

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ

ಪ್ರಧಾನ ಸಂಪಾದಕ

ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

(ಕ್ರಿ.ಶ.೨೦೦೨ರಿಂದ ೨೦೦೫ರ ಅವಧಿಯಲ್ಲಿ ನಡೆದ ಅಧ್ಯಯನ)

ಎನ್.ಕೇಶವಮೂರ್ತಿ

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)

೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ

ಗೋಕುಲಂ, ಮೈಸೂರು - ೫೭೦ ೦೦೨

sanketi E-lib-8 Web: 6-6-2018

ಸಂಕೇತಿ ಅಧ್ಯಯನ

ಸಂಪುಟ - ೮

SANKETI KRISHIYA VIBHINNA NELEGALU
N.KESHAVAMURTHY
TRANSMISSION EXECUTIVE (FARM & HOME)
ALL INDIA RADIO
MYSORE

Published by
Samudaya Adhyayana Kendra Charitable Trust (R.)
#3059, 4th 'A' Cross, Gokulam Park Road
Gokulam, Mysore - 570 002

Pages : XLIV + 482
First Edition : 2010

Research Documentation
For Internal - Free Circulation

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು
ಎನ್.ಕೇಶವಮೂರ್ತಿ
ಪ್ರಸಾರ ನಿರ್ವಹಣಾಧಿಕಾರಿ (ಕೃಷಿ)
ಆಕಾಶವಾಣಿ, ಮೈಸೂರು

ಪ್ರಕಾಶಕರು
ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ.)
೩೦೫೯, ೪ನೇ 'ಎ' ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ
ಗೋಕುಲಂ, ಮೈಸೂರು - ೫೭೦ ೦೦೨

ಪುಟಗಳು : XLIV + ೪೮೨
ಮುದ್ರಣ : ೨೦೧೦

ಸಂಶೋಧನ ದಾಖಲೀಕರಣ
ಖಾಸಗಿ - ಉಚಿತ ವಿತರಣೆಗಾಗಿ

ಡಿ.ಟಿ.ಪಿ : ಮಾತಾ ಗ್ರಾಫಿಕ್ಸ್, ಬೆಂಗಳೂರು
ದೂರವಾಣಿ ಸಂಖ್ಯೆ : 8095490747
ಲಕ್ಷ್ಮೀ ಮುದ್ರಣಾಲಯ

ಅರ್ಪಣೆ

ಶ್ರೀಮತಿ ಪುಟ್ಟಮ್ಮ

ಮತ್ತು

ರುದ್ರಪಟ್ಣ ಶ್ರೀ ವೆಂಕಟರಮಣಯ್ಯ

ಅವರ

ದಿವ್ಯ ಸ್ಮರಣೆಗೆ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟ ಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಈ ಸಂಪುಟಕ್ಕೆ ಆಸರೆಯಾಗಿನಿಂತ ಶ್ರೀಮತಿ ನಾಗರತ್ನ (ಪಾಪು)-ಶ್ರೀ ಆರ್.ವಿ.ಕೃಷ್ಣಮೂರ್ತಿ, ಶ್ರೀಮತಿ ಸಬಿತಾ-ಬ್ರಿಗೇಡಿಯರ್(ನಿ.) ಶ್ರೀ ಆರ್.ವಿ.ಸೀತಾರಾಮಯ್ಯ, ಶ್ರೀಮತಿ ಸುಮಿತ್ರಮ್ಮ-ಶ್ರೀ ಎಚ್.ಎಸ್.ಅನಂತರಾಮು, ಶ್ರೀಮತಿ ಸುಂದರಮಣಿ-ಶ್ರೀ ನಟೇಶ್‌ಮಗ್ಗೆ ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ರೈತ ಸಮುದಾಯಕ್ಕೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ, ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು. ನಾವು ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ, ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

* * * * *

ಇದೀಗ ಓದುಗರ ಮುಂದಿರುವುದು ಸಂಕೇತಿ ಅಧ್ಯಯನ ಮಾಲೆಯ ಎಂಟನೆಯ ಸಂಪುಟ. ಇದು ಸಂಕೇತಿ ಸಮುದಾಯದ ಕೃಷಿಯ ಅನನ್ಯತೆಯನ್ನು ಶೋಧಿಸಲು ಹೊರಟ ಕೃತಿ. ಸಂಕೇತಿ ಸಮುದಾಯದ ಬಹುಮುಖಸಾಧನೆಯ ಮೂಲಪೋಷಕಶಕ್ತಿಯು ಅವರ 'ಕೃಷಿ'ಯೇ ಆಗಿದೆ. ಹಾಗಾಗಿ ಈ ಸಮುದಾಯದ ಕೃಷಿಯ ಅಂತರಂಗವನ್ನು ಭೇದಿಸುವುದೆಂದರೆ ಒಂದು ಸಮಷ್ಟಿ ಬದುಕಿನ ಕ್ರತುಶಕ್ತಿಯ ಸೆಲೆಯನ್ನು ಅನಾವರಣಗೊಳಿಸಿದಂತೆ. ಆ ಕಾರಣದಿಂದಲೇ ಇದೊಂದು ಸಂಕೀರ್ಣ ಸ್ವರೂಪದ ಅಧ್ಯಯನವೂ ಹೌದು, ಕಠಿಣ ಸಾಧನೆಯೂ ಹೌದು.

ಬೆರಗು ಹುಟ್ಟಿಸುವ ಸಂಗತಿ: ಮೊದಲ ನೋಟದಲ್ಲೇ ಬೆರಗು ಹುಟ್ಟಿಸುವ ಸಂಗತಿ ಎಂದರೆ ಬ್ರಾಹ್ಮಣ ಸಮುದಾಯವೊಂದು ಇಷ್ಟೊಂದು ಗಾಢವಾಗಿ ಕೃಷಿಯನ್ನು ಆವಾಹಿಸಿಕೊಂಡಿದೆ ಎಂಬುದು. ಮಾನವವಿಕಾಸದ ಭಾಗವೇ ಆಗಿರುವ ಬ್ರಾಹ್ಮಣ ಸಮುದಾಯಗಳೆಲ್ಲವು ಕೂಡ ಕೃಷಿಯನ್ನು ಮೈಮನಗೂಡಿಸಿಕೊಂಡೇ ಬಂದಿರುವಂಥವು, ಸನ್ನಿವೇಶಗಳ ಅನುಕೂಲಗಳ ಲಾಭ ಪಡೆದು ಕಠಿಣ ದುಡಿಮೆಯ ಮಾರ್ಗವನ್ನು ತೊರೆದು ಸುಲಭ ಜೀವನದ ಕವಲುಗಳಿಗೆ ಒಡ್ಡಿಕೊಂಡಂಥವು. ಅದು ಜಗತ್ತಿನ ಎಲ್ಲೆಡೆಯ ಮಾನವಸಾಮಾನ್ಯಕ್ಕೆ ಅನ್ವಯವಾಗುವ ಸತ್ಯ. ಇಂಥ ಸುಲಭ ಕವಲುಗಳ ಸುಲಭಾವಕಾಶಗಳ ನಡುವೆಯೂ ಕೃಷಿಯ ಕರುಳನ್ನು ತನ್ನದಾಗಿಸಿಕೊಂಡು ಇನ್ನೂ ಆ ಗಾಢ ಭಾವದಲ್ಲೇ ಮುಂದುವರಿದಿರುವುದು ಸಂಕೇತಿ ಸಮುದಾಯ ಎಂಬುದೇ ಆ ಬೆರಗು. ಸಂಕೇತಿ ಸಮುದಾಯದಷ್ಟೇ ಕೃಷಿಭಾವವನ್ನು ಜೀವಂತವಾಗಿಯೂ ಗಾಢವಾಗಿಯೂ ಪ್ರಾಣಪ್ರಿಯವೆನಿಸುವ ಹಾಗೂ ಇಂದಿಗೂ ಮುಂದುವರಿಸಿಕೊಂಡು ಹೋಗುತ್ತಿರುವ ಇನ್ನಿತರ ಬ್ರಾಹ್ಮಣ ಸಮುದಾಯಗಳಿವೆ. ಅವುಗಳಲ್ಲಿ ಹವ್ಯಕ, ಚಿತ್ಪಾವನ ಸಮುದಾಯಗಳಂಥ ಕೆಲವು ನಿಕಟಗೋಚರದವು. ಕೃಷಿಗೆ ಹೊರತಾದ ಇನ್ನಿತರ ಸಾಮ್ಯಗಳ ಆಧಾರವನ್ನೂ ಇಟ್ಟುಕೊಂಡು ಈ ಬ್ರಾಹ್ಮಣ ಉಪಸಮುದಾಯಗಳ ಪರಸ್ಪರ ಸಂಬಂಧದ ಸ್ವರೂಪವನ್ನು ಅಧ್ಯಯನ ಮಾಡಲೂ ಅವಕಾಶವಿದೆ.

ಆಶ್ರಮ ಜೀವನದ ಬೇರು: 'ಸಂಕೇತಿ ಸಮುದಾಯದ ಕೃಷಿ' ಎನ್ನುವಾಗ ನಿಚ್ಚಳವಾಗಿ ನಮ್ಮ ಕಣ್ಣ ಮುಂದಿರಿರುವುದು ಅವರ ಬಾಗಾಯ್ತು. ಅಡಿಕೆ ಬೆಳೆಯು ಅವರ ತೋಟಗಳನ್ನು ಪ್ರವೇಶಿಸುವುದಕ್ಕೂ ಮೊದಲು ಅದು ಆಶ್ರಮ ಸದೃಶವಾಗಿದ್ದಿರಬೇಕು. ನಾವೀಗ ಸಂಕೇತಿ ವ್ಯಷ್ಟಿ, ಸಮಷ್ಟಿಯ ವಿಶೇಷಗಳೆಂದು ಗುರುತಿಸುವ ಕೃಷಿಸಹಿತವಾದ ಎಲ್ಲವೂ ಅದರ ಮುಂದುವರಿಕೆ, ಅದರ ಪಳೆಯುಳಿಕೆ. ಇಲ್ಲಿಯೂ, ಆ ಜೀವಸತ್ತ್ವದ ವಾಸನೆಯನ್ನು ಇಂದಿಗೂ ಸಂಕೇತಿ ಸಮುದಾಯವು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಂಡು ಬಂದಿದೆ ಎಂಬುದು ವಿಶೇಷ. ಈಗ ನಾವು ಸಂಕೇತಿಗಳ ವೈಶಿಷ್ಟ್ಯವೆಂದು ಗುರುತಿಸುವ ವೇದಾಧ್ಯಯನ, ಶಾಸ್ತ್ರಾಧ್ಯಯನ, ಸಂಗೀತ, ಗಮಕ, ಆಧ್ಯಾತ್ಮಿಕತೆ ಇವುಗಳನ್ನು ಅಂಥದೊಂದು ಪರಿಸರದಲ್ಲಿ ಬೆಳೆದ ಪ್ರವೃತ್ತಿ ಎಂದು ಗುರುತಿಸಬಹುದು. ಕೃಷಿ ಮತ್ತು ವೈದಿಕತೆಯ ಸಮನ್ವಯವು ಅವರ ಸಹಜಯೋಗ.

ಅಡಿಕೆ ಬೆಳೆಯೊಂದಿಗೆ ರಾಜಿ: ದಕ್ಷಿಣದ (ತಮಿಳುನಾಡು,ಕೇರಳ) ಸಂಕೇತಿಗಳು ಮೊದಲು ತಮ್ಮ ಹಿತ್ತಲಿನಲ್ಲಿ ಕುತೂಹಲಕ್ಕಾಗಿ ಒಂದೆರಡು ಅಡಿಕೆ ಸಸಿಗಳನ್ನು ಬೆಳೆದರು. ಅದರ ವಾಣಿಜ್ಯ ಮುಖದಿಂದ ಆಕರ್ಷಿತರಾದರು. ಪ್ರತ್ಯೇಕವಾದ ಅಡಿಕೆ ತೋಟಗಳನ್ನು ಮಾಡತೊಡಗಿದರು. ಇದು ಅಲ್ಲಿನ ಸಂಕೇತಿಗಳ ನೆನಪು. ಸಂಕೇತಿಗಳು ಕರ್ನಾಟಕಕ್ಕೆ ವಲಸೆ ಬರುವ ಮೊದಲೇ ಆಗಿದ್ದ ಬೆಳವಣಿಗೆ ಇದು. ಅಡಿಕೆ ಬೇಸಾಯದ ಪರಿಣತಿ ಹೊಂದಿದ ನಂತರವೇ ಕರ್ನಾಟಕಕ್ಕೆ ಸಂಕೇತಿಗಳ ವಲಸೆ ನಡೆದಿರಬೇಕೆಂಬುದು ಅನೇಕ ಚಿಂತಕರ ಅಭಿಪ್ರಾಯ.

ಅಡಿಕೆ ಬೆಳೆಯ ಮೂಲಚೂಲಗಳನ್ನು ಶೋಧಿಸಿ ಸಂಕೇತಿ ಸಮುದಾಯವು ಅದಕ್ಕೆ ಯಾವಾಗ ಒಲಿಯಿತು ಎಂಬುದನ್ನು ಪತ್ತೆ ಮಾಡಬೇಕಾದ ಕೆಲಸ ಹಾಗೆಯೇ ಉಳಿದಿದೆ. ಆದರೆ 'ಸಂಕೇತಿಯೊಬ್ಬನು ಅಡಿಕೆ ಸಸಿಯನ್ನು ಕೈಲಿ ಹಿಡಿದುಕೊಂಡೇ ಹುಟ್ಟುತ್ತಾನೆ' ಎಂಬ ಅರ್ಥಪೂರ್ಣ ರೂಪಕವೊಂದು ಪಡೆದುಕೊಂಡಿರುವ ಪ್ರಚಲಿತತೆಯು, ಅಡಿಕೆ ಬೆಳೆ ಮತ್ತು ಸಂಕೇತಿ ಸಮುದಾಯದ ನಡುವಿನ ಅವಿನಾಭಾವ ಸಂಬಂಧಕ್ಕೆ ಸಮರ್ಥವಾಗಿ ಕನ್ನಡಿ ಹಿಡಿಯುತ್ತದೆ.

ಸಂಕೇತಿಗಳು ಅಡಿಕೆ ಬೆಳೆಗೆ ಹೊಂದಿಕೊಂಡಿರುವ ರೀತಿಯು ಅನೇಕ ಅರ್ಥಗಳನ್ನೂ ಬೆರಗುಗಳನ್ನೂ ಹುಟ್ಟಿಸುತ್ತದೆ. ಮೊದಲನೆಯದಾಗಿ, ಆರ್ಥಿಕ ಬೆಳೆಯಾದ ಅಡಿಕೆಯ ಪ್ರವೇಶವು ಸಂಕೇತಿ ಸಮುದಾಯದ ಆಶ್ರಮಜೀವನ ಹದಕ್ಕೊಂದು

ಆಘಾತವಾಗಿಯೇ ಬಂದಿದೆ. ನಮಗೆ ಈಗ ತಿಳಿದಿರುವಂತೆ ಸುಮಾರು ಒಂಬತ್ತು ಶತಮಾನಗಳಷ್ಟು ದೀರ್ಘಕಾಲ ಅದು ಈ ಸಮುದಾಯದ ಬದುಕಿನ ಜೀವಸೆಲೆಯಾಗಿದೆ.

ಶೆಂಕೋಟ್ಟೈನಿಂದ ವಲಸೆ ಬಂದ ಸಂಕೇತಿ ಸಮುದಾಯವು ಕರ್ನಾಟಕದಲ್ಲಿ ಮೊದಲು (ಈಗಿನ ದಾವಣಗೆರೆ ಜಿಲ್ಲೆಯ) ಹರಪನಹಳ್ಳಿ ಕೇಂದ್ರದಲ್ಲಿ ನೆಲೆಸಿತಾದರೂ ಅನತಿ ಕಾಲದಲ್ಲಿ ಅದು ಮತ್ತೆ ವಲಸೆ ಬಂದು ಭದ್ರವಾಗಿ ಬೇರೂರಿದ್ದು ಅಡಿಕೆ ವಹಿವಾಟಿನ ಪ್ರಮುಖ ಕೇಂದ್ರವಾಗಿದ್ದ (ಈಗಿನ ಚಿಕ್ಕಮಗಳೂರು ಜಿಲ್ಲೆಯ) ಕಡೂರಿನಲ್ಲಿ. ಮತ್ತೆ ಆದ ಮರುವಲಸೆಗಳೆಲ್ಲವೂ ಅಡಿಕೆ ಬೆಳೆಯ ಸಾಧ್ಯತೆಯೊಂದಿಗೇ ತಳುಕು ಹಾಕಿಕೊಂಡಿವೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ನಿರಂತರವಾಗಿ ಸಂಕೇತಿ ಸಮುದಾಯದ ಬದುಕಿನೊಂದಿಗೆ ಗಾಢವಾಗಿ ಬೆರೆತು ಬಂದುದು ಇದೊಂದೇ ಆರ್ಥಿಕ ಬೆಳೆ.

ಸನ್ನಿವೇಶದ ಒತ್ತಡವು ಮನುಷ್ಯನ ಅಳವಡಿಕೆಗಳನ್ನು ಅನಿವಾರ್ಯಗೊಳಿಸುತ್ತದೆ ಎಂಬುದಕ್ಕೆ ಸಂಕೇತಿ ಸಮುದಾಯವು ಆಶ್ರಮ ಜೀವನದಿಂದ ಸರಿದು ಆರ್ಥಿಕತೆಗೆ ಒತ್ತುಬಿದ್ದ ಅಡಿಕೆ ಬೆಳೆಯೊಂದಿಗೆ ಹೊಂದಿಕೊಂಡುದು ದೊಡ್ಡ ಸಾಕ್ಷಿ. ಸಂಪ್ರದಾಯಕ್ಕೆ ತೀವ್ರವಾಗಿ ಬದ್ಧವಾದ ಈ ಸಮುದಾಯವು ಹೊಸ ಪ್ರವೃತ್ತಿ ಮತ್ತು ಅಗತ್ಯಗಳೊಂದಿಗೆ ಮಾಡಿಕೊಂಡ ರಾಜಿಯ ಪ್ರಮುಖ ಘಟ್ಟ ಅದು.

ಪರಿವರ್ತನೆಗಳ ಸ್ಫೋಟ: ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆದ ಪರಿವರ್ತನೆಗಳ ಸ್ಫೋಟವು ಸಂಕೇತಿ ಸಮುದಾಯದ ಸಮಗ್ರ ಬದುಕನ್ನು ಮೊದಲ ಬಾರಿಗೆ ಪರಿಣಾಮಗೊಳಿಸಿದೆ. ಈ ಕಾಲಘಟ್ಟದಲ್ಲಿ ಸಂಕೇತಿ ಸಮುದಾಯವು ಆಧುನಿಕ ವಿದ್ಯೆ, ಚಿಂತನೆ, ಉದ್ಯೋಗ, ನಗರೀಕರಣಕ್ಕೆ ಮುಕ್ತವಾಗಿ ತೆರೆದುಕೊಂಡಿದೆ, ಧಾವಿಸಿದೆ, ಸ್ಪರ್ಧಿಸಿದೆ, ಹೊಸ ಜಗತ್ತಿನ ಮುಂಚೂಣಿಯವರೆಗೆ ನುಗ್ಗಿದೆ. ಅಡಿಕೆಯ ಜತೆಜತೆಗೆ ಹೊಲಗದ್ದೆಗಳ ಬೇಸಾಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದೆ, ಹೊಸ ಹೊಸ ಆರ್ಥಿಕ ಬೆಳೆಗಳನ್ನು ಸ್ವಾಗತಿಸುವಲ್ಲಿ ಒಟ್ಟು ಕೃಷಿ ಸಮಾಜಕ್ಕೆ ಮಾರ್ಗದರ್ಶಿಯಾಗಿದೆ. ತೋಟದಲ್ಲೂ ಅಡಿಕೆ ಮತ್ತು ಇತರ ಸಾಂಪ್ರದಾಯಿಕ ಬೆಳೆಗಳ ಜತೆಗೆ ಹೊಸ ಆರ್ಥಿಕ ಸಾಧ್ಯತೆಗಳಿಗೆ ಬಾಗಿಲು ತೆರೆದಿದೆ. ಇವೆಲ್ಲದರ ಪರಿಣಾಮವಾಗಿ 'ಬಡಬ್ರಾಹ್ಮಣ' ಎನಿಸಿದ್ದ ಸಮುದಾಯವು ಬದಲಾಗಿದೆ. ಕೃಷಿಯಲ್ಲಿಯೂ ಮೈಮುರಿದು ದುಡಿಯುತ್ತಿದ್ದ ಜಾಗದಲ್ಲಿ ಯಂತ್ರೋಪಕರಣಗಳ ಪ್ರಯೋಜನ ದೊರೆತು ಕೆಲಸವು ಹಗುರವಾಗಿದೆ. ಆಹಾರ, ವಸತಿ, ಉಡುಪು, ಸಂವಹನಮಾಧ್ಯಮ ಹೀಗೆ ಪ್ರತಿಯೊಂದರಲ್ಲೂ ಈ ಸಮುದಾಯವು - ಇತರ ಎಲ್ಲರಂತೆ - ಈಗ ಉತ್ತಮಸ್ಥಿತಿಯಲ್ಲಿದೆ.

ಆದರೆ, ಗಮನಿಸಬೇಕಾದ ಮಾತೆಂದರೆ ಆರ್ಥಿಕಬೆಳೆಯಾಗಿ ಬಂದ ಅಡಿಕೆಯೂ ಬಾಗಾಯಿತಿನ ಆಶ್ರಮಸದೃಶ ನೈಸರ್ಗಿಕತೆಗೆ ಭಂಗ ತಂದಿರಲಿಲ್ಲ, ಬದಲಿಗೆ ಅದನ್ನು ಪೋಷಿಸಿತ್ತು. ಅದು ತಂದ ಆರ್ಥಿಕ ಸಾಧ್ಯತೆಯು ಜೀವನ ನಿರ್ವಹಣೆಯ ಕನಿಷ್ಠ ಅಗತ್ಯಗಳನ್ನು ಪೂರಯಿಸುವ ಮಿತಿಯಲ್ಲಿತ್ತು, ಭೋಗದ ಕಟ್ಟೆಗೆ ಕಾಲಿಟ್ಟಿರಲಿಲ್ಲ. ಬದುಕಿನ ಈ ಹೋರಾಟದ ನಡುವೆಯೂ ಪಾರಂಪರಿಕ ವಿದ್ಯೆ, ಆಚಾರ ವಿಚಾರ, ಕೌಟುಂಬಿಕ ಸಾಮಾಜಿಕ ಸಂಬಂಧ ಮತ್ತು ಆಧ್ಯಾತ್ಮಿಕ ಮನಃಪಾಕವನ್ನು ಅದು ಉನ್ನತಮಟ್ಟದಲ್ಲಿ ಕಾಪಾಡಿಕೊಂಡು ಬಂದಿತೆಂಬುದು ಆಶ್ಚರ್ಯ ಹುಟ್ಟಿಸುತ್ತದೆ. ಬ್ರಿಟಿಷ್ ಭಾರತದ ವಿದ್ಯೆ, ನಗರಜೀವನ ಮತ್ತು ಉಪಭೋಗಗಳ ಆಕರ್ಷಣೆಯನ್ನು ೨೦ನೆಯ ಶತಮಾನದ ಮಧ್ಯಭಾಗದವರೆಗೆ ಅದು ಮೆಟ್ಟಿ ನಿಂತಿತು ಎಂಬುದು ಕೂಡ ಗಮನಾರ್ಹವಾದ ಸಂಗತಿ. ಒಟ್ಟು ಚಿಂತನೆ ಮತ್ತು ಜೀವನದೃಷ್ಟಿಯು ಆಧ್ಯಾತ್ಮಿಕತೆಯ ಪೊರೆಯಲ್ಲಿ ಸುರಕ್ಷಿತವಾಗಿತ್ತು. ಆದರೆ ಇದೀಗ ಒಮ್ಮೆಗೇ ಬಂದಿರುವ ಮುಕ್ತತೆ, ಜಾಗತಿಕ ಸಾಧ್ಯತೆ, ಆರ್ಥಿಕ ಉನ್ನತಿ,

ಭೋಗೋಪಭೋಗದ ಸಾಧ್ಯತೆ ಇವು ಸಮಾಜವನ್ನು ವಿವಿಧ ಪ್ರಮಾಣದಲ್ಲಿಯಾದರೂ ಆಮೂಲಾಗ್ರವಾಗಿ ಕಂಪಿಸಿವೆ. ಒಟ್ಟು ಸಮಾಜದ ಮುಖ್ಯಪ್ರವಾಹದ ಜತೆ ಈ ರಾಜಿಯಾದ ಹೊರತು ಅಸ್ತಿತ್ವವೇ ಸಾಧ್ಯವಾಗದ ಸ್ಥಿತಿ ಅದು.

ಪ್ರಯೋಜನಗಳೂ ಆಗಿವೆ. ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ಮುಗ್ಧತೆ, ಸಾತ್ತ್ವಿಕತೆ, ಆಧ್ಯಾತ್ಮಿಕತೆಯ ಚಿಪ್ಪಿನೊಳಗೆ ಆತ್ಮಾನಂದದಲ್ಲಿ ವಿಹರಿಸುತ್ತಿದ್ದ ಈ ಸಮುದಾಯವು ಒಟ್ಟು ಸಮಾಜದಿಂದ ನಾನಾ ರೀತಿಯ ಶೋಷಣೆಗೆ ಒಳಗಾದ ಚಿತ್ರವು ಅವರ ವಂಶಚರಿತ್ರೆಗಳಲ್ಲಿ ದೊರೆಯುತ್ತದೆ. ಹೊಸ ವಿದ್ಯೆಯೊಂದಿಗೆ ಅದು ತಪ್ಪಿದೆ.

ಆದರೂ ಉಳಿದುಕೊಂಡ ಪ್ರಶ್ನೆ ಇದು. ಕೆಲಸವು ಹಗುರವಾದುದರಿಂದ, ಹಣವು ಹೆಚ್ಚಾಗಿ ದೊರೆತುದರಿಂದ, ಭೋಗೋಪಭೋಗಗಳ ಸಾಧ್ಯತೆ ಉಂಟಾದುದರಿಂದ ಮತ್ತು ನಗರೀಕರಣದಿಂದ ನೆಮ್ಮದಿ ಹೆಚ್ಚಿದೆಯೆ? ಇದು ಮೂಲಭೂತವಾದ ಪ್ರಶ್ನೆ, ಆದರೆ ಯಾರಿಗೂ ಆಕರ್ಷಕವೆನಿಸದ ಪ್ರಶ್ನೆ.

ಉಳಿಯಲು ಅರ್ಹವಾದ ಸಂಕೇತಿ ಬಾಗಾಯ್ತು ಸಂಸ್ಕೃತಿ: ಸಂಕೇತಿಗಳು ಪರಿಣತಿಯನ್ನು ಮೆರೆದ ಬಾಗಾಯ್ತು ದೃಢ ಶರೀರವನ್ನೂ, ಅದ್ಭುತವಾದ ಆರೋಗ್ಯವನ್ನೂ, ಕೃಷಿಮೂಲವಾದ ಔದಾರ್ಯವನ್ನೂ, ಪ್ರೀತಿಯನ್ನೂ ಹುಟ್ಟಿಸಿತು. ಅದರೊಂದಿಗೆ ಸಹಜವಾಗಿ ಹೊಂದಿಕೊಂಡ ಅಧ್ಯಾತ್ಮವು ಮಾನಸಿಕ ಧೃತಿಯನ್ನೂ, ಔನ್ನತ್ಯವನ್ನೂ ಉಂಟುಮಾಡಿತು. ಅಂಥ ಆಶ್ರಮಜೀವನದ ಮಡಿಲಲ್ಲಿ ನೆಮ್ಮದಿ ನೆಲೆಸಿತು, ವಿದ್ಯೆ ಬೆಳೆಯಿತು, ಕಲೆ ಅರಳಿತು. ಸದ್ಯ ಕಾಣುತ್ತಿರುವ ಸಮುದಾಯದ ಬಹುಮುಖ ಪ್ರತಿಭೆಯ ಮೂಲದ್ರವ್ಯವು ಅತಿಶಯವಾಗಿ ಬಂದುದು ಇಂಥ ಕೃಷಿಪರಂಪರೆಯ ಬೇರುಗಳಿಂದ.

ತಾವು ಅರ್ಥೈಸಿಕೊಂಡ, ರೂಢಿಸಿಕೊಂಡ, ಪರಿಣತಿ ಪಡೆದ ಆಶ್ರಮಸದೃಶವಾದ ಬಾಗಾಯ್ತಿಗೆ - ಜಗತ್ತನ್ನು ಸಾಕ್ಷೀಪ್ರಜ್ಞೆಯಿಂದ ನೋಡುತ್ತ ಆಧ್ಯಾತ್ಮಿಕ ಪೊರೆಯಲ್ಲಿ ಸುರಕ್ಷಿತವಾಗಿದ್ದು ಆತ್ಮಬಲವನ್ನೂ ದೇಹಬಲವನ್ನೂ ಹೆಚ್ಚಿಸಿಕೊಳ್ಳಬಹುದಾದ ಬಾಗಾಯ್ತಿಗೆ - ಭೋಗೋಪಭೋಗಗಳಲ್ಲಿ ಕರಗಿ ಹೋಗದೆ ಕಲೆಯನ್ನೂ ಸುಖ ಸಾಧನಗಳನ್ನೂ ಅಧೀನದಲ್ಲಿರಿಸಿಕೊಂಡು ನೆಮ್ಮದಿ ಸಾಧಿಸಬಹುದಾದ ಬಾಗಾಯ್ತಿಗೆ - ತಮ್ಮೆಲ್ಲ ಕಸುವಿನ ಮೂಲಸ್ರೋತವಾದ ಬಾಗಾಯ್ತಿಗೆ - ಮರಳಲು ಸಂಕೇತಿ ಸಮುದಾಯಕ್ಕೆ ಇನ್ನೂ ಅವಕಾಶ ಉಳಿದಿದೆ ಎಂಬುದು ಈ ಸಮುದಾಯದ ಪರವಾದ ಅಂಶ. ಹಳ್ಳಿಗಳಲ್ಲಿಯೇ ಉಳಿದು ಶತಮಾನಗಳ ಕಾಲದಿಂದ ಜತನ ಮಾಡಿಕೊಂಡು ಬಂದಿರುವ ಒಂದು ವಿಶಿಷ್ಟ ಕೃಷಿಪರಂಪರೆಯನ್ನು ಕಾಪಾಡುತ್ತಿರುವ ಸಂಕೇತಿಗಳ ಸಂಖ್ಯೆ ಈಗಲೂ ಗಣನೀಯವಾಗಿದೆ. ಭಾರತದ ವಿಶಿಷ್ಟ ಸಾಂಸ್ಕೃತಿಕ ಸಂವೇದನೆಗಳೆಲ್ಲವೂ ನಿಸರ್ಗಕ್ಕೆ ಹೊಂದಿಕೊಂಡಂಥವು. ಆ ಅರ್ಥದಲ್ಲಿ ಕೂಡ ಸಂಕೇತಿ ಸಮುದಾಯದ ಬಾಗಾಯ್ತು ಸಂಸ್ಕೃತಿ ಉಳಿದು ಬಾಳಲು ಅರ್ಹವಾಗಿದೆ. ಅದು ಭಾರತದ ವಿಶಿಷ್ಟ ಧಾರ್ಮಿಕ ಹದದ ಮುಂದುವರಿಕೆಗಾಗಿ ಅಗತ್ಯವೂ ಆಗಿದೆ.

ಬದುಕಿಗೆ ಬೇಕಾದ ನಿರಾತಂಕದ ತಳಾಧಾರ, ವಿಕೃತಿಗಳಿಗೆ ಎಡೆಯಿಡದ ಕಠಿಣ ದುಡಿಮೆಯನ್ನಾಧರಿಸಿದ ಮಿತವರಮಾನ, ಕೃಷಿಮೂಲದ ಹೃದಯ ಶ್ರೀಮಂತಿಕೆ, ಸಕಾರಾತ್ಮಕವಾದ ಎಲ್ಲ ವಿಕಾಸಗಳಿಗೆ ಬೇಕಾದ ತಿಳಿಮನ, ಸಾವಧಾನ, ಶಾಂತಿ, ನೆಮ್ಮದಿಗಾಗಿ ಬಾಗಾಯ್ತಿನ ಆಶ್ರಮಧರ್ಮವು ಮಾತ್ರವೇ ಏಕೈಕ ಮಾರ್ಗವಾಗಿದೆ.

ಮೂಷಿಕವರ್ಗದ ಲೆಮಿಂಗ್‌ಗಳು (LEMMINGS) ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತವೆ ಎಂಬುದು ಬಹಳ ಬಳಕೆಯಲ್ಲಿರುವ ರೂಪಕ. ಕೃಷಿಯ ಬೇರನ್ನು ಕಡಿದುಕೊಂಡು ನಗರೀಕರಣವು ಹುಟ್ಟಿಸಿರುವ ಮರೀಚಿಕೆಗಳ ಹಿಂದೆ ಬೀಳುವವನು ಲೆಮಿಂಗ್‌ಗಳಂತೆ ನಾಶವಾಗಿ ಹೋಗುತ್ತಾನೆ ಎಂದು ಈ ಅರ್ಥದಲ್ಲಿ ಹೇಳಬಹುದು.

ಇರಬೇಕಾದ ಎಚ್ಚರ: ಈ ಮಾತಿಗೆ ಇದೇ ಉಸಿರಿನಲ್ಲಿಯೇ ಅತ್ಯಗತ್ಯವಾಗಿ ಸೇರಿಸಬೇಕಾದ ಅಂಶವೊಂದಿದೆ. ಸಮಕಾಲೀನ ವಿದ್ಯೆ, ಉದ್ದಿಮೆ, ವಿದ್ಯಮಾನಗಳಿಗೆ ತೆರೆದುಕೊಳ್ಳದೆ - ಮಾನವ ಕಲ್ಯಾಣಕ್ಕಾಗಿ ತೆರೆದುಕೊಳ್ಳುತ್ತಿರುವ ವಿವಿಧ ಮಾರ್ಗಗಳನ್ನು ಹಿಗ್ಗಲಿಸುವ ಪ್ರಶ್ನೆ ಇಟ್ಟುಕೊಳ್ಳದೆ - ಹೊರಜಗತ್ತಿನ ವಿವಿಧ ಸ್ತರಗಳ ಸವಾಲುಗಳನ್ನೆದುರಿಸಲು ಸನ್ನದ್ಧರಾಗದೆ - ಬಾಗಾಯ್ತಿನಲ್ಲಿ ಆಶ್ರಯ ಹೊಂದುವುದೆಂದರೆ ದಯನೀಯವಾಗಿ ಕರಗಿ ಹೋಗುವುದೆಂದೇ ಅರ್ಥ. ಅಂಥ ಜಾಗತಿಕ ಒತ್ತಡ ಈಗ ಎಲ್ಲರ ಮೇಲಿದೆ. ಬದುಕಿನ ಹೋರಾಟದ ಅನಿವಾರ್ಯ ರಾಜಿಗಳೊಂದಿಗೆ ಬಾಗಾಯ್ತನ್ನು ನಮ್ಮ ಜೀವನದ ಅರ್ಥಪೂರ್ಣ ಭಾಗವಾಗಿಸಿಕೊಳ್ಳುವುದು ಸಾಧ್ಯವಾಗುವುದಾದರೆ ಮಾತ್ರ ಬಾಗಾಯ್ತಿನ ಪರವಾದ ಧ್ವನಿಯು ಸಹ್ಯವೆನಿಸುತ್ತದೆ. ಆಧುನಿಕ ಜಗತ್ತಿನ ಹಲವು ಆಯಾಮಗಳ ಅನಿವಾರ್ಯತೆಯನ್ನು ಮೆಟ್ಟಿ ಶಾಂತಿ, ಸಂತೃಪ್ತಿ ಮತ್ತು ನೆಮ್ಮದಿಯ ಕಡೆಗೆ ಮುಖಮಾಡಬಲ್ಲ ವಿವೇಕವು ಆಯಾ ಸನ್ನಿವೇಶದ ಮಡಿಲಿನಿಂದಲೇ ಮೂಡಿ ಬರಬೇಕಾಗಿದೆ.

ಶ್ರೀ ಎನ್.ಕೇಶವಮೂರ್ತಿಯವರ ಅಧ್ಯಯನದ ಫಲಶ್ರುತಿ: 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಈ ಸಂಶೋಧನ ಕೃತಿಯು ಸಂಕೇತಿ ಸಮುದಾಯದ ಬಾಗಾಯ್ತು ಸಂಸ್ಕೃತಿಯ ಪರವಾಗಿ ತೀರ್ಪಿತ್ತಿದೆ: "ಬದುಕಿನ ಮಟ್ಟವನ್ನು 'ಹಣ' ಆಳಲು ಆರಂಭಿಸಿದಾಗ ಹಳ್ಳಿಯ ಬದುಕು ಛಿದ್ರವಾಗಿರಬಹುದು ಎಂದು ನನ್ನ ಅನಿಸಿಕೆ. ಯಾಕೆಂದರೆ ಹಿಂದಿನ ದಿನಗಳಲ್ಲಿ ಕೃಷಿಯ ಮೂಲ ಉದ್ದೇಶ ಹಣಸಂಪಾದನೆ ಆಗಿರಲಿಲ್ಲ. ಭೂಮಿಯಿಂದ ಬದುಕು ಕಟ್ಟುವ ಕಲೆ ಸಂಕೇತಿಗಳಿಗೆ ಕರಗತವಾಗಿತ್ತು. ಕೇವಲ ಹತ್ತು ಗುಂಟೆ ಜಮೀನಿನಲ್ಲಿ ಬದುಕುವ ಕೃಷಿ ಸಂಕೇತಿಗಳಲ್ಲಿತ್ತು. ಹಣ ಸಂಪಾದನೆ ಜೀವನದ ಒಂದು ಭಾಗವಾಗಿತ್ತೇ ಹೊರತು ಹಣವೇ ಜೀವನವಾಗಿರಲಿಲ್ಲ. ಬಹುಮಹಡಿ ಪದ್ಧತಿಯ ಬಾಗಾಯ್ತು ಕೃಷಿ ಸ್ವಲ್ಪ ಹಣ ಹಾಗೂ ಸಂಪೂರ್ಣ ನೆಮ್ಮದಿ ಗಳಿಸಲು ಹಿರಿಯ ಸಂಕೇತಿಗಳು ಕಂಡುಕೊಂಡ ಒಂದು ಮಾರ್ಗ ಅಷ್ಟೆ. ಭೂಮಿ, ಬದುಕನ್ನು ಪ್ರೀತಿಸುತ್ತಿದ್ದ ಅವರಿಗೆ ಹಳ್ಳಿ ಆಸರೆಯಾಗಿತ್ತು, ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಬದುಕಲು ಹಣ ಬೇಕು ಎನ್ನುವ ಗ್ರಾಮೀಣ ಚಿಂತನೆ ಕುಸಿದು, ಹಣ ಮಾಡಲು ಬದುಕಬೇಕು ಎಂಬ ಪಟ್ಟಣದ ವ್ಯಾಪಾರೀ ಚಿಂತನೆ ಬಂದಾಗ ಬದುಕಿನ ಮೌಲ್ಯಗಳು ಬದಲಾದುವು."

ಜಗತ್ತು ಈಗ ಹೊಸ ಭ್ರಮೆಗಳನ್ನು ಹುಟ್ಟುಹಾಕುತ್ತಿದೆ, ಅವುಗಳನ್ನು ಅನಿವಾರ್ಯಗೊಳಿಸುತ್ತಲೂ ಇದೆ. ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟ, ಅರ್ಥಮಾಡಿಕೊಂಡವರೂ ಬಿಡಿಸಿಕೊಳ್ಳುವುದು ಇನ್ನೂ ಕಷ್ಟ. ಇಂಥ ಭ್ರಮೆಗಳನ್ನು ಪಕ್ಕಕ್ಕೆ ಸರಿಸಿ ಯೋಚಿಸಬಲ್ಲವರಿಗಾಗಿ ಒಂದೆರಡು ಹೆಚ್ಚಿನ ಮಾತುಗಳು ಇದೇ ಸಂಪ್ರಬಂಧದ ಫಲಶ್ರುತಿಯಾಗಿ ಬಂದಿವೆ.

"ಕೃಷಿ ಸಂಕೇತಿಗಳ ಪಾಲಿಗೆ ಸಂಸ್ಕೃತಿಯಾಗಿತ್ತು, ಜೀವನದ ರೀತಿಯಾಗಿತ್ತು. ತಮಗೆ ಬೇಕಾದ್ದನ್ನೆಲ್ಲಾ ಒಂದು ತುಂಡು ಭೂಮಿಯಲ್ಲೇ ಬೆಳೆಯುವ ಚಿಂತನೆಯಿತ್ತು. ಬಾಗಾಯ್ತು ಅವರ ಪಾಲಿಗೆ ಒಂದು ಪಾಠಶಾಲೆ. ಕೃಷಿಗೆ ಈ ಭಾಷ್ಯ ನೀಡಿದ ಸಂಕೇತಿಗಳು ನಿಜಕ್ಕೂ ಅಭಿನಂದನಾರ್ಹರು. ಹೊಸ ಕೃಷಿ ಚಿಂತನೆಗಳು ಹೊಳೆಯಂತೆ ಹರಿದು, ಹಳೆಯ ಬದುಕಿನ ಮೌಲ್ಯಗಳನ್ನು ಬುಡಮೇಲು ಮಾಡಿದರೂ ಅಂದು, ಇಂದು, ಎಂದೆಂದಿಗೂ ಬದಲಾಗದ ಗಟ್ಟಿಯಾದ ಕೃಷಿಪರಂಪರೆಯನ್ನು ಹುಟ್ಟುಹಾಕಿದ್ದು ಸಂಕೇತಿಗಳ ಬಾಗಾಯ್ತಿನ ಕೃಷಿ ರೀತಿ, ನೀತಿಗಳು. ಇಂದು ಪ್ರಸ್ತುತವಾಗಿರುವ ಸುಸ್ಥಿರ ಕೃಷಿ ಬದುಕಿಗೆ ಬಹಳ ಹಿಂದೆಯೇ ಅಡಿಪಾಯ ಹಾಕಿದ್ದು ಸಂಕೇತಿಗಳು. ಯಾವುದೇ ರೀತಿಯ ಆಧುನಿಕ ವಿಚಾರಗಳನ್ನು ಸಹ ಕೇಳದೆ, ನೋಡದೆ, ಕೇವಲ ತಮ್ಮ ಸಂಸ್ಕಾರದಿಂದ, ಸಂಸ್ಕೃತಿಯಿಂದ ತಮ್ಮ ಬಾಗಾಯ್ತಿನ ಮಣ್ಣನ್ನು ಸತ್ತ್ವಗೊಳಿಸಿ, ತಮ್ಮ ಬಾಳನ್ನು ಬಂಗಾರ ಮಾಡಿಕೊಂಡ ಹಿರಿಯ ಸಂಕೇತಿಗಳಿಗೆ ಗೌರವ ಸಲ್ಲಬೇಕು ತಾನೆ? ಸಾವಯವ ಕೃಷಿ ಪದ್ಧತಿ ಅನುಸರಿಸಿ, ಮಿಶ್ರಬೆಳೆ ಬೇಸಾಯದಿಂದ ಮಣ್ಣನ್ನು ಫಲವತ್ತುಗೊಳಿಸಿ, ವಿವಿಧ ಬೆಳೆಗಳನ್ನು

ಒಂದೇ ಜಮೀನಿನಲ್ಲಿ ಉನ್ನತ ವಿಚಾರದಲ್ಲಿ ಬೆಳೆದು, ಸತ್ವಯುತ ಆಹಾರ ಸೇವಿಸಿ, ತಮ್ಮ ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬಲಭೀಮರಾಗಿ ಬಾಳಿದ ಹಿರಿಯರ ಬದುಕು ಅವಿಸ್ಮರಣೀಯವಲ್ಲವೆ? ಇಷ್ಟೆಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡ ಈ ಕೃಷಿ ಮುಂದಿನ ಪೀಳಿಗೆಗೂ ಉಳಿಯಲೇಬೇಕು ತಾನೆ?"

ಕೃಷಿತಜ್ಞ: ಇಷ್ಟೊಂದು ಕಳಕಳಿಯಿಂದ ಸಂಕೇತಿಗಳ ಬಾಗಾಯ್ತು ಸಂಸ್ಕೃತಿಯ ಪರವಾಗಿ ವಾದಿಸುವ ಶ್ರೀ ಎನ್.ಕೇಶವಮೂರ್ತಿ ಒಬ್ಬ ಕೃಷಿತಜ್ಞ. ಕೃಷಿ ವಿಜ್ಞಾನವನ್ನು ಅಭ್ಯಸಿಸಿ, ಆಕಾಶವಾಣಿಯ ಮಾಧ್ಯಮವು ಕೃಷಿಕರ ಪಾಲಿಗೆ ವರದಾನವಾಗುವಂತೆ ದಶಕಗಳಿಂದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿರುವ ಕೃಷಿ ಅಧಿಕಾರಿ. ದೃಶ್ಯಮಾಧ್ಯಮಗಳ ಹುಚ್ಚು ಆಕರ್ಷಣೆಯ ನಡುವೆಯೂ ತಮ್ಮ ಕೃಷಿ ಕಾರ್ಯಕ್ರಮಗಳಿಂದ ರೈತರನ್ನು ಆಕರ್ಷಿಸಿ ಶಿಕ್ಷಣ ನೀಡಿ, ಅವರಲ್ಲಿ ಭರವಸೆ ಹುಟ್ಟಿಸಿ ರೈತಮಿತ್ರನಾಗಿ ಬೆಳೆದಿರುವ ನಿಷ್ಠಾವಂತ ಪ್ರಸಾರಕ. ಕೃಷಿಕಾರ್ಯಕ್ರಮಗಳ ಮೂಲಕವಾಗಿಯೇ ಆಕಾಶವಾಣಿಯ ಶ್ರೋತೃವರ್ಗವನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಸಫಲರಾಗಿರುವ ಕಾರ್ಯಕ್ರಮ ನಿರ್ಮಾಪಕ. ಪ್ರಸ್ತುತ ಅಧ್ಯಯನವು ನಡೆದಿರುವುದು ಅಂಥ ಸಮರ್ಥರಿಂದ.

ಸಂಕೇತಿ ಸಮುದಾಯದ ಕೃಷಿಜೀವನಕ್ಕೆ ವ್ಯಾಪಕವಾಗಿ ಆಶ್ರಯ ನೀಡಿರುವುದು ಹಾಸನ ಜಿಲ್ಲೆ. ಹಾಸನದ ಬಾನುಲಿಯು ಬಿತ್ತರಗೊಳಿಸುತ್ತಿದ್ದ ಕೃಷಿ ಕಾರ್ಯಕ್ರಮಗಳಲ್ಲಿ ಸಹಜವಾಗಿಯೇ ಸಂಕೇತಿ ಕೃಷಿಕರ ಬಗೆಗಿನ ವಿಚಾರಗಳೂ ಇರುತ್ತಿದ್ದವು. ಅತಿಶಯವಾದ ತನ್ನ ಕೃಷಿ ಕಾರ್ಯಕ್ರಮಗಳಿಂದಾಗಿ ಆ ಕೇಂದ್ರವು ಜನಪ್ರಿಯವಾಗಿತ್ತು. ಶ್ರೀ ಎನ್.ಕೇಶವಮೂರ್ತಿ ಮತ್ತು ಶ್ರೀ ವಿಜಯ ಅಂಗಡಿ ಎಂಬ ಕೃಷಿ ಅಧಿಕಾರಿಗಳು ಅದನ್ನು ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ಹಾಸನದ ಬಾನುಲಿ ಕೇಂದ್ರದ ನಿರ್ದೇಶಕಿಯಾಗಿದ್ದವರು ಡಾ||ಎಂ.ಎಸ್.ವಿಜಯ ಅವರು. ಹಾಸನ ಕೇಂದ್ರದ ಸಮಗ್ರವಾದ ಯಶಸ್ಸಿಗೆ ಅವರು ಕಾರಣರಾಗಿದ್ದರು. ಆ ಮೂವರು ಪ್ರತಿಭಾವಂತರನ್ನೂ ಸಮುದಾಯ ಅಧ್ಯಯನ ಕೇಂದ್ರವು 2002ರ ನವಂಬರ್‌ನಲ್ಲಿ ಸಂಪರ್ಕಿಸಿತು. 'ಸಂಕೇತಿ ಕೃಷಿ'ಯನ್ನು ಕುರಿತಾಗಿಯೇ ಸಂಕೇತಿ ಅಧ್ಯಯನ ಮಾಲೆಗೆ ಒಂದು ಸಂಪುಟವನ್ನು ಸಿದ್ಧಪಡಿಸಿಕೊಡುವಂತೆ ಕೋರಿತು. ಆ ಅಧಿಕಾರಿಗಳನ್ನು ಸಂಕೇತಿಗಳ ವಿಶಿಷ್ಟ ಕೃಷಿಯು ಎಷ್ಟು ಆಕರ್ಷಿಸಿತೆಂದರೆ ಅದು ಸಾರ್ವತ್ರಿಕವಾಗಿ ನೆಲೆಸಿರುವ ಸಮಗ್ರ ಸಂಕೇತಿಗಳ ಕೃಷಿ ಅಧ್ಯಯನವಾಗಿ ಬೆಳೆಯಿತು. ಅವರ ಸಂಶೋಧನೆಯ ಟಿಪ್ಪಣಿಗಳು ಎರಡು ಸಂಪುಟಗಳಷ್ಟಾದುವು. ಈಗ ಓದುಗರ ಮುಂದಿರುವುದು ಶ್ರೀ ಎನ್.ಕೇಶವಮೂರ್ತಿಯವರು ಸಂಕೇತಿ ಕೃಷಿಯ ಬಗೆಗೆ ನಡೆಸಿರುವ ಸಂಶೋಧನ ಕೃತಿ.

ಅಧ್ಯಯನ ವಿಸ್ತಾರ: ಶ್ರೀ ಕೇಶವಮೂರ್ತಿಯವರು ಈ ಅಧ್ಯಯನಕ್ಕಾಗಿ ಹಾಸನ ಜಿಲ್ಲೆಯಲ್ಲದೆ ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣಕನ್ನಡ, ಕೊಡಗು, ಮಂಡ್ಯ, ಮೈಸೂರು, ಬೆಂಗಳೂರು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಮಾಡಿದ್ದಾರೆ. ಊಟಿಯೂ ಈ ಪಟ್ಟಿಯಲ್ಲಿ ಸೇರಿದೆ. ಒಟ್ಟು 33 ನೆಲೆಗಳ 96 ಕೃಷಿಕರನ್ನು ಈ ಅಧ್ಯಯನಕ್ಕಾಗಿ ಸಂದರ್ಶಿಸಿಕೊಳ್ಳಲಾಗಿದೆ. ಪ್ರತಿ ಕೃಷಿಕ್ಷೇತ್ರದ ಪ್ರತ್ಯಕ್ಷ ಅವಲೋಕನ ಇದರ ಅಂಗವಾಗಿ ನಡೆದಿದೆ. ಪ್ರಾತ್ಯಕ್ಷಿಕೆಗಳ ಛಾಯಾಚಿತ್ರಗಳನ್ನೂ ಇದರಲ್ಲಿ ಯಥೇಚ್ಛವಾಗಿ ಒದಗಿಸಲಾಗಿದೆ.

ಸಾಂಪ್ರದಾಯಿಕವಾಗಿ ಬೆಳೆಸಿ ನಿರ್ವಹಿಸುತ್ತಿರುವ ಅಡಿಕೆ ತೋಟದ ಬೇಸಾಯದಿಂದ ತೊಡಗಿ, ಬಾಗಾಯ್ತಿನಲ್ಲಿಯೇ ವಿವಿಧ ಕಾಲಘಟ್ಟಗಳಲ್ಲಿ ನಡೆಸಿರುವ ಹೊಸ ಬೆಳೆಗಳ ಪ್ರಯೋಗಗಳ ಮಾಹಿತಿ ಇದರಲ್ಲಿ ಸೇರಿದೆ. ಹೊಲಗದ್ದೆಗಳಲ್ಲಿ ಕೂಡ ಸಾಂಪ್ರದಾಯಿಕವಾಗಿ ಬೆಳೆದ ರಾಗಿ, ಬತ್ತದ ಬೆಳೆಗಳಲ್ಲದೆ ವೈವಿಧ್ಯಪೂರ್ಣವಾದ ಗೃಹೋಪಯೋಗಿ ಬೆಳೆಗಳನ್ನೂ, ತರಕಾರಿಗಳನ್ನೂ, ವಾಣಿಜ್ಯ ಬೆಳೆಗಳನ್ನೂ ಈ ಅಧ್ಯಯನವು ಪರೀಕ್ಷಿಸಿದೆ.

ಸಂಕೇತಿಗಳು ಅನೂಚಾನವಾಗಿ ನೆಲೆಸಿದ ಜಿಲ್ಲೆಗಳಿಗೆ ಹೊರತಾಗಿ ಮಡಿಕೇರಿ, ಊಟಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮೊದಲಾದ ಎಡೆಗಳಲ್ಲಿ ಮಾಡಿರುವ ಕಾಫಿ, ಟೀ ಮೊದಲಾದ ಅಸಾಂಪ್ರದಾಯಿಕ ಕೃಷಿಯ ಸಾಹಸವನ್ನೂ ಇಲ್ಲಿ ಗಮನಿಸಲಾಗಿದೆ.

ಕೃಷಿಗೆ ಹೊಂದಿಕೊಂಡ ಗ್ರಾಮೀಣ ಬದುಕಿಗೆ ಬೇಸತ್ತು ಪಟ್ಟಣದ ಜೀವನಕ್ಕೆ ಹಾತೊರೆದವರು, ಅನಿವಾರ್ಯವಾಗಿ ತಮ್ಮ ಕೃಷಿಯನ್ನು ಕೊನೆಗೊಳಿಸಿಕೊಂಡವರು, ತಮ್ಮ ಗ್ರಾಮೀಣ ಕೃಷಿಯನ್ನು ಹೆಚ್ಚಿನ ಉತ್ಸಾಹ ಮತ್ತು ಕನಸುಗಾರಿಕೆಯಿಂದ ಮುಂದುವರಿಸುತ್ತಿರುವವರು, ನಗರವಾಸದ ಜಂಜಡಕ್ಕೆ ಹೇಸಿ ಮರಳಿ ಮಣ್ಣಿನ ವಾಸನೆಗೆ ಒಲಿದವರು, ನಗರವಾಸವನ್ನೂ ಅದರಲ್ಲಿನ ಹೋರಾಟವನ್ನೂ ಬಿಡದೆ ಕೃಷಿಯ ನೆಮ್ಮದಿಗಾಗಿ ಕೈಚಾಚಿ ನಿರ್ವಹಣೆ ಮಾಡುತ್ತಿರುವವರು - ಹೀಗೆ ನಡೆಯುತ್ತಿರುವ ಸಂಕೇತಿಗಳ ಕೃಷಿಸಂಬಂಧಿಯಾದ ತುಡಿತದ ಚಿತ್ರಣವೂ ಇಲ್ಲಿದೆ.

ಸ್ತ್ರೀಯರು ಪುರುಷರೊಂದಿಗೆ ಸಮಸಮವಾಗಿ ಕೃಷಿಕಾರ್ಯದಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ತೊಡಗಿಸಿಕೊಂಡಿರುವುದು ಕೃತಿಯ ಉದ್ದಕ್ಕೂ ಕಾಣುವ ಅಂಶ. ಕೆಲವೊಮ್ಮೆ ಸ್ತ್ರೀಯರು ಮುನ್ನಡೆ ಸಾಧಿಸಿ ಪುರುಷರಿಗೆ ಸರಿಮಿಗಿಲಾಗಿ ಕೃಷಿಸಾಧನೆ ಮಾಡಿರುವ ಚಿತ್ರವೂ ಇಲ್ಲಿದೆ.

ತಮ್ಮ ಕೃಷಿಸಾಧನೆಗಳಿಗಾಗಿ ವಿವಿಧ ಪ್ರಶಸ್ತಿಗಳನ್ನು ಪಡೆದು ಈ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿದವರ ಬಗೆಗಿನ ಮಾಹಿತಿ ಇಲ್ಲಿದೆ. ಕೃಷಿಗೆ ಹೊಂದಿಕೊಂಡ ವಿವಿಧ ಆಯಾಮಗಳು ಮತ್ತು ಉಪವೃತ್ತಿಗಳಲ್ಲಿ ಸಂಕೇತಿಗಳು ಸಾಧಿಸಿರುವ ಪರಿಣತಿಯ ವಿವರವೂ ಇಲ್ಲಿದೆ.

ಅಧ್ಯಯನ ಸ್ವರೂಪ: ಶ್ರೀ ಎನ್.ಕೇಶವಮೂರ್ತಿಯವರನ್ನು ಕೃಷಿಸಂಪುಟದ ರಚನೆಗಾಗಿ ಪ್ರಾರ್ಥಿಸಿಕೊಂಡಾಗ ಈ ಸಂಪುಟದ ಸ್ವರೂಪವು ಯಾರಿಗೂ ಸ್ಪಷ್ಟವಾಗಿರಲಿಲ್ಲ. ತಮ್ಮ ಅಧ್ಯಯನಕ್ಕೆ ತೊಡಗಿಕೊಳ್ಳುವ ಮೊದಲು ಕೇಶವಮೂರ್ತಿಯವರು ಸಂಕೇತಿ ಸಮುದಾಯ ಮತ್ತು ಅವರ ಕೃಷಿಯ ಪರಿಚಯ ಮಾಡಿಕೊಳ್ಳಲು ಪೂರ್ವಾಧ್ಯಯನ ಪ್ರವಾಸ ಮಾಡಿದರು, ಸಾರ್ವತ್ರಿಕವಾದ ಒಟ್ಟು ಸಮಾಜದ ಪ್ರಜ್ಞಾವಂತರೊಂದಿಗೆ ಚರ್ಚಿಸಿದರು. ತಮ್ಮ ಕೃತಿಯ ಸ್ವರೂಪದ ರೂಪುರೇಖೆಯನ್ನು ಕಲ್ಪಿಸಿಕೊಂಡರು. ಕ್ಷೇತ್ರಕಾರ್ಯಾಧ್ಯಯನವು ಮುಂದುವರಿದಂತೆ ಸಂದರ್ಶನ, ನೇರ ನಿರೂಪಣೆ, ಪರೋಕ್ಷ ನಿರೂಪಣೆಯ ತಂತ್ರಗಳನ್ನೆಲ್ಲ ಸಮನ್ವಯಗೊಳಿಸಿಕೊಂಡರು. ತಮ್ಮ ಮುಕ್ತ ಪ್ರಶ್ನಾವಳಿಗಳು ಅನುಭವವಿಸ್ತಾರದ ಕಾವಿನಲ್ಲಿ ಹೇಗೆ ವೈವಿಧ್ಯಪೂರ್ಣವಾಗಿ ಹೊಸ ರೂಪ ಪಡೆಯುತ್ತಿವೆ ಎಂಬುದನ್ನು ತಾವೇ ಕಂಡುಕೊಂಡರು, ಮಿತ ಕಾಲಾವಧಿಯಲ್ಲಿ ರೈತರೊಡನೆ ನಡೆಸುವ ಇಂಥ ಗಂಭೀರ ಸಂದರ್ಶನಗಳಲ್ಲಿ ಲೋಪ ಉಂಟಾಗಬಾರದೆಂದು ಭಾವಿಸಿ ಸಮಗ್ರವಾದ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿ ಅದರ ಪ್ರತಿಗಳನ್ನು ರೈತರಿಗೆ ಪೂರ್ವಭಾವಿಯಾಗಿ ಹಂಚಿದರು. ಹೊಸ ವಕ್ತೃ, ಹೊಸ ಬೆಳೆ, ಹೊಸ ಸವಾಲುಗಳಿಗೆ ಅನುಗುಣವಾಗಿ ತಮ್ಮ ಪ್ರಶ್ನಾವಳಿಯ ಚೌಕಟ್ಟಿಗೆ ಹೊಸ ಪಟ್ಟುಗಳನ್ನು ಸಮಯೋಚಿತವಾಗಿ ಸೇರಿಸಿದರು. ಕೊನೆಗೆ ಸಿದ್ಧವಾದ ಅವರ ಸಂಶೋಧನ ಪ್ರಬಂಧದ ಸ್ವರೂಪವು ಬೆರಗು ಹುಟ್ಟಿಸುವ ಆಕೃತಿಯನ್ನು ಕಂಡುಕೊಂಡಿತು. ಪ್ರತಿ ಸಂದರ್ಶನದ ಪ್ರಾರಂಭದಲ್ಲಿ ಅದರ ಸಾರಭೂತವಾದ ಇಲ್ಲವೆ ಗಮನ ಸೆಳೆಯಬೇಕಾದ ಮಾತು, ವಕ್ತೃವಿನ ಹಿನ್ನೆಲೆ ಮತ್ತು ಮಹತ್ತ್ವದ ಸಾರ, ವಕ್ತೃವಿನ ಕೌಟುಂಬಿಕ ಹಿನ್ನೆಲೆ - ಹಳ್ಳಿಯ ಪರಿಸರದ ಚಿತ್ರ - ಬೆಳೆಯ ಪರಿಣತ ಮಾಹಿತಿ - ಕೃಷಿ ಜೀವನವು ಒದಗಿಸಿದ ಜೀವನದೃಷ್ಟಿ - ಕೃಷಿಗೆ ಹೊಂದಿಕೊಂಡ ಇತರ ಮಾಹಿತಿ - ಇವು ನಿಯತವಾದ ಕ್ರಮದಲ್ಲಿ ಬಂದಿವೆ.

ಓದುಗನು ಪ್ರತಿ ಸಂದರ್ಶನದ ಪ್ರಾರಂಭದ ಸಾರಭೂತ ಮಾತುಗಳನ್ನಷ್ಟೇ ಓದಿದರೂ ಸಾಕು, ಸಂಕೇತಿ ಕೃಷಿಸಿದ್ಧಾಂತದ ಸ್ಪಷ್ಟ ದರ್ಶನವಾಗುತ್ತದೆ. ವಕ್ತೃವಿನ ಕೌಟುಂಬಿಕ ಹಿನ್ನೆಲೆಯ ವಿವರಗಳು - ಸಂಕೇತಿ ಸಮುದಾಯದ ವ್ಯಕ್ತಿಗಳು, ಕುಟುಂಬಗಳು, ಐತಿಹ್ಯಗಳು, ಜೀವನವಿಧಾನ, ಸಂಬಂಧಗಳ ಸ್ವರೂಪ - ಇವುಗಳ ವಿಸ್ತಾರವಾದ ಪ್ರಪಂಚದ ಪರಿಚಯ ಮಾಡಿಕೊಡುತ್ತವೆ. ಪ್ರತಿ ವಕ್ತೃವು ನೀಡಿರುವ ಕೃಷಿವಿಧಾನದ ಚಿತ್ರವು ಕಾಲ ದೇಶ ಸನ್ನಿವೇಶದ ಹಿನ್ನೆಲೆಯಲ್ಲಿ ವೈವಿಧ್ಯಪೂರ್ಣವಾಗಿದೆ. ವಿವಿಧ ವಕ್ತೃಗಳು ನೀಡಿರುವ ಈ ವಿವರಗಳು ಕೃಷಿಯ ಶಾಸ್ತ್ರೀಯ ಭಾಗಗಳು. ಎನ್.ಕೇಶವಮೂರ್ತಿಯವರ ಈ ಸಂಶೋಧನ ಕೃತಿಯು, ಸಂಕೇತಿ ಅಧ್ಯಯನ ಮಾಲೆಯಲ್ಲಿ (ಸಂಪುಟ-೨) ಬಂದ 'ಶತಮಾನದ ಪತ್ರಗಳು' ಎಂಬ ಕೃತಿಯಂತೆ ಹಲವು ಸಂಶೋಧನೆಗಳ ಆಶ್ರಯಸ್ಥಾನವಾಗುವ ಮಹತ್ತ್ವವನ್ನೂ ಪಡೆದಿದೆ.

ಸಾಂಪ್ರದಾಯಿಕ ಕೃಷಿಯ ಸಾಮಾನ್ಯ ಮಾಹಿತಿಯ ಸಂದರ್ಶನಗಳು ಸಂಕೇತಿ ಕೃಷಿಯ ಮೂಲಚಿತ್ರವನ್ನು ಕೊಡುತ್ತವೆ. ಪ್ರಯೋಗಶೀಲರ ಸಂದರ್ಶನಗಳು ಹೊಸ ತುಡಿತಗಳ ದಿಕ್ಕುದೆಸೆಗಳಿಗೆ ತೋರುಗಲ್ಲುಗಳಾಗಿವೆ. ಕಾಫಿ, ಟೀಯಂಥ ಹೊಸ ಬೆಳೆಗಳ ಸಾಹಸವು ಸಂಕೇತಿಗಳ ಅದಮ್ಯ ಕೃಷಿರಕ್ತಿಯ ಹೊಸ ಶಾಖೆಗಳಂತಿವೆ. ಪಟ್ಟಣಿಗರ ಕೃಷಿಯು ಕೇವಲ ಅವರ ಪೂರ್ವವಾಸನೆಯ ಸೆಳೆತದ ಪಳೆಯುಳಿಕೆಯಲ್ಲ, ನಗರ ಜೀವನದ ನೀರವತೆಯ ಪರಿಹಾರಸೂಚಿಯೂ ಹೌದು. ಈ ಸಂದರ್ಶನಗಳಲ್ಲಿ ವೇ.ಬ್ರ.ಶ್ರೀ ಅಶ್ವತ್ಥನಾರಾಯಣ ಅವಧಾನಿ, ಕೆ.ಕೆ.ವಿಶ್ವನಾಥ, ಡಾ.ರಾಮಕೃಷ್ಣ, ಕ್ಯಾಪ್ಟನ್ ಕೆ.ಕೆ.ವೆಂಕಟೇಶ್, ಬಿ.ಎನ್.ವಿ.ಸುಬ್ರಹ್ಮಣ್ಯ, ಟಿ.ಎನ್.ಸುಬ್ಬರಾವ್ ಮೊದಲಾದವರ ಸಂದರ್ಶನಗಳು ಸ್ಫೂರ್ತಿ ಮತ್ತು ಚಿಂತನೆಯ ಪ್ರಖರ ಕಿಡಿಗಳಾಗಿ ಅನುಭವದ ಮೂಸೆಯಿಂದ ಹೊರಬಿದ್ದಿವೆ. ಸಂಪ್ರಬಂಧಕ್ಕೆ ಹೊಸ ಆಯಾಮವನ್ನೇ ನೀಡಿವೆ.

ಕೇವಲ ಕೃಷಿಪ್ರೀತಿಯಿಂದ: ಇಷ್ಟೊಂದು ವೈವಿಧ್ಯಪೂರ್ಣವಾದ ಹಾಸುಬೀಸುಳ್ಳ ಕ್ಷೇತ್ರಸಂದರ್ಶನಗಳ ಮೂಲಕ ಕೇಶವಮೂರ್ತಿಯವರು ಸಂಕೇತಿ ಕೃಷಿಯ ನಾಡಿಗಳನ್ನು ಹಿಡಿಯುವ ಹರಸಾಹಸ ಮಾಡಿದ್ದಾರೆ. ಆಕಾಶವಾಣಿಯಂಥ ಅಗತ್ಯ ಸೇವೆಯನ್ನು ನಿರ್ವಹಿಸಿಕೊಂಡೂ ಪ್ರವಾಸ-ಸಂದರ್ಶನ-ಲೇಖನ ಮಾತ್ರವಲ್ಲದೆ ಸತತ ಚಿಂತನದ ತಪಸ್ಸು ಮಾಡಿದ್ದಾರೆ. ಈ ಬಗೆಗಿನ ಅವರ ಶ್ರದ್ಧೆಯು ಕೃಷಿಯ ಪರವಾದ ಅವರ ತೀವ್ರ ಮಿಡಿತದಿಂದಲೇ ಹುಟ್ಟಿಕೊಂಡಿದ್ದಾಗಿದೆ. ಅವರ ಅಪಾರ ತಾಳ್ಮೆ, ಕುತೂಹಲ, ಶ್ರಮಸಹಿಷ್ಣುತೆ, ತೊಡಗಿಕೊಳ್ಳುವಿಕೆ ಇವೆಲ್ಲವೂ ಅವರ ಕೃಷಿಪ್ರೀತಿಯಿಂದಲೇ ಬಂದಂಥವು. ಒಂದು ಉದ್ದೇಶಕ್ಕಾಗಿ -ಈ ದೇಶದ ಬೆನ್ನೆಲುಬಾದ ಕೃಷಿ ಮತ್ತು ಕೃಷಿಕರ ಹಿತಸಾಧನೆಯ -ಒಂದೇ ಉದ್ದೇಶಕ್ಕಾಗಿ ತಮ್ಮ ಅಮೂಲ್ಯವಾದ ಮೂರು ವರುಷಗಳನ್ನು ಸಂಕೇತಿ ಕೃಷಿಯ ಅಧ್ಯಯನಕ್ಕಾಗಿಯೂ ಮೀಸಲಿಟ್ಟಿದ್ದಾರೆ. ಭೌಗೋಳಿಕ ಪರಿಸರ, ಕೃಷಿಕನ ವ್ಯಕ್ತಿತ್ವ ಮತ್ತು ಕೌಟುಂಬಿಕ ಹಿನ್ನೆಲೆ, ಸಮಕಾಲೀನ ಕೃಷಿಯ ಸವಾಲುಗಳು ಮತ್ತು ಸಾಧ್ಯತೆಗಳು, ಕೃಷಿಕನ ಜೀವನದೃಷ್ಟಿ ಇವೆಲ್ಲವೂ ಬೇರೆಬೇರೆಯಾದ ಘಟಕಗಳಲ್ಲ, ಬದಲಿಗೆ ಒಟ್ಟು ಒಂದು ಕೃಷಿಸಂಸ್ಕೃತಿಯ ಹೆಣಿಗೆಗಳು ಎಂಬ ದೃಢಪ್ರಜ್ಞೆಯಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಿಸಿದ್ದಾರೆ, ಕಣಕಣದ ಮಾಹಿತಿಯನ್ನೂ ಹೆಕ್ಕಿ ತೆಗೆದಿದ್ದಾರೆ. ಅವನ್ನೆಲ್ಲ ತಮ್ಮ ಸರಳವೂ ನಿಖರವೂ ಹದವೂ ಆದ ಭಾಷೆಯಲ್ಲಿ ಮನಮುಟ್ಟುವಂತೆ ನಿರೂಪಿಸಿದ್ದಾರೆ. 'ಪೀಠಿಕೆ'ಯಲ್ಲಿ ತಮ್ಮ ಗುರಿ ಏನು? ಮಾರ್ಗ ಯಾವುದು? ಎಂಬುದರ ಹುಡುಕಾಟದಲ್ಲಿ ತೊಡಗಿಕೊಂಡು ತಮಗೆ ಈ ಸಂಶೋಧನೆಯ ಬಗೆಗೆ ಇರುವ ಬದ್ಧತೆಯನ್ನು ಪ್ರಕಟಿಸಿದ್ದಾರೆ. ತಮ್ಮ ದೀರ್ಘ ಸಂದರ್ಶನಗಳು, ಕಲೆ ಹಾಕಿದ ಅಪಾರ ಮಾಹಿತಿ, ಪ್ರಾತ್ಯಕ್ಷಿಕೆ ಮತ್ತು ಪಡೆದ ವಿಸ್ತಾರವಾದ ಅನುಭವದ ಹಿನ್ನೆಲೆಯಲ್ಲಿ ತಮಗಿರುವ ಕೃಷಿ ಪರಿಣತಿಯನ್ನು ಬಳಸಿಕೊಂಡು ಉಪಸಂಹಾರದಲ್ಲಿ ಸಂಕೇತಿಕೃಷಿಯ ಬಗೆಗೆ ತಮ್ಮೊಳಗಿನ ತಜ್ಞನೊಬ್ಬನ ನಿರ್ಣಾಯಕ ಮಾತುಗಳನ್ನು ಮಂಡಿಸಿದ್ದಾರೆ.

1/4 ಕ್ರೌನ್ ಆಕಾರದ ೪೮೨ ಪುಟಗಳಲ್ಲಿ ಈ ಸಂಪ್ರಬಂಧವು ಸಂಕೇತಿ ಕೃಷಿಯ ಸ್ಪಷ್ಟ ಚಿತ್ರಣ ಮೂಡಿಸುತ್ತದೆ, ಸಂಕೇತಿ ನೆಲೆಗಳ ಪ್ರವಾಸವನ್ನೂ ಮಾಡಿಸುತ್ತದೆ.

ಅಧ್ಯಯನದ ಕಾಲಘಟ್ಟ: ನವೆಂಬರ್ ೨೦೦೨ - ೨೦೦೫: 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬ ಈ ಅಧ್ಯಯನವು ಸಂಕೇತಿಕೃಷಿಯ ಯಾವ ಕಾಲಘಟ್ಟದ ಮೂರು ವರ್ಷಗಳಲ್ಲಿ ನಡೆದಿದೆ ಎಂಬುದನ್ನು ಅವಶ್ಯವಾಗಿ ಮನದಟ್ಟುಮಾಡಿಕೊಳ್ಳಬೇಕು.

ಸಂಕೇತಿಯೊಬ್ಬನು ಹುಟ್ಟುತ್ತಲೇ ತಾನು ಕಲಿಯಬೇಕಾಗಿರುವುದು ವೇದಶಾಸ್ತ್ರಗಳನ್ನು, ತನ್ನದು ಕಠಿಣ ದುಡಿಮೆಯ ವ್ರತ, ತನ್ನ ವೃತ್ತಿ ಬಾಗಾಯ್ತು, ತನ್ನದು ವೈದಿಕ ದಿನಚರಿ, ತನ್ನ ಜೀವನದ ಉದ್ದೇಶವು ನೆಮ್ಮದಿಯ ಬಾಳು, ತನಗೆ ಬೇಕಾದುದು ಅದ್ವೈತದ ಆಧ್ಯಾತ್ಮಿಕತೆ ಎಂಬುದನ್ನು ಖಚಿತಪಡಿಸಿಕೊಂಡಿರುತ್ತಿದ್ದ ದಿನಗಳು ೧೯ನೆಯ ಶತಮಾನದ ಕೊನೆಯವರೆಗೆ ದೃಢವಾಗಿ ಮುಂದುವರಿದವು. ಇಡೀ ಸಮುದಾಯದಲ್ಲಿ ಆವರೆಗಿನ ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಜೀವನವು ಪೂರ್ಣವಾಗಿ ದೈಹಿಕಶ್ರಮ ಮತ್ತು ಆಧ್ಯಾತ್ಮಿಕತೆಯಿಂದ ಕೂಡಿತ್ತು.

೨೦ನೆಯ ಶತಮಾನದ ಮೊದಲ ಪಾದದಲ್ಲಿ ಲೌಕಿಕ ಪ್ರಾಧಾನ್ಯದ ಕಿಟಕಿಗಳು ಅಲ್ಲಲ್ಲಿ ತೆರೆದುಕೊಳ್ಳತೊಡಗಿದವು. ಎರಡನೆಯ ಪಾದದಲ್ಲಿ ಅದರ ಬಾಗಿಲುಗಳೂ ತೆರೆದುಕೊಳ್ಳತೊಡಗಿದವು. ಆದರೆ ಈ ಅವಧಿಯಲ್ಲಿ ಹೊಸ ಶಿಕ್ಷಣ ಮತ್ತು ನಗರೀಕರಣದ ಬಗೆಗೆ ಮೈಚಳಿಬಿಟ್ಟ ಆಕರ್ಷಣೆಯೇನೂ ಇರಲಿಲ್ಲ. ವಾಸ್ತವವಾಗಿ ಆ ದಿಕ್ಕಿನಲ್ಲಿ ಕಾಲಿಟ್ಟ ಆ ಕೆಲವರಲ್ಲಿಯೂ ಬಹುಪಾಲು ಜನರು ಅರೆಮನಸ್ಸಿನಿಂದಲೂ ವೈದಿಕ ಪರಂಪರೆಯಿಂದ ದೂರಸರಿಯುತ್ತಿರುವರೆಂಬ ಪಾಪಪ್ರಜ್ಞೆಯಿಂದಲೂ ಹಾಗೆ ಮಾಡಿದರು. ಆ ಮೂಲಕ ವೇದಾಧ್ಯಯನದ ಅವಕಾಶವನ್ನು ಕಳೆದುಕೊಂಡರೂ ಸಣ್ಣಕಾರಣಗಳನ್ನೇ ಮುಂದೊಡ್ಡಿ ಕೃಷಿಯ ಸೆಳೆತಕ್ಕೆ ಸ್ವಯಂಪ್ರೇರಣೆಯಿಂದ ಒಪ್ಪಿಸಿಕೊಂಡರು. ಅಂಥವರೆಲ್ಲ ಕೃಷಿಗೆ ಮರಳಿದರು. ೧೯೫೦-೬೦ರವರೆಗೂ ಪೂರ್ಣವಾದ ದೈಹಿಕ ಶ್ರಮ ಮತ್ತು ಆಧ್ಯಾತ್ಮಿಕ ಪರಂಪರೆಯ ದಟ್ಟಛಾಯೆಯೇ ಸಂಕೇತಿ ರೈತರ ಬದುಕನ್ನು ಆವರಿಸಿತ್ತು. ದಟ್ಟ ವೈದಿಕಪರಂಪರೆಯೂ ಮುಂದುವರಿದಿತ್ತು.

ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಹುಟ್ಟಿದ ಸಂಕೇತಿ ಮಕ್ಕಳಿಗೆ ತಾವು ಶಾಲೆಗೆ ಸೇರಿ ಶಿಕ್ಷಣ ಹೊಂದಬೇಕೆಂಬ ಗುರಿ ಸ್ಪಷ್ಟವಾಗಿಹೋಗಿತ್ತು. ಆಧುನಿಕ ಶಿಕ್ಷಣ-ನೌಕರಿ-ನಗರೀಕರಣ-ಸ್ತ್ರೀಶಿಕ್ಷಣ -ಸ್ತ್ರೀ ಉದ್ಯೋಗ ಹೀಗೆ ಅದು ಅಲೆ ಅಲೆಯಾಗಿ ಸಂಕ್ರಮಿಸಿತು. ಆದರೂ ೨೦ನೆಯ ಶತಮಾನದ ಮೂರನೆಯ ಪಾದದ ಈ ಮಕ್ಕಳಿಗೆ ಬಾಗಾಯ್ತು, ಖುಷ್ಕಿ, ವೈದಿಕ ಪರಿಸರ, ಪಾರಂಪರಿಕ ಗ್ರಾಮೀಣ ಜೀವನದ ಸಂಸ್ಕಾರವಿತ್ತು, ಆ ಕಾರಣದಿಂದ ಆ ಬಗೆಗಿನ ಒಲವೂ ಇತ್ತು. ಆ ಅವಧಿಯಲ್ಲಿ ನೌಕರಿಗಾಗಿ ಗ್ರಾಮ ತೊರೆದವರ ಸಂಖ್ಯೆ ಹೆಚ್ಚಿತು. ಕೃಷಿಕರು ದೈಹಿಕ ಶ್ರಮದ ಜಾಗದಲ್ಲಿ ಯಂತ್ರಗಳ ಬಳಕೆ ಮಾಡಿಕೊಳ್ಳುವುದಕ್ಕೆ ಅವಕಾಶವಾಯಿತು. ನಗರಸಂಪರ್ಕ ಮತ್ತು ನಗರಸಂಸ್ಕಾರ ದಟ್ಟವಾಯಿತು. ಜಾಗತಿಕ ಒತ್ತಡದ ಸನ್ನಿವೇಶದಲ್ಲಿ ಆರ್ಥಿಕತೆಗೆ ಒತ್ತುಕೊಟ್ಟರು. ಬಾಗಾಯ್ತಿನ ಆಶ್ರಮ ಸಂಸ್ಕಾರವು ಶಿಥಿಲವಾಗತೊಡಗಿತು.

೨೦ನೆಯ ಶತಮಾನದ ನಾಲ್ಕನೆಯ ಪಾದವು ವೈದಿಕತೆ ಮತ್ತು ಬಾಗಾಯ್ತು ಧರ್ಮದ ಶೈಥಿಲ್ಯದ ಕಾಲ. ಆರ್ಥಿಕ ಪ್ರಾಧಾನ್ಯದ ಕಾಲ. ನಗರೀಕರಣ ಹೆಚ್ಚಿದ ಕಾಲ. ಹಳ್ಳಿಯವರೂ ನಗರ ಸಂಸ್ಕೃತಿಗೆ ಪಕ್ಕಾದ ಕಾಲ. ಕೃಷಿಕರೂ ವೈದಿಕರೂ ಕೀಳರಿಮೆಗೆ ಬಿದ್ದ ಕಾಲ.

೨೦೦೨ರ ನವೆಂಬರ್‌ನಿಂದ ೨೦೦೫ರ ನವೆಂಬರ್‌ವರೆಗೆ ನಡೆದ ಅಧ್ಯಯನದ ಸಂದರ್ಭದಲ್ಲಿ ಶ್ರೀ ಎನ್.ಕೇಶವಮೂರ್ತಿಯವರಿಗೆ ದೊರೆತ ವಕ್ತೃಗಳು ೨೫ ರಿಂದ ೯೫ ವರ್ಷಗಳ ಅಂತರದವರು; ೨೦ನೆಯ ಶತಮಾನದ ವಿವಿಧ ಮಜಲುಗಳ ಪ್ರತಿನಿಧಿಗಳು. ಅಂದರೆ ಪೂರ್ಣ ದೈಹಿಕ ಶ್ರಮವಿದ್ದ ಬಾಗಾಯ್ತು ಧರ್ಮವನ್ನೂ ಅಧ್ಯಾತ್ಮವನ್ನೂ ಸಮಾಜಧರ್ಮವನ್ನೂ ಸಮರಸಗೊಳಿಸಿಕೊಂಡ ಬಾಳಿನ ಇಳಿಗಾಲದ ಅವಸ್ಥೆಯ ಪ್ರತಿನಿಧಿಗಳು. ಆದರೆ ಈ ಇಳಿಗಾಲದ ಚಿತ್ರವೂ ಸಂಕೇತಿ ಸಮುದಾಯದ ಕೃಷಿ ಜೀವನದ ವೈಶಿಷ್ಟ್ಯ, ಅಧ್ಯಾತ್ಮಪ್ರಚೋದಿತ ಚಿಂತನ ವಿಧಾನ, ದೈಹಿಕ ಮತ್ತು ಬೌದ್ಧಿಕ ಕಸುವು ಇವುಗಳ ವಾಸನಾಶೇಷವನ್ನು ಸಮರ್ಥವಾಗಿ ಪ್ರಕಟಿಸಿದೆ. ಸಂಕೇತಿ ಬಾಗಾಯ್ತು ಸಂಸ್ಕೃತಿಯ ಪುನರುಜ್ಜೀವನದ ಸಾಧ್ಯತೆ ಮತ್ತು ಅಗತ್ಯಕ್ಕೆ ಇಂಬುಕೊಟ್ಟಿದೆ.

ಹಲವು ಕುದಿತಗಳ ನಡುವೆ ಶೋಧನೆಯ ಯಶಸ್ಸು: ಈ ಅಧ್ಯಯನ ನಡೆದ ಕಾಲದಲ್ಲಿ ರೈತರು ಹಲವು ಸವಾಲುಗಳಿಗೂ ಗೊಂದಲಗಳಿಗೂ ಪಕ್ಕಾಗಿದ್ದರು. ಬರಗಾಲ, ಮಾರುಕಟ್ಟೆಯ ಅನಿಶ್ಚಿತತೆ, ವಿದ್ಯುಚ್ಛಕ್ತಿಯ ಕಣ್ಣಾಮುಚ್ಚಾಲೆ, ಗ್ರಾಮೀಣ ಪ್ರದೇಶಗಳಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ, ನಗರದ ಹೊಸ ಗಾಳಿಯ ಆಕರ್ಷಣೆ, ನಗರ ಜೀವನದ ನಡುವೆಯೇ ಮರುಕಳಿಸಿದ ಕೃಷಿ ವಾಸನೆ, ಕೃಷಿಯ ಸಾಂಪ್ರದಾಯಿಕ ಮಾರ್ಗದ ಬಗೆಗಿನ ಅಂಟು, ಅದೇ ಹೊತ್ತಿನಲ್ಲಿ ಹೊಸ ಆರ್ಥಿಕ ಅಗತ್ಯಗಳಿಗಾಗಿ ವಾಣಿಜ್ಯಬೆಳೆಗಳ ತಡಕಾಟ, ಹೊಸ ರಾಜಕೀಯ ಸಾಮಾಜಿಕ ಒತ್ತಡಗಳು, ಆಧುನಿಕ ಶಿಕ್ಷಣ, ನೌಕರಿ, ಕೃಷಿ ಸಂಶೋಧನೆಗಳಲ್ಲಿ ಕೃಷಿಯಷ್ಟೇ ಗಂಭೀರವಾಗಿಯೂ ಅರ್ಥಪೂರ್ಣವಾಗಿಯೂ ತೊಡಗಿಸಿಕೊಳ್ಳಬಲ್ಲ ಸತ್ತ್ವ-ಇವೆಲ್ಲವೂ ಒಟ್ಟಾಗಿ ಉಂಟುಮಾಡಿರುವ ಕುದಿತದ ನಡುವೆಯೇ ಸಂಕೇತಿ ಕೃಷಿ ಮತ್ತು ಅದಕ್ಕೆ ಹೊಂದಿಕೊಂಡ ಬಾಳಿನ ಮೂಲಸ್ವರೂಪವನ್ನೂ ಸತ್ತ್ವವನ್ನೂ ಶೋಧಿಸುವ ಕೆಲಸವನ್ನು ಶ್ರೀ ಎನ್.ಕೇಶವಮೂರ್ತಿ ಯಶಸ್ವಿಯಾಗಿ ಮಾಡಿದ್ದಾರೆ. ಸಂಕೇತಿ ಸಮುದಾಯಕ್ಕೂ, ಒಟ್ಟು ಕೃಷಿಕವರ್ಗಕ್ಕೂ ಇದೊಂದು ದಾಖಲೆಯ ಕೊಡುಗೆ. ಅದಕ್ಕಾಗಿ ಶ್ರೀ ಎನ್.ಕೇಶವಮೂರ್ತಿ ಯವರನ್ನು ಸಮುದಾಯ ಅಧ್ಯಯನ ಕೇಂದ್ರವು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

೧೫.೮.೨೦೦೯ **ಡಾ||ಬಿ.ಎಸ್.ಪ್ರಣತಾರ್ತಿಹರನ್**

ಮೈಸೂರು ಪ್ರಧಾನ ಸಂಪಾದಕ

ಮುನ್ನುಡಿ

ಹೊಸಗನ್ನಡ ಸಾಹಿತ್ಯದಲ್ಲಿ ಆತ್ಮಕಥನ ಒಂದು ವಿಶಿಷ್ಟ ಸಾಹಿತ್ಯಪ್ರಕಾರ. ಆತ್ಮಕಥೆ, ಜೀವನ ಚರಿತ್ರೆಗಳು ಹೊಸಗನ್ನಡ ಗದ್ಯಕ್ಕೆ ತಮ್ಮವೇ ಆದ ಕೊಡುಗೆ ನೀಡಿವೆ. ನವರತ್ನ ರಾಮರಾಯರ 'ಕೆಲವು ನೆನಪುಗಳು', ಮಾಸ್ತಿಯವರ 'ಭಾವ', ಕುವೆಂಪುರವರ 'ನೆನಪಿನ ದೋಣಿಯಲ್ಲಿ', ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು' - ಮುಂತಾದ ಅನೇಕ ಪ್ರಸಿದ್ಧ ಆತ್ಮಕಥನಗಳು ಕನ್ನಡ ಸಾಹಿತ್ಯ ವಲಯದಲ್ಲಿ ಜನಪ್ರಿಯವಾಗಿದ್ದು ಇಂದಿಗೂ ಮನನೀಯವಾಗಿವೆ. ಧಾರವಾಡದ ಮಿಂಚಿನಬಳ್ಳಿ ಪ್ರಕಾಶನದವರು 'ಕಂನಾಡ ಸಾಹಿತ್ಯಜ್ಞರ ಆತ್ಮಕಥನ' ಪ್ರಕಟಿಸಿ ಸಾಹಿತ್ಯಲೋಕಕ್ಕೆ ಆತ್ಮಕಥೆಯ ರುಚಿ ಉಣಬಡಿಸಿದ ತರುವಾಯ ಕನ್ನಡದಲ್ಲಿ ಈ ಪ್ರಕಾರ ಹೆಚ್ಚು ಪ್ರಚಲಿತವಾದಂತೆ ಕಾಣುತ್ತದೆ. ಇದು ಸಾಹಿತಿಗಳ ಮಾತಾದರೆ ಆತ್ಮಕಥನ - ಕೃಷಿಕರ ಮುಖದಿಂದ ಮೂಡುವ ಗಾಥೆಯಾಗಿ ಅವರ ಬದುಕಿನ ರಾಗ ಭಾವಗಳ, ನೋವು-ನಲಿವುಗಳ ನೆನಪಿನ ಸುಂದರ ಅಭಿವ್ಯಕ್ತಿಯಾಗಿ, ಮಣ್ಣಿನ ಸುಗಂಧದ ಕುಸುಮವಾಗಿ ಸಾಮಾನ್ಯ ಹಾಗೂ ಅಸಾಮಾನ್ಯ ಕೃಷಿಕರ ಸತ್ಯಕಥನವಾಗಿ ಶ್ರೀ ಎನ್.ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಕೃತಿಯಲ್ಲಿ ಸಂದರ್ಶನ ರೂಪದಲ್ಲಿ ಮೈತಳೆದಿದೆ. ನಮ್ಮ ಸಾಹಿತಿಗಳ ಬದುಕು, ಪರಿಶ್ರಮ, ಸಾಧನೆ, ಅಂದಂದಿನ ಸಾಹಿತ್ಯದ ಅಭಿರುಚಿಗಳು, ಆಶಯಗಳನ್ನು ತಿಳಿಯಲು ಅಲ್ಲಿ ಆತ್ಮಕಥನ ಸಹಕಾರಿಯಾದಂತೆ ಪ್ರಸ್ತುತ ಕೃತಿಯಲ್ಲಿ ಸಂಕೇತಿ ಸಮುದಾಯದ ಮಣ್ಣಿನಮಕ್ಕಳ ವ್ಯವಸಾಯದ ಹುಮ್ಮಸ್ಸಿನ, ಹೋರಾಟದ ಬಾಳು, ಸಾಂಸ್ಕೃತಿಕ ಆವರಣದ ಬದುಕಿನ ವಿಕಾಸ ತಿಳಿಯಲು ಇಲ್ಲಿ ಸಹಕಾರಿಯಾಗಿದೆ.

ಸುಮಾರು ೫೦೦ ಪುಟಗಳ ಈ ಕೃತಿಯಲ್ಲಿ ೩೩ ಪ್ರದೇಶಗಳ ೯೬ ಕೃಷಿಕರ ಕೃಷಿಜೀವನದ ಆಗುಹೋಗುಗಳ ಆತ್ಮನಿವೇದನೆಯಿದ್ದು, ಕನ್ನಡದ 'ಸಂದರ್ಶನ ಸಾಹಿತ್ಯ' ಎಂದು ಕರೆಯಬಹುದಾದ ಒಂದು ನೂತನ ಪ್ರಯೋಗ ಇದಾಗಿದೆ. ಶ್ರೀ ಎನ್.ಕೇಶವಮೂರ್ತಿಯವರು ಆಕಾಶವಾಣಿ ಕಲಾವಿದರಾಗಿ, 'ಕೃಷಿರಂಗ' ಕಾರ್ಯಕ್ರಮದ ಜಯಣ್ಣನಾಗಿ ರೈತರಿಗೆ ಮಾತ್ರವಲ್ಲದೆ ಕರ್ನಾಟಕದ ಆಕಾಶವಾಣಿ ಶ್ರೋತೃಗಳಿಗೆಲ್ಲಾ ಚಿರಪರಿಚಿತರಾದವರು. ಪತ್ರಿಕೆಗಳಲ್ಲಿ ಲೇಖನಗಳ ಮೂಲಕ ಬರಹಗಾರನ ಬಲುಹನ್ನು, ವೈಚಾರಿಕತೆಯನ್ನು ತೋರಿರುವವರು. ಸಂಕೇತಿ ಕೃಷಿಯ ಆಳ ಅಗಲದ ವಿವಿಧ ನೆಲೆಗಳನ್ನು ಅಧ್ಯಯನ ಮಾಡಲು, ಗ್ರಂಥ ರಚಿಸಲು ಡಾ.ಪ್ರಣತಾರ್ತಿಹರನ್ ಅವರ ಸೂಚನೆ ಸಹಕಾರ ಕಾರಣವಾಗಿ ಸಾಧ್ಯಾಸಾಧ್ಯತೆಗಳ ವಿಚಾರ ನಡೆದು ಇಂಥ ಒಂದು ಸಾಹಸದ ಕಾರ್ಯಕ್ಕೆ ಕೈಹಚ್ಚಿ ಯಶಸ್ವಿಯಾಗಿದ್ದಾರೆ. ಒಂದು ಜನಾಂಗದ ಕೃಷಿಜೀವನವನ್ನು ಕೃಷಿಕರ ಮನೆಬಾಗಿಲಿಗೆ ಹೋಗಿ ಅವರೊಡನೆ ಕಲೆತು ಬೆರೆತು ಸಂದರ್ಶಿಸಿ, ಧ್ವನಿ ಮುದ್ರಿಸಿಕೊಂಡು ಮತ್ತೆ ಅದಕ್ಕೆ ಉಚಿತ ಲಿಖಿತರೂಪ ಕೊಟ್ಟು, ಸಂಕೇತಿ ಕೃಷಿ ಬದುಕಿನ ವಿಸ್ತಾರ, ವೈಭವ, ವೈವಿಧ್ಯಗಳ ಅದ್ಭುತ ಚಿತ್ರಣ ಮನಮುಟ್ಟುವಂತೆ ಕಟ್ಟಿಕೊಟ್ಟಿದ್ದಾರೆ. ಲೇಖಕರು ಹೇಳುವಂತೆ ಈ ಬೃಹತ್ಕೃತಿ- 'ಕೃಷಿಯನ್ನೇ ತಮ್ಮ ಉಸಿರನ್ನಾಗಿಸಿ ಬದುಕಿದ ಮಹನೀಯರ ವ್ಯವಸಾಯದ ಇತಿಹಾಸದ ಸಂಶೋಧನೆ '. ಇಂಥ ಕೃತಿಯೊಂದನ್ನು ರಚಿಸಬೇಕೆಂದಾದಾಗ ಸಂದರ್ಶನಕ್ಕೆ ಮುನ್ನ ಲೇಖಕರಿಗೆ ಸಂಕೇತಿ ಕೃಷಿ ಬದುಕಿನ ಬಗೆಗೆ ಉಂಟಾಗಿರುವ ಪ್ರಶ್ನೆಗಳು, ಸಂದೇಹಗಳು (ಸಂಕೇತಿಗಳು ಕೇವಲ ಬಾಗಾಯ್ತನ್ನು ಮಾತ್ರ ಅವಲಂಬಿಸಿದ್ದು ಏಕೆ? ಕೃಷಿ ಮಾಡುತ್ತಲೇ ವೇದವನ್ನೂ, ಸಂಗೀತವನ್ನೂ ಅಭ್ಯಾಸ ಮಾಡುವ ಸಂಪ್ರದಾಯ ಬಂದುದು ಹೇಗೆ? ಇತ್ಯಾದಿ) ಅವರ ಸಂಶೋಧನೆಯ ಹಾದಿಗೆ ದಾರಿದೀಪವಾಗಿ ಅಧ್ಯಯನ ಸುಗಮವಾಗಿ ಸಾಗಲು ನೆರವಾಗಿರುವುದು ಅರಿವಿಗೆ ಬರುತ್ತದೆ. ಕಾಲದಿಂದಲೂ ಸಂಕೇತಿಗಳು ವ್ಯವಸಾಯದೊಡನೆ ವೇದಾಭ್ಯಾಸ, ಪೌರೋಹಿತ್ಯ, ಸಂಗೀತ, ವೈದ್ಯ ಇನ್ನಿತರ ವೃತ್ತಿಗಳನ್ನು ನಡೆಸುತ್ತಾ ಬ್ರಾಹ್ಮಣವರ್ಗದಲ್ಲಿ ತಮ್ಮದೇ ಆದ ವೈಶಿಷ್ಟ್ಯ ಉಳಿಸಿಕೊಂಡು ಬಂದರು. ಕಾಲಕ್ರಮೇಣ ಕೃಷಿಯನ್ನು ಏಕೆ ಕಡೆಗಣಿಸಿದರು? ಎಂಬುದೇ ಲೇಖಕರಾದ ಶ್ರೀ ಎನ್.ಕೇಶವಮೂರ್ತಿಯವರ ಇತಿಹಾಸ ಸಂಶೋಧನೆಗೆ ನೆರವಾಗಬಹುದಾದ ಕೃತಿಯಲ್ಲಿನ ಮೂಲಭೂತ ಪ್ರಶ್ನೆ. ಸಂಕೇತಿ ಕೃಷಿ ನಶಿಸಲು 'ಉಳುವವನಿಗೇ

ಭೂಮಿ' ಎಂಬ ಸರ್ಕಾರದ ಕಾನೂನು, ಆಧುನಿಕ ಶಿಕ್ಷಣ ಪದ್ಧತಿ, ವಿಜ್ಞಾನ-ತಂತ್ರಜ್ಞಾನಗಳ ಆವಿಷ್ಕಾರದ ಪ್ರಭಾವ, ನಗರ ಜೀವನದ ಆಕರ್ಷಣೆ ಮುಂತಾದ ಕಾರಣಗಳು ಸುವ್ಯಕ್ತವಾಗಿದ್ದು, ಇವು ಎಲ್ಲ ಬ್ರಾಹ್ಮಣ ವರ್ಗದವರಿಗೂ ಅನ್ವಯಿಸುವುದಾಗಿದ್ದು ವಿಶೇಷವಾಗಿ ಸಂಕೇತಿ ವರ್ಗಕ್ಕೆ ಜ್ಞಾತ, ಅಜ್ಞಾತ ನಿಮಿತ್ತಗಳೇನಾದರೂ ಉಂಟೇ ಎಂಬುದನ್ನು ತಿಳಿಯಲು ಲೇಖಕರು ಒಂದು ಸಿದ್ಧ ಪ್ರಶ್ನಾವಳಿಯನ್ನು ಸಂದರ್ಶನಕ್ಕೆ ಅಳವಡಿಸಿಕೊಂಡಿದ್ದಾರೆ. ಪ್ರತಿ ಕೃಷಿಕನ ವಂಶದ ಕೌಟುಂಬಿಕ ಹಿನ್ನೆಲೆ, ಪರಿಸರ, ಪತ್ನಿಯ ಸಹಕಾರ, ಬೆಳೆಗಳು, ಬೆಳೆಯುವ ವಿಧಾನ, ಮಕ್ಕಳ ಭವಿಷ್ಯ, ಸಂಪ್ರದಾಯ ಇತ್ಯಾದಿ ಮಾನದಂಡಗಳೊಡನೆ ಸಂದರ್ಶನಕ್ಕೆ ಸಜ್ಜಾಗಿ ಸಂದರ್ಶಿಸುವ ವ್ಯಕ್ತಿಗೆ ಸಂದರ್ಭಕ್ಕೆ ಹೊಂದುವಂತೆ ಪ್ರಶ್ನೆಗಳನ್ನು ಎಸೆದು ಉತ್ತರ ಪಡೆದು ಆತ್ಮಕಥೆಗಳಿಂದ ಅಪಾರ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಸಂದರ್ಶಿಸಿದವರ ಕೃಷಿ ಮುಂದುವರೆಯುವ ಬಗ್ಗೆ ಸಾಮಾನ್ಯವಾಗಿ ಲೇಖಕರಿಗೆ ಕುತೂಹಲವಿರುವುದು ಎಲ್ಲ ಸಂದರ್ಶನಗಳಲ್ಲೂ ವೇದ್ಯವಾಗುವ ವಿಚಾರವಾಗಿದ್ದು ಕೆಲವೆಡೆ ಪ್ರತ್ಯಾಶೆ ಕೆಲವೆಡೆ ನಿರಾಶೆಗಳು ಮೂಡುವುದೂ ಉಂಟು. ಸಂಕೇತಿಗಳು ಸಮಾಜದ ಬೇರೆ ಯಾವ ಕ್ಷೇತ್ರದಲ್ಲಿ ಬೆಳೆದರೂ ಕೃಷಿಯನ್ನು ಮಾತ್ರ ನಿಲ್ಲಿಸಬಾರದು ಎಂಬ ಲೇಖಕರ ಕಾಳಜಿ, ಕಳಕಳಿ ಗ್ರಂಥದ ತುಂಬೆಲ್ಲಾ ಎದ್ದು ಕಾಣುತ್ತಿದ್ದು ಅವರ ಆಳವಾದ ಶೋಧನೆಗೆ ನೆರವಾಗಿದೆ.

ಕೃಷಿಕರ ಸಂದರ್ಶನ ಅವರ ಮನೆಗಳಲ್ಲಿ, ಕೆಲವೊಮ್ಮೆ ತೋಟದ ಸಹಜ ಪರಿಸರದಲ್ಲಿ ನಡೆದಿದ್ದು ಕೃಷಿಯಲ್ಲಿ ಮಹಿಳೆಯರ ಪಾಲೂ ಸಾಕಷ್ಟಿರುವುದರಿಂದ ಅಲ್ಲಲ್ಲಿ ಅವರೂ ಆಗಾಗ ಭಾಗಿಯಾಗಿರುತ್ತಾರೆ. ಇಂಥ ಒಂದು ಕೃತಿಯನ್ನು ಓದುವ ಓದುಗ ಏನನ್ನು ನಿರೀಕ್ಷಿಸುತ್ತಾನೆ ಎಂದು ಬರಹಗಾರರು ಚಿಂತನೆ ನಡೆಸಿದ್ದಾರೆ. ಏಕೆಂದರೆ ಕೃತಿ ಕಡೆಗೆ ಸಹೃದಯನನ್ನು ಮುಟ್ಟಬೇಕು. ಓದುಗರ ಭಾವನೆಗಳಿಗೆ ಸ್ಪಂದಿಸುವ ಸಾಹಿತ್ಯವಾಗಬೇಕು. 'ವ್ಯಕ್ತಿ ಮುಖ್ಯವೋ, ವಿಷಯ ಮುಖ್ಯವೋ' - ಎಂಬ ವಿಚಾರವೂ 'ಸಂದರ್ಶನ ಸಾಹಿತ್ಯ'ದಲ್ಲಿ ಚರ್ಚಿತವಾಗಬೇಕು. ವ್ಯಕ್ತಿ ವಿಚಾರಗಳು ಪ್ರಾಸಂಗಿಕವಾದರೂ ಇಂಥ ಕೃತಿಗಳಲ್ಲಿ ವ್ಯಕ್ತಿಗಳಿಂದಲೇ ಕೃಷಿ ಬದುಕಿನ ಸ್ವರೂಪ ನಿರ್ಣಯವಾಗಬೇಕಾಗಿರುವುದರಿಂದ ವ್ಯಕ್ತಿಗಳ ಪಾತ್ರವೂ ಅಷ್ಟೇ ಗಮನಾರ್ಹವಾಗುತ್ತದೆ. ವ್ಯಕ್ತಿಚಿತ್ರಣ ಸಂಕೇತಿ ಬದುಕಿನ ಸಾಮುದಾಯಿಕ ಸಮಗ್ರಚಿತ್ರಣಕ್ಕೆ ಇರುವ ಏಕೈಕ ಆಧಾರವಾಗಿದ್ದು ಪ್ರಸ್ತುತ ಕೃತಿಯಲ್ಲಿ ಸಂದರ್ಭಕ್ಕೆ ತಕ್ಕಂತೆ ಬಹುಮಟ್ಟಿಗೆ ಪೂರಕವಾಗಿದೆ. 'Honest criticism and sensitive appreciation is directed not upon the poet but upon the poetry' (T.S.Eliot) - ಎಂಬ ಮಾತು ಸಾಹಿತ್ಯವಲಯಕ್ಕೆ ಸರಿ. ಆದರೆ, ಕೃಷಿಕರನ್ನೇ ಗೌಣ ಮಾಡಿ ಸಂಕೇತಿ ಕೃಷಿಯ ಇತಿಹಾಸದ ವಿಕಾಸವನ್ನು ಅನ್ವೇಷಿಸುವುದು ಸಂಶೋಧನೆಯ ಮಾರ್ಗವಲ್ಲ. ಹಾಗಾಗಿ ಸಂದರ್ಶನದಲ್ಲಿ ಪ್ರಶ್ನೆಗಳನ್ನು ಕೇಳುವುದು, ಮಾಹಿತಿ ಪಡೆಯುವುದು ಕೆಲವೊಮ್ಮೆ ಚರ್ವಿತಚರ್ವಣವೆನಿಸಿದರೂ ಅನಿವಾರ್ಯವಿದ್ದು ಕೃಷಿಕರು ಹೇಳುವ ಆತ್ಮಕಥೆಗಳು ವ್ಯಕ್ತಿಚಿತ್ರಗಳೂ ಆಗಿ ಕಡೆಗೆ ಒಟ್ಟಾರೆ 'ಸಂಕೇತಿ ಕೃಷಿಯ ಸಾಂಸ್ಕೃತಿಕ ಬದುಕಿನ' ಚಿತ್ರವನ್ನೇ ಕಂಡಂತಾಗುತ್ತದೆ.

'ಸಂದರ್ಶನ ಸಾಹಿತ್ಯ' ಕೃತಿಯೊಂದರ ರಚನೆ ಒಂದು ಸಾಹಸಮಯವಾದ ಸಾಧನೆ. ದೈಹಿಕ ಶ್ರಮ, ಅಪಾರ ಶ್ರದ್ಧೆ, ಅತ್ಯಂತ ಸಂಯಮ ಹಾಗೂ ಕೃಷಿ ಬದುಕಿನ ಅನನ್ಯ ಚಿಂತನ ಬಯಸುವ ಈ 'ಕ್ಷೇತ್ರಕಾರ್ಯ' (Field work) ಸಂಶೋಧನೆಯ ಒಂದು ಪ್ರಮುಖ ಅಂಗ. ಸಂದರ್ಶನದಿಂದ ಸಂದರ್ಶನಕ್ಕೆ ವಿಚಾರಗಳು, ಆಸಕ್ತಿಗಳು ಬೆಳೆಯುತ್ತಾ ಹೋಗುತ್ತವೆ. ಹೆಚ್ಚು ಸಮಯ, ನಿಷ್ಠೆ ಬೇಡುವ ಈ ಕಾಯಕ ಹೊಸ ಹೊಸ ಹೊಳಹುಗಳನ್ನು ತೆರೆಯುತ್ತಾ ವಸ್ತುನಿಷ್ಠ ದೃಷ್ಟಿಕೋನಕ್ಕೆ ಕಾರಣವಾಗಬೇಕು. ಏಕತಾನತೆಯ ಬೇಸರಕ್ಕೆ ಆಸ್ಪದ ಕೊಡದೆ ವೈವಿಧ್ಯತೆಯ ಲೋಕಕ್ಕೆ ತೆರೆದುಕೊಳ್ಳುವಂತೆ ಸಂದರ್ಶಕ ಸದಾ ಜಾಗೃತನಾಗಿರಬೇಕು. ಈ ನಿಟ್ಟಿನಲ್ಲಿ ಈ ಕೃತಿಯಲ್ಲಿ ಸಂದರ್ಶಕರು ಸಂದರ್ಶನದ ಹೂರಣವನ್ನು ಸೂಕ್ತ ತಂತ್ರಗಳಿಂದ (ನೇರ ಸಂದರ್ಶನದ ಮಾದರಿ, ಸಂದರ್ಶನದ ಸಂಗ್ರಹದ ಮಾದರಿ ಇತ್ಯಾದಿ) ಸ್ವಾರಸ್ಯವಾಗಿ ನಿರ್ವಹಿಸಿದ್ದಾರೆ.

ವಸ್ತುಪ್ರದರ್ಶನದಲ್ಲಿ ಒಂದಾದ ಮೇಲೊಂದು ವಸ್ತುವನ್ನು ನೋಡುತ್ತಾ ಸಾಗುವಂತೆ ಈ ಕೃತಿಯಲ್ಲಿ ಕೃಷಿಗೆ ಸಂಬಂಧಿಸಿದ ವಿವರಗಳು ಒಂದೊಂದು ಸಂದರ್ಶನದಲ್ಲೂ ತಾನಾಗಿ ಪ್ರತ್ಯಕ್ಷವಾಗುತ್ತಾ ಹೋಗುತ್ತವೆ. ಇಡೀ ಕೃತಿಯನ್ನು ಓದಿ

ಮುಗಿಸುವ ವೇಳೆಗೆ ತೋಟದ ಅಭಿವೃದ್ಧಿ ಹಾಗೂ ಮಣ್ಣಿನ ವ್ಯವಸಾಯ, ಅಡಿಕೆ, ಬತ್ತ, ತೆಂಗು, ತಂಬಾಕು, ವಿಳ್ಳೇದೆಲೆ, ಬಾಳೆ, ರೇಶ್ಮೆ, ಕಬ್ಬು, ಕಾಫಿ, ಟೀ, ಏಲಕ್ಕಿ, ತರಕಾರಿ ಬೆಳೆಗಳು ಇತ್ಯಾದಿ ಬೆಳೆ ವಿಧಾನ, ಗೊಬ್ಬರದ ತಯಾರಿ, ಉಪಯೋಗ, ಎತ್ತಿನ ಲಕ್ಷಣ, ಹನಿ ನೀರಾವರಿ, ಮಿಶ್ರಬೆಳೆ, ಗೋಬರ್ ಗ್ಯಾಸ್, ಸಹಕಾರ ಸಂಘ, ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಮುಂತಾದ ಅತ್ಯಂತ ಗಹನವಾದ, ರೈತ ಸಮುದಾಯಕ್ಕೆ ಅತ್ಯುಪಯುಕ್ತವಾದ ಸಂಗತಿ, ಮಾಹಿತಿ ದೊರೆತು ಈ ಕೃತಿ ಒಂದು 'ಕೃಷಿ ಕೈಪಿಡಿ'ಯೇ ಆಗಿದೆ.

ಈ ವಿಸ್ತಾರವಾದ ಕೃತಿ ಅವಲೋಕಿಸಿದರೆ ಕರ್ನಾಟಕದಲ್ಲಿ ಬ್ರಾಹ್ಮಣವರ್ಗದಲ್ಲಿ ಸಂಕೇತಿ ವರ್ಗದ ಶ್ರಮದ ಬದುಕಿನ ಅಸಾಧಾರಣ ಸ್ವರೂಪ ಮನದ ಮುಂದೆ ನಿಲ್ಲುತ್ತದೆ. ಒಂದು ಕಾಲಕ್ಕೆ ತಮಿಳುನಾಡು, ಕೇರಳ ಗಡಿಭಾಗ "ಶೆಂಕೋಟ್ಟೈ"ನಿಂದ ನದೀಪಾತ್ರದ ಕೆಳಗಿನ ಪ್ರದೇಶಗಳಲ್ಲಿ ವಾಸಿಸುತ್ತಾ ಕರ್ನಾಟಕಕ್ಕೆ ಆಗಮಿಸಿದ ಸಂಕೇತಿಗಳು ತೋಟದ ವ್ಯವಸಾಯವನ್ನೇ ಜೀವನೋಪಾಯಕ್ಕಾಗಿ ಮುಖ್ಯವೃತ್ತಿಯನ್ನಾಗಿಸಿ ಬಾಳು ಕಂಡವರು. ನಿಸರ್ಗದೊಡನೆ ಬೆರೆತು, ಹಿಂಸೆ ಆಚರಿಸದೆ ನೆಲವನ್ನು ಉಳುಮೆ ಮಾಡಿ, ಬಾಗಾಯ್ತನ್ನೇ ನಂಬಿ, ಜ್ಞಾನಕ್ಕಾಗಿ ವೇದಾಧ್ಯಯನ ಮಾಡಿ, ಸಂಗೀತ ಕಲೆಯಲ್ಲಿ ಪರಿಣತಿ ಪಡೆವ ಸಾಧನೆ ಮಾಡಿದವರು. ಕೃಷಿಯೇ ವಂಶಪಾರಂಪರ್ಯವಾಗಿ ಬಂದ ಪ್ರಧಾನ ವೃತ್ತಿ. ಕೃಷಿಕನಿಗೆ ಬಹುಮಟ್ಟಿಗೆ ತಂದೆಯೇ ಮೇಲ್ಪಂಕ್ತಿ, ಆದರ್ಶ. ['ಕೈಯಿ, ಬಾಯಿ, ಕಚ್ಚೆ ಈ ಮೂರನ್ನು ನೀನು ಕಾಪಾಡಿಕೊಂಡು ಬಾ; ನೀನು ಎಲ್ಲಿದ್ರೂ ನಿನಗೆ ತೊಂದರೆ ಆಗೋದಿಲ್ಲ' (ಪು.೧೪೧) ಎಂಬ ತಂದೆಯ ಮಾತು.] ದೈವದಲ್ಲಿ, ಕೃಷಿಯಲ್ಲಿ, ಹಿರಿಯರಲ್ಲಿ ಇರುವ ದೃಢವಾದ ನಂಬಿಕೆ, ಶ್ರದ್ಧೆಗಳೇ ಸಂಕೇತಿ ಕುಟುಂಬವನ್ನು ಅನಂತಕಾಲವೂ ರಕ್ಷಿಸಿವೆ. ವೇದಾಭ್ಯಾಸ ಹಾಗೂ ಸಂಗೀತಾಭ್ಯಾಸ ನಡೆದ ಸ್ಥಳಗಳಲ್ಲಿ ವೃಕ್ಷ ಹಾಗೂ ಫಲಗಳೂ ಸಮೃದ್ಧಿಯಾಗುತ್ತವೆ ಎಂಬ ಅಚಲ ನಂಬಿಕೆ - ಅದೃಷ್ಟವನ್ನು ನೆಚ್ಚಬೇಕು; ವ್ಯವಸಾಯದಲ್ಲಿ ಹುಲ್ಲು, ನೀರು, ಸೌದೆ, ಹಸು ಬೇಕೇ ಬೇಕು ಎಂಬ ಆಶಯ - ದೇವರಲ್ಲಿ ಭಕ್ತಿಯಿಟ್ಟು ಧರ್ಮಕಾರ್ಯಗಳನ್ನು ಮಾಡಿದರೆ, ಪ್ರಾಮಾಣಿಕತೆಯಿದ್ದರೆ ಒಳ್ಳೆಯದಾಗುತ್ತದೆ ಎಂಬ ವಿಶ್ವಾಸ - ವ್ಯವಸಾಯದಲ್ಲಿ ಉತ್ಪತ್ತಿ, ವರಮಾನ ಮಾತ್ರ ಮುಖ್ಯವಾಗದೆ ದುಡಿಮೆಯೇ ಪ್ರಧಾನವಾಗಿ ಬದುಕುವುದು ಮುಖ್ಯ ಎಂಬ ಸಂಗತಿಗಳು ಇಲ್ಲಿ ಕಾಣುತ್ತವೆ. ಸುಸಂಸ್ಕೃತ ಭಾವನಾತ್ಮಕ ಬದುಕು ಸಂಕೇತಿ ವರ್ಗದ ಜೀವನರೀತಿ. ವೈಯಕ್ತಿಕ ಪರಿಶ್ರಮ, ಅನ್ಯ ಅವಲಂಬನೆಯಿಲ್ಲದ ಸ್ವಾಭಿಮಾನದ ಬದುಕು ಹಾಗೂ ಛಲ ರಕ್ತಗತವಾಗಿ ಬಂದಂತೆ ಕಾಣುತ್ತದೆ. 'ಜೀವನದಲ್ಲಿ ಏನಾದ್ರೂ ಆಗಲಿ; ಇನ್ನೊಬ್ಬನನ್ನು ಹೊಡೆದು ತಿನ್ನಬಾರದು. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ದುಡಿದು ತಿನ್ನಬೇಕು. ಇದು ಸಂಕೇತಿಗಳಲ್ಲೇ ಬಂದಿದೆ. ಅದಕ್ಕೇ ಅವರು ಆರಕ್ಕೇರದೆ, ಮೂರಕ್ಕಿಳಿಯದೇ ಇದಾರೆ. ಇದ್ದುದರಲ್ಲಿ ತೃಪ್ತರಾಗಿದ್ದಾರೆ' (ಪುಟ ೩೩೦) - ಎಂಬ ಮಾತು ಸ್ವಾಭಿಮಾನ ಮೂಲವಲ್ಲದೆ ಬೇರೆ ಅಲ್ಲ. ಮಳೆಗಾಗಿ ರೋಮಪಾದ ಋಷ್ಯಶೃಂಗರನ್ನು ದಶರಥನ ಆಸ್ಥಾನಕ್ಕೆ ಕರೆತಂದ ಪೌರಾಣಿಕ ಪ್ರಸಂಗದ (ಪು.೨೬೧) ಮೂರು ಶ್ಲೋಕವನ್ನು ನೂರೆಂಟು ಬಾರಿ ಜಪಿಸಬೇಕೆಂಬ ವಿಚಾರ ಆ ಬಗೆಗಿನ ದೈವನಿಷ್ಠೆಗೆ ದ್ಯೋತಕವಾಗಿದೆ. 'ನಮಗೆ ಜನ ಮೋಸ ಮಾಡಬಹುದು, ಆದರೆ ಭೂಮಿ ಮೋಸ ಮಾಡೋಲ್ಲ' (ಪು.೩೫೮), 'ಇದು ನಮ್ಮದಲ್ಲ; ಭೂಮಿ ತಾಯೀದು - ಎಂಬ ಮನೋಭಾವನೆಯಿಂದ ನಾವು ವ್ಯವಸಾಯ ಮಾಡ್ತೀವಿ' (ಪು.೩೯೯), 'ನನ್ನ ಪ್ರಕಾರ ಈ ಭೂಮಿಗೆ ಜೀವ ಇದೆ. ನಮ್ಮ ಮಕ್ಕಳನ್ನು ನಾವು ಸರಿಯಾಗಿ ಬೆಳೆಸಿದ್ರೆ ಹ್ಯಾಗೆ ಮೇಲೆ ಬರ್ತಾರೋ ಅದೇ ತರಹಾ ಈ ಭೂಮೀನಾ ಆರೈಕೆ ಮಾಡಿದ್ರೆ ಅವಳು ನಮ್ಮ ಕೈ ಬಿಡೋದಿಲ್ಲ' (ಪು.೩೭೬) - ಎಂಬ ಉದಾಹೃತ ಮಾತುಗಳಿಂದ ಸಂಕೇತಿ ಕೃಷಿಕ ಜನಾಂಗದ ಆತ್ಮವಿಶ್ವಾಸದ ಮನೋಭಾವ, ನಡೆಸಿರುವ ಶ್ರದ್ಧಾಮೂಲವಾದ ಜೀವನ ವ್ಯಕ್ತವಾಗುತ್ತದೆ. ಈ ರೀತಿ ದೃಢವಾದ ಭೂಮಿಯ, ಮಳೆಯ ಬಗೆಗಿನ ಕಾಳಜಿಯನ್ನು ವ್ಯವಸಾಯದಲ್ಲಿ ಹೊಂದಿರುವ ಕೃಷಿಕರು ಸಂದರ್ಶನದಲ್ಲಿ ಕಂಡುಬರುತ್ತಾರೆ. ಮನುಷ್ಯ ಸ್ವಾರ್ಥಿಯಾಗದೆ ಕೊಟ್ಟು ಪಡೆಯುವ ಸದ್ಗುಣ ಉಳ್ಳವನಾಗಬೇಕು. ಪ್ರಕೃತಿಯ ಮುಂದೆ ಮಾನವ ತುಂಬಾ ಚಿಕ್ಕವನು. ಮಹತ್ತಾದುದರ ಮುಂದೆ ಮಾನವವ್ಯಕ್ತಿತ್ವ ತತ್ತರಿಸುತ್ತದೆ ಎಂದು ಕವಿ ಕುವೆಂಪುರವರು ಹೇಳುವಂತೆ ಭವ್ಯತೆಯ ಅನುಭವ ಪಡೆದಿರುವ, ತಮ್ಮ ತೋಟಕ್ಕೆ, ಹಸಿರಿಗೆ ಎಲ್ಲವನ್ನೂ ಸಮರ್ಪಿಸಿಕೊಂಡಿರುವ ಕೃಷಿಕರ ಉದಾಹರಣೆಗಳು ಮನಮುಟ್ಟುವಂತಿವೆ. 'Agricultureನಲ್ಲಿ ಯಾವಾಗಲೂ There is scope for innovation.... ಹೆದರಬಾರದು ..... Agriculture

teaches you patience.... ನಾನು ನನ್ನ ತಮ್ಮ ಬೆಳದಿಂಗಳ ರಾತ್ರೀಲಿ ತೋಟದಲ್ಲಿ ಕುಳಿತುಕೊಳ್ತೀವಿ. ಇಲ್ಲಿನ ಪ್ರಕೃತಿ, ಗಿಡ, ಮರ ಎಲ್ಲ ಎಷ್ಟು ದೊಡ್ಡದಾಗಿರುತ್ತೆ. ಆದರೆ ನಾವು ಅದರ ಮುಂದೆ ಎಷ್ಟು ಚಿಕ್ಕವರಾಗಿ ಕಾಣ್ತೀವಿ. ನಮ್ಮ ಅಹಂಕಾರ ನಿಜವಾಗಿಯೂ ಆಗ ಕಡಿಮೆಯಾಗುತ್ತೆ. ಗಿಡಮರಗಳು ಸ್ವಾರ್ಥಿಯಲ್ಲ. ನೀವು ಅದರ ನಿರ್ವಹಣೆ ಮಾಡಿ, ಅದು ನಿಮಗೆ ಫಲ ನೀಡುತ್ತೆ' (ಪು.೩೮೦).

'ನನ್ನ ತೋಟಕ್ಕೆ ಹೋದ್ರೆ ನನ್ನ Battery charge ಆಗುತ್ತೆ. ಬೆಳಿಗ್ಗೆಯಿಂದ ನೂರೆಂಟು ತಾಪತ್ರಯ ಅನುಭವಿಸಿ ತೋಟಕ್ಕೆ ಹೋದ್ರೆ ಪ್ರಕೃತಿ ಒಳಗೆ ನಾವು ಎಲ್ಲಾ ಮರೀತೀವಿ. ಗಿಡ, ಹಣ್ಣು, ಹೂವು ನೋಡ್ತಾನೇ ಆಂತರಿಕ ಶಕ್ತಿ ಹೆಚ್ಚಾಗುತ್ತೆ... ಜನ ನಮಗೆ ಮೋಸ ಮಾಡಬಹುದು, ಆದ್ರೆ ಪ್ರಕೃತಿ ನಮಗೆ ಮೋಸ ಮಾಡೋಲ್ಲ' (ಪು.೪೧೮) ಇಂಥ ಅನುಭವಾಮೃತದ ಮಾತುಗಳು ಕೃಷಿಯೇ ಜೀವನವೆಂದು ಭಾವಿಸಿರುವವರಿಗೆ ವೇದವಾಕ್ಯದಂತಿದ್ದು ಮನದಾಳದಿಂದ ಸಹಜವಾಗಿ ಬಂದ ಮಾತುಗಳೆಂಬುದರಲ್ಲಿ ಸಂದೇಹವಿಲ್ಲ. ಪ್ರಕೃತಿಯನ್ನು ನಂಬಿ ಆಧರಿಸಿ ಅದರಲ್ಲೇ ಲೀನರಾಗಿ ಅದರ ಗಂಭೀರ, ಬೃಹತ್ತು, ಮಹತ್ತುಗಳಿಗೆ ತತ್ತರಿಸಿ ದೈವವೆಂದು ಪೂಜಿಸಿ ಅಹಂಕಾರವರ್ಜಿತರಾಗಿ ವ್ಯವಸಾಯ ವೃತ್ತಿಯನ್ನು ಆಚರಿಸಿರುವ ಸಂಕೇತಿ ಕುಟುಂಬಗಳ ಶ್ರೀಮಂತ-ಬಡತನದ-ಎಲ್ಲ ವರ್ಗಗಳ ಚಿತ್ರಮಾಲಿಕೆಗಳು ಒಟ್ಟಾರೆ ಈ ಸಂದರ್ಶನ ಸಾಹಿತ್ಯದಲ್ಲಿ ಸಮೃದ್ಧಿಯಾಗಿ ದೊರೆಯುತ್ತವೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಗ್ರಂಥದ ಅಂತಸ್ಸಾರವಿರುವುದು ನಿಜವಾಗಿ ವಿವಿಧ ಬೆಳೆಗಳ ಬೇಸಾಯ ಕ್ರಮದ ವಿವರಣೆಯಲ್ಲಿ. ಸಂಕೇತಿ ಪಂಗಡದ ಕೃಷಿ ಬೆಳವಣಿಗೆ ಶತಮಾನಗಳಿಂದ ಪರಂಪರಾನುಗತವಾಗಿ ಹೇಗೆ ವಿಕಾಸಗೊಂಡಿದೆಯೆಂಬುದು ಲೇಖಕರು ನಡೆಸಿರುವ ಸಂದರ್ಶನಗಳಲ್ಲಿ ಅರ್ಥಪೂರ್ಣವಾಗಿ ಮೈದಳೆದಿದೆ. ಸಂಕೇತಿಗಳು ಅನೇಕ ಉಪವೃತ್ತಿಗಳೊಡನೆ ವ್ಯವಸಾಯವನ್ನೇ ಮುಖ್ಯವೃತ್ತಿಯನ್ನಾಗಿ, ವ್ಯವಸಾಯದಲ್ಲೂ ತೋಟದ ಕೃಷಿಯನ್ನು ವಿಶೇಷವಾಗಿ ಆಧರಿಸಿರುವುದು ಗಮನೀಯ. ನದಿ, ಕೆರೆ ಮುಂತಾದ ಜಲಸಮೃದ್ಧಿಯಿರುವ ಸ್ಥಳಗಳನ್ನೇ ಆಶ್ರಯಿಸಿ, ಕಾಡನ್ನು ಕಡಿದು ತೋಟ ಮಾಡಿ ಅತ್ಯಂತ ಪರಿಶ್ರಮದ ಜೀವನ ನಡೆಸಿದ ಸಂಕೇತಿಗಳು ಬೆಳೆದ ಬೆಳೆಗಳಲ್ಲಿ ವೈವಿಧ್ಯವಿದೆ. ಬೆಳೆಗಳಿಗೆ ಅಗತ್ಯವಾದ ನೆಲ, ನೀರಿನ ಆಸರೆ, ಬಿತ್ತನೆ, ಕಾಲಮಾನ, ಮಾರುಕಟ್ಟೆ ಮುಂತಾದ ವಿಚಾರಗಳಿಗೆ ಅಗತ್ಯ ಮಾಹಿತಿ ಸಂದರ್ಶನಗಳಲ್ಲಿ ಸಾಕಷ್ಟು ದೊರೆಯುತ್ತಿದ್ದು ಅಂಥ ವಿಚಾರಗಳನ್ನು ಗಮನಿಸದೆ ಸಂಕೇತಿಗಳ ಆಸಕ್ತಿ ಸೆಳೆದ ಕೆಲ ಬೆಳೆಗಳ ಬಗ್ಗೆ ಗಮನಿಸಬಹುದು.

ಅಡಿಕೆ ಬೆಳೆ ಸಂಕೇತಿಗಳನ್ನು ಉಳಿಸಿ ಬೆಳೆಸಿದ ಬೆಳೆ ಎಂಬಂತೆ ಕೃಷಿಕರ ಮಾತುಗಳಿಂದ ತಿಳಿಯುತ್ತದೆ. ಸಂಕೇತಿಗಳಿಗೆ ಅಡಿಕೆ ಬೆಳೆ ಪ್ರಮುಖ ಆಧಾರ ಹಾಗೂ ಒಂದು ಕಾಲಕ್ಕೆ ಅನಿವಾರ್ಯವೂ ಆಗಿತ್ತೆಂಬ ಅಂಶ (ಪುಟ ೩೬೫), ಇಂದು ಏನಾಗಿದೆ ಎಂಬ ವಾಸ್ತವ ಸ್ಥಿತಿ, 'ಹಿಂದೆ ಅಡಿಕೆ ಬೆಳೆದೋರಲ್ಲಿ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ಎಡೀತಾ ಇದ್ದೋರು ಸಹ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ವಾಸ್ತವವಾಗಿ ಹೇಳಬೇಕೆಂದರೆ ಹಣಕಾಸಿನ ಮುಗ್ಗಟ್ಟು ಸಂಕೇತಿಗಳಲ್ಲಿ ಬಹಳ ಇತ್ತು ... ಈಗ ಅಂತೆಯೇ ಇಂದು ಅಡಿಕೆ ಎಡಿಯೋರು ಶೇ.ಒಂದರಷ್ಟೂ ಇಲ್ಲ' - ಎಂಬ ಮಾತುಗಳು ಬಡತನದ ಅಪರಿಹಾರ್ಯತೆಯನ್ನು ಸೂಚಿಸುತ್ತವೆ, ಅಡಿಕೆಗೆ, ಒಬ್ಬರು 'ಹಟ್ಟಿಗೊಬ್ಬರ ಮಾತ್ರ ತಕ್ಕದೆಂದು, ಸೀಮೆಗೊಬ್ಬರ ಹಾಕಿದರೆ ಪ್ರಯೋಜನವಿಲ್ಲ'ವೆಂದು ಹೇಳಿದರೆ (ಪು.೩೫೭) ಮತ್ತೊಬ್ಬರು, 'ಅಡಿಕೆಯಲ್ಲಿ ಹಿಂದಿನವರು ಪಾಲಿಸಿದ ವಿಧಾನವನ್ನೇ ಅನುಸರಿಸುತ್ತಾ ಇದೀವಿ. ಅಡಿಕೆಗೂ ನಾವು ಗೊಬ್ಬರ ಕೊಡ್ತೀವಿ (N:P:K) ಯಾಕೆ ಕೊಡ್ತೀವಿ ಎನ್ನುವುದು ಗೊತ್ತಿಲ್ಲ. ಸುಮ್ಮನೆ ಎಕರೆಗೆ ಎರಡು ಚೀಲ ಹಾಕ್ತೀವಿ' (ಪು.೩೧೪) - ಎನ್ನುತ್ತಾರೆ. ಈ ರೀತಿಯ ಅಭಿಪ್ರಾಯಗಳು ಎಲ್ಲ ಕಡೆಯಲ್ಲೂ ಅಡಿಕೆ ಬೆಳೆಯ ವಿಧಾನ ನಿಶ್ಚಿತ ರೀತಿಯಲ್ಲಿಲ್ಲವೆಂದೂ ಈ ಬೆಳೆಯ ವೈಜ್ಞಾನಿಕ ವಿಧಾನದ ವಿಚಾರದ ಕಡೆಗೆ ನಮ್ಮ ಗಮನ ಸೆಳೆಯುತ್ತವೆ. ಪ್ರದೇಶವಾರು ಬೆಳೆ ವಿಧಾನಕ್ಕೆ ಸಂಬಂಧಿಸಿದಂತೆ ಇರುವ ವ್ಯತ್ಯಾಸಗಳು ಮತ್ತು ಇಳವರಿ ಬಗೆಗಿನ ಮಾಹಿತಿ (ಪುಟ ೩೭೩-೩೮೦) ಕೃಷಿಕರಿಗೆ ಪ್ರಯೋಜನಕಾರಿಯಾಗಿದೆ. ಅಡಿಕೆ ತೋಟ ಮಾಡುವ ವಿಧಾನ, ಮುನ್ನೆಚ್ಚರಿಕೆ, ನಾಟಿ, ಕಳೆ ತೆಗೆಯುವುದು, ವೆಚ್ಚ, ನೀರು ಕೊಡುವುದು, ಮನೆಗೊಬ್ಬರ

ಹಾಗೂ ರಾಸಾಯನಿಕ ಗೊಬ್ಬರ ಹಾಕುವ ಬಗೆ, ಮಣ್ಣಿನ ಪರೀಕ್ಷೆ, ಇಳುವರಿ ಮುಂತಾದ ವಿವರಗಳು (ಪುಟ ೨೮೭) ಸಂಗ್ರಹಯೋಗ್ಯವಾಗಿವೆ. ಅದೇ ರೀತಿ ತೆಂಗಿನ ಬೆಳೆಯ ಬಗ್ಗೆಯೂ (ಪುಟ ೭೧) ಬೆಳೆಯ ವಿಧಾನದ ಒಕ್ಕಣೆಯಿದೆ. ತೆಂಗು, ಅಡಿಕೆ, ಅಡಿಕೆಯೊಳಗೆ ವಿಳ್ಳೇದೆಲೆ ಹಂಬು, ಸಪೋಟ, ಹೂವಿನ ಗಿಡಗಳು, ತೆಂಗಿನ ನರ್ಸರಿ ಎಲ್ಲವನ್ನೂ ತೋಟದಲ್ಲಿ ಬೆಳೆದ ವ್ಯವಸಾಯಗಾರರಿದ್ದಾರೆ. ಅಡಿಕೆ, ವಿಳ್ಳೇದೆಲೆ ಒಟ್ಟಿಗೆ ಬೆಳೆಯುವುದರಿಂದ ಇರುವ ಆರ್ಥಿಕ ಅನುಕೂಲ ಬಲ್ಲ ಕೃಷಿಗಾರರಿದ್ದಾರೆ (ಪು.೨೮) 'ಅಡಿಕೆ ಇದ್ರೇನೆ ವಿಳ್ಳೇದೆಲೆ. ಇವೆರಡೂ ಹಣ ನೀಡುವ ಸಸ್ಯಗಳು' (ಪು.೩೯) ಎಂದು ಭಾವಿಸಿರುವ ಬೆಳೆಗಾರರೊಬ್ಬರು ಅಡಿಕೆ ತೋಟದ ವ್ಯವಸಾಯ ಮತ್ತು ವಿಳ್ಳೇದೆಲೆ ಬೇಸಾಯದ ಬಗ್ಗೆ ತಮ್ಮ ಸ್ವಂತ ಅನುಭವ ಬಿತ್ತರಿಸಿದ್ದಾರೆ. ಕೃಷಿ ಸಂಕೇತಿಗಳ ಪಾರಂಪರಿಕ ಕಸುಬಾದರೂ ಕೆಲವು ಕೃಷಿಕರು ತಮ್ಮ ಬೆಳೆ ಪ್ರಯೋಗಗಳಲ್ಲಿ ಸ್ವಾರಸ್ಯದ ವಿಚಾರಗಳನ್ನು ಕಂಡು ಅನುಭವಿಸಿದ್ದಾರೆ. '... ಸಕಾಲದಲ್ಲಿ ನೀರು, ಗೋಡು, ಗೊಬ್ಬರ ಕೊಡಬೇಕು. ವ್ಯವಸಾಯದಲ್ಲಿ ಆತುರಪಡಬಾರದು, ತಾತ್ಸಾರ ಮಾಡಬಾರದು... ರಾಗಿ, ಜೋಳ, ನವಣೆ, ಸಜ್ಜೆ ಬೆಳೆಯನ್ನು ಹೊಂದಿಸಿ ಬೆಳೆಯುವಾಗ ಭೂಮಿ ಸಮತೋಲವಾಗಿರುತ್ತೆ. ಕೆಲವು ಬೆಳೆಗಳು ಒಳಗೆ ನೀರು ಇಳಿಸಿ ಸತ್ವ ಹೀರುತ್ವೆ. ಕೆಲವು ಬೆಳೆಗಳು ಭೂಮಿಯ ಮೇಲ್ಪದರದಲ್ಲಿ ರಸ ಹೀರುತ್ವೆ. ಭೂಮಿಯ ಒಳಗಿನ ಗಾಳಿ ಹೊರಗೆ ಹಾಗೂ ಹೊರಗಿನ ಗಾಳಿ ಒಳಗೆ ಹೋದಾಗ ಮಣ್ಣಿನ ಆರೋಗ್ಯ ಸುಧಾರಣೆಯಾಗುತ್ತೆ'. (ಪುಟ ೬೪) - ಹೀಗೆ ಕೃಷಿಯಲ್ಲಿ ತಾವು ತಾವೇ ಕಂಡುಕೊಂಡ ಪ್ರಕೃತಿಯ ಸತ್ವ, ಸತ್ಯ, ರಹಸ್ಯಗಳ ಸ್ವಾನುಭವದ ಭಂಡಾರವೇ ಈ ಕೃತಿಯಲ್ಲಿ ತುಂಬಿದೆ. ವ್ಯವಸಾಯದಲ್ಲಿ ಸ್ವಂತ ಶ್ರಮಕ್ಕೇ ತೆರೆದುಕೊಂಡು ಪ್ರಯೋಗಶೀಲರಾಗಿ ಬಡತನವಿರಲಿ, ಆರ್ಥಿಕ ಸವಲತ್ತುಗಳಿರಲಿ ನಿಷ್ಠೆಯಿಂದ ದುಡಿದು ಸ್ವಾವಲಂಬನೆಯ ಜೀವನ ಸಂಕೇತಿಗಳು ನಡೆಸಿರುವ ನಿದರ್ಶನಗಳು ಈ ಕೃತಿಯಲ್ಲಿ ಹೇರಳವಾಗಿವೆ.

ತೋಟದ ಬೆಳೆಗಳ ಹಾಗೆ ಬತ್ತದ ಬೆಳೆ ಮಾಡಿರುವ ಸಾಧಕರೂ ಇದ್ದಾರೆ. ಥಾಯ್‌ಚುಂಗ್ ಎಂಬ ಬತ್ತದ ತಳಿಯನ್ನು ಜಪಾನ್ ಮಾದರಿಯಲ್ಲಿ ಬೆಳೆದವರು (ಪು.೨೮೬) ಒಳ್ಳೆ ಇಳುವರಿ ಪಡೆದಿದ್ದು ಹೊಸ ಹೊಸ ಬತ್ತದ ತಳಿಗಳು ಬಂದಂತೆಲ್ಲಾ ಅವುಗಳ ಪ್ರಯೋಗ ಮಾಡಿರುವವರೂ ಇದ್ದಾರೆ. (ಪು.೩೬೭, ೩೦೦) ಸಂಕೇತಿಗಳಿಗೆ ಬಹು ವಿಭಿನ್ನವಾದ ಕೃಷಿ ಕಾಫಿ ತೋಟದ ವ್ಯವಸಾಯ. Airforce ನಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ನಂತರ ಕೃಷಿ ಪ್ರವೃತ್ತಿ ಹಿಡಿದು ಕಾಫಿ ಬೇಸಾಯದ ಯೋಜನೆ ಕೈಗೊಂಡು ಯಶಸ್ವಿಯಾದ ಒಂದು ಆತ್ಮಕಥೆ (ಪುಟ. ೩೦೬, ೩೦೭) ಇತರರಿಗೆ ಸ್ಫೂರ್ತಿದಾಯಕವಾದುದು. ಕಾಫಿ ಬೆಳೆಗೆ ಸಂಬಂಧಿಸಿದ ತಾಂತ್ರಿಕ ವಿಚಾರಗಳು ಗಹನವಾದದ್ದು. ಕೃಷಿಕರ ಮಡದಿ (ಶ್ರೀಮತಿ ಭಾಗ್ಯಲಕ್ಷ್ಮಿ)ಯ ಕೃಷಿ ವಿವರಣೆ ಸಂಕೇತಿಗಳಲ್ಲಿ ಮಹಿಳೆಯರ ಪಾತ್ರ, ಸಾಧನೆಗೆ ಅಳತೆಗೋಲಾಗಿದೆ. ಅವರ ನಿರೂಪಣೆಯಲ್ಲಿ ಅವರ ಮುತ್ತಜ್ಜಿಯ ವ್ಯವಸಾಯದ ರೀತಿ ಮಹಿಳೆಯರ ಆತ್ಮಬಲಕ್ಕೆ ಪುಷ್ಟಿಯೊದಗಿಸುವಂಥದು. ('ನೀವು ನನ್ನಷ್ಟು ಕೆಲಸ ಮಾಡಬೇಡಿ; ನಾನು ಮಾಡುವ ಕೆಲಸದಲ್ಲಿ ಅರ್ಧ ಕೆಲಸ ಮಾಡಿ ಸಾಕು' - ಎಂದು ಆಳುಗಳಿಗೆ ಬೇರೆಯವರು ಕೊಡುವ ಕೂಲಿಗಿಂತ ಜಾಸ್ತಿ ಕೂಲಿ ಕೊಡುತ್ತಿದ್ದರು') ಮಹಿಳೆಯರ ವ್ಯವಸಾಯದ ಶೈಲಿಗೆ ಕೈಗನ್ನಡಿ ಈ ನಿರೂಪಣೆ. ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಲ್ಲಿ ವೃತ್ತಿಪರರಾಗಿದ್ದು ವೃತ್ತಿಯಲ್ಲಿದ್ದುಕೊಂಡೇ ಹಾಗೂ ಅದನ್ನು ಬಿಟ್ಟೂ ಕೃಷಿಯ ಕಡೆಗೆ ಪ್ರವೃತ್ತರಾದ ಅನೇಕ ಸಂಕೇತಿ ವ್ಯವಸಾಯಸ್ಥರ ಉದಾಹರಣೆಗಳು ನಮಗೆ ಕಾಣಸಿಗುತ್ತವೆ.

ಗೊಬ್ಬರ, ಔಷಧಿಗಳಿಗೆ ವೈಜ್ಞಾನಿಕ ವಿಧಾನ ಅನುಸರಿಸಿ ಮಣ್ಣಿನ ಸಾವಯವ ಅಂಶ, ಸತ್ವ ಹೆಚ್ಚಿಸಿ ಗುಣಮಟ್ಟದ ಕಾಫಿ, ಏಲಕ್ಕಿ, ಮೆಣಸು ಬೆಳೆದಿರುವ ಮಡಿಕೇರಿಯ (ಶ್ರೀ ಕೆ.ವಿಶ್ವನಾಥ್, ಪು.೩೩೨) ಕಾಫಿ ಕೃಷಿಕರ ವಿಧಾನ ಅಪರೂಪವೆನ್ನಬಹುದು. ರೊಬಸ್ಟಾ, ಅರೇಬಿಕಾ ಕಾಫಿ ಹೇಗೆ ಬೆಳೆಯಬಹುದೆಂಬ ತಾಂತ್ರಿಕ ಸಂಗತಿಗಳು ಮತ್ತು ಕಾಫಿ ಬೆಳೆಗಾರರು ಏಲಕ್ಕಿಯನ್ನೂ ಸಹ ಹೇಗೆ ಕೃಷಿ ಮಾಡಬಹುದೆಂದು ಸುದೀರ್ಘವಾಗಿ ನಿರೂಪಿಸಿದ್ದಾರೆ. ಅಡಿಕೆ ಪಟ್ಟೆಯಿಂದ ಅಡಿಕೆ ತಟ್ಟೆಗಳನ್ನು ಮಾಡಿ ಮಾರಿ ಜೀವನ ಸಾಗಿಸಿರುವ ಕುಟುಂಬಗಳ ಕಥೆಯೂ (ಪು.೩೫೧) ಸಂಕೇತಿಗಳ ಶ್ರಮದ ಬದುಕಿಗೆ ಸಾಕ್ಷಿಯಾಗಿದೆ.

Navyಯಲ್ಲಿ Captain ಆಗಿದ್ದ ಮೈಸೂರಿನ ಶ್ರೀ ಕೆ.ಕೆ.ವೆಂಕಟೇಶ್ ಆರು ತಿಂಗಳು ಭೂಮಿಯ ಮೇಲೆ ಆರು ತಿಂಗಳು

ನೀರಿನ ಮೇಲೆ ತಮ್ಮೆಲ್ಲ ಸೇವೆಯನ್ನು ಪ್ರಪಂಚ ಸುತ್ತುವುದರಲ್ಲೇ ಕಳೆದಿರುವ ಇವರು ತಮ್ಮ ವೃತ್ತಿಯ ಜೊತೆಗೆ ಪತ್ನಿ ಸಹಕಾರದಿಂದ Tea Estate ವೈಜ್ಞಾನಿಕವಾಗಿ ನಿರ್ವಹಣೆ ಮಾಡಿ ಕೃಷಿಯಲ್ಲಿ ಅಸಾಧಾರಣ ಸಾಧನೆ ಮಾಡಿದಂಥವರು (ಪು.೩೯೦) Tea ಗಿಡದ ಸೊಪ್ಪು, ನೆರಳಿಗೆ Silver oak ಮರ ಬೆಳೆಸುವುದು, Factoryಗಳಿಗೆ ಎಲೆ ಮಾರುವುದು, ಟೀ ಸಂಸ್ಕರಣೆ ವಿಚಾರಗಳು, ಉತ್ತಮ ಗುಣಮಟ್ಟದ ಟೀ ತಯಾರಿಸುವ ಬಗೆ, ಅದರ ಇಳುವರಿ-ಹೀಗೆ ಟೀ ಬೆಳೆಯ ಸಮಗ್ರ ವಿಚಾರಗಳನ್ನು ಹೃದ್ಯವಾಗಿ ನಿವೇದಿಸಿದ್ದು, ಓದುಗರಿಗೆ, ಆ ಕ್ಷೇತ್ರದ ಪರಿಚಯ ಪಡೆಯಬೇಕೆನ್ನುವವರಿಗೆ ತುಂಬಾ ಸಹಕಾರಿಯಾಗಿದೆ. ಇದು ವೃತ್ತಿಯಲ್ಲಿದ್ದು ಮಾಡಿದ ಅಸಾಮಾನ್ಯಕಾರ್ಯ. ಕೃಷಿ ಹಿನ್ನೆಲೆ ಇರದ ವ್ಯಕ್ತಿಯೊಬ್ಬರ ಚಿಕ್ಕ ತೋಟದ ವಿಚಾರವೂ ಲೇಖಕರಿಗೆ 'ದಾಖಲಿಸಲು ಯೋಗ್ಯವಾದ ವಿಚಾರ'ವಾಗಿ ಕಂಡಿದ್ದು ಇದರಿಂದ ಲೇಖಕರ ಕೃಷಿ ಕಾಳಜಿ ನಮಗೆ ಅರಿವಾಗುತ್ತದೆ.

ಬೆಂಗಳೂರಿನಲ್ಲಿ ನೆಲೆಸಿ ಪ್ರವೃತ್ತಿಯಲ್ಲಿ ತಮ್ಮ ತನುಮನಗಳನ್ನು ಕೃಷಿಗೆ ಒಪ್ಪಿಸಿಕೊಂಡಿರುವ ನಾಲ್ವರ ಸಂದರ್ಶನ ಗ್ರಂಥದ ಕಡೆಯ ಭಾಗದಲ್ಲಿದ್ದು ಒಂದೊಂದೂ ತನ್ನದೇ ಆದ ವಿಚಾರವಂತಿಕೆಯಿಂದ, ಬೌದ್ಧಿಕತೆಯ ದೃಷ್ಟಿಯಿಂದ ಸುಸಂಗತವಾಗಿದೆ. ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ಸೇರಿದರೂ ಗ್ರಾಮಾಂತರದ ವ್ಯವಸಾಯದ ಬದುಕಿನಿಂದ ವಿಮುಖರಾಗದೆ ನಗರದಲ್ಲಿದ್ದುಕೊಂಡೇ ಕೃಷಿಕಾರ್ಯ ನಡೆಸಿ ಅಭಿನಂದನಾರ್ಹರಾಗಿದ್ದಾರೆ. ಕೆಲವರು ವೃತ್ತಿಯಲ್ಲಿ ಪ್ರಶಸ್ತಿ ಮಾತ್ರವಲ್ಲದೆ ಕೃಷಿಯಲ್ಲೂ ಪ್ರಶಸ್ತಿ ಪಡೆದಿದ್ದಾರೆ. (ಪು.೪೦೨) ಡಾ.ಬಿ.ಆರ್.ರಾಮಕೃಷ್ಣ ಆಯುರ್ವೇದ ವೈದ್ಯರಾಗಿದ್ದು ಇಬ್ಬರು ಸ್ನೇಹಿತರು ಜಮೀನು ಕೇಳಿದರೆಂದು ಅವರಿಗೂ ಕೊಟ್ಟು ತಾವೂ ಉಳಿಸಿಕೊಂಡು ಕೃಷಿ ನಡೆಸಿದ ಉದಾತ್ತರು ('ನಮ್ಮ ಮನೇಲಿ ಹಂಚಿಕೊಂಡು ಬಾಳುವ ಮಾರ್ಗದರ್ಶನ ಇತ್ತು. ಯಾರಾದ್ರೂ ಅಪೇಕ್ಷೆಪಟ್ರೆ ಅದನ್ನು ಉಪೇಕ್ಷೆ ಮಾಡಬಾರದು. ಕೊಟ್ಟೇ ಕೊಡಬೇಕು ಎನ್ನುವುದು ತತ್ತ್ವ') ತೇಗದ ಬೆಳೆ ಬಗೆಗೆ, ಆದಾಯದ ಬಗೆಗೆ ತಮ್ಮ ಪ್ರತ್ಯಕ್ಷ ಅನುಭವ ಹಂಚಿಕೊಂಡಿರುವುದು ಮಾತ್ರವಲ್ಲದೆ ತಮ್ಮ ವೃತ್ತಿಗೆ ಪೂರಕವಾಗಿ ಗಿಡಮೂಲಿಕೆಗಳ ೨೫೦ಕ್ಕೂ ಹೆಚ್ಚು ಔಷಧಿ ಸಸ್ಯಗಳನ್ನು ಬೆಳೆಯುವ ಪ್ರಯತ್ನ ಮಾಡಿದ್ದಾರೆ. ವಿವರವನ್ನೆಲ್ಲಾ ಪುಸ್ತಕವನ್ನು ಓದಿಯೇ ತಿಳಿಯಬೇಕು. Clinicನಲ್ಲಿ ಶಾಲೆ ಆರಂಭಿಸಿ ೩೦೦ಕ್ಕೂ ಹೆಚ್ಚು ಬಡಮಕ್ಕಳಿಗೆ, ಕೊಳೆಗೇರಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುವ ಇವರ ಸಾಮಾಜಿಕ ಕಳಕಳಿ ಸಂಕೇತಿ ಸಮುದಾಯಕ್ಕೇ ಗೌರವ ತರುವಂಥಾದ್ದಾಗಿದೆ.

ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯ ಅವರೊಡನೆ ನಡೆಸಿರುವ ಸುಮಾರು ೧೫ ಪುಟಗಳ ವಿಸ್ತಾರವಾದ ಸಂದರ್ಶನ ಕೃಷಿಗೆ ಮಾತ್ರ ಸೀಮಿತವಾಗದೆ ಬ್ರಾಹ್ಮಣ ವರ್ಗದ ಸ್ಥಿತಿಗತಿಯ ಬಗ್ಗೆ, ಇಂದಿನ ಜೀವನ, ಶಿಕ್ಷಣ ಪದ್ಧತಿಯ ಬಗ್ಗೆ, ಸಂಕೇತಿ ಕೃಷಿ ಉಳಿಯುವ ಬಗ್ಗೆ ಗಾಢವಾದ ಚಿಂತನೆಗಳಿಂದ ಕೂಡಿದ್ದು ಮೌಲಿಕವಾಗಿದೆ. ಸಂಕೇತಿ ನೆಲೆಗಳು, ಕೃಷಿಯ ಬಗ್ಗೆ ಅವರ ಆಳವಾದ ಜ್ಞಾನ, ಅನುಭವ ಸಂದರ್ಶನದಲ್ಲಿ ಎದ್ದು ಕಾಣುತ್ತಿದೆ. 'ಮಿಶ್ರ ಬೇಸಾಯ'ದ ಅಗತ್ಯ ಕಂಡುಕೊಂಡು ಆಚರಿಸಿದವರು ಇವರು. ಇಡೀ ಬ್ರಾಹ್ಮಣವರ್ಗಕ್ಕೇ ಅನ್ವಯಿಸುವಂತೆ ಅವರ ಮಾತುಗಳು ವಾಸ್ತವವನ್ನು ತೆರೆದಿಡುವ ಪ್ರಯತ್ನ. ['ಬ್ರಾಹ್ಮಣ ಇಡೀ ಪ್ರಪಂಚಕ್ಕೆ ಮಾರ್ಗದರ್ಶನ ತೋರಿಸ್ತಿದ್ದ. ಈಗ ಬ್ರಾಹ್ಮಣನಿಗೆ ಮಾರ್ಗದರ್ಶನ ತೋರಿಸುವ ಸ್ಥಿತಿ ಬಂದಿದೆ'. 'ಬ್ರಾಹ್ಮಣರಲ್ಲಿ ಸಂಘಟನೆ ಇಲ್ಲ. ಅದಕ್ಕೇ ನಾವು ಎಲ್ಲವನ್ನೂ ಕಳೆದುಕೊಂಡಿದ್ದೇವೆ'. (ಪು.೪೨೪) 'ನಾನು ಸಂಕೇತಿಗಳಷ್ಟೇ ಅಲ್ಲ. ಬ್ರಾಹ್ಮಣರು ಜಮೀನು ಇಟ್ಟು ಬೆಳೆಸಬೇಕು ಅಂತೀನಿ... ನಾನು ಬ್ರಾಹ್ಮಣ ಸಂಘದ ಅಧ್ಯಕ್ಷನಾಗಿ ಎಲ್ಲಾ ಕಡೆ ಪ್ರಾರ್ಥನೆ ಮಾಡೋದು ಅಂದ್ರೆ ದಯವಿಟ್ಟು ಜಮೀನು ಮಾರಬೇಡಿ, ಉಳಿಸಿಕೊಳ್ಳಿ-ಅಂತ' (ಪು.೪೧೯)] ಲೇಖಕರು 'ಇದು ಅವರ ಸಂದರ್ಶನ ಎನ್ನುವುದಕ್ಕಿಂತ ಅವರ ಆತ್ಮಾವಲೋಕನ ಎಂದರೆ ಹೆಚ್ಚು ಅರ್ಥ ಬಂದೀತೇನೋ' (ಪು.೪೧೪) ಎನ್ನುತ್ತಾರೆ. ಅದು ಸರಿ; ಆದರೆ ಬ್ರಾಹ್ಮಣವರ್ಗದ ಎಲ್ಲರಿಗೂ ಸಂದರ್ಶನ ಓದುತ್ತಿದ್ದರೆ ಅವರವರ ಆತ್ಮಾವಲೋಕನ ಮಾಡಿಕೊಳ್ಳುವಷ್ಟು ಜಾಗೃತಗೊಳಿಸುವ ಚೈತನ್ಯ, ಕಳಕಳಿ ಅತ್ಯಂತ ಪರಿಣಾಮಕಾರಿಯಾಗಿ ಇಲ್ಲಿ ಸ್ಫುರಿಸಿದೆ.

ಬೆಂಗಳೂರಿನ ಪ್ರಭಾ ಕಣ್ಣಿನ ಆಸ್ಪತ್ರೆಯ ಡಾ.ರಾಮಚಂದ್ರಮೂರ್ತಿ ಹಾಗೂ ಅವರ ಶ್ರೀಮತಿಯವರ ತೋಟಗಾರಿಕೆಯ

ವಿವರಗಳು ತೋಟಗಾರಿಕೆಯನ್ನು ಒಂದು ಒಳ್ಳೆಯ ಹವ್ಯಾಸವನ್ನಾಗಿ ಮಾಡಿಕೊಂಡು ಅದರಲ್ಲಿ ಆನಂದ ಕಾಣುವ ಮನೋಭಾವಕ್ಕೆ ನಿದರ್ಶನವಾಗಿದೆ. ಐದು ಬೋರ್‌ವೆಲ್ ಹಾಕಿಸಿ ಹನಿ ನೀರಾವರಿಯಿಂದ ತೆಂಗು, ಬತ್ತ, ಗೋಧಿ, ತೊಗರಿ ಮಾತ್ರವಲ್ಲದೆ ಭಾರತದಲ್ಲಿ ಬೆಳೆಯುವ ಎಲ್ಲ ಜಾತಿಯ ಮಾವಿನ ತಳಿಯನ್ನೂ ಇತರ ಹಣ್ಣುಗಳನ್ನೂ ಬೆಳೆದಿದ್ದಾರೆ. ತೇಗ, ಗಂಧ ಇತ್ಯಾದಿ ಮರಗಿಡಗಳನ್ನು ಬೆಳೆದಿರುವ ಇವರ ತೋಟ ಒಂದು ಆದರ್ಶ ತೋಟವಾಗಿದೆ. ವೃತ್ತಿಯಷ್ಟೇ ಹವ್ಯಾಸವನ್ನು ಗಂಭೀರವಾಗಿ ಸ್ವೀಕರಿಸಿ ಬೆಳೆಗಳ ವೈಜ್ಞಾನಿಕ ಅಧ್ಯಯನ ಮಾಡಿ ಅರಣ್ಯಾಧಿಕಾರಿಗಳ ಜೊತೆ ಸಂವಾದ ಮಾಡಿ, ತೋಟಕ್ಕೆ ಗಾಳಿ ತಡೆಯುವ ಬೇಲಿ ನಿರ್ಮಾಣ ಮಾಡಿಸಿ ತೋಟದ ನಿರ್ವಹಣೆ ಮಾಡಿರುವುದು ಗಮನಾರ್ಹ.

ಬೆಂಗಳೂರಿನ Mahyco ಕಚೇರಿಯಲ್ಲಿ ರಾಷ್ಟ್ರೀಯ ಮಾರುಕಟ್ಟೆ ಅಧಿಕಾರಿಯಾಗಿರುವ ಶ್ರೀ ಟಿ.ಎನ್.ಸುಬ್ಬರಾವ್ ಅವರ ಚಿಂತನೆಗಳು ಈ ಗ್ರಂಥದ ಉದ್ದೇಶ, ಆಶಯಗಳಿಗೆ ಕಳಸಪ್ರಾಯವಾಗಿವೆ. (ಪು.೪೩೫) ಕೃಷಿ ಹಿನ್ನೆಲೆಯಿಂದ ಬಂದು ಕೃಷಿ ಪದವೀಧರರಾಗಿ ಹಳ್ಳಿಯ ವ್ಯವಸಾಯದ ರೀತಿಯನ್ನು ಬದಲಿಸುವ ಅದಮ್ಯ ಆಸೆಯನ್ನು ಹೊಂದಿ ಹಳ್ಳಿಯಲ್ಲಿ ಎಕರೆಗೆ ಹತ್ತು ಪಲ್ಲ ರಾಗಿ ಬೆಳೆದು ರೈತರ ಗಮನ ಸೆಳೆದವರು. ಸಂಕೇತಿ ಕೃಷಿ ನಶಿಸಲು ಕೇವಲ ತೋಟದ ಬೆಳೆಯೊಂದನ್ನೇ ನಂಬಿ ಅದರಲ್ಲಿನ ಉತ್ಪತ್ತಿಯೇ ಸಾಕೆಂದು ಇತರ ಬೇಸಾಯದತ್ತ ಗಮನ ನೀಡದೆ ತಪ್ಪು ಮಾಡಿದರೆಂದು ಭಾವಿಸುವ ಸುಬ್ಬರಾವ್ ರೈತನಿಗೆ ಉತ್ತಮ ತಾಂತ್ರಿಕತೆಯಿಂದ ಬಿತ್ತನೆ ಬೀಜ ನೀಡಿ ಉತ್ತಮ ಸೇವೆ ಒದಗಿಸಿದರೆ ಅಭಿವೃದ್ಧಿ ಸಾಧ್ಯ ಎಂದು ನಂಬಿ ರೈತರನ್ನು ಜಾಗೃತಗೊಳಿಸುವ ಮಹಾಸಾಧನೆ ಮಾಡಿದವರು. ಹೈಬ್ರಿಡ್ ಕೋಸು ಬೀಜವನ್ನು ತಂದು ಹಾಸನದ ರೈತರಿಗೆ ಕೊಟ್ಟು ಒಂದು ಎಕರೆಗೆ ಅರುವತ್ತು ಸಾವಿರ ಲಾಭ ಗಳಿಸಲು ಪ್ರೇರಕಶಕ್ತಿಯಾಗಿ ಕಾರ್ಯಪ್ರವೃತ್ತರಾದವರು. ರೈತರೊಬ್ಬರ ಪ್ರಶಂಸೆ ಕೇಳಿದ ಮೇಲೆ '... ನಮ್ಮ ಜೀವನದಲ್ಲಿ ನಿಜವಾದ ಮಾರ್ಪಾಡು ಯಾವಾಗ ಆಗುತ್ತೆ ಅಂದ್ರೆ ನಮ್ಮಿಂದ ಇತರರಿಗೆ ಯಾವಾಗಲಾದರೂ ಅನುಕೂಲವಾದಾಗ... ರೈತರಿಗೆ ಇನ್ನೂ ಹೆಚ್ಚಿನ ತಂತ್ರಜ್ಞಾನ ಮುಟ್ಟಿಸಬೇಕು ಅಂತ ಸಂಕಲ್ಪ ಮಾಡಿದೆ' (ಪು.೪೪೧) - ಎಂದು ಅಂದುಕೊಂಡಂತೆ ಒಬ್ಬ ಅಧಿಕಾರಿಯಾಗಿ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಕೃಷಿಕರಿಗೆ ಮುಟ್ಟಿಸುವ ಕಾರ್ಯ ಮಾಡಿದ್ದಾರೆ. ಕೃಷಿ ನಿರಾತಂಕವಾಗಿ ಮುಂದುವರೆಯಲು ಉತ್ತಮ ಬಿತ್ತನೆ ಬೀಜ, ಸರಿಯಾದ ಮಾರ್ಗದರ್ಶನ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕೆಂಬುದೂ, ರೈತನ ಬೆಳೆಗೆ ಸರಿಯಾದ ಬೆಲೆ ಸಿಗಬೇಕೆಂಬ ಸುಬ್ಬರಾವ್ ಅವರ ನಿಲುವೂ ವೃತ್ತಿಯಿಂದ ಕಂಡುಕೊಂಡದ್ದು.

ನಿವೃತ್ತಿ ಹೊಂದಿದ ಅನಂತರ ಹುಟ್ಟೂರಿಗೆ ಬಂದು ವ್ಯವಸಾಯನಿರತರಾಗುವ, ಯುವ ಪೀಳಿಗೆಗೆ ಮಾದರಿಯಾಗಬಲ್ಲ ಆದರ್ಶದಂಪತಿಗಳ ಚಿತ್ರಣ (ಪು.೨೭೬) ಹಾಗೇ ಕೆಲಸ ಬಿಟ್ಟು ಬೆಂಗಳೂರಿನಿಂದ ಗ್ರಾಮಕ್ಕೆ ಬಂದು ಜಮೀನು ಕ್ರಯಿಸಿ ವ್ಯವಸಾಯಕ್ಕೆ ನಿಲ್ಲುವ ಒಂದು ಮನಸ್ಸಿನ ಮುಕ್ತ ಅಭಿಪ್ರಾಯ (ಪು.೩೭೬) ಜಮೀನಿಗೆ ಬಂದಾಗ 'ಏನೋ ಒಂದು ತರಹದ vibration ನನಗಾಯ್ತು! ಇದು ನನ್ನ ಜಾಗ ಅಂತ ಅನ್ನಿಸಿತು' - ಕೇವಲ ಭಾವುಕತೆ ಆಗದೆ ಬೌದ್ಧಿಕ ನೆಲೆಗಟ್ಟು ಉಳ್ಳದ್ದಾಗಿದೆ. ವ್ಯವಸಾಯಕ್ಷೇತ್ರದ ನಾನಾ ಅನುಭವಗಳನ್ನುಳ್ಳ ಕೃಷಿಕರ ಆತ್ಮಬಿನ್ನಹ ಈ ಕೃತಿಯಲ್ಲಿ ವಿಸ್ತೃತವಾಗಿದ್ದು ಈ ಲೇಖನದ ಮಿತಿಯಲ್ಲಿ ಎಲ್ಲರ ಪ್ರಸ್ತಾಪ ಮಾಡಲು ಅವಕಾಶವಾಗಿರುವುದಿಲ್ಲ. ಎಲ್ಲರನ್ನೂ ಹೆಸರಿಸಲೂ ಸಾಧ್ಯವಿಲ್ಲ. ಎಲ್ಲ ಬೆಳೆಗಳ ಬಗ್ಗೆ ತಿಳಿಯಲು ಪುಸ್ತಕವನ್ನೇ ಆಸಕ್ತರು ಸಾದ್ಯಂತ ಓದುವುದು ಉತ್ತಮ. ಲೇಖಕರು ವಿವಿಧ ಬೆಳೆಗಳಿಗೆ ಸಂಬಂಧಿಸಿದಂತೆ ಪುಟ ಸೂಚಿಸಲು ಒಂದು ಸೂಚಿಯನ್ನು ಒದಗಿಸುವುದು ಒಳ್ಳೆಯದು. ಅಂತೆಯೇ ಸಂದರ್ಶನ ನಡೆಸಿದ ದಿನಾಂಕವನ್ನೂ ಸೂಚಿಸಿದಲ್ಲಿ ಒಂದು ಕಾಲದ ಕೃಷಿಯ ಐತಿಹಾಸಿಕತೆಯ ಮಹತ್ವ ದೊರೆತಂತಾಗುತ್ತದೆ.

ಸಂಕೇತಿ ಕೃಷಿಕರು ತಮ್ಮ ವ್ಯವಸಾಯದ ಅನುಭವಸಾರವನ್ನೇ ಇಲ್ಲಿ ಹರಿಸಿದ್ದಾರೆ. 'ಎಲ್ಲವುದಕ್ಕೂ ಒಂದು life cycle ಅಂತ ಇರುತ್ತೆ. Marketingನಲ್ಲಿ we build brands. ಆ Brandಗೂ life ಇರುತ್ತೆ. ಅದೊಂದು cycle. ಬೆಳೀತಾ ಬೆಳೀತಾ curve ಮೇಲೆ ಹೋಗುತ್ತೆ. ಆಮೇಲೆ curve ತಿರಗಾ ಕೆಳಗೆ ಬರುತ್ತೆ. Brandಗೂ ಸಾವಿದೆ. ಆದ್ರೆ ನಾವು ಅದನ್ನು ಸಾಯದೇ ಇರೋ ತರಹಾ ಜೋಪಾನವಾಗಿ ಕಾದಿಡ್ತೀವಿ ಅಷ್ಟೆ' -(ಪು.೩೮೦) - ಎಂಬ ಮಾತು

ಅನುಭವದಿಂದ ಕಂಡುಕೊಂಡ ವಾಣಿಜ್ಯ ರಹಸ್ಯ. ಕೃಷಿಕರ ನಿವೇದನೆಗಳಲ್ಲಿ ಸೊಗಸಾದ ಕಲ್ಪನೆಗಳು, ಕಾವ್ಯದ ಪ್ರತಿಭಾ ಸ್ಪರ್ಶವಿರುವುದು ಮಾತ್ರವಲ್ಲದೆ ಜೀವನದಲ್ಲಿ ಕಂಡ ಸತ್ಯದರ್ಶನದ ಪ್ರಾಮಾಣಿಕ ಅನಿಸಿಕೆಗಳಿವೆ. ತಮ್ಮ ಬದುಕಿನ ಧ್ಯೇಯೋದ್ದೇಶಗಳನ್ನು ನಿರ್ಮಲ ಮನಸ್ಸಿನಿಂದ ಹೇಳಿಕೊಂಡಿದ್ದಾರೆ. ಕೆಲವನ್ನು ಉದಾಹರಿಸಬಹುದು :

'ಎಲ್ಲರೊಳಗಾಗಿ ಬದುಕುವುದೇ ನನ್ನ ಜೀವನಧರ್ಮ.' (ಪು.೧೯)

'ಹಣದ ಮುಗ್ಗಟ್ಟಿನಿಂದ ಬೋರ್ ಕೊರೆಸಲು ಆಗಿಲ್ಲ. ಅದಕ್ಕೇ ಗಿಡಗಳು ಬೇಸಗೇಲಿ ಒಣಗುತ್ವೆ, ಮಳೆಗಾಲದಲ್ಲಿ ಚಿಗುರುತ್ವೆ. ಅವು ಚಿಗುರಿದಾಗ ನನ್ನ ಕನಸುಗಳೂ ಚಿಗುರುತ್ವೆ.' (ಪು.೬೯)

'ಬಾಗಾಯ್ತನ್ನು ಪೂರ್ಣವಾಗಿ ಒಂದು ಸಂಸಾರಕ್ಕೆ ಹೋಲಿಸಬಹುದು. ಯಾವಾಗಲೂ ಸಹ ತೆಂಗಿನಮರ ತಲೇಲಿ ಎಳನೀರನ್ನು ಹೊತ್ತಿರುತ್ತೆ. ಅದು ಮನೆಯ ಯಜಮಾನನ ತರಹ. ಯಾವ Timeನಲ್ಲಿ ಯಾರೇ ಬಂದ್ರೂ "ಬನ್ನಿ ಒಳಗೆ" ಅಂತ ಕರೆಯೋ ರೀತಿಯಲ್ಲಿ ತೆಂಗಿನಮರ. ಮನೆಯಲ್ಲಿ ನಾಲ್ಕಾರು ಜನ ದುಡಿಯೋ ಮಕ್ಕಳಿಗೆ ಅಡಿಕೆ ಮರಗಳನ್ನು ಹೋಲಿಸಬಹುದು. ಮನೆಯನ್ನು ಶುಚಿಯಾಗಿ ಇಟ್ಟುಕೊಂಡಿರುವ ಗೃಹಿಣೀನ ಎಲೆ ಹಂಬಿಗೆ ಹೋಲಿಸಬಹುದು. ಸಂಸಾರದಲ್ಲಿ ನಾಲ್ಕಾರು ಜನ ಮಕ್ಕಳು ಮರಿ ಇರುವ ರೀತಿಯಲ್ಲಿ ಬಾಳೆಗಿಡ ಇರುತ್ತೆ. ಬಾಗಾಯ್ತು ಎನ್ನುವ ವ್ಯವಸಾಯವೂ ಒಂದೇ ಸಂಸಾರವೂ ಒಂದೇ ಅಂತ ಹಿರಿಯರು ಹೇಳಿದ್ರಲ್ಲಿ ಅರ್ಥವಿದೆ' -(ಪು.೨೦೯)

'ಹಿಮಾಲಯದಲ್ಲಿ ಮಿಲಿಟರಿಯವರು ಯಾವ ರೀತಿ ಶಿಸ್ತಿನಿಂದ ಇರ್ತಾರೋ ನಾವೂ ಅದೇ ರೀತಿ ಶಿಸ್ತಿನಿಂದ ಇರಬೇಕು. ಸೋಮಾರಿಗಳಾಗಬಾರದು.' (ಪು.೨೮೯)

'ನಾನು ಅಲ್ಪತೃಪ್ತ... ಭೂಮಿ ಕೊಟ್ಟಷ್ಟರಲ್ಲಿ ತೃಪ್ತನಾಗಿದೀನಿ. ಪುಸ್ತಕದ ವಾಸನೆ ತಲೆಗೆ ಹೋಗದಾದಾಗ ಮಣ್ಣಿನ ವಾಸನೆ ತಂತಾನೆ ಬರುತ್ತೆ.' (ಪು.೩೨೪)

'ಹತ್ತು ರೂಪಾಯಿ ಕೊಟ್ಟು ಮಾವಿನ ಹಣ್ಣು ಖರೀದಿ ಮಾಡಿ ತಿನ್ನೋದಕ್ಕಿಂತ, ನಮ್ಮ ತೋಟದಲ್ಲಿ ಬೆಳೆದ ನೂರು ಮಾವಿನ ಹಣ್ಣನ್ನು ನೋಡಿದ್ರೇ ಸಂತೋಷ.' (ಪು.೨೦೬)

'ನಮ್ಮ ಮನೇಲಿ ಎಲ್ಲರಿಗೂ ವ್ಯವಸಾಯದ ಮೇಲೆ ಆಸಕ್ತಿ. ಗೋಡೆ ಇದ್ರೆ ತಾನೆ ಚಿತ್ತಾರ ಬರೀಬಹುದು. ಅದಕ್ಕೆ ಈ ಗೋಡೇನ ಮಕ್ಕಳಿಗೆ ಉಳಿಸಬೇಕು ಅಂತ ಮಾಡಿದೀನಿ.' (ಪು.೧೭೨)

ತಮ್ಮ ತರುವಾಯ ಮಕ್ಕಳು ಕೃಷಿ ಮುಂದುವರಿಸುವ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಕೃತಿಯ ಸಂದರ್ಶನಗಳಲ್ಲೆಲ್ಲಾ ಒಡಮೂಡಿವೆ. ಸಂಕೇತಿ ಕೃಷಿ ನಶಿಸದೆ ಮುಂದೆಯೂ ದೇಶ ಕಾಲಗಳಲ್ಲಿ ಸತತ ಉಳಿಯಬೇಕು ಎಂಬ ಲೇಖಕರ ಕಾಳಜಿ ಎಲ್ಲರಿಂದ ಸಂಕೇತಿ ಕೃಷಿಯ ಭವಿಷ್ಯದ ಬಗ್ಗೆ ತಿಳಿಯುವ, ಕೇಳುವ ಕುತೂಹಲಕ್ಕೆ ಹಚ್ಚಿದೆ. ಕೆಲವರಿಂದ ಆಶಾಭಾವ ಉಂಟಾದರೆ ಮತ್ತೆ ಕೆಲವರ ಮಾತುಗಳಿಂದ ನಿರಾಶೆಯ ಛಾಯೆ ಕವಿಯುತ್ತದೆ.

'ಮತ್ತೂರಿನ ಎಲ್ಲ ಸಂಕೇತಿ ಕುಟುಂಬದಲ್ಲೂ ಒಬ್ಬನಿದ್ದು ವ್ಯವಸಾಯ ನೋಡಿಕೋತಿದಾನೆ. ಸಂಕೇತಿಗಳ ಕೃಷಿ ಇಲ್ಲಿ ಮುಂದುವರಿಯುತ್ತೆ.' (ಪು.೨೨೫)

'ವ್ಯರ್ಥವಾಗಿ ಕಾಲ ಕಳೆಯದೆ ಬದುಕನ್ನು ರೂಢಿಸಿದ್ದೇನೆ. ವ್ಯವಸಾಯಕ್ಕೆ ಕೊನೆ ಮೊದಲಿಲ್ಲ... ಒಬ್ಬ ಮಗ ಡಾಕ್ಟರ್ ಆದ. ಮತ್ತೊಬ್ಬ ಇಂಜಿನಿಯರ್ ಆದ... ಹಣಕಾಸಿನ ಸೌಕರ್ಯವಿಲ್ಲದೇ ಹಾಗೇ ಜಮೀನನ್ನು ಹಾಳುಬಿಟ್ಟಿದ್ದೆ. ಈಗ ಇಲ್ಲಿ ವೈದ್ಯನಾಗಿರುವ ನನ್ನ ಮಗ ಅದನ್ನು ಅಭಿವೃದ್ಧಿ ಮಾಡಿ ತೋಟ ಮಾಡಿದ್ದಾನೆ. ವ್ಯವಸಾಯದ ಬಗ್ಗೆ ಅವನಿಗೆ ಒಲವಿದೆ. ನಮ್ಮ ಕುಟುಂಬದ ಕೃಷಿ ಮುಂದುವರಿಯುತ್ತೆ ಅನ್ನುವುದಕ್ಕೆ ಇದು ಸಾಕ್ಷಿ.' (ಪು.೧೯೪)

'ತಂದೆ ತಾಯಂದಿರೇ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಹೊರಗೆ ಕಳಿಸುವುದೂ ಒಂದು (ಕೃಷಿಯನ್ನು ಬಿಡಲು) ಕಾರಣ. ತಾವು ಯಾವುದನ್ನು ನಂಬಿ ಬದುಕಿದಾರೋ ಅದರ ಬಗ್ಗೇನೇ ಅವರಿಗೆ ವಿಶ್ವಾಸ ಇಲ್ಲ.' (ಪು.೨೫೯)

'ನನ್ನ ಮಗ ವ್ಯವಸಾಯಸ್ಥನೇ ಆಗಬೇಕು ಅಂತ ನನ್ನ ಬಲವಂತವೇನಿಲ್ಲ. ಅವನ ಕ್ಷೇತ್ರವನ್ನು ಅವನು ಆರಿಸಿಕೊಳ್ಳಬಹುದು. ನನ್ನ ತಂದೇನೂ ನನಗೆ ಇಂಥಾದ್ದನ್ನೇ ಮಾಡು ಅಂತ ಬಲವಂತ ಮಾಡಲಿಲ್ಲ.' (ಪು.೨೯೬)

'ನಮ್ಮ ನಂತರ ಅದು (ವ್ಯವಸಾಯದ ಗತಿ) ದೇವರೇ ಗತಿ! (ನಗು) ಈಗಿನ ವಾತಾವರಣದಲ್ಲಿ ನಾಳೆಗೆ ಏನಾಗುತ್ತೆ ಹೇಳೋದೆ ಕಷ್ಟ ಅಂತಾದ್ರಲ್ಲಿ! ಈಗ ನಮ್ಮನ್ನು ಕೇಳಿದರೆ ನಾವು ಹೇಗೆ ಹೇಳುವುದು.' (ಪು. ೩೨೩)

ಕೃಷಿ ಪರಂಪರೆಯ ನಿರಂತರತೆಯ ಬಗ್ಗೆ ಸಕಾರಾತ್ಮಕ ಹಾಗೂ ನಕಾರಾತ್ಮಕ ಧೋರಣೆಗಳು ಮೇಲ್ಕಂಡ ಅನಿಸಿಕೆಗಳಲ್ಲಿ ಮಾತ್ರವಲ್ಲದೆ ಇಡೀ ಕೃತಿಯ ತುಂಬೆಲ್ಲ ವ್ಯಾಪಿಸಿವೆ. ಮುಂದಿನ ಪೀಳಿಗೆಗೆ ಸಂಕೇತಿ ಕೃಷಿ ಉಳಿಯುತ್ತದೆಯೆ? ಉಳಿಯಬೇಕು ಎಂಬ ಲೇಖಕರ ಆತಂಕ, ಆಶಯ ಸಂದರ್ಶನದ ಪುಟಪುಟಗಳಲ್ಲೂ ಢಾಳಾಗಿ ಎದ್ದು ಕಾಣುತ್ತದೆ. ಅವರೇ ಹೇಳುವಂತೆ - 'ಈ ಕಾಲಘಟ್ಟವೇ ಹಾಗಿದೆ. ಹಳೆಯದನ್ನು ಬಿಡಲಾಗದ, ಹೊಸದನ್ನು ಗಟ್ಟಿಯಾಗಿ ಅಪ್ಪಿಕೊಳ್ಳಲಾಗದ ಸ್ಥಿತಿಯಲ್ಲಿ ನಾವಿದ್ದೇವೆ... ಪಟ್ಟಣಗಳಲ್ಲಿ ನೆಲೆಸಿರುವವರ ಹಳ್ಳಿಪ್ರೀತಿಯನ್ನು, ಹಳ್ಳಿಯಲ್ಲಿರುವವರ ಪಟ್ಟಣದ ಪ್ರೀತಿಯನ್ನು ಒಟ್ಟಿಗೆ ನೋಡಿದ್ದೇನೆ.' (ಪು.೪೪೬)- ಎಂಬ ಮಾತು ಸದ್ಯದ ಬದುಕಿನ ಸಂಕ್ರಮಣ ಸ್ಥಿತಿಯನ್ನು, ಜೀವನದ ಅಸಹಾಯಕತೆ, ಅನಿವಾರ್ಯತೆಗಳನ್ನು ಸೂಚಿಸುತ್ತದೆ. 'ಉಪಸಂಹಾರ'ದ ಗ್ರಂಥದ ಕಡೆಯ ಪುಟಗಳಲ್ಲಿ ಲೇಖಕರು ಸಂದರ್ಶನಗಳಿಂದ ತಾವು ಗ್ರಹಿಸಿದ ಸಂಕೇತಿ ಕುಟುಂಬಗಳ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳ ಬಗೆಗೆ ವಿಚಾರಾತ್ಮಕವಾದ, ಇನ್ನೂ ಹೆಚ್ಚಿನ ಸಂಶೋಧನೆಗಳಿಗೆ ಹಚ್ಚಬಹುದಾದ ವಿಷಯಗಳನ್ನು ಪ್ರಸ್ತಾಪಿಸಿದ್ದು ತುಂಬಾ ಮೌಲಿಕವಾಗಿದೆ. 'ಉಳುವವನಿಗೇ ಜಮೀನು' ಕಾಯ್ದೆಯ ದುಷ್ಪರಿಣಾಮಗಳು, ಬಾಗಾಯ್ತನ್ನು ಮಾತ್ರ ಅವಲಂಬಿಸಿದ್ದು, ವ್ಯವಸಾಯಕ್ಕೆ ಪೂರಕವಲ್ಲದ ಆಧುನಿಕ ಶಿಕ್ಷಣ, ಮಕ್ಕಳಿಂದ ಕೃಷಿ ಅಸಾಧ್ಯ ಎಂಬ ಕೆಲವು ಹಿರಿಯರ ನಿಲುವು, ಕೃಷಿ ಉಳಿಯಲು ಹೆಣ್ಣು ಮಕ್ಕಳ ಪಾತ್ರ, ಪೂರಕ ವಿದ್ಯೆಗಳಾದ ವೇದ, ಸಂಗೀತಕ್ಕೆ ನಗರಗಳಲ್ಲಿ ದೊರೆತ ಮಾನ್ಯತೆ-ಇಂಥ ಹಲವು ವಿಚಾರಗಳು ಲೇಖಕರ ನಿಶಿತ ಮತಿಯಿಂದ ಚರ್ಚಿತವಾಗಿವೆ. ಅಮೆರಿಕಾದ ರೆಡ್ ಇಂಡಿಯನ್ನರ ಭೂಮಿ ಪ್ರೀತಿ, ಭಕ್ತಿಯನ್ನು ಉದಾಹರಿಸಿ 'ಪ್ರಕೃತಿಯ ವಿರಾಟ್ ಸ್ವರೂಪದ ಮುಂದೆ ನಮ್ಮ ಕೃಷಿ ಬದುಕು ಎಷ್ಟರಮಟ್ಟಿನದು? ಒಮ್ಮೆ ಯೋಚಿಸಿದರೆ, ಭೂಮಿಯನ್ನೂ, ಪ್ರಕೃತಿಯನ್ನೂ ಇದ್ದ ಹಾಗೆ ಬಿಟ್ಟು ತನ್ನ ಬದುಕಿಗೆ ಬೇಕಾದ್ದನ್ನು ಮಾತ್ರ ಪಡೆದು, ನಿಃಸ್ವಾರ್ಥವಾಗಿ ಜೀವಿಸುವ ಕಲೆ ಎಂದರೆ ಕೃಷಿ ಎನ್ನುವಂತಾಗಬೇಕು. ನಮ್ಮ ಕೃಷಿ ಎಂದಿಗೂ ಪರಿಸರಕ್ಕೆ ಭಾರವಾಗಬಾರದು' (ಪು.೪೫೨) - ಎಂದು ಉದಾರ, ಉದಾತ್ತ ಭಾವವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿನ ವಿಚಾರಮಂಥನ ಸಂಕೇತಿವರ್ಗಕ್ಕೆ ಮಾತ್ರ ಸೀಮಿತವಾಗದೆ ಕೃಷಿಯನ್ನು ಗ್ರಾಮೀಣ ಪ್ರದೇಶದಲ್ಲಿ ಅವಲಂಬಿಸಿದ್ದು ಸ್ಥಿತ್ಯಂತರಗೊಂಡ ಎಲ್ಲ ಬ್ರಾಹ್ಮಣವರ್ಗಕ್ಕೂ ಅನ್ವಯಿಸುವಂಥದ್ದಾಗಿದೆ.

'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಗ್ರಂಥದ ಮತ್ತೊಂದು ಉಲ್ಲೇಖಿಸಬೇಕಾದ ಅಂಶ ಎಂದರೆ - ಪ್ರಸ್ತುತ ಕೃತಿಯಲ್ಲಿ ಭಾಷಾ ಜಿಜ್ಞಾಸುಗಳಿಗೆ ಬೇಕಾದ ಸ್ಥಳನಾಮದ ವಿವರವಿದ್ದು ಸಂದರ್ಶಕರು ಅದರ ಬಗ್ಗೆ ವಿಶೇಷ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಒಂದು ಗ್ರಾಮಕ್ಕೆ, ಸ್ಥಳಕ್ಕೆ ಹೆಸರು ಬರಲು ಇರುವ ಕಾರಣ ಹಾಗೂ ಕಾಲಾನಂತರದಲ್ಲಿ ಜನಗಳ ಬಾಯಲ್ಲಿ ಆ ಹೆಸರು ಹೇಗೆ ರೂಪಾಂತರವಾಯಿತೆಂದು ಶೋಧಿಸುವುದು ಭಾಷಾ ವಿಜ್ಞಾನದ ಕಾರ್ಯ. ಲೇಖಕರು ತಾವು ಸಂದರ್ಶನದ ಸಲುವಾಗಿ ಭೇಟಿ ಮಾಡಿದ ಅನೇಕ ಸ್ಥಳಗಳ ಹೆಸರುಗಳ ನಿಷ್ಪತ್ತಿಯ ಬಗೆಗೆ ಚಿಂತನೆ ನಡೆಸಿದ್ದಾರೆ. ಅರಕಲಗೂಡು ತಾಲ್ಲೂಕು ಹಾನಗಲ್‌ನಿಂದ ಹಿಡಿದು (ಹಳ್ಳೀಮೈಸೂರು, ಪೂಮಗಾಮೆ, ಕೌಶಿಕ, ಚಿಲ್ಕುಂದ, ಮತ್ತೂರು, ಮಡಿಕೇರಿ, ಕೇರಳಾಪುರ ಇತ್ಯಾದಿ) ಬೆಂಗಳೂರಿನವರೆಗೆ ಏಳೆಂಟು ಜಿಲ್ಲೆಗಳ ಗ್ರಾಮಗಳಿಗೆ ಹೋದಾಗ ಅಲ್ಲಿನ ಹೆಸರುಗಳ ವೈಶಿಷ್ಟ್ಯದ ಬಗ್ಗೆ ವಿಚಾರಿಸಿ ಸ್ವಾರಸ್ಯವಿರುವ ಸ್ಥಳನಾಮಗಳನ್ನು ಪರಿಶೀಲಿಸಿದ್ದಾರೆ. ನಿದರ್ಶನಕ್ಕೆ - 'ಹಳ್ಳೀಮೈಸೂರು'. ''ಇದು ನಿಜವಾಗಿ ಹಳ್ಳೀಮೈಸೂರಲ್ಲ, 'ಹಳೇಮೈಸೂರು'. ಈಗಿರುವ ಮೈಸೂರು 'ಮಹಿಶೂರು'. ಶಾಸನಗಳನ್ನು ನೋಡಿದಾಗ

ಇದು ತಿಳಿಯುತ್ತೆ." . . . (ಪು.೧೬) ಎಂದು ಹೇಳಿ ಮುಂದೆ ಅಲ್ಲಿಗೆ ಸಮೀಪದ ಗೋಹಳ್ಳಿ, ಆನೆಕನ್ನಂಬಾಡಿ, ತೇಜೂರು, ಸಿಂಗಲಕುಪ್ಪೆ, ಮಂಗಳವಾಡಿ-ಹೆಸರಿನ ಸ್ಥಳಗಳ ವಿವರಣೆ ನೀಡಿರುವುದು ಅರ್ಥಪೂರ್ಣವಾಗಿದೆ. ತಾವು ಸಂದರ್ಶಿಸಲಿರುವ ಗ್ರಾಮಗಳ ಬಗ್ಗೆ ಲೇಖಕರು ಮೊದಲು ಪೀಠಿಕಾರೂಪದಲ್ಲಿ ತಿಳಿಸಿ ಅನಂತರದಲ್ಲಿ ಸಂದರ್ಶನ ನಡೆಸಿದ್ದು, ಆ ಪೀಠಿಕೆಗಳನ್ನು ಪ್ರತ್ಯೇಕವಾಗಿ ಸಂಕಲಿಸಿದರೆ ಅದೇ ಒಂದು ಉತ್ತಮ ಗ್ರಾಮ ಕೈಪಿಡಿ ಆಗುತ್ತದೆ. ಹಾಗೆಯೇ ತಾತನಹಳ್ಳಿ-ತೀರ್ಥೇಶ್ವರ ಸ್ವಾಮಿ ದೇವಸ್ಥಾನವಿರುವ ತೀರ್ಥಹಳ್ಳಿ-ಇಂದು ಜನಗಳ ಬಾಯಲ್ಲಿ ತಾತನಹಳ್ಳಿ ಆಗಿದೆ. ಸಂಪೂರ್ಣ ಬ್ರಾಹ್ಮಣರೇ ಇದ್ದ ಸಲುವಾಗಿ 'ಪೂರ್ಣಗ್ರಾಮ' ಅಂತ ಹಿಂದೆ ಹೆಸರಾಗಿದ್ದ ಊರು ಇಂದು 'ಪೂಮಗಾಮೆ' (ಪು.೬೫) ಆಗಿದೆ. ಆದರೆ, 'ಕೇರಳಾಪುರ' ಸ್ಥಳನಾಮದ ಬಗೆಗಿನ ವಿವರಣೆ ಇನ್ನೂ ಹೆಚ್ಚಿನ ಸಂಶೋಧನೆಗೆ ಕಾರಣವಾಗುವಂತಿದೆ. ಸ್ಥಳೀಯರೊಬ್ಬರ ವಿವರದಂತೆ "ಐದು ಶತಮಾನಗಳ ಹಿಂದೆ 'ವೀರಭದ್ರಪುರ' ಎಂದಿದ್ದ ಹೆಸರು ತಮಿಳುನಾಡು ಹಾಗೂ ಕೇರಳದ ಗಡಿಭಾಗ 'ಶೆಂಕೋಟ್ಟೈ'ನಿಂದ ಸಂಕೇತಿಗಳು ಇಲ್ಲಿಗೆ ಬಂದದ್ದರಿಂದ ಕೇರಳಾಪುರವೆಂದು' ಬದಲಾಯಿತು" ಎಂಬುದು ಇತಿಹಾಸದ ಕಲ್ಪಿತ ಮಾಹಿತಿಯೋ ಏನೋ ಎಂಬುದರ ಬಗೆಗೆ ಇನ್ನೂ ಆಳವಾದ ವಿಚಾರ ನಡೆಯಬೇಕು. (ಪು.೩೪೬). ಅದೇ ರೀತಿ ಈಚಲಕುಂದ>ಚಿಲ್ಕುಂದ. ಸ್ಥಳೀಯರೊಬ್ಬರ ಅನಿಸಿಕೆಯಂತೆ 'ಈ ಊರಿಗೆ ಮೊದಲು ಈಚಲಕುಂದ ಎಂದು ಹೆಸರಿತ್ತಂತೆ. ಈಚಲು ಮರಗಳ ಸಮೂಹ ಇತ್ತಂತೆ. ಕಾಲಕ್ರಮೇಣ ಈಚಲಕುಂದ ಹೋಗಿ ಚಿಲ್ಕುಂದ ಆಗಿದೆ. ಅಲ್ಲದೆ "ಚಿಲಕ" ಎಂದರೆ ಗಿಳಿಗಳು ಅಂತ ಅರ್ಥ. ಕುಂದ ಅಂದ್ರೆ ಗ್ರಾಮ ಅಥವಾ ಸಮೂಹ ಅಂತ. ಗಿಳಿಗಳ ಸಮೂಹ ಅಂತಾನೂ ಚಿಲ್ಕುಂದಕ್ಕೆ ಹೆಸರಿದೆ ಅಂತ ಹಿರಿಯರು ಹೇಳುತ್ತಿದ್ದರು' (ಪು.೧೭೩) -ಹೀಗೆ ಅರ್ಥದ ಅಸ್ಪಷ್ಟತೆಯಿರುವ ಸ್ಥಳನಾಮಗಳನ್ನು ಕುರಿತು ಲೇಖಕರು ತಮ್ಮ ಚಿಂತನಾಲಹರಿ ಹರಿಸಿರುವುದು ಅತ್ಯಂತ ಉಪಯುಕ್ತವಾಗಿದೆ.

ಒಟ್ಟಿನಲ್ಲಿ ಶ್ರೀ ಎನ್.ಕೇಶವಮೂರ್ತಿಯವರ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' - ಒಂದು ವಿಶಿಷ್ಟ ಶೈಲಿಯ, ವಿನೂತನ ಮಾದರಿಯ ಕನ್ನಡ ಸಾಹಿತ್ಯದ ಒಂದು ಸುಂದರ ಸಂದರ್ಶನಗಳ ಸಾರ ಸತ್ವಗಳ ಸಾಹಿತ್ಯ ಕೃತಿ. ಗ್ರಾಮೀಣ/ನಗರ ಪ್ರದೇಶವೆನ್ನದೆ ಕೃಷಿ ಮಾಹಿತಿ ಪಡೆಯಬೇಕೆನ್ನುವವರಿಗೆ, ಬ್ರಾಹ್ಮಣ ವರ್ಗದ -ಸಂಕೇತಿ ಸಮುದಾಯದ ಸಾಹಸದ, ಬದುಕಿನ ಕೃಷಿ ಸಾಧನೆ ತಿಳಿಯಬೇಕೆನ್ನುವವರಿಗೆ, ಕುಟುಂಬಗಳ ವಿಘಟನೆಯ ಆಧುನಿಕ ಸಮಾಜದಲ್ಲಿ ಕೃಷಿ ಭವಿಷ್ಯದ ಚಿಂತನೆ ಮಾಡುವವರಿಗೆ ಒಂದು ವೈಚಾರಿಕ ಆಕರ ಗ್ರಂಥ. ಸಾಹಿತ್ಯ ಜನಮುಖಿಯಾಗಬೇಕೆಂಬ ಒಂದು ಮಾತಿದೆ. ಹಾಗೆ ಈ ಕೃತಿಯಲ್ಲಿ ವಿಶೇಷವಾಗಿ ನಮ್ಮ ಹಳ್ಳಿಗಾಡಿನ ಸಣ್ಣ, ಮಧ್ಯಮವರ್ಗದ ಕೃಷಿಕರ ಆತ್ಮಕಥೆಗಳು ಸೂಕ್ತ ಭಾವಚಿತ್ರಗಳೊಡನೆ ದಾಖಲಾಗಿದ್ದು ಸಂದರ್ಶನಗಳು ಸಹಜತೆಯಿಂದ ಸ್ಫುರಿಸಿವೆ. ಓರ್ವ ಓದುಗನಾಗಿ ಕೃತಿಯನ್ನು ಒಳಹೊಕ್ಕಾಗ ನನಗನಿಸಿದ ಭಾವನೆಗಳನ್ನು ಇಲ್ಲಿ ನಿಮ್ಮೊಡನೆ ಹಂಚಿಕೊಂಡಿದ್ದೇನೆ. ಗ್ರಂಥದ-ಬೆಳೆ - ಬೆಳೆ ವಿಧಾನಗಳಿಗೆ ಸಂಬಂಧಿಸಿದಂತೆ ಕೃಷಿತಜ್ಞರು ಮಾತ್ರ ಅಧಿಕೃತವಾಗಿ ಹೇಳಬಲ್ಲರು. ಕನ್ನಡ ಸಾಹಿತ್ಯದ ಸಾರಸ್ವತ ಲೋಕಕ್ಕೆ ಇಂಥ ಒಂದು ಅಪರೂಪದ ಕೃತಿಯನ್ನು ನೀಡಿದ ಶ್ರೀ ಎನ್.ಕೇಶವಮೂರ್ತಿ ಅವರು ಹಾಗೂ ಇದಕ್ಕೆ ಪ್ರೇರಕರಾದ ಡಾ.ಪ್ರಣತಾರ್ತಿಹರನ್ ಅವರು ಅಭಿನಂದನೀಯರು.

ಕಾಲೇಜು ಶಿಕ್ಷಣ ಇಲಾಖೆ — **ಕೆ.ಎಸ್.ನರಸಿಂಗರಾವ್**

ಬೆಂಗಳೂರು — ನಿವೃತ್ತ ಕನ್ನಡ ಪ್ರಾಧ್ಯಾಪಕರು

ಅರಿಕೆ

ಕೃಷಿ ಇದ್ದಲ್ಲಿ ದುರ್ಭಿಕ್ಷವಿಲ್ಲ ಎಂಬುದು ಹಿರಿಯರ ಅನುಭವದ ನುಡಿ. ಸಮುದಾಯ ಅಧ್ಯಯನ ಕೇಂದ್ರವು ಸಂಕೇತಿ ಕೃಷಿಯ ಬಗ್ಗೆ ಒಂದು ಸಂಶೋಧನ ಕೃತಿಯನ್ನು ಸಿದ್ಧಪಡಿಸಿಕೊಡಬೇಕೆಂದು ಕೋರಿದಾಗ ನನಗೆ ಸಂತೋಷವೇ ಆಯಿತು. ಚಿಕ್ಕಂದಿನಿಂದಲೂ ನನ್ನ ಪ್ರೀತಿಯ ಕ್ಷೇತ್ರ ಕೃಷಿ. ಕೃಷಿಯಲ್ಲಿನ ನನ್ನ ಅರಿವಿಗೆ ನನ್ನ ತಂದೆ ಚನ್ನರಾಯಪಟ್ಟಣ ತಾಲ್ಲೂಕು ದೊಡ್ಡಗನ್ನಿಯ ಸಿ.ಎಸ್.ನಾರಾಯಣರಾವ್ (ಮಣಯ್ಯ) ಹಾಗೂ ತಾಯಿ ಜಯಲಕ್ಷ್ಮಿ ಕಾರಣ. ಹಳ್ಳಿ ಬದುಕಿನ ಪರಿಚಯ ತಂದೆಯಿಂದ ಆದ್ರೆ ಹಳ್ಳಿ ಆಹಾರದ ಸಂಸ್ಕೃತಿಯ ಪರಿಚಯ ಆದದ್ದು ತಾಯಿಯಿಂದ. ನಮ್ಮ ಮನೆಯಲ್ಲಿ ನಮ್ಮೆಲ್ಲರ ಸಹಭೋಜನ ನಡೀತಿದ್ದದ್ದು ರೈತರ ಜತೆಯಲ್ಲಿಯೇ. ಕೃಷಿ ಕಾಲೇಜಿನಲ್ಲಿ ವಿದ್ಯಾಭ್ಯಾಸವಾದ ಮೇಲೆ ಮತ್ತೆ ನನ್ನನ್ನು ಸೆಳೆದದ್ದು ಕೃಷಿ ಕ್ಷೇತ್ರವೇ. ಪ್ರತಿನಿತ್ಯವೂ ರೈತರ ಒಡನಾಟದಲ್ಲಿದ್ದ ನನಗೆ ಸಮುದಾಯ ಅಧ್ಯಯನ ಕೇಂದ್ರದ ಕೋರಿಕೆ 'ರೋಗಿ ಬಯಸಿದ್ದೂ ಹಾಲು ಅನ್ನ ವೈದ್ಯ ಹೇಳಿದ್ದೂ ಹಾಲು ಅನ್ನ' ಅಂದಂತಾಯ್ತು. ಈ ಕೆಲಸ ನನ್ನಿಂದ ಸಾಧ್ಯವೇ ಅಂತ ಮನ ಮೊದಲು ಅಳುಕಿದ್ದೂ ನಿಜ. ಆದರೆ ಅನುಕಾಲವೂ ನನ್ನ ಜತೆಯಲ್ಲಿದ್ದು ನನ್ನೊಳಗೇ ಒಬ್ಬರಾಗಿ ಹೋಗಿದ್ದ ಡಾ.ಪ್ರಣತಾರ್ತಿಹರನ್ ನನ್ನಿಂದ ಈ ಕೆಲಸ ಮಾಡಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾನು ಈ ಕೆಲಸ ಮಾಡಬಲ್ಲೆ, ನನ್ನಲ್ಲಿ ಈ ಸಾಮರ್ಥ್ಯ ಇದೆ ಎಂದು ಗುರುತಿಸಿದ್ದು ನನ್ನ ಮಾರ್ಗದರ್ಶಿಗಳಾದ ಆಕಾಶವಾಣಿಯ ನಿರ್ದೇಶಕರಾದ ಡಾ||ಎಂ.ಎಸ್.ವಿಜಯಹರನ್ ಅವರು. ಡಾ||ಪ್ರಣತಾರ್ತಿಹರನ್ ಹಾಗೂ ಡಾ||ವಿಜಯಹರನ್ ದಂಪತಿಗಳಿಗೆ ನಾನೆಷ್ಟು ಆಭಾರಿಯಾಗಿದ್ದರೂ ಸಾಲದು. ಅವರು ನನ್ನ ಮೇಲಿಟ್ಟಿದ್ದ ನಂಬಿಕೆ, ನಿರೀಕ್ಷೆಗಳನ್ನು ನಾನೆಷ್ಟು ನಿಜ ಮಾಡಿದ್ದೇನೆ ಎಂಬುದನ್ನು ಓದುಗರಾದ ನೀವೇ ಹೇಳಬೇಕು.

ನನ್ನ ಕೃಷಿ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತ ನನ್ನ ಅಣ್ಣ ಶ್ರೀ ಎನ್.ಶ್ರೀನಿವಾಸಮೂರ್ತಿ, ಈ ಕೆಲಸದಲ್ಲಿ ಸಹಕರಿಸಿದ ಶ್ರೀ ವೆಂಕಟನಾರಾಯಣ, ಬಸವಾಪಟ್ಟಣದ ಶ್ರೀ ಪ್ರಕಾಶ್ ಹಾಗೂ ಎಲ್ಲ ಸಂಕೇತಿ ಕೃಷಿಕರಿಗೂ ನಾನು ಆಭಾರಿಯಾಗಿದ್ದೇನೆ. ನನ್ನ ಈ ಅಧ್ಯಯನಕಾರ್ಯದ ಅವಧಿಯಲ್ಲಾದ ಹೆಚ್ಚಿನ ಇಹಕೃತ್ಯದ ಭಾರಗಳನ್ನು ನಿರ್ವಹಿಸಿ ಸಹಕರಿಸಿದ ನನ್ನ ಪತ್ನಿ ಬಿ.ಎಸ್.ವೀಣಾ ಹಾಗೂ ನನ್ನ ಮಕ್ಕಳಾದ ಕೆ.ವಿಂಧ್ಯಾ ಹಾಗೂ ಕೆ.ವರ್ಷಾ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಸಮುದಾಯ ಅಧ್ಯಯನ ಕೇಂದ್ರವು ನನಗೆ ವಹಿಸಿರುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸಿದ್ದೇನೆ. ಈ ಅವಕಾಶವನ್ನು ನನಗೆ ನೀಡಿದ ಮೈಸೂರಿನ ಸಮುದಾಯ ಅಧ್ಯಯನ ಕೇಂದ್ರಕ್ಕೆ ನಾನು ಚಿರಋಣಿ.

ಎನ್.ಕೇಶವಮೂರ್ತಿ

ಪ್ರಸಾರ ನಿರ್ವಹಣಾಧಿಕಾರಿ (ಕೃಷಿ)

ಆಕಾಶವಾಣಿ, ಮೈಸೂರು

ಮೈಸೂರು

೧೫.೦೮.೦೯

ಕೃತಜ್ಞತೆಗಳು

- ಪೂರ್ಣ ಸಹಕಾರವಿತ್ತು ಈ ಸಂಶೋಧನಕಾರ್ಯಕ್ಕೆ ನೆರವಾದ ಎಲ್ಲ ರೈತ ಬಂಧುಗಳಿಗೆ, ವಕ್ತೃಗಳಿಗೆ

- ಮೌಲಿಕವಾದ ಮುನ್ನುಡಿಯನ್ನು ಬರೆದುಕೊಟ್ಟು ಪ್ರೋತ್ಸಾಹಿಸಿರುವ ವಿದ್ವಾಂಸರಾದ ಪ್ರೊ.ಕೆ.ಎಸ್.ನರಸಿಂಗರಾವ್ ಅವರಿಗೆ

- ಕರಡು ತಿದ್ದಿಕೊಟ್ಟು ಉಪಕರಿಸಿದ ಶ್ರೀ ಎನ್.ಎಸ್.ಶಾರದಾ ಪ್ರಸಾದ್, ವಿದ್ವಾನ್ ಡಾ||ಟಿ.ವಿ.ಸತ್ಯನಾರಾಯಣ, ಪ್ರೊ.ಕೆ.ಎಸ್.ನರಸಿಂಗರಾವ್, ಪೂಮಗಾಮೆ ಗೋಪಿ, ಶ್ರೀ ಎಂ.ವಿ.ಕೃಷ್ಣ, ಡಾ||ಎಂ.ಎಸ್.ವಿಜಯಹರನ್ ಅವರಿಗೆ

- ಈ ಪುಸ್ತಕದ ಪ್ರಕಟಣೆಗೆ ಉದಾರವಾಗಿ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿರುವ
ಶ್ರೀಮತಿ ನಾಗರತ್ನ (ಪಾಪು)-ಶ್ರೀ ಆರ್.ವಿ.ಕೃಷ್ಣಮೂರ್ತಿ,
ಶ್ರೀಮತಿ ಸಬಿತಾ-ಬ್ರಿಗೇಡಿಯರ್ (ನಿ.) ಶ್ರೀ ಆರ್.ವಿ.ಸೀತಾರಾಮಯ್ಯ,
ಶ್ರೀಮತಿ ಸುಮಿತ್ರಮ್ಮ-ಶ್ರೀ ಎಚ್.ಎಸ್.ಅನಂತರಾಮು,
ಶ್ರೀಮತಿ ಸುಂದರಮಣಿ-ಶ್ರೀ ನಟೇಶ್‌ಮಗ್ಗೆ
ಶ್ರೀಮತಿ ವಿನೋದಾ-ಶ್ರೀ ಎಂ.ಎಸ್.ಶ್ರೀನಿವಾಸ್
ಶ್ರೀಮತಿ ಸ್ವರ್ಣಾ-ಶ್ರೀ ಹರಿಪ್ರಸಾದ್
ಶ್ರೀ ವಿ.ಮುಕುಂದಕುಮಾರ
ಅವರಿಗೆ

- ಕ್ಷೇತ್ರಕಾರ್ಯದಲ್ಲಿ ನೆರವಾದ ಶ್ರೀ ಬಿ.ವಿ.ವೆಂಕಟನಾರಾಯಣ ಹಾಗೂ ಶ್ರೀ ಪ್ರಕಾಶ್ (ಕಾಶೀಪತಿ) ಅವರಿಗೆ

- ಸಮುದಾಯ ಅಧ್ಯಯನ ಕೇಂದ್ರದ ವಿದ್ವಾಂಸ ಬಳಗ ಮತ್ತು ಪದಾಧಿಕಾರಿಗಳಿಗೆ

- ಡಿ.ಟಿ.ಪಿ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟ ಬೆಂಗಳೂರಿನ ಮಾತಾ ಗ್ರಾಫಿಕ್ಸ್‌ನವರಿಗೆ

- ಅಂದವಾಗಿ ಮುದ್ರಿಸಿಕೊಟ್ಟಿರುವ ಬೆಂಗಳೂರಿನ ಲಕ್ಷ್ಮೀಮುದ್ರಣಾಲಯದ ಮಾಲೀಕರಾದ
ಶ್ರೀ ಅಶೋಕಕುಮಾರ್ ಮತ್ತು ಸಿಬ್ಬಂದಿವರ್ಗದವರಿಗೆ

ಪರಿವಿಡಿ

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

ಚಿತ್ರಗಳು

ಕಪ್ಪು ಬಿಳುಪು

ಬಣ್ಣದ ಚಿತ್ರಗಳು

ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು

ಮನಸುಗಳ ಮಜಲ ಮಗಚುವ ಮುನ್ನ ...... !

ಮಾನವ ಭಾವನೆಗಳು ತುಂಬಿಹರಿಯುವ ಒಂದು ನದಿಯಂತೆ. ಸುಖದ ಉಬ್ಬರ, ದುಃಖದ ಆಳ, ನೋವು ನಲಿವಿನ ಏರಿಳಿತ ಎಲ್ಲವೂ ಪ್ರತಿಕ್ಷಣ, ಕಣಕಣವೂ ವ್ಯಾಪಿಸಿರುತ್ತೆ. ರಸಭರಿತ ಬಾಳೆಯ ದಿಂಡನ್ನು ಕಚಕ್ಕನೆ ಕಡಿದಾಗ, ಕತ್ತರಿಸಿದ ಜಾಗದಿಂದ ರಸ ಒಸರುವಂತೆ, ಭಾವನೆಗಳನ್ನು ಮಾತಿನ ಕತ್ತಿಯಿಂದ ಕಡಿದಾಗ ಆ ಕ್ಷಣದ ದುಃಖದ ಆಳವೋ, ನಿರಾಸೆಯ ಕೂಪವೋ, ಸಂತಸದ ಉಬ್ಬರವೋ! ಹೊರಹೊಮ್ಮುವುದು ಸಹಜ. ಅದು ಆ ಕ್ಷಣದ ಪ್ರತಿಕ್ರಿಯೆ ಅಷ್ಟೆ. ಸುಖದ ಭಾವ ಹೊಮ್ಮಿಸಿದ ವ್ಯಕ್ತಿ ಸಹಜವಾಗಿ ಯಶಸ್ವೀ ಪುರುಷನಂತೆ. ಹಾಗೆ ನಿರಾಸೆಯ ಆಳ ಹೊರಹೊಮ್ಮಿದೆಡೆ ಆ ವ್ಯಕ್ತಿ ಒಂದು ದೊಡ್ಡ failure ಅನ್ನಿಸುವುದು ಸಹಜ. ಇದು ಸಂದರ್ಶನದ ಮಿತಿಯೂ ಹೌದು. ಅರ್ಧದಿಂದ, ಒಂದೂವರೆ ಘಂಟೆ ಅಷ್ಟೇಕೆ ಒಂದು ದಿನವಿಡೀ ಸಂದರ್ಶನ ಮಾಡಿದ್ರೂ ಒಬ್ಬ ವ್ಯಕ್ತಿಯ ತುಂಬುಜೀವನವನ್ನು ಆತ ಬದುಕಿದಂತೆ, ಬರಹದಲ್ಲಿ ಬಿಂಬಿಸುವುದು ಅಸಾಧ್ಯ. ಬಹುಶಃ ಪ್ರತಿಯೊಬ್ಬನೂ ಮಹಾತ್ಮಗಾಂಧಿಯಂತೆ, ತನ್ನ ಜೀವನಕಥೆಯನ್ನು ತಾನೇ ಬರೆಯಬೇಕೇನೋ. ಆದರೆ ಅದು ಎಷ್ಟು ಜನರಿಂದ ಸಾಧ್ಯವಾದೀತು...? ಈ ಪ್ರಶ್ನೆಗಳ ತಾಕಲಾಟ ನನ್ನನ್ನು ಕಾಡಲು ಆರಂಭಿಸಿದ್ದು, ಡಾ.ಪ್ರಣತಾರ್ತಿಹರನ್ ಅವರು ಒಂದು ದಿನ ನನ್ನನ್ನು ಕಂಡು, ನೀವು ಸಂಕೇತಿ ಕೃಷಿ ಪುಸ್ತಕವನ್ನು ಬರೆಯಬೇಕೆಂದು ಕೇಳಿಕೊಂಡಾಗ. ಆಕಾಶವಾಣಿ ಹಾಗೂ ಪತ್ರಿಕಾಬರಹಗಳಿಗೆ ಲೇಖನಿ ಓಡಿಸಿದ್ದರ ಅನುಭವವಿತ್ತು. ಆದರೂ ... ಸಂಕೇತಿ ಕೃಷಿಸಾಧಕರ ಬದುಕಿನ ಚಿತ್ರಣ ಎಂದಾಗ ಮನ ಅಳುಕಿತ್ತು - ಇದು ನನ್ನಿಂದ ಸಾಧ್ಯವೆ ಅಂತ. ಹರನ್ ಅವರು ನನ್ನಿಂದ ಅಪೇಕ್ಷಿಸಿದ್ದೂ ಬಹಳಷ್ಟಿತ್ತು. ಸಂಕೇತಿ ಕೃಷಿಕರು ಇದ್ದ ಹಳ್ಳಿಗಳಿಗೆ ಹೋಗಿ, ಅವರನ್ನು ಅವರಿರುವ ಪರಿಸರದಲ್ಲಿ ಸಂದರ್ಶನ ಮಾಡಿ, ವಿಚಾರಗಳನ್ನು ದಾಖಲಿಸಬೇಕಿತ್ತು. ಹಳ್ಳಿಹಳ್ಳಿಗಳನ್ನು ತಿರುಗಿ ರೈತರ ಸಂದರ್ಶನ ಮಾಡಿ, ಅದನ್ನು ಬರಹವಾಗಿ ರೂಪಿಸಿದ ಅನುಭವ ಮನಕ್ಕೆ ಧೈರ್ಯ ನೀಡಿತು. ನಾನೂ ನಿಮ್ಮೊಂದಿಗೆ ಬರುತ್ತೀನಿ ಎಂದು ಹರನ್ ಭರವಸೆ ಇತ್ತರು. 'ನೋಡಿಯೇಬಿಡೋಣ' ಎಂದು ಹೊರಟೆ. ಆಕಾಶವಾಣಿ ಮಾಧ್ಯಮದಲ್ಲಿದ್ದುದರಿಂದ ನನಗೆ ಒಂದು ರೀತಿ ಅನುಕೂಲವಿತ್ತು. ನಾನು ಅವರು ಹೇಳಿದ್ದನ್ನು ತಕ್ಷಣ ಬರೆದುಕೊಳ್ಳುವ ಅಗತ್ಯವಿರಲಿಲ್ಲ. ಅದನ್ನು ಧ್ವನಿಮುದ್ರಣ ಮಾಡಿಕೊಳ್ಳುವ ವ್ಯವಸ್ಥೆಸಮೇತ, ಅಗತ್ಯ ಬಿದ್ದಾಗ ಭಾವಚಿತ್ರಗಳನ್ನು ತೆಗೆಯಲು ಕ್ಯಾಮರಾ ಜತೆಗೂಡಿ ನಾವು ಹೋದ ಮೊದಲ ಗ್ರಾಮ, ಹಾನಗಲ್. ಅಂಚೆಯ ಮೂಲಕ ಈಜುವುದನ್ನು ತಾಂತ್ರಿಕವಾಗಿ ಓದಿ ತಿಳಿದ ವ್ಯಕ್ತಿ, ಹರಿಯುವ ನೀರಿಗೆ ಬಿದ್ದಂತಾಯ್ತು. ತುಂಬಿದ ಕುಟುಂಬದ, ಸಮೃದ್ಧ ಮನಸ್ಸಿನ, ವಿಶಾಲ ವ್ಯಾಪ್ತಿಯ ಅನುಭವದ ವ್ಯಕ್ತಿಗಳನ್ನು ಏನು ಕೇಳುವುದು . . . ಎಲ್ಲಿಂದ ಆರಂಭಿಸುವುದು? ಅನುಮಾನ ಮೂಡಿತು. ಅನುಭವ ಎಲ್ಲವನ್ನೂ ತೂಗಿಸಿದ್ರೂ . . ನಿಧಾನವಾಗಿ ನನಗೆ ಒಂದು ವಿಚಾರ ಅರಿವಾಯ್ತು. ಇದು ಕೇವಲ ವ್ಯಕ್ತಿಯ ಸಂದರ್ಶನ ಮಾಡಿ, ಅದನ್ನು ಅಷ್ಟೇ ಸರಳವಾಗಿ ಬರೆದಿಡುವ ಕೆಲಸ ಅಲ್ಲ. ಒಂದು ಇಡೀ ಜನಾಂಗದ ಕೃಷಿ ಬದುಕಿನ ಅಧ್ಯಯನ . . . ಕೃಷಿಯನ್ನೇ ತಮ್ಮ ಉಸಿರನ್ನಾಗಿಸಿ ಬದುಕಿದ ಮಹನೀಯರ ವ್ಯವಸಾಯದ ಇತಿಹಾಸದ ಸಂಶೋಧನೆ . . . ಮಾತಿನ ಮನೆಯ ಮೂಲಕ ಬದುಕಿನ surgery ಆಗಬೇಕು . . . ಕೆಲಸದ ಅಗಾಧತೆ, ಆಳ, ಪ್ರಾಮುಖ್ಯತೆಯ ಅರಿವು ಅಲ್ಲಿ ನನಗಾಯ್ತು. ಯುದ್ಧ ಮಾಡಲು ಹೋಗುವ ಯೋಧ . . ಮೊದಲು ತಾನು ಸಿದ್ಧನಾಗಬೇಡವೇ! ಮಾನಸಿಕ ಸಿದ್ಧತೆ ಆರಂಭಿಸಿದೆ . . . ಇದಕ್ಕಾಗಿ ಆತ್ಮೀಯರನ್ನೂ ಅನುಭವಿಗಳನ್ನೂ ಕಂಡು ಮಾತನಾಡಿಸಿದೆ. ಈ ಮಾತುಕತೆಗಳು ಕಲಸಿ ರಾಡಿಯಾಗಿದ್ದ ನನ್ನ ಮುಂದಿನ ದಾರಿಯನ್ನು ತಿಳಿ ಮಾಡಿದವು. ಅಡಿಕೆ ಸಸಿಯನ್ನು ಹಿಡಿದುಕೊಂಡೇ ಸಂಕೇತಿಗಳು ಹುಟ್ಟಿದಾರೇನೋ ಎನ್ನುವಂತೆ, ಕೇವಲ ಬಾಗಾಯ್ತನ್ನು ಮಾತ್ರ ಈ ವರ್ಗ ಅವಲಂಬಿಸಿದ್ದು ಏಕೆ? ಸಂಕೇತಿ ಕೃಷಿಕರ ಕೃಷಿಮೂಲ ಯಾವುದು? ಕೃಷಿ ಮಾಡುತ್ತಲೇ, ವೇದಾಭ್ಯಾಸ, ಸಂಗೀತವನ್ನು ಅಭ್ಯಾಸ ಮಾಡುವ ಸಂಪ್ರದಾಯ ಬಂದದ್ದು ಹೇಗೆ? ಬ್ರಾಹ್ಮಣ್ಯ ಹಾಗೂ ಕೃಷಿ ಎರಡನ್ನೂ ಈ ವರ್ಗ ಅಷ್ಟು ಜತನದಿಂದ ಹೇಗೆ ಕಾಪಾಡಿಕೊಂಡು ಬಂದಿದೆ? ರಾಜಾಶ್ರಯವನ್ನು ಹೆಚ್ಚು ಅವಲಂಬಿಸದೇ ಕುಗ್ರಾಮಗಳಲ್ಲಿ ಕೃಷಿ ಮಾಡಿ, ಬದುಕು ಕಟ್ಟಿದ ರೀತಿ, ಕುಟುಂಬಗಳನ್ನು ನೆಲೆ ನಿಲ್ಲಿಸಿದ ಪರಿ ಹೇಗೆ? ಗ್ರಾಮಕೇಂದ್ರಿತ ವ್ಯವಸ್ಥೆಯಲ್ಲಿದ್ದುಕೊಂಡೇ ವಿದ್ಯೆ, ಮಾಹಿತಿ, ಮನೋರಂಜನೆ, ಕೃಷಿ ಎಲ್ಲವನ್ನೂ ರೂಪಿಸಿಕೊಂಡದ್ದು ಹೇಗೆ? ಹಳ್ಳಿಯೇ ತಮ್ಮ ಸರ್ವಸ್ವದಂತೆ ಇದ್ದ ಈ ಬುದ್ಧಿವಂತ ಜನರ ಕೃಷಿ ಕಾಲಾನುಕ್ರಮದಲ್ಲಿ ಬೆಳೆದದ್ದು ಹೇಗೆ? ಇತರೇ ಪಂಗಡದ ಜನರ ಕೃಷಿಗಿಂತ ಸಂಕೇತಿಗಳ ಕೃಷಿ ಹೇಗೆ ಭಿನ್ನ? ಕೆರೆಕಟ್ಟೆಗಳು ಇದ್ದ ಕಡೆ ಅಂದ್ರೆ ತನುವಾದ ಜಾಗದಲ್ಲಿ, ನೀರು ಇದ್ದ ಕಡೆ ತೋಟ ಮಾಡಿದ್ರು ಸಂಕೇತಿಗಳು - ಈ ಕಲೆ ಅವರಿಗೆ ಹೇಗೆ ಬಂತು? ಸಂಕೇತಿ ಕೃಷಿಯಲ್ಲಿ ಹೊಸದೇನಾದ್ರೂ ಇದೆಯೇ? ಸಂಪೂರ್ಣ ಕೃಷಿಯನ್ನು ಸ್ವತಃ ಪರಿಶ್ರಮದಿಂದ

ರೂಢಿಸಿದ ಹಿಂದಿನ ಕಾಲದ ಸಂಕೇತಿಗಳು ಕ್ಷಾತ್ರತೇಜದಿಂದ ಕೂಡಿ . . ಅಜಾನುಬಾಹುಗಳಾಗಿದ್ದರಂತೆ . . ಇದು ನಿಜವೇ? ಹಾಗಿದ್ದರೆ ಅನಂತರ ಬಂದ ಪೀಳಿಗೆಗಳಲ್ಲಿ ಆ ಶಕ್ತಿ ಏಕೆ ಉಳೀಲಿಲ್ಲ? ... ಈ ಪ್ರಾಥಮಿಕ ಹಂತದ ಪ್ರಶ್ನೆಗಳ ಗುದ್ದಲಿ ತಯಾರಾಯ್ತು. ಪ್ರತಿ ಕೃಷಿಕನ ಬದುಕಿನ ಸಂಪೂರ್ಣ ವಿವರಗಳನ್ನು ಪಡೆಯುವಾಗಲೇ . . ಈ ಪ್ರಶ್ನೆಗಳನ್ನು ತೂರಿ ಬಿಡಲಾರಂಭಿಸಿದೆ. ಮಾತಿನ ಘರ್ಷಣೆಗೆ ಸಿಲುಕಿ . .. ಪ್ರಶ್ನೆಗಳ ಗುದ್ದಲಿ ಹರಿತವಾಗುತ್ತಾ ಬಂತು. ಮನದಾಳದಲ್ಲಿ ಹೊಸ ಹೊಳಹುಗಳು ಹುಟ್ಟಲು ಆರಂಭಿಸಿದವು. ಅಧ್ಯಯನಕ್ಕೆ ಆಗ ಒಂದು ಅರ್ಥ ಬಂತು.

ಸಂಕೇತಿಗಳ ಮೂಲ ಕಸುಬು ನಿಜಕ್ಕೂ ಯಾವುದು-ವ್ಯವಸಾಯವೇ? ವೇದಾಭ್ಯಾಸವೇ? ವಿದ್ಯಾಭ್ಯಾಸವೇ? ಸಂಗೀತವೇ? ವೈದ್ಯವೇ? ಜ್ಯೋತಿಷ್ಯವೇ? ಯಾವುದು? ವ್ಯವಸಾಯ ಮುಖ್ಯ ಅಂತಾದರೆ, ಕಾಲಾನಂತರ, ವಿದ್ಯಾಭ್ಯಾಸ, ಪೌರೋಹಿತ್ಯದ ಕೆಲಸ ಮೇಲಾಗಿ, ಕೃಷಿ ಕ್ಷೀಣಿಸಿತೇಕೆ? ಬ್ರಾಹ್ಮಣರಲ್ಲಿ ಕೃಷಿಯಲ್ಲಿ ತಮ್ಮದೇ ವಿಶಿಷ್ಟ ಛಾಪು ಮೂಡಿಸಿದ ಸಂಕೇತಿಗಳ ವರ್ಗ, ವ್ಯವಸಾಯವನ್ನು ಕಡೆಗಣಿಸುತ್ತಾ ಬಂದಿತೇಕೆ? ತಮ್ಮ ವಿಶಿಷ್ಟ ಜೀವನಕ್ರಮದಿಂದ ಗ್ರಾಮಗಳನ್ನು, ಬದುಕನ್ನು ಕಟ್ಟಿ ಬೆಳೆಸಿದ ಈ ವಿಚಾರವಂತ ವರ್ಗ, ತಮ್ಮ ಮುಂದಿನ ಪೀಳಿಗೆಗೆ ಈ ವಿಚಾರಗಳನ್ನು ವರ್ಗಾಯಿಸಲಿಲ್ಲವೇಕೆ? ಕೃಷಿ ಕುಟುಂಬಕ್ಕಾಗಿ ಎಂದಿನಂತೆ ಒಬ್ಬ ಮಗ ಉಳಿಯಲಿಲ್ಲವೇಕೆ? ಬ್ರಾಹ್ಮಣರು ಉಳುಮೆ ಮಾಡಬಾರದು ಎನ್ನುವ ತಾಂತ್ರಿಕ ಅಂಶ ಹೊಲದ ಬೇಸಾಯವನ್ನು ಇವರು ಮಾಡದಂತೆ ತಡೆಯಿತೆ? ಸ್ವತಃ ಕೆಲಸ ಮಾಡುವ ಸಾಮರ್ಥ್ಯವಿದ್ದರೂ, ಸ್ವಸಾಮರ್ಥ್ಯದಿಂದ ತೋಟವನ್ನು ಎಬ್ಬಿಸಿದ ಈ ಸಂಕೇತಿಗಳು ಸಹ, ಕೇವಲ ಬಾಗಾಯ್ತನ್ನು ಮಾತ್ರ ನೆಚ್ಚಿಕೊಂಡು, ಹೊಲ, ಗದ್ದೆಯ ವ್ಯವಸಾಯವನ್ನು ಇತರರಿಗೆ ವಹಿಸಿದ್ದೇಕೆ? 'ಉಳುವವನಿಗೆ ಭೂಮಿ' ಎಂಬ ಕಾನೂನು ಇತರೇ ಬ್ರಾಹ್ಮಣವರ್ಗಗಳ ಮಗ್ಗುಲು ಮುರಿದಂತೆ, ಸಂಕೇತಿ ಕೃಷಿಕರ ಬದುಕನ್ನೂ ಮೂರಾಬಟ್ಟೆ ಮಾಡಲು ಇವರೇ ಅವಕಾಶ ಕೊಟ್ಟಂತೆ ಆಗಲಿಲ್ಲವೆ? 'ಬಾಗಾಯ್ತು ನಮ್ಮ ಆಚಾರ, ವಿಚಾರ, ಮಡಿ ಹುಡಿ ಪಾಲಿಸಲು ಯೋಗ್ಯ .. ಯಾರ ಹಂಗಿಲ್ಲದೆ ಸ್ವತಂತ್ರರಾಗಿ ಬದುಕಲು ಸಾಧ್ಯ . . . ಕಾಡುವ ಇತರರಿಂದ ದೂರಾಗಿ ಉಳಿಯಲು ಮಾರ್ಗ' ಎಂದು ಭಾವಿಸಿದ್ದು ಸಂಕೇತಿಗಳ ಸಾರ್ವಜನಿಕ ಸಂಪರ್ಕ ಕ್ಷೀಣಿಸಲು ಕಾರಣವಾಯ್ತೆ? ಇದು ಸಂಕೇತಿ ಕೃಷಿ ಬದುಕಿನ ಅವನತಿಗೆ ನಾಂದಿಯಾಯ್ತೆ? ಹಿಂದೆ ಹೊಲಗದ್ದೆ ವ್ಯವಸಾಯ ಮಾತ್ರ ಮಾಡಿ, ಬಾಗಾಯ್ತಿನಲ್ಲಿ ಕೂಲಿಯಾಗಿದ್ದು ಬದುಕಿ ಈಗ ತೋಟವನ್ನು ಮಾಡಿ ಹಳ್ಳಿಯಲ್ಲಿ ನೆಮ್ಮದಿಯಾಗಿರುವ ರೈತಾಪಿ ವರ್ಗ ಎಲ್ಲಿ, ಒಂದು ಕಾಲದಲ್ಲಿ ಹಳ್ಳಿಯಲ್ಲಿ ವೈಭವದಿಂದ ಬದುಕಿ . . . ವ್ಯವಸಾಯವನ್ನು ಶ್ರೀಮಂತಗೊಳಿಸಿ . . ನಂತರ ಆ ಜಮೀನನ್ನು ಮಾರಿ ಪಟ್ಟಣ ಸೇರಿ, ಹುಟ್ಟೂರಿನಲ್ಲಿಯೇ ನೆಲೆ ಇಲ್ಲದೆ ಪರಕೀಯವಾಗಿರುವ ಸಂಕೇತಿಗಳ ವರ್ಗ ಎಲ್ಲಿ? ಹೋಲಿಕೆ ಹೇಗೆ ಮಾಡಲು ಸಾಧ್ಯ? ಶಿಕ್ಷಣದ ಉನ್ನತಿ ವ್ಯವಸಾಯಕ್ಕೆ ಮಾರಕವಾಯ್ತೆ? ಬದುಕಿನ ಭದ್ರತೆ ಹಾಗೂ ಆದಾಯಕ್ಕೆ ಆರಂಭಿಸಿದ ಉಪವೃತ್ತಿ ಮೇಲಾಗಿ, ವ್ಯವಸಾಯದ ಆಕರ್ಷಣೆ ಮಸುಕಾಗಿದ್ದು, ಯುವಪೀಳಿಗೆ ಹಳ್ಳಿ ಬಿಡಲು ಕಾರಣವಾಯ್ತೆ? ತಲೆ ತಲಾಂತರದಿಂದ ಬಂದಂತೆ ಕೃಷಿಗೊಬ್ಬ ಮಗ ಉಳಿಯಲಿಲ್ಲವೇಕೆ? ತಂದೆತಾಯಂದಿರು ಕೊಟ್ಟ ಶಿಕ್ಷಣ ಸಾಲದೆ? ಅಥವಾ ಹಿರಿಯರಲ್ಲೇ ಮೂಡಿದ ನಿರಾಸಕ್ತಿ ಕಾರಣವೆ? ವ್ಯವಸಾಯಸ್ಥನನ್ನು ಮದುವೆಯಾಗಲು ಒಲ್ಲೆ ಎನ್ನುವ ವಿದ್ಯಾವಂತ ಸಂಕೇತಿ ತರುಣಿಯರು ಕೃಷಿಯ ಹಿನ್ನಡೆಗೆ ಕಾರಣರೆ? ಅಥವಾ 'ಪೇಟೆಯಲ್ಲಿ ನಾಲ್ಕು ಕಾಸು ಸಂಪಾದನೆ ಇದ್ರೆ ಸಾಕು, ಹಳ್ಳಿಗೆ ಮಾತ್ರ ನನ್ನ ಮಗಳನ್ನು ಕೊಡೋಲ್ಲ' ಅನ್ನುವ ಹೆತ್ತ ತಂದೆ ತಾಯಿಗಳ ಪ್ರೀತಿ ಕಾರಣವಾ? ಪ್ರಶ್ನೆಗಳ ಸರಣಿ ಮುಗಿಯಲೇ ಇಲ್ಲ. ಸಂವಾದವನ್ನು ಮತ್ತೂ ಅರ್ಥಪೂರ್ಣ ಮಾಡಲು ಒಂದು ಪ್ರಶ್ನಾವಳಿಯನ್ನು ಸಹ ತಯಾರು ಮಾಡಬೇಕಾಗಿ ಬಂತು. ಕೌಟುಂಬಿಕ ಹಿನ್ನೆಲೆ, ಊರಿನಲ್ಲಿ ಸಂಕೇತಿ ಕೃಷಿ ಹಾಗು ಕುಟುಂಬ ಬೆಳೆದು ಬಂದ ಬಗೆ, ವೈಯಕ್ತಿಕ ಹಿನ್ನೆಲೆ, ವ್ಯವಸಾಯದ ಹಿನ್ನೆಲೆ, ಪತ್ನಿಯ ಸಹಕಾರ, ಪರಿಸರ, ಮಕ್ಕಳ ಭವಿಷ್ಯ, ಸಂಕೇತಿ ಸಂಪ್ರದಾಯ ಹೀಗೆ ಹತ್ತು ಹಲವು ಆಸಕ್ತಿದಾಯಕ ವಿಚಾರಗಳು ಪ್ರಶ್ನಾವಳಿಯಲ್ಲಿ ಅಡಕವಾಗಿತ್ತು. ಈ ಎಲ್ಲ ಸಿದ್ಧತೆಗಳೂ ನನ್ನ ಸಂದರ್ಶನವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿಸಲು ನೆರವಾದವು. ಪ್ರಶ್ನಾವಳಿಯ ಹಿಂದೆ ಒಂದು ಸದುದ್ದೇಶ ಸಹ ಇತ್ತು. ನನ್ನ ಸಂದರ್ಶನದ ಅವಧಿ ಬಹಳ ಚಿಕ್ಕದು. ಒಬ್ಬ ವ್ಯಕ್ತಿಗೆ, ಆತನ ಬದುಕಿನ ಎಲ್ಲಾ ಘಟನೆಗಳು, ವಿವರಗಳು, ಒಂದೇ ಬಾರಿಗೆ ನೆನಪಾಗದಿರಬಹುದು. ನಂತರ ನೆನಪಿಗೆ ಬಂದ ವಿಚಾರಗಳು - ಬಂಧುಬಾಂಧವರೊಂದಿಗೆ ಕೂಡಿ ಚರ್ಚಿಸಿದಾಗ ಹೊರಬೀಳುವ ಅಮೂಲ್ಯವಾದ ವಿಚಾರಗಳು-ಹಾಗೇ ಪ್ರಶ್ನಾವಳಿಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ನಂತರ ಹೊಳೆಯಬಹುದಾದ ಉತ್ತಮ ಉತ್ತರಗಳು - ಜತೆಗೆ ಬದುಕಿನ ಬವಣೆಗಳನ್ನು ವಿವರವಾಗಿ ಬರೆದು ಕಳಿಸಲು ಕೋರಿದ್ದೆ. ವಿಷಯದ ಸಮಗ್ರತೆಯ ದೃಷ್ಟಿಯಿಂದ ಇದು ಅನಿವಾರ್ಯವಾಗಿತ್ತು. ಆದರೆ ಸಂದರ್ಶನದ ನಂತರವೂ ಪ್ರಾಮಾಣಿಕವಾಗಿ ಈ ಪ್ರಶ್ನಾವಳಿಗೆ ಉತ್ತರ ಬರೆದು ಸಂದರ್ಶನದಲ್ಲಿ ಅಡಕ ಮಾಡಿಕೊಳ್ಳಲು ಕೋರಿದವರು ಕಡಿಮೆ ಜನ! ಸಾಧ್ಯವಾದಷ್ಟು ಮಟ್ಟಿಗೆ ವ್ಯಕ್ತಿಯ ಸಹಜ ಪರಿಸರದಲ್ಲಿಯೇ ಸಂದರ್ಶನಗಳು ನಡೆದಿವೆ. ಕುಟುಂಬದ ಸದಸ್ಯರು . . . ಬಂಧುಬಾಂಧವರು ನುಡಿಗಳಿಗೆ ಸಾಕ್ಷಿಯಾದ ಸಂದರ್ಭವೂ ಉಂಟು. ಎಲ್ಲದಕ್ಕಿಂತ ಮಿಗಿಲಾಗಿ ಈ ವಿಚಾರಗಳು ಪುಸ್ತಕ ರೂಪದಲ್ಲಿ

ದಾಖಲಾಗುವುದರ ಜತೆಗೆ . . . ಅವರದೇ ಧ್ವನಿಯ ಮೂಲಕ ಧ್ವನಿಸುರುಳಿಗಳಲ್ಲಿ ಮುದ್ರಿತವಾಗಿವೆ. ಪದಗಳ ಜೀವಂತಿಕೆಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ? ವಿಚಾರಗಳನ್ನು ಮಥಿಸಿದಾಗ ಉದಯಿಸುವ ಹೊಸ ಹೊಸ ವಿಚಾರಗಳು ಅಲ್ಲೇ ಅಡಕವಾಗಿವೆ. ಇತರೇ ರೈತರಂತೆ ತಮ್ಮ ತೋಟದಲ್ಲಿ ಸಂಕೇತಿಗಳು ನೆಲೆಸಿರೋದು ಕಡಿಮೆ ಯಾಕೆ? ಈ ತರಹದ ಪ್ರಶ್ನೆಗಳು ಸಂದರ್ಭಾನುಸಾರ ಸ್ಥಳದಲ್ಲಿ ಮೂಡಿವೆ. ಪ್ರತಿ ಒಬ್ಬರಿಗೂ ಪ್ರತಿಯೊಂದು ಪ್ರಶ್ನೆಯನ್ನೂ ಕೇಳಲು ಸಾಧ್ಯವಾಗದೆ ಇರಬಹುದು. ಉತ್ತರಿಸುವವರ ಆಸಕ್ತಿ, ವಿಷಯಸಂಗ್ರಹಣೆ ಹಾಗೂ ನಿಜ ಉತ್ತರಗಳ ಹಾದಿಯಲ್ಲಿ ಸಂದರ್ಶನದ ಜಾಡು ಸಾಗಿದೆ. ಒಟ್ಟಾರೆ ಸಮಗ್ರತೆಗೆ ಎಲ್ಲೂ ಧಕ್ಕೆ ಬಂದಿಲ್ಲ. ಎಲ್ಲವನ್ನೂ ಓದಿದಾಗ 'ವಿಭಿನ್ನತೆಯಲ್ಲಿ ಏಕತೆ' ಹಾಗೇ 'ಏಕತೆಯಲ್ಲಿ ವಿಭಿನ್ನತೆ' ಖಂಡಿತಾ ಅರಿವಾಗುತ್ತದೆ.

ಸಂಕೇತಿ ಕೃಷಿಯ ಬಗ್ಗೆ ಪುಸ್ತಕ ಬರೆಯುವಾಗ ಯಾವ ವಿಚಾರ ಮುಖ್ಯ, ಯಾವ ವಿಚಾರ ಹೆಚ್ಚು ಪ್ರಸ್ತುತ . . . ಇಂಥ ಪುಸ್ತಕವೊಂದರ ಬಗ್ಗೆ ಓದುಗನ ನಿರೀಕ್ಷೆಗಳು ಏನಿರಬಹುದು ಎಂಬುದರ ಬಗ್ಗೆಯೂ ನಾನು ಸಾಕಷ್ಟು ವಿಚಾರ ಮಾಡಿದ್ದೇನೆ. 'ಸಂಕೇತಿ ಕೃಷಿ' ಕೇವಲ ತಜ್ಞ ಕೃಷಿ ತಾಂತ್ರಿಕ ವಿಚಾರ ಹೊಂದಿದ ಕೈಪಿಡಿ ಮಾತ್ರ ಆಗಬೇಕೆ? ಅನ್ನುವುದನ್ನು ನಾನು ಬಹಳಷ್ಟು ಸಲ ಯೋಚಿಸಿದ್ದೇನೆ. ಸಂಕೇತಿಗಳ ಕೃಷಿ ತಾಂತ್ರಿಕತೆಗಳ ಬಗ್ಗೆ ಬರೆದರೆ ಸಾಕಲ್ಲವಾ . . . ಅವರ ಬದುಕಿನ ವಿಚಾರಗಳು ಯಾಕೆ . . . ? ಅದರಿಂದ ಯಾರಿಗೇನು ಉಪಯೋಗ? ಈ ವಿಚಾರಗಳು ನನ್ನನ್ನು ಪದೇ ಪದೇ ಪೀಡಿಸಿವೆ. ನನ್ನ ದೃಷ್ಟಿಕೋನ ಇಷ್ಟೆ . . . ತನ್ನೆಲ್ಲ ಇಲ್ಲಗಳ ನಡುವೆ . . . ಕೈಯಲ್ಲಿ ಅಡಿಕೆ ಸಸಿ ಮಾತ್ರ ಹಿಡಿದು . . . ಇಡಿಯ ಜಗತ್ತನ್ನು ಎದುರಿಸಿ, ತನ್ನವರ ಏಳಿಗೆಗಾಗಿ ಶ್ರಮಿಸಿದ ಆ ಹಿರಿಯ ಸಂಕೇತಿ ಕೃಷಿ ದಿಗ್ಗಜಗಳ ಬದುಕು ಮುಖ್ಯ , ಬೆಳೆದ ರೀತಿ ಮುಖ್ಯ . . . ತಾಂತ್ರಿಕ ವಿಚಾರಗಳು ಪೂರಕ ಮಾತ್ರ ಅನ್ನಿಸಿದ್ದು ಸತ್ಯ! ವ್ಯಕ್ತಿ ಮುಖ್ಯವೋ . . . ವಿಷಯ ಮುಖ್ಯವೋ ಎಂಬ ಗೊಂದಲ ಓದುಗರನ್ನೂ ಕಾಡಬಹುದು. ನನ್ನ ವಿಚಾರ ಖಚಿತ. ಈ ಸಂದರ್ಶನಗಳ ಓಟವೆಲ್ಲಾ . . . ವ್ಯಕ್ತಿ ಬದುಕಿನ ಮೇಲೆ ಕೇಂದ್ರಿತವಾಗಿ . . . ಕೃಷಿಯನ್ನು ಬದುಕಿನ ಭಾಗವಾಗಿಸಿದೆ. ಇದು ಸಂಕೇತಿ ಬದುಕು ಆಧಾರಿತ ಕೃಷಿ ಚಿತ್ರಣ . . . ಸಂಕೇತಿ ಕೃಷಿ-ಬದುಕು ಅನ್ನಲು ಅಡ್ಡಿಯಿಲ್ಲ. ವಸ್ತುನಿಷ್ಠ ವಿಚಾರಗಳನ್ನು ನಿಮ್ಮ ಮುಂದೆ ಇಡುವ ಪ್ರಯತ್ನದಲ್ಲಿ ನಾನೆಷ್ಟು ಯಶಸ್ವಿಯಾಗಿದ್ದೇನೆ ಎಂಬುದನ್ನು ಓದುಗರಾದ ನೀವೇ ಹೇಳಬೇಕು.

೨೦೦೨ನೆಯ ಇಸವಿ ನವೆಂಬರ್ ತಿಂಗಳಿನಲ್ಲಿ ನಾವು ಭೇಟಿ ಮಾಡಿದ ಮೊದಲ ಗ್ರಾಮ 'ಹಾನಗಲ್'. ನಂತರ ಅನುಕ್ರಮವಾಗಿ ಸಮಯಸರಿಹೊಂದಿಸಿಕೊಂಡು ನಾವು ಭೇಟಿ ನೀಡಿರುವ ಗ್ರಾಮಗಳು, ಪುಸ್ತಕದಲ್ಲಿರುವ ಕ್ರಮದಂತೆಯೇ ಇವೆ. ೨೦೦೨-೦೩ರ ಇಸವಿಗಳು ಕರ್ನಾಟಕದಲ್ಲಿ ಬರಗಾಲ ಇದ್ದ ವರುಷಗಳು. ಈ ಅವಧಿಯಲ್ಲಿ ನಾನು ಹೆಚ್ಚಿನ ಸಂಕೇತಿ ಕೃಷಿಕರನ್ನು ಭೇಟಿ ಮಾಡಿದ್ದೇನೆ. ಉಳಿದಂತೆ ೨೦೦೪ ನೇ ಇಸವೀಲಿ ಸುರಿದ ಭರ್ಜರಿ ಮುಂಗಾರು ಮೂರು ವರುಷಗಳ ಬರವನ್ನು ನೀಗಿಸ್ತು. ಆ ಸಂದರ್ಭದಲ್ಲಿ ಬೆಂಗಳೂರಿನ ಕೃಷಿಕರಲ್ಲದ ಕೃಷಿಕರನ್ನು ಮಾತನಾಡಿಸಿದ್ದೇನೆ. ೨೦೦೨ ರ ನವೆಂಬರ್‌ನಿಂದ ೨೦೦೪ ರ ಅಂತ್ಯದವರೆವಿಗೂ ಈ ಪುಸ್ತಕಕ್ಕಾಗಿ ಮಾಹಿತಿ ಸಂಗ್ರಹಿಸಲು ಸಂಕೇತಿ ಕೃಷಿಕರ ಊರೂರು ಅಲೆದಿದ್ದೇನೆ. ಇಡೀ ನನ್ನ ಪಯಣದಲ್ಲಿ ಶೇ.೯೫ರಷ್ಟು ಭಾಗ ನನ್ನ ಜತೆಯಾಗಿದ್ದವರು ಪ್ರಣತಾರ್ತಿಹರನ್. ಅವರೇ ನನ್ನ friend, philosopher ಹಾಗೂ guide ಎಲ್ಲಾ. ಅವರ ಪ್ರೋತ್ಸಾಹ, ಮಾರ್ಗದರ್ಶನ, ಪ್ರೀತಿ, ವಿಶ್ವಾಸ ಇರದಿದ್ದರೆ ನಾನು ಈ ಪುಸ್ತಕ ಬರೆಯಲು ಸಾಧ್ಯವಿರುತ್ತಿರಲಿಲ್ಲವೇನೋ. ಕೆಲವು ಸ್ಥಳಗಳಿಗೆ ಹರನ್ ಬದಲಾಗಿ ಹಿರಿಯರಾದ ವೆಂಕಟನಾರಾಯಣ್ ಸಾಥ್ ನೀಡಿದ್ದಾರೆ. ಬಸವಾಪಟ್ಟಣದ ಪ್ರಕಾಶ್ ಒಂದೆರಡು ಸ್ಥಳಗಳಿಗೆ ಬೆಂಗಾವಲಾಗಿ ಬಂದಿದ್ದಾರೆ. ಇವಿಷ್ಟು ನಮ್ಮ ಪ್ರವಾಸದ, ಪ್ರಯಾಣದ ವಿವರಗಳು.

ವಿಚಾರಗಳು ಹೊರಬರಲು ಮಾತಿನ ಮಾಧ್ಯಮ ಸಾಕು ವ್ಯಕ್ತಿಗೆ. ಆತ ಹೇಳಿದ್ದನ್ನು ಅಂದವಾಗಿ ಕಟ್ಟಿಕೊಡಲು ಲೇಖಕನಿಗೆ ಯಾವ ಯಾವ ಪ್ರಕಾರಗಳು ಬೇಕು? ವ್ಯಕ್ತಿ ಹೇಳಿದ ವಿಚಾರಗಳು ನೇರವಾಗಿ ಅವನೇ ಓದುಗರ ಜತೆ ಸಂಭಾಷಿಸುವಂತೆ ಇದ್ದರೆ ಒಳಿತೇ? ಆತನ ಪರವಾಗಿ ಲೇಖಕ ಬರೆದರೆ ಸರಿಯೇ? ಅಥವಾ ಸಂದರ್ಶನದ ಮಾದರಿಯೇ ಸರಿಯೇ? ನಿರ್ಧರಿಸಲು ನನಗೇ ಸ್ವಾತಂತ್ರ್ಯ ಇತ್ತು. ನಾನು ಈ ಮೂರನ್ನೂ ಬಳಕೆ ಮಾಡಿದ್ದೇನೆ. ಕೆಲವೊಮ್ಮೆ ಒಂದು ಪ್ರಶ್ನೆಯನ್ನು ಮಾತ್ರ ಇಟ್ಟುಕೊಂಡು, ಉಳಿದ ಪ್ರಶ್ನೆಗಳ ಉತ್ತರವನ್ನು ಅರ್ಥಬರುವಂತೆ ಸೇರಿಸಿದ್ದೇನೆ. ವಿಧವಿಧವಾಗಿ ವಿಚಾರಗಳನ್ನು ಉಣಬಡಿಸುವ ಪ್ರಯತ್ನ ನನ್ನದು. ಸಂಕೇತಿ ಕೃಷಿಕನ ಬಾಯಿಂದ ಹೊರಬಂದ ಒಂದೊಂದು ಆಣಿಮುತ್ತನ್ನೂ ಆರಿಸಿ, ಪೋಣಿಸಿ, ಸರ ಮಾಡಿ ನಿಮ್ಮ ಮುಂದೆ ಇಟ್ಟಿದ್ದೇನೆ. ಅದೇಕೋ ನೀವು ಸಂಕೇತಿ ಕೃಷಿಕರ ವಿಚಾರಗಳನ್ನು ಓದುವ ಮೊದಲು ಇಷ್ಟು ಅನಿಸಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕು ಅಂತ ಅನ್ನಿಸಿತು. ಇನ್ನು ಬಗೆ ಬಗೆಯ ಬದುಕಿನ ಮಜಲುಗಳನ್ನು ಮಗುಚಿ ಹಾಕಲು ನೀವು ಸರ್ವಸ್ವತಂತ್ರರು . . . ಓದಿ ನೋಡಿ.

1. ಹಾನಗಲ್

'ಹಾನಗಲ್', ಹಾಸನಜಿಲ್ಲೆಯ ಅರಕಲಗೂಡು ತಾಲ್ಲೂಕಿಗೆ ಸೇರಿದ ಪುಟ್ಟಗ್ರಾಮ. ರಾಮನಾಥಪುರ, ಬಸವಾಪಟ್ಟಣ ಮಾರ್ಗವಾಗಿ ಕೇರಳಾಪುರಕ್ಕೆ ತೆರಳುವ ಟಾರ್ ರಸ್ತೆಗುಂಟಾ ಸಾಗಿ, ಮಾರ್ಗದಲ್ಲಿ ಸಿಗುವ ಕಾಳೇನಹಳ್ಳಿ ಕೂಡಿನಲ್ಲಿ ಎಡಕ್ಕೆ ತಿರುಗಿ, ಮುಂದೆ ಸಿಗುವ ಕಲ್ಲುಮಣ್ಣಿನ ರಸ್ತೆಗುಂಟಾ ಸಾಗಿದ್ರೆ, ಮೂರು ಕಿಲೋಮೀಟರ್ ಪ್ರಯಾಣದ ಬಳಿಕ ಧುತ್ತೆಂದು ನಿಮ್ಮೆದುರು ನಿಲ್ಲುತ್ತೆ ಹಾನಗಲ್. ಊರ ಮಧ್ಯೆ ವಿಶಾಲವಾದ ಅರಳೀಮರ, ಅದರ ಸುತ್ತ ನಾಗರಕಟ್ಟೆ. ಊರದೇವತೆ ಹಾನಗಲ್ಲಮ್ಮನ ದೇವಸ್ಥಾನದ ಮುಂದಿದೆ ಈ ಅರಳೀಕಟ್ಟೆ. ವಿಶೇಷವೆಂದರೆ, ಊರ ಸಂಕೇತಿ ಮನೆತನದ ಹಿರಿಯರಾದ ಎಚ್.ಆರ್.ಸೂರ್ಯನಾರಾಯಣಪ್ಪ ಹಾಗೂ ನಾಗಲಕ್ಷ್ಮಮ್ಮ ದಂಪತಿಗಳ ಮಕ್ಕಳು ಹಾನಗಲ್ಲಮ್ಮನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಸಾಲಂಕೃತಗೊಂಡ ಊರದೇವತೆ ಈ ಭರ್ಜರಿ ದೇವಸ್ಥಾನದಲ್ಲಿ ನಗುನಗುತ್ತಿದ್ದಾಳೆ.

ಬರದಲ್ಲಿ ಬೆಂದಿದ್ದ ಊರಿಗೆ ದಕ್ಷಿಣಗಂಗೆ ಕಾವೇರಿ ಹಾಗೂ ಹಾಸನಗಂಗೆ ಹೇಮಾವತಿ ಹರಿದು ಬಂದಿದ್ದಾರೆ. ಹಾರಂಗಿ ನಾಲೆ ಹಾಗೂ ಹೇಮಾವತಿ ನಾಲೆಗಳ ನೀರು ಕಳೆದ ೧೦-೧೨ ವರುಷಗಳಿಂದ ಇಲ್ಲಿನ ಜನರಿಗೆ ಸಿಕ್ಕಿದೆ. ೩೬೫ ದಿನವೂ ನೀರೋನೀರು. ವ್ಯವಸಾಯ ಇಲ್ಲಿ ಸಮೃದ್ಧವಾಗಿದೆ.

ಹಾನಗಲ್ಲಿಗೆ ಸಂಕೇತಿಗಳ ಆಗಮನವೇ ಒಂದು ರೋಚಕವಾದ ಕಥೆ. ಸುಬ್ಬರಾಯ ಹಾಗೂ ಶೀನಪ್ಪ ಎಂಬ ಅಣ್ಣತಮ್ಮಂದಿರು ಬಹಳ ಹಿಂದೆ ಮರಿತಮ್ಮನಹಳ್ಳಿಯಿಂದ ದಕ್ಷಿಣದಿಕ್ಕಿಗೆ ಪ್ರಯಾಣಮಾಡಿ ಕಾಳೇನಹಳ್ಳಿಗೆ ವಲಸೆ ಬಂದರಂತೆ. ಅಲ್ಲಿ ಏಳಿಗೆ ಆಗಲಿಲ್ಲ. 'ಓಹೋ .. ದಕ್ಷಿಣಕ್ಕೆ ಬಂದ್ವು, ಏಳ್ಗೆ ಆಗಲಿಲ್ಲ' ಅಂತ ಪೂರ್ವಾಭಿಮುಖವಾಗಿ ನಡೆದು ಯಾಚನಕುಪ್ಪೆಗೆ ಬಂದ್ರು. ಅಲ್ಲೂ ಸರಿಹೋಗಲಿಲ್ಲ. ಅನಂತರ ಇನ್ನೂ ಸ್ವಲ್ಪ ಮುಂದೆ ಬಂದು ಹಾನಗಲ್ಲಿನಲ್ಲಿ ನೆಲೆನಿಂತರಂತೆ. ಅನಂತರ ಅವರು ಮತ್ತೆಲ್ಲೂ ಅಲ್ಲಾಡಲಿಲ್ಲ. ಹಾನಗಲ್ಲಮ್ಮನ ಕೃಪೆಯಿಂದ ಅಲ್ಲಿ ಸಮೃದ್ಧವಾಗಿ ಬೆಳೆದು ಬಂದಿದೆ ಸಂಕೇತಿ ಪರಿವಾರ.

ಅಂದು ಊರಲ್ಲಿ ನೆಲೆನಿಂತ ಸುಬ್ಬರಾಯ ಹಾಗೂ ಶೀನಪ್ಪನವರು ಕಟ್ಟಿದ ನಾಡಹೆಂಚಿನ ಎರಡು ಬೃಹತ್ತಾದ ತೊಟ್ಟಿಮನೆಗಳು ಅಂದಿನ ವೈಭವಕ್ಕೆ ಸಾಕ್ಷಿಯಾಗಿ ಇಂದಿಗೂ ಗಟ್ಟಿಮುಟ್ಟಾಗಿ ನಿಂತಿವೆ.

ಬರ ಪರಿಸ್ಥಿತಿ, ಎಟ್ಟೆನೆಲ; ಜತೆಗೆ, ೪೦-೫೦ ಅಡಿ ಬಾವಿ ತೋಡಿ ಅಡಿಕೆ ತೋಟ, ವಿಳ್ಳೇದೆಲೆ ಹಂಬು ಏಳಿಸಿ ಪಡಬಾರದ ಪಾಡು ಪಟ್ಟಿರುವ ಸಂಕೇತಿ ಸಮುದಾಯ, ಇಂದು ವ್ಯವಸಾಯ ಹಾಗೂ ವ್ಯಾಪಾರ ಎರಡರಲ್ಲೂ ಪ್ರಗತಿ ಹೊಂದಿದೆ. ಈಗ ಹಾನಗಲ್ಲಿನಲ್ಲಿ ಒಟ್ಟು ೧೬ ಸಂಕೇತಿ ಕುಟುಂಬಗಳಿವೆ. ಒಂದು ಕಾಲದಲ್ಲಿ ೫೫ರಿಂದ ೬೦ ಕುಟುಂಬಗಳಿದ್ದವು ಹಾನಗಲ್ಲಿನಲ್ಲಿ. ಹೊರಗೆ ಉದ್ಯೋಗವನ್ನರಸಿ ಹೋದ ಸಂಕೇತಿ ಕುಟುಂಬಗಳೂ, ಪರ ಊರಲ್ಲಿ ವ್ಯವಸಾಯ ಮಾಡಲು ಹೊರಟ ಕುಟುಂಬಗಳೂ ಈಗ ಸಂಖ್ಯೆಯನ್ನು ಬಡವಾಗಿಸಿವೆ.

ಊರದೇವತೆ ಹಾನಗಲ್ಲಮ್ಮನ ಜಾತ್ರೆ ಉಗಾದಿ ಕಳೆದ ೧೫ನೇ ದಿವಸಕ್ಕೆ, ಅಂದ್ರೆ ಶುಕ್ರವಾರದ ಸಿಡಿ ಹಾಗೂ ಶನಿವಾರದ ತೇರು ಬಹಳ ವಿಜೃಂಭಣೆಯಿಂದ ಪ್ರತಿವರುಷ ನಡೆಯುತ್ತೆ. ಗ್ರಾಮದ ಹರಿಜನ ಸಮುದಾಯದವರು ಬೆನ್ನಿಗೆ ಕೊಕ್ಕೆ ಸಿಕ್ಕಿಸಿ ಅಡಿಮರ ಏರುತ್ತಾರೆ. ನೋಡಲು ಹತ್ತೂರಿನವರು ನೆರೆಯುತ್ತಾರೆ.

ತಲೆ ಮೇಲೆ ವಿಳ್ಳೇದೆಲೆ ಪಿಂಡಿ ಹೊತ್ತು, ಬಾಳಬುತ್ತಿ ತುಂಬಿಸಲು ಊರೂರು ತಿರುಗಿ ಮಾರಾಟ ಮಾಡುತ್ತಿದ್ದ ಹಿರಿಯ ಸಂಕೇತಿ ಕೃಷಿಕರ ಬಗ್ಗೆ ಜೀವಂತ ದಂತಕಥೆಗಳೂ ಇಲ್ಲಿವೆ. ಹೀಗೇ ಒಬ್ಬಿಬ್ಬರು ಸಂಕೇತಿಗಳು ಹೊರೆ ಹೊತ್ತು ಮೈಸೂರಿಗೆ ವಿಳ್ಳೇದೆಲೆ ಮಾರಲು ಹೋಗಿದ್ದರಂತೆ. ಮೈಸೂರು ಅರಮನೆ ಹತ್ರ ಮಹಾರಾಜರ ಸಮ್ಮುಖದಲ್ಲಿ ಜಗಜಟ್ಟಿಗಳ ಮಲ್ಲಯುದ್ಧ ನಡೀತಿತ್ತು. ಯುದ್ಧದಲ್ಲಿ ಗೆದ್ದ ಜಟ್ಟಿಯೊಬ್ಬ

ಮತ್ತೊಬ್ಬನನ್ನು ಎರಡೂ ಕೈಯಿಂದ ಮೇಲೆತ್ತಿ ಅಹಂಕಾರದಿಂದ ಬೀಗುತ್ತಿದ್ದನಂತೆ. ತಲೆ ಮೇಲೆ ಸುಮಾರು ೧೫೦ ಕೆ.ಜಿ. ಭಾರ ಹೊತ್ತಿದ್ದ ಸಂಕೇತಿ ಹಿರಿಯರಿಗೆ ಇದನ್ನು ನೋಡಿ ನಗುಬಂತು. ಇವರು ನಗುವುದನ್ನು ನೋಡಿದ ಮಹಾರಾಜರು 'ಯಾಕೆ ನಗ್ತೀರಾ?' ಎಂದರಂತೆ. 'ಮಹಾರಾಜರೆ, ಬೇರೊಬ್ಬನನ್ನು ಮೇಲೆತ್ತಿರುವ ಇವನನ್ನು ನೋಡಿ ನಗು ಬಂತು' ಅಂದರಂತೆ. 'ನೀವು ಇವರ ಜತೆ ಮಲ್ಲಯುದ್ಧ ಮಾಡಲು ತಯಾರಿದ್ದೀರಾ ಹಾಗಾದ್ರೆ?' ಅಂತಾ ಮಹಾರಾಜರು ಸವಾಲು ಹಾಕಿದ್ರಂತೆ. ಕೂಡಲೇ ಈ ರೈತರು ತಲೆಮೇಲೆ ಹೊರೆ ಹೊತ್ತೇ ಆ ಜಟ್ಟಿಯನ್ನು ಎರಡು ತೊಡೆಗಳ ನಡುವೆ ಸಿಕ್ಕಿಸಿಕೊಂಡು ಮಣಿಸಿದರಂತೆ. ಮಹಾರಾಜರಿಗೆ ಬಹಳ ಸಂತೋಷವಾಗಿ 'ಭಲೆ ಭಲೆ, ಮೆಚ್ಚಿದೆ ನಿಮ್ಮ ಸಾಹಸ! ನಿಮಗೇನು ಬೇಕೋ ಕೇಳಿ' ಎಂದಾಗ, ಇವರು, 'ಮಹಾರಾಜರೆ, ನಮಗೆ ಇಲ್ಲಿ ವ್ಯಾಪಾರದ ಸುಂಕ ನೀಡಲು ಆಗುತ್ತಿಲ್ಲ, ದಯಮಾಡಿ ನೆರವು ನೀಡಿ' ಎಂದು ಪ್ರಾರ್ಥಿಸಿದರಂತೆ. ಕೂಡಲೇ ಮಹಾರಾಜರು 'ಅಸ್ತು' ಅಂದರು ಎನ್ನುತ್ತೆ ಕಥೆಗಳು. ತಮಗಾಗಿ ಏನನ್ನೂ ಕೇಳದೆ ಸಮುದಾಯದ ಅಭಿವೃದ್ಧಿಗೆ ಪ್ರಾರ್ಥಿಸಿದ ಆ ಹಿರಿಯರು ಆದರ್ಶಪ್ರಾಯರು ತಾನೆ?

ಹಾನಗಲ್ಲಿನ ಸಂಕೇತಿಗಳ ಕೃಷಿ ಬದುಕಿನ ಬಗ್ಗೆ ಮಾಹಿತಿ ದಾಖಲಿಸಲು, ನಾವು ಹಾನಗಲ್ ಸೇರಿದಾಗ ಸಂಜೆಯ ಸಮಯ. ಪ್ರಣತಾರ್ತಿಹರನ್ ಹಾಗೂ ಬಸವಾಪಟ್ಟಣದ ಪಟೇಲ್ ನರಸಿಂಹಮೂರ್ತಿಗಳ ಮಗ ಕಾಶೀಪತಯ್ಯ (ಪ್ರಕಾಶ್) ಕಾರಿನಲ್ಲಿ ಜತೆಯಲ್ಲಿದ್ದರು. 'ಬಸವಾಪಟ್ಟಣದ ನಮ್ಮ ಮನೆಯಲ್ಲಿ ಕೆಲವು ಹಾನಗಲ್ಲಿನ ಸಂಕೇತಿ ವಿದ್ಯಾರ್ಥಿಗಳು, ನನ್ನ ತಂದೆಯವರ ಕಾಲದಲ್ಲಿ ವಾರಾನ್ನಕ್ಕೆ ಬರುತ್ತಿದ್ದರು, ನಾನೂ ಆಗ ಓದುತ್ತಿದ್ದೆ,' ಎಂಬ ನೆನಪಿನ ಬುತ್ತಿಯನ್ನು ಕಾಶೀಪತಯ್ಯನವರು ತೆರೆಯುತ್ತಿದ್ದಂತೆ, ಒಮ್ಮೆಗೇ ಹರನ್, 'ನೋಡಿ, ದಾರಿಯಲ್ಲಿ ಎಚ್.ಎನ್. ಸುಬ್ಬರಾಯರು ಹೋಗ್ತಿದಾರೆ' ಅಂದ್ರು. ಒಂದು ಕೈಯಲ್ಲಿ ಕುಡಗೋಲು, ಮತ್ತೊಂದರಲ್ಲಿ ಅಡಿಕೆಪಟ್ಟೆ; ಬನಿಯನ್, ಮೇಲೆತ್ತಿಕಟ್ಟಿದ ಪಂಚೆ, ತಲೆಗೆ ಮುಂಡಾಸು ಸುತ್ತಿದ್ದ ಸುಬ್ಬರಾಯರನ್ನು ದಾರಿಯಲ್ಲೇ ತಡೆದು ನಿಲ್ಲಿಸಿದ್ವಿ. ಅವರಿಗೆ ಒಮ್ಮೆಲೇ ಗಾಬರಿ. ಅವರ ಆ ವೇಷದಲ್ಲೇ ಒಂದೆರಡು ಭಾವಚಿತ್ರ ತೆಗೆದು, ಕಾರಿನಲ್ಲಿ ಅವರನ್ನೂ ಕೂರಿಸಿಕೊಂಡು ಊರ ಮಧ್ಯಕ್ಕೆ ಬಂದೆವು. ಅಡಿಕೆ ಹಂಗಾಮು ಅದು. ಅದು ಬೇರೆಡೆ ಸಿಗುವುದೇ ಅಪರೂಪ; ಸಂಕೇತಿ ಕೃಷಿಕರ ಬೆನ್ನ ಹಿಂದೆ ಈ ದೃಶ್ಯವನ್ನು ಸಂಯೋಜಿಸಿ ಭಾವಚಿತ್ರ ತೆಗೆಯಬೇಕೆಂಬ ಬಯಕೆ ತುಂಬಿಬಂತು. ಕೇಳಿದಾಗ ಸುಬ್ಬರಾಯರು, 'ಅದಕ್ಕೇನಂತೆ, ಎಚ್.ಎಸ್.ಸುಬ್ಬರಾಯರ ಅಣ್ಣತಮ್ಮಂದಿರು ಇಲ್ಲೇ ಇದ್ದಾರೆ, ಬನ್ನಿ' ಎಂದು ಕರೆದೊಯ್ದರು. ಬಾಯಿತುಂಬಾ ಎಲೆ ಅಡಿಕೆ ತುಂಬಿಕೊಂಡು, ಕಬ್ಬಿಣದ ಕುರ್ಚಿ ಮೇಲೆ ಕುಳಿತು ಉಸ್ತುವಾರಿ ನೋಡುತ್ತಿದ್ದ ವ್ಯಕ್ತಿಯೊಬ್ಬರು ದಡಕ್ಕನೆ ಎದ್ದರು. ದೊಡ್ಡ ಕಡಾಯಿಯಲ್ಲಿ ಅಡಿಕೆ ಬೇಯುತ್ತಿತ್ತು, ೨೫ ರಿಂದ ೩೦ ಮಂದಿ ಹೆಣ್ಣುಮಕ್ಕಳು ಅಡಿಕೆ ಎಡೆಯುತ್ತಿದ್ದರು, ಬೆಂದ ಅಡಿಕೆಯನ್ನು ಇಬ್ಬರು ಮೂರು ಜನ ಒಣಗಿಸಲು ಹರಗುತ್ತಿದ್ದರು. ಫೋಟೋಗೆ ಸರಿಯಾದ ಜಾಗ ಸಿಕ್ತು ಅಂದುಕೊಂಡು, 'ಯಜಮಾನ್ರೆ, ಕುರ್ಚಿಯ ಮೇಲೆ ಹಾಗೇ ಕೂತಿರಿ, ಒಂದು photo ತೆಗೀತೀನಿ, ಹಿನ್ನೆಲೆ ಚೆನ್ನಾಗಿದೆ' ಅಂದೆ. ಕೂಡಲೇ 'ಬೇಡ, photo ಬೇಡ, ನನ್ನ ಮಗನ ಮದುವೇಲೇ ನಾನು photo ತೆಗೆಸಿಲ್ಲ' ಅಂದ್ರು ಯಜಮಾನರು. ಕಾಶೀಪತಿಗಳು ಹಾಗೂ ಸುಬ್ಬರಾಯರು ಅವರಿಗೆ ನಮ್ಮ ಉದ್ದೇಶ ವಿವರಿಸಿದ್ರೂ ಆಸಾಮಿ ಒಪ್ಪಲಿಲ್ಲ. 'ಅಡಿಕೆ ಎಡೆಯುವ, ಬೇಯಿಸುವ photoನಾದ್ರೂ ತೆಗೆಯೋಣವಾ, ನಿಮ್ಮ photo ಬ್ಯಾಡಾಂದ್ರೆ ಬೇಡ' ಅಂದ್ರೆ, 'ಊರ ತುಂಬಾ ಜನ ಇದಾರೆ, ಜಾಗಾನೂ ಇದೆ; ಅಲ್ಲಿ ತೆಗೀರಿ, ನಮ್ಮದು ಬೇಡ', ಅಂದು, ನನ್ನ ಬಳಿ ಬಂದು, 'ನೀವು ಈ ರೀತಿ photo ಗೀಟೋ ತೆಗೀಬಾರದು' ಅಂತ ತಾಕೀತು ಮಾಡಿದ್ರು. ನಾನು ಸರಕಾರದವನು ಇರಬೇಕು ಅನ್ನುವ ಭಯ ಅವರಿಗೆ! ಕಡೆಗೆ ಸುಬ್ಬರಾಯರೇ, 'ನಡೀರಿ, ಬೇರೆಡೆ ಹೋಗೋಣ' ಅಂದ್ರು. 'ಅವರವರ ಭಾವಕ್ಕೆ!' ಅಂತ ಅದನ್ನು ಅಲ್ಲೇ ಮರೆತು ಮುಂದೆ ಹೊರಟಾಗ ಇನ್ನೂ ಒಳ್ಳೇ ಭಾವಚಿತ್ರಗಳೇ ಸಿಕ್ವು. ನಗುನಗುತ್ತಾ ಜನಾನೂ ಸಹಕರಿಸಿದ್ರು. ಸಂತೆಯಿಂದ ಸೀಮೆಎಣ್ಣೆ, ಸಾಮಾನು ಹೊತ್ತ ಶಂಕರ್, ಮೊಪೆಡ್ ಸವಾರಿ ಮಾಡುತ್ತಾ ಬಂದ ಎಚ್.ಎಸ್.ಸುಬ್ಬರಾಯರು, ಹಿರಿಯರಾದ ಸೀತಾರಾಮಯ್ಯನವರು, ಎಲ್ಲರೂ ಆ ಸಂಗತಿಯನ್ನು ಮರೆಸಿದರು. ಕತ್ತಲಾಗುವುದರೊಳಗೆ ಛಾಯಾಚಿತ್ರದ ಕಾರ್ಯಕ್ರಮವೆಲ್ಲಾ ಮುಗೀತು. ಮುಂದೆ ನಡೆದದ್ದು, ಸಂಕೇತಿ ಕೃಷಿಕರ ವಿವರವಾದ ಸಂದರ್ಶನ. ಅದೂ ಈಗ ನಿಮ್ಮ ಮುಂದಿದೆ. ರಾತ್ರಿ ಹೊತ್ತೇರಿ ವಾಪಸ್ಸು ಹೋಗುವಾಗಲೂ ನನ್ನನ್ನು ಕಾಡಿದ್ದು ಒಂದೇ - ಅದೇ, ಭಾವಚಿತ್ರ ಬೇಡಾಂತ (ಸಂಕೇತಿ ಭಾಷೆಯಲ್ಲಿ) ಹೇಳುತ್ತಾ ಗಾಬರಿಗೊಂಡ ಆ ವ್ಯಕ್ತಿಯ ಮುಖ!

ಅ) ಸೀತಾರಾಮಯ್ಯ ಇ /ಮ ಕೇಶವಯ್ಯ

ಹಾನಗಲ್, ಅರಕಲಗೂಡು (ತಾ) ದೂರವಾಣಿ: 08175-534882

'ಕಷ್ಟ ಅಂದುಕೊಂಡ್ರೆ ಕಷ್ಟ, ಅದನ್ನೇ ಸುಖ ಅಂದುಕೊಂಡ್ರೆ ಸುಖ. ನಾನು ಊರು ಕೇರಿ ತಿರುಗಿದವನಲ್ಲ, ಅನುಭವ ಪಾಠ ಕಲಿಸಿದೆ. ಕಷ್ಟಪಟ್ಟು ಜೀವನ ಮಾಡಬೇಕು. ಇದು ನನ್ನ ಧ್ಯೇಯ.'



ವೃದ್ಧ ರೈತ ಸೀತಾರಾಮಯ್ಯನವರು, ಹಾನಗಲ್: ಊರ ಮುಂದಿನ ಅರಳಿಕಟ್ಟೆಯ ಹಿನ್ನೆಲೆಯಲ್ಲಿ

ಹಾನಗಲ್ಲಿನ ಹಿರಿಯ ಕೃಷಿಕ ಸೀತಾರಾಮಯ್ಯನವರಿಗೆ ಈಗ ೮೪ರ ಹರಯ. ಊರದೇವತೆ ಹಾನಗಲ್ಲಮ್ಮನ ದೇವಸ್ಥಾನದ ಆವರಣದಲ್ಲಿ ಕುಳಿತು ತಮ್ಮ ಅನುಭವದ ಬುತ್ತಿ ಬಿಚ್ಚಿದ್ರು. ಅವರ ತಂದೆಗೆ ಮೂರು ಜನ ಗಂಡು ಮಕ್ಕಳು ಹಾಗೂ ಒಂದು ಹೆಣ್ಣು. Lower Secondary ವರೆಗೆ ವಿದ್ಯಾಭ್ಯಾಸ. ತಂದೆಗಿದ್ದದ್ದು, ೨೪ ಗುಂಟೆ ತೋಟ ಹಾಗೂ ಅರ್ಧ ಎಕರೆ ಗದ್ದೆ ಮಾತ್ರ. ಅಣ್ಣತಮ್ಮಂದಿರು ಸೇರಿ, ದುಡಿದು, ಏಳು ಎಕರೆ ತೆಂಗು, ಎರಡು ಎಕರೆ ಅಡಿಕೆ ತೋಟ ಹಾಗೂ ಎರಡು ಎಕರೆ ಗದ್ದೆ ರೂಢಿಸಿದ್ದಾರೆ. ಹಾನಗಲ್‌ನಲ್ಲಿ ಪ್ರೈಮರಿ ಶಾಲೆ ವಿದ್ಯಾಭ್ಯಾಸ ಮುಗಿಸಿ, ಹಾಸನ ತಾ. ಮೊಸಳೆಯಲ್ಲಿ ಲೋಯರ್ ಸೆಕೆಂಡರಿ ಓದುತ್ತಿರುವಾಗ ತಂದೆ ಹಿಸ್ಸೆಯಾದದ್ದು. ಸೀತಾರಾಮಯ್ಯ ವ್ಯವಸಾಯ ಆರಂಭಿಸಿದ್ದು ತಮ್ಮ ೧೭ನೇ ವಯಸ್ಸಿನಲ್ಲಿ. ಮದುವೆಯಾದಾಗ ೩೪ ವರುಷ. ಧರ್ಮಪತ್ನಿ ಸುನಂದಮ್ಮ ಕೊಣನೂರು ಹತ್ತಿರದ ಸರಗೂರಿನವರು. ಸೀತಾರಾಮಯ್ಯನವರಿಗೆ ನಾಲ್ಕು ಹೆಣ್ಣು ಹಾಗೂ ಎರಡು ಗಂಡು ಮಕ್ಕಳು.

'ಮಳೆ ನೀರಲ್ಲಿ ಅಡಿಕೆ ತೋಟ ಏಳಿಸಿ, ವಿಳ್ಳೇದೆಲೆ ಹಂಬು ಹಾಕಿದೆ. ಕೆರೆ ತುಂಬಿದಾಗ ಗದ್ದೆಗೆ ಭತ್ತ ಹಾಕಿದೆ. ತೋಟದಲ್ಲಿ ಬೆಳೆದ ಎಲೆಯನ್ನು ಪಿಂಡಿ ಕಟ್ಟಿ (ಒಂದು ಪಿಂಡಿಗೆ ೧೨೦ ಕಟ್ಟು, ಒಂದು ಕಟ್ಟಿಗೆ ನೂರು ಎಲೆ) ತಲೆ ಮೇಲೆ ಹೊತ್ತು ಊರೂರು ಸಂತೆಗೆ ತಿರುಗಿ ಮಾರಿದ್ದೇನೆ. ಬೇರೆ ತೋಟವನ್ನು ಗುತ್ತಿಗೆ ಹಿಡಿದು ವ್ಯವಸಾಯ ಮಾಡಿ ಚಿಕ್ಕಪ್ಪನ ಜತೆ ಸೇರಿ ಊರೂರು ಅಲೆದೆ. ಸುಮಾರು ಏಳು ವರುಷ ತಲೆ ಮೇಲೆಯೇ ಹೊರೆ ಹೊತ್ತು ವ್ಯಾಪಾರ ಮಾಡಿದೆ. ಕೊಣನೂರು, ಹೊಳೆನರಸೀಪುರ, ಸಾಲಿಗ್ರಾಮದ ಸಂತೆಗಳಿಗೆ ಹಾನಗಲ್ಲಿನಿಂದಲೇ ಹೊರೆಹೊತ್ತು ಓಡಾಡಿದೆ. ಸ್ವಲ್ಪ ಅನುಕೂಲ ಆದ ಮೇಲೆ ಎತ್ತುಗಾಡಿ ಖರೀದಿಸಿದೆ. ವ್ಯಾಪಾರ ಸುಲಭವಾಯ್ತು. ಆಗ ಮೂರು ಕಾಸಿಗೆ ಎರಡು ಮೂರು ಕಟ್ಟು ಎಲೆ. ಕೆಲವೊಮ್ಮೆ ಧಾರಣೆ ಸಿಗದಾಗ ಸಂತೆಯಲ್ಲಿ ಎಲೆ ಸುರಿದು ಬಂದಿದ್ದೂ ಇದೆ. ಈಗ ಟ್ರ್ಯಾಕ್ಟರ್ ಬಂದಿದೆ. ಸಾಕಷ್ಟು ಬದಲಾವಣೆ ಆಗಿದೆ. ಹಿಂದಿನ ಕಾಲದಲ್ಲಿ ನಾವೇ ಸ್ವತಃ ದುಡಿದು ತಿನ್ನುತ್ತಿದ್ದೆವು. ಈಗ ಕೂಲಿ ಆಳುಗಳನ್ನಿಟ್ಟು ಸುಖದ ಕೂಳು ತಿನ್ನುತ್ತಿದ್ದೇವೆ. ಇದು ನವೀನತೆ' ಎಂದು ನಗುತ್ತಾರೆ.

'ಬರಿಯ ಎಲೆಯ ವ್ಯಾಪಾರವಷ್ಟೇ ಯಾಕೆ ಮಾಡಿದ್ರಿ? ಅಡಿಕೆ ವ್ಯಾಪಾರ ಯಾಕೆ ಮಾಡಲಿಲ್ಲ' ಅಂತ ಕೇಳಿದ್ರೆ, 'ಅಡಿಕೆ ವ್ಯಾಪಾರಾನೂ ಮಾಡ್ತಿದ್ದೆ. ಆದ್ರೆ ಅಡಿಕೆ ಬೇಯಿಸುವಾಗ ಒಲೆ ಮುಂದೆ ನಮ್ಮ ತಂದೇನೇ ಕೂತು ಬಿಡೋರು. ಅವರಿಗೆ ಖಾಯಿಲೆ ಬಂತು. ಅದಕ್ಕೆ ಅಡಿಕೆ ವ್ಯಾಪಾರ ಬಿಟ್ಟೆ. ನಮ್ಮೂರಿನಲ್ಲಿ ಅಡಿಕೆ ವ್ಯಾಪಾರ ಮಾಡಿದ ಮೊದಲಿಗ ನಾನು' ಎನ್ನುತ್ತಾರೆ. ತಂದೆಯ ಆರೋಗ್ಯಕ್ಕಾಗಿ ಆದಾಯದ ಮೂಲವನ್ನು ಬಿಟ್ಟ ಇವರು ಆದರ್ಶಪ್ರಾಯ ಅಲ್ಲವೇ?

'ಆಗೆಲ್ಲಾ ಅಡಿಕೆ ೪೮ ಆಣೆಗೆ ಒಂದು ಮಣ. ಒಂದು ಎಕರೆಗೆ ೪೦ ಮಣ ಅಡಿಕೆ ಬರ್ತಿತ್ತು. ಈಗಿನವರಿಗೆ ಆಣೆ ಕಾಸು ಲೆಕ್ಕಾಚಾರ ಬರದು

ಅನ್ನಿಸುತ್ತೆ. ೧೨ ಕಾಸಿಗೆ ಒಂದು ಆಣೆ. ೧೬ ಆಣೆಗೆ ಒಂದು ರೂಪಾಯಿ. ಅಲ್ಲಿಗೆ ರೂಪಾಯಿಗೆ ೧೯೨ ಕಾಸು. ಆಗೆಲ್ಲಾ ಒಂದು ಖಂಡುಗ (೨೦೦ ಸೇರು) ಅಕ್ಕಿಗೆ ೧೦ ರಿಂದ ೧೧ ರೂಪಾಯಿ. ನಾಲ್ಕಾಣೆಗೆ ಒಂದು ಸೇರು ಬೆಣ್ಣೆ. ಆರು ಕಾಸಿಗೆ ಒಂದು ಅಚ್ಚುಬೆಲ್ಲ, ಆ ಕಾಲವೇ ಕಾಲ' ಎಂದು ನೆನಪಿನಂಗಳವನ್ನು ಚಪ್ಪರಿಸುತ್ತಾರೆ.

'ತೋಟಕ್ಕೆ ಮಣ್ಣು ಹೊಡೀಬೇಕು. ಅದೇ ಮುಖ್ಯ. ಅದ್ರಿಂದಲೇ ಅಭಿವೃದ್ಧಿ. ನನ್ನ ಜೀವನೋಪಾಯ ನಡೆದದ್ದು ವ್ಯವಸಾಯದಿಂದಲೇ. ಅಂದು ವ್ಯವಸಾಯ ಬಹಳ ಕಷ್ಟದ್ದಾಗಿತ್ತು. ನೀರಾವರಿ ಇರ್ಲಿಲ್ಲ. ಸಾಲಸೋಲ ಮಾಡಿ ಬದುಕು ಸಾಗಿಸಬೇಕು. ದುಡ್ಡಿರುವವರ ಹತ್ರ ನಂಬಿಕೆಯ ಮೇಲೆ ಸಾಲ ತಂದು, ತೀರಿಸಬೇಕು. ಪತ್ರ ವ್ಯವಹಾರವಿಲ್ಲ. ಎಲ್ಲಾ ಬಾಯಿ ಲೆಕ್ಕವೇ' ಎಂದು ಬೊಚ್ಚುಬಾಯಿ ಅರಳಿಸುತ್ತಾರೆ ಸೀತಾರಾಮಯ್ಯನವರು.

ಇಂದು ಆ ನಂಬಿಕೆ ಉಳಿದಿಲ್ಲವೇಕೆ ಅಂದ್ರೆ, 'ಕೊಟ್ಟವರ ದುಡ್ಡನ್ನು ಪ್ರಾಮಾಣಿಕವಾಗಿ ಮರಳಿ ಹಿಂದಿರುಗಿಸದಿರುವುದೇ ಕಾರಣ' ಅಂತಾರೆ. ಯುವಪೀಳಿಗೆಯಲ್ಲಿ ಇವರ ಮಗ ಹಾಗೂ ಇವರ ತಮ್ಮನವರ ಮಗ ಇಬ್ಬರೇ ವ್ಯವಸಾಯ ಮುಂದುವರೆಸಿರುವುದು. ಉಳಿದವರು ಉದ್ಯೋಗ ಅರಸಿ ಪಟ್ಟಣ ಸೇರಿದ್ದಾರೆ. 'ವ್ಯವಸಾಯದಲ್ಲಿ ಸುಖವಿಲ್ಲ ಅಂತ ಈಗಿನವರು ಹೇಳ್ತಾರೆ. ಕಷ್ಟಪಟ್ಟು ಕೆಲಸ ಮಾಡ್ದೇ ಇರೋದ್ರಿಂದ ಸುಖವಿಲ್ಲ ಅಷ್ಟೆ. ದುಡಿದರೆ ವ್ಯವಸಾಯ ಎಂದಿಗೂ ಆದಾಯವೇ. ದುಡಿಮೆಯೇ ದೇವರು ಎನ್ನುವುದನ್ನು ತಂದೆ ತಾಯಿಯಿಂದ ನಾನು ಕಲಿತೆ. ತೋಡು ಬಾವಿಯಿಂದ ಕೈತೂಕದಲ್ಲಿ ನೀರು ಹೊತ್ತು ಅಡಿಕೆ ಎಬ್ಬಿಸಿದ ನನಗೆ ಈ ಮಾತಿನ ಅರ್ಥ ಗೊತ್ತು. ನನ್ನ ತಂದೆತಾಯಿ ಪ್ರಾತಃಸ್ಮರಣೀಯರು' ಎಂದು ಹನಿಗಣ್ಣಾಗುತ್ತಾರೆ.

ಅಂದಿನ ಕಾಲದಲ್ಲೂ ರಾಜಕೀಯ ಇತ್ತಂತೆ. ಪಟೇಲ್ರು, ಶ್ಯಾನುಭೋಗ್ರು ಊರನ್ನು ಆಳುತ್ತಿದ್ದ ಕಾಲ. ಊರಿನ ವ್ಯಾಜ್ಯಗಳು ಪೊಲೀಸ್ ಠಾಣೆ ಮೆಟ್ಟಿಲು ಹತ್ತಿದ್ದೂ ಇದೆ. ಹುಟ್ಟಿ ಬೆಳೆದ ಹಾನಗಲ್ಲಿನ ಮೇಲೆ ಸೀತಾರಾಮಯ್ಯನವರಿಗೆ ಭಾರೀ ಪ್ರೀತಿ. ಚಿಕ್ಕಂದಿನಿಂದ 'ನಿರಾಳವಾಗಿ ಜೀವನ ನಡೆದ್ರೆ ಸಾಕು' ಅನ್ನೋದನ್ನ ಬಿಟ್ರೆ ಬೇರ್‍ಯಾವ ಕನಸನ್ನೂ ಇವರು ಹೊತ್ತವರಲ್ಲ. ನಿಮ್ಮ ಅಭಿವೃದ್ಧಿಯಲ್ಲಿ ನಿಮ್ಮ ಹೆಂಡತಿಯ ಪಾತ್ರ ಎಷ್ಟು ಅಂದ್ರೆ 'ಆಗೆಲ್ಲಾ ಹೆಣ್ಣುಮಕ್ಕಳು ಹೊರಗಿನ ವ್ಯವಹಾರಕ್ಕೆ ಬರ್‍ತಿರಲಿಲ್ಲ. ನನ್ನ ಮನೆಯನ್ನು ಅಚ್ಚುಕಟ್ಟಾಗಿ ಅವಳು ನಡೆಸಿದ್ದಾಳೆ' ಎನ್ನುತ್ತಾರೆ. ತುಂಬಿದ ಬಾಳು ನಡೆಸಿದ ಸೀತಾರಾಮಯ್ಯನವರದ್ದು ನಿಜಕ್ಕೂ ಸಾರ್ಥಕ ಬದುಕು.

ಆ) ಎಚ್.ಎಸ್. ಸುಬ್ಬರಾಯರು ಇ/ಮ ಎಚ್.ಆರ್ ಸೂರ್ಯನಾರಾಯಣಪ್ಪ

ಹಾನಗಲ್, ಅರಕಲಗೂಡು (ತಾ) ದೂರವಾಣಿ: 08175-534711

'ಶ್ರದ್ಧೆ ಯಿಂದ ದುಡೀಬೇಕು. ಇದ್ದುದರಲ್ಲಿ ಜೀವಿಸಬೇಕು. ಒಟ್ಟು ಕುಟುಂಬದಲ್ಲಿ ಮನೆಗೆ ಹಿರಿಯನಾಗಿ ನಾನೇ ಅನ್ಯಾಯದ ಮಾರ್ಗ ಹಿಡಿದ್ರೆ ಮನೆಗೆ ಏಳ್ಗೆ ಆಗೋಲ್ಲ ಅಂತ ನ್ಯಾಯಯುತವಾಗಿ ನಡೆದು ಬಾಳಿದೆ. ಯಾರಿಗೂ ಅನ್ಯಾಯ ಮಾಡಬಾರದು. ಇದು ನನ್ನ ತತ್ತ್ವ'



ಎಚ್.ಎಸ್.ಸುಬ್ಬರಾಯರು, ಹಾನಗಲ್: ತಮ್ಮ ಕುಟುಂಬದವರು ಪುನರುಜ್ಜೀವನಗೊಳಿಸಿದ ಹಾನಗಲ್ಲಮ್ಮ ದೇವಸ್ಥಾನದ ಎದುರು

ಸುಬ್ಬರಾಯರು ಹುಟ್ಟಿದ್ದು ೧೯೩೬ನೇ ಇಸವಿ. ತಂದೆ ಸೂರ್ಯನಾರಾಯಣಪ್ಪನವರು ೯೪ ವರುಷಗಳ ತುಂಬು ಜೀವನ ನಡೆಸಿ ಕಾಲವಾದ್ರೆ, ತಾಯಿ ನಾಗಲಕ್ಷಮ್ಮನವರು ೮೨-೮೩ರ ಇಳಿತನದಲ್ಲೂ ಆರೋಗ್ಯದಿಂದಿದ್ದಾರೆ. ಬದುಕಿನ ಬಗ್ಗೆ ಅಪಾರ



ಸುಬ್ಬಲಕ್ಷ್ಮಿ-ಎಚ್.ಎಸ್.ಸುಬ್ಬರಾಯ ದಂಪತಿ: ಉಯ್ಯಾಲೆಯ ಮೇಲೆ : ಹಾನಗಲ್

ಶ್ರದ್ಧೆ ಇರುವ ಸುಬ್ಬರಾಯರು ಹಳೆಯ ನೆನಪನ್ನು ತಮ್ಮ ಹಳೇ ಮನೆಯಲ್ಲಿ ಕುಳಿತು ಮೆಲುಕು ಹಾಕಿದ್ರು:

ನಮ್ಮ ತಂದೆಗೆ ಏಳು ಜನ ಗಂಡು ಮಕ್ಕಳು. ನಾನೇ ಹಿರಿಯ. ನಾವು ನಾಲ್ಕು ಜನ ಅಣ್ಣತಮ್ಮಂದಿರೂ, ವ್ಯವಸಾಯ ಮಾಡುತ್ತಿದ್ದೇವೆ. ಮೂರು ಜನ ಹೊರಗಡೆ ದುಡಿಯುತ್ತಿದ್ದಾರೆ. ನಮಗೆ ಜಮೀನು ಹೆಚ್ಚಿಗೆ ಇಲ್ಲ. ೧೯೫೨ರಲ್ಲಿ ಊರಿಗೆ ವ್ಯವಸಾಯಕ್ಕೆ ಬಂದೆ. ಎಟ್ಟೆ (ನೀರು ಇಲ್ಲದ) ಜಮೀನು, ತೋಟ. ಒಂದು ಎಕರೆ ಅಡಿಕೆ ತೋಟವನ್ನು ತಂದೆಯವರು ಪಾಳು ಬಿಟ್ಟಿದ್ರು. ತಿನ್ನಲು ಅನ್ನವಿಲ್ಲದ ರೇಷನ್‌ಕಾಲ. ತಂದೆಯವರು ತಮ್ಮ ಅಕ್ಕನ ಮನೆಯಿದ್ದ ಶೀಗೋಳಿಗೆ ಹೋಗಿ, ಅಲ್ಲಿಂದ ಮಂಕರಿಯಲ್ಲಿ ಅಕ್ಕಿ ತರುತ್ತಿದ್ದರು. ಯಾರಿಗಾದ್ರೂ ಕಂಡರೆ ಎಂದು ನಾಚಿ ಮಂಕರಿ ಮೇಲೆ ಹೊಟ್ಟು ತುಂಬಿ ತಂದು, ನಮ್ಮನ್ನೆಲ್ಲಾ ಸಾಕಿದ್ರು. ಕೆರೆಗೆ ನೀರು ಬಂದ್ರೆ ವ್ಯವಸಾಯ, ಇಲ್ಲಾಂದ್ರೆ ಉಪವಾಸ. ನಾನು ವ್ಯವಸಾಯಕ್ಕೆ ಬಂದ ಮೇಲೆ ನನ್ನ ತಮ್ಮನೂ ಬಂದ. ಅವನನ್ನು ಓದಿಸುವ ಆಸೆ ತಂದೆತಾಯಿಗೆ. ನನ್ನ ತಾಯಿ ಹತ್ರ ಒಂಭತ್ತು ತೊಲದ ಬಂದಿ ಸರ ಇತ್ತು. ಅದನ್ನು ಅಡ ಇಟ್ಟು ಓದಿಸ್ತೀನಿ ಅಂದ್ರು. ಅವನು 'ನಾನು ಓದೋಲ್ಲ, ವ್ಯವಸಾಯ ಮಾಡ್ತೀನಿ' ಅಂದ. ಇಬ್ರೂ ಇಲ್ಲಿ ಉಳಿದು ಅಡಿಕೆ ತೋಟವನ್ನು ಆಬಾದ್ ಮಾಡಿದ ಮೇಲೆ ತಂದೆಯವರು ಅಡಿಕೆ ವ್ಯಾಪಾರ ಆರಂಭಿಸಿದ್ರು. ನಾವು ತೋಟ ಉಳಿಸಿದ್ದೂ ಬಹಳ ಕಷ್ಟದಲ್ಲಿ. ೧೮ ಅಡಿ ಭಾವೀನ ನಾನೊಬ್ಬನೇ ಸೋಸಿ, ತಂದೆ ಜತೆ ಸೇರಿ ಯಾತ ಕಟ್ಟಿ, ಕಪಿಲೆ ಹೊಡೆದು, ಒಬ್ಬನೇ ನೀರನ್ನು ನಾಲ್ಕು ಜನರಿಗೆ ಎತ್ತಿಕೊಟ್ಟು ಅಡಿಕೆ ಗಿಡ ಉಳಿಸಿದೆ. ವ್ಯಾಪಾರದಲ್ಲಿ ನಿಧಾನವಾಗಿ ಅಭಿವೃದ್ಧಿ ಹೊಂದಿದ ಮೇಲೆ ಒಂಭತ್ತು ಎಕರೆ ಗದ್ದೆ ತೆಗೆದೆವು. ಈಗ ಎಂಟು-ಒಂಭತ್ತು ಎಕರೆ ಹೊಲ ಇದೆ. ಎಲ್ಲರಿಗೂ ಒಂದೊಂದು ಮನೆ ಇದೆ. ಈಗ ನೆಮ್ಮದಿಯಾಗಿದೆ.

ನಾನು ಪಿರಿಯಾಪಟ್ಟಣದ ನನ್ನ ಅಜ್ಜನ ಮನೇಲಿ ಮಿಡ್ಲ್‌ಸ್ಕೂಲು ಓದಿದ್ದು. ಹೈಸ್ಕೂಲು ಕೊಣನೂರು, ಎಸ್.ಎಸ್.ಎಲ್.ಸಿ. ಸಾಲಿಗ್ರಾಮದಲ್ಲಿ. ಪೈಪೋಟಿಯ ಮೇಲೆ ನಾನೂ ನನ್ನ ಅಣ್ಣತಮ್ಮಂದಿರೂ ವ್ಯವಸಾಯ ಮಾಡಿದ್ದೇವೆ. ಜಮೀನಿಗೆ ನಾನು ನಿಂತ್ರೆ ಉಳಿದೋರು ಅಡಿಕೆ ವ್ಯಾಪಾರ ಮಾಡಿದ್ರು. ೧೯೫೬ರಲ್ಲಿ ನಾನು ಮದುವೆಯಾದೆ. ಹೆಂಡತಿ ಸುಬ್ಬಲಕ್ಷ್ಮಿ ಬಸವಾಪಟ್ಟಣದವಳು. ನನಗೆ ಮೂರು ಗಂಡು ಹಾಗೂ ಒಂದು ಹೆಣ್ಣು. ನನ್ನ ಒಬ್ಬ ಮಗ ವ್ಯವಸಾಯದಲ್ಲಿದ್ದಾನೆ.

ವಿಳ್ಳೇದೆಲೆ ಬೇಸಾಯದಲ್ಲಿ, ಎರಡು ವರುಷಕ್ಕೆ ಒಂದು ಬಾರಿ ತೆಕ್ಕೆ ಇಳಿಸಬೇಕು. ಬೊಡ್ಡೆಯ ಹಂಬನ್ನು ಬಿಡಿಸಿ ಮರದ ಸುತ್ತಾ ಬಳ್ಳಿ ಬಿಡಬೇಕು. ಶಿವರಾತ್ರಿ ಸಂದರ್ಭದಲ್ಲಿ ತೆಕ್ಕೆ ಇಳಿಸಿದ್ರೆ ಉತ್ತಮ. ನಂತರ ಅದನ್ನು ಹಟ್ಟಿಗೊಬ್ಬರದಲ್ಲಿ ಮುಚ್ಚಬೇಕು. ವರುಷಕ್ಕೆ ಎರಡು ಮೂರು ಸಲ ಕುಡಿ ಕಟ್ಟಬೇಕು. ಸೀಮೆಗೊಬ್ಬರ ಹಾಕಿದ್ರೆ ಹಂಬು ಬೆಳೆಯುತ್ತೆ, ಆದ್ರೆ ತುರಿ ಬರುತ್ತೆ; ಅಂದ್ರೆ ಎಲೆ ಹಿಂಭಾಗದಲ್ಲಿ ಹಣ್ಣಾದ ಹಾಗೆ ಚುಕ್ಕಿಚುಕ್ಕಿ ಬರುತ್ತೆ. ಹಂಬಿಗೆ ಮಾಡಿದ ವ್ಯವಸಾಯ ಅಡಿಕೆಗೂ ಸಾಕು. ಅಡಿಕೆ ಮಧ್ಯೆ ಬಾಳೆ ಹಾಕಿದ್ರೆ ಹಂಬಿಗೆ ಅಪಾಯ. ಅದಕ್ಕೇ ಬಾಳೆ ತೆಗೆದಿದ್ದೇನೆ. ಮನೇಲಿ ಐದು-ಆರು ಹಸು, ಒಂದು ಜತೆ ಎತ್ತು ಇದೆ. ಅದಕ್ಕೆ ಬೇಕಾದ ಹಸಿರುಹುಲ್ಲನ್ನು ಜಮೀನಿನಲ್ಲಿ ಬೆಳೀತೀವಿ.

ಭತ್ತದ ಬೇಸಾಯದಲ್ಲಿ, ಮೊದಲು ಅಗೆಗದ್ದೆಗೆ ಗೊಬ್ಬರ ಹೇರಿ, ಒಂದು ಐದಾರು ಉಕ್ಕೆ ಹೊಡೀಬೇಕು. ಪಾಕ ಮಾಡಿ ಬಿಡಬೇಕು. ಜುಲೈನಲ್ಲಿ ನೀರು ಬಂದಾಗ, ಒಂದೊಂದು ಗಜಕ್ಕೆ ಪಟ ಮಾಡಬೇಕು. ನಂತರ ಪಟಗಳನ್ನು ಸಮಮಾಡಿ, ಸೀಮೆಗೊಬ್ಬರ ಉದುರಿಸಿ ನಂತ್ರ ಭತ್ತದ ಬೀಜವನ್ನು ಉದುರಿಸಬೇಕು. ಮೇಲೆ ಸ್ವಲ್ಪ ಹಟ್ಟಿಗೊಬ್ಬರವನ್ನು ಹಾಕಬೇಕು. ಅಗೆ ಏಳುತ್ತೆ. ನಂತ್ರ ೨೫ ರಿಂದ ೨೬ ದಿನದ ಸಸಿಯನ್ನು ನಾಟಿಮಾಡಬೇಕು. ಗದ್ದೆಯನ್ನು ಮೊದಲು ಮೂರು ಉಕ್ಕೆ ಹೊಡೆದು ಬಿಟ್ಟಿರಬೇಕು. ಆಮೇಲೆ ನೀರು ಬಿಟ್ಟು ಸಸಿ ನಾಟಿ ಮಾಡಬೇಕು. ನಾಟಿಯಾದ ಮೇಲೆ ಗದ್ದೆ ಆರದಂತೆ ನೋಡಿಕೊಂಡು, ಒಂದು ತಿಂಗಳು ಕಳೆ ತೆಗೆದು ಸರಿಯಾಗಿ ನೀರು ನಿರ್ವಹಣೆ ಮಾಡಿ, ಗೊಬ್ಬರ ಹಾಕಿದ್ರೆ ಬೆಳೆ ಬರುತ್ತೆ.


ಬದಲಾವಣೆಯತ್ತ ಬದುಕು:ಸರಕು ಸಾಗಾಣಿಕೆಗೆ ಮೊಪೆಡ್ ಏರಿರುವ ಎಚ್.ಎಸ್.ಸುಬ್ಬರಾಯರು:ಹಾನಗಲ್

ಅಡಿಕೆ ಕುಯ್ಲು ಸೆಪ್ಟೆಂಬರ್‌ನಿಂದ ಆರಂಭವಾಗಿ ಡಿಸೆಂಬರ್‌ವರೆಗೆ ಇರುತ್ತೆ. ಮೊದಲು ಅಡಿಕೆ ಕುಯ್ಲು ಮಾಡಿ, ಹೆಂಗಸರ ಹತ್ರ ಎಡಿಸ್ತೀವಿ. ಅಳತೆ ಮಾಡಿ ಬೇಯಿಸ್ತೀವಿ. ಬೆಂದ ಅಡಿಕೆಯನ್ನು ಚಾಪೆಯ ಮೇಲೆ ಐದು ದಿನ ಒಣಗಿಸ್ತೀವಿ. ಮೈಸೂರಿನಿಂದ ಅಚ್ಚು, ಬಣ್ಣದ ಪುಡೀ ತಂದು, ಹಂಡೇಲಿ ಅಡಿಕೆ ಬೇಯುವಾಗ ಹಾಕಿ ಬಣ್ಣ ಕಟ್ತೀವಿ. ಬಣ್ಣ ಹಾಕದಿದ್ರೆ ಅಡಿಕೆ ಬಿಳಿಯಾಗುತ್ತೆ, ಮಾರಾಟ ಆಗೋಲ್ಲ, ಅಡಿಕೆಗೆ ಮಿಂಚು ಬರೋಲ್ಲ. ಅಡಿಕೆಯಲ್ಲಿ ಚೂರು, ಬಟ್ಟಲಡಿಕೆ, ಉಂಡೆ ಗೋಲಿ, ಪೋಡಿ ಅನ್ನೋ ಪ್ರಭೇದಗಳಿವೆ. ಹಣ್ಣಡಿಕೆಯನ್ನು ಒಣಗಿಸಿ ಅದನ್ನು ಎಡಿಸಿದರೆ ಸಿಗುವುದು ಚಾಲಿ. ಹಿಂದೆಲ್ಲಾ ನಾವೇ ಅಡಿಕೆ ಮಾರ್‍ತಿದ್ವೆವು. ಈಗ ಚೇಣಿಗೆ ಕೊಡುವುದು ಜಾಸ್ತಿ.

'ನಿಮ್ಮ ಸಿಹಿಕಹಿ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ' ಎಂದಾಗ ಸುಬ್ಬರಾಯರಿಗೆ ನೆನಪಾದದ್ದು ಜೇನುಹುಳು ಕಡಿದದ್ದು. "ಒಂದು ದಿನ ನಾನು ಮತ್ತು ನನ್ನ ಮಗ ಜಮೀನಿಗೆ ಹೋಗ್ತಾ ಇದ್ವಿ. ಎರಡು ಜೇನುಹುಳು ಬಂತು. ನನ್ನ ಮಗ 'ಅಣ್ಣ ಅತ್ತ ಹೊಡಿ' (ಅಪ್ಪ, ಅದನ್ನು ಹೊಡಿ) ಅಂದ. ನನಗೆ ಅನುಭವ ಇರಲಿಲ್ಲ. ಜೇನುಹುಳು ಬಂದಾಗ ಮೈಯಮೇಲಿದ್ದ ಬಟ್ಟೆ ಎಸೆದ್ರೆ ಅದಕ್ಕೆ ಮುತ್ತುತ್ವಂತೆ. ನನಗೆ ಗೊತ್ತಾಗಲಿಲ್ಲ. ನನ್ನ ಮಗನ ತಲೆಗೆ ಎರಡು ಹುಳ ಕಡೀತು. ಅವನು ಹತ್ರ ಬಿದ್ದಿದ್ದ ಅಡಿಕೆ ಹಾಳೆ ಮುಚ್ಚಿಕೊಂಡು ತೋಟಬಿದ್ದ. ನಾನು ಅಲ್ಲೇ ಕುಳಿತುಬಿಟ್ಟೆ. ಮೊದಲಿಗೆ ಅದು ಕಣಜದ ಹುಳುವೇನೋ ಅಂದುಕೊಂಡೆ. ಅಷ್ಟರಲ್ಲಿ ಸಾವಿರಾರು ಜೇನುಹುಳುಗಳು ನನ್ನ ಮುತ್ತಿದ್ವು. ತಲೆ ಎಲ್ಲಾ ಮುಳ್ಳು, ಗಂಟುಗಂಟು. ವರುಷಕಾಲವೆಲ್ಲಾ ಕಷ್ಟಪಟ್ಟಿದ್ದೇನೆ." ಎಂದು; ಜೇನುಹುಳು ಕಡಿದ ಬೊಕ್ಕ ತಲೆಯ ಮೇಲೆ ಕೈಯಾಡಿಸಿದರು. "ಒಂದು ಸಾರಿ ನಾನು, ನನ್ನ ತಂದೆ ಸೇರಿ ಸೌದೆ ಒಡೀತಾ ಇದ್ವು. ಆಪು ಚಿಮ್ಮದಲ್ಲಿ ಸೌದೆ ಸೀಳಿದೆ. ಆ ಸೌದೆ ಸೀಳಿನಿಂದಲೇ ಒಂದು ನಾಗರಹಾವು ಬುಸ್ಸೆಂದು ತಲೆ ಎತ್ತಿತು. ಆ ನೆನಪು ಇನ್ನೂ ಮನದಲ್ಲೇ ಇದೆ" ಎಂದು ತಣ್ಣಗೆ ನುಡಿದರು.

ಸುಬ್ಬರಾಯರಿಗೆ ತಮ್ಮ ಹೆಂಡತಿಯ ಮೇಲೆ ಭಾರೀ ಅಭಿಮಾನ. 'ಒಟ್ಟು ಕುಟುಂಬದಲ್ಲಿ, ತಾಯಿ ಜತೆ ಸಂಪೂರ್ಣ ಜವಾಬ್ದಾರಿ ಹೊತ್ತು ನಡೆದಿದ್ದಾಳೆ, ಆಳುಕಾಳನ್ನು ಸಂತೈಸಿದ್ದಾಳೆ, ಜೀವನದುದ್ದಕ್ಕೂ ಕಷ್ಟಸುಖದಲ್ಲಿ ಭಾಗಿಯಾಗಿದ್ದಾಳೆ, ನನ್ನ ಕುಟುಂಬದ ಅಭಿವೃದ್ಧಿಯಲ್ಲಿ ಅವಳ ಪಾತ್ರ ಹಿರಿದು' ಅಂತ ಹೆಮ್ಮೆಯಿಂದ ಹೇಳಿದರು.


ಜೋಪಡಿಯಲ್ಲಿ ಜೋಡೆತ್ತು: ಎಚ್.ಎಸ್.ಸುಬ್ಬರಾಯರ ವ್ಯವಸಾಯ ಸಂಗಾತಿಗಳು: ಹಾನಗಲ್

ವ್ಯವಸಾಯದಲ್ಲಿ ತಂದೆಯ ಹೆಗಲಿಗೆ ಹೆಗಲಿಟ್ಟು ನಡೆಯುತ್ತಿರುವ ಸುಬ್ಬರಾಯರ ಮಗ ಚಂದ್ರಕಾಂತ್ ಮಾತಿಗೆ ಸಿಕ್ಕಿದರು. ಅವರು ವಿದ್ಯಾಭ್ಯಾಸ ಮುಗಿಸಿ ತಂದೆಗೆ ನೆರವಾಗಲು ಹಳ್ಳಿಯಲ್ಲೇ ಉಳಿದಿದ್ದಾರೆ. ತಮ್ಮ ಅಜ್ಜನೊಂದಿಗೆ ಕುಳಿತು ಚಿಕ್ಕಂದಿನಲ್ಲಿ ಪಡೆದ ಜೀವನ ಅನುಭವಗಳನ್ನು ಹಂಚಿಕೊಂಡ್ರು. "ನಮ್ಮ ಅಜ್ಜನಿಗೆ ಏಳು ಜನ ಮಕ್ಕಳು. ಹೊರಗಡೆ

ಕೂಲಿನಾಲಿ ಮಾಡಿ ಮಕ್ಕಳನ್ನು ಸಾಕಬೇಕು. ಹೀಗೇ ಒಂದು ದಿನ ಊರ ಹಿರಿಯರೊಬ್ಬರು ಕುಹಕ ಮಾಡಿದ್ರಂತೆ, 'ಏಳು ಜನ ಮಕ್ಕಳನ್ನು ಹುಟ್ಟಿಸಿದೀಯಲ್ಲಾ ಸೂರಪ್ಪಾ, ಅವರಿಗೆಲ್ಲಾ ಕಚ್ಚೆಕಟ್ಟಲು ನಿನಗೆ ಆಗುತ್ತಾ!' ಅಂದ್ರಂತೆ. ಅವರ ಮುಂದೆ ಆಗಲೇ ಪ್ರತಿಜ್ಞೆ ಮಾಡಿ, 'ಇದೇ ಊರಲ್ಲಿ ನಾನು ಬದುಕಿ ತೋರಿಸ್ತೀನಿ' ಅಂತ ಹೇಳಿದ್ರಂತೆ. ಹಾಗೆ ಹೇಳಿದ್ದೇ ಧೈರ್ಯದಿಂದ ಒಂದು ಜತೆ ಎತ್ತು ತಂದ್ರಂತೆ. ಆಗಲೇ ಅವರ ಮನೆಗೆ ಲಕ್ಷ್ಮಿ ಬಂದಂತಾಯ್ತು. ಎತ್ತುಗಳು ಸುಮಾರು ೧೫ ವರುಷ ದುಡಿದವು. ಎತ್ತಿನಗಾಡೀಲೇ ಕುಳಿತು ಊರೂರು ತಿರುಗಿ ವ್ಯಾಪಾರ ಮಾಡಿದ್ರಂತೆ. ಶ್ರಮದ ದುಡಿಮೆಯಿಂದ ಊರಲ್ಲಿ ನೆಲೆ ನಿಂತದ್ದು ನಮ್ಮ ಕುಟುಂಬ" ಅನ್ನುವಾಗ ಚಂದ್ರಕಾಂತ ಅವರ ಕಣ್ಣಲ್ಲಿ ಆತ್ಮವಿಶ್ವಾಸ ತುಂಬಿ ತುಳುಕಿತ್ತು. ಕೈಕೆಸರಾದ್ರೆ ಬಾಯಿ ಮೊಸರು ತಾನೆ!

೯) ಎಚ್.ಎನ್. ಶಂಕರ್ ೯/ಮ ಎಚ್.ಎಸ್. ನಾರಾಯಣರಾವ್
ಹಾಸಗಲ್, ಅರಕಲಗೂಡು (ತಾ) ದೂರವಾಣಿ: 08175-534873


ಸಂತೆ ಮುಗಿಸಿಕೊಂಡು ಊರ ದಾರಿ ಹಿಡಿದ ಎಚ್.ಎನ್.ಶಂಕರ್, ಹಾಸಗಲ್

ನಾನು ಸಾಮಾನ್ಯವಾಗಿ ಹಳೆಯ ನೆನಪುಗಳನ್ನು ತಲೆಯಲ್ಲಿ ಇಟ್ಟುಕೊಳ್ಳುವುದು ಕಮ್ಮಿ. ಯಾಕೇಂದ್ರೆ ಅದು ಕಹಿ, ಕೀಟಲೆ ಮಾಡುತ್ತೆ. ನಾನು ನಾಳೆಯದಕ್ಕೆ ಇಷ್ಟಪಡ್ತೀನೇ ಹೊರತು ನೆನ್ನೆಯದನ್ನು ಮರೀತೀನಿ-ದೊಡ್ಡದಿರಬಹುದು ಅಥವಾ ಸಣ್ಣದಿರಬಹುದು! ತಿದ್ದಿಕೊಳ್ಳುವುದಾದರೆ ನಾಳೆ ತಿದ್ದಿಕೊಳ್ಳುವುದು. ನೆನ್ನೆಯದಕ್ಕೆ ಪೇಚಾಡದೆ ಅದನ್ನ ಅಲ್ಲೇ ಬಿಡಬೇಕು.

ಹಾಸಗಲ್ಲಿಗೆ ಮೊದಲು ಬಂದ ಇಬ್ಬರು ಹಿರಿಯರು ಕಟ್ಟಿದ್ದು ಎರಡು ಬೃಹತ್ತಾದ ತೊಟ್ಟಿಮನೆಗಳು. ಅದರಲ್ಲಿನ ಒಂದು ಮನೆಯಲ್ಲಿ ಇಂದಿಗೂ ವಾಸಿಸುತ್ತಿದ್ದಾರೆ ಶಂಕರ್. ಮನೆಯ ಹಿರಿಯರ ಬಗ್ಗೆ, ಮನೆಯ ಬಗ್ಗೆ ಅಪಾರವಾದ ಹೆಮ್ಮೆಯಿದೆ ಇವರಿಗೆ. ಇವರ ತಮ್ಮ ಎಚ್.ಎನ್. ಸುರೇಶ್‌ರವರ ಧರ್ಮಪತ್ನಿ ವಾಣಿಯವರು ಮಾಡಿಕೊಟ್ಟ ಬಿಸಿಬಿಸಿ ಅಕ್ಕಿತರಿ ಉಪ್ಪಿಟ್ಟನ್ನು ಗಂಟಲಿಗಿಳಿಸಿ, ದೊಡ್ಡ ಲೋಟದ ತುಂಬಾ ಬಂದ ಹಸುವಿನ ಹಾಲನ್ನು ಸಹ ಕುಡಿದು, ಹಿರಿಯರು ಕಟ್ಟಿದ ಆ ಮನೆಯಲ್ಲೇ ಶಂಕರ್ ಅವರ ನೆನಪಿನ ಅಂಗಳವನ್ನು ಪ್ರಶ್ನೆಯೆಂಬ ಗುದ್ದಲಿಯಿಂದ ಅಗೆಯಲು ಆರಂಭಿಸಿದೆವು.

- **ನಮಸ್ಕಾರ ಶಂಕರ್ ಅವರೆ**

  ನಮಸ್ಕಾರ

- **ನಿಮ್ಮ ಮನೆಯಿಂದಲೇ ಆರಂಭಿಸೋಣ. ಏನು ಇದರ ವಿಶೇಷ?**

ನೋಡಿ, ನಮ್ಮ ಮನೆಯನ್ನು ಟಿಪ್ಪುಸುಲ್ತಾನ್ ಕಾಲದಲ್ಲಿ ಕಟ್ಟಿದ್ದಂತೆ. ಮನೇಲಿ ಹಿಂದೆ ಛತ್ರಿ ಬಟ್ಟೆಯ ಮೇಲೆ ಬರೆದ ಲಿಪಿಯಿತ್ತು. ಕಪ್ಪುಬಟ್ಟೆಯ ಮೇಲೆ ಬಿಳೀ ಪೈಂಟ್ ಬಳಸಿ ಬರೆದಿದ್ದು. ಆದರೆ ಅದು ಈಗ ಕಳೆದಿದೆ. ಅದ್ರಿಂದ ತಿಳಿದದ್ದು ಈ ಮನೆಯ ಇತಿಹಾಸ. ಈ ಮನೆ ಕಟ್ಟಿ ಏಳು ತಲೆಮಾರು ಕಳೆದಿದೆ. ಮುಂಚೆ ಇಷ್ಟು ಸ್ವಚ್ಛವಾಗಿರಲಿಲ್ಲ. ನಾವು ಈಗ ಸರಿಮಾಡಿಕೊಂಡಿದ್ದೇವೆ. ನಮ್ಮ ಮನೇಲಿ ಮದುವೆ ಮುಂಜಿ ಸಮಾರಂಭಗಳು ನಡೆದ್ರೆ ನಾವು ಛತ್ರಕ್ಕೆ ಹೋಗೋದಿಲ್ಲ. ನಮ್ಮ ಮನೆಯೇ ಸಾಕು.

- **ಅಂದಾಜು ಎಷ್ಟು ಮದುವೆಗಳು, ಸಮಾರಂಭಗಳು ಇಲ್ಲಿ ನಡೆದಿರಬಹುದು?**

ಸುಮಾರು ಸಾವಿರಗಟ್ಟಲೆ ಸಮಾರಂಭಗಳು ನಡೆದಿವೆ. ನಮ್ಮ ಮನೆಯಲ್ಲಿ ಸುಮಾರು ೩೦೦ ರಿಂದ ೩೫೦ ಜನ ಕುಳಿತು ಆರಾಮವಾಗಿ ಊಟ ಮಾಡಬಹುದು. ಛತ್ರಗಳಿಗಿಂತ ಶುಚಿಯಾಗಿ, ರುಚಿಯಾಗಿ ನಾವುಗಳು ಬಡಿಸುತ್ತೇವೆ. ಮೊದಲು ನಮ್ಮ ಮನೆಯಲ್ಲಿ ಎಂಟು ಕುಟುಂಬ ವಾಸವಾಗಿತ್ತು. ಈಗ ನಾಲ್ಕು ಕುಟುಂಬಗಳಿವೆ. ಎಲ್ಲಾ ಸೇರಿ ೧೪ ರಿಂದ ೧೫ ಜನ ಇದೀವಿ. ನಾಡಹೆಂಚಿನ ಮನೆಯಾದ್ರೂ ತುಂಬಾ ಗಡದ್ದಾಗಿದೆ ಮನೆ. ಮುಂದೆ ಇನ್ನೂ ಹತ್ತಾರು ತಲೆಮಾರು ಉಳೀಬಹುದು ಈ ಮನೆ.

- **ಮನೆಯಿದ್ದಂತೆ ಮನಸ್ಸೂ ಇರಬೇಕಲ್ಲವೆ, ಶಂಕರ್?**

ಇರಬೇಕು. ಇದೆ. ಮುಂದೇನಾಗುತ್ತೋ ಗೊತ್ತಿಲ್ಲ. ಮನಸ್ಸು ವಿಶಾಲವಾಗಿರಬೇಕು ಅನ್ನುವುದು ನಿಜ. ಆದರೆ ದೊಡ್ಡಮನೆಯವರಿಗೆಲ್ಲಾ ದೊಡ್ಡ ಬುದ್ಧಿ ಇರುತ್ತೆ ಅಂತ ಹೇಳೋಕೆ ಆಗುತ್ತಾ ಸ್ವಾಮಿ .... (ನಗು)

- **ನಿಮ್ಮ ಬಗ್ಗೆ ಹೇಳಿ ಶಂಕರ್?**

ನಮ್ಮ ತಂದೆಗೆ ನಾವು ಏಳು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ತೋಟ, ಗದ್ದೆ, ಹೊಲ ಎಲ್ಲಾ ಸೇರಿ ಆರೂವರೆ ಎಕರೆ ಜಮೀನಿತ್ತು. ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿದೆ. ನಂತರ ಬಿಟ್ಟುಬಿಟ್ಟೆ.

- **ಯಾಕೆ?**

ಸರಿಯಾಗಿ ಬರೀಲಿಲ್ಲ ಅಂತ fail ಮಾಡಿದ್ರು (ನಗು). ಎಲ್ಲಾ ಸಬ್ಜೆಕ್ಟ್‌ನಲ್ಲೂ first class, ಆದರೆ ಲೆಕ್ಕದಲ್ಲಿ ಆರು ಬಾರಿ fail ಆದೆ. ಲೆಕ್ಕ ಅಂದ್ರೆ ಅಲರ್ಜಿ ನಂಗೆ. ಚೆನ್ನಾಗಿ ಓದಿ ಪೊಲೀಸ್ ಇಲಾಖೆ ಸೇರುವ ಕನಸಿತ್ತು. ಈಗ ರೈತನಾಗಿದ್ದೇನೆ. ನನ್ನ ತಂದೆಗೆ ನನ್ನನ್ನು ಓದಿಸುವ ಮನಸ್ಸಿತ್ತು. ನನ್ನ ತಂದೆ, ತಾಯಿ ಇಬ್ಬರೂ ಅಂದಿನ ಕಾಲದಲ್ಲೇ 'L.S.' ಪಾಸ್ ಮಾಡಿದ್ರು. ಆದರೆ ನಾನೇ ಮೊಂಡು ಬಿದ್ದು ಮನೆಗೆ ಬಂದೆ ಅಷ್ಟೆ.

- **ನಿಮ್ಮ ಮನೆಗೆ ನೀವೇ ಹಿರಿಯ ಮಗನಾ?**

ಇಲ್ಲ. ನಮ್ಮ ಅಣ್ಣ ಹಿರಿಯ. ಅವನು ಈಗ ರುದ್ರಪಟ್ಟಣದಲ್ಲಿ ಇದಾನೆ. ನಂತರದವನೇ ನಾನು. ನಾವು ಭಾಗ ಆದ ಮೇಲೆ, ಮನೆವಾಳ್ತನ ನನಗೆ ಬಂತು. ಉಳಿದ ನಾಲ್ಕು, ಐದು ಜನರನ್ನು ನಾನು ಓದಿಸಿ ಮದುವೆ ಮಾಡಿದೆ. ಅವತ್ತು ಬರಗಾಲ. ರೈತಾಪಿಯಲ್ಲೇ ಕಷ್ಟಪಟ್ಟು ಇಷ್ಟು ಸಾಧಿಸಿದ್ದೇನೆ. ಇದಕ್ಕೆ ಹೆಮ್ಮೆ ಪಡಬೇಕಾ? ನನಗೆ ಗೊತ್ತಿಲ್ಲ. ನನ್ನ ಕರ್ತವ್ಯವನ್ನು ನಿಭಾಯಿಸಿದ್ದೇನೆ ಅಷ್ಟೆ.

- **ನಿಮ್ಮ ಕೃಷಿ ಬದುಕಿನ ಬಗ್ಗೆ ಹೇಳಿ.**

ಮೂಲವಾಗಿ ನಾವು ಭತ್ತ, ರಾಗಿ, ವಿಳ್ಳೇದೆಲೆ, ಅಡಿಕೆ ಬೆಳೆಗಾರರು. ಹೊಸದಾಗಿ ನಾನು ಹೊಗೆಸೊಪ್ಪು ಬೆಳೀತೀನಿ ಅಷ್ಟೆ. ಮನೇಲಿ ಎರಡು ಸಿಂಧಿ ರಾಸು ಇದೆ. ಜೋಡಿ ಎತ್ತಿದೆ. ಅದಕ್ಕೆ ಮೇವು ಬೆಳೀತೀವಿ. ವರುಷದಲ್ಲಿ ಎರಡು ಭತ್ತದ ಬೆಳೆ, ಒಂದು ಅಡಿಕೆ, ಒಂದು ಬಾಳೆ ಹಾಗೇ ಒಂದು ಹೊಗೆಸೊಪ್ಪು ಅಷ್ಟೆ. ಮುಂಚೆ ನಾನು ೧೪ ವರುಷ ಭತ್ತದ ವ್ಯಾಪಾರ ಮಾಡಿದೆ. ಹಿಡಿಸಲಿಲ್ಲ, ಬಿಟ್ಟುಬಿಟ್ಟೆ. ಹೊಗೆಸೊಪ್ಪು ಬಂತು. ಲಾಭ ಇತ್ತು, ಹೊಗೆಸೊಪ್ಪಿನ ಬೇಸಾಯದಲ್ಲಿ. ಹಾಗಾಗಿ ಭತ್ತದ ವ್ಯಾಪಾರ ನಿಲ್ಲಿಸಿದೆ.

- **ಹ್ಯಾಗಿತ್ತು ನಿಮ್ಮ ಕಾಲ ...?**

ಕಾಲ ಏನು ಸ್ವಾಮಿ! ಹಗಲು ರಾತ್ರಿ ಎಲ್ಲಾ ಒಂದೇ. ನಾವು ಮನುಷ್ಯರು ಬದಲಾಗಿದ್ದೀವಿ, ಅದಕ್ಕೇ ಈಗ ಕಾಲ ಬದಲಾಯ್ತು ಅಂತೀವಿ. ಆದ್ರೆ ಒಂದು ವಿಷಯ ಮಾತ್ರ ಸತ್ಯ. ಅವತ್ತಿಗಿಂತಾ, ಇವತ್ತಿನ ಮಕ್ಕಳು ವಿದ್ಯಾಭ್ಯಾಸದಲ್ಲಿ ಹೆಚ್ಚು ಪ್ರಗತಿ ಕಾಣ್ತಿದಾರೆ.

- **ಎತ್ತುಗಳನ್ನು ಸಾಕಿದೀರಲ್ಲಾ, ಜಾತ್ರೆಗಳಿಗೆ ಹೋಗ್ತಿರಲಿಲ್ವಾ, ಅದರ ಅನುಭವ?**

ಉಳುಮೆಗೆ ಎತ್ತುಗಳು ಸದಾ ನಮ್ಮಲ್ಲಿತ್ತು. ನಾನು ಪ್ರತಿ ವರುಷವೂ ಜಾತ್ರೆಗೆ ಹೋಗ್ತಿದ್ದೆ. ಹಾಸನ, ರಾಮನಾಥಪುರ, ಚುಂಚನಕಟ್ಟೆ, ಹೇಮಗಿರಿ - ವರುಷದಲ್ಲಿ ಒಂದು ಜಾತ್ರೆ ಗ್ಯಾರಂಟಿ. ಅಲ್ಲಿಗೆ ಹೋಗಿ ಒಳ್ಳೇ ಜಾತಿ ಎತ್ತನ್ನು ವ್ಯಾಪಾರ ಮಾಡೋವಿ.

- **ಒಳ್ಳೇ ಎತ್ತಿಗೆ ಏನು ಲಕ್ಷಣಗಳು ಇರಬೇಕು ಅಂತೀರಿ?**

ಅವತ್ತಿನ ಕಾಲದಲ್ಲಿ - ಕಣ್ಣಿಗೆ ಚೆನ್ನಾಗಿದ್ದು, ದೃಢಕಾಯವಾಗಿದ್ರೆ ಸಣ್ಣಪುಟ್ಟ ಐಬು ನೋಡ್ತಿರಲಿಲ್ಲ. ಇವತ್ತು ಹಣ ಇರೋನು Top to Bottom ಎಲ್ಲಾ ಸೋಸ್ತಾನೆ. ನೆತ್ತಿಯಿಂದ ಬಾಲದವರೆಗೆ ಎಲ್ಲಾ ಸರಿ ಇದ್ರೆ ಮಾತ್ರ ವ್ಯಾಪಾರ. ಎತ್ತಿಗೆ ಮುಖ್ಯವಾಗಿ ಲಕ್ಷಣ ಇರಬೇಕು. ಮುಖದಲ್ಲಿ ಹಾಗೂ ಕಣ್ಣಿನ ಹತ್ರ ರೇಖೆ ಇರಬೇಕು, ಕೊಂಬು ನೇರವಾಗಿರಬೇಕು, ಭುಜದಿಂದ ಬಾಲದವರೆಗೆ ಒಂದು ಸುಳಿ ಬಿಟ್ಟು ಬೇರ್‍ಯಾವ ಸುಳೀನೂ ಇರಬಾರದು; ಹಿಳಿಲು ಬಿಟ್ಟು ಒಂದು ಗೇಣಿನಾಚೆ ಒಂದೇ ಒಂದು ಸುಳಿ ಇರಬೇಕು ಅಷ್ಟೆ. ಕಾಲು ಒಂದಕ್ಕೊಂದು ಕೂಡಬಾರದು. ಕೂಡಿದ್ರೆ ಎತ್ತಿಗೂ ಸುಸ್ತು, ನೋಡೋರಿಗೂ ಅಸಹ್ಯ. ಇಷ್ಟೆಲ್ಲಾ ನೋಡಿಯೇ ಖರೀದಿಸಬೇಕು. ಇಲ್ಲದೇ ಹೋದ್ರೆ ನಾವು ಕೊಟ್ಟ ದುಡ್ಡು ನಮಗೆ ಮರಳಿ ಬರೋಲ್ಲ ಅಷ್ಟೆ.

- **ಎತ್ತಲ್ಲಿ ಹೀನಸುಳಿಗಳು ಇರಬಾರದು ಅಂತಾರಲ್ಲ, ಹಂಗಂದ್ರೆ ಏನು?**

ಹೀನಸುಳಿ ಅಥವಾ ಕೀಲುಸುಳಿ ಅಂತಾರೆ. ಪಾತಾಳ ಸುಳಿ ಅಥವಾ ಬೇಡಿಸುಳಿ ಅಂತಾರೆ. ಅದಿದ್ರೆ ಯಾರೂ ಎತ್ತನ್ನು ಖರೀದಿಸೋಲ್ಲ. ಅದು ಇದ್ರೆ ಮನೆಗೆ ಏಳಿಗೆ ಆಗೋಲ್ಲ ಅಂತಾರೆ. ಇದು ಮೂಢನಂಬಿಕೆಯೇ ನನಗೆ ಗೊತ್ತಿಲ್ಲ. ನಾನಂತೂ ಅಂಥದನ್ನು ಮಾರೋದೂ ಇಲ್ಲ, ಖರೀದಿಸುವುದೂ ಇಲ್ಲ.

- **ಈಗಲೂ ಎತ್ತಿನ ವ್ಯಾಪಾರ ಮಾಡ್ತೀರಾ?**

ಹೌದು. ಇಂದಿಗೂ ಬಿಟ್ಟಿಲ್ಲ. ಒಟ್ಟಿನಲ್ಲಿ ಇವತ್ತು ಹಿಂದಿಗಿಂತಲೂ ರೈತ ಸುಧಾರಣೆ ಆಗಿದಾನೆ. ಮನೇಲಿ ಒಳ್ಳೊಳ್ಳೆ ಮಾಲನ್ನು ಸಾಕ್ತಾನೆ, ಮಾರಾಟಕ್ಕೆ ತರ್‍ತಾನೆ. ಈಗ ಸಿಂಧಿ ಹಸುಗಳನ್ನು ತೊಗೊಳ್ಳಿ, ಹಿಂದೆ ಹುಡುಕಿದ್ರೂ ಒಂದು ರಾಸು ಸಿಕ್ತಿರಲಿಲ್ಲ. ಈಗ ಮನೆಗೆ ಸರಾಸರಿ ಒಂದು ಹಸು ಇದೆ. ಹಾಲಿನ ಉತ್ಪತ್ತಿಯಲ್ಲೂ ಈಗ ಹಳ್ಳಿಗಳು ಅಭಿವೃದ್ಧಿಯಾಗಿವೆ. ನಮ್ಮ ಮನೇಲೇ ನೋಡಿ, ಎರಡು ಸಿಂಧಿ ರಾಸು, ಎರಡು ಹಳ್ಳಿಕಾರ್ ಹಾಗೂ ಒಂದು ಜತೆ ಎತ್ತಿದೆ. ನಾವೇ ದಿನಾ ಎರಡು ಲೀಟರ್ ಹಾಲು ಮಾರ್‍ತೀವಿ.

- **ಅಡಿಕೆ ತೋಟಾನೂ ಇದೆ ಅಂದ್ರಲ್ಲಾ, ಅಡಿಕೆ ಬೇಸಾಯದ ಬಗ್ಗೆ ಹೇಳಿ.**

ನಮ್ಮ ತಂದೆಯವರಿಂದ ಅಡಿಕೆ, ವಿಳ್ಳೇದೆಲೆ ಬೆಳೆ ಬೇಸಾಯದ ಬಗ್ಗೆ ಸಾಕಷ್ಟು ವಿಚಾರ ತಿಳಿದಿದ್ದೇನೆ. ಒಂದು ಎಕರೆ ಅಡಿಕೆ ತೋಟ ನಿರ್ಮಿಸಲು ೫೦ ರಿಂದ ೬೦ ಸಾವಿರ ರೂಪಾಯಿಗಳು ಬೇಕು. ಮೊದಲು ಎಂಟು ಅಡಿಗೆ ಅಡಿಕೆಗುಂಡಿ, ಹಾಗೂ ಹನ್ನೆರಡು ಅಡಿಗೆ ಬಾಳೇಗುಂಡಿ ತೆಗೀಬೇಕು. ಮೂರರಿಂದ ನಾಲ್ಕು ತಿಂಗಳು ಗುಂಡಿ ಒಣಗಬೇಕು.

ನಂತ್ರ ಆ ಗುಂಡಿಗೆ ಮಣ್ಣು, ಸಾವಯವ ಗೊಬ್ಬರ ತುಂಬಿ ಸಸಿ ನಾಟಿ ಮಾಡಬೇಕು. ಅಗೆತ (ಸಂಕೇತಿ: ಅಗತ) ಮಾಡಬೇಕು. ಆರಂಭದಲ್ಲಿ ಅಡಿಕೆಗೆ ಬಾಳೆ ನೆರಳಾಗುತ್ತೆ. ಚೆನ್ನಾಗಿ ತೋಟ ನಿರ್ವಹಣೆ ಮಾಡಿದ್ರೆ, ಏಳರಿಂದ ಎಂಟು ವರುಷದಲ್ಲಿ ಅಡಿಕೆ ಫಸಲು ಬರುತ್ತೆ. ಅಡಿಕೆ ತೋಟದಲ್ಲಿ ಎಲೆ ಹಂಬನ್ನು ಜನವರಿಯಿಂದ ಏಪ್ರಿಲ್‌ನವರೆಗೆ ನೆಡಬಾರದು. ಏಪ್ರಿಲ್ ನಂತರ ಮುಂಗಾರಿನಲ್ಲಿ ನೆಡಬೇಕು. ಅಡಿಕೆ ಮರದ ಹಸಿರು ಮಾಗಿದಾಗ ಅಂದ್ರೆ ಮರದ ತೊಗಟೆಯ ಹಸಿರು ಹೋಗಿ ಬಿಳಿ ಆದಾಗ ವಿಳ್ಳೇದೆಲೆ ಪಲ್ಲಿ ಕಚ್ಚಿಕೊಳ್ಳುತ್ತೆ. ಹಸಿರಿಗೆ ಪಲ್ಲಿ ನಾಟೋಲ್ಲ. ಆದ್ರೆ ಅಡಿಕೆಯ ಹಸಿರು ಮಾಗಲು ಹತ್ತರಿಂದ ಹನ್ನೆರಡು ವರುಷ ಬೇಕು. ಆದ್ದರಿಂದ ಅಡಿಕೆ ತೋಟದಲ್ಲಿ ಮೊದಲು ಪಾಲಿವಾಣಕ್ಕೆ (ಹಾಲುವಾಣ) ಎಲೆ ಹಂಬು ಹಬ್ಬಿಸಿ, ನಂತರ ಅಡಿಕೆಗೆ ಹಬ್ಬಿಸಬೇಕು. ಆಗ ಒಂದೇ ತೋಟದಲ್ಲಿ ಹೆಚ್ಚು ಆದಾಯ ಸಂಪಾದಿಸಬಹುದು.

- **ಒಂದು ಎಕರೆ ತೋಟ ನಿರ್ವಹಣೆಗೆ ಎಷ್ಟು ಖರ್ಚು ಆಗುತ್ತೆ? ಏನು ಆದಾಯ ಸಿಗಬಹುದು?**

ಹತ್ತರಿಂದ ಹದಿನೈದು ಸಾವಿರ ಖರ್ಚು ಬರುತ್ತೆ. ಅಡಿಕೆಯಿಂದ ನಲವತ್ತು ಸಾವಿರ ಆದಾಯ ಇದೆ. ವಿಳ್ಳೇದೆಲೆಯಿಂದ ಸುಮಾರು ಹದಿನೈದು ಸಾವಿರದವರೆಗೂ ಸಿಗುತ್ತೆ. ಅಂದ್ರೆ ಎಕರೆಗೆ ೪೦-೪೫ ಪಿಂಡಿ ಎಲೆ ಬೀಳಬಹುದು (ಒಂದು ಪಿಂಡಿಗೆ ೧೨೦ ಕಟ್ಟು ಎಲೆ. ಒಂದು ಕಟ್ಟಿಗೆ ೧೦೦ ಎಲೆ) ವರುಷದಲ್ಲಿ ಮೂರು ಬಾರಿ ಕತ್ತರಿಸಬಹುದು. ಮೂರು ಬಾರಿ ಆದಾಯ. ಕೆಲವೊಮ್ಮೆ ಎಕರೆಗೆ ಇಪ್ಪತ್ತು ಸಾವಿರ ಸಹಾ ಸಿಕ್ಕಿದೆ.



ಎಚ್.ಎನ್.ಶಂಕರ್ ಹಾಗೂ ಎಚ್.ಎನ್.ಸುರೇಶ್ ಅವರ ಅವಿಭಕ್ತ ಕುಟುಂಬ, ಹಾನಗಲ್

- **ತಂಬಾಕಿನ ಬೆಳೆ ಬಗ್ಗೆ ಹೇಳಿ.**

ನಾನು ಕಳೆದ ಎಂಟು ವರುಷದಿಂದ ತಂಬಾಕು ಬೆಳೆಯುತ್ತಿದ್ದೇನೆ. ಮೊದಲು ಒಳ್ಳೆ ದುಡ್ಡು ಸಿಕ್ತಿತ್ತು. ಹೆಚ್ಚು ಜನ ಬೆಳೀತಾ ಇರಲಿಲ್ಲ. ಬ್ಯಾರನ್‌ಗೆ ಸುಲಭವಾಗಿ ಅನುಮತಿ ಸಿಗುತ್ತಿತ್ತು. ಈಗ ಪರಿಸ್ಥಿತಿ ಭಿನ್ನವಾಗಿದೆ. ಆರು ತಿಂಗಳ ಬೆಳೆ ಇದು. ಯುಗಾದಿ ಕಳೆದ ಬಳಿಕ ಅಂದ್ರೆ ಏಪ್ರಿಲ್ ೨೦ರ ನಂತರ ಒಗ್ಗು ಹುಯ್ತೀವಿ. ೧೨ರಿಂದ ೧೪ ದಿನದಲ್ಲಿ ಸಸಿ ಮೊಳಕೆ ಒಡೆದು ಬೀಜದಿಂದ ಹೊರಬರುತ್ತೆ. ೪೫ ರಿಂದ ೫೦ ದಿನದ ಸಸಿಯನ್ನು ನಾಟಿ ಮಾಡ್ತೀವಿ. ಬಹಳ ದುಬಾರಿ ಆರಂಬ ಇದು. ನಾಲ್ಕರಿಂದ ನಾಲ್ಕೂವರೆ ಎಕರೆಯಲ್ಲಿ ೨೫೦೦ರಿಂದ ೩೦೦೦ ಕೆ.ಜಿ. ತಂಬಾಕು ಬೆಳೆಯಬಹುದು. ೪೫ರಿಂದ ೫೦ ಸಾವಿರ ಆದಾಯ ಸಿಗುತ್ತೆ. ಖರ್ಚು ಕಳೆದು ೩೦ ಸಾವಿರ ಸಿಗುತ್ತೆ. ಆದರೆ ಈಗ ರೈತನ ಪರಿಸ್ಥಿತಿ ಹದಗೆಟ್ಟಿದೆ. ಸರ್ಕಾರಿ ಮಾರುಕಟ್ಟೆಗಳಲ್ಲೂ ರೈತನಿಗೆ ಅನ್ಯಾಯವಾಗ್ತಿದೆ. ಸುಖವಿಲ್ಲ. ಸುಲಭವಾಗಿ ಸಾಲ ಸಿಕ್ಕುತ್ತೆ, ರೈತರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಇಲ್ಲ. ಸರ್ಕಾರ ಮಾರುಕಟ್ಟೆಗಳನ್ನು ಅಭಿವೃದ್ಧಿ ಮಾಡಬೇಕು. ಇಂದು ರೈತನ ಕುಟುಂಬದವರೆಲ್ಲಾ ವ್ಯವಸಾಯದಲ್ಲಿ ತೊಡಗಲೇಬೇಕು. ಹಾಗಾದಾಗ ಮಾತ್ರ ಅಭಿವೃದ್ಧಿ ಸಾಧ್ಯ.

- **ಗಂಡ-ಹೆಂಡಿರ ನಡುವೆ ಸಾಮರಸ್ಯ ಹೇಗಿದೆ?**

ಮಧ್ಯೆ ಮಧ್ಯೆ ಜಗಳಾನೂ ಆಡ್ತೀವಿ, ಚೆನ್ನಾಗೂ ಇರ್ತೀವಿ. ಅದ್ಯಾವ ದೊಡ್ಡ ವಿಷಯ ಬಿಡಿ!

- **ನಿಮ್ಮ ಅಭಿವೃದ್ಧಿಯಲ್ಲಿ ಹೆಂಡತಿಯ ಪಾತ್ರ ಎಷ್ಟು?**

ಶೇಕಡಾ ೭೦ರಷ್ಟು. ಉತ್ತಮವಾದ ಸಲಹೆಗಳನ್ನು Time ಪ್ರಕಾರ ಕೊಡ್ತಾಳೆ. ನನಗೆ ಕೋಪ ಜಾಸ್ತಿ. ಕೋಪದಲ್ಲಿ ಅಂದದ್ದನ್ನು ಶಾಂತವಾದ ಮೇಲೆ convince ಮಾಡಿ ಹೇಳ್ತಾಳೆ. ಹಣಕಾಸಿನ ವಿಷಯವೇ ಆಗಲಿ, ಮಕ್ಕಳ ವಿದ್ಯಾಭ್ಯಾಸವೇ ಆಗಲಿ ನನ್ನ ಹೆಂಡ್ತೀನ ಒಂದು ಮಾತು ಹೇಳಿ ಕೇಳಿ ಮಾಡ್ತೀನಿ. ಹೆಂಡತಿ ಸಲಹೆ ಕೇಳೋದು ತಪ್ಪೇನಲ್ಲ. ಕೇಳಿದ್ದಕ್ಕೆ ಉತ್ತಮ ಸಲಹೆ ಸಿಕ್ಕಿದೆ.

- **ನಿಮ್ಮ ವ್ಯವಸಾಯ ಜೀವನದಲ್ಲಿ ನೀವು ಕಲಿತ ಪಾಠ?**

ಒಂದು ಸಾರಿ ಹೋಯ್ತು ಅಂತ ಬೇಸರ ಮಾಡಿಕೊಳ್ಳಬಾರದು. ಮತ್ತೆ Try try again ಅಂತ ಪ್ರಯತ್ನಪಡ್ತಿರಬೇಕು. ಶ್ರಮಪಟ್ಟು ದುಡಿದರೆ ದೇವರು ಖಂಡಿತಾ ಮೋಸ ಮಾಡೋಲ್ಲ.

- **ನಿಮ್ಮ ಬದುಕಿನ ಬಗ್ಗೆ, ಬೆಳೆದ ರೀತಿಯ ಬಗ್ಗೆ ತಿಳಿಸಿದ್ದಕ್ಕೆ ಧನ್ಯವಾದಗಳು.**

ನೀವು ಆಕಾಶವಾಣಿಯವ್ರು ನನ್ನ ಮನೆ ಬಾಗಿಲಿಗೆ ಬಂದು ಇಷ್ಟೆಲ್ಲಾ ವಿಚಾರ ಕೇಳಿದ್ದಕ್ಕೆ, ನಮ್ಮ ಬಗ್ಗೆ ಪುಸ್ತಕ ಬರೀತಿರೋದಕ್ಕೆ ನಿಮಗೂ ವಂದನೆಗಳು. ನಮಸ್ಕಾರ.

ಈ) ಎಚ್.ಎನ್. ಸುಬ್ಬರಾಯ ಇ/ಮ ನಾರಾಯಣಪ್ಪ

ಹಾನಗಲ್, ಅರಕಲಗೂಡು (ತಾ) ದೂರವಾಣಿ: 08175-534057



ಎಮ್ಮೆ ಮೇಯಿಸಿಕೊಂಡು ಬರುತ್ತಿರುವ ಎಚ್.ಎನ್.ಸುಬ್ಬರಾಯರು, ಹಾನಗಲ್

ವ್ಯವಸಾಯದಲ್ಲಿ ನನಗೆ ನಾನೇ ಗುರು. ಅಕ್ಕಪಕ್ಕದವರನ್ನು ನೋಡಿಯೇ ಎಲ್ಲಾ ಕಲಿತದ್ದು. ನಾನು ಅಭಿವೃದ್ಧಿ ಹೊಂದಲು ತಾಯ ಹಾರೈಕೆ, ಸ್ವಪ್ರಯತ್ನ ಹಾಗೂ ದೈವಯತ್ನ ಇದೆ. ತಾಳ್ಮೆ ನನ್ನ ಬಹುದೊಡ್ಡ ಆಸ್ತಿ.

ಸುಬ್ಬರಾಯರಿಗೆ ಈಗ ೬೪ ವರುಷ. ಇಳಿ ವಯಸ್ಸಿನಲ್ಲೂ ಯುವಕರನ್ನು ನಾಚಿಸುವ ಉತ್ಸಾಹ. ಹಾನಗಲ್ಲಿನಲ್ಲಿ ನಾವು ಇಳಿಯುತ್ತಿದ್ದಂತೆ, 'ರಾತ್ರಿ ಊಟ ನಮ್ಮ ಮನೆಯಲ್ಲಾಗಲಿ' ಎಂಬ ಫರಮಾನು ಹೊರಡಿಸಿದ್ರು. ನಮಗೆ ಬೇಕಂತೆಲ್ಲಾ ನಿಂತು ಕ್ಯಾಮರಾಕ್ಕೆ ಪೋಸು ನೀಡಿದ್ರು. ನಮ್ಮ ಬಗ್ಗೇನೇ ಬರೆಯೋಕೆ ಬಂದಿದೀರಾ, ಒಳ್ಳೇದಾಗಲಿ ಅಂತ ಹರಸಿದ್ರು. ಎಲ್ಲರ ಮನೆಗೂ ನಮ್ಮೊಂದಿಗೆ ಬಂದ್ರು. ಹಾನಗಲ್ಲಿನ ಹಿರಿಯ ಸಂಕೇತಿಗಳು ಕಟ್ಟಿದ ಎರಡು ಮನೆಗಳಲ್ಲಿ, ಒಂದು ತೊಟ್ಟಿಮನೆ ಇವರ ಸುಪರ್ದಿನಲ್ಲಿದೆ. ಮೃದು ಭಾಷಿ, ಸರಳ ಜೀವಿ ಸುಬ್ಬರಾಯರು, ತಮ್ಮ ಮನೆಯಂಗಳದಲ್ಲಿ ಮನಸ್ಸು ತೆರೆದು ಇಟ್ರು:

'ನನ್ನ ತಂದೆ ನನ್ನ ಹತ್ತನೇ ವಯಸ್ಸಿನಲ್ಲಿ ಕಾಲವಾದ್ರು. ನಂತ್ರ ತಾಯಿಯವರೇ (ಸುಂದರಮ್ಮನವರು) ನನ್ನನ್ನು ನೋಡಿಕೊಂಡಿದ್ದು. ನನ್ನ ತಾಯಿಗೀಗ ೮೨ ವರುಷ. ದೇವರ ದಯೆಯಿಂದ ಚೆನ್ನಾಗಿದ್ದಾರೆ. ನನ್ನ ತಾಯಿಗೆ ೩೨ ವರುಷ ಆಗಿದ್ದಾಗ, ನಾನು ಐದನೇ ಕ್ಲಾಸಿನಲ್ಲಿ ಓದುತ್ತಿದ್ದಾಗ ತಂದೆ ಇಲ್ಲವಾದ್ರು. ಕಷ್ಟಪಟ್ಟು ಬಸವಾಪಟ್ಟಣದಲ್ಲಿ ಎಸ್.ಎಸ್.ಎಲ್.ಸಿ. ವರೆಗೆ ಓದಿದೆ. ವಾರಾನ್ನವೇ ಗತಿ. ನಂತ್ರ ತಾಯಿಗೆ ನೆರವಾದೆ. ಕಷ್ಟದ ಕಾಲ ಅದು. ಅಕ್ಕಿ ಸಿಕ್ತಿರಲಿಲ್ಲ. ವಿದ್ಯಾಭ್ಯಾಸ ಮಾಡುವಾಗಲೇ ಬೆಳಗ್ಗೆ ತೋಟದಿಂದ ಮೇವನ್ನು ತಂದು ದನಕರುಗಳಿಗೆ ಹಾಕಿ, ಶಾಲೆಗೆ ಹೋಗುತ್ತಿದ್ದೆ. ಶಾಲೆಯಿಂದ ಬರುವಾಗ ಹಾದಿಬದಿಯಲ್ಲಿ ಬೆಳೆದಿದ್ದ ಹುಲ್ಲನ್ನೂ ತರುತ್ತಿದ್ದೆ. ರಾಗಿ, ಭತ್ತ, ತೆಂಗು, ಬಾಳೆ, ಅಡಿಕೆ, ತೊಗರಿ ಎಲ್ಲಾ ಬೆಳೆದಿದ್ದೇನೆ. ವಿಳ್ಳೇದೆಲೆಗೆ ಕೆಲಸ ಜಾಸ್ತಿ ಅಂತ ಮಾಡಲಿಲ್ಲ' ಅಂತಾರೆ.

ಸುಬ್ಬರಾಯರ ವಿಶೇಷ ಅಂದ್ರೆ ಇವರು ವ್ಯವಸಾಯದ ಜತೆಗೆ ಉಪವೃತ್ತಿಯನ್ನೂ ಕೈಗೊಂಡಿದ್ದಾರೆ. ಹಾನಗಲ್ಲಿನಲ್ಲಿ ೧೯೭೦ನೇ ಇಸವಿಯಲ್ಲಿ ಆರಂಭವಾದ ಶಾಖಾ ಅಂಚೆ ಕಛೇರಿಯ postmaster ಇವರು. ಅಂದಿನಿಂದ ಇಂದಿನವರೆಗೂ ತಮ್ಮ ಕರ್ತವ್ಯವನ್ನು ನಿಭಾಯಿಸಿಕೊಂಡು ಬಂದಿದ್ದಾರೆ. ಮೊದಲು ೩೦೦ ರಿಂದ ೩೫೦ ರೂ ಸಿಗುತ್ತಿತ್ತಂತೆ. ಈಗ ೨೫೦೦ರವರೆಗೂ ಸಿಗ್ತಿದೆ. ವ್ಯವಸಾಯದ ಜತೆ ಇದೂ ಇರೋದ್ರಿಂದ ಅನುಕೂಲ ಆಗಿದೆ ಅಂತಾರೆ. 'ಪೋಸ್ಟ್ ಆಫೀಸಿನಲ್ಲೇ ಖಾಯಂ ಕೆಲಸಕ್ಕಾಗಿ ಪ್ರಯತ್ನಿಸಲಿಲ್ಲವೇಕೆ?' ಅಂದ್ರೆ 'ನಮ್ಮ ತಂದೆಗೆ ಇಬ್ರು ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ತಮ್ಮನು ವಿದ್ಯಾಭ್ಯಾಸವನ್ನು ಎಂಟನೇ ಕ್ಲಾಸಿಗೇ ಬಿಟ್ಟಿದ್ದ. ಅಂಚೆ ಇಲಾಖೆಯಲ್ಲಿ 'ಅವತ್ತೇ ಬಂದು ಕೆಲಸಕ್ಕೆ ಸೇರಿ' ಅಂದ್ರು. ಆದ್ರೆ ಕೆಲಸಕ್ಕೇಂತ ಹೊರಗೆ ನಾನು ಹೊರಟುಹೋದ್ರೆ ಜಮೀನು ನೋಡೋರ್‍ಯಾರು? ತಮ್ಮನ ವಿದ್ಯಾಭ್ಯಾಸ, ತಂಗಿಯರ ಮದುವೆ ಯಾರು ಮಾಡೋರು? ನನ್ನ ಸುಖ ನೋಡಿಕೊಂಡರಷ್ಟೇ ಸಾಕೆ? ಅದಕ್ಕೇ ಕೆಲಸಕ್ಕೇಂತ ಹೊರಗೆ ಹೋಗಲಿಲ್ಲ' ಅಂತಾರೆ. ಸುಬ್ಬರಾಯರು ತಂಗಿ ತಮ್ಮಂದಿರನ್ನು ಪ್ರೀತಿ ವಿಶ್ವಾಸ ಹಂಚಿ ಬೆಳೆಸಿದ್ದಾರೆ. ತಾಯ ಒತ್ತಾಸೆಯಿಂದ ವ್ಯವಸಾಯದಲ್ಲಿ ನೆಲೆ ನಿಂತರೂ, ತಮ್ಮನನ್ನು ಎಸ್.ಎಸ್.ಎಲ್.ಸಿ., ಡಿಪ್ಲೊಮಾ ಓದಿಸಿ, ಕೆಲಸ ಕೊಡಿಸಿದ್ದಾರೆ. ಇಬ್ಬರು ತಂಗಿಯರನ್ನು ಅನುಕೂಲಸ್ಥರಿಗೇ ಕೊಟ್ಟಿದ್ದಾರೆ. 'ತಂಗಿಯರು ನನ್ನನ್ನು ತಂದೆಗಿಂತ ಹೆಚ್ಚಾಗಿ ಕಂಡಿದ್ದಾರೆ' ಅಂತ ಹೆಮ್ಮೆಯಿಂದ ಹೇಳುತ್ತಾರೆ. 'ತಂಗಿಯ ಮನೇಲಿ ಕಷ್ಟ ಇದ್ದಾಗ ಅವಳ ಮಗನ್ನ ನಾನು Engineering ಓದಿಸಿದೆ. ಆ ಕೃತಜ್ಞತೆಯಿಂದ ಆ ಹುಡುಗ ನನ್ನ ಮಗಳ ಮದುವೆಗೆ ನೆರವಾದ' ಎಂದು

ಭಾವುಕರಾಗಿ ನುಡಿಯುತ್ತಾರೆ. 'ನಾನು ತಂದೆ ಸ್ಥಾನದಲ್ಲಿ ನಿಂತು ಮಾಡಿದ್ದೀನಿ. ಎಲ್ಲರೂ ಸುಖವಾಗಿದ್ರೆ ಸಾಕು' ಅಂತ ಹಾರೈಸುತ್ತಾರೆ. 'ಹಾನಗಲ್ಲಿನಲ್ಲಿ ೬೦-೭೦ ಮಂದಿ ಸಂಕೇತಿಗಳಿದ್ದೀವಿ. ಎಲ್ಲರೂ ಒಟ್ಟಾಗಿದ್ದೀವಿ' ಅನ್ನೋ ಸುಬ್ಬರಾಯರಿಗೆ, 'ಯಾಕೆ ನೀವುಗಳು ಎಲ್ಲಿದ್ರೂ ಅಡಿಕೆ ತೋಟವನ್ನು ಮಾಡ್ತೀರಲ್ಲಾ' ಅಂದ್ರೆ, ನಗುತ್ತಾ ಹೇಳ್ತಾರೆ,

'ನೋಡಿ! ನಾವು ಹೈನುರಾಸು ಕಟ್ಟಿ, ತಿಂಡಿ ಹಾಕಿ ಹಾಲು ಕರೆದಂಗೆ ಈ ಅಡಿಕೆ ವಿಳ್ಳೇದೆಲೆ ತೋಟಾನೂ. ಇದೂ ಒಂದು ರೀತಿ ಕರಾವು ಇದ್ದ ಹಾಗೆ. ನಾವು ಎಷ್ಟು ಮುತುವರ್ಜಿಯಿಂದ ಬೇಸಾಯ ಮಾಡ್ತೀವೋ ಅಷ್ಟು ಆದಾಯ ಸಿಗುತ್ತೆ. ಇದು ನನ್ನ ಅನುಭವ' ಅಂತಾರೆ. 'ನಿಮ್ಮ ಅಭಿವೃದ್ಧಿಯಲ್ಲಿ ನಿಮ್ಮ ಹೆಂಡತಿಯ ಪಾತ್ರ ಏನು?' ಅಂದ್ರೆ,

'ನನಗೆ ಮದುವೆಯಾದಾಗ ೩೦ ವರ್ಷ, ಹೆಂಡತಿ ಅಗ್ರಹಾರದವಳು. ಬಹಳ ಸೈರಣೆಯಿಂದ ವಯಸ್ಸಾದ ನನ್ನ ತಾಯಿ ಜತೆ ಕಾಲ ನೂಕಿದ್ದಾಳೆ. ನನ್ನ ಅಭಿವೃದ್ಧಿಯಲ್ಲಿ ನನಗಿಂತಲೂ ಹೆಚ್ಚು ಪಾಲು ಅವಳದ್ದು. ಹೊರಗಡೆಯಿಂದ ನಾನು ತಂದು ಹಾಕಿದ್ದನ್ನು, ಮನೇಲಿ ಶಾಂತ ರೀತಿಯಿಂದ maintain ಮಾಡಿ ಸಹಕರಿಸಿದ್ದಾಳೆ. ನನ್ನ ತಾಯಿಯ ಕಿಡಿನುಡಿಗಳನ್ನು ಅಷ್ಟಾಗಿ ಹಚ್ಚಿಕೊಳ್ಳದೆ ತಾಳ್ಮೆಯಿಂದ ಇದ್ದಾಳೆ. ಹೊರಗೆ ನಮ್ಮ ಕುಟುಂಬದ ಮರ್ಯಾದೆ ಕಾಪಾಡಿದ್ದಾಳೆ' ಅಂತ ಭಾವಪೂರ್ಣರಾಗಿ ಹೇಳುತ್ತಾರೆ.

ವ್ಯವಸಾಯದ ಎಲ್ಲ ಕೆಲಸಗಳನ್ನೂ ಇಂದಿಗೂ ಸ್ವತಃ ಮಾಡುವ ಸುಬ್ಬರಾಯರ ಮಕ್ಕಳ್ಯಾರೂ ವ್ಯವಸಾಯ ಮಾಡುತ್ತಿಲ್ಲ. 'ನಿಮ್ಮ ನಂತರ ಮುಂದೇನು?' ಅಂದ್ರೆ 'ನಮ್ಮ ಕಷ್ಟ ನೋಡಿ, ವಿದ್ಯಾಭ್ಯಾಸ ಮಾಡಿರುವ ಅವರು ಈ ಹಳ್ಳೀಜೀವನ ಇಷ್ಟಪಡುತ್ತಿಲ್ಲ. ನನ್ನ ಶಕ್ತಿ ಇರುವವರೆಗೆ ವ್ಯವಸಾಯದಲ್ಲಿ ದುಡೀತೀನಿ. ನಾವೂ ಕಷ್ಟಪಟ್ಟು ದುಡಿದು ವ್ಯವಸಾಯ ಮುಂದುವರೆಸ್ತೀವಿ ಅನ್ನೋ ಮನೋಭಾವ ಮಕ್ಕಳಿಗಿಲ್ಲದ ಮೇಲೆ ನಾವು ಏನು ಮಾಡಲು ಸಾಧ್ಯ?' ಎಂದು ಮರುಪ್ರಶ್ನಿಸುತ್ತಾರೆ.

'ಚಿಕ್ಕಂದಿನಿಂದಲೇ ಮಕ್ಕಳಿಗೆ ವ್ಯವಸಾಯದಲ್ಲಿ ಪ್ರೀತಿ ಮೂಡಿಸಲು ಪ್ರಯತ್ನಿಸಲಿಲ್ಲವೇಕೆ?' ಅಂದ್ರೆ, 'ಆದಷ್ಟು ಮಕ್ಕಳ ವಿದ್ಯಾಭ್ಯಾಸಕ್ಕೆ ಮೊದಲ ಆದ್ಯತೆ ನೀಡಿದೆ, ಅಷ್ಟೆ' ಎಂದು ಮಗುಮ್ಮಾಗಿ ನುಡಿಯುತ್ತಾರೆ.

'ವ್ಯವಸಾಯದಲ್ಲಿ ಈಗ ಆದಾಯ ಇಲ್ಲ. ಅಡಿಕೆ ಧಾರಣೆ ಕುಸಿದಿದೆ. ವರುಷಕ್ಕೆ ೧೦ ರಿಂದ ೧೨ ಸಾವಿರ ಖರ್ಚು ಆಗುತ್ತೆ. ಆದಾಯ ೨೦ ಸಾವಿರ ಸಿಗ್ತಿದೆ ಅಷ್ಟೆ. ಅಡಿಕೆ ಕುಯ್ಸಿ ಹಿಂದೆ ಶಿವಮೊಗ್ಗದಲ್ಲಿ ಮಾರಿದ್ದೆ. ಈಗ ಆಳುಕಾಳು ಸಮಸ್ಯೆ ಇರೋದ್ರಿಂದ ಗೇಣಿ ಕೊಡ್ತಿದೀನಿ. ಭತ್ತದಲ್ಲೂ ಅಷ್ಟೆ, ಲಾಭವಿಲ್ಲ. ಸ್ವಲ್ಪ ಕಡಿಮೆ ದುಡ್ಡಿಗೆ ಭತ್ತ ಕೊಳ್ಳುವಂತೆ ಆಗಿದೆ ಅಷ್ಟೆ - ಈಗ ಭತ್ತದ ವ್ಯವಸಾಯ. ಆರ್ಥಿಕ ಮುಗ್ಗಟ್ಟು ಬಂದಾಗ ಸಾಲ ತಂದು, ಅಡಿಕೆ ಬಂದ ಮೇಲೆ ತೀರಿಸ್ತಿದ್ವಿ. ಈಗ ಅದಕ್ಕೂ ಕಷ್ಟ ಬಂದಿದೆ. ಹಿಂಗಾದ್ರೆ ಹೆಂಗೆ', ಅನ್ನುವ ಚಿಂತೆ ಸುಬ್ಬರಾಯರಿಗೆ.

'ಹಾನಗಲ್ಲಿನ ಕೆರೆಯಿಂದ ನೀರು ಹೊತ್ತು ತೋಟ ಮಾಡಿದೆ. ಕಷ್ಟ ಬಂದಾಗ ಕುಗ್ಗಲಿಲ್ಲ. ಶಾಂತಿ, ಕಷ್ಟಸಹಿಷ್ಣುತೆಗಳೇ ನನ್ನ ಜೀವನದ ಹಾದಿ. ಇದುವರೆಗೂ ಇದ್ದು ಸಾಧಿಸಿದ್ದೇನೆ. ಮುಂದಿನದನ್ನು ನಾನು ಯೋಚಿಸುತ್ತಿಲ್ಲ. ನನಗೆ ದೇವರು ಸಹಾಯ ಮಾಡಿದಾನೆ, ನನ್ನ ಮಕ್ಕಳಿಗೂ ನೆರವು ನೀಡಿದ್ರೆ ಸಾಕು. ನನ್ನ ಬದುಕಿನಲ್ಲಿ ತೃಪ್ತಿ ಇದೆ. ಅದಿಲ್ಲದಿದ್ರೆ ಬದುಕೇ ಇಲ್ಲ. ಇರೋದ್ರಲ್ಲಿ ತೃಪ್ತಿಯಿಂದ ಇದ್ದೇನೆ. ಇಲ್ಲದಿರುವುದರ ಬಗ್ಗೆ ಎಂದಿಗೂ ಆಸೆ ಮಾಡಿಲ್ಲ' ಅಂತ ಹೇಳಿ ನಮ್ಮನ್ನು ಊಟಕ್ಕೆ ಎಬ್ಬಿಸಿದ್ರು ಸುಬ್ಬರಾಯರು. ಮಿಡಿಮಾವಿನಕಾಯಿ ಉಪ್ಪಿನಕಾಯಿ, ಹಪ್ಪಳ, ಹಬೆಯಾಡುವ ಅನ್ನ, ತಿಳಿಸಾರು, ಕೆನೆಮೊಸರು ಉಂಡ ಮೇಲೆ, ತಾಂಬೂಲದ ತಟ್ಟೆ ಬಂತು. 'ಎಲೆ ಅಡಿಕೆ ಬೆಳೆಯೋರು ಅದನ್ನು ತಿನ್ನಬೇಕು. ನಮ್ಮ ಮಾಲನ್ನು ನಾವೇ ತಿನ್ನದಿದ್ರೆ ಹೇಗೆ' ಅಂದ್ರು ಜತೆಯಲ್ಲಿದ್ದ ಕಾಶೀಪತಯ್ಯ. ತಾಂಬೂಲ ಹಾಕಿ ಬಾಯಿ ಕೆಂಪಗಾಗಿಸಿಕೊಳ್ಳುವಷ್ಟರಲ್ಲಿ ಸಂಕೇತಿ ದಂಪತಿಗಳಿಬ್ಬರು ಮನೆಯೊಳಗೆ ಬಂದರು. 'ಇತ್ತೀಚೆಗಷ್ಟೆ ಇವರ ಮಗಳ ಮದುವೆಯಾಯ್ತು, ಇವರೂ ನಮ್ಮವರೆ' ಎಂದು ಪರಿಚಯಿಸಿದ್ರು, ಸುಬ್ಬರಾಯರು. 'ಮದುವೆಯಾದ ಮೇಲೆ ಮನೆಮನೆಗೆ ಹೋಗಿ ಬಾಗಿನ ನೀಡುವುದು ನಮ್ಮ ಸಂಪ್ರದಾಯ, ಅದಕ್ಕೇ ಬಂದಿದ್ದೇವೆ' ಅಂದ ಅತಿಥಿಗಳು, ಹಿರಿಯರಿಗೆ ನಮಸ್ಕರಿಸಿ, ಬಾಗಿನ ನೀಡಿ, ನಮ್ಮೊಂದಿಗೂ ಮಾತನಾಡಿ ಹೊರಟುಹೋದರು. ಹಳ್ಳಿಯ ಜೀವನದ ಸೊಗಡು ಪರಸ್ಪರ ಪ್ರೀತಿಬೆಸುಗೆಯಲ್ಲಿದೆ, ಅದಕ್ಕೆ ಈ ತರಹದ ಸಂಪ್ರದಾಯಗಳು ಎಷ್ಟು ಪೂರಕ ಅಲ್ಲವೇ ಅನ್ನಿಸಿತು. ಪಟ್ಟಣದ ಮಂದಿಯ ತಬ್ಬಲಿತನದ ಅರಿವಾಯ್ತು. ಮುಂದೆ ಮಾತಾಡುವಷ್ಟರಲ್ಲಿ, ಅಪರಾತ್ರಿಯಾದ್ದರಿಂದ 'ಹೊತ್ತಾಯ್ತು, ಹೊರಡೋಣ' ಅಂದ್ರು ಹರನ್. ಚಂದಿರ ಬಾನಲ್ಲಿ ತಣ್ಣಗೆ ನಗುತ್ತಿದ್ದ. ಹಾನಗಲ್ಲಿನ ಎಲ್ಲಾ ಸಂಕೇತಿಗಳ ಮುಖ ಮನದಲ್ಲಿ ಮೂಡಿಬಂತು. ಮಾತುಗಳು ಅಕ್ಷರವಾಗಿ ದಾಖಲಾಗಿ ನಿಮ್ಮ ಮುಂದೆ ಈಗಿದೆ ಅಷ್ಟೆ.

2. ಹಳ್ಳಿಮೈಸೂರು

'ಹಳ್ಳಿಮೈಸೂರು' ಹೊಳೆನರಸೀಪುರ ತಾಲ್ಲೂಕಿಗೆ ಸೇರಿದ ಗ್ರಾಮ. ಇಲ್ಲಿಗೆ ಸಂಕೇತಿಗಳ ಆಗಮನದ ಕಥೆ ಹಾಗೂ ಹಳ್ಳಿ ಮೈಸೂರು ಗ್ರಾಮದ ಇತಿಹಾಸ ರೋಚಕವಾದದ್ದು. 'ಸಂಕೇತಿಗಳ origin ಕೇರಳ. ಅಲ್ಲಿಂದ ಮದ್ರಾಸಿಗೆ ಬಂದಿದಾರೆ. ಅಲ್ಲಿಂದ ಕಣಿವೆ ಕೆಳಗೆ ಬಂದಿದಾರೆ. ಅಲ್ಲಿಂದ ಪಿರಿಯಾಪಟ್ಟಣಕ್ಕೆ ಬಂದಿದಾರೆ. ಅಲ್ಲಿಂದ ಮರಿತಮ್ಮನಹಳ್ಳಿಗೆ ಬಂದಿದಾರೆ. ಮರಿತಮ್ಮನಹಳ್ಳಿಯಿಂದ ಹಳ್ಳಿಮೈಸೂರಿಗೆ ಆಗಮನವಾಗಿರಬಹುದು' ಎಂದು ಇಲ್ಲಿನವರು ಹೇಳುತ್ತಾರೆ. 'ಈಗಲೂ ಸಹ ಮರಿತಮ್ಮನಹಳ್ಳಿಯಲ್ಲಿರುವವರು ನಮ್ಮ ಜ್ಞಾತಿಗಳೇ' ಎಂದು ನುಡಿಯುತ್ತಾರೆ. 'ಹಳ್ಳಿಮೈಸೂರಿಗೇ ಯಾಕೆ ಬಂದ್ರು? ಮರಿತಮ್ಮನಹಳ್ಳಿಯನ್ನು ಯಾಕೆ ಬಿಟ್ರು?' ಅಂದ್ರೆ '. . . ಮರಿತಮ್ಮನಹಳ್ಳಿಯಲ್ಲಿ ಇದ್ದಾಗ ಎಲ್ಲರೂ ವಿದ್ಯಾವಂತರೇ ಆಗಿದ್ದರು. ಒಂದು ದಿನ ಅಲ್ಲಿಗೆ ಒಬ್ಬರು ಸ್ವಾಮಿಗಳು ಬಂದಿದ್ರಂತೆ. ಯಾರೋ ಕುಹಕಿಗಳು ಅವರನ್ನು ಛೇಡಿಸಿದರಂತೆ. ಇದರಿಂದ ನೊಂದ ಸ್ವಾಮಿಗಳು ಶಪಿಸಿದರಂತೆ - ಇದು ಶಾಪಗ್ರಸ್ತ ಊರಾಗಿರಲಿ, ವೇದಬಾಹಿರವಾಗಲಿ - ಅಂತ. ಶಾಪಗ್ರಸ್ತವಾದ ಊರಿನಲ್ಲಿ ಇರಬೇಕಲ್ಲಾ ಅಂತ ಹೇಳಿ ಸಂಕೇತಿಗಳು ಆ ಊರನ್ನು ಬಿಟ್ಟರಂತೆ. ಹಾಗೆ ಬಂದಾಗ ಮೊದಲು 'ಹಿಂದಲಹಳ್ಳಿ' ಅನ್ನೋ ಊರು ಸಿಕ್ಕಿದೆ. ಅಲ್ಲಿ ನೆಲೆಸಿದ್ದಾರೆ. ಅಲ್ಲಿ ಈಗಲೂ ಸಹ 'ಹಾರುವರ ಹಾಳು' ಅನ್ನೋ ಜಾಗವನ್ನು ಗುರುತಿಸಲಾಗುತ್ತೆ. ಅಲ್ಲಿ ಸಂಕೇತಿಗಳು ಇದ್ರು ಅನ್ನೋದಕ್ಕೆ ಅಲ್ಲಿರುವ ಅವರೇ ನೆಟ್ಟ ಎರಡು ಅರಳಿಮರಗಳು ಸಾಕ್ಷಿ. ಅಲ್ಲಿದ್ದುಕೊಂಡು ಸ್ವಲ್ಪ ತನುವಾದ ಜಾಗದಲ್ಲಿ ತೋಟವನ್ನು ಅಭಿವೃದ್ಧಿ ಮಾಡಿದ್ರು. ಆ ತೋಟ ಜೀವನಕ್ಕೆ ಸಾಕಾಗಲಿಲ್ಲ. ಅಷ್ಟು ಹೊತ್ತಿಗೆ ಹೊಳೆನರಸೀಪುರದ ನರಸಿಂಹನಾಯಕನ ಆಶ್ರಯ ಅವರಿಗೆ ಸಿಕ್ಕಿದೆ. ಹಳ್ಳಿಮೈಸೂರಿನ ಬಳಿ ದೊಡ್ಡ ಕೆರೆ ಕಟ್ಟಿದ್ರು. ನರಸಿಂಹನಾಯಕನ ಆನೆಗಳೇ ಬಂದು ಕೆರೆ ಏರಿಯನ್ನ ತುಳಿದಿವೆ ಅನ್ನೋ ಪ್ರತೀತಿ ಇದೆ. ಆ ಕೆರೆಯ ಕೆಳಭಾಗದಲ್ಲಿ ಇನ್ನಷ್ಟು ತೋಟವನ್ನು ಅಭಿವೃದ್ಧಿ ಮಾಡಿದರು. ಜೀವನಕ್ಕೆ ಎರಡು ಕಡೆ ತೋಟಗಳಿಂದ ಹೆಚ್ಚು ಅನುಕೂಲ ಆಯ್ತು. ಈ ಎರಡು ಪ್ರದೇಶಗಳ ಮಧ್ಯದಲ್ಲಿ ನಾವಿರೋಣ ಅಂತ ಹೇಳಿ ಹಳ್ಳಿಮೈಸೂರಿಗೆ ಬಂದರಂತೆ ಸಂಕೇತಿಗಳು. ಹೀಗೆ ಆರಂಭವಾಗಿದೆ ಈ ಸ್ಥಳದಲ್ಲಿ ಸಂಕೇತಿಗಳ ಕೃಷಿ." 'ಈ ಸ್ಥಳಕ್ಕೆ ಹಳ್ಳಿಮೈಸೂರು ಎಂಬ ಹೆಸರು ಬರಲು ಕಾರಣವೇನು' ಅನ್ನೋದಕ್ಕೂ ಸೂಕ್ತ ಉತ್ತರವಿದೆ: "ಇದು ನಿಜವಾಗಿ ಹಳ್ಳಿಮೈಸೂರಲ್ಲ,! 'ಹಳೇಮೈಸೂರು'. ಈಗಿರುವ ಮೈಸೂರು 'ಮಹಿಶೂರು'. ಶಾಸನಗಳನ್ನು ನೋಡಿದಾಗ ಇದು ತಿಳಿಯುತ್ತೆ. ಮೈಸೂರು ಅನ್ನುವುದು ಇದೇ ಪ್ರಾಂತ್ಯವೇ. ಇಲ್ಲಿ ಪಾಳೇಗಾರ ಆಳುತ್ತಿದ್ದ ಎಂತಲೂ - ಇದೇ ರಾಜಧಾನಿ ಆಗಿತ್ತು ಎಂತಲೂ - ಈ ಊರಿಗೆ ಸ್ವಲ್ಪ ಹತ್ತಿರದಲ್ಲಿ ಗೋಹಳ್ಳಿ ಎನ್ನುವ ಗ್ರಾಮವಿದೆ; ಅಲ್ಲಿ ದನಗಳನ್ನು ಕಟ್ಟುತ್ತಿದ್ರು ಎಂತಲೂ - ಇನ್ನೂ ಸ್ವಲ್ಪ ಮುಂದೆ ಆನೇಕನ್ನಂಬಾಡಿ ಅನ್ನೋ ಊರು ಇದೆ. ಅಲ್ಲಿ ಆನೆಗಳನ್ನು ಕಟ್ಟುತ್ತಿದ್ರು ಅಂತಲೂ - ಈ ಕಡೆ ಬಂದ್ರೆ ತೇಜೂರು ಅನ್ನುವ ಗ್ರಾಮ ಇದೆ. ಅಲ್ಲಿ ಕುದುರೆಗಳನ್ನು ಕಟ್ಟುತ್ತಿದ್ರು ಅಂತಲೂ - ಗೋಹಳ್ಳಿಯ ಪಕ್ಕದಲ್ಲಿ ಸಿಂಗನಕುಪ್ಪೆ ಅನ್ನುವ ಗ್ರಾಮವಿದೆ. ಅಲ್ಲಿ ಕುಪ್ಪೆ, ಅಂದ್ರೆ ದನಗಳ ಸಗಣಿಯನ್ನು ಹಾಕುವ ಜಾಗವಾಗಿತ್ತು ಅಂತಲೂ (ಅದನ್ನು ಸಿಂಗ ಎನ್ನುವ ವ್ಯಕ್ತಿ ಹಾಕುತ್ತಿದ್ದರಿಂದ ಸಿಂಗನಕುಪ್ಪೆ ಎನ್ನುವ ಹೆಸರು ಬಂದಿದೆ) - ಅದರ ಪಕ್ಕದಲ್ಲಿಯೇ ಮಂಗಳವಾಡಿ ಅನ್ನುವ ಊರಿದೆ, ಅಲ್ಲಿ ಮಂಗಳದ್ರವ್ಯವನ್ನು ಇಡುತ್ತಿದ್ದರು ಎಂತಲೂ ಐತಿಹ್ಯ. ಅದರ ಪಕ್ಕದಲ್ಲಿ ದೇವಿತಂದ್ರೆ ಎನ್ನುವ ಊರಿದೆ. ಈ ಪಾಳೇಗಾರನ ಆರಾಧ್ಯದೇವತೆ ಆ ದೇವಿ. ಆ ತಂದ್ರೆ ಅನ್ನೋ ಹೆಸರು ಯಾಕೆ ಅಂದ್ರೆ, ಆರಾಧನೆ ಮಾಡದೇ ಹೋದ್ರೆ ತೊಂದ್ರೆ ಅಂತ ಅಷ್ಟೆ. ಅದಕ್ಕೇ ಅದು ದೇವಿತಂದ್ರೆ.



ಎಡಕ್ಕೆ ವೇ|| ಬ್ರ|| ಶ್ರೀ ಸೋಮನಾಥ ಘನಪಾಠಿಗಳು ಹಾಗೂ ಬಲಕ್ಕೆ ವೇ|| ಬ್ರ|| ಶ್ರೀಗಳಾದ ರಾಮಾವಧಾನಿ, ಕೃಷ್ಣಾವಧಾನಿಗಳು ಹುಟ್ಟಿ ಬೆಳೆದ ಮನೆ.

"ಇನ್ನು ಈ ಕಡೆ ಹೊಳೆನರಸೀಪುರ ರಸ್ತೆಯಲ್ಲಿ ತಾತನಹಳ್ಳಿ ಅನ್ನುವ ಊರಿದೆ. ಅದು ತಾತನಹಳ್ಳಿ ಅಲ್ಲ. ಅಪಭ್ರಂಶದಿಂದ ಆಗಿರುವ ಪ್ರಮಾದ ಅದು. ಅದು ತೀರ್ಥಹಳ್ಳಿ. ಈಗಲೂ ಅಲ್ಲಿ



ವೇ|| ಬ್ರ|| ಶ್ರೀಗಳಾದ ರಾಮಾವಧಾನಿ-ಕೃಷ್ಣಾವಧಾನಿ-ಹ.ವೆಂ.ನಾರಾಯಣಶಾಸ್ತ್ರಿಗಳು ಹುಟ್ಟಿ ಬೆಳೆದ ಮನೆಯ ಸಾಲಿನ ಇನ್ನೊಂದು ನೋಟ: ಹಳ್ಳಿಮೈಸೂರು.

ತೀರ್ಥೇಶ್ವರಸ್ವಾಮಿ ದೇವಸ್ಥಾನ ಇರುವುದು ಇದಕ್ಕೆ ಸಾಕ್ಷಿ. ಕ್ಯಾತನಹಳ್ಳಿ ಅನ್ನುವ ಊರಿದೆ. ಅಲ್ಲಿ ಮಹಾರಾಜರ ಸಂತತಿಗೆ ಕ್ಷೌರಿಕರಾದವರು ನೆಲೆಸಿದ್ರೂ ಅಂತಲೂ - ಬಡಕ್ಯಾತನಹಳ್ಳಿ ಎನ್ನುವ ಮತ್ತೊಂದು ಊರಿದೆ. ಸಾಮಾನ್ಯ ಜನರಿಗೆ ಕ್ಷೌರಿಕರಾದವರು ಅಲ್ಲಿದ್ರು ಅಂತಲೂ-ಈ ಊರಿನ ಚರಿತ್ರೆ ಇದೆ."

ಇಲ್ಲಿಗೆ ಬಂದಂತಹ ಸಂಕೇತಿಗಳ ಕುಟುಂಬ ಎಷ್ಟು? ಹ್ಯಾಗೆ ಇಲ್ಲಿ ಅವರ ಸಮೂಹ ಬೆಳೆದುಬಂತು? ಈಗ ಅವರ ಸಂಖ್ಯೆ ಇಲ್ಲಿ ಕ್ಷೀಣಿಸಿರಲು ಕಾರಣವೇನು? ಎಲ್ಲಕ್ಕೂ ಉತ್ತರ ಇದೆ.

ಇಲ್ಲಿ ಮೊದಲು ಬಂದಂತಹ ಸಂಕೇತಿಗಳ ಕುಟುಂಬ ಹತ್ತು. ಅದಕ್ಕೆ ಮೊದಲು ಹಳ್ಳಿಮೈಸೂರಿನಲ್ಲಿ ಕರ್ನಾಟಕ ಬ್ರಾಹ್ಮಣರು ಇದ್ದರಂತೆ. ಕಾಲಕ್ರಮೇಣ ಕರ್ನಾಟಕರು ಊರು ಬಿಟ್ಟಿದ್ದಾರೆ. ಆಮೇಲೆ ಮತ್ತೊಂದು ಸಾರಿ ಸಂಕೇತಿಗಳ ಐದು ಕುಟುಂಬಗಳು ಬಂದವಂತೆ. ಹಾಗಾಗಿ ಹದಿನೈದು ಮನೆಗಳು ಮೊದಲು ಆದವು. ಅದೇ ಅಭಿವೃದ್ಧಿಯಾಗಿ ಐವತ್ತು ಮನೆಗಳಾದವಂತೆ. ಸಾಮಾನ್ಯವಾಗಿ ಎಲ್ಲರಿಗೂ ಬಡತನವೇ. ಯಾಕೇಂದ್ರೆ ತೋಟವನ್ನೇ ಆಧಾರವಾಗಿಟ್ಟುಕೊಂಡು, ಮಳೆನೀರನ್ನೇ ನಂಬಿ ವ್ಯವಸಾಯ ಸಾಗುತ್ತಿದ್ದರಿಂದ, ಜನರಿಗೆ ತೊಂದರೆಯಾಗಿತ್ತು. ಆಧುನಿಕ ಬೇಸಾಯ ಪದ್ಧತಿ ತಿಳಿದಿರಲಿಲ್ಲ. ಬೇರೆ ರೀತಿ ದುಡಿಯೋದು ಗೊತ್ತಿರಲಿಲ್ಲ. ಹಾಗೂ ಕೃಷಿಯ ಮೇಲಿನ ಅವಲಂಬನೆ ಜಾಸ್ತಿಯಾಗಿ ಸಂಕೇತಿಗಳು ತೊಂದರೆಯಲ್ಲಿದ್ರು. ಇಂತಹ ಪರಿಸ್ಥಿತಿಯಲ್ಲೂ ಅನೇಕ ಖ್ಯಾತನಾಮರು ಈ ಊರಲ್ಲಿ ಹುಟ್ಟಿ ಬೆಳೆದಿದ್ದಾರೆ. ಸಂಕೇತಿಗಳ ಹೆಸರನ್ನು ಖ್ಯಾತಿಯ ನಭದಲ್ಲಿ ಇರಿಸಿದ್ದಾರೆ. ಇವರಲ್ಲಿ ಪ್ರಮುಖರು ವೇದಾಧ್ಯಯನ ಸಂಪನ್ನರು. ಹಿಂದೆ ಇಂಥವರಿಗೆ ಗೌರವ ಸೂಚಿಸುವ ಸಲುವಾಗಿ ವಿದ್ವತ್ ತಾಂಬೂಲವನ್ನು ನೀಡಲಾಗುತ್ತಿತ್ತು. ಅದು ಕೇವಲ ಪೂರ್ಣವಿದ್ಯಾವಂತರಿಗೆ ಮಾತ್ರ ಮೀಸಲಾಗಿತ್ತು. ಅಂತಹದ್ದನ್ನು ಹಳ್ಳಿಮೈಸೂರಿನಲ್ಲಿ ಹತ್ತು ಜನ ಸ್ವೀಕರಿಸುತ್ತಿದ್ದರಂತೆ. ಇವರಲ್ಲಿ ಪ್ರಮುಖರು ಕೇಶವಮೂರ್ತಿ ಘನಪಾಠಿಗಳು (ಇವರಿಗೆ ಸೋಮನಾಥ ಘನಪಾಠಿಗಳು ಅಂತ ಹೆಸರಿದೆ) ಅವರು ಸಂಸ್ಕೃತ ಪಾಠಶಾಲೆಯಲ್ಲಿ ಘನವಿದ್ವಾಂಸರಾಗಿ, ಶಿವಮೊಗ್ಗ ಸೇರಿ ಖ್ಯಾತಿಗಳಿಸಿದ್ದಾರೆ. ಅವರ ತಮ್ಮ ಸುಂದರೇಶ ಘನಪಾಠಿಗಳು. ಅವರ ಹೆಸರು ವಿದ್ವಾನ್ ವೆಂಕಟಸುಬ್ಬಯ್ಯ. ಅವರೂ ಅಷ್ಟೇ, ವೇದಾಧ್ಯಯನಸಂಪನ್ನರು. ಅವರ ತಮ್ಮ ಅನಂತನಾರಾಯಣ ಅವರು ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ Linguistic Professor ಆಗಿ ನಿವೃತ್ತಿ ಹೊಂದಿದವರು. ಅದಕ್ಕೆ ಮೊದಲು ಅಮೇರಿಕಾದಲ್ಲಿ ಬಹಳಷ್ಟು ವರ್ಷ ಇದ್ದರಂತೆ. ಹೀಗೆ ಒಂದೇ ಮನೆಯಲ್ಲಿ ಮೂರು ಜನ ಅದ್ವಿತೀಯ ಪಾಂಡಿತ್ಯ ಗಳಿಸಿದವರು ಇದ್ದಾರೆ. ಇನ್ನು ಇವರ ಅಣ್ಣತಮ್ಮಂದಿರ ಪೈಕಿ: ಹೆಚ್.ವಿ.ನಾರಾಯಣಶಾಸ್ತ್ರಿಗಳು. ಅವರೂ ಆಸ್ಥಾನ ವಿದ್ವಾನ್. ನಂತ್ರ ವೆಂಕಟೇಶಾವಧಾನಿಗಳು. ಆ ಕಾಲದಲ್ಲಿ ಲಕ್ಷ್ಮೀಪುತ್ರರೂ, ವೇದಾಧ್ಯಯನ ಸಂಪನ್ನರೂ ಆಗಿದ್ದ ಏಕೈಕ ವ್ಯಕ್ತಿ. ಅವರೊಬ್ಬರೇ ಹಳ್ಳಿಮೈಸೂರಿನ ಸಾಹುಕಾರರು. ಲಕ್ಷ್ಮೀಸರಸ್ವತಿ ಇಬ್ಬರೂ ಒಂದೇ ಮನೆಯಲ್ಲಿ ಇದ್ದದ್ದು ಇವರಲ್ಲಿ ಮಾತ್ರ. ವಿರೋಧಿಗಳೇ ಇಲ್ಲದಂತೆ ರಾಜಕೀಯವನ್ನು ಮಾಡಿದ ವ್ಯಕ್ತಿ ಇವರು. ೩೫ ವರುಷ ಹಳ್ಳಿಮೈಸೂರಿನ chairman ಆಗಿದ್ದವರು ಇವರು. ಜಿ.ಅಶ್ವತ್ಥನಾರಾಯಣ ಈ ಊರಿನಿಂದ ಹೊರಬಂದ IAS Officer; ವಿಕ್ರಾಂತ್ ಟೈರ್ಸ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿದ್ದವರು. ಮಾಜಿ ಪ್ರಧಾನಿ ಇಂದಿರಾಗಾಂಧಿಯವರಿಗೆ ಕಾರ್ಯದರ್ಶಿಯೂ ಆದವರು ಇವರು. ಆಂಗ್ಲಭಾಷೆಯಲ್ಲಿ ಪ್ರಾವೀಣ್ಯ ಪಡೆದವರೂ, ಹಾಗೇ ಪ್ರತಿಯೊಂದು ಮನೆಗೂ ಇಂಜಿನಿಯರ್ ಒಬ್ಬರು ಇದ್ದರಂತೆ. ವಿದ್ಯಾವಂತರೆಲ್ಲಾ ದೂರದೂರುಗಳಿಗೆ ತೆರಳಿದ್ದರಿಂದ ಹಳ್ಳಿಮೈಸೂರಿನಲ್ಲಿ ಸಂಕೇತಿಗಳ ಸಂಖ್ಯೆ ಕ್ಷೀಣಿಸಿದೆ. ಹಳ್ಳಿಮೈಸೂರಿಗೆ ಸಂಕೇತಿಗಳ ಆಗಮನದ ಹಿಂದೆ ಅನೇಕ ದಂತಕಥೆಗಳೂ ಇವೆ. ಮದ್ರಾಸಿಂದ ಕಣಿವೆಯನ್ನು ಹತ್ತಿ ಪಿರಿಯಾಪಟ್ಟಣಕ್ಕೆ ಬಂದಾಗ ಅಲ್ಲೆಲ್ಲಾ ಬೃಹತ್ತಾದ ಕಾಡು. ವೇದಾಧ್ಯಯನವೇ ಪ್ರಧಾನವಾದ್ದರಿಂದ, ಮಕ್ಕಳಿಗೆ ವೇದಾಧ್ಯಯನ ಮಾಡಿಸಿಕೊಂಡು ತಂದೆಯು ಮುಂದೆ ಒಬ್ಬನ ಹಿಂದೆ ಒಬ್ಬ ಮಗನನ್ನು ನಡೆಸಿಕೊಂಡು ಹೋಗುತ್ತಿರಬೇಕಾದ್ರೆ, ಹಿಂದಿನ ಮಗನನ್ನು ಹುಲಿ ಹೊತ್ತುಕೊಂಡು ಹೋಯಿತಂತೆ. ಆವಾಗ 'ಈ ಜಾಗ ನಮಗೆ ಯೋಗ್ಯವಲ್ಲ' ಅಂತ ಹೇಳಿ ಮರಿತಮ್ಮನಹಳ್ಳಿಗೆ ಬಂದರಂತೆ. ಸಾಮಾನ್ಯವಾಗಿ ಇಲ್ಲಿನ ಸಂಕೇತಿಗಳು ತೋಟವನ್ನು ಅವಲಂಬಿಸಿದರು. ತೋಟದಲ್ಲಿ ವಿಳ್ಳೇದೆಲೆ,

ಬಾಳೆ, ಅಡಿಕೆ, ತೆಂಗು ಎಲ್ಲಕ್ಕೂ ಪ್ರಧಾನವಾದ, ಪ್ರಮುಖವಾದ ಸ್ಥಾನ ಕೊಟ್ಟು ಬೆಳೆಸಿದರು. ಕಡಿಮೆ ಜಮೀನಿನಲ್ಲೇ ಬದುಕಿದರು ಸಂಕೇತಿಗಳು. ಹಿಂದಿನ ಕಾಲದಲ್ಲಿ ಒಂದು ಎಕರೆ, ಎರಡು ಎಕರೆ ಜಮೀನು ಇದ್ದವರು ಅಪರೂಪ. ಅರ್ಧ ಎಕರೆಯೇ ಹೆಚ್ಚು. ಅದರಲ್ಲೇ ಏಳು-ಎಂಟು ಜನ ಮಕ್ಕಳನ್ನು ಸಾಕಿ, ಕಡಿಮೆ ಆದಾಯದಲ್ಲಿ ತೃಪ್ತಿಯಾಗಿ ಬದುಕಿದ ಹಿರಿಮೆ ಇವರದು. ಹಿಂದಿನ ದಿನಗಳಲ್ಲಿ ಆದಾಯ ಕಡಿಮೆ ಇದ್ರೂ, ಸಾಲಸೋಲ ಮಾಡಿದ ನಿದರ್ಶನಗಳು ಇಲ್ಲ. ಸಾಲ ಮಾಡಲು ಹೆದರಿದವರು ಇವರು. ಸಂಕೇತಿ ಎನ್ನುವ ಪದದ ಅರ್ಥ 'ಸ್ವಾಭಿಮಾನಿ' ಅಂತೆ. ಸ್ವಾಭಿಮಾನವನ್ನು ಹೆಚ್ಚಾಗಿ ಇಟ್ಟುಕೊಂಡ ಜನ ಇವರು. ಇದು ಕೆಲವರಿಗೆ ದುರಭಿಮಾನವಾಗಿ ಕಾಣಬಹುದು, ಆದರೆ ಇದು ಸ್ವಾಭಿಮಾನ ಅಂತಾರೆ ಹಳ್ಳಿಮೈಸೂರಿನ ಎಚ್.ಕೆ. ರಾಮಚಂದ್ರಯ್ಯ.

ತೋಟಗಳಲ್ಲಿ ಸಂಕೇತಿಗಳು ಕೆಲಸ ಮಾಡುವ ವಿಧಾನವೂ ಉಲ್ಲೇಖಾರ್ಹ. ಅವರು ಬೇರೆಯ ಚಟಗಳನ್ನು ಅವಲಂಬಿಸಿದವರಲ್ಲ. ಅವರು ಬೆಳೆಯುವ ವಿಳ್ಳೇದೆಲೆ, ಅಡಿಕೆ ತಿನ್ನುವ ಚಟ ಅಷ್ಟೆ. ಆಗಿಂದಾಗ್ಗೆ ಎಲೆ ಅಡಿಕೆ ತಿನ್ನುವ ಚಟ ಇರುವವರು, 'ಐವೇಜ್ ಮಸ್ತಾಕ್' ಅನ್ನುವ ಚೀಲವನ್ನು ಇಟ್ಟುಕೊಳ್ಳುತ್ತಿದ್ದರು. ಐವೇಜ್ ಅಂತ ಹೇಳಿದ್ರೆ ಅವರ ಚಟಕ್ಕೆ ಬೇಕಾದ ಪದಾರ್ಥವನ್ನು ಇಡುವ ಚೀಲ. ಅದರಲ್ಲಿ ಎಲೆ, ಅಡಿಕೆ, ಅಡಿಕೆ ಶುಚಿಗೊಳಿಸಲು ಸಣ್ಣಚಾಕು, ಹೊಗೆಸೊಪ್ಪು, ಸುಣ್ಣ - ಇಂತಹವು ಇರುತ್ತಿದ್ದವು. ತೋಟದಲ್ಲಿ ಕೆಲಸ ಮಾಡುವಾಗ ಆಯುಧಗಳ ಅಗತ್ಯವೂ ಇದೆ. ಅಂಥ ಆಯುಧಗಳು ಸಾಮಾನ್ಯವಾಗಿ ಕೊಡಲಿ, ಕುಡುಗೋಲು, ಮಚ್ಚು, ವಿಳ್ಳೇದೆಲೆ ಕುಯ್ಯುವ ಉಗುರು, ಸಣ್ಣಚಾಕು, ಮುಂತಾದವು. ಇವನ್ನು ಇಡಲು ಮತ್ತೊಂದು ಚೀಲ. ಅದರ ಹೆಸರು 'ಆಯುಧ ಮಸ್ತಾಕು' ಅಂತ. ಹೀಗಾಗಿ ಸಂಕೇತಿಗಳು ಎಲ್ಲೇ ಕೃಷಿ ಕೆಲಸ ಮಾಡಲಿ, ಈ ಎರಡೂ ಚೀಲಗಳು ಅವರ ಹೆಗಲಲ್ಲಿ ಇರಲೇಬೇಕು. ಯಾವುದು ಬೇಕೋ ಅದನ್ನು ತಕ್ಷಣ ತೆಗೆಯಲು ಇದಕ್ಕಿಂತ ಉತ್ತಮ ವಿಧಾನ ಇದೆಯೇ!

ಇದರ ಜತೆಗೆ ಸಂಕೇತಿಗಳ ಮತ್ತೊಂದು ಚಟ ನಶ್ಯ. ನಶ್ಯವನ್ನು ಹಾಕುವುದು ಸಂಕೇತಿಗಳ ಬಹಳ ದೊಡ್ಡ ವಿಶೇಷ. ಹಿಂದೆ, ಮದುವೆಯಾದಾಗ ನಶ್ಯದ ಬೆಳ್ಳಿ ಡಬ್ಬಿಯನ್ನು ಅಳಿಯನಿಗೆ ಉಡುಗೊರೆಯಾಗಿ ನೀಡುತ್ತಿದ್ದರಂತೆ. ಕಾಫಿಚಟ ಹಿಂದೆ ಕೃಷಿಕರಲ್ಲಿ ಹೆಚ್ಚಿರಲಿಲ್ಲವಂತೆ. ಕಾಫಿಪುಡಿಯನ್ನು ಕೊಳ್ಳುವುದು ಆರಂಭವಾದದ್ದೂ ಇತ್ತೀಚೆಗೆ ಅಂತೆ. ಅದಕ್ಕೂ ಮೊದಲು ತೋಟದಲ್ಲಿ ಕೆಲವು ಕಾಫಿಗಿಡಗಳನ್ನು ಹಾಕಿ, ಅದರಲ್ಲಿ ಬಂದ ಕಾಫಿಹಣ್ಣನ್ನು ತಾವೇ ಸಂಸ್ಕರಿಸಿ - ಕಾಫಿಯ ರುಚಿಯನ್ನು ತಿಳಿಯದೇ, ಸುಮಾರಾಗಿ ಸಂಸ್ಕರಿಸಿ - ಅದನ್ನೇ ಕುಡಿಯಲಾಗುತ್ತಿತ್ತು. ಈಗ ಕಾಫಿಯೇ ಕೆಲವರ ಆಹಾರವಾಗಿದೆ. ಆಹಾರ ಸೇವನೆ ಕಮ್ಮಿಯಾಗಿದೆ. ಊಟದಲ್ಲಿ ಎಲೆ ಮುಂದೆ ಕುಳಿತಾಗಲೂ ಸಂಕೇತಿಗಳನ್ನು ಗುರುತಿಸುತ್ತಿದ್ದುದು ಉಂಟು. ಯಾಕೇಂದ್ರೆ ತೋಟದಲ್ಲಿ ದೈಹಿಕ ಶ್ರಮದಿಂದ ದುಡಿದು, ಬೆವರು ಹರಿಸಿ, ಬಂದು ಎಲೆ ಮುಂದೆ ಕುಳಿತಾಗ ಒಂದು ಪಾವು ಅಕ್ಕಿ ಅನ್ನವನ್ನು ಅಚ್ಚುಕಟ್ಟಾಗಿ ಊಟ ಮಾಡುತ್ತಿದ್ದರು. ಜೀರ್ಣಶಕ್ತಿಯೂ ಚೆನ್ನಾಗಿತ್ತು. ಬೇರೆಯವರ ಜತೆ ಊಟಕ್ಕೆ ಕುಳಿತಾಗ 'ಅವನು ಸಂಕೇತಿಯಪ್ಪ... ಚೆನ್ನಾಗಿ ಬಡಿಸು' ಅನ್ನುತ್ತಿದ್ರಂತೆ. "ನಾನು ಮೈಸೂರಿನ ಅನಾಥಾಲಯದಲ್ಲಿ ಓದುವಾಗ ನಮ್ಮ warden, 'ಆ ಸಂಕೇತಿ ಹುಡುಗನನ್ನು ನೋಡಿ ಬಡಿಸಿ' ಎನ್ನುತ್ತಿದ್ರು. ಆಗ ನನಗೆ ಅವಮಾನ ಅನ್ನಿಸಿದ್ರೂ ಅದು ನಮ್ಮ ಹಿರಿಮೆ" ಅಂತಾರೆ ಹಳ್ಳಿಮೈಸೂರಿನ ಹಿರಿಯ ಸಂಕೇತಿಯೊಬ್ಬರು.

ಹಳ್ಳಿಮೈಸೂರಿನಲ್ಲಿ ಸಾಮಾನ್ಯವಾಗಿ, ಕೃಷಿಯ ಜತೆಗೆ ವೇದಾಧ್ಯಯನವನ್ನೂ ಜತೆಯಲ್ಲಿ ಇಟ್ಟುಕೊಂಡಿದ್ರು ಸಂಕೇತಿಗಳು. ಒಬ್ಬ ವೇದಾಧ್ಯಯನ ಸಂಪನ್ನರ ಜತೆಯಲ್ಲಿ ಒಬ್ಬ ವಿದ್ಯಾರ್ಥಿ ಇದ್ದೇ ಇರುತ್ತಿದ್ದನಂತೆ. ಆ ವಿದ್ಯಾರ್ಥಿಗೆ ತೋಟದಲ್ಲಿ ಕೆಲಸ ಮಾಡುವಾಗಲೂ ಅಧ್ಯಯನ, ಮನೆಯಲ್ಲಿ ಬಿಡುವಿನ ವೇಳೆಯಲ್ಲೂ ವೇದಾಧ್ಯಯನ. ಇಲ್ಲಿನ ಕೃಷಿಕರಿಗಿದ್ದ ಆಸೆ ಆಕಾಂಕ್ಷೆಗಳು ಕಡಿಮೆ. ಐಶಾರಾಮಿ ಜೀವನ ನಡೆಸಿದವರಲ್ಲ. ಮಿತಖರ್ಚಿನಲ್ಲಿ ಹಿತಮಿತವಾಗಿ ಸಂಸಾರ ನಡೆಸಿದ್ದಾರೆ ಇಲ್ಲಿನ ಸಂಕೇತಿಗಳು. ಇವರು ವಿಳ್ಳೇದೆಲೆ ಬೆಳೆಯುತ್ತಿದ್ದಕ್ಕೆ ಕಾರಣ ಸಂಸಾರದ ವಾರವಾರದ ಖರ್ಚು ಸರಿತೂಗಲಿ ಅನ್ನುವುದು. ಹಳ್ಳಿಮೈಸೂರಿನಲ್ಲಿ ಇದಕ್ಕೊಂದು ಕಥೆಯೇ ಇದೆ. ಹಿಂದೆ ದಿವಾನ ಪೂರ್ಣಯ್ಯನವರು ಈ ಊರಿನ ಮೇಲೆ ಸವಾರಿ ಹೋಗ್ತಿದ್ದಾಗ, ಇಲ್ಲಿನ ಬ್ರಾಹ್ಮಣರು ಅವರಿಗೆ ಪೂರ್ಣಕುಂಭ ಸ್ವಾಗತವನ್ನು ಕೊಟ್ಟು, ನಿಲ್ಲಿಸಿದರಂತೆ. ಆಗ ಪೂರ್ಣಯ್ಯ 'ಏನು ಬೇಕು ನಿಮಗೆ?' ಅಂತ ಕೇಳಿದರಂತೆ. ಒಂದು ಸಂತೆಯನ್ನು ಕೊಡಿ ಎಂದರಂತೆ ಎಲ್ಲರೂ. 'ಇದೇನಿದು ನೀವು ಬ್ರಾಹ್ಮಣರು, ಇಷ್ಟೊಂದು ಜನ ಬಂದಿದ್ದೀರಿ, ಸಂತೆಯನ್ನು ಕೇಳ್ತಿದೀರಲ್ಲಾ, ಬೇರೇನಾದ್ರೂ ಕೇಳಿ. ನನಗೆ ಅಧಿಕಾರವಿದೆ, ಕೊಟ್ಟುಬಿಡ್ತೀನಿ' ಅಂದರಂತೆ. ಆಗ 'ಬೇಡ, ಬೇರೆ ಯಾವುದೇ ಅನುಕೂಲ ನೀವು ಕೊಟ್ರೂ ಮತ್ತೊಬ್ಬ ಅದನ್ನು ಕಿತ್ತುಕೊಳ್ಳುತ್ತಾನೆ. ಒಂದು ಸಂತೆಯನ್ನು ಕೊಡಿ, ಅಲ್ಲಿ ವಿಳ್ಳೇದೆಲೆ ಮಾರಾಟ ಮಾಡಿ, ಜೀವನ ಸಾಗಿಸುತ್ತೇವೆ. ಅದನ್ನು ಯಾರಿಂದಲೂ ಅಪಹರಿಸಲು ಸಾಧ್ಯವಿಲ್ಲ' ಅಂದರಂತೆ.

ಅದಕ್ಕೆ ಒಪ್ಪಿ ಪೂರ್ಣಯ್ಯನವರು ಸಂತೆಯನ್ನು ನೀಡಿದ್ದಾರೆಂಬ ಪ್ರತೀತಿ ಇದೆ. ಸಾಮಾನ್ಯವಾಗಿ ಬಾಳೇಹಣ್ಣು, ವಿಳ್ಳೇದೆಲೆ ಇವು ವಾರದ ಖರ್ಚಿಗೆ. ಅಡಿಕೆ ದುಡ್ಡನ್ನು ಖರ್ಚು ಮಾಡುತ್ತಿದ್ದುದು ಮದುವೆ ಮುಂಜಿಗಳಿಗೆ, ವಿಶೇಷವಾದ ಖರ್ಚುಗಳಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಾತ್ರ. ತೋಟದಲ್ಲೇ ಮನೆಗೆ ಬೇಕಾಗುವ ತರಕಾರಿ, ಹುಣಿಸೇಹಣ್ಣು ಬೆಳೆಯುತ್ತಿದ್ರು. ಈಗಿನ ಹಾಗೆ ೧೫ ರೂಪಾಯಿ ತೆತ್ತು ತರಕಾರಿ ಕೊಳ್ಳುತ್ತಿರಲಿಲ್ಲ. ತೋಟದಲ್ಲಿ ಬೆಳೆಯುವ ತರಕಾರಿಗಳು ಇದ್ವು. ಉದಾಹರಣೆಗೆ ಸುಂಡೇಕಾಯಿ. ಒಂದು ಗಿಡ ಇದ್ರೆ ಸಾಕು, ಅದು ವಾರದ ಒಂದು ದಿನದ ತರಕಾರಿ. ಈ ಬಾಳೇಕಾಯಿಯ ಚಕ್ಕಲು: ಕೆಲವು ಬಾಳೆಗಿಡಗಳು ಅಷ್ಟಾಗಿ ಫಲಭರಿತವಾಗಿ ಬರೋದಿಲ್ಲ, ಚಕ್ಕಲು ಬರುತ್ತೆ, ಅದೂ ಸಹ ತರಕಾರಿಯೇ. ಅಲ್ಲಲ್ಲೇ ಬೆಳೆಯುವ ಸೊಪ್ಪುಗಳು, ಇದು ಇವತ್ತು ನಮಗೆ ನಿಕೃಷ್ಟ; ಆದರೆ ಅವೇ ಅವತ್ತು ಉತ್ಕೃಷ್ಟ. ಒಂದೆಲಗ ಸೊಪ್ಪಿನಬಜ್ಜಿ, ಹೊನಗೊನೆಸೊಪ್ಪು, ಕೀರೆ, ದಂಟು, ಹರಿವೆ ಎಲ್ಲವೂ ಬಳಕೆಯಲ್ಲಿತ್ತು. ಪರಂಗೀಕಾಯಿಯೂ ಒಂದು ತರಕಾರಿಯೇ. ಹೀಗೆ ಒಂದು ವಾರದಲ್ಲಿ ತರಕಾರಿಯನ್ನು ಕೊಳ್ಳುತ್ತಿದ್ದ ದಿನಗಳೇ ಇರುತ್ತಿರಲಿಲ್ಲ. ವಿಶೇಷ ದಿನಗಳಿಗಾಗಿ ಸಕ್ಕರೆ ಕುಂಬಳ, ಬೂದುಗುಂಬಳ ಇದ್ದೇ ಇರುತ್ತಿತ್ತು. ತೋಟದಲ್ಲಿ ಬೆಳೆದ ತರಕಾರಿಗಳನ್ನು ತಿಂದ ದೇಹ ತನುವಾಗಿತ್ತು. ಶಕ್ತಿ ಮೀರಿ ದುಡೀತಿದ್ರು. ಆಳುಗಳನ್ನು ಅವಲಂಬಿಸಿ ಕೆಲಸ ಮಾಡಿದವರು ಕಡಿಮೆ. ಎಲ್ಲಾ ಸ್ವಂತ ಪರಿಶ್ರಮವೇ.

ಇಲ್ಲಿಯ ಜನರ ಕೃಷಿಸಾಧನೆಗಳೂ ಕಡಿಮೆಯೇನಲ್ಲ. ಹಳ್ಳಿಮೈಸೂರಿನ ಲಾಯರ್ ರಾಮಕೃಷ್ಣಯ್ಯನವರ ತಂದೆ, ಒಂದು ದೊಡ್ಡ ಹುಣಿಸೇಮರವನ್ನು ತಂದು ನೆಟ್ರಂತೆ. ಎಲ್ಲರೂ ಇದು ಚಿಗುರೋದಿಲ್ಲ ಅಂತಲೇ ಹೇಳಿದ್ರಂತೆ. ಅದು ಇವತ್ತು ದೊಡ್ಡಮರವಾಗಿದೆ, ಬಹಳ ಜನರಿಗೆ ಆಸರೆಯಾಗಿದೆ. ಅದನ್ನು ನೋಡಿದಾಗ ಜನ ಹೇಳಿದ್ರಂತೆ, 'ನರಸಿಂಹಯ್ಯನವರು ಮುಟ್ಟಿಬಿಟ್ರೆ ಒಣಗಿರುವ ಮರವೂ ಚಿಗುರುತ್ತೆ' ಅಂತ. ಅದು ಅನ್ವರ್ಥವೂ ಹೌದು. ಅವರು ಏಳಿಸಿರುವ ರಸ್ತೆಮರಗಳು ಬಾಡದೆ ಇಂದಿಗೂ ನೆರಳು ನೀಡುತ್ತಿವೆ; ಹಳ್ಳಿಮೈಸೂರಿನ ಹಾದಿಗೆ ಹಸಿರು ಹಾಸಿವೆ.

ಅ) ಎಚ್.ಕೆ. ರಾಮಚಂದ್ರಯ್ಯ ಇ/ಮ ಹೆಚ್.ಎಸ್. ಕೇಶವಮೂರ್ತಿ

ಹಳ್ಳಿಮೈಸೂರು, ಹೊಳೆನರಸೀಪುರ (ತಾ), ಹಾಸನಜಿಲ್ಲೆ, ದೂರವಾಣಿ: 08175-560705

ಡಿ.ವಿ.ಗುಂಡಪ್ಪನವರು ಹೇಳ್ತಾರೆ, 'ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ. ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ' ಅಂತ. ಅದನ್ನು ನಾನು ಸದಾ ಜ್ಞಾಪಿಸಿಕೊಳ್ಳುತ್ತೇನೆ. ಈ ರೀತಿ ಇರುವುದೇ ಮನುಷ್ಯನ ಸಹಜ ಗುಣ. ಅದನ್ನು ಬಿಟ್ಟು ಕಪಟವಾದ ಗುಣ ಹೊತ್ತರೆ ಫಲ ದೊರೆಯುವುದಿಲ್ಲ. ಎಲ್ಲರೊಳಗೊಂದಾಗಿ ಬದುಕುವುದೇ ನನ್ನ ಜೀವನಧರ್ಮ.



ಹಳ್ಳಿಮೈಸೂರಿನ ಸಹಕಾರ ಸಂಘಕ್ಕೆ ಕಾಯಕಲ್ಪ ನೀಡಿದ ಎಚ್.ಕೆ.ರಾಮಚಂದ್ರಯ್ಯ

ಹಳ್ಳಿಮೈಸೂರಿನ ಎಚ್.ಕೆ. ರಾಮಚಂದ್ರಯ್ಯನವರು ಎಚ್.ಎಸ್. ಕೇಶವಮೂರ್ತಿ ಹಾಗೂ ಕಟ್ಟೆಪುರದ ಗಂಗಮ್ಮ ದಂಪತಿಗಳ ಜ್ಯೇಷ್ಠ ಪುತ್ರ. ಇವರ ಧರ್ಮಪತ್ನಿ ಕೆ.ಶಕುಂತಲಾ ಕೇರಳಾಪುರದ ಕೃಷ್ಣಪ್ಪ ಹಾಗೂ ಸುಂದರಮ್ಮ (ರಾಮಲಕ್ಷ್ಮಮ್ಮ) ಅವರ ಮಗಳು. ರಾಮಚಂದ್ರಯ್ಯನವರಿಗೆ ಈಗ ೫೭ ವರುಷ. ಅವರಿಗೆ ಒಬ್ಬಳೇ ಮಗಳು. ಅವರ ಮನೆಯಲ್ಲಿಯೇ ಕುಳಿತು, ಹಳ್ಳಿಮೈಸೂರಿಗೆ ಸಂಕೇತಿಗಳ ಆಗಮನ ಹಾಗೂ ಐತಿಹ್ಯದ ಬಗ್ಗೆ ಸುದೀರ್ಘವಾದ ಉಪನ್ಯಾಸ ಮಾಡಿದರು. ಸ್ವಾರಸ್ಯಪೂರ್ಣವಾಗಿತ್ತು. ನಂತರದ್ದು ಅವರ ಬದುಕು. ಮಾತಿಗಿಳಿದೆವು.

- **ರಾಮಚಂದ್ರಯ್ಯನವರೇ, ನಿಮ್ಮ ಕುಟುಂಬದ ಬಗ್ಗೆ ಹೇಳಿ.**

ನಮ್ಮ ತಂದೆ-ತಾಯಿಗೆ ನಾವು ಹತ್ತು ಜನ ಮಕ್ಕಳು. ಐದು ಜನ ಗಂಡುಮಕ್ಕಳು, ಐದು ಜನ ಹೆಣ್ಣುಮಕ್ಕಳು. ಅವರಿಗಿದ್ದ ತೋಟ ೧೮ ಗುಂಟೆ ಮಾತ್ರ. ಅಷ್ಟರಲ್ಲಿ ಅವರು ಐದೂ ಜನ ಹೆಣ್ಣುಮಕ್ಕಳ ಮದುವೆ ಮಾಡಿದರು. ಐದು ಜನ ಗಂಡುಮಕ್ಕಳಿಗೂ ಸಾಧ್ಯವಾದಷ್ಟು ವಿದ್ಯಾಭ್ಯಾಸವನ್ನು ಕೊಟ್ಟರು. ಆದರೆ ಐಶಾರಾಮಿ ಜೀವನ ಸಾಧ್ಯವಿರಲಿಲ್ಲ. ನಾನು ಓದುವ ಕಾಲದಲ್ಲಿ ಇಲ್ಲಿಗೆ ಹೈಸ್ಕೂಲ್ ಬಂದಿತ್ತು. ಮನೆ ಮುಂದೇನೇ ಹೈಸ್ಕೂಲು ಮುಗಿಸಿದೆ. ಅಲ್ಲಿಂದ ಮುಂದಕ್ಕೆ ಮೈಸೂರಿನಲ್ಲಿ ಓದಿದೆ, ಅನಾಥಾಲಯದಲ್ಲಿ. ನನ್ನ ತಮ್ಮ ಎಸ್.ಎಸ್.ಎಲ್.ಸಿ. ಆದ ಮೇಲೆ ಕೆ.ಆರ್.ಪೇಟೆಯಲ್ಲಿ ವಾರಾನ್ನ ಮಾಡಿಕೊಂಡು, Diploma ಮಾಡಿದ. ಅವನು ಓದಿ ಕೆಲಸಕ್ಕೆ ಸೇರಿದ ಮೇಲೆ ಮತ್ತೊಬ್ಬ SSLC ಮುಗಿಸಿದ. ಎರಡನೆಯ ತಮ್ಮ ಮೂರನೆಯವನನ್ನು ಓದಿಸಿದ, ಮೂರನೇ ತಮ್ಮ ನಾಲ್ಕನೆಯವನನ್ನು, ನಾಲ್ಕನೆಯವನು ಐದನೆಯವನನ್ನು - ಇದು ನಮ್ಮ ಮನೆಯಲ್ಲಿ ನಡೆದು ಬಂದ ರೀತಿ. ಹೆಚ್ಚು ಖರ್ಚನ್ನು ನಾವು ಮಾಡಲು ಸಾಧ್ಯವಿರುತ್ತಿರಲಿಲ್ಲ. ಆದ್ದರಿಂದ ಆಸೆಯೂ ಇರಲಿಲ್ಲ. ಇದನ್ನು 'ಅಭಾವ ವೈರಾಗ್ಯ' ಅಂತಾರೆ. ಆ ವೈರಾಗ್ಯ ನಮಗಿತ್ತು. (ನಗು)

- **ಯಾಕೆ ಯಾರೂ ವ್ಯವಸಾಯಸ್ಥರಾಗಲಿಲ್ಲ?**

ಇದೀವಿ. ಈಗ ನನ್ನ ತಮ್ಮ ಒಬ್ಬ ತೋಟ ನೋಡುತ್ತಿದ್ದಾನೆ. ಉಪಕಸುಬಾಗಿ ಪೌರೋಹಿತ್ಯವನ್ನೂ ಆಚರಣೆಯಲ್ಲಿಟ್ಟುಕೊಂಡಿದ್ದಾನೆ. ನಮ್ಮ ತಂದೆ ವೇದಾಧ್ಯಯನಸಂಪನ್ನರಾಗಿದ್ದರು. ಪೌರೋಹಿತ್ಯವನ್ನೂ ಮಾಡುತ್ತಿದ್ರು. ಅದನ್ನು ನನ್ನ ತಮ್ಮನಿಗೆ ಕಲಿಸಿದ್ದಾರೆ. ತೋಟ, ಹಸು ಎಲ್ಲಾ ಇಟ್ಟುಕೊಂಡು ನನ್ನ ತಮ್ಮ ಹಾಗೂ ಅವನ ಹೆಂಡತಿ (ಶ್ರೀನಿವಾಸಮೂರ್ತಿ, ಸುಮಿತ್ರ) ಜತೆಯಾಗಿ ದುಡಿಯುತ್ತಿದ್ದಾರೆ.

- **ಹಾಗಾದ್ರೆ ನಿಮ್ಮ ತಂದೆ ನಿಮ್ಮನ್ನೆಲ್ಲಾ ಸಾಕಿದ್ದು ಪೌರೋಹಿತ್ಯದಿಂದ ಬಂದ ಹಣದಿಂದ್ಲಾ?**

ಪೌರೋಹಿತ್ಯ ಅವಾಗಿನ್ನೂ ಸಂಪಾದನೆಯ ಹಂತದಲ್ಲಿ ಇರಲಿಲ್ಲ. ಯಾಕೇಂದ್ರೆ ಇವರನ್ನು ಮೀರಿಸುವ ಪುರೋಹಿತರು ಬೇಕಾದಷ್ಟು ಜನ ಇದ್ರು. ಹಾಗಾಗಿ ಇವರೇನಿದ್ರೂ ಸಹಾಯಕರಾಗಿ ಹೋಗೋರು. ಅದರಿಂದ ನಮಗೆ feed ಮಾಡಲು ಆಗುತ್ತಿರಲಿಲ್ಲ. ಹಳೆಯ ತಲೆಮಾರಿನವರು ಕಾಲವಾದ ಮೇಲೆ ಇವರೇ ಮುಖ್ಯ ಪುರೋಹಿತರಾದ್ರು. ಆನಂತರ ಇವರಿಗೂ ಸ್ವಲ್ಪ ಆದಾಯ ಬಂತು. ಇದು ನನ್ನ ೩, ೪, ೫ನೇ ತಂಗಿಯರ ಮದುವೆಗೆ ಅನುಕೂಲವಾಯ್ತು.

- **ಮತ್ತೆ ಹ್ಯಾಗೆ ನಿಮ್ಮ ತಂದೆ ತಾಯಿ ಸಾಕಿದ್ರು! ಏನು ಕಷ್ಟ ಅನುಭವಿಸಿದ್ರಿ ಚಿಕ್ಕಂದಿನಲ್ಲಿ ನೀವು?**

ಕಷ್ಟ ಅಂದ್ರೆ ಇನ್ನೇನೂ ಇಲ್ಲ. ೧೮ ಗುಂಟೆ ತೋಟದ ಆದಾಯದಲ್ಲಿ ಜೀವನ ಸಾಗಬೇಕಿತ್ತು. ನಮ್ಮ ತಾಯಿ ಶಿಸ್ತಿನ ಹೆಂಗಸು. ಇದ್ದಿದ್ರಲ್ಲಿ ಮಾಡಿ ಎಲ್ಲರಿಗೂ ಹಂಚಿಬಿಡೋರು. ರಾತ್ರಿ ಹೊತ್ತಲ್ಲಿ ನಾವು ತಟ್ಟೆ ಮುಂದೆ ಕುಳಿತು ಊಟ ಮಾಡಿದ್ದಿಲ್ಲ. ಕೈ ತುತ್ತನ್ನು ಕೊಡೋರು ಆಗ. ಮಾಡಿದ್ದಷ್ಟನ್ನು ಅಲ್ಲಿ ಇಟ್ಟುಕೊಳ್ಳೋರು, ಸುತ್ತ ನಮ್ಮನ್ನ ಕೂರಿಸಿಕೊಳ್ಳೋರು. ಎಲ್ಲರಿಗೂ ತುತ್ತು ಹಾಕೋರು. ಅದು ಮುಗಿಯೋವರೆಗೆ ಕೊಟ್ಟುಬಿಡೋರು. ಇದು ಪದ್ಧತಿ. ನಮ್ಮ ತಂದೆ-ತಾಯಂದಿರು ಉಳಿಸ್ತಾ ಇದ್ದ ಪದ್ಧತಿ ಅಂದ್ರೆ - ಇವತ್ತು ಸೋಮವಾರ ಊಟ ಮಾಡೋಲ್ಲ, ಏಕಾದಶಿ ಊಟ ಇಲ್ಲ, ಶನಿವಾರ ಒಂದೇ ಹೊತ್ತು - ಈ ರೀತಿ ಅವರು ಅನುಭವಿಸಿದ್ರು.

ನಾವು ವಿದ್ಯಾಭ್ಯಾಸಕ್ಕೆ ಹೋದಾಗ ತಂದೆ ತಾಯಂದಿರ ಆಶ್ರಯ ಕಡಿಮೆ. ಸಾರ್ವಜನಿಕರ ಆಶ್ರಯವೇ ಹೆಚ್ಚಿತ್ತು. ನಾನು ಮೈಸೂರಿನಲ್ಲಿ ಸುಮಾರು ಎರಡು ವರುಷ ಭಿಕ್ಷಾನ್ನ ಮಾಡಿದೆ. ಆಮೇಲೆ ಅನಾಥಾಲಯದಲ್ಲಿ ಮೂರು ವರುಷ ಓದಿದೆ.

- **ಕಷ್ಟಪಟ್ಟು ಓದಿದ್ರೆ ವಿದ್ಯೆಯ ಬೆಲೆ ತಿಳಿಯುತ್ತೆ ಅಂತಾರೆ. ವಿದ್ಯೆ ನಿಮ್ಮ ಬದುಕಿನಲ್ಲಿ ಯಾವ ರೀತಿಯ ಬದಲಾವಣೆ ತಂದಿದೆ!**

ವಿದ್ಯಾವಂತನಾಗಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ. ವಿದ್ಯೆ ಇಲ್ಲದವನು ಎಂತಹವನು ಅಂದ್ರೆ 'ಸಾಕ್ಷಾತ್ ಪಶುಃ ಪುಚ್ಛವೃಷಾಣಹೀನ' ಅಂತ ಸಂಸ್ಕೃತದಲ್ಲಿ ಹೇಳ್ತಾರೆ. ಅಂದ್ರೆ ಕೊಂಬು ಬಾಲ ಇಲ್ಲದ ಹಸುವಿನಂತೆ ಎಂಬರ್ಥ.

- **ನೀವು ಓದದೇ ಇದ್ರೆ ಏನಾಗ್ತಾ ಇದ್ರಿ?**

ನಾನು ಓದದೇ ಇರುವವರ ಗುಂಪಿನಲ್ಲಿ ಇರ್ತಿದ್ದೆ. (ನಗು)

- **ಈಗ ನೀವು ಯಾವತ್ತೂ ವ್ಯವಸಾಯ ಮಾಡಲೇ ಇಲ್ವ?**
  ನಾನೂ ಸಹ ತೋಟದಲ್ಲಿ ವಿಳ್ಳೇದೆಲೆ ಬೇಸಾಯ ಮಾಡಿದೀನಿ. ನನ್ನ ೩೦ನೇ ವಯಸ್ಸಿನವರೆಗೆ ತೋಟದಲ್ಲಿ ದುಡಿದಿದ್ದೇನೆ.

- **ಯಾಕೆ, ಮತ್ತಷ್ಟು ಜಮೀನು ಖರೀದಿ ಮಾಡಿ ವ್ಯವಸಾಯಸ್ಥನಾಗುವ ನಿರ್ಧಾರ ಮಾಡಲಿಲ್ಲ?**
  ಜಮೀನು ಖರೀದಿ ಮಾಡಲು ಹಣವಿರಲಿಲ್ಲ. ಜಮೀನು ಮಾರುವವರೂ ಆಗ ಇರಲಿಲ್ಲ. ನಮಗೆ ಹೊಲ, ಗದ್ದೆ ಜಮೀನು ಮಾಡುವ ಚೈತನ್ಯ ಇರಲಿಲ್ಲ. ತೋಟದ ಜಮೀನು ಮಾಡುವ ಬುದ್ಧಿ ನನಗಿತ್ತು. ತೋಟದ ಜಮೀನು ಮಾರುವವರಿರಲಿಲ್ಲ. ಆದ್ದರಿಂದ ಇದ್ದಷ್ಟು ಜಮೀನಿನಲ್ಲೇ ಇದ್ವಿ. ಪುಣ್ಯಾತ್ಮರು, ಸೋಮನಾಥ ಘನಪಾಠಿಗಳ ತಮ್ಮ ನಮಗೆ ಅರ್ಧ ಎಕರೆ ತೋಟವನ್ನು ಕೊಟ್ರು. ಹ್ಯಾಗೆ ಕೊಟ್ರು - ಅವತ್ತು ಅದನ್ನು ಕೊಳ್ಳುವ ಚೈತನ್ಯ ನಮಗಿರಲಿಲ್ಲ. ಅವರನ್ನು ತಂಪು ಹೊತ್ತಿನಲ್ಲಿ ನೆನೆಯಬೇಕು. ನಾಲ್ಕು ಸಾವಿರ ರೂಪಾಯಿಗೆ ಅರ್ಧ ಎಕರೆ ತೋಟವನ್ನು ಕೊಟ್ರು. ನಾಲ್ಕು ಸಾವಿರವನ್ನೂ ಸಾಲವಾಗೇ ಕೊಟ್ರು, ವರುಷಕ್ಕೆ ಒಂದೊಂದು ಸಾವಿರ ತೀರ್ಸು ಅಂತ. ಅವತ್ತು ಆ ತೋಟದಿಂದ ವರುಷಕ್ಕೆ ಬರುತ್ತಿದ್ದ ಆದಾಯ ಎರಡು ಸಾವಿರ. ಇವತ್ತು ಆ ತೋಟ ನಮಗೆ ಕಾಮಧೇನು. ಅವರು ಎಷ್ಟು ಒಳ್ಳೆಯ ಮನಸ್ಸಿನಿಂದ ನಮಗೆ ಕೊಟ್ಟಿದಾರೋ, ನಾವು ಅಷ್ಟು ಉದ್ಧಾರವಾಗಿದ್ದೀವಿ. ಅದರಿಂದಲೇ ಬದುಕಿದ್ದು ನಾವು. ಹೆಚ್ಚು ಜಮೀನು ಸಂಪಾದನೆ ಮಾಡಲು ಆಗದ್ದರಿಂದ ಜೀವನ ಅವಲಂಬನೆಗಾಗಿ ಹೊರಗಡೆ ಹೋಗಬೇಕಾಯಿತು. ಎಲ್ಲರೂ ಸಣ್ಣ ಸಣ್ಣ ನೌಕರಿ ಅರಸುತ್ತಾ ಸಾಗಿದ್ರು. ನಾನೊಬ್ಬ ಇಲ್ಲಿ co-operative society ಸೆಕ್ರೆಟರಿ ಆದೆ - ಕಡಿಮೆ ಸಂಬಳಕ್ಕೆ. ನನ್ನ ತಮ್ಮ ಭದ್ರಾವತೀಲಿ ಕಬ್ಬಿಣದ ಕಾರ್ಖಾನೆ ಸೇರಿದ. ಇನ್ನೊಬ್ಬ ಕನಕಪುರದ Reelers Industrial Co-operative Society ಸೇರಿದ. ನಾಲ್ಕನೆಯ ತಮ್ಮ ಜಮೀನನ್ನು ನೋಡಿಕೊಂಡು ಪೌರೋಹಿತ್ಯಾನೂ ಮಾಡ್ತಿದಾನೆ. ಐದನೇ ತಮ್ಮ ಬೆಂಗಳೂರಿನ ಖಾಸಗಿ factoryನಲ್ಲಿದಾನೆ. ಹೆಣ್ಣುಮಕ್ಕಳ ಮದುವೆ ಮಾಡಿ ಗಂಡಂದಿರ ಮನೆಗೆ ಕಳುಹಿಸಿದೀವಿ. ಅವರು ಯಾರೂ ನೌಕರಿ ಮಾಡುತ್ತಿಲ್ಲ.

- **ನೀವು ಸಹಕಾರಿ ಕ್ಷೇತ್ರವನ್ನು ಆಯ್ಕೆ ಮಾಡಿದ್ದು ಹ್ಯಾಗೆ? ಅದೇ ಬೇಕೂಂತಾನಾ ಅಥವಾ ಅನಿವಾರ್ಯತೇನಾ?**
  ಸಹಕಾರಿ ಕ್ಷೇತ್ರವೇ ನನಗೆ ಗೊತ್ತಿರಲಿಲ್ಲ. ಮೈಸೂರಿನಿಂದ ಓದು ಮುಗಿಸಿ ಬಂದ ಮೇಲೆ, ಈ ಊರಿನ ನಾಗರಾಜಯ್ಯನವರ ಸ್ನೇಹ ಆಯ್ತು. ಅಷ್ಟೊತ್ತಿಗೆ, ನಮ್ಮೂರಿನ ಸಹಕಾರ ಸಂಘದ ಕಾರ್ಯದರ್ಶಿ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಅನ್ನೋ ದೂರಿತ್ತು. ಆ ಜಾಗಕ್ಕೆ ಬೇರೊಬ್ಬನನ್ನು ತರಬೇಕು ಅಂತಾ ಆದಾಗ ನಾಗರಾಜಯ್ಯನವರು ನನ್ನ ಹೆಸರನ್ನು ಸೂಚಿಸಿದ್ರು. ನಾನು ಸಹಕಾರಿ ಸಂಘಕ್ಕೆ ಪ್ರವೇಶಿಸಲು ನಾಗರಾಜಯ್ಯನವರೇ ಕಾರಣ. ಅವರು ನನ್ನ ಬೆನ್ನೆಲುಬಾಗಿ ನಿಂತು, ನನಗೋಸ್ಕರ ಮೂರು ನಾಲ್ಕು ವರುಷ ತಮ್ಮ ಕೆಲಸ ಬದಿಗೊತ್ತಿ, ನನ್ನನ್ನು ಮೇಲಕ್ಕೆ ತಂದ್ರು. ಇದ್ರಿಂದ ನನ್ನ ಜೀವನಕ್ಕೊಂದು ಆಧಾರ ಸಿಕ್ತು. ಈ ಕೆಲಸ ನನಗೆ ತೃಪ್ತಿಯನ್ನೂ ತಂತು. ಕಾರಣ ಏನೂ ಅಂದ್ರೆ, ನಾನು ಈ ಊರಲ್ಲಿ ಹುಟ್ಟಿ ಬೆಳೆದಿದ್ರೂ ಸಹ, ಈ ಊರಿನ ಜನರೇ ಗೊತ್ತಿರಲಿಲ್ಲ. ಬೆಳಗಾದ್ರೆ ತೋಟಕ್ಕೆ ಹೋಗ್ತಿದ್ದೆ, ಸಾಯಂಕಾಲ ಆಯ್ತೂಂದ್ರೆ ಮನೆ. ಮಧ್ಯದಲ್ಲಿ ಊರನ್ನ ನೋಡಿದವನೇ ಅಲ್ಲ. ಸಹಕಾರಿ ಸಂಸ್ಥೆಗೆ ಹೋದ ಮೇಲೆ ಊರ ಜನ ಪರಿಚಿತರಾದ್ರು. ಎಲ್ಲರಲ್ಲೂ ಬೆರೆತೆ. ಹೆಚ್ಚು ಸಹಕಾರಿಗಳು ದೊರೆತರು. ನಾನೂ ಬೆಳೆದೆ.

  ೧೯೭೭ರಲ್ಲಿ ಈ ಸಂಘಕ್ಕೆ ನಾನು ಬಂದಾಗ, ಸಾಲ ವಿಪರೀತ ಇತ್ತು. ಒಂದು Building ಕಟ್ಟಿ ೧೦,೦೦೦ ಸಾಲ ತಲೆ ಮೇಲಿತ್ತು. ಆದರೆ ಆ ಸಮಯಕ್ಕೆ ಸರಿಯಾಗಿ ಕ್ಷಾಮ ಬಂತು. ಆಗ DC ಅವರಿಂದ ರೇಷನ್ ಮಾರಲು order ಬಂತು. ಮಾರಾಟ ಮಾಡುವಾಗ, ನಮ್ಮ ಅದೃಷ್ಟವೋ ಏನೋ DC ಅವರೇ ಬಂದುಬಿಟ್ರು. ನಮ್ಮ ವ್ಯವಸ್ಥೆ ಎಲ್ಲಾ ನೋಡಿ, ಅವರಿಗೆ ಸಂತೋಷವಾಗಿ ಹಳ್ಳಿಮೈಸೂರು Society ಎಷ್ಟು ಕೇಳಿದ್ರೂ ಕೊಡಿ ಅಂದ್ರು. ನಾನು ಪ್ರತಿದಿನ ಆಗ ಒಂದು ಲೋಡ್ ಕೆಂಪುಜೋಳ ಮಾರುತ್ತಿದ್ದೆ. ರೂಪಾಯಿಗೆ ಒಂದು ಕೆ.ಜಿ. ಜೋಳ. ಎರಡು ವರುಷ ಕ್ಷಾಮದ ದವಡೆಗೆ ಜನ ಸಿಲುಕಿದ್ರು. ಕೆಲವರಿಗೆ ಈ ಜೋಳ ಕೊಳ್ಳಲು ನಾಚಿಕೆ. ಯಾಕೇಂದ್ರೆ ಮೊದಲು ಚೆನ್ನಾಗಿ ಬದುಕಿದವರು. ರಾತ್ರಿ ಹೊತ್ತು ತೆಗೆದುಕೊಂಡು ಹೋಗೋರು. ಜೋಳ ಮಾರಿದ ಮೇಲೆ ಖಾಲಿ ಚೀಲ ಉಳೀತಲ್ಲ ಅದನ್ನು ಮಾರಿ ಇನ್ನೊಂದು Building ಕಟ್ಟಿದ್ವಿ. ಐದು ಚದರದ RCC Building ಸ್ವಂತವಾಗಿ ೧೨,೦೦೦ ರೂಪಾಯಿಯಲ್ಲಿ ಕಟ್ಟಿದ್ವಿ. ಜನಗಳ ಸಹಕಾರವೂ ಇತ್ತು. ಕೊಟ್ಟ ಸಾಲ ವಸೂಲಾಯ್ತು. ಸಂಘ ಪ್ರವರ್ಧಮಾನಕ್ಕೆ ಬಂತು. ಇವತ್ತು ಸಂಘದಲ್ಲಿ ಲಕ್ಷಾಂತರ ರೂಪಾಯಿ ಬಂಡವಾಳವಿದೆ. ಯಾವ ವ್ಯವಹಾರವನ್ನಾದರೂ ಮಾಡುವ ಚೈತನ್ಯ ಇದೆ.


- **ನಿಮ್ಮ ಹೆಂಡತಿ ಯಾವ ರೀತಿ ನಿಮ್ಮ ಸುಖದುಃಖದಲ್ಲಿ ಭಾಗಿಯಾಗಿದ್ದಾರೆ? ನಿಮ್ಮ ಅಭಿವೃದ್ಧಿಯಲ್ಲಿ ಅವರ ಪಾಲು ಎಷ್ಟು?**
ಈ ಸಹಕಾರಿ ಸಂಘದಲ್ಲಿ ಒಳ್ಳೆ ಹಾಗೂ ಕೆಟ್ಟ ಜನರೊಡನೆ ಇರಬೇಕು. ಅವರನ್ನು ವರ್ಗೀಕರಿಸಲು ಸಾಧ್ಯವಿಲ್ಲ. ಮನೆಯಲ್ಲಿ ಎಲ್ಲರನ್ನೂ ಸತ್ಕರಿಸಬೇಕಾಗುತ್ತೆ. ಅಂಥ ಸಂದರ್ಭದಲ್ಲಿ ಹೆಂಡತಿಯಾದವಳು ಮುಖ ತಿರುಗಿಸಿದ್ರೆ ನಮ್ಮ ಪರಿಸ್ಥಿತಿ ಕಷ್ಟ ಆಗುತ್ತೆ. ಅದು ಆಗಲಿಲ್ಲ. ಯಾರೇ ಬರಲಿ, ಎಷ್ಟು ಹೊತ್ತಿನಲ್ಲೇ ಬರಲಿ ಅವರನ್ನು ಸತ್ಕರಿಸುವಲ್ಲಿ ಹೆಂಡತಿ ಸಹಕರಿಸಿದಳು. ಅದೂ ನನಗೆ ನನ್ನ ವೃತ್ತಿಜೀವನದಲ್ಲಿ ಸಹಕಾರ ನೀಡಿದೆ.

- **ಹಳ್ಳಿಮೈಸೂರಿನಲ್ಲಿ ಸಂಕೇತಿಗಳ ನಡುವೆ ಪರಸ್ಪರ ಸಹಕಾರ ಹ್ಯಾಗಿದೆ?**
ನಮ್ಮಲ್ಲಿ ಯಾವ ವೈಷಮ್ಯವೂ ಇಲ್ಲ. ಬ್ರಾಹ್ಮಣರಲ್ಲಿ ಎಲ್ಲರೂ ಪರಸ್ಪರ ಸಹಕಾರದಿಂದ ಒಂದೇ ಸಮ ಇದ್ದೇವೆ.

- **ನಿಮ್ಮ ಬದುಕಿನ ದಾರಿಯನ್ನು ಹಿಂತಿರುಗಿ ನೋಡಿದರೆ, ನಿಮ್ಮ ಸಾಧನೆ ನಿಮಗೆ ತೃಪ್ತಿ ತಂದಿದೆಯಾ?**
ನಾನು ತೀರ ಆಸೆ ಇಟ್ಟುಕೊಂಡುಬಿಟ್ಟೆ. ಆದ್ದರಿಂದಲೇ ನಾನು ತೀರ ಕೆಳಗೆ ಬಂದೆ. ಯಾಕೇಂದ್ರೆ ನಮ್ಮ ಚಿಕ್ಕಪ್ಪ IAS Officer. ಅವರು ಪದೇ ಪದೇ ನನ್ನನ್ನು ಕೇಳೋರು, ನೀನೇನು ಓದುತ್ತಿಯೋ ಅಂತ. ನಿಮ್ಮ ಹಾಗೆ IAS officer ಆಗ್ತೀನಿ ಅಂತಿದ್ದೆ. ಆದ್ರೆ ನಾನು B.Sc.ಯಿಂದ್ಲೇ ವಾಪಸ್ಸು ಬಂದೆ. ಆದ್ದರಿಂದ ಹೆಚ್ಚಿನ ಆಸೆಯನ್ನು ಇಟ್ಟುಕೋಬಾರದು ಎಂಬ ಬುದ್ಧನ ತತ್ತ್ವವನ್ನು ಅಳವಡಿಸಿಕೊಂಡೆ. ಯಾಕೇಂದ್ರೆ ಅಭಾವದಿಂದ.

- **ನಿಮ್ಮ ಜೀವನದುದ್ದಕ್ಕೂ ನೀವು ಪಾಲಿಸಿದ ತತ್ತ್ವ, ಆದರ್ಶ ಯಾವುದು?**
ನನಗೆ ನನ್ನನ್ನು societyಗೆ ಸೇರಿಸಿ, ಬೆಂಗಾವಲಾಗಿ ಬೆಳಸಿದ ನಾಗರಾಜಯ್ಯನವರು - ಅವರೇ ಆದರ್ಶ. ಅವರು ಕಷ್ಟದ ಮಡುವಿನಲ್ಲಿ ಮುಳುಗಿದವರು, ತೇಲಿದವರು, ಈಜಿದವರು. ಅದರಲ್ಲೇ ಸುಖ ಕಂಡವರು. ಅವರನ್ನು ನೋಡಿದಾಗ, ನನ್ನ ಕಷ್ಟ ಅವರ ಮುಂದೆ ಏನೇನೂ ಅಲ್ಲ ಅನ್ನಿಸಿತು.

- **ಒಳ್ಳೆಯದು ರಾಮಚಂದ್ರಯ್ಯನವರೆ, ಇದುವರೆಗೂ ನಿಮ್ಮ ಬದುಕಿನ ಬಗ್ಗೆ ಅನೇಕ ವಿಚಾರಗಳನ್ನು ತಿಳಿಸಿದ್ರಿ, ನಮಸ್ಕಾರ.**
ವಂದನೆಗಳು



ಕೆ.ಶಕುಂತಲಾ- ಎಚ್.ಕೆ.ರಾಮಚಂದ್ರಯ್ಯ ದಂಪತಿ ತಮ್ಮ ಪ್ರೀತಿಯ ಪುತ್ರಿಯೊಂದಿಗೆ: ಅಡಿಕೆ ಹರಡುವ ಮಂದಳದ ಹಿನ್ನೆಲೆ: ಹಳ್ಳಿಮೈಸೂರು

ಆ) ಎಚ್.ಎನ್. ಅನಂತರಾಮಯ್ಯ ಇ/ಮ ನಂಜುಂಡಾವಧಾನಿ

ಹಳ್ಳಿಮೈಸೂರು, ಹೊಳೆನರಸೀಪುರ (ತಾ) ಹಾಸನಜಿಲ್ಲೆ ದೂರವಾಣಿ: 08175-560658

ನಾವು ಕಷ್ಟಪಡದೆ ಊಟ ಮಾಡಲು ಸಾಧ್ಯವಿಲ್ಲವಲ್ಲ. ಭೂಮಿಯಲ್ಲಿ ಕಷ್ಟಪಡಬೇಕು, ಬೆವರು ಸುರಿಸಬೇಕು. ಆದರಿಂದಲೇ ಊಟ ಮಾಡಬೇಕು. ನಾನು ಇವತ್ತಿನವರೆಗೂ ಅಲ್ಲೇನೇ, ನನ್ನ ಜಮೀನಿನಲ್ಲೇ ಕುಳಿತೇ ಊಟ ಮಾಡುವುದೇ ವಿನಹ, ಮನೇಲಿ ಕುಳಿತು ಊಟ ಮಾಡುವ ಅಭ್ಯಾಸವಿಲ್ಲ.



ಎಸ್.ಕೆ.ಲೀಲಾವತಿ-ಎಚ್.ಎನ್.ಅನಂತರಾಮಯ್ಯ ದಂಪತಿ: ಸ್ವಗೃಹದ ಮುಂದೆ: ಹಳ್ಳಿಮೈಸೂರು

ಕೇರಳಾಪುರದ ಲಕ್ಷ್ಮೀದೇವಮ್ಮ ಹಾಗೂ ಹಳ್ಳಿಮೈಸೂರಿನ ನಂಜುಂಡಾವಧಾನಿಗಳ ಎರಡನೆಯ ಮಗ ಎಚ್.ಎನ್. ಅನಂತರಾಮಯ್ಯನವರಿಗೆ ಈಗ ೭೦ರ ಇಳಿ ಹರಯ. ಇವರ ಧರ್ಮಪತ್ನಿ ಲೀಲಾವತಿಯವರಿಗೆ ೬೦ ವರುಷ. ಗಂಡ ಹೆಂಡತಿ ಇಬ್ಬರಿಗೂ ವ್ಯವಸಾಯದಲ್ಲಿ ಅಪಾರ ಪ್ರೀತಿ. ಬೆಳಗಿನಿಂದ ಸಂಜೆಯವರೆವಿಗೂ ಅವರ ವಾಸ ತೋಟದಲ್ಲಿ. ಯುವಕರನ್ನು ನಾಚಿಸುವ ಉತ್ಸಾಹ. ಅವರ ಮನೆಯಲ್ಲಿ ಮಾತಿಗಿಳಿದಾಗ, ಹೊತ್ತಿಳಿಯುತ್ತಿತ್ತು. ಅದುವರೆವಿಗೂ ಅನಂತರಾಮಯ್ಯನವರು ತೂಗಿಕೊಳ್ಳುತ್ತಿದ್ದ ಜೋಕಾಲಿ ಜೀವನದ ಏರಿಳಿತವನ್ನು ಬಿಂಬಿಸುವಂತೆ ನಿಧಾನವಾಗಿ ಚಲಿಸುತ್ತಿತ್ತು.

- **ಅನಂತರಾಮಯ್ಯನವರೆ, ನಮಸ್ಕಾರ.**

  ನಮಸ್ಕಾರ

- **ಎಲ್ಲಿತನಕ ಓದಿದ್ರಿ ತಾವು?**

  ನಾನು SSLCವರೆಗೂ ಓದಿದೆ. ನಾನು ನನ್ನ ಒಂಭತ್ತನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡೆ. ನನ್ನ ತಾಯೀನೇ ನನ್ನನ್ನು ಸಾಕಿಸಲಹಿದ್ದು. ಸಾಲಿಗ್ರಾಮದಲ್ಲಿ ಬ್ರಾಹ್ಮಣರ ಸಂಘ ಇತ್ತು. ಅಲ್ಲಿದ್ದು ನಾನು ಓದಿದೆ. ಅವತ್ತು ತುಂಬಾ ಕಷ್ಟ ಇತ್ತು. ಇಲ್ಲಿ ನಮ್ಮ ಮನೇಲಿ ನೋಡೋರಿಲ್ಲ. ಸಣ್ಣ ವಯಸ್ಸು. ನಾವು ನಮ್ಮ ತಂದೆಗೆ ಮೂರು ಗಂಡು ಹಾಗೂ ನಮಗಿಂತ ಹಿರಿಯರು ಐದು ಜನ ಹೆಣ್ಣು ಮಕ್ಕಳಿದ್ರು. ಅವರು ಮುಂಚೇನೇ ಮದುವೆಯಾಗಿ ಹೋಗಿದ್ರು. ನನ್ನಣ್ಣ ಮೊದಲು ತಂದೆಯವರ ಜತೆ ವೇದಾಭ್ಯಾಸ ಮಾಡುತ್ತಿದ್ದ. ಅವರು ಹೋದ ಮೇಲೆ ಅಡಿಕೆ ವ್ಯಾಪಾರ ಮಾಡಲು ಆರಂಭಿಸಿದ. ಅಲ್ಪಸ್ವಲ್ಪ ಆದಾಯ ಬರೋದು. ನನ್ನ ತಾಯಿ ನನ್ನನ್ನು, 'ನೀನು ಓದಬೇಡ, ವ್ಯವಸಾಯ ಮಾಡು; ಇಲ್ಲಿಗೆ ಬಂದಿರು' ಅಂತಾ ಬಲವಂತ ಮಾಡಿದ್ರು. ಹಾಗಾಗಿ ಸಾಲಿಗ್ರಾಮದಿಂದ ಬಂದುಬಿಟ್ಟೆ.

- **ಹಳ್ಳಿಮೈಸೂರಿನಲ್ಲಿ ಓದಲು ಆಗ ಸೌಲಭ್ಯ ಇರಲಿಲ್ಲವೆ?**

  ೧೯೪೭ ರಿಂದ ೫೧ರವರೆಗೆ ಓದಲು ಇಲ್ಲಿ ಯಾವ ಸೌಲಭ್ಯವೂ ಇರಲಿಲ್ಲ. ಆಗ ಸಾಲಿಗ್ರಾಮಕ್ಕೆ ಹೈಸ್ಕೂಲು ಬಂತು. ಅಲ್ಲಿ ಹಾಸ್ಟೆಲ್ ಕಟ್ಟಿ ನಮ್ಮನ್ನೆಲ್ಲಾ ಕರೆಸಿಕೊಂಡ್ರು. ನಾವುಗಳು paying students ಆಗಿ ಹೋಗಿದ್ದು. ಅವತ್ತು ಅಗ್ಗದ ಕಾಲ. ಐದು ರೂಪಾಯಿ ತಿಂಗಳಿಗೆ. ಅಲ್ಲೇ ಜಮೀನಿತ್ತು. ತರಕಾರಿ ಬೆಳೀತಾ ಇದ್ವಿ. ಭಾವೀಲಿ ನೀರು ಸೇದೋದು, ಗಿಡ ಬೆಳೆಸೋದು. ಅಲ್ಲಿ ನಮಗೆ ಕೃಷಿ ಪಾಠವೂ ಆಯ್ತು. ಅನುಭವಾನೂ ಬಂತು. ಆ ಅಭ್ಯಾಸದಲ್ಲೇ ನಾನು ಇವತ್ತೂ ಕೃಷಿ ಮಾಡ್ತಿರೋದು. ಇಲ್ಲದೇ ಹೋದ್ರೆ ನನಗೆ ವ್ಯವಸಾಯದಲ್ಲಿ ಅಷ್ಟು ಆಸಕ್ತಿ ಬರುತ್ತಿರಲಿಲ್ಲ. ಬಾಲ್ಯದಲ್ಲಿ ಆದ ಅನುಭವ ಕೃಷಿಯಲ್ಲಿ ಪ್ರೀತಿ ಬೆಳೆಸಿದೆ. ಇವತ್ತೂ ನಮಗೆ ನಾವೇ ತರಕಾರಿ ಬೆಳೀಬೇಕು, ಅದನ್ನು ಊಟ ಮಾಡಬೇಕು, ನಮ್ಮ ಶರೀರ ಚೆನ್ನಾಗಿರಬೇಕು. ಇದೇ ಬೆಳೆದು ಬಂದಿದ್ದು.



ತಾವು ಬೆಳೆಸಿದ ತೋಟದಲ್ಲಿ ನಿಂತು ಬೀಗುವ
ಎಚ್.ಎಸ್.ಅನಂತರಾಮಯ್ಯ: ಹಳ್ಳಿಮೈಸೂರು

- **ಅವತ್ತಿನ ಕಾಲದಲ್ಲಿ ನಿಮಗೆ ಕೃಷಿ ಶಿಕ್ಷಣ ನೀಡಿದ ಗುರುಗಳು ಯಾರು?**

ನಂಜುಂಡ ಜೋಯಿಸ್ ಅಂತ ಇದ್ರು. ಅವರೇ ನಮಗೆ ಎಲ್ಲಾ ಹೇಳಿದ್ದು. ಅವರು ಹೇಳಿದ್ದನ್ನು ನಾನು ನನ್ನ ಜೀವನದಲ್ಲೂ ಅಳವಡಿಸಿಕೊಂಡೆ. ಅದೇ ನಮ್ಮನ್ನು ಇವತ್ತಿನವರೆಗೂ ಕಾಪಾಡಿದ್ದು.

- **ತಂದೆಯವರು ಜಮೀನು ಮಾಡಲಿಲ್ವಾ? ಅವರು ವ್ಯವಸಾಯ ಮಾಡಲಿಲ್ವಾ?**

ಅವರದೇ ಜಮೀನು. ನಾನು ಯಾವ ಜಮೀನೂ ಕೊಳ್ಳಲಿಲ್ಲ. ಅವರು ಮಾಡಿದ ಗೋಡೆಯಲ್ಲೇ ನಾನು ಈಗಲೂ ಚಿತ್ತಾರ ಬರೀತಿರುವುದು. ಆದರೆ ಆ ಗೋಡೆ ಹೋಗದ ಹಾಗೆ ನಾನು ಕಾಪಾಡಿಕೊಂಡು ಬಂದಿದೀನಿ ಅಷ್ಟೆ.

- **ವ್ಯವಸಾಯ ಯಶಸ್ವಿಯಾಗಲು ಯಾವುದು ಮುಖ್ಯ ಅಂತೀರಿ?**

ಭೂಮಿ ಪರೀಕ್ಷೆ ನಾವು ಮಾಡಿಕೊಂಡು ಈ ಭೂಮಿಯಲ್ಲಿ ಇಂಥಾ ಬೆಳೆ ಮಾಡಬೇಕು ಅಂತ ತೀರ್ಮಾನಿಸಬೇಕು. ನನಗೆ ೫೦ ವರುಷ service ಆಯ್ತು ತೋಟದಲ್ಲಿ. ಇವತ್ತಿನವರೆವಿಗೂ ಕೃಷಿಯಲ್ಲಿ ನಾನೇ ಸ್ವತಃ ದುಡಿದಿದ್ದೇನೆ. ಎಲ್ಲಾ ನನ್ನ estimateಗಳೇ. ಕೃಷಿಗೆ ಇಳಿದವರು ನಿಧಾನವಾಗಿ ನಾವೇ ಆಲೋಚನೆ ಮಾಡಿ, ಇದಕ್ಕೆ ಈ ಗೊಬ್ರ ಹಾಕಬೇಕು, ಈ ಮಣ್ಣು ಹಾಕಬೇಕು, ಅಂತ ತೀರ್ಮಾನಿಸಬೇಕು. ವಿಳ್ಳೇದೆಲೆ ಹಂಬನ್ನು ಜನವರಿ-ಫೆಬ್ರವರಿ ತಿಂಗಳಲ್ಲಿ ತೆಕ್ಕೆ ಬಿಡಬೇಕು. ಎಲೆ ಕುಯ್ಯ ಬೇಕಾದ್ರೆ - ಅಂಕುಲುಗಳು ಅಂತ ಎಲೆ ಮುಂದಕ್ಕೆ ಬರುತ್ತೆ ಸಣ್ಣದಾಗಿ - ಅಂಕುಲುಗಳು ಬಂದಾಗ ಎಲೆ ಕುಯ್ಯಬೇಕು. ಅದಿಲ್ಲದಾಗ ಚಳೀಲಿ ಎಲೆ ಕುಯ್ಯಬಾರದು. ಉದುರೋಗುತ್ತೆ. ಇದೆಲ್ಲಾ ನಾನು ಸ್ವತಃ ಕಲಿತಿದ್ದೇ, ನನ್ನ ಪರಿಶ್ರಮದಿಂದ. ನನಗಿವತ್ತು ವಿಳ್ಳೇದೆಲೆಯಿಂದ ೨೦ ರಿಂದ ೨೫ ಸಾವಿರ ಆದಾಯ ಇದೆ. ೫೦೦ ರಿಂದ ೬೦೦ ಗಿಡ ಅಡಿಕೇಲಿ ೪೦ ರಿಂದ ೫೦ ಸಾವಿರ ಆಗುತ್ತೆ. ೧೫೦ ತೆಂಗು ಇದೆ. ಇವತ್ತಿಗೆ ನಮ್ಮ ಜೀವನಕ್ಕೆ ಸಾಕು. ಹಿಂದೆ ಕೈತೂಕದಲ್ಲಿ ಬಾವಿಯಿಂದ ಗಡಿಗೆಗಳಲ್ಲಿ ನೀರು ಹೊತ್ತು ತೋಟದ ಗಿಡಗಳನ್ನೆಲ್ಲಾ ಉಳಿಸಿದ್ದು. ಸೀಮೆಎಣ್ಣೆ ಮೋಟಾರು ಬಂದ ಮೇಲೆ ಅದ್ರಿಂದ ನೀರು ಹೊಡೆದ್ವಿ. ಮೋಟಾರು, ಪೈಪು ಕಳ್ಳತನ ಆರಂಭವಾಯ್ತು. ಆನಂತರವೇ ನಾವು Bore-well ಹಾಕಿಸಿದ್ದು. ಅದು safe ಆಗಿರಬೇಕು ಅಂತ ಒಂದು ಮನೇನೂ ಮಾಡಿದ್ವಿ. ಆ ಮನೇಲಿ ನಮ್ಮ ಕೃಷಿ ಪರಿಕರಗಳನ್ನು ಭದ್ರವಾಗಿಡಬಹುದು. ಈಗ ಯಾವ ತೊಂದರೆಯೂ ಇಲ್ಲ. ನೆಮ್ಮದಿಯಾಗಿದೀವಿ. ಇಷ್ಟು ವಯಸ್ಸಾದ್ರೂ ತೋಟಕ್ಕೆ ಹೋಗಬೇಕು, ತೋಟದಲ್ಲಿರಬೇಕು; ಆ ಹವಾ ಚೆನ್ನಾಗಿರುತ್ತೆ, ಮನಸ್ಸಿಗೂ ತೃಪ್ತಿ ಇರುತ್ತೆ ಅನ್ನೋ ಆಸೆ.

- **ಈಗಲೂ ಏನೇನು ಕೆಲಸ ಮಾಡ್ತೀರಿ, ಅನಂತರಾಮಯ್ಯನವರೆ?**

ತೋಟದಲ್ಲಿ ಶೆತ್ತೆ ಪತ್ತೆ ಹಳವನ್ನ ತೆಗೀತೀನಿ, ಗುಣಿಗಿಣಿ ಕುಕ್ಕೋದೂ, ಹಂಬುಗಿಂಬು ಕಟ್ಟಿ ಹಾಕೋದು, ಅಲ್ಪಸ್ವಲ್ಪ ನನ್ನ ಕೈಲಾದದ್ದು ಮಾಡ್ತೀನಿ. ಉಳಿದದ್ದನ್ನು ಕೆಲಸಗಾರರಿಂದ ಮಾಡಿಸ್ತೀನಿ.

- **ನಿಮಗೆಷ್ಟು ಜನ ಮಕ್ಕಳು?**

ನನಗೆ ಇಬ್ಬರು ಗಂಡುಮಕ್ಕಳು, ಒಬ್ಬಳು ಹೆಣ್ಣು ಮಗಳು.

- **ಯಾರೂ ನಿಮ್ಮ ವ್ಯವಸಾಯ ಮುಂದುವರೆಸಲ್ವಾ?**

ಯಾರೂ ಇಲ್ಲಿ ಉಳೀಲಿಲ್ಲ. ನಾನು 'ನೀವು ಎಲ್ಲೀವರೆಗೆ ಓದ್ತೀರಪ್ಪಾ ಅಲ್ಲಿವರೆಗೆ ನನ್ನ ಕೈಲಾದಷ್ಟನ್ನು ನಾನು ಕೊಡ್ತೀನಿ. ಇನ್ನೊಬ್ಬರ

ಹತ್ರ ನೀವು ಹಣ ಕೇಳಬೇಡಿ' ಅಂದೆ. ಅವರು ಹಾಗೇ ಓದಿದ್ರು. ಮುಂದೆ ಬಂದ್ರು.

- **ನೀವು ಇಷ್ಟು ಕಷ್ಟಪಟ್ಟು ತೋಟ ಮಾಡಿದೀರಲ್ಲಾ, ನಿಮ್ಮ ನಂತರ ಮುಂದೇನು?**
ನಮ್ಮ ತಂದೆಯವರು ಮಾಡಿರೋದು. ಇದನ್ನು ಕಳೆಯಲು ನನಗೆ ಇಷ್ಟವಿಲ್ಲ. ಇರೋವರೆಗೆ ನೋಡೋದು. ಜೀವನಚಕ್ರಗಳು ಎರಡು ಉರುಳುತ್ತಿರುವವರೆಗೆ ಏನೂ ಭಯವಿಲ್ಲ. ಚಕ್ರ ಮುರಿದ ಮೇಲೆ ಇನ್ನೇನು ಮುಗಿದಂತೆ ತಾನೇ - ಸಂಸಾರದಲ್ಲಿ.



ಎಳೆಯ ಅಡಿಕೆ ಮಡಿಯಷ್ಟೇ ಲವಲವಿಕೆ ವೃದ್ಧ ಎಚ್.ಎನ್.ಅನಂತರಾಮಯ್ಯನವರಿಗೆ: ಹಳ್ಳಿಮೈಸೂರು

- **ಯಜಮಾನರೆ, ನಿಮ್ಮ ಮದುವೆ ಆದದ್ದು ಯಾವಾಗ? ನಿಮ್ಮ ಹೆಂಡತಿ ಬಗ್ಗೆ ಹೇಳಿ?**
ನನ್ನ ೨೧ನೇ ವಯಸ್ಸಿನಲ್ಲಿ ಮದುವೆಯಾಯ್ತು. ನನ್ನ ಹೆಂಡತಿಗೆ ಆಗ ಒಂಭತ್ತರಿಂದ ಹತ್ತು ವರುಷ ಇರಬಹುದು. ಅವತ್ತು ಬಡತನ. ನಮಗಿಂತ ಕೆಳಗಿನವರನ್ನು ನೋಡಿ ದೇವರು ನಮ್ಮನ್ನು ಚೆನ್ನಾಗಿಟ್ಟಿದ್ದಾನೆ ಅಂದುಕೋಬೇಕು, ಮೇಲಿನವರಂತೆ ನಾವು ಹೋಗಬೇಕು ಅನ್ನುವುದು ನನ್ನ ಹೆಂಡತಿಯ ಆಸೆ. 'ನನಗೆ ಅದು ಬೇಕು, ಇದು ಬೇಕು' ಅಂತ ಆಸೆಪಟ್ಟವಳಲ್ಲ. ಅವತ್ತಿನಿಂದ ಇವತ್ತಿನವರೆಗೂ ಅವಳು ಯಾವುದನ್ನೂ ಕೇಳಿಲ್ಲ. ನನಗೆ ಹೆಗಲಿಗೆ ಹೆಗಲು ಕೊಟ್ಟು ನಡೆದಿದ್ದಾಳೆ. ತೋಟದಲ್ಲೂ ಸಹಾಯ ಮಾಡಿದ್ದಾಳೆ. ಇಬ್ಬರೂ ಜತೇಲಿ ಇರಬೇಕು, ಜತೇಲಿ ಹೋಗಬೇಕು ಅನ್ನೋ ಆಸೆ ಅವಳಿಗೂ ಇದೆ, ನನಗೂ ಇದೆ. ಮನೆಗೆ ಹೋಗಿಬರುವ ಸಮಯ ಉಳಿಸಲು ತೋಟದಲ್ಲಿ ಸಣ್ಣ ಮನೆ ಕಟ್ಟಿದೆ. ಅವಳು ಬರದೇ ಹೋದ್ರೆ ನನಗೂ ನಿರಾಳ ಇಲ್ಲ. ಬಂದ್ರೆ ಅವಳಿಗೂ ಬೇಜಾರು ಕಳಿಯುತ್ತೆ. ಅಲ್ಲಿ ಬಂದು ಕೆಲಸ ಮಾಡಿದ್ರೆ, ನಮಗೂ ಸಹಕರಿಸಿದಂತಾಗುತ್ತೆ. ಮದುವೆಯಾದಾಗಲಿಂದಲೂ ಅವಳು ಅದೇ ರೀತಿ ನಡೆದಿದ್ದಾಳೆ. ನಾವು ಒಟ್ಟು ಕುಟುಂಬದಿಂದ ಬೇರೆಯಾದಾಗ ೧೫ ಚೀಲ ಅಡಿಕೆ ಆಗಿತ್ತು. ಬರೀ ಒಂದು ಸಾವಿರಕ್ಕೆ ಅಡಿಕೆ ಮಾರಿದ್ದು. ನನ್ನಣ್ಣ ಎರಡೂವರೆ ಎಕರೆ ಭೂಮಿ ಕೊಟ್ಟಿದ್ರು. ಅದರಲ್ಲೇ ನಾವು ಮುಂದೆ ಬಂದದ್ದು.

- **ಯಾವ ರೀತಿ ವ್ಯವಸಾಯದಲ್ಲಿ ಮುಂದೆ ಬಂದ್ರಿ ವಿವರವಾಗಿ ಹೇಳಿ?**
ಎರಡೂವರೆ ಎಕರೆ ಜಮೀನಿನಲ್ಲಿ ಅಡಿಕೆ, ತೆಂಗು, ವಿಳ್ಳೇದೆಲೆ ಹಾಕಿದೆ. ವರುಷ ವರುಷವೂ ೪೦ ರಿಂದ ೫೦ ಟ್ರಾಕ್ಟರ್ ಗೊಬ್ಬರ, ಮಣ್ಣು ಹೊಡೀತೀನಿ. ತೋಟಕ್ಕೆ ಎರಡು ಸಲ ಗೊಬ್ರ ಹಾಕುತ್ತೀನಿ. ಕಳೆ ಇಲ್ಲದ ಹಾಗೆ ತೋಟ ನೋಡಿಕೋತೀನಿ. ಆ ರೀತಿ ಮಾಡಿದ ಮೇಲೇ ನಾನು ಅಭಿವೃದ್ಧಿ ಆದದ್ದು. ಮುಂಚೆ ೧೫ ಮೂಟೆ ಅಡಿಕೆ ಆಗ್ತಿತ್ತು. ಈಗ ೬೦ ಮೂಟೆ ಅಡಿಕೆ ಆಗ್ತಿದೆ. ಅದರಲ್ಲೇ ತೃಪ್ತಿ ಆಗಿದೆ. ಇದು ಒಂದು ಎಕರೆ ಅಡಿಕೆ ವಿಸ್ತೀರ್ಣದ ಇಳುವರಿ ಅಷ್ಟೆ. ವಿಳ್ಳೇದೆಲೆ ಹಂಬಿನಲ್ಲಿ ಒಂದು ಕುಯ್ಲಿಗೆ ೧೦ ರಿಂದ ೧೫ ಸಾವಿರ ಬರುತ್ತೆ. ಏಳರಿಂದ ಎಂಟು ಸಾವಿರ ತೆಂಗಿನಕಾಯಿ ೧೦೦ ತೆಂಗಿನ ಮರದಿಂದ ಸಿಗುತ್ತೆ. ಜೀವನಕ್ಕೇನೂ ಪರವಾಗಿಲ್ಲ, ಆಳುಗಳಿಗೂ ಕೊಟ್ಟು ಸ್ವಲ್ಪ ಉಳಿಸಿಕೊಳ್ಳಬಹುದು.

- **ಬೇರೆ ಮತ್ತೇನನ್ನು ತೋಟದಲ್ಲಿ ಬೆಳೀತೀರಿ ನೀವು?**
ನಾವು ತರಕಾರಿ ಬೆಳ್ಕೋತೀವಿ. ಮನೆಗೆ ಬೇಕಾದ ತಡಗಣೆ, ಆಲೂಗೆಡ್ಡೆ ಬೆಳೀತೀವಿ. ವರ್ಷ ಕಾಲವೂ ನಮಗೆ ಬೇಕಾಗುವ ತರಕಾರಿಗಳನ್ನು ಅಲ್ಲಿ ಬೆಳೀತೀವಿ. ಹೊರಗಡೆಯಿಂದ ಕೊಳ್ಳುವುದು ಕಡಿಮೆ.

- **ವ್ಯವಸಾಯ ನಿಮಗೆ ಯಾವತ್ತೂ ನಷ್ಟ ಮಾಡಿಲ್ಲವಾ?**
ಇವತ್ತಿನವರೆಗೆವಿಗೂ ನಷ್ಟ ಆಗಲಿಲ್ಲ. ನಾವು ಖರ್ಚು ಮಾಡಿದ್ದಕ್ಕಿಂತಾ ಜಾಸ್ತಿ ಸಿಕ್ತಾ ಇದೆ. ವರುಷಕ್ಕೆ ಐವತ್ತು ಸಾವಿರದವರೆಗೂ

ಖರ್ಚು ಮಾಡ್ತೀವಿ. ಒಂದು ಲಕ್ಷದವರೆಗೂ ಆದಾಯ ಸಿಗುತ್ತೆ.

- **ಬ್ಯಾಂಕಲ್ಲಿ ಎಷ್ಟು ದುಡ್ಡು ಇಟ್ಟಿದೀರಿ?**

ನಾವು ಇಟ್ಟಿಲ್ಲ.... (ನಗು) ನಾವು ತೋಟಕ್ಕೇ ಖರ್ಚು ಮಾಡೋದು. ತೋಟ ಚೆನ್ನಾಗಿದ್ರೆ ನಾವೂ ಮುಂದೆ ಚೆನ್ನಾಗಿರ್ತೀವಿ. ಹತ್ತಾರು ವರ್ಷ ನಾವು ವ್ಯವಸಾಯ ಮಾಡದಿದ್ರೂ ನಮಗೆ ಅನುಕೂಲ ಆಗುತ್ತಲ್ಲಾ ಅನ್ನೋ ಅಭಿಪ್ರಾಯದಲ್ಲಿ ಅದಕ್ಕೇ ಖರ್ಚು ಮಾಡ್ತೀನಿ. ಮಣ್ಣು ಹಾಕ್ತಾ ಇರೋದು, ಸಸಿಗಳನ್ನು ನೆಡ್ತಾ ಇರೋದು, ಹಿಂದಕ್ಕೆ ಮುಂದಕ್ಕೆ ಗೊಬ್ಬರವನ್ನು stock ಇಡ್ತಾ ಇರೋದು ಈ ರೀತಿ ಮಾಡ್ತಾ ಇದೀನಿ.

- **ನಿಮ್ಮ ಬದುಕಿನಲ್ಲಿ ಇಂದಿಗೂ ನೀವು ನೆನಪಿಸಿಕೊಳ್ಳುವ ಕಷ್ಟದ ನೆನಪು?**

ಹಿಂದೆ ಕಳ್ಳತನ ಆಗ್ತಾ ಇತ್ತು. ರಾತ್ರಿ timeನಲ್ಲಿ ನಾನು ಹೋಗಿ ದೊಣ್ಣೆ ಹಿಡಿದು ತೋಟ ಬಳಸ್ತಾ ಇದ್ದೆ. ಅಯ್ಯೋ, ಈ ಕಷ್ಟ ಅನುಭವಿಸಿಕೊಂಡು ನಾನಿಲ್ಲಿ ಇರಬೇಕಾ, ಹೋಗಿಬಿಡಬೇಕು ಅನ್ನುವಷ್ಟು ಬೇಜಾರು ಬಂದಿತ್ತು. ಆದ್ರೆ ದೇವರು ಸಹಾಯ ಮಾಡ್ದ. ಕಟ್ಟೆರೋಗ ಬಂದು ಬಿದಿರಿನ ಮೆಳೆ ನಾಶವಾಗುವಂತೆ ಕಳ್ಳರೆಲ್ಲಾ ನಾಶವಾದ್ರು. ಕಟ್ಟೆ ೨೦ ವರುಷಕ್ಕೊಂದು ಸಾರಿ ಬರುತ್ತೆ, ಎಟ್ಟೆ ೧೦ ವರುಷಕ್ಕೂ ಬರಬಹುದು, ಐದು ವರುಷಕ್ಕೂ ಬರುತ್ತೆ. ಕಳ್ಳರೆಲ್ಲಾ ಹೋದ ಮೇಲೆ ವ್ಯವಸಾಯ ಸುಗಮವಾಯ್ತು.



'ಇದು ಹದದ ಮರ; ಇದರ ಎಳೆನೀರು ಕುಡಿದುಕೊಂಡು ಹೋಗಿ ಸ್ವಾಮಿ!':
ಎಚ್.ಎನ್.ಅನಂತರಾಮಯ್ಯ: ಹಳ್ಳಿಮೈಸೂರು

- **ಏನು ಕನಸುಗಳಿದ್ದವು ನಿಮಗೆ?**

ನಾವು ತುಂಬಾ ಬಡಸ್ತನದಲ್ಲಿ ಇದ್ದೆವಲ್ಲಾ, ಅದಕ್ಕೆ ಬೇರೆಯವರಂತೆ ಉತ್ತಮವಾಗಿ ಬದುಕಬೇಕೆನ್ನುವ ಆಸೆ ಇತ್ತು ಅಷ್ಟೆ. ನಾವು ಇವತ್ತು ಚೆನ್ನಾಗಿದ್ದೇವೆ.

- **ಒಟ್ಟಾರೆ ಬದುಕಿನಲ್ಲಿ ಸಂತೃಪ್ತಿ ಇದೆಯಾ?**

ಸಂತೃಪ್ತಿ ಇದೆ. ನಮಗೆ ಬಂದುದರಲ್ಲಿ ನಾವು ನೆಮ್ಮದಿಯಾಗಿ ಇದ್ದೇವೆ. ಯೋಚನೆಗಳಿಲ್ಲ. ಹಿಂದೆ ನಾನೇನೋ ಓದಿದೆ. ಆದ್ರೆ ಮಕ್ಕಳನ್ನು ಓದಿಸುವಾಗ ಕಷ್ಟ ಆಯ್ತು. 'Fail ಆಗದೆ ಎಲ್ಲೀವರೆಗೆ ಓದ್ತೀರೋ ಅಲ್ಲೀವರೆಗೆ ಓದಿ' ಅಂದೆ. ಮಕ್ಕಳು ಎರಡೆರಡು ಡಿಗ್ರಿ ಸಂಪಾದಿಸಿದರು. ಅದೇ ನನಗೆ ಸಂತೋಷ. ಮಕ್ಕಳಿಗೂ ನಮ್ಮನ್ನು ಕಂಡರೆ ಅಭಿಮಾನ. ಆದ್ರೆ ನನ್ನ ಮಕ್ಕಳು 'ನಮ್ಮನ್ನು ಇಷ್ಟು ಓದಿಸಿದೀರಲ್ಲಾ ಅಷ್ಟು ಸಾಕು, ನಿಮ್ಮ ಭೂಮಿ ನೀವು ಏನಾದ್ರೂ ಮಾಡಿಕೊಳ್ಳಿ' ಅಂದಿದಾರೆ. ನಾನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದನ್ನು ನಿಮ್ಮ ಹತ್ರ ಹೇಳ್ತಿದೀನಿ (ನಗು)

- **ಒಬ್ಬ ಮಗನೂ ವ್ಯವಸಾಯಸ್ಥ ಆಗಲಿಲ್ಲ ಅನ್ನೋ ಕೊರಗು ಇದೆಯಾ?**

ನಮಗಿಲ್ಲ. ಯಾಕೇಂದ್ರೆ ಅವರಿಗೆ ಆ ಕೆಲಸದಲ್ಲಿ ತೃಪ್ತಿ ಇದೆ. ನನಗೆ ತೋಟದಲ್ಲಿ ತೃಪ್ತಿ ಇದೆ.

- **ಒಳ್ಳೆಯದು ಯಜಮಾನ್ರೆ, ಇದುವರೆವಿಗೆ ನಿಮ್ಮ ಬದುಕಿನ ಅನುಭವಗಳನ್ನು ನಮ್ಮೊಂದಿಗೆ ವಿವರವಾಗಿ ಹಂಚಿಕೊಂಡ್ರಿ, ನಮಸ್ಕಾರ.**

ನಮಸ್ಕಾರ.

೯) ಎಸ್. ನಾಗರಾಜು ೯/ಮ ಸುಬ್ಬರಾಯ

ಹಳ್ಳಿಮೈಸೂರು, ಹೊಳೆನರಸೀಪುರ (ತಾ), ಹಾಸನ ಜಿಲ್ಲೆ, ದೂರವಾಣಿ: 08175-560789

ನಮ್ಮ ಜಮೀನಿನಲ್ಲೂ ಹಿಂದೆ ಕಳ್ಳರ ಕಾಟವಿತ್ತು. ಆಗೆಲ್ಲಾ ಸಾಮಾನ್ಯವಾಗಿ ಅಕ್ಕಪಕ್ಕದವರೇ ಮಾಡ್ತಿದ್ರು. ನಾನು ಅವರಿಗೂ ಅನುಕೂಲ ಮಾಡಿಕೊಡಲು ಅವರನ್ನೇ ಕೂಲಿ ಕೆಲಸಕ್ಕೆ ಹಾಕ್ಕೊಂಡೆ. ಕಳ್ಳರಿಗೇ ತೋಟ ಕಾಯುವ ಕೆಲಸ ವಹಿಸಿದೆ. ಹೊಟ್ಟೆ ಪಾಡಿಗೆ ಕದಿಯುತ್ತಿದ್ದ ಅಕ್ಕಪಕ್ಕದ ಜಮೀನಿನವರೇ ಅವರು. ಈಗ ಅವರೂ ಅಭಿವೃದ್ಧಿಯಾಗಿದ್ದಾರೆ. ಕಳ್ಳತನ ತಂತಾನೇ ನಿಂತಿದೆ.



ವಿವಿಧ ಘಟ್ಟದ ಸಸಿಮಡಿ: ಎಸ್.ನಾಗರಾಜು ಅವರ ಉಪವ್ಯವಸಾಯ: ಹಳ್ಳಿಮೈಸೂರು

ಕೊಣನೂರು ಸಮೀಪದ ಕಟ್ಟೆಪುರದ ಜಯಲಕ್ಷ್ಮಿ ಹಾಗೂ ಸೋಮನಹಳ್ಳಿ ಸುಬ್ಬರಾಯ ದಂಪತಿಗಳ ಪುತ್ರ ಎಸ್. ನಾಗರಾಜ ಅವರಿಗೆ ೬೧ರ ವಯಸ್ಸು. ಅಡಿಕೆ ವಿಳ್ಳೇದೆಲೆ ತೋಟದಲ್ಲಿ ತಮ್ಮ ಐವೇಜ ಹಾಗೂ ಆಯುಧ ಮಸ್ತಾಕಿನೊಂದಿಗೆ ನೀರು ಹಾಯಿಸುತ್ತಿರುವಾಗ ನಾವು ಇವರ ತೋಟ ಪ್ರವೇಶಿಸಿದ್ದು. ಅಲ್ಲೇ ಅವರ ಭಾವಚಿತ್ರ ತೆಗೆದ ಮೇಲೆ, ಎಳನೀರಿನ ಉಪಚಾರವಾಯ್ತು. ಎಳನೀರು ನಾಗರಾಜರ ಮನಸ್ಸಿನಷ್ಟೇ ಸಿಹಿಯಾಗಿತ್ತು. ಸಂಜೆ ಅವರ ಮನೆಯಲ್ಲಿ ಸಂದರ್ಶನಕ್ಕೆಂದು ಕುಳಿತಾಗ, ಅದುವರೆವಿಗೂ ಮಕ್ಕಳಿಗೆ ಸಂಗೀತಪಾಠ ಮಾಡುತ್ತಿದ್ದ ನಾಗರಾಜರ ಧರ್ಮಪತ್ನಿ ಸರಸ್ವತಿ, ಪಾಠವನ್ನು ಅಲ್ಲಿಗೇ ಮೊಟಕುಗೊಳಿಸಿದ್ರು. ನಿಮ್ಮ ತವರೂರು ಯಾವುದು ಎಂಬುದಕ್ಕೆ ಅವರು ಉತ್ತರಿಸಿದ್ದು, 'ವಿಳ್ಳೇದೆಲೆ, ದೊನ್ನೆ ಹಾಗೂ ಬಾಳೇಕಾಯಿಗೆ ಪ್ರಖ್ಯಾತವಾದ ಎಲೆ ಚಾಗಳ್ಳಿ' ಎಂದು. ಎಸ್. ನಾಗರಾಜರ ವೃದ್ಧ ತಾಯಿ ೮೫ರ ಇಳಿವಯಸ್ಸಿನಲ್ಲೂ ಸಂದರ್ಶನ ಕೇಳಲು ಕೂತರು. ಮನೆಯ ಆವರಣದಲ್ಲೇ ಸಂದರ್ಶನ ಶುರುವಾಯ್ತು.

- **ನಮಸ್ಕಾರ ನಾಗರಾಜ್ ಅವರೆ. . .**

  ನಮಸ್ಕಾರ



ತಮ್ಮ ಮನೆಯಲ್ಲಿ ಸಂಗೀತಪಾಠ ಹೇಳಿಕೊಡುತ್ತಿರುವ ಸಿ.ಎಚ್.ಸರಸ್ವತಿ ನಾಗರಾಜು: ಹಳ್ಳಿಮೈಸೂರು

- **ಎಲ್ಲಿಯತನಕ ವಿದ್ಯಾಭ್ಯಾಸ ಮಾಡಿದ್ರಿ ತಾವು?**

  ನಮ್ಮದೆಲ್ಲಾ ಎರಡನೆಯ ಕ್ಲಾಸು ಅಷ್ಟೆ.

- **ತಂದೆಯವರ ಹುಟ್ಟೂರು ಯಾವುದು?**

  ಸೋಮನಹಳ್ಳಿ

- **ಹಳ್ಳಿಮೈಸೂರಿಗೆ ನೀವು ಬರಲು ಕಾರಣ?**

  ನಮ್ಮ ಭಾವನವರಿಗೆ ಏಳು-ಎಂಟು ಎಕರೆ ಜಮೀನಿತ್ತು ಇಲ್ಲಿ. ಅದನ್ನು ಆಬಾದು ಮಾಡಲು ೧೩ ವರುಷಗಳ ಕೆಳಗೆ ನಾನು ಹಳ್ಳಿಮೈಸೂರಿಗೆ ಬಂದು ಕೃಷಿ ಮಾಡ್ತಿದೀನಿ. ನಮ್ಮ ತಂದೆಗೆ ನಾಲ್ಕು ಜನ ಗಂಡು, ನಾಲ್ಕು ಜನ ಹೆಣ್ಣುಮಕ್ಕಳು. ನಾನೇ

ಹಿರಿಯ ಮಗ. ನಮ್ಮ ಮನೆಯಲ್ಲಿ ತುಂಬಾ ಬಡಸ್ತನ. ಅರ್ಧ ಎಕರೆ ತೋಟದಲ್ಲಿ ನಾವೆಲ್ಲರೂ ಬೆಳೆದು ಬಂದಿದ್ದು. ಹಾಗಾಗಿ ಅಲ್ಲಿ ಜಮೀನು ಸಾಕಾಗ್ಲಿಲ್ಲ. ವಿಧಿಯಿಲ್ಲದೆ ಇಲ್ಲಿಗೆ ಬರಬೇಕಾಯ್ತು.

- **ಹೆಚ್ಚು ಓದಬೇಕು ಅನ್ನುವ ಆಸೆ ತಮಗಿತ್ತಾ?**

ಇತ್ತು. ಆದ್ರೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿರಲಿಲ್ಲ. ಅವಾಗೆಲ್ಲಾ ನಾನು ಕೃಷಿ ಕೆಲಸವನ್ನು ತುಂಬಾ ಮಾಡ್ತಿದ್ದೆ. ಇವತ್ತು ಆಳು ಕಾಳನ್ನು ಇಟ್ಟು ಮಾಡಿಸುವ ಕೆಲಸವನ್ನು ಅವತ್ತು ನಾವೇ ಸ್ವತಃ ಮಾಡ್ತಿದ್ವಿ. ಆದ್ರೂ ಅವತ್ತು ಜೀವನೋಪಾಯ ಮಾಡಲು ಕಷ್ಟವಿತ್ತು. ಸುಮಾರು ೨೦ ವರ್ಷ ನಾನು ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸ ಮಾಡಿದೆ. ಹಂಬು ಇಳಿಸೋದು, ಸಸಿ ನೆಡೋದು, ಯಾತ ಎತ್ತಿ ನೀರು ಹುಯ್ಯೋದು, ಹೀಗೆ ನಾನು ಬೇರೆಯವರ ಹೊಲದಲ್ಲಿ ಕೂಲಿ ಮಾಡಿಯೇ ಮುಪ್ಪಾಗಿದ್ದೇನೆ.

- **ಈಗ ಜಮೀನಿನಲ್ಲಿ ಯಾವ ಯಾವ ಬೆಳೆ ಇದೆ?**

ನಾಲ್ಕು ಎಕರೆಯಲ್ಲಿ ತೆಂಗಿನ ಸಸಿ ಹಾಕಿದ್ದೇನೆ. ಮೂರು ಎಕರೇಲಿ ಅಡಿಕೆ ಇದೆ. ಅಡಿಕೆ ಒಳಗೆ ವಿಳ್ಯೇದೆಲೆ ಹಂಬಿದೆ, ೧೦೦ ಸಪೋಟ ಗಿಡವಿದೆ. ೬೦ ಮಾವಿನ ಗಿಡಗಳು ಇದೆ. ಅದರೊಳಗೇ ಒಂದು ೫೦೦ ಸಿಲ್ವರ್‌ಗಿಡ ಇದೆ. ಗೊತ್ತಾಯ್ತೆ. ಇಷ್ಟೆಲ್ಲಾ ಇದೆ ತೋಟದಲ್ಲಿ. ಜಮೀನಿನಲ್ಲಿ ಜಾಗ ಇದ್ದಿದ್ರಿಂದ ಅಲ್ಲಿ ಇಲ್ಲಿ ನೋಡಿ ಎಲ್ಲ ರೀತಿಯ ಸಸಿಗಳನ್ನೂ ನಾಟಿ ಮಾಡಿದ್ದೇನೆ. ಇದರೊಳಗೆ ೨೦೦೦ ತೆಂಗಿನ ಸಸಿಯನ್ನು ನರ್ಸರಿಯಲ್ಲಿ ಬೆಳೆಸಿದ್ದೇನೆ. ೫೦೦೦ ಅಡಿಕೆ ಸಸಿಗಳು ಇವೆ. ಎಲ್ಲವೂ ನೆಡುವ ಹಂತದಲ್ಲಿವೆ. ಗಿಡಗಳ ನರ್ಸರಿ ಮಾಡುವುದನ್ನು ಸ್ವಂತವಾಗಿ ಕಲಿತಿದ್ದೇನೆ. ಪ್ರತಿ ವರ್ಷ ೫೦೦೦ ಅಡಿಕೆ ಗಿಡ ಮಾರ್ತಿದೀವಿ, ೨೦೦೦ ತೆಂಗಿನ ಸಸಿ ಮಾರ್ತೀನಿ. ತೆಂಗಿನ ಸಸಿಗೆ ೬೦ ರೂಪಾಯಿ, ಅಡಿಕೆಗೆ ಎಂಟರಿಂದ ಹತ್ತು ರೂಪಾಯಿ. ಇದರಲ್ಲಿ ಅರ್ಧ ಖರ್ಚು, ಅರ್ಧ ಆದಾಯ. ಬಿತ್ತನೆ ಕಾಯಿ ಹಾಗೂ ಗೋಟು ನಮ್ಮ ತೋಟದ್ದೇ.

- **ಯಾವ ರೀತಿ ಅಡಿಕೆ ಹಾಗೂ ತೆಂಗಿನ ಸಸಿಗಳನ್ನು ಬೆಳೆಸಬೇಕು ನಾಗರಾಜು ಅವರೆ?**

ಸಾಮಾನ್ಯವಾಗಿ ೩೦ ರಿಂದ ೫೦ ವರುಷದ ಮರಗಳಿಂದ ತೆಂಗಿನ ಕಾಯಿಗಳನ್ನು ಆರಿಸಬೇಕು. ಬೀಜದ ಕಾಯಿ ಮರದ ಮೇಲೆ ಹಣ್ಣಾಗಿರಬೇಕು. ಅಡಿಕೆ ಗಿಡಾನೂ ಅಷ್ಟೆ - ೩೦ ರಿಂದ ೫೦ ವರುಷದ ಗಿಡದಿಂದ ಗೋಟು ಸಂಗ್ರಹಿಸಬೇಕು. ಹಣ್ಣಡಿಕೆ ಆರಿಸಬೇಕು. ಮುಂಚೆ ಒಂದು ಅಡಿಗೆ ಒಂದು ಕಾಯಿ ಹಾಕಿ ನರ್ಸರಿ ಮಾಡಿ, ಒಂದು ವರುಷದ ನಂತರ ಮಾರಾಟ ಮಾಡಿದೆ. ಅರ್ಧಕ್ಕರ್ಧ ಲುಕ್ಸಾನು ಆಯ್ತು. ಅದಕ್ಕೇ ಈಗ ನಾನು ಗಜಕ್ಕೊಂದು ಕಾಯಿ ಹಾಕ್ತಿದೀನಿ. ನೆಲದಲ್ಲೇ ಹಾಕೋದ್ರಿಂದ ಗೆಪ್ಪೆ ಚೆನ್ನಾಗಿ ಬರುತ್ತೆ. ಅಡಿಕೇನ, ನೆಲದಲ್ಲೇ ಹಾಕೋದು. ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ಹಾಕಿದ ಸಸಿ ಹೋದ್ರೂ ನಮ್ಮ ಸಸಿಗಳು ಹಾಳಾಗೋದಿಲ್ಲ. ಅಷ್ಟು ಗಟ್ಟಿಮುಟ್ಟಾಗಿರುತ್ತದೆ. ನಾನು ನರ್ಸರಿಗೆ ಮನೆಗೊಬ್ಬರ ಮಾತ್ರ ಹಾಕೋದು. ರಾಸಾಯನಿಕ ಬಳಸೋಲ್ಲ. ಎರಡು ವರುಷಗಳಲ್ಲಿ ತೆಂಗಿನ ಸಸಿ ನಾಟಿಗೆ ಸಿದ್ಧವಿರುತ್ತೆ. ತೋಟಕ್ಕೆ ಮಣ್ಣು ಬಹಳ ಮುಖ್ಯ. ನಾನು ನನ್ನ ತೋಟಕ್ಕೆ ಸುಮಾರು ಅರ್ಧ, ಮುಕ್ಕಾಲು ಅಡಿ ಹೊಸ ಮಣ್ಣನ್ನು ಹಾಕಿದ್ದೇನೆ. ಅಡಿಕೆ ಸಸಿಗಳನ್ನು ಮೊದಲು ನೆಡುವಾಗ ನೆರಳಿಗೆ ಬಾಳೆ ಹಾಕಬೇಕು. ಅಡಿಕೆ ತೋಟಕ್ಕೆ ಅನುಕೂಲ ಆಗುತ್ತೆ ಅಂತ ವಿಳ್ಯೇದೆಲೆ ಹಾಕಿದ್ದೇನೆ. ಯಾಕೇಂದ್ರೆ ವಿಳ್ಯೇದೆಲೆ ನೆವದಲ್ಲಿ ತುಂಬಾ ನೀರು ಹಾಕುತ್ತೇವೆ, ಗೊಬ್ಬರ ಬೀಳುತ್ತೆ, ಅಡಿಕೆ ಗಿಡಕ್ಕೆ ಸಮೃದ್ಧ ವ್ಯವಸಾಯ ಆಗುತ್ತೆ. ಅಡಿಕೆ, ವಿಳ್ಯೇದೆಲೆ ಜತೆಯಾಗಿದ್ರೆ ಮತ್ತೊಂದು ಅನುಕೂಲಸಹಾ ಇದೆ. ಅಡಿಕೇಲಿ ಆದಾಯ ನೋಡೋದು ಒಂದು ವರುಷ ಆಗುತ್ತೆ. ವಿಳ್ಯೇದೆಲೆ ಅಳವಡಿಸಿದ್ರೆ, ಮಧ್ಯದಲ್ಲಿ ಖರ್ಚಿಗೆ ಹಣ ಸಿಗುತ್ತೆ. ಸರಿಯಾದ ವ್ಯವಸಾಯವನ್ನು ಕಾಲಕಾಲಕ್ಕೆ ಮಾಡಿದ್ರೆ ವಿಳ್ಯೇದೆಲೆಯಲ್ಲೂ ಅಡಿಕೆಯಷ್ಟೇ ಗಳಿಸಬಹುದು. ವಿಳ್ಯೇದೆಲೆಗೆ ಹಟ್ಟಿಗೊಬ್ಬರ ಹಾಕಬೇಕು, ಆಗಾಗ್ಗೆ ಎಲೆ ಕುಯ್ಯುವಾಗ ಕಟ್ಟು ಹಾಕಬೇಕು, ತೆಕ್ಕೆ ಇಳಿಸಬೇಕು. ಈ ರೀತಿ ವ್ಯವಸಾಯ ಮಾಡದಿದ್ರೆ ಕರಿಕಡ್ಡಿ ಬಂದು ಎಲೆ ಹಂಬು ಹಾಳಾಗಿ ಹೋಗುತ್ತೆ. ಒಂದು ಎಕರೇಲಿ ೧೫ ಹೇರು ಬೆಳೀಬಹುದು. (೨೦ ಸಾವಿರ ಕಟ್ಟು; ಅಂದ್ರೆ ಎರಡು ಲಕ್ಷ ಎಲೆ) ೫೦ ಸಾವಿರ ಆದಾಯ ಸಿಗುತ್ತೆ.

- **ತೋಟಕ್ಕೆ ಬೇಕಾದ ಗೊಬ್ಬರವನ್ನು ನೀವೇ ತಯಾರಿಸ್ತೀರಲ್ಲಾ, ಅದರ ಬಗ್ಗೆ ಹೇಳಿ?**

ಹಸಿರೆಲೆ ಗೊಬ್ಬರ ಅಂತ ಮಾಡ್ತೀವಿ. ಈ ಹೊಂಗೇ ಮರದ್ದು, ಬೇವಿನ ಮರದ್ದು ಎಲ್ಲಾ ಹಸಿರು ಸೊಪ್ಪನ್ನು ಸವರಿಸಿ, ಅದರೊಳಗೆ ಹಾಕ್ತೀವಿ. ಮಣ್ಣನ್ನು ಅದರ ಮೇಲೆ ಹಾಕ್ತೀವಿ. ಅದರ ಮೇಲೆ ಮತ್ತೊಂದು ಪದರ ಸೊಪ್ಪು, ತೆಂಗಿನಸೋಗು, ಅಡಿಕೆ ಸೋಗು, ಎಲ್ಲಾ

ಹಾಕ್ತೀವಿ. ತಿಂಗಳಿಗೆ ಒಂದು ಸಲ ನೀರು ಬಿಡ್ತೀವಿ, ಕರಗುತ್ತೆ. ಗೊಬ್ಬರ ಚೆನ್ನಾಗಿ ಬರುತ್ತೆ. ೧೨ ಗಜ ಉದ್ದ, ಎರಡು ಗಜ ಅಗಲದ ಗುಂಡಿ ಮಾಡಿದ್ದೇವೆ. ಸುಮಾರು ತೋಟದ ತುಂಬಾ ಆರು ಗುಂಡಿ ಮಾಡಿದ್ದೇವೆ. ತೋಟಕ್ಕೆಲ್ಲಾ ಗೊಬ್ಬರ ಆಗುತ್ತೆ. ಭೂಮೀಲಿ ಮಾತ್ರ ಒಂದು ರೂಪಾಯಿ ಆದಾಯ ಬಂದ್ರೆ ಎರಡು ರೂಪಾಯಿ ಖರ್ಚು ಮಾಡುವ ಗುಣ ಇವತ್ತೂ ನನ್ನಲ್ಲಿದೆ. ಭೂಮಿ ಮೇಲೆ ಅಷ್ಟು ಮೋಹ ಇದೆ. ಅದಕ್ಕೇ ನನ್ನ ಮನೆ ನೋಡಿ, ಗಾರೇನೂ ಹಾಕಿಸಿಲ್ಲ ನೆಲಕ್ಕೆ. ತೋಟದ ವ್ಯವಸಾಯ ಅಂದ್ರೆ ತೋಟದ ವ್ಯವಸಾಯಾನೇ. ಮನೇ ಕಡೆ ತಿರುಗಿಲ್ಲ ನಾನು. ತೆಂಗಿನ ಸಸಿ, ಅಡಿಕೆ ಸಸಿಯನ್ನು ಬೆಳೆಯೋದ್ರಿಂದ ಅನುಕೂಲ ಆಗಿದೆ. ಅನಿವಾರ್ಯವಾದಾಗ ಸಾಲಾನೂ ಮಾಡಿದ್ದೇನೆ - ಅದೂ ಒಂದು ಮಿತಿಯಲ್ಲಿ ಮಾತ್ರ.

- ಪ್ರತಿನಿತ್ಯದ ದಿನಚರಿ ಏನು ತಮ್ಮದು?

ನಾನು ಐದು ಘಂಟೆಗೆ ಏಳುತ್ತೇನೆ. ಸ್ನಾನ ಮುಗಿಸಿ ಆರು-ಆರೂವರೆಗೆ ತೋಟದಲ್ಲಿ ಇರ್ತೀನಿ. ೧೦ ಘಂಟೆಗೆ ತಿಂಡಿ ತಿಂದು ಮತ್ತೆ ತೋಟಕ್ಕೆ ಹೋದ್ರೆ ಸಂಜೆ ಏಳಕ್ಕೇ ಮನೆಗೆ ಬರೋದು. ನನ್ನ ತೋಟದಲ್ಲಿ ಐದಾರು ಜನ ಕೆಲಸಗಾರರಿದ್ದಾರೆ. ನಾನು ಒಂದು ಆಳಿನ ಕೆಲಸ ಇವತ್ತಿಗೂ ಮಾಡ್ತಾ ಇದೀನಿ. ಕೆಲಸ ಮಾಡುವಾಗ ವಿಳ್ಳೇದೆಲೆ ಚೀಲ ನನ್ನ ಜತೆಯಲ್ಲಿ ಇರಬೇಕು. ನನಗಿನ್ಯಾವ ದುರಭ್ಯಾಸವೂ ಇಲ್ಲ. ಏನೋ ಒಂದು ರೀತೀಲಿ ವ್ಯವಸಾಯ ಮಾಡಿಕೊಂಡು ಜಮೀನು ಹಾಳು ಮಾಡದಂತೆ ಇದೀನಿ.

- ಚಿಕ್ಕಂದಿನಲ್ಲಿ ಏನಾಗಬೇಕೆಂಬ ಕನಸ್ಸಿತ್ತು?

ಓದೋದಕ್ಕೆ ಏಚ್ ಬಾರ್ ಆಗಿತ್ತು. ಅದನ್ನ ಬಿಟ್ಟ ಮೇಲೆ ಇನ್ನು ವ್ಯವಸಾಯದ ಹಾದೀನಾದ್ರೂ ಹಿಡಿಯೋಣ ಅನ್ನಿಸಿತು. ಗೊತ್ತಾಯ್ತ! ವ್ಯವಸಾಯದಲ್ಲಿ ಮಾತ್ರ ತುಂಬಾ ದುಡಿದಿದ್ದೇನೆ. ನಾನೇ ಹಿರೀಮಗ. ಬಹಳ ಕಷ್ಟ. ನನ್ನ ತಾಯೀನೂ ನೆನೆಸಿಕೊಳ್ತಾರೆ. ಅವತ್ತು ನಮ್ಮ ಮನೆಗೆ ಯಾರಾದ್ರೂ ನಂಟರು ಬಂದ್ರೆ, ಯಾಕಾದ್ರೂ ಬಂದ್ರಪ್ಪಾ ಅಂದುಕೊಳ್ತಿದ್ವಿ. ನಮಗೇ ತಿನ್ನಲು ಇಲ್ಲ, ಇವರ್‍ಯಾಕೆ ಬಂದ್ರು ಅಂತಿದ್ವಿ. ಅವತ್ತು ಯಾರ ಹತ್ರಾನಾದ್ರೂ ಹತ್ತು ರೂಪಾಯಿ ಸಾಲ ಮಾಡಿದ್ರೆ ಅಷ್ಟು ಕೆಲಸವನ್ನು ಅವರ ತೋಟದಲ್ಲಿ ಮಾಡ್ತಿದ್ದೆ. ಕೇಳೋದಕ್ಕೆ ದಾಕ್ಷಿಣ್ಯ, ಏನು ಮಾಡೋದು. ಆದ್ರೆ ಈಗ ಭಗವಂತ ೮-೧೦ ಜನರಿಗೆ ಊಟ ಹಾಕುವಷ್ಟು ಕೊಟ್ಟಿದಾನೆ. ನನಗೆ ಇನ್ನೂ ಕೃಷಿಯಲ್ಲಿ ಸಾಧಿಸಬೇಕೆಂಬ ಆಸೆಯಿದೆ. ಕೃಷಿಗೆ ಹಣ ಬೇಕು. ಸಮಯ ಮೀರಿದ್ರೆ ಏನೂ ಮಾಡೋಕ್ಕಾಗಲ್ಲ. ಆದರೂ ಕಷ್ಟಪಡ್ತಿದೀನಿ, ಅಭಿವೃದ್ಧಿ ಮಾಡೋಕೆ.

- ನಿಮ್ಮ ಪ್ರಕಾರ ವ್ಯವಸಾಯವನ್ನು ನೆಚ್ಚಿಕೊಂಡು ಒಂದು ಕುಟುಂಬ ಬದುಕಬಹುದಾ?

ಬದುಕಬಹುದು. ಒಂದು ಎಕರೆ ಭೂಮಿ ಇದ್ದುಬಿಟ್ರೆ ಸಾಕು. ೧೦ ಜನರ ಸಂಸಾರ maintain ಮಾಡಬಹುದು.

- ಮತ್ತೆ ಇದೇ ನಂಬಿಕೆಯನ್ನು ನಿಮ್ಮ ಮಕ್ಕಳಲ್ಲಿ ಯಾಕೆ ಬಿತ್ತಲಿಲ್ಲ? ವ್ಯವಸಾಯಸ್ಥರನ್ನಾಗಿ ಮಾಡಲಿಲ್ಲ?



ಗಂಡಿ ಸೀರೆಯಲ್ಲಿ ವೃದ್ಧ ತಾಯಿ: ಅಕ್ಕಪಕ್ಕದಲ್ಲಿ ಸಿ.ಎಚ್.ಸರಸ್ವತಿ-ಎಸ್.ನಾಗರಾಜು: ಹಳ್ಳಿಮೈಸೂರು

ಮಾಡಲಿಲ್ಲ ಅಂದ್ರೆ ಅವಕ್ಕೆಲ್ಲಾ ಈಗ ಓದೋಲ್ಲ. ಏನಿದ್ರೂ ಹೊರಗಡೆ ೫೦೦-೧೦೦೦ ರೂಪಾಯಿ ಸಿಕ್ರೂ ಸಾಕು, ಹೋಗಣ ಇದನ್ಯಾರು ಮಾಡೋರು, ಅನ್ನೋ ಲೆಕ್ಕ ಅವರದ್ದು. ನಾನೇನೋ ಭೂಮಿಯಲ್ಲೇ ಅಡಗಿಬಿಡೋಣ ಅಂತಿದೀನಿ. ಆದ್ರೆ ನನ್ನ ಮಕ್ಕಳಿಗೆ ಅದೊಂದೂ ಬೇಕಿಲ್ಲ.

- ಮುಂದೊಂದು ದಿವಸ ನಿಮ್ಮ ಸಮುದಾಯದಲ್ಲಿ ಯಾರೂ ವ್ಯವಸಾಯಸ್ಥರೇ ಇಲ್ಲದೇ ಹೋಗಬಹುದು ಅಂತೀರಾ?

ಕಷ್ಟವೇ ಆಗುತ್ತೆ. ಈಗೇನೋ ನಾವು ಬೆಳೀತಾ

ಇದೀವಿ, ತೊಗೊಂಡು ಹೋಗ್ತಾರೆ, ತಿಂತಾ ಇದಾರೆ. ವ್ಯವಸಾಯ ಮಾಡೋದನ್ನ ಬಿಟ್ಟುಬಿಟ್ರೆ ತಿನ್ನೋಕೇ ಇರೋಲ್ಲ. ಬಹಳ ಕಷ್ಟಾನೇ ಬರಬಹುದು ಮುಂದೆ.

- **ವ್ಯವಸಾಯದಲ್ಲಿ ವಿಚಾರಗಳನ್ನು ನೀವು ಯಾರಿಂದ ತಿಳಿದುಕೊಂಡ್ರಿ?**

ನನಗೆ ಶಿವಮೊಗ್ಗದಲ್ಲಿ ನಮ್ಮ ಭಾವನವರು ಇದಾರೆ ಎಚ್.ಜಿ.ಕೇಶವರಾವ್, ಕೃಷ್ಣರಾವ್ ಅಂತ ಅಣ್ಣತಮ್ಮಂದಿರು. ೧೦೦ ಎಕರೆ ಅವರದ್ದು ಭೂಮಿ, ಗದ್ದೆ. ಅಲ್ಲಿ ಎಂಟು ಎಕರೆ ಜಮೀನಿಗೆ ಅಡಿಕೆ ಸಸಿ ಹಾಕಿಸಿ ಬಂದವನು ನಾನು. ೧೯೭೦ರಲ್ಲಿ ಅಲ್ಲಿಂದ ಬಂದ ಮೇಲೆ, ನನಗೆ ತೋಟ ಬೆಳೆಸಬೇಕೆಂಬ ಆಸೆ ಮೊಳೀತು. ಇಲ್ಲಿ ನಮ್ಮ ಅತ್ತೆಮಕ್ಕಳ ಜಮೀನು ನೋಡುವವರು ಇರಲಿಲ್ಲ. ಹಾಗಾಗಿ ಇಲ್ಲಿ ಬಂದು ನೆಲೆಸಿದೆ. ದೃಢವಾಗಿ ಕಾಲೂರಿದ್ದೇನೆ. ನಾನು ನಂಬಿದ ಭೂಮಿ ಯಾವತ್ತೂ ನನಗೆ ಅನ್ಯಾಯ ಮಾಡಿಲ್ಲ. ಮುಂದೆ ವೆನಿಲ್ಲಾ ಬೆಳೆಯಬೇಕು ಅನ್ನೋ ಆಸೆ ಇದೆ. ನೋಡಬೇಕು. ನಾನು ಮೊದಲು ಇಲ್ಲಿಗೆ ಬಂದಾಗ ಈ ಏಳು ಎಕರೆ ಜಮೀನು ಫಲವತ್ತು ಮಾಡ್ತೀನಾ ಅನ್ನಿಸಿತ್ತು. ಆಗ ನನ್ನ ತೋಟದ ಬಾವಿಯಲ್ಲಿ ಒಂದು ಘಂಟೆ ನೀರು ಸಿಕ್ತಿತ್ತು. ಕಷ್ಟಪಟ್ಟೆ. ನಾಲೆ ನೀರು ಬಂದು ತೋಟ ಅಭಿವೃದ್ಧಿ ಆಯ್ತು.

- **ನಿಮ್ಮ ಹೆಂಡತಿಯ ಸಹಕಾರ ಹ್ಯಾಗಿದೆ?**

ನಾನು ಹ್ಯಾಗೆ ನಡೀತಿದೀನೋ ಅವಳೂ ನನ್ನೊಂದಿಗೆ ನಡೀತಿದ್ದಾಳೆ. ವೆತ್ಯಾಸವಿಲ್ಲ. ನನ್ನ ಅಭಿವೃದ್ಧಿಯಲ್ಲಿ ಅವಳದ್ದೂ ಅರ್ಧ ಪಾಲಿದೆ. ಅತ್ತೆ-ಸೊಸೆಯರ ನಡುವೆ ಸಹಕಾರವಿದೆ. ಕಷ್ಟಪಟ್ಟು ನಮ್ಮನ್ನು ಬೆಳೆಸಿದ ತಾಯಿಯ ಬಗ್ಗೆ ಎಲ್ಲರಿಗೂ ಗೌರವವಿದೆ.

- **ಒಳ್ಳೆಯದು ನಾಗರಾಜ್ ಅವರೆ, ಇದುವರೆವಿಗೂ ನಿಮ್ಮ ಬದುಕಿನ ವಿಚಾರಗಳನ್ನು ತಿಳಿಸಿದ್ರಿ, ನಮಸ್ಕಾರ.**

ನಮಸ್ಕಾರ.



ಗಿಡಗಳೊಂದಿಗೇ ಎತ್ತರೆತ್ತರಕ್ಕೆ ಬೆಳೆದ ರೈತ ಎಸ್.ನಾಗರಾಜು: ಹಳ್ಳಿಮೈಸೂರು

3. ಸೋಮನಹಳ್ಳಿ

ಹಳ್ಳಿಮೈಸೂರಿನಲ್ಲಿ ನಮ್ಮ ಕೆಲಸ ಮುಗಿದಾಗ ರಾತ್ರಿ ಎಂಟು ಘಂಟೆ. 'ಈ ರಾತ್ರಿಯಲ್ಲಿ ಪ್ರಯಾಣವೇ? ಬೇಡ, ನಮ್ಮಲ್ಲಿಯೇ ಇದ್ದು ಬೆಳಗ್ಗೆ ಹೊರಡಿ" ಅಂದ್ರು ರಾಮಚಂದ್ರಯ್ಯನವರು. ಅದೂ ಒಂದು ಹೊಸ ಅನುಭವ, ರಾತ್ರಿಯಲ್ಲಿ ಪ್ರಯಾಣ ಮಾಡುವುದು ಎಂದು ನಮ್ಮ ದ್ವಿಚಕ್ರ ವಾಹನದಲ್ಲಿ ಹೊರಟೆವು. ಕೂಗಿ ದಾರಿಯನ್ನು ಹೇಳಿದ್ರು ರಾಯರು. ಇಲ್ಲಿಂದ ಮುಂದೆ ಕುರಿಕಾವಲು ಅಂದ್ರೆ ವೀರರಾಜಪುರ. ನಂತ್ರ ಬಡಕ್ಯಾತನಹಳ್ಳಿ. ಮುಂದೆ ಸಿಗೋದೇ ಸೋಮನಹಳ್ಳಿ, ಇಲ್ಲಿಂದ ಅದು ಏಳು ಕಿ.ಮೀ. ಮಾತ್ರ ಅಂದ್ರು. ಸುತ್ತಲೂ ಕತ್ತಲು ಬೇರೆ. ಸಮೀಪದಲ್ಲೇ ಒಂದು ಕವಲುದಾರಿ ಇದೆ, ಅಲ್ಲಿಂದ ಎಡಕ್ಕೆ ಹೋಗಬೇಡಿ, ಬಲಕ್ಕೆ ಹೋಗಿ ಅಂದಿದ್ರು. ಹಾದಿ ತಿಳಿಯದ ನಾವು ಹಂಗೂ ಹಿಂಗೂ ಕವಲು ರಸ್ತೆಗಳಲ್ಲಿ ಸ್ವತಃ ನಿರ್ಧಾರದಿಂದ ಮುಂದೆ ಹೋದೆವು. ಯಾರನ್ನಾದ್ರೂ ಕೇಳೋಣ ಅಂದ್ರೆ, ರಾತ್ರಿ ಹೊತ್ತು ಸಂಚಾರ ಇರಲಿಲ್ಲ. ಮುಂದೆ ದಾರೀಲಿ ಯಾರೋ ಇಬ್ರು ಸಿಕ್ರು. 'ಸೋಮನಹಳ್ಳಿ ಇನ್ನೆಷ್ಟು ದೂರ' ಅಂದಾಗ? 'ಸೋಮನಹಳ್ಳೀನಾ? ಈ ರಸ್ತೆನಾಗೆ ಯಾಕೆ ಬಂದ್ರಿ, ಇದು ಬೆಟ್ಟಹಳ್ಳಿ, ಕೇರಳಾಪುರ ರಸ್ತೆ; ನೀವು ಹಿಂದಿನ ತಿರುವಿನಲ್ಲೇ ಬಲಕ್ಕೆ ಹೋಗಬೇಕಿತ್ತು' ಅಂದ್ರು. ಆದ್ರೆ ನಾವು ಆ ದಾರಿ ದಾಟಿ ಮೂರು ಕಿಲೋಮೀಟರ್ ಬಂದಾಗಿತ್ತು. 'ಇದೇ ರಸ್ತೆಯಲ್ಲಿ ಹೋಗಿದ್ರೆ ಎಲ್ಲಿಗೆ ಹೋಗ್ತಿದ್ವಿ' ಅಂತಾ ಕೇಳಿದಾಗ, ಅವರು 'ಕೇರಳಾಪುರಕ್ಕೆ' ಅಂದಾಗ ನಾವು ಸುಸ್ತು. ತಪ್ಪಿದ ಹಾದಿ ತುಂಬಾ ತೊಂದರೆ ನೀಡಲಿಲ್ವಲ್ಲಾ ಅಂದುಕೊಂಡು ಹೊರಟೆವು. 'ಕೇರಳಾಪುರಕ್ಕೆ ಹೋಗಿದ್ರೂ ತೊಂದರೆ ಇತ್ತಿಲ್ಲ. ಅಲ್ಲೂ ಸಂಕೇತಿ ಕೃಷಿಕರು ಇದ್ದಾರೆ' ಅಂದ್ರು ಜತೇಲಿದ್ದ ಹರನ್. ಈ ಬಾರಿ ಬಹಳ ಜಾಗರೂಕತೆಯಿಂದ ಹೊರಟೆವು. ರಾತ್ರಿ ದೀಪ ಹಾಕಿದ್ದ ಮನೇಲಿ ಬಾಗಿಲು ಬಡಿದು ಜನರನ್ನು ಕರೆದು ರಸ್ತೆ ಬಗ್ಗೆ ದೃಢಪಡಿಸಿಕೊಂಡೇ ಮುಂದೆ ಸಾಗುತ್ತಿದ್ವು. ಮಧ್ಯೆ ಸಿಕ್ಕಿದ ಹಳ್ಳಿಯಲ್ಲಿ ರಂಗೋಲಿ ಹಾಕುತ್ತಿದ್ದ ಹೆಣ್ಣುಮಗಳೂ ನಮಗೆ ದಾರಿ ತೋರಿದಳು. ಎಲ್ಲರ ಸಹಕಾರದಿಂದ ನಾವು ಸೋಮನಹಳ್ಳಿ ತಲುಪಿದಾಗ ರಾತ್ರಿ ೧೦ ಘಂಟೆ. ಇನ್ನು ಸೋಮನಹಳ್ಳೀಲಿ ನಮಗೆ ಬೇಕಾದ ಗುಂಡಣ್ಣನವರ ಮನೆ? ಆಗಲೂ ನಮ್ಮ ನೆರವಿಗೆ ಬಂದದ್ದು ಊರ ಜನರೇ. ರಾತ್ರಿ ಹೊತ್ತು ಜನ ಎಚ್ಚರವಾಗಿದಾರೆ ಅಂದ್ರೆ ಅದು ಟಿ.ವಿ. ಮಹಿಮೆ ಅಂದುಕೊಂಡ್ವು ನಾವು. ಎದುರಿಗೆ ಸಿಕ್ಕ ಮೂರು ಜನರಲ್ಲಿ ಒಬ್ಬ ಹೇಳಿದ 'ಅದೇ ಸ್ವಾಮಿ, ಈ ವರ್ಷ ಮಗಳ ಮದುವೆ ಮಾಡಿದ್ರಲ್ಲಾ ಆ ಗುಂಡಣ್ಣನವರಾ, ಅಗೋ ನೋಡಿ ಮುಂದೆ ಕಾಣಿಸೋ ಲೈಟ್‌ಕಂಬದ ಹತ್ರ ಬಲಕ್ಕೆ ತಿರುಗಿ' ಅಂದ್ರು. ನಮಗಾಗಿ ಕಾದಿದ್ದ ಗುಂಡಣ್ಣನವರು ನಗುನಗುತ್ತಾ ನಮ್ಮನ್ನು ಬರಮಾಡಿಕೊಂಡ್ರು. ನಮ್ಮ ಪ್ರಯಾಣದ ವಿವರ ಕೇಳಿ ಅವರಿಗೂ ನಗು ಬಂತು. 'ರಾತ್ರಿ ಬಹಳ ಹೊತ್ತಾಗಿದೆ. ಬನ್ನಿ, ಊಟ ಮಾಡುತ್ತಾ ಮಾತನಾಡೋಣ' ಅಂದ್ರು. ಅಡಿಕೆ ಪಟ್ಟೆ ಮೇಲೆ ಹಬೆಯಾಡುವ ಅನ್ನ, ತುಪ್ಪ, ತಿಳಿಸಾರು ಬಿದ್ದಾಗ ಮಾತು ಮೌನವಾಯ್ತು. ಭರ್ಜರಿ ಊಟವಾದ ಮೇಲೆ ಗುಂಡಣ್ಣನವರು ಹೇಳಿದ್ರು, 'ಈಗ ಮಲಗಿ, ನಾಳೆ ಎಲ್ಲರನ್ನೂ ಇಲ್ಲಿಗೇ ಕರೆಸುತ್ತೇನೆ' ಅಂತ. ಮೆದುವಾದ ಹಾಸಿಗೆ, ಛಳಿಗೆ ಹೊದೆಯಲು ಕಂಬಳಿ, ಪ್ರಯಾಣದ ಆಯಾಸ;ನಿದ್ದೆ ಬಂದುದು ತಿಳಿಯಲಿಲ್ಲ.

ಸೋಮನಹಳ್ಳಿಯಲ್ಲಿ ಮೊದಲು ನೆಲೆಸಿದವ್ರು ಭಾರದ್ವಾಜ ಗೋತ್ರದವರಂತೆ. ಎಲ್ಲಾ ಒಂದೇ ಗೋತ್ರದವರಾಗುತ್ತೀವಿ ಎಂದುಕೊಂಡು ಆಯಾಸ್ಯ ಗೋತ್ರದವರನ್ನು ಚನ್ನರಾಯಪಟ್ಟಣ ತಾಲ್ಲೂಕು ಆನೇಕೆರೆಯಿಂದ ಕರೆತಂದರಂತೆ. ಮೊದಲು ಸೋಮನಹಳ್ಳಿಯಲ್ಲಿ ಬಹಳ ಬಡತನ. 'ಆರು ತಿಂಗಳು ನೀರಿಲ್ಲ, ಆರು ತಿಂಗಳು ಕೂಳಿಲ್ಲ' ಅನ್ನೋ ಪರಿಸ್ಥಿತಿ. ಇದಕ್ಕೆ ಮುಖ್ಯ ಕಾರಣ ನೀರಾವರಿ ಆಶ್ರಯವಿಲ್ಲ. ಇಲ್ಲಿಯ ಜನರ ಭಾಗ್ಯದ ಬಾಗಿಲು ತೆರೆದದ್ದು ಹೇಮಾವತಿ ನಾಲೆ ಇಲ್ಲಿ ಹಾದು ಹೋದಾಗ. ಸೋಮನಹಳ್ಳಿಯ ಗುಂಡಣ್ಣನವರು ಊರ ಬಗ್ಗೆ ಹೀಗೆನ್ನುತ್ತಾರೆ:



ರಾಜಕೀಯ ಶಕ್ತಿ: ಸೋಮನಹಳ್ಳಿ: ಮಾಜಿ ಪ್ರಧಾನಿ ಶ್ರೀ ದೇವೇಗೌಡರೊಂದಿಗೆ ಸಂಕೇತಿ ರೈತರು

ಮುಂಚೆ ಕ್ಷಾಮದಿಂದ ಈ ಗ್ರಾಮದ ಬಗ್ಗೆ ಯಾರಿಗೂ ಕಾಳಜಿ ಇರಲಿಲ್ಲ. ಹೇಮಾವತಿ Upper Canal ಬಂದ ಮೇಲೇನೇ ನಾವು ಸೋಮನಹಳ್ಳಿಯವರು ಅಂತ ಹೇಳುವ ಧೈರ್ಯ ಬಂದದ್ದು, ಇಲ್ಲಿ ಬದುಕುವ ಅವಕಾಶ ಸಿಕ್ಕಿದ್ದು. ನಾಲೆ ನಮ್ಮೂರಿಗೆ ಬಂದಿದ್ದು ೧೯೯೦-೯೧ರಲ್ಲಿ. ನಾಲೆ ಬಂದ ಮೇಲೇ ನಮ್ಮೂರು ಸುಭಿಕ್ಷವಾಗಿದ್ದು. ೧೯೭೫ರಲ್ಲಿ ಬಂದ ಕ್ಷಾಮ ನಮ್ಮೂರ ಇತಿಹಾಸದಲ್ಲಿ ಬರೆದಿಡಬೇಕು. ಆವಾಗ ಎಂಟರಿಂದ ಒಂಭತ್ತು ತಿಂಗಳು ಮಳೇನೇ ಇರಲಿಲ್ಲ. ಕೆರೆ ಬತ್ತಿತ್ತು. ಕುಡಿಯೋ ನೀರು ಇರಲಿಲ್ಲ. ನಮ್ಮೂರಲ್ಲಿ ಎರಡು ಭಾವಿ ಇತ್ತು. ಅದ್ರಲ್ಲೂ ನೀರು ಇತ್ತಿಲ್ಲ. ತೋಟದಲ್ಲಿ ಭಾವಿ ತೆಗೆದು ಆಳದಿಂದ ನೀರು ತಂದು ಬದುಕಿದ್ವು. ಅಡಿಕೆ ಬೆಳೆಯನ್ನು ಉಳಿಸಲು ತುಂಬಾ ಶ್ರಮ ಪಟ್ಟಿದ್ದೀವಿ. ಈವಾಗ ಸೋಮನಹಳ್ಳಿಯಲ್ಲಿ ಪ್ರೌಢಶಿಕ್ಷಣದವರೆಗೆ ಓದಬಹುದು. ಒಂದು ಆಸ್ಪತ್ರೆ ಆಗಿದೆ. ಗ್ರಾಮೀಣ ಬ್ಯಾಂಕಿದೆ. ಕುಡಿಯುವ ನೀರಿಗೆ ಸಮಸ್ಯೆ ಇಲ್ಲ. ಬಸ್ಸಿನ ಸೌಲಭ್ಯ ಇದೆ. ಮೂಲಭೂತ ಸೌಕರ್ಯಗಳಿಗೆ ಇಂದು ತೊಂದರೆ ಇಲ್ಲ. ನಮ್ಮ ಊರಿನ ಜನರು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಬೆಂಬಲಿಸುತ್ತಾ ಬಂದಿದ್ದೇವೆ. ಅದನ್ನು ಅವರು ಅರಿತು ನಮ್ಮೂರಿಗೆ ಸೌಲಭ್ಯ ನೀಡಲು ಶ್ರಮಿಸಿದ್ದಾರೆ. ಹೇಮಾವತಿ ನಾಲೆ ಇಲ್ಲೇ ಬರಬೇಕು ಅಂತೇನೂ ಇರಲಿಲ್ಲ. ಇಲ್ಲಿಂದ ೧೦ಕಿ.ಮೀ. ದೂರದಲ್ಲೂ ಹೋಗಬಹುದಿತ್ತು. ಅವರು ಮುಖ್ಯವಾಗಿ ಹಳ್ಳಿಮೈಸೂರು ಹೋಬಳಿಗೆ ತುಂಬಾ ಕ್ಷಾಮ, ಅಲ್ಲಿ ಜನರಿಗೆ ನೀರು ಕೊಟ್ರೆ ಸಾರ್ಥಕವಾಗುತ್ತೆ ಅಂತೇಳಿ, ಅವರು ಆರಿಸಿ ಬಂದು ಮಂತ್ರಿಯಾದ ತಕ್ಷಣ ಗುದ್ದಲಿ ಪೂಜೆ ಮಾಡಿದ್ರು. ಒಂದೇ ವರುಷದಲ್ಲಿ ನಾಲೆ ಕೆಲಸ ಆಯ್ತು. ನಮ್ಮೂರಿನಲ್ಲಿ ಬ್ರಾಹ್ಮಣರ ಸಮುದಾಯಕ್ಕೆ ರಾಮಮಂದಿರ ನಿರ್ಮಿಸಿದ್ವಿ. ಆ ಮಂದಿರಕ್ಕೆ ಸೇರಿದಂತೆ ಒಂದು ಸಭಾಂಗಣ ಕಟ್ಟಿದ್ವಿ ನಾವು, ನಮ್ಮದೇ ಹಣದಲ್ಲಿ. ದೇವೇಗೌಡರ ಮಕ್ಕಳು ಇಲ್ಲಿಗೆ ಬಂದಾಗ ಈ ಹೊಸ ಕಟ್ಟಡ ನೋಡಿ ವಿಚಾರಿಸಿದ್ರು. ನಮ್ಮದೇ ಹಣದಲ್ಲಿ ನಿರ್ಮಿಸಿದ ಸಭಾಂಗಣ ಇದು ಅಂದಾಗ, ನಾವು M.P. ಗ್ರಾಂಟ್‌ನಲ್ಲಿ ಮೂರು ಲಕ್ಷ ಕೊಡ್ತೀವಿ, ಮೇಲಕ್ಕೆ ಮತ್ತೊಂದು ಭವನ ಕಟ್ಟಿ ಅಂದ್ರು. ಅದ್ರಲ್ಲೇ ನಾವು ಕಟ್ಟಿದ್ವಿ. ಈಗ ರಾಮಮಂದಿರ ನಮ್ಮೂರಿನ ಎಲ್ಲ ಪುಣ್ಯ ಕೆಲಸಕ್ಕೆ ನೆರವಾಗಿದೆ, ಇದು ಸೋಮನಹಳ್ಳಿಯ ಬ್ರಾಹ್ಮಣ ಸಮುದಾಯದ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿ ಅಂತಾರೆ. ಹೌದು ಸುತ್ತೂರಿನ ಜನ ಸಹ ಸೋಮನಹಳ್ಳಿಯ ಸಂಕೇತಿಗಳನ್ನ ಹೊಗಳುತ್ತಾರೆ. ಒಗ್ಗಟ್ಟಿನ ಬಲ ಇದೇ ಅಲ್ಲವೆ!



ತಾವೇ ನಿರ್ಮಿಸಿದ ರಾಮಮಂದಿರದ ಮುಂದೆ ನಿಂತ ಸೋಮನಹಳ್ಳಿಯ ಸಂಕೇತಿ ರೈತರು

ಸೋಮನಹಳ್ಳಿಯ ಸೋಮೇಶ್ವರ ದೇವಸ್ಥಾನ ಈಗ ಶಿಥಿಲವಾಗಿದೆ. ಪೂಜೆ ನಡೀತಾ ಇಲ್ಲ. ಈ ಊರಿನ ಊರದೇವತೆ ದೊಡ್ಡಮ್ಮನಿಗೆ ನಿತ್ಯವೂ ಪೂಜೆ ಪುನಸ್ಕಾರ ಇದೆ. ಸೋಮನಹಳ್ಳೀಲಿ ರಾಮೋತ್ಸವ ಜೋರಾಗಿ ನಡೆಯುತ್ತೆ - ೯ ರಿಂದ ೧೦ ದಿವಸ. ನಂತರ ಶರನ್ನವರಾತ್ರಿ ಐದು ದಿನ, ಗ್ರಾಮದೇವತೆ ಜಾತ್ರೆ ಒಂದು ದಿನ ನಡೆಯುತ್ತೆ.

ಅ) ಎಸ್. ನಾಗರಾಜು ಇ/ಮ ಎಸ್.ಜಿ. ಸುಬ್ಬರಾಯ

ಸೋಮನಹಳ್ಳಿ, ಹೊಳೆನರಸೀಪುರ (ತಾ), ಹಾಸನಜಿಲ್ಲೆ, ದೂರವಾಣಿ: 08175 569119

ಡಾಕ್ಟ್ರು, ಅಡುಗೆಯವನು ಇಬ್ರೂ ಹಸ್ತಸಿದ್ಧಿ ಇರುವವರೆಗೆ ಕೆಲಸ ಮಾಡಬಹುದು. ಹಸ್ತಸಿದ್ಧಿ ಸರಿಯಾಗಿಲ್ಲದಿದ್ದಾಗ ಕೈ ಬಿಡುವುದು ಉತ್ತಮ ; ಇವರಿಗೆ ಹೆಸರು ಬರೋದಿಲ್ಲ; ಸಂಯಮ ಬಹಳ ಮುಖ್ಯ. ಅದು ನಮಗೂ ಇರಬೇಕು, ನಮ್ಮ ಜತೇಲಿ ಬಂದವರಿಗೂ ಇರಬೇಕು. ಅದಿಲ್ಲದಿದ್ರೆ ಇಲ್ಲಿ ಗೆಲ್ಲೋದಕ್ಕೆ ಆಗೋದಿಲ್ಲ. ಬಹಳ ಕಷ್ಟ ಆಗುತ್ತೆ.



ಅಡುಗೆ ಉಪವೃತ್ತಿಯ ಅವಿಭಕ್ತ ರೈತ ಕುಟುಂಬ: ಸ್ವಗೃಹದ ಮುಂದೆ (ಬಲತುದಿಯಲ್ಲಿ ನಿಂತ) ಶಾಂತ-ಎಸ್.ನಾಗರಾಜು ಅವರೊಂದಿಗೆ ಸೋದರ ಕುಟುಂಬಗಳು: ಬಲತುದಿಯಿಂದ ಮೂರನೆಯವರು ಎಸ್.ನಾಗೇಂದ್ರ

ಸೋಮನಹಳ್ಳಿಯವರೇ ಆದ ಎಸ್.ಜಿ. ಸುಬ್ಬರಾಯ ಹಾಗೂ ಎಸ್.ವಿ. ಸಾವಿತ್ರಮ್ಮ ದಂಪತಿಗಳ ಹಿರಿಯ ಮಗ ನಾಗರಾಜು. ಇವರಿಗೆ ೫೧ ವರುಷ. ಇವರ ಪತ್ನಿ ಶಾಂತ ಹಾಸನ ತಾ. ಮುದ್ಲಾಪುರದವರು. ಅಡುಗೆ ಕೆಲಸ ಇವರ ವೃತ್ತಿ. ಒಟ್ಟು ಕುಟುಂಬದ ಅಣ್ಣತಮ್ಮಂದಿರೆಲ್ಲರದ್ದೂ ಅಡುಗೆ ವೃತ್ತಿಯೇ. ಗುಂಡಣ್ಣನವರ ಮನೇಲಿ ಬೆಳಿಗ್ಗೆ ಮೊದಲು ಮಾತಿಗಿಳಿದದ್ದು ನಾಗರಾಜ್ ಅವರ ಜತೇನೇ.

- **ನಾಗರಾಜ್ ಅವರೆ, ನಮಸ್ಕಾರ.**
  ನಮಸ್ಕಾರ.

- **ನೀವು ಚಿಕ್ಕವರಿದ್ದಾಗ ಸೋಮನಹಳ್ಳಿ ಹ್ಯಾಗಿತ್ತು?**

ಬಹಳ ಬಡತನದ ಊರು ಇದು. ನೀರಿಗೂ ತುಂಬಾ ತೊಂದ್ರೆ ಇತ್ತು. ವ್ಯವಸಾಯ ಮಾಡುವುದಕ್ಕೂ ಶಕ್ತಿ ಇರಲಿಲ್ಲ. ಬಹಳ ಬಡತನದಲ್ಲಿ ಬಂದ ಕುಟುಂಬಗಳು ಜಾಸ್ತಿ ಈ ಊರಲ್ಲಿ. ಕಾಲಕಾಲಕ್ಕೆ ಮಳೆ ಆಗ್ತಿರಲಿಲ್ಲ. ಸರಿಯಾದಂಥ ವ್ಯವಸ್ಥಿತವಾದ ಜಮೀನಿರಲಿಲ್ಲ. ೧೯೬೫ನೇ ಇಸವೀಲಿ ನಾನು SSLC ಪಾಸು ಮಾಡಿದ್ದು, ಅವತ್ತು ನಮ್ಮೂರಲ್ಲಿ ಭೀಕರ ಬರಗಾಲ. ಒಂದು ಹೊತ್ತು ಊಟಕ್ಕೂ ಇಲ್ಲದ ಪರಿಸ್ಥಿತಿ. ಅಂತಹ ಕ್ಲಿಷ್ಟ ಪರಿಸ್ಥಿತೀಲಿ ಬಂದಂತಹ ಜನ ನಾವು. ನಮ್ಮ ಬಂಧು-ಬಳಗ ಎಲ್ಲಾ ಇದೇ ಊರಿನವರು. ಶೇಕಡಾ ೯೦ ಭಾಗ ನೆಂಟರು ಇಷ್ಟರೇ ಇಲ್ಲಿರೋದು. ಇಲ್ಲಿಗೆ ಹೊರಗಿನಿಂದ ಹೆಣ್ಣು ಕೊಡೋಕೆ ಯೋಚನೆ ಮಾಡೋರು. ಯಾಕೇಂದ್ರೆ ಬೀದಿಭಾವಿಯಿಂದ ನೀರು ಸೇದಬೇಕು. ೭೦-೮೦ ಅಡಿ ಆಳದಲ್ಲಿ ನೀರು ಇತ್ತು. ಹೆಣ್ಣು ಕೊಟ್ರೆ ನೀರು ಸೇದಬೇಕಲ್ಲಾ, ಬಹಳ ಕಷ್ಟ ಆಗುತ್ತೆ ನಮ್ಮ ಹುಡುಗೀಗೆ ಅನ್ನೋ ದೃಷ್ಟೀನೂ ಇತ್ತು. ಆದ್ರೆ ನಾನು ಮದುವೆಯಾದ ಹೆಣ್ಣು ಮುದ್ಲಾಪುರದವಳು. ನಮಗಿಂತ ಬಡಸ್ತನ ಅಲ್ಲಿದ್ದದ್ದರಿಂದ ನನಗೆ ಹೆಣ್ಣು ಕೊಟ್ರು.

- **ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಹೇಳಿ?**
  ನಾನು ಇಲ್ಲಿಗೆ ಸಮೀಪದಲ್ಲಿರೋ ಬಿದಿರಕ್ಕದಲ್ಲಿ ಏಳನೇ ತರಗತಿಯವರೆಗೆ ಓದಿದೆ. ನಂತರ ಹಳ್ಳಿಮೈಸೂರಿನಲ್ಲಿ ಹೈಸ್ಕೂಲ್. ನಂತರ ಒಂದು ವರ್ಷ I.T.I. ಕೂಡ ಮಾಡಿದೆ.

- **ಓದಿ ಏನಾಗಬೇಕೂ ಅಂತ ಕನಸುಗಳು ಇದ್ವು?**
  ಓದುವಾಗ ತುಂಬಾ ಕನಸುಗಳು ಇದ್ವು. ನಮ್ಮ ಮನೇಲಿ ತುಂಬಾ ಜನ. ವಿಪರೀತ ಬಡಸ್ತನ. ಸಣ್ಣ ನೌಕರಿ ಸಿಕ್ಕಿದ್ರೂ ಹೋಗುತ್ತಿದ್ದೆ. ಆದರೆ ಸಿಗಲಿಲ್ಲ. ತಿನ್ನೋಕೆ ಅನ್ನ ಇರಲಿ, ನೀರೂ ಸಿಕ್ತಿರಲಿಲ್ಲ. ಇಲ್ಲೇ ಕೂಲಿ ಕೆಲಸ ಮಾಡಲು ಆರಂಭಿಸಿದೆ. ಎಲ್ಲಾ ತೋಟದಲ್ಲೂ

ಕೆಲಸ ಮಾಡಿದೀನಿ. ನಾಲ್ಕಾಣೆಗೆ ಕೆಲಸ ಮಾಡಿದೀನಿ. ಹತ್ತು ಪೈಸೆ ಸಲುವಾಗಿ ತೆಂಗಿನಮರ ಹತ್ತಿದೀನಿ. ನಾನು ಹಿರಿಮಗ. ನಮ್ಮ ತಂದೆ ಸರಿಯಾಗಿ ಸಂಸಾರದ ಜವಾಬ್ದಾರಿ ಹೊತ್ತು ನಡೆಸಲಿಲ್ಲ.

- **ನಿಮ್ಮ ತಂದೆ-ತಾಯಿಯ ಬಗ್ಗೆ ಹೇಳಿ.**

  ಅದೇ, ನಮ್ಮ ತಂದೆ ಅಡುಗೆ ಕೆಲಸದವರು. ಚಿಕ್ಕಂದಿನಿಂದಲೂ ಅಡುಗೆ ಕೆಲಸ ಮಾಡಿಕೊಂಡು ಬೇರೆ ಬೇರೆ ಕಡೆ ಇದ್ರು. ಅವರನ್ನು ಕರೆದುಕೊಂಡು ಬಂದು ನಮ್ಮಜ್ಜ ಇದೇ ಊರಿನ ಹುಡುಗಿ ಕೊಟ್ಟು ಮದುವೆ ಮಾಡಿದ್ರು. ಆದರೂ ಅವರು ಇಲ್ಲಿ ನೆಲೆ ನಿಲ್ಲಲಿಲ್ಲ. ಕೆಲವು ದಿನ ಇಲ್ಲಿ ಇರೋರು, ಕೆಲವು ದಿನ ಇಲ್ಲಿ ಇರುತ್ತಿರಲಿಲ್ಲ. ಅವರು ಅಡುಗೆ ಮಾಡ್ತಿದಾರೆ ಅನ್ನುವ ಒಂದು ದೃಷ್ಟಿ ಇಟ್ಟುಕೊಂಡು ನಾನೂ ಸಹ ಅವರ ಜತೆ ಸೇರಿಕೊಂಡೆ.

- **ನೀವು ಎಷ್ಟು ಜನ ಮಕ್ಕಳು?**

  ನಾವು ಐದು ಜನ ಗಂಡುಮಕ್ಕಳು, ಮೂರು ಜನ ಹೆಣ್ಣು ಮಕ್ಕಳು.

- **ನಿಮ್ಮ ತಾತನವರದ್ದೂ ಇದೇ ಊರಾ?**

  ಹೌದು. ಅವರು ಗುಂಡಪ್ಪನವರೂ ಅಂತಾ. ಅವರು ಮೂಲತಃ ವ್ಯವಸಾಯಸ್ಥರು.

- **ನಿಮ್ಮ ತಾತ ವ್ಯವಸಾಯಸ್ಥರಾದರೂ ನಿಮ್ಮ ತಂದೆ ಅಡುಗೆ ವೃತ್ತಿ ಹಿಡಿದದ್ದು ಹ್ಯಾಗೆ?**

  ಅವರು ಸಣ್ಣವಯಸ್ಸಿನಲ್ಲೇ ಊರು ಬಿಟ್ರು. ರುದ್ರಪಟ್ಟಣದಲ್ಲಿ ಮಿಡ್ಲ್ ಸ್ಕೂಲ್ ಓದುವಾಗ ಅಲ್ಲಿಂದಲೇ ಕದ್ದು ಹೋಗಿ ಬಿಟ್ರು. ಯಾರ ಕೈಗೂ ಸಿಗಲಿಲ್ಲ. ಅಲ್ಲಿಂದ ಹಾಸನಕ್ಕೆ ಹೋಗಿ ಅಲ್ಲಿ ೫೦ ವರುಷಗಳ ಕಾಲ ಜೀವನ ಮಾಡಿದಾರೆ - ಅಡುಗೆ ವೃತ್ತೀಲಿ. ಅಂದಿನ ಮುಖ್ಯಮಂತ್ರಿ ದೇವರಾಜಅರಸ್ ಅವರಿಂದ certificate ಕೂಡ ಪಡೆದಿದ್ದಾರೆ. ಬಹಳ ಪ್ರಮುಖವಾದ ಅಡಿಗೆಯವರು ಆಗಿದ್ರು.

- **ನಿಮ್ಮ ತಂದೆಗೆ ಅನುಭವ ಬಂದದ್ದು ಹೇಗೆ?**

  ಅವರಿಗೆ ಹಾಸನದಲ್ಲಿ ಪರಿಚಿತರಿದ್ರು. ಅವರು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ರು. ದೋಸೆ ಸುಬ್ಬಣ್ಣ ಅಂತಲೇ ನಮ್ಮ ತಂದೆಗೆ ಹೆಸರು. ಎರಡೂ ಕೈಯಲ್ಲಿ ದೋಸೆ ಹಾಕೋರು. ಆಮೇಲೆ ಮದುವೆಗಳಿಗೆ ಅಡುಗೆ ಒಪ್ಪಂದ ಮಾಡಿಕೊಳ್ಳಲು ಶುರು ಮಾಡಿದ್ರು. ನಾವು ಅವರ ಜತೆ ಸೇರಿಕೊಂಡ್ವು. ನಾನು ಹಿರೀಮಗನಾಗಿ ಸಂಸಾರ ನಿರ್ವಹಣೆ ಮಾಡಬೇಕಿತ್ತಲ್ಲಾ, ಹಾಗಾಗಿ ನಾನು ಮೊದಲು ಸೇರಿದೆ. ನಂತ್ರ, ನನ್ನ ತಮ್ಮಂದಿರು ಹಿಂಬಾಲಿಸಿದ್ರು. ನಮ್ಮ ಕುಟುಂಬ ಪೂರ್ತಾ ಅಡುಗೆ ವೃತ್ತೀನೇ ಅವಲಂಬಿಸಿದೆ. ಈವಾಗ ಚೆನ್ನಾಗಿದೀವಿ, ಸುಖವಾಗಿದೀವಿ.

- **ನಿಮ್ಮ ತಾಯಿಯವರ ಬಗ್ಗೆ ಹೇಳಿ. ತಂದೆಯವರು ಹೊರಗೆ ಹೋದಾಗ ಕುಟುಂಬದ ನಿರ್ವಹಣೆ ಹೇಗೆ ಮಾಡ್ತಿದ್ರು?**

  ವಿಳ್ಳೇದೆಲೆ ಹಚ್ಚೋದು, ಅಡಿಕೆ ಎಡೆಯೋದು ಮಾಡಿ ನಮ್ಮನ್ನೆಲ್ಲಾ ಸಾಕಿದಾರೆ. ನಮ್ಮ ಸೋದರಮಾವ ವೆಂಕಟೇಶಮೂರ್ತಿ ಜೋಯಿಸ್ ಅಂತ. ಅವರು ಇದೇ ಊರಲ್ಲಿ ಇದಾರೆ. ಅವರೇ ನಮಗೆ ಮೂಲತಃ ಎಲ್ಲಾ ಅನುಕೂಲ ಮಾಡಿದವರು. ಅವರ ಮಾರ್ಗದರ್ಶನದಲ್ಲೇ ನಾವು ಬೆಳೆದದ್ದು. ಅವರು ಎಲ್ಲಾ ತರಹದ ನೆರವನ್ನೂ ನೀಡಿದ್ದಾರೆ. ಕಷ್ಟಕಾಲದಲ್ಲಿ ನಮ್ಮ ಕೈ ಹಿಡಿದಿದ್ದಾರೆ.

- **ಎಷ್ಟು ಜಮೀನಿತ್ತು ನಿಮಗೆ?**

  ನಮಗೆ ೧೦ ಗುಂಟೆ ತೋಟ, ೧೦ ಗುಂಟೆ ಗದ್ದೆ; ಐದರಿಂದ ಆರು ವರುಷಕ್ಕೆ ಒಂದು ಬೆಳೆ. ಕೂಲಿ ಮಾಡಿಕೊಂಡು ಬದುಕಿದ್ವು.

- **ಇಲ್ಲಿ ಸುತ್ತಮುತ್ತ ವ್ಯವಸಾಯಾನೇ ಚೆನ್ನಾಗಿರಲಿಲ್ಲ ಅಂದ ಮೇಲೆ ಕೂಲಿಗೆ ಯಾರು ಕರೀತಿದ್ರು?**

  ಈ ಊರಲ್ಲಿ ತುಂಬಾ ಜಮೀನಸ್ತರೂ ಇದ್ರು. ಅವರು ಕೂಲಿ ಕೆಲಸಕ್ಕೆ ಕರೆಯೋರು. ನಾಲೆ ಬಳಿ ಗದ್ದೆ ಇದ್ದು ಅನ್ನ ಊಟ ಮಾಡೋ ಜನ ಇದ್ದದ್ದು ಮೂರು ನಾಲ್ಕು ಮನೆ ಮಾತ್ರ. ಇನ್ನು ಉಳಿದೋರಿಗೆ ರಾಗಿ, ಸೊಸೈಟಿ ಗೋಧಿ ಅಷ್ಟೆ. ಅಕ್ಕಿ ಕಾಣಬೇಕಾದ್ರೆ ಎಷ್ಟೋ ದಿವಸಕ್ಕೆ ಒಂದು ಸಾರಿ ಮಾತ್ರ.

- **ಅಡುಗೆ ವೃತ್ತಿಯನ್ನು ನೀವು ಯಾವಾಗ, ಯಾವ ರೀತಿ ಆರಂಭಿಸಿದ್ರಿ?**

  ನನ್ನ ೧೮ನೇ ವಯಸ್ಸಿನಲ್ಲಿ ಆರಂಭಿಸಿದ್ದು. ನಮ್ಮ ತಂದೆ ಜತೆ ಹೋಗಿ ಅವರ ಸಹಾಯಕನಾಗಿದ್ದೆ. ಸ್ವಲ್ಪ ದಿವಸ ಕಳೆದ ಮೇಲೆ ಅವರಿಗೆ ಲಕ್ವ ಹೊಡೀತು. ಆಮೇಲೆ ನಾನೇ ವೃತ್ತೀನ ಮುಂದುವರಿಸಿದೆ. contract ಮಾಡಲು ಆರಂಭಿಸಿದೆ. ಈಗ ಇಡೀ ಕರ್ನಾಟಕದಲ್ಲಿ ಎಲ್ಲಾ ಕಡೇನೂ ಹೋಗಿ ಬರ್‍ತಾ ಇದೀನಿ. ಜವಾಬ್ದಾರೀನ ಚೆನ್ನಾಗಿ ನಿಭಾಯಿಸುತ್ತಾ ಇದೀನಿ.

- **ನಿಮ್ಮ ಅಡುಗೆ ವೃತ್ತಿಯ ಬಗ್ಗೆ ಹೇಳಿ? ಇದರ ಸುಖದುಃಖಗಳು ಏನು?**

  ಇಡೀ ಮದುವೆ ಮನೆ ಎಲ್ಲಾ - ಅಡುಗೆ ಮೇಲೇ depend ಆಗಿರೋದು. ಏನೇ ಆದ್ರೂ ನಮ್ಮ ಮೇಲೇ ದೂರು ಬರೋದು. ಎಲ್ಲವನ್ನೂ ಜವಾಬ್ದಾರಿಯಿಂದ ನಿಭಾವಣೆ ಮಾಡಬೇಕು. ಅಡುಗೆ ಕೆಡಬಾರದು. ನಾನು ಶುಭ, ಅಶುಭ ಎರಡಕ್ಕೂ ಅಡುಗೆ ಮಾಡ್ತೀನಿ. ಎಲ್ಲಾ ಜನಾಂಗಕ್ಕೂ ಅಡುಗೆ ಮಾಡ್ತೀವಿ. ಒಂದೇ ಜಾತಿಗೆ ಸೀಮಿತವಾಗಿದ್ರೆ ಇವತ್ತು ಬದುಕೋಕೆ ಆಗಲ್ಲ. ಯಾವ್ಯಾವ ಜಾತಿ ಜನ ಬಂದ್ರೂ ಅವರಿಗೆ ತಕ್ಕ ಹಾಗೆ ಅಡುಗೆ ಮಾಡಬೇಕು.

- **ನಿಮ್ಮ ತಂದೆಯವರು ವೃತ್ತಿಗೆ ಬೇಕಾದ ಸಾಮಾನು ಸರಂಜಾಮು ಇಟ್ಟುಕೊಂಡಿದ್ರಾ?**

  ಇಲ್ಲ. ಬಾಡಿಗೆಗೆ ತಂದು ಕೆಲಸ ಮಾಡೋರು. ಈಗಲೂ ನಾವು ಇಡಬೇಕಾಗಿಲ್ಲ. ಅವತ್ತು ಕೆಲವು ಬಾಂಡ್ಲಿ ವಗೈರೆ ಇಟ್ಟುಕೊಂಡಿರಬೇಕಿತ್ತು. ಇವತ್ತು ಬೇಕಿಲ್ಲ. ನಾವೇ ಪಾತ್ರೆಗಳನ್ನು ಇಟ್ಟುಕೊಂಡು city ಕಡೆ ಮಾಡಬಹುದು. ಹಳ್ಳೀ ಕಡೆ ಆಗಲ್ಲ. ನಾವು ಈಗ ಹಳ್ಳೀನೇ ಹೆಚ್ಚಾಗಿ ಅವಲಂಬಿಸಿದ್ದೀವಿ. ಹಿಂದೆಲ್ಲಾ ಅಡುಗೆಗೆ ಹಳ್ಳಿಗೆ ಹೋದಾಗ ಸೌದೆ ಒಲೆ, ಹಸೀ ಸೌದೆ ಹೊಗೇಲಿ ಕೆಲಸ ಮಾಡೋವಷ್ಟರಲ್ಲಿ ಕಣ್ಣು ಹಾಳಾಗಿ ಹೋಗೋದು. ಸರಿಯಾದ ವ್ಯವಸ್ಥೆ ಇರಲಿಲ್ಲ. ಆದರೆ ಇವತ್ತು ಗ್ಯಾಸ್ ಬಂದಿದೆ. ಕೆಲಸ ಸುಲಭ. ಬಟ್ಟೆ ಮಸಿಯಾಗೋಲ್ಲ. ಅಚ್ಚುಕಟ್ಟಾಗಿ ಅಡುಗೆ ಮಾಡಬಹುದು - ಬುದ್ಧಿವಂತಿಕೆ ಇದ್ರೆ.

- **ಅಡುಗೆ ಕೆಲಸ ಮಾಡುವ ವ್ಯಕ್ತಿಗೆ ಯಾವ ಗುಣಗಳು ಇರಬೇಕು ಅಂತೀರಿ?**

  ಸಂಯಮ ಇರಬೇಕು. ಮೊದಲನೇದೇ ಅದು. ನಮ್ಮ ಜತೇಲಿ ಬಂದವರಿಗೂ ಇರಬೇಕು. ಅದಿಲ್ಲದಿದ್ರೆ ಗೆಲ್ಲೋಕಾಗೋಲ್ಲ. ನಮ್ಮ ತಂದೆಯವರು ರೂಢಿಸಿದ ಕಸುಬು ಕೈ ಹತ್ತಿದೆ. ನಾನು ಇಂದು ರುಚಿಯಾಗಿ ಅಡುಗೆ ಮಾಡ್ತಿದ್ರೆ ಅದಕ್ಕೆ ನಮ್ಮ ತಂದೇನೇ ಗುರು. ನಮ್ಮ ತಂದೆ ಸುಮಾರು ೩೦-೪೦ ಜನರನ್ನು ಈ ವೃತ್ತೀಲಿ ತಯಾರು ಮಾಡಿದಾರೆ. ಈ ಊರಲ್ಲಿ, ವ್ಯವಸಾಯದ ಜತೆ, ಅಡುಗೆ ಮಾಡುವ ೩೦-೪೦ ಜನ ಇದಾರೆ. ನಾವು ಸ್ವತಂತ್ರವಾಗಿ ಈ ವೃತ್ತಿ ಮಾಡುತ್ತಿದ್ದೇವೆ.

- **ನಿಮ್ಮ ಮಕ್ಕಳು ಈ ವೃತ್ತಿ ಮುಂದುವರೆಸುತ್ತಾರಾ?**

  ಇಲ್ಲ. ಎಲ್ಲರೂ ಓದುತ್ತಿದ್ದಾರೆ. ನಾನು ನಮ್ಮ ವೃತ್ತೀ ಬೇಡ ಅಂದುಕೊಂಡಿದ್ದೀನಿ. ಹಣೇಬರಹ ಏನಾಗುತ್ತೋ ಯಾರಿಗೆ ಗೊತ್ತು?

- **ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ?**

  ತೋಟ ಹಾಗೂ ಗದ್ದೆಯ ಎಲ್ಲಾ ಕೆಲಸದಲ್ಲೂ ನಂಗೆ ಅನುಭವ ಇದೆ. ಇದು ಬೇರೆಯವರ ಜಮೀನಿನಲ್ಲಿ ಕೂಲಿ ಮಾಡಿ ಕಲಿತದ್ದು. ಇವತ್ತು ನೀರಿಗೆ ತೊಂದರೆ ಇಲ್ಲ. ನಾನು ತೋಟದಲ್ಲಿ ಅಡಿಕೆ ಬೆಳೆದಿದ್ದೇನೆ. ೧೦-೧೫ ವರುಷ ಹಿಂದೆ ಒಂದು ಎಕರೆ ಜಮೀನು ಖರೀದಿಸಿದ್ದೇನೆ. ಒಂದು ಎಕರೆಗೆ ೪೦ರಿಂದ ೫೦ ಸಾವಿರ ಧಾರಣೆ ಇತ್ತು. ನೀರಿನ್ನೂ ಬಂದಿರಲಿಲ್ಲ. ಕಡಿಮೆಗೆ ಸಿಕ್ತು.

- **ಅಷ್ಟು ಹಣ ನಿಮ್ಮಲ್ಲಿ ಆಗ ಇತ್ತ?**

  ಹೌದು, ಇತ್ತು. ನಮ್ಮ ಮನೇಲಿ ನಾವು ಅಣ್ಣತಮ್ಮಂದಿರೆಲ್ಲಾ ಒಟ್ಟಿಗೇ ಇದೀವಿ. ಹಿಂದಿನಿಂದ ಇಂದಿನವರೆಗೂ ಒಟ್ಟಾಗಿ ಬಾಳುತ್ತಿದ್ದೇವೆ. ಹಾಗಾಗಿ ಹಣ ಉಳಿತಾಯ ಆಗಿದ್ದು. ಹೊಂದಿಕೊಂಡು ಹೋಗ್ತಾ ಇದೀವಿ.

- **ಏನು ನಿಮ್ಮ ಒಟ್ಟುಕುಟುಂಬದ ವಿಶೇಷತೆ?**

  ಇಲ್ಲಿ ಸುಖವಾಗಿ ಜೀವಿಸಬಹುದು. ಬೇರೆ ಬೇರೆ ಹೋದರೆ ಕಷ್ಟ. ಒಟ್ಟು ಕುಟುಂಬದಲ್ಲಿ ಅವತ್ತಿಗವತ್ತಿಗೆ ಸಾಲ ಮಾಡದ ರೀತಿಯಲ್ಲಿ ವ್ಯವಸ್ಥಿತವಾಗಿ ಜೀವನ ನಡೆಸಬಹುದು. ನಾನೇ ನನ್ನ ಕುಟುಂಬದ ಹಿರಿಯ. ಹೊರಗಿನಿಂದ ಬಂದ ಹೆಣ್ಣು ಮಕ್ಕಳೂ ಹೊಂದಿಕೊಂಡಿದ್ದಾರೆ.

ಸಣ್ಣ ಪುಟ್ಟ ಮಾತು ಬರತ್ತೆ, ಅದನ್ನು ನಾವು ಗಣನೆಗೆ ತೆಗೆದುಕೊಳ್ತಾ ಇಲ್ಲ. ಹ್ಯಾಗೋ ಅನುಸರಿಸಿಕೊಂಡು ಹೋಗ್ತಾ ಇದೀವಿ.

- **ನಿಮ್ಮ ಹೆಂಡ್ತೀ ಬಗ್ಗೆ ಹೇಳಿ. ಅವರು ಯಾವ ರೀತಿ ನಿಮ್ಮ ಜತೆ ಸಹಕರಿಸಿದ್ದಾರೆ?**
  ಅವಳು ಬಂದ ಮೇಲೆ ನಮಗೆ ಅನುಕೂಲವಾಗಿದೆ. ವ್ಯವಸ್ಥಿತವಾಗಿ ಊಟ ತಿಂಡಿ ಮಾಡಿ ನಮ್ಮನ್ನು ಸಲಹಿದ್ದಾಳೆ.

- **ನಿಮ್ಮ ಜತೆ ನಿಮ್ಮ ತಮ್ಮಂದಿರೂ ಕಷ್ಟ ಅನುಭವಿಸಿದ್ದಾರಾ?**
  ನನ್ನ ಇಬ್ಬರು ತಮ್ಮಂದಿರು ನನ್ನಂತೆಯೇ ಕಷ್ಟಪಟ್ಟಿದ್ದಾರೆ. ಉಳಿದವರು ಬರೋ ಹೊತ್ತಿಗೆ ಸ್ವಲ್ಪ ಅನುಕೂಲ ಇತ್ತು. ನನ್ನ ತಂದೆಯ ಜವಾಬ್ದಾರಿಯೆಲ್ಲಾ ನಾನು ಮುಗಿಸಿದ್ದೇನೆ. ಇನ್ನು ಮುಂದಿನದು ನಮ್ಮ ಜವಾಬ್ದಾರಿ ಮಾತ್ರ.

- **ನೀವು ಮನೆಗೆ ಹಿರಿಯರಾಗಿ ನಿಮ್ಮ ತಮ್ಮಂದಿರೆಲ್ಲರನ್ನೂ ಅಡುಗೆಗೆ ಕರೆತಂದ್ರಿ? ಅವರನ್ಯಾಕೆ ಓದಿಸಿ ಒಳ್ಳೇ ಕೆಲಸಕ್ಕೆ ಸೇರಿಸಲಿಲ್ಲ?**
  ಓದಿಸ್ತಾ ಇದ್ವಿ. ಯಾರೂ ಓದಲಿಲ್ಲ. ಒಬ್ಬ PUCವರೆಗೆ ಓದಿದ. ಮನೆಗೆ ಬಂದ. ಅವಾಗ ಇನ್ನೇನು ಮಾಡೋದು? ಎಲ್ಲರಿಗೂ ಇದೊಂದು ವೃತ್ತಿ ಇದ್ದೇ ಇದೆಯಲ್ಲ, application ಬೇಕಿಲ್ಲ. ಬನ್ನಿ, ನಾವೇ ಸೇರಿ ದುಡಿಯೋಣ ಅಂದುಕೊಂಡು ಈ ಕೆಲಸ ಆರಂಭಿಸಿದ್ವು. ನಮ್ಮ ದುಡ್ಡು ನಮಗೇ ಉಳಿಯುತ್ತೆ ಬನ್ನಿ ಅಂದೆ. ಇನ್ನೊಬ್ಬ ತಮ್ಮ ಮಾತ್ರ ರೈಲ್ವೇಸ್‌ನಲ್ಲಿ ಸೀನಿಯರ್ ಕ್ಲಾರ್ಕ್ ಆಗಿ ಮೈಸೂರಿನಲ್ಲಿ ಮನೆ ಕಟ್ಟಿಕೊಂಡು ಸುಖವಾಗಿದ್ದಾನೆ. ಅಡುಗೆ ಕೆಲಸದಲ್ಲಿ ನನ್ನ ಅನುಭವದ ಪ್ರಕಾರ ದೇಹಶಕ್ತಿಗಿಂತ ಚತುರತೆ (knack) ಬಹಳ ಮುಖ್ಯ. ಬುದ್ಧಿವಂತಿಕೆ ಬೇಕು. ಅನುಭವ ಬಹಳ ಮುಖ್ಯ. ನಮ್ಮ ತಂದೆ ದೋಸೆಯಲ್ಲಿ ಹೆಸರು ಮಾಡಿದ್ರು. ನಾನು ಚಿರೋಟಿ ಚೆನ್ನಾಗಿ ಮಾಡ್ತೀನಿ.

- **ಚಿರೋಟಿ ಮಾಡುವ ವಿಧಾನ ಹ್ಯಾಗೆ?**
  ನಾಲ್ಕು ಕೆ.ಜಿ ರವೆ, ಒಂದು ಕೆ.ಜಿ. ಮೈದಾ ಹಾಕಿಕೊಂಡು, clean ಆಗಿ ಕಲಸಬೇಕು. ಅದನ್ನು ಚೆನ್ನಾಗಿ ಕುಟ್ಟಬೇಕು. ಅದಕ್ಕೇ ಆದ ಚಿರೋಟಿ ತಟ್ಟೆ ಇದೆ, ಅದನ್ನು ಸಾಟಿ ಕೊಡಬೇಕು. ಚಪಾತಿ ತರ ಒತ್ತಿಕೊಂಡು ಆಮೇಲೆ ಉಂಡೆ ಮಾಡಿ ಬೇಯಿಸಬೇಕು.

- **ಮತ್ತೆ ಬೇರೆ ಯಾವ ಯಾವ ಅಡುಗೆ ಮಾಡ್ತೀರಿ?**
  ಎಲ್ಲ ತರಹದ ಅಡುಗೇನೂ ಬರುತ್ತೆ. ಸಂಕೇತಿಗಳಲ್ಲಿ ಸಾರು ಮತ್ತು sweet ಬಹಳ ಮುಖ್ಯ. sweet ಅಂದ್ರೆ ಜಿಲೇಬಿ. ಜಿಲೇಬೀನ ಸಣ್ಣಗೆ ಮಾಡಬೇಕು. ಮೈದಾಹಿಟ್ಟನ್ನು ಕಲಸಿಕೊಂಡು ಕರಟದಲ್ಲಿ ಬಿಡಬೇಕು. ಸಂಕೇತಿಗಳ ಜಿಲೇಬಿ ಅಂತಾನೇ ಹೆಸರು. ಅದರ ಜತೆಗೆ ಸಂಕೇತಿ ಸಾರು. ಎರಡರಲ್ಲೂ ನಾನು famous. ಇಡೀ ಹಾಸನ ಜಿಲ್ಲೇಲಿರೋ ಅಡುಗೆಯವರು ನಮ್ಮ ತಂದೆ ಶಿಷ್ಯರೇ.

- **ನೀವು ನಿಭಾಯಿಸಿದ ದೊಡ್ಡ ಸಮಾರಂಭ ಯಾವುದು?**
  ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಒಂದು ಮದುವೆ ಒಪ್ಪಿಕೊಂಡಿದ್ದೆ. ಸುಮಾರು ೫೦೦೦ ಜನರ ಅಡುಗೆ. ಅದೇ ದೊಡ್ಡ ಮದುವೆ. ಮಾಜಿ ಪ್ರಧಾನಿ ದೇವೇಗೌಡರ ಹರದನಹಳ್ಳಿಯಲ್ಲಿ ಒಂದು ಕಾರ್ಯಕ್ರಮಕ್ಕೆ ೧೦,೦೦೦ ಜನರಿಗೆ ಅಡುಗೆ ಮಾಡಿದ್ದೀವಿ ನಾನು, ನನ್ನ ತಮ್ಮಂದಿರು ಹಾಗೂ ಇತರೇ ಸ್ನೇಹಿತರು ಸೇರಿ, ಅದೂ ಉಚಿತವಾಗಿ - ಅಭಿಮಾನದಿಂದ.

- **ನಿಮ್ಮ ಜೀವನದ ಸಿಹಿ ಕಹಿ ಘಟನೆಗಳು?**
  ಬೇಕಾದಷ್ಟಿವೆ. ನಮ್ಮ ಜೀವಮಾನದಲ್ಲಿ ಒಂದೊಂದು ದಿನವೂ ಕಣ್ಣೀರಿನಲ್ಲಿ ಕೈತೊಳೆದಿದ್ದೇವೆ. ಒಂದೊಂದು ದಿನ ತಿನ್ನಲು ಏನೂ ಇಲ್ಲದೆ ಕಡಲೇಕಾಯಿ ತಿಂದು ಮಲಗಿದ್ದೇವೆ. ಎಷ್ಟೋ ಬಾರಿ ಆತ್ಮಹತ್ಯೆ ಮಾಡಿಕೊಳ್ಳೋಣ ಅನ್ನೋ ಮಟ್ಟಕ್ಕೆ ಹೋಗಿದ್ದಿದೆ. ಹಿರಿಯ ಮಗನಾಗಿ ಹಾಗೆ ಮಾಡಿದರೆ ಇಡೀ ಕುಟುಂಬ ನಾಶವಾಗುತ್ತಲ್ಲಾ ಅಂತ ಧೈರ್ಯ ತಂದುಕೊಂಡು ಬದುಕಿದ್ದೇನೆ. ನಮ್ಮೂರಿನ ಇತರೇ ಜನ ನಮಗೆ ನೆರವಾಗಿದ್ದಾರೆ.

- **ಬದುಕಿನಲ್ಲಿ ನೀವು ಕಲಿತ ಪಾಠ?**
  ನಾವು ಎಷ್ಟೇ ಮೇಲಕ್ಕೆ ಹೋದರೂ ಸಹ, ಹಿಂದಿನ ಒಂದು ನೆನಪು ನಾವು ಇಟ್ಟುಕೊಳ್ಳದೇ ಹೋದರೆ ಮನುಷ್ಯತ್ವ ಉಳಿಯುವುದಿಲ್ಲ. ಹಳೆಯದನ್ನು ನೆನೆಸಿಕೊಳ್ಳಬೇಕು.

- **ಅಡುಗೆವೃತ್ತಿಯನ್ನು ನೆಚ್ಚಿಕೊಂಡು ಒಂದು ಕುಟುಂಬ ನೆಮ್ಮದಿಯಾಗಿ ಇರಬಹುದಾ?**

ಧಾರಾಳವಾಗಿ ಇರಬಹುದು. ನಾವು ಈ ಊರು ಬಿಟ್ಟು ಮೈಸೂರು, ಬೆಂಗಳೂರಲ್ಲಿ ಇದ್ದಿದ್ರೆ ಎಲ್ಲರಂತೆ ದೊಡ್ಡಮನೆ ಕಟ್ಟಿಕೊಂಡು ಇರಬಹುದಿತ್ತು. ಖಂಡಿತ. ಇವತ್ತಿನ ಅಡುಗೆವೃತ್ತಿ ಬಹಳ ಸುಲಭ. ನಮಗೆ ಜಮೀನು ಸಹ ಇರೋದ್ರಿಂದ ಇಲ್ಲಿದೀವಿ, ಅಷ್ಟೆ.

- **ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದೂ ಈ ವೃತ್ತಿಯಲ್ಲಿ ಮುಖ್ಯ ಅಲ್ಲವೇ?**

ಇದು ಬಹಳ ನಿಜವಾದ ಪ್ರಶ್ನೆ. ಯಾಕೇಂದ್ರೆ ಅಡುಗೆಯವರಿಗೆ ಬಹಳ ಚಟಗಳು ಇರುತ್ತೆ. ಕುಡಿತ, ಹೊಗೆಸೊಪ್ಪು, ಗುಟಕಾ, ಎಲ್ಲಾ ಇರುತ್ತೆ ಅನ್ನೋ ವಾಡಿಕೆ ಬಂದಿದೆ. ಅದರ ವಿರುದ್ಧ ನಾನು ಹೋರಾಡಿದೆ. ಯಾವುದೇ ಚಟ ಇಲ್ಲದೆ ಈ ವೃತ್ತಿಯಲ್ಲಿ ಮುಂದುವರೆಯುವುದು ಸಾಧ್ಯವಿಲ್ಲವೆ, ಮಾಡಿ ತೋರಿಸಬೇಕು ಅಂತ ಅದೇ ದೃಷ್ಟಿಯಲ್ಲಿ ನಾನು ಬದುಕಿದೆ. ನನಗೆ ಯಾವ ಚಟಗಳೂ ಇಲ್ಲ. ಚಟ ಮನುಷ್ಯನನ್ನು ಹಾಳು ಮಾಡುತ್ತೆ. ನನ್ನ ಸ್ನೇಹಿತ ಒಬ್ಬ ಚಟದಿಂದ ೪೧ನೇ ವಯಸ್ಸಿಗೇ ಸತ್ತ. ಅವನಿಗೂ ಮೂರು ಜನ ಹೆಣ್ಣುಮಕ್ಕಳು. ನಾನೇ ಎಲ್ಲಾ ವ್ಯವಸ್ಥೆ ಮಾಡಿದೀನಿ. ಮನುಷ್ಯ ಸರಿಯಾದ ರೀತಿ ಹೋದ್ರೆ ಯಾವುದೇ ತೊಂದರೆ ಇಲ್ಲ.

- **ವ್ಯವಸಾಯದಿಂದ ಏನೂ ಅನುಕೂಲ ಆಗಲಿಲ್ವಾ?**

ವ್ಯವಸಾಯದಿಂದಲೂ ಅಲ್ಪಸ್ವಲ್ಪ ಆದಾಯ ಬರುತ್ತಿದೆ. ಆದರೆ ಇಡೀ ಕುಟುಂಬಕ್ಕೆ ಆಗುವಷ್ಟು ಬರ್‍ತಾ ಇರ್‍ಲಿಲ್ಲ. ಅದಕ್ಕೇ ಅಡುಗೆ ವೃತ್ತಿ ಅವಲಂಬಿಸಿದ್ದು. ಇವತ್ತು ನಮ್ಮ ಇಡೀ ೧೫ ಜನರ ಕುಟುಂಬ ಒಂದು ಪೈಸಾ ಸಾಲ ಇಲ್ದೆ ಸುಖವಾಗಿ ಇದ್ದೀವಿ.

- **ನೀವು ಈ ವೃತ್ತಿಗೆ ಪೂರಕವಾದ ಬಂಡವಾಳ ಏನಾದ್ರೂ ಹಾಕಿದ್ರಾ?**

ಏನೂ ಇಲ್ಲ. ಎರಡು ಕೈಯೇ ಬಂಡವಾಳ. ಅಡುಗೆಯವರಿಗೆ ಎರಡು ಕೈಯಿ, ಒಂದು ಚಾಕು, ಅಷ್ಟೆ.

- **ನೀವು ಅಡುಗೆಯವರು ರುಚಿಯಾಗಿ ಅಡುಗೆ ಮಾಡ್ತೀರಿ. ಮನೇಲಿ ನಿಮ್ಮ ಹೆಂಡ್ತಿ ಮಾಡುವ ಅಡುಗೆ ರುಚಿಸುತ್ತಾ?**

ಹ್ಯಾಗಿದ್ರೂ ಚೆನ್ನಾಗಿದೆ ಅಂತ ತಿನ್ನಬೇಕು. ಆದರೂ ಕೆಲವು ಸಲಹೆಗಳನ್ನೂ ಕೊಡ್ತೀವಿ. ಅವರೂ ಹೇಳ್ತಾರೆ, ನೀವು ದೊಡ್ಡ ದೊಡ್ಡ ಕಡೆ ತಿಂತೀರಿ, ಅದಕ್ಕೆ ಈ ಅಡುಗೆ ರುಚಿಸೋಲ್ಲ ಅಂತ. ಇದೆಲ್ಲಾ ಇದ್ದದ್ದೇ.

- **ಒಟ್ಟಾರೆ ಬದುಕಿನಲ್ಲಿ ಈಗ ತೃಪ್ತಿ ಇದೆಯಾ?**

ದೇವರ ದಯದಿಂದ, ಹಿರಿಯರ ಆಶೀರ್ವಾದದಿಂದ ಚೆನ್ನಾಗಿದ್ದೀವಿ. ಏನೂ ತೊಂದರೆಯಿಲ್ಲ. ಮುಂದಿನ ಜವಾಬ್ದಾರಿಯನ್ನು ಸಮರ್ಥವಾಗಿ ನಾನು ನಿರ್ವಹಿಸಿದ್ರೆ ನಾನು ಹುಟ್ಟಿದ್ದಕ್ಕೂ ಸಾರ್ಥಕವಾಗುತ್ತೆ.

- **ಒಳ್ಳೆಯದು ನಾಗರಾಜ ಅವರೆ, ಇದುವರೆಗೂ ನಿಮ್ಮ ಅನುಭವಗಳನ್ನು ಹಂಚಿಕೊಂಡ್ರಿ, ನಮಸ್ಕಾರ.**

ವಂದನೆಗಳು.

ಆ) ಎಸ್.ಆರ್. ಕೇಶವನಾರಾಯಣ ೩/ಮ ರಾಮಸ್ವಾಮಯ್ಯ

ಸೋಮನಹಳ್ಳಿ, ಹೊಳೆನರಸೀಪುರ (ತಾ) ಹಾಸನಜಿಲ್ಲೆ, ದೂರವಾಣಿ : 08175 569142

ಆಗಿನ ಕಷ್ಟಗಳು, ಸಾಲಸೋಲಾದಿಗಳು ಅದನ್ನೆಲ್ಲಾ ತೀರಿಸೋದು ತುಂಬಾ ಕಷ್ಟ ಆಗಿದೆ ಅವತ್ತು. ಅದನ್ನು ಮರೆಯೋದಕ್ಕೆ ಆಗೋದಿಲ್ಲ. ಆ ಕಷ್ಟಗಳ ನೆನಪಿನಿಂದಲೇ ಈವಾಗ ಯಾರಾದ್ರೂ ಬಂದು, ನಮ್ಮತ್ರ ಇದ್ದಾಗ ಕೇಳಿದ್ರೆ ನಾವು ಕೊಟ್ಟು ಬಿಡ್ತೀವಿ. ನಾವೂನೂ ನಾಲ್ಕಾರು ಜನರ ಹತ್ರ ಆಗ ಕಷ್ಟ ಪಟ್ಟು ಮಾಡಿರೋದು, ನೆರವು ಪಡೆದಿರೋದು, ಅದು ಮರೆಯೋಲ್ಲ; ಅದೇ ಯಾವಾಗಲೂ ನೆನಪಿಗೆ ಬರುತ್ತೆ.



ಶ್ರೀಮತಿ - ಎಸ್.ಆರ್.ಕೇಶವನಾರಾಯಣ ದಂಪತಿ ಸ್ವಗೃಹದಲ್ಲಿ: ಸೋಮನಹಳ್ಳಿ

ಸೋಮನಹಳ್ಳಿಯ ರಾಮಸ್ವಾಮಯ್ಯ ಹಾಗೂ ಹೊಳೆನರಸೀಪುರ (ತಾ) ಐಚನಹಳ್ಳಿಯ ರುಕ್ಮಿಣಮ್ಮ ದಂಪತಿಗಳ ಮಗ ಎಸ್.ಆರ್. ಕೇಶವನಾರಾಯಣ ಅವರಿಗೆ ಈಗ ೬೪ ವರುಷ ವಯಸ್ಸು. ಅರಕಲಗೂಡು (ತಾ) ಬಸವಾಪಟ್ಟಣದ ಬಿ.ಎಸ್. ನಾರಾಯಣ ಹಾಗೂ ಅರಕಲಗೂಡು (ತಾ) ದೊಡ್ಡಮಗ್ಗೆಯ ಲಕ್ಷ್ಮಿ ಇವರ ಮಗಳು ಶ್ರೀಮತಿ, ಕೇಶವನಾರಾಯಣರ ಧರ್ಮಪತ್ನಿ; ಇವರ ವೃತ್ತಿ ವ್ಯವಸಾಯ. ಸ್ಥಳೀಯ ಹಸಿರು ಔಷಧಿಗಳೂ ಇವರಿಗೆ ಗೊತ್ತು. ಇವರನ್ನು ನಾವು ಮಾತಿಗೆಳೆದಾಗ:

- **ನಮಸ್ಕಾರ ಕೇಶವನಾರಾಯಣ ಅವರೆ . . .**
  ನಮಸ್ಕಾರ.

- **ನಿಮ್ಮ ಕುಟುಂಬದ ಬಗ್ಗೆ ಹೇಳಿ...**
  ನಮ್ಮ ತಂದೆ-ತಾಯಿಗೆ ನಾವು ಎಂಟು ಜನ ಮಕ್ಕಳು: ನಾಲ್ಕು ಗಂಡು, ನಾಲ್ಕು ಹೆಣ್ಣು. ನಾಲ್ಕು ಜನ ಗಂಡುಮಕ್ಕಳಲ್ಲಿ ಮೂರು ಜನ ವ್ಯವಸಾಯ, ಒಬ್ಬರು ಕೆಲಸದಲ್ಲಿದ್ದಾರೆ. ನಮ್ಮ ತಂದೆ ತಾತ ಎಲ್ಲರೂ ವ್ಯವಸಾಯಸ್ಥರೇ. ನಮ್ಮದು ಕೃಷಿ ಕುಟುಂಬ.

- **ಎಷ್ಟು ಜಮೀನಿದೆ?**
  ತಂದೆಯವರ ಕಾಲದಲ್ಲಿ ಮೂರು-ನಾಲ್ಕು ಎಕರೆ ಜಮೀನಿತ್ತು. ನಮ್ಮ ತಂದೆ ತಾಯಿ, ಅವರ ತಂದೆ ತಾಯಿ ಸೇವೆ ಮಾಡಲು ಕೆಲವು ದಿವಸ ತೋಟವನ್ನು ಹಾಳುಬಿಟ್ಟಿದ್ರು. ನಾನು ೧೪ನೇ ವಯಸ್ಸಿನಲ್ಲಿ ವಿದ್ಯಾಭ್ಯಾಸ ಬಿಟ್ಟು ವ್ಯವಸಾಯವನ್ನು ಪ್ರಾರಂಭ ಮಾಡಿದ್ದು. ಪಾಳುಬಿದ್ದ ತೋಟದಲ್ಲಿ ಪೈರು ಮಾಡಿ, ಬೇಸಾಯ ಮಾಡಿ, ಹೊಸದಾಗಿ ಸ್ಥಾಪನೆ ಮಾಡಿದೆ.

- **ನಿಮ್ಮ ವಿದ್ಯಾಭ್ಯಾಸದ ಬಗ್ಗೆ ಹೇಳಿ . . .**
  ನಾನು ಓದಿದ್ದು ಬರೀ Lower Secondary (L.S.) ಅಷ್ಟೆ. ಓದಿದ್ದು ಬಿದಿರಕ್ಕದಲ್ಲಿ. ಏನೇ ಕನಸುಗಳಿದ್ರೂ ಮನೇಲಿ ಆಗುವ ಹಾಗಿರಲಿಲ್ಲ. ನಮ್ಮ ತಂದೆಗೆ ವಯಸ್ಸಾಗಿತ್ತು. ನಮ್ಮ ತಾಯಿ ಎರಡನೆಯ ಸಂಬಂಧ. ಮೊದಲನೇ ಹೆಂಡತಿಗೆ ಮಕ್ಕಳಿರಲಿಲ್ಲ. ನಮ್ಮ ತಂದೆಯವರು ವಯಸ್ಸಿನ ಪ್ರಭಾವದಿಂದ ಬೇಗನೇ ಮನೇಲಿ ಕುಳಿತುಕೊಂಡುಬಿಟ್ರು. ನನ್ನ ಮೇಲೆ ಜವಾಬ್ದಾರಿ ಬಿತ್ತು. ಅಕ್ಕಪಕ್ಕದವರನ್ನು ನೋಡಿ, ತಿಳಿದು, ಸ್ವತಃ ಕೆಲಸ ಮಾಡಿ ತೋಟ ರೂಢಿಸಿದೆ.

- **ಪಾಳುಬಿದ್ದ ತೋಟವನ್ನು ಯಾವ ರೀತಿ ಅಭಿವೃದ್ಧಿ ಮಾಡಿದ್ರಿ?**
  ಮೊದಲು ಹಾಳಾದ ಮರಗಳನ್ನು ತೆಗೆದುಹಾಕಿದೆ. ತೋಟದಲ್ಲಿ ಗಂಧದಮರ, ಮುಳ್ಳಿನಮರ, ಕಾಡುಮರಗಳು ಇದ್ದು. ಅದನ್ನೆಲ್ಲಾ ಕಡಿದು, ಭೂಮಿ ಸಮಮಾಡಿ, ಮೊದಲಿನಿಂದ ಬಾಳೆ ನೆಟ್ಟು, ಅಡಿಕೆ ಸಸಿ ನೆಟ್ಟು ಮತ್ತೆ ಹೊಸದಾಗಿ ಏಳಿಸಿದ್ದು ಎಲ್ಲಾ. ಭಾವಿಯಲ್ಲಿ

ನೀರು ಇತ್ತಿಲ್ಲ. ತೋಟದ ಭಾವಿಯಲ್ಲಿ ಏತ ಮಾಡಿಕೊಂಡು, ಅದ್ರಿಂದ ನೀರು ಎತ್ತಿ ಹುಯ್ಯುತ್ತಿದ್ದೆ. ಮಳೆ ಇದ್ದಾಗ ೮-೧೦ ಅಡಿಯಲ್ಲಿ ನೀರಿರೋದು. ಮಳೆಗಾಲ ಕಡಿಮೆ ಆದಾಗ ನೀರು ಇರುತ್ತಿರಲಿಲ್ಲ. ಭಾವಿ ಸೋಸಿ, ನೀರು ತೆಗೆದು, ವ್ಯವಸಾಯ ಮಾಡಬೇಕಿತ್ತು. ಏತದಿಂದ ಗುಂಡಿಗಳಿಗೆ ನೀರು ಹಾಕಿ, ಗುಂಡಿಗಳಿಂದ ಕೈತೂಕದಲ್ಲಿ ನೀರು ಹೊತ್ತು ಗಿಡಗಳಿಗೆ ಹಾಕಿ ಬೆಳೆಸಿದೆ.

- **ಅಡಿಕೆಯನ್ನು ಯಾಕೆ ಬೆಳೀಬೇಕು ಅಂದುಕೊಂಡ್ರಿ?**

ಅಡಿಕೆ ಇದ್ರೇನೇ ವಿಳ್ಳೇದೆಲೆ. ಇವೆರಡೂ ಹಣ ನೀಡುವ ಸಸ್ಯಗಳು. ಅದಕ್ಕೇ ಈ ಬೆಳೆಗಳನ್ನು ಬೆಳೆಯೋದು. ಈಗ ನಾನು ಅಡಿಕೆ, ವಿಳ್ಳೇದೆಲೆ, ಬಾಳೆ, ತೆಂಗು ಬೆಳೀತಿದ್ದೇನೆ.

- **ಭತ್ತ ಬೆಳೆಯುವ ಜಮೀನು ಇದ್ಯಾ?**

ಇದೆ. ಮುಂಚೆ ಕೆರೆ ಹತ್ರದಲ್ಲಿ ಅರ್ಧ ಎಕರೆ ಇತ್ತು. ನಾಲೆ ಬಂದ ಮೇಲೆ ಸ್ವಯಾರ್ಜಿತವಾಗಿ ಜಮೀನು ಸಂಪಾದಿಸಿದ್ದೇನೆ. ಕಳೆದ ಆರು-ಏಳು ವರುಷದಿಂದ ನಾಲೇಲಿ ನೀರು ಬರುತ್ತಿದೆ. ಭತ್ತ ಬೆಳೆಯುತ್ತಿದ್ದೇವೆ. ನಮ್ಮೂರಲ್ಲಿ ಎರಡು ಕೆರೆ ಇದೆ. ಆದರೂ ಅವು ತುಂಬೋದಿಲ್ಲ.

- **ತೋಟದ ವ್ಯವಸಾಯ ಯಾವ ರೀತಿ ಮಾಡಬೇಕು?**

ಅಡಿಕೆ ತೋಟದಲ್ಲಿ ಎರಡು ವರುಷಕ್ಕೆ ಒಮ್ಮೆ ಅಗೆತ ಮಾಡಿಸಬೇಕು. ಪ್ರತಿ ಗಿಡಕ್ಕೆ ೧೫ ದಿವಸಕ್ಕೆ ಒಮ್ಮೆ ನೀರು ಹಾಕಬೇಕು. ಅದರಲ್ಲೇ ವಿಳ್ಳೇದೆಲೇನೂ ಇರುತ್ತೆ. ನನ್ನ ತೋಟದಲ್ಲಿ ನಾನು ಬೆಳೆದಿರೋದು ಸ್ಥಳೀಯ ತಳಿಗಳು. ನನ್ನ ತೋಟದ ಮರದಿಂದಲೇ ಗೋಟು ಸಂಗ್ರಹಿಸಿ, ಸಸಿ ಮಾಡಿ, ಎರಡು ವರುಷದ ಗೆಪ್ಪೆ ಸಸಿಗಳನ್ನು ಮಣ್ಣಿನ ಸಮೇತ ತೆಗೆದು ನಾಟಿ ಮಾಡಿದ್ದೇನೆ. ಎರಡು ಅಡಿ ಉದ್ದ, ಅಗಲ ಒಂದು ಅಡಿ, ಆಳ ಎರಡು ಅಡಿ ಗುಂಡಿ ಹೊಡೆದು ಅದರಲ್ಲಿ ನಾಟಿ ಮಾಡಬೇಕು. ಗುಂಡೀಲಿ ಸಗಣಿಗೊಬ್ಬರ ಮಾತ್ರ ಬಳಸೋದು. ನಂತರದ ದಿನಗಳಲ್ಲಿ ಒಂದು ಗಿಡಕ್ಕೆ ೨೦೦ ರಿಂದ ೨೫೦ ಗ್ರಾಂ ೧೫:೧೫:೧೫ ಸುಫಲಾ ಗೊಬ್ರ ಹಾಕುತ್ತೇನೆ. ವಿಳ್ಳೇದೆಲೆ ಹಂಬಿಗೆ ಏನೂ ತೊಂದರೆ ಆಗಿಲ್ಲ. ಸಾವಯವ ಗೊಬ್ಬರ ಹಾಕದೆ, ಬರೀ ರಾಸಾಯನಿಕ ಗೊಬ್ಬರ ಮಾತ್ರ ಬಳಸಿದ್ರೆ ಎಲೆ ತುರಿ ಬರುತ್ತೆ, ಎರಡೂ ಬಳಸಿದ್ರೆ ಏನೂ ತೊಂದರೆ ಇಲ್ಲ. ಒಂದು ಎಕರೆಗೆ ನಾಲ್ಕು ಲಕ್ಷ ಅಡಿಕೆ ಸಿಗುತ್ತೆ (೩೮-೪೦ ಕ್ವಿಂಟಾಲ್ ಹಸಿ ಅಡಿಕೆ). ಒಣ ಅಡಿಕೆ ಎಂಟರಿಂದ ಒಂಬತ್ತು ಕ್ವಿಂಟಾಲ್ ಆಗಬಹುದು. ನಾವು ಚೇಣಿ ಕೊಡ್ತೀವಿ. ನಮ್ಮೂರಲ್ಲಿ ಆರರಿಂದ ಏಳು ಜನ ಅಡಿಕೆ ಬೇಯಿಸಿ, ಸಂಸ್ಕರಿಸಿ ಮಾರುವವರು ಇದ್ದಾರೆ. ಹಿಂದೆ ನಾನೇ ಅಡಿಕೆ ಮರ ಹತ್ತಿ ಕಾಯಿ ಕೆಡವುತ್ತಾ ಇದ್ದೆ. ಈಗ ಆಗೋಲ್ಲ. ನಮ್ಮ ತಂದೇನೂ ಅಡಿಕೆ ಮರ ಹತ್ತೋರು. ಅವರೇ ಸಣ್ಣಂದಿನಿಂದಲೂ ನನಗೂ ಅಭ್ಯಾಸ ಮಾಡಿಸಿದ್ದು. 'ನೀನೇ ಕಲಿತಿರಬೇಕಪ್ಪಾ, ಎಲ್ಲಾದಕ್ಕೂ ಇತರರನ್ನು ಆಶ್ರಯಮಾಡಬಾರದು' ಅಂತಿದ್ರು. ಮರ ಹತ್ತೋದು, ಕಾಯಿ ಕೀಳೋದು ಕಷ್ಟ. ಎಷ್ಟೋ ಬಾರಿ ಕತ್ತಿ ಹೊಡೆದು ತೊಡೆ ಸೀಳಿರೋದೂ ಇದೆ.

- **ವಿಳ್ಳೇದೆಲೆ ಬೇಸಾಯದ ಬಗ್ಗೆ ಹೇಳಿ?**

ಅಡಿಕೆ ಮರದ ಪಕ್ಕದಲ್ಲಿ ಗುಣಿ ತೋಡಿ ಅದಕ್ಕೆ ಹಟ್ಟಿಗೊಬ್ಬರ, ಮಣ್ಣು ಹಾಕಿಕೊಂಡು, ಎರಡು ಅಡಿ ಉದ್ದದ ಹಂಬನ್ನು ನೆಡಬೇಕು. ಕೆಳಗಡೆ ಬೇರು ಬಿಡುವ ಸಲುವಾಗಿ ಎರಡು ಗಿಣ್ಣನ್ನು ಭೂಮಿಯ ಒಳಗೆ ಸೇರಿಸಬೇಕು. ಒಂದರಿಂದ ಎರಡು ಗಿಣ್ಣು ಮೇಲಿದ್ರೆ ಸಾಕು. ಒಂದೇ ವರುಷಕ್ಕೆ ಎರಡರಿಂದ ಮೂರು-ನಾಲ್ಕು ಕಟ್ಟು ಎಲೆ ಸಿಗುತ್ತೆ. ಅಷ್ಟು ವೇಗವಾಗಿ ಎಲೆ ಬಳ್ಳಿ ಬೆಳೆಯುತ್ತೆ. ಮೂರು ನಾಲ್ಕು ವರುಷದಲ್ಲಿ ಉತ್ತಮ ಇಳುವರಿ ಸಿಗುತ್ತೆ. ನನ್ನಲ್ಲಿ ಹಿಂದೆ ಒಂದು ಹಂಬಿನಲ್ಲಿ ೬೦, ೭೦, ೧೦೦ ಕಟ್ಟು ಎಲೆ ಸಿಗ್ತಿತ್ತು. ಈಗ ಅಷ್ಟಿಲ್ಲ. ವರುಷಕ್ಕೆ ಎರಡು ಸಲ ಗೊಬ್ರ ಹಾಕುತ್ತಿದ್ದು, ಪ್ರತೀ ವಾರಕ್ಕೊಮ್ಮೆ ನೀರು. ವರುಷಕ್ಕೆ ಮೂರು ಸಲ ಎಲೆ ಕುಯ್ಲು ಮಾಡಿಸ್ತಾ ಇದ್ದು. ಕೆಲವರು ನಾಲ್ಕು, ಐದು ಸಲ ಮಾಡ್ತಾರೆ. ಹಂಬು ಚೆನ್ನಾಗಿರಬೇಕು ಅಂದ್ರೆ ಮೂರು ಖಟಾವು ಸಾಕು, ಡಿಸೆಂಬರ್-ಜನವರಿ, ಮಾರ್ಚ್-ಏಪ್ರಿಲ್ ಹಾಗೂ ಮೇ-ಜೂನ್‌ನಲ್ಲಿ. ಮುಂಗಾರು ಮಳೆ ಬೀಳೋದ್ರಲ್ಲಿ ಮೂರೂ ಕುಯ್ಲು ಮುಗಿದಿರೋದು. ಈಗ ನನಗೆ ಒಂದು ವರುಷದಲ್ಲಿ ನಲವತ್ತು ಸಾವಿರ ಉತ್ಪತ್ತಿ ವಿಳ್ಳೇದೆಲೇಲಿ ಆಗುತ್ತಿದೆ. ಎರಡು ಎಕರೆ ಅಡಿಕೇಲಿ ಒಂದೂವರೆ ಲಕ್ಷ ಗಳಿಕೆ ಈ ವರುಷ ಆಗಿದೆ. ಖರ್ಚು ಕಳೆದು ೬೦-೭೦ ಸಾವಿರ ಉಳೀಬಹುದು ಅಷ್ಟೆ. ಒಳ್ಳೆ ಧಾರಣೆ ಇದ್ದಾಗ ಮೂರು ಲಕ್ಷದ ಇಪ್ಪತ್ತು ಸಾವಿರದವರೆಗೂ ಗೇಣಿ ಕೊಟ್ಟಿದ್ದೀನಿ. ಅದೇ ಗರಿಷ್ಠ.

- **ಇತರೇ ವ್ಯವಸಾಯ?**
  ಒಂದು ನೂರೈವತ್ತು ತೆಂಗು, ತೋಟದ ಅಂಚಲ್ಲಿ ಬಾಳೆ ಇದೆ. ತೆಂಗಿಗೆಲ್ಲಾ ನುಸಿ ಬಂದಿದೆ. ಬಾಳೆಗೆ ಅಂತಹ ವಿಶೇಷ ಮುತುವರ್ಜಿ ಇಲ್ಲ. ಇನ್ನು ಭತ್ತವನ್ನು ಮನೆಗೆ ಬೇಕಾದಷ್ಟು ಬೆಳೀತೀನಿ. ಕೆಲವೊಮ್ಮೆ ಮಾರುತ್ತೇನೆ. ವರುಷದಲ್ಲಿ ಖರ್ಚು-ವೆಚ್ಚ ಸರಿತೂಗಿಸಲು ಹೆಣಗಾಡಬೇಕು.

- **ನಿಮ್ಮ ಹೆಂಡತಿಯ ಬಗ್ಗೆ ಹೇಳಿ.**
  ನಮಗೆ ೨೦-೨೨ರ ವಯಸ್ಸಿನಲ್ಲಿ ಮದುವೆಯಾಯ್ತು. ಆ ಹೊತ್ತಿಗೆ ನಮ್ಮ ಕುಟುಂಬದಲ್ಲಿ ಅಷ್ಟು ಕಷ್ಟವಿರಲಿಲ್ಲ. ಸುಖದಲ್ಲೇ ಬೆಳೆದಳು. ಒಟ್ಟು ಕುಟುಂಬ. ಎಲ್ಲರನ್ನೂ ಅನುಸರಿಸಿ ಮನೆ ತೂಗಿಸಿದ್ದಾಳೆ.

- **ವ್ಯವಸಾಯದ ಬದುಕು ನಿಮಗೆ ತೃಪ್ತಿ ತಂದಿದೆಯಾ?**
  ತೃಪ್ತಿ ಇದೆ. ನಿರಾಳವಾಗಿದೀವಿ. ಆದ್ರೆ ನನ್ನ ತಮ್ಮನ ಅಕಾಲಿಕ ಮರಣ ಕಂಗೆಡಿಸಿದೆ. ಅವನು ಕೃಷ್ಣಮೂರ್ತಿ ಅವಧಾನಿ ಅಂತ. ನಮ್ಮೂರಲ್ಲಿ ಸುಬ್ರಹ್ಮಣ್ಯ ಘನಪಾಠಿಗಳು ಅಂತ ಇದ್ರು. ಅವರ ಬಳಿ ಶಿಕ್ಷಣ ಪಡೆದು ದೊಡ್ಡ ಪುರೋಹಿತನಾಗಿದ್ದ. ಹೃದಯಾಘಾತದಿಂದ ತೀರಿಕೊಂಡ. ಆ ನೋವು ನನಗಿದೆ. ಈಗ ಅವನ ಮಗನೂ ವೇದಾಧ್ಯಯನ ಮಾಡಿ ಪೌರೋಹಿತ್ಯ ಮಾಡಿಸುತ್ತಿದ್ದಾನೆ. ನನ್ನ ತಮ್ಮನ ಕುಟುಂಬ ಸಹಾ ನನ್ನ ಜತೆಯಲ್ಲೇ ಇದೆ. ನಾನು ಸಂಪಾದಿಸಿದ್ದೆಲ್ಲಾ ವ್ಯವಸಾಯದಿಂದ.

- **ನಾಟೀ ಔಷಧಗಳನ್ನು ನೀಡುವ ಅಭ್ಯಾಸ ಹ್ಯಾಗೆ ಬಂತು?**
  ನಾನು ಮೂರ್ನಾಲ್ಕು ಖಾಯಿಲೆಗೆ ಔಷಧಿ ಕೊಡ್ತೀನಿ. ಮಕ್ಕಳ ಹಕ್ಕಿ ಖಾಯಿಲೆಗೆ, ಕೈಮಸ್ಕಿಗೆ, ಅರಿಶಿನ ಕಾಮಾಲೆಗೆ ಔಷಧಿ ಕೊಡ್ತೀನಿ. ನಮ್ಮ ತಂದೇನೆ ನನಗೆ ಗುರುಗಳು. ಅವರು ಔಷಧಿ ಕೊಡ್ತಿದ್ರು. ನಂಗೂ ಕಲಿಸಿದ್ರು. ಇದನ್ನು ನಾನು ದುಡ್ಡಿಗಾಗಿ ಮಾಡ್ತಿಲ್ಲ. ಗೊತ್ತಿರೋರು ಬರ್ತಾರೆ. ಅವರಿಗೆ ಕೊಡ್ತೀನಿ. ಔಷಧಿಯಾಗಿ ಬಳಸುವ ಗಿಡಗಳನ್ನು ನಾವು ಯಾರಿಗೂ ತೋರಿಸೋಲ್ಲ. ಔಷಧಿಯಾಗಿ ಎಲೆ, ಬೇರನ್ನು ಬಳಸ್ತೀವಿ. ಸುತ್ತಮುತ್ತ ಹುಡುಕಿದ್ರೆ ಸಿಗುವ ಸಸ್ಯಗಳೇ ಅವು. ನಾನಿನ್ನೂ ನನ್ನ ಮಕ್ಕಳಿಗೆ ಹೇಳಿಕೊಟ್ಟಿಲ್ಲ. ನಮ್ಮೂರಲ್ಲಿ ನನ್ನ ತರಹ ಹಸಿರು ಔಷಧಿ ನೀಡೋರು ಮೂರು-ನಾಲ್ಕು ಜನ ಇದಾರೆ. ಮಂಡಲದ ಹಾವು ಕಚ್ಚಿದಾಗ ಔಷಧಿ ಕೊಡೋರೂ ಇದಾರೆ.


- **ವ್ಯವಸಾಯವನ್ನು ಈಗ ಹಳ್ಳೀಲಿ ಯಾರೂ ಇಷ್ಟಪಡ್ತಿಲ್ಲ. ಆದ್ರೆ ನೀವು ನಿಮ್ಮ ಮಗನನ್ನೂ ವ್ಯವಸಾಯಸ್ಥನನ್ನಾಗಿ ಮಾಡಿದ್ದೀರಲ್ಲಾ?**
  ಕೆಲವು ಸಮಯದಲ್ಲಿ, ಧಾರಣೆ ಸಿಗದೇ ಹೋದಾಗ ವ್ಯವಸಾಯ ಬೇಡ ಅನ್ನಿಸುತ್ತೆ. ತುಂಬಾನೇ ನೋವಾಗುತ್ತೆ. ಆದ್ರೆ ಅದರಿಂದಲೇ ನಾವು ಅವತ್ತಿನಿಂದಲೂ ಬದುಕಿರೋದ್ರಿಂದ, ಅದನ್ನು ಬಿಟ್ರೆ ಇಲ್ಲ, ವ್ಯವಸಾಯ ಮಾಡಲೇಬೇಕು ಅನ್ನಿಸುತ್ತೆ. ವ್ಯವಸಾಯ ಮಾಡಲೇಬೇಕು ಎನ್ನುವುದು ನನ್ನ ಅಭಿಪ್ರಾಯ. ದರ ಕಡಿಮೆ ಇರಲಿ, ಹೆಚ್ಚಾಗಿರಲಿ; ಇವತ್ತು ಕಡಿಮೆಯಾದದ್ದು ನಾಳೆ ಏರುತ್ತೆ. ಇದು ನನ್ನ ಅಭಿಪ್ರಾಯ. ನಾವು ಉಳಿಸಿದ್ದನ್ನು ಹಾಳು ಮಾಡಲು ಇಷ್ಟವಿಲ್ಲ. ಅದನ್ನು ಉಳಿಸಲೇಬೇಕು. ಅದಕ್ಕೇ ಮಗನನ್ನು ವ್ಯವಸಾಯಸ್ಥನನ್ನಾಗಿ ಮಾಡಿದೆ.

  ವ್ಯವಸಾಯದಲ್ಲಿ ಆದಾಯ ಕಾಣಬೇಕಾದರೆ, ರೈತನಲ್ಲಿ ಶ್ರದ್ಧೆ ಇರಬೇಕು. ಬೇಜವಾಬ್ದಾರಿ ಇರಕೂಡದು. ಏನು ಮಾಡಬೇಕೋ ನಮ್ಮ ಕರ್ತವ್ಯ ನಾವು ಮಾಡಬೇಕು. ಮುಂದಿನದು ಭಗವಂತ ಹ್ಯಾಗೆ ತೋರಿಸ್ತಾನೋ ತೋರಿಸಲಿ ಅನ್ನೋ ಅಭಿಪ್ರಾಯದಲ್ಲಿ ಮಾಡಿದ್ರೆ ವ್ಯವಸಾಯ ಯಾವತ್ತಿಗೂ ಅನುಕೂಲವಾಗಿರುತ್ತೆ. ನನ್ನ ಭೂಮಿ ನನಗೆ ಅನ್ಯಾಯ ಮಾಡಿಲ್ಲ. ಹಾಕಿದ ದುಡ್ಡಿಗೆ ಮೋಸವಾಗಿಲ್ಲ.

- ಒಳ್ಳೆಯದು ಕೇಶವನಾರಾಯಣ ಅವರೆ, ಇದುವರೆವಿಗೂ ನಿಮ್ಮ ವಿಚಾರಗಳನ್ನು ತಿಳಿಸಿದ್ರಿ, ನಮಸ್ಕಾರ.
  ನಮಸ್ಕಾರ.

೩) ಎಸ್.ಕೆ. ಸುಬ್ಬರಾಯ ೩/ಮ ಕೃಷ್ಣಪ್ಪ
ಸೋಮನಹಳ್ಳಿ, ಹೊಳೆನರಸೀಪುರ (ತಾ), ಹಾಸನ ಜಿಲ್ಲೆ

ಸೋಮನಹಳ್ಳಿಯಲ್ಲಿ ವ್ಯವಸಾಯದಿಂದ ನಮ್ಮ ಬದುಕು ಕಳೀತಿದ್ದು ಆರು ತಿಂಗಳು ಮಾತ್ರ. ಇನ್ನಾರು ತಿಂಗಳು ಹೇಗೆ ಕಳೀತಿತ್ತೋ ಆ ಭಗವಂತನಿಗೇ ಗೊತ್ತು. ವ್ಯವಸಾಯಕ್ಕೆ ಕೂಲಿ ಕೊಡಲು ಹಣವಿರಲಿಲ್ಲ. ಎಲ್ಲ ಕೆಲಸ ನಾವೇ ಮಾಡಬೇಕಿತ್ತು. ಕೇರಳಾಪುರ ಸಂತೆಗೆ ಬಾಳೇಕಾಯಿ ಹೊರೋದು - ಹೊಳೆನರಸೀಪುರ ಸಂತೆಗೆ ವಿಳ್ಳೇದೆಲೆ ಹೊರೋದು ; ಹ್ಯಾಗೋ ಬದುಕು ನೂಕಿದ್ದೇವೆ. ಅದೇ ಈಗ ಆಶ್ಚರ್ಯ.


ಉಪಕಸುಬಾಗಿ ಯಜ್ಞೋಪವೀತದ ತಯಾರಿ: ಎಸ್.ಕೆ.ಸುಬ್ಬರಾಯರು: ಸೋಮನಹಳ್ಳಿ

ಸುಬ್ಬರಾಯರಿಗೆ ಈಗ ೭೮ ವರುಷ. ೩ವರ ಪತ್ನಿ ಭಾಗ್ಯಲಕ್ಷ್ಮಿ ಈಗಿಲ್ಲ. ಮಕ್ಕಳ ಮನೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ರೂ ಸೋಮನಹಳ್ಳಿಯ ಸೆಳೆತ ೩ವರನ್ನು ಬಿಟ್ಟಿಲ್ಲ. ಆಗಾಗ್ಗೆ ಸೋಮನಹಳ್ಳಿಗೆ ಬರುತ್ತಾರೆ. ಸೋಮನಹಳ್ಳಿಯ ಕೃಷ್ಣಪ್ಪ ಹಾಗೂ ಹಳ್ಳಿಮೈಸೂರಿನ ಅನಂತಲಕ್ಷಮ್ಮ ೩ವರ ಮಗ ಸುಬ್ಬರಾಯರು, ಮನೆಗೆ ಹಿರಿಯರು. ನಾವು ಸೋಮನಹಳ್ಳಿಗೆ ಹೋದಾಗಲೇ ೩ವರೂ ಸಿಕ್ಕಿದ್ದು ವಿಶೇಷವೇ. ಮಾತನಾಡುವ ಹುರುಪೂ ಅವರಲ್ಲಿತ್ತು.

- **ಸುಬ್ಬರಾಯರೇ, ನಮಸ್ಕಾರ...**
  ನಮಸ್ಕಾರ.

- **ನಿಮ್ಮ ತಂದೆ ತಾಯಿ ಬಗ್ಗೆ ಹೇಳಿ...**
  ನಮ್ಮ ತಂದೆಯ ಅಣ್ಣತಮ್ಮಂದಿರು ೩ಬ್ಬರು. ಅವರ ಕಾಲದಿಂದಲೂ ಜಮೀನ್ದಾರರಾಗಿದ್ರು. ಕಾರಣಾಂತರದಿಂದ ಜೀವನದ ಕಷ್ಟಗಳ ಸಲುವಾಗಿ, ಅವರ ಕಾಲದಲ್ಲೇ ಅಲ್ಪಸ್ವಲ್ಪ ಜಮೀನನ್ನೆಲ್ಲಾ ಮಾರಿದ್ರು. ಉಳಿದ ೩ವರಿಬ್ಬರಲ್ಲಿ, ನಮ್ಮ ಚಿಕ್ಕಪ್ಪ ವೇದಾಧ್ಯಯನದ ಸಲುವಾಗಿ ಮೈಸೂರು, ಶೃಂಗೇರಿಗೆ ಹೋದರು. ನಮ್ಮ ತಂದೆಯ ಮೇಲೆ ಪೂರ್ಣ ಜವಾಬ್ದಾರಿ ಬಿದ್ದು, ಸಂಸಾರದ ಕಾರ್ಪಣ್ಯದಿಂದ ಜಮೀನೆಲ್ಲಾ ಪಾಳು ಬಿತ್ತು. ತುಂಬಾ ಕಷ್ಟಕ್ಕೆ ಈಡಾದ್ರು. ಆ ಕಷ್ಟದಲ್ಲೇ ನಮ್ಮ ಸಂತತಿ ಬೆಳೆದು ಬಂತು.

- **ಏನು ಕಷ್ಟಗಳನ್ನು ನೀವು ಅನುಭವಿಸಿರಬಹುದು?**
  ಕಷ್ಟ ಅಂದ್ರೆ, ನಮ್ಮ ತಂದೆಗೆ ಎಂಟು ಜನ ಮಕ್ಕಳು. ಅವರಲ್ಲಿ ಉಳಿದದ್ದು ನಾಲ್ಕು ಜನ ಮಾತ್ರ. ದೊಡ್ಡವರು ೩ಬ್ಬರು ಹೆಣ್ಣು ಮಕ್ಕಳು. ಕಡೆಗೆ ೩ಬ್ಬರು ಗಂಡುಮಕ್ಕಳು. ಈ ನಾಲ್ಕು ಜನರ ಜೀವನಕ್ಕೆ ಹೊಂದಿಸಲು ಕಷ್ಟ. ವಾರದಲ್ಲಿ ನಾಲ್ಕೈದು ದಿನ ಹೊರಗೆ ಹೋಗಿ, ಬಂದಿದ್ದು ತಂದು ಮನೆಗೆ ಹಾಕೋದು; ೩ಷ್ಟೆ. ನಮ್ಮ ತಾಯೀನ ಸಣ್ಣವಯಸ್ಸಿನಲ್ಲಿ, ಎರಡನೇ ಸಂಬಂಧಕ್ಕೆ ಮದುವೆಯಾದದ್ದು. ನಮ್ಮ ತಾಯಿಗೆ ಆಗ ಎಂಟು ವರುಷ ಮಾತ್ರ. ನಮಗೆಲ್ಲಾ ಕಷ್ಟಪಟ್ಟಿದ್ದು ನಮ್ಮ ತಾಯೀನೇ. ಕಣ್ಣಲ್ಲಿ ನೀರು ಬರುವ ಪರಿಸ್ಥಿತೀಲೇ ನಮ್ಮನ್ನು ಸಾಕಿದ್ರು. ಸಂಸಾರದ ಬೇಗೆಯಿಂದ ನಮ್ಮ ತಂದೆ ಅಷ್ಟು ಜವಾಬ್ದಾರಿ ಹೊರಲಿಲ್ಲ. ಜಮೀನು ಹಾಳಾಯ್ತು. ನನಗೆ ೧೦-೧೨ ವರುಷಕ್ಕೆ ಜ್ಞಾನೋದಯ ಆಯ್ತು. ಆಗಿನ ಕಾಲದಲ್ಲಿ ಸೌಲಭ್ಯ ಇಲ್ಲದ್ದರಿಂದ ಇಲ್ಲಿದ್ದ ೩೦-೪೦ ಮನೆಯಲ್ಲಿ ಮುಕ್ಕಾಲು ಭಾಗ ಬಡಸ್ತನದ್ದೇ.

  ನಮ್ಮ ಗ್ರಾಮ ೩ದು ಜೋಡಿಗ್ರಾಮ. ಸೋಮನಹಳ್ಳಿ, ಕುಪ್ಪೆ, ಬಿದಿರಕ್ಕ ಈ ಮೂರು ಗ್ರಾಮಗಳನ್ನೂ, ದಿವಾನ್ ಪೂರ್ಣಯ್ಯನವರು ಹಿಂದಿನ ಕಾಲದಲ್ಲಿ ಕೃಷ್ಣಸ್ವಾಮಿರಾಯರು ಅಂತ - ಅವರು ಬಬ್ರೂರು ಕಮ್ಮೆಗಳು-ಅವರಿಗೆ ೩ನಾಮಾಗಿ ನೀಡಿದ್ರಂತೆ. ಈ ಗ್ರಾಮಗಳಲ್ಲಿ ಬಂದ ವರಮಾನವನ್ನು ಅಲ್ಪಸ್ವಲ್ಪ ಪಶ್ಚಿಮವಾಹಿನಿ ಛತ್ರಕ್ಕೆ ನೀಡಬೇಕೆಂದು ಮೈಸೂರಿನ ಮಹಾರಾಜರು ಹೇಳಿದ್ರು. ಜೋಡಿದಾರ್ರು

ಕಂದಾಯಕ್ಕೆ ಬರೋರು. ಇಲ್ಲಿ ಇದ್ದುದೆಲ್ಲಾ ರೈತಾಪಿಜನರೇ. ಕಂದಾಯ ಕೊಡಲು ಸಾಧ್ಯವಾಗದೆ ನಾಲ್ಕೈದು ವರುಷದ ಕಂದಾಯ ನಿಂತಿರೋದು. ಅವರು ಸೌಕರ್ಯಾನೂ ಗ್ರಾಮಕ್ಕೆ ಮಾಡ್ತಿರಲಿಲ್ಲ. ಅದರಿಂದಾಗಿ ಗ್ರಾಮ ಹಿಂದುಳಿದಿತ್ತು. ಸ್ವಾತಂತ್ರ್ಯ ಬಂದ ಮೇಲೆ, ಎರಡು-ಮೂರು ವರುಷಕ್ಕೆ ಸರ್ಕಾರಿ ಗ್ರಾಮ ಆಯ್ತು. ಆದ್ರೆ ನೀರಾವರಿ ಇರ್ಲಿಲ್ಲ. ಒಂದು ರೀತಿ ಬರಗಾಲಪೀಡಿತ ಪ್ರದೇಶವಾಗಿತ್ತು. ಅದ್ರಿಂದ ಕಷ್ಟ. ಮಳೆ ಆದ್ರೆ, ನೀರು ಹಿಡಿದು ಇಟ್ಟುಕೊಳ್ಳುವ ದೊಡ್ಡ ಕೆರೆಗಳೇ ಇರಲಿಲ್ಲ. ನಾಲ್ಕರಿಂದ ಐದು ವರುಷಕ್ಕೆ, ಸಣ್ಣಕೆರೆ ಆಶ್ರಯದಲ್ಲಿ ಒಂದು ಬೆಳೆ ಆಗೋದು. ಅಡಿಕೆ, ವಿಳ್ಳೇದೆಲೆ ನಮ್ಮದು ಮುಖ್ಯ ಬೆಳೆ. ಯಾವಾಗ ನೀರು ಕಡಿಮೆ ಆಯ್ತೋ, ವರಮಾನ ಕಮ್ಮಿ. ಉತ್ಪತ್ತೀನೂ ಇರಲಿಲ್ಲ. ಧಾರಣೇನೂ ಕಮ್ಮಿ. ಮಾರುಕಟ್ಟೆ ಇರಲಿಲ್ಲ. ವಿಳ್ಳೇದೆಲೇನ ಹೊಳೆನರಸೀಪುರಕ್ಕೆ ತಲೆ ಮೇಲೆ ಹೊತ್ತುಕೊಂಡು ಹೋಗಿ ಮಾರಿ ಬರಬೇಕು. ಆ ಕಷ್ಟದಿಂದ ನಾವು ಮುಂದುವರೆಯಲು ಆಗಿರಲಿಲ್ಲ.

- **ಏನು ಓದಿದ್ದು ನೀವು?**

ನಾನು middle schoolಗೆ ಒಂದು ವರುಷಾನೋ, ಎರಡು ವರುಷಾನೋ ಹೋಗಿದೀನಿ. ಬಿದಿರಕ್ಕದಲ್ಲಿ ಮೊದಲು ಸ್ಕೂಲ್ ಬಂದಾಗ ಮೊದಲನೇ Batch ನಮ್ಮದು. ನಮ್ಮ ಮಾಸ್ತರು ಮುದ್ರೆಯವರು ಕೃಷ್ಣಮೂರ್ತಿ ಅಂತ, ಬಹಳ ಬುದ್ಧಿವಂತರು. ಅವರು ನಮ್ಮ ಕೆರೇಲಿ ಬೆಳಗ್ಗೆ ಐದು ಘಂಟೆಗೆ ಸ್ನಾನ ಮಾಡಿ, ನಮ್ಮ ಮನೆಗಳಿಗೆ ಬಂದು ಓದ್ತಾ ಇದಾರ ಇಲ್ವಾ ಅಂತ ನೋಡಿಕೊಂಡು ಹೋಗ್ತಿದ್ರು. ಅಂಥ ನಿಷ್ಠಾವಂತರು. ನಮ್ಮ ತಾಯಿಗೆ ನಾನಿಲ್ಲದಿದ್ರೆ ಆಗ್ತಿರಲಿಲ್ಲ. ಒಂದು ಎಮ್ಮೆ ಇತ್ತು. ಅದನ್ನು ಮೇಯಿಸಿ, ಕಟ್ಟಿಹಾಕಿ ನಂತ್ರ ಎರಡು ಮೈಲಿ ಓಡಿ ಬಿದಿರಕ್ಕದಲ್ಲಿ ಶಾಲೆಗೆ ಹೋಗ್ತಿದ್ದೆ. ಅಲ್ಲಿಂದ ವಾಪಸ್ಸು ಬಂದು ಅದೇ ಕೆಲಸಾನೇ. ತೋಟ ಮಾಡೋದಕ್ಕೆ ಒಬ್ಬ ರೈತನಿದ್ದ. ಅವನ ಜತೆಗೆ ಸೇರಿ, ಅವನಿಂದ ಸ್ಫೂರ್ತಿ ಪಡೆದು ನಾನೂ ಕೆಲಸ ಮಾಡ್ತಿದ್ದೆ.

- **ತಾಯಿಯವರು ಯಾವ ರೀತಿ ನಿಮ್ಮನ್ನು ಬೆಳೆಸಿದ್ರು?**

ಅವರಿಗೆ ವಿದ್ಯಾಭ್ಯಾಸ ಇರಲಿಲ್ಲ. ಅನಕ್ಷರಸ್ಥೆ. ಮುತ್ತುಗದ ಎಲೆ ಹಚ್ಚೋರು. ಅಡಿಕೆ ಕಾಲದಲ್ಲಿ ಕಾಯಿ ಎಡೆಯೋರು. ಬೇರೆ ಮನೆಗಳ ಕೆಲಸಕ್ಕೂ ಹೋಗೋರು. ನೆಮ್ಮದಿಯಾದ ಜೀವನ ನಮಗಿರಲಿಲ್ಲ.

- **ನಿಮ್ಮೂರಿನ ಸಂಕೇತಿಗಳು ನೆಲೆ ನಿಂತದ್ದು ಹ್ಯಾಗೆ?**

ನಾಚಾರಮ್ಮನ ಜತೆ ಬಂದ ಸಂಕೇತಿಗಳ ಕುಟುಂಬಗಳು ಬೆಟ್ಟದಪುರ ಹಾಗೂ ಕೌಶಿಕದಲ್ಲಿ ನೆಲೆ ನಿಂತವಂತೆ. ವೇದಾಭ್ಯಾಸ, ಶಾಸ್ತ್ರದ ಪಾಂಡಿತ್ಯ ನಮ್ಮಲ್ಲಿ ಜಾಸ್ತಿ. ಈ ಲೌಕಿಕಜ್ಞಾನ ಕಡಿಮೆ ಆಗ. ಕೌಶಿಕದ ದೊಡ್ಡಕೆರೆ ಆಶ್ರಯದಲ್ಲಿ ೭೦೦ ಕುಟುಂಬ ಸ್ವತಃ ಅಡಿಕೆ ಫಸಲು ಮಾಡಿ ನೆಲೆ ನಿಂತರು. ಸೋಮನಹಳ್ಳಿಗೆ ಮೊದಲು ಬಂದವರು ಭಾರದ್ವಾಜ ಗೋತ್ರದವರು. ಇಲ್ಲಿ ಮುಂಚೆ ಜಂಗಮರು ಇದ್ರಂತೆ. ಸಂಕೇತಿಗಳು ಮೊದಲು ಒಂದು ಸಣ್ಣ ಜೋಪಡಿ ಮನೆ ಕಟ್ಟಿಕೊಂಡು ವಾಸಮಾಡಲು ಆರಂಭಿಸಿದ್ರು. ಈಗಲೂ ಆ ಮನೆ ಇದೆ. ನಾವುಗಳು ಇದ್ದದ್ದು ಚನ್ನರಾಯಪಟ್ಟಣ (ತಾ) ಆನೇಕೆರೆಯಲ್ಲಿ. ನಮ್ಮದು ಆಯಾಸ್ಯ ಗೋತ್ರ (ಗೌತಮ ಗೋತ್ರ). ನಮ್ಮವರು ಒಬ್ಬರು ಕೋರ್ಟು-ಕಛೇರಿ ಸಲುವಾಗಿ ಪಿರಿಯಾಪಟ್ಟದ ಪಾಳೇಗಾರರ ಬಳಿ ಬಂದಾಗ ಈ ಊರಿನವರು ಸಿಕ್ಕಿದ್ರಂತೆ. ಇದೇನು ಇಷ್ಟು ದೂರ ತಿರುಗುತ್ತೀರಲ್ಲಾ - ಕೋರ್ಟು ಕಛೇರಿಗೆ ಅಂದ್ರಂತೆ. ನಡಿಯೋ ಕಾಲ ಅದು. ಕಾಲ್ನಡಿಗೇನೇ ಎಲ್ಲಾವುದಕ್ಕೂ ಮೂಲ. ಹಾಗೆ ಕೇಳಿದಾಗ 'ಏನು ಮಾಡೋಣ, ವಿಧಿ ಇಲ್ಲ' ಅಂದರಂತೆ. ಆಗ ಸೋಮನಹಳ್ಳಿಯಲ್ಲಿದ್ದವರು, 'ನಮ್ಮೂರಿನಿಂದ ನಿಮಗೆ ಹೆಣ್ಣನ್ನು ಕೊಟ್ಟು ನಿಮ್ಮನ್ನು ಇಲ್ಲೇ ಇಟ್ಟುಕೊಳ್ಳುತ್ತೀವಿ' ಅಂದರಂತೆ. ಹಾಗಾಗಿ ನಮ್ಮ ಗೋತ್ರದವರ ಅಭಿವೃದ್ಧಿ ಆಯಿತು, ಈ ಊರಲ್ಲಿ. ಇದಕ್ಕೆ ಸಂಬಂಧಿಸಿದಂತೆ ಶಾಸನವೂ ಇದೆ ನಮ್ಮೂರಲ್ಲಿ. ನಮ್ಮೂರಿನಲ್ಲಿ ಎರಡು ಕೆರೆ ಇದೆ. ಊರ ಕೆಳಭಾಗದ ಒಂದು ಕೆರೆಯ ಕೆಳಗೆ ಪೂರ್ತಿ ಜಮೀನನ್ನು ನಮ್ಮ ಗೋತ್ರದವರಿಗೆ ನೀಡಿದ್ರಂತೆ. ಇವತ್ತು ನಮ್ಮೂರಲ್ಲಿ ೪೦ ಮನೆಗಳು ಸಂಕೇತಿಗಳದ್ದು.

ಆಗಿನ ಕಾಲದಲ್ಲಿ ಇಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಹೋದವರೇ ಇಲ್ಲ. ವ್ಯವಸಾಯವೇ ಮುಖ್ಯವಾದ ಜೀವನ; ಪೂರಕವಾಗಿ ವೇದಾಧ್ಯಯನ, ಶಾಸ್ತ್ರ ಇತ್ತು.

- **ನಿಮ್ಮೂರಲ್ಲಿ ಖ್ಯಾತಿ ಪಡೆದ ವಿದ್ವಾಂಸರು ಯಾರಿದ್ರು?**

ನಾನು ಕಂಡ ಹಾಗೆ ನಮ್ಮೂರಲ್ಲಿ ಸುಬ್ರಹ್ಮಣ್ಯ ಘನಪಾಠಿಗಳು ಮತ್ತು ಇವರ ದೊಡ್ಡಪ್ಪನವರ ಮಗ ಸುಬ್ಬರಾಯಶಾಸ್ತ್ರಿಗಳು. ಅವರು

ಸಂಸ್ಕೃತ ವಿದ್ವಾಂಸರು. ಆಗಿನ ಕಾಲದಲ್ಲಿ ಹಿರಿಯ ವಿದ್ವಾಂಸರಿಂದ ಪ್ರಶಂಸೆಗಳಿಸಿದ್ದರು. ಅಧ್ಯಯನ ಮುಗಿಸಿದ ಮೇಲೆ ತಂದೆತಾಯಿಗಳನ್ನು ನೋಡಿಕೊಳ್ಳಲು ಹಾಗೂ ವ್ಯವಸಾಯ ಮಾಡಲು ಊರಿಗೇ ವಾಪಸ್ಸು ಬಂದವರು ಇವರು. ವ್ಯವಸಾಯದಲ್ಲಿ ಬಹಳ ಶಿಸ್ತು, ಆದರ್ಶ ಇತ್ತು. ನನ್ನ ತಮ್ಮನೂ ಅವರ ಬಳಿಯೇ ಪೌರೋಹಿತ್ಯ ಕಲಿತದ್ದು.

- **ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ. . .**

ನಮಗೆ ಒಂದು ಎಕರೆ ಒಳಪಟ್ಟು ಬಾಗಾಯ್ತು(ತೋಟ) ಇದ್ದದ್ದು. ತರೀನೂ ಅಷ್ಟೆ. ನಾವು ಅಣ್ಣತಮ್ಮಂದಿರಿಬ್ಬರೂ ಮದುವೆಯಾಗಿ ಬೇರೆ ಹೋಗುವವರೆಗೆ ಅದರಲ್ಲೇ ಕಷ್ಟಪಟ್ಟೆವು. ಸ್ವಂತವಾಗಿ ಅಡಿಕೆ, ತೆಂಗು ಹೊಸದಾಗಿ ಹಾಕಿದೆ. ನಮಗೆ ವರುಷದಲ್ಲಿ ಆರು ತಿಂಗಳು ಜೀವನ ವ್ಯವಸಾಯದಿಂದ ಅಷ್ಟೆ. ಇನ್ನಾರು ತಿಂಗಳು ಹ್ಯಾಗೆ ನಡಿದಿದೆಯೋ ನಡೆದುಬಿಟ್ಟಿದೆ. ಬಾಳೆಕಾಯಿ ಹೊರೋದು ಕೇರಳಾಪುರ ಸಂತೆಗೆ, ವಿಳ್ಳೇದೆಲೆ ಹೊರೋದು ಹೊಳೆನರಸೀಪುರ ಸಂತೆಗೆ, ಹಳ್ಳಿಮೈಸೂರು ಸಂತೆಗೆ. ಬಂದಿದ್ದರಲ್ಲಿ ಹ್ಯಾಗೋ ಜೀವನ ನಡೆಸಿದ್ವಿ.

ಹಾಲುಮೊಸರಿಗಾಗುವಷ್ಟು ಹಸುಗಳು ನಮ್ಮಲ್ಲಿತ್ತು. ಆ ಕಾಲದಲ್ಲಿ ಜನವೂ ಹೆಚ್ಚಿರಲಿಲ್ಲ. ಬೋರೆ ಎಲ್ಲಾ ಇತ್ತು. ಅಮೃತ್‌ಮಹಲ್ ಬೋರೆ ಅಂತ ನಮ್ಮ ಬೋರೆಗೆ ಹೆಸರಿತ್ತು. ಅಲ್ಲಿಗೆ ಏಳು-ಎಂಟು ಕುಳ್ಳ ಸ್ಥಳೀಯ ರಾಸನ್ನು ಹೊಡಕೊಂಡು ಹೋಗೋವಿ. ಆಗ ಒಂದು ರೂಪಾಯಿ ಕೊಟ್ರೆ ಒಂದು ಹಸೂನ ೮ ತಿಂಗಳು ಕಾಯೋವಿ. ಅಷ್ಟರಲ್ಲೇ ನಾವು ಬದುಕಿದ್ವಿ. ವ್ಯವಸಾಯದಲ್ಲೇ ಕಷ್ಟಪಟ್ಟು, ನಮ್ಮ ಮಕ್ಕಳಿಗೂ ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಮಾಡಿಸಿ ಒಂದು ನೆಲೆ ತಲುಪಿದ್ದೇವೆ. ಜೀವನಕ್ಕೆ ಭಯವಿಲ್ಲ.

- **ನಿಮ್ಮ ಶ್ರೀಮತಿಯವರ ಬಗ್ಗೆ ಹೇಳಿ. . .**

ಅತ್ಯುತ್ತಮವಾದ ಸಹಕಾರ ನೀಡಿದ್ಲು. ಅವಳಿಂದಲೇ ನನಗೆ ಬಲ. ಅವಳು ಭಾಗ್ಯಲಕ್ಷ್ಮಿ. ಅಂದ ಹಾಗೆ, ಅವರ ತವರುಮನೇಲೂ ತುಂಬಾ ಬಡತನ, ಅವರು ಏಳು-ಎಂಟು ಮಕ್ಕಳು, ವ್ಯವಸಾಯಸ್ಥ ಕುಟುಂಬ. ಮಕ್ಕಳಿಗೆಲ್ಲಾ ವ್ಯವಸಾಯದಲ್ಲಿ ಅನುಭವ ನೀಡಿರೋದು ನಮ್ಮ ಮಾವನವರೆ. ಕುಯ್ಲು ಆಗಲಿ, ಅಗತೆ ಆಗಲಿ, ನನಗೂ ಕೂಡ ವ್ಯವಸಾಯದ ಕಸುಬಿನಲ್ಲಿ ಜ್ಞಾನೋದಯ ಮಾಡಿಸಿದ್ದು ಅವಳೇ. ನಮ್ಮ ಮದುವೆಗೆ ಮಾವನ ಮನೇದು ಒಂದು ಸಾವಿರ, ನಮ್ಮ ಮನೇದು ಒಂದು ಸಾವಿರ ಅಷ್ಟೇ ಖರ್ಚು. ನಮ್ಮ ಮನೆಗೆ ಬಂದ ಮೇಲೆ ಅವರ ಮನೇಗಿಂತ ಕಷ್ಟ ಇಲ್ಲಿತ್ತು. ಅವಳು ಮಾಡದಿರುವ ಕೆಲಸವೇ ಇಲ್ಲ. ಅಡಿಕೆ ಕೀಳಿಸೋದ್ರಿಂದ, ರೇಖೆ ಮಾಡೋದು, ವಿಂಗಡಣೆ ಮಾಡೋದು ಎಲ್ಲಾವುದೂ ಗೊತ್ತಿತ್ತು. ಗಾಂಧಿ ಚರಕ ಅಂತ ಕೊಟ್ರು ಸರ್ಕಾರದೋರು. ಅದರಲ್ಲಿ ನೂಲು ತೆಗೆದು ಸಂಪಾದನೆ ಮಾಡಿದ್ಲು. ತಂಬಾಕು ಬೆಳೆ ಬಂದ ಮೇಲೆ ಅದನ್ನು grade ಮಾಡೋದಕ್ಕೆ ಕೂಲಿಗೆ ಹೋಗೋಳು. ನನಗೆ ತುಂಬಾ ನೆರವಾಗಿದ್ಲು ಅವಳು. ಅವಳು ನಿಜವಾದ ಭಾಗ್ಯಲಕ್ಷ್ಮಿ. ಈಗ ಅವಳಿಲ್ಲವಲ್ಲ ಅನ್ನೋ ಕೊರಗು ಪ್ರತಿನಿತ್ಯ ನನ್ನನ್ನು ಕಾಡುತ್ತೆ.

- **ವ್ಯವಸಾಯದ ಜೀವನದಲ್ಲಿ ತೃಪ್ತಿ ಇತ್ತಾ?**

ತೃಪ್ತಿ ಇದೆ. ಗಂಡಹೆಂಡಿರಿಬ್ಬರೂ ಅನ್ಯೋನ್ಯವಾಗಿದ್ದರಿಂದ ಸಂಸಾರ ಸರಾಗವಾಗಿ ಸಾಗುತ್ತಿತ್ತು. ನಾನೂ ಜನಿವಾರ ತೆಗೀತಿದ್ದೆ. ಅದರಲ್ಲೂ ನಾಕಾರು ರೂಪಾಯಿ ಸಂಪಾದಿಸಿದ್ದೇನೆ. ಒಂದು ರೂಪಾಯಿಗೆ ವಿಳ್ಳೇದೆಲೆ ಕುಯ್ಯಲು ಹೋಗಿದ್ದೇನೆ. ಇವತ್ತು ದುಂದುಗಾರಿಕೆ ಮಾಡೋರನ್ನ ಕಂಡರೆ ನನಗಾಗೋಲ್ಲ. ಅವತ್ತು ಒಂದು ರೂಪಾಯಿಗೆ ನಾವು ಪಟ್ಟ ಕಷ್ಟ, ಈ ಪಾಠ ಕಲಿಸಿದೆ. ಕಷ್ಟಪಟ್ಟರೂ ನೆಮ್ಮದಿ ಇದೆ, ಆರೋಗ್ಯ ಇದೆ.

- ಒಳ್ಳೆಯದು ಯಜಮಾನ್ರೆ, ಇದುವರೆಗೂ ನೀವು ವಿಚಾರ ತಿಳಿಸಿದ್ರಿ, ನಮಸ್ಕಾರ.

ನಮಸ್ಕಾರ.

ಈ) ರಾಮನಾಥಶರ್ಮ



ಪೌರೋಹಿತ್ಯವನ್ನು ನಡೆಸುವ ವೇ|| ಬ್ರ|| ಶ್ರೀ ರಾಮನಾಥಶರ್ಮ ಅವರು: ಸಂದರ್ಶನ ಎನ್.ಕೇಶವಮೂರ್ತಿ

ಎಸ್.ಕೆ. ಸುಬ್ಬರಾಯರ ತಮ್ಮ ಎಸ್.ಕೆ. ರಾಮನಾಥಶರ್ಮರಿಗೆ ೬೨ ವರುಷ. ಅರಕಲಗೂಡು ತಾಲ್ಲೂಕು ಮಾದಾಪುರದ ಕೇಶವ ಅವಧಾನಿ ಹಾಗೂ ಲಕ್ಷ್ಮೀದೇವಮ್ಮ ಇವರ ಮಗಳು ಎಂ.ಕೆ. ಪಾರ್ವತಿ ರಾಮನಾಥಶರ್ಮರ ಧರ್ಮಪತ್ನಿ. ಓದಿದ್ದು ಎಂಟನೇ ತರಗತಿಯವರೆಗೆ ಆದ್ರೂ ಗಂಡನಿಗೆ ಸಂಪೂರ್ಣ ಸಹಕಾರ ಇತ್ತಿದ್ದಾರೆ ಪಾರ್ವತಮ್ಮನವರು. ರಾಮನಾಥಶರ್ಮರು ಗ್ರಾಮದಲ್ಲೇ ವ್ಯವಸಾಯ ಹಾಗೂ ಪೌರೋಹಿತ್ಯ ಎರಡನ್ನೂ ನಡೆಸುತ್ತಾ ಬಂದಿದ್ದಾರೆ. "ಬಾಲ್ಯದಲ್ಲಿ ಸೋಮನಹಳ್ಳಿಯ ಸುಬ್ರಾಯಾವಧಾನಿಗಳ ಬಳಿ ವೇದಾಭ್ಯಾಸ ಮಾಡಿದೆ. ನಾನೂ ನನ್ನ ಸಹಪಾಠಿ ಕೃಷ್ಣಮೂರ್ತಿ ಅವಧಾನಿ ಇಬ್ರೂ ಐದು ವರುಷಗಳ ಕಾಲ ಶಿಕ್ಷಣ ಪಡೆದೆವು. ಇದಾದ ಮೇಲೆ ನನಗೆ ಮದುವೆ ಆಯ್ತು. ನಂತರ ನಮ್ಮೂರಿನ ಸುಬ್ರಹ್ಮಣ್ಯ ಘನಪಾಠಿಗಳ ಬಳಿ ಮೂರು ವರುಷ ವೇದಾಧ್ಯಯನ ಮಾಡಿದೆ. ಆ ಬಲದಿಂದ ನಮಗೆ ಪೌರೋಹಿತ್ಯ ಮಾಡಿಸುವಂತಹುದು, ಶುಭಕಾರ್ಯವನ್ನು ಮಾಡಿಸುವಂತಹುದು ಕರಗತವಾಯ್ತು. ಪೌರೋಹಿತ್ಯದ ಆದಾಯವೇ ನಮ್ಮನ್ನು ಮನುಷ್ಯನನ್ನಾಗಿ ಮಾಡಿದ್ದು. ಇಲ್ಲದೇ ಹೋದ್ರೆ ನಮಗಿರುವ ಜಮೀನಿನಲ್ಲಿ ಇಷ್ಟರಮಟ್ಟಿಗೆ ಬರಲು ಆಗ್ತಿರಲಿಲ್ಲ" ಅಂತಾರೆ ರಾಮನಾಥಶರ್ಮ.

"ನಮ್ಮ ಗುರುಗಳನ್ನು ನಾನು ನೆನೆಸಬೇಕು. ಅವರ ಅನುಗ್ರಹದಿಂದಲೇ ಬದುಕು ಈ ಹಂತಕ್ಕೆ ಬಂದಿದ್ದು. ಬಂಧುಮಿತ್ರರಿಗೆ, ಗ್ರಾಮಸ್ಥರಿಗೆ, ಇತರ ಜನರಿಗೆ, ಎಷ್ಟೇ ಕಷ್ಟ ಇದ್ದರೂ ನೆರವು ನೀಡಬೇಕು ಎಂದು ತಿಳಿ ಹೇಳಿದ್ದು ನಮ್ಮ ಗುರುಗಳು. ಕೃಷ್ಣ ಯಜುರ್ವೇದದ ಬ್ರಾಹ್ಮಣ ಭಾಗವನ್ನು ಬೆಳಗ್ಗೆ ನಾಲ್ಕೂವರೆ ಘಂಟೆಗೆ ಎಂಥಾ ಛಳಿಯಿರಲಿ, ಮಳೆಯಿರಲಿ ಎಬ್ಬಿಸಿ ಆರು ಘಂಟೆಯವರೆವಿಗೂ ವೇದಾಧ್ಯಯನ ಮಾಡಿಸೋರು. ಆಮೇಲೆ ಅವರ ಜತೇಲಿ ಹೋಗಿ ಅವರು ಮಾಡುವ ಕೆಲಸ ಕಾರ್ಯಗಳಲ್ಲಿ ಸಹಕಾರ ನೀಡ್ತಿದ್ವಿ. ಅವರ ಜತೇಲೇ ಸದಾ ಇದ್ದು ಪಾಠ ಕಲಿತ್ವಿ. ಇಂದಿಗೂ ಪ್ರತಿನಿತ್ಯ ಅದೇ ಪಾಠಗಳನ್ನು ಅಭ್ಯಾಸ ಮಾಡ್ತೀನಿ" ಅಂತಾರೆ ಶರ್ಮ ಅವರು.

ಪ್ರತಿನಿತ್ಯ ಬೆಳಗ್ಗೆ ಐದೂವರೆಗೆ ಎದ್ದು ತೋಟದಲ್ಲಿ ಸುತ್ತಾಡಿ, ಹೂವನ್ನು ತಂದು, ಸ್ನಾನಸಂಧ್ಯಾವಂದನೆಗಳನ್ನು ಮುಗಿಸಿ, ದೇವತಾಪೂಜೆ ಮುಗಿಸಿ ನಂತರ ಇತರೇ ಕೆಲಸಕಾರ್ಯ ಮಾಡೋದು ಇವರ ದಿನಚರಿ. ಮೂರು ಜನ ಹೆಣ್ಣುಮಕ್ಕಳನ್ನು ಸಾಕಷ್ಟು ಸ್ಥಿತಿವಂತರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಪೌರೋಹಿತ್ಯದಿಂದಲೇ ಒಬ್ಬ ವ್ಯಕ್ತಿಯ ಕುಟುಂಬ ನಿರ್ವಹಣೆ ಸಾಧ್ಯ ಅನ್ನುವುದು ಇವರ ದೃಢನಿಲುವು. 'ಮನಸ್ಸಿನಲ್ಲಿ ಆತ್ಮಸ್ಥೈರ್ಯ ಇರಬೇಕು, ನಾನು ಮಾಡ್ತೀನಿ ಅಂತ ಧೈರ್ಯ ಇರಬೇಕು, ಅಷ್ಟೆ' ಅಂತಾರೆ.

'ನನಗೆ ಇಪ್ಪತ್ತೈದು ವರುಷ ಇದ್ದಾಗ ಮದುವೆ ಆಯ್ತು. ಆಗ ತುಂಬಾ ಕಷ್ಟದ ದಿನಗಳು. ಪೌರೋಹಿತ್ಯಾನೂ ಜೀವನ ನಿರ್ವಹಣೆಗೆ ಸಾಲ್ತಿರಲಿಲ್ಲ. ಮೂರ್‍ನಾಲ್ಕು ವರುಷ ಅಡಿಕೆ ವ್ಯಾಪಾರ ಮಾಡಿದೆ. ದೂರದ ಶಿವಮೊಗ್ಗ ನಗರದಲ್ಲಿ ಮಾರಿ ಬಂದಿದ್ದುಂಟು. ನಂತರ 'ಮಲೆನಾಡು ಅಡಿಕೆಪುಡಿ' ಎಂಬ ಹೆಸರಿನಲ್ಲಿ ಅಡಿಕೆಪುಡೀನ ಮಾರಾಟ ಮಾಡಿದೆ. ಸುತ್ತ ಹಳ್ಳಿಗೆಲ್ಲಾ ಸೈಕಲ್ ಮೇಲೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿದೆ. ಈ ಗೃಹಕೈಗಾರಿಕೆ ಒಂದೂವರೆ ವರುಷ ನಡೀತು. ಇದ್ರಿಂದ ನಷ್ಟ ಆಗದಿದ್ರೂ ಮನೆಗೆ ಅನುಕೂಲ ಆಗ್ಲಿಲ್ಲ. ಆಮೇಲೆ 'ಜ್ಯೋತಿ ಕ್ಯಾಂಡಲ್ ಇಂಡಸ್ಟ್ರೀಸ್' ಅಂತ ಮೇಣದಬತ್ತಿ ತಯಾರಿಸುವ ಗೃಹಕೈಗಾರಿಕೆ ಆರಂಭಿಸಿದೆ. ಹಾಸನದಲ್ಲಿ ಲೈಸೆನ್ಸ್ ಮಾಡಿಸಿ ಎರಡು ವರುಷ ನಡೆಸಿದೆ. ಮನೆ, ಮಕ್ಕಳ ವಿದ್ಯಾಭ್ಯಾಸ, ವೇದಾಧ್ಯಯನ, ಹಾಗೇ ವ್ಯವಸಾಯಕ್ಕೆ ಈ ವ್ಯಾಪಾರದಿಂದ ತೊಂದರೆಯಾಗುತ್ತೆ ಅಂತ ಅದನ್ನು ಕೈಬಿಟ್ಟೆ. ನಂತರ ವೇದಾಭ್ಯಾಸ ಮುಂದುವರೆಸಿದೆ. ಅದರಿಂದಲೇ ನಾನು ಈ ಮಟ್ಟಕ್ಕೆ ಬಂದಿದ್ದು' ಅಂತಾರೆ ರಾಮನಾಥಶರ್ಮ.

'ಪೌರೋಹಿತ್ಯವನ್ನು ಸರಿಯಾಗಿ ಮಾಡದಿದ್ರೆ ಪಾಪಗಳ ಹೊರೆ ಹೊತ್ತುಕೊಳ್ಳಬೇಕಾಗುತ್ತೆ. ಮಾಡಿಸೋವಾಗ ಯೋಚನೆ ಮಾಡಿ ಮಾಡಿಸಬೇಕು. ಯಾವುದೇ ಲೋಪ ಆಗಬಾರದು. ಅದ್ರಿಂದ ನಮಗೇ ತೊಂದರೆ. ಗುರುಗಳ ಶಿಕ್ಷಣ ಈ ತೊಂದರೆ ಬಾರದಂತೆ ಕಾಪಾಡಿದೆ. ನನಗೆ ವ್ಯವಸಾಯದಿಂದ ಇಪ್ಪತ್ತೈದು ಸಾವಿರ ವರಮಾನವಿದೆ. ತುಂಬಾ ಸಂಪಾದನೆ ಮಾಡುವ ಆಸೆ ನನಗಿಲ್ಲ. ಈಗ ನಾವು ನೆಮ್ಮದಿಯಾಗಿದ್ದೀವಿ' ಅಂತಾರೆ ಶರ್ಮ. ನೂರೆಂಟು ದಾರಿಯಲ್ಲಿ ಅಲೆದು ಕಡೆಗೂ ಪೌರೋಹಿತ್ಯದಿಂದ ನೆಲೆ ಕಂಡ ಇವರ ಬದುಕಿಗೆ ವ್ಯವಸಾಯವೂ ತಂಪಾದ ನೆಲೆಯಾಗಿದೆ. ಹಳ್ಳಿಗಳಲ್ಲಿ ವ್ಯವಸಾಯದ ಜತೆಗೇ ಬೇರೆಯ ಬದುಕೂ ಸಾಧ್ಯ ಎಂಬುದಕ್ಕೆ ಇವರೊಂದು ಸಣ್ಣ ನಿದರ್ಶನ ಅಷ್ಟೆ.

ಉ) ಎಸ್.ಎಸ್. ಸುಬ್ರಹ್ಮಣ್ಯ (ಗುಂಡಣ್ಣ) ಇ/ಮ ಸೀತಾರಾಮಯ್ಯ

ಸೋಮನಹಳ್ಳಿ, ಹೊಳೆನರಸೀಪುರ (ತಾ), ದೂರವಾಣಿ : 08175 569134

ನಮ್ಮ ಗ್ರಾಮದಲ್ಲಿ ನಾವು ಎಷ್ಟು ಒಗ್ಗಟ್ಟಾಗಿದೀವಿ ಅಂದ್ರೆ ಬೇರೆ ಯಾವುದೇ ಶಕ್ತಿಗಳು ಇದನ್ನು ಭೇದಿಸೋಕೆ ಆಗೋದಿಲ್ಲ. ನಮ್ಮೂರಲ್ಲಿ ಕಳ್ಳತನ ಇಲ್ಲ. ಏನು ಬೇಕಾದ್ರೂ ಹೊರಗೇ ಬಿಸಾಕಿ ಹೋದ್ರೂ ಅದು ಹೋಗೋದಿಲ್ಲ. ಅಷ್ಟು ಬಂದೋಬಸ್ತಾಗಿದೆ. ತೋಟದಲ್ಲೂ ಅಷ್ಟೇನೆ. ಅಡಿಕೆ ಕಳ್ಳತನವಂತೂ ಇಲ್ಲವೇ ಇಲ್ಲ. ಅದಕ್ಕೆ ಕಾರಣ ನಮ್ಮ ಒಗ್ಗಟ್ಟೇ. ಒಂದೇ ಊರಿನಲ್ಲಿ ನಾವು ಇಷ್ಟು ಜನ ಸಂಕೇತಿಗಳ ಕುಟುಂಬ ಉಳಿದಿರೋದಕ್ಕೆ ಈ ಅನ್ಯೋನ್ಯತೆಯೇ ಕಾರಣ. ಆದ್ದರಿಂದಲೇ ನಮಗೆ ಯಾವ ರೀತಿ ಬಾಧೆಗಳೂ ಇಲ್ಲ. ಇತರೇ ಜನರ ಕಿರುಕುಳ ಇಲ್ಲ.

ಸೋಮನಹಳ್ಳಿ ಸೀತಾರಾಮಯ್ಯ ಹಾಗೂ ಸರಗೂರಿನ ಗಂಗಮ್ಮ ದಂಪತಿಗಳ ಮಗ ಸುಬ್ರಹ್ಮಣ್ಯ ಅವರಿಗೆ ಈಗ ೫೪ರ ಹರಯ. ಇವರ ಪತ್ನಿ ಸುಬ್ಬಲಕ್ಷಮ್ಮನವರು ಬಸವಾಪಟ್ಟಣದ ಬಿ.ಕೆ. ಕೇಶವನಾರಾಯಣ ಹಾಗೂ ಗೌರಮ್ಮ ಇವರ ಮಗಳು. ಸುಬ್ರಹ್ಮಣ್ಯ ಅವರನ್ನು ಊರ ಜನ ಪ್ರೀತಿಯಿಂದ ಕರೆಯೋದು 'ಗುಂಡಣ್ಣ' ಅಂತ. ಇವರ ಅಜ್ಜ ರಾಮಸ್ವಾಮಯ್ಯನವರು ಸಾಕಷ್ಟು ಸ್ಥಿತಿವಂತರಂತೆ. ನಮಗೆ ಆತಿಥ್ಯ ನೀಡಿ, ಊರ ಇತರ ಜನರನ್ನು ತಮ್ಮ ಮನೆಗೇ ಕರೆಸಿ ಹಬ್ಬದ ವಾತಾವರಣವನ್ನು ಸೃಷ್ಟಿಸಿದ ಗುಂಡಣ್ಣನವರನ್ನು ಅವರದೇ ಮನೆಯಲ್ಲಿ ಮಾತನಾಡಿಸಿದೆವು.

- **ನಮಸ್ಕಾರ ಸುಬ್ರಹ್ಮಣ್ಯ ಅವರೆ. . .**
  ನಮಸ್ಕಾರ.

- **ನಿಮ್ಮ ಅಜ್ಜನೇ ಸೋಮನಹಳ್ಳಿಗೆ ಸಾಕಷ್ಟು ಸ್ಥಿತಿವಂತರು ಅಂತಾರಲ್ಲ, ಅವರ ಬಗ್ಗೆ ಹೇಳಿ?**
  ನಮ್ಮ ಅಜ್ಜ ಸಾಮಾನ್ಯವಾಗಿ, ಅವತ್ತಿನ ಕಾಲದಲ್ಲಿ ಜಮೀನನ್ನು ಜಾಸ್ತಿ ಹೊಂದಿ, ಜೀವನಮಟ್ಟವನ್ನು ಸುಧಾರಿಸಿಕೊಂಡಿದ್ರು. ನಮ್ಮ ಅಜ್ಜನಿಗೆ ೩೫ ರಿಂದ ೪೦ ಎಕರೆ ಜಮೀನಿತ್ತು. ಅಡಿಕೆ ಹಾಗೂ ಭತ್ತ ಮುಖ್ಯ ಬೆಳೆ. ಹೊಲ ಜಮೀನಿನಲ್ಲಿ ರಾಗಿ ಬೆಳೀತಿದ್ರು. ದಾನಧರ್ಮದ ಗುಣವೂ ಇತ್ತು. ನಮ್ಮ ಗ್ರಾಮಕ್ಕೆ ಕ್ಷಾಮದ ತೀವ್ರತೆ ಸಾಕಷ್ಟಿತ್ತು. ನಮ್ಮೂರ ಕೆರೆ ತುಂಬ್ತಿದ್ದಿದ್ದು ಮೂರರಿಂದ ನಾಲ್ಕು ವರುಷಕ್ಕೆ. ಭತ್ತ ಆಗ ಮಾತ್ರ ಬೆಳೀಬೇಕಿತ್ತು. ಅಕ್ಕಿ ಊಟ ಮಾಡೋಕೆ ತ್ರಾಸದ ದಿನಗಳು ಅವು. ನಮ್ಮಜ್ಜ ಕೇರಳಾಪುರ



ಸುಬ್ಬಲಕ್ಷ್ಮಮ್ಮ-ಎಸ್.ಎಸ್.ಸುಬ್ರಹ್ಮಣ್ಯ ದಂಪತಿ:ಸೋಮನಹಳ್ಳಿಯ ತಮ್ಮ ಪೂರ್ವಿಕರ ಮನೆಯಲ್ಲಿ

ಹಾಗೂ ಬಸವಾಪಟ್ಟಣದ ನಾಲೇ ಕೆಳಗೆ ಜಮೀನು ಮಾಡಿದ್ರಿಂದ ಭತ್ತ ಬರ್‍ತಿತ್ತು. ಹಾಗಾಗಿ ನಮ್ಮ ಮೂರ್‍ನಾಲ್ಕು ಕುಟುಂಬ ಊಟಕ್ಕೆ ತೊಂದರೆ ಇಲ್ಲದ ಮಟ್ಟದಲ್ಲಿತ್ತು.

- **ನಿಮ್ಮ ತಾತನವರಿಗೆ ಎಷ್ಟು ಜನ ಮಕ್ಕಳು?**

ಮೂರು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ದೊಡ್ಡವರೇನೇ ಸುಬ್ರಾಯಾವಧಾನಿಗಳು ಅಂತ. ವೇದಾಧ್ಯಯನ ಪಂಡಿತರು. ನನ್ನ ಚಿಕ್ಕಪ್ಪನವರು ಬಹಳ ಮೇಧಾವಿ. ಅವತ್ತಿನ ಕಾಲದಲ್ಲೇ SSLC high first class ತೊಗೊಂಡು ಸಾಲಿಗ್ರಾಮದಲ್ಲಿ ಒಳ್ಳೇ ಹೆಸರು ಮಾಡಿದ್ರು. ಅವರನ್ನು ಮುಂದೆ ಓದಿಸಲಿಲ್ಲ ನಮ್ಮಜ್ಜ. ನಮ್ಮ ಜಮೀನನ್ನೇ ನೋಡಿಕೊಂಡಿರಲಿ, ಹೊರಗ್ಯಾಕೆ ಹೋಗೋದು ಅಂತ ನಮ್ಮಜ್ಜ ಅವರನ್ನೂ ಕೃಷೀಲೇ ಉಳಿಸಿದ್ರು.

- **ನಿಮ್ಮ ಬಗ್ಗೆ ಹೇಳಿ ಸುಬ್ರಹ್ಮಣ್ಯ ಅವರೆ. . .**

ನನ್ನ ಪ್ರಾಥಮಿಕ ವಿದ್ಯಾಭ್ಯಾಸ ನಮ್ಮೂರಲ್ಲೇ ಆಯ್ತು. ಅಲ್ಲಿಂದ ಮುಂದೆ SSLCವರೆಗೆ ಬಸವಾಪಟ್ಟಣದಲ್ಲಿ ಓದಿದೆ. PUCಗೆ ಮೈಸೂರಿನ ಶಾರದಾವಿಲಾಸ ಕಾಲೇಜು ಸೇರಿದೆ. ನಮ್ಮಜ್ಜ ಸಂಪಾದನೆ ಮಾಡಿದ ಆಸ್ತಿ ಮೇಲೆ ವ್ಯಾಮೋಹ ಇತ್ತು. ಕೆಲಸಕ್ಕೆ ಸೇರುವ ಮನಸ್ಸು ಬರಲಿಲ್ಲ, ಹಾಗಾಗಿ ಊರಿಗೆ ಬಂದೆ. ನಮ್ಮ ತಂದೆಗೆ ಆರು ಜನ ಗಂಡು, ಮೂರು ಜನ ಹೆಣ್ಣುಮಕ್ಕಳು. ನಾನೇ ಹಿರಿಯ ಮಗ. ನಮ್ಮ ತಂದೆಗೂ ನನ್ನನ್ನು ವ್ಯವಸಾಯಕ್ಕೆ ತರಬೇಕೆನ್ನುವ ಗುರಿ ಇತ್ತು. ನಾವು ನಾಲ್ಬರು ಈಗ ಕೃಷಿ ಮಾಡುತ್ತಿದ್ದೇವೆ. ಇಬ್ಬರು ಇಂಜಿನಿಯರ್ ಆಗಿ ಬೆಂಗಳೂರಿನಲ್ಲಿದ್ದಾರೆ. ನನ್ನನ್ನು ಬಿಟ್ರೆ ಉಳಿದವರು ಡಿಗ್ರಿ ಮಾಡಿದ್ದಾರೆ. ಈಗ ಎಲ್ಲರೂ ಸಾಕಷ್ಟು ಪರವಾಗಿಲ್ಲ ಅನ್ನೋ ಸ್ಥಿತೀಲಿ ಇದ್ದೇವೆ.

- **ನಿಮ್ಮ ಅಡ್ಡ ಹೆಸರು ಗುಂಡಣ್ಣ ಅಂತ ಯಾಕೆ?**

ನಮ್ಮ ತಂದೆ ತಾಯಿಗೆ ನನಗಿಂತ ಮುಂಚೆ ಒಬ್ಬಳು ಅಕ್ಕ ಹುಟ್ಟಿದ್ಲು. ಅವಳು ಹೋಗಿಬಿಟ್ಳು. ಹಾಗಾಗಿ ನನ್ನ ಹೆಸರು 'ಗುಂಡಣ್ಣ' ಅಂದ್ರು. ಈ ಹೆಸರು ಇಟ್ರೆ ಕಲ್ಲುಗುಂಡಿನಂತೆ ಗಟ್ಟಿಯಾಗಿ ಇರ್‍ತಾನೆ ಅನ್ನೋದು ಅವರ ಅಭಿಪ್ರಾಯವೇನೋ. ಅದಕ್ಕೇ ಈ ಹೆಸರು ಇಟ್ಟಿದ್ದಾರೆ.

- **ವಿದ್ಯಾವಂತ ಕೃಷಿಕರು ತಾವು. ನಿಮ್ಮ ವಿದ್ಯಾಭ್ಯಾಸ ವ್ಯವಸಾಯಕ್ಕೆ ನೆರವಾಗಿದೆಯಾ?**

ಖಂಡಿತಾ ಆಗಿದೆ. ನಾನು ಊರಿಗೆ ಬಂದು ವ್ಯವಸಾಯ ಆರಂಭಿಸಿದಾಗ ಆಧುನಿಕ ವ್ಯವಸಾಯ ಪದ್ಧತಿ ಇರಲಿಲ್ಲ. ಎಲ್ಲಾ ಹಳೆಯ ಪದ್ಧತೀನೆ. ರಾಸಾಯನಿಕ ಗೊಬ್ಬರದ ಬಳಕೆ ಇರಲಿಲ್ಲ. ಹಟ್ಟಿಗೊಬ್ಬರ ಹೆಚ್ಚು ಬಳಸ್ತಾ ಇದ್ರು. ಆಧುನಿಕ ಬೇಸಾಯ ಪದ್ಧತಿಯನ್ನು ನಾನು ಆರಂಭಿಸಿದ ಮೇಲೆ, ಬೆಳೇನೂ ಹೆಚ್ಚಿಗೆ ಬಂತು. ಉತ್ಪತ್ತೀನೂ ಜಾಸ್ತಿ ಆಯ್ತು. ೧೯೭೬ರಲ್ಲಿ ನಾನು ವಾಣಿಜ್ಯ ಬೆಳೆಯನ್ನು ಯಾಕೆ ಬೆಳೀಬಾರದು ಅಂತ ಆಲೋಚಿಸಿದೆ. ಇದ್ದ ವಾಣಿಜ್ಯ ಬೆಳೆ ಅಡಿಕೆ ಮಾತ್ರ. ಕ್ಷಾಮದಿಂದ ಅಡಿಕೇಲೂ ಆದಾಯ ಇರಲಿಲ್ಲ. ಆಗ ಹೊಗೇಸೊಪ್ಪನ್ನು ಬೆಳೆಯೋದಕ್ಕೆ ಆರಂಭಿಸಿದೆ. ಆಗ ನಮ್ಮ ಅಜ್ಜ ಇದ್ರು. ಅವರು 'ಇವನು ಊರಿಗೆ ಬಂದು ಏನೇನೋ ಮಾಡಿ ಮನೇನೆ ಹಾಳುಮಾಡಿಬಿಡ್ತಾನೆ, ಆರ್ಥಿಕ ಸಂಕಷ್ಟಕ್ಕೆ ನಮ್ಮನ್ನು ಸಿಲುಕಿಸಿಬಿಡ್ತಾನೆ' ಅನ್ನೋ ಅಭಿಪ್ರಾಯದಲ್ಲಿದ್ರು. ಅವರ ಇಷ್ಟಕ್ಕೆ ವಿರುದ್ಧವಾಗಿ ನಾನು ಹೊಗೇಸೊಪ್ಪನ್ನು ಬೆಳೆದೆ. ನಮ್ಮ ನಾಲೆಗೆ ನೀರು ಬರುವವರೆವಿಗೂ ಅದನ್ನು ಬೆಳೆದೆ. ಈಗ ಬಿಟ್ಟುಬಿಟ್ಟಿದ್ದೀನಿ. ಜಮೀನು ನೀರಾವರಿ ಆದ ಮೇಲೆ ಹೊಗೆಸೊಪ್ಪು ಆಗೋಲ್ಲ. ಆಮೇಲೆ ಎಲ್ಲರಿಗೂ ನೀರು ಸಿಕ್ಕ ಮೇಲೆ ಕೂಲಿ ಸಿಗೋದೂ ಕಷ್ಟ ಆಯ್ತು. ಅದಕ್ಕಾಗಿ ಬಿಟ್ಟುಬಿಟ್ಟೆ. ಸಾಮಾನ್ಯವಾಗಿ ನಮ್ಮ ಅಜ್ಜ ಸಂಪಾದನೆ ಮಾಡಿದಷ್ಟರಲ್ಲೇ ಇದ್ದಿದ್ರೆ ಈ ಮಟ್ಟಕ್ಕೆ ಬರೋದಕ್ಕೆ ಆಗ್ತಿರಲಿಲ್ಲ. ದೊಡ್ಡ ಕುಟುಂಬ ನಮ್ದು. ಹೊಗೇಸೊಪ್ಪಿನ ಬೇಸಾಯದಿಂದ ಬಂದ ಆದಾಯದಿಂದ ಮಾತ್ರ ನಮ್ಮ ಕುಟುಂಬ ಕಷ್ಟವಿಲ್ಲದೇ ಬೆಳೆದುಬಂತು.

- **ಎಷ್ಟು ಜನ ನಿಮ್ಮೂರಲ್ಲಿ ಹೊಗೇಸೊಪ್ಪು ಬೆಳೀತಿದ್ರು?**

ನಮ್ಮೂರಲ್ಲಿ ಬ್ರಾಹ್ಮಣರ ಪೈಕಿ ನಾವು ಮೂರೇ ಜನ ತಂಬಾಕು ಬೆಳೀತಾ ಇದ್ದದ್ದು. ನಮ್ಮದು ಎರಡು ಬ್ಯಾರನ್ ಇತ್ತು. ೧೮ ರಿಂದ ೨೦ ವರುಷ ತಂಬಾಕು ಬೆಳೆದ್ವಿ. ಮುಂಚೆ ನಮ್ಮ ತಂದೆಗೂ ಅಷ್ಟು ಇಷ್ಟ ಇರಲಿಲ್ಲ. ಮೊದಲ ವರುಷ ಬ್ಯಾರನ್ ಕಟ್ಟೋಕೆ,

ವ್ಯವಸಾಯಕ್ಕೆ ಅಂತ ೧೨,೦೦೦ ರೂ ಖರ್ಚಾಗಿತ್ತು. ನಮಗೆ ಹೊಗೇಸೊಪ್ಪಿನಿಂದ ೨೦ ಸಾವಿರ ಆದಾಯ ಬಂತು. ಅಷ್ಟೆಲ್ಲಾ ಖರ್ಚಾದ್ರೂ ಎಂಟು ಸಾವಿರ ಉಳಿದಿದೆಯಲ್ಲಾಂತ ಆಗ ನಮ್ಮ ಅಜ್ಜ ತುಂಬಾ ಖುಷಿಪಟ್ರು. ನಿಜವಾಗಿಯೂ ಅವರು ಎಂಟು ಸಾವಿರಾನ ನಾಲ್ಕು ವರುಷ ನೋಡಬೇಕಿತ್ತು. ಅಡಿಕೇಲಿ, ಒಂದೂವರೆಯಿಂದ ಎರಡು ಸಾವಿರ ಬರ್ರಿತ್ತು. ಮಾರನೇ ವರುಷಾನೇ ಇನ್ನೊಂದು ಬ್ಯಾರನ್ ಮಾಡ್ದೆ. ಆಗ ಅಜ್ಜಾನೇ ಪ್ರೋತ್ಸಾಹ ನೀಡಿದ್ರು, ಅನುಕೂಲವಾದದ್ದರಿಂದ.

- **ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ. . .**

ಅಡಿಕೆ, ಹೊಗೆಸೊಪ್ಪು, ರಾಗಿ ಬೆಳೀತಾ ಇದ್ವು. ನಾಲೆ ಬಂದ ಮೇಲೆ ಗದ್ದೆ ತೊಗೊಂಡು ಭತ್ತದ ಬೇಸಾಯ ಆರಂಭಿಸಿದೆ. ಒಂದೂವರೆ ಎಕರೆ ಗದ್ದೇನ ತೋಟ ಮಾಡಿದೆ. ಇವತ್ತು ಅದು ಫಸಲು ನೀಡ್ತಿದೆ. ಅಡಿಕೆ ಮರಗಳು ತುಂಬಾ ಒತ್ತಾಗಿದ್ದರಿಂದ ನಾವು ವಿಳ್ಳೇದೆಲೆ ಮಾಡಲಿಲ್ಲ. ಮರಗಳು ಎತ್ತರ ಬೆಳೆದ ಮೇಲೆ ಇನ್ನೂ ಎರಡು ಮೂರು ವರುಷ ಬಿಟ್ಟು ವಿಳ್ಳೇದೆಲೆ ಬೆಳೀಬೇಕೂ ಅಂತ ಅಂದುಕೊಂಡಿದ್ದೀನಿ. ನನಗೆ ೫೦ ಕ್ವಿಂಟಾಲ್ ಅಡಿಕೆ ಆಗುತ್ತೆ. ವ್ಯವಸಾಯ ನನಗೆ ತೃಪ್ತಿ ತಂದ ಕಸುಬು.

- **ನಿಮ್ಮ ಮಕ್ಕಳನ್ನು ವ್ಯವಸಾಯಸ್ಥರನ್ನಾಗಿ ಮಾಡುವ ಆಲೋಚನೆ ಇದೆಯಾ?**

ನಾನೇ ಮಕ್ಕಳಿಗೆ ವ್ಯವಸಾಯ ಬೇಡ ಅಂತೀನಿ. ಇವತ್ತು ನಾವು ಬೆಳೆದದ್ದಕ್ಕೆ ಬೆಲೆ ಇಲ್ಲ. ಅಡಿಕೆ ಧಾರಣೆ ಕುಸಿದಿದೆ. ಜೀವನ ನಿರ್ವಹಣೆ ಮುಂದಿನ ದಿನಗಳಲ್ಲಿ ಕಷ್ಟ ಆಗಬಹುದು. ಏನಾದರೂ ಒಂದು ವೃತ್ತಿ ಮಾಡುತ್ತಾ ವ್ಯವಸಾಯವನ್ನು ಜತೇಲಿ ಮಾಡೋದು ಒಳ್ಳೆಯದು ಅಂತಾ ನನ್ನ ಅಭಿಪ್ರಾಯ.

- **ನಿಮ್ಮ ಜೀವನದ ಮರೆಯಲಾಗದ ಘಟನೆ?**

೨೬ನೇ ವಯಸ್ಸಿನಲ್ಲಿ ನನ್ನ ಮದುವೆ ಆಗಿರಲಿಲ್ಲ. ಕ್ರೀಡೇಲಿ ಆಸಕ್ತಿ ಇತ್ತು. ನಮ್ಮ ಗೆಳೆಯರೆಲ್ಲಾ ಸೇರಿ ವಾಲೀಬಾಲ್ ಆಡೋವಿ. ಹಿರಿಯರ ಪ್ರೋತ್ಸಾಹಾನೂ ಇತ್ತು. ಒಂದು ತಂಡಾನೇ ನಾವು ಕಟ್ಟಿದ್ವಿ. ನನಗೆ ತುಂಬಾ ಹೆಮ್ಮೆ ಇದೆ ಅದರ ಬಗ್ಗೆ. ಈಗ, ನಮ್ಮ ಹುಡುಗರು 'ವಾಲೀಬಾಲ್ ಆಡ್ತೀವಿ' ಅಂದ್ರು. 'ನೀವು ಆಗಿನ ಕಾಲದಲ್ಲಿ ಆಡ್ತಿದ್ದರಂತೆ, ಬನ್ನಿ' ಅಂದ್ರು. ೨೦-೨೫ ವರುಷ ಆಯ್ತು ಈಗ ನಮ್ಗೆಲ್ಲಿ ಆಗುತ್ತೇ ಅಂತ ಅಂದುಕೊಂಡ್ವಿ. ಆದ್ರೆ ಬಿಡಲಿಲ್ಲ. 'ಬನ್ನಿ, ಒಂದ್ಸಲ ಆಡಬೇಕು ನೀವು' ಅಂತಾ ಕರೆದ್ರು. ವಯಸ್ಸಾದವರದ್ದೆಲ್ಲಾ ಒಂದು Team. ಕಿರಿಯರದ್ದೇ ಒಂದು Team ಅಂತ ಅವರೇ ನಿರ್ಧಾರ ಮಾಡಿದ್ರು. ಹಿಂದೆ ಆಡಿದ್ದ ವಾಂಛಲ್ಯ ಅಲ್ಲವೇ! ನಮಗೂ ಸ್ವಲ್ಪ ಸ್ಫೂರ್ತಿ ಬಂತು. ದೇಹದಲ್ಲಿ ಶಕ್ತಿ ಕುಂದಿದೆ ಅಂತ ನಮಗೆ ಅನ್ನಿಸಲಿಲ್ಲ. ಹೋಗಿ ನಿಂತುಕೊಂಡ್ವು. ಹಿಂದೆ smash ಮಾಡ್ತಾ ಇದ್ದೆವಲ್ಲಾ ಅದೇ ರೀತಿ ನೆಗೆದ್ರೆ ನಮಗೆಲ್ಲಿ ಬ್ಯಾಲನ್ಸ್ ಸಿಗುತ್ತೆ? ಬ್ಯಾಲನ್ಸ್ ಸಿಗಲಿಲ್ಲ, ಬಿದ್ದು ಕೈ ಊರಿದೆ. ಕೈ ಮುರಿದುಹೋಯ್ತು. ಬ್ಯಾಂಡೇಜ್ ಹಾಕಿದ್ದೆ. ಇದು ಮರೆಯಲಾಗದ ಘಟನೆ.

- **ಈಗ ನಿಮ್ಮೂರಿನ ಸಂಕೇತಿ ವರ್ಗ ಹ್ಯಾಗಿದೆ?**

ತುಂಬಾ ಹೆಮ್ಮೆಯಾಗುತ್ತೆ ಹೇಳೋದಕ್ಕೆ. ನಮ್ಮ ಸೋಮನಹಳ್ಳಿ ಗ್ರಾಮದಲ್ಲಿ ನಾವು ಎಷ್ಟು ಅನ್ಯೋನ್ಯವಾಗಿದ್ದೀವಿ ಅಂದ್ರೆ ಬೇರೆ ಯಾವುದೇ ಶಕ್ತಿಗಳೂ ಅದನ್ನು ಭೇದಿಸಲು ಆಗೋದಿಲ್ಲ. ನಮ್ಮೂರಲ್ಲಿ ಕಳ್ಳತನವಾಗಲೀ ಸುಳ್ಳುತನವಾಗಲೀ ಯಾವುದೂ ಇಲ್ಲ. ಏನು ಬೇಕಾದ್ರೂ ಹೊರಗೆ ಬಿಸಾಕಿ ಹೋಗಿ. ಯಾವುದೂ ಹೋಗೋದಿಲ್ಲ. ಅಷ್ಟು ಬಂದೋಬಸ್ತಾಗಿದೆ. ತೋಟದಲ್ಲೂ ಅಷ್ಟೇನೆ. ಅಡಿಕೆ ಕಳ್ಳತನವಂತೂ ಇಲ್ಲವೇ ಇಲ್ಲ. ಅದಕ್ಕೆ ಕಾರಣ ನಮ್ಮ ಒಗ್ಗಟ್ಟೇ. ಅದರಿಂದ ಊರಲ್ಲಿ ನಮಗೆ ಯಾವುದೇ ಈತಿಬಾಧೆಗಳಿಲ್ಲ. ನಮ್ಮ ಒಳಜಗಳಾನ ನಾವೇ ಬಗೆಹರಿಸಿಕೊಳ್ತೀವಿ. ನೀವು ಯೋಚಿಸಬಹುದು, ಇಷ್ಟರಮಟ್ಟಿಗೆ ನಾವು ಈ ಸಂಖ್ಯೆಯಲ್ಲಿ ಇಲ್ಲಿ ಉಳೀಬೇಕೂ ಅಂದ್ರೆ ಅದಕ್ಕೆ ನಮ್ಮ ಒಗ್ಗಟ್ಟೇ ಕಾರಣ. ಹಳ್ಳಿಮೈಸೂರಲ್ಲಿ ನಮ್ಮವರದ್ದು ೪೫ ಕುಟುಂಬ ಇತ್ತು. ಈಗ ೮ಕ್ಕೆ ಬಂದಿದೆ. ಬೇರೆ ಜನಾಂಗದ ಕಿರುಕುಳ ತಡೀಲಾಗದೆ ಅವರೆಲ್ಲಾ ಹೊರಗಡೆ ಹೋದ್ರು. ಆದ್ರೆ ನಮ್ಮೂರಿನಲ್ಲಿ ಇತರೇ ವರ್ಗಗಳ ಜನರ ಜತೆ ನಮ್ಮ ಸಂಬಂಧ ತುಂಬಾ ಚೆನ್ನಾಗಿದೆ. ಅವರು ನಮಗೆ ಸಹಕಾರ ನೀಡ್ತಾರೆ. ಏನೂ ತೊಂದರೆ ಇಲ್ಲ.

ಈಗ ಐದಾರು ವರುಷದ ಹಿಂದೆ ಕೂಲಿ ಜಾಸ್ತಿ ಮಾಡಬೇಕು ಅಂತ ರೈತರು ಧರಣಿ ಮಾಡಿದ್ರು. ಆಗ ನಾವು ಒಗ್ಗಟ್ಟಾಗಿ, ಯುವಕರೆಲ್ಲಾ ಒಂದು ತಂಡ ಮಾಡಿ ನಾವೇ ಎಲ್ಲ ಜಮೀನಿನಲ್ಲೂ ಕೆಲಸ ಮಾಡಿದ್ವು. ಭತ್ತವನ್ನೂ ಖಟಾವು ಮಾಡಿ, ಒಕ್ಕಣೆ ಮಾಡಿ, ಬಡಿದು,

ತೂರಿ ಚೀಲಕ್ಕೆ ತುಂಬಿದ್ವು. ಸ್ವಸಹಾಯಪದ್ಧತಿಯಿಂದಲೇ ಆ ವರ್ಷ ನಾವು ರೇಖೆ ಮಾಡಿದ್ವು. ಒಟ್ಟಾರೆ ನನಗೆ ಬದುಕಿನಲ್ಲಿ, ನಾನು ಬಾಳಿದ ಬಗ್ಗೆ ಸಂತೃಪ್ತಿ ಇದೆ.

- **ಒಳ್ಳೆಯದು ಗುಂಡಣ್ಣನವರೇ, ಇದುವರೆವಿಗೂ ನಿಮ್ಮ ವಿಚಾರ ತಿಳಿಸಿದ್ರಿ. ನಮಸ್ಕಾರ.**

  ನಮಸ್ಕಾರ.

ಸೋಮನಹಳ್ಳೀಲಿ ನೀರು ಕೂಳು ಎರಡೂ ಇಲ್ಲದ ಸಮಯದಲ್ಲಿ ಹೊರಗಿನಿಂದ ಬಂದ ಹೆಣ್ಣುಮಕ್ಕಳ ಪಾಡೇನು? ಈ ಊರಿಗೆ ಹೆಣ್ಣನ್ನು ಕೊಡ್ತಾ ಇದ್ರಾ? ಹೆಣ್ಣುಮಕ್ಕಳ ಮನಃಸ್ಥಿತಿ ಹೇಗಿತ್ತು ಎಂದು ತಿಳಿಯಲು ನಾವು ಗುಂಡಣ್ಣನವರ ಧರ್ಮಪತ್ನಿ ಸುಬ್ಬಲಕ್ಷ್ಮಿ ಅವರನ್ನು ಮಾತನಾಡಿಸಿದೆವು. ಅವರ ವಿಚಾರಗಳನ್ನು ಅವರದೇ ಮಾತಿನಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ.

'ನಮ್ಮ ತಂದೆ ದೇವಸ್ಥಾನದಲ್ಲಿ ಪೂಜೆ ಮಾಡೋರು. ನಮ್ಮ ಮನೇಲಿ ತುಂಬಾ ಕಷ್ಟಾನೇ ಇತ್ತು. ಊಟಕ್ಕೆ ತಿಂಡಿಗೆ ತೊಂದ್ರೆ ಇತ್ತು. ಅಡಿಕೆ ಸುಲಿಯಲು ಹೋಗ್ತಿದ್ವಿ. ಅದ್ರಿಂದ ಬಂದ ಕೂಲಿ ಹಣದಲ್ಲಿ ಅಕ್ಕಿ ತಂದು ಊಟ ಮಾಡ್ತಿದ್ವಿ. ನಮ್ಮ ತಂದೆಗೆ ಮೂರು ಗಂಡು, ಎರಡು ಹೆಣ್ಣು ಮಕ್ಕಳು. ನಾನೇ ಹಿರೀಮಗಳು. ನಮ್ಮ ತಂದೆ ಇಲ್ಲಿ ಗಂಡು ನೋಡಲು ಬಂದಿದ್ರು. ಅವಾಗ ಇವರ ಜತೇಲಿದ್ದ ನನ್ನ ಚಿಕ್ಕಮ್ಮಂದ್ರು "ಇದು ವಡ್ಡ ಸೋಮನಹಳ್ಳಿ, ಇಲ್ಲಿ ನೀರಿಗೆ ತುಂಬ ಕಷ್ಟ. ನೀನು ಮದುವೆ ಮಾಡ್ಕೋಬೇಡ" ಅಂತ ಹೇಳಿದ್ರು. ನಮ್ಮ ತಂದೆಗೆ ಕಷ್ಟ ಆಗುತ್ತಲ್ಲಾ, ಅವರ ಮಾತು ಕೇಳಬೇಕು ಅಂತ ಮದುವೆ ಮಾಡಿಕೊಂಡೆ. ಇಲ್ಲಿ ಭಾವೀಲಿ ನೀರು ಇರ್ಲಿಲ್ಲ. ದಿನಕ್ಕೆ ಎರಡೋ ಮೂರೋ ಬಿಂದಿಗೆ ನೀರು ಬರೋದು. ರಾತ್ರೀನೇ ಹೋಗಿ ಕೊಡ ಇಡಬೇಕು. ಬೆಳಗ್ಗೆ ನೀರು ಬಂದ್ರೆ ಅದು ಮೊದಲು ಕೊಡ ಇಟ್ಟವರಿಗೆ ಸಿಗೋದು. ಆಗ ತೋಟದಿಂದ ನೀರು ತರಬೇಕು. ನೀರು ಸೇದೋಕೆ ತುಂಬಾ ಆಳ. ಮನೆಯ ಎಲ್ಲ ಬಳಕೆಗೂ ಅಲ್ಲಿಂದಲೇ ನೀರು ಹೊರಬೇಕು. ಯಾವತ್ತೂ ನನಗೆ ಬೇಸರ ಆಗಲಿಲ್ಲ. ನನ್ನ ತಂದೆ ಮನೆಗಿಂತ ಇಲ್ಲಿ ನಾನು ಚೆನ್ನಾಗಿದ್ದೇನೆ. ನಮ್ಮೆಜಮಾನರು ಪ್ರೀತಿಯಿಂದ ಕಾಣ್ತಿದಾರೆ. ಬದುಕಿನಲ್ಲಿ ಸಂತೃಪ್ತಿ ಇದೆ. ಅತ್ತೆ ಸೊಸೆ, ಅತ್ತಿಗೆ ನಾದಿನಿ, ವಾರಗಿತ್ತೀರ ನಡುವೆ ಜಗಳ ಆಗಿಲ್ಲ. ಎಲ್ಲರೂ ಒಂದು ಕುಟುಂಬದವರಂತೆ ಇದ್ದೀವಿ,' ಅಂತ ತುಂಬುಹೃದಯದಿಂದ ಹೇಳ್ತಾರೆ. ಇದು ಇಂದಿನವರಿಗೆ ಮಾದರಿ ಆಗಬೇಕು, ಅಲ್ಲವೆ?



ಮುಂಜಾವಿನ ಒಂದು ರೈತ ಕಾಯಕ: ಹಾಲು ಕರೆಯುತ್ತಿರುವ ಶ್ರೀಮತಿ ಸುಬ್ಬಲಕ್ಷ್ಮಮ್ಮ: ಸೋಮನಹಳ್ಳಿ

ಊ) ಎಸ್. ನಾಗೇಂದ್ರ ಇ/ಮ ಸುಬ್ರಾಯಾವಧಾನಿ

ಸೋಮನಹಳ್ಳಿ, ಹೊಳೆನರಸೀಪುರ (ತಾ), ಹಾಸನಜಿಲ್ಲೆ, ದೂರವಾಣಿ : 08175 569127

ನನ್ನ ತಂದೆ ಸದಾ ಹೇಳ್ತಿದ್ರು 'ದೊಡ್ಡವರಿಗೆ ಬೆಲೆ ಕೊಡಬೇಕು. ಹಿರಿಯರ ಆಶೀರ್ವಾದದಂತೆ ನಡೀಬೇಕು. ಯಾವಾಗಲೂ ಸನ್ಮಾರ್ಗದಲ್ಲಿ ನಡೀಬೇಕು' ಅಂತ. ಅದರಂತೆ ನಾನು ನಡೀತಿದ್ದೀನಿ. ವಿಶ್ವಾಸದಿಂದ ಜನರನ್ನು ಗೆಲ್ಲಬೇಕೇ ವಿನಃ ವಿರಸದಿಂದ ಅಲ್ಲ.

ಸೋಮನಹಳ್ಳಿಯ ವೇ||ಬ್ರ||ಶ್ರೀ||ಸುಬ್ರಾಯಾವಧಾನಿ ಹಾಗೂ ಗೌರಮ್ಮ ಅವರ ಮಗ ಎಸ್.ನಾಗೇಂದ್ರ ಅವರಿಗೆ ಈಗ ೫೨ ವರುಷ. ಅಗ್ರಹಾರದ ರಂಗನಾಥ ಹಾಗೂ ಭಾಗ್ಯಲಕ್ಷ್ಮಿ ಅವರ ಮಗಳು ರಾಧ ಇವರ ಧರ್ಮಪತ್ನಿ. ವ್ಯವಸಾಯ, ವ್ಯಾಪಾರ, ನಾಟಿ ಔಷಧಿ ಹಾಗೂ ವೇದಾಧ್ಯಯನ ಎಲ್ಲದರಲ್ಲೂ ನಾಗೇಂದ್ರ ಅನುಭವ ಹೊಂದಿದ್ದಾರೆ. ಮಾತಿಗೆಳೆದರೆ ಹೊಸವಿಚಾರಗಳು ಹೊರಬರುವುದೇನೋ ಎಂದುಕೊಂಡು ವಂದಿಸಿದೆ.

- **ನಮಸ್ಕಾರ ನಾಗೇಂದ್ರ ಅವರೆ...**
  ನಮಸ್ಕಾರ

- **ನಿಮ್ಮ ವ್ಯವಸಾಯದ ಬದುಕು ಹ್ಯಾಗಿದೆ?**
  ಜಮೀನು ಎಂಟು ಎಕರೆ ಇದೆ. ಅದರಲ್ಲಿ ಮುಖ್ಯ ಬೆಳೆ ಅಡಿಕೆ. ಜತೇಲಿ ತೆಂಗಿನಕಾಯಿ, ವಿಳ್ಳೇದೆಲೆ ಬೆಳೀತಿದೀನಿ. ಒಂದರಿಂದ ಒಂದೂಕಾಲು ಲಕ್ಷ ರೂ ಆದಾಯ ಅಡಿಕೇಲಿ ಆಗ್ತಿದೆ, ಅದೂ ಎರಡು ಎಕರೇಲಿ. ವಿಳ್ಳೇದೆಲೆ ಮುಕ್ಕಾಲು ಎಕರೆಯಿಂದ ೪೦ ಸಾವಿರ ಆದಾಯ ಆಗ್ತಿದೆ. ೧೫ ರಿಂದ ೨೦ ಗುಂಟೆ ಭತ್ತವನ್ನು ಈಗ ಬೆಳೀತಿದ್ದೀನಿ. ಮುಂದೆ ಅದನ್ನೂ ತೋಟ ಮಾಡ್ತೀನಿ.

- **ನಿಮ್ಮ ವೇದಾಧ್ಯಯನದ ಬಗ್ಗೆ ಹೇಳಿ.**
  ನನ್ನ ತಂದೆ ವೇದಾಧ್ಯಯನಸಂಪನ್ನರು. ಅವರಿಂದ ಅಲ್ಪಸ್ವಲ್ಪ ಕಲಿತಿದ್ದನ್ನು ನಾನು ನನ್ನ ನಿತ್ಯಕರ್ಮದಲ್ಲಿ ಬಳಸುತ್ತಿದ್ದೇನೆ ಅಷ್ಟೆ, ಊರಿನ ಯಾವುದೇ ಕೆಲಸ ಇದ್ರೂ ನನ್ನ ತಂದೆ ಮುಂದಾಳತ್ವ ವಹಿಸಿ ಮಾಡ್ತಿದ್ರು. ಈಗ್ಗೆ ಎರಡು-ಮೂರು ವರುಷಗಳ ಹಿಂದೆ ಅವರು ದೈವಾಧೀನರಾದ್ರು.
- **ನಿಮ್ಮ ಕೌಟುಂಬಿಕ ಹಿನ್ನೆಲೆ?**
  ನಮ್ಮ ತಂದೆಗೆ ಮೂರು ಜನ ಮಕ್ಕಳು. ನಾನೇ ಹಿರೀಮಗ. ಎರಡನೆಯವನು KEBಲಿ Junior Engineer ಆಗಿದಾನೆ. ಕೊನೆಯವನು ಕೃಷಿಕ. ನಾವು ಪೂರ್ತಿ ಒಟ್ಟು ಕುಟುಂಬದಲ್ಲಿದ್ದೇವೆ. ನನ್ನ ತಾಯಿ ವೃದ್ಧಾಪ್ಯದವರು. ಎರಡು, ಮೂರನೇ ತರಗತಿವರೆಗೆ ವಿದ್ಯಾಭ್ಯಾಸ ಅಷ್ಟೆ. ಆದರೂ ಬುದ್ಧಿ ಚೆನ್ನಾಗಿತ್ತು. ಮಕ್ಕಳನ್ನು ಸುಸಂಸ್ಕೃತರನ್ನಾಗಿ ಬೆಳೆಸಿದ್ರು. ನಾನು ಓದಿದ್ದು PUC ಮಾತ್ರ. ಮನೆಗೆ ನಾನೇ ಹಿರಿಯ. ವ್ಯವಸಾಯ ಹಾಳಾಗಬಾರದು ಅಂತ ಮನೇಲಿ ಉಳಿದೆ. ತಂದೆಯವರು ಮಾಡಿದ ಆಸ್ತಿಯನ್ನು ರೂಢಿಸಿದೆ. ಕಳೆದದ್ದು ಇಲ್ಲ ಅಷ್ಟೆ.

- **ಪೂರಕವಾದ ವ್ಯಾಪಾರದ ಬಗ್ಗೆ ಆಲೋಚನೆ ಹ್ಯಾಗೆ ಬಂತು?**
  ವ್ಯವಸಾಯದ ಜತೆಗೆ ಒಂದು ಉಪ ಉದ್ಯೋಗ ಬೇಕು ಅಂತ ಅನ್ನಿಸ್ತು. ಮನೇಲಿ ಜನ ಇದ್ವಿ. ತೋಟದ ಆದಾಯ ಅಷ್ಟಿರಲಿಲ್ಲ. ಹಾಗಾಗಿ ಒಂದು ಹಲ್ಲರ್ ಹಾಗೂ ಫ್ಲೋರ್‌ಮಿಲ್ ಹಾಗೂ ಪಕ್ಕದಲ್ಲಿ ಚಿಲ್ಲರೆ ಅಂಗಡಿ ಇಟ್ಟುಕೊಂಡು ೨೨ ವರುಷದಿಂದ ನಡೆಸುತ್ತಾ ಇದ್ದೀನಿ. ಹಿಂದೆ ೨೦ ಸಾವಿರ ಕೊಟ್ಟು mill ಖರೀದಿಸಿದೆ. ತೊಂದರೆ ಅಂತೂ ಇಲ್ಲ. ಲಾಭ ಹೆಚ್ಚು ಬರದಿದ್ರೂ ಕೈಯಿಂದ ಅಂತೂ ಹೋಗಿಲ್ಲ. ಇನ್ನು ಅಂಗಡೀಗೆ ಮೈಸೂರು, ಹಾಸನದಿಂದ ಮಾಲು ತರ್ತೀನಿ. ಒಂದಷ್ಟು ಲಾಭ ಇಟ್ಟು ಮಾರ್ತೀನಿ. ನಮ್ಮೂರಿನಲ್ಲಿ ಇಬ್ಬರು ಸಂಕೇತಿಗಳು ಅಂಗಡಿ ಇಟ್ಟಿದ್ದೇವೆ. ನಮ್ಮಿಬ್ಬರಲ್ಲಿ ಪೈಪೋಟಿ ಇಲ್ಲ. ಅಣ್ಣತಮ್ಮಂದಿರಂತೆ ಹೊಂದಿಕೊಂಡು ಹೋಗ್ತಿದ್ದೇವೆ. ವಿಶ್ವಾಸದಿಂದ ಮನುಷ್ಯನನ್ನು ಗೆಲ್ಲಬೇಕೇ ವಿನಹ ವಿರಸದಿಂದ ಅಲ್ಲ. ವ್ಯಾಪಾರಕ್ಕೆ ನನ್ನ ತಂದೆಯವರು ಆಶೀರ್ವದಿಸಿ ೨೫ ಸಾವಿರ ನೀಡಿದ್ರು. ಅದೇ ಬಂಡವಾಳವಾಯ್ತು. ಈ ನಿಟ್ಟಿನಲ್ಲಿ ನನಗೆ ನಮ್ಮೂರ ಕೇಶವನಾರಾಯಣ ಗುರುಗಳು. ಅವರು 'ಏನೂ ತೊಂದರೆ ಆಗೋಲ್ಲ, ಮಾಡು' ಅಂದ್ರು. ಮಾಡ್ತಿದ್ದೇನೆ. ಮನೆಗೆ ಬೇಕಾದ ಪ್ರತಿಯೊಂದನ್ನೂ ನಾನು ಮಾರ್ತಾ ಇದ್ದೇನೆ. ಯಾರಿಗೂ ಅನ್ಯಾಯ

ಮಾಡದೆ, ಒಂದು ಮಿತವಾದ ಅಂತರ ಇಟ್ಟು ಇದುವರೆವಿಗೂ ವ್ಯಾಪಾರ ಮಾಡಿದ್ದೇನೆ. ಈಗ ಮಿಲ್ ಅಷ್ಟು ಚೆನ್ನಾಗಿ ನಡೀತಿಲ್ಲ. ಸರ್ಕಾರದಿಂದ ಕೊಡೋ ಅಕ್ಕೀನ ಜನ ಊಟ ಮಾಡ್ತಾರೆ. ಮಿಲ್‌ಗೆ ಬರೋದಿಲ್ಲ. ರಾಗಿ ಮಿಲ್ ಮಾಡಿಸೋರು ಕಡಿಮೆ. ಅದರ ವ್ಯಾಪಾರ ಮುಂಚಿನಷ್ಟು ಇಲ್ಲ. ದಿನಕ್ಕೆ 500 ರಿಂದ 800 ರೂ ವ್ಯಾಪಾರ ಆಗುತ್ತೆ. ನಾನು ಎರಡರಿಂದ ನಾಲ್ಕು ಪರ್‌ಸೆಂಟ್ ಲಾಭ ಇಟ್ಟಿದ್ದೇನೆ, ಅಷ್ಟೆ.

- **ಕೃಷಿಗೆ ಪೂರಕವಾಗಿ ವಿಳ್ಳೇದೆಲೆ, ಅಡಿಕೆ ವ್ಯಾಪಾರಾನೇ ನೀವು ಯಾಕೆ ಮಾಡಲಿಲ್ಲ, ದಿನಸಿ ವ್ಯಾಪಾರ ಯಾಕೆ ಮಾಡಿದ್ರಿ?**

ಆಗ ದಿನಸಿ ವ್ಯಾಪಾರ ಅಷ್ಟು ಇರಲಿಲ್ಲ ಇಲ್ಲಿ. ಅಡಿಕೆಗೆ ಅಂಥಾ ಧಾರಣೆ ಇರಲಿಲ್ಲ. ಹಾಗಾಗಿ ದಿನಸಿ ಶುರು ಮಾಡಿದ್ವಿ. ಈಗ ನಾವು ಬೆಳೆದ ಅಡಿಕೇನ ಮಾರಬೇಕು ಅನ್ನೋ ಯೋಚನೆ ಸಹಾ ಇದೆ. ವ್ಯವಸಾಯದ ಜತೆ ವ್ಯಾಪಾರಾನೂ ಇದ್ರೆ ಕಾಲ ಸುಲಭವಾಗಿ ಕಳಿಯುತ್ತೆ. ಆದಾಯವೂ ಸಿಗುತ್ತೆ. ನಮ್ಮ ಕುಟುಂಬಕ್ಕೆ ವ್ಯಾಪಾರದಿಂದ ಅನುಕೂಲ ಆಗಿದೆ. ಇದುವರೆವಿಗೂ ನಾವು ಸಾಲ ಮಾಡಿಲ್ಲ. ನಮ್ಮ ಮನೆಯ ಯಾವುದೇ ಕೆಲಸಗಳಿಗೂ ಹಣದ ತೊಂದರೆ ಆಗಿಲ್ಲ. ನನ್ನದು ಸಂಪೂರ್ಣ ಅಂಗಡಿಯ ವ್ಯಾಪಾರದ ನಿರ್ವಹಣೆ. ನನ್ನ ತಮ್ಮ ವ್ಯವಸಾಯವನ್ನು ನಿರ್ವಹಣೆ ಮಾಡ್ತಾನೆ. ಸ್ವತಃ ಕೆಲಸ ಮಾಡುವುದು ಕಮ್ಮಿ. ಆಳುಕಾಳಿನ ಮೇಲೆ ಅವಲಂಬನೆ ಹೆಚ್ಚು.

- **ನಿಮ್ಮ ಕುಟುಂಬದಲ್ಲಿ ಹಸಿರು ಔಷಧಿಯನ್ನು ನೀಡುವ ಅಭ್ಯಾಸ ಹೇಗೆ?**

ನಮ್ಮ ತಂದೆ ಬಸವಾಪಟ್ಟಣ ಹಾಗೂ ಸರಗೂರಿನಲ್ಲಿ ವಿದ್ಯಾಭ್ಯಾಸ ಮಾಡುವಾಗ ಅವರ ಹಿರಿಯರು ಹೇಳಿದ್ದಂತೆ, ಅದನ್ನೇ ಅನೂಚಾನವಾಗಿ ಪಾಲಿಸಿಕೊಂಡು ಬಂದಿದ್ರು. ಅವರಿಂದಲೇ ನನಗೆ ತಿಳಿದದ್ದು. ಹಿರಿಯರು ನಮ್ಮ ತಂದೆಗೆ ಹೇಳಿದ್ರಂತೆ, 'ಇದರಲ್ಲಿ ಹಣದ ಆಸೆಯಂತೂ ಇರಬಾರದು, ಸ್ವಾರ್ಥಕ್ಕಾಗಿ ಬಳಸಬಾರದು. ಹೀಗೆ ಮಾಡಿದ್ರೆ ಅನುಕೂಲ ಆಗುತ್ತೆ' ಅಂತ. ಅದ್ರಂತೆ ಮೂರು ಜನ ಮಕ್ಕಳಿಗೂ ನಮ್ಮ ತಂದೆ ಈ ವಿದ್ಯೆ ಕಲಿಸಿದ್ದಾರೆ. ನಾವು ಈಗ ಹುಚ್ಚು ನಾಯಿ ಕಡಿತಕ್ಕೆ, ಮಕ್ಕಳ ಹಕ್ಕಿಖಾಯಿಲೆಗೆ, ವಿಷಬು, ಹಲ್ಲುನೋವು ಹಾಗೂ ಇಕ್ಕು ಮದ್ದು (ಕೈಮಸ್ಸು) ಇಷ್ಟಕ್ಕೂ ಮನೆ ಔಷಧ ನೀಡ್ತೇವೆ. ನಾಯಿಕಡಿತಕ್ಕೆ ಒಳ್ಳೇ ಔಷಧ ಇರೋದ್ರಿಂದ ತುಂಬಾ ದೂರದಿಂದ ಜನ ಬರ್ತಾರೆ. ಔಷಧಿಗೆ ಪ್ರತಿಯಾಗಿ ಹಣ ಸ್ವೀಕರಿಸಬೇಕು ಅಂತಿದೆ. ಅವರಿಂದ ಪಡೆದ ಹಣವನ್ನು ಧರ್ಮಸ್ಥಳಕ್ಕೆ ಕಳಿಸ್ತೇವೆ, ನಾವಂತೂ ಬಳಸೋಲ್ಲ. ಸ್ವಾಭಾವಿಕವಾಗಿ ನಮ್ಮ ಸುತ್ತಮುತ್ತ ಸಿಗುವ ಹಸಿರು ಗಿಡಗಳನ್ನು ಔಷಧಿಯಾಗಿ ಬಳಸಬಹುದು. ಆದರೆ ಅದನ್ನು ಯಾರಿಗೂ ತೋರಿಸುವಂತಿಲ್ಲ. ಹೇಳಿದರೆ 'ಅಯ್ಯೋ ಇಷ್ಟೇನಾ' ಅಂತ ಮೂಗೆಳೀತಾರೆ. ಔಷಧದ ಪ್ರಭಾವ ಕಮ್ಮಿಯಾಗುತ್ತೆ. ಆದ್ದರಿಂದ ಗಿಡಮರಗಳ ಮೂಲಸ್ವರೂಪವನ್ನು ಬದಲಿಸಿ ಔಷಧಿಯಾಗಿ ನೀಡ್ತೇವೆ. ಹಾವಿನ ಉಸಿರಿಗೆ ಔಷಧಿಯಾಗಿ ಬೇರನ್ನು ಬಳಕೆ ಮಾಡ್ತೀವಿ. ಹಸಿರು ಔಷಧಿಯಿಂದ ತೊಂದರೆಯಂತೂ ಇದುವರೆಗೆ ಆಗಿಲ್ಲ.

- **ವ್ಯಾಪಾರ ಹಾಗೂ ವ್ಯವಸಾಯದಲ್ಲಿ ಯಾವುದು ಒಳ್ಳೆಯದು ಅಂತೀರಿ?**

ಎರಡೂ ಒಳ್ಳೆಯದು. ಆದರೆ ವ್ಯವಸಾಯವೇ ಎರಡರಲ್ಲಿ ಒಳ್ಳೇದು ಅನ್ನಿಸುತ್ತೆ. ವ್ಯಾಪಾರ ಅದಕ್ಕೆ ಪೂರಕವಾಗಿದ್ರೆ ಅನುಕೂಲ ಅಷ್ಟೆ.

- **ನಿಮ್ಮ ಒಟ್ಟು ಕುಟುಂಬದ ಯಶಸ್ಸು ಹ್ಯಾಗೆ-ಹಳ್ಳಿಗಳಲ್ಲಿ ಇಂದು ಒಟ್ಟು ಕುಟುಂಬಗಳು ಕಾಣುವುದು ಅಪರೂಪವಾಗಿರುವಾಗ!**

ಸಾಮಾನ್ಯವಾಗಿ ಮನೆಗೆ ಬಂದವರಲ್ಲಿ ಅನುಸರಣೆ ಕಡಿಮೆಯಾಗಿ ಕುಟುಂಬಗಳು ಬೇರೆಯಾಗುತ್ತೆ ಅಷ್ಟೆ. ಮೊದಲು ಅಣ್ಣತಮ್ಮಂದಿರು ಒಟ್ಟಾಗಿ ಇದ್ದೇ ಇರ್ತಾರೆ. ಎಲ್ಲಾರ ಸಂಸಾರದಲ್ಲೂ ಆಗುತ್ತೆ ಅಂತ ಅಲ್ಲ. ಹೊರಗಿನಿಂದ ಬಂದವರು ಅನುಸರಿಸದೆ ಹೋದಾಗ ಸಮಸ್ಯೆ ಅಷ್ಟೆ. ಗಂಡಸರದ್ದು ಏನೂ ತಪ್ಪಿಲ್ಲ ಅಂತ ಹೇಳೋದಿಕ್ಕೆ ಆಗೋದಿಲ್ಲ. ಎರಡು ಕೈ ಸೇರಿದರೆ ತಾನೆ ಚಪ್ಪಾಳೆ? ಆದರೆ ನಮ್ಮ ಮನೆಯಲ್ಲಿ ಎಲ್ಲರೂ ಅನುಸರಿಸಿಕೊಂಡು ಹೋಗ್ತಿದೀವಿ. ಯಾವ ತೊಂದರೇನೂ ಬರೋದು ಬೇಡ ಅಂತ ಆ ದೇವರಲ್ಲಿ ಪ್ರತಿನಿತ್ಯ ನಾನು ಬೇಡಿಕೊಳ್ತೀನಿ. ನಮ್ಮ ಒಟ್ಟು ಕುಟುಂಬ ಹಲವು ರೀತಿಯಲ್ಲಿ ನೆರವು ನೀಡಿದೆ. ಒಟ್ಟಾಗಿದ್ರೆ ಕೆಲಸದ ಹಂಚಿಕೆ ಇರುತ್ತೆ. ಬೇರೆ ಬೇರೆಯಾದ್ರೆ ಎಲ್ಲ ಕೆಲಸವನ್ನೂ ನಾವೇ ಮಾಡಬೇಕು. ನಾವು ಬೇರೆ ಕಡೆ ಊರಿಗೆ ಹೋಗಬೇಕಾಗಿ ಬಂದಾಗ ಮನೆ ನಿರ್ವಹಣೆ ಇತರರು ಮಾಡುತ್ತಾರೆ. ಸಹೃದಯತೆ ಇದ್ದಾಗ ಮನೆ ವಾತಾವರಣ ಚೆನ್ನಾಗಿರುತ್ತೆ. ಇದೇ ಒಟ್ಟು ಕುಟುಂಬದ ರಹಸ್ಯ.

- **ಜೀವನದಲ್ಲಿ ನೀವು ಪಾಲಿಸಿದ ತತ್ತ್ವ?**

ಹಿರಿಯರು ಮನೆಯಲ್ಲಿ ಯಾವ ತರಹದ ದುರಭ್ಯಾಸಗಳೂ ಇಲ್ಲದೆ ಇದ್ರೆ ಕಿರಿಯರೂ ಸಹ ಅದನ್ನೇ ಅನುಸರಿಸ್ತಾರೆ ಅನ್ನೋದು ನನ್ನ

ತತ್ತ್ವ. ನಾವು ಇನ್ನೊಬ್ಬರಿಗೆ ಹೇಳುವಾಗ ಸರಿಯಾಗಿದ್ರೆ ಮನೇಲೂ ಹಾಗೇ ನಡೆಯುತ್ತೆ. ನಾವೇ ದಾರಿ ಬಿಟ್ರೆ ನಾವಿನ್ಯಾರನ್ನೂ ಕೇಳುವಂತಿಲ್ಲ.

- ಒಳ್ಳೆಯದು ಯಜಮಾನ್ರೆ, ಇದುವರೆಗೆ ನಿಮ್ಮ ವಿಚಾರಗಳನ್ನು ತಿಳಿಸಿದ್ರಿ. ವಂದನೆಗಳು.
  ನಮಸ್ಕಾರ

೩೬) ಪ್ರಕಾಶ್

ಸಂಕೇತಿಗಳ ಬದುಕಿನಲ್ಲಿ ಕೆಲವು ಚಟಗಳು ಅವಿನಾಭಾವವಾಗಿ ಬೆಸೆದಿವೆ. ಇದರಲ್ಲಿ ಇಸ್ಪೀಟು ಆಡುವ ಚಟವೂ ಒಂದು. ಸಭೆ ಸಮಾರಂಭದಲ್ಲಿ ರಾತ್ರಿಯಿಡೀ ಜಾಗರಣೆ ಮಾಡುವ ಜನರೂ ಇದ್ದಾರೆ. ಸೋಮನಹಳ್ಳಿಯ ಪ್ರಕಾಶ್ ಅವರನ್ನು ನಾವು ಈ ಕುರಿತು ಮಾತನಾಡಿಸಿದೆವು. ಮೂಲತಃ ಅಡುಗೆವೃತ್ತಿಯವರಾದ ಇವರು ಇಸ್ಪೀಟನ್ನು ಆರಂಭಿಸಿದ್ದು ಆಕಸ್ಮಿಕವಾಗಿ.

'ಆರಂಭದಲ್ಲಿ ಅಡುಗೆ ವೃತ್ತಿಯನ್ನು ಯಾಕಾದ್ರೂ ಆರಂಭಿಸಿದ್ವಿ ಅನ್ನೋ ನೋವು ಇತ್ತು. ಆದರೆ ನಂತರದ ದಿನಗಳಲ್ಲಿ ಸಂಪಾದನೆ ಚೆನ್ನಾಯ್ತು. ಲಕ್ಷಾಂತರ ದುಡ್ಡು ನೋಡಿದ್ವಿ. ಮದುವೆ ಮನೆಗಳಿಗೆ ಹೋದಾಗ ಉಪವೃತ್ತಿಯಾಗಿ ಇಸ್ಪೀಟು ಆಟ ಆರಂಭವಾಯ್ತು. ಅಲ್ಲೂ ಜನ ನೆರೆದಿರ್ತಾರೆ, ಅವರ ಜತೆ ಬೆಳ್ಳಂಬೆಳಗೂ ಆಡೋದು, ನಂತರ ಬಂದು ಅಡುಗೆ ಮಾಡೋದು. ನಮ್ಮಜ್ಜ ತುಂಬಾ ಆಡ್ತಿದ್ದರಂತೆ, ಅವರಿಂದ ನಮ್ಮ ತಂದೆಗೆ ಬಂತು. ಅವರಿಂದ ನಾವು ಕಲಿತ್ವಿ. ನಮ್ಮ ಅಣ್ಣತಮ್ಮಂದಿರಲ್ಲಿ ನಾನೇ ಜಾಸ್ತಿ ಆಡೋದು. ನಾನು ಎರಡು ಮೂರು ದಿನ ಮುಖಾನೂ ತೊಳೀದೇ ಆಡಿದೀನಿ. ಇಸ್ಪೀಟು ಆಡಿಯೇ ಐದಾರು ಲಕ್ಷ ರೂಪಾಯಿ ಸಂಪಾದನೆ ಮಾಡಿದೀನಿ' ಅಂತ ಹೆಮ್ಮೆಯಿಂದ ಹೇಳ್ತಾರೆ.

'ನಾನು ಸುಮಾರು ಇಪ್ಪತ್ತು ವರುಷಗಳಿಂದ ಆಟ ಆಡ್ತಿದೀನಿ. ಇಸ್ಪೀಟು ಆಟಕ್ಕೆ ವ್ಯಕ್ತಿಯ luck ಬಹಳ ಮುಖ್ಯ, ಬುದ್ಧಿವಂತಿಕೆಯ ಪ್ರಾಮುಖ್ಯ ಕಡಿಮೆ. ನಾನು ಬೆಂಗಳೂರು, ಮೈಸೂರಿನ clubಗಳಲ್ಲೂ ಆಡಿದ್ದೇನೆ. ಬೆಂಗಳೂರು clubನಲ್ಲಿ ಇಪ್ಪತ್ತೈದು ಸಾವಿರದವರೆಗೂ ಸಂಪಾದಿಸಿದ್ದೇನೆ. ನನಗೆ ನಷ್ಟ ಆಗಿರುವ ಸಂಭಾವ್ಯತೆ ಕಡಿಮೆ. ಕೆಲವರಿಗೆಲ್ಲಾ ಜಮೀನು, ವ್ಯಾಪಾರ ಇದರಲ್ಲಿ ಅದೃಷ್ಟ ಇರುತ್ತೆ. ನನಗೆ ಇಸ್ಪೀಟಿನಲ್ಲಿ ಇದೆ ಅನ್ನಿಸುತ್ತೆ. ಐದಾರು ತಿಂಗಳ ಹಿಂದೆ ನನ್ನ ತಮ್ಮನ ಮದುವೆ ಆಯ್ತು. ಹೊರಗಡೆಯಿಂದ ಇಸ್ಪೀಟು ಆಡುವವರನ್ನೇ Invite ಮಾಡಿದ್ವಿ. ಅದಕ್ಕೇ ಶಾಮಿಯಾನ ಹಾಕಿಸಿ, Generator ಕೂಡ ಇಟ್ಟಿದ್ವಿ. ಅಲ್ಲೇ ತಿಂಡಿ, ಊಟ, ಕಾಫಿ supply ಆಗಿತ್ತು. ನನ್ನ ಮನೆಯವಳು ನನಗೆ ಇಸ್ಪೀಟು ಆಡಬೇಡ ಅಂತ ಹೇಳ್ತಾಳೆ. ಆದರೆ ಅದರ ಆದಾಯದ ರುಚಿ ಕಂಡಿರುವುದರಿಂದ ಬಿಡಲು ಆಗ್ತಿಲ್ಲ' ಅಂತ ಮಗುಮ್ಮಾಗಿ ನುಡೀತಾರೆ.

'ನಮ್ಮ ಸೋಮನಹಳ್ಳೀಲಿ ಇಸ್ಪೀಟು ಆಡೋರು ಮನೆಗೆ ಒಬ್ರು ಇಬ್ರು ಇದಾರೆ. ಅದನ್ನೇ ಉಪವೃತ್ತಿಯನ್ನಾಗಿ ಇಟ್ಟುಕೊಂಡಿರುವವರು ನಾಲ್ಕು-ಐದು ಜನ ಅಷ್ಟೆ. ಸಮಯ ಕಳೆಯೋದಕ್ಕೆ ಸರಿ, ಆದಾಯ ಸಂಪಾದನೆಗೆ ಇಸ್ಪೀಟನ್ನು ಮೂಲವಾಗಿ ಇಟ್ಟುಕೊಂಡಿರುವುದು ನನಗೆ ತಪ್ಪು ಅಂತ ಅನ್ನಿಸಿಲ್ಲ, ಮುಂದಿನದು ಗೊತ್ತಿಲ್ಲ. ಹೆಚ್ಚು ನಷ್ಟ ಆಗಿದ್ರೆ ನಾನು ಇಸ್ಪೀಟು ಬಿಡ್ತಿದ್ದೆನೋ ಏನೋ. ಇದನ್ನು ಆಡಲೇಬೇಕು ಅಂತಾನೂ ಇಲ್ಲ. ಹಣ ಸಂಪಾದನೆ ಮಾಡಬೇಕು, ನಾವು ಇತರರಂತೆ ಬದುಕಬೇಕು ಅನ್ನುವ ಛಲ ಅಷ್ಟೆ. ಹಣವಿದ್ರೆ ಮಾತ್ರ ತಾನೆ ಗೌರವ!' ಎಂದು ಮರುಪ್ರಶ್ನಿಸುತ್ತಾರೆ.

ಸಂಪಾದನೆ ಮಾಡಿದ ಹಣದಿಂದ ಇತರರಿಗೆ ನೆರವು ನೀಡಿದ್ದನ್ನೂ ಸಹ ಇವರು ಸ್ಮರಿಸುತ್ತಾರೆ. ಸಮೀಪದ ರಾಮನಾಥಪುರ ಜಾತ್ರೆಯಲ್ಲಿ ಗುಂಪಾಗಿ ಇವರು ಇಸ್ಪೀಟು ಆಡುವಾಗ, ಯಾರೋ 'ಜೂಜಾಡುತ್ತಾರೆ' ಎಂದು ಪೊಲೀಸರಿಗೆ ತಿಳಿಸಿ, ಅವರು ಬಂದು ಹಿಡಿದಿದ್ದನ್ನು, ತಪ್ಪಿಸಿಕೊಳ್ಳಲು ಕತ್ತಲಲ್ಲಿ ಚೆಲ್ಲಾಪಿಲ್ಲಿಯಾಗಿ ಓಡಿದ್ದನ್ನು ಬಹಳ ರೋಚಕವಾಗಿ ವರ್ಣಿಸುತ್ತಾರೆ. ಸಂಕೇತಿಗಳ ಕೃಷಿ ಬದುಕಿನ ಒಂದು ವರ್ಣಮಯ ಮಗ್ಗುಲನ್ನು ಪರಿಚಯಿಸುವ ದೃಷ್ಟಿಯಿಂದ ಈ ವಿಚಾರಗಳನ್ನು ಹೆಣೆಯಲಾಗಿದೆ ಅಷ್ಟೆ. ಇತರರು ಓದಿ ಅನುಸರಿಸಲಿ ಎಂದಲ್ಲ!

4. ಗೆಜ್ಜಗನಹಳ್ಳಿ



ಚನ್ನಪ್ಪಯ್ಯನವರ ಮೊರೆಗೆ ಓಗೊಟ್ಟ ಮಹಾಮಹಿಮ ಬಸವಣ್ಣನ ದೇವಸ್ಥಾನ: ಗೆಜ್ಜಗನಹಳ್ಳಿ

ಹಳ್ಳಿಮೈಸೂರಿನಿಂದ ಅರಕಲಗೂಡು ರಸ್ತೆಯಲ್ಲಿ ಐದು ಕಿಲೋಮೀಟರ್ ಕ್ರಮಿಸಿ ಅಲ್ಲಿ ಸಿಗುವ ಗುಡ್ಡೇನಹಳ್ಳಿಯಿಂದ ಎಡಕ್ಕೆ ತಿರುಗಿ ಮಣ್ಣಿನ ರಸ್ತೆಯಲ್ಲಿ ಸಾಗಿದ್ರೆ ಸಿಗುತ್ತೆ, ಗೆಜ್ಜಗನಹಳ್ಳಿ. ಆದ್ರೆ ನಾವು ಈ ಊರಿಗೆ ಹೋಗಿದ್ದು ಸೋಮನಹಳ್ಳಿಯಿಂದ ಒಳ ರಸ್ತೆಯಲ್ಲಿ. ಹಲವು ಜಮೀನನ್ನು ಹಾದು ಏರಿಳಿತದ ಹಾದಿಯನ್ನು ಸವೆಸುವಷ್ಟರಲ್ಲಿ ಸಾಕಪ್ಪಾ ಗೆಜ್ಜಗನಹಳ್ಳಿಯ ಸಹವಾಸ ಅನ್ನಿಸಿತ್ತು. ಈ ಊರಿಗೆ ಬರಲು ಹಳ್ಳಿಮೈಸೂರಿನ ರಸ್ತೆಯೇ ಮೇಲು ಅನ್ನಿಸಿದ್ದು ನಾವು ವಾಪಸ್ಸು ಸಂಜೆ ಹಳ್ಳಿಮೈಸೂರಿನಿಂದ ಹಾದು ಸಾಲಿಗ್ರಾಮಕ್ಕೆ ಹೋದಾಗ. ಗೆಜ್ಜಗನಹಳ್ಳಿಯಲ್ಲಿ ಸಂಕೇತಿಗಳ ಮೂರು ಕುಟುಂಬಗಳಿವೆ. ಇಬ್ಬರನ್ನು ನಾವು ಮಾತನಾಡಿಸಿದ್ದೇವೆ. ಉಳಿದದ್ದು ಜಿ.ಎಸ್.ಸುಬ್ಬರಾಯ ಹಾಗೂ ಕಾತ್ಯಾಯನಿ ಅವರ ಕುಟುಂಬ. ಅವರು ಊರಿನಲ್ಲಿ ಇರಲಿಲ್ಲ. ಹಿಂದಿನ ತಲೆಮಾರಿನ ಜನ ಕ್ಷಾತ್ರ ತೇಜದವರು ಅನ್ನಿಸುತ್ತೆ. ಮನೆಗೊಂದು ಯುದ್ಧದ ಕತ್ತಿಯೂ ಇದೆ. ಸುತ್ತಮುತ್ತಲಿನ ಕಾಡುಕಾಕರ ಜತೆ ಸೇರಿ ಬದುಕುವಾಗ ಈ ತರಹದ ಧೈರ್ಯ ಅನಿವಾರ್ಯವಾಗಿತ್ತು ಅನ್ನುವುದು ಇಲ್ಲಿಯ ಜನರ ಅಂಬೋಣ. ಮೈಸೂರು ಮಹಾರಾಜರ ಎದುರೇ ಮಲ್ಲರನ್ನು ಮಣ್ಣು ಮುಕ್ಕಿಸಿ ಅವರಿಂದ ಭಕ್ಷೀಸು ಸ್ವೀಕರಿಸಿದ ಹಿರಿಯ ಸಂಕೇತಿ ಈ ಊರಿನವರು. ಊರಮಧ್ಯದಲ್ಲಿ ಬಸವಣ್ಣನ ದೇವಾಲಯವಿದೆ. ಊರಿಗೂ, ಸಂಕೇತಿಗಳ ಬದುಕಿಗೂ, ಬಸವಣ್ಣನಿಗೂ ಅವಿನಾಭಾವ ಸಂಬಂಧವಿದೆ. ಹಿಂದೆ 'ಸತ್ಯ'ವಾದ ಕಾಲ ಇದ್ದಾಗ, ಕಲ್ಲು ಬಸವನಿಗೆ ಹುಲ್ಲು ತಿನ್ನಿಸ್ತಾ ಇದ್ರು ನಮ್ಮ ತಾತನವರು ಅಂತಾರೆ ಜಿ.ಕೆ. ರಂಗನಾಥಯ್ಯನವರು. ಈ ಬಸವನ ಬಗ್ಗೆ ಅವರು ಹೇಳಿದ ಘಟನೆಯೂ ಸ್ವಾರಸ್ಯಕರವಾಗಿದೆ. 'ಒಂದು ಸಾರಿ ಗೆಜ್ಜಗನಹಳ್ಳಿಯ ಜನ ಸಮೀಪದ ಬಡಕ್ಯಾತನಹಳ್ಳಿಯಲ್ಲಿ ಕಳ್ಳತನ ಮಾಡಿದ್ರಂತೆ. ಅದೂ ಏನು ಅಂತೀರಾ, ಎರಡರಿಂದ ಮೂರು ಸಾವಿರದಷ್ಟು ಬೂದುಬಾಳೆ, ಮರಬಾಳೆ, ರಾಜಬಾಳೆ ಗೊನೆಗಳು. ಆ ಜನ ಗುಮಾನಿಯ ಮೇಲೆ ಈ ಊರಿಗೆ ಬಂದ್ರು. ಪಂಚಾಯ್ತಿ ಏರ್ಪಡಿಸಿದ್ರಂತೆ. ಆಗ ರಂಗನಾಥಯ್ಯನವರ ತಾತ ಚನ್ನಪ್ಪಯ್ಯನ್ನವರನ್ನೂ ಕರೆಸಿದ್ರಂತೆ. ಅವರಿಗೆ ವಿಷಯವೆಲ್ಲಾ ಅರ್ಥವಾಯ್ತು. ಬಾಳೆಗೊನೆಯನ್ನೆಲ್ಲಾ ಹಗೇವಿಗೆ ತುಂಬಿಸಿ, ಬಡಕ್ಯಾತನಹಳ್ಳಿಯ ಜನರಿಗೆ ಹೇಳಿದ್ರಂತೆ "ಎಂಟು ಹತ್ತು ದಿನ ಕಳೆದ ಬಳಿಕ ನೀವು ಬಂದು ನಿಮ್ಮ ನಿಮ್ಮ ಗೊನೆಯನ್ನು ತೆಗೆದುಕೊಂಡು ಹೋಗಿ" ಅಂತ. ಪಂಚಾಯತಿ ತೀರ್ಮಾನವೂ ಆಯ್ತು. ಊರ ಮರ್ಯಾದೆಯ ಪ್ರಶ್ನೆ. ಮಾರನೇ ದಿನ ಚನ್ನಪ್ಪಯ್ಯನವರು ಊರ ಪಕ್ಕದ ಕೊಳದಲ್ಲಿ ಸ್ನಾನ ಮಾಡಿ, ಸಂಕಲ್ಪ ಮಾಡಿ ಬಸವಣ್ಣನನ್ನು ಪ್ರಾರ್ಥಿಸಿದರಂತೆ, "ನೀನು ಸತ್ಯವಾದ ಬಸವಣ್ಣನೇ ಆದ್ರೆ, ಈ ಗೊನೆಗಳೆಲ್ಲಾ ರಸಬಾಳೆ ಆಗಲಿ. ಹಾಗಾದ್ರೆ ನಿನಗೆ ಮೂರು ಎಕರೆ ಜಮೀನು ಬಿಡ್ತೀನಿ" ಅಂತ ಹೇಳಿ ನೀರನ್ನು ಕೊಡದಲ್ಲಿ ತಂದು ಹಗೇವಿಗೆ ಹಾಗೂ ದೇವಸ್ಥಾನದ ಸುತ್ತಾ ಚೆಲ್ಲಿದರಂತೆ. ಹತ್ತು ದಿನ ಕಳೆದ ಮೇಲೆ ಮತ್ತೆ ಪಂಚಾಯ್ತಿ ಸೇರಿದಾಗ ಚನ್ನಪ್ಪಯ್ಯನವರು ಬಡಕ್ಯಾತನಹಳ್ಳಿಯ ಜನರಿಗೆ "ಹಗೇವನ್ನು ತೆರೆದು ನಿಮ್ಮ ಗೊನೆಗಳನ್ನು ಆರಿಸಿಕೊಳ್ಳಿ" ಅಂದರಂತೆ. ಅದರಂತೆ ಅವರು ಹಗೇವನ್ನು ತೆರೆದಾಗ ಅವರಿಗೆ ಸಿಕ್ಕಿದ್ದೇನು . . . ಬರೀ ರಸಬಾಳೆಯ ಗೊನೆಗಳು ಅಷ್ಟೆ. "ನಮ್ಮದು ಮಹಾಪರಾಧವಾಯಿತು" ಅಂತ ಅವರೆಲ್ಲಾ ನಮಸ್ಕರಿಸಿ ಹೊರಟುಹೋದರಂತೆ. ಮಾತಿನಂತೆ ನಮ್ಮ ತಾತ ಮೂರು ಎಕರೆ ಜಮೀನನ್ನು ಬಸವಣ್ಣನಿಗೆ ಬಿಟ್ಟಿದ್ದಾರೆ' ಅಂತಾರೆ ರಂಗನಾಥಯ್ಯನವರು. ಸೋಮವಾರ ಬಸವನ ವಾರ ಆದ್ದರಿಂದ ಇಲ್ಲಿಯ ಜನ ಅಂದು ಬೇಸಾಯ ಹೂಡೋದಿಲ್ಲ. ಯುಗಾದಿ ಕಳೆದ ಒಂದು ವಾರಕ್ಕೆ ಓಕಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಎರಡು ತಲೆಮಾರಿನ ಹಿಂದೆ ಇದ್ದ ಕ್ಷಾತ್ರತೇಜಸ್ಸು, ದೃಢವಾದ ಮೈಕಟ್ಟು, ಗಡುಸಾದ ವ್ಯಕ್ತಿತ್ವ ಈಗಿನ ಯುವಪೀಳಿಗೆಯಲ್ಲಿ ಸ್ವಲ್ಪ ಕಾಣಬಹುದು ಅಷ್ಟೆ. ಎರಡು ತಲೆಮಾರಿನಲ್ಲಿ ಇಷ್ಟು ಬದಲಾವಣೆ ಆದದ್ದು ಹೇಗೆ ಎಂಬ ಸಂದೇಹ ಮನಸ್ಸನ್ನು ಕೊರೆಯುತ್ತದೆ. ಅಂದು ಅದರ ಅಗತ್ಯವಿತ್ತು. ಇಂದಿಗೆ ಅದು ಬೇಡದಿರುವುದರಿಂದ ಈ ಬದಲಾವಣೆಯೇ

ಅಥವಾ ಅಂದಿನ ಆಹಾರ, ವಿಹಾರ, ಶ್ರಮದ ದುಡಿತ ಇಲ್ಲದಿರುವುದು ಈ ಬದಲಾವಣೆಗೆ ಕಾರಣವೇ . . . ಇದೂ ನಂತರದ ಸಂಶೋಧನೆಗೆ ವಸ್ತುವಾಗಬಹುದಲ್ಲವೇ ಎನ್ನಿಸುತ್ತದೆ. ಗೆಜ್ಜಗನಹಳ್ಳಿಯ ಸಂಕೇತಿಗಳ ಕೃಷಿ ಬದುಕು ವೈಯಕ್ತಿಕ ಸಂದರ್ಶನದಲ್ಲಿ ಅನಾವರಣಗೊಳ್ಳುತ್ತಾ ಸಾಗಿದಂತೆ, ವಿಷಯವೂ ಸರಳವಾಗಬಹುದೆಂಬ ಅನಿಸಿಕೆ ಮನದಲ್ಲಿ ಮೂಡಿದ್ದು ಸುಳ್ಳಲ್ಲ.

ಅ) ಜಿ.ಆರ್. ನಾಗರಾಜ್ ಇ/ಮ ಜಿ.ಕೆ. ರಾಮನಾಥಯ್ಯ

ಗೆಜ್ಜಗನಹಳ್ಳಿ, ಹೊಳೆನರಸೀಪುರ (ತಾ), ಹಾಸನ ಜಿಲ್ಲೆ, ದೂರವಾಣಿ : 08175 569161

ಮನುಷ್ಯನಾಗಿ ಮುಂದುವರೆಯಲು ಒಂದು ಮಾರ್ಗ ಸಾಕು. ಮಾರ್ಗಗಳನ್ನು ಬದಲಿಸ್ತಾ ಹೋದ್ರೆ ಯಾವುದರಲ್ಲೂ ಮುಂದುವರೆಯಲು ಆಗೋದಿಲ್ಲ. ವ್ಯವಸಾಯದ ಮಾರ್ಗದಲ್ಲಿ ಸಾಕಷ್ಟು ಆದಾಯ ಬಂದಿದ್ರಿಂದ ಅದರಲ್ಲೇ ಮುಂದುವರೆದಿದ್ದೇವೆ. ಈಗ ದೇವರು ಸಾಕಷ್ಟು ನೀಡಿದ್ದಾನೆ.



ಮುದ್ದಿನ ಮಗಳನ್ನೆತ್ತಿಕೊಂಡು ತಮ್ಮ ಕಬ್ಬಿನಗದ್ದೆಯ ಪಕ್ಕದಲ್ಲಿ ನಿಂತ ಜಿ.ಆರ್.ನಾಗರಾಜ್: ಗೆಜ್ಜಗನಹಳ್ಳಿ

ಗೆಜ್ಜಗನಹಳ್ಳಿಯ ಜಿ.ಕೆ. ರಾಮನಾಥಯ್ಯ ಹಾಗೂ ಚಿಲ್ಕುಂದದ ಸಿ.ಎಸ್.ಸಾವಿತ್ರಮ್ಮನವರ ಎರಡನೇ ಮಗ ಜಿ.ಆರ್.ನಾಗರಾಜು. ರಾಮನಾಥಯ್ಯನವರಿಗೆ ಮೂವರು ಗಂಡು ಹಾಗೂ ಐವರು ಹೆಣ್ಣುಮಕ್ಕಳು. ತಮ್ಮ ನಲವತ್ತೈದನೇ ವಯಸ್ಸಿನಲ್ಲಿ ರಾಮನಾಥಯ್ಯನವರು ತೀರಿಕೊಂಡಾಗ ಸಾವಿತ್ರಮ್ಮನವರಿಗೆ ಮೂವತ್ತೈದು ವರುಷ ಮಾತ್ರ. ರಾಮನಾಥಯ್ಯನವರು ಬಹಳ ಕ್ಷಾತ್ರತೇಜದವರಂತೆ. 'ಸುತ್ತಮುತ್ತಲಿನವರೊಂದಿಗೆ ಬದುಕಬೇಕಾದಾಗ ಈ ತರಹದ ಧೈರ್ಯ ಅಗತ್ಯವಿತ್ತು' ಎಂದು ಸಾವಿತ್ರಮ್ಮನವರು ಹೇಳುತ್ತಾರೆ. ಇವರ ಮನೆಯಲ್ಲಿ ಯುದ್ಧದ ಕತ್ತಿ ಪೂರ್ವಕಾಲದಿಂದಲೂ ಇತ್ತಂತೆ. ಒಮ್ಮೆ ಹೊಲದಲ್ಲಿ ರಾಗಿ ಒಟ್ಟಲು ಹಾಕಿದ್ರಂತೆ. ಈ ಊರಿನ ರೈತನೊಬ್ಬನ ಮದುವೆಗೇಂತ ಕುಪ್ಪಳ್ಳಿಯಿಂದ ೧೦ ರಿಂದ ೧೨ ಎತ್ತಿನ ಗಾಡಿಗಳು ಬಂದವಂತೆ. 'ನಮ್ಮ ಹೊಲದಲ್ಲಿ ಗಾಡಿ ಹೊಡೀಬೇಡ' ಎಂದಾಗ ಕೇಳದ ಅವರು ಗಾಡಿ ಓಡಿಸಿದ್ದರಿಂದ ಸಿಟ್ಟಿಗೆದ್ದ ರೈತನೊಬ್ಬ ಕಲ್ಲನ್ನು ಹಿಡಿದು ಅವರಿಗೆ ಹೊಡೆದಿದ್ದಾನೆ. ದೊಡ್ಡ ಗಲಾಟೆ ಆರಂಭವಾಗಿದೆ. ಕೂಡಲೇ ರಾಮನಾಥಯ್ಯ ಊರಿನ ಮಾನ ಉಳಿಸಲು, ಮನೆಯೊಳಗೆ ಹೋಗಿ ಯುದ್ಧದ ಕತ್ತಿ ಹಿಡಿದು ಬಂದು ಹೊರಗೆ ಝಳಪಿಸಿದರಂತೆ. 'ಸುತ್ತಮುತ್ತಲಿನವರು ಆಗ ಸಮಾಧಾನಪಡಿಸಿ ವಾಪಸ್ಸು ತರದಿದ್ರೆ ಅನಾಹುತ ಆಗಿರುತ್ತಿತ್ತು' ಎಂದು ಸಾವಿತ್ರಮ್ಮನವರು ತಮ್ಮ ನೆನಪಿನಂಗಳದಿಂದ ಮೆಲುಕು ಹಾಕುತ್ತಾರೆ. ಈಗ ಇವರ ಸೋದರಮಾವ ಹಾಸನದ ಕೆ.ಎನ್.ಗುಂಡೂರಾವ್ ಅವರ ಮನೆಯಲ್ಲಿ ಇನ್ನೊಂದು ಕತ್ತಿ ಇದೆಯಂತೆ.

ಹಿರಿಯರು ಕಟ್ಟಿದ ಹಿರಿದಾದ ಮನೆಯಲ್ಲಿ ನಾಗರಾಜ್ ಅವರೊಂದಿಗೆ ಮಾತಿಗಿಳಿದಾಗ ಮಧ್ಯಾಹ್ನ ದಾಟಿತ್ತು. ನಾಗರಾಜ್ ಅವರು ಕೆ.ಆರ್. ಪೇಟೆ ತಾಲ್ಲೂಕು ಸೀಳನೆರೆಯಲ್ಲಿ ಪ್ರಾಥಮಿಕ ಶಿಕ್ಷಣ ಮಾಡುತ್ತಿರುವಾಗಲೇ ತಂದೆ ತೀರಿಹೋದದ್ದು. ಆಗ ಇವರಿಗೆ ೧೧ ವರುಷ. ನಂತರ ಹಳ್ಳಿಮೈಸೂರಿನಲ್ಲಿ SSLCವರೆಗೆ ಮುಂದುವರಿಸಿದ್ರೂ ಪೂರ್ಣಗೊಳಿಸಲು ಆಗಲಿಲ್ಲ. ಮಳೆ ಬೆಳೆ ಆದರೆ ಜೀವನ ಎನ್ನುವ ಸ್ಥಿತಿ ಹಳ್ಳಿಯಲ್ಲಿ. ಗೊರೂರು ಒದೆವಿನ ನಾಲೆ ಬಂದು ಹಳ್ಳಿಯ ಕೆರೆಯಲ್ಲಿ ನೀರು ನಿಂತ ಮೇಲೆ ವ್ಯವಸಾಯ ಸುಗಮವಾಗಿದೆ. ಇವರ ಎರಡು pumpset ಸೇರಿ ೨೫೦೦ ಗ್ಯಾಲನ್ ನೀರು ಸಿಕ್ಕಿದೆ. ನಾಲ್ಕೂವರೆ ಎಕರೆಗೆ ನೀರು ಸಾಕಾಗುತ್ತಿದೆ. ಎರಡು ಎಕರೆ ತೋಟ, ಮೂರು ಎಕರೆ ತರಿ ಜಮೀನು ಸಹ ಈ ಕುಟುಂಬಕ್ಕೆ ಆಧಾರವಾಗಿದೆ. ಕಬ್ಬು, ಮುಸುಕಿನಜೋಳ, ತಡಗುಣಿ, ಮೆಣಸಿನಕಾಯಿ, ವಿಳ್ಳೇದೆಲೆ, ಅಡಿಕೆ - ಹೀಗೆ ಹತ್ತು ಹಲವು ಬೆಳೆಗಳನ್ನು ಇವರು ಬೆಳೆಯುತ್ತಾರೆ. ಅಣ್ಣ ವೆಂಕಟೇಶಮೂರ್ತಿ ಹಾಗೂ ತಮ್ಮ ಕೃಷ್ಣಮೂರ್ತಿ ಇವರೊಂದಿಗೆ ಒಟ್ಟಾಗಿರುವ



ತಮ್ಮ ತಾಯಿ ಸಿ.ಎಸ್.ಸಾವಿತ್ರಮ್ಮ ಅವರೊಂದಿಗೆ ಜಿ.ಆರ್.ನಾಗರಾಜ್ ಅವರ ಕುಟುಂಬ: ಗೆಜ್ಜಗನಹಳ್ಳಿ

ನಾಗರಾಜ್, 'ಒಟ್ಟು ಕುಟುಂಬ ಕೃಷಿಗೆ ಸಹಕಾರಿ' ಅನ್ನುತ್ತಾರೆ.

'ವ್ಯವಸಾಯದಲ್ಲಿ ಬಹಳ ಕಷ್ಟಪಟ್ಟು ಮುಂದೆ ಬಂದ್ವಿ. ನಮಗೆ ಇದೇ ರೀತಿ ಮಾಡಬೇಕು ಅಂತ ಹೇಳೋರು ಯಾರೂ ಇರಲಿಲ್ಲ. ಅಕ್ಕಪಕ್ಕದವರನ್ನು ನೋಡಿ, ನಾವು ಇದನ್ನು ಬೆಳೆದ್ರೆ ಅಭಿವೃದ್ಧಿ ಹೊಂದಬಹುದು ಅಂತ ಹೇಳಿ ವಿಧವಿಧವಾಗಿ ಬೆಳೆ ಬೆಳೆದ್ವಿ. ಬೋರ್‌ವೆಲ್ ಬರುವುದಕ್ಕಿಂತ ಮುಂಚೆ ಬರ ಇತ್ತು. ನೀರಾವರಿ ಆದ ಮೇಲೆ ಹಿಂದೆ ನಮ್ಮ ತಂದೆ ಬೆಳೀತಾ ಇದ್ದಂತೆ ಕಬ್ಬನ್ನು ಬೆಳೀತಾ ಇದ್ದೇವೆ. ಕೆ.ಆರ್.ಪೇಟೆ (ತಾ) ಬ್ಯಾಲದಕೆರೆಯಿಂದ ಬಾವುಟತಳಿ (ನಂ ೪೪೬) ತಂದು ನಾಟಿ ಮಾಡಿದ್ದೇವೆ. ಕಬ್ಬು ಬೆಳೆದು ಶ್ರೀನಿವಾಸಪುರ, ಅಥವಾ ಚುಂಚನಕಟ್ಟೆಯಲ್ಲಿ ಇರುವ ಸಕ್ಕರೆ ಕಾರ್ಖಾನೆಗೆ ಸಾಗಿಸುವ ಆಲೋಚನೆ ಇದೆ. ಹೈಬ್ರಿಡ್ ಮುಸುಕಿನ ಜೋಳವನ್ನು ಒಂದು ಎಕರೆ ಮುವತ್ತಾರು ಗುಂಟೆಯಲ್ಲಿ ಬೆಳೆದೆ. ೩೨ ಕ್ವಿಂಟಾಲ್ ಇಳುವರಿ ಬಂತು. ಆಳಿನ ಆಶ್ರಯ ಇಲ್ಲ. ಖರ್ಚು ಬರೀ ೩೦೦೦ ಆಯ್ತು. ಖರ್ಚು ಕಳೆದು ಆದಾಯ ೧೧ ಸಾವಿರ ರೂಪಾಯಿ ಸಿಕ್ಕಿದೆ. ಎಲ್ಲವೂ ಮನೆಯವರೇ ಮಾಡಬಹುದಾದ ಕೆಲಸ. ಆದ್ದರಿಂದ ಮುಸುಕಿನ ಜೋಳ ಬಹಳ ಸುಲಭದ ಬೆಳೆ' ಎಂದು ನಾಗರಾಜ್ ನುಡಿಯುತ್ತಾರೆ.

ನೀರು ಸಿಕ್ಕಿದ್ರೆ ಎರಡು ಬೆಳೆ ಭತ್ತ ಹಾಗೂ ಮೆಣಸಿನಕಾಯಿ ಇವರು ಬೆಳೀತಾರೆ. ಮನೆ ಮಟ್ಟಿಗೆ ಎರಡರಿಂದ ಮೂರು ಚೀಲ ರಾಗಿ ಮಾತ್ರ ಬೆಳೀತಾರೆ. ಯಾಕೇಂದ್ರೆ, ರಾಗಿಯಲ್ಲಿ ಆದಾಯಕ್ಕಿಂತ ಖರ್ಚು ಜಾಸ್ತಿ ಎನ್ನುವುದು ಇವರ ಅಭಿಪ್ರಾಯ. ವ್ಯವಸಾಯದಿಂದ ಐದು ಲಕ್ಷದವರೆಗೆ ಇವರ ಕುಟುಂಬ ವಾರ್ಷಿಕವಾಗಿ ಗಳಿಸುತ್ತಿದೆ.

'ನಮ್ಮ ಮನೇಲಿ ಒಂದು ಜತೆ ಎತ್ತು, ನಾಲ್ಕು ಎಮ್ಮೆ ಹಾಗೂ ಒಂದು ಹಸು ಇದೆ. ಹಾಲನ್ನು ನಾವು ಮಾರೋದಿಲ್ಲ. ಮನೇಲೇ ಹನ್ನೆರಡು ಜನ ಇದೀವಿ. ನಮಗೂ ಆಗುತ್ತೆ. ಎತ್ತಿನಿಂದಲೇ ಉಳುಮೆ ಕೆಲಸ ಮಾಡ್ತೀವಿ. ನನ್ನ ತಾಯಿ ಹಾಗೂ ಮನೆಯಲ್ಲಿರುವ ಎಲ್ಲ ಹೆಂಗಸರೂ ವ್ಯವಸಾಯದ ಕೆಲಸದಲ್ಲಿ ನೆರವು ನೀಡುತ್ತಾರೆ. ಒಟ್ಟು ಕುಟುಂಬದಲ್ಲಿ ಹೆಂಗಸರ ಜವಾಬ್ದಾರಿ ಜಾಸ್ತಿ. ನಮ್ಮ ಸಂಕೇತಿಗಳ ಕುಟುಂಬ ಇಲ್ಲಿ ಬಹಳ ಕಡಿಮೆ ಇರುವುದರಿಂದ ನಮ್ಮ ತಾಯಿ 'ಯಾರೊಂದಿಗೂ ಜಗಳಕ್ಕೆ ಹೋಗಬೇಡಿ, ತಕರಾರು ಮಾಡಬೇಡಿ' ಅಂತ ಹೇಳ್ತಾನೇ ಇರ್ತಾರೆ. ಇತರರೊಂದಿಗೆ ಹೊಂದಿಕೊಂಡು ಬಾಳುತ್ತಾ ಇದ್ದೀವಿ. ನಮ್ಮ ಮಕ್ಕಳನ್ನು ಓದಿಸಬೇಕೆಂಬ ಆಸೆ ಇದೆ. ದೇವರ ಇಚ್ಛೆ ಏನಿದೆಯೋ ನೋಡಬೇಕು. ನಮ್ಮ ಮನೆಯಲ್ಲಿ ಸಹಮತ ಇದೆ. ಪರಸ್ಪರ ಸಲಹೆ ಕೇಳಿ ಕೆಲಸ ಮಾಡುತ್ತೇವೆ. ನಮ್ಮ ವಿಶೇಷ ಎಂದ್ರೆ ನಾವು ಯಾರೂ ವರದಕ್ಷಿಣೆ ಸ್ವೀಕರಿಸಿ ಮದುವೆ ಆಗಿಲ್ಲ, ನಮ್ಮ ಹೆಣ್ಣುಮಕ್ಕಳಿಗೂ ವರದಕ್ಷಿಣೆ ನೀಡಿಲ್ಲ. ಪ್ರತಿಯೊಬ್ಬರೂ ಶ್ರಮವಹಿಸಿ ದುಡಿಯುತ್ತೇವೆ. ನಾವು ಶ್ರಮಪಡದೆ ವ್ಯವಸಾಯದಲ್ಲಿ ಆದಾಯ ನಿರೀಕ್ಷಿಸಿದ್ರೆ ಆಗೋಲ್ಲ. ವ್ಯವಸಾಯದಲ್ಲಿ ಶ್ರಮಪಟ್ಟಷ್ಟೂ ಆದಾಯ ಇದೆ. ಅತ್ಯುತ್ತಮ ಫಲ ಇದೆ. ನಮಗಿಂತ ಕೆಳಗಿನವರನ್ನು ನೋಡಿ, ಅವರಿಗಿಂತ ಉತ್ತಮ ಬದುಕನ್ನು ಸಾಗಿಸ್ತಿದ್ದೀವಲ್ಲ ಎಂದು, ನಿರಾಳವಾಗಿರ್ತೀವಿ. ಒಟ್ಟಿನಲ್ಲಿ ವ್ಯವಸಾಯ ಬದುಕಿಗೆ ಭದ್ರತೆ ನೀಡಿದೆ, ಬಾಳಿನಲ್ಲಿ ನೆಮ್ಮದಿ ಇದೆ' ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟರು ನಾಗರಾಜ್. ಅವರ ಮನೆಯ ಹಿಂದಿನ ಕೈತೋಟ, ಕೊಟ್ಟಿಗೆ, ಕರುಗಳ ಆಟ, ಮಕ್ಕಳ ಚಿನ್ನಾಟ ಎಲ್ಲವನ್ನೂ ನೋಡಿ ಹಸಿದ ಹೊಟ್ಟೆಯನ್ನು ತುಂಬಿಸಿ ಮುಂದಿನ ಮನೆಗೆ ಹೊರಟಾಗ ಸಂಜೆಯ ಸಮಯ.

ಆ) ಜಿ.ಕೆ. ರಂಗನಾಥಯ್ಯ ಬಿ/ಮ ಜಿ. ಕೃಷ್ಣಪ್ಪ

ಗೆಜ್ಜಗನಹಳ್ಳಿ, ಹೊಳೆನರಸೀಪುರ (ತಾ) ಹಾಸನ ಜಿಲ್ಲೆ, ದೂರವಾಣಿ : 08175 569154

ನಾನಾಗ ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ನಮ್ಮ ಮಾಸ್ಟ್ರು ಶಾಲೆಯಲ್ಲಿ ನನ್ನನ್ನು ಬಗ್ಗಿಸಿ ನಿಲ್ಲಿಸಿ ಮೇಲೆ ಇಬ್ಬರು ಹುಡುಗರನ್ನು ಕೂರಿಸಿದ್ರು. ನನಗೆ ಬಹಳ ನೋವಾಯ್ತು. ಶಾಲೆ ಬಿಟ್ಟ ಬಳಿಕ ಮೇಸ್ಟ್ರು ಹೊರಗೆ ಬರುವುದನ್ನೇ ಕಾದಿದ್ದು ಅವರಿಗೆ ಕಲ್ಲಿನಿಂದ ಹೊಡೆದೆ. ಬಳಿಕ ಹೆದರಿಕೆಯಿಂದ ಶಾಲೆಗೇ ಹೋಗಲಿಲ್ಲ. ಮಾಸ್ತರಿಗೆ ಕಲ್ಲಲ್ಲಿ ಹೊಡೆದದ್ದು ನನ್ನ ವಿದ್ಯಾಭ್ಯಾಸಕ್ಕೆ ಕಲ್ಲು ಬೀಳುವಂತಾಯ್ತು ಅಷ್ಟೆ!



ಮಹಾರಾಜರು ಬಳುವಳಿಯಾಗಿ ನೀಡಿದ ಕತ್ತಿಯನ್ನು ಹಿಡಿದ ಜಿ.ಕೆ.ರಂಗನಾಥಯ್ಯ, ಗೆಜ್ಜಗನಹಳ್ಳಿ

ಗೆಜ್ಜಗನಹಳ್ಳಿಯ ಕೃಷ್ಣಪ್ಪ ಹಾಗೂ ಅಗ್ರಹಾರದ ಸುಬ್ಬಲಕ್ಷಮ್ಮ ಅವರಿಗೆ ಒಟ್ಟು ಐದು ಗಂಡುಮಕ್ಕಳು ಹಾಗೂ ಮೂರು ಹೆಣ್ಣುಮಕ್ಕಳು. ಅದರಲ್ಲಿ ನಾಲ್ಕನೆಯವರೇ ರಂಗನಾಥಯ್ಯ. ಈಗ ಇವರಿಗೆ ೭೩ ವರುಷ. ಇವರ ಪತ್ನಿ ಎಚ್.ವಿ. ಗೌರಮ್ಮನವರಿಗೆ ೬೫ ವರುಷ. ಇವರು ಪೂರಿಪಲ್ಯದವರು; ಹಿರೇಹಳ್ಳಿಕೊಪ್ಪಲು, ಪೂರಂಪಳ್ಳಿ ಅಥವಾ ಈಗಿನ ಪೂರಿಪಲ್ಯದ ವೆಂಕಟಸುಬ್ಬಯ್ಯ ಹಾಗೂ ರಾಜಮ್ಮನವರ ಮಗಳು. ತಮ್ಮ ಯಶಸ್ಸಿನ ಅರ್ಧಭಾಗವನ್ನು ರಂಗನಾಥಯ್ಯನವರು ಗೌರಮ್ಮನವರಿಗೆ ನೀಡುತ್ತಾರೆ. ತಮ್ಮ ಪೂರ್ವಿಕರ ಬಗ್ಗೆ ಕೇಳಿದಾಗ ನಿಧಾನವಾಗಿ ನುಡಿಯುತ್ತಾರೆ :

'ಹಿಂದೆ ಸುಭಿಕ್ಷದಕಾಲ. ಈಗಿನ ಹಾಗೆ ನಯಾಪೈಸೆ ಕಾಲ ಅಲ್ಲ. ಆಣೆ, ಕಾಸಿನ ಕಾಲ. ಹೆಚ್ಚಿನ ಧಾರಣೆ ಇಲ್ಲದ ಕಾಲ. ನಮ್ಮ ತಾತನನ್ನು ನಾನು ನೋಡಿಲ್ಲ. ನಮ್ಮ ತಂದೆ ಅವರ ಬಗ್ಗೆ ಹೇಳಿರುವುದನ್ನು ಕೇಳಿದ್ದೇನೆ. ಅವರು ಪ್ರತೀವಾರ ಮೈಸೂರಿಗೆ ಇಲ್ಲಿಂದ ಕಾಲು ನಡಿಗೆಯಲ್ಲಿ ಒಂದು ಸಾವಿರ ಬಾಳೆಹಣ್ಣನ್ನು ಹೊತ್ತುಕೊಂಡು ಹೋಗಿ ಮಾರಿಬರ್‍ತಿದ್ದರಂತೆ. ಮೈಸೂರು ಇಲ್ಲಿಂದ ಒಳದಾರಿಯಲ್ಲಿ ೪೦ ರಿಂದ ೬೦ ಕಿಲೋಮೀಟರ್ ದೂರ. ನಮ್ಮ ತಾತ ಚನ್ನಪ್ಪಯ್ಯನವರೇ ಮೈಸೂರಿನ ಪೈಲ್ವಾನರನ್ನು ಸೋಲಿಸಿದ್ದು. ಆಗ ಮೈಸೂರು ಮಹಾರಾಜರಿಂದ ಎರಡು ಹಿತ್ತಾಳೆ ಕತ್ತಿ ಬಳುವಳಿಯಾಗಿ ನಮ್ಮ ಕುಟುಂಬಕ್ಕೆ ಸಿಕ್ಕಿತ್ತು. ಕೋಣನೂರಿಗೆ ಹೋಗುವ ರಸ್ತೆಯಲ್ಲಿ ಕೋಣನೂರು ಎಂಬ ಗ್ರಾಮ ಸಹಾ ಜಹಗೀರಾಗಿ ಸಿಕ್ಕಿತ್ತು. ಅದನ್ನು ಆಗಲೇ ಮಾರಿದ್ರಂತೆ. ಆಗಿನ ಕಾಲದಲ್ಲಿ ರಾಗಿರೊಟ್ಟಿ, ರಾಗಿ ಮುದ್ದೇನ ತಿಂತಿದ್ದು ಜಾಸ್ತಿ. ನನ್ನ ತಂದೇನೂ ತಾತನಂತೆ ಗಟ್ಟಿಯಾಗಿದ್ರು. ನಮ್ಮ ತಾತ ಮೆಣಸಿನಕಾಯಿ ವ್ಯಾಪಾರ ಮಾಡೋಕೆ ಯಾರ ಬಳೀನೋ ೨೫ ರೂಪಾಯಿ ಸಾಲ ಮಾಡಿದ್ರಂತೆ, ನೂರು ವರುಷದ ಹಿಂದೆ. ಅದನ್ನು ತೀರಿಸಲಿಲ್ಲ. ಸಾಲ ಲಕ್ಷಾಂತರವಾಗಿ ಬೆಳೀತು. ಕೋರ್ಟಿಗೂ ಬಿತ್ತು. ನಮ್ಮ ಜಮೀನನ್ನು ಯಾರೂ ಅಪಹರಿಸದಂತೆ ನಾವು ಕಾಯಬೇಕಾಯ್ತು. ಆಗ ನಮ್ಮ ಕ್ಷಾತ್ರತೇಜ ನೆರವಿಗೆ ಬಂತು. ಎದುರಿನ ಪಾರ್ಟಿ ಸರ್ಕಾರಕ್ಕೆ ಜಮೀನು ವಹಿಸಿದ್ರು. ನಂತರ ನಾವು ಬಹಳ ಕಷ್ಟಪಟ್ಟು ಜಮೀನನ್ನು ನಮ್ಮದಾಗಿ ಮಾಡಿಕೊಂಡ್ವಿ. ಹಾಗಾಗಿ ನಾವು ತುಂಬಾ ಕಷ್ಟದಿಂದ ಬಾಳು ನೂಕಬೇಕಾಗಿ ಬಂತು. ತಂದೆ ಬಡತನದಲ್ಲೇ ನಮ್ಮನ್ನು ಸಾಕಿದ್ರು. ಊಟಕ್ಕೂ ಇರದೆ ಸೊಪ್ಪುಸದೆ ತಿಂದು ಬದುಕಿದ್ವಿ. ಹತ್ತು ಹನ್ನೆರಡು ಜನರ ಕುಟುಂಬ ನಮ್ಮದು. ನನ್ನ ಅಣ್ಣಂದಿರು ಓದಲು ಪಟ್ಟಣಕ್ಕೆ ಹೋದರು. ನನ್ನಣ್ಣ ಹಾಗೂ ನಾನು ಊರಲ್ಲಿ ವ್ಯವಸಾಯಕ್ಕೆ ಇಳಿದ್ವು. ವಿದ್ಯಾಭ್ಯಾಸಕ್ಕೆ ಹೋಗಲೇ ಇಲ್ಲ. ಓದು ಅಂತ ಕುಳಿತಿದ್ರೆ ೪೮ ಎಕರೆ ಜಮೀನು ಪರಭಾರೆಯಾಗಿರೋದು' ಎಂದು ಆಳದ ನೆನಹುಗಳನ್ನು ಹೆಕ್ಕುತ್ತಾರೆ.

ನಿಮ್ಮ ವ್ಯವಸಾಯ, ನಿಮ್ಮ ಬದುಕಿನ ಬಗ್ಗೆ ಹೇಳಿ ಅಂದಾಗ, 'ನಾನೂ ನನ್ನಣ್ಣ ಇಬ್ಬರಿಂದ ಒಬ್ಬೊಬ್ಬರಿಗೆ ೧೨ ಎಕರೆ ಜಮೀನು ಸಿಕ್ತು. ನಾನು ತೆಂಗು, ಬಾಳೆ, ಅಡಿಕೆ, ವಿಳ್ಳೇದೆಲೆ, ಭತ್ತ, ರಾಗಿ, ಕಬ್ಬು, ತಂಬಾಕು ಎಲ್ಲಾ ಬೆಳೆದೆ. ೧೯೭೦ನೇ ಇಸವೀಲಿ ಮೊದಲು ತಂಬಾಕು ಬ್ಯಾರನ್ ಇಟ್ಟೆ. ೧೧ ವರುಷ ನಿರಂತರವಾಗಿ ತಂಬಾಕು ಬೆಳೆದೆ. ಈಗಿನ ರೇಟ್ ಇರಲಿಲ್ಲ. ಮೈಮೇಲೆ ಸಾಲ ಬಂತು, ಬಿಟ್ಟುಬಿಟ್ಟೆ. ಈಗಿನ ಧಾರಣೆ ಆಗ ಸಿಕ್ಕಿದ್ರೆ ಖಂಡಿತಾ ತಂಬಾಕು ಬೇಸಾಯ ಬಿಡುತ್ತಿರಲಿಲ್ಲ. ನಂತರ ವಿಳ್ಳೇದೆಲೆ ನನ್ನ ಕೈಹಿಡೀತು. ಆ ಲಕ್ಷ್ಮಿಯಿಂದ ನಾನು



ತಮ್ಮ ಮುದ್ದು ಹಸುವಿನೊಂದಿಗೆ ತಮ್ಮ ತೋಟದಲ್ಲಿ ನಿಂತ ಎಚ್.ವಿ.ಗೌರಮ್ಮ: ಗೆಜ್ಜಗನಹಳ್ಳಿ

ಸಂಪಾದನೆ ಮಾಡಿದ್ದು ಜಾಸ್ತಿ. ಆರು ಕಾಸಿನಿಂದ ಆರಂಭವಾದ ವಿಳ್ಳೇದೆಲೆ ವ್ಯಾಪಾರದಲ್ಲಿ ಕಟ್ಟಿಗೆ ನಾಲ್ಕಾಣೆ ಸಿಗುವಂತಾದಾಗ ದುಡ್ಡು ನೋಡಲು ಆರಂಭಿಸಿದ್ವಿ. ನಂತರ ವ್ಯಾಪಾರ ಆರಂಭಿಸಿದೆ. ರಾಗಿ, ಭತ್ತ, ನೆಲಗಡಲೆ ಎಲ್ಲವನ್ನೂ ಸುತ್ತಮುತ್ತಲ ಪ್ರದೇಶದಿಂದ ಕೊಂಡು, ಮನೆಯಲ್ಲಿ ಒಟ್ಟು ಹಾಕಿ ನಂತರ ಮಾರುತ್ತಿದ್ದೆ. ಆದಾಯ ಬಂತು. ನಂತರ ಅಡಿಕೆ ಆದಾಯ ಶುರುವಾಯ್ತು. ಮೊದಲು ಅಡಿಕೆಯಲ್ಲಿ ಬಾಳೆ ಹಾಕಿದೆ. ಬಯಲಲ್ಲಿ ಬಾಳೆ ಚೆನ್ನಾಗಿ ಬರುತ್ತೆ. ನೆರಳಿದ್ರೆ ಗಿಡ ಬರುತ್ತೆ, ಇಳುವರಿ ಸಿಗೋಲ್ಲ. ಹಾಗಾಗಿ ಬಾಳೆ ಕೈಬಿಟ್ಟೆ. ಈಗ ಮನೇಲಿ ನಾಲ್ಕು ರಾಸು ಇದೆ. ಗೋಬರ್ ಗ್ಯಾಸ್ ಇದೆ. ಮನೆಗೆ ಬೇಕಾದ್ದು ಎಲ್ಲವೂ ಇದೆ. ಹಿಂದೆ ನಮ್ಮೂರಿನಿಂದ ಮೈನ್‌ರೋಡಿಗೆ ಹೋಗಬೇಕು ಅಂದ್ರೆ ಹತ್ತು ಮೈಲು ನಡೀಬೇಕಿತ್ತು. ಈಗ ಊರ ಪಕ್ಕದಲ್ಲೇ ಮುಖ್ಯ ರಸ್ತೆ ಇದೆ. ನಂಟರು ಇಷ್ಟರು ಮುಂಚೆ "ನಿಮ್ಮೂರಿಗೆ ಯಾರು ಬರ್ತಾರೆ-ಐಗಂಚಿಗೆ ಹೋದ ಹಾಗೆ ಆಗುತ್ತೆ" ಅಂತಿದ್ರು. ಈಗ ಎಲ್ಲವೂ ಸಲೀಸು. ವ್ಯವಸಾಯದಲ್ಲಿ ನನ್ನ ತತ್ತ್ವ ಇಷ್ಟೆ: ಇಲ್ಲಿ, ಕುಳಿತು ಸುಖವಾಗಿ ಉಣ್ಣಲು ಆಗೋಲ್ಲ. ಕಷ್ಟಪಡಬೇಕು. ಖರ್ಚು ಮಾಡಬೇಕು. ಆದಾಯ ನೋಡಲು ಹೋಗಬಾರದು. ಕೆಲವೊಮ್ಮೆ ಎಣ್ಣೆಬತ್ತೀಗೆ ನೇರ ಆಗುತ್ತೆ. ಅನುಭವಿಸಬೇಕು' ಅಂತಾರೆ ರಂಗನಾಥಯ್ಯ.

ರಂಗನಾಥಯ್ಯನವರ ಏಕಮಾತ್ರ ಪುತ್ರ ಜಿ.ಆರ್. ರಾಮಚಂದ್ರ B.Com. ಪದವೀಧರ. ಒಬ್ಬ ಮಗಳನ್ನು ಒಳ್ಳೆಯ ಕಡೆ ಸೇರಿಸಿದ್ದಾರೆ. ಸೊಸೆ H.S. ಶೈಲಶ್ರೀ B.A. ಪದವೀಧರೆ. 'ಸರಿಯಾದ ಕೆಲಸ ಸಿಗಲಿಲ್ಲ. ಅದಕ್ಕೇ ಅನಿವಾರ್ಯವಾಗಿ ವ್ಯವಸಾಯಕ್ಕೆ ಬಂದೆ' ಅಂತಾರೆ ರಾಮಚಂದ್ರ. ವ್ಯವಸಾಯದ ಮುಂದಿನ ಜವಾಬ್ದಾರಿ ಇವರ ಹೆಗಲ ಮೇಲಿದೆ. 'ವಿದ್ಯಾಭ್ಯಾಸಕ್ಕೆ ತೊಂದರೆ ಅನ್ನೋದು ಬಿಟ್ರೆ ನಮ್ಮ ಹಳ್ಳಿ ಜೀವನ ತೊಂದರೆ ಇಲ್ಲದ್ದು, ಹಳ್ಳಿ ಪಟ್ಟಣ ಇವೆರಡು ಜೀವನದಲ್ಲೂ ಅದರದ್ದೇ ಆದ ಅನುಕೂಲ ಹಾಗೂ ಅನನುಕೂಲ ಎರಡೂ ಇದೆ. ಆಯ್ಕೆ ನಮಗೆ ಬಿಟ್ಟಿದ್ದು' ಎಂದು ನಗುತ್ತಾರೆ. ಸಂಕೇತಿಗಳ ಯುವಪೀಳಿಗೆಯು ಮುಂದೆ ವ್ಯವಸಾಯ ಮುಂದುವರೆಸಲು ಹಿಂಜರಿಯುತ್ತಿರುವ ಈ ದಿನಗಳಲ್ಲಿ, ರಂಗನಾಥಯ್ಯನವರ ಕೃಷಿಕುಟುಂಬ ರಾಮಚಂದ್ರರ ರೂಪದಲ್ಲಿ ಭದ್ರವಾದ ನೆಲೆಕಂಡಿದೆ.

ಎಚ್.ವಿ.ಗೌರಮ್ಮ- ಜಿ.ಕೆ.ರಂಗನಾಥಯ್ಯ ದಂಪತಿ ತಮ್ಮ ಕುಟುಂಬದೊಂದಿಗೆ: ಗೆಜ್ಜಗನಹಳ್ಳಿ



5. ಸಾಲಿಗ್ರಾಮ



ಕಾವ್ಯವಾಚನದ ಬೆಳಕು : ಎಸ್.ಎಸ್.ಮಾರ್ಕಂಡೇಯ: ಸಾಲಿಗ್ರಾಮ

ಗೆಜ್ಜಗನಹಳ್ಳಿಯಿಂದ ಸಾಲಿಗ್ರಾಮಕ್ಕೆ ಹೊರಟಾಗ ಪಡುವಲಲ್ಲಿ ಕೆಂಪೇರಿತ್ತು. ಅಲ್ಲಿಂದ ಹಳ್ಳಿಮೈಸೂರಿಗೆ ಬಂದು ಮುಂದಿನ ದಾರಿ ಹಿಡಿದೆವು. 'ಸಾಲಿಗ್ರಾಮ' ಹಳ್ಳಿ ಮೈಸೂರಿನಿಂದ ಕೇವಲ ಹನ್ನೊಂದು ಕಿಮೀ. ದೂರ ಮಾತ್ರ. ಆದರೆ ರಸ್ತೆ ತೀರಾ ಕಳಪೆ. ಗುಂಡಿಗಳ ನಡುವೆ ನಮ್ಮ ದ್ವಿಚಕ್ರ ವಾಹನ ಸಾಲಿಗ್ರಾಮ ತಲುಪಿದ್ದು ರಾತ್ರಿ ಎಂಟಕ್ಕೆ. ಸಾಲಿಗ್ರಾಮದಲ್ಲಿ ಬ್ರಿಟಿಷರ ಕಾಲದಲ್ಲಿ ಅಂದ್ರೆ ೧೮೬೨ರಲ್ಲಿ ಕಟ್ಟಿದ ಪ್ರವಾಸಿ ಮಂದಿರ ಇದೆ. ಅಲ್ಲಿ ರಾತ್ರಿಯ ವಾಸ್ತವ್ಯಕ್ಕೆ ಹೊರಟಾಗ ಎದುರಾದವರು ಮೇಟಿ ಜವರನಾಯಕ. ೧೯೭೬ರಿಂದ ಇಲ್ಲಿದ್ದಾರಂತೆ. ಹಾಸನ ಆಕಾಶವಾಣಿ ಕೇಳುಗರು ಅವರು ಎಂದಾಗ ಸಂತಸವಾಯ್ತು. VIPರೂಮೂ ಸಿಕ್ತು. ಮುಂದೆ ಮಾರ್ಕಂಡೇಯನವರ ಮನೆಯತ್ತ ಪ್ರಯಾಣ. ಸಾಲಿಗ್ರಾಮ ಕತ್ತಲಲ್ಲಿ ಮುಳುಗಿತ್ತು. ಮಾರ್ಕಂಡೇಯನವರು ತಮ್ಮ ಕೋಣೆಯಲ್ಲಿ ಕುಳಿತು, ಕಂದೀಲ ಬೆಳಕಲ್ಲಿ ಕಾವ್ಯವಾಚನ ಮಾಡುತ್ತಿದ್ರು. ಮುಂದೆ ಕೇಳುವ ಜನರಿದ್ರು, ನಾವೂ ಸ್ವಲ್ಪ ಹೊತ್ತು ಕುಳಿತು ಕೇಳಿದ್ವಿ, ಅವರನ್ನು ಆ ಪ್ರಪಂಚದಿಂದ ನಮ್ಮೆಡೆಗೆ ಸೆಳೆಯಲು ಧೈರ್ಯ ಸಾಲಲಿಲ್ಲ! ಮುಂದಿನ ಮನೆಗೆ ಹೊರಟೆವು. ಸಾಲಿಗ್ರಾಮದಲ್ಲಿ ವ್ಯವಸಾಯದ ಪಳೆಯುಳಿಕೆ ಉಳಿದಿರುವುದು ಎರಡೇ ಕುಟುಂಬಗಳಲ್ಲಿ. ಈಗ ಅದು ಕುಟುಕುಜೀವದಲ್ಲಿದೆ. ಒಂದು ಕಾಲದಲ್ಲಿ ಸಂಕೇತಿಗಳ ಸ್ವರ್ಗ ಎನಿಸಿದ್ದ ಸಾಲಿಗ್ರಾಮ, ಸಂಕೇತಿಗಳು ಬಾಳಿ ಬದುಕಿದ್ದ ವಠಾರ, ಓಣಿಗಳು ಮೌನವಾಗಿ ರೋದಿಸುತ್ತಿವೆ. ವಿದ್ಯಾಭ್ಯಾಸ, ಉದ್ಯೋಗ ನೆಚ್ಚಿ ದೂರದೂರಿಗೆ ಹೊರ ಹೋದ ಕುಟುಂಬಗಳು ಸಾಲಿಗ್ರಾಮವನ್ನು ಒಂಟಿಯಾಗಿಸಿವೆ.


ಸಂಕೇತಿಗಳು ವಾಸ ಮಾಡಿದ್ದ ಬೀದಿಯಲ್ಲೇ ನಾರಾಯಣಸ್ವಾಮಿಗಳ ಮನೆ ಇರೋದು. ಅವರ ಹೆಂಡತಿ ಬೆಂಗಳೂರಿನಲ್ಲಿದ್ದಾರೆ. ಮನೆ ಮುಂದೆಲ್ಲಾ ಭತ್ತದ ಹುಲ್ಲು. 'ಸರಿರಾತ್ರಿಯಲ್ಲಿ ನಿಮಗೆ ತೊಂದರೆಯಾಗಬಹುದೇನೋ, ನಿಮ್ಮದಿನ್ನೂ ಊಟವಾಗಿಲ್ಲ, ಈಗ ಮಾತುಕತೆ ಬೇಡ, ನಾವು ಬೆಳಗ್ಗೆ ಬರುತ್ತೀವಿ, ನಿಮ್ಮ ಲಭ್ಯತೆ ತಿಳಿಯಲು ಮಾತ್ರ ನಾವು ಬಂದಿದ್ದು' ಅಂದಾಗ ನಾರಾಯಣಸ್ವಾಮಿ ನುಡಿದ್ರು 'ಯೋಚನೆ ಮಾಡಬೇಡಿ. ನಾನು ನನ್ನ ಹೊಟ್ಟೆಗೆ ಹೇಳಿದೀನಿ. ನನ್ನ ಕೈ ಹಾಕಿದಾಗ ನೀನು ತಿನ್ನಬೇಕು ಅಂತ. ನೀವು ಮಾತಾಡಿ' ಅಂದ್ರು. 'ಹಿರಿಯರಿಗೆ ತೊಂದರೆಬೇಡ, ಬೆಳಗ್ಗೆ ಬರೋಣ' ಅಂದ್ರು ಜತೆಯಲ್ಲಿದ್ದ ಮಾರ್ಕಂಡೇಯ ಅವರ ಮಗ. ರಾತ್ರಿ ಊಟ ಮಾರ್ಕಂಡೇಯನವರ ಮನೆಯಲ್ಲಿ. ಕೋಸು ಕಡಲೇಕಾಳು ಹುಳಿ, ನಂಚಿಕೊಳ್ಳಲು ನೆಲ್ಲಿಹಿಂಡಿ, ಕೆನೆ ಮೊಸರು.. ಊಟ ಭರ್ಜರಿಯಾಗಿತ್ತು. ನಾಳೆ ಬರುತ್ತೇವೆಂದು ಮಾರ್ಕಂಡೇಯ ಅವರಿಂದ ಬೀಳ್ಕೊಟ್ಟಾಗ ರಾತ್ರಿ ೧೦.೩೦. ಪ್ರವಾಸಿ ಮಂದಿರದ ಪಕ್ಕದ ಕೋಣೆಯಲ್ಲಿ ಜೂಜುಕೋರರ ದಾಂಧಲೆಯಿತ್ತು. ಸಾಕಷ್ಟು ಛಳಿಯೂ ಇತ್ತು. ರಾತ್ರಿ ಬಹಳ ಹೊತ್ತು ನಿದ್ದೆ ಬರಲಿಲ್ಲ. ಸಾಲಿಗ್ರಾಮದಲ್ಲಿ ಸಂಕೇತಿಗಳ ಕೃಷಿ ಬದುಕು ಇನ್ನೆಷ್ಟು ದಿನ ಎಂದು ಮನ ಯೋಚಿಸುತ್ತಿತ್ತು. ಈ ಊರಿನ ಸಂಕೇತಿಗಳ ವೈಶಿಷ್ಟ್ಯಮಯ ಹಿನ್ನೆಲೆ ಉಳಿಸಲು ಯಾರಾದರೂ ಯುಗಪುರುಷ ಬರಬಾರದೇ ಎನ್ನಿಸಿತ್ತು. ನಿದ್ದೆ ಹರಿದು ಎಚ್ಚರವಾದಾಗ ಸಾಲಿಗ್ರಾಮದ ಸೂರ್ಯ ಮೂಡಲಲ್ಲಿ ನಗುತ್ತಿದ್ದ.



ಕಾವ್ಯವಾಚನದ ಏರು : ಇನ್ನೊಂದು ಭಂಗಿ

ಅ) ಎಸ್. ಎಸ್. ಮಾರ್ಕಂಡೇಯ ಇ/ಮ ಪೇಟೆ ಸಾಹುಕಾರ್ ಶ್ರೀಕಂಠಯ್ಯ
ಸಾಲಿಗ್ರಾಮ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ : 08223 683299

ನನ್ನ ಹೆಂಡತಿ ಹಾಗೂ ನನ್ನ ತಾಯಿ ಮುಖ ಗಂಟು ಹಾಕಿಕೊಂಡಿರಲಿಲ್ಲ. ಕುಟುಂಬದಲ್ಲಿ ಸೌಖ್ಯ ಇತ್ತು. ಹಣಕಾಸಿನ ಮುಗ್ಗಟ್ಟು ಇರಲಿಲ್ಲ. ಮನೆಯ ಒಳಗೂ ಸೌಖ್ಯ, ಹೊರಗೂ ಸೌಖ್ಯ. ಆದ ಕಾರಣ ನಾನು ನಿತ್ಯಸಂತೋಷಿಯಾಗಿದ್ದೆ. ಅದಕ್ಕೆ ನಾನು ಈವರೆಗೆ ಬದುಕಿರೋದೇ ಸಾಕ್ಷಿ.



ಮಡ್ಡಿನಶ್ಯ ಇಡಿಯುವುದು ಹಿಂದಿನಿಂದ ಬಂದ ಹವ್ಯಾಸ: ಎಸ್.ಎಸ್.ಮಾರ್ಕಂಡೇಯ: ಸಾಲಿಗ್ರಾಮ

ಸಾಲಿಗ್ರಾಮದ ಪೇಟೆ ಸಾಹುಕಾರ್ ಶ್ರೀಕಂಠಯ್ಯ ಹಾಗೂ ತಾಯಕ್ಕ ಇವರ ಒಬ್ಬನೇ ಮಗ ಮಾರ್ಕಂಡೇಯ ಅವರಿಗೆ ಈಗ ೮೨ ವರುಷ. ಹರವೆಯ ಎಚ್. ಬಿಂದುಮಾಧವಶಾಸ್ತ್ರಿ ಹಾಗೂ ಪಾರ್ವತಮ್ಮನವರ ಮಗಳು ಕಮಲಮ್ಮ ಇವರ ಧರ್ಮಪತ್ನಿ. ಮಾರ್ಕಂಡೇಯ ಅವರ ತಾತ ಪೇಟೆ ರಾಮಣ್ಣ; ಮುತ್ತಜ್ಜ ಪೇಟೆ ಸುಬ್ಬಯ್ಯ ಎಲ್ಲರೂ ವ್ಯವಸಾಯದಿಂದಲೇ ಬದುಕಿದವರು. ಮಾರ್ಕಂಡೇಯ ಹೇಳುತ್ತಾರೆ 'ನಮ್ಮ ತಾತ, ಮುತ್ತಂದಿರ ಕಾಲ ಸ್ವರ್ಣಯುಗ. ಅವರು ಬಹಳ ಶ್ರೀಮಂತರು. ಅಂಥ ಕಾಲ ಈಗ ಬರೋದಿಲ್ಲ. ನಮಗೆ ಸಮೀಪದ ಶೀಗೊಳಿನಲ್ಲಿ ೨೦೦ ಎಕರೆ ಹೊಲ, ಸಾಲಿಗ್ರಾಮದಲ್ಲಿ ೩೦೦ ಎಕರೆ ಗದ್ದೆ, ಹನಸೋಗೆ ಬಯಲಿನಲ್ಲಿ ೩೦ ಎಕರೆ ಗದ್ದೆ ಇತ್ತು. ಇಷ್ಟೆಲ್ಲಾ ಆಸ್ತಿಯನ್ನು ತಾತ ಜೋಪಾನವಾಗಿ ಕಾಪಾಡಿದ್ರು. ಆದ್ರೆ ನನ್ನ ತಂದೆಗೆ ನಾಟಕದ ಖಯಾಲಿ ಜಾಸ್ತಿ. ನಾಲ್ಕು ಜನ ಅಣ್ಣತಮ್ಮಂದಿರಲ್ಲಿ ಇವರೊಬ್ಬರೇ ಉಳಿದಿದ್ದು. ತಂದೆಯವರದೇ ಒಂದು ಸ್ವಂತದ ನಾಟಕ ಕಂಪನಿ ಇತ್ತು. ಅವತ್ತಿನ ಕಾಲದ ಪ್ರಖ್ಯಾತ ಚಾಮುಂಡೇಶ್ವರಿ ಕಂಪನಿ ಹಾಗೂ ಗುಬ್ಬಿ ವೀರಣ್ಣನವರ ಕಂಪನಿಯನ್ನೂ ಇಲ್ಲಿಗೆ ಕರೆಸಿದ್ರು. ನನ್ನ ತಂದೆ ರಾಮನಾಥಪುರದ ಜಾತ್ರೇಲಿ ನಾಟಕ ಆರಂಭಿಸಿದ್ರೆ ಹೊಳೆನರಸೀಪುರದ ಜಾತ್ರೆ ಮುಗಿಯುವ ತನಕ ಮನೆಗೆ ಸೇರ್ತಿರಲಿಲ್ಲ. ನಾಟಕದ ಕಂಪನಿಯಿಂದ ಆದಾಯ ಬರ್ತಿರಲಿಲ್ಲ. ನಮ್ಮ ತಂದೇನ ಕೇಳಿದ್ರೆ ಅವರು ಹೇಳೋರು, "ಎಷ್ಟು ಜನ ಊಟ ಮಾಡಿದ್ರೋ, ಎಷ್ಟು ಅನ್ನದಾನವಾದಂತಾಯ್ತೋ!" ಅಂತ ಹೇಳಿ ಸುಮ್ಮನಾಗಿಸೋರು. ಪ್ರತೀ ಕ್ಯಾಂಪಿನಲ್ಲೂ ಸಾವಿರಾರು ರೂಪಾಯಿ ನಷ್ಟ ಆಗೋದು. ಸಾಲ ಮಾಡೋರು, ವಾಪಸ್ಸು ಬಂದು ಇಲ್ಲಿ ಒಂದೊಂದು ಸರ್ವೆ ನಂಬರನ್ನು ಭೋಗ್ಯ, ಆಧಾರ ಮಾಡೋರು. ಸಾಲ ತೀರಿಸಲು ಆಗ್ತಿರಲಿಲ್ಲ. ಕೋರ್ಟು ಕಛೇರಿ ಬಿದ್ದು ಜಮೀನು ಪರಭಾರೆ ಆಗ್ತಿತ್ತು. ನೋಡಿ! ಈಗ ನನ್ನ ಕಾಲಕ್ಕೆ ಐದರಿಂದ ಆರು ಎಕರೆ ಗದ್ದೆ, ಎರಡು ಎಕರೆ ತೋಟ, ಹಾಗೂ ಪೂರ್ವಿಕರು ಕಟ್ಟಿದ ಮನೆ ಉಳೀತು. ನನ್ನ ತಾತ ಮೂರು ಬಸ್ಸು ಇಟ್ಟಿದ್ರು, ಸುಬ್ರಹ್ಮಣ್ಯೇಶ್ವರ ಮೋಟಾರ್ ಸರ್ವೀಸ್ ಅಂತ. ಇಲ್ಲಿಂದ ಹೊಸ ಅಗ್ರಹಾರ, ರಾಮನಾಥಪುರ ಹಾಗೂ ಕೊಣನೂರಿಗೆ ಇವು ಓಡಾಡೋವು. ಅದರಲ್ಲೂ ನಷ್ಟ ಅನುಭವಿಸಿದ್ರು. ಈ ಕೊರಗಿನಲ್ಲೇ ಅವರು ತಮ್ಮ ೫೨ನೆಯ ವಯಸ್ಸಿನಲ್ಲಿಯೇ ತೀರಿಕೊಂಡ್ರು. ತಂದೆಯವರಿಗೆ ನಾಟಕದ ಖಯಾಲಿ ಜತೆ ಕಾವ್ಯವಾಚನದ ಖಯಾಲಿಯೂ ಇತ್ತು. ಸೊಗಸಾಗಿ ಹಾರ್ಮೋನಿಯಂ ನುಡಿಸೋರು. ಸಂಗೀತ ಸಾಹಿತ್ಯದ ಸಾಮ್ರಾಜ್ಯ ಅವತ್ತಿನ ನಾಟಕದ ಕಾಲ. ಆದರೆ ನಾನು ನಾಟಕದ ಖಯಾಲಿಯಿಂದ ಆದ ನಷ್ಟ ಗಮನಿಸಿದ್ದೆ. ಹಾಗಾಗಿ ಅದನ್ನು ನೋಡುತ್ತಿದ್ದೆ ಅಷ್ಟೆ, ಖಯಾಲಿಯಾಗಿ ಬಳಸಲಿಲ್ಲ. ತಂದೇನೂ ಬಲವಂತ ಮಾಡ್ತಿರಲಿಲ್ಲ. ಅವರು ನಾಟಕದಲ್ಲಿ ರಾಮ, ರಾವಣ, ಲಕ್ಷ್ಮಣನ ಪಾತ್ರ ಮಾಡೋರು. ಲಂಕಾ ದಹನ ಅವರ ಇಷ್ಟದ ನಾಟಕ. ನನಗೆ ಕಾವ್ಯವಾಚನ ಕಲೆ ಮಾತ್ರ ಪಿತ್ರಾರ್ಜಿತ ಅಷ್ಟೆ' ಎಂದು ನುಡಿಯುತ್ತಾರೆ.

ನಿಮ್ಮ ಬದುಕಿನ ಬಗ್ಗೆ ಹೇಳಿ ಅಂದಾಗ ಮಾರ್ಕಂಡೇಯನವರು ಚುರುಕಾಗುತ್ತಾರೆ. 'ನಾನು ರುದ್ರಪಟ್ಟಣದಲ್ಲಿ ನಮ್ಮ ಸೋದರಮಾವನ ಮನೇಲಿ ಹುಟ್ಟಿದೆ. L.S.ವರೆಗೆ ಸಾಲಿಗ್ರಾಮದಲ್ಲಿ ಓದಿದೆ. ನಂತರ ಓದಲು ಇಲ್ಲಿ ಸೌಲಭ್ಯ ಇರಲಿಲ್ಲ. ಮೈಸೂರಿನ ಬನುಮಯ್ಯದಲ್ಲಿ SSLC first classನಲ್ಲಿ ಪಾಸ್ ಮಾಡಿದೆ. ನಂತ್ರ Intermediate ಎರಡು ವರುಷ. ಅಷ್ಟರಲ್ಲಿ ನನ್ನ ಮದುವೆಯಾಯ್ತು. ಮದುವೆಯಾದ

ಹತ್ತನೇ ದಿನಕ್ಕೆ ತಂದೆ ತೀರಿಕೊಂಡ್ರು. ಅನಿವಾರ್ಯವಾಗಿ ಮಾಸ್ತರ ಕೆಲಸಕ್ಕೆ ಸೇರಿದೆ. ಹನಸೋಗೆಯಲ್ಲಿ ಏಳು ವರುಷ, ಹೆಚ್.ಡಿ.ಕೋಟೆಯಲ್ಲಿ ಒಂದು ವರುಷ, ಹರದನಹಳ್ಳೀಲಿ ಏಳು ವರುಷ, ನಂತರ ತೆರಕಣಾಂಬಿ ಹತ್ರ ಕೊತ್ತಲವಾಡಿ, ಅಲ್ಲಿಂದ ಸಾಲಿಗ್ರಾಮದ ಹತ್ರ ಮೇಲೂರಿನಲ್ಲಿ ಎಂಟು ವರುಷ, ನಂತರ ಹನಸೋಗೆ ಹತ್ರ ಚನ್ನಮ್ಮಗೆರೆಯಲ್ಲಿ ಕೆಲಸ ಮಾಡಿದೆ. ಅಪಘಾತದಲ್ಲಿ ಕಾಲು ತುಂಡಾಯ್ತು. DEO (District Education Officer) ಹತ್ರ ಹೇಳಿ ಸಾಲಿಗ್ರಾಮಕ್ಕೆ Transfer ಮಾಡಿಸಿಕೊಂಡೆ. ಇಲ್ಲಿ ಎಂಟು ವರುಷ, ಸೇವೆ ಮಾಡಿ ೭೭ರಲ್ಲಿ ರಿಟೈರ್ ಆದೆ. "ಉತ್ತಮ ಉಪಾಧ್ಯಾಯ" ಅನ್ನೋ ಪ್ರಶಸ್ತೀನೂ ತೊಗೊಂಡೆ. ನನ್ನ ವೃತ್ತಿ ಅಧ್ಯಾಪಕ ವೃತ್ತಿ, ಪ್ರವೃತ್ತಿ ವ್ಯವಸಾಯ ಅಷ್ಟೆ' ಎಂದು ನಗುತ್ತಾರೆ.

'ನಿಮ್ಮ ಕಾಲದ ವಿದ್ಯಾಭ್ಯಾಸ ಹ್ಯಾಗಿತ್ತು'? ಅಂದಾಗ ಅವರ ಕಣ್ಣುಗಳು ಅರಳುತ್ತೆ. 'ಆ ಕಾಲದ್ದು ಗಟ್ಟಿ ವಿದ್ಯಾಭ್ಯಾಸ. ಈಗಿನ ವಿದ್ಯಾಭ್ಯಾಸ ಪೊಳ್ಳು. ಬರೀ ಪಾಸ್ ಮಾಡುವುದು ಮುಖ್ಯ ಈಗ. ಹಿಂದಿನ ಸೂಕ್ಷ್ಮತೆ ಹಾಗೂ ಆಳವಾದ ಅಧ್ಯಯನ ಇಲ್ಲ. ಈಗ ಪರೀಕ್ಷಾ ದೃಷ್ಟಿಯಿಂದ ಮಕ್ಕೀಕಾಮಕ್ಕಿ ಉರು ಹೊಡೀಯೋದು, ಅದನ್ನೇ ಬರೆಯೋದು. ಈಗಿನ ಕಾಲದ ಮಕ್ಕಳಿಗೆ ಲೋಕಜ್ಞಾನ ಇರೋದಿಲ್ಲ. ಆಗಿನ ಕಾಲದಲ್ಲಿ ಸರ್ವತೋಮುಖ (all round development) ಬೆಳವಣಿಗೆ ಇತ್ತು. ಗಟ್ಟಿ ಉಪಾಧ್ಯಾಯರಿದ್ರು. ಶಿಸ್ತು, ಪ್ರಾಮಾಣಿಕತೆ, ನಂಬಿಕೆ ಇವೆಲ್ಲವನ್ನೂ ನಾನು ನನ್ನ ಗುರುಗಳಿಂದಲೇ ಕಲಿತದ್ದು. ಅದು ನನ್ನನ್ನು ಇಲ್ಲಿಯವರೆಗೆ ಕಾಪಾಡಿದೆ' ಎನ್ನುತ್ತಾರೆ.

ನಿಮ್ಮ ವ್ಯವಸಾಯದ ಬದುಕು ಹೇಗಿತ್ತು ಅಂದಾಗ 'ನಮ್ಮ ಪೂರ್ವಕಾಲದಲ್ಲಿ ಅಜ್ಜ, ಮುತ್ತಜ್ಜ ಅವರೇ ಸ್ವತಃ ದುಡಿಯೋರು. ತೋಟದಲ್ಲಿ ಸ್ವತಃ ಅಗೆತ ಮಾಡೋರು. ತಂದೆಯವರ ಕಾಲಕ್ಕೆ "ಮಾಡು ತೋಟ" ಪದ್ಧತಿ ಬಂತು. ಅಡಿಕೆ ಆದಾಯ ನಮಗೆ, ವಿಳ್ಳೇದೆಲೆ ಆದಾಯವು ಮಾಡಿದ ರೈತರಿಗೆ. ವ್ಯವಸಾಯದ ಶಿಕ್ಷಣ ತಂದೆಯವರಿಂದ ಬಂತು. ಆದರೆ Tenancy Actನಲ್ಲಿ ನಾಲ್ಕು ಎಕರೆ ಜಮೀನು ನಾನೇ ಖರೀದಿಗೆ ನೀಡಿದೆ. ಈಗ ಎರಡು ಎಕರೆ ಜಮೀನು, ಅರ್ಧ ಎಕರೆ ತೋಟ ಮಾತ್ರ ಇದೆ. ತೋಟದಲ್ಲಿ ತೆಂಗು, ಅಡಿಕೆ, ಕೋಕೋ, ವಿಳ್ಳೇದೆಲೆ, ಪಪ್ಪಾಯ, ಬಾಳೆ ಇದೆ. ಕೆಲವೊಮ್ಮೆ ಅವರೆ ಬೆಳೀತೀವಿ. ಸ್ವಂತವಾಗಿ ಕೆಲಸ ಮಾಡಲು ಆಗೋದಿಲ್ಲ. ಅಧ್ಯಾಪಕವೃತ್ತಿಯೂ ಇದ್ದುದರಿಂದ ಮೊದಲಿನಿಂದಲೂ ನಾನು ಮೇಲುಸ್ತುವಾರಿ ಅಷ್ಟೆ. ತಂದೆಯವರು ಜಮೀನು ಕಳೀದೆ ಇದ್ರೆ ವ್ಯವಸಾಯಾನೇ ಮಾಡ್ತಿದ್ದೇನೋ. ಆದರೆ ನಾನು ಕೆಲಸಕ್ಕೆ ಸೇರಲು ನನ್ನ ತಾಯಿಯ ಒತ್ತಾಸೆ ಕಾರಣ. ಗದ್ದೆ ವ್ಯವಸಾಯದಿಂದ ಊಟಕ್ಕೆ ಬೇಕಾದ ಧಾನ್ಯ ಸಿಗುತ್ತೆ. ಸೌಕರ್ಯಕ್ಕೆ ಬೇಕಾದ ತೆಂಗು, ಅಡಿಕೆ, ಹುಣಿಸೆ ತೋಟದಿಂದ ಬರುತ್ತೆ. ಬದುಕಿನಲ್ಲಿ ತೃಪ್ತಿ ಇದೆ' ಎಂದು ನೆಮ್ಮದಿಯ ನಗೆ ಬೀರುತ್ತಾರೆ.

'ನಿಮ್ಮ ತಾಯಿ ಹಾಗೂ ಹೆಂಡತಿಯ ಬಗ್ಗೆ ಹೇಳಿ' ಅಂದಾಗ ಕಣ್ಣು ತುಂಬಿಕೊಳ್ಳುತ್ತೆ.

'ನನ್ನ ತಾಯಿಯಿಂದ ಬದುಕಿದೋನು ನಾನು. ಆಕೆ ಬಹಳ ಮಿತವ್ಯಯಿ. ಆಡಂಬರವಿರಲಿಲ್ಲ. ಮಡಿವಂತಿಕೆ ಜಾಸ್ತಿ. ನನ್ನ ತಾಯಿಯವರು ಮನೆಯ ಹೊಸ್ತಿಲು ದಾಟದೆ ಸಂಪೂರ್ಣ ಕುಟುಂಬ ನಿರ್ವಹಣೆ ಮಾಡಿದ್ರು. ನಾನು ಬರೀ ಉಪಾಧ್ಯಾಯ ವೃತ್ತಿ ಮಾಡಿದ್ನೆ ಹೊರತು, ಇತರ ಇನ್ಯಾವ ಮನೆಯ ಜವಾಬ್ದಾರಿಯನ್ನೂ ತಾಯಿ ನನಗೆ ಕೊಡಲಿಲ್ಲ. ನನ್ನ ಹೆಂಡ್ತೀನೂ ಬಹಳ ಒಳ್ಳೆಯವಳು. ಯಾವುದಕ್ಕೂ ಪ್ರತಿಭಟನೆ ಮಾಡಿದೋಳಲ್ಲ. ಎಲ್ಲದಕ್ಕೂ support ಮಾಡೋಳು. ಸಮಯೋಚಿತ ಸಲಹೆ, ಸರಿಯಾದ ಮಾರ್ಗದರ್ಶನ ಸಿಗುತ್ತಿತ್ತು. ಸಂಸಾರದಲ್ಲಿ ಸಾಮರಸ್ಯ ವಿತ್ತು. ನಾನು ನನ್ನ ಹೆಂಡತಿಯ ಮಾತನ್ನು ಕೇಳ್ತಿದ್ದೆ. ಸಾಧುವಾದದ್ದನ್ನು ಆಚರಣೆಗೆ ತರ್ತಿದ್ದೆ. ಅವಳನ್ನೂ ಈಗ ಕಳೆದುಕೊಂಡಿದ್ದೀನಿ. ಅವಳಿದ್ದಿದ್ರೆ ಚೆನ್ನಾಗಿರೋದು ಅಂತ ಇಂದಿಗೂ ಅನ್ನಿಸುತ್ತೆ' ಎಂದು ಹನಿಗಣ್ಣಾಗಿ ನುಡಿಯುತ್ತಾರೆ.



ಶಾಂತ-ಎಸ್.ಎಂ.ಮಲ್ಲಿಕಾರ್ಜುನ ದಂಪತಿ: ತಂದೆ ಎಸ್.ಎಸ್.ಮಾರ್ಕಂಡೇಯ ಅವರೊಂದಿಗೆ ಸಾಲಿಗ್ರಾಮ

'ನಿಮ್ಮ ಗಮಕದ ಬದುಕು ಹ್ಯಾಗಿದೆ?' ಎಂದರೆ, 'ತಂದೆಯವರ ಕಾಲದಿಂದ ಅಂದ್ರೆ ಸುಮಾರು ಅರುವತ್ತು ವರುಷದಿಂದ ಗಮಕಾಭ್ಯಾಸ ಮಾಡುತ್ತಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರೌಢಪರೀಕ್ಷೆ ಪಾಸ್ ಮಾಡಿದ್ದೇನೆ. "ಸಂಸ್ಕೃತಿಪ್ರಸಾರಾಚಾರ್ಯ" ಅನ್ನೋ ಬಿರುದೂ ನನಗೆ ಸಿಕ್ಕಿದೆ. ಪ್ರತಿನಿತ್ಯ ಸಾಯಂಕಾಲ ನನ್ನ ಮನೆಯಲ್ಲಿ ಒಂದು ಘಂಟೆ ಕಾವ್ಯವಾಚನ ಮಾಡ್ತೀನಿ. ವಾಚನ ಹಾಗೂ ವ್ಯಾಖ್ಯಾನ ಎರಡರಲ್ಲೂ ಅನುಭವ ಇದೆ. ಕುಮಾರವ್ಯಾಸಭಾರತ, ಜೈಮಿನಿಭಾರತ, ಭಾಗವತ, ನಳಚರಿತ್ರೆ ಹಾಗೂ ಹರಿಶ್ಚಂದ್ರಕಾವ್ಯ ನನ್ನ ಮೇಲೆ ಪ್ರಭಾವ ಬೀರಿವೆ. ಪ್ರತಿನಿತ್ಯ ಪ್ರತಿಕ್ಷಣ ನನ್ನ ಜೀವನವನ್ನು ಯಾವ ರೀತಿ Modify ಮಾಡಿಕೊಂಡು ಬದುಕಬೇಕು ಎಂಬುದನ್ನು ಇವು ನಿರಂತರವಾಗಿ ಕಲಿಸಿವೆ. ಕಾವ್ಯವಾಚನದಲ್ಲಿ ನಾನಿನ್ನೂ ವಿದ್ಯಾರ್ಥಿ' ಎಂದು ನಮ್ರವಾಗಿ ನುಡಿಯುತ್ತಾರೆ.

ಮಾರ್ಕಂಡೇಯನವರಿಗೆ ನಾಲ್ಕು ಗಂಡು ಹಾಗೂ ಮೂರು ಹೆಣ್ಣು ಮಕ್ಕಳು. ಎರಡನೆಯ ಮಗ ಎಸ್.ಎಂ. ಮಲ್ಲಿಕಾರ್ಜುನ ಸಮೀಪದ ತಂದ್ರೆಯಲ್ಲಿ ಖಾಸಗಿ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದಾರೆ. ಇವರ ಪತ್ನಿ ಶಾಂತ ಹನಸೋಗೆಯವರು. ಎರಡನೆಯ ಮಗ ಸಾಲಿಗ್ರಾಮದಲ್ಲಿ ಉಳಿದು ತನ್ನ ಅಲ್ಪಸ್ವಲ್ಪ ಕೃಷಿ ಮುಂದುವರೆಸುತ್ತಾನೆ ಎಂಬ ನಂಬಿಕೆ ಮಾರ್ಕಂಡೇಯನವರಿಗಿದೆ. ಹಿಂದೆ ಸಾಲಿಗ್ರಾಮದಲ್ಲಿ ಸಂಕೇತಿಗಳದ್ದು ಅರುವತ್ತು ಕುಟುಂಬ ಇತ್ತಂತೆ. Tenancyನಲ್ಲಿ ಜಮೀನು ಕಳೆದುಕೊಂಡು ಊರು ಬಿಟ್ಟವರು ಬಹಳ. ಸ್ವಂತ ಕೃಷಿ ಮಾಡದೆ ಗುತ್ತಿಗೆ ನೀಡಿದ್ದು ಕಾರಣ ಎಂದು ಮಾರ್ಕಂಡೇಯ ಅಭಿಪ್ರಾಯ ಪಡುತ್ತಾರೆ. ಸಾಲಿಗ್ರಾಮದಲ್ಲಿ ಮಾರ್ಕಂಡೇಯನವರೇ ಕಟ್ಟಿ ಬೆಳೆಸಿದ ಯೋಗಾನರಸಿಂಹಸ್ವಾಮಿ ವಿದ್ಯಾಸಂಸ್ಥೆ ಇದೆ. ಇಲ್ಲಿ LKG ಯಿಂದ SSLC ವರೆಗೆ ಶಿಕ್ಷಣ ನೀಡಲಾಗುತ್ತೆ. ಇತರರು ಊರು ಬಿಟ್ಟರೂ ತಾನು ಮಾತ್ರ ಅಪ್ಪ ಹಾಕಿದ ಆಲದಮರ ಅಂತ ಇಲ್ಲೇ ಉಳಿದುಬಿಟ್ಟಿದೀನಿ ಅಂತಾರೆ ಮಾರ್ಕಂಡೇಯ. ಜ್ಯೋತಿಷ್ಯ ಜ್ಞಾನವೂ ಇವರಿಗಿದೆ. ಬಡಬಗ್ಗರು ತಂದುಕೊಡುವ ದ್ರವ್ಯವನ್ನು ಜೋಪಾನವಾಗಿ ಮನೆಯಲ್ಲಿಟ್ಟು ಅವರಿಗೆ ಬೇಕಾದಾಗ ವಾಪಸ್ಸು ನೀಡುತ್ತಾರೆ. ಇದರ ಹಿಂದಿರುವುದು ಬರಿಯ ಸೇವಾ ಮನೋಭಾವ ಮಾತ್ರ. ಇವರು ಬಡಬಗ್ಗರ ಪಾಲಿನ safe locker. 'ಒಳ್ಳೆಯ ಕೆಲಸ ಮಾಡಿ, ಸತ್ಯವಂತರಾಗಿರಿ, ಪ್ರಾಮಾಣಿಕರಾಗಿರಿ' ಇದು ಇವರು ಕಿರಿಯರಿಗೆ ನೀಡುವ ಆಶೀರ್ವಾದ. 'ನಿಮ್ಮ ಮುಂದಿನ ಕನಸು?' ಅಂದ್ರೆ 'ಕಡೆಯ ದಿನಗಳನ್ನು ಎಣಿಸ್ತಾ ಇದೀನಿ. ಕನಸುಗಳಿಲ್ಲ' ಎಂದು ಖಚಿತವಾಗಿ ನುಡಿಯುತ್ತಾರೆ. ಮೈಸೂರಿಗೆ ಹೊರಡುವ ತರಾತುರಿಯಲ್ಲಿದ್ದ ಮಾರ್ಕಂಡೇಯನವರನ್ನು ಬೀಳ್ಕೊಟ್ಟು ಮುಂದಿನ ಮನೆಗೆ ತೆರಳುವಾಗ ಅವರಾಡಿದ ಮಾತುಗಳು ಮನದಾಳದಲ್ಲಿ ತರಂಗಗಳನ್ನು ಎಬ್ಬಿಸುತ್ತಲೇ ಇದ್ದು. ಹಾಂ! ಅಂದ ಹಾಗೆ, ಮಾರ್ಕಂಡೇಯರು ಆಕಾಶವಾಣಿ ಕಲಾವಿದರೂ ಹೌದು. ಮೈಸೂರು, ಬೆಂಗಳೂರು ಆಕಾಶವಾಣಿಯಲ್ಲಿ ಇವರ ಕಾವ್ಯವಾಚನ ಪ್ರಸಾರವಾಗಿದೆ. ಕೃಷಿಪ್ರಸಾರಕನಾದ ನನಗೆ, ಇವರ ಕೃಷಿ ಕಾರ್ಯಕ್ರಮಗಳು ಪ್ರಸಾರವಾಗುವಂತೆ ಇವರು ಪೂರ್ಣ ಕೃಷಿಕರಾಗಬಾರದಿತ್ತೆ ಎಂದು ಅನ್ನಿಸಿದ್ದು ಸುಳ್ಳಲ್ಲ.

ಎಸ್.ಎಸ್.ಮಾರ್ಕಂಡೇಯ
ಮತ್ತು
ಎಸ್.ಎಂ.ಮಲ್ಲಿಕಾರ್ಜುನ
ಅವರು ತರಕಾರಿಯನ್ನು ಬೆಳೆದ
ತಮ್ಮ ತೋಟದಲ್ಲಿ:
ಸಾಲಿಗ್ರಾಮ



ಆ) ಎಸ್.ವಿ. ನಾರಾಯಣಸ್ವಾಮಿ ಇ/ಮ ಕೇಣಿ ವೆಂಕಟೇಶಯ್ಯ
ಸಾಲಿಗ್ರಾಮ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ

ನನ್ನ ತಾತ ಬೆಳಗ್ಗೆ ಎದ್ದು ಗುದ್ದಲಿ, ಪಿಕಾಸಿ, ಕುಡಗೋಲು ತೊಗೊಂಡು ತೋಟಕ್ಕೆ ಹೋದ್ರೆ ಅಲ್ಲಿ ಮಧ್ಯಾಹ್ನ ಹನ್ನೆರಡರವರೆಗೆ ಸೊಂಟದಮಟ್ಟ ಅಗೆಯೋರಂತೆ. ನಂತರ ತೋಟದಲ್ಲಿದ್ದ ಅಡಿಕೆ, ಮಾವು, ತೆಂಗಿಗೆ ಕೊಳದಿಂದ ನೀರು ಹಾಕಿ, ಅವರೂ ಕೊಳದಲ್ಲಿ ಸ್ನಾನಮಾಡಿ, ಗುದ್ದಲಿಯ ಕಾವನ್ನು ತೆಗೆದು ತೊಳೆದು, ತೋಟದಲ್ಲಿ ಮೂರು ಕಲ್ಲನ್ನು ಇಟ್ಟು, ತರಗು ಹಾಕಿ, ಬೆಣಚುಕಲ್ಲಿನಿಂದ ಜುಂಗನ್ನು ಹಚ್ಚಿ ಬೆಂಕಿ ಮಾಡಿ, ಗುದ್ದಲಿ ಮೇಲೆ ರೊಟ್ಟಿ ತಟ್ಟಿಕೊಂಡು ತಿನ್ನೋರಂತೆ. ಆಮೇಲೆ ಮೂರು ಘಂಟೆವರೆಗೆ ಕೆಲಸ ಮಾಡಿ, ತೋಟದಲ್ಲಿ ಬಿದ್ದಿರುವ ಗೊದಮೊಟ್ಟೆಯನ್ನು ಹೊರೆಕಟ್ಟಿ, ಸುಮಾರು ೧೦೦ ಕೇಜಿ ಅಷ್ಟನ್ನು ಹೆಗಲ ಮೇಲೆ ಹೊತ್ತು ಮನೆಗೆ ಬರುತ್ತಿದ್ರಂತೆ. ಕೆಲವೊಮ್ಮೆ ೩೦೦ - ೪೦೦ ಕಟ್ಟು ವಿಳ್ಳೇದೆಲೆ ಪಿಂಡಿಯನ್ನು ತಲೆಯ ಮೇಲೆ ಹೊತ್ತು ತಂದದ್ದೂ ಉಂಟು.



ಎಸ್.ವಿ.ನಾರಾಯಣಸ್ವಾಮಿ ತಮ್ಮ ಅಪರೂಪದ ತೋಟದಲ್ಲಿ : ಸಾಲಿಗ್ರಾಮ

ಸಾಲಿಗ್ರಾಮದ ಕೇಣಿ ವೆಂಕಟೇಶಯ್ಯ ಹಾಗೂ ರುದ್ರಪಟ್ಟಣದ ಸಣ್ಣಮ್ಮ ಅವರ ಮಗ ನಾರಾಯಣಸ್ವಾಮಿ ಅವರಿಗೆ ಈಗ ೮೦ ವರುಷ. ಇವರ ತಾಯಿ ರುದ್ರಪಟ್ಟಣದ ದೊಡ್ಡತೊಟ್ಟಿಮನೆ ಆರ್.ಟಿ. ರಾಮಸ್ವಾಮಯ್ಯ ಅವರ ಮಗಳು. ನಾರಾಯಣಸ್ವಾಮಿ ಅವರ ಪತ್ನಿ ಹನಸೋಗೆಯ ಶ್ರೀನಿವಾಸಯ್ಯ ಹಾಗೂ ಸೀತಮ್ಮ ಇವರ ಮಗಳು ಕಮಲಮ್ಮ. ನಾರಾಯಣಸ್ವಾಮಿ ಅವರ ತಾತ ನಾರಾಯಣಪ್ಪ ಅನಕ್ಷರಸ್ಥ. ಬರೀ ಹೆಸರು ಮಾತ್ರ ಬರೆಯಲು ಬರ್ತಿತ್ತಂತೆ. ಆದ್ರೆ ಶ್ರಮಜೀವಿ. ಅಜ್ಜಿ ಭಾಗೀರಥ'ಮ್ಮ ಬಸವಾಪಟ್ಟಣದವರು. ನಾರಾಯಣಸ್ವಾಮಿಯವರಿಗೆ ಆರು ವರುಷದ ಹಿಂದೆ ಹೃದಯದ ಬೈಪಾಸ್ ಸರ್ಜರಿ ಆಗಿದೆ. ಆಗಾಗ ಬರುವ ಎದೆನೋವನ್ನು ಶಮನ ಮಾಡಲು ಇವರು ಒಂದು ಪುಟ್ಟ ಕಬ್ಬಿಣದ ಹಿಡಿಯಲ್ಲಿ ಜಲ್ಲಿಯ ಕಲ್ಲನ್ನಿಟ್ಟು ಒಡೆಯುತ್ತಾರೆ. ಈ ಶ್ರಮ ಎದೆನೋವನ್ನು ಮರೆ ಮಾಡುತ್ತೆ ಅಂತಾರೆ. ಉಳಿದಂತೆ, ಹಳೆಯ ಮನೆಯಲ್ಲಿ ಏಕಾಂಗಿಯಾಗಿದ್ದಾರೆ. ಪತ್ನಿ ಕಮಲಮ್ಮನವರಿಗೆ ೭೨ ವರುಷ. ಅವರಿಗೆ ಆರೋಗ್ಯ ಸರಿಯಿಲ್ಲದೆ ಬೆಂಗಳೂರಿನಲ್ಲಿ ಮಗನ ಮನೇಲಿ ಇದ್ದಾರೆ. ವೃದ್ಧಾಪ್ಯ ನಾರಾಯಣಸ್ವಾಮಿಯವರನ್ನು ಕಾಡುತ್ತಿದೆ. ಸಾಲಿಗ್ರಾಮದ ಈಗಿನ ಎರಡು ವ್ಯವಸಾಯಸ್ಥ ಸಂಕೇತಿ ಕುಟುಂಬಗಳಲ್ಲಿ ಇವರದ್ದು ಒಂದು. ಈಗ ಅದೂ ವ್ಯವಸಾಯಕ್ಕೆ ಬೆನ್ನು ಹಾಕಲಿದೆ. ಬೆಳಗ್ಗೆ ಹೊಸ ಹುರುಪಿನಲ್ಲಿದ್ದ ನಾರಾಯಣಸ್ವಾಮಿಯವರು ಪ್ರಶ್ನೆ ಕೇಳುವ ಮೊದಲೇ ತಾವೇ ಮಾತಾಡುತ್ತಾ ನಡೆದರು.

'ನಮ್ಮ ಪೂರ್ವಿಕರು ಬಹಳ ಶ್ರಮಜೀವಿಗಳು. ತೋಟದ ಕೆಲಸ ಮಾಡಿ ಮನೆಗೆ ಬಂದು ಊಟ ಮುಗಿಸಿ ಎಲೆ ವಿಂಗಡಿಸೋರು, ನಂತ್ರ ಅದನ್ನು ಮಾರಾಟಕ್ಕೆ ಕಳಿಸಿ, ರಾಸುಗಳಿಗೆ ಮೇವಿನ ಜೋಳವನ್ನು ಕತ್ತರಿಸೋರು. ರಾತ್ರಿ ಹತ್ತರಿಂದ ಬೆಳಗಿನವರೆಗವಿಗೂ ಜೋಳವನ್ನು ಕತ್ತರಿಸ್ತಿದ್ರಂತೆ. ಆಗ ನಮ್ಮ ಮನೇಲಿ ೫೦-೬೦ ರಾಸು ಇದ್ವಂತೆ. ವ್ಯವಸಾಯದಿಂದ ಬಂದ ಆದಾಯಾನ ಕಬ್ಬಿಣದ ಪೆಟ್ಟಿಗೇಲಿ ಇಡ್ತಿರಲಿಲ್ಲ. ನಮ್ಮ ಮನೇಲಿ ಅದಕ್ಕೇಂತ ಒಂದು ಕೋಣೆ ಇತ್ತು. ಅದರಲ್ಲಿ ಎರಚೋರು. ನಮ್ಮ ಪೂರ್ವಿಕರ ಸಂಪೂರ್ಣ ವೃತ್ತಿ ವ್ಯವಸಾಯ. ನಮ್ಮ ತಾತಂಗೆ ಎರಡು ಗಂಡು, ಒಂದು ಹೆಣ್ಣು. ನನ್ನ ದೊಡ್ಡಪ್ಪ ಕೇಶವಯ್ಯ ಅವರದ್ದು ವ್ಯವಸಾಯ ವೃತ್ತಿ ಮಾತ್ರ. ನನ್ನ ತಂದೆ ಚಿಕ್ಕೋರು, ಅವರು ಮಾಸ್ತರಾದ್ರು. ನಮ್ಮ ತಂದೆಗೆ ನಾಲ್ಕು ಗಂಡು, ಎರಡು ಹೆಣ್ಣು ಮಕ್ಕಳು. ನಾನೇ ಹಿರಿಯ ಮಗ. ನನಗೆ ಒಂಬತ್ತು ವರುಷ ಇದ್ದಾಗ ತೋಟಕ್ಕೆ ಹೋಗ್ತಿದ್ದೆ. ಕಾಯಿ ಕೀಳಲು ಒಂದು ಅಡಿಕೆ ಮರ ಹತ್ತಿದ್ರೆ, ಕೊನೇ ಮರದಿಂದ್ಲೇ ಇಳೀತಿದ್ದು. ತಂದೆ ಅಧ್ಯಾಪಕ ವೃತ್ತಿಯ ಬಿಡುವಿನ ವೇಳೆಯಲ್ಲಿ ವ್ಯವಸಾಯ ಮಾಡ್ತಿದ್ರು. ನಮಗೆ ಹದಿನೈದು ಎಕರೆ ಗದ್ದೆ, ನಾಲ್ಕು ಎಕರೆ ತೋಟ, ಹತ್ತು ಎಕರೆ ಹೊಲ ಇತ್ತು. ಭತ್ತ, ರಾಗಿ, ಜೋಳ, ಈರುಳ್ಳಿ, ಎಳ್ಳು, ತೊಗರಿ ಎಲ್ಲಾ ಬೆಳೀತಿದ್ವು. ತೋಟದಲ್ಲಿ ಅಡಿಕೆ, ತೆಂಗು, ವಿಳ್ಳೇದೆಲೆ, ಬಾಳೆ, ಮಾವು

ಇತ್ತು. ಹಿಂದೆ ಇಲ್ಲಿ ಸಂಕೇತಿಗಳು ಸ್ವತಂತ್ರವಾಗಿ ಎಲ್ಲಾ ಕೆಲಸಾನೂ ಮಾಡೋರು. ಗಾಡಿ ಹೊಡೀತಿದ್ರು, ವ್ಯವಸಾಯ ಮಾಡುತಿದ್ರು, ಕೋಟೆ ಮಲ್ಲಪ್ಪನವರ ಮಕ್ಕಳು ಮರ ಕೆಲಸಾನೂ ಮಾಡ್ತಿದ್ರು. "ಕೇಣಿ" ಅನ್ನೋ ಹೆಸರು ನಮ್ಮ ಕುಟುಂಬಕ್ಕೆ ಹ್ಯಾಗೆ ಬಂದಿದೆ ಅಂದ್ರೆ ನಮ್ಮ ಪೂರ್ವಿಕರು ಚೇಣಿಯಲ್ಲಿ ಚಾಪೆ ಹೆಣೆಯೋರಂತೆ. ಚೇಣಿ ಹೋಗಿ ಕೇಣಿ ಆಯ್ತು. ಹೀಗೆ ಇಲ್ಲಿದ್ದ ಪ್ರತಿಯೊಬ್ಬರೂ ಒಂದೊಂದು ವೃತ್ತಿ ಮಾಡ್ತಿದ್ರು. ಮದುವೆ ಮುಂಜಿ ಆದ್ರೆ ಸಂಕೇತಿಗಳೆಲ್ಲಾ ಸೇರೋರು. ಅಡುಗೆಯವರನ್ನು ಯಾರೂ ಕರೀತಿರಲಿಲ್ಲ. ಒಬ್ರು ನೀರು ಸೇದೋರು, ಮತ್ತೊಬ್ರು ತರಕಾರಿ ಹೆಚ್ಚೋರು. ಇನ್ನೊಬ್ರು ಅಡುಗೆ ಮಾಡೋರು. ಪರಸ್ಪರ ಸಹಕಾರ ಇತ್ತು. ಸಹಬಾಳ್ವೆ ಇತ್ತು' ಎಂದು ಒಂದೇ ಉಸಿರಿಗೆ ಹೇಳುತ್ತಾರೆ.

- **ಪ್ರತಿ ಸಂಕೇತಿಗಳ ಮನೆಯಲ್ಲೂ ಉಯ್ಯಾಲೆ ಇರುತ್ತಲ್ಲಾ? ಯಾಕೆ?**
  ಮನೆಗೆ ಉಯ್ಯಾಲೆ ಒಂದು ಲಕ್ಷಣ, ಭೂಷಣ. ನಮಗೆ ಬೇಸರವಾದಾಗ ತೂಗಿಕೊಳ್ಳಬಹುದು. ಅತಿಥಿಗಳು ಬಂದಾಗ ಅವರನ್ನು ಉಯ್ಯಾಲೆಯ ಮೇಲೆ ಕೂರಿಸಿ ಸತ್ಕರಿಸೋದು ಸಂಕೇತಿಗಳ ಸತ್ ಸಂಪ್ರದಾಯ. ಈಗಿನ ಕಾಲದಂತೆ ಸೋಫಾ ಸೆಟ್ ಆಗ ಇರಲಿಲ್ಲ. ನಮ್ಮ ಮನೇಲಿ ಬಹಳ ವಿಶಾಲವಾದ ಉಯ್ಯಾಲೆ ಮಣೆ ಈಗಲೂ ಇದೆ.

- **ನಿಮ್ಮ ಪೂರ್ವಿಕರು ಬಹಳ ಗಟ್ಟಿಮುಟ್ಟಾಗಿದ್ರಲ್ಲಾ, ಏನು ಕಾರಣ?**
  ಅವರು ಈಗಿನ ಕಾಲದಂತೆ ಎಣ್ಣೆ ಬಳಸ್ತಾ ಇರಲಿಲ್ಲ. ಎಲ್ಲದಕ್ಕೂ ಹಸುವಿನ ತುಪ್ಪವೇ. ಹಾಲು, ಮೊಸರು, ಬೆಣ್ಣೆ, ತುಪ್ಪ ಸಮೃದ್ಧವಾಗಿ ಬಳಸೋರು. ಈಗಿನಂತೆ ಕಾಫಿ, ಟೀ ಕುಡೀತಿರಲಿಲ್ಲ. ಎರಡು ಹೊತ್ತು ಸಂಪೂರ್ಣ ಊಟ ಮಾಡಿ ದುಡಿಯೋರು, ವಿಶ್ರಾಂತಿ ತೊಗೊಳ್ಳೋರು. ಈಗಿನಂತೆ ಮೂರು ಬಾರಿ ತಿಂತಿರಲಿಲ್ಲ. ನಮ್ಮ ತಾಯಿಯವರು ಅವರ ಹೆರಿಗೇನ ಅವರೇ ಮಾಡಿಕೊಳ್ಳೋರು. ಮೂವತ್ತು ದಿನಗಳವರೆಗೆ ಲೇಹ್ಯ, ಕಷಾಯ, ಸತ್ವಯುತವಾದ ಆಹಾರ ಅವರೇ ತಯಾರಿಸಿ ಸೇವಿಸೋರು. ಆಮೇಲೆ ತಣ್ಣೀರುಸ್ನಾನ ಮಾಡಿ ಮನೆ ಕೆಲಸಾನೂ ಮಾಡೋರಂತೆ. ಹೆರಿಗೆಗೆ ಆಸ್ಪತ್ರೆಗೆ ಹೋದೋರಲ್ಲ. ಡಾಕ್ಟ್ರು, ಮಿಡ್‌ವೈಫು ಮನೆಗೆ ಬಂದಿಲ್ಲ. ಈಗ ಅದು ಸಾಧ್ಯವೆ!

- **ನಿಮ್ಮ ಬಗ್ಗೆ, ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ . . .**
  ಇಲ್ಲಿ ಬರೀ primary school ಇತ್ತು. public exam ಬರೆಯಲು ಮೇಲುಕೋಟೆಗೆ ಹೋಗಬೇಕಿತ್ತು. ನಾನು Electrical diploma ಓದಿದೆ. Tailoring ತರಬೇತಿ ಆಯ್ತು. ಸರ್ಕಾರಿ ಕೆಲಸ ಸಿಕ್ತು. Australiaದಲ್ಲಿ ಕೆಲಸ ಸಿಗೋ ಭರವಸೆ ಇತ್ತು. ಅಜ್ಜ-ಅಜ್ಜಿ ಕಳಿಸಲಿಲ್ಲ. ನಮ್ಮ ಮನೆ ಹಿಂಬದೀನೆ ತೋಟ. ಈ ತರಹ ಇಲ್ಲಿ ಮತ್ಯಾರಿಗೂ ಇರಲಿಲ್ಲ. ದೂರದಲ್ಲಿ ಮತ್ತೊಂದು ತೋಟ ಹಿರಿಯರು ಮಾಡಿದ್ರು. ಕಾವೇರಿ ನದಿಗೆ ಇಲ್ಲೇ ಸಮೀಪ ಬಳ್ಳೂರಿನಲ್ಲಿ ಕಟ್ಟೆ ಕಟ್ಟಿದ ಮೇಲೆ ಭತ್ತದ ಬೇಸಾಯ ಆರಂಭವಾದದ್ದು. ಉಳುವವನಿಗೇ ಭೂಮಿ ಕಾಯ್ದೆ ಬಂದ ಮೇಲೆ ಗದ್ದೆ ಹೋಯ್ತು. ಈಗ ಇಲ್ಲಿ ನಮ್ಮ ಜಮೀನಿಲ್ಲ. ಕಣಗಾಲಿನಲ್ಲಿ ಐದು ಎಕರೆ ೧೬ ಗುಂಟೆ ಜಮೀನಿದೆ. ಭತ್ತ ಬರುತ್ತೆ, ಮನೆ ಹಿಂಭಾಗದ ತೋಟದಲ್ಲಿ, ಹುಣಿಸೆ, ಅಡಿಕೆ, ತೆಂಗು, ಬಿಲ್ವಪತ್ರೆ, ಬಾಳೆ, ನೇರಳೆಮರ ಇದೆ. ಏಳು-ಎಂಟು ಬಿಳೀ-ಕೆಂಪು ಬೆಟ್ಟಹುಣಿಸೇಮರ ಇದೆ. ಮಕ್ಕಳಿಗೆ, ಹಸುಗಳಿಗೆ ಪ್ರಿಯವಾದ ಆಹಾರ ಇದು. ಮನೆ ಹಿಂದೆ ಒಂದು ಹುಣಿಸೆಮರದ ಹಣ್ಣು ಸಿಹಿಯಾಗಿದೆ. ಬಹಳ ದಿನ ಇದ್ರೂ ಕೆಡೋದಿಲ್ಲ. ಅಂಥಾ ವಿಶೇಷ ಇದೆ.

- **ವ್ಯವಸಾಯಸ್ಥ ಕುಟುಂಬದ ನಿಮ್ಮ ತಂದೆ ಬೇರೆ ವೃತ್ತಿ ಹಿಡಿದದ್ದು ಯಾಕೆ?**
  ನಮ್ಮ ತಾಯಿಯ ತಂದೆ ಉಪಾಧ್ಯಾಯರು. ಅವರೇ ನಮ್ಮ ತಂದೆಯ ಮನಸ್ಸನ್ನು ಪರಿವರ್ತನೆ ಮಾಡಿರಬಹುದು. ನಾನೂ ಸಹ ವ್ಯವಸಾಯಸ್ಥ ಆಗಬೇಕು ಅಂತಿದ್ದೆ. ಆದರೆ ಆಗ ನಮ್ಮ ತಂದೆಗೆ ೧೭ ರೂಪಾಯಿ ಸಂಬಳ. ಹೆಣ್ಣುಮಕ್ಕಳು ಮದುವೆಗೆ ಇದ್ರು. ಹಾಗಾಗಿ ಕೆಲಸಕ್ಕೆ ಸೇರಿದೆ. ಆದ್ರೆ ತಂದೆ ಸಾಯುವಾಗ ಹೇಳಿದ್ರು, 'ನಾನು ಮಾಡಿದ ಆಸ್ತಿ ಕಳೀಬೇಡ' ಅಂತ. ಹಾಗಾಗಿ ೭೮ರಲ್ಲಿ ನನ್ನ ರಿಟೈರ್ ಆದ ಬಳಿಕ ಇಲ್ಲಿಗೆ ಬಂದೆ. ಇಲ್ಲೇ ಇದ್ದೀನಿ.

- **ನಿಮ್ಮ ಹೆಂಡತಿಯ ಬಗ್ಗೆ ಹೇಳಿ . . .**
  ಎಲ್ಲ ವಿಧದಲ್ಲೂ ನನಗೆ ಸಹಕಾರ ನೀಡಿದಾಳೆ. ಒಂದು ರೀತೀಲಿ ಹೇಳೋದಾದ್ರೆ ನಾನು ಅವಳಿಗೆ ಯಾವ ಜವಾಬ್ದಾರೀನೂ ನೀಡಲಿಲ್ಲ.

ನಾನು ತಂದು ಹಾಕಿದ್ರಲ್ಲಿ, ಕುಟುಂಬ ನೋಡಿಕೊಂಡು, ಅತಿಥಿಗಳು ಬಂದಾಗ ಸತ್ಕರಿಸೋಳು. ಒಂದು ದಿನವೂ ನನಗೆ ಇಂಥದ್ದು ಬೇಕು ಎಂದವಳಲ್ಲ. ನಾನು ತರುವ ಸೀರೇನೇ ಉಡೋಳು. ಒಡವೆ ವಸ್ತ್ರಗಳಿಗೆ ಆಸೆಪಡಲಿಲ್ಲ. ಈ ಮಿತವ್ಯಯದಿಂದಾಗಿ ನಾನು ಯಾರ ಬಳಿಯೂ ಸಾಲಕ್ಕೆ ಕೈಚಾಚುವ ಪರಿಸ್ಥಿತಿ ಬರಲಿಲ್ಲ. ಹೆರಿಗೆಗೆ ಬಿಟ್ಟು, ಒಂದು ದಿನವೂ ಅನಾವಶ್ಯಕವಾಗಿ ನನ್ನ ಹೆಂಡತಿ ತವರಿಗೆ ಹೋಗಿಲ್ಲ. ನನ್ನ ಮಾವನವರೇ ಇಲ್ಲಿಗೆ ಬರೋರು. ನಾನು ನನ್ನ ಅತ್ತೆ ಮಾವನ್ನ ತಂದೆ ತಾಯಿಯಂತೆ ಕಂಡೆ. ನಾದಿನಿ, ಭಾವಮೈದುನರನ್ನು ತಂಗಿ-ತಮ್ಮಂದಿರಂತೆ ಕಂಡೆ. ಅವರ ವಿದ್ಯಾಭ್ಯಾಸ, ಮದುವೆಗೆ ನೆರವಾಗಿದ್ದೀನಿ. ನನ್ನ ಅಭಿವೃದ್ಧೀಲಿ ಅವಳ ಪಾತ್ರ ಹಿರಿದು.

- **ನಿಮ್ಮ ಬದುಕು, ತತ್ತ್ವ ಆದರ್ಶಗಳ ಬಗ್ಗೆ ಹೇಳ್ತೀರಾ?**

ಹಿರಿಯರಿಂದ ನಾನು ಕಲಿತ ಪಾಠ ಸಹನೆ, ಸಹೋದರತ್ವ ಹಾಗೂ ಪ್ರೀತಿ. ಇದುವರೆವಿಗೂ ನಾನು ನನ್ನ ತಮ್ಮಂದಿರ ಹತ್ರ ಜಗಳ ಆಡಿಲ್ಲ. ಇನ್ನೊಬ್ಬರ ಹತ್ರ ಸಹಾಯಕ್ಕೆ ಕೈಚಾಚಿದವನಲ್ಲ. ಇನ್ನೊಬ್ಬರ ವೈಯಕ್ತಿಕ ವಿಚಾರದಲ್ಲಿ ತಲೆ ಹಾಕೋದಿಲ್ಲ. ಇತರರಿಗೆ ತಲೆ ಬಾಗೋನಲ್ಲ. ಹಿಂದಿನ ಕಾಲದಲ್ಲಿ ಐದು ರೂಪಾಯಿ ಸಾಲ ಸಿಕ್ತಿರಲಿಲ್ಲ. ನಾಲ್ಕು ರೂಪಾಯಿಗೆ ೨೦೦ ಸೇರು ಭತ್ತ ಅಥವಾ ೨೦೦ ಸೇರು ರಾಗಿ ಸಿಕ್ತಾ ಇತ್ತು. ಅಂಥಾ ಕಾಲದಲ್ಲಿ ಮೈಸೂರಿನಲ್ಲಿ ತಿಂಗಳಿಗೆ ಮೂರು ರೂಪಾಯಿಯಲ್ಲಿ ಜೀವನ ನೂಕಿದ್ದೇನೆ. ಹನ್ನೆರಡು ಆಣೆ ಮನೆ ಬಾಡಿಗೆ. ಒಂದು ರೂಪಾಯಿಗೆ ಹದಿನಾರು ಸೇರು ಅಕ್ಕಿ ತಂದು ತಿಂಗಳು ತಳ್ಳಿದ್ದೇನೆ. ನನ್ನ ಒಂಬತ್ತನೇ ವಯಸ್ಸಿಂದ ನಾನು ಹೊರಗೇ ಬೆಳೆದದ್ದು. ಕೆಲಸದಲ್ಲಿದ್ದಾಗ ಊರೂರು ತಿರುಗಿದೆ. ಜೀವನವು ಪಾಠ ಕಲಿಸಿದೆ. ದೇವರು ಎರಡು ಕೈ ನೀಡಿದ್ದಾನೆ. ಒಂದು ಉತ್ತಮ ಕೆಲಸ ಮಾಡಿದ್ರೆ, ಮತ್ತೊಂದು ಅಧರ್ಮದ ಕಡೆ ಹೊರಳಬಾರದು. ಹೊರಳಿದರೆ ದೇವರು ಮೆಚ್ಚೋಲ್ಲ. ಇದುವರೆವಿಗೂ ಧರ್ಮದ ಹಾದಿಯಲ್ಲೇ ನಡೆದೆ. ಆದ್ದರಿಂದ ಬದುಕಿನಲ್ಲಿ ಸಂತೃಪ್ತಿ ಇದೆ.

- **ವ್ಯವಸಾಯದಲ್ಲಿ ನಿಮಗಾದ ಅನುಭವ, ಬೆಳೆಗಳ ಬೇಸಾಯದ ಬಗ್ಗೆ ನಿಮಗಿರುವ ಆಳವಾದ ಅರಿವು ಏನು?**

ಸಕಾಲಕ್ಕೆ ಸರಿಯಾಗಿ ನೀರು, ಗೋಡು, ಗೊಬ್ರ ಕೊಡಬೇಕು. ಆಗ ನಾವು ನೆಚ್ಚಿದ ವ್ಯವಸಾಯ ನಮ್ಮನ್ನು ತಬ್ಬಲಿ ಮಾಡೋಲ್ಲ. ವ್ಯವಸಾಯದಲ್ಲಿ ಆತುರಪಡಬಾರದು. ತಾತ್ಸಾರ ಮಾಡಬಾರದು. ರೈತನು ಹಸುಗಳ ಸಾಕಾಣಿಕೆಯನ್ನು ಒಂದು ದಿನವೂ ಬಿಡಬಾರದು. ಹಸು ಸಾಕಣೆ ಮಾಡಿದ್ರಿಂದಲೇ ನಾನು ಉಳಿದಿರೋದು. ನನಗೆ ಹೃದಯದ ಚಿಕಿತ್ಸೆ ಆದಾಗ ನಮ್ಮ ಪುರೋಹಿತರು ಹೇಳಿದ್ರು. 'ಹಸು ಸಾಕು, ಬೇಕಾದ್ರೆ ನಮ್ಮ ಮನೇಲಿರೋದು ಕೊಡ್ತೀನಿ. ಒಂದು ಕರು ಹಾಕೋವರೆಗೆ ಮನೇಲಿಟ್ಟುಕೊಂಡು ಮುಂದಿನ ಕರಾವಿಗೆ ಮನೆಗೆ ಹೊಡೆದುಕೊಡು' ಅಂದ್ರು. ಅದರಂತೆ ಹಸು ಸಾಕಲು ಆರಂಭಿಸಿದೆ. ಹಸುವಿಗೆ ನಾವು ಎಷ್ಟು ಪ್ರೀತಿ ತೋರಿಸ್ತೀವೋ ಅದರ ಎರಡು ಪಟ್ಟು ಪ್ರೀತಿ ನಮಗೆ ಅದು ತೋರಿಸುತ್ತೆ. ಹಸು ಸಾಕಣೆಯಿಂದ ಬಂದ ಮುಕ್ಕಾಲು ಆದಾಯವನ್ನು ಅದಕ್ಕೇ ವಿನಿಯೋಗಿಸುತ್ತಿದ್ದೆ. ಹಸು ಚೆನ್ನಾಗಿದ್ರೆ ಅದು ನಮ್ಮನ್ನು ಕಾಪಾಡುತ್ತೆ. ಸೇವಾಮನೋಭಾವದಿಂದ ಹಸುಗಳನ್ನು ಸಾಕಬೇಕು. ಆದರೆ ಈಗ ಅದನ್ನು ಸಾಕೋರು ಅದ್ರಿಂದ ಸಿಗುವ ಆದಾಯವನ್ನು ಮಾತ್ರ ಗಮನಿಸುತ್ತಾರೆ. ಹಸುವಿನ ಆರೋಗ್ಯ ಗಮನಿಸೋಲ್ಲ. ನಾನು ಬೆಳಗ್ಗೆ ಮೂರು ಘಂಟೆಗೆ ಎದ್ದು ಹಸುವಿಗೆ ಕಡಲೇಕಾಯಿಹಿಂಡಿ, ತೌಡು, ಗೋಧಿ ಬೂಸ, ರವೆ ಬೂಸ, ಜೋಳದ ಹುಡಿ, ರಾಗಿ ಹಿಟ್ಟನ್ನು ತಿಂಡಿ ಅಂತ ನೀಡ್ತಿದ್ದೆ. ದಿನಕ್ಕೆ ಎರಡು ಬಾರಿ ತಿಂಡಿ ನೀಡಿದ ಮೇಲೆ ಹಾಲು ಕರೀತಾ ಇದ್ದೆ. ಗೋವುಗಳ ಸೇವೆ ಬಹಳ ಶ್ರೇಷ್ಠ. ಅದಕ್ಕೇ ಹಿರಿಯರು ಗೋದಾನ ಮಾಡು ಅನ್ನೋರು. ದಾನ ತೊಗೊಂಡು ಹಸುವಿನಿಂದ ತೃಪ್ತಿ ಹೊಂದಿದರೆ, ದಾನ ನೀಡಿದವನಿಗೂ ಸಂತೃಪ್ತಿ.

'ಇನ್ನು ಅಡಿಕೇನ ಆಳಕ್ಕೆ ನೆಡಬೇಕು. ಅದರ ಬೇರು ಆಳಕ್ಕೆ ಇಳಿಯುತ್ತೆ. ತೆಂಗು ತೇಲಿಸಿ ನೆಡಬೇಕು. ಅದರ ಬೇರುಗಳು ಉದ್ದವಾಗಿ ನೆಲದ ಮೇಲೆ ಹರಡಿಕೊಂಡು ರಸಹೀರುತ್ತೆ. ಅಡಿಕೆ ಮರಕ್ಕೆ ಉಪ್ಪು ಹಾಕಿದ್ರೆ ಅದು ಕೀಟನಾಶಕ ಹಾಗೂ ರೋಗನಾಶಕವಾಗಿ ಕೆಲಸ ಮಾಡುತ್ತೆ. ಪೋಷಕಾಂಶ ನೀಡುತ್ತೆ. ನಮ್ಮ ತೋಟದ ಒಂದು ವಿಳ್ಳೇದೆಲೇಲಿ ಅನ್ನ ಕಲೆಸಿ, ರಾಗಿಮುದ್ದೆ ಇಟ್ಟು ಊಟ ಮಾಡಬಹುದಿತ್ತು. ಅಷ್ಟು ದೊಡ್ಡದಾಗಿತ್ತು. ಒಂದೇ ಹದದ ಖಾರ ಇತ್ತು. ಒಂದು ಎಲೆ ಹಂಬು ೨೦ ರಿಂದ ೨೫ ವರುಷ ಇರೋದು. ಎಲೆ ಹಂಬನ್ನು ಸುತ್ತಾ ತೆಕ್ಕೆ ಬಿಟ್ಟು ಅದಕ್ಕೆ ಸುಣ್ಣ, ಕೆಮ್ಮಣ್ಣು, ಮರಳು, ಉಪ್ಪು, ಹಟ್ಟಿಗೊಬ್ಬರ ಹಾಗೂ ಅದೇ ಮೇಲ್ಮಣ್ಣು ಹಾಕಬೇಕು. ಅಡಿಕೆಗೆ ವಿಳ್ಳೇದೆಲೆ ಹಬ್ಬಿಸೋದು ಶ್ರೇಷ್ಠ.

'ರಾಗಿ, ಜೋಳ, ನವಣೆ, ಸಜ್ಜೆ ಬೆಳೆಯನ್ನು ಹೊಂದಿಸಿ ಬೆಳೆಯುವಾಗ ಭೂಮಿ ಸಮತೋಲನವಾಗುತ್ತೆ. ಕೆಲವು ಬೆಳೆಗಳು ಭೂಮಿಯ ಒಳಗೆ ಬೇರು ಇಳಿಸಿ ಸತ್ವ ಹೀರುತ್ವೆ. ಕೆಲವು ಬೆಳೆಗಳು ಭೂಮಿಯ ಮೇಲ್ಪದರದಲ್ಲಿ ರಸ ಹೀರುತ್ವೆ. ಭೂಮಿಯ ಒಳಗಿನ ಗಾಳಿ ಹೊರಗೆ ಹಾಗೂ ಹೊರಗಿನ ಗಾಳಿ ಒಳಗೆ ಹೋದಾಗ ಮಣ್ಣಿನ ಆರೋಗ್ಯ ಸುಧಾರಣೆಯಾಗುತ್ತೆ!' ಎಂದು ಗಹನವಾದ ಸತ್ಯವನ್ನು ಸರಳವಾಗಿ ಹೇಳಿ ಮುಗಿಸಿದರು.

ನಾರಾಯಣಸ್ವಾಮಿಯವರು ತಮ್ಮ ಈಗಿನ ಒಂಟಿತನ ಹೋಗಲಾಡಿಸಿಕೊಳ್ಳಲು ಊರಿನ ಸಕಲ ಜಾತಿಯ ಮಕ್ಕಳಿಗೆ ಆಶ್ರಯ ನೀಡಿದ್ದಾರೆ. ಅವರಿಗೆ ಪುಕ್ಕಟೆಯಾಗಿ ಪಾಠ ಹೇಳ್ತಾರೆ. 'ಯಾವ ವೃತ್ತೀನೂ ಕಡೆಗಣಿಸಬಾರದು, ಸಂತೃಪ್ತಿಯಿಂದ ಕೆಲಸ ಮಾಡಬೇಕು. ಕಸ ಗುಡಿಸುವುದಾದರೂ ಸರಿ ಶಿಸ್ತಾಗಿ ಮಾಡಬೇಕು. ಜಾತಿ ಭೇದ ಮಾಡಬಾರದು' ಎಂದು ಮಕ್ಕಳಿಗೆ ತಿಳಿಹೇಳ್ತಾರೆ. 'ಮಕ್ಕಳೇ ದೇವರು, ಅವರ ಜತೆ ಇದ್ರೆ ಇತರೇ ಚಿಂತೆ ಬರೋಲ್ಲ' ಅಂತ ಇತರರಿಗೆ ಅಧಿಕಾರಯುತವಾಗಿ ಹೇಳ್ತಾರೆ. ಬಿಡುವಿನ ವೇಳೆಗೆ ರೇಡಿಯೋ ಇವರ ಆಪ್ತ ಸಂಗಾತಿ. 'ನಿಮ್ಮ ಮುಂದಿನ ಬಾಳು ಶಾಂತಿಯುತವಾಗಿರಲಿ' ಎಂದು ಹಾರೈಸಿ ಅವರಿಂದ ಬೀಳ್ಕೊಟ್ಟೆವು. ಮುಂದಿನ ದಿನಗಳಲ್ಲಿ ಸಾಲಿಗ್ರಾಮ ಬಿಟ್ಟು ಬೆಂಗಳೂರಿನಲ್ಲಿ ಅವರ ಮಗನ ಮನೆಯಲ್ಲಿ ನೆಲೆಸುವ ನಿರ್ಧಾರ ಮಾಡಿದ್ದಾರೆ ನಾರಾಯಣಸ್ವಾಮಿಗಳು. ಇವರ ಮಗ ಎಸ್.ಎನ್. ಚಂದ್ರಶೇಖರ್ ಹಾಗೂ ಸೊಸೆ ಸ್ವರ್ಣವತಿ ಬೆಂಗಳೂರಿನಲ್ಲಿದ್ದಾರೆ, ಅವರ ಮನೆಯಲ್ಲಿ. ಸಂದರ್ಶನಕ್ಕಾಗಿ ಅವರ ದೂರವಾಣಿ ಸಂಖ್ಯೆ 080-6711555



ಎಲ್ಲ ಜಾತಿಯ ಮಕ್ಕಳನ್ನೂ ಮನೆಯಲ್ಲಿಟ್ಟುಕೊಂಡು ಸಾಕಿ ಉಚಿತವಾಗಿ ಪಾಠ ಹೇಳುವುದನ್ನೇ ದೇವರಪೂಜೆ ಎಂದು ತಿಳಿದ ಎಸ್.ವಿ.ನಾರಾಯಣಸ್ವಾಮಿ ಅವರು ಸಾಲಿಗ್ರಾಮ

6. ಪೂಮಗಾಮೆ

ಸಂಪೂರ್ಣ ಬ್ರಾಹ್ಮಣರೇ ಇದ್ದ ಸಲುವಾಗಿ 'ಪೂರ್ಣಗ್ರಾಮ' ಅಂತ ಹಿಂದೆ ಹೆಸರಾಗಿದ್ದ ಈ ಊರು ಈಗ ಪೂಮಗಾಮೆ ಆಗಿದೆ. ಈ ಊರಿನಲ್ಲಿ ಸಂಕೇತಿಗಳು ನೆಲಸಿ ೨೦೦ ರಿಂದ ೩೦೦ ವರುಷಗಳು ಆಗಿರಬಹುದು. ಹಾಸನದಿಂದ ಅರಸೀಕೆರೆಗೆ ಹೋಗುವ ರಸ್ತೆಯಲ್ಲಿ ಸಿಗುವ ಕೋರವಂಗಲ ಗೇಟ್‌ನಲ್ಲಿ ಎಡಕ್ಕೆ ತಿರುಗಿ ಮೈಲನಹಳ್ಳಿಗೆ ಹೋಗುವ ರಸ್ತೆಯಲ್ಲಿ ತೆರಳಿದ್ರೆ ಸಿಗುವ ಊರು ಪೂಮಗಾಮೆ. ಹಾಸನದಿಂದ ಈ ಗ್ರಾಮ ೧೭ ಕಿಲೋಮೀಟರ್ ದೂರದಲ್ಲಿದೆ. ಹಿಂದೆ ೧೮ ರಿಂದ ೨೦ ಮನೆ ಸಂಕೇತಿಗಳದ್ದು ಇತ್ತಂತೆ. ಈಗ ಅದು ೧೪ಕ್ಕೆ ಇಳಿದಿದೆ. ಒಟ್ಟಾರೆ ಎಲ್ಲಾ ಸೇರಿ ೪೦ ಜನ ಸಂಕೇತಿಗಳು ಇದ್ದಾರೆ. ಎಲ್ಲ ಕುಟುಂಬದ ಮೂಲಕಸುಬು ವ್ಯವಸಾಯ. ಎಲ್ಲರಿಗೂ ಜಮೀನಿದೆ, ಸ್ವಂತ ಮನೆಯಿದೆ. ಊರಲ್ಲಿ ಎರಡು ಪುಟ್ಟ ಕೆರೆಯಿದೆ - ಬೆಳದಿಂಗಳಲ್ಲಿ ತುಂಬಿದ್ರೆ ಅಮಾವಾಸ್ಯೇಲಿ ಖಾಲಿಯಾಗುವಂತಹದ್ದು. ಆದರೂ ಅಂತರ್ಜಲದ ಮಟ್ಟ ಉತ್ತಮವಾಗಿದೆ. ಕೆರೆ ಒಣಗಿದ್ರೂ ಕೆರೆ ಪಕ್ಕದ ಕಲ್ಯಾಣಿ ಒಣಗುತ್ತಿರಲಿಲ್ಲವಂತೆ. ನೇರವಾಗಿ ಬೋರ್‌ವೆಲ್‌ಗೆ ಡೀಸಲ್ ಮೋಟಾರ್ ಅಳವಡಿಸಿ ನೀರೆತ್ತುವ ಈ ಊರಿನ ಪಿ.ಎಸ್.ಸುಬ್ಬರಾಯರ ಮಗ ಪಿ.ಎಸ್. ಜಗನ್ನಾಥ ಅವರ ತೋಟದಲ್ಲಿ ಗಂಗೆ ಉಕ್ಕಿ ಹರಿದಿದ್ದಾಳೆ. ತೋಟದಲ್ಲಿ ಕಂಗು, ತೆಂಗು ಹುಲುಸಾಗಿ ಬೆಳೆದಿದೆ. ಸಂಕೇತಿಗಳದ್ದು ಎಂದಿನಂತೆ ರಾಮಮಂದಿರವಿದೆ. ವಾರಕ್ಕೊಮ್ಮೆ ಎಲ್ಲರೂ ಸೇರಿ ಭಜನೆ ಮಾಡುತ್ತಾರೆ. ರಾಮೋತ್ಸವದ ಆಚರಣೇನೂ ಇದೆ. ಕಾಲೇಶ್ವರ ಹಾಗೂ ಗೋಪಾಲಕೃಷ್ಣನ ಎರಡು ದೇವಸ್ಥಾನ ಇದೆ. ಪೂಮಗಾಮೆಯಲ್ಲಿ ಹಾಲಿನ ಡೈರಿ ಇದೆ. ಹೈಸ್ಕೂಲ್ ಇದೆ. ನೇರವಾದ ಟಾರ್ ರಸ್ತೆ ಇದೆ. ಸಂಕೇತಿಗಳ ಐದಾರು ಕುಟುಂಬ ಹಸು ಸಾಕಿ ಹಾಲನ್ನು ಡೈರಿಗೆ ಹಾಕಿ ಆದಾಯ ಕಾಣ್ತಿವೆ. ಈ ಪೂರ್ಣಗ್ರಾಮದ ಕೃಷಿ ಚಿತ್ರಣ, ಕೃಷಿಕರ ಮಾತಿನ ರೂಪದಲ್ಲಿ ನಿಮ್ಮ ಮುಂದಿದೆ.



ತಾನಾಗಿ ಉಕ್ಕಿ ಬಂದ ನೀರಿನ ದಣಿಯಾದ ರೈತ ಪಿ.ಎಸ್.ಜಗನ್ನಾಥ: ಪೂಮಗಾಮೆ

ಅ) ಕೆ. ನಂಜುಂಡಯ್ಯ ಇ/ಮ ಕೇಶವಯ್ಯ

ಪೂಮಗಾಮೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223802

ವ್ಯವಸಾಯಸ್ಥನಿಗೆ ವಿದ್ಯೆ ಒಂದು ಆಸ್ತಿ. ಅದನ್ನು ಯಾರೂ ಕದಿಯುವಂತಿಲ್ಲ. ವಿದ್ಯೆ ಇಲ್ಲದಿದ್ರೆ ಪರಾವಲಂಬಿ ಬದುಕು. ವಿದ್ಯೆ ಕಲಿತು ವ್ಯವಸಾಯ ಮಾಡೋನು ಬೇರೆ ಕಡೆ ಹೋಗಿ ವಿಚಾರ ತಿಳಿಯಬಹುದು, ವ್ಯವಸಾಯದಲ್ಲಿ ಅಭಿವೃದ್ಧಿ ಸಾಧಿಸಬಹುದು.



ತಮ್ಮ ತೋಟದಿಂದ ತಂದ ಶ್ರಾದ್ಧ ಪರಿಕರಗಳ ಮುತುವರ್ಜಿ: ಕೆ.ನಂಜುಂಡಯ್ಯ: ಪೂಮಗಾಮೆ

ಹನುಗನಾಳಿನಲ್ಲಿ ಮಾಸ್ತರಾಗಿದ್ದ ಕೇಶವಯ್ಯನವರು ದೈವಾಧೀನರಾದಾಗ ಅವರ ಮಗ ಕೆ. ನಂಜುಂಡಯ್ಯನವರಿಗೆ ಆರು ವರುಷ. ತಾಯಿ ನಾಚಾರಮ್ಮ ಪೂಮಗಾಮೆಯ ರಾಮಾವಧಾನಿಗಳ ಮಗಳು. ಗಂಡ ತೀರಿಹೋದ ಮೇಲೆ ಮಗನೊಂದಿಗೆ ತವರು ಸೇರಿದ್ರು. ನಾಚಾರಮ್ಮನವರ ತಂದೆಗೆ ನಾಲ್ಕು ಜನ ಹೆಣ್ಣುಮಕ್ಕಳು. ಗಂಡುಮಕ್ಕಳು ಇರಲಿಲ್ಲ. ರಾಮಾವಧಾನಿಗಳು ವೇದಾಧ್ಯಯನ ಸಂಪನ್ನರು, ಸಾತ್ತ್ವಿಕರು. ಹೊಲಗದ್ದೆಯನ್ನು ವಾರಕ್ಕೆ ಕೊಟ್ಟು ಬಾಗಾಯ್ತನ್ನು ಸ್ವತಃ ಮಾಡುತ್ತಿದ್ದವರು. ಕೆ.ನಂಜುಂಡಯ್ಯನವರ ಪತ್ನಿ ಕಮಲಮ್ಮ ಹಾಸನ(ತಾ) ಮುಗಳೂರಿನ ಪಟೇಲ್ ಸುಬ್ಬಯ್ಯ ಹಾಗೂ ಚನ್ನಮ್ಮ ಅವರ ಮಗಳು. ಕಮಲಮ್ಮನವರಿಗೆ ೭೨ ವರುಷವಾದ್ರೆ, ನಂಜುಂಡಯ್ಯನವರಿಗೆ ೭೬ ವರುಷ. ಸಮೀಪದ ಬಂಧುಗಳ ಮನೆಯಲ್ಲಿ ವೈದೀಕ ಇದ್ದುದರಿಂದ ಅದಕ್ಕೆ ಬೇಕಾದ ಸಾಮಾನು ಸರಂಜಾಮು ತೋಟದಿಂದ ತಂದು ಅಡಿಕೆ ಪಟ್ಟೆಯಲ್ಲಿ ಕಟ್ಟುವ ತರಾತುರಿಯಲ್ಲಿದ್ರು. ಅವರ ಮನೆಯಲ್ಲಿ ಮಾತಿಗಿಳಿದಾಗ ಮಧ್ಯಾಹ್ನದ ಸಮಯ.

'ನಾನು L.S. ವರೆಗೆ ಓದಿದೆ. ಮುಂದೆ ಓದುವ ಮನಸ್ಸಿತ್ತು. ತಾತನ ಮನೆಯಲ್ಲಿ ಗಂಡು ದಿಕ್ಕಿಲ್ಲದ ಕಾರಣ, ಅನಿವಾರ್ಯವಾಗಿ ವಿದ್ಯಾಭ್ಯಾಸ ಮೊಟಕು ಮಾಡಬೇಕಾಯ್ತು. ನನ್ನ ೧೮ನೇ ವಯಸ್ಸಿನಲ್ಲಿ ವ್ಯವಸಾಯ ಆರಂಭಿಸಿದೆ. ಕೆರೇಲಿ ನೀರಿದ್ರೆ ಭತ್ತ ಬೆಳೀತಿದ್ವಿ. ಖುಷ್ಕಿ, ತರಿ, ಬಾಗಾಯ್ತು ಅಂತ ೧೫ ಎಕರೆ ಜಮೀನಿತ್ತು. ರಾಗಿ ಬೆಳೆಯೋವು, ತೋಟದಲ್ಲಿ ತೆಂಗು, ಅಡಿಕೆ, ಬಾಳೆ ಇತ್ತು. ಹಿಂದೆ ವ್ಯವಸಾಯದಲ್ಲಿ ತೃಪ್ತಿ ಇತ್ತು. ಈಗ ವ್ಯವಸಾಯ ನೋವು ಕೊಡ್ತಿದೆ. ಸರಿಯಾಗಿ ಮಳೆ ಬೆಳೆ ಆಗೋಲ್ಲ, ಕೂಲಿ ಕಾರ್ಮಿಕರು ಸಿಕ್ಕೋಲ್ಲ. ನಮ್ಮ ಊರಲ್ಲಿ ಒಟ್ಟು ೧೦೦ ಬೋರ್‌ವೆಲ್ ಇದೆ. ಎಲ್ಲಾ ಸೇರಿ ೧೫೦ ಕುಟುಂಬ ಇರಬಹುದು.

'ಎಲ್ಲರಿಗೂ ಜಮೀನಿದೆ. ೩೬೫ ದಿನವೂ ಬೆಳೆ ಬೆಳೀತಾರೆ. ನೀರನ್ನು ಇತರರಿಂದ ಪಡೆದು ಬೆಳೆಯುವ ಕಾರ್ಮಿಕ ವರ್ಗವೂ ಇದೆ. ಸಮಯಕ್ಕೆ ಸರಿಯಾಗಿ ಕೂಲಿ ಕೆಲಸ ಆಗೋಲ್ಲ. ಎಷ್ಟು ಕಷ್ಟಪಟ್ರೂ ಪ್ರತಿಫಲ ಇಲ್ಲ. ಸರಿಯಾಗಿ ವ್ಯವಸಾಯ ಮಾಡೋನಿಗೆ ವರುಷದ ೩೬೫ ದಿನವೂ ಕೆಲಸ ಇರುತ್ತೆ. ನನಗೂ ವಯಸ್ಸಾಯ್ತು. ಕೂಲಿಯಾಳುಗಳ ಮೇಲಿನ ಅವಲಂಬನೆ ಜಾಸ್ತಿ. ಆದ್ದರಿಂದ ವ್ಯವಸಾಯ ದುಸ್ತರವಾಗಿದೆ. ನಾವು ಸಂಕೇತಿಗಳೇ ಸೇರಿ ಮುಯ್ಯಿ ಆಳು ರೀತಿ ಮಾಡೋಣ ಅಂದ್ರೆ ಒಬ್ಬೊಬ್ಬರದ್ದು ಒಂದೊಂದು ಬೆಳೆ ಇದೆ. ಇಲ್ಲಿ ಸರಿಯಾಗಿ ದುಡಿಯುವ ರೈತರು ಐದಾರು ಜನ ಸಿಕ್ಕಬಹುದು ಅಷ್ಟೆ. ಉಳಿದವರೆಲ್ಲಾ ನನ್ನಂತೆ ವಯಸ್ಸಾದವರು' ಎಂದು ನಿಟ್ಟುಸಿರುಬಿಡುತ್ತಾರೆ. 'ನಿಮ್ಮ ಮಗನನ್ನೇಕೆ ವ್ಯವಸಾಯಕ್ಕೆ ತರಬಾರದು' ಅಂತ ಕೇಳಿದ್ರೆ, 'ನನಗೆ ಇರೋನು ಒಬ್ಬ ಮಗ, WIPROನಲ್ಲಿದ್ದಾನೆ. ವ್ಯವಸಾಯದ ಬಗ್ಗೆ ಒಳ್ಳೆಯ ಅಭಿಪ್ರಾಯ ಅವರ ಆತ್ಮದಿಂದ ಮೂಡಿಬರಬೇಕು. ತಂದೆತಾಯಿ ಪ್ರಯತ್ನ ಪಟ್ಟರೆ ಆಗೋಲ್ಲ. ಮಗನಿಗೆ ವ್ಯವಸಾಯದ ಆಸಕ್ತಿ ಇಲ್ಲ' ಎನ್ನುತ್ತಾರೆ.

'ನಮ್ಮ ಊರಲ್ಲಿ ಆಲೂಗೆಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಮೆಂತ್ಯ, ಧನಿಯ, ಮೆಣಸಿನಕಾಯಿ, ಕೋಸು, ಕಬ್ಬು ಎಲ್ಲಾ ಬೆಳೀತಾರೆ. ನನಗೆ ಮನಸ್ಸು ಬರಲಿಲ್ಲ. ಎಷ್ಟು ಹೊರಲು ಸಾಧ್ಯವೋ ಅಷ್ಟು ಹೊರಬೇಕು ಅಷ್ಟೆ. ನಾನು ಅಡಿಕೆ, ತೆಂಗು, ಭತ್ತ, ರಾಗಿ ಬೆಳೆ ಬಿಟ್ರೆ ಬೇರೆ



ಹೊಸದಾಗಿ ಅಗೆತ ಮಾಡಿ ಮುಗಿಸಿರುವ ತೋಟ: ಕೆ.ನಂಜುಂಡಯ್ಯ: ಪೂಮಗಾಮೆ

ಬೆಳೆಯಲಿಲ್ಲ' ಅಂತಾರೆ ನಂಜುಂಡಯ್ಯ.

ನಿಮ್ಮ ಹೆಂಡತಿಯ ಬಗ್ಗೆ ಹೇಳಿ ಅಂದಾಗ, 'ನನಗೆ ೧೮ನೇ ವಯಸ್ಸಿನಲ್ಲಿ ಮದುವೆ ಆಯ್ತು, ನನ್ನ ಹೆಂಡತಿ ಎಲ್ಲಾ ಭಾಗದಲ್ಲೂ ಸಹಕರಿಸಿದ್ದಾಳೆ. ನಾನು ಮನೇಲಿಲ್ಲದಾಗ ದನಾನೂ ಮೇಯಿಸ್ತಾಳೆ. ತೋಟದಲ್ಲಿ ನಾನು ಅಗೆತ ಹಾಗೂ ಗುದ್ದಲಿ ಕೆಲಸ ಮಾಡುವಾಗ ಬುತ್ತಿಯನ್ನು ಅಲ್ಲೇ ತಂದಿದ್ದಾಳೆ. ಹೊರಗೆ ಸುತ್ತುವ ಆಸೆ ಅವಳಿಗಿಲ್ಲ. ಇಬ್ಬರೂ ಒಬ್ಬರಿಗೊಬ್ಬರು ಹೊಂದಿಕೊಂಡಿದ್ದೀವಿ. ಅವಳಿಲ್ಲದಿದ್ರೆ ನಾನು ಇಷ್ಟೆಲ್ಲಾ ಮಾಡೋಕೆ ಆಗ್ತಿರಲಿಲ್ಲ' ಅಂತ ಹೆಮ್ಮೆಯಿಂದ ಹೇಳುತ್ತಾರೆ.

ವ್ಯವಸಾಯದಲ್ಲಿ ನಿಮ್ಮ ಸಾಧನೆ, ತಿಳುವಳಿಕೆ ಏನು ಅಂದಾಗ 'ನೋಡಿ, ಅಡಿಕೆಗೆ ಕಪ್ಪುಮಣ್ಣು ಬಹಳ ಸೂಕ್ತ. ಸಮಯಕ್ಕೆ ಸರಿಯಾಗಿ ಅಗೆತ, ಕಳೆ ತೆಗೆಸೋದು, ನೀರು, ಗೊಬ್ರ ನಿರ್ವಹಣೆ ಮಾಡಿದ್ರೆ ಇಳುವರಿ ಜಾಸ್ತಿ. ಮುಂಗಾರಿಗೆ ಶ್ರಾವಣ ಮಾಸದಲ್ಲಿ ಒಂದು ಬಾರಿ, ಹಿಂಗಾರಿಗೆ ಕಾರ್ತೀಕ ಮಾರ್ಗಶಿರದಲ್ಲಿ ಒಂದು ಬಾರಿ ಅಗೆತ ಮಾಡಬೇಕು. ಮರದ ಸುತ್ತಾ ಗುಣಿ ಮಾಡಿ ಕೆಮ್ಮಣ್ಣು, ಹಟ್ಟಿಗೊಬ್ಬರ ಹಾಕಬೇಕು. ನಾನು ನನ್ನ ಎರಡೂವರೆ ಎಕರೆ ಅಡಿಕೆ ತೋಟಕ್ಕೆ ೫೦೦ ಕೇಜಿ ಸುಫಲಾ (೧೫.೧೫.೧೫) ನಾಲ್ಕು ಚೀಲ ಪೊಟ್ಯಾಷ್, ೧೦೦೦ ಕೇಜಿ ಬೇವಿನಹಿಂಡಿ, ೧೦೦೦ ಕೇಜಿ ಹೊಂಗೆ ಹಿಂಡಿ ಹಾಕ್ತೀನಿ. ಬೇವು, ಹೊಂಗೆ ಹಿಂಡೀನ ೧೦ ರಿಂದ ೧೨ ವರುಷದಿಂದ, ಪ್ರತಿ ವರ್ಷ ಬಳಸುತ್ತೀದ್ದೀನಿ. ರೋಗ, ಕೀಟಗಳು ಅಡಿಕೆಗೆ ಬಂದಿಲ್ಲ. ಐವತ್ತು ವರುಷದ ಹಳೆಯ ಅಡಿಕೆ ತೋಟದಲ್ಲಿ, ಎರಡೂವರೆ ಎಕರೆಗೆ ೧೨೫ ರಿಂದ ೧೩೦ ಕ್ವಿಂಟಾಲ್ ಅಡಿಕೆ ಸಿಕ್ತಿದೆ. ತೋಟದ ಬೋರ್‌ವೆಲ್‌ನಲ್ಲಿ ೧೬೫ ಅಡಿಗೆ ೫ ಇಂಚು ನೀರು ಸಿಕ್ಕಿದೆ. ತೋಟಕ್ಕೆ ನೀರಿನ ಸಮಸ್ಯೆ ಇಲ್ಲ. ಅಡಿಕೆ ತೋಟದಲ್ಲಿ ಬಾಳೆ, ತೆಂಗು ಇದೆ. ಅದಕ್ಕೀಂತ ಪ್ರತ್ಯೇಕ ವ್ಯವಸಾಯ ಬೇಕಿಲ್ಲ. ಆದ್ರೆ ಈ ಭಾಗದಲ್ಲಿ ಬಾಳೆಗೆ ತುಂಬಾ ರೋಗ ಇದೆ. ಸರಿಯಾಗಿ ಬರ್ತಿಲ್ಲ. ಇಲ್ಲಿ ಗೋಮಾಳ ಇಲ್ಲದ್ದರಿಂದ, ಸೌಲಭ್ಯ ಇಲ್ಲದ್ದರಿಂದ ಹಸುಗಳನ್ನು ನಾನು ಸಾಕಿಲ್ಲ. ಹಾಲು ಹಾಗೂ ಹಸುವಿನ ಗೊಬ್ಬರ ಕೊಳ್ಳಲೇಬೇಕು. ನಾನಂತೂ ಎದ್ರೆ ತೋಟ, ಬಿದ್ರೆ ಮನೆ ದಿನಚರಿಯವನು. ಇದನ್ನೇ ಶಿಸ್ತಾಗಿ ಪಾಲಿಸಿದೀನಿ' ಅಂತಾರೆ.



ತಮ್ಮ ತೋಟದಲ್ಲಿ ನಂಜುಂಡಯ್ಯ: ಹಿನ್ನೆಲೆಗೆ ತಿಳಿನೀರಿನ ಬಾವಿ: ಪೂಮಗಾಮೆ

ಹಿರಿಯರಾದ ನಂಜುಂಡಯ್ಯನವರಿಗೆ ಮಗ ವ್ಯವಸಾಯ ಮುಂದುವರೆಸುತ್ತಾನೆ ಎಂಬ ನಂಬಿಕೆ ಇಲ್ಲ. 'ನನ್ನ ನಂತರ ನಾನೇ ಇರೋದಿಲ್ಲವಲ್ಲಾ, ಅದರ ಚಿಂತೆ ಯಾಕೆ?' ಎಂದು ನಗುತ್ತಾರೆ. ಹಿಂದೆ ಹಳ್ಳಿಗಳಲ್ಲಿ ಸಂಕೇತಿಗಳು ವಾಸಿಸುವ ಮನೆಗಳು ಓಣಿಯ ರೀತಿಯಲ್ಲಿ ಇರುತ್ತಿದ್ದವಂತೆ. ಅದಕ್ಕೆ ನಂಜುಂಡಯ್ಯನವರ ಮನೆ ಉದಾಹರಣೆ. ಈ ವಿಶೇಷ ಓಣಿಯ ಭಾವಚಿತ್ರ ತೆಗೆದು ಮುಂದಿನ ಮನೆಗೆ ಅಡಿಯಿಟ್ಟೆವು.

ಆ) ಪಿ.ಎನ್. ಸುಬ್ಬರಾಯ ಇ/ಮ ನಾರಾಯಣಾವಧಾನಿ

ಪೂಮಗಾಮೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223641

ಬಹಳ ಕಷ್ಟ ಜೀವನ ನಮ್ಮದು. ಒಪ್ಪತ್ತು ಊಟ ಮಾಡಿದ್ರೆ ಇನ್ನೊಂದು ಹೊತ್ತು ಹಸಿದುಕೊಂಡು ಇರ್ತಿದ್ವು. ಇದ್ದ ಜಮೀನು ಮಾರಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಮದುವೆ ಮಾಡಿದ್ರು ನನ್ನ ತಂದೆ ತಾಯಿ. ನಾನು ಮೇಷ್ಟ್ರು; ಆದ್ರೂ ಜಮೀನಿನ ಮೇಲೆ ಆಸಕ್ತಿ ಇತ್ತು. ಸರ್ಕಾರಿ ಕೆಲಸ ಬಿಡಲು ಆಗದೆ ಶನಿವಾರ, ಭಾನುವಾರದ ಕೃಷಿಕ ಆದೆ.



ಎಂ.ಸಾವಿತ್ರಮ್ಮ-ಪಿ.ಎನ್.ಸುಬ್ಬರಾಯ ದಂಪತಿ: ಪೂಮಗಾಮೆ

ಪೂಂಗಾಮೆಯ ನಾರಾಯಣಾವಧಾನಿ ಹಾಗೂ ಮೊಸಳೆಯ ಗೌರಮ್ಮನವರ ಹಿರಿಯ ಮಗ ಪಿ.ಎನ್. ಸುಬ್ಬರಾಯರಿಗೆ ಈಗ ೬೩ರ ಹರೆಯ. ಇಳಿವಯಸ್ಸಿನಲ್ಲೂ ವ್ಯವಸಾಯದ ಕೆಲಸವನ್ನು ನಿಷ್ಠೆಯಿಂದ ಮಾಡುವ ಇವರು, ಇರುವ ಒಂದು ಎಕರೆ ಒಂದು ಗುಂಟೆ ತೋಟದಲ್ಲಿ ಅಭಿವೃದ್ಧಿಯಾಗಲು ಹರ ಸಾಹಸ ಮಾಡುತ್ತಿದ್ದಾರೆ. 'ಬದುಕಿನ ನೋವು ನಲಿವನ್ನು ನಮ್ಮೊಂದಿಗೆ ಹಂಚಿಕೊಳ್ಳಿ' ಎಂದಾಗ, ಮನೆಯ ಕಂಬಕ್ಕೆ ಒರಗಿ ನಿಂತು ಹೇಳಲು ಆರಂಭಿಸಿದ್ರು. ಕೇಳುವ, ಧ್ವನಿ ಮುದ್ರಿಸುವ ಕೆಲಸವಷ್ಟೆ ನಮಗೆ ಉಳಿದದ್ದು.

'ನಮ್ಮ ತಂದೆಗೆ ೧೨ ಎಕರೆ ಜಮೀನಿತ್ತು. ಬಹಳ ಕಷ್ಟಜೀವಿ. ಒಬ್ಬರೇ ಗುದ್ದಲಿ ಹಿಡಿದು ಕೆಲಸ ಮಾಡೋರು. ಬಹಳ ಬಡತನ. ಕಂಡೋರ ಮನೆ ಕೂಲಿನಾಲಿ ಮಾಡಿ ಮಕ್ಕಳನ್ನು ಸಾಕಿದ್ರು. ತಂದೆ ಅಬಲಸ್ಥರಾದ್ರು. ಒಂದು ಕೈಗೆ paralysis ಹೊಡೀತು. ನನ್ನ ತಾಯಿ, ಮನೆ ಕೆಲಸ ಆದ ಮೇಲೆ ದೊನ್ನೆ ಕಟ್ಟೋರು, ಎಲೆ ಚುಚ್ಚೋರು. ಇಲ್ಲೇ ಹಂಗರಹಳ್ಳೀಲಿ ಸುಕ್ಕಾಲಿಗರು ಇದ್ದಾರೆ. ಅವರಿಂದ ಎರಡು-ಮೂರು ಗಾಡಿ ಮುತ್ತುಗದ ಎಲೆ ತರಿಸಿ, ಹಿತ್ತಲಲ್ಲಿ ಒಣಗಿಸಿ, ದಿನವೆಲ್ಲಾ ಎಲೆ ಚುಚ್ಚೋರು. ಎಲೆ ಚುಚ್ಚಿ ಚುಚ್ಚಿ ಅವರಿಗೆ ಎರಡು ಕಣ್ಣೂ ಕಾಣದಂತಾಯ್ತು. ನಾವು ಮೂರು ಜನ ಮಕ್ಕಳು. ಎರಡು ಗಂಡು, ಒಂದು ಹೆಣ್ಣು. ನಾನೇ ಹಿರಿಯ ಮಗ. ನಾನು SSLC ಓದಿದೆ, ೬೧ರಲ್ಲಿ ಮೇಷ್ಟರ ಕೆಲಸ ಸಿಕ್ತು. ಕಡಿಮೆ ಸಂಬಳ. ನನಗೆ ಒಬ್ಬ ಮಗ, ಮೂರು ಹೆಣ್ಣು ಮಕ್ಕಳು. ಬಡತನ ಬೇರೆ. ಕಷ್ಟದಲ್ಲಿ ಮಕ್ಕಳನ್ನು ಓದಿಸಿದೆ. ವ್ಯವಸಾಯದ ಮೇಲೆ ಹುಚ್ಚುಹಂಬಲ. ಇದ್ದ ಒಂದು ಎಕರೆ ಒಂದು ಗುಂಟೇಲಿ ೫೨ ಗಿಡ ತೆಂಗು ಇತ್ತು. ಶನಿವಾರ ಸ್ಕೂಲ್ ಮುಗಿಸಿ ಬಂದ ಮೇಲೆ, ಒಂದು ಘಂಟೆಗೆ ತೋಟಕ್ಕೆ ಹೋಗಿ ಸಂಜೆ ಆರು ಘಂಟೆಯವರೆಗೆ ಕೆಲಸ ಮಾಡ್ತಿದ್ದೆ. ಫಸಲು ಬರುವ ೨೮ ಗಿಡ ಇತ್ತು. ಬರುತ್ತಿದ್ದ ಅಲ್ಪಸ್ವಲ್ಪ ಫಸಲು ಕಳ್ಳಕಾಕರ ಪಾಲಾಗ್ತಿತ್ತು. ನಾನು ಓದುವಾಗ ವಾರಾನ್ನ ಮಾಡಿ ಓದಿದೆ. ಕಷ್ಟ ನನ್ನನ್ನು ಕಂಗೆಡಿಸಲಿಲ್ಲ. ಕಷ್ಟದ ಜೀವನದಲ್ಲೇ ಮಕ್ಕಳನ್ನು ದಡ ಸೇರಿಸಿದೆ. ರಿಟೈರ್ ಆದ ಮೇಲೆ, ಪ್ರತಿ



ಹೂವು ತುಳಸಿ ಸುತ್ತಿದ ಅಡಿಕೆಪಟ್ಟೆಯನ್ನು ಇರುಕಿಕೊಂಡಿರುವ ಪಿ.ಎನ್.ಸುಬ್ಬರಾಯ: ಪೂಮಗಾಮೆ



ಈ ವಯಸ್ಸಿನಲ್ಲೂ 'ಆಗೆತ' ನನಗೊಂದು ಲೆಕ್ಕವಲ್ಲ: ಪಿ.ಎನ್.ಸುಬ್ಬರಾಯ: ಪೂಮಗಾಮೆ.

ತಿಂಗಳೂ ೨೧೦೦ ರೂ pension ಬರ್‍ತಿದೆ. ಹಣದ ಮುಗ್ಗಟ್ಟಿನಿಂದ ವ್ಯವಸಾಯ ಅಭಿವೃದ್ಧಿ ಮಾಡಲು ಆಗ್ತಿಲ್ಲ. ಈಗ ನನಗೆ ೬೩ ವರುಷ. ವ್ಯವಸಾಯ ಮಾಡಿದ್ರೆ ಮನೆ ಕಷ್ಟ ನಿವಾರಣೆ ಆಗಬಹುದು ಅಂತ ಈಗಲೂ ಗುದ್ದಲಿ ತೊಗೊಂಡು ಅಗೀತೀನಿ. ತೋಟದ ಕೆಲಸವೆಲ್ಲಾ ನಾನೇ ಮಾಡ್ತೀನಿ. ಎರಡು ಉಕ್ಕೆ ಹೊಡೆಸೋ ಬದಲು ಒಂದು ಉಕ್ಕೆ ಹೊಡಿಸ್ತಾ ಇದ್ದೀನಿ. ಹಣದ ಮುಗ್ಗಟ್ಟಿನಿಂದ ಬೋರ್‌ವೆಲ್ ಕೊರೆಸಲು ಆಗಿಲ್ಲ. ಅದಕ್ಕೇ ಗಿಡಗಳು ಬೇಸಗೇಲಿ ಒಣಗುತ್ವೆ, ಮಳೆಗಾಲದಲ್ಲಿ ಚಿಗುರುತ್ವೆ. ಅವು ಚಿಗುರಿದಾಗ ನನ್ನ ಕನಸುಗಳೂ ಚಿಗುರುತ್ವೆ. ಅದಕ್ಕೆ ೧೫೦ ಅಡಿಕೆ ಗಿಡಗಳನ್ನು ಈಗ ಕೂರಿಸಿದೀನಿ. ಮುಂದಿನ ದಿನಗಳು ಚೆನ್ನಾಗುತ್ತವೆ ಎಂಬ ನಿರೀಕ್ಷೆ ನನ್ನದು. ಇರುವ ವಿಚಾರವನ್ನು ನಮ್ರವಾಗಿ ನಿಮಗೆ ತಿಳಿಸಿದ್ದೇನೆ. ಇದರಲ್ಲಿ ಕಪಟವಿಲ್ಲ' ಎಂದು ನುಡಿದು ಮೌನವಾದ್ರು.

ಪಿ.ಎನ್. ಸುಬ್ಬರಾಯರ ಪತ್ನಿ ಎಂ. ಸಾವಿತ್ರಮ್ಮನವರು ಮೊಸಳೆಯ ತಿಮ್ಮರಾಯಪ್ಪ(ಭೋಜಪ್ಪ) ಹಾಗೂ ರುಕ್ಮಿಣಮ್ಮ ಅವರ ಮಗಳು. ಗಂಡನ ಜತೆ ಸೇರಿ ಸಂಸಾರದ ರಥವನ್ನು ಎಳೆದ ಅರ್ಧಪಾಲು ಇವರಿಗೂ ಸಲ್ಲುತ್ತೆ. ಹಿಂಜರಿಯುತ್ತಲೇ, ಆಷಾಢದ ಜಡಿಮಳೆಯಂತೆ ಮಾತು ಆರಂಭಿಸಿದ ಇವರು, ಅನಂತರ ಶ್ರಾವಣ ಭಾದ್ರಪದದ ಜೋರು ಮಳೆಯಾದರು. ಮನದಾಳದ ಮೌನಕ್ಕೆ ಮಾತಿನ ರೂಪ ನೀಡಿದ್ರು.

'ನನ್ನ ತಾಯಿ ತಂದೇನೂ ಬಹಳ ಕಷ್ಟಪಟ್ಟವರು. ನಾವು ಐದು ಜನ ಮಕ್ಕಳು; ಮೂರು ಗಂಡು, ಎರಡು ಹೆಣ್ಣು. ನಾನು ಮೂರು ವರುಷದವಳಿರಬೇಕಾದ್ರೆ ತಂದೆ ತೀರಿಕೊಂಡ್ರು. ತಾಯಿ ಅವರಿವರ ಮನೆ ಕೂಲಿ ಮಾಡಿ ಸಾಕಿದ್ರು. ನಮಗೆ ಅರ್ಧ ಎಕರೆ ತೋಟ, ಅರ್ಧ ಎಕರೆ ಗದ್ದೆ ಇತ್ತು. ತಾಯೀನೇ ಸ್ವಂತ ಜಮೀನಿನಲ್ಲಿ ದುಡಿಯೋರು. ಅಣ್ಣಂಗೆ ೧೨ ವರುಷ. ಅವನು ತಾಯಿಗೆ ನೆರವು ನೀಡ್ತಿದ್ದ. ನನ್ನ ತಾಯಿ ಕಂಡೋರ ಮನೆ ಯಾತದಲ್ಲಿ ಭತ್ತ ಕುಟ್ಟಿ, ಕೂಲಿ ಕೆಲಸಕ್ಕೆ ಹೋಗೋರು; ಗದ್ದೆ ನಾಟಿ ಮಾಡೋರು, ಪೈರು ಕುಯ್ಯೋರು, ಹೊರೆ ಹೊರೋರು, ಅಡಿಕೆ ಸುಲಿಯೋಕೂ ಹೋಗೋರು. ನಾನು ಮೊಸಳೇಲೆ ೭ನೇ ತರಗತೀವರೆಗೆ ಓದಿದೆ. ಮನೇಲಿ ಹಸು ಸಾಕಿದ್ದೆ; ಭತ್ತ ಕುಟ್ಟಿ, ರಾಗಿ ಬೀಸಿ ಮನೆಕೆಲಸ ಮಾಡ್ತಿದ್ದೆ. ನನ್ನ ೨೧ನೇ ವಯಸ್ಸಿಗೆ ಮದುವೆಯಾಯ್ತು. "ಕೊಟ್ಟು-ತಂದು" ಸಂಬಂಧ ನಂದು. ನಮ್ಮೆ ಜಮಾನರ ತಂಗೀನ, ನನ್ನ ಎರಡನೇ ಅಣ್ಣಂಗೆ ಕೊಟ್ಟಿರೋದು. ನಮ್ಮ ಮದುವೇಲಿ ನಾವು ಹೆಣ್ಣು ಗಂಡು ಮೊದಲು ನೋಡಲಿಲ್ಲ. ಹಿರಿಯರು ನಿಶ್ಚಯಿಸಿದ್ರು. ಮದುವೆ ಮಂಟಪದಲ್ಲಿ ನಾನು ನನ್ನ ಮನೆಯವರನ್ನು ನೋಡಿದ್ದು. ಗಂಡನ ಮನೆ ಹೊಕ್ಕಾಗ ಇಲ್ಲಿ ಕಷ್ಟ ಬೆಟ್ಟದಷ್ಟು ಇತ್ತು. "ಹುಟ್ಟಿದ ಮನೆ ಶಿವರಾತ್ರಿ ಅಂದ್ರೆ, ಹೊಕ್ಕಮನೆ ಏಕಾದಶಿ" ಅನ್ನೋ ಪರಿಸ್ಥಿತಿ ಇತ್ತು. ಇವತ್ತು ಊಟ



ಹುಲ್ಲಿನ ಹೊರೆ ಹೊತ್ತು ತರುತ್ತಿರುವ ಪಿ.ಎನ್.ಸುಬ್ಬರಾಯ: ಪೂಮಗಾಮೆ.

ಮಾಡಿದ್ರೆ ನಾಳೆಗೆ ಹ್ಯಾಗೆ ಅನ್ನುವ ಚಿಂತೆ. ನನ್ನ ಅತ್ತೆ ಎಲೆ ಹಚ್ಚತಿದ್ರು. ನಾನು ಬಂದ ಮೇಲೆ ಅದನ್ನು ನಿಲ್ಲಿಸಿ ದೊನ್ನೆ ಕಟ್ಟಲು ಆರಂಭಿಸಿದೆ. ಇದು ಸುಲಭ, ಹಾಗೂ ತವರು ಮನೆ ಅನುಭವ ಇತ್ತು. ನನ್ನ ಯಜಮಾನರು, ಸುತ್ತಾಮುತ್ತಾ ಬಾಳೆ ತೋಟದಿಂದ ಹಾಗೂ ಕುದುರುಗುಂಡಿಯಿಂದ ಬಾಳೆ ತರಗು, ಎಲೆ ತರ್ತಿದ್ರು. ನಾನು ದಿನಕ್ಕೆ ಒಂದು ಸಾವಿರ ದೊನ್ನೆ ಕಟ್ತಿದ್ದೆ. ನಮ್ಮೆಜಮಾನರು ಅದನ್ನು ಮಾರಿಕೊಂಡು ಬರೋರು. ಎರಡು ರೂಪಾಯಿ ಸಿಗ್ತಿತ್ತು. ಅದ್ರಿಂದ ಸಾಮಾನು ತಂದು ಜೀವನ ನಡೆಸಿದ್ವಿ. ಮಕ್ಕಳನ್ನು ಓದಿಸಿದ್ವಿ. ದೊಡ್ಡ ಕುಟುಂಬ ನಮ್ಮದು. ಹಾಗಾಗಿ ಸುಮಾರು ೨೦ ವರುಷ ದೊನ್ನೆ ಕಟ್ಟಿದೆ. ಕಷ್ಟ ಅನುಭವಿಸಿಯೇ ಇಷ್ಟು ಮುಂದೆ ಬಂದ್ವಿ. ನನ್ನ ಹೆಣ್ಣು ಮಕ್ಕಳಿಗೂ ಹೇಳ್ತಿರುತ್ತೀನಿ, "ಕಷ್ಟಪಟ್ಟು ಜೀವನ ನಡೆಸಬೇಕು" ಅಂತ. ನಮ್ಮತ್ತೆ ಸ್ವಲ್ಪ ಜೋರು. ನಾನೇ ಅವರನ್ನು ಅನುಸರಿಸಿ ನಡೆದೆ. ನನ್ನ ಸೊಸೆಯನ್ನು ನಾನು ನನ್ನ ಹೆಣ್ಣುಮಕ್ಕಳಂತೆ ಕಂಡಿದ್ದೀನಿ. ಮೊದಲಿನಿಂದಲೂ ಒಟ್ಟು ಕುಟುಂಬದಲ್ಲೇ ಬದುಕಿದವಳು ನಾನು. ಒಟ್ಟಾಗಿ ಬಾಳುವುದರಲ್ಲೇ ಸುಖ ಕಂಡಿದ್ದೀನಿ. ನಮ್ಮ ಗ್ರಹಚಾರಕ್ಕೆ ಒಟ್ಟು ಕುಟುಂಬಗಳು ಒಡೆದ್ರೆ ಅದಕ್ಕೆ ಹೆಣ್ಣುಮಕ್ಕಳನ್ನು ದೂಷಿಸಬಾರದು. ಇದು ನನ್ನ ಮನವಿ. ಕಿರಿಯರಿಗೆ ನಾನು ಹೇಳೋದು, ಕಷ್ಟಪಟ್ರೆ ಸುಖವಿದೆ ಅಂತ ಮಾತ್ರ!' ಅಂತ ಹೇಳಿ ಸುಮ್ಮನಾದ್ರು. ಕಷ್ಟಗಳ ಬಿರುಮಳೆ ಬಿದ್ದ ಮೇಲೆ ನೆಲೆಸುವ ಶಾಂತಿ ಮನೆಯಲ್ಲಿ ಆಗ ನೆಲೆಸಿತ್ತು. ವಿಚಾರಗಳನ್ನು ಚತು ತಪ್ಪದೆ ಹೇಳಿ ಮುಗಿಸಿದ ನಿರುಮ್ಮಳ ಭಾವನೆ ಆ ದಂಪತಿಗಳಲ್ಲಿತ್ತು. ಕಾಫಿ ಕುಡಿದು ಮುಂದಿನ ಮನೆಯ ಹಾದಿ ಹಿಡಿದೆವು.

ಇ) ಪಿ.ಆರ್. ರಾಮಣ್ಣ ಇ/ಮ ರಾಮಚಂದ್ರಯ್ಯ

ಪೂಮಗಾಮೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223803

ಒಂದು ಕುಟುಂಬ ವ್ಯವಸಾಯದಲ್ಲಿ ನೆಮ್ಮದಿಯ ನೆಲೆ ಕಾಣಬೇಕಾದ್ರೆ ಎರಡು ಎಕರೆ ಗದ್ದೆ, ಎರಡು ಎಕರೆ ಹೊಲ ಹಾಗೂ ಒಂದು ಎಕರೆ ತೋಟ ಇರಬೇಕು. ಆಗ ತಕ್ಕಷ್ಟು ಉತ್ಪನ್ನ ತೊಗೊಂಡು ಸಂತೃಪ್ತವಾಗಿರಬಹುದು. ಜಮೀನು ಜಾಸ್ತಿ ಆದ್ರೆ ಖರ್ಚು ಜಾಸ್ತಿ ಆಗುತ್ತೆ; ಆದಾಯ ಕಡಿಮೆ ಅಷ್ಟೆ.

ಕೃಷ್ಣಾಪುರದ ಕೇಶವಮೂರ್ತಿ ಹಾಗೂ ವೆಂಕಟಲಕ್ಷಮ್ಮ ಅವರ ಎರಡನೆಯ ಮಗನೇ ರಾಮಣ್ಣ. ಇವರ ಸೋದರತ್ತೆ ಹಾಗೂ ಮಾವನಿಗೆ ಗಂಡು ಮಕ್ಕಳಿಲ್ಲದ ಕಾರಣ ಇವರನ್ನು ಪೂಮಗಾಮೆಯ ರಾಮಚಂದ್ರಯ್ಯ ಹಾಗೂ ಗೌರಮ್ಮ ಅವರಿಗೆ ದತ್ತು ನೀಡಿದ್ರಂತೆ. ಹಾಗಾಗಿ ತಮ್ಮ ಐದನೇ ವಯಸ್ಸಿನಲ್ಲಿ ಪೂಮಗಾಮೆಗೆ ಬಂದ್ರು ಪಿ.ಆರ್. ರಾಮಣ್ಣ. ಇವರ ಪತ್ನಿ ಸ್ವರ್ಣಗೌರಿ ಪೂಮಗಾಮೆಯ ಪಿ.ಎಸ್. ನಾಗಪ್ಪ ಹಾಗೂ ರತ್ನಮ್ಮ ಅವರ ಮಗಳು. ರಾಮಣ್ಣನವರಿಗೆ ಈಗ ೬೦ ವರುಷ, ಸ್ವರ್ಣಗೌರಿ ಅವರಿಗೆ ೫೦ ವರುಷ. ಮನೆಯ ಗೋಡೆಗೆ ಒರಗಿ ಕುಳಿತ ರಾಮಣ್ಣನವರನ್ನು ನಾವು ಮಾತಿಗೆಳೆದೆವು.



ತಮ್ಮ ತೆಂಗಿನಮಕ್ಕಿಯಲ್ಲಿ ಬೆಳೆಸಿರುವ ಜೋಳದ ಪೈರಿನ ನಡುವೆ ಪಿ.ಆರ್.ರಾಮಣ್ಣ

- **ನಮಸ್ಕಾರ ರಾಮಣ್ಣನವರೆ . . .**

  ನಮಸ್ಕಾರ

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ . . .**

ನಮ್ಮ ಸೋದರತ್ತೆ-ಮಾವನಿಗೆ ದತ್ತು ನಾನು. ಸೋದರತ್ತೆ ಮಗಳು ಗುಂಡಮ್ಮ (ಲಕ್ಷ್ಮಮ್ಮ) ಅಂತ ಇದ್ರು. ಅವರನ್ನು ೧೬ನೇ ವಯಸ್ಸಿಗೆ ಮದುವೆ ಮಾಡಿ ಬರಗೂರಿಗೆ ಕೊಟ್ಟಿತ್ತು. ಒಂಬತ್ತು ತಿಂಗಳಿಗೆ ಗಂಡ ತೀರಿಕೊಂಡ್ರು. ನನ್ನ ಮಾವ

ಮನೆಗೆ ಮಗಳನ್ನು ಕರೆದುಕೊಂಡು ಬಂದ್ರು. ಆಮೇಲೆ ಮಾವಾನೂ ತೀರಿಕೊಂಡ್ರು. ಮನೆಗೆ ಗಂಡು ದಿಕ್ಕಿರಲಿಲ್ಲ. ನಾವು ನಮ್ಮ ತಂದೆಗೆ ನಾಲ್ಕು ಗಂಡು, ಮೂರು ಹೆಣ್ಣು. ಎರಡನೆಯವನು ನಾನು. ಐದು ವರುಷದವನಿದ್ದಾಗ ನನ್ನನ್ನು ಇಲ್ಲಿಗೆ ದತ್ತು ಕೊಟ್ರು. ಹಾಸನದಲ್ಲಿ SSLCವರೆಗೆ ಓದಿದೆ. ಮನೇಲಿ ಇಬ್ಬರು ಹೆಣ್ಣುಮಕ್ಕಳು ಮಾತ್ರ-ನಮ್ಮ ಅತ್ತೆ ಹಾಗೂ ಅವರ ಮಗಳು. ಹಾಗಾಗಿ ಊರಿಗೆ ಬಂದೆ.

- **ನೀವು ಓದುವಾಗ ವ್ಯವಸಾಯ ಯಾರು ನಿರ್ವಹಿಸಿದ್ರು?**

  ಸೋದರತ್ತೆ ಮಗಳೇ ನಿಂತು ಮಾಡೋರು. ೨೦ ಎಕರೆ ಜಮೀನಿತ್ತು. ಆಳುಕಾಳನ್ನು ಇಟ್ಟು ಮಾಡಿಸೋರು. ಗಂಡಸಿಗಿಂತ ಹೆಚ್ಚಾಗಿ ಅವರು ಬೇಸಾಯ ಮಾಡಿದ್ರು. ಹಿಂದೆ ತುಂಬಾ ಬಡತನ. ಸಮೀಪದ ಕಾಡಿನಿಂದ ಮುತ್ತುಗದ ಎಲೆ ತಂದು, ಎಲೆ ಹಚ್ಚಿ ಮಾರಿ ಸಂಪಾದನೆ ಮಾಡಿ ದುಡಿದು ಸಾಲ ಸೋಲ ತೀರಿಸಿ, ಜಮೀನನ್ನು ಉಳಿಸಿದ್ರು. ಅದು ಮಹತ್ಸಾಧನೆಯೇ.

- **ನಿಮ್ಮ ವಿಚಾರ ಹೇಳಿ . . .**

  ನಾನು ನನ್ನ ಹದಿನಾಲ್ಕನೇ ವಯಸ್ಸಿಗೆ ವ್ಯವಸಾಯ ಆರಂಭಿಸಿದೆ. ಸ್ವಂತ ಅಗೆತ ಮಾಡ್ತಿದ್ದೆ. ತೋಟದ ಬಾವಿಗಳಿಂದ ನೀರೆತ್ತಿ ಗಿಡಗಳಿಗೆ ಹಾಕಿ ತೋಟ ಉಳಿಸಿದೆ. ನಾನು ಜಮೀನು ರೂಢಿಸಲಿಲ್ಲ. ಆದ್ರೆ ಪೈರು ರೂಢಿಸಿದೀನಿ. ಹಳೇಕಾಲದ ಅಡಿಕೆ ತೆಂಗು ಇತ್ತು. ನಾನು ೨೫೦ ತೆಂಗು, ಒಂದು ಸಾವಿರ ಅಡಿಕೆ ಬೆಳಿದಿದೀನಿ. ಕೆರೇಲಿ ನೀರಿದ್ದಾಗ ಭತ್ತ ಬೆಳೀತಿದ್ದೆ. 1R-20, 1R-30 ತಳಿ ಹಾಕ್ತಿದ್ದೆ. ನೀರು ಕಡಿಮೆ ಇದ್ದಾಗ ಮಂಗಳ ತಳಿ ಬಳಸುತ್ತಿದ್ದೆ. ನೀರಿಲ್ಲದಾಗ ಹೊಲದಲ್ಲಿ ರಾಗಿ, ಗದ್ದೇಲಿ ಮೆಂತ್ಯ, ಧನಿಯ, ಬೆಳ್ಳುಳ್ಳಿ, ಜೋಳ ಬೆಳೀತಿದ್ದೆ. ಆಲೂಗೆಡ್ಡೇನ ಲೋಡ್‌ಗಟ್ಟಲೆ ಬೆಳೆದಿದೀನಿ. ಈಗ ವಯಸ್ಸಾಯ್ತು. ಕೂಲಿ ಜನ ಸಿಕ್ಕಲ್ಲ, ಹಾಗಾಗಿ ಬೇರೆಯವರ ಕೈಲಿ ಭತ್ತ ಮಾಡಿಸ್ತಾ ಇದ್ದೀನಿ. ತೋಟ ಮಾತ್ರ ನಾನು ನೋಡಿಕೊಂಡು ನೆಮ್ಮದಿಯಾಗಿದ್ದೀನಿ.

- **ಪೂಮಗಾಮೆಯಲ್ಲಿ ಅಂತರ್ಜಲ ಹೆಚ್ಚು. ಇದಕ್ಕೇನು ಕಾರಣ?**

  ಸುತ್ತಮುತ್ತಲ ಪ್ರದೇಶ ಎತ್ತರವಾಗಿದೆ. ಇದು ತಗ್ಗಿನ ಪ್ರದೇಶ. ಜಲವಸತಿ ಜಾಸ್ತಿ. ಹಿಂದೆ ನಮ್ಮ ತೋಟದ ಐದು ಆರು ಅಡಿ ಬಾವೀಲಿ ನೀರು ಹೊರಗೆ ಹರೀತಿತ್ತು. ಈಗ ಸುತ್ತ ಬೋರ್‌ವೆಲ್ ಬಂದು ತೋಡು ಬಾವಿ ಬತ್ತಿದೆ. ನಮ್ಮದೇ ಬೋರ್ ಇದೆ. 6HP ಮೋಟರ್ ಹಾಕಿದೀನಿ. ಎರಡೂವರೆ ಇಂಚು ಪೈಪ್ ತಡೆಯೋಲ್ಲ. ಅಷ್ಟು ನೀರಿದೆ.

- **ತೆಂಗಿನ ಬೇಸಾಯವನ್ನು ಯಾವ ರೀತಿ ಮಾಡಬೇಕು ಅಂತೀರಿ?**

  ಮೊದಲು ನಡುಪ್ರಾಯದ (೪೦ ರಿಂದ ೫೦ ವರುಷ) ತೆಂಗಿನ ಮರ ನೋಡಿ, ಅದರ ಬೀಜ ಆರಿಸಬೇಕು. ಬೀಜದ ಕಾಯಿ ಉದ್ದ ಇರಬೇಕು. ದಪ್ಪ ಇರಬಾರದು. ಇಂಥ ಬೀಜದಿಂದ ಬೆಳೆದ ಮರದ ಇಳುವರಿ ಜಾಸ್ತಿ. ಈ ಬೀಜವನ್ನು ಎರಡು ಅಡಿ ಸಾಲಿನಿಂದ - ಸಾಲು, ಎರಡು ಅಡಿ ಬೀಜದಿಂದ ಬೀಜಕ್ಕೆ ಬಿತ್ತಿ, ಮೂರು ವರುಷವಾದ ಬಳಿಕ ಕಿತ್ತು ನಾಟಿ ಮಾಡಬೇಕು. ಇದು ಸುಲಭದ ವಿಧಾನ. ಕೆಲವು ಪ್ರದೇಶಗಳಲ್ಲಿ ಮೊದಲು ೧೦ ಅಡಿ ಉದ್ದ ೧೦ ಅಡಿ ಅಗಲದ ಜಾಗದಲ್ಲಿ ೫೦೦ ತಳಿ ನಾಟಿ ಮಾಡ್ತಾರೆ. ಒಂದು ವರುಷದ ನಂತ್ರ ಅದನ್ನು ಕಿತ್ತು ಎರಡು ಅಡಿ, ಎರಡು ಅಡಿ ದೂರಕ್ಕೆ ಒಂದೂವರೆ ಗುಂಟೆ ಪ್ರದೇಶದಲ್ಲಿ ನಾಟಿ ಹಾಕ್ತಾರೆ. ಎರಡೂವರೆ ವರುಷದ ಬಳಿಕ ಮುಖ್ಯ ಜಮೀನಿನಲ್ಲಿ ನಾಟಿ ಮಾಡ್ತಾರೆ. ಕೃಷಿಕರು ಅವರಿಗೆ ಯಾವ ವಿಧಾನ ಅನುಕೂಲವೋ ಆ ವಿಧಾನ ಅನುಸರಿಸಬಹುದು. ಎಕರೆಗೆ ೪೦ ತೆಂಗಿನ ಸಸಿ ಕೂರಿಸುವುದೇ ಸರಿಯಾದ ವಿಧಾನ. ಎರಡು ಘನ ಅಡಿಗಳ ಗುಂಡಿ ತೆಗೆದು ಗುಂಟೆಗೆ ಒಂದರಂತೆ ಸಸಿ ಕೂರಿಸಬೇಕು. ಅದಕ್ಕಿಂತ ಹೆಚ್ಚು ಸಸಿ ಕೂರಿಸಿದ್ರೆ ಮರಗಳು ಹೆಚ್ಚಾಗುತ್ವೆ, ಇಳುವರಿ ಕಡಿಮೆಯಾಗುತ್ತೆ. ತೆಂಗಿನ ಗಿಡ ನಾಟಿ ಮಾಡುವ ಮೊದಲು ಬೇಸಿಗೇಲಿ ಗುಂಡೀ ತೆಗೆದು ಬಿಸಿಲಿಗೆ ಒಣಗಲು ಬಿಡಬೇಕು. ಮಳೆಗಾಲದಲ್ಲಿ ತಳಿಲು ನೆಟ್ಟು ಸುತ್ತ ಮರಳು ಹಾಗೂ ಮಣ್ಣುಮಿಶ್ರಿತ ನೀರು ಹಾಕಬೇಕು. ಒಂದೆರಡು ದಿನ ಬಿಟ್ಟು ನೀರು ಆರಿದ ಮೇಲೆ ಸುತ್ತ ಭದ್ರವಾಗಿ ತುಳಿದ್ರೆ ಮಣ್ಣು ಬಿಗಿಯಾಗುತ್ತೆ, ತೆಂಗು ಬೇರು ಬಿಡುತ್ತೆ. ಸಸಿ ಹೋಗೋಲ್ಲ. ಗಿಡ ಹಾಕಿದ ಐದನೇ ವರುಷಕ್ಕೆ ಹುಸಿ ಫಸಲು ಬಂದು ಉದುರುತ್ತೆ. ಆರನೇ ವರುಷದಿಂದ ಗಟ್ಟಿ ಫಸಲು. ನನ್ನ ತೋಟದ ಪ್ರತಿ ಮರ ೫೦ ರಿಂದ ೧೦೦ ಕಾಯಿ ಸರಾಸರಿ ಬಿಡುತ್ತೆ. ಎರೆ ನೆಲದಲ್ಲಿ ಮರಳುಮಿಶ್ರಿತ ಕೆಂಪು ನೆಲದಲ್ಲಿ ಬರುವಂತೆ ತೆಂಗು ಬರೋಲ್ಲ. ರುಚಿ ಇರುತ್ತೆ; ಕಾಯಿ ದಪ್ಪವಾಗಿ, ಕೊಬ್ಬರಿ ತೆಳ್ಳಗಾಗುತ್ತೆ. ಇದು ನನ್ನ ಅನುಭವ.



ಸಂಜೆ ಮನೆಗೆ ಹೊರಡುವ ಸಿದ್ಧತೆ: ಪಿ.ಆರ್.ರಾಮಣ್ಣ : ಪೂಮಗಾಮೆ

- **ಅಡಿಕೆ ಬೇಸಾಯದ ಬಗ್ಗೆ ಹೇಳಿ.**


ಬೇಸಿಗೇಲಿ ಅಡಿಕೆ ಕುಯ್ದಾಗ ಒಳ್ಳೆಯ ಗೋಟನ್ನು ಆರಿಸಬೇಕು. ಆಗಲೇ ಗೇಣಿಗೊಂದರಂತೆ ನಾಟಿ ಮಾಡಿ ನೀರು ಬಿಡಬೇಕು. ಮುಂಗಾರಿನ ಹೊತ್ತಿಗೆ ಮೊಳಕೆ ಬರುತ್ತೆ. ಎರಡು ವರುಷಕ್ಕೆ ಸಸಿ ನಾಟಿಗೆ ಸಿದ್ಧವಾಗುತ್ತೆ. ಆರಿದ್ರೆ ಮಳೆಯಲ್ಲಿ ಅಡಿಕೆ ನೆಡಬೇಕು. ಅಡಿಕೆ ನೆಡುವಾಗ ಮಳೆಗಾಲ ಇರಬೇಕು. ಮುಖ್ಯವಾಗಿ ಮೋಡ ಇರಬೇಕು. ಐದು ವರುಷಕ್ಕೆ ಫಸಲು ಬರುತ್ತೆ. ನನ್ನ ತೋಟದ ಒಂದು ಮರದಲ್ಲಿ ಒಂದರಿಂದ ಎರಡು ಕೇಜಿವರೆಗೆ ರೇಖೆ ಮಾಡಿದ ಅಡಿಕೆ ಸಿಗ್ತಿದೆ. ಅಡಿಕೆಗೆ ಹಸಿರು ಸೊಪ್ಪಿನ ಗೊಬ್ಬರ ಹಾಕಬೇಕು. ವರುಷಕ್ಕೆ ಎರಡು ಬಾರಿ ಬೇರು ಹರಿಯದ ಹಾಗೆ ಅಗೆತ ಮಾಡಬೇಕು. ಉಕ್ಕೆ ಹೊಡೆದ್ರೆ ಇಳುವರಿ ಜಾಸ್ತಿ, ಮರ ಬೇಗ ಹೋಗುತ್ತೆ. ಅಗೆತ ಮಾಡಿದ್ರೆ ೭೦ ವರುಷ ಬದುಕುವ ಮರ, ಉಕ್ಕೆ ಹೊಡೆದ್ರೆ ಬರೀ ೫೦ ವರುಷ ಬದುಕುತ್ತೆ. ಚೆನ್ನಾಗಿ ವ್ಯವಸಾಯ ಮಾಡಿದ್ರೆ ಹತ್ತು ವರುಷ ಕಳೆದ ಮೇಲೆ ಅಡಿಕೆಯ ಇಳುವರಿ ಹೆಚ್ಚುತ್ತೆ. ೪೦ ವರುಷದವರೆಗೂ ಗರಿಷ್ಠ ಇಳುವರಿ ಕೊಡುತ್ತೆ. ಆಮೇಲೆ ಇಳುವರಿ ಕಡಿಮೆ. ಹಳೇ ಮರಗಳು ಹೋಗೋ ಮೊದಲು, ಮಧ್ಯದಲ್ಲಿ ಹೊಸ ಅಡಿಕೆ ಸಸಿ ಕಟ್ಟಬೇಕು. ಮೊದಲು ೧೦ ಅಡಿಗೆ ಅಡಿಕೆ ಹಾಕಿದ್ರೆ ಇದು ಸಾಧ್ಯ. ಎರಡು ಸಾಲಿನ ಮಧ್ಯದಲ್ಲಿ ಸಸಿ ಬೆಳೆಸಬಹುದು. ಇಳುವರಿಗೆ ತೊಂದರೆ ಆಗೋಲ್ಲ. ನೀರು ಗೊಬ್ರ ಕೊಟ್ರೆ ಇಳುವರಿ ಉತ್ತಮವಾಗುತ್ತೆ. ವಿಳ್ಳೇದೆಲೆ ಹಾಕಿದ್ರೆ ಅಡಿಕೆ ತೋಟ ಉತ್ಕೃಷ್ಟವಾಗುತ್ತೆ.

- **ಅಡಿಕೆ ತೋಟದಲ್ಲಿ ಪೂರಕ ಬೆಳೆ ಬಾಳೆ ಬೇಸಾಯ ಹ್ಯಾಗೆ ಮಾಡಬೇಕು?**

ಅಡಿಕೆ ಸಸಿ ಹಾಕೋ ಮೊದಲು ನೆರಳಿಗೆ ಬಾಳೆಕಂದು ಹಾಕಬೇಕು. ಅದೇ ತೋಟದಲ್ಲಿ ಉಳಿಯುತ್ತೆ. ಬೇರ‍್ಯಾವ ಪ್ರೇರಣೇನೂ ಬೇಡ. ಅಡಿಕೆಗೆ ಮಾಡಿದ ವ್ಯವಸಾಯವೇ ಸಾಕು. ಬೇಕಾದಷ್ಟು ಕಂದು ಬುಡದಲ್ಲಿ ಉಳಿಸಿ ಉಳಿದವನ್ನು ಕತ್ತರಿಸಿದರೆ ಸಾಕು. ಆದರೆ ಈಗ ಬಾಳೆಗೆ ಕಟ್ಟೆರೋಗ ಬಂದು ಹೋಗಿದೆ. ಒಂದೂ ಉಳಿದಿಲ್ಲ.

- **ಹಸು ಸಾಕಣೆಯನ್ನು ನೀವು ಮಾಡ್ತಿದ್ದೀರಾ?**

ಎರಡು ನಾಟಿ ಹಸು ಇದೆ, ಎರಡು ಎಮ್ಮೆ ಇದೆ. ಊರಲ್ಲೇ ಡೈರಿ ಇದೆ. ನಮ್ಮ ಊರು, ಹಾಗೂ ನಮ್ಮ ಪಕ್ಕದ ಕೋಡಿಹಳ್ಳಿ ಸೇರಿ ಬೆಳಗ್ಗೆ ೧೪ ಕ್ಯಾನ್ (ಒಂದು ಕ್ಯಾನ್=೪೦ ಲೀಟರ್), ಸಂಜೆ ೧೪ ಕ್ಯಾನ್ ಹಾಲು ಡೈರಿಗೆ ಹೋಗುತ್ತೆ. ನಾನೂ ಡೈರಿಗೆ ೧೦ ಲೀಟರ್ ಹಾಲು ಹಾಕ್ತೀನಿ. ಮನೇಲಿ ನಂದಿನಿ ಹಸುವಿನ ಆಹಾರದ ಜತೆಗೆ, ಪಾಲಿಶ್ ತೌಡು, ಮಿಲ್‌ಮಾಡಿದ ಹಲ್ಲುಜೋಳ ಕೊಡ್ತೀನಿ. ಹಾಲಿನ ಇಳುವರಿ ಜಾಸ್ತಿ ಆಗುತ್ತೆ. ಮುಂಗಾರಿಗೆ ಸಿಹಿಜೋಳ, ಹಿಂಗಾರಿಗೆ ಒಗರು ಜೋಳ, ವರುಷದ ಎಲ್ಲಾ ಕಾಲದಲ್ಲೂ ಮುಸುಕಿನಜೋಳ



ನೀರಿನ ಶೇಖರಣೆಗಾಗಿ ತೋಟದಲ್ಲಿ ಕಟ್ಟಿಸಿರುವ ದೊಡ್ಡ ನೀರಿನ ತೊಟ್ಟಿಯ ಕಟ್ಟೆಯ ಮೇಲೆ ಕೂತ ಪಿ.ಆರ್.ರಾಮಣ್ಣ : ಪೂಮಗಾಮೆ

ಮೇವಿಗಾಗಿ ಬೆಳೀತೀವಿ. ಹಸು ಸಾಕಣೆಯಿಂದ ನನಗೆ ತುಂಬಾ ಅನುಕೂಲ ಆಗಿದೆ. ಕುಡಿಯಲು ಹಾಲು, ಮೊಸರು ಸಿಗುತ್ತೆ. ಗೋಬರ್‌ಗ್ಯಾಸ್ ಇದೆ. ಅದರ ಅನಿಲದಿಂದ ಐದು ಜನರ ಅಡುಗೆ ಆಗುತ್ತೆ. ಗೋಬರ್ ರಾಡಿ ತೋಟಕ್ಕೆ ಗೊಬ್ಬರ ಆಗುತ್ತೆ. ಎಮ್ಮೆ ಸಗಣಿ ಕಾವು ಜಾಸ್ತಿ. ಗೋಬರ್ ಘಟಕದಲ್ಲಿ ಬಳಸಿದ್ರೆ ಅನಿಲದ ಇಳುವರಿ ಜಾಸ್ತಿ.

- **ವ್ಯವಸಾಯಕ್ಕೆ ಪೂರಕವಾದ ವ್ಯವಸ್ಥೇನ ಏನೇನು ಮಾಡಿದ್ದೀರಾ?**

  ಈಗಿನ ವಿದ್ಯುತ್ (ಶಕ್ತಿ) ಸಮಸ್ಯೇನ ಗಮನದಲ್ಲಿ ಇಟ್ಟುಕೊಂಡು, ತೋಟದಲ್ಲಿ ೪೦ ಅಡಿ ಉದ್ದ, ೨೦ ಅಡಿ ಅಗಲ, ೮ ಅಡಿ ಆಳದ ಸಿಮೆಂಟ್ ತೊಟ್ಟಿ ಕಟ್ಟಿದ್ದೇನೆ. ಕರೆಂಟ್ ಇದ್ದಾಗ ತೊಟ್ಟಿಯಲ್ಲಿ ನೀರು ತುಂಬುತ್ತೆ. ಈ ತೊಟ್ಟಿಯಿಂದ ಜಮೀನು ಪೂರ್ತಾ ನೀರು ಹರಿಯುವಂತೆ ಪೈಪ್ ಜೋಡಿಸಿದ್ದೇನೆ. ತೋಟದಿಂದ ಗದ್ದೆಯವರೆಗೂ ಪೈಪ್ ಹೂಳಿಸಿದ್ದೇನೆ. ಬೇಸಿಗೆ ಬೆಳೆಗೆ ನೀರಿನ ತೊಂದರೆ ಆದಾಗ ಇದ್ರಿಂದ ನೀರು ಕೊಡಬಹುದು.

- **ವ್ಯವಸಾಯದ ಬದುಕು ನಿಮಗೆ ತೃಪ್ತಿ ತಂದಿದೆಯಾ?**

  ವ್ಯವಸಾಯ ತೃಪ್ತಿ ತಂದಿದೆ. ಮನಸ್ಸಿಗೆ ನೆಮ್ಮದಿ ಇದೆ. ಹೆಂಡತಿಯ ಸಹಕಾರವೂ ಚೆನ್ನಾಗಿದೆ. ಈಗ ಹಳ್ಳೀಲೂ Townನಲ್ಲಿ ಇರುವಂತೆ ಸಂಸಾರ ಮಾಡಬಹುದು. ದಿಲ್ಲಿ ಸೌಲಭ್ಯ ಎಲ್ಲಾ ಹಳ್ಳೀಲಿದೆ. ನನ್ನ ಪ್ರಕಾರ ಮುಂದಿನ ಪೀಳಿಗೆ ಹಳ್ಳಿಯಲ್ಲೇ ನಿಂತು ವ್ಯವಸಾಯ ಮುಂದುವರಿಸಿದ್ರೆ ಒಳ್ಳೆಯದು.

- ಇದುವರೆಗೂ ನಿಮ್ಮ ಅಮೂಲ್ಯವಾದ ವಿಚಾರ ನಮ್ಮೊಂದಿಗೆ ಹಂಚಿಕೊಂಡ್ರಿ, ನಮಸ್ಕಾರ.

  ನಿಮಗೂ ನನ್ನ ನಮಸ್ಕಾರಗಳು.

ಈ) ಪಿ.ಎನ್. ಯೋಗಾನರಸಿಂಹ ಇ/ಮ ಪಿ.ವೈ. ನರಸಿಂಹಯ್ಯ
ಪೂಮಗಾಮೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223804

ನಾವು ಕುಡಿಯುವ ನೀರನ್ನು ಕೆರೆಯಿಂದ ತರ್ತಿದ್ವಿ. ದನಕರುಗಳ ಮೈತೊಳೆದು ಅದು ಕುಡಿಯಲು ಯೋಗ್ಯವಾಗಿರಲಿಲ್ಲ. ನಾನು ಒಮ್ಮೆ ಬೆಂಗಳೂರಿನ ಕೋಣನಕುಂಟೆಯಲ್ಲಿರುವ ನಮ್ಮ ಅಣ್ಣನ ಮನೆಗೆ ಹೋಗಿದ್ದೆ. ಅಲ್ಲಿ ಒಬ್ಬ ರೈತ ಬೋರ್‌ವೆಲ್ ಕೊರೆಸಿ, ಸುಮಾರು ೨೦೦ ಮನೆಗೆ ಕುಡಿಯುವ ನೀರಿನ supply ಮಾಡ್ತಿದ್ದ. ನಮ್ಮ ಊರಲ್ಲೂ ಹೀಗೇ ಮಾಡಬಾರದೇಕೆ ಅನ್ನಿಸ್ತು. ಬ್ರಾಹ್ಮಣ ಮಂಡಳೀಲಿ ಚರ್ಚೆ ಮಾಡಿದ್ವಿ. ಒಂದು ಬೋರ್ ಕೊರೆಸಿ, ನಾವೇ ಕಾಲುವೆ ತೆಗೆದು, ಪೈಪ್ ಜೋಡಿಸಿ ಮನೆ ಮನೆಗೆ ಸಿಹಿ ನೀರು ಬರುವಂತೆ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಬರುವ ಕರೆಂಟ್ ಬಿಲ್ಲನ್ನು ಎಲ್ಲರೂ ಹಂಚಿಕೊಳ್ತೀವಿ. ಇದು ನಮ್ಮ ಸಹಬಾಳ್ವೆ.



ಮುಸುಕಿನ ಜೋಳದ ಹೊಲದಲ್ಲಿ ಪಿ.ಎನ್.ಯೋಗಾನರಸಿಂಹ: ಪೂಮಗಾಮೆ

ಪೂಮಗಾಮೆಯ ಪಿ.ವೈ. ನರಸಿಂಹಯ್ಯ ಹಾಗೂ ಹೇಮಗಿರಿ ಕುಪ್ಪಳ್ಳಿಯ ರಾಮಲಕ್ಷ್ಮಮ್ಮ ಅವರಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಒಬ್ಬರು ಪಿ.ಎನ್. ಯೋಗಾನರಸಿಂಹ. ಈಗ



ತಮ್ಮ ಕೇರಿಗೆ ತಮ್ಮದೇ ನೀರಿನ ಜಾಲ: ಸಂಪರ್ಕ ಕಟ್ಟಿಕೊಳ್ಳುತ್ತಿರುವ ಪಿ.ಎನ್.ಯೋಗಾನರಸಿಂಹ ದಂಪತಿ: ಪೂರ್ಣಿಮಗಾಮೆ

ಯೋಗಾನರಸಿಂಹ ಅವರಿಗೆ ೪೮ ವರುಷ. ಚಿಲ್ಕುಂದದ ವೆಂಕಟಗಿರಿಯಪ್ಪ ಹಾಗೂ ಗೌರಮ್ಮ ದಂಪತಿಯ ಮಗಳು ಶ್ರೀಮತಿ ಇವರ ಧರ್ಮಪತ್ನಿ. ಶ್ರೀಮತಿಯವರಿಗೆ ೪೨ ವರುಷ. ಶ್ರೀಮತಿಯವರು ಕೃಷಿ ಕುಟುಂಬದಿಂದ ಬಂದವರು. ಇವರಿಗೂ ವ್ಯವಸಾಯದ ಬಗ್ಗೆ ಆಸಕ್ತಿ. ಗಂಡನ ವ್ಯವಸಾಯಕ್ಕೆ ತುಂಬಾನೇ support ಮಾಡಿದ್ದಾರೆ. 'ನನ್ನ ಹೆಂಡತಿ ನನ್ನ ಬಲಗೈ ಇದ್ದಂತೆ' ಎಂದು ಹೆಮ್ಮೆಯಿಂದ ಹೇಳ್ತಾರೆ ಯೋಗಾನರಸಿಂಹ. 'ಮನೇಲಿ ಆಳುಕಾಳುಗಳು ಇಲ್ಲ. ದನಕರುಗಳ ನಿರ್ವಹಣೆ, ಆಳುಕಾಳುಗಳಿಗೆ ಹಾಗೂ ಮನೆ ಮಂದಿಗೆ ಊಟ ತಿಂಡಿ ಎಲ್ಲ ಅವಳದ್ದೇ ನಿರ್ವಹಣೆ. ಎಷ್ಟು ಬೇಕಾದ್ರೂ ಕಷ್ಟ ಆಗಲಿ, ನೀವು ಸಾಧನೆ ಮಾಡಿ ನಾನು ನಿಮ್ಮ ಬೆನ್ನ ಹಿಂದೆ ಇರ್‍ತೇನೆ ಅಂತಾಳೆ ನನ್ನ ಹೆಂಡತಿ' ಎಂದು ಹುರುಪಿನಿಂದ ಹೇಳ್ತಾರೆ. ಅವರ ಮನೇಲಿ ಊಟ ಮಾಡಿ ಮಾತಿಗಿಳಿದೆವು.

- **ನಿಮ್ಮ ಬಾಲ್ಯದ ಬಗ್ಗೆ, ತಂದೆ ತಾಯಂದಿರ ಬಗ್ಗೆ ಹೇಳ್ತೀರಾ . . .**

ಇಲ್ಲಿ ನಾನು primary school ಓದಿದೆ, ಹೊನ್ನಾವರದಲ್ಲಿ ಏಳನೇ ತರಗತಿ, ನಮ್ಮದೇ ಮೊದಲ public exam. ಬೆಂಗಳೂರಿನ ಕೋಟೆ ಹೈಸ್ಕೂಲಿನಲ್ಲಿ SSLC ಪಾಸು ಮಾಡಿದೆ. ವ್ಯವಸಾಯ ಅಂದ್ರೆ ನನಗೆ ಮೊದಲಿನಿಂದ ಆಸಕ್ತಿ. ಓದಿನಲ್ಲಿ ಮಮಕಾರ ಇರಲಿಲ್ಲ. ತಂದೆಗೆ ೧೨ ಎಕರೆ ಜಮೀನು ಇತ್ತು. ನಾಲ್ಕು ಎಕರೆ ತೋಟ, ಎಂಟು ಎಕರೆ ಹೊಲ ಜಮೀನು ಇತ್ತು. ನಮ್ಮ ತಂದೆ ಉತ್ತಮ ವ್ಯವಸಾಯಸ್ಥರು. ಅವರಿಂದಲೇ ಕೃಷಿ ಪಾಠವಾಯ್ತು. ತಂದೆ ಕಾಲದಲ್ಲಿ ತೆಂಗು, ಅಡಿಕೆ, ಬಾಳೆ, ಭತ್ತ, ರಾಗಿ, ಜೋಳ ಬೆಳೆಯೋರು. ಕೆರೆ ಕೆಳಗೆ ತೂಬಿನ ಪಕ್ಕದ್ದೇ ನಮ್ಮ ಜಮೀನು. ಮಳೆ ಆದಾಗ ಭತ್ತ ಬೆಳೀತಿದ್ವಿ. ಸಮಯಕ್ಕೆ ಸರಿಯಾಗಿ ವ್ಯವಸಾಯ ಮಾಡೋದು ಹೇಳಿಕೊಟ್ಟಿದ್ದು ತಂದೇನೆ.

- **ನಿಮ್ಮ ವ್ಯವಸಾಯದ ಬದುಕು, ಬೆಳೆದ ವಿಶೇಷ ಬೆಳೆಗಳು, ಅವುಗಳ ಬೇಸಾಯ ಕ್ರಮ ಹ್ಯಾಗೆ?**

ನಾನು ಗದ್ದೇಲಿ ಸಂಬಾರ, ಮೆಂತ್ಯೆ, ಈರುಳ್ಳಿ, ಬೆಳ್ಳುಳ್ಳಿ, ಸಾಸಿವೆ, ಎಲ್ಲಾ ಬೆಳೆದಿದ್ದೀನೆ. ಪ್ರತಿಯೊಂದು ಬೆಳೇನೂ ಬೆಳೆದ ಅನುಭವ ಇದೆ. ಮೆಂತ್ಯಾನ ಅಕ್ಟೋಬರ್ ತಿಂಗಳಿನಲ್ಲಿ ಬಿತ್ತನೆ ಮಾಡಬೇಕು. ಹಿಮ ಬಿದ್ರೆ ಮೆಂತ್ಯ ಚೆನ್ನಾಗಿ ಬರುತ್ತೆ. ಮುಂಗಾರಿಗೆ ಹಾಕಿದ್ರೆ ರೋಗ ಜಾಸ್ತಿ. ಇಳುವರಿ ಬರೋಲ್ಲ. ಜಮೀನನ್ನು ಹದ ಮಾಡಿ ಎಕರೆಗೆ ಐದು ಸೇರು ಮೆಂತ್ಯವನ್ನು ತೆಳುವಾಗಿ ಚೆಲ್ಲಬೇಕು. ಮಣ್ಣಿನಲ್ಲಿ ತೇವದ ಹದ ಇದ್ದಾಗ ಬರಮೆಂತ್ಯ ಚೆಲ್ಲಬೇಕು. ಬೀಜ ಚೆಲ್ಲುವ ಮೊದಲೇ ಮಣ್ಣಿಗೆ ಏಳು/ಎಂಟು ಗಾಡಿ ಹಟ್ಟಿಗೊಬ್ಬರ ಬೆರೆಸಿರಬೇಕು. ಬೀಜ ಚೆಲ್ಲಿದ ಐದು ದಿನದಲ್ಲಿ ಮೊಳಕೆ ಬರುತ್ತೆ. ಒಂದೂವರೆ ತಿಂಗಳಾದ ಮೇಲೆ ಒಂದು ಬಾರಿ ನೀರು ನೀಡಬೇಕು. ಮಳೆ ಬಂದ್ರೆ ಬೇಕಾಗಿಲ್ಲ. ನೀರು ಕೊಡದಿದ್ರೂ ಮುಕ್ಕಾಲು ಭಾಗ ಇಳುವರಿ ಸಿಗುತ್ತೆ. ಮೂರೂವರೆ ತಿಂಗಳಲ್ಲಿ ಫಸಲು ಕೈ ಸೇರುತ್ತೆ. ಬೀಜ ಬಲಿಯೋವರೆಗೆ ಬಿಟ್ಟು, ಖಟಾವು ಮಾಡಿ ಕಣಕ್ಕೆ ಹಾಕಿ, ರೋಣಗಲ್ಲಿನಲ್ಲಿ ಅರೆದು, ತೂರಿ, ಮೆಂತ್ಯವನ್ನು ಚೀಲದಲ್ಲಿ ತುಂಬಬೇಕು. ಎಕರೆಗೆ ನಾಲ್ಕರಿಂದ ಐದು ಕ್ವಿಂಟಾಲ್ ಇಳುವರಿ ಬರುತ್ತೆ. ಹತ್ತು ಸಾವಿರ ಆದಾಯ ಸಿಗುತ್ತೆ. ಬೀಜಕ್ಕೆ ಬಳಸೋದಿದ್ರೆ ವರುಷದ ಒಳಗೆ ಬಿತ್ತಬೇಕು. ಆಮೇಲೆ ಹುಟ್ಟಲ್ಲ.

ನಾನು ಈರುಳ್ಳಿ, ಬೆಳ್ಳುಳ್ಳಿ, ಸಂಬಾರಾನ ಒಟ್ಟಿಗೆ ಗದ್ದೇಲಿ ಬೆಳೀತೀನಿ. ಒಂದು ಎಕರೇಲಿ ಎರಡು ಪಲ್ಲ ಸಂಬಾರ, ನಾಲ್ಕು ಕ್ವಿಂಟಾಲ್ ಈರುಳ್ಳಿ, ಎಂಟು ಕ್ವಿಂಟಾಲ್ ಬೆಳ್ಳುಳ್ಳಿ ಸಿಗುತ್ತೆ. ಸಂಬಾರ ಈ ವಿಧಾನದಲ್ಲಿ ಬಹಳ ಚೆನ್ನಾಗಿ ಬರುತ್ತೆ. ಮಿಶ್ರ ಬೆಳೆಯಾದ್ದರಿಂದ ಒಂದಕ್ಕೊಂದು ಹೊಂದಿಕೊಂಡು ರೋಗ ಬರೋದಿಲ್ಲ. ಮೊದಲು ಸಂಬಾರಾನ ಒಂದರಿಂದ ಎರಡು ಸೇರು ತೆಳ್ಳಗೆ ಚೆಲ್ಲಿ ನೀರು ಬಿಡ್ತೀವಿ. ಬೆಳ್ಳುಳ್ಳಿಯ ಹಿಕ್ಕಲು ಬಿಡಿಸಿ, ೧೨ ಕಾಲಿನ ಹಲುಬೇಲಿ ಜಮೀನು ಕೆರೆದಾಡಿ, ಪರಿ ಹೊಡೆದು ಬೆಳ್ಳುಳ್ಳಿ ಬಿತ್ತುತ್ತೀವಿ. ಈ

ಪರೀಲೆ ದಿಂಡಿನ ಮೇಲೆ ಈರುಳ್ಳಿನ ಮೆಟ್ಟುಸ್ತೀವಿ. ನಾವು ಬೆಳೆಯೋದು ಸಣ್ಣ ಈರುಳ್ಳಿ. ಬುಡ್ಡ ಈರುಳ್ಳಿ ಅಥವಾ ಕಾರುಳ್ಳಿ ಅಂತಾನೂ ಇದಕ್ಕೆ ಕರೀತಾರೆ. ಎಕರೆಗೆ ಒಂದು ಕ್ವಿಂಟಾಲ್ ಬೆಳ್ಳುಳ್ಳಿ ಬಿತ್ತನೆ ಬೇಕು. ಈರುಳ್ಳಿ, ಬೆಳ್ಳುಳ್ಳೀನ ಮುಂಗಾರು, ಹಿಂಗಾರಿನಲ್ಲಿ ಬೆಳೀಬಹುದು. ಶೀತವನ್ನು ಇವು ತಡೆಯೋಲ್ಲ.

ಸಂಬಾರವನ್ನು ಪ್ರತ್ಯೇಕವಾಗಿ ಬೆಳೀಬೇಕು ಅಂತಿದ್ರೆ ಬೇಸಗೆ ಸರಿ. ಮುಂಗಾರಿನಲ್ಲಿ ಇಳುವರಿ ಚೆನ್ನಾಗಿ ಬರುತ್ತೆ. ಆದರೆ ಹೂವು ಬಂದಾಗ ಸೋನೆ ಮಳೆ ಹಿಡಿದ್ರೆ ಹೂ ಕರೆತು ಹೋಗುತ್ತೆ. ತುಂಬಾ ಸೂಕ್ಷ್ಮದ ಬೆಳೆ ಇದು. ಎಕರೆಗೆ ಎಂಟು ಸೇರು ಬೀಜ ಚೆಲ್ಲಿದ್ರೆ ೧೦ ಪಲ್ಲ (೬ ಕ್ವಿಂಟಾಲ್) ಇಳುವರಿ ತೊಗೋಬಹುದು. ಎರಡು ಸಾವಿರ ಖರ್ಚಾದ್ರೆ ಹತ್ತು ಸಾವಿರ ಆದಾಯ ಸಿಗುತ್ತೆ.

ಮುಂಗಾರಿನಲ್ಲಿ ಆಲೂಗೆಡ್ಡೆ ಹಾಕಿದ ಮೇಲೆ, ಅದನ್ನು ಕಿತ್ತು ಮುಸುಕಿನಜೋಳ ಹಾಕ್ತೀನಿ. ಈಗ ಮುಸುಕಿನಜೋಳ ಬಹು ಲಾಭದಾಯಕ. ಎರಡು ಎಕರೇಲಿ ೬೦ ಕ್ವಿಂಟಾಲ್ ಜೋಳ ಬೆಳೆದಿದೀನಿ. ಆದಾಯವನ್ನು ಅರಸಿ ಕೋಸು, ಬದನೆ, ಮೆಣಸಿನಕಾಯಿ, ಸಾಸಿವೆ ಎಲ್ಲಾ ಬೆಳೆದಿದ್ದೀನಿ. ಅದರಲ್ಲೇ ಮುಳುಗಿ ಏಳುವಷ್ಟು ಪ್ರಯೋಗ ಮಾಡಿದೀನಿ. ವ್ಯವಸಾಯದ ಆದಾಯದಿಂದಲೇ ನನ್ನ ಇಬ್ಬರು ಗಂಡು, ಒಬ್ಬ ಹೆಣ್ಣು ಮಗಳಿಗೆ ವಿದ್ಯಾಭ್ಯಾಸ ಕೊಟ್ಟಿದ್ದೀನಿ. ಬೇರೆ ಕೆಲಸ ಅರಸೋದು ಯಾಕೆ, ನಾನು ಅಭಿವೃದ್ಧಿ ಮಾಡಿರುವ ವ್ಯವಸಾಯ ಮುಂದುವರೆಸಿ ಅಂತ ಮಕ್ಕಳಿಗೆ ಹೇಳ್ತೀನಿ. ನನ್ನ ಮಕ್ಕಳು ಕೃಷಿಕರಾಗಬೇಕು ಅನ್ನುವುದು ನನ್ನ ಆಸೆ.


ಅಪರೂಪದ ಕೆಮ್ಮಣ್ಣನ್ನು ಪಕ್ಕದ ಹಳ್ಳಿಯಿಂದ ಹೇರಿಕೊಳ್ಳುತ್ತಿರುವ ಪಿ.ಎನ್.ಯೋಗಾನರಸಿಂಹ: ಪೂಮಗಾಮೆ

- **ನಿಮ್ಮ ಜೀವನದ ಮರೆಯಲಾಗದ ಘಟನೆ?**

ಒಮ್ಮೆ ನನ್ನ ತಮ್ಮ ಹುಣಿಸೇಮರದಿಂದ ಕೆಳಗೆ ಬಿದ್ದ. ಶಂಕರನಾರಾಯಣ ಅಂತ ಅವನ ಹೆಸರು. ಪ್ರಾಣ ಉಳಿಯೋ ಹಾಗಿರಲಿಲ್ಲ. ಎಲ್ಲರೂ 'ಇವನು ಉಳಿಯೋಲ್ಲ, ಎಲ್ಲೂ ಕರೆದುಕೊಂಡು ಹೋಗಬೇಡ' ಅಂದ್ರು. ನಾನು ಕೇಳದೆ ಅವರಿವರ ಕೈಕಾಲು ಹಿಡಿದು ಹಾಸನದ ಸರ್ಕಾರಿ ಆಸ್ಪತ್ರೆ ಸೇರಿಸಿದೆ. ವೈದ್ಯರ ಪ್ರಯತ್ನ, ದೇವರದಯೆ - ಉಳಿದುಕೊಂಡ! ಅವನಿಗೂ ವ್ಯವಸಾಯದಲ್ಲಿ ಬಹಳ ಆಸಕ್ತಿ. ಎಂಟು ವರುಷ ಇಲ್ಲಿ ದುಡಿದ. ಆರೋಗ್ಯ ಸರಿಯಿರದೆ ಈಗ ಬೆಂಗಳೂರಿನ BHELನಲ್ಲಿ ಕೆಲಸದಲ್ಲಿದ್ದಾನೆ. ನನ್ನ ವ್ಯವಸಾಯಕ್ಕೆ ತುಂಬಾ ನೆರವಾಗಿದ್ದಾನೆ. ಮೊದಲನೆಯ ಅಣ್ಣ ಬೇರೆಯಾಗಿದ್ದಾನೆ. ನಾವು ಮೂವರು ಅಣ್ಣತಮ್ಮಂದಿರೂ ಒಟ್ಟಾಗಿದ್ದೇವೆ. 'ನೀನು ಏನು ಬೇಕಾದ್ರು ಬೆಳಿ, ಅಭಿವೃದ್ಧಿಪಡಿಸು, ಹಣದ ಸಹಕಾರ ನಾವು ನೀಡ್ತೀವಿ' ಅಂತ ಅಣ್ಣ ಅಂತಾನೆ. ಅಜ್ಜನ ಕಾಲದ ಆಸ್ತಿ ಉಳೀಬೇಕು, ವ್ಯವಸಾಯ ಮುಂದುವರೀಬೇಕು ಅಂತ support ಮಾಡ್ತಾ ಇದಾರೆ. ಮೊದಲು ಒಂದು ಬೋರ್‌ವೆಲ್ ಇತ್ತು. ೩೦೦ ತೆಂಗಿನ ಗಿಡ ಹಾಕಿ, ಡ್ರಂನಲ್ಲಿ ನೀರು ತಂದು ಮರ ಬೆಳೆಸಿದ್ವಿ. ಈಗ ಅದು ಫಸಲಿಗೆ ಬಂದಿದೆ. ಮತ್ತೊಂದು ಬೋರ್‌ವೆಲ್ ಹಾಕಿಸಿ, ೭೦೦, ೮೦೦ ತೆಂಗು ಕೂರಿಸಿದೀನಿ. ವ್ಯವಸಾಯದಲ್ಲೇ ಸಾಕಷ್ಟು ಪ್ರಗತಿ ಸಾಧಿಸಿದ್ದೀನಿ. ಮಕ್ಕಳು ವ್ಯವಸಾಯ ಮುಂದುವರೆಸಲಿ ಎಂಬ ಆಸೆ ನನ್ನದು ಎನ್ನುತ್ತಾರೆ, ಯೋಗಾನರಸಿಂಹ. ನಿಮ್ಮ ಆಸೆ ಫಲಿಸಲಿ ಎಂದು ಮನದಲ್ಲಿ ಹಾರೈಸಿದೆವು. ಉಪಯುಕ್ತವಾದ ಭಾವಚಿತ್ರ ತೆಗೆದು ಮುಂದಿನ ಊರಿಗೆ ಹೊರಡುವ ತಯಾರಿ ನಡೆಸಿದ್ವಿ. ಮುಂದಿನ ಗ್ರಾಮ ನಮ್ಮನ್ನು ಕೈಬೀಸಿ ಕರೆಯುತ್ತಿತ್ತು. ಕತ್ತಲಾಗುವುದರ ಒಳಗೆ ಗಮ್ಯ ಸೇರುವ ಹುರುಪಿನಿಂದ ದ್ವಿಚಕ್ರ ವಾಹನಕ್ಕೆ ಜೀವ ನೀಡಿದೆವು. ಪೂಮಗಾಮೆಯ ಕೃಷಿ ಪರಂಪರೆ ಮುಂದುವರೆಯುವುದೇ ಎಂಬ ಅನುಮಾನ ಕಾಡಿತು. ಭವಿಷ್ಯ ಹೇಳಬೇಕಾದವರು ಯುವ ಪೀಳಿಗೆ ತಾನೆ? ಸೂರ್ಯನೂ ಅಸ್ತನಾಗಲು ಆತುರ ತೋರುವಂತೆ ಕಂಡ!

7. ಮುದ್ಲಾಪುರ



ಮುದ್ಲಾಪುರ ಗ್ರಾಮದ ಬೀದಿ: ಶ್ರೀಚನ್ನಕೇಶವ ದೇವಾಲಯದ ಹಿನ್ನೆಲೆ

ಆನೆಗೊಂದಿ ಮಹಾರಾಜರು, ಚನ್ನಪ್ಪ ದೀಕ್ಷಿತ ಹಾಗೂ ಅವರ ನಾಲ್ಕು ಜನ ಅಣ್ಣ-ತಮ್ಮಂದಿರಿಗೆ ಐದು ಗ್ರಾಮಗಳನ್ನು ಇನಾಮಾಗಿ ನೀಡಿದ್ರಂತೆ. ಹಾಗೆ ಇನಾಮಾಗಿ ಬಂದದ್ದರಲ್ಲಿ 'ಮೊದಲಗ್ರಾಮ' ಇದು. ಕಾಲಾನಂತರ ಮೊದಲಗ್ರಾಮ ಹೋಗಿ ಮುದ್ಲಾಪುರ ಆಗಿದೆ. ಇದರ ಜತೆ ಸಂಕೇತಿಗಳಿಗೆ ಬಳುವಳಿಯಾಗಿ ಬಂದ ಇತರ ಗ್ರಾಮಗಳು ಅಂದ್ರೆ ಹಾಸನ ತಾಲ್ಲೂಕಿನ ಜೋಡಿಕೃಷ್ಣಾಪುರ, ಪೂಮಗಾಮೆ, ಬೇಲೂರು ತಾಲ್ಲೂಕು ಹಗರೆ ಸಮೀಪದ ಹಂದನಹಾಳು (ಈಗಿನ ಹಂದ್ರಾಳು) ಹಾಗೂ ಚಿಕ್ಕಮಗಳೂರು ಜಿಲ್ಲೆ ಕಡೂರು ತಾ. ಹೋಚೇಹಳ್ಳಿ ಗ್ರಾಮಗಳು. ವ್ಯವಸಾಯವೇ ಮುದ್ಲಾಪುರದ ಸಂಕೇತಿಗಳ ಮುಖ್ಯ ಕಸುಬು. ಒಂದು ಕಾಲದಲ್ಲಿ ಐವತ್ತು ಗುಡಿಸಲು ಹಾಗೂ ಕೊಚ್ಚೆಯಿಂದ ತುಂಬಿದ್ದ ಈ ಗ್ರಾಮ, ಈಗ ಸಾಧಿಸಿರುವ ಪ್ರಗತಿ ಅಚ್ಚರಿಗೊಳಿಸುತ್ತೆ. ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸಂಕೇತಿಗಳ ಕೊಡುಗೆ ಅಪಾರ. ಈಗ ಸಂಕೇತಿಗಳ ನಡುವಿನ ಒಗ್ಗಟ್ಟಿಗೆ ಸಾಕ್ಷಿಯಾಗಿ ನಿಂತಿದೆ ರಾಮಮಂದಿರ. ಪ್ರತಿ ಶನಿವಾರ ರಾತ್ರಿ ಎಂಟು ಘಂಟೆಯ ಭಜನೆಗೆ ಎಲ್ಲರೂ ತಪ್ಪದೇ ಹಾಜರಾಗುತ್ತಾರೆ. ಪರಸ್ಪರ ಸಹಕಾರದ 'ಮುಯ್ಯಿ ಆಳು' ಪದ್ಧತಿ ಮುದ್ಲಾಪುರದಲ್ಲಿ ಜೀವಂತವಾಗಿದೆ. ಸಂಕೇತಿಗಳು ಒಬ್ಬರು ಮತ್ತೊಬ್ಬರ ಜಮೀನಿನಲ್ಲಿ ದುಡಿಯುವುದು, ಒಟ್ಟಾಗಿರುವುದು ಇಲ್ಲಿ ಸರ್ವೇಸಾಮಾನ್ಯ. ಊರಲ್ಲಿ ಚನ್ನಕೇಶವ, ಹಾನಗಲ್ಲಮ್ಮ ಹಾಗೂ ಸಿದ್ಧರಾಮೇಶ್ವರ ದೇವಸ್ಥಾನಗಳಿವೆ. ಈ ಊರಿನ ಸಿದ್ಧರಾಮೇಶ್ವರನ ದೇವಸ್ಥಾನಕ್ಕೆ ವಿಶೇಷ ಆಕರ್ಷಣೆಯಿದೆ. ಇಲ್ಲಿನ ಉದ್ಭವಲಿಂಗ ಬೆಳೆಯುತ್ತಿದೆ ಅಂತಾರೆ ಗ್ರಾಮಸ್ಥರು. ಈ ಊರಿನ ಎಂ.ಆರ್. ಚನ್ನಕೇಶವಯ್ಯನವರು ಹೇಳುತ್ತಾರೆ: ೧೯೮೯ರಲ್ಲಿ ಸಿದ್ಧರಾಮೇಶ್ವರನ ದೇವಸ್ಥಾನ ಮಾಡಿಸಬೇಕು ಅಂದುಕೊಂಡ್ವು. ಬೆಂಗಳೂರಿನ Forest Conservator ಕೃಷ್ಣಪ್ಪನವರ ಪರಿಚಯವಿತ್ತು. ಅವರನ್ನು ಕೇಳಿದೆ. ಉದಾರ ಮನಸ್ಸಿನಿಂದ ಐದು ಲಕ್ಷ ರೂಪಾಯಿ ನೀಡಿದ್ರು. ಅವರ ಮಗನೇ Architect. ಎಲ್ಲರೂ ಸೇರಿ ತುಂಬಾ ಉತ್ತಮವಾಗಿ ದೇವಸ್ಥಾನ ಕಟ್ಟಿದ್ವಿ. ಒಟ್ಟು ಎಂಟು ಲಕ್ಷ ಖರ್ಚಾಗಿದೆ. ದೇವಸ್ಥಾನ ಕಟ್ಟಿದಾಗ ದೇವರಿಗೆ ಅಂತ ಬೆಳ್ಳಿ ಕವಚ ಮಾಡಿಸಿದ್ವು. ಅದಕ್ಕೆ ಹಿಂದುಗಡೆ ಹುಕ್ ಇತ್ತು. ಮೊದಲು ಸುಲಭವಾಗಿ ಕವಚ ತೊಡಿಸಬಹುದಿತ್ತು. ಈಗ ಬಹಳ tight ಆಗುತ್ತೆ. ಹಾಗಾಗಿ ಲಿಂಗ ಬೆಳೀತಿದೆ ಅಂತ ಊಹಿಸಬಹುದು. ಮಹಾಮಹಿಮೆಯಿಂದ ಕೂಡಿದ ಸಿದ್ಧರಾಮೇಶ್ವರ ದೇವಸ್ಥಾನ ಇದು ಎಂದು



ಶ್ರೀಸಿದ್ಧರಾಮೇಶ್ವರ ದೇವಾಲಯ: ಮುದ್ಲಾಪುರ

ಹೇಳುತ್ತಾರೆ. ಈ ಊರಿಗೆ ಬರಲು ಮೊದಲು ಸರಿಯಾದ ರಸ್ತೆ ಇರಲಿಲ್ಲವಂತೆ. ಮುದ್ದಾಪುರ ಹಾಗೂ ಅಕ್ಕಪಕ್ಕದ ಮೂರು ಹಳ್ಳಿಯ ಜನ ಒಟ್ಟಾಗಿ ಸೇರಿ ಮನೆಗೆ ಮೂರು ಗಾಡಿಯಂತೆ ಜಲ್ಲಿ ಹಾಕಿ, ಜಲ್ಲಿ ರಸ್ತೆಯನ್ನು ನಿರ್ಮಿಸಿಕೊಂಡಿದ್ದಾರೆ. ಊರ ಹಾದಿ ಮಧ್ಯದಲ್ಲಿರುವ ಕೆರೆಯ ಒಳಗೂ ಮಣ್ಣು ಹೇರಿ ರಸ್ತೆ ನಿರ್ಮಿಸಿರುವುದು ಬಹಳ ವಿಶೇಷ. ಪರಸ್ಪರ ಸಹಕಾರಕ್ಕೆ ಮೂಕಸಾಕ್ಷಿ ಮುದ್ದಾಪುರ. ಸಂಜೆ ಸಮಯದಲ್ಲಿ ಮುದ್ದಾಪುರ ತಲುಪಿದಾಗ ಊರು ಶಾಂತವಾಗಿತ್ತು. ದ್ವಿಚಕ್ರವಾಹನದಲ್ಲಿ ಮುಂಚಿತವಾಗಿ ಬಂದು ಊರ ಕಟ್ಟೆಯ ಮೇಲೆ ಕುಳಿತಿದ್ದಾಗ, ವಯಸ್ಸಾದ ಹೆಂಗಸರೊಬ್ಬರು ಬಂದು 'ಯಾವೂರು ಮಗಾ?' ಎಂದ್ರು. ಅಪರಿಚಿತರನ್ನೂ ವಿಚಾರಿಸುವ ಹಳ್ಳಿಯವರ ಗುಣವನ್ನು ಮನದಲ್ಲಿ ಮೆಚ್ಚುತ್ತಾ ಉತ್ತರಿಸುತ್ತಿರುವಾಗ ಮತ್ತೊಬ್ಬ ಹತ್ತಿರ ಬಂದು ಮಾತು ಆಲಿಸತೊಡಗಿದ. ನಂತರ ಅವನೇ ಕೇಳಿದ, 'ಸಾರ್ ನೀವು ಆಕಾಶವಾಣಿಯವರಲ್ವಾ! ನಿಮ್ಮ ದನೀನ ನಾನು ರೇಡಿಯೋದಲ್ಲಿ ಕೇಳಿದೀನಿ' ಅಂದ. ನನಗೆ ನಿಜಕ್ಕೂ ಖುಷಿಯಾಯ್ತು. ಕೇವಲ ದನಿಯಿಂದಲೇ ಈ ವ್ಯಕ್ತಿ ನನ್ನನ್ನು ಗುರುತಿಸಿದ್ದಾನಲ್ಲಾ ಅಂತ. ಆತ ಮುಂದುವರೆದು ಹೇಳಿದ 'ನೀವು ಕೃಷಿರಂಗ ಕಾರ್ಯಕ್ರಮ ನೀಡುವ ಜಯಣ್ಣ ಅಲ್ವಾ?' ಎಂದಾಗ ನಾನು ನಿರುತ್ತರನಾದೆ. ಆಕಾಶವಾಣಿಯಲ್ಲಿ ನನ್ನ ಹೆಸರು ಜಯಣ್ಣ ಎಂದೇ. 'ಸಾರ್ ನಮ್ಮ ಮನೆಗೆ ಬನ್ನಿ, ಹಾಲು ಕುಡಿದು ಹೋಗಿ, ರೈತರಿಗೆ ಉತ್ತಮ ವಿಚಾರ ನೀಡುವ ನಿಮಗೆ ನಾವು ಕೊಡುವ ಗೌರವ ಇದೇ', ಅಂದಾಗ ಹೃದಯ ತುಂಬಿಬಂತು. ನನ್ನ ಹೊಸ ದ್ವಿಚಕ್ರ ವಾಹನಕ್ಕೆ ಕಠಿಣ ರಸ್ತೆಯಲ್ಲಿ ತೊಂದರೆಯಾಗಬಾರದು ಅಂತ ಎರಡು ಕಿಲೋಮೀಟರ್ ಹಿಂದೆಯೇ ಇಳಿದು ನಡೆದು ಬಂದ ಹರನ್ ಅಷ್ಟರಲ್ಲಿ ನಮ್ಮನ್ನು ಕೂಡಿಕೊಂಡ್ರು. ಆ ವ್ಯಕ್ತಿಯನ್ನು ಸಮಾಧಾನಪಡಿಸಿ, ಮತ್ತೊಮ್ಮೆ ಬರುತ್ತೇನೆಂದು ತಿಳಿಸಿ ಎಂ.ಕೆ.ಚನ್ನಕೇಶವ ಅವರ ಮನೆಗೆ ತೆರಳಿದ್ವಿ. ಮುಂದಿನದು ನಿಮ್ಮ ಮುಂದಿದೆ.



ಗರ್ಭಗುಡಿ: ಶ್ರೀಸಿದ್ಧರಾಮೇಶ್ವರ, ಮುಂದೆ ಬಸವ: ಮುದ್ದಾಪುರ

ಅ) ಎಂ.ಕೆ. ಚನ್ನಕೇಶವ ಇ/ಮ ಕೇಶವಮೂರ್ತಿ (ಅಯ್ಯ)

ಮುದ್ಲಾಪುರ, ಹಾಸನ ತಾ. ಜಿಲ್ಲೆ, ದೂರವಾಣಿ : 08172 255277

ನಮ್ಮ ಮನೇಲಿ ಒಂದು ಜತೆ ಹೊಸದಾದ ಬಿಳಿ ಹೋರಿ ತಂದ್ರು. ಅದನ್ನು ನೋಡಿ, ವ್ಯವಸಾಯ ಮಾಡಬೇಕು ಅನ್ನಿಸ್ತು. ಆಗ ನಾನು PUC ಓದುತ್ತಿದ್ದೆ. ಪರೀಕ್ಷೇಲಿ ಪಾಸ್ ಮಾಡಿದ್ರೆ ಮುಂದೆ ಓದಲು ಕಳಿಸ್ತಾರೆ, ಊರಿಗೆ ಬರಲು ಆಗೋದಿಲ್ಲ ಅಂತ ಪರೀಕ್ಷೆಗೆ ಹೋಗಿ ಸುಮ್ಮನೆ ಖಾಲಿ ಉತ್ತರ ಪತ್ರಿಕೆ ಕೊಟ್ಟು ಬಂದೆ.



'ಮುಸುಕಿನ ಜೋಳ ಅಂದರೆ ಹೀಗಿರಬೇಕು' ಎಂ.ಕೆ.ಚನ್ನಕೇಶವ: ಮುದ್ಲಾಪುರ

ಮುದ್ಲಾಪುರದ ಕೇಶವಮೂರ್ತಿಯವರು 'ಅಯ್ಯಾ' ಎಂದೇ ಸುತ್ತಮುತ್ತೆಲ್ಲಾ ಪರಿಚಿತರು. ಇವರ ಪತ್ನಿ ಸಾವಿತ್ರಮ್ಮ ಮತ್ತೂರು ಹೊಸಹಳ್ಳಿಯವರು. ಮೊದಲ ಪತ್ನಿಯು ವಿಧಿವಶರಾದ ನಂತರ ಮನೆ ಮನ ತುಂಬಿದವರು ನಾಗರತ್ನ. ಜೋಡಿದಾರ್ ಸೀತಾರಾಮಯ್ಯನವರ ಹಿರಿಯ ಮಗ ಕೇಶವಮೂರ್ತಿಯವರ ಹಿರಿಯ ಮಗನೇ ಎಂ.ಕೆ. ಚನ್ನಕೇಶವ. ಈಗ ಇವರಿಗೆ ೫೦ ವರುಷ. ಮೊಸಳೆಯ ಎಂ.ಪಿ. ರಾಮಸ್ವಾಮಯ್ಯ ಹಾಗೂ ನಾಗಲಕ್ಷ್ಮಮ್ಮ ಅವರ ಮಗಳು ಎಂ. ಆರ್.ಪ್ರಭಾವತಿ ಇವರ ಧರ್ಮಪತ್ನಿ. ಪ್ರತಿ ಶನಿವಾರದಂದು ರಾಮಮಂದಿರದಲ್ಲಿ ನಡೆಯುವ ಪೂಜೆಗೆ, ಅಂದು ಇವರ ಸೇವಾರ್ಥ. ಪೂಜೆಗೆ ಸಮಯವಿದ್ದರಿಂದ ಮಾತಿಗೆ ಸಿಕ್ಕರು. ಹಿರಿಯರ ವಿಚಾರ, ಹಿಂದಿನ ವಿಚಾರ ಹೇಳುವಾಗ, ಈಗಲೂ ಅದನ್ನು ಅನುಭವಿಸುವವರಂತೆ ಹೇಳುತ್ತಾ ಹೊರಟರು.

'ಹಿಂದೆ ನಮ್ಮ ಊರಲ್ಲಿ ಪಾರ್ಟಿ ಇತ್ತು. ಇಡೀ ಊರ ಜನರೇ ಒಂದು, ನಮ್ಮ ತಾತನೇ ಒಂದು. ಊರು ಬಿಟ್ಟು ನಮ್ಮ ತಾತ ಜಮೀನಲ್ಲೇ ಗುಡ್ಲು ಹಾಕಿದ್ರು. ನಮ್ಮ ತಂದೇ ಕಾಲದಲ್ಲಿ ಕೂಡ ಇದೇ ಮುಂದುವರೀತು. ೮೦ ಎಕರೆ ಜಮೀನಿತ್ತು. ಎಲ್ಲವನ್ನೂ ತಂದೆ ಸ್ವಂತ ಬೇಸಾಯದಿಂದ ಕಾಪಾಡಿದ್ರು. ತಂದೆ ಬೆಳಗ್ಗೇನೆ ಎದ್ದು ನೀರು ಕಾಯಿಸಿ, ಅವರೇ ರೊಟ್ಟಿ ತಟ್ಟಿ, ಒಲೆ ಸುತ್ತಾ ಇಟ್ಟಿರೋರು. ಈಗಲೂ ಅದು ಕಣ್ಣಿಗೆ ಕಟ್ಟಿದಂತಿದೆ. ಆ ರೀತಿ ಗರಿಗರಿಯಾದ ರೊಟ್ಟಿ ತಯಾರಿಸೋದಕ್ಕೆ ಹೆಂಗಸರಿಗೂ ಬರೋಲ್ಲ ಬಿಡಿ. ಈಗಿನ ರೊಟ್ಟಿ ಅಗಿದ್ರೆ ಬಟ್ಟೆ ಅಗಿದಂತಿರುತ್ತೆ. ಮನೆ ಕೆಲಸ ಮುಗಿಸಿ ನಂತರ ಜಮೀನಿಗೆ ಹೊರಡೋರು. ಊರ ಜನರ ಸಹಕಾರ ಇರದಿದ್ರೂ ಸಮೀಪದ ಹಳೇಕೊಪ್ಪಲಿನ ಜನರ ಸಹಕಾರ ಇತ್ತು. ಅಗತ್ಯವಿದ್ದಾಗ ಅವರನ್ನು ಕೂಲಿ ಕೆಲಸಕ್ಕೆ ತೊಗೊಳ್ಳೋರು. ನಾನು ೭೧ ರಲ್ಲಿ ಊರಿಗೆ ಬಂದೆ. ಎರಡು ಜತೆ ಎತ್ತಿತ್ತು. ಒಂದನ್ನು ನಮ್ಮ ತಂದೆ, ಮತ್ತೊಂದನ್ನು ನಾನು ಹಿಡಿದು, ಉಳುಮೆ ಮಾಡ್ತಿದ್ವಿ. ತಂದೆಗೆ ಮರದ ಕೆಲಸಾನೂ ಬರ್ತಿತ್ತು. ನೇಗಿಲನ್ನು ಅವರೇ ಕೆತ್ತೋರು. ಹುಣಿಸೆ, ನೇರಳೆ ಹಾಗೂ ಹೊಂಗೆ ಮರದಿಂದ ನೇಗಿಲು ಕೆತ್ತೋರು. ಹುಣಿಸೇಮರದ ನೇಗಿಲಿಂದ ಉಳುಮೆ ಮಾಡಿದ್ರೆ ಉತ್ತರೆ ಸಿಡಿಲು ಹೊಡೆಯುತ್ತೆ ಅಂತಿದ್ರು; ಆದ್ರೆ ನಾವು ಬಿಟ್ಟಿಲ್ಲ, ಅದರಲ್ಲೂ ಉತ್ತಿದೇವೆ. ನೇಗಿಲಿಗೆ ನೇರಳೆ ಮರ ಸರಿ, ಬಹಳ ಗಟ್ಟಿ, ಅಂತ ಹೇಳ್ತಿದ್ರು. ನಮ್ಮೂರ ಕುಂಬಾರಶೆಟ್ಟರ ಬಳಿ ನಾಲ್ಕಾಣೆಗೆ ಗಡಿಗೆ ಸಿಕ್ತಿತ್ತು. ಕಣ ಸಾರಿಸೋಕೆ ನೀರನ್ನು ಸಮೀಪದ ಕೊಂಡಗಟ್ಟೆಯಿಂದ ಗಡಿಗೇಲಿ ತರಬೇಕಿತ್ತು. ಚಳಿಗೆ ಕೈ ಮರಗಟ್ಟಿ ಅದೆಷ್ಟು ಗಡಿಗೆ ಒಡಿದಿದ್ದೀವೋ. ಈಗ ಎಲ್ಲಾ ಸುಲಭ ಆಗಿದೆ. ಬೋರ್‌ವೆಲ್ ಆನ್ ಮಾಡಿದ್ರೆ ಕೈ ಪೈಪಿನಲ್ಲಿ ನೀರು ಬರುತ್ತೆ. ಹಿಂದೆಲ್ಲಾ ಮಳೆ ಚೆನ್ನಾಗಿ ಆಗ್ತಿತ್ತು. ಸದ್ಯ ಮಳೆನಿಂತ್ರೆ ಸಾಕು ಅನ್ನಿಸುತಿತ್ತು. ನಾನು ೭೧ರಲ್ಲಿ ಇಲ್ಲಿ ಬಂದಾಗ ಊರಲ್ಲಿ ೫೦ ಗುಡಿಸಲು ಇತ್ತು. ನಾನು ಊರೊಳಗೆ ಹೋಗ್ತಿರಲಿಲ್ಲ. ನನಗೆ ಅವರು ದೂರ, ಅವರಿಗೆ ನಾನು ದೂರ ಅನ್ನುವ ಪರಿಸ್ಥಿತಿ. ತಂದೇನೂ ಅಷ್ಟು ಹೊತ್ತಿಗೆ ಸುಸ್ತಾಗಿದ್ರು. ವ್ಯವಸಾಯದ ಸಂಪೂರ್ಣ ಜವಾಬ್ದಾರಿ ನನ್ನ ಮೇಲೆ ಬಂತು' ಎನ್ನುತ್ತಾ ಮಾತಿಗೆ ಬಿಡುವು ಕೊಟ್ಟರು.

'ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ' ಅಂದಾಗ ಮತ್ತೆ ಆರಂಭಿಸಿದ್ರು. 'ಈ ಊರಿನಲ್ಲಿ ಮೊದಲು ಭತ್ತ ಬೆಳೆದದ್ದು ನಮ್ಮ ತಂದೆ. ಮೊದಲು ಆಲೂಗೆಡ್ಡೆ ಬೆಳೆದಿದ್ದೂ ಇವರೆ. ಆಲೂಗೆಡ್ಡೆಯ ಬಿತ್ತನೆ ಬೀಜವನ್ನು ಚಿಕ್ಕಬಳ್ಳಾಪುರದಿಂದ ತರೋರು. ಮೊದಲೇ ಮಡಿ ಇವರದ್ದು. ಇಲ್ಲಿಂದ ಗೊಜ್ಜವಲಕ್ಕಿಯನ್ನು ತೆಗೆದುಕೊಂಡು ಹೋಗೋರು. ಚಿಕ್ಕಬಳ್ಳಾಪುರದ ವೆಂಕಟರಮಣಪ್ಪನವರ ಏತದ ಬಾವೀಲಿ ಸ್ನಾನ. ಎರಡು, ಮೂರು ದಿನ ಅಲ್ಲಿದ್ದು ಬಿತ್ತನೆ ಬೀಜ ತರೋರು. ಹಿಂದೆ ಆಲೂಗೆಡ್ಡೆಗೆ ಸಗಣಿ ಗೊಬ್ರ ಜಾಸ್ತಿ ಹಾಕೋರು. ಇಳುವರೀನೂ ಚೆನ್ನಾಗಿತ್ತು. ಒಂದು ಚೀಲ ಆಲೂಗೆಡ್ಡೆ ಬಿತ್ತನೆಗೆ, ೨೨ ಚೀಲ "ತಿನ್ನುವ" ಆಲೂಗೆಡ್ಡೆಯನ್ನು ಬೆಳೀತಾ ಇದ್ರು. ಆಲೂಗೆಡ್ಡೆ ಹೊಸಬೆಳೆ. ಕೂಲಿ ಆಳುಗಳಿಗೆಲ್ಲಾ ಒಂದೊಂದು ಆಲೂಗೆಡ್ಡೆ ಕೊಡಬೇಕಿತ್ತು. ಅವರು ಕದಿಯದಂತೆ ಎಚ್ಚರವಹಿಸಬೇಕಿತ್ತು. ಖಟಾವು ಮಾಡಿದ ಮೇಲೆ ಆಲೂಗೆಡ್ಡೆಯನ್ನು ಕಾಯಲು ಹೋಗ್ತಿದ್ವಿ. ಹಾಗಿತ್ತು ಅವತ್ತಿನ ಕಾಲ. ಈಗ ಆಲೂಗೆಡ್ಡೆಯನ್ನು ಖಟಾವು ಮಾಡಿ ಹಾಗೇ ಬಿಟ್ಟು ಮನೆಗೆ ಬರ್‍ತೀವಿ. ರಾತ್ರಿ ಎಲ್ಲಾ ಹೊಲದಲ್ಲಿದ್ರೂ ಯಾರೂ ಕದಿಯೋಲ್ಲ. ತಂದೆಯವರು ತೋಗೋತಿದ್ದ ಇಳುವರಿಯನ್ನು ಈಗ ಪಡೆಯಲು ಆಗ್ತಿಲ್ಲ. ಒಂದು ಚೀಲ ಬಿತ್ತನೆ ಗಡ್ಡೆಗೆ ಗರಿಷ್ಠ ೧೨ ಚೀಲ "ತಿನ್ನುವ" ಗಡ್ಡೆ ಬರ್‍ತಿದೆ. ರಾತ್ರಿ ಆಲೂಗೆಡ್ಡೆ ಹೊಲ ಕಾಯಲು ಹೋಗುವಾಗ ೭೦ ವರುಷದ ತಂದೇನೂ ಜತೇಲಿ ಬರೋರು. ಆ ಛಳೀಗೆ ಅವರು ನಡುಗುತ್ತಿದ್ರೆ ನಾನು ಬೈಯುತ್ತಿದ್ದೆ "ಯಾಕೆ ಹೀಗೆ ನಡುಗ್ತೀಯಾ" ಅಂತ. ಈಗ ನನಗೆ ಅದರ ಅರಿವಾಗಿದೆ. ನನಗೆ ೫೦ ವರುಷ. ಈಗ ನನಗೆ ರಾತ್ರಿ ಸಮಯದಲ್ಲಿ ಜಮೀನಿನ ಹತ್ರ ಹೋಗೋಕಾಗೋಲ್ಲ, ಬೆಳಗ್ಗೆ ಹೋದರಾಯ್ತು ಅಂತ ಮಲಗಿರುತ್ತೇನೆ. ಅವತ್ತು ನಮ್ಮ ತಂದೆ ೭೦ರ ಇಳಿವಯಸ್ಸಿನಲ್ಲೂ ಹ್ಯಾಗೆ ಬರ್‍ತಿದ್ರು ಎಂಬುದು ಇವತ್ತಿಗೂ ಆಶ್ಚರ್ಯವೇ' ಎನ್ನುತ್ತಾರೆ.


ಹೊಲದಲ್ಲಿ ರಾಗಿಗುಡ್ಡೆ ಹಾಕಿಕೊಂಡ ಎಂ.ಕೆ.ಚನ್ನಕೇಶವ: ಮುದ್ದಾಪುರ

ನಮ್ಮ ಮನೇಲಿ ೬೦ ರಿಂದ ೭೦ ರಾಸು ಇತ್ತು. ಮನೇಲಿ ನಾವು ೧೫ ಜನ ಇದ್ವಿ. ಹಾಲನ್ನು ಮಾರ್‍ತಿರಲಿಲ್ಲ. ನಮ್ಮ ಮನೆಯ ರಾಸಿಗೆ ಬೇರೆ ಯಾವುದಾದ್ರೂ ಪ್ರಾಣಿ ತೊಂದರೆ ಮಾಡಿದ್ರೆ ಎಲ್ಲವೂ ಒಟ್ಟಾಗಿ ಹೋಗಿ ಅದನ್ನು ಹಾದು ಬಿಡೋವು. ನನಗೆ ನೆನಪಿರುವ ಹಾಗೆ ೧೫-೨೦ ವರುಷಗಳ ಹಿಂದೆ ನಾವು ಕಾಲುವೇಲಿ ಮಣ್ಣು ತೆಗೀತಾ ಇದ್ವಿ. ನಮ್ಮ ಮನೆಯ ಒಂದು ಸಣ್ಣ ಕರುವನ್ನು ಬಾಡಿಗೆಗೆ ತಂದಿದ್ದ ಒಂದು ಎತ್ತು ಗುದ್ದಿ ಬಿಡ್ತು. ಆಗ ಮನೇಲಿ ೨೫ ರಾಸುಗಳು ಇದ್ದು. ಇವೆಲ್ಲವೂ ಸೇರಿ ಆ ಎತ್ತನ್ನು ಒಂದು ದೊಣಿ ಹತ್ರದವರೆಗೂ ಓಡಿಸಿಕೊಂಡು ಹೋಗಿ, ತಿವಿದು ಆ ಎತ್ತನ್ನು ಸಾಯಿಸಿಬಿಟ್ಟು. "ನಾವು, ನಮ್ಮವರು" ಅನ್ನೋ ತಿಳುವಳಿಕೆ ಇತ್ತು ರಾಸುಗಳಿಗೆ. ಅಂಥಾ ಒಗ್ಗಟ್ಟಿತ್ತು. ಅದೇ ಒಗ್ಗಟ್ಟು ನಾವು ಮನುಷ್ಯರಲ್ಲಿ ಇಲ್ಲವಲ್ಲಾ ಅಂತ ಆಶ್ಚರ್ಯವಾಗುತ್ತೆ. ಈಗ ನಮ್ಮ ಮನೇಲಿ ೯ ರಾಸು ಇದೆ. ತಂದೆ ಮಾಡಿದ್ದ ಜಮೀನನ್ನು ಕಳೆದು ಕಳೆದು ೧೨ ಎಕರೆ ಜಮೀನು ಉಳಿದಿದೆ. ೯೮ರಲ್ಲಿ Borewell ಹಾಕಿಸಿದೆ. ಆಗ ನಮ್ಮೂರಲ್ಲಿ ನಾಲ್ಕು ಬೋರ್‌ವೆಲ್ ಇತ್ತು. ಈಗ ೨೨ ಬೋರ್‌ವೆಲ್ ಇದೆ. ನಮ್ಮ ಬೋರ್‌ವೆಲ್‌ನಲ್ಲಿ ಮೂರೂವರೆ ಇಂಚು ನೀರು ಬರ್‍ತಿತ್ತು, ಈಗ ಕಡಿಮೆಯಾಗಿದೆ. ಮತ್ತೊಂದನ್ನು ಕೊರೆಸಬೇಕಿದೆ' ಎಂದು ನಿಟ್ಟುಸಿರಿಡುತ್ತಾರೆ.

'ಬೋರ್‌ವೆಲ್ ಹತ್ರ ತೆಂಗು ಹಾಕಿದೀನಿ. ರಾಗಿ, ಆಲೂಗೆಡ್ಡೆ, ಕೋಸು, ಮೆಣಸಿನಕಾಯಿ, ಭತ್ತ ಎಲ್ಲವನ್ನೂ ಬೆಳೀತೀನಿ. ಈ ಮೊದಲು ಕೋಸು ಬೆಳೆ ಅನುಭವ ಇರಲಿಲ್ಲ. ೯೮ರಲ್ಲಿ ಬೋರ್‌ವೆಲ್ ಆದ ಮೇಲೆ ಮೊದಲು ಕೋಸು ಬೆಳೆದೆ. ಕೋಸಿನಲ್ಲಿ ಅನುಭವ ಇರೋರನ್ನು ಕರೆದುಕೊಂಡು ಒಂದು ಒಟ್ಲು ಪಾತಿ ಹಾಕಿದೆ. ಮೊದಲು ಎತ್ತರವಾದ ಜಾಗದಲ್ಲಿ ಏರು ಮಡಿ ಮಾಡಿಕೊಂಡು, ನೀರು ನಿಲ್ಲದ ಹಾಗೆ ಎಚ್ಚರವಹಿಸಿ, ಸಸಿ ಮಡಿಯನ್ನು ಕಡ್ಡಿಯಲ್ಲಿ ಕೆರೆದು ಸಾಲು ಮಾಡಬೇಕು. ಈ ಸಾಲಿನಲ್ಲಿ ಕೋಸಿನ ಬೀಜವನ್ನು ಒಂದೊಂದೇ ಬಿತ್ತನೆ ಮಾಡಬೇಕು. ಅದರ ಮೇಲೆ ತೆಳುವಾಗಿ ಮಣ್ಣು ಮುಚ್ಚಬೇಕು. ಸಣ್ಣದಾಗಿ ನೀರು ಚುಮುಕಿಸಿ ಸೋಗೆ ಮುಚ್ಚಬೇಕು. ಮೂರು ದಿನದಲ್ಲಿ

ಬೀಜ ಮೊಳಕೆ ಒಡೆಯುತ್ತೆ. ಆನಂತರ ಸೋಗೆ ತೆಗೆಯಬೇಕು. ಇಲ್ಲದಿದ್ರೆ ಕೋಸಿನ ಸಸಿಗಳು ನೇರವಾಗಿ ಎತ್ತರವಾಗಿ ಬೆಳೆದು ಸೊಂಟ ಮುರಿದುಕೊಂಡು ಬೀಳುತ್ತೆ. ೨೨ ದಿನಕ್ಕೆ ಕೋಸಿನ ಪೈರು ನಾಟಿಗೆ ಸಿದ್ಧವಾಗುತ್ತೆ. ಮುಖ್ಯ ಜಮೀನಿನಲ್ಲಿ ಎರಡು ಅಡಿಗೆ ಸಾಲು ಹೊಡೆದು ಒಂದೂವರೆ ಅಡಿಗೆ ಒಂದರಂತೆ ಸಸಿ ನಾಟಿ ಮಾಡಬೇಕು. ಕೋಸಿಗೆ ರಾಸಾಯನಿಕ ಔಷಧಿ ಹೊಡೀತಾನೇ ಇರಬೇಕು. ಇಲ್ಲದಿದ್ರೆ ಹುಳು ಹೊಡೆಯುತ್ತೆ. ಒಂದಕ್ಕಿಂತ ಒಂದು ವಿಷದ ರಾಸಾಯನಿಕಗಳನ್ನು ಹೊಡೆದು ನನಗೆ ಕೆಮ್ಮು, ನೆಗಡಿ, ತಲೆಭಾರ ಆಯ್ತು. ಕೋಸು ಎರಡರಿಂದ ಎರಡೂವರೆ ತಿಂಗಳಲ್ಲಿ ಗಡ್ಡೆ ಕಟ್ಟುತ್ತೆ. ಮೊದಲ ಬಾರಿ ನಾನು ಕೋಸು ಬೆಳೆದದ್ದು ಮರಳು ನೆಲದಲ್ಲಿ. ನೆಲ ನೀರು ಕುಡಿದು ಗಡ್ಡೆ ಸಣ್ಣಗಾಯ್ತು. ಮೂರು ಸಾವಿರಕ್ಕೆ ಮಾರಾಟ ಆಯ್ತು. ಎರಡು ಸಾವಿರ ಖರ್ಚಾಗಿತ್ತು. ಒಂದು ಸಾವಿರ ರೂಪಾಯಿ ಸಿಗ್ತಲ್ಲಾ ಅಂತ ಖುಷಿಯಾಯ್ತು. ಆದ್ರೆ ಅದೇ ಬೆರಗಲ್ಲಿ ಕೋಸು ಬೆಳೆದಿದ್ದ ಇತರರಿಗೆ ಇಪ್ಪತ್ತು ಸಾವಿರ ರೂಪಾಯಿ ಸಿಕ್ತು. ಆಗ ನನಗೆ ಹೊಟ್ಟೆ ಉರೀತು. ಈಗ ಎಕರೆಗೆ ಒಂದೂವರೆ ಲೋಡ್ ಕೋಸು ಬೆಳೀತೀನಿ. ವರುಷದಲ್ಲಿ ಒಂದು ಬಾರಿ ಮಾತ್ರ ಬೆಳೀತೀನಿ. ಇದುವರೆಗೆ ಗರಿಷ್ಠ ೧೦ ಸಾವಿರ ರೂಪಾಯಿ ಆದಾಯ ಆಗಿದೆ ಅಷ್ಟೆ. ಹೇಮಂತ ಋತುವಿಗಿಂತ ಮುಂಚೆ, ಮೆಣಸಿನ ಬೀಜವನ್ನು ಒಟ್ಲು ಪಾತಿಯಲ್ಲಿ ಹಾಕ್ತೀವಿ. ಕೋಸಿನ ಮಡಿ ಮಾಡಿದಂತೆಯೇ ಮೆಣಸಿನ ಮಡಿ ಮಾಡಬೇಕು. ಹಿಮದಲ್ಲಿ ನಾಟಿ ಮಾಡಬೇಕು. ನೀರನ್ನು ಕೊಟ್ಟು ಕಳೆ ಕೀಳುವುದು ಬಹಳ ಮುಖ್ಯ. ನಾವು ಹಸಿಮೆಣಸಿನಕಾಯಿ ಕುಯ್ತೀವಿ. ಹಣ್ಣುಮೆಣಸಿನಕಾಯಿ ಬಿಟ್ರೆ ಒಂದೇ ಬೆಳೆ ಬರೋದು. ಹಸಿಮೆಣಸನ್ನು ಕುಯ್ದರೆ ಗಿಡ ಒಡೆಯುತ್ತೆ. ಹತ್ತು ಕೆ.ಜಿ. ಚೀಲಾನ ೧೫೦ ರಿಂದ ೩೦೦ ರೂಪಾಯಿವರೆಗೂ ಮಾರಿದೀವಿ. ಮೆಣಸಿನಕಾಯಿ ಬೇಸಾಯದಲ್ಲಿ ಆದಾಯ ಇದೆ.

'ನಮ್ಮ ಜಮೀನಿನಲ್ಲೇ ಎರಡೂವರೆ ಎಕರೆ ವಿಸ್ತೀರ್ಣದ ಬಿದಿರಕಟ್ಟೆ ಅಂತ ಸ್ವಂತ ಕೆರೆ ಇದೆ. ಕೆರೆ ತುಂಬಿದಾಗ ಭತ್ತ ಬೆಳೀತೀವಿ. ನಾವು ಬೆಳೆಯೋದು ಪುಟ್ಟಭತ್ತ. ದಪ್ಪದಾಗಿ ಕೆಂಪು ಬಣ್ಣ ಇರುತ್ತೆ. ಪುರಿ ಮಾಡಲು ಬಳಸುತ್ತಾರೆ. ಕೇರಳಕ್ಕೂ ಹೋಗುತ್ತೆ. ಮನೇ ಬೀಜವನ್ನೇ ನಾವು ಬಳಸೋದು. ಎರಡೂವರೆ ಎಕರೆ ಪ್ರದೇಶಕ್ಕೆ ೮೦ ಸೇರು ಬೀಜ ಬಳಸುತ್ತೀವಿ. ಬರ ಒಟ್ಲು ಮಾಡ್ತೀವಿ. ಬೀಜವನ್ನು ಮೊಳಕೆ ಬರಿಸಿ ಬಿತ್ತಿ ತೆಳ್ಳಗೆ ನೀರು ಹಾಯಿಸ್ತೀವಿ. ಒಂದು ತಿಂಗಳ ಸಸಿಯನ್ನು ನಾಟಿ ಮಾಡಿ, ಗದ್ದೇಲಿ ನೀರು ನಿಲ್ಲಿಸ್ತೀವಿ. ೪೦ಕ್ವಿಂಟಾಲ್ ಭತ್ತ ಬರುತ್ತೆ. ನಮ್ಮ ಭಾವ ಅವರ ಮನೇಲಿ 'ರಾಶಿ' ಭತ್ತದ ತಳಿ ಬೆಳೀತಾರೆ. ನೀವು ತೆಗೆಯೋದು ಅರ್ಧ ಇಳುವರಿ ಅಂತಾರೆ. ಆದರೆ ನಮಗೆ ಇದೇ ತೃಪ್ತಿ ನೀಡಿದೆ. ಅಕ್ಕಿ ರುಚಿ ಇರುತ್ತೆ. ದನಕರುಗಳಿಗೆ ಸಾಕಷ್ಟು ಮೇವು ಸಿಗುತ್ತೆ ಹುಲ್ಲಿನ ರೂಪದಲ್ಲಿ. ಇದು ಬೇರೆಯವರಿಗೆ ತಿಳಿಯೋಲ್ಲ.


ಎಂ.ಆರ್.ಪ್ರಭಾವತಿ-ಎಂ.ಕೆ.ಚನ್ನಕೇಶವ ದಂಪತಿ ತಮ್ಮ ಕುಟುಂಬದೊಂದಿಗೆ: ಮುದ್ದಾಪುರ

'ಹೆಂಡತಿ ಸಹಕರಿಸಿದ್ದಾಳೆ. ಸಂಪೂರ್ಣ ಮನೆ ನಿರ್ವಹಣೆ ಅವಳದ್ದೇ. ನನ್ನ ಯಶಸ್ಸಿನಲ್ಲಿ ಅವಳದ್ದೂ ಅರ್ಧ ಪಾಲಿದೆ. ನನಗೆ ಒಂದು ಗಂಡು, ಒಂದು ಹೆಣ್ಣು. ಮಗನಿಗೆ ವ್ಯವಸಾಯದಲ್ಲಿ ಆಸಕ್ತಿ ಅಷ್ಟಿಲ್ಲ. ನನಗೂ ೧೦೦ಕ್ಕೆ ೧೦೦ ಭಾಗ ತೃಪ್ತಿ ಇದೆ ಅಂತ ಹೇಳಲಾರೆ. ಆದರೆ ಇದುವರೆಗೆ ನನ್ನ ಆತ್ಮಸಾಕ್ಷಿ ಒಪ್ಪಿದ ಹಾಗೆ ಬದುಕಿದೀನಿ. ಇನ್ನೊಬ್ಬರು ಹೇಳಿದ ಹಾಗೆ ಕೇಳಿಲ್ಲ. ನನಗೆ ಸುಳ್ಳು, ಮೋಸ ಆಗೋಲ್ಲ. ನನ್ನದೇ ಸ್ವಲ್ಪ ಹೋದ್ರೂ ಚಿಂತೆಯಿಲ್ಲ. ನನ್ನಿಂದ ಇನ್ನೊಬ್ಬರಿಗೆ ತೊಂದರೆ ಆಗಬಾರದು ಅನ್ನೋನು ನಾನು. ಈಗ ೧೦, ೧೫ ವರುಷದಿಂದ ಊರಿನ ಜತೆ ಸಂಪರ್ಕವಿದೆ. ಹಳೆಯದನ್ನು ನಾನೂ ಮರೆತಿದ್ದೇನೆ. ನಾವು ಈಗ ಒಗ್ಗಟ್ಟಿನಿಂದ ಇದ್ದೇವೆ. ನೆಮ್ಮದಿಯಾಗಿ ಇದ್ದೇವೆ' ಎಂದು ಹೇಳಿ, 'ನಡೀರಿ ರಾಮಮಂದಿರಕ್ಕೆ ಹೋಗೋಣ, ಪೂಜೆಗೆ ಹೊತ್ತಾಗುತ್ತೆ,' ಅಂತ ಹೇಳಿ ಮಾತು ಮುಗಿಸಿದ್ರು.

ಆ) ಎಂ.ಎಸ್. ಕೇಶವಮೂರ್ತಿ ಇ/ಮ ಶ್ರೀನಿವಾಸಯ್ಯ
ಮುದ್ದಾಪುರ, ಹಾಸನ ತಾ. ಜಿಲ್ಲೆ, ದೂರವಾಣಿ : 08172 255278

ನನಗೆ ಆಗ ನಾಲ್ಕೈದು ವರುಷ ಇರಬೇಕು. ೬೨ ವರುಷಗಳ ಹಿಂದೆ ಪ್ಲೇಗ್ ಬಂದಿತ್ತು. ಊರಲ್ಲಿ ಇಲಿ ಸತ್ತ ತಕ್ಷಣ ಊರ ಹೊರಗೆ ಗುಡಿಸಲು ಹಾಕಿಕೊಂಡು ಇರುತಿದ್ರು. ನಾವೂ ಊರ ಹೊರಗೆ ಎರಡೂವರೆ ತಿಂಗಳು ಇದ್ದು ನಂತರ ಊರಿಗೆ ವಾಪಸ್ಸು ಬಂದಿದ್ವಿ.

ಮುದ್ದಾಪುರದ ಶ್ರೀನಿವಾಸಯ್ಯ ಹಾಗೂ ಗೌರಮ್ಮ ಇವರ ಎರಡನೆಯ ಮಗ ಎಂ.ಎಸ್.ಕೇಶವಮೂರ್ತಿಯವರಿಗೆ ಈಗ ೬೭ ವರುಷ. ಇವರ ಪತ್ನಿ ರಾಜಲಕ್ಷ್ಮಿ ಬಸವಾಪಟ್ಟಣದ ಸೀತಾರಾಮಾವಧಾನಿ ಹಾಗೂ ವೆಂಕಟಲಕ್ಷಮ್ಮ ಇವರ ಮಗಳು. ಕೇಶವಮೂರ್ತಿಯವರಿಗೆ ಎರಡು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಗ್ರಾಮಲೆಕ್ಕಿಗರಾಗಿ ಸರ್ಕಾರಿ ಸೇವೆಯಲ್ಲಿದ್ದು ಈಗ ನಿವೃತ್ತಿಯಾಗಿದ್ದಾರೆ. ವ್ಯವಸಾಯವನ್ನು ಕೈಬಿಟ್ಟಿಲ್ಲ. ಕೃಷಿಗೆ ಅನುಕೂಲವಾಗಲಿ ಅಂತ ಟ್ರ್ಯಾಕ್ಟರ್ ಖರೀದಿಸಿದ್ದಾರೆ. ಬದುಕಿನ ಅನುಭವವನ್ನು ನಮ್ಮೊಂದಿಗೆ ಹಂಚಿಕೊಂಡ್ರು.



ಟ್ರ್ಯಾಕ್ಟರ್ ಚಾಲಿಸುವ ಎಂ.ಎಸ್.ಕೇಶವಮೂರ್ತಿ: ಮುದ್ದಾಪುರ

'ನಾನು SSLC ಹಾಸನದಲ್ಲಿ ಓದಿದ್ದು. ೧೦ ರಿಂದ ೧೫ ಕಿಲೋಮೀಟರ್ ನಡೆದು ಹೋಗುತ್ತಿದ್ದೆ. ಸೈಕಲ್ ನೋಡಿದ್ರೆ ಈಗ ಹೆಲಿಕ್ಯಾಪ್ಟರ್ ನೋಡಿದ ಹಾಗಿತ್ತು ಕಾಲ, ಹಿಂದೆ. ತಂದೆಗೆ ೧೦ ಎಕರೆ ಜಮೀನಿತ್ತು. ಅವರು ಅದನ್ನು ವಾರಗುತ್ತಿಗೆಗೆ ನೀಡಿದ್ರು. ತೋಟದಲ್ಲಿ ೧೦೦ ಅಡಿಕೆ ಗಿಡ ಇತ್ತು. ಆದಾಯ ಇರಲಿಲ್ಲ. Primary School ಓದಿದ್ದು ಹಳೇಕೊಪ್ಪಲಿನಲ್ಲಿ. ಹೈಸ್ಕೂಲು ಎರಡನೇ ವರುಷ ಓದುವಾಗ ತಂದೆ ತೀರಿಕೊಂಡ್ರು. ಓದುವುದನ್ನು ಬಿಟ್ಟೆ. ಆಗ ಸರ್ಕಾರಿ ಶಾಲೆಯ ಶುಲ್ಕ ೨ ರೂಪಾಯಿ ಇತ್ತು. ಅದನ್ನು ಕೊಡೋಕೂ ಆಗದ ಬಡತನ. ಆದರೆ ನಾನು ಛಲದಿಂದ ಮತ್ತೆ ಶಾಲೆಗೆ ಸೇರಿದೆ. ದೊಡ್ಡಕೊಂಡಗುಳದ ಮೂಲಕ ದಿನಾ ನಡೆದು ಹೋಗುತ್ತಿದ್ದೆ. ೧೯೮೬ರಲ್ಲಿ ನಮ್ಮೂರಿಗೆ Bus ಬಂತು.



ಎಲೆ ಕೋಸು ಬೆಳೆಗಾರ ಎಂ.ಎಸ್.ಕೇಶವಮೂರ್ತಿ: ಮುದ್ದಾಪುರ

'SSLC ಆದ ಮೇಲೆ ಒಬ್ಬ ಕಂಟ್ರಾಕ್ಟರ್ ಹತ್ರ ಮೇಸ್ತ್ರಿ ಆಗಿ ಕೆಲಸಕ್ಕೆ ಸೇರಿದೆ. ಮದುವೆಯಾಯ್ತು. ಮದುವೆಯಾದ ಒಂದು ವರುಷಕ್ಕೆ ಗ್ರಾಮಲೆಕ್ಕಿಗನ ಕೆಲಸ ಸಿಕ್ತು. ನಮ್ಮದು ಕೊಟ್ಟು ತಂದು ಮದುವೆ. ನನ್ನ ಹೆಂಡ್ತಿ ಅಣ್ಣಂಗೆ ಚಿಕ್ಕಪ್ಪನ ಮಗಳನ್ನು ಕೊಟ್ಟಿತ್ತು. ನಮ್ಮ ಊರಲ್ಲೇ ನನ್ನ ಮದುವೆ ಆದದ್ದು. ತುಂಬಾ ಸರಳವಾಗಿ ಆಯ್ತು. ಕುಟುಂಬವನ್ನು ಊರಲ್ಲಿ ಬಿಟ್ಟು ನನ್ನ ಕೆಲಸ ಮುಗಿಸಿ ಸಂಜೆ ಊರಿಗೆ ವಾಪಸ್ಸು ಬರುತ್ತಿದ್ದೆ. ನನ್ನ ಹೆಂಡತೀನೂ ವ್ಯವಸಾಯದ ಬದುಕಿನಲ್ಲಿ ಸಹಕರಿಸಿದಾಳೆ. Village Accountant ಕೆಲಸ

ಸಿಕ್ಕ ಮೇಲೆ ಪ್ರಾಥಮಿಕ ಶಾಲೆಯ ಮೇಷ್ಟ್ರ ಕೆಲಸವೂ ಸಿಕ್ಕಿತ್ತು. ಒಂದು ತಿಂಗಳು ಆ ಕೆಲಸ ಮಾಡಿದೆ. ಇಷ್ಟ ಆಗಲಿಲ್ಲ. ಮತ್ತೆ ಹಳೇ ಕೆಲಸಕ್ಕೆ ಬಂದುಬಿಟ್ಟೆ. ೧೯೬೫ನೇ ಇಸವೀಲಿ ಬರ ಬಂದಾಗ, ಸರ್ಕಾರದ ಲೈಸೆನ್ಸ್ ಪಡೆದು ಕೆಂಪು ಜೋಳವನ್ನು ರೂಪಾಯಿಗೆ ಎರಡು ಕೇಜಿಯಂತೆ ಮಾರಿದೆ. ಹಿಂದೆ ಬರೀ ಗಿಡ್ಡರಾಗಿ ದೊಡ್ಡರಾಗಿ ಬೆಳೀತಾ ಇದ್ವಿ. ನಾನು ಬೇರೆ ಬೇರೆ ಬೆಳೆಗಳನ್ನೂ ಬೆಳೆದೆ. ಗ್ರಾಮಲೆಕ್ಕಿಗನಾಗಿ ನಾನು ಬೇರೆ ಬೇರೆ ಊರು ತಿರುಗುವಾಗ, ಪಹಣಿ ಬರೀಬೇಕಾದ್ರೆ ಕೂತ ಜಾಗದಲ್ಲಿ ಬರೀತಿರಲಿಲ್ಲ. ಅವರ ಜಮೀನಿನಲ್ಲಿ ತಿರುಗಾಡಿ ಬೇರೆ ಬೇರೆ ಬೆಳೆಯನ್ನು, ಅದರ ಬೇಸಾಯದ ವಿಧಾನವನ್ನು ತಿಳೀತಿದ್ದೆ. ವ್ಯವಸಾಯದಲ್ಲಿ ಕಷ್ಟ ಪಟ್ಟು ದುಡಿದ್ರೆ ಆದಾಯ ಸಿಗುತ್ತೆ ಅನ್ನಿಸಿತು. ಕೆಲಸದ ಜತೆಯಲ್ಲೇ ಜಮೀನು ಅಭಿವೃದ್ಧಿಯನ್ನೂ ಮಾಡತೊಡಗಿದೆ. ಇರುವ ಆರು ಎಕರೆ ಜಮೀನಿನಲ್ಲಿ ಭತ್ತ, ಆಲೂಗೆಡ್ಡೆ, ಹಾಗೂ ತರಕಾರಿ ಬೆಳೆ ಬೆಳೆದೆ. ಮಗ, ಓದು ಮುಗಿಸಿದ ಮೇಲೆ ವ್ಯವಸಾಯ ಮಾಡ್ತೀನಿ ಅಂದ. ಅವನಿಗೆ ಅನುಕೂಲ ಆಗಲಿ ಅಂತ ಟ್ರ್ಯಾಕ್ಟರ್‌ನ ಖರೀದಿ ಮಾಡಿದೆ. ಉಳುಮೆಗೆ, ಗೋಡು ಸಾಗಿಸಲು ಇದ್ರಿಂದ ಅನುಕೂಲವಾಯ್ತು. ಹಾಗೇ ಬಾಡಿಗೇನೂ ಹೊಡೀತೀವಿ. ಗ್ರಾಮಲೆಕ್ಕಿಗನಾಗಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದೀನಿ. ಕರ್ತವ್ಯ ಲೋಪ ಮಾಡಿಲ್ಲ. ನಂಗಿಂತ ಕೆಳಗಿರುವವರನ್ನು ನೋಡಿ ನಾನು ಉತ್ತಮ ಸ್ಥಿತಿಯಲ್ಲಿದ್ದೇನಲ್ಲಾ ಅಂತಾ ಸಮಾಧಾನಪಡ್ತೀನಿ' ಅಂತ ಮಾತು ಮುಗಿಸಿದ್ರು. ನಾವು 'ಅಣ್ಣಯ್ಯ'ನವರ ಮನೆಗೆ ಹೊರಟೆವು.

೯) ಎಂ.ಆರ್. ಚನ್ನಕೇಶವಯ್ಯ (ಅಣ್ಣಯ್ಯ) ಇ/ಮ ರಾಮಸ್ವಾಮಯ್ಯ
ಮುದ್ಲಾಪುರ, ಹಾಸನ ತಾ. ಜಿಲ್ಲೆ, ದೂರವಾಣಿ : 08172 255295

ವ್ಯವಸಾಯ ಅಂದ್ರೆ ಹುಚ್ಚು ನನಗೆ. ಯಾರಾದ್ರೂ ಎತ್ತುಗಾಡಿ ಹೊಡೀತಿದ್ರು, ಗಾಡಿಗೆ ಗೊಬ್ರ ಮಣ್ಣು ತುಂಬ್ತಿದ್ರು - ಅಂದ್ರೆ ನಾನು ಅಲ್ಲಿಗೆ ಹೋಗ್ತಿದ್ದೆ. ನನ್ನ ತಂದೆ ೧೯೬೧-೬೨ರಲ್ಲಿ ೧೭೦೦ ರೂಪಾಯಿಗೆ ಎತ್ತುಗಾಡಿ ಕೊಡಿಸಿದ್ರು. ೧೨೦೦ ರೂಪಾಯಿ ಗಾಡಿ, ೫೦೦ ರೂ ಒಂದು ಜತೆ ಎತ್ತು. ಇದೇ ಗಾಡೀಲಿ ಗೊಬ್ರ ಹೇರುತ್ತಿದ್ದೆ, ಬಾಡಿಗೆಗೆ ಹೋಗುತ್ತಿದ್ದೆ. ಮೂಟೆ ಹೊರ್ತಿದ್ದೆ. ನೋಡಲು ಸಣ್ಣ ಆಳಾಗಿರಬಹುದು. ನಾನು ಈಗಲೂ ಒಂದು ಪಲ್ಲದ ಚೀಲವನ್ನು ಆರಾಮವಾಗಿ ಹೊರಬಲ್ಲೆ. ಆ ಐಡಿಯಾ ಈಗಲೂ ಇದೆ.


ಹಾಲಿನ ಡೈರಿಯ ಸಂಸ್ಥಾಪಕ ಕಾರ್ಯದರ್ಶಿ ಎಂ.ಆರ್.ಚನ್ನಕೇಶವಯ್ಯ:ಮುದ್ಲಾಪುರ

ಮುದ್ಲಾಪುರದ ರಾಮಸ್ವಾಮಯ್ಯ ಹಾಗೂ ಹೊಳೆನರಸೀಪುರ (ತಾ) ಹಳೇಕೋಟೆ ಸಮೀಪದ ಹರಿಹರಪುರದ ವೆಂಕಟಲಕ್ಷಮ್ಮ ಅವರ ಮಗ ಎಂ.ಆರ್. ಚನ್ನಕೇಶವಯ್ಯ ಅವರಿಗೆ ಈಗ ೫೮ರ ಹರಯ. ಅವರ ಪತ್ನಿ ಎಚ್.ಎನ್. ಗೌರಮ್ಮ ಶಿವಮೊಗ್ಗ ಜಿಲ್ಲೆ ಮತ್ತೂರು ಹೊಸಹಳ್ಳಿಯ ನಾರಾಯಣ ಅವಧಾನಿ ಹಾಗೂ ಲಕ್ಷ್ಮೀದೇವಮ್ಮ ಅವರ ಮಗಳು. ಎಂ.ಆರ್.ಚನ್ನಕೇಶವಯ್ಯನವರನ್ನು ಊರಜನ ಪ್ರೀತಿಯಿಂದ 'ಅಣ್ಣಯ್ಯ' ಎಂದು ಕರೆಯುತ್ತಾರೆ. 'ಮುದ್ಲಾಪುರದ ಅಯ್ಯನವರು' ಎಂದು ಹೊರಗಿನವರು ಗುರುತಿಸುವುದುಂಟು. ಕೃಷಿ, ವ್ಯಾಪಾರ, ಹಾಲಿನ ಡೈರಿ, ಗ್ರಾಮೀಣ ಅಭಿವೃದ್ಧಿ, ರಾಜಕೀಯ ಈ ಎಲ್ಲ ಕ್ಷೇತ್ರಗಳಲ್ಲೂ ಅನುಭವ ಹೊಂದಿದ್ದಾರೆ. ಪಾದರಸದಂತಹ ವ್ಯಕ್ತಿತ್ವ. ರಾತ್ರಿಯ ಊಟವನ್ನು ಮುಗಿಸಿ ನಾವು ಚನ್ನಕೇಶವಯ್ಯನವರ ಮನೆಗೆ ಬಂದಾಗ ೧೧ ಘಂಟೆಯ ಸಮಯ. ಪೂರ್ವಿಕರ ವಿಚಾರದಿಂದ ನಮ್ಮ ಮಾತುಕತೆ ಆರಂಭವಾಯ್ತು. ಅಣ್ಣಯ್ಯನವರು ಚುರುಕಾಗಿ ವಿಚಾರ ತಿಳಿಸಲು ಆರಂಭಿಸಿದ್ರು.



ತಮ್ಮ ಹಸುಗಳೊಂದಿಗೆ ಎಚ್.ಎನ್.ಗೌರಮ್ಮ-ಎಂ.ಆರ್.ಚನ್ನಕೇಶವಯ್ಯ ದಂಪತಿ: ಮುದ್ದಾಪುರ

'ನನ್ನ ತಾತನನ್ನು ನಾನು ನೋಡಿಲ್ಲ. ತಂದೆ ಜೋಡಿದಾರ್ ರಾಮಸ್ವಾಮಯ್ಯನವರು. ಇನಾಮು ಗ್ರಾಮ ಇದಾದ್ರಿಂದ ಜಮೀನಿನ ಕಂದಾಯವನ್ನು ಸಂಗ್ರಹಿಸಬೇಕಿತ್ತು. ಶಿಸ್ತುಬದ್ಧವಾದ ಉತ್ತಮ ಜೀವನ ನಡೆಸಿದ್ರು. ಲೇವಾದೇವಿ ವ್ಯವಹಾರವೂ ಇತ್ತು. ಬಹಳ ಹಿಡಿತವಾಗಿ ಜೀವನ ನಡೆಸ್ತಿದ್ರು. ದುಂದುವೆಚ್ಚ ಇರಲಿಲ್ಲ. ಯಾರಿಗಾದ್ರೂ ಮಾತುಕೊಟ್ಟು ತಪ್ಪಿರಲಿಲ್ಲ. ಸ್ವಂತ ವ್ಯವಸಾಯ ಮಾಡ್ತಿರಲಿಲ್ಲ. ಇತರರ ಕೈಲಿ ಕೂಲಿ ಕೊಟ್ಟು ಮಾಡಿಸೋರು. ತೋಟ ಮಾತ್ರ ತಾವೇ ನೋಡಿಕೊಳ್ಳೋರು. ೧೯೬೬ರಲ್ಲಿ ೧೦ ಎಕರೆ ಜಮೀನನ್ನು ಕೇವಲ ೨೦೦೦ ರೂಪಾಯಿಗೆ ಇತರರಿಗೆ ಮಾರಿದ್ರು. ನಾನು ಆಗಿನ್ನೂ ಕಾಲೇಜು ಓದು ಮುಗಿಸಿ ಮನೆಗೆ ಬಂದಿದ್ದೆ. "ಜಮೀನು ಮಾರಬೇಡಿ, ನಾನು ವ್ಯವಸಾಯ ಮಾಡ್ತೀನಿ" ಅಂದೆ. ಕೊಟ್ಟ ಮಾತಿಗೆ ತಪ್ಪಬಾರದು ಅಂತ ಮಾರಿಬಿಟ್ರು. ನಾವು ಇಬ್ರು ಗಂಡು ಮಕ್ಕಳು, ಆರು ಜನ ಹೆಣ್ಣುಮಕ್ಕಳು. ನನ್ನ ತಾಯಿ ವೆಂಕಟಲಕ್ಷ್ಮಮ್ಮ ಬಹಳ ಗಟ್ಟಿಗಾತಿ. ಆಗ ಮನೇಲಿ ೫೦ ಜನ ಆಳು ಇದ್ರು. ಒಬ್ಬನಿಗೆ ಎರಡು ರೊಟ್ಟಿಯಂತೆ ಸುಮಾರು ೧೦೦ ರೊಟ್ಟಿ ತಟ್ಟಿ ಒಂದು ಬಕೆಟ್ ಚಟ್ನಿ ಮಾಡೋರು. ಬೆಳಗಿನಿಂದ ಸಂಜೆವರೆಗೆ ಅಡುಗೆಮನೆ ಕೆಲಸವೇ. ಈಗ ಗ್ಯಾಸು ಬಂದಿದೆ. ಆಗ ಒಲೆ ಹಚ್ಚಬೇಕು. ಅವತ್ತು ನಮ್ಮ ತಂದೆ ಒಲೆಗೆ ಅಂತ ಮುಗಳಿ ಮುಳ್ಳು ಕಡ್ಡಿ ಇಡೋರು. ಸೌದೆ ಒಡೆಸ್ತಿರಲಿಲ್ಲ. ಬಹಳ ಕಷ್ಟದಲ್ಲೇ ಮನೆ ನಿರ್ವಹಣೆ ಮಾಡಿದ್ರು. ಅವರ ಕಷ್ಟವನ್ನು ಈಗಿನವರು ಅನುಭವಿಸಲು ಸಾಧ್ಯವಿಲ್ಲ. ನನ್ನ ಹೆಂಡತಿ ಮತ್ತೂರು ಹೊಸಳ್ಳಿಯವಳು. ಬಂದ ಹೊಸದರಲ್ಲಿ ಮನೆ ಜನ, ಆಳುಕಾಳು, ದನಕರು, ಹೊಂದಿಕೊಳ್ಳಲು ಬಹಳ ಕಷ್ಟಪಟ್ಟಿದಾಳೆ. ನಮ್ಮ ಮಾವನ ಮನೇಲಿ ಇಂಥ ಕೃಷಿ ಇರಲಿಲ್ಲ. ಕ್ರಮೇಣವಾಗಿ ಹೊಂದಿಕೊಂಡಳು. ನನ್ನ ತಾಯಿಯ ಜತೆ ಸೇರಿ ಮನೆಯ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ಮಾಡಿದ್ಲು. ನನಗೆ ಒಬ್ಬ ಮಗ ಹಾಗೂ ಮೂರು ಜನ ಹೆಣ್ಣುಮಕ್ಕಳು. ಮಗ B.E ಓದುತ್ತಿದ್ದಾನೆ. ಅವನಿಗೆ ಹಳ್ಳಿಜೀವನ ಒಗ್ಗೋಲ್ಲ, ಕೊಟ್ಟಿಗೇಲಿ ಎಷ್ಟು ಹಸುವಿದೆ ಗೊತ್ತಿಲ್ಲ. ಹಾಗಾಗಿ ಅವನಿಗೆ ವ್ಯವಸಾಯ ಆಗೋಲ್ಲ ಅಂತ ನಾನು ತೀರ್ಮಾನ ಮಾಡಿದೀನಿ. ಆದರೆ ನನ್ನ ಮೂರು ಜನ ಹೆಣ್ಣು ಮಕ್ಕಳು ಮಾತ್ರ ವ್ಯವಸಾಯದಲ್ಲಿ ಅಪರಂಜಿ. ಈಗ ಅಮೇರಿಕಾಕ್ಕೆ ಕೊಟ್ಟಿರುವ ಮಗಳು, ನನ್ನ, ಹಾಲಿನ ಡೈರಿಲೆಕ್ಕವನ್ನು ಅಚ್ಚುಕಟ್ಟಾಗಿ ಬರೆಯೋಳು. ನನಗಿಂತ ವೇಗವಾಗಿ ಹಾಲು ಕರೆಯೋಳು. ಹೆಣ್ಣು ಮಕ್ಕಳ ಅದೃಷ್ಟ ಚೆನ್ನಾಗಿತ್ತು, ಒಳ್ಳೆ ಕಡೆ ಸೇರಿದ್ರು. ಜನ ಗಂಡುಮಕ್ಕಳು ಬೇಕು ಅಂತಾರೆ, ಆದ್ರೆ ನನ್ನ ಹೆಣ್ಣುಮಕ್ಕಳು ಎಡಗೈ ಬಲಗೈ ಹಾಗಿದ್ರು. ಮಗಳ ಬಾಣಂತನದ ನೆವದಲ್ಲಿ ನಾನು ನನ್ನ ಹೆಂಡ್ತಿ, ಅಮೇರಿಕಾ ಪ್ರವಾಸ ಮಾಡುವಂತಾಯ್ತು. ಇದು ಇಲ್ಲಿಯವರೆಗಿನ ಕಥೆ' ಎಂದರು. 'ನಿಮ್ಮ ಬಹುಮುಖ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡಿ' ಅಂದಾಗ ಎಲ್ಲಿಂದ ಆರಂಭಿಸುವುದು ಎಂಬ ಆಲೋಚನೆ ಅವರಿಗೂ ಆಗಿರಬೇಕು. ತಮ್ಮ ಬಾಲ್ಯದಿಂದಲೇ ವಿಚಾರ ಆರಂಭಿಸಿದ್ರು.

'ನಾನು primary ಹಾಗೂ middle school ಇಲ್ಲಿ ಓದಿದೆ. ಹೊಸಕೋಟೆ ತಾಲ್ಲೂಕು ಸೂಲಿಬೆಲೆಯಲ್ಲಿ ಭಾವನ ಮನೇಲಿ SSLC ಓದಿದೆ. ಹಾಸನದಲ್ಲಿ ಸರ್ಕಾರಿ ಕಾಲೇಜಿಗೆ PUCಗೆ ಸೇರಿದೆ. ಅಚಾನಕ್ಕಾಗಿ ತಂಗಿ ಒಬ್ಬಳು ತೀರಿಕೊಂಡಳು. ತಂದೆ ತಾಯಿ ನೋವಿನಿಂದ ಕುಸಿದರು. ನಾನು ವಿದ್ಯಾಭ್ಯಾಸ ನಿಲ್ಲಿಸಿ ಮನೆಗೆ ಬಂದುಬಿಟ್ಟೆ. ಮೊದಲಿನಿಂದಲೂ ಎತ್ತುಗಾಡಿ ಅಂದ್ರೆ ಪ್ರಾಣ. ಸಣ್ಣಪುಟ್ಟ ಎತ್ತು ಕಟ್ಟಿಲ್ಲ ನಾನು. ಎತ್ತನ್ನು ಹೂಡಿ ಗಾಡಿ ಮೂಕಿ ಮೇಲೆ ಕುಳಿತರೆ ಅಲ್ಲೇ ಕುಳಿತಿರಬೇಕು. ಅಷ್ಟು ಮಜಬೂತಾಗಿರ್‍ತಿತ್ತು ಎತ್ತುಗಳು. ಜಾವಗಲ್, ಗಂಡಸಿ, ಹಾಸನಕ್ಕೆ ಬಾಡಿಗೆ ಹೊಡೀತಿದ್ದೆ. ಚೀಲ ಹೊರುತ್ತಿದ್ದೆ. ಎತ್ತುಗಾಡಿ ಹೂಡಿ ಕುಳಿತ್ರೆ ಎತ್ತು ಹೀಗೇ ಕಾಲು ಹಾಕಬೇಕು ಅಂತ ಆಸೆ ನನಗೆ. ಅಡ್ಡಗಾಲು ಹಾಕುವ ಎತ್ತನ್ನು ಕಟ್ಟಿರಲಿಲ್ಲ. ಆಗ ಚೀಲಕ್ಕೆ ೧೨ ಆಣೆ ಬಾಡಿಗೆ, ಹಾಸನಕ್ಕೆ ಬಾಡಿಗೆ ಹೋದ್ರೆ. "ಎತ್ತುಗಳನ್ನು ಚೆನ್ನಾಗಿ ಸಾಕಬೇಕು, ತಿಂಡಿ ಹಾಕಬೇಕು" ಅಂದ್ರೆ, ತಂದೆ, "ಅದಕ್ಕೆ ತಿಂಡಿ ಯಾಕೆ" ಅನ್ನೋರು. ಆದರೆ ನಾನು ಕೈತುಂಬಾ ತಿಂಡಿ ಹಾಕ್ತಿದ್ದೆ. ಅವತ್ತು ೧೬ ಮೈಲಿ ದೂರದ ಗಂಡಸಿಗೆ ಒಂದು ಚೀಲಕ್ಕೆ ಒಂದೂಕಾಲು ರೂಪಾಯಿ ಬಾಡಿಗೆ ಕೊಡೋರು, ಜಾವಗಲ್‌ಗೆ ಹೋದ್ರೆ

ಎರಡೂಕಾಲು ರೂಪಾಯಿ. ಇವತ್ತು ೧೫, ೨೦ ರೂ ಕೊಡ್ತಾರೆ. ಹಿಂದೆ ಒಂದು ಒಳ್ಳೇ ಜಾತಿ ಎತ್ತಿನ ಜೋಡಿಗೆ ೬೦೦ ರಿಂದ ೮೦೦ ಅಷ್ಟೆ. ೧೫೦೦ ರೂಪಾಯಿ ಆದ್ರೆ ಅದೇ ಭಾರಿ. ನಾನು ಎತ್ತಿನ ವ್ಯಾಪಾರಾನೂ ಮಾಡಿದೀನಿ. ಹೊಳೆನರಸೀಪುರ ತಾಲ್ಲೂಕು ದೊಡ್ಡ ಕುಂಚೇವು, ಮಾದಾಪುರ ಈ ಪ್ರದೇಶಗಳಿಂದ ೮, ೧೦ ಜತೆ ಎತ್ತುಗಳನ್ನು ಹಾಗೇ ತರ್ತಿದ್ದೆ. ಜನರಿಗೆ ಅಷ್ಟು ನಂಬಿಕೆ ಇತ್ತು. ಆ ಎತ್ತನ್ನು ಗಂಡಸಿ, ಹಾಸನ, ಚುಂಚನಕಟ್ಟೆ, ರಾಮನಾಥಪುರ, ಬೂಕನಬೆಟ್ಟ ಜಾತ್ರೆಗೆ ಹೊಡೀತಿದ್ದೆ. ವ್ಯಾಪಾರ ಮಾಡಿ ಲಾಭಾಂಶ ಇಟ್ಟುಕೊಂಡು ಉಳಿದ ಹಣವನ್ನು ಎತ್ತಿನ ಮಾಲೀಕರಿಗೆ ಹಿಂತಿರುಗಿಸುತ್ತಿದ್ದೆ."

ಮಾತನ್ನು ತಡೆದು ಕೇಳಿದೆ, ಒಳ್ಳೆಯ ಎತ್ತುಗಳಿಗೆ ಏನು ಲಕ್ಷಣ ಇರಬೇಕು, ವ್ಯಾಪಾರದ ವಿಧಾನ ಹೇಗೆ?

'ಜೋಡಿ ಸರಿ ಇರಬೇಕು, ತಲೆ ಹಾಗೂ ಬಣ್ಣ ಕೂಡಬೇಕು. ಕಾಲು ಅತಿ ಎತ್ರ ಇರಬಾರದು. ಉದ್ದ ಇದ್ರೆ ಮಡಿಕಾಲು ಎತ್ರ ಅಂತೀವಿ. ಆದ್ದರಿಂದ ಕಾಲು ಮಟ್ಟ ಇರಬೇಕು. ಶರೀರ ಬೆಳೆದಿರಬೇಕು. ಲಕ್ಷಣವಾದ ಸುಳಿಗಳು ಇರಬೇಕು. ಭುಜದಿಂದ ಸ್ವಲ್ಪ ಹಿಂದೆ ರಾಜಸುಳಿ. ಭುಜದ ಮೇಲೆ ಇರುವ ಸುಳಿ 'ಕಾಗೆ ಸುಳಿ'. ಅದು ಒಳ್ಳೇದಲ್ಲ. ಸುಳಿಯ ವಿಚಾರ ಅಂದ್ರೆ ಕೊಳ್ಳುವವರಿಗೂ ಜರಿಯಲು ಕಾರಣ ಬೇಕು. ಇಲ್ಲದಿದ್ರೆ ವ್ಯಾಪಾರ ಜಗ್ಗೋಲ್ಲ. ಬಾಲದ ಹತ್ರ ಹೀನಸುಳಿ, ಪರಸುಳಿ ಅಂತಿರುತ್ತೆ. ಕಾಲಲ್ಲಿ ಬೇಡಿ ಸುಳಿ ಇರುತ್ತೆ. ಅಂಥವಕ್ಕೆ ಧಾರಣೆ ಕಡಿಮೆ. ಕಣ್ಣಿಗೆ ಕಾಣೋದನ್ನು ಮುಚ್ಚೋದಕ್ಕೆ ಆಗೋಲ್ಲ. ಎಲ್ಲರಿಗೂ ಗೊತ್ತಾಗುತ್ತೆ. "ಮೋಟು ಬಗ್ರಿ" ಅಂತೀವಿ, ಕೆಲವನ್ನು. ಹಸುವಿನ ಪಕ್ಕೇಲಿ ಎರಡೂ ಕಡೆ ಬಗ್ರಿ ಪೂರ್ಣವಾಗಿ ಇರಬೇಕು. ಕೆಲವಕ್ಕೆ ಈ ಮೂಳೆ ಪೂರ್ಣವಾಗಿ ಇರೋಲ್ಲ. ಇದು ಎರಡೂ ಕಡೆ ಇದ್ರೆ ಪರವಾಗಿಲ್ಲ. ಆದರೆ ಕೆಲವಕ್ಕೆ ಎಡಗಡೆ ಮಾತ್ರ ಇರುತ್ತೆ. ಎಡಮೋಟು ಅಂತೀವಿ. ಜಾಸ್ತಿ ಮೇವು ತಿಂದಾಗ ಹೊಟ್ಟೆಗೆ ಚುಚ್ಚಿದಾಗೆ ಕಾಣುತ್ತೆ. ಇದಿದ್ರೆ ವ್ಯಾಪಾರ ಕಡಿಮೆ. ಮನೇಗೂ ಒಳ್ಳೇದಾಗಲ್ಲ ಅಂತಾರೆ. ಇದನ್ನು ಪತ್ತೆ ಹಚ್ಚಲು ಅನುಭವ ಬೇಕು. ವ್ಯಾಪಾರವೆಲ್ಲಾ ನಡೆಯೋದು ಬಟ್ಟೆ ಅಡಿಯಲ್ಲಿ. ಕೊಡೋನಿಗೆ ಹಾಗೂ ಮಧ್ಯವರ್ತಿಗೆ ಇಬ್ಬರಿಗೂ ವ್ಯಾಪಾರ ಗೊತ್ತಿರಬೇಕು. ಇಲ್ಲಾಂದ್ರೆ ಸುಮ್ಮನೆ ಕೈಬೆರಳು ಮುಟ್ಟಿ ಆಭಾಸವಾಗುತ್ತೆ. ಎತ್ತಿನ ಬೆಲೆ ಇತರರಿಗೆ ತಿಳೀಬಾರದು ಅಂತ ಅಷ್ಟೆ, ಈ ವಿಧಾನ,' ಎಂದು ಹೇಳಿ ವಿಚಾರದ ಮಗ್ಗುಲು ಬದಲಿಸಿದ್ರು.

'೧೯೭೮ರಲ್ಲಿ ಅವಿರೋಧವಾಗಿ ನನ್ನನ್ನು ಪಂಚಾಯ್ತಿಗೆ ಆಯ್ಕೆ ಮಾಡಿದ್ರು. ಆಗ ಗ್ರಾಮದಲ್ಲಿ party ಇತ್ತು. ೩೯೬೨ ರೂಪಾಯಿ ಊರೊಟ್ಟಿಗಿನ ಹಣ ಇತ್ತು. ನಾನು ಪಂಚಾಯ್ತಿ ಸದಸ್ಯ ಆದ ಮೇಲೆ ಊರಿನವರಿಗೆ ಹೇಳಿದೆ, "party, ತಂಡ ಎಲ್ಲಾ ಸ್ವಂತದ ವಿಷಯ. ಎಲ್ಲರೂ ಊರೊಟ್ಟಿಗಿನ ಕೆಲಸ ಮಾಡೋಣ. ಭೇದ ಮರೆತು ಬನ್ನಿ" ಅಂದೆ. ಎಲ್ಲರೂ ಬಂದರು. ಊರೊಟ್ಟಿಗಿನ ಹಣವನ್ನು ೧೦೦ಕ್ಕೆ ಒಂದು ರೂಪಾಯಿಯಂತೆ ತಿಂಗಳ ಬಡ್ಡಿಗೆ ನೀಡಿದ್ವಿ. ಐದರಿಂದ ಆರು ಸಾವಿರ ಬಡ್ಡಿ ದುಡ್ಡು ಸಂಗ್ರಹ ಆಯ್ತು. ಆಗ ಊರಲ್ಲಿ ಒಂದು ರಾಮಮಂದಿರ ಕಟ್ಟೋಣ ಅಂದೆ. ಜಾಗ ಎಲ್ಲಿದೆ ಅಂದ್ರು ಎಲ್ಲರೂ. ಆಗ ನಮ್ಮೂರಿನ ಕೇಶವಮೂರ್ತಿಯವರು (ಅಯ್ಯ) ಈಗ ರಾಮಮಂದಿರ ಕಟ್ಟಿರುವ ಜಾಗವನ್ನು ಉದಾರವಾಗಿ ನೀಡಿದ್ರು. ಒಂದು ಮನೆಗೆ ಐದು ನೂರು ಇಟ್ಟಿಗೆಯಂತೆ ಸಂಗ್ರಹ ಮಾಡಿದೆವು. ಊರೊಟ್ಟಿಗಿನ ಅರಳೀಮರ ಕಡಿಸಿ, ಮರದ ಸಾಮಾನು ಮಾಡಿಸಿದೆವು. ಒಟ್ಟು ೭೬೦೦ ರೂಪಾಯಿಯಲ್ಲಿ ರಾಮಮಂದಿರ ಆಯ್ತು. ಊರಿಗೆ ಕರೆಂಟ್ ಇರಲಿಲ್ಲ. ಹೋರಾಟವನ್ನು ಆರಂಭಿಸಿದ್ವಿ. ಊರಿಗೆ Bus ಇರಲಿಲ್ಲ. ಮೂರು ಹಳ್ಳಿ ಜನ ಸೇರಿ ಊರಿಗೆ ರಸ್ತೆಯನ್ನು ಮಾಡಿದ ಮೇಲೆ, ಕರೆಂಟ್ ಹಾಗೂ Bus ಸೌಲಭ್ಯ ೧೯೮೬ರಲ್ಲಿ ಬಂತು. ಹಾಗೇ ೩.೩.೧೯೮೬ರಲ್ಲಿ ಒಂದು ಹಾಲಿನ ಡೈರಿಯನ್ನು ಆರಂಭಿಸಿದ್ವಿ. ಜನರೆಲ್ಲಾ ಒತ್ತಾಯ ಮಾಡಿ ನನ್ನನ್ನೇ



ಗೋಬರ್‌ಗ್ಯಾಸ್ ನಿರ್ವಹಣೆ: ಎಚ್.ಎನ್.ಗೌರಮ್ಮ-ಎಂ.ಆರ್.ಚನ್ನಕೇಶವಯ್ಯ: ಮುದ್ದಾಪುರ

ಕಾರ್ಯದರ್ಶಿ ಮಾಡಿದ್ರು. ನಾನೂ ೧೦ ರಿಂದ ೧೨ ಲೀಟರ್ ಹಾಲು ಹಾಕ್ತಿದ್ದೆ. ನನಗೆ ತಿಂಗಳಿಗೆ ೬೫೦ ರೂಪಾಯಿ ಗೌರವಧನ ಕೊಡೋರು. ಹಾಲಿನಿಂದಲೇ ನನಗೆ ವಾರಕ್ಕೆ ೭೦೦ ರೂಪಾಯಿ ಸಿಗೋದು. ೨೫೦ ರೂಪಾಯಿ ಹಸುವಿನ ತಿಂಡಿಗೆ ಅಂದ್ರೂ ಉಳಿದಿದ್ದೆಲ್ಲಾ ಆದಾಯವೇ. ಜಮೀನಿಗೆ ಗೊಬ್ಬರ, ಮನೆ ಜನಕ್ಕೆ ಹಾಲು, ಮೊಸರು, ತುಪ್ಪ, ಬೆಣ್ಣೆ ಸಿಗುತ್ತೆ; ಗೋಬರ್‌ಗ್ಯಾಸ್ ಇರೋದ್ರಿಂದ ಅಡುಗೆಗೆ ನಿರಾಳ; ಸಂತೆಖರ್ಚಿಗೆ ವಾರಕ್ಕೊಮ್ಮೆ ಹಣ, ಇವಿಷ್ಟು ಸಿಗುತ್ತೆ. ಆರಂಭದಲ್ಲಿ ಡೈರಿಗೆ ೨೩ ಲೀಟರ್ ಹಾಲು ಬರೋದು. ಈಗ ದಿನಕ್ಕೆ ೨೭೫ ಲೀಟರ್ ಹಾಲು ಬರುತ್ತೆ. ವಾರಕ್ಕೆ ಒಂದು ಸಾವಿರ ರೂಪಾಯಿ ಹಣ ತೊಗೋಳ್ಳೋರೂ ಇದ್ದಾರೆ. ನನಗೂ ಹಸು ಸಾಕಾಣಿಕೆ ಇಷ್ಟ. ಹೆಣ್ಣು ಹಾಕಿದ್ರೆ ಉತ್ತಮ ತಳಿ ಆಗುತ್ತೆ. ಗಂಡಾದ್ರೆ ವ್ಯವಸಾಯಕ್ಕೆ ಆಗುತ್ತೆ' ಅಂತ ಮಿಂಚುಗಣ್ಣಿನಿಂದ ಹೇಳಿದ್ರು.

'ರಾಜಕೀಯವನ್ನು ಊರಿನ ಅಭಿವೃದ್ಧಿಗೆ ಬಳಸಿದ್ದೀನಿ. ಊರಿಗೊಂದು ಟಾರ್ ರಸ್ತೆ ಆಗಬೇಕು ಅನ್ನೋದು ನನ್ನ ಬಹುದಿನದ ಆಸೆ. ಅದಕ್ಕಾಗಿ ಹೋರಾಟ ಮಾಡ್ತಿದೀನಿ. ನನ್ನ ಕೈಲಿ ಸಾಧ್ಯವಾದಷ್ಟೂ ಇತರರಿಗೆ ನೆರವು ನೀಡ್ತೀನಿ. ಆದ್ರೆ ಈಗ ಹಳ್ಳಿಯ ಜನ ಹಿಂದಿನಂತಿಲ್ಲ. ನಿಯತ್ತು ಇಲ್ಲ, ಉಪಕಾರಸ್ಮರಣೆ ಇಲ್ಲವೇ ಇಲ್ಲ. ಇಷ್ಟರ ನಡುವೆ ವ್ಯವಸಾಯವನ್ನು ನಾನು ಕಡೆಗಣಿಸಿಲ್ಲ. ಆಲೂಗೆಡ್ಡೆ, ಎಲೆಕೋಸು, ರಾಗಿ, ಭತ್ತ, ಬಾಳೆ ಎಲ್ಲವನ್ನೂ ಬೆಳೀತಾ ಇದ್ದೀನಿ. ಬೆಳಿಗ್ಗೆ ನಾಲ್ಕು ಘಂಟೆಗೆ ಎದ್ದು ಗೋಡು ಹೊಡೆಯಲು ಗಾಡಿ ಕಟ್ತೀನಿ. ಈವತ್ತು ಮಳೆ ಆಶ್ರಯದ ವ್ಯವಸಾಯದಲ್ಲಿ ಏನನ್ನೂ ಗ್ಯಾರಂಟಿಯಾಗಿ ಹೇಳಲು ಆಗುವುದಿಲ್ಲ. ನೀರಾವರಿ ಇದ್ರೆ ಪರವಾಗಿಲ್ಲ. ಕಳೆದ ವರುಷ ನಾಲ್ಕೂವರೆ ಚೀಲ ಬಿತ್ತನೆ ಆಲೂಗೆಡ್ಡೆಗೆ ೫೧ ಚೀಲ "ತಿನ್ನುವ" ಆಲೂಗೆಡ್ಡೆ ಬೆಳೆದಿದ್ದೇನೆ. ಮನೆಗೊಬ್ಬರ ಜಾಸ್ತಿ ಹಾಕಿದ್ರಿಂದ ಈ ಇಳುವರಿ ಬಂತು. ಚೆನ್ನಾಗಿ ಉಳುಮೆ ಮಾಡಿ ಹದವರಿತು ಬೇಸಾಯ ಮಾಡಿದ್ರೆ ಆದಾಯ ಸಿಗುತ್ತೆ. ನನಗೆ ಇವತ್ತಿಗೂ ಊರಿನ ಜನರೆಲ್ಲಾ ಬೇಕು. ಎಲ್ಲರೂ ಜತೆಯಾಗಿ ದುಡಿಯಬೇಕು ಅನ್ನೋನು ನಾನು. ಜನಸೇವೆ ನನ್ನ ದೃಷ್ಟಿ, ರಾಜಕೀಯ ಮಾಡೋಲ್ಲ. ಏನೇ ಮಾಡಿದ್ರೂ ನನ್ನ ಆತ್ಮತೃಪ್ತಿಯಾಗುವಂತೆ ಮಾಡ್ತೀನಿ. ಬದುಕಿನಲ್ಲಿ ಸಂತೃಪ್ತಿ ಇದೆ' ಎಂದು ನಗೆ ಬೀರಿದರು. ನಂತರ ಸ್ವಲ್ಪ ಹೊತ್ತು ಅವರ ಅಮೇರಿಕಾ ಪ್ರವಾಸದ ಅನುಭವವನ್ನು ವರ್ಣರಂಜಿತವಾಗಿ ತಿಳಿಸಿದ್ರು. ಸಮಯ ಜಾರಿದ್ದು ತಿಳಿಯಲಿಲ್ಲ. ಅಣ್ಣಯ್ಯನವರ ಪತ್ನಿ ಗೌರಮ್ಮನವರೇ ಬಂದು ಎಚ್ಚರಿಸಬೇಕಾಯ್ತು. ವಿಭಿನ್ನ ವ್ಯಕ್ತಿತ್ವವನ್ನು ಮೆಲುಕು ಹಾಕುತ್ತಾ ಎಂ.ಕೆ. ಚನ್ನಕೇಶವಯ್ಯ ಅವರ ಮನೇಲಿ ಮಲಗಿದಾಗ, ನಿದ್ರೆ ಹತ್ತಿದ್ದು ತಿಳಿಯಲಿಲ್ಲ.

ಈ) ಎಂ.ಎಸ್. ಶ್ರೀನಿವಾಸಮೂರ್ತಿ ಇ/ಮ ಶ್ರೀನಿವಾಸಯ್ಯ

ಮುದ್ಲಾಪುರ, ಹಾಸನ ತಾ. ಜಿಲ್ಲೆ, ದೂರವಾಣಿ : 08172 255278

(ದೂರವಾಣಿ: ಅವರ ತಮ್ಮ ಎಂ.ಎಸ್. ಕೇಶವಮೂರ್ತಿ ಅವರ ಮನೆಯದ್ದು)

ನಮ್ಮ ಗೊಬ್ಬಳಿ ಮರದ ಎತ್ತುಗಾಡೀನ ನಾನೇ ರಿಪೇರಿ ಮಾಡ್ತೀನಿ. ನನಗೆ ಮರದ ಕೆಲಸ ಎಲ್ಲಾ ಬರುತ್ತೆ. ಈಗಲೂ ನೇಗಿಲು ಮಾಡ್ತೀನಿ. ನಾವು ವಾಸವಿರುವ ಮನೆಯನ್ನು ನಾನೇ ಸ್ವತಃ ಕಟ್ಟಿದ್ದು. ಮರಗೆಲಸ ಪೂರ್ತಾ ನಂದೇ. 'ಕೆಲವಂ ಬಲ್ಲವರಿಂದ ಕಲ್ತು' ಅಂತಾರಲ್ಲಾ ಹಾಗೇ ಇತರರನ್ನು ನೋಡಿಯೇ ನಾನು ಕಲಿತಿದ್ದು. ಏನನ್ನಾದ್ರೂ ನೋಡಿದ್ರೆ ಕಲೀತೀನಿ, ಮಾತನಾಡಿದ್ರೆ ತಿಳಿದುಕೋತೀನಿ. ಹೀಗೆ ನನ್ನ ಬುದ್ಧಿ ಚುರುಕು, ಆದರೆ ವಿದ್ಯೆ ನೈವೇದ್ಯ ಅಷ್ಟೆ!


ಎಂ.ಎನ್.ನಾಗರತ್ನಮ್ಮ-ಎಂ.ಎಸ್.ಶ್ರೀನಿವಾಸಮೂರ್ತಿ ದಂಪತಿ ತಮ್ಮ ಗುಡಿ ಕೈಗಾರಿಕೆಯ ಉತ್ಪನ್ನಗಳೊಂದಿಗೆ

ಮೊಸಳೆಯ ನರಸಿಂಹಯ್ಯ ಹಾಗೂ ಗೌರಮ್ಮ ದಂಪತಿಗಳಿಗೆ ಐದು ಹೆಣ್ಣು ಹಾಗೂ ಮೂರು ಗಂಡುಮಕ್ಕಳು. ಅವರ ಹಿರಿಯ ಮಗಳು ಎಂ.ಎನ್. ನಾಗರತ್ನಮ್ಮ



ಹಸುವಿನ ಹಾಲು ಕರೆಯುತ್ತಿರುವ ಅನಂತಲಕ್ಷ್ಮಿ: ಎಂ.ಎಸ್.ಶ್ರೀನಿವಾಸಮೂರ್ತಿ ಅವರ ಸೊಸೆ: ಮುದ್ದಾಪುರ

ಮದುವೆಯಾದದ್ದು ಮುದ್ದಾಪುರದ ಶ್ರೀನಿವಾಸಯ್ಯ ಹಾಗೂ ಗೌರಮ್ಮನವರ ಹಿರಿಯ ಮಗ ಎಂ.ಎಸ್. ಶ್ರೀನಿವಾಸಮೂರ್ತಿ ಅವರನ್ನು. ನಾಗರತ್ನಮ್ಮನವರದ್ದೂ ಕೃಷಿಕುಟುಂಬ. ತವರುಮನೆ ಹಾಗೂ ಗಂಡನ ಮನೆಯ ಬದುಕಿನ ಚಿತ್ರಣವನ್ನು ಚುಟುಕಾಗಿ ಹಂಚಿಕೊಂಡ್ರು. 'ತವರು ಮನೇಲೂ ತುಂಬಾನೇ ಕಷ್ಟ ಇತ್ತು. ತಂದೆಗಿದ್ದುದು ಸ್ವಲ್ಪ ತೋಟ. ನಾವು ಎಂಟು ಜನ ಮಕ್ಕಳು. ನಾನು ದೊಡ್ಡವಳಾದ್ರಿಂದ ಅಡಿಕೆ ಸುಲೀತಿದ್ದೆ, ದೊನ್ನೆ ಹಚ್ಚುತ್ತಿದ್ದೆ. ಆಗ ಈಗಿನಷ್ಟು ಧಾರಣೆ ಇರಲಿಲ್ಲ. ಮದುವೆಯಾಗಿ ಗಂಡನ ಮನೆಗೆ ಬಂದಾಗ ಇಲ್ಲಿಯೂ ಕಷ್ಟ. ಮಕ್ಕಳಿಗೆ ಎರಡು ಹೊತ್ತು ಊಟ ಹಾಕುವುದಕ್ಕೂ ಕಷ್ಟ ಇತ್ತು. ಮನೇ ಕೆಲಸ ಮಾಡಿ ಮುಗಿಸಿ, ನಂತರ ದಿನಕ್ಕೆ ೬೦ ರಿಂದ ೭೦ ಎಲೆ ಹಚ್ಚುತ್ತಿದ್ದೆ. ದೊನ್ನೇನೂ ಹಾಕುತ್ತಿದ್ದೆ. ಇದನ್ನು ಮಾರಿ ಬಂದ ಆದಾಯದಲ್ಲಿ ಮನೆ ಖರ್ಚನ್ನು ತೂಗಿಸುತ್ತಿದ್ದೆ. ಈಗಲೂ ಎಲೆ ಹಚ್ಚುತ್ತೀನಿ. ೧೯೮೫ರಲ್ಲಿ ಮನೆಗೆ Gobar gas ಬಂತು. ಅಲ್ಲಿಂದ ಅನುಕೂಲ ಆಯ್ತು. ಕಡ್ಡಿ ಹಾಕಿ ಹೊಗೇಲಿ ಕುಳಿತು ಅಡುಗೆ ಮಾಡಬೇಕಿತ್ತು. ಈಗ ಸುಲಭ ಆಗಿದೆ. ಮಕ್ಕಳು ದುಡಿಯುವಂತೆ ಆದಾಗ ಸಂಸಾರ ಒಂದು ನೇರಕ್ಕೆ ಬಂತು. ಮಕ್ಕಳೂ ಪ್ರೀತಿಯಿಂದ ಕಾಣ್ತಾರೆ. ಅತ್ತೆ ಸೊಸೆಯರು ತಾಯಿ ಮಕ್ಕಳಂತೆ ಇದೀವಿ - ಪರಸ್ಪರ ಒಬ್ಬರು ಹೇಳಿದ ಹಾಗೆ ಮತ್ತೊಬ್ಬರು ಕೇಳಿಕೊಂಡು. ನಾನೂ ನನ್ನ ಯಜಮಾನರೂ ಇಷ್ಟು ದಿವಸ ಬದುಕಿ ಬಾಳಿದೀವಿ. ಈಗ ಬದುಕಿನಲ್ಲಿ ನೆಮ್ಮದಿ ಇದೆ' ಎಂದು ಹೇಳಿ 'ತಾಳಿ, ನಿಮಗೆ ಕುಡಿಯಲು ಹಾಲು ತರ್ತೀನಿ' ಅಂತ ಅಡುಗೆಮನೆಗೆ ಹೊರಟರು. ಅದುವರೆಗೂ ಮೌನವಾಗಿ ಮಾತನ್ನೆಲ್ಲಾ ಆಲಿಸಿದ ಶ್ರೀನಿವಾಸಮೂರ್ತಿಯವರನ್ನು ಮಾತನಾಡಿಸಲು ಹೊರಟಾಗ ಅವರೆಂದರು 'ಅತಿಥಿ ಸತ್ಕಾರ ಮೊದಲು, ನೀವು ಹಾಲನ್ನು ಕುಡೀರಿ. ನಂತರ ಮಾತಾಡುವ' ಎಂದರು. ಮನೆಯ ಹಾಲು ಗಟ್ಟಿಯಾಗಿತ್ತು, ರುಚಿಯಾಗಿತ್ತು. ಬೆಳಗ್ಗೆ ಅದೇ ತಾನೆ, ನಾನೇ, ಇವರ ಸೊಸೆ ಅನಂತಲಕ್ಷ್ಮಿಯವರು ಹಾಲು ಕರೆಯುತ್ತಿರುವ photo ತೆಗೆದಿದ್ದೆ. ಗೋಬರ್ ಘಟಕಕ್ಕೆ ಸಗಣಿ ಕದಡುತ್ತಿದ್ದ ಶ್ರೀನಿವಾಸಮೂರ್ತಿಯವರೂ ಸಹ ಭಂಗಿ ನೀಡಿದ್ರು ಭಾವಚಿತ್ರಕ್ಕೆ. ಎಲ್ಲವೂ ನೆನಪಾಯ್ತು. ಹಾಲಿನ ಸಿಹಿ ಗಂಟಲಿನಲ್ಲಿ ಇದ್ದಂತೆಯೇ ಮೂರ್ತಿಯವರು ಮಾತನಾಡಲಾರಂಭಿಸಿದರು.



ತಮ್ಮ ಬತ್ತದ ಗದ್ದೆಯಲ್ಲಿ ಎಂ.ಎಸ್.ಶ್ರೀನಿವಾಸಮೂರ್ತಿ: ಮುದ್ದಾಪುರ

'ನನ್ನ ತಾಯಿ ನಾನು ನಾಲ್ಕು ವರುಷದವನಿದ್ದಾಗ ತೀರಿಕೊಂಡ್ರಂತೆ. ನನ್ನನ್ನು ಪೂಂಗಾಮೆಯಲ್ಲಿದ್ದ ದೊಡ್ಡಮ್ಮ ಸಾಕಿದ್ರು. ನಾನು ಶಾಲೇನ ಒಂದನೇ ತರಗತೀಗೇ ಬಿಟ್ಟುಬಿಟ್ಟೆ. ವಿದ್ಯೆ ಹತ್ತಲಿಲ್ಲ. ತಂದೆ ಒಬ್ಬಂಟಿಗರು. ನಾನು ದನಕರು ನೋಡಿಕೊಂಡಿದ್ದೆ. ಬೋರೆಗೆ ಮೇಯಲು ಹೊಡೆದುಕೊಂಡು ಹೋಗ್ತಿದ್ದೆ. ಆಟದ ಮೇಲೆಯೆ ನನ್ನ ಗಮನ ಎಲ್ಲಾ. ಗೋಲಿ ಆಡೋದು, ಬುಗುರಿ ಆಡೋದು, ಪಿಳ್ಳೆ ಆಡೋದು. ನನ್ನ ಅಕ್ಕಂದಿರು ಮನೇಲಿ ಅಡುಗೆ ಮಾಡ್ತಿದ್ರು. ಅವರ ಮದುವೆಯಾದ ಬಳಿಕ ನನ್ನ ೧೯ನೇ ವಯಸ್ಸಿಗೆ ತಂದೆ ಮದುವೆ ಮಾಡಿದ್ರು. ಜೋಡಿಗ್ರಾಮ ಇದು. ೧೫೦ ರಿಂದ ೨೦೦ ಎಕರೆ

ಜಮೀನು ಇತ್ತು. ಕಂದಾಯ ಕಟ್ಟಲು ಆಗದೆ ತಂದೆ ಜಮೀನು ಮಾರಿಬಿಟ್ರು. ಕೊನೆಗೆ ಉಳಿದದ್ದು ನಾಲ್ಕೂವರೆ ಎಕರೆ ಮಾತ್ರ. ವ್ಯವಸಾಯ ನನ್ನ ಕೈಹತ್ತಲಿಲ್ಲ. ಮಾಡಿದ ಬೆಳೆಯಲ್ಲಿ ನಷ್ಟ ಆಯ್ತು. ಒಂದು ಜತೆ ಎತ್ತು ಹಾಗೂ ೪-೫ ಹಸು ಇತ್ತು. ನನ್ನ ಜನುಮದಲ್ಲಿ ಹಸುಕರು ಇಲ್ಲದೆ ಬಾಳು ಸಾಗಿಸಿಲ್ಲ. ಜಮೀನಿಗೆ ನಾಲ್ಕು ಮಂಕರಿ ಗೊಬ್ಬರ ಆಗುತ್ತೆ, ಜಮೀನಿನ ಬದುವಿನ ಹುಲ್ಲು ಮೇಯಲು ಆಗುತ್ತೆ ಅಂತ ಹಸುಕರು ಇಟ್ಟಿದೀನಿ. ಹಿಂದೆ ಗೋಮಾಳ ಇತ್ತು. ಈಗ ಹಸುವನ್ನು ಕಟ್ಟಿ ಸಾಕಬೇಕು. ಅದಕ್ಕೇಂತ ತೋಟದಲ್ಲಿ ನೇಪಿಯರ್ ಹುಲ್ಲು ಹಾಕಿದೀನಿ. ತಂದೆ ತೀರಿಕೊಂಡ್ರು. ತಮ್ಮ ಬೇರೆಯಾದ. ನಾನು ಒಬ್ಬಂಟಿಯಾದೆ. ವ್ಯವಸಾಯ, ವ್ಯಾಪಾರ, ಸಂತೆ ಎಲ್ಲಾ ನಾನೇ ನೋಡಬೇಕಿತ್ತು. ಮೂರು ಕಾಸೂ ವರಮಾನ ಇತ್ತಿಲ್ಲ. ತುಂಬಾ ಬಡತನ. ರಾತ್ರೋರಾತ್ರಿ ಏಳು ಎಂಟು ಮೈಲು ದೂರದ ರಾಮದೇವರಹಳ್ಳಕ್ಕೆ ಗಾಡಿ ಹೊಡೆದುಕೊಂಡು ಹೋಗಿ ಮುತ್ತುಗದ ಎಲೆ ತರ್ತಿದ್ದೆ. ಕೆಲವೊಮ್ಮೆ ಮೂರು ಮೈಲಿ ದೂರದ ತಿರುಮಲದೇವರ ಗುಡ್ಡಕ್ಕೆ ಹೋಗಿ ಮುತ್ತುಗದ ಎಲೆಯನ್ನು ತಲೆ ಮೇಲೆ ಹೊತ್ತು ತರುತ್ತಿದ್ದೆ. ಹಸಿಎಲೆಯನ್ನು ಸರಪೋಣಿಸಿ, ಒಣಗಿಸಿ ನಂತರ ನೀರಲ್ಲಿ ನೆನೆಸಿ ಹಂಚಿಕಡ್ಡೀಲಿ ಎಲೆ ಹಚ್ಚುತ್ತಿದ್ಲು ನನ್ನ ಹೆಂಡತಿ. ಸರಾಸರಿ ಪ್ರತಿದಿನ ೭೫ ರಿಂದ ೧೦೦ ಎಲೆ ಹಚ್ಚೋಳು. ಒಂದು ಸಾವಿರ ಎಲೆಗೆ ೧೦ ರಿಂದ ೧೫ ರೂಪಾಯಿ ಸಿಗ್ತಿತ್ತು. ನನ್ನ ಹೆಂಡತಿಯಿಂದಲೇ ಈ ಮನೆ ಉಳಿದಿರೋದು. ನನ್ನ ಕುಟುಂಬದ ಅಭಿವೃದ್ಧಿಯಲ್ಲಿ ಅವಳ ಪಾಲೇ ಹೆಚ್ಚು. ಸುಮಾರು ೪೦ ವರುಷದಿಂದ ಅವಳು ಎಲೆ ಹಚ್ಚುತ್ತಿದಾಳೆ. ನಾನು ಮೊದಮೊದಲು ಬೈಯುತ್ತಿದ್ದೆ, ಇದ್ರಿಂದ ಏನಾಗುತ್ತೆ ಅಂತ. ಈಗ ಅರಿವಾಗಿದೆ. ನಾನು ಭತ್ತ, ರಾಗಿ ಬೆಳೀತಿದ್ದೆ. ಅವರಿವರನ್ನು ಬೇಡಿ ಎರಡು, ಮೂರು ಚೀಲ ಆಲೂಗೆಡ್ಡೆ ಬಿತ್ತನೆ ತಂದು ಬಿತ್ತನೆ ಮಾಡ್ತಿದ್ದೆ. ೧೨, ೧೩ ರೂಪಾಯಿ ಚೀಲದ ಗೊಬ್ಬರ ಹಾಕಲು ದುಡ್ಡಿರಲಿಲ್ಲ. ಇಳುವರಿ ಬರ್ತ್ತಿರಲಿಲ್ಲ. ನನಗೆ ಎರಡು ಗಂಡು ಹಾಗೂ ಒಂದು ಹೆಣ್ಣು. ಮಕ್ಕಳನ್ನು ಬೆಳಸಲು ಕಷ್ಟ ಆಯ್ತು. ನಾನೂ ಬೇರೆಯವರ ಜಮೀನಿನಲ್ಲಿ ಕೂಲಿ ಕೆಲಸ ಮಾಡಲು ಆರಂಭಿಸಿದೆ. ನನ್ನ ಎತ್ತಿನಲ್ಲೇ ಬೇಸಾಯ ಹೊಡೀತಿದ್ದೆ, ಉಕ್ಕೆ ಹೊಡೀತಿದ್ದೆ, ಗುದ್ದಲಿ ಕೆಲಸ ಮಾಡ್ತಿದ್ದೆ. ಐದರಿಂದ ಹತ್ತು ರೂಪಾಯಿ ಕೂಲಿ ಸಿಕ್ತಿತ್ತು.



ಮೆಣಸಿಗೆಯ ಹೊಲದಲ್ಲಿ : ಎಂ.ಎಸ್.ಶ್ರೀನಿವಾಸಮೂರ್ತಿ: ಮುದ್ದಾಪುರ

'ತಂದೆ ಹೇಳೋರು, "ಒಳ್ಳೆಯ ದಾರೀಲಿ ಹೋಗಬೇಕು, ಕಳ್ಳತನ ಮಾಡಬಾರದು" ಅಂತ. ಅದೇ ದಾರೀಲಿ ನಾನು ನಡೆದೆ. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ನನಗೆ ನಿರಾಳವಾಯ್ತು. ನನ್ನ ಇಬ್ರು ಗಂಡು ಮಕ್ಕಳೂ ವ್ಯವಸಾಯ ಮಾಡ್ತಿದಾರೆ. ಆರು ತಿಂಗಳ ಹಿಂದೆ Borewell ಕೊರೆಸಿದೀನಿ. ಮೂರೂವರೆ ಇಂಚು ನೀರು ಸಿಕ್ಕಿದೆ. ಎಲೆಕೋಸು, ಮೆಣಸಿನಕಾಯಿ ಬೆಳೀತಾ ಇದೀವಿ. ಊಟಕ್ಕೆ ಭತ್ತ ಬೆಳೀತೀವಿ. ಈಗ ಜೀವನದ ಬಂಡಿ ಸರಾಗವಾಗಿ ಸಾಗುತ್ತಿದೆ. ಬದುಕಿನಲ್ಲಿ ಸಂತೃಪ್ತಿ ಇದೆ. ಮಕ್ಕಳೂ ಚೆನ್ನಾಗಿ ದುಡೀತಾ ಇದ್ದಾರೆ. ಈಗಲೂ ಒಬ್ಬ ಮಗ ಎತ್ತು ಗಾಡೀನ ಹೊಡೆದುಕೊಂಡು ಬಾಡಿಗೆಗೆ



ಈ ಜೀವನ ಎತ್ತಿನಗಾಡಿ: ಎಂ.ಎಸ್.ಶ್ರೀನಿವಾಸಮೂರ್ತಿ ಅವರ ಕುಟುಂಬ: ಮುದ್ದಾಪುರ

ಹೋಗಿದಾನೆ. ಕಷ್ಟಪಟ್ರೆ ಸುಖವುಂಟು ಎಂಬ ಹಿರಿಯರ ಗಾದೆ ನನ್ನ ಮಟ್ಟಿಗೆ ನಿಜವಾಗಿದೆ' ಅಂದ್ರು. ಮನೆ ತುಂಬಾ ಮೊಮ್ಮಕ್ಕಳ ಕಲರವ; ಅಜ್ಜಅಜ್ಜೀನ ಕೂರಿಸಿ, ಅಕ್ಕಪಕ್ಕದಲ್ಲಿ ಮುತ್ತುಗದ ಎಲೆ ಹಾಗೂ ದೊನ್ನೆ ಪಿಂಡಿಯಿಟ್ಟು ಭಾವಚಿತ್ರ ತೆಗೆಯಲು ಅನುವು ಮಾಡಿಕೊಟ್ರು. ಅವರಿಗೂ ಏನೋ ಕುತೂಹಲ. 'ನಮ್ಮ ತಾತನ ಸಂದರ್ಶನ ರೇಡಿಯೋದಲ್ಲಿ ಬರುತ್ತಾ?' ಅಂತ ಕೇಳಿದ್ರು. ನಾನು 'ಇಲ್ಲ ಮಕ್ಕಳೆ, ಪುಸ್ತಕದಲ್ಲಿ ಬರುತ್ತೆ' ಅಂದಾಗ ಕಣ್ಣರಳಿಸಿದ್ರು. ಹೊರಗಡೆ ಹೋಗಿದ್ದ ಮಗ ವಾಪಸ್ಸು ಬಂದಾಗ ಎತ್ತಿನಗಾಡೀಲಿ ಕುಟುಂಬದ ಭಾವಚಿತ್ರ ತೆಗೆದದ್ದು ಮಕ್ಕಳಿಗೆ ಖುಷಿ ತಂದಿತ್ತು. ನೋವು ನಲಿವಿನ ಸರಮಾಲೆಯನ್ನು ಕೇಳಿ ಭಾರವಾಗಿದ್ದ ಮನಸ್ಸು ಮುದ್ದುಮಕ್ಕಳ ಸಂತಸ ಕಂಡು ಹಗುರವಾಯ್ತು. ನಾನೂ ಮಗುವಾಗಿದ್ರೆ ಎಷ್ಟು ಚಂದವಾಗಿತ್ತು ಅಂತ ಅನ್ನಿಸಿತು. ಬೆಳಗಿನ ತಿಂಡಿ ತಿಂದಿಲ್ಲ ಅಂತ ಹೊಟ್ಟೆ ನೆನಪಿಸಿತು. ಎಂ.ಕೆ. ಚನ್ನಕೇಶವ ಅವರ ಮನೆಯ ಉಪ್ಪಿಟ್ಟು ತಿಂದು, ಕೆನೆ ಮೊಸರಿನ ರುಚಿ ನೋಡಿ, ಅವರೊಂದಿಗೆ ಚಿಕ್ಕಮೇನಹಳ್ಳಿಗೆ ಹೊರಟಾಗ ಬೆಳಗ್ಗೆ 11ರ ಸಮಯ.



ಎಲೆ ಹಚ್ಚುತ್ತಿರುವ ಎಂ.ಎನ್.ನಾಗರತ್ನಮ್ಮ, ಕುಟುಂಬದ ದುಡಿಮೆಗೆ ಮೇಲ್ಪಂಕ್ತಿ: ಮುದ್ದಾಪುರ

8. ಚಿಕ್ಕಮೇನಹಳ್ಳಿ

ಹಾಸನ ತಾಲ್ಲೂಕು ಪೂಮಗಾಮೆಯಿಂದ ಕೇವಲ ಒಂದು ಕಿಲೋಮೀಟರ್ ದೂರದಲ್ಲಿದೆ, ಚಿಕ್ಕಮೇನಹಳ್ಳಿ. ಚಿಕ್ಕಮಗಳೂರಿನ ಕಳಸದ ಬಳಿ ಕಾಫಿ ತೋಟದಲ್ಲಿ ರೈಟರ್ ಆಗಿದ್ದ ಸಂಕೇತಿಗಳ ಕೆಲ ಕುಟುಂಬ ಚಿಕ್ಕಮೇನಹಳ್ಳಿಗೆ ವಲಸೆ ಬಂದಿದೆಯಂತೆ. ಮೊದಲು ಬಂದಾಗ ಏಳೆಂಟು ಕುಟುಂಬಗಳು ಇದ್ದವಂತೆ. ಈಗ ನಾಲ್ಕಕ್ಕೆ ಇಳಿದಿದೆ. ಈ ಊರಲ್ಲಿ ಸುಲಭವಾಗಿ ಜಮೀನು ಸಿಕ್ಕಿದ್ರಿಂದ, ಪಕ್ಕದ ಪೂಂಗಾಮೆಯಲ್ಲಿ ಹೆಚ್ಚಿನ ಸಂಕೇತಿಗಳ ಕುಟುಂಬ ಇದ್ದಿದ್ರಿಂದ, ಇಲ್ಲಿ ಜೀವನ ಸುಲಭ ಅಂತ ಹಿರೀಕರು ಬಂದಿರಬಹುದು ಎಂಬ ಅಭಿಪ್ರಾಯ ಇದೆ. ಊರಲ್ಲಿ ರಂಗನಾಥಸ್ವಾಮಿ ದೇವಸ್ಥಾನ ಇದೆ. ಹಳ್ಳಿಗಳಲ್ಲಿ ಬ್ರಾಹ್ಮಣರ ಸಂಖ್ಯೆ ಕ್ಷೀಣಿಸುತ್ತಿರುವುದಕ್ಕೆ, ವ್ಯವಸಾಯ ಬಿಟ್ಟು ಪಟ್ಟಣ ಸೇರುತ್ತಿರುವುದಕ್ಕೆ, ಊರಹಿರಿಯ ಸಿ.ಎಸ್. ನಾಗಪ್ಪನವರು ಹೀಗೆನ್ನುತ್ತಾರೆ. "ಬ್ರಾಹ್ಮಣೋ ಅಸಂಘಾತಃ ಅಂತ ಪರಶುರಾಮನ ಶಾಪ ಇದೆ. ಪರಶುರಾಮ ಪ್ರಪಂಚವನ್ನೇ ಗೆದ್ದು ಬ್ರಾಹ್ಮಣರಿಗೆ ಧಾರೆ ಎರೆದ. ನಂತರ ನದೀ ದಡದಲ್ಲಿ ತಪಸ್ಸಿಗೆ ಕುಳಿತನಂತೆ. ದಾನ ಸ್ವೀಕರಿಸಿದ ಜನರು, 'ಇದೇನು ಪರಶುರಾಮರು ಧಾರೆ ಎರೆದ್ರೂ ಇಲ್ಲೇ ಕುಳಿತಿದ್ದಾರಲ್ಲಾ' ಅಂತ ಮಾತನಾಡಿದರಂತೆ. ಕುಪಿತನಾದ ಪರಶುರಾಮ 'ಬ್ರಾಹ್ಮಣರಿಗೆ ರಾಜ ಪದವಿ ಸಿಗದಿರಲಿ, ಇವರು ಸಂಘಟಿತರಾಗದಿರಲಿ' ಅಂತ ಶಾಪ ಇತ್ತನಂತೆ. ಇದು ಹಿರಿಯರು ನಮಗೆ ಹೇಳಿರುವ ವಿಚಾರ. ಬ್ರಾಹ್ಮಣರು ಅತೀ ಬುದ್ಧಿವಂತರಾದ್ದರಿಂದ ಇತರರನ್ನು ಕಟ್ಟಿಕೊಂಡು ನನಗೇನು ಅನ್ನೋ ಧೋರಣೇನೂ ಸೇರಿದೆ. ಹಳ್ಳಿಗಳಲ್ಲಿ ಬ್ರಾಹ್ಮಣರ ಸಂಖ್ಯೆ ಹೆಚ್ಚಿದ್ದು ಅವರು ಒಗ್ಗಟ್ಟಾಗಿದ್ದರೆ ಊರು ಬಿಡುವ ಸಮಸ್ಯೆ ಇರುತ್ತಿರಲಿಲ್ಲ. ಆದರೆ ವಿದ್ಯಾಭ್ಯಾಸಕ್ಕೆಂದು ಹೊರ ಹೋದ ಜನ ಅಲ್ಲಿಯೇ ಉದ್ಯೋಗನಿರತರಾದ್ರು. ಹಳ್ಳೀಲಿ ಬ್ರಾಹ್ಮಣರ ಸಂಖ್ಯೆ ಕಡಿಮೆಯಾಯ್ತು. ಇರೋ ಮೂರು-ನಾಲ್ಕು ಕುಟುಂಬ ಒಟ್ಟಾಗಿರೋದ್ರಿಂದ ಹಳ್ಳೀಲಿ ಪ್ರಯೋಜನ ಆಗೋಲ್ಲ. ಹಳ್ಳೀಲಿ ಬೇರೆ ವರ್ಗಗಳ ಜನಸಂಖ್ಯೆ, ಅವರ ನಡುವಿನ ಒಗ್ಗಟ್ಟು, ಅವರಿಗೆ ಸರಕಾರದ ಸೌಲಭ್ಯ ಈ ಎಲ್ಲವೂ ಸೇರಿದೆ. ಹಾಗಾಗಿ ನಮಗೆ ವ್ಯವಸಾಯದಲ್ಲಿ ಹಿಂದಿದ್ದ ಅನುಕೂಲ ಈಗಿಲ್ಲ. ಪ್ರಕೃತಿ ವಿಕೋಪ, ಇತರರಿಂದ ಕಿರುಕುಳ ಜಾಸ್ತಿ ಆಗಿದೆ. ನಮ್ಮ ತೋಟದಲ್ಲಿ ಕಳ್ಳತನ ಜಾಸ್ತಿ ಆಗಿದೆ. ಇದೇ ಮುಖ್ಯ ಕಾರಣ ನಮ್ಮವರು ವ್ಯವಸಾಯ ತ್ಯಜಿಸಿ ಪಟ್ಟಣ ಸೇರುತ್ತಿರುವುದಕ್ಕೆ. ನಮ್ಮಲ್ಲಿ ೪/೫ ಮನೆ ಸಂಕೇತಿಗಳದ್ದು ಇದ್ರೂ ೫/೬ ಜನ ಅಮೇರಿಕಾ, ಆಸ್ಟ್ರೇಲಿಯಾ, ಜರ್ಮನಿ ಅಂತಹ ಹೊರ ದೇಶದಲ್ಲಿದ್ದಾರೆ. ಅವರ ಬುದ್ಧಿಶಕ್ತಿ ಬಳಸಿ ಹೊರದೇಶ ಅಭಿವೃದ್ಧಿ ಮಾಡ್ತಿದಾರೆ. ಅದೇ ಬುದ್ಧಿವಂತ ವರ್ಗ ನಮ್ಮಲ್ಲಿ ಉಳಿದಿದ್ರೆ ನಮ್ಮ ದೇಶ ಎಷ್ಟು ಅಭಿವೃದ್ಧಿಯಾಗೋದು! ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಬೇಕು" ಅಂತ ಕಳಕಳಿಯಿಂದ ಹೇಳಿದ್ರು ನಾಗಪ್ಪ. ಈ ಊರಿನ ಸಿ.ಎಂ. ಅನಂತಸುಬ್ಬರಾಯರ ಏಳು ಮಕ್ಕಳಲ್ಲಿ, ಮೂರು ಜನ ಅಮೇರಿಕಾದಲ್ಲಿ, ಇಬ್ಬರು ಆಸ್ಟ್ರೇಲಿಯಾದಲ್ಲಿದ್ದಾರೆ. ವ್ಯವಸಾಯದ ಬದುಕಿನ ಎರಡು ವಿಭಿನ್ನ ವ್ಯಕ್ತಿತ್ವವನ್ನು ಮಾತನಾಡಿಸುವ ಅವಕಾಶ ನಮಗೆ ಸಿಕ್ತು. ವಿವರಗಳು ನಿಮ್ಮ ಮುಂದಿದೆ.

ಅ) ಸಿ.ಎಲ್. ಲಕ್ಷ್ಮೀನಾರಾಯಣ ಇ/ಮ ಲಕ್ಷ್ಮೀಕಾಂತಯ್ಯ

ಚಿಕ್ಕಮೇನಹಳ್ಳಿ, ಹಾಸನ ತಾ.ಜಿಲ್ಲೆ, ದೂರವಾಣಿ : 08172 242450



ತಮಗೆ ಬದುಕು ನೀಡಿದ ನರ್ಸರಿಯಲ್ಲಿ ಸಿ.ಎಲ್.ಲಕ್ಷ್ಮೀನಾರಾಯಣ: ಚಿಕ್ಕಮೇನಹಳ್ಳಿ

ಮನುಷ್ಯರಿಗಲ್ಲದೆ ಮರಗಳಿಗೆ ಖಾಯಿಲೆ ಬರುತ್ತಾ ಅಂತಿದ್ರು ಹಿಂದೆ. ಈಗ ಮರಗಳಿಗೇ ಖಾಯಿಲೆ ಬಂದಿದೆ. ತೆಂಗಿಗೆ ನುಸಿ ಬಂದಿದೆ. ಅಡಿಕೆ ಧಾರಣೆ ಕುಸಿದಿದೆ. ಈಗ ವ್ಯವಸಾಯ ನಮ್ಮ ತಳ ಹಿಡಿದು ಅಳ್ಳಾಡಿಸುವಂತಿದೆ. ಈಗ ರೈತರಲ್ಲಿ ನಿಜವಾಗಿ ಹೇಳಬೇಕು ಅಂದ್ರೆ ನೂರಕ್ಕೆ ತೊಂಬತ್ತು ಭಾಗ ಸೋಮಾರಿಗಳೇ. ಎದ್ರೆ ಪೇಟೆಗೆ ಹೋಗಬೇಕು ಅನ್ನೋರೇ ಹೊರತು, ನನ್ನ ವೃತ್ತಿ ಏನೂಂತ ಅನ್ನೋದ್ರ ಬಗ್ಗೆ ಯಾರಿಗೂ ಗಮನ ಇಲ್ಲ. ಪ್ರತಿಯೊಂದು ಊರಿಗೂ ಬಸ್ಸು ಬರಬೇಕು, ಬೆಳಗ್ಗೆ ಎದ್ದು townಗೆ ಹೋಗಿ ಸಂಜೆ ಕುಡಿದು ಮನೆಗೆ ಬರಬೇಕು. ವ್ಯವಸಾಯಕ್ಕೆ ನಿಜವಾಗಿ ದೇಹ ಮುರೀತಿರೋರು ಈಗ ಹಳ್ಳೀಲಿ ತುಂಬಾ ಅಪರೂಪ.

ಚಿಕ್ಕಮೇನಹಳ್ಳಿ ಲಕ್ಷ್ಮೀಕಾಂತಯ್ಯ ಹಾಗೂ ಮುದ್ಲಾಪುರದ ಎಂ.ಎ. ರತ್ನಮ್ಮ ಇವರ ಒಬ್ಬನೇ ಮಗ ಲಕ್ಷ್ಮೀನಾರಾಯಣ ಅವರಿಗೆ ಈಗ ೫೨ ವರುಷ. ಹೊಳೆನರಸೀಪುರ (ತಾ) ಗೆಜ್ಜಗನಹಳ್ಳಿಯ ಜಿ.ಕೆ.ರಾಮನಾಥಯ್ಯ ಹಾಗೂ ಸಾವಿತ್ರಮ್ಮ ಸಿ.ಎಸ್. ಅವರ ಮಗಳು ಜಿ.ಆರ್. ಸೀತಾಲಕ್ಷ್ಮಿ ಇವರ ಪತ್ನಿ. ಇವರಿಗೆ ಒಬ್ಬ ಗಂಡು ಮಗ ಹಾಗೂ ಮೂವರು ಹೆಣ್ಣು ಮಕ್ಕಳು. 'ಈಗ ವ್ಯವಸಾಯ ಮಾಡಲು ವಿದ್ಯಾಭ್ಯಾಸ ಬೇಕು; ಹಾಗೂ ಮಗ PUC ಓದುತ್ತಿದ್ದಾನೆ. ಆದರೆ ಅವನು ವ್ಯವಸಾಯವನ್ನು ಮುಂದುವರೆಸುತ್ತಾನೆ ಎಂದು ಈಗಲೇ ನಂಬಿಕೆಯಿಂದ ಹೇಳಲು ಆಗೋಲ್ಲ. ಈ ಬಗ್ಗೆ ನಾನೇ ತೀರ್ಮಾನ ಮಾಡಿದ್ರೆ ಮುಂದಿನ ಆಗುಹೋಗುಗಳನ್ನು ಮಗ ನನ್ನ ತಲೆಯ ಮೇಲೆ ಹಾಕಬಹುದು. ಹಾಗಾಗಿ ನಾನು ತೀರ್ಮಾನವನ್ನು ಅವನಿಗೇ ಬಿಟ್ಟಿದೀನಿ. ಅವನ ಅಭಿಲಾಷೆ ಹ್ಯಾಗಿದೆಯೋ ಹಾಗೆ ಮಾಡಬಹುದು' ಅಂತ ಸ್ಪಷ್ಟವಾಗಿ ಹೇಳುತ್ತಾರೆ ಲಕ್ಷ್ಮೀನಾರಾಯಣ. ನಮಗಾಗಿ ತೋಟದಿಂದ ಬಂದು ಮನೆಯಲ್ಲಿ ಕಾಯುತ್ತಿದ್ದ ಅವರು ಹೇಳಿದ್ರು, 'ಈಗ ನೀವು ಬಂದಿದೀರಿ ಅಂತ ನಾನು ತೋಟದಿಂದ ಮನೆಗೆ ಬಂದಿದೀನಿ. ಇಲ್ಲಾಂದ್ರೆ ನಾನು ಬೆಳಗ್ಗೆ ತೋಟಕ್ಕೆ ಹೋದ್ರೆ ಬರುವುದು ಸಂಜೆಗೇನೆ. ತಿಂಡಿ ಊಟ ಎಲ್ಲಾ ನನ್ನದು ತೋಟದಲ್ಲೇ' ಅಂದ್ರು. ಅವರದೇ ಮನೆಯಲ್ಲಿ ಲಕ್ಷ್ಮೀನಾರಾಯಣ ಅವರೊಂದಿಗೆ ಮಾತಿಗಿಳಿದಾಗ ಮಧ್ಯಾಹ್ನದ ಸಮಯ.



ತಾಯಿ ಎಂ.ಎ.ರತ್ನಮ್ಮ ಅವರ ಅಕ್ಕಪಕ್ಕದಲ್ಲಿ ಜಿ.ಆರ್.ಸೀತಾಲಕ್ಷ್ಮಿ-ಸಿ.ಎಲ್.ಲಕ್ಷ್ಮೀನಾರಾಯಣ ದಂಪತಿ: ಚಿಕ್ಕಮೇನಹಳ್ಳಿ

"ನನ್ನ ತಂದೆಗೆ ಇಬ್ಬರು ಹೆಂಡತಿಯರು. ಮೊದಲನೇ ಹೆಂಡತಿ ಹಾಗೂ ಅವರ ಮಕ್ಕಳು ಕಾರಣಾಂತರದಿಂದ ತೀರಿಹೋದರಂತೆ. ಮೊದಲನೇ ಹೆಂಡತಿಯ ಮಕ್ಕಳಲ್ಲಿ ಉಳಿದದ್ದು ಒಬ್ಬಳು ಮಗಳು ಮಾತ್ರ. ಹಾಗಾಗಿ ನನ್ನ ತಂದೆ ಎರಡನೇ ಮದುವೆಯಾದರು. ನಾನು ನನ್ನ ತಂದೆಯ ೭೧ನೇ ವಯಸ್ಸಿನಲ್ಲಿ

ಹುಟ್ಟಿದ್ದು. ನನ್ನ ೨೧ನೇ ವಯಸ್ಸಿಗೆ ಅವರು ತೀರಿಕೊಂಡ್ರು. ನಾನು ಒಬ್ಬನೇ ಮಗ, ಸಂಸಾರದ ಜವಾಬ್ದಾರಿ ನನ್ನ ಮೇಲೆ ಬಿತ್ತು. ನನ್ನನ್ನು ಓದಿಸುವಾಗ ಬಹಳ ಸುಖವಾಗಿ ಸಾಕಿದ್ರು. ನಂಗೆ ನಮ್ಮ ತೋಟ ಯಾವ ಕಡೆ ಇದೆ ಅಂತ ತಿಳಿದಿರಲಿಲ್ಲ. ನನ್ನ ತಂದೆ, ಅವರ ತಂದೆಗೆ ಒಬ್ಬನೇ ಮಗನಂತೆ. ಆ ಕಾಲದಲ್ಲಿ ಬಡತನ. ಜಮೀನು ಇಲ್ಲದೆ ಊಟಕ್ಕೂ ತೊಂದ್ರೆಪಟ್ಟಿದ್ದಾರೆ ತಂದೆ. ಅವರೂ ಒಬ್ಬರೇ ಕಷ್ಟಪಟ್ಟು ನಾಲ್ಕು ಎಕರೆ ತೋಟ ಪೂರ್ತಾ ರೂಢಿಸಿದ್ದಾರೆ. ಈಗಾದ್ರೆ ನಾವು ಆಳುಕಾಳು ಅಂತ ಹೋಗ್ತೀವಿ. ಆದ್ರೆ ಇಡೀ ಒಬ್ಬರ ಶ್ರಮದಿಂದಲೇ ನಾಲ್ಕು ಎಕರೆ ತೋಟ ಏಳಿಸೋದು ಅಂದ್ರೆ ತುಂಬಾ ಕಷ್ಟ. ಅಂಥಾ ಕಷ್ಟದಲ್ಲೇ ಬದುಕಿದ್ರು ತಂದೆ. ಕೊನೆಗೆ ಅವರು ಅನಾರೋಗ್ಯದಿಂದ ಕಾಲುಮುರಿದುಕೊಂಡಾಗ ಅನಿವಾರ್ಯವಾಗಿ ನಾನು ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಮನೆಗೆ ಬಂದೆ. ತಂದೆ ತೀರಿಕೊಂಡಾಗ ಅವರ ಅಂತ್ಯಕ್ರಿಯೆ ಮಾಡೋದಕ್ಕೂ ನನ್ನಲ್ಲಿ ಹಣವಿರಲಿಲ್ಲ. ಆಗ ನನ್ನ ಅಕ್ಕನೇ ನೆರವಾದ್ರು. ಈಗಲೂ ನನ್ನ ಅಕ್ಕನ ಜತೆ ಸಂಬಂಧ ಮಧುರವಾಗಿದೆ" ಎಂದು ಹೇಳಿದ್ರು.

'ನಿಮ್ಮ ಬೇಸಾಯದ ಬದುಕಿನ ಬಗ್ಗೆ ಹೇಳಿ' ಅಂದಾಗ, 'ನನಗೆ ಚಿಕ್ಕಂದಿನಿಂದಲೂ ಕೃಷಿಯ ಬಗ್ಗೆ ಆಸಕ್ತಿ ಇತ್ತು. ನನ್ನದೇ ಆದ ಬದುಕನ್ನು ರೂಪಿಸಿಕೊಳ್ಳಬೇಕು ಅನ್ನುವ ಆಸೆ ಹಿಂದಿನಿಂದಲೂ ಇತ್ತು. ನನ್ನ ತಂದೆ ಒಳ್ಳೆಯತನವನ್ನು ಕಲಿಸಿ ಹೋಗಿದ್ರು. ಸದ್ಗುಣಗಳನ್ನು ನನ್ನಲ್ಲಿ ಬೆಳೆಸಿದ್ರು. ದುಷ್ಟಗುಣಗಳು ಬರಲಿಲ್ಲ. ಕೆಟ್ಟದ್ದು ಮಾಡಿದವನನ್ನು ಒಳ್ಳೆಯವ ಅನ್ನೋರು. ಅವನು ಕೆಟ್ಟದ್ದು ಮಾಡಿದ ಅಂತ ಹೇಳ್ತಿರಲಿಲ್ಲ ತಂದೆ. ಅದೇ ಗುಣ ನನ್ನಲ್ಲೂ ಇದೆ. ಇದೇ ಹಾದಿಯಲ್ಲೇ ನನ್ನ ವ್ಯವಸಾಯದ ಬದುಕು ರೂಪಿಸಿಕೊಂಡಿದೀನಿ. ತಂದೆ ಮಾಡಿದ ಆಸ್ತಿಯಷ್ಟೇ ಇದೆ. ನಾನು ರೂಢಿಸಿಲ್ಲ, ಕಳೆದೂ ಇಲ್ಲ. ಆದ್ರೆ ಹೆಚ್ಚು ಜಮೀನನ್ನು ತೋಟವಾಗಿ ಪರಿವರ್ತನೆ ಮಾಡಿದೀನಿ. ಏಳೆಂಟು ಎಕರೆ ತೋಟ ಇದೆ. ತೆಂಗು, ಕಾಳುಮೆಣಸು, ಅಡಿಕೆ, ಕಾಫಿ, ಬಾಳೆ, ಮಾವು, ಸೀಬೆ, ಸಪೋಟ, ಹಲಸು ಹೀಗೆ ಮನೆಗೆ ಬೇಕಾದ ಎಲ್ಲವನ್ನೂ ತೋಟದಲ್ಲಿ ಬೆಳೆದಿದೀನಿ. ಒಂದು ಎಕರೆ ಖುಷ್ಕಿ ಜಮೀನು ಇದೆ. ಅದರಲ್ಲಿ ರಾಗಿ, ಜೋಳ, ಆಲೂಗೆಡ್ಡೇನ ಮಳೆಗಾಲ ಅನುಕೂಲವಾಗಿದ್ರೆ ಬೆಳೀತೀನಿ. ಭತ್ತ ಬೆಳೆಯುವ ಒಂದು ಎಕರೆ ಗದ್ದೇನ ತಂದೆ ಹಿರೀ ಮಗಳಿಗೆ ಧಾರೆ ಎರೆದುಕೊಟ್ಟಿದ್ದಾರೆ.


ಅಡಿಕೆ ತೋಟದಲ್ಲೊಂದು ಕಾಫಿ ತೋಟ: ಸಿ.ಎಲ್.ಲಕ್ಷ್ಮೀನಾರಾಯಣ: ಚಿಕ್ಕಮೇನಹಳ್ಳಿ

'ಮಿಶ್ರಬೇಸಾಯದಲ್ಲಿ ಮೊದಲಿನಿಂದಲೂ ಆಸಕ್ತಿ ಇದೆ. ತೆಂಗು ಅಂದ್ರೆ ಬರೀ ತೆಂಗು, ಬಾಳೆ ಅಂದ್ರೆ ಬರೀ ಬಾಳೆ ಬೆಳೀಬಾರದು. ಒಂದರೊಳಗೆ ಮತ್ತೊಂದು ಬೆಳೆದ್ರೆ ಬೇರೆ ಬೇರೆ ಬೆಳೆಗಳಿಂದ ಆದಾಯ ಬರುತ್ತೆ. ತೊಂದ್ರೆ ಆಗೋಲ್ಲ. ಮೊದಲು ೩೬ ಅಡಿಗೆ ತೆಂಗು ಹಾಕಿ, ಅದರೊಳಗೆ ಒಂಭತ್ತು ಅಡಿ ಅಂತರದಲ್ಲಿ ಅಡಿಕೆ ಹಾಕಿದೆ. ಬರೀ ಅಡಿಕೇನ ಬೇರೆ ತೋಟದಲ್ಲಿ ಮಾಡಿದ್ದೆ. ಸುಬ್ರಹ್ಮಣ್ಯ, ಧರ್ಮಸ್ಥಳಕ್ಕೆ ಹೋದಾಗ ಅಲ್ಲಿ ಕಾಳುಮೆಣಸನ್ನು ನೋಡಿದೆ. ನಾನೂ ಯಾಕೆ ಪ್ರಯತ್ನಪಡಬಾರದು ಅಂತ ತಂದುಹಾಕಿದೆ. ಮನೆ ಬಳಕೆಗೆ ಇರಲಿ ಅಂತ ಕಾಫಿ ಹಾಕಿದೆ. ಅಲ್ಲಿ ಇಲ್ಲಿ ಹೋದಾಗ ನೋಡಿದ ಎಲ್ಲ ಬೆಳೇನೂ ತೋಟದಲ್ಲಿ ಬೆಳೆದಿದೀನಿ. ಎಲ್ಲಾ ಚೆನ್ನಾಗಿ ಬಂದಿದೆ. ಮಲೆನಾಡಿನ ಬೆಳೆ ಬಯಲು ಸೀಮೆಯಲ್ಲೂ ಬರುತ್ತೆ. ಆದಾಯಕ್ಕೆ ಕಾಳುಮೆಣಸು, ತೆಂಗು, ಅಡಿಕೆ, ಬಾಳೆ ಅಷ್ಟೆ. ಉಳಿದದ್ದು ಮನೆ ಬಳಕೆಗೆ' ಅಂದ್ರು ಲಕ್ಷ್ಮೀನಾರಾಯಣ.

'ಪ್ರತಿ ಬೆಳೆಯ ಬೇಸಾಯ ವಿಧಾನವನ್ನೂ ವಿವರಿಸಿ' ಅಂತ ಕುತೂಹಲದಿಂದ ಕೇಳಿದಾಗ, 'ನಾನು ಒಂದು ಎಕರೆ ಕಾಳು ಮೆಣಸು ಮಾಡಿ ೧೫ ವರುಷ ಆಯ್ತು. ಉಪ್ಪಿನಂಗಡಿ ಸಮೀಪದ ತೋಟದಿಂದ ಒಂದು ವರುಷದ ಸಸಿ ತಂದು ಅಡಿಕೆ ತೋಟದಲ್ಲಿ ನಾಟಿ ಮಾಡಿದೆ; ಒಟ್ಟು ಈಗ ೨೦೦ ಬೀಳಿದೆ. ಕೆಲವು ಸೊಂಕು ರೋಗ ಬಂದು ಹೋಗಿವೆ. ಒಟ್ಟು ನಾಲ್ಕು ಕ್ವಿಂಟಾಲ್ ಇಳುವರಿ ಸಿಕ್ತಿದೆ. ಅಡಿಕೆ ಮರಕ್ಕೆ ಬೀಳು ಹಬ್ಬಿರೋದ್ರಿಂದ ಒಂದು ಬೀಳಿನಲ್ಲಿ ಎರಡರಿಂದ ಎರಡೂವರೆ ಕೇಜಿ ಕಾಳುಮೆಣಸು ಸಿಗ್ತಿದೆ. ತೆಂಗಿನ ಮಧ್ಯೆ ಬಾಳೆ ಹಾಕಿದೀನಿ. ಪ್ರತಿ



'ಕಾಳುಮೆಣಸು ಹೀಗಿರಬೇಕು...': ಸಿ.ಎಲ್.ಲಕ್ಷ್ಮೀನಾರಾಯಣ: ಚಿಕ್ಕಮೇನಹಳ್ಳಿ

ವರುಷ ಒಂದು ಎಕರೇಲಿ ಬಾಳೆ ಬೆಳೀತೀನಿ. ಪುಟ್ಟಬಾಳೆ, ಪಚ್ಚೆಬಾಳೆ, ಏಲಕ್ಕಿಬಾಳೆ, ಮರಬಾಳೆ, ಸೀಮೆರಸಬಾಳೆ ಅಂದ್ರೆ ಪೂಜೆಬಾಳೆ ಎಲ್ಲವನ್ನೂ ಬೆಳೀತೀನಿ. ಎರಡರಿಂದ ಮೂರು ಕೂಳೆ ಬೆಳೆ ತೊಗೋತೀನಿ. ನಂತ್ರ ಬೇರೆ ಜಾಗದಲ್ಲಿ ನಾಟಿ ಮಾಡ್ತೀನಿ. ಪಚ್ಚಬಾಳೆಗೆ ನಾಲ್ಕರಿಂದ ಐದು ರೂ ಧಾರಣೆ ಪ್ರತಿ ಕೆಜಿಗೆ ಸಿಗುತ್ತೆ. ಪುಟ್ಟಬಾಳೆಗೆ ಎಂಟರಿಂದ ಹತ್ತು ರೂಪಾಯಿ ಸಿಗುತ್ತೆ. ಬಾಳೆಯಲ್ಲಿ ಒಟ್ಟಿಗೆ ಆದಾಯ ಬರೋಲ್ಲ. ವಾರಕ್ಕೆ, ಹದಿನೈದು ದಿನಕ್ಕೆ ಆದಾಯ ಬರೋದ್ರಿಂದ ಸಂಸಾರದ ದೈನಂದಿನ ಖರ್ಚನ್ನು ನಿರ್ವಹಿಸಿ, ಸಂಸಾರ ನಿರ್ವಹಣೆ ಸುಲಭವಾಗುತ್ತೆ. ಹಸುಗಳನ್ನು ಸಾಕಿ ಹಾಲು ಮಾರುವ ರೈತರಿಗೆ ದಿನನಿತ್ಯದ ಬದುಕು ಸಾಗಿಸಲು ನೆರವಾಗುವ ರಾಸುಗಳಂತೆ, ತೋಟ ಇಟ್ಟಿರುವ ಬ್ರಾಹ್ಮಣರಿಗೆ ಬಾಳೆ ನೆರವಾಗುತ್ತೆ. ತೆಂಗು ಅಡಿಕೆ ಆದಾಯವು ಮುಂದಿನ ಬೆಳವಣಿಗೆ ಬಗ್ಗೆ ನೆರವಾಗುತ್ತೆ. ಈಗ ನನ್ನ ಬಳಿ ೩೫೦ ತೆಂಗು, ೧೪೦೦ ಅಡಿಕೆ ಗಿಡ ಇದೆ. ರಾಸಾಯನಿಕ ಗೊಬ್ಬರ ನಾನು ಬಳಸೋದು ಕಡಿಮೆ. ಮನೇಲಿ ಗೋಬರ್‌ಗ್ಯಾಸ್ ಇದೆ. ನಾಲ್ಕು ನಾಟಿ ದನಗಳು ಇವೆ. ಮನೆ ಗೊಬ್ಬರಾನ ತೋಟದಲ್ಲಿ ಬಳಸ್ತೀವಿ. ಕೆರೆಗೋಡನ್ನು ಹೊಡೀತೀನಿ, ಒಳ್ಳೆ ಮಳೆಗಾಲ ಆದಾಗ IFFCO ಸಂಸ್ಥೆಯ 10:26:26 (NPK) ಗೊಬ್ಬರ ಹಾಕ್ತೀನಿ. ಯಾಕೇಂದ್ರೆ ಇದರಲ್ಲಿ ಸಾರಜನಕ ಕಡಿಮೆ ಇದೆ. ಹಾಗಾಗಿ ಈ ರಾಸಾಯನಿಕ ಗೊಬ್ಬರ ಸ್ವಲ್ಪ ಬಳಸ್ತೀವಿ. ಮನೇಲಿ ಕರಾವು ತಪ್ಪಿದ್ದೇ ಇಲ್ಲ. ಹಾಲನ್ನು ಕೊಳ್ಳುವ ಪರಿಸ್ಥಿತಿ ಇದುವರೆಗೆ ಬಂದಿಲ್ಲ. ನಾನು ಹಾಲನ್ನು ಮಾರ್ತಿಲ್ಲ' ಎಂದು ದೃಢವಾಗಿ ನುಡೀತಾರೆ.

'ನಾನು gobar ಘಟಕ ಹಾಕಿ ೨೨ ವರುಷ ಆಯ್ತು. ಒಬ್ಬರನ್ನು ನೋಡಿ ಮತ್ತೊಬ್ಬರು ಮಾಡ್ತಾರೇನೋ ಅಂತ ನಾನು ಮೊದಲು ಮಾಡಿದೆ. ಆದರೆ ನನ್ನನ್ನು ಬಿಟ್ರೆ ಮತ್ತೊಬ್ಬರು ಯಾರೂ ಈ ಊರಲ್ಲಿ ಮಾಡಿಲ್ಲ. ಮೊದಲು ನಾನು ಮಾಡಿದ್ದು ಡ್ರಂ ಮಾದರಿ. ಈಗಲೂ ಅದೇ ಡ್ರಂ ಇದೆ. ಎರಡರಿಂದ ಮೂರು ವರ್ಷಕ್ಕೆ Clean ಆಗಿ ಬಣ್ಣ ಹೊಡಿಸ್ತೀನಿ. ಕ್ರಮವಾಗಿ ಸಗಣಿ ಕದಡುತ್ತೀನಿ. ಇದುವರೆಗೂ ತೊಂದರೆ ಆಗಿಲ್ಲ. ಗ್ಯಾಸ್ ಚೆನ್ನಾಗಿ ಬರುತ್ತೆ. ಚಳಿಗಾಲದಲ್ಲಿ ಸ್ವಲ್ಪ ಕಡಿಮೆ. ನಾವು ನಾಲ್ಕು ಜನರ ಅಡುಗೆಗೆ ಏನೂ ತೊಂದರೆ ಇಲ್ಲ. ನೆಂಟರು ಇಷ್ಟರು ಬಂದಾಗಲೂ ಗ್ಯಾಸ್ ತೊಂದರೆ ಆಗಿಲ್ಲ. ನಾನು ನನ್ನ ಹೆಂಡತಿ ಇಬ್ಬರೂ ಸಗಣಿಯನ್ನು ಕದಡುತ್ತೀವಿ, ಹಸು ಮೈ ತೊಳೀತೀವಿ, ಹಾಲು ಕರೀತೀವಿ. ವ್ಯವಸಾಯದ ಬದುಕಿಗೆ ಹೆಂಡತಿಯ ಸಹಭಾಗಿತ್ವ ಇದೆ. ಅತಿಥಿಗಳನ್ನು ಯಾವುದೇ ಕೊರತೆ ಇಲ್ಲದ ಹಾಗೆ ಇದುವರೆಗೆ ನಿಭಾಯಿಸಿದ್ದಾಳೆ. ನನ್ನ ತಾಯಿಯನ್ನು ಚೆನ್ನಾಗಿ ನೋಡಿಕೊಂಡಿದ್ದಾಳೆ. ನನ್ನ ಸಾಧನೇಲಿ ನನ್ನ ಹೆಂಡತಿಯದ್ದು ಸಿಂಹಪಾಲು' ಅಂತ ಹೆಮ್ಮೆಯಿಂದ ಹೇಳಿದ್ರು ಲಕ್ಷ್ಮೀನಾರಾಯಣ.

'ಹಂತಹಂತವಾಗಿ ವ್ಯವಸಾಯದ ಜೀವನದಲ್ಲಿ ಅಭಿವೃದ್ಧಿ ಹೊಂದಿದ್ದು ಯಾವ ರೀತಿ?' ಅಂತ ಕೇಳಿದಾಗ ಮತ್ತೆ ಮಾತಾಡಲು ಆರಂಭಿಸಿದ್ರು. 'ನಮ್ಮ ತಂದೆ ಕಾಲದಲ್ಲಿ ೨೦ ಚೀಲ ಅಡಿಕೆ ಬರೋದು; ಈಗ ೧೨೦ ರಿಂದ ೧೩೦ ಚೀಲ ಅಡಿಕೆ ಬರುತ್ತೆ. ಹಿಂದೆ ಹತ್ತು ಸಾವಿರ ಸಂಪಾದನೆ ಮಾಡಿ ಏನು ಸಂಸಾರ ಮಾಡ್ತಿದ್ವೋ ಈಗ ಲಕ್ಷ ರೂಪಾಯಿ ಸಂಪಾದನೆ ಮಾಡಿದ್ರೂ ಸಂಸಾರ ನಿರ್ವಹಣೆ ಅದೇ ರೀತೀನೆ. ಆದ್ರೆ ನಾನು ಸಾಲ ಮಾಡಿಲ್ಲ. ವ್ಯವಸಾಯದಲ್ಲಿ ಸ್ವತಂತ್ರವಾಗಿ ಸಂಪಾದನೆ ಮಾಡಿದೀನಿ. ನಾನು ನನ್ನ ಜೀವನದಲ್ಲಿ ಅಭಿವೃದ್ಧಿ ಹೊಂದಿದ್ದು ಅಡಿಕೆ, ತೆಂಗಿನ ಸಸಿ ಮಾರಾಟದಿಂದ. ಸುಮಾರು ೧೦, ೧೫ ವರುಷದಿಂದ ಮಾರಾಟ ಮಾಡ್ತಿದೀನಿ. ಲಕ್ಷಾಂತರ ಸಸಿಗಳನ್ನು ಮಾರಾಟ ಮಾಡಿದೀನಿ. ಬೆಂಗಳೂರು ರಾಮನಗರದಿಂದ ಬೆಳಗಾಂ ಹುಬ್ಬಳ್ಳಿಯವರೆಗೆ ಎಲ್ಲ ಕಡೆ ನನ್ನ ತೆಂಗು, ಅಡಿಕೆ ಸಸಿಗಳು ಮಾರಾಟ ಆಗಿವೆ. ಎಲ್ಲರೂ, ಚೆನ್ನಾಗಿದೆ ಅಂತ ಹೇಳ್ತಾರೆ. ಪ್ರತಿ ವರುಷ ನನಗೆ ಖರ್ಚು ಕಳೆದು ೨೫ ರಿಂದ ೩೦ ಸಾವಿರ ಸಂಪಾದನೆ ಆಗ್ತಿತ್ತು. ಆದರೆ ಈಗ ೪೦೦೦ ತೆಂಗಿನ ಸಸಿ ಹಾಗೇ ಇದೆ. ತೆಂಗಿಗೆ ನುಸಿ ಇರೋದ್ರಿಂದ ಸಸಿಗೆ ಬೇಡಿಕೆ ಇಲ್ಲ. ವ್ಯಾಪಾರ ಕುಗ್ಗಿದೆ. ಆದ್ರೆ ನಾನು ನನ್ನ ಗುಣಮಟ್ಟ ಕಾಪಾಡಿಕೊಂಡಿದೀನಿ. ನನ್ನ ತೋಟದ ತಳಿಗಳಿಂದಲೇ ನಾನು ಅಡಿಕೆ ತೆಂಗನ್ನು ಅಭಿವೃದ್ಧಿಪಡಿಸೋದು. ಅಡಿಕೆ ಬಿತ್ತನೆಗೆ

ಆರಿಸುವ ಕಾಯಿಮರಕ್ಕೆ ೪೦ ರಿಂದ ೬೫ ವರುಷ ಆಗಿರಬೇಕು. ತೆಂಗಿನಕಾಯಿ ಮರಕ್ಕೆ ೩೦ ವರುಷ ಆಗಿರಬೇಕು. ತುಂಬಾ ತೆಂಗಿನ ಮೊಟ್ಟೆ ಇರಬೇಕು. ಒಳ್ಳೆ ಒತ್ತಾಗಿರುವ ಜಾತಿ ಮರ ಆರಿಸಬೇಕು. ಬೀಜ ಬಿತ್ತಿದ ಮೇಲೆ ಐದು ತಿಂಗಳ ನಂತರ ಮೊಳಕೆ ಬರುವ ಸಸಿಗಳನ್ನು ಆರಿಸಬಾರದು. ಇಳುವರಿ ಬರೋಲ್ಲ. ಹೊಸ ರೀತಿಯಿಂದ ವ್ಯವಸಾಯ ಮಾಡಬೇಕು ಅನ್ನುವ ಅಭಿಲಾಷೆ ನನ್ನದು. ಹಣ್ಣಿನ ಬೆಳೆಗಳನ್ನು ಹೆಚ್ಚು ಬೆಳೆಯೋಣ ಅಂದ್ರೆ ನಮ್ಮದು ಎರೆನೆಲ. ಶೀತ ಜಾಸ್ತಿ. ಹಣ್ಣಿನ ಗಿಡಗಳು ಕೆಂಪು ಕೆಬ್ಬೆ ಮಣ್ಣಿನಲ್ಲಿ, ಎಟ್ಟೆ ನೆಲದಲ್ಲಿ ಚೆನ್ನಾಗಿ ಬೆಳೆಯುತ್ವೆ. ಎರೆ ನೆಲದಲ್ಲಿ ಗಿಡ ಬೆಳೆಯುತ್ತೆ. ಇಳುವರಿ ಬರೋಲ್ಲ. ಹೆಚ್ಚು ಫಸಲೂ ಸಿಕ್ಕೋಲ್ಲ. ಹಾಗಾಗಿ ಹಣ್ಣಿನ ಗಿಡಗಳನ್ನು ನಾನು ಮನೆ ಬಳಕೆಗೆ ಮಾತ್ರ ಬೆಳೆದಿದೀನಿ' ಅಂತಾರೆ, ಲಕ್ಷ್ಮೀನಾರಾಯಣ. ವ್ಯವಸಾಯದ ಬದುಕಿನ ಬಗ್ಗೆ ಇವರಿಗೆ ಬೇಸರ ಬಂದಿಲ್ಲ. ಪ್ರೀತಿ ಇದೆ. 'ಒಳ್ಳೆಯತನಕ್ಕೆ, ಪ್ರಾಮಾಣಿಕತೆಗೆ ಈ ಕಾಲದಲ್ಲಿ ಬೆಲೆ ಇಲ್ಲ' ಅಂತ ವಿಷಾದದಿಂದ ನುಡೀತಾರೆ. 'ನಾನು ಪ್ರಾಮಾಣಿಕವಾಗಿ ವಿದ್ಯುತ್ ಬಿಲ್ ಕಟ್ತೇನಿ. ಆದರೆ ಬೇರೆಯವರು ಹಣ ಕಟ್ಟಲ್ಲ. ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಇಟ್ಟುಕೊಂಡಿದ್ದಾರೆ. ಕಳ್ಳತನ ಇದೆ. ಸಂಪೂರ್ಣ ಹಣ ಕಟ್ಟಿದವನಿಗೂ ಹಾಗೂ ಬೇರೆಯವರಿಗೂ ಒಂದೇ ರೀತಿ ವಿದ್ಯುತ್ ನೀಡ್ತಾರೆ. ಪ್ರಾಮಾಣಿಕತೆಗೆ ಬೆಲೆ ಎಲ್ಲಿದೆ?' ಅಂತ ಪ್ರಶ್ನಿಸುತ್ತಾರೆ. ಕಡೆಗೆ ತಮ್ಮ ವ್ಯವಸಾಯದ ಬದುಕಿನ ಸಂಪೂರ್ಣ ಸಾರವನ್ನು ಸಮಗ್ರವಾಗಿ ನುಡಿದ್ರು.

'ನಾನು ವ್ಯವಸಾಯ ಬಿಟ್ಟರೆ ಬೇರೆ ವ್ಯವಹಾರ ಮಾಡಿಲ್ಲ. ನನ್ನ ಏಕೈಕ ವ್ಯವಹಾರ ವ್ಯವಸಾಯ. ಅದರ ಬಗ್ಗೆ ಒಲವು ಇದೆ. ಈ ಬಗ್ಗೆ ಬೇರೆಯವರು ಟೀಕೇನೂ ಮಾಡಿದ್ದಾರೆ. ನಾನು ಅದಕ್ಕೆ ಕಿವಿಗೊಟ್ಟಿಲ್ಲ. ಈಗಿನ ಕಾಲದಲ್ಲಿ ಓದಿ ವಿದ್ಯಾವಂತರಾದ್ರೆ ಬೆಲೆ, ವ್ಯವಸಾಯಸ್ಥನಿಗೆ ಅಷ್ಟು ಗೌರವ ಇಲ್ಲ ಅನ್ನುವ ಭಾವನೆ ಕೆಲವರಲ್ಲಿ ಇದೆ. ಆದರೆ ಅದು ತಪ್ಪು. ನನಗೆ ನನ್ನ ಕಸುಬಿನ ಬಗ್ಗೆ ಹೆಮ್ಮೆ ಇದೆ. ಆತ್ಮಸಮ್ಮಾನ, ಸಂತೃಪ್ತಿ ಇದೆ' ಎಂದು ನೆಮ್ಮದಿಯಾಗಿ ಹೇಳುತ್ತಾರೆ. ಲಕ್ಷ್ಮೀನಾರಾಯಣ ಅವರ ವ್ಯವಸಾಯದ ಗುಂಗಿನಲ್ಲಿ ನಾವಿದ್ದಂತೆ, ಅವರ ಪತ್ನಿ ಬಿಸಿ ಹಾಲು, ಬಾಳೇಹಣ್ಣು ತಂದಿಟ್ಟರು. ಹಸಿದ ಹೊಟ್ಟೆ ಯಾವ ನೆಪಾನೂ ಹೇಳಲಿಲ್ಲ.

ಆ) ಸಿ.ಎಸ್.ನಾಗಪ್ಪ ಇ/ಮ ಸಿ.ಶಾಮಣ್ಣ
ಚಿಕ್ಕಮೇನಹಳ್ಳಿ, ಹಾಸನ ತಾ.ಜಿಲ್ಲೆ

ಬ್ರಾಹ್ಮಣರಿಗೆ ತೋಟ ಇರಬೇಕು. ಮನೇಲಿ ಕರಾವು ಇದ್ದ ಹಾಗೆ, ತೋಟದಿಂದ ನಿರಂತರ ಆದಾಯ ಇರುತ್ತೆ. ಪ್ರತಿನಿತ್ಯ ದೇವರ ಪೂಜೆಗೆ ಬೇಕಾದ ವಿಳ್ಯೇದೆಲೆ, ಅಡಿಕೆ, ಬಾಳೆಹಣ್ಣು, ಹೂವು ಎಲ್ಲಾ ಸಿಗುತ್ತೆ. ನಂತರ ಊಟಕ್ಕೆ ಬೇಕಾದ ಬಾಳೆಎಲೆಯೂ ಸಿಗುತ್ತೆ. ಪರಿಪೂರ್ಣವಾದ ಬ್ರಾಹ್ಮಣ ಕುಟುಂಬಕ್ಕೆ ತೋಟವೊಂದು ಇರಲೇಬೇಕು.


ತಮ್ಮ ಮನೆಯ ಮುಂದೆ ನಿಂತ ಎಂ.ವಿ.ಸಾವಿತ್ರಮ್ಮ-ಸಿ.ಎಸ್.ನಾಗಪ್ಪ ದಂಪತಿ: ಚಿಕ್ಕಮೇನಹಳ್ಳಿ

ಚಿಕ್ಕಮೇನಹಳ್ಳಿಯ ಸಿ.ಶಾಮಣ್ಣ ಹಾಗೂ ವೆಂಕಟಲಕ್ಷಮ್ಮ ದಂಪತಿಗಳಿಗೆ ಎಂಟು ಗಂಡು ಹಾಗೂ ಎರಡು ಹೆಣ್ಣುಮಕ್ಕಳು. ಇವರ ಹಿರಿಯ ಮಗನೇ ಸಿ.ಎಸ್.ನಾಗಪ್ಪ. ಹೊಳೆನರಸೀಪುರದ ವೆಂಕಟರಾಮಯ್ಯ ಹಾಗೂ ವೆಂಕಟಲಕ್ಷಮ್ಮ ಅವರ ಮಗಳು ಎಂ.ವಿ.ಸಾವಿತ್ರಮ್ಮ ಇವರ ಧರ್ಮಪತ್ನಿ. ಸಿ.ಎಸ್.ನಾಗಪ್ಪನವರು ಹಿರಿಕಡಲೂರಿನ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದವರು. ಸಹಕಾರಿ ಸಂಘದ ನಿರ್ವಹಣೆ ಹಾಗೂ ವ್ಯವಸಾಯ ನಿರ್ವಹಣೆ ಎರಡೂ ಮಾಡುವ ಸಲುವಾಗಿ ೧೫ ವರುಷ ನಿರಂತರವಾಗಿ ಸೈಕಲ್ ಹೊಡೆದಿದ್ದಾರೆ. ೪೫

ವರುಷ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ. ಸುತ್ತಮುತ್ತಲ ಸಂಘಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದಾಗ ಅವುಗಳ ನಿರ್ವಹಣೆಯನ್ನೂ ಮಾಡಿದ್ದಾರೆ. ಹೀಗೆ ಒಟ್ಟು ಏಳು ಸಹಕಾರಿ ಸಂಘಗಳನ್ನು ಒಟ್ಟಿಗೆ ನಿರ್ವಹಿಸಿದ್ದಾರೆ. ಇಂದಿಗೂ ಬತ್ತದ ಚಿಲುಮೆ ನಾಗಪ್ಪನವರು. ವ್ಯವಸಾಯದ ವಿಷಯವಾಗಿ, ಬದುಕಿನ ವಿಷಯವಾಗಿ, ನಾಗಪ್ಪನವರನ್ನು ನಾವು ಮಾತನಾಡಿಸಲು ಮುಂದಾದಾಗ ಅವರೂ ಮಾತನಾಡುವ ಹುರುಪಿನಲ್ಲಿದ್ದರು.

'ನಮ್ಮ ತಂದೆ ತಾಯಿ ಕೃಷಿ ಮಾಡಿ, ವ್ಯವಸಾಯ ಅವಲಂಬಿಸಿ ಬದುಕಿದವರು. ಮಕ್ಕಳನ್ನು ಪೋಷಣೆ ಮಾಡಿದ್ರು. ಅವರು ಓದದೇ ಹೋದರೂ ಮಕ್ಕಳಿಗೆ ನಾಲ್ಕು ಅಕ್ಷರ ಕಲಿಸಿದ್ರು. ತಮ್ಮದೇ ತೋಟದಲ್ಲಿ ಮೈಮುರಿದು ದುಡಿದು, ಅಡಿಕೆ, ತೆಂಗು, ಬಾಳೆ ಬೆಳೆದು ನನ್ನನ್ನು ಸಾಕಿದ್ದಾರೆ. ನಮಗೆ ಒಂಭತ್ತು ಎಕರೆ ಜಮೀನಿತ್ತು. ನಾನು ೧೯೫೭ರಲ್ಲಿ SSLCಯನ್ನು ಉತ್ತಮ ದರ್ಜೆಯಲ್ಲಿ ಪಾಸ್ ಮಾಡಿದ್ದೆ. ಜ್ಞಾನ ಇದ್ರೂ ಆರ್ಥಿಕ ಮುಗ್ಗಟ್ಟಿನಿಂದ ಓದಲು ಆಗಲಿಲ್ಲ. ನನಗೆ ಚೆನ್ನಾಗಿ ಓದಿ Engineer ಆಗುವ ಆಸೆ ಇತ್ತು. ವಿಶ್ವೇಶ್ವರಯ್ಯನವರ ರೀತಿಯಲ್ಲಿ ದೇಶಕ್ಕೆ ಕೊಡುಗೆಯಾಗುವ ಶಾಶ್ವತ ಕೆಲಸ ಮಾಡಬೇಕೆನ್ನುವ ಆಸೆ ಇತ್ತು. ಈ ಜನುಮದಲ್ಲಂತೂ ಆಗೋದಿಲ್ಲ. ಮುಂದಿನ ಜನುಮದಲ್ಲಿ ಆಗಬಹುದೇನೋ. ನಾನಂತೂ ಓದಲಿಲ್ಲ, ನನ್ನ ತಮ್ಮಂದಿರಾದ್ರೂ ಓದಲಿ ಅಂತ ನಾನು ಕೃಷಿ ಮಾಡಿ ಅವರನ್ನು ಓದಿಸಿದೀನಿ. ನಾನು ನನ್ನ ನಾಲ್ಕನೇ ವಯಸ್ಸಿನಿಂದ ತೋಟದಲ್ಲಿ ಕೆಲಸ ಮಾಡ್ತಿದ್ದೆ. SSLC ಮುಗಿದ ಮೇಲೆ ಕೂಲಿಯಾಳುಗಳನ್ನು ಕಟ್ಟಿಕೊಂಡು, ತೋಟದಲ್ಲಿ ಅಗೆತ, ಗುದ್ದಲಿಕೆಲಸ ಮಾಡಿ, ತಮ್ಮ ತಂಗಿಯರನ್ನು ಒಂದು ಮಟ್ಟಕ್ಕೆ ತಂದಿದ್ದೇನೆ. ನನಗೆ ಒಂದು ಗಂಡು ಹಾಗೂ ಎರಡು ಹೆಣ್ಣು. ನನ್ನ ಮಕ್ಕಳನ್ನೂ ಓದಿಸಿ ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ಮಾಡಿದ್ದೇನೆ. ಇವೆಲ್ಲವನ್ನೂ ನನ್ನ ವೃತ್ತಿ ಹಾಗೂ ವ್ಯವಸಾಯದಿಂದ ಮಾಡಿದ್ದೇನೆ. ಆದರೆ ಈಗಿನ ವ್ಯವಸಾಯದ ಸನ್ನಿವೇಶ ನೋಡಿ ಊರು ಬಿಡಲು ಸಿದ್ಧರಾಗಿದ್ದೇವೆ. ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗ್ತಾ ಇಲ್ಲ. ಒಂದು ವರುಷ ಮಳೆ ಬಂದ್ರೆ ಮತ್ತೊಂದು ವರುಷ ಬರ. ನಮ್ಮನ್ನು ಮುಂದುವರೆದ ಜನ ಅಂತ ಸರ್ಕಾರಾನೂ ಕೈಬಿಟ್ಟಿದೆ. ಸೌಲಭ್ಯ ಸವಲತ್ತು ಸಿಗ್ತಾ ಇಲ್ಲ. ಸರಕಾರದ ನೆರವಿಲ್ಲದೆ ಜ್ಞಾನಿಗಳು ಪರದೇಶಕ್ಕೆ ಹೋಗ್ತಾ ಇದಾರೆ. ಅವರ ವಿದ್ಯೆಯಿಂದ ಈ ದೇಶಕ್ಕೆ ನೆರವಾಗ್ತಿಲ್ಲ. ಹಳ್ಳಿ ಬಿಡಲು ನಾನು ಸಹ ತಯಾರಿದ್ದೇನೆ' ಅಂತ ನೋವಿನಿಂದ ನುಡಿದರು.

'ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ' ಅಂದಾಗ 'ನನ್ನ ತಂದೆ ಹೇಳೋರು, ಧರ್ಮದೃಷ್ಟಿಯಿಂದ ಕಷ್ಟಾರ್ಜಿತವಾಗಿ ಜೀವನ ನಡೆಸಬೇಕು. ಸ್ವಸಾಮರ್ಥ್ಯದಿಂದ ನಾವೇ ಕಷ್ಟಪಟ್ಟು ದುಡಿಯಬೇಕು. ಇತರರ ಮೇಲೆ ಅವಲಂಬನೆ ಸಲ್ಲದು ಅಂತ. ನಾನೂ ಹಾಗೇ ಬದುಕಿರೋನು. ನನ್ನ ಬಾಲ್ಯದಲ್ಲಿ ತೋಟದಲ್ಲಿ ವೇದದ ಕೆಲವು ಭಾಗಗಳನ್ನು ಕಲಿತಿದ್ದೇನೆ. ತೋಟದಲ್ಲಿ ಪ್ರಶಾಂತವಾದ ವಾತಾವರಣವಿರುತ್ತೆ, ಬೇರೆಯವರ ಪ್ರವೇಶ ಇರೋಲ್ಲ ಅಂತ ವೇದವನ್ನು ತೋಟದಲ್ಲಿ ಅಭ್ಯಾಸ ಮಾಡಿಸೋರು. ಮನೇಲಿ ಕೆಲವು ಭಾಗವನ್ನು ಕಲಿತ್ರೆ, ಕೆಲವನ್ನು ತೋಟದಲ್ಲಿ ಕಲಿಯೋವು. ೧೯೬೮ರಲ್ಲಿ ನನ್ನ ಮದುವೆಯಾಯ್ತು. ನನ್ನ ಹೆಂಡತಿ ಶಿಕ್ಷಕಿಯಾಗಿದ್ದಳು. ಕೃಷಿಯಿಂದಲೇ ಬದುಕೋಣ ಅಂದ ಮೇಲೆ ಆ ಕೆಲಸ ಬಿಟ್ಟು ಅವಳೂ ನನ್ನ ಜತೆ ದುಡಿದಿದ್ದಾಳೆ. ನನಗೆ ನಾಲ್ಕು ಎಕರೆ ತೋಟ ಇದೆ. ಅದರಲ್ಲೇ ಅಡಿಕೆ, ತೆಂಗು, ಬಾಳೆ ಹಾಕಿದೀನಿ. ಒಂದು Borewell ಹಾಕಿಸಿದ್ದೀನಿ. ೧೫೦ ಅಡಿ ಆಳದಲ್ಲಿ ೫೦೦೦ ಗ್ಯಾಲನ್ ನೀರು ಸಿಕ್ಕಿದೆ. ಮೊದಲು ನಾನು ನೆಲಗಡಲೆ ತುಂಬಾ ಬೆಳೀತಾ ಇದ್ದೆ. ಸಾಮಾನ್ಯವಾಗಿ ಡಿಸೆಂಬರ್ ಜನವರಿ ತಿಂಗಳಲ್ಲಿ ಬಿತ್ತನೆಯಾಗಬೇಕು. ಎಕರೆಗೆ ೪೫ ಕೇಜಿ ನೆಲಗಡಲೆಕಾಯಿ ಬೇಕಾಗುತ್ತೆ. ಕೈಯಿಂದ ಕಾಯಿ ಬಿಡಿಸಿ ಬೀಜ ಬೇರ್ಪಡಿಸಬೇಕು. ಮೆಶೀನ್



'ನಾವೇ ಬೆಳೆದ ಆನಂದಕ್ಕೆ ಬೆಲೆ ಕಟ್ಟಬಹುದೆ?': ಸಿ.ಎಸ್.ನಾಗಪ್ಪ: ಚಿಕ್ಕಮೇನಹಳ್ಳಿ

ಬಳಸಿದ್ರೆ ಬೀಜ ಹಾಳಾಗುತ್ತೆ. ಒಂದು ಅಡಿಗೆ ಸಾಲು ಹೊಡೆದು, ನಾಲ್ಕು ಅಂಗುಲಕ್ಕೆ ಒಂದರಂತೆ ಬೀಜ ಬಿತ್ತನೆ ಮಾಡಬೇಕು. ಹರತೆ ಹೊಡೆಯೋ ನೇಗಿಲು ಬಿಟ್ಟು, ನೀರು ಸಾಲು ಹೊಡೆದು ೧೦ ದಿನಕ್ಕೆ ಒಂದು ಬಾರಿ ನೀರು ಕೊಡಬೇಕು. ಕಳೆ ತೆಗೆಯೋದು ಬಹಳ ಮುಖ್ಯ. ಹನಿ ನೀರಾವರಿ ಅಳವಡಿಸಿದ್ರೆ ಹೆಚ್ಚಿನ ಇಳುವರಿ ಪಡೀಬಹುದು. ಸರಿಯಾದ ವ್ಯಾವಸಾಯಿಕ ಕ್ರಮ ಅಳವಡಿಸಿದ್ರೆ ೧ ಕೇಜಿ ಬಿತ್ತನೆ ಕಾಳಿಗೆ ಒಂದು ಪಲ್ಲ ಕಾಯಿ ಸಿಗುತ್ತೆ. ಇನ್ನು ತೋಟದ ಕೆಲಸವನ್ನು ನಾವು ಶಾರೀರಿಕವಾಗಿ ಮಾಡಬೇಕು. ತೋಟದ ಬೇಸಾಯದಲ್ಲಿ ಯಾವ ತಿಂಗಳಾದ್ರೂ ಒಂದು ಸಾರಿ ಕೆಲಸ ಹೆಚ್ಚು ಕಡಿಮೆ ಮಾಡಬಹುದು. ಆದರೆ ಹೊಲದ ಬೇಸಾಯದಲ್ಲಿ ಆಯಾ ದಿನದ ಕೆಲಸವನ್ನು ಅವತ್ತೇ ಮಾಡಬೇಕಾಗುತ್ತೆ. ನಾನೂ ಎತ್ತು ಗಾಡಿ ಆಳು ಕಾಳು ಕಟ್ಟಿಕೊಂಡು ವ್ಯವಸಾಯ ಮಾಡಿದ್ದೇನೆ. ತೆಂಗಿನ ಒಂದು ಮರದಿಂದ ೫೦೦ ರೂಪಾಯಿ ಹಾಗೂ ಅಡಿಕೆ ಒಂದು ಮರದಿಂದ ೨೦೦ ರೂಪಾಯಿ ವರಮಾನ ಪಡೆದಿದ್ದೇನೆ. ಜನಗಳ ಅಭಾವ ಇರೋದ್ರಿಂದ ಅಡಿಕೇನ ರೇಖೆ ಮಾಡುವುದು ಕಡಿಮೆ. ಹಾಗಾಗಿ ನಾವು ಗುತ್ತಿಗೆ ನೀಡ್ತೀವಿ. ನಾವೇ ಸ್ವತಃ ಮಾಡಿದ್ರೆ ಹೆಚ್ಚಿನ ಆದಾಯ ಪಡೀಬಹುದು' ಅಂತಾರೆ ನಾಗಪ್ಪನವರು.



ತ್ಯಾಜ್ಯ ನಿರ್ವಹಣೆಯೂ ಕೃಷಿಯ ಭಾಗ: ಸಿ.ಎಸ್.ನಾಗಪ್ಪ: ಚಿಕ್ಕಮೇನಹಳ್ಳಿ

ಸಹಕಾರಿ ಕ್ಷೇತ್ರ ಹಾಗೂ ವ್ಯವಸಾಯ ಎರಡರಲ್ಲೂ ಒಲವನ್ನು ಇಟ್ಟುಕೊಂಡು ಬದುಕು ಸಾಗಿಸಿರುವ ವ್ಯಕ್ತಿ ನಾಗಪ್ಪನವರು. ಸಮಾಜ ಸೇವೆಯಲ್ಲೂ ಇವರಿಗೆ ಆಸಕ್ತಿ. 'ಪರೋಪಕಾರಾರ್ಥಮ್ ಇದಮ್ ಶರೀರಮ್' ಅಂತಾರೆ. 'ನನ್ನಿಂದ ಇತರರಿಗೆ ಅನುಕೂಲವಾಗುವಂತಿದ್ದರೆ ಅವರಿಗೆ ನೆರವಾಗುತ್ತೇನೆ. ಅವರ ಜತೆ ಕೋರ್ಟು, ಕಛೇರಿ ಹಾಗೂ ಆಸ್ಪತ್ರೆಗೆ ಹೋಗುತ್ತೇನೆ. ಆರ್ಥಿಕ ನೆರವನ್ನು ನೀಡಿದ್ದೇನೆ. ಯಾವುದಕ್ಕೂ ಪ್ರತಿಫಲ ಅಪೇಕ್ಷೆ ಮಾಡಿಲ್ಲ. ಕಷ್ಟಪಡೋದ್ರಿಂದ, ಇತರರಿಗೆ ನೆರವು ನೀಡೋದ್ರಿಂದ ನಮ್ಮ ಆರೋಗ್ಯ ಸುಧಾರಿಸುತ್ತೆ' ಅಂತಾರೆ. 'ನಿಮ್ಮ ನಂತರ ವ್ಯವಸಾಯ ಯಾರು ಮುಂದುವರೆಸುತ್ತಾರೆ?' ಅಂದರೆ 'ನನ್ನ ಮಗ ವ್ಯವಸಾಯ ಮಾಡೋಲ್ಲ. ಯಾಕೇಂದ್ರೆ ನಾನೇ ಬಿಡ್ತಿದೀನಿ. ಇದು ನನ್ನ ವ್ಯವಸಾಯದ ಕೊನೇಕಾಲ. ನನ್ನ ಕಷ್ಟಕಾರ್ಪಣ್ಯಗಳನ್ನು ಗಮನಿಸಿಕೊಂಡು, ನನಗೇ ವ್ಯವಸಾಯ ಕೊನೆಯಾಗಲಿ ಅಂತ ನಾನೇ ನನ್ನ ಮಗನಿಗೆ ಹೇಳಿದ್ದೇನೆ. ಅಲ್ಲದೇ ನಮ್ಮ ಶಕ್ತಿ ಮಕ್ಕಳಿಗೆ ಬಂದಿಲ್ಲ. ಅದಕ್ಕಾಗಿ ನಾನು ಇರುವವರೆಗೂ ಇದನ್ನು ಅನುಭವಿಸಿ ನನ್ನ ಪಾತ್ರವನ್ನು ಮುಗಿಸುವ ಆಸೆ ಇದೆ' ಎಂದು ಮಾತು ಮುಗಿಸಿ ಎದ್ರು ನಾಗಪ್ಪನವರು. ನಂತರ ತೋಟಕ್ಕೆ ಹೋಗಿ ಭಾವಚಿತ್ರ ತೆಗೆಯುವ ಕೆಲಸ. ನಿಜಕ್ಕೂ ತೋಟವನ್ನು ಬಹಳ ಚೆನ್ನಾಗಿ ಕಾಪಾಡಿದ್ದಾರೆ ಚಿಕ್ಕಮೇನಹಳ್ಳಿಯ ಸಂಕೇತಿಗಳು. ಆದರೆ ಇದರ ಮುಂದಿನ ಭವಿಷ್ಯ ಮಸುಕಾಗಿದೆ. ಮುಂದಿನ ಊರಿಗೆ ನನ್ನ ಪ್ರಯಾಣ ಮುಂದುವರೀತು, ಮನದಾಳದ ಪ್ರಶ್ನೆಯು ಮೂಲೆಯಲ್ಲಿ ಕಾಡುತ್ತಿತ್ತು, ಇಷ್ಟೆಲ್ಲಾ ಶ್ರದ್ಧೆಯಿಂದ ಮಾಡಿದ ವ್ಯವಸಾಯಕ್ಕೆ ಸಂಕೇತಿ ಕೃಷಿಕರು ಈ ರೀತಿಯ ಅಂತ್ಯ ಯಾಕೆ ನೀಡುತ್ತಿದ್ದಾರೆ ಅನ್ನುವುದು!?

9. ನಿಟ್ಟೂರು



ಶಿಥಿಲವಾದ ಹೊಯ್ಸಳರ ಕಾಲದ ಶ್ರೀಕೇಶವ ದೇವಸ್ಥಾನ: ನಿಟ್ಟೂರು

ಹಾಸನದಿಂದ ಸಾಲಗಾಮೆ ರಸ್ತೇಲಿ MCF (Master Control Facility)ವರೆಗೆ ಸಾಗಿ ಅಲ್ಲಿಂದ ಬಲ ಭಾಗಕ್ಕೆ ಹೊರಳಿದ್ರೆ ಆ ಟಾರ್‌ರಸ್ತೆ ನಿಟ್ಟೂರನ್ನು ತಲುಪುತ್ತೆ. ಒಟ್ಟು ೧೮ ಕಿಲೋಮೀಟರ್ ಪ್ರಯಾಣ. ಚಿಕ್ಕಮೇನ ಹಳ್ಳಿಯಿಂದ ಕುದುರುಗುಂಡಿ ಕೆರೆ ಏರಿ ಮೇಲೆ, ಬೂದೇಶ್ವರ ಮಠದ ಮುಂಭಾಗ ದಿಂದ ನಿಟ್ಟೂರಿಗೆ ಹೋಗೋದಾದ್ರೆ ಬರೆ ಎಂಟು ಕಿಲೋಮೀಟರ್ ಅಷ್ಟೆ, ಆದ್ರೆ ರಸ್ತೆ ಚೆನ್ನಾಗಿಲ್ಲ. ನಿಟ್ಟೂರಿನಲ್ಲಿ ಹಿಂದಿನಿಂದ ಇರುವುದು ಒಂದೇ ಒಂದು ಕುಟುಂಬ ಸಂಕೇತಿಗಳದ್ದು. ಸಂಕೇತಿಗಳಿಗೆ ಹೆಚ್ಚಾಗಿ ಆಶ್ರಯವನ್ನು ನೀಡಿದ್ದ ಹೊಯ್ಸಳ ರಾಜರ ಕುರುಹಾಗಿ ಶಿಥಿಲವಾದ ಹೊಯ್ಸಳ ದೇವಸ್ಥಾನ ಈಗಲೂ ಇದೆ. ಊರ ಜನ ಮನಸ್ಸು ಮಾಡಿ ಜೀರ್ಣೋದ್ಧಾರ ಮಾಡಿದ್ರೆ ಉತ್ತಮ ಸಾಂಸ್ಕೃತಿಕ ಕುರುಹಾಗುವ ಎಲ್ಲ ಲಕ್ಷಣಗಳೂ ಇವೆ. ನಿಟ್ಟೂರಿನಲ್ಲಿ ಸಕಲ ಸೌಲಭ್ಯಗಳೂ ಇವೆ. ಸಹಕಾರಿ ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಶಾಲೆ, ರಸ್ತೆ, ಬಸ್ಸು, ಅಂಗಡಿ ಮುಂಗಟ್ಟುಗಳು ಎಲ್ಲವೂ ಸೇರಿ ನಿಟ್ಟೂರನ್ನು ಅಭಿವೃದ್ಧಿ ಗ್ರಾಮವನ್ನಾಗಿಸಿವೆ.

ಮೂರು ವರುಷಕ್ಕೆ ಒಂದು ಬಾರಿ ಮಾರಿಜಾತ್ರೆ ನಡೆಯುತ್ತೆ. ಅದೇ ಸಂದರ್ಭದಲ್ಲಿ ಯುಗಾದಿ ಕಳೆದ ಬಳಿಕ ಚೈತ್ರ ಮಾಸದಲ್ಲಿ ನಿಟ್ಟೂರಮ್ಮನ ರಥೋತ್ಸವವೂ ನಡೆಯುತ್ತೆ. ಬಹಳ ವಿಜೃಂಭಣೆಯಿಂದ ನಡೆಯುವ ಗ್ರಾಮೀಣ ಸಡಗರಕ್ಕೆ ಸುತ್ತಣ ಊರಿನ ಜನರ ಸಹಭಾಗಿತ್ವವೂ ಇರುತ್ತೆ ಅನ್ನುವುದು ವಿಶೇಷ. ನಿಟ್ಟೂರಿನ ಹಾಲಿನ ಡೈರಿ ಪ್ರಗತಿಯ ಹಾದಿಯಲ್ಲಿದೆ. ನಿಟ್ಟೂರಿನ ಒಂದೇ ಒಂದು ಸಂಕೇತಿ ಕುಟುಂಬದ ವಿವರ, ವ್ಯವಸಾಯದ ಬದುಕು ಎಲ್ಲವನ್ನೂ ವಿವರವಾಗಿ ನೀಡಲಾಗಿದೆ.



ದಿಬ್ಬದ ಮೇಲಿನ ಶ್ರೀಕೇಶವ ದೇವಸ್ಥಾನದ ಮೇಲಿಂದ ನಿಟ್ಟೂರಿನ ಒಂದು ನೋಟ

ಎನ್) ಮಂಜುನಾಥಯ್ಯ ಇ/ಮ ಎನ್. ಗುಂಡಪ್ಪ

ನಿಟ್ಟೂರು, ಹಾಸನ (ತಾ) ಜಿಲ್ಲೆ, ದೂರವಾಣಿ : 08172 242240

ಹಿಂದೆ ಮಳೆ ಚೆನ್ನಾಗಿ ನಡೆಸೋದು. ಅಡಿಕೆ, ತೆಂಗನ್ನು ಮಳೆ ಆಶ್ರಯದಲ್ಲಿಯೇ ಬೆಳೆಯೋವು. ಈ ಬೋರ್‌ವೆಲ್ ಗಳನ್ನು ಕೊರೆಸೋದು ಆರಂಭವಾದ ಮೇಲೆ ಮಳೆ ಬರೋದೇ ಕಡಿಮೆ ಆಗಿದೆ. ಅಡಿಕೆ ತೋಟದ ನೆಲಭಾವಿ ಒಣಗಿದೆ. ಮಳೆ ಬೆಳೆ ಚೆನ್ನಾಗಿ ನಡೆದ್ರೆ ಒಂದು ಕುಟುಂಬ ವ್ಯವಸಾಯ ಮಾಡಿಕೊಂಡು ಸುಖವಾಗಿ ಜೀವಿಸಬಹುದು.

ನಿಟ್ಟೂರಿನ ಎನ್. ಗುಂಡಪ್ಪ ಹಾಗೂ ಹೋಚೇಹಳ್ಳಿಯ ಗೌರಮ್ಮ ಅವರಿಗೆ ನಾಲ್ಕು ಗಂಡು ಹಾಗೂ ನಾಲ್ಕು ಹೆಣ್ಣುಮಕ್ಕಳು. ಕೊನೆಗೆ ಉಳಿದೋರು ಮೂರು ಜನ ಗಂಡು ಮಕ್ಕಳು ಮಾತ್ರ. ಹಿರಿಯ ಮಗ ಎನ್. ಲಕ್ಷ್ಮೀಕಾಂತಯ್ಯ PWD ಇಲಾಖೆಯಲ್ಲಿ Assistant Executive Engineer ಆಗಿ ನಿವೃತ್ತಿ ಹೊಂದಿದ್ದಾರೆ. ಲಕ್ಷ್ಮೀಕಾಂತಯ್ಯನವರ ಪತ್ನಿ ಎನ್. ಎಲ್. ನಾಗಲಕ್ಷ್ಮಿ ಹಂದ್ರಾಳಿನ ಎಚ್.ಎಸ್. ಸುಬ್ಬರಾವ್ ಹಾಗೂ ಲಕ್ಷಮ್ಮ ಅವರ ಮಗಳು. ಬೆಂಗಳೂರಿನಲ್ಲಿ Diploma in Mechanical Engineering ವ್ಯಾಸಂಗವನ್ನು ೧೯೪೯ರಲ್ಲಿ ಮುಗಿಸಿದ ಲಕ್ಷ್ಮೀಕಾಂತಯ್ಯನವರು ಅದೇ ವರುಷ PWDನಲ್ಲಿ Sub overseer ಆಗಿ ೫೦ ರೂ. ಸಂಬಳಕ್ಕೆ ಸೇರಿದರು. ೧೯೮೪ರಲ್ಲಿ ಇವರು ನಿವೃತ್ತಿ ಹೊಂದಿ, ಈಗ ಊರಲ್ಲೇ ವಾಸ ಮಾಡುತ್ತಿದ್ದಾರೆ. 'ತಾಯಿಗೆ ವಯಸ್ಸಾಗಿತ್ತು ಹಾಗೂ ಊರು ಬಿಟ್ಟುಹೋಗಬಾರದು ಅಂತ ಊರಿಗೇ ವಾಪಸ್ಸು ಬಂದುಬಿಟ್ಟೆ' ಎಂದು ಹೇಳುತ್ತಾರೆ. ಇನ್ನೊಬ್ಬ ತಮ್ಮ ಎನ್. ನಾಗರಾಜ್ ಹಾಸನದಲ್ಲಿ 'Nittoor Associates ಅನ್ನುವ ಸಂಸ್ಥೆ ನಡೆಸುತ್ತಿದ್ದಾರೆ. ಮಧ್ಯದವರು ಎನ್. ಮಂಜುನಾಥಯ್ಯ. ಇವರ ಪತ್ನಿ ರಮಾಮಣಿ, ಕೆ.ಆರ್. ನಗರ ತಾಲ್ಲೂಕು ವರಾಹನಾಥನ ಕಲ್ಲಹಳ್ಳಿಯ ರಾಮಯ್ಯ ಹಾಗೂ ಲಕ್ಷ್ಮೀದೇವಮ್ಮ ದಂಪತಿಗಳ ಮಗಳು. ಹಿರಿಯರು ಕಟ್ಟಿದ ಮನೆಯಲ್ಲಿ ಮಂಜುನಾಥಯ್ಯ ಹಾಗೂ ಲಕ್ಷ್ಮೀಕಾಂತಯ್ಯ ಒಟ್ಟಿಗೆ ಇದ್ದಾರೆ. ಮುಂಚಿನಿಂದಲೂ ವ್ಯವಸಾಯವನ್ನು ಮಾಡುತ್ತಿರುವ ಮಂಜುನಾಥಯ್ಯನವರನ್ನು ನಾವು ಮಾತನಾಡಿಸಿದಾಗ ಮಧ್ಯಾಹ್ನದ ಸಮಯ. ಮೊದಲು ಹಿರಿಯರ ಬಗ್ಗೆ ಮಾತನಾಡಿದರು ಮಂಜುನಾಥಯ್ಯ.



ಎನ್.ಲಕ್ಷ್ಮೀಕಾಂತಯ್ಯ, ಎನ್.ಮಂಜುನಾಥಯ್ಯ ಸೋದರರು ತಮ್ಮ ರಾಗಿ ಪೈರಿನ ಮಧ್ಯೆ: ನಿಟ್ಟೂರು

"ನಮ್ಮ ಅಜ್ಜ ಸುಬ್ರಹ್ಮಣ್ಯ ಮೊದಲು ಕೃಷ್ಣಾಪುರದಲ್ಲಿದ್ರಂತೆ. ಶಾಸ್ತ್ರಿಗಳ ಮನೆತನದವರು. ಅವರು ಪುರಾಣವನ್ನು ಬಹಳ ಚೆನ್ನಾಗಿ ಹೇಳುತ್ತಿದ್ರಿಂದ ನಿಟ್ಟೂರಿನವರು ಅವರನ್ನು ಇಲ್ಲಿಗೆ ಕರೆತಂದ್ರಂತೆ. ಅದಕ್ಕೇಂತ ಜಮೀನನ್ನೂ ಬಿಟ್ಟಿದ್ದಾರೆ. ನಾನು ನಮ್ಮ ತಾತನ್ನ ನೋಡಿಲ್ಲ. ನನ್ನ ತಂದೆ ಶಾಲಾಶಿಕ್ಷಕರು; ನಿಟ್ಟೂರಿನ ಸುತ್ತಮುತ್ತ ತಮ್ಮ ಅಧ್ಯಾಪಕ ವೃತ್ತಿಯನ್ನು ಮುಂದುವರಿಸಿ, ನಿವೃತ್ತಿ ಹೊಂದಿದವರು. ಜಮೀನನ್ನು ಅವರಿವರಿಗೆ ಸಾಗು ಮಾಡಲು ನೀಡಿದ್ರು. ಇಬ್ಬರು ದೊಡ್ಡಪ್ಪಂದ್ರು ಇದ್ರು. ಅವರು ವ್ಯವಸಾಯ ಮಾಡ್ತಿದ್ರು. ತಾತ ರೂಢಿಸಿದ ಜಮೀನೂ ಸಹ ನಿಟ್ಟೂರಲ್ಲಿ ಇತ್ತು. ನನ್ನ ತಂದೇನೂ ಪುರಾಣ ಪ್ರವಚನ ಮಾಡೋರು. ನಾನು ಏಳನೇ ತರಗತಿಯವರೆಗೆ ಓದಿದೆ. ಮೊದಲಿನಿಂದಲೂ ವ್ಯವಸಾಯದ ಹುಚ್ಚು. ವ್ಯವಸಾಯದಲ್ಲಿ ಸುಖವಾಗಿರಬಹುದು ಅಂತ ಓದಿನ ಬಗ್ಗೆ ಉದಾಸೀನ ಮಾಡಿದೆ. ೫೭ನೇ ಇಸವಿಯಿಂದ ವ್ಯವಸಾಯ ಮಾಡಲು ಆರಂಭಿಸಿದೆ. ವ್ಯವಸಾಯ ಬಿಟ್ರೆ ಬೇರೆ ಹವ್ಯಾಸ ಇರಲಿಲ್ಲ. ದನ ಕಾಯೋದು ನನ್ನ ವೃತ್ತಿಯಾಗಿತ್ತು. ತಂದೆ ತಮ್ಮ ಪುರಾಣ ಪ್ರವಚನವನ್ನು ರಾತ್ರಿ ಸಮಯದಲ್ಲಿ ಮಾಡೋರು. ನಾನು ದಿನವಿಡೀ ಬೇಸಾಯದಲ್ಲಿ ಮೈಹಣ್ಣಾಗುವವರೆಗೆ ದುಡಿದು ರಾತ್ರಿ



ಎನ್.ಎಲ್.ನಾಗಲಕ್ಷ್ಮಿ-ಎನ್.ಲಕ್ಷ್ಮೀಕಾಂತಯ್ಯ; ರಮಾಮಣಿ-ಎನ್.ಮಂಜುನಾಥಯ್ಯ ದಂಪತಿಗಳು: ನಿಟ್ಟೂರು

ಮನೆಗೆ ಬರುತ್ತಿದ್ದೆ. ಊಟ ಮಾಡಿ ಮಲಗಿ ಬಿಡ್ತಿದ್ದೆ. ತಂದೆಯ ಪುರಾಣ ಪ್ರವಚನದ ಕಲೆ ನನಗೆ ಬರಲಿಲ್ಲ" ಅಂತಾರೆ ಮಂಜುನಾಥಯ್ಯ.

ಬಾಲ್ಯದಿಂದಲೇ ಬೇಸಾಯದ ಬಗ್ಗೆ ಆಸಕ್ತಿ ಬೆಳೆಸಿಕೊಂಡ ಮಂಜುನಾಥಯ್ಯನವರಿಗೆ ಮದುವೆಯಾದದ್ದು ೧೯೫೮ರಲ್ಲಿ. ಮನೆಯಲ್ಲಿ ಕೆಲಸದಾಳುಗಳನ್ನು ಇಟ್ಟುಕೊಳ್ಳದೇ, ಪೂರ್ಣ ಕೆಲಸ ಮಾಡಿ, ಹೊಲಗದ್ದೆಯಲ್ಲೂ ಗಂಡನ ಜತೆ ದುಡಿದಿದ್ದಾರೆ ರಮಾಮಣಿಯವರು. ಒಟ್ಟು ೧೨ ಎಕರೆ ಗದ್ದೆ, ಮೂರು ಎಕರೆ ತೋಟ ಹಾಗೂ ನಾಲ್ಕು ಎಕರೆ ಹೊಲ ಇವರ ಕುಟುಂಬಕ್ಕೆ ಇದೆ. ಮೂರು ಎಕರೆ ಹೊಲವನ್ನು ಮಂಜುನಾಥಯ್ಯ ರೂಢಿಸಿದ್ದಾರೆ. ತೋಟದಲ್ಲಿ ಅಡಿಕೆ, ತೆಂಗು ಕಂಗೊಳಿಸುತ್ತಾ ಬೆಳೆದಿದೆ. ಈ ಹಿಂದೆ ಬಾಳೆ ಬೆಳೆಯೂ ಇತ್ತಂತೆ. ಸುತ್ತಾಮುತ್ತಾ ಯಾರೂ ಬಾಳೆ ಬೆಳೆಯದೇ ಇದ್ದದ್ರಿಂದ ಇವರ ಜಮೀನಿನಲ್ಲಿ ಕಳ್ಳತನ ಜಾಸ್ತಿ ಆಯಿತಂತೆ. ಹಾಗಾಗಿ ಬಾಳೆ ಕಿತ್ತಿದ್ದಾರೆ. ಉಳಿದಂತೆ ಊರ ಎರಡು ಕೆರೆಯಲ್ಲಿ ನೀರು ಬಂದರೆ ಭತ್ತ, ಹೊಲದಲ್ಲಿ ರಾಗಿ, ಬೀನ್ಸ್, ತೊಗರಿ, ಅವರೆ, ಹುರುಳಿಯನ್ನು ಬೆಳೀತಾರೆ. ಹುಲ್ಲು ಬಡಿಯಲು ವಿಶಾಲವಾದ ಕಣವನ್ನು ನಿರ್ಮಿಸಿಕೊಂಡಿದ್ದಾರೆ. ರಾಗಿ ಹಾಗೂ ಭತ್ತದ ಹುಲ್ಲಿನ ಮೆದೆಯನ್ನು ಒಟ್ಟಿಕೊಂಡಿದ್ದಾರೆ. ಅಕ್ಕಪಕ್ಕದ ಕೃಷಿಕರಿಗೂ ತಮ್ಮ ಕಣವನ್ನು ಬಿಟ್ಟಿದ್ದಾರೆ. ಪರಸ್ಪರ ಸಹಕಾರವಿದ್ದಾಗ ಮಾತ್ರ ವ್ಯವಸಾಯದ ಅಭಿವೃದ್ಧಿ ಸಾಧ್ಯ ಅಂತಾರೆ.

ಮಂಜುನಾಥಯ್ಯನವರ ವ್ಯವಸಾಯದ ಬದುಕಿನ ಬಗ್ಗೆ ಅವರೇ ಹೇಳಿಕೊಂಡರು, "ಹಿಂದೆ ದೊಡ್ಡರಾಗಿ, ಗಿಡ್ಡರಾಗಿ ಅಂತ ಬೆಳೀತಿದ್ವಿ. ಇಳುವರಿ ಬರ್ತಿರಲಿಲ್ಲ. ಎಕರೆಗೆ ಎರಡರಿಂದ ಮೂರು ಕ್ವಿಂಟಾಲ್ ಸಿಗೋದು. ಈಗ ಸುಧಾರಿತ ತಳಿ ಬಳಸಿ, ರಾಸಾಯನಿಕ ಗೊಬ್ರ ಹಾಕೋದ್ರಿಂದ ೧೦ ರಿಂದ ೧೨ ಕ್ವಿಂಟಾಲ್ ಇಳುವರಿ ಸಿಗುತ್ತೆ. ರಾಗಿ ಪೈರಿನ ಮಧ್ಯದಲ್ಲಿ ೬ ರಿಂದ ೮ ಸಾಲು ತೊಗರಿ, ಅವರೆ, ಹುರುಳಿ ಬೆಳೀತೀವಿ. ಒಂದು ಬೋರ್‌ವೆಲ್ ಇದೆ. ೫ ಇಂಚು ನೀರು ಸಿಕ್ಕಿದೆ. ಕರೆಂಟ್ ಅಭಾವದಿಂದ ನೀರನ್ನು ಬಳಸಲು ಆಗುತ್ತಿಲ್ಲ. ಕೆರೆಯಲ್ಲಿ ನೀರು ತುಂಬಿದಾಗ ಭತ್ತ ಬೆಳೀತೀವಿ. ಮುಂಚೆ ಪುಟ್ಟಭತ್ತ, ಕ್ಯಾಸರಿ, ಕೆಂಪುಭತ್ತ ಬೆಳೆಯೋವು. ಈಗ ಜಯಾ, ಇಂಟಾನ್, IR 20ತಳಿ ಬಳಸ್ತೀವಿ. ರಾಸಾಯನಿಕಗೊಬ್ರ ಹಾಕ್ತೀವಿ. ೨೨ ದಿನದ ಸಸಿಯನ್ನು ನಾಟಿಗೆ ಬಳಸ್ತೀವಿ. ಇಳುವರಿ ಬರುತ್ತೆ. ಈ ರಾಸಾಯನಿಕ ಒಂದು ಸಾರಿ ಬಳಸಿದ್ರೆ, ಚಟ ಹತ್ತಿಸಿದ ಹಾಗೆ. ಮುಂದಿನ ಬಾರಿ ಬಳಸದಿದ್ರೆ ಬೆಳೆ ಮೇಲೆ ಏಳೋದಿಲ್ಲ. ರಾಸಾಯನಿಕ ಗೊಬ್ಬರ ಹಾಕೋದ್ರಿಂದ ಮುಂದೆ ಭೂಮಿಗೆ ತೊಂದರೆಯಾಗುತ್ತೆ. ಹಿಂದಿನ ತಳಿಗಳಿಗಾದ್ರೆ ರಾಸಾಯನಿಕ ಬೇಕಿರಲಿಲ್ಲ. 'ಕ್ಯಾಸರಿ' ಭತ್ತದ ಅಕ್ಕಿ ಬಹಳ ರುಚಿ. ರಾಗಿ ಮುದ್ದೆ ಊಟ ಮಾಡಿದಷ್ಟು ಶಕ್ತಿ ನೀಡೋದು. ಆದರೆ ಈಗ ಅದು ಕೆಂಪು ಅಂತ ಜನ ಅಪೇಕ್ಷೆ ಪಡೋಲ್ಲ. ಉತ್ಕೃಷ್ಟ ಅಕ್ಕಿಯ ಜತೆಗೆ



ಬಡಿಯಲು ಹುರುಳಿ ಹರಡಿಕೊಂಡ ಎನ್.ಮಂಜುನಾಥಯ್ಯ: ನಿಟ್ಟೂರು

ದನಕರುಗಳಿಗೆ ಹೆಚ್ಚು ಹುಲ್ಲು ಸಿಗೋದು. ಈಗ ಆ ತಳಿಗಳನ್ನು ಹುಡುಕಿದ್ರೂ ಸಿಕ್ಕೋಲ್ಲ" ಅಂತಾರೆ.

ವ್ಯವಸಾಯವನ್ನೇ ತಮ್ಮ ಉದ್ಯೋಗವನ್ನಾಗಿಸಿಕೊಂಡು, ಯಾವುದಕ್ಕೂ ಹೆಚ್ಚಿನ ಆಸೆ ಪಡದೆ, ಇದ್ದುದರಲ್ಲಿ ತೃಪ್ತಿಯ ಜೀವನ ನಡೆಸಿದ್ದಾರೆ. "ಹೆಚ್ಚು ಸಂಪಾದನೆಯ ಆಸೆ ನನಗಿರಲಿಲ್ಲ. ಆದಷ್ಟು ಕೆಲಸ ಮಾಡಿ, ಮನೇಲಿ ಇರೋ ಹಸು, ಎತ್ತು ನೋಡಿಕೊಂಡು ಆರಾಮವಾಗಿದೀನಿ. ಮತ್ತೆ ಯಾವ ವ್ಯವಹಾರಾನೂ ನಾನು ಮಾಡಿಲ್ಲ" ಅಂದ್ರು ಮಂಜುನಾಥಯ್ಯ. ನಿಟ್ಟೂರಿನಲ್ಲಿ ೧೯೭೫ರಲ್ಲಿ ಒಂದು ಹಾಲಿನ ಡೈರಿ ಆರಂಭವಾಗಿದೆ. ಹಿಂದೆ ಒಂದರಿಂದ ಎರಡು ಕ್ಯಾನು (ಒಂದು ಕ್ಯಾನ್ = ೪೦ ಲೀಟರ್) ಹಾಲು ಬರುತ್ತಿದ್ದು ಈಗ ಎಂಟು ಕ್ಯಾನ್‌ಗೆ ಏರಿದೆ. ಹೈನುಗಾರಿಕೆಯಲ್ಲಿ ಮುಂದಿರುವ ಇವರು ಹೇಳುತ್ತಾರೆ 'ಮನೇಲಿ ಎಂಟು, ಹತ್ತು ರಾಸು ಯಾವಾಗಲೂ ಇರೋದು. ಆಗ ಮೂರು ಲೀಟರ್ ಹಾಲು ಸಿಗ್ತಿರಲಿಲ್ಲ. ಈಗ ಒಂದೊಂದು ಸುಧಾರಿತ ತಳಿ ಹಸುಗಳು ಐದಾರು ಲೀಟರ್ ಹಾಲು ಕರೀತಾವೆ. ಹಿಂದೆ ಹಾಲಿನ ಮಾರಾಟ ಇತ್ತಿಲ್ಲ. ಎಷ್ಟೇ ಹಾಲು ಬಂದ್ರೂ ಮನೆಯವರೇ ಕುಡಿಯಬೇಕಿತ್ತು. ಡೈರಿ ಬಂದ ಮೇಲೆ ವ್ಯಾಪಾರ ಸುಲಭವಾಗಿದೆ. ನಾವು ಡೈರಿಗೆ ಹಾಲು ಹಾಕ್ತೀವಿ. ಆದಾಯದ ಅರ್ಧಭಾಗ ನಿರ್ವಹಣೆಗೆ ಆಗುತ್ತೆ. ಉಳಿದ ಅರ್ಧದಲ್ಲಿ ನಮ್ಮ ಜೀವನ ನಿರ್ವಹಣೆಯಾಗುತ್ತೆ. ಮಕ್ಕಳನ್ನು ಹಣ ಕೇಳುವ ಹಾಗಿಲ್ಲ. ಸುಮಾರು ಎಂಟು, ಹತ್ತು ವರುಷದಿಂದ ಗೋಬರ್ ಘಟಕ ಇಟ್ಟಿದೀನಿ. ಮನೆ ಅಡುಗೆಗೆ ಅನುಕೂಲ ಆಗಿದೆ'.

ವ್ಯವಸಾಯದ ಬದುಕಿನಲ್ಲಿ ಹಲವು ಜನಪದ ಆಚರಣೆಗಳು ಹಾಸು ಹೊಕ್ಕಿವೆ. ಈ ಕುರಿತು ಕೇಳಿದಾಗ 'ನಮ್ಮ ತಾಯಿ ಹಿಂದೆ ರಾಗಿ ಬೀಸೋವಾಗ ದೇವರನಾಮ ಹಾಡೋರು. ಈಗ ಎಲ್ಲದಕ್ಕೂ ಯಂತ್ರ ಬಂದಿದೆ. ಹಳ್ಳಿಯ ಆಚರಣೆಗಳು ಅರ್ಥ ಕಳೆದುಕೊಂಡಿವೆ. ನಾವು ಧಾನ್ಯವನ್ನು ಕಣದಲ್ಲಿ ರಾಶಿ ಮಾಡಿದ ಮೇಲೆ ರಾಶಿಪೂಜೆ ಮಾಡ್ತೀವಿ. ಈ ಆಚರಣೆ ಈಗಲೂ ಉಳಿದಿದೆ. ಮೊದಲು ಬೆನಕನನ್ನು ಇಟ್ಟು ಪೂಜೆ ಮಾಡಿ, ಬೆನಕನ ರಾಶಿಯನ್ನು ಮೊದಲು ಮನೆಗೆ ತರ್ತೀವಿ. ಉಳಿದ ಧಾನ್ಯವನ್ನೂ ಚೀಲದಲ್ಲಿ ತಂದು ನಂತರ ಕಣಜದಲ್ಲಿ ತುಂಬುತ್ತೀವಿ. ಸೋಬಾನೆ ಹಾಡು, ಹೊಲದ ನಾಟಿ ಸಮಯದಲ್ಲಿ ಹಾಡುವ ಹಾಡು ನಮ್ಮಲ್ಲಿ ರೂಢಿಯಲ್ಲಿಲ್ಲ' ಅಂದ್ರು ಮಂಜುನಾಥಯ್ಯ.


ಹುಲ್ಲಿನ ಮೆದೆ: ಇನ್ನೂ ಉಳಿದಿದೆ: ಎನ್.ಲಕ್ಷ್ಮೀಕಾಂತಯ್ಯ, ಎನ್.ಮಂಜುನಾಥಯ್ಯ

'ಸುಮಾರು ೬೦ ತೆಂಗು ಹಾಗೂ ೩೦೦ ಅಡಿಕೆ ಮರಗಳು ಇವೆ ತೋಟದಲ್ಲಿ. ತೆಂಗಿನ ತೋಟದಲ್ಲಿ ಅಡಿಕೆ ಬೆಳೆದ್ರೆ ಎರಡರ ಫಸಲೂ ಚೆನ್ನಾಗಿ ಬರೋಲ್ಲ, ಎರಡೂ ಪ್ರತ್ಯೇಕವಾಗಿರಬೇಕು' ಅನ್ನುವುದು ಇವರ ತತ್ತ್ವ. ಮಳೆ ಆಶ್ರಯದಲ್ಲಿಯೇ ಬೆಳೆದ ತೋಟಗಳು ಇವು. ಅಡಿಕೆ ಹಾಗೂ ತೆಂಗಿನ ತೋಟಗಳಿಗೆ ಇವರು ರಾಸಾಯನಿಕ ಗೊಬ್ಬರ ಬಳಸೋಲ್ಲ. ರಾಸಾಯನಿಕ ಹಾಕಿದ್ರೆ ಇಳುವರಿ ಬರುತ್ತೆ, ಆದ್ರೆ ಮರ ಬಾಳಿಕೆ ಬರೋಲ್ಲ. ಮನೆಕಸ ಹಾಕಿದ್ರೆ ಹೆಚ್ಚು ಇಳುವರಿ ಸಿಗದೇ ಹೋದ್ರೂ ಗಿಡ ಬಾಳಿಕೆ ಬರುತ್ತೆ,' ಅಂತಾರೆ. ಜಮೀನಿನ ನಿರ್ವಹಣೆ ಬಗ್ಗೆ ಅಪಾರ ಆಸಕ್ತಿ ಇದೆ. ಕೆಂಪು ಮಣ್ಣಲ್ಲಿ ಆಲೂಗೆಡ್ಡೆ, ರಾಗಿ, ಹುರುಳಿ, ತೊಗರಿ ಚೆನ್ನಾಗಿ ಬರುತ್ತೆ. ಇವಕ್ಕೆ ಶೀತ ಅಂದ್ರೆ ಆಗೋಲ್ಲ. ಕಪ್ಪು ನೆಲದಲ್ಲಿ ಅಡಿಕೆ, ಈರುಳ್ಳಿ ಕೊತ್ತಂಬರಿ ಉತ್ಕೃಷ್ಟವಾಗಿ ಬರುತ್ತೆ' ಅಂತ ಅಧಿಕಾರಯುತವಾಗಿ ಹೇಳುತ್ತಾರೆ. ವ್ಯವಸಾಯವೇ ಉಸಿರು ಅಂತಾ ಜೀವಿಸಿದ ಇವರ ಕುಟುಂಬದ ವ್ಯವಸಾಯದ ಭವಿಷ್ಯ ಏನು? ಮಂಜುನಾಥಯ್ಯ ಮಾರ್ಮಿಕವಾಗಿ ಹೇಳಿದ್ರು,

'ವಿದ್ಯಾಭ್ಯಾಸಕ್ಕೇಂತ ಹೊರಗಡೆ ಹೋದ ಮಕ್ಕಳು ವಾಪಸ್ಸು ಹಳ್ಳಿಗೆ ಬಂದಿಲ್ಲ. ಇವತ್ತಿನ ಮಳೆಬೆಳೆ ಪರಿಸ್ಥಿತಿ, ರೈತರ ಪಾಡು ಇದನ್ನು ನೋಡಿ ಅವರಿಗೆ ವ್ಯವಸಾಯದ ಬಗ್ಗೆ ಪ್ರೀತಿ ಹುಟ್ಟಲಿಲ್ಲ. ಯಾಕಿಷ್ಟು ಕಷ್ಟಪಡಬೇಕು ಅನ್ನೋ ಭಾವನೇನೂ ಇರಬಹುದು. ಮುಂದೆ

ನಮ್ಮ ತಲೆಗಳು ಉರುಳಿದ ಮೇಲೆ, ಹಿರಿಯರ ಆಸ್ತಿ ಜಮೀನು ಹಾಳಾಗುತ್ತಲ್ಲ ಅಂತ ಬಂದರೂ ಬರಬಹುದು' ಅಂತಾರೆ. ವ್ಯವಸಾಯದಲ್ಲೇ ತೃಪ್ತಿಕಂಡಿರುವ ಈ ಹಿರಿಯ ಜೀವ, 'ಒಬ್ಬ ವ್ಯಕ್ತಿ ಒಂದೇ ವೃತ್ತಿ ಹಿಡಿದು ಸಾಗಿದ್ರೆ ಬದುಕು ಭಾರವಾಗೋಲ್ಲ' ಅನ್ನೋ ತತ್ತ್ವದ ಆಧಾರದ ಮೇಲೆ ಇಂದಿಗೂ ಜೀವಿಸಿದೆ. 'ವ್ಯವಸಾಯದಲ್ಲಿ ಎಷ್ಟೇ ಕಷ್ಟ ಬಂದ್ರೂ ಭೂಮಿ ತಾಯಿ ಅರ್ಧ ಕೊಡ್ತಾಳೆ. ಮೋಸ ಮಾಡೋಲ್ಲ. ಸಂತೃಪ್ತ ಜೀವನ ಸಾಕು ಅನ್ನುವ ಗುರಿ ಹೊತ್ತವನಿಗೆ ವ್ಯವಸಾಯ ಸಾಕು' ಅಂತ ತೃಪ್ತಿಯಿಂದ ನುಡೀತಾರೆ. ಬದುಕಿನ ಗಂಭೀರ ತತ್ತ್ವವನ್ನು ತಮ್ಮ ಸರಳ ಮಾತಿನಲ್ಲಿ ತಿಳಿಸಿದ ಮಂಜುನಾಥಯ್ಯ ಒಮ್ಮೆಗೇ ಮಾತು ಮುಗಿಸಿ, 'ಬನ್ನಿ, ತಡವಾಗಿದೆ, ಊಟ ಮಾಡೋಣ' ಅಂದ್ರು. 'ಬಾಳುವವನಿಗೆ ಒಂದು ವೃತ್ತಿ ಸಾಕು' ಎನ್ನುವ ತತ್ತ್ವ ಮನದ ತುಂಬಾ ತುಂಬಿತ್ತು. ಊಟ ರುಚಿಯಾಗಿತ್ತು. ಅಣ್ಣತಮ್ಮಂದಿರಿಬ್ಬರನ್ನೂ ಕರೆದುಕೊಂಡು ಊರು ಸುತ್ತಿದೆವು. ಅಗತ್ಯ ಭಾವಚಿತ್ರ ತೆಗೆಯಲು ವಾತಾವರಣ ಸಹಕರಿಸಿತು. ಮುಂದೆ ನಮಗಾಗಿ ಹಾಸನದ ಹಾದಿ ಕಾಯುತ್ತಿತ್ತು.



ಈಗಲೂ ಉಂಟು ಬಾವಿಯಿಂದ ಮನೆಗೆ ನೀರು ಸೇದುವುದು: ರಮಾಮಣಿ: ನಿಟ್ಟೂರು

10. ಜೋಡಿಕೃಷ್ಣಾಪುರ



ತಮ್ಮ ಆರಾಧ್ಯದೈವದ ಹಿನ್ನೆಲೆಯಲ್ಲಿ ಪ್ರಸನ್ನಲಕ್ಷ್ಮಿ-ಕೆ.ಎಸ್.ನರಸಿಂಹಮೂರ್ತಿ ದಂಪತಿ: ಜೋಡಿಕೃಷ್ಣಾಪುರ

ಹಾಸನ - ಅರಸೀಕೆರೆ ರಸ್ತೇಲಿ ಸಿಗುವ ಕೋರಮಂಗಲ ಗೇಟ್‌ನಲ್ಲಿ ಎಡಕ್ಕೆ ತಿರುಗಿ ಅಲ್ಲಿಂದ ಎಡಕ್ಕೆ ತಿರುಗುವ ಕಬ್ಬಳ್ಳಿ ಹೊಸಹಳ್ಳಿ ಸಾಲಗಾಮೆಗೆ ತೆರಳುವ ರಸ್ತೆಯಲ್ಲಿ ಒಂದು ಕಿಲೋಮೀಟರ್ ಕ್ರಮಿಸಿದ್ರೆ ಸಿಗುತ್ತೆ ಜೋಡಿ ಕೃಷ್ಣಾಪುರ. ಊರಲ್ಲಿ ಸಂಕೇತಿಗಳದ್ದು ಆರು ಕುಟುಂಬ ಇದೆ. ಊರಿನ ಚನ್ನಕೇಶವ ದೇವಸ್ಥಾನ ಬಹಳ ಶಿಥಿಲವಾಗಿತ್ತಂತೆ. ಈ ಊರಿನ ಸಂಕೇತಿಗಳು ಅಲ್ಲಿ ಭಜನೆಗೆ ಸೇರ್ತಿದ್ರಂತೆ. ಹಳೆಯ ದೇವಸ್ಥಾನವನ್ನು ಸ್ವಲ್ಪ ರಿಪೇರಿ ಮಾಡಲು ಹೊರಟಾಗ ಛಾವಣಿ ಕುಸಿಯುವ ಹಂತಕ್ಕೆ ಬಂತಂತೆ. ಬೆಂಗಳೂರಿನಲ್ಲಿರುವ ರಾಮಸ್ವಾಮಿಗಳ ಮಗ ಶ್ರೀನಿವಾಸಮೂರ್ತಿ ಅವರು 'ಎಲ್ಲರೂ ಸೇರಿ ಎಷ್ಟಾಗುತ್ತೋ ಕೊಡಿ, ಉಳಿದಿದ್ದನ್ನು ನಾನು ಹಾಕ್ತೀನಿ' ಅಂತ ಹೇಳಿ ಇಡೀ ದೇವಸ್ಥಾನವನ್ನು ಪುನಃ ನಿರ್ಮಿಸಿದ್ದಾರೆ. ಒಟ್ಟು ನಾಲ್ಕೈದು ಲಕ್ಷ ಖರ್ಚಾಗಿರಬಹುದೆಂಬ ಅಂದಾಜು. "ರಾಮನವಮಿ ಸಂದರ್ಭದಲ್ಲಿ ಬಹಳ ಜೋರಾಗಿ ಉತ್ಸವವಾಗುತ್ತೆ. ಊರ ಹೊರಗಿರುವ ಹುಡುಗರು ಅಂದು ಬಂದು ಸೇರ್ತಾರೆ. ಇತರರನ್ನು ಒಂದು ಕಾಸು ಸಹಾ ಕೇಳದೆ ತಾವೇ ಹಣ ಹಾಕಿ ಉತ್ಸವ ನಡೆಸ್ತಾರೆ. ರಾಮಸ್ವಾಮಿಗಳ ಹಿರಿಯ ಮಗ ರಂಗನಾಥ ಉತ್ಸವಮೂರ್ತಿಗೆ ಶ್ರದ್ಧೆಯಿಂದ ಹೂವಿನ ಅಲಂಕಾರ ಮಾಡ್ತಾನೆ. ನೋಡೋದಕ್ಕೆ ನಾಲ್ಕು ಕಣ್ಣು ಬೇಕು" ಅಂತ ಹೇಳುತ್ತಾರೆ ಊರ ಹಿರಿಯ ನಾಗರಾಜ. ಇತರೇ ಜಾತಿಯ ಜನರೊಂದಿಗೆ ಇಲ್ಲಿ ಸಂಕೇತಿಗಳ ಸಂಬಂಧ ಸುಮಧುರವಾಗಿದೆ. ಈ ನಿಟ್ಟಿನಲ್ಲಿ ಜೋಡಿಕೃಷ್ಣಾಪುರವನ್ನು ಹೊಗಳಬೇಕು. ಇರುವುದು ನಮ್ಮದು ಆರು ಮನೆ ಆದ್ರೂ, ಇಲ್ಲಿ ಒಟ್ಟು ಸಾಮರಸ್ಯ ಇದೆ. ಈ ಊರಿನ ಸಂಕೇತಿಗಳ ಕೃಷಿಯೂ ಸಾಕಷ್ಟು ಭಿನ್ನ. ಅದನ್ನು ತಿಳಿಯುವ ಸಲುವಾಗಿ ಇಬ್ಬರು ಹಿರಿಯರನ್ನು ನಾವು ಮಾತನಾಡಿಸಿದ್ದೇವೆ.



ಪುನರುಜ್ಜೀವನಗೊಂಡ ಶ್ರೀಚನ್ನಕೇಶವಸ್ವಾಮಿ ದೇವಸ್ಥಾನ: ಜೋಡಿಕೃಷ್ಣಾಪುರ

ಅ) ಕೆ.ಎಸ್. ನರಸಿಂಹಮೂರ್ತಿ ೩/ಮ ಕೆ. ಶ್ರೀನಿವಾಸ ಶ್ರೌತಿ

ಜೋಡಿಕೃಷ್ಣಾಪುರ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223907

ತೆಂಗಿನ ಗಿಡ ಏಳಿಸಬೇಕು. ಅದಕ್ಕೆ ತಳಿಲು ತಂದು ಮೊಳಕೆ ಹಾಕಬೇಕು. ಸಸೀನ ತರೋಕೆ ಚೈತನ್ಯ ಇರಲಿಲ್ಲ. ಬಿತ್ತನೆಗೆ ತೆಂಗಿನ ಕಾಯಿ ತರೋದು ಹ್ಯಾಗೆ? ಒಳ್ಳೆಯ ಫಲವತ್ತಾಗಿರೋ ತೋಟಕ್ಕೆ ಹೋಗುತ್ತಿದ್ದೆ. 'ಅಯ್ಯಾ ಒಂದು ಹತ್ತು ತೆಂಗಿನಕಾಯಿ ಕೊಡಯ್ಯಾ' ಅಂತ ಮಾಲೀಕರನ್ನು ಕೇಳಿದ್ರೆ, ಪುಗಸಟ್ಟೆ ಕೊಡ್ತಾನೆ?' 'ಸ್ವಾಮಿ ಹತ್ತು ದೊಡ್ಡಮರ ಇದೆ, ಕಾಯಿ ಕೆಡವಿಕೊಡಿ, ಮರಕ್ಕೆ ಒಂದು ತೆಂಗಿನಕಾಯಿ ಕೊಡ್ತೀನಿ' ಅನ್ನೋರು. ಹೀಗೆ ಅವರಿಗೆ ಮರಹತ್ತಿ ಕಾಯಿ ಕೆಡವಿ ಕೊಟ್ಟು, ಬಿತ್ತನೆ ತೆಂಗಿನಕಾಯಿ ತಂದು, ಒಂದು ತೆಂಗಿನಕಾಯನ್ನು ಮನೇಲಿ ಚಟ್ನಿ ಮಾಡಲು ಕೊಟ್ಟು, ಉಳಿದ ಒಂಭತ್ತನ್ನು ಹಿತ್ತಲಲ್ಲಿ ಬಿತ್ತನೆ ಮಾಡುತ್ತಿದ್ದೆ. ಹೀಗೆ ಏಳಿಸಿದ್ದು ಈ ತೆಂಗಿನತೋಟ!

ಜೋಡಿಕೃಷ್ಣಾಪುರದ ಕೆ. ಶ್ರೀನಿವಾಸ ಶ್ರೌತಿ ಹಾಗೂ ಪೂಮಗಾಮೆಯ ಗೌರಮ್ಮ ದಂಪತಿಗಳ ಮಗ ಕೆ.ಎಸ್.ನರಸಿಂಹಮೂರ್ತಿ ಅವರಿಗೆ ೬೫ರ ಹರಯ. ಇವರ ಪತ್ನಿ ಪ್ರಸನ್ನಲಕ್ಷ್ಮಿ ಅರಕಲಗೂಡು ತಾಲ್ಲೂಕು ದೊಡ್ಡಮಗ್ಗೆಯ ರಾಮಸ್ವಾಮಯ್ಯ ಹಾಗೂ ಸತ್ಯಲಕ್ಷ್ಮಿ ದಂಪತಿಗಳ ಮಗಳು. ಸಂಕೇತಿ ಕೃಷಿಗೆ ಕಳಸವಿಟ್ಟಂತೆ ಇರುವ ಕುಟುಂಬ ಹಾಗೂ ಕೃಷಿ ಸಾಧನೆಗಳು ಅನುಕರಣೀಯ. ಕೆ.ಎಸ್. ನರಸಿಂಹಮೂರ್ತಿಯವರಿಗೆ ಇಬ್ಬರು ಗಂಡುಮಕ್ಕಳು ಹಾಗೂ ಮೂರು ಹೆಣ್ಣುಮಕ್ಕಳು. ಇಬ್ಬರು ಗಂಡುಮಕ್ಕಳು ಹಾಗೂ ಸೊಸೆಯಂದಿರು-ಕೆ.ಎನ್.ಶ್ರೀನಿವಾಸನ್ ಹಾಗೂ ಶ್ರೀವಿದ್ಯಾ ಮತ್ತು ಕೆ.ಎನ್. ರಾಘವೇಂದ್ರಪ್ರಸಾದ್ ಹಾಗೂ ಶ್ರೀಲತಾ- ಕೃಷಿಯಲ್ಲಿ ತೊಡಗಿರುವುದು ವಿಶೇಷ. ಈ ಯುವಕರು ಹೇಳುತ್ತಾರೆ, 'ನಮಗೆ ಗೊತ್ತಿರುವುದನ್ನು ಮಾಡಬೇಕು, ಗೊತ್ತಿಲ್ಲದಿರುವುದನ್ನು ಮಾಡಲು ಹೋದರೆ ಭವಿಷ್ಯದ ಗತಿ? ಅದಕ್ಕೆಂದೇ ನಮಗೆ ಗೊತ್ತಿರುವ ವ್ಯವಸಾಯದ ಕ್ಷೇತ್ರವನ್ನು ಆರಿಸಿಕೊಂಡೆವು. ಕೃಷಿ ಬದುಕು ತೃಪ್ತಿ ನೀಡಿದೆ. ಬೆಂಗಳೂರಿಗೆ ಹೋದರೂ ಸಂಜೆ ವಾಪಸ್ಸು ಬರುತ್ತೇವೆ. ಹಳ್ಳಿಯ ಸೆಳೆತ, ವ್ಯವಸಾಯದ ಸೆಳೆತ ಹಾಗಿದೆ' ಅಂತ.

ತಮ್ಮ ವಿಶಿಷ್ಟವಾದ ತೋಟದಲ್ಲಿಯೇ ಕುಟೀರವನ್ನು ಕಟ್ಟಿದ್ದಾರೆ ಕೆ.ಎಸ್. ನರಸಿಂಹಮೂರ್ತಿಗಳು. ಅವರ ವಿಶಿಷ್ಟವಾದ ಕೃಷಿ ಬದುಕಿನ ವಿವರಗಳನ್ನು ತಿಳಿಯಲು ಮಾತನಾಡಿಸಿದೆವು.

- **ನಮಸ್ಕಾರ, ನರಸಿಂಹಮೂರ್ತಿಗಳೆ**

  ನಮಸ್ತೇ...



ಕೆ.ಎಸ್.ನರಸಿಂಹಮೂರ್ತಿ: ಸಂತೃಪ್ತ ಕೃಷಿ ಕುಟುಂಬ: ಜೋಡಿಕೃಷ್ಣಾಪುರ

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ. ಜೋಡಿಕೃಷ್ಣಾಪುರಕ್ಕೆ ಸಂಕೇತಿಗಳು ಯಾವ ರೀತಿ ಬಂದ್ರು? ಹಿಂದಿನ ದಿನಗಳಲ್ಲಿ ಯಾವ ರೀತಿ ಇತ್ತು ವ್ಯವಸಾಯ, ವಿವರವಾಗಿ ಹೇಳಿ?**

ಕೃಷ್ಣಾಪುರ ಅಂತ ಈ ಊರಿನ ಹೆಸರು. ೧೪೪೩ರಲ್ಲಿ ಅಷ್ಟಭಾಷಾ ಕವೀಶ್ವರ್ ತ್ರಿವೇದಿ ರಾಮಾವಧಾನಿ ಅಲಿಯಾಸ್ ಅಣ್ಣಾಜಿಭಟ್ಟ ಅನ್ನೋರಿಗೆ ೧೨೬೦ ಎಕರೆ ೧೮ ಗುಂಟೆ ಪ್ರದೇಶವನ್ನು ದಾನವಾಗಿ ನೀಡಲಾಯ್ತು. ಕೃಷ್ಣರಾವ್ ಅನ್ನುವ ಸಾಮಂತರಾಜ, ತ್ರಿವೇದಿ ಅಂದ್ರೆ ಮೂರು ವೇದದಲ್ಲಿ ಪಾರಂಗತರಾಗಿದ್ದ ರಾಮಾವಧಾನಿಗಳಿಗೆ ಅವರ ವಿದ್ವತ್ತನ್ನು ಮೆಚ್ಚಿ ಈ ಊರನ್ನು ದತ್ತಿ ನೀಡಿದನಂತೆ. ದಾನವಾಗಿ ಬಂದ ಕೃಷ್ಣಾಪುರ ನಂತರ ಸರ್ಕಾರಿ ದಾಖಲೆಯಲ್ಲಿ 'ಜೋಡಿಕೃಷ್ಣಾಪುರ' ಎಂದು

ಬದಲಾಗಿದೆ. ದಾನವಾಗಿ ಬಂದ ಈ ಊರನ್ನು ಅವರು ಒಬ್ಬರೇ ಅನುಭವಿಸದೆ, ನಮ್ಮ ಆಚಾರ ವಿಚಾರಗಳಿಗೆ ಅನುಕೂಲವಾಗುವ ರೀತಿಯಲ್ಲಿ ವಲಸೆ ಬಂದ ನಾಲ್ಕೈದು ಗೋತ್ರದ ಸಂಕೇತಿಗಳನ್ನು (ನಿತುಂದಿಲ, ವಾಧೂಲಸ, ಕೌಂಡಿನ್ಯ, ಭಾರಧ್ವಾಜ, ಕೌಶಿಕ ಗೋತ್ರದವರನ್ನು) ಕರೆತಂದರಂತೆ. ಅವರಿಗೆ ವೃತ್ತಿಪ್ರಕಾರ ತಾಮ್ರ ಶಾಸನದಲ್ಲಿ ಉಲ್ಲೇಖವಾಗಿರುವಂತೆ, ೨೬ ಭಾಗವನ್ನಾಗಿ ಮಾಡಿದರಂತೆ. ಒಂದು ರೂಪಾಯಿನ ೧೬ ಆಣೆ ಭಾಗವನ್ನು ಭರ್ತಿ ತೊಗೊಂಡೋರು ೧೬ ವೀಸಕ್ಕೆ ಒಂದು ವೃತ್ತಿ ಅಂತ ಮಾಡಿಕೊಂಡು, ೨೬ ವೃತ್ತಿಗಳನ್ನಾಗಿ ಗ್ರಾಮವನ್ನು ಭಾಗ ಮಾಡಿಕೊಂಡು ಅವರವರ ದರ್ಜೆಗೆ ತಕ್ಕ ಹಾಗೆ ಹಂಚಿಕೊಂಡ್ರು. ಸಮಾನವಾಗಿ ಅನುಭವಿಸಿಕೊಂಡು, ಸಾಮೂಹಿಕವಾಗಿ ಜೀವನವನ್ನು ನಡೆಸಿಕೊಂಡು 'ಕೃಷ್ಣಾಪುರ ಅಗ್ರಹಾರ' ಅಂತ ಮಾಡಿಕೊಂಡು ಕೋಟೆ ಕೊತ್ತಲ ಎಲ್ಲಾ ಕಟ್ಟಿಕೊಂಡ್ರು. ಊರೊಳಕ್ಕೆ ಯಾರಾದರೂ ಪ್ರವೇಶ ಮಾಡಬೇಕಾದ್ರೆ ಜೋಡಿದಾರರನ್ನು ಕೇಳಿ ಪ್ರವೇಶಿಸಬೇಕಿತ್ತು. ನಂತರ ೧೯೬೮ರ Februaryಲಿ ಇನಾಮು Abolition Act ಬಂತು. ಸರ್ಕಾರ ಜೋಡಿಯನ್ನೂ ವಹಿಸಿಕೊಂಡ್ತು. ಎಲ್ಲವೂ ಸರ್ಕಾರಿ ಗ್ರಾಮಗಳಾದವು. ಜೋಡಿಗ್ರಾಮದಲ್ಲಿ 'ಜೋಡಿ' ಹೋಯ್ತು. ನಾವು ರೈತರಾದ್ವಿ. ಹಿಂದಿನಿಂದಲೂ ನಮ್ಮ ಜನ ಕೃಷಿಯನ್ನು ಮಾಡಿಕೊಂಡು ಬಂದವರೇ. ಅಂದ್ರೆ ಆಧುನಿಕ ವ್ಯವಸಾಯವನ್ನು ಅಷ್ಟು ಮಾಡ್ತಿರಲಿಲ್ಲ. ಅಸಲೀ ವೃತ್ತಿ ಇವರದ್ದು ಬಾಗಾಯ್ತು; ಅಡಿಕೆ, ಬಾಳೆ, ತೆಂಗು, ವಿಳ್ಳೇದೆಲೆ ಅಷ್ಟೆ. ಗ್ರಾಮೀಣ ಭಾಷೆಯಲ್ಲಿ ಜೋಡಿಕೃಷ್ಣಾಪುರವನ್ನು ಕೋಟಾಳು ಗ್ರಾಮ ಅಂತಾರೆ. ಕೋಟಾಳು ತೋಟದ ಎಲೆ ಅಂದ್ರೆ ಬಹಳ ಪ್ರಖ್ಯಾತವಾದ ವಿಳ್ಳೆಯದೆಲೆ ಎಂದು ಹಾಸನ ಹಾಗೂ ದುದ್ದ ಸಂತೆಯಲ್ಲಿ ಹೆಸರು ಮಾಡಿತ್ತು. ಇತ್ತೀಚೆಗೆ ವಿದ್ಯಾಭ್ಯಾಸ ಮಾಡಿ ವ್ಯವಸಾಯಕ್ಕೆ ಬಂದವರು ಬರೀ ಅಡಿಕೆ ಹಾಗೂ ತೆಂಗು ನೆಚ್ಚಿಕೊಂಡು ಕುಳಿತರೆ ಏನೂ ಆಗೋಲ್ಲ ಅಂತ ಹೇಳಿ, ಬೇರೆ ಬೇರೆ ಬೆಳೆ ಬೆಳೆಯೋದಕ್ಕೆ ಆರಂಭಿಸಿದ್ರು. ನಮ್ಮ ಉದಾಹರಣೇನೇ ಹೇಳೋದಾದ್ರೆ, ಏರಿ ಹಿಂದಲ ತೋಟ ಅಂತ ತಂದೆ ಒಂದು ತೋಟ ಇಟ್ಟಿದ್ರು. ತಂದೆ ಅದನ್ನು ಯಾರಿಗೋ ಕೊಟ್ಟು ಆಸ್ಥಾನ ವಿದ್ವಾಂಸರಾಗಿ ಸೇರಿಕೊಂಡ್ರು. ನಾವು ಬರೋ ಕಾಲಕ್ಕೆ ನಾವು ಆಸ್ಥಾನ ವಿದ್ವಾಂಸರಾಗಲು ಆಗೋಲ್ಲ, ಬೇರೆ ಏನಾದ್ರೂ ಮಾಡಬೇಕು ಅಂತ ಅನ್ನಿಸ್ತು. ಇಲ್ಲಿ ೧೦, ೧೫ ಎಕರೆ ಪಾಳು ಭೂಮಿ ಇತ್ತು. 'ಕೋರಂ ಬೋರೆ' ಅನ್ನೋರು. ಇಲ್ಲಿಗೆ ನಾವು ಬಂದು ೧೬ ವರುಷ ಆಯ್ತು, ನಮ್ಮ ಗರ್ಭ-ವಾಸವನ್ನು ಇಲ್ಲಿ ಮಾಡಿದ್ದೇವೆ. ಊರೊಳಗೇ ಇದ್ವಿ. ಆದ್ರೆ ಎಲ್ಲಾ ಜನಗಳೂ cityಗೆ ಹೋಗಿ ಹಳ್ಳೀಲಿ ನಮ್ಮ ಜನಸಂಖ್ಯೆ ಯಾವಾಗ ಕಡಿಮೆಯಾಯ್ತೋ, ನಾವು ಇಲ್ಲಿ ನೆಮ್ಮದಿಯಾಗಿ, ನಿರ್ಬಾಧಕವಾಗಿ ಇರಬಹುದು ಅಂತ ತೋಟದಲ್ಲಿ ಮನೆ ಮಾಡಿದ್ವಿ.



ಜೋಡಿ ಅಡಿಕೆ ಸಾಲಿನ ಪಥದಲ್ಲಿ ಮಗನೊಂದಿಗೆ ಕೆ.ಎಸ್.ನರಸಿಂಹಮೂರ್ತಿ: ಜೋಡಿಕೃಷ್ಣಾಪುರ

ಇದು ಬೋರೆ ಪ್ರದೇಶ. ಕೂರೋದಕ್ಕೂ ನೆರಳಿರಲಿಲ್ಲ. ಎಲ್ಲವನ್ನೂ ಸ್ವಯಂ ಚೈತನ್ಯದಲ್ಲಿ ಸಸಿ ತಂದು ಬೀಜ ನೆಟ್ಟು, ಭೂತಾಳೆ ಗಡ್ಡೆ ಹಾಗೂ ಲಂಟಾನವನ್ನು ಸಹ ಮಳೆಗಾಲದಲ್ಲಿ ಕಿತ್ತುತಂದು ಹಾಕಿದ್ದೀನಿ. ಬೇಲಿ ಮಾಡಿದ್ದೀನಿ. ಕುಡಿಯುವ ನೀರನ್ನು ಊರಿಂದಲೇ ತರಬೇಕಿತ್ತು. ಊಟ ಮಾಡಲು ಇಲ್ಲಿ ಮರದ ನೆರಳಿರಲಿಲ್ಲ. ತೋಟ ಹುಡಿಕ್ಕಂಡು ಸಮೀಪದಲ್ಲಿ ಬಳ್ಳೆ ಕಟ್ಟೆ ತೋಟ ಅಂತ ಇತ್ತು, ಅಲ್ಲಿ ನೆರಳಲ್ಲಿ ಕುಳಿತು ಊಟ ಮಾಡಬೇಕಿತ್ತು. ಉಳಲು, ಹಾಗೆಯೇ ಉಕ್ಕೆ ಹೊಡೆಯೋದಕ್ಕೆ ಉರೊಳಗಿಂದಲೇ ಲಕ್ಕಿ ಕೋಲನ್ನು ಮುರಿದು ತರಬೇಕಿತ್ತು, ಇವತ್ತು ಇಲ್ಲಿ ಕಲ್ಪವೃಕ್ಷ ಏಳಿಸಿದೀನಿ, ಕಾಮಧೇನುವನ್ನು ಸಾಕಿದೀನಿ, ವಾಸಕ್ಕೆ ಮನೆ ಮಾಡಿದೀನಿ. ನೀರು ನೆರಳು ಎಲ್ಲಾ ಇದೆ. ಹಾಯಾಗಿದೀವಿ ಅಂತ ಇಟ್ಟುಕೊಳ್ಳೋಣ. ಕರಲು ಭೂಮಿ ೧೦ ಎಕರೆ, ನಾಲ್ಕು ಎಕರೆ ಗದ್ದೆ ಇತ್ತು. ಗದ್ದೆ ವಿಚಾರವಾಗಿ ಹೇಳಬೇಕೂ ಅಂದ್ರೆ: ನಮ್ಮ ತಂದೆ ಮೈಸೂರು ಅರಮನೆಯಲ್ಲಿದ್ದಾಗ, ಮಂತ್ರಮೂರ್ತಿ ಅಥರ್ವಣ ಪಂಡಿತ್ ಕೃಷ್ಣಾಪುರಂ



ಕೃಷಿ ಬದುಕನ್ನು ಪ್ರೀತಿಯಿಂದ ಆರಿಸಿಕೊಂಡಿರುವ ಶ್ರೀವಿದ್ಯಾ-ಕೆ.ಎನ್.ಶ್ರೀನಿವಾಸನ್ ದಂಪತಿ: ಹೊಸ ಪೀಳಿಗೆಯ ಹೆಮ್ಮೆ : ಜೋಡಿಕೃಷ್ಣಾಪುರ

ಶ್ರೌತಿ ಅಂತ ಬಹಳ ಪ್ರಖ್ಯಾತರು. ಸಾಮವೇದಿಗಳಾಗಿದ್ರೂ, ಅವರು, ಮಂತ್ರ ಯಂತ್ರದಲ್ಲೂ, ದಿಗ್ಬಂಧನ ಮಾಡುವುದರಲ್ಲೂ ನಿಪುಣರಾಗಿದ್ದರು. ಹನುಮಾನ್ ಉಪಾಸಕರೂ, ಶ್ರೀಚಕ್ರ ಆರಾಧಕರೂ ಆಗಿದ್ರಿಂದ ಮಹಾರಾಣಿಯವರ ಸನ್ನಿಧಾನದಲ್ಲಿ ಅವರಿಗೆ ಒಳ್ಳೆಯ ಸ್ಥಾನಮಾನ ಸಿಕ್ಕಿತ್ತು. ೧೩ ವರುಷಗಳ ಕಾಲ ತ್ರಿಪುರಸುಂದರಮ್ಮಣ್ಣಿಯವರ ಹಾಗೂ ಮಹಾರಾಜರ ಸನ್ನಿಧಾನದಲ್ಲಿ ಇದ್ರು. ಮಹಾರಾಜರ ರಾಜತ್ವವೂ ನಶಿಸುವ ಕಾಲ ಬಂದಾಗ, 'ರಾಜಾಶ್ರಯವನ್ನು ಇಟ್ಟುಕೊಂಡು ನಾವು ಏನು ಮಾಡೋಣ, ಅಂತಹ ಮಹಾರಾಜರೇ ಇಲ್ಲದಾಗ ನಮ್ಮನ್ಯಾರು ಕೇಳ್ತಾರೆ! ದೇವರೇ ಇಲ್ಲದಾಗ ಪೂಜಾರಿಯನ್ನು ಯಾರು ಕೇಳ್ತಾರೆ' ಅಂತ ಇಲ್ಲಿಗೆ ಬಂದ್ರು. ಆಗ ನಾನೂ ನನ್ನ ಜೀವನಪಥವನ್ನು ಅರಸುತ್ತಾ ಇಲ್ಲಿಗೇ ಬರಬೇಕಾಯ್ತು. ಮೊದಲು ಹುದಿ ಹಾಕಿಕೊಂಡು ಮುಳ್ಳುಬೇಲಿ ಮಾಡಿದ್ವಿ. ತಂತಿ ಬೇಲಿ ಹಾಕಲು ಬಂಡವಾಳ ಇರಲಿಲ್ಲ. ಮಣ್ಣನ್ನು ಎತ್ತರವಾಗಿ ಹುದಿ ಕಟ್ಟೋದು, ಸೊಂಟಮಟ್ಟ ಕಾಲುವೆ ತೆಗೆಯೋದು, ಹುದಿ ಮೇಲೆ ಭೂತಾಳೆ ಗಡ್ಡೆ ನೆಡೋದು. ಕಳ್ಳಿಬೇಲಿ, ಜಾಡಲ ತೀನು, ಮುಳ್ಳುಗುಲಾಬಿ (ಲಂಟಾನ) ಅದನ್ನೂ ಸಹ ಹೊರಗಿಂದ ತಂದು ಬೇಲಿ ಏಳಿಸಿದೆವು. ಬೇಲಿ ಮುಳ್ಳಿಗೂ ಹತ್ತಿರದ ಬಳ್ಳೆಕಟ್ಟೆಯಿಂದ ನೀರು ತಂದು ಹುಯ್ದಿದೀವಿ. ಹೀಗೆ ಮಾಡಿ ಆರಂಭ ಮಾಡಿದೆ. ಏರಿ ಕೆಳಗಿನ ತೋಟ ಹೋಯ್ತು. ಬಳ್ಳೆಕಟ್ಟೆಯಂತಹ ದಯಾರಸವಾದ ಗದ್ದೆಯನ್ನು ತಂದೆ ಅರಮನೆಯನ್ನು ನೆಚ್ಚಿಕೊಂಡು ಕಳೆದ್ರಲ್ಲಾ ಅಂತ ಬೇಸರದಲ್ಲಿ ಇಲ್ಲಿ ವ್ಯವಸಾಯ ಆರಂಭಿಸಿದೆ. ಬೇರೆ ತೋಟದಲ್ಲಿ ಹೋಗಿ ನಾನೇ ಮರಹತ್ತಿ ಕಾಯನ್ನ ಅವರಿಗೆ ಕೆಡವಿಕೊಟ್ಟು, ಬಿತ್ತನೆಕಾಯಿ ತಂದಿದೀನಿ. ಈಗ ತೆಂಗಿನ ಗಿಡಾನ ಏಳಿಸಬೇಕು, ಅದಕ್ಕೆ ತಳಿಲು ತಂದು ಮಳಕೆ ಹಾಕಬೇಕು, ಸಸೀನ ತರೋಕೆ ಚೈತನ್ಯ ಇರಲಿಲ್ಲ. ಹಾಗಾಗಿ ಒಳ್ಳೆಯ ತೋಟಕ್ಕೆ ಹೋಗಿ, ಒಳ್ಳೆಯ ಈಡಿರೋದು ಒಳ್ಳೆಯ ಜಾತಿ ಮರವನ್ನು ಆಯ್ದುಕೊಂಡು, ಚೆನ್ನಾಗಿ ಮಾಡಿರುವ ತೋಟಕ್ಕೇ ಹೋಗ್ತಿದ್ವಿ. 'ಅಯ್ಯಾ, ಒಂದು ಹತ್ತು ತೆಂಗಿನಕಾಯಿ ಕೊಡಯ್ಯಾ' ಅಂದ್ರೆ ಪುಗಸಟ್ಟೆ ಕೊಡ್ತಾನಾ?



ನೇಗಿಲಯೋಗಿ ಕೆ.ಎನ್.ಶ್ರೀನಿವಾಸನ್: ಜೋಡಿಕೃಷ್ಣಾಪುರ

'ಸ್ವಾಮಿ, ಒಂದು ಹತ್ತು ದೊಡ್ಡಮರ ಇದೆ, ಕಾಯೀನ ಹತ್ತಿ ಕೆಡವಿಕೊಡಿ. ಮರಕ್ಕೆ ಒಂದು ಕಾಯಿ ಕೊಡ್ತೀನಿ' ಅನ್ನೋರು. ಈ ಹತ್ತು ಮರ ಹತ್ತೋದು, ಬೇಕಾದ ತಳಿಲನ್ನು ಆರಿಸೋದು. ಅದನ್ನು ಚಟ್ನಿ ಮಾಡಿದ್ರೆ ಅನ್ಯಾಯವಾಯ್ತು. ಉದ್ದೇಶ ಸಾರ್ಥಕವಾಗಲಿಲ್ಲವಲ್ಲಾ! ಒಂದನ್ನು ಚಟ್ನಿಗೆ ಕೊಡೋದು, ಇನ್ನು ಒಂಭತ್ತನ್ನು ಹಿತ್ತಲಲ್ಲಿ ಹೂಳೋದು, ಗಿಡ ಏಳಿಸಿ ನಾಟಿ ಮಾಡೋದು. ಈ ಪ್ರಕಾರವಾಗಿ ಇಲ್ಲಿರುವ ೫೦೦ ತೆಂಗಿನ ಗಿಡಗಳನ್ನೂ ಏಳಿಸಿರೋದು. ಈಗ ಈ ಕಲ್ಪವೃಕ್ಷ ಯಾರಾದ್ರೂ ಪುಣ್ಯಾತ್ಮರು ಬಂದ್ರೆ ಎರಡು ಎಳನೀರನ್ನು ಕೊಡಲು ಆಗುವಂತೆ ಆಗಿದೆ. ಇದನ್ನು ನಾನು ಮಾಡಿದೆ

ಅಂತ ಹೇಳಿದ್ರೆ ಅದು ಹೆಮ್ಮೆಯಾಗುತ್ತೆ. ಅದನ್ನು ದೇವರ ಅನುಗ್ರಹ, ಹಿರಿಯರ ಆಶೀರ್ವಾದ ಅನ್ನಬೇಕು. ನಾನು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಕೆಲಸದಲ್ಲಿದ್ದೆ. ಜೀವನೋಪಾಯದ ಸಲುವಾಗಿ ಹಾಸನ, ಅರಸೀಕೆರೆ ತಾಲ್ಲೂಕಿನಲ್ಲಿ ಕೆಲಸ ಮಾಡಿದೆ. ನಾನು ಮೊದಲು ಹಾಕಿದ ೭೦, ೮೦ ತೆಂಗು ಫಸಲು ಕೊಡಲು ಆರಂಭಿಸಿದ ಮೇಲೆ ನಾಲ್ಕಾಣೆ, ಎಂಟಾಣೆಗೆ ಕಾಯಿ ಮಾರ್ತಿದ್ವು. ಆಗ ಕೂಲಿಯೂ ನಾಲ್ಕಾಣೆ. ಜತೆಗೆ ಒಬ್ಬ ಆಳನ್ನು ಕರೆದುಕೊಂಡ್ರೂ ವ್ಯವಸಾಯ ಮಾಡಬಹುದು ಅಂತ ಕಡಿಮೆ ಸಂಬಳದ ನೌಕರಿಗೆ ರಾಜೀನಾಮೆ ನೀಡಿದೆ. ಮಕ್ಕಳಿಬ್ರಿಗೂ ಡಿಗ್ರೀ ಆಯ್ತು. ಅವರಿಗೂ ಬೇರೆ ಕಡೆ ಕೆಲಸಕ್ಕೆ ಕಳಿಸೋದರ ಬದಲು, ನಮ್ಮ ಇಲಾಖೇಲೆ ಅವರಿಗೆ ಕೆಲಸ ಕೊಡೋಣ, ಮರಿಗಳನ್ನು ಇಲ್ಲೇ ತಯಾರು ಮಾಡೋಣ, ಜೀವನಕ್ಕೆ ನಮಗೆ ವಯಸ್ಸಾದ ಕಾಲದಲ್ಲಿ ನಮ್ಮ ಜತೇಲೇ ಇದ್ದುಕೊಂಡಿದ್ರೆ ಒಂದು ನೆಮ್ಮದಿ ಹಾಗೂ ಧೈರ್ಯ ಅಂತ ಹೇಳಿ ಅವರನ್ನೂ ಇಲ್ಲೇ ಉಳಿಸಿಕೊಂಡೆ. ಮಕ್ಕಳು ಗುದ್ದಲಿ ನೇಗಿಲು ಹಿಡಿಯೋದಕ್ಕೆ ಶುರು ಮಾಡಿದ ಮೇಲೆ ನಾನು ಕೆಲಸ ಮಾಡ್ತಿಲ್ಲ. ಸರ್ಕಾರ ಕೆಲಸಕ್ಕೆ ರಿಟೈರ್ ಮಾಡಿದ ಹಾಗೆ ಈ ವೃತ್ತೀಲಿ ನಾನು ನಿವೃತ್ತಿ ಹೊಂದಿ ಆರಾಮವಾಗಿ ಜೀವನ ಮಾಡ್ತಿದೀನಿ. ಆಗಿನ ವ್ಯವಸಾಯ ಕಷ್ಟಕರವಾಗಿತ್ತು. ಬೋರೇನ ಉಕ್ಕೆ ಹೊಡೆಯೋವು. ಮನೆ ಗೊಬ್ರ ಕೆರೆಗೋಡು ಹೇರಿ ರಾಗಿ ಜೋಳ ಬೆಳೀತಿದ್ವಿ. ಈಗ ಆಧುನಿಕ ಬೇಸಾಯ ಮಾಡ್ತಿದೀವಿ, ನಮ್ಮ ಹುಡುಗರು ತಯಾರಾದ ಮೇಲೆ. ಹಿಂದೆ ತೆಂಗಿನ ಸಸಿ ಹಾಕಬೇಕಾದ್ರೆ ಮೊದಲು ಸೊಂಟದುದ್ದ ಕುಂದಲಿಕೆ ಬಾವಿ ಅಂತೀವಿ ಅದನ್ನು ತೆಗೆಯೋರು. ಒಂದು ಗಡಿಗೇಲಿ ನೀರು ತುಂಬಿಕೊಂಡು ಬರೋದು, ಸಸಿಗಳಿಗೆ ನೀರು ಹುಯ್ಯೋದು, ಏಳಿಸೋಕೆ. ಆಮೇಲೆ ಸ್ವಲ್ಪ ಯೋಚನೆ ಮಾಡಿ ಏತದ ಭಾವಿ ಮಾಡ್ದೆ, ಇದ್ರಲ್ಲಿ ನೀರು ಸಾಕಾಗೋಲ್ಲ ಅಂತ. ತೋಟದಲ್ಲಿ ನೀರು ಹುಯ್ಯೋದ್ರ ಬದಲು ಉದ್ದವಾದ ಅಡಿಕೆ ಮರಕ್ಕೆ ತುದೀಗೆ ಹಗ್ಗ ಕಟ್ಟೋದು, ಏತದ ಕಬ್ಬಿಣದ ಬಾನಿ ಬರುತ್ತೆ, ಅದಕ್ಕೆ ಒಂದು ಗಣೆ ಹಾಕಿ, ನೀರು ಮೇಲೆತ್ತಿ ಬಗ್ಗಿಸೋದು, ಕಪಿಲೆ ತರ. ಈ ಪ್ರಕಾರ ಬಾಳೆ, ತೆಂಗಿನ ಗಿಡ, ಅಡಿಕೆ ಗಿಡ ಸ್ವಲ್ಪಸ್ವಲ್ಪವಾಗಿ ಮಾಡುತ್ತಾ ಇದ್ದೆ. ನಾವು ಈ ವ್ಯವಸಾಯವನ್ನು ಅವಲಂಬಿಸಿದ ಮೇಲೆ ಹುಡುಗರು ಬೆಂಬಲಕ್ಕೆ ನಿಂತ ಮೇಲೆ, ಆಳುಗಳ ಸಹಾಯ ತೊಗೊಂಡು, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಬ್ಯಾಂಕಿನಲ್ಲಿ



ಹೂಕೋಸು ಬೆಳೆಯ ನಡುವೆ ಕೆ.ಎನ್.ರಾಘವೇಂದ್ರ ಪ್ರಸಾದ್ ಮತ್ತು ಶ್ರೀವಿದ್ಯಾ ಶ್ರೀನಿವಾಸನ್

ಕೃಷಿ ಸಾಲ ಮಾಡಿ Borewell ಮಾಡಿಸಿದೆ. ೧೩೫ ಅಡಿ ಭಾವಿ ಮಾಡಿಸ್ದೆ. ಸಮೃದ್ಧವಾಗಿ ದ್ಯಾವಾಪೃಥಿವೀ ನೀರು ಬಂತು. 5HP Submersible ಮೋಟರ್ ಬಿಟ್ಟಿದೀವಿ. Regular source of income ಸಲುವಾಗಿ Regular source of water ಮಾಡಿಕೊಂಡ್ವು. ಇತ್ತೀಚೆಗೆ ಕೋಸು, ಆಲೂಗೆಡ್ಡೆ, ತರಕಾರಿ ಬೆಳೆಗಳು, ಸವತೆ, ಬದನೆ, ಸಾಮಾನ್ಯವಾಗಿ ೧೨ ತಿಂಗಳಿನಲ್ಲಿಯೂ ಹೂಕೋಸು, ಗೆಡ್ಡೆಕೋಸು, ಎಲೆಕೋಸು, ಹೈಬ್ರಿಡ್ ಜೋಳ ಬೆಳೀತೀವಿ. ಹೈಬ್ರಿಡ್ ಅಂದ್ರೆ ಒಂದು ನೆನಪು ಬರುತ್ತೆ. ಹಿಂದೆ ಗಿಡ್ಡರಾಗಿ, ದೊಡ್ಡರಾಗಿ, ಸಿಹಿಜೋಳ, ಒಗರು ಜೋಳ ಬೆಳೀತಿದ್ವಿ. ಊರಲ್ಲೇ ಬೀಜ ತರ್ತಿದ್ವಿ. ಈಚೆಗೆ ಸುಧಾರಿತ ತಳಿ ಬಂದ್ವು. ಹೈಬ್ರಿಡ್ ರಾಗಿ, ಜೋಳ ಬಂತು. ಭತ್ತದಲ್ಲಿ ನೂರಾರು ತಳಿ ಬಂತು. ಪುಟ್ಟ ಭತ್ತ, ಕೆಂಬತ್ತಿಯ ಭತ್ತವನ್ನು ಕೈಬಿಟ್ಟು ಎಲ್ಲದಕ್ಕೂ ಆಧುನಿಕವಾದ ರೀತಿಯಲ್ಲಿ ಸುಧಾರಿತ ಬೀಜ, ಸುಧಾರಿತ ಗೊಬ್ಬರ ತಂದು ಕ್ರಮಬದ್ಧವಾಗಿ ಬೆಳೀತೀವಿ. ನನಗಿಂತ ನನ್ನ ಮರಿಗಳನ್ನು ಚೆನ್ನಾಗಿ ತಯಾರು ಮಾಡಿದೀನಿ ಅಂತ ಹೆಮ್ಮೆ ಇದೆ. ನಾವು ಆಧುನಿಕ ರೀತಿಯಾದ ವ್ಯವಸಾಯ ಮಾಡ್ತಿರೋದ್ರಿಂದ, ಈಗ ಸ್ವಲ್ಪ ನೆಮ್ಮದಿ ಇದೆ. ಆಗ ನಾವೇ ಸ್ವಂತ ಉಕ್ಕೆ ಹೊಡೆದು ಮಾಡಬೇಕಿತ್ತು. ಅದಕ್ಕೆ ಟ್ರಾಕ್ಟರನ್ನು ಖರೀದಿ ಮಾಡಿದ್ವಿ. ಆದರೆ ಕೊಟ್ಟುಬಿಟ್ಟೆ. ಹಿಂದಿನ ಕಷ್ಟಗಳು ಈಗ ಕಾಣುತ್ತಿಲ್ಲ. ಬಾಕಿ ಕಷ್ಟಗಳು ಬಿಡಿ, ಮಾರ್ಕೆಟ್ ಇಲ್ಲದಿರೋದು, 'ತೇಜಿಮಂಡಿ' ಆಗೋದು. ಕೆಲವೊಮ್ಮೆ ೨೦ ಗುಂಟೆ ಕೋಸನ್ನು ಸ್ಥಳದಲ್ಲೇ, ೨೫ ಸಾವಿರಕ್ಕೆ ಕೊಟ್ಟಿರೋದು ಉಂಟು, ಬೆಂಗಳೂರು ಮಾರ್ಕೆಟ್‌ಗೆ ಹೋಗಿ ೧೦ ಟನ್

ಕೋಸನ್ನು ೯೦೦ ರೂಪಾಯಿಗೆ ಮಾರಿರೋದೂ ಉಂಟು. ಈ ಕಷ್ಟನಷ್ಟಗಳು ಬೇಕಾದಷ್ಟಿವೆ. ಹಿಂದೆ ಸ್ವತ ಏವ ಚೈತನ್ಯದಲ್ಲಿ ನಾವು ಮೊದಲು ಮಾಡ್ತಾ ಇದ್ದ ಕಷ್ಟಕ್ಕೂ ಈಗಿನ ಕಷ್ಟಕ್ಕೂ ನೋಡಿಕೊಂಡ್ರೆ ಆ ಕಷ್ಟ ಇಲ್ಲ. ಮಾರುಕಟ್ಟೆ ವೈಪರೀತ್ಯ, ಗೊಬ್ಬರದ ಅಭಾವ, ವಿದ್ಯುತ್ ವೈಪರೀತ್ಯ, ಈ ಕಷ್ಟಗಳು ಎಲ್ಲರಿಗೂ ಎಲ್ಲಾ ಕಾಲದಲ್ಲೂ ಇರುವಂತಹುದೇ. ಆದರೆ ಕಾರ್ಪಣ್ಯದ ಜೀವನ ಅನ್ನುವ ಮೊದಲಿದನ್ನು ನೆನಸಿಕೊಂಡ್ರೆ, ನನ್ನ ಬಾಲ್ಯದ ದೆಸೆಯಲ್ಲಿ ನಾನು ಅನುಭವಿಸಿದ್ದಕ್ಕೂ ಈಗ್ಲೂ I am happy. ನೆಮ್ಮದಿಯಾಗಿದೀನಿ. ಸ್ವಂತ ಮನೆ ಬಳಕೆಗೆ ನೀರಿನ ಟ್ಯಾಂಕ್ ಮಾಡಿದೀನಿ, ಎಲ್ಲಾ ಕಡೆ ನಲ್ಲಿ ಇದೆ. ೧೩ ಎಕರೆ ಜಮೀನಿನ ಪೂರ್ತಾ ಪೈಪ್ ಹೂಳಿಸಿದೀನಿ. Switch on ಆದ್ರೆ ಜಮೀನಿನ ನಾಲ್ಕೂ ಮೂಲೆಗೆ ನೀರು ಓಡಾಡುವ ವ್ಯವಸ್ಥೆ ಇದೆ. ಮಕ್ಕಳೂ ವ್ಯವಸಾಯದಲ್ಲಿ ನುರಿತಿದ್ದಾರೆ.

- **ನಿಮ್ಮ ತಂದೆ ವ್ಯವಸಾಯ ಮಾಡ್ತಿರಲಿಲ್ಲವಾ?**

  ಮಾಡ್ತಾ ಇದ್ರು. ಹೊಲದ ಕೆಲಸವನ್ನು, ಉಳುಮೆಯನ್ನು ಪ್ರಧಾನವಾಗಿ ಮಾಡ್ತಿರಲಿಲ್ಲ.

- **ತಂದೆಯವರಿಗೆ ಎಷ್ಟು ಜಮೀನಿತ್ತು?**

  ತಂದೆಯವರಿಗೆ ಎರಡೂವರೆ ವೃತ್ತಿ ಜಮೀನು ಅಂದ್ರೆ, ೨೬೦ ಎಕರೇಲಿ, ೨೬ ವೃತ್ತಿ ಇತ್ತು. ಅದ್ರಲ್ಲಿ ೧೪ನೇ ಒಂದು ಭಾಗ ನಮ್ಮ ತಂದೆಗೆ ಇತ್ತು. ಎಲ್ಲಾನೂ ಸಾಗು ಮಾಡಲು ಹೋಗ್ತಿರಲಿಲ್ಲ. ವಾರ, ಮುಕ್ಕುಪ್ಪೆ, ಹಣಪಾಲು ಅಂತ ಕೊಡೋರು. ಮುಕ್ಕುಪ್ಪೆ ೩ನೇ ಒಂದು ಭಾಗ ಇವರಿಗೆ ಕೊಡೋದು, ಬಾಕಿ ಭಾಗ ಅವನು ಇಟ್ಟುಕೊಳ್ಳೋದು. ವಾರ ಅಂದ್ರೆ ಅರ್ಧ ಕೊಡೋದು, ಎಂಥದೋ ವರ್ಷಕ್ಕೆ ಇಷ್ಟು ಕೊಡು ಅಂತ ಹೇಳಿ ಗುತ್ತಿಗೆ ಕೊಡೋದು. ಹೀಗೆ ರೈತರಿಗೆ ಕೊಟ್ಟುಕೊಂಡು, ಬರೀ ತೋಟ ಮಾಡೋರು. ವಿಳ್ಳೇದೆಲೆ, ತೆಂಗು, ಅಡಿಕೆ, ಬಾಳೆ ಬೆಳೆದುಕೊಂಡು ಸ್ವಂತ ದುಡಿಮೆ ಮಾಡಿದೋರೇನೆ, ನಮ್ಮ ತಂದೆ.

- **ಸಂಕೇತಿಗಳದ್ದು ಬಹಳ ವಿಶೇಷ ಅಂತಾರಲ್ಲ?**

  ಸಂಕೇತಿಗಳು ಅಂದ್ರೆ ನಮ್ಮಲ್ಲಿ ಹೇಳ್ತಾರೆ, 'ಸಂಕೇತಿ ಅಂಡಾಕೋಡೋ? ಅಡ್‌ಕೈಲೆ ನಶ್ಯತ ಡಬ್ಬಿ ಪುಡ್‌ಚ್‌ಕಿಂಡಿ, ವಲ ಕೈಲೆ ಇಸ್ಪೀಟ್ ಪ್ಯಾಕ ಪುಡ್‌ಚ್‌ಕ್‌ಂಡಿಟ್ಟ್, ಸಂಗೀತು ಪಾಡ್‌ಕಿಂಡೇ ಪರ್‌ಂದಿರಣ ಸಂಕೇತಿ' (ಸಂಕೇತಿ ಎಂದರೆ ಏನೋ? ಎಡಗೈಲಿ ನಶ್ಯದ ಡಬ್ಬಿ ಹಿಡಕೊಂಡು, ಬಲಗೈಲಿ ಇಸ್ಪಿಟ್‌ಪ್ಯಾಕ್ ಹಿಡಕೊಂಡುಬಿಟ್ಟು, ಸಂಗೀತ ಹಾಡಿಕೊಂಡೇ ಹುಟ್ಟಿರ್ತಾನೆ ಸಂಕೇತಿ) ಅಂತ. ಸಂಗೀತಾನೆ ಹಾಡಿಕೊಂಡು ಹುಟ್ಟಬೇಕು. ವೇದ, ಸಂಗೀತ, ನಶ್ಯದಡಬ್ಬಿ, ಇಸ್ಪೀಟು ಪ್ಯಾಕು, ಸಾಮಾನ್ಯವಾಗಿ ೧೦೦ಕ್ಕೆ ೯೯ ಅಂತ ಹೇಳಬೇಕು, ಸಂಕೇತಿಗಳಲ್ಲಿ ಇವುಗಳಲ್ಲಿ ಯಾವುದಾದರೂ ಒಂದು ಇರುತ್ತೆ.

- **ನೀವು ಎಷ್ಟು ಜನ ಮಕ್ಕಳು ನಿಮ್ಮ ತಂದೆಗೆ?**

  ನಾನು ಹಿರಿಮಗ, ಇನ್ನೊಬ್ಬ ಮಗ ದತ್ತು ಹೋಗಿದಾನೆ. ಐದು ಜನ ಹೆಣ್ಣುಮಕ್ಕಳು. ದತ್ತು ಹೋದ ಮಗ ಬೆಂಗಳೂರಿನಲ್ಲಿ ಬೇಕರಿ ನಡೆಸುತ್ತಿದ್ದಾನೆ.

- **ನಿಮ್ಮ ಪಾಲಿಗೆ ಎಷ್ಟು ಜಮೀನು ಬಂತು ಯಜಮಾನರೆ?**

  ಪಿತ್ರಾರ್ಜಿತವಾದದ್ದೇನನ್ನೂ ಕೃಷ್ಣಾಪುರದಲ್ಲಿ ನಮ್ಮ ತಂದೆ ಉಳಿಸಲಿಲ್ಲ. ನಮಗೆ ಉಳಿಸಿದ್ದು, ತಮಾಷೆಯಾಗಿ ಹೇಳೋದಾದ್ರೆ ನಮ್ಮನ್ನು! ನಮ್ಮನ್ನು ಕೊಟ್ಟಿದ್ರು ಭೂಮಿಗೆ. ರಾಮಕೃಷ್ಣಪರಮಹಂಸರು ಹೇಳೋವ್ರಂತೆ, ಅಪ್ಪನ್ನ ಮಗ ನೀನು ನನಗೇನು ಕೊಟ್ಟೆ ಅಂತ ಕೇಳಿದ್ದಕ್ಕೆ, ಕನ್ನಡೀನ ಕೊಟ್ನಂತೆ. ಇದರಲ್ಲಿ ನೋಡು ಅಂದನಂತೆ. ಹಾಗೆ ನಮ್ಮಪ್ಪ ನಮ್ಮನ್ನು ಉಳಿಸಿದ್ರು. ಅವರು ಶೃಂಗೇರಿ ಮಠ, ಮಂತ್ರಾಲಯ, ಗಾಣಗಾಪುರ, ಸಾವಂತವಾಡಿ, North India ಹೀಗೇ All Over India ಜೀವನದಲ್ಲಿ ಹತ್ತಾರು ಸಲ tour ಮಾಡಿದ್ರು. ವಿದ್ಯಾಪಾರಂಗತರು. ವೇದವಿದ್ಯೆ ಕಲಿತಿದ್ದರು, ಆಯುರ್ವೇದ ಚಿಕಿತ್ಸೇನೂ ಮಾಡ್ತಾ ಇದ್ರು. ಅಷ್ಟು ಪ್ರತಿಭಾಶಾಲಿಗಳಾಗಿ ಇದ್ರು. ಭವಿಷ್ಯೋತ್ತರದಲ್ಲಿಮಕ್ಕಳಿಗೆ ನಾವು ಆಸ್ತಿ ಕಾಪಾಡಿಕೊಂಡು ಹೋಗಬೇಕು, ಇದನ್ನು ಇಟ್ಟುಕೊಂಡಿರೋಣ, ಇವರಿಗೆ ಊರ್ಜಿತವಾಗಿಡೋಣ ಅನ್ನೋದನ್ನು ದೇವರು ಅವರಿಗೆ ಕೊಟ್ಟಿರಲಿಲ್ಲ ಅಂತ ಅನ್ನಿಸುತ್ತೆ. ಅವರೂ ನನ್ನ ಹಾಗೇ ದುಡಿದುಕೊಳ್ಳಲಿ ಅನ್ನೋ ಭಾವನೆ ಇತ್ತೋ ಅಥವಾ ನಾವು ಬುದ್ಧಿವಂತರಾಗಲಿ ಅಂತ ಹೇಳಿ ಹಾಗೆ ಮಾಡಿದ್ರೂ ಅಂತ ಅನ್ನಿಸುತ್ತೆ. ಯಾಕೇಂದ್ರೆ ಎಲ್ಲವೂ ಇದ್ದಿದ್ರೆ ನಾವು ದಡ್ಡ ಕುರಿಗಳಾಗಿ ಇರ್ತಿದ್ದೋ ಏನೋ. ದೇವರಿಗೆ ಪೂಜೆ ಮಾಡುವಾಗ ಗಂಧ ತೇಯಲು ಇಟ್ಟುಕೊಂಡಿದ್ದು

ಒಂದು ಸಾಣೇಕಲ್ಲು ಇದೆ ನಮ್ಮನೇಲಿ. ಈಗ ಒಬ್ಬರು ಎತ್ತೋಕಾಗದಷ್ಟು ಇದೆ, ಆ ತರಹದ ಒಂದು ಸಾಣೇಕಲ್ಲು. ಇಲ್ಲಿ ಬಾರಿಸಿದ್ರೆ ಸುಮಾರು ನಮ್ಮ ಕೋರವಂಗಲದ ಗೇಟಿಗೆ ಕೇಳುವಷ್ಟು ಸದ್ದು ಮಾಡುವ ಒಂದು ಘಂಟೆ - ಇಷ್ಟು ಆಸ್ತಿಯಾಗಿ ಅವರು ಬಿಟ್ಟಿದ್ದು. ಆದರೆ ಇವರ ವಿದ್ಯಾ ಪ್ರೌಢಿಮೆಗೆ ಮೆಚ್ಚಿ ಮಹಾರಾಣಿಯವರು ಅವರ ಅಧಿಕಾರಿಗಳ ಮೂಲಕ ಮಂಜೂರು ಮಾಡಿಸಿದ ೪ ಎಕರೆ ತರಿ ಜಮೀನು ಇತ್ತು.



ಸಂಕೇತಿ ಖಾದ್ಯದ ವಿಶೇಷ ಶಾವಿಗೆ: ಶಾವಿಗೆ ಒತ್ತುವ ಭಂಗಿಯಲ್ಲಿ ಪ್ರಸನ್ನಲಕ್ಷ್ಮಿ: ಜೋಡಿಕೃಷ್ಣಾಪುರ

- **ನೀವೆಷ್ಟು ಜಮೀನು ರೂಢಿಸಿದ್ರಿ?**

ಅದೇ ಈ ಕೋರಂಬೋರೆ ಅಂತ ಹಾಳು, ಬಳ್ಳೆಕಟ್ಟೆ ಒಳ ಆಯದ ಕಟ್ಟೆ, ಅದನ್ನೆಲ್ಲಾ ಮುಚ್ಚಿ ನಾವು ಮೇಡು ಹೊಡೆದು, ಸ್ವಂತ ಗುದ್ದಲಿ ಕೆಲಸ ಮಾಡಿ, ಕರಲು ಜಮೀನಿಗೆ ಕೆರೆಗೋಡನ್ನು ತಲೆ ಮೇಲೆ ಹೊತ್ತು ತಂದು ಹಾಕಿ, ನಂತರ ಗಾಡಿಯಲ್ಲಿ ಹೇರಿದ್ವಿ. ಈಗ ಟ್ರಾಕ್ಟರ್‌ನಲ್ಲಿ ಹೇರ್ತೀವಿ. ನಂತರ ತೆಂಗಿನ ತೋಟ ಮಾಡಿ, ಗದ್ದೇಲಿ ಭತ್ತವನ್ನೂ ಬೆಳೆದು, ಈಗ ಆದಷ್ಟು ಅನುಕೂಲ ಮಾಡಿಕೊಂಡಿದ್ದೀವಿ.

- **ನಿಮ್ಮ ತಾಯಿಯವರ ಬಗ್ಗೆ ಹೇಳಿ.**

ನನ್ನ ತಾಯಿ ಪೂಂಗಾಮೆಯ ಸುಬ್ರಹ್ಮಣ್ಯಯ್ಯ ಅವರ ಮಗಳು. ಈಗ ಏಳು ವರುಷಗಳಾಯ್ತು ಅವರು ತೀರಿಹೋಗಿ, ತಂದೆ ಹೋದದ್ದು ೧೯೭೮ನೇ ಇಸವಿ October ೨೨ ರಂದು.

- **ನಿಮ್ಮ ವಿದ್ಯಾಭ್ಯಾಸ ಹಾಗೂ ಬಾಲ್ಯ ಹ್ಯಾಗೆ?**

ನಾನು Primary School ಇಲ್ಲೇ ಓದಿದ್ದು. ದುದ್ದಕ್ಕೆ ನಡೆದುಕೊಂಡು ಹೋಗಿ Lower Secondary ಅಲ್ಲಿ ಮಾಡಿದೆ. ಹೈಸ್ಕೂಲ್ ವಿದ್ಯಾಭ್ಯಾಸವನ್ನು ಸಾಲಿಗ್ರಾಮದಲ್ಲಿ ಮಾಡಿದೆ. ಆಗ ತಾಲ್ಲೂಕು ಕೇಂದ್ರದಲ್ಲಿ ಹೈಸ್ಕೂಲ್ ಇತ್ತೇ ವಿನಃ ಗ್ರಾಮಾಂತರ ಪ್ರದೇಶದಲ್ಲಿ ಇರಲಿಲ್ಲ. ತಂದೆಯವರ ಪರಿಚಯಸ್ತರ ಮನೇಲಿ ಇದ್ದು ಸಾಲಿಗ್ರಾಮದಲ್ಲಿ ಹೈಸ್ಕೂಲು ಓದಿದೆ. ಆಮೇಲೆ ಊರಿಗೆ ಬಂದೆ. ನಂತರ ಉಪನಯನವಾಯ್ತು. ನಮ್ಮೂರಲ್ಲಿ ಶ್ರೀನಿವಾಸ ಉಪಾಧ್ಯಾಯ ಅಂತ ಬಾಧ್ಯಾರ್ ಇದ್ರು. ನಮಗೆ ಬೇಕಾದ ವೇದವಿದ್ಯೆ, ಪೂಜೆ ಪುನಸ್ಕಾರ, ನಿತ್ಯ ಆಚಾರ ವಿಚಾರಗಳಿಗೆ ಮಂತ್ರ ಹೇಳಿಕೊಟ್ರು. ಹಾಗಾಗಿ ನಾನು ಓದಿದ್ದು ಹೈಸ್ಕೂಲ್‌ವರೆಗೆ ಮಾತ್ರ.

- **ಮುಂದೆ ಓದಿ ದೊಡ್ಡ ವಿದ್ಯಾವಂತನಾಗುವ ಆಸೆ ಇರಲಿಲ್ಲವೆ?**

ಮುಂದೆ ಓದಬೇಕು, ನಾವು ವಿದ್ಯಾವಂತರಾಗಬೇಕು; Engineer, Doctor ಆಗೋಣ, ಅಥವಾ ವೇದ ವಿದ್ಯಾಭ್ಯಾಸ ಮಾಡಿ ಪಾಠಶಾಲೆ ಸೇರೋಣ ಅಂತ ಹೇಳಿ ಈ ಜಿಜ್ಞಾಸೇಲಿ SSLC ಆದ ಮೇಲೆ ಊರಿಗೆ ಬಂದೆ. ಆದರೆ ಸುಮ್ಮನೆ ಒಂದು ಗಾದೆ ಹೇಳೋರು 'ಅಧ್ಯಯನ ಕಲ್ತೋನಿಗೆ ಮಧ್ಯಾಹ್ನಕ್ಕೆ ಹಿಟ್ಟಿಲ್ಲ ಕಣೋ' ಅಂತ. ವೇದ ಓದೋದಕ್ಕೆ ಯಾಕೆ ಹೋಗಬೇಕು ಅಂತ ಕಾಲೆಳೆದರು. ಈಗ ನೋಡಿದ್ರೆ ಪಟ್ಟಣಗಳಲ್ಲಿ ವೇದವಿದ್ಯಾಭ್ಯಾಸ ಮಾಡಿದೋರಿಗೆ ಸಿಗುತ್ತಿರುವ ಮನ್ನಣೆ ನೋಡಿದ್ರೆ, ವೇದವಿದ್ಯೆ ನಾವು ಮಾಡಲಿಲ್ಲವಲ್ಲಾ ಅಂತ ಮನಸ್ಸಿಗೆ ವ್ಯಥೆ ಆಗುತ್ತೆ. ಇಂಗ್ಲಿಷ್ ವಿದ್ಯಾಭ್ಯಾಸವನ್ನು ಆರ್ಥಿಕ ದುಃಸ್ಥಿತಿಯಿಂದ ನಿಲ್ಲಿಸಬೇಕಾಯ್ತು. ನಮ್ಮ ತಂದೆ ಇಲ್ಲಿ ಒಂದು ಸಮ ಇರ್ತಿರಲಿಲ್ಲ. ನನ್ನ ೧೩ನೇ ವಯಸ್ಸಿನಲ್ಲೇ ನಾನು ಇಲ್ಲಿಗೆ ಬಂದು ಈ ವ್ಯವಸಾಯ ಹಾಗೂ ಸಾಂಸಾರಿಕ ಜೀವನಕ್ಕೆ ಅಂಟಿಕೊಂಡೆ. ನಮ್ಮ ತಂದೇನ ನೆಚ್ಚಿಕೊಳ್ಳಲಿಲ್ಲ. ಅವರಿಗೆ ಅರಮನೆ, ಪಂಡಿತರು, ಪಾಂಡಿತ್ಯ ಇದೇ ಹುಚ್ಚು.

- **ನಿಮಗೆ ಇದರಲ್ಲಿ ಆಸಕ್ತಿ ಬರಲಿಲ್ಲವಾ?**

ಅವರಿರುವಾಗಲೇ ಅವಕಾಶ ಸಿಕ್ಕಿತ್ತು. ಅವರಿರುವಾಗ ಮಹಾರಾಣಿಯವರು ನನ್ನನ್ನು ಕೂರಿಸಿಕೊಂಡು 'ನೀನು ಇಲ್ಲಿಗೆ ಬಂದುಬಿಡು.



ಮೊಸರು ಕಡೆಯುತ್ತಿರುವ ಶ್ರೀವಿದ್ಯಾಶ್ರೀನಿವಾಸನ್: ಜೋಡಿಕೃಷ್ಣಾಪುರ

ನಿಮ್ಮ ಸಾಲಸೋಲ ನಾವು ಬಗೆಹರಿಸ್ತೀವಿ. ತಂದೆಯವರಿಗೆ ಗೌರವ ಇದೆ. ಪಾದಪೂಜೆ ಮಾಡ್ತೀವಿ. ನಜರ್‌ಬಾದ್ ರುಕ್ಮಾಲಯದಲ್ಲಿ ಕರೆದುಕೊಂಡು ಹೋಗ್ತೀವಿ. ಅವರಿಗೆ ಮನ್ನಣೆ ಇದೆ. ನೀನು ನಮ್ಮ Royal Speedways ಅಂತ transport department ಇದೆ. ಅದನ್ನು management ಮಾಡಿಕೊಂಡು ಇರು, ಬುದ್ಧಿವಂತ ಇದೀಯ' ಅಂದ್ರು. ನಾನೊಂದು ಯೋಚನೆ ಮಾಡಿದೆ. ನಮ್ಮ ತಂದೆಯವರು ಇರುವವರೆಗೂ ಅವರು ಮನ್ನಣೆ ಕೊಡಬಹುದು ಅಥವಾ ಅವರಿಗೆ ಪಾದಪೂಜೆ ಮಾಡಬಹುದು. ನಮಗೆ ಪಾದಪೂಜೆ ಮಾಡುವವರು ಯಾರು? ಆ ಪಾಂಡಿತ್ಯದ ನಿರೀಕ್ಷೇನೂ ನಾವು ಮಾಡೋಕ್ಕಾಗಲ್ಲ. ನಾಳೆ ದಿವಸ ಅವರು ನಮ್ಮನ್ನ ಉಚ್ಚಾಟನೆ ಮಾಡಬಹುದು. ಆಗ ನಾವೇನು ಮಾಡುವುದು? ಆದ್ದರಿಂದ ಅದರ ಬದಲು, ನಾವು ಇವತ್ತೇನೆ ಏನಾದ್ರೂ ಮಾಡಿ, ಈ ಜಮೀನು ನಮ್ಮ ಸ್ಥಳ, ಇದನ್ನು ನಾವು ಬಿಟ್ಟು ಹೋಗಬಾರದು, ಹಿಂದಿನವರು ಅನೂಚಾನವಾಗಿ ಬಾಳಿ ಬದುಕಿದ ಜಾಗ. ಶ್ರೀನಿವಾಸ ಶ್ರೌತಿ ಅಂತ ಒಂದು ಬೋರ್ಡನ್ನು ಇಲ್ಲಿ ಹಾಕಿರಬೇಕು, ಅವರು ಕಿತ್ತುಬಿಸಾಕಿ ಹೋದ್ರು ಅಂತ ನಾವು ಹೋಗಬಾರದು, ಅದೊಂದೇ ಧ್ಯೇಯದಿಂದ ನಾನು ಇಲ್ಲಿ ನೆಲೆ ನಿಂತೆ.

- **ಹಿಂದೆ ಈ ಊರಲ್ಲಿ ಎಷ್ಟು ಸಂಕೇತಿಗಳ ಮನೆ ಇದ್ದು?**

ನಾನು Middle Schoolಗೆ ಹೋಗುವಾಗ, ೩೩ ಮನೆ ಗಣಪತಿ ಮಂಗಳಾರತಿಗೆ ಹೋಗಿದೀನಿ. ಅವರೆಲ್ಲರ ಹೆಸರೂ ನನಗೆ ಗೊತ್ತಿದೆ. ಕೆಳಗಿನ ಮನೆ, ಮೇಲಿನಮನೆ, ಓಣಿ ಮನೆ ಮಾವಯ್ಯ, ಅಮ್ಮಾಮಿ, ಎಲ್ಲರೂ ಗೊತ್ತು.

- **ಈಗೆಷ್ಟು ಮನೆ ಇದೆ?**

ಅಂಕಿ ವೆತ್ಯಾಸವಾಗಿಲ್ಲ; ಮೂರು, ಮೂರು, ಆರಕ್ಕೆ ಬಂದಿದೆ ಅಷ್ಟೆ!

- **ಎಲ್ಲರೂ ವ್ಯವಸಾಯವನ್ನೇ ಮಾಡೋದ?**

ಎಲ್ಲರೂ ವ್ಯವಸಾಯಾನೇ. ಉಪಕಸುಬು ಇತ್ತು ಅವರಿಗೆ. ಕೌಂಡಿನ್ಯ ಗೋತ್ರದವರು ನಾಲ್ಕು ಮನೆತನದವರು ಪೂರ್ಣವಾಗಿ ಬಾಧ್ಯಾರ್ ಅಂದ್ರೆ ಪುರೋಹಿತರು. ಸಾಮವೇದಿಗಳಲ್ಲಿ ನಮ್ಮ ತಂದೆ, ದೊಡ್ಡಪ್ಪನವರು ಶ್ರೌತಿ ಅಂತ. ಅಂದ್ರೆ ಯಜ್ಞಯಾಗಾದಿಗಳಲ್ಲಿ ವಿದ್ಯಾವಂತರು. ಆಮೇಲೆ ನಿತುಂದಿಲ ಗೋತ್ರದವರು ಎಲ್ಲರೂ ಅವಧಾನಿಗಳು. ವಿದ್ವತ್ ತಾಂಬೂಲವನ್ನು ತೆಗೆದುಕೊಳ್ಳುವ ಅರ್ಹತೆ ಇದ್ದವರು. ವಿದ್ವತ್ ಅಂದ್ರೆ Degree ಇದ್ದ ಹಾಗೆ. ೧೨ ವರುಷ ಪಾಠಶಾಲೇಲಿ ಅಭ್ಯಾಸ ಮಾಡಿ, ಪಾಂಡಿತ್ಯ ಪಡೆದಿದ್ರು. ಕಾಲ ಬದಲಾವಣೆ ಆದ ಹಾಗೆ ಮಕ್ಕಳೆಲ್ಲಾ ವಿದ್ಯಾಭ್ಯಾಸ ಮಾಡಿದ ಮೇಲೆ



ತೋಟದಮನೆ: ಎದುರಿಗೆ ಬತ್ತದ ಗುಡ್ಡೆ, ಕಣ, ರಾಸುಗಳು: ಜೋಡಿಕೃಷ್ಣಾಪುರ

ನಗರವಾಸಿಗಳಾಗಿ ಇರಬೇಕು, ಇಲ್ಲೇನು ಇರೋದು ಅಂತ ಹೇಳಿ ಜಮೀನು ಮಾರಿಹೋದರು. ಕೆಲವರು ಹೆಣ್ಣುಮಕ್ಕಳಿಗೆ ಮದುವೆ ಮುಂಜಿ ಮಾಡಬೇಕು ಅಂತ ಜಮೀನು ಮಾರಿದ್ರು. ಕೆಲವರು ಹಳ್ಳೀಜೀವನ ಬೇಜಾರಾಗಿ ನಾವು ನಗರದಲ್ಲಿರೋಣ ಅಂತ ಜಮೀನು ಮಾರಿದ್ರು. ಕೆಲವರು ಮಂತ್ರಾಕ್ಷತೆ, ಕೆಲವರು ದರ್ಭೆ, ಕೆಲವರು ಕೃಷ್ಣಾಜಿನ ಹಿಡಿದುಕೊಂಡು ಹೋದ್ರು. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ ಅನ್ನುವ ಹಾಗೆ, ಸಂಕೇತಿಗಳ ಕೃಷಿ ನಶಿಸ್ತಾ ಬಂತು. ನಮ್ಮ ಚಿಕ್ಕಪ್ಪನ ಮಕ್ಕಳು ನಾಗರಾಜ, ಸೂರ್ಯ ಅಂತ ಅವರಿಬ್ಬರು, ನಾವು. ಕೌಂಡಿನ್ಯ ಗೋತ್ರದವರಾಗಿ ಮರಿಬಾಧ್ಯಾರ್ ಅಂತ ಬೆಂಗಳೂರಿನಲ್ಲಿದ್ರು ಅವರ ಮಗ ಒಬ್ಬ ವ್ಯವಸಾಯ ಮಾಡ್ತಾನೆ. ಜೋಯಿಸರ ಬುಡಕಟ್ಟಿನಲ್ಲಿ ತಮ್ಮಭಟ್ಟರ ಮಗ ದೊರೆಸ್ವಾಮಿ, ನಿತುಂದಿಲ ಗೋತ್ರದವರಾಗಿ ನಾಗಪ್ಪ, ಇಷ್ಟು ಜನ ಊರಲ್ಲಿ ಉಳಿದಿದೀವಿ.

- **ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ.**

ಮೊದಲು ಖುಷ್ಕಿ ಜಮೀನು ಇದು. ನೀರು, ನೆರಳು ಇಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ Village Accountant ಆಗಿ ಎಂಟು ವರುಷ ಕಾಲ ಅರಸೀಕೆರೆ ತಾಲ್ಲೂಕಿನಲ್ಲಿದ್ದೆ. ಅಲ್ಲಿ ಜೀವನದಲ್ಲಿ ಅವರು ಅವಲಂಬಿತರಾಗಿರೋದು ತೆಂಗು. ಅದನ್ನು ನೋಡಿ ನನಗೆ ಏನನ್ನಿಸಿತು: Regular source of Income ಬರೋ ಬೆಳೆ ತೆಂಗು, ಅಡಿಕೆ ಮಾಡಬೇಕು ವಿನಃ, ಬರೇ ರಾಗಿ, ಆಲೂಗೆಡ್ಡೆ ಬೆಳೆದ್ರೆ ಅನುಕೂಲ ಇಲ್ಲ ಅಂತ. ಮಳೆ ಬಂದ್ರೆ ಉಂಟು, ಇಲ್ಲಾಂದ್ರೆ ಇಲ್ಲ, ಈ ತರಹದ ಮಳೆ ಆಧಾರಿತ ಖುಷ್ಕಿ ಬೆಳೆಗಳು, ಒಂಭತ್ತು ವರುಷ ಅಳಿಸುತ್ತೆ ಒಂದು ವರುಷ ನಗಿಸುತ್ತೆ. Marketಊ ಅಷ್ಟೇನೇ, ಬೆಳೇನೂ ಅಷ್ಟೇನೆ; ಹಾಗಾಗಿ ಇದನ್ನೆಲ್ಲಾ ನಂಬಬಾರದು. ಶಾಶ್ವತವಾದಂಥ ಈ ಧ್ರುವ ಪೈರು ತೆಂಗನ್ನು ಮಾಡಬೇಕು ಅಂತ ಮನಸ್ಸಿಗೆ ಬಂದುದಕ್ಕೆ ಅರಸೀಕೆರೇಲಿ ಎಂಟು ವರುಷ ಇದ್ದದ್ದು ಕಾರಣ. ಮೊದಲು ೧೦೦ ಗಿಡ ಹಾಕಿದೆ. ಮೊಳಕೆ ಏಳಿಸಿಕೊಂಡು, ಆಮೇಲೆ ಅದನ್ನು ಗೆಪ್ಪೆಗೆ ಹಾಕೋದು. ಒಂದು ಜಾಗದಲ್ಲಿ ಮರಳನ್ನೂ ಹಾಕಿ ಕಾಯಿಯನ್ನು ಹೂಳಬೇಕು. ಆಮೇಲೆ ಮೊಳಕೆ ಬಂದು ದಸಿ ಹೊರಡುತ್ತೆ. ಎರಡು ಗರಿ ಬರುವ ಮೊದಲು ಬೇರೆಡೆ ಕಿತ್ತು ಗೆಪ್ಪೆ ಹಾಕಬೇಕು. ಆಗ ಒಂದು ಗಜಕ್ಕೆ ಒಂದು ಸಸಿ ಹಾಕಬೇಕು. ಆಮೇಲೆ ಮಣ್ಣು ಗೆಪ್ಪೆ ತೆಗೀಬೇಕು. ನೀರನ್ನು ಹಾಕಿಕೊಂಡು, ಕಾಲಲ್ಲಿ ಮೆಟ್ಟಿ ಅಡುವು ಮಾಡಿಕೊಂಡು, ದಸಿಗಳಲ್ಲಿ ಅಂದ್ರೆ ಅಡಿಕೆ ದಬ್ಬೆದಸಿ ಅಥವಾ ಕಬ್ಬಿಣದ ಹಾರೇನೇ ರೆಪ್ಪೆಹಾರೆ ಅಂತ ಮಾಡಿಕೊಂಡು ಬಾಯಿ ಅಗಲ ಮಾಡಿಕೊಂಡು ಸುತ್ತ Round ಆಗಿ ಅಚ್ಚು ತೆಗೆದ ಹಾಗೆ, ಬೇರುಸಮೇತ ಗೆಪ್ಪೆ ತೆಗೆದು ಗುಂಡಿಗಳನ್ನು ಎರಡು ಅಡಿ ಅಗಲ, ಎರಡು ಅಡಿ ಆಳ ತೆಗೆದು, ಅದರಲ್ಲಿ ಮರಳುಗೊಬ್ಬರ ತುಂಬಿ, ಆಮೇಲೆ ಇಡ್ಲಿಹಿಟ್ಟಿನ ಹಾಗೆ ರಾಡಿ ಮಾಡಿ ಗೆಪ್ಪೇನ ಅಳ್ಳಾಡದ ರೀತಿ ಇಬ್ಬರು ಗುಂಡೀಲಿಟ್ಟು, ಒಂದು ದಡೀನ supportಗೆ ಕೊಟ್ಟು ಕಟ್ಟು ಕಟ್ಟಬೇಕು. ಸ್ವಲ್ಪ ನೆಲ ಗಟ್ಟಿ ಆಯ್ತು ಒಂದು ನಾಲ್ಕು ದಿವಸ ಅನ್ನುವಾಗ, ನೋಡಿ ಮೆಟ್ಟುವ ಹದ ಅಂತೀವಿ, ಮೆಟ್ಟುಮಣ್ಣು ಅಂತ್ಲೂ ಅಂತಾರೆ, ಆ ಹದದಲ್ಲಿ ಮೆಟ್ಟಬೇಕು. ಈ ಪ್ರಕಾರ ತೆಂಗನ್ನು ನಾಟಿ ಮಾಡಿದ್ರೆ, ಆರು/ಏಳು ವರುಷದಲ್ಲಿ ಫಸಲಿಗೆ ಬರುತ್ತೆ. ಅಡಿಕೆ ಗಿಡಾನೂ ಹಾಗೇ, ಗೋಟನ್ನು ಮೊದಲು, ಮಣ್ಣು ತುಂಬಿ ಮಂಕರೀಲಿಟ್ಟರೂ ಮೊಳಕೆ ಬರಿಸಬಹುದು. ಇಲ್ಲ, ನೆಲದಲ್ಲಿ ಗೋಟು ಹಾಕಿ ಮೊಳಕೆ ಬರಿಸಬಹುದು, ತೆಂಗಿನ ಗಿಡಾನ ಗೆಪ್ಪೆಗೆ ಹಾಕಬೇಕಾದ್ರೆ ದೂರಕ್ಕೆ ಹಾಕ್ತೀವಿ, ಅಡಿಕೇನ ಮಳಕ್ಕೆ ಒಂದು ಸಸಿ ಹಾಕಬೇಕು. ಒಂದು ಅರ್ಧ ಅಡಿ ಗೆಪ್ಪೆ ತೊಗೊಂಡ್ರೆ ಸಾಕು, ಈ ತರಹದ ಗೆಪ್ಪೇನೆ, ಒಂದು ಅಡಿ ಅಗಲ ಹಾಗೂ ಆಳದ ಗುಂಡೀಲಿ ಗೊಬ್ಬರ ಹೊಸಮಣ್ಣು ಹಾಕಿ, ಸಸಿ ಹಾಕಿ ಕಾಲಲ್ಲಿ ಮೆಟ್ಟುತೀವಿ. ಈ ಜಮೀನಿಗೆಲ್ಲಾ ತೆಂಗಿನ ಗಿಡಾನೇ ಮಾಡಬೇಕು ಅಂತ ಏತದ ಮಣ್ಣುಭಾವಿ ಮಾಡಿಕೊಂಡು ಸಸಿ ಏಳಿಸಿದೆ. ಆಮೇಲೆ ಬೋರ್‌ವೆಲ್ ಮಾಡಿದೆ. ತೆಂಗಿನ ಗಿಡಗಳು ಪೂರ್ತಿ ಏಳುವವರೆಗೆ ಏನು ಮಾಡೋದು ಅಂತ ಹೇಳಿ, ಮುಂಗಾರಲ್ಲಿ ಆಲೂಗೆಡ್ಡೆ, ಹಿಂಗಾರಿಗೆ, ಎಲೆಕೋಸು, ಹೂಕೋಸು, ಗೆಡ್ಡೆಕೋಸು ಬೆಳೆಯಲು ಶುರುಮಾಡಿದೆ.

ಆಲೂಗೆಡ್ಡೇಲಿ, ಇಲ್ಲಿ ಬೆಳೆದ ಗೆಡ್ಡೆ ಬಿತ್ತನೆಗೆ ಬರೋಲ್ಲ. ಮೊದಲು ಚಿಕ್ಕಬಳ್ಳಾಪುರದಿಂದ ಬಿತ್ತನೆ ತರ್‍ತೀವಿ. ಆಲೂಗೆಡ್ಡೇನ ಕಣ್ಣನ್ನು ನೋಡಿ, ಎರಡು, ನಾಲ್ಕು ಭಾಗ ಮಾಡಿ, ನೇಗಿಲಲ್ಲಿ ಸಾಲು ಹೊಡೆದು, ಸಾಲಲ್ಲಿ ಅರ್ಧ ಅಡಿಗೆ ಬೀಜ ಹಾಕ್ತೀವಿ. ಮೊದಲೇ ಮನೆ ಗೊಬ್ರ ಹಾಕಿ ಉಕ್ಕೆ ಹೊಡೆದಿರ್‍ತೀವಿ. ಬಿತ್ತನೆಯಾದ ಮೇಲೆ ಸೀಮೆಗೊಬ್ಬರ ಹಾಕ್ತೀವಿ. ಆಮೇಲೆ ಮಳೆ ಹದದಲ್ಲಿಯೇ ಮಧ್ಯೆ ನೇಗಿಲು ಬಿಟ್ಟು ದಿಂಡು ಮಾಡ್ತೀವಿ. ಹರತೆ, ಬೇಸಾಯ ಸ್ವಂತ ಮಾಡಿಸ್ತೀವಿ. ಕುಂಟೆ ಹೊಡೀಬೇಕು, ಆಮೇಲೆ ನಾಕುದಾಳು ಕುಂಟೆ ಅಂತ ಮಣ್ಣು ಕೊಡೋದು, ಆಮೇಲೆ ದಪ್ಪವಾಗಿ ದಿಂಡು ಕಟ್ಟಬೇಕು. ಮೂರು ತಿಂಗಳಲ್ಲಿ ಖಟಾವಿಗೆ ಬರುತ್ತೆ. ಈಗ ಪಂಜಾಬಿನಿಂದ ಬೀಜ ತಂದು ಬಳಸ್ತಾ ಇದ್ದೀವಿ. ಆಲೂಗೆಡ್ಡೆ ಖಟಾವಾದ ಮೇಲೆ, ಕೋಸು ಬೆಳೀತೀವಿ. ನವಿಲುಕೋಸು ಸಸಿ ಮಡಿ ಮಾಡಿ ೨೬


ಸಂಕೇತಿಗಳಿಗೆ ಪ್ರಿಯವಾದ ನಶ್ಯ ತೀಡುತ್ತಿರುವ ಕೆ.ಎಸ್.ಶ್ರೀನಿವಾಸನ್(ಗುರು): ಜೋಡಿಕೃಷ್ಣಾಪುರ

ದಿನದ ಸಸಿ ನಾಟಿ ಮಾಡಿದ್ರೆ ಒಂದೂವರೆ ತಿಂಗಳಲ್ಲಿ ಗೆಡ್ಡೆ ಬರುತ್ತೆ. ಎಲೆಕೋಸು ಬೀಜ ಹತ್ತು ಗ್ರಾಂ ಪ್ಯಾಕೆಟ್ಟಿನಲ್ಲಿ ಸಿಗುತ್ತೆ. ಅದನ್ನು ಒಟ್ಲು ಹಾಕಿ ತಿಂಗಳ ಸಸೀನ ನಾಟಿ ಮಾಡ್ತೀವಿ. ಎರಡು ಅಡಿಗೆ ಸಾಲು ಹೊಡೆದು, ನೀರು ಬಿಟ್ಟುಕೊಂಡು ನಾಟಿ ಮಾಡ್ತೀವಿ. ಒಂದು ಅಡಿಗೆ ಒಂದು ಸಸಿ ಹಾಕಬೇಕು. ನಾಟಿ ಮಾಡಿದ ಎರಡೂವರೆ-ಮೂರು ತಿಂಗಳಲ್ಲಿ ಮೊಟ್ಟೆ ಕಟ್ಟುತ್ತೆ. ನಂತರ ಮಾರುಕಟ್ಟೆ ಆಧರಿಸಿ ಸ್ಥಳದಲ್ಲೇ ಮಾರಾಟ ಮಾಡ್ತೀವಿ. ಇಲ್ಲಾ ಹಾಸನ, ಬೆಂಗಳೂರಿಗೆ ತೊಗೊಂಡು ಹೋಗಿ ಮಾರ್ತೀವಿ. ಹೂಕೋಸೂ ಅಷ್ಟೇನೆ, ಬೀಜಾನ ಒಗ್ಗುಹುಯ್ದು ೨೫ ದಿನದ ಸಸೀನ ನಾಟಿ ಮಾಡಬೇಕು. ಎರಡು ಅಡಿಗೆ ಸಾಲು ಹೊಡೆದು, ಒಂದೂವರೆ ಅಡಿಗೆ ಸಸಿ ನಾಟಿ ಮಾಡ್ತೀವಿ. ಯಾಕೇಂದ್ರೆ ಗಿಡ ಜೋರಾಗಿ ಬೆಳೆಯುತ್ತೆ. ಎರಡೂವರೆ ತಿಂಗಳಲ್ಲಿ ಖಟಾವಿಗೆ ಬರುತ್ತೆ. ಸಸಿ ನಾಟಿ ಮಾಡಿದ ಮೇಲೆ, ಎತ್ತುಗಳಲ್ಲಿ ಬೇಸಾಯ ಮಾಡಲು ಆಗೋಲ್ಲ. ಕೈಕೆಲಸ ಮಾಡಬೇಕು. ಈ ಗಿಡ ಬಹಳ ಸೂಕ್ಷ್ಮ. ಕೈಲೇ ಕುಂಟೆ ಎಳೀಬೇಕು. ಆಳುಗಳ ಹತ್ರ ಕಳೆ ಕೀಳಿಸೋದು. ಆಮೇಲೆ ಗುದ್ದಲೀಲಿ ಬೇಕಾದ್ರೆ ಮಣ್ಣು ಕೊಡಬಹುದು. ಸಾಲಿಗೆ ನೀರು ಹರಿಯುವ ಹಾಗೆ pipe ಜೋಡಿಸಿದ್ದೀವಿ. ನಾಲೆಗೆ ನೀರು ಬಿಡಬೇಕು. ಇದರ ಮಧ್ಯೆ ತೆಂಗಿನ ತೋಟದಲ್ಲಿ ಎತ್ತಿಗೆ ಮೇವಿನ ಜೋಳ ಬೆಳೀತೀವಿ. ಎಕರೆಗೆ ೨೦ ರಿಂದ ೩೦ ಕ್ವಿಂಟಾಲ್ ಹೈಬ್ರಿಡ್ ಜೋಳ ಹಾಗೂ ಮುಸುಕಿನ ಜೋಳ ಬೆಳೀತೀವಿ. ಕ್ವಿಂಟಾಲ್‌ಗೆ ೫೦೦ ರೂಪಾಯಿ ಸಿಕ್ಕಿರೋದೂ ಉಂಟು. ಇಳುವರಿ ಲೆಕ್ಕದಲ್ಲಿ ಹೇಳುವುದಾದ್ರೆ ಅವತ್ತು ಐದು ಚೀಲ ಬೆಳೆಯೋ ಜಾಗದಲ್ಲಿ ೨೫ ಚೀಲ ಬೆಳೆಯೋ ತಳಿಗಳು ಇವು. ಹೈಬ್ರಿಡ್ ತಳಿಗಳು. ರಾಗೀಲೂ ಅಷ್ಟೇನೆ. ಒಂದು ಎಕರೆಗೆ, ಒಂದು ಖಂಡುಗ, ಅಂದ್ರೆ ೨೪೦ ಸೇರು ಬೆಳೆದ್ರೆ ಅದು ಬಂಪರ್ ಬೆಳೆ. ಈಗ ಎಕರೆಗೆ ೧೦, ೧೫ ಚೀಲ ಬೆಳೆಯಬಹುದು.

ನಿಮ್ಮ ತೋಟದಲ್ಲಿ ಅಡಿಕೆಯನ್ನು ಬಹಳ ವಿಶಿಷ್ಟವಾಗಿ ಬೆಳೆದಿದೀರಿ. ಅದರ ಬಗ್ಗೆ ಹೇಳಿ...

ಎಲ್ಲಾ ನಮ್ಮ Boundary ಸುತ್ತಾ ೫೦೦ ತೆಂಗಿನ ಗಿಡಗಳನ್ನು ಮೊದಲು ಹಾಕಿದೆ. ನಮ್ಮವರು ಆರ್ಷೇಯವಾಗಿ ಅಡಿಕೆ ಮಾಡ್ತಿದ್ರಲ್ಲಾ, ನಾವು ಅಡಿಕೆ ಹಾಕುವಂಥ ಖಾಲಿ ಜಾಗಾನೇ ಬಿಡಲಿಲ್ಲವಲ್ಲಾ ಅಂತ ಮನಸ್ಸಿನಲ್ಲಿ ಯೋಚನೆ ಇತ್ತು. ಅಲ್ಲೊಂದು ಮೂರು ಎಕರೆ ಗದ್ದೆ ಇದೆ, ಅಲ್ಲೇ ಹಾಕೋಣ ಅಂತ ನಾನೂ ನನ್ನ ಮಕ್ಕಳೂ ಮಾತಾಡಿಕೊಂಡ್ವು. ಅದು ತಗ್ಗಿನಲ್ಲಿದೆ ಗದ್ದೆ. ಒಂದು ಟ್ರಾಕ್ಟರ್ ಲೋಡ್‌ಗೆ ೮೦ ರೂಪಾಯಿಯಂತೆ, ೫೦ ಸಾವಿರ ರೂಪಾಯಿ ಖರ್ಚು ಮಾಡಿದ್ರೆ ಒಂದು ಎಕರೆಗೆ ಮಣ್ಣು ಹಾಕಬಹುದು. ಮೂರು ಎಕರೆಗೆ ಒಂದೂವರೆ ಲಕ್ಷದ ಮಣ್ಣು ಮುಚ್ಚಿದ್ರೆ ನಾವು ಮೂರು ಎಕರೆ ಅಡಿಕೆ ಮಾಡಬಹುದು ಅಂತ ಮಕ್ಕಳು ಆತುರ ಮಾಡಿದ್ರು. ಜಮೀನನ್ನು ದುಡ್ಡು ಕೊಟ್ಟು ಕೊಂಡ ಹಾಗೆ ಆಗುತ್ತೆ, ಆ ರೀತಿ ಮಾಡೋದು ಬೇಡ, ಗದ್ದೇಲಿ ಭತ್ತ ಬೆಳೆಯೋದು ಬೆಳೀತಾ ಇರಿ, ಅಡಿಕೆ ಗಿಡ ಏಳಿಸಬೇಕು ತಾನೆ, ಒಂದು ಕೆಲಸ ಮಾಡಿ, ಈ ೧೦, ೧೫ ಎಕರೆ ಜಮೀನಿಗೆ, ಅಲ್ಲಲ್ಲಿ ತೆಂಗಿನ ಗಿಡಕ್ಕೆ ನೀರು ಹಾಕಲು ಪ್ಲಸ್ ಮಾರ್ಕ್(+) ಹಾಕಿದ ಹಾಗೆ, ಮೇಲುಗಡೆಗೆ pipe ಹೂಳಿಕೊಂಡು ಹೋಗಿರೋದು ಮಧ್ಯದಲ್ಲಿದೆ, ಒಂದು ಸಾವಿರ ಅಡಿ. ದಕ್ಷಿಣೋತ್ತರವಾಗಿ ಬರೋದಕ್ಕೂ ಎರಡು ಪರಿ ಮಾಡಿದೀನಿ ಎರಡು ಜಾಗದಲ್ಲಿ. ದಕ್ಷಿಣೋತ್ತರವಾಗಿಯೂ ಭೂಮಿ ಓಟ ಇದೆ. ಪೂರ್ವಪಶ್ಚಿಮವಾಗಿ ಮೇಲಕ್ಕೆ permanent ಆಗಿ pipe ಹೂಳಿಸಿದ್ದೀನಿ. ಅಲ್ಲಲ್ಲಿ ಮೂರು ಜಾಗದಲ್ಲಿ 'T' ಬಿಟ್ಟಿದೀನಿ. ಆ Tನೇರಕ್ಕೆ ಮೂರು ಜಾಗದಲ್ಲೂ ಪರಿಹೊಡೆಸಿದೀನಿ. ಮೊದಲಿನಿಂದ ಆ ಪರಿಗಳು ಹಾಗೇ ಇತ್ತು. ಅದರಲ್ಲಿ ಬೇರೆ ಪೈರು ಮಾಡಲಾಗದೆ waste ಆಗಿತ್ತು. ಮಧ್ಯೆ ಬದು ಬಿಟ್ಟು, ಎರಡೂ ಕಡೆ ಪರಿ ಹಾಗೇ ಇತ್ತು. ಹಾಗೇ ಒಂದು ದಿನ ಕುಳಿತು ಯೋಚನೆ ಮಾಡಿದೆ. ಸುಮ್ಮನೆ ತಾನೇ ತಾನಾಗಿ ನೀರು ಹರೀತಿರುತ್ತೆ. ಯಾವಾಗಲೂ ಹದ ಇರುತ್ತೆ. ಹುಡುಗರು ಅಡಿಕೆ ತೋಟ ಬೇರೆ ಮಾಡಬೇಕು

ಅಂತಾರಲ್ಲ, ಇದಕ್ಕೆ ಯಾಕೆ ಅಡಿಕೆ ಸಸಿ ಹಾಕಬಾರದು? ಅಳತೆ ಮಾಡಿದೆ. ಆರು ಅಡಿಗೆ ಹಾಕಿದ್ರೆ ಎಷ್ಟು ಕೂರಬಹುದು ಅಂತ ಕೋಲು ತೊಗೊಂಡು ಅಳತೆ ಮಾಡಿ ಅಂತ ಮಕ್ಕಳಿಗೆ ಹೇಳಿದೆ. 'ಅಯ್ಯೋ ಅಣ್ಣ, ನಿನಗೆ ಭ್ರಮೆ' ಅಂದ್ರು. 'ಹಾಗಲ್ಲಪ್ಪ, ಅಳತೆ ಮಾಡಿ, ನೋಡೋಣ' ಅಂದೆ. ನನ್ನ Idea ಇದ್ದದ್ದು ಹೀಗೆ-ಅಡಿಕೆ ಗಿಡ ಹಾಕಬೇಕು ಅಂತ. ಅಳತೆ ಮಾಡಿ ೨೦೦ ಕೋಲು ಬರುತ್ತೆ ಅಂದ. ಎರಡು ಎರಡು ನಾಲ್ಕು; ಹೀಗೆ ನಾಲ್ಕು, ನಾಲ್ಕು ಹೀಗೆ; ನಾಲ್ಕು ಸಾಲು ಅಡಿಕೆ ಗಿಡ ಹಾಕಬೇಕು, ಬೇರೆ ಜಾಗಕ್ಕೆ ಹಾಕಬೇಡಿ, ಉಕ್ಕೆ ಹೊಡೆಯಲು ತೊಂದ್ರೆ ಮಾಡ್ಕೋಬೇಡಿ. ನೀರು ಹರಿಯುವ ಪರಿಗೆ, ಎಡಕ್ಕೆ ಬಲಕ್ಕೆ, ಅಂದ್ರೆ ದಕ್ಷಿಣೋತ್ತರ ಸಾಲಿಗೆ ಪೂರ್ವಕ್ಕೆ ಒಂದು ಸಾಲು, ಪಶ್ಚಿಮಕ್ಕೆ ಒಂದು ಸಾಲು, ಪೂರ್ವಪಶ್ಚಿಮಕ್ಕೆ ಪರಿ ಇರುವ ಜಾಗದಲ್ಲಿ, ದಕ್ಷಿಣಕ್ಕೆ ಉತ್ತರಕ್ಕೆ ಒಂದು ಸಾಲು ಹಾಕಿದೀವಿ. ಈಗ ೬೦೦ ಗಿಡ ಆಗಿದೆ. ಒಂದು ಎಕರೇಲಿ ನಾವು ಖಾಲಿ ನೆಲದಲ್ಲಿ ವ್ಯವಸಾಯಕ್ಕೆ ಅಸಲೀ ಅಡಿಕೆ ತೋಟ ಮಾಡಲು ಹೊರಟ್ರೆ ಅದರ ಬಂಡವಾಳ ಖರ್ಚು ಲೆಕ್ಕ ಹಾಕಿದ್ರೆ ಜಮೀನು ಕೊಂಡಂತಾಗುತ್ತೆ. ಆದರೆ ನಾನು ಮಾಡಿರುವ ರೀತಿಯಲ್ಲಿ, ಅಡಿಕೆ ಮಾಡಿದ್ರೂ ಎರಡೂ ಒಂದೇ ಬಾರಿಗೆ ಫಸಲಿಗೆ ಬರುತ್ತೆ, ವ್ಯವಸಾಯ ಎರಡಕ್ಕೂ ಒಂದೇನೆ. ಬೇರೆ ಜಮೀನಿನಲ್ಲಿ ಮಾಡೋಕಾದ್ರೆ ನೀರಿಗೆ ವ್ಯವಸ್ಥೆ ಮಾಡಬೇಕು. ಅದಕ್ಕೇ ಬೇರೆ ಜಮೀನು ಬೇಡ, ಬೆಟ್ಟಕ್ಕೆ ಕಲ್ಲು ಹೊತ್ತ ಹಾಗಾಗುತ್ತೆ, ಇಲ್ಲಿ ಮಾಡಿ, ನೀರಿರುವ ಜಾಗದಲ್ಲಿ, ಅಂದೆ. ಒಂದು ಎಕರೇಗೆ ದಾಯಕ್ಕೆ ಹಾಕಿದ್ರೂ ೬೦೦ ಗಿಡಾನೇ ಹಾಕೋದು. ಅಷ್ಟು ಗಿಡಾನ ತೆಂಗಿನ ಗಿಡದ ಮಧ್ಯದಲ್ಲಿ, ನೀರು ಕಾಲುವೆ ಪಕ್ಕದಲ್ಲಿ ಏಳಿಸಿದೀನಿ.

- **ಮನೆಗೆ ಬೇಕಾದ್ದು ಎಲ್ಲವನ್ನೂ ಜಮೀನಿನಲ್ಲೇ ಬೆಳೀತೀರಾ?**

ಹೌದು. ಉಪ್ಪು, ಸೀಮೇಎಣ್ಣೆ ಬಿಟ್ಟು ಮನೆಗೆ ಬೇಕಾದ ತರಕಾರಿ, ಕಾಲಕ್ಕೆ ಬೇಕಾದ ಬೆಳೆ ಹಾಕುತ್ತೀವಿ. ಮುಂಗಾರಲ್ಲಿ ಜ್ಯೇಷ್ಠ ಆಷಾಢದವರೆಗೆ ಮೂಲಂಗಿ, ಬೀನ್ಸ್ ಬೆಳೀತೀವಿ. ನಂತರ ಆಲೂಗೆಡ್ಡೆ. ಅದನ್ನು ಕೊಳ್ಳೋ ಅಗತ್ಯವಿಲ್ಲ. ಸೌತೆ ಹಾಕ್ತೀವಿ, ಮನೆಗೂ ಬಳಸಿ ಮಾರ್ಕೆಟ್‌ಗೆ ಆಗೋವಷ್ಟು ಬೆಳೀತೀವಿ. ನಂತರ ಎಲ್ಲಾ ಜಾತಿ ಕೋಸನ್ನೂ ಬೆಳೀತೀವಿ. ಮಾಗೀಲಿ ಬದನೆಕಾಯಿ ಬೆಳೀತೀವಿ. ಆಮೇಲೆ ಸೊಪ್ಪು, ಸಂಬಾರಸೊಪ್ಪು, ಮೆಂತ್ಯದ ಸೊಪ್ಪನ್ನು ಮನೆಗೆ ಬೇಕಾಗುವಷ್ಟು ಕೋಸಿನ ಒಳಗೇ ಚೆಲ್ಲುತ್ತೀವಿ. ಆ ಬೆಳೆ ಬರೋ ತನಕ ಹಾಗೂ ಹೀಗೂ ನಮಗೆ ಸೊಪ್ಪು ಸಿಗುತ್ತೆ. ಆಮೇಲೆ ಹಾಲುಸೋರೆಕಾಯಿ ಅಂದ್ರೆ ಮಾಗಿ ಗಿಡ ಹಾಕಿದೀನಿ. ದುಂಡನೆಯ ಕಾಯಿಂದು ಒಂದು ಜಾತಿ, ಉದ್ದಕಾಯಿ ಬರೋದು ಒಂದು ಜಾತಿ. ಕೋಸಿಗೆ ಅಂತ ಗೊಬ್ರ ಹಾಕಿದಾಗ, ಗೊಬ್ಬರದಲ್ಲಿ ಬೀಜ ಬಂದು ಒಂದು ಮಾಗಿ ಗಿಡ ಎದ್ದಿದೆ. ನಮ್ಮ ಹುಡುಗರು, ಕೋಸು ಖಟಾವಾದ ಮೇಲೆ, ಎರಡು ಹೊಲದ ಮಧ್ಯೆ ಎದ್ದಿರುವ ಗಿಡ ಕೀಳಬಾರದು ಅಂತ ಗುಣಿ ಮಾಡಿ ಗೊಬ್ರ ಹಾಕಿದಾರೆ. ಗಿಡ ಹಬ್ಬಲು ಶುರುವಾಯ್ತು. ತಾನಾಗಿಯೇ ಎದ್ದಿರುವ ತಬ್ಬಲಿ ಗಿಡ ಕೀಳಬೇಡಿ ಅಂತ ಹೇಳಿದೆ. ನಮ್ಮ ತಂದೆ ಹೇಳೋರು, ಸೋರೆ ಗಿಡ, ಬೂದಗುಂಬಳ ಗಿಡ, ಮಾಗಿಗಿಡ ಇವು ತಬ್ಬಲಿ ಗಿಡ ಎದ್ರೆ ಬೇಕಾದಷ್ಟು ಕಾಯಿ ಬಿಡುತ್ತೆ ಅಂತ. ಹಾಗಾಗಿ ಕೀಳಬೇಡಿ ಅಂದೆ. ಈಗ ಒಂದು ಗಿಡ ೧೦ ಗುಂಟೇಲಿ ಹಬ್ಬಿದೆ. ಸಾಮಾನ್ಯವಾಗಿ ೧೦೦೦ ಕಾಯೀನ ದಪ್ಪ ಲೆಕ್ಕದಲ್ಲಿ ಕುಯ್ದಿದೀವಿ. ಹೆಚ್ಚು ಕಡಿಮೆ ಇನ್ನೂ ೫೦೦ ಕಾಯಿ ಇರಬಹುದು, ನಾವೂ ಬಳಸ್ತೀವಿ, ಮಾರುಕಟ್ಟೇಲೂ ಮಾರಿದೀವಿ.



ಹಗ್ಗ ಹೊಸೆಯುವುದೂ ಕೃಷಿಯ ಭಾಗ: ಕೆ.ಎನ್.ಶ್ರೀನಿವಾಸನ್: ಜೋಡಿಕೃಷ್ಣಾಪುರ

- **ವ್ಯವಸಾಯಕ್ಕೆ ಪೂರಕವಾಗಿ ಹಸು ಸಾಕಣೇನೂ ಕೈಗೊಂಡಿದ್ದೀರಾ?**

ಎರಡು ಹಸು ಸಾಕಿದೀನಿ. ಮನೆಗೆ ನಾಲ್ಕು ಲೀಟರ್ ಹಾಲು ಬೇಕು. ನಾವು ಗೋವುಗಳ ಸೇವೆ ಮಾಡೋದು ಒಳ್ಳೆಯದು. ಬೆಳಗ್ಗೆ ಎದ್ದ

ತಕ್ಷಣ ಕಲ್ಪವೃಕ್ಷ ನೋಡು, ಕಾಮಧೇನು ನೋಡು ಅಂತಾರೆ. ಹಾಲಿಗಾಗಿ ಹಸು ಸಾಕಬೇಕು. ಎರಡನೆಯದು ಗೊಬ್ಬರ. ನಾಟಿಗೊಬ್ಬರ ಹಾಕದೆ ರಾಸಾಯನಿಕ ಬಳಸಿದ್ರೆ ಅನುಕೂಲ ಆಗೋಲ್ಲ. ಇದು ನನ್ನ ಅನುಭವ. ಮನೇ ಬಳಕೆಗೆ ಆಗಿ ಮಿಕ್ಕಿದ ಹಾಲನ್ನು ಮಾರಬಹುದು. ಅದನ್ನು ವೃತ್ತಿಯಾಗಿ ಮಾಡಬಹುದು ಅಂತ ಮಾಡ್ತಿದ್ದೇನೆ. ತೆಂಗಿಗೆ ನುಸಿ ಕಾಣಿಸಿದ ಮೇಲೆ ಆರ್ಥಿಕ ಪರಿಸ್ಥಿತಿ ಕುಂಠಿತವಾಗುತ್ತೆ, ಬರೀ ಒಂದನ್ನೇ ನಂಬಿ ಇರಬಾರದು ಅಂತ ಸಿಂಧಿ ಹಸು ಸಾಕಿದೀನಿ. ಅದರ ಮೇವಿಗೆ ನೇಪಿಯರ್ ಹುಲ್ಲನ್ನು ಬೆಳೀತಿದೀನಿ. ೨೦ ಗುಂಟೇಲಿ ಮೆಕ್ಕೆ ಜೋಳಾನೂ ಬೆಳೀತೀನಿ, ಪ್ರತಿದಿನ ಎರಡು ಹಸುವಿನಿಂದ, 25 ಲೀಟರ್ ಹಾಲು ಸಿಗುತ್ತೆ. ಡೈರಿಗೆ ೨೦ ಲೀಟರ್ ಹಾಲು ಹಾಕ್ತಿದೀವಿ. ಊರಲ್ಲಿ ಡೈರಿ ಇಲ್ಲ, ಕೋರವಂಗಲ, ಹಾಗೂ ಚಿಕ್ಕಡಲೂರಿನಲ್ಲಿ ಇದೆ. ದೂರ ಆದ್ರೂ ಡೈರಿಗೆ ಹಾಕ್ತೀವಿ. ಒಂದು ವರುಷದಿಂದ ಡೈರಿಗೆ ಹಾಲು ಹಾಕ್ತಿದೀವಿ. ಮೊದಲು ಮನೆ ಬಳಕೆಗೆ ಹಸು, ಎಮ್ಮೆ ಇಟ್ಟುಕೊಂಡಿದ್ವಿ. ಈಗ ಅದನ್ನೇ ಉಪಕಸುಬಾಗಿ ಕೈಗೊಂಡಿದ್ದೀವಿ. ವ್ಯವಸಾಯ ತೃಪ್ತಿ ತಂದಿದೆ. ಈ ಇಳೀವಯಸ್ಸಿನಲ್ಲೂ, ಐಶಾರಾಮೀ ಜೀವನ ಮಾಡಬೇಕು ಅಂತಾಗಲಿ, ಅಥವಾ ವ್ಯವಸಾಯ ಬಿಟ್ಟು ಬೇರೆ ಉದ್ಯೋಗಕ್ಕೆ ಹೋಗುವ ಆಸಕ್ತಿಯಾಗಲಿ ಇಲ್ಲ. ಸಂಪೂರ್ಣವಾಗಿ ನಮಗೆ ಇದರಲ್ಲೇ ಆಸೆ, ಆಸಕ್ತಿ, ನೆಮ್ಮದಿ; ಎಲ್ಲಾ ಇದರಲ್ಲೇನೆ.

- **ಏನು ಜೀವನದಲ್ಲಿ ಸಾಧಿಸಬೇಕು ಅಂದುಕೊಂಡಿದ್ರೋ ಅದನ್ನು ಸಾಧಿಸಿದ ತೃಪ್ತಿ ಇದೆಯಾ?**

ನನ್ನ ಉದ್ದೇಶ ಇದ್ದಿದ್ದು, ತಂದೆ ರಾಜಾಶ್ರಯದಲ್ಲಿದ್ರೂ ನಾವು ಇಲ್ಲಿರೋವಷ್ಟು ನೆಮ್ಮದಿಯಾಗಿ, ಇಲ್ಲಿರೋವಷ್ಟು ಆರಾಮವಾಗಿ ಇರ್ಲಿಲ್ಲ. ನನಗೆ ಇದೇ ಜೀವನ ಸರಿ ಅನ್ನಿಸ್ತು. ಹಾಗೇ ಮಾಡಬೇಕು ಅಂತ ಶುರು ಮಾಡಿದೆ. ಅದರಲ್ಲಿ ಉತ್ತೀರ್ಣತೆ ಸಿಕ್ಕಿದ್ರಿಂದ ನನ್ನ ಜೀವನದಲ್ಲಿ ನನ್ನ ಗುರೀನ ನಾನು ಸಾಧನೆ ಮಾಡಿದೆ ಅನ್ನುವ satisfaction ಸಿಕ್ಕಿದೆ. ಇದಕ್ಕಿಂತ ಬೇರೆ ಜೀವನ ಉತ್ತಮ ಅಂತ ನನಗೆ ಇವತ್ತಿನವರೆಗೆ ಅನ್ನಿಸಿಲ್ಲ.

- **ನಿಮ್ಮ ಹೆಂಡತಿಯ ಸಹಕಾರ ಹ್ಯಾಗಿತ್ತು?**

ಅವಳದ್ದೂ ವ್ಯವಸಾಯಸ್ಥ ಕುಟುಂಬವೇ. ನಾನು ರೆವಿನ್ಯೂ ಇಲಾಖೇಲಿ ಕೆಲಸದಲ್ಲಿದ್ದು, 'ಕೆಲಸ ಬಿಟ್ಟು ಬರ್ತೀನಿ. ಇಲ್ಲಿ ಹೊಲ ಉಳೋಕೆ, ತೋಟ ಅಗೆಯೋಕೆ ಬರ್ತೀನಿ' ಅಂದಾಗಲೂ ಕೂಡ 'ನೀವು ಮಾಡ್ತಾ ಇರೋದು ಸರಿ' ಅಂತ ಸಂಪೂರ್ಣ ಸಹಕಾರ ನೀಡಿದ್ಲೇ ವಿನಃ 'ನಾವು ಸಿಟೀಲಿ ಇರಬೇಕು, ದೊಡ್ಡ ಕುರ್ಚೀಲೇ ಇರಬೇಕು' ಅಂತ ಆಸೆಪಟ್ಟವಳಲ್ಲ. ಅದರ ಬದಲು ನಾವು ಇಲ್ಲೇ ಇರ್ತೀವಿ ಅನ್ನೋದಕ್ಕೆ ಸಂಪೂರ್ಣ ಸಹಕಾರ ಕೊಟ್ಟು, ನಮ್ಮ ಜತೇಲಿ ಸಹಾಯಕಳಾಗಿ, ಮೊದಲಿನಿಂದ ಕೊನೇವರೆಗೂ ಏನೇ ಕಷ್ಟ ಕಾರ್ಪಣ್ಯ ಬಂದ್ರೂ 'ಇದೇ ಸರಿ, ನೀವು ಮಾಡುತ್ತಿರುವ ನಿಮ್ಮ ಧ್ಯೇಯಕ್ಕೆ ನಾವು ಅಡ್ಡಿ ಬರೋದಿಲ್ಲ' ಅಂತ ಹೇಳಿದ್ದಕ್ಕೆ, ನಾನು ಇಲ್ಲಿ ನಿಲ್ಲೋದಕ್ಕೆ ಅವಕಾಶವಾಯ್ತು ಅಂತ ನನ್ನ ಭಾವನೆ. ಹಾಗಂತ ಘಂಟಾಘೋಷವಾಗಿ ಹೇಳಬಹುದು. ಅವರೂ ಜಮೀನ್ದಾರರ ಮನೆಯೋರೇನೇ. ಅಡಿಕೆ ಸುಲಿಯೋದು, ಮಣ್ಣು ಸಾರಿಸೋದು, ಕಳೆ ಕೀಳೋದು, ವ್ಯವಸಾಯ ಮಾಡೋದು, ಹಾಲು ಕರೆಯೋದು, ಕಡೆಗೋಲಲ್ಲಿ ಮಜ್ಜಿಗೆ ಕಡೆಯೋದು ಎಲ್ಲವೂ ಅವಳಿಗೆ ಗೊತ್ತಿದೆ.



ಹತ್ತುಗುಂಟೆ ವಿಸ್ತಾರಕ್ಕೆ ಹಬ್ಬಿರುವ ಒಂದೇ ಸೋರೆಗಿಡ: ಜೋಡಿಕೃಷ್ಣಾಪುರ

- **ಯಜಮಾನ್ರೆ, ಸಾಮಾನ್ಯವಾಗಿ ವ್ಯವಸಾಯಸ್ಥ ತಂದೆ ತಾಯಂದಿರು 'ನಾವು ಪಟ್ಟ ಕಷ್ಟಾನೇ ಸಾಕು. ನಮ್ಮ ಮಕ್ಕಳು ವ್ಯವಸಾಯ ಮಾಡೋದು ಬೇಡ. ಅವರು ಆಫೀಸರ್ ಆಗಿರಲಿ,**

ಕುರ್ಚಿ ಏರಲಿ,' ಅಂತ ಅಪೇಕ್ಷೆ ಪಡೋದು ಸಹಜ. ಆದ್ರೆ ನೀವು ನಿಮ್ಮ ಇಬ್ಬರೂ ಮಕ್ಕಳನ್ನು ವ್ಯವಸಾಯಸ್ಥರನ್ನಾಗಿ ಮಾಡಿದ್ದೀರಲ್ಲಾ ಇದಕ್ಕೆ ಏನು ಕಾರಣ?

ಅದು ಹೇಳೋದಾದ್ರೆ ನಮ್ಮ ಬಂಧು ಬಾಂಧವರು cityಲಿ ಇರೋರ ಜೀವನವನ್ನೂ ನಾನು ನೋಡಿದೀನಿ. ಕಷ್ಟನಿಷ್ಠುರ ಅನ್ನೋದನ್ನೇ ಪ್ರಧಾನವಾಗಿ ತೊಗೊಂಡ್ರೆ cityಲಿ ಕಷ್ಟ ಇಲ್ಲಾಂತ ಹೇಳೋಕೆ ಬರೋದಿಲ್ಲ. ಅವರಿಗೆ ಒಂದು ವಿಧವಾದ ಕಷ್ಟ, ಯಾಂತ್ರಿಕ ಜೀವನ. ವ್ಯವಸಾಯಕ್ಕೆ ಬುದ್ಧಿಶ್ರಮವೂ ಬೇಕು, ದೇಹಶ್ರಮವೂ ಬೇಕು. 'ದೂರತಃ ಪರ್ವತೋ ರಮ್ಯಃ' ಅಂತ ಗಾದೆ ಹೇಳುವ ಹಾಗೆ, ಎಲ್ಲೋ ದೂರದಲ್ಲಿ ಹಸಿರು ನೋಡಿ, ಹೊಳೆಯ ಈಚೆಯ ದಡದಲ್ಲಿರುವ ಹಸು ಹೊಳೆ ಈಜಿ ಆಚೆ ದಡಕ್ಕೆ ಹೋಗಿ ಅಲ್ಲಿ ಹಸಿರು ಕಾಣ್ತಿದೆ ಅಂತ, ಅಲ್ಲಿ ಸ್ವಲ್ಪ ಎರಡು ಗುಕ್ಕು ಮೇದು ತಿರುಗಿ ಈ ಕಡೆ ನೋಡಿದಾಗ ಈ ಜಾಗಾನೇ ಹಸಿರಾಗಿ ಕಾಣುತ್ತೆ. ಮತ್ತೆ ಈ ಕಡೇಗೇ ಈಜಿಕೊಂಡು ಬರೋದು. ಎರಡು ಮೂರು ಸಲ ಈಜಿದ ಮೇಲೆ ಕಾಲು ಸೋತು ಬಂದು ನಡುಹೊಳೇಲಿ ಪ್ರಾಣತ್ಯಾಗ ಮಾಡುತ್ತಂತೆ. ಹಾಗೆ ಬೇರೆ ಕಸುಬು ದೂರಕ್ಕೆ ರಮ್ಯವಾಗಿ ಕಾಣುತ್ತೇ ವಿನಃ ತಾನು ಮಾಡೋದ್ರಲ್ಲಿ ಶ್ರದ್ಧಾಭಕ್ತಿಯಿಂದ, ನಾನು ಇದರಲ್ಲೇ ದುಡೀಬೇಕು, ಇದರಲ್ಲೇ ಬದುಕಬೇಕು ಅಂತ ಹೇಳಿ ನಿರ್ಧಾರಕ್ಕೆ ಬಂದು ಕೆಲಸ ಮಾಡಿದ್ರೆ ಸ್ವತಂತ್ರವಾಗಿ ಯಾರ ಆಶ್ರಯಾನೂ ಇಲ್ಲದೆ, ತನ್ನ ಅನ್ನ ತಾನು ದುಡಿದುಕೊಂಡು, ನೆಮ್ಮದಿಯಾಗಿ ತನ್ನ ಆಚಾರ ವಿಚಾರಗಳನ್ನು ಕಾಪಾಡಿಕೊಂಡು ರೈತ ಇರಬಲ್ಲ. ಅಷ್ಟು ಧೈರ್ಯವಾಗಿ ನಗರ ಜೀವನದಲ್ಲಿ ಇರೋದಕ್ಕೆ ಆಗೋಲ್ಲ ಅಂತ ನನ್ನ ಅನುಭವ. ನನ್ನ ಮಕ್ಕಳಿಗೂ ನಾನು ಅದನ್ನೇ ಹೇಳಿದೀನಿ. ಅವರೂ ಸಹ ಅದನ್ನೇ ಮಾಡಿಕೊಂಡು, 'ನೀವು ಹೇಳೋದು ಸರಿ, ನಾವು ಅನ್ನದಾತನ ಮಕ್ಕಳಾಗಿ ಇರ್ತೀವಿ. ಇನ್ನೊಬ್ಬನನ್ನು ಆಶ್ರಯ ಮಾಡಿಕೊಂಡು, ಅವನು ಕೊಡುವ ಸಂಬಳಕ್ಕೆ ಕೈಚಾಚಿಕೊಂಡು, ಸರ್ಕಾರಿ ಅಥವಾ ಸಾಹ್ಕಾರಿ ಕೆಲಸ ಮಾಡಿಕೊಂಡು, ಇರೋಲ್ಲ' ಅಂತಾರೆ. ಅವನಿಗೇ ಬೇಜಾರಾದ್ರೂ ಇಲ್ಲ ಇವನಿಗೇ ಬೇಜಾರಾದ್ರೂ ಮುಗೀತು ಅವತ್ತಿನಿಂದ ಅನ್ನ ಇಲ್ಲ. ಆದರೆ ವ್ಯವಸಾಯ ಹಾಗಲ್ಲ. ವಿದ್ಯೆಯನ್ನು ಹ್ಯಾಗೆ ಮನುಷ್ಯನಿಂದ ಕಿತ್ತುಕೊಳ್ಳಲು ಆಗೋದಿಲ್ಲವೋ ಹಾಗೆ ಇಲ್ಲಿ ಕಲ್ಪ ವೃಕ್ಷ ಏಳಿಸಿದೀವಿ, ಇದು ಜಮೀನು, ಚಾಪೆಯಲ್ಲ! ಯಾರೋ ಸುತ್ತಿಕೊಂಡು ಹೋಗೋದಕ್ಕೆ. ಗುರುಕೊಟ್ಟ ಜೋಳಿಗೆ ಅಂತ ಗೂಟಕ್ಕೆ ತಗಲು ಹಾಕಿದ್ರೆ ಆಗಲಿಲ್ಲ. ಕಷ್ಟ ಪಟ್ಟು ಮಾಡಿದ್ರೆ ಸುಖವುಂಟು. ಗೋಡೆ ಮಾಡಿದೀವಿ. ಚಿತ್ರ ಅವರು ಬರೀಬೇಕು. ಮಕ್ಕಳೂ ಮಾಡ್ತಾ ಇದಾರೆ. ಕಷ್ಟವನ್ನು ಲೆಕ್ಕ ಹಾಕೋದಾದ್ರೆ, ಕಷ್ಟ ಪಡದೆ ಎಲ್ಲೂ ಸಂಪಾದಿಸಲು ಆಗೋಲ್ಲ. ಯಾರೋ ಒಬ್ಬ ಕಂಪ್ಯೂಟರ್ ಇಂಜಿನಿಯರಾದ್ರೆ ನಾವೂ ಬಣ್ಣದ ಬದುಕಿಗೆ ಆಸೆ ಪಡಬಾರದು. ಅದು ತಪ್ಪು.

- **ನಿಮ್ಮ ಜೀವನದುದ್ದಕ್ಕೂ ಯಾವ ತತ್ತ್ವ ಅನುಸರಿಸಿದ್ರಿ?**

ತತ್ತ್ವ ಅಂದ್ರೆ, ಆಚಾರ ವಿಚಾರ ಪಾಲನೆ ಮಾಡಿಕೊಂಡು ಶ್ರದ್ಧಾಭಕ್ತಿಯಿಂದ ಮಾಡುವ ಕೆಲಸವನ್ನೇ ಮಾಡಿ, ನಾವು ನಂಬಿರುವ ಜಮೀನೇ ನಮಗೆ ದೇವರು - ಆ ಪ್ರಕಾರ ಬದುಕಿದೀವಿ. ಮುಂದಕ್ಕೂ ಇದನ್ನೇ ರೂಢಿಸಿ ಸನ್ಮಾರ್ಗ ಅವಲಂಬಿಗಳಾಗಿರಬಹುದು, ಶಾಂತಿಯುತ ಜೀವನ ನಡೆಸಬಹುದು ಅನ್ನೋ ಕೇಂದ್ರಧ್ಯೇಯ ಇಟ್ಟುಕೊಂಡು ನಾನು ಬಂದೆ. ಅದನ್ನೇ ನನ್ನ ಮಕ್ಕಳಿಗೆ ಹೇಳುತ್ತೇನೆ, ನಂಬಿದ ದೇವರು ನಮ್ಮನ್ನು ಕೈಬಿಡೋಲ್ಲ ಅಂತ.

- ಒಳ್ಳೆಯದು ನರಸಿಂಹಮೂರ್ತಿಗಳೆ, ಇದುವರೆವಿಗೂ ನಿಮ್ಮ ಬದುಕಿನ ಅನೇಕ ಮಜಲುಗಳನ್ನು ನಮ್ಮ ಮುಂದೆ ತೆರೆದು ಇಟ್ರಿ, ತುಂಬಾ ಅನುಕೂಲವಾಯ್ತು. ನಮಸ್ಕಾರ.

ಬಹಳ ಸಂತೋಷ. ನನ್ನ ಅನುಭವ ಹೇಳಿದ್ದೇನೆ. ಉತ್ಪ್ರೇಕ್ಷೆ ಇಲ್ಲ. ನಾನು ನಡೆದು ಬಂದ ದಾರಿ ತಿಳಿಸಿದ್ದೇನೆ. ನಮಸ್ಕಾರ.

ಆ) ಕೆ.ನಾಗರಾಜ ಇ/ಮ ಕೆ.ಆರ್. ಕೇಶವಮೂರ್ತಿ

ಜೋಡಿಕೃಷ್ಣಾಪುರ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 223463



ಅಡಿಕೆಪಟ್ಟೆ ಎಡೆದು ಕೂತ ಕೆ.ನಾಗರಾಜ: ಜೋಡಿಕೃಷ್ಣಾಪುರ

ನಾನು SSLC ಪ್ರಥಮದರ್ಜೆಲಿ ಪಾಸ್ ಮಾಡಿ ಊರಿಗೆ ಬಂದಾಗ, ಜೋಡಿಗ್ರಾಮ ಹೋಯ್ತು. ಆಗ ಪರಿಚಯಸ್ಥರು ಹೇಳಿದ್ರು, 'ಜೋಡಿ ಹೋಯ್ತು. ಈಗ ನೀವು ರೈತಾಪಿ ಜನಕ್ಕೆ ಜಮೀನು ನೀಡಿದ್ರೆ ಕಾಲಕ್ರಮದಲ್ಲಿ ಅವರು ಡಿಕ್ಲರೇಷನ್ ನೀಡಿದ್ರೆ ಜಮೀನು ಅವರಿಗೆ ಆಗುತ್ತೆ. ನೀವು ಈಗಲೇ ನಿಮ್ಮ ಜಮೀನನ್ನು ಸ್ವಂತಕ್ಕೆ ಬಿಡಿಸಿಕೊಂಡ್ರೆ ನಿಮ್ಮದಾಗುತ್ತೆ.' ಆಗ ನಾನು ಆಲೋಚನೆ ಮಾಡಿ, ಬೇರೆಡೆ ಕೆಲಸಕ್ಕೆ ಹೋಗುವ ಅವಕಾಶವಿದ್ರೂ ಅದನ್ನು ಬಿಟ್ಟು ಊರಲ್ಲಿ ಉಳಿದೆ. ವ್ಯವಸಾಯ ಮಾಡಿದೆ.

ಜೋಡಿಕೃಷ್ಣಾಪುರದ ಕೆ.ಆರ್. ಕೇಶವಮೂರ್ತಿ ಹಾಗೂ ಹೇಮಗಿರಿ ಕುಪ್ಪಹಳ್ಳಿಯ ವೆಂಕಟಲಕ್ಷಮ್ಮ ದಂಪತಿಗಳಿಗೆ ನಾಲ್ಕು ಗಂಡು ಹಾಗೂ ನಾಲ್ಕು ಹೆಣ್ಣು. ಹಿರಿಯ ಮಗನೇ ಕೆ.ಆರ್.ನಾಗರಾಜ. ಬಸವಾಪಟ್ಟಣದ ಬಿ.ಎಸ್. ವೆಂಕಟರಾಮಯ್ಯ ಹಾಗೂ ಎಲೆಚಾಗಳ್ಳಿಯ ಶಾರದಮ್ಮ ದಂಪತಿಗಳ ಮಗಳು ಬಿ.ವಿ. ಕಮಲಮ್ಮ ನಾಗರಾಜ ಅವರ ಧರ್ಮಪತ್ನಿ. 'ಬೇಸಾಯ ಹೂಡಿಕೊಂಡು ಹೋಗಿರುವ ರೈತರಿಗೆ ಸಮಯಕ್ಕೆ ಸರಿಯಾಗಿ ತಿಂಡಿ ತಂದು ಕೊಟ್ರೆ, ವ್ಯವಸಾಯದ ಅಭಿವೃದ್ಧಿಯಲ್ಲಿ ಹೆಂಡತಿಯದ್ದು ಅರ್ಧಪಾಲು. ಇಲ್ಲದಿದ್ರೆ ಒಂಭತ್ತು ಘಂಟೆಗೆ ಆರು ಬಿಟ್ಟು ಮನೆಗೆ ಬರಬೇಕಾಗುತ್ತೆ. ತಿಂಡಿ ತಿಂದು ಮತ್ತೆ ಹೋಗೋದಕ್ಕೆ ೧೨ ಘಂಟೆ ಆಗುತ್ತೆ. ಅಲ್ಲಿಗೆ ೯ ರಿಂದ ೧೨ ಘಂಟೆವರೆಗಿನ ಹೊಲದ ಕೆಲಸ ಹೆಂಡತಿ ಮಾಡಿದಂತೆ ತಾನೆ? ಹಾಗಾಗಿ ನನ್ನ ಹೆಂಡತಿಯದ್ದು ಅರ್ಧ ಪಾಲು' ಅಂತಾರೆ ನಾಗರಾಜ. ನಾಗರಾಜ ಅವರಿಗೆ ನಾಲ್ಕು ಹೆಣ್ಣು ಹಾಗೂ ಇಬ್ಬರು ಗಂಡುಮಕ್ಕಳು. 'ತಂದೆ ಮಾಡಲಾಗದೆ ಕೈಬಿಟ್ಟಿದ್ದ ಜಮೀನನ್ನು ರೂಢಿಸಿ, ಅಡಿಕೆ ಹಾಕಿ ಬೆಳೆ ಬೆಳೆಯುವ ಹಾಗೆ ಮಾಡಿ, ತಮ್ಮನಿಗೆ ಹಿಸ್ಸೇನೂ ಮಾಡಿಕೊಟ್ಟಿದೀನಿ. ಗೋಡೆ ಮಾಡಿಕೊಟ್ಟೆ, ಚಿತ್ತಾರ ಅವನು ಬರೆದಿದಾನೆ. ನೆಮ್ಮದಿಯಾಗಿದಾನೆ. ನಾನು ಈ ಜಮೀನನ್ನು ಕಳೆಯದಂತೆ ನೋಡಿಕೊಂಡಿದೀನಿ. ನನ್ನ ಕರ್ತವ್ಯ, ಜವಾಬ್ದಾರಿ ಕಳೆದಿದೆ. ಮುಂದಿನದು ಮಕ್ಕಳ ಜವಾಬ್ದಾರಿ' ಎಂದು ಹೇಳುತ್ತಾರೆ. ಮಕ್ಕಳನ್ನು ಬೇರೆಡೆ ಕಳಿಸುವ ಬದಲು ವ್ಯವಸಾಯಸ್ಥರನ್ನಾಗಿ ಮಾಡಬಹುದಿತ್ತಲ್ಲ ಅಂದ್ರೆ 'ಬೇಡ, ನಾಲ್ಕಾರು ದಿನ ಅವರೂ ಹೊರಗೆ ಇದ್ದು ಬರಲಿ. ಅಲ್ಲೀತನಕ ನಾನು ಜಮೀನನ್ನು ಜೋಪಾನವಾಗಿ ಕಾದುಕೊಂಡಿರುತ್ತೀನಿ. ಆಮೇಲೆ ಅವರು ಬಂದು ನೋಡಿಕೊಳ್ಳುತ್ತಾರೆ. ಮಕ್ಕಳು ನನ್ನ ವ್ಯವಸಾಯ ಮುಂದುವರಿಸುತ್ತಾರೆ ಅನ್ನುವ ನಂಬಿಕೆ ಇದೆ. ಇಲ್ಲದಿದ್ರೆ ಇಷ್ಟು ಹೊತ್ತಿಗೆ ಜಮೀನು ಮಾರಿಬಿಡ್ತಿದ್ದೆ. ಮಕ್ಕಳು ಬಂದ ಮೇಲೆ ತೋಟದಲ್ಲಿ ಮನೆ ಮಾಡುವ ಆಸೆ ಇದೆ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ. ವ್ಯವಸಾಯದ ಬಗ್ಗೆ ಅಪಾರ ಒಲವಿರುವ ನಾಗರಾಜ ಹೇಳುತ್ತಾರೆ 'ಸಗಣಿ ಮುಟ್ಟಿ ಅನ್ನ ತಿನ್ನು ಅಂದ್ರೂ ತಿಂತೀನಿ. ವ್ಯವಸಾಯದ ಮಟ್ಟಿಗೆ ಬೇಸರ ಇಲ್ಲ. ಭೂಮಿತಾಯಿ ನಮ್ಮನ್ನು ಇಲ್ಲಿಯವರೆಗೆ ಬದುಕಿಸಿದ್ದಾಳೆ, ನಮ್ಮನ್ನು ಇಷ್ಟರಮಟ್ಟಿಗೆ ಬೆಳೆಸಿದ್ದಾಳೆ. ಅವಳನ್ನು ಮರೆಯೋಕಾಗುತ್ತಾ' ಅಂತ. ನಾಗರಾಜ ಅವರ ಮನೆಯಲ್ಲಿ ನಿಂತು ಅವರ ಪೂರ್ವಿಕರ ಬಗ್ಗೆ ಹೇಳುವ ಮಾತು ಕೇಳುವಾಗ ಹಿಂದಿನ ಕಷ್ಟ ಇಷ್ಟಿತ್ತಾ ಅನ್ನಿಸುತ್ತೆ!

'ತಂದೆ ಬಹಳ ಶ್ರಮಜೀವಿ. ಒಂದೂವರೆ ಎಕರೆ ತೋಟ ಇತ್ತು. ಉತ್ಪತ್ತಿ ಇರಲಿಲ್ಲ. ಆಹಾರದ supply ಇರಲಿಲ್ಲ. ಮಳೆ ಬೆಳೆ ಆಗ್ತಿರಲಿಲ್ಲ. ನಾವು ನಾಲ್ಕು ಗಂಡು, ನಾಲ್ಕು ಹೆಣ್ಣುಮಕ್ಕಳು. ಮನೆಗೆ ಆಹಾರ ಸಾಲ್ತಿರಲಿಲ್ಲ. ಹೀಗಾಗಿ ವಾರಕ್ಕೆ ಒಂದು ಬಾರಿ ಹದಿನೈದು ಮೈಲಿ ದೂರದ ಬೇಲೂರು (ತಾ) ಹಂದ್ರಾಳಿಗೆ ಹೋಗೋರು. ಅಲ್ಲಿ ನನ್ನ ಅತ್ತೆ ಒಬ್ಬರೇ ಇದ್ರು. ಅದು ಮಲೆಸೀಮೆ. ಮಳೆ ಆಗೋದು.

ಹಾಗಾಗಿ ಭತ್ತವನ್ನು ಅಲ್ಲಿಂದ ತಲೆ ಮೇಲೆ ಹೊತ್ತು ತರೋರು. ಪಾಳ್ಯದಲ್ಲಿ ನಮ್ಮ ಸೋದರತ್ತೆ ಅಳಿಯ ವೆಂಕಟನಾರಾಯಣಶಾಸ್ತ್ರಿ ಅಂತ ಇದ್ರು. ಅವರಿಗೂ ನಮ್ಮ ತಂದೆಗೂ ವಿಶ್ವಾಸ. ಅಲ್ಲಿ ಯಾರದೋ ಜಮೀನನ್ನು ಭೋಗ್ಯ ಅಂತ ಮಾಡಿಕೊಂಡು, ಅಲ್ಲಿ ಭತ್ತ ಬೆಳೆಯುತ್ತಿದ್ರು. ಬೇರೆ ಕಡೆ ಭತ್ತ ಕೊಂಡುಕೊಂಡು, food inspector ಹತ್ರ ರಹದಾರಿ ಮಾಡಿಸಿ, ಮನೆಗೆ ಅಕ್ಕಿ ತರೋರು. ಅದನ್ನು ನಮಗೆ ತಾಯಿ ಅಡುಗೆ ಮಾಡಿ ಬಡಿಸೋರು. ನಮ್ಮ ಕಷ್ಟ ನೆನೆಸಿಕೊಂಡ್ರೆ ಅದಕ್ಕೆ ಕೊನೆ ಮೊದಲಿಲ್ಲ' ಅಂತಾರೆ. ನಾಗರಾಜ ಅವರ ತಾಯಿ ತೀರಿಕೊಂಡಿದ್ದು ಅವರ ೨೧ನೇ ವಯಸ್ಸಿನಲ್ಲಿ. ತಂದೆ ಕುಸಿದು ಕುಳಿತಾಗ ಸಂಸಾರದ ಜವಾಬ್ದಾರಿ ಹೊತ್ತವರು ಇವರು. ಇವರ ಮೂರನೆ ತಮ್ಮ (ಸತ್ಯನಾರಾಯಣ ಹಾಗೂ ಪತ್ನಿ ಜಯಮ್ಮ) ವ್ಯವಸಾಯದಲ್ಲಿ ಸಹಕರಿಸಿದ್ದಾರೆ. ಹಾಳುಬಿದ್ದ ತೋಟವನ್ನು ಒಂದು ಕಡೆಯಿಂದ ಹೀಜಿ, ಕೆರೆಗೋಡು ಹಟ್ಟಿ ಗೊಬ್ರ ಹಾಕಿ ಹದಮಾಡಿ, ಬಾಳೆ ಬೆಳೆದು, ಅಡಿಕೆ ಕೂರಿಸಿ, ಇವತ್ತು ಕಾಯಿ ಕೆಡವುವ ಹಂತಕ್ಕೆ ತಂದಿದ್ದಾರೆ. ತಮ್ಮನಿಗೆ ಪಾಲು ನೀಡಿದ ಮೇಲೆ ನಾಗರಾಜ ಅವರ ಪಾಲಿಗೆ ಒಂದು ಎಕರೆ ತೋಟ, ಒಂದು ಎಕರೆ ಗದ್ದೆ ಹಾಗೂ ನಾಲ್ಕು ಎಕರೆ ಹೊಲ ಬಂದಿದೆ. ಎತ್ತುಗಳ ಸಾಕಾಣಿಕೆ ಬಗ್ಗೆ ಬಹಳ ಒಲವಿದೆ. ಈ ಕುರಿತು ಪ್ರಶ್ನಿಸಿದಾಗ,

'ರೈತನಿಗೆ ಎತ್ತುಗಳು ಇರಲೇಬೇಕು. ಆದರೆ ಇವತ್ತು ಕೃಷ್ಣಾಪುರ ಬಳಸಿದ್ರೆ ೧೦೦ ಜತೆ ಎತ್ತಿಲ್ಲ. ಸಾವಿರಾರು ಎಕರೆ ಜಮೀನಿದೆ. ಬೇಸಾಯ ಆಗೋದು ಹ್ಯಾಗೆ? ಅದಕ್ಕೇ ನಾನು ಊರಿಗೆ ಬಂದು ಬೇಸಾಯ ಆರಂಭಿಸಿದ ಲಾಗಾಯ್ತಿನಿಂದ ಎತ್ತುಗಳನ್ನು ಇಟ್ಟಿದೀನಿ. ನನ್ನ ೧೬ನೇ ವಯಸ್ಸಿನಲ್ಲಿ ತಂದೆ ಕರುಗಳನ್ನು ತಂದುಕೊಟ್ರು. ಅದರಿಂದ ರೂಢಿಸಿ, ಎತ್ತುಗಳನ್ನು ಜತೆ ಮಾಡಿಕೊಂಡೆ. ನನ್ನ ತಮ್ಮನ ಬಳಿ ಈಗ ಎತ್ತುಗಾಡಿ ಎರಡೂ ಇದೆ. ಆದ್ರೆ ನಾನು ಬರೀ ಎತ್ತನ್ನು ಇಟ್ಟಿದೀನಿ. ಗಾಡಿ ತೊಗೋಳೋಕೆ ಹಣದ ಅಭಾವ ಅಂತ ಅಲ್ಲ. ನಾನು ಎಲ್ಲೋ ಹೊರಟು ನಿಂತಿದ್ದಾಗ ಯಾರೋ ಬಂದು ಗಾಡಿ ಕೇಳ್ತಾರೆ, ಕೊಡೋಲ್ಲ ಅಂದ್ರೆ ನಿಷ್ಠೂರ. ಹಾಗಾಗಿ ನನಗೆ ತುಂಬಾ ವಿಶ್ವಾಸ ಇರೋನಿಗೆ ಗಾಡಿ ಕೊಡಿಸಿದೀನಿ. ನನಗೆ ಬೇಕು ಅಂದಾಗ ತೊಗೊಂಡು ಬರ್ತೀನಿ. ಎತ್ತುಗಳನ್ನು ನಾನು ಚೆನ್ನಾಗಿ ಸಾಕಿದೀನಿ. ಎತ್ತುಗಳ ಬಗ್ಗೆ ನಿಗಾ ಇರಬೇಕು. ತೋಟದ ಹತ್ರ ಮೇವಿರುವ ಜಾಗದಲ್ಲಿ ಮೇಯಿಸಬೇಕು. ಅಕ್ಕಿ ಹುಲ್ಲು, ಹಲ್ಲುಜೋಳ, ಒಗರು ಜೋಳ ಹಾಕಬೇಕು. ಬೇಸಿಗೇಲಿ ತಿಂಡಿ ಕೊಡಬೇಕು. ಎತ್ತುಗಳನ್ನು ಹ್ಯಾಗೆ ಸಾಕಬೇಕು ಅಂದಿದ್ದಕ್ಕೆ ಒಬ್ಬ ತಮಾಷೆಯಾಗಿ ಹೇಳಿದ್ನಂತೆ - ಅದಕ್ಕೆ 'ಹುಲ್ಲೇ ತುಪ್ಪ' ಕೊಡಬೇಕು ಅಂತ. ಈ ಹುಲ್ಲೇತುಪ್ಪ ಎಲ್ಲಿ ಸಿಗುತ್ತೆ ಅಂತ ಅವನು ಹುಡುಕಿ ಹುಡುಕಿ ಸಾಕಾಗಿ ಮತ್ತೆ ಬಂದಾಗ ಇವನು ಹೇಳಿದ್ನಂತೆ 'ಎತ್ತುಗಳಿಗೆ ಹುಲ್ಲೇ ತುಪ್ಪದಂತೆ, ಹುಲ್ಲನ್ನು ಚೆನ್ನಾಗಿ ತಿನ್ನಿಸಬೇಕು' ಅಂತ. 'ಎತ್ತುಗಳಿಗೆ ಪ್ರಿಯವಾದ ಹುಲ್ಲನ್ನು ತಂದು ಮೇಯಿಸಬೇಕು. ತೋಟದ ಸೆತ್ತೆ ತಂದು ಮೇಯಿಸಿದ್ರೆ ಎತ್ತಾಗುತ್ತದೆಯೇ?' ಅಂತ ನಮ್ಮನ್ನೇ ಪ್ರಶ್ನಿಸುತ್ತಾರೆ. ಕರಾವಿಗೆ ಅಂತ ಎರಡು ಎಮ್ಮೆ ಕಟ್ಟಿದ್ದಾರೆ. ಮನೆಯಲ್ಲಿ ಒಂದು ಸಣ್ಣ ಅಂಗಡಿಯನ್ನು ಇಟ್ಟು ವ್ಯಾಪಾರ ಸಹ ಮಾಡ್ತಿದಾರೆ. ವ್ಯವಸಾಯದ ಬದುಕಿನ ಜತೆಗೆ ಅಂಗಡಿಯ ನಂಟು ಹೇಗೆ ಬಂತು ಅಂದಾಗ ಹೇಳಿದ್ರು, "ಅದಕ್ಕೆ ಒಂದು ಇತಿಹಾಸಾನೇ ಇದೆ. ಇಲ್ಲಿ ಒಬ್ಬ ವೀರಶೈವರ ಅಂಗಡಿ ಇತ್ತು. ಆತನಿಗೂ ವಯಸ್ಸಾಗಿತ್ತು. ಸೋತುಹೋಗಿದ್ದ. ನನಗೂ ಅವನಿಗೂ ವಿಶ್ವಾಸ ಇತ್ತು. 'ಸ್ವಾಮಿ, ನೀವು ಅಂಗಡಿ ಇಡಿ; ನಾನು ನನ್ನ ಪದಾರ್ಥ ಎಲ್ಲಾ ಕೊಡ್ತೀನಿ' ಅಂದ. ಆಗ ನಮ್ಮದು ಒಟ್ಟು ಕುಟುಂಬ. ನಮ್ಮ ತಂದೆಗೆ ಆಗ ೬೫ರ ಆಸುಪಾಸು ವಯಸ್ಸಾಗಿತ್ತು. ನಾವು ಅಣ್ಣತಮ್ಮಂದಿರು ಹೊರಗೆ ಸೇರಿ ದುಡಿಯೋಣ. ಮನೇಲಿ ಎತ್ತು ಗಾಡಿ ಇದೆ. ವಾರಕ್ಕೆ ಒಂದು ಸಲ ಪೇಟೆಯಿಂದ ಸಾಮಾನು ಸರಂಜಾಮು ತರೋಣ. ತಂದೇನ ಇಲ್ಲಿ ಕೂರಿಸೋಣ. ಅವರಿಗೆ ವಿಶ್ರಾಂತಿಯೂ ಆಗುತ್ತೆ, ವ್ಯಾಪಾರವೂ ಆಗುತ್ತೆ ಅಂತ ಯೋಚನೆ ಮಾಡಿದೆ. ನಾನು ದೂರಾಲೋಚನೆ



ಗೂಡಂಗಡಿಯ ಸಮಯ: ಕೆ.ನಾಗರಾಜ: ಜೋಡಿಕೃಷ್ಣಾಪುರ



'ಹುಲ್ಲೇತುಪ್ಪ' ಕೊಟ್ಟು ಬೆಳೆಸಿದ ತಮ್ಮ ಜೋಡೆತ್ತಿನೊಂದಿಗೆ ಕೆ.ನಾಗರಾಜ: ಜೋಡಿಕೃಷ್ಣಾಪುರ

ಮಾಡಿದ್ರೆ ಅವರು ಬೇರೆ ರೀತಿ ಆಲೋಚನೆ ಮಾಡಿದ್ರು. ಅಂಗಡೀಲಿ ಬರುವ ಆದಾಯದಿಂದ ನಾನು ಅಭಿವೃದ್ಧಿ ಹೊಂದುತ್ತೀನಿ ಅಂತ, ನಾವು ಬೇರೆ ಹೋಗ್ತೀವಿ ಅಂದ್ರು. ಅಂಗಡಿ ಇಡುವುದು ಬೇಡ ಅಂತ ಹಿಸ್ಸೆ ಮಾಡುವ ಏರ್ಪಾಡು ಮಾಡಿದ್ರು. ಅವರು ಬೇರೆ ಹೋದ್ರೂ ಅಂಗಡಿ ಇಡಬೇಕು ಅನ್ನುವುದು ನನ್ನ ಮನದಲ್ಲಿ ಮೂಡಿತ್ತು. ನಂತರ ನಾನೇ ನೂರು ರೂಪಾಯಿ ಬಂಡವಾಳ ಹಾಕಿ ೨೫ ವರುಷದ ಕೆಳಗೆ ಅಂಗಡಿ ಹಾಕಿದೆ. ಹಳ್ಳಿಗೆ ಬೇಕಾದ ಚಿಲ್ಲರೆ ಸಾಮಾನು ಮಾರುತ್ತೀನಿ. ಇದ್ರಿಂದ ಜೀವನಕ್ಕೆ ಆಗಿರುವ ದೊಡ್ಡ ಅನುಕೂಲ ಅಂದ್ರೆ, ಇನ್ನೊಬ್ಬರನ್ನು ಒಂದು ರೂಪಾಯಿ ಕೇಳದ ಹಾಗೆ ಜೀವಿಸಬಹುದು. ತುಂಬಾ ಲಾಭ ಮಾಡಬೇಕು ಅಂತಾಗಲಿ, ಒಂದೇ ದಿನದಲ್ಲಿ ಮಹಡಿ ಮನೆ ಕಟ್ಟಬೇಕು ಅಂತಾಗಲಿ ನಾನು ಅಂಗಡಿ ಇಟ್ಟಿಲ್ಲ. ಆ ಆಸೆಯೂ ನನಗಿಲ್ಲ. ಹಾಗೇನಾದ್ರೂ ಇದ್ದಿದ್ರೆ ೨೫ ವರುಷದಿಂದ ಅಂಗಡಿ ನಡೀತಿರಲಿಲ್ಲ. ಈಗ ಹಳ್ಳೀಲೂ ತುಂಬಾ ಅಂಗಡಿ ಆಗಿದೆ. ಇಲ್ಲಿಯೂ ಪೈಪೋಟಿ ಇದೆ" ಅಂದ್ರು. 'ನಿಮ್ಮ ಆದರ್ಶಗಳು ಏನು?' ಅಂದದಕ್ಕೆ, 'ಇರೋದ್ರಲ್ಲಿ ತೃಪ್ತಿಪಟ್ಟು, ಇಲ್ಲದ್ದಕ್ಕೆ ಆಸೆಪಡದೆ, ಹಿಂದಕ್ಕೆ ನೋಡದೆ ಮುಂದಕ್ಕೆ ಯಾರು ಹೆಜ್ಜೆ ಹಾಕ್ತಾರೋ ಅವರೇ ಮನುಷ್ಯರು' ಅಂದ್ರು ಕೆ. ನಾಗರಾಜ. ಆಡಿದ್ದಕ್ಕೆ ಸಾಕ್ಷಿಯಾಗಿ ಅವರ ಕಣ್ಣುಗಳೂ ಮಿನುಗುತ್ತಿದ್ದು. ವ್ಯವಸಾಯ ಬೇಡ ಅನ್ನೋರು ಜೋಡಿಕೃಷ್ಣಾಪುರಕ್ಕೆ ಒಮ್ಮೆ ಬರಲಿ ಅಂತ ನನ್ನ ಮನಸ್ಸು ಆಲೋಚಿಸುತ್ತಿತ್ತು.

11. ಕೌಶಿಕ

ಸಂಕೇತಿಗಳ ರಾಜಧಾನಿ ಕೌಶಿಕ, ಸಂಕೇತಿಗಳ ಆರಾಧ್ಯದೈವ ಲಕ್ಷ್ಮೀಕೇಶವನ ದಿವ್ಯಸನ್ನಿಧಿ, ಮಹರ್ಷಿ ವಿಶ್ವಾಮಿತ್ರನ ಸೃಷ್ಟಿ. ಕೌಶಿಕಗ್ರಾಮ ಐತಿಹಾಸಿಕ ಹಿನ್ನೆಲೆಯುಳ್ಳದ್ದು. ಒಂದು ಕಾಲದಲ್ಲಿ ಸಂಕೇತಿಗಳ ೨೦೦ ಕುಟುಂಬಗಳು ಇಲ್ಲಿ ನೆಲೆಸಿದ್ದಂತೆ. ನಂತರ ಚಿಲ್ಲು ಒಡೆದು ಮರಿತಮ್ಮನಹಳ್ಳಿ, ಮತ್ತೂರು ಹೊಸಳ್ಳಿ, ಕುಪ್ಪಳ್ಳಿ ಮೊದಲಾದ ಎಡೆಗಳಿಗೆ ಕೆಲವು ಕುಟುಂಬಗಳು ವಲಸೆ ಹೋಗಿವೆ.



ಶ್ರೀಲಕ್ಷ್ಮೀಕೇಶವಸ್ವಾಮಿ ದೇವಸ್ಥಾನದ ಎದುರು ಬೀದಿ: ಕೌಶಿಕ

ಹಾಸನ-ಹೊಳೆನರಸೀಪುರ ರಸ್ತೆಯಲ್ಲಿ ಒಂಬತ್ತು ಕಿಲೋಮೀಟರ್ ಕ್ರಮಿಸಿದ್ರೆ ಸಿಗುವ ವೃತ್ತದಲ್ಲಿ ಎಡಭಾಗಕ್ಕೆ ಕೌಶಿಕಕ್ಕೆ ತೆರಳುವ ಮಾರ್ಗದಲ್ಲಿ ಮೂರು ಕಿಲೋಮೀಟರ್ ಕ್ರಮಿಸಿದ್ರೆ ಕೌಶಿಕಗ್ರಾಮ ಸಿಗುತ್ತೆ. ಕೌಶಿಕದಲ್ಲಿ ಸುಮಾರು ೩೬೦ ಎಕರೆ ಒಳ ಆಯದ ಬೃಹತ್ತಾದ ಕೆರೆಯಿದೆ. ಕೆರೆ ಕೆಳಗಿನ ೩೫೦

ಎಕರೆ ಜಮೀನು ಹಿಂದೆ ಸಂಪೂರ್ಣವಾಗಿ ಸಂಕೇತಿಗಳದೇ ಆಗಿತ್ತಂತೆ. ಕೌಶಿಕವನ್ನು ವಿಶ್ವಾಮಿತ್ರರು ಸ್ಥಾಪನೆ ಮಾಡಿದ್ದು ಅನ್ನುವುದರ ಕುರುಹಾಗಿ ದೀಪಸ್ತಂಭ ಹಾಗೂ ತಪಸ್ಸು ಮಾಡಲು ಬಳಸುತ್ತಿದ್ದ ಕಲ್ಲುಮಂಟಪ ಹಾಗೇ ಇದೆ. ಕೌಶಿಕದಲ್ಲಿ ಲಕ್ಷ್ಮೀಕೇಶವ, ಆಂಜನೇಯ, ಶಂಕರಮಠ, ನವಗ್ರಹ, ಗಣಪತಿ, ಈಶ್ವರ, ಕೊತ್ತಲಮಾರಮ್ಮ, ದ್ಯಾವಮ್ಮ ಹಾಗೂ ಪ್ಲೇಗಮ್ಮ ದೇವಸ್ಥಾನಗಳಿವೆ. ಪ್ರತಿ ವರುಷ ಚೈತ್ರ ಶುದ್ಧ ಪೂರ್ಣಿಮೆಯ ದಿನ ಲಕ್ಷ್ಮೀಕೇಶವನ ರಥೋತ್ಸವ ಜರುಗುತ್ತದೆ. ಕೌಶಿಕದಿಂದ ಚದುರಿ ಹೋದ ಎಲ್ಲ ಸಂಕೇತಿಗಳೂ ಅಂದು ಒಟ್ಟಿಗೆ ಸೇರುತ್ತಾರೆ. ಆರು ದಿನಗಳ ಕಾಲ ವಿಜೃಂಭಣೆಯಿಂದ ಹಬ್ಬ ನೆರವೇರಿಸುತ್ತಾರೆ. ಹಾಸನ-ಮೈಸೂರು ರೈಲು ಈ ಊರ ಹಾದಿಯಲ್ಲಿ ಸಂಚರಿಸುತ್ತೆ. ಮೊದಲು ಮೀಟರ್‌ಗೇಜ್ ಆಗಿದ್ದುದು ಈಗ ಬ್ರಾಡ್‌ಗೇಜ್. ಈ ರೈಲಿಗಾಗಿ ಪುರಾತನವಾದ ಕೌಶಿಕದ ಕೋಟೆ ನೆಲಸಮವಾಗಿದೆ. ಸುಮಾರು ೬೦, ೭೦ ವರುಷಗಳ ಹಿಂದೆ ೩೦, ೪೦ ಇದ್ದ ಸಂಕೇತಿಗಳ ಸಂಖ್ಯೆ ಈಗ ೧೬ಕ್ಕೆ ಇಳಿದಿದೆ. ಮನೆಗಳ ಲೆಕ್ಕದಲ್ಲಿ ಸಂಕೇತಿಗಳದ್ದು ೨೨ ಮನೆ ಇದೆ. ಕೌಶಿಕಕ್ಕೆ ನೀವು ಬಂದರೆ ಪಂಚಲಿಂಗ ದರ್ಶನ ಸಾಧ್ಯ. ಈಶಾನ್ಯದ ತ್ರಿನೇಶ್ವರ ದೇವಸ್ಥಾನ ಬಿದ್ದುಹೋಗಿದೆ, ಆಗ್ನೇಯದಲ್ಲಿ ರಾಮೇಶ್ವರ, ನೈಋತ್ಯದಲ್ಲಿ ಮಲ್ಲೇಶ್ವರ, ವಾಯವ್ಯದಲ್ಲಿ ಬಸವೇಶ್ವರ, ನಡುಮಧ್ಯದಲ್ಲಿ ಯಜ್ಞೇಶ್ವರ ದೇವಸ್ಥಾನವಿದೆ. ಕೌಶಿಕದ ಕಡ್ಲೆಬಸವನ ಪ್ರತಿಮೆ ಆರು ಅಡಿ ಎತ್ತರದ ಮಂಡಿಯೂರಿ ಕುಳಿತಿರುವ ಬಸವ. ಗದ್ದೆಹಳ್ಳದಲ್ಲಿ ಹಾಕಿದ್ದ ಸೊಪ್ಪಿನ ಕಡಲೆಯನ್ನು ಬಸವನೊಂದು ತಿಂದಿತ್ತಂತೆ. ರೈತ ಹೊಡೆದಾಗ ಅದು ಕೆರೆಯೊಳಗೆ ಈಜುತ್ತಾ ಹೋಗಿ ಚಿಕ್ಕಬಸವನಹಳ್ಳೀಲಿ ಚಿಕ್ಕಗುಡ್ಡೆಯ ಹಾಗೆ ಒಡೆದು ಮೂಡ್ತಂತೆ. ದೂರದ ಊರಿಂದ ಬಂದ ಒಡ್ಡರು, ಗುಡ್ಡೇ ಮೇಲೆ ಅಡುಗೆ ಮಾಡಿ ಊಟ ಮಾಡಿದ್ರಂತೆ. ಅವರ ಪ್ರಜ್ಞೆ ಹೋಯ್ತು. ಗುಂಪಿನ ಯಜಮಾನನಿಗೆ ಕನಸಿನಲ್ಲಿ ಬಂದ ಬಸವ, 'ನಾನು ಒಡೆದು ಮೂಡಿದ ಜಾಗದಲ್ಲಿ ದೇವಸ್ಥಾನ ಕಟ್ಟಿಸಿ' ಎಂದು ಹೇಳಿತಂತೆ. ಅವನು ಹರಕೆ ಮಾಡಿದ ಮಾರನೇ ದಿನ ಬೆಳಗ್ಗೆ ಬಸವ ಮೂರು ಅಡಿ ಎದ್ದಿತ್ತಂತೆ. ದೇವಸ್ಥಾನ ಕಟ್ಟಿದ ಬಳಿಕ ಮತ್ತೆ ಆರು ಅಡಿಗೆ ಬೆಳೀತಂತೆ. ಹಳೆಯ ದೇವಸ್ಥಾನ ಮುರಿದುಬಿತ್ತು. ಮತ್ತೆ ಹೊಸ ದೇವಸ್ಥಾನ ಕಟ್ಟಿದ್ದಾರೆ. ಈಗಲೂ ಈ ಬಸವ ಬೆಳೀತಿದೆ ಅಂತ ಊರಿನವರು ಹೇಳುತ್ತಾರೆ. ಕೌಶಿಕದ ಕೃಷಿಕರು ಶ್ರಮಜೀವಿಗಳು. ಕೌಶಿಕದ ಲಕ್ಷ್ಮೀಕೇಶವ ದೇವಸ್ಥಾನದ ಅರ್ಚಕರಾದ ಶ್ರೀನಿವಾಸ್ ಹಾಗೂ ಅವರ ತಾಯಿ ಇಂದಿರಮ್ಮ, ನಾವು ರಾತ್ರಿ ಅವರ ಮನೇಲಿ ಉಳಿದಾಗ ಗಮನ ಸೆಳೆಯುವ ವಿಚಾರ ತಿಳಿಸಿದರು. ಕೌಶಿಕದಲ್ಲಿ ಮೊದಲು ಬಹಳ ಕಳ್ಳತನ ಇತ್ತಂತೆ. ರೈಲು ಬಂದ ಮೇಲೆ ಸಮೀಪದ ತೋಟದಿಂದ ಸಾಧ್ಯವಾಗುವಷ್ಟು ಕದ್ದು ಸಾಗಿಸುತ್ತಿದ್ರಂತೆ. ರಾತ್ರಿ ಹನ್ನೆರಡಕ್ಕೆ ಹಾಗೂ ಬೆಳಗಿನ ನಾಲ್ಕು ಗಂಟೆಗೆ ಬರುತ್ತಿದ್ದ ರೈಲು ಕಳ್ಳರಿಗೆ ಕದ್ದ ಮಾಲು ಸಾಗಿಸಲು ಬಹಳ ನೆರವಾಗಿತ್ತಂತೆ. ಹಾಗಾಗಿ ಕೌಶಿಕದ ಜನರೇ ರೈಲು ನಿಲ್ಲುವುದು ಬೇಡ ಅಂದ್ರಂತೆ. ಆದ್ರೆ ಈಗ ಸಮೀಪದಲ್ಲಿ ಕೈಗಾರಿಕಾ ವಲಯ ಅಭಿವೃದ್ಧಿ ಆದ ಮೇಲೆ ಕಳ್ಳತನ ಕಡಿಮೆಯಾಗಿದೆಯಂತೆ. ಕಳ್ಳತನ ಮಾಡಿ, ಸಿಕ್ಕಿಬಿದ್ದು ಮಾನಸಿಕ ಹಿಂಸೆ ಅನುಭವಿಸುವುದಕ್ಕಿಂತ ಸಮೀಪದಲ್ಲಿ ತಲೆ ಎತ್ತಿ ನಿಂತಿರುವ H.P.Gas ಕಂಪನೀಲಿ ಕೆಲಸಕ್ಕೆ ಈ ಜನ ಸೇರಿದ್ದಾರಂತೆ. ಬೆಳಗ್ಗೆ ಎದ್ದು ಕೆಲಸಕ್ಕೆ ಹೋದರೆ ಬರೋದು ಸಂಜೆಯೇ. ಹೀಗಾಗಿ ಅವರ ಹಟ್ಟೀಲಿ ಯಾರಾದ್ರೂ ಬೆಳಿಗ್ಗೆ ಎಂಟು ಗಂಟೆ ಆದ ಮೇಲೆ ಸತ್ರೆ, ಎಲ್ಲರೂ ಬಂದು ಅಳೋದು ರಾತ್ರಿ ಎಂಟರ ನಂತರವೇ ಎಂದು ಮಾರ್ಮಿಕವಾಗಿ ನುಡಿಯುತ್ತಾರೆ. ತೋಟಗಳಲ್ಲಿ ಕಳ್ಳತನ ಕಡಿಮೆಯಾದ್ರೆ ಸಂಕೇತಿಗಳಿಗೆ ಬಹಳ ಒಳಿತು ಅಂತ ತಿಳಿಸಿದ್ರು. ಕೌಶಿಕದಲ್ಲಿ ಗ್ರಂಥಾಲಯ ಸ್ಥಾಪಿಸಲು ಬಹಳ ಹೆಣಗಾಡಿದ್ದಾರೆ ಇಂದಿರಮ್ಮ. ಗ್ರಾಮೀಣ ಹೆಣ್ಣುಮಕ್ಕಳು ಓದಬೇಕು, ಮುಂದೆ ಬರಬೇಕು ಅಂತ ಇವರು ಹೇಳುತ್ತಾರೆ. ಕೌಶಿಕದಲ್ಲಿ ಸಂಕೇತಿಗಳು ವಾಸಿಸಿದ ನಾಲ್ಕು ಬೀದಿಯ ಮನೆಗಳು ಹಾಗೇ ಇವೆ. ಮರಿಹಕ್ಕಿಗಳು ರೆಕ್ಕೆ ಬಲಿತ ಮೇಲೆ ದೂರದ ಊರಿಗೆ ಹಾರಿ ಹೋಗಿವೆ. ಈಗ ಇಲ್ಲಿ ಉಳಿದಿರುವುದು ವಯೋವೃದ್ಧರು, ಹಾಗೂ ಅವರ ನೆನಪುಗಳು. ಯುವಕರು ಕಡಿಮೆ. ಸಾಧ್ಯವಾದಷ್ಟು ಮಟ್ಟಿಗೆ ಅವರ ಅರಿವಿನ ಅಂಗಳವನ್ನು ಉಳುವ ಯತ್ನ ಮಾಡಿದ್ದೇವೆ.

ಅ) ಕೆ. ಸುಬ್ಬರಾಯ ಇ/ಮ ಕೇಶವಯ್ಯ
ಕೌಶಿಕ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 227319



ಸುಲೋಚನ-ಕೆ.ಸುಬ್ಬರಾಯ ದಂಪತಿ: ಕೌಶಿಕ

ನನ್ನ ತಂದೆ ಭಾರೀ ಆಳು. ತೋಟದಲ್ಲಿ ಒಮ್ಮೆ ಆಕಸ್ಮಿಕವಾಗಿ ಅಡಿಕೆ ಮರ ಕಡಿದು ಬಿದ್ದಾಗ, ಅದಕ್ಕೆ ಹಬ್ಬಿರುವ ವಿಳ್ಳೇದೆಲೆ ಹಂಬು ಹಾಳಾಗುತ್ತೆ ಅಂತ ಇಡೀ ಮರವನ್ನೇ ತಬ್ಬಿ ಹಿಡಿದ್ರಂತೆ. ಕೌಶಿಕದ ಕೆರೆ ಹುಚ್ಚುಕೋಡಿ ಬಿದ್ದಾಗಲೂ ಧೈರ್ಯದಿಂದ ಈಜ್ತಾ ಇದ್ರಂತೆ. ಆದರೆ ಕೌಶಿಕದ ಜಾತ್ರೆಯ ಸಂದರ್ಭದಲ್ಲಿ ಅದೇ ಕೆರೆಯಲ್ಲಿ ಅವರ ಪರ್ಯವಸಾನ ಆಗಿದ್ದು ವಿಪರ್ಯಾಸ!

ಕೌಶಿಕದ ಕೇಶವಯ್ಯ ಹಾಗೂ ಮತ್ತೂರಿನ ಸೀತಾಲಕ್ಷ್ಮಿ ದಂಪತಿಗಳ ಮಗ ಕೆ. ಸುಬ್ಬರಾಯರಿಗೆ ಈಗ ೬೨ ವರುಷ. ಇವರ ಪತ್ನಿ ಸುಲೋಚನ ಮುದ್ದಾಪುರದ ರಾಮಸ್ವಾಮಯ್ಯ ಹಾಗೂ ವೆಂಕಟಲಕ್ಷ್ಮಿ ಅವರ ಮಗಳು. ಕೆ.ಸುಬ್ಬರಾಯರಿಗೆ ಇಬ್ಬರು ಗಂಡು ಹಾಗೂ ಒಬ್ಬ ಮಗಳಿದ್ದಾಳೆ. ಸುಬ್ಬರಾಯರಿಗೆ ನಾಟಿ ಔಷಧದ ಜ್ಞಾನವೂ ಇದೆ. ಇಸಬು, ಕಾಮಾಲೆ, ಕೈಮಸ್ಕು, ಕಜ್ಜಿ, ಬಸುರಿಗೆ ಔಷಧಿ ಹಾಗೂ ಹಸುಗಳಿಗೂ ನಾಟಿ ಔಷಧ ನೀಡುತ್ತಾರೆ. 'ಆದಾಯ ಸಂಪಾದನೆಗೆ ಔಷಧಿ ನೀಡುತ್ತಿಲ್ಲ. ಸೇವೆಯ ದೃಷ್ಟಿಯಿಂದ ಮಾತ್ರ ನೀಡುತ್ತೇನೆ' ಎಂದು ಸುಬ್ಬರಾಯರು ಸ್ಪಷ್ಟಪಡಿಸಿದರು. ಸುಬ್ಬರಾಯರ ಪತ್ನಿ ಸುಲೋಚನ ಅವರು ಮಾತಿಗೆ ಸಿಕ್ಕಿದರು. 'ನಮ್ಮೆಜಮಾನರ ಮನೆಯಲ್ಲಿ ಒಟ್ಟು ಕುಟುಂಬ ಐದು ಜನ ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣುಮಕ್ಕಳಿದ್ರು, ನನ್ನ ಅತ್ತೆ ಮಾವನಿಗೆ. ನಾನೇ ಹಿರಿಯ ಸೊಸೆ. ನೀರಿಗೆ ಅವತ್ತು ಕಷ್ಟವಿತ್ತು. ಮನೆ ಬಳಕೆಗೆ ಸಂಪೂರ್ಣವಾಗಿ ನೀರನ್ನು ಹೊತ್ತು ತರಬೇಕಿತ್ತು. ನಮ್ಮೆಜಮಾನರ ತಮ್ಮಂದಿರು ಹಾಗೂ ತಂಗಿಯರ ಮದುವೆ ಹಾಗೂ ನಾದಿನಿಯರ ಬಾಣಂತನ ಎಲ್ಲ ಜವಾಬ್ದಾರಿಯನ್ನೂ ನಿಭಾಯಿಸಿದ್ದೇನೆ. ಇವತ್ತಿನ ಹುಡುಗಿಯರಾಗಿದ್ರೆ ಖಂಡಿತ ಓಡಿಹೋಗೋರು' ಎಂದು ಆತ್ಮೀಯವಾಗಿ ನಗುತ್ತಾರೆ. ಅವರು ಹೇಳುವ ಮಾತಿನಲ್ಲಿ ಎಷ್ಟು ಸತ್ಯವಿದೆ ಅನ್ನಿಸಿತು. ನಂತರ ಸುಬ್ಬರಾಯರು ಮಾತನಾಡಿದ್ರು 'ನಾನು ೧೨ನೇ ವಯಸ್ಸಿನ ಹುಡುಗನಾಗಿದ್ದಾಗಿನಿಂದ ವ್ಯವಸಾಯ ಮಾಡುತ್ತಿದ್ದೀನಿ. ನನ್ನ ತಂದೆಗೆ ಹುಶಾರಿಲ್ಲದ ಕಾರಣ, ಓದುವ ಮನಸ್ಸಿದ್ದರೂ ಏಳನೇ ತರಗತಿಗೇ ನನ್ನ ವಿದ್ಯಾಭ್ಯಾಸ ಮೊಟಕುಗೊಳಿಸಿ ಊರಿಗೆ ಬರಬೇಕಾಯ್ತು. ತಂದೆಗೆ ಮೂರು ಎಕರೆ ತೋಟ, ಮೂರು ಎಕರೆ ಗದ್ದೆ ಇತ್ತು. ತಂದೆ ಸ್ವತಃ ವ್ಯವಸಾಯ ಮಾಡಿ, ಅಡಿಕೆ, ತೆಂಗು, ವಿಳ್ಳೇದೆಲೆ ಹಂಬನ್ನು ತೋಟದಲ್ಲಿ ಹಾಕಿದ್ರು. ಬಹಳ ಕಷ್ಟಪಟ್ಟು ದುಡೀತಿದ್ರು. ವ್ಯವಸಾಯದಲ್ಲಿ ನನಗೆ ನನ್ನ ತಂದೆಯೇ ಗುರು. ಐದು ಜನ ಅಣ್ಣತಮ್ಮಂದಿರಲ್ಲಿ ನಾನು ನನ್ನ ತಮ್ಮ ಮಾತ್ರ ವ್ಯವಸಾಯ ಮಾಡುತ್ತಿರುವುದು. ನಾವು ಅಣ್ಣತಮ್ಮಂದಿರು



ತಮ್ಮ ಕಡಲೆ ಹೊಲದಲ್ಲಿ ಕೆ.ಸುಬ್ಬರಾಯರು: ಕೌಶಿಕ



ಸಾಂಪ್ರದಾಯಿಕ ವಿಧಾನದಲ್ಲಿಯೇ ಜೋಡಿ ಗಡಿಗೆಯಲ್ಲಿ 'ತೂಕ' ಹಾಕುತ್ತಿರುವ ಕೆ.ಸುಬ್ಬರಾಯರು: ಕೌಶಿಕ

ಪಾಲಾದ ಮೇಲೆ ನನಗೆ ಅರ್ಧ ಎಕರೆ ಗದ್ದೆ ಹಾಗೂ ಅರ್ಧ ಎಕರೆ ತೋಟ ಬಂತು. ನಾನೇ ಎರಡು ಎಕರೆ ತೋಟ ರೂಢಿಸಿದ್ದೇನೆ. ಸಾಲ ಸೋಲ ಮಾಡಿ ಜಮೀನು ರೂಢಿಸಿ ವ್ಯವಸಾಯದಿಂದ ಬಂದ ಆದಾಯದಿಂದ ತೀರಿಸಿದ್ದೇನೆ. ಸುಮಾರು ೨೨ ವರುಷಗಳ ಹಿಂದೆ ೩೨ ಸಾವಿರ ಖರ್ಚು ಮಾಡಿ ನೆಲಬಾವಿ ಕಟ್ಟಿದೆ. ಅದರಿಂದ ನೀರನ್ನು ಹೊಯ್ದು ಮೂರು ಎಕರೆ ತೋಟಕ್ಕೆ ಅಡಿಕೆ, ತೆಂಗು, ಬಾಳೆ ನಾನೇ ಕಟ್ಟಿದ್ದೇನೆ. ಅಡಿಕೆಗೆ ವಿಳ್ಳೆ ಹಂಬು ಹಾಕಿ ಆರು ವರುಷ ಆಯ್ತು. ಕೌಶಿಕದ ಏಲಕ್ಕಿ ಬಾಳೆ ಬಹಳ ರುಚಿಯಾಗಿರುತ್ತೆ. ಖಾಯಿಶ್ ಪಟ್ಟು ಜನ ತೊಗೋತಾರೆ. ತೋಟದಿಂದ ತಕ್ಕಮಟ್ಟಿಗೆ ಆದಾಯ ಸಿಗ್ತಾ ಇದೆ. ನನಗೆ ಇಬ್ಬರು ಗಂಡುಮಕ್ಕಳು ಹಾಗೂ ಒಬ್ಬಳು ಮಗಳು. ಮಕ್ಕಳು ನನ್ನ ವ್ಯವಸಾಯ ಮುಂದುವರೆಸುತ್ತಾರೆ ' ಎಂದ್ರು ಸುಬ್ಬರಾಯರು.

ಹೈನುಗಾರಿಕೆಯಲ್ಲಿ ವಿಶೇಷ ಅನುಭವವನ್ನು ಸುಬ್ಬರಾಯರು ಹೊಂದಿದ್ದಾರೆ. ಒಂದು ಎಕರೆ ಜಮೀನನ್ನು ತಾವು ಸಾಕಿದ ದನಗಳು ಮೇಯಲು ಬಿಟ್ಟಿದ್ದಾರೆ. ಗೋಮಾಳಗಳು ಹಳ್ಳಿಗಳಲ್ಲಿ ಅಪರೂಪವಾಗುತ್ತಿರುವ ಈ ದಿನಗಳಲ್ಲಿ ಇದು ಅನಿವಾರ್ಯ ಎನ್ನುತ್ತಾರೆ. ಹೈನುಗಾರಿಕೆಯಲ್ಲಿನ ವಿಶೇಷಗಳೇನು ಅಂದಾಗ ಹೇಳಿದ್ರು, 'ನೋಡಿ, ನಮ್ಮ ತಂದೆ ಕಾಲದಲ್ಲಿ ಸುಮಾರು ೬೦ ರಾಸುಗಳಿದ್ವು. ಈಗ ನಾನು ೨೦ ರಾಸುಗಳನ್ನು ಇಟ್ಟಿದ್ದೇನೆ. ಎಲ್ಲವೂ ನಾಟಿ ರಾಸುಗಳು ಹಾಗೂ ಎಮ್ಮೆಗಳು. ಪ್ರತಿನಿತ್ಯ ಅವನ್ನು ಮೇಯಿಸಿಕೊಂಡು ಬರುತ್ತೇನೆ. ಜಮೀನಿನಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಹುಲ್ಲು ದನಗಳಿಗೆ ಆಹಾರ. ಸುಮಾರು ೨೦ ರಾಸುಗಳಿಂದ ೪ ಲೀಟರ್ ಹಾಲು ಸಿಗುತ್ತೆ ಅಷ್ಟೆ. ಮನೆ ಬಳಕೆಗೆ ಆಗುತ್ತೆ. ದನಗಳಿಂದ ಪೂರ್ಣ ಹಾಲನ್ನು ಕರೆಯುವುದಿಲ್ಲ. ಕರುಗಳಿಗೇ ಹಾಲು ಬಿಡ್ತೀನಿ. ಹೋದ ವರುಷ ನಾಲ್ಕು ಕರುಗಳನ್ನು ಮಾರಿದೀನಿ. ಈ ವರುಷವೂ ನಾಲ್ಕು ಕರುಗಳು ಇವೆ. ಕರುಗಳನ್ನು ಮಾರಾಟ ಮಾಡುವುದರಿಂದಲೂ ಆದಾಯ ಸಿಗ್ತಿದೆ. ಸುತ್ತಮುತ್ತ ಪರಿಚಯ ಇರೋದ್ರಿಂದ ಮನೆ ಬಾಗಿಲಿಗೇ ಬಂದು ಕರುಗಳನ್ನು ಹಿಡಿದುಕೊಂಡು ಹೋಗ್ತಾರೆ. ಮಾರಾಟಕ್ಕೇನೂ ಸಮಸ್ಯೆಯಿಲ್ಲ. ವ್ಯವಸಾಯ ನನಗೆ ತೃಪ್ತಿ ತಂದ ವೃತ್ತಿ' ಅಂದರು ಸುಬ್ಬರಾಯರು. ಕೃಷಿಯಿದ್ದಲ್ಲಿ ದುರ್ಭಿಕ್ಷವಿಲ್ಲ ಎಂಬ ನಾಣ್ಣುಡಿಗೆ ಕಲಶಪ್ರಾಯದಂತಿತ್ತು ಇವರ ಮಾತುಗಳು.



ಕೆ.ಸುಬ್ಬರಾಯರ ಮಗ ಸುಬ್ಬರಾಮು ತಮ್ಮ ಕೊಟ್ಟಿಗೆಯಲ್ಲಿ ಹಾಲು ಕರೆಯುತ್ತಿರುವ ದೃಶ್ಯ: ಕೌಶಿಕ

ಆ) ಕೆ.ವಿ. ಸುಬ್ರಹ್ಮಣ್ಯ ಇ/ಮ ಕೆ.ವಿ. ವೆಂಕಟರಾಮಯ್ಯ
ಕೌಶಿಕ, ಹಾಸನ (ತಾ) ಜಿಲ್ಲೆ, ದೂರವಾಣಿ: 08172 227318

ಕಾರುಭತ್ತ ಹಾಗೂ ಪುಟ್ಟಭತ್ತ ಅನ್ನೋ ತಳೀನ ಹಿಂದೆ ಬೆಳೀತಿದ್ವು. ಇವುಗಳ ಬೆಳವಣಿಗೆ ಜಾಸ್ತಿ, ಇಳುವರಿ ಕಡಿಮೆ. ನಂತರ ಕೃಷಿ ಇಲಾಖೆ ನೀಡಿದ ಥಾಯ್‌ಚುಂಗ್ ಅನ್ನುವ ಸುಧಾರಿತ ತಳಿಯನ್ನು ಆಧುನಿಕ ಕೃಷಿ ಪದ್ಧತಿಗಳನ್ನು ಅನುಸರಿಸಿ ಬೆಳೆದೆ. ಒಂದು ಗುಂಟೆಗೆ ಒಂದು ಕ್ವಿಂಟಾಲ್‌ನಂತೆ ಎಕರೆಗೆ ೪೦ ಕ್ವಿಂಟಾಲ್ ಭತ್ತ ಬೆಳೆದು ಅತ್ಯುತ್ತಮ ಕೃಷಿಕ ಅನ್ನುವ ಪ್ರಶಸ್ತಿ ಪಡೆದೆ.

ಕೌಶಿಕದ ಕೆ.ವಿ. ವೆಂಕಟರಾಮಯ್ಯ ಹಾಗೂ ಪೂಮಗಾಮೆಯ ಸಾವಿತ್ರಮ್ಮ ದಂಪತಿಗಳಿಗೆ ಒಟ್ಟು ನಾಲ್ಕು ಗಂಡು ಹಾಗೂ ಮೂರು ಜನ ಹೆಣ್ಣುಮಕ್ಕಳು. ಕಿರಿಯ ಮಗ ಕೆ.ವಿ. ಸುಬ್ರಹ್ಮಣ್ಯ ಅವರಿಗೆ ಈಗ ೫೨ ವರುಷ. ಇವರ ಪತ್ನಿ ಶಶಿಕಲಾ ಕಟ್ಟೆಪುರದ ಸುಬ್ಬರಾವ್ ಹಾಗೂ ಸರಸ್ವತಿ ದಂಪತಿಗಳ ಮಗಳು. ವ್ಯವಸಾಯದ ಹಾಗೂ ಬದುಕಿನ ಅನುಭವಗಳನ್ನು ಪಡೆಯಲು ಸುಬ್ರಹ್ಮಣ್ಯ ಅವರನ್ನು ಮಾತನಾಡಿಸಿದೆವು.


ಅಗತೆಗೆ ನಿಂತ ಕೆ.ವಿ.ಸುಬ್ರಹ್ಮಣ್ಯ: ಕೌಶಿಕ

'ನನ್ನ ತಂದೆ ನೂರು ವರುಷದ ತುಂಬು ಜೀವನವನ್ನು ನಡೆಸಿ ಕಾಲವಾದ್ರು. ನನ್ನ ತಂದೆ ತಾಯಿ ಪಟ್ಟಿರುವ ಕಷ್ಟವನ್ನು ನೆನೆಸಿಕೊಂಡ್ರೆ ನಮಗೆ ಕಷ್ಟ ಆಗುತ್ತೆ. ನಾವು ತುಂಬಾ ಮಕ್ಕಳು. ಹಳ್ಳೀಲಿ ಜೀವನ ನಿರ್ವಹಣೆ ಆಗದೆ, ತಂದೆ ತೋಟದ ಏಲಕ್ಕಿ ಬಾಳೆಯನ್ನು ರೈಲಿನಲ್ಲಿ ಸಾಗಿಸಿ ಮಾರುತ್ತಿದ್ರು. ಕಡೆಗೆ ವಿದ್ಯುತ್ ಮಂಡಳಿಯಲ್ಲಿ ಲೈನ್‌ಮನ್ ಆಗಿ ಎರಡು ರೂಪಾಯಿ ಸಂಬಳಕ್ಕೆ ಸೇರಿದ್ರು. ಕಡೆಗೆ ೧೯೮೫ರಲ್ಲಿ ಮೇಸ್ತ್ರಿಯಾಗಿ ರಿಟೈರ್ ಆದರು. ಒಂದು ಎಕರೆ ಗದ್ದೆ ಹಾಗೂ ಒಂದು ಎಕರೆ ತೋಟ ಇತ್ತು. ತಂದೆ ವ್ಯವಸಾಯಾನೂ ಮಾಡ್ತಿದ್ರು. ನಾನು PUC ವರೆಗೆ ಓದಿದೆ. ಉಳುವವನಿಗೆ ಜಮೀನು ಕಾನೂನು ಬಂದ ಮೇಲೆ, ನಮ್ಮ ತೋಟ ಗದ್ದೆ ಪರರ ಪಾಲಾಗುತ್ತೆ ಅಂತ ನಾನು ವ್ಯವಸಾಯಕ್ಕೆ ಬಂದೆ. ನಾವು ಅಣ್ಣತಮ್ಮಂದಿರು ಪಾಲಾದ ಮೇಲೆ ೨೨ ಗುಂಟೆ ತೋಟ ಬಂತು. ತೋಟದಲ್ಲಿ ಒಂದು ತೋಡುಬಾವಿ ತೆಗೆದು ಬೇಸಿಗೆಯಲ್ಲಿ ನೀರು ಹೊತ್ತು ಹೊಯ್ದು ತೋಟ ಉಳಿಸಿದೆ. ಈಗ ೨೨ ಗುಂಟೆ ಅಡಿಕೆ ತೋಟದ ಪ್ರದೇಶದಿಂದ ೨೨ ಕ್ವಿಂಟಾಲ್ ಅಡಿಕೆಯನ್ನು ಖಟಾವು ಮಾಡ್ತಿದ್ದೇನೆ. ತೋಟದಲ್ಲಿ ಕಳೆ ಬರದಂತೆ ವರುಷಕ್ಕೆ ನಾಲ್ಕು ಬಾರಿ ಕಳೆ ತೆಗೆಸ್ತೀನಿ. ಹಟ್ಟಿ ಗೊಬ್ಬರ ಹಾಕ್ತೀನಿ. ವರುಷಕ್ಕೆ ಒಂದು ಬಾರಿ ಅಗೆತ ಮಾಡ್ತೀನಿ. ವರುಷದಲ್ಲಿ ಎರಡು ಬಾರಿ ಸೀಮೆಗೊಬ್ಬರ ಕೊಡ್ತೀನಿ. ಹಾಗಾಗಿ ಉತ್ತಮ ಇಳುವರಿ ಬರ್ತಿದೆ. ಆದರೆ ಏನು ಮಾಡೋದು, ಅಡಿಕೆಗೆ ಕ್ವಿಂಟಾಲ್‌ಗೆ ೧೪೦೦ ರೂಪಾಯಿ ಇತ್ತು, ಈಗ ೬೦೦ಕ್ಕೆ ಇಳಿದಿದೆ. ಆದಾಯ ಸಿಕ್ತಿಲ್ಲ. ಹೀಗಾದ್ರೆ ಅಡಿಕೆ ಬೆಳೆಯೋದು ಹ್ಯಾಗೆ? ಅಂತ ಪ್ರಶ್ನಿಸುತ್ತಾರೆ.

ಸುಬ್ರಹ್ಮಣ್ಯ ಅವರು ಸಮೀಪದ ಸಾವಂತಹಳ್ಳಿಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹಾಲಿನ ಡೈರಿಯ ನಿರ್ವಹಣೆ ಬಗ್ಗೆ ಪ್ರಶ್ನಿಸಿದಾಗ ಹೇಳಿದ್ರು 'ಸುಮಾರು ೨೬ ವರುಷಗಳ ಹಿಂದೆ ಹಾಲಿನ ಡೈರಿ ಕೌಶಿಕದಲ್ಲಿ ಆರಂಭವಾಯ್ತು. ಆದರೆ ಇಲ್ಲಿಯ ಜನರು ಸರಿಯಾಗಿ ಹಾಲು ಹಾಕದೆ ಅಸಹಕಾರ ತೋರಿದ್ರಿಂದ ಪಕ್ಕದ ಸಾವಂತಹಳ್ಳಿಗೆ ಅದು shift ಆಯ್ತು. ಡೈರಿ ಆರಂಭವಾದಾಗಿನಿಂದ ನಾನೇ ಕಾರ್ಯದರ್ಶಿಯಾಗಿದ್ದೇನೆ. ಸುಮಾರು ೧೫೦ ಲೀಟರ್ ಹಾಲು ಬರ್ತಾ ಇದೆ. ಡೈರಿಯ ವತಿಯಿಂದ ರೈತರಿಗೆ ಸೀಮೆಹಸುಗಳನ್ನು ಕೊಡಿಸಿದ್ದೇವೆ. ಆದರೆ ಕೃಷಿಕರಿಗೆ ಹೆಚ್ಚು ಹಾಲು ಹಾಕಿ ಹಣ ಸಂಪಾದನೆ ಮಾಡುವ ಗುರಿ ಇದೆಯೇ ಹೊರತು, ಉತ್ತಮ ಗುಣಮಟ್ಟದ ಹಾಲನ್ನು ಡೈರಿಗೆ ಹಾಕುವ ಮನೋಭಾವನೆ ಇಲ್ಲ. ಹಾಗಾಗಿ ಸಂಘದ ನಿರ್ವಹಣೆ ಕಷ್ಟದ ಕೆಲಸವಾಗಿದೆ. ಬೆಳಗ್ಗೆ



ತೋಟದ ಬಾವಿಯ ದಡದಲ್ಲಿ ಹರ್ಷಚಿತ್ತ ಕೆ.ವಿ.ಸುಬ್ರಹ್ಮಣ್ಯ: ಕೌಶಿಕ

ಹಾಗೂ ಸಂಜೆ ರೈತರು ಹಾಲನ್ನು ತಂದು ಡೈರಿಗೆ ಹಾಕ್ತಾರೆ. ಆ ಹಾಲನ್ನು ಕ್ಯಾನ್‌ಗಳಲ್ಲಿ ತುಂಬಿ ಹಾಸನ ಡೈರಿಯ ಹಾಲಿನ ವಾಹನದಲ್ಲಿ ಕಳಿಸಿದ್ರೆ ನಮ್ಮ ಕೆಲಸ ಆಯ್ತು. ಉಳಿದ ಸಮಯದಲ್ಲಿ ನನ್ನ ವ್ಯವಸಾಯದ ಕೆಲಸಗಳನ್ನು ಮಾಡಬಹುದು' ಎಂದು ಹೇಳುತ್ತಾರೆ. ವ್ಯವಸಾಯದ ಬದುಕು ಸುಬ್ರಹ್ಮಣ್ಯ ಅವರಿಗೆ ಸಂಪೂರ್ಣ ತೃಪ್ತಿ ನೀಡಿಲ್ಲ. ಅವರು ಹೇಳಿದ್ರು, 'ನಾನು ಇದುವರೆಗೂ ಮುಂದುವರೆಯಲು ಆಗಿಲ್ಲ. ವ್ಯವಸಾಯಕ್ಕೆ ಖರ್ಚು ಆಗ್ತಿದೆ. ಸರಿಯಾಗಿ ಏಳ್ಗೆ ಆಗಿಲ್ಲ. ಕೂಲಿಯಾಳುಗಳ ವೆಚ್ಚ ಜಾಸ್ತಿ. ಮುಂಚೆ ದಿನಪೂರ್ತಿ ಕೆಲಸವನ್ನು ಶ್ರದ್ಧೆಯಿಂದ ಮಾಡೋರು. ೨೦ ರೂಪಾಯಿ ಕೂಲಿ ನೀಡಿದ್ರೆ ಸಾಕಾಗಿತ್ತು. ಆದರೆ ಈಗ ದಿನಕ್ಕೆ ನಾಲ್ಕು ಘಂಟೆ ಸರಿಯಾಗಿ ಕೆಲಸ ಮಾಡೋಲ್ಲ. ಅವರಿಗೆ ಕಾಲ ಕಳೆದ್ರೆ ಸಾಕು. ಅಲ್ಲದೆ ಅವರದ್ದು ಜಮೀನಿದೆ. ಮೊದಲು ಅವರ ಜಮೀನಿನ ಕೆಲಸ ಮುಗಿಸಿ ನಂತರ ನಮ್ಮ ಕೆಲಸಕ್ಕೆ ಬರ್‍ತಾರೆ. ನಮ್ಮ ಜಮೀನಿನಲ್ಲಿ ಸಮಯಕ್ಕೆ ಸರಿಯಾಗಿ ಕೆಲಸ ಆಗೋಲ್ಲ. ಅದ್ರಿಂದ ನಮಗೆ ಉಪಯೋಗ ಆಗೋಲ್ಲ. ನಾವು ಬೆಳೆದ ಬೆಳೆಗಳಿಗೆ ಧಾರಣೆ ಸಿಗೋಲ್ಲ. ಹಾಗಾಗಿ ವ್ಯವಸಾಯದಿಂದ ಲಾಭ ಆಗ್ತಿಲ್ಲ. ಆದ್ದರಿಂದ ನನ್ನ ಮಕ್ಕಳಿಗೆ ವ್ಯವಸಾಯ ಬೇಡ ಅಂತ ಹೇಳ್ತಿದೀನಿ. ನನ್ನ ಮಕ್ಕಳಿಗೆ ಹಳ್ಳಿಯಲ್ಲಿ ನಾನು ಉಳಿಯುವ ಅವಕಾಶ ನೀಡೋಲ್ಲ. ರೈತನ ಜೀವನ ಕಷ್ಟ. ಕೃಷಿಯಲ್ಲಿ ಮುಂದುವರೆಯಲು ಆಗೋಲ್ಲ. ಹಾಗಾಗಿ ಈ ಕಷ್ಟ ನಮ್ಮ ಕಾಲಕ್ಕೇ ಕೊನೆಯಾಗಬೇಕು. ನನ್ನ ಜೀವನ ಕಳೆಯುವುದರೊಳಗೆ ಬೇರೆ ಮಾರ್ಗ ಹುಡುಕಿ ಅಂತ ಮಕ್ಕಳಿಗೆ ಹೇಳಿದೀನಿ' ಅಂತ ದೃಢವಾಗಿ ಹೇಳಿದ್ರು ಸುಬ್ರಹ್ಮಣ್ಯ. ಅವರ ಮಾತುಗಳನ್ನು ಕೇಳುತ್ತಾ ತಲೆ ತೂಗುವುದೊಂದೇ ನಮಗೆ ಉಳಿದಿದ್ದ ಕೆಲಸ. ವ್ಯವಸಾಯವನ್ನು ಬಿಟ್ಟು ಬೇರೆಡೆ ತೆರಳಿರುವ ಇತರೇ ಸಂಕೇತಿಗಳ ವಾದಸರಣಿಯೂ ಇದೇ ರೀತಿ ಇದ್ದಿರಬಹುದೇ ಎಂಬ ಅನುಮಾನ ಮನದಲ್ಲಿ ಮೂಡಿದ್ದು ಮಾತ್ರ ಸತ್ಯ.

೩) ಕೆ. ಶ್ರೀನಿವಾಸಮೂರ್ತಿ ೩/ಮ ಕೇಶವಶಾಸ್ತ್ರಿ

ಕೌಶಿಕ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 227343



ಕೆ.ರಮಾಮಣಿ-ಕೆ.ಶ್ರೀನಿವಾಸಮೂರ್ತಿ ದಂಪತಿ: ಕೌಶಿಕ

ನನಗೆ ನಾನು ವ್ಯವಸಾಯ ಯಾಕೆ ಮಾಡಿದ್ನೋ ಅಂತ ಇದುವರೆಗೂ ಅನ್ನಿಸಲಿಲ್ಲ. ಮನೆಯಲ್ಲಿ ನಾಲ್ಕೈದು ಜನ ಹುಟ್ಟಿದ್ವಿ. ಅವರವರ ಯೋಗಾನ ಆ ಪರಮಾತ್ಮ ಮೊದಲೇ ಬರೆದಿರ್‍ತಾನೆ, ನೀನು ಹೀಗೇ ಜೀವನ ಮಾಡಬೇಕು ಅಂತ. ಹಾಗೇ ನನ್ನ ಜೀವನ ಕೌಶಿಕದಲ್ಲಿ ಬರೆದಿತ್ತೇನೋ ಅಂತ ನೆಮ್ಮದಿಯಾಗಿ ಇದೀನಿ.

ಕೌಶಿಕದ ಕೇಶವಶಾಸ್ತ್ರಿ ಹಾಗೂ ಕೃಷ್ಣಾಪುರದ ಕಮಲಮ್ಮ ಅವರ ಮಗ ಶ್ರೀನಿವಾಸಮೂರ್ತಿಯವರು ವಯೋವೃದ್ಧರು. ಈಗ ಅವರಿಗೆ ಅರುವತ್ತೈದು ವರುಷ. ಹೇಮಗಿರಿ ಕುಪ್ಪಳ್ಳಿಯ ಕೆ.ಕೆ. ಮೂರ್ತಿ ಹಾಗೂ ನಾಗಲಕ್ಷ್ಮಿ ದಂಪತಿಗಳ ಮಗಳು ಕೆ.ರಮಾಮಣಿ,

ಶ್ರೀನಿವಾಸಮೂರ್ತಿಗಳ ಧರ್ಮಪತ್ನಿ. ಸ್ವತಃ ವ್ಯವಸಾಯದಲ್ಲಿ ಸಾಕಷ್ಟು ಪರಿಶ್ರಮ ಹೊಂದಿರುವ ಶ್ರೀನಿವಾಸಮೂರ್ತಿಗಳನ್ನು ಅವರ ಮನೆಯಲ್ಲಿ ಮಾತನಾಡಿಸಿದಾಗ ರಾತ್ರಿಯ ಸಮಯ.

'ನನ್ನ ತಂದೆ ಶ್ರದ್ಧೆಯಿಂದ ವ್ಯವಸಾಯ ಮಾಡೋರು. ಐದು ಎಕರೆ ಹೊಲ, ಎರಡು ಎಕರೆ ತೋಟ ಹಾಗೂ ಎರಡು ಎಕರೆ ಗದ್ದೆ ಇತ್ತು. ನಾನು Middle School ವರೆಗೆ ಓದಿ ೧೫ನೇ ವಯಸ್ಸಿನಲ್ಲಿಯೇ, ವ್ಯವಸಾಯ ಮಾಡಿ ಜೀವಿಸಬಹುದೆಂದು ಊರಿಗೆ ಬಂದೆ. ಅವತ್ತಿನಿಂದ ಇವತ್ತಿನವರೆಗೂ ಅದೇ ಜಮೀನಿನಲ್ಲಿ ಕಷ್ಟಪಟ್ಟು ಜೀವನ ಮಾಡಿ ಸುಖವಾಗಿ ನೆಮ್ಮದಿಯಾಗಿ ಇದ್ದೇನೆ. ಇಲ್ಲದಿದ್ರೆ ನಮ್ಮ ಜಮೀನು ಅವತ್ತೇ ಮಾರಾಟ ಆಗಿರೋದು. ನಮ್ಮ ತಂದೆಗೆ ಒಟ್ಟು ಐದು ಜನ ಗಂಡುಮಕ್ಕಳು. ನಾವೆಲ್ಲರೂ ಒಟ್ಟಾಗಿದ್ದೀವಿ. ಪಾಲಾಗಿಲ್ಲ. ನಾನು ಮತ್ತು ನನ್ನ ತಮ್ಮ ಶೇಷಾಚಲ ಇಲ್ಲಿ ವ್ಯವಸಾಯ ಮಾಡ್ತೀವಿ. ಉಳಿದವರು ಹೊರಗಡೆ ಕೆಲಸದಲ್ಲಿ ಇದ್ದಾರೆ. ಬೆಳೆದದ್ದನ್ನು ಎಲ್ಲರೂ ಹಂಚಿಕೊಳ್ಳುತ್ತೀವಿ. ನೆಮ್ಮದಿ ಇದೆ. ನಾವು ಇರುವವರೆಗೂ ಜಮೀನನ್ನು ಚೆನ್ನಾಗಿ ನೋಡಿಕೊಳ್ತೀವಿ. ನಮ್ಮನಂತರ ಮುಂದೆ ನಮ್ಮ ಕುಟುಂಬದ ಮಕ್ಕಳು ವ್ಯವಸಾಯ ಮಾಡಬಹುದು. ಕಷ್ಟಪಟ್ಟು ರೂಢಿಸಿದ ಜಮೀನು ಕಳೀಬಾರದು ಅನ್ನುವುದು ನನ್ನ ಅಭಿಪ್ರಾಯ. ಜಮೀನಿನಲ್ಲಿ ಬೆಳೆದಿದ್ದನ್ನು ಹಂಚಿಕೊಂಡು ತಿಂದ್ರೆ ಒಟ್ಟಾಗಿ ಇರಬಹುದು. ವ್ಯವಸಾಯ ಸುಖಕರವಾಗಿರುತ್ತೆ ಅನ್ನುತ್ತಾರೆ.



ಹುಲ್ಲುಹೊರೆ ಹೊತ್ತು ಸಂಜೆ ಮನೆಗೆ ಮರಳುತ್ತಿರುವ ಕೆ.ಶ್ರೀನಿವಾಸಮೂರ್ತಿ: ಕೌಶಿಕ

'ಹಿಂದಿನ ಕಾಲದಲ್ಲಿ ವ್ಯವಸಾಯ ಉತ್ತಮ ಕಸುಬಾಗಿತ್ತು. ಶ್ರದ್ಧೆಯಿಂದ ಕೆಲಸ ಮಾಡೋರು. ಆದರೆ ಈಗಿನ ಯುವಕರಿಗೆ ವ್ಯವಸಾಯದಲ್ಲಿ ಆಸಕ್ತಿ ಇಲ್ಲ. ವ್ಯವಸಾಯ ಮಾಡೋನಿಗೆ ಹೆಣ್ಣು ಕೊಡೋಲ್ಲ. ನಿಮ್ಮ ಅಭಿಪ್ರಾಯ ಏನು ತಿಳಿಸಿ' ಅಂದಾಗ,

'ಇವತ್ತಿನ ಯುವಕರಿಗೆ ಪ್ಯಾಂಟು ಹಾಕಿ ಪೇಟೆ ತಿರುಗೋದು ಪ್ರಿಯವಾದ ಕೆಲಸ. ಬೇಸಾಯ ಕಷ್ಟ, ಕೈ ಹತ್ತೋಲ್ಲ ಅಂತ ಇಷ್ಟಪಡ್ತಿಲ್ಲ. ಸ್ವಲ್ಪ ಓದಿದ್ರೂ ಸಿಟೀಲಿ ಸಣ್ಣ ಕೆಲಸವಾದ್ರೂ ಸಾಕು ಅಂತಾರೆ. ಹಿಂದಿನವರು ಜೀವನ ಮಾಡಿದ ಹಾಗೆ, ಕಷ್ಟಪಟ್ಟು ಜೀವನ ಮಾಡುವ ಮನೋಭಾವನೆ ಇಲ್ಲ. ಆದ್ದರಿಂದಲೇ ಹಳ್ಳೀಲಿ ಉಳಿದವನಿಗೆ ಹೆಣ್ಣು ಕೊಡದ ಪರಿಸ್ಥಿತಿ ಇದೆ. ಆದರೆ ಇವತ್ತು ಪರಿಸ್ಥಿತಿ ಬದಲಾಗಿದೆ. ಸರ್ಕಾರದ ಸೌಲಭ್ಯಗಳು ಹಾಗೂ ಬ್ಯಾಂಕಿನ ಸಾಲಸೌಲಭ್ಯ ಪಡೆದು ವ್ಯವಸಾಯದಲ್ಲಿ ಮುಂದುವರೀಬಹುದು. ಹಿಂದೆ ನಮ್ಮ ಕಾಲದಲ್ಲಿ ವ್ಯವಸಾಯ ಮಾಡೋನಿಗೆ ಹೆಣ್ಣು ಕೊಡ್ತಾ ಇದ್ರು. ಆದ್ರೆ ಈಗ ಜಮೀನು ಮಾಡಿಕೊಂಡು ಹುಡುಗ ಊರಿನಲ್ಲಿ ಇದಾನೆ ಅಂದ್ರೆ, ಹಳ್ಳಿ ಜೀವನ ಕಷ್ಟ, ತೋಟ ಬಳಸಬೇಕು, ಸುಮ್ಮನೇ ಹೆಣ್ಣುಮಕ್ಕಳನ್ನು ಶ್ರಮಪಡಿಸೋದು ಯಾಕೆ ಅಂತಾರೆ. ಸಣ್ಣ ಕೆಲಸದಲ್ಲಿದ್ರೂ ಪೇಟೆಗೆ ಮಗಳನ್ನು ಕೊಡ್ತಾರೆ. ಹಿಂದಿನ ಹಾಗೆ ವೇದವಿದ್ಯೆ ಅಂತ ಜುಟ್ಟು ಬಿಟ್ಟಿದ್ರಂತೂ ಅವನಿಗೆ ಹೆಣ್ಣು ಸಿಗೋಲ್ಲ' ಅಂತ ನಗುತ್ತಾರೆ.

ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ ಅಂದರೆ,

'ನಾನು ನನ್ನ ೧೬ನೇ ವಯಸ್ಸಿನಲ್ಲಿ ಸ್ವತಃ ಎತ್ತು ಗಾಡಿ ತಂದು, ವ್ಯವಸಾಯ ಹಾಗೂ ಉಳುಮೆ ಮಾಡಿದೆ. ಮೊದಲು ಒಂದೂವರೆಯಿಂದ ಎರಡು ಗಜ ಅಗಲದ ದದ್ದು ತೆಗೆದು ಅದರಲ್ಲಿ ಬಾಳೆ ಹಾಕೋವಿ. ನಂತರ ಆ ತೋಟಕ್ಕೆ ಅಡಿಕೆ ಕಟ್ಟೋವಿ. ಮೊದಲು ಬಾಳೆ ಬೇಸಾಯದ ಫಲದಿಂದ ನಾವು ಬದುಕಿದ್ವಿ. ಅಡಿಕೆ ಐದು ಮಣ ಆಗೋದು, ನಂತ್ರ ಐದುನೂರು ಅಡಿಕೆ ಏಳಿಸಿದೆ. ಹೊಲದಲ್ಲಿ ರಾಗಿ, ಆಲೂಗೆಡ್ಡೆ ಬೆಳೀತಿದ್ದೆ. ಕೃತ್ತಿಕೆ ರೋಹಿಣಿ ಮಳೆಗೆ ಆಲೂಗೆಡ್ಡೆ ನಾಟಿ ಮಾಡಿ, ೨೫ ಕೇಜಿ ತೂಕದ ಒಂದು ಬಿತ್ತನೆ ಚೀಲಕ್ಕೆ ತಿನ್ನುವ ಆಲೂಗೆಡ್ಡೆ ೧೮ ಚೀಲ (೮೦ ಕೇಜಿ ತೂಕದ್ದು) ಬೆಳೆದಿದ್ದೇನೆ. ರಾಗಿಯ ಒಟ್ಲು ಹುಯ್ದು ಪಗಡಿ ನಾಟಿ ಮಾಡಿ ಎಕರೆಗೆ ೧೦ ರಿಂದ ೧೨ ಪಲ್ಲ ರಾಗಿ

ಬೆಳೆದಿದ್ದೇನೆ. ಒಟ್ಟು ೬೦೦ ಅಡಿಕೆಮರದಿಂದ ಸರಾಸರಿ ೧ ಲಕ್ಷ ೩೩ ಸಾವಿರ ಅಡಿಕೆ ಆಗುತ್ತೆ. ಮೂರು ನಾಟಿ ಹಸು ಇದೆ. ನಾವು ಮನೆಯವರೇ ಹಾಲು, ಮೊಸರು, ಬೆಣ್ಣೆ, ತುಪ್ಪ ಸಮೃದ್ಧವಾಗಿ ತಿಂತೀವಿ. ಆರೋಗ್ಯ ಚೆನ್ನಾಗಿದೆ. ಹಿಂದೆ ಎಲ್ಲಾ ಕೆಲಸ ನಾವೇ ಮಾಡಬೇಕಿತ್ತು. ಈಗ ತಾಂತ್ರಿಕ ಯುಗ, ಕೆಲಸ ಹಗುರ ಮಾಡಲು ಯಂತ್ರಗಳಿವೆ. ಅಡಿಕೆ ತೋಟದ ಸುತ್ತಾ ತೆಂಗಿದೆ. ಮನೆಗೆ ಕಾಯಿ ಆಗುತ್ತೆ. ಮನೇಲಿ ಧಾನ್ಯವನ್ನು ಶೇಖರಿಸಲು ಮರದ ಕಣಜ ಇದೆ. ೫೦ ಪಲ್ಲ ಹಿಡಿಯುತ್ತೆ; ಇಲಿ ಬರೋಲ್ಲ. ನಮ್ಮ ತೋಟದ ಮರದಿಂದಲೇ ಮರದ ಕಣಜ ಮಾಡಿಸಿದ್ದೇನೆ. ನನ್ನ ಒಟ್ಟು ಕುಟುಂಬದಲ್ಲಿ ಹೆಂಡತಿಯೂ ಸಹಕರಿಸಿದ್ದಾಳೆ. ನಾವೆಲ್ಲರೂ ಒಟ್ಟಿಗಿದ್ದೇವೆ. ಕಷ್ಟಪಟ್ಟರೆ ಸುಖವುಂಟು ಅನ್ನುವ ತತ್ತ್ವದಲ್ಲಿ ನಂಬಿಕೆ ಇಟ್ಟಿದ್ದೇನೆ' ಎಂದು ಸಂತೃಪ್ತಿಯಿಂದ ನುಡಿದರು ಶ್ರೀನಿವಾಸಮೂರ್ತಿಗಳು. ಅವರಿಗೆ ವಂದನೆ ಹೇಳಿ ಬಂದೆವು.

ಈ) ಕೆ.ಕೆ. ಪ್ರಸನ್ನ ಇ/ಮ ಕೆ.ಆರ್. ಕೇಶವಯ್ಯ

ಕೌಶಿಕ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 227315

ನಾನು ಏಳನೇ ತರಗತಿವರೆಗೆ ಇಲ್ಲೇ ಓದಿದೆ. ನಮ್ಮ ತಂದೆಗೆ ಬೆಂಗಾವಲಾಗಿದ್ದೆ. ವ್ಯವಸಾಯದ ಸಣ್ಣಪುಟ್ಟ ಕೆಲಸ ಮಾಡ್ತಿದ್ದೆ. ನನಗೆ ವ್ಯವಸಾಯದಲ್ಲಿ ಆಸಕ್ತಿ ಇದೆ ಅನ್ನುವುದನ್ನು ತಿಳಿದುಕೊಂಡ ತಂದೆ ನನಗೆ ಓದುವುದಕ್ಕೆ ಅವಕಾಶ ನೀಡಲಿಲ್ಲ. ನಾನು ಸ್ಕೂಲ್‌ಗೆ ಹೋಗ್ತೀನಿ ಅಂದ್ರೆ ಬೇಡ ಅನ್ನೋರು. 'ಓದಿ ಯಾವುದೋ ಖಾಸಗೀ ಕೆಲಸಕ್ಕೆ ಹೋಗುವ ಬದಲು ಮನೇ ಕೆಲಸ ಮಾಡುವುದು ಉತ್ತಮ, ನಮಗಿರುವ ಒಂದೂವರೆ ಎಕರೆ ತೋಟದಲ್ಲಿ ಆರಾಮವಾಗಿ ಜೀವಿಸಬಹುದು' ಅನ್ನೋರು. ಎಲ್ಲ ತಂದೆ-ತಾಯಂದಿರೂ ಮಕ್ಕಳನ್ನು ಓದು ಅಂದ್ರೆ ನಮ್ಮಪ್ಪ ಓದಬೇಡ ಅನ್ನೋರು!



ಚಂದ್ರಕಲಾ-ಕೆ.ಕೆ.ಪ್ರಸನ್ನ ದಂಪತಿ ಮಕ್ಕಳೊಂದಿಗೆ ತಮ್ಮ ಕೈತೋಟದಲ್ಲಿ: ಕೌಶಿಕ

ಕೌಶಿಕದ ಕೆ.ಆರ್. ಕೇಶವಯ್ಯ ಹಾಗೂ ಶಿವಮೊಗ್ಗ ಸಮೀಪದ ಹೊಸಹಳ್ಳಿಯ ರತ್ನಮ್ಮ ದಂಪತಿಗಳಿಗೆ ಒಂಬತ್ತು ಜನ ಮಕ್ಕಳು. ಐದು ಗಂಡು ಹಾಗೂ ನಾಲ್ಕು ಹೆಣ್ಣುಮಕ್ಕಳು. ಮೂರನೆಯ ಮಗನೇ ಕೆ.ಕೆ. ಪ್ರಸನ್ನ. ವ್ಯವಸಾಯದಲ್ಲಿರುವ ಉತ್ಸಾಹೀ ತರುಣ. ವಯಸ್ಸು ೪೦ ವರುಷ. ಇವರ ಪತ್ನಿ ಚಂದ್ರಕಲಾ ಸಿರ್ಸಿ ಸಮೀಪದ ಶಾಮವಳ್ಳಿಯ ಗಣಪತಿ ಹೆಗ್ಗಡೆ ಹಾಗೂ ರಾಧ ದಂಪತಿಗಳ ಮಗಳು. 'ನನ್ನ ಹೆಂಡತಿ ಹವ್ಯಕ ಸಂಪ್ರದಾಯದಿಂದ ಬಂದಿದ್ರೂ, ಇಲ್ಲಿಗೆ ಚೆನ್ನಾಗಿ ಹೊಂದಿಕೊಂಡಿದ್ದಾಳೆ. ನಾವು ಅಲ್ಲಿಗೆ ಹೋದಾಗ ಅಲ್ಲಿಯವರು ನಮ್ಮನ್ನು ಚೆನ್ನಾಗಿ ಕಾಣ್ತಾರೆ, ಅವರು ಇಲ್ಲಿಗೆ ಬಂದಾಗ ನಾವು ಅವರನ್ನು ಚೆನ್ನಾಗಿ ಕಾಣ್ತೇವಿ. ಸಂಪ್ರದಾಯಗಳ್ಯಾವುದೂ ಅಡ್ಡಿ ಬಂದಿಲ್ಲ. ಆಚಾರ ವಿಚಾರ ಅವರವರಿಗೆ ಸೇರಿದ್ದು' ಅಂತಾರೆ ಪ್ರಸನ್ನ. ಮುಂಜಾವಿನ ಮುಂಬೆಳಕಲ್ಲಿ ಪ್ರಸನ್ನ ಅವರೊಡನೆ ಮಾತಿಗಿಳಿದಾಗ ಮಾತುಕತೆಗಳಿಗೆ ಹೊಸ ಅರ್ಥ ಬಂದಿತ್ತು.

'ನನ್ನ ತಂದೆ ಸ್ವತಃ ದುಡೀತಿದ್ರು, ಕೂಲೀ ಮಾಡಿಸ್ತಿರಲಿಲ್ಲ. ಒಂದೊಂದು ರೂಪಾಯಿ ರೂಢಿಸಲೂ ಬಹಳ ಕಷ್ಟಪಟ್ಟಿದ್ದಾರೆ. ನಾವು ಒಂಭತ್ತು ಜನ ಮಕ್ಕಳು. ಒಂದು ಹೊತ್ತು ಊಟಕ್ಕಿದ್ರೆ ಮತ್ತೊಂದು ಹೊತ್ತು ಊಟಕ್ಕಿರಲಿಲ್ಲ. ಕೇವಲ ವ್ಯವಸಾಯದಲ್ಲೇ ಬಾಳಿ ಬದುಕಿದ್ದು ನಾವು. ತೋಟ ಅಂದ್ರೆ ಅಲ್ಲೇ ಇರೋರು ತಂದೆ. ನಮ್ಮ ಅಜ್ಜನಿಗೆ ಬಹಳ ಹೆದರೋರು. ಬೆಳಗ್ಗೆ ಐದೂವರೆಗೇ ಎದ್ದು ನಮ್ಮಜ್ಜ ಹಾಗೂ ತಂದೆ ಇಬ್ರೂ ತೋಟಕ್ಕೆ ಹೋಗೋರು. ನಮ್ಮ ತೋಟ ಅಂದ್ರೆ ಮುಂಚೆ ಇದೆಲ್ಲಾ ಕಾಡಂತೆ. ಬರೀ ಮುಗಳೀ ಮರಗಳೇ ತುಂಬಿದ್ವಂತೆ.

ಅದನ್ನು ಕಡಿದು, ಭೂಮಿ ಸಮ ಮಾಡಿ, ಯಾರಿಗೂ ಕೂಲಿ ಕೊಡದೇ ದುಡಿದು, ಮೊದಲು ಬಾಳೆ ಹಾಕಿದ್ರಂತೆ. ಬಾಳೇಕಾಯನ್ನು ಸಂತೇಲಿ ತಂದು ಮಾರಿ ಸಂತೆಯಿಂದ ಸಾಮಾನು ತರೋರು. ನನ್ನ ತಾಯಿ, ತಂದಿದ್ದರಲ್ಲಿ ಮಿತವಾಗಿ ಸಂಸಾರ ಮಾಡಿ ಸಹಕರಿಸಿದ್ದಾರೆ. ನಾವು ಚಿಕ್ಕಮಕ್ಕಳು. ನಾವು ಕೇಳಿದ್ದನ್ನು ಕೊಡುವ ಚೈತನ್ಯ ಇರಲಿಲ್ಲ. ನಮ್ಮನ್ನು ಮನವೊಲಿಸಿ, ತಾಯಿ, ಎಷ್ಟು ಬಂತೋ ಅಷ್ಟರಲ್ಲಿ ಸಂಸಾರ ಮಾಡೋರು. ತೋಟದಲ್ಲಿ ಬಾಳೆ ಆಶ್ರಯದಲ್ಲಿ ಅಡಿಕೆ ಏಳಿಸಿದ್ರು ತಂದೆ ಹಾಗೂ ಅಜ್ಜ. ತಂದೆ ನನಗೆ ಹೇಳೋರು, 'ನೀನು ಓದುವುದೂ ಬೇಡ, ಬೇರೆ ಕೆಲಸವೂ ಬೇಡ. ಪಿತ್ರಾರ್ಜಿತವಾದ ಆಸ್ತೀನ ಉಳಿಸು. ನೀನು ವ್ಯವಸಾಯ ಮಾಡು. ಜಮೀನು ಮಾರಿದ್ರೆ ನಮಗೆ ಲಕ್ಷ್ಮೀಕೇಶವನ ಸನ್ನಿಧಿ ಹೊರಟುಹೋಗುತ್ತೆ' ಅನ್ನೋರು. ಆದರೆ ನನಗೆ ವ್ಯವಸಾಯ ಮಾಡೋದು ಬೇಡ ಅನ್ನಿಸುತ್ತಿತ್ತು. ಇಷ್ಟು ಜಮೀನಿನಲ್ಲಿ ಜೀವನ ನಿರ್ವಹಣೆ ಸಾಧ್ಯವಾ ಅಂತ ಆಲೋಚನೆ ಮಾಡ್ತಿದ್ದೆ. SSLCವರೆಗೆ ಹಾಸನದಲ್ಲಿ ಓದಿದ ಮೇಲೆ, ೧೬ನೇ ವಯಸ್ಸಿಗೆ ಬೆಂಗಳೂರಿಗೆ ಹೋದೆ. ಒಂದು ಖಾಸಗೀ ಕೆಲಸ ಸಿಗ್ತು. ೨೬ನೇ ವಯಸ್ಸಿನವರೆಗೆ ಅಲ್ಲಿ ಕೆಲಸ ಮಾಡಿದೆ. ಅಲ್ಲಿಯ ವಾತಾವರಣ ನನಗೆ ಹಿಡಿಸಲಿಲ್ಲ. ನಮ್ಮ ಊರೇ ನನಗೆ ಸರಿ ಅಂತ ಕೌಶಿಕಕ್ಕೆ ಬಂದುಬಿಟ್ಟೆ. ಇಲ್ಲಿ ನಾನು ಬಂದು ವ್ಯವಸಾಯ ಮಾಡಲು ಹಿಡಿದು ಹದಿನಾಲ್ಕು ವರುಷಗಳಾದವು. ವ್ಯವಸಾಯವು ಸುಖಜೀವನ ಅಂತ ಈಗ ಅನ್ನಿಸಿದೆ. ಬೇರೆ ಕೆಲಸದಲ್ಲಿರುವಂತೆ ಇನ್ನೊಬ್ಬರಿಗೆ ಸಲಾಂ ಹೊಡೆಯುವ ಹಾಗಿಲ್ಲ. ನಾವು ಎಲ್ಲಿಗೆ ಹೋದ್ರೂ ಯಾರೂ ನಮ್ಮನ್ನು ಕೇಳುವ ಹಾಗಿಲ್ಲ. ವ್ಯವಸಾಯ ಬೇಸರ ತರಿಸೋಲ್ಲ. ಇದ್ದುದರಲ್ಲಿ ಜೀವನ ನಡೆಸಬಹುದು. ನಾನೂ ಸ್ವತಃ ಕೆಲಸ ಮಾಡ್ತೀನಿ. ತಂದೆ ಹೇಳೋರು, 'ನೀನು ಮೊದಲು ಸ್ವಂತ ಕೆಲಸಮಾಡು. ತೋಟದಲ್ಲಿ ಸ್ವತಃ ದುಡಿ, ಇನ್ನೊಬ್ಬರ ಮೇಲೆ ಅವಲಂಬನೆ ಆಗಬೇಡ. ಆಳುಕಾಳುಗಳಿಲ್ಲದೆ ನನ್ನ ಕೆಲಸ ಆಗೋಲ್ಲ ಅನ್ನಬೇಡ. ಬೆಳಗ್ಗೆ ಐದೂವರೆಗೆ ತೋಟಕ್ಕೆ ಹೋಗು. ಒಂಭತ್ತಕ್ಕೆ ಮನೆಗೆ ಬಾ. ದಿನನಿತ್ಯದ ಪೂಜೆ ಮುಗಿಸಿ, ತಿಂಡಿ ತಿಂದು ಮತ್ತೆ ತೋಟಕ್ಕೆ ಹೋಗು. ಎಷ್ಟು ಸಾಧ್ಯವೋ ಅಷ್ಟು ಸ್ವಂತ ಕೆಲಸ ಮಾಡು. ಬರುವ ಆದಾಯವನ್ನೆಲ್ಲಾ ಕೂಲಿ ಕೊಟ್ರೆ, ವ್ಯವಸಾಯದಿಂದ ಯಾವ ಪ್ರಯೋಜನವೂ ಆಗೋಲ್ಲ. ನಾವು ಕಷ್ಟ ಪಡಬೇಕು. ಒಂದು ಸಾರಿ ಕೂಲಿ ಕೊಟ್ರೆ ನಿನಗೆ ಕೆಲಸ ಮಾಡಲು ಬೇಸರವಾಗುತ್ತೆ. ಪ್ರತೀ ಬಾರಿ ಆ ಕೆಲಸಕ್ಕೆ ಕೂಲೀನೇ ಕರೆಸೋಣ ಅನ್ನಿಸುತ್ತೆ,' ಅನ್ನೋರು. ನಾನು ಕ್ರಿಕೆಟ್ ನೋಡಿದ್ರೆ ತಂದೆ ಸಿಕ್ಕಾಪಟ್ಟೆ ಬಯ್ಯೋರು. 'ಅದ್ರಿಂದ ನಿನಗೇನು ಸಿಗುತ್ತೆ. ನೀನು ಹಾಳಾಗ್ತೀಯ. ಅದನ್ನು ನೋಡೋ ಬದಲು ತೋಟದ ಕೆಲಸ ಮಾಡು. ಇಲ್ಲಾಂದ್ರೆ ಮನೇಲಿ ವಿಶ್ರಾಂತಿ ತೊಗೋ' ಅನ್ನೋರು. 'ಈ ಮಾತುಗಳು ನನಗೆ ವೇದವಾಕ್ಯ. ನನಗೆ ಎರಡು ಎಕರೆ ತೋಟ, ಒಂದೂವರೆ ಎಕರೆ ಗದ್ದೆ, ಹಾಗೂ ಮುಕ್ಕಾಲು ಎಕರೆ ಹೊಲ ಇದೆ. ಅಡಿಕೆ, ತೆಂಗು, ಬಾಳೆ, ಭತ್ತ, ರಾಗಿ, ಹಲ್ಲು ಜೋಳ, ಕಡಲೆ, ಸಂಬಾರ ಎಲ್ಲಾ ಬೆಳೀತೀನಿ. ಸ್ವತಃ ಕಷ್ಟಪಟ್ಟು ದುಡೀತೀನಿ. ಆಗದ್ದನ್ನು ಕೂಲಿಯಾಳುಗಳಿಗೆ ದುಡ್ಡುಕೊಟ್ಟು ಮಾಡಿಸ್ತೀನಿ' ಅಂದ್ರು ಪ್ರಸನ್ನ.

'ವಿವಿಧ ಬೆಳೆಗಳ ಬೇಸಾಯದ ವಿಚಾರದಲ್ಲಿ ನಿಮ್ಮ ಅನುಭವವೇನು?' ಅಂದರೆ ವಿವರವಾಗಿ ವಿಚಾರ ತಿಳಿಸಿದರು.




ಹಿತ್ತಲಲ್ಲಿ ಪಾತ್ರೆ ಬೆಳಗುತ್ತಿರುವ ಚಂದ್ರಕಲಾ: ಕೌಶಿಕ

'ಅಡಿಕೆ ತೋಟವನ್ನು ಅಚ್ಚುಕಟ್ಟಾಗಿಡಬೇಕು. ಕಳೆ ಬೆಳೆಯದಂತೆ ನೋಡಿಕೊಳ್ಳಬೇಕು. ತೋಟಕ್ಕೆ ಪ್ರತೀ ವರುಷ ಬೇರೆ ಮಣ್ಣು ಬೀಳಬೇಕು. ಅಗೆತ ಮಾಡಬೇಕು. ಅಗೆತದಿಂದ ಬೇರು ಕತ್ತರಿಸುತ್ತೆ. ಹೊಸ ಬೇರು ಹೊರಡುತ್ತೆ. ಬೇರಿನ ಬೆಳವಣಿಗೆ ಚೆನ್ನಾಗಿ ಆಗುತ್ತೆ. ಮರ ಚೆನ್ನಾಗಿ ಫಸಲು ಕೊಡುತ್ತೆ. ತೋಟದಲ್ಲಿ ಭಾವಿ ಇದೆ. ಬೇಸಗೇಲಿ ಅಡಿಕೆಗೆ ನೀರು ಕೊಡ್ತೀನಿ. ಒಂದು ಎಕರೇಲಿ ೬೦ ರಿಂದ ೭೦ ಕ್ವಿಂಟಾಲ್ ಇಳುವರಿ ತೊಗೋತೀನಿ. ನನ್ನ ತಂದೆ ಅಡಿಕೆಯನ್ನು ಸ್ವತಃ ಕೆಡವಿಸಿ, ಬೇಯಿಸಿ, ಅಡಿಕೆ ವ್ಯಾಪಾರ ಮಾಡೋರು. ಆದ್ರೆ ನಾನು ಚೇಣಿಗೆ ಕೊಡ್ತೀನಿ. ಅಡಿಕೆ ತೋಟದ ಸುತ್ತಾ ತೆಂಗಿದೆ. ಅಡಿಕೆ ತೋಟದಲ್ಲಿ ಬಾಳೆ ಇದೆ. ಸಾಮಾನ್ಯವಾಗಿ ಎರಡು

ಘನ ಅಡಿ ಗುಂಡಿ ತೆಗೆದು ಬಾಳೆ ಹಾಕ್ತಾರೆ. ಅದ್ರಲ್ಲಿ ಅಂಥ ಇಳುವರಿ ಬರೋಲ್ಲ. ಬಾಳೆ ಬೇರು ಹರೀಬೇಕು. ಆಗ ಇಳುವರಿ ಜಾಸ್ತಿ. ಅದಕ್ಕೆ ನಾನು ದದ್ದು ತೆಗೆದು ಬಾಳೆ ನಾಟಿ ಮಾಡ್ತೀನಿ. ಒಂದೂವರೆ ಅಡಿ ಅಗಲ ಎರಡು ಅಡಿ ಆಳದ ದದ್ದನ್ನು ತೋಟದಲ್ಲಿ ತೆಗೀತೀನಿ. ಅದರಲ್ಲಿ ೧೨ ಅಡಿಗೆ ಬಾಳೆ ಕಂದನ್ನು ನಾಟಿ ಮಾಡ್ತೀನಿ. ತುಂಬಾ ಹತ್ರ ನಾಟಿ ಮಾಡಿದ್ರೆ ಬಾಳೆಗೆ ಬಾಳೆ ಕೂಡುತ್ತೆ, ಇಳುವರಿ ಬರೋಲ್ಲ. ಕಾಯಿ ಆಗೋಲ್ಲ. ನಾವು ಏಲಕ್ಕಿ ಬಾಳೆ ಬೆಳೆದಾಗ ಬುಡದಲ್ಲಿ ೧೦ ಕಂದು ಹೊರಟಿತ್ತು. ಆ ಹತ್ತೂ ಕಂದಿನಲ್ಲಿ ಒಂದೇ ಪ್ರಕಾರದ ಗೊನೆ ಬಿಟ್ಟಿತ್ತು. ದದ್ದು ತೆಗೆದು ಬಾಳೆ ಹಾಕಿದ್ರೆ ೨೦, ೩೦ ವರುಷ ಬಾಳೆ ಹಾಗೇ ಇರುತ್ತೆ. ನಮ್ಮ ತಂದೆ ಹಾಕಿದ ಬಾಳೆ ಈಗಲೂ ಇದೆ. ಅಡಿಕೆ ತೋಟಕ್ಕೆ ಮಣ್ಣು, ಗೊಬ್ರ ಹಾಕುವಾಗ ಇದಕ್ಕೆ ಹಾಕಿದ್ರೆ ಆಯ್ತು. ಅಡಿಕೇನೂ ಸಹ ಎಂಟು ಅಡಿಗೇ ಹಾಕಬೇಕು. ನನ್ನ ಬೇಸಾಯ ಕ್ರಮದಲ್ಲಿ ಒಂದು ಏಲಕ್ಕಿ ಬಾಳೆ ಗೊನೇಲಿ ೧೦೦ ರಿಂದ ೧೨೦ ಕಾಯಿ ಬರುತ್ತೆ. ಕೌಶಿಕದ ಏಲಕ್ಕಿ ಬಾಳೆ ಡೆಲ್ಲೀಲೂ famous. ಬಹಳ ರುಚಿಯಾಗಿರುತ್ತೆ. ಆ ತಳಿಯನ್ನು ಈಗಲೂ ಉಳಿಸಿಕೊಂಡಿದ್ದೀನಿ. ಒಂದು ಗೊನೆ ೨೫೦ ರೂಪಾಯಿಗೆ ಮಾರಾಟ ಆಗುತ್ತೆ. ನನ್ನ ತೋಟದಲ್ಲಿ ಈಗಲೂ ೧೫೦ ಬುಡ ಇದೆ. ಮನೆಯ ಹಿಂಬದಿಯಲ್ಲಿ ಒಂದು ಸಣ್ಣ ಕೈತೋಟ ಮಾಡಿದ್ದೇನೆ. ಅರುವತ್ತು-ನಲವತ್ತು ಅಡಿ ಜಾಗ ಅದು. ಅಲ್ಲಿ ಹೂವಿನಗಿಡ, ಹಾಗೂ ತರಕಾರಿ ಬೆಳೆಗಳಾದ ಬದನೆ, ಮೆಣಸಿನಕಾಯಿ, ಹಾಗಲಕಾಯಿ ಗಿಡ ಹಾಕಿದೀನಿ. ಪರಂಗಿ, ನಿಂಬೆ, ನುಗ್ಗೆ ಗಿಡಗಳು ಇವೆ. ಮಳೆಗಾಲದಲ್ಲಿ ತರಕಾರಿ ಸಿಗುತ್ತೆ. ಮನೆಯ ನೀರಿನ ಸದುಪಯೋಗ ಆಗುತ್ತೆ. ದೇವರ ಪೂಜೆಗೆ ಹೂವು ಸಿಗುತ್ತೆ. ಮನೇಲಿ ಒಂದು ಕೈತೋಟ ಇದ್ರೆ ಮನಸ್ಸಿಗೆ ಸಮಾಧಾನ. ಗದ್ದೇಲಿ ನೀರಿದ್ದಾಗ ಭತ್ತ ಬೆಳೀತೀವಿ. ಕೆರೆ ಒಣಗಿದಾಗ ಕಡಲೆ, ಮೆಂತ್ಯ ಹಾಗೂ ಸಂಬಾರ ಬೆಳೀತೀವಿ. ಮನೆಗೂ ಆಗುತ್ತೆ, ಹೆಚ್ಚಿನದನ್ನು ಮಾರಬಹುದು. ಇದರ ಬೇಸಾಯವನ್ನು ಮಕ್ಕಳೂ ಸಹ ಮಾಡಬಹುದು. ಮೊದಲು ಜಮೀನನ್ನು ಉಳುಮೆ ಮಾಡಿ, ಬೀಜವನ್ನು ಎರಚಿ ಉಕ್ಕೆ ಹೊಡೆದ್ರೆ, ಆಮೇಲೆ ಕೀಳುವಾಗ ಹೋದ್ರೆ ಆಯ್ತು. ಡಿಸೆಂಬರ್ ತಿಂಗಳಿನಲ್ಲಿ ಬಿತ್ತನೆ ಮಾಡೋದ್ರಿಂದ, ಆಗ ಮಳೆ ಇರೋಲ್ಲ, ಹಾಗಾಗಿ ಕಳೆ ಬರೋಲ್ಲ. ವ್ಯವಸಾಯ ತುಂಬಾ ಸುಲಭ. ಕಡಲೆ ಬಿತ್ತನೆ ಮಾಡೋದಾದ್ರೆ ಮೊದಲು ಬೀಜವನ್ನು ನೆನೆಸಬೇಕು. ಆಗ ಸುಲಭವಾಗಿ ಮೊಳಕೆ ಒಡೆಯುತ್ತೆ. ಇಬ್ಬನೀಲೇ ಬೆಳೆ ಬರುತ್ತೆ. ಕೆಲವರು ಹಸೀಕಡಲೆ ಕೀಳ್ತಾರೆ. ನಾನು ಒಣಗಿದಾಗ ಕೀಳ್ತೀನಿ. ಎರಡರಿಂದ ಮೂರು ಕ್ವಿಂಟಾಲ್ ಇಳುವರಿ ಸಿಗುತ್ತೆ. ಕಡಲೆ ಹಾಗೂ ಮೆಂತ್ಯವನ್ನು ಒಟ್ಟಿಗೆ ಬಿತ್ತನೆ ಮಾಡಬಹುದು. ಇವೆರಡರ ಬೆಳೆ ಬರಲು ಒಂದು ತಿಂಗಳ ವೆತ್ಯಾಸವಿರುತ್ತೆ. ಮೊದಲು ಮೆಂತ್ಯವನ್ನು ಬಿತ್ತನೆ ಮಾಡುವುದಾದ್ರೆ ಬೀಜವನ್ನು ನೆನೆಸುವುದು ಬೇಕಿಲ್ಲ, ಮಣ್ಣಿನ ತೇವಕ್ಕೆ ಬೆಳೆ ಬರುತ್ತೆ. ಒಂದು ಎಕರೇಲಿ ಒಂದು ಕ್ವಿಂಟಾಲ್ ಸಂಬಾರ ಸಿಗುತ್ತೆ. ನನ್ನ ಜೀವನ ನಿರ್ವಹಣೆ ಮಾಡುವಷ್ಟು ಆದಾಯ ವ್ಯವಸಾಯದಿಂದ ಸಿಕ್ತಾ ಇದೆ. ತೋಟವನ್ನು ಇನ್ನೂ ಚೆನ್ನಾಗಿ ಅಭಿವೃದ್ಧಿಮಾಡಿ, ವ್ಯವಸಾಯದಲ್ಲೇ ಬದುಕಿ ಬಾಳಬೇಕು ಅನ್ನುವುದು ನನ್ನ ಆಸೆ' ಎಂದು ಹೇಳಿದ್ರು ಕೆ.ಕೆ. ಪ್ರಸನ್ನ. ಅವರ ಮಾತುಗಳಿಗೆ ಪೂರಕವಾಗಿ ಮುಖದ ಮಂದಹಾಸ ಮಿನುಗುತ್ತಿತ್ತು.

12. ಮೊಸಳೆ

ಹಾಸನ ಜಿಲ್ಲೆ ಶಾಂತಿಗ್ರಾಮ ಹೋಬಳಿ ಹೊಸಳ್ಳಿ ಪಂಚಾಯ್ತಿಗೆ ಸೇರಿರುವ ಮೊಸಳೆ ಗ್ರಾಮ ಸಂಕೇತಿಗಳಿಗೆ ಆಶ್ರಯವಿತ್ತಿರುವ ಮತ್ತೊಂದು ಮುಖ್ಯವಾದ ಗ್ರಾಮ. ಹಾಸನದಿಂದ ಹೊಳೆನರಸೀಪುರ ರಸ್ತೆಯಲ್ಲಿ ೧೩ ಕಿಲೋಮೀಟರ್ ಕ್ರಮಿಸಿ ಅಲ್ಲಿಂದ ಬಲಕ್ಕೆ ಒಂದು ಕಿಲೋಮೀಟರ್ ಕ್ರಮಿಸಿದ್ರೆ ಮೊಸಳೆ ಗ್ರಾಮ ಸಿಗುತ್ತೆ. ಸಂಕೇತಿಗಳ ೨೬ ಕುಟುಂಬ ಈಗಲೂ ಇಲ್ಲಿ ನೆಲೆಸಿದೆ. ವ್ಯವಸಾಯ ಈ ಜನರ ಕಸುಬು. ಊರಿನ ಇತಿಹಾಸದ ಬಗ್ಗೆ ಹಿರಿಯರಾದ ಗುಂಡೂರಾಮಯ್ಯ ಹೀಗೆನ್ನುತ್ತಾರೆ 'ನಮ್ಮೂರ ದೇವಸ್ಥಾನದ ಲಿಪೀಲೂ ಇದೆ, ಈ ಊರ ಹೆಸರು'ಮುಸಲೀ' ಅಂತ. "ಮುಸಲಿ" ಅಂದ್ರೆ ಒನಕೆ. ಇದು ಬಲರಾಮನ ಆಯುಧ. ಹಾಗೇ ಇದಕ್ಕೆ ಬಲರಾಮಪುರ ಅನ್ನುವ ಹೆಸರಿತ್ತು. ಹತ್ತಿರದಲ್ಲೇ ವಿಶ್ವಾಮಿತ್ರರು ಸ್ಥಾಪಿಸಿದ ಕೌಶಿಕ ಇದೆ. ಪಕ್ಕದಲ್ಲೇ ವೆಂಕಟರಮಣನ ವಾಸಸ್ಥಾನ ಮಾವಿನಕೆರೆ ಇದೆ. ಹರಿಹರರಲ್ಲಿ ಭೇದ ಇಲ್ಲ ಅನ್ನುವುದಕ್ಕೆ ಇಲ್ಲಿ ನಾಗೇಶ್ವರ ಹಾಗೂ ಲಕ್ಷ್ಮೀಕೇಶವ ಅವಳೀ ಜವಳೀ ದೇವಸ್ಥಾನಗಳಿವೆ. ಈ ದೇವಸ್ಥಾನದ ವೈಶಿಷ್ಟ್ಯ ಏನಂದ್ರೆ ಇಲ್ಲಿ ಹೊಯ್ಸಳ ಲಾಂಛನ ಇದೆ. ದೇವಸ್ಥಾನದ ಮೇಲೆ ಕಳಸ ಇದೆ, ಬೇಲೂರು ಹಳೇಬೀಡಿನ ಹಾಗಲ್ಲ. ಗರ್ಭಗುಡಿಯಲ್ಲೂ ಸಹ ಪರಮಾತ್ಮನ ಹತ್ತು ಅವತಾರಗಳನ್ನು ಕೆತ್ತಲಾಗಿದೆ. ಬೇರೆ ದೇವಸ್ಥಾನಗಳಲ್ಲಿ ಹರನ ನರ್ತನದ ಪ್ರತಿಮೆಗಳಿರುತ್ತವೆ. ನಮ್ಮೂರಿನಲ್ಲಿ ವಿಷ್ಣುವಿನ ನರ್ತನದ ಪ್ರತಿಮೆ ಇದೆ. ಇದು ವಿಶೇಷ. ಹೊಳೆನರಸೀಪುರವನ್ನು ಆಳುತ್ತಿದ್ದ ನರಸಿಂಗನಾಯಕನ ಸಹಾಯಕ ವೆಂಕಟಾದ್ರಿನಾಯಕ ೯೫೦ ವರುಷಗಳ ಹಿಂದೆ ಇವನ್ನು ಕಟ್ಟಿದ್ದಾನೆ ಎಂಬುದಕ್ಕೆ ದಾಖಲೆ ಇದೆ' ಎನ್ನುತ್ತಾರೆ. ಈ ಊರಿಗೆ ನಾಲಾ ನೀರಿನ ಸೌಕರ್ಯವಿಲ್ಲ. ಒಂದು ದೊಡ್ಡಕೆರೆ ಇದೆ. ಮಳೆ ಆದರೆ ಮಾತ್ರಾ ಸುತ್ತಮುತ್ತಲ ಪ್ರದೇಶಗಳಿಂದ ನೀರು ಬಂದು ತುಂಬುತ್ತೆ. ಕಳೆದ ಮೂರು ವರುಷದಿಂದ ಈ ಕೆರೆ ತುಂಬಿಲ್ಲ. ಮೊಸಳೆಯ ಸಂಕೇತಿ ಕೃಷಿಕರ ಕೃಷಿಯೂ ತುಸು ಭಿನ್ನವಾಗಿದೆ. ಇತರೇ ಹಳ್ಳಿಗಳಂತೆ ಇಲ್ಲಿಯೂ ವಯಸ್ಸಾದವರು ಜಾಸ್ತಿ. ಪ್ರಾಯದ ಹುಡುಗರು ೨೫ ಜನ ಇರಬಹುದು ಅಷ್ಟೆ.



ಶ್ರೀನಾಗೇಶ್ವರ-ಶ್ರೀಲಕ್ಷ್ಮೀಕೇಶವ ಜೋಡಿ ದೇವಸ್ಥಾನಗಳು: ಮೊಸಳೆ

ಅ) ಗುಂಡೂರಾಮಯ್ಯ ಇ/ಮ ತಿಮ್ಮರಾಯಪ್ಪ

ಮೊಸಳೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 228783

ಹಿಂದೆ ಸ್ವತಃ ಕೆಲಸ ಮಾಡ್ತಿದ್ವು. ನೆಮ್ಮದಿಯ ಜೀವನವಿತ್ತು. ಆಹಾರದಲ್ಲಿ ರುಚಿಸತ್ವ ಇರೋದು. ಅರ್ಧ ಪಾವು ಅಕ್ಕಿ ಊಟ ಮಾಡಿದ್ರೆ ಸಂತೃಪ್ತಿ ಸಿಕ್ಕೋದು. ಹೆಚ್ಚು ಖಾಯಿಲೆ ಕಸಾಲೆ ಇರಲಿಲ್ಲ. ನಮ್ಮೂರಿನ ೮೦೦ ಜನಕ್ಕೆ ಹುಡುಕಿದ್ರೆ ೨೦ ಜನ ರೋಗಿಗಳೂ ಸಿಕ್ತಿರಲಿಲ್ಲ. ಈಗ ಕೃಷಿ ಕೆಲಸಕ್ಕೆ ಯಂತ್ರಗಳು ಬಂದಿವೆ. ಮಣ್ಣಿಗೆ ರಾಸಾಯನಿಕ ಗೊಬ್ಬರಗಳು, ಆಹಾರದಲ್ಲಿ ರುಚಿಸತ್ತ್ವ ಇಲ್ಲ, ಬೆಂಡು. ಈಗ ನೂರು ಜನಕ್ಕೆ ಮೂವತ್ತು ಜನ ರೋಗಿಗಳೇ.



ಉಯ್ಯಾಲೆಯಲ್ಲಿ ಕೂತ ಗುಂಡೂರಾಮಯ್ಯ: ಮೊಸಳೆ

ನಾವು, ಕೌಶಿಕಸಂಕೇತಿಗಳದ್ದು ಮುಖ್ಯವಾದ ಕಸುಬು ವ್ಯವಸಾಯ. ತೋಟ, ಜಮೀನು ಮಾಡುವುದು ನಮ್ಮ ಕೆಲಸ ಅಂತ ದೃಢವಾಗಿ ಮಾತನಾಡುವ ಗುಂಡೂರಾಮಯ್ಯ ಅವರಿಗೆ ೭೧ ವರುಷ. ಮೊಸಳೆಯ ತಿಮ್ಮರಾಯಪ್ಪ (ಭೋಜಪ್ಪ) ಹಾಗೂ ಕಟ್ಟಾಯ ಸಮೀಪದ ಹಿರಿಗನಹಳ್ಳಿಯ ರುಕ್ಮಿಣಮ್ಮ ಅವರ ಹಿರಿಯ ಮಗ ಗುಂಡೂರಾಮಯ್ಯ. ಇವರ ಕೈ ಹಿಡಿದದ್ದು ಎಳ್ಳೇಶಪುರದ (ಹೊಳೆನರಸೀಪುರ ತಾ) ನರಸಿಂಹಮೂರ್ತಿ ಹಾಗೂ ಸಾವಿತ್ರಮ್ಮ ದಂಪತಿಗಳ ಮಗಳು ಮಹಾಲಕ್ಷ್ಮಮ್ಮನವರು. ತಿಮ್ಮರಾಯಪ್ಪ ನವರ ತಂದೆ ಶ್ರೀಕಂಠಯ್ಯನವರಿಗೆ ಐದು ಜನ ಗಂಡುಮಕ್ಕಳು ಹಾಗೂ ತಿಮ್ಮರಾಯಪ್ಪನವರಿಗೆ ಮೂರು ಗಂಡು ಹಾಗೂ ಎರಡು ಹೆಣ್ಣು. ಪಿತ್ರಾರ್ಜಿತವಾದ ಆಸ್ತೀಲಿ ಪಾಲಾಗಿ ಕಡೆಗೆ ಗುಂಡೂರಾಮಯ್ಯನವರ ಪಾಲಿಗೆ ಉಳಿದದ್ದು ೨೦ ಗುಂಟೆ ಗದ್ದೆ ಹಾಗೂ ಅರ್ಧ ಎಕರೆ ತೋಟ ಮಾತ್ರ. ಅದರಲ್ಲೇ ಕಷ್ಟಪಟ್ಟು ಗುಂಡೂರಾಮಯ್ಯ ಜಮೀನು ರೂಢಿಸಿದ್ದಾರೆ. ಈಗ ೭೦ ಗುಂಟೆ ಗದ್ದೆ, ಒಂದು ಎಕರೆ ತೋಟ ಇದೆ. ಅಡಿಕೆ, ತೆಂಗು, ಬಾಳೆ, ಹುಣಿಸೆ, ವಿಳ್ಳೇದೆಲೆ, ರಾಗಿ, ಬತ್ತ, ಹುರುಳಿ, ಕಬ್ಬು ಎಲ್ಲ ಬೆಳೆಗಳನ್ನೂ ಬೆಳೆದಿದ್ದಾರೆ. ಜತೆಗೆ ಹರಿದಾಸರೂ ಕೂಡ. ಪೂರ್ವಿಕರ ಬಗ್ಗೆ ಮಾತನಾಡುವಾಗ ಗುಂಡೂರಾಮಯ್ಯನವರ ದನಿಗೆ ದಣಿವು ಇರುವುದಿಲ್ಲ. 'ನನ್ನ ತಂದೆಗೆ ವಯಸ್ಸಾದ ಮೇಲೆ ನಾನು ಹುಟ್ಟಿದೆ. ನನ್ನ ತಾಯಿಗೆ ಮೊದಲ ಐದು ಮಕ್ಕಳು abortion ಆಗಿ ತೀರಿಕೊಂಡವಂತೆ. ತಾಯಿ ರಾಮನ ಪೂಜೆ ಮಾಡೋರು. ಕಡೆಗೆ ನಾನು ಹುಟ್ಟಿದೆ. ಮಕ್ಕಳು ಹುಟ್ಟಿದಾಗ ಮೊದಲು ಕಲ್ಲುಗುಂಡನ್ನಿಟ್ಟು ತೊಟ್ಟಿಲು ತೂಗೋದು ಹಿಂದೂ ಸಂಪ್ರದಾಯ. ನನ್ನ ಮಗನೂ ಗುಂಡುಕಲ್ಲಿನಂತಿರಲಿ ಅಂತ ಗುಂಡೂರಾಮಯ್ಯ ಅಂತ ಹೆಸರಿಟ್ಟಿದ್ದಾರೆ. ನನ್ನ ನಂತರ ಇಬ್ಬರು ತಮ್ಮಂದಿರು ಹಾಗೂ ಇಬ್ಬರು ತಂಗೀರು ಹುಟ್ಟಿದರು. ನನಗೆ ೧೧ ವರುಷವಾಗುವಷ್ಟರಲ್ಲಿ ತಂದೆ ತೀರಿಕೊಂಡ್ರು. ತಂದೇನೂ ಶ್ರಮಪಟ್ಟು ಗುದ್ದಲೀ ಕೆಲಸ ಮಾಡಿ ತೋಟ ಏಳಿಸಿದ್ರು. ಕೂಲಿ ಕೊಡಲು ಆಗದೆ ಭತ್ತದ ಗದ್ದೇನೂ ಅಗೆದದ್ದು ಉಂಟು. ತಂದೆ ತೀರಿಹೋದ ಮೇಲೆ ತಾಯಿಯ ಮೇಲೆ ಸಂಸಾರದ ನೊಗ ಬಿತ್ತು. ಅಧಿಕವಾದ ಕಷ್ಟ. ಇಸ್ತ್ರೀ ಎಲೆ ಅಂದ್ರೆ ಮುತ್ತುಗದ ಎಲೆ ತಂದು ಹಚ್ಚೋರು, ನೂರು ಎಲೆಗೆ ಎಂಟಾಣೆ ಕೊಡೋರು. ದೊನ್ನೆ ಕೂಡ ಮಾಡೋರು, ಒಂದು ಸಾವಿರ ದೊನ್ನೆಗೆ ೭೫ ಪೈಸೆ ಮಾತ್ರ. ಕಡೆಗೆ ಕೂಲಿ ಮಾಡಲು ಆರಂಭಿಸಿದ್ರು. ಅಡಿಕೆ ಸುಲಿಯೋಕೆ ಹೋಗೋರು. ಮನೇಕೆಲಸದಲ್ಲಿ ನಾನು ತಾಯಿಗೆ ಸಹಾಯ ಮಾಡುತ್ತಿದ್ದೆ. ಸುತ್ತ ೪೦ ಹಳ್ಳೀಲಿ ಆಗ ಎಲ್ಲೂ ಪಕ್ಕಾ Middle School ಇರಲಿಲ್ಲ. ನಮ್ಮೂರಲ್ಲಿ ಮಾತ್ರಾ ಇತ್ತು. ಆದರೂ ಆರ್ಥಿಕ ಸಂಕಷ್ಟದಿಂದ ನಮ್ಮನ್ನು ಓದಿಸಲು ತಾಯಿಗೆ ಆಗಲಿಲ್ಲ. ಮನುಷ್ಯನಿಗೆ ವಿದ್ಯೆಬೇಕು ಅಂತ ನಾನೇ ಛಲದಿಂದ ವಿದ್ಯೇನ ಊರ್ಜಿತ ಮಾಡಿಕೊಂಡೆ. L.S.ವರೆಗೆ ಓದಿದೆ. ಅನೇಕ ಪುಸ್ತಗಳನ್ನು ಓದಿದೆ. ಮನಸ್ಸಿದ್ದರೆ ಮಾರ್ಗ ಅಂತಾರಲ್ಲ ಹಾಗೆ ನನಗೆ ವಿದ್ಯೆ ಒಲೀತು. ಮನುಷ್ಯ ತನ್ನ ಕರ್ತವ್ಯವನ್ನು ಮಾಡ್ತಾ ಇದ್ರೆ ಅವನಿಗೆ ಅನ್ನ ಸಿಗುತ್ತೆ ಅನ್ನೋದಕ್ಕೆ ನಾನೇ ಸಾಕ್ಷಿ' ಅಂದರು. 'ನೀವು ಹರಿದಾಸರಾದದ್ದು ಹೇಗೆ?' ನಮ್ಮ ಮುಂದಿನ ಪ್ರಶ್ನೆ.

'ಜನನೀ ಜನ್ಮಭೂಮಿಷ್ಚ ಸ್ವರ್ಗಾದಪಿ ಗರೀಯಸೀ' ಅನ್ನೋ ಹಾಗೆ ನನ್ನ ತಾಯಿ ನಾನು ಹರಿದಾಸನಾಗಲು ಮುಖ್ಯಕಾರಣ. ನನ್ನ ತಾಯಿ ರಾಮಾಯಣ ಮಹಾಭಾರತವನ್ನು ಬಾಯಲ್ಲಿ ಹೇಳೋರು. ಅದು ನನಗೆ ಪ್ರೇರಣೆಯಾಯಿತು. ತಾಯಿಯೇ ನನಗೆ ಮೊದಲ ಗುರು. ರಾಮಾಯಣ, ಮಹಾಭಾರತದ ಕಥೆಗಳನ್ನು ಮಕ್ಕಳಿಗೆ ಹೇಳೋರು. ಧರ್ಮವಾಗಿರಬೇಕು, ಸತ್ಯವಾಗಿರಬೇಕು, ದೇವರ ಪ್ರಾರ್ಥನೆ ಮಾಡಬೇಕು ಅಂತ ತಿಳಿಹೇಳೋರು. ತಾಯಗರ್ಭದಿಂದಲೇ ರಾಮನಾಮ ನನ್ನ ಶರೀರವನ್ನು ತುಂಬಿತ್ತೇನೋ? ನನಗೆ ಅವಾಗವಾಗ ಕನಸು ಬೀಳೋದು. "ಏನೇನೋ ಮಾಡ್ತಾ ಇದೀಯಲ್ಲ ಹರಿಕಥೆ ಮಾಡು, ಹರಿದಾಸನಾಗು" ಅಂತ ಯಾರೋ ಅಂದ ಹಾಗೆ ಆಗೋದು. ನಂತರ ನಾನೇ ಸ್ವತಃ ರಾಮಾಯಣ, ಮಹಾಭಾರತವನ್ನು ಓದಿ ಅರಗಿಸಿಕೊಂಡು ಗ್ರಾಮೀಣ ಜನರಿಗೆ ಅರ್ಥವಾಗುವ ರೀತಿಯಲ್ಲಿ ಹರಿಕಥೆ ಮಾಡಲು ಆರಂಭಿಸಿದೆ. ಕವನಗಳನ್ನೂ ಬರೆಯಲು ಆರಂಭಿಸಿದೆ. ನಂತರ ಕುಟುಂಬಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಅರ್ಜಿ ಸಲ್ಲಿಸಿದೆ. ಮಿತಸಂಸಾರದ ಬಗ್ಗೆ, ಸಾಕ್ಷರತೆ ಬಗ್ಗೆ ಹರಿಕಥೆ, ಹಾಡು ಹೇಳಲು ಅವರಿಂದ ಅನುಮತಿ ಸಿಕ್ತು. ಎರಡು ಬಾರಿ ಬಹುಮಾನ ಬಂತು. ಕಲಾವಿದರ ಮಾಸಾಶನ ಸಿಕ್ತಾ ಇದೆ. ಮೊದಲು ಒಂದು ಕಾರ್ಯಕ್ರಮಕ್ಕೆ ನಲವತ್ತು ರೂಪಾಯಿ ಕೊಡೋರು. ಈಗ ೩೦೦ ರೂಪಾಯಿ ಕೊಡ್ತಾರೆ. ವರುಷದಲ್ಲಿ ಎರಡು ಮೂರು ಕಾರ್ಯಕ್ರಮ ಸಿಗುತ್ತೆ. ಬರೀ ಸರ್ಕಾರಿ ಯೋಜನೆಗಳ ಬಗ್ಗೆ ಹೇಳಿದ್ರೆ ಜನ ಕೇಳೋಲ್ಲ ಅಂತ ರಾಮಾಯಣ, ಮಹಾಭಾರತದ ಉಪಕಥೆಗಳನ್ನು ಹೇಳ್ತಿದ್ದೆ. ಹಳ್ಳಿಹಳ್ಳಿಗಳಲ್ಲಿ ಶ್ರಾವಣಮಾಸದಲ್ಲಿ ಹಾಗೂ ದೀಪಾವಳಿ, ಯುಗಾದಿ ಸಂದರ್ಭದಲ್ಲಿ ಹರಿಕಥೆ ಮಾಡಿಸೋರು. ಮೊದಲು ಹತ್ತು ರೂಪಾಯಿ ಕೊಡೋರು, ಆಮೇಲೆ ೨೫೦ ರೂಪಾಯಿವರೆಗೂ ಬಂತು. ಸಂಸಾರದ ಖರ್ಚಿಗೆ, ಮಕ್ಕಳ ಪುಸ್ತಕ, ಫೀಜ್, ಬಟ್ಟೆಬರೆಗೆ ಆಗೋದು. ವ್ಯವಸಾಯದ ಜತೆಗೇ ಇದನ್ನೂ ಮಾಡ್ತಾ ಇದ್ದೆ. ಹರಿಕಥೆ ನಾನು ಮಾಡ್ತಿದ್ದು ರಾತ್ರಿ ವೇಳೆಯಲ್ಲಿ. ಎಷ್ಟೋ ಬಾರಿ ಬೆಳಗಿನ ಜಾವದವರೆಗೂ ಹರಿಕಥೆ ಆಡಿಸಿದ್ದಾರೆ. ಸುತ್ತಮುತ್ತ ನಲವತ್ತು ಕಿಲೋಮೀಟರ್ ವ್ಯಾಪ್ತೀಲಿ ತಿರುಗಾಡುತ್ತಿದ್ದೆ. ಬೆಳಗ್ಗೇ ವೇಳೆಗೆ ಮನೆಗೆ ಬರುತ್ತಿದ್ದೆ. ನಂತರ ವ್ಯವಸಾಯದ ಕೆಲಸ ಮಾಡ್ತಿದ್ದೆ' ಅಂದ್ರು ಗುಂಡೂರಾಮಯ್ಯ.

ಗುಂಡೂರಾಮಯ್ಯನವರಿಗೆ ಜ್ಯೋತಿಶ್ಯಾಸ್ತ್ರ ಹಾಗೂ ವಾಸ್ತುಶಾಸ್ತ್ರದ ಬಗ್ಗೆಯೂ ಅರಿವಿದೆ. 'ರೈತನ ಮನೆಗೆ ವೃಷಭಾಯವೇ ಆಗಬೇಕು. ವೃಷಭ ಅಂದ್ರೆ ಎತ್ತು. ೧೧/೨೩ ಮಳ ಅಥವಾ ಅಡಿ ಆದ್ರೆ ಅದು ವೃಷಭಾಯ, ಅಥವಾ ೩೧/೪೩ ಅಡಿ ಇದ್ರೂ ವೃಷಭಾಯವೇ. ಈಶಾನ್ಯ ದಿಕ್ಕಿಗೆ ನಾಲ್ಕು ಅಂಗುಲ ಜಾಸ್ತಿ ಇರಬೇಕು. ಶನಿವಾರದ ದಿನ ಮನೆ ಆಯ, ಗುದ್ದಲಿ ಪೂಜೆ ಮಾಡಿದ್ರೆ ಕಳ್ಳತನ, ಭಾನುವಾರ ಬೆಂಕಿ ಬೀಳುತ್ತೆ, ಸೋಮವಾರ ಕಳ್ಳತನ, ಮಂಗಳವಾರ ಮಾಡಿದ್ರೆ ಸರ್ವನಾಶ. ಅದಕ್ಕೇ ಗುರುವಾರ, ಶುಕ್ರವಾರ ಶ್ರೇಷ್ಠವಾದ ದಿನಗಳು. ಅಂದು, ಯಜಮಾನನ ಹೆಂಡತಿ ಮುಟ್ಟಾಗಿರಬಾರದು. ದೊಡ್ಡ ಮನೆಗಾದ್ರೆ ಸಿಂಹ ಆಯ, ಒಂದು ಗಜ ಆಯ ಮಾಡಬೇಕು. ಆಗ್ನೇಯ ದಿಕ್ಕಿಗೆ ಅಗ್ನಿ, ಉತ್ತರ ದಿಕ್ಕು ಕುಬೇರನದು. ಅಲ್ಲಿ ನೀರಿನ ಟ್ಯಾಂಕ್, ಮಲಗುವ ಮನೆ ಇರಬೇಕು' ಅಂತ ವಿವರ ನೀಡುತ್ತಾರೆ. 'ನಿಮ್ಮ ವ್ಯವಸಾಯದ ಬದುಕಿನ ಬಗ್ಗೆ ಹೇಳಿ' ಅಂದಾಗ ಹೇಳಿದ್ರು,

'ನಾನು ಕೆಸರುಗದ್ದೇಲಿ ಭತ್ತದ ಸಸಿ ನೆಡ್ತಿದ್ದೆ, ಖಟಾವು ಮಾಡಿ ಕಣದಲ್ಲಿ ಬಡೀತಿದ್ದೆ. ಜೋಳ ಬೆಳೀತಿದ್ದೆ. ಭತ್ತ, ರಾಗಿ, ಹುಲ್ಲು ಬಡಿದು ಬಣವೆ ಹಾಕ್ತಿದ್ದೆ. ಹುಣಿಸೇಹಣ್ಣು ಕೆಡವುತ್ತಿದ್ದೆ. ಅಡಿಕೆ ತೋಟದಲ್ಲಿ ಅಗೆತ ಮಾಡ್ತಿದ್ದೆ, ಎತ್ತುಗಾಡೀಲಿ ಗೋಡು ತುಂಬಿ ಹೊಲಕ್ಕೆ ಹೊಡೀತಿದ್ದೆ. ಸ್ವತಃ ತೋಟ, ಗದ್ದೇಲಿ ಕಳೆ ಕೀಳ್ತಿದ್ದೆ. ಹೀಗೆ ಪ್ರತಿಯೊಂದು ಕೆಲಸಾನೂ ಶ್ರದ್ಧೆಯಿಂದ ಮಾಡುತ್ತಿದ್ದೆ. ನಾನು ಹಾಗೂ ನನ್ನ ತಮ್ಮ ಶ್ರೀಕಂಠಯ್ಯ ಇಬ್ರೂ ವ್ಯವಸಾಯ ಮಾಡ್ತಿದೀವಿ. ತಂದೆ ಮಾಡಿದ ತೋಟ ಹಾಳಾಗಿತ್ತು. ಮೂರು ಕ್ವಿಂಟಾಲ್ ಹಸಿ ಅಡಿಕೆ ಸಿಗ್ತಿತ್ತು. ಅದನ್ನು ರೂಢಿಸಿ ಈಗ ೫೦ ಕ್ವಿಂಟಾಲ್ ಇಳುವರಿ ಬರುವ ಹಾಗೆ ಮಾಡಿದ್ದೀವಿ. ಭಾವಿ ತೆಗೆದು ಬಾಳೆ, ಅಡಿಕೆ, ವಿಳ್ಳೇದೆಲೆ ಬೆಳೆದಿದ್ದೇವೆ. ಬಾಳೇಕಾಯಲ್ಲಿ ಕಬ್ಬಿಣದ ಅಂಶ ಇರುತ್ತೆ, ಬಾಳೇ ದಿಂಡಿನಲ್ಲಿ ಹತ್ತಿಯ ಎಳೆಯ ಹಾಗೆ ಇರುವ ನಾರು ದೇಹದ ಕಶ್ಮಲ ತೆಗೆಯುತ್ತೆ, ಹಲಸಿನ ಕಾಯಿಯೂ ಒಳ್ಳೆಯದು. ಕೆರೇಲಿ ಬಿಡುವ ಸುವರ್ಣಗಡ್ಡೆ ಸಹ ಶರೀರಕ್ಕೆ ಒಳ್ಳೆಯದು. ಇಂತಹವನ್ನೆಲ್ಲಾ ತರಕಾರಿಯಾಗಿ ಬಳಸ್ತಾ ಇದ್ವಿ. ಆರೋಗ್ಯ ಚೆನ್ನಾಗಿತ್ತು. ಕತ್ತಲಾದ್ರೂ ತೋಟದಲ್ಲಿ ಕೆಲಸ ಮಾಡೋವಿ. ತೋಟದ ಕೆಲಸ ಕಷ್ಟದ ಕೆಲಸ. ಆದರೆ ನಂತರ ಆದಾಯ ಸಿಗುತ್ತೆ. ಮಿಶ್ರಬೆಳೆ ಇರೋದ್ರಿಂದ ಒಂದರಲ್ಲಿ ಹೋದ್ರೂ ಮತ್ತೊಂದರಲ್ಲಿ ಸಿಗುತ್ತೆ. ನಾನು ಕಷ್ಟಪಟ್ಟು ಜೀವನ ಮಾಡಿರೋದ್ರಿಂದ ಯಾವ ರೋಗಾನೂ ಬಂದಿಲ್ಲ. ಕೂತಿರುವವನಿಗೆ ಬರುವ ರೋಗ ಕಷ್ಟಪಡುವವನಿಗೆ ಬರೋಲ್ಲ. ಇಲ್ಲಿ ಸಂಕೇತಿಗಳದ್ದು ಎಂಟು ಬೋರ್‌ವೆಲ್ ಇದೆ. ಉಳಿದ ತೋಟಗಳಲ್ಲಿ ಭಾವೀನೇ ಗತಿ. ತೋಟದ ಭಾವಿಯಿಂದ ಈಗಲೂ ನೀರೆತ್ತಿ ತೋಟ ಉಳಿಸಿದ್ದೀನಿ' ಅಂದ್ರು ಗುಂಡೂರಾಮಯ್ಯ.

'ನಿಮ್ಮ ತತ್ತ್ವ ಆದರ್ಶಗಳು?' ಅಂದ್ರೆ ಹೇಳಿದ್ರು, 'ಜಲಬಿಂದುನಿಪಾತೇನ ಕ್ರಮಶಃ ಪೂರ್ಯತೇ ಘಟಃ, ಸಹಹೇತುಂ ಸರ್ವವಿಧಾನಾಂ ಧರ್ಮಸ್ಯ ಚ ಧನಸ್ಯ ಚ' ಅಂತ. ಹನಿಹನಿಯಾಗಿ ನೀರಿನ ಬಿಂದು ಕೊಡವನ್ನು ತುಂಬುವಂತೆ ಧರ್ಮ ಧನಗಳನ್ನು ಮನುಷ್ಯನಾದವನು ಸಂಪಾದಿಸಬೇಕು. ಇದ್ದುದರಲ್ಲಿ ಜೀವಿಸಬೇಕು. ನಿಃಸ್ವಾರ್ಥ ಜೀವನ ನಡೆಸಬೇಕು. ನಾನು ನನ್ನ ಹೆಣ್ಣು ಮಕ್ಕಳನ್ನು ಕೊಡಬೇಕಾದರೆ ಐಶ್ವರ್ಯವಂತರನ್ನು ಹುಡುಕಲಿಲ್ಲ. ಹಾಗೇ ಮನೆಗೆ ಹೆಣ್ಣು ತರುವಾಗಲೂ ಏನೂ ಅಪೇಕ್ಷೆ ಪಡಲಿಲ್ಲ. ಎರಡು ಹೊತ್ತಿಗೆ ಸಿಕ್ರೆ ಸಾಕು ನನಗೆ. ಇದುವರೆಗೆ ನುಡಿದಂತೆ ನಡಿದಿದೀನಿ' ಎಂದು ಮಾತು ಮುಗಿಸಿದರು. ಮುಂದಿನ ದಾರಿ ನಮಗೆ ಕಾಯುತ್ತಿತ್ತು.

ಆ) ಎಂ.ಆರ್. ಸೂರ್ಯನಾರಾಯಣಪ್ಪ ಇ/ಮ ಎಂ.ಪಿ. ರಾಮಸ್ವಾಮಯ್ಯ
ಮೊಸಳೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 228584

'ಗೋಬ್ರಾಹ್ಮಣೇಭ್ಯಃ ಶುಭಂ ಭವತು' ಅಂತ ಪ್ರವರ ಹೇಳ್ತೀರಿ. ಗೋವುಗಳು ಬ್ರಾಹ್ಮಣರಿಗೆ ದೇವರ ಸಮಾನ. ಉಂಡ ಎಲೆಯಲ್ಲಿ ಬಿಟ್ಟ ಎಂಜಲನ್ನು ಗೋವುಗಳಿಗೆ ಹಾಕಬಾರದು. ಅದು ಅಕ್ಷಮ್ಯ ಅಪರಾಧ. ಇತರಾದಿಗಳು ಹಾಕ್ತಾರೆ. ಆದರೆ ಬ್ರಾಹ್ಮಣರು ಹಾಕಬಾರದು.


ಎಂ.ಆರ್.ಸೂರ್ಯನಾರಾಯಣಪ್ಪ ತಮ್ಮ ರಾಸುಗಳೊಂದಿಗೆ: ಮೊಸಳೆ

ಮೊಸಳೆಯ ಗುಂಡೂರಾಮಯ್ಯನವರ ಸಂದರ್ಶನ ಮಾಡಿದ ಮೇಲೆ ಅವರ ಜತೇಲಿ ಎಂ.ಆರ್.ಸೂರ್ಯನಾರಾಯಣಪ್ಪನವರ ಮನೆಗೆ ಬಂದಾಗ ಮಧ್ಯಾಹ್ನದ ಸಮಯ. ನಮ್ಮ ಆಗಮನದ ವಿಚಾರವನ್ನು ತಿಳಿದ ಅವರು 'ಮೊದಲು ಊಟ ಮುಗಿಸಿ. ನಂತರ ಆರಾಮವಾಗಿ ಮಾತನಾಡುವಾ' ಅಂದ್ರು. ಹಾಸನದ ಸಮಾರಂಭವೊಂದಕ್ಕೆ ಹೆಂಡತಿ ತೆರಳಿದ್ರಿಂದ, ಯಜಮಾನರಿಗಾಗಿ ಅವರು ಮಾಡಿಟ್ಟುಹೋದ ಅಡುಗೆ ಬಡಿಸಿದವರು ಸೂರ್ಯನಾರಾಯಣಪ್ಪನವರ ಮೂರನೆಯ ಮಗ ಲಕ್ಷ್ಮೀಶ. ಬೋರ್‌ವೆಲ್ ಕೊರೆಸಲು ನೀರಿನ ಮೂಲ ಪತ್ತೆ ಹಚ್ಚುವುದು ಇವರ ಕೆಲಸ. ಹಾಸನದಲ್ಲಿದ್ದಾರೆ. ನಾವು ಊಟ ಮಾಡುವಾಗ ಮಾತನಾಡಿದ್ರು, 'ವ್ಯವಸಾಯದಲ್ಲಿ ಸುಖ ಇಲ್ಲ. ನಾನು ಊರೂರು ಸುತ್ತಿದಾಗ ಅನೇಕ ರೈತರನ್ನು ನೋಡಿದ್ದೇನೆ. ಅವರು ಯಾರೂ ಸುಖವಾಗಿಲ್ಲ. ಅಲ್ಲದೆ ಹಿಂದಿನಂತೆ ಹಟ್ಟಿ ಗೊಬ್ಬರ ಬಳಸಿದ್ರೆ ಈ ಜನಸಂಖ್ಯೆಗೆ ಆಹಾರ ನೀಡಲು ಆಗೋಲ್ಲ. ರಾಸಾಯನಿಕ ಗೊಬ್ಬರ ಬಳಸಿ ಅಧಿಕ ಉತ್ಪತ್ತಿ ತೆಗೆದಾಗ ಆಹಾರ ಸ್ವಾವಲಂಬನೆ ಬರುತ್ತೆ' ಅಂದ್ರು. ಊಟವಾದ ಬಳಿಕ, ತಾಂಬೂಲ ಮೆದ್ದು ಸೂರ್ಯನಾರಾಯಣಪ್ಪ ಅವರೊಂದಿಗೆ ಮಾತಿಗಿಳಿದೆ. ಮೊದಲು ತಮ್ಮ ಪೂರ್ವಿಕರ ಬಗ್ಗೆ ಮಾತನಾಡಿದ್ರು. 'ನನ್ನ ತಾತ ಪದ್ಮನಾಭಯ್ಯನವರು ಕಟ್ಟಾಯ ಸಮೀಪದ ಹಿರಿಗನಹಳ್ಳಿಯವರು. ಅವತ್ತಿನ ಕಾಲದಲ್ಲಿ Diploma Engineer ಆಗಿದ್ರು. ನನ್ನ ತಂದೆ ಒಬ್ಬರೇ ಗಂಡು ಮಗ; ಒಬ್ಬ ಮಗಳಿದ್ಲು. ನನ್ನ ತಂದೆ ಎಂ.ಪಿ. ರಾಮಸ್ವಾಮಯ್ಯನವರಿಗೆ ೨೦ ಎಕರೆ ಗದ್ದೆ, ೧೫ ಎಕರೆ ಹೊಲ, ೧೨ ಎಕರೆ ಬಾಗಾಯ್ತು ಇತ್ತು. ನನ್ನ ತಾಯಿ ಲಕ್ಷಮ್ಮ ಬೆಂಗಳೂರಿನವರು. ನಮ್ಮ ತಂದೆಗೆ ಐದು ಗಂಡು ಹಾಗೂ ಒಬ್ಬ ಮಗಳು. ತಂದೆ ಸ್ವತಃ ಬೇಸಾಯ ಮಾಡ್ತಿರಲಿಲ್ಲ. ಬರೀ supervision ಅವರದ್ದು. ಆದರೆ ಯಾವ ಜಮೀನನ್ನೂ ಹಾಳು ಬಿಟ್ಟಿರಲಿಲ್ಲ. ನಮಗೂ ವ್ಯವಸಾಯದ ಪಾಠ ಕಲಿಸಿದ್ರು. ತಪ್ಪಿದಾಗ ತಿದ್ದೋರು. ಬರಿ ಕೂಲಿಯಾಳುಗಳ ಕೈಲಿ ಕೆಲಸ ಅವರದ್ದು. ಆದರೆ ನಮ್ಮ ಚಿಕ್ಕ ವಯಸ್ಸಿನಲ್ಲೇ ತಂದೆ ತೀರಿಹೋದ್ರು. ನಾನು ೧೯೪೭ರಲ್ಲಿ SSLC ಪಾಸು ಮಾಡಿದೆ. ಆಗ Land Reforms ಬಂತು. ನಮ್ಮ ಮನೇಲಿ ಒಳ್ಳೆಯ personality ಹೊಂದಿ ಹಳ್ಳಿಗೆ ಲಗತ್ತಾಗಿದ್ದವನು ನಾನು ಮಾತ್ರ. ಹಾಗಾಗಿ ನಾನು ಇಲ್ಲಿ ಉಳಿದೆ. ಹೊರಗೆ ಕೆಲಸಕ್ಕೆ ಹೋಗಿದ್ದ ನನ್ನ ಅಣ್ಣ ಹಾಗೂ ತಮ್ಮ ಮಾತ್ರ ಊರಿಗೆ ಬಂದ್ರು.



ಹಂಬಿನ ಬೇಸಾಯ: ಎಂ.ಆರ್.ಸೂರ್ಯನಾರಾಯಣಪ್ಪ: ಮೊಸಳೆ

ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನಗೆ ಹಳ್ಳಿಯ ಬಗ್ಗೆ attachment ಜಾಸ್ತಿ. SSLC ಓದಿದಾಗ ನನಗೆ ಸುಲಭವಾಗಿ ಕೆಲಸ ಸಿಗೋದು. ನನ್ನ ಸ್ನೇಹಿತರೂ ಸಹ ಸೇರಿದ್ರು. ೨೦ ರೂಪಾಯಿ ಸಂಬಳಕ್ಕೆ ಕೆಲಸ ಮಾಡಲು ಮನಸ್ಸು ಬರಲಿಲ್ಲ. ವ್ಯವಸಾಯಕ್ಕೆ ಬಂದುಬಿಟ್ಟೆ. ನಾನೂ ಕೂಲಿಯಾಳುಗಳ ಜತೆ ದುಡೀತಿದ್ದೆ. ನನಗೇ ಒಂದು ಜತೆ ಬೇರೆ ಎತ್ತು ಹಾಗೂ ಗಾಡಿ ಇತ್ತು. ಅದನ್ನು ನಾನೇ maintain ಮಾಡ್ತಿದ್ದೆ. ಗದ್ದೆ ನಾಟಿ ಮಾಡೋದು, ಕೆಸರು ಗದ್ದೆ ಉಳೋದು, ಬದು ಹಾಕೋದು, ಸಸಿ ನೆಡೋದು, ನೀರು ಬಿಡೋದು, ಗದ್ದೆ ಕುಯ್ಯುವಾಗ ೧೫ ರಿಂದ ೨೦ ಆಳುಗಳು ಒಟ್ಟಿಗೇ ಕೆಲಸ ಮಾಡ್ತಿದ್ವಿ. ನಮ್ಮಲ್ಲೇ competition, ಯಾರು ಮೊದಲು ಕುಯ್ತಾರೆ ಅಂತ. ಹೀಗೆ ಶ್ರಮಪಟ್ಟು ದುಡೀತಿದ್ದೆ. ಕಡಲೆ, ತೊಗರಿ, ಹುರುಳಿ, ರಾಗಿ ಬೆಳೀತಿದ್ವಿ. ಒಂದೂವರೆಯಿಂದ ಎರಡು ತಿಂಗಳು ಕಣದ ಕೆಲಸವಾಗೋದು. ನನಗೆ ಕೆಲಸವನ್ನು ಆಳುಗಳಿಗೆ ಹೇಳಿ ಹೋಗುವ ಅಭ್ಯಾಸ ಇರಲಿಲ್ಲ. ನಾನೂ ಅವರ ಜತೆ ಕೆಲಸ ಮಾಡ್ತಿದ್ರಿಂದ ಅರ್ಧ ಕೆಲಸ ಆಗೋದು. ಕೆಲಸದವನಿಗೂ ತರಬೇತಿ ಆಗ್ತಿತ್ತು. ನನ್ನ ತಾಯಿ ಕೆರೆಯಿಂದ ನೀರು ತಂದು, ಭತ್ತವನ್ನೂ ಕುಟ್ಟಿ, ಆಳುಗಳಿಗೆ ಅಡುಗೆ ಮಾಡಿ, ಸಂಸಾರವನ್ನು ತೂಗಿಸೋರು. ನಮಗೆ ಕಷ್ಟವಿರಲಿಲ್ಲ. ಸುಖವಾಗಿಯೇ ಬೆಳೆದ್ವು. ನಾನು ಮದುವೆಯಾದದ್ದು ಮೊಸಳೆಯ ನರಸಿಂಹಯ್ಯ ಹಾಗೂ ಮಂಜಮ್ಮ (ಗುಂಡಮ್ಮ) ಅವರ ಮಗಳು ರಾಮಲಕ್ಷ್ಮಮ್ಮನ್ನ. ನಾವು ಅಣ್ಣ ತಮ್ಮಂದಿರು ಪಾಲಾದ ಮೇಲೆ, ನನ್ನ ಪಾಲಿಗೆ ಎರಡೂವರೆ ಎಕರೆ ಬಾಗಾಯ್ತು, ಎಂಟು ಎಕರೆ ಖುಷ್ಕಿ ಹಾಗೂ ನಾಲ್ಕು ಎಕರೆ ತರಿ ಜಮೀನು ಬಂತು. ನಾವು divide ಆದ ಮೇಲೆ ಹೆಂಡತಿ ನನಗೆ ಬಹಳ support ಮಾಡಿದ್ಲು. ಮನೆ ಕೆಲಸ ಮುಗಿಸಿ ಮಧ್ಯಾಹ್ನ ತೋಟಕ್ಕೆ ಬರೋಳು. ಅಲ್ಲಿಯವರೆವಿಗೂ ತೋಟಕ್ಕೆ ನೀರು ಹೊತ್ತು ನಮಗೆ ಸುಸ್ತಾಗಿರೋದು. ಆಮೇಲೆ ನನ್ನ ಹೆಂಡತಿ ನೀರು ಹೊರೋಳು. ವಿಳ್ಳೇದೆಲೇನ ಸೋಮವಾರ ಕುಯ್ದು ಮಂಗಳವಾರದ ಸಂತೆಗೆ, ಹಾಗೇ ಶುಕ್ರವಾರದ ಹೊಸಹಳ್ಳಿ ಸಂತೆಗೆ ಗುರುವಾರ ಕುಯ್ದು ಜೋಡಿಸಿಕೊಡೋಳು. ಮೊಸಳೆ ವಿಳ್ಳೇದೆಲೆ ಸ್ವಲ್ಪ ದಪ್ಪ. ಹಾಗೇ ಸುತ್ತಮುತ್ತಲ ಸಂತೇಲಿ ಮೊಸಳೆ ವಿಳ್ಳೇದೆಲೆ ಅಂದ್ರೆ ಬಹಳ ಪ್ರಖ್ಯಾತಿ. ಹಿಂದಿನ ವ್ಯವಸಾಯ ಬಹಳ ಕಷ್ಟವಿತ್ತು. ಎಷ್ಟು ಕಷ್ಟಪಟ್ರೂ ಉತ್ಪತ್ತಿ ಇರಲಿಲ್ಲ. ಈಗ ರಾಸಾಯನಿಕ ಗೊಬ್ಬರ ಬಂದಿದೆ, ಅಲ್ಪಾವಧಿ ಹೈಬ್ರಿಡ್ ತಳಿಗಳು ಬಂದಿವೆ. ಬೇಸಾಯದಲ್ಲಿ ಈಗ ನೆಮ್ಮದೀನೂ ಇದೆ. ಧಾರಣೇನೂ ಇದೆ. ಆದ್ರೆ ಕೂಲಿಯಾಳುಗಳಿಗೆ ಬರ ಬಂದಿದೆ. ಅವರಿಂದ ಕೆಲಸ ಆಗದಿದ್ದಾಗ ನಾವು ಆ ಕೆಲಸ ಮಾಡಿಕೊಳ್ಳಬೇಕು. ಅವರ ಕಷ್ಟಕ್ಕೆ ನಾವು ಆಗಬೇಕು. ಈಗ ನನ್ನ ತೋಟದಲ್ಲಿ ಮೂರು ಜನ permanent ಆಗಿ ಇದ್ದಾರೆ, ದುಡೀತಿದ್ದಾರೆ. ಮೊದಲು ನಮ್ಮದೂ ಹಾಳು ಜಮೀನು. ಮೊದಲು ಜಮೀನಿನಲ್ಲಿ ದದ್ದು ತೆಗೆದು, ಬಾಳೆ ಹಾಕಿ ಅಡಿಕೆ ಕೂರಿಸಿದೆ. ಅಡಿಕೆ ಬರುವುದು ನಿಧಾನ, ಆದಾಯಕ್ಕೆ ವಿಳ್ಳೇದೆಲೆ ಹಂಬನ್ನು ಹಬ್ಬಿಸಬೇಕಿತ್ತು. ಸಮೀಪದಲ್ಲಿ



ಮಗ ಶ್ರೀರಾಮ್ ಜೊತೆ ಎಂ.ಆರ್.ಸೂರ್ಯನಾರಾಯಣಪ್ಪ ಎಳ್ಳಿನ ಹೊಲದಲ್ಲಿ: ಮೊಸಳೆ



ಎಲೆ ಹಂಬಿನಂತೆಯೇ ಕಾಣುವ ಕಾಳುಮೆಣಸಿನೊಂದಿಗೆ ಎಂ.ಆರ್.ಸೂರ್ಯನಾರಾಯಣಪ್ಪ : ಮೊಸಳೆ

ಸುಲಭವಾಗಿ ಸಿಗುವ ಬಿದಿರಗಳವನ್ನು ಖರೀದಿ ಮಾಡಿದೆ. ಅದನ್ನು ತೋಟದಲ್ಲಿ ನೆಟ್ಟು ಅದಕ್ಕೆ ಎಲೆ ಹಂಬು ಹಬ್ಬಿಸಿದೆ. ವಿಳ್ಳೇದೆಲೆ ಜೋರಾಗಿ ಬಂತು. ಸಂತೆ ಖರ್ಚಿಗೆ, ಆಳುಕಾಳಿನ ನಿರ್ವಹಣೆಗೆ ಸಾಕಾಗುವಷ್ಟು ಹಣ ಬರ್‍ತಿತ್ತು. ಕೈಯಲ್ಲಿ ಕಾಸು ಓಡಾಡ್ತಿತ್ತು. ತೆಂಗನ್ನು ಪ್ರತ್ಯೇಕವಾಗಿ ಬೇರೆ ಜಮೀನಿಗೆ ಹಾಕಿದೆ. ಅಡಿಕೆ ತೋಟದಲ್ಲಿ ವಿಳ್ಳೇದೆಲೆ, ಕಾಫಿ, ಕಾಳುಮೆಣಸು, ಏಲಕ್ಕಿ, ಅರಿಶಿನ ಹಾಕಿದೀನಿ. ಆದರೆ ಆದಾಯದ ಬೆಳೆ ಅಡಿಕೆ ಹಾಗೂ ವಿಳ್ಳೇದೆಲೆ ಮಾತ್ರ. ಉಳಿದದ್ದು ಕಾಫಿ, ಕಾಳುಮೆಣಸು, ಏಲಕ್ಕಿ ಹಾಗೂ ಅರಿಶಿನ ಮನೆ ಬಳಕೆಗೆ ಮಾತ್ರ. ಹೆಚ್ಚಾದ್ರೆ ಅಣ್ಣ ತಮ್ಮಂದಿರಿಗೆ ಕೊಡ್ತೀನಿ. ವಿಳ್ಳೇದೆಲೆ ಹಂಬು ಹಣದ ಬೆಳೆ; ಯಾವತ್ತು ದುಡ್ಡಿಲ್ಲ ಅಂದ್ರೂ ಎಲೆ ಕುಯ್ದು ಮಾರಿದ್ರೆ ಹಣ ಸಿಗುತ್ತೆ. ಅಡಿಕೆ ತೋಟದ ಒಂದೂಕಾಲು ಎಕರೆ ಪ್ರದೇಶದಲ್ಲಿ ೪೪ ಕ್ವಿಂಟಾಲ್ ಅಡಿಕೆ ಸಿಕ್ಕಿದೆ. ಕಳೆದ ವರುಷ ೫೫ ಕ್ವಿಂಟಾಲ್ ಸಿಕ್ಕಿತ್ತು. ಮನೇಲಿ ಮೂರು ಹಸು ಹಾಗೂ ಒಂದು ಜತೆ ಎತ್ತಿದೆ. ಎತ್ತಿಲ್ಲದಿದ್ರೆ ಮನುಷ್ಯನ ಬಲಗೈ ಹೋದಂತೆ. ಎತ್ತಿನಗಾಡಿ ಸಾಗಾಣಿಕೆಗೆ ಆಗುತ್ತೆ. ಬಾಗಾಯ್ತಿಗೆ ನಾನು ದನದ ಗೊಬ್ಬರ ಮಾತ್ರ ಹಾಕ್ತೀನಿ. ಗೋಡು ಹೊಡೀತೀನಿ. ತೆಂಗಿನ ತೋಟದಲ್ಲಿ ಕುರಿ ಮಂದೆ ನಿಲ್ಲಿಸ್ತೀನಿ. ಅಡಿಕೆ ತೋಟದಲ್ಲಿ ಕುರಿ ನಿಲ್ಲಿಸಿದ್ರೆ ಹಂಬು ತಿನ್ನುತ್ತೆ. ಕುರಿಹಿಕ್ಕೆ ಹಾಗೂ ಗಂಜಲ ತೆಂಗಿಗೆ ಅತ್ಯುತ್ತಮವಾದ ಗೊಬ್ಬರ. ಸಿರಾ ಕಡೆಯಿಂದ ೧೫೦೦ ರಿಂದ ೨೦೦೦ ಕುರಿಗಳನ್ನು ಮಂದೆ ರೂಪದಲ್ಲಿ ಹೊಡೆದುಕೊಂಡು ಬರ್‍ತಾರೆ. ಎರಡರಿಂದ ಮೂರು ದಿನ ತೋಟದಲ್ಲಿ ನಿಲ್ಲಿಸ್ತೀನಿ. ಅವರಿಗೆ ದಿನಕ್ಕೆ ೫೦೦ ರೂಪಾಯಿ, ೧೦ ಸೇರು ಅಕ್ಕಿ ಹಾಗೂ ರಾಗಿ ಕೊಡಬೇಕು. ಹೊಲದಲ್ಲಿ ರಾಗಿ, ಜೋಳ, ತೊಗರಿ, ಎಳ್ಳು, ಹಲ್ಲುಜೋಳ, ಸಾಸಿವೆ, ನೆಲಗಡಲೆ, ಹರಳು, ಹುರುಳಿ ಬೆಳೀತೀನಿ. ಗದ್ದೇಲಿ ಭತ್ತ, ಅದೂ ಕೆರೇಲಿ ನೀರಿದ್ದಾಗ ಮಾತ್ರ. ಆಲೂಗೆಡ್ಡೆ ಜತೆ ಬೀನ್ಸ್ ಹಾಕ್ತೀವಿ. ಹಿಂದಿನ ಭತ್ತದ ಬೇಸಾಯದಲ್ಲಿ ೪೦ ಗುಂಟೆಗೆ ೪೦ ಸೇರು ಭತ್ತ ಬಿತ್ತನೆ ಮಾಡ್ತಿದ್ವಿ. ಎರಡು ತಿಂಗಳು ಒಟ್ಲು ಪಾತೀಲಿ ಸಸಿ ನಿಂತಿರೋದು, ಆದರೆ ಈಗ ೨೫ ದಿವಸಕ್ಕೆ ಸಸಿ ನಾಟಿ ಮಾಡ್ತೀವಿ, ಎಕರೆಗೆ ೨೦ ಸೇರು ಭತ್ತ ಸಾಕು. ಹಿಂದಿನ ತಳಿಗಳು ಎತ್ತರವಾಗಿ ಬೆಳೆದು ತೆನೆ ಬಂದ ಮೇಲೆ ಕೆಳಗೆ ಬಿದ್ದು ನಷ್ಟ ಆಗೋದು. ಆದರೆ ಈಗಿನದು ಹೆಚ್ಚು ಎತ್ತರ ಬೆಳೆಯೋಲ್ಲ.



ಗೊಬ್ಬರ ಸಾಗಣೆ: ಮಗ ಶ್ರೀರಾಮ್ ಜತೆಯಲ್ಲಿ ಎಂ.ಆರ್.ಸೂರ್ಯನಾರಾಯಣಪ್ಪ : ಮೊಸಳೆ

ಇಳುವರಿ ಜಾಸ್ತಿ, ನಷ್ಟ ಕಡಿಮೆ. ನಾನು ದನಗಳನ್ನು ಚೆನ್ನಾಗಿ ಸಾಕುತ್ತೀನಿ. ನನ್ನ ವಾಸದ ಮನೆ ಇದ್ದಂತೆ ಹಸುವಿನ ಕೊಟ್ಟಿಗೇನೂ ಇಟ್ಟಿದ್ದೇನೆ. ಕೊಟ್ಟಿಗೆ ವಿಶಾಲವಾಗಿದೆ. ಒಂದು ರಾಸು ಮಲಗಿದ್ರೆ ಮತ್ತೊಂದು ನಿಂತಿರಬೇಕು ಅನ್ನುವ ಪರಿಸ್ಥಿತಿ ಇಲ್ಲ. ಅವನ್ನೂ ನಮ್ಮ ಹಾಗೇ ನೋಡ್ಕೋತೀನಿ. ನನಗೆ ಈ ವಯಸ್ಸಿನಲ್ಲಿಯೂ ದುಡಿಯುವ ಆಸೆ ಇದೆ. ನನಗೆ ಮೂರು ಜನ ಗಂಡುಮಕ್ಕಳು. ಹಿಂದೆ, ಹಳ್ಳಿ ಜೀವನ ನಮಗೆ ಸಾಕು, ಮಕ್ಕಳು ಓದಿ ಹೊರಟು ಹೋದರೆ ಸಾಕು, ಮಕ್ಕಳಿಗೆ ಈ ಕಷ್ಟಬೇಡ, ಬಿಸಿಲು ಮಳೇಲಿ ಶ್ರಮಬೇಡ, ನಾವು ಗಂಡ ಹೆಂಡತಿ ಇಬ್ಬರೇ ಕಷ್ಟಪಡೋಣ ಅಂತ ಅವರನ್ನು ಓದಿಸಿದ್ವಿ. ಸುಲಭೋಪಾಯದಲ್ಲಿ ಹಣ ಸಂಪಾದನೆ


ಹಂಬಿನ ಪಾತಿಗೆ ನೀರು: ಎಂ.ಆರ್.ಸೂರ್ಯನಾರಾಯಣಪ್ಪ ಅವರೊಂದಿಗೆ ಮಗ ಶ್ರೀರಾಮ್

ಮಾಡೋದನ್ನು ಕಲಿತ್ರು. ನಮ್ಮ ಹಾಗೆ ಕಷ್ಟ ಪಡೋದನ್ನು ಕೈಬಿಟ್ರು. ಇವತ್ತು ಇಷ್ಟಪಟ್ಟು ಈ ಜಮೀನನ್ನು ನೋಡ್ಕೋತೀನಿ ಅಂತ ಮಕ್ಕಳು ಹೇಳೋದಿಲ್ಲ. ಯಾವುದೇ ಕೆಲಸ ಮಾಡಿದ್ರೂ ಇದ್ರಿಂದ ನಾನು ಬದುಕುತೀನಿ ಅಂತ ಶ್ರದ್ಧೆಯಿಂದ ಮಾಡಿದ್ರೆ ಮುಂದೆ ಬರ್ತೀವಿ. ಮಾಡಬಾರದ್ದನ್ನು ಮಾಡಿದ್ರೆ ಆಗಬಾರದ್ದು ಆಗುತ್ತೆ. ವ್ಯವಸಾಯವನ್ನು ಶ್ರದ್ಧೆಯಿಂದ ಮಾಡಿದ್ರೆ ಆ ಭೂಮಿತಾಯೀನೂ ಒಲೀತಾಳೆ. ನಮಗೂ ತಕ್ಕ ಪ್ರತಿಫಲ ಸಿಗುತ್ತೆ. ನನಗೆ ವ್ಯವಸಾಯ ಸಂಪೂರ್ಣ ಸಂತೃಪ್ತಿ ನೀಡಿದೆ' ಎಂದು ನೆಮ್ಮದಿಯ ನಗೆ ಬೀರಿದ್ರು ಸೂರ್ಯನಾರಾಯಣಪ್ಪ. ಕೇಳಲು ಏನೂ ಉಳಿದಿರಲಿಲ್ಲ. 'ನಿಮ್ಮ ಕಾಲದ ಕೃಷಿ ಸಂಪ್ರದಾಯಗಳ ಬಗ್ಗೆ ಹೇಳಿ' ಅಂದೆ, "ಯುಗಾದಿ ಹಬ್ಬ ಕಳೆದ ಮಾರನೇ ದಿನ ಹೊನ್ನಾರು ಹೂಡೋವಿ. ಊರಿಗೆ ಒಳ್ಳೇದಾಗಲಿ, ಹಾಗೇ ನಮ್ಮೂರು ಚೆನ್ನಾಗಿರಲಿ ಅಂತ ಊರಲ್ಲಿ ಯಾರ್‍ಯಾರದ್ದು ಎತ್ತುಗಾಡಿ ಇದೆಯೋ ಅವರೆಲ್ಲಾ ಎತ್ತುಗಾಡಿ ಹೂಡಿಕೊಂಡು ಊರಸುತ್ತಾ ಸುತ್ತೋವಿ. ಆ ವರುಷ ನವಗ್ರಹಕ್ಕೆ ಯಾರು ಅಧಿಪತಿಯಾಗ್ತಾರೋ ಅವರ ಬಣ್ಣಕ್ಕೆ ಹೋಲುವ ಎತ್ತಿಗೆ ನೇಗಿಲು, ನೊಗ ಹೂಡೋವಿ. ನಂತರ ಎಲ್ಲಾ ಎತ್ತುಗಳಿಗೂ ಹೂವಿನ ಅಲಂಕಾರ ಮಾಡಿ, ಮಂಗಳಾರತಿ ಮಾಡಿ, ಎಲ್ಲಾ ಎತ್ತುಗಾಡೀನೂ ಊರ ಸುತ್ತಾ ಸುತ್ತಿಸಿ ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಮಾಡಿಸೋವಿ. ಅವತ್ತು ರಾತ್ರಿ ಗ್ರಾಮದೇವತೇನ ಎಲ್ಲರ ಮನೆಗೆ ಕರೆಸಿ ಹಣ್ಣುಕಾಯಿ ಮಾಡಿಸೋವಿ. ನಂತರ ಕಣ ಮಾಡುವ ಸಂದರ್ಭದಲ್ಲಿ ಕಣದಲ್ಲಿ ಕೊನೇದಿನ ಹಬ್ಬ ಮಾಡಿ ರಾತ್ರಿ ಊಟ ಅಲ್ಲೇ ಮಾಡ್ತಿದ್ವಿ. ಆಮೇಲೆ ದೀಪಾವಳಿ ಮಾರನೇ ದಿನ ಮನೆ ಗೊಬ್ಬರ ಹಾಗೂ ಒಲೆ ಬೂದಿ ಬೆರೆಸಿಕೊಂಡು, ಹೊಲದಲ್ಲಿ ಬಾಣದ ಗುರುತು ಹಾಕಿ ಹೊಲದಲ್ಲೆಲ್ಲಾ ಜೋರಾಗಿ ಕೂಗು ಹಾಕಿ ಮಿಶ್ರಣವನ್ನು ಹೊಲದಲ್ಲೆಲ್ಲಾ ಚೆಲ್ಲಿ ಬರೋವಿ. ಇದು 'ಕೂಗೋ ಹಬ್ಬ' ಅಂತ. ಇದು ಸಂತೋಷದ ಹಬ್ಬ. 'ಮಳೆಗಾಲ ಮುಗೀತು, ನಮ್ಮ ಬೆಳೆಗಳೆಲ್ಲ ಕೈಸೇರಲಿ' ಅಂತ ಖುಷಿಯಿಂದ ಮಾಡುವ ಹಬ್ಬ. ಅವತ್ತು ಗೋವುಗಳ ಪೂಜೆ ಮಾಡೋವಿ. ಅವುಗಳ ಮೈತೊಳೆದು, ಅಲಂಕಾರ ಮಾಡಿ ಸಿಹಿ ತಿನ್ನಿಸೋವಿ. 'ಈ ಮನೇಲಿ ಮಕ್ಕಳು ಮರಿ ಚೆನ್ನಾಗಿರಲಿ, ಕಣಜದಲ್ಲಿ ಭತ್ತ, ರಾಗಿ ತುಂಬಿರಲಿ, ಕೊಟ್ಟಿಗೇಲಿ ದನಕರುಗಳು ತುಂಬಿರಲಿ' ಅಂತ ಪ್ರಾರ್ಥನೆ ಮಾಡ್ತಿದ್ವಿ" ಅಂದ್ರು ಸೂರ್ಯನಾರಾಯಣಪ್ಪನವರು. ಮಾತುಕತೆ ಮುಗಿದ ಮೇಲೆ ಅವರ ತೋಟಕ್ಕೆ ಬೆಳೀತು ನಮ್ಮ ಪಯಣ. ದಾರಿಯಲ್ಲಿ ಸೂರ್ಯನಾರಾಯಣಪ್ಪ ಹೇಳಿದ್ರು, 'ಬ್ರಾಹ್ಮಣರಿಗೆ ಬಾಗಾಯ್ತು ಬಹಳ ಶ್ರೇಷ್ಠ' ಅಂದ್ರು. ಅವರ ಕಣದಲ್ಲಿ ತಲೆಗೆ ಪೇಟ ಕಟ್ಟಿ ಹುರುಳಿ ತೂರುತ್ತಿದ್ದ ವ್ಯಕ್ತಿಯನ್ನು ಬಳಿಗೆ ಕರೆದರು. ಇವನು ನನ್ನ ದೊಡ್ಡ ಮಗ ಶ್ರೀರಾಮ್. ಹಾಸನದ Godrej ಕಂಪೆನೀ ಕಛೇರೀಲಿ manager ಅಂತ ಪರಿಚಯಿಸಿದ್ರು. ನನಗೆ ಅಚ್ಚರಿಯಾಯ್ತು, ಅಷ್ಟರಲ್ಲಿ ಶ್ರೀರಾಮ್ ನಿಧಾನವಾಗಿ ಹೇಳಿದ್ರು, 'ನನಗೆ ವ್ಯವಸಾಯ ಅಂದ್ರೆ ತುಂಬಾ ಇಷ್ಟ' ಅಂತ. ಬಳಿಕ ತೋಟಕ್ಕೆ ಕರೆದುಕೊಂಡು ಹೋದ್ರು.


ಹುರುಳಿ ತೂರುತ್ತಿರುವ ಶ್ರೀರಾಮ್: ಮೊಸಳೆ

'ನೋಡಿ, ಇದು ನಾನು ಕಷ್ಟ ಪಟ್ಟು ಉಳಿಸಿದ ತೋಟ. ಎಟ್ಟೆ ಬಂದಾಗ ಹೆಂಗಸರು ಮಕ್ಕಳನ್ನು ಕರೆದು ಅವರ ಬಳೀನೂ ನೀರು ಹೊರಿಸಿದೀನಿ. ಈಗ ನಮ್ಮ ಈ ಜಮೀನು ತೋಟ ನೋಡಿದ್ರೆ ಎಲ್ಲರಿಗೂ ಕಣ್ಣು' ಅಂದ್ರು. ಬಹಳ ವ್ಯವಸ್ಥಿತವಾದ ನಿರ್ವಹಣೆ ಇರುವ ತೋಟ. ವಿಳ್ಳೇದೆಲೆ ಕುಯ್ಯಲು ಏಣಿಗಳನ್ನು (ಮೂರು ಕಾಲಿನದು) ಅಲ್ಲಲ್ಲಿ ಇಟ್ಟಿದ್ದಾರೆ. ಗೊಬ್ಬರ ಗೋಡನ್ನು ಹೇರಿ ಅಂದವಾಗಿ ಇಟ್ಟಿದ್ದಾರೆ ತೋಟವನ್ನು. ಹೊಸಬೆಳೆ ವೆನಿಲ್ಲಾ ಮಾಡುವ ಆಸೆ ಇದೆ ಅಂದ್ರು, ಸೂರ್ಯನಾರಾಯಣಪ್ಪ. 'ಮಾದರಿಯಾಗಿ ತೋಟ ನಿರ್ವಹಣೆ ಮಾಡಿದ್ದೀರಿ' ಎಂದು ಹೇಳಿ ನಮಸ್ಕರಿಸಿ, ಅವರಿಂದ ಬೀಳ್ಕೊಡುಗೆ ಪಡೆದು ಬಂದೆ.

ಇ) ಎಂ.ಎನ್. ಶ್ರೀನಿವಾಸಮೂರ್ತಿ ಇ/ಮ ಎಂ.ವೈ. ನಾರಾಯಣಪ್ಪ
ಮೊಸಳೆ, ಹಾಸನ (ತಾ) ಜಿಲ್ಲೆ, ದೂರವಾಣಿ : 08172 228365

ನಾನು ಎಂಟು ವರುಷದ ಹುಡುಗನಿದ್ದಾಗ ತಂದೆ ಓದು ಬಿಡಿಸಿದ್ರು. ವ್ಯವಸಾಯಕ್ಕೆ ಬಂದೆ. ನನಗೆ ಹದಿನೆಂಟು ವರುಷವಾದಾಗ ನಾನು ಎಲ್ಲರಂತೆ ಓದಿದ್ರೆ ಮುಂದೆ ಬರ್ತಿದ್ನೇನೋ ಅನ್ನಿಸ್ತು. ಆದರೆ ನನ್ನ ಹಣೇಬರಹ ಜಮೀನಿನಲ್ಲಿ ಬರೆದಿತ್ತು ಎಂದು ವ್ಯವಸಾಯ ಮಾಡಿದೆ. ಈಗ ನಾನು ಪರಿತಪಿಸುತ್ತಿಲ್ಲ. ನಾನು ಸಂಸಾರ ಕಟ್ಟಿಕೊಂಡ ಮೇಲೆ ಇದರಲ್ಲೇ ಜೀವನ ನಡೆಸುವ ಯೋಚನೆ ಮಾಡಬೇಕು. ಕಳೆದುಹೋದುದಕ್ಕೆ ಪರಿತಪಿಸಿ ಏನು ಪ್ರಯೋಜನ? ಹಳೆಯದನ್ನು ಬದಲಿಸಲು ಸಾಧ್ಯವಿಲ್ಲ. ಯೋಚಿಸುತ್ತಾ ಇದ್ರೆ ಈ ಜೀವನದ ಆನಂದವೂ ಇರುವುದಿಲ್ಲ.

ಮೊಸಳೆಯ ಎಂ.ವೈ.ನಾರಾಯಣಪ್ಪ ಹಾಗೂ ಬೇಲೂರು ತಾ ಹಗರೆಯ ಸಮೀಪದ ತೆಂಡೇಕೆರೆಯ ಗೌರಮ್ಮನವರಿಗೆ ಎರಡು ಗಂಡು ಹಾಗೂ ಒಂದು ಹೆಣ್ಣು ಮಗು. ಹಿರಿಯ ಮಗನೇ ಎಂ.ಎನ್. ಶ್ರೀನಿವಾಸಮೂರ್ತಿ. ಶ್ರೀನಿವಾಸಮೂರ್ತಿಯವರಿಗೆ ನಾಲ್ಕು ವರುಷ ಇದ್ದಾಗಲೇ ತಾಯಿ ತೀರಿಕೊಂಡ್ರು. ಆಗ ನಾರಾಯಣಪ್ಪನವರು ಮತ್ತೊಂದು ಮದುವೆಯಾದರಂತೆ. ಎರಡನೆಯ ಹೆಂಡತಿಗೆ ಮೂರು ಗಂಡು ಹಾಗೂ ಎರಡು ಹೆಣ್ಣು ಮಕ್ಕಳು. ಶ್ರೀನಿವಾಸಮೂರ್ತಿಯವರ ಪತ್ನಿ ಮುದ್ದಾಪುರದ ಶ್ರೀನಿವಾಸಮೂರ್ತಿ ಹಾಗೂ ನಾಗರತ್ನಮ್ಮ ಅವರ ಮಗಳು ಸತ್ಯವತಿ. ಅವರ ತೋಟಕ್ಕೆ ಹೋದಾಗ ಶ್ರೀನಿವಾಸಮೂರ್ತಿಗಳು ಅಡಿಕೆ ಮರಕ್ಕೆ ನೀರು ಹಾಕುತ್ತಿದ್ರು. ಊಟದ ಸಮಯವಾಗಿದ್ರೂ ಮನೆಗೆ ಹೋಗಿರಲಿಲ್ಲ. 'ಕೆಲಸ ಮುಗಿಸಿ ಹೋಗುತ್ತೇನೆ' ಅಂದ್ರು. ತಮ್ಮ ಕೆಲಸದ ನಡುವೆ ಬಿಡುವು ಮಾಡಿಕೊಂಡು ಮಾತನಾಡಿದ್ರು.



ಯಂತ್ರದ ಸಹಾಯದಿಂದ ತೋಟಕ್ಕೆ ನೀರು ಹಾಯಿಸುತ್ತಿರುವ ಎಂ.ಎನ್.ಶ್ರೀನಿವಾಸಮೂರ್ತಿ : ಮೊಸಳೆ

'ನಾನು ಎರಡನೇ ತರಗತಿಗೂ ಹೋಗಲಿಲ್ಲ. ನನಗೆ ಓದುವ ಆಸೆ ಇತ್ತು. ಆದರೆ ಅಂದಿನ ದಿನದಲ್ಲಿ ಮನೇಲಿ ದೊಡ್ಡವರು ಹೇಳಿದ ಹಾಗೆ ಕೇಳಬೇಕಿತ್ತು. ಎದುರಿಗೆ ನಿಂತು ಮಾಡನಾಡುವ ಧೈರ್ಯ ಇರಲಿಲ್ಲ. ಆಗ ಮನೇಲಿ ತೊಂದ್ರೆ ಇತ್ತು. ನನ್ನ ತಂದೆಯ ಅಣ್ಣ, ಹೆಂಡತಿ, ತಾಯಿ ತೀರಿಕೊಂಡಿದ್ರು. ಮನೇಲಿ ಅವ್ಯವಸ್ಥೆ ಇತ್ತು. ನೋಡೋರು ಮಾಡೋರು ಇರಲಿಲ್ಲ. ನನ್ನ ಓದನ್ನು ಬಿಡಿಸಿದ್ರು. ನನಗೂ ದೊಡ್ಡವರು, ತಂದೆ, ತಾಯಿ ಅಂದ್ರೆ ಏನೋ ಭಯ, ಎದುರಿಗೆ ನಿಲ್ಲಲು ಭಯ. ಅವರು ಒಳಗಿದ್ರೆ ಹೋಗಲು ಭಯ. ಭಯದಲ್ಲೇ ಬೆಳೆದೆ. ಆದರೆ ಇವತ್ತು ನನ್ನ ಮಕ್ಕಳಿಗೆ ಆ ವಾತಾವರಣ ಇಲ್ಲ. ನಾವು ಅವರು ಸ್ನೇಹಿತರಂತೆ ಇದ್ದೇವೆ. ಮಕ್ಕಳನ್ನು ತುಂಬಾ strict



ತೋಟದಲ್ಲಿ ಕಾವಲು-ಗುಡಿಸಲು: ಎಂ.ಎನ್.ಶ್ರೀನಿವಾಸಮೂರ್ತಿ: ಮೊಸಳೆ

ಮಾಡಿದ್ರೆ ಅವರು ಹಾಳಾಗಬಹುದು. ಅವರನ್ನು ಕಟ್ಟಿ ಹಾಕಿ ಶಿಕ್ಷೆ ಮಾಡಿದ್ರೆ ಹಾದಿ ಬಿಡಬಹುದು. ಅದೇ ಸ್ನೇಹಿತರಂತೆ ಕಂಡಾಗ ಒಳ್ಳೆಯ ದಾರೀಲಿ ನಡೀಬಹುದು. ನನ್ನ ತಂದೇನೂ ಕೃಷಿಕರು. ಅವರಿಗೆ ಒಂದೂವರೆ ಎಕರೆ ಜಮೀನಿತ್ತು. ಪಾಲಾದಾಗ ನನಗೆ ಅರ್ಧ ಎಕರೆ ತೋಟ ಹಾಗೂ ಅರ್ಧ ಎಕರೆ ಹೊಲ ಸಿಕ್ತು. ಬಹಳ ಕಷ್ಟದ ಕಾಲ. ಹಣದ ಅಭಾವ. ಕೆರೆಗೆ ನೀರು ಬಂದ್ರೆ ಭತ್ತದ ಬೆಳೆ. ಅರ್ಧ ಎಕರೆ ತೋಟಕ್ಕೆ ತೆಂಗು, ಅಡಿಕೆ, ಬಾಳೆ ಕಟ್ಟಿದೆ. ೬೨, ೬೩ನೇ ಇಸವೀಲಿ ಬರ ಬಂತು. ತೋಟ ಒಣಗಿತು. ಅಡಿಕೆ ಹಾಳಾಯ್ತು. ಆದರೆ ಧೈರ್ಯಗೆಡಲಿಲ್ಲ. ಹೊಸದಾಗಿ ಗೋಟಿನಿಂದ ಸಸಿ ಏಳಿಸಿ, ನಾಟಿ ಮಾಡಿದೆ. ಗಿಡ ಬೆಳೆಸಿದೆ. ಈಗ ಅದ್ರಿಂದ ಫಸಲು ಕುಯ್ತಿದೀನಿ. ನಾನು ಇವತ್ತಿಗೂ ಸ್ವತಃ ಕೆಲಸ ಮಾಡ್ತೀನಿ. ಜಮೀನು ಬಿಟ್ರೆ ಬೇರೆ ಜಗತ್ತು ನನಗೆ ಗೊತ್ತಿಲ್ಲ. ಆಳುಕಾಳುಗಳ ಮೇಲೆ ಅವಲಂಬಿತನಾಗಿಲ್ಲ. ದಿನದ ೨೪ ಗಂಟೇಲಿ ೧೬ ಗಂಟೆ ಕೆಲಸ ಮಾಡ್ತೀನಿ ಅನ್ನೋನಿಗೆ ಮಾತ್ರ ಈ ಬೆಳೆ ಹಾಗೂ ವ್ಯವಸಾಯ. ಜಮೀನು ಹೆಚ್ಚಿದ್ರೂ ಜೀವನ ಮಾಡಬೇಕು, ಕಡಿಮೆ ಇದ್ರೂ ಜೀವನ ಮಾಡಬೇಕು. ಈಗ ನನಗೆ ಜೀವನಕ್ಕೆ ತೊಂದ್ರೆ ಅನ್ನುವ ಹಾಗೂ ಇಲ್ಲ, ಬೇಕಾದಷ್ಟಿದೆ ಅಂತ ಹೇಳುವ ಹಾಗೂ ಇಲ್ಲ. ತಂದೆ ಕಾಲದಲ್ಲಿ ೮/೧೦ ರಾಸು ಇತ್ತು. ಈಗ ಹಳ್ಳೀಲಿ ದನಗಳ ಬೋರೇನ ದರಖಾಸ್ತು ಮಾಡಿ ಉತ್ತಿದಾರೆ. ಮೇಯಿಸಲು ಜಾಗ ಇಲ್ಲ. ಹಾಗಾಗಿ ಎರಡು/ಮೂರು ರಾಸು ಇಟ್ಟುಕೊಂಡಿದೀನಿ. ಮೊಸಳೇಲಿ ಹಾಲಿನ ಡೈರಿ ಇದೆ. ನಾಲ್ಕು ಕ್ಯಾನ್ ಹಾಲು ಹೋಗುತ್ತೆ. ಹೆಚ್ಚಾದ್ರೆ ನಾನೂ ಹಾಲು ಹಾಕ್ತೀನಿ. ನಮ್ಮ ಊರಲ್ಲಿ ಎಲ್ಲರೂ ಕಷ್ಟಪಟ್ಟು ಜೀವನ ಮಾಡ್ತೀವಿ. ಕೂತ್ಕೊಂಡು ತಿನ್ನೋರು ಯಾರಿಲ್ಲ. ನನಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗ ಇದ್ದಾನೆ. ಮೊದಲು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸ್ತೀನಿ. ಅದಕ್ಕೆ ನನ್ನ ಪ್ರಯತ್ನ ಮಾಡ್ತಿದೀನಿ. ವಿದ್ಯೆ ಹತ್ತೋದೂ ಬಿಡೋದೂ ದೈವಪ್ರಯತ್ನ. ವಿದ್ಯಾಭ್ಯಾಸ ಮಾಡಿ ರೈತರಾಗಿ ಅನ್ನೋದಕ್ಕೆ ಇಲ್ಲಿ ಜಮೀನಿಲ್ಲ. ನಾವು ಕಷ್ಟಪಟ್ಟಂತೆ ಈಗಿನವರು ಪಡೋಲ್ಲ. ಈಗ ಹಣದ ಮುಗ್ಗಟ್ಟಿಲ್ಲ. ಸಾಲಸೋಲ ಸಿಗುತ್ತೆ, ಇರೋ ಜಮೀನನ್ನು ಕಳೆಯದ ಹಾಗೆ ಇಟ್ಟುಕೊಂಡಿರೋದು, ನಾವು ಇರೋವರೆಗೆ ವ್ಯವಸಾಯ ಮಾಡೋದು. ಮುಂದಿನವರು ಏನಾದ್ರೂ ಮಾಡಲಿ. ನನಗಂತೂ ವ್ಯವಸಾಯ ತೃಪ್ತಿ ನೀಡಿದೆ' ಅಂದು ಸುಮ್ಮನಾದ್ರು ಶ್ರೀನಿವಾಸಮೂರ್ತಿ. ದಣಿದಿದ್ದ ಅವರಿಗೆ ವಿರಾಮ ನೀಡಲು ವಂದಿಸಿ ಸುಮ್ಮನಾದೆ.



'ಅಗೆತ ಹೀಗಿರಬೇಕು ನೋಡಿ' : ಎಂ.ಎನ್.ಶ್ರೀನಿವಾಸಮೂರ್ತಿ: ಮೊಸಳೆ

ಈ) ಎಂ.ಎನ್.ಮಂಜುನಾಥಯ್ಯ (ಶಾಂತಾರಾಂ) ಇ/ಮ ಎಂ.ವಿ.ನರಸಿಂಹಯ್ಯ

ಮೊಸಳೆ, ಹಾಸನ (ತಾ) ಜಿಲ್ಲೆ ದೂರವಾಣಿ : 08172 228378

ಓದುವ ಆಸೆಯಿದ್ರೂ ಜಮೀನು ಹೋಗುತ್ತಲ್ಲಾ ಅಂತ ವ್ಯವಸಾಯಕ್ಕೆ ಬಂದೆ. ನಮ್ಮ ಜಮೀನು ಅಂದ್ರೆ ಬರೀ ಬಗನಿಮರ ಹಾಗೂ ಗಜ್ಜುಗದ ಬೀಳು ಇದ್ದ ಕಾಡು. ಕೂಲಿ ಕೊಡೋಕೆ ಕೈಲಿ ಕಾಸಿರಲಿಲ್ಲ. ನಾನು ಒಬ್ಬನೇ ಅದನ್ನು ಕಡಿದು ಈ ತೋಟ ಮಾಡಿದೀನಿ. ಈ ತೋಟದ ಕೆಲಸ ಮಾಡುವಾಗ ಹಗಲು ಹೊತ್ತು ಸಾಲೋದಿಲ್ಲ ಅಂತ ಕೆಲಸ ಮಾಡಿದೀನಿ. ರಾತ್ರಿ ಹೊತ್ತೂ ಸಹ ತೋಟದಲ್ಲಿ ಅಗೆತ ಮಾಡಿ, ನೀರು ಬಿಟ್ಟಿದ್ದೀನಿ. ನನ್ನ ಶ್ರಮ ಇವತ್ತು ಫಲ ನೀಡ್ತಿದೆ.



ಸೋಗು ಒಟ್ಟುತ್ತಿರುವ ಎಂ.ಎನ್.ಮಂಜುನಾಥಯ್ಯ: ಮೊಸಳೆ

ಶಾಂತಾರಾಂ ಎಂದೇ ಖ್ಯಾತರಾದ ಮಂಜುನಾಥಯ್ಯ ಅವರನ್ನು ಈ ಪುಸ್ತಕಕ್ಕಾಗಿ ಸಂದರ್ಶನ ಮಾಡಲು ಹರಸಾಹಸ ಮಾಡಬೇಕಾಯ್ತು. ನಾನು ಸೂರ್ಯನಾರಾಯಣಪ್ಪ ಅವರ ಮನೇಲಿದ್ದಾಗ ಅಲ್ಲಿಗೆ ಬಂದಿದ್ರು. ಸ್ವಲ್ಪ ಕಾದು, 'ತೋಟದ ಕೆಲಸ ಇದೆ' ಅಂತ ಹೊರಟುಹೋದ್ರು. ಊಟವಾದ ಮೇಲೆ ಮನೇಲಿ ಇರಬಹುದು ಅಂತ ಹೋದ್ವಿ. ಮನೇಲಿ ಊಟ ಮುಗಿಸಿ ತೋಟಕ್ಕೆ ಅವರಾಗಲೇ ಹೋಗಿಯಾಗಿತ್ತು. ಅವರ ಅಡಿಕೆ ತೋಟಕ್ಕೆ ಅವರನ್ನು ಅರಸಿ ಹೊರಟೆ. ತೋಡುಬಾವಿಗೆ ಮೋಟಾರ್ ಅಳವಡಿಸಿ, ಪೈಪ್ ಹಿಡಿದು ನೀರು ಬಿಡ್ತಿದ್ರು ಮಂಜುನಾಥಯ್ಯ. ಮೋಟರ್ ಗದ್ದಲದಲ್ಲಿಯೇ ನಾನು ಬಂದ ಕಾರಣವನ್ನು ಅವರಿಗೆ ವಿವರಿಸಿದೆ. 'ಮೋಟಾರ್ ಕೆಟ್ಟು ಹೋಗಿತ್ತು, ಹಾಗಾಗಿ ತೋಟಕ್ಕೆ ಮೂರು ದಿನದಿಂದ ನೀರು ಬಿಟ್ಟಿಲ್ಲ, ಗಿಡ ಒಣಗ್ತಾ ಇದೆ, ಈಗ ನೀರು ಬಿಡಲೇಬೇಕು, ಬೇರೆ ಯಾರನ್ನಾದ್ರು ಸಂದರ್ಶನ ಮಾಡಿ' ಅಂತ ನಯವಾಗಿ ನಿರಾಕರಿಸಿದ್ರು. ನನಗೆ ಬೇಸರವಾಯ್ತು. ಸರಿ, ಸಮೀಪದಲ್ಲಿ ತಮ್ಮ ತೋಟದಲ್ಲಿ ಕೆಲಸ ಮಾಡ್ತಿರುವ ಶ್ರೀನಿವಾಸಮೂರ್ತಿಯವರು ಕಣ್ಣಿಗೆ ಕಂಡ್ರು. ಅವರೂ ಹಸಿದಿದ್ರು. ಆದರೂ ಬಿಡದೆ ಅವರ ಸಂದರ್ಶನವನ್ನು ಮುಗಿಸಿದೆ. ಅವರು ಊಟಕ್ಕೆ ಮನೆಗೆ ಹೊರಡಲು ಸಿದ್ಧರಾದ್ರು. ಮುಂದೇನು ಮಾಡೋದು? ನನಗೆ ಶಾಂತಾರಾಂ ಅವರನ್ನು ಬಿಡುವ ಮನಸ್ಸು ಇರಲಿಲ್ಲ. ಅದುವರೆಗೂ ಗುಡುಗುತ್ತಿದ್ದ ಅವರ ಮೋಟಾರ್ ಸದ್ದು ಒಮ್ಮೆಗೇ ನಿಂತುಹೋಯ್ತು. ಅವರ ಕೆಲಸ ಮುಗಿದಿರಬಹುದೇ? ಇನ್ನು ನನಗೆ ಸಂದರ್ಶನ ಕೊಡಬಹುದೇ? ಮನದಲ್ಲಿ ಆಸೆ ಮೂಡಿತು. ಮತ್ತೆ ಅವರ ತೋಟಕ್ಕೆ ಹೊರಟೆ. ಮಂಜುನಾಥಯ್ಯನವರು ಅವರ ಮೋಟಾರ್ ಮುಂದೆ ಬಾಗಿ ಕುಳಿತಿದ್ರು. ಅವರ ಕೆಲಸ ಮುಗಿದಿರಬಹುದು ಎಂಬ ನಿರೀಕ್ಷೆ ಹುಸಿಯಾಗಿತ್ತು. ಮೋಟಾರ್ ಮತ್ತೆ ಕೆಟ್ಟಿತ್ತು. 'ಇವತ್ತಿನ್ನೂ ರಿಪೇರಿಯಾದ ಮೋಟಾರ್ ತಂದಿದ್ದೆ, ಆಗಲೇ ಕೈಕೊಡ್ತಲ್ಲಾ' ಅನ್ನುತ್ತಲೇ ಅದನ್ನು Start ಮಾಡಲು ಸಾಹಸ ಮಾಡಿದ್ರು. ಮೆಶೀನ್ ಕೇಳಲಿಲ್ಲ. ನಾನು ನೋಡುತ್ತಿದ್ದೆ. ಬಹುಶಃ ನನಗೆ ಸಂದರ್ಶನ ನೀಡಲು ನೆರವಾಗುವಂತೆ ಆ ಯಂತ್ರ ಕೈಕೊಟ್ಟಿರಬಹುದು ಅನ್ನಿಸ್ತು. ಮತ್ತೆ ನಿಧಾನವಾಗಿ ಕೇಳಿದೆ, 'ಸಾರ್, ಹೇಗಿದ್ರೂ ಬಿಡುವಿದೆಯಲ್ಲಾ, ಸ್ವಲ್ಪ ಮಾತನಾಡಿ' ಎಂದೆ. ಅವರ ಕೆಲಸದ ಬಗ್ಗೆ ಅವರಿಗಿದ್ದ ಶ್ರದ್ಧೆಯ ಬಗ್ಗೆ ನನಗೆ ನಿಜಕ್ಕೂ ಮೆಚ್ಚುಗೆಯಾಗಿತ್ತು. ನನ್ನ ಕೆಲಸದ ಬಗ್ಗೆ ನನಗಿದ್ದ ಶ್ರದ್ಧೆಯ ಬಗ್ಗೆಯೂ ಅವರಿಗೆ ಅರಿವಾಗಿತ್ತೇನೋ, 'ಬನ್ನಿ, ನನ್ನ ನೀರು ಬಿಡುವ ಕೆಲಸ ಆಗಲಿಲ್ಲ, ಇನ್ನು ನಿಮ್ಮ ಕೆಲಸವಾದ್ರೂ ಮುಗಿಸೋಣ' ಅಂದ್ರು. ಅಂದದ್ದೇ ತಡ ಅಲ್ಲೇ ತೋಟದಲ್ಲೇ ಅವರ ಜೀವನಕ್ರಮವನ್ನು ಧ್ವನಿಮುದ್ರಿಸುವ ಕೆಲಸ ಆರಂಭವಾಯ್ತು. ಮಂಜುನಾಥಯ್ಯನವರ ಮಾತು ಮುಂದುವರೀತು, ಅಡೆತಡೆಗಳಿಲ್ಲದೆ.

'ನನ್ನ ಅಜ್ಜ ವೆಂಕಟರಾಮಯ್ಯನವರನ್ನು ನಾನು ನೋಡಿಲ್ಲ. ನನ್ನ ತಂದೆ ಆರು ತಿಂಗಳ ಮಗುವಾಗಿದ್ದಾಗಲೇ ಅಜ್ಜ ತೀರಿಹೋಗಿದ್ರಂತೆ. ಅಜ್ಜಿ ಒಬ್ಬರೇ ಇದ್ರು. ನನ್ನ ತಂದೆ ಮೈಸೂರಿನಲ್ಲಿ ವಾರಾನ್ನ, ಭಿಕ್ಷಾನ್ನ ಮಾಡಿ L.S. ಕಟ್ಟಿದ್ರು, ಆದರೆ ಐದು ರೂಪಾಯಿ ಪರೀಕ್ಷೆ ಫೀಜ್

ಕಟ್ಟಲಾಗದೆ ಊರಿಗೆ ಹಿಂತಿರುಗಿ ಬಂದ್ರು. ಊರಲ್ಲಿ ಐದು ಎಕರೆ ಐದು ಗುಂಟೆ ಜಮೀನಿತ್ತು. ಜಮೀನಿನ ಅರ್ಧಭಾಗದಲ್ಲಿ ಮಾತ್ರ ತಂದೆ ವ್ಯವಸಾಯ ಮಾಡಿದ್ರು. ಅಡಿಕೆ, ವಿಳ್ಳೇದೆಲೆ, ಬಾಳೆ ಹಾಕಿದ್ರು. ಸ್ವತಃ ದುಡೀತಿದ್ರು. ಸ್ವಲ್ಪ ತೋಟ improve ಆಯ್ತು. ತಂದೆಯ ಮದುವೆ ಆಯ್ತು. ತಂದೆಗೆ ಎರಡು ಗಂಡು ಹಾಗೂ ನಾಲ್ಕು ಹೆಣ್ಣುಮಕ್ಕಳು. ನಾನೇ ಹಿರಿಯ ಮಗ. ನನ್ನ ತಾಯಿ ಗೌರಮ್ಮ ಎಲೆಚಾಗಹಳ್ಳಿಯವರು. ನಾನು ೧೯೫೫ರಲ್ಲಿ SSLC. "ಹಣಕ್ಕೆ ತೊಂದರೆ ಇದೆ, ಓದಿಸಲು ಆಗೋಲ್ಲ" ಅಂದ್ರು ತಂದೆ. ಓದುವುದು ಬೇಡ, ಜಮೀನಿದ್ಯಲ್ಲಾ ಅಂತ ಬಂದೆ. ಪಾಳುಬಿದ್ದ ಜಮೀನನ್ನು ಹದ ಮಾಡಿ, ಬಾಳೆ, ಅಡಿಕೆ ಕಟ್ಟಿದೆ. ಬಾಳೆ ನೆರಳಲ್ಲಿ ಅಡಿಕೆ ಬೆಳೀತು. ಚಿಕ್ಕಮರಕ್ಕೇ ವಿಳ್ಳೆದೆಲೆ ಹಂಬು ಕಟ್ಟಿದೆ. ಎಳೆಮರ, ಎಲೆಹಂಬು ಜಾರಿಹೋಯ್ತು. ಹಾಗಾಗಿ ಪೂರ್ತಿ ತೋಟಕ್ಕೆ ಅಡಿಕೇನೇ ಮಾಡಿದೆ. ೧೦ ಗುಂಟೆ ಹೊಲ, ೧೦ ಗುಂಟೆ ಗದ್ದೆ ಇತ್ತು. ತೋಟ ಅಭಿವೃದ್ಧಿ ಮಾಡಬೇಕು ಅನ್ನುವ ಆಸೆ ಪ್ರಬಲವಾದಾಗ ಬ್ಯಾಂಕಿನಲ್ಲಿ ಸಾಲ ತೊಗೊಂಡೆ. ಐದರಿಂದ, ಹದಿನೈದು ಸಾವಿರದವರೆಗೂ ಸಾಲ ಮಾಡಿದೆ. ಯಾವುದಕ್ಕೆ ಸಾಲ ಪಡೆದಿದ್ನೋ ಅದಕ್ಕೆ ಖರ್ಚು ಮಾಡಿದೆ. ಸ್ವಲ್ಪ ಸ್ವಲ್ಪ ಅಭಿವೃದ್ಧಿ ಆಯ್ತು. ಪಡೆದಿದ್ದ ಸಾಲವನ್ನು ಪ್ರಾಮಾಣಿಕವಾಗಿ ಹಿಂತಿರುಗಿಸಿದೆ. ಅಡಿಕೆ ತೋಟಕ್ಕೆ ದನೀನ ಗೊಬ್ರ, ಮಕ್ಕಿಯಿಂದ ಮಣ್ಣು ಹಾಕ್ತೀನಿ. ಕೆಲವೊಮ್ಮೆ ಅಡಿಕೆ ಮರದ ಪಕ್ಕದಲ್ಲಿ ಗುಂಡಿ ಮಾಡಿ, ಅದರಲ್ಲಿ ಗೊಬ್ಬರ, ಮಣ್ಣು, ಸ್ವಲ್ಪ ರಾಸಾಯನಿಕ ಗೊಬ್ಬರ ಹಾಕ್ತೀನಿ. ಇಲ್ಲಾಂದ್ರೆ ಕಾಲುವೆ ತೆಗೆದು ಮಣ್ಣು ಗೊಬ್ಬರ ತುಂಬ್ತೀನಿ. ವ್ಯವಸಾಯವೇ ನನ್ನ ಜೀವನ. ಪಕ್ಕದವರು ಬೆಳೆದಿರುವ ಹಾಗೆ ನಾನೂ ಬೆಳೀಬೇಕು, ಅಭಿವೃದ್ಧಿಯಾಗಬೇಕು ಅನ್ನುವ ಆಸೇಲೇ ತೋಟಮಾಡಿದೆ, ದುಡಿದೆ. ಬೇಜಾರು ಮಾಡಿಕೊಂಡ್ರೆ ಪೈರು ಹೋಗುತ್ತೆ, ಜೀವನಕ್ಕೆ ತೊಂದರೆ. ನನಗೆ ಇವತ್ತಿಗೂ ದುಡಿಯುವ ಹಂಬಲ ಇದೆ. ನನ್ನ ಜೀವನ ಮಟ್ಟ ಇನ್ನೂ ಸುಧಾರಿಸಬೇಕು, ನಾವೂ ನಾಲ್ಕು ಜನರಂತೆ positionಗೆ ಬರಬೇಕು, ಬಡತನ ಅನುಭವಿಸಬಾರದು ಅಂತ ಮಾಡ್ತಾ ಇದೀನಿ. ಅಡಿಕೆ ತೋಟದಲ್ಲಿ ಚೆನ್ನಾಗಿ ಮಳೆಯಾದಾಗ ಎರಡೂವರೆ ಅಡಿಗಳ ಕಾಲುವೆ ತೆಗೆದು ನೀರು ಬಸೀತೀನಿ. ಮಳೆಹೋದ್ರೆ ಕಾಲುವೆ ತುಂಬಾ ಮಕ್ಕಿಗದ್ದೆ ಮಣ್ಣು ಹಾಗೂ ಗೊಬ್ಬರ ತುಂಬ್ತೀನಿ. ನಮ್ಮೂರ ಸಂಕೇತಿಗಳಲ್ಲಿ ಒಗ್ಗಟ್ಟಿದೆ. ಭತ್ತದ ಗದ್ದೆ ಖಟಾವು ಹಾಗೂ ಬಡಿಯೋದು ಬಣವೆ ಕಟ್ಟೋದಕ್ಕೆ ಪರಸ್ಪರ ಸಹಾಯ ಮಾಡ್ತೀವಿ. ಆದರೆ ತೋಟದ ಕೆಲಸ ಒಬ್ಬರೇ ಮಾಡಬೇಕು. ಜಾಸ್ತಿ ಕೆಲಸ ನಾವು ಮಾಡಿ, ಕೂಲಿ ಕಡಿಮೆ ಕೊಟ್ರೆ ಆದಾಯ ಬರುತ್ತೆ. ಸಂತೃಪ್ತಿಯಿಂದ ಇರಬಹುದು. ಧರ್ಮವಾಗಿ ನಡೆದು, ಇರೋದ್ರಲ್ಲಿ ತೃಪ್ತಿ ಪಟ್ಟುಕೊಂಡು, ಹೆಚ್ಚು ಆಸೆಪಡದೆ ಕಷ್ಟಪಟ್ಟು ದುಡಿದ್ರೆ ವ್ಯವಸಾಯ ಕೈ ಹತ್ತುತ್ತೆ. ನನಗೆ ಇಬ್ಬರು ಗಂಡುಮಕ್ಕಳು ಹಾಗೂ ಒಬ್ಬ ಮಗಳು ಇದ್ದಾಳೆ. ಒಬ್ಬ ಮಗ ಮೈಸೂರಿನ CFTRIನಲ್ಲಿ ಕೆಲಸದಲ್ಲಿದ್ದಾನೆ. ಅವನು ವ್ಯವಸಾಯಕ್ಕೆ ಬರೋಲ್ಲ. ಮಗಳ ಮದುವೆ ಆಗಿದೆ. ಇನ್ನೊಬ್ಬ ಹಾಸನದ ಅಂಗಡೀಲಿ ಕೆಲಸ ಮಾಡ್ತಿದಾನೆ. "ಹ್ಯಾಗಿದ್ರೂ ಅಪ್ಪ ಮಾಡ್ತಿದಾನಲ್ಲ, ನಾವೂ ಬೇರೆ ಕಡೆ ದುಡಿದು ಹಣ ಸಂಪಾದಿಸೋಣ, ಮುಂದಿನ ಅಭಿವೃದ್ಧಿಗೆ ಆಗುತ್ತೆ" ಅಂತ ಮಗ ಕೆಲಸಕ್ಕೆ ಹೋಗ್ತಾ ಇದಾನೆ. ಅವನಲ್ಲಿ ಸೋಮಾರಿತನ ಇಲ್ಲ. ಜಮೀನನ್ನು ಬಿಡೋಕೆ ಅವನೂ ತಯಾರಿಲ್ಲ. ನನ್ನ ಹೆಂಡತಿ ಶಾಂತಲಕ್ಷ್ಮಿ, ಹೊಳೆನರಸೀಪುರ (ತಾ) ಐಚನಹಳ್ಳಿಯ ಐ.ಸಿ.ವೆಂಕಟೇಶಯ್ಯ ಹಾಗೂ ಲಕ್ಷಮ್ಮ ಅವರ ಮಗಳು. ವ್ಯವಸಾಯದಲ್ಲಿ ಅವಳೂ ಸಹಕರಿಸಿದ್ದಾಳೆ. ಹಿಂದೆ ದೊನ್ನೆ ಕಟ್ಟೋದು, ಅಡಿಕೆ ಸುಲಿಯೋದು ಮಾಡ್ತಿದ್ಳು. ಮನಸ್ಸಿಟ್ಟು ಮಾಡಿದ್ರೆ ವ್ಯವಸಾಯದಲ್ಲಿ ಒಂದು ಕುಟುಂಬ ಸಂತೃಪ್ತಿಯಿಂದ ಜೀವಿಸಬಹುದು ಅನ್ನುವುದಕ್ಕೆ ನಾನೇ ಸಾಕ್ಷಿ. ನನಗೆ ಇವತ್ತಿಗೂ ಜಮೀನನ್ನು ಒಳ್ಳೆಯ ಸ್ಥಿತೀಲಿ ಇಡಬೇಕು ಅನ್ನವ ಹಂಬಲ. ಜಮೀನಿನ ಕೆಲಸ ಮಾಡಲು ನನಗೆ ಸಮಯ ಸಾಲ್ತಾ ಇಲ್ಲ, ಬೇರೆಯದರ ಬಗ್ಗೆ ಆಲೋಚಿಸಲು ಸಮಯವೂ ಇಲ್ಲ' ಅಂದ್ರು ಮಂಜುನಾಥಯ್ಯ. ವಿಚಾರವನ್ನು ಹೇಳಿ ಮುಗಿಸಿದ ತೃಪ್ತಿ ಅವರಲ್ಲಿ ಇದ್ರೆ, ನನ್ನ ಕರ್ತವ್ಯವನ್ನು ಮಾಡಿದ ಸಂತೃಪ್ತಿ ನನ್ನಲ್ಲೂ ಇತ್ತು.



ಹಂಬು ಕಟ್ಟುತ್ತಿರುವ ಎಂ.ಎನ್.ಮಂಜುನಾಥಯ್ಯ: ಮೊಸಳೆ

13. ಕುಪ್ಪಹಳ್ಳಿ

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆ ತಾಲ್ಲೂಕು ಕಸಬಾ ಹೋಬಳಿಗೆ ಸೇರಿರುವ ಗ್ರಾಮ ಕುಪ್ಪಹಳ್ಳಿ. ಕೃಷ್ಣರಾಜ ಪೇಟೆಯಿಂದ ಹೇಮಗಿರಿ ರಸ್ತೆಯಲ್ಲಿ ಏಳು ಕಿಲೋ ಮೀಟರ್ ಕ್ರಮಿಸಿ ಬಲಗಡೆ ತಿರುಗಿ ಒಂದು ಕಿಲೋ ಮೀಟರ್ ತೆರಳಿದ್ರೆ ಸಿಗುತ್ತೆ ಕುಪ್ಪಹಳ್ಳಿ. ಸಮೀಪದಲ್ಲೇ ತಣ್ಣಗೆ ಹರಿದಿದ್ದಾಳೆ ಹೇಮಾವತಿ. ಮಂದಗೆರೆ ಕಟ್ಟೆಯಿಂದ ನಾಲೆಯಲ್ಲಿ ನೀರು ಹರಿಸಿ ಕುಪ್ಪಹಳ್ಳಿಗೆ ನೀರಾವರಿ ಆಶ್ರಯ ಕಲ್ಪಿಸಲಾಗಿದೆ. ಸಮೀಪದ ಮಾಕವಳ್ಳಿಯಲ್ಲಿ ಸಕ್ಕರೆ ಕಾರ್ಖಾನೆ ಇದೆ. ಕಬ್ಬು ಕುಪ್ಪಹಳ್ಳಿಯ ಪ್ರಮುಖ ಬೆಳೆ. ಕುಪ್ಪಹಳ್ಳಿ, ವರಾಹನಾಥನ ಕಲ್ಲಹಳ್ಳಿ,



ಕುಪ್ಪಹಳ್ಳಿಗೆ ಆಸರೆ: ಹೇಮಾವತಿ




ಕುಪ್ಪಹಳ್ಳಿಯ ಒಂದು ಸಂಕೇತಿ ಮನೆ

ಹೊಸಕೋಟೆ, ತೇಗನಹಳ್ಳಿ, ನಾಚನಹಳ್ಳಿ, ಗದ್ದೆ ಹೊಸೂರು ಗ್ರಾಮಗಳಲ್ಲಿ ಸಂಕೇತಿಗಳು ನೆಲೆಸಿದ್ರು. ಕನ್ನಂಬಾಡಿ ಕಟ್ಟಿದಾಗ ವರಾಹನಾಥನ ಕಲ್ಲಹಳ್ಳಿ ಹಾಗೂ ಹೊಸಕೋಟೆ ಮುಳುಗಡೆ ಆಗಿವೆ. ಕುಪ್ಪಹಳ್ಳೀಲಿ ಮೊದಲು ಇದ್ದದ್ದು ಸಂಕೇತಿಗಳ ಮೂರು ಕುಟುಂಬ. ಈಗ ೨೭ ಕುಟುಂಬಗಳಿವೆ. ಎಲ್ಲರ ಪ್ರಮುಖ ಕಸುಬು ವ್ಯವಸಾಯ. ರಾಜಕೀಯವಾಗಿಯೂ ಗ್ರಾಮ ಬೆಳೆದಿದೆ. ಸ್ಥಳೀಯ ಶಾಸಕರಿಂದ ಊರಿಗೆ ಟಾರ್ ರಸ್ತೆ ಮಾಡಿಸಿದ್ದಾರೆ. ಸಂಕೇತಿಗಳೇ ಸೇರಿ ಮಾಸಿಕ ನೂರು ರೂಪಾಯಿ ಪ್ರತಿ ಮನೆಗೆ ಸೇರಿಸಿ ರಾಮ ಮಂದಿರ ನಿರ್ಮಿಸಿದ್ದಾರೆ. ರಾಮನವಮಿಯ ಕಾಲದಲ್ಲಿ ಹತ್ತು ದಿನಗಳ ಕಾಲ ವಿಜೃಂಭಣೆಯಿಂದ ಕಾರ್ಯಕ್ರಮಗಳು ನಡೆಯುತ್ತವೆ. ಸಂಕೇತಿಗಳ ನಡುವೆ ಪರಸ್ಪರ ಸಹಕಾರವಿದೆ. ಇತರೇ ಜನರ ೨೫೦ ಒಕ್ಕಲು ಇದ್ರೂ ಲೌಕಿಕವಾಗಿ ಹಾಗೂ ವ್ಯಾವಹಾರಿಕವಾಗಿ ಅವರೊಂದಿಗೆ ಹೊಂದಿಕೊಂಡಿದ್ದಾರೆ. ಯಾವುದೇ ಕಲಹಗಳು ಇಲ್ಲ. ಆದರೆ ಈ ಹಳ್ಳಿಯಲ್ಲೂ ಸಂಕೇತಿಗಳ ಮುಂದಿನ ಪೀಳಿಗೆಯ ಕೃಷಿ ಸಾಧ್ಯತೆಗಳು ಕ್ಷೀಣವಾಗಿವೆ.



ಜೋಡಿ ಅರಳಿಮರದ ಸಾಲುರಸ್ತೆ: ಕುಪ್ಪಹಳ್ಳಿ

ಅ) ಕೆ.ವಿ. ವೆಂಕಟರಮಣಯ್ಯ ಇ/ಮ ವೆಂಕಟಗಿರಿಯಯ್ಯ
ಕುಪ್ಪಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ



ಪಾರಾಯಣನಿರತ ಕೆ.ವಿ.ವೆಂಕಟರಮಣಯ್ಯ: ಕುಪ್ಪಹಳ್ಳಿ

ಹಿಂದೆ ಮೈಸೂರು ರಾಜ್ಯದಲ್ಲಿ ಬಾಲಬೋಧೆಗೆ ಚ.ವಾಸುದೇವಯ್ಯ ಅವರು ಬರೆದ ಪದ್ಯವಿತ್ತು. ಮಕ್ಕಳಿಗೆ ಹೇಳಿಕೊಡೋರು. ಅದು ನನ್ನ ಮನದಲ್ಲಿ ಉಳಿದಿದೆ :

> ಹಸಿದು ಬಂದವರಿಂಗೆ ಅಶನವೀಯಲು ಬೇಕು
> ಶಿಶುಗಳಿಗೆ ಪಾಲ್ಬೆಣ್ಣೆಗಳನುಣಿಸಲು ಬೇಕು
> ಮೋಸಗಾರರ ಕೂಡೆ ಬೆರೆಸದಿರಬೇಕು
> ಭಾಷೆ ಕೊಟ್ಟ ಬಳಿಕ ನಿಜವಿರಲುಬೇಕು
>
> ಕಳ್ಳತನವ ಮಾಡಿ ಒಡಲ ಹೊರೆಯಲು ಬೇಡ
> ಸುಳ್ಳಾಡಿ ಪಾತಕವ ಗಳಿಸಿಕೊಳಬೇಡ
> ಕುಳ್ಳಿರ್ದ ಸಭೆಯೊಳಗೆ ಕುತ್ಸಿತವು ಬೇಡ
> ಸಿರಿಬಂದ ಕಾಲಕ್ಕೆ ಬಲು ಮೆರೆಯಬೇಡ

ಮಕ್ಕಳು ಈ ಅರ್ಥಪೂರ್ಣ ಪದ್ಯ ಹಾಡ್ತಿದ್ರೆ ರೋಮಾಂಚನವಾಗುತ್ತೆ. ಈ ಇಂಗ್ಲೀಷಿನವರು ಬಂದ ಮೇಲೇ rat-cat ಬಂದಿದ್ದು. ಅಲ್ಲೇ ಒಂದಕ್ಕೊಂದು ಆಗೋಲ್ಲ ನೋಡಿ. ಇದು ಇಂದಿನ ವಿದ್ಯಾಭ್ಯಾಸದ ವಿಪರ್ಯಾಸ!

ಕುಪ್ಪಹಳ್ಳಿಯ ವೆಂಕಟಗಿರಿಯಯ್ಯ ಹಾಗೂ ರುದ್ರಪಟ್ಟಣದ ಲಕ್ಷ್ಮೀದೇವಮ್ಮ ಅವರ ಮಗ ಕೆ.ವಿ. ವೆಂಕಟರಮಣಯ್ಯ ಅವರಿಗೆ 85ರ ಇಳಿವಯಸ್ಸು. ಇವತ್ತಿಗೂ ಕಟ್ಟುಮಸ್ತಾದ ದೇಹ ಹೊಂದಿ ಯುವಕರನ್ನು ನಾಚಿಸುವ ಉತ್ಸಾಹ ಅವರದ್ದು. ಮಾತಿಗೆ ಕುಳಿತರೆ ಎದುರಿನವರನ್ನು ಮೂಕನಾಗಿಸುವಂತಹ ವಾಕ್ ಪ್ರವಾಹ. ವಿಚಾರವಂತಿಕೆಯೂ ಮಾತಿನಲ್ಲಿ ಬೆರೆತಾಗ ಎಂತಹವರೂ ತಲೆತೂಗಲೇಬೇಕು. ನಮಗಾದದ್ದೂ ಅದೇ. ವೆಂಕಟರಮಣಯ್ಯ ಅವರನ್ನು ಮಾತಿಗೆ ಬಿಟ್ಟು ಕೇಳುತ್ತಾ ಕುಳಿತೆವು.

'ನಮ್ಮ ಪೂರ್ವಿಕರು ಮೈಸೂರು ಮನೆಯವರು. ಅಲ್ಲಿಂದ ೪೦೦ ವರುಷಗಳ ಹಿಂದೆ ವಲಸೆ ಬಂದು ಇಲ್ಲಿ ನೆಲೆಸಿದ್ರು. ಜಮೀನು ಮಾಡಿದ್ರು. ತೋಟವೇ ಪ್ರಾಮುಖ್ಯವಾದ ಜೀವನಕ್ಕೆ ಆಧಾರವಾದ ಕಸುಬು. ಆಗ ಈ ಕಡೆ ನೀರಿರಲಿಲ್ಲ. ಹೊಳೆ ಆಚೇಲಿ ಮಂದಗೆರೆಕಟ್ಟೆಯಿಂದ ನಾಲೆ ಇತ್ತು. ಅಲ್ಲಿ ನೀರಾವರಿ ಇತ್ತು. ಈ ಕಡೇಲಿ ನಾಲೆ ಇರಲಿಲ್ಲ. ಬರೀ ಬೆಜ್ಜಲು ಭೂಮಿ. ಇದರಲ್ಲೇ ವ್ಯವಸಾಯ ಮಾಡಿದ್ರು. ಇಲ್ಲಿ ಬಂದು ನೆಲೆಸಿದವ್ರು ಮೂರು ಜನ ಅಣ್ಣತಮ್ಮಂದಿರು - ತಿಪ್ಪಯ್ಯ, ದಾಸಪ್ಪ ಹಾಗೂ ಕೃಷ್ಣಪ್ಪ ಅಂತ. ಇವರು ನೆಲೆಸಿದ ಮೇಲೆ, ಬರೀ ನಾವೇ ಆದೆವಲ್ಲಾ-ಹವ್ಯಕವ್ಯವೇ ಆಗಲಿ, ಒಳ್ಳೇದು ಕೆಟ್ಟದ್ದಕ್ಕಾಗಲಿ ಯಾರೂ ಇಲ್ವಲ್ಲಾ-ಅಂತ ಆಗ ಬೇರೆಯವರನ್ನು ಈ ಊರಿಗೆ ಬರಮಾಡಿಕೊಂಡ್ರು. ಅವರಿಗೆ ಪುರಾಣ ಹೇಳುವ ಕೆಲಸ. ಅವರಿಗೆ ಮನೆ ಜಮೀನನ್ನು ನೀಡಿದ್ರು. ಅವರ ವಂಶ ಈಗಲೂ ಇದೆ. ಆಮೇಲೆ ಅನ್ಯ ಗೋತ್ರದವರನ್ನೂ ಕರೆತಂದ್ರು. ಈ ಊರುಬಾಗಿಲಿನಿಂದ ಹೊಳೇ ತನಕ ೫೦ ಅರಳೀ ಮರಗಳನ್ನು ನಾಟಿ ಮಾಡಿದ್ರು. ಇತಿಹಾಸದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಇಷ್ಟು ಅರಳೀಮರಗಳನ್ನು ಸಾಲು ಮರಕ್ಕೆ ಹಾಕಿದ್ದು ಇದೇ ಮೊದಲು. ಹೊಳೇದಡದಲ್ಲಿ ಒಂದು ಮನೆಕಟ್ಟಿ ವ್ಯಾಸಪೂರ್ಣಿಮೆಯ ದಿನ ಹರಿಕಥೆ ಮಾಡಲು, ಗೌರೀಹಬ್ಬದ ಪೂಜೆ ಮಾಡಿಸಲು ಏರ್ಪಾಡು ಮಾಡಿದ್ರು, ಒಬ್ಬರನ್ನು ಕರೆತಂದು ಇಟ್ಟಿದ್ರು. ಅವರು ಕಟ್ಟಿದ ಮೂರು ವಠಾರವೇ ಮೇಲಿನ ಮನೆ, ಮಧ್ಯದ ಮನೆ ಹಾಗೂ ಕೆಳಗಿನ ಮನೆ ಅಂತ ಆಯ್ತು. ಮೂರು ಜನರೂ ಈ ಊರಲ್ಲಿ ಇದ್ದಾರೆ. ನೂರಾರು ಜನ ಹೊರಗಡೆ ಹೋಗಿದ್ದಾರೆ. ಈ ಊರಲ್ಲಿರುವ ಸಂಕೇತಿಗಳ ಜನಸಂಖ್ಯೆ ಕಡಿಮೆ. ಇಲ್ಲಿಯ ಜನರಲ್ಲಿ ವೇದವನ್ನು ಕಲಿತು ಸಾಂಗಾಧ್ಯಾಪಕರಾಗಿದ್ದೋರು ವಿರಳ. ಶಾಸ್ತ್ರದಲ್ಲಿ ಮಾತ್ರ ಪೂರ್ವಭಾಗ, ಉತ್ತರಭಾಗ, ವಿದ್ವತ್ ಆಗಿ, ವ್ಯಾಕರಣ, ಸಾಹಿತ್ಯ ಮೀಮಾಂಸದಲ್ಲಿ



ರಾಜಮ್ಮ - ಕೆ.ವಿ.ವೆಂಕಟರಮಣಯ್ಯ ದಂಪತಿ: ಕುಪ್ಪಹಳ್ಳಿ

ಇಲ್ಲಿನ ಸಂಕೇತಿಗಳು ಬಹಳ ಪ್ರಸಿದ್ಧಿ ಪಡೆದಿದ್ರು; ಈಗಲೂ ಇದ್ದಾರೆ. ಆಗಿನ ಕಾಲದಲ್ಲಿ ನಮ್ಮ ಪೂರ್ವಿಕರು ಹೇಳ್ತಿದ್ದ ಹಾಗೆ ಹಳ್ಳಿಗಳಲ್ಲಿ ಜೀವನ ಮಾಡೋದಕ್ಕೆ ಭಯೋತ್ಪಾದನೆ ಇತ್ತು. ಪಂಜುಗಳ್ಳರ ಕಾಟ; ಮೈಮೇಲೆ ನಗ, ಒಡವೆ ಹಾಕುವ ಹಾಗಿರಲಿಲ್ಲ. ಪಂಜುಗಳ್ಳರು ಮನೇ ನುಗ್ಗೋರು ಅನ್ನುವ ಭಯ. ಕಷ್ಟದಲ್ಲಿ ಜೀವಿಸಿದ್ರು. ನಮ್ಮ ದೊಡ್ಡಜ್ಜ ತಿಪ್ಪಯ್ಯ ಆಗಿನ ಕಾಲದಲ್ಲೇ ಶಿರಸ್ತೇದಾರರು. ಹಿಂದಿನ ಕಾಲದಲ್ಲಿ ಅಡಿಕೆ, ತೆಂಗು, ಬಾಳೆ ಬೆಳೀತಿದ್ರು. ಮೊದಲು ಪಾಳು ಜಮೀನನ್ನು ತೊಗೊಂಡು, ಅದನ್ನು ಮೊದಲು ಅಗೆಯೋದು. ಅದ್ರಲ್ಲಿ ಬಾಳೆ ಕಂದು ನೆಡೋದು. ತೀರ ಹತ್ತಿರಕ್ಕೆ ನೆಡಕೂಡದು. ೧೦ ಮಳಕ್ಕೆ ನೆಡಬೇಕು. ಮೂರು ಮಳ ಅಗಲ, ಮೂರು ಮಳ ಉದ್ದ ಹಾಗೂ ಒಂದೂವರೆ ಮಳ ಆಳಕ್ಕೆ ಗುಂಡೀ ತೆಗೆಯೋದು, ಅದಕ್ಕೆ ಬಾಳೆಕಂದು ನೆಡೋದು. ಬಾಳೆ ಗಿಡದ ಮೇಲೆ ಆರು ಮಳಕ್ಕೆ ಅಡಿಕೆ ಸಸಿ ನೆಡಬೇಕು, ಆಗ ಬಾಳೇನೂ ಬರುತ್ತೆ. ಸುತ್ತಾ ಹೊರಗಡೆಗೆ ಗಾಳಿ ಮರೆಯೂ ಆಗಬೇಕು, ತೋಟಕ್ಕೆ ರಕ್ಷಣೆಯೂ ಆಗಬೇಕು. ಜೀವನೋಪಾಯಕ್ಕೂ ಆಗಬೇಕು. ಅಡುಗೆಗೆ ಒಲೆಮೇವು ಆಗಬೇಕಲ್ಲ, ಅದಕ್ಕೋಸ್ಕರ ಸುತ್ತ ತೆಂಗಿನಸಸಿ ನೆಡೋರು. ಗಾಳಿ ತಡೆಗೆ ಕಾಡು ಮರಗಳನ್ನೂ ನೆಡೋರು. ನೇರಳೆ, ಅತ್ತಿ, ಮಾವು, ಹಲಸು ಹೀಗೆ ಫಲವೃಕ್ಷಗಳನ್ನು ಏಳಿಸೋರು. ಇದ್ರಿಂದ ನಮಗೂ ಹಣ್ಣು ಸಿಗುತ್ತೆ, ಆಮೇಲೆ ಕಾಲಕಾಲಕ್ಕೆ ಮರಗಳು ಹಣ್ಣು ಬಿಡೋದ್ರಿಂದ, ಅಡಿಕೆ ಮರಕ್ಕೆ ಅಳಿಲಿನ ಕಾಟ ಇರೋಲ್ಲ. ಅಳಿಲು ಅಡಿಕೆ ಕಾಯಿ ರಸ ತುಂಬುವ ಹಂತದಲ್ಲಿ ಕಣ್ಣಿನ ಹತ್ರ ರಸಹೀರಿ ಹಳ ಉದುರುತ್ತೆ. ಹಣ್ಣಿನ ಮರಗಳನ್ನು ನೆಟ್ರೆ, ಅಳಿಲಿಗೆ ಆಹಾರ ಅಲ್ಲಿ ದೊರೆಯುತ್ತೆ. ಅಡಿಕೆ ತೋಟಕ್ಕೆ ಬರೋಲ್ಲ. ನಮಗೆ ಲುಕ್ಸಾನು ಕಡಿಮೆಯಾಗುತ್ತೆ. ಅದಕ್ಕೇ ಹಣ್ಣಿನ ಮರಗಳನ್ನೂ ಏಳಿಸೋರು. ಹೀಗೆ ಅವರು ಕೃಷಿ ಜೀವನದಲ್ಲಿ ಪರಿಣಿತರಾಗಿದ್ರು. ನಿಜವಾಗಿ ಹೇಳಬೇಕೂಂದ್ರೆ ತೋಟದ ವ್ಯವಸಾಯದಲ್ಲಿ ಅವರಷ್ಟು ತಿಳುವಳಿಕೆ ನಮಗಿಲ್ಲ. ವಿಳ್ಳೇದೆಲೆ ಹಂಬು ಜೀವನಕ್ಕೆ ಆಧಾರ. ತೋಟದ ವ್ಯವಸಾಯ ಹ್ಯಾಗೆ ಅಂದ್ರೆ ಅದು ವೇದಾಧ್ಯಯನ ಮಾಡೋದಕ್ಕೆ ಅವಕಾಶ ಕೊಡೋದು. ತೋಟದ ವ್ಯವಸಾಯ ಇವತ್ತು ಮಾಡೋದನ್ನ ಇನ್ನೊಂದು ತಿಂಗಳು ಬಿಟ್ಟು ಮಾಡಿದ್ರೂ ಒಪ್ಪಿಕೊಳ್ಳುತ್ತೆ. ಬೇರೆ ಕೃಷೀಲಿ, ನಾಳೆ ಮಾಡೋದನ್ನು ಇಂದೇ ಮಾಡಬೇಕು. ತೋಟಕ್ಕೆ ಹಿಂದೆ ಆಳುಗಳನ್ನು ಕರೀತಿತ್ತಿಲ್ಲ. ಸ್ವತಃ ವ್ಯವಸಾಯ ಮಾಡೋರು. ಹಾಗಾಗಿ ವೇದಾಭ್ಯಾಸಕ್ಕೂ ಅವಕಾಶವಿತ್ತು. ಹಿಂದೆ ಜನಸಂಖ್ಯೆ ಇರಲಿಲ್ಲ. ಭೂಮಿ ಮಾತ್ರ ವಿಸ್ತಾರವಾಗಿತ್ತು. ಆಗ ವ್ಯವಸಾಯ ಮಾಡಿದಷ್ಟನ್ನು ಊಟ ಮಾಡಿ ಮುಗಿಸಲು ಆಗ್ತಿರಲಿಲ್ಲ. ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಹೋಗಲು ರಸ್ತೆ ಇರಲಿಲ್ಲ. ನದಿಗೆ ಸೇತುವೆ ಇರಲಿಲ್ಲ. ೫೦, ೬೦ ಕಿಲೋಮೀಟರ್ ಹೋದ್ರೆ ಬೇರೆ ಸೀಮೆಗೆ ಹೋಗಿದಾರೆ ಅನ್ನೋರು. ಯಾಕೇಂದ್ರೆ ಒಬ್ಬೊಬ್ಬರಿಗೆ ಸಂಪರ್ಕ ಇರಲಿಲ್ಲ. ಕಾಡು ಇತ್ತು. ಕಾಲುದಾರೀಲಿ ನಡಿದೇ ಹೋಗಬೇಕು. ನಾನೂ ರಾಮನಾಥಪುರಕ್ಕೆ ನಡಿದೇ ಹೋಗ್ತಿದ್ದೆ. ಊರಿಗೆಲ್ಲಾ ಎರಡೋ ಮೂರೋ ಮರದ ಗಾಡಿ ಇರೋದು. ನನಗೆ ೪೦/೫೦ ವರುಷ ಆಗುವವರೆಗೂ ನಡೆದೇ ಹೋಗುತ್ತಿದ್ದೆ. ಅವತ್ತಿನ ವಿಶೇಷ ಅಂದ್ರೆ ಚಪ್ಪಲಿ ಇರಲಿಲ್ಲ. ಬರೀಕಾಲಲ್ಲಿ ನಡಿಗೆ ಅಷ್ಟೆ. ಹಿರಿಯರ ಬಗ್ಗೆ ಒಂದು ಸನ್ನಿವೇಶ ಹೇಳೋರು. ಈ ಸಾಲು ಮರ ಏಳಿಸಿದ್ರಲ್ಲಾ, ಇದಕ್ಕೆ ಒಂಟೆ ಸರದಾರ ಅನ್ನುವನು ಬಂದು, ಒಂಟೆಗೆ ಸಾಲು ಮರದ ಸೊಪ್ಪನ್ನು ಕಡಿಸಿ ಹಾಕಿದ್ನಂತೆ. ಆಗ ಹೊಳೆ ಹತ್ರ ಇದ್ದ ಹೆಂಗಸರು ಹೇಳಿದ್ರೂ ಕೇಳದೆ ಒಂಟೆಗೆ ಸೊಪ್ಪು ಸವರಿ ಹಾಕಿದ್ರಂತೆ. ಆ ಹೆಂಗಸರು ಬಂದು ಮನೇಲಿ ಹೇಳಿದಾಗ, ಮೂರು ಜನ ಅಣ್ಣತಮ್ಮಂದಿರೂ ಶಕ್ತರಾಗಿದ್ರಲ್ಲಾ. ಇವರು ಹೋಗಿ ಅವರನ್ನು ಬಡಿದು ಓಡಿಸಿದ್ರಂತೆ. ಆಮೇಲೆ, ಅವರು ಸಮೀಪದ ಅತ್ತಿಗುಪ್ಪೆಗೆ ಓಡಿಹೋಗಿ ಅವರ ಕ್ಯಾಂಪ್‌ಗೆ ಸುದ್ದಿ ತಿಳಿಸಿದಾರೆ. ಅವರು ೫೦/೬೦ ಜನ ಜತೆಗೂಡಿ ಬಂದ್ರಂತೆ. ಇಲ್ಲಿ ಜಗಳವಾಯ್ತು. ಆಮೇಲೆ ಅವನು ಬುದ್ಧಿವಂತಿಕೆ ಮಾಡಿ, "ಸ್ವಾಮಿ, ನಿಮಗೂ ನಮಗೆ ಯಾಕೆ ಜಗಳ, ಎಲೆ ಅಡಿಕೆ ಕೊಡಿ, ನಾವು ಹೊರಟುಹೋಗ್ತೀವಿ" ಅಂದ್ನಂತೆ. ಇವರೂ ನಿಜ ಅಂತ ತಿಳಿದು, ತಟ್ಟೇನಲ್ಲಿ ವಿಳ್ಳೆದೆಲೆ, ಅಡಿಕೆ, ತೆಂಗಿನಕಾಯಿ ಕೊಡಲು ಹೋದಾಗ, ಅವನು ನೂಲು ಹಗ್ಗದ ಕುಣಿಕೆ ಮಾಡಿ ಕೈಲಿ ಹಿಡಿದುಕೊಂಡಿದ್ದನ್ನು ಇವರ ತಲೆ

ಮೇಲೆ ಎಸೆದನಂತೆ. ಅದು ಇವರ ಕುತ್ತಿಗೇಗೆ ಬೀಳುತ್ತೆ, ಜೋರಾಗಿ ಎಳೆದುಕೊಂಡು, ಒಂಟೆ ಹೊಡೆದುಕೊಂಡು ಹೋದ್ರೆ ಮೆಟ್ರೆ ಬಿಗಿದು ಸಾಯ್ತಾರೆ ಅನ್ನುವುದು ಅವನ ಉದ್ದೇಶ. ಎಸೆದಾಗ ವಿಧಿವಶಾತ್ ತಲೆಗೆ ಬೀಳಲಿಲ್ಲ, ಮಗ್ಗುಲಿಗೆ ಬೀಳ್ತು. ಅದನ್ನು ಕಂಡು ಇವರು "ನೀನು ನಂಬಿಕೆದ್ರೋಹಿ" ಅಂತ ಹೇಳಿ ಒನಕೆ ತಂದು, ಒಂಟೆ ಸರದಾರನಿಗೆ ಹಾಗೂ ಒಂಟೆಗೆ ಬಡಿದ್ರಂತೆ. ಅವರೆಲ್ಲಾ ದಿಕ್ಕೆಟ್ಟು ಓಡಿದ್ರಂತೆ. ಹೊಡೆದಾಟ ನಡೆದಿದ್ದೆಲ್ಲಾ ಮನೆ ಒಳಗೆ. ಕಡೆಗೆ ಇವರನ್ನು ಹೊತ್ತುಕೊಂಡು ಹೋಗುವ ಉದ್ದೇಶದಿಂದ ಸರದಾರ ಬಂದು ತಬ್ಬಿದನಂತೆ. ಆಗ ಮನೆ ತೊಲೆಯನ್ನು ಬಿಗಿಯಾಗಿ ಹಿಡಿದ್ರಂತೆ. ಕಡೆಗೆ ಮನೆಯ ಹೆಂಗಸರು ಓಡಿಹೋಗಿ ಇತರೇ ಜನರನ್ನು ಕರೆತಂದ್ರು. ಆಗ ಅವರು ಬಂದು ಹಿಡಿದಿದ್ದೋರನ್ನು ಕಿತ್ತು ಬಿಡಿಸಿದ್ರಂತೆ. ಆಮೇಲೆ ಅವರೆಲ್ಲಾ ಕ್ಷಮೆ ಕೇಳಿ ಹೋದ್ರಂತೆ. ಇದು ತಂದೆ ಹೇಳೋರು. ಎರಡನೆಯದು ಶಾಮಣ್ಣನವರು ಅಂತ. ಅವರು ನಮ್ಮ ದೊಡ್ಡ ಅಜ್ಜ. ಅವರಲ್ಲಿ ಒಂದು ವಿಶೇಷವಾದ ಶಕ್ತಿ ಇದ್ದುದ್ದು ಏನಪ್ಪಾ ಅಂದ್ರೆ, ಅವರು ಕುಳಿತು ಸಂಧ್ಯಾವಂದನೆ ಮಾಡುವಾಗ ಪ್ರಾಣಾಯಾಮ ಮಾಡಿದ್ರೆ ನೆಲಕ್ಕೆ ಸಂಪರ್ಕ ಇರುತ್ತಿರಲಿಲ್ವಂತೆ. ಮೊದಲು ಈ ಊರಿನಲ್ಲಿ ಕುಡಿಯುವ ನೀರಿಲ್ಲದೆ ಕುಡಿಯಲು ಒಂದು ಭಾವೀನ ರಂಗದ ಮಾಳದಲ್ಲಿ ಗಂಡ ಹೆಂಡತಿ ಇಬ್ಬರೇ ಸೇರಿ ತೆಗೆದಿದ್ರಂತೆ. ಇಲ್ಲಿ ಗೌರಿ ಹಬ್ಬದ ಆಚರಣೆ ವಿಶೇಷವಾಗಿತ್ತು. ಗೌರಮ್ಮನ್ನ ಕೂರಿಸಿದ ದಿನದಿಂದ ಬರುವ ಹುಣ್ಣಿಮೆವರೆಗೆ ದಿನಕ್ಕೊಂದು ಅಲಂಕಾರ ಮಾಡಿ, ಕಡೆಯ ದಿನ ಅದ್ದೂರಿಯಾಗಿ ಬಾಣ ಬಿರುಸು ಮದ್ದುಗುಂಡು ಮಾಡಿ ಗೌರಮ್ಮನನ್ನು ಊರಲ್ಲೆಲ್ಲಾ ಮೆರವಣಿಗೆ ಮಾಡಿ ಬಿಡ್ತಾ ಇದ್ರು. ಆವಾಗ ಹೇಳೋರು, ಇಲ್ಲಿ ಇಡಿಗಾಯಿ ಹಾಕಿದ್ದು ಹೊಳೆ ಆಚೆ ದಡದಲ್ಲಿರುವ ನಾಚನಹಳ್ಳಿಗೆ ಕೇಳೋದಂತೆ. ನನ್ನ ಜೀವಿತದ ಕಾಲದಲ್ಲೂ ೨೦೦ ಕಾಯಿ ಹಾಕ್ತಾ ಇದ್ದೆ. ಬಹಳ ಭಕ್ತಿಯಿಂದ ಆಚರಣೆ ಮಾಡೋರು, ಇಲ್ಲಿಯ ಜನ.

ಇನ್ನು ನನ್ನ ಬಗ್ಗೆ ಹೇಳೋದಕ್ಕೆ ದುಃಖ ಬರುತ್ತೆ. ನಾನು ನಮ್ಮ ಖಾಸಾ ದೊಡ್ಡಪ್ಪನವರಿಗೆ ದತ್ತು. ಪ್ರೈಮರಿ ಶಾಲೆ ನಮ್ಮ ಕುಪ್ಪಳ್ಳೀಲೇ ಇತ್ತು. ಮೂರನೇ ಕ್ಲಾಸ್‌ವರೆಗೆ ಇಲ್ಲಿ ವಿದ್ಯಾಭ್ಯಾಸ. L.S. ಮಾಡೋದಕ್ಕೆ ಹೊರಗೆ ಹೋಗಬೇಕು. ನಾನು ದತ್ತು ಹೋದಾಗ ಹತ್ತು ವರುಷ ವಯಸ್ಸು. Primary ಓದಿದ್ದೆ. ನಮ್ಮ ದೊಡ್ಡಪ್ಪನಿಗೆ ಹೆಂಡ್ತಿ ಇಲ್ಲ. ನಾನೇ ಅಡುಗೆ ಮಾಡಬೇಕಿತ್ತು. ಸ್ವಲ್ಪ ತೋಟ ಇತ್ತು. ಅದು ಎಟ್ಟೆ ಬಂದಾಗ ಒಣಗೋದು. ನನ್ನ ಜೀವನದ ಪ್ರಾರಂಭವೇ ಕಷ್ಟವಾಯ್ತು. ನನಗೆ ವಿದ್ಯಾಭ್ಯಾಸದ ಮೇಲೆ ಮೊದಲಿನಿಂದಲೂ ಆಸಕ್ತಿ. ಇಲ್ಲಿ ರಂಗಸ್ವಾಮಿಭಟ್ಟರು ಅಂತ ಇದ್ರು. ಅವರು ಪೂರ್ವಭಾಗ, ಉತ್ತರಭಾಗ ವ್ಯಾಕರಣ ವಿದ್ವಾಂಸರು. ಅವರ ಹತ್ರ ಹೋಗಿ ಹೇಳಿದೆ. ಮೂವತ್ತು ದಿನ ಕಲಿತೆ. ಅವರ ಮನೇಲಿ ಅಕ್ಷರಾಭ್ಯಾಸ ಮಾಡಿದೆ. ಮನೇಲಿ ನಿರ್ಬಂಧವಾಯ್ತು. ಆಮೇಲೆ ವಿದ್ಯೆ ಕಲಿಯುವ ಆಸೆಯಿಂದ ಊರು ಬಿಟ್ಟು ಕದ್ದುಹೋದೆ. ಯಾರಿಗೂ ಹೇಳಲಿಲ್ಲ. ನಮ್ಮಣ್ಣ ವೆಂಕಟಕೃಷ್ಣಯ್ಯ ಮೈಸೂರಿನ ಸದ್ವಿದ್ಯಾ ಪಾಠಶಾಲೇಲಿ ಓದ್ತಾ ಇದ್ರು. ಊಟಾನ ಛತ್ರದಲ್ಲಿ ಹಾಕೋರು. ಅಲ್ಲಿಗೆ ಹೋಗಿ ಊಟ ಮಾಡಿದ್ರೆ ಒಬ್ಬರಿಗೆ ಆಗೋದು. ತೊಗೊಂಡು ಬಂದ್ರೆ ಇಬ್ಬರಿಗೆ ಆಗೋದು. ಅವರಿಗೆ ನಾನು ಊಟ ತಂದು, ಇಬ್ಬರೂ ಊಟ ಮಾಡೋವಿ. ಅಲ್ಲಿ ಪಾಠಶಾಲೆಗೆ ಸೇರಲು ಅದು ಅಕಾಲ. ಒಂದು ದಿನ ನಾನು ಶ್ರೀರಾಮಪೇಟೇಲಿ ನಡೆದು ಬರುವಾಗ ಜಟ್ಟಿರಂಗ ಅನ್ನೋರು ಪರಿಚಯವಿಲ್ಲದೆ ಮಾತನಾಡಿಸಿದ್ರು. ನಾನು ಕಟ್ಟುಮಸ್ತಾಗಿದ್ದೆ. ನನ್ನ ವಿಚಾರ ತಿಳಿದ ಅವರು "ಈಗ ಏನೂ ಮಾಡ್ತಾ ಇಲ್ವಲ್ಲ, ಬಾ, ನಮ್ಮ ಮನೇಲಿ ನಿನಗೆ ಗರಡಿ ಕಲಿಸ್ತೀನಿ" ಅಂದರು. ಅವರಿಗೆ ಮಕ್ಕಳಿರಲಿಲ್ಲ. ಅಲ್ಲಿ ಗರಡಿ ಕಲಿತೆ ೬/೭ ತಿಂಗಳ ಕಾಲ. ಅವರ ಹೆಂಡತಿ ನನ್ನ ತಾಯಿಯಂತೆ ಸಲಹಿದ್ರು. ದಂಡೆ ಹೊಡೆದು ಬಂದಾಗ ಬಿಸಿಬಿಸಿಯಾಗಿ ರೊಟ್ಟಿ ಮಾಡಿ ಬೆಣ್ಣೆ ಜಿನುಗುವ ಹಾಗೆ ಇಟ್ಟುಕೊಡೋರು. ದೇಹಕ್ಕೆ ಆರೋಗ್ಯ, ಶಕ್ತಿ ಕೊಡ್ತು. ನಂತ್ರ ನಮ್ಮಜ್ಜ, ನಮ್ಮಜ್ಜೀನ ನೋಡಿಕೊಂಡು ಬರೋಣ ಅಂತ ದೊಡ್ಡಮಗ್ಗೆ ಹತ್ತಿರದ ಬರಗೂರಿಗೆ ಜಟ್ಟಿಗಳ ಹತ್ರ



ಗೋವಿಗೆ ಒಂದಿಷ್ಟು ಹುಲ್ಲು: ತಮ್ಮ ಹಿತ್ತಲಿನಲ್ಲಿ ಹಿರಿಯುತ್ತಿರುವ ಕೆ.ವಿ.ವೆಂಕಟರಮಣಯ್ಯ: ಕುಪ್ಪಹಳ್ಳಿ



ಸ್ನಾನಕ್ಕೆ ನೀರು ಕಾಯಿಸುವ ಒಲೆ: ರಾಜಮ್ಮನವರು: ಕುಪ್ಪಹಳ್ಳಿ

ಅನುಮತಿ ಪಡೆದು ಹೋಗಿದ್ದೆ. ಅಲ್ಲಿ ಹುಡುಕುವವರ ಕೈಗೆ ಸಿಕ್ಕಿಬಿದ್ದೆ. ವಿದ್ಯಾಭ್ಯಾಸ, ಗರಡಿ ಎಲ್ಲಾ ಮುಕ್ತಾಯವಾಯ್ತು. ಊರಿಗೆ ಬಂದೆ. ನಾನು ದುಷ್ಟ, ದೇಹವೂ ಬಲಿಷ್ಠವಾಗಿತ್ತು. ಮನಸ್ಸೂ ದುಷ್ಟವಾಗಿತ್ತು. ಕನಿಕರ ಕಡಿಮೆ. ರಾಕ್ಷಸೀವೃತ್ತಿ ಬೆಳೆದಿತ್ತು. ವಿದ್ಯಾಭ್ಯಾಸ ಮಾಡಲಾಗಲಿಲ್ಲವಲ್ಲಾ ಅನ್ನುವ ಕೋಪ ಬೇರೆ ಇತ್ತು. ಹೀಗಿರುವಾಗ ವಿಠಲಾಪುರದ ನಾರಾಯಣಾವಧಾನಿಗಳ ತಂದೆ ರಾಮಕೃಷ್ಣಯ್ಯ ಅವರು ನಮ್ಮ ತಂದೆಯ ಸೋದರಮಾವ. ಅವರು ಬಂದು ನಮ್ಮ ಮನೇಲಿ ಒಂದು ವರುಷ ಇದ್ರು. ಒಂದು ದಿನ ನಾನು ತರಕಾರಿ ಹಾಕಿದ್ದ ಜಾಗವನ್ನು ಹಸು ಬಂದು ಮೇದುಬಿಡ್ತು. ಬೇಸಿಗೆ ಕಾಲ ಅದು. ಕೋಪಗೊಂಡ ನಾನು ಕಲ್ಲು ತೊಗೊಂಡು ಅದನ್ನು ಹೊಡೆದೆ. ಅದನ್ನು ನೋಡಿದ ರಾಮಕೃಷ್ಣಯ್ಯನವರು ಕರೆದ್ರು, ಕೇಳಿದ್ರು, "ಅದನ್ನು ಹೊಡೆದೆಯಲ್ಲಾ ಈಗ ನಿನ್ನ ತರಕಾರಿ ಗಿಡ ಬೆಳೀತಾ? ಆ ಹಸುವಿಗೆ ಹೊಟ್ಟೆ ಹಸಿವು. ಮನುಷ್ಯನೇ ಹೊಟ್ಟೆ ಸಲುವಾಗಿ ಮಾಡಬಾರದ್ದನ್ನು ಮಾಡ್ತಾನೆ. ಅಂಥಾದ್ರಲ್ಲಿ ಮೂಕಪ್ರಾಣಿ. ಹೊಟ್ಟೆಗೆ ಬೇಕಿತ್ತು, ಹಸಿರು ತಿಂತು. ಅದನ್ನು ನೀನು ಹೊಡೆದೆಯಲ್ಲಾ, ಅದು ಮಹಾ ಅಪರಾಧ. ಹಾಗೇ ಓಡಿಸಬೇಕಿತ್ತು. ಇಲ್ಲಿಂದ ಮುಂದೆ ನಿನಗೆ ಕಷ್ಟನಷ್ಟಗಳನ್ನು ವಿಪರೀತವಾಗಿ ಕೊಡ್ತಾನೆ ಭಗವಂತ. ನಿನಗೆ ಧೈರ್ಯ, ಸಮಯಸ್ಫೂರ್ತಿ ಇದೆ. ವಿದ್ಯೆ ಇಲ್ಲ ಅಂತ ಪೇಚಾಡಬೇಡ. ಇವತ್ತಿನಿಂದ ಮುಂದಕ್ಕೆ ಈ ಜೀವನ ನಿನಗೆ ಹೋಗುತ್ತೆ. ರಾಕ್ಷಸೀವೃತ್ತಿ ತೊಲಗುತ್ತೆ. ನನ್ನನ್ನು ಹಿಡಿದುಕೋ' ಅಂದ್ರು. ಅವರು ಅಂಥಾ ಜಪಿತರು. ನಾನು ಹಿಡಿದಾಗ ನನ್ನ ಮೈಯಿ ಅದುರಿತು. ಅವತ್ತು ಎಲೆಕ್ಟ್ರಿಕ್ ದೀಪ ಇರಲಿಲ್ಲ. ನಾನು ಸುಳ್ಳು ಹೇಳ್ತಾ ಇಲ್ಲ. ನನಗೆ ಎಲೆಕ್ಟ್ರಿಕ್ ಶಾಕ್ ಹೊಡೆದ ಹಾಗೆ ಆಯ್ತು. "ಕೈಯಿ, ಬಾಯಿ, ಕಚ್ಚೆ ಈ ಮೂರನ್ನೂ ನೀನು ಕಾಪಾಡಿಕೊಂಡು ಬಾ, ನೀನು ಎಲ್ಲಿದ್ರೂ ನಿನಗೆ ತೊಂದರೆ ಆಗೋದಿಲ್ಲ" ಅಂದ್ರು. ಅಲ್ಲಿಂದೀಚೆಗೆ ನನ್ನ ಜೀವನ ಪರಿವರ್ತನೆಯಾಯ್ತು. ನಾನೊಬ್ಬ ಮನುಷ್ಯನಾದೆ. ದಯೆ ದಾಕ್ಷಿಣ್ಯ ಅನುಕಂಪ ಎಲ್ಲಾ ಉಂಟಾಯ್ತು. ನಂತರ ಹಾನಗಲ್ಲಿನ ಕೇಶವಯ್ಯನವರ ಒಬ್ಬಳೇ ಮಗಳನ್ನು ಕೊಟ್ಟು ನನಗೆ ಮದುವೆಯಾಯ್ತು. ವಿವಾಹವಾದಾಗ ನನಗೆ ಹದಿನೆಂಟು ವರುಷ. ಆ ಕಾಲದಲ್ಲಿ ಆರು ದಿನದ ಮದುವೆ. ಆ ಕಾಲದಲ್ಲಿ ಬೆಳಗಿನ ಹೊತ್ತು ತಿಂಡಿ ಇಲ್ಲ. ಮಕ್ಕಳಿಗೆಲ್ಲಾ ಮೊಸರನ್ನ. ಮಧ್ಯಾಹ್ನದಲ್ಲಿ ಭೋಜನ, ರಾತ್ರೀನೂ ಭೂರಿಭೋಜನವಾಗೋದು. ಬಹಳ ಸಂತೋಷದಿಂದ ಕಾಲ ಕಳೆಯೋರು. ನನಗೆ ಮೊದಲ ಹೆಂಡತಿಯಲ್ಲಿ ಮೂರು ಹೆಣ್ಣು ಹಾಗೂ ಎರಡು ಗಂಡುಮಕ್ಕಳಾದವು. ನನ್ನ ಕೊನೇ ಮಗಳಿಗೆ ಎರಡು ವರುಷ ಇದ್ದಾಗ ಮೊದಲ ಹೆಂಡತಿ ತೀರಿಕೊಂಡ್ಳು. ಮಕ್ಕಳನ್ನು ನೋಡಿಕೊಳ್ಳಲು ನಮ್ಮ ಅತ್ತೆ ಬಂದು ವಾಸ ಇದ್ರು. ಸಂಸಾರದ ನೊಗ ಹೊರಲು ಇನ್ನೊಂದು ಮದುವೆ ಮಾಡಿಕೋ ಅಂತ ಒತ್ತಾಯ ಮಾಡ್ತಾ ಇದ್ರು. ನನಗೆ ಇಷ್ಟ ಇರಲಿಲ್ಲ. ಬಂಧುಬಳಗದವರೆಲ್ಲಾ ಸೇರಿ ಒಂದು ತೀರ್ಮಾನ ಹೇಳಿದ್ರು. "ದೇವರ ಮುಂದೆ ಎರಡು ಚೀಟಿ ಹಾಕೋಣ. ಒಂದನ್ನು ಎತ್ತಿ ಯಾವುದು ಬರುತ್ತೋ ಅದರಂತೆ ನಡಿ" ಅಂದ್ರು. ನನ್ನ ಎರಡನೆಯ ಮಗಳು ಕುಮುದ ಚೀಟಿ ಎತ್ತಿದ್ಳು. 'ಮದುವೆ ಆಗಬೇಕು' ಅಂತ ಬಂತು. ಆಗ ಕಟ್ಟೆಪುರದ ಅನಂತಮ್ಮ ಅವರ ಮಗಳು ರಾಜಮ್ಮನನ್ನು ಮದುವೆಯಾದೆ. ಆಮೇಲೆ ಇವಳು ಮಕ್ಕಳನ್ನು ಕಾಪಾಡಿದ್ಳು. ಮೊದಲು ಇದೆಲ್ಲಾ ಒಣಭೂಮಿಯಾಗಿತ್ತು. ಬಡತನ ಇತ್ತು. ಆಮೇಲೆ ನಾಲೆ ಬಂತು. ನೀರಾವರಿ ಆಯ್ತು. ತೋಟಾನ ಖರೀದಿ ಮಾಡಿದೆ. ಈ ಮಧ್ಯದಲ್ಲಿ ನನಗೆ ಮತ್ತೊಂದು ಹೊಡೆತ ಬಿತ್ತು. ಹಿಂದಿನಿಂದ ಈ ಊರಲ್ಲಿ ಎಲ್ಲರಿಗೂ ನಾಟಕದ ಚಟ ಇತ್ತು. ಇಲ್ಲಿ ಕೆ.ಕೆ. ಮೂರ್ತಿಗಳು ಅಂತ ಇದ್ರು. ಅವರು ಕವಿಗಳು, ಬುದ್ಧಿವಂತ್ರು, ರಾಷ್ಟ್ರಪ್ರಶಸ್ತೀನೂ ಬಂದಿತ್ತು. ನಾಟಕದ ಕಂಪನಿಗೆ ಸಹಾಯ ಮಾಡಬೇಕು ಅಂದ್ರು. ದುಡ್ಡಿಗೆ ಅಭಾವ ಇದ್ದದ್ದರಿಂದ ಸಾಲ ಮಾಡಿ ಹಣ ತಂದು ಕೊಟ್ಟೆ. ಚಿಲ್ಕುಂದದಲ್ಲಿ ಕಂಪನಿ ಶುರುವಾಯ್ತು. ಕಾರಣಾಂತರದಿಂದ ನಾಟಕದ ಕಂಪನಿ ನಿಂತುಹೋಯ್ತು. ನನ್ನ ದುಡ್ಡಿಗೆ ತಿಲಾರ್ಪಣ ಆಯ್ತು. ಆಗ ಆಸ್ತಿ ಮಾರಿ ಸಾಲ ತೀರಿಸಬೇಕಾಯ್ತು. ಇದ್ರಿಂದ ಕೆ.ಕೆ. ಮೂರ್ತಿಗಳಿಗೂ ತೊಂದ್ರೆಯಾಯ್ತು. ಅವರಿಗೂ ಮೂರು ಹೆಣ್ಣು ಹಾಗೂ ಎರಡು ಗಂಡು. ನನಗೆ ಅವರೂ ನಮ್ಮ ಕುಟುಂಬದ ಸದಸ್ಯರು, ನನ್ನ ದೊಡ್ಡಣ್ಣ ಇದ್ದ ಹಾಗೆ

ಅನ್ನಿಸ್ತು. ಅವರ ಹೆಣ್ಣುಮಕ್ಕಳ ಮದುವೆಗೂ ನಾನು ಜಮೀನು ಮಾರಿದೆ. ಅದನ್ನೆಲ್ಲಾ ಹೇಳಬಾರದು, ಇದುವರೆಗೂ ಯಾರ ಬಳೀಲೂ ಹೇಳಿಲ್ಲ. ಅವರ ಮಗನ ವಿದ್ಯಾಭ್ಯಾಸಕ್ಕೆ ಇಲ್ಲಿಂದ ನಾನು ಮೈಸೂರಿಗೆ ಅಕ್ಕಿ ಹೊತ್ತುಕೊಂಡು ಹೋಗಿದೀನಿ. ಅವರಿಗೂ ನನಗೂ ವ್ಯತ್ಯಾಸವಿರಲಿಲ್ಲ. ಇಷ್ಟರಲ್ಲಿ ನನ್ನ ಮನೆ ಪಕ್ಕದಲ್ಲಿ ಕೇಶವಯ್ಯ ಅಂತಿದ್ರು. ಅವರಿಗೂ ವಯಸ್ಸಾಗಿತ್ತು. ಅಬಲಸ್ಥರು. ನನ್ನ ಮನೇಲಿ ಮನೆಯವರಾಗಿದ್ರು. ತೀವ್ರವಾಗಿ ಖಾಯಿಲೆ ಬಿದ್ರು. ನನ್ನನ್ನು ಕರೆದು "ನೋಡು, ನಾನು ಸತ್ತುಹೋಗ್ತೀನಿ, ನನ್ನ ಮನೆ ಬೆಳಕು ಮಾಡು" ಅಂದ್ರು. "ವಿಧಿನಿಯಮ ಹಾಗಿದ್ರೆ ಯಾರೂ ತಪ್ಪಿಸಲು ಆಗೋಲ್ಲ, ನೀವು ಹುಶಾರಾಗಿ ಮೊದಲು, ಆಮೇಲೆ ದತ್ತು ಹೋಮ ಮಾಡಿ ಒಬ್ಬ ಮಗನನ್ನು ಧಾರೆ ಎರಿತೀನಿ" ಅಂದೆ. "Subregistrar ಕರೆದುಕೊಂಡು ಬಾ, ನನ್ನ ಆಸ್ತೀನ ನಿನಗೆ ಮಾಡ್ತೀನಿ" ಅಂದ್ರು. "ನಾನು ಬರೆಸಿಕೊಳ್ಳೋಲ್ಲ, ಜೀವನದಲ್ಲಿ ಇನ್ನೊಂದಕ್ಕೆ ಆಸೆ ಪಡಬಾರದು ಅನ್ನುವ ಪಾಠ ಆಗಿದೆ. ನನ್ನ ಆಸ್ತೀನೇ ನನಗೆ ಇಲ್ಲ. ನಿಮ್ಮದು ನನಗೆ ಬೇಡ. ಶಾಸ್ತ್ರೋಕ್ತವಾಗಿ ನಿಮಗೆ ದತ್ತು ನೀಡಿದ ಮಗನ ಹೆಸರಿಗೆ ಮಾಡಿ" ಅಂದೆ. ನನ್ನ ಹೆಂಡತಿಯೂ ಇದಕ್ಕೆ ಒಪ್ಪಲಿಲ್ಲ. ಆದರೆ ನನ್ನ ಮಗನ ಜಾತಕ ನೋಡಿದವರು ಇವನಿಗೆ ತ್ರಿಮಾತೃಯೋಗ ಇದೆ ಅಂದಿದ್ರು. ಅದು ಒಂದು ಕಾರಣವಾಯ್ತು. ಹೀಗಾಗಿ ಹಾನಗಲ್‌ನಲ್ಲಿ ದತ್ತುಹೋಮ ಮಾಡಿ ಕೇಶವಯ್ಯನವರಿಗೆ ಮಗನನ್ನು ದತ್ತು ನೀಡಿದೆ. ನನ್ನ ಮಕ್ಕಳು ಬುದ್ಧಿವಂತ್ರು. ಎರಡನೆಯ ಮಗ ನಟೇಶ ೧೨ನೇ ವರುಷಕ್ಕೆ SSLC ಪಾಸ್ ಮಾಡಿದ್ದ. ಸೇರಿಸುವಾಗಲೇ ಅವನ್ನ ಮೂರನೇ ಕ್ಲಾಸಿಗೆ ಸೇರಿಸಿದ್ದೆ. ವ್ಯವಸಾಯದಲ್ಲೂ ನಿಸ್ಸೀಮರಾದ್ರು. ಅವರ ಉಕ್ಕೆ, ಇತರರ್‍ಯಾರೂ ಹೊಡೆಯಲು ಆಗೋಲ್ಲ. ಅಷ್ಟು ಪರಿಣತರ ಹಾಗೆ ವ್ಯವಸಾಯ ಮಾಡ್ತಾರೆ. ಆದರೆ ನನ್ನ ಸಮಯಸ್ಫೂರ್ತಿಯಿಂದ ಮತ್ತೆ ಮಕ್ಕಳನ್ನು ಓದಿಸಿದೆ. ಇಲ್ಲೇ Middle School ಹಾಗೂ ಹೇಮಗಿರಿಯಲ್ಲಿ ಹೈಸ್ಕೂಲ್ ಮಾಡಿದ್ರು. ನಾನು ರಾಜಕೀಯದಲ್ಲೂ ಇದ್ದೆ. ಯಾವ ಮಂತ್ರಿಗಳನ್ನು ನೋಡಬೇಕಾದ್ರೂ ನಾನು ಯಾರನ್ನೂ ಕರೆದುಕೊಂಡು ಹೋಗ್ತಿರಲಿಲ್ಲ. ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ೧೯೪೬ರಲ್ಲಿ ನಾನು, ಎಸ್.ಎಂ.ಲಿಂಗಪ್ಪ, ಶಂಕರೇಗೌಡ ಹಾಗೂ ಸಿದ್ದೇಗೌಡ ಅವರುಗಳನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದಕ್ಕೆ ಗುಜರಾತ್ ಜೈಲಿಗೆ ಹಾಕಿದ್ರು. ಅಲ್ಲಿ ನಾಲ್ಕು ಜನರಲ್ಲೂ ಒಂದು condition ಆಯ್ತು. ಮುಂದೆ ನಮಗೆ ಸ್ವಾತಂತ್ರ್ಯ ಬಂದ ಮೇಲೆ ಇದಕ್ಕೆ ಪರಿಹಾರ ಕೊಟ್ರೆ ತೊಗೋಬಾರದು ಅಂತ; ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಬಂದಿದೀವೇ ಹೊರತು ಸ್ವಾರ್ಥಕ್ಕಾಗಿ ಅಲ್ಲ ಅಂತ. ನಾನು ಮಾಸಾಶನವನ್ನು ತೆಗೆದುಕೊಳ್ಳಲಿಲ್ಲ. ನನ್ನ ರಾಜಕೀಯ ಪ್ರಭಾವವನ್ನು ಸ್ವಂತಕ್ಕೆ ಬಳಸಲಿಲ್ಲ. ಗಂಡು ಮಕ್ಕಳು, ಹೆಣ್ಣು ಮಕ್ಕಳು ಓದಿ ವಿದ್ಯಾವಂತರಾದ್ರು, ಈಗ ಸುಖವಾಗಿ ಇದಾರೆ.

ವ್ಯವಸಾಯದ ಬಗ್ಗೆ ಹೇಳಬೇಕು ಅಂದ್ರೆ ಬೆಜ್ಜಲು ಭೂಮಿ ಮಳೆಯನ್ನೇ ಆಧರಿಸಿರುವಂತಹದ್ದು. ಅದಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿರಬೇಕು. ಮಳೆ ಬಂದ ತಕ್ಷಣ ಆ ನಿಮಿಷದಲ್ಲಿ ಕೆಲಸ ಮಾಡಬೇಕು. ಮಖೆ ಮಳೆ ಭೂಮಿಗೆ ಅಮೃತ. ರೇವತಿ ಮಳೆ ಬಿದ್ದ ಮೇಲೆ ಮಣ್ಣಿನ ವಾಸನೆಯೇ ವಿಭಿನ್ನವಾಗಿರುತ್ತೆ. ವಿಶಾಖ ಮಳೆ ಕೀಟಗಳಿಗೆ ವಿಷ. ಆ ಮಳೆ ಬಿದ್ದಾಗ ಹೋರಿಗಳು ನೀರು ಬಿದ್ದ ಹುಲ್ಲನ್ನು ಮೇಯೋದಿಲ್ಲ. ಹುಲ್ಲು ವಿಷವಾಗುತ್ತೆ. ಕಬ್ಬನ್ನು ನೆಡಬೇಕಾದ್ರೆ ರೋಹಿಣಿ/ಮೃಗಶಿರ ಮಳೆಯ ಬೆರಗು ಉತ್ತಮ. ಚಿತ್ತೆ ಮಳೆ ಬೆರಗಿನಲ್ಲಿ ಬಿತ್ತನೆ ಮಾಡಿದ್ರೆ ಅಕಾಲಕ್ಕೆ ಬರುತ್ತೆ, ಧಾರಣೆ ಸಿಗುತ್ತೆ. ಅಕಾಲದಲ್ಲಿ ಬೆಳೆದ ಕಬ್ಬು ಆರರಿಂದ ಏಳು ಅಡಿ ಬೆಳೆಯುತ್ತೆ. ಅದೇ ಒಳ್ಳೆ ಬೆರಗಲ್ಲಿ ಹಾಕಿದ್ರೆ ೧೨ ಅಡಿ ಬೆಳೆಯುತ್ತೆ. ನಾನು ರೋಹಿಣಿ ಮಳೆಗೆ ಕಬ್ಬು ಹಾಕಿ ೧೪ ಅಡಿ ಕಬ್ಬು ಬೆಳೆದಿದೀನಿ. ಇನ್ನು ಭತ್ತದ ಬೆಳೆ ಬೇಸಾಯ ಅಂದ್ರೆ, ಗದ್ದೆ ಬೇಸಾಯದಲ್ಲಿ ಸ್ವಲ್ಪ ಸಮಯ ಸಿಗುತ್ತೆ. ಆರಿದ್ರ ಮಳೆ ಎರಡನೇ ಪಾದದಲ್ಲಿ ಅಗೆ ಹಾಕಬೇಕು. ಪುನರ್ವಸು ಕಳೆದು ಪುಷ್ಯದಲ್ಲಿ ನಾಟಿ ಹಾಕಬೇಕು. ನಾಟಿ ಮಾಡಬೇಕಾದ್ರೆ ಮೊದಲು ಜಮೀನನ್ನು ಎರಡು ಮೂರು ಉಕ್ಕೆ ಉತ್ತು, ಪಾಕ ಮಾಡಿಕೊಂಡು, ಬದೂನ ಕೊಚ್ಚಿ, ಅದನ್ನು ಭದ್ರವಾಗಿ ಕಟ್ಟಿ, ನಾಲ್ಕು ಮೂಲೇನಲ್ಲಿ ಎರಡು ಅಂಗುಲ ನೀರು ನಿಲ್ಲುವ ಹಾಗೆ ಮಾಡಿ, ಭೂಮಿಯನ್ನು ಇಪ್ಪತ್ತು ದಿವಸ ಕರಗಿಸಬೇಕು. ಆಗ ಸೀಮೆ ಗೊಬ್ರ ಇರಲಿಲ್ಲ. ಗದ್ದೇಲಿ ಅಪ್‌ಸೆಣಬು ಸೊಪ್ಪು ಬೆಳೆಯೋವು. ಎಳ್ಳುಹಾಕೋವು. ಅಪ್‌ಸೆಣಬು ಬೆಳೆದಾಗ ಅದನ್ನು ತುಂಡು ಹಾಕಿ ಉಳಿಸಿದೀವಿ. ಅದು ಭೂಮಿಗೆ ಬಿದ್ದ ತಕ್ಷಣ, ಮಣ್ಣಿನಲ್ಲಿ ಕೊಳೆತು ಎರಡನೇ ಉಕ್ಕೆ ಹೊತ್ತಿಗೆ ನಾತ ಬರೋದು. ಇಪ್ಪತ್ತು ದಿನದಲ್ಲಿ ಚೆನ್ನಾಗಿ ಕರಗಿ ಭತ್ತದ ಬೆಳೆಗೆ ಸತ್ತ್ವವನ್ನು ಕೊಡೋದು. ನಾಟಿ ಮಾಡಿದ ತಕ್ಷಣ ಬಹಳ ಬೇಗ ಭತ್ತದ ಪೈರು ಎಚ್ಚೆತ್ತುಕೊಳ್ಳುತ್ತೆ. ಭತ್ತದ ನಾಟಿ ಸಂಘ ಜೀವನ; ಒಬ್ರು ಇಬ್ರು ಮಾಡೋದಲ್ಲ. ಒಬ್ಬರಿಗೊಬ್ಬರು ಸಹಾಯ ಮಾಡಿ, ಆರು ಆಳು ಎಲ್ಲ ಒಬ್ಬರಿಗೊಬ್ಬರು ಸಹಾಯ ಮಾಡ್ತಿದ್ರು. ವ್ಯವಸಾಯದಲ್ಲಿ ಬೆರಗು ಬಿಟ್ಟುಹೋದ್ರೆ ವ್ಯವಸಾಯದ ಖರ್ಚು ತೊಗೊಳ್ಳೋದೂ ಕಷ್ಟ ಆಗುತ್ತೆ. ಬರಕ್ಕೆ ಭತ್ತ ಅಂತಾರೆ. ವಸತಿ ಅಥವಾ ಅಣ್ಣೆ ನೆಲದಲ್ಲಿ ಭತ್ತ ಆಗೋಲ್ಲ. ಬೇಸಿಗೆಯಲ್ಲಿ ಭತ್ತದ ಇಳುವರಿ ಚೆನ್ನಾಗಿರುತ್ತೆ. ಭತ್ತದ ಹೊಡೆ ಹೊರಡುವ ಕಾಲದಲ್ಲಿ ಮೋಡ ಇದ್ರೆ ಕಾಳು ಜೊಳ್ಳಾಗುತ್ತೆ. ಬಿಸಿಲು ಕಾದ್ರೆ ಉತ್ತಮ. ನೀರಲ್ಲೇ ಭತ್ತ ಇದ್ರೂ ಭತ್ತಕ್ಕೆ

ಬರ ಬೇಕು. ನೀರು ಬೇಗ ಇಂಗುವಂತಿರಬೇಕು. ಒಂದು ಸಾರಿ ನಾನು ರಾಜಭೋಗ ಭತ್ತವನ್ನು ಹಾಕಿ ರಾಸಾಯನಿಕ ಗೊಬ್ಬರ ಹಾಕದೇನೆ, ಮೂರು ಎಕರೇಗೆ ಬಾಯಿ ಹೊಲೆದ ನೂರು ಮೂಟೆ ಭತ್ತ ಆಗಿತ್ತು. ಭೂಮಿಯ ಪೋಷಕಾಂಶವನ್ನು ರಕ್ಷಿಸಬೇಕು. ಗದ್ದೆಗೆ ವ್ಯವಸಾಯ ಮಾಡಿ ನೀರುಕಟ್ಟಿದ ಮೇಲೆ ಕೆನೆ ಅಂತ ಏಳುತ್ತೆ, ಬಿರುಕು ಬಿಟ್ಟು. ನಮ್ಮ ಗದ್ದೇಲಿ ಮೂರು ಅಂಗುಲ ಏಳೋದು. ಅದೆಲ್ಲಾ ಗೊಬ್ಬರಾನೇ. ಆಗ ಭತ್ತದ ಫಸಲು ಚೆನ್ನಾಗಿ ಬರುತ್ತೆ. ವ್ಯವಸಾಯದಲ್ಲಿ ಅದೃಷ್ಟವೂ ಬೇಕು. ತೃಣ, ಕಾಷ್ಠ, ಜಲಸಮೃದ್ಧಿ ಇರುವಲ್ಲಿ ಬ್ರಾಹ್ಮಣ ವ್ಯವಸಾಯ ಮಾಡಬೇಕು. ಹುಲ್ಲು ನೀರು ಸೌದೆ ಬೇಕೇಬೇಕು. ಗೋಬ್ರಾಹ್ಮಣಹಿತಾಯ ಚ ಅಂದಾಗ ಇವನ ಜತೆ ಹಸುಗಳು ಇರಬೇಕು, ಅದಕ್ಕೆ ಹುಲ್ಲು ಬೇಕು, ನೀರು ವ್ಯವಸಾಯಕ್ಕೆ ಬೇಕು, ಸೌದೆ ಬದುಕಲು ಬೇಕು.

ವ್ಯವಸಾಯದಲ್ಲಿ ಬಹಳ ಮುಖ್ಯವಾದ ಅಂಶ ಏನಪ್ಪಾ ಅಂದ್ರೆ, "ಮನೇಲಿ ಹೆಚ್ಚು ಜನರಿದ್ದಾಗ ಕೂಲಿ ಕೊಟ್ಟು ವ್ಯವಸಾಯ ಮಾಡೋನು ಕೆಟ್ಟ, ಒಂಟಿಯಾಗಿರೋನು ಸ್ವತಃ ಕೆಲಸ ಮಾಡಿದ್ರೆ ಕೆಟ್ಟ" ಮನೇಲಿ ಜನ ಇದ್ದಾಗ ಅವರೇ ದೇಹಶ್ರಮ ಮಾಡಿ ವ್ಯವಸಾಯ ಮಾಡೋದು ಉತ್ತಮ. ಆದರೆ ಒಂಟಿಯಾಗಿ ಇದ್ದಾಗ ಅವನು ಬುದ್ಧಿಗೆ ಕೆಲಸ ಕೊಡಬೇಕು. ದೇಹಕ್ಕೆ ಹೆಚ್ಚು ಕೆಲಸ ಕೊಡಬಾರದು. ಅವನು ಆರೋಗ್ಯವಾಗಿರಬೇಕು. ಖಾಯಿಲೆ ಹಿಡಿದು ಮಲಗಿದ್ರೆ ವ್ಯವಸಾಯ ಮಾಡೋರ್‍ಯಾರು? ವ್ಯವಸಾಯ ಮಾಡುವಾಗ ಭೂಮಿಪೂಜೆ ಮಾಡಬೇಕು. ಅಗೆ ಹಾಕುವಾಗ ವಿನಾಯಕ ಪೂಜೆ ಮಾಡ್ತಾರೆ. ಖಟಾವು ಮಾಡುವಾಗ ಸ್ವಲ್ಪ ಧಾನ್ಯವನ್ನು ಕುಯ್ದು ಲಕ್ಷ್ಮಿ ಅಂತ ಪೂಜೆ ಮಾಡ್ತಾರೆ. ರೈತ ಖರ್ಚು ಕಡಿಮೆ ಮಾಡಬೇಕು. ದುಂದುವೆಚ್ಚ ಮಾಡಬಾರದು. ೧೯೬೩ರಲ್ಲಿ Tenancy ಬಂದಾಗ ೧೦೦ಕ್ಕೆ ೯೯ ಜನ ಬ್ರಾಹ್ಮಣರ ಜಮೀನು ಹೋಯ್ತು. ರಾಜಕೀಯ ಹಾಗೂ ಕಾನೂನು ತಿಳಿದಿದ್ರೆ ಬ್ರಾಹ್ಮಣರ ಜಮೀನು ಹೋಗ್ತಿರಲಿಲ್ಲ. ಬ್ರಾಹ್ಮಣರಿಗೆ ಭೂಮಿ ಇದ್ದಿದ್ರೆ ಒಳ್ಳೇದಾಗಿರೋದು. ಹಳ್ಳಿ ಜೀವನ ಕಷ್ಟ, ಹೆಂಡಕುಡುಕರು ಜಾಸ್ತಿ, ಮರ್ಯಾದೆರಹಿತ ಜೀವನ ಅಂತ ಹೇಳಿ ಬಹಳ ಜನ ಹಳ್ಳಿ ಬಿಟ್ಟು ಹೋದ್ರು. ವಿದ್ಯಾವಂತರ ಜತೆ ದ್ವೇಷ ಕಟ್ಟಿಕೊಂಡು ಜೀವಿಸಬಹುದು. ದಡ್ಡರ ಜತೆ ದ್ವೇಷ ಸಲ್ಲದು. ಮುಂದಿನ ದಿನಗಳಲ್ಲಿ ವಿದ್ಯೆ ಇದ್ದರೂ ಕೆಲಸ ಸಿಗೋದು ಕಷ್ಟ. ಸರ್ಕಾರಿ ಕೆಲಸವಂತೂ ಸಿಗೋದಿಲ್ಲ. ಅಂತಹ ಸಂದರ್ಭದಲ್ಲಿ ಹಳ್ಳಿಗೆ ವಾಪಸ್ಸು ಬರಬೇಕು ಅಂದುಕೊಂಡ್ರೆ ಹ್ಯಾಗೆ ಬರೋಕೆ ಆಗುತ್ತೆ, ಇಲ್ಲಿ ಜಮೀನು ಇಲ್ಲದಿದ್ರೆ! ಅದಕ್ಕೇ ಇವತ್ತಿಗೂ ಬ್ರಾಹ್ಮಣರಿಗೆ ಹಳ್ಳೀಲಿ ಜಮೀನು ಇದ್ರೆ ವಾಸಿ ಅನ್ನಿಸುತ್ತೆ. ಆದರೆ ಹೆಂಗಸರಲ್ಲಿ ಇಂತಹ ಪರಿವರ್ತನೆ ಆಗಬೇಕು ಅನ್ನಿಸುತ್ತೆ. ಯಾವಾಗ ನಮ್ಮ ಜನರ ಹೆಂಗಸರಲ್ಲಿ, "ನಾವು ಗ್ರಾಮಾಂತರ ಪ್ರದೇಶದಲ್ಲಿ ಇರಬೇಕು" ಅನ್ನುವ ಮನೋಭಾವ ಬೆಳೆಯುತ್ತೋ ಆಗ ಬ್ರಾಹ್ಮಣರು ಹಳ್ಳಿಗೆ ಬರ್ತಾರೆ.

ಬ್ರಾಹ್ಮಣರು ಶಾಪಗ್ರಸ್ತರು. 'ಗಜದ್ವಿಜಶ್ವಾನ ಸಿಂಹ' ಇವು ನಾಲ್ಕೂ ಅವಕ್ಕೆ ಅವೇ ವೈರಿ. ಬ್ರಾಹ್ಮಣ ಯಾರನ್ನೂ ಯಜಮಾನ ಮಾಡಿಕೊಳ್ಳೋಲ್ಲ. ನಮ್ಮ ಹೆಂಗಸರಲ್ಲಿ ದುರ್ಬಲತೆ ಇದ್ರೆ ನಾವೇ ಕಾರಣ. ನಾವು ಗಂಡಸರು ಅವರನ್ನು ಮನೇಲಿ ಇಟ್ಟಿದ್ದೇವೆ, ಹೆಂಗಸರೂ ಸಹ ಪ್ರತಿಭಟಿಸದೇ ಇದ್ದಾರೆ. ಒಮ್ಮೆ ಅಕ್ಬರ್ ಬೀರಬಲ್ಲನ ಹೆಂಡತಿಯನ್ನು ಮೋಹಿಸಿದಾಗ, ಅವಳು ಗಂಡನಿಗೆ ಧೈರ್ಯ ಹೇಳಿ ಅಕ್ಬರನ ಅಂತಃಪುರಕ್ಕೆ ಎರಡು ಕಠಾರಿ ತೊಗೊಂಡು ಹೋದಳಂತೆ. "ಅಕ್ಬರ್ ಅಂತಃಪುರಕ್ಕೆ ಬಂದಾಗ ಒಂದು ಕತ್ತಿಯನ್ನು ಅವನಿಗೆ ನೀಡಿ ಹೇಳಿದಳಂತೆ. "ನಿನ್ನನ್ನು ನಿರಾಯುಧನಾಗಿ ನಾನು ಕೊಲ್ಲೋಲ್ಲ. ಇಬ್ಬರೂ ಕಾಳಗ ಮಾಡೋಣ. ನಾನು ಗೆದ್ದರೆ ಪಾತಿವ್ರತ್ಯ ಉಳಿಯುತ್ತೆ. ಸೋತರೆ ವೀರಮರಣ" ಅಂದಳಂತೆ. ಆಗ ಅಕ್ಬರನ ಮನಃಪರಿವರ್ತನೆ ಆಯ್ತಂತೆ. ಹಾಗಿತ್ತು ನಮ್ಮ ಹೆಣ್ಣು ಮಕ್ಕಳ ಧೀಶಕ್ತಿ. ಪುರುಷರೂ ಅಷ್ಟೇ-ಬೆಳಗ್ಗೆ ನಾಲ್ಕೂವರೆಗೆ ಏಳಬೇಕು. ಶುಚಿರ್ಭೂತರಾಗಿ ಗುರುವಿನ ದೇಹಸ್ಪರ್ಶ ಇರುವಂತೆ ಕುಳಿತು, ವೇದವಿದ್ಯೆಯನ್ನು ಕಲಿಯಬೇಕು. ಹಿಂದಿನ ಕಾಲದಲ್ಲಿ ನಮ್ಮ ಜನರಿಗೆ ವೇದವಿದ್ಯೆ ಸಂಪೂರ್ಣ ಕಂಠಪಾಠವಾಗಿತ್ತು. ತೋಟದ ವ್ಯವಸಾಯ ವಿದ್ಯಾಭ್ಯಾಸಕ್ಕೆ ಅನುಕೂಲ ಅಂತ ಬಾಗಾಯ್ತು ಮಾಡಿದ್ರು. ವೇದ ಬಂದ್ರೆ ಪ್ರಪಂಚವನ್ನು ಸೃಷ್ಟಿ ಮಾಡಬಹುದು ಅಂತ ಅವರಿಗೆ ತಿಳಿದಿತ್ತು. ಆದ್ರೆ ಬರ್‍ತಾ ಬರ್‍ತಾ ಹಳ್ಳಿಗಳಲ್ಲಿ ಬ್ರಾಹ್ಮಣರಿಗೆ ಪ್ರಖ್ಯಾತಿ ಬಂತು. ನನಗಿಂತ ತಿಳಿದವರಿಲ್ಲ ಅಂತ ಕರ್ಮವನ್ನು ಕೈಬಿಟ್ರು. ಸಂಧ್ಯಾವಂದನೇನ ಬಿಟ್ರು. ಅವನತಿ ಆರಂಭವಾಯ್ತು. ಸಮಾಜದಲ್ಲಿ ನಮ್ಮವರು, ಉತ್ತಮರು ಅಂತ ಅನ್ನಿಸಿಕೊಂಡವರು ಪಾಠ ಹೇಳಲಿಲ್ಲ, ದುರ್ಗತಿ ಬಂತು. ಬ್ರಹ್ಮಜ್ಞಾನವನ್ನು ಪಡೆದವನು ಬ್ರಾಹ್ಮಣ. ಗಾಯತ್ರೀಮಂತ್ರದ ಉಪದೇಶವನ್ನು ಇತರರಿಗೆ ಯಾರು ಹೇಳುತ್ತಾನೋ ಅವನು ಬ್ರಾಹ್ಮಣ. ಇದು ನನ್ನ ಅಭಿಪ್ರಾಯ. ಹಳ್ಳಿಗಳಲ್ಲಿ ಇಂದು ಮತ್ತೆ ವೇದಾಭ್ಯಾಸ ಆರಂಭವಾಗಬೇಕು. ವೇದವಿದ್ಯಾಪಾರಂಗತರು, ಅಂತಸ್ತು ನೋಡದೆ, ಪಾಠ ಮಾಡಬೇಕು. ಮುಂದಿನ ಪೀಳಿಗೆ ತಯಾರು ಮಾಡಬೇಕು. ಎಂತಹ ಪ್ರಾಣಿಯನ್ನಾದರೂ ಪಳಗಿಸುವ ಮನುಷ್ಯ ಮತ್ತೊಂದು ಮನುಷ್ಯ ಪ್ರಾಣಿಯನ್ನು ಪಳಗಿಸಲಾರನೆ? ಹಾಗೇ ನಮ್ಮ ಗ್ರಾಮಿಣ ಬದುಕು, ವೇದ, ವಿದ್ಯೆ, ಕೃಷಿ ಉಳೀಬೇಕು. ಆಗ ಎಷ್ಟೇ ಕಷ್ಟ ಆದ್ರೂ ಬ್ರಾಹ್ಮಣ್ಯ ಉಳಿಯುತ್ತೆ.

"ಅಭ್ಯಾಸಾನುಸಾರಿಣೀ ವಿದ್ಯಾ ಬುದ್ಧಿಃ ಕರ್ಮಾನುಸಾರಿಣೀ" ಅಂತೀವಿ. ಜನುಮ ಜನುಮಗಳ ಕರ್ಮಕ್ಕೆ ಅನುಸಾರವಾಗಿ ನಾವು ಬದುಕು ನಡೆಸುತ್ತೀವಿ. ಏಳು, ಎಂಟು ವರುಷಕ್ಕೇ ಈ ಹುಡುಗ ಎಷ್ಟು ಬುದ್ಧಿವಂತ ಅಂತೀವಿ. ಆದರೆ ಅದು ಅವರವರ ಪೂರ್ವಜನ್ಮದ ಶ್ರಮದ ಫಲ. ಹ್ಯಾಗೆ ಅಂದ್ರೆ, ಈ ವರುಷ ಬರ ಬಂತು. ಆದರೆ ನಾವು ಉಪವಾಸ ಇಲ್ಲ. ಹೋದವರುಷದಲ್ಲಿ ಬೆಳೆದ ಧಾನ್ಯವನ್ನು ಊಟ ಮಾಡ್ತಿದೀವಿ. ನಮ್ಮ ಬದುಕೂ ಹಾಗೇ. ಹಾಗೇಂತ ಎಲ್ಲ ನಮ್ಮ ಪೂರ್ವಜನ್ಮದ ಶಾಪ ಅಂತ ಸುಮ್ಮನೆ ಇರಬಾರದು. ಪ್ರತಿ ಜನುಮದಲ್ಲೂ ಸಾಧನೆ ಮಾಡಬೇಕು. ಈಗ ನಾವು ಹತ್ತು ಮೈಲಿ ನಡೆದು ದೂರದ ಊರು ಸೇರಬೇಕು. ಇವತ್ತು ಒಂದು ಮೈಲು ನಡೆದ್ರೆ ನಾಳೆಗೆ ಒಂಭತ್ತು ಮೈಲಿ ಉಳಿಯುತ್ತೆ. ಹತ್ತು ದಿನದಲ್ಲಿ ದೂರ ಕ್ರಮಿಸಬಹುದು. "ಋಣಾನುಬಂಧರೂಪೇಣ ಪಶುಪತ್ನೀಸುತಾಲಯಾಃ" ಅಂತೀವಿ. ಋಣವಿದ್ರೇ ಎಲ್ಲವೂ ಉಳಿಯೋದು. ತಂದೆ ತಾಯನ್ನು ಮಕ್ಕಳು ಸಾಕಲಿಲ್ಲಾ ಅಂತೀವಿ. ಆದರೆ ಋಣವಿದ್ರೆ ಉಳೀತಾರೆ, ಸಾಕ್ತಾರೆ ಕೂಡ. ಋಣವೇ ಇಲ್ಲದ ಮೇಲೆ ನೋಡಿಕೊಳ್ಳೋದು ಹ್ಯಾಗೆ? ಅದಕ್ಕೇ ಹಿರಿಯರು ಹೇಳಿದ್ರು, "ನಿನಗೆ ಉತ್ಪತ್ತಿಯಾಗೋದ್ರಲ್ಲಿ ಹದಿನಾರನೇ ಒಂದು ಭಾಗ ಧರ್ಮ ನೀಡು" ಅಂದ್ರು. ಕೊನೇತನಕ ನಮ್ಮ ಜತೆಯಲ್ಲಿ ಬರುವುದು ಧರ್ಮ. ಇದ್ದು ಕೊಡದಿದ್ರೆ ತಪ್ಪು. ಇರದೆ ಡಂಭಾಚಾರಕ್ಕೆ ನೀಡೋದೂ ತಪ್ಪು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನೀಡುವುದು ಧರ್ಮ' ಅಂತ ಹೇಳಿ ತಮ್ಮ ದೀರ್ಘ ಉಪನ್ಯಾಸ ಮುಗಿಸಿದ್ರು ವೆಂಕರಮಣಯ್ಯ. ಅದುವರೆಗೂ ಯಾವುದೋ ಲೋಕದಲ್ಲಿ ತೇಲಾಡುತ್ತಿದ್ದ ನಾವು ಒಮ್ಮೆಗೇ ಭೂಮಿಗೆ ಬಿದ್ವು. "ಏಳಿ, ದೋಸೆ ಮಾಡಿದೀನಿ ತಿನ್ನೋರಂತೆ" ಅಂದ್ರು ರಾಜಮ್ಮನವರು. ದೋಸೆ ಬಹಳ ರುಚಿಯಾಗಿತ್ತು. ರಾಜಮ್ಮನವರು ಹೇಳಿದ್ರು, 'ನನ್ನ ತಾಯಿ ಕಟ್ಟೆಪುರದವರು, ಚಿಕ್ಕಂದಿನಲ್ಲೇ ತಂದೆ ತೀರಿಹೋದ್ರು. ಅವರ ನೆನಪು ಇಲ್ಲ. ನನ್ನ ತಾಯಿ ಬಸವಾಪಟ್ಟಣಕ್ಕೆ ಬಂದ್ರು. ಅಲ್ಲಿ ಯಾತದಲ್ಲಿ ಭತ್ತ ಕುಟ್ಟಿ, ಅವಲಕ್ಕಿ ಮಾಡಿ, ಮೆಣಸಿನಪುಡಿ ಮಾಡಿಕೊಟ್ಟು ನಮ್ಮನ್ನು ಸಾಕಿದ್ರು. ಈಗ ಈ ಮನೆ ಸೇರಿದ ಮೇಲೆ ನೆಮ್ಮದಿಯಾಗಿದೀನಿ' ಅಂದ್ರು. ಪತಿಪತ್ನಿಯರ ನಡುವೆ ಸಾಮರಸ್ಯವಿದೆ. ಹಳೆಯ ಮನೆಯಲ್ಲಿಯೇ ಇಂದಿಗೂ ವಾಸ ಮಾಡುತ್ತಿರುವ ವೆಂಕಟರಮಣಯ್ಯ ತಮಾಷೆ ಮಾಡಿದ್ರು, 'ನಮ್ಮ ಜೀವನವೇ ಹರುಕು, ನನ್ನ ಮನೆಯೂ ಮುರುಕು. ಹೊಸಮನೆ ಮಾಡೋಕೆ ಶಕ್ತಿ ಇತ್ತು. ಬುದ್ಧಿ ಇರಲಿಲ್ಲ. ಯಾಕೆ ಬೇರೆ ಮನೆ ಮಾಡಿಲ್ಲವೋ ಗೊತ್ತಿಲ್ಲ' ಅಂದ್ರು. ಹಳ್ಳಿಯ ಜೀವನಕ್ಕೆ ಹಳೆಯ ಮನೆಯೂ ಸೊಗಸಲ್ಲವೇ! ಮನದಲ್ಲಿ ಮಾತು ಹಾಗೇ ಉಳೀತು. ಬುದ್ಧಿ ವೆಂಕಟರಮಣಯ್ಯನವರ ಮಾತನ್ನು ಮೆಲುಕು ಹಾಕುತ್ತಿತ್ತು.

ಆ) ಕೆ.ವಿ. ಕೃಷ್ಣಮೂರ್ತಿ ಇ/ಮ ವಿದ್ವಾನ್ ವೆಂಕಟಕೃಷ್ಣಯ್ಯ

ಕುಪ್ಪಹಳ್ಳಿ, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ದೂರವಾಣಿ : 08302 63496



ಕಾಫಿ ಬೀಜವನ್ನು ಶೇಖರಿಸುತ್ತಿರುವ ಕೆ.ವಿ.ಕೃಷ್ಣಮೂರ್ತಿ: ಕುಪ್ಪಹಳ್ಳಿ

ಬಾಲ್ಯದಿಂದಲೂ ನನಗೆ ವಿದ್ಯೆಗಿಂತ ವ್ಯವಸಾಯದ ಮೇಲೆ ಪ್ರೀತಿ ಜಾಸ್ತಿ. ಚಿಕ್ಕಂದಿನಲ್ಲಿ ಮನೆ ಆಳು ಆರು ಬಿಟ್ಟು ತಿಂಡಿ ತಿನ್ನೋವಾಗ ನಾನು ಆರು ಹೊಡೀತಿದ್ದೆ. ಸ್ವತಃ ಮನೆ ಹತ್ರ ನಾನೇ ಟೈರ್‌ಗಾಡಿ ಹೂಡಿಸ್ತಿದ್ದೆ. ತೆಂಗಿನಮರ ಹತ್ತಿ ಕಾಯಿ ಕೆಡವುತ್ತಿದ್ದೆ. ಭತ್ತದ ಗದ್ದೆ, ನಾಟಿ, ಖಟಾವು, ಬಣವೆ ಹಾಕೋದು ಇವೆಲ್ಲ ವಿದ್ಯೆಗಿಂತ ಪ್ರಿಯವಾದ ಕೆಲಸಗಳು.

ಕುಪ್ಪಹಳ್ಳಿಯ ವಿದ್ವಾನ್ ವೆಂಕಟಕೃಷ್ಣಯ್ಯ ಹಾಗೂ ಎಲೆಚಾಗಹಳ್ಳಿಯ ಸಾವಿತ್ರಮ್ಮ ದಂಪತಿಗಳ ಒಬ್ಬನೇ ದತ್ತುಮಗ ಕೆ.ವಿ. ಕೃಷ್ಣಮೂರ್ತಿ. ಕೇರಳಾಪುರದ ಕೆ.ಎಸ್. ಶ್ರೀನಿವಾಸಯ್ಯ ಹಾಗೂ ಕೃಷ್ಣರಾಜಸಾಗರದ ಪದ್ಮಾವತಿ ದಂಪತಿಗಳ ಮಗಳು ಕೆ.ಎಸ್.ಸತ್ಯವತಿ ಕೃಷ್ಣಮೂರ್ತಿಗಳ ಧರ್ಮಪತ್ನಿ.


ಕಬ್ಬಿನಗದ್ದೆಯಲ್ಲಿ ಕೆ.ವಿ.ಕೃಷ್ಣಮೂರ್ತಿ: ಕುಪ್ಪಹಳ್ಳಿ

ಮಧ್ಯಾಹ್ನದ ಸಮಯದಲ್ಲಿ ಇವರ ಮನೆಗೆ ಹೋದಾಗ, ಆಗ ತಾನೆ ತೋಟದಿಂದ ಬಂದು ವಿಶ್ರಮಿಸುತ್ತಿದ್ರು. ನಿಮ್ಮ ಕೃಷಿ ಜೀವನದ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಿ ಅಂದಾಗ ಮೊದಲು ಸಂಕೋಚಪಟ್ರೂ ನಂತರ ನಿರಾಳವಾಗಿ ಮಾತನಾಡಿದ್ರು.

'ನನಗೆ ಚಿಕ್ಕಂದಿನಿಂದಲೂ ವಿದ್ಯಾಭ್ಯಾಸದ ಬಗ್ಗೆ ಗಮನ ಕಡಿಮೆ. ನನ್ನನ್ನು ಮೈಸೂರು ಶಾರದಾ ವಿಲಾಸಕ್ಕೆ ಓದಲು ಕಳಿಸಿದ್ರು. ನಾನು ೧೯೭೮ರಲ್ಲಿ ಊರಿಗೆ ವ್ಯವಸಾಯ ಮಾಡಲು ಹಿಂತಿರುಗಿದೆ. ಆ ವರುಷವೇ ತಂದೆ ತೀರಿಕೊಂಡ್ರು. ಮನೆ ವ್ಯವಸಾಯದ ಜವಾಬ್ದಾರಿ ನನ್ನ ಮೇಲೆ ಬಿತ್ತು. ಜಮೀನು ಕಡಿಮೆ ಇತ್ತು. ಕಬ್ಬು, ಭತ್ತ, ಅಡಿಕೆ, ಬಾಳೆ ಬೆಳೀತಾ ಇದ್ವು. ನಂತರ ನಾನೂ ಜಮೀನನ್ನು ರೂಢಿಸಿದೆ. ೧೯೭೮-೭೯ರಲ್ಲಿ ಒಂದು ಎಕರೆ ಅಡಿಕೇಲಿ ಎಂಟು ಸಾವಿರ ರೂಪಾಯಿ ಆದಾಯ ಬರ್ತಿತ್ತು. ೨೦ ಚೀಲ ಇಳುವರಿ ಅಷ್ಟೆ. ಉತ್ತಮವಾಗಿ ವ್ಯವಸಾಯ ಮಾಡಿ ಈಗ ಇಳುವರೀನ ಜಾಸ್ತಿ ಮಾಡಿದ್ದೀನಿ. ೮೦ ಚೀಲ ಅಡಿಕೆ ಈಗ ಸಿಕ್ತಾ ಇದೆ. ೨೦೦ ಟನ್‌ವರೆಗೆ ಕಬ್ಬು ಬೆಳಿದಿದೀನಿ. ಪ್ರತಿ ವರುಷ ಎರಡು ಬಾರಿ ಭತ್ತ ಬೆಳೀತೀನಿ. ವ್ಯವಸಾಯದಲ್ಲಿ ಈಗ ಸಂಪೂರ್ಣವಾಗಿ ಲೀನವಾಗಿದೀನಿ' ಅಂದ್ರು.

- **ಕಬ್ಬಿನ ಬೇಸಾಯವನ್ನು ಯಾವ ರೀತಿ ಮಾಡಬೇಕು?**

  ಭೂಮಿಯನ್ನು ಹದವಾಗಿ ಉತ್ತು, ಹಟ್ಟಿಗೊಬ್ಬರ ಬೆರೆಸಿ, ಜೂನ್ ಜುಲೈ ತಿಂಗಳಲ್ಲಿ ಮೂರು ಕಣ್ಣಿರುವ ಬಿತ್ತನೆಯನ್ನು ನಾಟಿ ಮಾಡಬೇಕು. ಮೂರು ಅಡಿ ಸಾಲು ಹೊಡೆದು, ನಾಲ್ಕು ಅಂಗುಲ ಅಂತರವಿರುವಂತೆ ನಾಟಿ ಮಾಡಿ ಕಳೆನಾಶಕ ಸಿಂಪರಣೆ ಮಾಡಬೇಕು. ಒಂದು ದಿನ ಆದ ಮೇಲೆ ಎಕರೆಗೆ ಮೂರು ಕ್ವಿಂಟಾಲ್ 20:20:0:15 ಗೊಬ್ಬರ, ಎರಡು ಕ್ವಿಂಟಾಲ್ ಯೂರಿಯ, ಎರಡು ಕ್ವಿಂಟಾಲ್ ಪೊಟ್ಯಾಷ್ ಗೊಬ್ಬರವನ್ನು ಭೂಮಿಯಲ್ಲಿ ದಸಿ ಹೊಡೆದು ಕೊಡಬೇಕು. ನಲವತ್ತು ದಿನಕ್ಕೆ ಪಟ ಮಾಡಿ ಮುರಿ ಕಟ್ಟುವ ಸಂದರ್ಭದಲ್ಲಿ ನಾಲ್ಕು ಕ್ವಿಂಟಾಲ್ ಅಚ್ಚುಪ್ಪು ಹಾಗೂ ಎರಡು ಕ್ವಿಂಟಾಲ್ ಪೊಟ್ಯಾಷ್ ಕೊಡಬೇಕು. ಏರು ಕಟ್ಟಿ ನೀರು ನಿಲ್ಲಿಸಬೇಕು. ಹತ್ತು ತಿಂಗಳಿಗೆ ಕಬ್ಬಿಗೆ ಸುತ್ತು ಮಾಡಿ, ತೆಂಡೆಕಟ್ಟಿ ಗಾಳಿ ಮಳೆಗೆ ಬೀಳದಂತೆ ನೋಡಿಕೊಳ್ಳಬೇಕು. ನೀರಿನ ನಿರ್ವಹಣೆ ಮಾಡಬೇಕು. ಹೀಗೆ ಮಾಡಿದ್ರೆ ಎಕರೆಗೆ ೭೦ ರಿಂದ ೮೦ ಟನ್ ಇಳುವರಿ ಪಡೀಬಹುದು.

- **ಅಡಿಕೆ ಬೇಸಾಯ ವಿಧಾನ ಹೇಗೆ?**

  ಆರಿದ್ರೆ ಮಳೆಯಲ್ಲಿ ಅಂದ್ರೆ ಜೂನ್ ಜುಲೈ ತಿಂಗಳಲ್ಲಿ, ಆರರಿಂದ ಒಂಭತ್ತು ಅಡಿಗೆ ಸಸಿ ನಾಟಿ ಮಾಡಬೇಕು. ಗೆಪ್ಪೆಸಮೇತ ಸಸಿಯನ್ನು ಒಂದೂವರೆ ಅಡಿ ಗುಂಡಿಯಲ್ಲಿ ನೆಡಬೇಕು. ನೆಟ್ಟ ಹೊಸದರಲ್ಲಿ ಅಡಿಕೆಗೆ ನೀರು ಹಾಯಿಸಬಾರದು. ಗಿಡ ಕೊಳೆಯುತ್ತೆ. ಹಿಂಗಾರಿನಲ್ಲಿ ಚೆನ್ನಾಗಿ ಅಗೆತ ಮಾಡಬೇಕು. ಫಸಲು ಬಿಡುವ ಮರಕ್ಕೆ ೮೦೦ ಗ್ರಾಂ ಸುಫಲ ಗೊಬ್ಬರ, (15:15:15), ಸಸಿ ಗಿಡಗಳಿಗೆ ೨೫೦ ಗ್ರಾಂ ಸುಫಲ ಗೊಬ್ಬರವನ್ನು ಕೊಡಬೇಕು. ಹಟ್ಟಿ ಗೊಬ್ಬರವನ್ನು ಹಾಕಬೇಕು. ಹೀಗೆ ವ್ಯವಸಾಯ ಮಾಡೋದ್ರಿಂದ ಪ್ರತಿ ಮರದಿಂದ ೨೦ ರಿಂದ ೨೨ ಕೇಜಿ ಹಸಿ ಅಡಿಕೆ ಪಡೀಬಹುದು. ಎಕರೆಗೆ ೭೦ ರಿಂದ ೭೨ ಕ್ವಿಂಟಾಲ್ ಅಡಿಕೆ ಇಳುವರಿ ಸಿಗುತ್ತೆ. ಅಡಿಕೆ ಒಳಗೆ ಮಧ್ಯಂತರ ಬೆಳೆಯಾಗಿ ಬಾಳೆಯನ್ನು ಬೆಳೆದ್ರೆ ಎಕರೆಗೆ ೩೦ ರಿಂದ ೩೫ ಸಾವಿರ ರೂಪಾಯಿಗಳನ್ನು ಅಧಿಕವಾಗಿ ಸಂಪಾದಿಸಬಹುದು. ಅಡಿಕೆ ಗಿಡಗಳ ಮಧ್ಯದಲ್ಲಿ ತೆಂಗನ್ನು ನೆಡಬಾರದು. ಅಡಿಕೆ ತೋಟದ ಹೊರಮೈಯಲ್ಲಿ ೧೧ ಗಜಕ್ಕೆ ತೆಂಗನ್ನು ನೆಡಬೇಕು. ಅಡಿಕೆ ಹೊಂಬಾಳೆ ಬೀಸುವಾಗ ತೆಂಗಿನ ಮಟ್ಟೆ ಬೀಳುವುದರಿಂದ ತೆಂಗನ್ನು ಅಡಿಕೆ ತೋಟದಲ್ಲಿ ನೆಟ್ರೆ ತೊಂದರೆಯಾಗುತ್ತೆ. ತೆಂಗಿಗೂ ಮನೆ ಗೊಬ್ಬರವನ್ನು




ಆರಂಬ ಮುಗಿಸಿದ ಮೇಲೆ ಎತ್ತುಗಳಿಗೆ ವಿಶ್ರಾಂತಿ: ಕೆ.ವಿ.ಕೃಷ್ಣ ಮೂರ್ತಿ: ಕುಪ್ಪಹಳ್ಳಿ

ಹಾಕಬೇಕು. ಹಾಗೇ ತೆಂಗಿಗೆ, ಅಡುಗೆ ಉಪ್ಪನ್ನು ಮುಂಗಾರಿನ ಸಂದರ್ಭದಲ್ಲಿ ಹಾಕುವುದರಿಂದ ಹರಳು ಉದುರುವುದಿಲ್ಲ, ಇಳುವರಿ ಹೆಚ್ಚಾಗುತ್ತೆ.

- ವ್ಯವಸಾಯಕ್ಕೆ ಪೂರಕ ಹಸು ಸಾಕಾಣಿಕೆ. ನಿಮ್ಮ ಬದುಕಿನಲ್ಲಿ ಇದು ಹೇಗೆ ನೆರವಿಗೆ ಬಂದಿದೆ? ನಿಮ್ಮೂರ ಜಾತ್ರೆಗಳು ಹಾಗೂ ವ್ಯಾಪಾರ ವಹಿವಾಟಿನ ಬಗ್ಗೆ ಹೇಳಿ.

ನಮ್ಮ ಮನೇಲಿ ಒಂದು ಜತೆ ಎತ್ತು ಹಾಗೂ ನಾಲ್ಕು ನಾಟಿ ಹಸುಗಳು ಇವೆ. ಮಾಘಮಾಸದಲ್ಲಿ ಜನವರಿ ಕೊನೇವಾರ ಅಥವಾ ಫೆಬ್ರವರಿ ಮೊದಲ ವಾರದಲ್ಲಿ ಹೇಮಗಿರಿಯಲ್ಲಿ ರಥೋತ್ಸವ ನಡೆಯುತ್ತೆ. ಅಲ್ಲಿರುವ ಛತ್ರದಲ್ಲಿ ಪ್ರತಿ ದಿನ ಅನ್ನ ಸಂತರ್ಪಣೆ ರಥೋತ್ಸವ ಸಂದರ್ಭದಲ್ಲಿ ನಡೆಯುತ್ತೆ. ರಥೋತ್ಸವಕ್ಕೆ ೧೦ ದಿನ ಮುಂಚೆ ದನಗಳ ಜಾತ್ರೆ ನಡೆಯುತ್ತೆ. ಶಿವಮೊಗ್ಗ, ಹೊನ್ನಾಳಿ, ಬೆಳಗಾಂ ಕಡೆಯಿಂದ ಖರೀದಿದಾರರು ಬರ್ತಾರೆ. ಉತ್ತಮ ರಾಸಿಗೆ ಮುಜರಾಯಿ ಇಲಾಖೆಯಿಂದ ಬಹುಮಾನ ಸಿಗುತ್ತೆ. ನಾನೂ ಕೂಡ ಎರಡು ಬಾರಿ ಬಹುಮಾನ ಪಡೆದಿದೀನಿ. ಜಾತ್ರೇಲಿ ನಿಗದಿತ ಜಾಗವನ್ನು ಗೊತ್ತು ಮಾಡಿದೀವಿ. ನಮ್ಮ ರಾಸುಗಳನ್ನು ಅಲ್ಲಿ ಕಟ್ತೀವಿ. ಎತ್ತಿನ ವ್ಯಾಪಾರದಲ್ಲಿ ನನಗೆ ಅನುಭವವಿದೆ. ಹಾಗಾಗಿ ನಮ್ಮೂರಿಗೆ, ನಮ್ಮ ಕಡೆಯವರಿಗೆ ಎತ್ತು ಖರೀದಿಸಲು ನಾನೇ ಹೋಗ್ತೀನಿ. ಮೊದಲು ಸುಳಿ ನೋಡ್ತೀವಿ. ನಂತ್ರ ಹಲ್ಲುಗಳನ್ನು ನೋಡ್ತೀವಿ. ಹುಟ್ಟುವಾಗ ಎಲ್ಲ ಕರುಗಳಿಗೂ ಎಂಟು ಹಲ್ಲು ಇರುತ್ತೆ. ಅದು ಬಿದ್ದು ಮತ್ತೆ ಹುಟ್ಟುವ ಲೆಕ್ಕ ಬಹಳ ಮುಖ್ಯ. ಎರಡು, ನಾಲ್ಕು, ಆರು ಹಲ್ಲಿರುವ ಜಾತಿ ಇವೆ. ಬಾಯಿಗೂಡಿದ ಎತ್ತಿಗೆ ಬಹಳ ಬೆಲೆ. ಕೆಲವಕ್ಕೆ ಏಳು ಹಲ್ಲು ಇರುತ್ತೆ. 'ಆರು ಹಲ್ಲನ್ನು ಅರಸಿ ತೊಗೋ' ಅಂತ ಹಿರಿಯರು ಹೇಳಿದಾರೆ ಅಂತ ಅದನ್ನು ಕೆಲವರು ಹುಡುಕ್ತಾರೆ. ಅದಕ್ಕಾಗಿ ಏಳು ಹಲ್ಲು ಇದ್ದಾಗ ಒಂದು ಹಲ್ಲು ಕಿತ್ತು ಆರು ಹಲ್ಲು ಮಾಡ್ತಾರೆ. ಇದು ಅನುಭವ ಇರೋರಿಗೆ ಮಾತ್ರ ತಿಳಿಯೋದು. ಆಮೇಲೆ ಕಣ್ಣು ನೋಡಬೇಕು. ಕೆಲವಕ್ಕೆ ಕಣ್ಣಲ್ಲಿ ಹೂವು ಬಂದು ಕಣ್ಣು ಕಾಣ್ತಾ ಇರೋಲ್ಲ, ಕೆಲವಕ್ಕೆ ನೀರುಗಣ್ಣು ಅಂತ ಆಗಿ ನೀರು ಹರೀತಿರುತ್ತೆ. ಅದನ್ನು ನೋಡಬೇಕು. ಕೆಲವಕ್ಕೆ ಮೂಗು ಹುಣ್ಣು ಇರುತ್ತೆ, ಮೂಗುದಾರ ಹಾಕಿದಾಗ ಒಳಭಾಗ ಹುಣ್ಣಾಗುತ್ತೆ. ಉಸಿರಾಡಲು ಅಂಥ ರಾಸಿಗೆ ಆಗೋಲ್ಲ. ಅದನ್ನು ಪರೀಕ್ಷೆ ಮಾಡಬೇಕು. ಎತ್ತುಗಳಿಗೆ ಹಲ್ಲೆ ಚೆನ್ನಾಗಿ ಹೊಡೆಸಿರಬೇಕು. ಕೆಲವು ಎತ್ತುಗಳಿಗೆ ಗೆರಸು ಇಕ್ಕಲಾಗಿರುತ್ತೆ. ಸೀಳು ಗೊರಸಿನ ಪ್ರಾಣಿಗಳಲ್ಲಿ ಇದು ಸಾಮಾನ್ಯ. ಆದ್ರೆ ಎರೆ ಮಣ್ಣಿರುವ ಪ್ರದೇಶದಲ್ಲಿ ಮಣ್ಣು ತೇವವಿದ್ದಾಗ ಇಕ್ಕಲು ಗೆರಸಿನ ಎತ್ತುಗಳು ಕಾಲಿಟ್ಟಾಗ ಗೊರಸಿನ ನಡುವೆ ಮಣ್ಣು ಸೇರಿ ಪಾದ ಭಾರವಾಗುತ್ತೆ ಅಂತ ಕೆಲವರು ಇಂಥ ಎತ್ತುಗಳನ್ನು ತೊಗೋಳ್ಳೋದಿಲ್ಲ. ಹಾಗಾಗಿ ಹಲ್ಲೇ ಕಟ್ಟಿಸುವಾಗ ಮಧ್ಯದ ಭಾಗವನ್ನು ಸ್ವಚ್ಛ



ಮಗನಿಗೂ ಕೊಟ್ಟಿಗೆಯ ಪ್ರೀತಿ: ಕೆ.ವಿ.ಕೃಷ್ಣ ಮೂರ್ತಿ: ಕುಪ್ಪಹಳ್ಳಿ



ತಾಯಿ ಸಾವಿತ್ರಮ್ಮ, ಪತ್ನಿ ಕೆ.ಎಸ್.ಸತ್ಯವತಿ ಹಾಗೂ ಮಕ್ಕಳೊಂದಿಗೆ ಕೆ.ವಿ.ಕೃಷ್ಣಮೂರ್ತಿ : ಕುಪ್ಪಹಳ್ಳಿ

ಮಾಡಿ, ಕಟ್ಟಬೇಕು. ಹೀಗೆ ಎಲ್ಲ ಗಮನಿಸಿ ಖರೀದಿ ಮಾಡಬೇಕು. ನಾನೂ ಒಳ್ಳೆ ಜಾತಿ ಎತ್ತು ಕಟ್ಟಿದೀನಿ. ನನ್ನ ಟೈರ್ ಗಾಡೀಲಿ ಎರಡೂವರೆ ಟನ್ ಭಾರ ಎಳೀಬಹುದು. ಹೊರಗಡೆ ಮೇಯಲು ಜಾಗ ಇಲ್ಲ, ಹಾಗಾಗಿ ೨೪ ಘಂಟೆ ಮನೆಹತ್ರ ಕಟ್ಟಿರ್ತೀನಿ. ಎತ್ತಿಗೆ ೧ ಕೇಜಿ ಹಿಂಡಿ, ಅರ್ಧಕೇಜಿ ಹುರುಳಿ, ಎರಡು ಕೇಜಿ ಹೊಟ್ಟು ದಿನಕ್ಕೆ ಎರಡು ಬಾರಿ ಕೊಡ್ತೀನಿ. ಹಸುವಿಗೆ ಅದರ ದೇಹದ ತೂಕಕ್ಕೆ ೧ ಕೇಜಿ ಹಾಗೂ ಒಂದು ಲೀಟರ್ ಹಾಲಿನ ಇಳುವರಿಗೆ ಒಂದು ಕೇಜಿ ಅಂತೆ ತಿಂಡಿ ಮಿಶ್ರಣ ಕೊಡ್ತೀನಿ. ಇಲ್ಲಿ ಹಾಲಿನ ಡೈರಿ ಇದೆ. ಹೆಚ್ಚಾದ್ರೆ ಹಾಲನ್ನು ಡೈರಿಗೆ ಹಾಕ್ತೀನಿ. ಡೈರಿಯಿಂದ ನನಗೆ ವೈದ್ಯರ ಸಲಹೆ ಹಾಗೂ cattlefeed ದೊರೆಯುತ್ತೆ.

ನಾನು ಕೊಟ್ಟಿಗೇನ ಬಹಳ ವಿಶೇಷವಾಗಿ ಕಟ್ಟಿದೀನಿ. ತಳಕ್ಕೆ ಕಾಂಕ್ರೀಟ್ ಹಾಕಿಸಿಲ್ಲ. ಮಣ್ಣನ್ನು ತುಂಬ್ತೀನಿ. ಹಸುವಿನ ಸಗಣಿ ಹಾಗೂ ಗಂಜಲ ಅದೇ ಮಣ್ಣಲ್ಲಿ ಬೆರೆಯುತ್ತೆ. ನನಗೆ ಗೊಬ್ಬರ ಆಗುತ್ತೆ. ವಾರಕ್ಕೆ ಒಂದು ಸಾರಿ ಮೇಲಿನ ಅರ್ಧ ಅಡಿ ಮಣ್ಣನ್ನು ಎತ್ತಿ ತಿಪ್ಪೆಗೆ ಹಾಕ್ತೀನಿ. ಮತ್ತೆ ಅರ್ಧ ಅಡಿ ಹೊಸ ಮಣ್ಣು ತುಂಬ್ತೀನಿ. ಹೀಗೆ ಮಾಡೋದ್ರಿಂದ ಬಹಳ ಅನುಕೂಲ.

- **ನಿಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿ...**

"೧೯೮೮ರ ಜುಲೈ ೨೯ರಂದು ನಾನು ಮದುವೆಯಾದೆ. ವರದಕ್ಷಿಣೆ ಮುಟ್ಟಲಿಲ್ಲ. ಸರಳವಾಗಿ ಮದುವೆಯಾಯ್ತು. ನಾನು ಮೊದಲೇ ನನ್ನ ಹೆಂಡತಿಯಾಗುವವಳನ್ನು ಕೇಳಿದ್ದೆ, 'ನಮ್ಮದು ಹಳ್ಳಿಯ ಜೀವನ, ವ್ಯವಸಾಯ ಕೆಲಸ, ದನಕರುಗಳ ನಿರ್ವಹಣೆ, ಹೊರಗಡೆ ಸುತ್ತಾಡಲು ಆಗೋದಿಲ್ಲ' ಅಂತ. ಅದಕ್ಕೆ ಅವಳು ಒಪ್ಪಿದ್ಲು. ನಂತರ ಸಹಕರಿಸಿದಳು. ನನ್ನ ಅತ್ತೆ ಮಾವನೂ ಬಹಳ ಸಹಕಾರ ನೀಡಿದ್ರು. ನನಗೆ ಎರಡು ಹೆಣ್ಣು ಹಾಗೂ ಒಬ್ಬ ಮಗ. ಈಗ ನನಗೆ ವಿದ್ಯಾಭ್ಯಾಸ ಉತ್ತಮ ಅನ್ನಿಸುತ್ತಾ ಇದೆ. ಈಗ ವ್ಯವಸಾಯದ ಆದಾಯ ಕಡಿಮೆಯಾಗಿದೆ. ಮಕ್ಕಳು ಓದಿ ಕೆಲಸ ಪಡೀಬೇಕು, ಹಳ್ಳೀಜೀವನ ನಮಗೆ ಸಾಕು ಅನ್ನಿಸಿದೆ. ನನ್ನ ಮಕ್ಕಳನ್ನು ವ್ಯವಸಾಯಸ್ಥರನ್ನಾಗಿ ಮಾಡೋದಿಲ್ಲ" ಅಂದ್ರು. ನಮ್ಮ ಪ್ರಶ್ನೆಗಳೂ ಮುಗಿದಿತ್ತು. ನಿಧಾನವಾಗಿ ಕೃಷ್ಣಮೂರ್ತಿಯವರ ಪತ್ನಿ ಸತ್ಯವತಿ ಹೇಳಿದ್ರು, 'ನೋಡಿ, ನಮ್ಮ ಯಜಮಾನ್ರು ರ್‍ಯಾಂಕ್ ಸ್ಟೂಡೆಂಟ್. ಅಂದಿನ ಕಾಲದಲ್ಲಿ ಕೆಲಸಕ್ಕೆ ಸೇರಿದ್ರೆ ಪರಿಸ್ಥಿತಿ ಬೇರೆನೇ ಇರೋದು. ಹಳ್ಳಿಯ ವಾತಾವರಣದಲ್ಲಿ ಬೆಳೆದ ನನ್ನ ಮಕ್ಕಳು ಎತ್ತು ಗಾಡಿ ಅಂತಾರೆ. ಆದರೆ ಅವರು ವಿದ್ಯಾಭ್ಯಾಸ ಮಾಡಿ ಉನ್ನತ ಪದವಿಗೇರಲಿ ಅನ್ನುವುದು ನನ್ನ ಆಸೆ' ಅಂದ್ರು. ಕೃಷ್ಣಮೂರ್ತಿ ಅವರ ಮುಂದಿನ ವ್ಯವಸಾಯದ ಬದುಕಿನ ಬಗ್ಗೆ ಸ್ಪಷ್ಟ ಚಿತ್ರಣ ನಮಗೆ ದೊರಕಿತ್ತು.

14. ತೇಗನಹಳ್ಳಿ

ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ (ಕೃಷ್ಣರಾಜಪೇಟೆ) ತಾಲ್ಲೂಕು, ಕಸಬ ಹೋಬಳಿಗೆ ಸೇರಿದ ಪುಟ್ಟಗ್ರಾಮ ತೇಗನಹಳ್ಳಿ. ಕೆ.ಆರ್.ಪೇಟೆಯಿಂದ ಕಿಕ್ಕೇರಿಗೆ ಹೋಗುವ ದಾರಿಯಲ್ಲಿದೆ. ಪೂರ್ಣ ಒಣಭೂಮಿಯಿಂದ ತುಂಬಿದ್ದು ಕೆರೆಕಟ್ಟೆಗಳ ಆಶ್ರಯ ಮಾತ್ರ ಹೊಂದಿದ್ದ ತೇಗನಹಳ್ಳಿಗೆ ೧೯೮೨ನೇ ಇಸವೀಲಿ ಹೇಮಾವತಿಯು ಎಡದಂಡೆ ನಾಲೆಯ ಮೂಲಕ ಹರಿದು ಬಂದು ಹಸಿರು ಹಾಸಿದ್ದಾಳೆ. ಅಡಿಕೆಗೆ ಈ ಪ್ರದೇಶ ಉತ್ತಮ ಆಗ್ರವಲ್ಲದಿದ್ದರೂ ಇಲ್ಲಿ ಅಡಿಕೆ ಬೆಳೆದಿರುವುದು ಸಂಕೇತಿಗಳು ಮಾತ್ರ. ಹಿಂದೆ ಹತ್ತು ಒಕ್ಕಲು ಸಂಕೇತಿಗಳು ಇದ್ರಂತೆ. ಈಗ ಆರು ಒಕ್ಕಲು ಮಾತ್ರ ಇವೆ. ಕೇವಲ ನಾಲ್ಕು ಕುಟುಂಬಗಳು ವ್ಯವಸಾಯ ಅವಲಂಬಿಸಿದ್ರೆ, ಉಳಿದ ಎರಡು ಕುಟುಂಬಗಳು ವ್ಯಾಪಾರ ಅವಲಂಬಿಸಿವೆ. ತೇಗನಹಳ್ಳಿಯ ಸಂಕೇತಿಗಳು, ದೂರದ ವಿಶಾಖಪಟ್ಟಣದಲ್ಲಿ ಬೇಕರಿ ಉದ್ಯಮ ಆರಂಭಿಸಿ ಯಶಸ್ವಿಯಾಗಿದ್ದಾರೆ. ಸುಮಾರು ನೂರು, ನೂರಾ ಇಪ್ಪತ್ತೈದು ವರುಷಗಳ ಹಿಂದೆ, ಕಟ್ಟೆ ಹೊಸಹಳ್ಳಿಯಿಂದ ನರಸಿಂಹಾವಧಾನಿ ಅನ್ನುವ ಸಂಕೇತಿಗಳು ಅವರ ಮಕ್ಕಳು ಶ್ಯಾಮಾವಧಾನಿ ಹಾಗೂ ತಿರುಮಲಾವಧಾನಿ (ಶ್ರೀನಿವಾಸಾವಧಾನಿ) ಅವರ ಸಮೇತ ಮೊದಲು ಇಲ್ಲಿ ನೆಲೆಸಿದ್ದು ಅಂತಾರೆ ಈ ಊರ ಹಿರಿಯರು. ಸಂಕೇತಿಗಳೆಲ್ಲಾ ಸೇರಿ ರಾಮಮಂದಿರವನ್ನು ನಿರ್ಮಿಸಿದ್ದಾರೆ. ಕಳೆದ ೨೦೦೦ನೇ ಇಸವೀಲಿ ರಾಮಮಂದಿರ ಕಟ್ಟಿ ೫೦ ವರುಷಗಳು ಆದ ಸವಿನೆನಪಿಗೆ ಸ್ಮರಣಸಂಚಿಕೆ ಹೊರತಂದಿದ್ದಾರೆ. ಈ ಊರಿನಿಂದ ಹೊರಗೆ ಹೋಗಿರುವ ಎಲ್ಲರೂ ರಾಮೋತ್ಸವ ಸಂದರ್ಭದಲ್ಲಿ ತೇಗನಹಳ್ಳಿಯಲ್ಲಿ ಸೇರುತ್ತಾರೆ. ಈ ಊರಿನ ವಿಶೇಷವೆಂದರೆ ರೈತಾಪಿ ಜನರು ರಾಮೋತ್ಸವದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಪ್ರತಿ ಶನಿವಾರ ರಾಮಮಂದಿರದಲ್ಲಿ ಭಜನೆ ನಡೆಯುತ್ತೆ. ತೇಗನಹಳ್ಳಿಯಲ್ಲಿ ಈಗ ಕೃಷಿ ಮಾಡುತ್ತಿರುವ ಹಿರಿಯ ತಲೆಗಳಿರುವ ತನಕ ಕೃಷಿ ಉಳಿಯುತ್ತೆ ಅಂತ ಈ ಊರ ಹಿರಿಯರು ಹೇಳುತ್ತಾರೆ. ಹಿಂದೆ ವಿಠಲಾಪುರ ಹಾಗೂ ಅಗ್ರಹಾರ ಬಾಚಿಹಳ್ಳಿಯಲ್ಲಿಯೂ ಸಂಕೇತಿಗಳು ನೆಲೆಸಿದ್ರು ಅಂತ ಹಿರಿಯರು ಹೇಳ್ತಾರೆ. ತೇಗನಹಳ್ಳಿಯೂ ಸಂಕೇತಿಗಳ ಕೃಷಿಗೆ ಪ್ರಯೋಗಶಾಲೆಯಾಗಿತ್ತು.

ಅ) ಟಿ.ಎನ್. ಪ್ರಭುರಾವ್ ಇ/ಮ ಟಿ.ಎಸ್. ನಾರಾಯಣಪ್ಪ

ತೇಗನಹಳ್ಳಿ, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ, ದೂರವಾಣಿ : 08230 263540

ಹಳ್ಳಿಗಳಲ್ಲಿ ವ್ಯವಸಾಯ ಮಾಡ್ತಿರುವ ಸಂಕೇತಿಗಳ ಗಂಡು ಹುಡುಗರಿಗೆ, ಹಳ್ಳಿಗಳಲ್ಲಿರುವ ಸಂಕೇತಿಗಳೇ ಹೆಣ್ಣು ಕೊಡೋಲ್ಲ. ಹಳ್ಳಿಯಲ್ಲಿ ಹುಡುಗನ ಮನೆಯವರಿಗೆ ಇರುವ ಆಸ್ತಿಗೆ ಬೆಲೆ ಕೊಡೋಲ್ಲ. ಮೊದಲು ಕೆಲಸ, ನಂತರ ವ್ಯಾಪಾರ ಹಾಗೂ ಪಟ್ಟಣದಲ್ಲಿರುವವರನ್ನು ನೋಡ್ತಾರೆ. ನಮ್ಮ ಒಂದು ಎಕರೆ ಗದ್ದೆ ಹೋದ್ರೂ ಚಿಂತೆಯಿಲ್ಲ ಮಗಳನ್ನು ಪಟ್ಟಣಕ್ಕೆ ಕೊಡೋಣ, ಕೊನೆಗೆ ನಾವೂ ಪಟ್ಟಣ ಸೇರೋಣ ಅಂತಾರೆ. ಸಂಕೇತಿಗಳು ಹಳ್ಳಿಗೆ ಹೆಣ್ಣು ಕೊಡದೇ ಇದ್ದುದರಿಂದ ಈಗ ಬೇರೆ ಕಡೆಯಿಂದ ಹೆಣ್ಣು ತರ್‍ತಾ ಇದಾರೆ. ನನ್ನ ಮಗನಿಗೂ ವ್ಯವಸಾಯದ ಮೇಲೆ ವ್ಯಾಮೋಹ. ಆದರೆ ಹೆಣ್ಣು ಸಿಗೋಲ್ಲ ಅನ್ನುವ ಕಾರಣಕ್ಕೆ ಅವನನ್ನು B.Com. ಓದಿಸಿದೀನಿ. ಸಣ್ಣ ಕೆಲಸಕ್ಕೆ ಸೇರಿಸುವ ಇರಾದೆ ಇದೆ. ಯಾರಾದ್ರೂ ಹೆಣ್ಣು ಕೊಟ್ರೆ ಮೇಲೆ ನನ್ನ ಮಗನೂ ವ್ಯವಸಾಯ ಮಾಡಲಿ ಅನ್ನುವುದು ನನ್ನ ಪಾಲಿಸಿ. ನಾನು ಮಾತ್ರ ನನ್ನ ಮೂರೂ ಹೆಣ್ಣು ಮಕ್ಕಳನ್ನೂ ಹಳ್ಳಿಗೆ ವ್ಯವಸಾಯಸ್ಥರಿಗೇ ಕೊಟ್ಟಿದೀನಿ.



ಎಚ್.ಎಸ್.ಲೀಲಾವತಿ-ಟಿ.ಎನ್.ಪ್ರಭುರಾವ್ ದಂಪತಿ ತುಳಸಿಕಟ್ಟೆಯ ಮುಂದೆ : ತೇಗನಹಳ್ಳಿ

ತೇಗನಹಳ್ಳಿಯ ಟಿ.ಎಸ್. ನಾರಣಪ್ಪ ಹಾಗೂ ರುದ್ರಪಟ್ಟಣದ ಸಾವಿತ್ರಮ್ಮ ದಂಪತಿಗಳ ಮಗ



ಎಚ್.ಎಸ್.ಲೀಲಾವತಿ-ಟಿ.ಎನ್.ಪ್ರಭುರಾವ್: ತಮ್ಮ ಮಗನೊಂದಿಗೆ: ತೇಗನಹಳ್ಳಿ

ಟಿ.ಎನ್. ಪ್ರಭುರಾವ್ ತೇಗನಹಳ್ಳಿಯಲ್ಲಿ ಈಗ ವ್ಯವಸಾಯ ಮಾಡುತ್ತಿರುವ ನಾಲ್ಕು ಕುಟುಂಬಗಳಲ್ಲಿ ಒಂದು ಕುಟುಂಬದ ಯಜಮಾನರು. ಇವರ ಅಣ್ಣಂದಿರಾದ ಟಿ.ಎನ್. ನಾಗರಾಜ ಹಾಗೂ ಟಿ.ಎನ್. ನಾರಾಯಣಸ್ವಾಮಿ ಅವರೂ ವ್ಯವಸಾಯ ಮಾಡುತ್ತಿದ್ದಾರೆ. ಹಿರಿಯರಾದ ಟಿ.ಎನ್. ರಾಮಣ್ಣ, ಅವತ್ತಿನ ಕಾಲದಲ್ಲಿಯೇ B.Com., ಓದಿ ಕೆಲಸದಲ್ಲಿದ್ದು ಈಗ ನಿವೃತ್ತಿ ಹೊಂದಿ ಬೆಂಗಳೂರಲ್ಲಿ ನೆಲೆಸಿದ್ದಾರೆ. ಮೂಲತಃ ಅತ್ನಿ ಹೆಬ್ಬಾಲೆಯವರಾದ ಎಚ್.ಕೆ. ಶ್ರೀನಿವಾಸಯ್ಯ ಹಾಗೂ ಗೌರಮ್ಮ ದಂಪತಿಗಳು, ಇದ್ದ ಜಮೀನನ್ನು ಮಾರಿ ಬೆಂಗಳೂರಿಗೆ ಸೇರಿಕೊಂಡ ಮೇಲೆ ಮಗಳು ಎಚ್.ಎಸ್.ಲೀಲಾವತಿ ಅವರನ್ನು ಟಿ.ಎನ್. ಪ್ರಭುರಾವ್ ಅವರಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಪ್ರಭುರಾವ್ ಅವರಿಗೆ ಮೂರು ಹೆಣ್ಣು ಹಾಗೂ ಒಬ್ಬ ಮಗ. ತೇಗನಹಳ್ಳಿಯ ವ್ಯವಸಾಯದ ಹಾಗೂ ತಮ್ಮ ವೈಯಕ್ತಿಕ ಬದುಕಿನ ಪುಟಗಳನ್ನು ಪ್ರಭುರಾವ್ ತೆರೆದಿಟ್ಟರು.

'ನಮ್ಮದು ಪೂರ್ವಕಾಲದಿಂದಲೂ ವ್ಯವಸಾಯಸ್ಥ ಕುಟುಂಬ. ತಂದೆ ಕಾಲದಲ್ಲಿ ನಾಲೆ ನೀರಾವರಿ ಇತ್ತಿಲ್ಲ. ತಂದೆಗೆ ೫೦ ರಿಂದ ೬೦ ಎಕರೆ ಜಮೀನಿತ್ತು. ಖುಷ್ಕಿ ಜಮೀನು. ಆದಾಯ ಇರಲಿಲ್ಲ. ಹಾಗಾಗಿ ಹೆಚ್ಚಾದ ಜಮೀನನ್ನು ಮಾರಿ ತಮಗೆ ಬೇಕಾದಷ್ಟು ಜಮೀನನ್ನು ಇಟ್ಟುಕೊಂಡಿದ್ರು. ವ್ಯವಸಾಯವೇ ಮುಖ್ಯ ಕಸುಬು. ಆದರೆ ಕನಿಷ್ಠ ಅಗತ್ಯಗಳು ಇಲ್ಲಿರಲಿಲ್ಲ. ನನಗೆ ಓದುವ ಆಸೆಯಿತ್ತು. ಆರ್ಥಿಕ ತೊಂದರೆಯಿತ್ತು. ಹಾಗಾಗಿ ನಾನು ನನ್ನ ಅಕ್ಕ-ಭಾವನ ಮನೆಯಲ್ಲಿ ಇದ್ದು ಓದಿದೆ. ಭಾವನಿಗೆ transfer ಆದ ಹಾಗೆ ಟಿ.ನರಸೀಪುರ, ಕೆ.ಆರ್.ನಗರ, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಂದುವರೀತು. ನನಗೆ ಬಿ.ಕಾಂ., ಮಾಡಿ ಬ್ಯಾಂಕಲ್ಲಿ ಉದ್ಯೋಗ ಮಾಡುವ ಆಸೆಯಿತ್ತು. ಆದರೆ ಬಿ.ಕಾಂ., ಪೂರ್ಣಗೊಳಿಸಲು ಆಗಲಿಲ್ಲ. ಬೇರೆ ಕೆಲಸದಲ್ಲಿ ಆಸಕ್ತಿ ಇರಲಿಲ್ಲ. ಊರಲ್ಲಿ ಜಮೀನಿತ್ತು. ಬ್ಯಾಂಕ್ ಕೆಲಸದಲ್ಲಿದ್ರೆ ನಾನೊಬ್ಬ ಮುಂದುವರೀಬಹುದು, ಆದ್ರೆ ಕೃಷಿ ಮಾಡಿದ್ರೆ ಕುಟುಂಬಾನೇ ಅಭಿವೃದ್ಧಿ ಹೊಂದಬಹುದು-ಅಂತ ಹೇಳಿ ಊರಿಗೆ ಬಂದೆ. ವ್ಯವಸಾಯ ಮುಂದುವರೆಸಿದೆ. ಮುಂಚೆ ಅಣ್ಣತಮ್ಮಂದಿರು ಒಟ್ಟಾಗಿದ್ವು. ವ್ಯವಸಾಯದ ವರಮಾನ ಸಾಕಾಗೋಲ್ಲ ಅಂತ ಅಂಗಡಿಯೊಂದನ್ನು ಇಟ್ಟೆ, ೪೦ ವರುಷದ ಹಿಂದೆ. ವಿನೋದಕ್ಕಾಗಿ ಈ ಅಂಗಡಿಯನ್ನು ಇಟ್ಟಿದ್ದು. ಸಂಸಾರದ ಒಂದು ಅಂಗವಾಗಿ ಅಂಗಡಿ ಇತ್ತು. ಆದಾಯ ಹಾಗೂ ನಷ್ಟ ಎರಡೂ ಇರಲಿಲ್ಲ. ನಾವು ಜಮಾ-ಖರ್ಚಿನ ಲೆಕ್ಕ ಇಡಲಿಲ್ಲ. ನಾವು ಅಣ್ಣತಮ್ಮಂದಿರು ೧೫, ೨೦ ವರುಷದ ಹಿಂದೆ ಬೇರಾದಾಗಿನಿಂದ ನಾನೇ ಅಂಗಡಿಯನ್ನು ನಡೆಸ್ತಾ ಇದೀನಿ. ಹೆಣ್ಣುಮಕ್ಕಳ ಮದುವೆ ಆದ ಮೇಲೆ ನಾನು, ನನ್ನ ಹೆಂಡತಿ ಹಾಗೂ ಮಗ ಮೂವರೇ ಇದೀವಿ. ತಂದೆ ಕಾಲದಲ್ಲಿ ೬೦ ಎಕರೆ ಇದ್ದ ಜಮೀನು, ಅಣ್ಣತಮ್ಮಂದಿರ ಕಾಲಕ್ಕೆ ಹತ್ತು ಹನ್ನೆರಡು ಎಕರೆಗೆ ಬಂತು. ಪಾಲಾದ ಮೇಲೆ ಪ್ರತಿಯೊಬ್ಬರಿಗೆ ಎರಡು ಎಕರೆ ಜಮೀನು ಹಾಗೂ ಒಂದು ಎಕರೆ ಗದ್ದೆ ಬಂದಿದೆ. ಅಡಿಕೆ, ತೆಂಗು, ಕಬ್ಬು ಹಾಗೂ ಭತ್ತ ಇಲ್ಲಿಯ ಪ್ರಮುಖ ಬೆಳೆಗಳು. ಆರಂಭದಲ್ಲಿ ನಾನು ಬ್ಯಾಂಕಿನಿಂದ ಹತ್ತು ಸಾವಿರ ರೂಪಾಯಿ ಸಾಲ ಮಾಡಿ, ಜಮೀನಿಗೆ ೨೦೦ ತೆಂಗಿನ ಗಿಡ ಹಾಕಿದೆ. ಆಗ ಒಟ್ಟು ಕುಟುಂಬ ನಮ್ಮದು. ನಾನು ಮಾಡಿದ ಸಾಲಕ್ಕೆ ಊರವರೇ ಹೆದರಿದ್ರು! ಆದ್ರೆ ನಾವು ಮುಂದಾಲೋಚನೆಯಿಂದ ತೆಂಗಿನ ಸಸಿಗಳನ್ನು ಕಾಪಾಡಲಿಲ್ಲ. ತೋಟ ಹಾಳು ಬಿತ್ತು. ಇವತ್ತು ಆ ತೆಂಗು ಇದ್ದಿದ್ರೆ ನಮ್ಮ ೪೦ ಎಕರೆ ಜಮೀನೂ ಸಹ ಇರೋದು. ಬೆಳೆ ಬಾರದೇ ಹೋದಾಗ ಜಮೀನು ಮಾರಿ ಸಾಲ ತೀರಿಸಿದ್ವಿ. ಕಡೆಗೆ ನಮ್ಮ ಸಂಸಾರ ಸಾಗುವಷ್ಟು ಜಮೀನು ಉಳೀತು. ನಂತರ ನಾನು ೬೦೦ ಅಡಿಕೆ ಸಸಿ ಕೂರಿಸಿದೆ. ತೇಗನಹಳ್ಳಿಯದು ಅಡಿಕೆಗೆ ಉತ್ತಮ ಆಗ್ರ ಅಲ್ಲ. ಸಂಕೇತಿಗಳು ಬಿಟ್ಟರೆ ಬೇರೆ ಯಾರೂ ಇಲ್ಲಿ ಅಡಿಕೆ ಮಾಡಿಲ್ಲ. ಇರುವ ಅಡಿಕೆ ತೋಟದಲ್ಲಿ ಕಳೆದೆರಡು ವರುಷಗಳಿಂದ ಬರವಿದ್ರೂ ಜಮೀನಿನ ಹಸಿ ಆರಿಲ್ಲ. ನಾವು ತೋಟಕ್ಕೆ ನೀರು ಕೊಟ್ಟಿಲ್ಲ. ಅಡಿಕೆಯಲ್ಲಿ ಫಸಲು ಆರಂಭವಾಗಿದೆ. ಈಗ ಅಡಿಕೇನ ಸಮೀಪದ ಸಂತೇಲಿ ಮಾರ್ತಾ ಇದೀವಿ. ಅಡಿಕೆ ತೋಟದ ವರಮಾನವನ್ನು

ಸಂಪೂರ್ಣ ತೊಗೊಳ್ಳೋವರೆಗೂ ನಾನು ಊರಲ್ಲೇ ಇರ್ತೀನಿ. ಮಗನಿಗೂ ವ್ಯವಸಾಯ ಇಷ್ಟ ಇದೆ. ಆದ್ರೆ ಮುಂದೆ ಹೆಣ್ಣು ಸಿಗುವುದು ಕಷ್ಟ ಆಗಬಹುದು ಅಂತ ಓದಿಸಿದ್ದೇನೆ. ವ್ಯವಸಾಯ ಉತ್ತಮ ಕಸುಬು ಅಂತ ಇವತ್ತಿಗೂ ಅನ್ನಿಸುತ್ತೆ. ಯಾಕೇಂದ್ರೆ ಸಿಟಿ ನೆಮ್ಮದಿಗಿಂತ ಇಲ್ಲಿರುವ ಕನಿಷ್ಠ ಅಗತ್ಯಗಳೊಡನೆ ನಾವು ಪಡೆಯುವ minimum ನೆಮ್ಮದಿ ಬಹಳ ಒಳ್ಳೇದು. ಹಾಗಾಗಿ ನಾನು ಜಮೀನು ಕಳೆದಿಲ್ಲ. ಹಣ ದುರುಪಯೋಗ ಮಾಡಿಲ್ಲ. ಈಗ ಬದುಕಿನಲ್ಲಿ ತೃಪ್ತಿ ಇದೆ' ಅಂತ ನೆಮ್ಮದಿಯ ನಗೆ ನಕ್ಕರು.


ತಮ್ಮ ಗೂಡಂಗಡಿಯಲ್ಲಿ ಟಿ.ಎನ್.ಪ್ರಭುರಾವ್ : ತೇಗನಹಳ್ಳಿ


ಊರ ಬಗ್ಗೆ ಇತರೇ ವಿಚಾರ ತಿಳಿಸಿ ಅಂದಾಗ, 'ಈ ಊರ ಸಂಕೇತಿಗಳಲ್ಲಿ ಒಗ್ಗಟ್ಟಿದೆ. ನನ್ನ ತಂದೆ ಊರಿಗೆ ಯಜಮಾನರಾಗಿದ್ರಂತೆ. ಅವರ ಮಾತಿಗೆ ಬೆಲೆ ಇತ್ತು. ಇವತ್ತಿಗೂ ಇತರೇ ರೈತಾಪಿ ಜನರೊಂದಿಗೆ ನಮ್ಮ ಸಂಬಂಧ ಚೆನ್ನಾಗಿದೆ. ನಮ್ಮೂರಿಗೆ ಬೇಕಾದ, ನಮಗೆ ಬೇಕಾದ, ಶಾಸ್ತ್ರಭಾಗ, ದೇವತಾಕಾರ್ಯ, ಪೂಜೆ, ಶ್ರಾದ್ಧದ ಮಂತ್ರಗಳನ್ನು ನಾವೇ ಕಲಿತಿದ್ದೀವಿ. ಪರಾಶ್ರಯ ಇಲ್ಲ. ಪುರೋಹಿತರು ಅನ್ನುವ ಪಟ್ಟವಿರದಿದ್ರೂ, ನಮ್ಮ ಕೆಲಸ ನಾವು ಮಾಡಿಕೋಅಷ್ಟು ಸ್ವಾವಲಂಬನೆ ನಮ್ಮಲ್ಲಿ ಇದೆ. ಕಾಲ ಕಳೆಯಲು, ಎಲ್ಲರೂ ಸೇರಿ cards ಆಡ್ತೀವಿ. ಹರಟೆ ಹೊಡೀತೀವಿ. ಜೂಜಾಡಿ ಹಣಕಳೆದುಕೊಂಡಿರೋರು ಯಾರೂ ಇಲ್ಲ. ಹಿಂದಿನ ಕಾಲಕ್ಕೂ ಇವತ್ತಿಗೂ ಹೋಲಿಸಿದ್ರೆ ಈಗಿನ ತರುಣರು ಬಹಳ ಶಕ್ತಿಹೀನರಾಗ್ತಿದಾರೆ. ನಮ್ಮ ಪೂರ್ವಿಕರಿಗೆ ದುಡ್ಡಿರಲಿಲ್ಲ; ಹಾಗಾಗಿ ತೋಟವನ್ನು ಅವರೇ ಅಗೆತ ಮಾಡೋರು, ಆರೋಗ್ಯವಾಗಿರೋರು. ಹೊಗೆಸೊಪ್ಪು ಹಾಗೂ ಜರ್ದಾದಂತಹ ಪಿಡುಗು ಇರಲಿಲ್ಲ. ಚಟದಿಂದ ಆರೋಗ್ಯ ಹಾಳಾಗುತ್ತೆ. ಇಸ್ಪೀಟು ಚಟದಿಂದಲೂ ಎಷ್ಟೋ ಜನ ಆಸ್ತಿ, ಆರೋಗ್ಯ ಕಳೆದುಕೊಂಡಿರೋದೂ ಉಂಟು. ಹೀಗಾಗಿ ಪೀಳಿಗೆಯಿಂದ ಪೀಳಿಗೆಗೆ ಶಕ್ತಿ ನಶಿಸುತ್ತಿದೆ. ಇದೂ ಸಂಕೇತಿಗಳಲ್ಲಿ ವ್ಯವಸಾಯ ಮುಂದುವರೆಯದಿರಲು ಕಾರಣವಿರಬಹುದು' ಅಂದ್ರು.

ಮನೆಯ ಹೆಣ್ಣುಮಕ್ಕಳ ಸಹಕಾರ ಹ್ಯಾಗಿದೆ ಅಂದ್ರೆ 'ನಮ್ಮೂರಲ್ಲಿ ಯಾವ ಹೆಣ್ಣು ಮಕ್ಕಳೂ ವ್ಯವಸಾಯ ಮಾಡೋಲ್ಲ. ಕುಟುಂಬದಲ್ಲಿ ಸಹಕರಿಸಿದ್ದಾರೆ. ನಮ್ಮ ಎಲ್ಲಾ ಕೆಲಸಗಳಿಗೂ supportive ಆಗಿದ್ದಾರೆ. ನಮಗೆ ನಮ್ಮ ಮಕ್ಕಳ ಭವಿಷ್ಯ ಮುಖ್ಯವಾದ್ದರಿಂದ ನಾವು ಎಲ್ಲಿಯೂ ಜತೆಯಾಗಿ ಪ್ರವಾಸಕ್ಕೆ ಹೋಗಲು ಆಗಿಲ್ಲ. ಹಾಗಿದ್ದಾಗಲೂ ಊರೂರು ತಿರುಗುವುದನ್ನು ಅಪೇಕ್ಷಿಪಡದೆ ಎಲ್ಲದರಲ್ಲೂ ಸಹಕಾರಿಯಾಗಿ ಅರ್ಧಾಂಗಿ ಅನ್ನುವ ಹೆಸರಿಗೆ ಅನ್ವರ್ಥವಾಗಿದ್ದಾರೆ' ಎಂದು ಹೆಮ್ಮೆಯಿಂದ ಹೇಳಿ ಮಾತು ಮುಗಿಸಿದ್ರು ಪ್ರಭುರಾವ್. ಮುಂದಿನವರತ್ತ ನಮ್ಮ ಗಮನ ಹರೀತು. ಮತ್ತೊಂದು ಬದುಕಿನ ಅನಾವರಣ ಆರಂಭವಾಯ್ತು.

ಆ) ಟಿ.ಆರ್. ಶಂಕರಯ್ಯ ಇ/ಮ ರಾಮಯ್ಯ
ತೇಗನಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ

ಹಿಂದಿನವರು ಶ್ರಮಪಟ್ಟು ದುಡಿದು ಮೈಯ ಕೆಟ್ಟ ನೀರನ್ನು ಆಚೆಗೆ ತೆಗೀತಿದ್ರು. ಅದ್ರಿಂದ ಆರೋಗ್ಯವಾಗಿದ್ರು. ನಾವು ತೆಗಿಯೋಲ್ಲ. ಆದ್ರಿಂದ ಅನಾರೋಗ್ಯ. ಜತೆಗೆ ದುಷ್ಟ ಚಟಗಳು ಬೇರೆ. ಹೊಗೆಸೊಪ್ಪು ಇರದಿದ್ರೆ ಹುಲ್ಲು ಕುಯ್ಯಲು ಆಗೋಲ್ಲ ಅಂತೀವಿ. ಹೀಗಾದ್ರೆ ಆರೋಗ್ಯ ಎಲ್ಲಿಂದ ಬರುತ್ತೆ?


ತೇಗನಹಳ್ಳಿಯ ರಾಮಯ್ಯ ಹಾಗೂ ಪಿರಿಯಾಪಟ್ಟಣದ ಸುಬ್ಬಲಕ್ಷಮ್ಮ ದಂಪತಿಗಳಿಗೆ ಎಂಟು ಜನ ಮಕ್ಕಳು. ರಾಮಯ್ಯನವರೂ ಸೇರಿ ಒಟ್ಟು ನಾಲ್ಕು ಜನ ಅಣ್ಣತಮ್ಮಂದಿರು. ಈ ನಾಲ್ವರೇ ಸೇರಿ ತೇಗನಹಳ್ಳೀಲಿ ವಾಸಕ್ಕೆ ಮನೆ ಕಟ್ಟಿದ್ರು. ಹೋರಾಟ ಮಾಡಿ ಬದುಕಿದ್ರು. ಆದರೆ ಅಣ್ಣತಮ್ಮಂದಿರಲ್ಲಿ ಉಳಿದದ್ದು ಸುಬ್ಬರಾಯಪ್ಪ ಹಾಗೂ ರಾಮಯ್ಯ ಇಬ್ಬರೇ. ರಾಮಯ್ಯನವರಿಗೂ ಹಾವು ಕಡೀತು, ಒಂದು ಕಾಲು ಹೋಯ್ತು. ಮನೆ ತುಂಬಾ ಮಕ್ಕಳು. ಸುಬ್ಬರಾಯಪ್ಪ ಅದೇ ಸಂದರ್ಭದಲ್ಲಿ ಬೇರಾಗಿ ಕುಪ್ಪಹಳ್ಳಿಗೆ ಹೊರಟುಹೋದ್ರು. ಒಂಟಿಕಾಲಿನ ರಾಮಯ್ಯನವರು ಏನು ಮಾಡ್ತಾರೆ! ಸಿನಿಮೀಯ ಘಟನೆಗಳಂತೆ ಇದೆ ಅಂತೀರಾ? ಆದರೆ ಇದು ಸತ್ಯ. ಹಾಗೆ ಹುಟ್ಟಿದ ಎಂಟು ಮಕ್ಕಳಲ್ಲಿ ಟಿ.ಆರ್. ಶಂಕರಯ್ಯನವರೂ ಒಬ್ಬರು. ಅವರು ಹೇಳ್ತಾರೆ, 'ಆಗ ನಮ್ಮ ಮನೇಲಿ ತಿನ್ನುವ ಅನ್ನಕ್ಕೂ ಕಷ್ಟ ಇತ್ತು. ತಂದೆ ತಾಯಿ ಭಿಕ್ಷೆ ಬೇಡಿ ನಮ್ಮನ್ನು ಸಾಕಿದ್ರು. ಒಂದೇ ಕಾಲಿನಲ್ಲಿ ನನ್ನ ತಂದೆ ಕೃಷಿ ಮಾಡಿದ್ರು. ತೋಟ ಅಗೆತ ಮಾಡೋರು, ತೆಂಗಿನಮರ ಹತ್ತೋರು, ಬಾಳೆ ತೆಂಗು ಹಾಕೋರು, ಸಂತೇಲಿ ಕೂಲಿ ಮಾಡೋರು, ಹೀಗೆ ಮಾಡಿ ನಮ್ಮನ್ನು ಸಾಕಿದ್ರು. ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಆಗಲಿಲ್ಲ. ನನಗೆ B.E. ಓದುವ ಆಸೆಯಿತ್ತು. ಸೋದರಮಾವನ ಮನೇಲಿದ್ದೆ. SSLC ವರೆಗೆ ಓದಿದೆ. ನನ್ನ ದುರಾದೃಷ್ಟ, ಅವರು "ಹೋಗು" ಅಂದ್ರು. ಅಷ್ಟರಲ್ಲಿ ನನ್ನ ಅಣ್ಣ ಹೋಟೆಲ್ ಒಂದರಲ್ಲಿ ಕೆಲಸಕ್ಕೆ ಸೇರಿದ್ದ. ಆ ಹೋಟೆಲ್ ಸಾಹುಕಾರರು ನಮ್ಮ ಮನೆ ಕಷ್ಟ ನೋಡಿ, "ನೀನು ಸ್ವಂತ ವ್ಯಾಪಾರ ಮಾಡು" ಅಂತ ಬೂಕನಕೆರೇಲಿ ಒಂದು ಹೋಟೆಲ್ ಇಟ್ಟುಕೊಟ್ರು. ಅದರ ಆದಾಯದಿಂದ ಅಣ್ಣತಮ್ಮಂದಿರನ್ನು ಓದಿಸಿದೆ. ನಾನೂ ಸಹ ಊರಿನಲ್ಲಿ ವ್ಯವಸಾಯ ಆರಂಭಿಸಿದಾಗ ಬಡತನ, ಬರ ಎರಡೂ ಇತ್ತು. ದನಕರುಗಳಿಗೆ ಏನೂ ಆಹಾರ ಇಲ್ಲದೆ ಈಚಲಗರೀನ ಕತ್ತರಿಸಿ ಹಾಕಿದೀವಿ. ಇಲ್ಲಿ ಜೀವನ ಆಗದೆ ಹೋದಾಗ ಬೂಕನಕೆರೇಲಿ ನಾನು ಒಂದು ಚಿಲ್ಲರೆ ಅಂಗಡಿ ಇಟ್ಟೆ. ೩೦ ವರುಷಗಳ ಕಾಲ ಅದನ್ನು ನಿರ್ವಹಣೆ ಮಾಡಿದೆ. ಅಲ್ಲೂ ತೊಂದರೆಯಾಯ್ತು. ಮತ್ತೆ ಊರಿಗೆ ಬಂದೆ. ಮತ್ತೆ ಹಟದಿಂದ ವ್ಯವಸಾಯ ಆರಂಭಿಸಿದೆ. ನಾನು ನೋಡ್ತಾ ನೋಡ್ತಾ, ಮಾಡ್ತಾ ಮಾಡ್ತಾ ವ್ಯವಸಾಯ ಕಲಿತದ್ದು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದೆ. ಆದರೆ ಒಬ್ಬ ಮಗ ಓದಲಿಲ್ಲ. ಅವನಿಗಾಗಿ ಇಲ್ಲಿ ಜಮೀನು ಉಳಿಸಿದೀನಿ' ಅಂದ್ರು ಟಿ.ಆರ್. ಶಂಕರಯ್ಯ.


ಹೊಟೇಲ್ ಉದ್ಯಮಿಯಾಗಿ ಬೆಳೆದ ಟಿ.ಆರ್.ಲಕ್ಷ್ಮೀಶ:ತೇಗನಹಳ್ಳಿ

ಶಂಕರಯ್ಯನವರ ಪತ್ನಿ ಕೆ.ಎಸ್. ಸರಸ್ವತಮ್ಮ ಜೋಡಿಕೃಷ್ಣಾಪುರದವರು; ಸ್ವತಃ ಶಂಕರಯ್ಯನವರ ತಂಗಿ ನಾಗರತ್ನ ಹಾಗೂ ಭಾವ ಕೆ.ಎಸ್. ಸುಬ್ಬರಾಯರ ಮಗಳು. ನನ್ನ ತಂಗಿ ಭಾವನೇ ನನಗೆ ಆದರ್ಶ ಎನ್ನುತ್ತಾರೆ ಶಂಕರಯ್ಯ. 'ನಾನು ಕೆಳಗೆ ಬಿದ್ದಾಗ ನೆರವಾಗಿ, ನಾನು ಮುಂದೆ ಬರಲು ನೆರವು ನೀಡಿದ್ದು ಅವರೇ. ಈಗ ಭಾವನಿಗೆ ೮೫ ವರುಷ. ಹಾಗಿದ್ದರೂ ಈಗಲೂ ೭೧ ವರುಷದ ಈ ಮಗುವಿಗೆ ಸಹಾಯ ಮಾಡ್ತಿದಾರೆ' ಎಂದು ಸ್ಮರಿಸುತ್ತಾರೆ ಶಂಕರಯ್ಯ. 'ಇತರೇ ರೈತಾಪಿ ಜನ ಮನೆ ಮಂದಿಯೆಲ್ಲಾ ಜಮೀನಿನಲ್ಲಿ ದುಡೀತಾರೆ, ಸಕಾಲಕ್ಕೆ ಕೆಲಸವಾಗುತ್ತೆ. ವ್ಯವಸಾಯ ಆದಾಯ ನೀಡುತ್ತೆ. ನಮ್ಮಲ್ಲಿ ಆ ರೀತಿ ಆಗೋಲ್ಲ. ವ್ಯವಸಾಯದಿಂದ ಅನ್ನ ಬಟ್ಟೆಗೆ ತೊಂದರೆ ಇಲ್ಲ. ಮುಂದುವರೆಯಲು ಆಗೋಲ್ಲ. ಈಗಲೂ ಪಟ್ಟಣದಲ್ಲಿ ಇರಬೇಕು ಅನ್ನಿಸುತ್ತೆ. ಆದರೆ ವಿಧಿ. ಅನಿವಾರ್ಯವಾಗಿ ಮಗನಿಗಾಗಿ ಹಳ್ಳಿಲಿದೀನಿ' ಅಂದ್ರು ಶಂಕರಯ್ಯ. ವ್ಯವಸಾಯ ಇವರಿಗೀಗ

ಬಲವಂತದ ಮಾಘಸ್ನಾನ. ಟಿ.ಆರ್.ಲಕ್ಷ್ಮೀಶ, ತೇಗನಹಳ್ಳಿಯ ವ್ಯವಸಾಯಸ್ಥ ಕುಟುಂಬದ ಯುವಉದ್ಯಮಿ. ಸಮೀಪದ ಕೆ.ಆರ್. ಪೇಟೆ (ಕೃಷ್ಣರಾಜಪೇಟೆ)ಯಲ್ಲಿ ಇವರ ಹೋಟೆಲ್ ಇದೆ. ವ್ಯವಸಾಯದಿಂದ ಸಂಕೇತಿಗಳ ಯುವಕರು ವಿಮುಖರಾಗುತ್ತಿರುವ ಈ ದಿನಗಳಲ್ಲಿ ಲಕ್ಷೀಶ್ ಅವರ ಅನುಭವ 'ಸಂಕೇತಿ ಕೃಷಿ' ಪುಸ್ತಕಕ್ಕೆ ಅರಿವಿನ ದಾರಿಯಾಗಬಹುದೇ ಎಂಬ ಉದ್ದೇಶದಿಂದ ಮಾತನಾಡಿಸಿದೆವು.

'ವ್ಯವಸಾಯ ನಮ್ಮ ಕುಟುಂಬದ ವೃತ್ತಿ. ನಾವು ನಾಲ್ಕು ಜನ ಮಕ್ಕಳು. ತೋಟ ಗದ್ದೆ ಸೇರಿ ತಂದೆಗೆ ಒಂದೂಕಾಲು ಎಕರೆ ಮಾತ್ರ ಜೀವನಕ್ಕೆ ಇತ್ತು. ಮನೆ ಪರಿಸ್ಥಿತಿ ಬಡತನದಲ್ಲಿತ್ತು. ನಾನು ಬಾಲ್ಯದಿಂದಲೂ ಅಸ್ತಮಾ ರೋಗಿ. ಮೈಸೂರಿನ ಸಂಕೇತಿ ಹಾಸ್ಟಲ್‌ನಲ್ಲಿ free seat ಪಡೆದು PUC ಓದಿದೆ. ನಂತರ B.Sc.ಗೆ ಸೇರಿದೆ. ಗಣಿತ ಕಷ್ಟವಾದ ವಿಷಯವಾಗಿತ್ತು. ಎರಡನೇ ವರುಷದ B.Sc.ಗೆ ಓದು ನಿಲ್ಲಿಸಿದೆ. ಮತ್ತೆ ನಾನು ಊರಿಗೆ ಬಂದಾಗ ತೋಟ ತುಡಿಕೆ ಇರಲಿಲ್ಲ. ಮನೆ ಹಿಂದುಗಡೆ ಹತ್ತು ತೆಂಗಿನ ಗಿಡ ಮಾತ್ರ ಇತ್ತು. ಯು.ಆರ್. ಗೋಪಾಲರಾವ್ ಅನ್ನೋರು ಕೆ.ಆರ್.ಪೇಟೇಲಿ ದುರ್ಗಾಭವನ್ ಅನ್ನೋ ಹೋಟೆಲ್‌ನ ೭೦ ವರುಷದಿಂದ ನಡೆಸ್ತಿದಾರೆ. ನಾನು ಅವರ ಹೋಟೆಲ್‌ನಲ್ಲಿ ಕ್ಯಾಷಿಯರ್ ಆಗಿ ಕೆಲಸಕ್ಕೆ ಸೇರಿದೆ. ಐದು ವರುಷ ಕೆಲಸ ಮಾಡಿದೆ. ಒಂದು ದಿನ ಮಾಲೀಕರ ಸ್ನೇಹಿತರೊಬ್ಬರು, ಅವರ ಹೋಟೆಲ್‌ನ ಮಾರುವವರಿದ್ದಾರೆ ಅನ್ನುವ ವಿಷಯ ತಿಳೀತು. ಆ ಹೋಟೆಲ್‌ನ ನಾನೇ ಖರೀದಿಸಲು ನಿರ್ಧರಿಸಿದೆ. ನನ್ನ ತಮ್ಮ ಒಬ್ಬ ಬೆಂಗಳೂರಿನಲ್ಲಿ computer engineeer. ಅವನಿಂದ ಬಂಡವಾಳವಾಗಿ ೫೦,೦೦೦ ರೂಪಾಯಿ ಪಡೆದೆ. ನಲವತ್ತು ಸಾವಿರ ರೂಪಾಯಿಗೆ ಹೋಟೆಲ್ ಖರೀದಿಸಿದೆ. ಅಡುಗೆ, serving ಹಾಗೂ cleaning ಎಲ್ಲದರಲ್ಲೂ ನನಗೆ ಅನುಭವವಿತ್ತು. ೧೦ ಜನ ಕೆಲಸದವರನ್ನು ತೆಗೆದುಕೊಂಡೆ. ವ್ಯವಹಾರ ಜಾಸ್ತಿ ಮಾಡಲು ದೋಸೆ ಆರಂಭಿಸಿದೆ. ಹಿಂದಿನವರು ಬರೀ ಪೂರಿ, ಇಡ್ಲಿ, ಬಾತು ಇಂತಹುದನ್ನೇ ಮಾಡ್ತಿದ್ರು. ದೋಸೆ ಆರಂಭಿಸಿದ ಮೇಲೆ, ವ್ಯಾಪಾರ ಜೋರಾಯ್ತು. ತಿಂಗಳಿಗೆ ಮೂರರಿಂದ ನಾಲ್ಕು ಸಾವಿರ ಉಳಿಯುತ್ತೆ. ನಾನು ಹಾಗೂ ನನ್ನ ತಮ್ಮ ಹೋಟೆಲ್ ನಡಿಸ್ತಾ ಇದೀವಿ. ಸಂಕೇತಿಗಳಲ್ಲಿ ನನಗೆ ಹೆಣ್ಣು ಸಿಗದೆ ನಾನು ಚನ್ನರಾಯಪಟ್ಟಣ ತಾಲ್ಲೂಕು ಹಿರೀಬಿಳ್ತಿಯ ಗಾಯಿತ್ರಿ ಅವರನ್ನು ಮದುವೆಯಾದೆ. ಅವರು ಹೊಯ್ಸಳ ಕರ್ನಾಟಕರು. ಇಲ್ಲಿ ಅಂಗನವಾಡಿ teacher ಆಗಿದಾರೆ. ನನ್ನ ಅಪ್ಪ, ಅಮ್ಮ, ನಾನು, ನನ್ನ ಹೆಂಡತಿ ಹಾಗೂ ನನ್ನ ತಮ್ಮ ಇಷ್ಟು ಜನರ ಜೀವನ ಹೋಟೆಲ್‌ನಿಂದ ನಡೀತಿದೆ' ಎಂದು ಹೇಳಿದರು ಲಕ್ಷ್ಮೀಶ್. ಹೀಗೆ ಅಂತ್ಯವಾಗಿತ್ತು, ವ್ಯವಸಾಯಸ್ಥ ಕುಟುಂಬದ ಕೃಷಿ. ಆದರೆ ಹಳ್ಳಿ ತ್ಯಜಿಸಿ ಪೇಟೇಲಿ ಇರದಿದ್ದಿದ್ದಕ್ಕೆ ಸ್ವಲ್ಪ ಸಮಾಧಾನ ಪಡಬಹುದೇ? ಅನ್ನುವುದಷ್ಟೇ ಉಳಿದಿರುವ ವಿಷಯ.



ಟಿ.ಎನ್.ಪ್ರಭುರಾವ್, ಟಿ.ಆರ್.ಲಕ್ಷ್ಮೀಶ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ

15. ಹರಿಹರಪುರ

ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆಯಿಂದ ಭೇರ್ಯಕ್ಕೆ ಹೋಗುವ ರಸ್ತೆಯಲ್ಲಿ ಒಂಬತ್ತು ಕಿಲೋಮೀಟರ್ ಕ್ರಮಿಸಿದ್ರೆ ಸಿಗುವ ಗ್ರಾಮ ಹರಿಹರಪುರ. ಈ ಊರಲ್ಲಿ ಸಂಕೇತಿಗಳದ್ದು ಒಂದು ಕುಟುಂಬ ಇದೆ ಎಂದು ತೇಗನಹಳ್ಳಿಯ ಪ್ರಭುರಾವ್ ತಿಳಿಸಿದಾಗ, ಅದೇ ದಾರಿಯಲ್ಲಿ ಹುಣಸೂರಿಗೆ ಹೊರಟಿದ್ದ ನಾವು ಈ ಕುಟುಂಬವನ್ನೂ ಸಂದರ್ಶಿಸೋಣ ಎಂದು ಹೊರಟೆವು. ರಾತ್ರಿಯ ಸಮಯ. ಮನೆ ಹುಡುಕಲು ಕಷ್ಟವಾಗಲಿಲ್ಲ. ಸಮೀಪದ ರೈತನ ಮನೆಗೆ ಕೆ.ರಮೇಶ್ ಜೋಯಿಸ್ ಹೋಗಿದ್ದರು. ಅವರ ಪತ್ನಿ ಮಗನನ್ನು ಕರೆಯಲು ಕಳಿಸಿ, ನಮ್ಮನ್ನು ಸ್ವಾಗತಿಸಿದರು. ಮನೆಯ ಎದುರುಗಡೆ ಎತ್ತಿನಗಾಡಿ, ಪಕ್ಕದಲ್ಲಿ ವ್ಯವಸಾಯದ ಉಪಕರಣಗಳು, ರಾಸುಗಳು ಇದ್ದವು. ವೃತ್ತಿಯಿಂದ ವ್ಯವಸಾಯ, ಪ್ರವೃತ್ತಿಯಿಂದ ಜೋಯಿಸ ವೃತ್ತಿಯಿರಬಹುದೇ ಎಂಬ ಅನುಮಾನ ಕಾಡಿತು. ವಿದ್ಯುತ್ ದೀಪ ಕಣ್ಣಾಮುಚ್ಚಾಲೆಯಾಡುತ್ತಿತ್ತು. ಅಷ್ಟರಲ್ಲಿ ರಮೇಶ್ ಬಂದರು. ಬಂದ ಕಾರಣ ತಿಳಿದು 'ಬನ್ನಿ, ಕುಳಿತುಕೊಳ್ಳೋಣ' ಎಂದು ಚಾಪೆ ಹಾಸಿದರು. ಕತ್ತಲ ಬೆಳಗಲು ಕಂದೀಲೂ ಸಹ ಬಂತು. ಕಾಫಿ ದಣಿದ ಗಂಟಲಿಗೆ ತ್ರಾಣ ನೀಡಿತು. ಮಾತು ಆರಂಭವಾಯ್ತು.

ಕೆ. ರಮೇಶ್ ಜೋಯಿಸ್ ಇ/ಮ ಕೃಷ್ಣಮೂರ್ತಿ ಜೋಯಿಸ್
ಹರಿಹರಪುರ

ಇತರೇ ರೈತರನ್ನು ನೋಡಿ, ಕೇಳಿ ನಾನು ವ್ಯವಸಾಯ ಕಲಿತೆ. ಈಗ ಅವರೇ, 'ನಿಮ್ಮ ಸಮಾನ ನಾವು ವ್ಯವಸಾಯ ಮಾಡಲು ಸಾಧ್ಯವಿಲ್ಲ' ಅಂತಾರೆ. ಇತರೇ ರೈತರು ಬೆಳೆಯೋ ಭತ್ತಕ್ಕಿಂತ ನನ್ನ ಜಮೀನಿನಲ್ಲಿ ಯಾವಾಗಲೂ ಹತ್ತು ಚೀಲ ಜಾಸ್ತಿ ಭತ್ತದ ಇಳುವರಿ ಬರುತ್ತೆ.

ಹರಿಹರಪುರದ ಕೃಷ್ಣಮೂರ್ತಿ ಜೋಯಿಸ್ ಹಾಗೂ ಸೋಮನಹಳ್ಳಿಯ ಸಾವಿತ್ರಮ್ಮ ದಂಪತಿಗಳ ಮಗ ಕೆ.ರಮೇಶ್ ಜೋಯಿಸ್ ಅವರದ್ದು ಹರಿಹರಪುರದಲ್ಲಿರುವ ಏಕೈಕ ಸಂಕೇತಿ ಕುಟುಂಬ. ಇವರ ಪತ್ನಿ ಕುಸುಮ ಕೆ.ಆರ್. ಪೇಟೆ ಸಮೀಪದ ಬ್ಯಾಲದಕೆರೆಯವರು. ಬ್ಯಾಲದಕೆರೆಯ ತಮ್ಮಯ್ಯಾ ಹಾಗೂ ಬೇಲೂರಿನ ಅನಂತಲಕ್ಷ್ಮಿ ಇವರ ತಂದೆ ತಾಯಿ. ಐಯರ್ ಪಂಗಡಕ್ಕೆ ಸೇರಿದವರು ಇವರು. ರಮೇಶ್ ಜೋಯಿಸ್ ಅವರದ್ದು ಮೂಲತಃ ಜೋಯಿಸ ವೃತ್ತಿಯ ಕುಟುಂಬವೇ. ಜತೆಯಲ್ಲಿ ವ್ಯವಸಾಯವೂ ಇದೆ. ತಮ್ಮ ಬದುಕಿನ ಬಗ್ಗೆ ವಿವರಗಳನ್ನು ಹೇಳುತ್ತಾ ಹೊರಟರು ರಮೇಶ್ ಜೋಯಿಸ್.



ಕುಸುಮ-ಕೆ.ರಮೇಶ್ ಜೋಯಿಸ್ ದಂಪತಿ: ಹರಿಹರಪುರ

'ಅಜ್ಜ ಮುತ್ತಜ್ಜರ ಕಾಲದಿಂದ ನಮ್ಮದು ಜೋಯಿಸರ ಮನೆತನ. ಅವರಿಗೆ ಜ್ಯೋತಿಷ್ಯದ ಪೂರ್ಣ ಅರಿವಿತ್ತು. ರಾಜರ ಆಶ್ರಯವೂ ಇತ್ತಂತೆ. ಹಿಂದಿನಿಂದಲೂ ಪೂರ್ವಿಕರು ಜೋಯಿಸ ವೃತ್ತೀಲೇ ಬದುಕಿದ್ದು. ನನ್ನ ತಂದೆ ವಿಠಲಾಪುರದಲ್ಲಿದ್ರು. ಅಲ್ಲಿಗೆ ಬಸ್ಸಿನ ಸೌಕರ್ಯವಿರಲಿಲ್ಲ. ಬದುಕು ಭಾರವಾಗಿತ್ತು. ಅಲ್ಲಿ ಜಮೀನಿರಲಿಲ್ಲ. ಅಲ್ಲಿದ್ದ ಮನೆಯನ್ನು ಮಾರಿ ಐವತ್ತು ವರುಷದ ಹಿಂದೆ ಹರಿಹರಪುರಕ್ಕೆ ಬಂದರು. ಇಲ್ಲಿನ ರೈತರು ಈ ಊರ ಹರಿಹರೇಶ್ವರ ದೇವಸ್ಥಾನವನ್ನು, ಹಾಗೂ ದೇವಸ್ಥಾನದ ೩೪ ಗುಂಟೆ ಜಮೀನನ್ನು ತಂದೆಗೆ ನೀಡಿದ್ರು. ದೇವಸ್ಥಾನದ ಪೂಜೆ ಹಾಗೂ ವ್ಯವಸಾಯ ಎರಡನ್ನೂ ಆರಂಭಿಸಿದ್ರು. ಎಮ್ಮೆ ದನ ಕೂಡ ಕಟ್ಟಿದ್ರು. ನಮ್ಮ ತಂದೆ ಕೈಯಲ್ಲಿ ಐವತ್ತು ವರುಷದ ಕೆಳಗೆ ಇಪ್ಪತ್ತು ರೂಪಾಯಿ ಇತ್ತಿಲ್ಲ. ಊರ ರೈತರ ಸಹಕಾರದಿಂದಲೇ ಇಲ್ಲಿ ಒಂದು ಮನೆ ಕಟ್ಟಿದ್ರು. ಮನೇ ಭಾವಣಿ

ಸಹಿತ ಊರ ರೈತರೇ ತಂದು ಒಂದೂವರೆ ತಿಂಗಳಲ್ಲಿ ಮನೆ ಕಟ್ಟಿಕೊಟ್ಟರಂತೆ. ಅಂದಿನಿಂದಲೇ ಕೃಷಿಕರನ್ನು ನಂಬಿ ಬದುಕಲು ಆರಂಭಿಸಿದ್ದು, ತಂದೆ. ದೇವಸ್ಥಾನದ ಪೂಜೆ ಮಾಡಲು ಆರಂಭಿಸಿದ ಮೇಲೆ ಬಡತನ ಇಂಗಿತು. ಮುಂಚೆ ಹರಿಹರೇಶ್ವರ ದೇವಸ್ಥಾನ ಇದ್ದಲ್ಲೇ ಹರಿಹರಪುರ ಇತ್ತಂತೆ. ಈಗ ಊರು ಇಲ್ಲಿಗೆ ಬಂದಿದೆ. ದೇವಸ್ಥಾನ ಎರಡು ಕಿಲೋಮೀಟರ್ ದೂರದಲ್ಲಿದೆ. ಸಾಮಾನ್ಯವಾಗಿ ಊರವರು ಪ್ರತಿನಿತ್ಯ ಬರುವುದು ಕಡಿಮೆ. ವಿಶೇಷ ಪೂಜೆ ಸಂದರ್ಭದಲ್ಲಿ ಬರುತ್ತಾರೆ. ಶಿವರಾತ್ರಿ, ಕಾರ್ತಿಕಮಾಸದಲ್ಲಿ, ದೀಪಾವಳಿ, ಯುಗಾದಿ ಸಂದರ್ಭದಲ್ಲಿ ವಿಶೇಷ ಪೂಜೆ ಇರುತ್ತೆ. ಐವತ್ತು ವರುಷಗಳ ಹಿಂದೆ ಊರಿನಲ್ಲಿ ಬಡತನವಿತ್ತು. ನಾವೂ ಬಡತನದಲ್ಲಿದ್ದೆವು. ನಮಗೆ ತೋಟ ಇರಲಿಲ್ಲ. ತಂದೆ ಕೂಲಿಯಾಳುಗಳ ಮೇಲೆ ಅವಲಂಬಿತರಾಗಿ ವ್ಯವಸಾಯ ಮಾಡ್ತಿದ್ರು. ನಾನು ನಾಲ್ಕನೇ ತರಗತಿ ಓದಿದ್ದು. ಅವತ್ತು ಮನೇಲಿ ಎಮ್ಮೆಗಳು ಜಾಸ್ತಿ ಇತ್ತು. ಎಮ್ಮೆ ದನ ಜಮೀನು ನೋಡಿಕೊಂಡು ಮನೇಲಿರು ಅಂತ ತಂದೆ ಓದು ಬಿಡಿಸಿದ್ರು. ಓದಿದ್ರೆ ಇವತ್ತು ಸಿಟೀಲಿ ಇರ್ತಿದ್ನೇನೋ! ಹೇಮಾವತಿಗೆ ಮಂದಗೆರೆ ಸಮೀಪ ಅಣೆಕಟ್ಟೆ ಕಟ್ಟಿ ಎಡದಂಡೆ ನಾಲೇಲಿ ನೀರು ಹಾಯಿಸಲು ಆರಂಭಿಸಿದ ಮೇಲೆ ಅನುಕೂಲ ಆಯ್ತು. ಭತ್ತ, ರಾಗಿ, ಕಬ್ಬು ಬೆಳೆಯಲು ಆರಂಭಿಸಿದ್ವು. ನಾನು ಸ್ವತಃ ವ್ಯವಸಾಯದ ಕೆಲಸ ಮಾಡಲು ಕಲಿತೆ. ನನ್ನ ಬಳೀಲಿ ವ್ಯವಸಾಯಕ್ಕೆ ಸಂಬಂಧಿಸಿದ ಉಪಕರಣಗಳು A to Z ಇದೆ. ಎತ್ತುಗಾಡಿ, ನೇಗಿಲು, ದನಕರುಗಳು ಇವೆ. ಆರಂಬಕ್ಕೆ ಬೇಕಾದ ಸಕಲ ಸೌಕರ್ಯಗಳೂ ಇವೆ. ಬೇರೆಯವರನ್ನು ಕೇಳುವ ಹಾಗಿಲ್ಲ. ನಾನೂ ಬೇರೆಯವರ ಜಮೀನಿಗೆ ಉಳುಮೆ ಮಾಡಲು ಹೋಗುತ್ತಿದ್ದೆ. ಈಗ್ಗೆ ೧೫ ವರುಷದ ಹಿಂದೆ ೧೫ ರೂಪಾಯಿ ಇತ್ತು ಕೂಲಿ. ಈಗ ನೂರು ರೂಪಾಯಿ ಮುಟ್ಟಿದೆ. ಈಗ ರೂಪಾಯಿಗೆ ೧೨ ಆಣೆ ಆದಾಯ; ಪರವಾಗಿಲ್ಲ. ಈಗ ನಾಲ್ಕು ವರುಷದ ಹಿಂದೆ ಒಂದೂವರೆ ಎಕರೆ ಜಮೀನು ಖರೀದಿ ಮಾಡಿದೆ. ಮನೆಗೊಬ್ಬರವನ್ನು ಜಾಸ್ತಿ ಹಾಕಿ ವ್ಯವಸಾಯ ಮಾಡೋದ್ರಿಂದ, ಇಳುವರಿ ಯಾವಾಗಲೂ ನಂದು ಜಾಸ್ತಿ ಇರುತ್ತೆ. ರಸಗೊಬ್ಬರ ಕಡಿಮೆ ಬಳಸಿ ಕೈ ಮುಂದೆ ಮಾಡಿ ಮುಂಚಿತವಾಗಿ ಕೆಲಸ ಮಾಡಿದ್ರೆ ಆದಾಯ ಜಾಸ್ತಿ. ಭತ್ತವನ್ನು ಜೂನ್-ಜುಲೈ ತಿಂಗಳಲ್ಲಿ ಒಟ್ಲು ಹಾಕಿ, ೨೨ ರಿಂದ ೨೩ ದಿನದ ಸಸಿಯನ್ನು ನಾಟಿ ಮಾಡುತ್ತೇವೆ. ತಿಂಗಳು ತುಂಬಿದ ಸಸೀನ ನಾಟಿ ಮಾಡಿದ್ರೆ ಇಳುವರಿ ಕಡಿಮೆ. ಎಕರೆಗೆ ೨೫ ಗಾಡಿ ಹಟ್ಟಿ ಗೊಬ್ಬರ ಹಾಕ್ತೀನಿ. ಎರಡು ಚೀಲ ರಾಸಾಯನಿಕ ಗೊಬ್ಬರಾನೂ ಹಾಕ್ತೀನಿ. ಕಳೆ ತೆಗೆದ ಮೇಲೆ ೨೦ ಕೇಜಿ ಯೂರಿಯಾನಾ ಮೇಲುಗೊಬ್ಬರವಾಗಿ ನೀಡ್ತೀನಿ. ಇತರರಿಗೆ ಹೋಲಿಸಿದ್ರೆ ೧೦ ಚೀಲ ಇಳುವರಿ ಜಾಸ್ತಿ ಸಿಗುತ್ತೆ. ರಾಗೀಲೂ ಅಷ್ಟೆ. ೨೦ ದಿನದ ಪೈರನ್ನು ನಾಟಿ ಮಾಡಬೇಕು. ಕಬ್ಬಿಗೆ ನೀರಿನ ನಿರ್ವಹಣೆ ಬಹಳ ಮುಖ್ಯ. ನನ್ನ ವ್ಯವಸಾಯದ ಬದುಕಿಗೆ ನನ್ನ ತಮ್ಮಂದಿರು ಬಹಳ ಸಹಾಯ ಮಾಡ್ತಾರೆ. ಅವರು ಬೆಂಗಳೂರು, ಮೈಸೂರಿನಲ್ಲಿ ಕೆಲಸದಲ್ಲಿ ಇದಾರೆ. ನೀನು ಕಷ್ಟಪಡ್ತೀಯಾ, ನೀನು ನೆಮ್ಮದಿಯಾಗಿರಬೇಕು ಅಂತ ಸದಾ ಹೇಳುತ್ತಾರೆ. ಕಷ್ಟ ಇದ್ದಾಗ ಹಣಕಾಸಿನ ನೆರವು ನೀಡ್ತಾರೆ. ೮೦ ಸಾವಿರ ಖರ್ಚು ಮಾಡಿ ಜಮೀನು ಖರೀದಿಸಿದೆ. ಮುಂಚೆ ದುಡ್ಡಿರ್ತಿಲ್ಲ. ಕಷ್ಟ ಇತ್ತು. ಈಗ್ಗೆ ೭, ೮ ವರುಷದಿಂದ ಪರವಾಗಿಲ್ಲ. ನಾನು ಹಾಲನ್ನು ಮಾರೋದಿಲ್ಲ. ಭೂತಾಳೆ ಎಲೆಯನ್ನು ತಂದು, ನೆನೆ ಹಾಕಿ ದಾರ ತೆಗೆದು, ದನಕಟ್ಟುವ ಹಗ್ಗ ಹಾಗೂ ಸೇದೋ ಹಗ್ಗ ಹೊಸೀತೀನಿ. ಒಂದು ದಿನಕ್ಕೆ ಒಂದು ಎಕರೆ ಜಮೀನು ಉಳುಮೆ ಮಾಡುವ ಸಾಮರ್ಥ್ಯ ಇದೆ. ವ್ಯವಸಾಯವೇ ಈಗ ನಮ್ಮ ಕುಟುಂಬದ ಆದಾಯದ ಮೂಲ. ಆದರೆ ವ್ಯವಸಾಯದ ಬದುಕಿನ ಜತೆಗೆ ಒಂದು ವೃತ್ತಿಯಿರಬೇಕು ಅಂತ ಜೋಯಿಸ ವೃತ್ತೀನೂ ಮಾಡುತ್ತಿದ್ದೇನೆ. ಹೆಸರು ಬಲ, ಆಯ, ಮದುವೆ, ಮುಂಜಿ, ಶುಭ ಸಮಾರಂಭಗಳನ್ನೂ ಮಾಡಿಸ್ತೀನಿ. ನನಗೆ ಎರಡು ಹೆಣ್ಣು ಹಾಗೂ ಒಂದು ಗಂಡು. ಮಕ್ಕಳನ್ನು ಓದಿಸ್ತಿದ್ದೀನಿ. ಮಗನಿಗೆ ವೇದಾಧ್ಯಯನವನ್ನು ಮಾಡಿಸ್ತಿದೀನಿ. ಮಕ್ಕಳನ್ನು ಓದಿಸಬೇಕೆಂಬ ಆಸೆ ಇದೆ. ನನ್ನ ಹೆಂಡತಿ ವ್ಯವಸಾಯದಲ್ಲಿ ಸಹಕರಿಸಿದ್ದಾಳೆ. ಅತ್ತೆಮಾವನವರು ಭಾವಮೈದುನರನ್ನು ಕಳಿಸಿ ಕೃಷಿ ಕೆಲಸದಲ್ಲಿ ನೆರವಾಗಿದ್ದಾರೆ. ಮಗನಿಗೆ ಓದಿನಲ್ಲಿ ಆಸಕ್ತಿ ಇದೆ. ವ್ಯವಸಾಯ ಮಾಡೋಲ್ಲ ಅಂತಾನೆ. ಮುಂದಿನದು ಯಾರು ಬಲ್ಲೋರು? ನಾನಂತೂ ತೃಪ್ತಿಯಿಂದ ಇದೀನಿ. ಇತರರ ಜತೆ ಜಗಳ ಕಾಯೋಲ್ಲ. ಮರ್ಯಾದೆಯಿಂದ ಬಾಳ್ವೆ ಮಾಡುತ್ತಿದ್ದೇನೆ' ಅಂದ್ರು ಕೆ.ರಮೇಶ್ ಜೋಯಿಸ್. ನಮ್ಮ ಸಂದರ್ಶನವೂ ಮುಗಿದಿತ್ತು.


16. ಹರವೆ

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು, ಮುಂಚೆ ಚಿಲ್ಕುಂದ ಹೋಬಳಿ, ನಂತರ ರಾವಂದೂರು ಹೋಬಳಿ, ಈಗ ಗಾವಡಗೆರೆ ಹೋಬಳಿಗೆ ಸೇರಿರುವ ಪುಟ್ಟಗ್ರಾಮ, ಹರವೆ. ಹುಣಸೂರಿನಿಂದ ಕೆ.ಆರ್. ನಗರ ರಸ್ತೇಲಿ ಕಟ್ಟೆಮಳಲವಾಡಿಗೆ ಬಂದು ನಂತರ ಹಿರಿಕ್ಯಾತನಹಳ್ಳಿ ಮೂಲಕ ಮರೂರು ನಂತರ ಹರವೆಗೆ ಬರಬೇಕಾದ್ರೆ ಹದಿನಾಲ್ಕು ಕಿಲೋಮೀಟರ್ ಕ್ರಮಿಸಬೇಕು. ಸಂಕೇತಿ ಕೃಷಿಯ ಕೊನೆಯ ಕೊಂಡಿ ಈ ಊರಿನಿಂದ ಕಳಚುವುದರಲ್ಲಿತ್ತು ನಾವು ಈ ಊರಿಗೆ ಹೋದಾಗ. ಶ್ಯಾನುಭೋಗ್ ಎಚ್.ವಿ.ನರಸಿಂಹಯ್ಯನವರು ತಮ್ಮ ಜಮೀನು ಹಾಗೂ ಮನೆಯನ್ನು ಮಾರಿ ಮೈಸೂರಿಗೆ ಹೊರಡಲು ಸಿದ್ಧವಾಗಿದ್ದರು. ಶ್ಯಾನುಭೋಗ್ ನರಸಿಂಹಯ್ಯನವರ ಮಗ ಶ್ರೀನಿವಾಸಯ್ಯ ಮಾಸ್ತರ ಮಗ ಬಾಲಸುಬ್ರಹ್ಮಣ್ಯ ಸಹ ಜಮೀನು ಮನೆ ಮಾರಿಯಾಗಿದೆ. ಸಂಕೇತಿಗಳ ಪಾಲಿಗೆ ಹರವೆ ಮುಗಿದ ಅಧ್ಯಾಯ, ಈಗ! ನೆಮ್ಮದಿಯ ವಿಷಯವೆಂದರೆ ಕೃಷಿ ಅಧ್ಯಾಯ ಮುಗಿಯುವಾಗ ನಾವು ಅದಕ್ಕೆ ಸಾಕ್ಷಿಯಾಗಿದ್ದು, ಹರವೆಯಲ್ಲೇ ವಿಷಯವನ್ನು ದಾಖಲಿಸಿದ್ದು. ಹಿರಿಯರು ಕಟ್ಟಿ, ಬೆಳೆದ ಹಳೆಯ ಮನೆಯ ಜಗಲಿಯಲ್ಲಿ ಕುಳಿತು ನರಸಿಂಹಯ್ಯನವರ ವಿಚಾರಗಳನ್ನು ದಾಖಲಿಸಿದ್ದು. ಭಾವನಾತ್ಮಕವಾಗಿ ಯೋಚಿಸುವಾಗ, ಅತೀ ಶ್ರದ್ಧೆಯಿಂದ ಚಿತ್ತಾರ ಬಿಡಿಸಿದ ವ್ಯಕ್ತಿಯೊಬ್ಬ ಅಷ್ಟೇ ನಿರ್ಭಾವುಕತೆಯಿಂದ ತನ್ನ ಕಲಾಕೃತಿ ತೊರೆದು ಹೋಗುತ್ತಿರುವಂತೆ ಭಾಸವಾಗುತ್ತೆ. 'ನನಗೂ ೮೬ ವರುಷ, ಒಬ್ಬಂಟಿಗ, ಕೈಲಿ ಆಗೋಲ್ಲ ಅಂತ ಊರು ಬಿಡುತ್ತಿದ್ದೇನೆ. ಸ್ವಂತ ಸ್ಥಳ ಅನ್ನುವ ಆಸೆಯಿಂದ ಇದುವರೆಗೆ ಇದ್ದೆ' ಅನ್ನುವ ನರಸಿಂಹಯ್ಯನವರ ಮಾತುಗಳು ವಾಸ್ತವವನ್ನು ನೆನಪಿಸುತ್ತವೆ. ಹರವೆಗೆ ೮೦೦ ವರುಷಗಳ ಹಿಂದೆ ಸಂಕೇತಿಗಳು ಬಂದರಂತೆ. ಮೊತ್ತಮೊದಲು ಈ ಊರಿಗೆ ಬಂದವರು ಗಂಟಿ ನರಸಯ್ಯ. ಇವರಿಗೆ ನರಸಯ್ಯ ಹಾಗೂ ಕಾಶಯ್ಯ ಇಬ್ಬರು ಗಂಡುಮಕ್ಕಳು. ೮೦೦ ವರುಷಗಳ ಸುದೀರ್ಘ ಇತಿಹಾಸದ ನಂತರ ಕಡೆಯವರಾಗಿ ಈ ಊರು ಬಿಡುತ್ತಿರುವ ಎಚ್.ವಿ.ನರಸಿಂಹಯ್ಯ ನರಸಯ್ಯನವರ ಕುಟುಂಬದವರು. ಸಂಕೇತಿಗಳಲ್ಲಿಸಾಕಷ್ಟು ಪ್ರಖ್ಯಾತಿ ಪಡೆದಿರುವ ಡಾ.ಕೃಷ್ಣಹರವೆ ಕಾಶಯ್ಯನ ಕುಟುಂಬದವರು. ಇಲ್ಲಿ ಆಂಜನೇಯ ಹಾಗೂ ಬಸವನ ಎರಡು ದೇವಸ್ಥಾನಗಳಿವೆ. ವಿಶೇಷವೆಂದರೆ, ಈ ಊರಿನಲ್ಲಿ ವಾಸವಿದ್ದ ಸಂಕೇತಿಗಳ ಮನೆದೇವರು ದೂರದ ಕಡೂರಿನ ಸಮೀಪದಲ್ಲಿರುವ ಮುಗಳೀಕಟ್ಟೆಯಲ್ಲಿರುವ ಲಕ್ಷ್ಮೀನರಸಿಂಹ. ಹಿಂದೆ ಈ ಊರಿನ ಸಂಕೇತಿಗಳು ಅಲ್ಲಿದ್ದ ಬಗ್ಗೆ ದಾಖಲೆಗಳು ಇದೆಯಂತೆ. ಹಾರಂಗಿ ನಾಲೆ ಎಂಟು ವರುಷದ ಹಿಂದೆ ಬಂದ ಮೇಲೆ ಕೃಷಿಕರ ಬಾಳು ಹಸನಾಗಿದೆ. ಹರವೆಗೆ ಬರುವುದಕ್ಕಿಂತ ಮುಂಚೆ ಹತ್ತಿರದ ರಾವಂದೂರಿನಲ್ಲಿ ಸಂಕೇತಿಗಳು ಇದ್ರಂತೆ. ಮರೂರು ಹಾಗೂ ಹರವೆಯಲ್ಲಿ ತೋಟ ಇತ್ತು- ಸುಮಾರು ಐವತ್ತು ಎಕರೆ ಆಗ್ರ. ಆದರೆ ಅಲ್ಲಿನ ಕಳ್ಳರ ಕಾಟದಿಂದ ಹರವೆಗೆ ಬಂದು ಸೇರಿದ್ರಂತೆ. ಮಡಿವಾಳರು, ಲಿಂಗಾಯತರು, ಅರಸರು, ತಿಗಳರು, ಆದಿಕರ್ನಾಟಕರು ಈ ಊರಲ್ಲಿ ಇದ್ದಾರೆ. ಮಲ್ಲಿಕಾರ್ಜುನಶಾಸ್ತ್ರಿಗಳು, ಶತಾಯುಶಿ ಮತ್ತು ಸಂಸ್ಕೃತ ವಿದ್ವಾಂಸರಾದ ಎಸ್.ಎನ್. ಹರವೆ (ಶ್ರೀನಿವಾಸಯ್ಯನವರು) ಈ ಊರ ಪ್ರಮುಖ ವಿದ್ವಾಂಸರು. ಹರವೆಯ ಕೃಷಿ ಬದುಕಿನ ಬಗ್ಗೆ ತಿಳಿಯಲು ನರಸಿಂಹಯ್ಯನವರನ್ನು ಸಂದರ್ಶಿಸಿದೆವು.

ಹೆಚ್.ವಿ. ನರಸಿಂಹಯ್ಯ ಇ/ಮ ವೆಂಕಟರಮಣಯ್ಯ

ಹರವೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

ದೂರವಾಣಿ : ಹೆಚ್.ಎನ್. ಮುರಳೀಧರ (ಮಗ) ಮೈಸೂರು: 0821 2462021



ಎಚ್.ವಿ.ನರಸಿಂಹಯ್ಯ: ರೇಡಿಯೋ ಕೇಳುವುದರಲ್ಲಿ ಮಗ್ನ: ಹರವೆಯ ಕುಟೀರ


ಮಲ್ಲಿಕಾರ್ಜುನಶಾಸ್ತ್ರಿಗಳ ಅಜ್ಜ ನರಸಿಂಹಶಾಸ್ತ್ರಿಗಳು ವೇದ ಕಲಿಯುತ್ತಲೇ ತೋಟದ ಅಗೆತ ಮಾಡ್ತಿದ್ದರಂತೆ. ಈಗ್ಗೆ ೮೦ ವರುಷದ ಹಿಂದೆ ಇಲ್ಲಿದ್ದ ಸಂಕೇತಿಗಳು ತೋಟ ಮಾಡ್ತಿದ್ರು, ಸ್ವತಃ ದುಡೀತಿದ್ರು, ದಷ್ಟಪುಷ್ಟವಾಗಿದ್ರು. ಆದ್ರೆ ಆಧುನಿಕ ವಿದ್ಯಾಭ್ಯಾಸ ಬಂದ ಮೇಲೆ, ತೋಟ ಪಾಳುಬಿತ್ತು. ಕೆಲಸವನ್ನು ಅರಸುತ್ತಾ, ಪೇಟೆಗೆ ವಲಸೆ ಹೋದ್ರು. ತೋಟವನ್ನು ಮಾರಿಬಿಟ್ರು. ೭೦, ೮೦ ವರುಷದ ಹಿಂದಿನಿಂದಲೇ ಈ ಊರಿನಿಂದ ಸಂಕೇತಿಗಳ ವಲಸೆ ಆರಂಭವಾಗಿದೆ ಅನ್ನಿಸುತ್ತೆ. ಮುಂಚೆ ೪೦ ಕುಟುಂಬಗಳು ಇದ್ದವಂತೆ. ಆದ್ರೆ ನನ್ನ ಮದುವೆ ೧೯೪೦ರಲ್ಲಿ ಆದಾಗ ಇಲ್ಲಿದ್ದಿದ್ದು ಕೇವಲ ೪/೫ ಸಂಕೇತಿಗಳ ಮನೆ ಮಾತ್ರ. ಹಳ್ಳಿ ಬಿಟ್ಟವರಲ್ಲಿ ನಮ್ಮೂರಿನವರು ಮೊದಲಿಗರಿರಬೇಕು.

ಹರವೆಯ ವೆಂಕಟರಮಣಯ್ಯ ಹಾಗೂ ಬೆಟ್ಟದಪುರದ ಸಾವಿತ್ರಮ್ಮ (ಕಾಡಮ್ಮ) ಇವರ ಹಿರಿಯ ಮಗ ನರಸಿಂಹಯ್ಯ ಅವರಿಗೆ ೮೬ರ ಹರಯ. ರುದ್ರಪಟ್ಟಣದ ರಾಮಸ್ವಾಮಯ್ಯ ಹಾಗೂ ಸಾಲಿಗ್ರಾಮದ ಭಾಗೀರಥಮ್ಮನವರ ಮಗಳು ಪಾರ್ವತಮ್ಮ ನರಸಿಂಹಯ್ಯನವರ ಅರ್ಧಾಂಗಿ. ೭೮ರ ಇಳಿ ವಯಸ್ಸಿನಲ್ಲೂ ಹರಯದ ಹೆಣ್ಣುಮಗಳನ್ನು ನಾಚಿಸುತ್ತಾರೆ ಪಾರ್ವತಮ್ಮ. ಅಚ್ಚುಕಟ್ಟಾದ ಅಡುಗೆ ಮನೆಯಲ್ಲಿ ಕುಳಿತು, ಕಾಫಿ ಮಾಡಿ ಬಲವಂತದಿಂದ ನೀಡಿದರು ಪಾರ್ವತಮ್ಮ. ಏಕಾಂತದ ಬದುಕಿಗೆ ರೇಡಿಯೋ ನನ್ನ ಸಂಗಾತಿ ಅಂದ್ರು ನರಸಿಂಹಯ್ಯ. ಶಿಥಿಲವಾದ ಮನೆಯ ಅಂಗಳದಲ್ಲಿ ನರಸಿಂಹಯ್ಯನವರ ತುಂಬುಜೀವನದ ಕ್ಷಣಗಳನ್ನು ದಾಖಲಿಸುವಾಗ ಮನ ಅದೇಕೋ ತುಂಬಿಬಂದಿತ್ತು. ವಯಸ್ಸಿಗೆ ಸಹಜವಾದ ಮುಪ್ಪು, ಮರೆವು ಇದ್ದರೂ ಕೈಯಲ್ಲಿ ಚಿಟಿಕೆ ಹಿಡಿದಿದ್ದ ನಶ್ಯವನ್ನು ಒಮ್ಮೆ ಸೇದಿ, ಗಟ್ಟಿಯಾಗಿ ಸೀನಿ, ನೆನಪುಗಳು ಹಾರದಂತೆ ನಿಧಾನವಾಗಿ ಮಾತನಾಡಲು ಆರಂಭಿಸಿದ್ರು.

'ಶ್ಯಾನುಭೋಗರ ಮನೆತನ ನಮ್ಮದು. ಸುಮಾರು ೭೦/೮೦ ಎಕರೆ ಜಮೀನಿತ್ತು. ಜಮೀನಿದ್ರೂ ಹಿರಿಯರು ವಾರಕ್ಕೆ ಕೊಡೋರು. ನಮ್ಮ ಅಜ್ಜ ಪುಟ್ಟನರಸಯ್ಯ ಅವರ ಆರು ಜನ ಅಣ್ಣತಮ್ಮಂದಿರು ಜಮೀನು ಹಂಚಿಕೊಂಡ್ರು. ನಮ್ಮ ತಂದೆಗೆ ಐದು ಜನ ಮಕ್ಕಳು. ನಾನೇ ಹಿರಿಯ ಮಗ. ನಾನು SSLC ಓದುವಾಗ ತಂದೆ ತೀರಿಹೋದ್ರು. ೧೭ನೇ ವಯಸ್ಸಿನಲ್ಲಿ ಶ್ಯಾನುಭೋಗತನ ಹಾಗೂ ಕುಟುಂಬದ ಜವಾಬ್ದಾರಿ ನನ್ನ ಮೇಲೆ ಬಿತ್ತು. ತಮ್ಮಂದಿರು ಸಣ್ಣವರು. ವ್ಯವಸಾಯ, ಶ್ಯಾನುಭೋಗತನ ಎರಡೂ ಮುಂದುವರೆಸಿದೆ. ರಾಗಿ, ಹುರುಳಿ, ಕಡಲೇಕಾಯಿ



ಪಾರ್ವತಮ್ಮ-ಎಚ್.ವಿ.ನರಸಿಂಹಯ್ಯ ದಂಪತಿ: ತಮ್ಮ ಮನೆಯ ಮುಂದೆ : ಹರವೆ



ವಿರಾಮವಾಗಿ ಕೂತು ನಶ್ಯದ ಡಬ್ಬಿಗೆ ಕೈ ಹಾಕಿರುವ ಎಚ್.ವಿ.ನರಸಿಂಹಯ್ಯ:ಹರವೆಯ ತಮ್ಮ ಮನೆಯ ಜಗುಲಿಯ ಮೇಲೆ

ಬೆಳೆಯಲು ಆರಂಭಿಸಿದೆ. ನಾಲೆ ಬಂದ ಮೇಲೆ ಭತ್ತದ ಬೇಸಾಯ ಆರಂಭವಾಯ್ತು. ನಮಗೆ ತೋಟ ಇರಲಿಲ್ಲ. ನಾನೂ ಕೂಲಿಯಾಳುಗಳ ಮೇಲೆಯೇ ಅವಲಂಬಿತನಾಗಿದ್ದೆ. ಮೊದಲು ನಾನು ಮರಡೂರು, ಮರಗನಕೆರೇಲಿ ಶ್ಯಾನುಭೋಗ ಆಗಿದ್ದೆ. ಈ ಊರಿಗೆ ಕೇಶವಮೂರ್ತಿಗಳ ತಂದೆ ಶ್ಯಾನುಭೋಗರಾಗಿದ್ರು. ೧೯೫೬ನೇ ಇಸವೀಲಿ, ನೀನೇ ಈ ಗ್ರಾಮದ ಶ್ಯಾನುಭೋಗತನ ಮಾಡು ಎಂದು ಹರವೆಯನ್ನು ಬಿಟ್ಟುಕೊಟ್ರು. ನನ್ನ ತಮ್ಮಂದಿರನ್ನು ಓದಿಸಿದೆ. ಮೊದಲನೆಯ ತಮ್ಮ ಎಚ್.ವಿ. ರಾಮಚಂದ್ರ ಲಂಡನ್‌ನಲ್ಲಿದ್ದಾನೆ. ಎರಡನೆಯವನು ಎಚ್.ವಿ. ಕೃಷ್ಣರಾವ್ ಭದ್ರಾವತೀಲಿದ್ದಾನೆ. High school Head Master, ಮೂರನೆಯ ತಮ್ಮ ಎಚ್.ವಿ.ಸೂರ್ಯನಾರಾಯಣರಾವ್ ಬೆಂಗಳೂರಲ್ಲಿದಾನೆ, ಮುಗಳೀಕಟ್ಟೆಯ ಲಕ್ಷ್ಮೀನರಸಿಂಹನ ಬಗ್ಗೆ ತಿಳಿದು ಹೇಳಿದವನು ಅವನೇ. ಹಿಂದೆ ಯಾರೂ ಅಲ್ಲಿಗೆ ಹೋಗ್ತಿರಲಿಲ್ಲ. ನಾನು ಮೈಸೂರಿನಲ್ಲಿ ರೂಮ್ ಮಾಡಿಕೊಂಡು ಓದಿದೆ, ೧೯೩೧ರಲ್ಲಿ LS ಪಾಸು ಮಾಡಿದೆ. ಹರವೇಲಿ ಆಗ Primary School ಇತ್ತು. ಹುಣಸೂರಿನಲ್ಲಿ Middle School. High School ಓದಲು ಮೈಸೂರಿಗೇ ಹೋಗಬೇಕಿತ್ತು. ೧೭ನೇ ವಯಸ್ಸಿನಲ್ಲಿ ಶ್ಯಾನುಭೋಗತನ ಮಾಡಿದ ನನಗೆ ೧೯೪೦ರಲ್ಲಿ ಮದುವೆಯಾಯ್ತು. ನನ್ನ ಸೋದರಮಾವ ಬಿ.ಆರ್.ಸ್ವಾಮಿರಾವ್ ಅವರೇ ಹೆಣ್ಣು ನೋಡಿದ್ದು. ಹೆಣ್ಣಿನ ಮನೆಯವರಿಗೆ ಹತ್ತಿರ ಅಂತ ಚುಂಚನಕಟ್ಟೆಯ ಮುಸಾಫಿರ್ ಖಾನೇಲಿ ಮದುವೆ ಮಾಡಿದ್ರು. ನಾವು ಗಂಡಿನವರು ಎತ್ತಿನಗಾಡೀಲಿ ಮದುವೆಗೆ ಹೋಗಿದ್ವಿ. ಎರಡು ದಿನದ ಮದುವೆ ಅಷ್ಟೆ. ಮಲ್ಲಿಕಾರ್ಜುನಶಾಸ್ತ್ರಿಗಳು ನನ್ನ ಬದುಕಿನ ಆದರ್ಶ. ಎಲ್ಲರನ್ನೂ ಸೌಹಾರ್ದತೆಯಿಂದ ಅನುಸರಿಸಬೇಕು, ಪ್ರೀತಿಯಿಂದ ಕಾಣಬೇಕು ಅಂತ ಹೇಳೋರು. ನಮ್ಮೂರಿನ ಸಂಕೇತಿಗಳಿಗೆ, ನನ್ನನ್ನೂ ಸೇರಿಕೊಂಡು ವ್ಯವಸಾಯದ ಬಗ್ಗೆ ಅಷ್ಟು ಕಾಳಜಿ ಇರಲಿಲ್ಲ. ಅಂಥಾ ಬಲಿಷ್ಠರೂ ಅಲ್ಲ. ಹಾಗಾಗಿ ವ್ಯವಸಾಯ ಇಲ್ಲಿ ಅಭಿವೃದ್ಧಿಯಾಗಲಿಲ್ಲ. ವಿದ್ಯಾಭ್ಯಾಸ ಮಾಡಬೇಕು, ನೌಕರಿ ಹುಡುಕಬೇಕು, ಹಳ್ಳಿಬಿಡಬೇಕು ಅನ್ನುವ ಚಟವಿತ್ತು. ಹಾಗಾಗಿ ವ್ಯವಸಾಯ ಮಾಡಲಿಲ್ಲ. ಬಿಟ್ರು. ನಾನೂ ಮಕ್ಕಳನ್ನು ಓದಿಸಿದೆ. ನನ್ನ ಮಕ್ಕಳ ಮದುವೆಯನ್ನು ಮೈಸೂರಿನಲ್ಲಿ ಮಾಡಿದೆ. ಇಲ್ಲಿ ಸೌಲಭ್ಯ ಇರಲಿಲ್ಲ. ಮಕ್ಕಳೆಲ್ಲಾ ಮೈಸೂರು, ಬೆಂಗಳೂರಿನಲ್ಲಿದ್ದಾರೆ. ನಾನೂ ಇಲ್ಲಿಂದ ಹೊರಡುವುದರಲ್ಲಿದ್ದೇನೆ. ಇಲ್ಲಿರುವಷ್ಟು ದಿನವೂ ನಾಲ್ಕು ಜನರಿಗೆ ಉಪಕಾರ ಆಗುವ ಹಾಗೆ ಬದುಕಿದ ತೃಪ್ತಿ ಇದೆ' ಎಂದು ನೆಮ್ಮದಿಯ ನಿಟ್ಟುಸಿರುಬಿಟ್ಟರು. ನರಸಿಂಹಯ್ಯನವರ ಜಮೀನನ್ನು ಖರೀದಿ ಮಾಡಿದ ರೈತ ಹಾಗೂ ಮನೆಯನ್ನು ಖರೀದಿ ಮಾಡಿದ್ದ ಮತ್ತೊಬ್ಬ ರೈತ ಮಾತುಗಳಿಗೆ ಮೂಕಸಾಕ್ಷಿಯಾಗಿದ್ದರು. ಹಣ ಸಂಪೂರ್ಣ ಕೈಸೇರಿದ ಬಳಿಕ, ಆದಷ್ಟೂ ಬೇಗ ಗೂಡಿನಿಂದ ಹಾರಿಹೋಗಿ ಮೈಸೂರು ಸೇರಲು ಅನುವಾಗಿತ್ತು, ನರಸಿಂಹಯ್ಯನವರ ಕುಟುಂಬ. ನೀವು ಈ ಲೇಖನವನ್ನು ಓದುವ ವೇಳೆಗೆ ಹರವೆಯಲ್ಲಿ ಅವರಿಲ್ಲದಿರಬಹುದು!!



ಇದೇ ನನ್ನ ರಾಜಧಾನಿ ಎನ್ನುತ್ತಾರೆ ಅಡುಗೆಮನೆಯಲ್ಲಿ ನಿಂತ ಪಾರ್ವತಮ್ಮ : ಹರವೆ

17. ಚಿಲ್ಕುಂದ


ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು ಹನಗೋಡು ಹೋಬಳಿಗೆ ಸೇರಿದ ಚಿಲ್ಕುಂದ ಸಂಕೇತಿಗಳಿಗೆ ಸ್ವರ್ಗ. ಮೈಸೂರು, ಹುಣಸೂರು ಪಿರಿಯಾಪಟ್ಟಣ ರಸ್ತೆಯಲ್ಲಿ, ಹುಣಸೂರಿನಿಂದ ಕೇವಲ ೧೨ ಕಿ.ಮೀ. ದೂರದಲ್ಲಿದೆ ಚಿಲ್ಕುಂದ. ಸಂಕೇತಿಗಳದ್ದು ಇಲ್ಲಿ ೫೨ ಮನೆಯಿದೆ. ೫೦ ಜನರಿಗೆ ಜಮೀನು ಇದೆ. 'ಮತ್ತೂರಿನ ಸಂಕೇತಿಗಳು Land Lords, ಅಂದ್ರೆ ಎರಡು ಎಕರೆಗೂ ಮೇಲ್ಪಟ್ಟು ಬಾಗಾಯ್ತನ್ನು ಹೊಂದಿರುವವರು, ನಾವು ಚಿಲ್ಕುಂದದ ಸಂಕೇತಿಗಳು ಬರೀ Land Holders ಅಷ್ಟೆ, ಇಲ್ಲಿ ಎಲ್ಲರಿಗೂ ಎರಡು ಎಕರೆಗಿಂತ ಕಡಿಮೆ ತೋಟ ಇರೋದು' ಅಂತಾರೆ ಚಿಲ್ಕುಂದದ ಹಿರಿಯ ಸಂಕೇತಿಗಳು. ಎಲ್ಲಿ ಹೋದರೂ ಸಂಕೇತಿಗಳು ಬಾಗಾಯ್ತನ್ನೇ ನೆಚ್ಚಿದ್ದೇಕೆ ಅಂದ್ರೆ ಸ್ಪಷ್ಟವಾದ ಉತ್ತರ ನೀಡುತ್ತಾರೆ. 'ಸಂಕೇತಿಗಳು ವೈದಿಕ ವೃತ್ತಿ ಉಳಿಸಬೇಕಿತ್ತು, ವೇದಾಭ್ಯಾಸ ಮಾಡಬೇಕಿತ್ತು. ಬೀಡಿ, ಕುಡಿತ, ಮಾಂಸದ ಸೇವನೆ ಇತ್ಯಾದಿ ಬೇಕಿರಲಿಲ್ಲ. ಇತರೇ ಜನರ ಹವ್ಯಾಸವೂ ಇವರಿಗೆ ಬೇಕಿರಲಿಲ್ಲ. ಹಾಗಾಗಿ ತೋಟದ ವ್ಯವಸಾಯಕ್ಕೆ ಇವರು ನಿಂತ್ರು. ತೋಟದಲ್ಲಿ ಎಲ್ಲವೂ ಸಾಧ್ಯ. ಸಂಕೇತಿಗಳಲ್ಲಿ ಗುರುವಿಗೆ ಪ್ರಾಧಾನ್ಯ ಇದೆ. ತೋಟವೇ ಅವರಿಗೆ "ಆಶ್ರಮ"ವಾಗಿತ್ತು. ಹಿರಿಯರೇ ಅಲ್ಲಿ ಸ್ವಾಮಿಗಳಂತಿದ್ರು. ತೋಟವೇ ಪುಣ್ಯಭೂಮಿ. ವೇದಾಧ್ಯಯನ, ಕೃಷಿ ಜತೆಜತೆಯಾಗಿ ಸಾಂಗೋಪಾಂಗವಾಗಿ ನಡೆಯುತ್ತಿತ್ತು' ಎನ್ನುತ್ತಾರೆ. ಈ ಮಾತನ್ನು ಪುಷ್ಟೀಕರಿಸುವಂತೆ ನಮಗೆ ಗೋಚರಿಸಿದ್ದು ಚಿಲ್ಕುಂದದ ಚಿ.ನಾ.ಕೇಶವಮೂರ್ತಿಯವರ ತೋಟ. ಈ ತೋಟದ ಹೆಸರೂ 'ಆಶ್ರಮ' ಅಂತ. ನಾವು ಚಿಲ್ಕುಂದಕ್ಕೆ ಹೋದಾಗ ಮೊದಲು ಭೇಟಿ ನೀಡಿದ್ದು ಇವರ ತೋಟಕ್ಕೆ. ಬಹು ಮಹಡಿಗಳ ಬೆಳೆ ಪದ್ಧತಿಗೆ, ಹಾಗೂ, ವ್ಯವಸ್ಥಿತವಾಗಿ ಒಬ್ಬ ವ್ಯಕ್ತಿ ನೆಲೆ ನಿಂತು ಕೃಷಿ ಮಾಡಿದರೆ ಏನೆಲ್ಲಾ ಬೆಳೆಗಳನ್ನು ಒಂದೇ ಜಮೀನಿನಲ್ಲಿ ಬೆಳೆಯಲು ಸಾಧ್ಯ ಎಂಬುದಕ್ಕೆ ಈ ತೋಟ ಜ್ವಲಂತ ಸಾಕ್ಷಿ. ಅಡಿಕೆ, ಕಾಳುಮೆಣಸು, ವಿಳ್ಳೇದೆಲೆ, ತೆಂಗು, ಬಾಳೆ, ದಾಲ್ಚಿನ್ನಿ, ಕಿತ್ತಳೆ, ಸೀಬೆ, ಸಪೋಟ, ಪರಂಗಿ, ಮಾವು, ಏಲಕ್ಕಿ, ಸರ್ವಸಂಬಾರ, ಬಗೆ ಬಗೆಯ ಔಷಧೀಯ ಗಿಡಗಳು, ಒಂದೇ ಎರಡೇ, ಹಿರಿಯರು ನೀಡಿದ ಗೋಡೆಯ ಮೇಲೆ ಅತ್ಯಂತ ಸುಂದರವಾದ ಚಿತ್ತಾರ ಬಿಡಿಸಿದ್ದಾರೆ, ಕೇಶವಮೂರ್ತಿಯವರು. ಇವರು Hindi Professor ಆಗಿದ್ದರೆಂಬುದು ವಿಶೇಷ. ಆದರೆ ಈ ತೋಟ ಈಗ ಮಾಲೀಕನಿಲ್ಲದೆ ಸೊರಗಿದೆ ಎಂಬುದು ಮಾತ್ರ ಸತ್ಯ. ಚಿಲ್ಕುಂದದ ಸಿ.ಕೆ. ಗುರುಮೂರ್ತಿ ಹೇಳುತ್ತಾರೆ ನಮ್ಮ ಚಿಲ್ಕುಂದದ ಸಂಕೇತಿ ಸಮುದಾಯಕ್ಕೆ ಚಿ.ನಾ.ಕೇಶವಮೂರ್ತಿ 'ಕಣ್ಣೆಲೆ' ಇದ್ದ ಹಾಗೆ. ಅಂದ್ರೆ ವಿಳ್ಳೇದೆಲೆ ಕವಳಿಗೇಲಿ ಕಣ್ಣೋಟ ಸೆಳೆಯಲು ಅಂದವಾದ ಎಲೆಯನ್ನು ಮೇಲುಗಡೆ ಇಟ್ಟಿರುತ್ತಾರೆ. ಅದೇ ಕಣ್ಣೆಲೆ. ಈ ಊರಿನಲ್ಲಿ ಮೊದಲು ಕಾಳುಮೆಣಸನ್ನು ಬೆಳೆದಿದ್ದು ಅವರು. ಮಂಗಳ ಅಡಿಕೆ ಹಾಗೂ ಏಲಕ್ಕಿಯನ್ನು ಪರಿಚಯಿಸಿದ್ದೂ ಅವರೆ. ತೋಟಕ್ಕೆ ಬಂದ ಅತಿಥಿಗಳಿಗಾಗಿಯೇ ಒಂದು ತೆಂಗಿನಮರವನ್ನು ಬಿಟ್ಟಿದ್ರು. ಅತಿಥಿಗಳಿಗೆ ಎಳನೀರು, ಹಣ್ಣುಹಂಪಲು ನೀಡದೇ ಕಳಿಸುತ್ತಿರಲಿಲ್ಲ. ಆದರೆ ಅವರನ್ನು ಕೇಳದೆಯೇ ಹೊರಗಿನವರು ಒಂದು ಗಿಡವನ್ನೂ ಮುಟ್ಟುವಂತಿರಲಿಲ್ಲ. ಅವರಿಗೆ ಸೋಲಲು ಇಷ್ಟವಿರಲಿಲ್ಲ. ಏಕಾಂಗಿಯಾಗಿಯೇ ಹೋರಾಡಿದರು, ವ್ಯವಸಾಯ ಮಾಡಿದರು. ಇಡೀ ತೋಟಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸಿದ್ದಾರೆ. ರಾತ್ರಿಯ ವೇಳೆಯಲ್ಲೂ ಕೃಷಿಕೆಲಸಗಳನ್ನು ಅವರು ಮಾಡೋರು. ನೀರು ನೀಡೋರು. ಬೆಳೆ ಖಟಾವಿಗೆ ಅವರೇ ರೂಪಿಸಿದ ಏಣಿಗಳನ್ನು ಅಲ್ಲಲ್ಲಿ ಅಳವಡಿಸಿದ್ದಾರೆ. ಅಚ್ಚುಕಟ್ಟಾಗಿ ತೋಟವನ್ನು ಇಟ್ಟಿದ್ದರು. ಅವರು ಬೆಳೆಯದಿರುವ ಬೆಳೆಯೇ ಇಲ್ಲ. ಒಂದೇ ತೋಟದಲ್ಲಿ ಎಲ್ಲವನ್ನೂ ಬೆಳೆಯಬಹುದು ಎಂಬುದನ್ನು ತೋರಿಸಿದವರು ಅವರು. ಅವರ ಸಂಸಾರವೇ ತೋಟ. ಎದ್ದರೆ ತೋಟ, ಕಣ್ಣು ಬಿಟ್ಟರೆ ತೋಟ. ಕಾಲುವೆ ತೆಗೆದು ಗೊಬ್ಬರವನ್ನು ಅದರಲ್ಲಿ ತುಂಬೋರು. ನಮ್ಮ ದುರದೃಷ್ಟ, ಅನಿವಾರ್ಯ ಕಾರಣಗಳಿಂದ ಅವರು ಊರುಬಿಟ್ಟರು. ಈಗ ಹೃಷಿಕೇಶದಲ್ಲಿದ್ದಾರಂತೆ. ನಮ್ಮ ಸಂಕೇತಿ ಕೃಷಿಗೆ ವಿಭಿನ್ನ ಅರ್ಥ ನೀಡಿದವರು ಅವರು' ಎಂದು ಹೃದಯತುಂಬಿ ಹೇಳುತ್ತಾರೆ. ನಿಜಕ್ಕೂ ಸಂಕೇತಿ ಕೃಷಿಗೆ ವಿಶೇಷ ಭಾಷ್ಯ ಬರೆಯುವ ತೋಟ ಇದು. ಉಳಿಸಿದರೆ ಮಾದರಿ. ಚಿಲ್ಕುಂದದಲ್ಲೂ ಕಡುಬಡತನದಿಂದ ಕೃಷಿ ಮಾಡಿದವರಿದ್ದಾರೆ. ಹೊಟ್ಟೆಗೆ ಏನೂ ಇಲ್ಲದೆ ಹೊಲದಲ್ಲಿ ಬೀನ್ಸ್ ಹಾಕಿ, ಬರಿ ಅದನ್ನೇ ತಿಂದು ಬದುಕಿದವರಿದ್ದಾರೆ. ನಾವು ಮಾಡಿದ್ದನ್ನು ಇತರರಿಗೆ ಹೇಳಬಾರದು ಅನ್ನುವ ಆದರ್ಶ. ಕಷ್ಟ ಏನೆಂದೇ ತಿಳಿಯದ ಇವತ್ತಿನ ಯುವ ಜನತೆಗೆ, ಇದು ಆದರ್ಶವಾದೀತೆ? ಹಿರಿಯರ ಅನುಭವ ಎಂದೂ ಮುಕ್ಕಾಗಬಾರದು. ಹಗಲು ರಾತ್ರಿ ಎಣಿಸದೆ ತಂದೆ ತಾಯಂದಿರು ಅನುಭವಿಸಿದ ಕಷ್ಟ, ಹೊಟ್ಟೆಗೆ ಹಿಟ್ಟಿಲ್ಲದ ದಿನಗಳಲ್ಲಿ ಇರುವಷ್ಟನ್ನೇ ಮಕ್ಕಳಿಗೆ ಹೊಟ್ಟೆ ತುಂಬಾ ಬಡಿಸಿ ತಾವು ಮಾತ್ರ ಹೊಟ್ಟೆತುಂಬಾ ತಣ್ಣೀರು ಕುಡಿದು ತಂಪಾಗಿ ಮಲಗಿದ ಮಾದರಿ, ಕಿರಿಯರ ಪಾಲಿಗೆ ಭಗವದ್ಗೀತೆಯಾಗಬೇಕು. ಚಿಲ್ಕುಂದ ಹಿರಿಯ ಮೇಧಾವಿಗಳಿಗೆ ಜನುಮ ನೀಡಿದೆ. ಅನಂತನಾರಾಯಣಪ್ಪನವರು ವೇದದಲ್ಲಿ ಗುರುಪೀಠವನ್ನು ಅಲಂಕರಿಸಿದ್ರೆ ಕೊಳಲು ಮೂರ್ತಿಗಳು ಸಂಗೀತದಲ್ಲಿ ಮಾರ್ಗದರ್ಶಿಯಾಗಿದ್ರು, ನಾಗಪ್ಪಶಾಸ್ತ್ರಿಗಳು ಸಂಸ್ಕೃತ ವಿದ್ವಾಂಸರು. ಚಿಲ್ಕುಂದದ ಸಂಕೇತಿಗಳನ್ನು ಹತ್ತಿರದಿಂದ ಬಲ್ಲ ಹಾಸನದ ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಾದ

ಡಾ.ಕೃಷ್ಣಮೂರ್ತಿಯವರು ಹೇಳ್ತಾ ಇದ್ರು, 'ಚಿಲ್ಕುಂದದ ಸಂಕೇತಿಗಳು ಬೆಳಗ್ಗೆ ಎದ್ದು, ಎಲೆ ಅಡಿಕೆ ಹಾಕಿ, ಸೊಂಟದಲ್ಲಿ ಒಂದಷ್ಟು ಸಿಕ್ಕಿಸಿ, ಗುದ್ದಲಿ ಹಿಡಿದು ಹೊಲಕ್ಕೆ ಹೊರಟರೆ, ಮಧ್ಯಾಹ್ನ ಒಂದರವರೆಗೆ ಅಗೀತಾ ಇದ್ರಂತೆ. ಅವರಿಗೆ ನಾಟೀ ಔಷಧಿ ಸಹಾ ಗೊತ್ತು. ನನ್ನ ಹೆಂಡತಿಗೆ ಕೈಮಸ್ಕನ್ನು ಯಾರೋ ಹಾಕಿದ್ರು. ನಮಗೆ ಗೊತ್ತಿರಲಿಲ್ಲ. ಚಿಲ್ಕುಂದದ ಹಿರಿಯ ಸಂಕೇತಿಗಳು ನನ್ನ ಹೆಂಡತಿಯ ಮುಖವನ್ನು ನೋಡಿ ಹೇಳಿದ್ರು, ಕೈಮಸ್ಕನ್ನು ಇವರಿಗೆ ಹಾಕಿದ್ದಾರೆ ಅಂತ. ಅದುವರೆಗೆ ನಾನು ಎಲ್ಲಾ ನುರಿತ ವೈದ್ಯರಿಗೂ ಅವಳನ್ನು ತೋರಿಸಿ, ಹುಶಾರಾಗುವ ಆಸೆ ಬಿಟ್ಟಿದ್ದೆ. ಅವರು ಏನೂ ಪ್ರತಿಫಲ ಅಪೇಕ್ಷೆ ಪಡದೆ ಔಷಧಿ ನೀಡಿ, ಅವಳನ್ನು ಗುಣಪಡಿಸಿದ್ರು. ಇದು ಚಿಲ್ಕುಂದ ಸಂಕೇತಿಗಳ ಹಿರಿಮೆ' ಎಂದು ಮನತುಂಬಿ ಹೇಳ್ತಿದ್ರು. ಚಿಲ್ಕುಂದದಲ್ಲಿ ಹಿಂದೆ ೩೦ ರಿಂದ ೩೨ ಮನೆ ಸಂಕೇತಿಗಳಿದ್ದು ಇತ್ತಂತೆ. 'ಮನೆ ಭಾಗವಾಗಿ, ಭಾಗವಾಗಿ ವೃದ್ಧಿ ಆಗಿದೆ, ಈಗ ೫೨ ಮನೆ ಇದೆ ಅಷ್ಟೆ,' ಅಂತಾರೆ ಹಿರಿಯರು. ಚಿಲ್ಕುಂದದಲ್ಲಿ ಹರಿಜನರು, ಮುಸಲ್ಮಾನರು, ಒಕ್ಕಲಿಗರು, ಅಗಸರು, ಕುಂಬಾರರು, ಹೀಗೆ ಸಾಕಷ್ಟು ಪಂಗಡದ ಜನ ಇದ್ದಾರೆ. ಹರಿಜನರ ಸಂಖ್ಯೆ ಹೆಚ್ಚಿದೆ. ಕೃಷಿ ಕೆಲಸಕ್ಕೆ ಕೂಲಿಯಾಳುಗಳ ಬೇಡಿಕೆ ನೀಗಿಸೋರು ಇವರೇ. ಅವರ ಬದುಕಿಗೆ ಸಂಕೇತಿಗಳು ಆಸರೆ ನೀಡಿದ್ದಿದೆ. ಕೆಲಸ ಸಿಕ್ಕಾಗ ಚೆನ್ನಾಗಿರ್ತಾರೆ, ಇಲ್ಲದಿದ್ರೆ ಪುಂಡರಾಗ್ತಾರೆ ಎಂದು ಇಲ್ಲಿನ ಸಂಕೇತಿಗಳು ಹೇಳ್ತಾರೆ. ಒಟ್ಟಾರೆ ಎಲ್ಲರ ನಡುವೆ ಪರಸ್ಪರ ಸೌಹಾರ್ದಯುತ ವಾತಾವರಣ ಇದೆ.

೮) ಸಿ.ಎನ್. ರಾಮಣ್ಣ ಇ/ಮ ನರಸಿಂಹಮೂರ್ತಿ
ಚಿಲ್ಕುಂದ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ದೂರವಾಣಿ : 08222-241083

ಅಗಲವಾಗಿ ಮಾಡೋ ಬದಲು ಆಳವಾಗಿ ಮಾಡು ಅನ್ನುವುದು ಅನುಭವದ ಮಾತು. ತುಂಬಾ ಜಮೀನು ಮಾಡಿ, ತುಂಬಾ ಬೆಳೆ ಬೆಳೆದು, ಯಾವುದಕ್ಕೂ ಸರಿಯಾದ ಗೊಬ್ಬರ ಕೊಡದೆ, ಕಡಿಮೆ ನಿಗಾ ಮಾಡಿ, ಕಡಿಮೆ ಆದಾಯ ಪಡೆಯೋದಕ್ಕಿಂತ ಕಡಿಮೆ ಜಮೀನು ಇಟ್ಟು, ಚೆನ್ನಾಗಿ ವ್ಯವಸಾಯ ಮಾಡಿ, ಹೆಚ್ಚಿನ ಉತ್ಪತ್ತಿ ಪಡೆದು, ಆದಾಯ ಗಳಿಸೋದು ಸಂಕೇತಿ ಕೃಷಿ.

ಚಿಲ್ಕುಂದದ ನರಸಿಂಹಮೂರ್ತಿಯವರು ಮದುವೆಯಾದದ್ದು ಮಧ್ಯಪ್ರದೇಶದಲ್ಲಿ ಹುಟ್ಟಿ ಬೆಳೆದ ರುಕ್ಮಿಣಿಯಮ್ಮನವರನ್ನು. ರುಕ್ಮಿಣಿಯಮ್ಮನವರ ತಂದೆ ಪಿ.ಆರ್. ವೆಂಕಟೇಶಯ್ಯ, ತಾಯಿ ತಾಯಮ್ಮ. ವೆಂಕಟೇಶಯ್ಯನವರು ರೈಲ್ವೆ ಇಲಾಖೆಯಲ್ಲಿ Chief Engineer ಆಗಿದ್ದು, ನಾಗಪುರದ ರೈಲ್ವೆನಿಲ್ದಾಣವನ್ನು ಕಟ್ಟಿಸಿದ ಖ್ಯಾತಿ ಅವರದ್ದು. ನರಸಿಂಹಮೂರ್ತಿಯವರಿಗೆ ಆರು ಹೆಣ್ಣು ಮಕ್ಕಳು ಹಾಗೂ ಐದು ಗಂಡುಮಕ್ಕಳು. ಎರಡನೆಯ ಮಗನೇ ಸಿ.ಎನ್. ರಾಮಣ್ಣ. ರಾಮಣ್ಣನವರ ಪತ್ನಿ ಬಿ.ವಿ. ನಾಗರತ್ನ, ಬರಗೂರಿನ ವಿಶ್ವನಾಥಯ್ಯ ಹಾಗೂ ಅಗ್ರಹಾರದ ಗೌರಮ್ಮ ದಂಪತಿಗಳ ಮಗಳು. ರಾಮಣ್ಣ ಅವರಿಗೆ ಇಬ್ಬರು ಹೆಣ್ಣು ಹಾಗೂ ಇಬ್ಬರು ಗಂಡುಮಕ್ಕಳು. ಮೊದಲ ಮಗ ನರಸಿಂಹಶರ್ಮ ಹಾಸನದಲ್ಲಿ ಶ್ರೀರಾಮ ಆಗ್ರೋ ಎಂಬ ಅಂಗಡಿ ನಡೆಸುತ್ತಿದ್ದಾರೆ. ಎರಡನೆಯ ಮಗ ರಾಘವೇಂದ್ರ. ಹೆಣ್ಣು ಮಕ್ಕಳನ್ನು ಒಳ್ಳೆಯ ಕಡೆ ಸೇರಿಸಿದ ಸಂತೃಪ್ತಿ ಇದೆ ರಾಮಣ್ಣನವರಿಗೆ. ವಿಶಾಲವಾದ ಅವರ ಮನೆಯಲ್ಲಿ ಕುಳಿತು ಒಂದೂವರೆ ಗಂಟೆಗಳ ಕಾಲ ಅವರ ವ್ಯವಸಾಯದ ಬದುಕನ್ನು ಕೆದಕಿದ್ದರ ಪ್ರತಿಫಲವಾಗಿ ಅಮೂಲ್ಯವಾದ ವಿಚಾರಗಳು ಹೊರಹೊಮ್ಮಿದವು. ಅಂಗಳದಲ್ಲಿ ಕುಳಿತು



ಬಿ.ವಿ.ನಾಗರತ್ನ-ಸಿ.ಎನ್.ರಾಮಣ್ಣ ದಂಪತಿ ಚಿಲ್ಕುಂದದ ತಮ್ಮ ಮನೆಯ ಹೆಬ್ಬಾಗಿಲಲ್ಲಿ




ಸಿ.ಎನ್.ರಾಮಣ್ಣ ಅವರು ತಮ್ಮ ಎಲೆಕೋಸಿನ ಹೊಲದಲ್ಲಿ : ಚಿಲ್ಕುಂದ

ಅನುಭವಗಳನ್ನು ಹಂಚಿಕೊಂಡ ರಾಮಣ್ಣನವರು, ಪೂರ್ವಿಕರಿಂದ ಆರಂಭಿಸಿದರು, 'ನನ್ನ ತಂದೆ ಅಜ್ಜ ಅನಂತರಾಮಯ್ಯನವರು. ಮಡಿಕೇರಿಯಲ್ಲಿ ಸಂಸ್ಕೃತ ಮೇಷ್ಟರಾಗಿದ್ರು. ಜ್ಯೋತಿಷ್ಯದಲ್ಲಿ ಪ್ರಾವೀಣ್ಯ ಇತ್ತು. ಜಾತಕ ನೋಡೋರು. ಬಹಳ ಸಿದ್ಧಿ ಇತ್ತು. ನನ್ನ ತಂದೆ ಶ್ಯಾನುಭೋಗರು. ವ್ಯವಸಾಯ ಹಾಗೂ ವ್ಯಾಪಾರ ಎರಡನ್ನೂ ಮಾಡೋರು. L.S.ವರೆಗೆ ಓದಿದ್ರು. ತಮ್ಮ ೧೬ನೇ ವಯಸ್ಸಿನಲ್ಲಿ ವ್ಯಾಪಾರ ಆರಂಭಿಸಿದ್ರು. ರಾಗಿ, ಹುರಳಿ ಮಾರ್ತಿದ್ರು. ಸಂಕೇತಿ ಜನಾಂಗದಲ್ಲಿ ಈ ಊರಿಗೆ ಮೊದಲ ಅಡಿಕೆ ವ್ಯಾಪಾರಸ್ಥರು. ಸಮೀಪದ ಸಂತೆಗೆ ವಿಳ್ಯೇದೆಲೆ ಪಿಂಡಿಯನ್ನು ತಲೆ ಮೇಲೆ ಇಟ್ಟು ಹೋಗೋರು. ಹುಣಸೂರು, ಗೋಣಿಕೊಪ್ಪ, ಪಿರಿಯಾಪಟ್ಟಣ, ಕಂಪ್ಲಾಪುರ ಸಂತೆಗೆ ಹೋಗೋರು. ೫೦ ಕಿಲೋಮೀಟರ್ ದೂರದ ಸಂತೆಗೂ ಸೈಕಲ್ ಮೇಲೆ ಎಲೆ ಪಿಂಡಿ ಇಟ್ಟು ಪ್ರಯಾಣಿಸಿದ್ದಾರೆ. ಒಟ್ಟು ಕುಟುಂಬದಲ್ಲಿ ಇದ್ದಾಗ ಅಡಿಕೆ ವ್ಯಾಪಾರ ಆರಂಭಿಸಿದ್ರು. ಅರಸೀಕೆರೆ, ಮಲಬಾರು ಪ್ರದೇಶಗಳಿಗೂ ಹೋಗ್ತಿದ್ರು. ತಮ್ಮಂದಿರು ಬೇರಾದ ಮೇಲೆ ಅಡಿಕೆ ವ್ಯಾಪಾರ ಕೈಬಿಟ್ಟು ಬೀಡಿ ಹೊಗೆಸೊಪ್ಪು ಮಾರಾಟ ಆರಂಭಿಸಿದ್ರು. ಗುಡಿಯಾತಮ್, ವೆಲ್ಲೂರು, ನೆಲ್ಲೂರು, ಆಂಧ್ರ, ತಮಿಳುನಾಡು ಪ್ರದೇಶವನ್ನು ಸುತ್ತಿದ್ದಾರೆ. ಈ ಗ್ರಾಮದ ಯಜಮಾನಿಕೆ ಇತ್ತು. ಹುಣಸೂರು ತಾಲ್ಲೂಕು ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿದ್ದರು. ಚಿಲ್ಕುಂದದ ಸೊಸೈಟಿಯಲ್ಲಿ ಸುಮಾರು ೨೦ ವರುಷಗಳ ಕಾಲ ಅಧ್ಯಕ್ಷರಾಗಿದ್ರು. ಈ ಊರಿಗೆ Middle School, High School ಬರಲು ಅವರು ಕಾರಣ. ಕಲ್ಲಹಳ್ಳಿಯ ಶ್ಯಾನುಭೋಗರಾಗಿದ್ರಿಂದ ದೇವರಾಜ ಅರಸುಗೆ ಆಪ್ತರಾಗಿದ್ರು. ಅದೇ ಸ್ನೇಹದಲ್ಲಿ ಚಿಲ್ಕುಂದಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಟ್ರು ಅರಸು. ನಮ್ಮ ತಂದೆ ವೈಯಕ್ತಿಕವಾಗಿ ಒಂದು ರೂಪಾಯಿ ಕೆಲಸಾನೂ ಮಾಡಿಸಿಕೊಳ್ಳಲಿಲ್ಲ. ಊರ ಹಿತಕ್ಕೆ ದುಡಿದ್ರು. ದೇವರಾಜ ಅರಸು ಅವರಿಗೆ ಈ ಊರ ಸಂಕೇತಿಗಳ ಬಗ್ಗೆ ಅಕ್ಕರೆಯಿತ್ತು. ಹಾಸನದ ಸಾರ್ವಜನಿಕ ಸಭೇಲಿ ಒಂದು ಬಾರಿ "ಅವರು ಕೇವಲ ಹತ್ತು ಗುಂಟೆ ತೋಟದಲ್ಲಿ ದುಡಿದು ವಿಳ್ಯೇದೆಲೆ, ಅಡಿಕೆ, ಬಾಳೆ ಬೆಳೆದು ದೊನ್ನೆ ಕಟ್ಟಿ ಮಾರಾಟ ಮಾಡಿ ಅವರ ಆರು ಜನ ಮಕ್ಕಳನ್ನು ಓದಿಸಿ ಒಳ್ಳೆಯ ಕೆಲಸಕ್ಕೆ ಸೇರಿಸಿದ್ದಾರೆ", ಅಂತ ಚಿಲ್ಕುಂದದ ಎಂ.ಕೆ. ಶ್ರೀನಿವಾಸಮೂರ್ತಿ ಅವರ ಬಗ್ಗೆ ಹೆಮ್ಮೆಯಿಂದ ಹೇಳಿದ್ದಾರೆ. "ನೋಡಿ, ಚಿಲ್ಕುಂದದ ಬ್ರಾಹ್ಮಣರು, ಕಚ್ಚೆ ಹಾಕಿ ತೋಟದಲ್ಲಿ ಸ್ವತಃ ದುಡೀತಾರೆ," ಅಂತ ನಮ್ಮನ್ನು ಹೊಗಳೋರಂತೆ ದೇವರಾಜ ಅರಸು. ಈ ಊರ ಹೊಸಕೆರೆಯನ್ನು ಜೀರ್ಣೋದ್ಧಾರ ಮಾಡಿ ಎಂದು ಬ್ರಾಹ್ಮಣರು ಹೋಗಿ ಕೇಳಿದಾಗ ದೇವರಾಜ ಅರಸು, ಇಪ್ಪತ್ನಾಲ್ಕು ಎಕರೆ ವಿಸ್ತಾರದ ಕೆರೆ ಜೀರ್ಣೋದ್ಧಾರ ಮಾಡಿದ್ದಾರೆ. ಈ ಊರ ಗ್ರಾಮದೇವತೆ ವಾಣಿಯಮ್ಮ. ಹಿಂದೆ ಓಣಿಯಮ್ಮ ಎಂದು ಹೆಸರು. ಓಣೀಲಿ ಕಲ್ಲುಪಾದ ಉದ್ಭವವಾಗಿದೆ. ನನ್ನ ಕುಟುಂಬದ ಹಿರಿಯರಿಗೆ ಸ್ವಾಮಿ ಕನಸಲ್ಲಿ ಬಂದು "ನನ್ನ ಪಾದುಕೆಗೆ ಹೊಲಸು ಬೀಳ್ತಿದೆ. ಸರಿಯಾದ ವ್ಯವಸ್ಥೆ ಮಾಡಿ" ಅಂದ ಹಾಗೆ ಆಗೋದಂತೆ. ಆಗ ನಮ್ಮ ಕುಟುಂಬದವರೇ ಸೇರಿ ಒಂದು ದೇವಸ್ಥಾನವನ್ನು ಕಟ್ಟಿಸಿದ್ದೇವೆ. ಈಗಲೂ ಅಷ್ಟೆ, ದೇವಸ್ಥಾನಕ್ಕೆ ಏನೇ ಅಪಚಾರವಾದರೂ ಸ್ವಾಮಿ ನನ್ನ ಕನಸಲ್ಲಿ ಬರ್ತಾನೆ' ಎಂದು ಹೇಳಿ ಸ್ವಲ್ಪ ಸುಧಾಸಿರಿಕೊಂಡ್ರು ರಾಮಣ್ಣನವರು. ನಂತರ ತಮ್ಮ ಬದುಕಿನ ಬಗ್ಗೆ ಹೇಳಲು ಆರಂಭಿಸಿದ್ರು. ನಾನು ಓದುವಾಗ ಇಲ್ಲಿ Primary ಹಾಗೂ Middle School ಇತ್ತು. ನನ್ನ ಓದಿಗೆ ತೊಂದರೆ ಆಗಲಿಲ್ಲ. ನಾನು ಪಾವಗಡದಲ್ಲಿ ಹೈಸ್ಕೂಲ್ ಓದಿದೆ. ಮೈಸೂರು ಶಾರದಾವಿಲಾಸದಲ್ಲಿ PUC ಮಾಡಿ, ಒಂದು ವರುಷ Diploma ಮಾಡಿದೆ. ಅಂಚೆ ಶಿಕ್ಷಣದ ಮೂಲಕ BA ಮುಗಿಸಿದೆ. ನನ್ನ ಅಣ್ಣ ಕೆಲಸದಲ್ಲಿದ್ರು. ತುಂಬಿದ ಮನೆ ನಮ್ಮದು. ತಮ್ಮಂದಿರ ಓದು, ತಂಗೀರ ಮದುವೆ ಆಗಬೇಕಿತ್ತು. ಹಾಗಾಗಿ ಮನೆಗೆ ಬಂದೆ. ಕುಟುಂಬದ ನಿರ್ವಹಣೆ ಜತೆ ವ್ಯವಸಾಯದ ಜವಾಬ್ದಾರಿ ಇತ್ತು. ತಂದೆಯವರ ಕಾಲದಲ್ಲಿ ಮಾವಿನ ತೋಟ ಮಾಡಿದ್ವಿ. ಯಾವ ಬೆಳೇನೂ ಬರದೇ ಇರೋ ಜಾಗದಲ್ಲಿ ಮಾವು ಬರುತ್ತೆ ಅಂತ ತಂದೆ ಹೇಳೋರು. ಹಾಗಾಗಿ ೧೯೫೮ರಲ್ಲಿ ಮೈಸೂರಿನಿಂದ ಬಾದಾಮಿ, ರಸಪುರಿ, ತೋತಾಪುರಿ ತಳೀನ ತಂದು, ಒಟ್ಟು ೧೫೦ ಗಿಡಗಳನ್ನು ನಾಟಿ ಮಾಡಿದ್ವು. ಪ್ರತಿ ವರುಷ ಉಳುಮೆ ಮಾಡಿ, ಮರದ

ಸುತ್ತಾ ಪಾತಿ ತೆಗೆದು ಬಿಟ್ರೆ, ಮರದ ಎಲೆ ಅಲ್ಲೇ ಬೀಳುತ್ತೆ, ಕರಗುತ್ತೆ, ಗೊಬ್ಬರ ಆಗುತ್ತೆ. ಬೇರೆ ವ್ಯವಸಾಯ ಬೇಕಿಲ್ಲ. ಒಂದು ಎಕರೆಗೆ ಒಂದು ಸಾವಿರ ಖರ್ಚಾಗುತ್ತೆ. ಹೋದ ಸಾರಿ, ಎರಡು ವರುಷದ ಫಸಲನ್ನು ಎರಡು ಲಕ್ಷಕ್ಕೆ ಮಾರಾಟ ಮಾಡಿದ್ದೆ. ಈ ಬಾರಿ ಒಂದು ಲಕ್ಷ ಮೂವತ್ತೊಂದು ಸಾವಿರಕ್ಕೆ ನೀಡಿದೀನಿ. ಮಾವಿನಿಂದ ಆದಾಯವಿದೆ. ಮತ್ತೆ, ಸಂಕೇತಿಗಳ ಮುಖ್ಯ ಕೃಷಿ ಅಡಿಕೆ ಮಾಡಿದೀನಿ. ನಮ್ಮವರು ವಲಸೆ ಬಂದಾಗ ಅಡಿಕೆ ಸಸಿ ಹಿಡಿದೇ ಬಂದ್ರಂತೆ. ಹಿರಿಯರು ಹಾಗೆ ಹೇಳೋರು. ಚಿಲ್ಕುಂದಕ್ಕಿಂತ ಮುಂಚೆ ಪಿರಿಯಾಪಟ್ಟಣಕ್ಕೆ ಬಂದರಂತೆ. ಅಲ್ಲಿಂದ ಬೆಟ್ಟದಪುರ, ಹರವೆ, ಶಿವಮೊಗ್ಗಕ್ಕೆ ಹೋಗಿದಾರೆ. ಎಲ್ಲೂ ನಮ್ಮವರು ಬೆಟ್ಟಗುಡ್ಡದ ಜಮೀನನ್ನು ಅರಸಲಿಲ್ಲ. ಅಡಿಕೆಗೆ ಸೂಕ್ತವಾದ ಹಳ್ಳದ ಕಡೆ ಜಮೀನು ಮಾಡಿ, ನೆಲೆ ನಿಂತು ಬೇಸಾಯ ಮಾಡಿದ್ರು. ಅಡಿಕೇಲಿ ನನ್ನ ಅನುಭವ ಹೇಳೋದಾದ್ರೆ, ಎಕರೆಗೆ ೬೦ ಗಿಡವನ್ನು ಸಾಲಾಗಿ ನೆಡಬೇಕು. ಕಾಂಡ ಗಟ್ಟಿಯಾಗಿರುವ ಎರಡು ವರುಷದ ಮೂರು ಅಡಿ ಉದ್ದದ ಸಸಿಗಳನ್ನು ನೆಡಬೇಕು, ಆಗ ಗಿಡ ಪೂರ್ತಿ ನಿಲ್ಲುತ್ತೆ. ನಷ್ಟ ಆಗೋಲ್ಲ. ಡಿಸೆಂಬರ್, ಜನವರಿ ತಿಂಗಳಲ್ಲಿ ಹಣ್ಣಾದ ಗೋಟನ್ನು ತಾಯಿಮರದಿಂದ ಆರಿಸಬೇಕು. ಛಳೀಲಿ ಬಲಿಕೆ ಇರುತ್ತೆ, ಕಳಪೆ ಇರೋಲ್ಲ. ಗೋಟನ್ನು ಮೂರು ಅಡಿ ಅಗಲದ ಪಾತೀಲಿ ಒಂಭತ್ತು ಇಂಚಿಗೆ ನಾಟಿ ಹಾಕಬೇಕು. ಕೆರೆಗೋಡು ಮಣ್ಣು, ಕಪ್ಪುಮಣ್ಣು, ಹಟ್ಟಿಗೊಬ್ಬರ ಹೆಚ್ಚು ಹಾಕಬೇಕು. ಮಣ್ಣು ಅಂಟಿನ ತರಹ ಇರಬೇಕು. ಯಾಕೇಂದ್ರೆ ಮಣ್ಣು ಸಮೇತ ಗೆಪ್ಪೆ ಕೀಳಲು ಅನುಕೂಲವಾಗುತ್ತೆ. ಸಸಿಯನ್ನು ಕೀಳಲು ಅಡಿಕೆ ಮರದ ದಸಿ ಬಳಸಬೇಕು. ಹೆಪ್ಪು ಸಮೇತ (ಸುತ್ತಮುತ್ತಲಿನ ಮಣ್ಣು) ಕುಯ್ದು ತೆಗೀಬೇಕು. ಕಬ್ಬಿಣದ ದಸಿ ಬಳಸಿದ್ರೆ ಗಿಡ ನಂಜಾಗುತ್ತೆ. ಜಮೀನಿನಲ್ಲಿ ಮೊದಲೇ ಬೇಸಗೇಲಿ ಗುಂಡಿ ತೆಗೆದು ಇಟ್ಟಿರಬೇಕು. ಬೇಸಿಗೆ ಬಿಸಿಲಿಗೆ ಗುಂಡಿ ಕಾದು, ಕೀಟ ರೋಗಗಳು ಇರೋದಿಲ್ಲ. ಮುಂಗಾರಿನ ಮೊದಲಿನ ಒಂದೆರಡು ಮಳೆ ಬಿಟ್ಟು ಜಡಿ ಮಳೆಗೆ ಅಡಿಕೆ ನೆಡಬೇಕು. ಗಿಡ ನೆಡುವಾಗ ಹೆಪ್ಪನ್ನು ತುಳೀಬಾರದು. ಸುತ್ತಾಮಣ್ಣನ್ನು ತುಳೀಬೇಕು. ಆಗ ಸಸಿ ಆರೋಲ್ಲ. ಎಷ್ಟು ಬಿಗಿಯಾಗಿ ತುಳೀಬೇಕು ಅಂದ್ರೆ, ಮೇಲೆ ನೀರು ಹಾಕಿದ್ರೆ ಅದು ನಿಲ್ಲಬೇಕು, ಹಾಗೆ. ಗೊಬ್ಬರ ಹಾಕಬಾರದು. ಮೊದಲ ವರುಷ ಅಗೆತ ಮಾಡಬಾರದು. ಮಾರನೇ ವರುಷ ಹೊಸಬೇರು ಬಂದಿರುತ್ತೆ, ಆಗ ಅಗೆತ ಮಾಡಬಹುದು. "ಅಡಿಕೇನ ಆಳಕ್ಕೆ ನೆಡು, ತೆಂಗು ತೇಲಿಸಿ ನೆಡು ಅಂತಾರೆ". ಯಾಕೇಂದ್ರೆ ಅಡಿಕೆ ಉದ್ದ ಜಾಸ್ತಿ, ಚದುರ ಬೇರು, ಮೇಲೆ ನೆಟ್ರೆ ಗಾಳಿಗೆ ಉರುಳುತ್ತೆ, ಆಳಕ್ಕೆ ಹಾಕಿದ್ರೆ ಬೇರು ಮೇಲೆ ಬರೋದಿಲ್ಲ. ತೆಂಗು ಗೂಟಿ ಬೇರು, ನೀರಿರುವವರೆಗೆ ಬೇರು ಹೋಗುತ್ತೆ. ಅದನ್ನು ಮೇಲೆ ಹಾಕಿದ್ರೆ ತಪ್ಪಿಲ್ಲ. ತೆಂಗಿನ ಬೇಸಾಯಾನೂ ಶ್ರದ್ಧೆಯಿಂದ ಮಾಡಬೇಕು. ೪೦ ರಿಂದ ೪೫ ವರುಷವಾಗಿರುವ ತಾಯಿಮರದಲ್ಲಿ ಒಣಗಿರುವ, ನೀರಿರುವ ಬಿತ್ತನೆ ಕಾಯಿ ಆರಿಸಬೇಕು. ಹಿಂದಿನವರು ಬಚ್ಚಲಲ್ಲಿ ಬಿತ್ತನೆಕಾಯಿ ಇಟ್ಟು ಅದರ ಮೇಲೆ ಕೈ ತೊಳೆಯೋರು. ಸಿಪ್ಪೆ ಕೊಳೆತು, ಮೊಳಕೆ ಬರೋದು. ಅಥವಾ ತೆಂಗನ್ನು ಮರಳುಮಿಶ್ರ ಕೆಂಪುಮಣ್ಣಲ್ಲಿ ಪಾತಿ ಮಾಡಿ ನೆಡಬೇಕು. ಯಾಕೇಂದ್ರೆ ತೆಂಗಿನ ಸಿಪ್ಪೆ ದಪ್ಪ ಇರೋದ್ರಿಂದ, ಅದನ್ನು ಮರಳಲ್ಲಿ ಹೂತು ನೀರು ಕೊಡಬೇಕು. ಒಂದೂವರೆ ತಿಂಗಳಲ್ಲಿ ಮೊಳಕೆ ಬರುತ್ತೆ. ಒಂದು ವರುಷಕ್ಕೆ ಎರಡು ಎಲೆ ಆಗುತ್ತೆ. ಆಗ ಕಿತ್ತು ತೆಗೆದು ಎರಡೂವರೆ ಅಡಿಗೆ ಗುಂಡಿ ತೋಡಿ ನೆಡಬೇಕು. ಅಡಿಕೆ ದಸೀಲಿ ಕೀಳಬೇಕು. ತೆಂಗಲ್ಲಿ ಹೆಪ್ಪು ಬರೋಲ್ಲ, ಕಾಯಿಸಮೇತ ಬರುತ್ತೆ. ನೀರಿನ ಅಗತ್ಯ ಜಾಸ್ತಿ. ಒಂದು ವರುಷ ಕಳೆದ ಬಳಿಕ ಮುಖ್ಯ ಜಮೀನಿಗೆ ನಾಟಿ ಮಾಡಬಹುದು. ಇಪ್ಪತ್ನಾಲ್ಕು ಮಳಕ್ಕೆ ಒಂದರಂತೆ ಒಂದು ಎಕರೆಗೆ ೬೦ ಸಸಿ ನೆಡಬೇಕು. ಈ ತೆಂಗಿನತೋಟದ ನಡುವೆ ಸಾಲು ಅಡಿಕೆ ಹಾಕಬಹುದು. ಎಕರೆಗೆ ಒಂದು ನೂರು (೧೦೦) ಗಿಡ ಕೂರುತ್ತೆ. ತೆಂಗು, ಅಡಿಕೇಲಿ ಬಾಳೆ ಬೆಳೀಬಹುದು. ಬಾಳೆ ಚದುರಬೇಕು. ಒಂದೊಂದು ಅಂಗುಲಕ್ಕೆ ಒಂದೊಂದು ಬೇರು ಇರುತ್ತೆ. ಬಾಳೆಗೆ ಪ್ರತ್ಯೇಕವಾಗಿ ನೀರು ಕೊಡಬೇಕು. ತೋಟದಲ್ಲಿ ಶೈತ್ಯಾಂಶ ಇರಬೇಕು. ಇಲ್ಲದಿದ್ರೆ ಬಾಳೆ ಬರೋಲ್ಲ. ಸೂರ್ಯನ ಬೆಳಕು ಚೆನ್ನಾಗಿ ಬಾಳೆ ಬೆಳೆ ಮೇಲೆ ಬಿದ್ರೆ ರೋಗ ಇರೋಲ್ಲ. ಹಿಂದೆ ಯಾಲಕ್ಕಿ,


ತಮ್ಮ ತಾಯಿ ರುಕ್ಮಿಣಿಯಮ್ಮನವರ ಜತೆ ಉಯ್ಯಾಲೆಯಲ್ಲಿ ಕೂತ ಸಿ.ಎನ್.ರಾಮಣ್ಣನವರು: ಚಿಲ್ಕುಂದ

ಮರಬಾಳೆ, ಕರಿಬಾಳೆ, ರಸಬಾಳೆ ಬೆಳೆಯೋರು. ಈಗ ಪುಟ್ಟಬಾಳೆ, ಯಾಲಕ್ಕಿ ಬಾಳೆ ಜಾಸ್ತಿ. ಕೊಟ್ಟಿಗೆ ಗೊಬ್ಬರ, ಕೆರೆಗೋಡು ಕೊಟ್ರೆ ಖಾಯಿಲೆ ಇರಲ್ಲ. ರಾಸಾಯನಿಕ ಗೊಬ್ಬರ ಕೊಟ್ರೆ ರೋಗಜಾಸ್ತಿ. ಬಾಳೇನ ದೂರಕ್ಕೆ ನೆಡಬೇಕು. ಒತ್ತೊತ್ತಾಗಿ ನೆಟ್ಟಾಗಲೂ ರೋಗ ಬರುತ್ತೆ. ಈಗ ತೆಂಗಿಗೆ ನುಸಿ ಬಂದಿದೆ. ಮರಕ್ಕೆ ಕೊಬ್ಬು ಹೆಚ್ಚಾದಾಗ ನುಸಿ ಬರುತ್ತೆ. ಆಗ ವ್ಯವಸಾಯ ಕಡಿಮೆ ಮಾಡಿ, ನೀರನ್ನು ಸ್ವಲ್ಪ ಕೊಡಬೇಕು. ಮರ ರಸಭರಿತವಾದ್ರೆ ರೋಗ ಜಾಸ್ತಿ. ಮರಕ್ಕೆ ೨ ಕೇಜಿ ಬೇವಿನಹಿಂಡಿ, ಹಾಗೂ ೧ ಕೇಜಿ ಪೊಟ್ಯಾಷ್ ನೀಡಿದ್ರೆ ಹರಳು ಉದುರುವುದು ಕಡಿಮೆಯಾಗುತ್ತೆ. ತೆಂಗಿಗೆ ರಾಸಾಯನಿಕ ಗೊಬ್ಬರ ಕೊಡೋಲ್ಲ. ಕೆರೆಗೋಡು, ಹಟ್ಟಿಗೊಬ್ಬರ ಹಾಕ್ತೀವಿ. ಮನೇಲಿ ೧೫ ರಿಂದ ೨೦ ನಾಟಿ ಕ್ರಾಸ್ ರಾಸು ಇದೆ. ಎಲ್ಲಾ ಕಡೆ ಇವು ಮೇಯೋದರಿಂದ, ಖಾಯಿಲೆ ಬರೋದಿಲ್ಲ. ಹುಣಸೂರು ತಾಲ್ಲೂಕಿನಲ್ಲಿ ನಾನೇ ಮೊದಲ gobar gas ಮಾಡಿದ್ದು. ಹಿಂದೆ MS Sheet Drum ಇತ್ತು. ಬಳಕೆ ಆದ ಮೇಲೆ Drum ತೂತು ಬೀಳೋದು. ಹಾಗಾಗಿ, ಬಿಟ್ಟೆ. ಈಗ fibredrum ಬಂದಿದೆ. ಚೆನ್ನಾಗಿದೆ. ಆದರೆ ನಾನು petroleum gas ಬಳಸ್ತೀನಿ. ಮನೆಗೆ ಬೇಕಾದ ತರಕಾರೀನ ತೋಟದಲ್ಲಿ ಬೆಳೀತೀನಿ. ಬೀನ್ಸ್, ಬೆಂಡೆ, ಮೂಲಂಗಿ, ಸೊಪ್ಪು, ಬದನೆ, ಟೊಮ್ಯಾಟೋ ಬೆಳೀತೀನಿ. ಹಾಲು ಮಾರೋದಿಲ್ಲ. ಮೂರು ಜತೆ ಎತ್ತು ಇದೆ. ಒಂದು ಎತ್ತಿನ ಗಾಡಿ ಇದೆ. ಎಲೆ ಹಂಬನ್ನೂ ಬೆಳೆದಿದೀನಿ. ಹಂಬಿಗೆ ನೀರು ಗೊಬ್ಬರ ಸಾಕು. ಹಂಬು ೭೦ ವರುಷ ಇರುತ್ತೆ. ತಳಭಾಗದ ಎಲೆ ಕುಯ್ದಾಗ ಖಾಲಿ ಜಾಗ ಬಿಡುತ್ತೆ. ಆಗ ಅದನ್ನು ಗುಂಡಿಗೆ ಮತ್ತೆ ಇಳುಕುತ್ತೀವಿ. ಮತ್ತೆ ಬಳ್ಳಿ ಚಿಗುರು ಒಡೆಯುತ್ತೆ. ಗುಂಡಿ ಒಳಗೆ ಬಳ್ಳೀನ ತೆಕ್ಕೆ ಬಿಡ್ತೀವಿ. ತಾಯಿ ಗುಣಿ, ತೆಕ್ಕೆ ಗುಣಿ ಅಂತ ಇರುತ್ತೆ. ಮರದ ಆ ಮಗ್ಗುಲು, ಈ ಮಗ್ಗುಲಿನಲ್ಲಿ ತೆಕ್ಕೆ ಬಿಡ್ತೀವಿ. ಜಾಸ್ತಿ ನೀರು ಕೊಡ್ತೀವಿ. ಕೊಯಿಲು ಮಾಡುವಾಗ, ಕವಲುಗೊಯ್ಲು ಅಂತ, ಬಲಿತ ಎಲೆ ಕುಯ್ದು ಎಳೆ ಎಲೆ ಬಿಡ್ತೀವಿ. ಮುರುಗುಯ್ಲು ಅಂತ ಇದರಲ್ಲಿ ಎಲ್ಲ ಎಲೆ ಕುಯ್ತೀವಿ. ಆದರೆ ಎಲೆ ಹಂಬಿನ ಮೇಲಿನ ಎಲೆ ಕುಯ್ಯಬಾರದು. ಹಾಗೆ ಕುಯ್ದರೆ ಹಂಬು ಒಣಗುತ್ತೆ. ಹೊದಿಕೆ ಎಲೆ ಹಂಬಿಗೆ ರಕ್ಷಣೆ ನೀಡುತ್ತೆ. ಎಲೆ ಕುಯ್ಯುವಾಗ ಬರೀಉಗುರಿನಲ್ಲಿ ಕುಯ್ಯಬಾರದು, ಕಬ್ಬಿಣದ ಉಗುರು ಬಳಸಬೇಕು. ಒಂದು ಎಕರೇಲಿರೋ 600 ಅಡಿಕೆ ಗಿಡಕ್ಕೂ ಹಂಬು ಹಬ್ಬಿಸೋಕೆ ಆಗೋಲ್ಲ. ಎಲ್ಲ ಮರಕ್ಕೂ ಹಾಕಿದ್ರೆ ಒಂದರ ಪಕ್ಕ ಒಂದು ಆಗುತ್ತೆ. ಎಲೆಗೆ ಎಲೆ ಹೊಡೆಯುತ್ತೆ. ಏಣಿ ಸಾಗಿಸುವಾಗ ಕವಲು ಮುರಿಯುತ್ತೆ. ಹಾಗಾಗಿ ಒಂದು ಮರ ಬಿಟ್ಟು ಮತ್ತೊಂದು ಮರಕ್ಕೆ ಹಾಕ್ತೀವಿ. ಎಕರೆಗೆ ೨೫೦ ರಿಂದ ೩೦೦ ಹಂಬು ಹಾಕಬಹುದು. ಒಂದು ಹಂಬಿನಲ್ಲಿ ೨೫೦ ಕವಳಿಗೆ ಅಂದ್ರೆ ೫೦೦೦ ಎಲೆ ಬರುತ್ತೆ. ಅಡಿಕೆ ತೋಟದಲ್ಲಿ ನೀರು ನೀಡೋಕೆ ೫ ರಿಂದ ೧೦ ಗುಂಟೆ ಅಗಲದ ಬಾವಿ ಇತ್ತು. ಬೋರ್‌ವೆಲ್ ಬಂದ ಮೇಲೆ, ಬಾವೀನ ಮುಚ್ಚಿ ಅಲ್ಲಿ ಬೆಳೆ ಬೆಳೆದಿದೀನಿ. ೧೯೫೮, ೬೦ರಲ್ಲಿ ಬೀಡಿ ಹೊಗೆಸೊಪ್ಪು, ಹತ್ತಿ ಬೆಳೀತಾ ಇದ್ದೆ. ಆಗ ನೀರಾವರಿ ಇರಲಿಲ್ಲ. ಈಗ ಅಲ್ಲಿ ಮಾವು ಹಾಕಿದೀವಿ. ಈಗ ವ್ಯವಸಾಯದಲ್ಲಿ ರಾಸಾಯನಿಕ ಗೊಬ್ಬರ ಬಳಸಿ, ಮಣ್ಣಿನ ಫಲವತ್ತತೆ ಕ್ಷೀಣಿಸಿದೆ. ರೈತನ ಮಿತ್ರ ಎರೆಹುಳುಗಳು ಸಾಯುತ್ತಿವೆ. ಅದಕ್ಕೆ ನಾನು ಸಾವಯವ ಗೊಬ್ಬರವನ್ನು ಹೆಚ್ಚು ಬಳಸ್ತೀನಿ. ತಿಪ್ಪೆಗೆ ಗ್ಲಿರಿಸೀಡಿಯಾ ಎಲೆ, ಹೊಂಗೆ ಎಲೆ, ಹೊಗೆಸೊಪ್ಪಿನ ದಂಟು, ದೂಳು, ಎಲ್ಲ ಕರಗಿಸಿ, ಮಣ್ಣು ಹಾಕಿಸಿ, ಗೊಬ್ಬರ ಮಾಡ್ತೀನಿ. ತಿಪ್ಪೆಗುಂಡಿಗೆ ನೀರು ಹರಿದು ಬರಬೇಕು, ಹೊರಗೆ ಹೋಗಬಾರದು. ಆ ರೀತಿ ಹಟ್ಟಿ ಗೊಬ್ಬರ ತಯಾರಿಸಿ ಜಮೀನಿಗೆ ಹಾಕ್ತೀನಿ. ಹಿಂದೆ ೭೨ರಲ್ಲಿ ಭೀಕರ ಕ್ಷಾಮ ಬಂದಾಗ, ಕೆರೆಗಳಲ್ಲಿನ ಚಿಲುಮೆ ಬಾವಿಯಿಂದ ನೀರು ತರ್ತಿದ್ವಿ. ಈಗ ಕಳೆದೆರಡು ವರುಷದಿಂದ ಬರ ಬಂದು ವ್ಯವಸಾಯದ ಪ್ರೀತೀನೇ ಕಡಿಮೆ ಮಾಡಿದೆ. ಆದಾಯ ಬಂದಾಗ ವ್ಯವಸಾಯ ಸುಖ ಅನ್ನಿಸುತ್ತೆ, ಆದಾಯ ಇಲ್ಲದಾಗ ವ್ಯವಸಾಯ ಕಷ್ಟ ಅನ್ನಿಸುತ್ತೆ. ಸಾಕಷ್ಟು ಜಮೀನು ಇದ್ರೆ ಈಗಲೂ ವ್ಯವಸಾಯ ಸುಖ. ಆದ್ದರಿಂದ ನಾನು ವ್ಯವಸಾಯದ ಜತೆ Raw ಊದುಬತ್ತಿ ಮಾಡುವ ವ್ಯಾಪಾರ ಮಾಡ್ತಿದ್ದೇನೆ. ಕುಳ್ಳು ಮಾವಿನಚಕ್ಕೆ ಪುಡೀಜತೆ, ಇದ್ದಿಲಮಸಿ ಸೇರಿಸಿ, ಕಲಸಿ ಉಂಡೆ ಮಾಡಿ, ಬಿದಿರಕಡ್ಡಿ ಮೇಲೆ ಉಜ್ಜಬೇಕು. ನಂತರ ಒಣಗಿಸಿದ್ರೆ Raw ಊದುಬತ್ತಿ ತಯಾರು. ಇದಕ್ಕೆ perfume


ತಮ್ಮ ಊದುಬತ್ತಿ ತಯಾರಿಕಾ ಘಟಕದಲ್ಲಿ ಸಿ.ಎನ್.ರಾಮಣ್ಣ : ಚಿಲ್ಕುಂದ

ಹಾಕಿದ್ರೆ ಊದು ಬತ್ತಿ ತಯಾರು. ನಾನು Raw ಬತ್ತೀನ ವಾಸು ಅಗರಬತ್ತಿ, ಎನ್. ರಂಗರಾವ್ ಅಂಡ್ ಸನ್ಸ್ ಇವರಿಗೆ supply ಮಾಡ್ತೀನಿ. ಬಾಲಬತ್ತಿ, ಮಸಾಲೆಬತ್ತಿ, ೬.೮.೯.೧೨ ಇಂಚಿನ ಬತ್ತಿ, ದಪ್ಪ ಹಾಗೂ ಸಣ್ಣ ಬತ್ತಿ ಬರುತ್ತೆ. ದಪ್ಪಬತ್ತಿ export ಆಗುತ್ತೆ. ಖಾದಿ ಗ್ರಾಮೋದ್ಯೋಗ ಮಂಡಳಿ ಇದಕ್ಕೆ ಸಂಬಂಧಿಸಿದ ತರಬೇತಿ ನೀಡುತ್ತೆ. ಜಿಲ್ಲಾ ಕೈಗಾರಿಕಾ ಕೇಂದ್ರ, ಊದುಬತ್ತಿ ಉಜ್ಜುವ ಮಣೆ ಹಾಗೂ ಕಚ್ಚಾ ಪದಾರ್ಥ ನೀಡುತ್ತೆ. ನಾನು ನನ್ನ ಕಚ್ಚಾಬತ್ತಿ ಮಾಡುವ factoryಲಿ ನಮ್ಮ ಹಳ್ಳಿಯ ಹೆಣ್ಣು ಮಕ್ಕಳಿಗೆ ಕೆಲಸ ನೀಡಿದ್ದೀನಿ. ನನ್ನ ತಮ್ಮ ಒಬ್ಬ ಬೆಂಗಳೂರಿನಲ್ಲಿ Plastic Conversion Factory ಇಟ್ಟಿದಾನೆ. ಊದುಬತ್ತಿಗೆ ಬೇಕಾದ ಪ್ಲಾಸ್ಟಿಕ್ ಕವರ್, ಅದರ ಮೇಲಿನ ಮುದ್ರಣ ಎಲ್ಲಾ ಮಾಡ್ತಾನೆ. ಅವನ ಕೈಗಾರಿಕೆ ದೊಡ್ಡ ಮಟ್ಟದಲ್ಲಿ ನಡೀತಿದೆ. ನನ್ನ ಉದ್ಯಮದಲ್ಲೂ ನನಗೆ ಶೇಕಡಾ ೨೫ ಲಾಭ ಇದೆ. ನಾನೂ ಸಹ ೨೫ ರಿಂದ ೩೦ ವರುಷ ಪಂಚಾಯ್ತಿ ಸದಸ್ಯನಾಗಿದ್ದೆ. ಊರಿಗೆ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ ನನ್ನ ಕಾಲದಲ್ಲಿ ಅಭಿವೃದ್ಧಿಯಾಯ್ತು. ನಮ್ಮೂರಲ್ಲಿ ಎಲೆ ಹಚ್ಚೋರು, ದೊನ್ನೆ ಮಾರೋರು ಇದಾರೆ. ಹಿಂದೆ photo ಬರೀತಿದ್ರು, ಜನಿವಾರ ಮಾರೋರು, ಅಡಿಕೆ ಪಟ್ಟೇನ ಎಡೆದು ಮಾರೋರು. ನಮ್ಮೂರಲ್ಲಿ ಸಂಗೀತಾನೂ ಸಂಕೇತಿಗಳಲ್ಲಿ ಅಭಿವೃದ್ಧಿಯಾಗಿತ್ತು. ತೋಟದಲ್ಲಿ ವೇದ ಕಲಿತ ಹಾಗೆ ಸಂಗೀತಾನೂ ಕಲಿತರು. ಗುರುಗಳು ಶಿಷ್ಯರನ್ನು ಜತೇಲಿ ಒಯ್ದು, ತೋಟದಲ್ಲಿ ಕೆಲಸ ಮಾಡೋರು. ಸುಸ್ತಾದಾಗ, ಮನಸ್ಸನ್ನು ಬೇರೆಡೆ ತಿರುಗಿಸಲು ಸಂಗೀತಾಭ್ಯಾಸ ಮಾಡೋರು. ಮನಸ್ಸಿಗೆ ಶಾಂತೀನೂ ಸಿಗೋದು, ತೋಟದ ಕೆಲಸಾನೂ ಆಗೋದು. ಒಳ್ಳೆಯ ಶಾರೀರ ಇಲ್ಲದವರು ಪಿಟೀಲು, ವೀಣೆ, ಕೊಳಲು ಕಲಿಯೋರು. ನಮ್ಮೂರಲ್ಲಿ ರಾಜಾಶ್ರಯ ಪಡೆದ ಸಂಗೀತಗಾರರೂ ಇದ್ರು. ನನಗೆ ವ್ಯವಸಾಯದಲ್ಲಿ ತೃಪ್ತಿ ಇದೆ. ಅಣ್ಣತಮ್ಮಂದಿರು ಜಮೀನು ಹಂಚಿಕೊಂಡಿದ್ರೂ ಎಲ್ಲರ ಜಮೀನೂ ನಾನೇ ನೋಡ್ತಿದೀನಿ. ನಾನು ಮಾಡಿದ ಜಮೀನು ಅನ್ನುವ ಮಮಕಾರ ಇದೆ. ನಾನು ಇರುವವರೆಗೆ ವ್ಯವಸಾಯ ಮಾಡ್ತೀನಿ. ಮಕ್ಕಳ ಸಲುವಾಗಿ, ನಿರಂತರ ಆದಾಯದ ಸಲುವಾಗಿ compelx ಕಟ್ಟಬೇಕು ಅಂತಿದೀನಿ. ಯಾರಿಗೂ ಮೋಸ ಮಾಡಬಾರದು, ಸುಳ್ಳು ಹೇಳಬಾರದು ಅನ್ನುವುದು ನನ್ನ ತತ್ತ್ವ. ಮೋಸ ಮಾಡಿದ್ರೆ ಇವತ್ತು ಊರ್ಜಿತವಾಗಬಹುದು, ನಾಳೆ ನಮಗೆ ಕಷ್ಟ ಆಗೇ ಆಗುತ್ತೆ. ಹಾಗಾಗಿ ನನ್ನ ವ್ಯವಸಾಯದಲ್ಲೂ ಯಾರಿಗೂ ದ್ರೋಹ ಮಾಡಿಲ್ಲ. ಹಳ್ಳಿ ಜೀವನ ನನಗೆ ಇಷ್ಟ' ಅಂತ ಹೇಳಿ ಮಾತು ಮುಗಿಸಿದ್ರು ರಾಮಣ್ಣನವರು. ಅವರ ಮನೆಯ ಸುಗ್ರಾಸ ಭೋಜನ ನಮಗಾಗಿ ಕಾಯುತ್ತಿತ್ತು.

ಸಿ. ಎನ್. ಕೇಶವಮೂರ್ತಿ ಮತ್ತು
ಆ) ಸಿ.ಎನ್. ಗುರುನಾಥ್ ಇ/ಮ ಸಿ.ಕೆ. ನಾಗಪ್ಪಯ್ಯ

ಚಿಲ್ಕುಂದ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ದೂರವಾಣಿ: 082222-241083

ನನ್ನ ಆಸೆ, ನನ್ನ ಮಗನಿಗೆ ವಿದ್ಯಾಭ್ಯಾಸದ ಜತೆಜತೆಗೆ ವ್ಯವಸಾಯದ ಅನುಭವವೂ ಬಂದಿರಬೇಕು ಅನ್ನುವುದು. ನಾಳೆ ದಿನ ಕೆಲಸ ಸಿಗದೇ ಹೋದಾಗ, ವ್ಯವಸಾಯದಲ್ಲಿ ಪೂರ್ಣ ಮಾಹಿತಿ ಇದ್ರೆ ಅದರಲ್ಲಿ ಜೀವನ ಸಾಗಿಸಲು ಅನುಕೂಲವಾಗುತ್ತೆ ಅಂತ. ವ್ಯವಸಾಯದಲ್ಲಿ ಯುವಕರು ಪೂರ್ಣ ಪ್ರಾವೀಣ್ಯ ಪಡೆಯುವುದು ಒಳ್ಳೆಯದು.



ಚಿಲ್ಕುಂದದ ತಮ್ಮ ಮನೆಯಲ್ಲಿ

ಚಿಲ್ಕುಂದದ ಸಿ.ಕೆ. ನಾಗಪ್ಪಯ್ಯ ಹಾಗೂ ದೊಡ್ಡಮಗ್ಗೆಯ ಗೌರಮ್ಮ ದಂಪತಿಗಳಿಗೆ ಐದು ಜನ ಗಂಡುಮಕ್ಕಳು ಹಾಗೂ ನಾಲ್ಕು ಜನ ಹೆಣ್ಣುಮಕ್ಕಳು. ಇವರ ಮೂರನೆಯ ಮಗ ಸಿ.ಎನ್. ಗುರುನಾಥ್. ಚಿಲ್ಕುಂದದವರೇ ಆದ ಸಿ.ಎನ್. ಸುಬ್ರಹ್ಮಣ್ಯ



ಸಿ.ಎನ್.ಗುರುನಾಥ್: ಚಿಲ್ಕುಂದ

ಹಾಗೂ ಅಗ್ರಹಾರದ ಸುವರ್ಣಲಕ್ಷ್ಮಿ ದಂಪತಿಗಳ ಮಗಳು ಲಕ್ಷ್ಮಿ, ಗುರುನಾಥರ ಪತ್ನಿ. ಗುರುನಾಥ ಅವರಿಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗ. ಗುರುನಾಥ್ ಅವರ ಹಿರಿಯ ಅಣ್ಣ ಕೇಶವಮೂರ್ತಿ ಗ್ರಾಮದ Postmaster ವೃತ್ತಿಯ ಜತೆಗೆ ವ್ಯವಸಾಯವನ್ನೂ ಮಾಡುತ್ತಾ ಗುರುನಾಥ್ ಅವರ ಜತೆಯಲ್ಲಿ ಇದ್ದಾರೆ. ಅಣ್ಣತಮ್ಮಂದಿರು ವ್ಯವಸಾಯದಲ್ಲಿದ್ದಾರೆ. ನಿಜ ಅರ್ಥದಲ್ಲಿ ಗುರುನಾಥ್ ಅವರ ಕುಟುಂಬ ವ್ಯವಸಾಯ ಅವಲಂಬಿಸಿರುವ ಸಮೃದ್ಧ ಕುಟುಂಬ. ೨೫ ರಿಂದ ೩೦ ಎಕರೆ ಅಡಿಕೆ ತೋಟ, ೧೫ ಎಕರೆ ತೆಂಗು, ೧೫ ಎಕರೆ ಮಾವು, ನಾಲ್ಕರಿಂದ ಐದು ಎಕರೆ ತರಿ ಜಮೀನು ಹೊಂದಿ ನೆಮ್ಮದಿಯಾಗಿದ್ದಾರೆ. 'ಒಂದು ಕಾಲದಲ್ಲಿ ನಾವೂ ಬಡತನದಲ್ಲಿದ್ವಿ. ತಂದೆ ಕಾಲದಲ್ಲಿ ಒಂದೂವರೆ ಎಕರೆ ತೋಟ ಮಾತ್ರ ಇತ್ತು. ತಂದೆ ಸತ್ತಾಗ, ನಾನು ಮಳವಳ್ಳೀಲಿ ಹಾಕಿದ್ದ ಚೀಟಿ ತೆಗೆದು ಶ್ರಾದ್ಧ ಮಾಡಿದ್ದು. ಆದರೆ ನನ್ನ ಅಣ್ಣತಮ್ಮಂದಿರು ಶ್ರಮಜೀವಿಗಳು. ಬೆಳಗ್ಗೆ ಆರರಿಂದ ಸಂಜೆ ಒಂಭತ್ತರವರೆಗೆ ಗಾಣದೆತ್ತಿನಂತೆ ದುಡಿದರು. ನಮಗೆ ಸಹಾಯ ಮಾಡಿದ್ದು ಹೊಗೆಸೊಪ್ಪು. ಹೊಗೆಸೊಪ್ಪು ನಮಗೆ ಲಕ್ಷ್ಮಿ. ೧೯೭೫ರಲ್ಲಿ ನಾವು ಬೇಸಾಯ ಆರಂಭಿಸಿದಾಗ ಹೊಗೆಸೊಪ್ಪಿನ ಧಾರಣೆ ಕೇವಲ ಹನ್ನೊಂದರಿಂದ ಹನ್ನೊಂದೂಕಾಲು ರೂಪಾಯಿ ಪ್ರತಿ kgಗೆ. ಆದರೂ ಅದು ವಾಣಿಜ್ಯ ಬೆಳೆ. ಈ ಮಳೆ, ಈ ವಾತಾವರಣಕ್ಕೆ ಬಹಳ ಹೊಂದಿಕೊಳ್ಳುತ್ತಿತ್ತು. ಮೊದಲ ವರುಷವೇ ನಮಗೆ ೪೦ ರಿಂದ ೪೫ ಸಾವಿರ ಲಾಭ ಬಂತು. ಅದಕ್ಕಿಂತ ಮುಂಚೆ ರಾಗಿ, ಹುರುಳಿ ಬೆಳೆದಾಗ ೧೦ ಸಾವಿರ ನೋಡೋದೂ ಕಷ್ಟ ಆಗಿತ್ತು, ಆದರೆ ೭೫ರಲ್ಲಿ ಬಂದ ೪೦ ರಿಂದ ೪೫ ಸಾವಿರ ನಮಗೆ ಐದು ಲಕ್ಷ ರೂಪಾಯಿ ಆದಂತಾಯ್ತು. ಒಂದೇ ವರುಷದಲ್ಲಿ ಬ್ಯಾಂಕ್ ಸಾಲ ತೀರಿಹೋಯ್ತು. ಮುಂದೆ ಸಾಲ ತೆಗೆದುಕೊಳ್ಳುವ ಪ್ರಮೇಯ ಬರಲಿಲ್ಲ. ಮುಂದಿನ ಎರಡು ವರುಷದಲ್ಲಿ ಎರಡು ಲಕ್ಷ ರೂಪಾಯಿ ಆದಾಯವಾಗಿ ಸಂಗ್ರಹವಾಗಿತ್ತು. ರಾಮನಾಥಪುರ ಸಮೀಪದ ಅಗ್ರಹಾರದಲ್ಲಿ ಎರಡು ಎಕರೆ ತೋಟ, ಒಂದು ಎಕರೆ ಗದ್ದೆ ಹಾಗೂ ಮನೆಯನ್ನು ೫೦ ಸಾವಿರಕ್ಕೆ ಖರೀದಿ ಮಾಡಿ ಅಲ್ಲಿದ್ವಿ. ವರುಷದಿಂದ ವರುಷಕ್ಕೆ ಚಿಲ್ಕುಂದದಲ್ಲಿ ವೃದ್ಧಿಯಾಯಿತು. ಅಗ್ರಹಾರದ ಜಮೀನು ಮಾರಿ ಚಿಲ್ಕುಂದಕ್ಕೆ ಮತ್ತೆ ಬಂದ್ವಿ. ನಂತರ ಮೂರು ಎಕರೆ ತೋಟ ಸಿಕ್ತು. ಹೀಗೇ ವೃದ್ಧಿಯಾಗುತ್ತಾ ಹೋಗಿ ಹತ್ತು ವರುಷದಲ್ಲಿ ಇಪ್ಪತ್ತೈದು ಎಕರೆ ತೋಟವಾಯ್ತು' ಅಂತ ಗುರುನಾಥ್ ಅವರು ಹೇಳುವಾಗ, ಈಗಿನ ಅವರ ಸಾಧನೆಯ ಹಿಂದಿನ ಪರಿಶ್ರಮ ಎಂತಹವರಿಗೂ ಅರಿವಾಗುತ್ತದೆ. "ಸತತವಾದ ಪರಿಶ್ರಮ ನಮ್ಮನ್ನು ಮೇಲೆ ತಂತು" ಎನ್ನುವ ಅವರ ಮಾತು ವ್ಯವಸಾಯಕ್ಕೆ ವೇದವಾಕ್ಯವಾಗುತ್ತೆ. ಅಡಿಕೆ ಬಾಳೆ ತೋಟ ಏಳಿಸಲು ಇವರು 2500 ಟ್ರಾಕ್ಟರ್ ಲೋಡ್ ಮಣ್ಣನ್ನು ಹಾಕಿದ್ದಾರೆ. 'ಅಡಿಕೆ ಬಾಳೆ ವಿಳ್ಳೇದೆಲೆ ತೋಟ ಏಳಿಸಲು ಗುರುನಾಥರ ಕುಟುಂಬ ಚೀಲದಲ್ಲಿ ಹಣ ಹಾಕಿದ್ದಾರೆ' ಎಂದು ಇತರರು ಹೇಳುವಾಗ, ಗುರುನಾಥ್ ನಗುತ್ತಾರೆ. ತೋಟ ನೋಡಿದರೆ ಪರಿಶ್ರಮ ಅರಿವಾಗುತ್ತೆ.



ಸಿ.ಎನ್.ಗುರುನಾಥ್ ಅವರ ಸಂದರ್ಶನ: ಎನ್.ಕೇಶವಮೂರ್ತಿ: ಅಡಿಕೆ ದಾಸ್ತಾನಿನ ಹಿನ್ನೆಲೆ: ಚಿಲ್ಕುಂದ

ತಮ್ಮ ತೊಟ್ಟಿ ಮನೆಯ ವಿಶಾಲ ಅಂಗಳದಲ್ಲಿ ಉಯ್ಯಾಲೆಯ ಮೇಲೆ ಕುಳಿತು ವಿರಮಿಸುತ್ತಿದ್ದ ಗುರುನಾಥ್ ಅವರನ್ನು ನಾವು ಮಾತಿಗೆಳೆದಿದ್ದು ಮಧ್ಯಾಹ್ನದ ಸಮಯದಲ್ಲಿ. ತಮ್ಮ ಪೂರ್ವಿಕರ ಬಗ್ಗೆ ಹೆಮ್ಮೆಯಿಂದ ಮಾತನಾಡಿದ್ರು. 'ನಮ್ಮಜ್ಜ ಕೇಶವರಾಯ. ಅಜ್ಜಿ ತಿಮ್ಮಕ್ಕಮ್ಮ ಚಿಲ್ಕುಂದದವರು. ಅವರಿಗೆ ಐದು ಗಂಡು ಹಾಗೂ ಎರಡು ಹೆಣ್ಣು. ನನ್ನ ತಂದೆ ನಾಗಪ್ಪಯ್ಯ ಹಿರಿಯ ಮಗ. ಅಜ್ಜ ವ್ಯವಸಾಯ ಹಾಗೂ ವೇದಾಭ್ಯಾಸ ಎರಡನ್ನೂ ಮಾಡೋರಂತೆ. ನಮ್ಮಜ್ಜ ಮಕ್ಕಳ ಪುರೋಭಿವೃದ್ಧಿಗೆ "ಐದು ನೂರು ರೂಪಾಯಿ ಸಾಲ ಮಾಡಿದ್ರಂತೆ. ತೀರಿಸಲು ಆಗಿರಲಿಲ್ಲ. ಅವರು ಸತ್ತಾಗ ಸಾಲ ಕೊಟ್ಟವನು ಬಂದು ಐದು ನೂರು ರೂಪಾಯಿ ಸಾಲ ತೀರಿಸಿ ಹೆಣ ಎತ್ತಿ"



ಬೆಳೆಸಿದ ತೋಟ ತಂದ ನಗುಮೊಗ: ಸಿ.ಎನ್.ಗುರುನಾಥ್:ಚಿಲ್ಕುಂದ

ಅಂದನಂತೆ. ಅಷ್ಟು ಬಡತನ ನಮ್ಮಲ್ಲಿತ್ತು. ಆಗ ಬೇರೊಬ್ಬರು ಹಿರಿಯರು ಬಂದು "ಆ ಹಣಾನ ನಾನು ತೀರಿಸ್ತೀನಿ, ಹೆಣ ಎತ್ತಲು ಬಿಡು'" ಅಂದ್ರಂತೆ. ನಂತರವೇ ಅಜ್ಜನ ಸಂಸ್ಕಾರವಾದದ್ದು. ನನ್ನ ತಾಯಿ ತಂದೇನೂ ಶ್ರಮಜೀವಿಗಳು. ಅವರಿಗೆ ಮಕ್ಕಳು ವಿದ್ಯಾಭ್ಯಾಸ ಮಾಡಬೇಕು, ಪಟ್ಟಣದಲ್ಲಿರಬೇಕು, ಅಲ್ಲಿಯ ಜೀವನ ಸುಲಭ, ನೆಮ್ಮದಿ ಜಾಸ್ತಿ ಅನ್ನುವ ಆಸೆ ಇತ್ತು. "ನಾವು ಕಷ್ಟಪಟ್ಟಂತೆ ಅವರು ಕಷ್ಟಪಡಬಾರದು, ಹಳ್ಳಿ ಪರಿಸ್ಥಿತಿ ಕಷ್ಟ. ವ್ಯವಸಾಯ ಸುಲಭ ಅಲ್ಲ. ಮಳೆ ಮೇಲೆ ಅವಲಂಬನೆ, ಕೂಲಿಗೆ ಹಣ ಕೊಟ್ಟು ಮಾಡಿಸಿದ್ರೆ ನಮಗೆ ಏನೂ ಉಳಿಯೋಲ್ಲ. ಸ್ವತಃ ಎಲ್ಲವನ್ನೂ ಮಾಡಿ ಉಳಿಸಲು ಆಗೋಲ್ಲ. ಜೀವನಕ್ಕೆ ಸಾಕಾಗೋಲ್ಲ. ಮಕ್ಕಳು ನೌಕರಿ ಮಾಡಿದ್ರೆ ನೆಮ್ಮದಿ, ಸುಖ ಅನ್ನೋರು." ವಿದ್ಯಾಭ್ಯಾಸದಿಂದ ಲೋಕಜ್ಞಾನ ಬರುತ್ತೆ ಅಂತಿದ್ರು. ತೋಟದ ಪ್ರತಿಯೊಂದು ಕೆಲಸವನ್ನೂ ಅವರೇ ಮಾಡೋರು. ಕೂಲಿ ಕೊಡ್ತಿರಲಿಲ್ಲ. ಮಕ್ಕಳು ಜಾಸ್ತಿ, ಆದಾಯ ಕಡಿಮೆ. ಪ್ರತಿನಿತ್ಯದ ಜೀವನ ಕಷ್ಟ. ಸ್ವತಃ ನೇಗಿಲು ಹಿಡಿದು ಉಳೋರು. ಅಡಿಕೆ ಸುಲಿದು ಮಾರಾಟ ಮಾಡೋರು. ಸಂತೆಯಲ್ಲಿ ತೋಟದ ಉತ್ಪನ್ನ ಮಾರಿ, ವಾರಕ್ಕೆ ಬೇಕಾದ ಸಾಮಾನು ತರಬೇಕಿತ್ತು. ತಂದೆ ಉಪಕಸುಬು ಮಾಡ್ತಿರಲಿಲ್ಲ. ಮನೆಗೆ ಬೇಕಾದ ಹಗ್ಗವನ್ನು ತೆಂಗಿನ ನಾರಿನಿಂದ ಹೊಸೀತಿದ್ರು. ಒಂದು ರೂಪಾಯಿ ಕೊಟ್ಟು ಹಗ್ಗ ತಂದವರಲ್ಲ. ನಾನು ಹುಣಸೂರಿನಲ್ಲಿ B.Com ಮಾಡಿದೆ. ನೌಕರಿಗೆ ಹೋಗುವ ಮನಸ್ಸಿತ್ತು. ಕೆಲಸ ಸಿಗಲಿಲ್ಲ. ವಿದ್ಯಾಭ್ಯಾಸದ ಜತೆಗೆ ವ್ಯವಸಾಯಾನೂ ತಂದೆ ಜತೆ ಮಾಡುತ್ತಿದ್ದೆ. ತಂದೆಯವರ ಅಪೇಕ್ಷೆಯಂತೆ ಬೆಂಗಳೂರಿನ Shaw wallace ಕಂಪನೀಲಿ ಐದು ವರುಷ ಕೆಲಸ ಮಾಡಿದೆ. ನನಗೆ ಮನೆ attachment ಜಾಸ್ತಿ. ವಾರಕ್ಕೊಂದು ಸಾರಿ ಮನೆಗೆ ಬರಬೇಕು, ತೋಟ ನೋಡಬೇಕು ಅನ್ನುವ ಆಸೆ. ಅಷ್ಟರಲ್ಲಿ ಕಂಪನಿಯವರು ವಿಜಯವಾಡಕ್ಕೆ ವರ್ಗ ಮಾಡಿದ್ರು. ಊರಿಗೆ ಬರ್ತೀನಿ ಅಂದೆ. ತಂದೆ ಬೇಡ ಅಂದ್ರು. ಕಡೆಗೆ ಮಳವಳ್ಳೀಲಿ bakery ಶುರುಮಾಡಿದೆ. ತಂದೇನ ಹಣ ಕೇಳಲಿಲ್ಲ. ನನ್ನ cousin brother, BHEL ನಲ್ಲಿ ಕೇಶವಮೂರ್ತಿ ಅಂತ ಇದಾರೆ. "ನೀನು ನನ್ನ



ಸಂಜೆಯ ಹೊತ್ತಿಗೆ ತೋಟದಿಂದ ಮನೆಗೆ ಹೊರಟ ಸಿ.ಎನ್.ಗುರುನಾಥ್: ಚಿಲ್ಕುಂದ



ತಮ್ಮ ಮಾವಿನ ತೋಟದಲ್ಲಿ ಸಿ.ಎನ್.ಗುರುನಾಥ್: ಚಿಲ್ಕುಂದ

ತಮ್ಮನ ಹಾಗೆ" ಅಂತ KSFCನಲ್ಲಿ ಅವರ salary certificate ನೀಡಿ ನನಗೆ ಒಂದೂವರೆ ಲಕ್ಷ ರೂಪಾಯಿ ಸಾಲ ಕೊಡಿಸಿದ್ರು. ತಂದೆ ಅದಕ್ಕೂ oppose ಮಾಡಿದ್ರು. ಕುಳಿತು ನೀನು ಅನ್ನ ಮಾರಬೇಡ, ನೌಕರಿ ಮಾಡು ಅಂದ್ರು. ನಾನು ಬೇಕರಿ ಮಾಡಿದ್ದಕ್ಕೆ ತಂದೆಗೆ ಅಸಮಾಧಾನ ಇತ್ತು. ಬೇಕರಿ ಚೆನ್ನಾಗಿ ನಡೀತಿತ್ತು. ಅದನ್ನು ಆರಂಭಿಸಿದ ಆರು ತಿಂಗಳಲ್ಲಿ ತಂದೆ ತೀರಿಕೊಂಡ್ರು. ಮನೆಯ ಪರಿಸ್ಥಿತಿ ನಿಭಾಯಿಸಲು ಬೇಕರಿ ಬಿಟ್ಟು ಊರಿಗೆ ಬಂದೆ. ತಂಬಾಕು ನಮ್ಮ ಕೈ ಹಿಡೀತು. ಈ ಮಧ್ಯೆ ಸ್ವಲ್ಪ ದಿನ ರೇಷ್ಮೆ ಮಾಡಿದೆ. ಆದರೆ ಒಂದು ತಿಂಗಳು ಅದನ್ನು ಪ್ರೀತಿಯಿಂದ ಸಾಕಿ ನಂತರ ಬಿಸಿ ನೀರಿಗೆ ಹಾಕಿ ಕೋಶವನ್ನು ಸಾಯಿಸ್ತಾರೆ ಅಂತ ಬೇಸರವಾಗಿ ಕೈಬಿಟ್ಟೆ. ಇಲ್ಲಿ ೧೫, ೨೦ ಕಿಲೋಮೀಟರ್ ಫಾಸಲೇಲಿ ಅಡಿಕೆ ಏಳಿಸಿರೋದು ಸಂಕೇತಿಗಳೇ. ಅಡಿಕೆ ಬೇಸಾಯದಲ್ಲಿ ಅವರು ಪರಿಣತರು. ಹತ್ತಿರದ ಕಲ್ಕೆರೇಲಿ ಹಾರುವಯ್ಯನ ಹಟ್ಟಿ ಅಂತ ಇದೆ. ನಮ್ಮೋರು ಹಿಂದೆ ಅಲ್ಲಿದ್ರಂತೆ. ಸುತ್ತಮುತ್ತಲ ಹಬ್ಬನಕುಪ್ಪೆ, ಜವನೇಕುಪ್ಪೆ, ಕಣಗಾಲು, ಬೇಲಾಳು, ಹಳೇಕೋಟೆಯಲ್ಲಿ ಶಾಸ್ತ್ರೋಕ್ತವಾಗಿ ಶಾಶ್ವತವಾದ ತೋಟವನ್ನು ಮಾಡಿ ಅಲ್ಲೇ ಸಂಕೇತಿಗಳು ವಾಸವಾಗಿದ್ರು. ನಂತರ ಚಿಲ್ಕುಂದಕ್ಕೆ ಬಂದಿದ್ದು. ಅಡಿಕೆ ಸಿಪ್ಪೆ ಕೊಳೆತು, ಬೀಜದ ಕಣ್ಣುಹುಟ್ಟಲು ಎರಡು ತಿಂಗಳು ಬೇಕು. ನಂತರ ಒಂದೂವರೆ ಅಡಿಗೆ ಮೊಳಕೆ ಕೂರಿಸಿ, ಸಸಿ ಬೆಳೆಸಿ, ಒಂದೂವರೆ ವರುಷದ ನಂತರ ನಾಟಿ ಮಾಡಬೇಕು. ಹಳ್ಳದ ಜಮೀನು, ಶೈತ್ಯಾಂಶ ಇಟ್ಟುಕೊಳ್ಳುವ ಜಮೀನು ಅಡಿಕೆಗೆ ಸೂಕ್ತ. ಹನಿ ನೀರಾವರಿ ಬಂದಿದೆ ಅಂತ ದಿಣ್ಣೇಲಿ ಅಡಿಕೆ ಹಾಕ್ತಾರೆ. ಅದು ಸರಿಯಲ್ಲ. ಒಂಭತ್ತು ಅಡಿ ಸಾಲಿನಿಂದ ಸಾಲು, ಒಂಭತ್ತು ಅಡಿ ಗಿಡದಿಂದ ಗಿಡಕ್ಕೆ ಕೊಟ್ಟು ನಾಟಿ ಮಾಡಬೇಕು. ಆಗ ಅಡಿಕೆಯ ಗುಣಮಟ್ಟ, ಗಾತ್ರ ಚೆನ್ನಾಗಿರುತ್ತೆ. ಉತ್ತಮ ಇಳುವರಿ ದೊರೆಯುತ್ತೆ. ಜಮೀನಿನಲ್ಲಿ ತೇವ ಹೆಚ್ಚಾದಾಗ ಪಿಳ್ಳೆ ತೆಗೆಯೋದ್ರಿಂದ ಗಾಳಿಯಾಡುತ್ತೆ. ಬೇರು ಜೋರಾಗುತ್ತೆ. ಇಳುವರಿ ಉತ್ತಮವಾಗುತ್ತೆ. ಇದು ಅವತ್ತು, ಇವತ್ತು, ನಾಳೆಗೂ ಸರಿ. ಹಿಂದೆ ನಮ್ಮವರೇ ಅಡಿಕೆ ಮರ ಹತ್ತಿ ಅಡಿಕೆ ಕೆಡವೋರಂತೆ. ಈಗ ಅಡಿಕೆ ಕೆಡವೋರು ಇಲ್ಲ' ಎಂದು ಹೇಳಿದ್ರು ಗುರುನಾಥ್.

ಇವರ ಮದುವೆಯಾದದ್ದು 1987ರಲ್ಲಿ. ಒಂದೇ ಊರಿನ ಹುಡುಗಿ. 'ಅವಳನ್ನೇ ಮದುವೆಯಾಗ ಬೇಕೂಂತ ಇದ್ದೆ. ನಮ್ಮದು love cum arranged marriage' ಅಂದ್ರು. ಇವತ್ತಿನ ದಿನದಲ್ಲಿ ಹಳ್ಳಿಯಲ್ಲಿ ವ್ಯವಸಾಯ ಮಾಡುತ್ತಿರುವ ಸಂಕೇತಿ ಯುವಕರಿಗೆ ಹೆಣ್ಣು ಸಿಗುವುದು ಕಷ್ಟ ಆಗಿದೆಯಲ್ಲಾ ಎಂಬ ಮಾತಿಗೆ ಗುರುನಾಥ್, ಗಮನ ಸೆಳೆಯುವ ಉತ್ತರ ನೀಡಿದ್ರು. 'ಹಳ್ಳಿಗೆ ಹೆಣ್ಣು ಕೊಡಲು ಆ ಊರಲ್ಲಿ ಏನಿದೆ, ಏನಿಲ್ಲ ಅನ್ನೋದನ್ನು ನೋಡುವುದು ಯಾಕೆ? ಹೆಂಡತಿಯ ಕನಿಷ್ಠ ಅಗತ್ಯಗಳನ್ನು ಪೂರೈಸುವ ಶಕ್ತಿ ಹುಡುಗನಿಗೆ ಇದ್ದಾಗ ಅವನು ಹಳ್ಳೀಲಿದ್ರೂ, ಪಟ್ಟಣದಲ್ಲಿದ್ರೂ ಎಲ್ಲಾ ಒಂದೆ. ಇದನ್ನು ಜನ ಆಲೋಚಿಸಬೇಕು' ಅಂದ್ರು. ಸತ್ಯವಾದ ವಿಚಾರ ಅನ್ನಿಸಿತು.



ಸಿ.ಎನ್.ಗುರುನಾಥ್ ಅವರ ಅತ್ತಿಗೆ ಶಶಿಕಲಾ-ಕೇಶವಮೂರ್ತಿ-ಚಿಲ್ಕುಂದ




ಶಶಿಕಲಾ-ಕೇಶವಮೂರ್ತಿ; ಲಕ್ಷ್ಮಿ-ಸಿ.ಎನ್.ಗುರುನಾಥ್ : ಚಿಲ್ಕುಂದ

ಮುಂದುವರೆದು ಹೇಳಿದ್ರು ಗುರುನಾಥ್ 'ನಾನು ಚೆನ್ನಾಗಿದೀನಿ ಅಂದ್ರೆ ಚೆನ್ನಾಗಿದೀನಿ. ಇಲ್ಲಾಂದ್ರೆ ಇಲ್ಲ. ನಮ್ಮ ಮನೆಯ ಹೆಣ್ಣುಮಕ್ಕಳನ್ನು ವ್ಯವಸಾಯಸ್ಥರಿಗೇ ಕೊಟ್ಟಿದೀವಿ. ಅಲ್ಲಿ ಬದುಕು ಸುಲಭ. ಹೆಣ್ಣು ಕೊಡುವಾಗ ದೊಡ್ಡ ಮನೆಗೆ ಕೊಡು, ತರುವಾಗ ಬಡವರ ಮನೆಯಿಂದ ತಾ ಅಂತ ಹಿರಿಯರು ಹೇಳೋರು. ನಮಗೂ ಜಮೀನು ಹಿಂದೆ ಇರಲಿಲ್ಲ. ಅಣ್ಣತಮ್ಮಂದಿರು ಹಂಚಿಕೊಂಡಿದ್ರೆ ಜಮೀನು ಸಾಲುತ್ತಿರಲಿಲ್ಲ. ಆದರೆ ಹೆಂಡತೀನ ಸಾಕುವ ಸಾಮರ್ಥ್ಯ ಇತ್ತು' ಅಂದ್ರು. 'ನಿಮ್ಮ ತತ್ತ್ವ ಆದರ್ಶಗಳೇನು?' ಅಂದಾಗ 'ಬೇರೆಯವರಿಗೆ ಅನುಕೂಲ ಮಾಡಬೇಕು. ದುಷ್ಟರ ಸಹವಾಸ ಮಾಡಬಾರದು. ಕೆಟ್ಟ ಯೋಚನೆ ಮಾಡಬಾರದು. ಊರಿಂದ ನನಗೇನಾಯ್ತು ಅನ್ನುವುದಕ್ಕಿಂತ, ನನ್ನಿಂದ ಊರಿಗೇನಾಗಿದೆ ಅಂತ ಆಲೋಚಿಸ್ತೀನಿ. ಇತರರಿಗೆ ಆರ್ಥಿಕ ನೆರವು ನೀಡಿದೀನಿ. ಕಷ್ಟದಲ್ಲಿ ನೆರವಾಗಿದೀನಿ. ವ್ಯವಸಾಯದಲ್ಲಿ ತೃಪ್ತಿ ಇದೆ. ನಾಲ್ಕು ಜನ ನೆಮ್ಮದಿಯಾಗಿರುವಷ್ಟು ಆಸ್ತಿ ನಮ್ಮಲ್ಲಿದೆ' ಎಂದು ತೃಪ್ತಿಯಿಂದ ನುಡಿದರು. ಗುರುನಾಥ್ ಅವರ ಸಂದರ್ಶನ ಮುಗಿಯುವಷ್ಟರಲ್ಲಿ ಪಡುವಣದಲ್ಲಿ ಸೂರ್ಯ ಇಳಿಯುತ್ತಿದ್ದ.

೩) ಸಿ.ಕೆ. ಗುರುಮೂರ್ತಿ ೩/ಮ ಸಿ.ಕೆ. ಚನ್ನಕೇಶವಯ್ಯ

ಚಿಲ್ಕುಂದ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ : 08222-241087



ಸಿ.ಕೆ.ಗುರುಮೂರ್ತಿ: ತಮ್ಮ ರಾಸಿನೊಂದಿಗೆ, ಮನೆಯ ಹಿಂಭಾಗದಲ್ಲಿ:ಚಿಲ್ಕುಂದ

ನಾನೊಂದು HF ಹಸು ಸಾಕಿದ್ದೆ. ದಿನಕ್ಕೆ 22 ಲೀಟರ್ ಹಾಲನ್ನು ಕೊಡೋದು. ಅಡಿಕೆ ತೋಟಕ್ಕೆ ಎಟ್ಟೆ ಬಂದಾಗ ನಮ್ಮ ಕುಟುಂಬಾನ ಎರಡು ವರುಷ ಅದು ಕಾಪಾಡ್ತು. ಅವತ್ತಿನಿಂದ ಹಸುಗಳ ಮೇಲೆ ಬಹಳ ಪ್ರೀತಿ ನನಗೆ. ಯಾವಾಗಲೂ ಲಕ್ಷಣವಾದ ಹಸುಗಳನ್ನೇ ಕಟ್ತೀನಿ. ಈಗ ನಮ್ಮ ಮನೇಲಿರುವ ಹಸುವಿಗೆ ಮಕ್ಕಳು 'ಸುಂದರಾಂಗಿ' ಅಂತಾರೆ. ಸುಂದರಾಂಗಿ ಈ ಮನೆಗೆ ಬಂದ ಮೇಲೆ ಅಣ್ಣತಮ್ಮಂದಿರಲ್ಲಿದ್ದ ವೈಮನಸ್ಸು ದೂರಾಗಿದೆ.

ಚಿಲ್ಕುಂದದ ಸಿ.ಕೆ. ಚನ್ನಕೇಶವಯ್ಯ ಹಾಗೂ ಕುಪ್ಪಹಳ್ಳಿಯ ಶ್ರೀಲಕ್ಷ್ಮಿ ಅವರಿಗೆ ಆರು ಜನ ಗಂಡು ಹಾಗೂ ನಾಲ್ಕು ಹೆಣ್ಣು ಮಕ್ಕಳು. ಚನ್ನಕೇಶವಯ್ಯನವರನ್ನು ಊರವರು ಪ್ರೀತಿಯಿಂದ



ಸಿ.ಕೆ.ಗುರುಮೂರ್ತಿ ಅವರ ಕುಟುಂಬಕ್ಕೆ ಆತ್ಮೀಯ ಸಹವಾಸ ಅವರ ಗೋಲೋಕ: ಚಿಲ್ಕುಂದ

ಕರೆಯುತ್ತಿದ್ದುದು 'ಶಾಮು ಮಾವಯ್ಯ' ಅಂತ. ಇವರ ಹತ್ತು ಮಕ್ಕಳಲ್ಲಿ ಒಂಭತ್ತನೆಯವರು ಗುರುಮೂರ್ತಿ. ಅವರು ಹೇಳುತ್ತಾರೆ 'ನನ್ನ ತಂದೆ ಓದಿದ್ದು ಮೂರನೇ ಕ್ಲಾಸ್ ಮಾತ್ರ. ನಾಗಪ್ಪಶಾಸ್ತ್ರಿಗಳ ಬಳಿ ಸಂಸ್ಕೃತ ಕಲಿತಿದ್ದು. ವೇದಾಭ್ಯಾಸವೂ ಇತ್ತು. ಬಹಳ ಪ್ರಾಮಾಣಿಕರು. ಜನರ ಬಲವಂತದ ಮೇರೆಗೆ ಹತ್ತು ವರುಷಗಳ ಕಾಲ ಪಂಚಾಯ್ತಿಯ Chairman ಆಗಿದ್ರು. ಅವರು ಯಾರಿಗೂ ಅನ್ಯಾಯಮಾಡಿಲ್ಲ. ಸ್ವಂತದ ೧೦೦ ಅಡಿ ಉದ್ದ ೩೦ ಅಡಿ ಅಗಲದ ಜಾಗವನ್ನು ಪಂಚಾಯ್ತಿ ಕಟ್ಟಡಕ್ಕೆ ಬಿಟ್ಟುಕೊಟ್ಟರು. ಎಲ್ಲರಿಗಿಂತ ಹೆಚ್ಚು ದಾನ ನೀಡಬೇಕು ಅನ್ನುವ ಆಸೆ ಅವರದ್ದು. ಅವರ ಕಾಲದಲ್ಲಿ ಕಳ್ಳತನ ಇರಲಿಲ್ಲ. ಅಕಸ್ಮಾತ್ ಯಾರಾದ್ರೂ ಕಳ್ಳತನ ಮಾಡಿದ್ರೆ, ಅವರನ್ನು ಪಂಚಾಯ್ತಿ ಹಾಲ್‌ನಲ್ಲಿ ಕೂಡಿಹಾಕಿ ಬುದ್ಧಿವಾದ ಹೇಳೋರು. ಬಹಳ ಬಿಗಿಯಾದ ಆಡಳಿತ ಅವರದ್ದು. ಅವರ ಕಾಲದಲ್ಲಿ ಊರಿಗೆ ಕರೆಂಟ್ ಬಂತು. ರಾಜಕೀಯದ ಜತೆ ವ್ಯವಸಾಯಾನೂ ಮಾಡೋರು. ನಾಲ್ಕು ಎಕರೆ ತೋಟದಲ್ಲಿ ಅಡಿಕೆ, ತೆಂಗು, ಬಾಳೆ, ವೀಳ್ಯೇದೆಲೆ ಹಾಕಿದ್ರು. ೨೨ ಎಕರೆ ಹೊಲ ಇತ್ತು. ರಾಗಿ ಜೋಳ ಬೆಳೆಯೋರು. ೭೬ರಲ್ಲಿ ಹೊಗೆ ಗಿಡಾನೂ ಹಾಕಿದ್ರು. ಆಳುಗಳ ಜತೆ ಅವರೂ ಕೆಲಸ ಮಾಡೋರು. ನಾನು ಚಿಕ್ಕವನಿದ್ದಾಗ ಅವರ ಜತೇಲಿ, ಅವರ ಎಲೆಅಡಿಕೆ ಚೀಲ ಹಿಡಿದು ಹೋಗುತ್ತಿದ್ದೆ. ಅವರ ಜತೇಲಿರೋದು ನನಗೆ ಬಹಳ ಖುಷಿ. ಅವರ ಆಡಳಿತ ನನ್ನಮನಸ್ಸನ್ನು ತಟ್ಟಿತ್ತು. ಒಂದು ತರಹ ಎಲ್ಲರನ್ನೂ ನಿಯಂತ್ರಣದಲ್ಲಿ ಇಡುವ ಸ್ವಭಾವ. ಇಪ್ಪತ್ತು ಜನ ಆಳುಗಳನ್ನು ಒಬ್ಬರೇ maintain ಮಾಡೋರು. ಇವತ್ತಿಗೂ ಈ ಊರಲ್ಲಿ 'ಶಾಮುಮಾವಯ್ಯ'ನ ಹೆಸರು ಹೇಳಿ ವ್ಯವಸಾಯ ಮಾಡಬೇಕು ಅಂತಾರೆ ರೈತರು. ದೇವರಾಜ ಅರಸೂ ಜತೆ ಸ್ನೇಹ ಇತ್ತು. ಚುಂಚನಕಟ್ಟೆ ಜಾತ್ರೇಲಿ ನಮ್ಮ ತಂದೆ ಆಯ್ಕೆ ಮಾಡಿದ ಹೋರಿಕರುಗಳಿಗೆ, ದೇವರಾಜ ಅರಸು ಬಂದು ರೇಷ್ಮೆ ಹಾಗೂ ಚಿನ್ನದ ಹೊದಿಕೆ ಇದ್ದ ಗೌನ್ ನೀಡಿದ್ರು. ಅವರ ಬಳಿ ನಾಲ್ಕು ಜತೆ ಎತ್ತು, ಇಪ್ಪತ್ತು ದನ, ಹತ್ತು ಎಮ್ಮೆ ಇತ್ತು. ಎರಡು ಗಾಡಿ ಇತ್ತು. ನಾನು ೧೨, ೧೩ರ ಹುಡುಗ ಆಗಿದ್ದಾಗ ತಂದೆಯವರ ಜತೆ ರಾಮನಾಥಪುರದ ಜಾತ್ರೆಗೆ ಹೋಗ್ತಿದ್ದೆ. ವಾರಗಳ ಕಾಲ ಗಾಡಿ ಕೆಳಗೆ ಮಲಗ್ತಾ ಇದ್ವಿ. ಅಲ್ಲೇ ಅಡುಗೆ ಮಾಡ್ತಿದ್ವಿ. ಜಾತ್ರೆ ಖುಷಿ ನೀಡ್ತಿತ್ತು. ಎತ್ತುಗಳನ್ನು ಮಾರಿ, ಎತ್ತುಗಳನ್ನು ತರ್‍ತಿದ್ವಿ. ತಂದೆ ಜತೆ ಇದ್ದಿದ್ರಿಂದ ನನ್ನ will power ಜಾಸ್ತಿ ಆಯಿತು. ಅವರ ಅನುಭವದಿಂದಲೇ ನಾನೂ ಹಸು ಸಾಕಿದ್ದು,' ಅಂತಾರೆ ಗುರುಮೂರ್ತಿ.



ಬಿ.ಎಸ್.ಸುಬ್ಬಲಕ್ಷ್ಮಿ-ಸಿ.ಕೆ.ಗುರುಮೂರ್ತಿ ಮಕ್ಕಳೊಂದಿಗೆ: ಚಿಲ್ಕುಂದ

ಗುರುಮೂರ್ತಿಯವರ ಪತ್ನಿ ಬಿ.ಎಸ್. ಸುಬ್ಬಲಕ್ಷ್ಮಿ ಬಸವಾಪಟ್ಟಣದ ಬಿ.ಆರ್. ಸುಬ್ರಹ್ಮಣ್ಯ ಹಾಗೂ ನಾಗವೇಣಿ ದಂಪತಿಗಳ ಮಗಳು. ಗುರುಮೂರ್ತಿಯವರಿಗೆ ಎರಡು ಹೆಣ್ಣು ಹಾಗೂ ಒಬ್ಬ ಗಂಡುಮಗ. ಹಿರಿಯರ ಸಾಧನೆಗಳ ಬಗ್ಗೆ ಹೇಳಲು ಗುರುಮೂರ್ತಿಗಳಿಗೆ ಬಹಳ ಅಕ್ಕರೆ.



ಮುಸ್ಸಂಜೆಯಲ್ಲಿ ತಮ್ಮ ತೋಟದಲ್ಲಿ ಮೇವಿನ ಬೆಳೆಯ ಹಿಂದೆ ಸಿ.ಕೆ.ಗುರುಮೂರ್ತಿ: ಚಿಲ್ಕುಂದ

'ಹಿಂದಿನವರು ದೇಹದಾರ್ಢ್ಯತೆ ಚೆನ್ನಾಗಿರಲಿ, ಆರೋಗ್ಯ ಇರಲಿ ಅಂತ ಕೆಲಸ ಮಾಡೋರು. ನನ್ನ ಮನೇಲಿ ೧೬ ಜನ ಇದ್ವಿ. ನಮ್ಮ ಅಜ್ಜಿ ಅವರ ೮೮ನೇ ವಯಸ್ಸಿನಲ್ಲೂ ಅಡುಗೆ ಮಾಡೋರು. ಸಾರು ಮಾಡುವ ಬಳಪದ ಕಲ್ಲಿನ ಪಾತ್ರೆ ಅದೇ ೧೫ ಕೇಜಿ ತೂಕ ಇತ್ತು. ಸಾರು ತುಂಬಿದ ಪಾತ್ರೆಯನ್ನು ಅವರೇ ಎತ್ತಿ ಇಳಕೋರು. ಅವರು ತಮ್ಮ ಚಿಕ್ಕವಯಸ್ಸಿನಲ್ಲಿ, ಹೊರಗಾದಾಗ, ಒಂದು ತಿಂಗಳಿಗೆ ಆಗುವಷ್ಟು ಭತ್ತವನ್ನು ಏತದಲ್ಲಿ ಕುಟ್ಟೋರಂತೆ. ಅರುವತ್ತು ಬಾಳೆ ತೋಟ ಅಂತ ಇತ್ತು. ೧೨ ಮೊಳ, ೧೨ ಮೊಳಕ್ಕೆ ಹಾಕಿದ ಬಾಳೆ ತೋಟ. ಇಲ್ಲಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಅಲ್ಲಿಂದ ತಲೆ ಮೇಲೆ ನೀರನ್ನು ಹೊತ್ತು ತರ್ತಿದ್ರಂತೆ. ಅಡುಗೆಗೆ, ಕುಡಿಯಲು ಹಾಗೂ ದನಕರುಗಳಿಗೆ ಸಾಕಾಗುವಷ್ಟು ನೀರನ್ನು ಹೊರೋರಂತೆ. ನಮ್ಮ ತಾತನೂ ಬಹಳ ಶಕ್ತಿವಂತರು, ಎಡಗೈ ಜಾಸ್ತಿ ಬಳಸೋರಂತೆ. ಅವರು ಎಂದಿಗೂ ತೆಂಗಿನ ಮರ ಹತ್ತಿ ಕಾಯಿ ಕೀಳುತ್ತಿರಲಿಲ್ವಂತೆ. ಕೆಳಗಿನಿಂದ ಕಲ್ಲಲ್ಲಿ ಹೊಡೆದು ಕಾಯಿ ಕೆಡವುತ್ತಿದ್ರಂತೆ. ನನ್ನ ತಾಯಿ ಶ್ರೀಲಕ್ಷ್ಮಿ, ಮೈಸೂರಿನ ಕೆ.ಕೆ. ಮೂರ್ತಿಗಳ ತಂಗಿ. ಬಹಳ ಚೆನ್ನಾಗಿ ಹಾಡೂ ಹೇಳೋರಂತೆ. ಎಂಟು ವರುಷದ ನನ್ನ ತಾಯಿ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಹಾಡು ಹೇಳುವಾಗ ಮೈಸೂರು ಮಹಾರಾಜರ ತಾಯಿ ಅಲ್ಲಿಗೆ ಬಂದ್ರಂತೆ. ನನ್ನ ತಾಯಿಯ ಹಾಡನ್ನು ಕೇಳಿ ಅವರಿಗೆ ಬಹಳ ಖುಷಿಯಾಗಿ, "ದಿನಾ ಬಂದು ನಾನು ಅರಮನೆಯಲ್ಲಿ ಮಂಗಳಾರತಿ ಮಾಡುವ ಸಮಯದಲ್ಲಿ ಹಾಡು ಹೇಳು" ಅಂದರಂತೆ. ತಾಯಿಯ ಮನೆಯಲ್ಲಿ ಬಡಸ್ತನ. ಮನೆಗೇ ಮಹಾರಾಣಿ ಸಾರೋಟು ಕಳಿಸಿ ಕರೆಸಿಕೊಳ್ತಿದ್ರಂತೆ. ಜೀವನಕ್ಕೆ ಬೇಕಾದ್ದನ್ನು ಕೊಡ್ತಿದ್ರಂತೆ. ೧೧ ವರುಷದಲ್ಲಿ ನನ್ನ ತಾಯಿ, ನನ್ನ ತಂದೆಯನ್ನು ಮದುವೆಯಾದಾಗ ಯುವ ದಂಪತಿಗಳನ್ನು ಮಹಾರಾಣಿಯವರು ಕರೆಸಿ ಆಶೀರ್ವಾದ ಮಾಡಿದ್ರಂತೆ. ತಾಯಿ ಇದನ್ನು ಸದಾ ಹೇಳೋರು. ಹಿಂದಿನವರು, ಹಲಸಿನಕಾಯಿ, ಪರಂಗೀಕಾಯಿ, ಕುಂಬಳಕಾಯಿ, ಬೂದುಗುಂಬಳ, ಬಾಳೇಕಾಯಿ, ಬಾಳೆ ದಿಂಡು, ಬಾಳೆ ಮೋತೆ, ಸುಂಡೇಕಾಯಿ, ಕೆಸವಿನ ದಂಟು, ಹೀಗೆ ಸ್ಥಳೀಯ ತರಕಾರಿಗಳನ್ನು ಬಳಸುತ್ತಿದ್ರು. ಹಾಗಾಗಿ ಗಟ್ಟಿಯಾಗಿದ್ರು. ಬಾಂಧವ್ಯದ ದೃಷ್ಟೀಲಿ ಈ ಮನೆಯದು ಬಹಳ ವಿಶೇಷ. ನಮ್ಮ ತಂದೆಯ ತಂದೆ ಹಾಗೂ ತಂದೆಯ ದೊಡ್ಡಪ್ಪ ಇಬ್ಬರು ಅಣ್ಣತಮ್ಮಂದಿರು. ಇಲ್ಲಿ ಸಮೀಪದಲ್ಲಿ ಗೂಳಿ ತುಂಡು ಅಂತ ಎಂಟು ಎಕರೆ ಹೊಲ ಇದೆ. ಅದು ಉತ್ತಮ ಬೆಳೆ ಬೆಳೆಯುವುದಕ್ಕೆ ಹೆಸರುವಾಸಿ. ಅಲ್ಲಿ ನಮ್ಮ ತಾತ ಜಮೀನು ಮಾಡಿದ್ರಂತೆ. ಅಪ್ಪಾಜಯ್ಯ ಅಂತ ಅವರ ಹೆಸರು. ಪ್ಲೇಗ್ ಬಂದಾಗ ಚಿಲ್ಕುಂದ ಬಿಟ್ಟು, ತೋಟದಲ್ಲಿ ಕಟ್ಟಿದ್ದ ನಾಲ್ಕು ಅಂಕಣದ ಮನೇಲಿ ಇದ್ರಂತೆ. ನನ್ನ ತಾತನಿಗೆ ಇದ್ದಕ್ಕಿದ್ದಂತೆ ಬೆನ್ನುಫಣಿಯಾಗಿ ಸಾಯುವ ಹಂತ ತಲುಪಿದಾಗ, ಅವರ ಅಣ್ಣ ಪುಟ್ಟಯ್ಯನ್ನ ಕರೆದು, "ನನ್ನ ಹೆಂಡತಿ, ಮಕ್ಕಳನ್ನು ನಿನ್ನ ಮಡಿಲಿಗೆ ಹಾಕಿದೀನಿ. ಅವರ ಭಾರ ನಿನ್ನದು" ಅಂತ ಹೇಳಿ ಪ್ರಾಣ ಬಿಟ್ರಂತೆ. ಆಗ ನಮ್ಮ ಅಜ್ಜಂಗೆ ೩೬ ವರುಷ. ಅಜ್ಜಿಗೆ ಬರೀ ೧೮ ವರುಷ. ಮೂರು ಜನ ಪುಟ್ಟಮಕ್ಕಳು ಬೇರೆ. ತಮ್ಮನಿಗೆ ಮಾತುಕೊಟ್ಟಂತೆ ನಮ್ಮ ತಾತನ ಅಣ್ಣ ಎಲ್ಲರನ್ನೂ ಸಲಹಿದ್ರು. ನನ್ನ ತಂದೇನೂ ಅವರ ಮಗನಂತೇ ಕಂಡರಂತೆ. ತಮ್ಮ ಮಕ್ಕಳಿಗೆ ಆಸ್ತಿ ನೀಡದೆ ನನ್ನ ತಂದೆ ಹೆಸರೀಗೇ ಆಸ್ತೀನ ಪೂರ್ಣ ಬರೆದ್ರಂತೆ. ಇದು ನಮ್ಮ ಕುಟುಂಬದ ವಿಶೇಷ' ಅಂದ್ರು ಗುರುಮೂರ್ತಿ.

'ನಿಮ್ಮ ಬಗ್ಗೆ, ನಿಮ್ಮ ಹಿರಿಯರ ಬಗ್ಗೆ ಹೇಳಿ' ಅಂದಾಗ ಗುರುಮೂರ್ತಿ ಹೊಸ ಹುರುಪಿನಿಂದ ಹೇಳಲು ಆರಂಭಿಸಿದ್ರು. 'ನಾನು ಮೈಸೂರಿನ CPC ಪಾಲಿಟೆಕ್ನಿಕ್ ಕಾಲೇಜಿನಲ್ಲಿ Diploma in Civil Engineering ಓದಿದೆ. ನನಗೆ engineering ಓದುವ ಆಸೆ ಇತ್ತು. ಆದರೆ ನನ್ನ ಅಣ್ಣಂದಿರು ಹೊರಗಡೆ ಇದ್ರು. ಈ ಮನೆ ಬಾಗಿಲು ಹಾಕಬಾರದು ಅಂತ ಇಲ್ಲಿಗೆ ಬಂದೆ. ತಂದೆಗೂ ನಾನು ಊರಿಗೆ ಬಂದದ್ದು ಖುಷಿ ಆಯ್ತು. ನನ್ನ ಜತೆಯಾಗಿ ನೀನಿರು ಅಂದ್ರು. ನಾನು ಜಮೀನು ಮಾಡಲು ಆರಂಭಿಸಿದೆ. ಆರಂಭದಲ್ಲಿ ತಂಬಾಕು ಬ್ಯಾರನ್ ಕಟ್ಟಿ, ಉತ್ತಮ ಆದಾಯ ಪಡೆದು ತಂಗಿಯ ಮದುವೆ ಮಾಡಿದ್ವಿ. ಒಂದು ಎಕರೆಗೆ ೭೦೦೦ ಗಿಡ ತಂಬಾಕು ಕೂರುತ್ತೆ. ಒಂದು



ತೋಟದಲ್ಲಿ ಡ್ರಿಪ್ ಇರಿಗೇಷನ್ ಅಳವಡಿಸಿರುವ ಸಿ.ಕೆ.ಗುರುಮೂರ್ತಿ ಅದರ ನಿರ್ವಹಣೆಯಲ್ಲಿ: ಚಿಲ್ಕುಂದ

ಬ್ಯಾರನ್‌ಗೆ ೨೦,೦೦೦ ಗಿಡ ಬೇಕು. ಕನಿಷ್ಠ ೩ ರಿಂದ ೪ ಎಕರೆ ತಂಬಾಕು ಬೆಳೆದ್ರೆ ಒಂದು ಬ್ಯಾರನ್ ಇಡಬಹುದು. ಒಂದು ಬ್ಯಾರನ್ ಹೊಗೆಸೊಪ್ಪು ಬೇಯಿಸಲು ೨೪ ಟನ್ ಸೌದೆ ಬೇಕು. ಅಂದ್ರೆ ಕಾಡು, ಪರಿಸರ ನಾಶ. ತಂಬಾಕಿಗೆ ಕನಿಷ್ಠ ೧೫ ರಿಂದ ೨೦ ಕೂಲಿಯಾಳುಗಳು ಬೇಕು. ಅದಕ್ಕೆ ನಾಲ್ಕು ವರುಷ ತಂಬಾಕು ಬೆಳೆದು ಕೈಬಿಟ್ಟೆ. ಈಗ ನಂದು ಎರಡೂವರೆ ಎಕರೆ ತೋಟ ಇದೆ. ಅದರಲ್ಲಿ ಅಡಿಕೆ, ಬಾಳೆ, ವಿಳ್ಳೇದೆಲೆ, ಮೆಣಸು, ವೆನಿಲ್ಲಾ, ಏಲಕ್ಕಿ, ಮಾವು ಎಲ್ಲಾ ಹಾಕಿದ್ದೇನೆ. ಹಸುವಿಗೆ ಸೀಮೆಹುಲ್ಲು **ಗಜರಾಜ** ಬೆಳೆದಿದ್ದೇನೆ.

'ನಮ್ಮ ತೋಟದ ಜಾಗ ಸ್ವಲ್ಪ ಎಟ್ಟೆ. ಕೆರೇಲಿ ನೀರಿದ್ರೆ ತೋಟ ಉಳಿಯುತ್ತೆ, ಇಲ್ಲಾಂದ್ರೆ ತೋಟ ಉಳಿಯೋಲ್ಲ. ಆರು ತಿಂಗಳು ನೀರಿರದಿದ್ರೆ ತೋಟ ಉಳಿಯೋಲ್ಲ ಅಂತ ತಂದೆ ಹೇಳೋರು. ಸುತ್ತಮುತ್ತಲ ಒತ್ತುವರಿಯಿಂದ ಕೆರೇಲಿ ನೀರು ಕಡಿಮೆಯಾಯ್ತು. ತೋಟದ ಬಾವೀಲಿ ನೀರು ಕಡಿಮೆಯಾಗ್ತಾ ಬಂತು. ಆ ಬಾವೀಲಿ ೧೦೦ ಅಡಿ ಬೋರ್‌ವೆಲ್ ಕೊರೆಸಿದ್ವಿ. ೭, ೮ ವರುಷ ಆದ ಮೇಲೆ ಅದರಲ್ಲೂ ನೀರು ಕಡಿಮೆಯಾಯ್ತು. ನಂತರ ತೋಟದ ಮೇಲ್ಭಾಗದಲ್ಲಿ ಮತ್ತೊಂದು ಬೋರ್‌ವೆಲ್ ಕೊರೆಸಿದೆ. ಕರೆಂಟ್ ಸಮಸ್ಯೆಯಿಂದ ದಿನಕ್ಕೆ ಎರಡು ಸಾಲೂ ನೀರು ಹಾಯಿಸಲು ಆಗ್ತಿರಲಿಲ್ಲ. ನನ್ನದು ಒಟ್ಟು ೮೦ ಸಾಲಿದೆ. ಇಡೀ ತೋಟಕ್ಕೆ ನೀರು ಹಾಯಿಸಲು ಒಂದೂವರೆ ತಿಂಗಳು ಬೇಕು. ಏನು ಮಾಡೋದು ಅಂತ ಯೋಚಿಸಿ, ಹುಣಸೂರಿನಲ್ಲಿ ಹನಿ ನೀರಾವರಿ ಬಗ್ಗೆ ವಿಚಾರಿಸಿದೆ. micro tube system ಅಳವಡಿಸಿದೆ. ಪ್ರತಿ ಮರಕ್ಕೆ ಪ್ರತಿ ಗಂಟೆಗೆ ೧೨ ಲೀಟರ್ ನೀರು ಸಿಗುವಂತೆ ಹನಿ ನೀರಾವರಿ ಅಳವಡಿಸಿದೆ. ಒಟ್ಟು ೬೮ ಸಾವಿರ ರೂಪಾಯಿ ಖರ್ಚು. ಸರ್ಕಾರದಿಂದ ೩೦ ಸಾವಿರ ರೂಪಾಯಿ ಸಹಾಯಧನ ಬಂತು. ತೋಟಕ್ಕೆ ಹನಿ ನೀರಾವರಿ ಅಳವಡಿಸಿ, ನಾಲ್ಕು ವರುಷವಾಗಿದೆ. ನೀರಿನ ನಿರ್ವಹಣೆ ಈಗ ಅತ್ಯಂತ ಸಮರ್ಪಕವಾಗಿದೆ. ಮುಂಚೆ ಮೂರು ಲಕ್ಷ ಅಡಿಕೆ ಬೀಳ್ತಿತ್ತು, ಈಗ ಐದೂವರೆ ಲಕ್ಷ ಅಡಿಕೆ ಬೀಳ್ತಿದೆ. ನನಗೆ ೨೬ನೇ ವಯಸ್ಸಿನಲ್ಲಿ ಮದುವೆ ಆಯ್ತು. ಮಾವನವರು ಬಿ.ಆರ್. ಸುಬ್ರಹ್ಮಣ್ಯ, ಅವರು ಬಸವಾಪಟ್ಟಣದಲ್ಲಿ ಅಡಿಕೆ ಬೆಳೆಗಾರರು. ಅವರಿಂದ ನನಗೆ ಹಳೇ ಅಡಿಕೆ ತೋಟದ ಮಧ್ಯದಲ್ಲಿ ಹೊಸದಾಗಿ ಅಡಿಕೆ ನೆಡುವ ವಿಧಾನ ತಿಳೀತು. ಇದ್ರಿಂದ ಹಳೆಯ ಮರಗಳು ಮುಪ್ಪಾಗುವಷ್ಟರಲ್ಲಿ, ಅವುಗಳ ನಡುವೆ ಹೊಸ ಮರಗಳು ಬೆಳೆದಿರುತ್ತವೆ. ಅಡಿಕೆಯ ಒಂದು ಸಾಲಿನ ಮಧ್ಯದಲ್ಲಿ ಗಿಡ ನೆಡಬೇಕು. ಇದ್ರಿಂದ ಏಣಿ ತಳ್ಳೋಕೆ ಸುಲಭ, ಅಡಿಕೆ ಮರ ಹೋದಾಗ ತೆಗೆಯೋದು ಸುಲಭ, ಉಳುಮೆಗೆ ಅನುಕೂಲ, ಹನಿ ನೀರಾವರಿಗೂ ನೆರವು, ಎಲೆ ಹಂಬಿಗೂ ಚೆನ್ನಾಗಿ ಗಾಳಿಯಾಡುತ್ತೆ. ಹೀಗೆ ಅವರಿಂದ ವ್ಯವಸಾಯದ ವಿಚಾರಗಳನ್ನು ತಿಳಿದೆ' ಅಂದ್ರು ಗುರುಮೂರ್ತಿ.

'ನಿಮ್ಮ ಜೀವನದಲ್ಲಿ ನೀವು ಮರೆಯಲಾಗದ ಘಟನೆ ಯಾವುದು?' ಅಂದಾಗ ಗುರುಮೂರ್ತಿಯವರ ಕಣ್ಣುಗಳು ಹನಿಗೂಡಿದವು. 'ನನ್ನ ಹಿರಿಯ ಮಗ ಇದ್ದ. ಮೂರೂವರೆ ವರುಷದವನು ಇದ್ದಾಗ ಚಿಲ್ಕುಂದ circleನಲ್ಲಿ ಅಪಘಾತವಾಗಿ ತೀರಿಕೊಂಡ. ನನಗೆ ಆಘಾತವಾಯ್ತು. ನನ್ನ ತೋಟದಲ್ಲಿ ಪಳನಿಸ್ವಾಮಿ ಅಂತ ತಮಿಳು ಕೂಲಿಯವನು ಇದ್ದ. ಬಹಳ ನಿಷ್ಠಾವಂತ. ಒಂದು ದಿನ ನಾನು ತೋಟಕ್ಕೆ ಹೋಗದಿದ್ರೂ "ಸ್ವಾಮಿ ನೀವು ಬರಲಿಲ್ಲ" ಅಂತಿದ್ದ. ನನ್ನ ತೋಟದ ಅಡಿಕೆ ಸಸೀನ ಅವನೇ ನಿಂತು ಕಟ್ಟಿಸಿದ್ದು. ನನ್ನ ಮಗ ಸತ್ತಾಗ, ಅವನು ಹೇಳಿದ, "ನಾನು ಸತ್ಯಮಂಗಲದ ಸಮೀಪ ಇರುವ ಬನ್ನಾರಿಯಮ್ಮಂಗೆ ಹರಕೆ ಕಟ್ತೀನಿ, ನಿಮಗೆ ಗಂಡು ಮಗು ಆದರೆ ನನ್ನ ಮುಡಿ ಕೊಡ್ತೀನಿ" ಅಂತ ಅಂದ. ರಕ್ತಸಂಬಂಧವಿರದ ವ್ಯಕ್ತಿ. ನನ್ನಲ್ಲಿ ಎಂಥ ವಿಶ್ವಾಸ! ನನ್ನ ಮನಸ್ಸು ತುಂಬಿ ಬಂತು. ಅವನ ಸಲಹೆಯಂತೆ ಬನದಮಾರಿಯಮ್ಮ ದೇವಸ್ಥಾನಕ್ಕೆ ಹೋಗಿ ಬಂದೆ. ಆ ನಂತರ ಕಿರಿಯ ಮಗ ಹುಟ್ಟಿದ' ಅಂದ್ರು. ಕಾರ್ಮಿಕ, ಮಾಲೀಕನ ನಡುವಿನ ಸಂಬಂಧ ಹೀಗಿದ್ದರೆ ಎಷ್ಟು ಚೆನ್ನ ಅನ್ನಿಸಿತು.



ಅಳಗುಳಿ ಮನೆಯಾಟದಲ್ಲಿ ನಿರತ ಮಕ್ಕಳು: ಚಿಲ್ಕುಂದ

'ನಿಮ್ಮ ಮನೋರಂಜನೆ ಹ್ಯಾಗೆ, ಹವ್ಯಾಸಗಳೇನು?' ಅಂದಾಗ 'ನಾನು ಯೋಗಾಸನ ಮಾಡ್ತೀನಿ. ದೇಹ ಹಗುರವಾಗಿದೆ. ಇದುವರೆಗೆ ತಲೆನೋವು ಬಂದಿಲ್ಲ. ಬಿಡುವಿನ ಸಮಯದಲ್ಲಿ ಕೇರಮ್, ಪಗಡೆ ಆಡ್ತೀನಿ. ಬೀಟೆ ಮರದ ಕಟ್ಟು ಇರುವ champion ಕೇರಮ್ board ಮನೇಲಿದೆ. ನಾನು ಸಂಗೀತ ಕೂಡ ಹೇಳ್ತೀನಿ. ಅಭ್ಯಾಸ ಮಾಡ್ತಾ ಮಾಡ್ತಾ ಸಂಗೀತ ಕಲಿತದ್ದು. ದೇವರ ಧ್ಯಾನ ಮಾಡ್ತೀನಿ. ಮನಸ್ಸಿಗೆ ನೆಮ್ಮದಿ ಸಿಗುತ್ತೆ. ಸಂತೋಷ ನನ್ನ ಮನಸ್ಸಲ್ಲಿ ತುಂಬಿದೆ. ಹಾಗಾಗಿ ನಾನು ದೃಢಕಾಯನಾಗಿದ್ದೇನೆ. ಯಾರಿಗೂ ಹೆದರುವ ಸ್ವಭಾವ ಇಲ್ಲ' ಅಂದ್ರು ಗುರುಮೂರ್ತಿ. 'ನಿಮ್ಮ ತತ್ತ್ವ ಆದರ್ಶಗಳು ಯಾವುದು?' ಅಂದಾಗ, 'ಇನ್ನೊಬ್ಬರಿಗೆ ಮೋಸ ಮಾಡಬಾರದು, ಅನ್ಯಾಯ ಮಾಡಿದಾಗ ಖಂಡಿಸುವುದು ನನ್ನ ಗುಣ. ನನ್ನ ಅಣ್ಣತಮ್ಮಂದಿರನ್ನೂ ನಾನು ಬಿಟ್ಟಿಲ್ಲ. ಯಾರೇ ತಪ್ಪು ಮಾಡಿದ್ರೂ ನಗುನಗುತ್ತಲೇ ಅವರಿಗೆ ತಿಳಿಹೇಳ್ತೀನಿ' ಅಂದ್ರು.

'ಸಂಕೇತಿ ಕೃಷಿಯ ವಿಶೇಷ ಏನು?, ನಿಮ್ಮ ಕೃಷಿಯ ಮುಂದಿನ ಭವಿಷ್ಯ ಏನು?' ಅಂದರೆ, 'ನಮ್ಮ ವ್ಯವಸಾಯದಲ್ಲಿ neatness ಇದೆ. ಹಳ್ಳದಲ್ಲಿ ಜಮೀನು ಮಾಡಿ ನಾಟಿ ಮಾಡಿರುವ ೧೨೦ ವರುಷದ ತೆಂಗು ಇಂದಿಗೂ ಬದುಕಿದೆ. ಎಂಥಾ ಬರಕ್ಕೂ ಜಗ್ಗಿಲ್ಲ. ಅದೇ ಗುಡ್ಡೆ ಮೇಲೆ ಮಾಡಿರುವ ತೆಂಗು ಬೋರ್‌ವೆಲ್ ಇದ್ರೂ ಬತ್ತಿದೆ. ಇದು ನಮ್ಮ ವಿಶೇಷ. "ಎರೆಯೋ, ದೊರೆಯೋ" ಎಂಬಂತೆ ಎರೆ ಮಣ್ಣಲ್ಲಿ ಅಡಿಕೆ ಎಬ್ಬಿಸಿದ್ರು. ಇತರೇ ಕೃಷಿಕರು ರಾಗಿ, ಜೋಳ ಬೆಳೆಯುವಲ್ಲಿ ಅಡಿಕೆ ತೋಟ ಎಬ್ಬಿಸಿದ್ರು, ಇಂದಿಗೂ ಅವು ನಳನಳಿಸುತ್ತಾ ಇವೆ. ಇನ್ನು ಚಿಲ್ಕುಂದದಲ್ಲಿ ನಮ್ಮದು ೫೨ ಮನೆ. ಇತರರದ್ದು ೩೦೦ ಕುಟುಂಬ ಇದೆ. ನಾನು ನನ್ನ ಮಗನ್ನ ಲೋಕಜ್ಞಾನ ತಿಳಿಯಲು ಓದಿಸುತ್ತಿದ್ದೇನೆ. ದೇಶಸೇವೆ ಮಾಡೋದಾದ್ರೆ ಮಾಡಲಿ. ಕೆಟ್ಟರೆ ವ್ಯವಸಾಯ ಇದ್ದೇ ಇದೆಯಲ್ಲ. ಇನ್ನು ಸಂಕೇತಿಗಳಲ್ಲಿ ಕೃಷಿ ಉಳಿಯುತ್ತೆ, ಮುಂದುವರೆಯುತ್ತೆ. ಮುಂದೆ ಕೆಲಸ ಸಿಗೋಲ್ಲ. ಜೀವನ ನಿರ್ವಹಣೆಗೆ ವ್ಯವಸಾಯ ಬೇಕೇ ಬೇಕು. ಹೊರಗಿನಿಂದ ವಾಪಸ್ಸು ಬಂದು ಈಗ ಚಿಲ್ಕುಂದದಲ್ಲಿ ನೆಲೆಸಿ, ವ್ಯವಸಾಯ ಮಾಡುತ್ತಿರುವವರ ಸಂಖ್ಯೆ ದೊಡ್ಡದಿದೆ,' ಎಂದು ದೃಢವಾಗಿ ಹೇಳಿದ್ರು, ಗುರುಮೂರ್ತಿ. ರಾತ್ರಿ ವೇಳೆಯಲ್ಲಿ ಗುರುಮೂರ್ತಿಯವರ ಮನೆಯಲ್ಲಿ ಕುಳಿತು, ಅವರ ಸಂದರ್ಶನ ಮಾಡುತ್ತಿದ್ದಾಗ ಹೊರಗಡೆ ಧೋ ಎಂದು ಮಳೆ ಸುರಿಯುತ್ತಿತ್ತು. ಮಂದಹಾಸ ಗುರುಮೂರ್ತಿಯವರ ಮುಖದಲ್ಲಿತ್ತು. 'ಆರು ತಿಂಗಳಿನಿಂದ ಮಳೆ ಇರಲಿಲ್ಲ, ಈಗ ನೀವು ಸಂಕೇತಿ ಕೃಷಿ ಪುಸ್ತಕ ಬರೆಯಲು, ನಮ್ಮ ಸಂದರ್ಶನ ಮಾಡುವ ಸಲುವಾಗಿ ಬಂದಿದ್ದೀರಿ, ಋಷ್ಯಶೃಂಗರಂತೆ ನೀವು ಬಂದು ನಮ್ಮ ಊರಿಗೆ ಮಳೆ ಬಂತು' ಅಂದಾಗ ನಮಗೂ ಖುಷಿಯಾಯ್ತು. ಇದು ಒಳ್ಳೆಯ ಶುಭಾರಂಭ ಅನ್ನಿಸಿತು. ನಂತರ ಅವರ



ತಮ್ಮ ತೋಟದ ಮನೆಯ ಮುಂದೆ ಸಿ.ಕೆ.ಗುರುಮೂರ್ತಿ: ಚಿಲ್ಕುಂದ

ಮನೆಯಲ್ಲಿಯೇ ಊಟ. ಸುಗ್ರಾಸ ಭೋಜನವಾದ ಮೇಲೆ, ಎಲೆ ಅಡಿಕೆ ಒಣಕೊಬ್ಬರಿ ಹಿಡಿದು ಲೋಕಾಭಿರಾಮವಾಗಿ ಮಾತಿಗೆ ಕುಳಿತೆವು. 'ಸಂಕೇತಿಗಳ ಮನೆಯಲ್ಲಿ ಉಯ್ಯಾಲೆಯದು ವಿಶೇಷ. ಎಲ್ಲರ ಮನೆಯಲ್ಲೂ ಇರುತ್ತಲ್ಲಾ ಯಾಕೆ?' ಅಂದೆ. 'ಅತಿಥಿಗಳ ಸತ್ಕಾರಕ್ಕೆ, ಆಯಾಸವಾದಾಗ, ಬೇಸರವಾದಾಗ ಅದರ ಮೇಲೆ ಕುಳಿತು ತೂಗಿಕೊಂಡ್ರೆ ಪರಿಶ್ರಮ ಮಾಯವಾಗುತ್ತೆ. ಇದು ಗ್ರಾಮೀಣ ಸೊಗಡು' ಅಂದ್ರು. ಹಾಗೇ ನೀರಾವರಿ ವಿಷಯಕ್ಕೆ, ಚರ್ಚೆ ತಿರುಗಿತು. 'ನಮಗೆ ಲಕ್ಷ್ಮಣತೀರ್ಥ ೧೨ ಮೈಲಿ ದೂರ, ಅದೇ ನಮಗೆ ಸರಿ. ಇನ್ನೂ ೧೨ ಕಿಲೋಮೀಟರ್ ದೂರದಲ್ಲಿರುವ ಕರಡಿಲಕ್ಕನ ಕೆರೆಯಿಂದ ಏತನೀರಾವರಿ ಯೋಜನೆ ಮಾಡಬೇಕೂಂತ ಇತ್ತು. ನಂತರ ಏನಾಯಿತೋ ಗೊತ್ತಿಲ್ಲ. ನೀರಾವರಿ ಇದ್ದಿದ್ರೆ ಹೆಚ್ಚಿನ ಸಾಧನೆಯಾಗಿರೋದು' ಅಂದ್ರು. ಎಲೆ ಅಡಿಕೆ ಮಹಾತ್ಮೆ ಬಗ್ಗೆ ಮಾತಾಯ್ತು. 'ನಿರಂತರವಾಗಿ ಎಲೆ ಅಡಿಕೆ ಸೇವಿಸುವುದರಿಂದ ಪೋಷಕಾಂಶಗಳು ದೇಹಕ್ಕೆ ಸಿಗುತ್ತೆ, ದೇಹ ಶಾಖವಾಗಿರುತ್ತೆ. ಅಡಿಕೆ ಬೇಯಿಸುವಾಗ ಕಾಚು, ಕೊಬ್ಬರಿ ಎಣ್ಣೆ, ಸುಣ್ಣ ಹಾಕ್ತೀವಿ. ಮನೆ ಬಳಕೆಗೆ ಆದ್ರೆ ಎಳನೀರು, ಸುಣ್ಣ ಹಾಗೂ ವಿಳ್ಳೇದೆಲೆ ಹಾಕ್ತೀವಿ. ರುಚಿ ಚೆನ್ನಾಗಿರುತ್ತೆ. ಕೆಲವರು ಹಸಿ ಅಡಿಕೆ ತಿಂತಾರೆ. ಅದಕ್ಕೆ ಅನುಭವ ಬೇಕು. ಅನುಭವ ಇಲ್ಲದವರು ತಿಂದ್ರೆ, ಸೊಕ್ಕಿ ಬಿಡುತ್ತೆ, ಗಂಟಲು ಹಿಡಿಯುತ್ತೆ. ಆಗ ತಕ್ಷಣ ಹುಣಿಸೇಹಣ್ಣು, ಉಪ್ಪು ಅಥವಾ ಸಕ್ಕರೆ ಸೇವಿಸಬೇಕು' ಎಂದು ಹೇಳಿದ್ರು. ಹೀಗೆ ವಿಷಯ ಅನೇಕ ಬಾರಿ ತಿರುವುಪಡೀತು. ಅವರ ಮಕ್ಕಳಾಗಲೇ ಹಜಾರದಲ್ಲಿ ಹಾಸಿಗೆ ಹಾಸಿ, ಸೊಳ್ಳೆಪರದೆ ಕಟ್ಟಿಕೊಂಡು ಮಲಗಿದ್ರು. ಗುರುಮೂರ್ತಿಯವರ ಪತ್ನಿ ಸುಬ್ಬಲಕ್ಷ್ಮಿಯವರು ಬಂದು 'ಹೊತ್ತಾಯ್ತು, ಏಳಿ' ಅಂದಾಗಲೇ ಸಮಯದ ಅರಿವಾದದ್ದು. 'ಅಟ್ಟ ವಿಶಾಲವಾಗಿದೆ. ಅಲ್ಲಿ ಆರಾಮವಾಗಿ ಮಲಗಿ' ಎಂದು ಪ್ರೀತಿಯಿಂದ ಹಾಸಿಗೆ ಹಾಸಿ ಕೊಟ್ಟರು. ಮಳೆ ಬಂದು ಇಳೆಯನ್ನು ತಂಪು ಮಾಡಿತ್ತು. ದಣಿದಿದ್ದ ದೇಹಕ್ಕೆ ಯಾವಾಗ ನಿದ್ದೆ ಹತ್ತಿತೋ ತಿಳಿಯಲಿಲ್ಲ.

ಈ) ಸಿ.ವಿ. ಸತ್ಯನಾರಾಯಣ (ಮುತ್ತಣ್ಣ) ಇ/ಮ ವೆಂಕಟಗಿರಿಯಯ್ಯ
ಚಿಲ್ಕುಂದ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ : 08222-241151

ಏಳರ ಸಂಖ್ಯೆಗೂ ನಮ್ಮ ಮನೆಗೂ ವಿಚಿತ್ರವಾದ ನಂಟು. ನಾವು ಅಣ್ಣತಮ್ಮಂದಿರು ಏಳು ಜನ, ನಾವು ಹೆಣ್ಣು ತಂದಿರುವ ಕಡೆ ಅವರು ಅಕ್ಕತಂಗೀರು ಏಳು ಜನ. ಮಾಡಿದ ಬೇರೆ ಬೇರೆ ಬೆಳೆಗಳ ವ್ಯವಸಾಯ ಏಳು ವರುಷ. ಮೊದಲು ನಾಟಿ ಹಿಪ್ಪುನೇರಳೆ ಹಾಕಿ ರೇಷ್ಮೆ ಏಳು ವರುಷ ಬೆಳೆದೆ. ನಂತರ ತಂಬಾಕು ಏಳು ವರುಷ. ಮತ್ತೆ ಸುಧಾರಿತ ರೇಷ್ಮೆಯನ್ನು ಸಂಕೇತಿಗಳಲ್ಲಿ ಮೊದಲಿಗನಾಗಿ ಬೆಳೆದು ಏಳು ವರುಷ ವ್ಯವಸಾಯ ಮಾಡಿದೆ. ಆನಂತರ ಕಾಕಡ ಬೇಸಾಯವನ್ನು ಏಳು ವರುಷ ಮಾಡಿದ್ದು, ಈಗ ಪರ್ಮನೆಂಟಾಗಿ ಅಡಿಕೆ, ತೆಂಗು, ಮಾವು ಮಾಡಿದ್ದೇವೆ. ನಮ್ಮ ಮನೇಲಿ ಎಲ್ಲರಿಗೂ ವ್ಯವಸಾಯದ ಮೇಲೆ ಆಸಕ್ತಿ. ಗೋಡೆ ಇದ್ರೆ ತಾನೆ ಚಿತ್ತಾರ ಬರೀಬಹುದು. ಅದಕ್ಕೆ ಈ ಗೋಡೇನ ಮಕ್ಕಳಿಗೆ ಉಳಿಸಬೇಕು ಅಂತ ಮಾಡಿದೀನಿ.


ಸಿ.ವಿ.ಸತ್ಯನಾರಾಯಣ (ಮುತ್ತಣ್ಣ): ಚಿಲ್ಕುಂದ

ಚಿಲ್ಕುಂದದ ಸೂರ್ಯನಾರಾಯಣ ಹಾಗೂ ಲಕ್ಷ್ಮೀದೇವಮ್ಮ ದಂಪತಿಗಳಿಗೆ ದತ್ತುಮಗನಾಗಿ ಬಂದಿದ್ದು ಹಾಸನ ತಾಲ್ಲೂಕು ಕೋರವಂಗಲದ ವೆಂಕಟಗಿರಿಯಯ್ಯನವರು. ಹಿರಿಯರು ವೆಂಕಟಗಿರಿಯಯ್ಯನವರಿಗೆ ಗೊತ್ತು ಮಾಡಿದ ವಧು ಕಣಗಾಲಿನ ಗೌರಮ್ಮನವರು.



ತಮ್ಮ ಕುಟುಂಬವರ್ಗದೊಂದಿಗೆ ಸಿ.ವಿ.ಸತ್ಯನಾರಾಯಣ: ಚಿಲ್ಕುಂದ

ವೆಂಕಟಗಿರಿಯಯ್ಯನವರಿಗೆ ಏಳು ಜನ ಗಂಡು, ಹಾಗೂ ಐದು ಜನ ಹೆಣ್ಣುಮಕ್ಕಳು. ಗಂಡು ಮಕ್ಕಳಲ್ಲಿ ಆರನೆಯವರೇ ಸಿ.ವಿ. ಸತ್ಯನಾರಾಯಣ, ಅಥವಾ ಗ್ರಾಮಸ್ಥರು ಪ್ರೀತಿಯಿಂದ ಕರೆಯುವ ಮುತ್ತಣ್ಣ. ಅವರ ಮನೆಗೆ ಬೆಳಗ್ಗೆ ನಾವು ಹೋದಾಗ ಅಲ್ಲಿ ಹಬ್ಬದ ವಾತಾವರಣವಿತ್ತು. ಅಣ್ಣತಮ್ಮಂದಿರೆಲ್ಲಾ ಸೇರಿದ್ರು. ಮಾತುಕತೆ ವಿಶೇಷವಾಗಿತ್ತು. ಹಿಂದಿನ ದಿನ ಭಾರಿ ಮಳೆಯಾದುದಕ್ಕೆ ಹರುಷ ವ್ಯಕ್ತಪಡಿಸಿದ್ರು. ಬರದಿಂದ ಬೆಂದ ರೈತರಿಗೆ ಒಂದು ಮಳೆ ಎಷ್ಟು ಹರುಷ ತರುತ್ತಲ್ವಾ ಅನ್ನಿಸಿತು. ಬಹುಶಃ ಕೋಟಿ ರೂಪಾಯಿ ನೀಡಿದರೂ ಕೃಷಿಕನಿಗೆ ಈ ಹರುಷ ಸಿಗಲಾರದೇನೋ. ನಮಗೂ ಸಂತಸವಾಗಿತ್ತು. ಅದಕ್ಕೆ ಕಾರಣ ನೀವು ಬಂದ್ರಿ ಮಳೆ ಆಯ್ತು ಅಂತ ಅವರೂ ಹೇಳಿದ್ದಕ್ಕೆ. ಅಂಗಳದಲ್ಲಿ ಚಾಪೆ ಹರಡಿ ಕುಳಿತಾಗ ಆರಂಭದಲ್ಲಿ ಮುತ್ತಣ್ಣ ಹೇಳಿದ್ರು, 'ತಂದೆ ತೀರಿಕೊಂಡಾಗ ನಾವು ಇನ್ನೂ ಚಿಕ್ಕವರು. ನನ್ನ ಹಿರೀ ಅಣ್ಣ-ಅತ್ತಿಗೆ ತಂದೆ-ತಾಯಿ ಸ್ಥಾನದಲ್ಲಿ ನಿಂತು ನಮ್ಮನ್ನು ಸಾಕಿ ಸಲಹಿದ್ದಾರೆ. ಮನಸ್ಸು ಮಾಡಿದ್ರೆ ಅವರು ಅವತ್ತು ಬೇರೆ ಹೋಗಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ತಮ್ಮ ತಂಗೀರನ್ನು ಓದಿಸಿ, ಬದುಕಿಗೆ ನೆಲೆ ನೀಡಿದ್ರು. ತಮ್ಮ ಜೀವನವನ್ನು ತಮ್ಮ, ತಂಗೀರಿಗೆ ಮುಡುಪಾಗಿಟ್ರು' ಅಂದ್ರು. ನಮಗೂ ಅವರನ್ನು ನೋಡುವ ಕಾತರ. ಸುತ್ತಮುತ್ತಲ ಜನರಿಂದ ಹಿರಿಯರೊಬ್ಬರು ಎದ್ದು ಬಂದರು. ಮುತ್ತಣ್ಣ ಹೇಳಿದ್ರು 'ಇವರೇ ನಮ್ಮ ದೊಡ್ಡಣ್ಣ ಸಿ.ವಿ. ಸೂರ್ಯನಾರಾಯಣ' ಅಂದ್ರು. ನನ್ನ ಕೈಗಳು ಅರಿವಿಲ್ಲದಂತೆ ಜೋಡಿಸಿಕೊಂಡವು, ಆ ಪ್ರೀತಿಯ ಮೇರುಶಿಖರಕ್ಕೆ ಗೌರವ ಸೂಚಿಸಲು. ನಗುತ್ತಲೇ ಸಿ.ವಿ. ಸೂರ್ಯನಾರಾಯಣ ಮಾತನಾಡಿದ್ರು. 'ಈ ಊರಿಗೆ ಮೊದಲು ಈಚಲಕುಂದ ಅಂತ ಹೆಸರಿತ್ತಂತೆ. ಈಚಲಮರಗಳ ಸಮೂಹ ಇಲ್ಲಿತ್ತಂತೆ. ಕಾಲಕ್ರಮೇಣ ಈಚಲ ಕುಂದ ಹೋಗಿ ಚಿಲ್ಕುಂದ ಆಗಿದೆ. ಅಲ್ಲದೆ ಚಿಲಕ ಅಂದ್ರೆ ಗಿಳಿಗಳು ಅಂತ ಅರ್ಥ, ಕುಂದ ಅಂದ್ರೆ ಗ್ರಾಮ ಅಥವಾ ಸಮೂಹ ಅಂತ. ಗಿಳಿಗಳ ಸಮೂಹ ಅಂತಾನೂ ಚಿಲ್ಕುಂದಕ್ಕೆ ಹೆಸರಿದೆ ಅಂತ ಹಿರಿಯರು ಹೇಳುತ್ತಿದ್ರು. ಸಂಕೇತಿಗಳು ಚಿಲ್ಕುಂದಕ್ಕಿಂತ ಮೊದಲು ಸಮೀಪದ ಅಣ್ಣಕ್ಯಾತನಹಳ್ಳಿ ಮಾಳದಲ್ಲಿ ಇದ್ರಂತೆ. ಹಾಗೇ ಸುತ್ತಮುತ್ತಲ ಹರಿಯನಹಳ್ಳಿ, ಕಣಗಾಲು, ಹೆಗ್ಗರೆ, ಕಲ್ಕೆರೆ ಗ್ರಾಮದಲ್ಲೂ ಇದ್ದರಂತೆ. ಒಟ್ಟಿಗಿದ್ರೆ ಪರಸ್ಪರ ಸಹಕಾರಕ್ಕೆ ಆಗುತ್ತೆ ಅಂತ, ಚಿಲ್ಕುಂದಕ್ಕೆ ಬಂದು ಎಲ್ಲರೂ ಸೇರಿದ್ರಂತೆ. ನಮ್ಮ ತಂದೆಗೆ ಇಲ್ಲಿದ್ದದ್ದು, ಮೂರು ಎಕರೆ ಬಾಗಾಯ್ತು ಮಾತ್ರಾ. ಅದರಲ್ಲಿ ಅಡಿಕೆ, ಎಲೆಹಂಬು, ಬಾಳೆ, ತೆಂಗು ಹಾಕಿದ್ರು. ೧೪ ಎಕರೆ ಖುಷ್ಕಿ ಜಮೀನಿತ್ತು. ಅದರಲ್ಲಿ ರಾಗಿ ಬೆಳೆಯೋರು. ಮೇಲ್ಫಸಲು ಅಡಿಕೇನ ತಂದೆ ತೊಗೊಂಡು, ಕೆಳಫಸಲು ಎಲೆ ಹಾಗೂ ಬಾಳೆಯನ್ನು ರೈತರಿಗೆ ಕೊಡೋರು. ನನ್ನ ೨೧ನೇ ವಯಸ್ಸಿನಲ್ಲಿ ತಂದೆ ತೀರಿಕೊಂಡ್ರು. ಮನೆಯ ೧೪, ೧೫ ಜನರ ಜವಾಬ್ದಾರಿ ನನ್ನ ಮೇಲೆ ಬಿತ್ತು. ನಾನು ಧೈರ್ಯಗೆಡಲಿಲ್ಲ. ತೋಟದ ತೋಡುಬಾವಿಯಿಂದ ಮಣ್ಣಿನ ಗಡಿಗೇಲಿ ನೀರು ಹೊತ್ತು ಅಡಿಕೆ ತೋಟ ಉಳಿಸಿದ್ವಿ. ಯಾತದಿಂದಲೂ ನೀರು ಎತ್ತುತ್ತಿದ್ವಿ. ಅಡಿಕೆಗೆ ಎರಡೂವರೆ ಅಡಿಯಿಂದ ಮೂರು ಅಡಿ ತಳಭಾಗದಲ್ಲಿ ನೀರಿರಬೇಕಂತೆ. ತೋಟದ ಫಸಲನ್ನು ಗುರುವಾರದ ಹುಣಸೂರು ಸಂತೆಗೆ ಎತ್ತಿನ ಗಾಡೀಲಿ ಸಾಗಿಸುತ್ತಿದ್ವಿ. ಭಾನುವಾರದ ಕಂಪ್ಲಾಪುರ ಸಂತೆಗೆ ತಲೆ ಮೇಲೆ ಹೊತ್ತುಕೊಂಡು ಹೋಗಿ ಮಾರಿ ಬರುತ್ತಿದ್ವಿ. ನನ್ನ ನೆರವಿಗೆ ಮೂರು ಜನ ತಮ್ಮಂದಿರು ಸೇರಿದ ಮೇಲೆ ಬಲ ಬಂತು. ಒಗ್ಗಟ್ಟಾಗಿ ದುಡಿದ್ವಿ. ಪ್ರೀತಿಯಿಂದ ಜೀವನ ಮಾಡಿದ್ವಿ. ನಮ್ಮ ಪರಸ್ಪರ ಸಹಕಾರ, ಒಗ್ಗಟ್ಟು ನಮ್ಮನ್ನು ಮುಂದೆ ತಂತು' ಅಂದ್ರು ಸೂರ್ಯನಾರಾಯಣ.

ನಂತರ ಮುತ್ತಣ್ಣ ಮಾತು ಆರಂಭಿಸಿದ್ರು. 'ನಾನು PUC ವರೆಗೆ ಓದಿದೆ. ವ್ಯವಸಾಯದಲ್ಲೇ ಏನಾದರೂ achieve ಮಾಡಬೇಕು ಅಂದುಕೊಂಡು ಮೊದಲು ನಾಟಿ ಹಿಪ್ಪುನೇರಳೆ ತಳಿ ಹಾಕಿ ರೇಷ್ಮೆ ಬೆಳೆದ್ವಿ, ನಾಲ್ಕು ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ಇತ್ತು. ಸಂಕೇತಿಗಳಲ್ಲಿ ರೇಷ್ಮೆ ಮಾಡಿದ್ದು ನಾನೇ ಮೊದಲು. ಬೆಳೆ ಚೆನ್ನಾಗಿ ಬರಲಿಲ್ಲ. ಅಲ್ಲದೆ ಒಂದು ಕೇಜಿ ಗೂಡಿಗೆ ಐದು, ಆರು ರೂಪಾಯಿ ಇತ್ತು ಅಷ್ಟೆ. ನಂತರ ೧೯೭೪ರಲ್ಲಿ ಬಾವಿ ತೆಗೆದು ತರಕಾರಿ ಬೆಳೆಯಲು ಆರಂಭಿಸಿದ್ವಿ. ಕೋಸು, ಬದನೆ, ಕ್ಯಾರೆಟ್, ಟೊಮ್ಯಾಟೋ, ಮೂಲಂಗಿ, ಸೊಪ್ಪು



ಸಿ.ವಿ.ಸತ್ಯನಾರಾಯಣ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ:ಚಿಲ್ಕುಂದ

ಹೀಗೆ ತರತರಾವರಿ ತರಕಾರಿ ಬೆಳೆದು, ಕುಶಾಲನಗರ, ಮಂಗಳೂರು, ಸಿದ್ದಾಪುರ, ವಿರಾಜಪೇಟೆ ಕಡೆ ತೊಗೊಂಡು ಹೋಗೋವಿ. ಆಗ ತರಕಾರೀನ ಕೇಳೋರು ಇರಲಿಲ್ಲ. ಇಲ್ಲಿಂದ ಅಲ್ಲಿಗೆ ಸಾಗಿಸಿದ ಕೂಲಿ ಕಳೆದು ಐದು ಆರು ರೂಪಾಯಿ ಸಿಗೋದು. ಅದನ್ನು ಕೈಬಿಟ್ಟು, ITC ಕಂಪನೀಲಿ ತರಬೇತಿ ಪಡೆದು ತಂಬಾಕು ಬೇಸಾಯ ಆರಂಭಿಸಿದೆ. ಮಾರ್ಚ್ ೧೫ ರಿಂದ ಏಪ್ರಿಲ್ ೧೫ರ ಒಳಗೆ ಬೀಜವನ್ನು ಬಿತ್ತನೆ ಮಾಡ್ತಿದ್ವಿ. 45ದಿನದ ಸಸಿಯನ್ನು ನಾಟಿ ಮಾಡ್ತಿದ್ವಿ. DAP, CAN, SOP ಅಂದ್ರೆ ಕ್ರಮವಾಗಿ Di Ammonium Phosphate, Calcium Ammonium Nitrate ಹಾಗೂ Sulphate of Potash ಗೊಬ್ಬರವನ್ನು ಹೊಗೆಸೊಪ್ಪಿಗೆ ಹಾಕ್ತಿದ್ವಿ. ನೆಟ್ಟ ೫೦ ದಿನಕ್ಕೆ ಎಲೆ ಬರೋದು. ಆರು ದಿನಕ್ಕೆ ಒಂದು ಬಾರಿಯಂತೆ ಆರು ಸಾರಿ ಎಲೆ ಕೀಳಬಹುದು. ಕಿತ್ತ ಎಲೆಯನ್ನು ಗಾಡೀಲಿ ಹೇರಿಕೊಂಡು ಬಂದು, ಬಿದಿರುಗಳಕ್ಕೆ ಮಾಲೆಕಟ್ಟಿ ಬ್ಯಾರನ್‌ನಲ್ಲಿ ನೇತು ಹಾಕೋವು. ಒಂದು ಬ್ಯಾರನ್‌ಗೆ ಇಂತಹ ೪೦೦ ರಿಂದ ೫೦೦ ಕಡ್ಡಿ ಹಿಡಿಯೋದು. ನಾವು ಬೆಳೀತಿದ್ದು VFC, Virginia Fuel Cured ತಂಬಾಕು. ಬ್ಯಾರನ್‌ಗೆ ಜೋಡಿಸಿದ ಮೇಲೆ, ನಾನೇ ಸೌದೆ ಒಡೆದು, ಬ್ಯಾರನ್‌ಗೆ ಹಾಕಿ ಐದು ದಿನ ಶಾಖ ಕೊಡ್ತಾ ಇದ್ದೆ. ತಂಬಾಕಿಗೆ ಕೂಲಿ ಆಳುಗಳ ಬೇಡಿಕೆ ಜಾಸ್ತಿ. ನೆಡುವಾಗ ೭, ೮ ದಿನ ೨೦ ಹೆಣ್ಣಾಳುಗಳು ಬೇಕಿತ್ತು. ಆರಂಭದಲ್ಲಿ ಐದು ರೂಪಾಯಿ ಇದ್ದ ಕೂಲಿ ಆಮೇಲೆ ೪೦ ರೂಪಾಯಿಗೆ ಏರಿತು. ಸೌದೆ ಬೆಲೇನೂ ಜಾಸ್ತಿ ಆಯಿತು. ಆದಾಯ ಸಿಕ್ತಾ ಇರಲಿಲ್ಲ. ನಾನು ಆರಂಭ ಮಾಡಿದಾಗ top class ತಂಬಾಕಿಗೆ ೪ ರೂಪಾಯಿ ೫೦ ಪೈಸೆ ಇತ್ತು. ಬಿಡುವಾಗ ೧೨ ರೂಪಾಯಿ ೫೦ ಪೈಸೆ ಆಗಿತ್ತು ಅಷ್ಟೆ. ಅದನ್ನು ಬಿಟ್ಟು ಮತ್ತೆ ನನ್ನ ೩೫ ನೇ ವಯಸ್ಸಿನಲ್ಲಿ, ಅಂದ್ರೆ ೧೯೮೨ರಲ್ಲಿ ಮತ್ತೆ ಸುಧಾರಿತ ಹಿಪ್ಪುನೇರಳೆ ತಳಿ M-5ನ ನಾಲ್ಕು ಎಕರೇಲಿ ನಾಟಿ ಮಾಡಿದ್ವಿ. ನೀರಾವರಿ ಇತ್ತು. ಪ್ರತೀಬಾರಿ ೫೦೦ ರಿಂದ ೧೦೦೦ ಮೊಟ್ಟೆ ಸಾಕ್ತಿದ್ವಿ. ವರುಷಕ್ಕೆ ಐದು ಬೆಳೆ. ಮೈಸೂರಿನಿಂದ ಮೊಟ್ಟೆ ತಂದು ಚಾಕಿ ಕಟ್ತಿದ್ವಿ. ರೇಷ್ಮೆ ಹುಳುವನ್ನು ಬಿದಿರಿನ ತಟ್ಟೇಲಿ ಸಾಕ್ತಿದ್ವಿ. ನಾವು ತರ್ತಿದ್ದು "ಸುಧಾರಿತ ಮಿಶ್ರತಳಿ" ಮೊಟ್ಟೆಯನ್ನು, ಎಲೆ ಬಿಡಿಸಿ ತಂದು ಹುಳುಗಳಿಗೆ ಹಾಕಿ ತಟ್ಟೇಲಿ ಬೇಯಿಸುತ್ತಿದ್ವಿ. ರೇಷಮ್ ಕೀಟ ಔಷಧಿ ಅಂತ ಬರೋದು, ಅದನ್ನು ಬಳಸಿ ಸೋಂಕು ನಿವಾರಣೆ ಮಾಡ್ತಿದ್ವಿ. ರೇಷ್ಮೆ ಹುಳು ಸಾಕಣೆಗೆ ಪ್ರತ್ಯೇಕವಾದ ಮನೆ ಕಟ್ಟಲಿಲ್ಲ. ವಾಸದ ಮನೆ ದೊಡ್ಡದಾಗಿ ಇದ್ದಿದ್ರಿಂದ ಸ್ವಂತ ಮನೇಲಿ ಸಾಕ್ತಿದ್ವಿ. ೨೮ ರಿಂದ ೩೦ ದಿನದಲ್ಲಿ ರೇಷ್ಮೆ ಗೂಡು ಸಿಗೋದು. ಹೆಂಗಸರು, ಮಕ್ಕಳು, ನಾವು ಎಲ್ಲ ಸೇರಿ ಮನೆಮಂದಿಯೆಲ್ಲಾ ದುಡಿಯೋವು. ನಮ್ಮ ಬಳಿ ೫ ರಿಂದ ೬ ಬಿದಿರಿನ ತಟ್ಟೆ ಇಡುವ stand, ಹಾಗೂ ೨೦೦ ಬಿದಿರಿನ ತಟ್ಟೆ ಇತ್ತು. ಹಣ್ಣಾದ ಹುಳುಗಳನ್ನು ಗೂಡು ಕಟ್ಟಲು ಬಿಡುವ ೧೨೦ ಚಂದ್ರಿಕೆ ಇತ್ತು. ಹುಳು ಹಣ್ಣಿಗೆ ಬಂದಾಗ ನಮ್ಮ ಮನೆ ಸಾಲದೆ, ಅಣ್ಣಂದಿರ ಮನೆ, ಸ್ನೇಹಿತರ ಮನೆ ಎಲ್ಲಾ ಕಡೆ ಇಟ್ಟಿದೀನಿ. ರೇಷ್ಮೆಗೂಡನ್ನು ರಾಮನಗರ, ಕೊಳ್ಳೇಗಾಲಕ್ಕೆ ಹೋಗಿ ಮಾರಿ ಬರ್ತಿದ್ದೆ. ಆರಂಭದಲ್ಲಿ ೬೦ ರಿಂದ ೭೦ ರೂಪಾಯಿ ಇದ್ದ ಗೂಡಿನ ಧಾರಣೆ ನಾವು ಬಿಡುವ ಹೊತ್ತಿಗೆ ೮೦ ರಿಂದ ೯೦ ರೂಪಾಯಿಗೆ ಬಂದಿತ್ತು. ರೇಷ್ಮೆಯಲ್ಲಿ ನಮಗೆ ಆದಾಯ, ಅನುಕೂಲ ಎರಡೂ ಇತ್ತು. ವರುಷಕ್ಕೆ ಖರ್ಚು ಕಳೆದು ಒಂದು ಲಕ್ಷ ರೂಪಾಯಿ ಸಿಗೋದು. ಆದರೆ ನನಗೆ ವರುಷದಿಂದ ವರುಷಕ್ಕೆ ಕೆಮ್ಮು ಜಾಸ್ತಿ ಆಗ್ತಾ ಬಂತು. ಪರೀಕ್ಷೆ ಮಾಡಿದ ವೈದ್ಯರು, ಸ್ವಂತ ಮನೇಲಿ ರೇಷ್ಮೆ ಸಾಕಬೇಡಿ, ಬೇರೆ ಕಡೆ ಮಾಡಿ, ಆ ಧೂಳಿನಿಂದ dust allergy ಆಗಿದೆ ಅಂದ್ರು. ರೇಷ್ಮೆ ಬಿಟ್ಟುಬಿಟ್ಟೆ. ಕೆಮ್ಮು ನಂತರ ಬರಲಿಲ್ಲ. ಅದಾದ ನಂತರ ಕಾಕಡ ಹೂವಿನ ಬೇಸಾಯ ಆರಂಭಿಸಿದೆ. ಮೊದಲು ಬೆಟ್ಟದಪುರದಲ್ಲಿ ಹುಡುಕಿದೆ. ಗಿಡ ಸಿಗಲಿಲ್ಲ. ಬಸವಾಪಟ್ಟಣಕ್ಕೆ ಹೋದೆ. ಅಲ್ಲಿ ಒಬ್ಬ ರೈತ ಅಂದ, "ಸ್ವಾಮಿ, ನಾವು ನಿಮಗೆ ಗಿಡ ಕೊಟ್ರೆ, ನೀವು ಮಾಲನ್ನು ಮಾರ್ಕೆಟ್‌ಗೆ ತರ್ತೀರಿ, ಬೆಲೆ ಇಳಿಯುತ್ತೆ" ಅಂತ. ಆಗ ನಾನು "ಕಾಕಡ ಹೂವು ಬೆಳೀಬೇಕು ಅಂತ ತೀರ್ಮಾನ ಮಾಡಿದೀನಿ, ನೀನು ಕೊಡದಿದ್ರೆ ಬೇಡ, ಅದು ಅಂಡಮಾನ್‌ನಲ್ಲಿ ಇದ್ರೂ ನಾನು ಹುಡುಕಿ ತರ್ತೀನಿ" ಅಂದೆ, ಕಡೆಗೆ ಕೆ.ಆರ್.ನಗರ ತಾಲ್ಲೂಕು ತಿಪ್ಪೂರಿಗೆ ಹೋದೆ. ಅಲ್ಲಿ ಪ್ರತಿಯೊಬ್ಬ ರೈತನೂ ೧೦೦ ಗಿಡ ಕಾಕಡ ಇಟ್ಟಿದಾನೆ. ಅಲ್ಲಿಂದ ಕಡ್ಡಿ ತಂದು, ಎರಡು ಎಕರೆಗೆ ೩೦೦ ಗುಣಿ ಹಾಕಿದೆ. ಸಾಲಿನಿಂದ ಸಾಲಿಗೆ ಎಂಟು ಅಡಿ, ಗಿಡದಿಂದ ಗಿಡಕ್ಕೆ ಎಂಟು ಅಡಿ. ಗಿಡ

ಗುತ್ತಿಯಾಗಿ ಬೆಳೆಯುತ್ತೆ. ಮೊದಲ ಎರಡು ವರುಷ ಉತ್ಪತ್ತಿ ಇಲ್ಲ. ಹಟ್ಟಿ ಗೊಬ್ಬರ ಹಾಕ್ತಿದ್ವಿ. ಮೂರು ವರುಷದಲ್ಲಿ ಗಿಡಗಿಡ ಸೇರುವವರೆಗೂ ಉಳುಮೆ ಮಾಡ್ತಿದ್ವಿ. ನಂತರ ಗಿಡದ ಬುಡ ಮಾತ್ರಾ ಕುಕ್ತಿದ್ವಿ. ದಿನಕ್ಕೆ ೨೦ ರಿಂದ ೨೫ ಕೇಜಿ ಹೂವು ಸಿಕ್ಕೋದು. ಮನೆಯವರೆಲ್ಲಾ ಸೇರಿ ಬೆಳಗ್ಗೆ ಆರು ಘಂಟೆಯಿಂದ ಹತ್ತು ಘಂಟೆಯವರೆಗೆ ಹೂವು ಕೀಳ್ತಿದ್ವಿ. ಹುಣಸೂರಿನಲ್ಲಿ ಬಿಡಿಹೂವನ್ನೇ ಮಾರ್ತಿದ್ವಿ. ಹತ್ತು ರೂಪಾಯಿಯಿಂದ ಮೂವತ್ತು ರೂಪಾಯಿವರೆಗೂ ಮಾರಾಟ ಆಗ್ತಿತ್ತು. ಹೂವನ್ನು ಕಡ ಕೊಡಬೇಕಿತ್ತು. ಅದೇ ಅಲ್ಲದೆ ಹೂವಿಗೆ ಕೀಟದ ಬಾಧೆ ಜಾಸ್ತಿಯಾಯ್ತು. ಬಾಗಾಯ್ತು ಮಾಡದಿದ್ರೆ ಉಳಿಗಾಲವಿಲ್ಲ ಅಂತ, ಎರಡೂವರೆ ಎಕರೆ ಅಡಿಕೆ, ನಾಲ್ಕು ಎಕರೆ ತೆಂಗು, ಎರಡು ಎಕರೆ ಮಾವು ಅಲಾಯದ ಹಾಕಿದೆ. ಮಾವಿನ ತೋಟದಲ್ಲಿ ಸಪೋಟ, ದಾಳಿಂಬೆ ಹಾಕಬೇಕು ಅಂತ ಇತ್ತು. ನೀರಿನ ಅಭಾವದಿಂದ ಕೈಬಿಟ್ಟೆ. ನಂತರ ಅಡಿಕೆ ಸಸಿಗಳನ್ನು ಮಾರಾಟ ಮಾಡಬೇಕು ಅಂತ ಅನ್ನಿಸ್ತು. ಒಳ್ಳೆ ತಾಯಿಮರದಿಂದ ಗೋಟನ್ನು ತಂದು ಹತ್ತು ವರುಷದ ಕೆಳಗೆ Nursery ಆರಂಭಿಸಿದೆ. ೪೦ ರಿಂದ ೪೫ ವರುಷ ಆಗಿರುವ ತಾಯಿಮರ. ಸುಮಾರು ೧೦೦೦ ಅಡಿಕೆ ಫಸಲು ಇರಬೇಕು. ಅಡಿಕೆ ಅಂಡು ವಡಕಲಾಗಿರಬಾರದು. ಕೆಂಪು ಅಡಿಕೆ ತಂದು ನೀರಿಗೆ ಹಾಕಿದಾಗ ಗೋಟು ಮೇಲ್ಮುಖವಾಗಿ ನಿಲ್ಲಬೇಕು. ಸಿಪ್ಪೆ ತೆಳುವಾಗಿರಬೇಕು. ಮಂದವಾಗಿರಬಾರದು. ಅಂತಹ ಗೋಟನ್ನು ಜನವರೀಲಿ ಕಿತ್ತು ತಂದು ಪ್ಲಾಸ್ಟಿಕ್ ಪ್ಯಾಕೆಟ್ಟಿಗೆ ಮಣ್ಣುಗೊಬ್ಬರ ತುಂಬಿ ಗೋಟು ಮೇಲ್ಮುಖವಾಗಿ ಬರುವಂತೆ ನಾಟಿ ಮಾಡಬೇಕು. ಅಡಿಕೇನ ಚೀಲದಲ್ಲಿ ಕಟ್ಟಿ, ಬಚ್ಚಲು ಮನೇಲಿ ಇಟ್ಟು ಪ್ರತಿದಿನ ಚೀಲಕ್ಕೆ ನೀರು ಬೀಳೋದ್ರಿಂದ ಮೊಳಕೆ ಬರುತ್ತೆ. ಅಥವಾ ಪ್ಲಾಸ್ಟಿಕ್ ಚೀಲಕ್ಕೆ ಹಾಕಿ ಪ್ರತಿದಿನ ನೀರು ಕೊಡ್ತಿದ್ರೆ ಎರಡು ತಿಂಗಳಲ್ಲಿ ಮೊಳಕೆ ಬರುತ್ತೆ. ಎರಡು ಗರಿ ಆದ ಮೇಲೆ, ಒಂದು ಅಡಿ ಆಳ ಹಾಗೂ ಮೂರು ಅಡಿ ಅಗಲದ ಕಾಲುವೆ ತೋಡಿ, ಅದರಲ್ಲಿ ಪ್ಯಾಕೆಟ್‌ಗಳನ್ನು ಮೂರು ಅಂಗುಲ ಅಂತರವಿರುವಂತೆ ಜೋಡಿಸಿ, ಮಣ್ಣು ಏರಿಸಿ, ಪಟ ಕಟ್ಟಬೇಕು. ವಾರಕ್ಕೆರಡು ಬಾರಿ ನೀರು ಕೊಡಬೇಕು. ಒಂದೇ ವರುಷದಲ್ಲಿ ಗಿಡ ಮಾರಾಟ ಆಗೋದು. ನಾಲ್ಕು ರೂಪಾಯಿಯಿಂದ ಎಂಟು ರೂಪಾಯಿವರೆಗೂ ಮಾರಾಟ ಆಗೋದು. ವರುಷಕ್ಕೆ ಐದರಿಂದ ಆರು ಸಾವಿರ ಸಸಿ ಮಾಡ್ತಿದ್ದೆ. ೩೫ ರಿಂದ ೪೦ ಸಾವಿರ ಆದಾಯ ಸಿಗೋದು. ಹೀಗೆ ವ್ಯವಸಾಯದಲ್ಲಿ ಏನಾದರೂ ಸಾಧನೆ ಮಾಡುವ, ಪ್ರಯೋಗ ಮಾಡುವ ಆಸೆ. ನಾನು, ನನ್ನ ಸ್ನೇಹಿತ ಇಬ್ಬರೂ ಸೇರಿ ಟಿಲ್ಲರ್ ಖರೀದಿಸಿದೆವು. ಒಂದು ಲಕ್ಷ ಹದಿನೆಂಟು ಸಾವಿರ ರೂಪಾಯಿ ಆಯ್ತು. ಅಡಿಕೆ ತೋಟದಲ್ಲಿ ಉಕ್ಕೆ ಹೊಡೆಯಲು ಅನುಕೂಲ. ೧೫ ರಿಂದ ೨೦ ದಿನಕ್ಕೆ ಒಂದು ಉಕ್ಕೆ ಹೊಡೀಬಹುದು. ಟಿಲ್ಲರ್ ದುಡ್ಡು ನಮಗೆ ವಾಪಸ್ಸು ಬಂದಿದೆ,' ಅಂತ ಹೇಳಿದ್ರು ಮುತ್ತಣ್ಣ. ಮತ್ತೆ ಮುಂದುವರೆಸಿ, 'ನಮ್ಮ ಮನೆಯ ಹೆಣ್ಣುಮಕ್ಕಳ ಬಗ್ಗೆ ವಿಶೇಷವಾಗಿ ಹೇಳಬೇಕು. ಅವರು ನಮ್ಮ ಬದುಕಿಗೆ ನೆರವಾಗಿದ್ದಾರೆ, ನಮ್ಮ ಸಮಕ್ಕೆ ದುಡಿದಿದ್ದಾರೆ, ಹಾಗೇ ನಮ್ಮ ಕೈ ಬಿಗಿ ಮಾಡಿದ್ದಾರೆ. ವ್ಯವಸಾಯದಿಂದ ನನಗೆ ತೃಪ್ತಿ ಇದೆ. ಸುಳ್ಳು, ಮೋಸ, ವಂಚನೆ ಮಾಡಬಾರದು, ದಾನಧರ್ಮ ಮಾಡಬೇಕು ಅನ್ನುವುದು ನನ್ನ ತತ್ತ್ವ. ನನ್ನ ತಂದೆ 'ಮಕ್ಕಳು ಓದಲಿ' ಅಂತ ಶಾಲೆಗೆ ಒಂದು ಎಕರೆ ಜಮೀನನ್ನು ದಾನವಾಗಿ ನೀಡಿದ್ರು. ನನ್ನ ತಾತ ವಿಶ್ವನಾಥ ಅನ್ನುವವರಿಗೆ ಒಂದೂವರೆ ಎಕರೆ ಜಮೀನನ್ನು ದಾನವಾಗಿ ನೀಡಿದ್ರು. ನನ್ನ ತಂದೆ ಬೇರೆಯವರಿಗೆ ನೆರವಾಗಲು ಎರಡು ಎಕರೆ ಜಮೀನು ಬಿಟ್ಟು, ಹದಿನೇಳು ಗುಂಟೆ ತೋಟ ತೊಗೊಂಡರು. ದಾನಧರ್ಮ ನಮ್ಮ ರಕ್ತದಲ್ಲಿ ಬಂದಿದೆ, ಆದರೆ ನನ್ನ ಮಕ್ಕಳಿಗೆ ಮಾತ್ರ ವ್ಯವಸಾಯ ಬೇಡ ಅನ್ನಸಿದೆ' ಅಂತ ಮಾತು ಮುಗಿಸಿದ್ರು ಮುತ್ತಣ್ಣ. ಚರ್ಚೆ ಆರಂಭವಾಯ್ತು. ಇವತ್ತಿನ ಯುವಕರನ್ನು ವ್ಯವಸಾಯ ಆಕರ್ಷಿಸುತ್ತಿಲ್ಲ, ವಿದ್ಯಾಭ್ಯಾಸ, ಪಟ್ಟಣದ ಮೋಹ ಹೆಚ್ಚಾಗಿದೆ. ತಂದೆ ತಾಯಂದಿರು ಜತನದಿಂದ ಕಾಪಾಡಿದ ಕೃಷಿ ಹೀಗೆ ಮಣ್ಣಾಗಬೇಕೆ? ಇದರಲ್ಲಿ ಹಿರಿಯರದ್ದೂ ತಪ್ಪಿದೆಯೇ? ಈ ವಿಷಯಗಳನ್ನು ಕುರಿತು ವಾದಸರಣಿಗಳು ನಡೆದ್ವು. 'ಇವತ್ತಿನ ಕೃಷಿ ಕಷ್ಟ. ವ್ಯವಸಾಯಗಾರನಾಗಿ ಹುಟ್ಟುವುದು ಒಂದು ಶಾಪ' ಅಂದ್ರು ಮುತ್ತಣ್ಣ. ಇದು ಒಂದು ರೀತಿ ಘೋಷವಾಕ್ಯವಾಯಿತು. 'ಸಂಕೇತಿಗಳ ವಿಶಿಷ್ಟ ಕೃಷಿ ಪರಂಪರೆ ಉಳಿಸಿ' ಎಂದಷ್ಟೇ ಹೇಳಿ ಅವರ ಮನೆಯಿಂದ ಹೊರಬಂದೆವು.



ತೋಟದಲ್ಲಿ ಸಸಿಗಳಿಗೆ ನೀರು ಹಾಯಿಸುತ್ತಿರುವ ಗಿರೀಶ್ (ನಾಗರಾಜ್ ಅವರ ಮಗ)

ಉ) ಸಿ.ಎನ್ ಸುಬ್ಬರಾಯ (ಅಪ್ಪಯ್ಯ) ಇ/ಮ ಕೆ. ನಾರಾಯಣಪ್ಪ
ಚಿಲ್ಕುಂದ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08222-241138



ಮಮತೆಯಿಂದ ತಾವು ಬೆಳೆಸಿದ ಎಲೆಹಂಬು ಹಿಡಿದು ನಿಂತಿರುವ ಸಿ.ಎನ್.ಸುಬ್ಬರಾಯ : ಚಿಲ್ಕುಂದ

ಹೃದಯದಲ್ಲಿರುವ ಸ್ವಾಮಿಗೆ ಕೈ ಮುಗಿದ್ರೆ ಸಾಕು. ಕಾಶೀಯಾತ್ರೆ ಯಾಕೆ ಬೇಕು? ಹಿಂದೆ ಕಾಶೀಯಾತ್ರೆಗೆ ನಡೆದುಕೊಂಡು ಹೋಗೋರು. ಹೋದೋರು ಬರ್ತಾರೆ ಅನ್ನುವ ನಂಬಿಕೆ ಇರಲಿಲ್ಲ. ಆದರೆ ಬರೀ ಕಾಶೀಯಾತ್ರೆ ಮಾಡಿದರೆ ಸಾಕೆ? ಹೃದಯ ಶುದ್ಧವಿರಬೇಡವೇ? ರಾಮನನ್ನು ಪೂಜೆ ಮಾಡುವುದಕ್ಕಿಂತ ಆತನ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ಅದು ನಿಜವಾದ ಪೂಜೆ. ತೋಟದ ವ್ಯವಸಾಯವೇ ನನಗೆ ದೇವರು. ನಮ್ಮ ಹೃದಯ ಶುದ್ಧವಾಗಿದ್ರೆ ಸಾಕು, ಆ ಸ್ವಾಮಿಗೆ ಬೇರೆ ಪೂಜೆ ಬೇಕಿಲ್ಲ.

ಕುಪ್ಪಹಳ್ಳಿಯ ಸುಬ್ರಹ್ಮಣ್ಯ ಹಾಗೂ ಲಕ್ಷ್ಮೀದೇವಮ್ಮ ಅವರಿಗೆ ಮೂರು ಜನ ಗಂಡು ಮಕ್ಕಳು. ಇದ್ದ ಆಸ್ತಿ, ೧೦ ಗುಂಟೆ ಬಾಗಾಯ್ತು, ಅರ್ಧ ಎಕರೆ ಹೊಲ ಮಾತ್ರಾ. ಜೀವನನಿರ್ವಹಣೆ ಕಷ್ಟವಾದ್ದರಿಂದ, ಇವರ ಮಕ್ಕಳಾದ ಕೆ. ನಾಗಪ್ಪಯ್ಯ ಹಾಗೂ ಕೆ. ನಾರಾಯಣಪ್ಪ ಚಿಲ್ಕುಂದಕ್ಕೆ ವಲಸೆ ಬಂದ್ರು. ಚಿಲ್ಕುಂದದಲ್ಲಿ ಬೋದಗಟ್ಟೆ ಎನ್ನುವ ಪಾಳುಭೂಮಿ ಖರೀದಿಸಿದ್ರು. ೧೦ ಎಕರೆ ಖುಷ್ಕಿ, ಎರಡು ಎಕರೆ ತರಿ ಹಾಗೂ ಐದು ಎಕರೆ ಬಾಗಾಯ್ತನ್ನು ಮೂರು ಸಾವಿರ ರೂಪಾಯಿಗೆ ಖರೀದಿ ಮಾಡಿದ್ರು. ಎಲ್ಲವೂ ಪಾಳು. ನಾರಾಯಣಪ್ಪ ಕೆ.ಆರ್.ಪೇಟೇಲಿ L.S. ಓದಿದ್ರೆ, ನಾಗಪ್ಪಯ್ಯ ಜ್ಯೋತಿಷ್ಯಶಾಸ್ತ್ರದಲ್ಲಿ, ಗಣಿತದಲ್ಲಿ ಮಹಾಮೇಧಾವಿ. ಇಬ್ಬರೂ ಸೇರಿ ಯಾರಿಗೂ ಒಂದು ಪೈಸೆ ಕೂಲಿ ಕೊಡದೆ, ಹಗಲು ರಾತ್ರಿ ದುಡಿದು, ಜಮೀನು ಅಭಿವೃದ್ಧಿ ಮಾಡಿದ್ರು. ಕೆ.ನಾರಾಯಣಪ್ಪ ಮದುವೆಯಾದದ್ದು ಕಟ್ಟೇಪುರದ ಅನಂತಲಕ್ಷ್ಮಮ್ಮನವರನ್ನು. ಇವರ ಮಗನೇ ಸಿ.ಎನ್. ಸುಬ್ಬರಾಯ, ಅಥವಾ ಈಗ ಊರವರು ಪ್ರೀತಿಯಿಂದ ಕರೆಯುವ 'ಅಪ್ಪಯ್ಯ ಮಾವಯ್ಯ'. 'ಇನ್ನೊಬ್ಬರಿಗೆ ನಾವು ಪಟ್ಟ ಕಷ್ಟವನ್ನು ಹೇಳಿಕೊಳ್ಳಬಾರದು. ಹಗಲೂ ರಾತ್ರಿ ತಂದೆ ತೋಟವನ್ನು ಕಾವಲು ಕಾಯ್ತಿದ್ರು, ಕಷ್ಟಪಟ್ಟು ಜಮೀನು ಮಾಡಿದ್ರು. ಅದನ್ನು ನೋಡಿ ನನ್ನ ಮನಸ್ಸು ಪರಿವರ್ತನೆ ಆಯ್ತು' ಅಂತ ಸುಬ್ಬರಾಯರು ಹೇಳುವಾಗ ಕಣ್ಣುಗಳಲ್ಲಿ ಮಿಂಚು ಹೊಳೆದಿತ್ತು. ಸಿ.ಎನ್.ಸುಬ್ಬರಾಯರು ಓದಿದ್ದು Primary School, ಮದುವೆಯಾದದ್ದು ಕುಪ್ಪಹಳ್ಳಿಯ ತಿಪ್ಪಣ್ಣನವರ ಮಗಳು ಪಾರ್ವತಮ್ಮ ಅವರನ್ನು. ನೇರವಾಗಿ ತಮ್ಮ ವ್ಯವಸಾಯದ ಅನುಭವದ ಬಗ್ಗೆ ಮಾತನಾಡಿದ್ರು. 'ಅಡಿಕೆ ನಾಟಿ ಮಾಡುವ ಭೂಮಿ ಕೆಳಗಡೆ ಅರೆ ಇರಬಾರದು. ಅಂದ್ರೆ ಗಟ್ಟಿ ಇರಬಾರದು. ೨೫ ಅಡಿವರೆಗೂ ಅರೆ ಸಿಗಬಾರದು. ಹಳ್ಳದ ಜಮೀನಿನಲ್ಲಿ, ಎರೆ ಭೂಮಿಯಲ್ಲಿ ಅರೆ ಇರೋದಿಲ್ಲ. ಅದಕ್ಕೇ ಅಡಿಕೇನ



ದುಡಿದು ಮುಪ್ಪಾದ ಸಿ.ಎನ್.ಸುಬ್ಬರಾಯ :ಸಂಜೆಗತ್ತಲಲ್ಲಿ ಮಕ್ಕಿಯ ಮೇಲೆ: ಚಿಲ್ಕುಂದ




ತೋಟದ ಬಿದಿರಿನ ತಡಿಕೆಗೆ ಬೀಗಹಾಕಿ ಮನೆಗೆ ಹೊರಟ ಸಿ.ಎನ್.ಸುಬ್ಬರಾಯ: ಚಿಲ್ಕುಂದ

ಕರಿನೆಲದಲ್ಲಿ ಮಾಡಬೇಕು. ಅಡಿಕೇನ ಎರಡೂವರೆಯಿಂದ ಮೂರು ಅಡಿ ಆಳದಲ್ಲಿ ನೆಡಬೇಕು. ೮೦ ರಿಂದ ೧೦೦ ಅಡಿ ಅಡಿಕೆಮರ ಬೆಳೆಯೋದ್ರಿಂದ, ಮೇಲೆ ತೇಲಿಸಿ ಸಸಿ ನೆಡಬಾರದು. ೨೦ ಅಡಿ ಆಳದವರೆಗೂ ಅಡಿಕೆ ಬೇರು ಹೋಗುತ್ತೆ. ಅಡಿಕೆಯ ತಳಬೇರು, ನೀರಿರುವವರೆಗೂ ಆಳಕ್ಕೆ ಹುಡುಕಿಕೊಂಡು ಹೋಗಿ ಮರಕ್ಕೆ ರಕ್ಷಣೆ ನೀಡುತ್ತೆ. ಮೇಲುಗಡೆ ಬರುವ ಹೂವುಬೇರು ಗೊಬ್ಬರ ಗೋಡಿನ ಸಾರವನ್ನು ಹೀರಿ ಮರವನ್ನು ಸಾಕುತ್ತೆ. ಹೀಗೆ ಬೆಳೆದ ಮರ ಗಾಳಿ ಬಂದಾಗ ತೂಗಾಡುತ್ತೇ ವಿನಃ ಮರ ಬೀಳೋದಿಲ್ಲ. ಅಡಿಕೆ ಜತೇಲಿ ದೂರದೂರಕ್ಕೆ ಬಾಳೆ ಹಾಕಿದ್ರೆ ನೂರು ವರುಷವಾದ್ರೂ ಬದುಕುತ್ತೆ. ಅಡಿಕೆಗೆ ರಾಸಾಯನಿಕ ಗೊಬ್ಬರ ಹಾಕೋಲ್ಲ. ಕೆರೆಗೋಡು ಹಾಗೂ ನಾಟಿ ಗೊಬ್ಬರ ಮಾತ್ರಾ ಹಾಕ್ತೀನಿ. ಮರದ ಸುತ್ತಾ ಪಾತಿ ಮಾಡಿ, ಎರಡರಿಂದ ಮೂರು ಮಂಕರಿ ಗೊಬ್ಬರ ಹಾಕ್ತೀನಿ. ಅಡಿಕೆ ತೋಟದಲ್ಲಿ ತೇವ ಜಾಸ್ತಿ ಇರಬಾರದು. ಖಾಯಿಲೆ ಬಂದ ಮರದ ಬೇರಿಗೆ ಮತ್ತೊಂದು ಮರದ ಬೇರು ತಗುಲಿದ್ರೆ ಖಾಯಿಲೆ ಬರುತ್ತೆ. ಅದಕ್ಕೆ ಖಾಯಿಲೆ ಬಂದ ಮರವನ್ನು, ಕಾಲುವೆ ತೆಗೆದು ಪ್ರತ್ಯೇಕಿಸಬೇಕು. ಅಡಿಕೆ ಹಾಗೂ ಎಲೆ ಹಂಬಿನ ಕೆಲಸವನ್ನು, ೭೬ರ ನನ್ನ ಈ ವಯಸ್ಸಿನಲ್ಲೂ ಸ್ವತಃ ಮಾಡ್ತೀನಿ. ಆಳುಗಳಿಗೆ ಪ್ರೀತಿ ಇರೋಲ್ಲ. ಸ್ವಲ್ಪ ವೆತ್ಯಾಸವಾದ್ರೂ ಹಂಬು ಉಳಿಯೋಲ್ಲ. ಎಲೆ ಹಂಬನ್ನು ಮೂರು ನಾಲ್ಕು ಕಡೆ ತೆಕ್ಕೆ ಬಿಟ್ಟಿರುತ್ತೀವಿ. ಅದು ಹೋಗಿರೋಲ್ಲ. ತೆಕ್ಕೆ ಜೀವಂತವಾಗಿರುತ್ತೆ. ಅದು ಎಲೆ ಹಂಬಿಗೆ ಶಕ್ತಿ ನೀಡುತ್ತೆ. ಆ ವಿಚಾರ ನಮಗೆ ಮಾತ್ರಾ ಗೊತ್ತಿರುತ್ತೆ. ಹಾಗಾಗಿ ಕೂಲಿಯಾಳುಗಳಿಗೆ ಬಿಡೋಲ್ಲ. ವ್ಯವಸಾಯ ಮಾಡದಿದ್ರೆ ಜೀವನ ಇರಲಿಲ್ಲ. ಹಿಂದೆ ನಮ್ಮ ತಂದೆ ಸಂತೆಗೆ ಹೋದ್ರೆ, ನಾನು ತೋಟದ ಕೆಲಸ ಮಾಡ್ತಿದ್ದೆ. ನಾವು ಜಾಸ್ತಿ ಕೆಲಸ ಮಾಡಿ, ಆಳುಗಳ ಕೈಯಲ್ಲಿ ಕಡಿಮೆ ಕೆಲಸ ಮಾಡಿಸಬೇಕು, ಇದು ನನ್ನ ತತ್ತ್ವ ಎಂದರು ಅಪ್ಪಯ್ಯಮಾವಯ್ಯ.

'ನಿಮ್ಮ ಜೀವನದ ಮರೆಯಲಾಗದ ಘಟನೆ?' ಎಂದಾಗ, 'ಬೇಕಾದಷ್ಟಿವೆ' ಎಂದರು. 'ಕೆಲವನ್ನು ಹೇಳಿ' ಎಂದಾಗ ಮಾತಿಗೆ ಆರಂಭಿಸಿದ್ರು. 'ನನಗೆ ೧೨, ೧೩ ವರುಷ ಇರಬಹುದು, ತೋಟದಲ್ಲಿ ನನ್ನನ್ನು ಯಾತ ಎತ್ತಲು ಬಿಟ್ಟು, ತಂದೆ ಹಾಗೂ ದೊಡ್ಡಪ್ಪ ದೂರದಲ್ಲಿ ಕೆಲಸ ಮಾಡ್ತಿದ್ರು. ಮೂರು ವರುಷದ ಹಳೆಯ ಮರ, ಲಡ್ಡಾಗಿತ್ತು. ನಾನು ಏತ ಎಳೆದಾಗ ಮೂರೂ ಮರ ನನ್ನ ಮೇಲೆ ಬಿತ್ತು. ನಾನು ೧೮ ಅಡಿ ಆಳದ ಬಾವಿಗೆ ಬಿದ್ದೆ. ಐದಾರು ಅಡಿ ನೀರಿತ್ತು. ನನ್ನ ದೊಡ್ಡಪ್ಪ ಓಡಿಬಂದು, ಭಾವಿಗೆ ಧುಮುಕಿ ನನ್ನ ಉಳಿಸಿದ್ರು. ಸೊಂಟಕ್ಕೆ ಏಟಾಗಿ ಮೂರು ತಿಂಗಳು ಮನೇಲಿದ್ದೆ. ನನಗೆ ೨೫ ವರುಷ ಇದ್ದಾಗ, ರಸ್ತೆ ಪಕ್ಕದ ಮಾವಿನ ಮರದಲ್ಲಿ ಮಾವಿನಕಾಯಿ ಕುಯ್ಯಲು ಹೋಗಿದ್ದೆ. ತುದೀವರೆಗೆ ಏರಿದಾಗ, ತುದಿಗೊಂಬೆ ಮುರೀತು. ಕೆಳಕ್ಕೆ ಜಾರಿದಾಗ, ಸಣ್ಣಕೊಂಬೆ ರಕ್ಷಣೆ ನೀಡಿತು. ಅದು ಹ್ಯಾಗೆ ಆ ಪುಟ್ಟ ರೆಂಬೆ ರಕ್ಷಣೆ ನೀಡಿತೋ, ನಾನು ಹ್ಯಾಗೆ ಕೆಳಗೆ ಬಂದೆನೋ ಒಂದೂ ಗೊತ್ತಿಲ್ಲ. ಎಲ್ಲವೂ ದೈವಕೃಪೆ. ೧೯೮೦ರಲ್ಲಿ ನಾನು ಮನೆ ಹಿಂದೆ ಹೊಸದಾಗಿ ಕೋಣೆ ಕಟ್ಟುವಾಗ ಎಲೆಕ್ಟ್ರಿಕ್ ಶಾಕ್ ಹೊಡೀತು. ಅಕಸ್ಮಾತ್ತಾಗಿ ಅಲ್ಲಿಗೆ ಬಂದ ನನ್ನ ಮಗ ಆಘಾತಕ್ಕೆ ಒಳಗಾಗಿದ್ದ ನನ್ನನ್ನು ಮುಟ್ಟಿದನಂತೆ. ಅವನಿಗೂ ಶಾಕ್ ತಟ್ಟಿ, ಅವನ ಕೈ ಕೊಕ್ಕರೆಯಾಯ್ತಂತೆ. ಅದೇ ಪರಿಸ್ಥಿತಿಯಲ್ಲಿ ಹೋಗಿ main switch ಆಫ್ ಮಾಡಿದಾಗ, ನಾನು ಕೆಳಗೆ ಬಿದ್ದೆನಂತೆ. ಅಲ್ಲೇ ಕೆಲಸ ಮಾಡ್ತಿದ್ದ ವಡ್ಡನೊಬ್ಬ ತುಂಬಿದ ಕೊಡದ ನೀರನ್ನು ನನ್ನ ಮೇಲೆ ಸುರಿದನಂತೆ. ಅವನ ಕೈಯ ನೀರ ಮಹಿಮೆಯಿಂದ ಎಚ್ಚರವಾಯ್ತು' ಎಂದು ನಕ್ಕರು ಅಪ್ಪಯ್ಯ. ನಿಮ್ಮ ವೈಯಕ್ತಿಕ ಬದುಕಿನ ಬಗ್ಗೆ ಹೇಳಿ, ಅಂದ್ರೆ 'ನನಗೆ ೨೧ನೇ ವಯಸ್ಸಿನಲ್ಲಿ ಮದುವೆಯಾಯ್ತು. ನನ್ನ ಮಾವನವರು ತಂದೆಯ ಸ್ನೇಹಿತರು. ನಾನು ನನ್ನ ಹೆಂಡತಿಯ ಕೈಯಲ್ಲಿ ಇದುವರೆಗೆ ತೋಟದ ಕೆಲಸ ಮಾಡಿಸಿಲ್ಲ. ಮನೆಕೆಲಸ ಮಾತ್ರ ಅಷ್ಟೆ. ಹೆಚ್ಚೆಂದರೆ ತೋಟಕ್ಕೆ ಊಟ ತಂದಿರಬಹುದು ಅಷ್ಟೆ. ನನಗೆ ನಾಲ್ಕು ಗಂಡು ಹಾಗೂ ಎರಡು ಹೆಣ್ಣು. ಎಲ್ಲರನ್ನೂ ವ್ಯವಸಾಯದಲ್ಲೇ ಓದಿಸಿದೆ. ನಾನು ಇನ್ನೊಬ್ಬರ ಸಹವಾಸಕ್ಕೆ ಹೋಗಿಲ್ಲ. ನನ್ನ ಮಕ್ಕಳೂ ಕಷ್ಟದಲ್ಲಿಯೇ ಓದಿದ್ದು.

ಪಂಚೆಯಾದ್ರೆ ಪಂಚೆ, ನಿಕ್ಕರಾದ್ರೆ ನಿಕ್ಕರೆ. ನನ್ನ ಮಗ MA ಓದುವಾಗಲೂ ಕಾಲಿಗೆ ಚಪ್ಪಲಿ ಹಾಕ್ತಿರಲಿಲ್ಲ. ಕಷ್ಟದ ಕಾಲದಲ್ಲಿ ಅಷ್ಟೂ ಜನ ಒಂದೂವರೆ ಸೇರು ಅನ್ನದಲ್ಲಿ ಇಡೀ ದಿನ ಕಳೆದಿರೋದೂ ಉಂಟು. ನನ್ನ ಗಂಡು ಮಕ್ಕಳಲ್ಲಿ ಮೂರು ಜನ ಕೆಲಸದಲ್ಲಿದ್ದಾರೆ. ಕೊನೇ ಮಗ ಸುಬ್ರಹ್ಮಣ್ಯ BA ಮಾಡಿ ನನ್ನ ಜತೆ ವ್ಯವಸಾಯ ಮಾಡ್ತಿದಾನೆ. ಎಲ್ಲ ಮಕ್ಕಳೂ ವ್ಯವಸಾಯದಲ್ಲಿ ಸಹಾಯ ಮಾಡ್ತಿದ್ರು. ೮೪ರಲ್ಲಿ ಬೋರ್‌ವೆಲ್ ಕೊರೆಸಿದ್ವಿ. ಮಗ ಈಗ ಮುತುವರ್ಜಿಯಿಂದ ವ್ಯವಸಾಯ ಮಾಡ್ತಿದಾನೆ. ಮುಕ್ಕಾಲು ಕೆಲಸ ಈಗ ಅವನದ್ದೆ. ಐದು ವರುಷದ ಹಿಂದೆ ಒಂದೂವರೆ ಎಕರೆ ಜಮೀನನ್ನು ಒಂದೂವರೆ ಲಕ್ಷ ರೂಪಾಯಿ ಕೊಟ್ಟು ಖರೀದಿ ಮಾಡಿದ್ವಿ. ಅರೂಪಕ್ಕೆ ತಿರುಗಿದ್ದ ತೋಟ ಅದು. ಸ್ವಂತ ಕೆಲಸ ಮಾಡಿ, ಸುಮಾರು ಎರಡು ಲಕ್ಷ ರೂಪಾಯಿ ಖರ್ಚು ಮಾಡಿ, ತೋಟಾನ ಉಳಿಸಿದ್ವಿ. ಈಗ ಎರಡು ಲಕ್ಷ ಅಡಿಕೆ ಸಿಗ್ತಿದೆ. ಮಗ "ಬೇರೆ ಬೇರೆ ಬೆಳೆ ಮಾಡೋಣ" ಅಂದ. ಆದರೆ ನಾನು, "ನಾವು ಒಂದನ್ನು ಉಳಿಸೋಣ" ಎಂದೆ. "ಕಾಫಿ ಹಾಕಿ, ವೆನಿಲ್ಲಾ ಹಾಕಿ" ಅಂದ್ರು ಬೇರೆಯವರು. "ಎರಡು ಕಡೆ ನಂಬಿದ್ರೆ, ಅದೂ ಆಗೋಲ್ಲ, ಇದೂ ಆಗೋಲ್ಲ. ಕಾಳುಮೆಣಸಿಗಿಂತ, ಎಲೆ ಹಂಬು ಉತ್ತಮ" ಅಂತ ಮಗನಿಗೆ ಹೇಳಿದೆ. ಈಗ ನಾಲ್ಕೂವರೆ ಎಕರೆ ಜಮೀನಿನಲ್ಲಿ ನಾವು ತೃಪ್ತಿಯಿಂದ ಇದ್ದೇವೆ' ಅಂದ್ರು ಸುಬ್ಬರಾಯರು.



ವ್ಯವಸಾಯದಲ್ಲಿ ಜತೆಯಾಗಿರುವ ತಮ್ಮ ಮಗನೊಂದಿಗೆ ಸಿ.ಎನ್.ಸುಬ್ಬರಾಯ: ಅಡಿಕೆ ಮೂಟೆಗಳ ಹಿನ್ನೆಲೆ: ಚಿಲ್ಕುಂದ

'ವ್ಯವಸಾಯ ಮಾಡ್ತಿರುವ ನಿಮ್ಮ ಮಗನಿಗೆ ಹೆಣ್ಣು ಸಿಗಲು ಕಷ್ಟವಾಗಲಿಲ್ವೆ' ಅಂದಾಗ, '೯೩ರಲ್ಲಿ ಅವನ ಮದುವೆ ಮಾಡಿದೆ. ಸೊಸೆ ಕೃಷ್ಣಾಪುರದವಳು, ಬೆಂಗಳೂರಲ್ಲಿ BA ಓದಿದೋಳು. ಹೆಣ್ಣು ನೋಡಲು ಹೋದಾಗ ಅವಳನ್ನೇ ಅಲಾಯಧ ಕರೆದು ಕೇಳಿದೆ, "ಏನಮ್ಮಾ ನೀನು ಓದಿರೋಳು, ನಮ್ಮ ಹುಡುಗನನ್ನು ನೀನು ಮದುವೆ ಮಾಡಿಕೊಂಡ್ರೆ, ಹೊರಗೆ ಎಲ್ಲೂ ಹೋಗೋಕೆ ಆಗೋಲ್ಲ, ನಮ್ಮ ಹುಡುಗ ಕೆಲಸಕ್ಕೆ ಹೋಗೋಲ್ಲ. ನೀನು ಹಳ್ಳೀಲಿ ಇರಬೇಕಾಗುತ್ತೆ" ಅಂದೆ. ಆಗ ಅವಳು ಹೇಳಿದಳು, "ನಾವು ಹೆಂಗಸರು, ಮನೇಲಿರ್‍ತೀವಿ, ತಂದು ಹಾಕಿದ್ದರಲ್ಲಿ ಅಚ್ಚುಕಟ್ಟಾಗಿ ಸಂಸಾರ ನಿರ್ವಹಣೆ ಮಾಡ್ತೀವಿ. ನನಗೆ ಹಳ್ಳಿಯಾದ್ರೂ ಒಂದೆ, ಪಟ್ಟಣವಾದ್ರೂ ಒಂದೇನೆ. ನಾನು ಮನೆಕೆಲಸ ಮಾಡಿಕೊಂಡು, ಹಳ್ಳೀಲಿ ಸುಖವಾಗಿ ಇರ್‍ತೀನಿ" ಅಂದ್ಲು. ನನಗೂ ಸಂತೋಷವಾಯ್ತು. ಹೆಣ್ಣು ಮಕ್ಕಳಲ್ಲಿ ಉನ್ನತ ದರ್ಜೇಲಿ ಇರಬೇಕೂ ಅಂತ ಇರುತ್ತೆ. ಅದಕ್ಕೆ ನನ್ನ ಸೊಸೆ ಅಪವಾದ. ನನ್ನ ಪ್ರಕಾರ ಹಳ್ಳಿ ಆರಾಮ. ಪಟ್ಟಣದ ಜೀವನ ಯಾಂತ್ರಿಕ. ವ್ಯವಸಾಯದಲ್ಲಿ ವಿರಾಮ ಇರುತ್ತೆ. ವ್ಯಕ್ತಿಸ್ವಾತಂತ್ರ್ಯ ಇರುತ್ತೆ. ಪೇಟೇಲಿ ೫೦ ಸಾವಿರ ರೂಪಾಯಿ ಸಂಬಳ ಇದ್ರೂ ಅವರವರ ದಾರಿ ಅವರಿಗೆ. ಆದ್ರೆ ಹಳ್ಳಿ ಹಾಗಲ್ಲ, ಇಲ್ಲಿ ಒಬ್ಬರನ್ನು ಒಬ್ಬರು ಅನುಸರಣೆ ಮಾಡಬೇಕು. ಅಕ್ಕಪಕ್ಕದವರ ಕಷ್ಟಸುಖಕ್ಕೂ ನಾವು ಆಗಬೇಕು,' ಅಂತ ನಿಖರವಾಗಿ ಹೇಳಿದ್ರು. 'ಸಂಕೇತಿಗಳಲ್ಲಿ ಮುಂದಿನ ಕೃಷಿ?' ಅಂದಾಗ, 'ಅವರು ಕಷ್ಟಪಟ್ಟರೆ ಉಳಿಯುತ್ತೆ', ಅಂತ ದೃಢವಾಗಿ ನುಡಿದ್ರು. ಅವರ ಮಗ ಮಾಡಿಕೊಟ್ಟ ಕಾಫಿ ಕುಡಿದೆವು. ಮುಂದಿನ ಊರ ದಾರಿ ನಮಗಾಗಿ ಕಾಯುತ್ತಿತ್ತು.

18. ಹುಣಸೂರು

ಮೈಸೂರು ಜಿಲ್ಲೆಯ ಪ್ರಮುಖವಾದ ತಾಲ್ಲೂಕು ಕೇಂದ್ರ ಹುಣಸೂರು. ಹುಣಸೂರು ತಾಲ್ಲೂಕಿನ ಅನೇಕ ಹಳ್ಳಿ ಹಾಗೂ ಹೋಬಳಿ ಕೇಂದ್ರ ಸಂಕೇತಿ ಕೃಷಿಕರನ್ನು ಕೊಡುಗೆಯಾಗಿ ನೀಡಿದ್ರೆ, ತಾಲ್ಲೂಕು ಕೇಂದ್ರವಾದ ಹುಣಸೂರಿನಲ್ಲಿ ಕೃಷಿ ಮಾಡುತ್ತಿರುವ ಸಂಕೇತಿಗಳ ಕುಟುಂಬ ಇರುವುದು ಕೇವಲ ಒಂದು. ಸುತ್ತಮುತ್ತಲ ಕೃಷಿಕರಿಂದ ಈ ಕುಟುಂಬದ ಕೃಷಿ ಬಗ್ಗೆ ಮಾಹಿತಿ ಪಡೆದು, ದೂರವಾಣಿ ಮುಖಾಂತರ ಅವರನ್ನು ಸಂಪರ್ಕಿಸಿದಾಗ ಆತ್ಮೀಯವಾದ ಸ್ವಾಗತ ದೊರೆಯಿತು. ಅವರ ತೋಟವನ್ನು ಹುಡುಕಲು ಸ್ವಲ್ಪ ಶ್ರಮ ಆಯಿತು. ತಮ್ಮ ತೋಟದ ಬಳಿಯಿದ್ದ ಕಟ್ಟೆಯ ಮೇಲೆ ನಮಗಾಗಿ ಕಾಯುತ್ತಾ ಕುಳಿತಿದ್ರು, ಜಗದೀಶ್ ಕುಮಾರ್. ಸೂರ್ಯ ಆಗಲೇ ಕೆಂಪಾಗಿ ಮುಳುಗುವ ಸಿದ್ಧತೆಯಲ್ಲಿದ್ದ. ಭಾವಚಿತ್ರ ತೆಗೆಯಲು ಬೇಕಾದ ಬೆಳಕು ಸ್ವಲ್ಪ ನಿಮಿಷಗಳ ಕಾಲ ಮಾತ್ರ ಇರುತ್ತೆ ಅನ್ನಿಸಿತು. ತರಾತುರಿಯಲ್ಲಿ ಅವರ ಭಾವಚಿತ್ರ ತೆಗೆಯುವಾಗ, ಅವರ ಅಣ್ಣನೂ ಜತೆಯಾದರು. ಪುಟ್ಟ photo session ಮುಗಿಸಿ, ಮಾತುಕತೆಗೆ ಮುಂದಾದೆವು.

ಎಂ.ಆರ್. ಜಗದೀಶ್ ಕುಮಾರ್ ಇ/ಮ ಎಂ. ರಾಮಸ್ವಾಮಿ

ಹುಣಸೂರು, ದೂರವಾಣಿ : ಮನೆ : 0821 653374 ತೋಟ : 08222-247033

ವ್ಯವಸಾಯದಲ್ಲೇ ನಾನು ಸಂಪಾದನೆ ಮಾಡಿ ಮೇಲಕ್ಕೆ ಬರಬೇಕು ಅನ್ನುವ ಏಕೈಕ ಉದ್ದೇಶದಿಂದ ಜಮೀನನ್ನು ಖರೀದಿ ಮಾಡಿದೆ. ಅವತ್ತಿನ ದಿವಸ ಖಾಲಿ ಜಮೀನನ್ನು ಖರೀದಿ ಮಾಡಿ, ವೈವಿಧ್ಯಮಯವಾಗಿ ಬೆಳೆ ಮಾಡಿದೆ. ಕೆಲವು ಲಾಭ ನೀಡಿದ್ರೆ, ಕೆಲವು ನಷ್ಟ ಮಾಡಿದ್ವು. ಇವತ್ತಲ್ಲಾ ನಾಳೆ ಅಭಿವೃದ್ಧಿ ಸಾಧ್ಯ ಅಂತ ನಿರಂತರವಾಗಿ ದುಡಿದಿದ್ದಕ್ಕೆ ಈಗ ಫಲ ಸಿಕ್ಕಿದೆ. ಬೇಸಾಯ ನನ್ನ ಬದುಕನ್ನು ಶ್ರೀಮಂತಗೊಳಿಸಿದೆ.



ಬೆಳೆದ ಫಸಲು: ಸಂತಸದ ಕ್ಷಣ ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು

ಸ್ವಾಮಿರಾವ್ ಹಾಗೂ ಪಾರ್ವತಮ್ಮ ದಂಪತಿಗಳದ್ದು ಮಳವಳ್ಳಿಯಲ್ಲಿ ನೆಲೆಸಿದ್ದ ಸಂತೃಪ್ತ ಸಂಕೇತಿ ಕುಟುಂಬ. ಇವರ ಮಗ ಎಂ.ರಾಮಸ್ವಾಮಿ ಹುಣಸೂರಿಗೆ ವಲಸೆ ಬಂದ್ರು, ಚಿಲ್ಕುಂದದ ಸುಬ್ಬಲಕ್ಷ್ಮಮ್ಮನವರನ್ನು ಮದುವೆಯಾದ್ರು. ಇವರ ಮಗ ಎಂ.ಆರ್. ಜಗದೀಶ್‌ಕುಮಾರ್ ಹುಣಸೂರು ಸಮೀಪದ ಹೊಸಕೋಟೆ ಗ್ರಾಮದಲ್ಲಿ 'ಶ್ರೀರಾಮ ಫಾರ್ಮ್' ಎನ್ನುವ ತೋಟ ಮಾಡಿಕೊಂಡು ಹುಣಸೂರಿನಲ್ಲಿ ವಾಸವಾಗಿದ್ದಾರೆ. ಇವರ ಪತ್ನಿ ವಸುಂಧರಾ ಬಿ.ವಿ., ಹೊಳೆನರಸೀಪುರದ ಬಿ.ಎಸ್. ವೆಂಕಟಸುಬ್ಬರಾವ್ ಹಾಗೂ ಗೌರಮ್ಮ ಅವರ ಮಗಳು. ಸಂಕೇತಿಗಳಿಗೆ ಬಹಳ ಭಿನ್ನ ಎನ್ನಬಹುದಾದ ತರಕಾರಿ ಕೃಷಿಯಲ್ಲಿ ಬಹಳ ಸಾಧನೆ ಮಾಡಿದ್ದಾರೆ, ಎಂ.ಆರ್. ಜಗದೀಶ್ ಕುಮಾರ್. ಇವರ ತೋಟದ ಮನೆಯಲ್ಲಿ ನಾವು ಸಂದರ್ಶನ ಆರಂಭಿಸುವಾಗ ಕತ್ತಲು ಕವಿಯುತ್ತಿತ್ತು. ಆದರೆ ಜಗದೀಶ್ ಕುಮಾರ್ ಅವರ ಮಾತಲ್ಲಿ ಬೆಳಕಿನ ಸೆಲೆಯಿತ್ತು.

'ನನ್ನ ತಂದೆ ಹಿಂದೆ ಮಳವಳ್ಳೀಲಿ ಇದ್ರಂತೆ. ೧೯೧೦ರಲ್ಲಿ ಹುಣಸೂರಿನ ಲಾಯರ್ ಬಳಿ ಗುಮಾಸ್ತರಾಗಿ ಕೆಲಸ ಮಾಡ್ತಿದ್ರು. ತಂದೆಯವರಿಗೆ ಚಿಲ್ಕುಂದದಲ್ಲಿ ತೋಟ ಇತ್ತು. ಅದನ್ನು ಅವರು ಮಾರಾಟ ಮಾಡಿದರು. ಇಲ್ಲಿ ಹೊಸಕೋಟೆಯಲ್ಲಿ ಜಮೀನು ಮಾಡಿಕೊಂಡು ಇದೀವಿ. ನನ್ನ ತಾತನಿಗೆ ನಾಲ್ಕು ಜನ ಗಂಡುಮಕ್ಕಳು. ನನ್ನ ತಂದೆ ಎರಡನೆಯರು. ತಂದೆ ವ್ಯವಸಾಯ ಮಾಡ್ತಿರಲಿಲ್ಲ. ನನ್ನ ತಾಯಿಯ ತಂಗಿ ಯಜಮಾನರು (ಚಿಕ್ಕಪ್ಪ) ಚಿಲ್ಕುಂದದ ತೋಟ ನೋಡ್ತಿದ್ರು. ನಾನೂ PUC ವರೆಗೆ ಓದಿದೆ. ಬೇರೆಯವರು ವ್ಯವಸಾಯ ಮಾಡೋದನ್ನು


ಟೊಮೆಟೊ ಬೆಳೆಯ ಮಧ್ಯೆ: ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು

ನೋಡಿ, ನನಗೂ ಮಾಡಬೇಕು ಅನ್ನಿಸ್ತು. ಆಗ ಕುಟುಂಬದ ನಾವೆಲ್ಲರೂ ಸಮ್ಮತಿಸಿ ಹೊಸಕೋಟೆಯಲ್ಲಿ ಜಮೀನು ಖರೀದಿಸಿದೆವು. ಈಗ ೨೫ ವರುಷದಿಂದ ನಾನು ವ್ಯವಸಾಯ ಮಾಡ್ತಿದೀನಿ. ಖಾಲಿ ಜಮೀನನ್ನು ತೊಗೊಂಡು, ಹೊಸದಾಗಿ ತೆಂಗಿನ ಸಸೀನ ನೆಟ್ಟು, ಅಡಿಕೆ ತೋಟ ಮಾಡಿದ್ವೀವಿ. ನಾವು ನಮ್ಮ ತಂದೆಗೆ ಒಟ್ಟು ಏಳು ಜನ ಮಕ್ಕಳು - ನಾಲ್ಕು ಗಂಡು, ಮೂರು ಹೆಣ್ಣುಮಕ್ಕಳು. ನಾನೇ ಮೂರನೆಯ ಮಗ. ನನ್ನ ತಂದೆಗೆ ಬರುತ್ತಿದ್ದ ೩೦ ರೂಪಾಯಿ ಸಂಬಳದಲ್ಲಿ ನಮ್ಮನ್ನೂ ಪೋಷಿಸುತ್ತಿದ್ದರು. ನನ್ನ ದೊಡ್ಡಣ್ಣ ಕೃಷ್ಣಮೂರ್ತಿ civil contractor ಆದ್ರು. ಕಬಿನಿ ಅಣೆಕಟ್ಟೆನಲ್ಲಿ ಹತ್ತು ವರುಷ ಕೆಲಸ ಮಾಡಿ ಹುಣಸೂರಿಗೆ ಬಂದ್ರು. ಇಲ್ಲಿ contract ಕೆಲಸ ಮಾಡಿ ನಮ್ಮನ್ನೆಲ್ಲಾ ಓದಿಸಿದ್ರು. ತಂದೆ ಚಿಲ್ಕುಂದದ ತೋಟವನ್ನು ಬರೀ ಆರು ಸಾವಿರ ರೂಪಾಯಿಗೆ ಮಾರಿದ್ರು. ನನ್ನ ಅಣ್ಣ ಸಂಪಾದಿಸಲು ಆರಂಭಿಸಿದ ಮೇಲೆ ಊರಿಗೆ ಹತ್ತಿರವಿರುವ ಈ ಜಮೀನು ಖರೀದಿ ಮಾಡಿಕೊಟ್ರು. ಆವಾಗಿನಿಂದ ನಾನು ವ್ಯವಸಾಯ ಮಾಡ್ತಿದೀನಿ. ನಾವು ಮೂರು ಜನ ಅಣ್ಣತಮ್ಮಂದಿರು ಒಟ್ಟಿಗೆ ಹುಣಸೂರಿನಲ್ಲಿ ಇದ್ದೀವಿ. ದೊಡ್ಡಣ್ಣ ಮೈಸೂರಿನಲ್ಲಿದ್ದಾರೆ. ಮೂರು ಜನರಲ್ಲಿ ನಾನು ಒಬ್ಬನೇ ವ್ಯವಸಾಯ ಮಾಡ್ತಿರೋದು. ಚಿಲ್ಕುಂದದಲ್ಲಿ ನಮ್ಮ ಸಂಕೇತಿಗಳು ಮಾಡುವ ವ್ಯವಸಾಯ ನೋಡಿ ನನಗೂ ವ್ಯವಸಾಯ ಮಾಡಬೇಕು ಅನ್ನಿಸಿತ್ತು. ನನ್ನ ತಂದೆಗೂ ಚಿಲ್ಕುಂದದ ತೋಟವನ್ನು ಮಾರಿದ ಮೇಲೆ ಮತ್ತೊಂದು ತೋಟ ಮಾಡಬೇಕು ಅನ್ನಿಸಿತ್ತು. ಹಾಗಾಗಿ ಈ ಜಮೀನಿನ ಖರೀದಿಗೆ ಅವರೂ ಒತ್ತಾಸೆಯಾಗಿ ನಿಂತರು. ಮೊದಲು ಮೂರು ಎಕರೆ ಜಮೀನು ಖರೀದಿ ಮಾಡಿದ್ವಿ. ಈಗ ಹತ್ತು ಎಕರೆ ಜಮೀನಿದೆ. ಆರು ಎಕರೆ ಹಾಗೂ ನಾಲ್ಕು ಎಕರೆಯ ಎರಡು plot ಇದೆ. ನಾಲ್ಕು ಜನ ಕೆಲಸದ ಆಳುಗಳಿದ್ದಾರೆ, ಖಾಯಂ ಆಗಿ. ಇಲ್ಲಿ ನೀರಿನ ಸೌಕರ್ಯ ಇದೆ. ರಸ್ತೆ ಪಕ್ಕದ ತೋಟ ಇದು. ಹುಣಸೂರಿನಿಂದ ಬರೀ ಆರು ಕಿಲೋಮೀಟರ್ ದೂರ ಇದೆ ಅಷ್ಟೆ.


ಅಡಿಕೆ, ತೆಂಗಿನ ವ್ಯವಸಾಯಕ್ಕೆ ಬಹಳ ಸೂಕ್ತವಾದ ಜಾಗ ಇದು. ಹಾಗಾಗಿ ಇಲ್ಲಿ ವ್ಯವಸಾಯ ಮಾಡ್ತಿದೀವಿ. ನನಗೆ ಮೊದಲು ವೈದ್ಯನಾಗಬೇಕು ಅನ್ನುವ ಕನಸು ಇತ್ತು. PUC ಓದುವಾಗ, ಅಣ್ಣನ ಜತೇಲಿ contract ಮಾಡ್ತಿದ್ದೆ. ವ್ಯವಸಾಯದಲ್ಲಿ ಸ್ವತಂತ್ರವಾಗಿರಬಹುದು ಅನ್ನಿಸಿತು. ಹಾಗಾಗಿ ಜಮೀನು ಖರೀದಿ ಮಾಡಿದ್ವಿ. ಮುಂದೆ ಓದಲಿಲ್ಲ. ಇಲ್ಲಿ ಅಡಿಕೆ, ತೆಂಗು ಬೆಳೆಯೋಕೆ ಮುಖ್ಯ ಕಾರಣ ಅಂದ್ರೆ, ಈ ಬೆಳೆಗೆ ದಿನಾ ಖರ್ಚು ಇರೋದಿಲ್ಲ, ವರುಷಕ್ಕೆ ಒಂದು ಸಾರಿ ದುಡ್ಡು ಕಾಣಬಹುದು, ಅಂತ. ಆರಂಭದಲ್ಲಿ ಕಬ್ಬು, ಬಾಳೆ ಹಾಕಿದ್ವಿ. ಅವುಗಳು ಅಷ್ಟು ಪ್ರಯೋಜನ ಆಗಲಿಲ್ಲ. ಆರಂಭದಲ್ಲಿ ನಾವು ತರಕಾರಿ ಬೆಳೆ ಮಾಡಿದ್ವಿ.


ಬದನೆಬೆಳೆ: ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು

ಕೋಸು, ಬದನೆ, ಮೆಣಸಿಗೆ, ಆಲೂಗೆಡ್ಡೆ ಬೆಳೆದ್ವಿ. ಬೆಳೆ ಬಂದಾಗ ಬೆಲೆ ಸಿಗುತ್ತಿರಲಿಲ್ಲ. ಮಾಡಿದ ಖರ್ಚು ಹುಟ್ಟಿರಲಿಲ್ಲ. ೧೯೭೫ ರಿಂದ ೮೦ರವರೆಗೆ ತರಕಾರಿ ಬೆಳೆದ್ವಿ. ನಂತರ ರೇಷ್ಮೆ ಬೆಳೆದ್ವಿ. ಅದು ಶ್ರಮದಾಯಕ ಅನ್ನಿಸ್ತು. ಸುಮಾರು ನಾಲ್ಕೈದು ವರುಷ ಮಾಡಿದ ಮೇಲೆ ಅದನ್ನು ಕೈಬಿಟ್ಟೆ. ಕಡೆಗೆ ಅಡಿಕೆ, ತೆಂಗನ್ನು ಮಾಡಿದೆ. ಈಗ ಇಲ್ಲಿ ಎರಡು pumpset ಇದೆ. ನೀರಿಗೆ ತೊಂದರೆ ಇಲ್ಲ. ಪಕ್ಕದಲ್ಲೇ ಕೆರೆ ಇದೆ. ಮೊದಲು ತೆಂಗಿನ ಸಸಿಗಳನ್ನು ನಾಟಿಮಾಡಿದೆ. ಅವುಗಳ ಮಧ್ಯದಲ್ಲಿ ಹಿಪ್ಪುನೇರಳೆ ಹಾಕಿದ್ದೆ. ತೆಂಗಿನ ನೆರಳಾದ್ರಿಂದ ರೇಷ್ಮೆ ಸರಿಯಾಗಿ ಬರಲಿಲ್ಲ. ಅದನ್ನು ಕಿತ್ತುಹಾಕಿ ತೆಂಗಿನ ಮಧ್ಯದಲ್ಲಿ ಅಡಿಕೆಯನ್ನು ಎಂಟು ಅಡಿಗೆ ಒಂದರಂತೆ ನಾಟಿ ಮಾಡಿದೆ. ತೆಂಗು ೩೦ ಅಡಿಗೆ ಒಂದು ಸಾಲು ಇದೆ. ಅದರ ಮಧ್ಯದಲ್ಲಿ ಎರಡು ಸಾಲು ಅಡಿಕೆ ಇದೆ. ೨೨೦ ತೆಂಗು ಹಾಗೂ ೧೩೦೦ ಅಡಿಕೆ ಗಿಡ ಇದೆ. ಬೇಲಿ ಅಂಚಿನಲ್ಲಿ ಸುಬಾಬುಲ್ ಹಾಗೂ ತೇಗದ ಗಿಡಗಳನ್ನು ಹಾಕಿದ್ದೇನೆ. ಹಲಸು, ಮಾವಿನ ಗಿಡಗಳನ್ನೂ ಹಾಕಿದೀನಿ. ನನ್ನ ಎರಡನೆಯ ಅಣ್ಣ auditor. ಅವರಿಗೂ ಜಮೀನು ಮಾಡುವ ಆಸೆ ಇತ್ತು. ಹಾಗಾಗಿ ಕಳೆದ ಎರಡು ವರುಷದ ಹಿಂದೆ ಆರು ಎಕರೆ ಜಮೀನನ್ನು ಖರೀದಿ ಮಾಡಿದ್ವಿ. ಆ ಜಮೀನನ್ನೂ ನಾನೇ ನಿರ್ವಹಣೆ ಮಾಡ್ತಿರೋದು. ಈ ಆರು ಎಕರೇಲಿ, ತೆಂಗು, ಸಪೋಟ, ಮಾವು, ಬಾಳೆ, ಅಡಿಕೆ ಹಾಕಿದೀವಿ. ಅದರ ಜತೇಲಿ ತರಕಾರೀನೂ ಬೆಳೀತಾ ಇದೀವಿ. ಬದನೆ, ಮೆಣಸಿನಕಾಯಿ, ಟೊಮ್ಯಾಟೋ, ಅರಿಸಿನ ಬೆಳೀತಾ ಇದೀವಿ. ಈಗ ಈ ಬೆಳೆಗಳು ಪರವಾಗಿಲ್ಲ. ಹಿಂದೆ ತರಕಾರಿಗಳಲ್ಲಿ ಒಳ್ಳೆಯ ಜಾತಿಯ ತಳಿಗಳು ಇರುತ್ತಿರಲಿಲ್ಲ. ಹಾಗಾಗಿ ಆದಾಯ ಇರುತ್ತಿರಲಿಲ್ಲ. ಈಗ ಒಳ್ಳೆಯ ಜಾತಿಯ ಹೈಬ್ರಿಡ್ ತಳಿಗಳು ಬಂದಿವೆ. ಈಗ ತರಕಾರಿ ಬೇಸಾಯ ಪರವಾಗಿಲ್ಲ, ಆದಾಯ ಸಿಗುತ್ತೆ. ಕಳೆದ ಎರಡು ವರುಷದಿಂದ ಒಂದು ಎಕರೇಲಿ ಬದನೆ ಬೆಳೀತಾ ಇದೀವಿ. ಮೊದಲು ಭತ್ತ ಬೆಳೀತೀವಿ. ಅದನ್ನು ಖಟಾವು ಮಾಡಿದ ಮೇಲೆ ಅದೇ ಜಮೀನಿಗೆ ಬದನೆ ಹಾಕ್ತೀವಿ. ಹೀಗೆ ಪ್ರತಿ ವರುಷ ಬದನೆ ಹಾಗೂ ಭತ್ತ ಬೆಳೀತಾ ಇದೀವಿ. ಹೈಬ್ರಿಡ್ ಬದನೆ ಆದ್ರಿಂದ, ಒಂದು ಗಿಡಕ್ಕೆ ನಾಲ್ಕರಿಂದ ಐದು ಕೇಜಿ ಸಿಗುತ್ತೆ. ಒಂದು ಗಿಡಕ್ಕೆ ಐದು ರೂಪಾಯಿ ಖರ್ಚಾದ್ರೆ, ೨೫ ರೂಪಾಯಿ ಆದಾಯ ಸಿಗುತ್ತೆ. ಒಂದು ಎಕರೇಲಿ ೪೦೦೦ ಗಿಡ ಇರುತ್ತೆ. ಬದನೇಲಿ ೧೫ ರಿಂದ ೨೦ ಸಾವಿರ ರೂಪಾಯಿ ಸಿಕ್ತಾ ಇದೆ. ಮೊದಲು ಸಸಿ ಮಡಿ ಮಾಡಿ ಸಸೀನ ಏಳಿಸ್ತೀವಿ, ೩೦ ದಿನದ ಸಸೀನ ನೆಡ್ತೀವಿ. ಮೂರು ಅಡಿ ಅಂತರದ ಸಾಲಿನಲ್ಲಿ ಒಂದು ಅಡಿಗೆ ಒಂದು ಸಸಿ ನಾಟಿ ಮಾಡ್ತೀವಿ. ಗೊಬ್ಬರ, ಔಷಧೀನ ಕ್ರಮವಾಗಿ ಕೊಡ್ತೀವಿ. ಒಂದೂವರೆ ತಿಂಗಳಿಗೆ ಹೂವು, ಮೊಗ್ಗು ಆರಂಭವಾಗುತ್ತೆ. ಎರಡು ತಿಂಗಳಿಗೆ ಕಾಯಿ ಕುಯ್ಯಬಹುದು. ಪ್ರತಿವಾರವೂ ಬದನೇಕಾಯಿ ಬರುತ್ತೆ. ಹುಣಸೂರು, ಮೈಸೂರು, ಬೆಂಗಳೂರಿಗೆ ನಾವೇ ತೆಗೆದುಕೊಂಡು ಹೋಗಿ ಮಾರಾಟ ಮಾಡ್ತೀವಿ. ಅರಿಸಿನ ಹಾಕಿದಾಗ ಮಧ್ಯದಲ್ಲಿ ಬೀನ್ಸ್ ಬೆಳೀತೀವಿ. ವರುಷವೆಲ್ಲಾ ಹಸಿರು ಮೆಣಸಿನಕಾಯಿ ಬೆಳೆ ಇರುತ್ತೆ. ಟೊಮ್ಯಾಟೋನ ಜನವರಿಯಿಂದ ಜೂನ್



ತಾವು ರೂಪಿಸಿದ ಸಸಿ ಮಡಿಯೊಂದಿಗೆ ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು



ಕೃಷಿ ಜೀವನದ ಮುಖ್ಯ ಅಂಗ ಟಿಲ್ಲರ್:
ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು



ಅಡಿಕೆ ಸಸಿಗಳ ಮಾರಾಟಕ್ಕೆ ಸಜ್ಜು: ಎಂ.ಆರ್.ಜಗದೀಶ್‌ಕುಮಾರ್: ಹುಣಸೂರು

ಜುಲೈವರೆಗೆ ಬೆಳೀತೀವಿ. ಆಗ ಮದುವೆ season ಇರೋದ್ರಿಂದ ಸ್ವಲ್ಪ ಧಾರಣೆ ಇರುತ್ತೆ. ಟೊಮ್ಯಾಟೋ ದಲ್ಲೂ ಹೈಬ್ರಿಡ್ ತಳಿಗಳು ಇವೆ. ಇದನ್ನು ಸಹ ಸಸಿ ಮಡಿ ಮಾಡಿ, ಬೀಜ ಬಿತ್ತಿ, ಸಸಿಗಳನ್ನು ಏಳಿಸಿ ಕೊಂಡು ಮೂರು ಅಡಿ ಅಂತರದ ಸಾಲಿನಲ್ಲಿ ಒಂದೂವರೆ ಅಡಿಗೆ ಒಂದರಂತೆ ಸಸಿಯನ್ನು ನಾಟಿ ಮಾಡ್ತೀವಿ. ಟೊಮ್ಯಾಟೋ ಸಹ ಬೇಗ ಬರುವ ಬೆಳೆ. ನಾಟಿ ಮಾಡಿದ ಒಂದೂವರೆ ತಿಂಗಳಿಗೆ ಹಣ್ಣುಕಾಯಿ ಬರುತ್ತೆ. ಮದನಪಲ್ಲಿ ಜಾತೀಲಿ ಒಂದು ಗಿಡಕ್ಕೆ ೪ ರಿಂದ ೫ ಕೇಜಿ ಇಳುವರಿ ಸಿಗುತ್ತೆ. ಖರ್ಚು ಒಂದು ಗಿಡಕ್ಕೆ ಮೂರು ರೂಪಾಯಿ ಧಾರಣೆ ಇದ್ರೆ ೧೦ ರೂಪಾಯಿ ಆದಾಯ ಸಿಗುತ್ತೆ. ಧಾರಣೆ ಇಲ್ಲದಾಗ ಖರ್ಚೂ ಸಿಗೋಲ್ಲ. ಒಂದು ಕುಕ್ಕೆ ಟೊಮ್ಯಾಟೋನ ೧೦ ರೂಪಾಯಿಯಿಂದ ಹಿಡಿದು ನೂರು ರೂಪಾಯಿವರೆಗೂ ಮಾರಿದೀನಿ. ನಾವು ಅರಿಸಿನ ಹಾಕಿದಾಗ ಅದರ ಮಧ್ಯದಲ್ಲಿ ಮೆಣಸಿನಗಿಡಾನೂ ಹಾಕ್ತೀವಿ. ಅರಿಸಿನ ೧೦ ತಿಂಗಳ ಬೆಳೆ. ಆದ್ದರಿಂದ ಮೆಣಸು ಅರಿಸಿನದ ಮಧ್ಯೆ ಯಾವಾಗಲೂ ಇರುತ್ತೆ. ವರುಷದಲ್ಲಿ ಯಾವಾಗಲಾದರೂ ಮೆಣಸಿಗೆ ಧಾರಣೆ ಸಿಕ್ಕೇ ಸಿಗುತ್ತೆ. ಮೊದಲು ಅರಿಸಿನ ಹಾಕ್ತೀವಿ. ಅದು ಹುಟ್ಟಿ ಬರಲು ಒಂದು ತಿಂಗಳು ಬೇಕು. ಬೀನ್ಸ್ ಒಂದೂವರೆ ತಿಂಗಳ ಬೆಳೆ. ಹಾಗಾಗಿ ಮಧ್ಯದಲ್ಲಿ ಬೀನ್ಸ್ ಹಾಕ್ತೀವಿ. ಇದನ್ನು ಬೆಳೆಯೋದ್ರಿಂದ ಕಳೆ ಬರೋದಿಲ್ಲ. ಸಣ್ಣ ಪುಟ್ಟ ಖರ್ಚಿಗೂ ಆಗುತ್ತೆ. ಬೀನ್ಸ್, ಅರಿಸಿನ ಹಾಗೂ ಮೆಣಸಿನಕಾಯಿ ಒಟ್ಟಿಗೇ ಬೆಳೆಯೋದ್ರಿಂದ ಆದಾಯ ಜಾಸ್ತಿ. ಅಲ್ಲದೆ ಸ್ವಲ್ಪ ನೆರಳಿದ್ರೆ ಅರಿಸಿನ ಚೆನ್ನಾಗಿ ಬರುತ್ತೆ. ಹಾಗಾಗಿ ಮೆಣಸಿನಕಾಯಿ ಅನುಕೂಲ. ಏಪ್ರಿಲ್ ತಿಂಗಳಲ್ಲಿ ಅರಿಸಿನ ಹಾಕುವಾಗ ಬೀನ್ಸ್, ಮೆಣಸಿನಕಾಯಿ ಹಾಕೋದು. ಮುಂದಿನ ಜನವರಿ ಫೆಬ್ರವರಿ ತಿಂಗಳಿಗೆ ಅರಿಸಿನ ಬರುತ್ತೆ. ಆವಾಗ ಅದನ್ನು ಕೀಳಿಸಿ ಬೇಯಿಸ್ತೀವಿ. ಇಲ್ಲೇ ಪಾಲೀಶ್ ಕೂಡ ಮಾಡ್ತೀವಿ. ಅದನ್ನು ಪುಡಿ ಮಾಡಿ ಇಲ್ಲೇ ಮಾರಾಟ ಮಾಡ್ತೀವಿ. ಅರಿಸಿನದ ಬೇಸಾಯದ ಬಗ್ಗೆ ವಿವರವಾಗಿ ಹೇಳಬೇಕೂಂದ್ರೆ, ಅರಿಸಿನದಲ್ಲಿ ಕುಪ್ಪಂ ಅನ್ನುವ ತಳಿಯಿದೆ, ಎಕರೆಗೆ ೪೦ ರಿಂದ ೫೦ ಗಾಡಿ ಗೊಬ್ಬರ ಬೇಕು. ೧೫ ವರುಷದಿಂದ ನಾವು ಅರಿಸಿನ ಬೆಳೀತಾ ಇದೀವಿ. ಪ್ರತಿ ವರುಷ ಬೀಜಾನ ನಾವೇ ಸಂಗ್ರಹ ಮಾಡ್ತೀವಿ. ಒಂದು ಎಕರೆಗೆ ನಾಲ್ಕು ರಿಂದ ಐದು ಕ್ವಿಂಟಾಲ್ ಬಿತ್ತನೆ ಬೀಜ ಬೇಕು. ಜನವರಿ ತಿಂಗಳಲ್ಲಿ ಖಟಾವು ಮಾಡಿದ ಅರಿಸಿನದ ಸ್ವಲ್ಪ ದಪ್ಪವಾದ ಕೊಂಬನ್ನು ಸಂಗ್ರಹಿಸಿ, ಮೊದಲು ಮರಳು ಹಾಸಿ, ಅದರ ಮೇಲೆ ಅರಿಸಿನದ ಗುಡ್ಡೆ ಹಾಕಿ, ಮೇಲೆ ಬಾಳೆ ತರಗಿನಿಂದ ಮುಚ್ಚಿರುತ್ತೀವಿ. ಏಪ್ರಿಲ್ ತಿಂಗಳಲ್ಲಿ ನಾಟಿ ಮಾಡುವುದಕ್ಕಿಂತ ಮುಂಚೆ ಸ್ವಲ್ಪ ನೀರು ಹಾಕ್ತೀವಿ. ಆವಾಗ ಮೊಳಕೆ ಬರುತ್ತೆ. ನಂತರ ಒಂದೂವರೆ ಅಡಿ ಸಾಲಿನಲ್ಲಿ, ಅರಿಸಿನ ನಾಟಿ ಮಾಡ್ತೀವಿ. ಅದರ ಜತೇಲಿ ಬೀನ್ಸ್ ಹಾಗೂ ಮೆಣಸಿನಕಾಯಿ ಹಾಕ್ತೀವಿ. ಮೊದಲು ಬೀನ್ಸ್ ಬರುತ್ತೆ. ಅದನ್ನು ಕಿತ್ತು ಅರಿಸಿನಕ್ಕೆ ರಾಸಾಯನಿಕ ಗೊಬ್ಬರವನ್ನು ಕೊಡ್ತೀವಿ. ರೋಗ ಬಾರದಂತೆ ಕೀಟನಾಶಕ ಹಾಗೂ ರೋಗನಾಶಕಗಳನ್ನು ಸಿಂಪರಣೆ ಮಾಡ್ತೀವಿ. ನವೆಂಬರ್ ಡಿಸೆಂಬರ್ ಹೊತ್ತಿಗೆ ಅದರ ಬೆಳವಣಿಗೆ ಎಲ್ಲಾ ಮುಗಿದು ಮೇಲ್ಭಾಗದ ಎಲೆಗಳು ಒಣಗುತ್ವೆ. ಜನವರಿ ತಿಂಗಳಲ್ಲಿ ಮೇಲಿನ ಸೋಗನ್ನು



ದೂರದೃಷ್ಟಿ: ತೇಗದ ಬೆಳೆ: ಎಂ.ಆರ್.ಜಗದೀಶ್‌ಕುಮಾರ್, ಹುಣಸೂರು

ಕುಯ್ಸಿ ಬಿಡ್ತೀವಿ. ೨೦ ರಿಂದ ೩೦ ದಿನಗಳು ಕಳೆದ ಮೇಲೆ ಅರಿಸಿನ ಕೀಳ್ತೀವಿ. ನಂತರ ಅರಿಸಿನ ಬೇಯಿಸುವ ಕೊಪ್ಪರಿಗೆಯಲ್ಲಿ ಬೇಯಿಸ್ತೀವಿ. ಒಂದು ಕ್ವಿಂಟಾಲ್ ಅರಿಸಿನಾನ ಒಂದು ಕೊಪ್ಪರಿಗೆ ಹಿಡಿಯುತ್ತೆ. ಅದಕ್ಕೇನು ಮಾಡ್ತೀವಿ ಅಂದ್ರೆ ಒಂದು ಬಕೆಟ್ ಸಗಣಿ ಬಗ್ಗಡ, ಎರಡು ಬಕೆಟ್ ನೀರು ಅಷ್ಟು ಹಾಕಿ ಬೇಯಿಸಬೇಕು. ಆಮೇಲೆ ಅದನ್ನು polish ಮಾಡುವ ಡ್ರಂ ಇದೆ. ಅದು ಡೀಸಲ್ ಡ್ರಂ, ಒಳಗಡೆ ಮುಳ್ಳಿನ ಹಾಗೆ ಇರುತ್ತೆ. ಅರಿಸಿನಾನ ಡ್ರಂನಲ್ಲಿ ತುಂಬಿ ರಾಟೇಲಿ ತಿರುಗಿಸ್ತೀವಿ. ಆಗ ಮೇಲಿನ ಸಗಣಿ ಅಂಶ ಹೋಗುತ್ತೆ. ಅರಿಸಿನ ಬೇಯಿಸೋದು ಸಹ ಬಹಳ ಮುಖ್ಯ. ಅದು ಗೆಣಸಿನ ತರ ಮೆತ್ತಗಾಗಬೇಕು. ಹೀಗೆ ಬೇಯಿಸೋಕೆ ಎರಡರಿಂದ, ಮೂರು ಘಂಟೆ ಬೇಕು. ಸರಿಯಾಗಿ ಬೆಂದ ಅರಿಸಿನವನ್ನು ಪಾಲಿಶ್ ಮಾಡಿದ್ರೆ ಹೊಳಪು ಚೆನ್ನಾಗಿರುತ್ತೆ. ಇಲ್ಲಿಗೆ ಬೇಕಾದಷ್ಟನ್ನು ಇಟ್ಟುಕೊಂಡು, ಜಾಸ್ತಿ ಇರೋದನ್ನು ಅರಿಸಿನದ ಮುಖ್ಯ ಮಾರುಕಟ್ಟೆ ತಮಿಳುನಾಡಿನ ಈರೋಡ್‌ನಲ್ಲಿ ಮಾರ್ತೀವಿ. ಹಸಿ ಅರಿಸಿನವನ್ನು ಬಿತ್ತನೆಗೆ ಸಹಾ ಮಾರಾಟ ಮಾಡ್ತೀವಿ. ದರ ಬರದೇ ಇದ್ದಾಗ ಬೇಯಿಸಿ ಒಂದು ವರುಷ ಇಡಬಹುದು. ನಾಲ್ಕು ಕ್ವಿಂಟಾಲ್ ಹಸಿ ಅರಿಸಿನವನ್ನು ಬೇಯಿಸಿದ್ರೆ ಒಂದು ಕ್ವಿಂಟಾಲ್ ಒಣಗಿದ ಅರಿಸಿನ ಸಿಗುತ್ತೆ. ಹುಣಸೂರಿನಲ್ಲಿ ಅರಿಸಿನದ ಪುಡೀ ಸಹ ಮಾಡಿಸ್ತೀನಿ. ಮೈಸೂರು, ಬೆಂಗಳೂರಿನಲ್ಲಿ ತೊಗೋತಾರೆ. ವರುಷಕ್ಕೆ ಎರಡು ಕ್ವಿಂಟಾಲ್ ಅರಿಸಿನದ ಪುಡಿಯನ್ನು ಮಾರಾಟ ಮಾಡ್ತೀನಿ. ಒಂದು ಕ್ವಿಂಟಾಲ್ ಅರಿಸಿನವನ್ನು ಪುಡಿ ಮಾಡಿಸಿದ್ರೆ ೯೦ ಕೇಜಿ ಅರಿಸಿನದ ಪುಡಿ ಸಿಗುತ್ತೆ. ಪ್ರತಿ ಕಿಲೋಗ್ರಾಂ ಪುಡೀನ ೫೦ ರೂಪಾಯಿಯಲ್ಲಿ sale ಮಾಡ್ತೀನಿ. ಪುಡಿ ಮಾಡಿ ಮಾರೋದು ಆದಾಯ. ಆದ್ರೆ ಅಷ್ಟು ಪುಡಿ sale ಆಗದೆ ಇರೋದ್ರಿಂದ ಅರಿಸಿನದ ಕೊನೇನೂ ಸಹ ಮಾರಾಟ ಮಾಡಬೇಕಾಗುತ್ತೆ. ಏನಿದ್ರೂ ೨೫೦೦ ರಿಂದ ೩೦೦೦ ರೂಪಾಯಿ ಕ್ವಿಂಟಾಲ್ ಅರಿಸಿನದ-ಕೊನೆ ಧಾರಣೆ ಇದೆ. ಪುಡಿ ಮಾಡಿ ಮಾರಿದ್ರೆ ೪೫೦೦ ಸಿಕ್ಕ ಹಾಗೆ ಆಗುತ್ತೆ. ಪುಡಿ ತುಂಬಾ ಶುದ್ಧವಾಗಿ ಇರೋದ್ರಿಂದ ನಮ್ಮ ಸಂಕೇತಿ ಜನಾಂಗದವರೇ ಹಬ್ಬಹರಿದಿನದಲ್ಲಿ ಬಳಸಲು ತೊಗೋತಾರೆ. ಅರಿಸಿನ ಬಹಳ ಲಾಭದಾಯಕ ಬೆಳೆ. ಇಲ್ಲಿ ಹತ್ತಿರದ ರತ್ನಪುರಿಯಲ್ಲಿ ತಮಿಳರು ಬಹಳವಾಗಿ ಅರಿಸಿನ ಬೆಳೀತಾರೆ. ಮೊದಲಿಗೆ ನಾನು ಬಿತ್ತನೇನ ಅಲ್ಲಿಂದಲೇ ತಂದಿದ್ದು. ಮೊದಲನೇ ಸಲ ಬೆಳೆದಾಗ ಒಣಗಿದ ಅರಿಸಿನಾನೇ ೪೦ ಕ್ವಿಂಟಾಲ್ ಆಗಿತ್ತು, ಒಂದು ಎಕರೆಗೆ. ಈಗ ಒಂದು ಎಕರೇಲಿ ೨೫ ರಿಂದ ೩೦ ಕ್ವಿಂಟಾಲ್ ಸಿಕ್ತಿದೆ. ಧಾರಣೆ ವಿಪರೀತ ಏರುಪೇರು ಆಗ್ತಿರೋದರಿಂದ ಒಂದು ಎಕರೇಲಿ ಮಾತ್ರ ಅರಿಸಿನ ಬೆಳೀತಾ ಇದೀನಿ. ಶುಂಠಿ ಈ ಭಾಗದಲ್ಲಿ ಚೆನ್ನಾಗಿ ಬರೋಲ್ಲ. ಕೊಡಗಿನಲ್ಲಿ ಚೆನ್ನಾಗಿ ಬರುತ್ತೆ. ಅಲ್ಲದೆ ಅದಕ್ಕೆ ಕೀಟ, ರೋಗ ಜಾಸ್ತಿ. ಅರಿಸಿನದ್ದು ಸುಲಭದ ಬೇಸಾಯ. ಹಾಗೇ ಇದನ್ನು ಯಾವಾಗ ಬೇಕಾದ್ರೂ ಮಾರಬಹುದು. ಶುಂಠೀನಾದ್ರೆ ಹಸಿ ಇರುವಾಗಲೇ ಮಾರಬೇಕು. ಅದಕ್ಕೋಸ್ಕರ ಶುಂಠಿ ಬೆಳೀಲಿಲ್ಲ. ನಾವು ಜಮೀನು layout ಅನ್ನು ಬಹಳ ಮುತುವರ್ಜಿಯಿಂದ ಮಾಡಿದ್ದೇವೆ. ಮೊದಲು ಖಾಲಿ ಜಮೀನು ಹಾಗೂ ನಾಡ ಬೇಲಿ ಮಾತ್ರ ಇತ್ತು. ನಾವು ಅದನ್ನು level ಮಾಡಿಸಿ, ತಿರುಗಾಡಲು ರಸ್ತೆ ಬಿಟ್ಟು, ತಂತಿ ಕಲ್ಲು ಕಂಬ ಹಾಕಿಸಿ, ಬೇಲಿಗೆ ಪೂರ್ತಾ ತೇಗದ ಸಸಿ ಹಾಕಿದೀವಿ. ಹಾಗೇ ನಡೆದಾಡಲು ಬಿಟ್ಟಿರುವ ಕಾಲುಹಾದಿಯಲ್ಲಿ ತೇಗವನ್ನು ನಾಟಿ ಮಾಡಿದೀವಿ. ಜಮೀನಿಗೆ ಐದು ಲಕ್ಷ ರೂಪಾಯಿ ಬಿತ್ತು. ಸಮ ಮಾಡಲು ಎರಡು ಲಕ್ಷ ರೂಪಾಯಿ ಖರ್ಚಾಯ್ತು. ೮೫೦ ಅಡಿಕೆ ಇದೆ, ಚೆನ್ನಾಗಿ ನಿಂತಿದೆ. ಬಾಳೆ ಹಾಕಿದೀವಿ. ಅದರಲ್ಲಿ ೫೦ ರಿಂದ ೬೦ ಸಾವಿರ ರೂಪಾಯಿ ಸಿಕ್ಕಿದೆ. ಯಾಲಕ್ಕಿ ಬಾಳೆ, ಬೂದುಬಾಳೆ ಹಾಕಿದೆ. ೮ ಅಡಿಗೆ ಒಂದು ಗುಂಡೀನ ಟಿಲ್ಲರ್‌ನಲ್ಲಿ ಮೆಶೀನ್ ಅಳವಡಿಸಿ ತೆಗೆದಿದ್ದು. ಅದಕ್ಕೆ ಹಟ್ಟಿ ಗೊಬ್ಬರ ತುಂಬಿ, ಕಂದನ್ನು ಬಾವಿಸ್ಟಿನ್ ಪುಡೀಲಿ ಅದ್ದಿ ನಾಟಿ ಮಾಡ್ತೀವಿ. ಎರಡು ತಿಂಗಳಾದ ಮೇಲೆ ಸೀಮೆಗೊಬ್ಬರ ಕೊಡ್ತೀವಿ. ಕಳೆ ಹತೋಟಿ ಮಾಡಲು ಟಿಲ್ಲರ್‌ನಲ್ಲಿ ಉಳುಮೆ ಮಾಡ್ತೀವಿ. ಒಂದು ವರುಷಕ್ಕೆ ಮೂರು ಬಾರಿ, ಪ್ರತಿ ಗಿಡಕ್ಕೆ ಒಂದೂವರೆ ಕೇಜಿ ಅಷ್ಟು ಗೊಬ್ಬರ ಕೊಡ್ತೀವಿ. ಮಣ್ಣು ಏರಿಸ್ತೀವಿ. ೧೫ ದಿನಕ್ಕೆ ಒಂದು ಬಾರಿ ನೀರು ಕೊಡ್ತೀವಿ. ಒಂದೂವರೆ ಎಕರೇಲಿ ೧೨೦೦ ಬುಡ ಇತ್ತು. ಒಂದು ಗೊನೆ ೬ ಕೇಜಿ ಯಿಂದ ೧೩ ಕೇಜಿವರೆಗೆ ಬಂದಿದೆ. ನನ್ನ ಬಳಿ ಈಗ ಪವರ್ ಟಿಲ್ಲರ್ ಸಹಾ ಇದೆ. ಪವರ್ ಟಿಲ್ಲರ್‌ಗೆ ಒಂದು ಲಕ್ಷದ ೧೫ ಸಾವಿರ ಕೊಟ್ಟೆ. ಕೃಷಿ ಇಲಾಖೆಯಿಂದ ೧೫ ಸಾವಿರ ಸಹಾಯ ಧನ ಸಿಗ್ತು. ಹಾಲು ಕರೆಯಲು ಹಸುಗಳು ಇವೆ. ಉಳುಮೆ, ಅಗೆತಕ್ಕೆ ಟಿಲ್ಲರ್ ಇದೆ. ಅಡಿಕೇಲಿ ಉಳೋದಕ್ಕೆ ಅನುಕೂಲ. ಒಂದು ಗಂಟೆಗೆ ೧೬೦ ರೂಪಾಯಿಯಂತೆ ಬಾಡಿಗೆಗೆ ಸಹ ಟಿಲ್ಲರ್ ನೀಡ್ತೀವಿ. ಅದಕ್ಕೇಂತ ಒಬ್ಬ ಡ್ರೈವರ್ ಇದಾನೆ. ವೈವಿಧ್ಯಮಯವಾಗಿ ವ್ಯವಸಾಯ ಮಾಡೋದ್ರಿಂದ ಅನುಕೂಲ ಆಗಿದೆ. ವ್ಯವಸಾಯ ತೃಪ್ತಿ ನೀಡಿದೆ. ನನ್ನ ಹೆಂಡತೀನೂ ಸಹಕರಿಸಿದ್ದಾಳೆ. ನನ್ನ ಮಗ PUC ಓದುತ್ತಿದ್ದಾನೆ. ಅವನನ್ನು ನೋಡಿದ್ರೆ ಅವನು ವ್ಯವಸಾಯ ಮುಂದುವರಿಸೋಲ್ಲ ಅನ್ನಿಸುತ್ತೆ. ನಾನು ಇರೋವರೆಗೆ ಮಾಡಬೇಕು, ಅಭಿವೃದ್ಧಿ ಮಾಡಬೇಕು ಅಷ್ಟೆ. ಮಕ್ಕಳು ಓದುತ್ತೀನಿ ಅನ್ನುವಾಗ ನಾವು ವ್ಯವಸಾಯಕ್ಕೆ ಬಾ ಅನ್ನೋದಕ್ಕೆ ಆಗೋದಿಲ್ವಲ್ಲಾ?' ಎಂದು ನಮ್ಮನ್ನೇ ಪ್ರಶ್ನೆ ಕೇಳಿ ಮಾತು ಮುಗಿಸಿದರು. ಅದುವರೆಗೂ ಜಗದೀಶ್ ಕುಮಾರ್ ಅವರ ಮಾತಿನ ಪ್ರಭೆಯಿಂದ ಬೆಳಗಿದ್ದ ಇರುಳು ಒಮ್ಮೆಗೆ ಕತ್ತಲು ತುಂಬಿದಂತೆ ಭಾಸವಾಯ್ತು. ಅವರಿಗೆ ವಂದಿಸಿ ಹೊರಟಾಗ, ಹಾದಿ ಬದಿಯ ದೀಪಗಳು ಮಿನುಗುತ್ತಿದ್ದು. ಇದು ಭವಿಷ್ಯ ಸೂಚಕವೆ ಎಂಬ ಪ್ರಶ್ನೆ ಮನದಲ್ಲಿ ಮೂಡಿ ಮರೆಯಾಯ್ತು.

19. ಪಿರಿಯಾಪಟ್ಟಣ

ಮೈಸೂರಿನಿಂದ ೭೬ ಕಿಲೋಮೀಟರ್ ದೂರವಿರುವ ಪಿರಿಯಾಪಟ್ಟಣದಲ್ಲಿ ಸಂಕೇತಿಗಳದ್ದು ೩೦ ಕುಟುಂಬ ಇದೆ. ೨೫ ಕುಟುಂಬಗಳು ವ್ಯವಸಾಯ ಮಾಡುತ್ತಿವೆ. ಚಿಕ್ಕಕೆರೆ ಹಾಗೂ ದೊಡ್ಡಕೆರೆ ಅನ್ನುವ ಎರಡು ಕೆರೆಗಳು ಇವೆ. ಪಿರಿಯಾಪಟ್ಟಣದ Middle Schoolನಲ್ಲಿ ಶಿಕ್ಷಕರಾಗಿದ್ದು, ಈಗ ನಿವೃತ್ತಿ ಹೊಂದಿರುವ, ಎಸ್.ಟಿ. ದಕ್ಷಿಣಾಮೂರ್ತಿಯವರು ಹೊಯ್ಸಳ ಕರ್ನಾಟಕರು. ಸಂಕೇತಿಗಳ ಒಡನಾಟ ಚೆನ್ನಾಗಿದೆ, ಮೇಲಾಗಿ ಊರಿನ ಇತಿಹಾಸ ಅರಿತವರು. ಅವರು ಇಲ್ಲಿನ ಸಂಕೇತಿಗಳ ಬಗ್ಗೆ ಮಾಹಿತಿ ನೀಡಿದ್ರು. 'ಪಿರಿಯಾಪಟ್ಟಣದ ಇತಿಹಾಸದಲ್ಲಿ ಚೆಂಗಾಳ್ವರು ಅಂತ ಆಳ್ತಾ ಇದ್ರು. ಅವರಲ್ಲಿ ಪ್ರಖ್ಯಾತವಾದ ಮಾಂಡಲೀಕರು ಇದ್ರು, ಈ ಸಂಕೇತಿಗಳಲ್ಲಿ ಅನೇಕ ಜನ ವಿದ್ಯಾವಂತರು, ಸಂಸ್ಕೃತ, ಸಾಹಿತ್ಯ, ಸಂಗೀತ, ಮುಖ್ಯವಾಗಿ ವೈದ್ಯ ಇವುಗಳಲ್ಲಿ ಪಾರಂಗತರಾದ ಕುಟುಂಬಗಳು ಇಲ್ಲಿ ನೆಲೆಸಿದ್ವು ಅನ್ನುವುದು ಇತಿಹಾಸದಿಂದ ತಿಳಿಯುತ್ತೆ. ಮುನ್ನೂರು, ನಾನೂರು ವರುಷಗಳ ಇತಿಹಾಸ ನೋಡಿದಾಗ ಮುಖ್ಯವಾಗಿ ಬರೋದು ಪಂಡಿತ ರಂಗಣ್ಣನವರ ಕುಟುಂಬ. ಇವತ್ತಿಗೂ ವೈದ್ಯಕೀಯ ಪರಂಪರೆ ಉಳಿಸಿಕೊಂಡು ಬಂದಿದೆ. ಅವರು ಮಾಂಡಲೀಕರುಗಳಿಗೆ ಆಸ್ಥಾನ ವೈದ್ಯರಾಗಿದ್ರು. ನಾನು ಪ್ರತ್ಯಕ್ಷ ಕಂಡ ಹಾಗೆ ಅನೇಕ ಚಿತ್ರಗಳು ಅವರ ಮನೇಲಿ ಇತ್ತು. ಈಗ ಪ್ರಾಯಶಃ ಆ ಚಿತ್ರಗಳು ಇಲ್ಲ. ಹಿಂದಿನ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕಿಂತ ಹಿಂದೆ, ಕಾಗೆಬಂಗಾರದ ಮೇಲೆ, ದೊಡ್ಡ ದೊಡ್ಡ ಚಿತ್ರಗಳನ್ನು ಬರೆದು, ಅದನ್ನು ಶೇಖರಿಸಿ ಇಡೋದು ರಸಿಕತೆಯ ಕುರುಹಾಗಿತ್ತು. ಅದು ಪಂಡಿತ ರಂಗಣ್ಣನವರ ಮನೇಲಿತ್ತು. ಆ ಕಾಲದಲ್ಲಿ ಔಷಧಿ ತಯಾರಿಸಲು ಬಳಸುತ್ತಿದ್ದ ಕುಪ್ಪಿ ಮಾತ್ರೆಗಳು, ಅದನ್ನು ಅರೆಯಲು ಬಳಸುತ್ತಿದ್ದ ಕಲ್ಲು ಪಾತ್ರೆಗಳು, ಅವರ ಮನೇಲಿತ್ತು. ಇವರು ರಾಜಾಶ್ರಯದಲ್ಲಿ ಇದ್ದುದಕ್ಕೆ ಗುರುತು ಏನೂ ಅಂದ್ರೆ, ಪಂಡಿತರು ಸದಾಕಾಲದಲ್ಲಿ ಹೊರಗಡೆ ಹೋಗುವಾಗ ಒಂದು ದೊಣ್ಣೆ ಹಿಡಿದಿರೋರು. ಅದು ನೋಡಲು ಒಂದು ದೊಡ್ಡ ದೊಣ್ಣೆ ಹಾಗೆ ಕಂಡ್ರೂವೆ, ಅದನ್ನು ಎಳೆದರೆ ಒಳಗೆ ಕತ್ತಿ ಇರೋದು. ಪ್ರಾಯಶಃ ಅದು ರಾಜಮನೆತನದವರ ಬಳಿ ಇರುತ್ತಿತ್ತೇ ಹೊರತು ಸಾಮಾನ್ಯರ ಮನೇಲಿ ಇರುತ್ತಿರಲಿಲ್ಲ. ಅರಮನೆಗೆ ಸಂಬಂಧಪಟ್ಟ ಸಾಮಗ್ರಿ ಸಂಕೇತಿಗಳ ಮನೇಲಿ ಇದ್ದಿದ್ರಿಂದ, ಇವರಿಗೂ ರಾಜರಿಗೂ ಹತ್ತಿರದ ಸಂಬಂಧ ಇತ್ತು ಅನ್ನೋದು ತಿಳಿಯುತ್ತೆ. ಡಾ. ಸುಬ್ರಹ್ಮಣ್ಯ ಅವರ ಮನೇಲೂ ಕುಪ್ಪಿ ಮಾತ್ರೆಗಳು ಇದ್ವು. ಒಳ್ಳೆ ಸಾಲಿಗ್ರಾಮ ಇದ್ದ ಹಾಗೆ ಇರೋದು. ನಾನಾ ಖಾಯಿಲೆಗೆ ಒಂದೇ ಮಾತ್ರೆ ಉಪಯೋಗಿಸುವ ಸಿದ್ಧಿ ಹಿಂದಿನ ವೈದ್ಯರಿಗೆ ಇತ್ತು. ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟ ತಾಳೆಗರಿಗ್ರಂಥಗಳು, ನಾಗರೀ ಲಿಪಿಯಲ್ಲಿತ್ತು. ಅರಿಯದ ಕೆಲವರು ಇದನ್ನು ನನ್ನ ಕಣ್ಣೆದುರಿಗೇ ಕೆರೇಲಿ ತೇಲಿಬಿಟ್ರು. ಮೈಸೂರಿನ Oriental Library Curators ಇಲ್ಲಿಗೆ ಬಂದಿದ್ರು. "ಹಳೆಯ ಓಲೆಗರಿ ಗ್ರಂಥಗಳನ್ನು ಕೊಡಿ ನಾವು ಸಂರಕ್ಷಣೆ ಮಾಡ್ತೀವಿ" ಅಂದ್ರು. ಹಳೆಯ ಓಲೆಗರಿಗಳು ಡಾ.ಸುಬ್ರಹ್ಮಣ್ಯ ಅವರ ಮನೆಯಲ್ಲಿ ಜತನದಿಂದ ಕಾಪಾಡಲ್ಪಟ್ಟಿತ್ತು. ಅದು ಈಗ Libraryಯಲ್ಲಿ ಸಂರಕ್ಷಿತವಾಗಿದೆ. ಇಲ್ಲಿನ ಸಂಕೇತಿಗಳು ವೃತ್ತಿಯಲ್ಲಿ ವೈದ್ಯರಾಗಿದ್ರು, ಪ್ರವೃತ್ತಿ ವ್ಯವಸಾಯ. ಆದರೆ ಈಗ ವೃತ್ತಿಯೇ ವ್ಯವಸಾಯ, ಪ್ರವೃತ್ತಿಯೇ ವೈದ್ಯ ಅಂತ ಬದಲಾಯಿಸಬೇಕೇನೋ. ಎಲ್ಲಿ ಸಂಕೇತಿಗಳು ಇದ್ದಾರೆ ಅಲ್ಲಿ ಒಂದು ತೋಟ ಇರಲೇಬೇಕು. ಬಾಗಾಯ್ತು ಕೃಷಿಯಲ್ಲಿ ಇವರು ಎತ್ತಿದ ಕೈ. ಪ್ರತಿಯೊಬ್ಬ ಸಂಕೇತೀನೂ ಹೆಗಲ ಮೇಲೆ ಗುದ್ದಲಿ ಹಾಕಿಕೊಂಡು, ತೋಟ ಅಗೆತ ಮಾಡಲು ಹೋಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ನಾನೂ ಅವರ ಜತೆ ತೋಟಕ್ಕೆ ಹೋಗಿ ಸೂಕ್ಷ್ಮವಾಗಿ ಅವರ ಕೆಲಸಗಳನ್ನು ಗಮನಿಸಿದ್ದೀನಿ. ಅಡಿಕೆ, ಬಾಳೆ, ತೆಂಗು, ಎಲೆಹಂಬು ಇರುವ ತೋಟವನ್ನು ಅವರು ಅಪೇಕ್ಷೆಪಡೋರು. ಯಾಕೇಂದ್ರೆ ಯಾರಿಗೂ ತೊಂದರೆ ಕೊಡಬೇಕಿಲ್ಲ. ಧಾರ್ಮಿಕವಾದ ವಿಚಾರ ಅಂದ್ರೆ, ವ್ಯವಸಾಯ ಮಾಡಿದ್ರೆ ಜೀವಜಂತುಗಳಿಗೆ ಹಿಂಸೆಯಾಗುತ್ತೆ, ಆದ್ದರಿಂದ ಬಾಗಾಯ್ತು ಮಾಡಿದ್ರೆ ಯಾರಿಗೂ ಹಿಂಸೆಯಾಗೋಲ್ಲ ಅಂತ ಅನೇಕ ಹಿರಿಯರು ಹೇಳೋರು. ತಲೆ ಹಾಗೂ ಭುಜದ ಮೇಲೆ ತೆಂಗಿನಕಾಯಿಯನ್ನು ಹೊತ್ತು ತರೋರು. ತೋಟಗಳನ್ನು ಅವತ್ತು ಹೇಗಿತ್ತೋ ಹಾಗೇ ಇವತ್ತೂ ಉಳಿಸಿಕೊಂಡು ಬಂದಿದ್ದಾರೆ. ಬ್ರಾಹ್ಮಣರಲ್ಲಿ ಸಂಕೇತಿಗಳ ಜನಾಂಗ ವ್ಯವಸಾಯವನ್ನು ಶ್ರೇಷ್ಠವಾದ ವೃತ್ತಿ ಅಂತ ಭಾವಿಸಿಕೊಂಡು, ತಮ್ಮ ಸ್ವಶಕ್ತಿಯಿಂದ ದುಡಿದು, ಸ್ವಾವಲಂಬಿಗಳಾಗಿ ಬದುಕಿದ್ದು ನೋಡಿದ್ರೆ ಬಹಳ ಹೆಮ್ಮೆಯಾಗುತ್ತೆ. ಅನಂತರಾಮಯ್ಯ ಅಂತ ನನ್ನ ಸ್ನೇಹಿತರು ಇದ್ರು. ಅವರು ವ್ಯವಸಾಯ, ಸಂಗೀತ ಹಾಗೂ ಸಂಸ್ಕೃತದಲ್ಲಿ ಪಾರಂಗತರಾಗಿದ್ರು. ಪಿರಿಯಾಪಟ್ಟಣದ ಸಂಕೇತಿಗಳು, ಇರುವ ಗದ್ದೇನ ತೋಟವಾಗಿ ಪರಿವರ್ತನೆ ಮಾಡಿದ್ರು. ಯಾಕೇಂದ್ರೆ ತೋಟದಲ್ಲಿ ಪುರುಸತ್ತು ಬಹಳ ಸಿಗುತ್ತೆ. ರಾಯಪ್ಪನವರದ್ದು ಒಂದು ದೊಡ್ಡ ಕುಟುಂಬ. ಈ ಊರಿನ ಚನ್ನಕೇಶವ ದೇವಸ್ಥಾನದ ಎದುರುಗಡೆ ಅವರ ಮನೆಯಿತ್ತು. ಪಿರಿಯಾಪಟ್ಟಣಕ್ಕೆ ಸಂಕೇತಿಗಳಲ್ಲಿ ಮೊದಲು ಬಂದವರು ರಾಯಪ್ಪನವರು. ಅವರ ವಂಶದಲ್ಲೇ, ಉಪಾಧ್ಯಾಯರಾಗಿದ್ದ ಸುಬ್ಬಣ್ಣನವರು ಅಂತ ಇದ್ರು. ವರ್ಗವಾದಾಗ ಅವರ ದೊಡ್ಡದಾದ ತೊಟ್ಟಿಮನೆಯನ್ನು ಮಾರಿಹೋದ್ರು. ಅವರ ಕಾಲದಲ್ಲಿ ಇಲ್ಲಿ ಅಂದಾಜು ಸಂಕೇತಿಗಳದ್ದು ೬೦ ಮನೆ ಇತ್ತು. ಕೃಷಿ

ವಿದ್ಯೆ ಸಂಕೇತಿಗಳಿಗೆ ರಕ್ತಗತವಾಗಿ ಬಂದಿದೆ' ಎಂದು ಹೇಳಿದ್ರು ದಕ್ಷಿಣಾಮೂರ್ತಿಯವರು. ನಂತರ ಸಂಕೇತಿ ಕೃಷಿಕರನ್ನು ಮಾತನಾಡಿಸಿದೆವು. ಪಿರಿಯಾಪಟ್ಣದಲ್ಲಿ ತ್ರಿಮತಸ್ಥ ಬ್ರಾಹ್ಮಣರು ಒಂದಾಗಿ ಸೇರಿ ನಿರ್ಮಿಸಿದ ಭರ್ಜರಿಯಾದ ರಾಮಮಂದಿರ ಇದೆ. ಒಂಬತ್ತು ದಿನಗಳ ಕಾಲ ವಿಜೃಂಭಣೆಯಿಂದ ರಾಮೋತ್ಸವ ಜರುಗುತ್ತೆ. ಹಾಗೇ ಊರಲ್ಲಿರುವ ಕನ್ನಂಬಾಡಿಯಮ್ಮ, ಮಸ್ಣಿಯಮ್ಮ ದೇವಸ್ಥಾನದ ಜಾತ್ರೆಗಳೂ ಜರುಗುತ್ವೆ. ವೈದ್ಯೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಸಂದರ್ಭದಲ್ಲಿ ರಥೋತ್ಸವ ಜರುಗುತ್ತೆ. ಇವು ಊರಿನ ಹೆಗ್ಗಳಿಕೆಯ ಅಂಶಗಳು.

ಅ) ಪಿ.ಎಸ್. ವೆಂಕಟನಾರಾಯಣ ಇ/ಮ ಪಿ.ಎಸ್. ಶ್ರೀನಿವಾಸಯ್ಯ (ಚಿನ್ನಸ್ವಾಮಯ್ಯ)

ಪಿರಿಯಾಪಟ್ಟಣ, ಮೈಸೂರು ಜಿಲ್ಲೆ ದೂರವಾಣಿ : 08223-274835

Lifeನಲ್ಲಿ charm ಇರೋದು Riskನಲ್ಲಿ. ಹಣ ಎಲ್ಲಿ ಬಿದ್ದಿದೆಯೋ, ಅಲ್ಲೇ ಹಣ ಅರಸಬೇಕು ಅಂತ ನಾನು ಬಹಳಷ್ಟು Risk ತೊಗೊಂಡೆ. ಸಂದರ್ಭ ಇದ್ದ ಹಾಗೆ ಬದುಕಿದೆ, ಧಿಮಾಕು ತೋರಿಸಲು ಹೋಗಲಿಲ್ಲ. ಸದಾ ನನಗೆ ಪ್ಲಸ್ಸು ಹಾಗೂ ಮೈನಸ್‌ನದ್ದು ಮಾತ್ರ ಚಿಂತೆ.


ಪಿ.ಎಸ್.ವೆಂಕಟನಾರಾಯಣ ಅವರೊಂದಿಗೆ ಪ್ರಭಾವತಿ-ಪಿ.ವಿ.ನಾಗೇಶರಾವ್ ದಂಪತಿ: ಪಿರಿಯಾಪಟ್ಟಣ

ಪಿರಿಯಾಪಟ್ಟಣದ ಶ್ರೀನಿವಾಸಯ್ಯನವರು 'ಜೋಕರ್ ಶ್ರೀನಿವಾಸಯ್ಯನವರು' ಎಂದೇ ಪ್ರಖ್ಯಾತಿ. ಇವರು ಸದಾ ಖುಷಿಯಾಗಿದ್ದಿದ್ರಿಂದ ಈ ಅನ್ವರ್ಥನಾಮ ಬಂದಿದ್ದಿರಬಹುದು. ಆಗಿನ ಕಾಲದಲ್ಲೇ ಇವರ ತಂದೆ ವೆಂಕಟನಾರಾಯಣಪ್ಪ ಸರ್ಕಾರಿ ಉದ್ಯೋಗದಲ್ಲಿದ್ರಂತೆ. ಶ್ರೀನಿವಾಸಯ್ಯನವರೂ ಇದ್ದಿದ್ದು ಸರ್ಕಾರಿ ಕೆಲಸದಲ್ಲೇ. ಕೆಲವು ಕಾಲ ನಂಜನಗೂಡಿನಲ್ಲೇ ವಾಸವಿದ್ರಂತೆ. ಶ್ರೀನಿವಾಸಯ್ಯನವರ ಪತ್ನಿ ನಂಜಮ್ಮ ಮರಿತಮ್ಮನಹಳ್ಳಿಯವರು. ಈ ದಂಪತಿಗಳ ಮಗನೇ ಪಿ.ಎಸ್. ಶ್ರೀನಿವಾಸಯ್ಯ. ಮಗ ಎರಡು ವರುಷದವನು ಇದ್ದಾಗಲೇ ಜೋಕರ್ ಶ್ರೀನಿವಾಸಯ್ಯನವರು ತೀರಿಕೊಂಡ್ರು. ಒಡವೆ ವಸ್ತ್ರದ ಜತೆಗೆ ಗರ್ಗೇಶ್ವರಿ, ಗುಂಡಮಾಡಿ, ಮರೂರು ಹಾಗೂ ಹಿಟ್ನೆಹೆಬ್ಬಾಗಿಲು ಗ್ರಾಮಗಳಲ್ಲಿ ಆಸ್ತಿ ಇತ್ತು. ಕುಟುಂಬದ ಹಿರಿಯರಾದ ವೆಂಕಟನಾರಾಯಣಪ್ಪನವರು ಆಸ್ತಿ ಹಿಸ್ಸೆ ಮಾಡಲು ಕುಳಿತರು. ಸೊಸೆ ನಂಜಮ್ಮನವರನ್ನು ಕರೆದು ಕೇಳಿದ್ರಂತೆ, "ಈ ಒಡವೆ ವಸ್ತ್ರ ತೊಗೊಂಡು ತವರು ಮನೆಗೆ ಹೋಗ್ತೀಯೋ, ಅಥವಾ ನಿನಗೂ ತೋಟ ಗದ್ದೆಯ ಭಾಗ ಬೇಕೋ" ಅಂತ. ನಂಜಮ್ಮನವರು ದೃಢವಾಗಿ ನುಡಿದ್ರಂತೆ, "ನಾನು ಇಲ್ಲೇ ಇರ್ತೀನಿ, ನನಗೆ ಒಡವೆ ಚಿನ್ನ ಬೇಡ. ತೋಟ ಕೊಡಿ ಸಾಕು" ಅಂತ. ಅವರಿಗೂ ತೋಟದ ಭಾಗ ಬಂತು. ಕಷ್ಟಪಟ್ಟು ದುಡಿದು ಆಸ್ತಿಯನ್ನು ದುಪ್ಪಟ್ಟು ಮಾಡಿದ್ರಂತೆ. ಇವಿಷ್ಟನ್ನು ಹೇಳಿದ್ದು ೯೦ರ ವಯೋವೃದ್ಧ ಪಿ.ಎಸ್.ವೆಂಕಟನಾರಾಯಣ. ನಂಜಮ್ಮ ಇವರ ಪ್ರೀತಿಯ ಅಜ್ಜಿ. ಪಿ.ಎಸ್. ವೆಂಕಟನಾರಾಯಣಪ್ಪ ಹೇಳುತ್ತಾರೆ, "ಮನೆಗೆ ಒಬ್ಬರು ಬುದ್ಧಿವಂತರು ಇರಬೇಕು. ಇಲ್ಲದಿದ್ರೆ ಕುಟುಂಬ ಉಳಿಯೋಲ್ಲ. ನನ್ನ ಅಜ್ಜಿ ಬಹಳ ಬುದ್ಧಿವಂತೆ. ಅವತ್ತು ಅವರು ತೋಟ ಕೇಳದಿದ್ರೆ, ನಾವು ಇವತ್ತು ಮನುಷ್ಯರಾಗಿ ಇರೋಕೆ ಆಗ್ತಿರಲಿಲ್ಲ. ಅವತ್ತಿನ ಆಸ್ತೀನೇ ಇವತ್ತಿಗೂ ನಾವು ಅನುಭವಿಸುತ್ತಾ ಇರೋದು. ಅಜ್ಜಿ ಬೆಳಗ್ಗೆ ಎದ್ದು ಶ್ರೀಕೃಷ್ಣನ ಹಾಡು ಹೇಳುತ್ತಾ ಪಾತ್ರೆ ತೊಳೆದು, ರಂಗೋಲಿ ಇಟ್ಟು ಮೊಸರು ಕಡೆದು ಬೆಣ್ಣೆ ಮಾಡಿ, ದನಗಳ ನಿರ್ವಹಣೆ ಮಾಡಿ, ಮುಕ್ಕಾಲು ಮೈಲಿ ದೂರದ ಅರಸಿನಕೆರೇಲಿ ಬಟ್ಟೆ ಒಗೆದು, ಮಡೀಲಿ ಅಡುಗೆ ಕೆಲಸ ಮಾಡೋರು. ಯಾತದಲ್ಲಿ ಭತ್ತ ಕುಟ್ಟಿ ತೆಗೆಯೋರು, ಅವರು ಬಹಳ ಶ್ರಮಜೀವಿ. ಅವರು ಕೆಲಸ ಮಾಡದಿದ್ರೆ ಈ ಜಮೀನು

ಉಳೀತಿರಲಿಲ್ಲ" ಅಂದ್ರು. ಜೋಕರ್ ಶ್ರೀನಿವಾಸಯ್ಯನವರ ಮಗ ಪಿ.ಎಸ್. ಶ್ರೀನಿವಾಸಯ್ಯ (ಚಿನ್ನಸ್ವಾಮಯ್ಯ) ಮದುವೆಯಾದದ್ದು ಚಿಲ್ಕುಂದದ ಅನಂತಲಕ್ಷ್ಮಮ್ಮ (ಗುಂಡಮ್ಮ)ನವರನ್ನು. ಇವರ ಮಗನೆ ಪಿ.ಎಸ್.ವೆಂಕಟನಾರಾಯಣ. ತಮ್ಮ ಮಗ ಪಿ.ವಿ. ನಾಗೇಶರಾವ್ ಅವರ ಜತೆಯಲ್ಲಿ ಪಿರಿಯಾಪಟ್ಟಣದಲ್ಲಿ ನೆಲೆಸಿದ್ದಾರೆ. ಅವರ ಮನೆಯಂಗಳದಲ್ಲಿ ಕುಳಿತು ನೆನಪಿನಂಗಳವನ್ನು ಕೆದಕಿದಾಗ, ಅನುಭವದ ಆಣಿಮುತ್ತುಗಳು ಉದುರಿದವು. 'ನನ್ನ ಅಜ್ಜ ಮಾಡಿದ ಮಾವಿನ ತೋಟದ ಜಾಗ ನಂದು ಅಂತ ಹಯಾತ್‌ಸಾಬಿ ಅನ್ನೋನು ಕೋರ್ಟ್‌ನಲ್ಲಿ ಕೇಸ್ ಹಾಕಿದ್ನಂತೆ. ಎಲ್ಲಿ ವ್ಯತಿರಿಕ್ತವಾದ ತೀರ್ಪು ಬರುತ್ತೋ, ಅನ್ಯಾಯವಾಗುತ್ತೋ ಅಂತ ನಮ್ಮಜ್ಜಿ ಆ ಮ್ಯಾಜಿಸ್ಟ್ರೇಟ್ ಬಳಿ ಹೋಗಿ, ಅವರ ಪತ್ನಿಗೆ ಮುತ್ತೈದೆ ಸತ್ಕಾರ ಮಾಡಿ, ನನ್ನ ಮಕ್ಕಳು ತಬ್ಬಲಿಗಳಾಗ್ತಾರೆ, ನೀವೇ ಕಾಪಾಡಬೇಕು ಅಂತ ಕೇಳಿಕೊಂಡ್ರಂತೆ. ಕಡೆಗೆ ವ್ಯತಿರಿಕ್ತವಾಗಿದ್ದ ಆ ಸಾಬೀನೇ ಮನಃ ಪರಿವರ್ತನೆ ಮಾಡಿಕೊಂಡು ಇವರಂತೇ ಬಂದನಂತೆ. ಅಂಥ ಗಟ್ಟಿಗಿತ್ತಿ ನಮ್ಮ ಅಜ್ಜಿ. ನನ್ನ ತಂದೆ ಮೈಸೂರಿನ ಮರಿಮಲ್ಲಪ್ಪ ಶಾಲೇಲಿ ಓದಿದ್ದು, ಚಿಕ್ಕ ವಯಸ್ಸಿನಲ್ಲಿ ತಂದೇನ ಕಳೆದುಕೊಂಡ್ರು. ಎಂಟು ಎಕರೆ ತೋಟವಿತ್ತು. ಅಡಿಕೆ, ವಿಳ್ಳೇದೆಲೆ, ಬಾಳೆ ಇತ್ತು. ರೈತರಿಗೆ "ಮಾಡು ತೋಟ"ಕ್ಕೆ ಕೊಟ್ಟಿದ್ರು. ನನ್ನ ತಂದೆ ಭಾರೀ ಆಳು. ನಡೆದ್ರೆ ಭೂಮಿ ನಡುಗುವಂತೆ ಇದ್ರು. ಬಹಳ ಕಷ್ಟಜೀವಿ. ಎಂಟುಎಕರೆಯ ಅಡಿಕೆ ಪಟ್ಟೇನೆಲ್ಲಾ ಕಟ್ಟಿ ಹೊರೆ ಮಾಡೋರಂತೆ. ಅದನ್ನು ಮೂರು ಜನ ಆಳುಗಳು ಎತ್ತಿ ತಲೆ ಮೇಲೆ ಹೊರಿಸೋರಂತೆ. ಅದನ್ನು ಒಂದು ಮೈಲಿ ದೂರದ ಮನೆಗೆ ತಂದು, ಎಡೆದು, ಜೋಡಿಸಿಕೊಂಡು ನಂತರ ಗಿರಾಕಿಗಳಿಗೆ ಮಾರೋರು. ಅದರಲ್ಲೇ ದುಡ್ಡು ಮಾಡೋರು. ಅವರು ಬದುಕಿದ ರೀತೀನೇ ಬೇರೆ, ನಮ್ಮದೇ ಬೇರೆ. ಅರ್ಥಾತ್ ಸಂಬಂಧ ಇಲ್ಲ. ಅವರನ್ನು ನೆನೆಸೋ ಯೋಗ್ಯತೆ ನಮಗಿಲ್ಲ. ಇವತ್ತಿಗೂ ಅವರ ಹೆಸರು ಹೇಳೀನೇ ನಾನು ನಡಿಯೋದು. ಇಲ್ಲದಿದ್ರೆ ಮನಸು ಓಡೋದಿಲ್ಲ. ಅವತ್ತು ಅಡಿಕೆ ಧಾರಣೆ ಇರಲಿಲ್ಲ. ನನ್ನ ತಂದೆ ಹೆಣ್ಣುಮಕ್ಕಳ ಮದುವೆ ಮಾಡಲು ೫೦೦೦ ರೂಪಾಯಿ ಸಾಲ ಮಾಡಿದ್ರು. ತೀರಿಸೋದಕ್ಕೆ ಕಷ್ಟ ಆಯ್ತು. ಆಸ್ತೀನ ಮಾರಬೇಕಾಗಿ ಬಂತು. ಅವತ್ತಿನ ಐದು ಸಾವಿರ ರೂಪಾಯಿ ಇವತ್ತಿನ ಐವತ್ತು ಲಕ್ಷಕ್ಕೆ ಸಮಾನ. ಕಡೆಗೆ ತಂದೆಗೆ hookworm infection ಆಯ್ತು. ಖಾಯಿಲೆಗೆ ಬಿದ್ರು. ಔಷಧಿಯ ಪ್ರಭಾವದಿಂದ ೧೦ ವರುಷ ಬದುಕಿದ್ರು. ಆ ಖಾಯಿಲೆಯಲ್ಲೂ ದುಡಿಯೋರು. ನಾನು ಮೈಸೂರಿನಲ್ಲಿ intermediate ಮಾಡಿದೆ. ತಂದೆ ಖಾಯಿಲೆ ಬಿದ್ದಾಗ ನನ್ನ ೨೨ನೇ ವಯಸ್ಸಿನಲ್ಲಿ ಊರಿಗೆ ಬಂದು ವ್ಯವಸಾಯ ಮಾಡಲು ಆರಂಭಿಸಿದೆ. ನನಗೆ ಐದು ಎಕರೆ ತೋಟ ಇತ್ತು. "ಮಾಡು ತೋಟ"ಕ್ಕಿದ್ದ ರೈತರನ್ನು ಬಿಡಿಸಿ, ನಾನೇ ಸ್ವತಃ ದುಡಿಯಲು ಆರಂಭಿಸಿದೆ. ತೋಟದ ನಾಲ್ಕೈದು ಭಾವಿಯಿಂದ ಗಡಿಗೇಲಿ ನೀರನ್ನು ಎತ್ತಿ ಅಡಿಕೆ ಗಿಡಗಳಿಗೆ ಹಾಕ್ತಿದ್ದೆ. ಎಲೆ ಹಂಬು ಕಟ್ತಿದ್ದೆ. ತೋಟದ ಅಗೆತ ಮಾಡ್ತಿದ್ದೆ. ಶ್ರಮದಿಂದ ಜೀವನ ನಡೆಸಿದೆ', ಎಂದರು ವೆಂಕಟನಾರಾಯಣಪ್ಪ. ಕೆಲವು ಕ್ಷಣ ನೆನಪಿನ ಅಂಗಳದಲ್ಲಿ ಮುಳುಗಿ ತಕ್ಷಣ ಹೇಳಿದ್ರು, 'ನನ್ನ ತಾಯಿಗೆ, liver ಖಾಯಿಲೆಯಿಂದ ಮೊದಲ ಐದು ಮಕ್ಕಳು ತೀರಿಕೊಂಡ್ವಂತೆ. ಆಗ ಮೂಢನಂಬಿಕೆ ಜಾಸ್ತಿ. ನಾನು ಹುಟ್ಟಿದಾಗ, ಹೊಟ್ಟೆ ಊದಿದಂತಿತ್ತಂತೆ. ಎಲ್ಲೋ ಹೋಗ್ತಿದ್ದ ಮಾಟಗಾರರನ್ನು ಕರೆಸಿ ೫೦ ರೂಪಾಯಿ ಕೊಟ್ಟು ಮಾಟ ಮಾಡಿಸಿದ್ರಂತೆ. ಯಾತಕ್ಕೆ ಹೀಗೆ ಮಕ್ಕಳು ಸಾಯುತ್ತಿವೆ ಅಂದಾಗ ಯಾರೋ ಹೇಳಿದ್ರಂತೆ "ಈಯಮ್ಮಂಗೆ ಎದೆನಾಗರ ಇದೆ. ತಾಯಿ ಹಾಲನ್ನು ಮಗೀಗೆ ಕುಡಿಸಬೇಡಿ. ಕುಡಿಸಿದ್ರೆ ಮಗು ಸಾಯುತ್ತೆ" ಅಂತ. ನನಗೆ ಟೋಪಿ ಬಿತ್ತು. ತಾಯಿ ಹಾಲು ಸಿಗಲೇ ಇಲ್ಲ. ಎದೆ ಹಾಲಿಗೆ ಬೇರೆ ಹೆಂಗಸನ್ನು ಗೊತ್ತು ಮಾಡಿದ್ರು, ನಾನು ಅವಳ ಬಳಿ ಹಾಲು ಕುಡೀಲಿಲ್ವಂತೆ. ತಾಯಿ ಹಾಲು ಕುಡಿದು ಬೆಳೆದಿದ್ರೆ ಕಬ್ಬಿಣ ಮುರೀತಿದ್ದೆ. ಈಗ ಉಲ್ಲಾಸ ಇದೆ ಅಷ್ಟೆ, ಶಕ್ತಿ ಇಲ್ಲ. ಆಗ ನಮಗೆ ಜ್ವರ ಬಂದರೆ ಹೆದರಿಕೆಯಾಗೋದು. ಸ್ವಲ್ಪ ದಿನ ನೋಡಿ ಬಳೆ ಗಾಜಲ್ಲಿ ಚಿಟಿಕೆ ಹಾಕೋರು. ನನ್ನ ಮೈಯಲ್ಲೆಲ್ಲಾ ಚಿಟಿಕೆ ಗುರುತಿದೆ. ನಾನು ಚಿಕ್ಕವನಿದ್ದಾಗ ಒಮ್ಮೆ ಕೆರೇಲಿ ಈಜಲು ಹೋಗಿ ಮುಳುಗಿದ್ದೆ. ನನಗೆ ಈಜಲು ಬರ್ತಿರಲಿಲ್ಲ. ಅವತ್ತು ನಮ್ಮ ಮನೇಲಿ ವೈಕುಂಠಸಮಾರಾಧನೆ. ಬಂದ ನೆಂಟರು ಇಷ್ಟರು ಕೆರೇಲಿ ಈಜೋಕೆ ಹೋಗಿದ್ರು. ನಾನೂ ಹೋಗಿ ನೀರಿಗೆ ಬಿದ್ದೆ, ಮುಳುಗಿದೆ. ನಮ್ಮ ನೆಂಟರು ಪುಟ್ಟಯ್ಯಾ ಅಂತ ಇದ್ರು. ಅವರು ದಡದಲ್ಲಿದ್ರು. ಅವರು ಮಾತನಾಡೋದು ನನಗೆ ಕೇಳೋದು, ನಾನು ಕೂಗೋದು ಅವರಿಗೆ ಕೇಳ್ತಿರಲಿಲ್ಲ. ಅವರು ಪಕ್ಕದವರನ್ನು ಕೇಳಿದ್ರು, ಈ ಹುಡುಗ ನೀರಿಗೆ ಬಿದ್ದು ಮುಳುಗಿದನಲ್ಲಾ ಅವನಿಗೆ ಈಜೋಕೆ ಬರುತ್ತಾ ಅಂತ. ಜತೇಲಿದ್ದೋರು ಹೇಳಿದ್ರು ಅವನಿಗೆ ಈಜು ಬರೋಲ್ಲ ಅಂತ. ಆಗ ಅವರು ಹೇಳಿದ್ರು, ನಾನು ಈ ಪಂಚೇನ ಎಸೀತೀನಿ ಅವನು ಹಿಡಿದ್ರೆ ನಾನು ಎಳೀತೀನಿ. ಇಲ್ಲಾಂದ್ರೆ ಬಿಟ್ಟುಬಿಡ್ತೀನಿ ಅಂದ್ರು. ನೀರಲ್ಲಿ ಇದ್ದ ನನಗೆ ಅಯ್ಯೋ ದೇವರೆ ಅವರು ಬೇಗ ಪಂಚೇನ ಎಸೀಬಾರದೆ ಅನ್ನಿಸಿತ್ತು. ಬದುಕುವ ಆಸೆ ನನಗೆ. ನಾನಂತೂ ಅವರು ಎಸೆದ ಪಂಚೆ ಬಟ್ಟೇನ ಒಳ್ಳೆ ಹೂವು ಹಿಡಿದ ಹಾಗೆ ಹಿಡಿದಿದ್ದೆ. ಜೋರಾಗಿ ಎಳೆದ್ರೆ ಅವರು ಎಲ್ಲಿ ಬಿಟ್ಟು ಬಿಡ್ತಾರೋ ಅನ್ನುವ ಭಯ ನನಗೆ. ಪ್ರತಿಯೊಬ್ಬರಿಗೂ ಪ್ರಾಣದ ಮೇಲೆ ಪ್ರೀತಿ ಇರುತ್ತೆ. ಯಾರೂ ಸಾಯಲು ಇಷ್ಟಪಡೋಲ್ಲ' ಅಂದ್ರು. ನಮಗೂ ನಿಜವಾದ ಮಾತು ಅನ್ನಿಸಿತು. ವಯೋಮಾನಕ್ಕೆ ಸಹಜವಾದ ಮರೆವು ಇದ್ರೂ, ಅದನ್ನು ನೆನೆನೆನೆಸಿಕೊಂಡು ವೆಂಕಟನಾರಾಯಣಪ್ಪನವರು ಹೇಳುತ್ತಿದ್ದ ರೀತಿ ಮಾತ್ರ ಸೊಗಸಾಗಿತ್ತು. 'ನನ್ನ ಜೀವನವೇ ಒಂದು

ರೀತಿ Mesmerism ಅನ್ನಬಹುದು. ನನ್ನ ಹೆಂಡತಿ ಬಿ.ಎಸ್. ಸರಸ್ವತಮ್ಮ ಮೈಸೂರಿನ ರಾಜಶಿಲ್ಪಿ ವಿಶಾರದ ಬಿ.ಸುಬ್ಬರಾವ್ ಹಾಗೂ ರುಕ್ಮಿಣಮ್ಮ ದಂಪತಿಗಳ ಮಗಳು. ನನ್ನ ಮಾವನವರು ಸರ್.ಎಂ. ವಿಶ್ವೇಶ್ವರಯ್ಯನವರ ಜತೆ Chief engineer ಆಗಿದ್ರು. ನನಗೆ ಹುಡುಗುಬುದ್ಧಿ. ಅಂಥಾ ದೊಡ್ಡಮನೆಯ ಸಂಬಂಧ ಒದಗಿಬಂತು. ನನ್ನ ಮದುವೆ ಒಂದು ವಾರ ಆಯ್ತು. ಮೂರು ಸಾವಿರ ರೂಪಾಯಿ ಖರ್ಚು ಮಾಡಿ ಬಹಳ ಚೆನ್ನಾಗಿ ಮದುವೆ ಮಾಡಿ ಕೊಟ್ರು. ಹೆಂಡತಿ ಒಳ್ಳೆಯವಳು. ನನ್ನ ಹೆಂಡತಿ ಕಡೆಯಿಂದ ಐದು ಸಾವಿರ ಹಣ ಬಂತು. ನನಗೆ ದುಡ್ಡು ಮಾಡುವ ಆಸೆ. ಹೊಗೆಸೊಪ್ಪಿನ ಮಾರಾಟದಲ್ಲಿ ದುಡ್ಡು ಮಾಡೋಣ ಅಂತ ಚಿಲ್ಕುಂದದಲ್ಲಿ ಒಂದು warehouse ಮಾಡಿದೆ. ಹೊಗೆಸೊಪ್ಪಿನ ಕೂಳೆ ಹುಡಿ ಉಳಿದಿತ್ತು. ನನಗೆ typhoid ಬಂತು. ತಿಂಗಳುಗಟ್ಟಲೆ ಅದು ಹಾಗೇ ಉಳೀತು. ಕಡೆಗೆ ವೇಲೂರಿಗೆ ತೊಗೊಂಡು ಹೋದೆ. ಆದ್ರೆ ಅಲ್ಲಿ ಮಾರಿದ್ರೆ ನಾನು ಕಟ್ಟಿದ ಸುಂಕದಷ್ಟು ದುಡ್ಡು ಉಳಿಯೋದು. ಏನು ಪ್ರಯೋಜನ? ಕಡೆಗೆ ನಾನು ಹೇಳಿದಾಗ ಮಾರು ಅಂತ ಮಾರಾಟಗಾರರಿಗೆ ಹೇಳಿದೆ. ದೇವರು ದೊಡ್ಡವನು. ಒಳ್ಳೆ ಧಾರಣೆ ಸಿಕ್ಕಿ ನನ್ನ ಬಂಡವಾಳ ಉಳೀತು. ಸಂಸಾರ ಮಾಡುವಾಗ ಮತ್ತೆ ಮತ್ತೆ ನನ್ನ ತಲೆಗೆ ಏನೇನೋ ಹೊಳೆಯೋದು. ನನ್ನ ಹಾಗೆ ಹೋದ್ರೆ ಯಾರೂ ಉಳಿಯೋಲ್ಲ. ಆದ್ರೂ ನಾನು ಬಿಡಲಿಲ್ಲ. ಮತ್ತೆ ಹೊಗೆಸೊಪ್ಪು ವ್ಯಾಪಾರ ಮಾಡಿದೆ. ಈ ಬಾರಿ ನನ್ನ partner ಸರಿಹೋಗಲಿಲ್ಲ. ಬಿಟ್ಟುಬಿಟ್ಟೆ. ಕಡೆಗೆ ಲೇವಾದೇವಿ ಮಾಡಿ ಹಣ ಸಂಪಾದಿಸೋಣ ಅಂತ ಹೊರಟೆ. ಕೋರ್ಟು ಕಛೇರಿ ಸಹವಾಸ ಮಾಡಬೇಕಾಯ್ತು. ಅದನ್ನು ಬಿಟ್ಟೆ. ಹೆಂಡತಿಯ ದುಡ್ಡು, ಅದನ್ನು ಹಾಳು ಮಾಡೋದುಬೇಡ ಅಂತ ಅವಳನ್ನು ಕೇಳಿದೆ, ಈ ದುಡ್ಡಲ್ಲಿ ತೋಟ ತೊಗೋಳೋಣವೋ ಅಥವಾ ಮನೆ ಕಟ್ಟೋಣವೋ ಅಂದೆ. ಮೈಸೂರಲ್ಲಿ ಮನೆ ಮಾಡಿ ಅಂದಳು ಹೆಂಡತಿ. ನನ್ನ ಪುಟ್ಟ ಆದಾಯದಲ್ಲಿ ಎಂಟು ಜನ ಮಕ್ಕಳನ್ನು ಸಾಕಿದೆ. ನನ್ನ ಪರಿಸ್ಥಿತಿ ಸುಧಾರಿಸುವಾಗ ಹೆಂಡತಿ ತೀರಿಕೊಂಡ್ಲು. ಬಲವಾದ ಹೊಡೆತ ಬಿತ್ತು. ನನ್ನ ಹೆಣ್ಣುಮಕ್ಕಳು, ಮನೆ ನಿರ್ವಹಣೆ ಮಾಡಿದ್ರು. ಅಂತೂ ಇಂತೂ ಸಂಸಾರದ ದೋಣಿ ದಡ ಸೇರಿತು. ಮಕ್ಕಳನ್ನೂ ಓದಿಸಿದೆ. ಅವರೂ ಬುದ್ಧಿವಂತ್ರು. ಕಷ್ಟಪಟ್ಟು ಓದಿ ಒಳ್ಳೆಯ ಕೆಲಸ ಸಂಪಾದಿಸಿದರು. ನನ್ನ ೮೫ರ ವಯಸ್ಸಿನಲ್ಲೂ ನಾನು ಸೈಕಲ್ ಹೊಡೆದುಕೊಂಡು ತೋಟಕ್ಕೆ ಹೋಗಿ ಬರ್ತಿದ್ದೆ. ಪರಮಾತ್ಮನ ಸಹಕಾರ ಇರದಿದ್ರೆ ನಾನು ಹೊಟ್ಟಾಗಿ ಉದುರಿ ಹೋಗ್ತಿದ್ದೆ. ನನ್ನ ಬದುಕಿನಲ್ಲಿ ನಾನು ಕಲಿತ ಪಾಠ, ನಾವು ಮಾಡಿದ ಪಾಪ ಪುಣ್ಯವನ್ನು ನಾವೇ ಅನುಭವಿಸಬೇಕು. ಮತ್ತೊಬ್ಬರಿಗೆ ಸಾಲ ಕೊಡೋಕೆ ಆಗೋದಿಲ್ಲ. ಒಳ್ಳೆ ನಡತೆ ಇರಬೇಕು. ಈಗ ನನ್ನನ್ನು ನಾನು ಕಾಣಲು ಆರಂಭಿಸಿದ್ದೀನಿ' ಅಂದ್ರು. 'ನಿಮ್ಮ ವ್ಯವಸಾಯದ ಚಿಂತನೆ?' ಅಂದಿದ್ದಕ್ಕೆ 'ಗೊಬ್ಬರ, ಗೋಡು, ನೀರು ಹಾಕಿದ್ರೆ ಸಾಕು ವ್ಯವಸಾಯ ಆಗುತ್ತೆ' ಅಂತ ಹೇಳಿ ನಕ್ಕರು.

ಪಿ.ಎಸ್.ವೆಂಕಟನಾರಾಯಣಪ್ಪನವರ ಮಗ ಪಿ.ವಿ. ನಾಗೇಶ್‌ರಾವ್ ಈಗ ವ್ಯವಸಾಯ ಮುಂದುವರಿಸುತ್ತಿದ್ದಾರೆ. ತಂದೆಗೆ ಬೆಂಗಾವಲಾಗಿದ್ದಾರೆ. ಇವರು ಓದಿದ್ದು BE(Mechanical). ಖಾಸಗಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ರು. ಅದನ್ನು ಬಿಟ್ಟು ಬಂದು ತಂದೆಯ ವ್ಯವಸಾಯವನ್ನು ಶ್ರೀಮಂತಗೊಳಿಸಿದ್ದಾರೆ. ಈ ಸಂದರ್ಭದಲ್ಲಿ ಅವರೂ ಮಾತನಾಡಿದರು. 'ನಾವು ನಮ್ಮ ತಂದೆಗೆ ನಾಲ್ಕು ಜನ ಗಂಡು, ನಾಲ್ಕು ಹೆಣ್ಣುಮಕ್ಕಳು. ನಾನು ಚಿಕ್ಕವನಿದ್ದಾಗ ಅಂದ್ರೆ ನನಗೆ ಮೂರು ವರುಷ ಇರುವಾಗಲೇ ನಮ್ಮ family ಪೂರ್ತಿ ಮೈಸೂರಿಗೆ shift ಆಯ್ತು. ಮೈಸೂರಿನ ಕೆ.ಆರ್.ವನಂನಲ್ಲಿ ತಂದೆ ಮನೆಮಾಡಿದ್ರು. ನಾವೆಲ್ಲಾ ಪಿರಿಯಾಪಟ್ಟಣ ಬಿಟ್ಟು ಅಲ್ಲಿ ನೆಲೆಸಿದ್ವಿ. ತಂದೆ ಪ್ರತೀವಾರಕ್ಕೆ ಒಂದು ಸಾರಿ ಪಿರಿಯಾಪಟ್ಟಣಕ್ಕೆ ಬರೋರು. ಅಡಿಕೇಲಿ ಮೂರು ಸಾವಿರ ವರಮಾನ, ಹಾಗೇ ನಂಜನಗೂಡಿನಲ್ಲಿ ಇದ್ದ ನಾಲ್ಕು ಎಕರೆ ತಾಯಿ ಕಡೆ ಜಮೀನಿನಲ್ಲಿ ೧೦೦ ಕ್ವಿಂಟಾಲ್ ಭತ್ತ ಬರೋದು. ಇದೇ ನಮ್ಮ ಸಂಸಾರಕ್ಕೆ ಇದ್ದ ಆದಾಯದ ಮೂಲ.



ಪಿ.ವಿ.ನಾಗೇಶರಾವ್: ಪಿರಿಯಾಪಟ್ಟಣ: ಸಂದರ್ಶನ: ಎನ್.ಕೇಶವಮೂರ್ತಿ

ವಿದ್ಯಾಭ್ಯಾಸಕ್ಕೆ ಬಹಳ ಕಷ್ಟ. ನಮ್ಮ ತಂದೆ ನಾಲ್ಕು ಜನ ಗಂಡು ಮಕ್ಕಳಿಗೆ, ವರುಷಕ್ಕೆ ಪ್ರತಿ ಒಬ್ಬರಿಗೆ ಎರಡು ಚಡ್ಡಿ, ಎರಡು ಶರಟು, ಹೊಲಿಸೋರು ಅಷ್ಟೆ. ಬಟ್ಟೆ ಹೊಲೆಯೋನಿಗೆ ವರುಷಕ್ಕೆ ಒಂದು ಸಾರಿ ದುಡ್ಡು. ನಾನು BSc ಮಾಡಿ ನಂತರ ಗುಲ್ಬರ್ಗದಲ್ಲಿ BEಗೆ ಸೇರಿದೆ. ಬಹಳ ಕಷ್ಟಪಟ್ಟು ತಂದೆ ೭೦ ರೂಪಾಯಿ ಕಳಿಸೋರು. ದೊಡ್ಡಣ್ಣ ಕೆಲಸಕ್ಕೆ ಸೇರಿದ ಮೇಲೆ ಸಂಸಾರಕ್ಕೆ ಸುಖವಾಯ್ತು. ನನ್ನ ತಮ್ಮನೂ ಬುದ್ಧಿವಂತ. ಮೈಸೂರು NIEನಲ್ಲಿ BE ಓದಿ, scholarship ತೊಗೊಂಡು ME ಮಾಡಿದ. ಅವನ scholarship ಹಣಾನೂ ಮನೆಗೆ ಕಳಿಸೋನು. ಈಗ ಅವನು ಅಮೇರಿಕಾದಲ್ಲಿದ್ದಾನೆ. ಹೀಗೆ ನಮ್ಮ ಸಂಸಾರ ಒಳ್ಳೆಯ ಸ್ಥಿತಿಗೆ ಬರುತ್ತಿರುವಾಗಲೇ ತಾಯಿ ಆಸ್ತಮಾದಿಂದ ನಿಧನರಾದ್ರು. ನಮಗೆ ಆಘಾತವಾಯ್ತು. ತಂದೆ ಮತ್ತೊಂದು ಮದುವೆ ಆಗಲಿಲ್ಲ. ನಮ್ಮ ಪುಣ್ಯ. ನನ್ನ ತಂಗೀರು ಚಿಕ್ಕವರಾದ್ರೂ ಪರಿಸ್ಥಿತೀನ ಸುಧಾರಿಸಿದ್ರು. ನನಗೆ ವ್ಯವಸಾಯದಲ್ಲಿ ಆಸಕ್ತಿ ಇರಲಿಲ್ಲ. ಯಾಕೇಂದ್ರೆ ನಾನು ಬೆಳೆದಿದ್ದೆಲ್ಲಾ ಪಟ್ಟಣದಲ್ಲಿ. ನನ್ನ ತಂದೆಗೆ ವಯಸ್ಸಾಯ್ತು. ಅವರಿಗೆ ಮಕ್ಕಳು ಜಮೀನು ಮಾರ್‍ತಾರಲ್ಲಾ ಅನ್ನುವ ಚಿಂತೆ. ಆಸ್ತೀನ ಮಾರಾಟ ಮಾಡಬೇಡಿ, ಯಾರಾದ್ರೂ ವ್ಯವಸಾಯ ಮುಂದುವರೆಸಿ ಅಂದ್ರು. ಇತರೇ ಮೂರು ಜನ, ನನ್ನ ಅಣ್ಣತಮ್ಮಂದಿರು ಇಲ್ಲಿಗೆ ಬರಲು ಒಪ್ಪಲಿಲ್ಲ. ನನ್ನ ಹೆಂಡತಿ ಪ್ರಭಾವತಿ, ಕೆ.ಆರ್.ನಗರದ ಸಮೀಪ ಇರುವ ಎಡತೊರೆಯವಳು. ನನ್ನನ್ನೂ, ನನ್ನ ಹೆಂಡತಿಯನ್ನೂ ಕಂಡರೆ ನನ್ನ ತಂದೆಗೆ ಅಭಿಮಾನ. ನನ್ನ ಹೆಂಡತೀನೂ ಒಳ್ಳೆಯವಳು. ಈ ಜಮೀನನ್ನು ನನಗೆ ಕೊಡಬೇಕು ಅನ್ನುವ ಮನಸ್ಸಿತ್ತು ತಂದೆಗೆ. ಕಡೆಗೆ ಒಟ್ಟಾರೆ ಆಸ್ತಿಯನ್ನೆಲ್ಲಾ ಮೌಲ್ಯಮಾಡಿ, ಎಲ್ಲರಿಗೂ ಕೊಡಬೇಕಾದ್ದು ಕೊಟ್ಟು, ನಾನು ಜಮೀನು ವಹಿಸಿಕೊಂಡೆ. ನಂತರ ೧೦ ವರುಷ ತಂದೆನೇ ಇಲ್ಲಿದ್ದು ವ್ಯವಸಾಯ ಮಾಡ್ತಿದ್ರು. ಅವರಿಗೆ ತೀರಾ ವಯಸ್ಸಾದಾಗ ನಾನು ಕೆಲಸ ಬಿಟ್ಟು ಇಲ್ಲಿಗೆ ಬಂದೆ. ನನ್ನ ಪ್ರತಿಯೊಂದು ಹೆಜ್ಜೆಗೂ ಹೆಂಡತಿಯ ಸಹಕಾರ ಇದೆ. ಇಲ್ಲಿಗೆ ಬಂದ ಮೇಲೆ ವ್ಯವಸಾಯದ ಅನುಭವ ಆಯ್ತು. ಇಲ್ಲಿರುವ ಸಂಕೇತಿಗಳು ತೋಟವನ್ನು ರೈತರಿಗೆ ನೀಡಿದ್ರು. ಕಳ್ಳತನಾನೂ ಸಾಕಷ್ಟು ಇತ್ತು. ನಮ್ಮ ಜಮೀನಿನ ಮುಂದಿದ್ದ ಗುಡ್ಡವನ್ನು ಸಮತಟ್ಟುಮಾಡಿ, ಒಟ್ಟು ಎಂಟು ಎಕರೆ ಪ್ರದೇಶದಲ್ಲಿ ಈಗ ತೆಂಗು, ಸಿಲ್ವರ್, ತೇಗದ ಗಿಡ ಏಳಿಸಿದೀನಿ. ಮಾವನ್ನು ಹಾಕ್ತೀನಿ. ಒಂದು ಬೋರ್‌ವೆಲ್ ಇದೆ. ಕಳ್ಳತನ ತಡೆಯಲು, ಮೊದಲಬಾರಿಗೆ ನಾನು ನೇಪಾಳದ ಗೂರ್ಖಾ ಕುಟುಂಬವೊಂದನ್ನು ತೋಟದಲ್ಲಿ ಕಾವಲಿಗೆ ಬಿಟ್ಟಿದ್ದೇನೆ. ತಿಂಗಳಿಗೆ ಅವರಿಗೆ ಸಂಬಳ ನೀಡುತ್ತೇನೆ. ಈಗ ತೋಟ ಸುರಕ್ಷಿತವಾಗಿದೆ. ನಾನು ಚಿಲ್ಕುಂದಕ್ಕೆ ಹೋದಾಗ ಒಂದು ವಿಷಯ ತಿಳೀತು, ೧೦೦ ವರುಷಗಳ ಹಿಂದೆ ಯಾರೋ ಪೂರ್ವಿಕರು ತಮ್ಮ ಜಮೀನಿನಲ್ಲಿ ಒಂದು rosewood (ಬೀಟೆ ಮರ) plant ಹಾಕಿದ್ರಂತೆ. ಈಗ ಆ ಒಂದು ಮರಾನ ಒಂದು ಲಕ್ಷಕ್ಕೆ ಕೇಳ್ತಿದಾರಂತೆ. ಅವರು ಮಾರಿಲ್ಲ. ಹಾಗಾಗಿ ನಾನೂ ತೇಗ ಹಾಕಿದ್ದೇನೆ. ಮುಂದೆ ಉತ್ತಮ ಗುಣದ ಮರಗಿಡಗಳನ್ನು ಬೆಳೆಸುವ ಆಸೆ ಇದೆ. ನಮ್ಮ ಬದುಕು settle ಆಗಿದೆ. ಮುಂದಿನ ಜನಾಂಗದವರಿಗೆ ಅನುಕೂಲವಾಗಲಿ ಅಂತ ಮರಗಿಡಗಳನ್ನು ಬೆಳೆಸ್ತೀನಿ. ನನಗೆ ಇಬ್ಬರು ಮಕ್ಕಳು. ಒಬ್ಬ ಮಗ ಹಾಗೂ ಒಬ್ಬಳು ಮಗಳು. ಮಗಳಿಗೆ ಮದುವೆ ಆಗಿದೆ. ಮಗ ME ಮಾಡಿ, Wiproದಲ್ಲಿ software engineer ಆಗಿದ್ದಾನೆ. ಅವನಿಗೆ ವ್ಯವಸಾಯದಲ್ಲಿ ಆಸಕ್ತಿ ಇದೆ ಅನ್ನಿಸುತ್ತೆ. ನಾವು ಇನ್ನೂ ಜಮೀನು purchase ಮಾಡೋಣ, ಅಭಿವೃದ್ಧಿ ಮಾಡೋಣ ಅಂತಿರುತ್ತಾನೆ. ಮುಂದಿನ ದಿನಗಳಲ್ಲಿ ಆದಾಯ ಸಿಕ್ಕಿದ್ರೆ ಅವನು ವ್ಯವಸಾಯ ಮುಂದುವರಿಸಬಹುದು ಎನ್ನುವ ಆಸೆ ನನ್ನದು. ಮುಂದಿನ ಜನಾಂಗಕ್ಕಾಗಿ ಇಂದು ನಾವು ವ್ಯವಸಾಯ ಮಾಡಬೇಕು' ಎಂದು ದೃಢವಾಗಿ ನುಡಿದರು ಪಿ.ವಿ. ನಾಗೇಶ್‌ರಾವ್. ಹಿರಿಯರಾದ ವೆಂಕಟನಾರಾಯಣಪ್ಪ ಅವರ ಮೊಗದಲ್ಲಿ ಮಂದಹಾಸ ಮಿನುಗಿ ಮರೆಯಾಯ್ತು.

ಆ) ಸಿ.ಎನ್. ನರಸಿಂಹಮೂರ್ತಿ ಇ/ಮ ಸಿ.ಕೆ. ನಾಗಪ್ಪಯ್ಯ
ಪಿರಿಯಾಪಟ್ಟಣ, ಮೈಸೂರು ದೂರವಾಣಿ : 08223-273372

ಜಮೀನಿನ ಉತ್ಪತ್ತಿ ನೋಡಿಕೊಂಡು ಖರ್ಚು ಮಾಡಬೇಕು. ಸುಮ್ಮನೇ ಖರ್ಚು ಮಾಡ್ತಾ ಹೋದ್ರೆ ವ್ಯವಸಾಯ ಹಾಳಾಗುತ್ತೆ. ಅಲ್ಲದೆ ಹಣ ಎಲ್ಲಿಂದ ತರ್ತೀರಿ? ವ್ಯವಸಾಯದಿಂದ ಏನು ಉತ್ಪತ್ತಿ ಇದೆ, ಅದರ ಎಷ್ಟು ಭಾಗಾನ ವ್ಯವಸಾಯಕ್ಕೆ ವಿನಿಯೋಗಿಸಬಹುದು, ಹೀಗೆ ಒಂದು ratio ಹಾಕ್ಕೊಂಡು ಖರ್ಚು ಮಾಡಬೇಕು. ಆಗ ವ್ಯವಸಾಯ ಉತ್ತಮವಾಗಿರುತ್ತೆ. ಸುಮ್ಮನೆ ಎಲ್ಲಿಂದಲೋ ಹಣ ಬರ್ತಿದೆ ಅಂತ ವಿಪರೀತ ಖರ್ಚು ಮಾಡಿದ್ರೆ ಅದು ಲಾಭದಾಯಕ ವ್ಯವಸಾಯ ಅಲ್ಲ.


ಸಿ.ಎನ್.ನರಸಿಂಹಮೂರ್ತಿ, ಪಿರಿಯಾಪಟ್ಟಣ: ತಮ್ಮ ತೋಟದ ಪಕ್ಕದ ತಮ್ಮ ಹೊಲದಲ್ಲಿ ಕಾಯಕ

ಚಿಲ್ಕುಂದದ ಸಿ.ಕೆ. ನಾಗಪ್ಪಯ್ಯ ಹಾಗೂ ಗೌರಮ್ಮ ದಂಪತಿಗಳ ಮಗ ಸಿ.ಎನ್.ನರಸಿಂಹಮೂರ್ತಿ. ಇವರ ಪತ್ನಿ ಶಕುಂತಲಾ ಹೊಳೆನರಸೀಪುರ ತಾಲ್ಲೂಕು ಐಚನಹಳ್ಳಿಯ ಸುಬ್ಬರಾಯ ಹಾಗೂ ಸುಶೀಲಮ್ಮ ಇವರ ಮಗಳು. ಚಿಲ್ಕುಂದದಲ್ಲಿರುವ ಇವರ ಮೂರು ಜನ ಅಣ್ಣತಮ್ಮಂದಿರು ಹಾಗೂ ಪಿರಿಯಾಪಟ್ಟಣದಲ್ಲಿರುವ ಇವರದ್ದು ಈಗಲೂ ಒಟ್ಟು ವ್ಯವಹಾರವೇ. ನಾನು ಇಲ್ಲಿರಬಹುದು, ಆದರೆ ನಾವೆಲ್ಲಾ ಒಂದೇ ಎನ್ನುತ್ತಾರೆ ನರಸಿಂಹಮೂರ್ತಿಗಳು. 'ನನ್ನ ಮದುವೆಯಾಗಿ *೨೫* ವರುಷವಾಯ್ತು. ನನ್ನ ಅಣ್ಣನದು ಮದುವೆಯಾಗಿ ಬಹಳ ವರ್ಷಗಳೇ ಕಳೆದಿವೆ. ತಂದೆ ತಾಯಿ ಹೋದ ಮೇಲೆ ಮನೆಗೆ ಬಂದ ಸೊಸೆಯರು ಒಟ್ಟಾಗಿದ್ದು ಒಟ್ಟು ಕುಟುಂಬ ಉಳಿಸಿದ್ದಾರೆ. ಪರಸ್ಪರ ಹೊಂದಿಕೊಂಡು ಬಂದಿದಾರೆ. ವ್ಯವಸಾಯಕ್ಕೂ ಬಲ ನೀಡಿದ್ದಾರೆ. ನಾನೂ ಸಹ ಮುಂಚೆ ಮದುವೆ ಬೇಡ, ನಾನು progress ಆಗಬೇಕು ಅಂತಿದ್ದೆ. ಆದರೆ "ಋಣಾನುಬಂಧರೂಪೇಣ ಪಶುಪತ್ನೀ ಸುತಾಲಯಾಃ" ಅನ್ನುವ ಹಾಗೆ ಕಂಕಣಬಲ ಕೂಡಿಬಂತು. ಮದುವೆಯಾಗಿ ಮನೆ ತುಂಬಿದ ಹೆಂಡತಿ ವ್ಯವಸಾಯದ ಅಭಿವೃದ್ಧಿಗೆ ಸಹಕರಿಸಿದಳು' ಎಂದು ಹೇಳುತ್ತಾರೆ. ನರಸಿಂಹಮೂರ್ತಿಗಳ ಜಮೀನಿನಲ್ಲಿ ಅವರನ್ನು ಮಾತನಾಡಿಸಿದಾಗ ಸಂಜೆ ನಾಲ್ಕರ ಸಮಯ. ತಮ್ಮ ಜಮೀನಿನಲ್ಲಿ ಹೈಬ್ರಿಡ್ ಜೋಳದ ಬಿತ್ತನೆ ಮಾಡಿಸುತ್ತಾ ಇದ್ರು. ಅವರ ಮಗನೂ ಜತೆಯಲ್ಲಿದ್ದ. ಚಕಚಕನೆ, ಅವರ ಭಾವಚಿತ್ರಗಳನ್ನು ತೆಗೆದ್ವಿ. ರಾತ್ರಿ ಬಂದು ಮಾತನಾಡಿಸುತ್ತೇವೆಂದು ಹುಣಸೂರಿಗೆ ಹೊರಟು ಬಂದ್ವಿ. ರಾತ್ರಿ ಡಾ.ಸುಬ್ರಹ್ಮಣ್ಯ ಅವರ ಮನೇಲಿ ಕುಳಿತು ನರಸಿಂಹಮೂರ್ತಿಗಳನ್ನು ಮಾತನಾಡಿಸಿದ್ವು. ನರಸಿಂಹಮೂರ್ತಿಗಳೂ ಹೊಸದಾಗಿ ಕಂಬಗಳ ಮನೆಯನ್ನು ಕಟ್ಟಿದ್ದಾರೆ. ಆದರೆ ಮೊದಲು ಬಂದಾಗ ಉಳಿದಿದ್ದ ಹಳೆಯ ಮನೆಯನ್ನು ಸಹ ಉಳಿಸಿಕೊಂಡಿದ್ದಾರೆ. 'ಈ ಮನೆಗೆ ಬಂದ ಎಲ್ಲರೂ ಉದ್ಧಾರವಾಗಿದ್ದಾರೆ. ನನಗೂ ಅನುಕೂಲವಾಗಿದೆ. ಹಾಗಾಗಿ ಹೊಸ ಮನೆಗೆ ಬಂದ್ರೂ ಹಳೆಯ ಮನೆಯನ್ನು ಉಳಿಸ್ತೀವಿ' ಅಂದ್ರು. ಅವರ ಬದುಕಿನ ಬಗ್ಗೆ ಪ್ರಶ್ನಿಸಿದಾಗ ಮುಚ್ಚುಮರೆಯಿಲ್ಲದೆ ಉತ್ತರಿಸಿದ್ರು.

'ನಾನು PUC ವರೆಗೆ ಓದಿದೆ. ನಂತರ ನಾನು, ನನ್ನ ಅಣ್ಣ ಜಮೀನಿಗೇ ನಿಂತ್ವಿ. ೨೦ ಎಕರೆ ಖುಷ್ಕಿ ಹಾಗೂ ಒಂದೂವರೆ ಎಕರೆ ಬಾಗಾಯ್ತು ಇತ್ತು. ನನ್ನ ತಂದೇನೂ ವ್ಯವಸಾಯದಲ್ಲಿ ನಿಪುಣರು. ಬೆರಗನ್ನು ನೋಡಿ maintain ಮಾಡುವ ಕಲೆ ಕರಗತವಾಗಿತ್ತು. ತಂದೆ ತಾಯಿ ಇಬ್ರೂ ಕಷ್ಟಜೀವಿಗಳು. ಅವರ ಪಾತ್ರಾನ ಎಷ್ಟು ವರ್ಣಿಸಿದರೂ ಸಾಲದು. ನನ್ನ ತಾಯೀನೂ ಅಷ್ಟೆ. ಕಣದಲ್ಲಿ ತೂರೋದು, ಒಕ್ಕಣೆ ಮಾಡೋದ್ರಿಂದ ಹಿಡಿದು, ನಾಟಿ ಹಾಕ್ತಾ ಇದ್ರು. ನಮ್ಮ ತಂದೆ ತಾಯಿ ಪಟ್ಟ ಕಷ್ಟದಲ್ಲಿ ನಮ್ಮದು ಶೇಕಡಾ ಒಂದರಷ್ಟು ಮಾತ್ರಾ. ಸಂಸಾರದಲ್ಲಿ ಅನ್ಯೋನ್ಯತೆಯಿತ್ತು. ಬಡತನ ಇತ್ತು. ಹಾಗಾಗಿ ಅವರು ಕಷ್ಟಪಡದಿದ್ರೆ ನಮ್ಮನ್ನು ಮೇಲಕ್ಕೆ ತರಲು ಆಗ್ತಿರಲಿಲ್ಲ. ಅವತ್ತು ಹಣದ ಮುಗ್ಗಟ್ಟು. ವರುಷಕ್ಕೆ ೬೦೦ ರಿಂದ ೮೦೦ ರೂಪಾಯಿ ವರಮಾನ ಬರ್ತಿತ್ತು. ಮಕ್ಕಳನ್ನು ಮುಂದೆ ತರಬೇಕು ಅನ್ನುವ ಆಸೆ ಅವರಿಗೆ



ಶಕುಂತಲಾ-ಸಿ.ಎನ್.ನರಸಿಂಹಮೂರ್ತಿ ದಂಪತಿ ತಮ್ಮ ಕುಟುಂಬದೊಂದಿಗೆ: ಪಿರಿಯಾಪಟ್ಟಣ

ಇತ್ತು. ನಮಗೆ ವ್ಯವಸಾಯದ ಕೊಂಬೆ ಸಿಕ್ತು. ಅದನ್ನೇ ಗಟ್ಟಿಯಾಗಿ ಹಿಡಿದೆವು. ನನ್ನ ತಂದೆ ನನ್ನ ೮, ೯ನೇ ವಯಸ್ಸಿಗೆ ವ್ಯವಸಾಯದ ಶ್ರಮದ ಬಗ್ಗೆ ಶಿಕ್ಷಣ ನೀಡಿದ್ರು. ನಾನು ನನ್ನ ೧೨/೧೩ನೇ ವಯಸ್ಸಿನಲ್ಲೇ ಆರಂಬದ ಕೆಲಸ ಮಾಡ್ತಿದ್ದೆ. ಎತ್ತು ದನಗಳ ವ್ಯಾಮೋಹ ನನಗೆ. ಬೇರೆ ಯಾವ ಚಟವೂ ಗೊತ್ತಿಲ್ಲ. ನನ್ನ ತಂದೆಯೇ ನನಗೆ ಆದರ್ಶ, ಅವರೇ ನನ್ನ ಗುರುಗಳು. ಪ್ರತಿಯೊಂದು ವ್ಯವಸಾಯದ ವಿಚಾರದ ಬಗ್ಗೆ, ಬದುಕಿನ ಬಗ್ಗೆ ಮಾರ್ಗದರ್ಶನ ನೀಡಿದ್ರು. ನನ್ನ ಮಕ್ಕಳಿಗೆ ನಾನು ಸದಾ ಹೇಳ್ತೀನಿ, "ನೀವು ನಿಮ್ಮ ಅಜ್ಜ ಅಜ್ಜಿಯ ಹಾಗೆ ಆಗಬೇಕು" ಅಂತ. ತಂದೆ ರಾಗಿ, ತೊಗರಿ, ತಡಗುಣಿ, ಎಣ್ಣೆಕಾಳು ಬೆಳೆಯನ್ನು ಬೆಳೆಯೋರು. ನಾವು ಬಂದ ಮೇಲೆ ವಾಣಿಜ್ಯ ಬೆಳೆಗಳಾದ ಹತ್ತಿ, ಮುಸುಕಿನ ಜೋಳ ಹಾಗೂ ಹೊಗೇಸೊಪ್ಪು ಬೆಳೆಯಲು ಆರಂಭಿಸಿದ್ವು. ವ್ಯವಸಾಯದಲ್ಲೇ ಅಭಿವೃದ್ಧಿ ಹೊಂದಲು ಬೋರ್‌ವೆಲ್ ಕೊರೆಸಿ, ಜಮೀನಿಗೆ ಬೇಲಿ ಹಾಕಿಸಿ, ೧೦ ಎಕರೆ ತೆಂಗು, ಹತ್ತು ಎಕರೆ ಮಾವು ಮಾಡಿದ್ವಿ. ಖುಷ್ಕಿ ಬೆಳೆಗಳಿಗಿಂತ ತೋಟಗಾರಿಕಾ ಬೆಳೆ ಒಳ್ಳೆಯದು ಎನ್ನುವುದು ನನ್ನ ನಂಬಿಕೆ. ನನ್ನ ತಮ್ಮ ೧೫ ವರುಷದ ಹಿಂದೆ ಮಳವಳ್ಳೀಲಿ ಬೇಕರಿ ಮಾಡಿದ. ಅದಾದ ಎರಡು ತಿಂಗಳಲ್ಲಿ ತಂದೆ ತೀರಿಕೊಂಡ್ರು. ನನ್ನ ತಮ್ಮ ವ್ಯವಸಾಯಕ್ಕೆ ಬಂದ. ನಾನು Bakery ಉದ್ಯಮ ಮುಂದುವರೆಸಲು ಮಳವಳ್ಳಿಗೆ ಹೋದೆ. ಬೇಕರಿ ಬಗ್ಗೆ ಏನೂ ಗೊತ್ತಿರಲಿಲ್ಲ. ಅದನ್ನು ಸ್ವತಃ ಕಲಿತು ನಿರ್ವಹಣೆ ಮಾಡಿದೆ. ನಿಷ್ಠರಾದ ಆಳುಗಳು ಇದ್ರು. ಅವರಿಂದ ತುಪ್ಪ, yeast, ಸಕ್ಕರೆ ಪ್ರಮಾಣ ತಿಳಿದುಕೊಂಡೆ. ನಂತರ ಅವರನ್ನೇ manage ಮಾಡಿದೆ. ಇದು ಬಹಳ ಮುಖ್ಯ. ಗ್ರಾಹಕರಿಗೆ ಸಂತೃಪ್ತಿಯನ್ನು ನೀಡಬೇಕು. ಹಾಗಾಗಿ ಗುಣಮಟ್ಟವನ್ನು ಕಾಪಾಡಬೇಕು. ಮಳವಳ್ಳೀಲಿ ೧೨ ವರುಷ ಬೇಕರಿ ನಡೆಸಿ ನಂತರ ಮೈಸೂರಿನಲ್ಲಿ ಎರಡು ವರುಷ ಬೇಕರಿ ನಡೆಸಿದೆ. ಅಷ್ಟರಲ್ಲಿ ಪಿರಿಯಾಪಟ್ಟಣದಲ್ಲಿ ಜಮೀನು ಖರೀದಿ ಮಾಡಿದ್ವಿ. ಬೇಕರಿ ಬಗ್ಗೆ ನನಗೆ ಅಂಥ ಒಲವಿರಲಿಲ್ಲ. ಹಾಗಾಗಿ ನನ್ನ ಪ್ರೀತಿಪಾತ್ರವಾದ ಕಸುಬು ವ್ಯವಸಾಯಕ್ಕೆ ಮರಳಿದೆ. ಬಾಲ್ಯದ ಬಡಸ್ತನದಲ್ಲಿ ನಾವು ಅಣ್ಣತಮ್ಮಂದಿರೇ ಒಟ್ಟಾಗಿ ಸೇರಿ, ಹೊಗೆಸೊಪ್ಪಿನ ಬೇಸಾಯ ಮಾಡಿ, ಎಲೆ ಕಿತ್ತು, ಪೋಣಿಸಿ, ಸರಕಟ್ಟಿ, ಬ್ಯಾರನ್‌ಗೆ ಹಾಕಿ ಹದ ಮಾಡ್ತಿದ್ವು. ನಿದ್ದೆಗೆಟ್ಟು ಹಗಲು ರಾತ್ರಿ ದುಡಿದ ಅನುಭವ ಇತ್ತು. ಹಾಗಾಗಿ ಇಲ್ಲಿಗೆ ಬಂದ ಮೇಲೆ ವ್ಯವಸಾಯದಲ್ಲಿ ಮುಂದಿಟ್ಟ ಹೆಜ್ಜೇನ ಬದಲಿಸಲಿಲ್ಲ. ಮೊದಲು ಆರು ಎಕರೇ ರೆಡಿ ಇರೊ, ಅಭಿವೃದ್ಧಿ ಮಾಡಿರುವ ಅಡಿಕೆ ತೋಟಾನ ಹದಿನಾರೂವರೆ ಲಕ್ಷಕ್ಕೆ ಖರೀದಿ ಮಾಡಿದ್ವಿ. ಆಮೇಲೆ ಪುನಃ ಒಂದೂವರೆ ಎಕರೇನ ಏಳು ಲಕ್ಷಕ್ಕೆ ಖರೀದಿ ಮಾಡಿದ್ವಿ. ಈ ಎಲ್ಲಾ ಜಮೀನು ಕುಟುಂಬದ ಒಟ್ಟಾರೆ ವರಮಾನದಿಂದ ಖರೀದಿಸಿದ್ದು. ಆ ತೋಟವನ್ನು ರೂಢಿಸಿದ್ರೆ ಸಾಕಾಗಿತ್ತು. ಆರು ಎಕರೇಲಿ, ೩೦೦೦ ಅಡಿಕೆ, ೨೦೦೦ ಎಲೆ ಹಂಬು, ಮಕ್ಕಿಯಲ್ಲಿ ೨೦೦, ೩೦೦ ಬಾಳೆ, ೨೦೦ ತೆಂಗು, ೭ ಮಾವು, ೨ ಹುಣಿಸೇ ಮರಗಳು ಇದ್ವು. ನಂತರ ಈಚೆಗೆ ಖರೀದಿಸಿದ



ಕಾಲಿಗೆ ಶಸ್ತ್ರಚಿಕಿತ್ಸೆಯಾಗಿದೆ, ಆದರೂ ಗೊಬ್ಬರ ಹೊರಲು ಅಡ್ಡಿ ಇಲ್ಲ: ಸಿ.ಎನ್.ನರಸಿಂಹಮೂರ್ತಿ: ಪಿರಿಯಾಪಟ್ಟಣ

ತೋಟದಲ್ಲಿ, ಒಂದೂವರೆ ಎಕರೆ ಪ್ರದೇಶದಲ್ಲಿ ೧೦೦೦ ಅಡಿಕೆ ಇದೆ. ಅದನ್ನು ಅಭಿವೃದ್ಧಿ ಮಾಡಬೇಕು. ತೆಂಗಿಗೆ ಪೂರ್ತಿ ಹನಿ ನೀರಾವರಿ ಮಾಡಿಸಿದೀನಿ. ಆ ತೋಟದಲ್ಲಿ ಒಂದು Borewell ಇದೆ. ಮಾವಿನ ಗಿಡಗಳನ್ನು ಹಾಕಿರುವ ಕಡೆ, ಮತ್ತೊಂದು ಬೋರ್‌ವೆಲ್ ಕೊರೆಸಿದ್ದೀನಿ. ಪಕ್ಕದಲ್ಲಿ ಕೆರೆ ಇದೆ. ಹಾಗಾಗಿ ತೋಟದಲ್ಲಿ ತನು ನಿಲ್ಲುತ್ತೆ. ದೀಪಾವಳಿಯ ಸಂದರ್ಭದಲ್ಲಿ ಅಡಿಕೆ ತೋಟದಲ್ಲಿ ಅಗೆತ ಮಾಡ್ತೀನಿ. ಇದ್ರಿಂದ ತೋಟದಲ್ಲಿ ತನು ನಿಲ್ಲುತ್ತೆ. ಅಗೆತ ಇಲ್ಲದಿದ್ರೆ ಇಳುವರಿ ಕಡಿಮೆಯಾಗುತ್ತೆ. ನಿರಂತರವಾದ ಅಗೆತದಿಂದ ಮಣ್ಣು ಹಗುರವಾಗುತ್ತೆ. ನೀರು, ಮಣ್ಣು, ಗೊಬ್ಬರ ಎಷ್ಟು ಚೆನ್ನಾಗಿ ಕೊಡ್ತೀವೋ ಅಷ್ಟು ಚೆನ್ನಾಗಿ ಇಳುವರಿ ಬರುತ್ತೆ. ಪಿರಿಯಾಪಟ್ಣದ ಎರೆಭೂಮಿ, ಅಡಿಕೆಗೆ ಹೇಳಿ ಮಾಡಿಸಿದ್ದು. ಹೊಲದಲ್ಲಿ ನಾವು ಹೈಬ್ರಿಡ್ ಮುಸುಕಿನ ಜೋಳ ಸಹಾ ಬೆಳೀತೀವಿ. ಹೈಬ್ರಿಡ್ ಮುಸುಕಿನ ಜೋಳಾನ April ಕೊನೇ ವಾರದಲ್ಲಿ ಅಥವಾ May ತಿಂಗಳ ಮೊದಲ ವಾರದಲ್ಲಿ ಬಿತ್ತನೆ ಮಾಡಿದ್ರೆ ಉತ್ತಮ ಇಳುವರಿ ಬರುತ್ತೆ. ತಡವಾಗಿ ಬಿತ್ತನೆ ಮಾಡಿದ್ರೆ ಬೆಂಕಿರೋಗದ ಬಾಧೆ ಹೆಚ್ಚು. ಮಳೆ ಹೆಚ್ಚಾದ್ರೂ ಮುಸುಕಿನ ಜೋಳಕ್ಕೆ ಖಾಯಿಲೆ ಜಾಸ್ತಿ. ಇದರ ಬೇರು ಸೂಕ್ಷ್ಮ. ಬಿತ್ತನೆ ಮಾಡುವಾಗ DAP (Di Ammonium phosphate) ಹಾಗೂ SOP. (Sulphate of Potash) ಗೊಬ್ಬರ ಕೊಡ್ತೀವಿ. ಒಂದು ತಿಂಗಳ ನಂತರ ಮೇಲುಗೊಬ್ಬರವಾಗಿ urea ಕೊಡ್ತೀವಿ. ಕಳೆ ಬರದಂತೆ ಹರತೆ ಹೊಡೆದು, ಮಣ್ಣು ಏರಿ ಹಾಕ್ತೀವಿ. ಮೂರೂವರೆಯಿಂದ ೪ ತಿಂಗಳಲ್ಲಿ ೨೫ರಿಂದ ೩೦ ಕ್ವಿಂಟಾಲ್ ಇಳುವರಿ ಪಡೀಬಹುದು. ವ್ಯವಸಾಯದಲ್ಲಿ ನನಗೆ ಬಹಳ ಆಸಕ್ತಿ. ನನ್ನ ಮಕ್ಕಳು ಓದಿ, graduate ಆಗಿ ನಂತರ ವ್ಯವಸಾಯ ಮಾಡಲಿ ಅನ್ನುವ ಆಸೆ ನನ್ನದು. ಓದಿ ವಿದ್ಯಾವಂತರಾಗಿ ವ್ಯವಸಾಯಗಾರರಾಗ ಬೇಕು. ಆಸೆ ಪಡೋದು ನಮ್ಮ ಕರ್ತವ್ಯ. ಆದ್ರೆ ಇದನ್ನೇ ಮಾಡಿ ಅಂತ compel ಮಾಡೋದಕ್ಕೆ ಆಗೋದಿಲ್ಲ. ನನ್ನ ಮಕ್ಕಳಿಗೆ ಬೇಸಾಯದ ಪೂರಕ ಶಿಕ್ಷಣಾನೂ ನಾನು ಕೊಟ್ಟಿದೀನಿ. ಆದರೆ ಶಿಕ್ಷೆ ನೀಡಿ ಮಕ್ಕಳನ್ನು ವ್ಯವಸಾಯಕ್ಕೆ ತರಲು ಸಾಧ್ಯವಿಲ್ಲ.



ಮಕ್ಕಳಿಗೆ ಈ ಶಿಕ್ಷಣವೂ ಮುಖ್ಯ: ಸಿ.ಎನ್.ನರಸಿಂಹಮೂರ್ತಿ ಅವರ ಮಗ: ಪಿರಿಯಾಪಟ್ಟಣ

'ಮಕ್ಕಳಿಗೆ ತಮ್ಮ ತಂದೆಗಿಂತಲೂ ವ್ಯವಸಾಯದಲ್ಲಿ ಪ್ರೀತಿ ಹುಟ್ಟಬೇಕು, ಆ ರೀತಿ ನಾವು ಮಾತನಾಡಬೇಕು. ವಿಚಾರಗಳನ್ನು ಮನದಟ್ಟು ಮಾಡಬೇಕು. ಎಲೆ ಹಂಬಲ್ಲಿ ಆದಾಯ ಬರುತ್ತೆ, ಅದರಲ್ಲಿ ಆಳುಕಾಳನ್ನು maintain ಮಾಡಬಹುದು. ಇನ್ನು ಅಡಿಕೇಲಿ ಬರೋದನ್ನು ಗಂಟಾಗಿ ಇಡಬಹುದು, ಅಂತ ಅವರಲ್ಲಿ ಉತ್ಸಾಹ ಮೂಡಿಸಬೇಕು. ಸ್ವಲ್ಪ ವರಮಾನ ಬರ್ತಾ ಇದ್ರೆ ಜಾಸ್ತಿ ಇರುವ ಹಾಗೆ ತೋರಿಸಬೇಕು. ಅವರ ಕೈಯಲ್ಲಿ, ಎಲೆ ಹಂಬು ಕಟ್ಟಿಸೋದು, ನೀರು ಗೊಬ್ಬರ ಹಾಕಿಸೋದು, ಗಿಡ ಕಟ್ಟಿಸೋದು ಮಾಡಬೇಕು. ಈ ರೀತಿಯ ಪ್ರಾಯೋಗಿಕ ತರಬೇತಿಯಿಂದ ಮಕ್ಕಳಿಗೆ ವ್ಯವಸಾಯದ ಮೇಲೆ ಪ್ರೀತಿ ಹುಟ್ಟುತ್ತೆ. ನಾನೇ ಮಾಡಿರೋದು ಕಳೀಬಾರದು ಅಂತ ಮನಸ್ಸು ಪರಿವರ್ತನೆ ಆಗುತ್ತೆ' ಅಂತ ದೀರ್ಘವಾಗಿ ಉಸಿರು ಎಳೆದು ಹೇಳಿದ್ರು, ನರಸಿಂಹಮೂರ್ತಿ. 'ಸಂಕೇತಿಗಳಲ್ಲಿ ಮುಂದೆ ಕೃಷಿ ಉಳಿಸುವುದು ಹೇಗೆ?' ನಮ್ಮ ಪ್ರಶ್ನೆ ಚುಟುಕಾಗಿತ್ತು. ಅವರ ಉತ್ತರವೂ ಅಷ್ಟೇ ಮಾರ್ಮಿಕವಾಗಿತ್ತು. 'ಯಾರೇ ಆಗಲಿ ಶ್ರದ್ಧೆಯಿಂದ, ಶ್ರಮದಿಂದ ವ್ಯವಸಾಯ ಮಾಡಿದ್ರೆ progress ಸಾಧ್ಯ. ನಾನು ಮಾಡೋಲ್ಲ, ನನ್ನ ಕೈಲಿ ಆಗೋಲ್ಲ ಅಂದ್ರೆ ಯಾವ ಕೆಲಸಾನೂ ಅವರಿಂದ ಸಾಧ್ಯವಿಲ್ಲ. ನಾವು ಮಾಡುವುದನ್ನು ಮಾಡಿದ್ರೆ ಮುಂದೆ ದೇವರು ಒಳ್ಳೇಯದನ್ನು ಮಾಡ್ತಾನೆ. ಮುಖ್ಯವಾಗಿ ಇಂದಿನ ಯುವ ಸಂಕೇತಿಗಳಲ್ಲಿ challenging nature ಬೆಳೀಬೇಕು. ಬೇರೆಯವರು ಮಾಡುವುದೇನು ಮಹಾ, ನಾನು ಮಾಡಿ ತೋರಿಸ್ತೀನಿ ಅನ್ನುವುದು ಹುಟ್ಟಿದಾಗ ಸಂಕೇತಿ ಕೃಷಿ ಉಳಿಯುತ್ತೆ. ಕೂತಾಗ, ನಿಂತಾಗ ತಾವೇ ವ್ಯವಸಾಯವನ್ನು ಮೈದುಂಬಿಸಿಕೊಳ್ಳಬೇಕು. ಹಿರಿಯರು ನಾವು ನಮ್ಮ ಮಕ್ಕಳನ್ನು ಯಾವ ರೀತಿ ತಿದ್ದುತೀವಿ, ಅದೇ ರೀತಿ, ಬೇರೆ ಕಡೆ ಸ್ನೇಹಿತರ ಮನೆಗೆ ಹೋದಾಗ ಅವರ ಮಕ್ಕಳನ್ನೂ ತಿದ್ದಬೇಕು. ವ್ಯವಸಾಯಕ್ಕೆ ಪೂರಕವಾಗಿ ಮಾತನಾಡಬೇಕು. "ಆಳುಕಾಳನ್ನು ನಂಬಬೇಡಿ. ನಮ್ಮ ಕೆಲಸ ನಾವು ಮಾಡಬೇಕು. ನಿಮ್ಮ ತಂದೆ, ತಾಯಿ, ಹಿರಿಯರು ಸ್ವತಃ ದುಡಿದ ಹಾಗೆ ನೀವು ದುಡಿದರೆ ವ್ಯವಸಾಯ ಉಂಟು, ನೀವೂ

ಶ್ರಮ ಪಡಬೇಕು" ಅಂತ ತಿಳಿಹೇಳಬೇಕು. ನಾಚಿಕೆ ಅಂತ ನಾವು ಹಿರಿಯರು ಸುಮ್ಮನಿದ್ರೆ ನಮ್ಮ ಜನಾಂಗದ ವ್ಯವಸಾಯ ನಿಂತುಹೋಗುತ್ತೆ. ಅದು ಆಗಬಾರದು'. ಅಂತ ಕಳಕಳಿಯಿಂದ ಹೇಳಿದ್ರು ಸಿ.ಎನ್.ನರಸಿಂಹಮೂರ್ತಿ. ಈ ಮಾತಿಗೆ ತಮ್ಮ ಪೂರ್ಣಸಮ್ಮತಿ ಇದೆ ಅಂತ ಅವರ ಜತೆಯಲ್ಲಿದ್ದ ಹಿರಿಯ ಸಂಕೇತಿ ಕೃಷಿಕ ಪಿ.ಎಸ್.ಶ್ರೀನಿವಾಸಮೂರ್ತಿ ಮುಗುಳುನಕ್ಕರು. ನಮಗೂ ಈ ಮಾತುಗಳು ಇತರೇ ಕೃಷಿಕರಿಗೆ ಆದರ್ಶಪ್ರಾಯ ಅನ್ನಿಸಿತು. ಸುವರ್ಣಾಕ್ಷರಗಳಲ್ಲಿ ಈ ಮಾತುಗಳನ್ನು ಬರೆದಿಡಬೇಕು!

ಇ) ಪಿ.ಎಸ್. ಶ್ರೀನಿವಾಸಮೂರ್ತಿ ಇ/ಮ ಪಿ.ಆರ್ ಸುಬ್ಬರಾವ್ (ಅಪ್ಪಣ್ಣಯ್ಯ)
ಪಿರಿಯಾಪಟ್ಟಣ, ಮೈಸೂರು ಜಿಲ್ಲೆ, ದೂರವಾಣಿ : 08223-274330



ಪ್ರಭಾವತಿ-ಪಿ.ಎಸ್.ಶ್ರೀನಿವಾಸಮೂರ್ತಿ ದಂಪತಿ: ಪಿರಿಯಾಪಟ್ಟಣದ ತಮ್ಮ ಹೊಸ ಮನೆಯ ಮುಂದೆ.

ಮೂವತ್ತೇಳು ವರುಷದ ಹಿಂದೆ, ತೀವ್ರವಾದ ಆರ್ಥಿಕ ಮುಗ್ಗಟ್ಟಿನಲ್ಲಿ ಸಾಲ ಸೋಲ ಮಾಡಿ ತಂಗಿ ಮದುವೆ ಮಾಡಿದ್ವು. ಈ ಸಂದರ್ಭದಲ್ಲೇ ಹೃದಯದ ಸಮಸ್ಯೆಯಿಂದ ತಾಯಿ ತೀರಿಕೊಂಡ್ರು. ಹಣ ಕೊಟ್ಟರೆ ಇವರು ವಾಪಸ್ಸು ತೀರಿಸ್ತಾರೋ ಇಲ್ವೋ ಅನ್ನುವ ಹೆದರಿಕೆಯಿಂದ ಯಾರೂ ಸಾಲ ನೀಡಲಿಲ್ಲ. ಆ ಸಂದರ್ಭದಲ್ಲಿ ಪೂರ್ಣ ಒಂದು ವರುಷ ನಮ್ಮನ್ನು ಕಾಪಾಡಿದ್ದು ಎಲೆ ಹಂಬು. ಒಂದರಿಂದ ಒಂದೂವರೆ ತಿಂಗಳಿಗೆ ಒಂದು ಕುಯಿಲು, ವರುಷಕ್ಕೆ ೧೦ ರಿಂದ ೧೨ ಕುಯಿಲು. ಪ್ರತಿ ಕುಯಿಲಿನಲ್ಲಿ ೯೦೦ ರಿಂದ ೧೦೦೦೦ ರೂಪಾಯಿ ಸಿಕ್ತಿತ್ತು; ಮನೆ ನಿರ್ವಹಣೆಗೆ, ತಾಯಿಯವರ ಶ್ರಾದ್ಧ ಕರ್ಮಕ್ಕೆ ಸಾಕಾಯ್ತು. ನಂತರ ಹೀಗೇ ೫ ರಿಂದ ೬ ವರುಷ ಮಳೆ ಹೋದಾಗಲೂ ಎಲೆ ಹಂಬು ನಮ್ಮನ್ನು ಉಳಿಸ್ತು. ಮಕ್ಕಳ ವಿದ್ಯಾಭ್ಯಾಸಕ್ಕೆ, ಕುಟುಂಬ ನಿರ್ವಹಣೆಗೆ ಹಣ ನೀಡಿದ್ದು ವಿಳ್ಳೇದೆಲೆ ಪೈರು. ಅಡಿಕೆ ಒಂದು ಬೆಳೆಯಾದ್ರೆ ಎಲೆ ಹಂಬು ಹತ್ತು ಬೆಳೆ.

ಪಿರಿಯಾಪಟ್ಟಣದ ಪಂಡಿತ್ ರಂಗಪ್ಪ ಹಾಗೂ ಚಿಲ್ಕುಂದದ ಗೌರಮ್ಮ ದಂಪತಿಗಳ ಮಗ ಪಿ.ಆರ್.ಸುಬ್ಬರಾವ್, 'ಅಪ್ಪಣ್ಣಯ್ಯ' ಎಂದು ಹೆಸರಾಗಿದ್ದವರು. ಇವರ ಪತ್ನಿ ಭಾಗೀರತಮ್ಮ ಚಿಲ್ಕುಂದದವರು. ಅಪ್ಪಣ್ಣಯ್ಯ ಪಿರಿಯಾಪಟ್ಟಣದ ಮುನಸಿಪಾಲಿಟೀಲಿ Bill collector ಆಗಿದ್ದವರು. ಇವರ ಒಬ್ಬನೇ ಮಗ ಪಿ.ಎಸ್. ಶ್ರೀನಿವಾಸಮೂರ್ತಿ, ಮಿತಭಾಷಿ ಹಾಗೂ ಸರಳವಾದ ನಡವಳಿಕೆ ಉಳ್ಳವರು. ಶ್ರೀನಿವಾಸಮೂರ್ತಿಯವರ ಪತ್ನಿ ಪ್ರಭಾವತಿ ಮರಿತಮ್ಮನಹಳ್ಳಿಯ ಎಂ.ಎಸ್.ಸುಬ್ಬರಾವ್ ಹಾಗೂ ಮಹಾಲಕ್ಷ್ಮಿ ದಂಪತಿಗಳ ಮಗಳು. ಶ್ರೀನಿವಾಸಮೂರ್ತಿಗಳಿಗೆ ಇಬ್ಬರು ಗಂಡು ಮಕ್ಕಳು. ರಾತ್ರಿಯ ವೇಳೆ ಶ್ರೀನಿವಾಸಮೂರ್ತಿಯವರನ್ನು ಅವರ ಮನೆಯಲ್ಲಿ ನಾವು ಮಾತನಾಡಿಸಿದ್ವು. ನಿಧಾನವಾಗಿ ತಮ್ಮ ಕುಟುಂಬದ ವಿವರಗಳನ್ನು ನೀಡಿದ್ರು. 'ನಾನು ಹಾಸನದ ಎಲ್.ವಿ. ಪಾಲಿಟೆಕ್ನಿಕ್ ಕಾಲೇಜಿನಲ್ಲಿ 1961ರಲ್ಲಿ Diploma in Mechanical Engineering ಮಾಡಿದೆ. ನಮ್ಮ ಅಜ್ಜಿ ಹಾಸನದಲ್ಲಿದ್ರು. ವಿದ್ಯಾಭ್ಯಾಸ ಮುಗಿಸಿದ ಮೇಲೆ ಕೆಲಸ ಸಿಗಲಿಲ್ಲ. ನಮಗೆ ಯಾರ support ಸಹಾ ಇರಲಿಲ್ಲ. ನಾನು ಒಬ್ಬನೇ ಮಗ. ಇಬ್ಬರು ತಂಗೀರು ಮದುವೆಗೆ ಇದ್ರು. ತಾಯಿಗೆ ಹೃದಯದ ಖಾಯಿಲೆ ಇತ್ತು. ಬಡತನದ ಸಮಸ್ಯೆ ಬೇರೆ ಇತ್ತು. ಇನ್ನು ಸುಮ್ಮನೆ ಕುಳಿತರೆ ಆಗೋಲ್ಲ ಅಂತ ಮುಕ್ಕಾಲು ಎಕರೆ ತೋಟವನ್ನು ಅಭಿವೃದ್ಧಿ ಮಾಡಿದೆ. ಅದನ್ನೂ ಮೊದಲು ಇಳಿಭೋಗ್ಯಕ್ಕೆ ಹಾಕಿದ್ವಿ. ಎಂಟು ವರುಷ ನಮ್ಮ ಸುಪರ್ದಿನಲ್ಲಿ ತೋಟ ಇರಲಿಲ್ಲ. ಐದು ಎಕರೆ ಗದ್ದೆ ಸಹಾ ಇತ್ತು. ಮಳೆ ಆದರೆ ಮಾತ್ರ ಭತ್ತ ಬರೋದು. ಕುಟುಂಬಕ್ಕೆ ಇನ್ನೇನೂ ಆಧಾರ ಇತ್ತಿಲ್ಲ. ಹತ್ತಾ ಕೆಳಕ್ಕೆ ಬೀಳದ ಹಾಗೆ

ಈ ಕೊಂಬೆ ಸಿಕ್ತು. ಅದನ್ನೇ ಭದ್ರವಾಗಿ ಹಿಡಿದೆ. ವ್ಯವಸಾಯ ಬದುಕಿಗೆ ಭದ್ರವಾದ ಬುನಾದಿ ಆಯ್ತು. ಕುಟುಂಬದ ಏಳಿಗೆಗೆ ದಾರಿ ಆಯ್ತು. ನನಗೆ ವ್ಯವಸಾಯದ ಅನುಭವ ಇರಲಿಲ್ಲ. ನನಗೆ ಏನು ಹೊಳೀತೋ ಅದನ್ನು ಬುದ್ಧಿಗೆ ತಿಳಿದ ಹಾಗೆ ಮಾಡಿದೆ. ನಾವು ತೋಟದಲ್ಲಿ ಎಷ್ಟು ಆಸಕ್ತಿ ತೋರಿಸ್ತೀವೋ ಅಷ್ಟು ತೋಟ improve ಆಗುತ್ತೆ. ೨೪ ಘಂಟೆ ತೋಟದ ಮೇಲೆ ಕಣ್ಣಿಟ್ಟಿರಬೇಕು. ಒಂದೇ ಸಮ ಒಂದೇ ತರಹ ತೋಟದ ವ್ಯವಸಾಯ ಮಾಡಲು ಆಗೋದಿಲ್ಲ. ಕಾಲ ಅನುಸರಿಸಿ ಮಾಡಬೇಕು. ಮಳೆಗಾಲ ಆರಂಭವಾಗುವುದಕ್ಕಿಂತ ಮುಂಚೆ, ಗುಂಡಿ ತೆಗೆಸಿ, ಗೊಬ್ಬರ ಹಾಕಿಸಿ, ಗೋಡು ಹೇರಿಸಿ, ಕಾಲುವೆಗಳನ್ನೆಲ್ಲಾ ಸ್ವಚ್ಛಗೊಳಿಸಬೇಕು. ಮಳೆ ಆಗುವಾಗ ಮೂರುಕಾಸಿನ ಕೆಲಸವನ್ನೂ ಮಾಡಿಸೋಕೆ ಆಗೋಲ್ಲ. ನೀರು ನಿಂತಿರುತ್ತೆ. ಆಳುಗಳು ಸಿಗೋಲ್ಲ. ನಾಳೆ ಮಾಡುವ ಕೆಲಸವನ್ನು ಇಂದು ಮಾಡಬೇಕು. ಇದು ನನ್ನ ತತ್ತ್ವ. ಮುಕ್ಕಾಲು ಎಕರೆ ತೋಟದಲ್ಲೇ ಅಡಿಕೆ, ಹಂಬು, ಅಭಿವೃದ್ಧಿ ಮಾಡಿದ್ದೇನೆ. ೨೫ ರಿಂದ ೩೦ ಅಡಿ ಭಾವಿಯನ್ನು ನಾವೇ ಸೋಸಿ, ನಾನೂ ನನ್ನ ತಂದೆಯೂ ಗಡಿಗೇಲಿ ನೀರನ್ನು ಹೊತ್ತು ಅಡಿಕೆ ಎಲೆಹಂಬನ್ನು ಉಳಿಸಿದ್ವಿ. ಮುಕ್ಕಾಲು ಎಕರೇಲಿ ೧೨೦೦ ಅಡಿಕೆ ಸಸಿ ಹಾಗೂ ೬೦೦ ಎಲೆ ಹಂಬು ಇದೆ. ಎರಡು ಹುಣಿಸೆ, ೧೦ ತೆಂಗು ಹಾಗೂ ಮಾವು, ಸಪೋಟ ಗಿಡಗಳು ಇವೆ. ಸಸಿಗಳ ಸಂಖ್ಯೆ ಅಧಿಕವಾಗಿರೋದ್ರಿಂದ ಒಂದಕ್ಕೆ ಮೂರು ಪಟ್ಟು ಹಟ್ಟಿ ಗೊಬ್ಬರವನ್ನು ಹಾಕ್ತೀವಿ. ೫೦ ರಿಂದ ೬೦ ಗಾಡಿ ಗೊಬ್ಬರವನ್ನೂ ಹೇರ್‍ತೀವಿ. ೫ ರಿಂದ ೬ ಹಸು ಮನೇಲಿ ಇತ್ತು ಹಾಗೂ ಮೂರು ಎಮ್ಮೇನೂ ಇತ್ತು. ಸಗಣಿ ಹಾಗೂ ಹಸಿರು ಸೊಪ್ಪನ್ನು ಪದರ ಪದರವಾಗಿ ಹಾಕಿ ನಾವೇ ಹಟ್ಟಿ ಗೊಬ್ಬರವನ್ನು ತಯಾರಿಸ್ತಾ ಇದ್ವಿ. ೨೦ ರಿಂದ ೨೫ ವರುಷ ನಾವು ಜೀವನ ಮಾಡಿದ್ದು, ಮಕ್ಕಳ ವಿದ್ಯಾಭ್ಯಾಸ ಎಲ್ಲಾ ಮುಕ್ಕಾಲು ಎಕರೆ ಜಮೀನಿನಲ್ಲೇ ಆಗಿದ್ದು. ೧೨೦೦ ಅಡಿಕೇನ ದಾಯ ನೋಡಿ, ಅಂತಸ್ತಿನಲ್ಲಿ ಎಲ್ಲಕ್ಕೂ ಗಾಳಿ ಬೆಳಕು ಆಡುವ ಹಾಗೆ, ಮರಗಳಲ್ಲೂ ಅಂತಸ್ತು ಇರುವ ರೀತಿಯಲ್ಲಿ ಬೆಳೆಸಿದೀವಿ. ನನ್ನ ತೋಟದಲ್ಲಿ ೬೦ ವರುಷದ, ೪೦ ವರುಷದ, ೨೫ ವರುಷದ ಹಾಗೂ ೧೦ ವರುಷದ ಅಡಿಕೆ ಸಸಿಗಳು ಇವೆ. ಹೀಗೆ ನಾಲ್ಕು ಹಂತದಲ್ಲಿ ಅವು ಬೆಳೆದಿವೆ. ಗಾಳಿ ಬೆಳಕು ಹಂಚಿಕೆಯಾಗುತ್ತೆ.



ತಮ್ಮ ಪೂರ್ವಿಕರಿಗೆ ಆಳುವ ಅರಸರಿಂದ ಬಂದ ಕತ್ತಿ; ವೈದ್ಯಕೀಯ ಸಾಧನ 'ಕಲ್ಪತ್ತು': ಜತೆಗೆ ಕುಳಿತವರು ಪ್ರಭಾವತಿ-ಪಿ.ಎಸ್.ಶ್ರೀನಿವಾಸಮೂರ್ತಿ ದಂಪತಿ:ಪಿರಿಯಾಪಟ್ಟಣ

ನಾನು ತೋಟಕ್ಕೆ ರಾಸಾಯನಿಕ ಗೊಬ್ಬರ ಬಳಸೋಲ್ಲ. ಮೂರರಿಂದ ನಾಲ್ಕು ಪಟ್ಟು ಸಾವಯವ ಗೊಬ್ಬರ ಬಳಸ್ತೀನಿ. ಮುಕ್ಕಾಲು ಎಕರೇಲಿ, ಮೂರು ಲಕ್ಷ ಅಡಿಕೆ ಬೀಳ್ತಿದೆ. ಎಲ್ಲ ಅಡಿಕೆ ಮರಗಳಿಗೂ ಹೆಚ್ಚಾಗಿ ಗೊಬ್ಬರ ಹಾಕ್ತೀನಿ. ಇದರೊಳಗೆ ೬೦೦ ಎಲೆ ಹಂಬು ಕಟ್ಟಿದೀನಿ. ಸಣ್ಣಸಸಿಗೆ ಎಲೆ ಹಂಬು ಕಟ್ಟಿಲ್ಲ, ಹಂಬು ಸಾರ ಎಳೆದು ಎಳೆಗಿಡ ಒಣಗುತ್ತೆ ಅಂತ. ಹಂಬು ಕಟ್ಟಬೇಕಾದ್ರೆ ಅಡಿಕೆ ಗಿಡ ಬಲಿತಿರಬೇಕು. ಇಡೀ ತೋಟದ ಕೆಲಸವನ್ನು ನಾವೇ ಮಾಡ್ತಿದ್ವಿ. ಕೂಲಿ ಕೊಡ್ತಿರಲಿಲ್ಲ. ನನ್ನ ಹೆಂಡತೀ ಸಹ ಮನೆಕೆಲಸ ಮುಗಿಸಿ, ತೋಟಕ್ಕೆ ಬಂದು ಕಳೆ ಕೀಳೋದು, ಗೊಬ್ಬರ ಹೇರೋದು ಮಾಡಿದ್ದಾಳೆ. ವ್ಯವಸಾಯಕ್ಕೆ



ಬಿ.ಎಸ್.ಸ್ವರ್ಣ-ಡಾ.ಪಿ.ಎಸ್.ಸುಬ್ರಹ್ಮಣ್ಯ ದಂಪತಿ: ತಮ್ಮ ಕುಟುಂಬವರ್ಗದೊಂದಿಗೆ: ಪಿರಿಯಾಪಟ್ಟಣ

ಅವಳ ಸಂಪೂರ್ಣ ಸಹಕಾರ ಸಿಕ್ಕಿದೆ. ನಮ್ಮ ದುಡಿಮೆ ನೋಡಿಕೊಂಡು, ಹಾಸಿಗೆ ಇದ್ದಷ್ಟು ಕಾಲು ಚಾಚಿ, ಇನ್ನೊಬ್ಬರಿಗೆ ಹೊರೆಯಾಗದಂತೆ, ವ್ಯರ್ಥವಾಗಿ ಕಾಲ ಕಳೆಯದೆ ಬದುಕನ್ನು ರೂಢಿಸಿದ್ದೇವೆ. ವ್ಯವಸಾಯಕ್ಕೆ ಕೊನೆ ಮೊದಲಿಲ್ಲ. ಯಾವ ರೀತಿ ಬೇಕಾದ್ರೂ ಅದನ್ನು ರೂಢಿಸಬಹುದು. ಮಕ್ಕಳನ್ನು ಓದಿಸಲು ನಾನು ಹೊರಗೆ ಕಳಿಸಲಿಲ್ಲ. PUCವರೆಗೆ ಅವರು ಇಲ್ಲೇ ಓದಿದ್ದು. ಇಲ್ಲಿ ಶಿಕ್ಷಕರಾಗಿದ್ದ ಭೀಮರಾವ್ ಅವರು ಅವಿಚ್ಛಿನ್ನವಾಗಿ ಶ್ರಮಿಸಿ, ನನ್ನ ಮಕ್ಕಳಿಗೆ ಪಾಠ ಹೇಳಿ ವಿದ್ಯಾವಂತರನ್ನಾಗಿ ಮಾಡಿದ್ರು. ಒಬ್ಬ ಮಗ ಡಾಕ್ಟರ್ ಆದ. ಮತ್ತೊಬ್ಬ ಇಂಜಿನಿಯರ್ ಆದ. ನಾನು ಮಕ್ಕಳಿಗೂ ವ್ಯವಸಾಯದ ಶಿಕ್ಷಣ ನೀಡಿದ್ದೇನೆ. ಕಾಲಕಾಲಕ್ಕೆ ಏನು ಮಾಡಬೇಕು ಅನ್ನುವ ಅರಿವು ಅವರಿಗಿದೆ. ನಾನು ಪ್ರೀತಿಯಿಂದ ಮಾಡಿದ್ದನ್ನು ಅವರು ಹಾಳುಮಾಡದೆ, ನನ್ನ ವ್ಯವಸಾಯವನ್ನು ಮುಂದುವರಿಸುತ್ತಾರೆ ಅನ್ನುವ ನಂಬಿಕೆ ನನಗಿದೆ. ಹೊಸದಾಗಿ ತೋಟ ಮಾಡಬೇಕು ಅನ್ನುವ ಹುಚ್ಚು ನನಗೆ ಮೊದಲಿನಿಂದಲೂ ಇತ್ತು. ಹಣಕಾಸಿನ ಸೌಕರ್ಯ ಇಲ್ಲದೇ ಹಾಗೇ ಜಮೀನನ್ನು ಹಾಳುಬಿಟ್ಟಿದ್ದೆ. ಈಗ ಇಲ್ಲಿ ವೈದ್ಯನಾಗಿರುವ ನನ್ನ ಮಗ ಡಾ.ಸುಬ್ರಹ್ಮಣ್ಯ ಅದನ್ನು ಅಭಿವೃದ್ಧಿ ಮಾಡಿ, ತೋಟ ಮಾಡಿದಾನೆ. ವ್ಯವಸಾಯದ ಬಗ್ಗೆ ಅವನಿಗೆ ಒಲವಿದೆ. ನಮ್ಮ ಕುಟುಂಬದ ಕೃಷಿ ಮುಂದುವರಿಯುತ್ತೆ ಅನ್ನುವುದಕ್ಕೆ ಇದು ಸಾಕ್ಷಿ' ಎಂದು ಹೇಳಿ ಸುಮ್ಮನಾದರು ಪಿ.ಎಸ್. ಶ್ರೀನಿವಾಸಮೂರ್ತಿ. ವಿಷಯ ಅವರ ಮಗ ಡಾ.ಸುಬ್ರಹ್ಮಣ್ಯ ಅವರತ್ತ ಹೊರಳಿತು.


ಪಿ.ಎಸ್. ಶ್ರೀನಿವಾಸಮೂರ್ತಿ ಅವರ ಹಿರಿಯ ಮಗ ಡಾ. ಪಿ.ಎಸ್. ಸುಬ್ರಹ್ಮಣ್ಯ, ವೃತ್ತಿಯಿಂದ ವೈದ್ಯರು; ಪ್ರವೃತ್ತಿಯಿಂದ ಇವರು ಪಕ್ಕಾ ವ್ಯವಸಾಯಗಾರರು. ನಾವು ಮಧ್ಯಾಹ್ನದ ಸಮಯದಲ್ಲಿ ಇವರ ಮನೆ ಬಾಗಿಲನ್ನು ಬಡಿದದ್ದು ಶ್ರೀನಿವಾಸಮೂರ್ತಿಗಳಿಗಾಗಿ. ಅವರು ಇರಲಿಲ್ಲ. ಕಾರಣಾಂತರದಿಂದ ಪರಸ್ಥಳಕ್ಕೆ ತೆರಳಿದ್ರು. ಬಾಗಿಲು ತೆಗೆದು ನಮ್ಮನ್ನು ಆತ್ಮೀಯವಾಗಿ ಸ್ವಾಗತಿಸಿದ್ದು ಡಾ. ಪಿ.ಎಸ್.ಸುಬ್ರಹ್ಮಣ್ಯ ಅವರೇ. ಸಂಜೆ ವೇಳೆಗೆ ತಂದೆ ಮನೆಗೆ ಬರುತ್ತಾರೆ ಎಂದು ತಿಳಿಸಿದ್ರು. ವೈದ್ಯರ ಬಳಿ ವ್ಯವಸಾಯದ್ದೇನು ಮಾತು ಅನ್ನಿಸಿತು. ಅವರು ಪ್ರಶ್ನಿಸಿದಾಗ ನಾವು ಕಾರಣ ಹೇಳಬೇಕಾಯಿತು. ಬಹುಶಃ ಈ ಘಟನೆ, ನಮ್ಮ ಅಭಿಪ್ರಾಯ ಬದಲಿಸುವಂತೆ ಮುಂದಿನ ವಾತಾವರಣ ನಿರ್ಮಿಸಿತು. ಡಾ.ಪಿ.ಎಸ್.ಸುಬ್ರಹ್ಮಣ್ಯ ಮಾತನಾಡುವ ಲಹರಿಯಲ್ಲಿದ್ರು. ಅವರ ಧರ್ಮಪತ್ನಿ, ಬಸವಾಪಟ್ಟಣದ ಸತ್ಯನಾರಾಯಣ ಹಾಗೂ ಶ್ರೀಲಕ್ಷ್ಮಿ ದಂಪತಿಗಳ ಮಗಳು ಬಿ.ಎಸ್.ಸ್ವರ್ಣ, ಮಾತುಗಳಿಗೆ ಅಂತರಾಳವಾಗಿ ಪಕ್ಕದಲ್ಲಿದ್ರು. ನಾವು ಮೌನವಾಗಿ ಕುಳಿತು ಕೇಳಿದೆವು ಅಷ್ಟೆ.

'ನಮ್ಮದು ವೈದ್ಯಪರಂಪರೆ, ನನ್ನ ತಾತ ಪಿ.ಆರ್.ಸುಬ್ಬರಾವ್. ಅವರನ್ನು "ಅಪ್ಪಣ್ಣಯ್ಯ" ಅಂತ ಅಡ್ಡಹೆಸರಿನಿಂದ ಕರೀತಿದ್ರು. ಅವರ, ತಂದೆ ತಾತ ಮುತ್ತಾತ ಹೀಗೆ ಅವರೆಲ್ಲಾ ಪಿರಿಯಾಪಟ್ಟಣದ ಪಾಳೇಗಾರನ ಆಸ್ಥಾನದಲ್ಲಿ ವೈದ್ಯರಾಗಿದ್ರಂತೆ. ಅವರಿಗೆ ಔಷಧಿಯನ್ನು ಅರೆಯುವ ಕಲ್ಪತ್ತನ್ನು, ಬಳುವಳಿಯಾಗಿ ನೀಡಿದ್ದು ಈಗಲೂ ಮನೇಲಿದೆ. ನನ್ನ ಅಜ್ಜ ಹಸಿರು ಔಷಧಿ ಕೊಡೋರು: ಬಸುರೀರಿಗೆ ಹೊಟ್ಟೆನೋವಿಗೆ, ಹೊರಗಡೆ ಆದಾಗ ಬರುವ ಹೊಟ್ಟೆನೋವಿಗೆ, ಬಿಳೀ ಬಟ್ಟೆ ಹೋಗುವುದಕ್ಕೆ, ವಿಷಮಶೀತಜ್ವರಕ್ಕೆ, ಮಕ್ಕಳ ಹಕ್ಕಿಖಾಯಿಲೆಗೆ, ವಾಂತಿ ಭೇದಿಗೆ ಔಷಧಿ ಕೊಡೋರು. ನಮ್ಮ ಮನೇಲಿ "ಕುಪ್ಪಿಮಾತ್ರೆ" ಅಂತ ಇತ್ತು. ಅದನ್ನು ಒಂದು ಸುತ್ತು ಬಲಗಡೆಗೆ ತಿರುಗಿಸಿದ್ರೆ ಒಂದು ಜ್ವರಕ್ಕೆ ಆಗೋದು. ಎರಡು ಸುತ್ತು ಸುತ್ತಿದ್ರೆ ವಾಂತಿ ಭೇದಿಗೆ ಆಗೋದು. ಮೂರನೇ ಸುತ್ತು ಸುತ್ತಿದ್ರೆ ವಿಷಮಶೀತಜ್ವರಕ್ಕೆ ಆಗೋದು. ಹೀಗೇ ಎಡಕ್ಕೆ ಸುತ್ತಿದಾಗ ಒಂದೊಂದು ಸುತ್ತಿಗೂ ಒಂದೊಂದು ಖಾಯಿಲೆಗೆ ಆಗೋದು. ಹಾಗೇ dosage ಕೂಡ ವ್ಯತ್ಯಾಸವಾಗೋದು. ಅದಲ್ಲದೆ ಅವರು ಬಹಳ ಮುಖ್ಯವಾಗಿ ಎರಡು ಔಷಧೀನ ಕೊನೇವರೆಗೂ ಚಾಲ್ತಿಯಲ್ಲಿ ಇಟ್ಟುಕೊಂಡಿದ್ರು, ಅದರಲ್ಲಿ ಒಂದು



ತಾವು ರೂಪಿಸಿದ ತೋಟದಲ್ಲಿ ಅಭಿಮಾನದಿಂದ ನಿಂತ ಡಾ.ಪಿ.ಎಸ್.ಸುಬ್ರಹ್ಮಣ್ಯ: ಪಿರಿಯಾಪಟ್ಟಣ

ಹಳ್ಳೀಕಡೆ ಹೇಳುವ ಇಕ್ಕುಮದ್ದಿನ ಔಷಧಿ ಕೊಡ್ತಾ ಇದ್ರು. ಅದು actual ಆಗಿ slow poison ಅಂತ ಹೇಳಿ -ತಿನ್ನುವ ಆಹಾರದಲ್ಲಿ ಬೆಕ್ಕಿನ ಕೂದಲು, ಇಲಿ ಹಿಕ್ಕೆ, ಅಥವಾ ಜಿರಲೆ ಮೊಟ್ಟೆ ಧಾನ್ಯ ಸಂಗ್ರಹ ಮಾಡುವಾಗ ಬೆರೆಸಿ ಇಟ್ಟ ವಿಷ, ಇವನ್ನು ಸೇವಿಸಿದಾಗ ಶರೀರದಲ್ಲಿ ಜೀರ್ಣಶಕ್ತಿ ಕಡಿಮೆ ಮಾಡಿ, liver ಮೇಲೆ ಪರಿಣಾಮ ಬೀರುತ್ತೆ. ಆವಾಗ ಜೀರ್ಣಶಕ್ತಿ ಕಡಿಮೆಯಾಗಿ, ರಕ್ತದಲ್ಲಿ ಹೀಮೋಗ್ಲೋಬಿನ್ ಕಡಿಮೆಯಾಗುತ್ತೆ. Anaemic ಆಗಿ ಮುಖ ಕೈಕಾಲು ಊತ ಬರುತ್ತೆ. ಉಬ್ಬಸ ಬರುತ್ತೆ. ಓಡಾಡೋಕೆ ಆಗೋಲ್ಲ. ಅಂಥದಕ್ಕೆ, ಮೊದಲು ಪರೀಕ್ಷಿಸಲು, ನುಗ್ಗೆಸೊಪ್ಪಿನ ರಸವನ್ನು ಕೈಗೆ ಹಿಂಡಿ ನೋಡೋರು, ಅಥವಾ ಸೀಗೆಬೀಜವನ್ನು ಮೂತ್ರದಲ್ಲಿ ರಾತ್ರಿ ಒಂದು ಕರಟಕ್ಕೆ ಹಾಕಿ ಬೆಳಗ್ಗೆ ಎಷ್ಟು ಉಳಿಯುತ್ತೆ ಅಂತ ನೋಡಿ ಅದಕ್ಕೆ ಔಷಧಿ ಕೊಡೋರು. ಯಾವುದೇ ಫಲಾಪೇಕ್ಷೆಯಿಲ್ಲದೆ ಲಕ್ಷಾಂತರ ಜನಕ್ಕೆ ಔಷಧಿ ನೀಡಿದ್ದಾರೆ. ಮತ್ತೊಂದು ಮುಖ್ಯವಾದದ್ದು ಅಂದ್ರೆ ಈ ಮಂಡಲದ ಹಾವಿನ ಉಸಿರು ತಗುಲಿದ್ದಕ್ಕೆ: ಅದರಲ್ಲಿ ಗೆಜ್ಜೆಮಂಡಳ, ಉರಿಮಂಡಳ, ಕೊಳೆತಮಂಡಳ, ಬಾವುಮಂಡಳ ಅಂತ ನಾಲ್ಕೈದು ತರ ಇರುತ್ತೆ. ಆ ತರಹದಲ್ಲಿ ಯಾವುದಾದರೂ ಹಾವಿನ ಉಸಿರಿಗೆ ಔಷಧಿ ನೀಡೋರು. ಅದನ್ನು ನನ್ನ ತಂದೇನೂ ನಡೆಸಿಕೊಂಡು ಬಂದಿದಾರೆ. ಇದು ನಮ್ಮ ಕೌಟುಂಬಿಕ ಹಿನ್ನೆಲೆ. ನನ್ನ ತಂದೆ ಡಿಪ್ಲೊಮಾ ಇಂಜಿನಿಯರಿಂಗ್ ಓದಿದ್ರಿಂದ ಅವರಿಗೆ ನಾನು ಇಂಜಿನಿಯರ್ ಆಗಲಿ ಅಂತ ಆಸೆ ಇತ್ತು. ನನ್ನ ತಂದೆ ಓದಿದ್ರೂ ತಮ್ಮ ತಂದೆ ತಾಯಂದಿರ ಸೇವೆಗೆ ನಿಂತು ಕೆಲಸಕ್ಕೆ ಹೋಗಲಿಲ್ಲ. ಆದರೆ ನಾನು MBBS ಓದಿದೆ. ನನ್ನ ತಾತನಿಗೆ family background ನಿಂದ ವೈದ್ಯನಾಗಲಿ ಅಂತ ಆಸೆ ಇತ್ತು. MBBS ಮುಗಿದ ಮೇಲೆ Paediatricsನಲ್ಲಿ Diploma ಓದಿದೆ. ಹಾಗೇ Diploma in Alterate Medicine ಮಾಡಿದೆ. MD in Alternate Medicine ಮಾಡಿದೆ. Diploma in Family Counselling ಮಾಡಿದೆ. ಆಮೇಲಿಂದ Lactation managementನಲ್ಲಿ Diploma ಮಾಡಿದೆ. ನಾನು ಬಸವಾಪಟ್ಟಣದಲ್ಲಿ ೧೯೮೮ರಿಂದ ೯೧ ರವರೆಗೆ, practice ಮಾಡಿದೆ. ಅಲ್ಲಿ ಪ್ರೋತ್ಸಾಹ ಸಿಕ್ತು. ಬಸವಾಪಟ್ಟಣದ ಹುಡುಗೀನ ಮದುವೆಯಾಗಿ ೯೧ರಲ್ಲಿ ಪಿರಿಯಾಪಟ್ಟಣಕ್ಕೆ ಬಂದೆ. "ವಿನಾಯಕ ಕ್ಲಿನಿಕ್" ಅಂತ ಇಲ್ಲಿ open ಮಾಡಿದೆ. ಇದು ನನ್ನ ವೈಯಕ್ತಿಕ ವಿಚಾರವಾಯ್ತು. ನನಗೆ ವ್ಯವಸಾಯದ ಬಗ್ಗೆ ಹೇಗೆ ಒಲವು ಬೆಳೀತು ಅನ್ನುವುದರ ಬಗ್ಗೆ, ಕೆಲವು ಉದಾಹರಣೆಗಳನ್ನು ಕೊಡ್ತೀನಿ. ನಾವು ಚಿಕ್ಕವರಿದ್ದಾಗ, ಮನೆ ಹಸು, ಎಮ್ಮೆಗೆ ಮೇವಿಗೋಸ್ಕರ ಹಸಿರು ಹುಲ್ಲನ್ನು ಕುಯ್ಯಲು ತಾತನ ಜತೆಗೆ ನಾವೂ ಹೋಗ್ತಾ ಇದ್ವಿ. ಹುಲ್ಲು ಕುಯ್ಯೋದ್ರಲ್ಲೂ ಪದ್ಧತಿ ಇದೆ ಅಂತ ಅವರು ತಿಳಿಸ್ತಾ ಇದ್ರು. keep left ಅಂತ, ಒಂದು ಕಡೆಯಿಂದ ಎಡಗಡೆ ಹುಲ್ಲನ್ನು ಕುಯ್ತಾ ಬರೋರು. ಅದು ನೋಡೋದಿಕ್ಕೆ ಚೆನ್ನಾಗಿ ಕಾಣಬೇಕು. ಒಂದು ಕಡೆಯಿಂದ ಕುಯ್ದರೆ, ಇನ್ನೊಂದು ಕಡೆಯಿಂದ ಹುಲ್ಲು ಬಂದಿರುತ್ತೆ. ಹೀಗೆ guidance ಕೊಡೋರು. ಅವರು ವೇಗವಾಗಿ ಹುಲ್ಲು ಕುಯ್ಯೋರು. ನಾವೂ ಕುಯ್ಯುತ್ತಿದ್ವಿ. ನಾನೂ MBBS ಓದುವಾಗ, ಊರಿಗೆ ಬಂದ ಸಮಯದಲ್ಲಿ ತಂದೆ ಜತೆ ಜಮೀನಿಗೆ ಹೋಗ್ತಿದ್ದೆ. ಸ್ವಲ್ಪ ಆಸಕ್ತಿ genetic ಆಗಿಯೇ ಬಂತು. ೧೯೮೪ರಲ್ಲಿ ಬರ ಬಂದು ತೋಟದಲ್ಲಿ ನೀರು ಆಳಕ್ಕೆ ಹೋಯ್ತು. ಆಗ ತಂದೆಯವರು ತೋಟದಲ್ಲಿ ವಿಪರೀತ ದುಡೀತಿದ್ರು. ನನ್ನ ತಾಯಿ ಕೂಡ ತೋಟಕ್ಕೆ ಹೋಗಿ ಕಳೆ ತೆಗೆಯೋರು, ಕೂಲಿಯಾಳುಗಳನ್ನು ಕರೀತಿರಲಿಲ್ಲ, ದುಡ್ಡು ಖರ್ಚಾಗುತ್ತೆ ಅಂತ. ಗಿಡಗಳಿಗೆ ಅವರೂ ನೀರು ಹಾಕೋರು. ಅದೇ influence ಆಗಿ ನಾನೂ ಅದೇ ರೀತಿ ಶುರುಮಾಡಿದೆ. ಇಲ್ಲಿ ಬಂದು settle ಆದ ಮೇಲೆ, ೨೦೦೦ ಇಸವೀಲಿ, February ತಿಂಗಳಲ್ಲಿ ನನ್ನ ತಾತ ಪಕ್ಕಕ್ಕೆ ಕರೆದು ಕೂರಿಸಿಕೊಂಡ್ರು. ನಂದೊಂದು ಆಸೆ ಇದೆ ನಡೆಸಿಕೊಡ್ತೀಯಾ ಅಂದ್ರು. ಏನೂಂತ ಕೇಳಿದೆ. ನಮ್ಮ ಪಿತ್ರಾರ್ಜಿತವಾದ ಆಸ್ತಿ ಇದೆ. ಅದನ್ನು ಹಾಗೇ ಬಿಟ್ರೆ ಬೇರೆಯವರ ಪಾಲಾಗುತ್ತೆ. ನಮ್ಮ ಹಿರೀಕರು ಈಶಾನ್ಯ ದಿಕ್ಕಲ್ಲಿ ಒಂದು ಬಾವೀನ ತೋಡಿದಾರೆ, ಸುಮಾರು ಸಸಿ ನೆಟ್ಟಿದಾರೆ, ಫಲಪ್ರದವಾಗಿಲ್ಲ. ನನ್ನ ಕೈಲಿ ಅದನ್ನು ಮಾಡೋಕೆ ಆಗೋಲ್ಲ. ನನ್ನ ಮಗನಿಗೂ ಆಗಿಲ್ಲ. At least ನೀನಾದರೂ ನನ್ನ ಆಸೆ ನೆರವೇರಿಸಿ, ಎರಡು ಎಕರೆ ತೋಟ ಮಾಡಿದ್ರೆ, ನನ್ನ ಆತ್ಮಕ್ಕೆ ಶಾಂತಿ ಸಿಗುತ್ತೆ ಅಂತ ಹೇಳಿ ನನ್ನಿಂದ ಮಾತು ತೊಗೊಂಡ್ರು. ದೈವೇಚ್ಛೆ ಅಂತ ನಾನು ಸರಿ ಅಂದೆ. ಆವಾಗ ಅವರಿಗೆ ೯೮ ವರುಷ. ಅದಾದ ಮಾರನೇ ದಿವಸಾನೆ, ತಾತನ ಹೆಸರಿನಲ್ಲಿದ್ದ ಜಮೀನನ್ನು, ತಂದೆ ಹೆಸರಿಗೆ ಮಾಡಿಸಿ, ಸೀಗೂರಿನ SBIನಲ್ಲಿ loanಗೆ apply ಮಾಡಿದೆ. ಜಮೀನು ಹಳೇಪೇಟೆ ಕಂಪ್ಲಾಪುರ ಅಂತ ಸಿದ್ದಾಪುರ ರಸ್ತೇಲಿ, ಊರಿಗೆ ಸೇರಿದ ಹಾಗಿದೆ, ಐದು ಎಕರೆ plot. ಕುಂಬಾರಕಟ್ಟೆ ಅಂತ ಕೆರೆ ಬರುತ್ತೆ. ಅದರ ತಳಭಾಗದಲ್ಲಿ ಜಮೀನು ಇರೋದು. ಸಾಲಸಿಕ್ತು, ಬೋರ್ ತೆಗೆಸ್ದೆ, Aprilನಲ್ಲಿ. ತಾತನ ಆಶೀರ್ವಾದವೂ ಇತ್ತು. ನೀರು ಸಿಕ್ತು. ಮಣ್ಣು ಹೊಡೆಸಲು ಆರಂಭಿಸಿದೆ. ಜಮೀನು ಏರುಪೇರು ಇತ್ತು. ಅದನ್ನು ಒಂದೇ ಮಟ್ಟಕ್ಕೆ ಮಾಡಲು, JCB ತರಿಸಿದೆ. ಐದು ಟ್ರಾಕ್ಟರ್ ತೊಗೊಂಡು April ಎರಡರಿಂದ ೧೧ನೇ ತಾರೀಖಿನವರೆಗೆ ಕೆಲಸ ಮಾಡಿದ್ವಿ. ೧೨, ೧೩ರಂದು cyclone ಬಂತು. ೧೩ನೇ ತಾರೀಖು ನಮ್ಮ ತಾತ ದೈವಾಧೀನರಾದ್ರು. ನಂತರ May ೨೫ ರಿಂದ June ೫ ರ ತನಕ ೧೦ ದಿನ ಮತ್ತೆ ಕೆಲಸ ಮಾಡಿದ್ವಿ. ಒಂದು ದಿವಸಕ್ಕೆ ೩೦೦ ಟ್ರಾಕ್ಟರ್, ಅಂದರೆ ಒಂದು ಘಂಟೆಗೆ ೩೦ ಟ್ರಾಕ್ಟರ್ ಹೋಗಬೇಕು, ಪ್ರತೀ ಎರಡು ನಿಮಿಷಕ್ಕೆ ಒಂದೊಂದು ಟ್ರಾಕ್ಟರ್



ತಮ್ಮ ಮುದ್ದಿನ ಗಿಡದೊಂದಿಗೆ ಒಂದು ಭಂಗಿ: ಡಾ.ಪಿ.ಎಸ್.ಸುಬ್ರಹ್ಮಣ್ಯ: ಪಿರಿಯಾಪಟ್ಟಣ

ಖಾಲಿಯಾಗಬೇಕು. ದಿನಕ್ಕೆ ೧೦ ಘಂಟೆ minimum. ಆ ರೀತಿ ೧೦ ದಿನ ಎರಡು instalmentನಲ್ಲಿ ಕೆಲಸ ಮಾಡಿ, ಒಟ್ಟು ೬ ಸಾವಿರ ಟ್ರಾಕ್ಟರ್ ಮಣ್ಣು ಪೂರ್ತಿ ಜಮೀನಿಗೆ ಹಾಕಿಸಿದೀವಿ. ಮೂರು ಅಡಿ ಮಣ್ಣು ಬಿದ್ದಿದೆ. ನಂತರ ಉಳುಮೆ ಮಾಡಿ, ೨೦೦೦ ಗುಂಡಿ ತೆಗೆದು ಅಡಿಕೆ ನಾಟಿ ಮಾಡಿದ್ವಿ. ಆಮೇಲಿಂದ ಬಾಳೆ ನಾಟಿ ಮಾಡಿದ್ವಿ. ಮಳೆ ಆರಂಭವಾಯ್ತು. ಮಳೆನೀರಲ್ಲಿ ಎರಡು ಮೂರು ತಿಂಗಳು ಸಸಿಗಳು ನಿಂತ್ವು. ಜನವರಿ ಹೊತ್ತಿಗೆ ನೀರು ಇಳಿದಾಗ ಬಾಳೆ ಅರ್ಧಕ್ಕರ್ಧ ಹೋಗಿತ್ತು. ಅಡಿಕೆ ಬರುತ್ತೋ ಇಲ್ವೋ ಅನ್ನುವ ಅನುಮಾನ ಇತ್ತು. ಮತ್ತೆ, ದನೀನ ಗೊಬ್ಬರ, ಮಣ್ಣು ಹಾಕಿ, ಸುತ್ತಾ ನೀರು ಹರಿದು ಹೋಗಲು trench ತೆಗೆದ್ವಿ. ಕಳೆ ತೆಗೆಸಿ, ಅಗೆತ ಮಾಡಿಸಿದ್ವಿ. ಮತ್ತೆ ಮುಂದಿನ ವರುಷ ಗುಣೀ ಕೆರೆಸಿ, ಗೊಬ್ಬರ ಹಾಕಿಸಿದ್ವಿ. ಅಗೆತ ಮಾಡಿಸಿದ್ವಿ. ಇದು ಮೂರನೇ ವರುಷ. ಮತ್ತೆ ೧೫೦ ಟ್ರಾಕ್ಟರ್ ಕೆರೆಗೋಡು, ಕೆಬ್ಬೆಮಣ್ಣನ್ನು ಹಾಕಿದ್ವಿ, ಎರೆ ಮಣ್ಣಿಗೆ ಕಟ್ಟೆ ಮಣ್ಣು mix ಆದ್ರೆ ಒಳ್ಳೆಯದು ಅಂತ. ೧೦೦ ತೆಂಗಿನ ಗಿಡ ಹಾಕಿದ್ವಿ. ಮೊದಲನೇ ಸಾರಿ ೪೦ ಗಿಡ ಹೋಯ್ತು. ಮತ್ತೆ ೪೦ ಗಿಡ ಹಾಕಿದ್ವಿ. ೨೫ ಗಿಡ ಹೋಯ್ತು. ಮತ್ತೆ ೨೫ ಹಾಕಿದ್ವಿ ೧೫ ಹೋಯ್ತು. ಮತ್ತೆ ೧೫ ಹಾಕಿದ್ವಿ. ೧೦ ಹೋಯ್ತು. ಅಂದ್ರೆ ನೂರಕ್ಕೆ ನೂರುಗಿಡದಷ್ಟು ಹೋಗೇ ಬಿಟ್ಟಿದೆ. ಆದರೂ ನಾವು ಬಿಟ್ಟಿಲ್ಲ. ಹಟ ಹಿಡಿದು ನೋಡೇಬಿಡೋಣ, ಯಾಕೆ ಬರೋದಿಲ್ಲ ಅಂತ ಮಾಡ್ತಾ ಇದೀವಿ. ಆ ರೋಡಲ್ಲಿ ದಿನಕ್ಕೆ ಸಾವಿರಾರು ಜನ ಓಡಾಡ್ತಾರೆ. ಒಬ್ಬೊಬ್ಬರು ಒಂದೊಂದು idea ಕೊಡ್ತಾರೆ, ಕಾಮೆಂಟ್ ಮಾಡ್ತಾರೆ. ನಾವು ಅದಕ್ಕೆ ಗೌರವ ಕೊಡ್ತೀವಿ. ಉಪಯುಕ್ತವಾದ ಸಲಹೆಗಳನ್ನು ಸ್ವೀಕರಿಸುತ್ತೀವಿ. ಮೊದಮೊದಲು, "ಇವರಿಗೆ ಬುದ್ಧಿ ಇಲ್ಲ, ಇದರಲ್ಲಿ ಒಂದು ಗಿಡ ನೆಡಿಸಲಿ" ಅಂತ challenge ಮಾಡಿ ಹೋದವರೂ ಇದ್ದಾರೆ. ಇವತ್ತು ಅವರೇ ಬಂದು, ನಿಮ್ಮ ಹಾಗೆ ಯಾರೂ ಮಾಡೋದಕ್ಕೆ ಆಗೋದಿಲ್ಲ ಅಂತಾ ಇದಾರೆ. ಗಿಡ ನೆಡುವಾಗ ಕುರಿ ಆಡಿನ ಗೊಬ್ಬರ ಹಾಕಿದೀವಿ. ಮತ್ತೆ ಕೆಬ್ಬೆ ಮಣ್ಣು ಹಾಕಿ ನೀರು ಬಿಟ್ಟಿದೀವಿ. ಕೆರೆಗೋಡು ಬಹಳ ಸತ್ವ ಜಾಸ್ತಿ, ಹಾಗೂ economical. ಒಂದು ಟ್ರಾಕ್ಟರ್ ಹಟ್ಟಿಗೊಬ್ಬರ ೮೦೦ ರೂಪಾಯಿ. ಫಲವತ್ತಾಗಿರುವ ಮೇಲ್ಮಣ್ಣು ಕೆರೆಯ ತಳದಲ್ಲಿ ಏನಿದೆ, ಅದನ್ನು ಮೆಕ್ಕಲು ಮಣ್ಣು ಅಂತ ಕರೀತೀವಿ. ಅದು ಗೊಬ್ಬರದಷ್ಟೇ ಉಪಯುಕ್ತ. ಮಾಮೂಲುಗೊಬ್ಬರಾನ ಮೂರು ಮಂಕರಿ ಹಾಕಿದ್ರೆ ಇದನ್ನು ಒಂದೇ ಹಾಕಿದ್ರೆ ಸಾಕು. ನನ್ನ ತಂದೆ ಏನು ಮಾಡಿದಾರೆ ಅಂದ್ರೆ, ಕಲ್ಲುಭೂಮೀಲಿ ತೆಂಗು ನೆಡುವಾಗ, ಫಸಲು ಕಟ್ಟುತ್ತೆ, ಬೇರು ಬಿಡಲು ಅನುಕೂಲವಾಗಲಿ ಅಂತ, ನಾಲ್ಕು ಅಡಿ ಅಗಲ, ನಾಲ್ಕು ಅಡಿ ಉದ್ದ, ಒಂದೂವರೆ ಅಡಿ ಆಳ ತೆಗೆದು, ಗಿಡದ ಸುತ್ತಾ ಪಾತಿ ಮಾಡಿ, ೫೦, ೬೦ ಮಂಕರಿ ಈ ತರಹದ ಗೋಡು ತುಂಬಿದಾರೆ. ಈಗ ಗಿಡಾನೂ ಚೆನ್ನಾಗಿದೆ. ಇದ್ರಿಂದ ನಮ್ಮ ಹುಮ್ಮಸ್ಸು ಜಾಸ್ತಿಯಾಗಿದೆ. ಇನ್ನೂ ಮಾಡುವ ಆಸೆ ಬರ್ತಾ ಇದೆ. ಹೋಗಿ ಬರೋರಿಗೂ ಎಂಥಾ ಜಮೀನಿನಲ್ಲೂ ಏನು ಬೇಕಾದ್ರೂ ಮಾಡಬಹುದು ಅನ್ನುವ ಮಾರ್ಗದರ್ಶನ ಸಿಕ್ತು. "ಬಂಗಾರದ ಮನಷ್ಯ" ಸಿನಿಮಾದ ಹಾಡು ನನಗೆ ನೆನಪಿಗೆ ಬರುತ್ತೆ. "ಆಗದು ಎಂದು, ಕೈಲಾಗದು ಎಂದು, ಕೈಕಟ್ಟಿ ಕುಳಿತರೆ, ಸಾಗದು ಕೆಲಸವು ಎಂದೂ" ಅಂತ ಹೇಳಿರುವ ಸಾಲು ಬಹಳ ಅರ್ಥಗರ್ಭಿತವಾಗಿದೆ. ನಾಲ್ಕು ಎಕರೆ ತೋಟ ನಿಲ್ಲಿಸಲು ನನಗೆ ಎಕರೆಗೆ ಎರಡೂವರೆಯಿಂದ ಮೂರು ಲಕ್ಷ ರೂಪಾಯಿ ಖರ್ಚು ಬೀಳ್ತು. ಬರೀ ಮಣ್ಣಿನದೇ, ಮೂರು ಲಕ್ಷ ರೂಪಾಯಿ ಆಯ್ತು. ನನ್ನ ತಂದೆಯವರದ್ದು ಒಂದೂವರೆ ಎಕರೆ ತೋಟ ಇದೆ. ಅದರಲ್ಲಿ ವರುಷಕ್ಕೆ ಒಂದೂವರೆ ಲಕ್ಷ ರೂಪಾಯಿ ಆದಾಯ ಬರೋದು. ಮೂರು ನಾಲ್ಕು ವರುಷದಿಂದ ಉಳಿಸಿದ ಹಣ ಮೂರು ನಾಲ್ಕು ಲಕ್ಷ ಇತ್ತು. ನನ್ನ ತಮ್ಮ ಪಿ.ಎಸ್. ನಾಗರಾಜು, ಸಿಂಗಪುರದಲ್ಲಿ Engineer. ಅವನು ನಾಲ್ಕು ಲಕ್ಷ ನೀಡಿದ. ನಾನು ದುಡಿದಿರೋದ್ರಲ್ಲಿ ನಾಲ್ಕು ಲಕ್ಷ ರೂಪಾಯಿ ಹಾಕಿದೆ. ಮತ್ತೆ ಪ್ರತೀ ವರುಷ ಒಂದೂವರೆ ಲಕ್ಷ ರೂಪಾಯಿ ಸಾಲ ತೊಗೋತೀವಿ. ಹೆಂಗೋ maintain ಆಗ್ತಿದೆ. ಗಿಡಕ್ಕೆ ನೆರಳಾಗಲಿ ಅಂತ ಒಂದೊಂದು ಗುಣೀಲಿ ಮೂರುನಾಲ್ಕು ಬಾಳೆ ಬಿಟ್ಟಿದಾರೆ. ಒಂದೇ ಬೆಳೆದ್ರೆ ಗಾಳಿ ಬಂದಾಗ ಉರುಳುತ್ತೆ. ಗೊನೆ ಬಿಟ್ರೆ, ಒಂದರಲ್ಲಿ ೧೫

ಕೇಜಿ ಬರಬಹುದು. ಅದೇ ಮೂರು ಗಿಡ, ಐದ್ಕೈದು kg ಗೊನೆ ಬಿಟ್ರೂ ೧೫ ಕೇಜಿ ಆಯ್ತು. ಇಲ್ಲಾಂದ್ರೆ ಕತ್ತರಿಸಿದ್ರೆ ಗೊಬ್ಬರ ಆಗುತ್ತೆ. ಗಿಡಗಳು ಜಾಸ್ತಿ ಇರೋದ್ರಿಂದ ಗರಿಕೆ ಬರೋಲ್ಲ. ದದ್ದು ಮಾಡಿ, ಕಡಿದು ತುಂಡು ಮಾಡಿ ಹಾಕಿ ಎರೆಹುಳು ಬಿಟ್ರೆ ಸಾವಯವ ಗೊಬ್ಬರ ತಯಾರಾಗುತ್ತೆ. ಮಣ್ಣಿನ ಫಲವತ್ತತೆ ಜಾಸ್ತಿಯಾಗುತ್ತೆ. ನಾವು ತೋಟಕ್ಕೆ ರಾಸಾಯನಿಕ ಗೊಬ್ಬರ ಬಳಸೋಲ್ಲ. ರಾಸಾಯನಿಕ ಕೊಟ್ರೆ ಮೊದಲನೇ ವರುಷ ಗೊನೆ ಚೆನ್ನಾಗಿ ಬರುತ್ತೆ. ಆದ್ರೆ ಖಾಯಿಲೇನೂ ಹಾಗೇ ಬರುತ್ತೆ. ಈಗ ಮಕ್ಕಳಿಗೆ ಮಾಮೂಲಿ ಆಹಾರ ಕೊಟ್ಟು ಬೆಳೆಸೋದಕ್ಕೂ ಅಥವಾ ಬರೀ Protein powder, tonic ಕೊಡ್ತಾ ಬಂದು, ಊಟ ಕೊಡದಿದ್ರೆ ಬೆಳವಣಿಗೆ ಇರೋಲ್ಲ. ಮಣ್ಣಿನ ಫಲವತ್ತತೆ ಬೆಳೆಸಿ ನಾವು ಗಿಡ ಬೆಳೆಸಬೇಕೇ ಹೊರತು, ಬರಿ ಗಿಡಕ್ಕೋಸ್ಕರ ನಾವು ಆಹಾರ ಕೊಡಬಾರದು. ಅಲ್ಲದೆ ಬರೀ ದುಡ್ಡಿಗೋಸ್ಕರ ಮಾಡಬಾರದು. ನಮ್ಮ ambition ಏನಿರುತ್ತೆ, ಖುಷಿ ಏನಿರುತ್ತೆ, ಅದರ ಪ್ರಕಾರ ಮಾಡಿಕೊಂಡು ಹೋಗ್ತಾ ಇದ್ರೆ, ಸುಖ ಇರುತ್ತೆ. ಇದು ಒಂದು, ಎರಡು ದಿನದ ಬೆಳೆ ಅಲ್ಲ. ಅಷ್ಟೇ ಅಲ್ಲದೆ ರಾಸಾಯನಿಕ ಗೊಬ್ಬರ ಹಾಕೋರು, ವಿಜ್ಞಾನಿಗಳನ್ನು ಸಂಪರ್ಕ ಮಾಡಿ, ಎಷ್ಟು ಹಾಕಬೇಕು ಅಂತ ತಿಳಿದು ಬಳಸೋಲ್ಲ. ವಿಪರೀತವಾಗಿ ಗೊಬ್ಬರ ಬಳಸುತ್ತಾರೆ. ಈ ತರಹ ಗೊಬ್ಬರ ಹಾಕಿದ ಆಹಾರ ತಿಂದಾಗ, ಬಾಯಲ್ಲಿ ಹುಣ್ಣು, gastric ಜಾಸ್ತಿಯಾಗುತ್ತೆ, ಎದೆ ಉರಿ ಬರುತ್ತೆ. ಇದು ತುಂಬಾ ಜನರ complaint. ಯಾಕೇಂದ್ರೆ ನಾವು ಬಾಳೆಗೆ ಕೊಟ್ಟ chemical ಹಣ್ಣಲ್ಲಿ ವಾಪಸ್ಸು ಬಂದಿರುತ್ತೆ. ನಮ್ಮ ತೋಟದ ಪಚ್ಚಬಾಳೆ ಗೊನೇನ ಒಂದು ತಿಂಗಳಿಟ್ರೂ ಒಂದೂ ಹಣ್ಣೂ ಉದುರೋಲ್ಲ. ತೊಟ್ಟು ಗಟ್ಟಿಯಾಗಿರುತ್ತೆ. ಸಿಪ್ಪೆ ಕಪ್ಪಾದ್ರೂ ಹಣ್ಣು ಒಳಗೆ ಕೊಳೆತಿರೋಲ್ಲ. ಯಾಲಕ್ಕಿ ಬಾಳೇನೂ ಅಷ್ಟೇನೆ. ರುಚಿ ತುಂಬಾ ಚೆನ್ನಾಗಿರುತ್ತೆ. ಹಾಗಾಗಿ ಈ ವಿಧಾನ ಸರಿ ಅಂತ ಬರೀ ಸಾವಯವ ಗೊಬ್ಬರಾನ ಮಾತ್ರ ಬಳಸ್ತೀನಿ. ರೈತರಿಗೆ ನನ್ನ ಕಿವಿಮಾತು ಏನಪ್ಪಾ ಅಂದ್ರೆ, ಒಂದೇ ಸಲಕ್ಕೆ desperate ಆಗಬಾರದು. ಇವೆಲ್ಲ ಚಕ್ರ ಇದ್ದಹಾಗೆ. ನಾಲ್ಕು ವರುಷ enjoy ಮಾಡಿರ್ತೀವಿ. ಮುಂದಿನ ನಾಲ್ಕು ವರುಷ ಏನೂ ಸಿಗೋಲ್ಲ. ಆಗ ಪರಿಸ್ಥಿತೀನ ನಿಭಾಯಿಸಬೇಕು. ಎಲ್ಲರೂ ಒಂದೇ ಬೆಳೆ ಮಾಡಬಾರದು. ಅಡಿಕೆ ಧಾರಣೆ ಇದೆ ಅಂತ ಹೇಳಿ ಹೊಲಕ್ಕೆಲ್ಲಾ ಅಡಿಕೆ ಹಾಕಿದಾರೆ. ಅವರ ಫಸಲು ಬಂದಾಗ ಅಡಿಕೇ ಧಾರಣೆ ಕುಸಿಯುತ್ತೆ. ಕಡಿಮೆ ಧಾರಣೇಲಿ ಸಾಗೋಲ್ಲ ಅಂತ ಕೆಲವರು ಬಿಡ್ತಾರೆ. ಆಗ ಮತ್ತೆ ಧಾರಣೆ ಏರುತ್ತೆ. ನಾವು ಕಾಯಬೇಕು ಅಷ್ಟೆ. ಹಿಡಿದ ಕೆಲಸವನ್ನು ಬಿಡಬಾರದು. ತೋಟ ಮಾಡೋದಾದ್ರೂ ಒಂದು ಛಲದ ಮೇಲೇ ಮಾಡಬೇಕು. Will power ಬಹಳ ಮುಖ್ಯ. ವೈದ್ಯನಾಗಬೇಕು ಅಂತ ಹೊರಟವನು Injection ಕೊಡೋದಕ್ಕೆ ಹೆದರಿದ್ರೆ ಹೋಯ್ತು. ಅಳುಕಬಾರದು ಯಾವಾಗಲೂವೆ. ಧೈರ್ಯ ಮಾಡಬೇಕು. ನಾವೀಗ ಇಷ್ಟು ಖರ್ಚು ಮಾಡಿದ್ದೀವಿ, ಮುಂದೆ ಯಾವತ್ತಾದರೂ ಒಂದು ದಿನ ನನ್ನ ಖರ್ಚನ್ನು ಕಳೆದು ಆದಾಯಗಳಿಸ್ತೀನಿ ಅನ್ನುವ ನಂಬಿಕೆ ಇದೆ. ಸುತ್ತಾ ಸಿಲ್ವರ್, ತೇಗ ಏನು ಹಾಕಿದೀವಿ, ೫೦, ೬೦ ವರುಷ, ಮಾತನಾಡುವ ಹಾಗಿಲ್ಲ. 'Practice makes man perfect' ಅನ್ನುವ ಹಾಗೆ ನಾನು ವ್ಯವಸಾಯದ ವಿಷಯವನ್ನು ಕರಗತ ಮಾಡಿಕೊಂಡೆ. ನಾನು clinicನಲ್ಲಿ ಕುಳಿತಿದ್ರೂ, ರೈತರು ಬಂದ್ರೆ ಜಮೀನಿನ ಬಗ್ಗೆ ವಿಚಾರಿಸ್ತೀನಿ. Tobacco Boardನಲ್ಲಿ MSc(Ag) ಮಾಡಿದ ಸ್ನೇಹಿತರು ಇದ್ದಾರೆ. ಅವರನ್ನು ಜಮೀನಿಗೆ ಕರೆದುಕೊಂಡು ಹೋಗ್ತೀನಿ, ವಿಷಯ ತಿಳೀತೀನಿ. ನನ್ನ ತಂದೆ ಉತ್ತಮ ಕೃಷಿಕ. ಅವರಿಗೆ ೪೦ ವರುಷಗಳ ಅನುಭವವಿದೆ. ಪಾಳು ಜಮೀನನ್ನು ಅಭಿವೃದ್ಧಿ ಮಾಡಿ, ಒಂದೂವರೆ ಎಕರಗೆ ಅಡಿಕೆ ಮಾಡಿ, ಐದರಿಂದ ಆರು ಲಕ್ಷ ಅಡಿಕೆ ಕೀಳುತ್ತಿದ್ದಾರೆ. ಜಮೀನಿನ ಅಭಿವೃದ್ಧಿಯಲ್ಲಿ ಅಂತಿಮವಾದ ತೀರ್ಮಾನ ಅವರದ್ದೇ. ಜಮೀನಿನ ಬಗ್ಗೆ ಅವರಿಗೆ ಆಳವಾದ ಜ್ಞಾನ ಇದೆ. ಈಗ ನಾವು ಅಡಿಕೆ ಬೆಳೆದಿರುವ ಜಮೀನಿನಲ್ಲಿ ಒಂದು ತಿಂಗಳು ಮಳೆ ಹೋದ್ರೂ ಅಡಿಕೆಗೆ ತೊಂದರೆ ಆಗೋಲ್ಲ. ಮಣ್ಣನ್ನು ಫಲವತ್ತಾಗಿ ಮಾಡಿದ್ರೆ ಸಾಕು, ತೋಟ ಅಭಿವೃದ್ಧಿಯಾಗುತ್ತೆ. ನನಗೂ ಅಷ್ಟೆ, ಒಂದೇ ವೃತ್ತಿ ಮಾಡಿ ಬೇಸರವಾದಾಗ, ತೋಟಕ್ಕೆ ಹೋದ್ರೆ ಬದಲಾವಣೆ ಇರುತ್ತೆ. ನನ್ನ ಅತ್ತೆ ಮಾವ, ಯಾವತ್ತಿದ್ರೂ ಅದು ಐವತ್ತು ಲಕ್ಷರೂಪಾಯಿ ಆಸ್ತಿ ಅಂತಾರೆ. ಅವರೂ ಕೃಷಿಕರು. ಆದರೂ ನೋಡಿಕೊಂಡು, ತುಂಬಾ ಧೈರ್ಯ ಮಾಡದೆ ಮಿತವಾಗಿ ಖರ್ಚು ಮಾಡಿ ಅಂತಾರೆ. ನನ್ನ ತಂದೆ, ಅವರ ಆರೋಗ್ಯಾನೂ ಲೆಕ್ಕಿಸದೆ, ದುಡೀತಿದ್ದಾರೆ. ಅವರೇ ಒಂದು ದೊಡ್ಡ ಆಸ್ತಿ ನನಗೆ. ಅವರಿಂದಲೇ ಲಕ್ಷಾಂತರ ರೂಪಾಯಿ ಉಳಿದಿದೆ. ನನ್ನ ಹೆಂಡತಿಗೂ ಆಸಕ್ತಿ ಇದೆ, "ತೋಟ ಮಾಡಿದ್ರೆ ಚೆನ್ನ" ಅಂತ ಬೇರೆಯವರ ಕೈಲಿ ಹೇಳಿಕೊಳ್ಳುತ್ತಾಳೆ. ವ್ಯವಸಾಯದ ಬಗ್ಗೆ ಎಲ್ಲರಿಗೂ ಪ್ರೀತಿ ಇದೆ. ಅದೂ ಅಲ್ಲದೆ ಸಮಯಕ್ಕೆ ಸರಿಯಾಗಿ ಹಣ ಹೊಂದಿಸಲು ಆಗದಿದ್ರೆ ವ್ಯವಸಾಯ ಮಾಡಲು ಆಗೋದಿಲ್ಲ. ನನಗೆ ದಿನಾ ದುಡ್ಡು ಬರೋದ್ರಿಂದ ಕಷ್ಟ ಆಗಿಲ್ಲ. ನನ್ನ ಮುಂದಿನ ಯೋಚನೆ ಅಂದ್ರೆ, ಈಗ ನನಗೆ ೪೦ ವರುಷ. ಇನ್ನೊಂದು ಐದು ವರುಷ ಇದೇ ರೀತಿ ದುಡಿದು, ನಂತರ ಆರು ಘಂಟೆ clinicನಲ್ಲಿ ನೋಡಿ, ಮತ್ತೆ ಎರಡು ಘಂಟೆ free treatment ಕೊಡುವ ಮನಸ್ಸಿದೆ. ಮಧ್ಯಾಹ್ನದ ಮೇಲೆ ಯಾರು ಬಡವರು ಬಂದ್ರೂ ಅವರಿಗೆ free treatment. ಹಾಗೇ ವ್ಯವಸಾಯವನ್ನು ಅಭಿವೃದ್ಧಿ ಮಾಡಿ, ತೋಟವನ್ನು ಮಾದರಿಯಾಗಿ ನಿರ್ಮಿಸಿ, ನಮ್ಮ ಜನಾಂಗದವರಿಗೆ ಹಾಗೇ ಇತರೇ ಜನರಿಗೆ ಒಂದು ಶೈಕ್ಷಣಿಕ ಕೇಂದ್ರವನ್ನಾಗಿ ಮಾರ್ಪಡಿಸುವ ಮಹತ್ವಾಕಾಂಕ್ಷೆ ಇದೆ'

ಎಂದು ಅಭಿಮಾನಪೂರ್ವಕವಾಗಿ ಹೇಳಿದರು ಡಾ.ಸುಬ್ರಹ್ಮಣ್ಯ. ಮಾತೇ ಹೊರಡದಂತೆ ನಾವು ಮೂಕರಾಗಿದ್ವಿ. ರಾತ್ರಿ ನಮ್ಮ ಮನೆಯಲ್ಲಿಯೇ ಉಳೀರಿ ಅಂತ ಹೇಳಿ ಕ್ಲಿನಿಕ್‌ಗೆ ಹೊರಟುಹೋದರು. ಅವರು ಮಾತನಾಡುವ ಸಂದರ್ಭದಲ್ಲೇ ಹಲವು ರೋಗಿಗಳ ಕರೆ ಬಂದಿತ್ತು. ಡಾ.ಸುಬ್ರಹ್ಮಣ್ಯ ಅವರದ್ದು ಅನುರೂಪವಾದ ದಾಂಪತ್ಯ ಹಾಗೂ ಸುಖೀ ಕುಟುಂಬ. ಇಬ್ಬರು ಮುದ್ದಾದ ಮಕ್ಕಳಿದ್ದಾರೆ. ತಂದೆ ತಾಯಿ ಜತೆ ಸಂತೃಪ್ತ ಜೀವನ ಇದೆ. ಪತ್ನಿ ಬಿ.ಎಸ್. ಸ್ವರ್ಣ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ಮಾಡಿದ್ದಾರೆ. ಮಧುರವಾದ ಕಂಠ ಅವರದ್ದು. ಜತೆಗೆ ಸುಬ್ರಹ್ಮಣ್ಯ ಅವರಿಗೆ ಹಾರ್ಮೋನಿಯಂ ಸಹ ಬಾರಿಸಲು ಬರುತ್ತೆ. ಸಂಗೀತದಲ್ಲಿ ಪತ್ನಿಗೆ ಸಹಕಾರಿಯಾಗುವ ಆಸೆ ಇವರಿಗಿದೆ. ಬೆಳಗ್ಗೆ ಡಾ.ಸುಬ್ರಹ್ಮಣ್ಯ ಅವರ ಎರಡನೆಯ ಮಗಳ ಬಗ್ಗೆ ಮಾತನಾಡುತ್ತಾ ಇದ್ರು. 'ನನ್ನ ತಾತ ತೀರಿಹೋದಾಗ ಇವಳಿನ್ನೂ ಚಿಕ್ಕವಳು. ದುಃಖದಲ್ಲಿ ನಾವು ಅಳುತ್ತಾ ಇದ್ದಾಗ, ಇವಳು ಕೇಳಿದಳು, "ಯಾಕೆ ಅಳುತ್ತಾ ಇದ್ದೀರಿ" ಅಂತ. ಆಗ "ತಾತ ಸತ್ತುಹೋಗಿದ್ದಾರೆ, ಅವರ ಜೀವ ಹೋಗಿದೆ, ಅದಕ್ಕೆ ಈ ಅಳು" ಎಂದು ವಿವರಿಸಿ ಹೇಳಿದೆ. ನಂತರ ನಾನು ಆ ಘಟನೆ ಮರೆತೇಬಿಟ್ಟಿದ್ದೆ. ನಮ್ಮ ಹಳೇಮನೆ alter ಮಾಡಿ ಹೊಸದಾಗಿ ಮಹಡಿ ಕಟ್ಟಿಸುವಾಗ ಮನೆ ಮುಂದಿದ್ದ ತೆಂಗಿನ ಮರ ಕಡೀಬೇಕಾಯ್ತು. ಆ ಮರ ಕಡಿದ ದಿನ, ನನ್ನ ಮಗಳು ಕೇಳಿದ್ಲು "ಅಪ್ಪಾ, ಆ ಮರಕ್ಕೆ ಜೀವ ಇತ್ತಲ್ವಾ. ನೀವು ಕಡಿದಾಗ ಆ ಮರ ಸತ್ತುಹೋಯ್ತು. ಆದ್ರೆ ನೀವು ಯಾರೂ ಈಗ ಯಾಕೆ ಅಳ್ತಾ ಇಲ್ಲ?" ಅಂತ ಕೇಳಿದ್ಲು. ನನ್ನ ಮನಸ್ಸು ಕರಗಿಹೋಯ್ತು' ಅಂದರು. ಹೀಗೇ ಹಲವು ವಿಷಯಗಳ ಬಗ್ಗೆ ನಿರಂತರವಾದ ಚಿಂತನ ಮಂಥನ ಆಯ್ತು. ಅತಿಥಿಗಳ ಸತ್ಕಾರದಲ್ಲಿಯೂ ಇವರು ಮುಂದು. ತಿಂಡಿ, ತೀರ್ಥವೆಲ್ಲಾ ಮುಗಿದ ಮೇಲೆ, ಮುಂದಿನ ಊರಿಗೆ ನಾವು ಹೊರಡಲು ಸಿದ್ಧವಾದ್ವಿ. 'ಮತ್ತೆ ಈ ಕಡೆ ಬಂದಾಗ ಮರೆಯದೆ ಬನ್ನಿ' ಎಂಬ ಆಮಂತ್ರಣ ಸಿಕ್ತು, ಇಡೀ ಕುಟುಂಬದಿಂದ. ಹಾಗೇ ಬಾಗಿಲವರೆಗೂ ಬಂದು ಬೀಳ್ಕೊಟ್ಟರು ನಮ್ಮನ್ನು.



ಮಗಳಿಗೆ ಸಂಗೀತ ಮಾರ್ಗದರ್ಶನ: ಡಾ.ಪಿ.ಎಸ್.ಸುಬ್ರಹ್ಮಣ್ಯ:ಪಿರಿಯಾಪಟ್ಟಣ


20. ಬೆಟ್ಟದಪುರ

'ಬೆಟ್ಟದಪುರ ಸಂಕೇತಿಗಳ' ರಾಜಧಾನಿ ಬೆಟ್ಟದಪುರ ಪಿರಿಯಾಪಟ್ಟಣದಿಂದ ಹದಿನಾರು ಕಿಲೋಮೀಟರ್ ದೂರದಲ್ಲಿರುವ ಹೋಬಳಿ ಕೇಂದ್ರ. ಸಂಕೇತಿಗಳ ಒಂದು ಶಾಖೆಗೇ ಭಾಗ್ಯನಗರವಾಗಿದ್ದ ಬೆಟ್ಟದಪುರ ಈಗ ಬಸವಳಿದಿದೆ. ಸುಮಾರು ನಲವತ್ತು ವರುಷಗಳ ಹಿಂದೆ ೭೦, ೮೦ರಷ್ಟು ಸಂಕೇತಿಗಳದ್ದೇ ಒಕ್ಕಲಿತ್ತಂತೆ ಇಲ್ಲಿ. ಅವರದ್ದೇ ಒಂದು ಬೀದಿಯಿತ್ತು. ಈಗ, ವ್ಯವಸಾಯ ಮಾಡುತ್ತಿರುವ ಸುಮಾರು ಏಳು ಒಕ್ಕಲು ಮಾತ್ರಾ ಇರೋದು. Tenancy ಕಾಯಿದೆ, ಇಲ್ಲಿಯ ಸಂಕೇತಿಗಳ ವ್ಯವಸಾಯವನ್ನು ಛಿದ್ರ ಮಾಡಿದೆ. ಹಳ್ಳಿಗಳಲ್ಲಿ ಜೀವನ ಕಷ್ಟವಾಗಿ, ಮಕ್ಕಳನ್ನು ಮೊದಲು ವಿದ್ಯಾಭ್ಯಾಸ, ನಂತರ ಕೆಲಸದ ಸಲುವಾಗಿ ಪಟ್ಟಣಕ್ಕೆ ಕಳಿಸಿ, ಆಮೇಲೆ ಅವರ ಬೆನ್ನು ಹಿಡಿದು, ಹಿರಿಯರು ಊರು ಬಿಟ್ಟಿದ್ದಾರೆ. ಉಳಿದಿರುವ ಸಂಕೇತಿಗಳ ಕುಟುಂಬಗಳು ಸಹ ಊರು ಬಿಡುವ ಸನ್ನಾಹದಲ್ಲಿವೆ. 'ಆಗಲೇ ನಾವು ಒಂದು ಕಾಲನ್ನು ಹೊರಗೆ ಇಟ್ಟಾಗಿದೆ' ಎನ್ನುವ ಹಿರಿಯರಾದ ಪ್ರಭಾಶಂಕರ, ಊರ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಿದರು. 'ಬೆಟ್ಟದಪುರದ ಮುಖ್ಯ ದೇವಸ್ಥಾನ ಸಿಡ್ಲು ಮಲ್ಲಿಕಾರ್ಜುನನದು, ಬೆಟ್ಟದ ಮೇಲಿನ ದೇವಸ್ಥಾನ. ಭಾರೀ ಸಿದ್ಧಿ ಇರುವ ದೇವಸ್ಥಾನ. ಅಲ್ಲಿಯೇ ಭ್ರಮರಾಂಬ ಇದೆ. ಬೆಟ್ಟದ ತಳಭಾಗದಲ್ಲಿ ಉತ್ಸವಮೂರ್ತಿಲಿಂಗ ಇದೆ. ಬೆಟ್ಟದ ಮಧ್ಯದಲ್ಲಿ ಏಣಿ ಹನುಮಂತರಾಯ ದೇವಸ್ಥಾನವಿದೆ. ಹದಿನಾರು ಅಡಿ ಎತ್ತರದ ಪ್ರತಿಮೆ. ಪೂರ್ಣ ಶಿಥಿಲವಾಗಿತ್ತು. ಜ್ಯೋತಿ ಇಂಡಸ್ಟ್ರೀಸ್‌ನ ಬಿ.ಎನ್.ವಿ. ಸುಬ್ರಹ್ಮಣ್ಯಂ ಜೀರ್ಣೋದ್ಧಾರ ಮಾಡಿದ್ರು. ಬೆಟ್ಟದಲ್ಲಿ ಪುರಾತನವಾದ ಗುಹೆಗಳು ಇವೆ. ಅಲ್ಲಿ ಕೆತ್ತನೆ ಕೆಲಸ ಆಗಿದೆ. ಕಾಳಿಕಾಂಬ ದೇವಸ್ಥಾನ, ಬೆಟ್ಟದ ಸುತ್ತಾ ನಾಲ್ಕು ಕಡೆ ಗ್ರಾಮದೇವತೆಯ ದೇವಸ್ಥಾನ ಇದೆ. ಕೋದಂಡರಾಮ ದೇವಸ್ಥಾನ ಸಹ ಇದೆ. ಭೂಗೋಳದಲ್ಲಿ ಉಲ್ಲೇಖವಿರುವಂತೆ, ನಾವೆಲ್ಲಾ ಶಾಲೆಯಲ್ಲಿ ಓದಿರುವಂತೆ, ಬೆಟ್ಟದಪುರ ಬೀಡಿ ತಂಬಾಕಿಗೆ ಪ್ರಸಿದ್ಧಿ. ನಶ್ಯ ಹಾಗೂ ಬೀಡಿ ಹೊಗೇಸೊಪ್ಪನ್ನು ಇಲ್ಲಿಯ ಜನ ಹೇರಳವಾಗಿ ಬೆಳೀತಿದ್ರು. ಈಗ ೨೦ ವರುಷಗಳಿಂದ VFC ತಂಬಾಕು ಬೆಳೀತಿದಾರೆ. ಅದೇ ಈಗ ಈ ಭಾಗದ cash crop. ಒಬ್ಬೊಬ್ಬನೂ ಈಗ ಇಲ್ಲಿ ಲಕ್ಷದ ಮೇಲೆ ಸಂಪಾದನೆ ಮಾಡ್ತಿದಾನೆ. ಬೆಟ್ಟದಪುರಕ್ಕೆ ಮೊದಲು ಬಂದ ಸಂಕೇತಿಗಳು, ಹಳ್ಳದ ಕಡೆ ಜಮೀನನ್ನು ಹಿಡಿದಿದ್ರು. ಬೆಟ್ಟದಪುರಕ್ಕೆ ೨, ೩ ಕಿಲೋಮೀಟರ್ ದೂರದಲ್ಲಿರುವ ಹರದೂರು, ನಾಗನಹಳ್ಳಿ, ಆನವಾಳು ಈ ಗ್ರಾಮಗಳ ತೋಟ ಜಮೀನು, ಸಂಕೇತಿಗಳದ್ದೇ. ತೋಟದಲ್ಲಿ ವೇದ ಪಾರಾಯಣಕ್ಕೆ ಅನುಕೂಲ, ಹಾಗೇ ಸ್ವತಂತ್ರ ಬೇಸಾಯ ಆಗಿದ್ರಿಂದ ಬಾಗಾಯ್ತಿನ ಮೇಲಿನ ಅವಲಂಬನೆ ಜಾಸ್ತಿ. ಕಾಲಕ್ರಮೇಣ, ಸಂಕೇತಿ ಕೃಷಿ ಇಲ್ಲಿ ನಶಿಸುತ್ತಾ ಬಂತು. "ದೀಪಾವಳಿ" ಇಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಡುವ ಹಬ್ಬ. ಬೆಟ್ಟದ ಸುತ್ತಾ ಹದಿಮೂರು ಮೈಲಿ ದೂರದವರೆಗೆ ಜಾತ್ರೆಯ ತೇರು ಸಂಚರಿಸುತ್ತೆ. ಸುಮಾರು ನಾಲ್ಕೈದು ಸಾವಿರ ಜನ ಪಂಜು ಹಿಡಿದಿರುತ್ತಾರೆ. ಇಂದು ಬೆಳಗ್ಗೆ ಆರು ಘಂಟೆಗೆ ದೇವರು ಹೊರಟ್ರೆ, ಅದು ಮತ್ತೆ ದೇವಸ್ಥಾನ ಸೇರೋದು ಮಾರನೇ ದಿನ ಆರು ಘಂಟೆಗೆ. ಇಡೀ ವಿಶ್ವದಲ್ಲೇ ಆ ರೀತಿಯ ಹಬ್ಬ ಜರುಗೋಲ್ಲ. ಈ ಹಬ್ಬದಲ್ಲಿ ಬೆಟ್ಟದಪುರದ ಎಲ್ಲಾ ಸಂಕೇತಿಗಳೂ ಸೇರ್ತೀವಿ. ಹಾಗೇ February ತಿಂಗಳಲ್ಲಿ ಬೆಟ್ಟದಪುರದಲ್ಲಿ ದನಗಳ ಭಾರೀ ಜಾತ್ರೆ ನಡೆಯುತ್ತೆ. ಒಂಭತ್ತು ದಿನಗಳ ಕಾಲ ನಡೆಯೋ ಈ ಜಾತ್ರೇಲಿ ಏಳರಿಂದ, ಎಂಟು ಸಾವಿರ ದನ ಸೇರುವ ಅಂದಾಜಿದೆ', ಎಂದು ಹೆಮ್ಮೆಯಿಂದ ಹೇಳಿದ್ರು ಪ್ರಭಾಶಂಕರ್. ಬೆಟ್ಟದಪುರದ ಈಗಿನ ಸಂಕೇತಿ ಕೃಷಿಕರು ಏನನ್ನುತ್ತಾರೆ, ಓದಿ ನೋಡಿ.

ಅ) ಬಿ.ಎಸ್. ಸೇತುರಾಮಯ್ಯ ೩/ಮ ಬಿ.ಕೆ. ಸೀತಾರಾಮಯ್ಯ

ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-275631

ನನ್ನ ನಾಲ್ಕೂ ಜನ ಗಂಡು ಮಕ್ಕಳಿಗೆ, ವ್ಯವಸಾಯದಲ್ಲಿ ಆಸಕ್ತಿ ಇದೆ. ತೋಟ ಜಮೀನು ಇರಬೇಕು, ಅದನ್ನು ಕಳೀಬಾರದು ಅನ್ನುವ ಮನೋಭಾವ ಇದೆ. ಸತತವಾಗಿ ಪರಿಶ್ರಮ ಪಟ್ಟು, ತೋಟವನ್ನು ಅಭಿವೃದ್ಧಿ ಮಾಡ್ತಿದಾರೆ. ನನ್ನ ಮುಂದಿನ ಪೀಳಿಗೆಗೆ ಕೃಷಿ ಉಳಿಯುತ್ತೆ.



ಬಿ.ಎಸ್.ಸಾವಿತ್ರಮ್ಮ-ಬಿ.ಎಸ್.ಸೇತುರಾಮಯ್ಯ ದಂಪತಿ: ಬೆಟ್ಟದಪುರ

ಬೆಟ್ಟದಪುರದ ಬಿ.ಕೆ. ಸೀತಾರಾಮಯ್ಯ ಹಾಗೂ ಹನಸೋಗೆಯ ಶಕುಂತಲಮ್ಮನವರದ್ದು ವ್ಯವಸಾಯಸ್ಥ ಕುಟುಂಬ. ಈ ದಂಪತಿಗಳ ಒಬ್ಬನೇ ಮಗ ಬಿ.ಎಸ್. ಸೇತುರಾಮಯ್ಯನವರು ಈಗ ೭೧ ವರುಷದ ವಯೋವೃದ್ಧರು. ಇವರ ಪತ್ನಿ ಬಿ.ಎಸ್.ಸಾವಿತ್ರಮ್ಮ ಹನಸೋಗೆಯ ಹೆಚ್.ಎಸ್.ಸುಬ್ಬರಾವ್ ಹಾಗೂ ಸೀತಾಲಕ್ಷ್ಮಮ್ಮ ಇವರ ಮಗಳು. ಸೇತುರಾಮಯ್ಯನವರ ಅಜ್ಜ ಕೃಷ್ಣಾವಧಾನಿಗಳು ಪೌರೋಹಿತ್ಯದ ಜತೆ ವ್ಯವಸಾಯವನ್ನೂ ರೂಢಿಸಿದವರು. ಬೆಟ್ಟದಪುರಕ್ಕೆ ಮೂರು ಕಿಲೋಮೀಟರ್ ದೂರದಲ್ಲಿದ್ದ ನಾಗನಹಳ್ಳಿಯಲ್ಲಿ ತೋಟ, ಮನೆ, ಜಮೀನು ಮಾಡಿಕೊಂಡು ಬದುಕಿದವರು. ಕಾಲಕ್ರಮೇಣ ಇವರ ಮಗ ಸೀತಾರಾಮಯ್ಯನವರ ಕಾಲಕ್ಕೆ ಬೆಟ್ಟದಪುರದಲ್ಲಿ ನೆಲೆಸಿದ್ದಾರೆ. ಬಿ.ಎಸ್.ಸೇತುರಾಮಯ್ಯನವರು ಓದಿರುವುದು SSLCವರೆಗೆ. ತಮ್ಮ ಕೃಷಿ ಬದುಕಿನ ಬಗ್ಗೆ ಮಾತನಾಡುತ್ತಾ ಹೇಳಿದರು 'ನಮಗೆ ಒಟ್ಟು ೨೨ ಎಕರೆ ಜಮೀನಿತ್ತು. ನನಗೆ ಚಿಕ್ಕಂದಿನಿಂದಲೂ ವ್ಯವಸಾಯದ ಮೆಲೆ ವ್ಯಾಮೋಹ. ಹಿಂದೆ ನಮ್ಮಲ್ಲಿ ಬಡತನ ಇತ್ತು. ಕಷ್ಟದಿಂದಲೇ ನಮ್ಮ ಕುಟುಂಬ ಮೇಲೆ ಬಂದಿದ್ದು. ನೀರಾವರಿ ಇಲ್ಲದೆ ಬೆಳೆ ಸರಿಯಾಗಿ ಬರ್‍ತಿರಲಿಲ್ಲ. ಕಡೆಗೆ ನನಗೆ ೪೫ ವರುಷ ಆಗಿದ್ದಾಗ, ನಮ್ಮ ಚಿಕ್ಕಪ್ಪನವರ ಸಹಕಾರದಿಂದ ನಾಗನಹಳ್ಳೀಲಿ ನಮ್ಮಜ್ಜ ಮಾಡಿದ್ದ ತೋಟವನ್ನು ಮಾರಿ, ಬೆಟ್ಟದಪುರದಲ್ಲಿ ಎರಡೂಕಾಲು ಎಕರೆ ಪಾಳು ತೋಟವನ್ನು ಖರೀದಿಸಿದೆ. ಆಗ ಎರಡೂಕಾಲು ಎಕರೆ ತೋಟಕ್ಕೆ ಕೇವಲ ನಾಲ್ಕೂವರೆ ಸಾವಿರ ರೂಪಾಯಿ ಅಷ್ಟೆ. ನಂತರ ಪಾಳುಬಿದ್ದ ತೋಟವನ್ನು ಆಳುಕಾಳುಗಳ ನೆರವಿನಿಂದ ಅಭಿವೃದ್ಧಿಪಡಿಸಿದೆ. ನಾನೂ ಕೂಲಿಯಾಳುಗಳ ಜತೆ ಸೇರಿ ಸಣ್ಣಪುಟ್ಟ ಕೆಲಸ ಮಾಡ್ತಿದ್ದೆ. ಅಡಿಕೆ, ತೆಂಗು, ಬಾಳೆ ತೋಟದಲ್ಲಿ ಇತ್ತು. ಅಷ್ಟರಲ್ಲಿ ಮಕ್ಕಳು ಕೈಗೆ ಬಂದರು. ಆಗ ಜಮೀನಿನಲ್ಲಿ ಬೋರ್‌ವೆಲ್ ಕೊರೆಸಿದೆ. ಹೊಗೆಸೊಪ್ಪು, ಭತ್ತ ಹಾಗೂ ಹೊಲದ ಬೆಳೆಗಳನ್ನು ಬೇಸಾಯ ಮಾಡಲು ಆರಂಭಿಸಿದೆ. ತೋಟದಲ್ಲಿ ತೇಗ, ಸರ್ವೆಮರಗಳನ್ನು ಬೇಲಿ ಬದಿಯಲ್ಲಿ ಮಕ್ಕಳು ಏಳಿಸಿದ್ರು. ನನ್ನ ಮಕ್ಕಳಿಗೂ ವ್ಯವಸಾಯದಲ್ಲಿ ಬಹಳ ಆಸಕ್ತಿ. ಶ್ರದ್ಧೆಯಿಂದ ಕೃಷಿ ಮಾಡ್ತಾರೆ. ಹಿಂದಿನ ಬದುಕಿಗೆ ಹೋಲಿಸಿದಾಗ ಈಗಿನ ಬದುಕಿನಲ್ಲಿ ನೆಮ್ಮದಿ ಇದೆ' ಎಂದ್ರು ಸೇತುರಾಮಯ್ಯ. ಇವಿಷ್ಟೂ ಮಾತುಕತೆ ನಡೆದಿದ್ದು ಅವರು ತಮ್ಮ ಹಳೆಯ ಮನೆಯ ಹಿಂಭಾಗದಲ್ಲಿ ಕಟ್ಟಿರುವ ಹೊಸಮನೆಯಲ್ಲಿ. ತಾವು ಬದುಕಿ, ಬಾಳಿದ ಹಳೆಯ ಮನೆಯನ್ನು ಸಹ ಹಾಗೇ ಉಳಿಸಿಕೊಂಡಿದ್ದಾರೆ. ನಾವು ಈ ಹಿರಿಯ ದಂಪತಿಗಳ ಭಾವಚಿತ್ರ ತೆಗೆದದ್ದು ಅವರ ಹಳೆಯ ಮನೆಯಲ್ಲಿಯೇ. ನಾಲ್ಕು ಜನ ಗಂಡುಮಕ್ಕಳು, ಬೇರೆ ಬೇರೆ ಕೆಲಸ ಮಾಡ್ತಿದ್ರೂ ವ್ಯವಸಾಯವನ್ನು ಕೈಬಿಡದಿರುವುದು ವಿಶೇಷ ಎನ್ನಿಸಿತು. ಸಂಕೇತಿ ಕೃಷಿಯ ಮುಂದಿನ ಅಡಿಪಾಯದ ಅಡಿಗಲ್ಲುಗಳು ಇವರಾಗಬಹುದು ಎನ್ನಿಸಿತು, ಅಷ್ಟರಲ್ಲಿ 'ಮಕ್ಕಳ ಮೇಲೆ ಜವಾಬ್ದಾರಿ ವಹಿಸಿ ಈಗ ನಾನು ನಿರಾಳವಾಗಿದ್ದೇನೆ' ಅಂತ ಹೇಳಿ ಮಾತಿಗೆ ಮಂಗಳ ಹಾಡಿದ್ರು, ಸೇತುರಾಮಯ್ಯ.

ಆ) ಬಿ.ಜಿ. ಕೃಷ್ಣಾವಧಾನಿ ಇ/ಮ ಗುಂಡಾವಧಾನಿ (ಶ್ರೀನಿವಾಸಯ್ಯ)


ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-274462

ನನ್ನ ತಂದೆ ಅವರ ೧೬ನೇ ವಯಸ್ಸಿನಲ್ಲಿಯೇ ಪೌರೋಹಿತ್ಯ ಹಾಗೂ ವ್ಯವಸಾಯ ಎರಡನ್ನೂ ಮಾಡೋರು. ನಾನು ಸಹ ತೋಟದಲ್ಲಿಯೇ ವೇದಾಭ್ಯಾಸ ಮಾಡಿದೆ. ನಮ್ಮ ಊರಿನ ಮರಿಯಮ್ಮನ ಸುಬ್ಬರಾಯರು, ತಾಳೆಮುಂಡಿ ಅವಧಾನಿ ಹಾಗೂ ಜನಾರ್ದನ ಭಟ್ಟರ ಬಳಿ ವೇದ ಶಿಕ್ಷಣ ಪಡೆದೆ. ತೋಟದಲ್ಲಿ ವ್ಯವಸಾಯದ ಜತೆ ವೇದಾಭ್ಯಾಸ ಮಾಡುವುದು ನಮ್ಮ ಕಾಲದಲ್ಲಿ ಸಾಮಾನ್ಯವಾಗಿತ್ತು.



ತಮ್ಮ ಮನೆಯ ಜಗುಲಿಯಲ್ಲಿ ಕುಳಿತ ವೇ|| ಬ್ರ|| ಶ್ರೀ ಬಿ.ಜಿ.ಕೃಷ್ಣಾವಧಾನಿಗಳು: ಬೆಟ್ಟದಪುರ

ಬೆಟ್ಟದಪುರದ ಬಿ.ಜಿ. ಕೃಷ್ಣಾವಧಾನಿಗಳು ಹಿರಿಯ ಸಂಕೇತಿಗಳು. ೮೧ರ ಇಳಿವಯಸ್ಸು. ನೆತ್ತಿಸುಡುವ ಬಿಸಿಲಲ್ಲಿ ದಣಿದು ಬರುತ್ತಿದ್ದ ಇವರನ್ನು ನಾವು ಭೇಟಿಯಾದದ್ದು ಕೋಟೆಯ ಹಾದಿಯಲ್ಲಿ. 'ಒಂದು ಘಂಟೆ ತುರ್ತು ಕೆಲಸವಿದೆ, ನಂತರ ಸಿಗುತ್ತೇನೆ, ಮನೆಗೆ ಬನ್ನಿ' ಅಂತ ಹೇಳಿದ್ರು. ಉಳಿದ ಕೆಲಸ ಮುಗಿಸಿ ಹೊರಟಾಗ ಮತ್ತೆ ದಾರಿಯಲ್ಲೇ ಸಿಕ್ಕಿದ್ರು. ಈ ಬಾರಿ ಮನೆಗೆ ಬನ್ನಿ ಅಂತ ಆಹ್ವಾನಿಸಿ, ಬಾಯ್ತುಂಬಾ ನಕ್ಕರು. ಅವರ ನಾಡಹೆಂಚಿನ ಮನೆ, ಸಗಣಿ ಸಾರಿಸಿದ ನೆಲ ಹಿತವಾಗಿತ್ತು. ಚಾಪೆ ಬಿಡಿಸಿ ಹಾಕಿ ಕುಳಿತುಕೊಳ್ಳಿ ಅಂದ್ರು. ನೀವೂ ಕುಳಿತುಕೊಳ್ಳಿ ಅಂದ್ವು ನಾವು. 'ನನ್ನ ಹೆಂಡತಿ ಊರಲ್ಲಿಲ್ಲ. ನಿಮಗೆ ಏನೂ ಕೊಡೋದಕ್ಕೆ ಆಗ್ತಿಲ್ಲ' ಅಂತ ಬೇಸರಿಸಿಕೊಂಡ್ರು. 'ನಮಗೆ ನಿಮ್ಮ ವಿಚಾರವಷ್ಟೆ ಸಾಕು' ಅಂದಾಗ ಅವರ ಜಾತಕ ಬಿಚ್ಚಿದ್ರು. 'ನನ್ನ ತಂದೆ ಗುಂಡಾವಧಾನಿ ಕಣಗಾಲ್‌ನವರು. ಬೆಟ್ಟದಪುರದ ಸೋಮಣ್ಣಾವಧಾನಿ, ಅವರ ಗುರುಗಳು. ನನ್ನ ತಂದೆಯ ಸೋದರಮಾವ ಜವರಾಯಭಟ್ರು ಅಂತ ಇಲ್ಲಿದ್ರು. ಅವರು ನನ್ನ ತಂದೆಗೆ ಬೆಟ್ಟದಪುರದ ಪುಟ್ಟಮ್ಮನವರನ್ನು ಮದುವೆ ಮಾಡಿಸಿದ್ರು. ನನ್ನ ತಂದೆ ಮೂರು ವರುಷದ ಹುಡುಗನಾಗಿದ್ದಾಗಿನಿಂದ ಅವರೇ ಸಾಕಿದ್ರಂತೆ.



ಹೊಸ ಚಿಕಿತ್ಸೆ ಪಡೆದ ತಮ್ಮ ಹಳೆಯ ಮನೆಯಲ್ಲಿ ಕುಳಿತು ಮಾಹಿತಿ ನೀಡಿದ ವೇ||ಬ್ರ||ಶ್ರೀ ಬಿ.ಜಿ.ಕೃಷ್ಣಾವಧಾನಿಗಳು:ಬೆಟ್ಟದಪುರ

ನನ್ನ ತಂದೆಗೆ ಐದು ಎಕರೆ ಜಮೀನು ಹಾಗೂ ಒಂದು ವಾಸದ ಮನೆ ಈ ಊರಲ್ಲಿ ದಾನವಾಗಿ ಬಂತಂತೆ. ನಂತರ ಅವರು ಎತ್ತುಗಾಡಿ ಇಟ್ಟು ಸ್ವತಃ ಪರಿಶ್ರಮದಿಂದ ದುಡಿದು ಏಳು ಎಕರೆ ಹೊಲ ಹಾಗೂ ಮೂರು ಎಕರೆ ತೋಟಾನ ರೂಢಿಸಿದ್ರು. ನಾವು ನಮ್ಮ ತಂದೆ ತಾಯಿಗೆ ಐದು ಗಂಡು, ಹಾಗೂ ಒಂದು ಹೆಣ್ಣು - ಹೀಗೆ ಆರು ಜನ ಮಕ್ಕಳು. ನಾನೇ ನಾಲ್ಕನೆಯವನು. ನನ್ನ ತಂದೆ ಸತ್ತಾಗ ನನಗೆ ೧೨ ವರುಷ. ನನ್ನ ೨೫ನೇ ವಯಸ್ಸಿನಲ್ಲಿ ಪಿರಿಯಾಪಟ್ಟಣದ ಪಿ. ಸಿ. ಪುಟ್ಟಲಕ್ಷ್ಮಮ್ಮನನ್ನು ಕೊಟ್ಟು ಮದುವೆಯಾಯ್ತು. ಮದುವೆಗೆ ಮುಂಚೆ ನಾನು ಬೆಟ್ಟದಪುರದಲ್ಲೇ ವಾರಾನ್ನ, ಭಿಕ್ಷಾನ್ನ ಮಾಡಿಕೊಂಡು ಕೆಲಕಾಲ ಇದ್ದೆ. ಆಗ ತಂದೆತಾಯಿ ಇರಲಿಲ್ಲ. "ಉಳುವವನಿಗೇ ಭೂಮಿ ಕಾಯ್ದೆ" ಬಂದಾಗ ನಮ್ಮ

ಹೊಲ, ಗದ್ದೆ ಮಾಡುತ್ತಿದ್ದ ರೈತರು declaration ಕೊಟ್ರು. ಹೊಲಗದ್ದೆ ಅವರ ಪಾಲಾಯ್ತು. ತಂದೆ ತೀರಿಕೊಂಡಾಗ ಒಂದು ೮, ೧೦ ವರುಷ ತೋಟ ಪಾಳು ಬಿದ್ದಿತ್ತು. ನನ್ನ ಮದುವೆಯಾದ ಮೇಲೆ ಅಣ್ಣತಮ್ಮಂದಿರು ಪಾಲಾದ್ವಿ. ನನಗೆ ಮೂರು ಎಕರೆ ತೋಟ ಬಂತು. ತೋಟದಲ್ಲಿ ಬಾಳೆ, ಅಡಿಕೆ, ತೆಂಗು, ಕಿತ್ತಳೆ, ಹಲಸು, ಮಾವು ಹೀಗೆ ಎಲ್ಲಾ ಗಿಡಗಳನ್ನೂ ಬೆಳೆದೆ. ನನಗೆ ಎರಡು ಗಂಡು, ಹಾಗೂ ಐದು ಜನ ಹೆಣ್ಣುಮಕ್ಕಳು. ಬಹಳ ಕಷ್ಟದ ಪರಿಸ್ಥಿತಿ. ದೇವರ ಅನುಗ್ರಹದಿಂದ ನನ್ನ ಕುಟುಂಬದ ನಿರ್ವಹಣೆಯಾಯ್ತು. ನಾನು ಪೌರೋಹಿತ್ಯ ಹಾಗೂ ವ್ಯವಸಾಯ ಇವೆರಡರ ಜತೆ ಲೇವಾದೇವೀನೂ ಮಾಡ್ತಿದ್ದೆ. ಸ್ವತಃ ತೋಟದ ಕೆಲಸ ಮಾಡ್ತಿದ್ದೆ. ಮಕ್ಕಳನ್ನು ಓದಿಸಿ, ಮದುವೆ ಮಾಡಿ, ಒಂದು ಹಂತಕ್ಕೆ ತಂದೆ. ಈಗ ಅವರು ಪಟ್ಟಣದಲ್ಲಿದ್ದಾರೆ. ಬೆಂಗಳೂರಿನಲ್ಲಿರುವ ನನ್ನ ಮಕ್ಕಳು, ಈ ತೋಟವನ್ನು ಮಾರಿ ಅಲ್ಲಿಗೆ ಬನ್ನಿ ಅಂತಾರೆ. ನನಗೆ ಬೆಟ್ಟದಪುರದಲ್ಲಿಯೇ ಉಳಿದು, ಇಲ್ಲಿಯೇ ನೆಮ್ಮದಿಯಾಗಿರುವ ಆಸೆ. ಈಗ ನಾನು, ನನ್ನ ಹೆಂಡತಿ ಇಲ್ಲಿದೀವಿ. ಮಕ್ಕಳಿಗೆ ವ್ಯವಸಾಯ ಇಷ್ಟವಿಲ್ಲ. ಅಲ್ಲದೆ ಬೆಟ್ಟಪುರ ಈಗ ಶಿಥಿಲವಾಗಿದೆ. ನಮ್ಮ ಕಾಲದಲ್ಲಿ ಈ ಸುತ್ತಮುತ್ತ ಬೀದೀಲೆಲ್ಲಾ ವೈದೀಕರು ಇದ್ರು. ಈಗ ಈ ಊರಲ್ಲಿ ನನ್ನ ವಯಸ್ಸಿನ ಜನರೇ ಇಲ್ಲ. ಎಲ್ಲರೂ ಜಮೀನು ಮಾರಿ, ಪಟ್ಟಣದಲ್ಲಿರುವ ಮಕ್ಕಳ ಮನೆ ಸೇರಿದಾರೆ. ಹಿರಿಯರ ಮಾತುಗಳನ್ನು ಕೇಳುವವರಿಲ್ಲ. ಎಲ್ಲಾ ಇತರೇ ಹುಡುಗರ ಪಾಳ್ಯ. ಹೀಗಿದ್ರೂ ನನಗೆ ಬೆಟ್ಟದಪುರ ಇಷ್ಟ. ಇಲ್ಲಿನ ಬದುಕು ಇಷ್ಟ' ಅಂತ ಬೊಚ್ಚುಬಾಯಿ ಅಗಲಿಸಿ ನಕ್ಕರು. ಅದು ಅವರು ಹೇಳಬೇಕಾದ್ದನ್ನು ಹೇಳಿ ಮುಗಿಸಿದ್ದರ ಸಂತೃಪ್ತಿಯ ಸಂಕೇತವಾಗಿತ್ತು.

೩) ಬಿ.ಎಸ್. ಶ್ರೀಧರಮೂರ್ತಿ ಌ/ಮ ಹೆಚ್. ಶ್ರೀಕಂಠಯ್ಯ

ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-275535

ನನ್ನ ಈವರೆಗಿನ ಕೃಷಿ ಬದುಕಿನಲ್ಲಿ ನಾನು ಕೂಲಿ ಕೊಟ್ಟಿರುವುದು ಅಪರೂಪ. ಸ್ವತಃ ಜಮೀನಿನಲ್ಲಿ ದುಡಿದಿದೀನಿ. ಪ್ರೀತಿಯಿಂದ ಬೇಸಾಯ ಮಾಡಿದೀನಿ. ಹೀಗಾಗಿ ದೇಹಕ್ಕೆ ಸೌಖ್ಯ ಇದೆ. ಆರೋಗ್ಯವಿದೆ. ಖಾಯಿಲೆ ಬಿದ್ದಿಲ್ಲ. ಅತಿಯಾದ ದುಡ್ಡಿನ ಆಸೆಯೂ ನನಗಿಲ್ಲ. ದೇವರು ನನಗೆ ಸಾಕಷ್ಟು ಕೊಟ್ಟಿದಾನೆ.

ಹರವೆಯ ಎಚ್.ಶ್ರೀಕಂಠಯ್ಯ ಹಾಗೂ ಮೈಸೂರಿನ ಲಕ್ಷಮ್ಮ ದಂಪತಿಗಳಿಗೆ ಆರು ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳು. ಇವರ ಕೊನೆಯ ಮಗ ಬಿ.ಎಸ್.ಶ್ರೀಧರಮೂರ್ತಿ ಹುಟ್ಟಿದ್ದು ಬೆಟ್ಟದಪುರದಲ್ಲಿ. ಶ್ರೀಧರಮೂರ್ತಿಗಳ ತಾಯಿ ಲಕ್ಷಮ್ಮನವರ ತಂದೆತಾಯಿ ಬೆಟ್ಟದಪುರದವರು. ಅವರ ಜಮೀನನ್ನು ಮಾಡಲು ಎಚ್.ಶ್ರೀಕಂಠಯ್ಯನವರು ಹರವೆಯಿಂದ ಬಂದು ಬೆಟ್ಟದಪುರದಲ್ಲಿ ನೆಲೆಸಿದ್ದಾರೆ. ಇಲ್ಲಿ ನೆಲೆ ನಿಂತು ಬೇಸಾಯ ಕೂಡಿಸಿದ್ದಾರೆ. ಮಧ್ಯಾಹ್ನದ ಬಿರುಬಿಸಿಲು ಹೊರಗೆ ರಾಚುತ್ತಿರುವಾಗ ತಮ್ಮ ಮನೆಯ ಅಂಗಳದಲ್ಲಿ ಕುಳಿತು ತಂಪಾಗಿ ಮಾತನಾಡಿದ್ರು ಶ್ರೀಧರಮೂರ್ತಿ.



ಉಯ್ಯಾಲೆಯಲ್ಲಿ ಕುಳಿತ ಎಚ್.ಎಸ್.ಪುಷ್ಪಲತಾ-ಬಿ.ಎಸ್.ಶ್ರೀಧರಮೂರ್ತಿ ದಂಪತಿ: ಬೆಟ್ಟದಪುರ

'ನಾನು ಹುಟ್ಟಿದ್ದು ಇಲ್ಲಿ. ಕೊಣನೂರಿನಲ್ಲಿ PUC ಓದಿದೆ. ನನಗೆ ತಂದೆ, ತಾಯಿಯ ವ್ಯಾಮೋಹ ಜಾಸ್ತಿ. ಅವರನ್ನು ಬಿಟ್ಟಿರೋಕೆ ಆಗಲಿಲ್ಲ. ಅಲ್ಲದೆ ತಂದೆಗೆ ಎರಡು ಕಡೆ ಜಮೀನಿತ್ತು. ಅವರಿಗೆ ಒಬ್ಬರೇ ನಿರ್ವಹಿಸಲು ಕಷ್ಟವಾಗುತ್ತಿತ್ತು. ಹಾಗಾಗಿ ತಂದೆಯ ಜತೆ ನಾನು ವ್ಯವಸಾಯಕ್ಕೆ ಉಳಿದೆ. ಆಗ ನನಗೆ ೧೬ ವರುಷ. ತೋಟದಲ್ಲಿ ವಿಳ್ಳೇದೆಲೆ, ಅಡಿಕೆ, ತೆಂಗು, ಹಾಗೂ ಬಾಳೆ ಇತ್ತು. ತಂದೆ ಎಲೆಯನ್ನು



ಬಿ.ಎಸ್.ಶ್ರೀಧರಮೂರ್ತಿ ಅವರ ಹಂಬಿನತೋಟ: ಬೆಟ್ಟದಪುರ

ಕುಯ್ದು, ಪಿಂಡಿಕಟ್ಟಿ ತಲೆ ಮೇಲೆ ಹೊತ್ತುಕೊಂಡು ಹೋಗಿ ಕುಶಾಲನಗರದ ಸಂತೇಲಿ ಮಾರಿ, ಅಲ್ಲಿಂದ ಒಂದು ಸೇರು ಕಾಫಿಬೀಜವನ್ನು ತರ್ತಿದ್ರು. ಹುಣಿಸೇಮರವನ್ನು ಹತ್ತಿ, ಹುಣಿಸೇಹಣ್ಣನ್ನು ಕೆಡವಿ, ಮೈಸೂರಿನಲ್ಲಿ ಮಾರಿ ಬರ್ತಿದ್ರು. ಗಾಡಿ ಕಟ್ಟಿಕೊಂಡು ದೂರದ ಸಂತೆಗೆ ಹೋಗೋರು. ನಾನೂ ನನ್ನ ತಂದೆ ಒಟ್ಟಾಗಿ ಕೆಲಸ ಮಾಡೋವಿ. ತಂದೆ ಗುದ್ದಲೀಲಿ ತೋಟ ಅಗೆಯೋರು, ಏಣಿ ಹತ್ತಿ ಹಂಬು ಇಳಿಸೋರು, ಎಲೆ ಕುಯ್ಯೋರು, ಹುಣಿಸೇಮರ ಹತ್ತೋರು, ಕೈತೂಕದಲ್ಲಿ ಇಬ್ಬರೂ ನೀರು ಹಾಕೋವಿ. ಇವತ್ತಿಗೂ ನಾನು ೧೫೦ ತೂಕ ನೀರು ಹಾಕ್ತೀನಿ. ಅಡಿಕೇನ, ಹಿಂದೆ ಖಟಾವು ಮಾಡಿಸಿ, ತೋಟದಲ್ಲಿಯೇ ರೇಖೆ ಮಾಡೋರಂತೆ. ಹಿಂದೆಲ್ಲಾ ಸುತ್ತಮುತ್ತೆಲ್ಲಾ ನಮ್ಮೋರದ್ದೆ ಆಗ್ರ ಇದ್ದಿದ್ರಿಂದ ಎಲ್ಲಾ ಬೇಯಿಸಿ, ಒಣಗಿಸಿ, ನಂತರ ಮಾರೋರಂತೆ. ನನಗೆ ಬುದ್ಧಿ ಬರುವ ಕಾಲಕ್ಕೆ ಚೇಣಿ ಪದ್ಧತಿ ಇತ್ತು. ಮೂರು ಎಕರೆ ತೋಟದಲ್ಲಿ, ಮೇಡು ಬಿಟ್ಟು, ೧೦೦೦ ಅಡಿಕೆ, ೧೫೦ ತೆಂಗು, ೩೦೦ ಎಲೆಹಂಬು, ೫/೬ ಹುಣಿಸೇಮರ, ೩ ಮಾವು, ೩ ಹಲಸು, ಹಾಗೇ ಮೂರು ಕಾಡುಮರಗಳು ಇವೆ. ಅಡಿಕೆಗೆ ಎರೆನೆಲ ಹಾಗೂ ಕೆಬ್ಬೆ ಮಣ್ಣು ಉತ್ತಮ ಅಂತ ಹೇಳೋರು. ನಾನು ಇಂದಿಗೂ ದಿನಕ್ಕೆ ಮೂರು ಬಾರಿ ತೋಟಕ್ಕೆ ಹೋಗ್ತೀನಿ. ಭಾವಿ ಇದೆ. Kerosene motor ಇದೆ. ಈಗ ನೀರು ಪೂರೈಕೆ ಮಾಡಲು ಸುಲಭವಾಗಿದೆ. ದದ್ದು ತೆಗೆದು ಬಾಳೆ ಹಾಕಿದೀನಿ. ಅಡಿಕೆ ಗಿಡದ ಸುತ್ತಾ ಪಾತಿ ಮಾಡಿ ಗೊಬ್ಬರ, ಗೋಡು ಹಾಕ್ತೀನಿ. ಇಳುವರಿ ಉತ್ತಮವಾಗಿದೆ. ಅಕ್ಕಪಕ್ಕದವರ ಕಿರುಕುಳ ಅಷ್ಟಿಲ್ಲ. ಆದ್ರೆ ಸ್ವಲ್ಪ ಕಳ್ಳತನ ಇದೆ. ನಾನು ಯಾರಿಗೂ ತೊಂದರೆ ಕೊಟ್ಟಿಲ್ಲ. ನನ್ನನ್ನು ಬೇರೆ ತೋಟದವರು ಕರೀತಾರೆ. ನನಗೆ ತಿಳಿದಿರುವ ಸಲಹೆಯನ್ನು ಕೊಡ್ತೀನಿ. ಹಸುಗಳ ಮೇಲೆ ತಂದೆಗೆ ಅಪಾರ ಒಲವಿತ್ತು. ನಾನೂ ಕೂಡ ಎರಡು ದನ ಇಟ್ಟಿದ್ದೆ. ಆದರೆ ಈಗಿಲ್ಲ. ದಾನ ನೀಡಿಬಿಟ್ಟೆ. ಹಸುಗಳು ಇದ್ರೆ ಕೆಲಸ ಜಾಸ್ತಿ, ಒಬ್ಬರು ಮನೇಲಿರಲೇಬೇಕು, ಬೇರೆ ಕಡೆ ಹೋಗುವ ಹಾಗಿಲ್ಲ. ನನ್ನ ಹೆಣ್ಣುಮಕ್ಕಳೂ ಸಹ "ನೀನು ಕಷ್ಟಪಡಬೇಡ" ಅಂದ್ರು. ಹಾಗಾಗಿ ಹಸು ಸಾಕಾಣಿಕೆ ಬಿಟ್ಟೆ. ನನಗೆ ಇಬ್ಬರು ಹೆಣ್ಣುಮಕ್ಕಳು. ಹೆಣ್ಣುಮಕ್ಕಳ ಮದುವೆ ಮಾಡಿದ ಮೇಲೆ, ತೋಟ ಮಾರಬೇಕು ಅನ್ನುವ ಅಭಿಪ್ರಾಯವಿದೆ. ನನ್ನ ಜಮೀನು ಪಾಳು ಬೀಳುವುದಕ್ಕಿಂತ ಮುಂಚೆ ಪುಣ್ಯಾತ್ಮರಿಗೆ ಕೊಡಬೇಕು, ಆಗ ಪದಾರ್ಥ ಚೆನ್ನಾಗಿರುತ್ತೆ ಅನ್ನುವ ಅಭಿಪ್ರಾಯ ನನ್ನದು. ಜಮೀನು ಮಾಡ್ತಿರೋರಿಗೆ, ಹಳ್ಳಿಗೆ ನನ್ನ ಹೆಣ್ಣುಮಕ್ಕಳನ್ನು ಕೊಡುವ ಆಸೆಯಿಲ್ಲ. ವ್ಯವಸಾಯಸ್ಥರನ್ನು ಮನೆ ಅಳಿಯ ಮಾಡಿಕೊಳ್ಳುವ ಮನಸ್ಸಿಲ್ಲ. ನನ್ನ ಮಕ್ಕಳಿಗೂ ರೈತರನ್ನು ಮದುವೆಯಾಗುವ ಮನಸ್ಸಿಲ್ಲ. "ನೀನು ಕಷ್ಟ ಪಟ್ಟಿದ್ದು ಸಾಕು, ತೋಟ ಮಾರಿಬಿಡು" ಅಂತಿದಾರೆ. ನನ್ನ ಹೆಣ್ಣುಮಕ್ಕಳ ಮಾತನ್ನೂ ನಾನು ಕೇಳಬೇಕಲ್ವ? ಇನ್ನು ಮುಂದಿನ ಯುವಪೀಳಿಗೆಗೆ ದೈಹಿಕ ಶ್ರಮ ಸಾಧ್ಯವಿಲ್ಲ. ಮುಂದೆ ಜೀವನಮಟ್ಟ ಬೆಳೆಯುತ್ತೆ. ವ್ಯವಸಾಯದಲ್ಲಿ ಸಂಪಾದನೆ ಕಡಿಮೆಯಾಗ್ತಾ ಬರುತ್ತೆ,



ಆಧುನಿಕ ಸೌಲಭ್ಯದ ಬಳಕೆ:ಬಿದಿರು ಏಣಿಯ ಬದಲು ಕಬ್ಬಿಣದ ಏಣಿ:ಬಿ.ಎಸ್.ಶ್ರೀಧರಮೂರ್ತಿ:ಬೆಟ್ಟದಪುರ

ಖರ್ಚು ಜಾಸ್ತಿಯಾಗುತ್ತೆ. ಮುಂದಿನ ದಿನಗಳಲ್ಲಿ ವ್ಯವಸಾಯ ಕಷ್ಟ!' ಅಂದರು ಶ್ರೀಧರಮೂರ್ತಿ. ಅವರ ಪತ್ನಿ, ಹನಸೋಗೆಯ ಎಚ್.ಜೆ. ಸುಬ್ರಹ್ಮಣ್ಯ ಹಾಗೂ ಸುಶೀಲಮ್ಮ ದಂಪತಿಗಳ ಮಗಳು ಎಚ್.ಎಸ್. ಪುಷ್ಪಲತಾ ಮಾತನಾಡಿದ್ರು 'ನಾನು ಹುಟ್ಟಿದ್ದು ಹನಸೋಗೆಯಲ್ಲಿಯಾದ್ರೂ, ಬೆಳೆದದ್ದೆಲ್ಲಾ ಬೆಂಗಳೂರಿನಲ್ಲಿ. ಮದುವೆಯಾದ ಮೇಲೆ ಬೆಟ್ಟದಪುರಕ್ಕೆ ಬಂದೆ. ಹಳ್ಳಿಯ ಜೀವನಕ್ಕೆ ಬಲವಂತವಾಗಿ ಒಗ್ಗಿಕೊಂಡೆ. ನನ್ನ ಹೆಣ್ಣುಮಕ್ಕಳನ್ನು ಈ ಹಳ್ಳೀಲಿ ಓದಿಸಲು, ಹಾಗೂ ಅವರ ಭವಿಷ್ಯವನ್ನು ರೂಪಿಸಲು ಬಹಳ ಕಷ್ಟಪಡಬೇಕಾಯ್ತು. ನಾನು ಈ ಹಳ್ಳಿಗೆ ಬಂದು ಕಷ್ಟ ಅನುಭವಿಸಿದಂತೆ ನನ್ನ ಹೆಣ್ಣುಮಕ್ಕಳು ಹಳ್ಳೀಲಿ ಕಷ್ಟಪಡೋದು ಬೇಡ. ನನ್ನ ಹೆಣ್ಣುಮಕ್ಕಳಿಗೂ ಹಳ್ಳಿ ಇಷ್ಟವಿಲ್ಲ' ಅಂತ ಮನದಿಂಗಿತವನ್ನು ವ್ಯಕ್ತಪಡಿಸಿದ್ರು. 'ನಿಮಗೆ ಹೆಣ್ಣು ಕೊಡುವವರು ಹೀಗೇ ಅಂದಿದ್ರೆ ನಿಮ್ಮ ಮದುವೆಯಾಗ್ತಿತ್ತಾ?' ಅಂತ ನಾವು ಶ್ರೀಧರಮೂರ್ತಿಗಳಿಗೆ ಕೇಳಿದಾಗ ಅವರು ಋಣಾನುಬಂಧದ ಮೊರೆ ಹೋದ್ರು. 'ನಿಮ್ಮ ಮಕ್ಕಳ ಋಣಾನುಬಂಧದಲ್ಲಿ ರೈತರೇ ಇದ್ದರೆ?' ಅಂತ ಅಂದಾಗ 'ಮುಂದಿನ ಭವಿಷ್ಯವನ್ನು ಬಲ್ಲವರಾರು' ಅಂದ್ರು. ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವ ತಂದೆತಾಯಂದಿರ ಭಾವನೆಗಳಿಗೂ ಬೆಲೆ ಇದ್ದೇ ಇದೆ ತಾನೆ, ವಾದವಿವಾದಗಳೇಕೆ ಅಂತ ನಮಗೆ ಅನ್ನಿಸಿತು. 'ನಿಮ್ಮ ಹೆಣ್ಣು ಮಕ್ಕಳ ಭವಿಷ್ಯ ಉಜ್ವಲವಾಗಲಿ' ಅಂತ ಹಾರೈಸುವ ಕೆಲಸವಷ್ಟೇ ನಮಗೆ ಉಳಿದದ್ದು.

ಈ) ಬಿ.ವಿ. ಸೂರ್ಯನಾರಾಯಣ ಇ/ಮ ವೆಂಕಟರಮಣಾವಧಾನಿ

ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-275784



ಮನೋನ್ಮಣಿ-ಬಿ.ವಿ.ಸೂರ್ಯನಾರಾಯಣ ದಂಪತಿ ತಮ್ಮ ರಾಸುಗಳೊಂದಿಗೆ:ಬೆಟ್ಟದಪುರ

ಈಗ ವ್ಯವಸಾಯದಲ್ಲಿ ಜೀವನ ಆಗೋಲ್ಲ. ಕಷ್ಟಪಟ್ರೆ ಫಲವಿಲ್ಲ. ನೆರೆಹೊರೆ ಸರಿಯಿಲ್ಲ. ಸುಖವಾಗಿ ಜೀವನ ಸಾಗೋಲ್ಲ. ಅಕ್ಕಪಕ್ಕದವರ ಪೀಡನೆ ಜಾಸ್ತಿ. ಸುತ್ತಮುತ್ತ ನಮ್ಮವರೇ ಇದ್ರೆ ನೆಮ್ಮದಿ ಇರೋದು. ನಾವೂ ಹಳ್ಳಿ ಜೀವನವನ್ನು ಬಿಟ್ಟು ಪಟ್ಟಣ ಸೇರಬೇಕು ಅನ್ನುವ ಆಸೆ ಇದೆ. ನಮ್ಮ ಮಕ್ಕಳಿಗೆ ಹಳ್ಳಿಜೀವನವನ್ನು ಹೊರಿಸೋದು ಬೇಡ ಅಂತ ನನ್ನ ಹೆಂಡತೀನೂ ಹೇಳ್ತಾಳೆ. ಆದ್ರೆ ನಮ್ಮ ಗಂಡು ಮಕ್ಕಳದ್ದು ಖಾಸಗಿ ಕೆಲಸ. ಮುಂದೆ ಹ್ಯಾಗೋ ಏನೋ? ಅದಕ್ಕಾಗಿ ಹಳ್ಳೀಲಿ ಜಮೀನು ಇಡಬೇಕು. ತೋಟ ಕೊಡಬಾರದು, ಉಳಿಸಬೇಕು ಅನ್ನುವ ಮನಸ್ಸು ಮಕ್ಕಳಿಗಿದೆ. ಆದ್ರೆ ಕೆಲಸದ ಅನುಭವ ಇಲ್ಲ. ಈಗ ನನ್ನ ಬದುಕಿನಲ್ಲಿ ಇಲ್ಲಿರುವುದೋ ಅಥವಾ ಬಿಟ್ಟು ಪಟ್ಟಣ ಸೇರುವುದೋ ಅನ್ನುವ ದ್ವಂದ್ವ ಇದೆ. ಹ್ಯಾಗಾದರೂ ಮಾಡಿ ಹೋರಾಟ ಮಾಡಬೇಕಿದೆ.

ಬೆಟ್ಟದಪುರದ ವೆಂಕಟರಮಣಾವಧಾನಿ ಹಾಗೂ ರುದ್ರಪಟ್ಟಣದ ತಾಯಮ್ಮ ದಂಪತಿಗಳಿಗೆ ಐದು ಗಂಡು ಹಾಗೂ ಒಬ್ಬ ಮಗಳು. ಈ ದಂಪತಿಗಳ ನಾಲ್ಕನೆಯ ಮಗ ಬಿ.ವಿ. ಸೂರ್ಯನಾರಾಯಣ. ಹನಸೋಗೆಯ ವಿಶ್ವೇಶ್ವರಯ್ಯ ಹಾಗೂ ರುದ್ರಪಟ್ಟಣದ ಪದ್ಮಾವತಮ್ಮ ದಂಪತಿಗಳ ಮಗಳು ಮನೋನ್ಮಣಿ ಸೂರ್ಯನಾರಾಯಣ ಅವರ ಧರ್ಮಪತ್ನಿ. ಸೂರ್ಯನಾರಾಯಣ ಅವರ ಮನೆ ಒಳಗೆ ನಾವು ಕಾಲಿಟ್ಟಾಗ ಅವರು ಮನೆ ಒಳಗಿರಲಿಲ್ಲ. ಮಾಡಿನ ಮೇಲಿದ್ದರು. ನಾಡಹೆಂಚು ಕೈ ಆಡುತ್ತಿದ್ದರು. ಅಲ್ಲೇ ಇರಿ ಫೋಟೋ ತೆಗೀತೀವಿ ಅಂದಾಗ ಅವರಿಗೂ ಗಾಭರಿಯಾಯ್ತು. ನಮ್ಮ ಪರಿಚಯ ಹಾಗೂ ಉದ್ದೇಶ ತಿಳಿದ ಮೇಲೆ ನೆಮ್ಮದಿಯಾಗಿ ಭಾವಚಿತ್ರಕ್ಕೆ ಭಂಗಿ ನೀಡಿದ್ರು. ಏಣಿಯಿಳಿದು ಬಂದು ಮನೆಯಂಗಳದಲ್ಲಿ ಸುಧಾರಿಸಿಕೊಳ್ಳಲು ಕುಳಿತಾಗ ಅವರ ಪತ್ನಿ ಹೇಳಿದ್ರು 'ನೋಡಿ, ಬೆಳಗಿನಿಂದ ಏನೂ



ಹಂಚು ಕೈಯಾಡುತ್ತಿರುವ ಬಿ.ವಿ.ಸೂರ್ಯನಾರಾಯಣ:ಬೆಟ್ಟದಪುರ

ತಿಂದಿಲ್ಲ. ಈಗ ಘಂಟೆ ಹನ್ನೆರಡು. ಅವರಿಗೆ ಯಾವಾಗಲೂ ಕೆಲಸ, ಕೆಲಸ, ಕೆಲಸ. ಅದು ಮುಗಿಯುವವರೆಗೂ ಊಟ ತಿಂಡಿ ಬೇಡವೇ ಬೇಡ' ಅಂದ್ರು. ಮುಗುಳುನಗುತ್ತಿದ್ದ ಸೂರ್ಯನಾರಾಯಣ ಶ್ರಮದ ಪ್ರತೀಕವಾಗಿ ಹರೀತಿದ್ದ ಬೆವರನ್ನು ಒರೆಸಿ ತಣ್ಣಗೆ ನುಡಿದ್ರು 'ನನ್ನ ತಂದೆ ಹೆಂಚನ್ನು ಕೈ ಆಡೋರು. ಅವರಿಂದ ನಾನು ಈ ವಿದ್ಯೆ ಕಲಿತೆ' ಬೆವರಧಾರೆ ನಿಂತಿರಲಿಲ್ಲ. ಅಡುಗೆ ಮನೆಯಿಂದ ಮಾತು ತೂರಿ ಬಂತು 'ಈ ೭೮ರ ವಯಸ್ಸಿನಲ್ಲೂ ಎಲ್ಲಾ ಕೆಲಸ ಮಾಡ್ತಾರೆ. ಆದ್ರೆ ಊಟ ತಿಂಡಿ ಬಗ್ಗೆ ಗಮನ ಇರೋದಿಲ್ಲ. . ನೀವಾದ್ರೂ ಹೇಳಿ' ಅಂತ. 'ಕೆಲಸ ಮಾಡ್ತಿದ್ರೆ ನನಗೆ ಏನೂ ಬೇಡ. ಅದು ಮುಗಿಯುವವರೆಗೆ ಬೇರೆ ಕಡೆ ಗಮನ ಇರೋಲ್ಲ' ಅಂದ್ರು ಸೂರ್ಯನಾರಾಯಣ. 'ನೋಡಿ ಎಷ್ಟು ಒರೆಸಿದ್ರು ಬೆವರು ಹರೀತಾ ಇದೆ . . ತಾಳಿ ಸ್ನಾನ ಮಾಡಿ ಬರ್ತೀನಿ' ಅಂದ್ರು. ಪತಿ ಪತ್ನಿಯರ ಸಾಮರಸ್ಯ ಕಂಡ ಬೆನ್ನಲ್ಲೇ . . ಸಮಯ ಸಹಾ ತನ್ನಿರವನ್ನು ನೆನಪಿಸಿತು. 'ಸ್ನಾನಕ್ಕೆ ಮುಂಚೆ ಕೆಲ ಕಾಲ ನಮ್ಮೊಡನೆ ಮಾತನಾಡಿ ಎಂದು ನಾವು ಅವರನ್ನು ಕೇಳಿಕೊಂಡಾಗ, ಅಲ್ಲೇ ಕಂಬಕ್ಕೊರಗಿ, ಸಲೀಸಾಗಿ ಮಾತನಾಡಿದ್ರು. 'ನನ್ನ ತಂದೆಗೆ ೨೭ ಎಕರೆ ಖುಷ್ಕಿ, ಆರು ಎಕರೆ ಗದ್ದೆ ಹಾಗೂ ನಾಲ್ಕೂವರೆ ಎಕರೆ ತೋಟ ಇತ್ತು. ಇಬ್ಬರು ಆಳುಗಳನ್ನಿಟ್ಟು ಜಮೀನು ರೂಢಿಸಿದ್ರು. ತೋಟದಲ್ಲಿ ಸ್ವತಃ ದುಡಿಯೋರು. ಇಡೀ ಬೆಟ್ಟದಪುರಕ್ಕೆ ನನ್ನ ತಂದೆ famous. ತಾಳೆಮುಂಡಿ ಅಂತ ನಮ್ಮ ತೋಟದ ಹೆಸರು. ನಮ್ಮ ತಂದೆಯ ನಿಜವಾದ ಹೆಸರೇ ಹಲವರಿಗೆ ಗೊತ್ತಿರಲಿಲ್ಲ, "ತಾಳೆಮುಂಡಿ ಅಯ್ಯ" ಅಂತಾನೇ ಕರೀತಿದ್ರು. ತೋಟದಲ್ಲಿ ಮಾವು, ಅಡಿಕೆ, ಬಾಳೆ, ತೆಂಗು, ವಿಳ್ಳೇದೆಲೆ ಅಂತ ತೋಟದ ತುಂಬ ವಿವಿಧ ಜಾತಿಯ ಬೆಳೆ ತುಂಬಿದ್ರು. ೪೦, ೫೦ ರಾಸುಗಳನ್ನು ಮನೇಲಿ ಸಾಕಿದ್ರು. ಈ ದನಗಳನ್ನು ಮೇಯಿಸೋಕೆ ಒಬ್ಬ ಆಳು ಇದ್ದ. ಹಾಲನ್ನು ಮನೆಬಳಕೆಗೆ ಮಾತ್ರಾ ಕರೀತಿದ್ರು. ಗೊಬ್ಬರಕ್ಕಾಗಿ ಮುಖ್ಯವಾಗಿ ದನಗಳನ್ನು ಸಾಕಿದ್ರು. ಮನೆಯಿಂದ ದನದ ಗೊಬ್ಬರವನ್ನು ತಲೆಯ ಮೇಲೆ ಹೊತ್ತು ತೋಟಕ್ಕೆ ಸಾಗಿಸುತ್ತಿದ್ರು. ಸೌದೆ ಒಡೆಯೋರು. ಬೆಳಗ್ಗೆ ಐದೂವರೆಗೆ ಎದ್ದು ತೋಟಕ್ಕೆ ಹೋದ್ರೆ, ಅಲ್ಲಿ ಗುದ್ದಲಿ ಕೆಲಸ, ಕಾಲುವೆ ಅಗೆತ, ಹಂಬಿನ ಕೆಲಸ ಮಾಡಿ, ತೋಟದ ಭಾವಿಯಿಂದ, ಒಂಭತ್ತು ಘಂಟೆಯ ಹೊತ್ತಿಗೆ ಸುಮಾರು ೪೦೦ ಕೈ ತೂಕ ನೀರು ಹಾಕಿರ್ರೋರು. ನಂತರ ಮನೆಗೆ ಬಂದು ನಿತ್ಯಕರ್ಮ ಮುಗಿಸಿ, ವೇದಾಭ್ಯಾಸ ಮಾಡಿಸೋರು. ಮತ್ತೆ ಮೂರು ಘಂಟೆಯಿಂದ ರಾತ್ರಿ ಎಂಟು ಘಂಟೆಯವರೆಗೆ ತೋಟದಲ್ಲಿ ಕೆಲಸ ಮಾಡೋರು. ಎಂಟು ಘಂಟೆಯ ನಂತರ ಮನೇಲಿ ವೇದಾಭ್ಯಾಸಕ್ಕೆ ಶಿಷ್ಯರು ಕಾದಿರೋರು. ನಾನೂ ಸಹ ತಂದೆಯಿಂದಲೇ ತೋಟದಲ್ಲಿ ವೇದ ಕಲಿತಿದ್ದೀನಿ. ಎಲೆಪಿಂಡಿ ಹೊತ್ತುಕೊಂಡು, ಗೋಣಿಕೊಪ್ಪಲು ಸಂತೆಗೆ ಹೋಗೋರು. ಇಲ್ಲಿ ಸಮೀಪದಲ್ಲಿರುವ ಅತ್ತಿಗೋಡು ಸಂತೆಗೆ ಹೋಗಿ, ವಿಳ್ಳೇದೆಲೆ ಮಾರಿ ಅಲ್ಲಿಂದ ಸಾಮಾನು ತಂದು ಮನೇಲಿ ಅಡುಗೆ ಮಾಡಬೇಕಿತ್ತು. ಹಗಲು ರಾತ್ರಿ ಅನ್ನದೆ ತೋಟ ಕಾಯೋರು. ರುದ್ರಪಟ್ಟಣ, ಬಸವಾಪಟ್ಟಣಕ್ಕೆ ಹೋಗಿ ಅಲ್ಲಿ ನಮ್ಮವರ ತೋಟ ನೋಡಿಕೊಂಡು ಬಂದು, ಅವರನ್ನು ಇಲ್ಲಿಗೆ ಕರೆಸಿ ಸಲಹೆ ಕೇಳೋರು. ಅದನ್ನು ಅನುಷ್ಠಾನ ಮಾಡೋರು. ಆಗ ಬೆಟ್ಟದಪುರದಲ್ಲಿ ಬರೀ Middle School ಮಾತ್ರ ಇತ್ತು. High School ಓದಲು ಮೈಸೂರಿಗೆ ಹೋಗಬೇಕಿತ್ತು. ನಾನೂ ನಮ್ಮ ಅಣ್ಣಂದಿರೂ ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಓದಿದ್ವು. ನಾನು B.Sc. ಓದಿ, ಮೈಸೂರಿನ JCE ಕಾಲೇಜಿನಲ್ಲಿ Diploma in Civil Engineering ಮಾಡಿದೆ, ೧೯೫೪ರಲ್ಲಿ. ನಂತರ ನಾಸಿಕ್, ಕರ್ನೂಲ್ ಹಾಗೂ ಮಹಾರಾಷ್ಟ್ರದಲ್ಲಿ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದೆ. ಆ ಸಂದರ್ಭದಲ್ಲಿ ತುರ್ತುಪರಿಸ್ಥಿತಿ ಜಾರಿಯಾಯ್ತು. Declaration ನಲ್ಲಿ ನಮ್ಮ ಹೊಲಗದ್ದೆಗಳು ಪರರ ಪಾಲಾಯ್ತು. ತಂದೆ, ತಾಯಿಯ ಆರೋಗ್ಯ ಸರಿಯಿರಲಿಲ್ಲ. ಅವರನ್ನು ನೋಡಿಕೊಂಡು ಹೋಗೋಣ ಅಂತ ಬಂದೆ. ಮತ್ತೆ ನನ್ನನ್ನು ಕೆಲಸಕ್ಕೆ ಹೋಗಲು ಬಿಡಲಿಲ್ಲ. ತಂದೆ ತಾಯಂದಿರ ಯೋಗಕ್ಷೇಮ ಹಾಗೂ ಜಮೀನಿನ ನಿರ್ವಹಣೆ ಮಾಡಿಕೊಂಡು ಊರಲ್ಲೇ ಉಳಿದೆ. ನನ್ನ ತಂದೆಯೇ ನನಗೆ ಗುರು. ರಾತ್ರಿಯ ಬೆಳದಿಂಗಳಲ್ಲಿ ಹಾರೆ ಗುದ್ದಲಿ ಹಿಡಿದು ತೋಟದಲ್ಲಿ ಅವರು ಕೆಲಸ ಮಾಡ್ತಿದ್ರು. ನನಗೂ ಈ ಜಮೀನು ನನ್ನದು ಅನ್ನುವ ಭಾವನೆ ಬಂತು. ನನ್ನ ಅಣ್ಣತಮ್ಮಂದಿರು

"ನೀನು ಗಟ್ಟಿಮುಟ್ಟಾಗಿದೀಯ, ಇಲ್ಲಿದ್ದು ವ್ಯವಸಾಯ ಮಾಡು" ಅಂತ ಪ್ರೋತ್ಸಾಹ ನೀಡಿದ್ರು. ನಾನು ಕಾಫಿ ಟೀ ಕುಡೀತಿರಲಿಲ್ಲ. ದಿನಕ್ಕೆ ಎರಡು ಊಟ ಅಷ್ಟೆ. ಹಾಗಾಗಿ ಆರೋಗ್ಯ ಚೆನ್ನಾಗಿದೆ. ನನ್ನ ತೋಟದ ಕೆಲಸವನ್ನು ಈಗಲೂ ನಾನೇ ಮಾಡ್ತೀನಿ. ಪರರ ಸಹಾಯ ಕೇಳೋಲ್ಲ. ನನ್ನ ಕೆಲಸ ನನಗೆ ಮುಖ್ಯ. ಅಕಸ್ಮಾತ್ತಾಗಿ ಬೇಕಾದ್ರೆ ಒಬ್ಬರೋ, ಇಬ್ಬರೋ ಕೂಲಿಯಾಳುಗಳನ್ನು ಕರ್‍ಕೋತೀನಿ. ಈಗ ನನಗೆ ೨೫೦೦ ಅಡಿಕೆ, ೨೦೦ ಎಲೆಹಂಬು, ಬಾಳೆ, ಮಾವು, ತೆಂಗು, ತೇಗ, ಹಲಸು, ಹುಣಿಸೆ, ಸೌದೆ ಜಾತಿಯ ಮರಗಳು ಹೀಗೆ ತೋಟ ತುಂಬಿದೆ. ಮೋಟಾರ್ ನೆರವಿನಿಂದ, ತೋಟದ ಬಾವಿಯಿಂದ ನೀರು ಹಾಕ್ತೀನಿ. ನನಗೆ ದುಡಿಮೆಗೆ ಬೇಸರವಿಲ್ಲ. ಸುತ್ತಮುತ್ತಲಿನ ಈತಿಬಾಧೆಗಳು ಬಿಟ್ರೆ ವ್ಯವಸಾಯ ನೆಮ್ಮದೀನೆ. ಹತ್ತು ರೂಪಾಯಿ ಕೊಟ್ಟು ಮಾವಿನ ಹಣ್ಣು ಖರೀದಿ ಮಾಡಿ ತಿನ್ನೋದಕ್ಕಿಂತ, ನಮ್ಮ ತೋಟದಲ್ಲಿ ಬೆಳೆದ ನೂರು ಮಾವಿನ ಹಣ್ಣನ್ನು ನೋಡಿದ್ರೇ ಸಂತೋಷ. ವ್ಯವಸಾಯದ ಬದುಕಿನಲ್ಲಿ ಹೆಂಡತಿಯೂ ಜತೆಯಾಗಿ ನಡೆದಿದ್ದಾಳೆ. ವಿರುದ್ಧವಾಗಿ ಮಾತನಾಡಿಲ್ಲ. ನನ್ನ ತಂದೆ ತಾಯಿ ನೋಡಿ ಮಾಡಿದ ಸಂಬಂಧ. ನಾನು ಅವಳನ್ನು ನೋಡಿದ್ದು ಮದುವೆ ಮಂಟಪದಲ್ಲೇ. ನನ್ನ ಹೆಂಡತಿಗೆ ಮೊದಲು ಹಳ್ಳೀಜೀವನ ಇಷ್ಟವಿರಲಿಲ್ಲ. ಆದರೆ ಬಲವಂತವಾಗಿ ಒಗ್ಗಿಕೊಂಡಳು. ನನಗೆ ಇಬ್ಬರು ಗಂಡುಮಕ್ಕಳು. ಇಬ್ಬರೂ ಖಾಸಗಿ ಕೆಲಸದಲ್ಲಿದ್ದಾರೆ. ಅವರಿಗೆ ಜಮೀನಿನ ಬಗ್ಗೆ ಒಲವಿದೆ. ಕೆಲಸದ ಅನುಭವ ಇಲ್ಲ. ಮುಂದಿನ ದಿನಗಳು ನಮ್ಮ ಹೋರಾಟದ ಬದುಕನ್ನು ರೂಪಿಸುತ್ತವೆ' ಎಂದು ಹೇಳಿದರು ಸೂರ್ಯನಾರಾಯಣ. ಭರವಸೆಯ ಸೆಲೆಯಾಗಿ, ನಾಡಹಂಚಿನ ಸಂದಿಯಿಂದ ಬೆಳಕಿನ ಕೋಲು ಸೂರ್ಯನಾರಾಯಣ ಅವರ ಮುಖದ ಮೇಲೆ ಬಿದ್ದು ಪ್ರತಿಫಲಿಸುತ್ತಿತ್ತು.

ಉ) ಬಿ.ಎಸ್. ಪ್ರಭಾಶಂಕರ್ ಇ/ಮ ಬಿ.ಕೆ. ಶ್ರೀನಿವಾಸ ಜೋಯಿಸ್

ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-275411

ನಮ್ಮಜ್ಜನ ಅಣ್ಣ ಕೇಶವಾವಧಾನಿ ಅಂತ ಇದ್ರಂತೆ. ಅವರು ಭಾರೀ ಆಳು, ಹಾಗೇ ಪೈಲ್ವಾನರಂತೆ. ಯೋಗಕ್ಕೆ ಕುಳಿತರೆ ಎರಡು ಅಡಿ ಭೂಮಿ ಬಿಟ್ಟು ಮೇಲಕ್ಕೆ ಏರಿರೋರಂತೆ. ಅವರಿಗೆ ಬಹಳ ವಾಕ್ ಸಿದ್ಧಿ.



ಲಕ್ಷ್ಮಿ-ಬಿ.ಎಸ್.ಪ್ರಭಾಶಂಕರ ದಂಪತಿ:ಬೆಟ್ಟದಪುರ

ಬೆಟ್ಟದಪುರದ ಬಿ.ಕೆ. ಶ್ರೀನಿವಾಸಜೋಯಿಸ್ ಹಾಗೂ ಸಾಲಿಗ್ರಾಮದ ಅಕ್ಕಯ್ಯಮ್ಮ ದಂಪತಿಗಳಿಗೆ ಎರಡು ಗಂಡು ಹಾಗೂ ಎರಡು ಹೆಣ್ಣುಮಕ್ಕಳು. ಈ ದಂಪತಿಗಳ ಮಗ ಬಿ.ಎಸ್. ಪ್ರಭಾಶಂಕರ್ ಮೊದಲು ಮದುವೆ ಬೇಡ ಅಂತ ಹೇಳಿ ಸಮಾಜಸೇವೆಯತ್ತ ಮುಖ ಮಾಡಿದವರು. ಏನನ್ನೋ ಸಾಧಿಸುವ ತವಕ ಅವರದ್ದು. ಆದರೆ ಹಿರಿಯರ ಒತ್ತಾಸೆಯ ಮೇರೆಗೆ ಮೈಸೂರಿನ ಎಸ್.ಎನ್. ಶ್ರೀಕಂಠಯ್ಯ ಹಾಗೂ ಸಾಲಿಗ್ರಾಮದ ಎಸ್.ಆರ್.ನಾಗರತ್ನ ದಂಪತಿಗಳ ಮಗಳು ಲಕ್ಷ್ಮಿಯನ್ನು ಮದುವೆಯಾಗಿ ಈಗ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ತಮ್ಮ ಹೆಸರಿನ ಹಿನ್ನೆಲೆಯನ್ನೇ ವಿವರಿಸಿದ್ರು. 'ಹಿಂದೆ ಬೆಟ್ಟದಪುರದ ಕೆರೆ ಏರಿ ಮೇಲೆ ನಮ್ಮ ಮುತ್ತಜ್ಜ ಕಟ್ಟಿಸಿದ ದೇವಸ್ಥಾನ ಇತ್ತು. ಕಳ್ಳರು ಲಿಂಗ ಕದ್ದರು. ನಮ್ಮಜ್ಜ ಅದನ್ನು ಪುನಃ ಪ್ರತಿಷ್ಠಾಪನೆ ಮಾಡಿಸಿದ್ರು. ಅದು ಶಿಥಿಲವಾಯ್ತು. ಸಾಲಿಗ್ರಾಮದ ಹಿರಿಯರೊಬ್ಬರು ಕಾಶಿಯಿಂದ

ಲಿಂಗವನ್ನು ತಂದು ನನ್ನ ತಂದೆಗೆ ನೀಡಿದ್ರು. ಅದೇ ಲಿಂಗವನ್ನು ಕಾಶೀವಿಶ್ವನಾಥ ಅಂತ ತಂದೆ ಪ್ರತಿಷ್ಠಾಪನೆ ಮಾಡಿಸಿದ್ರು. ಆಗ ನಾನು ಹುಟ್ಟಿದೆನಂತೆ. ಅದಕ್ಕೇ ಪ್ರಭಾಶಂಕರ ಅಂತ ಹೆಸರಿಟ್ಟಿದ್ದಾರೆ. ೯೨ರಲ್ಲಿ ನಾನು ಮತ್ತೆ ಆ ದೇವಸ್ಥಾನ ಕಟ್ಟಿಸಿ, ಅರ್ಚಕರನ್ನು ಇಟ್ಟಿದ್ದೀನೆ. ಪ್ರತಿನಿತ್ಯ ಪೂಜೆ ನಡೀತಿದೆ' ಅಂತ ಹೇಳಿ, ಬೆಟ್ಟದಪುರದ, ಸಂಕೇತಿ ಕೃಷಿಯ ಬಗೆಗೆ ಭವಿಷ್ಯ ಸಹಾ ನುಡಿದ್ರು. 'ನನಗೂ ೨೨ ಎಕರೆ ಜಮೀನಿದೆ, ಎರಡು ಬೋರ್ ಹಾಕಿಸಿದೀನಿ. ಅಡಿಕೆ ತೋಟ ಹಾಗೂ ೪೦೦ ತೆಂಗು ಇದೆ. ಈಗ ಕೂಲಿಯಾಳುಗಳ ಸಮಸ್ಯೆ ತುಂಬಾ ಇದೆ. ಮುಂಚೆ ಕೂಲಿಯಾಳುಗಳಲ್ಲಿ ಕ್ರಿಯೆ ಇತ್ತು. ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಭಯ, ಭಕ್ತಿ ಇತ್ತು. ಈಗ ಅದು ಕಡಿಮೆಯಾಗಿದೆ. ದೌರ್ಜನ್ಯ ಜಾಸ್ತಿ ಆಗಿದೆ. ವ್ಯವಸಾಯ ನಮ್ಮ ಕಾಲಕ್ಕೆ ಮಾತ್ರ. ನನ್ನ ಮಗ Diploma ಓದುತ್ತಿದ್ದಾನೆ. ಮುಂದೆ ಅವನು ಬಂದು ಬೇಸಾಯ ಮಾಡೋದು ಕಷ್ಟ. ಈಗ ಈ ಊರಲ್ಲಿ ಯುವಕರು ಯಾರೂ ಇಲ್ಲ. ಇನ್ನು ಹತ್ತು ವರುಷದಲ್ಲಿ ಈಗ ಇರೋ ಸಂಕೇತಿಗಳೂ ಊರು ಬಿಡಬಹುದು' ಎಂದರು. 'ಹಿಂದಿನ ಕೃಷಿ ಪದ್ಧತಿಗಳ ಬಗ್ಗೆ ಹೇಳಿ' ಅಂತ ಕೇಳಿದಾಗ ಪ್ರಭಾಶಂಕರ ನಿರಾಯಾಸವಾಗಿ ಉತ್ತರಿಸಿದ್ರು. 'ನಮ್ಮ ಪೂರ್ವಿಕರು ನಾಗನಹಳ್ಳಿಯಲ್ಲಿದ್ರು. ಏಳು ಎಕರೆಯ ಈ plotನ ಅವತ್ತಿನ ಕಾಲದಲ್ಲಿ ಕೇವಲ ೫೦ ರೂಪಾಯಿಗೆ ಅಜ್ಜ ಖರೀದಿಸಿದ್ರಂತೆ. ಅಲ್ಲಿ ಸುತ್ತಾ ಮುತ್ತಾ ಸಂಕೇತಿಗಳದ್ದೇ ತೋಟ, ಮನೆ ಗದ್ದೆಗಳಿತ್ತು. ಹಿರಿಯರು ಸ್ವತಃ ದುಡೀತಿದ್ರು. ಈಗ ನಾವು ವಾರ ಕೊಡ್ತೀವಿ. ಹಿಂದೆ ಕಾಸಿಗೂ ಕಷ್ಟ ಇತ್ತು. ತಂದೆ SSLC ಮಾಡಿ, ಶಿಕ್ಷಕರಾಗಿದ್ರು, ರಾವಂದೂರು ಸಮೀಪದ ಹರಳಹಳ್ಳಿ ಹತ್ರ ಕೇವಲ ೧೧ ರೂಪಾಯಿ ಸಂಬಳಕ್ಕೆ. ಅಜ್ಜ ಹೋದ ಮೇಲೆ ಅವರ ೨೨ನೇ ವಯಸ್ಸಿನಲ್ಲಿ ಬೆಟ್ಟದಪುರಕ್ಕೆ ಬಂದ್ರು. ಶಿಕ್ಷಕ ವೃತ್ತಿ ಬಿಟ್ಟು ವೇದಾಧ್ಯಯನ, ವ್ಯವಸಾಯ ಹಾಗೇ ಪೌರೋಹಿತ್ಯಾನೂ ಮಾಡೋರು. ನಾನೂ ಹೈಸ್ಕೂಲು ಓದುವಾಗ ವ್ಯವಸಾಯದ ಕೆಲಸ ಮಾಡ್ತಿದ್ದೆ. PUC ಓದುವಾಗ Tenancy Act ಬಂತು. ಆಗ ಜಮೀನು ಮಾಡ್ತಿದ್ದ ರೈತರನ್ನು ಬಿಡಿಸಿ, ನಾನೇ ಸ್ವತಃ ಎತ್ತುಗಾಡಿ ಇಟ್ಟು ಬೇಸಾಯ ಆರಂಭಿಸಿದೆ. ನನ್ನ ತಂದೆಗೆ ಬ್ರಹ್ಮತೇಜಸ್ಸು ಇತ್ತು. ಭಾರೀ ನಿಃಸ್ಪೃಹರು. ಅವರಿಗೆ ಸುಳ್ಳು ಹೇಳಬಾರದು, ಹಾಗೇ ಪ್ರಾಣಿಹಿಂಸೆ ಮಾಡಬಾರದು. ಮನೆಗೆ ಹಾವು ಬಂದ್ರೂ ಅದನ್ನು ಹೊಡೀತಿರಲಿಲ್ಲ. ಹಿಡಿಸಿ ಕಾಡಿಗೆ ಬಿಡಿಸೋರು, ಕೋಪ ಇರಲಿಲ್ಲ. ನಾನು ಅವರಿಂದ ವೇದ, ಜ್ಯೋತಿಷ್ಯ ಹಾಗೂ ವ್ಯವಸಾಯ ಕಲಿತೆ. ಅವರ ಗುಣದ ಕಾಲುಭಾಗ ನನ್ನಲ್ಲಿ ಇರಬಹುದು. ಈ ಊರಿನ ಮರಿಯಮ್ಮನ ಸುಬ್ಬರಾಯರು ತಂದೆಗೆ ತೋಟದಲ್ಲಿ ವೇದಪಾಠ ಮಾಡಿದರಂತೆ. ನನಗೂ ವ್ಯವಸಾಯದಲ್ಲಿ ಶ್ರದ್ಧೆ ಇತ್ತು. ಇಲ್ಲಿ ಪ್ರಕೃತಿ ಚೆನ್ನಾಗಿರುತ್ತೆ, ಸ್ವತಂತ್ರ ಜೀವನ. ನಾವು ಕಷ್ಟಪಟ್ಟು ದುಡಿದಷ್ಟೂ ಆದಾಯ. ಹಾಗಾಗಿ ನಾನು ನನ್ನ ೨೨ನೇ ವಯಸ್ಸು ಅಂದ್ರೆ ೧೯೭೧ರಲ್ಲಿ ವ್ಯವಸಾಯ ಆರಂಭಿಸಿದೆ. ಹಿಂದೆ ರಾಗಿ, ಹುರಳಿ, ಅವರೆ ಬೆಳೀತಿದ್ರು. ನಾನು ತೋಟದಲ್ಲಿ ಮೆಣಸು, ಅಡಿಕೆ, ತೆಂಗು, ಬಾಳೆ ಬೆಳೆದೆ. ಹೊಲ ಜಮೀನು ಬಿಡಿಸಿಕೊಂಡು ಅದರಲ್ಲಿ ಹಣದ ಬೆಳೆ ಹೊಗೆಸೊಪ್ಪು, ಹಾಗೇ ಸೂರ್ಯಕಾಂತಿ, ಅರಿಸಿನ, ಹತ್ತಿ, ಮುಸುಕಿನ ಜೋಳ ಬೆಳೆದೆ. ವೈಜ್ಞಾನಿಕ ಬೇಸಾಯ ಪದ್ಧತೀನ ಅಳವಡಿಸಿದೆ. ಹಿಂದೆ "ಹೊಲ ಮಾಡಿದೋನ ತೋಟ ಹಾಳು, ಮಾಟ ಮಾಡಿದೋನ ಮನೆ ಹಾಳು" ಅನ್ನೋರು. ಈಗ ನಮ್ಮದು ಆ ಲೆಕ್ಕಕ್ಕೆ ಬಂದಿದೆ ಅಂದರು ಪ್ರಭಾಶಂಕರ. ಮಾತಿಗೆ ಸ್ವಲ್ಪ ವಿರಾಮ ಸಿಕ್ತು. 'ನಿಮ್ಮ ವ್ಯವಸಾಯದ ಬದುಕಿನ ಸಾಧನೆ ಬಗ್ಗೆ ಸ್ವಲ್ಪ ಹೇಳಿ' ಅಂದಾಗ ಮತ್ತೆ ನೆನಪುಗಳನ್ನು ಮೆಲುಕು ಹಾಕಿದ್ರು. '೧೯೭೧-೭೩ರಲ್ಲಿ ಸೂರ್ಯಕಾಂತಿ ಹೊಸಬೆಳೆ. ಕೃಷಿ ಇಲಾಖೆ ವತಿಯಿಂದ ಬೀಜವನ್ನು free ಕೊಟ್ಟಿದ್ರು. ಅದಕ್ಕೆ ಭಾರೀ ವ್ಯವಸಾಯ ಮಾಡಿದ್ವಿ. ಮೂರರಿಂದ ನಾಲ್ಕು ಜೇನು ಪೆಟ್ಟಿಗೆ ಇಟ್ಟಿದ್ದೆ, ಹೂವಿನ ಪರಾಗಸ್ಪರ್ಶಕ್ಕೆ ಅನುಕೂಲವಾಗಲಿ ಅಂತ. ಒಂದೊಂದು ಹೂವೂ ಪಂದರಿ ಅಗಲ ಬಂತು. ಸೂರ್ಯಕಾಂತಿ ಬೇಸಾಯದ ಬಗ್ಗೆ ನನಗೆ ತಿಳಿದಿರಲಿಲ್ಲ. ಅಂತರ ಜಾಸ್ತಿ ಕೊಟ್ಟು ವಿಪರೀತ ಬೇಸಾಯ ಮಾಡಿದ್ರಿಂದ ಹೂವು ಅಗಲವಾಯ್ತು, ಆದ್ರೆ ಜೊಳ್ಳಾಯ್ತು. ನಾವೇ ಸ್ವತಃ ಪರಾಗಸ್ಪರ್ಶ ಮಾಡಬೇಕಿತ್ತು. ಆದ್ರೆ ಮುಂದಿನ ದಿನಗಳಲ್ಲಿ ಈ ತಪ್ಪನ್ನು ಸರಿಪಡಿಸಿಕೊಂಡ್ವಿ. ಸೂರ್ಯಕಾಂತಿಗೆ ಹೆಚ್ಚು ಖರ್ಚಿಲ್ಲ, ಎರಡು ಎಕರೆಗೆ ೨೫ ಕ್ವಿಂಟಾಲ್ ಇಳುವರಿ ಸಿಗುತ್ತೆ. ಕ್ವಿಂಟಾಲ್ ಸೂರ್ಯಕಾಂತಿ ಧಾರಣೆ ಒಂದು ಸಾವಿರದಿಂದ, ೧೨೦೦ ಇದೆ. ನಾನು ವರುಷಕ್ಕೆ ೨ ರಿಂದ ೩ ಎಕರೆ ಸೂರ್ಯಕಾಂತಿ ಬೆಳೀತೀನಿ. ಹಿಂದೆ ಇಲ್ಲಿ ಬೀಡಿ-ಹೊಗೆಸೊಪ್ಪನ್ನು ಬೆಳೆದು, ಚಪ್ಪರಹಾಕಿ ಒಣಗಿಸುತ್ತಿದ್ರು. ಆ ಬೆಳೆ ಸುಲಭ. ಆದರೆ ಈಗ ಯಾರೂ ಬೆಳೆಯೋಲ್ಲ. ಈಗ್ಗೆ ೨೦/೨೫ ವರುಷಗಳ ಹಿಂದೆ VFC ತಂಬಾಕು ಬಂತು. ಬೆಟ್ಟದಪುರದಲ್ಲಿ ಮುಂಚೆ ಐದು ಒಕ್ಕಲು ತಂಬಾಕು ಬೆಳೆದರು. ಹಣದ ಬೆಳೆ ಅದು. ಆದ್ರೆ ನಾನು ರೇಷ್ಮೆ ಮಾಡೋಣಾಂತಿದ್ದೆ. ಹುಳುವನ್ನು ಬಿಸಿನೀರಿಗೆ ಹಾಕಿ ಸಾಯಿಸ್ತಾರೆ, ಹಿಂಸೆ ಬೇಡ ಅಂತ ತಂದೆ ಹೇಳಿದ್ರು. ಹಾಗಾಗಿ ತಂಬಾಕಿನ ಒಂದು ಬ್ಯಾರನ್ ಕಟ್ಟಿದೆ. ೨೫ ರಿಂದ ೩೦ ಸಾವಿರ ಸಸಿಗಳನ್ನು ಮೂರು ಎಕರೇಲಿ ಬೆಳೆದು, ೨೫೦೦ ಕೇಜಿ ತಂಬಾಕು ಪ್ರತಿ ವರುಷ ಬೆಳೀತೀವಿ. ಹಣ ಬರುವ ಹಾಗೇ ಇದು ಬಹಳ risk ಇರುವ ಬೆಳೆ. ಮೂರು ದಿನ ಸೊಪ್ಪನ್ನು ಬೇಯಿಸಬೇಕು. ಕಡೇ ದಿನವಂತೂ ಬಹಳ ಎಚ್ಚರಿಕೆ ಬೇಕು. ಒಳಗಡೆ ಒಲೆ ಎಲ್ಲಾ ಕಾದಿರುತ್ತೆ. ಸ್ವಲ್ಪ ಹೆಚ್ಚು ಕಡಿಮೆ ಆದ್ರೂ, ಇಡೀ ಬ್ಯಾರನ್ ಹೊತ್ತಿಕೊಳ್ಳುತ್ತೆ. ಜಾಗರೂಕತೆಯಿಂದ ಮಾಡಿದ್ರೆ ಲಕ್ಷಾಂತರ ರೂಪಾಯಿ ಆದಾಯ ಸಿಗುತ್ತೆ. ತೋಟಕ್ಕೆ ಹೋಲಿಸಿದ್ರೆ

ತಂಬಾಕು ಉತ್ತಮ. ಎರಡು ತಿಂಗಳ ಬೆಳೆ, ಮೂರು ಹದ ಮಳೆ ಸಾಕು. ಕಳೆದ ಸಾರಿ ಎಲ್ಲಾ ಕಡೆ ಬರ ಬಂತು. ಆದರೆ ನಮ್ಮ ಪಿರಿಯಾಪಟ್ಟಣ, ಬೆಟ್ಟದಪುರದ ಕಡೆ ಲಕ್ಷಾಂತರ ಆದಾಯವೇ ಸಿಕ್ತು. ನಮ್ಮ ಬಾಗಾಯ್ತಿಗೆ ಕೆರೆ ಆಶ್ರಯವಿದೆ. ಬರ ಇದ್ರೂ ನೀರು ಬತ್ತಿಲ್ಲ. ಹೊಲ ಜಮೀನಿನ ನಿರ್ವಹಣೆಗೆ ಎರಡು ಬೋರ್‌ವೆಲ್ ಇದೆ. ನಾನು ಎರಡು ಜತೆ ಎತ್ತು ಇಟ್ಟಿದ್ದೇನೆ. ನಮ್ಮ ಮನೇಲಿ ಇದ್ದ ಹಳೆ ಜೋಡಿ ಎತ್ತುಗಳು, ನಾಗನಹಳ್ಳೀಲಿ ಗಾಡಿಗೆ ಹೂಡಿಬಿಟ್ರೆ, ಬೆಟ್ಟದಪುರದ ಮನೆಗೆ ಸುಲಭವಾಗಿ ಬರೋವು. ಯಾರೂ ಗಾಡಿ ಹೊಡೀಬೇಕಿರಲಿಲ್ಲ. ನಾನು ಸೀಮೆಹಸುವನ್ನೂ ಕಟ್ಟಿದ್ದೆ. ನಮ್ಮೂರ ಸೊಸೈಟೀಲಿ ೧೨ ಜನರನ್ನು ಆರಿಸಿದ್ರು, ಅದರಲ್ಲಿ ನಾನೂ ಒಬ್ಬ. ಮೈಸೂರಿಗೆ ಹೋಗಿ ೩೦೨೫ ರೂಪಾಯಿ ಕೊಟ್ಟು, ೧೯೭೬ರಲ್ಲಿ ಸೀಮೆಹಸು ತಂದೆ. ಆರರಿಂದ ಏಳು ಲೀಟರ್ ಹಾಲು ಕೊಡೋದು. ಬ್ರಾಹ್ಮಣರು ಹಾಲು ಮಾರಬಾರದು ಅಂತ ತಂದೆ ಹೇಳಿದ್ರು. ಹಾಲು ಮಾರದೇ ಹೋದ್ರೆ ಸಾಲ ತೀರಿಸೋದು ಹ್ಯಾಗೆ? ಹಾಗಾಗಿ ಆ ಹಸುವನ್ನೇ ಮಾರಿದೆ. ಈಗ ನನ್ನ ಬಳಿ ಐದು/ಆರು ಹಸು ಇದೆ. ವ್ಯವಸಾಯಕ್ಕೆ ಬೇಕಾದ ಸಲಕರಣೆಗಳು ಇವೆ. ನಾನು ಮೊದಲು PWD Contractor ಆಗಿದ್ದೆ. ಅದನ್ನೂ ಸಮಾಜಸೇವೆ ಅಂತ ಮಾಡ್ತಿದ್ದೆ. ಯಾವುದೇ ಲಾಭದ ಆಸೆಯಿಂದ ಮಾಡಲಿಲ್ಲ. ಈ ಊರ ಹೆರಿಗೆ ಆಸ್ಪತ್ರೆ ಹಾಗೂ ಪಂಚಾಯ್ತಿ ಕಟ್ಟಡ ನಾನೇ ಕಟ್ಟಿದ್ದು. ನಂತರ ಈಗ LIC Agent ಆಗಿ ಕೆಲಸ ಮಾಡ್ತಿದೀನಿ. ಜನರಿಗೂ ಅನುಕೂಲ, ನನಗೂ ಅನುಕೂಲ ಆಗಿದೆ. ಹಿಂದೆ ಈ ಊರಲ್ಲಿ ದೊನ್ನೆ ಕಟ್ಟೋರು, ಮುತ್ತುಗದ ಎಲೆ ಹಚ್ಚೋರು. ಯಾರದ್ದಾದ್ರೂ ಒಬ್ಬರ ಮನೆ ಜಗಲೀಲಿ, ಎಲ್ಲಾ ಹೆಂಗಸರೂ ಸೇರಿ ಅವರವರ ಮನೆ ಎಲೇನ ತಂದು, ಆರಾಮವಾಗಿ ಮಾತನಾಡುತ್ತಾ ಮುತ್ತುಗದ ಎಲೆ ಹಚ್ಚೋರು. ಕೆಲಸಾನೂ ಆಯ್ತು, ಮನೋರಂಜನೇನೂ ಸಿಕ್ತು. ಜಮೀನು ಇರದಿದ್ದ ಜನರೂ ಸಹ ನಂತರದ ದಿನಗಳಲ್ಲಿ ಸಾಕಷ್ಟು ಉತ್ತಮ ಸ್ಥಿತಿಗೆ ಬಂದಿದ್ದಾರೆ. ಹೊಗೆಸೊಪ್ಪು ಇರದಿದ್ರೆ ನಾನು ಇಲ್ಲಿ ಇರೋದಕ್ಕೆ ಆಗ್ತಿರಲಿಲ್ಲ' ಅಂದ್ರು ಪ್ರಭಾಶಂಕರ. ನಿಮ್ಮ ಮನೆತನದಲ್ಲಿ ವ್ಯವಸಾಯಕ್ಕೆ ಹೆಣ್ಣುಮಕ್ಕಳ ಕೊಡುಗೆಯೇನು, ಅಂದಾಗ, 'ನಮ್ಮ ಮನೇಲಿ ಆಚಾರ, ವಿಚಾರ ಬಹಳ ಜಾಸ್ತಿ. ನನ್ನ ತಾಯಿ ಬಹಳ ಮಡಿ. ಅವರು ಸಾಲಿಗ್ರಾಮದೋರು. ಅವರು ಹಸಿರು ಔಷಧಿ ನೀಡೋರು. ಮಕ್ಕಳಾಗೋದಕ್ಕೆ, ಜ್ವರಕ್ಕೆ ಔಷಧಿ ನೀಡೋರು. ನನ್ನ ಹೆಂಡತೀನೂ ಸಹ ಸಂಗೀತ ಕಲಿತಿದ್ದಾಳೆ. ಪುಕ್ಕಟೆಯಾಗಿ ಇತರರಿಗೆ ಹೇಳಿಕೊಡ್ತಾಳೆ. ಮನೆ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ಮಾಡೋದ್ರಿಂದ, ವ್ಯವಸಾಯ ಮಾಡೋದ್ರಲ್ಲಿ ನಮಗೆ ಸಮಸ್ಯೆಯಾಗೋಲ್ಲ' ಅಂದ್ರು ಪ್ರಭಾಶಂಕರ. ಹಾಗೇ ಮಾತು ಮುಂದುವರೆಸಿ, 'ನನ್ನ ತಂದೆಗೆ ಜಮೀನು ಕಳೆಯುವುದು ಇಷ್ಟವಿರಲಿಲ್ಲ. ಹಾಗಾಗಿ ನಾನು ಜಮೀನು ಉಳಿಸಿದ್ದೇನೆ. ಇದ್ದರೆ ಮಕ್ಕಳು ಇರಬಹುದು. ನನಗೆ ನಾಲ್ಕು ಜನರಿಗೆ ಸಹಾಯ ಮಾಡುವ ಹಾಗಿರಬೇಕು, ಇತರರಿಗೆ ಕೆಟ್ಟದ್ದನ್ನು ಮಾಡಬಾರದು, ಆದಷ್ಟೂ ಒಳ್ಳೆಯದನ್ನು ಮಾಡಬೇಕು ಅನ್ನುವುದು ನನ್ನ ತತ್ತ್ವ' ಅಂತ ಹೇಳಿದ್ರು ಪ್ರಭಾಶಂಕರ. ಮಧ್ಯಾಹ್ನದ ಊಟ ನಮ್ಮಲ್ಲಿಯೇ ಅಂತ ಹೇಳೋದನ್ನ ಮರೀಲಿಲ್ಲ. ಅವರ ಪತ್ನಿ ಲಕ್ಷ್ಮಿ ಬಹಳ ಅಭಿಮಾನದಿಂದ ಸತ್ಕರಿಸಿದ್ರು. 'ನನ್ನ ಮನೆಯವರು ಸಂಘಜೀವಿ ಆಗಿರೋದ್ರಿಂದ ಪ್ರತಿದಿನ ಮನೆಯಲ್ಲಿ ಅತಿಥಿಗಳು ಇದ್ದೇ ಇರ್ತಾರೆ. ನೀವು ಬಂದಿರುವುದೂ ಬಹಳ ಸಂತೋಷ' ಅಂದ್ರು. ಮನೆಯಂಗಳದಲ್ಲಿ ಉಯ್ಯಾಲೆಯ ಮೇಲೆ ಕುಳಿತು ವಿಳ್ಳೇದೆಲೆ ಮೆಲ್ಲುತ್ತಿರುವಾಗ, ಪ್ರಭಾಶಂಕರ ಅವರು - ಅಮೇರಿಕಾದಲ್ಲಿರುವ, ಇವರಿಗೆ ಪರಿಚಯವಿರದ ಬೆಟ್ಟದಪುರದ ಸಂಕೇತಿಗಳ ಕುಟುಂಬ, ಒಂದು ಸಾರಿ ತಮ್ಮ ಮಕ್ಕಳಿಗೆ ಹುಟ್ಟೂರನ್ನು ತೋರಿಸಲು, ಇವರ ಮನೆಯಲ್ಲಿ ಮೂರು ದಿನ ತಂಗಿದ್ದನ್ನೂ, ಸುತ್ತಮುತ್ತಲ ಪ್ರದೇಶವನ್ನು ಮಕ್ಕಳಿಗೆ ತೋರಿಸಿದ್ದನ್ನೂ ಸ್ಮರಿಸಿಕೊಂಡ್ರು. 'ದೇಶವಿದೇಶಗಳಲ್ಲಿರುವ ನಮ್ಮ ಸಂಕೇತಿಗಳ ಹೆಸರಲ್ಲಿ ಮಾತ್ರ ಈಗ ಬೆಟ್ಟದಪುರ ಉಳಿದಿದೆ. ಈ ಊರನ್ನೇ ನೋಡಿರದ ಮಕ್ಕಳು, ಹೆಸರಿನಲ್ಲಿರುವ ಬೆಟ್ಟದಪುರದ ಬಗ್ಗೆ ಪ್ರಶ್ನಿಸಿದಾಗ, ಈ ಊರ ನೆನಪು ಬರುತ್ತದೆ, ಆಗ ಇಲ್ಲಿಗೆ ಬರುತ್ತಾರೆ' ಎಂದು ಹೇಳಿ ನಕ್ಕರು. ಸಂಕೇತಿ ಕೃಷಿಯ ಭವಿಷ್ಯ ನಾವು ತೂಗುತ್ತಿದ್ದ ತೂಗುಯ್ಯಾಲೆಯಂತಾಯ್ತಲ್ಲಾ ಅಂತ ನಮಗೆ ಆ ಕ್ಷಣ ಅನ್ನಿಸಿದ್ದು ಸುಳ್ಳಲ್ಲ.

ಊ) ಬಿ.ಎಸ್. ಅನಂತಕೃಷ್ಣಪ್ಪ ಇ/ಮ ಕೆ. ಶಾಮಣ್ಣ

ಬೆಟ್ಟದಪುರ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ದೂರವಾಣಿ: 08223-275439

ಬಾಗಾಯ್ತನ್ನು ಪೂರ್ಣವಾಗಿ ಒಂದು ಸಂಸಾರಕ್ಕೆ ಹೋಲಿಸಬಹುದು. ಯಾವಾಗಲೂ ಸಹ ತೆಂಗಿನಮರ ತಲೇಲಿ ಎಳನೀರನ್ನು ಹೊತ್ತಿರುತ್ತೆ. ಅದು ಮನೆಯ ಯಜಮಾನನ ತರಹ. ಯಾವ timeನಲ್ಲಿ ಯಾರೇ ಬಂದ್ರೂ 'ಬನ್ನಿ ಒಳಗೆ' ಅಂತ ಕರೆಯೋ ರೀತಿಯಲ್ಲಿ ತೆಂಗಿನಮರ. ಮನೇನಲ್ಲಿ ನಾಲ್ಕಾರು ಜನ ದುಡಿಯೋ ಮಕ್ಕಳಿಗೆ ಅಡಿಕೆ ಮರಗಳನ್ನು ಹೋಲಿಸಬಹುದು. ಮನೆಯನ್ನು ಶುಚಿತ್ವವಾಗಿ ಇಟ್ಟುಕೊಂಡಿರುವ ಗೃಹಿಣೀನ ಎಲೆಹಂಬಿಗೆ ಹೋಲಿಸಬಹುದು. ಸಂಸಾರದಲ್ಲಿ ನಾಲ್ಕಾರು ಜನ ಮಕ್ಕಳು ಮರಿ ಇರುವ ರೀತಿಯಲ್ಲಿ ಬಾಳೆ ಗಿಡ ಇರುತ್ತೆ. ಬಾಗಾಯ್ತು ಅನ್ನುವ ವ್ಯವಸಾಯವೂ ಒಂದೇ ಸಂಸಾರವೂ ಒಂದೇ ಅಂತ ಹಿರಿಯರು ಹೇಳಿದ್ರಲ್ಲಿ ಅರ್ಥವಿದೆ. ಬಾಳೇನಲ್ಲೂ ಸಹ ಪ್ರತಿನಿತ್ಯ ಉತ್ಪನ್ನ ಬರುತ್ತೆ. ಎಲೆ ಹಂಬಲ್ಲೂ ಪ್ರತಿನಿತ್ಯದ ವರಮಾನ. ಅಡಿಕೆ, ತೆಂಗು ವರುಷದಲ್ಲಿ ಒಂದೊಂದು ಬೆಳೆ ಬರೋದ್ರಿಂದ ಅದನ್ನು ಕ್ರೋಢೀಕರಿಸಿ ಇಟ್ರೆ ಹಣದ ಸೌಲಭ್ಯ ಉತ್ತಮವಾಗಿರುತ್ತೆ ಅನ್ನುವ ದೃಷ್ಟಿಯಿಂದಲೇ ನಮ್ಮ ಪೂರ್ವಜರು, ಹಾಗೇ ನಾವೂ ಸಹ ಇಲ್ಲಿಯವರೆಗೆ ಬಾಗಾಯ್ತನ್ನು ಮಾಡಿರುವುದು. ಇದೇ ನಮ್ಮ ವಿಶೇಷ.



ಅಡಿಕೆಪಟ್ಟೆಯ ನಿರ್ವಹಣೆ: ಬಿ.ಎಸ್.ಅನಂತಕೃಷ್ಣಪ್ಪ:ಬೆಟ್ಟದಪುರದ ತಮ್ಮ ತೋಟದಲ್ಲಿ

ಬೆಟ್ಟದಪುರದ ಕೆ. ಶಾಮಣ್ಣ ಹಾಗೂ ಹುಣಸೂರಿನ ಅಮ್ಮಯ್ಯಮ್ಮ ದಂಪತಿಗಳಿಗೆ ಎರಡು ಗಂಡು ಹಾಗೂ ಐದು ಜನ ಹೆಣ್ಣು ಮಕ್ಕಳು. ಹಿರಿಯ ಮಗ ಬಿ.ಎಸ್. ಅನಂತಕೃಷ್ಣಪ್ಪನವರು ಹೆಸರುವಾಸಿ. ಇವರ ಪತ್ನಿ ಆರ್.ಕೆ.ಅನಸೂಯ ರುದ್ರಪಟ್ಟಣದ ಕೇಶವಮೂರ್ತಿ ಹಾಗೂ ದೊಡ್ಡಹನಸೋಗೆಯ ವಿಶಾಲಾಕ್ಷಮ್ಮ ದಂಪತಿಗಳ ಮಗಳು. ಬಿ.ಎಸ್.ಅನಂತಕೃಷ್ಣಪ್ಪನವರಿಗೆ ಐದು ಜನ ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ಇವರ ನಾಲ್ಕನೆಯ ಮಗ ಸಂಗೀತಗಾರ. ಅವನನ್ನು ವ್ಯವಸಾಯಕ್ಕೆ ಎಳೆಯಲು, ತಮ್ಮ ಕೃಷಿ ಮುಂದುವರೆಸಲು ಅನಂತಕೃಷ್ಣಪ್ಪನವರಿಗೆ ಆಸೆಯಿದೆ. ಸಂಜೆಯ ಸಮಯದಲ್ಲಿ, ಬಿ.ಎಸ್.ಶ್ರೀಧರಮೂರ್ತಿಯವರ ಮನೆಯಲ್ಲಿ ಕುಳಿತು ಯಾವ ಹಿಂಜರಿಕೆಯಿಲ್ಲದೆ ಮುಕ್ತವಾಗಿ ಮಾತನಾಡಿದ್ರು. ಆಳು ಚಿಕ್ಕದಾದ್ರೂ, ಕಂಚಿನ ಕಂಠ ಹಾಗೂ ಸೊಗಸಾದ ಮಾತುಗಾರಿಕೆ.

- **ಅನಂತಕೃಷ್ಣ ಅವರೆ, ನಮಸ್ಕಾರ.**

ನಮಸ್ಕಾರ

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ. ಅವರ ಬಗ್ಗೆ ನೀವು ತಿಳಿದಿರುವ ಐತಿಹ್ಯಗಳು ಏನು?**

ಬಹಳ ಹಿಂದೆ ೩೦೦ ಒಕ್ಕಲು ಬೆಟ್ಟದಪುರಕ್ಕೆ ಬಂದಿದೆ. ಬೆಟ್ಟದಪುರವನ್ನು ತಾಯಿ ಊರಾಗಿ ಉಳಿಸಿ, ಅಕ್ಕಪಕ್ಕದ ಅಷ್ಟಗ್ರಾಮಗಳನ್ನು ನಮ್ಮವರು ಹಂಚಿಕೊಂಡ್ರು. ಪಿರಿಯಾಪಟ್ಟಣ, ಕಣಗಾಲು, ಬೆಟ್ಟದಪುರ, ದೊಡ್ಡಹನಸೋಗೆ, ಹರವೆ, ಬಸವಾಪಟ್ಟಣ, ರುದ್ರಪಟ್ಟಣ ಹಾಗೂ ಸಾಲಿಗ್ರಾಮ ಇವು ಆ ಗ್ರಾಮಗಳು. ಇಲ್ಲಿ ನಮ್ಮವರು ವ್ಯವಸಾಯಗಾರರಾಗಿ ಕೃಷಿಯನ್ನೇ ಅವಲಂಬಿಸಿ, ವೇದಾಧ್ಯಯನ ಸಂಪನ್ನರಾಗಿ, ಊರಿಗೆ ಕ್ಷೇಮಸಮಾಚಾರಗಳನ್ನು ವ್ಯಕ್ತಪಡಿಸಿಕೊಂಡು, ಸಂಗೀತದಲ್ಲೂ ಅವರು ಮುಂದಿದ್ದರು. ನನ್ನ ಬಾಲ್ಯದಲ್ಲಿ ಬೆಟ್ಟದಪುರದಲ್ಲಿ ೭೨ ಒಕ್ಕಲು ಇದ್ರು, ಅಷ್ಟೂ ಜನ ವ್ಯವಸಾಯಗಾರರಾಗಿದ್ರು. ಸ್ವತಃ ಕೆಲಸ ಮಾಡ್ತಿದ್ರು. ಸುತ್ತಮುತ್ತಲ ಹರದೂರು, ಗೊರಳ್ಳಿ, ನಾಗನಹಳ್ಳಿ, ಸಂಗರಸೆಟ್ಟಳ್ಳಿ, ತುಂಗಾ, ದೇಬೂರು, ಜೋಗನಹಳ್ಳಿ, ಬೂನಳ್ಳಿ, ಕೂರಗಲ್ಲು ಇಷ್ಟು ಗ್ರಾಮದ ಕೆರೆಕೆಳಗಿನ ಬಾಗಾಯ್ತು ಜಮೀನೆಲ್ಲಾ ಸಂಕೇತಿಗಳದ್ದೇ ಆಗಿತ್ತು. ಬೆಟ್ಟದಪುರಕ್ಕೆ ಇರುವ ಕೆರೆ ತಾವರೇಕೆರೆ, ಬಂಡಾರಗಟ್ಟೆ ಹಾಗೂ ತೆಪ್ಪಕೊಳದ ಆಶ್ರಯದಲ್ಲೂ ತೋಟ ಇತ್ತು. ಕೆರೆಯಲ್ಲಿ seepage ಇರುವುದರಿಂದ, ತೋಟ ಗುಣಮಟ್ಟದಲ್ಲಿ ಇರುತ್ತೆ ಅನ್ನುವ ದೃಷ್ಟಿಯಿಂದ ಅಂಥಾ ಪ್ರದೇಶದಲ್ಲೇ ತೋಟ ಮಾಡಿದ್ರು.

- **ಬಾಲ್ಯದಲ್ಲಿ ನೀವು ಗಮನಿಸಿರುವಂತೆ ಅಂದಿನ ವ್ಯವಸಾಯದ ಚಿತ್ರಣ ಹೇಗಿತ್ತು?**

ಪ್ರತಿನಿತ್ಯ ನಮ್ಮ ಹಿರಿಯರು ಬೆಳಗಿನ ಜಾವವೇ ಎದ್ದು, ಸ್ನಾನ ಆಹ್ನೀಕಕ್ಕೆ ಮೊದಲು ತೋಟಕ್ಕೆ ಹೋಗಿ ಅಲ್ಲಿ ಕೆಲಸ ಮಾಡಿ, ಯಾರ ಆಶ್ರಯವೂ ಇಲ್ಲದೆ ದುಡೀತಿದ್ರು. ಮಧ್ಯಾಹ್ನ ಮನೆಗೆ ಬಂದು ಸ್ನಾನ ಸಂಧ್ಯಾವಂದನೆ ಮಾಡಿ ಭೋಜನಾನಂತರ ಮತ್ತೆ ಬಾಗಾಯ್ತಿಗೆ ಹೋಗಿ ಸಣ್ಣಪುಟ್ಟ ಕೆಲಸ ಮಾಡೋರು.

- **ತಾವೇ ತಿಳಿಸಿದ್ರಿ - ಸಂಕೇತಿಗಳು ವ್ಯವಸಾಯ, ವೇದಾಭ್ಯಾಸ ಹಾಗೂ ಸಂಗೀತ ಎಲ್ಲದರಲ್ಲೂ ಪಾರಂಗತರಾಗಿದ್ರು ಅಂತ, ಆದ್ರೆ ಇವೆಲ್ಲವನ್ನೂ ಅವರು ಜಮೀನಿನಲ್ಲೇ ಕಲೀತಿದ್ರಾ?**

ವೇದಾಧ್ಯಯನವನ್ನು ಜಮೀನಿನ ಕಡೇಲಿ ಮಾಡ್ತಿದ್ರು. ಅಕ್ಕಪಕ್ಕದ ಬಾಗಾಯ್ತಿನವರು ಒಂದು ಕಡೆ ಸೇರಿ, ಗುರುತ್ವದ ಮೂಲಕ ವೇದ ಕಲೀತಿದ್ರು. ಹುಣ್ಣಿಮೆ ದಿನಗಳಲ್ಲಿ ಅವರು ತಮ್ಮ ನಾಡಹೆಂಚಿನ ಮನೆಯನ್ನು ರಿಪೇರಿ ಮಾಡುವಾಗಲು ಸಹ ಅಲ್ಲಿಯೇ ಕುಳಿತು ವೇದಾಧ್ಯಯನ ಮಾಡುವ ದೃಶ್ಯವನ್ನು ನಾನು ಕಂಡಿದ್ದೀನಿ. ಸಾಯಂಕಾಲದ ವೇಳೆಯಲ್ಲಿ ಸಂಗೀತವನ್ನು ಗುರುಗಳ ಮೂಲಕ ದೇವಸ್ಥಾನಗಳಲ್ಲಿ ಕಲೀತಿದ್ರು, ಹಾಗೇ ತಮ್ಮ ವಿಶಾಲವಾದ ಮನೆಗಳಲ್ಲಿ ಪಾಠಪ್ರವಚನ ಮಾಡ್ತಿದ್ರು. ಬೆಟ್ಟದಪುರದಲ್ಲಿ ಸಂಗೀತಗಾರರಾಗಿ ಹೆಸರು ಮಾಡಿದವರಲ್ಲಿ ವೀಣೆ ಶಾಮಣ್ಣನವರು, ವೀಣೆ ರಾಮಸ್ವಾಮಯ್ಯನವರು, ವೀಣೆ ಶ್ರೀನಿವಾಸಯ್ಯನವರು ಹಾಗೂ ಸುಬ್ಬರಾಯರು ಪ್ರಮುಖರು.



ಹನಿ ನೀರಾವರಿಯ ನಿರ್ವಹಣೆಯಲ್ಲಿ ಬಿ.ಎಸ್.ಅನಂತಕೃಷ್ಣಪ್ಪ : ಬೆಟ್ಟದಪುರ

- **ವ್ಯವಸಾಯ ಹಾಗೂ ವೇದಾಭ್ಯಾಸ ಎರಡೂ ಒಂದಕ್ಕೊಂದು ಹೇಗೆ ಅನುಕೂಲ ಮಾಡಿಕೊಟ್ಟಿತ್ತು?**

ಇದೊಂದು ಪ್ರತೀತಿ. ವೇದಾಧ್ಯಯನ ನಡೆದಂತಹ ಸ್ಥಳದಲ್ಲಿ, ಸಂಗೀತ ನಡೆದಂತಹ ಸ್ಥಳದಲ್ಲಿ ಫಲವೃಕ್ಷಗಳೂ ಸಹ ಸಮೃದ್ಧಿಯಾಗಿ ಇರುತ್ತೆ. ಇದು ಪ್ರಕೃತಿಯ ಒಂದು ನಿಯಮ. ಯಾಕೆ ಅಂದ್ರೆ ವ್ಯವಸಾಯದಲ್ಲಿ ಮುಖ್ಯವಾದದ್ದು ತೆಂಗು, ಅಡಿಕೆ. ಅವುಗಳ ಹಿತಚಿಂತನೆಗೆ ಇಂತಹ ಒಂದು ಸಂಸ್ಕಾರ ಇದ್ರೆ ಒಳ್ಳೆಯದು ಅನ್ನುವುದು ಹಿರಿಯರ ನಂಬಿಕೆ. ಇದು ನನ್ನ ಅನುಭವಕ್ಕೂ ಬಂದಿದೆ. ಯಾಕೇಂದ್ರೆ ಮನೆ ಮುಂಬಾಗಿಲಿನಲ್ಲಿ, ಸಾಮಾನ್ಯವಾಗಿ ಜನಸಂಪರ್ಕ ಇರುವ ಸ್ಥಳದಲ್ಲಿ ವೇದಾಧ್ಯಯನ, ಸಂಗೀತಗಾರರು ಇರುವ ಸ್ಥಳದಲ್ಲಿ ತೆಂಗಿನಮರ ಸಮೃದ್ಧವಾಗಿ ಫಸಲು ಕೊಡುತ್ತೆ. ಒಳ್ಳೆಯ ಸಂಸ್ಕಾರ ಇದ್ದ ಕಡೆ ವೃಕ್ಷಗಳಲ್ಲೂ ಅದೇ ಭಾವನೆ ಇರುತ್ತೆ ಅನ್ನುವ ಮಾತು ಖಂಡಿತಾ ಸತ್ಯ.

- **ಈಗ ನೋಡಿ ಸಂಗೀತ ಹಾಗೂ ವೇದಾಭ್ಯಾಸ ಇದು ಮೊದಲ ಹಂತಗಳಲ್ಲಿ ವ್ಯವಸಾಯಕ್ಕೆ ಪೂರಕವಾಗಿತ್ತು. ಆದ್ರೆ ದಿನಕಳೆದಂತೆ ವ್ಯವಸಾಯದಲ್ಲಿ ದೈಹಿಕ ಶ್ರಮ ಕಡಿಮೆಯಾಗುತ್ತಾ ಬಂದಂತೆ, ಆದಾಯ ಸಂಪಾದನೆಗೆ ಉಪವೃತ್ತಿಯಾಗಿದ್ದ ಸಂಗೀತ ಹಾಗೂ ವೇದಾಭ್ಯಾಸ, ಮುಖ್ಯವೃತ್ತಿಯಾಗಿ ವ್ಯವಸಾಯವು ಕಡೆಗಣಿಸಿದ ಕಸುಬಾಯ್ತೆ?**

ಇದು ಹೀಗೆ, ಸಂದರ್ಭಾನುಸಾರ ಈಗಿನ ಪಟ್ಟಣದಲ್ಲಿರುವ ಬೇರೆಯವರ ಸಂಸಾರವನ್ನು ನೋಡಿದಾಗ, ಎಂತಹವನಿಗೂ ಸಹ ನಾನು ವ್ಯವಸಾಯದಲ್ಲಿ ಮುಂದೆ ಬರಲು ಆಗೋಲ್ಲ, ನಾನು ಸಹ ಬೇರೆ ಕಡೆ ಹೋಗಿ ವೃತ್ತಿ ಮಾಡಿ, ಈ ವ್ಯವಸಾಯವನ್ನು ತ್ಯಾಜ್ಯ ಮಾಡಿದ್ರೆ ಅನುಕೂಲ ಸ್ಥಿತಿಗೆ ಬರಬಹುದು ಅನ್ನುವ ದೃಷ್ಟಿಯಿಂದ ಹೀಗಾಗಿರಬಹುದು. ಹಣ ಸಂಪಾದನೆಯೇ ಇಲ್ಲಿ ಮುಖ್ಯವಾದ ಪಾತ್ರ ವಹಿಸ್ತು.

- **ಹಾಗಿದ್ರೆ ಸಂಕೇತಿಗಳು ಕೃಷಿಯನ್ನು ಆರಂಭ ಮಾಡಿದ್ದಾದ್ರೂ ಯಾಕೆ?**

ಸ್ವತಂತ್ರವಾಗಿ ನಾವು ಜೀವನ ಮಾಡಬೇಕು, ಮತ್ತೊಬ್ಬರ ಅಧೀನದಲ್ಲಿ ನಾವು ಬಾಳಬಾರದು, ಅದೂ ಅಲ್ಲದೆ ನಮ್ಮ ಕರ್ಮ ನಿಷ್ಠೆಗಳಿಗೆ ಸಹ ಬೇರೆ ತರಹದ ಸಂಪರ್ಕ ಇರಕೂಡದು, ನಾವು ಉತ್ತಮ ಕುಲವಾಗಿ, ಒಳ್ಳೆಯ ವೇದಾಧ್ಯಯನ ಸಂಪನ್ನರಾಗಿ ಪರಕೀಯರ ಹತ್ರ, ಬೇರೆಯವರ ಹತ್ರ ಒಂದು ಸೇವಾಮನೋಭಾವದಿಂದ ಕೆಲಸ ಮಾಡೋದು ಅಷ್ಟು ಮರ್ಯಾದೆ ಅಲ್ಲ ಎಂಬ ಭಾವನೆಯಿಂದ ಕೃಷೀನ ಅವಲಂಬಿಸಿ ತಮ್ಮ ಕರ್ತವ್ಯನಿಷ್ಠೆಯಲ್ಲಿ ಪಾಲ್ಗೊಳ್ಳುವ ಅವಕಾಶ ಮಾಡಿಕೊಂಡ್ರು.

- **ನೋಡಿ, ಇಷ್ಟೆಲ್ಲಾ ಒಳ್ಳೆಯ ಅಂಶಗಳಿದ್ರೂ ಇವತ್ತಿನ ಪೀಳಿಗೆ ವ್ಯವಸಾಯ ಮಾಡುತ್ತಿಲ್ಲವೇಕೆ?**

ಕಾರಣ ಇಷ್ಟೇನೆ, ಇವತ್ತಿನ ಪೀಳಿಗೆಗೆ ಸ್ವತಃ ದುಡಿಯುವ ಸಾಮರ್ಥ್ಯ ಇಲ್ಲ. ಅವತ್ತಿನ ದೇಹದಾರ್ಢ್ಯತೆ ಈಗಿಲ್ಲ. ಇವತ್ತಿನ ಆಹಾರ, ವಿಹಾರಗಳು ಬೇರೇನೇ. ಮನೆಯ ಹೆಂಗಸರೂ ಅಷ್ಟೆ, ಶ್ರಮಪಟ್ಟು ಬೀಸೋದು, ಕುಟ್ಟೋದು, ಹೊರಗಿನಿಂದ ನೀರು ತರೋದು ಇಂಥಾ ಸಾಮರ್ಥ್ಯ ಇತ್ತು. ಆಧುನಿಕತೆ ಬಂದಾಗ ಮನೇಲಿ ಮಿಕ್ಸಿ, ಗ್ರೈಂಡರ್ ಮತ್ತೆ ಪಂಪುಗಳನ್ನು ಹಾಕಿ ಮನೆಗೆ ನೀರು ತರುವ ಕೆಲಸ ಯಾವಾಗ ಆರಂಭವಾಯ್ತೋ ಇವರಲ್ಲಿ ಶಕ್ತಿ ತಾನಾಗಿಯೇ ಕುಗ್ಗಿಹೋಯ್ತು. ಬೆಟ್ಟದಪುರದಲ್ಲಿ ಹಿರಿಯ ತಲೆಗಳು ಕಣ್ಮರೆಯಾದ ತಕ್ಷಣ, ಯುವಪೀಳಿಗೆ ಈ ಸ್ಥಳದಿಂದ ಪರಸ್ಥಳಕ್ಕೆ ವಿದ್ಯಾಭ್ಯಾಸಕ್ಕೆ ಹೋಗಿ, ಇಲ್ಲಿರುವವರ ಆಸ್ತಿಯನ್ನು ಪರಭಾರೆ ಮಾಡಿ ಇಲ್ಲಿರುವ ಅವಕಾಶದಿಂದ ವಂಚಿತರಾಗಿದ್ದಾರೆ. ಅಲ್ಲದೆ ಸ್ವತಃ ಮಾಡುವ ದೇಹದಾರ್ಢ್ಯತೆ ಕಡಿಮೆಯಾದಾಗ ಕೆಲವರಲ್ಲಿ ಕೂಲಿ ಕೊಟ್ಟು ಮಾಡಿಸುವ ವ್ಯವಸ್ಥೆಗೆ ಶರಣಾದ್ರು. ಆಸ್ತಿ ಇಟ್ಟುಕೊಂಡ್ರು. ಆದರೂ ಸಹ ಸ್ವತಃ ಮಾಡಲು ಇಷ್ಟಪಡಲಿಲ್ಲ. ನಿಜ ಹೇಳಬೇಕೂಂದ್ರೆ ಇಲ್ಲಿ ಬಾಗಾಯ್ತನ್ನ ಸ್ವತಃ ಮಾಡುವ ಜನಾಂಗ ಇರೋದು ಕೇವಲ ಮೂರು ನಾಲ್ಕು ಒಕ್ಕಲು ಮಾತ್ರ.



ಬಿ.ಎಸ್.ಅನಂತಕೃಷ್ಣಪ್ಪ ಅವರೊಂದಿಗೆ ಸಂದರ್ಶನ:ಬೆಟ್ಟದಪುರ: ಎನ್.ಕೇಶವಮೂರ್ತಿ

- **ಸಂಕೇತಿಗಳು, ಅನಿವಾರ್ಯವಾಗಿ ಜಮೀನು ಮಾರಿ ಹೋಗಲೇಬೇಕಾದ ಪರಿಸ್ಥಿತಿ ಇದ್ದಾಗ, ಪಕ್ಕದಲ್ಲಿದ್ದ ಇತರೇ ಬ್ರಾಹ್ಮಣರಿಗೇ ಆ ಜಮೀನನ್ನು ಯಾಕೆ ಮಾರಲಿಲ್ಲ?**

ಇವರಲ್ಲಿ ಆ ಹಣ ಕೊಡೋದಕ್ಕೆ ಚೈತನ್ಯ ಇರಲಿಲ್ಲ. ಇತರೇ ರೈತಾಪಿ ಜನಾಂಗ ಹೇರಳವಾಗಿ ಹಣ ಸಂಪಾದನೆ ಮಾಡಿದ್ರಾರೆ. ಅವರು ಕೇಳಿದ ಹಣ ಕೊಟ್ಟು ಕೊಳ್ತಾರೆ. ಹೀಗಾಗಿಯೇ ಹಿಂದಿನ ಎಲ್ಲಾ ಬಾಗಾಯ್ತು ಹಾಗೇ ಜಮೀನೂ ಇತರೆಯವರಿಗೆ ಹೋಗಿರೋದು.

- **ಬಹಳ ಹಿಂದಿನಿಂದಲೂ ಸಂಕೇತಿಗಳು ಬಾಗಾಯ್ತನ್ನೇ ನೆಚ್ಚಿಕೊಂಡು ಬಂದ್ರು, ಇತರೇ ರೈತರು ಬೇರೆ ಬೆಳೆಗಳನ್ನು ಬೆಳೆದ್ರು. ಇವತ್ತು ತಾವು ಹೇಳ್ತಾ ಇದೀರಿ ಬೇರೆ ರೈತರ ಹತ್ರ ಹಣ ಇದೆ, ಸಂಕೇತಿಗಳ ಹತ್ರ ಹಣವಿಲ್ಲ ಅಂತ. ಇದಕ್ಕೇನು ಕಾರಣ?**

ಅವರು ಬೆಳೆದ commercial cropಗೆ ಒಳ್ಳೆಯ ಧಾರಣೆ ಬಂತು. ತಂಬಾಕು ಬೆಳೆ ತಾಲ್ಲೂಕಿಗೆ ಬಂದು ಹಣದ ಹೊಳೆ ಹರಿಸಿತು. ಲೆಕ್ಕ ಮಾಡಲು ಸಾಧ್ಯವಿಲ್ಲದಷ್ಟು ಹಣ ಅವರ ಕೈಸೇರಿತು. ಹೀಗಾಗಿ ಆಸ್ತಿಯನ್ನು ಕೊಳ್ಳಲು ಅವರಿಗೆ ಅನುಕೂಲವಾಯ್ತು.

- **ನೋಡಿ, ಹಿಂದಿನ ಕಾಲ ಹಾಗಿತ್ತು. ಸಂಕೇತಿಗಳು ವೇದಾಭ್ಯಾಸ, ಸಂಗೀತ ಹಾಗೂ ಬಾಗಾಯ್ತಿನ ಮೇಲೆ ಅವಲಂಬಿತವಾಗಿದ್ರು. ಆದ್ರೆ ಪರಿಸ್ಥಿತಿ ಕ್ರಮೇಣ ಬದಲಾದಂತೆ, ಅವರ ಮುಂದಿನ ಪೀಳಿಗೆ ಬದಲಾದ ಕಾಲಕ್ಕೆ ತಕ್ಕಂತೆ ತಾವೂ ಬದಲಾಗಿ, ಬೇರೆ ಬೇರೆ ಬೆಳೆಗಳನ್ನು ಯಾಕೆ ಬೆಳೀಲಿಲ್ಲ?**

ಬೆಳೆಯೋದಕ್ಕೆ ಪೀಳಿಗೆಗಳು ಇಲ್ಲಿ ಉಳಿಯಲೇ ಇಲ್ಲ. ಎಲ್ಲರೂ ವಿದ್ಯಾಭ್ಯಾಸವಾದ ತಕ್ಷಣ ತಾಯಿ ಊರಿನ ಚಿಂತೆಯೇ ಇಲ್ಲದೆ ಹೊರಟುಹೋದ್ರು. ಅವರ ತಂದೆ ತಾಯಿಗಳು ಇಲ್ಲಿ ಇದ್ದಾಗ್ಲೂ, ವೃದ್ಧಾಪ್ಯದಲ್ಲಿ ಅವರನ್ನು ಇಲ್ಲಿಂದ ಕರೆದುಕೊಂಡು ಹೋಗೋದಕ್ಕೆ ಅಣಿಯಾಗಿದ್ರೇ ಹೊರತು, ಈ ಸ್ಥಳಕ್ಕೆ ಬಂದು, ಇದು ನಮ್ಮ ತಾಯಿ, ನಾವೇನಾದ್ರೂ ಇಲ್ಲಿ ಕಿಂಚಿತ್ತು ಮಾಡಿ ಇದನ್ನು ಪ್ರವರ್ಧಮಾನಕ್ಕೆ ತಂದು, ನಾವು ಉಳೀಬೇಕು ಅನ್ನುವ ಮನೋಭಾವ ಇಲ್ಲದೇ ಪ್ರತಿಯೊಬ್ಬರೂ ಊರು ತೊರೆದಿದ್ದಾರೆ.

- **ವ್ಯವಸಾಯ ಹಾಗೂ ವೇದಾಧ್ಯಯನಸಂಪನ್ನರು ಈ ಊರಲ್ಲಿ ಯಾರು ಇದ್ರು ಹಿಂದೆ?**

  ಸೀತಾರಾಮಾವಧಾನಿಗಳು, ಮರಿಯಮ್ಮನ ಸುಬ್ಬರಾಯರು, ತುಪ್ಪದಂಗಡಿ ಸುಬ್ಬರಾಯರು, ತಮ್ಮಯ್ಯಾವಧಾನಿಗಳು, ಜವರಾಯಭಟ್ಟರ ವೆಂಕಟರಮಣಯ್ಯನವರು, ವೆಂಕಟರಾಮಾವಧಾನಿಗಳು, ಸೂರ್ಯನಾರಾಯಣಾವಧಾನಿಗಳು, ಶ್ರೀನಿವಾಸಾವಧಾನಿಗಳು. ಸುಮಾರು ನನ್ನ ಬಾಲ್ಯದಲ್ಲಿ ಇದೇ ಗ್ರಾಮದಲ್ಲಿ ವೇದಾಧ್ಯಯನಸಂಪನ್ನರು ೩೦ ರಿಂದ ೪೦ ಜನ ಇದ್ರು. ಕೃಷ್ಣರಾಜ ಒಡೆಯರ್ ಅವರು ಆ ಸ್ಥಳಕ್ಕೆ ಬೇಟಿಕೊಟ್ಟಾಗ, "ನೀವೆಲ್ಲರೂ ಸತ್ಕುಲಸಂಪನ್ನರಾಗಿದ್ದೀರಿ, ನಿಮಗೇನು ಬೇಕು ಕೇಳಿ" ಅಂದಾಗ, ಈ ಮಹಾಜನಗಳು "ಸ್ವಾಮಿ, ನಾವು ಯಾರಿಂದಲೂ ಯಾವ ಪ್ರತಿಫಲಾನೂ ಪಡೀದೇನೆ ನಮ್ಮಲ್ಲಿರುವ ವಿದ್ಯೆಯನ್ನು ಪ್ರತಿಯೊಬ್ಬರಿಗೂ ಕಲಿಸಿ, ದೇಶಕಲ್ಯಾಣದ ಸಲುವಾಗಿ ಯಜ್ಞಯಾಗಾದಿಗಳನ್ನು ಮಾಡ್ತಿದೀವಿ. ನಾವು ಕೃಷಿಯ ಜತೆಗೆ ಉಪಕಸುಬಾಗಿ ಬಾಳೆಯ ತರಗದಲ್ಲಿ ದೊನ್ನೆಯನ್ನು ಕಟ್ತಾ ಇದೀವಿ. ೧೦೦ ದೊನ್ನೆಯ ಕಟ್ಟಿನಲ್ಲಿ ೯೦ ದೊನ್ನೆ ಹಾಕ್ತೀವಿ. ೧೦ ದೊನ್ನೆ ನಮಗೆ ರಿಯಾಯಿತಿ. ಆದರೆ ಅದರ ಬೆಲೆಯು ನೂರರದ್ದು ಕೊಡಿಸಬೇಕು" ಎಂದು ಕೇಳಿದ್ರಂತೆ. ಹೀಗೆ ಒಂದು ಪ್ರತೀತಿ ಇದೆ.

- **ಬೆಟ್ಟದಪುರದಲ್ಲಿ ಸಂಕೇತಿಗಳು ವ್ಯವಸಾಯಕ್ಕೆ ಪೂರಕವಾಗಿ ಏನೇನು ಉಪಕಸುಬನ್ನು ಇಟ್ಟುಕೊಂಡಿದ್ರು?**

  ಮನೇಲಿ ಸೊದೆ ಹುಲ್ಲಿನಲ್ಲಿ ಬುಟ್ಟಿ ಹಾಗೂ ಸೂಟ್‌ಕೇಸ್ ಮಾದರಿಯ ಬುಟ್ಟಿಯನ್ನು ಹೆಣೆದು, ಅದರಲ್ಲಿ ಬಟ್ಟೆಗಳನ್ನು ಇಟ್ಟು ಹೊರಗಡೆ ಪ್ರಯಾಣ ಮಾಡುವಾಗ ತೆಗೆದುಕೊಂಡು ಹೋಗೋರು.

  ಸ್ನಾನ ಸಂಧ್ಯಾವಂದನೆಯ ಉಪಕರಣಗಳನ್ನೂ, ದೇವತಾಕಾರ್ಯಕ್ಕೆ ಹೋಗುವಾಗ ವಿಶೇಷವಾಗಿ ದೇವರನ್ನೂ ಅದರಲ್ಲಿ ಇಟ್ಟುಕೊಂಡು ಹೋಗೋರು, ಪರಸ್ಥಳಕ್ಕೆ ಹೋಗುವಾಗ. ಪ್ರತಿಯೊಬ್ಬರೂ ಮನೇನಲ್ಲಿ ಕಸೂತಿ ಕೆಲಸ ಮಾಡೋರು. ಪ್ರತಿಯೊಬ್ಬರ ಮನೇಲೂ ಊಟದ ಎಲೆ ಹಚ್ಚೋರು, ದೊನ್ನೆ ಕಟ್ಟೋರು. ನಮ್ಮ ಗ್ರಾಮದಲ್ಲಿ ಆ ಕಾಲದಲ್ಲಿ ಒಂದು ಹತ್ತಾರು ಒಕ್ಕಲು ಅನುಕೂಲ ಸ್ಥಿತಿಯಲ್ಲಿದ್ರು, ಅಷ್ಟೆ. ಇನ್ನೆಲ್ಲರೂ ಸಹ ಈ ತರಹದ ಕಸುಬುಗಳನ್ನು ಮಾಡಿ ಜೀವನ ಸಾಗಿಸ್ತಾ ಇದ್ರು. ಅವರ ನೆಂಟರು ಇಷ್ಟರ ಮನೇಲಿ ಹೋಗಿ ಖಾರದಪುಡಿ ಮಾಡೋದು, ಚಟ್ನಿಪುಡಿ, ಉಪ್ಪಿನಕಾಯಿ ಮಾಡೋದು, ಹೀಗೆ ಮಾಡಿ ಬಂದ ವರಮಾನದಿಂದ ಜೀವನ ಸಾಗಿಸ್ತಾ ಇದ್ರು.

- **ಹಿಂದಿನ ದಿನಗಳಲ್ಲಿ ಸಂಕೇತಿಗಳಲ್ಲಿ ಇತರೇ ರೈತರಲ್ಲಿ ಇದ್ದಂತೆ ಒಬ್ಬರ ತೋಟಕ್ಕೆ ಉಳಿದವರು ಹೋಗಿ ಕೆಲಸ ಮಾಡುವ (ಮುಯ್ಯಿ ಆಳು) ಪದ್ಧತಿ ಇತ್ತಾ?**

  ಇತ್ತು, ಅಕ್ಕಪಕ್ಕದ ತೋಟಗಳಿಗೆ ಎಲೆ ಹಂಬಿಗೆ ನೀರು ಹಾಕೋದಕ್ಕೆ ಇವರೂ ಹೋಗೋರು. ಅವರೂ ಬಂದು ಸಹಕರಿಸೋರು. ಇಬ್ಬರೂ ಪರಸ್ಪರ ತೋಟದಲ್ಲಿ ಗುದ್ದಲೀ ಕೆಲಸ ಮಾಡೋರು. ಅದೇ ರೀತಿನಲ್ಲಿ ಅನ್ಯೋನ್ಯತೆಯಲ್ಲಿ ಇದ್ದುಕೊಂಡು, ಕೆರೆ ಅಚ್ಚುಕಟ್ಟಿನಲ್ಲಿ ಒಂದು ಆಗ್ರ ಮಾಡಿದಾಗ ೩೦, ೪೦ ಬಾಗಾಯ್ತಿನ ಜಮೀನ್ದಾರ್ರು ಒಗ್ಗಟ್ಟಿನಲ್ಲಿ ಕೆಲಸ ಮಾಡ್ತಿದ್ರು.

- **ಮತ್ತೆ ಇವತ್ತು ಯಾಕೆ ಮಾಡ್ತಾ ಇಲ್ಲ?**

  ಈಗ ಅವರುಗಳು ಇಲ್ಲವೇ ಇಲ್ಲವಲ್ಲಾ.

- **ಇಲ್ಲಿ ಇರೋರೆ ಯಾಕೆ ಈಗ ಮಾಡ್ತಾ ಇಲ್ಲ?**

  ಇರೋರು ಮಾಡೋದಕ್ಕೆ ಅಕ್ಕಪಕ್ಕದಲ್ಲಿ ಈಗಿರೋರು ಬೇರೆಯವರು. ಅದಲ್ಲದೆ manual labour ಅನ್ನುವುದು ನಮ್ಮಲ್ಲಿ ಈಗ ಪೂರ ಕಡಿಮೆಯಾಗಿದೆ. ಇಲ್ಲವೇ ಇಲ್ಲ. ದೈಹಿಕ ಶ್ರಮಪಡುವ ಆಸಕ್ತಿ ಈಗ ನಮ್ಮ ಜನಾಂಗದಲ್ಲಿ ಉಳಿದಿಲ್ಲ. ಅಲ್ಲದೇ ಬರಿಯ

ಸಂಕೇತಿಗಳೇ ಪೂರ್ಣ ಇದ್ದ ಅಗ್ರದಲ್ಲಿ ಈಗ ಇಬ್ಬರು, ಮೂರು ಜನ ಇದ್ದಾರೆ ಅಷ್ಟೆ.

- **ವ್ಯವಸಾಯಾನೂ ಸಂಸ್ಕಾರಾನೇ, ತಂದೆ ತಾಯಂದಿರೂ ಮಕ್ಕಳಿಗೆ ಇಂತಹ ವಿಚಾರಗಳನ್ನು ತೋಟದಲ್ಲಿ ಹೇಳಿಕೊಡಬೇಕು. ನಿಮ್ಮ ಪೂರ್ವಿಕರಲ್ಲಿ ಈ ಪದ್ಧತಿ ಇತ್ತು ಅಂತ ನೀವೇ ಹೇಳಿದ್ರಿ. ಅದೇ ತರಹ ಇಂದಿನ ತಂದೆ ತಾಯಂದಿರು ಮಕ್ಕಳಿಗೆ ಹೇಳಿಕೊಡದಿರುವುದರಿಂದ ಸಂಕೇತಿ ಪರಂಪರೆಯಲ್ಲಿ ವ್ಯವಸಾಯ ನಶಿಸುತ್ತಿರಬಹುದೆ? ಹಾಗೇ ವ್ಯವಸಾಯ ಮುಂದುವರೆಯುತ್ತಿಲ್ಲದೆ ಇರುವುದಕ್ಕೂ ಇದೇ ಕಾರಣವೆ?**

  ಹೌದು. ಬೇರೆಯವರ ದೃಷ್ಟಿ ನೋಡ್ತಾರೆ. ಏನಪ್ಪಾ, ನಾನು ತೋಟ ಅಗೆದುಕೊಂಡು ಇದ್ರೆ ಯಾವ ಮಹಾ ಸಂಪಾದನೆಯಾಗುತ್ತೆ? ನಾನೂ ವಿದ್ಯಾಭ್ಯಾಸ ಮಾಡಿ ಇಂಜಿನಿಯರ್ ಆಗೋಣ, ಡಾಕ್ಟರ್ ಆಗೋಣ, ಹಣ ಸಂಪಾದನೆ ಮಾಡುವ, ಚೆನ್ನಾಗಿರುವ; ಈ ಕೃಷಿಯಲ್ಲಿ ಏನಿದೆ ಅಂತ ಹಿರಿಯರಲ್ಲೇ ಮೂಡಿದೆ.

- **ನಿಮ್ಮ ತಾತನೇ ಈ ರೀತಿ ಮಾಡಿದ್ರೆ ಇವತ್ತೇ ವ್ಯವಸಾಯ ಇರ್ತಿರಲಿಲ್ಲ ಅಲ್ವಾ?**

  ಇಲ್ಲ...

- **ಆದ್ರೆ ಅವರು ಹಾಗೆ ಮಾಡಲಿಲ್ಲ, ಯಾಕೆ?**

  ಅವರು ಮಾಡಲಿಲ್ಲ ಅಂತ ಹೇಳಿದ್ರೆ, ಅವರು ಅದೇ ರೀತಿ ಅವಕಾಶ ಮಾಡಿಕೊಂಡ್ರು. ನಾವು ಮಾಡುವಂತಹ ದೈಹಿಕ ಶ್ರಮ ಯಾವುದಕ್ಕೂ ನೋವಾಗೋದಿಲ್ಲ. ನಮ್ಮ ನಿಷ್ಠೆಗೆ ಅದು ವಿರೋಧವಲ್ಲ ಅಂತ ವ್ಯವಸಾಯ ಮಾಡಿದ್ರು. ನಿತ್ಯಕರ್ಮಕ್ಕೆ ನಿಷ್ಠರಾಗಿದ್ದ, ವೇದಾಧ್ಯಯನದಿಂದ ಜ್ಞಾನಶಕ್ತಿ, ಆ ಮೂಲಕ ಶಾಂತಿಯನ್ನು ಪಡೀಬಹುದು ಅನ್ನುವ ಭಾವನೆಯೇ ಅವರಿಗೆ ಮುಖ್ಯವಾಗಿತ್ತು.

- **ಸಂಕೇತಿಗಳು ಎಲ್ಲಿಯೇ ಹೋದರೂ ಕೆರೆ ತಳಗಿನ ಜಾಗವನ್ನೇ ಆಶ್ರಯಿಸಿದ್ರು. ಅಡಿಕೇ, ವಿಳ್ಳೇದೆಲೆನೇ ಮಾಡ್ತಿದ್ರು. ಯಾಕೆ? ಈ ಗುಣ ಸಂಕೇತಿಗಳಲ್ಲಿ ಹ್ಯಾಗೆ ಬಂದಿರಬಹುದು?**

  ಈ ಪ್ರಕೃತಿಯಲ್ಲಿ ಏರುಪೇರಾಗಿ ನಾಲ್ಕಾರು ವರುಷ ಕ್ಷಾಮ ಬಂದ್ರೂ. ಕೆರೆ ಅಚ್ಚುಕಟ್ಟಿನಲ್ಲಿರುವ ಬಾಗಾಯ್ತಿನಲ್ಲಿ ಗುಣ ಇರುತ್ತೆ, ಬೆಳೆ ಹಾಳಾಗೋದಿಲ್ಲ. ಇತರೇ ಬೆಳೆಗೂ ಬಾಗಾಯ್ತಿಗೂ ಬಹಳ ವ್ಯತ್ಯಾಸವಿದೆ. ಬಾಗಾಯ್ತಿನಲ್ಲಿ ಒಂದು ರೂಪಾಯಿ ಹಾಕಿದ್ರೆ ಎಂತಹ ಪ್ರಕೃತಿ ವಿಕೋಪವಾದ್ರೂ ಐವತ್ತು ಪೈಸೇನಾದ್ರೂ ಉಂಟೇ ಉಂಟು. ಜೀವನಕ್ಕೆ ನೋವಿಲ್ಲ. ಖುಷ್ಕಿ ಕೃಷಿ ಬೆಳೆ ಹ್ಯಾಗಪ್ಪಾ ಅಂದ್ರೆ ಮಳೆಯಾದ್ರೆ ಉಂಟು, ಮಳೆ ಹೋದರೆ ಇಲ್ಲವೇ ಇಲ್ಲ.

- **ನಿಮ್ಮ ತಾತ, ಮುತ್ತಾತಂದಿರ ಬಗ್ಗೆ, ಅವರ ಬಗ್ಗೆ ಇರುವ ಘಟನೆಗಳು, ಬದುಕಿದ ರೀತಿ ಅವುಗಳ ಬಗ್ಗೆ ಹೇಳಿ.**

  ಹಿಂದಿನ ಕಾಲದಲ್ಲಿ ನಮ್ಮ ಊರಲ್ಲಿ ಎಲ್ಲರೂ ಪರಸ್ಪರ ಸಹಕಾರದಲ್ಲಿ ಯಾವುದೇ ಸಮಾರಂಭ, ದೇವತಾಕಾರ್ಯವನ್ನು ನಡೆಸ್ತಾ ಇದ್ರು. ತಮ್ಮ ಕೈಲಾದ ನೆರವನ್ನು ನೀಡೋರು. ಈಗ ಪ್ರತಿಯೊಬ್ಬರೂ ಅವರವರ ಮನೆ ಯೋಗಕ್ಷೇಮ ಅಷ್ಟೇ ಗಮನಿಸ್ತಾರೆ. ನಮ್ಮ ತಂದೆ ಶಾಮಣ್ಣನವರು ಉಪಾಧ್ಯಾಯರಾಗಿದ್ರು. ಹಾಗಾಗಿ ಅವರು ಪರಸ್ಥಳದಲ್ಲಿದ್ರು. ನಮ್ಮ ದೊಡ್ಡಪ್ಪ ವ್ಯವಸಾಯಗಾರರು. ಆದ್ರಿಂದ ತಂದೆಯ ಆಸ್ತೀನ ಇವರೇ ನೋಡ್ಕೋರು. ಬಂದಂಥ ಪ್ರತಿಫಲಾನ ಇಬ್ಬರೂ ಹಂಚಿಕೊಳ್ಳೋರು. ನಮ್ಮ ತಾತಂಗೆ ಮೂರು ಜನ ಗಂಡು ಮಕ್ಕಳು. ಅವರ ಹಿರಿಯ ಮಗನಂತೂ ಪ್ರತಿ ದಿನ ಯೋಗ ಮಾಡೋರಂತೆ. ತಂದೆ ಹೇಳ್ತಾ ಇದ್ರು. ಸಂಜೆ ಆರರಿಂದ, ಏಳು ಘಂಟೆಯವರೆಗೆ ಯೋಗದಲ್ಲಿ ಕುಳಿತ್ರೆ, ನೆಲದಿಂದ ಎರಡು, ಮೂರು ಅಡಿ ಮೇಲಿರೋರಂತೆ; ಹಾಗೇ ತೂಗಾಡ್ತಾ ಇರೋರಂತೆ. ಶಾಮಿ ಉಪಾದ್ರು ಅಂತ, ನಮ್ಮ ಹಿರಿಯ ದೊಡ್ಡಪ್ಪ ಅವರು. ಹಾಗೇ ವ್ಯವಸಾಯ ಮಾಡ್ತಿದ್ದ ಎರಡನೆಯ ದೊಡ್ಡಪ್ಪ ಬಾಗಾಯ್ತನ್ನು ಸ್ವತಃ ಮಾಡೋರು, ಗದ್ದೇನ ಮಾಡೋರು.

- **ನಿಮ್ಮ ಬಗ್ಗೆ ಹೇಳಿ, ಅನಂತಕೃಷ್ಣಪ್ಪನವರೆ?**

  ನಾನು ೧೯೪೮-೪೯ರಲ್ಲಿ SSLC ಪರೀಕ್ಷೆಗೆ ಹೋಗಬೇಕು ಅನ್ನುವ ಸಂದರ್ಭದಲ್ಲಿ ಮಹಾತ್ಮಾಗಾಂಧಿ ಕೊಲೆಯಾಯ್ತು. ನಾನು RSSನಲ್ಲಿದ್ದೆ. ಆಗ ನನ್ನನ್ನು ಬಂಧಿಸಿ, ಬೆಳಗಾಂ ಜೈಲಿನಲ್ಲಿ ಮೂರು ತಿಂಗಳು ಕಾಲ ಇಟ್ಟಿದ್ರು. ಕಾನೂನಿನ ಮಿತಿಯಿಂದ ಯಾರ್‍ಯಾರು

ವಿದ್ಯಾರ್ಥಿಗಳು ಇದ್ದಾರೆ ಅವರನ್ನು ಬಿಡುಗಡೆ ಮಾಡಬೇಕು ಅನ್ನುವ ಘೋಷಣೆ ಸರ್ಕಾರದಿಂದ ಆದಾಗ, ನನ್ನ ಬಿಡುಗಡೆಯಾಯ್ತು. ಕಾರಾಗೃಹಕ್ಕೆ ಬಂದವರಲ್ಲಿ ಹೈಸ್ಕೂಲ್ ಶಿಕ್ಷಕರಿದ್ರು. ಅವರೆಲ್ಲರೂ ಸಹ ಯಾರ್‍ಯಾರು ವಿದ್ಯಾರ್ಥಿಗಳಿದಾರೆ ಅವರಿಗೆಲ್ಲಾ ಜೈಲಿನಲ್ಲೇ ವಿದ್ಯಾಭ್ಯಾಸ ಮಾಡಿಸಿದ್ರು. ನಾನು ಹೊರಗೆ ಬಂದ ಮೇಲೆ ಪರೀಕ್ಷೆಗೆ ಕೇವಲ ಎಂಟು ದಿನ ಉಳಿದಿತ್ತು. ಆಗ ನಮ್ಮ head master ಬಿ.ಟಿ. ಕೇಶವ ಅಯ್ಯಂಗಾರ್‍ರು. ಅವರೇ ನನ್ನ exam fee ಕಟ್ಟಿ, hall ticket ತೆಗೆದು ಇಟ್ಟಿದ್ರು. ನಾನು ಪರೀಕ್ಷೆಲಿ ಬರೆದು first classನಲ್ಲಿ pass ಮಾಡಿದೆ. ನಾನು English medium student. ನಂತರ ವಿದ್ಯಾಭ್ಯಾಸ ಮಾಡಿಸಲು ತಂದೆ ಇಷ್ಟಪಡಲಿಲ್ಲ. ಮನೇ ಹತ್ರಾನೇ ನನ್ನನ್ನು ಇಟ್ಟುಕೊಂಡ್ರು. ನಮ್ಮ ತಂದೆಗೆ ನಾವು ಇಬ್ಬರು ಗಂಡುಮಕ್ಕಳು, ಐದು ಜನ ಹೆಣ್ಣುಮಕ್ಕಳು.

- **ನೀವೇ ಯಾಕೆ ಬಂದ್ರಿ ವ್ಯವಸಾಯಕ್ಕೆ?**

  ನನ್ನ ತಂದೆ ಯಾವಾಗ ನನಗೆ ಹೊರಗಡೆ ಹೋಗಬೇಡ ಅಂತ ಹೇಳಿದ್ರೋ ಆಗ ನಾನು ಅವರು ಮಾಡಿದ ಸ್ವಲ್ಪ ಪ್ರದೇಶದ ಜಮೀನನ್ನೇ ರೂಢಿಸಿದೆ. ವ್ಯವಸಾಯವನ್ನಷ್ಟೇ ಮಾಡಿ ನಾನು ಮುಂದುವರೆಯಲು ಸಾಧ್ಯ ಇಲ್ಲಅಂತ ಹೇಳಿ ಸ್ಥಳೀಯವಾಗಿರುವ ಒಂದು ಸಹಕಾರ ಸಂಸ್ಥೇಲಿ ಕಾರ್ಯದರ್ಶಿಯಾಗಿ ಸೇರಿ, ಇತ್ತೀಚೆಗೆ ನಾಲ್ಕು ವರುಷದ ಹಿಂದೆ ನಾನು ಅಲ್ಲಿಂದ ನಿವೃತ್ತನಾದೆ. ನಾನು Diploma in Co-operation ಸಹಾ ಮಾಡಿದ್ದೀನೆ.

- **ಬಾಲ್ಯದಲ್ಲಿ ನಿಮಗೆ ವ್ಯವಸಾಯದ ಬಗ್ಗೆ ಆಸಕ್ತಿ ಇತ್ತಾ?**

  ಇತ್ತು. ಅಕ್ಕಪಕ್ಕದವರು ಎಲ್ಲಾ ವ್ಯವಸಾಯ ಮಾಡೋದನ್ನ ನೋಡಿ, ನಾನೂ ಬೇಸಾಯ ಮಾಡಬೇಕು ಅಂದುಕೊಂಡಿದ್ದೆ. ೩೦ ಗುಂಟೆ ಪ್ರದೇಶಾನ ನಮ್ಮ ಅಣ್ಣನವರ ಹತ್ರಾನೇ ಖರೀದಿಗೆ ಪಡೆದು, ವ್ಯವಸಾಯ ಆರಂಭಿಸಿದೆ. ಈಗ ನನಗೆ ಮೂರು ಎಕರೆ ಬಾಗಾಯ್ತು ಇದೆ. ಅಕ್ಕಪಕ್ಕ ಜಮೀನನ್ನೂ ನಾನೇ ಖರೀದಿ ಮಾಡಿದೆ. ಸಹಕಾರ ಸಂಘದಲ್ಲಿ ಕೆಲಸ ಮಾಡುವಾಗಲೂ ನಾನು ರೈತರೊಂದಿಗೆ ಹೆಚ್ಚಿನ ಸಂಪರ್ಕ ಇಟ್ಟುಕೊಂಡಿದ್ದೆ. ವ್ಯವಸಾಯ ನನ್ನ ಮುಖ್ಯ ಉದ್ದೇಶ. Born gift ಅನ್ನುವ ಹಾಗೆ ಸಂಕೇತಿಗಳಿಗೆ ಬಾಗಾಯ್ತು ರಕ್ತಗತವಾಗಿ ಬಂದಿದೆ. ಇದು ನನಗೆ ಒಳ್ಳೆಯ ಫಲಪ್ರದವಾಯ್ತು.

- **ಸ್ವತಃ ನೀವೇನು ಕೆಲಸ ಮಾಡ್ತಿದ್ರಿ?**

  ನಾನು ಗುದ್ದಲೀ ಕೆಲಸ ಮಾಡ್ತಿದ್ದೆ. ಎಲೆ ಹಂಬಿಗೆ ನೀರು ಹಾಕ್ತಿದ್ದೆ. ಹಂಬು ಕಟ್ತಿದ್ದೆ. ತೋಟದ ಎಲ್ಲಾ ಕೆಲಸ ಮಾಡ್ತಿದ್ದೆ. ನನ್ನ ೧೯ನೇ ವಯಸ್ಸಿನಿಂದ ನಾನು ಇಲ್ಲಿ ಉಳಿದು ವ್ಯವಸಾಯ ಮಾಡ್ತಾ ಇದೀನಿ.

- **ನಿಮ್ಮ ಕುಟುಂಬದಲ್ಲಿ ವ್ಯವಸಾಯಕ್ಕೆ ಸ್ತ್ರೀಯರ ಕೊಡುಗೆ ಏನು?**

  ನನ್ನ ಹೆಂಡತಿಯ ಸೋದರಮಾವ ಸ್ವಂತ ಜಮೀನ್ದಾರ್‍ರು. ಅವರು ಇಲ್ಲಿ ಪಕ್ಕದಲ್ಲಿ ಸೀಗೇಕೊರೆ ಕಾವಲು ಅಂತ ಇದೆ, ಅಲ್ಲಿ ನೂರಾರು ಎಕರೆ ಭೂಮಿ ಇದೆ, ಈಗಲೂ ವ್ಯವಸಾಯ ಮಾಡ್ತಿದಾರೆ. ನಮ್ಮ ಅತ್ತೆ, ಮಾವನ ಮನೆಯವರೂ ಸಹ ವ್ಯವಸಾಯಗಾರರು. ನನ್ನ ಹೆಂಡತಿ ಸಹ ದನಕರುಗಳ ಪೋಷಣೆ, ಹಾಗೇ, ಪ್ರತಿಯೊಂದನ್ನು ಸಹ ಮಾಡಿದಾಳೆ. ಆಳುಕಾಳುಗಳಿಗೆ ಊಟ ಉಪಚಾರ, ಹಾಗೇ ಎಲ್ಲ ಕೆಲಸಕ್ಕೂ ಸಹಕಾರ ನೀಡಿದಾಳೆ. ನಮ್ಮಜ್ಜಿ ವ್ಯವಸಾಯದ ಕೆಲಸ ಮಾಡ್ತಿದ್ರು. ಅವರು ತೋಟಕ್ಕೆ ಹೋಗಿ ಯಜಮಾನರ ಜತೆ, ಸೆತ್ತೆ ಕೀಳೋದು, ಗೊಬ್ಬರ ಮಣ್ಣು ಹೊರೋದು, ಈ ಎಲ್ಲ ಕೆಲಸ ಮಾಡೋರು.

- **ವ್ಯವಸಾಯದಲ್ಲಿ ಅಭಿವೃದ್ಧಿಯಾಗುವುದು ಕಷ್ಟ ಅಂತ ನೀವು ಬೇರೆ ಕೆಲಸ ಹಿಡಿದ್ರಾ?**

  ಇಲ್ಲ. ಅದೊಂದು ಉಪಕಸುಬಾಗಿ ಇರಲಿ ಅಂತ. ಯಾಕೇಂದ್ರೆ, ಜೀವನದಲ್ಲಿ ಒಬ್ಬ ಮನುಷ್ಯ ನಾಲ್ಕಾರು ಜನಕ್ಕೆ ಪರಿಚಿತನಾಗಿ, ನಾಲ್ಕಾರು ಜನರಲ್ಲಿ ಸಹೃದಯತೆಯಿಂದ ಇದ್ದಾಗ, ನಮ್ಮ ಕೆಲಸಕ್ಕೂ ಅನುಕೂಲ. ಅದ್ರಿಂದ ಸಂಪರ್ಕ ಸಹ ಹೆಚ್ಚಿಗೆ ಆಗುತ್ತೆ. ಬರ್‍ತಾ ಇರುವ ಉತ್ಪತ್ತಿ ಜತೆಗೆ, ಸ್ಥಳೀಯವಾಗಿ ಎಲ್ಲರ ಜತೆ ಸಂಪರ್ಕ ಇಟ್ಟುಕೊಂಡಾಗ, ಹೆಚ್ಚಿನ ಅವಕಾಶ ಇರುತ್ತೆ. ಇತರೇ ರೈತಾಪಿವರ್ಗ ಹಾಗೂ ಅಧಿಕಾರಿವರ್ಗದಲ್ಲಿ ಒಂದು ವಿಶ್ವಾಸ ಇದ್ದಾಗ ನಮ್ಮ ಅಭಿವೃದ್ಧಿಗೆ ನೆರವಾಗುತ್ತೆ ಅಂತ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾದೆ.

- **ವ್ಯವಸಾಯದಲ್ಲಿ ಏನೇನು ಸಾಧನೆ ಮಾಡಿದ್ರಿ?**

ಮೊಟ್ಟಮೊದಲನೆಯದಾಗಿ, ಇದ್ದಂತಹ ಅಡಿಕೆ ಫಸಲನ್ನು ಹೆಚ್ಚಿನ ಮಟ್ಟದಲ್ಲಿ ಮಾಡಿದೀನಿ. ತೆಂಗಿನ ಫಸಲೂ ಹೆಚ್ಚಾಗಿದೆ. ಬಾಗಾಯ್ತಿನ ಆದಾಯ ಸಹ ಹೆಚ್ಚಿದೆ. ತಂದೆ ಬಹಳ ಕಡಿಮೆ ಪ್ರದೇಶದಲ್ಲಿ ಆಳುಗಳನ್ನು ಇಟ್ಟು ಬೇಸಾಯ ಮಾಡ್ತಿದ್ರು. ಪ್ರತಿಫಲ ಕಡಿಮೆ ಇತ್ತು. ನಾನು ಸ್ವತಃ ಮಾಡಿದ ಮೇಲೆ ಪ್ರತಿಫಲ ಜಾಸ್ತಿ ಆಯ್ತು. ನಾನು ತೋಟಕ್ಕೆಲ್ಲಾ ಹನಿ ನೀರಾವರಿ (Drip Irrigation) ಅಳವಡಿಸಿದ್ದೇನೆ. ಗಿಡಗಳಿಗೆ ನೀರಿನ ಪೂರೈಕೆ ಚೆನ್ನಾಗಿದ್ದಿದ್ರಿಂದ ಅಡಿಕೆ ಇಳುವರಿ ಜಾಸ್ತಿ ಆಯ್ತು. ಹಾಗೇ ನಾನು ಹಾಗೂ ನನ್ನ ಪಕ್ಕದ ತೋಟದವರೂ ಸೇರಿ ಇತ್ತೀಚೆಗೆ ಆಫ್ರಿಕಾ ಜಾತಿಯ ಎರೆಹುಳುಗಳನ್ನು ಸಾಕಾಣಿಕೆ ಮಾಡುವ ಯೋಜನೆ ಆರಂಭಿಸಿ ಸಾವಯವ ಗೊಬ್ಬರ ತಯಾರಿಸುವುದರಲ್ಲಿದ್ದೇವೆ. ವಿವಿಧ ಇಲಾಖೆಗಳ ಸಂಪರ್ಕ ಇದ್ದುದರಿಂದ ಇದನ್ನೆಲ್ಲಾ ಮಾಡಲು ಸಾಧ್ಯವಾಯ್ತು. ಹನಿ ನೀರಾವರಿಗೆ ಸರ್ಕಾರದ ಸಹಾಯಧನ ಕೂಡ ಪಡೆದಿದ್ದೇನೆ. ಬಾಗಾಯ್ತು ಜಮೀನು ಕಪ್ಪುಮಿಶ್ರಿತ ಮಣ್ಣಿನಿಂದ ಕೂಡಿರಬೇಕು. ಅಡಿಕೆ ಗಿಡಾನ ಏಳಿಸಬೇಕಾದ್ರೆ, ಗೋಟನ್ನು ಹಾಕಿ ಸಸಿ ಏಳಿಸಿ ಒಂಭತ್ತು ಅಡಿ, ಒಂಭತ್ತು ಅಡಿ ಅಂತರದಲ್ಲಿ ಬೇರೆ ಕಡೆ ಬದಲಾಯಿಸಿ, ಅದಕ್ಕೆ ಪ್ರತಿವರುಷ ಪಾತಿ ಮಾಡಿ, ಗೊಬ್ಬರ, ಸಾವಯವಗೊಬ್ಬರ, ಬೇವಿನಹಿಂಡಿ, ರಾಸಾಯನಿಕ ಗೊಬ್ರಾನೂ ಬಳಸಿ, ಐದು, ಆರು ವರುಷದಲ್ಲಿಯೇ ಫಸಲು ಪಡೀಬಹುದು. ರೋಗ ಬಂದಾಗ ಇಲಾಖೆ ಹಾಗೂ ರೈತಾಪಿ ವರ್ಗದಿಂದ ತಿಳಿದು ಬೇವಿನಹಿಂಡಿ, ಬೇವಿನಸೊಪ್ಪು, ಹೊಂಗೆ ಸೊಪ್ಪು, ಹಸಿರುಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಟ್ಟು, ನಾವು ಫಲ ಪಡೀತಿದೀವಿ.

- **ವಿಳ್ಳೇದೆಲೆ ಹಂಬಿನ ವ್ಯವಸಾಯ ಯಾವ ರೀತಿ ಮಾಡಬೇಕು?**

ಎಲೆ ಹಂಬಿನಲ್ಲಿ, ನಿಜಕ್ಕೂ ಹೇಳೋದಾದ್ರೆ ಅದರ ಆದಾಯ ಹ್ಯಾಗಿದೆ ಅಂದ್ರೆ - ಬ್ಯಾಂಕಿನಲ್ಲಿ ಪ್ರತಿಯೊಬ್ಬನ ಲೆಕ್ಕದಲ್ಲಿ Deposit ಇದ್ದ ಹಾಗೆ. ಎಲೆ ಹಂಬು ಬಾಗಾಯ್ತಿನಲ್ಲಿದ್ರೆ deposit ಇದ್ದ ಹಾಗೆ. ಪ್ರತಿ ದಿನ ಬೆಳೇನ ಬೇಕಾದ್ರೆ ಖಟಾವು ಮಾಡಬಹುದು, ಪ್ರತಿನಿತ್ಯ ವರಮಾನ ಪಡೀಬಹುದು. ಅದೂ ಅಲ್ಲದೆ ವಿಳ್ಳೇದೆಲೆ ಹಂಬು ತೋಟದಲ್ಲಿದ್ರೆ, ಮನೇಲಿ ಒಬ್ಬ ಗೃಹಿಣಿ ಇದ್ರೆ ಯಾವ ರೀತಿ ಮನೆ ಶುಚಿತ್ವವಾಗಿ ಇರುತ್ತೋ, ಆ ರೀತಿ ಎಲೆ ಹಂಬಿನ ತೋಟಗಳು ಅಷ್ಟೇ ಶುಚಿಯಾಗಿರುತ್ವೆ. ಕಸಕಡ್ಡಿಗಳಿಲ್ಲದೆ ತೋಟ ಶುಭ್ರವಾಗಿರುತ್ತೆ. ಅದಕ್ಕೆ ತೋಟದಲ್ಲಿ ಎಲೆಹಂಬು ಇರುತ್ತೆ. ಅದ್ರಿಂದ ಬಾಗಾಯ್ತು ಜಮೀನು ಉತ್ಕೃಷ್ಟವಾಗಿರುತ್ತೆ.

- **ನೀವು ತಂಬಾಕನ್ನು ಯಾಕೆ ಬೆಳೀಲಿಲ್ಲ?**

ಮನೇಲಿ ನಾಲ್ಕಾರು ಜನ ಸ್ವತಃ ವ್ಯವಸಾಯ ಮಾಡೋರು ಇದ್ರೆ ಹೊಲದ ಬೆಳೆ ಮಾಡಬಹುದು. ಅದ್ರಿಂದ ಉತ್ಪತ್ತಿ ಪಡೀಬಹುದು. ಹದ, ಬೆದೆ ನೋಡಿ, ಸಮಯಕ್ಕೆ ಸರಿಯಾಗಿ ಬೇಸಾಯ ಮಾಡಬೇಕು. ಹೊರಗಡೆಯಿಂದ ಕೂಲಿಯಾಳುಗಳನ್ನು ಕೆಲವು ಬಾರಿ ಕರೆಸಲು ಹಣದ ಸೌಕರ್ಯ ಇರಬೇಕು. ಅದೂ ಅಲ್ಲದೆ ಈ commercial crop ಬೆಳೆಯಲು ನನ್ನಲ್ಲಿ ಅಷ್ಟು ಸಾಮರ್ಥ್ಯ ಇರಲಿಲ್ಲ.

- **ನಿಮ್ಮ ಸಹಕಾರ ಸಂಘದ ಬಗ್ಗೆ ಹೇಳಿ?**

ನಾನು ೧೯೫೭ರಲ್ಲಿ ಆ ಸಂಸ್ಥೆಗೆ ಸೇರಿದೆ. ಅದನ್ನು ಬಹಳ ಪುರೋಭಿವೃದ್ಧಿಗೆ ತಂದೆ. ಪ್ರತಿಯೊಬ್ಬ ರೈತನ ಮನೆಗೂ ಹೋಗಿ, ನೀವು ಸಂಘದ ಸದಸ್ಯರಾಗಬಹುದು, ಸಾಲ ಸೌಲಭ್ಯ ಸಿಗುತ್ತೆ, ಗೊಬ್ಬರದ ಅನುಕೂಲ ಇರುತ್ತೆ ಎಂದು ತಿಳಿಸಿ ಅವರನ್ನು ಪ್ರಚೋದಿಸಿದೆ. ನಾನು ಸೇರಿದಾಗ ೧೨೦ ಜನ ಷೇರುದಾರರು ಇದ್ರು, ನಾನು ಸಂಸ್ಥೆ ಬಿಡುವಾಗ ೧೮೦೦ ಜನ ಷೇರುದಾರರಾಗಿ ಸಾಲದ ಸೌಲಭ್ಯ ಪಡೆದಿದ್ರು. ಪ್ರತಿಯೊಬ್ಬರೂ ಸುಮಾರು ೪೦ ರಿಂದ ೫೦ ಸಾವಿರ ರೂಪಾಯಿ ಸಾಲ ಪಡೆಯುವ ಮಟ್ಟದಲ್ಲಿದ್ರು. ಸಂಸ್ಥೆ ಸಂಪೂರ್ಣವಾಗಿ ಲಾಭದಲ್ಲಿಯೇ ಬಂತು, ಆಡಿಟ್ ವರದಿಯಲ್ಲಿ A ಗ್ರೇಡ್ ಪಡೆದಿತ್ತು. ಬಂದಂತಹ ಆಡಳಿತ ಮಂಡಳಿಯವರು, ಅಧಿಕಾರಿಗಳೂ ಸಹ ಆ ಸಂಘದ ಅಭಿವೃದ್ಧಿಗೆ ಶ್ರಮಿಸಿದ್ರು. ಸಂಕೇತಿಗಳಲ್ಲಿ ಬಿ.ಸಿ. ನಾರಾಯಣಸ್ವಾಮಿ, ಬಿ.ಎನ್.ರಾಮಣ್ಣ, ಬಿ.ವಿ. ಕೃಷ್ಣಪ್ಪ, ಬಿ.ಕೆ. ಚಿಕ್ಕಸುಬ್ಬರಾಯ ಅನ್ನುವವರು ಆ ಸಂಘದ ಅಧ್ಯಕ್ಷರಾಗಿದ್ರು. ನಮ್ಮ ಬೆಟ್ಟದಪುರದ ಇತರ ಸಂಕೇತಿಗಳೂ ಸಹ ವ್ಯವಸಾಯದ ಅಭಿವೃದ್ಧಿಗೆ ಸಾಲ ಪಡೆದು, ನೆರವು ಪಡೆದಿದ್ದಾರೆ.

- **ಸಮುದಾಯದ ಚಿಂತನೆ ಸಂಕೇತಿಗಳಲ್ಲಿ ಉತ್ತಮವಾಗಿತ್ತು. ನಾವೊಬ್ಬರು ಚೆನ್ನಾಗಿದ್ದರೆ ಸಾಲದು, ಸಮುದಾಯವೂ ಚೆನ್ನಾಗಿರಬೇಕು ಅನ್ನುವ ಆಸೆ ಇದ್ದ ಹಿರಿಯರು ನಿಮ್ಮಲ್ಲಿ ಇದ್ರಾ? ಬೆಟ್ಟದಪುರದ ಅಭಿವೃದ್ಧಿಗೆ ಇಲ್ಲಿನ ಸಂಕೇತಿಗಳು ನೀಡಿದ ಕೊಡುಗೆ ಏನು?**

ಊರಿನ ಅಭಿವೃದ್ಧಿಗೆ, ಇತ್ತೀಚೆಗೆ ಒಂದು ಕಲ್ಯಾಣಮಂಟಪದ ನಿರ್ಮಾಣಕ್ಕೆ ಹೆಚ್ಚಿನ ನೆರವು ನೀಡಿದಾರೆ. ಗ್ರಾಮದ ದೇವತಾಕಾರ್ಯದಲ್ಲಿ

ಭಾಗಿಯಾಗಿದಾರೆ. ದೇವಸ್ಥಾನಗಳನ್ನು ನಿರ್ಮಾಣ ಮಾಡಿದಾರೆ. ಓಂಕಾರೇಶ್ವರ ಸ್ವಾಮಿ ದೇವಸ್ಥಾನ, ಕಾಶಿ ವಿಶ್ವನಾಥ, ಶಾಂತವೀರಮ್ಮ ಅನ್ನುವ ಗ್ರಾಮದೇವತೆ, ಬೆಟ್ಟದ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಕೋದಂಡರಾಮ ದೇವಸ್ಥಾನವನ್ನು ನಮ್ಮ ಹಿರಿಕರು ಅಭಿವೃದ್ಧಿ ಮಾಡಿದಾರೆ. ಗ್ರಾಮದ ಪ್ರತಿಯೊಂದು ಕೆಲಸದಲ್ಲೂ ಭಾಗಿಯಾಗಿದಾರೆ.

- **ಸಂಕೇತಿಗಳನ್ನು ನೋಡಿ ಇತರರು ಎಲೆ, ಅಡಿಕೆ ಬೇಸಾಯ ಆರಂಭಿಸಿರಬಹುದಾ?**

  ಹೌದು, ಮುಂಚೆ ಇತರರಿಗೆ ಬಾಗಾಯ್ತು ಇರಲಿಲ್ಲ. ನಾವು ಬಾಗಾಯ್ತಿನಲ್ಲಿ ಹೆಚ್ಚಿನ ಶ್ರದ್ಧೆ ಮಾಡಿದ್ರೆ ನಮ್ಮ ಜೀವನವೂ ಸ್ವಸ್ಥ ಆಗುತ್ತೆ ಅಂತ, ಬಾಗಾಯ್ತಿನ ಬೇಸಾಯವನ್ನು ಸಂಕೇತಿಗಳಿಂದಲೇ ಕಲಿತಿದ್ದಾರೆ ಅಂತ ಹೇಳೋದ್ರಲ್ಲಿ ತಪ್ಪಿಲ್ಲ.

- **ಹಿಂದಿನವರು ಮನೋರಂಜನೆಗೆ ಸಂಗೀತ ಕಲಿತಿದ್ರು. ನೀವು ನಿಮ್ಮ ಕೌಟುಂಬಿಕ ಮನೋರಂಜನೆಗೆ ಏನು ಮಾಡಿದ್ರಿ? ಅಂದ್ರೆ ನೀವೊಬ್ಬರು ಖುಷಿಯಾಗಿರೋಕೆ ಅಲ್ಲ, ನಿಮ್ಮ ಮನೆಯವರೆಲ್ಲರೂ ಸಂತೋಷವಾಗಿರಲು ಏನು ಮಾಡಿದ್ರಿ?**

  ಮನೆಯಲ್ಲಿ ಆಡುವ ಆಟಪಾಟಗಳನ್ನು ಆಡ್ತಿದ್ವಿ. ಚಿಕ್ಕಂದಿನಿಂದಲೂ ನಾನು ನಾಟಕಗಳನ್ನು ಆಡ್ತಿದ್ದೆ. ಮನೆಯವರು ಬಯಲು ನಾಟಕಗಳಿಗೆ ಬರಲು ಪ್ರೋತ್ಸಾಹ ನೀಡ್ತಿದ್ದೆ. ನಾನು ನಾಟಕದಲ್ಲಿ part ಮಾಡ್ತಿದ್ದೆ. ನಮ್ಮ ಜನಾಂಗದವರೂ ಸಹ ಮಾಡ್ತಿದ್ರು. ಹಿರಿಯರು, ಕಿರಿಯರು ಭೇದ ಇರಲಿಲ್ಲ. ಈಗ ಒಂದು ಇಪ್ಪತ್ತು ವರುಷಗಳ ಹಿಂದೆಯೂ ಸಹ ಬೆಟ್ಟದಪುರದ ಜಾತ್ರಾ ಸಂದರ್ಭದಲ್ಲಿ ನಮ್ಮ ಜನಾಂಗದವರದ್ದೇ ನಾಟಕದ ಕಂಪನಿಗಳು ಎರಡು ಮೂರು ಇರೋವು. ಮಲ್ಲಿಕಾರ್ಜುನಸ್ವಾಮಿ ನಾಟಕದ ಮಂಡಳಿ, ಲಕ್ಷ್ಮೀಕೇಶವನಾಟಕ ಮಂಡಳಿ, ಹಾಗೂ ಕೋದಂಡರಾಮ ಮಂಡಳಿ ಅಂತ ಇತ್ತು. ಕೃಷಿಕರೂ ಸಹ ಮನೋರಂಜನೆಗೆ ನಾಟಕ ಮಾಡೋರು.

- **ವ್ಯವಸಾಯಸ್ಥ ಕುಟುಂಬಕ್ಕೆ ಈಗ ಸಂಕೇತಿಗಳೇ ಹೆಣ್ಣು ಕೊಡದಿರಲು ಕಾರಣ ಏನು?**

  ಆದಾಯ ಕಮ್ಮಿ. ಹಳ್ಳಿಗಾಡಿಗೇ ಏಕೆ ಕೊಡಬೇಕು, ಎಲ್ಲರೂ ಪಟ್ಟಣದಲ್ಲಿರೋಣ ಅನ್ನುವ ಅಭಿಪ್ರಾಯ ಹಲವರಲ್ಲಿದೆ. ನನ್ನ ಹೆಣ್ಣು ಮಕ್ಕಳನ್ನು ವ್ಯವಸಾಯಸ್ಥರಿಗೆ ಕೊಡುವ ಆಸೆಯಿದೆ. ನನ್ನ ಮಗಳು ಕೆಲಸದಲ್ಲಿದ್ರೂ, ವ್ಯವಸಾಯಸ್ಥರನ್ನು ಮದುವೆಯಾಗಲು ಸಿದ್ಧಳಿದ್ದಾಳೆ.

- **ನಿಮ್ಮ ಮದುವೆಯ ಸಂಭ್ರಮ, ಸಡಗರದ ಆಚರಣೆಗಳ ಬಗ್ಗೆ ಹೇಳಿ?**

  ನನ್ನ ಮದುವೆ ಬೆಟ್ಟದಪುರದ ದಿಡ್ಡೆ ಚಂದ್ರಶೇಖರ ಉಪಾಧ್ಯರ ಮನೇಲಿ ಆಗಿದ್ದು, ೧೯೫೭ರಲ್ಲಿ. ನನ್ನ ಮದುವೆ ಐದು ದಿನದ್ದು. ಮೊದಲನೆಯ ದಿನ ವರಪೂಜೆ, ಮಾರನೆ ದಿವಸ ಧಾರೆ, ಅದರ ಮಾರನೆಯ ದಿನ ನಾಗೋಲಿ, ಅದರ ಮಾರನೆಯ ದಿನ ಕಾಚಿನಕಾಯಿ, ಐದನೇ ದಿನ ಬೀಗರ ಔತಣ. ಕಾಚಿನಕಾಯಿ ಅಂದ್ರೆ ಗಂಡು ಹಾಗೂ ಹೆಣ್ಣಿನ ಕಡೆಯವರು, ಭಕ್ಷ್ಯ ಭೋಜ್ಯಾದಿಗಳನ್ನುಮಾಡಿ, ಅದರಲ್ಲಿ ಪರಸ್ಪರ ಹೊಡೆದಾಡೋದು. ಹೂವಿನ ಚಂಡು ಕಟ್ಟಿ ಗಂಡು-ಹೆಣ್ಣಿನ ಹತ್ರ ಆಡಿಸೋದು. ಮದುವೆ ಸಂತೋಷದ ಸಮಾರಂಭ. ಕೋಡಂಗಿ ಸಭೆ ಅಂತ ನಡಿಯೋದು. ಹುಡುಗಿ ಸೋದರಮಾವ ಕೋಡಂಗಿ ಅಂತ ಒಂದು ಭೂತಾಕಾರದ ಅವತಾರದಲ್ಲಿ ಒಂದು ಒನಕೆ ಹಿಡಿದು, ಮದುವೆ ಗಂಡು ಹೆಣ್ಣು ಹಾಗೂ ಜನಾಂಗ ಬೆಚ್ಚಿಬೀಳುವಂತೆ ಮಾಡೋರು, ತಕ್ಷಣ ಗೋಚರಿಸೋರು. ಇದೂ ಕೂಡ ಕಾಚಿನಕಾಯಿ ದಿವಸವೇ ನಡಿಯೋದು.

- **ವ್ಯವಸಾಯದಲ್ಲಿ ನಿಮಗೆ ತೃಪ್ತಿ ಇದೆಯಾ?**

  ಖಂಡಿತವಾಗಿ ಇದೆ. ಮನಸ್ಸಿನಲ್ಲಿ ಶಾಂತಿ ಇರುತ್ತೆ. ಏನೇ ಕ್ಲೇಶ ಇದ್ರೂ, ನಮ್ಮ ಬಾಗಾಯ್ತಿನ ಬಳಿ ಹೋಗಿ ಕುಳಿತ್ರೆ, ಇದೆಲ್ಲವೂ ಮರೆತು ಶಾಂತಿ ಮೂಡುತ್ತೆ. ಇದನ್ನು ಕಂಡೂ ಇದೀವಿ, ಅನುಭವಿಸಿಯೂ ಇದೀವಿ.

- **ನಿಮ್ಮ ತಂದೆ ತಾಯಂದಿರ ಆದರ್ಶಗಳು ಏನು?**

  ಇವತ್ತಿನ ನಮ್ಮ ಒಳ್ಳೆಯ ನಡೆವಳಿಕೆಗಳಿಗೆ ಅವರು ಕಾರಣ. ಇತರರಿಗೆ ಉಪಕಾರಿಯಾಗಿ ಬಾಳುವೆ ಮಾಡಬೇಕು ಅನ್ನುವುದು ಅವರ ತತ್ತ್ವ. ನಾನು ನನ್ನ ಬಾಲ್ಯದಿಂದಲೂ ಪ್ರತಿಯೊಂದು ಮನೆಯ ಕಷ್ಟಸುಖದಲ್ಲಿ ಭಾಗಿಯಾಗಿದೀನಿ. ಇವತ್ತಿಗೂ ಹಾಗೇ ಇದೀನಿ.

- **ನಿಮ್ಮ ಕುಟುಂಬದಲ್ಲಿ ವ್ಯವಸಾಯ ಮುಂದುವರೆಯುತ್ತಾ?**

  ನನಗೆ ಐದು ಜನ ಗಂಡುಮಕ್ಕಳು, ಎರಡು ಹೆಣ್ಣುಮಕ್ಕಳು. ಒಬ್ಬ ಮಗ ನಮ್ಮ ಪೂರ್ವಿಕರ ವೃತ್ತಿಯಾದ ವ್ಯವಸಾಯ ಮುಂದುವರೆಸಬೇಕು ಅನ್ನುವ ದೃಷ್ಟೀಲೇ ಅವನನ್ನು ಇಟ್ಟಿದೇನೆ. ಮಗನನ್ನೂ ಒಪ್ಪಿಸಿದೀನಿ. ಅವನ ಅಣ್ಣತಮ್ಮಂದಿರೂ ಕುಳಿತು, ಅಪ್ಪ ಮಾಡಿದ ಆಸ್ತಿ ಉಳಿಸಬೇಕು ಅಂತ ಹೇಳಿದಾರೆ. ಆ ಸಂಸ್ಕಾರ ನಮಗಿರಲಿ ಅಂತ ಅವನಿಗೂ ಆಸೆ ಇದೆ. ವ್ಯವಸಾಯದ ಶಿಕ್ಷಣವನ್ನು ನಾನು ಆರಂಭದಿಂದಲೂ ಅವನಿಗೆ ನೀಡಿದ್ದೇನೆ.

- **ವ್ಯವಸಾಯಸ್ಥ ಸಂಕೇತಿಗಳ ಮನೆ ಬಹಳ ವಿಶೇಷವಾದದ್ದು; ನಿಮ್ಮೂರ ಸಂಕೇತಿ ಕೃಷಿಕರ ಮನೆಗಳ ಬಗ್ಗೆ ಹೇಳಿ.**

  ಬಹಳ ವಿಶೇಷವಾದ ಮನೆಗಳು ಇವೆ. ಮನೆಗೆ ಒಂದು ಜೋಕಾಲಿ, ವಿಶಾಲವಾದ ಮನೆಗಳು, ಹಿರಿಯರ ವರುಷದ ಶ್ರಾದ್ಧಕರ್ಮದಲ್ಲಿ ಅಡುಗೆ ಮಾಡಲು ಒಂದು ಪ್ರತ್ಯೇಕವಾದ ಅಡುಗೆಮನೆ, ಶುಭಶೋಭನಾದಿಗಳನ್ನು ಮಾಡಲು ಒಂದು ಅಡುಗೆ ಮನೆ, ದಿನನಿತ್ಯದ ಊಟ ಉಪಚಾರಗಳಿಗೇ ಒಂದು ಅಡುಗೆಮನೆ. ಹೀಗೆ ಮೂರು ನಾಲ್ಕು ಮನೆಯಲ್ಲಿ ಈ ಸೌಲಭ್ಯ ಇದೆ. ಚಂದ್ರಶೇಖರ ಉಪಾಧ್ಯರು, ಶಾಮಣ್ಣನವರು, ಅಣ್ಣಾಜಿ ನಾರಾಯಣಸ್ವಾಮಿಗಳ ಮನೇಲಿ ಇತ್ತು. ಸೀತಾರಾಮಾವಧಾನಿಗಳ ಮನೇಲೂ ಇತ್ತು. ಸೀತಾರಾಮಾವಧಾನಿಗಳು ಅಗ್ನಿಹೋತ್ರಿಗಳು, ಪ್ರತಿದಿನ ಮನೇಲಿ ಯಾಗ ಮಾಡೋರು. ದಿಡ್ಡೆ ಚಂದ್ರಶೇಖರ ಉಪಾದ್ಯರು ನಮ್ಮ ಊರಿನ ಜೋಡಿದಾರ್ರು. ಅವರಿಗೆ ಆಲನಹಳ್ಳಿ, ಭೂತವಳ್ಳಿ, ಹಿಟ್ನೆ ಹೆಬ್ಬಾಗಿಲು, ಮೇಲೂರು ಈ ನಾಲ್ಕು ಗ್ರಾಮಗಳು ಇತ್ತು. ಅವರ ಮನೆ ದೊಡ್ಡ ಛತ್ರದ ಹಾಗೇ ಇದೆ.

- **ಈಗಿನ ಹಳೆಯ ತಲೆಗಳು ಉರುಳಿದ ಮೇಲೆ, ಸಂಕೇತಿಗಳಲ್ಲಿ ವ್ಯವಸಾಯ ಉಳಿಯುತ್ತೆ ಅಂತೀರಾ?**

  ಈಗ ಪಟ್ಟಣವಾಸಿಗಳಲ್ಲಿ ಕೆಲವರಿಗೆ ಬೇಸರವಾಗಿ ಶಾಂತಿ ಇಲ್ಲದೆ ಸ್ವಗ್ರಾಮಕ್ಕೆ ಮರಳುತ್ತಿದ್ದಾರೆ. ವ್ಯವಸಾಯ ಮುಂದುವರೆಸುವ ಆಸೆಯೂ ಅವರಲ್ಲಿದೆ. ಕೊಟ್ಟಂತಹ ಜಮೀನು ವಾಪಸ್ಸು ಸಿಗುವ ಅವಕಾಶವೂ ಇದೆ.

- *ಒಳ್ಳೆಯದು ಅನಂತಕೃಷ್ಣಪ್ಪನವರೆ, ಇದುವರೆಗೂ ನಿಮ್ಮ ಬಗ್ಗೆ, ಊರಿನ ಬಗ್ಗೆ, ಸಂಕೇತಿಗಳ ಪೂರ್ವಪರಂಪರೆಯ ಬಗ್ಗೆ ಅಮೂಲ್ಯವಾದ ವಿಚಾರಗಳನ್ನು ತಿಳಿಸಿದ್ರಿ, ನಮಸ್ಕಾರ.*

  ನಿಮಗೂ ನಮಸ್ಕಾರ.

21. ದೊಡ್ಡಹನಸೋಗೆ

ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕು, ಚುಂಚನಕಟ್ಟೆ ಹೋಬಳಿಗೆ ಸೇರಿದ ಗ್ರಾಮ ದೊಡ್ಡಹನಸೋಗೆ ದಕ್ಷಿಣಗಂಗೆ ಕಾವೇರಿ ಮಡಿಲಿನ ಬೆಚ್ಚನೆಯ ಗ್ರಾಮ. ಊರ ಪಕ್ಕದಲ್ಲಿಯೇ ಹರಿದ ಕಾವೇರಿ, ಪಕ್ಕದಲ್ಲಿರುವ ಕೇರಳಾಪುರವನ್ನು ಬೇರ್ಪಡಿಸಿದ್ದಾಳೆ. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಹಾದರೆ ಕೇರಳಾಪುರ ಬರಿಯ ಆರು ಕಿಲೋಮೀಟರ್ ಮಾತ್ರ. ಮೈಸೂರು, ಕೆ.ಆರ್.ನಗರ, ಚುಂಚನಕಟ್ಟೆ, ಹೊಸೂರು, ಮಾಯಗೋಡನಹಳ್ಳಿ, ಹಾಡ್ಯ, ಕೋಳೂರು, ಬಳಸಿದ್ರೆ ಮುಂದೆ ಸಿಗೋದೇ ದೊಡ್ಡ ಹನಸೋಗೆ. ಚುಂಚನಕಟ್ಟೆಯಿಂದ ಈ ಗ್ರಾಮ ಹದಿನೈದು ಕಿಲೋಮೀಟರ್ ದೂರವಿದೆ. ಅವಿಮುಕ್ತೇಶ್ವರಸ್ವಾಮಿ, ಪಾರ್ವತಮ್ಮ, ವೈದ್ಯನಾಥೇಶ್ವರ ಹಾಗೂ ಶ್ರೀನಿವಾಸದೇವರ ದೇವಸ್ಥಾನಗಳು ಊರ ಮಡಿಲಿನಲ್ಲಿವೆ. ಸುಮಾರು ಐವತ್ತು ವರುಷಗಳ ಹಿಂದೆ, ಇಲ್ಲಿ ಸಂಕೇತಿಗಳದ್ದು ಅರುವತ್ತು ಕುಟುಂಬ ಇದ್ದವಂತೆ. ಈಗ ಇಲ್ಲಿರುವುದು ಅಣ್ಣತಮ್ಮಂದಿರಿಬ್ಬರ ಎರಡು ಕುಟುಂಬ ಮಾತ್ರ. ವಿವರಗಳು ನಿಮ್ಮ ಮುಂದಿವೆ.

ಎಚ್. ಕೆ. ರಾಮಸ್ವಾಮಿ ಇ/ಮ ಕೇಶವಯ್ಯ
ದೊಡ್ಡಹನಸೋಗೆ, ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ

ನಮ್ಮಜ್ಜ ತೋಟದಲ್ಲಿ ಬದನೆಕಾಯಿ ಬೆಳೆದಿದ್ರು. ಒಂದು ಬದನೇಕಾಯಿ ಎಷ್ಟು ದೊಡ್ಡದು ಅಂದ್ರೆ, ಅಡ್ಡೆಗೆ ಎರಡು ಬದನೇಕಾಯಿ ಮಾತ್ರ ಕೂರೋದು. ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಬದನೇಕಾಯಿ ನೋಡಿ ಆಶ್ಚರ್ಯಚಕಿತರಾಗಿ, ಕಡೆಗೆ ತೋಟಕ್ಕೆ ಬಂದು ಬದನೇಕಾಯಿ ಬೆಳೆಯನ್ನು ನೋಡಿ ಸಂತೋಷದಿಂದ ಶಾಲು ಹೊದಿಸಿ ಅಜ್ಜನಿಗೆ ಸನ್ಮಾನ ಮಾಡಿದರಂತೆ. ಅಂದಿನಿಂದ ನಮ್ಮ ಕುಟುಂಬವೆಲ್ಲಾ 'ಬದನೆಕಾಯಿ ವಂಶ' ಎಂದು ಹೆಸರಾಯ್ತು.



ಸೀತಾಲಕ್ಷ್ಮಿ-ಎಚ್.ಕೆ.ರಾಮಸ್ವಾಮಿ ದಂಪತಿ ಪಗಡೆಯಾಟದಲ್ಲಿ:ದೊಡ್ಡಹನಸೋಗೆ

ಬೆಟ್ಟದಪುರದ ಚಿಕ್ಕರಾಮಸ್ವಾಮಯ್ಯ ಹಾಗೂ ಲಕ್ಷ್ಮೀದೇವಮ್ಮನವರು ಎಚ್.ಕೆ.ರಾಮಸ್ವಾಮಿ ಅವರ ಅಜ್ಜ, ಅಜ್ಜಿ. ಬದನೇಕಾಯಿ ಬೆಳೆದು ಬಹುಮಾನ ಪಡೆದು ಕುಟುಂಬಕ್ಕೆ ಬದನೇಕಾಯಿ ವಂಶವೆಂಬ ಹೆಗ್ಗಳಿಕೆ ಗಳಿಸಿಕೊಟ್ಟವರು ಇವರೆ. ಚಿಕ್ಕರಾಮಸ್ವಾಮಯ್ಯ ಅವರ ಮಗ ಬದನೇಕಾಯಿ ಕೇಶವಯ್ಯ ಅವರು ಮದುವೆಯಾದದ್ದು ರುದ್ರಪಟ್ಟಣದ ಸೀತಮ್ಮನವರನ್ನು. ಕೇಶವಯ್ಯನವರ ಇಬ್ಬರು ಮಕ್ಕಳು ಎಚ್.ಕೆ. ರಾಮಸ್ವಾಮಿ ಹಾಗೂ ಎಚ್.ಕೆ.ಸೂರ್ಯನಾರಾಯಣ ಅವರು ಈಗ ದೊಡ್ಡ ಹನಸೋಗೆಯಲ್ಲಿ ಉಳಿದಿರುವ ಎರಡು ಸಂಕೇತಿಗಳ ಕುಟುಂಬವನ್ನು ಪ್ರತಿನಿಧಿಸುತ್ತಾರೆ. ೮೪ ವರುಷದ ಎಚ್.ಕೆ. ರಾಮಸ್ವಾಮಿಗಳನ್ನು ಅವರ ಮನೆಯ ಅಂಗಳದಲ್ಲಿ, ಮಕ್ಕಳು, ಮೊಮ್ಮಕ್ಕಳ ಕಲರವದ ನಡುವೆ ಮಾತನಾಡಿಸುವಾಗ ಇರುಳಿಗೆ ಹೊಸ ಬೆಳಕು ಬಂದಿತ್ತು. ವಿದ್ಯುತ್‌ಶಕ್ತಿಯ ಪದೇ ಪದೇ ವ್ಯತ್ಯಯದೊಂದಿಗೆ ಮಾತುಕತೆ ಮಾತ್ರ ಅಬಾಧಿತವಾಗಿ ಸಾಗಿತ್ತು. ಬದನೇಕಾಯಿ ವಂಶದ ಇತಿಹಾಸದ ಬಗ್ಗೆ ತಿಳಿಯುವ ಕುತೂಹಲವನ್ನು ಮೊದಲು ತಣಿಸಿದ್ರು ರಾಮಸ್ವಾಮಿಗಳು. 'ಹಿಂದೆ ಸ್ವಲ್ಪ ಮುರುಜು ಕಾಲ(ಒರಟು ಕಾಲ). ನಮ್ಮ ಅಜ್ಜ ಜಮೀನಿನಲ್ಲಿ ಭಾರೀ ಗಾತ್ರದ ಬದನೇಕಾಯಿ ಬೆಳೆದಿದ್ರು. ಅದನ್ನು ಮಾರೋದಕ್ಕೆ ಮುಸಾಫಿರ್ ಖಾನೆಯ ಜಗಲೀ ಮೇಲೆ ಕುಕ್ಕೇಲಿ ಇಟ್ಟುಕೊಂಡು ಕುಳಿತಿದ್ರಂತೆ. ಆಗ ಮುಮ್ಮಡಿ ಕೃಷ್ಣರಾಜ ವಡೆಯರ್

ಅದೇ ಮಾರ್ಗವಾಗಿ ಹಾದುಹೋಗುವಾಗ ಬದನೇಕಾಯಿ ಗಮನಿಸಿದ್ರಂತೆ. ನಂತರ ಅವರ ಸೇವಕರಿಗೆ ಬದನೇಕಾಯಿ ಖರೀದಿ ಮಾಡಲು ಹೇಳಿದ್ರಂತೆ. ಮಹಾರಾಜರ ಸೇವಕರಿಗೆ ೧೧ ಕಾಸಿಗೆ ಒಂದು ಬದನೇ ಕಾಯಿಯನ್ನು ಮಾರಿ ಅಜ್ಜ ಮನೆಗೆ ಬಂದರಂತೆ. ಮಹಾರಾಜರು ಬದನೇಕಾಯಿಯ ಗಾತ್ರ ನೋಡಿ ಆಶ್ಚರ್ಯದಿಂದ ಈ ಬದನೇಕಾಯಿ ಮಾರುತ್ತಿದ್ದವನನ್ನು ಕರೆದು ತನ್ನಿ ಅಂದರಂತೆ. ಮಹಾರಾಜರ ಭಟರು ತನ್ನನ್ನು ಹುಡುಕುತ್ತಿದ್ದಾರೆಂಬ ಸುದ್ದಿ ತಿಳಿದ ನಮ್ಮಜ್ಜ ಹೆದರಿಕೊಂಡು ಬೆಟ್ಟದಪುರದ ಉಪಾದ್ರರ ಅಟ್ಟದ ಮೇಲೆ ಹೋಗಿ ಅವಿತು ಕುಳಿತರಂತೆ. ರಾಜಭಟರು ದೊಡ್ಡಹನಸೋಗೆಗೆ ಬಂದು ಅಜ್ಜೀನ ಕೇಳಿದಾಗ ಅವರಿಗೆ ವಿಷಯ ತಿಳಿದು, ಬೆಟ್ಟದಪುರಕ್ಕೆ ಹೋಗಿ ಅಜ್ಜನನ್ನು ಕುದುರೆ ಮೇಲೆ ಕೂರಿಸಿಕೊಂಡು ಮಹಾರಾಜರ ಬಳಿ ಕರೆದುಕೊಂಡು ಹೋದರಂತೆ. ಮಹಾರಾಜರು ಸಮಾಧಾನವಾಗಿ ಮಾತನಾಡಿಸಿ "ನಿಮ್ಮ ಬದನೇಕಾಯಿ ತೋಟ ನೋಡಬಹುದಾ?" ಅಂತ ಕೇಳಿದರಂತೆ. ನಮ್ಮ ಅಜ್ಜನಿಗೆ ಆಗದವರು, ಮಹಾರಾಜರಿಗೆ "ಅವರ ತೋಟಕ್ಕೆ ಹೋಗಲು ಸರಿಯಾದ ರಸ್ತೆ ಇಲ್ಲ" ಎಂದು ಚಾಡಿ ಹೇಳಿದಾಗ, ನಮ್ಮಜ್ಜ "ನಾನು ಖಂಡಿತಾ ಬಂದು ನಿಮ್ಮನ್ನು ಕರೆದೊಯ್ಯುತ್ತೇನೆ" ಎಂದು ಹೇಳಿ ವಾಪಸ್ಸು ಊರಿಗೆ ಬಂದರಂತೆ. ಬೆಳಕು ಹರಿಯುವುದರೊಳಗೆ, ರಾತ್ರಿಯಿಡೀ ಕೆಲಸ ಮಾಡಿ, ರಸ್ತೆಯ ಅಟ್ಲು ಜಾಗಕ್ಕೆ ಕಲ್ಲು ಮಣ್ಣು ತುಂಬಿ, ತೋಟದ ಬಾಳೆ ಕಂದನ್ನು ಕಡಿದು ರಸ್ತೆ ತುಂಬಾ ಹಾಕಿ, ತೋಟಕ್ಕೆ ಸೀದಾ ರಸ್ತೆಯನ್ನು ಮಾಡಿದ್ರಂತೆ. ಮುಂಜಾನೆ ಸೀದಾ ಮಹಾರಾಜರ ಮುಂದೆ ನಿಂತು "ತಾವು ತೋಟಕ್ಕೆ ದಯಮಾಡಿಸಬೇಕು" ಅಂದರಂತೆ. ಮಹಾರಾಜರು ತೋಟವನ್ನು ನೋಡಿ, ಎಳನೀರು ಕುಡಿದು "ನಿನಗೇನು ಬೇಕು ಕೇಳು" ಅಂದರಂತೆ. ಆಗ ನಮ್ಮಜ್ಜ, "ಮಹಾಸ್ವಾಮಿ, ನನಗೆ ದೇವರು ಕೊಟ್ಟಿದ್ದು ಸಾಕಷ್ಟು ಇದೆ. ತಾವು ನನಗೆ ಒಂದು ಜತೆ ಶಾಲು ಕೊಡಬೇಕು" ಅಂದರಂತೆ. ಮಹಾರಾಜರು ಬಹಳ ಸಂತೋಷದಿಂದ ಅಜ್ಜನಿಗೆ ಶಾಲು ಹೊದಿಸಿ ಸನ್ಮಾನ ಮಾಡಿ, ತಂದ್ರೆ ಊರಿನ ಕೆರೆ ಕೆಳಗಿನ ೨೨ ಎಕರೆ ಜಮೀನನ್ನು ನೀಡಿದ್ರಂತೆ, ಇದು ನಮ್ಮ ಬದನೇಕಾಯಿ ಪುರಾಣ' ಅಂತ ನಕ್ಕರು ರಾಮಸ್ವಾಮಿಗಳು.



ಎಚ್.ಕೆ.ರಾಮಸ್ವಾಮಿ:ಕುಟುಂಬವರ್ಗದೊಂದಿಗೆ:ದೊಡ್ಡಹನಸೋಗೆ

ಮತ್ತೆ ಮಾತು ಮುಂದುವರೆಸಿ 'ನಮ್ಮಜ್ಜ ಮರಗೆಲಸ ಸಹಾ ಮಾಡೋರಂತೆ. ಅವರ ಬಳಿ ಹತಾರ ಎಲ್ಲಾ ಇತ್ತು. ಚಿತ್ರದ ಕೆಲಸ ಎಲ್ಲಾ ಮಾಡೋರು. ಈ ಮನೆಯ ಮರಗೆಲಸ ಅವರದ್ದೇ' ಅಂತ ತಾವು ಕುಳಿತಿದ್ದ ಪಡಸಾಲೆಯ ಕಂಬಗಳನ್ನೆಲ್ಲಾ ತೋರಿಸಿದ್ರು. ಚಿತ್ರ ಚಿತ್ತಾರಗಳು ಬೆಳಕಿಗೆ ಮಿಂಚಿದವು. ರಾಮಸ್ವಾಮಿಗಳ ಕಣ್ಣ ಮಿಂಚೂ ಸಹ ಹೊಳೆಯಿತು. 'ನಮ್ಮಜ್ಜ ಸ್ವತಃ ಮಾವಿನಗಿಡಕ್ಕೆ ಕಸಿ ಕಟ್ಟೋರಂತೆ. ಅವರು ಗುದ್ದಲಿ ಹಿಡಿದು ಬೆಳಗ್ಗೆ ತೋಟಕ್ಕೆ ಹೋದ್ರೆ ಬರ್ತಾ ಇದ್ದಿದ್ದು ರಾತ್ರೀಗೇ. ನನ್ನ ತಂದೆ ಕೇಶವಯ್ಯ ಸಹಾ ಕಠಿಣ ಪರಿಶ್ರಮದವರು. ಅವರಿಗೆ ನಾಲ್ಕು ಎಕರೆ ತೋಟ, ಎಂಟು ಎಕರೆ ಗದ್ದೆ ಹಾಗೂ ಏಳು ಎಕರೆ ಹೊಲ ಇತ್ತು. ದೊಡ್ಡ ಹನಸೋಗೆಯಲ್ಲಿದ್ದ ೫೫ ಒಕ್ಕಲಲ್ಲಿ ತೋಟ ಇದ್ದಿದ್ದು ನಾಲ್ಕು ಐದು ಒಕ್ಕಲಿಗೆ ಮಾತ್ರ. ೧೯೩೭, ೩೮ರಲ್ಲಿ ನಮ್ಮ ತಂದೆ ಹೊಲದಲ್ಲಿ ಹೊಗೆಸೊಪ್ಪು ಬೆಳೆದಿದ್ರು. ಹೊಲದ ಉಳುಮೆ ಒಂದು ಬಿಟ್ಟು ಬಾಕಿ ಕೆಲಸ ಎಲ್ಲಾ ಮಾಡೋರು. ನಮ್ಮ ತೋಟ ಇದ್ದದ್ದು ಚಿಕ್ಕಹನಸೋಗೆ ಹತ್ರ. ೧೯೨೪ರಲ್ಲಿ ಕಟ್ಟೆಪುರದ ನಾಲೆ ಬಂದು ನೀರಾವರಿ ಆಯ್ತು ತೋಟಕ್ಕೆ. ತಂದೆ ಕಾಲದಲ್ಲಿ ಎರಡು ಜತೆ ಎತ್ತು, ಒಂದು ಗಾಡಿ, ನಾಲ್ಕು ಎಮ್ಮೆ, ಐದು-ಆರು ಹಸು ಇತ್ತು. ನಾನೂ ನನ್ನ ತಂದೆಯೂ ತೋಟದಲ್ಲಿ ಒಟ್ಟಾಗಿ ಕೆಲಸ ಮಾಡೋವಿ. ನನ್ನ ವ್ಯವಸಾಯದ ಪ್ರಾಥಮಿಕ ಶಿಕ್ಷಣವಾದದ್ದು ತೋಟದಲ್ಲಿ. ನನ್ನ ತಂದೆಯೇ ಶಿಕ್ಷಕ. "ವ್ಯವಸಾಯವೇ ಮುಖ್ಯ, ನಾನು ಜಮೀನನ್ನು ಕಷ್ಟಪಟ್ಟು ರೂಢಿಸಿದೀನಿ; ಅದನ್ನು ಉಳಿಸಿಕೊಳ್ಳಿ" ಅಂತ ಸದಾ ಹೇಳೋರು. ನಾನು SSLC ವರೆಗೆ ಓದಿದೆ. ಅವತ್ತಿನ ವಿದ್ಯಾಭ್ಯಾಸ, ಶಿಕ್ಷಕರು ಹಾಗೂ ಆ ಕಾಲಕ್ಕೂ ಈಗಿಗೂ ಅರ್ಥಾತ್ ಸಂಬಂಧವಿಲ್ಲ. ನನ್ನ ವಿದ್ಯಾಭ್ಯಾಸ ಮುಗಿದ ಮೇಲೆ ವ್ಯವಸಾಯ ಆರಂಭಿಸಿದೆ. ಹಾಗೇ ನಾನು ೩೦ ವರುಷ PWD Contractor ಸಹಾ ಆಗಿದ್ದೆ. ನಮ್ಮ ತೋಟದಲ್ಲಿ ಅಡಿಕೆ, ಮಾವು,

ತೆಂಗು, ಬಾಳೆ, ಎಲೆಹಂಬು ಇತ್ತು. ಹೊಲದಲ್ಲಿ ರಾಗಿ, ಅಲಸಂದೆ, ಸೆಣಬು, ಹೊಗೆಸೊಪ್ಪು, ಧನಿಯ, ಮೆಣಸಿನಕಾಯಿ, ಬದನೇಕಾಯಿ, ಟೊಮ್ಯಾಟೋ ಬೆಳೆಯೋವಿ. ಎಲೆ ಪಿಂಡೀನ ಹಾಗೇ ಬಾಳೇಗೊನೇನ ಹೊತ್ತುಕೊಂಡು ಹೋಗಿ, ಅತ್ತಿಗೋಡು, ಕೇರಳಾಪುರ ಹಾಗೂ ರಾವಂದೂರು ಸಂತೇಲಿ ಮಾರೋವಿ. ಮದುವೆ ಮನೆಗಳಿಗೆ ವಿಳ್ಳೇದೆಲೇನ ಕೊಡೋವಿ. ಭತ್ತದ ಗದ್ದೆ ಕೆಲಸಾನ ಸ್ವತಃ ನಾನೇ ಮಾಡುವೆ. ನಮ್ಮ ಗದ್ದೇಲಿ ೭೦ ರಿಂದ ೮೦ ಖಂಡುಗ ಭತ್ತ ಬೆಳೀತಿದ್ದೆ. ರಾಜಮುಡಿ, ರಾಜಭೋಗ, ರತ್ನಚೂಡಿ, ಅರಿಸಿಣ ಕೆಂಬೂತಿ, ಸಣ್ಣಕೆಂಬೂತಿ, ಹೊಟ್ಟೆಕೆಂಬೂತಿ ಅನ್ನುವ ಸ್ಥಳೀಯ ತಳಿಗಳು ಇದ್ವು. ಅಕ್ಕಿ ಬಹಳ ಚೆನ್ನಾಗಿರೋದು. ಗದ್ದೇನ ಕೆಸರು ಮಾಡಿ ಮಾಡಿ ಕಣಗಾಲಿನಿಂದ ಹೊಂಗೆ ಸೊಪ್ಪನ್ನು ತಂದು ತುಳಿಯೋವು. ಮೂರನೇ ಉಕ್ಕೆಗೆ ಪೈರು ನಾಟಿ ಮಾಡೋವಿ. ಬೆಳೆ ಚೆನ್ನಾಗಿ ಬರೋದು. ತೋಟದಲ್ಲಿ ಭಾವಿಯಿಂದ ನೀರನ್ನೆತ್ತಿ ಅಡಿಕೆ ಗಿಡಗಳಿಗೆ ಹಾಕೋವಿ. ದಿನಕ್ಕೆ ೨೫೦ ಕೈತೂಕ. ಬೆಳಗ್ಗೆ ತೋಟಕ್ಕೆ ಹೋದ್ರೆ ರಾತ್ರಿ ಏಳಕ್ಕೆ ಮನೆಗೆ ಬರ್ತಿದ್ದೆ. ಊಟ ತಿಂಡಿ ಎಲ್ಲಾ ಅಲ್ಲೇ. ತೋಟದಲ್ಲೇ ಒಂದು ಹಂಡೆ ಇಟ್ಟು ನೀರು ಕಾಯಿಸಿ ಸ್ನಾನ ಮಾಡ್ತಿದ್ದೆ. ಒಂದು ಸಣ್ಣ ಗುಡಿಸಲನ್ನು ಕಟ್ಟಿಕೊಂಡು ವಾಸ ಇರ್ತಿದ್ದೆ. ದನದ ಗೊಬ್ಬರವನ್ನು ಹೇರಳವಾಗಿ ತೋಟಕ್ಕೆ ಹಾಕೋವಿ. ಇಳುವರಿ ಚೆನ್ನಾಗಿ ಬರೋದು. ಆಗಿನ ಕಾಲದಲ್ಲಿ ಆಳು ಕಾಳು ಸಿಕ್ಕೋರು, ವ್ಯವಸಾಯ ಚೆನ್ನಾಗಿ ಆಗ್ತಿತ್ತು. ಇಲ್ಲಿ ಗದ್ದೆ ವ್ಯವಸಾಯ ಮಾಡ್ತಿದ್ದ ಬಹಳ ಸಂಕೇತಿಗಳು ಗದ್ದೇನ ವಾರಕ್ಕೆ ಕೊಟ್ಟಿದ್ರು. Land Tribunalನಲ್ಲಿ ಜಮೀನು ರೈತರ ಪಾಲಾದಾಗ ಬಹಳಷ್ಟು ಜನ ಊರು ಬಿಟ್ಟರು. ಗಂಡು ಮಕ್ಕಳೂ ಸಹ ಅಷ್ಟರಲ್ಲಿ city ಸೇರಿದ್ರು. ಹೀಗೆ ಹಂತಹಂತವಾಗಿ ದೊಡ್ಡಹನಸೋಗೆ ಸಂಕೇತಿಗಳ ಪಾಲಿಗೆ ಮರೀಚಿಕೆಯಾಯ್ತು. ನನ್ನ ಚಿಕ್ಕವಯಸ್ಸಿನಲ್ಲಿ ತಾಯಿ ತೀರಿಕೊಂಡಿದ್ದು. ತಂದೇನೇ ನಮ್ಮನ್ನು ಸಾಕಿದ್ದು. ನಾನಾಯ್ತು ನನ್ನ ಕೆಲಸವಾಯ್ತು ಅಂತ ಬದುಕಿದೆ ನಾನು. ಶ್ರಮಪಟ್ಟು ದುಡಿಯೂವೆ. ವ್ಯವಸಾಯ ತೃಪ್ತಿ ನೀಡಿದೆ. ಆದರೆ ಇಲ್ಲಿ ಸಂಕೇತಿ ಕೃಷಿ ಉಳಿಯೋಲ್ಲ' ಅಂತ ಹೇಳಿ ದೀರ್ಘವಾಗಿ ಉಸಿರೆಳೆದು ಸುಮ್ಮನಾದ್ರು, ರಾಮಸ್ವಾಮಿಗಳು.

ರಾಮಸ್ವಾಮಿಗಳ ಪತ್ನಿ ಸೀತಾಲಕ್ಷ್ಮಮ್ಮನವರು ರುದ್ರಪಟ್ಟಣದ ಆರ್.ಎನ್.ರಾಮಸ್ವಾಮಯ್ಯ ಹಾಗೂ ಸಾಲಿಗ್ರಾಮದ ಭಾಗೀರಥಮ್ಮ ದಂಪತಿಗಳ ಮಗಳು. ಪತಿ ರಾಮಸ್ವಾಮಿಗಳು ಮಾತನಾಡುವಾಗ ಉದ್ದಕ್ಕೂ ಅನೇಕ ವಿಷಯಗಳನ್ನು ನೆನೆಪಿಸಿಕೊಟ್ಟವರು ಸೀತಾಲಕ್ಷ್ಮಮ್ಮನವರೆ. ನೀವೂ ಸಹ ನಿಮ್ಮ ಕುಟುಂಬದ ಬಗ್ಗೆ ಮಾತನಾಡಿ ಅಂದಾಗ ಮರುಮಾತನಾಡದೇ ಪಡಸಾಲೆಯಲ್ಲಿ ಕುಳಿತರು. ನಿಧಾನವಾಗಿ ವಿಚಾರ ಹೊರಬಂತು. 'ನಮ್ಮದು ರುದ್ರಪಟ್ಟಣ. ನನ್ನ ತಂದೆ ಮೇಷ್ಟರು. ನಾಲೆ ಕೆಳಗೆ ೫-೬ ಎಕರೆ ಜಮೀನಿತ್ತು. ಅದನ್ನು ಗುತ್ತಿಗೆ ಕೊಟ್ಟಿದ್ರು. ನಮ್ಮ ತಂದೆಗೆ ನಾವು ಐದು ಜನ ಹೆಣ್ಣುಮಕ್ಕಳು, ಹಾಗೂ ಒಬ್ಬ ಮಗ. ನಾನು ಎರಡನೆಯ ಮಗಳು. ನಾನು L.S. ಪಾಸು ಮಾಡಿದೆ. ೧೯೪೨ರಲ್ಲಿ ನನ್ನ ಮದುವೆಯಾಯ್ತು. ನಮ್ಮಜ್ಜಿ ನನ್ನ ತಾಯೀನ ಆಗಲೇ ಕೇಳಿದ್ರು, "ಹೋಗಿ ಹೋಗಿ ನಿನ್ನ ಮಗಳನ್ನು ಆ ಕೇಶವಯ್ಯನ ಮನೆಗೆ ಯಾಕೆ ಹಾಕ್ತೀಯ, ಅವನ ಮನೆಯಲ್ಲಿ ಕತ್ತೆ ಜೀತ ಕಣೆ" ಅಂದಿದ್ರು. ತಂದೆ ತಾಯಿ ಬಿಡದೆ ನನ್ನ ಇಲ್ಲಿಗೆ ಕೊಟ್ರು. ನಾನು ಇಲ್ಲಿಗೆ ಬಂದಾಗ ಅತ್ತೆ ಇರಲಿಲ್ಲ. ನಾನೇ ಯಜಮಾನತಿ ಆದೆ. ಮಾವನವರು ಬಹಳ ಒಳ್ಳೆಯವರು. ನಾನು ನನ್ನ ಮದುವೇಲೇ ಯಜಮಾನರನ್ನು ನೋಡಿದ್ದು. ಈಗಿನ ಕಾಲದ ಹಾಗೆ ಅಲ್ಲ ಆಗಿನ ಕಾಲ. ಹೆಚ್ಚು ತಿಳುವಳಿಕೆ ಆಗ ಇರಲಿಲ್ಲ. ನಾನು ಮನೆಯಲ್ಲೇ ಎಲ್ಲಾ ಕೆಲಸಗಳನ್ನೂ ಮಾಡಿದ್ದು. ತೋಟಗಳಲ್ಲಿ ದುಡಿದಿಲ್ಲ. ಮನೇಲಿ ದನಕರುಗಳ ನಿರ್ವಹಣೆಗೆ ಆಳುಕಾಳುಗಳು ಇದ್ರು. ಹೊತ್ತಿಗೆ ಮೂರು ಸೇರು ಅಕ್ಕಿಯ ಅನ್ನ, ಸಾರು, ಹುಳಿ ಆಗಬೇಕಿತ್ತು. ಅಡುಗೆಗೆ ಬೇಕಾದ ನೀರನ್ನು ಹೊಳೆಗೆ ಹೋಗಿ ತರಬೇಕಿತ್ತು. ದಿನಕ್ಕೆ ನಾಲ್ಕೈದು ಬಾರಿ ಮನೆಗೆ ನೀರು ಹೊರ್ತಿದ್ದೆ. ಈ ಬೀದಿಯ ಬ್ರಾಹ್ಮಣರಿಗೆಲ್ಲಾ ನಮ್ಮ ಮನೆಯಿಂದ ಮಜ್ಜಿಗೆ ಕೊಡ್ತಿದ್ದೆ. ಸಂತೃಪ್ತಿ ಇತ್ತು.


ಸೀತಾಲಕ್ಷ್ಮಿ-ಎಚ್.ಕೆ.ರಾಮಸ್ವಾಮಿ ದಂಪತಿ: ಹಿಂಬದಿಗೆ ಜಪಾಸನಗಳು:ದೊಡ್ಡಹನಸೋಗೆ

ಮಕ್ಕಳ ನೆರವಿನಿಂದ ಕಾಶೀಯಾತ್ರೆ ಸಹಾ ಮಾಡಿದೀನಿ. ನನ್ನ ಇಬ್ಬರು ಮಕ್ಕಳೂ ಸಹ ವ್ಯವಸಾಯ ಮುಂದುವರೆಸಲಿ ಅನ್ನುವ ಆಸೆ ನನ್ನದು' ಅಂತ ಹೇಳಿದರು.

ಎಚ್.ಕೆ. ರಾಮಸ್ವಾಮಿ ಹಾಗೂ ಸೀತಾಲಕ್ಷ್ಮಿ ದಂಪತಿಗಳಿಗೆ ಏಳು ಜನ ಗಂಡುಮಕ್ಕಳು ಹಾಗೂ ಮೂರು ಜನ ಹೆಣ್ಣುಮಕ್ಕಳು. ಇವರ ಹಿರಿಯ ಮಗ ಕೇಶವಮೂರ್ತಿಯವರಿಗೆ ೫೫ರ ಹರಯ. ಇವರ ತಮ್ಮ ಶ್ರೀಧರ ಸಹ ವ್ಯವಸಾಯದ ದುಡಿಮೆಗೆ ಹೆಗಲು ಜೋಡಿಸಿದ್ದಾರೆ. ಕೇಶವಮೂರ್ತಿಗಳ ಪತ್ನಿ ನಾಗರತ್ನ ಬೆಟ್ಟದಪುರದವರು. ವ್ಯವಸಾಯ ನಂಬಿ ಇಲ್ಲಿ ಇಬ್ಬರು ಅಣ್ಣತಮ್ಮಂದಿರು ಇದ್ರೆ, ಇತರ ಐದು ಜನ ಪಟ್ಟಣಗಳಲ್ಲಿ ಉದ್ಯೋಗದಲ್ಲಿದ್ದಾರೆ. ಕೇಶವಮೂರ್ತಿಯವರೂ ಸಹ KSRTCನಲ್ಲಿ ಕಂಡಕ್ಟರ್ ಆಗಿ (ನಿರ್ವಾಹಕನಾಗಿ) ಸೇವೆ ಸಲ್ಲಿಸಿದವರು. ಕುಟುಂಬಕ್ಕೆ ಹಿರಿಯ ಮಗನಾಗಿ, ವ್ಯವಸಾಯದ ಜವಾಬ್ದಾರಿಯನ್ನು ಹೊತ್ತಿರುವ ಕೇಶವಮೂರ್ತಿಗಳನ್ನು ಮಾತಿಗೆ ಎಳೆದಾಗ ವ್ಯವಸಾಯದ ವಿಚಾರವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. 'ನಮ್ಮದು ಅವಿಭಕ್ತ ಕುಟುಂಬ. ಎಲ್ಲರೂ ಇಂದಿಗೂ ಒಟ್ಟಾಗಿಯೇ ಇದ್ದೀವಿ. ನಾನು 1955ರಲ್ಲಿ PUC ಓದಿದೆ. ನಂತರ ಕುಶಾಲನಗರದಲ್ಲಿ ಒಂದು ವರುಷ Diploma ಸಹ ಮಾಡಿದೆ. ಮನೇಲಿ ಬಹಳ ಸಮಸ್ಯೆಯಿತ್ತು. ಹಾಗಾಗಿ ಓದು ನಿಲ್ಲಿಸಿ ವ್ಯವಸಾಯದ ಬದುಕಿಗೆ ಮರಳಿ ಬಂದೆ. ನನ್ನ ತಂದೆ PWD Contractor ಆಗಿದ್ದರು. ತಿರುನಾರಾಯಣ ಅಯ್ಯಂಗಾರ್ ಅನ್ನುವ PWD Junior Engineer ಒಬ್ಬರು ನಮ್ಮ ಮನೆಗೆ ಬಂದು, ನನ್ನ ತಂದೆಗೆ ನೀವು "contract ಮಾಡಿ" ಅಂತ ಸಲಹೆ ನೀಡಿದ್ದರು. ಅದರಂತೆ ತಂದೆ ಸುಮಾರು ೨೫ ರಿಂದ ೩೦ ವರುಷ contract ಮಾಡಿದ್ರು. ಆಗ ನಾನು ವ್ಯವಸಾಯದ ಜವಾಬ್ದಾರಿ ಹೊರುತ್ತಿದ್ದೆ. ಚಿಕ್ಕಂದಿನಿಂದಲೂ ನನಗೆ ವ್ಯವಸಾಯದ ಬಗ್ಗೆ ಆಸಕ್ತಿ ಇತ್ತು. ನನ್ನ ತಾತ ಒಂದು ದೊಡ್ಡದಾದ Rice mill ಇಟ್ಟಿದ್ರು. ಭತ್ತದ ಮಾರಾಟ ಮಾಡ್ತಿದ್ರು. ನಮ್ಮ ಅಜ್ಜನ ಕಾಲದಲ್ಲಿ ಅವರು ಬೇರೆ ಆಗುವುದಕ್ಕಿಂತ ಮುಂಚೆ ನಮ್ಮದು ಇಡೀ ಊರಿಗೆ ಕಣ್ಣಾಗಿದ್ದ ಕುಟುಂಬ. 'ಸಾಹುಕಾರ್ ಕೇಶವಯ್ಯ' ಅನ್ನೋರು ನಮ್ಮ ತಾತಂಗೆ. ಭಾಗ ಆದ ಮೇಲೆ ತಾತ Rice mill ಮಾರಿಬಿಟ್ರು. ತಂದೆ contract ಆರಂಭಿಸಿದಾಗ ಸೇವೆಯ ಜತೆಗೆ ಸಂಪಾದನೆಯ ಉದ್ದೇಶವೂ ಇತ್ತು. ಹಿಂದೆ ನಮ್ಮೂರಿನ ಛೇರ್‌ಮನ್ ನರಸಿಂಹಯ್ಯನವರ ಕಾಲದಲ್ಲಿ ಊರಲ್ಲಿ ದೊಡ್ಡ ಗ್ರಂಥಾಲಯ ಇತ್ತು. ಮೈಸೂರು ಜಿಲ್ಲೆಗೆ ಉತ್ತಮವಾದ library ಅನ್ನುವ ಪ್ರಶಸ್ತಿ ಸಿಕ್ಕಿತ್ತು. ಸುಮಾರು ೩೫೦೦ ಪುಸ್ತಕ ಇತ್ತು. ನಾವು ಎಮ್ಮೆ, ದನ ಕಾಯಲು ಹೋಗುವಾಗ ಒಂದೊಂದು ಪುಸ್ತಕ ಹಿಡಿದು ಹೋಗೋವಿ. ಹಸುಗಳನ್ನು ಮೇಯಲು ಬಿಟ್ಟು, ಮರದ ನೆರಳಲ್ಲಿ ಕುಳಿತು ನಾನು ಪುಸ್ತಕ ಓದೂವೆ. ಎಮ್ಮೆ, ಹಸು, ಎತ್ತು ಎಲ್ಲವೂ ಇತ್ತು. ನಮ್ಮ ತಾಯಿ ಒಂದು ದಿನವೂ ನಮಗೆ ಮಜ್ಜಿಗೆ ಹಾಕಿಲ್ಲ; ಬರೀ ಹಾಲು, ಮೊಸರೇ. ಎಮ್ಮೆ ಮೊಸರು, ಬೆಣ್ಣೆ ತಿಂದು ತಿಂದು ಈಗ ನಮಗೆ ವಾಯು ಬಂದಿದೆ ಅನ್ನಿಸುತ್ತೆ. ಹಿಂದೆ ನಾವು ಶ್ರದ್ಧೆಯಿಂದ ವ್ಯವಸಾಯ ಮಾಡ್ತಿದ್ವಿ. ಈಗ ವ್ಯವಸಾಯ ನಿಲ್ಲಿಸುವ ಸ್ಥಿತಿ ಬಂದಿದೆ. ಹಣಕಾಸಿನ ತೊಂದರೆ, labour problem ಇದೆ. ಕೂಲಿ ಜಾಸ್ತಿ, ಮಾಡಿದ ಖರ್ಚಿಗೆ ತಕ್ಕ ಪ್ರತಿಫಲ ದೊರೆಯೋದಿಲ್ಲ. ಪ್ರತೀ ವರುಷ ಬೇಸಿಗೇಲಿ ಮೆಣಸಿನಕಾಯಿ, ಟೊಮ್ಯಾಟೋ ಹಾಗೂ ಬದನೆಕಾಯಿ ಬೆಳೀತೀವಿ. ಹೋದ ವರುಷ ಈ ಬೆಳೆ ಬೆಳೆದು ಸಾಲ ಮಾಡುವ ಪರಿಸ್ಥಿತಿ ಬಂತು. ಎರಡರಿಂದ ಮೂರು ರೂಪಾಯಿ ಒಂದು ಕೆಜಿ ಮೆಣಸಿನಕಾಯಿ; ಟೊಮ್ಯಾಟೋ ಕೇಳೋರೇ ಇತ್ತಿಲ್ಲ. ರೈತನಿಗೆ ವ್ಯವಸಾಯದಲ್ಲೂ ಸಮಸ್ಯೆ, ಮಾರುಕಟ್ಟೇಲೂ ಸಮಸ್ಯೆ. ನಾವು ವ್ಯವಸಾಯದಲ್ಲಿ ಸೋತಿದ್ದೇವೆ ಅನ್ನಿಸುತ್ತಿದೆ. ಆದಾಯ ಸಿಕ್ತಾ ಇಲ್ಲ. ಪಟ್ಟಣದಲ್ಲಿರುವ ನನ್ನ ತಮ್ಮಂದಿರು "ಇನ್ನೂ ಯಾಕೆ ಹಳ್ಳೀಲಿದೀಯಾ?" ಅಂತ ಕೇಳುತ್ತಿದ್ದಾರೆ. "ಉಳುವವನಿಗೇ ಭೂಮಿ" ಕಾಯಿದೆ ಬಂದು ಯಾವ ಬ್ರಾಹ್ಮಣರು ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಿದರೋ, ಹಳ್ಳಿಯ ಮನೆಮಠ ಕಳೆದುಕೊಂಡ್ರೋ, ಅವರು ಈಗ ಸ್ಥಿತಿವಂತರಾಗಿರುವಂತೆ, equip ಆಗಿರುವಂತೆ, ಹಳ್ಳಿಯಲ್ಲಿ ಉಳಿದ ನಾವುಗಳು ಇಲ್ಲ. ಇಂದು ಹನಸೋಗೆಯ ಹೆಸರು ವಿಶ್ವದ ಎಲ್ಲಾ ಕಡೆ ಇದೆ. ಅದೇ ಧೈರ್ಯದಿಂದ ಈಗ "ಹನಸೋಗೆ ಗ್ರಾಮಾಭಿವೃದ್ಧಿ ಟ್ರಸ್ಟ್" ಮಾಡಿದ್ದೇವೆ. ನಮ್ಮ ಊರ ಈಶ್ವರ ದೇವಸ್ಥಾನದ ಅರ್ಚಕರು ತೀರಿಹೋದಮೇಲೆ, ಟ್ರಸ್ಟ್ ವತಿಯಿಂದ ಒಂದೂವರೆ ಲಕ್ಷ ರೂಪಾಯಿ ಖರ್ಚು ಮಾಡಿ, ದೇವಸ್ಥಾನದ ಜೀರ್ಣೋದ್ಧಾರ ಮಾಡಿ, ಜೋಯಿಸರನ್ನು ಸಂಬಳ ಕೊಟ್ಟು ನೇಮಿಸಿದ್ದೀವಿ. ಪೂಜೆ ಚೆನ್ನಾಗಿ ಆಗ್ತಾ ಇದೆ. ನಾವು ಬ್ರಾಹ್ಮಣರೆಲ್ಲಾ ಸೇರಿ, ನಮ್ಮೂರ ಶಾಲೆಯ ಬಡವಿದ್ಯಾರ್ಥಿಗಳಿಗೆ ಪುಸ್ತಕ, ಬಟ್ಟೆಯನ್ನು ಕೊಟ್ಟಿದೀವಿ. ಆಸ್ಪತ್ರೆಗೆ ಹತ್ತಾರು ಸಾವಿರ ರೂಪಾಯಿ ಔಷಧಿಯನ್ನು ನೀಡಿದೀವಿ. ಮಾಡುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡ್ತಾ ಇದೀವಿ. ನಮ್ಮೂರಿನಲ್ಲಿ ಶ್ರೀನಿವಾಸ ರಥೋತ್ಸವ ಬಹಳ Grand ಆಗಿ ಆಗುತ್ತೆ. ಒಂದು ವಾರ ಕಾಲ ನಡೆಯುತ್ತೆ. ಬ್ರಾಹ್ಮಣರ ಎರಡು ಮನೆಯನ್ನೇ ವಿಶ್ರಾಂತಿಧಾಮ ಅಂತ ಬಿಟ್ಟಿದ್ದಾರೆ. ಬಂದವರಿಗೆಲ್ಲಾ ಊಟ, ತಿಂಡಿಯ ವ್ಯವಸ್ಥೆಯನ್ನು ನಾವೇ ನೋಡಿಕೊಳ್ತೀವಿ. ಈಗ ನಮ್ಮೂರಿನ ಆಂಜನೇಯಸ್ವಾಮಿ ದೇವಸ್ಥಾನವನ್ನು ಆರೂವರೆ ಲಕ್ಷ ರೂಪಾಯಿ ಖರ್ಚು ಮಾಡಿ ಪುನರುಜ್ಜೀವನಗೊಳಿಸುತ್ತಿದ್ದೀವಿ' ಅಂತ ಹೇಳಿ ಸ್ವಲ್ಪ ಸುಧಾರಿಸಿಕೊಂಡ್ರು



ಬತ್ತ ತುಂಬಿದ ಪೆಟ್ಟೆ: ಎಚ್.ಕೆ.ರಾಮಸ್ವಾಮಿ ಅವರ ಮನೆ:ದೊಡ್ಡ ಹನಸೋಗೆ

ಕೇಶವಮೂರ್ತಿಗಳು. ಮತ್ತೆ ಮಾತು ಮುಂದುವರೀತು, ಅವ್ಯಾಹತವಾಗಿ.

'ನಾವು ಸಂಕೇತಿಗಳು ಟಿಪ್ಪಣಿಯಾಗಿ ವ್ಯವಸಾಯ ಮಾಡ್ತೀವಿ. ಕಂಡಾಪಟ್ಟೆ ಮಾಡೋಲ್ಲ. ಆದರೆ ಇತ್ತೀಚೆಗೆ ಮಳೆ ಸರಿಯಾಗಿ ಆಗ್ತಿಲ್ಲ. ಹಾಗಾಗಿ ನಮ್ಮ ವ್ಯವಸಾಯ ಹದಗೆಟ್ಟಿದೆ. ನಮ್ಮ ಜಮೀನು ಇರೋದು ಚಿಕ್ಕ ಹನಸೋಗೆಯಲ್ಲಿ. ಅಲ್ಲಿ ಸುಮಾರು ೫೦೦, ೬೦೦ ಎಕರೆ ಜಮೀನು ಮುಂಚೆ ಸಂಕೇತಿಗಳದ್ದೇ ಆಗಿತ್ತು. ಆದರೆ ಈಗ ಉಳಿದಿರೋದು ನಾವು ಮಾತ್ರ. ಅಲ್ಲಿ ನಾವು ಅಲ್ಪ ಸಂಖ್ಯಾತರು. ನಮ್ಮ ಮಾತು ನಡಿಯೋಲ್ಲ. ಇಲ್ಲಿ ಹಿಂದಿನಿಂದಲೂ ತೋಟದ ವ್ಯವಸಾಯ ಬಹಳ ಕಡಿಮೇನೆ. ಕೆಲವರದ್ದು ಮಾತ್ರ ತೋಟ ಇತ್ತು. ತೋಟಕ್ಕೆ ನಾವು ಬಳಸ್ತಾ ಇದ್ದದ್ದು ಸಾವಯವ ಗೊಬ್ಬರ ಮಾತ್ರ. ಆದರೆ ಇತ್ತೀಚಿನ ದಿನಗಳಲ್ಲಿ ದನಕರು ಕಡಿಮೆಯಾದ ಮೇಲೆ ರಾಸಾಯನಿಕ ಗೊಬ್ಬರದ ಮೊರೆ ಹೋಗಬೇಕಾಗಿದೆ. ಈ ಗೊಬ್ಬರ ಕೊಟ್ಟ ತಕ್ಷಣ ನೀರು ಕೊಡದಿದ್ರೆ ಅಥವಾ ಮಳೆ ಹೋದ್ರೆ ಬೆಳೆ burn ಆಗುತ್ತೆ. ನಾವೇ ಅನುಭವಿಸಿದೀವಿ. ತೋಟವನ್ನು ನಾವು ಚೆನ್ನಾಗಿ ನಿರ್ವಹಣೆ ಮಾಡ್ತಿದ್ವು. ನಮ್ಮ ತೆಂಗಿನಮರದ ಒಂದು ಎಳನೀರನ್ನು ಒಬ್ಬರು ಕುಡಿಯೋಕೆ ಆಗ್ತಿರಲಿಲ್ಲ. ಈಗ ನುಸಿ ಬಂದು ತೆಂಗು ಎಲ್ಲಾ ನಿರ್ನಾಮವಾಗಿದೆ. ಎರಡು ವರುಷದ ಹಿಂದೆ ಹಾಕಿದ ಕೊಬ್ಬರೀನ ಈಗಲೂ ಬಳಸ್ತಾ ಇದೀವಿ. ಕೊಬ್ಬರಿ ಮುಗೀತಾ ಬಂತು. ನುಸಿ ಹೋಗಿಲ್ಲ. ನಾನು, ನನ್ನ ತಮ್ಮ ಇಲ್ಲಿ ಗಟ್ಟಿಯಾಗಿ ಇರುವವರೆಗೆ ಮಾತ್ರ ನಮ್ಮ ಕೃಷಿ ಅಷ್ಟೆ. ನನ್ನ ಚಿಕ್ಕಪ್ಪ ಎಚ್.ಕೆ. ಸೂರ್ಯನಾರಾಯಣ ಹಾಗೂ ಚಿಕ್ಕಮ್ಮ ಲೀಲಾವತಿ ಅವರಿಗೆ ಹೆಣ್ಣುಮಕ್ಕಳು ಮಾತ್ರ. ಅವರು ಎಲ್ಲರಿಗೂ ಮದುವೆ ಮಾಡಿದ್ದಾರೆ. ಕೆಲವು ಸಾರಿ ನನ್ನ ಅಣ್ಣತಮ್ಮಂದಿರೂ ಸಹ ಹೇಳ್ತಾರೆ, "ಚಿಕ್ಕಪ್ಪನ ಜಮೀನನ್ನೂ ಸಹ ಖರೀದಿ ಮಾಡಿ, ಮತ್ತೊಂದು ಸಾರಿ ಪ್ರಯತ್ನ ಮಾಡು. ಒಂದೇ plot ಆಗೋದ್ರಿಂದ ವ್ಯವಸಾಯದಲ್ಲಿ ಸಾಧನೆ ಮಾಡಬಹುದು"' ಅಂತ. ನನಗೂ ಹಾಗೇ ಅನ್ನಿಸುತ್ತೆ ಕೆಲವು ಸಾರಿ. ಆದರೆ ಅವರೇ "ಹಳ್ಳೀಲಿ ಇನ್ನೂ ಯಾಕಿದೀಯ?" ಅಂದಾಗ ಮನಸ್ಸು ಗೊಂದಲದ ಗೂಡಾಗುತ್ತೆ. ಒಂದು ತರಹದ ದ್ವಂದ್ವ ಆವರಿಸಿದೆ. ನಾವು ಅಣ್ಣತಮ್ಮಂದಿರಿಗೆ ಪಿತ್ರಾರ್ಜಿತವಾದ ಆಸ್ತಿ ಕಳೆಯುವ ಮನಸ್ಸು ಇಲ್ಲ. ನನಗೂ ಮೂರು ಜನ ಹೆಣ್ಣುಮಕ್ಕಳು. ನಮ್ಮ ಮುಂದಿನ ಪೀಳಿಗೆ ವ್ಯವಸಾಯಕ್ಕೆ ಬರೋಲ್ಲ ಅನ್ನಿಸುತ್ತೆ. ಅವರಿಗೆ ಆಸಕ್ತಿ ಇಲ್ಲ. ಈಗ ನಮ್ಮ ಮನೇಲಿ ಎರಡು ಎಮ್ಮೆ ಇದೆ. ಪ್ರತಿದಿನ ಪಗಡೆ, ಚೌಕಾಬಾರ ಮನರಂಜನೆಯ ಸಾಧನಗಳು. ಬಂದು ಹೋದವರಿಗೆಲ್ಲಾ ತೃಪ್ತಿಯಾಗುವಂತೆ ಉಪಚರಿಸುವ ಕಾಯಕ ಹೆಂಗಸರದ್ದು. ಅತ್ತೆ, ಸೊಸೆ ಚೆನ್ನಾಗಿದ್ದಾರೆ. ನಮ್ಮ ಈಗಿನ financial ಸ್ಥಿತಿ ಸುಧಾರಿಸಿದ್ರೆ ಸಾಕು, ವ್ಯವಸಾಯ ಮುಂದುವರೆಸುವ ಇರಾದೆ ಇದೆ. ಅತಿಯಾದ ಹಣದ ನಿರೀಕ್ಷೆಯೂ ನಮಗಿಲ್ಲ' ಎಂದು ಹೇಳಿ ಮಾತು ಮುಗಿಸಿದ್ರು. ಅದುವರೆಗೆ ಕತ್ತಲಾಗಿದ್ದ ಮನೆಯನ್ನು ಬೆಳಗಿಸುವಂತೆ ವಿದ್ಯುತ್ ದೀಪಗಳು ಒಮ್ಮೆಗೇ ಹೊತ್ತಿದವು. ಪ್ರಖರವಾದ ಬೆಳಕು ಸುತ್ತಲೂ ಹರಡಿತು. ಜತೆಯಾಗಿ ಕುಳಿತಿದ್ದ ರಾಮಸ್ವಾಮಿ, ಸೀತಾಲಕ್ಷ್ಮಿ ದಂಪತಿಗಳು 'ಊಟ ಮಾಡಿ' ಅಂದರು. ರಾತ್ರಿಯ ಭೋಜನ ಹಿತವಾಗಿತ್ತು. ಸಂಕೇತಿ ಕೃಷಿಯ ಮಜಲುಗಳ ಬಗ್ಗೆ ಚರ್ಚೆಯೇ ಊಟದ ಸಮಯದಲ್ಲೂ. ನಾವು ಕೃಷಿಯಲ್ಲಿ ಮುಂದುವರೆಯಲು ಯಾವ ಯಾವ ಬೆಳೆ ಬೆಳೆಯಬಹುದು, ಯಾವುದರಿಂದ ಆದಾಯ ಗಳಿಸಬಹುದು ಎನ್ನುವ ಆಲೋಚನೆ ಎಲ್ಲರಿಗಿತ್ತು. 'ಸಂಕೇತಿ ಕೃಷಿ ಉಳಿಸಿ' ಎಂದಷ್ಟೇ ಹೇಳಿ ನಾವು ಅವರಿಂದ ವಿದಾಯ ಬೇಡಿದೆವು. ನಮ್ಮನ್ನು ಬೀಳ್ಕೊಡಲು ಇಡೀ ಕುಟುಂಬವೇ ಬಾಗಿಲಿಗೆ ಬಂದದ್ದು ಮಾತ್ರ ವಿಶೇಷ ಎನ್ನಿಸಿತು.

22. ಮತ್ತೂರು

ಸುಸಂಸ್ಕೃತ ಸಂಕೇತಿಗಳ ಸಂಸ್ಕೃತ ಗ್ರಾಮ ಮತ್ತೂರು. ತಾಯಿ ತುಂಗೆ ಮಂದಗಮನೆಯಾಗಿ ಪಕ್ಕದಲ್ಲಿ ಪವಡಿಸಿದ್ದಾಳೆ. ಕೇವಲ ಸಂಸ್ಕೃತ ಭಾಷೆಗೆ ಮಾತ್ರವಲ್ಲ, ಕೃಷಿಯೂ ಇಲ್ಲಿ ಒಂದು ಸಂಸ್ಕೃತಿ, ಸಂಕೇತಿ ಸಮುದಾಯದ ಇಲ್ಲಿನ ನಾಗರಿಕತೆಯ ಬೆಳವಣಿಗೆಯ ಅಡಿಗಲ್ಲು. ವೇದ, ಸಂಸ್ಕೃತ ಸಮೃದ್ಧ ಕೃಷಿಗೆ ಅಲಂಕಾರಪ್ರಾಯವಾಗಿವೆ. ತೂಗಾಡುವ ತೆಂಗೂ, ತೊನೆದಾಡುವ ಕಂಗೂ ಸಹ ಇಲ್ಲಿ ಸಂಸ್ಕೃತವನ್ನೇ ನುಡಿಯುತ್ತಿರುವಂತೆ ಭಾಸವಾಗುತ್ತದೆ. ಸಂಕೇತಿ ಕೃಷಿಗೆ ಈ ಗ್ರಾಮ ಬಲವಾದ ಅಡಿಗಲ್ಲು. ಜನರ ನಾಡಿ ಮಿಡಿತದಲ್ಲೂ ಕೃಷಿಯಿದೆ, ನಿತ್ಯನಿರಂತರವಾದ ತುಂಗೆಯ ಹರಿವಿನಷ್ಟೇ ಸತ್ಯವಾಗಿ ಇಲ್ಲಿ ಕೃಷಿ ಮುಂದುವರೆಯುತ್ತೆ. ಬ್ರಾಹ್ಮಣ್ಯದ ಶ್ರೀಮಂತಿಕೆ, ವೇದದ ವಿಲಾಸ, ಸಂಸ್ಕಾರದ ಸೊಗಡು, ಸಂಕೇತಿಗಳ ಸಂಘಟಿತ ಜೀವನ, ಮಕ್ಕಳಿಗೆ ಬಾಲ್ಯದಿಂದಲೇ ದೊರೆಯುವ ಪೂರಕ ಭಾರತೀಯ ಶಿಕ್ಷಣ, ಹಿರಿಯರ ಆದರ್ಶದ ಜೀವನ ಎಲ್ಲವೂ ಕೃಷಿಯ ಉಳಿವಿಗೆ ಸಹಕಾರಿಯಾಗಿದೆ. ಅರುವತ್ತು ವರುಷದ ಹಿಂದೆ ನಲವತ್ತರಷ್ಟು ಇದ್ದ ಮನೆ ಈಗ ಎಂಬತ್ತು ಮನೆಗೆ ಏರಿದೆ. ಎಲ್ಲರೂ ವ್ಯವಸಾಯ ವೃತ್ತಿ ಇರುವವರೇ; ಹಾಗೇ ಮತ್ತೂರಿನ ವಾಸಸ್ಥರೇ. ನೆಲದ ಸೊಗಡಿನ ಅರಿವು ಇಲ್ಲಿ ಹುಟ್ಟುವ ಮಗುವಿಗೂ ಇದೆ. ಹಂದ್ರಾಳು, ರಾಮನಾಥಪುರ, ಮರಿತಮ್ಮನಹಳ್ಳಿ, ಕೃಷ್ಣಾಪುರ, ಹೋಚೇಹಳ್ಳಿ - ಈ ಎಲ್ಲ ಪ್ರದೇಶಗಳಿಂದ ವಲಸೆ ಬಂದು ನೆಲೆಸಿದ ಸಂಕೇತಿಗಳೂ ಇದ್ದಾರೆ. ಮತ್ತೂರು ಎಲ್ಲರಿಗೂ ತಂಪಾದ ತಾಣವಾಗಿದೆ. ಸಂಕೇತಿ ಕೃಷಿಗೂ ಮತ್ತೂರು ಭವಿಷ್ಯದಲ್ಲಿ ಭದ್ರವಾದ ನೆಲೆಯಾಗುವ ಕುರುಹುಗಳಿವೆ. ಭೂತ, ವರ್ತಮಾನ, ಭವಿಷ್ಯಕಾಲದ ಸಂಕೇತಿ ಕೃಷಿಯ ಲಾಸ್ಯವನ್ನು ನೀವಿಲ್ಲಿ ನೋಡಬಹುದು, ಅನುಭವಿಸಬಹುದು. ತುಂಗೆಯ ತೀರದಲ್ಲಿ ನಿಂತು ಪಾನ ಮಾಡಬಹುದು. ನಾನು ಅನುಭವಿಸಿದ್ದನ್ನು ಅಕ್ಷರಗಳಲ್ಲಿ ದಾಖಲಿಸುವ ಪ್ರಯತ್ನ ಮಾಡಿದ್ದೇನೆ. ಓದಿ ನೋಡಿ.

ಅ) ಎಚ್.ಕೆ. ಸುಬ್ಬರಾಯ ಶಾಸ್ತ್ರಿ ಇ/ಮ ಕೇಶವಾವಧಾನಿ
ಮತ್ತೂರು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237808

ಅಡಿಕೆ ತೋಟದ ಒಳಗೆ ಬಾಳೆ ಇದ್ರೆ ಲಕ್ಷಣ. ಮೊದಲು ಅಡಿಕೆಗೆ ಬಾಳೆ ನೆರಳು ನೀಡುತ್ತೆ. ಅಡಿಕೆ ಬೆಳೆದಾಗ ತೋಟದ ಭರ್ತಿ ಬಾಳೆ ಕಂದು ಇದ್ದರೆ, ಮಳೆಗಾಲದಲ್ಲಿ ನೀರು ಹೆಚ್ಚಾದಾಗ ಹೆಚ್ಚಾದ ನೀರನ್ನು ಕಂದು ಹೀರಿಕೊಳ್ಳುತ್ತೆ. ಬೇಸಿಗೇಲಿ ತೋಟದ ನೀರು ಇಂಗಿದಾಗ ಬಾಳೆ ತನ್ನಲ್ಲಿರುವ ನೀರನ್ನು ನಿಧಾನವಾಗಿ ಬಿಟ್ಟುಕೊಡುತ್ತೆ. ಒಂದು ಬಾಳೆ ಕಂದನ್ನು ಕಡಿದರೆ ನೀರು ಝಳ್ಳನೆ ಚಿಮ್ಮುವುದು ಇದಕ್ಕೆ ಸಾಕ್ಷಿ. ಇದು ದೈವೇಚ್ಛೆ. ಅಡಿಕೆ ತೋಟದ ನೀರಿನ ನಿರ್ವಹಣೆಗೆ ತೋಟದ ತುಂಬಾ ಬಾಳೆ ಕಂದು ತುಂಬಿರಬೇಕು.



ಎಚ್.ಕೆ.ಸುಬ್ಬರಾಯಶಾಸ್ತ್ರಿಗಳೊಂದಿಗೆ ಸಂದರ್ಶನ:ಎನ್.ಕೇಶವಮೂರ್ತಿ:ಮತ್ತೂರು

ಹೋಚೇಹಳ್ಳಿಯ ಶಂಕರಶಾಸ್ತ್ರಿಗಳು ಮದುವೆ ಯಾದದ್ದು ಹಂದ್ರಾಳಿನ ಸುಬ್ಬಮ್ಮನವರನ್ನು; ನಂತರ ಇವರ ಕುಟುಂಬ ಕೂಡಲಿಗೆ ಬಂದಿದೆ. ಇವರ ಮಗ ಕೇಶವಾವಧಾನಿ ಕೂಡಲಿ ಮಠದಲ್ಲಿದ್ದವರು. ದೇವರಾಯ ಸಮುದ್ರದ ಬಳಿ ಇರುವ ಗಂಜಿಗುಂಟೆಯ ಜಾನಕಮ್ಮ ಕೇಶವ ಅವಧಾನಿಗಳ ಹೆಂಡತಿ. ಈ ದಂಪತಿಗಳಿಗೆ ನಾಲ್ಕು ಗಂಡು ಹಾಗೂ ಎರಡು ಹೆಣ್ಣುಮಕ್ಕಳು. ಇವರ ಮೊದಲನೆಯ ಮಗ ಎಚ್.ಕೆ.ಸುಬ್ಬರಾಯಶಾಸ್ತ್ರಿ ಅವರು ಹುಟ್ಟಿದ್ದು ಕೂಡಲಿಯಲ್ಲಿ. ನಂತರ ಕೇಶವಾವಧಾನಿಗಳು ಶಿವಮೊಗ್ಗದಲ್ಲಿ ಶಾನುಭೋಗತನ ಮಾಡುವ

ಸಲುವಾಗಿ ಮತ್ತೂರಿಗೆ ಬಂದಿದ್ದಾರೆ. ಆಗ ಸುಬ್ಬರಾಯಶಾಸ್ತ್ರಿಗಳಿಗೆ ಕೇವಲ ಎರಡು ವರುಷ. ಹೋಚೇಹಳ್ಳಿಯ ಜಮೀನನ್ನು ಬಿಟ್ಟು ಮತ್ತೂರಿಗೆ ವಲಸೆ ಬಂದ ಇವರ ಕುಟುಂಬಕ್ಕೆ, ಮತ್ತೂರಿನಲ್ಲಿ ಮೊದಲು ಜಮೀನಿರಲಿಲ್ಲ. ಶ್ಯಾನುಭೋಗತನವೇ ಕುಟುಂಬಕ್ಕೆ ಆಧಾರ. ದೊಡ್ಡ ಕುಟುಂಬದ ನಿರ್ವಹಣೆ ಕಷ್ಟವಾದಂತೆಯೇ, ಗಾಯದ ಮೇಲೆ ಬರೆ ಎಳೆದಂತೆ ಕೇಶವಾವಧಾನಿಗಳು ಹಾಗೂ ಜಾನಕಮ್ಮನವರು ತೀರಿಕೊಂಡಾಗ ಸುಬ್ಬರಾಯಶಾಸ್ತ್ರಿಗಳಿಗೆ ಹದಿನೆಂಟರ ಹರಯ. ಬಾಳನೌಕೆಯನ್ನು ದಡ ಸೇರಿಸುವ ಗುರುತರ ಜವಾಬ್ದಾರಿಯನ್ನು ನಿಭಾಯಿಸಿದ ಗಾಥೆಯನ್ನು, ಮನೆಯ ಹಜಾರದಲ್ಲಿ ಕುಳಿತು ವಿವರವಾಗಿ ಹೇಳಿದರು, ಸುಬ್ಬರಾಯಶಾಸ್ತ್ರಿಗಳು. 'ಮತ್ತೂರಿನಲ್ಲಿ ಮುಂಚೆ ಅಗ್ನಿಹೋತ್ರಿಗಳು ಇದ್ದರಂತೆ. ವೇದವಿದ್ಯಾಭ್ಯಾಸಕ್ಕೆ, ಹವನ ಹೋಮಗಳಿಗೆ ಅನುಕೂಲವಾಗಲೆಂದು ಮೈಸೂರಿನ ಮಹಾರಾಜರು ಮತ್ತೂರು ಗ್ರಾಮವನ್ನು ಅವರಿಗೆ ದಾನವಾಗಿ ನೀಡಿದ್ರಂತೆ. ಈ ಕುರಿತು ತಾಮ್ರದ ಶಾಸನ ಇದೆ. ನಮ್ಮ ಮನೆಯವರು ಮತ್ತೂರಿಗೆ ಬಂದಾಗ ನಮಗೆ ಇಲ್ಲಿ ಜಮೀನಿರಲಿಲ್ಲ. ಮತ್ತೂರಿನಲ್ಲಿ ನಾಲ್ಕನೆಯ ತರಗತಿಯವರೆಗೆ ಶಾಲೆ ಇತ್ತು. ನಾನು ಅಲ್ಲಿಯವರೆಗೆ ಓದಿದೆ. ನಂತರ ನನಗೆ ಆರೋಗ್ಯ ಕೆಡ್ತು. ನಾನು ಬದುಕುತ್ತೀನಿ ಅನ್ನುವ ಭರವಸೆಯೇ ಇರಲಿಲ್ಲ. ಮೈಯೆಲ್ಲಾ ಕಜ್ಜಿ. ಬೇರೆಯವರು ನನ್ನನ್ನು ಬಳಿಗೆ ಸೇರಿಸುತ್ತಾ ಇರಲಿಲ್ಲ. ಐದಾರು ವರುಷ ವಿದ್ಯಾಭ್ಯಾಸ ಇಲ್ಲದೇನೇ ಮನೆಯಲ್ಲೇ ಇದ್ದೆ. ನನ್ನ ತಾಯಿ ತೀರಿಕೊಂಡ ಮೇಲೆ ನನ್ನ ೧೮ನೇ ವಯಸ್ಸಿಗೆ ಕಜ್ಜಿ ಗುಣವಾಯ್ತು. ಮತ್ತೆ ಮನುಷ್ಯನಾದೆ. ನನ್ನ ತಮ್ಮ, ತಂಗಿಯರನ್ನು ಸಾಕುವ ಜವಾಬ್ದಾರಿಯಿತ್ತು. ನನಗೆ ಇಂಗ್ಲಿಷ್ ಶಿಕ್ಷಣ ಇರದಿದ್ದರಿಂದ ನನ್ನ ತಂದೆಯ ಶ್ಯಾನುಭೋಗತನವನ್ನು ನನ್ನ ತಮ್ಮನಿಗೆ ನೀಡಿದೆ. ಅವನಿಗೆ ಅದ್ರಿಂದ ಅನುಕೂಲವಾಗಿ ಈಗ ಸ್ಥಿತಿವಂತನಾಗಿ ಇದ್ದಾನೆ. ನಾನು ೧೮ನೇ ವಯಸ್ಸಿಗೆ ನಮ್ಮೂರಲ್ಲಿ ಚಿಲ್ಲರೆ ಅಂಗಡಿಯನ್ನು ಆರಂಭಿಸಿದೆ. ನಮ್ಮ ಊರಿನವರೇ ಶಿವಮೊಗ್ಗದಲ್ಲಿ ಅಂಗಡಿ ಇಟ್ಟಿದ್ರು. ಅವರು "ನೀನು ಮತ್ತೂರಿನಲ್ಲಿ ಅಂಗಡಿ ಮಾಡು, ನಾನು ಸಹಾಯ ಮಾಡ್ತೀನಿ" ಅಂದ್ರು. ಮತ್ತೂರಿನಲ್ಲಿಯೂ ಒಬ್ಬರ ಸಹಕಾರ ಸಿಕ್ತು. ಅವರ ನೆರವಿನಿಂದ ಐದು ರೂಪಾಯಿ ಸಾಲ ಮಾಡಿ, ಅದನ್ನೇ ಬಂಡವಾಳವಾಗಿಟ್ಟುಕೊಂಡು ದಿನಸಿ ಸಾಮಾನುಗಳನ್ನು ಮಾರತೊಡಗಿದೆ. ಜತೆಗೆ ಭತ್ತದ ವ್ಯಾಪಾರವನ್ನೂ ಆರಂಭಿಸಿದೆ. ವ್ಯಾಪಾರ ಕೈಹತ್ತಿತು. ಮಾಡಿದ್ದ ಸಾಲವನ್ನು ಕೇವಲ ಒಂದು ವರುಷದಲ್ಲಿ ತೀರಿಸಿದೆ, ದಿನೇ ದಿನೇ ಆದಾಯ ಕೈಸೇರಿತು. ಈಗ ೬೦ ವರುಷದ ಹಿಂದೆ, ದುಡ್ಡಿಗೆ ಬೆಲೆ; ಪದಾರ್ಥಕ್ಕೆ ಬೆಲೆ ಇರಲಿಲ್ಲ. ಒಂದು ನೂರು ರೂಪಾಯಿಗೆ ಒಂದು ಗಾಡಿ ತುಂಬಾ ಸಾಮಾನನ್ನು ತರಬಹುದಿತ್ತು. ಆರು ರೂಪಾಯಿಗೆ ಉಪ್ಪಿನ ಚೀಲ, ರೂಪಾಯಿಗೆ ಎಂಟು ಸೇರು ಅಕ್ಕಿ, ನಾಲ್ಕಾಣೆಗೆ ಸೇರು ಬೆಣ್ಣೆ. ಭತ್ತದ ವ್ಯಾಪಾರದಲ್ಲೂ ಆಗ ಅಳತೆಯ ಕಾಲ, ಈಗ ತೂಕದ ಕಾಲ ಬಂದಿದೆ. ಆಗಿನ ಒಂದು ರೂಪಾಯಿ ಬೆಲೆ ಈಗಿನ ಒಂದು ನೂರು ರೂಪಾಯಿಗೆ ಇಲ್ಲ. ನನ್ನ ವ್ಯಾಪಾರದ ಸಂಪಾದನೆಯೂ ಅಷ್ಟೆ. ದಿನಕ್ಕೆ ನಾಲ್ಕು ರೂಪಾಯಿ ಬಂದ್ರೆ ಅದು ಒಳ್ಳೆಯ ದುಡಿಮೆ. ದಿನಕ್ಕೆ ಎಂಟಾಣೆ ಇದ್ರೆ ಸುಲಭವಾಗಿ ಜೀವನ ನಡೆಸಬಹುದಿತ್ತು. ವ್ಯಾಪಾರ ವೃದ್ಧಿಯಾದಂತೆ ನನಗೆ ವ್ಯವಸಾಯ ಮಾಡುವ ಮನಸ್ಸು ಆಯ್ತು. ಆಗ ಇಲ್ಲಿ ಬೇಕಾದಷ್ಟು ಜಮೀನು ಬೀಳುಬಿದ್ದಿತ್ತು. ಸಾಗುವಳಿ ಆಗ್ತಿರಲಿಲ್ಲ. ಮತ್ತೂರಿನಿಂದ ಹೊಸಹಳ್ಳಿಯವರೆಗೆ ಬೀಳುಜಮೀನು ಸಾಕಷ್ಟು ಇತ್ತು. ಹೊಸಹಳ್ಳಿಯ ನಂಜುಂಡಾವಧಾನಿಗಳು ಅವರ ಐದಾರು ಎಕರೆ ಜಮೀನನ್ನು ಇಪ್ಪತ್ತು ವರುಷಗಳವರೆಗೆ ಗುತ್ತಿಗೆ ನೀಡಿದ್ರು. ಸುತ್ತಮುತ್ತಲ ಜನರನ್ನು ನೋಡಿಯೇ ನನಗೆ ವ್ಯವಸಾಯ ಮಾಡುವ ಹಂಬಲ ಹೆಚ್ಚಾದದ್ದು. ನಂತರ ನಾನೇ ತೋಟ ಹಾಗೂ ಗದ್ದೆ ಖರೀದಿಸಿದೆ. ಈ ಭಾಗದಲ್ಲಿರುವ ಸುಮಾರು ೬೦ ರಿಂದ ೭೦ ಎಕರೆ ಅಡಿಕೆ ತೋಟವನ್ನು ನಾನೇ ಎಳಿಸಿಕೊಟ್ಟಿದ್ದೀನಿ. ಅಷ್ಟು ಅನುಭವ ನನಗೆ ಬಂತು. ಬಸವರಾಜು ಅಂತ ಇತರೆಯವರು ಇದ್ರು. ಅವರ ೨೫ ಎಕರೆ ಅಡಿಕೆ ತೋಟವನ್ನು ಎಳಿಸಿ, ೨೨ ವರುಷ ನಿರ್ವಹಣೆ ಮಾಡಿ ಆಮೇಲೆ ಅವರಿಗೆ ನೀಡಿದ್ದೀನಿ. ೧೯೪೮ರಲ್ಲಿ ಮತ್ತೂರಿನಲ್ಲಿ ಅಷ್ಟು ಅಡಿಕೆ ತೋಟವಿರಲಿಲ್ಲ. ಕೆರೆಕೆಳಗೆ ೬೦ ಎಕರೆ ಜಮೀನಿನಲ್ಲಿ ಹಳೆಯ ಅಡಿಕೆ ತೋಟವಿತ್ತು ಅಷ್ಟೆ. ಮೊದಲೆಲ್ಲಾ ಇಲ್ಲಿ ಭತ್ತ ಬೆಳೀತಿದ್ದು ಅಷ್ಟೆ. ನಾನು ೯೦ ರಿಂದ ೧೦೦ ಚೀಲ ಭತ್ತ ಬೆಳೀತಿದ್ದೆ. ಆಗ ಸೀಮೆಗೊಬ್ಬರದ ಭರಾಟೆ ಇರಲಿಲ್ಲ. ಸಗಣಿ ಗೊಬ್ಬರವೇ ಜಾಸ್ತಿ. ನಮ್ಮ ಮನೇಲಿ, ಎರಡು ಗಾಡಿ, ಎರಡು ಜತೆ ಎತ್ತು, ಆರರಿಂದ ಎಂಟು ದನಗಳು ಇದ್ವು. ನಮ್ಮ ದನಗಳ ಗೊಬ್ಬರದ ಜತೆಗೆ ಇತರೇ ಪ್ರದೇಶಗಳಲ್ಲೂ ದನದ ಗೊಬ್ಬರ ಸಿಗೋದು. ಸುತ್ತುಮುತ್ತು ಎರಡು ಮೈಲಿ ದೂರದವರೆಗೆ ಕಾಡಿತ್ತು. ಗಾಡಿಗಟ್ಟಳೆ ಸೌದೆ ಸಿಗೋದು. ಮಳೇನೂ ತುಂಬಾ ಬರೋದು. ಭರಣಿ ಮಳೆಗೆ ಕೂರಿಗೆ ನೆರವಿನಿಂದ ಬೀಜವನ್ನು ಬಿತ್ತನೆ ಮಾಡ್ತಿದ್ವಿ. ಆರಿದ್ರೆ ಮಳೆಗೆ ಕೊರಡು ಹೊಡೆದು, ಕಳೆ ಕೀಳ್ತಿದ್ವಿ. ಈಗಿನಂತೆ ಭತ್ತದ ಸಸಿಯನ್ನು ನಾಟಿ ಮಾಡ್ತಿರಲಿಲ್ಲ. ನಮ್ಮ ಕಾಲದಲ್ಲಿ ದಬ್ಬಣಸಾಲೆ, ರತ್ನಚೂಡಿ, ಮೈಸೂರು ಸಣ್ಣ ತಳಿಗಳು ಇದ್ವು. ಬೀಜವನ್ನು ನಮ್ಮಲ್ಲೇ ಶೇಖರಿಸಿ ಇಟ್ಟುಕೊಂಡು ಇರ್ತಿದ್ವಿ. ದಬ್ಬಣಸಾಲೆ ಅಕ್ಕಿ ಸ್ವಲ್ಪ ದಪ್ಪನಾದ್ರೂ ರುಚಿ ಜಾಸ್ತಿ ಇರೋದು. ಬಾಯಿಗೆ ಹಾಕಿದ್ರೆ ಸಿಹಿ, ಇನ್ನೂ ತಿನ್ನಬೇಕು ಅನ್ನಿಸೋದು. ಈಗಿನ ಅಕ್ಕಿ ಸಪ್ಪೆ, ರುಚಿ ಇರೋದಿಲ್ಲ. ನಂತರ ನಾನು ಐದಾರು ವರುಷ ಕಬ್ಬು ಬೆಳೆದೆ. ಶಿವಮೊಗ್ಗದಲ್ಲಿ ಶುಗರ್ ಫ್ಯಾಕ್ಟರಿ ಇತ್ತು. ಅವರೇ ಕಬ್ಬಿನ ಬಿತ್ತನೆಯನ್ನು ಕೊಡೋರು. ಆಗ ಸೀಮೆಗೊಬ್ಬರದ ಬಳಕೇನೂ ಆರಂಭವಾಯ್ತು. ಕಾಲಾನಂತರ ಫ್ಯಾಕ್ಟರೀಗೆ

ನಷ್ಟವಾಗಿ ಮುಚ್ಚಿಹೋಯ್ತು. ಆಗ ಇಲ್ಲಿನ ಭತ್ತದ ಗದ್ದೆಗಳೆಲ್ಲಾ ಅಡಿಕೆ ತೋಟವಾಗಿ ಪರಿವರ್ತನೆ ಆಯ್ತು. ಅಡಿಕೆ ತೋಟ ಏಳಿಸುವುದರಲ್ಲಿ ನನಗೆ ಅನುಭವ ಸಿಕ್ತು. ಮೊದಲು ಅಡಿಕೆ ತೋಟದಿಂದ ಹಣ್ಣಾಗಿ ಉದುರಿದ ಗೋಟನ್ನು ಆರಿಸಬೇಕು. ನಂತರ ನೆಲವನ್ನು ಹಣ್ಣು ಮಾಡಿ, ಚಪ್ಪರದ ಅಡಿಯಲ್ಲಿ ಗೇಣಿಗೆ ಒಂದರಂತೆ ಗೋಟು ನೆಡಬೇಕು. ಒಂದು ವರುಷಕ್ಕೆ ಸಸಿ ನಾಟಿಗೆ ಸಿದ್ಧವಾಗುತ್ತೆ. ಜಮೀನಿನಲ್ಲಿ ಒಂದೂವರೆ ಅಡಿ ಗುಂಡೀನ ತೆಗೆದು, ಮಣ್ಣು ಗೊಬ್ಬರ ಹಾಕಿ ಮುಂಗಾರಿನ ಆಷಾಢ ಮಾಸದಲ್ಲಿ ಅಡಿಕೆ ಸಸಿ ನೆಡಬೇಕು. ಬೇಸಿಗೇಲಿ ನೀರು ಕೊಡಬೇಕು. ಪ್ರತೀ ವರುಷ ಹೊರಮಣ್ಣು, ಗೊಬ್ಬರ ಹಾಕಬೇಕು. ಕಳೆ ಇರಬಾರದು. ಅಗೆತ ಮಾಡಬೇಕು. ಮಳೆಗಾಲದಲ್ಲಿ ಅಡಿಕೆಗೆ ನೀರಿನ ಹೊಡೆತ ಬೀಳಬಾರದು. ಬೇಸಿಗೇಲಿ ನೀರು ತಪ್ಪಿಸಬಾರದು. ಎರಡೂ ಅನುಕೂಲವನ್ನೂ ತೋಟದಲ್ಲಿ ಇಟ್ಟಿದ್ರೆ ಐದು ವರುಷದಲ್ಲಿ ಹಿಂಗಾರ ಹೊರಬರುತ್ತೆ. ಎಂಟು ವರುಷಕ್ಕೆ ಫಸಲು ಸ್ಥಿರವಾಗುತ್ತದೆ. ಮಳೆಗಾಲದಲ್ಲಿ ತೋಟದಲ್ಲಿ ನೀರು ನಿಲ್ಲಬಾರದು. ಕಪ್ಪು ಹೊಡೆದು ಹೆಚ್ಚಾದ ನೀರನ್ನು ಬಸಿಯಬೇಕು. ಅದು ಹರಿದು ಹತ್ತಿರದ ಹಳ್ಳ ಸೇರುವಂತೆ ಮಾಡಬೇಕು. ಅಡಿಕೆ ಚಿಕ್ಕದಿರುವಾಗ ಮುಂಡಿಗೆ ರೋಗ ಅಂತ ಬರುತ್ತೆ. ಗರಿಗಳು ಚಿಕ್ಕದಾಗುತ್ತೆ. ಗಿಡದ ಬೆಳವಣಿಗೆ ಕಮ್ಮಿಯಾಗುತ್ತೆ. ಆಗ ಆಗರ ತೊಗೊಂಡು ಅಡಿಕೆ ಬೊಡ್ಡೇನ ಕೊರೀಬೇಕು. ತೂತಿನಲ್ಲಿ ಸಿಂಬಳದ ಹಾಗೆ ರೋಗ ಹೊರಬರುತ್ತೆ. ಆಗ ಗಂಧಕವನ್ನು ತಂದು ಗಿಡದ ಸುತ್ತಾ ತಂದು ಹಾಕಿದ್ರೆ ಮೂರು ತಿಂಗಳಲ್ಲಿ ಗಿಡ ಸರಿಯಾಗುತ್ತೆ. ಎಂಟು ವರುಷದಲ್ಲಿ ಅಡಿಕೆ ಫಸಲು ಸ್ಥಿರವಾಗುತ್ತೆ. ಅಡಿಕೆ ತೋಟದಲ್ಲಿ ಹೊಸದಾಗಿ ಪ್ರತಿ ವರುಷ ಗೋಟನ್ನು ನೆಟ್ಟು ಹೊಸದಾಗಿ ಸಸಿಗಳನ್ನು ಬೆಳೆಸುತ್ತಲೇ ಇರಬೇಕು. ಗಿಡ ಹೋದ ಜಾಗದಲ್ಲಿ ಹೊಸದಾಗಿ ಈ ಸಸಿಗಳನ್ನು ನೆಡಬಹುದು. ಇಲ್ಲಿ ವಿಪರೀತ ಮಳೆ ಬೀಳೋದ್ರಿಂದ ಎಲೆಹಂಬನ್ನು ಅಡಿಕೇಲಿ ಹಾಕುವ ಹಾಗಿಲ್ಲ. ಮೂರು ತಿಂಗಳು ಮಳೆ ಸುರಿಯೋದ್ರಿಂದ ಜಮೀನೆಲ್ಲಾ ಕೆಸರು ರಾಡಿಯಾಗುತ್ತೆ. ಹಿಂದೆ ಗಾಜನೂರಿನಲ್ಲಿ ತುಂಗಾ ನದಿಗೆ ಅಣೆಕಟ್ಟು ಇರಲಿಲ್ಲ. ಈಗಿನಂತೆ ನಾಲೆಗಳೂ ಇರಲಿಲ್ಲ. ನಾನು ಚಿಕ್ಕವನಿದ್ದಾಗ ಒಂದು ಸಾರಿ, ಹಾಗೇ ೧೯೫೨ರಲ್ಲಿ ತುಂಗಾ ನದಿಯಲ್ಲಿ ಪ್ರವಾಹ ಬಂದಿತ್ತು. ೨೨/೨೩ ಅಡಿ ನದಿ ನೀರು ಬಂದು, ಊರೊಳಗೂ ನೀರು ನುಗ್ಗಿತ್ತು. ಈಗ ಆ ತರಹದ ಮಳೇನೂ ಇಲ್ಲ... ಹೊಳೇನೂ ಉಕ್ಕಿ ಬರೋಲ್ಲ. ಅಡಿಕೆ ತೋಟದಲ್ಲಿ ಎಲ್ಲೀಂದ್ರೆ ಅಲ್ಲಿ ತೆಂಗು ಹಾಕುವ ಹಾಗಿಲ್ಲ. ತೋಟದ ಸುತ್ತಾ ತೆಂಗು ಹಾಕಿ ಮಧ್ಯದಲ್ಲಿ ಜಾಗ ಇದ್ರೆ ಒಂದು ಸಾಲು ತೆಂಗು ಹಾಕಬಹುದು ಅಷ್ಟೆ. ನನ್ನ ಒಂದೂವರೆ ಎಕರೆ ಅಡಿಕೆ ತೋಟದಲ್ಲಿ ಒಂದೂವರೆ ಲಕ್ಷ ರೂಪಾಯಿ ಆದಾಯ ಬರ್ತಿತ್ತು. ಅಡಿಕೆಗೆ ಧಾರಣೆ ಕುಸಿದಾಗಿನಿಂದ ಆದಾಯ ನಲವತ್ತು ಸಾವಿರಕ್ಕೆ ಇಳಿದಿದೆ. ಕೂಲಿಯಾಳುಗಳ ವೆಚ್ಚ ಏರಿದೆ. ಇಲ್ಲಿ ಸಮೀಪದಲ್ಲಿ ಬಂಡ್ಯನಕೊಪ್ಪ ಹಾಗೂ ಮಾಳದಕೊಪ್ಪ ಅಂತ ಸುಕ್ಕಾಲಿಗರ ತಾಂಡ್ಯ ಇದೆ. ಇವತ್ತಿಗೂ ನಮ್ಮ ತೋಟಗಳಲ್ಲಿ ಅವರೇ ಕೂಲಿ ಕೆಲಸಕ್ಕೆ ಬರೋದು. ಈಗ ಸ್ವಲ್ಪ ತಮಿಳರ ಸಂಖ್ಯೆ ಜಾಸ್ತಿ ಆಗಿದೆ. ಎಷ್ಟೋ ಜನ ಕೂಲಿ ಕೆಲಸಕ್ಕೆಂದು ಬಂದವರು ಜಮೀನನ್ನು ಸಹ ಸ್ವಂತಕ್ಕೆ ಮಾಡಿಕೊಂಡಿದ್ದಾರೆ. ನನ್ನ ಹೆಂಡತಿ ಸಾವಿತ್ರಮ್ಮ ಹೊಸಹಳ್ಳಿಯ ಸುಬ್ಬರಾಯಶಾಸ್ತ್ರಿ ಹಾಗೂ ಚೆನ್ನಮ್ಮ (ಸೀತಾಲಕ್ಷ್ಮಿ) ಅವರ ಮಗಳು. ನನ್ನ ಮನೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದಳು. ಈಗ ಅವಳಿಲ್ಲ. ನನಗೆ ಎಂಟು ಜನ ಮಕ್ಕಳು - ಮೂರು ಗಂಡು, ಐದು ಹೆಣ್ಣು. ನನ್ನ ಕಿರಿಯ ಮಗ ಎಂ.ಎಸ್. ಗಣೇಶ, ಈಗ ಇಲ್ಲಿದ್ದು ವ್ಯವಸಾಯ ಮಾಡ್ತಿದಾನೆ. ನನ್ನ ನಂತರ ವ್ಯವಸಾಯ ಮಾಡೋಕೆ ಹಾಗೂ ವೃದ್ಧ ತಂದೆ ತಾಯಿಯನ್ನು ಕಾಪಾಡಲು ನಾನೇ ಅವನನ್ನು ಉಳಿಸಿಕೊಂಡೆ. ಮತ್ತೂರಿನ ಎಲ್ಲ ಸಂಕೇತಿ ಕುಟುಂಬದಲ್ಲೂ ಒಬ್ಬನಿದ್ದು ವ್ಯವಸಾಯ ನೋಡಿಕೋತಿದಾನೆ. ಸಂಕೇತಿಗಳ ಕೃಷಿ ಇಲ್ಲಿ ಮುಂದುವರೆಯುತ್ತೆ. ದೇವರಲ್ಲಿ ನಂಬಿಕೆಯಿಟ್ಟು, ಭಯಭಕ್ತಿಯಿಂದ ಆತನನ್ನು ಪೂಜಿಸಬೇಕು. ದೇವತಾಕಾರ್ಯಗಳನ್ನು ಮನೇಲಿ ಮಾಡಬೇಕು, ದೇವರ ಉತ್ಸವಾದಿಗಳಲ್ಲಿ ಭಾಗವಹಿಸಬೇಕು. ಆಗ ನಮಗೆ ದೇವರು ಒಳ್ಳೆಯದನ್ನು ಮಾಡ್ತಾನೆ. ಏನೂ ಇಲ್ಲಾಂದ್ರೆ ನಮಗೂ ಏನೂ ಇಲ್ಲಾ ಅಷ್ಟೆ' ಅಂತ ಹೇಳಿ ಮಾತಿಗೆ ಸಂಪೂರ್ಣ ವಿರಾಮ ಹಾಕಿದ್ರು, ಸುಬ್ಬರಾಯಶಾಸ್ತ್ರಿಗಳು. ಅವರು ಆರಾಮವಾಗಿ ಕುಳಿತಿದ್ದ ಏಳೂವರೆ ಚದುರದ ಮನೆಯನ್ನು ಹಿಂದಿನ ಕಾಲದಲ್ಲಿ ಕೇವಲ ಎಂಟು ಸಾವಿರಕ್ಕೆ ಅವರೇ ಕಟ್ಟಿದ್ದಂತೆ. ಮನೆ ಕಟ್ಟಿದಂತೆ ತಮ್ಮ ಕುಟುಂಬವನ್ನು ಕಟ್ಟಿ ಬೆಳೆಸಿದ ಸಾರ್ಥಕತೆ ಅವರ ಮುಖದಲ್ಲಿತ್ತು. ಮನೆ ತುಂಬಾ ನೆಮ್ಮದಿ ಹರಡಿತ್ತು. ಆದರೆ ಮನೆಯೊಡತಿ ಇಲ್ಲವಲ್ಲಾ? ಕೊರತೆ ಸ್ವಲ್ಪವಾದರೂ ಇದ್ದಿರಬೇಕು, ಶಾಸ್ತ್ರಿಗಳಿಗೆ. ವಿದಾಯ ಹೇಳಿ ಮುಂದಿನ ಮನೆಗೆ ಪಯಣ ಬೆಳೆಸಿದೆವು.

ಆ) ಎನ್.ಕೆ. ಚನ್ನಕೇಶವ ೩/ಮ ಎನ್.ಎಸ್. ಕೃಷ್ಣಮೂರ್ತಿ

ಮತ್ತೂರು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237562

ಮತ್ತೂರಿನಲ್ಲಿ ಸಂಕೇತಿ ಕೃಷಿ ಮುಂದುವರೆಯುತ್ತೆ. ಅದಕ್ಕೆ ಪೂರಕವಾಗಿ ನಾವು ಏನು ಮಾಡ್ತೀವಿ ಅಂದ್ರೆ, ಅವರು ಈ ಊರಲ್ಲೇ ಉಳೀಬೇಕು ಅಂತ ಅವರಿಗೆ ನಮ್ಮ ವೈದಿಕ ಪರಂಪರೆಗೆ ಅನುಗುಣವಾಗಿ ವೇದ ಹಾಗೂ ಸಂಸ್ಕೃತ ಅಭ್ಯಾಸ ಮಾಡಿಸ್ತೀವಿ. ಮತ್ತೂರಿನಲ್ಲಿ SSLCವರೆಗೆ ಶಾಲೆ ಇದೆ. ಇಲ್ಲಿ ಆರರಿಂದ ಏಳನೇ ವಯಸ್ಸಿನಲ್ಲಿ ಉಪನಯನ ಮಾಡಿ, ವೇದ, ಸಂಸ್ಕೃತ ಶಿಕ್ಷಣ ನೀಡ್ತೀವಿ. SSLC ಮುಗಿಸೋ ಹೊತ್ತಿಗೆ, ಈ ಶಿಕ್ಷಣ ಸಹ ಮುಗಿದಿರುತ್ತೆ. ಹಳ್ಳಿಯ ಪರಿಸರದಲ್ಲೇ ಬೆಳೆದ ಅವರಿಗೆ, ಹಿರಿಯರು ಮಾಡಿದ ಆಸ್ತಿಯನ್ನು ರೂಢಿಸೋಣ ಅನ್ನುವ ಅಭಿಪ್ರಾಯ ಮೂಡುತ್ತೆ. ಕೃಷಿಯ ಬಗ್ಗೆ ಮೋಹ ಹುಟ್ಟುತ್ತೆ. ಹೊರಗಡೆ ಹೋಗಿಬಿಟ್ರೆ ವ್ಯವಸಾಯದ ವ್ಯಾಮೋಹ ಹೊರಟು ಹೋಗುತ್ತೆ.



ಎನ್.ಕೆ.ಚನ್ನಕೇಶವ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ:ಮತ್ತೂರು

ನಾಟನಹಳ್ಳಿಯ ಶ್ರೀನಿವಾಸಯ್ಯ ಹಾಗೂ ಸೋಮನಹಳ್ಳಿಯ ಸೀತಮ್ಮ ದಂಪತಿಗಳ ಮಗ ಎನ್.ಎಸ್. ಕೃಷ್ಣಮೂರ್ತಿ. ಕೃಷ್ಣಮೂರ್ತಿಯವರು ಮದುವೆಯಾದದ್ದು ಮತ್ತೂರಿನ ಎಂ.ಆರ್.ಸೀತಮ್ಮ ನವರನ್ನು. ಇವರಿಗೆ ನಾಲ್ಕು ಗಂಡು ಹಾಗೂ ಮೂರು ಹೆಣ್ಣುಮಕ್ಕಳು. ಈ ದಂಪತಿಗಳ ಮೊದಲನೆಯ ಮಗನೇ ಎನ್.ಕೆ. ಚೆನ್ನಕೇಶವ. ಇವರಿಗೆ ೪೬ರ ನಡುಪ್ರಾಯ. ಚನ್ನಕೇಶವ ಅವರ ಪತ್ನಿ ಬಿ.ಕೆ. ಸೀತಾಲಕ್ಷ್ಮಿ ದೊಡ್ಡ ಬ್ಯಾಗತವಳ್ಳಿಯ ಬಿ.ಎಸ್.ಕೃಷ್ಣಮೂರ್ತಿ ಹಾಗೂ ಚಿಲ್ಕುಂದದ ಸಾವಿತ್ರಮ್ಮ ದಂಪತಿಗಳ ಮಗಳು. ಮತ್ತೂರಿನ ಗ್ರಂಥಾಲಯದ ಮೇಲಿರುವ ಕೋಣೆಯಲ್ಲಿ ನಾವು ಚನ್ನಕೇಶವ ಅವರನ್ನು ಮಾತನಾಡಿಸಿದ್ದು. ತೋಟದಿಂದ ವಾಪಸ್ಸಾಗುತ್ತಿದ್ದ ಅವರನ್ನು ದಾರಿಯಲ್ಲೇ ನಿಲ್ಲಿಸಿ, ನಮ್ಮ ವಿಚಾರಗಳನ್ನು ತಿಳಿಸಿ, ಅವರನ್ನು ಮನೆಗೂ ಬಿಡದೆ, ಕೋಣೆಯಲ್ಲಿ ಕೂಡಿಸಿ, ಕಾಡುವ ಪ್ರಶ್ನೆಗಳನ್ನು ಕೇಳಿದಾಗ ನಗುನಗುತ್ತಲೇ ಉತ್ತರಿಸಿದ್ರು.

- **ಚನ್ನಕೇಶವ ಅವರೆ, ನಮಸ್ಕಾರ**

  ನಮಸ್ಕಾರ...

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ.**

  ನಮ್ಮ ತಾತ ಶ್ರೀನಿವಾಸಯ್ಯ, ಅವರು ಕೆ.ಆರ್. ಪೇಟೆ ತಾಲ್ಲೂಕು ನಾಟನಹಳ್ಳಿಯಲ್ಲಿ ವಾಸಿಸ್ತಾ ಇದ್ರು. ಅವರು ತುಂಬಾ ಶ್ರಮಜೀವಿಗಳು. ಪ್ರತಿಯೊಂದು ಕಾರ್ಯವನ್ನೂ ಸ್ವತಃ ಮಾಡ್ತಿದ್ರು. ಹೇಮಾವತಿ ನಾಲಾ ಬಯಲಿನಲ್ಲಿ ಹದಿನೆಂಟು ಎಕರೆ ತೆಂಗಿನ ತೋಟವಿತ್ತು. ಕಾಯನ್ನು ಹೆಗಲ ಮೇಲೆ ಹೊರಲಾರದೆ, ಮನೆಯ ಹಿಂಭಾಗದಲ್ಲಿ ಚಾನಲ್ ಹರೀತಾ ಇದ್ದಿದ್ರಿಂದ, ಎಲ್ಲವನ್ನೂ ಕಾಲುವೇಲಿ ತೇಲಿ ಬಿಡೋರು. ನಮ್ಮಜ್ಜಿ ಅತ್ಯಂತ ಶ್ರಮಜೀವಿ. ಅವರು ಸಮಯಕ್ಕೆ ಸರಿಯಾಗಿ ಕಾದಿದ್ದು ಅದನ್ನು ಮೇಲಕ್ಕೆ ಎತ್ತಿಕೊಳ್ಳೋರಂತೆ. ಅಜ್ಜ ತೋಟದಿಂದ ಬಂದ ಮೇಲೆ ಅದನ್ನು ಮನೆಗೆ ಸಾಗಿಸೋರು. ಆಗಿನ ಕಾಲದಲ್ಲಿ ನಮ್ಮ ಮನೇಲಿ ಊಟ ಮಾಡದಿರುವ ಜನರೇ ಇಲ್ಲ. ಕತ್ತಲಾಯ್ತು ಅಂದ್ರೆ ನದೀನ ಜನ ದಾಟ್ತಾ ಇರಲಿಲ್ಲ. ನಮ್ಮ ಮನೆ ಸುಮಾರು ಹದಿನೆಂಟು ಅಡಿ ಅಗಲದ ಕಟ್ಟೆ. ೬೦ ಅಡಿ ಉದ್ದ. ೬೦ ಜನಕ್ಕೆ ತಕ್ಕಷ್ಟು ಕಂಬಳಿ, ದಿಂಬುಗಳು ಇರ್ತಿತ್ತು. ಅವತ್ತು ಪಾತ್ರೆ ಪಡಗ ಇರಲಿಲ್ಲ. ಎಲ್ಲಾ ಮಣ್ಣಿನ ಕುಡಿಕೆಗಳೆ. ಎಂಟು, ಹತ್ತು ಎಮ್ಮೆ ಕರೆಸೋದು. ನಮ್ಮಜ್ಜಿ ಐವತ್ತು ಜನರಿಗೆ ಆಗುವಷ್ಟು ರಾಗಿಮುದ್ದೇನ, ಸಣ್ಣ ಚೆಂಡಿನಿಂದ ಹಿಡಿದು, ತಲೆ ಗಾತ್ರದವರೆಗೂ ಕಟ್ಟಿ

ಇಟ್ಟಿರೋರು. ಆವಾಗ ಅಕ್ಕಿ ಕಡಿಮೆ. ಬಂದ ಪ್ರತಿ ಅತಿಥಿಗಳಿಗೂ ಕುಡಿಕೇಲಿ ಗಟ್ಟಿ ಮೊಸರು, ರಾಗಿಮುದ್ದೇನ ಕೊಡೋರು. ಇದೇ ರೀತಿ ಕಳೀತಾ ಬಂತು. ನಮ್ಮಜ್ಜ ದುರ್ಮರಣಕ್ಕೆ ಈಡಾದ್ರು. ನಮ್ಮಜ್ಜನಿಗೆ ೬೦ನೇ ವಯಸ್ಸು. ಅಜ್ಜಿಗೆ ಬಹಳ ಸಣ್ಣ ವಯಸ್ಸು, ಬರಿಯ ೨೫ ವರುಷ ಮಾತ್ರ. ಅಜ್ಜನಿಗೆ ಎರಡನೆಯ ಸಂಬಂಧ. ಆಮೇಲೆ ಲೇವಾದೇವಿಯ ವಸೂಲಿ ಸಲುವಾಗಿ ಇರುವ ಆಸ್ತಿಯನ್ನೆಲ್ಲಾ ಕಳೆದುಕೊಂಡುಬಿಟ್ರು. ನಮ್ಮ ತಂದೆ ಹಾಗೂ ದೊಡ್ಡಪ್ಪ ಇಬ್ಬರೂ ಚಿಕ್ಕಮಕ್ಕಳು. ಊರನ್ನೇ ಬಿಡಬೇಕಾದ ಪರಿಸ್ಥಿತಿ ಬಂದು ನಾಟನಹಳ್ಳೀನ ತೊರೆದ್ರು. ಆಗ ನನ್ನ ತಂದೆಗೆ ಏಳು ವರುಷ. ಅಲ್ಲಿನ ರೈತರ ಕಿರುಕುಳವೂ ಇದಕ್ಕೆ ಕಾರಣ. ತೆಂಗಿನ ಫಸಲು ಬರದಂತೆ ಹಿಂಗಾರವನ್ನೆಲ್ಲಾ ರಾತ್ರೋ ರಾತ್ರಿ ಕಡಿದು ಹಾಕ್ತಿದ್ರಂತೆ. ಅಜ್ಜಿ ಒಬ್ಬಂಟಿ. ಹಾಗಾಗಿ ಬೆಂಗಳೂರು ಪಟ್ಟಣ ಸೇರಿದ್ರು. ಸಾಧಾರಣವಾಗಿ ನಮ್ಮ ಸಂಕೇತಿಗಳು ಹಾಗೂ ಇತರೇ ಬ್ರಾಹ್ಮಣರ ಮನೇಲಿ ಅಡುಗೆ ಕೆಲಸ, ಬಾಣಂತನ, ಚಟ್ನಿಪುಡಿ, ಅವಲಕ್ಕಿ ಮಾಡಿ ಮಕ್ಕಳನ್ನು ಸಾಕಿದ್ರು. ದೊಡ್ಡದಾಗಿ ಬದುಕಿ ಬಾಳಿದ ಅಜ್ಜಿ ನನ್ನ ಅಪ್ಪನನ್ನು ಉಳಿಸಲು ಅಷ್ಟು ಕಷ್ಟಪಡಬೇಕಾಯಿತು. ಆಮೇಲೆ ನಮ್ಮತ್ತೆಗೆ ನಂಜನಗೂಡಿಗೆ ಕೊಟ್ಟು ಮದುವೆಯಾಯ್ತು. ಮದುವೆಯಾದ ನಂತರ ನಮ್ಮಜ್ಜಿ ಅವರ ಮಗಳ ಮನೆ ಸೇರಿದ್ರು. ನಮ್ಮ ತಂದೆಗೆ ಅವರ ಹದಿನೇಳನೆ ವಯಸ್ಸಿಗೆ ಶಾಲಾ ಶಿಕ್ಷಕನ ಕೆಲಸ ಸಿಕ್ತು ಬೆಂಗಳೂರಿನಲ್ಲಿ. ಅವರು ಶಿಕ್ಷಕ-ಕೆಲಸ ಸರಿ ಬರದೆ ವ್ಯವಸಾಯ ಇಲಾಖೆ ಸೇರಿದ್ರು. ಸುಮಾರು ಮೂರು ವರುಷ ಬೆಂಗಳೂರಿನ ಸಮೀಪದ ರಾಮಕೃಷ್ಣಾಪುರದಲ್ಲಿದ್ರು. ತಂದೆಗೆ ಮತ್ತೂರಿನ ಹೆಣ್ಣು ಕೊಟ್ಟು ಮದುವೆಯಾಯ್ತು. ನನ್ನ ತಾಯಿಯ ತಂದೆ ಆಗ ಇಲ್ಲಿ ಶಕ್ತಿಯುತವಾಗಿದ್ರು. ವಶೀಲಿ ಬಳಸಿ ತಂದೇನ ಶಿವಮೊಗ್ಗಕ್ಕೆ ವರ್ಗಮಾಡಿಸಿಕೊಂಡ್ರು. ನನ್ನ ತಂದೆ ೨೫ ವರುಷ ಕಾಲ ಒಂದೇ ಕಟ್ಟಡದಲ್ಲಿ ಕೆಲಸ ಮಾಡಿದ್ರು. ತಂದೆ Intermediate ಓದಿದ್ರು. ಕೃಷಿ ಇಲಾಖೇಲಿ ಎರಡನೇ ದರ್ಜೆಯ ಗುಮಾಸ್ತನಾಗಿ ಸೇರಿದ್ರು. ಅವರು Retire ಆದ ಮೇಲೆ ನಾವು ಜಮೀನನ್ನು ಖರೀದಿ ಮಾಡಿದ್ವಿ. ಈಗ ವ್ಯವಸಾಯ ಮಾಡ್ತಿದೀನಿ.

- **ನಿಮ್ಮ ತಂದೆಯ ಕಾಲದಲ್ಲಿ ಇಲ್ಲಿ ನಿಮಗೆ ಜಮೀನು ಇರಲಿಲ್ವಾ?**

  ಇಲ್ಲ. ತಂದೆಗೆ Retire ಆದದ್ದು ೮೧ರಲ್ಲಿ. ನಾವು ಜಮೀನನ್ನು ತೊಗೊಂಡಿದ್ದು ೧೯೮೦ರಲ್ಲಿ. ನಮ್ಮ ತಂದೆಗೆ ಜಮೀನಿಗೆ ಹಣಗಾಡುವ ಪರಿಸ್ಥಿತಿ ಬರಲಿಲ್ಲ. ಅವರ ತಂದೆ ಕಾಲಕ್ಕೆ ಜಮೀನು ಹೋಯ್ತು. ಮಕ್ಕಳು ಪ್ರಬುದ್ಧರಾದಾಗ ಜಮೀನು ಬಂತು. ಅವರು ಇವತ್ತಿಗೂ ತಮ್ಮ ಕೈಲಾದ ಕೆಲಸ ಮಾಡ್ತಾರೆ. ನಾವು ಇಲ್ಲಿ ಸುಮಾರು ಒಂದೂವರೆ ಎಕರೆ ಜಮೀನನ್ನು ಗಂಗಾಧರ ಶಾಸ್ತ್ರಿಗಳಿಂದ ಖರೀದಿ ಮಾಡಿದ್ದು ಅವತ್ತು ಇಪ್ಪತ್ತೆರಡು ಸಾವಿರ ಬಿತ್ತು. ಈಗ ನಮ್ಮದು ಮೂರೂವರೆ ಎಕರೆ ಜಮೀನಿದೆ. ಈಗ್ಗೆ ಎರಡು ವರುಷದ ಕೆಳಗೆ ಮೂರೂವರೆ ಎಕರೆ ಜಮೀನನ್ನು ನೀರಿಗೆ ತೊಂದರೆ ಅಂತ ಏಳೂವರೆ ಲಕ್ಷಕ್ಕೆ ಮಾರಾಟ ಮಾಡಿದೆ. ಈಗ ಸಂಪೂರ್ಣವಾಗಿ ಅಡಿಕೆ ತೋಟ ಮಾಡಿದ್ದೇವೆ.

- **ನಿಮ್ಮದು ಒಟ್ಟು ಕುಟುಂಬಾನ?**

  ಹೌದು. ವ್ಯವಹಾರ ಒಟ್ಟು, ಊಟ ಮಾತ್ರ ಬೇರೆ ಅಷ್ಟೆ. ಅಕ್ಕಪಕ್ಕದ ಎರಡು ಮನೇಲಿ ನಾನು, ನನ್ನ ತಮ್ಮ ಇಬ್ಬರೂ ಇದ್ದೇವೆ.

- **ನಿಮ್ಮ ಬಾಲ್ಯ ಹಾಗೂ ವಿದ್ಯಾಭ್ಯಾಸದ ಬಗ್ಗೆ ಹೇಳಿ.**

  ನಾನು ಮತ್ತೂರಿನಲ್ಲೇ ಹುಟ್ಟಿದ್ದು ಹಾಗೂ ಬೆಳೆದಿದ್ದು. ನಾನು ನನ್ನ ೧೧ನೇ ವಯಸ್ಸಿನಲ್ಲಿ ವ್ಯಾಪಾರಕ್ಕೆ ಬಿದ್ದೆ. ಆಗ ಬಹಳ ಕಷ್ಟ. ಮನೆ ತುಂಬಾ ಮಕ್ಕಳು. ನಮ್ಮ ತಂದೆಗೆ ಅವತ್ತಿನ ಕಾಲದಲ್ಲಿ ಬರ್ತಿದ್ದ ಸಂಬಳ ೧೮೦ ರೂಪಾಯಿ. ಅದರಲ್ಲೇ ಮನೇಲಿ ೧೦ ಜನ ಊಟ ಮಾಡಬೇಕಿತ್ತು. ನಾನು ಹಿರಿಯ ಮಗ. ನಾವು ಈ ಊರಲ್ಲಿ ಬಾಡಿಗೆ ಮನೇಲಿದ್ವಿ. ಸಿಕ್ಕಾಪಟ್ಟೆ ಖಾಯಿಲೆ ಬರೋದು. ಇರೋದೆಲ್ಲಾ ಆಸ್ಪತ್ರೆಗೆ ಖರ್ಚಾಗೋದು. ಮನೆಯ ಹಿಂದೆ ಸಂಪಿಗೆ ಮರ ಇತ್ತು. ನನಗೆ ಆಗ ಎಂಟು ವರುಷ. ಎರಡು ಜೇಬು ತುಂಬಾ ಹೂವು ಕುಯ್ದುಕೊಂಡು ಇಳೀವಾಗ ಬಿದ್ದೆ. ಕೈತುಂಡಾಯ್ತು. ನಾ ಬಿದ್ದ ಆರು ತಿಂಗಳಿಗೆ ಮರ ಒಣಗಿ ಹೋಯ್ತು. ಅದಾದ ಮೇಲೆ ಬೇರೆ ಕಡೆ ಊರಲ್ಲಿ ಎಂಟತ್ತು ಸಂಪಿಗೆ ಮರ ಇತ್ತು. ಬಹಳ ವಿಶೇಷವಾದ ಹೂವು. ಅದನ್ನು ಮಾರಾಟ ಮಾಡಿ ಸಂಪಾದನೆ ಮಾಡ್ತಿದ್ದೆ. ನೂರು ಹೂವಿಗೆ ಒಂದು ರೂಪಾಯಿ ಅಷ್ಟೆ. ದಿನಕ್ಕೆ ೧೦ ರೂಪಾಯಿ, ೧೨ ರೂಪಾಯಿ ಸಂಪಾದನೆ ಮಾಡ್ತಿದ್ದೆ. ೧೧ನೇ ವಯಸ್ಸಿನಿಂದ ೧೬ನೇ ವಯಸ್ಸಿನವರೆಗೂ ಅಂದ್ರೆ SSLC ಆಗುವವರೆಗೂ ಇದೇ ವ್ಯವಹಾರ ಮಾಡಿದೆ. SSLC ಆದ ಮೇಲೆ ಇನ್ನೂ ಸ್ವಲ್ಪ ಮೇಲಕ್ಕೆ ಹೋಗಬೇಕು ಅನ್ನಿಸ್ತು. ಆವಾಗ ಯಾರೋ ಪುಣ್ಯಾತ್ಮರು ಎರಡು ಬಾಳೆಗೊನೆ ತೊಗೊಂಡು ಬಂದ್ರು. ಆ ಬಾಳೆಗೊನೇನ ಇಲ್ಲಿಂದ ಎರಡು ರೂಪಾಯಿಗೆ ಖರೀದಿ ಮಾಡಿ ಶಿವಮೊಗ್ಗಕ್ಕೆ ತೊಗೊಂಡು ಹೋಗಿ ಮಾರಿದಾಗ ನಾಲ್ಕು ರೂಪಾಯಿ

ಬಂತು. ಆ ಒಂದು ಪುಣ್ಯ ನನ್ನ ಜೀವನವನ್ನು ತಿರುಗಿಸಿತು. ಬಾಳೇಕಾಯಿ ವ್ಯಾಪಾರ ನಾನು ನಿಲ್ಲಿಸಿ ೧೦ ವರುಷ ಆಯ್ತು. ನನ್ನ ತಮ್ಮ ಇವತ್ತಿಗೂ ತೆಂಗಿನಕಾಯಿ, ಅಡಿಕೆ ಹಾಗೂ ಬಾಳೆಕಾಯನ್ನು ಮಾರ್ತಾನೆ. ನಾನು ಸುಮಾರು ೨೫ ವರುಷಗಳ ಕಾಲ ಕಷ್ಟಪಟ್ಟು ದಿನಕ್ಕೆ ಒಂದು ಸಾವಿರ ರೂಪಾಯಿಯಂತೆ ಸಂಪಾದನೆ ಮಾಡಿಕೊಂಡು, ದಿನಕ್ಕೆ ೮೫ ಕಿಲೋಮೀಟರ್ ಸೈಕಲ್ ಹೊಡೀತಿದ್ದೆ. ಇವತ್ತಿನ ಹಾಗೆ ವಾಹನಸೌಕರ್ಯ ಆಗ ಇರಲಿಲ್ಲ - ಈಗ ೨೦ ವರುಷದ ಹಿಂದೆ. ಪ್ರತಿದಿನ ಸೈಕಲ್ ಮೇಲೆ ೧೦೦ ರಿಂದ ೧೫೦ ಕೆ.ಜಿ. ಬಾಳೇಹಣ್ಣು ಹೇರಿಕೊಂಡು, ಇಲ್ಲಿಂದ ಅಂಗಡಿಗೆಲ್ಲಾ ಸರಬರಾಜು ಮಾಡ್ತಿದ್ದೆ.

- **ಎಲ್ಲೆಲ್ಲಿಗೆ ಹೋಗ್ತಿದ್ರಿ?**

  ಬೆಳಗಿನ ಜಾವ ನಾಲ್ಕೂವರೆಗೆ ಎದ್ರೆ, ಏಳೂವರೆಗೆ ವಾಪಸ್ಸು ಬರ್ತಿದ್ದೆ. ಮತ್ತೆ ಎಂಟೂವರೆಗೆ ಕನ್ನಡ ಇಂಗ್ಲಿಷ್ typewriting, shorthand ಕಲೀತಿದ್ದೆ. ನಂತರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿಗೆ ಹೋಗ್ತಿದ್ದೆ. ನಂತರ ಎರಡು ಘಂಟೆಗೆ ಮನೆಗೆ ವಾಪಸ್ಸು ಬರ್ತಿದ್ದೆ. ಊಟ ಮುಗಿಸಿ ಮತ್ತೆ ವ್ಯಾಪಾರಕ್ಕೆ ಶಿವಮೊಗ್ಗಕ್ಕೆ ಹೋಗೋದು. ರಾತ್ರಿ ೧೦ ರಿಂದ ೧೨ ಘಂಟೆಗೆ ಮನೆಗೆ ಬರ್ತಿದ್ದೆ. ಮೂರು trip ಪ್ರತಿದಿನ ಸೈಕಲ್ ತುಳೀತಿದ್ದೆ. ಅಣ್ಣ ತಮ್ಮಂದಿರಿಬ್ಬರೂ ಕಷ್ಟಪಟ್ಟಿದೀವಿ. ಈ ರೀತಿ ಸಂಪಾದನೇನ ರೂಢಿಸಿಕೊಂಡು ಒಂದು ಹಂತಕ್ಕೆ ನಾವು ಬಂದ್ವಿ.

- **ನಿಮ್ಮ ಜೀವನದಲ್ಲಿ ಮರೆಯಲಾಗದ ಘಟನೆಗಳೇನಾದರೂ ಆಗಿದ್ಯಾ?**

  ಕಷ್ಟ ಅಂದ್ರೆ ಏನು, ಕಷ್ಟಪಟ್ಟು ಸಂಪಾದನೆ ಮಾಡಿದ್ರೆ ಮನುಷ್ಯನಿಗೆ ಇರುವ ಉತ್ಸಾಹ ಏನು, ಕಷ್ಟಪಟ್ರೆ ಭಗವಂತ ಅನುಕೂಲ ಮಾಡಿಯೇ ಮಾಡ್ತಾನೆ ಅನ್ನುವ ವಿಶ್ವಾಸ ಬಂತು. ನಂತರ ಲಕ್ಷಗಟ್ಟಳೆ ವ್ಯವಹಾರಕ್ಕೆ ಇಳಿದ್ವಿ. ಅಡಿಕೆ ವ್ಯಾಪಾರಾನ ಶುರು ಮಾಡಿದ್ವಿ. ಭಗವಂತ ಇವತ್ತು ಚೆನ್ನಾಗಿ ಇಟ್ಟಿದ್ದಾನೆ.

- **ಯಾವ ಬಂಡವಾಳವೂ ಇಲ್ಲದೆ ನೀವು ವ್ಯಾಪಾರ ಆರಂಭಿಸಿದ್ದಾ?**

  ಹೌದು. ಬಂಡವಾಳ ಏನೂ ಇಲ್ಲ. ಇಲ್ಲಿ ನಮ್ಮ ಜನರ ಬಳಿ ೫೦ ರೂಪಾಯಿ ಬಾಳೇಕಾಯಿ ಮೊದಲು ಹಣವಿಲ್ಲದೆ ತೊಗೊಂಡು ಅದನ್ನು ಮಾರಿ ಬಂದ ಲಾಭವನ್ನು ಜೇಬಿನಲ್ಲಿ ಇಟ್ಟುಕೊಂಡು ಅವರ ಅಸಲನ್ನು ಕೊಡುತ್ತಿದ್ದೆ. ನಮ್ಮ ಜನಗಳ ಸಹಕಾರವನ್ನು ನಾನು ಜೀವನದಲ್ಲಿ ಮರೆಯಲು ಆಗೋದಿಲ್ಲ. ಅದರಲ್ಲೂ ಮೋಹನ್‌ಕುಮಾರ್ ಅನ್ನುವ ಆತ್ಮೀಯ ಸ್ನೇಹಿತರು, ಅವರದ್ದೇ ೪೦, ೫೦ ಎಕರೆ ಜಮೀನಿದೆ. ಒಂದು ರೂಪಾಯಿ ಅವತ್ತು ನೂರು ಬಾಳೇಹಣ್ಣಿಗೆ. ನೀನು ಮಾರಿ ಬಾ. ಲುಕ್ಸಾನು ಆದ್ರೆ ಬಿಟ್ಟುಕೊಡ್ತೀನಿ. ನಿನಗೆ ಉಳಿದಿದ್ದನ್ನು ನನಗೆ ಕೊಡು ಅಂತ ಹೇಳಿ ನೆರವು ನೀಡಿದ್ರು. ನಾನು ಸಾಯುವವರೆಗೂ ಮರೆಯಲಾಗದಂತಹ ನೆರವು ನೀಡಿದ್ದಾರೆ. ಅವರ ಸಹಾಯ ನನ್ನನ್ನು ಉಳಿಸಿತು.

- **ಮತ್ಯಾವ ಕಷ್ಟಗಳನ್ನು ತಾವು ಎದುರಿಸಿರಬಹುದು?**

  ನಾನು final degreeಗೆ ಹೋದಾಗ ನನಗೆ exam ತೊಗೊಳ್ಳಲು ಆಗಲಿಲ್ಲ. ನನ್ನ ಇಬ್ಬರು ತಮ್ಮಂದಿರು ಹೊರಗೆ ಓದ್ತಾ ಇದ್ರು. ಒಬ್ಬ KR ಪೇಟೇಲಿ, ಮತ್ತೊಬ್ಬ ಮೈಸೂರಿನಲ್ಲಿ ಓದ್ತಾ ಇದ್ದ. ಅವರ ಉದ್ಯೋಗಕ್ಕೆ ತೊಂದರೆ ಆಗಬಾರದು, ಅವರನ್ನೂ ಚೆನ್ನಾಗಿ ಓದಿಸಬೇಕು ಅಂತ ಹೇಳಿ ನಾವು ಅಣ್ಣತಮ್ಮಂದಿರು ಇಲ್ಲಿ ಕುಳಿತ್ವಿ. ಇವತ್ತು ಇಬ್ರೂ ಉದ್ಯೋಗದಲ್ಲಿ ಸಂತೋಷವಾಗಿದಾರೆ.

- **ಶೂನ್ಯ ಬಂಡವಾಳದಿಂದ ಆರಂಭಿಸಿದ ತಾವು ಈಗ ಎಷ್ಟು ಸಂಪಾದನೆ ಮಾಡಿದೀರಾ?**

  ಅದನ್ನು ನಾನು public ಮಾಡಲು ಇಷ್ಟಪಡೋದಿಲ್ಲ. ಶಿವ ಇವತ್ತು ತಂಪಾಗಿ ಇಟ್ಟಿದಾನೆ ಅಂತ ಹೇಳಿದ್ರೆ ತಪ್ಪಿಲ್ಲ ಅಷ್ಟೆ. ನಾನು ಸಂಪಾದಿಸಿದ್ದು ವ್ಯಾಪಾರದಲ್ಲೇ.

- **ವ್ಯಾಪಾರದ ಮೂಲಕವೇ ಸಾಕಷ್ಟು ಹಣ ಬರ್ತಿತ್ತಲ್ಲ, ವ್ಯವಸಾಯ ಮಾಡೋದಕ್ಕೆ ಯಾಕೆ ಮುಂದಾದ್ರಿ?**

  ಅದು, ವಯಸ್ಸಾಗ್ತಾ ಬಂದ ಹಾಗೆ ದೇಹದಲ್ಲಿ ಸುಸ್ತು ಕಾಣೋದಕ್ಕೆ ಶುರುವಾಯ್ತು. ಆಗ ವೈದ್ಯರ ಬಳಿ ಹೋದಾಗ 'ನೀನು ಹೆಚ್ಚು ಶ್ರಮದ ಕೆಲಸ ಮಾಡಬೇಡ. ನೀನು ಕೆಲಸ ಕಮ್ಮಿ ಇರುವ ಕಸುಬು ಮಾಡು' ಅಂತ ಸಲಹೆ ನೀಡಿದ್ರು. ನಾನು ಹೊರಗಡೆ ಉದ್ಯೋಗಕ್ಕೂ

ಹೋಗಲಿಲ್ಲ. ಯಾವುದಾದರೂ ಒಂದು ಉದ್ಯೋಗ ಬೇಕಲ್ಲವಾ? ಆಗ ಆರು ಎಕರೆ ಜಮೀನು ಖರೀದಿಸಿದೆವು. ಕುಟುಂಬದ ಕಷ್ಟದ ಸಲುವಾಗಿ ಅನಿವಾರ್ಯವಾಗಿ ನಾನು ಮೊದಲು ವ್ಯಾಪಾರ ಮಾಡಿದೆ ಅಷ್ಟೆ. ನನ್ನ ತಂದೆಗೆ ನಾವು ಓದಬೇಕು, ಓದಿ ಕೆಲಸಕ್ಕೆ ಸೇರಬೇಕು ಅಂತ ಇತ್ತು. ವಿದ್ಯೆ ಯಾವಾಗ ಕಷ್ಟ ಅನ್ನಿಸ್ತೋ ಆಗ ನೀವು ವ್ಯಾಪಾರವನ್ನೇ ಮಾಡಿ ಅಂತ ಹುರಿದುಂಬಿಸಿದರು. ನಂತರ ವ್ಯವಸಾಯದ ವಿಚಾರವನ್ನು ಸಂಜೆ ಕೂರಿಸಿಕೊಂಡು ತಿಳಿಹೇಳ್ತಾ ಇದ್ರು.

- **ವ್ಯವಸಾಯಕ್ಕೆ ಸಂಬಂಧಪಟ್ಟ ಯಾವ ಯಾವ ವಿಷಯಗಳನ್ನು ನಿಮ್ಮ ತಂದೆ ತಿಳಿಸಿದ್ದಾರೆ?**

ಯಾವ ಯಾವ ಬೆಳೆಗಳನ್ನು ಯಾವ ಸಂದರ್ಭದಲ್ಲಿ ಮಾಡಬೇಕು. ಯಾವುದು ಮಾಡಿದರೆ ಅನುಕೂಲ ಎಂದು ಅವರು ತಿಳಿಸಿದರು. 'ಬಾಳೆ ಬೆಳೆದರೆ ನಿಮ್ಮ ವ್ಯಾಪಾರಕ್ಕೆ ಅನುಕೂಲವಾಗುತ್ತೆ. ಆದಷ್ಟು ತರಕಾರಿಗಳನ್ನು ಬೆಳೀರಿ, ತರಕಾರಿ ಬೆಳೆದರೆ ಪ್ರತಿದಿನ ಆದಾಯ ಸಿಗೋದ್ರಿಂದ ಯಾವ ಬಡತನವೂ ನಿಮಗೆ ಕಾಡೋದಿಲ್ಲ. ಪ್ರತಿದಿನ ಬೆಳಕು ಹರಿದ ತಕ್ಷಣ ನಿಮಗೆ ಹಣ ಸಿಗುತ್ತೆ. ಪಶುಸಂಗೋಪನೆ ಮಾಡಿ. ಮನೆಗೂ ಹಾಲಿನ ಸಮೃದ್ಧಿಯಾಗುತ್ತೆ. ಯಾರಾರೂ ನಾಲ್ಕಾರು ಜನ ಕೇಳಿದ್ರೆ ಅವರಿಗೂ ಹಾಲು ಮೊಸರು ನೀಡಬಹುದು. ಖರೀದಿಗೆ ಕೊಟ್ರೆ ಮನೆಗೆ ಹಣಕಾಸಿನ ನೆರವಾಗುತ್ತೆ' ಅಂತ ಈ ರೀತಿಯಾಗಿ ತಂದೆ ತಿಳಿ ಹೇಳ್ತಿದ್ರು. ನಮ್ಮ ತಂದೆ ಹೇಳಿದ್ರಲ್ಲಿ ೯೯ ಭಾಗವನ್ನು ನಾವು ಮಾಡಿದ್ದೀವಿ.

- **ನೀವು ಯಾವ ಯಾವ ತರಕಾರಿಗಳನ್ನು ಬೆಳೆದ್ರಿ?**

ಬದನೇಕಾಯಿ, ಹಾಗೂ ಹೊಲದ ಅವರೆ. ಅವರೆಕಾಯಿಯಲ್ಲಿ ವರುಷ ೨೫ ರಿಂದ ೫೦ ಸಾವಿರ ರೂಪಾಯಿ ಆದಾಯ ಗಳಿಸ್ತಾ ಇದ್ವಿ. ಈಗ ಎರಡು ವರುಷದಿಂದ ಅದನ್ನು ಬಿಟ್ಟಿದ್ದೀವಿ. ಆದರೆ ಇವತ್ತಿಗೂ ಅದನ್ನು ಬೆಳೆಯುವ ಆಸೆ ಇದೆ. ಈ ಊರಲ್ಲಿ ದನಕರುಗಳಿಗೆ ಮೇಯಲು ಜಾಗವಿಲ್ಲ. ನಿಲ್ಲೋಕೆ ನೆಲೆಯಿಲ್ಲ. ದನಕರುಗಳನ್ನು ಸಾಕೋದು ಶಾಪವಾಗಿದೆ. ಇಲ್ಲಿಂದ ಸುಮಾರು ೧೦ ಕಿಲೋಮೀಟರ್ ದೂರ ಹೋಗಬೇಕು ಅವುಗಳನ್ನು ಅಟ್ಟಿಕೊಂಡು. ನಮ್ಮ ಒಂದೂವರೆ ಎಕರೆ ಜಮೀನನ್ನು ಹಾಗೇ ಬೀಳು ಬಿಟ್ಟು, ದನಕರುಗಳಿಗೆ ಹುಲ್ಲು ಬೆಳೀತಾ ಇದೀವಿ. ಎರಡು ಸಿಂಧೀ ರಾಸುಗಳನ್ನು ಸಾಕಿದೀವಿ. ಇಷ್ಟು ದಿವಸ ನಾಲ್ಕು ಲೀಟರ್ ಹಾಲು ಮಾರ್ತಿದ್ವಿ. ಈಗ ಸಂಪೂರ್ಣ ಮನೆ ಬಳಕೆಗೆ ಮಾತ್ರ ಇಟ್ಟುಕೊಂಡಿದೀವಿ. ನಮಗೆ ಪ್ರತಿದಿನ ಆರರಿಂದ ಎಂಟು ಲೀಟರ್ ಹಾಲು ಬೇಕು. ಬರೋರು ಹೋಗೋರು ಜಾಸ್ತಿ.

- **ಬದುಕು ಯಾವ ಪಾಠವನ್ನು ಕಲಿಸಿದೆ?**

ಒಳ್ಳೆಯ ಮಾರ್ಗದರ್ಶನವಾಗಿದೆ. ಕಷ್ಟಪಟ್ಟು ಸಂಪಾದನೆ ಮಾಡಬೇಕು. ಮನುಷ್ಯ ಸೋಮಾರಿಯಾಗಬಾರದು. ಕಷ್ಟಪಟ್ಟು ಸಂಪಾದನೆ ಮಾಡಿದ್ರೆ ಮನುಷ್ಯನಿಗೆ ನಿಜವಾದ ತಿಳುವಳಿಕೆ ಬರುತ್ತೆ. ಇದು ಬದುಕಿನ ಪಾಠ.

- **ತಾವು ಹೇಳಿದ್ರಿ, ವ್ಯಾಪಾರದಲ್ಲಿ ದೈಹಿಕ ಶ್ರಮ ಇತ್ತು, ಹಾಗಾಗಿ ವ್ಯವಸಾಯಕ್ಕೆ ಬಂದೆ ಅಂತ. ಆದರೆ ವ್ಯವಸಾಯದಲ್ಲೂ ತುಂಬಾ ದೈಹಿಕ ಶ್ರಮ ಇಲ್ವೆ?**

ಇದ್ರೂ ಸಹ, ಇವತ್ತು ಒಂದು ಹಂತವನ್ನು ನಾವು ತಲುಪಿರುವುದರಿಂದ, ಆ ಕಾರ್ಯಗಳನ್ನು ನಾವು ಮಾಡ್ತಾ ಇಲ್ಲ, ಮನೇಲಿ ನಾಲ್ಕಾರು ಜನ ಆಳುಗಳನ್ನಿಟ್ಟುಕೊಂಡು ಕೆಲಸ ಮಾಡಿಸ್ತಾ ಇದೀವಿ. ಈಗ ನಮ್ಮದು ಉಸ್ತುವಾರಿಯೇ ಹೊರತು, ದೈಹಿಕ ಶ್ರಮವಿಲ್ಲ.

- **ನಿಮ್ಮ ಜಮೀನಿನಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೀತಾ ಇದೀರಿ, ಅದನ್ನೆಲ್ಲಾ ಯಾವ ರೀತಿ ಬೆಳೆಸಿದ್ರಿ ಹೇಳಿ?**

ಅಡಿಕೆ ಮತ್ತು ತೆಂಗು, ಇವರೆಡನ್ನು ನಾವು ಬಹಳ ಶಿಸ್ತುಬದ್ಧವಾಗಿ ಬೆಳೆದಿದೀವಿ. ಸ್ವತಂತ್ರವಾಗಿ ನಾವೇ ಮಾಡಿರೋದು. ಇವತ್ತು ಪ್ರತಿ ವರುಷ ಎರಡರಿಂದ ಮೂರು ಲಕ್ಷ ರೂಪಾಯಿ ಉತ್ಪತ್ತಿ ಇದೆ. ಧಾರಣೆ ಕುಸಿದಾಗ ವರಮಾನ ಸ್ವಲ್ಪ ಕಡಿಮೆಯಾಗುತ್ತೆ ಅಷ್ಟೆ. ವರುಷಕ್ಕೆ ಎರಡು ಸಲ ತೋಟದ ಅಗೆತ ಮಾಡಿಸ್ತೀವಿ. ಎರಡು ಸಲ ಕಳೆ ತೆಗಿಸ್ತೀವಿ. ಮರಗಳಿಗೆ ಸೀಮೆಗೊಬ್ಬರ ಹಾಕ್ತೀವಿ. ಹೊಸಮಣ್ಣು ಹಾಗೂ ದನದ ಗೊಬ್ಬರವನ್ನು ಹಾಕಿ ಕೃಷಿ ಮಾಡ್ತೀವಿ. ಇವತ್ತು ಪ್ರಪಂಚವೆಲ್ಲಾ ಅಡಿಕೆ ಧಾರಣೆ ಕಂಡು, ಅಡಿಕೆ ಬೆಳೀತಿದೆ. ಮುಂದಿನ ದಿನಗಳಲ್ಲಿ ಅಡಿಕೆ ಧಾರಣೆ ಕುಂಠಿತವಾಗಬಹುದೇನೋ ಅನ್ನುವ ದಿಗಿಲಿದೆ. ಯಾಕೇಂದ್ರೆ ಈಗ ನಾವು ಅದನ್ನೇ ನಂಬಿ ಜೀವನ

ನಡೆಸ್ತಾ ಇದೀವಿ. ನಾವು ನಮ್ಮ ಜೀವನ ಮಟ್ಟವನ್ನು ಏರಿಸಿಕೊಂಡಿದೀವಿ. ಮುಂದೆ ಧಾರಣೆ ಕಡಿಮೆಯಾದರೆ, ಉತ್ಪತ್ತಿ ಕಡಿಮೆಯಾಗಿ ಜೀವನ-ವೆಚ್ಚ ಏರಬಹುದು. ಆದ್ದರಿಂದ ನಾವು ಪರ್ಯಾಯವಾಗಿ ಬೇರೆ ಬೆಳೇನೂ ಮಾಡಬೇಕು ಅನ್ನುವ ಅಭಿಪ್ರಾಯ ಸಹಾ ಇದೆ.

- **ನಿಮ್ಮ ತಾಯಿಯವರ ಬಗ್ಗೆ ಹೇಳಿ.**

ನಮ್ಮ ತಾಯಿ ನಮ್ಮನ್ನೆಲ್ಲಾ ಸಾಕೋದಕ್ಕೆ ಬೆಂದಿದಾರೆ. ಮತ್ತೂರಿನಲ್ಲಿ ನೂರು ಮನೆ ಇದೆ. ನೂರು ಮನೆಯಲ್ಲೂ ಸಹ ಅವಲಕ್ಕಿ ಮಾಡೋರು, ಭಾವಿಯಿಂದ ನೀರು ಸೇದೋರು, ಪ್ರತಿ ಮನೆಗೂ ರಾತ್ರಿ ೧೨ ಘಂಟೆಯಿಂದಲೇ ಅಡಿಕೆ ಸುಲಿಯಲು ಹೋಗೋರು, ಅವಲಕ್ಕಿ ಕುಟ್ಟೋರು, ನಾನು ಒಂಭತ್ತು ತಿಂಗಳ ಗರ್ಭದಲ್ಲಿ ಇದ್ದಾಗಲೂ ಸಹ ನನ್ನ ತಾಯಿ ಅವಲಕ್ಕಿ ಕುಟ್ಟಿ ನನ್ನನ್ನು ಹಡೆದರಂತೆ, ನಮ್ಮ ಜೀವನದಲ್ಲಿ ಅದು ಬಹಳ ಕ್ಲಿಷ್ಟವಾದ ಸಮಯ. ನಮ್ಮ ಜೀವನದಲ್ಲಿ ನನ್ನ ತಾಯಿ ಮಾಡಿರುವ ತ್ಯಾಗವನ್ನು ಊರೇ ಹೊಗಳುತ್ತೆ. 'ಓಣಿ ಸೀತೆ' ಅಂತ ಅವರ ಹೆಸರು. ನನ್ನ ತಾಯಿ ಮಾಡಿರುವ ಕಷ್ಟವನ್ನು ಈ ಊರಿನ ನೂರು ಮನೆಯವರೂ ಹೇಳ್ತಾರೆ. ಅಂಥಾ ಕಷ್ಟದಲ್ಲೂ, ಒಳ್ಳೆಯ ಪರಿಶ್ರಮದಿಂದ ನಮ್ಮನ್ನು ಒಳ್ಳೆಯ ಮಾರ್ಗದಲ್ಲಿ ಸಾಕಿದ್ರು. ಇವತ್ತು ನಮ್ಮ ಜತೆ ನೆಮ್ಮದಿಯಿಂದ ಇದಾರೆ.

- **ನೀವು ಕೃತಜ್ಞತೆಯನ್ನು ಇಟ್ಟುಕೊಂಡು ಅವರನ್ನು ನೆಮ್ಮದಿಯಾಗಿ ಸಾಕ್ತಾ ಇದೀರಿ.**

ನಾವು ಇಟ್ಟುಕೊಳ್ಳಲೇಬೇಕು. ಯಾವತ್ತು ಅದನ್ನು ಮರೀತೀವಿ, ಅವತ್ತು ನಮ್ಮ ನಾಶ ಗ್ಯಾರಂಟಿ. ತಂದೆ ತಾಯನ್ನು ಕಡೆಗಣಿಸಿ ಯಾವತ್ತು ಅವರಿಗೆ ನಾವು ಗೌರವವನ್ನು ಕೊಡೋದಿಲ್ಲ, ಅವತ್ತು ನಮ್ಮದು ಕೊನೆ ಹಂತವಾಗುತ್ತೆ ಅನ್ನುವುದು ನನ್ನ ದೃಢವಾದ ನಂಬಿಕೆ. ನಾನು ಬೇರೆ ಯಾವ ದೇವಸ್ಥಾನಕ್ಕೂ ಹೋಗೋಲ್ಲ. ನನ್ನ ತಂದೆ ತಾಯೀನೇ ನನಗೆ ದೇವರು. ಬೆಳಗ್ಗೆ ಎದ್ದ ತಕ್ಷಣ ಕೈಮುಗಿಯೋದು ನನ್ನ ಅಪ್ಪ-ಅಮ್ಮನಿಗೆ ಮಾತ್ರ.

- **ನಿಮ್ಮ ಹೆಂಡತಿ ಹಾಗೂ ನಿಮ್ಮ ತಮ್ಮನ ಹೆಂಡತಿ, ಇವತ್ತಿನ ಹೆಣ್ಣುಮಕ್ಕಳ ಬಗ್ಗೆ ಹೇಳಿ. ಹಳ್ಳಿಗೆ ಹೆಣ್ಣನ್ನು ಕೊಡೋದಿಲ್ಲ ಅಂತ ಬಹಳಷ್ಟು ಜನ ಹೇಳ್ತಾರೆ. ನಿಮಗೆ ಹೆಣ್ಣು ಸಿಗಲು ಕಷ್ಟವಾಗಲಿಲ್ಲವಾ?**

ಅದು ಹ್ಯಾಗಾಯಿತು ಅಂದ್ರೆ, ನಮ್ಮ ಮಾವನವರೂ ಸಹ ತುಂಬಾ ಬಡತನದಲ್ಲಿದ್ರು. ಊರು ಬಿಟ್ಟು ಊರಿಗೆ ಬಂದು ಇಲ್ಲಿ BRPನಲ್ಲಿ (Bhadra Reservoir Project) ಬಂದು ಸೇರಿದವರು. ನಮ್ಮ ಅತ್ತೆ ಮಾವ ನಮಗಿಂತ ಹೆಚ್ಚು ನೋವನ್ನು ಅನುಭವಿಸಿದ್ದಾರೆ. ಅವರಿಗೆ ಒಂಭತ್ತು ಜನ ಮಕ್ಕಳು - ಐದು ಗಂಡು, ನಾಲ್ಕು ಜನ ಹೆಣ್ಣುಮಕ್ಕಳು. ನನ್ನ ಹೆಂಡತಿ ಹೇಳುವ ಒಂದೊಂದು ದಿನದ ಕಥೆ ಕೇಳಿದ್ರೆ ಮೈಜುಮ್ಮೆನ್ನುತ್ತೆ. ದನಕ್ಕೆ ಅಂತ ತರ್ತಿದ್ದ ಅಕ್ಕಿ ತೌಡಿನ, ಸಣ್ಣ ಕಾಳು ನುಚ್ಚನ್ನು ಶೇಖರಣೆ ಮಾಡಿ ಉಪ್ಪಿಟ್ಟು ಮಾಡಿ ತಿನ್ನುತ್ತಿದ್ದರಂತೆ. ಸೀಬೇಕಾಯಿ ತಿಂದು ದಿನ ಕಳೆದಿದಾರೆ. ಅಲ್ಲಿ ಇಲ್ಲಿ ಬಿದ್ದ ಸಗಣಿಯನ್ನು ಆರಿಸಿ ನಾಲ್ಕಾಣೆ, ಎಂಟಾಣೆಗೆ ಮಾರುತ್ತಿದ್ದರಂತೆ. ನಮ್ಮ ಬ್ರಾಹ್ಮಣರ ಮನೇಲೇ ಹಿಂಬಾಗಿಲಿನಿಂದ ಬಾ ಅಂತ ಅನ್ನಿಸಿಕೊಂಡಿದಾರೆ ನನ್ನ ಅತ್ತೆ ಮಾವ. ಈಗ ಅವರ ಎಲ್ಲಾ ಮಕ್ಕಳೂ ದಡ ಸೇರಿದಾರೆ. ಏನೂ ತೊಂದರೆಯಿಲ್ಲ. ಹಾಗಾಗಿ ನನಗೆ ಸುಲಭವಾಗಿ ಅಲ್ಲಿಂದ ಹೆಣ್ಣು ಸಿಕ್ತು.

- **ನೀವು ನಿಮ್ಮ ಅತ್ತೆ ಮಾವಂಗೆ ನೆರವಾಗಿದೀರಾ?**

ನನ್ನ ಅತ್ತೆಯ ಮಕ್ಕಳಿಗೆ ಎರಡು ಮನೆ ಭದ್ರಾವತೀಲಿ ಮಾಡಿಕೊಟ್ಟಿದೀನಿ. ಒಂದೆರಡು ಮದುವೆ ಮಾಡಿಸಿದೆ. ಉಪನಯನಕ್ಕೆ ಸಹಕಾರ ನೀಡಿದೆ. ಅವರ ಕಷ್ಟಸುಖದಲ್ಲೂ ನಾನು ಭಾಗಿಯಾಗಿದೀನಿ. ಅವರು ನಮ್ಮ ಮನೆಗೆ ಹೆಣ್ಣು ಕೊಟ್ಟು ಬೆಳಕು ತಂದಿದಾರೆ. ನನ್ನ ಹೆಂಡತಿ ಕಾಲಿಟ್ಟ ಘಳಿಗೆ, ೧೯೮೪ರಿಂದ ಈಚೆಗೆ, ನಮ್ಮ ಮನೆ ಸಮೃದ್ಧಿಯಾಗಿ ಬೆಳೀತಾ ಇದೆ, ಎಲ್ಲಾ ವಿಷಯದಲ್ಲೂ. ನನ್ನ ಅತ್ತೆ ಮಾವ ನನಗೆ ಕಣ್ಣು ಕೊಟ್ಟಿದಾರೆ ಅನ್ನುವ ಹೆಮ್ಮೆ ನನಗೆ ಇದ್ದೇ ಇದೆ. ಅತ್ತೆ ಸೊಸೆ, ಅತ್ತಿಗೆ ನಾದಿನಿ ಹಾಗೂ ಓರಗಿತ್ತಿಯರ ನಡುವಿನ ಸಂಬಂಧ ಸೌಹಾರ್ದಯುತವಾಗಿದೆ, ನಮ್ಮ ಮನೇಲಿ.

- **ಮತ್ಯಾಕೆ ನೀವೂ ನಿಮ್ಮ ತಮ್ಮನೂ ಬೇರೆ ಇದೀರಿ?**

ವ್ಯವಹಾರ ಇವತ್ತಿಗೂ ಒಂದೇ. ಓರಗಿತ್ತಿಯರೂ ಅಕ್ಕತಂಗಿಯರಂತೆ ಇದಾರೆ. ಮಕ್ಕಳ ವಿಷಯದಲ್ಲಿ ವೈಷಮ್ಯ ಬರಬಾರದು ಅಂತ, ಎರಡು ಮನೆ ಇತ್ತಲ್ಲ ಹಾಗಾಗಿ ಬೇರೆ ಬೇರೆ ಇದೀವಿ ಅಷ್ಟೆ. ಬೇರೆ ಯಾವುದೇ ವಿಚಾರದಲ್ಲಿ ಇಡೀ ಊರಿಗೇ ಬೆಳಕಾಗಿದೆ ನಮ್ಮ

ಕುಟುಂಬ. ನಾಲ್ಕು ಜನ ಸೊಸೇರೂ ಬೇರೆ ಬೇರೆ ಇದ್ರೂ, ಒಟ್ಟಾಗಿ ಸೇರಿದಾಗ ಅಕ್ಕತಂಗಿಯರ ಹಾಗೆ ಕೆಲಸ ಮಾಡೋದನ್ನು ಕಂಡು ಊರೇ ಬೆರಗಾಗಿದೆ. ಬಾಂಧವ್ಯ ತುಂಬಾ ಚೆನ್ನಾಗಿದೆ, ಅದ್ರಿಂದ ಏನೂ ಸಮಸ್ಯೆಯಾಗಿಲ್ಲ.

- **ಅನೇಕ ಕಷ್ಟ ನಷ್ಟಗಳನ್ನು ಅನುಭವಿಸಿದಿರಿ, ಇವತ್ತು ಈ ಹಂತ ತಲುಪಿದ್ದೀರಿ. ನೀವು ಹ್ಯಾಗೆ ಬದುಕಿದೀರಿ ಅದಕ್ಕೆ ತೃಪ್ತಿ ಇದೆಯಾ?**

ಇವತ್ತಿಗೆ ನಾವು ಸಂತೋಷವಾಗಿದೀವಿ. ಇದಕ್ಕಿಂತ ಇನ್ನೂ ಹೆಚ್ಚಿನ ತೃಪ್ತಿಯನ್ನು ನಾನು ಆಸೆಪಡೋದಿಲ್ಲ. ನನ್ನ ಮನಸ್ಸಿನಲ್ಲಿ ಏನಿದೆ ಅಂದ್ರೆ ನನಗಿಂತ ಕೆಳವರ್ಗದವರನ್ನು ನೋಡಿಬಿಟ್ಟು ಅವರಿಗೆ ನಮ್ಮ ಕೈಲಾದ ನೆರವನ್ನು ನೀಡಬೇಕು, ಉಪಕಾರ ಮಾಡಬೇಕು ಅನ್ನುವ ಆಸೆ ಇದೆ. ನಾನು ಇವತ್ತಿಗೂ ಹಣದ ವ್ಯವಹಾರವನ್ನು ಮಾಡ್ತೀನಿ. ಯಾರು ಅತಿ ಕಷ್ಟ ಅಂತ ಬರ್ತಾರೋ ಅವರಿಗೆ ನೆರವು ನೀಡ್ತಿದೀನಿ. ನೆಂಟರು ಇಷ್ಟರಲ್ಲಿ ಬಡ್ಡಿ ವ್ಯವಹಾರ ಮಾಡೋದಿಲ್ಲ. ಧರ್ಮವಾಗಿ ಯಾರಿಗೂ ಹಣ ಕೊಡೋಲ್ಲ. ಉಪಕಾರ ಅಂತ ಹಣ ನೀಡಿ, ಅವರಿಂದ ಮತ್ತೆ ವಾಪಸ್ಸು ಪಡೀತೀನಿ. ನಾನಿರೋವರೆಗೂ ಇದು ಸತ್ಯ. ಇದು ನನ್ನ ಪದ್ಧತಿ.

- **ನೋಡಿ, ಸಂಕೇತಿಗಳಲ್ಲಿ ಇನ್ನು ಮುಂದೆ ವ್ಯವಸಾಯ ಮಾಡಿಕೊಂಡು ಯುವ ಪೀಳಿಗೆ ಉಳಿಯೋಲ್ಲ ಅಂತ ಹೇಳಲಾಗ್ತಿದೆ. ನಿಮ್ಮ ಮತ್ತೂರು ಗ್ರಾಮ ಹ್ಯಾಗೆ, ನಿಮ್ಮ ಮಕ್ಕಳು, ಅವರ ಮಕ್ಕಳು ಮುಂದೆ ನಿಮ್ಮ ವ್ಯವಸಾಯವನ್ನು ಮುಂದುವರೆಸ್ತಾರಾ?**

ಖಂಡಿತವಾಗಿ ಮುಂದುವರೆಸ್ತಾರೆ. ಮುಖ್ಯವಾಗಿ ಅದಕ್ಕೆ ಪೂರಕವಾಗಿ ನಾವು ಏನು ಮಾಡ್ತಿದೀವಿ ಅಂದ್ರೆ, ಈ ಊರಲ್ಲೇ ನಾವು ಉಳೀಬೇಕು ಅಂತ ಹೇಳಿಬಿಟ್ಟು ನಮ್ಮ ವೇದಪರಂಪರೆ ಏನಿದೆ, ವೇದ ಮತ್ತು ಸಂಸ್ಕೃತ ಕಲಿಸ್ತಾ ಇದೀವಿ. ಇವತ್ತು ನಮ್ಮ ಊರಲ್ಲಿ ಆರರಿಂದ ಏಳನೇ ವಯಸ್ಸಿಗೆ ಎಲ್ಲರಿಗೂ ಉಪನಯನವಾಗುತ್ತೆ. ಉಪನಯನವಾದ ತಕ್ಷಣ ವೇದ ಹಾಗೂ ಸಂಸ್ಕೃತ ಪಾಠಕ್ಕೆ ಸೇರಿಸ್ತೀವಿ. ಪ್ರತಿ ದಿನ ಆರರಿಂದ ಒಂಬತ್ತರವರೆಗೆ ವೇದಪಾಠ. ಆಮೇಲೆ ಅವರ ಶಾಲೆ. ಇಲ್ಲಿ SSLCವರೆಗೆ ಶಾಲೆ ಇದೆ. ಅವರು SSLC ಮುಗಿಸುವ ಹೊತ್ತಿಗೆ ವೇದಾಧ್ಯಯನ ಮುಗಿದಿರುತ್ತೆ. ಅಷ್ಟು ಹೊತ್ತಿಗೆ ಈ ಊರಿನ ವಾತಾವರಣದಲ್ಲಿ ಬೆಳೆದಿರ್ತಾರಲ್ಲ, ಈ ಊರು ಬಿಟ್ಟು ಬೇರೆ ಕಡೆ ಹೋಗುವ ಭಾವನೆ ಬರೋದಿಲ್ಲ. ಮಕ್ಕಳಿಗೆ ಉತ್ತಮವಾದ ಸಂಸ್ಕಾರ ನೀಡಿ, ವೇದ, ಸಂಸ್ಕೃತ ಶಿಕ್ಷಣ ನೀಡಿದ್ರೆ ಮಕ್ಕಳು ನಾಳೆ ಉತ್ತಮ ಸ್ಥಿತಿ ಪಡೀತಾರೆ ಅನ್ನುವುದು ನನ್ನ ಅಭಿಪ್ರಾಯ. ಮಕ್ಕಳಿಗೆ "ಮನೇಲಿ ತೋಟ ಆಸ್ತಿ ಇದೆ, ಇದನ್ನು ಬಿಟ್ಟು ಹೋಗಬಾರದು, ಇದನ್ನು ರೂಢಿಸಿಕೊಂಡು ಹೋಗೋಣ. ಹಿರಿಯರು ಮಾಡಿದ್ದು" ಅನ್ನುವ ಅಭಿಪ್ರಾಯ ಮೂಡುತ್ತೆ. ಹೊರಗಡೆ ಹೋಗಿಬಿಟ್ರೆ ಅದರ ಬಗ್ಗೆ ಮೋಹ ಹೋಗಿಬಿಡುತ್ತೆ. ಅವರು ಇಲ್ಲೇ ಇದ್ದಾಗ ಕೃಷಿ ಬಗ್ಗೆ ಮೋಹ ಹುಟ್ಟುತ್ತೆ.

ನಮ್ಮ ಊರಲ್ಲಿ ಮನೇಗೆ ಎರಡರಿಂದ ನಾಲ್ಕು ಜನ ಹೊರಗಡೆ ಉದ್ಯೋಗಕ್ಕೆ ಹೋಗಿದಾರೆ. ಕಡಿಮೆ ಆಸ್ತಿ ಇರುವಾಗ 'ನಾಳೆ ಜೀವನಕ್ಕೆ ತೊಂದರೆಯಾಗುತ್ತೆ. ನಾನು ಹೊರಗಡೆ ಹೋಗೋದರಿಂದ ಇತರರಿಗೆ ಅನುಕೂಲ ಆಗೋದಾದ್ರೆ ಆಗಲಿ. ನಾನು ಹೊರಗಡೆ ಉದ್ಯೋಗ ಮಾಡ್ತೀನಿ, ಇವರು ವ್ಯವಸಾಯ ಮಾಡಲಿ' ಅಂತ ಹೋದವರೂ ಇದ್ದಾರೆ. ಅದರಲ್ಲೂ ಉದಾರ ಮನೋಭಾವನೆಯೇ ಹೊರತು ಬೇರೆ ಭಾವನೆ ಇಲ್ಲ.

- **ಸಂಕೇತಿಗಳ ಕೃಷಿಗೂ, ಇತರೇ ಜನರ ಕೃಷಿಗೂ ಏನು ವ್ಯತ್ಯಾಸವಿದೆ ಅನ್ನಿಸುತ್ತೆ?**

ಅಂತಹ ವ್ಯತ್ಯಾಸ ಏನಿಲ್ಲ. ಈಗ ನಾವು ಏನು ಮಾಡ್ತೀವಿ, ಅವರಿಗಿಂತ ಉತ್ತಮವಾಗಿ ಮಾಡ್ತೀವಿ. ಯಾಕೇಂದ್ರೆ ಕೆಲವು ಕೃಷಿಕರು ಬಂಡವಾಳ ಇಲ್ಲದೆ ತುಂಬಾ ತೊಂದರೆ ಅನುಭವಿಸ್ತಾ ಇರ್ತಾರೆ. ನಾವು ಬಂಡವಾಳದ ಜತೆಗೆ, ನಮ್ಮ ವಿಶೇಷವಾದ ಜ್ಞಾನ ಬಳಸಿ ಕೃಷಿ ಮಾಡ್ತೀವಿ. ಆಗ ನಮ್ಮದೇ ಉತ್ತಮವಾಗುತ್ತೆ ಅನ್ನುವುದು ನನ್ನ ಅಭಿಪ್ರಾಯ.

- *ಒಳ್ಳೆಯದು ಚನ್ನಕೇಶವ ಅವರೆ, ಇದುವರೆಗೂ ನಿಮ್ಮ ಬದುಕಿನ ವಿಚಾರಗಳನ್ನು ಹಂಚಿಕೊಂಡಿದ್ದೀರಿ, ನಮಸ್ಕಾರ.*

ತುಂಬಾ ಸಂತೋಷ. ನಮಸ್ಕಾರ.

ಇ) ಎಂ.ಎನ್. ಗೋಪಾಲ ಅವಧಾನಿ ಇ/ಮ ನಾರಾಯಣ ಅವಧಾನಿ (ಕಡೆಮನೆ)

ಮತ್ತೂರು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237742 / 237696

ಎತ್ತಿನಗಾಡಿ ಬಹಳ ಪ್ರಚಾರ ಇದ್ದ ಕಾಲದಲ್ಲಿ ನನ್ನ ಅಣ್ಣಂದಿರು ಟೈರ್‌ಗಾಡಿ ಮಾಡಿದ್ರು. ಆಗ ಆ ತರಹದ ಗಾಡಿ ಇರಲಿಲ್ಲ. ಟೈರ್‌ಗಾಡಿಯ ಗಾಲಿ ನಡುವೆ ಬರುವ ಅಚ್ಚನ್ನು ಮಧ್ಯೆ ಡೊಂಕು ಮಾಡಿ ಎತ್ತರ ಬರುವ ಹಾಗೆ ಮಾಡಿದ್ರು. ಹಳೇ ಎತ್ತಿನಗಾಡಿ ಓಡಾಡೋ ದಾರೀಲಿ, ಚಕ್ರ ಹರಿಯೋ ಜಾಗದಲ್ಲಿ ಆಳ ಇರುತ್ತೆ. ಮಧ್ಯದ ಜಾಗ ಎತ್ತರ ಇರುತ್ತೆ. ಅಂತಹ ದಾರೀಲಿ ಟೈರ್‌ಗಾಡಿಯು ಸುಲಭವಾಗಿ ಸಾಗಲು ನೆರವಾಗುವಂತೆ ಮಧ್ಯದಲ್ಲಿ ಎತ್ತರವಾದ ಡೊಂಕು ಇತ್ತು. ಚಕ್ರಕ್ಕೆ ಬೇರಿಂಗ್ ಇದ್ದುದರಿಂದ ಎತ್ತುಗಳಿಗೆ ಎಳೆಯಲು ಸರಾಗವಾಗಿತ್ತು. ಮಾಮೂಲಿ ಚಕ್ಕಡಿಯಲ್ಲಿ ಒಂದು ಟನ್ ಭಾರ ಎಳೀದ್ರೆ, ನಮ್ಮ ಟೈರ್ ಗಾಡೀಲಿ ಮೂರರಿಂದ ನಾಲ್ಕು ಟನ್ ಸುಲಭವಾಗಿ ಎಳೆಯಬಹುದಿತ್ತು. ನಮ್ಮ ಮನೇಲಿ ಎರಡು ಟೈರ್ ಗಾಡಿ ಇತ್ತು. ಗಾಡೀಲಿ ಕುಳಿತುಕೊಳ್ಳಲು ವಿಶೇಷವಾದ ಆಸನಗಳನ್ನು ಮಾಡಿದ್ರು. ನಮ್ಮ ಮನೆ ಟೈರ್ ಗಾಡಿ ಬಂದ್ರೆ 'ಬಾಧ್ಯಾರ ಮನೆ ಸಾರೋಟು ಬಂತು' ಅನ್ನೋರು. ಆದರೆ ಹಳೇಗಾಡಿ ಓಡಿಸಿ ರೂಢಿಯಿದ್ದ ಆಳುಗಳು ಹೊಸ ಮಾದರಿಗೆ ಒಗ್ಗಿಕೊಳ್ಳಲಿಲ್ಲ. ಹಾಗಾಗಿ ಆ ಗಾಡಿಯನ್ನು ಮಾರಿಬಿಟ್ವು.


ಎಂ.ಎನ್.ಗೋಪಾಲ ಅವಧಾನಿ: ಹಿನ್ನೆಲೆಗೆ ತಮ್ಮ ತಂದೆತಾಯಿಗಳ ಭಾವಚಿತ್ರ:ಮತ್ತೂರು

"ಈ ಮನೆಯಲ್ಲಿ ನೀವು ಸಂಸ್ಕೃತ ಮಾತನಾಡಬಹುದು" ಎಂಬ ಫಲಕ ನಮ್ಮನ್ನು ಸ್ವಾಗತಿಸಿತು. ಮನೆಯ ವಿಶಾಲವಾದ ಪಡಸಾಲೆಯಲ್ಲಿ ಹಿರಿಯರೊಬ್ಬರು ಕುಳಿತು ವೇದಾಧ್ಯಯನ ಮಾಡುತ್ತಿದ್ದರು. ಮಂತ್ರಘೋಷ ಹಜಾರವನ್ನು ತುಂಬಿತ್ತು. ಗೋಡೆಗಳ ಮೇಲೆ ಹಿರಿಯರ ಭಾವಚಿತ್ರಗಳು ಹಳೆಯ ಕಾಲಕ್ಕೆ ನಮ್ಮನ್ನು ಒಯ್ದುವು. ಅಷ್ಟರಲ್ಲೇ ನಿಧಾನವಾಗಿ ಒಳಮನೆಯಿಂದ 'ನಮಸ್ಕಾರ' ಎಂಬ ದನಿಗೆ ತಿರುಗಿದಾಗ ಗೋಪಾಲ ಅವಧಾನಿಗಳು ಕಂಡರು. ನಮ್ಮ ವಿಚಾರಗಳನ್ನು ಆಲಿಸಿದಾಗ ಮೊದಲಿಗೆ 'ನನಗೆ ಮಾತನಾಡಲು ಬರುವುದಿಲ್ಲ, ಬೇರೆಯವರನ್ನು ಮಾತನಾಡಿಸಿ' ಎಂದರು. ಅವರಲ್ಲಿ ಧೈರ್ಯ ತುಂಬಲು ನಾವು ಸಿದ್ಧಪಡಿಸಿದ ಪ್ರಶ್ನಾವಳಿಯನ್ನು ಅವರಿಗೆ ನೀಡಿದಾಗ, ಅದನ್ನು ಓದಿ 'ನಾನು ನಿಮಗೆ ಉತ್ತರ ಬರೆದು ಕಳುಹಿಸುತ್ತೇನೆ' ಎಂದರು. ನಮ್ಮ ಬಲವಂತ ಮುಂದುವರೀತು. ಒಮ್ಮೆಗೇ ನಿರ್ಧಾರ ಮಾಡಿದಂತೆ 'ಈಗಲೇ ಮಾತನಾಡುತ್ತೇನೆ' ಎಂದರು. ಮತ್ತೆ ನಾವು ಮಾತು ಮುಂದುವರಿಸಲು ಹೋಗಲಿಲ್ಲ. ಗೋಪಾಲ ಅವಧಾನಿಗಳ ಮಾತು ತುಂಗಾ ನದಿಯ ಹರಿವಿನಷ್ಟೇ ಸರಾಗವಾಗಿ ಹರಿದುಬಂತು. ಅದರಲ್ಲಿ ಲಾಲಿತ್ಯವೂ ಇತ್ತು. ಹೊಸತನವೂ ಇತ್ತು. 'ನನ್ನ ತಾತ ರಾಮಾವಧಾನಿ. ಅವರು ಮದುವೆಯಾದದ್ದು ಮತ್ತೂರಿನ ಸೀತಮ್ಮನವರನ್ನು. ಅವರ ಊರು ಇಲ್ಲಿ ಸಮೀಪದಲ್ಲಿರುವ ಎರಗನಹಾಳುಗ್ರಾಮ. ಪೂರ್ಣ ಎರಗನಹಾಳು ಗ್ರಾಮ ನಮ್ಮ ಅಜ್ಜನದೇ ಆದದ್ರಿಂದ ಅವರನ್ನು ಎರಗನಹಾಳು ರಾಮಪ್ಪನವರು ಅಂತ ಕರಿಯೋರು. ನಮ್ಮಜ್ಜ ವೈದಿಕ ವೃತ್ತಿಗೆ ಇಳಿದ್ರು. ಜಮೀನು ಹೋಯ್ತು. ಕಡೆಗೆ ಊರೂ ಬಿಟ್ಟುಹೋಯ್ತು. ನನ್ನ ತಂದೆ, ಕಡೆ ಮನೆ ನಾರಾಯಣಾವಧಾನಿಗಳು; ತಾಯಿ ಮತ್ತೂರಿನ ಲಕ್ಷ್ಮೀದೇವಮ್ಮ. ನಾವು ಐದು ಜನ ಗಂಡುಮಕ್ಕಳು. ನನ್ನ ತಂದೆ ಕಾಲದಲ್ಲಿ ನಮ್ಮ ತಾಯಿ ಕಡೆ ಹಾಗೂ ಅತ್ತೆ ಕಡೆ ವ್ಯವಹಾರವನ್ನು ಸಹ ನನ್ನ ತಂದೆ ನೋಡಿಕೊಳ್ಳೋರು. ಹಾಗಾಗಿ ನಮ್ಮ ತಂದೇದು ಸ್ವಂತ ಜಮೀನು ಕಡಿಮೆ ಇದ್ರೂ ಬೇರೆ ಜಮೀನೂ ಸೇರಿದ್ರಿಂದ ಕೃಷಿಯಲ್ಲಿ ನಿಪುಣರಾಗಿದ್ರು. ಅವರ ಕಾಲದಲ್ಲಿ ನಮ್ಮ ತಂದೆಯ ಓರಗೆಯವರು ಏಳು/ಎಂಟು ಜನ ಇದ್ರು. ಅವರೆಲ್ಲರೂ ಒಟ್ಟಿಗೇ ತೋಟಕ್ಕೆ ಹೋಗಿ ಒಟ್ಟಿಗೆ ಮನೆಗೆ ಬರೋರು. ತಮ್ಮ ತಮ್ಮ ತೋಟದ ಅಗೆತ, ಕಪ್ಪು ಹೊಡೆಯೋದು ಅವರೇ ಸ್ವತಃ ಮಾಡೋರು. ಪರಸ್ಪರ ಸಹಕಾರಾನೂ ನೀಡೋರು. ನನ್ನ ತಂದೆಗೆ ಇದ್ದದ್ದು ೧೦ ಎಕರೆ ತೋಟ. ಇತರರಿಗೆ ಒಂದು ಎರಡು ಎಕರೆ. ಆದರೂ ಕೆಲಸದ ವಿಷಯದಲ್ಲಿ ಭೇದ ಇರಲಿಲ್ಲ. ಅದು ಒಂದು ರೀತಿ ಪರಸ್ಪರ ಇದ್ದ ಗೌರವವೂ ಹೌದು, ಹಾಗೇ ಸ್ನೇಹವೂ ಹೌದು. ತೋಟದ ಕೆಲಸದಲ್ಲಿ ಪರಸ್ಪರ ಸಹಕರಿಸೋರು. ತೋಟದಲ್ಲಿಯೇ ವೇದ ಕಲಿಯೋರು. ನನ್ನ ತಂದೆಯದು ಇಂಜಿನಿಯರ್ ಮೈಂಡ್.

ಅಡಿಕೆ ಸುಲಿಯಲು ಒಂದು ಯಂತ್ರ ಕಂಡು ಹಿಡಿಯಬೇಕೆಂದು ಬಹಳ ಒದ್ದಾಡಿದ್ರು. ಆಗಲಿಲ್ಲ. ಕಡೆಗೆ ಅಡಿಕೆ ಕತ್ತರಿಸಲು ಒಂದು ಸರಳ ಸಾಧನ ಅವರೇ ಸಿದ್ಧಪಡಿಸಿದ್ರು. ಆ ಕಾಲದಲ್ಲಿ ಗೋಟನ್ನು ಕತ್ತರಿಸಿಯೇ ಮಾರಬೇಕಿತ್ತು. ಈಗಿನಂತೆ "ಇಡಿ" ಮಾರಾಟ ಇರಲಿಲ್ಲ. ಹೋಳು ಮಾರಾಟ ಆಗ ಜಾಸ್ತಿ. ಅಡಿಕೆ ಕತ್ತರಿಸುವ ಕೆಲಸ ಬಹಳ ಕಷ್ಟವಾಗಿತ್ತು. ಹಾಗಾಗಿ ಅಡಿಕೆ ಕತ್ತರಿಸುವ ಕತ್ತಿ ಮಾಡಿದ್ರು. ಅದ್ರಿಂದ ಬಹಳ ಸುಲಭವಾಗಿ ಅಡಿಕೆ ಕತ್ತರಿಸಬಹುದಿತ್ತು. ನಮ್ಮ ತಂದೆ ಚಪ್ಪರ ಹಾಕೋರು. ಅದು ಎಷ್ಟು ಚೆನ್ನಾಗಿ ಇರೋದು ಅಂದ್ರೆ, ಚಪ್ಪರದ ಮೇಲುಭಾಗ ಮನೆಯ ನೆಲ ಇದ್ದಂತೆ, ಸಮವಾಗಿರೋದು. ನನ್ನ ತಂದೆ ಎತ್ತುಗಳನ್ನು ಇಟ್ಟು ಬೇಸಾಯ ಮಾಡಿದವರಲ್ಲ. ಅಜ್ಜನ ಕಾಲದಲ್ಲಿ ಗದ್ದೆ ಇತ್ತಂತೆ. ನಾವು ಹುಟ್ಟಿದ ಮೇಲಿಂದ ತಂದೆ ಎತ್ತು ಕಟ್ಟಿರಲಿಲ್ಲ. ಆದರೆ ಮನೆ ತುಂಬಾ ಗೋವುಗಳ ಸಂಪತ್ತಿತ್ತು. ಹಸು, ಎಮ್ಮೆಗಳು ಸೇರಿ ೩೦ ರಾಸುಗಳು ಇದ್ದವು. ನನ್ನ ತಂದೆ ಹತ್ರ ಎತ್ತುಗಾಡಿ ಇರಲಿಲ್ಲ. ನನ್ನ ೧೨ನೇ ವಯಸ್ಸಿನಲ್ಲಿ ನನ್ನ ತಂದೆ ತೀರಿಕೊಂಡ್ರು. ಅದುವರೆಗೂ ನನ್ನ ತಂದೆ ನನ್ನ ಮಾವನ್ನ ನೋಡಿಕೊಂಡಿದ್ರು. ತಂದೆ ತೀರಿಕೊಂಡ ಮೇಲೆ ಮಾವ ನಮ್ಮನ್ನೆಲ್ಲಾ ನೋಡಿಕೊಂಡ್ರು. ನನ್ನ ಮಾವ ಒಳ್ಳೆಯ ಬೇಸಾಯಗಾರ. ಅವರದ್ದು ಹೊಲ ಗದ್ದೆ ಇತ್ತು. ಅವರ ಹತ್ರ ಐದು/ಆರು ಜತೆ ಎತ್ತು ಇತ್ತು. ಮೂರು ಗಾಡಿಗಳೂ ಇದ್ವು. ಅವರು ಸ್ವತಃ ಬೇಸಾಯ ಮಾಡೋರು. ನಂತರ ನಾವೂ ಎತ್ತುಗಾಡಿ ಇಟ್ವು. ನನ್ನ ಅಣ್ಣಂದಿರು ಸುಧಾರಿತ ಟೈರ್ ಗಾಡಿ ಸಹಾ ಸಿದ್ಧಪಡಿಸಿದ್ರು.

'ನಾನು ಓದಿದ್ದು ಮತ್ತೂರಿನಲ್ಲಿ. ನಮ್ಮದು ವೇದ ಹಾಗೂ ಸಂಸ್ಕೃತ ಇದ್ದ ಮನೆ. ಲಕ್ಷ್ಮೀಕೇಶವಶಾಸ್ತ್ರಿಗಳು ಅಂತ ಒಳ್ಳೆಯ ಗುರುಗಳು ಇಲ್ಲಿ ನನಗೆ ಸಿಕ್ಕಿದ್ರು. ನನ್ನ ಸಂಸ್ಕೃತ ಅಧ್ಯಯನ ಚೆನ್ನಾಗಿ ಆಯ್ತು. ಆ ಪಾಠವನ್ನು ನಾನು ಇವತ್ತಿಗೂ ಮರೆತಿಲ್ಲ. ನಾನು LSವರೆಗೆ ಮತ್ತೂರಿನಲ್ಲಿ ಓದಿದೆ. High School ಓದುವಾಗ ನನಗೆ ದೊಡ್ಡ Engineer ಆಗುವ ಆಸೆಯಿತ್ತು. ನನ್ನದು PUCಗೆ ಮೊದಲ ಬ್ಯಾಚು. ಅದುವರೆಗೆ Intermediate ಇತ್ತು. PUC ಇರಲಿಲ್ಲ. ಅವತ್ತಿನ ಕಾಲದಲ್ಲಿ ಒಂದು ಸಾವಿರ ಜನ ಮಾತ್ರ first class ಬಂದಿದ್ರು. ಅದರಲ್ಲಿ ನಾನೂ ಒಬ್ಬ. ನಮ್ಮೂರಲ್ಲಿ ಆಗ post office ಇರಲಿಲ್ಲ. runner ಮಾತ್ರ ಇದ್ದರು. ಈ ಊರಿಗೆ ಒಂದು post office ತರಬೇಕು ಅಂತ ಇತ್ತು. ಹಾಗಾಗಿ ಇಲಾಖೆಯವರು, ನೀವು ತುಂಬಾ ಅರ್ಜಿ ಹಾಕ್ತೀರಾ, ಊರ ವಿಳಾಸ ಕೊಡಿ, ಪತ್ರಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದ್ರೆ ಆಗ post office ಕೇಳಲು ಆಧಾರ ಸಿಕ್ಕುತ್ತೆ ಅಂದ್ರು. ಹಾಗಾಗಿ ನಾನು Engineering Collegeಗೆ apply ಮಾಡುವಾಗ ಊರ ವಿಳಾಸ ಕೊಟ್ಟೆ. ಐದಾರು ಕಾಲೇಜಿಗೆ ಅರ್ಜಿ ಹಾಕಿದ್ದೆ. ನಮ್ಮೂರಿಗೆ ಬರಬೇಕಿದ್ದ post office ಬರಲಿಲ್ಲ. ನನಗೆ ಬಂದ ಪತ್ರಗಳು runner ಬಳಿ ಉಳೀತು. ತಿಂಗಳು ಉರುಳಿದ್ರೂ ನನಗೆ ಮಾಹಿತಿ ಬರಲಿಲ್ಲ. ನನಗೆ B.Sc. ಓದಲು ಬೇಜಾರು. ಅಷ್ಟರಲ್ಲಿ ನಮ್ಮ ಮಾವ ಬಂದು "ನಿನಗೆ ದಾವಣಗೆರೆ collegeನಿಂದ interviewಗೆ ಬಂದಿದೆ, ಇವತ್ತೇ interview ಇದೆ" ಅಂದ್ರು. ಆಗ ಸಂಜೆ ೪.೩೦. ಕಡೆಗೆ ನಾನು phone ಮಾಡಿ, ಮಾರನೇ ದಿನಕ್ಕೆ ಸಂದರ್ಶನ ನಿಗದಿಪಡಿಸಿಕೊಂಡೆ. ಅಲ್ಲಿನ principal ಒಳ್ಳೆಯವರು. ಆಗ ನನಗೆ ಜುಟ್ಟು ಇತ್ತು. Interviewನಲ್ಲಿ "ನೀನು ಹೀಗೇ collegeಗೆ ಬರ್ತ್ತೀಯಾ?" ಅಂದ್ರು. "ನಿಮ್ಮ collegeನ Rules and regulationsಗೆ ತೊಂದರೆಯಾಗದಿದ್ರೆ ಹೀಗೇ ಬರ್ತ್ತೀನಿ" ಅಂದೆ. "seat ಕೊಟ್ರೆ ಬಂದು ಸೇರ್ತ್ತೀಯಾ?" ಅಂದ್ರು. ನಾನು "ಖಂಡಿತವಾಗಿ ಬಂದು ಸೇರ್ತ್ತೀನಿ" ಅಂದೆ. ಮತ್ತೆ ಒಂದು ತಿಂಗಳು ನನಗೆ ಮಾಹಿತಿ ಬರಲಿಲ್ಲ. ನಂತರ ಒಂದು reply card ಬಂತು. ನಮ್ಮ ಮೊದಲನೆಯ ಪತ್ರಕ್ಕೆ ನೀವು ಉತ್ತರಿಸಲಿಲ್ಲ, ಈಗ seat ಕೊಟ್ಟರೆ ನೀವು ಸೇರ್ತ್ತೀರಾ ಅಂತ ಕೇಳಿದ್ರು. ನನ್ನ ಅಣ್ಣಂದಿರು "ನೀನು ಕಾಲೇಜಿಗೆ ನೇರವಾಗಿ ಹೋಗಿ ಸೇರು" ಅಂದ್ರು. ನಾನು ಶುದ್ಧ ಹುಂಬ. Reply cardನಲ್ಲಿ "ಹೌದು ಸೇರುತ್ತೇನೆ" ಅಂತ ಬರೆದೆ ಅಷ್ಟೆ. ಅಲ್ಲಿಂದ ಉತ್ತರ ಬರಲಿಲ್ಲ. B.E. ಓದಲು ಆಗಲಿಲ್ಲ. B.Sc. ಸೇರಿದೆ. ಅಲ್ಲಿ Lecturers "ಇದನ್ನೇ ಓದು, scientist ಆಗಬಹುದು" ಅಂದ್ರು. ಈ ಮಧ್ಯೆ ನನಗೆ ವಿಪರೀತ ಕಣ್ಣುನೋವು ಆರಂಭವಾಯ್ತು. ವೈದ್ಯರು ಕೊಟ್ಟ ಕನ್ನಡಕ ಹಾಕಿದ್ರೂ ಸಹ ಕಣ್ಣಲ್ಲಿ ನೀರು ಸುರಿಯೋದು. ನಮ್ಮ ವೈದ್ಯರು "ನಿನಗೆ ಕಣ್ಣು ಮುಖ್ಯವೋ, ಪರೀಕ್ಷೇನೋ?" ಅಂತ ಕೇಳಿದ್ರು. ನಾನು 'ಕಣ್ಣು' ಅಂದೆ. ಆಗ ಅವರು ಹೆಚ್ಚು ಓದಬೇಡ ಅಂದ್ರು. ನಾನು ಓದೋದು ಬಿಟ್ಟೆ. ಎಲ್ಲಾ ಮರೆತುಹೋಯ್ತು. B.Sc. ಪಾಸ್ ಮಾಡೋದು ಕಷ್ಟ ಆಯ್ತು. ಅಷ್ಟರಲ್ಲಿ ನನ್ನ Junior ಹರಿನಾರಾಯಣ ಹಾಗೂ ಸೂರ್ಯನಾರಾಯಣ ಅನ್ನುವವರು ಮತ್ತೂರಿನಲ್ಲಿ ಶಾಲೆ ಆರಂಭಿಸಿದ್ರು. ನಾನು B.Sc. fail ಆದ್ರೂ ಗಣಿತದಲ್ಲಿ ಬುದ್ಧಿವಂತ. ಹಾಗಾಗಿ honorary ಆಗಿ ಶಿಕ್ಷಕನಾಗಿ ಸೇರಿದೆ. ನಂತರ B.Sc. ನಲ್ಲಿ ನಪಾಸಾಗಿದ್ದ English ವಿಷಯ ಪಾಸ್ ಮಾಡಿದೆ. ನನ್ನ ಮಾವನವರ ಮಗ ಮೈಸೂರಿನ Jayachamarajendra College of Engineeringನಲ್ಲಿ ಓದುತ್ತಿದ್ದ. "ಕೇವಲ ೩೦೦೦ ರೂಪಾಯಿ donation ಅಂತೆ, ನೀನೂ ಸೇರೋದಾದ್ರೆ ಸೇರು" ಅಂದ್ರು ಮಾವ. ಅಷ್ಟು ಹೊತ್ತಿಗೆ ನನಗೆ ಮದುವೆಯಾಗಿ ಮಗುವಿತ್ತು. ನಾನು ಮದುವೆಯಾದದ್ದು ನನ್ನ ಮಾವ ಹಾಗೂ ಸೋದರತ್ತೆ ಸೂರ್ಯನಾರಾಯಣಾವಧಾನಿ ಹಾಗೂ ಸುಂದರಮ್ಮನವರ ಮಗಳಾದ ಸರೋಜಳನ್ನು.

ಹೀಗಿದ್ರೂ ಇಂಜಿನಿಯರ್ ಆಗಬೇಕು ಅನ್ನುವ ಹಳೆಯ ಆಸೆಯಿತ್ತಲ್ಲ, ಹಾಗಾಗಿ, ಸೇರಿದೆ. ಛಲದ ಮೇಲೆ ಓದಿದೆ. ಮೆರಿಟ್ ಬರಲಿಲ್ಲ. ನನ್ನ ಅತ್ತಿಗೇರೆಲ್ಲ ನನ್ನ ರೇಗಿಸೋರು. "ಊರಿಗೇ ಬಂದು ನಿಮ್ಮನ್ನು ಗೋಳು ಹುಯ್ಕೋತೀನಿ" ಅಂತಿದ್ದೆ. ಓದು ಮುಗಿದ ಮೇಲೆ ಸರಿಯಾಗಿ Agro industries corporationನಲ್ಲಿ ತರಬೇತಿಗೆ callfor ಆಯ್ತು. ಇಲ್ಲಿ, ಬ್ಯಾಂಕಿನವರೂ ಸಹ ಬಲವಂತ ಮಾಡಿದ್ರು. "ತರಬೇತಿ ಮುಗಿಸಿದ ಮೇಲೆ ಎರಡು ಲಕ್ಷದವರೆಗೂ ಸಾಲ ತೊಗೋಬಹುದು, ಗೊಬ್ಬರದ ಅಂಗಡಿ ಇಡಬಹುದು" ಅಂತೆಲ್ಲಾ ಹೇಳಿದ್ರು. ನಾನು training ಸೇರಿದೆ. ತರಬೇತಿ ಚೆನ್ನಾಗಿತ್ತು. ಆಧುನಿಕ ಕೃಷಿ ವಿಧಾನಗಳ ಬಗ್ಗೆ, ಟ್ರಾಕ್ಟರ್ ಬಳಕೆಯ ಬಗ್ಗೆ ಮಾಹಿತಿ ನೀಡಿದ್ರು. ತರಬೇತಿ ಮುಗಿದ ಮೇಲೆ ಬ್ಯಾಂಕಿನವರು ಸಾಲ ನೀಡಲು ಸತಾಯಿಸಿದ್ರು. ನನ್ನ ಅಣ್ಣಂದಿರೂ ಸಹ co-obligant ಆಗಿ, ನಮ್ಮ ಇಡೀ ೧೦ ಎಕರೆ ತೋಟವನ್ನು ಆಧಾರವಾಗಿಟ್ಟು ಒಂದು ಲಕ್ಷ ಸಾಲ ಮಂಜೂರು ಮಾಡಿಸಿಕೊಂಡೆವು. ಅದ್ರಲ್ಲಿ ೬೦ ಸಾವಿರ ಬಳಸಿ ಒಂದು tractor ಹಾಗೂ power tiller ಖರೀದಿಸಿದ್ವಿ. ಸಾಲದ ಭಾಗವಾಗಿ ನೀವು ಕಟ್ಟುವಷ್ಟು ಹಣವನ್ನು ನಾವೂ ಕಟ್ತೇವಿ ಅಂತ ಮೊದಲು ಹೇಳಿದ್ರು. ಆದರೆ ಅವರು ಅವರ ಕಂತನ್ನು ಕಟ್ಟಲಿಲ್ಲ. ಸಾಲ ಬೆಳೀತು. ಗೊಬ್ಬರದ ವಾಸನೆ ಹಿಡಿಸದೆ ನಾನು ಅಂಗಡಿ ಇಡಲಿಲ್ಲ. ೬೦ ಸಾವಿರದ ಸಾಲ ಒಂದೂವರೆ ಲಕ್ಷ ಆಗಿತ್ತು. Court case ಆಯ್ತು. ಕಡೆಗೆ ಒಪ್ಪಂದ ಮಾಡಿಕೊಂಡ್ವಿ. ಪ್ರತಿ ವರುಷ ಇಪ್ಪತ್ತು ಸಾವಿರದ ಹಾಗೆ ಎಂಟು ವರುಷ ಕಟ್ಟಬೇಕು ಅಂತ ಆಯ್ತು. ಹಾಗೇ ಸಾಲ ತೀರಿಸಿದ್ವಿ. ನನ್ನ tractor ನಲ್ಲಿ ಕೆಲಸ ಮಾಡಲು ಆರಂಭಿಸಿದೆ. ನಾನೇ ಓಡಿಸ್ತಾ ಇದ್ದೆ. ಒಬ್ಬ driver ಸಹ ಇದ್ದ. ಹಾಗೇ ತೋಟದ ಕೃಷಿ ಮೇಲೆ ನನ್ನ ಗಮನ ಹೋಯ್ತು. ಹಿಂದೆ ಇಲ್ಲಿ ತೋಟಕ್ಕೆ ಮಣ್ಣುಗೊಬ್ಬರ ಹಾಕ್ತಾ ಇರಲಿಲ್ಲ. ನಾನು tractor ಕೆಲಸ ಆರಂಭಿಸಿದ ಮೇಲೆ ಇಡೀ ಮತ್ತೂರಿನ ಅಡಿಕೆ ತೋಟದ ಉತ್ಪತ್ತಿ ಒಂದಕ್ಕೆ ಎರಡರಷ್ಟು ಬೆಳೀತು. ೪ ಕ್ವಿಂಟಾಲ್ ಬರುವ ಕಡೆ, ೧೦ ರಿಂದ ೧೨ ಕ್ವಿಂಟಾಲ್ ಇಳುವರಿ ಬರತೊಡಗಿತು. ಟ್ರ್ಯಾಕ್ಟರಿನಲ್ಲಿ ಮಣ್ಣು, ಗೊಬ್ಬರ ಹಾಗೂ ಕಾಡಿನಿಂದ ಸೊಪ್ಪನ್ನು ಹೇರಿ ತೋಟಕ್ಕೆ ಹಾಕೋವಿ. ಈಗ ಮತ್ತೂರಿನಲ್ಲಿ ಅಡಿಕೆ ತೋಟ ಬಹಳ ಚೆನ್ನಾಗಿದೆ. ನಾನು ಖಂಡಸಾರಿ ಸಕ್ಕರೆ factory ಇಡ್ಬೋಣ ಅಂತಿದ್ದೆ. ಅದಕ್ಕೆ ಸಂಬಂಧಿಸಿದಂತೆ ಬಹಳ study ಮಾಡಿದೆ. ಉತ್ಪತ್ತಿ ಇಲ್ಲ ಅನ್ನಿಸ್ತು. ನಂತರ ನಾನು cement pipe factory ಇಡಬೇಕು ಅಂತ ಮಾಡಿದೆ. Cementಗೆ ಬಹಳ ಅಭಾವ ಇದ್ದ ಕಾಲ. ಅನುಮತಿ ಸಿಗಲಿಲ್ಲ. ಹಾಗೇ ಬೇಸಾಯವನ್ನೇ ಶ್ರದ್ಧೆಯಿಂದ ಮಾಡಿದೆ. ಇಲ್ಲಿ ಭತ್ತ ಬೆಳೆಯುವ ಜಮೀನಿನಲ್ಲಿ ಮೊದಲು ಸೆಣಬು ಹಾಕಿಸಿ ನಂತರ ಅದನ್ನು tractorನಲ್ಲಿ ಉಳಿಸಿ, ಸಸಿ ನಾಟಿ ಮಾಡುವ ವಿಧಾನವನ್ನು ನಾನೇ ಆರಂಭಿಸಿದ್ದು. ಅಷ್ಟರಲ್ಲಿ ಇಲ್ಲಿ ದೊಡ್ಡದಾಗಿ ಅಡಿಕೆ ಚೇಣಿ ಮಾಡ್ತಿದ್ದ ಹಿರಿಯರು "ಅಡಿಕೆ ಬೇಯಿಸಲು ಒಂದು ಸಾಧನ ಮಾಡು, ತುಂಬಾ ಸೌದೆಯ ಸಮಸ್ಯೆ ಇದೆ" ಅಂತ ಹೇಳಿದ್ರು. ನಾನು ಸಕ್ಕರೆ ಕಾರ್ಖಾನೇಲಿ ಇರೋ ತರಹ, ಒಂದು grate ಇಟ್ಟು ಎರಡು ಹಂಡೇನ ಒಂದೇ ಸಾಲಿನಲ್ಲಿ ಇಟ್ಟು ಅಡಿಕೆ ಬೇಯಿಸುವ ಹಾಗೆ ವಿಧಾನ ರೂಪಿಸಿದೆ. ಹಿಂದಿನ ಹಂಡೆ ಸಣ್ಣದು, ಮುಂದಿನ ಹಂಡೆ ದೊಡ್ಡದಿರುವ ಹಾಗೆ ಮಾಡಿದೆ. ಒಂದು ಘಂಟೆ ಬೇಯುತ್ತಿದ್ದ ಸಮಯ ೨೦ ರಿಂದ ೨೫ ನಿಮಿಷಕ್ಕೆ ಇಳೀತು. ಒಂದು ಹಂಡೇದನ್ನು ಇಳಿಸುವಷ್ಟರಲ್ಲಿ, ಮತ್ತೊಂದು ಹಂಡೆ ಬಂದಿರೋದು. ನಂತರ ಮೂರು ಹಂಡೆಗಳನ್ನಿಟ್ಟು ಸಹ ಪ್ರಯೋಗ ಮಾಡಿದೆ. ಇದ್ರಿಂದ ಇಲ್ಲಿನ ಬೆಳೆಗಾರರಿಗೆ ಅನುಕೂಲವಾಯ್ತು. ಮುಂಚೆ ಗದ್ದೆ ಇದ್ದ ಜಮೀನನ್ನೆಲ್ಲ ತೋಟವಾಗಿ ಪರಿವರ್ತನೆ ಮಾಡಿದೆ. ವ್ಯವಸಾಯದಲ್ಲಿ ನನ್ನ ಅಣ್ಣಂದಿರು ನೆರವು ನೀಡೋರು. ಈಗ ಅಣ್ಣನ ಮಕ್ಕಳು ಇಬ್ಬರು ಇಲ್ಲೇ ವೇದಾಧ್ಯಯನ ಮಾಡುತ್ತಾ, ಸಂಸ್ಕೃತ ಕಲೀತಿದ್ದಾರೆ. ಈಗ ತೋಟದ ನಿರ್ವಹಣೇನ ನಾನು ಮಾಡ್ತೀನಿ. ನನಗೆ ಒಬ್ಬ ಮಗ ಹಾಗೂ ಒಬ್ಬಳು ಮಗಳು. ನಮ್ಮ ಕುಟುಂಬದಲ್ಲಿ ಕೃಷಿ ಮುಂದುವರೆಯುತ್ತೆ. ಪಟ್ಟಣದಲ್ಲಿರುವ ನನ್ನ ಅಣ್ಣಂದಿರು "ಈಗ ನಾವು VRS ತೊಗೊಂಡು ಹಳ್ಳೀಗೆ ಬರ್ತೀವಿ" ಅಂತಿದಾರೆ. ಒಂದಿಬ್ಬರು ಈಗಲೇ ಬರಬಹುದು. ನನ್ನ ತಾಯಿ ಅಡಿಕೆ ಸುಲಿಯೋರು. ಮತ್ತೂರಿನಲ್ಲಿ ಎಲ್ಲ ಹೆಂಗಸರೂ ಸೇರಿ ಇವತ್ತು ಒಂದು ಮನೇಲಿ ಸುಲಿದ್ರೆ, ನಾಳೆ ಮತ್ತೊಂದು ಮನೇಲಿ ಸುಲಿಯೋರು. ಹೀಗೆ ಹೆಣ್ಣುಮಕ್ಕಳು ಸಹಾ ದುಡಿಯೋರು. ಈಗ ನನ್ನ ತಮ್ಮ ಮೂರು ಎಕರೆ ಜಮೀನು ಖರೀದಿ ಮಾಡಿ, ಮಾವು, ಹಲಸು, ನೇರಳೆ ಹೀಗೆ ಹತ್ತು ಹಲವು ಹಣ್ಣಿನ ಬೆಳೆಗಳನ್ನು ಬೆಳೆದು, ಅದಕ್ಕೆ 'ಸ್ನೇಹವನ' ಅಂತ ಹೆಸರು ಇಟ್ಟಿದ್ದಾನೆ. ಯಾರು ಬೇಕಾದರೂ ಬಂದು, ಎಷ್ಟು ಬೇಕಾದರೂ ಹಣ್ಣು ತಿನ್ನಬಹುದು. ಮನೆಗೆ ಒಯ್ಯುವಂತಿಲ್ಲ. ಜೀವನದುದ್ದಕ್ಕೂ ನಾವು ಪಾಲಿಸಿದ ತತ್ತ್ವ ಒಂದೇ. ದಾನಧರ್ಮ ಮಾಡಬೇಕು. ಬಂದಿದ್ದೆಲ್ಲವನ್ನೂ ನಾವೇ ತಿಂದು ಮುಗಿಸಬಾರದು. ಯಾರಿಗಾದರೂ ಕೊಡಬೇಕು. ಕೈ ಹಿಡೀಬಾರದು ಅನ್ನುವುದು ನನ್ನ ಧ್ಯೇಯ. ಯಾರಾರೂ ಕೇಳಿದ್ರೆ ಇಲ್ಲ ಅನ್ನಬಾರದು, ಏನಾದ್ರೂ ಕೊಡಬೇಕು. ನಮ್ಮ ಕುಟುಂಬದ ಧ್ಯೇಯವೂ ಇದೇ. ನಾವೆಲ್ಲರೂ ಇವತ್ತಿಗೂ ಒಟ್ಟಾಗಿದೀವಿ' ಅಂತ ಹೇಳಿ ಮುಗುಳು ನಕ್ಕರು, ಗೋಪಾಲ ಅವಧಾನಿಗಳು. ಮಾತು ಬರೋದಿಲ್ಲ ಅಂತಲೇ ಇಷ್ಟೆಲ್ಲಾ ಮಾತನಾಡಿದ್ರಾ ಅನ್ನಿಸಿತು. ಕೇಳಲೂ ಮತ್ತೇನೂ ಉಳಿದಿರಲಿಲ್ಲ.

ಈ) ವೇದಬ್ರಹ್ಮ ಶ್ರೀ ಅಶ್ವತ್ಥ ನಾರಾಯಣಾವಧಾನಿ ಇ/ಮ ಸುಬ್ರಾಯಾವಧಾನಿ

ಮತ್ತೂರು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237728



ಶಿಷ್ಯರೊಂದಿಗೆ ತೋಟದಿಂದ ಮನೆಗೆ ಮರಳುತ್ತಿರುವ ವೇ||ಬ್ರ||ಶ್ರೀ ಅಶ್ವತ್ಥನಾರಾಯಣಾವಧಾನಿಗಳು: ಮತ್ತೂರು

ನನಗೆ ನನ್ನ ತಂದೆಯ ಜತೆಯಲ್ಲಿದ್ದು ಅವರು ಹೇಳಿದ್ದನ್ನು ಕೇಳಬೇಕು ಅನ್ನುವ ಅಭಿಪ್ರಾಯ ಚೆನ್ನಾಗಿತ್ತು. ನನ್ನ ತಂದೆ ಭೀಷ್ಮನ ಕಥೆ ಹೇಳಿದ್ರು. ಆ ದೇವವ್ರತ ತಂದೆಗೋಸ್ಕರ ಎಲ್ಲಾ ತ್ಯಾಗ ಮಾಡಿದ ಕಥೆ ನನ್ನ ಮನದಲ್ಲಿ ಬಲವಾಗಿ ಬೇರೂರಿತ್ತು. ಹಾಗಾಗಿ ತಂದೆ ಹೇಳಿದ್ದನ್ನು ಬದಲಿಸದೇ ಪಾಲಿಸುವುದಷ್ಟೇ ನನ್ನ ಜೀವನದಲ್ಲಿ ಇದ್ದದ್ದು. ಹಾಗಾಗಿ ತಂದೆ ಜತೇಲೇ ಸದಾ ಇದ್ದೆ. ಅವರೇ ಕೃಷಿಪಾಠವನ್ನು ಹೇಳಿದ್ದು, ಅವರೇ ವೇದಾಧ್ಯಯನವನ್ನು ಮಾಡಿಸಿದ್ದು, ಎಲ್ಲವನ್ನೂ ನೀಡಿದ್ದು. ಇವತ್ತು ನನ್ನದು ಅಂತ ಏನೇನಿದೆಯೋ ಅದೆಲ್ಲಾ ಒಂದು ರೀತಿ ಅವರು ಕೊಟ್ಟಿದ್ದೇ.

ಮತ್ತೂರಿನ ಸುಬ್ರಾಯಾವಧಾನಿಗಳು ಹಾಗೂ ಗೌರಮ್ಮ ದಂಪತಿಗಳಿಗೆ ಐದು ಜನ ಗಂಡುಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು. ಎರಡನೆಯ ಮಗನೇ ಅಶ್ವತ್ಥನಾರಾಯಣಾವಧಾನಿ. ಇವರು ಮದುವೆಯಾದದ್ದು ಮತ್ತೂರಿನ ನಾರಾಯಣ ದೀಕ್ಷಿತ್ ಹಾಗೂ ಸೀತಾಲಕ್ಷ್ಮಿ ದಂಪತಿಗಳ ಮಗಳು ಚಂದ್ರಮತಿಯನ್ನು. ಅಶ್ವತ್ಥನಾರಾಯಣಾವಧಾನಿಗಳಿಗೆ ಇಬ್ಬರು ಗಂಡು ಮಕ್ಕಳು, ಹಾಗೂ ಒಬ್ಬ ಮಗಳಿದ್ದಾರೆ. ಮಗ ವ್ಯವಸಾಯ ಮುಂದುವರೆಸಿದ್ದಾನೆ. ಮಕ್ಕಳು, ಮೊಮ್ಮಕ್ಕಳೊಂದಿಗೆ ತುಂಬಿದ ಕುಟುಂಬದಲ್ಲಿರುವ ವೇದಬ್ರಹ್ಮಶ್ರೀ ಅಶ್ವಥ್ಥನಾರಾಯಣ ಅವಧಾನಿಗಳು ತಮ್ಮ ಜೀವನವನ್ನು ಕಿರಿಯರಿಗೆ ವೇದಾಧ್ಯಯನ ಹಾಗೂ ಸಂಸ್ಕೃತ ಶಿಕ್ಷಣ ನೀಡಲು ಮೀಸಲಿಟ್ಟಿದ್ದಾರೆ. ಇವರ ತಂದೆ ಸುಬ್ರಾಯಾವಧಾನಿಗಳು, ಈಗ ಸಂನ್ಯಾಸ ಸ್ವೀಕರಿಸಿ ಅದ್ವೈತಾನಂದೇಂದ್ರಸರಸ್ವತಿಯಾಗಿದ್ದಾರೆ. ಪೂರ್ವಾಶ್ರಮದ ಹೆಸರು ಮರೆಯಾಗಿದೆ. ಮತ್ತೂರಿನ ಮುಖ್ಯರಸ್ತೆಯಲ್ಲಿ ತೋಟದಲ್ಲಿ ವೇದಾಧ್ಯಾಯನ ಮುಗಿಸಿ ಮನೆಗೆ ಶಿಷ್ಯರ ಸಂಗಡ ಬರುತ್ತಿದ್ದ ಅಶ್ವತ್ಥನಾರಾಯಣಾವಧಾನಿಗಳನ್ನು ಭೇಟಿಯಾದಾಗ ಅವರ ಕಂಚಿನ ಕಂಠ ಕೇಳಿ ಬೆರಗಾಯ್ತು. 'ನಮ್ಮ ಸಂಸ್ಕೃತ ಅಧ್ಯಯನ ಕೇಂದ್ರದ ಉಪ್ಪರಿಗೆಯಲ್ಲಿ ಕುಳಿತು ಮಾತನಾಡುವಾ' ಎಂದರು. ಅಧ್ಯಯನಶಾಖೆಯಲ್ಲಿ ಯುವಕರ ಸಮೂಹ ವೇದ ಮಂತ್ರ ಜಪಿಸುವಲ್ಲಿ ತಲ್ಲೀನವಾಗಿತ್ತು. ಶುಭ್ರವಾದ ಬಿಳಿಯ ಬಟ್ಟೆ, ತಲೆಯ ಹಿಂಭಾಗದಲ್ಲಿ ಜುಟ್ಟು, ತೀಕ್ಷ್ಣವಾದ ಕಣ್ಣುಗಳ ಆ ಯುವಕರನ್ನು ಕಂಡಾಗ ಹೆಮ್ಮೆಯಾಯ್ತು. 'ದೂರದ ತಮಿಳುನಾಡು, ಕೇರಳ, ಕರ್ನಾಟಕದ ಹಲವು ಭಾಗಗಳಿಂದ ಇವರು ಬಂದಿದ್ದಾರೆ, ನಾವು ಇವರಿಗೆಲ್ಲಾ ಊಟ ವಸತಿ ಸೌಕರ್ಯ ಕಲ್ಪಿಸಿ ವೇದಾಧ್ಯಯನ ಹಾಗೂ ಸಂಸ್ಕೃತ ಅಧ್ಯಯನಕ್ಕೆ ಅವಕಾಶ ನೀಡಿದ್ದೇವೆ. ಈಗ ಬಹಳಷ್ಟು ಜನ ಬ್ರಾಹ್ಮಣ ಯುವಕರು, ವೇದಾಧ್ಯಯನ



ವೇದಪಾಠಶಾಲೆಯಲ್ಲಿ ವಿದ್ಯಾರ್ಥಿನಿಲಯದಲ್ಲಿ ಬ್ರಹ್ಮಚಾರಿ:ಮತ್ತೂರು

ಮಾಡಲು ಬರುತ್ತಿದ್ದಾರೆ' ಅಂದರು ಅಶ್ವತ್ಥನಾರಾಯಣಾವಧಾನಿಗಳು. ವಿಶಾಲವಾದ ಅಂಗಳದಲ್ಲಿ ಬೆಳ್ಳನೆ ಬೆಳಕಿತ್ತು. ಅನತಿ ದೂರದಲ್ಲಿ ತಾಯಿ ತುಂಗೆ ಶಾಂತವಾಗಿ ಹರಿಯುತ್ತಿದ್ದಳು. ಸುತ್ತೆಲ್ಲಾ ಧನ್ಯತಾಭಾವ. 'ನಿಮ್ಮ ಅನುಮಾನಗಳನ್ನು ಕೇಳಿ . . ನನಗೆ ತಿಳಿದಷ್ಟನ್ನು ತಿಳಿಸುತ್ತೇನೆ' ಅಂದ್ರು ಅವಧಾನಿಗಳು. ಜಿಜ್ಞಾಸೆ ಆರಂಭವಾಯ್ತು.

- **ಬ್ರಾಹ್ಮಣರು ನೆಲವನ್ನು ಉಳುಮೆ ಮಾಡಬಾರದು ಅಂತಾರಲ್ಲ ಏನು ಕಾರಣ?**
  ನೀವು ಹೇಳುವುದು ಸರಿ. ಉಳುಮೆ ಮಾಡುವುದು ಬ್ರಾಹ್ಮಣ್ಯವನ್ನು ನಾಶಪಡಿಸುತ್ತೆ. 'ಹಲಾಂತಂ ಬ್ರಹ್ಮವರ್ಚಸಮ್' ಅಂದ್ರೆ ನೇಗಿಲು ಹಿಡಿದ ಅಂದ್ರೆ ಅವನ ಬ್ರಾಹ್ಮಣ್ಯ ಹಾಳಾಯ್ತು ಅಂತ ಸ್ಪಷ್ಟವಾಗಿ ಶಾಸ್ತ್ರದಲ್ಲಿದೆ. 'ಭೂಮಿಗತಾನ್ ಹಂತಿ ಕಾಷ್ಠಮ್ ಅಯೋಮುಖಮ್' ಅಂತ ಹೇಳಿದ್ದಾನೆ ಮನುಸ್ಮೃತಿಕಾರ. 'ಉಳುಮೆಯಿಂದ ಭೂಮಿಯಲ್ಲಿರುವ ಪ್ರಾಣಿಗಳನ್ನು ನಾಶ ಮಾಡ್ತಾನೆ, ಭೂಮಿಯನ್ನು ನಾಶ ಮಾಡ್ತಾನೆ, ಆದ್ರಿಂದ ಉಳುಮೆ ಬಹಳ ಹಿಂಸಾಪ್ರಧಾನವಾಗಿದೆ, ಮಾಡಬಾರದು' ಅನ್ನುವ ಅಭಿಪ್ರಾಯವನ್ನು ನಾವು ಶಾಸ್ತ್ರದಲ್ಲಿ ಒಪ್ಪಿಕೊಂಡಿದ್ದೇವೆ. ಅದು ನಮ್ಮ ವೃತ್ತಿಯೂ ಅಲ್ಲ, ಆ ತರಹದ ಬದುಕನ್ನು ಬ್ರಾಹ್ಮಣರು ಇಷ್ಟವೂಪಡೋದಿಲ್ಲ.

- **ಬಾಗಾಯ್ತಿನಲ್ಲಿ ನಾವು ಭೂಮಿಯನ್ನು ಅಗೆತ ಮಾಡ್ತೀವಲ್ಲ ಅದು ಹಿಂಸೆಯಾಗೋದಿಲ್ವಾ?**
  ಹಿಂಸೆ ಅನ್ನುವಾಗ ಶಾಸ್ತ್ರದಲ್ಲಿ ಏನಿದೆ ಅಂದ್ರೆ, ವೃತ್ತಿಗೆ 'ಅದ್ರೋಹಿಣ್ಯೈವ ಭೂತಾನಾಮ್ ಅಲ್ಪದ್ರೋಹೇಣ ವಾ ಪುನಃ' ಅಂತ ಹೇಳಿದಾರೆ. ಯಾರಿಗೂ ಹಿಂಸೆಯಿಲ್ಲದ, ಸುಳ್ಳಿಲ್ಲದ ವೃತ್ತಿಯಾಗಬೇಕು ಅಥವಾ ಸ್ವಲ್ಪ ನೋವಾದರೂ ಪರವಾಗಿಲ್ಲ. ಯಾಕೇಂದ್ರೆ ನಾವು ಗುಂಡಿ ತೆಗೆಯೋದು ಅಡಿಕೆ ಬೆಳೆಯುವ ಸಲುವಾಗಿ. ಮರ ನೆರಳು ಕೊಡುತ್ತೆ, ಪ್ರಕೃತಿಯನ್ನು ಕಾಪಾಡುತ್ತೆ, ಪರಿಸರ ಚೆನ್ನಾಗಿಡುತ್ತೆ ಅನ್ನುವ ದೃಷ್ಟಿಯಿಂದ ಭೂಮಿಯನ್ನು ಸ್ವಲ್ಪ ಅಗಿತೀವಿ. ಅಷ್ಟು ಹಿಂಸೆ ಭೂಮಿಗೆ ಕೊಡದೆ ಆಗೋದಿಲ್ಲ. ಅನಿವಾರ್ಯವಾದ ಹಿಂಸೆಯನ್ನು ನಾವು ಮತ್ತೊಬ್ಬರಿಗೆ ಕೊಟ್ಟೇ ಬದುಕಬೇಕಾಗಿದೆ. ಅಷ್ಟು ಹಿಂಸೆಯನ್ನು ನಾವು ಒಪ್ಪಿಕೋತೀವಿ. ಅದು ಹಿಂಸೆ ಅಲ್ಲ.

- **ಅಷ್ಟು ಹಿಂಸೇನೇ ಒಪ್ಪಿಕೊಳ್ಳುವವರು ನೇಗಿಲ ಹಿಂಸೆಯನ್ನು ಯಾಕೆ ಒಪ್ಪಿಕೊಳ್ಳುತ್ತಿಲ್ಲ?**
  ಇಲ್ಲ, ನೇಗಿಲ ಹಿಂಸೆಯಲ್ಲಿ ನಿಜವಾಗಿ ಪ್ರಾಣಿಗಳನ್ನು ಕೊಲ್ಲುತ್ತೀವಿ. ಅದು ಅನಿವಾರ್ಯವೇನಲ್ಲ. ಇಲ್ಲಿ ಭವಿಷ್ಯವಿದೆಯಲ್ಲ? ಮರ ನೆಡುವ ಪರೋಪಕಾರದ ಚಿಂತನೆ ಇದೆ. ಅಲ್ಲಿ ಆ ತರಹದ ಚಿಂತನೆ ಇಲ್ಲ. ಅದು ಕೇವಲ ಸ್ವಾರ್ಥವಾಗಿ ಕಾಣ್ತಾ ಇದೆ - ನಮ್ಮ ಅನ್ನಕ್ಕೋಸ್ಕರ ಭೂಮಿಯಲ್ಲಿರುವ ಪ್ರಾಣಿಯನ್ನು ಕೊಲ್ಲುವುದು, ಅಲ್ಲಿರುವ ಮರಗಳನ್ನು ಕಡಿಯೋದು, ಕಾಡನ್ನು ಹಾಳು ಮಾಡೋದು. ಈ ಎಲ್ಲವನ್ನೂ ಮಾಡೋದು ಇದೆಯಲ್ಲಾ ಬಹಳ ಹಿಂಸೆಯಾಗುತ್ತೆ, ಪ್ರಕೃತಿ ನಾಶ ಅನ್ನುವುದು ನನ್ನ ಅಭಿಪ್ರಾಯ. ನಮ್ಮ ಅನ್ನಕ್ಕೋಸ್ಕರ ಪ್ರಕೃತಿಯನ್ನು ನಾಶ ಮಾಡುವ ಬದಲು, ಪ್ರಕೃತಿ ಇದ್ದ ಹಾಗೆ ಒಂದು ತೋಟದ ಹಾಗೆ ನೋಡಿಕೊಂಡ್ರೆ ನಮ್ಮ ಬದುಕು ಚೆನ್ನಾಗಿರುತ್ತೆ ಅನ್ನುವ ಅಭಿಪ್ರಾಯದಲ್ಲಿ ಈ ತೋಟಕ್ಕೋಸ್ಕರ ಮಾಡುವ ಹಿಂಸೆಯನ್ನು ಒಪ್ಪಿಕೊಳ್ತೀವಿ.

- **ಸಂಕೇತಿಗಳ ಮೂಲ ಕಸುಬು ವ್ಯವಸಾಯ. ವೇದಾಭ್ಯಾಸ ಹಾಗೂ ಸಂಗೀತ ಅದಕ್ಕೆ ಪೂರಕವಾಗಿ ಹುಟ್ಟಿಕೊಂಡಿದ್ದಾವೆ ಅನ್ನುವುದು ನನ್ನ ಅಭಿಪ್ರಾಯ. ನಿಮ್ಮ ವ್ಯಾಖ್ಯೆ ಏನು?**
  ಇಲ್ಲಿ ಸಂಕೇತಿಗಳ ವೃತ್ತಿ, ಜೀವನೋಪಾಯಕ್ಕೆ ಅಂದ್ರೆ ಅದು ತೋಟದ ವ್ಯವಸಾಯ. ವ್ಯವಸಾಯ ಅಂದ್ರೆ ಬೇಸಾಯ ಅನ್ನುವ ಅರ್ಥ ಅಲ್ಲ, ತೋಟ ಅನ್ನುವ ಅಭಿಪ್ರಾಯದಲ್ಲಿ ಇದು ಸರಿ. ಯಾಕೇಂದ್ರೆ ಅವರು ಪ್ರಕೃತಿಯ ಜತೆಯಲ್ಲಿ ಬದುಕಬೇಕು, ಸ್ವತಃ ಕಷ್ಟಪಡಬೇಕು, ಸೋಮಾರಿಯಾಗದೆ ಬದುಕಬೇಕು ಅನ್ನುವುದಕ್ಕಾಗಿ ತೋಟವನ್ನಿಟ್ಟಿದ್ದರು. ಇನ್ನು ವೇದಾಧ್ಯಯನ: ಅವನಿಗೆ ಜೀವನದಲ್ಲಿ ಜ್ಞಾನವನ್ನು ರಕ್ಷಣೆ ಮಾಡುವ ಸಲುವಾಗಿ ವೇದವನ್ನು ರಕ್ಷಣೆ ಮಾಡಬೇಕಾಯ್ತು. ಬ್ರಾಹ್ಮಣನಿಗೆ ಜ್ಞಾನವನ್ನು ರಕ್ಷಣೆ ಮಾಡಬೇಕಾದ ಸಾಮಾಜಿಕ ಹೊಣೆ ಇದೆ. ಬ್ರಾಹ್ಮಣ ಜ್ಞಾನಪ್ರಸಾರ ಮಾಡಬೇಕು. ಅದಕ್ಕೋಸ್ಕರ ವೇದವನ್ನೂ ಕೂಡ ತೋಟದಲ್ಲೇ ಕಲಿತುಕೊಳ್ಳುತ್ತಿದ್ದ. ನಾನೂ ಕೂಡ ಬಾಲ್ಯದಲ್ಲಿ ತೋಟದ ಕೆಲಸ ಮಾಡುತ್ತಲೇ ವೇದಾಭ್ಯಾಸ ಮಾಡುತ್ತಿದ್ದೆ. ಆದ್ದರಿಂದ ವೇದಾಧ್ಯಯನವು ವೃತ್ತಿಯಲ್ಲ ಅನ್ನುವುದು ನಿಜ. ನಮಗೆ ತೋಟವೇ ವೃತ್ತಿ. ಸಂಗೀತವೂ ಇದೇ ರೀತಿಯೆ.

- **ವೇದಾಧ್ಯಯನ ಮತ್ತು ಮುಖ್ಯವಾಗಿ ಸಂಗೀತ ಯಾವಾಗ ಸಂಕೇತಿಗಳಲ್ಲಿ ಆರಂಭವಾಗಿರಬಹುದು ಅಂತೀರಿ? ಅಥವಾ ಅದು ವ್ಯವಸಾಯ ಆರಂಭವಾಗುವುದಕ್ಕಿಂತ ಮುಂಚೆಯೇ ಇತ್ತೆ?**



ವೇ||ಬ್ರ||ಶ್ರೀ ಅಶ್ವತ್ಥನಾರಾಯಣಾವಧಾನಿ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ : ಮತ್ತೂರು

ಈ ಕಾಲದ ಹಿನ್ನೆಲೆ ಕೇಳಿದ್ರೆ, ನಮಗೆ ದಾನ ಕೊಟ್ಟಿದಾರಲ್ಲ ಅಗ್ರಹಾರವನ್ನು ಉಡುಗೊರೆಯಾಗಿ, ಅವರು ಹೇಳ್ತಾರೆ, ಇಂಥಾ ಅಧ್ಯಯನ ಮಾಡಿದ ಇಂಥಾ ಗೋತ್ರದವನಿಗೆ ಇಂಥಾ ನೆಲವನ್ನು ಕೊಟ್ರು ಅಂತ. ಭೂಮಿಯನ್ನು ಹಂಚುವಾಗ ಹಾಗೇ ಕೊಟ್ಟಿದಾರೆ, ಶ್ಲೋಕದಲ್ಲಿ ಹಾಗೇ ಇದೆ. ಆದ್ರೆ ವೇದಾಧ್ಯಯನ ಪರಂಪರೆಯ ಅದೇ ಜನರೇ ಇಲ್ಲಿ ಬಂದಿದ್ದಾರೆಯೇ ಅನ್ನುವುದನ್ನು ನಾವು ಗುರುತಿಸಲು ಆಗುವುದಿಲ್ಲ. ವೇದಾಧ್ಯಯನ ನನಗೆ ನೆನಪಿರುವಂತೆ ನಮ್ಮ ವಂಶದಲ್ಲಿ ಅದು ವಿಚ್ಛೇದವಾಗಿಲ್ಲ. ಆರಂಭವಾದ ದಿವಸ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಹೇಳೋರು, 'ಹಿರಣ್ಯಗರ್ಭ ಬ್ರಹ್ಮನಿಂದ ಇವತ್ತಿನವರೆಗೂ ನಮ್ಮ ವಂಶದಲ್ಲಿ ವೇದ ತುಂಡಾಗಿಲ್ಲ' ಅಂತ. ಕೃಷಿವೃತ್ತೀನೂ ಕೂಡ ಬಹಳ ಕಾಲದಿಂದಲೂ ನಡೆದು ಬಂದಿರುವುದರಿಂದ ಅದಕ್ಕೂ ಆರಂಭ ಸಿಗೋಲ್ಲ. ಯಾವುದು ಮುಂಚೆ, ಯಾವುದು ಆಮೇಲೆ ಅನ್ನುವುದಕ್ಕೆ ಉತ್ತರ ಸಿಗೋಲ್ಲ. ಸಂಗೀತವೂ ಕೂಡ, ಅದು ಒಂದು ರೀತಿ ಸಾಮವೇದ ಇತ್ತಲ್ಲ, ಅದರ ಬಲದಿಂದ ಭಗವಂತನನ್ನು ಸ್ತೋತ್ರ ಮಾಡುವಾಗ ಭಕ್ತಿಪ್ರಧಾನ ಆಗಬೇಕಾಯ್ತು. ಹಾಗೆ ಜತೇಲಿ ಸಂಗೀತ ಹುಟ್ಟಿಕೊಳ್ತು. ಸಂಗೀತವನ್ನೂ ಸಹ ಬಹಳ ಹಿಂದಿನಿಂದಲೂ ಕಲಿತುಕೊಂಡು ಬಂದಿದ್ದಾರೆ. ಸಂಗೀತವೂ ಕೂಡ ನಮ್ಮಲ್ಲಿ ಆರಂಭವಾದ ನೇರವಾದ ಉಲ್ಲೇಖ ಸಿಗೋಲ್ಲ. ಇದಕ್ಕೂ ಕಾಲದ ಗಣನೆ ಇಲ್ಲ. ಆ ವಿಷಯವಾಗಿ ನಾನು ಏನೂ ಹೇಳಲಾರೆ.

- **ತಂದೆ ತಾಯಂದಿರ ಜತೆ ತೋಟದಲ್ಲಿ ವೇದಾಭ್ಯಾಸ ಮಾಡ್ತಿದ್ದೆ ಅಂತ ತಾವು ತಿಳಿಸಿದ್ರಲ್ಲಾ, ಏನು ಆ ಅಭ್ಯಾಸ ವಿವರವಾಗಿ ಹೇಳಿ...**

  ತಂದೆಯವರು ಬೆಳಗ್ಗೆ ಎದ್ದಕೂಡಲೆ, ನಮ್ಮನ್ನೂ ಸಹ ಎಬ್ಬಿಸಿಕೊಂಡು, ತೋಟಕ್ಕೆ ಕರೆದುಕೊಂಡು ಹೋಗಿ, ತೋಟದಲ್ಲಿ ಕೆಲಸ ಮಾಡ್ತಾನೆ ವೇದ ಹೇಳಿಕೊಡೋರು; ಹಾಗೇ ನಾವೂ ಬಾಯಲ್ಲಿ ಹೇಳಿಕೊಳ್ಳುತ್ತಿದ್ವಿ. ಯಾವ ಕೆಲಸ ಇದ್ರೂ ಕೂಡ, ಅಡಿಕೆ ಆರಿಸೋದು, ಗಿಡ ನೆಡೋದು, ಬಾಳೆ ಕಂದು ನೆಡೋದು ಅಥವಾ ಮರ ಹತ್ತೋದೇ ಇರಬಹುದು, ಯಾವ ಕೆಲಸವೂ ಕೂಡ ತೋಟದಲ್ಲಿ ಮಾಡ್ತಾ ಮಾಡ್ತಾ ಹಾಗೇ ಪಾಠವೇ ಹೊರತು, ಬರೀ ವೇದಪಾಠ ಅಂತ ಮನೇಲಿ ಕುಳಿತು ಪಾಠ ನಡೀತಿರಲಿಲ್ಲ. ನನಗಾಗಿರುವ ಪಾಠವೂ ಕೂಡ ಪೂರ್ಣ ತೋಟದಲ್ಲಿ ಆಗಿರುವುದೇ. ತಂದೆ ಹೇಳೋರು 'ತೋಟದ ಮರ ಮರಗಳಿಗೂ ವೇದ ಬರುತ್ತೆ. ನಿನಗೆ ಬರೋದಿಲ್ಲ' ಅಂತ ಬೈಯೋರು. ಅದರರ್ಥ ತೋಟದಲ್ಲಿ ಅಷ್ಟು ಪಾಠ ಆಗುತ್ತೆ ಅಂತ. ಹೀಗಾಗಿ ತೋಟದಲ್ಲೇ ವೇದಪಾಠ ನಡೀತಿತ್ತು.

- **ನೋಡಿ, ಜ್ಞಾನ ಹರೀತಾ ಇದ್ದದ್ದು ತಂದೆಯಿಂದ ಮಕ್ಕಳಿಗೆ. ಅದನ್ನು ಅವರು ಮನೇಲೂ ಮಾಡಬಹುದಿತ್ತು ಅಲ್ವಾ. ತೋಟದಲ್ಲೇ ಯಾಕೆ ಮಾಡಿದ್ರು?**

  ಮನುಷ್ಯನಿಗೆ ಅನ್ನ ಪ್ರಧಾನ. ಅನ್ನವನ್ನು ಆಶ್ರಯಿಸಿ ಬದುಕು. ಆ ದೃಷ್ಟಿಯಲ್ಲಿ ಅನ್ನಕ್ಕೋಸ್ಕರ ಕೆಲಸ ಮಾಡದೆ ಮನೇಲಿ ಕುಳಿತು ಅಧ್ಯಯನ ಮಾಡೋದು ಅನ್ನದ್ರೋಹ, ಸರಿಯಾಗೋಲ್ಲ. ಒಟ್ಟಿನಲ್ಲಿ ನಾವು ಎಲ್ಲಿ ಅನ್ನವನ್ನು ಸಂಪಾದನೆ ಮಾಡ್ತೀವೋ ಅಲ್ಲಿ ನಾವು ಯಾವಾಗಲೂ ಇರಬೇಕು. ತಂದೆಯವರು ಹೇಳೋರು, ಹಗಲು ಹೊತ್ತು ಪೂರ್ತಿ ತೋಟದಲ್ಲೇ ಇರಬೇಕು. ಮನೆ ರಾತ್ರಿ ಮಲಗಲು ಅಷ್ಟೇ ಹೊರತು ಹಗಲು ಹೊತ್ತು ಯಾವಾಗಲೂ ಮನೇಲಿ ಇರಬಾರದು ಅನ್ನುವ ಅಭಿಪ್ರಾಯ ಅವರಲ್ಲಿತ್ತು. ಅಷ್ಟರಮಟ್ಟಿಗೆ ನಮ್ಮ ಜನಾಂಗದ ಜೀವನ ಪೂರ್ತಿ ತೋಟದಲ್ಲೇ ಇರ್ತಾ ಇತ್ತು.

- **ರಾತ್ರಿ ಹೊತ್ತೂ ಕೂಡ ತಾವು ತೋಟದಲ್ಲಿದ್ದು ಅಧ್ಯಯನ ಮಾಡಿದ ನಿದರ್ಶನಗಳು ಇದ್ವೆ? ರಾತ್ರಿ ಹೊತ್ತು ತೋಟಾನ ಯಾಕೆ ಆಯ್ಕೆ ಮಾಡಿಕೊಳ್ಳಲಿಲ್ಲ?**

  ರಾತ್ರಿ ಹೊತ್ತು ಕೆಲವು ಸಲ ಕಾವಲಿಗೆ ಹೋದದ್ದು ಉಂಟು ಅಷ್ಟೆ. ರಾತ್ರಿ ಅಲ್ಲಿ ಬೆಳಕೇ ಇಲ್ವಲ್ಲ. ಅಲ್ಲಿ ಏನು ಕೆಲಸ ಮಾಡಲು ಸಾಧ್ಯ? ಕತ್ತಲಾಗುವ ತನಕ ಇರ್ತಾ ಇದ್ವಿ ಅಷ್ಟೆ. ಕತ್ತಲಾದ ಮೇಲೆ ವಾಪಸ್ಸು ಬರೋದು ಅಷ್ಟೆ. ಆ ರೀತಿ ನಮ್ಮ ತೋಟದ ಜೀವನ ಇತ್ತು. ತೋಟದ ಪರಿಚಯವೂ ಹಾಗೇ ಪ್ರತಿ ಇಂಚು ಇಂಚಿನಲ್ಲೂ ಹ್ಯಾಗಿದೆ ನೆಲ, ಭೂಮಿ ಹ್ಯಾಗಿದೆ, ಅಲ್ಲಿ ಮರ ಗಿಡಗಳು ಹ್ಯಾಗಿವೆ, ಎಷ್ಟು ಫಲ ಇದೆ, ಏನೇನು ಬದಲಾವಣೆ ಆಗ್ತಾ ಇದೆ -ಪೂರ್ಣ ಮಾಹಿತಿ ಚೆನ್ನಾಗಿ, ಸ್ಪಷ್ಟವಾಗಿ ಇರ್ತಾ ಇತ್ತು ಅವರಿಗೆ. ಹಾಗಾಗಿ ನಮ್ಮ ತೋಟದ ಒಡನಾಟ ತಾಯಿ ಜತೆಯ ಸಂಬಂಧ ಇದ್ದ ಹಾಗೆ.

- **ನಿಮ್ಮ ದೃಷ್ಟಿಯಲ್ಲಿ ನಿಮ್ಮ ಅನ್ನ ಬೆಳೆಯುವ ಜಾಗದಲ್ಲಿ ವೇದಾಭ್ಯಾಸ ಮಾಡುವುದು ಸರೀನೇ. ಆದ್ರೆ ಅದ್ರಿಂದ ತೋಟದಲ್ಲಿ ಬೆಳೆದ ಗಿಡಮರಗಳಿಗೆ ಏನಾದ್ರೂ ಅನುಕೂಲ ಆಗುತ್ತಾ? ತಾವು ಅಭ್ಯಾಸ ಮಾಡಿದೀರಾ?**

  ಒಂದು ಸಂಬಂಧ ಅಂತೂ ನಮಗೆ ಗೊತ್ತಾಗೋದು. ನಾವು ತೋಟದಲ್ಲಿ ಮಂತ್ರ ಹೇಳ್ತಾ ಅಲ್ಲಿಯ ಗಿಡಮರಗಳ ಜತೆ ಇದ್ದ ಮೇಲೆ, ಪ್ರತಿ ಗಿಡವನ್ನೂ ಮುಟ್ಟಿ ಅದರೊಂದಿಗೆ ಸ್ನೇಹಸಂಬಂಧ ಇದೆಯಲ್ಲಾ, ನಮ್ಮ ಕಾಳಿದಾಸ ಹೇಳುವ ಹಾಗೆ, "ಸ್ತನಂಧಯಪ್ರೀತಿಮವಾಪ್ಸಸಿತ್ವಂ" ಅಂತ, ಮಗು ತಾಯಿ ಸಂಬಂಧ ಇದ್ದ ಹಾಗೆ ಗಿಡಮರಗಳಿಗೂ ನಮಗೂ ಸಂಬಂಧ ಇದೆ. ಬಾಂಧವ್ಯ ಬರುತ್ತೆ, ಅಭಿಮಾನ ಬೆಳೆಯುತ್ತೆ. ಇಲ್ಲದೇ ಹೋದ್ರೆ ತೋಟದಲ್ಲಿ ಏನೇ ವ್ಯತ್ಯಾಸವಾದ್ರೂ ಏನೂ ಅನ್ನಿಸೋದೇ ಇಲ್ಲ. ಹಿಂದಿನವರಿಗೆ ಒಂದು ಗರಿ ಮುರಿದು ಹೋದ್ರೆ 'ಅಯ್ಯೋ ಗರಿ ಮುರಿದು ಹೋಯ್ತಲ್ಲಾ' ಅಂತ ನೋವಾಗ್ತಾ ಇತ್ತು. ಇವತ್ತು ಮರಾನೇ ಉರುಳಿ ಹೋದ್ರೂ, ಮರ ತಾನೇ ಬಿದ್ದಿರೋದು ಅಂತಾರೆ. ಹಿಂದಿನ ಭಾವನಾಸಂಬಂಧ ಈಗಿಲ್ಲ. ವೇದಾಧ್ಯಯನವನ್ನು ಮರ ಕೇಳುತ್ತೆ ಇಲ್ವೆ? ಅದ್ರಿಂದ ಅದರ ಬೆಳವಣಿಗೆ ಹೆಚ್ಚಾಗಿದ್ಯೆ ಇಲ್ವೆ? ಈ ಕುರಿತು ಚಿಂತನೆ ಮಾಡಿಲ್ಲ.

- **ಯಾಕೇಂದ್ರೆ ಗಿಡ ಮರ ಪ್ರಾಣಿಗಳನ್ನು ಸಹ ಜತೆಯಲ್ಲೇ ಇಟ್ಟುಕೊಂಡು ಅಣ್ಣತಮ್ಮಂದಿರ ತರಹ ಬದುಕಿದವರು ನೀವು. ಈ ತರಹದ ಅಧ್ಯಯನ ನಿಮ್ಮಲ್ಲಿ ಹಳೇಕಾಲದಲ್ಲಿ ಆಗಿತ್ತಾ, ನಿಮ್ಮ ಪೂರ್ವಿಕರು ಇದರ ಬಗ್ಗೆ ಏನಾದ್ರೂ ಹೇಳಿದಾರಾ?**

  ಗಿಡಮರಗಳಿಗೆ ಬೇಕಾದ ಮಂತ್ರಗಳನ್ನು ಹೇಳ್ತಾ ಇದ್ರು. ಅವರು ತಮ್ಮ ಪ್ರಯೋಜನಕ್ಕೋಸ್ಕರ ಅಂತ ಮಂತ್ರವನ್ನು ಹೇಳ್ತಿರಲಿಲ್ಲ. ಅದ್ರಲ್ಲಿ ಮೂರು ಭಾಗ ಇದೆ. ಒಂದು ಸೃಷ್ಟಿಯ ರಕ್ಷಣೆ, ಸಮಾಜದ ರಕ್ಷಣೆ ಹಾಗೂ ಕುಟುಂಬದ ರಕ್ಷಣೆ. ಈ ಮೂರೂ ರಕ್ಷಣೆ ಇವನು ಮಾಡಬೇಕಾದ್ರೆ, ಸೃಷ್ಟಿ ರಕ್ಷಣೆ ಮಳೆಯಿಂದ ಆಗುತ್ತೆ ಅಂತ ತೋಟವನ್ನು ಚೆನ್ನಾಗಿ ಇಟ್ಟುಕೊಳ್ಳೋರು, ತೋಟದಲ್ಲಿ ಅಧ್ಯಯನ ಮಾಡೋರು. ತೋಟದ ಉತ್ಪತ್ತಿಯನ್ನು ತೊಗೊಂಡು ಕುಟುಂಬವನ್ನು ರಕ್ಷಣೆ ಮಾಡೋರು. ತನ್ಮೂಲಕ ಸಮಾಜದ ರಕ್ಷಣೆ ಆಗೋದು. ಹೀಗೆ ಮೂರರ ರಕ್ಷಣೆ ವೇದಾಧ್ಯಯನ ಹಾಗೂ ಕೃಷಿಯಿಂದ ನಡೀತಾ ಇತ್ತು.



ವೇದಪಾಠಶಾಲೆ:ಸಂಕೇತಿ ಕೃಷಿಯ ವೈದಿಕ ಹಿನ್ನೆಲೆಯ ಬಗೆಗೆ ಮಾಹಿತಿ ನೀಡುತ್ತಿರುವ ವೇ||ಬ್ರ||ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು:ಮತ್ತೂರು

- **ಸಂಕೇತಿಗಳಿಗೆ ವ್ಯವಸಾಯವು ಪ್ರಧಾನವಾದ ವೃತ್ತಿ ಅಂತ ತಾವೂ ಒಪ್ಪಿಕೊಂಡಿದ್ದೀರಿ. ಕಾಲಾನಂತರ ವೇದ ಹಾಗೂ ಸಂಗೀತವನ್ನೇ ಮುಖ್ಯ ವೃತ್ತಿಯನ್ನಾಗಿ ಮಾಡಿಕೊಂಡು ವ್ಯವಸಾಯವನ್ನು ಕಡೆಗಣಿಸಿದಾರೆ ಅನ್ನುವುದು ನನ್ನ ಅಭಿಮತ. ನಿಮ್ಮ ಅನಿಸಿಕೆ ಏನು?**

  ಜೀವನೋಪಾಯದ ಪ್ರಶ್ನೆಯಿಂದ ವ್ಯವಸಾಯ ಬಿಟ್ರು ಅನ್ನುವುದಕ್ಕಿಂತಲೂ, ಈಗಿನ ವಿದ್ಯಾಭ್ಯಾಸ

ಇದೆಯಲ್ಲಾ, ಆಂಗ್ಲ ವಿದ್ಯಾಭ್ಯಾಸ ಹಾಗೂ ಕೆಲಸ? ರಾಜಶಾಸನ ಬದಲಾದ ಮೇಲೆ ಕೆಲಸ ಮಾಡಿ ಸಂಬಳದ ಮೂಲಕ ದುಡ್ಡು ತೊಗೊಳ್ಳೋದು ಸುಲಭ. ಆದರೆ ವ್ಯವಸಾಯದ್ದು ಅನಿಯತ ಉತ್ಪತ್ತಿ. ಆದರೆ ಕೆಲಸದಲ್ಲಿ ಮಳೆ ಬರಲಿ, ಬರದೇ ಹೋಗಲಿ ಸಂಬಳ ಬಂದೇ ಬರುತ್ತೆ. ಹಾಗಾಗಿ ಒಂದು ರೀತಿ ಭೋಗದ ಆಸೆಯಿಂದ, ದುಡ್ಡಿನ ಆಸೆಯಿಂದ ಹಳ್ಳೀನ ಬಿಟ್ರು ಅನ್ನೋದ್ರಲ್ಲಿ ಎರಡನೆಯ ಮಾತಿಲ್ಲ. ಸಿಟೀಗೆ ಹೋಗಬೇಕು ಅನ್ನುವ ಅಪೇಕ್ಷೆ ಇತ್ತು. ಬಹುಶಃ ಇವತ್ತಿಗೂ ಇದೆ. ಹಾಗಾಗಿ ಹಳ್ಳಿಯಲ್ಲಿರುವವರೂ ಸಹ ಅರ್ಧಕ್ಕಿಂತ ಹೆಚ್ಚು ಜನ ಪಟ್ಟಣ ಸೇರಿದ್ರು. ಈಗ ಇದ್ದವರೂ ತೋಟದ ಜತೆ ಹಿಂದಿನ ಸಂಪರ್ಕ ಇಟ್ಟುಕೊಂಡಿಲ್ಲ.

- **ಸಂಕೇತಿಗಳಲ್ಲಿ ಮುಂದಿನ ದಿನಗಳಲ್ಲಿ ಕೃಷಿಯ ಪರಿಸ್ಥಿತಿ ಯಾವ ರೀತಿ ಇರಬಹುದು ಅಂತ ಅನ್ನಿಸುತ್ತೆ?**

ನನಗೆ ಅನ್ನಿಸುವುದು, ಹಳ್ಳಿಯಲ್ಲಿರುವ ತಂದೆ ತಾಯಂದಿರು, ಬಲಾತ್ಕಾರವಾಗಿ ಹಳ್ಳೀಲಿ ಉಳೀಬೇಕು ಅಂತ ಮಕ್ಕಳಿಗೆ ಪ್ರಯತ್ನ ಮಾಡಿ, ಅಭಿಮಾನದಿಂದ ಉಳಿಸಿ ಖಂಡಿತ ಕೃಷೀನ ಬೆಳೆಸಿಕೊಳ್ಳಲೇಬೇಕು. ಬೇರೆ ದಾರಿಯೇ ಇಲ್ಲ. ಆದರೆ 'ರಾಜಾ ಕಾಲಸ್ಯ ಕಾರಣಮ್' ಅಂತ ಹೇಳ್ತೀವಿ. ಬದುಕುವ ದಾರಿ ಕಾಣದೆ, ಸರ್ಕಾರದ ಶಾಸನದಿಂದ ಊರು ಬಿಟ್ಟವರೂ ಇದ್ದಾರೆ. ಭೋಗಕ್ಕೋಸ್ಕರ ಬಿಟ್ಟವರೂ ಇದ್ದಾರೆ, ವಿದ್ಯಾಭ್ಯಾಸಕ್ಕಾಗಿ ಬಿಟ್ಟವರೂ ಇದ್ದಾರೆ. ಕಾರಣಗಳು ನೂರಾರು ಇರಬಹುದು, ಹಳ್ಳಿ ಬಿಟ್ಟಿದ್ದಂತೂ ನಿಜ.

- **ಕೃಷಿಗೆ ಒಬ್ಬ ಮಗನನ್ನು ಉಳಿಸಿಕೊಳ್ಳುವ ಪರಿಪಾಠ ಹಿಂದಿನಿಂದಲೂ ಜನಾಂಗದಲ್ಲಿ ರೂಢಿಯಾಗಿದೆ. ಆದರೆ ಇವತ್ತು ತಾವೇ ಹೇಳಿದ ಹಾಗೆ ಶಿಕ್ಷಣ ಯಾರನ್ನೂ ಹಳ್ಳಿಯಲ್ಲಿ ಉಳಿಯಗೊಡುತ್ತಿಲ್ಲ. ಹಿಂದಿನ ಕಾಲದಲ್ಲಿ ತಂದೆ ತಾಯಂದಿರು ಹ್ಯಾಗೆ ಮಕ್ಕಳಿಗೆ ಶಿಕ್ಷಣ ನೀಡ್ತಿದ್ರೋ ಆ ತರಹ ಇವತ್ತಿನ ದಿನಗಳಲ್ಲಿ ತಂದೆತಾಯಂದಿರು ಶಿಕ್ಷಣ ನೀಡದಿರುವುದು ಸಂಕೇತಿ ಕೃಷಿ ಅಳಿಯಲು ಕಾರಣವೆ?**

ಹೌದು. ಈ ಅಭಿಪ್ರಾಯ ಸರಿ. ತಂದೆ ತಾಯಂದಿರು ಮಕ್ಕಳಿಗೆ 'ನೀನು ಇದನ್ನೇ ಕಲಿತುಕೊಳ್ಳಬೇಕು, ಇಲ್ಲಿರಬೇಕು' ಅನ್ನುವ ಒಂದು ಸಂಬಂಧವನ್ನು ಕಲ್ಪಿಸದೇ ಇರುವುದೂ ಒಂದು ಕಾರಣ. ತಂದೆ ತಾಯಂದಿರೇ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಹೊರಗೆ ಕಳಿಸುವುದೂ ಒಂದು ಕಾರಣ. ತಾವು ಯಾವುದನ್ನು ನಂಬಿ ಬದುಕಿದಾರೋ ಅದರ ಬಗ್ಗೇನೇ ಅವರಿಗೆ ವಿಶ್ವಾಸ ಇಲ್ಲ, ಆ ತಂದೆ ತಾಯಂದಿರಿಗೆ ಅಂದ್ರೆ ಅದು ಒಪ್ಪುವ ಮಾತೆ? ನಾವು ಬದುಕಿದ ದಾರಿ ನನಗೇ ಒಪ್ಪುಗೇ ಇಲ್ಲ ಅಂದ್ರೆ ಮಕ್ಕಳನ್ನು ಹ್ಯಾಗೆ ಕಲಿಸ್ತೀವಿ.

- **ನಿಮ್ಮ ಪ್ರಕಾರ ಈಗಿನ ತಂದೆತಾಯಿಗಳು ಯಾವ ರೀತಿಯ ಶಿಕ್ಷಣವನ್ನು ನೀಡಬೇಕು ಅಂತೀರಿ, ಕೃಷಿಯನ್ನು ಉಳಿಸಲೋಸುಗ?**

ಖಂಡಿತವಾಗಿ ನೀಡಬೇಕು. ಕೃಷಿಯನ್ನು ಬೆಳೆಸೋದು, ಅದರ ಜತೆ ಭಾವನಾಸಂಬಂಧವನ್ನು ಉಳಿಸಿಕೊಳ್ಳುವುದು, ಮತ್ತು ಅದಕ್ಕೆ ಬೇಕಾದ ವೇದಾಧ್ಯಯನ ಪರಂಪರೆಯನ್ನು ಉಳಿಸಿಕೊಳ್ಳುವುದು ಖಂಡಿತಾ ಅವಶ್ಯ; ಇಲ್ಲಾಂದ್ರೆ ಹಳ್ಳಿ ಉಳಿಯೋದೇ ಇಲ್ಲ. ನಿಮ್ಮ ಈ ಮಾತು ನೂರಕ್ಕೆ ನೂರು ಸತ್ಯ. ಒಂದು ಕೃಷಿಯನ್ನು ಅವಲಂಬಿಸಿ ನಾವು ಬದುಕಬೇಕಾದರೆ, ಅದು ಎಷ್ಟಾದರೂ ಬರಲಿ ಉತ್ಪತ್ತಿ - ಉತ್ಪತ್ತಿಗೆ ತಕ್ಕ ಹಾಗೆ ಬದುಕು, ಮತ್ತು ನೆಲದ ಜತೆಗೆ ತಾಯಿಯೊಂದಿಗಿನ ಸಂಬಂಧ - ನಾವು ಪ್ರತಿನಿತ್ಯ ಹೋಗಿ ಅದರ ಜತೆ ಇರಬೇಕು. ಹೀಗೆ ವೇದಾಧ್ಯಯನ ಹಾಗೂ ಕೃಷೀನ ಉಳಿಸಿಕೊಂಡ್ರೆ ನಮ್ಮ ಸಂಕೇತಿ ಗ್ರಾಮಗಳು ತುಂಬಾ ಚೆನ್ನಾಗಿ ಆಗುತ್ತೆ. ಅದಕ್ಕೋಸ್ಕರ ಪ್ರಯತ್ನ ಹಾಕಬೇಕು ಅಂತೀನಿ.

- **ಬಾಗಾಯ್ತನ್ನು ಹೆಚ್ಚು ಸಂಕೇತಿಗಳು ನೆಚ್ಚಿಕೊಂಡ್ರು. ತಮ್ಮ ಅಧ್ಯಯನಕ್ಕೆ, ಆಚಾರ ವಿಚಾರಗಳಿಗೆ ಯಾರಿಂದಲೂ ತೊಂದರೆ ಬಾರದೆನ್ನುವ ಆಶಯವೂ ಇದ್ದಿರಬಹುದು. ಆದರೆ ಇತರೇ ಕೃಷಿಕರ ರೀತಿಯಲ್ಲಿ ವ್ಯವಸಾಯ ಮಾಡದೇ ಇದ್ದುದರಿಂದ ಸಾರ್ವಜನಿಕ ಸಂಪರ್ಕ ಕಡಿಮೆಯಾಗಿ, ಇತರರ ಕಿರುಕುಳ ಜಾಸ್ತಿಯಾಗಿರಬಹುದೇ?**

ಸ್ವಾವಲಂಬಿಗಳಾಗಬೇಕು ಅನ್ನುವುದಕ್ಕೆ ಹೆಚ್ಚು ತೋಟವನ್ನು ಬೆಳೆಸಿದ್ರು. ತೋಟ ಇದ್ರೆ ಬೇರೆ ಕೆಲಸಗಾರರ ಅವಲಂಬನೆ ಇರೋಲ್ಲ. ಜಮೀನಾದ್ರೆ ಕಾಲದಲ್ಲಿ ಕೆಲಸಗಾರರು ಕೈಕೊಡ್ತಾರೆ ಅಂತ ಇರಬಹುದು. ಆದರೆ ಇತರರ ತೊಂದರೆ ಅಂತ ನಮ್ಮ ಹಳ್ಳೀಲಿ ಆಗಿಲ್ಲ. ರಾಜಶಾಸನದಿಂದ ಸಾರ್ವಜನಿಕ ಸಂಪರ್ಕ ಭಿನ್ನವಾಯ್ತೇ ಹೊರತು ನಿಜವಾಗಿ ಹೇಳೋದಾದ್ರೆ - ಮೊದಲ ಸಂಬಂಧ ಇತ್ತಲ್ಲ - ನಮಗೂ, ನಮ್ಮ ತೋಟದಲ್ಲಿ ಕೆಲಸ ಮಾಡುವವರಿಗಾಗಲೀ ಹಾಗೇ ಹಳ್ಳಿಯ ಇತರರೊಂದಿಗಾಗಲೀ ತುಂಬಾ ಒಳ್ಳೆಯ ಸಂಬಂಧ ಇತ್ತು. ತುಂಬಾ ಆತ್ಮೀಯ ಭಾವವೂ ಇತ್ತು. ಇದುವರೆಗೆ ನಮ್ಮೂರಲ್ಲಿ ಗಲಾಟೆಯಾಗಲೀ, ವಿವಾದವಾಗಲೀ ಒಂದೂ ನಡೆದಿಲ್ಲ. ಏನೋ ಹೊಟ್ಟೆಪಾಡಿಗೆ ಸ್ವಲ್ಪ ಕಳ್ಳತನ ನಡೆದಿರಬಹುದು, ಅದನ್ನು ಪಂಚಾಯ್ತಿಯಲ್ಲಿ ಸರಿಪಡಿಸಿದ್ದೇವೆ. ಮನೆಯ ಒಬ್ಬ ಕೌಟುಂಬಿಕ ವ್ಯಕ್ತಿಯಾಗಿಯೇ ಅವರೂ ಬದುಕ್ತಾ ಇದ್ದಾರೆ. ಬಾಂಧವ್ಯ ಉತ್ತಮವಾಗಿದೆ.

- **ವೇದಶಿಕ್ಷಣ ತೋಟದಲ್ಲಿ ಆಗ್ತಿತ್ತು, ಸರಿ. ವ್ಯವಸಾಯದ ಶಿಕ್ಷಣ ಯಾವ ರೀತಿ ಆಗ್ತಿತ್ತು?**

ವ್ಯವಸಾಯದ ಶಿಕ್ಷಣ ಮಾಡುವಾಗ ಆ ನೆಲದ ಪರಿಚಯವನ್ನು ಮಾಡಿಕೊಂಡು, ತಂದೇನೇ ಹೆಚ್ಚಾಗಿ ಕೊಡ್ತಿದ್ರು. ತೋಟದಲ್ಲಿ ಈ ರೀತಿ ಮಾಡಬೇಕು ಅಂತ ಹೇಳ್ತಿದ್ರು. ಯಾವ ಕಾಲದಲ್ಲಿ ಗಿಡ ನೆಡಬೇಕು, ಯಾವ ಕಾಲದಲ್ಲಿ ಗೊಬ್ಬರ ಹಾಕಬೇಕು, ಯಾವಾಗ ಯಾವ ಮಳೆ ಬರುತ್ತೆ, ಜ್ಯೋತಿಷ್ಯ ಒಂದು ಬರ್‍ತ್ತಲ್ಲ ಅದರ ಬಲದಿಂದ ಮಳೆಯ ಪರಿಣಾಮ, ಋತು ವ್ಯತ್ಯಾಸಗಳು ಹಾಗೂ ಪರಿಣಾಮ, ಯಾವ ಕಾಲದಲ್ಲಿ ಮರಗಿಡಗಳು ಸೊರಗುತ್ತೆ, ಯಾವ ಕಾಲದಲ್ಲಿ ಚಿಗುರುತ್ತೆ, ಬೀಜ ಹಾಕೋದು ಯಾವಾಗ - ಪ್ರತಿಯೊಂದನ್ನೂ ಕಲಿಸ್ತಾ ಇದ್ರು. ಪ್ರಾಯೋಗಿಕವಾಗಿ ಮಾಡಿ ತೋರಿಸೋರು. ನಮ್ಮ ಕೈಯಲ್ಲೂ ಮಾಡಿಸೋರು. ಹೀಗಾಗಿ ನೋಡಿ ಕಲಿ, ಮಾಡಿ ಕಲಿ ಎರಡೂ ತರಹದ ಶಿಕ್ಷಣ ನಮಗೆ ಸಿಗ್ತಿತ್ತು. ಹೀಗಾಗಿ ತಂದೆ ತಾಯಿಗಳ ಮೂಲಕ ಕೃಷಿಶಿಕ್ಷಣವೇ ಹೊರತು ಗ್ರಂಥವೇನಿಲ್ಲ. ವೇದದ ಅರ್ಥವನ್ನು ಅವರು ತಿಳಿದುಕೊಂಡು ವೇದದಲ್ಲಿ ಮಳೆ, ಮನುಷ್ಯ ಹಾಗೂ ಗಿಡಮರದ ಸಂಬಂಧ ಕುರಿತಂತೆ ಮಾಹಿತಿ ಇದೆ. ಅದನ್ನು ಕೂಡ ಅರಿತು ಕೃಷಿ ಮಾಡ್ತಿದ್ರು.

- **ನಿಮ್ಮ ತಂದೆಯವರ ಕೃಷಿ ಬಗ್ಗೆ ವಿವರವಾಗಿ ಹೇಳಿ . . .**

ನನ್ನ ತಂದೆಯವರು, ನಮ್ಮಜ್ಜನಿಗೆ ಒಬ್ಬನೇ ಮಗ. 'ಮಗನನ್ನು ಓದಿಸಬೇಡಿ' ಅಂತ ಅಜ್ಜನಿಗೆ ಯಾರೋ ಹೇಳಿದ್ರಂತೆ. 'ಏನೇ ಆಗಲಿ ನಾವು ಹಳ್ಳೀಲೇ ಉಳಿಸೋದು, ಕಳಿಸೋಲ್ಲ' ಅಂದ್ರಂತೆ ಅಜ್ಜ. ಕನ್ನಡದಲ್ಲಿ ಒಂದು ಗಾದೆ ಹೇಳೋರು, 'ಉಚ್ಚೆ ಕುಡಿದ್ರೂ ಇಚ್ಛೆಯಿಂದಿರಬೇಕು' ಅಂತ. ಹಾಗಾಗಿ ತಂದೆ ಇಲ್ಲಿ ಉಳಿದ್ರು. ಪ್ರತಿನಿತ್ಯ ತೋಟಕ್ಕೆ ಹೋಗೋರು. ನಿಜವಾಗಿ ಹೇಳಬೇಕು ಅಂದ್ರೆ ಒಬ್ಬ ಮನುಷ್ಯ ತನ್ನ ಜೀವನದಲ್ಲಿ ತನ್ನ ಸ್ವಪ್ರಯತ್ನದಿಂದ ಇಷ್ಟು ಮಾಡಬಲ್ಲ ಅನ್ನುವುದನ್ನು ಅವರು ಆದರ್ಶವಾಗಿ ತೋರಿಸಿದ್ದಾರೆ. ಯಾರಿಗೂ ಆಗೋಲ್ಲ. ತಮ್ಮ ಐದು ಜನ ಮಕ್ಕಳಿಗೂ ಪೂರ್ಣವಾಗಿ ವೇದಾಧ್ಯಯನ ಮಾಡಿಸಿ, ಅಷ್ಟೂ ಜನಕ್ಕೂ ಮನೆಯನ್ನು ಕೊಟ್ಟು-ಎಲ್ಲಾ ಸ್ವಂತ ದುಡಿಮೆಯೇ-ತಾವೇ ಸ್ವತಃ ಶ್ರಮಪಟ್ಟು ತೋಟದಲ್ಲಿ ಎಲ್ಲಾ ಕೆಲಸ ಮಾಡಿ, ಅಡಿಕೆ ಕೆಡವೋದು, ಸುಲಿಯೋದು, ಆರಿಸಿ ತರೋದು, ಮನೇಲಿ ಕುದಿಸೋದು, ಹರವೋದು, ಅದನ್ನು ಶುದ್ಧಿ ಮಾಡೋದು, ಅಡಿಕೆ ವಿಭಾಗ ಮಾಡೋದು, ಎಲ್ಲವನ್ನೂ ಸ್ವಂತವಾಗಿ ಮಾಡೋರು. ಇದರ ಜತೆ ಗೋವನ್ನೂ ಕಾಪಾಡೋರು. ಅವರು ಒಂದು ಮಾತು ಹೇಳೋರು 'ನೀನು ದನ ಕಟ್ಟದಿದ್ರೆ ಬ್ರಾಹ್ಮಣನೇ ಅಲ್ಲ', ಅಂತ. ದನಗಳ ಜತೇನೇ ಇರಬೇಕು ಬ್ರಾಹ್ಮಣ. ಯಾಕೇಂದ್ರೆ ತೋಟಕ್ಕೆ ಗೊಬ್ಬರ ದನದಿಂದಲೇ ಆಗೋದು. ಮನೇಲಿ ಆತಿಥ್ಯಕ್ಕೆ, ಹಾಲು ಮೊಸರು, ಬೆಣ್ಣೆ ತುಪ್ಪ ಹಸುಗಳಿಂದಲೇ ಸಿಗೋದು; ಹಸುಗಳನ್ನು ಕೂಡ ಕೌಟುಂಬಿಕ ಸದಸ್ಯರಂತೆಯೇ ಕಾಪಾಡಬೇಕು ಅನ್ನುವುದು ಅವರ ವಿಚಾರ. ಸಂಪತ್ತು ಮುಖ್ಯವಲ್ಲ. ನಿನ್ನ ಕುಟುಂಬದಲ್ಲಿ ನೀನು ಬದುಕಬೇಕಾದರೆ ಯಾವ ರೀತಿ ಮಕ್ಕಳನ್ನು ಸಾಕುತ್ತೀಯೋ ಹಾಗೆ ಹಸುಗಳನ್ನೂ ಕಾಪಾಡಬೇಕು. 'ಗೋಷು ಚಾತ್ಮಸಮಂ ದದ್ಯಾತ್' ಅಂದ್ರೆ 'ಹಸುವಿಗೆ ನೀನೇ ಖುದ್ದು ಹಾಜರಾಗಬೇಕು. ನೀನೇ ಹೊಡೆದುಕೊಂಡು ಹೋಗಬೇಕು.' ಅಂತ ಸದಾ ಹೇಳೋರು. ಹಸುಗಳಿಗೂ ತೋಟಕ್ಕೂ ನಂಟಿದೆ. ಹಸುವು ಎಲ್ಲಿ ಎಲ್ಲಿ ಕಾಲಿಡುತ್ತೋ, ಎಲ್ಲೆಲ್ಲಿ ಓಡಾಡುತ್ತೋ ಆ ನೆಲವೆಲ್ಲ ತುಂಬಾ ಫಲವತ್ತಾಗುತ್ತೆ. ಹಸುವಿನ ಕೂದಲಿನಿಂದ ದೂರ್ವ ಇತ್ಯಾದಿ ಔಷಧಿ ಗಿಡಗಳು ಹುಟ್ಟುತ್ವೆ. ಹಸುವಿನ ಗಂಜಲ ಭೂಮಿಗೆ ಫಲವತ್ತತೆಯನ್ನು ನೀಡುತ್ತೆ. ಹಸು ಓಡಾಡಿದ್ರೆ ಆ ಜಾಗ ತುಂಬಾ ಫಲವತ್ತು ಹಾಗೂ ಶುದ್ಧಿ ಅಂತ. ಇವತ್ತೂ ಗೃಹಪ್ರವೇಶದ ಸಂದರ್ಭದಲ್ಲಿ ನಾವು ಹಸೂನ ಓಡಾಡಿಸ್ತೀವಿ. ಹಸುವಿರುವ ಜಾಗದಲ್ಲಿ ಬ್ರಾಹ್ಮಣ ಇರಬೇಕು. ನಮಗೆ ಎಷ್ಟು ಭಾವ ಇದೆ ಅಂದ್ರೆ, ಯಜ್ಞದಲ್ಲಿ ನಾವು ಅಗ್ನಿಹೋತ್ರ ಅಂತ ಏನು ಕರೀತೀವಿ, ಇದನ್ನು ಮೊದಲು ಕರೆದದ್ದು ಹಸುವಿಗೆ- "ಗೌರ್ವಾ ಅಗ್ನಿಹೋತ್ರಂ" ಅಂತ. ಅಗ್ನಿಹೋತ್ರ ಅಂದ್ರೆ ಹಸುವಿಗೆ ಹೆಸರು. ನೀನು ಬ್ರಾಹ್ಮಣನಾಗಿ ಬದುಕಬೇಕಾ, ಹಾಗಾದ್ರೆ ಹಸು ಕಟ್ಟಬೇಕು. ಹಸುವಿಗೆ 'ಘೃತಪದಿ' ಅಂತ ಹೆಸರಿದೆ. **'ಯತ್ರ ಯತ್ರ ಪದಾನ್ಯಾಕ್ರಾಮಾತಿ ತತೋ ಘೃತಂ ಅಪೀಉದ್ದದ್ಯತ ತಸ್ಮಾದ್ ಘೃತಪದ್ಯುಚ್ಯತೇ'**, ಅಂದ್ರೆ ಆ ಹಸು ಎಲ್ಲಿ ಎಲ್ಲಿ ಕಾಲಿಡುತ್ತೋ ಅಲ್ಲೆಲ್ಲಾ ಗಿಡ, ಮರ, ಹೂವು ಬೆಳೆದು ಅದು ಫಲವತ್ತಾದ ಭೂಮಿಯಾಗಿ ಒಳ್ಳೆಯ ಹುಲ್ಲು ಬೆಳೆದು, ಅದನ್ನು ಹಸುವು ತಿಂದು, ಒಳ್ಳೆಯ ತುಪ್ಪ ಸಿಗುತ್ತೆ, ಉತ್ತಮವಾದ ಆಹಾರ ಸಿಗುತ್ತೆ ಅನ್ನುವ ಸಲುವಾಗಿ ಹಸುವಿನ ಕಾಲಿಗೆ **'ಘೃತಪದೀ'** ಅಂತ ಹೆಸರಿಸಿದ್ದಾರೆ. **'ಘೃತಂಪದಂ ಯಸ್ಯಾಃ ಸಾ'**, ಅಂದ್ರೆ ಹಸು ಕಾಲಿಟ್ಟ ಕಡೆ ತುಪ್ಪ ಬರುತ್ತೆ ಅಂತ ಅನ್ವರ್ಥವಾಗಿ ಹೇಳಿರುವ ವಿಚಾರ. ತನ್ನ ಯಾವುದೇ ಸ್ವಾರ್ಥವಿಲ್ಲದೆ, ಇಡೀ ಜನಾಂಗಕ್ಕೆ ಅನುಕೂಲ ಮಾಡುವ ಯಾವ ಪ್ರಾಣಿಯೂ ಹಸುವಿನಂತೆ ಇಲ್ಲ. 'ಇಡಾ' ಅಂತ ಯಜ್ಞದಲ್ಲಿ ಬರುತ್ತೆ. ಇಡಾ ಅಂದ್ರೆ ಯಾವುದು ಅಂತ? ಇಡಾ ಅಂದ್ರೆ ಮೊದಲನೆಯ ಹೆಸರು ಹಸು ಅಂತ ಹೇಳಿದ್ರು. 'ಇಡೆ ನೀನು ಬಾ' ಅಂತ ಕರೀಬೇಕಂತೆ. ಇಡೆ ಅಂದ್ರೆ

ಭೂಮಿ ಅಂತ ಎರಡನೆಯ ಅರ್ಥವನ್ನೂ ನೀಡಿದ್ದಾರೆ. ಭೂಮಿಗೂ ತಾಯಿಗೂ ಸಂಬಂಧ ಇದೆ. ಹಸುವಿಗೂ ತಾಯಿಗೂ ಸಂಬಂಧವಿದೆ. ನಾವು ಗೋಮಾತಾ ಅಂತಾನೇ ಕರಿತೀವಿ. ಭೂಮಾತಾ ಅಂತಾನೂ ಕರೀತೀವಿ. ಗಿಡಮರಗಳು, ಹುಲ್ಲೂ ಸಹಾ 'ಇಡಾ' ಅಂತಾರೆ. ಕೊನೆಯಲ್ಲಿ ಮಳೆಯನ್ನೂ ಸಹ 'ಇಡಾ' ಅಂತಾನೇ ಕರೆಯಲಾಗಿದೆ. ಯಾಕೇಂದ್ರೆ ಮಳೆ ಜಗತ್ತಲ್ಲಿ ಎಲ್ಲರಿಗೂ ಅನುಕೂಲವಾಗುತ್ತೆ. ಹಸು, ಭೂಮಿ, ಗಿಡಮರಗಳು ಮತ್ತು ಮಳೆ ಈ ನಾಲ್ಕನ್ನೂ ಕೂಡ ನಾವು ಯಜ್ಞದ ಮೂಲಕ ಅವಲಂಬಿಸ್ತೀವಿ. ಇದಕ್ಕೆ ಕೃಷೀನೂ ಬೇಕು, ತೋಟವೂ ಬೇಕು, ಹಸುಗಳೂ ಬೇಕು, ನಮ್ಮ ವೇದ ಮಂತ್ರಗಳೂ ಬೇಕು. ಹೀಗಾಗಿ ನಮ್ಮ ಬದುಕಿನಲ್ಲಿ ಪೂರ್ಣವಾಗಿ ತೋಟದ ಜತೇನಲ್ಲಿ ಇರೋದು, ಹಸುವಿನ ಜತೇಲಿ ಇರೋದು; ವೇದಮಂತ್ರಗಳ ಅಧ್ಯಯನ, ತೋಟದಲ್ಲೇ ವಿದ್ಯಾಭ್ಯಾಸ. ಸಂಸ್ಕೃತಿಯ ಬದುಕು ಸಂಕೇತಿಗಳದ್ದು. ಯಾಕೇಂದ್ರೆ ನಮಗೆ ಉತ್ಪತ್ತಿ ಪ್ರಧಾನ ಅಲ್ಲ. ಬದುಕಲ್ಲಿ ದುಡ್ಡು, ದುಡಿಮೆಯೇ ನಮಗೆ ಪ್ರಧಾನ ಅಲ್ಲ, ಸಾಂಸ್ಕೃತಿಕ ಬದುಕು, ಭಾವನಾತ್ಮಕ ಸಂಬಂಧ ಅನ್ನುವುದು ಖಂಡಿತ ನಿಜ.

ನನ್ನ ತಂದೆಗೆ ಬಹಳ ಬಡತನವಿತ್ತು. ಆದ್ರೂ ಕೂಡ ಅವರ ಜೀವನದಲ್ಲಿ ತುಂಬಾ ಕಷ್ಟಪಟ್ಟು ಕೆಲಸ ಮಾಡ್ತಿದ್ರು. ತೋಟಕ್ಕೆ ಬೆಳಗ್ಗೆ ಹೋದ್ರೆ ಬರ್ತಿದ್ದು ಮಧ್ಯಾಹ್ನ ಊಟಕ್ಕೆ ಮಾತ್ರ. ಮತ್ತೆ ತೋಟಕ್ಕೆ ಹೋಗಿ ರಾತ್ರಿ ಕತ್ತಲಾಗುವವರೆಗೆ ಬಹಳ ಕೆಲಸ ಮಾಡೋರು. ತೋಟದಲ್ಲಿ ಕಳೆ ಕೀಳೋರು, ಸಸಿ ನೆಡೋರು, ತೆಂಗಿನ ಮರ ಹತ್ತೋರು, ಅಡಿಕೆ ಮರ ಹತ್ತಿ ಕಾಯಿ ಕೆಡವೋರು. ನಮ್ಮನ್ನು ಕರೆದುಕೊಂಡು ಹೋಗಿ ಕೆಡವಿಸೋರು. 'ಹತ್ತು, ನೀನು ಮರ ಹತ್ತಿ ಕೆಡವು' ಅಂತ ಹತ್ತಿಸೋರು. ನನಗೆ ಕಾಣುವ ಹಾಗೆ ಅವರ ೭೦ನೇ ವಯಸ್ಸಿನಲ್ಲಿ ಸಂನ್ಯಾಸ ತೊಗೋಳೋ ಮುಂಚೇನೂ ಅವರು ಮರ ಹತ್ತಿದಾರೆ. 'ನಾವು ಏನು ಊಟ ಮಾಡ್ತೀವೋ, ಅದಕ್ಕೆ ತಕ್ಕಷ್ಟು ನಾವು ಕೆಲಸ ಮಾಡಬೇಕು, ಅದನ್ನು ಹಾಗೇ ತಿನ್ನಬಾರದು' ಅನ್ನುವ ತತ್ತ್ವ ಅವರದ್ದು. 'ಹಾಗೇ ಊಟ ಮಾಡಿದ್ರೆ ನೀವು ಅನ್ನದ್ರೋಹಿ' ಅನ್ನೋರು. ಆದ್ರಿಂದ ಅವರದ್ದು ಸಂಪೂರ್ಣ ವೈಯಕ್ತಿಕ ಪರಿಶ್ರಮವೇ. ಯಾರ ಅವಲಂಬನೆಯೂ ಇಲ್ಲ. ಕೆಲಸದ ಮೇಲೆ ಅಭಿಮಾನವೂ ಇತ್ತು ಅವರಿಗೆ, ಅಚ್ಚುಕಟ್ಟಾಗಿ ಕೆಲಸ ಮಾಡಬೇಕು ಅಂತ. ಒಂದು ಉದಾಹರಣೆ ಹೇಳ್ತೀನಿ, ಅವರು ಹ್ಯಾಗೆ ಕೆಲಸ ಮಾಡಿದ್ರು ಅನ್ನೋದಕ್ಕೆ ನಮ್ಮ ಒಂದು ತೋಟದಲ್ಲಿ ಉಗನೆ ಬಳ್ಳಿ ಎಲ್ಲಾ ಕಡೇಲೂ ಹಬ್ಬಿತ್ತು ಇತ್ತು. ಅದರದ್ದು ಗೆಡ್ಡೆ ಇರುತ್ತೆ. ಆ ಗೆಡ್ಡೇನ ಕೀಳಬೇಕು. ಅದು ಪ್ರತಿ ಇಂಚಿನಲ್ಲೂ ಗೆಡ್ಡೆ ಇದೆ, ಇಡೀ ತೋಟದಲ್ಲೆಲ್ಲಾ ಇದೆ. ಒಬ್ಬ ಮನುಷ್ಯನಿಗೆ ಒಬ್ಬನೇ ಕುಳಿತು 'ನಾನು ಇದನ್ನು ಪೂರೈಸ್ತೀನಿ' ಅಂದ್ರೆ, 'ಒಂದು ಹುಲ್ಲನ್ನು ತೊಗೊಂಡು ಹೊಳೆನೀರನ್ನು ಖಾಲಿ ಮಾಡ್ತೀನಿ' ಅಂದ ಹಾಗೆ. ಆದರೂ ತಂದೆ ಮಾಡಿದ್ರು. ನಮಗೆ ಆಗೋಲ್ಲ. ಗೆಡ್ಡೇನ ಕೀಳೋದು, ಸುತ್ತಾ ಮಣ್ಣನ್ನು ಬಿಡಿಸೋದು. ಗೆಡ್ಡೇನ ಒಂದು ಹಾಳೇಲಿ ಇಟ್ಟುಕೊಳ್ಳೋದು, ದಿವಸಾ ಇಷ್ಟಿಷ್ಟು ತಂದು ರಸ್ತೇಲಿ ಹಾಕೋದು. ಒಂದೊಂದು ಕೆಲಸವನ್ನೂ ಅಚ್ಚುಕಟ್ಟಾಗಿ, ಪೂರ್ಣವಾಗಿ ಹಟ ಸಾಧನೆಯಂತೆ ಮಾಡೋರು. ಅವರು ಒಂದು ಹೇಳೋರು, 'ಇರುವೆಯಂತೆ ನಿಧಾನವಾಗಿ ಹೋದ್ರೂ ಪರವಾಗಿಲ್ಲ, ಮಾಡಬೇಕು' ಅಂತ. ಊರಿನ ಕೆಲಸದಲ್ಲೂ ಇದ್ರು. ತೋಟದಲ್ಲೂ ಭಾರೀ ಪರಿಶ್ರಮ ಪಡೋರು. ಸಾಮಾಜಿಕವಾಗಿಯೂ ಕೆಲಸ ಮಾಡೋರು. ಬರಗಾಲ ಬಂದಾಗ ಕೊಯಮತ್ತೂರಿನಿಂದ ಪಂಪ್ ತಂದು, ಮೊತ್ತಮೊದಲಿಗೆ ಅವರೇ ನಮ್ಮೂರಲ್ಲಿ ಪಂಪ್ ಇರಿಸಿ, ಇಲ್ಲಿಂದ ತೋಟದವರೆಗೆ ಬಂಡ್ ಹಾಕಿಸಿ, ನದಿಯಿಂದ ನೀರು ಹೊಡೆಸಿದ್ರು, ೧೯೫೧-೫೨ರಲ್ಲಿ. ಹೀಗೆ ಬಹಳ ಕಷ್ಟಪಟ್ಟು ತೋಟವನ್ನು ಉಳಿಸಿದ್ದಾರೆ.

- **ನಿಮ್ಮ ಬಾಲ್ಯದ ಬಗ್ಗೆ, ನಿಮ್ಮ ಕನಸುಗಳ ಬಗ್ಗೆ, ನೀವು ಯಾವ ರೀತಿ ಕೆಲಸ ಮಾಡಿದ್ರಿ ಅನ್ನುವುದರ ಬಗ್ಗೆ ಹೇಳಿ...**

ನನಗೆ ನಮ್ಮ ತಂದೆ ಜತೇಲಿದ್ದು ಅವರು ಹೇಳಿದ್ದನ್ನು ಕೇಳಬೇಕು ಅನ್ನುವ ಅಭಿಪ್ರಾಯ ಚೆನ್ನಾಗಿತ್ತು. ನಮ್ಮ ತಂದೆ ಭೀಷ್ಮನ ಕಥೆ ಹೇಳಿದ್ರು. ದೇವವ್ರತ ತಂದೆಗೋಸ್ಕರ ಎಲ್ಲಾ ತ್ಯಾಗ ಮಾಡಿದ್ನಲ್ಲಾ ಆ ಕಥೆ ಬಲವಾಗಿ ನನ್ನ ಮನಸ್ಸಿನಲ್ಲಿ ಬೇರೂರಿತ್ತು. ಹಾಗಾಗಿ ತಂದೆ ಹೇಳಿದ್ದಕ್ಕೆ ಬದಲಿಲ್ಲ; ಅಪ್ಪ ಒಂದೇ ನನ್ನ ಜೀವನದಲ್ಲಿ ಇದ್ದದ್ದು. ಹಾಗಾಗಿ ತಂದೆ ಜತೇಲಿದ್ದೆ, ಅವರೇ ಅಧ್ಯಯನ ಹೇಳಿಸಿದ್ದು, ಅವರೇ ಎಲ್ಲವನ್ನೂ ಮಾಡಿಸಿದ್ದು. ಹೇಳೋದಾದ್ರೆ ನನ್ನದು ಅಂತ ಈಗ ಏನಿದೆ ಒಟ್ಟು ಜೀವನದ ಸಂಪಾದನೆ, ಒಂದು ರೀತಿ ಅವರು ಕೊಟ್ಟಿದ್ದೆ. ನಾನು ಆಂಗ್ಲ ವಿದ್ಯಾಭ್ಯಾಸದಲ್ಲಿ ಆರನೇ ತರಗತಿಯವರೆಗೆ ಓದಿದ್ದು. ಆಮೇಲೆ ಹೊಳೆನರಸೀಪುರದಲ್ಲಿ ಒಳ್ಳೆಯ ಗುರುಗಳು ಇದ್ರು. ಶಂಕರಾಚಾರ್ಯರ ಅದ್ವೈತ ಸಂಪ್ರದಾಯದಲ್ಲಿ ಪ್ರಸ್ಥಾನತ್ರಯಭಾಷ್ಯ ಅದನ್ನು ಚೆನ್ನಾಗಿ ಪಾಠ ಹೇಳೋರು. ಅವರಿಗಾಗಲೇ ೮೮ರ ವಯಸ್ಸು. ನನಗೆ ೧೫ರ ವಯಸ್ಸು. ಅವರ ಜತೇಲಿ ಒಂದು ಐದಾರು ವರುಷ ಇದ್ದು ಅವರ ಸೇವೆ ಮಾಡಿ, ಶಂಕರಭಾಷ್ಯವನ್ನು ಓದಿದೆ. ಆಮೇಲೆ ಪರ್ಕಾಜೆಯ ಸುಬ್ರಹ್ಮಣ್ಯ ಭಟ್ಟರು ಅನ್ನುವವರನ್ನು ಮಂಗಳೂರಿನಿಂದ ಕರೆಸಿ ಮನೇಲಿಟ್ಟುಕೊಂಡು ವ್ಯಾಕರಣಪಾಠ ಕಲಿತೆ. ಸ್ವತಃ ನಮ್ಮ ತಂದೆಯವರೇ ಧರ್ಮಶಾಸ್ತ್ರ, ವೇದಾಧ್ಯಯನ ಮತ್ತು ಜ್ಯೋತಿಷ್ಯದ ಪಾಠ ಹೇಳಿದ್ರು. 'ಜ್ಞಾನವೆಲ್ಲಾ ಉಳೀಬೇಕು.

ವೃತ್ತಿಯಲ್ಲಿ ನೀನು ಯಾವ ಪಾಠ ಹೇಳಿಕೊಟ್ರೂ ಒಂದು ಪೈಸ ತೊಗೋಕೂಡದು. ಸಮಾಜಕ್ಕೆ ಜ್ಞಾನ ಉಳೀಬೇಕು. ನೀನು ಎಲ್ಲವನ್ನೂ ಉಳಿಸಿಕೋ' ಅನ್ನೋರು. 'ವೃತ್ತಿ ತೋಟ. ಅದ್ರಲ್ಲಿ ನೀನು ಏನು ಬರುತ್ತೋ ತೊಗೋ, ತೋಟಕ್ಕೆ ದಿನಾ ಹೋಗು. ಅಲ್ಲೇ ಪಾಠ ಹೇಳು.' ಹೀಗೆ ಹೇಳ್ತಾ ನಮ್ಮನ್ನು ತಂದೆ ಬೆಳಿಸಿದ್ರು. ಹಾಗಾಗಿ ನಮಗೆ ತೋಟದ ಜತೆ ಸಂಬಂಧವೂ ಇದೆ. ವೇದಾಧ್ಯಯನವೂ ಇದೆ. ನಾನು ಈಗ ಬರೀ ತೋಟಕ್ಕೆ ಹೋಗುವುದಷ್ಟೆ. ವಯಸ್ಸಿನ ದೃಷ್ಟಿಯಲ್ಲಿ ನಾನು ಪಿತಾಮಹ, ಅಂದ್ರೆ ಅಜ್ಜ. ಅಜ್ಜನಾಗಿರೋದ್ರಿಂದ ಎರಡು ಕಾರಣ ಇದೆ, ಸಾಮಾಜಿಕವಾಗಿ ನಾವು ಕೆಲಸ ಮಾಡಲು ನಿಂತ್ರೆ ಈಗಿನ ಜನಸಂಖ್ಯೆ ಇದೆಯಲ್ಲಾ ಅವರಿಗೆ ಕೆಲಸ ತಪ್ಪುತ್ತೆ. ಒಂದು ರೀತಿ ಈ ವೃತ್ಯಂತರ ನಿರೋಧ ಅಂತ ಒಂದು ಮಾಡಬೇಕು ಅಂತ ಹಿಂದಿತ್ತು, ಬಹಳ ಮುಖ್ಯವಾಗಿ ಹೇಳ್ತೀನಿ ಕೇಳಿ. ಒಬ್ಬನ ವೃತ್ತಿ ಯಾವುದಿದೆಯೋ ಅದನ್ನೇ ಅವನು ಮಾಡಬೇಕು, ಇನ್ನೊಬ್ಬನ ವೃತ್ತಿ ಮಾಡಬಾರದು. ಬುಟ್ಟಿ ಹೆಣೆಯೋನು, ಮಂಕರಿ ಹೆಣೀತಾ ಇರಲಿಲ್ಲ. ಮಂಕರಿ ಮಾಡೋನು ಮರ ಮಾಡ್ತಿರಲಿಲ್ಲ; ಒಂದೇ ಜಾತಿಯಾದ್ರೂ, ಅವರವರು ಅವರ ಕಸುಬೇ ಮಾಡಬೇಕು, ಇನ್ನೊಬ್ಬರ ಕಸುಬನ್ನು ಮಾಡಬಾರದು - ಅದು ನಮ್ಮಲ್ಲಿ ನಿಜವಾಗಿ ಬರಬೇಕು. ಯಾಕೇಂದ್ರೆ ಇನ್ನೊಬ್ಬರ ಅನ್ನವನ್ನು ನಾವು ಕಿತ್ತುಕೊಳ್ಳಬಾರದು. ಆ ರೀತಿ ಅವನ ವೃತ್ತಿಯನ್ನು ಅವನು ಮಾಡಿಕೊಂಡು ಬಂದ್ರೆ ಒಳ್ಳೆಯ ಕೆಲಸ ಇರುತ್ತೆ, ವೃತ್ತಿಯ ಜತೆ ಒಂದು ಸಾಂಸ್ಕೃತಿಕ ಸಂಬಂಧವೂ ಇರುತ್ತೆ. ಸುಮ್ಮನೆ ದುಡ್ಡು ಪ್ರಧಾನವಾದ ಬದುಕೂ ಇರೋದಿಲ್ಲ. ಆ ರೀತಿ ನಮ್ಮನ್ನು ಪೂರ್ಣವಾಗಿ ತೋಟದ ಜತೇಲಿ ಬೆಳೆಸಿದ್ರು. ನಮ್ಮ ಜೀವನದಲ್ಲಿ ಯಾವ ಕೊರತೇನೂ ಆಗಲಿಲ್ಲ. ಇವತ್ತು ನಾವು ತೋಟಕ್ಕೆ ಹೋಗಿ ಬಹಳ ಕಷ್ಟಪಟ್ರೆ ಕಳೆ ಕೀಳಬಹುದು, ಸಸಿ ನೆಡಬಹುದು, ಅಡಿಕೆ ಆರಿಸಬಹುದು ಅಷ್ಟೆ. ಪರಿಸ್ಥಿತಿ ಬಂದ್ರೆ ಎಲ್ಲಾ ಕೆಲಸ ಮಾಡೋದಕ್ಕೂ ಸಾಮರ್ಥ್ಯ ಇದೆ, ಆದ್ರೆ ಈಗ ಅದರ ಆವಶ್ಯಕತೆ ಇಲ್ಲ.

- **ನಿಮ್ಮ ಕುಟುಂಬದಲ್ಲಿ ನಿಮ್ಮ ಅಜ್ಜಿ, ತಾಯಿ ಹಾಗೂ ನಿಮ್ಮ ಹೆಂಡತಿ ಇವರ ಒಂದು ಪಾತ್ರವೇನು?**

ನನ್ನ ತಾಯಿಯ ಕಾಲದಲ್ಲಿ, ಹೆಣ್ಣುಮಕ್ಕಳು ಅಷ್ಟೂ ಜನ ತೋಟಕ್ಕೆ ಬಂದು ಅಡಿಕೆ ಆರಿಸೋರು, ಅಡಿಕೆ ಸುಲಿಯೋರು, ಮನೇಲಿ ಅಡಿಕೇನ ಕಾಪಾಡೋರು, ಹರವೋರು, ಒಳಗಿಡೋರು. ಮನೆ ಕೃಷಿಗೆ ತಕ್ಕ ಹಾಗೆ ಇತ್ತು. ಈಗಿನ ಆಧುನಿಕ ಸಲಕರಣೆಗಳು ಇರಲಿಲ್ಲ. ಕೃಷಿಗೆ ಏನು ಬೇಕೋ ಅದಕ್ಕೆ ತಕ್ಕಂತಹ ಅಚ್ಚುಕಟ್ಟು ಹೇಗಿತ್ತೂಂದ್ರೆ, ಅಡಿಕೆ ಬೇಯಿಸೋದು, ಅಡಿಕೆ ತಂದು ಹಾಕೋದಕ್ಕೆ ತಕ್ಕನಾಗಿ ಇತ್ತು. ಹಾಗೆಯೇ ನಡೆದುಕೊಂಡು ಬಂದಿದೆ. ಈಗ ಮನೆಗಳೆಲ್ಲಾ ಹಂಚಿ ಚಿಕ್ಕದಾದ್ದರಿಂದ ಅದಕ್ಕೋಸ್ಕರ ಒಂದು ಕೃಷಿ ಮನೇನೇ ಕಟ್ಕೊಂಡು ಬೇರೆ ಕಡೆ ನಾವು ಒಟ್ಟಾಗಿ ಮಾಡ್ತಾ ಇದೀವಿ. ನಮ್ಮ ತಾಯಿ, ಅವರಿಗೆ ಮೂರು ನಾಲ್ಕು ಅಕ್ಕ ತಂಗೀರಿದಾರೆ, ನನಗೆ ಒಬ್ಬಳೇ ಮಗಳು. ನಾವು ಐದು ಜನ ಅಣ್ಣತಮ್ಮಂದಿರಿಗೆ ಒಬ್ಬಳು ತಂಗಿ ಇದಾಳೆ. ಎಲ್ಲಾ ಇಲ್ಲೇ ಇದಾರೆ. ನನ್ನ ಮಗಳು ಮಾತ್ರ ಇಡೀ ಕುಟುಂಬದಲ್ಲೇ M.Sc. ಮಾಡಿ, ಹೊರಗಡೆ ಬೆಂಗಳೂರಿನಲ್ಲಿ ಸಂಸಾರ ಮಾಡ್ತಿದಾಳೆ. ನಮ್ಮ ಅಣ್ಣತಮ್ಮಂದಿರ ಎಲ್ಲಾ ಗಂಡು ಮಕ್ಕಳೂ ವೇದಾಧ್ಯಯನ ಹಾಗೂ ಕೃಷಿ ಅದರಲ್ಲೇ ಉಳಿದಿದಾರೆ. ಮುಂದಕ್ಕೆ ಹಾಗೆಯೇ ಇರಬೇಕು ಅನ್ನುವುದು ಅವರ ಅಭಿಪ್ರಾಯ.

- **ಹಿಂದೆ ಸಂಕೇತಿಗಳು ಬಹಳ ಕ್ಷಾತ್ರತೇಜದವರಾಗಿದ್ದರು, ಬಹಳ ಶಕ್ತಿವಂತರಾಗಿದ್ರು ಅಂತ ಹೇಳಲಾಗುತ್ತೆ.**

ನಮ್ಮ ತಂದೆಯವರದ್ದು ಒಂದು ಘಟನೆ ಹೇಳ್ತೀನಿ. ನಮ್ಮ ತಂದೆಯವರ ಕಾಲದಲ್ಲಿ ಮತ್ತೂರಲ್ಲಿ ಹೊರಗಡೆಯವರ ಒಂದು ಆಕ್ರಮಣ ನಡೀತು. ಆಕ್ರಮಣ ಅಂದ್ರೆ ಗೂಂಡಾಗಿರಿ. ಲಕ್ಕಪ್ಪ ಅನ್ನುವವನು ಒಬ್ಬ ಅವನ ಜಮೀನು ವಿವಾದದಲ್ಲಿ ಶಿವಮೊಗ್ಗದಿಂದ ೨೫ ಜನ ಗೂಂಡಾಗಳನ್ನು ಕರೆಸಿ, ಊರನ್ನು ಕೊಳ್ಳೆ ಹೊಡೆಸ್ತೀನಿ ಅಂತ ಕಳಿಸಿದ್ದ. ಆಗ ತಂದೆಯವರು ೧೧ ಘಂಟೆಗೆ ಮನೆಗೆ ಬಂದ್ರು. ಅವರದು ಒಂದು ಊಟ, ಮಧ್ಯಾಹ್ನ ಅಷ್ಟೆ. ಪುನಃ ಮತ್ತೆ ರಾತ್ರಿಗೆ ಅಷ್ಟೆ. ತೋಟದಿಂದ ಮನೆಗೆ ಬಂದಿದಾರೆ, ಅವರಿಗೆ ಸುದ್ದಿ ತಿಳೀತು. ಮನೇಲಿ ಹೇಳಿ ಹೋದರು. 'ವಾಪಸ್ಸು ಬರ್ತೀನೋ ಇಲ್ವೋ ಗೊತ್ತಿಲ್ಲ, ಕೋಲನ್ನು ತೊಗೊಂಡು ಹೊರಟಿದೀನಿ. ಬಂದ್ರೆ ಸರಿ, ಇಲ್ಲಾಂದ್ರೆ ಇಲ್ಲ, ಅದನ್ನು ನೆನಪು ಇಟ್ಟುಕೊಳ್ಳಿ' ಅಂತ ಹೇಳಿ ಹೊರಟುಹೋದ್ರು. ೨೫ ಜನರನ್ನು ಒಬ್ಬರೇ ಹೊಡೆದಿದಾರೆ, ಅಷ್ಟು ಜನ ಏಟುಬಿದ್ದು ಬಿದ್ರು. ಅವರು ಏಟು ಹೊಡೆದದ್ದು ನೋಡಿ ಅಷ್ಟು ಜನ ಬಿದ್ರಲ್ಲಾ, ಅದೇನು ಹೊಡೀತಾ ಇದ್ರು ಅಂದ್ರೆ ಒಂಥರಾ ರುದ್ರಾವೇಶ ಅಂತಾರಲ್ಲ, ಆ ಪ್ರಳಯಕಾಲದ ರುದ್ರನ ಸಿಟ್ಟು ಬಂದಿತ್ತು. ನನಗೆ ವಾಪಸ್ಸು ಬರುವ ಇಚ್ಛೆಯಿಲ್ಲ. ಊರನ್ನೇ ಕೊಳ್ಳೆಹೊಡೀತಾರೆ ಅಂದ್ರೆ ಇನ್ನು ನಾನು ಯಾತಕ್ಕೆ ಇರಬೇಕು? ಊರನ್ನು ಉಳಿಸಬೇಕು ಅಂತ ನುಗ್ಗಿದ್ರು.

- **ಆ ಕ್ಷಾತ್ರತೇಜ ಇವತ್ತಿನ ಪೀಳಿಗೆಯಲ್ಲಿ ಕ್ಷೀಣಿಸಲು ಏನು ಕಾರಣ?**

ಕಾರಣ ಹೇಳೋದಾದ್ರೆ ತೋಟದ ಜತೆ ಇಂದು ಸಂಬಂಧ ಇಲ್ಲ. ನಿಜವಾದಂತಹ ಸಾಮಾಜಿಕವಾದ ಶಕ್ತಿ ಇದೆಯಲ್ಲಾ ಅದು ಹೋಗಿದೆ. ನಾನು ಒಂದೇ ದೋಷ ಹೇಳೋದಾದ್ರೆ ಮನುಷ್ಯನಲ್ಲಿ, ಈ ಹೊರಗಿನ ವೈಜ್ಞಾನಿಕ ಭೋಗಾಸಕ್ತಿ ಇದೆಯಲ್ಲಾ - ತುಂಬಾ ಟಿ.ವಿ. ನೋಡೋದು, ಹೊರಗಡೆ ಸಿಟಿಗೆ ಹೋಗೋದು - ಈ ಎಲ್ಲಾ ಭೋಗದ ಆಸಕ್ತಿಯೇ ಕ್ಷಾತ್ರದ ಬಲವನ್ನು ಕಡಿಮೆ ಮಾಡುತ್ತೆ. ಅವನಿಗೆ ಒಂದು ಧೃತಿ ಇರೋದಿಲ್ಲ. ಹೌದು, ನಾನು ಅನ್ಯಾಯಾನ ಪ್ರತಿಭಟನೆ ಮಾಡಬೇಕು ಅನ್ನುವ ಧೈರ್ಯ ಬರೋದೇ ಅವನು ನ್ಯಾಯಬದ್ಧವಾಗಿ ನಡೆದುಕೊಳ್ಳುವಾಗ. ತಾನೇ ನ್ಯಾಯದಲ್ಲಿಲ್ಲ, ತಾನೇ ಹೆದರುವ ಪುಕ್ಕಲ ಅನ್ನೋದಾದ್ರೆ ಎಂತಹ ಶಕ್ತಿ ಬರುತ್ತೆ? ಶಂಕರರೂ ಹೇಳ್ತಾರೆ, 'ಕಾಮೋದ್ಭೋದಾ' ಅಂತ. ಕಾಮ ಹೆಚ್ಚಾದ್ರೆ, ಭೋಗಾಸಕ್ತಿ ಹೆಚ್ಚಾದ್ರೆ ಸಮಸ್ತ ಶಕ್ತಿಯೂ ಉಡುಗಿ ಹೋಗುತ್ತೆ. ಬ್ರಹ್ಮಶಕ್ತಿಯೂ ಹೋಗುತ್ತೆ, ಕ್ಷಾತ್ರಶಕ್ತಿಯೂ ಹೋಗುತ್ತೆ, ಎಲ್ಲಾ ಶಕ್ತಿಯೂ ಹೊರಟು ಹೋಗುತ್ತೆ.

- **ವೇದದಲ್ಲಿ ಕೃಷಿಯ ಬಗ್ಗೆ ಇರುವ ಉಲ್ಲೇಖಗಳೇನು?**

ಈ ಜಗತ್ತು ಅಗ್ನಿ ಮತ್ತು ಸೋಮರ ಸಂಬಂಧದಿಂದ ಸೃಷ್ಟಿಯಾಗುತ್ತೆ. ಉಷ್ಣಶರೀರಿಯಾದ ಅಗ್ನಿಯು, ತಂಪು ಅಂದ್ರೆ ನೀರು ಹಾಗೂ ರಸಶರೀರಿಯಾದ ಸೋಮನನ್ನು ಹೀರಿಕೊಂಡ ಮೇಲೆ ಅಲ್ಲಿ ಸೃಷ್ಟಿ, ಉತ್ಪತ್ತಿ ಉಂಟಾಗುತ್ತೆ ಅನ್ನುವುದು ವೈದಿಕ ದರ್ಶನ. ಈ ಜಗತ್ತು ಅಗ್ನೀಷೋಮಾತ್ಮಕವಾಗಿದೆ ಎಂಬುದು. ಅಗ್ನಿಯು ಈ ಜಗತ್ತಿನಲ್ಲಿರುವ ವನಸ್ಪತಿಗಳಿಂದ ಆಯುಷ್ಮಂತನಾಗಿದ್ದಾನೆ. **"ಅಗ್ನಿರಾಯುಷ್ಮಾನ್ ಸವನಸ್ಪತಿಭಿರಾಯುಷ್ಮಾನ್ ತೇನ ತ್ವಾಯುಷಾಯುಷ್ಮಂತಂ ಕರೋಮಿ"** ಅಂದ್ರೆ ಅಗ್ನಿ ಯಾರು ಈ ಭೂಲೋಕದಲ್ಲಿ ಸಿಗ್ತಾನೋ ಅವನು. ಸೂರ್ಯಕಿರಣಗಳಿಂದ ಬಂದಂಥ ಆ ಅಗ್ನಿಯನ್ನು, ಶಾಖೆ ಕೊಂಬೆಗಳಿರುವ ವನಸ್ಪತಿಗಳಿಂದ ನಾವು ಪಡೀತೀವಿ. ಆದ್ದರಿಂದ ಒಂದು ರೀತಿ ವನಸ್ಪತಿಗಳನ್ನು ಸಂಗ್ರಹ ಮಾಡುವುದು ಅಗ್ನಿಯನ್ನೇ ಸಂಗ್ರಹ ಮಾಡಿದ ಹಾಗೆ. ಅದು ಅಗ್ನಿರೂಪವಾದ ಶಕ್ತಿ. ಯಾವುದು ಈ ಲೋಕದಲ್ಲಿ ವನಸ್ಪತಿಯಾಗಿ ಬರುತ್ತೋ ಅದೆಲ್ಲವೂ ಸೂರ್ಯರಶ್ಮಿಯನ್ನು ಹೀರಿಕೊಂಡು ಅಗ್ನಿಯನ್ನು ತನ್ನ ಗರ್ಭದಲ್ಲಿಟ್ಟುಕೊಂಡು, ಫಲವನ್ನು ಕೊಡುತ್ತಾ ನಮಗೆ ನೆರಳನ್ನು ಕೊಡುತ್ತಾ ಲೋಕೋಪಕಾರ ಮಾಡ್ತಾ ಇದೆ. ಆದ್ದರಿಂದ ಅಗ್ನಿಯು ವನಸ್ಪತಿಗಳಿಂದ ಆಯಷ್ಮಂತನಾಗಿದಾನೆ. ಅದೇ ರೀತಿ ಯಜಮಾನನೂ ಕೂಡ, ವನಸ್ಪತಿಗಳಿಂದ ಆಯುಷ್ಮಂತನಾಗಲಿ, ಮರಗಿಡಗಳಿಂದ ಆಯುಷ್ಯ ಬೆಳೀಲಿ ಅನ್ನುವ ಅಭಿಪ್ರಾಯ ಇದೆ.

ಹಾಗೆಯೇ ಸೋಮ ಔಷಧಿಗಳಿಗೆ. ಅಂದ್ರೆ ಯಾವುದು ಕಾಯಿ ಹಣ್ಣು ಬಿಟ್ಟ ಕೂಡಲೇ ಅದರ ಆಯುಷ್ಯವನ್ನು ಕಳೆದುಕೊಳ್ಳುತ್ತೋ- ಉದಾಹರಣೆಗೆ ಭತ್ತ, ರಾಗಿ, ಜೋಳ ಇವು - ತೆನೆ ಬಂದು ಫಲವಾದ ಕೂಡಲೆ ಆ ಗಿಡಗಳ ಆಯುಷ್ಯ ಅಲ್ಲಿಗೇ ಆಯ್ತು. **'ಓಷಧ್ಯಃ ಫಲಪಾಕಾಂತಾಃ'** ಅಂತ ಅಮರಕಾರ ಕೂಡ ಔಷಧಿ ಎಂಬ ಶಬ್ದಕ್ಕೆ ಹಣ್ಣು ಬಿಟ್ಟ ಕೂಡಲೇ ತನ್ನ ಜೀವಿತವನ್ನು ಕೊನೆಗೊಳಿಸುವ ಸಸ್ಯಗಳು ಅಂದಿದಾನೆ. **"ಸೋಮ ಆಯುಷ್ಮಾನ್‌ಸ ಔಷಧೀಭಿರಾಯುಷ್ಮಾನ್ ತೇನ ತ್ವಾಯುಷಾಯುಷ್ಮಂತಂ ಕರೋಮಿ"**, ಸೋಮನು ಔಷಧಿಗಳಿಂದ ಆಯುಷ್ಮಂತ. ಅಂದ್ರೆ ಭೂಮಿಯಲ್ಲಿರುವ ನೀರಿನ ರಸವನ್ನು ಹೀರಿಕೊಂಡು ಔಷಧಿಗಳು ಬೆಳೆಯುತ್ವೆ. ಅದ್ರಿಂದ ಸೋಮ ಪುಷ್ಟಿಯಾಗುತ್ತೆ. **"ಸೋಮೋ ಭೂತ್ವಾ ರಸಾತ್ಮಕಃ"** ಅಂದ್ರೆ ರಸರೂಪನಾದ ಸೋಮ ನಮಗೆ ಔಷಧಿಗಳಿಂದಲೇ ಸಿಗ್ತಾನೆ. ಹೀಗೆ ಅನ್ನ, ರಾಗಿ, ಜೋಳ ಧಾನ್ಯಗಳಿಂದಲೂ, ಸಸ್ಯಗಳಿಂದಲೂ ಸೋಮನನ್ನು ಪಡೆದು, ವನಸ್ಪತಿಗಳಿಂದ ಅಗ್ನಿಯನ್ನು ಪಡೆದು, ಅಗ್ನೀಷೋಮರಿಂದ ನಾವು ಶಕ್ತಿಯನ್ನು ಸಂಪಾದನೆ ಮಾಡ್ತೀವಿ. ಈ ಅಗ್ನೀಷೋಮರ ಸಂಬಂಧದಿಂದಲೇ ಬಲಾಭಿಮಾನಿಯಾದ ಶಕ್ತಿದೇವತೆ ಇಂದ್ರ ತೋರಿಕೊಳ್ಳುತ್ತಾನೆ. ಅದನ್ನೇ ಮನುಷ್ಯನ ಸಾಮರ್ಥ್ಯ, ಬಲ ಅಂತ ಕರಿಯಲಾಗುತ್ತೆ. ಹೀಗೆ ವೇದದಲ್ಲಿ ಕೃಷಿವಿಜ್ಞಾನಕ್ಕೆ ಒಂದು ಮೂಲವಾದ ಸಿದ್ಧಾಂತವನ್ನು ಇಟ್ಟುಕೊಂಡು ಆರಂಭದಲ್ಲಿ ಕೆಲವು ವಿಶೇಷವಾಗಿ - ಭೂದೇವತೆ ಫಲವತ್ತಾಗುವುದು ಹೇಗೆ, ಋತುಗಳ ಸ್ವಭಾವವನ್ನು ತಿಳಿಯುವುದು ಹೇಗೆ, ಗಿಡಮರಗಳ ಸ್ವಭಾವವೇನು ಎಂಬುದನ್ನು - ಅಲ್ಲಲ್ಲಿಯೇ ಉಲ್ಲೇಖಿಸಲಾಗಿದೆ. ಪ್ರಕರಣ ಯಜ್ಞಪ್ರಧಾನವಾದರೂ, ಯಜ್ಞದಲ್ಲಿ ಗೋವೂ ಬೇಕು, ಗಿಡಮರಗಳೂ ಬೇಕು, ವೃಕ್ಷಗಳೂ ಬೇಕು. ಆದ್ದರಿಂದ ಅವುಗಳನ್ನು ವಿವರಣೆ ಮಾಡುವಾಗ, ಗಿಡಮರಗಳ ಸ್ವಭಾವವನ್ನು ಸಹ ವಿವರಿಸಲಾಗಿದೆ. ಒಂದು ಕಡೆ ಹೇಳಲಾಗಿದೆ, ಈ ಮುತ್ತುಗದ ಮರ ಸೋಮರಸದಿಂದ ಹುಟ್ಟಿದ್ದು, ಈ ಸೋಮರಸವನ್ನು ಗಾಯತ್ರೀ ಭೂಲೋಕಕ್ಕೆ ತರುವಾಗ, ಸೋಮರಸ ಪೂರ್ಣವಾಗಿ ಕೆಳಗೆ ಬಿತ್ತು. ಅದು ಮುತ್ತುಗದ ಮರವಾಯ್ತು. ಗಾಯತ್ರಿಯಲ್ಲಿ ಮೂರು ಪಾದವಿರುವಂತೆ, ಮುತ್ತುಗಕ್ಕೂ ಮೂರು ಎಲೆಯಿದೆ, ಅದೇ ಚಿಹ್ನೆ ಅಂತ

ಅವರು ಹೇಳೋದು. ಹೀಗೆ ಪ್ರತಿಯೊಂದು ಗಿಡವನ್ನೂ ಸಹ ದೇವತಾದೃಷ್ಟಿಯಿಂದಲೇ ನೋಡುತ್ತಾ 'ಅದು ನಮಗೆ ಬಹಳ ಉಪಕಾರ ಮಾಡಿದೆ, ನಮ್ಮನ್ನು ರಕ್ಷಣೆ ಮಾಡಿದೆ' ಅನ್ನುವ ದೃಷ್ಟಿಯಿಂದ ಕರೆಯಲಾಗಿದೆ.

'ಅರುಣಪ್ರಶ್ನ' ಅಂತ ನಮ್ಮಲ್ಲಿ ಆರಣ್ಯಕದ ಭಾಗದ ಮೊದಲನೆಯ ಪ್ರಶ್ನೆ. **"ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ"** ಅಂತ ಆರಂಭವಾಗುತ್ತೆ. ಅದರಲ್ಲಿ ನೀರು ಮತ್ತು ಔಷಧಿಗಳ ವಿಶೇಷವಾದ ಸ್ವರೂಪವನ್ನು ಹೇಳಿ ನಡುವೆ ಋತುಗಳ ಸ್ವಭಾವವನ್ನು ಹೇಳಲಾಗಿದೆ. ಋತುಗಳ ಸ್ವಭಾವವನ್ನು ಹೇಳ್ತಾ, ವಸಂತಋತುವಿನಲ್ಲಿ ಅನ್ನದಾನವನ್ನು ಮಾಡಬೇಕು, **'ಅಮೂನಾದಯತೇತ್ಯನ್ನಾನ್ ಅಮೂಗ್‌ಗ್‌ಶ್ಚ ಪರಿರಕ್ಷತಃ'** ಅಂತ ಹೇಳಿ ಅನ್ನದಾನದಿಂದ ಜನರನ್ನು ಸಂತೋಷಪಡಿಸಿ ಅಂತ ಹೇಳಲಾಗಿದೆ. ಯಾಕೇಂದ್ರೆ ಅನ್ನವನ್ನು ಸಂಗ್ರಹ ಮಾಡಿದವರು ವಸಂತ ಋತುವಿನಲ್ಲಿ ಅದನ್ನು ದಾನ ಮಾಡಬೇಕು ಅಂತ ವಿಶೇಷವಾಗಿ ಉಲ್ಲೇಖಿಸಲಾಗಿದೆ. ವರ್ಷಋತುವಿಗೆ, ವರ್ಷಾಃ ಎಂಬ ಹೆಸರು ಬಂದದ್ದೇ, ವರುಷ ಎಂಬುದು ಹ್ಯಾಗೆ ಸಂವತ್ಸರದ ಹೆಸರೋ, ಆ ವರ್ಷಋತುವಿನಲ್ಲಿ ಯಾರು ತನ್ನ ಕೆಲಸವನ್ನು ಮಾಡದೆ, ಮಳೆ ಬಂದಾಗ ಯಾರು ಸಸ್ಯವನ್ನು ಬೆಳೆಯದೆ ಸೋಮಾರಿಯಾಗಿ ಉಳೀತಾನೋ ಅವನು **"ಯಾ ವೈ ಪ್ರಜಾಭಿರ್ಗೃಹ್ಯಂತೇ", ಸವಂತ್ಸರಾತಾಭಿರ್ಗೃಹ್ಯಂತೇ ಯಾ ಪ್ರತಿತಿಷ್ಠಂತಿ ಸಂವತ್ಸರೇ ತಾ ಪ್ರತಿತಿಷ್ಠಂತಿ, ವರ್ಷಾಭ್ಯ ಇತ್ಯರ್ಥಃ"** ಅಂದ್ರೆ ವರ್ಷಋತುವನ್ನು ಸದುಪಯೋಗ ಮಾಡಿಕೊಳ್ಳದೇ ಹೋದರೆ ಇಡೀ ಸಂವತ್ಸರ ಅನ್ನವಿಲ್ಲದೆ ನಿರ್ಗತಿಯಾಗ್ತಾನೆ. ವರುಷ ಋತುವಿನಲ್ಲಿ ಮಳೆ ಅನುಸರಿಸಿ ನಾವು ಕೃಷಿ ಮಾಡಬೇಕು. ಬಂದ ಮಳೆಯನ್ನು ಸದುಪಯೋಗ ಮಾಡಿಕೊಳ್ಳಬೇಕು, ಅಂತ. ವರ್ಷ ಋತುವಿನ ಆರಂಭಸೂಚನೆಯನ್ನು ಹೇಳ್ತಾ, ಈ ಋತುವಿನಲ್ಲಿ ಗಾಳಿ ಹ್ಯಾಗೆ ಬೀಸುತ್ತೆ, ಸೂರ್ಯಕಿರಣಗಳು ಯಾವ ರೀತಿ ಗಾಳಿಯನ್ನು ತಂದುಕೊಡುತ್ತೆ, ಮೋಡಗಳು ಯಾವ ರೀತಿ ಮಳೆ ಸುರಿಸುತ್ತೆ ಈ ವಿಷಯವನ್ನೆಲ್ಲಾ ವಿವರಿಸಲಾಗಿದೆ. **'ಅಗ್ನಿರ್ವಾ ಇತೋ ವೃಷ್ಟಿಮುದೀರಯತಿ ಮರುತಸ್ತಾನ್ನಯಂತಿ ಯದಾ ಖಲು ವಾ ಅಸಾವಾದಿತ್ಯೋ ನ್ಸಂಗ್ರಷ್ಮಿ ವಿಪರ್ಯಾವರ್ತತೇ ಅಥ ವರ್ಷತಿ"** ಅಂತ ಹೇಳಿ ಮಳೆಯ ಲಕ್ಷಣವನ್ನು ಹೇಳುತ್ತೆ. ಮೊದಲು ಉಷ್ಣದಿಂದ ಅಗ್ನಿಯು ಗಾಳಿಯನ್ನು ಎಳೀತಾನೆ, ಗಾಳಿ ತಾನು ಬರುವಾಗ ಮೋಡಗಳನ್ನು ತರುತ್ತೆ, ಆ ಮೋಡಗಳ ರಾಶಿಯಲ್ಲಿ ಸೂರ್ಯರಶ್ಮಿಯ ಸಂಚಾರದಿಂದ ನಮಗೆ ಮಳೆ ದೊರೆಯುತ್ತೆ. ಅಂದ್ರೆ ಇಲ್ಲಿ ಅಗ್ನಿ, ವಾಯು ಮತ್ತು ಸೂರ್ಯ ಈ ಮೂರೂ ಜನ ಸೇರಿ ನಮಗೆ ಮಳೆಯನ್ನು ಕೊಡ್ತಾರೆ. ಈ ವರ್ಷಋತುವಿನ ಲಕ್ಷಣವನ್ನು ಹೇಳುವಾಗ ಗಿಡಮರಗಳಿಗೂ ಕೆಲವು ಲಕ್ಷಣಗಳನ್ನು ಹೇಳಲಾಗಿದೆ. ವೇದದಲ್ಲಿ ಒಂದು ಕಥೆಯ ಉಲ್ಲೇಖವಿದೆ. ವೃತ್ರಾಸುರ ಅಗ್ನೀಷೋಮಾತ್ಮಕವಾಗಿ ಬೆಳೆದಾಗ ಇಂದ್ರ ವೃತ್ರಾಸುರನನ್ನು ಸಂಹಾರ ಮಾಡಲು ಹೋದ. ಆಗ ವೃತ್ರಾಸುರನಲ್ಲಿದ್ದ ಅಗ್ನೀಷೋಮರು ಹೇಳಿದ್ರು 'ಹೊಡೀಬೇಡ ನೀನು. ಹೊಡೆದ್ರೆ ಜಗತ್ತೆಲ್ಲಾ ಒಣಗಿ ಹೋಗುತ್ತೆ' ಅಂದರಂತೆ. ಆಗ ವೃತ್ರನಿಂದ ಅಗ್ನೀಷೋಮರನ್ನು ಹೊರಕ್ಕೆ ಕರೆದರಂತೆ. ಭೂಮಿಯ ಮೇಲೆ ಅಗ್ನಿಸೋಮರು ಬಿದ್ರು. ಬಿದ್ದಾಗ ಅದನ್ನು ಔಷಧಿಗಳು ಹೀರಿಕೊಂಡ್ವು. ಆಗ ದೇವತೆಗಳು ಕೇಳಿದ್ರು, ಈಗ 'ಅಗ್ನಿ ಸೋಮರು ಹುಲ್ಲಿನಲ್ಲಿ ಸೇರಿದ್ದಾರೆ, ಅಗ್ನಿಸೋಮವಿಲ್ಲದೆ ಯಜ್ಞ ನಡೆಯೋಲ್ಲ, ಅವರು ಬೇಕು' ಅಂದಾಗ, 'ಯಾರು ಎಲ್ಲರಿಗೂ ಮಿತ್ರನಾಗಬಲ್ಲನೋ ಅವನು ಅಗ್ನಿಸೋಮರನ್ನು ತರುತ್ತಾನೆ' ಎಂದು ತೀರ್ಮಾನಿಸಲಾಯ್ತಂತೆ. ಅದಕ್ಕೆ ಹಸುವು ಸಕಲಕ್ಕೂ ಮಿತ್ರವಾದ್ದರಿಂದ **'ಗಾರ್‍ವಾವಸರ್ವಸ್ವಮಿತ್ರಮಿತಿ ಸಾಬ್ರವೀತ್'** ಆಗ ಗೋವು ಹೇಳುತ್ತಂತೆ, 'ನಾನು ಅಗ್ನಿ ಸೋಮರನ್ನು ತರ್ತೀನಿ, ಆದರೆ ನನ್ನಲ್ಲಿ ಅವರು ಯಾವಾಗಲೂ ಇರಬೇಕು; ಅಗ್ನಿಯು ತುಪ್ಪದ ರೂಪದಲ್ಲೂ, ಸೋಮನು ಹಾಲಿನ ರೂಪದಲ್ಲೂ ಇರುವ ಹಾಗೆ ನನಗೆ ವರಕೊಟ್ರೆ ನಾನು ನಿಮಗೆ ತಂದು ಕೊಡ್ತೀನಿ' ಅಂತ ಪ್ರತಿಜ್ಞೆ ಮಾಡಿ, ಹುಲ್ಲಿನಿಂದ ಅಗ್ನಿಸೋಮರನ್ನು ತಂದು ಕೊಡ್ತು. ಆದರೆ ಹುಲ್ಲಿನಿಂದ ತರುವಾಗ ಹುಲ್ಲಿಗೆ ಹಿಂಸೆ ಆಗದಿರಲೆಂದು, ತನ್ನ ರೋಮದಿಂದ ಹುಲ್ಲು ಬೆಳೆಯುವ ಹಾಗೆ, ತಾನು ಕಾಲಿಟ್ಟ ಜಾಗದಲ್ಲಿ ಸಸ್ಯಗಳು ಬೆಳೆಯುವ ಹಾಗೆ, ಗಂಜಲ ಹಾಗೂ ಸಗಣಿ ಪ್ರತಿಯೊಂದೂ ಸಸ್ಯಗಳಿಗೇ ಉಪಯೋಗ ಆಗುವ ಹಾಗೆ, ತೃಣಗಳಿಗೆ ವರವನ್ನು ಕೊಟ್ಟು ಅಗ್ನಿ ಸೋಮರನ್ನು ತಂದುಕೊಟ್ಟಿತು ಅಂತ ವೇದದ ಯಜ್ಞಪ್ರಕರಣದಲ್ಲಿ ಉಲ್ಲೇಖಿಸಲಾಗಿದೆ. ಔಷಧಿ, ವನಸ್ಪತಿಗಳ ಕಥೆಯನ್ನು ಹೇಳುವುದಾದ್ರೆ ಬಹಳ ಹಿಂದೆ **'ತ್ರಿಯುಗಂ ಪುರ, ಯಾ ಜಾತಾಔಷಧಯೋ ದೇವೇಭ್ಯಸ್ತ್ರಿಯುಗಂ ಪುರಾ'** ಅಂತ ದೊಡ್ಡ ಅನುವಾಕದಲ್ಲಿ ಕಥೆ ತಿಳಿಸಲಾಗಿದೆ. ಅದು ಯಾವುದಕ್ಕೋಸ್ಕರ ಸೃಷ್ಟಿಯಾಯ್ತು, ಯಾವ್ಯಾವ ಕಾರಣಗಳಿಂದ ಈ ಮನುಷ್ಯಲೋಕಕ್ಕೆ ಬಂತು ಅನ್ನೋದನ್ನು ದೇವತೆಗಳು ಬಹಳ ಹಿಂದೆಯೇ ವಿಚಾರ ಮಾಡಿದ್ರು. ಅದ್ರಲ್ಲಿ ಮುಖ್ಯ ಕಾರಣವೇನು ಅಂದ್ರೆ ಮನುಷ್ಯ ತನ್ನ ಹಸಿವಿನಿಂದ ಶಕ್ತಿಯನ್ನು ಕುಂಠಿತಗೊಳಿಸುತ್ತಾನೆ. ಅದ್ರಿಂದ ಅವನು ಬಲಹೀನನಾಗುತ್ತಾನೆ. ಅದನ್ನು ನಾವು ಕೊನೆಗಾಣಿಸಬೇಕು ಅಂತ ಔಷಧಿಗಳು ಬಂದ್ವು. ಅವುಗಳ ಸ್ವಭಾವ ಸ್ವರೂಪವನ್ನು ಅನುವಾಕದಲ್ಲಿ ವಿಸ್ತಾರವಾಗಿ ಹೇಳಿದಾರೆ. ಕೆಲವು

ಇಂಥ ಖಾಯಿಲೆಗಳನ್ನು ವಾಸಿ ಮಾಡುತ್ತೆ, ಕೆಲವುದರಿಂದ ಉಬ್ಬಸಹೋಗುತ್ತೆ, ಕೆಲವುದರಿಂದ ಯಕ್ಷ್ಮರೋಗ ಹೋಗುತ್ತೆ, ಕೆಲವು ಸಸ್ಯದಿಂದ ಚರ್ಮರೋಗ ನಾಶವಾಗುತ್ತೆ. ಔಷಧಿಗಳು ದೇಹಕ್ಕೆ ಪುಷ್ಟಿ ಕೊಡುವುದಲ್ಲದೆ, ಸಮಸ್ತ ರೋಗಗಳನ್ನು ಓಡಿಸುವಂತಹ ಸಾಮರ್ಥ್ಯವನ್ನು ತಂದುಕೊಂಡು, "**ನಾಕಂ ವಾತಸ್ಯದ್ಧಾಜ್ಯ ನಾಕನ್ನಷ್ಯನಿಹಾಕಯಾಃ**, ಅಂತ ಹೇಳಿ ನಿಹಾಕ ಅಂತ ರೋಗ, ವಾತರೋಗ ಹೀಗೆ ಸಮಸ್ತ ರೋಗಗಳಿಗೂ ಔಷಧಿಗಳಿಂದ ಶಕ್ತಿಯನ್ನು ಪಡೆದುಕೊಳ್ಳಬಹುದು. ಆದರೆ ಔಷಧಿಗಳು ನಾನಾ ರೂಪದಲ್ಲಿ ಇದೆಯಲ್ಲಾ ಏನು ವಿಶೇಷ ಅಂತ ಕೇಳಿದ್ರೆ ಅವರು ಹೇಳ್ತಾರೆ, '**ತಸ್ಮಾತ್ ಸಂವತ್ಸರಸ್ಯ ದ್ವಿಸಂವತ್ಸರಸ್ಯ ಸಸ್ಯಂ ಪಚ್ಯತೇ**' ಅಂತ ಉಲ್ಲೇಖವಿದೆ. ಔಷಧಿಗಳು ಮನುಷ್ಯರ ಅಪೇಕ್ಷೆ ನೋಡಿ ಸಂವತ್ಸರಕ್ಕೆ ಎರಡು ಸಲ ನಾವು ಫಲವನ್ನು ಕೊಡ್ತೀವಿ ಅಂದವಂತೆ. ಅಂದ್ರೆ ಎರಡು ಬೆಳೆ ಪಡೆಯಬಹುದು ಅನ್ನುವ ವಿಚಾರ ಇದೆ. ಇದು ಕೃಷಿಗೂ ಅನ್ವಯಿಸುತ್ತೆ, ಒಂದು ಬೇಸಗೆ ಬೆಳೆ, ಮತ್ತೊಂದು ಮಳೆಗಾಲದ ಬೆಳೆ. ಇನ್ನೊಂದು ವಿಶೇಷ ಅಂದ್ರೆ ಕೆಲವು ವನಸ್ಪತಿಗಳು, ಅರಳೀಮರ ಇತ್ಯಾದಿಗಳು ಎರಡು ಸಲ ಕಾಯಿ ಬಿಡುತ್ವೆ. ಎಂಥ ಅದ್ಭುತವಾದ ವಿಜ್ಞಾನ ಇದೆ ವೇದದಲ್ಲಿ ಅಂದ್ರೆ ಆ ಮರಗಳ ಸ್ವಭಾವ, ಅವುಗಳ ಒಳಗಿನ ರಚನೆ, ಅವುಗಳು ಪಕ್ವವಾಗುವ ಕಾಲ ಎಲ್ಲವನ್ನೂ ತಿಳಿಸಲಾಗಿದೆ. ಈಗ ಅತ್ತಿಮರದಲ್ಲಿ 'ಊರ್ಗ್ವಾ ಅನ್ನಮುದುಂಬರಹಾಃ' ಅಂತ ಅತ್ಯಂತ ಬಲಯುಕ್ತವಾದ ಅನ್ನ ಅಂದ್ರೆ ತಿನ್ನುವ ಶಕ್ತಿ ಔದುಂಬರ ವೃಕ್ಷದ ಹಣ್ಣಿಗಿದೆ ಅಂತ ಅರ್ಥ. ನಾವು ಈಗ ಹೇಳ್ತೀವಿ ಅತ್ತಿಮರದ ಹಣ್ಣಲ್ಲಿ ಏನೂ ಇಲ್ಲ ಅಂತ. ವೇದ ಹಾಗೆ ಹೇಳೋಲ್ಲ. ಬಹಳ ಬಲಿಷ್ಠವಾದ ಆಹಾರ ಅದು, ಅದನ್ನು ಉಪಯೋಗಿಸಿದ್ರೆ ತುಂಬಾ ಶಕ್ತಿ ಬರುತ್ತೆ ಅಂತ ವಿವರಿಸುತ್ತೆ. ಹೀಗೆ ಪ್ರತಿಯೊಂದು ಗಿಡಮರವನ್ನೂ ಕುರಿತು ವಿಸ್ತಾರವಾಗಿ ವರ್ಣನೆ ಮಾಡ್ತಾ '**ಓಷಧೀರಿತಿಮಾತರಸ್ಥದ್ವೋದೇವೀರುಪಬ್ರುವೇ, ನಪಾದುಂ ಸಿವಿಗ್ರತೀರಿತರಪಶ್ಚಾತ್‌ಯಜಮಾನಃ**', ನಿಮ್ಮನ್ನು ತಾಯಿಯಾಗಿ ನಾವು ಕರೆದುಕೋತಾ ಇದೀವಿ, ತಾಯಿ ಹ್ಯಾಗೆ ನಮಗೆ ರಕ್ಷಣೆ, ಪೋಷಣೆ, ಪುಷ್ಟಿ ನೀಡಿ, ಸನ್ಮಾರ್ಗದಲ್ಲೇ ನಡೆಸ್ತಾಳೋ ಹಾಗೆ ತಾಯಿಯಂತೆ ನಮ್ಮ ಬಳಿಗೆ ಬನ್ನಿ, ನಮ್ಮ ದೇಹಕ್ಕೆ ನಾವು ಕರೆದುಕೊಂಡ ಮೇಲೆ ಆ ಔಷಧಿಗಳ ಅನ್ನವನ್ನೂ ಕೂಡ ನಾನೇ ಅಂತ ಕರೆದುಕೊಳ್ಳುತ್ತೀವಲ್ಲಾ, ದೇಹ ಬೇರೆ ನಾವು ಬೇರೆ ಅಲ್ಲವಲ್ಲಾ! ಆ ರೀತಿ ಔಷಧಿಗಳನ್ನು ಅನ್ನವಾಗಿ ನಾನೇ ಅನ್ನುವ ರೂಪದಲ್ಲಿ ತೆಗೆದುಕೊಂಡ ಮನುಷ್ಯ, ಅವುಗಳ ಬಗ್ಗೆ ಎಷ್ಟು ಉತ್ತಮವಾದ ಭಾವನೆ ಇಟ್ಟುಕೋಬೇಕು ಅಂತ ಹೇಳುವಾಗ ಕೆಲವು ವಿಷಯ ವಿವರಿಸಲಾಗಿದೆ. ನೀವು ನಿಮ್ಮ ದೇಹದ ತಾಪವನ್ನು ಕಳೀತೀರಿ, ನಮಗೆ ಬಲವನ್ನೂ ಉಂಟು ಮಾಡ್ತೀರಿ, ಉತ್ಸಾಹ ಶಕ್ತಿ ನೀಡ್ತೀರಿ, ನಮ್ಮ ಮನಸ್ಸೂ ಆಗ್ತೀರಿ, ನಮ್ಮ ಪ್ರಾಣವೂ ಆಗಿದೀರಿ ಅಂತ ಆ ಗಿಡಮರಗಳನ್ನು ಪ್ರಾರ್ಥನೆ ಮಾಡುತ್ತಾ, ನಾವು ಔಷಧಿಗಳನ್ನು ಬಳಸಿಕೊಳ್ತೀವಿ. ಇದು ವೇದದಲ್ಲಿರುವ ಕೆಲವು ವಿಚಾರ ಅಷ್ಟೆ.

ಒಳ್ಳೆಯದು ಅಶ್ವತ್ಥನಾರಾಯಣಾವಧಾನಿಗಳೆ, ಇದುವರೆಗೆ ತಮ್ಮ ವಿಚಾರಗಳನ್ನು ವಿದ್ವತ್ಪೂರ್ಣವಾಗಿ ನಮ್ಮೊಂದಿಗೆ ಹಂಚಿಕೊಂಡಿದ್ದೀರಿ, ನಮಸ್ಕಾರಗಳು.

ನಿಮಗೂ ವಂದನೆಗಳು.

23. ಬಸವಾನಿ

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿಗೆ ಹೋಬಳಿಗೆ ಸೇರಿದ ಗ್ರಾಮ ಬಸವಾನಿ. ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಬಂದು ಅಲ್ಲಿಂದ ದೇವಂಗಿ ಮಾರ್ಗವಾಗಿ ಬಸವಾನಿಗೆ ಬರಲು ೧೨ ಕಿಲೋಮೀಟರ್ ಕ್ರಮಿಸಬೇಕು. ಶೃಂಗೇರಿಯಿಂದ ಬಂದಂಥ ಸಂಕೇತಿಗಳ ಕುಟುಂಬ ಇಲ್ಲಿ ನೆಲೆ ನಿಂತಿರಬಹುದೆಂಬ ಅಂದಾಜಿದೆ. ಬಹಳ ಹಿಂದೆ ಸಂಕೇತಿಗಳ ಸುಮಾರು ೨೦ ಕುಟುಂಬಗಳು ಇದ್ದವಂತೆ. ಈಗ ಇಲ್ಲಿರುವುದು ಎರಡೇ ಕುಟುಂಬ. ಆದರೆ ಸಂಕೇತಿ ಕೃಷಿಗೆ ಈ ಊರು ಹೊಸ ಪರಿಭಾಷೆ ಬರೆಯಬಲ್ಲದು. ಯಾಕೇಂದ್ರೆ ಇಲ್ಲಿ ಕೃಷಿಯಲ್ಲಿ ತೊಡಗಿರೋದು ಮಹಿಳೆಯರು. ಮಲೆನಾಡಿನ ಈ ಭಾಗದಲ್ಲಿ, ಮಳೆಗಾಲದ ನಡುವೆಯೂ, ಮಹಿಳೆ ಮನತುಂಬಿ ಬೇಸಾಯ ಮಾಡುತ್ತಿರುವುದನ್ನು ನಾವು ಇಲ್ಲಿ ಕಾಣಬಹುದು. ಇಂದಿನ ದಿನಗಳಲ್ಲಿ ಮಹಿಳೆ ಮನಸ್ಸು ಮಾಡಿದರೆ ಮಾತ್ರ ಸಂಕೇತಿ ಕೃಷಿ ಉಳಿಯುತ್ತೆ ಅಂತ ಪುರುಷರು ಹೇಳುವಾಗ, ಇಲ್ಲಿ ಮಹಿಳೆಯರೇ ಕೃಷಿ ಮಾಡುತ್ತಿರುವುದು ನಿಜಕ್ಕೂ ಆದರ್ಶಪ್ರಾಯ. ಸಾಧಕ ಸ್ತ್ರೀಯರ ಬದುಕಿನ ಮಜಲುಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದೇನೆ. ಸಂಕೇತಿ ಕೃಷಿ ಪುಸ್ತಕ ಬರೆಯುವ ನನ್ನ ಕೆಲಸವನ್ನು ಹಗುರ ಮಾಡಲು ನಾನೊಂದು ಪ್ರಶ್ನಾವಳಿ ರೂಪಿಸಿದ್ದೆ. ಸಂದರ್ಶನ ಮುಗಿದ ಮೇಲೆ, ಮುಂದೆ ಅವರಿಗೆ ಮರೆತಿದ್ದ ವಿಚಾರಗಳು ನೆನಪಿಗೆ ಬಂದು, ಅವು ದಾಖಲಿಸಲು ಯೋಗ್ಯ ಅಂತ ಅವರಿಗೆ ಅನ್ನಿಸಿದರೆ ಬರೆಯಲು ಅನುಕೂಲವಾಗಲಿ ಎಂಬುದು ಉದ್ದೇಶ. ಈ ಪ್ರಶ್ನಾವಳಿಗೆ, ದೀರ್ಘಸಂದರ್ಶನದ ಬಳಿಕವೂ ಉತ್ತರ ಬರೆದು ಕಳಿಸಿದ ಮೊದಲ ಹಾಗೂ ಕಡೆಯ ವ್ಯಕ್ತಿ ಬಸವಾನಿಯ ಸಾವಿತ್ರಮ್ಮನವರು. ಅವರ ಕಕ್ಕುಲಾತಿ ಎಷ್ಟೆಂದರೆ ದೂರವಾಣಿಯ ಮುಖಾಂತರವೂ ನನ್ನೊಂದಿಗೆ ಈ ಕುರಿತು ಮಾತನಾಡಿದ್ದಿದೆ. ನನ್ನ ಮನಸ್ಸು ಆರ್ದ್ರವಾಗಿದೆ ಈ ಬಗೆಯ, ಬದುಕಿನ ಬಗೆಗೆ ಪ್ರೀತಿ ಹಾಗೂ ಜೀವನೋತ್ಸಾಹ ಕಂಡು. ಮುಂದಿನದು ನಿಮ್ಮ ಮುಂದಿದೆ.

ಅ) ಬಿ.ಕೆ. ಕಸ್ತೂರಮ್ಮ ಇ/ಹಂ. ಹೆಚ್.ಎನ್. ನಾಗರಾಜ್

ಬಸವಾನಿ, ಮತ್ತೂರು ಹೋಬಳಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08181 754763



ಬಿ.ಕೆ.ಕಸ್ತೂರಮ್ಮ-ಎಚ್.ಎನ್.ನಾಗರಾಜ್ ದಂಪತಿ: ತೋಟದ ಹಿನ್ನೆಲೆಯಲ್ಲಿ:ಬಸವಾನಿ

ನೆಂಟರು ಇಷ್ಟರ ಮನೆಗೆ ಮದುವೆಗೆ ಹೋದಾಗ ಮದುವೆ ಮನೇಲೂ ನಾನು ಜಮೀನು, ವ್ಯವಸಾಯದ ವಿಚಾರ ಮಾತನಾಡ್ತೀನಿ. ನನಗೆ ಚಿನ್ನ, ಸೀರೆ, ಒಡವೆ ಮೇಲೆ ಆಸಕ್ತಿ ಇಲ್ಲ. ಹೊರಗಡೆ ಹೋದಾಗ ಲೌಕಿಕವಾಗಿ ಹೇಗಿರಬೇಕೋ ಹಾಗಿರ್ತೀನಿ. ಆದ್ರೆ ಜನ ತಾತ್ಸಾರವಾಗಿ ನೋಡ್ತಾರೆ. ಯಾಕೇಂದ್ರೆ ಇವರು ಬಡವರು, ಏನೂ ಇಲ್ಲ ಅಂತ. ಕೆಲವೊಮ್ಮೆ ನಿಕೃಷ್ಟವಾಗಿ ಕಾಣ್ತಾರೆ. ನಾನು ಅದನ್ನು ಮನಸ್ಸಿಗೆ ತೊಗೋಳ್ಳೋಲ್ಲ. ತೊಗೊಂಡ್ರೆ ತಾನೇ ಮನಸ್ಸಿಗೆ ನೋವಾಗೋದು? ಅವರ ಪಾಡಿಗೆ ಅವರು ಇರ್ತಾರೆ. ನಮ್ಮ ಪಾಡಿಗೆ ನಾವು ಇರೋಣ. ಭಗವಂತ ನಮಗೆ ಇಷ್ಟುಕೊಟ್ಟಿದಾನಲ್ಲ, ಸಾಕು, ಅಂತ ನೆಮ್ಮದಿಯಾಗಿ ಇರ್ತೀನಿ. ಯಾರಿಗಾದ್ರೂ ನಾನು ಇವತ್ತಿಗೂ ಹೇಳೋದು ಅಷ್ಟೆ, ಹೆಚ್ಚಿಗೆ ಚಿನ್ನ, ಸೀರೆಗೆ ಹಾಕಬೇಡಿ, ಹಣ ದಂಡ ಆಗುತ್ತೆ, ಹಣ ಹಾಳು ಮಾಡಬೇಡಿ ಅಂತ ಬೈತೀನಿ. ಜಮೀನು, ವ್ಯವಸಾಯ ಅಂದ್ರೆ ನನಗೆ ತುಂಬಾ ಇಷ್ಟ.

ಸಂಕೇತಿ ಮಹಿಳೆಯರ ಕೃಷಿಗೆ ಮುನ್ನುಡಿ ಬರೆದಂತಿರುವ ಬಸವಾನಿ ಗ್ರಾಮದ ಹೆಮ್ಮೆಯ ಮಹಿಳೆ ಬಿ.ಕೆ. ಕಸ್ತೂರಮ್ಮ. ಇವರ ಪತಿ ಎಚ್.ಎನ್.ನಾಗರಾಜ್, ಹಾಸನ ತಾಲ್ಲೂಕು ಹೆಬ್ಬಾಲೆಯ ಶೇಷಪ್ಪ ಹಾಗೂ ಕುಪ್ಪಳ್ಳಿಯ ಕಾಮಾಕ್ಷಮ್ಮ ದಂಪತಿಗಳ ಮಗ. ತಮ್ಮ ತೋಟದ ಅಂಗಳದಲ್ಲೇ ಮನೆ ಮಾಡಿಕೊಂಡಿರುವ ಕಸ್ತೂರಮ್ಮ ಹಾಗೂ ನಾಗರಾಜ್ ಇವರದು ಸಂತೃಪ್ತ ಕೃಷಿ ಕುಟುಂಬ. ಇವರ ಮನೆ ಪಡಸಾಲೆಯಲ್ಲಿ ಕುಳಿತು,

ನಮ್ಮ ಉದ್ದೇಶ ವಿವರಿಸಿ, ವಿಚಾರ ತಿಳಿಸಿರೆಂದು ನಾವು ನಾಗರಾಜ್ ಅವರನ್ನು ಆಹ್ವಾನಿಸಿದಾಗ ಅವರು "ಎಲ್ಲಾ ನನ್ನ ಹೆಂಡತೀನೇ ಹೇಳುತ್ತಾಳೆ" ಅಂದ್ರು. ತಕ್ಷಣ ನನಗೆ ಅವರು ತಮಾಷೆ ಮಾಡುತ್ತಿರಬಹುದೇ ಅನ್ನಿಸಿತು. ಆದರೂ ತೋರ್ಪಡಿಸಿಕೊಳ್ಳಲಿಲ್ಲ. ಅಷ್ಟರಲ್ಲಿ ಅಡುಗೆಮನೆಯಿಂದ ಹಾಲು, ಹಣ್ಣನ್ನು ಹಿಡಿದುಕೊಂಡು ಬಂದ ಕಸ್ತೂರಮ್ಮನವರು, ಹೇಳಿದ್ರು, "ನಮ್ಮ ಯಜಮಾನ್ರು ಸದಾ ಹೇಳ್ತಿರುತ್ತಾರೆ, ನಾನು ಇಲ್ಲಿ ಕೂಲಿ ಆಳು ಮಾತ್ರ; ಇದು ನಿನ್ನ ಜಮೀನು, ಅಂತ. ಹಾಗಾಗಿ ಇಡೀ ಕುಟುಂಬದ ನಿರ್ವಹಣೆ ನನ್ನದೇ; ಹಾಗೂ ವ್ಯವಸಾಯದ ಮ್ಯಾನೇಜ್‌ಮೆಂಟ್ ಕೂಡಾ ನನ್ನದೇ. ಈ ಮೊದಲು ನಮ್ಮ ತೋಟದಲ್ಲಿ ೬೦ ಕೇಜಿ ಅಡಿಕೆ ಆಗ್ತಿರಲಿಲ್ಲ. ಈಗ ಅದೇ ಜಮೀನಿನಲ್ಲಿ ೨೦ ಕ್ವಿಂಟಾಲ್ ಅಡಿಕೆ ಆಗ್ತಿದೆ. ಅಷ್ಟರಮಟ್ಟಿಗೆ ತೋಟ ನಿರ್ವಹಣೆ ಮಾಡಿದೀನಿ. ಅದೇನು ವಿಷಯ ಬೇಕೋ ನನ್ನನ್ನೇ ಕೇಳಿ" ಅಂದ್ರು. ಆ ರೀತಿ ದಿಟ್ಟತನದಿಂದ ಮಾತನಾಡಿದ ಮೊದಲನೇ ಸಂಕೇತಿ ಮಹಿಳೆ ಇವರೇ ಇರಬಹುದು. ಅವರ ನೇರನುಡಿ ಇಷ್ಟವಾಯಿತು. ಯಾವುದೇ ಅಡೆತಡೆಯಿಲ್ಲದೆ ವಿಚಾರಮಂಥನ ಆರಂಭವಾಯ್ತು. ಒಟ್ಟಾರೆಯಾಗಿ ಕಸ್ತೂರಮ್ಮನವರು ಹೇಳಿದ ವಿಚಾರಗಳನ್ನು ಅವರದೇ ಭಾಷೆಯಲ್ಲಿ ಭಟ್ಟಿ ಇಳಿಸಿದ್ದೇನೆ, ಅಷ್ಟೆ.


ಗುದ್ದಲಿ ಹಿಡಿದ ಎಚ್.ಎನ್.ನಾಗರಾಜ್:ಬಸವಾನಿ

"ನನ್ನ ಅಜ್ಜಿ ತಿಮ್ಮಮ್ಮ, ಲಿಂಗದಹಳ್ಳಿಯವರು. ಬಹಳ ಕಷ್ಟವಾಣಿ. ನನ್ನ ಅಜ್ಜ ವೆಂಕಟರಮಣಭಟ್ಟ. ನನ್ನ ತಂದೆಯನ್ನು ಇನ್ನೂ ಗರ್ಭದಲ್ಲಿ ಹೊತ್ತಿರುವಾಗಲೇ, ಏಳು ತಿಂಗಳ ಬಸುರೀಲಿ, ಅಜ್ಜ ಪ್ಲೇಗು ಬಂದು ತೀರಿಕೊಂಡ್ರಂತೆ. ತಮ್ಮ ಸ್ವಂತ ದೇಹಶ್ರಮದಿಂದ ಅಜ್ಜಿ ಎಲ್ಲರನ್ನೂ ಸಾಕಿದ್ರಂತೆ. ನಮ್ಮ ಅಜ್ಜೀನೇ ಲಿಂಗದಹಳ್ಳಿ ಬಿಟ್ಟು ಇಲ್ಲಿ ಬಸವಾನಿಗೆ ಬಂದು ಸೇರಿದ್ದು. ತೋಟ ಆವಾಗ ರೂಢಿ ಇರಲಿಲ್ಲ. ಕೃಷಿ ಮಾಡಿ, ಜಾನುವಾರುಗಳನ್ನು ಸಾಕಿ ಕಷ್ಟದಲ್ಲಿ ಸಂಸಾರ ಸಾಗಿಸಿದ್ರಂತೆ. ಆವಾಗೆಲ್ಲ ಒಂದು ಸೇರು ಅಕ್ಕಿಯನ್ನು ಭಿಕ್ಷೆ ಬೇಡಿದ ಹಾಗೆ ಬೇಡಿ ತಂದು ಜೀವನ ಸಾಗಿಸಿದ್ದಂತೆ. ಅಂತೂ ಇಂತೂ ಮಕ್ಕಳನ್ನು ದಡ ಸೇರಿಸಿದ್ರು. ನಮ್ಮ ಅಜ್ಜಿಗೆ ೮೦ ವರುಷ ಇದ್ದಾಗಲೂ ಬೆಳಗ್ಗೆ ಎದ್ದ ತಕ್ಷಣ ಪೇಪರ್ ಓದಿ, ಮಕ್ಕಳಿಗೆಲ್ಲಾ ಅದರಲ್ಲಿನ ಲೋಕಜ್ಞಾನದ ವಿಷಯ ತಿಳಿಸಿ, ಆನಂತರವೇ ಬೇರೆಯ ಕೆಲಸ ಮಾಡೋರು. ನನ್ನ ತಾಯಿ ರುಕ್ಮಿಣಮ್ಮ ಮತ್ತೂರಿನವರು. ತಂದೆ ಬಿ.ಕೃಷ್ಣಭಟ್ಟ. ನನ್ನ ತಂದೆ ಹೆಚ್ಚು ಕೆಲಸ ಮಾಡ್ತಿರಲಿಲ್ಲ. ಪ್ರತಿಯೊಂದು ಕೆಲಸವನ್ನೂ ಆಳುಗಳ ಹತ್ರ ಮಾಡಿಸಿ, ಇವರು ಮೇಲುಗೆಲಸ ಮಾಡೋರು. ನಮ್ಮ ಮತ್ತೂರಿನ ಸೋದರಮಾವನ ಬಳಿಯಿಂದ ಸಾಲ ತಂದು, ವಾಪಸ್ಸು ಕೊಡ್ತಿದ್ರು. ಆದರೂ ಹಣಕಾಸಿಗೆ ಮುಗ್ಗಟ್ಟು ಬಂದು ತೋಟ ಪಾಳು ಬಿತ್ತು. ನನ್ನ ತಂದೆ ಜಮೀನಿಗಾಗಿ ಯಾವತ್ತೂ ಕಷ್ಟಪಡಲಿಲ್ಲ. ಒಂದೇ ತರಹ ಸಾತ್ವಿಕವಾಗಿ ಜೀವನ ನಡೆಸಿದ್ರು. ದೇವಸ್ಥಾನದಲ್ಲಿ ಪೂಜೆ, ಕರೆದ್ರೆ


ಗೋಟು ಸೀಳುತ್ತಿರುವ ಎಚ್.ಎನ್.ನಾಗರಾಜ್:ಬಸವಾನಿ



ಎಚ್.ಎನ್.ನಾಗರಾಜ್ ತಮ್ಮ ಮನೆಯ ಮುಂದೆ: ಬಸವಾನಿ

ಯಾರಾದರೂ ಮನೆಗೆ ಪೂಜೆಗೆ ಹೋಗೋರು. ನಮ್ಮ ಮನೆಯಲ್ಲಿ ಹೆಣ್ಣುಮಕ್ಕಳದೇ ಕೆಲಸ. ನಾನೂ ಸಹ ಗದ್ದೆಯಿಂದ ಹುಲ್ಲು ತರೋವೆ, ನಾಟಿ ಮಾಡೋವೆ, ಗದ್ದೆ ಕುಯಿಲು ಮಾಡ್ತಿದ್ವೆ, ಅಡಿಕೆ ಗೊನೆ ತೆಗೆದ್ರೆ ಉದುರು ಹೆರಕುತ್ತಿದ್ವೆ. ನನ್ನ ಅಜ್ಜಿ, ತಾಯಿ ಕೂಡ ಮಾಡ್ತಾ ಇದ್ರು. ಹಿಂದಿನಿಂದ ಕೆಲಸ ಮಾಡಿ ಬಂದ ರೂಢಿ. ಈಗ ವಯಸ್ಸಾಗಿದೆ. ದೇಹ ಕೇಳಲ್ಲ. ಮನಸ್ಸು ಬಿಡೋಲ್ಲ. ಆಳುಕಾಳಿಗೆ ಈಗ ಕೆಲಸ ಹೇಳಿ ಅವರು ತಕ್ಷಣ ಆ ಕೆಲಸ ಮಾಡದಿದ್ರೆ ಮನಸ್ಸಿಗೆ ತುಂಬಾ ನೋವಾಗುತ್ತೆ. ನಾನು ಓದಿದ್ದು L.S. ಅಂದ್ರೆ ೮ನೇ ತರಗತಿಯವರೆಗೆ ಮಾತ್ರ. ಆಗ ನನ್ನ ತಾಯಿ ಮತ್ತೂರಿನಲ್ಲಿದ್ರು. SSLC ಮಾಡಲು ಹೊರಗೆ ಕಳಿಸಲು ಆಗೋದಿಲ್ಲ ಅಂತ ನನಗೆ ಮದುವೆ ಮಾಡಿದ್ರು. ನನಗೆ 'ನಾನು SSLC ಓದಿ, ಉದ್ಯೋಗದಲ್ಲಿರಬೇಕು. ನಾಲ್ಕು ಜನರಿಗೆ ಪಾಠ ಹೇಳಬೇಕು' ಅಂತ ಬಹಳ ಆಸೆ ಇತ್ತು. ಅದೊಂದೇ ಧ್ಯೇಯ ಇದ್ದದ್ದು. ಅದು ಕೈಗೂಡಲಿಲ್ಲ. ನನ್ನ ಮದುವೆ ಆದದ್ದು ಹಾಸನದಲ್ಲಿ. ನನ್ನ ಯಜಮಾನ್ರು KSRTC Driver ಆಗಿದ್ರು. ಅಲ್ಲಿಂದ ಅರಸೀಕೆರೆಗೆ ಬಂದ್ವಿ. ಅಲ್ಲಿ ನನ್ನ ಮನೆಯವರು ಓಡಿಸುತ್ತಿದ್ದ ಬಸ್ accident ಆಯ್ತು. ಇವರ ಜೀವ ಉಳಿದದ್ದೇ ಹೆಚ್ಚು. ಆದ್ರೆ ಅದ್ರಿಂದ ಇವರ ಕೆಲಸ ಹೋಯ್ತು. 'ಸದ್ಯ ಜೀವ ಉಳೀತಲ್ಲಾ, ಎಲ್ಲಾದರೂ ದುಡಿದು ತಿನ್ನಬಹುದು' ಅಂದುಕೊಂಡೆ. ಬೇರ್‍ಯಾವ ಆಸೆಯೂ ನನಗೆ ಇರಲಿಲ್ಲ. ಅವತ್ತಿನಿಂದ ಇವತ್ತಿನವರೆಗೆ ನಾನು ಯಾವುದಕ್ಕೂ ಆಸೆ ಪಟ್ಟವಳಲ್ಲ. ಒಬ್ಬರಿಗೆ ನಾವು ಮನಸ್ಸು ನೋಯಿಸಬಾರದು, ಇನ್ನೊಬ್ಬರಿಗೆ ನಾವು ಕೈಲಾದ ಸಹಾಯ ಮಾಡಬೇಕು, ಇನ್ನೊಬ್ಬರ ಹತ್ತಿರ ಅದನ್ನೇ ಅಪೇಕ್ಷೆ ಪಡಬಾರದು ಅನ್ನೋದನ್ನು ಇವತ್ತಿನವರೆಗೂ ನಾನು ಪಾಲಿಸಿದೀನಿ. ಹಾಗಾಗಿ ಬಹಳ ಕಷ್ಟಪಟ್ಟಿದೀನಿ. ನನ್ನ ಮಾವನವರು ಕೊಣನೂರಿನಲ್ಲಿ ಮಾಸ್ತರು. ಅಲ್ಲಿ ಅವರ ಜತೇಲಿ ಇದ್ವಿ. ಅಲ್ಲೂ ತುಂಬಾ ಕಷ್ಟ ಪಟ್ವಿ. ಇವರು ಗಾಡಿ ಬಾಡಿಗೆ ಓಡಿಸೋರು. ಮನೇಲಿ ದನಕರುಗಳನ್ನು ಸಾಕಿ ಹಾಲು ಹಿಂಡಿ ಅದನ್ನು ಮಾರ್ತಿದ್ವಿ. ನಾನು ದುಡಿದು ತಿನ್ನಬೇಕು, ಇನ್ನೊಬ್ಬರಿಗೆ ತೊಂದರೆ ಕೊಡಬಾರದು ಅನ್ನುವುದು ನನ್ನ ಧ್ಯೇಯ. ನಾವು ನಮ್ಮ ತಂದೆ ತಾಯಿಗೆ ಮೂರು ಜನ ಹೆಣ್ಣುಮಕ್ಕಳು. ನಾನೇ ಹಿರಿಯ ಮಗಳು. ಒಂದು ದಿನ ಕೊಣನೂರಿಗೆ ಬಂದ ನನ್ನ ದೊಡ್ಡ ಸೋದರಮಾವ, 'ಇಲ್ಲಿ ಇಷ್ಟು ಕಷ್ಟಪಡ್ತಾ ಇದೀರಲ್ಲಾ, ಅಲ್ಲಿ ನಿನ್ನ ತಂಗೀ ಹಾಗೂ ತಂದೆ, ತಾಯನ್ನು ನೋಡೋರು ಇಲ್ಲ. ಈ ದುಡಿಮೇನ ಅಲ್ಲಿ ನಿಮ್ಮ ಜಮೀನನಲ್ಲೇ ಮಾಡಿ. ಅವರಿಗೂ ಆಸರೆ ಆಗುತ್ತೆ' ಅಂದ್ರು. 'ಏನೇ ಆದ್ರೂ ಹೆಣ್ಣುಮಕ್ಕಳು ಕೆಟ್ಟು ತವರುಮನೆ ಸೇರಬಾರದು, ನಾವು ದುಡಿದುಕೊಂಡು ದೂರ ಇರ್ತೀವಿ, ಅಲ್ಲಿಗೆ ನಮ್ಮನ್ನು ಕರೀಬೇಡಿ' ಅಂದೆ. ಅವರು ಬಿಡಲಿಲ್ಲ. ಮೂರು-ನಾಕು ಬಾರಿ ಬಂದು, ತಿಳಿಹೇಳಿ, ನನ್ನನ್ನು ಇಲ್ಲಿ ಸೇರಿಸಿದ್ರು. ನಾನು ಬಸವಾನಿಗೆ ಬಂದು ೩೫ ವರುಷವಾಯ್ತು. ನಾವು ಇಲ್ಲಿಗೆ ಬಂದಾಗ ಇಲ್ಲೂ ಬಹಳ ಕಷ್ಟ. ಉತ್ಪತ್ತಿ ಇರಲಿಲ್ಲ. ಊಟಕ್ಕೆ ಸಾಲ್ತಾ ಇರಲಿಲ್ಲ. ಹೊತ್ತಿಗೆ ಮನೇಲಿ ಎಂಟು ಜನರ ಊಟ ಆಗಬೇಕಿತ್ತು. ಆರು ತಿಂಗಳು ಮನೆ ಅಕ್ಕಿ ಊಟ ಮಾಡಿದ್ರೆ ಮುಗೀತಿತ್ತು. ಮತ್ತೆ ಆರು ತಿಂಗಳು, ಬೇರೆ ಮನೆಯಿಂದ ಅಕ್ಕಿ ಸಾಲ ತಂದು ಊಟ ಮಾಡಬೇಕಿತ್ತು. ನಮ್ಮ ಭತ್ತ ಬಂದಾಗ ಸಾಲ ತೀರಿಸೋವಿ. ಮತ್ತೆ ಮುಂದಿನ ವರುಷ ಅದೇ ಬದುಕು. ಮನೇಲಿ ಹಪ್ಪಳ, ಸಂಡಿಗೆ, ಚಟ್ನಿಪುಡಿ ಮಾಡಿ, ಅದನ್ನು ಮಾರಿ ಬಂದ ಆದಾಯದಲ್ಲಿ ವ್ಯವಸಾಯದ ಅಭಿವೃದ್ಧಿ ಮಾಡಿದ್ವಿ. ಆನಂತರ ನಾನು Diploma in tailoringನಲ್ಲಿ junior ಹಾಗೂ senior ಪರೀಕ್ಷೆ ಮಾಡಿಕೊಂಡೆ. ಪದ್ಮಾ ಮೆಮೋರಿಯಲ್ ಟ್ರಸ್ಟ್ ಹಾಗೂ ಅಭಯಾಶ್ರಮದಲ್ಲಿ ಹೊಲಿಗೆ ಶಿಕ್ಷಕಿ ಕೆಲಸ ಸಿಕ್ತು. ಮೂರು ವರುಷ ಅಲ್ಲಿ ದುಡಿದೆ. ಅಲ್ಲಿ ಸುಮಾರು ೪೦ ಜನ ಹೆಣ್ಣುಮಕ್ಕಳ ಜೀವನಕ್ಕೆ ನೆರವಾದೆ. ದುಡಿದ ಸಂಬಳವನ್ನೆಲ್ಲಾ ಮನೆಯ ಅಭಿವೃದ್ಧಿಗೆ ವಿನಿಯೋಗಿಸಿದೆ. ಅಕ್ಕಿ ಸಾಲ ತರುವುದು ನಿಂತಿತು. ನಮ್ಮ ಕುಟುಂಬವೂ ಒಂದು levelಗೆ ಬಂತು. ನನ್ನ ತಾಯಿ ನನಗೆ ಹೇಳೋರು, 'ನೀನು ದುಡಿದ ದುಡ್ಡನ್ನು ಮನೆಗೆ ಹಾಕಬೇಡ, ಮನೆಯಿಂದ ನಂತರ ನಿನಗೆ ಒಂದು ನಯಾ ಪೈಸೆ ತೊಗೋಳ್ಳೋಕೆ ಕಷ್ಟ ಆಗುತ್ತೆ' ಅಂತಿದ್ರು. 'ನೀನು ದುಡಿದ ದುಡ್ಡನ್ನೆಲ್ಲಾ ಬ್ಯಾಂಕಿನಲ್ಲಿ ಇಟ್ಟುಕೋ' ಅಂತ ಸಲಹೆ ನೀಡ್ತಿದ್ರು. ದುಡ್ಡನ್ನು ಕೂಡಿ ಹಾಕಿ ನಾನು ಏನು



ಪತ್ನಿಯೊಂದಿಗೆ ರೂಢಿಸಿದ ತೋಟದಲ್ಲಿ ಎಚ್.ಎನ್.ನಾಗರಾಜ್: ಬಸವಾನಿ

ಮಾಡಲಿ, ಇವತ್ತಿನ ಕಷ್ಟ ಸ್ವಲ್ಪ ಪರಿಹಾರ ಆದ್ರೆ ಸಾಕು ಅಂತ ನಾನು ಅಮ್ಮನ್ನ ಸಮಾಧಾನಪಡಿಸ್ತಿದ್ದೆ. ನನ್ನ ಯಜಮಾನರೂ ಸಹ ಈ ಮನೆ ಅಭಿವೃದ್ಧಿಗೆ ಹಗಲೂ ರಾತ್ರಿ ಅವರ ಜೀವ ತೇದಿದ್ದಾರೆ. ಅಡಿಕೆ, ಬಾಳೆ ತೋಟವನ್ನು ಮುತುವರ್ಜಿಯಿಂದ ಎಬ್ಬಿಸಿದಾರೆ. ಬೆಳಗ್ಗೆ ಎಂಟಕ್ಕೆ ತೋಟಕ್ಕೆ ಹೋದ್ರೆ ಸಂಜೆ ನಾಲ್ಕಕ್ಕೆ ಬಂದು ಊಟ ಮಾಡೋರು. ಅನ್ನ ಊಟಕ್ಕೆ ಇದ್ರೆ ಇತ್ತು ಇಲ್ಲಾಂದ್ರೆ ಇಲ್ಲ. ಬಹಳ ಕಷ್ಟದಲ್ಲೇ ಬಂದು ಈಗ ನೆಮ್ಮದಿ ಕಂಡಿದೀವಿ. ಈಗಲೂ ಸಾಲ ತುಂಬಾ ಇದೆ. ನನ್ನ ತಾಯಿ ತೀರಿಕೊಂಡಿದ್ದು ೧೯೬೩ರಲ್ಲಿ, ತಂದೆ ೧೯೮೦ರಲ್ಲಿ. ನನ್ನ ತಾಯಿಗೆ ಕಡೆಗೆ ಪಾರ್ಶ್ವವಾಯು ಬಡೀತು. ಶಿವಮೊಗ್ಗೆಯಲ್ಲಿ treatmentಗೆ ತುಂಬಾ ಖರ್ಚಾಯ್ತು. ಮೂರು ವರುಷ ತಾಯಿ ನರಳಿದ್ರು. ನಾನು ಮನೆಗೆ ಬಂದಾಗ ನನ್ನ ತಂಗೀರಿಗೆ ಮದುವೆ ಆಗಿರಲಿಲ್ಲ. ಸ್ವಲ್ಪ ಜಮೀನು improve ಆದ ಮೇಲೆ ಮದುವೆ ಮಾಡಿದ್ವಿ. ೩೫ ವರುಷದ ಹಿಂದೆ ಜಮೀನಿನಲ್ಲಿ ಎಲ್ಲೆಲ್ಲೋ ಒಂದು ಅಡಿಕೆ ಹಾಗೂ ಬಾಳೆ ಇತ್ತು. ನಾನೂ, ನನ್ನ ಯಜಮಾನರೂ ದುಡಿದು ಅಡಿಕೆ ಬಾಳೆ ರೂಢಿಸಿದೆವು. ಚಿಕ್ಕಂದಿನಿಂದಲೇ ವ್ಯವಸಾಯದ ಕೆಲಸವನ್ನೂ ಮಾಡಿದ ಅನುಭವ ನನಗೆ ನೆರವಾಯ್ತು. ನನಗೆ ಒಬ್ಬನೇ ಮಗ, ಅವನ ಹೆಸರು ಎಚ್.ಎನ್.ಹರೀಶ್‌ಕುಮಾರ್.

ಅವನ ಹೆಂಡತಿ ಭಾಗ್ಯಲಕ್ಷ್ಮಿ ಅಂತ, ಹಾಸನದವಳು. ಅವನು SSLC ವರೆಗೆ ಓದಿ, ಈಗ ಶಿವಮೊಗ್ಗದಲ್ಲಿ ಖಾಸಗಿಯಾಗಿ ಕೆಲಸ ಮಾಡ್ತಿದಾನೆ. ನಾವು ತೋಟದ ಕೆಲಸವನ್ನು ಕಾಲಕ್ಕೆ ಸರಿಯಾಗಿ ಮಾಡ್ತಿದ್ವಿ. ಈಗ್ಗೆ ೧೦, ೧೫ ವರುಷದಿಂದ ತೋಟಕ್ಕೆ ಸೀಮೆಗೊಬ್ಬರ ಬಳಸ್ತಾ ಇದೀವಿ. ಪ್ರತಿ ಅಡಿಕೆ ಮರಕ್ಕೆ ಎರಡು ಹಿಡಿಗೆ ಕೊಟ್ಟಿಗೆ ಗೊಬ್ಬರ ಹಾಗೂ ೧೦೦ ಗ್ರಾಂ ಮಾತ್ರ ಸೀಮೆಗೊಬ್ಬರ ಬಳಸ್ತೀವಿ. ನಮ್ಮ ತೋಟ ತಗ್ಗಿನಲ್ಲಿರೋದ್ರಿಂದ, ಕೆರೆ ನೀರು ಸಿಗ್ತಿದೆ. ಈಗ ತೋಟದಲ್ಲಿ ಏಲಕ್ಕಿ, ಕಾಳುಮೆಣಸು, ವಿಳ್ಳೇದೆಲೆ, ಬಾಳೆ ಬೆಳೆದಿದೀವಿ. ಅಡಿಕೇನೂ ಇದೆ. ಅಡಿಕೆ ಮರದ ಬುಡದಿಂದ ಒಂದು ಗೇಣು ಬಿಟ್ಟು ಕಾಳುಮೆಣಸು ನೆಡಬೇಕು. ನಂತರ ಅದು ಬೆಳೆದಂತೆ ಹಗ್ಗ ಹಾಕಿ ಕಟ್ತಾ ಬರಬೇಕು. ಅಡಿಕೆಗೆ ಮಾಡೋ ಬೇಸಾಯದಲ್ಲೇ ಇದೂ ಬೆಳೆಯುತ್ತೆ. ಎಲೆಹಂಬನ್ನು ನಾನು ತರೀಕೆರೆಯಿಂದ ತರಿಸಿ ನೆಟ್ಟಿದ್ದು. ಚೆನ್ನಾಗಿ ಬೆಳೆದಿದೆ. ಹಳ ಇಲ್ಲದಂತೆ ತೋಟವನ್ನು ನೋಡಿಕೋತೀವಿ. ತೋಟಕ್ಕೆ ಮಣ್ಣು ಹೊಡಿಸ್ತೀವಿ. ತೋಟದಲ್ಲಿ ಒಂದು ಬಾವಿ ಇದೆ. ಅಗತ್ಯ ಬಿದ್ದಾಗ ಬಾವಿ ನೀರು ಬಳಸ್ತೀವಿ. ಅಡಿಕೆ ಮರಗಳಿಗೆ ಬೇವಿನ ಹಿಂಡಿ ಬಳಸ್ತೀವಿ. ಇಲ್ಲಿನ Primary Credit Co-operative Bankನಿಂದ ತಂತಿ ಬೇಲಿಗೆ ಸಾಲ, ಭಾವಿ ಹಾಗೂ pumpset ಸಾಲ ಹಾಗೂ ಮನೆ ಸಾಲ ತೊಗೊಂಡಿದೀವಿ. ಎಲ್ಲೂ ನಾಲಿಗೆ ಕೆಡಿಸಿಕೊಂಡಿಲ್ಲ. ಶ್ರಮಪಟ್ಟು ದುಡಿದು ಸಾಲ ತೀರಿಸ್ತಾ ಇದೀವಿ. ಮನೇಲಿ ೧೪ ಬಾಲ (ರಾಸು)



ಮಳೆಗಾಲಕ್ಕೆ ಉರುವಲು ಸಂಗ್ರಹ:ಎಚ್.ಎನ್.ನಾಗರಾಜ್:ಬಸವಾನಿ

ಇದೆ. ದಿನಕ್ಕೆ ಮೂರು ಲೀಟರ್ ಹಾಲು ಸಿಗುತ್ತೆ. ಮುಂಚೆ ಮಾರ್ತಿದ್ವಿ. ಆದ್ರೆ ಈಗ ಮಾರಲ್ಲ. ಯಾರಾದ್ರೂ ಕೇಳಿದ್ರೆ ಹಾಗೇ ಕೊಡ್ತೀನಿ.

ವ್ಯವಸಾಯದಲ್ಲಿ ಒಂದು ಕುಟುಂಬ ನೆಮ್ಮದಿಯಾಗಿ ಇರಬಹುದು. ಆದ್ರೆ ಸ್ವಂತ ಕೆಲಸ ಮಾಡಿದ್ರೆ ಮಾತ್ರ ಉಳಿಯಲು ಸಾಧ್ಯ. ವ್ಯವಸಾಯದಲ್ಲಿ ಹೆಣ್ಣುಮಕ್ಕಳ ಪಾತ್ರ ಜಾಸ್ತಿ. ಎಲ್ಲದಕ್ಕೂ ನಾವು ಪ್ರೋತ್ಸಾಹ ನೀಡಿದ್ರೆ ಅವರು ಮುಂದೆ ಹೋಗ್ತಾರೆ. ಇಲ್ಲದಿದ್ರೆ ರಥ ಸಾಗೋಲ್ಲ. ಇಷ್ಟು ಅನುಭವ ಇದ್ರೂ ನನ್ನ ಯಜಮಾನರು ಇವತ್ತೂ ಈ ಕೆಲಸ ಮಾಡ್ಲಾ, ಆ ಕೆಲಸ ಮಾಡ್ಲಾ ಅಂತ ಕೇಳ್ತಾರೆ. ಇವತ್ತಿಗೂ ನಾವಿಬ್ಬರೂ ಪರಸ್ಪರ ಮಾತನಾಡಿಕೊಂಡು ಕೆಲಸ ಮಾಡೋದು. ನನಗೂ ನನ್ನ ತಂದೆ ಆವಾಗವಾಗ ಮಾಹಿತಿ ಹೇಳುತ್ತಿದ್ದರಿಂದ ವ್ಯವಸಾಯದ ಅನುಭವ ಇದೆ. ನಮಗೆ ೧೫ ರಿಂದ ೧೬ ಪಲ್ಲ ಭತ್ತ ಆಗುತ್ತೆ. ಜಾನುವಾರುಗಳ ಸಗಣಿ, ಗಂಜಲ ಬಳಸಿ ಸತ್ತ್ವಯುತವಾದ ಸಾವಯವ ಗೊಬ್ಬರ ತಯಾರಿಸಿಕೊಳ್ತೀವಿ. ಹಸಿರುಸೊಪ್ಪನ್ನು ತರಿದು ಹಟ್ಟಿಗೊಬ್ಬರಕ್ಕೆ ಹಾಕ್ತೀವಿ. ಇದು ಮಲೆನಾಡು ಆದ್ರಿಂದ, ನಮ್ಮಜ್ಜ ಹೇಳೋರು, 'ಜಾನುವಾರುಗಳಿಗೆ ಬಿಸಿ ನೀರು ಕುಡಿಸಿ, ಅದರ ಆರೋಗ್ಯಕ್ಕೆ ಒಳ್ಳೆಯದು' ಅಂತ. ನಾವು ಬಿಸಿನೀರಿನ ಜತೆಗೆ, ಅಕ್ಕಿತೊಳೆದ ನೀರಿಗೆ (ಕಲಗಚ್ಚಿಗೆ) ಪಾಲಿಶ್ ತೌಡು, ತರಕಾರಿ ಸಿಪ್ಪೆ, ಉಪ್ಪು ಸೇರಿಸಿ ಕೊಡ್ತೀವಿ. ತೋಟದ ವ್ಯವಹಾರದಲ್ಲಿ, ನಾವು ಕೆಲಸ ಮಾಡಿದ್ರೆ ಆದಾಯ ಗಳಿಸಬಹುದು.

ಮಲೆನಾಡಿನಲ್ಲಿ ಮಳೆ ವಿಪರೀತ ಹಾಗೂ ಮಳೆ ಆರಂಭವಾಗುವುದಕ್ಕಿಂತ ಮುಂಚಿತವಾಗಿಯೇ ಗದ್ದೆ ಸೌತೆಕಾಯಿ, ಬಣ್ಣದ ಸೌತೆಕಾಯಿ, stock ಇಡ್ತೀವಿ. ದಿಂಡಿನ ಮಾವಿನಕಾಯಿ ರಸ ತೆಗೆದು ಉಪ್ಪಿನಕಾಯಿ ಹಾಕ್ತೀವಿ. ನಿಂಬೆಹಣ್ಣಿನ ಗೊಜ್ಜು ಮಾಡಿ ಇಡ್ತೀವಿ. ಮಳೆಗಾಲಕ್ಕೆ ಸಕಲ ಸಿದ್ಧತೆಯನ್ನೂ ಮೊದಲೇ ಮಾಡಿಕೊಳ್ತೀವಿ.

ನನ್ನ ತತ್ತ್ವ ಇಷ್ಟೆ, ನನ್ನ ಮನೆ ಅಂತ ನಾವು ದುಡೀಬೇಕು. ಮುಂದೆ ಬರಬೇಕು ಅಂತ ಇದ್ರೆ ಎಲ್ಲರೂ ಒಟ್ಟಾಗಬೇಕು. ಗಂಡ ಹೆಂಡತಿ ಇಬ್ಬರಲ್ಲಿ ಸಾಮರಸ್ಯ ಇರಬೇಕು. ಪೇಟೇಲಿ ಗಂಡ ಹೆಂಡತಿ ಇಬ್ಬರೂ ಹೊರಗೆ ದುಡೀತಾರೆ, ಯಾತಕ್ಕೆ? ಕುಟುಂಬದ ನಿರ್ವಹಣೆಗೆ ತಾನೆ? ಅದಾದ್ರೆ ಕೆಲಸ, ವ್ಯವಸಾಯದ್ದು ಕೆಲಸ ಅಲ್ವಾ? ಗಂಡ ಹೆಂಡತಿ ಇಬ್ಬರೂ ವ್ಯವಸಾಯದಲ್ಲಿ ಯಾಕೆ ದುಡೀಬಾರದು? ಇಲ್ಲಿ ಉತ್ಪತ್ತಿ ಕಡಿಮೆ ಆದ್ರೂ ನೆಮ್ಮದಿ ಜಾಸ್ತಿ. ವ್ಯವಸಾಯದಲ್ಲಿ ನಾವು ಗಳಿಸಿದ್ದನ್ನು ಇತರರಿಗೆ ಸ್ವಲ್ಪ ಕೊಡಬೇಕು. ಆಗ ನಮ್ಮ ಬದುಕಿಗೂ ಬೆಲೆ" ಎಂದರು ಕಸ್ತೂರಮ್ಮ.

ಅವರ ಜೀವನಾನುಭವಕ್ಕೆ, ಗಂಡ ಹೆಂಡಿರ ಅನ್ಯೋನ್ಯತೆಗೆ ನಾವು ಬೆರಗಾದೆವು. ಕಸ್ತೂರಮ್ಮನವರಿಗೆ ಕಸ್ತೂರಮ್ಮನವರೇ ಸಾಟಿ ಅಂತ ಅನ್ನಿಸಿದ್ದು ಮಾತ್ರ ಸುಳ್ಳಲ್ಲ.



ಗೊದಮಟ್ಟೆ ಮತ್ತು ಅಡಕೆ ಪಟ್ಟೆಗೂ ಒಂದು ಅಣೆ: ಎಚ್.ಎನ್.ನಾಗರಾಜ್:ಬಸವಾನಿ

ಆ) ಎ. ಮೋಹನ್‌ದಾಸ್ ಇ/ಮ ಎ.ಎಂ.ಕೃಷ್ಣದಾಸ್

ಅಂಡೇಕುಳಿ, ಬಸವಾನಿಗ್ರಾಮ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 754548



ಎ.ಮೋಹನದಾಸ್: ಅಂಡೇಕುಳಿಯ ತಮ್ಮ ತೋಟದಲ್ಲಿ

ನನಗೆ ಮೊದಲಿನಿಂದಲೂ official ಕೆಲಸ ಬೇಡ ಅನ್ನಿಸುತ್ತಿತ್ತು. ಲಂಚದ ಹಾವಳಿಯಿಂದ ನೆಮ್ಮದಿ ಇರೋಲ್ಲ. ವ್ಯವಸಾಯ ಸ್ವತಂತ್ರವಾದ ದುಡಿಮೆ, ಅದ್ರಲ್ಲಿ ನನಗೆ ಪ್ರೀತಿ ಇದೆ. ಇಲ್ಲೂ ಸಹ ನಾವು ಭೂಮಿಗೆ ಸತ್ತ್ವದ ಲಂಚ ನೀಡಿ ಫಲ ತೊಗೋತೀವಿ. ಕೆಲವೊಮ್ಮೆ ಏನೂ ಕೊಡದೇ ಫಸಲು ತೊಗೊಂಡ್ರೂ ಯಾರೂ objection ಮಾಡುವ ಹಾಗಿಲ್ಲ. ಮಣ್ಣಿಗೂ ಮನುಷ್ಯನಿಗೂ ತಾಯಿ ಮಗುವಿನ ಸಂಬಂಧ ಇದೆ. ಕೊಡುಕೊಳ್ಳುವಿಕೆಯನ್ನು ಮೀರಿದ್ದು ಇದು.

ಬಸವಾನಿಯಿಂದ ಅನತಿ ದೂರದಲ್ಲಿರುವ ಅಂಡೇಕುಳಿ ಗ್ರಾಮದ ಎಸ್.ಮಂಜಯ್ಯ, ವ್ಯವಸಾಯಗಾರರು, ಹಾಗೇ ಸ್ವಾತಂತ್ರ್ಯ ಹೋರಾಟಗಾರರು. ಇವರ ಪತ್ನಿ ಸರಸ್ವತಮ್ಮನವರು ಮೂಲತಃ ತಮಿಳುನಾಡಿನವರು. ಇವರಿಗೆ ಆರು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು. ಸ್ವಾತಂತ್ರ್ಯ ಹೋರಾಟಕ್ಕೆ ತೆರಳಬೇಕಾದ ಸಂದರ್ಭದಲ್ಲಿ, ದೇವಂಗಿಯ ಸಾಹುಕಾರರ ಬಳಿ ಜಮೀನನ್ನು ಇಟ್ಟು, ಹಣ ಪಡೆದಂತಹ ಅಪ್ಪಟ ದೇಶಪ್ರೇಮಿ. ಕಡೆಗೆ ದೇವಂಗಿಯ ಸಾಹುಕಾರರು ಅವರ ಅಂತ್ಯವಾಗುವ ಸಂದರ್ಭದಲ್ಲಿ ಜಮೀನನ್ನು ಹಿಂದಿರುಗಿಸಿ, 'ನೀವು ನಮ್ಮಿಂದ ಪಡೆದ ಹಣವನ್ನು ವಾಪಸ್ಸು ನೀಡುವುದು ಬೇಡ' ಅಂದರಂತೆ. ಎಸ್. ಮಂಜಯ್ಯ ಅವರ ಮಗ, ಹಿರಿಯರಾದ ರಾಮದಾಸ್ ವ್ಯವಸಾಯ ಮುಂದುವರೆಸಿದ್ರು. ೧೯೬೪, ೬೫ರಲ್ಲಿ ಈ ಕುಟುಂಬಕ್ಕೆ ಐದು ಎಕರೆ ಬಾಗಾಯ್ತು, ನೂರು ಎಕರೆ ಗದ್ದೆ ಇತ್ತು. ಇಷ್ಟು ಪ್ರಮಾಣದ ಜಮೀನಿನ ನಿರ್ವಹಣೆಗೆ ಎಸ್.ಮಂಜಯ್ಯ ಅವರ ನಾಲ್ಕನೆಯ ಮಗ ಎ.ಎಂ.ಕೃಷ್ಣದಾಸ್ ಅವರೂ ಬರಬೇಕಾಯ್ತು. ಕೃಷ್ಣದಾಸ್ ಜೇನು inspector ಆಗಿ ಕೆಲಸ ಮಾಡುತ್ತಿದ್ದವರು ಆ ಕೆಲಸ ಬಿಟ್ಟು ವ್ಯವಸಾಯಕ್ಕೆ ನಿಂತರು. ಕೃಷ್ಣದಾಸ್ ಅವರ ಕೈಹಿಡಿದಿದ್ದು ಹೊಸಹಳ್ಳಿಯ ಶಾರದಮ್ಮನವರು. ಈ ದಂಪತಿಗಳಿಗೆ ಎರಡು ಗಂಡು ಹಾಗೂ ಎರಡು ಹೆಣ್ಣು. ಇವರ ಹಿರಿಯ ಮಗನೇ ಎ.ಮೋಹನ್‌ದಾಸ್. ಹಿರಿಯರು ಕಟ್ಟಿ, ಬಾಳಿ, ಬೆಳೆಸಿದ ಇವರ ಬೃಹತ್ ಮನೆಗೆ ನೂರು ವರುಷ. ಮಲೆನಾಡಿಗೆ ಯೋಗ್ಯವಾದ ಈ ಮನೆಯಲ್ಲಿ ನಿಂತು, ಹಿರಿಯ ಜೀವಗಳ ಭಾವಚಿತ್ರವನ್ನು ನೋಡುತ್ತಿದ್ದರೆ, ಹಳೆಯ ಕಾಲ ಮತ್ತೆ ಎದುರಿಗೆ ನಿಂತಂತೆ ಭಾಸವಾಗುತ್ತದೆ. ಹಿರಿಯರ ಬಗ್ಗೆ ಹೆಮ್ಮೆಯಾಗುತ್ತದೆ. ಅವರು ಹಾಕಿದ ಹೆಜ್ಜೆಯ ಹಾದಿಯಲ್ಲಿ ಅಡಿಯಿಡಲು ಶ್ರಮಿಸುತ್ತಿರುವ ಮೋಹನ್‌ದಾಸ್ ನಿಧಾನವಾಗಿ ಮಾತನಾಡಿದ್ರು, "ನಾನು ಮತ್ತೂರಿನಲ್ಲಿ SSLC ವರೆಗೆ ಓದಿದೆ. ಇಲ್ಲಿ ಆಗ ಓದಲು ಸೌಕರ್ಯ ಇರಲಿಲ್ಲ. ಜಮೀನಿನ ಬಗ್ಗೆ ನನಗೆ ಮೊದಲಿನಿಂದಲೂ ಆಸಕ್ತಿ. SSLC fail ಆದೆ. ರಾಮಶರ್ಮ ಅವರ ನೆರವಿನಿಂದ



ಎ.ಮೋಹನದಾಸ್ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ: ಅಂಡೇಕುಳಿ



ಗೆಡ್ಡೆ ಅಗೆಯುತ್ತಿರುವ ಎ.ಮೋಹನದಾಸ್: ಅಂಡೇಕುಳಿ

ಶೃಂಗೇರಿಯ ವೇದಪಾಠಶಾಲೆಗೆ ಸೇರಿದೆ. ಮೂರು ತಿಂಗಳು ಅಲ್ಲಿದ್ದೆ. ಆರೋಗ್ಯ ಸರಿ ಇರಲಿಲ್ಲ. ಅದನ್ನು ಬಿಟ್ಟು ಬಂದ ಮೇಲೆ ರಾಮಶರ್ಮರೇ ನನಗೆ ರುದ್ರ, ಚಮೆ, ಶ್ರೀಸೂಕ್ತ, ಪುರುಷಸೂಕ್ತ, ಪೂಜೆ ಪುನಸ್ಕಾರಗಳ ವಿಧಾನ ಹೇಳಿಕೊಟ್ರು. ಸೋಮೇಶ್ವರ ದೇವಸ್ಥಾನದಲ್ಲಿ ಪೂಜೆ ಕೊಡಿಸಿದ್ರು. ಆರು ವರುಷ ಪೂಜೆ ಮಾಡಿದೆ. ದೇವಸ್ಥಾನದ ಕಮಿಟಿ ಬದಲಾಯ್ತು. ನನಗೂ ಅವರಿಗೂ ಹೊಂದಿಕೆ ಆಗಲಿಲ್ಲ. ಬಿಟ್ಟುಬಿಟ್ಟೆ. ಜಮೀನು ಪೂರ್ಣವಾಗಿ ಹಿಸ್ಸೆ ಆದ ಮೇಲೆ ನನ್ನ ಪಾಲಿಗೆ ಒಂದು ಎಕರೆ ತೋಟ, ಮುಕ್ಕಾಲು ಎಕರೆ ಗದ್ದೆ ಬಂತು. ಹೊಸದಾಗಿ ಒಂದೂವರೆ ಎಕರೆ ತೋಟವನ್ನು ನಾನು ಈಗ ಎರಡು ವರುಷದ ಹಿಂದಿನಿಂದ ಎಬ್ಬಿಸಿದೀನಿ. ಈಗ ನನ್ನ ಜೀವನಕ್ಕೆ ವ್ಯವಸಾಯವೇ ಆಧಾರ. ತೋಟದ ಕೆಲಸ ವಿಪರೀತವಾಗಿ ಇದ್ದಾಗ ಕೂಲಿ ಕೆಲಸದವರನ್ನು ಕರೆದುಕೊಳ್ತೀನಿ. ಒಬ್ಬನ ಕೆಲಸವಿದ್ದಾಗ ನಾನೇ ಮಾಡ್ತೀನಿ. ಹಳೆಯ ತೋಟದಲ್ಲಿ ಅಡಿಕೆ, ಬಾಳೆ, ಕಾಫಿ, ಏಲಕ್ಕಿ, ಕಾಳುಮೆಣಸು, ವಿಳ್ಳೇದೆಲೆ ಬೆಳೆದಿದೀನಿ. ಕಾಫಿ ಹಾಗೂ ವಿಳ್ಳೇದೆಲೆ ಮನೆಬಳಕೆಗೆ ಮಾತ್ರ. ಎಂಟು ರಿಂದ ಒಂಭತ್ತು ಕ್ವಿಂಟಾಲ್ ಅಡಿಕೆ ಆಗುತ್ತೆ. ಒಳ್ಳೆಯ ಧಾರಣೆ ದೊರಕಿದ್ರೆ ಒಂದು ಲಕ್ಷ ರೂಪಾಯಿ ಆದಾಯ ದೊರಕುತ್ತೆ. ಮನೇಲಿ ಎರಡು ಹಸು, ಮೂರು ಎಮ್ಮೆ ಇದೆ. ಗೋಬರ್ ಅನಿಲ ಘಟಕ ಇದೆ. ಅದರ ಗ್ಯಾಸ್ ಮನೆ ಅಡಿಗೆಗೆ ಉಪಯುಕ್ತ. ಹಾಲು ಹೆಚ್ಚಾದಾಗ ಮಾರ್ತೀನಿ. ಮಳೆಗಾಲದ ಆರಂಭಕ್ಕಿಂತ ಮುಂಚೆ ಅಡಿಕೆ ತೋಟದಲ್ಲಿ ಕಪ್ಪು ಹೆರೆದು, ಹಳ ತೆಗೆದು, ಬೋರ್ಡೋ ದ್ರಾವಣ ಸಿಂಪರಣೆ ಮಾಡ್ತೀನಿ. ಕೊಳೆರೋಗ ಬರೋದಿಲ್ಲ. ನಾವು ಸ್ವತಃ ದುಡಿದ್ರೆ ಮಾತ್ರ ವ್ಯವಸಾಯದಲ್ಲಿ ಬದುಕಬಹುದು. ನನ್ನ ತಂದೆ ಬಹಳ ದೃಢಕಾಯರಾಗಿದ್ರು. ದಿನಕ್ಕೆ ಎರಡಾಳಿನ ಕೆಲಸ ಮಾಡೋರು. ನನಗೆ ಅವರಷ್ಟು ಶಕ್ತಿಯನ್ನು ಭಗವಂತ ಕೊಡಲಿಲ್ಲ.

ನನ್ನ ತಮ್ಮ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸದಲ್ಲಿದ್ದಾನೆ. ನನ್ನ ತಾಯಿ ಅವನ ಜತೆಗೆ ಇದ್ದಾರೆ. ನನ್ನ ತಾಯಿಗೆ ಸಂಗೀತ ಹಾಗೂ ಕಾವ್ಯವಾಚನದಲ್ಲಿ ಬಹಳ ಪ್ರೌಢಿಮೆ ಇದೆ. ಬೆಂಗಳೂರಿನಲ್ಲಿಯೇ ೨೫ ಜನರಿಗೆ ಪಾಠ ಹೇಳ್ತಾರೆ. ನನಗೆ ಇಬ್ಬರು ಹೆಣ್ಣುಮಕ್ಕಳು. ನನ್ನ ತಮ್ಮ, ಅಕ್ಕ ತಂಗೀರು ಇಡೀ ಜಮೀನನ್ನು ನನಗೆ ಬಿಟ್ಟಿದಾರೆ. ನನ್ನ ಹೆಂಡತಿ ರತ್ನ, ಇಲ್ಲಿಗೆ ಅರ್ಧ ಕಿಲೋಮೀಟರ್ ದೂರದಲ್ಲಿರುವ ಬಂಡಿಗಡಿ ಗ್ರಾಮದ ಕೆಸವಿನ ಮನೆ ಶಿವರಾಮಯ್ಯ ಹಾಗೂ ಸರಸ್ವತಿ ದಂಪತಿಗಳ ಮಗಳು. ಅವರು ಕೋಟದವರು, ಘಟ್ಟದ ಕೆಳಗಿನ ಜನ, ಆದರೆ ವ್ಯವಸಾಯಸ್ಥರು. ನನ್ನ ಜತೆಗೆ ನನ್ನ ಹೆಂಡತಿ ಜಮೀನಿನಲ್ಲಿ ದುಡೀತಾಳೆ, ಮನೆಯ ನಿರ್ವಹಣೆ ಸಹಾ ಮಾಡ್ತಾಳೆ. ನನಗೆ ವ್ಯವಸಾಯದ ಬದುಕು ನೆಮ್ಮದಿ ನೀಡಿದೆ. ಆದರೆ ನನ್ನ ತಲೆ ಇರುವವರೆಗೆ ಮಾತ್ರ ವ್ಯವಸಾಯ ಅಷ್ಟೆ. ನನಗೆ ಕೈಲಾಗುವವರೆಗೆ ಮಾಡ್ತೀನಿ. ನಂತರ ನಾನೂ ಪಟ್ಟಣ ಸೇರ್ತೀನಿ. ಅಲ್ಲಿಗೆ ನಮ್ಮ ವ್ಯವಸಾಯ ಅಂತ್ಯ ಕಾಣುತ್ತೆ" ಅಂದ್ರು ಮೋಹನ್‌ದಾಸ್. ಅವರ ಕೆಲವು ಭಾವಚಿತ್ರ ತೆಗೆದು ನಾವು ಅಲ್ಲಿಂದ ಹೊರಟಾಗ ಸೂರ್ಯ ನಡುನೆತ್ತಿಯಲ್ಲಿದ್ದ.



ಕೊಟ್ಟಿಗೆಯ ನಿರ್ವಹಣೆ: ಎ.ಮೋಹನದಾಸ್: ಅಂಡೇಕುಳಿ

೩) ಸಾವಿತ್ರಮ್ಮ ೩/ಹಂ ರಾಮಶರ್ಮ

ಬಸವಾನಿ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ದೂರವಾಣಿ: 08181 754745



ಸಾವಿತ್ರಮ್ಮ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ: ಬಸವಾನಿ

ಇವತ್ತಿನ ಆಧುನಿಕ ಬೇಸಾಯವಿಜ್ಞಾನದ ರೀತಿ ಸಂಪೂರ್ಣವಾಗಿ ಬೇಸಾಯ ಮಾಡದೆ, ನಮ್ಮ ಹಳೆಯ ಕಾಲದ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡ್ರೆ ಸುಖವಾಗಿ ಬದುಕಬಹುದು. ಆಧುನಿಕ ಬೇಸಾಯ ಕ್ರಮ, ರಸಗೊಬ್ಬರ, ಇವುಗಳಿಂದ ಸದ್ಯಕ್ಕೆ ಬೇಕಾದಷ್ಟು ಸಿಕ್ರೂ, ಆಮೇಲೆ ಉತ್ಪತ್ತಿ ಕಡಿಮೆಯಾಗುತ್ತೆ. ಆಧುನಿಕ ಗೊಬ್ಬರಗಳಿಗಿಂತ ನಮ್ಮ ಹಸಿರುಸೊಪ್ಪು, ಹಟ್ಟಿಗೊಬ್ಬರವೇ ಶ್ರೇಷ್ಠವಾದದ್ದು. ಅತಿಯಾಗಿ ೨೦, ೩೦ ಎಕರೆ ಜಮೀನು ಮಾಡಲು ಹೋಗಬಾರದು. ನಮ್ಮ ಕೈಲಿ ಎಷ್ಟು ಸಾಧ್ಯವೋ ಅಷ್ಟು ಮಾಡಿದ್ರೆ ಸುಖ, ನೆಮ್ಮದಿ. ಕೃಷಿ ಬದುಕಿನಲ್ಲಿ ಸಿಗುವ ಸಂತೃಪ್ತಿ ಬೇರೆಲ್ಲೂ ಸಿಗೋದಿಲ್ಲ. ಆದರೆ ಮನುಷ್ಯ ಅತಿಯಾಗಿ ಗಳಿಸಲು ಹೋಗಿ ತನ್ನ ನೆಮ್ಮದೀನ ತಾನೇ ಹಾಳು ಮಾಡಿಕೊಳ್ಳುತ್ತಾನೆ ಅನ್ನುವುದು ನನ್ನ ನಂಬಿಕೆ.

ಲಿಂಗದಹಳ್ಳಿಯ ವೆಂಕಟರಮಣಾವಧಾನಿ ಹಾಗೂ ಮಹಾಲಕ್ಷ್ಮಿ ದಂಪತಿಗಳಿಗೆ ನಾಲ್ಕು ಗಂಡು ಹಾಗೂ ಎರಡು ಹೆಣ್ಣುಮಕ್ಕಳು. ಮೂರನೆಯ ಮಗಳೇ ಸಾವಿತ್ರಮ್ಮ. ಇವರು ಮದುವೆಯಾದದ್ದು ಬಸವಾನಿಯ ವಿಶ್ವನಾಥ ಭಟ್ ಹಾಗೂ ನಾಗಮ್ಮ ದಂಪತಿಗಳ ಮಗ ರಾಮಶರ್ಮ ಅವರನ್ನು. ಸಾವಿತ್ರಮ್ಮ-ರಾಮಶರ್ಮ ಅವರು ೮೦ರ ಇಳಿವಯಸ್ಸಿನ ವೃದ್ಧ. ಕಾಯ ಹಣ್ಣಾದರೂ . . ಮನಸ್ಸಿಗೆ ೨೦ರ ನಲಿವಿದೆ. . ೪೦ರ ದೃಢತೆಯಿದೆ.. ಜೀವನದ ಅನುಭವ ಪಕ್ವವಾಗಿದೆ. ಇವರು ಮಾತನಾಡಿದರೆ ನುಡಿಮುತ್ತುಗಳು ಅರಳುತ್ತವೆ . . ಬರೆದು ದಾಖಲಿಸುವ ಲೇಖನಿ ಖುಷಿಯಿಂದ ಓಡುತ್ತದೆ. ಅವರ ಆತ್ಮಕಥೆಯನ್ನು ಅವರೇ ಬರೆದು ಕಳಿಸಿದ ರೀತಿಯಲ್ಲೇ, ನಮ್ಮ ಸಂದರ್ಶನದ ಭಾಗಗಳ ಜತೆ ಸೇರಿಸಿ ನೀಡಿದ್ದೇನೆ. 'ನನ್ನ ತಾಯಿ ತಂದೆ ಸಂಪ್ರದಾಯಸ್ಥರು, ವಿದ್ಯಾವಂತರು, ಹಾಗೇ ಆಚಾರವಂತರು. ನಮ್ಮ ತಂದೆ ತಾಯಿಗೆ ಆರು ಜನ ಮಕ್ಕಳು; ಹಾಗೇ ನಮ್ಮ ದೊಡ್ಡಪ್ಪದೊಡ್ಡಮ್ಮನವರಿಗೂ ಆರು ಜನ ಮಕ್ಕಳು. ನಮ್ಮದು, ತುಂಬಿದ ದೊಡ್ಡ ಕುಟುಂಬ. ನಾವೆಲ್ಲಾ ಸಹೋದರ ಸಹೋದರಿಯರು ಒಟ್ಟಿಗೆ ಬೆಳೆದವರು. ನನ್ನ ತಂದೆ ತೋಟದ ಕೆಲಸ ಹಾಗೂ ದೊಡ್ಡಪ್ಪ ಗದ್ದೆಯ ಕೆಲಸ ಮಾಡ್ತಿದ್ರು. ನನ್ನ ಅಜ್ಜಿ ಹಾಗೂ ತಾಯಿಗೆ ಕೃಷಿಯಲ್ಲಿ ಆಸಕ್ತಿಯಿತ್ತು. ಅವರ ಜತೇಲಿ ನಾವೂ ತೋಟಕ್ಕೆ ಹೋಗಿ ಅವರ ಮಾರ್ಗದರ್ಶನದಲ್ಲಿ ಸಣ್ಣಪುಟ್ಟ ಕೆಲಸ ಮಾಡ್ತಿದ್ವಿ. ನನ್ನ ತಂದೆ, ತಾಯಿ, ದೊಡ್ಡಪ್ಪ, ಅಜ್ಜಿ, ದೊಡ್ಡಮ್ಮ ಎಲ್ಲಾ ಭತ್ತದ ಖಟಾವಿನ ಸಂದರ್ಭದಲ್ಲಿ ಗದ್ದೇಲಿ ಅಡುಗೆ ಮಾಡಿ, ಅಲ್ಲೇ ಊಟ ಮಾಡೋರು. ನಮಗೂ ಇದನ್ನೆಲ್ಲಾ ನೋಡಿ ಕೃಷಿಯ ಬಗ್ಗೆ ಒಲವು ಬೆಳೀತು. ನಾನು ಓದಿದ್ದು ಏಳನೆಯ ತರಗತಿಯವರೆಗೆ ಮಾತ್ರ. ನನಗೆ



ಎಲ್ಲ ಜಾತಿಯ ಬಡ ಮಕ್ಕಳಿಗೆ ಆಶ್ರಯ: ಸಾವಿತ್ರಮ್ಮ ಅವರ ಮನೆ: ಬಸವಾನಿ

ಬಡವರಿಗೆ ಏನಾದರೂ ಸಹಾಯ ಮಾಡಬೇಕು, ಊರಿಗೆ ಒಳ್ಳೆಯದನ್ನು ಮಾಡಬೇಕು, ನಮ್ಮ ಪರಿಸರವನ್ನು ಒಳ್ಳೆಯ ರೀತಿಯಲ್ಲಿ ಇಡಬೇಕು ಅನ್ನುವ ಕನಸುಗಳಿದ್ದು. ನಮ್ಮಜ್ಜ ರಾಮಾಯಣ, ಮಹಾಭಾರತದ ಸುಂದರ ಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ರು. ನನ್ನ ತಾಯಿ, ಸತ್ಯಹರಿಶ್ಚಂದ್ರ, ಪಾರ್ವತೀಕಲ್ಯಾಣ ಹಾಗೂ ಸತ್ಯವಾನ್ ಸಾವಿತ್ರಿಯ ಹಾಡುಗಳನ್ನು ಹೇಳಿ ಕೊಡುತ್ತಿದ್ರು. ಇದ್ರಿಂದ ನಮಗೆ ಸತ್ಯವಂತರಾಗಿದ್ದು, ಬದುಕಿನಲ್ಲಿ ಏನೇ ಕಷ್ಟ ಕಾರ್ಪಣ್ಯಗಳು ಬಂದರೂ ಎದುರಿಸಿ ಬಾಳುವ ಛಲ ಬಂತು. ನನ್ನ ತಾಯಿ ಪೂಜೆ, ಪುನಸ್ಕಾರ, ದೇವರಸೇವೆ, ಉಪವಾಸ ಮಾಡ್ತಾ ಇದ್ದದ್ದನ್ನು ನೋಡಿ ನಾವೂ ಕಲಿತ್ವು. ಹೇಳಬೇಕೂಂದ್ರೆ ನನ್ನ ತಾಯಿ ದುಡ್ಡನ್ನೇ ಮುಟ್ಟಿಲ್ಲ. ಒಂದು ರೂಪಾಯಿ, ಎಂಟಾಣೆ, ದೇವರಪೂಜೆಗೆ ಬೇಕಿದ್ರೆ ನಮ್ಮ ಬಳಿ ಹೇಳಿ ಕಳಿಸೋರು. ನಾವು ತಂದೆಯ ಹತ್ರ ತೊಗೊಂಡು, ತಾಯಿಗೆ ಕೊಡೋವಿ. ನಾನು ಪ್ರಾಮಾಣಿಕತೆ ಕಲಿತದ್ದು ತಾಯಿಯಿಂದ. ಅಜ್ಜಿ, ತಾಯಿ ನಮಗೆ ಏನನ್ನೂ ಉಪದೇಶ ಮಾಡಿಲ್ಲ. ಜತೆಯಲ್ಲಿಯೇ ನಮ್ಮನ್ನು ಕೂರಿಸಿಕೊಂಡು ಅವರು ಕೆಲಸ ಮಾಡೋರು. ಅವರು ಮಾಡೋದನ್ನು ನೋಡಿ ನಾವು ಕಲಿತ್ವಿ. ಹೆಣ್ಣುಮಕ್ಕಳಿಗೆ ಆಸಕ್ತಿ ಇರದಿದ್ರೆ ಬೇಸಾಯ ಆಗೋಲ್ಲ. ಹೆಣ್ಣೂ ಅರ್ಧಭಾರ ವಹಿಸಿಕೊಂಡ್ರೆ ವ್ಯವಸಾಯ ಅಷ್ಟೆ. ಇವತ್ತಿನ ತಂದೆ ತಾಯಂದಿರು ಅವರೂ ಕೆಲಸ ಮಾಡೋಲ್ಲ; ಪೇಟೇಲಿ ಇರ್ತಾರೆ . . ಮಕ್ಕಳಿಗೂ ವ್ಯವಸಾಯದ ವ್ಯಾಮೋಹ ಬರೋಲ್ಲ. ಆದ್ರೆ ಹಳ್ಳಿಯ ಕೃಷಿ ಪರಿಸರದಲ್ಲಿಯೇ ತಾಯಿ ಇದ್ರೆ ಮುಂದೆ ಹೆಣ್ಣುಮಕ್ಕಳಿಗೂ ಅದರ ಬಗ್ಗೆ ಒಲವು ಬರುತ್ತೆ. ತಂದೆ ತಾಯಿ ಸುಳ್ಳು ಹೇಳಿ, ಮಕ್ಕಳನ್ನು ಸತ್ಯವಂತರಾಗಿ ಮಾಡುವುದು ಅಸಾಧ್ಯ. ಮನೆ ಹಿರಿಯರು ಮಕ್ಕಳಿಗೆ ಸಂಸ್ಕಾರ ಕಲಿಸಬೇಕು. ಅಜ್ಜಿಯಾದವಳು ಮೊಮ್ಮಗಳಿಗೆ ದೇವರಪೂಜೆ ಮಾಡಮ್ಮ ಅಂದಾಗ ತಾಯಿಯಾದವಳು, "ಅವಳಿಗೆ ಸಮಯಾನೇ ಇಲ್ಲ, ಕಾಲೇಜಿಗೆ ಹೋಗಬೇಕು" ಅಂದ್ರೆ ಏನಾಗುತ್ತೆ. ಹಿಂದಿನ ಕಾಲದಲ್ಲಿ ಹೆಂಗಸರೂ ತೋಟಕ್ಕೆ ಹೋಗೋರು, ಗದ್ದೆ ಕುಯ್ಲಿಗೆ ಹೋಗೋರು, ಗಂಡಸಿಗೆ ಸರಿಸಮವಾಗಿ ದುಡಿಯೋರು. ಕೃಷಿ ಉಳಿಯಬೇಕಿದ್ರೆ ಗಂಡಹೆಂಡತಿ ಇಬ್ಬರೂ ಸಮವಾಗಿ ದುಡಿಯಲೇಬೇಕು. ಇಲ್ಲಾಂದ್ರೆ ಆಗೋಲ್ಲ. ನಮ್ಮ ಅಜ್ಜಿಗೆ ಚಿಕ್ಕ ವಯಸ್ಸಿನಲ್ಲೇ ಗಂಡ ಹೋದರಂತೆ. ಸಣ್ಣಪುಟ್ಟ ಮಕ್ಕಳನ್ನು ಕಟ್ಟಿಕೊಂಡು ಅವರೇ ತೋಟದಲ್ಲಿ ದುಡಿದಿದಾರೆ. ನನ್ನ ತಂದೆ ಕೃಷಿ ಕೆಲಸದಲ್ಲಿ ಹೆಚ್ಚು ಪ್ರಾವೀಣ್ಯ ಪಡೆದಿದ್ರು. ವೇದ-ವೇದಾಂತದಲ್ಲೂ ಪ್ರಾವೀಣ್ಯ ಇತ್ತು. ಮೇಲು, ಕೀಳು ಎಂಬ ಭಾವನೆ ಅವರಿಗೆ ಇರಲಿಲ್ಲ. ಅವರು ಪೌರೋಹಿತ್ಯವನ್ನು ಸಹ ಮಾಡ್ತಿದ್ರು. ಬಡಬಗ್ಗರ ಕೆಲಸವನ್ನು ತಮ್ಮ ಸ್ವಂತ ಕಷ್ಟವನ್ನು ಪರಿಗಣಿಸದೇ ಮಾಡ್ತಿದ್ರು. ಹೀಗಾಗಿ ಅವರು ಜನಾನುರಾಗಿಯಾಗಿದ್ರು. ನನ್ನ ದೊಡ್ಡಪ್ಪನವರಿಗೂ ತಂದೆಯ ಮೇಲೆ ಪ್ರೀತಿ ಇತ್ತು. ತಂದೆಯವರ ಉದಾರತೆಯಿಂದ, ಮನೇಲಿ ಸಾಲವಾದ್ರೂ ಅವರು ಪ್ರೀತಿಯಿಂದ ಸೈರಿಸಿಕೊಂಡ್ರು. ಒಟ್ಟು ಕುಟುಂಬ ಉಳೀತು. ನನ್ನ ತಂದೆಗೆ ಜಾನುವಾರುಗಳ ಮೇಲೆ ಬಹಳ ಕರುಣೆ; ಪ್ರೀತಿಯಿಂದ ನಾಟಿ ಔಷಧ ನೀಡಿ ಅವುಗಳ ಖಾಯಿಲೆ ವಾಸಿ ಮಾಡ್ತಿದ್ರು. ಗಾಯವಾದ ದನಗಳಲ್ಲಿ ಹುಳ ತೆಗೆದು ಔಷಧಿ ಹಾಕ್ತಿದ್ರು. ನನ್ನ ತಂದೆ ಮನೇಲಿ, ಅಜ್ಜನ ಕಡೆಯವರು ಪಿಟೀಲು ಕಲಿತಿದ್ರು. ಅವರು ತೋಟದಲ್ಲೇ ಅದನ್ನು ಹೇಳಿಕೊಡ್ತಾ ತೋಟದ ಕೆಲಸ ಮಾಡೋರಂತೆ. ನನ್ನ ತಂದೆ ತಾಯಿ, ಮನೆಯ ಆರ್ಥಿಕ ಸ್ಥಿತಿ ಉತ್ತಮವಾಗಿರದಿದ್ರೂ ಮಕ್ಕಳಿಗೆ ಪ್ರೋತ್ಸಾಹ ನೀಡಿ, ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ನೀಡಿದ್ರು. ಅವತ್ತಿನ ಪರಿಸರದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವಿರಲಿಲ್ಲ. ಅಂತಹದರಲ್ಲೂ ನನ್ನ ತಾಯಿ, ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡಿದ್ರು, ತರಗತಿಯಲ್ಲಿ ಮೊದಲಿಗಳಾಗಿರುವಂತೆ ನೋಡಿಕೊಂಡ್ರು. ನಮ್ಮ ಹಳ್ಳೀಲಿ ಪ್ರೌಢಶಾಲೆ ಇರಲಿಲ್ಲ. ನಾನು ಏಳನೆಯ ತರಗತಿ ಓದಿದ ಮೇಲೆ, ಚಿಕ್ಕವಯಸ್ಸಿಗೇ, ನನ್ನ ತಂದೆಯ ತಂಗಿಯ ಮಗ ಬಸವಾನಿಯ ರಾಮಶರ್ಮರೊಂದಿಗೆ ನನ್ನ ಮದುವೆ ಆಯ್ತು. ಗಂಡ ಶೃಂಗೇರಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದ ಪ್ರಜ್ಞಾವಂತರು. ಮೂರು ಎಕರೆ ತೋಟ, ನಾಲ್ಕು ಎಕರೆ ಗದ್ದೆ ಇತ್ತು. ಗಂಡನ ಮನೇಲಿ ಅಡುಗೆ ಕೆಲಸ, ತೋಟದ ನಿರ್ವಹಣೆ ಎರಡನ್ನೂ ಮಾಡಬೇಕಾಗಿ ಬಂತು. ರಾಮಶರ್ಮ ಅವರು ಹೆಚ್ಚಿನ ವೇದವಿದ್ಯಾಭ್ಯಾಸಕ್ಕೆ ಮಾಯಾವರಂಗೆ ಹೋದರು. ನಂತರ ಅವರನ್ನು ಅನುಸರಿಸಿ ನಾನೂ ಮಾಯಾವರಂಗೆ ಹೋದೆ. ಅಲ್ಲಿನ ಪರಿಸರಕ್ಕೆ ಹೊಂದಿಕೊಂಡೆ. ಅಲ್ಲಿ ಎರಡು ವರುಷ ಕಳೆದು ಮತ್ತೆ ನಾವು ಬಸವಾನಿಗೆ ಹಿಂತಿರುಗಿದೆವು. ಆಗ ನನಗೆ ೨೦ ವರುಷ. ಅದೇ ಸಂದರ್ಭದಲ್ಲಿ ಮಹಾತ್ಮಾಗಾಂಧಿಯವರು ತೀರ್ಥಹಳ್ಳಿಗೆ ಬಂದಿದ್ದರು. ನಾನೂ ಅವರ ದರುಶನಕ್ಕೆ ಹೋದೆ. 'ದೇಶ್ ಕಿ ಸೇವಾ ಕರೋ' ಅನ್ನುವ ಅವರ ಮಾತು ಮನದಲ್ಲಿ ಬಲವಾಗಿ ಬೇರೂರಿತು. ರಾಮಶರ್ಮರಂತೂ ದೇಶಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಅವರಿಗೆ ದೇಶವೇ ಸಂಸಾರವಾಯ್ತು. ಎಲ್ಲರೊಡನೆ ಒಂದಾಗಿ ದುಡಿದರು. ಸಮುದಾಯದ ಚಿಂತನೆ ಅವರಿಗೆ ಜಾಸ್ತಿ. ಸ್ವಾತಂತ್ರ್ಯದ ಚಳವಳಿ ಸಂಘಟಿಸಲು ಊರೂರು ತಿರುಗಲು ಆರಂಭಿಸಿದ್ರು. ಮನೆಯಲ್ಲಿರುವುದು ಕಡಿಮೆಯಾಯ್ತು. ಕೃಷಿ ನನ್ನ ಪಾಲಾಯ್ತು. ನಿರ್ವಹಣೆಯಿಲ್ಲದೆ ತೋಟ ಹೀನಸ್ಥಿತಿಯಲ್ಲಿತ್ತು. ಹೊಸದಾಗಿ ಅಡಿಕೆ ಸಸಿಗಳನ್ನು ಆಳುಗಳ ಸಹಕಾರದಿಂದ ಕೂರಿಸಿದೆ. ತೋಟದ ನಿರ್ವಹಣೆಗೆ, ಸ್ವಾತಂತ್ರ್ಯದ ಹೋರಾಟಕ್ಕೆ ಸಾಲ ಮಾಡಬೇಕಾಯ್ತು. ಉತ್ಪತ್ತಿ ಇರಲಿಲ್ಲ. ಬಡ್ಡಿ ಬೆಳೀತು. ರಾಮಶರ್ಮರು ಚಳವಳಿ ನಿಮಿತ್ತ ಊರಲ್ಲಿರಲಿಲ್ಲ. ಹಣ ಕೊಟ್ಟವರು ಫಸಲನ್ನು ತೆಗೆಯುತ್ತೇವೆಂದು ಹೇಳಿಕಳಿಸಿದ್ರು. "ಅವರಿಲ್ಲದಾಗ ಅಡಿಕೆ ಕೊನೆ

ತೆಗೆಯಲು ನಾನು ಬಿಡುವುದಿಲ್ಲ, ಅವರು ಊರಿಗೆ ಬಂದ ಮೇಲೆ ಮಾತನಾಡಿ" ಅಂತ ಹೇಳಿಕಳಿಸಿದೆ. ಆದರೂ ಅವರು ಕೇಳದೆ ಮಾರನೇ ದಿನ ಬೆಳಗ್ಗೆ ಆರು ಘಂಟೆಗೆ ಐವತ್ತು ಜನ ಗಂಡಾಳಿನ ಸಮೇತ ಬಂದು ತೋಟದಲ್ಲಿ ಕೊನೆ ಕೆಡವಲು ಮರಹತ್ತಲು ಆರಂಭಿಸಿದ್ರು. ನನ್ನ ಮನವಿಗೆ ಅವರು ಬೆಲೆ ಕೊಡಲಿಲ್ಲ. ಕಡೆಗೆ ನಾನು ರೋಷದಿಂದ "ಮೊದಲು ನನ್ನ ರಕ್ತವನ್ನು ಚೆಲ್ಲಿ . . ಆಮೇಲೆ ಗೊನೆ ಕಡಿದುಕೊಂಡು ಹೋಗಿ" ಎಂದು ಚೀರಿದೆ. ಮಧ್ಯಾಹ್ನದವರೆಗೂ ಅವರನ್ನು ತಡೆದೆ. ಅವರು ತಾಳಲಾರದೆ ಹೊರಟುಹೋದ್ರು. ಊರಿನ ಜನರೆಲ್ಲಾ ಈ ಘಟನೆಯನ್ನು ದೂರದಿಂದಲೇ ನೋಡುತ್ತಿದ್ದರು. ಇದು ನನ್ನ ಜೀವನದ ಮಹತ್ತ್ವದ ಘಟ್ಟ.

ಒಂದು ದಿನ ಕಸ್ತೂರಬಾ ಟ್ರಸ್ಟಿನ ಆಶ್ರಯದಲ್ಲಿ ಮೈಸೂರು ಸಮೀಪ ಇರುವ ಪಡುವಾರಹಳ್ಳಿಯಲ್ಲಿ ಹೆಣ್ಣು ಮಕ್ಕಳಿಗೆ ಉಚಿತ ತರಬೇತಿ ಇರುವ ವಿಚಾರವನ್ನು ರಾಮಶರ್ಮರು ನನಗೆ ತಿಳಿಸಿದರು. 'ನಿನಗೆ ಆಸಕ್ತಿ ಇದ್ದರೆ ಹೋಗು' ಎಂದು ಧೈರ್ಯ ತುಂಬಿದರು. ಅವರ ಅನುಮತಿ ಪಡೆದು ಅಲ್ಲಿಗೆ ಹೋದೆ. ಪೂಜ್ಯ ಶ್ರೀಮತಿ ಯಶೋಧರ ದಾಸಪ್ಪನವರ ನೇತೃತ್ವದಲ್ಲಿ ಆ ತರಬೇತಿ ನಡೀತಿತ್ತು. ತರಬೇತಿಯಲ್ಲಿ ಚರಕದಿಂದ ನೂಲುವುದು, ಎಲ್ಲಾ ಕಡೆ ಸಫಾಯಿ ಕೆಲಸ, ಹಳ್ಳಿಹಳ್ಳಿಗಳಿಗೆ ಹೋಗಿ ಅವರನ್ನು ಪರಿಚಯಿಸಿಕೊಳ್ಳುವುದು, ಬಾಲವಾಡಿ ತರಗತಿ ನಡೆಸುವುದು ತಿಳಿಯಿತು. ಭಾರತೀಯ ಆಯುರ್ವೇದ ಪದ್ಧತಿಯಲ್ಲಿ, ಎಲ್ಲರನ್ನೂ ಕಾಡುವ ಖಾಯಿಲೆಗಳಿಗೆ ಔಷಧಿ ತಯಾರಿಸುವ ವಿಧಾನ ಹಾಗೂ ಗಿಡಮೂಲಿಕೆಗಳ ಪರಿಚಯವೂ ಆಯ್ತು. ಕಡೆಗೆ ಬಾಪೂಜಿಯವರ ದರ್ಶನ ಮಾಡಿ ಅವರ ನುಡಿಗಳನ್ನು ಆಲಿಸಲು, ನಮ್ಮನ್ನು ಮದರಾಸಿಗೆ ಕರೆದೊಯ್ದರು. ನನಗೆ ಅವರ ಭಾಷಣ ಕೇಳಿ ಸಂತೋಷವಾಯ್ತು. ಬಾಪೂಜಿಯವರು "ನೀವು ನಿಮ್ಮ ಹಳ್ಳಿಯಲ್ಲಿ ಸೇವೆ ಮಾಡುವಿರಾ ಅಥವಾ ಬೇರೆ ಕಡೆ ಸೇವೆ ಮಾಡುವಿರಾ?" ಎಂದು ಪ್ರಶ್ನಿಸಿದರು. ನಾನು ಎದ್ದು ನಿಂತು "ನಮ್ಮ ಹಳ್ಳಿಯಲ್ಲಿಯೇ ಇದ್ದು ಜನರ ಸೇವೆ ಮಾಡುತ್ತೇನೆ" ಎಂದೆ. ಅವರು ಸಂತೋಷದಿಂದ ಹರಸಿದರು. ತರಬೇತಿ ಮುಗಿಸಿ ನಾನು ಊರಿಗೆ ಬಂದಾಗ ಸ್ವಾತಂತ್ರ್ಯ ಚಳವಳಿ ಜೋರಾಗಿತ್ತು. ರಾಮಶರ್ಮರು ಪೂರ್ಣವಾಗಿ ಚಳವಳಿಯಲ್ಲಿ ಭಾಗವಹಿಸಿದ್ದರು. ನನ್ನನ್ನೂ ಭಾಗವಹಿಸು ಎಂದರು. ನಾನೂ ಚಳವಳಿಯಲ್ಲಿ ತೊಡಗಿದೆ. ತೀರ್ಥಹಳ್ಳಿ ಹಾಗೂ ಸುತ್ತಮುತ್ತಲ ಹಳ್ಳಿಗೆ ಹೋಗಿ ಹೆಣ್ಣುಮಕ್ಕಳನ್ನು ಹುರಿದುಂಬಿಸಿದೆ. ನಾವಿಬ್ಬರೂ ಹೊರಗಡೆ ಹೋದಾಗ ತೋಟವನ್ನು ನಂಬಿಕಸ್ತರ ನಿರ್ವಹಣೆಗೆ ಬಿಟ್ಟು ಹೋಗೋವಿ. ಆ ಕಾಲದಲ್ಲಿ ಪ್ರಾಮಾಣಿಕತೆ ಇತ್ತು. ತೋಟಕ್ಕೆ ತೊಂದರೆ ಆಗಲಿಲ್ಲ. ನಾವು ಹೆಂಗಸರೆಲ್ಲಾ ಸೇರಿ ತಾಲ್ಲೂಕು ಕಛೇರಿ ಎದುರು ಧರಣಿ ಕುಳಿತೆವು. ಪೊಲೀಸರು ಗುಂಡು ಹಾರಿಸುತ್ತೀವಿ ಅಂದರೂ ಹೆದರಲಿಲ್ಲ. "ಸ್ವಾತಂತ್ರ್ಯ ಬರುವವರೆಗೂ ಚಳವಳಿ ಮುಂದುವರಿಸುತ್ತೀವಿ" ಅಂತ ಪಟ್ಟು ಹಿಡಿದೆವು. ನಮ್ಮನ್ನೆಲ್ಲಾ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಹಾಕಿದ್ರು. ಕೆಲ ದಿನಗಳಲ್ಲಿ ನಮಗೆ ಸ್ವಾತಂತ್ರ್ಯ ದೊರಕಿತು. ಜೈಲಿನಿಂದ ನನ್ನ ಬಿಡುಗಡೆಯಾಯ್ತು. ಎಲ್ಲೆಲ್ಲೂ ಉತ್ಸವದ ವಾತಾವರಣ. ಮನೆಗೆ ಬಂದ ಮೇಲೆ ಕೃಷಿ ಹಾಗೂ ಸಮಾಜಸೇವೆ ನನ್ನ ಮುಖ್ಯ ಗುರಿಯಾಯ್ತು. ತೋಟಕ್ಕೆ ಸಮಯಕ್ಕೆ ಸರಿಯಾಗಿ ಗೊಬ್ಬರ, ಮಣ್ಣು, ಹಸಿರುಸೊಪ್ಪು ಹಾಕಿಸ್ತಾ ಇದ್ವಿ. ಹೊರಗಿನಿಂದ ಮಣ್ಣು ಹಾಕಿಸೋವಿ. ಬಾಳೆ, ತೆಂಗು ಸೊಂಪಾಗಿ ಬರೋದು. ಇದ್ದ ಮೂರು ಎಕರೆ ತೋಟ ಹಾಗೂ ನಾಲ್ಕು ಎಕರೆ ಗದ್ದೇನ ರೂಢಿಸಿದೆ. ತೋಟದಲ್ಲಿ ಬಾಳೆ, ಅಡಿಕೆ, ಮೆಣಸು, ಏಲಕ್ಕಿ ಹಾಕಿದೆ. ಗದ್ದೇಲಿ ಬಂಗಾರಕಡ್ಡಿ, ಕೆಂಪುಮುಕ್ಕಿ ಭತ್ತ ಬೆಳೀತಿದ್ವಿ. ಮನೇನಲ್ಲಿ ಎಂಟು, ಹತ್ತು ಜನ ಓದುವ ಹುಡುಗರು ಇದ್ರು. ಸಮಾಜಸೇವೆಗೆ ಊರವರು ಸಹಕಾರ ನೀಡೋರು. ವ್ಯವಸಾಯಕ್ಕೆ ಎಮ್ಮೆ, ದನ ಬಹಳ ಮುಖ್ಯ. ಅವುಗಳ ಗೊಬ್ಬರ ಮರಕ್ಕೆ ಜೀವಾಳ. ನಮ್ಮ ಮನೇಲಿ, ೧೫ ದನ, ೪ ಎಮ್ಮೆ ಇತ್ತು, ಕೊಟ್ಟಿಗೇಲಿ ಹಸಿರುಸೊಪ್ಪನ್ನು ಹರಡಿ ಅದನ್ನು ಜಾನುವಾರುಗಳ ಬಳಿ ತುಳಿಸಿ, ಮಗ್ಗಲು ಸೊಪ್ಪು ಮಾಡಿ, ನಂತರ ಗೊಬ್ಬರದ ಗುಂಡೀಗೆ ಹಾಕ್ತಿದ್ವಿ. ಮಳೆ ವಿಪರೀತ ಹಿಡಿದಾಗ ತೆಂಗು ಹಾಗೂ ಅಡಿಕೆ ಮರಗಳಿಗೆ ಬೋರ್ಡೋ ದ್ರಾವಣ (ಸುಣ್ಣ ಹಾಗೂ ಮೈಲುತುತ್ತದ ಮಿಶ್ರಣ) ಹೊಡೀತಾ ಇದ್ವಿ. ಆಗ ಕೊಳೆರೋಗ



ಸಾವಿತ್ರಮ್ಮ ಅವರು ನಡೆಸುತ್ತಿರುವ ವೃದ್ಧಾಶ್ರಮದ ಒಂದು ನೋಟ: ಬಸವಾನಿ

ಬರ್ತ್ತಿರಲಿಲ್ಲ. ಅವತ್ತು ಅಡಿಕೆಗೆ ಧಾರಣೇನೂ ಕಡಿಮೆ, ಖರ್ಚೂ ಕಡಿಮೆಯೇ. ನನಗಂತೂ ಅವತ್ತಿನ ಕೃಷಿ ಇವತ್ತಿಗೂ ಶ್ರೇಷ್ಠ ಅನ್ನಿಸುತ್ತೆ. ಕೃಷಿಯ ಜತೆಯಲ್ಲಿಯೇ ಜನಸೇವೆಯಲ್ಲಿ ತೊಡಗಿದೆ. ಬಾಲವಾಡಿ, ಹೆಣ್ಣುಮಕ್ಕಳಿಗೆ ಹಾಗೇ ವಯಸ್ಕರ ಶಿಕ್ಷಣ, ರಾಟೆಯಲ್ಲಿ ನೂಲು ತೆಗೆಯುವುದು ಈ ಕೆಲಸವನ್ನು ಹಂತಹಂತವಾಗಿ ಆರಂಭಿಸಿದೆ. ಹಳ್ಳಿಯ ಜನರ ಪ್ರೀತಿ ವಿಶ್ವಾಸವೂ ದೊರೆಯಿತು. ಅವತ್ತು ಬಸವಾನಿಯ ಹತ್ತು ಮೈಲಿ ಆಸುಪಾಸಿನಲ್ಲಿ ಆಸ್ಪತ್ರೆಯಾಗಲಿ, ವೈದ್ಯರಾಗಲಿ, ಖಾಸಗೀ ಔಷಧಿ ಅಂಗಡಿಗಳಾಗಲಿ ಇರಲಿಲ್ಲ. ರೋಗಿಗಳನ್ನು ಶುಶ್ರೂಷೆ ಮಾಡಲು ನುರಿತ ನರ್ಸುಗಳೂ ಇರಲಿಲ್ಲ. ಸುತ್ತಮುತ್ತಲ ಹಳ್ಳಿಗಳಲ್ಲಿ ಯಾರದಾದರೂ ಆರೋಗ್ಯ ಕ್ಷೀಣಿಸಿದಾಗ ನನ್ನನ್ನು ಕರೆಯುತ್ತಿದ್ದರು. ಅವರ ಮನೆಗೆ ಹೋದಾಗ ಅವರಿಗೆ ಉಡುವ ಬಟ್ಟೆ ಇರುತ್ತಿರಲಿಲ್ಲ, ಹಾಸುವ ಬಟ್ಟೆಯೂ ಇರುತ್ತಿರಲಿಲ್ಲ. ಹೆರಿಗೆ ನೋವಿನಿಂದ ನರಳುವ ಗರ್ಭಿಣಿಯರಿಗೆ ಕಾಫಿ ಮಾಡಿಕೊಡಲು ಅವರ ಬಳಿ ಹಾಲು, ಬೆಲ್ಲ, ಕಾಫಿ ಪುಡಿ ಇರುತ್ತಿರಲಿಲ್ಲ. ಹಳ್ಳಿಗಳ ಬಡತನದ ಈ ಪರಿಸ್ಥಿತಿ ನೋಡಿ ನಾನು ಮರುಗುತ್ತಿದ್ದೆ. ನಮ್ಮ ಹಳ್ಳಿಗಳ ಜನರ ಬಡತನ ನನಗೆ ಅರಿವಾಗತೊಡಗಿತ್ತು. ಆ ಸಲುವಾಗಿ ನಾನು ಊರ ಜನರನ್ನೆಲ್ಲಾ ಒಂದು ದಿನ ಸೇರಿಸಿ, ಅವರಿಗೆ ಹಳ್ಳಿಯ ಹೆಣ್ಣು ಮಕ್ಕಳ ಪರಿಸ್ಥಿತಿಯನ್ನು ವಿವರಿಸಿದೆ. ನೀವೆಲ್ಲರೂ ಸಹಕರಿಸಿದರೆ ಈ ಊರಲ್ಲಿಯೇ ಒಂದು ಆಸ್ಪತ್ರೆಯನ್ನು ತೆರೆಯಬಹುದು ಅಂತ ತಿಳಿಸಿ ಹೇಳಿದೆ. ಊರವರ ಸಹಕಾರ ಹಾಗೂ ತಾಲ್ಲೂಕಿನ ಜನರ ಸಹಕಾರದಿಂದ ಬಸವಾನಿಯ ಹೊಳೆಕೊಪ್ಪ ಎಂಬ ಸ್ಥಳದಲ್ಲಿ ಮಾತೆ ತುಂಗೆಯ ಮಡಿಲಲ್ಲಿ ಒಂದು ಸುಂದರ ಕಟ್ಟಡ ನಿರ್ಮಾಣವಾಯ್ತು. ನಂತರ ಅರಸೀಕೆರೆಯ ಕಸ್ತೂರಬಾ ಟ್ರಸ್ಟ್‌ನ ಆಶ್ರಯದಲ್ಲಿ ಹೆರಿಗೆ ಆಸ್ಪತ್ರೆಯನ್ನು ಈ ಕಟ್ಟಡದಲ್ಲಿ ಆರಂಭಿಸಲಾಯ್ತು. ಇಲ್ಲಿ ಹುಟ್ಟಿದ ಮೊದಲ ಮಗುವಿಗೆ ಕರ್ನಾಟಕ ಶಾಖೆಯ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದ ಶ್ರೀಯುತ ಸಾಹುಕಾರ್ ಚನ್ನಯ್ಯನವರು ಚಿನ್ನದ ಉಂಗುರವಿತ್ತು ಹರಸಿದರು. ಈ ಆಸ್ಪತ್ರೆಗೆ ಸುತ್ತಮುತ್ತಲ ಹತ್ತು ಮೈಲು ದೂರದಿಂದ ಬಡ ಗರ್ಭಿಣಿಯರು ಹೆರಿಗೆಗಾಗಿ ಬರುತ್ತಿದ್ದರು. ಇಲ್ಲಿ ಅವರಿಗೆ ಉಚಿತ ಊಟ, ವಸತಿ ಹಾಗೂ ಔಷಧೋಪಚಾರ ದೊರಕುತ್ತಿತ್ತು. ಈ ಅನುಕೂಲ ಬೇರೆ ಆಸ್ಪತ್ರೆಗಳಲ್ಲಿ ಇರಲಿಲ್ಲ. ಕೆಲವೊಮ್ಮೆ ಇಲ್ಲಿಗೆ ಬರುತ್ತಿದ್ದ ಗರ್ಭಿಣಿಯರಿಗೆ ರಕ್ತಹೀನತೆಯ ತೊಂದರೆಯೂ ಇರುತ್ತಿತ್ತು. ಹೀಗೆ ಸಹಜ ಸ್ಥಿತಿಯಲ್ಲಿರದೇ ಇರುವವರು ಬಂದಾಗ ಅವರನ್ನು ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಚಿಕಿತ್ಸೆ ಮಾಡಿಸುತ್ತಿದ್ದೆ. ಆಗ ಬಸ್ಸಿನ ಸೌಕರ್ಯ ಅಷ್ಟಾಗಿ ಇರಲಿಲ್ಲ. ರಸ್ತೆಗಳೂ ಉತ್ತಮವಾಗಿ ಇರಲಿಲ್ಲ. ಎತ್ತಿನಗಾಡಿಯಲ್ಲಿ ಗರ್ಭಿಣಿಯರನ್ನು ಕರೆದುಕೊಂಡು ಹೋಗಿ, ಅವರ ಜತೆಯೇ ಆಸ್ಪತ್ರೆಯಲ್ಲಿ ಎರಡು-ಮೂರು ದಿನ ಇರುತ್ತಿದ್ದೆ. ಇಲ್ಲಿ ಬಸವಾನಿಯ ನಮ್ಮ ಮನೆಯಲ್ಲಿ ಎಂಟರಿಂದ ಹತ್ತು ಜನ ವಿದ್ಯಾರ್ಥಿಗಳು ಸದಾ ಇರುತ್ತಿದ್ದರು. ಅವರ ಊರಿನಲ್ಲಿ ಅನುಕೂಲ ಇಲ್ಲದೇ ಇರುವಂತಹ ವಿದ್ಯಾರ್ಥಿಗಳು ನಮ್ಮ ಮನೆಯಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದರು. ನಾನು ಇಲ್ಲದೇ ಇದ್ದಾಗ ನನ್ನ ಪತಿ ರಾಮಶರ್ಮರು ವಿದ್ಯಾರ್ಥಿಗಳಿಗೆ ಅಡುಗೆ ಮಾಡಿ ಬಡಿಸುತ್ತಿದ್ದರು. ಮಾತೃಮಂದಿರದಲ್ಲಿರುವ ಗರ್ಭಿಣಿಯರಿಗೆ ಬೇಕಾದ ಅನುಕೂಲಗಳನ್ನು ಒದಗಿಸುತ್ತಿದ್ದರು. ರಾಮಶರ್ಮರ ಸಂಪೂರ್ಣ ಸಹಕಾರ ಹಾಗೂ ಪ್ರೋತ್ಸಾಹ ಇದ್ದುದರಿಂದಲೇ ನನಗೆ ಸೇವಾಕಾರ್ಯ ಮಾಡಲು ಸಾಧ್ಯವಾಯ್ತು. ನನ್ನ ಪತಿ ರಾಮಶರ್ಮರ ಸಹಕಾರದಿಂದ ಅಭಿವೃದ್ಧಿ ಹೊಂದಿದ ಆಸ್ಪತ್ರೆಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರು ಭೇಟಿ ಇತ್ತು, ನಮ್ಮ ಶ್ರಮವನ್ನು ಶ್ಲಾಘಿಸಿ, ಐದು ಸಾವಿರ ರೂಪಾಯಿ ದೇಣಿಗೆ ನೀಡಿದರು. "ರಾಜ್ಯದ ಒಂದು ಮೂಲೆಯಲ್ಲಿರುವ ಈ ಮಾತೃಮಂದಿರ ಋಷಿಗಳ ಆಶ್ರಮ ಇದ್ದಂತಿದೆ" ಎಂದು ಸಂತೋಷಪಟ್ಟರು.



ಸಾವಿತ್ರಮ್ಮ ಅವರು ನಡೆಸುತ್ತಿರುವ ವೃದ್ಧಾಶ್ರಮದ ಒಳನೋಟ:ಬಸವಾನಿ

ಯಶೋಧರ ದಾಸಪ್ಪನವರು ಅರಸೀಕೆರೆಯಲ್ಲಿ ಕನ್ಯಾವಿದ್ಯಾಲಯ ಎಂಬ ಸಂಸ್ಥೆಯನ್ನು ತೆರೆದರು. ಆ ಸಂಸ್ಥೆಗೆ ಬಸವಾನಿ ಹಾಗೂ ಸುತ್ತಮುತ್ತಲ ಗ್ರಾಮದ ಬಡ ಹೆಣ್ಣುಮಕ್ಕಳನ್ನು ಹೆಚ್ಚಿನ ಶಿಕ್ಷಣಕ್ಕಾಗಿ ಕಳಿಸುತ್ತಿದ್ದೆ. ಅವರು ಅಲ್ಲಿಯೇ ಇದ್ದು ಸಣ್ಣಪುಟ್ಟ ಕೆಲಸ ಮಾಡಿಕೊಂಡು ಶ್ರದ್ಧೆಯಿಂದ ಓದಿ ಮುಂದೆ ಬಂದರು. ಹೀಗೆ ಓದಿದವರಲ್ಲಿ ಒಬ್ಬಳಾದ

'ಸರೋಜ' ಎಂಬ ಕನ್ಯೆಯನ್ನು ಶ್ರೀಯುತರಾದ ದಾಸಪ್ಪ ಎಂಬ ಮಂತ್ರಿಗಳು ತಮ್ಮ ಮಗನಿಗೆ ಮದುವೆ ಮಾಡಿಕೊಂಡರು. ಕಡುಬಡವಳಾದ ಓರ್ವ ಹೆಣ್ಣುಮಗಳು ಮಂತ್ರಿಗಳ ಸೊಸೆಯಾದದ್ದು ಊರವರಿಗೆ ಸಂತೋಷ ತಂತು. ಸಂಸ್ಥೆಯ ಮೇಲೆ ಪ್ರೀತಿ ವಿಶ್ವಾಸ ಗೌರವ ಹೆಚ್ಚಾಗಲು ಕಾರಣವಾಯ್ತು. ಹೀಗೆ ನಾನು ಕಳುಹಿಸಿಕೊಟ್ಟ ಹೆಣ್ಣು ಮಕ್ಕಳೆಲ್ಲಾ ಒಳ್ಳೆಯ ಹೆಸರು ಪಡೆದುಕೊಂಡು, ವಿದ್ಯಾಭ್ಯಾಸ ಮುಗಿಸಿ ಊರಿಗೆ ಬಂದರು. ಕೆಲವರು ಒಳ್ಳೆಯ ಕೆಲಸಕ್ಕೆ ಸೇರಿದ್ರು.

ಕೆಲವು ವರುಷಗಳ ನಂತರ ಸರ್ಕಾರದಿಂದ ಕುಟುಂಬಯೋಜನೆ ಪ್ರಚಾರಕ್ಕೆ ಬಂತು. ನಾನೂ ಸಹ ಸಮೀಪದ ಊರಿನಲ್ಲಿ ಪ್ರಚಾರಾಂದೋಲನ ಕೈಗೊಂಡೆ. ಮೊದಲ ಮತ್ತು ಎರಡನೆಯ ಮಗುವಿಗೆ ಹೆರಿಗೆ ಭತ್ಯೆ ಸಿಗ್ತಿತ್ತು. ಇದು ಜನರ ಅರಿವಿಗೆ ಬಂತು. ಕಸ್ತೂರಿಬಾ ಮಾತೃಮಂದಿರದಲ್ಲಿ ಹೊಲಿಗೆ ತರಬೇತಿಯನ್ನು ಆರಂಭಿಸಿದೆ. ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ನಾನು ದುಡಿದದ್ದರಿಂದ ೧೯೮೭ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆ ಅಡಿಯಲ್ಲಿ ರಾಷ್ಟ್ರಪ್ರಶಸ್ತಿಗೆ ಆಯ್ಕೆಯಾದೆ. ದೆಹಲಿಯಲ್ಲಿ ರಾಷ್ಟ್ರಪತಿ ವೆಂಕಟರಾಮನ್ ಅವರಿಂದ ಪ್ರಶಸ್ತಿ ಸ್ವೀಕರಿಸಿದೆ. ಪ್ರಶಸ್ತಿಯಿಂದ ಬಂದ ಹಣವನ್ನು ಬ್ಯಾಂಕಿನಲ್ಲಿಟ್ಟು ಸಮಾಜದ ಏಳಿಗೆಗೆ ಬಳಸಿದೆ, ಮಾತೃಮಂದಿರದ ಸುತ್ತಾ ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ ತೆಂಗು ಹಾಗೂ ಬಾಳೆಯ ಗಿಡವನ್ನು ನೆಡಿಸಿದೆ. ತೋಟದಲ್ಲಿ ಮೆಣಸು, ಏಲಕ್ಕಿ, ಶುಂಠಿ, ಅರಿಸಿನ ಸಹಾ ಬೆಳೆದೆ. ಆಶ್ರಮದ ನಿರ್ವಹಣೆಗೆ ಕೃಷಿಯಿಂದ ಬಂದ ಆದಾಯ ನೆರವಾಗುತ್ತಿತ್ತು. ಕೆಲವು ಸಮಯದ ನಂತರ **ಕಸ್ತೂರ್‌ಬಾ ಅಭಯಾಶ್ರಮ** ಎಂಬ ಟ್ರಸ್ಟ್ ಸ್ಥಾಪನೆ ಮಾಡಿ, ಅದರ ಅಧ್ಯಕ್ಷಳಾಗಿ ಸಮಾಜಸೇವೆ ಕೆಲಸ ಮುಂದುವರೆಸಿದೆ. ಉದಾರಿಗಳ ನೆರವು ಹಾಗೂ ಸಹಕಾರದಿಂದ ಟ್ರಸ್ಟ್ ನಡೆಯುತ್ತಿದೆ. ಈ ಅಭಯಾಶ್ರಮ ಹೆಣ್ಣುಮಕ್ಕಳ ಸೇವೆಗಾಗಿ ಇದೆ. ಇಲ್ಲಿ ಅನಾಥವಾಗಿರುವ ಚಿಕ್ಕಮಕ್ಕಳಿಗೆ, ವಿದ್ಯಾಭ್ಯಾಸ ಮುಂದುವರೆಸಲು ಹಾಗೇ ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಜೀವನ ನಡೆಸಲು ನೆರವು ನೀಡಲಾಗುತ್ತಿದೆ. ಪೂರಕ ಸ್ವಂತ ಉದ್ಯೋಗದ ತರಬೇತಿ ನೀಡಲಾಗುತ್ತಿದೆ. ಈ ಸಂಸ್ಥೆ ಗಂಡಂದಿರಿಂದ ಪರಿತ್ಯಕ್ತರಾದ ಹೆಣ್ಣುಮಕ್ಕಳಿಗೆ ಆಶ್ರಯ ನೀಡಿದೆ. ಬುದ್ಧಿಮಾಂದ್ಯ ಹೆಂಗಸರಿಗೂ ತಂಪಾದ ಆಶ್ರಯತಾಣವಾಗಿದೆ. ಯಾರೂ ದಿಕ್ಕಿಲ್ಲದ ಅನಾಥ ವೃದ್ಧರಿಗೆ ಊಟ, ಔಷಧಿ, ವಸತಿ, ಬಟ್ಟೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ದಾನಿಗಳಿಂದ ಈಗ ೨೦ ಲಕ್ಷ ರೂಪಾಯಿ ಸಂಗ್ರಹವಾಗಿದೆ. ಎಂಟು ಲಕ್ಷ ರೂಪಾಯಿಗಳನ್ನು ಬ್ಯಾಂಕಿನಲ್ಲಿ ಡಿಪಾಸಿಟ್ ಇಡಲಾಗಿದೆ. ನನ್ನ ನಂತರವೂ ಈ ಸಂಸ್ಥೆ ಸಮಾಜ ಸೇವೆಯನ್ನು ಶಾಶ್ವತವಾಗಿ ಮುಂದುವರಿಸಿಕೊಂಡು ಹೋಗಬೇಕು ಎನ್ನುವ ಗುರಿ, ಅಭಿಲಾಷೆ ನನ್ನದಾಗಿದೆ.

ಹಿಂದಿನ ಕಾಲದಲ್ಲಿ ಹಳ್ಳಿ ಕಡೆಗೆ ಹೆಣ್ಣು ಕೊಡೋಲ್ಲ ಅಂತ ಅಂತಿರಲಿಲ್ಲ. "ಯಾರು ನೆಮ್ಮದಿಯಿಂದ ಇದಾರೋ ಅವರಿಗೆ ಹೆಣ್ಣು ಕೊಡ್ತೀವಿ, ಪುರೋಹಿತನಾದ್ರೂ ಸರಿ" ಅನ್ನೋರು. ಕಳ್ಳ, ಸುಳ್ಳನಾಗಿರದೆ ಸತ್ಯವಂತರಾಗಿ ದುಡಿಯುವವರು ಹಳ್ಳಿಯಲ್ಲಿದ್ರೆ ಹೆಣ್ಣಿನ ಮನೆಯವರು ಸಂತೋಷವಾಗಿ ಮದುವೆ ಮಾಡೋರು. ಈಗ ಸಂಕೇತಿ ಹೆಣ್ಣುಮಕ್ಕಳಲ್ಲೇ ಬದಲಾವಣೆಯಾಗಿದೆ. "ನನಗೆ ಒಂದು ಸಾವಿರ ಸಂಬಳ ತಂದ್ರೂ ಪರವಾಗಿಲ್ಲ. cityಲಿ ಇರೋ ಗಂಡ ಬೇಕು" ಅಂತಾರೆ. ಏನು ಮಾಡೋದು. ಬದಲಾವಣೆ ಆಗಲು ಭಗವಂತನೇ ಬರಬೇಕೇನೋ. ಹಿಂದಿನ ಕಾಲದಲ್ಲಿಯೂ ಅಷ್ಟೆ, ಹೆಣ್ಣುಮಕ್ಕಳು ನಾಲ್ಕು ಗೋಡೆಯ ಒಳಗೇ ಇರಬೇಕು ಅಂತೇನೂ ಇರಲಿಲ್ಲ. ವಿದ್ಯಾಭ್ಯಾಸ ಇಲ್ಲದೇ, ಏನೂ ಇಲ್ಲದೇ ಇರೋರು ಇರೋರೆ ವಿನಃ, ಕಟ್ಟುಪಾಡುಗಳೇನೂ ಇರಲಿಲ್ಲ. ಆದ್ರೆ ಇವತ್ತು ಹೊರಗೆ ಹೋಗಿ ದುಡಿಯುವ ಹೆಂಗಸರಿಗೆ ಕಷ್ಟಗಳು ಇವೆ. ಆದರೂ ದುಡಿಯುವ ಹಂಬಲ. 'ಬೇಕು' ಅನ್ನೋದು ಬಂದ್ರೆ ಒಂದು ಮನೆ ಇದ್ರೂ ಸಾಲದು, ಹತ್ತು ಮನೆ ಇದ್ರೂ ಸಾಲದು, ಉಪ್ಪರಿಗೆ ಮನೆ ಇದ್ರೂ ಸಾಲದು. ಮನಸ್ಸಿನಲ್ಲಿಯೇ ಎಲ್ಲಾ ಸಂತೋಷ ಇರುತ್ತೆ, ಮನೇಲಲ್ಲ. ನನಗೆ ಇದರಲ್ಲಿ ಸಂತೋಷ ಇದೆ ಅಂದ್ರೆ ಅದು ಸಿಗುತ್ತೆ. ಕೋಟಿ ರೂಪಾಯಿ ಇದ್ರೂ 'ಸಂತೋಷ' ಅನ್ನೋದು ಒಂದೇ ಪದ ಅಷ್ಟೆ. ಸ್ವಲ್ಪದರಲ್ಲೇ ಸಂತೋಷವಾಗಿರುವ ಕಲೆ ಹೆಣ್ಣು ಮಕ್ಕಳಿಗೆ ಕರಗತವಾಗಬೇಕು. ಇದ್ದುದರಲ್ಲಿ ನೆಮ್ಮದಿಯಾಗಿರಬೇಕು. ತಂದೆ ತಾಯಂದಿರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕು, ಅವರು ಆದರ್ಶಪ್ರಾಯರಾಗಿರಬೇಕು. ಆಗ ಮಕ್ಕಳು ಅವರನ್ನು ನೋಡಿ ಕಲಿಯುತ್ತವೆ. ಅದು ಬಿಟ್ಟು ನನ್ನ ಮಗಳಿಗೆ ಪುರುಸೊತ್ತೇ ಇಲ್ಲ ಅಂದ್ರೆ ಒಳ್ಳೆಯ ವಿಚಾರಗಳನ್ನು ಅವರು ಕಲಿಯುವುದು ಯಾವಾಗ? ನನ್ನ ಯಜಮಾನರ ಅಕ್ಕನ ಮಗ ನಮ್ಮ ಕುಟುಂಬದ ವ್ಯವಸಾಯ ಮುಂದುವರೆಸುತ್ತಾನೆ. ನನಗೆ ನನ್ನ ಗಂಡನ ಸೇವೆಯನ್ನು ನಾನು ಬದುಕಿರುವರೆಗೆ ಮಾಡಬೇಕು ಅನ್ನುವ ಹಂಬಲವಿತ್ತು. ಆ ಭಗವಂತ ಅವರನ್ನು ಬೇಗನೆಯೇ ಕರೆದುಕೊಂಡ. ನಾನು ಅವರ ಸೇವೆಯನ್ನು ಸಂಪೂರ್ಣವಾಗಿ ಮಾಡಲಿಲ್ಲ ಎನ್ನುವ ಕೊರಗು ನನ್ನಲ್ಲಿ ಉಳಿದಿದೆ' ಎಂದು ಹೇಳಿ ಮಾತು ಮುಗಿಸಿದ್ರು ಸಾವಿತ್ರಮ್ಮ ರಾಮಶರ್ಮ. ಅವರೇ ಕಟ್ಟಿ ಬೆಳೆಸಿದ ವೃದ್ಧಾಶ್ರಮಕ್ಕೂ ಭೇಟಿ ನೀಡಿದೆವು. ಸಾವಿತ್ರಮ್ಮ ಅವರ ಸಾಮಾಜಿಕ ಕಳಕಳಿ ಮೆಚ್ಚುವಂತಹದ್ದು. ಮತ್ತೆ ಮಧ್ಯಾಹ್ನ ಮನೆಗೆ ಮರಳಿದಾಗ ಮಲೆನಾಡಿನ ಭೋಜನ ನಮಗಾಗಿ ಕಾಯುತ್ತಿತ್ತು. ಊಟ ಮಾಡಿದ ಮೇಲೆ ಸಾವಿತ್ರಮ್ಮ ಅವರಿಂದ ಬೀಳ್ಕೊಟ್ಟೆವು. ಹಾದಿಯುದ್ದಕ್ಕೂ ನನಗೆ ಅವರ ಸಾಧನೆಗಳದ್ದೇ ಗುಂಗು. ಮುಂದಿನ ಊರು ಯಾವಾಗ ಬಂತೋ ತಿಳಿಯಲಿಲ್ಲ.

24. ಬೀರೂರು

ಅರಸೀಕೆರೆ - ಶಿವಮೊಗ್ಗ ಮುಖ್ಯ ರಸ್ತೆಯಲ್ಲಿರುವ ಬೀರೂರು, ಸಂಕೇತಿಗಳ ನೆಲೆಯೂ ಹೌದು. ಸಮೀಪದ ಲಿಂಗದಹಳ್ಳಿ, ಬಸವಾನಿಯಿಂದ ಚಿಲ್ಲು ಒಡೆದು ಬಂದ ಜನ ಇಲ್ಲಿ ನೆಲೆಸಿರಬಹುದು. ಹಿಂದೆ ಇಲ್ಲಿ ಸಂಕೇತಿಗಳದ್ದು ಐದು ಮನೆ ಇತ್ತಂತೆ. ಈಗ ನಾಲ್ಕಾಗಿದೆ. 'ಬೀರೂರು ಸಮೀಪದ ಹಿರಿಯಂಗಳ, ಲಿಂಗಳಾಪುರ ಗ್ರಾಮಗಳು ಸಂಕೇತಿಗಳ ನೆಲೆಯಾಗಿತ್ತು, ಪಂಜುಗಳ್ಳರ ಕಾಟದಿಂದ ಬೀರೂರಿಗೆ ಬಂದು ಸಂಕೇತಿಗಳು ನೆಲೆಸಿದ್ರು' ಅಂತಾರೆ ಇಲ್ಲಿನ ಹಿರಿಯ ಸಂಕೇತಿಗಳಾದ ಶಿವರಾಮಶಾಸ್ತ್ರಿಗಳು. ಒಟ್ಟು ನಾಲ್ಕು ಮನೆಯಲ್ಲಿ, ಎರಡು ಮನೆಯವರು ವ್ಯವಸಾಯ ಮಾಡುತ್ತಿದ್ದಾರೆ. ಉಳಿದವರದು ಪೌರೋಹಿತ್ಯ. ಜೋಯಿಸರ ಮನೆತನದವರೂ ಇದ್ದಾರೆ. ಬೀರೂರು ಈಗ ಪಟ್ಟಣವಾಗಿರುವುದರಿಂದ, ಊರಿಂದ ಅನತಿ ದೂರದಲ್ಲಿ ಸಂಕೇತಿಗಳದ್ದು ತೋಟ, ಗದ್ದೆ ಇದೆ. ಅಡಿಕೆ, ಬಾಳೆ, ತೆಂಗಿನ ವ್ಯವಸಾಯ ಇಲ್ಲೂ ಮುಂದುವರೆದಿದೆ. ಇತಿಹಾಸ ಪ್ರಸಿದ್ಧವಾದ ಕಡೂರಿನ ಸಮೀಪದ ಮದಗದ ಕೆರೆ, ಬೀರೂರಿಗೂ ಜೀವಾಳ. 'ಮದಗದ ಕೆರೆ ತುಂಬಿದರೆ ಸುತ್ತಮುತ್ತಲ ೨೦ ರಿಂದ ೨೫ ಕೆರೆ ತುಂಬುತ್ತೆ, ಕೃಷಿಗೆ ಅನುಕೂಲವಾಗುತ್ತೆ' ಅಂತಾರೆ. ಮಳೆ ಬರದೆ ಕೆರೆ ಬತ್ತಿದರೆ, ಇವರ ಉತ್ಸಾಹವೂ ಬತ್ತಿದಂತೆ. ಹಳ್ಳದ, ಆಯಕಟ್ಟಿನ ಜಾಗದಲ್ಲಿಯೇ ಸಂಕೇತಿಗಳು ಇಲ್ಲಿಯೂ ವ್ಯವಸಾಯ ಮಾಡುತ್ತಿದ್ದಾರೆ. ವ್ಯವಸಾಯದ ವೈವಿಧ್ಯತೆಯ ವಿವರ ಪಡೆಯಲು ಸಂಕೇತಿ ಕೃಷಿಕರನ್ನು ಭೇಟಿಯಾದೆವು.

ಅ) ಬಿ.ಎಸ್.ಶಿವರಾಮಶಾಸ್ತ್ರಿ ೩/ಮ ಸುಬ್ಬರಾಯಶಾಸ್ತ್ರಿ

ಬೀರೂರು, ಚಿಕ್ಕಮಗಳೂರು ಜಿಲ್ಲೆ, ದೂರವಾಣಿ: 08267 755550

ಒಂದು ದಿನ ಸುಖವಾಗಿ ಇರಬೇಕು ಅಂದ್ರೆ ಕುಡೀಬೇಕಂತೆ. ಎಂಟು ದಿನ ಸುಖವಾಗಿ ಇರಬೇಕು ಅಂದ್ರೆ ಮದುವೆ ಆಗಬೇಕಂತೆ. ಆದರೆ ವರುಷವೆಲ್ಲಾ ಸುಖವಾಗಿ ಇರಬೇಕು ಅಂದ್ರೆ ವ್ಯವಸಾಯ ಮಾಡಬೇಕಂತೆ . .. ನಾವು ಬೆಳೆದ ಮಾವಿನಹಣ್ಣನ್ನು ತಿಂದ್ರೆ . . . ಆ ಒಂದು ಕ್ಷಣ ಸ್ವರ್ಗಕ್ಕೆ ಹೋದ ಸಂತೋಷ ಸಿಗುತ್ತೆ . . . ಈ ಸುಖ ಮತ್ಯಾವುದರಲ್ಲಿದೆ ?



ಬಿ.ಎಸ್.ಶಿವರಾಮಶಾಸ್ತ್ರಿ:ಕುಟುಂಬವರ್ಗದೊಂದಿಗೆ:ಬೀರೂರು

ಬೀರೂರಿನ ಬಿ.ಎನ್. ಸುಬ್ಬರಾಯಶಾಸ್ತ್ರಿ ಹಾಗೂ ಲಿಂಗದಹಳ್ಳಿಯ ಲಕ್ಷ್ಮಮ್ಮ ದಂಪತಿಗಳ ಮಗ ಬಿ.ಎಸ್. ಶಿವರಾಮಶಾಸ್ತ್ರಿ ಅವರಿಗೆ ಈಗ ೬೫ರ ಹರಯ. ಇವರ ಪತ್ನಿ ಇಂದ್ರಮ್ಮನವರು ಸೋದರತ್ತೆ ಸಾವಿತ್ರಮ್ಮ ಹಾಗೂ ಮಾವ ಲಕ್ಷ್ಮೀವೆಂಕಟೇಶಯ್ಯನವರ ಮಗಳು. ವ್ಯವಸಾಯ ಶಿವರಾಮಶಾಸ್ತ್ರಿಗಳ ಕಸುಬು. ಬೀರೂರಿಗೆ ನಾವು ಹೋದಾಗ ಸೂರ್ಯಾಸ್ತವಾಗಿತ್ತು. ಶಾಸ್ತ್ರಿಗಳ ಮನೆಯಲ್ಲಿ, ಅಷ್ಟೇಕೆ ಇಡೀ ಬೀರೂರಿನಲ್ಲಿಯೇ ಕರೆಂಟ್ ಇರಲಿಲ್ಲ. ಮಳೆ ಅಭಾವದ ದಿನಗಳು... ಮುಂಗಾರು ಮಳೆಯಿನ್ನೂ ಆರ್ಭಟಿಸಿರಲಿಲ್ಲ. ಉತ್ತಮ ಮಳೆಯಾಗಲು ಜಪಿಸಬೇಕಾದ ಸ್ತೋತ್ರವನ್ನು ಹಿಡಿದುಕೊಂಡೇ ಶಿವರಾಮಶಾಸ್ತ್ರಿಗಳು ಮನೆ ಪ್ರವೇಶಿಸಿದರು. ಈ ಶ್ಲೋಕವನ್ನು ಪಠಿಸಿದರೆ ಉತ್ತಮವಾಗಿ ಮಳೆಯಾಗುತ್ತದಂತೆ ಅಂತ ಹೇಳಿದ್ರು. ನಿಮಗೆ ಈ ವಿಷಯ ಯಾರು ಹೇಳಿದ್ದು ಅಂದಾಗ, 'ಲಿಂಗದಹಳ್ಳಿಯ ನರಸಿಂಹಮೂರ್ತಿಗಳು. ಅವರು ತಿಳಿಸಿದಾರಂತೆ, ಈಗ ಎಲ್ಲ ಕಡೆಗೂ ತಿಳಿಸಬೇಕು. ಋತ್ವಿಕರು ಕುಳಿತು ಪಠಣ ಮಾಡುವ ವ್ಯವಸ್ಥೆಯೂ ಆಗಬೇಕು' ಅಂದ್ರು. ನಾವು ಬಂದ ಉದ್ದೇಶ ತಿಳಿದಾಗ, ಸಮಾಧಾನ ಚಿತ್ತದಿಂದ 'ಕಾಫಿ ಕುಡಿದು ಮುಂದುವರಿಸೋಣ' ಅಂದ್ರು. ಮೇಣದಬತ್ತಿಯ ಮಿಣುಕು ಬೆಳಕು ಸಂದರ್ಶನಕ್ಕೆ ಆಸರೆಯಾಯ್ತು. ಶಿವರಾಮಶಾಸ್ತ್ರಿಗಳ ಆತ್ಮವಿಶ್ವಾಸದ

ಬೆಳಕಿನ ಜಾಡಿನಲ್ಲಿ ಸಂದರ್ಶನ ಸಾಗಿತು.



ಬಿ.ಎಸ್.ಶಿವರಾಮಶಾಸ್ತ್ರಿ ಅವರು ತಾಯಿ ಲಕ್ಷ್ಮಮ್ಮ ಅವರೊಂದಿಗೆ:ಬೀರೂರು

- **ನಮಸ್ಕಾರ ಶಿವರಾಮಶಾಸ್ತ್ರಿಗಳೆ . . .**

  ನಮಸ್ಕಾರ

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ.**

  ನನ್ನ ಮುತ್ತಜ್ಜ ಸುಬ್ಬಾವಧಾನಿಗಳು ತೆಂಗಿನಕೆರೆ ಅಂತ ತೀರ್ಥಹಳ್ಳಿ ತಾಲ್ಲೂಕಿನಲ್ಲಿದ್ದ ಗ್ರಾಮದಲ್ಲಿದ್ರು. ಅಲ್ಲಿ ಹದಿನಾರು ಎಕರೆ ತೋಟ ಎಬ್ಬಿಸಿ ಕಾರಣಾಂತರದಿಂದ ಬಿಟ್ಟು ಹೊಸಹಳ್ಳಿ ಮತ್ತೂರಿಗೆ ಬಂದ್ರು. ಅಲ್ಲಿ ಕೆಲವು ದಿನ ಇದ್ದು ನಂತರ ಬೀರೂರಿನ ಜೋಯಿಸರ ಮುಖಾಂತರ ಇಲ್ಲಿಗೆ ಬಂದ್ರು. ಜೋಯಿಸರ ಮನೆಯಿಂದ ಲಿಂಗಳಾಪುರ ಅಂತ ಅರ್ಧ ಮೈಲು ದೂರದಲ್ಲಿರುವ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡು ಬಂದು ಇದ್ರು. ಅವರು ಕಾಲವಾದ ನಂತರ ನಮ್ಮಜ್ಜ ವಿಶ್ವನಾಥಶಾಸ್ತ್ರಿ ಕೆಲವು ದಿನ ಅಲ್ಲಿ ಇದ್ದು, ನಂತರ ಅಲ್ಲಿ ಆಗದೆ, ಇಲ್ಲಿ ಕಣಕಟ್ಟೆ ರಾಮಣ್ಣನವರು ದೇವಸ್ಥಾನ ಕಟ್ಟಿದ್ರು, ಅದನ್ನು ನೋಡಿಕೊಂಡು ಓಡಾಡಿಕೊಂಡು ಇದ್ರು. ಆನಂತರ ನಮಗೆ ಪಿತ್ರಾರ್ಜಿತ ಏಳು ಎಕರೆ ಜಮೀನಿತ್ತು. ಅದರಲ್ಲಿ ಎರಡು ಎಕರೆ ನಮ್ಮ ಮುತ್ತಜ್ಜ ಬೆಳೆದಿದ್ದು ನಾಶವಾಗಿ ಹೋಯ್ತು. ದೇವಸ್ಥಾನದ ವಹಿವಾಟಿನಲ್ಲಿ ಭೂಮಿ ಹಾಗೇ ಉಳಿದಿತ್ತು. ಇನ್ನೊಂದು ಕಡೆ ಎರಡೂವರೆ ಎಕರೆ ಭೂಮಿ ದಾನವಾಗಿ ಬಂದಿದ್ದು ಇತ್ತು. ನನ್ನ ತಂದೆ ಬಿ.ವಿ. ಸುಬ್ಬರಾಯಶಾಸ್ತ್ರಿಗಳು ಕನ್ನಡ ಪಂಡಿತರು. ಮಾಸ್ತರಾಗಿದ್ರು. ಅಜ್ಜ ತೀರಿಕೊಂಡ ಮೇಲೆ, ಜಮೀನಿಗೆ ಬಾಳೆ, ಅಡಿಕೆ ಹಾಕಿದ್ರು. ಕಳಸಕ್ಕೆ ಹೋಗಿ ೧೫ ರೂಪಾಯಿ ಸಂಬಳಕ್ಕೆ ದುಡೀಬೇಕಾಗಿ ಬಂತು. ಅವರು ಐದು ರೂಪಾಯಿ ಖರ್ಚು ಮಾಡಿ, ತಿಂಗಳಿಗೆ ೧೦ ರೂಪಾಯಿ ಮನೆಗೆ ಕಳಿಸ್ತಿದ್ರು. ಬಂದ ಸಂಬಳದಲ್ಲೇ ಜಮೀನಿನ ಕಂದಾಯ ಪಾವತಿ ಮಾಡಿ ಜಮೀನು ಉಳಿಸಿದ್ರು ನನ್ನ ತಂದೆ. ನಂತರ ನನ್ನ ತಂದೆ ನನಗೆ support ಮಾಡಿದ್ರು. 'ನೀನು ತೋಟ ಮಾಡು, ನಾನು ಮಾಡೋಣ ಅಂತಿದ್ದೆ ಆಗ್ಲಿಲ್ಲ,' ಅಂತ. ೧೯೬೦ರಲ್ಲಿ ಎರಡೂವರೆ ಎಕರೆಗೆ ಸಸಿ ಹಾಕಿದೆ. ೬೫ರಲ್ಲಿ ಪೂರ್ಣವಾಗಿ ಫಸಲಿಗೆ ಬಂತು. ೬೬/೬೭ರಲ್ಲಿ ಒಳ್ಳೆಯ ಫಸಲು ಬಂತು. ನಾನು ಚೇಣೀನೇ ಕೊಡ್ತಾ ಇದ್ದೆ, ಸ್ವಂತ ಮಾಡ್ತಾ ಇರಲಿಲ್ಲ. ೬೭ರಲ್ಲಿ ಪಿತ್ರಾರ್ಜಿತವಾಗಿ ಬಂದಿದ್ದ ಮೂರೂವರೆ ಎಕರೆ ಜಮೀನಿನಲ್ಲಿ ಅಡಿಕೆ ಕೂರಿಸಿದೆ. ಅದನ್ನು ಚೆನ್ನಾಗಿ ರೂಢಿಸಿದೆ. ಈಗ 25 ವರುಷದಿಂದ ಫಸಲು ತೊಗೋತಾ ಇದೀವಿ. ಮತ್ತೂರು, ಹೊಸಹಳ್ಳೀಲಿ ನನಗೆ relations ಇದಾರೆ. ಹೋದಾಗೆಲ್ಲಾ, 'ನಾವು ಚಾಲಿಗೆ ಬಿಡ್ತಾ ಇದೀವಿ, ನಮಗೆ ಈಗ ಎಕರೆಗೆ ೧೫ ಸಾವಿರ ರೂಪಾಯಿ ಸಿಕ್ತಾ ಇದೆ' ಅಂತ ೪೦ ವರುಷದ ಹಿಂದೆ ಹೇಳ್ತಿದ್ರು, ನೀನೂ ಆ ಕೆಲಸ ಮಾಡು ಅಂತಿದ್ರು. ನಾನು ಮಾಡಲೇ ಇಲ್ಲ. ನಾನು ಚೇಣಿ ಕೊಟ್ಟು ಎಲ್ಲಾ ಲಾಸ್ ಮಾಡಿಕೊಂಡೆ. ಅಡಿಕೆಗೆ ಧಾರಣೆ ಸಿಕ್ಕಿದಾಗ ಇದ್ದುದನ್ನೇ ಚೆನ್ನಾಗಿ ರೂಢಿಸಿ ಒಳ್ಳೆಯ ಬೆಳೆ ಬರುವ ಹಾಗೆ ಮಾಡಿ ತೋಟಾನ ಒಳ್ಳೆಯ ಸ್ಥಿತಿಯಲ್ಲಿಟ್ಟುಕೊಂಡೆ. ೧೯೮೬ರಲ್ಲಿ, ಮೂರು ಕಡೆ ಇರುವ ಜಮೀನಿನಲ್ಲಿ ಮೂರು ಕಡೆ ಪಾಯಿಂಟ್ ಮಾಡಿ ಮೂರು ಬೋರ್‌ವೆಲ್ ತೆಗೆಸಿದೆ. ಒಟ್ಟು ಎಂಟು ಎಕರೆ ಜಮೀನು. ಅದರಲ್ಲೇ ಮುತ್ತಜ್ಜ ಹಾಕಿದ ಮಾವಿನ ಗಿಡಗಳು ಇವೆ, ಹಲಸಿನ ಗಿಡ ಇದೆ.

- **ನಿಮ್ಮ ವ್ಯವಸಾಯದ ವಿಚಾರ ಹೇಳಿ.**

  ನಮಗೆ ಬೇಕಾದ್ದು ಗೊಬ್ಬರ, ನೀರು. ಎಂತಹ ದಡ್ಡರೂ ಮಾಡುವ ಕೆಲಸ. ಇದಕ್ಕೆ ಬುದ್ಧಿವಂತಿಕೆ ಬೇಕಾಗಿಲ್ಲ. ಇಂಜಿನಿಯರಿಂಗ್ ಮಾಡಬೇಕಿಲ್ಲ. ಯಾವ ಕೋರ್ಸೂ ಬೇಕಾಗಿಲ್ಲ. ನೀರು, ಗೊಬ್ಬರ ಚೆನ್ನಾಗಿ ಕೊಟ್ರೆ ಎಂಥ ಮರಾನೂ ಹುಲುಸಾಗಿ ಬೆಳೆದು ಫಸಲು ಕೊಡುತ್ತೆ. 'ಇವನು ಬ್ರಾಹ್ಮಣ, ತೋಟಾನ ಒಳ್ಳೆ standard ಆಗಿ ಇಟ್ಟಿದಾನೆ' ಅಂತ ನನ್ನ ತೋಟವನ್ನು ನೋಡಿದವರು ಹೇಳ್ತಾರೆ. ಆದರೆ ಕಳೆದ ಎರಡು ವರುಷದಿಂದ ಮಳೆ ಇಲ್ಲ, ಈ ವರುಷ ಇನ್ನೂ ಅಧ್ವಾನವಾಗಿದೆ. ಫಸಲು ಕಡಿಮೆಯಾಗಿದೆ. ಏನಾಗ್ತೀವೋ

ಏನೋ, ತೋಟ ಉಳಿದ ಮೇಲೆ ನಾವೋ . . ನಾವು ಉಳಿದುಕೊಂಡ ಮೇಲೆ ತೋಟವೋ ಒಂದೂ ಅರ್ಥವಾಗುತ್ತಿಲ್ಲ.

- **ನಿಮ್ಮ ತಾತನ್ನ ನೀವು ನೋಡಿದ್ರಾ?**
  ಹೌದು, ನೋಡಿದ್ದೆ.

- **ಅವರು ಸ್ವತಃ ವ್ಯವಸಾಯ ಮಾಡ್ತಿದ್ರಾ?**
  ಕೆಲವು ದಿನ ಲಿಂಗಳಾಪುರದಲ್ಲಿಯೇ ಇದ್ದು ಭೂಮಿ ಕಾಣಿ ನೋಡಿಕೊಳ್ಳುತ್ತಿದ್ರು. ನಮ್ಮ ಚಿಕ್ಕಪ್ಪ ಒಬ್ಬರು ಇದ್ರು. ಅವರಿಗೆ ಅರ್ಧ ಕೊಟ್ಟ ಮೇಲೆ, ಉಳಿದಿದ್ರಲ್ಲಿ ನಾವು ಸಸಿ ಹಾಕಲು ಹೋದಾಗ ಒಂಭತ್ತು ಮರ ಇತ್ತು - ನಮ್ಮ ಪಿತ್ರಾರ್ಜಿತದ ಭಾಗದಲ್ಲಿ, ಮುತ್ತಜ್ಜ ಬೆಳೆದಿದ್ದು. ನಮ್ಮಜ್ಜ ದೇವಸ್ಥಾನದ ಕಾರಣದಿಂದಲೇ ಭೂಮಿ ಹಾಳು ಬಿಟ್ರು. ಇಲ್ಲದಿದ್ರೆ ಅವರು ಒಳ್ಳೆಯ ಕೃಷಿಕಾರರೆ, ಒಳ್ಳೆಯ ಅನುಭವಾನೂ ಇತ್ತು. ನಮ್ಮ ತಂದೆಗೆ ತೋಟ ರೂಢಿಸಬೇಕು ಅನ್ನುವ ಸಂಸ್ಕಾರ ಇದ್ದುದರಿಂದ ನನಗೆ ತೋಟ ಮಾಡುವ ಯೋಗ ಬಂತು. ನನ್ನ ಮುತ್ತಜ್ಜ ೧೬ ಎಕರೆ ತೋಟಾನ ತೀರ್ಥಹಳ್ಳಿಯ ತೆಂಗಿನ ಕೆರೇಲಿ ಬೆಳೆದ್ರು ಅಂದ್ರೆ ನೀವೇ ಊಹಿಸಿ. ತೆಂಗಿನ ಕೆರೆ ಇದ್ದದ್ದು ತೀರ್ಥಹಳ್ಳಿ ಶಿವಮೊಗ್ಗ ಮಧ್ಯ ಮಂಡಗದ್ದೆ ಬಿಟ್ಟ ಮೇಲೆ ಒಂದು ಗೇಟ್ ಸಿಗುತ್ತೆ, ಕೈಮರ ಇದೆ. ಅಲ್ಲಿದೆ ತೆಂಗಿನಕೆರೆ.

- **ನಿಮ್ಮ ಮುತ್ತಜ್ಜ ತೆಂಗಿನಕೆರೆಯಿಂದ ಬೀರೂರಿಗೆ ಬಂದಾಗ ಇಲ್ಲಿ ಸಂಕೇತಿಗಳ ಮನೆ ಎಷ್ಟಿತ್ತು?**
  ಇದ್ದಿದ್ದೇ ಜೋಯಿಸರ ಮನೆ. ಮೂರು ಮನೆ ಸಂಕೇತಿಗಳದ್ದು. ಅವರು ವ್ಯವಸಾಯ ಮಾಡ್ತಿದ್ರು. ಮೂರು ಮನೆಯವರಿಗೆ ಸೇರಿ ೧೬ ಎಕರೆ ಜಮೀನಿತ್ತು. ಇದರೊಳಗೆ, ಮತ್ತೂರಲ್ಲಿ ನಾರಾಯಣ ಮಾಸ್ತರು ಅಂತ ಇದ್ರು. ಅವರು ಇದೇ ಊರಿನವರು. ಅವರು ಅಡಿಕೆ ವ್ಯಾಪಾರ ಮಾಡಿ ಬಹಳ ಲಾಸ್ ಆಗಿ, ಇಲ್ಲಿನ ಜಮೀನೆಲ್ಲಾ ಕೊಟ್ಟು ಮತ್ತೂರು ಸೇರಿಕೊಂಡ್ರು. ಅಲ್ಲಿ ಪೌರೋಹಿತ್ಯ ಮಾಡ್ತಿದ್ರು. ಜೋಯಿಸರ ಮನೆಯವರು ಹೊಸಹಳ್ಳಿಗೆ ಓಡಾಡ್ತಾ ಇದ್ದರಲ್ಲಾ, 'ನೀನು ಸುಬ್ಬಾವಧಾನಿ ಇಲ್ಲೇನೂ ಮಾಡೋದಕ್ಕೆ ಆಗೋದಿಲ್ಲ, ಬೀರೂರಿಗೆ ಬಾ' ಅಂತ ಮುತ್ತಜ್ಜನನ್ನು ಇಲ್ಲಿಗೆ ಕರೆತಂದ್ರು. ಜೋಯಿಸರು ಹಿರಿಯಂಗಳದಲ್ಲಿದ್ರು, ನಮ್ಮ ಮುತ್ತಜ್ಜ ಸಮೀಪದಲ್ಲಿ ಒಂಭತ್ತು ಅಂಕಣದ ಮನೆ ಕಟ್ಟಿದ್ರು, ಲಿಂಗಳಾಪುರದಲ್ಲಿ. ಇವತ್ತಿಗೂ ಆ ಮನೆಯ ಗುರುತಿದೆ. ವೀರಾಂಜನೇಯನ ದೇವಸ್ಥಾನವೂ ಅಲ್ಲಿತ್ತಂತೆ. ನಮ್ಮ ತಂದೆಗೂ ಆ ಆಂಜನೇಯನ ಮೇಲೆ ಬಹಳ ಅಭಿಮಾನ. ತೋಟದಿಂದ ಬರಬೇಕಾದರೆ ಮೂರು ಸುತ್ತುಸುತ್ತಿ, ನನಗೂ ನಮಸ್ಕಾರ ಮಾಡು ಅಂತ ಹೇಳ್ತಿದ್ರು. ಬಹಳ ಸುಂದರವಾದ ಮೂರ್ತಿ. ಕಾರಣಾಂತರದಿಂದ ಪಂಜುಗಳ್ಳರ ಕಾಟದಿಂದ, ಹಿರಿಯಂಗಳ ಹಾಗೂ ಲಿಂಗಳಾಪುರಾನೂ ಹಾಳಾಯ್ತು. ಹಾಗಾಗಿ ಬಂದು, ಬೀರೂರಿನಲ್ಲಿ ನೆಲಸಬೇಕಾಯ್ತು. ಇಲ್ಲಿ ಮುಂಚಿನಿಂದಲೂ ಸಂಕೇತಿಗಳದ್ದು ನಾಲ್ಕು ಕುಟುಂಬ ಅಷ್ಟೆ. ನನ್ನ ತಂದೆ ಕೆಲಸಕ್ಕೆ ಸೇರಿದ ಮೇಲೆ ತೋಟ ಹಾಳು ಬಿತ್ತು. ಜಮೀನು ಉಳೀತು ಅಷ್ಟೆ. ಅದರಲ್ಲಿ ಮುತ್ತಜ್ಜ ಬೆಳೆದಿದ್ದ ಕಿತ್ತಳೆ ಗಿಡಗಳು ಬಹಳ ದಿನ ಇತ್ತಂತೆ. ಬಹಳ ರುಚಿಯಾಗಿರೋದಂತೆ. ನಮ್ಮ ಮುತ್ತಜ್ಜನ ಕಾಲದಲ್ಲಿ ಇಪ್ಪತ್ತು ಮರಗಳನ್ನು ಅಡಿಕೆ ಖಟಾವು ಮಾಡಿದ್ರೆ ಅವತ್ತಿನ ಕುಯಿಲು ೨೫ ಚೀಲ ಅಡಿಕೆ ಆಗೋದಂತೆ. ಅಂಥಾ ಕೃಷಿ ಮಾಡೋರಂತೆ ಅವರು. ಆವಾಗಿನ ಮಳೇನೂ ಹಾಗಿತ್ತು. ಭೂಮೀನೂ ಫಲವತ್ತಾಗಿತ್ತು. ಬರ್ತಾ ಬರ್ತಾ ಕ್ರಮೇಣ ಬೇರೆ ಬೇರೆ ಗೊಬ್ಬರ ಬಳಸಿ ಭೂಮೀನೂ ಲಡ್ಡಾಯ್ತು. ಮಳೇನೂ ಕಮ್ಮಿಯಾಯ್ತು. ನಾನು ಕಾಣುವ ಹಾಗೆ ೬೫ರಲ್ಲಿ ಬರಗಾಲ. ೬೬ನೇ ಇಸವೀಲಿ ಭರಣಿ ಮಳೆ ಇಡೀ ಕರ್ನಾಟಕಕ್ಕೆ ಸಮೃದ್ಧವಾಗಿ ಸುರಿದಿತ್ತು, ಐದಿಂಚಿನಿಂದ ಹತ್ತು ಇಂಚಿನವರೆಗೆ. ಆಮೇಲಿನಿಂದ ಮಳೆ ಕಡಿಮೆಯಾಗ್ತಾ ಆಗ್ತಾ ಈಗ ಏನೇನೂ ಇಲ್ಲದ ಹಾಗೆ ಆಗಿದೆ.

- **ಮಳೆ ಬರೋದಕ್ಕೆ ಶ್ಲೋಕ ಇದೆ ಅಂತ ಹೇಳ್ತಾ ಇದ್ರಲ್ಲಾ ಅದರ ಬಗ್ಗೆ ವಿವರವಾಗಿ ಹೇಳಿ?**
  ಋಷ್ಯಶೃಂಗರು ಅಂತ. ಕಿಗ್ಗದಲ್ಲಿ ಇವರ ವಾಸಸ್ಥಾನ. ಹಿಂದೆ ಪುರಾಣ ಕಾಲದ್ದು ಅಂತ ಇಟ್ಕೊಳಿ. ಅವರು ಅಲ್ಲಿ ತಪಸ್ಸು ಮಾಡಿಕೊಂಡು ಇದ್ರು. ಕೋಸಲ ದೇಶದಲ್ಲಿ ದಶರಥ ಮಹಾರಾಜನಿಗೆ ನಾನಾ ವರುಷ ಮಳೆ ಹೋಯಿತು. ರೋಮಪಾದ ಅಂತ ಅವನ ಸ್ನೇಹಿತ ಒಬ್ಬ ಇದ್ದ. ಅವನೂ ಒಬ್ಬ ರಾಜ. ದಶರಥ ಅವನನ್ನು ಕರೆದು, 'ನೋಡಪ್ಪಾ ಮಳೆ ಹೋಯ್ತು, ಏನು ಮಾಡೋಣ?' ಅಂತ ಕೇಳಿದ. ಆಗ ಅವನು 'ಋಷ್ಯಶೃಂಗರನ್ನು ಕರೆದು ತಂದ್ರೆ ಮಳೆಯಾಗುತ್ತೆ' ಅಂದನಂತೆ. 'ನೀನೇ ಹೋಗಿ ಕರೆದು ತಾ' ಅಂದನಂತೆ ದಶರಥ ಮಹಾರಾಜ. ಇವನು ಹೋದಾಗ ಋಷ್ಯಶೃಂಗರನ್ನು ಮಾತನಾಡಿಸಲು ಆಗಲಿಲ್ಲ. ವಾಪಸ್ಸು ಬಂದ. ಋಷ್ಯಶೃಂಗರದ್ದು ಏನಪ್ಪಾ ಅಂದ್ರೆ ಯಾರ ಮುಖವನ್ನೂ ನೋಡಿಯೇ ಇಲ್ಲ. ಇವರು ಹುಟ್ಟಿದ ಮೇಲೆ ತಾಯಿ ತೀರಿಕೊಂಡ್ರಂತೆ. ಅವರ ಮುಖಾನೂ ನೋಡಲಿಲ್ಲ.

ತಂದೆ ಒಬ್ಬರು ವಿಭಾಂಡಕ ಅಂತ ಇದ್ದರಂತೆ. ಋಷ್ಯಶೃಂಗರಿಗೆ ಅವರನ್ನು ಶುಶ್ರೂಷೆ ಮಾಡುವ ಕೆಲಸ ಒಂದನ್ನು ಬಿಟ್ಟು ಬೇರೆಯ ಕೆಲಸ ಇರಲಿಲ್ಲ. ಯಾರನ್ನೂ ನೋಡದಂತೆಯೇ ಕಾಡಿನಲ್ಲಿ ಬ್ರಹ್ಮಚಾರಿಗಳಾಗಿ ಇದ್ರು. ರೋಮಪಾದನಿಗೆ ಒಂದು ಸಾವಿರ ಜನ ಹೆಣ್ಣುಮಕ್ಕಳು. ಇವರನ್ನೂ ಕರೆದುಕೊಂಡು ಹೋದ್ರೆ ಕೆಲಸ ಆಗುತ್ತೆ ಅಂತ ಅವನ ಹೆಣ್ಣುಮಕ್ಕಳನ್ನು ಕಾಡಿಗೆ ಕರೆದೊಯ್ಯುತ್ತಾನೆ. ಅವರು ಸಂಗೀತ, ನೃತ್ಯ ಮಾಡಿದಾಗ ಋಷ್ಯಶೃಂಗರ ಗಮನ ಇವರ ಮೇಲೆ ಬಿತ್ತು. ಕೋಸಲ ದೇಶಕ್ಕೆ ಆಗ ಅವರನ್ನು ಕರೆದೊಯ್ದನಂತೆ, ಸಮೃದ್ಧವಾಗಿ ಮಳೆಯೂ ಬಂತಂತೆ. ಆಗ ಅವರಿಗೆ ತನ್ನ ಸಾವಿರ ಜನ ಹೆಣ್ಣುಮಕ್ಕಳನ್ನು ಕೊಟ್ಟು ಮದುವೆ ಮಾಡಿದ ಅನ್ನುವ ಇತಿಹಾಸ ಇದೆ. ಆ ಶ್ಲೋಕ ಈ ರೀತಿ ಇದೆ

'ಋಷ್ಯಶೃಂಗಾಯ ವಿದ್ಮಹೇ ವಿಭಾಂಡಕಸುತಾಯ ಚ
ನಮಃ ಶಾಂತಾಧಿಪತಯೇ ಸದ್ಯಃ ಸದ್ವೃಷ್ಟಿಹೇತವೇ||
ಮಾರ್ಕಂಡೇಯ ಮಹಾಭಾಗ ಕಲ್ಪಾಂತರಸ್ಥಿರಜೀವನ
ಆಯುರಾರೋಗ್ಯಮೈಶ್ವರ್ಯಂ ಸದ್ಯೋ ವೃಷ್ಟಿಂ ಚ ದೇಹಿ ಮೆ||
ಪರ್ಜನ್ಯಾಯ ಪ್ರಗಾಯಚ ದಿವಃಸ್ಪುತ್ರಾಯ ಮೀಢುಷೇ
ಸನೋಯವ ಸಮಿಚ್ಛತು| ಇದಂ ವಚಃ ಪರ್ಜನ್ಯಾಯ ಸ್ವರಾಜೇ
ಹೃದೋ ಅಸ್ವತರಂ ತದ್‌ಗುಹೋತ ಮಯೋಜುರ್ವಾತ
ವಿಶ್ವಕೃಷ್ಣಯಃ ತಸ್ಮೈ|| ಸುಪ್ಪಿಪಲಾ ಔಷಧೀಶ
ದೇವಗೋಪಾಃ ಯೋಗರ್ಭಮೋಷಧೀನಾಂ|| ಗವಾಂ
ಕೃಣೋತ್ಯರ್ಜತಂ ಪರ್ಜನ್ಯಃ ಪುರುಷಿಣಾಂ||

ಪ್ರತಿದಿನ ಈ ಮೂರು ಶ್ಲೋಕವನ್ನು ೧೦೮ ಸಾರಿ ಜಪ ಮಾಡಬೇಕು. ಆನಂತರದಲ್ಲಿ ನೀವು ಓಡಾಡಬೇಕಾದರೆ ಅದನ್ನು ಹೇಳಿಕೊಳ್ಳಬಹುದು. ಇದಕ್ಕೆ ಜನಜಾತಿ ಯಾವುದೂ ಇಲ್ಲ ಅಂತ ನನಗೆ ಅನ್ನಿಸುತ್ತೆ. ಈ ಶ್ಲೋಕಗಳನ್ನು ಜಪಿಸಿದರೆ ಆಯುರಾರೋಗ್ಯ ಐಶ್ವರ್ಯ ಎಲ್ಲವೂ ಸಿಗುತ್ತಂತೆ. ಭಗವಂತ ನಮಗೆ ಸಮೃದ್ಧಿಯಾಗಿ, ನೀವು ಬಂದಿರೋ ಕಾರಣದಿಂದಲೂವೆ ಮಳೆ ಕೊಟ್ರೆ ಸಾಕು. ಹಿಂದೆ ಅಕ್ಬರನ ಕಾಲದಲ್ಲಿ ತಾನ್‌ಸೇನ್ ಮೇಘಮಲ್ಹಾರ ರಾಗ ಹಾಡಿದ್ರೆ ಮಳೆ ಬರ್‍ತಿತ್ತು, ದೀಪಕರಾಗ ಹಾಡಿದ್ರೆ ದೀಪ ಹತ್ತುತ್ತಿತ್ತು ಅಂತಾರಲ್ಲ. ಹಾಗೇ ಕೃಷಿ ವಿಚಾರದಲ್ಲೂ. ನಿಜವಾಗಿಯೂ ಬೆಳೆಗಳು ಮನುಷ್ಯರ ಹಾಗೆಯೇ ಒಂದು ಜೀವ. ನಾವು ತೋಟದಲ್ಲಿ ಸಂಗೀತವಾಗಲಿ ಅಥವಾ ವೇದದ ಅಧ್ಯಯನವಾಗಲಿ ಮಾಡ್ತ ಇದ್ರೆ ಒಳ್ಳೆ ಉತ್ಪತ್ತಿ ಬರುತ್ತೆ. ಇದು ನಿಜ. ಹ್ಯಾಗೇಂದ್ರೆ ಹಾಸನದ ಸೀಮೇಲಿ, ಎಷ್ಟೋ ಜನ ಬೇಕಾದಷ್ಟು ಎಲೆ ಹಂಬು ಮಾಡಿಕೊಂಡಿದ್ರು. ಅವರಿಗೆ ಕೈಯಲ್ಲಿ ಎರಡು ಕೊಡ ಇದ್ದುಬಿಟ್ರೆ ಊಟ ಮಾಡಿದ್ದು ಬೇಡ, ತಿಂಡಿ ತಿಂದದ್ದೂ ಗೊತ್ತಿರಲಿಲ್ಲ ಹಾಗೆ ದುಡೀತಾ, ವೇದಾಧ್ಯಯನ ಮಾಡ್ತಾ, ಶಿಷ್ಯರಿಗೂ ಹೇಳಿಕೊಟ್ಟು, ತೋಟದಲ್ಲಿ ಮಾಡ್ತಾ ಇದ್ರು, ಒಳ್ಳೆ ಬೆಳೆ ತೊಗೋತಾ ಇದ್ರು ಅನ್ನೋದು ಗೊತ್ತು. ಆದರೆ ಇಲ್ಲಿ ಯಾರೂ ಅದನ್ನು ಪರೀಕ್ಷಿಸಿಲ್ಲ.

- **ನಿಮ್ಮ ಬಾಲ್ಯದ ಬಗ್ಗೆ ಹೇಳಿ?**

ನಾನು SSLC ವರೆಗೆ ಓದಿದೆ. ನನ್ನ ಉದ್ದೇಶ ಭೂಮಿ ಮಾಡಬೇಕು ಅಂತಲೇ ಇತ್ತು. ನಾನು ನೌಕರಿಗೆ ಹೋದ್ರೆ ನಾನು, ನನ್ನ ಮಕ್ಕಳು, ಮೊಮ್ಮಕ್ಕಳನ್ನು ಸಾಕಬಹುದು. ಆದ್ರೆ ಕೃಷೀಲಿ ಎಲ್ಲರಿಗೂ ಅನುಕೂಲವಾಗುತ್ತೆ. ನಾನು ಬೆಳೆದ ದವಸ ನಾಲ್ಕು ಜನರ ಆಹಾರವಾಗುತ್ತೆ, ನಾನೂ ನಾಲ್ಕು ಜನರಿಗೆ ಕೊಡಬಹುದು. ಸಮೃದ್ಧಿಯಾಗಿ ಇರಬಹುದು ಅನ್ನುವುದು ನನ್ನ ಉದ್ದೇಶ.

- **ಏನೇನು ಬೆಳೆಗಳನ್ನು ನೀವು ಬೆಳೆದಿದೀರಿ?**

ನಾನು ಒಂದು ೧೫ ವರುಷ ಭತ್ತ ಬೆಳೆದೆ. ಮೂರೂವರೆ ಎಕರೇಲಿ ೭೫ ರಿಂದ ೮೦ ಚೀಲ ಸಿಗ್ತಿತ್ತು. ನಮ್ಮಲ್ಲಿ ಮದಗದ ಕೆರೆ ಇದೆ. ಅದರಲ್ಲಿ ೬೫ ಅಡಿ ನೀರು ನಿಲ್ಲುತ್ತೆ. ವರುಷಾವರುಷ ತುಂಬುತ್ತೆ. ಅದ್ರಿಂದ ಒಂದು ಪೈರಿಗೆ ನೀರು ಸಿಕ್ತಿತ್ತು. ಇನ್ನೊಂದು ಭಾಗದ ನೀರನ್ನು ಬಾಗಾಯ್ತಿಗೆ ಇಟ್ಟುಕೊಳ್ಳುತ್ತಿದ್ರು. ಸ್ವಲ್ಪ ಸೊಸೈಟಿ ಗೊಬ್ಬರ ಹಾಗೂ ಸಗಣಿಗೊಬ್ಬರ ಹಾಕ್ತಾ ಇದ್ದೆ. ಇಂಟಾನ್, ಸಣ್ಣಭತ್ತ ಹಾಗೂ ಸ್ಥಳೀಯ ತಳೀನೇ ಬಳಸ್ತಾ ಇದ್ದದ್ದು. ನಾನು ಎತ್ತುಗಾಡಿ ಇಟ್ಟಿರಲಿಲ್ಲ. ಹಳ್ಳಿಯವರಿಗೆ ಹೇಳ್ತಿದ್ದೆ. ಐದೆಕರೆ ಜಮೀನಿನಲ್ಲಿ

ಅವರಿಗೆ ಎರಡು ಎಕರೆ ಕೊಟ್ಟಿದ್ದೆ. ಅವರು ಬೇಸಾಯ ಮಾಡ್ತಿದ್ರು. ಎಡೆಕುಂಟೆ ಹೊಡೀತಿದ್ರು. ಕೊಯ್ಲು ಕಾಲದಲ್ಲಿ ಖಟಾವು ಮಾಡಿ ಕೊಡ್ತಿದ್ರು. ಒಕ್ಕಣೆ ಸಹಾ ಮಾಡ್ತಿದ್ರು. ಹುಲ್ಲು ಖರೀದಿಗೆ ಕೊಡ್ತಿದ್ದೆ. ನಮಗೆ ಬೇಕಾದಷ್ಟು ಭತ್ತ ಇಟ್ಟುಕೊಂಡು ಬಾಕೀದೆಲ್ಲಾ ಮಾರ್‍ತಿದ್ದೆ.

ನನ್ನ ತಂದೆ ಅವರ pension ಹಣದಲ್ಲಿ ವಾರಕ್ಕೆ ನೂರು, ಇನ್ನೂರು ರೂಪಾಯಿ ಕೊಡೋರು. ಹೆಣ್ಣಾಳಿಗೆ ಕೂಲಿ ಒಂದೂವರೆ ರೂಪಾಯಿ. ಅಗತೆ ಕಡಿಯೋ ಹೆಣ್ಣಾಳು ನಮ್ಮಲ್ಲಿದ್ದಾರೆ. ಎರಡೂವರೆ ರೂಪಾಯಿ ಗಂಡಾಳಿಗೆ. ಅವರು ಒಂದು ಅಗೆತ ಕಡಿದು ಹೋಗಿಬಿಟ್ರೆ, ನಾನು ಮತ್ತೊಂದು ಸಾರಿ ಬರುವವರೆಗೆ ಅರ್ಧ ಮುಕ್ಕಾಲು ಎಕರೇನ ಸ್ವಂತ ಕಡೀತಿದ್ದೆ. ಬಾಳೆಗುಂಡಿ ತೆಗೀತಿದ್ದೆ, ಕಪ್ಪು ತೆಗೀತಿದ್ದೆ. ಅಡಿಕೆ ಸಸಿ ಬೆಳೀತಿದ್ದೆ. ಇದಕ್ಕೆಲ್ಲಾ ಕೂಲಿ ಕೊಡ್ತಿರಲಿಲ್ಲ. ಇಲ್ಲೆಲ್ಲಾ ಅಡಿಕೆ ತೋಟದಲ್ಲಿ ಮುಖ್ಯ ಬೆಳೆ ಬಾಳೆ. ನಾನು ಕಾಳುಮೆಣಸು, ಏಲಕ್ಕಿ ಅದ್ಯಾವುದೂ ಹಾಕಲಿಲ್ಲ. ನಮ್ಮ ಜಮೀನು ದೂರದಲ್ಲಿದೆ. ಕಳ್ಳತನವಾಗಬಹುದು ಅಂತ ಮಾಡಲಿಲ್ಲ.

- **ಅಡಿಕೇನೂ ಕದಿಯಬಹುದಲ್ಲವೆ?**

ಅಡಿಕೆ ಕದಿಯೋದಕ್ಕೆ ಇಲ್ಲಿ ಬಿಗಿ ಇತ್ತು. ಅಡಿಕೆ ಕದ್ರೆ ಬಹಳ ಅಪರಾಧ ಅಂತ ಇತ್ತು. ಏನೂ ಆಗ್ತಿರಲಿಲ್ಲ. ಮಧ್ಯ ನೀವು ಹೇಳಿದ ಹಾಗೆ ಕಳ್ಳತನ ಶುರುವಾಗಿತ್ತು. ಸಂಘ ಮಾಡಿದ್ರು. ಎಕರೆಗೆ ಇಷ್ಟು ಅಂತ ವಸೂಲು ಮಾಡ್ತಿದ್ರು. ಅವರು ಯಾವ್ಯಾವ ಗಂಡೀಲಿ ಮಾಲು ಹೋಗುತ್ತೋ ಅಲ್ಲೆಲ್ಲಾ ಇದ್ದು ಕಾದು ನಮಗೆ ರಕ್ಷಣೆ ಮಾಡಿಕೊಡೋರು. ಈಗ ಕಳ್ಳತನ ಕಡಿಮೆ.

- **ನಿಮ್ಮ ತಾಯಿ, ಅಜ್ಜಿಯವರ ಬಗ್ಗೆ ಹೇಳಿ...**

ನನ್ನ ತಾಯಿ ಲಕ್ಷಮ್ಮ, ಲಿಂಗದಹಳ್ಳಿಯವರು. ಅವರ ವಿಚಾರವಾಗಿ ಹೇಳೋದಾದ್ರೆ, ನಾನು ಇವತ್ತು ಆರು ಘಂಟೆಗೆ ಎದ್ದು ಹೋಗಬೇಕು ಅಂದ್ರೆ ಅಷ್ಟೊತ್ತಿಗೆ ತಿಂಡಿ, ಕಾಫಿ ರೆಡಿಮಾಡಿ ಇಟ್ಟಿರೋರು. ಹತ್ತು ಘಂಟೆಗೆ ಊಟ ಆಗಬೇಕು ಅಂದ್ರೆ ಅಷ್ಟು ಹೊತ್ತಿಗೆ ಸರಿಯಾಗಿ ಅಡುಗೆ ಮಾಡಿರೋರು. ಅವರ ಸಹಾಯ ಹಾಗೆ ಇದ್ದುದರಿಂದಲೇ ನಾನು ತೋಟದಲ್ಲಿ ದುಡಿಯಲು ಅನುಕೂಲವಾಯ್ತು. ತೋಟ ಬೆಳೀತು. ನನ್ನ ಮನೆಯವರೂ ಹಾಗೇ ಸಹಕರಿಸಿದಾರೆ. ತಾಯಿಯ ಕೆಲಸ ಮಾತ್ರ ಅಸಾಧ್ಯವಾದುದು ಅಂತ ಹೇಳಬೇಕು. ನಮ್ಮ ತಂದೆ ತಾಯಿಗೆ ನಾನು ಒಬ್ಬನೇ ಮಗ ಅಷ್ಟೆ. ಅಕ್ಕತಂಗಿ ಯಾರಿಲ್ಲ. ಅದಕ್ಕೇ ಅಷ್ಟು ಮುಚ್ಚಟೆಯಾಗಿ ನನ್ನ ಬೆಳೆಸಿದ್ರು.

- **ನಿಮ್ಮ ದಿನಚರಿ ಹ್ಯಾಗಿತ್ತು?**

ನಾನು ಪ್ರತಿದಿವಸವೂ ತೋಟಕ್ಕೆ ಹೋಗೋದನ್ನು ತಪ್ಪಿಸಿಲ್ಲ. ನಾನು ಸೋಮಾರಿಕಟ್ಟೆಗೆ ಹೋಗ್ತಿರಲಿಲ್ಲ. ಬೆಳಗ್ಗೆ ಎದ್ದು ನನಗೆ ತೋಟಕ್ಕೆ ಹೋಗಬೇಕು, ಮನೆಗೆ ಬರಬೇಕು ಎನ್ನುವುದರದ್ದೇ ಚಿಂತನೆ. ಇವೆರಡೇ ಕೆಲಸ. ಬೆಳಗ್ಗೆ ಆರು ಘಂಟೆಗೆ ಮನೆ ಬಿಡ್ತಿದ್ದೆ. ಒಂದು ೮/೧೦ ವರುಷ ನಡೆದುಕೊಂಡೇ ಓಡಾಡ್ತಿದ್ದೆ. ಆಮೇಲೆ ನಮ್ಮ ಸ್ನೇಹಿತರದ್ದು ಸೈಕಲನ್ನು ೨೦೦ ರೂಪಾಯಿಗೆ ಕೊಂಡುಕೊಂಡೆ. ೨೦ ವರುಷ ಸೈಕಲ್ ಮೇಲೆ ಓಡಾಡಿದೆ. ೮೬ರಲ್ಲಿ ಸ್ವಂತ ಚಾಲಿ ಮಾಡಿದ್ವಿ. ಆವಾಗ ಸ್ವಲ್ಪ ಲಾಭ ಬಂತು. ಆಗ ಒಂದು ಮೊಪೆಡ್ ಖರೀದಿಸಿದ್ವಿ, ಅಷ್ಟೆ. ತೋಟ, ಮನೆಯ ನನ್ನ ದಿನಚರಿ ಮಾತ್ರಾ ಬದಲಾಗಿಲ್ಲ.

- **ನಿಮ್ಮ ಮಕ್ಕಳ ಬಗ್ಗೆ ಹೇಳಿ . . .**

ನಮಗೆ ಇಬ್ಬರು ಗಂಡುಮಕ್ಕಳು, ಒಬ್ಬಳು ಮಗಳು. ಅವರೂ ವ್ಯವಸಾಯದಲ್ಲಿ ಆಸಕ್ತಿಯಿಂದ ದುಡೀತಿದಾರೆ. ದೊಡ್ಡವನಿಗೆ B.A. ಆಯ್ತು. ಮತ್ತೊಬ್ಬ SSLCವರೆಗೆ ಓದಿದ. ನಾನು 'ಹೀಗೆ ಮಾಡಿ', 'ಹಾಗೆ ಮಾಡಿ' ಅಂತ ಏನೂ ಹೇಳಲಿಲ್ಲ. ನನಗೆ ನನ್ನದೇ ಕೆಲಸ. ಅದು ಬಿಟ್ರೆ ಮನೇಲಿ ಕೂರಲು ಮನಸ್ಸಾಗ್ತಾ ಇರಲಿಲ್ಲ. ಈಗ ನನ್ನ ಮಕ್ಕಳಿಗೂ ಅನುಭವ ಚೆನ್ನಾಗಿ ಆಗಿದೆ. ವಿಶ್ವನಾಥಶಾಸ್ತ್ರಿ ಹಾಗೂ ಕೇಶವಶಾಸ್ತ್ರಿ ಅಂತ ಅವರ ಹೆಸರು. ಮಗಳು ಕಾವೇರಿ ಅಂತ. ಅವಳನ್ನು ಹೊಳೆನರಸೀಪುರಕ್ಕೆ ಕೊಟ್ಟಿದೀವಿ. ನನ್ನ ಮಕ್ಕಳೇ ಅವರ ಸ್ವಂತ ಅಭಿಪ್ರಾಯದಿಂದ ವ್ಯವಸಾಯ ಮುಂದುವರೆಸ್ತಾ ಇದಾರೆ.

- **ವ್ಯವಸಾಯದಲ್ಲಿ ಸಾಧನೆ ಮಾಡಬೇಕಾದ್ರೆ ಏನು ಮುಖ್ಯ ಅನ್ನಿಸುತ್ತೆ?**

ಇವತ್ತಿನ ದಿನದಲ್ಲಿ ನೋಡೋದಾದ್ರೆ, ಹಣ ಬಹಳ ಮುಖ್ಯ. ಆ ಹಣ ಬರಬೇಕಾದ್ರೆ ನಾನು ಏನು ಕೆಲಸ ಮಾಡಬೇಕು, ಈಗ ನಾನು ಏನು ಮಾಡ್ತಾ ಇದೀನಿ, ಯಾವುದರಲ್ಲಿ ನನಗೆ ಉತ್ಪತ್ತಿ ಬರುತ್ತೆ ಅಂತ ಯೋಚಿಸಿ, ಅದನ್ನು ನಾವು ರೂಢಿಸಿದ್ರೆ ನಮಗೆ ದುಡ್ಡು ಸಿಗುತ್ತೆ. ನಮ್ಮ ಅಗತ್ಯಗಳಿಗೆ ತಕ್ಕಂತೆ ಅದನ್ನು ಮಿತವಾಗಿ ಖರ್ಚು ಮಾಡಿಕೊಂಡು, ಬಾಕೀದನ್ನು ಮತ್ತೆ ವ್ಯವಸಾಯಕ್ಕೆ ವಿನಿಯೋಗಿಸಬೇಕು.

ನನಗೆ ಐದು ಲಕ್ಷ ಉತ್ಪತ್ತಿ ಇದ್ರೆ ಅದ್ರಲ್ಲಿ ಎರಡು ಲಕ್ಷ ಭೂಮಿಗೇ ಹಾಕ್ತಿದ್ದೆ. ನಾವು ವೆಂಕಟರಮಣನ ಒಕ್ಕಲು. ದುಡ್ಡು ಉಳೀತಿರಲಿಲ್ಲ. ಕೇಶವದೇವರ ಒಕ್ಕಲಿನವರಿಗೆ ದುಡ್ಡು ಉಳಿಯಬಹುದೇನೋ... (ನಗು)

- **ಎದ್ರೆ ತೋಟ ಬಿದ್ರೆ ಮನೆ ಅನ್ನುವ ಹಾಗೆ ಬದುಕಿದ್ರಲ್ಲಾ? ಗಂಡ, ಹೆಂಡತಿಯರಿಗೆ ಮನರಂಜನೆ ಏನು?**

ಮನರಂಜನೆ ಅಂದ್ರೆ ಬಹಳ ಸುಲಭವಾದ ಕೆಲಸ. ಹೆಂಗಸರಿಗೆ ಪಾತ್ರೆ ಬೆಳಗೋದು, ನಲ್ಲೀಲಿ ನೀರು ಹಿಡಿಯೋದು, ಬಟ್ಟೆ ಒಗೆಯೋದು ಈ ಕೆಲಸ ಇದ್ದುದರಿಂದ ವಿರಾಮ ಇರ್ತಿರಲಿಲ್ಲ. ಆದರೂ ಸಿನಿಮಾಕ್ಕೆ ಹೋಗ್ತಿದ್ವಿ. ಊರಿಗೂ ಹೋಗ್ತಿದ್ವಿ. ಜತೆಯಾಗಿ ದಕ್ಷಿಣ ಭಾರತ ಪ್ರವಾಸ ಸಹಾ ಮಾಡಿದೀವಿ.

- **ವ್ಯವಸಾಯ ನೆಚ್ಚಿಕೊಂಡು ಬದುಕಿದೆ, ಭೂಮಿಯಿಂದ ನನಗೆ ಅನ್ಯಾಯವಾಗಿದೆ ಅಂತ ಯಾವಾಗಲಾದರೂ ಅನ್ನಿಸಿದ್ಯಾ?**

ಭೂಮಿ, ನಂಬಿದವರಿಗೆ ಯಾವತ್ತೂ ಮೋಸ ಮಾಡೋದಿಲ್ಲ. ಕೆಲವು ತೊಂದರೆಗಳಿಂದ ನಷ್ಟ ಆಗಬಹುದು. ಅದು ಇದ್ದದ್ದೇ, ಮಾಮೂಲಿ. ದೊಡ್ಡ ದೊಡ್ಡ factoryನೇ ಇವತ್ತು ಮುಚ್ಚಿದೆ. ಹಾಗೆ ಭೂಮೀನೂ ಯಾರು ಮಾಡ್ತಾರೆ ಅಂತ ಒಂದಷ್ಟು percent ಜನ ಬಿಟ್ಟಿರಬಹುದು. ಅಥವಾ ಜಮೀನನ್ನೆಲ್ಲಾ ಮಾರಿ, ಬಂದ ಹಣವನ್ನು ಬ್ಯಾಂಕಿನಲ್ಲಿಟ್ಟು ಜೀವನ ಮಾಡಬಹುದು ಅನ್ನುವ ಮಟ್ಟದಲ್ಲಿ ಮಾತನಾಡುವವರೂ ಇದಾರೆ, ಕೆಲವರು ಮಾಡಿದಾರೆ. ಆದರೆ ಅದೆಲ್ಲಾ percentage ಕಡಿಮೆ. ಯಾರೂ ಭೂಮಿ ಕೊಡೋದಕ್ಕೆ ಇಷ್ಟಪಡೋದಿಲ್ಲ. ಇದೇ ಊರಲ್ಲಿ ಹದಿನೈದು ಲಕ್ಷದವರೆಗೆ ವ್ಯಾಪಾರವಾಯ್ತು. ಕೆಲವು ಎಕರೆ ಮಾತ್ರ ವ್ಯಾಪಾರವಾಯ್ತು. ಹಾಗಾದ್ರೆ ಊರಿನವರೆಲ್ಲಾ ಹಣ ಇದ್ದವರಿಗೆ ಜಮೀನು ಕೊಡಬಹುದಿತ್ತಲ್ಲಾ. ಇದುವರೆವಿಗೂ ಮನುಷ್ಯ ಪ್ರಯತ್ನ ಇರುವವರೆಗೆ ಅಡಿಕೆ ತೋಟಕ್ಕೆ ಮಣ್ಣು ನೀರು ಕೊಟ್ಟು ಕಾಪಾಡೋಣ ಅಂತಾರೇ ವಿನಃ ಅದನ್ನು ಹಾಳು ಮಾಡೋಣ ಅಂತ ಯಾರೂ ಅನ್ನೋಲ್ಲ. ಇಲ್ಲೊಬ್ಬರು, ಅವರ ಅಡಿಕೆ ತೋಟ ಒಣಗುವ ಪರಿಸ್ಥಿತಿ ಬಂದಾಗ ಟ್ರಾಕ್ಟರ್‌ನಲ್ಲಿ ನೀರು ತೊಗೊಂಡು ಹೋಗಿ drip irrigation pipeಗೆ ಬಿಟ್ಟಿದಾರೆ. ಎಷ್ಟು ಶ್ರಮ ಇರಬಹುದು ಊಹಿಸಿ.

- **ಸಂಕೇತಿಗಳ ವ್ಯವಸಾಯಕ್ಕೂ, ಇತರೇ ಜನಗಳ ಬೇಸಾಯಕ್ಕೂ ಏನು ವ್ಯತ್ಯಾಸವಿದೆ?**

ಏನೂ ವ್ಯತ್ಯಾಸವಿಲ್ಲ. ಅವರೂ ಗೊಬ್ಬರ ಹಾಕ್ತಾರೆ, ನಾವೂ ಹಾಕ್ತೀವಿ. ಅವರೂ ನೀರು ಕೊಡ್ತಾರೆ; ನಾವೂ ಕೊಡ್ತೀವಿ. ನಮಗೆ ಉತ್ಕೃಷ್ಟವಾದ ಭೂಮಿ ಸಿಕ್ಕರೆ ಒಳ್ಳೆ ಫಸಲು ಸಿಗುತ್ತೆ, ಅದೇ ಅವರಿಗೆ ಸಿಕ್ಕರೂ ಸಿಗುತ್ತೆ. ಕಪ್ಪು, ಕಾಲುವೇಲಿ ನೀರು ಆಡುವ ತೋಟಗಳಲ್ಲಿ ಒಳ್ಳೆ ಫಸಲು ಅವರಿಗೂ ಸಿಕ್ಕಿದೆ. ನಮ್ಮ ಜನಾಂಗಕ್ಕೂ ತೊಂದರೆ ಆಗಿಲ್ಲ. ಅವರಿಗೂ ತೊಂದರೆ ಆಗಿಲ್ಲ. ವ್ಯವಸಾಯದಲ್ಲಿ ಮಾತ್ರ ಒಂದು ತಿಳ್ಕಳಿ, ಎರಡು ಸೇರು ರಾಗೀನ ನಾವು ಭೂಮಿಗೆ ಬಿತ್ತುತೀವಿ. ೨೦ ಚೀಲ ಧವಸ ತೊಗೋತೀವಿ. ಇಷ್ಟನ್ನು ನೀವು ಯಾವ ಉದ್ಯೋಗಕ್ಕೆ ಹಾಕಿದ್ರೂ, ಅಷ್ಟು ಲಾಭ ತೊಗೊಳ್ಳಲು ಆಗೋದಿಲ್ಲ. ಒಂದು ಅಡಿಕೆ ಗೋಟು ಊರಿದ್ರೆ ೧೨ ರಿಂದ ೨೫ ರೂಪಾಯಿವರೆಗೂ ಆದಾಯ ಇದೆ. ಇಷ್ಟು ಆದಾಯ ಬೇರೇದ್ರಲ್ಲಿ ಇದೆಯಾ? ಒಂದು ತೆಂಗಿನಕಾಯಿ ಹಾಕಿದ್ರೆ ಅದು ಎಷ್ಟು ವರುಷ ಫಸಲು ಕೊಡುತ್ತೆ? 'ನೀನು ಹತ್ತು ವರುಷ ಸಾಕು, ನಾನು ನಿನ್ನನ್ನು ನೂರು ವರುಷ ಸಾಕ್ತೀನಿ' ಅಂತ ತೆಂಗಿನ ಗಿಡ ಹೇಳುತ್ತೆ. ಒಂದು ಮರಕ್ಕೆ ೫೦ ಕಾಯಿ ಅಂತ ಹಿಡಿದ್ರೂ ೯೦ ವರುಷಕ್ಕೆ ಎಷ್ಟಾಯ್ತು? ಯಾವ ವ್ಯವಹಾರದಲ್ಲಿ ಇಷ್ಟು ಲಾಭ ಇದೆ? ಬಡ್ಡಿಗೆ ಕೊಟ್ರೆ ಕೆಲವು ಕಾಲ ದುಡೀಬಹುದು, ಬಡ್ಡೀಲಿ. ಆನಂತರ ಅವನು ಅಸಲಿಗೇ ಮೋಸ ಮಾಡಬಹುದು. ವ್ಯವಸಾಯ ಯಾರಿಗೂ ಅನ್ಯಾಯ ಮಾಡದೇ ದುಡಿಯುವಂತಹ ಬದುಕು.

- **ಮತ್ತೆ ಇಷ್ಟು ಚೆನ್ನಾಗಿರುವ ಕಸುಬು ಬಿಟ್ಟು ಯಾಕೆ ಸಂಕೇತಿಗಳು ಪಟ್ಟಣ ಸೇರ್‍ತಾ ಇದಾರೆ?**

ಏನಾಗಿದೆ ಅಂದ್ರೆ ಕೆಲವು ವರುಷ ಇವನು ಕೃಷಿ ಕೈ ಬಿಟ್ಟುಬಿಟ್ಟ. ಅವನಿಗೆ ಅದು ಕಷ್ಟ ಅಂತ ತೋರಿಬಿಡ್ತು. ಇಷ್ಟರ ಮೇಲೆ ಇನ್ನೊಂದು ವಿಚಾರ ಇದೆ. ಬ್ರಿಟಿಷರು ಬಂದ ಮೇಲೆ ನಮ್ಮ ದೇಶಾನೂ ಹಾಳಾದದ್ದು, ಜನಾನೂ ಹಾಳಾದದ್ದು. ಬ್ರಿಟಿಷರು ಬಂದಾಗ ಅವರು ಉಳಿಯುವ ಸಲುವಾಗಿ ಬುದ್ಧಿವಂತ ಜನಾಂಗವನ್ನು ಹುಡುಕಿದ್ರು. ಆಗ ಅವರಿಗೆ ಸಿಕ್ಕಿದವರು ಬ್ರಾಹ್ಮಣರು. ಇವರು ಈರುಳ್ಳಿ ತಿನ್ನಲಿಲ್ಲ, ಬೆಳ್ಳುಳ್ಳಿ ತಿನ್ನಲಿಲ್ಲ. ಇವರ ನಾಲಿಗೆ ಸ್ಪಷ್ಟವಾಗಿತ್ತು. ವಿದ್ಯೆಯಲ್ಲೂ ಚುರುಕಾಗಿದ್ರು. ಆಗಿನ ಕಾಲದ SSLC ಅಂದ್ರೆ ಈಗಿನ ಕಾಲದಲ್ಲಿ, ಏನು ವಿದ್ಯಾಭ್ಯಾಸ ಮಾಡಿಕೊಂಡು ಬಂದ್ರೂ ಅದಕ್ಕೆ ಸಮಾನ ಅಲ್ಲ. ಹಾಗಾಗಿ ಉದ್ಯೋಗದ ರುಚಿ ಇವರಿಗೆ ಹತ್ತಿತು. ಭೂಮಿ ಕಾಣೆ ಕಡೆಗಣಿಸಿದರು. ವ್ಯವಸಾಯದ ಮೋಹ ಕಡಿಮೆಯಾಯ್ತು. ತಂದೆತಾಯಂದಿರ ಕೆಲಸದ ವ್ಯಾಮೋಹ ಅವರ

ಮಕ್ಕಳಿಗೂ ಮುಂದುವರೀತು. ವ್ಯವಸಾಯ ಕಡಿಮೆಯಾಯ್ತು. ಮತ್ತೊಂದು ಕಾರಣ ಅಂದ್ರೆ ಹೆಣ್ಣು ಹೆತ್ತೋರಿಗೆ ಮದುವೆ ಮಾಡುವುದು ಕಷ್ಟವಾಯಿತು. ಅಂತಹ ಸಂದರ್ಭದಲ್ಲಿ ಭೂಮೀನ ಹೋದಷ್ಟಕ್ಕೆ ಕೊಟ್ಟು ಮದುವೆ ಮಾಡುವುದು ನಮ್ಮ ಕರ್ತವ್ಯ ಅಂತ ಆಯಿತು. ಹಿಂದೆ ಒಂದು ಕಾಲ ಹ್ಯಾಗಿತ್ತಪ್ಪ ಅಂದ್ರೆ, ಒಂದು ಮನೆತನ ಹಾಳಾಗಬೇಕು ಅಂತಿದ್ರೆ ಅವನಿಗೆ ಹತ್ತು ಹೆಣ್ಣು ಹುಟ್ಟಿದ್ರೆ ಸಾಕು ಅನ್ನುವ ಮಾತಿತ್ತು. ಹತ್ತು ಹೆಣ್ಣಾದ್ರೆ ಅವನು ನಾಶವಾದ ಅಂತಲೆ .... (ನಗು). ವರದಕ್ಷಿಣೆ ಪಿಡುಗು, ಬುದ್ಧಿವಂತ ಪಂಗಡದಿಂದಲೇ ಹುಟ್ಟಿದ್ದು. ಹಾಗಾಗಿ ವ್ಯವಸಾಯ ಮೂಲೆಗುಂಪಾಯ್ತು.

- **ಅಲ್ಲ ಯಜಮಾನರೆ . . . ಮನೆ ಬೆಳಗೋಳು ಹೆಣ್ಣು. . . ಜನುಮ ನೀಡೋಳು ಹೆಣ್ಣು. ಅಂತದ್ರಲ್ಲಿ ಹತ್ತು ಹೆಣ್ಣಾದ್ರೆ ಮನೆ ನಾಶ ಅಂತೀರಲ್ಲಾ . . !**

ಹೆಣ್ಣು ಕೊಟ್ಟವನ ಮನೆ ಬೆಳಗುತ್ತೆ.. ಅದು ನಿಜ. ಆದರೆ ಹೆಣ್ಣು ತರುವವರು, ಅವಳ ತವರುಮನೇನೂ ಚೆನ್ನಾಗಿರಬೇಕು ಅಂತ ಆಲೋಚಿಸಲಿಲ್ಲ. ವರದಕ್ಷಿಣೆ ಬೇಡಿದ್ರು. ಅವರ ಮನೆ ಬಗ್ಗೆ ಕಾಳಜಿ ಇರಲಿಲ್ಲ. ಅತೀ ಬುದ್ಧಿವಂತ ಜನಾಂಗದಲ್ಲಿಯೇ ಈ ರೀತಿ ಅಂದ್ರೆ ಏನು ಹೇಳೋಕಾಗುತ್ತೆ. **'ಅತಿಬುದ್ಧಿಃ ಪ್ರಳಯಾಂತಕಃ'** ಅನ್ನುವಂತೆ, ಅತಿಯಾದ ಆಸೆ, ನಮ್ಮ ಕೃಷಿಗೇ ಕೊಡಲಿ ಪೆಟ್ಟಾಯ್ತು.

- **ಮುಂದಿನ ದಿನದಲ್ಲಿ ನಿಮ್ಮ ವ್ಯವಸಾಯ ಏನಾಗಬಹುದು?**

ಈಗ ಕುಡಿಯೋದಕ್ಕೇ ನೀರಿರೋದಿಲ್ಲ. ಭೂಮಿ ಹ್ಯಾಗೆ ಉಳಿಸಿಕೊಳ್ತಾರೋ.. ಏನು ವ್ಯವಸಾಯ ಮಾಡ್ತಾರೋ ಗೊತ್ತಿಲ್ಲ. ಅಂತ್ಯ ಕಾಲ ಬಂದಿದೆ. 'ಮುಂದಿನ ವರುಷ ಭಾರೀ ಬರಗಾಲ ಅಂದ್ರು', ಯಾರೋ ಒಬ್ಬನಿಗೆ. 'ಬಂದ್ರೆ ಬಂತು ಕಣ್ಲಾ. . . ಈ ವರುಷ ನಂದು ಇದ್ರೆ ತಾನೆ' ಅಂದನಂತೆ (ನಗು). ಹೀಗೆ ತಮಾಷೆ ಇದೆ. ವ್ಯವಸಾಯ ನಿಜಕ್ಕೂ ಬಹಳ ಕಷ್ಟ. ಅದನ್ನು ಚೆನ್ನಾಗಿ ರೂಢಿಸಿ, ನಾವು ರೂಢಿಯಲ್ಲಿಟ್ರೆ ಸುಖವಾದ ಜೀವನ. ಒಂದು ವಿಚಾರ ಹೇಳ್ತೀನಿ. ಒಂದು ದಿನ ಸುಖವಾಗಿ ಇರಬೇಕು ಅಂದ್ರೆ ಕುಡೀಬೇಕಂತೆ. ಎಂಟು ದಿವಸ ಸುಖವಾಗಿರಬೇಕು ಅಂದ್ರೆ ಮದುವೆಯಾಗಬೇಕಂತೆ. ವರುಷವೆಲ್ಲಾ ಸುಖವಾಗಿರಬೇಕು ಅಂದ್ರೆ ವ್ಯವಸಾಯಗಾರನಾಗಬೇಕಂತೆ. ನಾವು ಬೆಳೆದ ಮಾವಿನಹಣ್ಣನ್ನು ತಿಂದ್ರೆ ಆ ಒಂದು ನಿಮಿಷ ಸ್ವರ್ಗಕ್ಕೆ ಹೋದಷ್ಟು ಸಂತೋಷ ಆಗುತ್ತೆ. ವ್ಯವಸಾಯದಲ್ಲೂ ಇವತ್ತು ಪೈಪೋಟಿ ಇದೆ.

ಇವತ್ತು ಮನುಷ್ಯನಿಗೆ ಆಸೆ ಬಹಳ ಜಾಸ್ತಿ. ಆಸೆಯೇ ದುಃಖಕ್ಕೆ ಕಾರಣ ಅಂದಿದಾನೆ ಭಗವಾನ್ ಬುದ್ಧ. ಈಗ ಹತ್ತು ಎಕರೆ ಜಮೀನಿದೆ... ಇನ್ನೂ ಹತ್ತು ಎಕರೆ ಮಾಡುತ್ತೀನಿ, ಮತ್ತೂ ಹತ್ತು ಎಕರೆ ಮಾಡ್ತೀನಿ ಅಂತ ಮಾಡಿಕೊಂಡು ಹೋಗಿದಾರೆ. ತುಂಗಾಭದ್ರಾ ನದಿ ನೀರು ಒಣಗಿದ್ರೂ ನಮ್ಮ ಆಸೆ ಮಾತ್ರ ಬತ್ತೋಲ್ಲ. ಇವತ್ತು ಕುದುರೆಮುಖದಲ್ಲಿ ಲಕ್ಷಾಂತರ ಎಕರೆ ಕಾಡು ನಷ್ಟವಾಗಿದೆ. ನದಿಗಳ ಮೂಲವೇ ಬತ್ತಿ ನಿಂತಿದೆ. ನಮ್ಮ ರಾಜಕಾರಣಿಗಳು ಈ ದೇಶಾನ ಮೊದಲು ಬರಡು ಮಾಡಿದ್ರು.. . ನಮ್ಮ ಆಸೆಯಿಂದ ಈಗ ನಾವು ಮತ್ತಷ್ಟು ಬರಡು ಮಾಡುತ್ತಿದ್ದೇವೆ. ಮುಂದೆ ಏನೂ ಉಳಿಯೋಲ್ಲ. . . ಏನೂ ಉಳಿಯೋಲ್ಲ. ಗಳಿಸಿದ ನೋಟನ್ನು ನಾವು ತಿನ್ನಬೇಕು. ತಿಂದ ಮೇಲೆ ಕುಡಿಯೋದಕ್ಕೆ ನೀರು ಸಹಾ ಇರೋದಿಲ್ಲ. ಆ ಮಟ್ಟಕ್ಕೆ ಹೋಗುತ್ತೆ.

- **ನಿಮ್ಮ ತಂದೆ ತಾಯಿ ಯಾವ ಮಾತನ್ನು ನಿಮಗೆ ಸದಾ ಹೇಳೋರು?**

ಒಳ್ಳೆಯ ಮಾರ್ಗದಲ್ಲಿ ಹೋಗು, ನಿನಗೂ ಒಳ್ಳೇದಾಗುತ್ತೆ ಅಂತ ಹೇಳೋರು. ಅವರೂ ಭಾರತ, ರಾಮಾಯಣ ಚೆನ್ನಾಗಿ ಓದಿದವರು. ನಮಗೂ ನೀತಿ ಹೇಳೋರು. ನಮ್ಮ ತಂದೆ, ಅಜ್ಜನ ಆದಿಯಾಗಿ ಎಲ್ಲರೂ ದೇವಸ್ಥಾನದಲ್ಲಿ ಪಾರಾಯಣ ಮಾಡೋರು. ಬೆಳಗ್ಗೆ ಎದ್ದ ತಕ್ಷಣ ಬ್ರಾಹ್ಮಣನಿಗೆ ಏನು ಕೆಲಸ ಅಂದ್ರೆ ಸ್ನಾನ, ಸಂಧ್ಯಾವಂದನೆ, ಆಮೇಲೆ ದೇವರಪೂಜೆ, ನಂತರ ನಿತ್ಯಕರ್ಮಗಳು, ನಂತರ ವ್ಯವಸಾಯ ಅಷ್ಟೆ. ನಿಜವಾಗಿಯೂ ವ್ಯವಸಾಯದಲ್ಲಿ ಕೆಟ್ಟವರಿಲ್ಲ. ಆದರೆ ಇವತ್ತಿನ ಪರಿಸ್ಥಿತಿ ಪೈಪೋಟಿ ಮೇಲೆ ನಡೀತಿದೆ. ಕಾಲಕ್ರಮೇಣ ಎಲ್ಲಾ ಒಳ್ಳೆಯದಾಗಬಹುದು. ಹೀಗೇ ಇರೋದಿಲ್ಲ ಪ್ರಪಂಚ.

- *ಒಳ್ಳೆಯದು ಶಿವರಾಮಶಾಸ್ತ್ರಿಗಳೆ. ಇದುವರೆಗೂ ನಿಮ್ಮ ಬದುಕಿನ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದೀರಿ, ನಮಸ್ಕಾರ.*

ನಮಸ್ಕಾರ.

ಆ) ಸುಧಾಕರ ಜೋಯಿಸ್ ೩/ಮ ಬಿ.ವಿ. ಶ್ರೀನಿವಾಸ ಜೋಯಿಸ್
ಬೀರೂರು, ಚಿಕ್ಕಮಗಳೂರು ಜಿಲ್ಲೆ

ವ್ಯವಸಾಯದಲ್ಲಿ ನಾವು ಸ್ವತಃ ಕೆಲಸ ಮಾಡಿದ್ರೆ, ನಮ್ಮ ಆರೋಗ್ಯವೂ ಚೆನ್ನಾಗಿರುತ್ತೆ, ಹಣವೂ ಉಳಿಯುತ್ತೆ. ನಾನು ಇವತ್ತಿಗೂ ತೋಟದಲ್ಲಿ ಎರಡಾಳಿನ ಕೆಲಸ ಮಾಡ್ತೀನಿ. ಆಳಿಗೆ ಕೊಟ್ರೆ ಹಣ ಖರ್ಚಾಗುತ್ತೆ. ಕೆಲಸ ಅಚ್ಚುಕಟ್ಟಾಗಿ ಆಗೋಲ್ಲ.



ಸುಧಾಕರ ಜೋಯಿಸ್: ಬೀರೂರು

ಬೀರೂರಿನ ಬಿ.ವಿ.ಶ್ರೀನಿವಾಸ ಜೋಯಿಸ್ ಹಾಗೂ ಲಿಂಗದಹಳ್ಳಿಯ ಸುಬ್ಬಮ್ಮ ದಂಪತಿಗಳಿಗೆ ನಾಲ್ಕು ಜನ ಗಂಡುಮಕ್ಕಳು ಹಾಗೂ ನಾಲ್ಕು ಜನ ಹೆಣ್ಣುಮಕ್ಕಳು. ಎರಡನೆಯ ಮಗನೇ ಸುಧಾಕರ ಜೋಯಿಸ್. ಸುಧಾಕರ ಜೋಯಿಸ್ ಹಾಗೂ ಅವರ ತಮ್ಮ ಈಗ ವ್ಯವಸಾಯ ಮಾಡುತ್ತಿದ್ದಾರೆ. ಬೆಂಗಳೂರುವಾಸಿ ವೆಂಕಟರಾವ್ ಹಾಗೂ ಕೌಶಿಕದ ನಾಗಲಕ್ಷಮ್ಮ ದಂಪತಿಗಳ ಮಗಳು ಪದ್ಮಾವತಿ, ಸುಧಾಕರಜೋಯಿಸರ ಧರ್ಮಪತ್ನಿ. ಶಿವರಾಮಶಾಸ್ತ್ರಿಗಳ ಮನೆಯಲ್ಲಿಯೇ ನಾವು ಸುಧಾಕರಜೋಯಿಸರನ್ನು ಮಾತನಾಡಿಸಿದ್ದು. ಅವರು ಹೇಳಿದ್ದು ಇಷ್ಟು, 'ನನ್ನ ತಾತ ವೆಂಕಟರಮಣ ಜೋಯಿಸ್. ಅವರು ವ್ಯವಸಾಯಸ್ಥರು. ಕಾರಣಾಂತರದಿಂದ ಅವರ ಜಮೀನು ಪರಭಾರೆಯಾಗುವ ಸಂದರ್ಭ ಬಂದಾಗ, ಬೇರೆ ಕಡೆ ನಾಲ್ಕು ಎಕರೆ ಜಮೀನು ಮಾಡಿದ್ರು. ನನ್ನ ತಂದೆಗೆ ಕಣ್ಣು ಸರಿಯಾಗಿ ಕಾಣ್ತಿರಲಿಲ್ಲ. ಆದರೂ ಅವರು ಆಳುಕಾಳುಗಳ ನೆರವಿನಿಂದ ಜಮೀನು ರೂಢಿಸಿದ್ರು. ನಾನು PUCವರೆಗೆ ಓದಿದೆ, ನನ್ನ ೧೮ನೇ ವಯಸ್ಸಿನಿಂದಲೇ ವ್ಯವಸಾಯ ಮಾಡಲು ಆರಂಭಿಸಿದೆ. ಮನೆಯ ಪರಿಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಹಾಗಾಗಿ ನನ್ನ ಅಣ್ಣ ಹಾಗೂ ತಮ್ಮ ಕೆಲಸಕ್ಕೆ ಹೋದರು. ವ್ಯವಸಾಯ ಸ್ವತಂತ್ರ ದುಡಿಮೆ, ಸಮಯದ ನಿರ್ಬಂಧ ಇಲ್ಲ, ಅಡ್ಡಿ ಆತಂಕಗಳೂ ಇಲ್ಲ ಎನ್ನುವ ವಿಚಾರಗಳು ವ್ಯವಸಾಯದತ್ತ ನನ್ನನ್ನು ಆಕರ್ಷಿಸಿದವು. ಚಿಕ್ಕಂದಿನಿಂದಲೂ ನಾನು ಸ್ವತಃ ದುಡೀತಿದೀನಿ. ತೋಟದಲ್ಲಿ ಅಡಿಕೆ, ತೆಂಗು ಬಾಳೆ ಬೆಳೆದಿದ್ದೇನೆ. ವಿಳ್ಳೇದೆಲೆ ಬೆಳೆಯಲು ಪ್ರಯತ್ನಿಸಿದೆ. ಆಗಲಿಲ್ಲ. ಹಿಂದೆ ನಮಗೆ ಕಷ್ಟ ಇತ್ತು. ಮದಗದ ಕೆರೆ ತುಂಬಿರೋದು. ಆದ್ರೆ ತೋಟಕ್ಕೆ ಗೊಬ್ಬರಗೋಡು ಹೊಡೆಯೋದಕ್ಕೆ ನಮಗೆ ಶಕ್ತಿ ಇರಲಿಲ್ಲ. ಈಗ ಶಕ್ತಿ ಇದೆ . . . ಕೆರೇಲಿ ನೀರಿಲ್ಲ. ನಾನೂ ನನ್ನ ತಮ್ಮನೂ ಈಗ ಪಾಲಾಗಿದೀವಿ. ನನ್ನ ಪಾಲಿಗೆ ಒಂದು ಎಕರೆ ತೋಟ ಹಾಗೂ ಎರಡು ಎಕರೆ ಗದ್ದೆ ಇದೆ. ಒಂದು ಕುಟುಂಬ ಸಂತೃಪ್ತವಾಗಿ ಈಗಿನ ಕಾಲದಲ್ಲಿ ಬದುಕಬೇಕು ಅಂದ್ರೆ ಐದು ಎಕರೆ ಜಮೀನಿರಬೇಕು ಅನ್ನುವುದು ನನ್ನ ಅಭಿಪ್ರಾಯ. ಆದರೂ ಇರುವುದರಲ್ಲಿ ನನಗೆ ತೃಪ್ತಿ ಇದೆ. ಆರ್ಥಿಕ ತೊಂದರೆಯಿಂದ ಬೋರ್‌ವೆಲ್ ಕೊರೆಸಲು ಆಗಿಲ್ಲ. ಕೆರೆ ತುಂಬಿದಾಗ ಒಂದು ಬೆಳೆ ಭತ್ತ ಆಗುತ್ತೆ. ಬರಗಾಲ ಬಿದ್ರೆ ಭತ್ತಕ್ಕೆ ಕಲ್ಲು ಬೀಳುತ್ತೆ. ನೀರು, ಗೊಬ್ಬರ, ಗೋಡು ಇರುವ ಜಾಗ, ಸಕಲ ಸೌಕರ್ಯಗಳು ಇರುವುದಾದ್ರೆ ವ್ಯವಸಾಯ ಉತ್ತಮ. ವ್ಯವಸಾಯಕ್ಕೆ ನೆರೆಹೊರೆಯೂ ಉತ್ತಮವಾಗಿರಬೇಕು. ಅವರ ಕಿರುಕುಳ, ಕಳ್ಳತನ ಇದ್ರೆ ಕಷ್ಟವಾಗುತ್ತೆ. ನನ್ನ ಹೆಂಡತಿ ಬೆಂಗಳೂರಿನವಳು. ವ್ಯವಸಾಯದ ಒಂದು ವಿಚಾರವೂ ಅವಳಿಗೆ ತಿಳಿದಿರಲಿಲ್ಲ. ಇಲ್ಲಿಗೆ ಬಂದ ಮೇಲೆ ಅರಿಯುವ ಪ್ರಯತ್ನ ಮಾಡಿದಾಳೆ. ತೋಟಕ್ಕೆ ಬಂದು ಸಹಕರಿಸದಿದ್ರೂ, ಮನೇಲಿ ಅಡುಗೆ, ಊಟ, ತಿಂಡಿ ಕಾಲಕಾಲಕ್ಕೆ ಮಾಡಿಕೊಟ್ಟು ನೆರವು ನೀಡಿದ್ದಾಳೆ. ನನಗೆ ಒಬ್ಬನೇ ಮಗ. ನನಗಿರುವ ಆಸ್ತಿಯನ್ನು ಅವನು ರೂಢಿಸಿದ್ರೆ ಉತ್ತಮವಾಗಿ ಬದುಕಬಹುದು. ಆದರೆ ಅವನು ಏನು ಮಾಡ್ತಾನೋ ಹೇಳುವುದು ಹೇಗೆ? ಈಗ ನಾನಂತೂ ವ್ಯವಸಾಯದಿಂದ ನೆಮ್ಮದಿ ಕಂಡಿದ್ದೇನೆ' ಎಂದು ಹೇಳಿ ನಿರುಮ್ಮಳರಾಗಿ ಉಸಿರೆಳೆದು ಸುಮ್ಮನಾದ್ರು ಸುಧಾಕರ ಜೋಯಿಸ್. ಆಗ ವಿದ್ಯುತ್ ಬಂದು ಬೀರೂರೆಲ್ಲಾ ಬೆಳಕಾಯ್ತು. ಬೀರೂರಿನ ಸಂಕೇತಿ ಕೃಷಿ ಹೀಗೆಯೇ ಮುಂದೆ ಬೆಳಗಲಿದೆಯೇ? ಈ ಪ್ರಶ್ನೆಗೆ ಉತ್ತರ ಹೇಳಬೇಕಾದವರು ಮಾತ್ರ ಅಲ್ಲಿನ ಯುವಪೀಳಿಗೆ ಅನ್ನಿಸಿ ಸುಮ್ಮನಾದೆ.

25. ಹೊಸಹಳ್ಳಿ



ರಾಜಾರಾಮಮೂರ್ತಿ:ಪಕ್ಕದಲ್ಲಿ ಕೋತಿಗಳನ್ನು ಹಿಡಿಯುವ ಬೋನು:ಮತ್ತೂರು

ಸಂಕೇತಿ ಕೃಷಿ ಶ್ರೀಮಂತವಾಗಿರುವ ಹೊಸಹಳ್ಳಿ ತುಂಗಾನದಿಯ ದಂಡೆಯಲ್ಲಿದೆ. ಮತ್ತೂರಿಗೆ ಹೆಚ್ಚು ಕಡಿಮೆ ಎಲ್ಲದರಲ್ಲೂ ಸಾಮ್ಯ ಇದೆ. ಅದರ ಮಧ್ಯದ ತುಂಗಾನದಿ ಈ ಎರಡೂ ಗ್ರಾಮಗಳನ್ನು ಬೇರೆ ಮಾಡಿರುವುದರಿಂದ ಇದು ಪ್ರತ್ಯೇಕ ಗ್ರಾಮ ಅಷ್ಟೆ. ಹಾಗಾಗಿಯೇ ಈ ಗ್ರಾಮವನ್ನು ಮತ್ತೂರು ಹೊಸಹಳ್ಳಿ ಎಂದೇ ಗುರುತಿಸುವುದು. ಮಂಗಗಳ ಹಾವಳಿ ತಡೆಯಲು ತುಂಗಾ ನದಿಯ ದಂಡೆಯ ಮೇಲೆ ಒಂದು ಬೋನನ್ನು ಸ್ಥಳೀಯರೇ ನಿರ್ಮಿಸಿಕೊಂಡಿದ್ದಾರೆ. ಅಡಿಕೆ ದಬ್ಬೆಗಳನ್ನು ಬಳಸಿಕೊಂಡು, ಎರಡು compartment ಮಾಡಿದಾರೆ. ಇದರ ಕಾರ್ಯವಿಧಾನ ಅಂದ್ರೆ, ಬಾಗಿಲು ಒಂದು ಕಡೆ ತೆಗೆದೇ ಇರುತ್ತೆ. ಒಳಗಡೆ ಹಣ್ಣು ತಿಂಡಿ ಪದಾರ್ಥಗಳನ್ನು ಇಡೋದು. ಮಂಗ ಬರೋದನ್ನು ಕಾಯ್ತಾ ಇರೋದು, ದೂರದಿಂದ. ಅಲ್ಲೇ ಓಡಾಡ್ತಾ ಇರುವ ಮಂಗಗಳು ಮೊದಲು ಸ್ವಲ್ಪ ದೂರದಿಂದ ನೋಡುತ್ವೆ. ಹೆದರುತ್ವೆ. ಆಮೇಲೆ ಧೈರ್ಯ ಮಾಡಿ ಒಳಗೆ ಬರುತ್ವೆ. ತಿಂಡಿ ತೊಗೊಂಡು ಹೋಗುತ್ವೆ. ಹೀಗೆ ಪ್ರತಿದಿನ ರೂಢಿಮಾಡಿಸಿ ಮಂಗಗಳಿಗೆ ವಾಡಿಕೆ ಮಾಡಿಸೋದು. ಆ ರೀತಿ ಮಂಗಗಳಿಗೆ ಸದರವಾಗುವ ಹಾಗೆ ಸಲಿಗೆ ಕೊಟ್ಟು, ನಂತರ ಸಂಜೆ ವೇಳೆ ಆಹಾರ ಇಡೋದು. ಮಂಗಗಳು ಗುಂಪುಗುಂಪಾಗಿ ಬರುತ್ವೆ. ಒಂದು ಮಾಡಿದ್ದನ್ನು ಇನ್ನೊಂದು ಮಾಡುತ್ತೆ. ಅದು ಅದರ ಸ್ವಭಾವ. ಹಾಗಾಗಿ ಗೂಡಿನೊಳಗೆ ಒಂದು ಮಂಗ ಹೋದ್ರೆ ಉಳಿದವೂ ಹೋಗುತ್ವೆ. ಸಂಜೆ ಆಹಾರ ಇಟ್ಟು, ರಾತ್ರಿ ಹೊತ್ತು ಆರಾಮವಾಗಿ ಮಂಗಗಳು ಅಲ್ಲಿ ತಂಗೋದನ್ನು ಅಭ್ಯಾಸ ಮಾಡಿಸಬೇಕು. ತುಂಬಾ ಮಂಗಗಳು ಯಾವತ್ತು ಮಲಗೋದಕ್ಕೆ ಸೇರಿಕೊಳ್ತವೆ, ಅವತ್ತು ರಾತ್ರಿ ಬಂದು ಬಾಗಿಲು ಹಾಕಬೇಕು. ಒಂದು ದಿನ ಅದನ್ನು ಅಲ್ಲೇ ಇಟ್ಟು, ಆಹಾರವಿಲ್ಲದಹಾಗೆ ನಿತ್ರಾಣಗೊಳಿಸಿ, ನಂತರ ಬೋನಿನ ಬಾಗಿಲಿಗೆ ಚೀಲ ಹಿಡಿದು, ಅದರಲ್ಲಿ ತುಂಬಿಕೊಂಡು ದೂರದ ಕಾಡಿಗೆ ಬಿಟ್ಟುಬರೋದು, ಇದು ವಾಡಿಕೆ. ಯಾವುದಕ್ಕೂ ಪ್ರಾಣಹಾನಿ ಮಾಡದೆ, ಸುಲಭವಾಗಿ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ. ಮೊದಲಿನಿಂದಲೂ ಮತ್ತೂರು, ಹೊಸಹಳ್ಳಿ ಗ್ರಾಮಗಳು ಸಾಂಸ್ಕೃತಿಕವಾಗಿ ಒಂದೇ ಊರು. ಒಂದೇ ಕುಟುಂಬದವರೇ ಇಲ್ಲಿರೋದು. ಮತ್ತೂರಿನಿಂದ ಹೊಸಹಳ್ಳಿ ಹಾಗೂ ಹೊಸಹಳ್ಳಿಯಿಂದ ಮತ್ತೂರಿಗೆ ಸಂಬಂಧಗಳು ನಿರಂತರವಾಗಿ ನಡೀತಾ ಇದೆ. ಹಾಗಾಗಿ ಮತ್ತೂರಿನ ಎಲ್ಲ ಸಂಕೇತಿಗಳಿಗೂ ಹೊಸಹಳ್ಳಿಯ ಎಲ್ಲ ಸಂಕೇತಿಗಳೂ ಸಂಬಂಧಿಗಳೇ. ಆ ಸಂಬಂಧವನ್ನು ನಡುವಿನ ತುಂಗಾನದಿ ತುಂಡು ಮಾಡಿದೆ ಅಂದುಕೊಂಡ್ರೆ, ಈ ಎರಡೂ ಗ್ರಾಮದ ಜನತೆ ಸೇರಿ



ಸಂಕೇತಿಗಳೇ ಚಾಲಿಸುವ ಉಕ್ಕಡ:ಮತ್ತೂರು-ಹೊಸಹಳ್ಳಿಯ ನಡುವಿನ ಸೇತು

ನಿರ್ಮಿಸಿರುವ ಉಕ್ಕಡ ಅವರನ್ನು ಬೆಸೆದಿದೆ. ಮುಂಚೆ ಬಂಬಿನಲ್ಲಿ ತೆಪ್ಪಗಳನ್ನು ಮಾಡಿಕೊಂಡು ತುಂಗಾ ನದೀ ದಾಟ್ತಾ ಇದ್ದರಂತೆ, ಅದೂ ವರುಷದಲ್ಲಿ ಆರು ತಿಂಗಳು ಕಾಲ ಮಾತ್ರ. ಮಳೆಗಾಲದ ದಿನದಲ್ಲಿ ನದಿ ನೀರು ಉಕ್ಕಿದಾಗ ಭಯ. ಅದಕ್ಕೇ ಚರ್ಮದಿಂದ ಮಾಡಿದ ದೋಣಿ ಉಕ್ಕಡದಲ್ಲಿ ಜನ ನದೀ ದಾಟ್ತಾ ಇದ್ದಾರೆ. ಅದನ್ನು ನಡೆಸೋದಕ್ಕೆ ಹಿಂದೆ ಮಲ್ಲ ಹಾಗೂ ನಂತರ ಅವನ ಮಗ ಮಾಯಣ್ಣ ಲಾಗಾಯ್ತಿನಿಂದಲೂ ದುಡಿದಿದ್ದಾರೆ. ಈಗ ಇವರಿಬ್ಬರೂ ಇಲ್ಲ. ಹೊಸಹಳ್ಳಿಯ ರಾಜಾರಾಮಮೂರ್ತಿ ಹೇಳುತ್ತಾರೆ "ನಾವು ಹೇಗೆ ಅಪ್ಪನ ವಿದ್ಯೆಯನ್ನು ಬಿಟ್ಟೆವೋ, ಹಾಗೇ ಮಾಯಣ್ಣನ ಮಕ್ಕಳೂ ಸಹ ಅಪ್ಪನ ವಿದ್ಯೆ



ಕಾಂಚಿಯ ಶ್ರೀಶಾಖಾಮಠ: ಮತ್ತೂರು

ಬಿಟ್ಟಿದಾರೆ. ಅವರು ದೋಣಿ ಓಡಿಸ್ತಾ ಇಲ್ಲ. ಹಾಗಾಗಿ ನಾವೇ ಊರಿನವರು ಆ ಚರ್ಮದ ದೋಣಿಯನ್ನು ಖರೀದಿಸಿ ಕಬ್ಬಿಣದ ಉಕ್ಕಡವನ್ನು ಮಾಡಿಸಿಟ್ಟುಕೊಂಡಿದೀವಿ. ತುಂಬಾ ರಕ್ಷಣೆ ಅದು. ಈ ಕಬ್ಬಿಣದ ಉಕ್ಕಡದಲ್ಲಿ, ೨೦ ರಿಂದ ೨೨ ಜನ ಏಕಕಾಲದಲ್ಲಿ ನದಿ ದಾಟಬಹುದು. ನದಿ ಅಪಾಯದ ಮಟ್ಟವನ್ನು ಮೀರಿ ಹರಿದಾಗ ಮಾತ್ರ ನದಿಗೆ ಉಕ್ಕಡ ಇಳಿಯೋಲ್ಲ. ಉಳಿದಂತೆ ಸಾಮಾನ್ಯವಾದ ಪ್ರವಾಹ ಬಂದರೂ ಕೂಡ ನಾವು ಊರವರೇ ಸ್ವತಂತ್ರವಾಗಿ ನಡೆಸ್ತೀವಿ. ಹೆದರೋದಿಲ್ಲ. ಎಷ್ಟೋ ಸರ್ತಿ ಕೃಷಿ ಉತ್ಪನ್ನಗಳನ್ನೂ ಸಹ ಉಕ್ಕಡದಲ್ಲಿಯೇ ಸಾಗಿಸುವುದುಂಟು. scooter ಹಾಗೂ cycle ಸಹ ಉಕ್ಕಡದಲ್ಲಿಯೇ ಸಾಗಿಸುವುದುಂಟು. ಈ ಉಕ್ಕಡ ನಮ್ಮ ಸಂಪರ್ಕಸೇತು. ನದೀ ದಾಟದೇ ಹೋದ್ರೆ ನಮ್ಮ ಜನ ಹತ್ತಾರು ಕಿಲೋಮೀಟರ್ ದಾರಿ ಸವೆಸಿ ಮತ್ತೂರು ಸೇರಬೇಕಾಗುತ್ತೆ" ಎನ್ನುತ್ತಾರೆ. ಮತ್ತೂರಿನಲ್ಲಿ ಕಾಂಚಿಮಠದ ಶಾಖಾಮಠ ಆರಂಭವಾಗಿದೆ, ಈಗ್ಗೆ ನಾಲ್ಕು ವರುಷದ ಹಿಂದೆ. ತುಂಗಾ ನದಿಯ ತಟದಲ್ಲಿ, ನಿರ್ಜನವಾದ ಸ್ಥಳದಲ್ಲಿರುವ ಈ ಮಠದ ವಿವರಗಳನ್ನು ಹೊಸಹಳ್ಳಿಯ ರಾಜಾರಾಮಮೂರ್ತಿಯವರು ನೀಡಿದ್ರು. "ಈ ಮಠದ ಸ್ವಾಮೀಜಿಯವರ ಪೂರ್ವಾಶ್ರಮದ ಹೆಸರು ಸುಬ್ರಹ್ಮಣ್ಯ. ಅವರು ತಮಿಳುನಾಡು ಕಾಂಚಿ ಹತ್ತಿರದ ಊರಿನವರು. ಇವರ ಮೇಲೆ ಕಾಂಚಿ ಪರಮಾಚಾರ್ಯರಿಗೆ ವಿಶೇಷವಾದ ಅಕ್ಕರೆ. ಬಹುಶಃ ಇವರೂ ಅವರ ವಂಶಸ್ಥರೇ ಇರಬೇಕು. ಸುಬ್ರಹ್ಮಣ್ಯ ಅವರು chartered accountant ಆಗಿ ಮುಂಬೈನಲ್ಲಿ ಕೆಲಸ ಮಾಡ್ತಾ ಇದ್ರಂತೆ. ಒಂದಷ್ಟು ವರುಷ ಆದ ಮೇಲೆ ಲೌಕಿಕಜೀವನದಲ್ಲಿ ಅವರಿಗೆ ಆಸಕ್ತಿ ಕಡಿಮೆಯಾಯ್ತು. ವೇದಾಂತವನ್ನು ಕಲೀಬೇಕು ಅನ್ನಿಸಿತಂತೆ. ಅವರು ವೇದಾಂತ ಕಲಿಯಲು ಮದರಾಸಿಗೆ ಹೋದ್ರು. ಅಲ್ಲಿ ಅವರಿಗೆ, 'ಸಂಸ್ಕೃತ ಗ್ರಾಮ ಮತ್ತೂರು' ಅಂತ ಇದೆ, ಅಲ್ಲಿ ಚೆನ್ನಾಗಿ ಕಲಿಸ್ತಾರೆ ಹೋಗಿ' ಅಂತ ತಿಳಿಸಿದ್ರಂತೆ. ಕೂಡಲೇ ಅವರು ಮತ್ತೂರಿಗೆ ಬಂದ್ರು. ಇಲ್ಲಿ ಅಶ್ವತ್ಥನಾರಾಯಣಾವಧಾನಿಗಳು, ಕೇಶವಾವಧಾನಿಗಳು ಸಂಪರ್ಕಕ್ಕೆ ಸಿಕ್ಕಿದ್ರು. ಇಲ್ಲೇ ವಾಸ ಮಾಡಿ ಸುಮಾರು ಆರೆಂಟು ವರುಷಗಳ ಕಾಲ ವೇದಾಂತವನ್ನು ಆಳವಾಗಿ ಅಧ್ಯಯನ ಮಾಡಿದ್ರು. ಅದಾದ ಮೇಲೆ, ಇನ್ನು ಮನಸ್ಸು ದೃಢವಾಗಿ ನಿಂತಿದೆ ಅಂದ ಮೇಲೆ



ತುಂಗಾತೀರದ ಹೊಸಹಳ್ಳಿ: ಮುಂಜಾನೆಯ ನೋಟ

ಸಂನ್ಯಾಸ ಸ್ವೀಕರಿಸಿದ್ರು. ಇದನ್ನು ಸ್ವೀಕರಿಸಲು ನಮ್ಮಲ್ಲಿ ಬಹಳ ಹಿಂದು ಮುಂದೆ ನೋಡ್ತಾರೆ. ಯಾಕೇಂದ್ರೆ ಸಂನ್ಯಾಸ ಸ್ವೀಕರಿಸಿದ ಮೇಲೆ ಮತ್ತೆ ಹಿಂದೆ ಬರೋದು ಮಹಾ ಅಪರಾಧ. ಕಾಳಹಸ್ತಿಯಲ್ಲಿ ಸಂನ್ಯಾಸ ಮಾಡಿದ್ರು, ಅವರಿಗೆ ಉತ್ತರಭಾರತಕ್ಕೆ ಹೋಗುವ ಆಸೆಯಿತ್ತು. ಹಿಮಾಲಯಪರ್ವತದಲ್ಲಿದ್ದು ಸಾಧನೆ ಮಾಡುವ ವಿಚಾರವಿತ್ತು. ಅದರಂತೆ ಕಾಂಚಿ ಜಯೇಂದ್ರ ಸರಸ್ವತಿಗಳ ಬಳಿ ಅನುಮತಿ ಕೇಳಿದಾಗ, ಅವರು ಒಪ್ಪಲಿಲ್ಲ. 'ಮತ್ತೂರಿನಲ್ಲಿ ನಮ್ಮ ಶಾಖಾ ಮಠ ಮಾಡ್ತೀವಿ, ನೀವು ಅಲ್ಲಿದ್ದು ಸಾಧನೆ ಮಾಡಿ' ಅಂದರಂತೆ. ಮೂರು ತಿಂಗಳಿನಲ್ಲಿ ಇಲ್ಲಿ ಮನೆ ಕಟ್ಟಿಕೊಟ್ರು. ಸ್ವಾಮೀಜಿ ಬಹಳ ನಿಷ್ಠಾವಂತರು. ಅವರಿಗೆ ಮಠ ಕಟ್ಟಿ ಆಡಂಬರ ಮಾಡುವ ಆಸೆ ಇಲ್ಲ. ಪೂರ್ಣ ವಿರಾಗಿಗಳು. ಅವರಿಗೆ ಮತ್ತೂರಿನಲ್ಲಿ ವೇದವಿದ್ಯೆ ಕಲಿಸಿದ ಗುರುಗಳ ಮನೆಗೆ ಹೋಗ್ತಾರೆ ಅಷ್ಟೆ. ಊರಿನಲ್ಲಿ ಪ್ರತಿನಿತ್ಯ ಭಿಕ್ಷೆಯಿಂದಲೇ ಬದುಕ್ತಾ ಇದಾರೆ. ಮತ್ತೂರು ಹಾಗೂ ಹೊಸಹಳ್ಳೀಲಿ ಪ್ರತಿದಿನ ಭಿಕ್ಷೆಗೆ ಬರ್ತಾರೆ. ಅದೂ ಮನೆಯ ಗೃಹಿಣಿಯ ಊಟವಾದ ಮೇಲೆ, ಮಧ್ಯಾಹ್ನ ಭಿಕ್ಷೆಗೆ ಬರ್ತಾರೆ. ಮನೆಯವರಿಗೆ ಯಾರಿಗೂ ತೊಂದರೆ ಆಗಬಾರದೆನ್ನುವುದು ಉದ್ದೇಶ. ಭಿಕ್ಷಾನ್ನವಾಗಿ ಏನು ಸಿಗುತ್ತೋ ಅದನ್ನು ನದೀ ತೀರದ ಬಳಿ ತೆಗೆದುಕೊಂಡು ಹೋಗ್ತಾರೆ. ಅದನ್ನು ಹಾಗೇ ಊಟ ಮಾಡೋದಿಲ್ಲ. ಒಂದು ಪಾತ್ರೆಯಲ್ಲಿ ಇಟ್ಟು, ಅದರ ಮೇಲೆ ಎಲೆ ಮುಚ್ಚಿ, ನೀರಲ್ಲಿ ಅದನ್ನು ಮುಳುಗಿಸಿ ಎತ್ತುತಾರೆ. ನಂತರ ನೀರು ಬಸಿದು, ಅದರಲ್ಲಿ ರುಚಿ ಇರದಂತೆ ಮಾಡಿ ಊಟ ಮಾಡ್ತಾರೆ.

"ಅವರ ದೇವರಭಕ್ತಿ ಅಗಾಧ. ಭಜನೆ ಮಾಡ್ತಾ ನಿಂತರೆ ಎಂಟು ಘಂಟೆಗಳ ಕಾಲ ಸತತವಾಗಿ ಭಜನೆ ಮಾಡ್ತಾರೆ. ಕಣ್ಣಿನಿಂದ ಧಾರಾಕಾರವಾಗಿ ನೀರು ಬರ್ತಾ ಇರುತ್ತೆ. ಅವರ ಪ್ರಭಾವ ಊರಲ್ಲಿ ಎಷ್ಟಾಗಿದೆ ಅಂದ್ರೆ, ಅನೇಕ ಯುವಕರು ಅವರ ಪ್ರಭಾವಕ್ಕೆ ಸಿಕ್ಕಿ, ಗುರುಗಳು ಇರಲಿ, ಇಲ್ಲದೇ ಇರಲಿ ಭಜನೆ ಮಾಡ್ತಾರೆ. ಅಷ್ಟರಮಟ್ಟಿಗೆ ಇಲ್ಲಿ ಬದಲಾವಣೆಯಾಗಿದೆ" ಅಂತಾರೆ ರಾಜರಾಮಮೂರ್ತಿ. ಹೊಸಹಳ್ಳಿಗೆ ಸಮೀಪದಲ್ಲಿಯೇ, ಗದ್ದೆಮನೆ ಅಥವಾ ಲಿಂಗದಹಳ್ಳಿಮನೆ ಎಂದು ಖ್ಯಾತಿ ಪಡೆದಿರುವ ಸ್ಥಳವಿದೆ. ಲಿಂಗದಹಳ್ಳಿಯಿಂದ ಇಲ್ಲಿಗೆ ವಲಸೆ ಬಂದಿರುವ ಸಂಕೇತಿಗಳು ಜಮೀನಿನಲ್ಲಿಯೇ ಮನೆ ಮಾಡಿಕೊಂಡು ವ್ಯವಸಾಯ ಮಾಡ್ತಿದಾರೆ. ವೇದವಿದ್ಯೆಯಲ್ಲಿ ಪಾರಂಗತರಾಗಿರುವ ಇಲ್ಲಿನ ಎಳೆಯರನ್ನು ಗಮನಿಸಿದಾಗ ವೇದವಿದ್ಯೆಗೆ ಉಜ್ವಲ ಭವಿಷ್ಯವಿದೆ ಅನ್ನಿಸುತ್ತದೆ. ವಿದ್ಯಾವಂತರ ಕೃಷಿಯನ್ನು ಗಮನಿಸಿದರೆ ಸಂಕೇತಿ ಕೃಷಿಯ ಭವಿಷ್ಯ ಮಸುಕಾಗಿದೆಯೇ ಎಂಬ ಅನುಮಾನ ಕಾಡದೆ ಇರದು. ಹೊಸಹಳ್ಳಿಯ ಕೃಷಿಕರು ಏನೆನ್ನುತ್ತಾರೆ . . . ಓದಿ ನೋಡಿ.

ಅ) ಹೆಚ್.ವಿ. ಕೃಷ್ಣರಾವ್ ಇ/ಮ ವೆಂಕಟರಮಣಯ್ಯ
ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ: 08182 237821


ರತ್ನಮ್ಮ-ಎಚ್.ವಿ.ಕೃಷ್ಣರಾವ್ ದಂಪತಿ: ಹೊಸಹಳ್ಳಿ

೧೯೬೯ರ ನವೆಂಬರ್ ೧ ನೇ ತಾರೀಖು ನನಗೆ ಭತ್ತದ ಬೇಸಾಯದಲ್ಲಿ ರಾಜ್ಯಮಟ್ಟದ ಮೊದಲನೇ 'ಕೃಷಿಪಂಡಿತ ' ಪ್ರಶಸ್ತಿ ಲಭಿಸಿತು. ಒಂದು ಎಕರೆಯಲ್ಲಿ ೪೫ ಕ್ವಿಂಟಾಲ್‌ಗಿಂತಲೂ ಸ್ವಲ್ಪ ಜಾಸ್ತೀನೇ ಭತ್ತದ ಇಳುವರಿ ಬಂದಿತ್ತು. ವೀರೇಂದ್ರ ಪಾಟೀಲರು ನನಗೆ ಒಂದು ಚಿನ್ನದ ಮೆಡಲ್, ಪ್ರಶಸ್ತಿಪತ್ರ ನೀಡಿ, ಶಾಲು ಹೊದಿಸಿ ಗೌರವಿಸಿದ್ರು. ನನ್ನ ಕೃಷಿಗೆ ಸಂದ ಗೌರವ ಇದು.

ಹೊಸಹಳ್ಳಿಯಲ್ಲಿ ನಾವು ಮೊದಲು ಭೇಟಿ ಮಾಡಿದ ಸಂಕೇತಿ ಕೃಷಿಕ ಎಚ್.ವಿ. ಕೃಷ್ಣರಾವ್. ಅವರಿಗೀಗ ೭೬ ವರುಷ. ಅವರ ಪತ್ನಿ ರತ್ನಮ್ಮ ಮತ್ತೂರಿನ ಕೇಶವಶ್ರೌತಿ ಹಾಗೂ ಮೀನಾಕ್ಷಮ್ಮ ದಂಪತಿಗಳ ಮಗಳು. ಕೃಷ್ಣರಾವ್ ಅವರನ್ನು ಮಾತಿಗೆಳೆದಾಗ ಬೆಳಗಿನ ಸಮಯ.

- **ಕೃಷ್ಣರಾವ್ ಅವರಿಗೆ ನಮಸ್ಕಾರ.**

ನಮಸ್ಕಾರ.

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ. . .**



ಪೂಜಾನಿರತ ಎಚ್.ವಿ.ಕೃಷ್ಣರಾವ್: ಹೊಸಹಳ್ಳಿ

ನನ್ನ ತಾತ ರಾಮಾಶಾಸ್ತ್ರಿಗಳು, ಶೃಂಗೇರಿ ಮಠದ ಪಾರುಪತ್ತೇಗಾರರಾಗಿದ್ರು. ಅಲ್ಲಿ ಐವತ್ತು ಎಕರೆ ಒಂದೇ plot ಜಮೀನು ಇತ್ತು. ಸ್ವಂತ ಮಾಡಿಸ್ತಾ ಇದ್ರು. ಕಡೆಗೆ ಕ್ಷಾಮ ಬಂದು, ಅಲ್ಲಿನ ಜಮೀನು ಮಾರಿ ಹೊಸಹಳ್ಳಿಗೆ ಬಂದ್ರು, ೧೯೧೨ರಲ್ಲಿ ಇರಬಹುದು. ನನ್ನ ತಂದೆ ವೆಂಕಟರಮಣಯ್ಯ ಕೋರ್ಟ್‌ನಲ್ಲಿ copyist ಆಗಿದ್ರು. ದೊಡ್ಡಪ್ಪ subregistrar officeನಲ್ಲಿ head clerk ಆಗಿದ್ರು. ಅವರೆಲ್ಲಾ ಒಟ್ಟಿಗೆ ಇದ್ರು. ಹೊಸಹಳ್ಳಿಯಲ್ಲಿ ಜಮೀನು ಖರೀದಿಸಿದರು. ಆಮೇಲೆ ಕಷ್ಟ ಬಂತು. ಪ್ರಾಯದ ಮಕ್ಕಳು ತೀರಿಕೊಂಡ್ರು. ದೈವಕೃಪೆ ನಮಗಿತ್ತು. ರಾಜರಾಜೇಶ್ವರಿ ನಮ್ಮ ಕೈಹಿಡಿದಿರೋದು. ಕೂಡಲೀಲಿ ಅನಂತಾವಧಾನಿಗಳು ಅಂತ ಸಾಹುಕಾರರಿದ್ರು. ಅವರ ಮಗ ರಾಮನಾರಾಯಣ ಅವಧಾನಿ ಅಂತ. ಇಬ್ಬರೂ ನಮಗೆ ಸಾಲ ಕೊಟ್ಟು ಜಮೀನನ್ನು ಕೊಡಿಸಿದ್ರು. ಅಣ್ಣತಮ್ಮಂದಿರ ಹಾಗೆಯೇ ಬಳಸಿದ್ವಿ. ಅವರಿಂದಲೇ ನಾವು ಮುಂದೆ ಬಂದಿರೋದು, ದೀಪ ಹಚ್ತಾ ಇರೋದು. ಅವರನ್ನು ಮರೆಯುವ ಹಾಗಿಲ್ಲ. ಇಲ್ಲಿರುವ ಅವರ ಜಮೀನನ್ನೂ ನಮಗೆ ನೀಡಿದ್ದಾರೆ. ೧೯೫೪-೫೫ರಲ್ಲಿ ಗಾಜನೂರಿನಲ್ಲಿ ತುಂಗಾ ಅಣೆಕಟ್ಟು ಆದ ಮೇಲೆ ಜಮೀನು ನೀರಾವರಿ ಆಯ್ತು. ಆಗ, ೬೮-೬೯ರಲ್ಲಿ ಹೈಬ್ರಿಡ್ ತಳಿಗಳು ಆರಂಭವಾಯ್ತು. ನಮ್ಮ ಭತ್ತದ ಬೆಳೆಯೂ ಚೆನ್ನಾಗಿತ್ತು. ಜಪಾನ್ ಸರ್ಕಾರದವರು ಎರಡು ಪವರ್ ಟಿಲ್ಲರ್ free ಆಗಿ ಕೊಟ್ಟರು. ಹಾಗೇ ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಿ ಎಂದು ಹೇಳಿದರು. ಆಗ ಜಿಲ್ಲಾ ಮಟ್ಟದಲ್ಲಿ ಮೊದಲ ಬಹುಮಾನ ಬಂತು. ಬೆಳೆದಿದ್ದ ತಳಿ 1R-8. ಎಕರೆಗೆ ೪೫ ಕ್ವಿಂಟಾಲ್ ಇಳುವರಿ ಬಂದಿತ್ತು.



ಶ್ರೀರಾಜರಾಜೇಶ್ವರಿ:ಎಚ್.ವಿ.ಕೃಷ್ಣರಾವ್ ಅವರ ಆರಾಧ್ಯದೈವ: ಹೊಸಹಳ್ಳಿ

- **ಯಾವ ರೀತಿ ಬೇಸಾಯ ಮಾಡಿದ್ರಿ, ವಿವರವಾಗಿ ಹೇಳಿ . . .**

Tractor ಇತ್ತು. ಅದರಲ್ಲೇ ಉಳುಮೆ. ದನಿನ ಗೊಬ್ಬರ ಹಾಕ್ತಾ ಇದ್ವಿ. Artificial ಗೊಬ್ಬರಾನೂ ಹಾಕ್ತಿದ್ವಿ. ಪೂರ್ತಿ ಜಮೀನಿನಲ್ಲೇ ಇರ್ತಿದ್ವಿ. ಮನೇಲಿ ಇರ್ತಿದ್ದು ಕಡಿಮೆ. ಶ್ರದ್ಧೆ ಇರಬೇಕು, ಅಲ್ಲೇ ಇದ್ದು ನೋಡಿಕೋಬೇಕು ಹೊರ್ತು ಬರೀ ಆಳುಗಳ ಹತ್ರ 'ಅಲ್ಲಿ ಹೋಗಿ ಮಾಡಿ' ಅಂದ್ರೆ ಆಗೋದಿಲ್ಲ. ನಮ್ಮ ಅದೃಷ್ಟ ಚೆನ್ನಾಗಿತ್ತು. ಪೈರು ಚೆನ್ನಾಗಿ ಬಂತು. ಅಷ್ಟು ಹೊತ್ತಿಗೆ ನಾವು ಐವತ್ತು ಎಕರೆ ಜಮೀನು ಮಾಡಿದ್ವಿ.

ನಂತರ ಕಬ್ಬು ಬೆಳೆಯಲು ಆರಂಭಿಸಿದ್ವಿ. ೧೯೫೮ರಲ್ಲಿ ಶಿವಮೊಗ್ಗದಲ್ಲಿ sugar factory ಬಂತು. ಈ ಹವಾಮಾನಕ್ಕೆ ಭತ್ತ ಹಾಗೂ ಕಬ್ಬು ಚೆನ್ನಾಗಿ ಬರುತ್ತೆ. ಕಬ್ಬಿನಲ್ಲಿ ಎರಡು, ಮೂರು ಕೂಳೆ ತೆಗೆದು, ನಂತರ

ಹಾಗೆಯೇ ಉಳುಮೆ ಮಾಡ್ತಿದ್ವು. ಅದೇ ಗೊಬ್ಬರ ಆಗೋದು. ನಂತರ ಆ ಜಮೀನಿನಲ್ಲಿ ಭತ್ತ ಬೆಳೀತಿದ್ವಿ. ಆಗ ಭತ್ತಕ್ಕೆ ಸ್ವಲ್ಪ ಗೊಬ್ಬರ ಹಾಕಿದ್ರೆ ಸಾಕಿತ್ತು. ೧೯೬೯ರಲ್ಲಿ ಕೃಷಿ ಇಲಾಖೆಯ ಉಪನಿರ್ದೇಶಕರು ಬಂದು, 'ನೀವು ತುಂಬಾ ಬೆಳೆ ಬೆಳೀತಾ ಇದೀರಿ, ರಾಜ್ಯಮಟ್ಟದಲ್ಲಿ ಸ್ಪರ್ಧಿಸಿ' ಅಂತ ಸಲಹೆ ನೀಡಿದ್ರು. ನಮಗ್ಯಾತಕ್ಕೆ ಸ್ವಾಮಿ ಅಂತ ಹೇಳಿದಾಗ, 'ನಿಮ್ಮಂತಹವರು ಸ್ಪರ್ಧಿಸಲೇಬೇಕು' ಅಂತ ಒತ್ತಾಯ ಮಾಡಿದ್ರು. ರಾಜ್ಯಮಟ್ಟದಲ್ಲಿ ಸ್ಪರ್ಧಿಸಿದ್ವಿ. ಆನಂದಮೂರ್ತಿ ಅಂತ agricultural inspector ಇದ್ರು. ಶ್ರೀನಿವಾಸಮೂರ್ತಿ ಅವರು ಕೇಳಿದ ಸಮಯವೆಲ್ಲಾ ಗೊಬ್ಬರ ಕೊಡೋರು. ಸಲಹೆ ನೀಡೋರು. ಆ ವರುಷ ೨೫ ಎಕರೆ ಭತ್ತ ಇತ್ತು. ಸ್ಪರ್ಧೆಗೆ ಒಂದು ಎಕರೆ ಬಿಟ್ಟಿದ್ವಿ. ಖಟಾವು ಮಾಡಿದಾಗ ೪೫ ಕ್ವಿಂಟಾಲ್ ಹಾಗೂ ಚಿಲ್ಲರೆ ಒಂದು ಎಕರೆಗೆ ಬಂತು. ಇತರರು ಅನುಮಾನಪಟ್ಟಾಗ, ಮತ್ತೆ ಬೆಂಗಳೂರಿನಿಂದ ಕರೆಸಿ ಅಳತೆ ಮಾಡಿಸಿದ್ರು. ಆಗಲೂ ಅಷ್ಟೇ ಬಂತು. ೧೯೬೯ರ ನವೆಂಬರ್ ೧ನೇ ತಾರೀಖು ನನಗೆ ರಾಜ್ಯಮಟ್ಟದಲ್ಲಿ ಭತ್ತದ ಬೆಳೆಗೆ ಮೊದಲ 'ಕೃಷಿ ಪಂಡಿತ' ಪ್ರಶಸ್ತಿ ಸಿಕ್ತು. ವೀರೇಂದ್ರ ಪಾಟೀಲರು ನನಗೆ ಪ್ರಶಸ್ತಿ ಕೊಟ್ಟಿದ್ದು. ಒಂದು ಚಿನ್ನದ ಮೆಡಲ್, ಶಾಲು ಹಾಗೂ ಪ್ರಶಸ್ತಿಪತ್ರ ಕೊಟ್ರು. ಪ್ರಶಸ್ತಿ ಬಂದದ್ದು ಸಂತೋಷವಾಯ್ತು. ಆ ವರುಷ ೯ ಜನರಿಗೆ ಪ್ರಶಸ್ತಿ ನೀಡಿದ್ರು. ಭತ್ತದ ಬೆಳೆಗೆ ನಾವು ಗ್ಲಿರಿಸೀಡಿಯಾ, ಹಾಗೂ ಸೆಣಬು ಸೊಪ್ಪನ್ನು ಹೇರಳವಾಗಿ ಸೇರಿಸ್ತಿದ್ವಿ. ನಮ್ಮ ಇಡೀ ಊರಿಗೆ ಗ್ಲಿರಿಸೀಡಿಯ ಬೆಳೆದದ್ದು ನಾನೇ ಮೊದಲು. ನಾನೇ ಊರವರಿಗೆಲ್ಲಾ ಕಟಿಂಗ್ಸ್ ನೀಡಿದೆ. ಇಡೀ ಊರಲ್ಲಿ develop ಆಯ್ತು. ಮುಂಚೆ ನಾವು ಸ್ಥಳೀಯ ಭತ್ತದ ತಳಿಯನ್ನು ಬೆಳೀತಿದ್ವಿ. ಮಾಸೂರು ದಬ್ಬಣಸಾಲೆ ಅಂತ, ಕೊಯಮತ್ತೂರು ಸಣ್ಣ ಅಂತ. ಅವೆಲ್ಲಾ ಎಕರೆಗೆ ೨೦ ಪಲ್ಲ ಬಂದ್ರೆ ಹೆಚ್ಚು. ಹೊಸದಾಗಿ ಬಂದ ತಳಿಗಳು ಕೃಷಿಕರಿಗೆ ನೆರವಾದವು.

ನಂತರದ ದಿನಗಳಲ್ಲಿ, ೧೫೦೦ ರಿಂದ ೨೦೦೦ ಟನ್ ಕಬ್ಬನ್ನು ಬೆಳೀತಾ ಇದ್ದೆ. ೪೦ ಎಕರೆಯಲ್ಲಿ ಕಬ್ಬು ಬೆಳೀತಾ ಇದ್ದೆ. sugar factory manager ಬಂದು ಖುಷಿಪಡ್ತಿದ್ರು. ಆಗ ನಾವು ಬಳಸ್ತಾ ಇದ್ದದ್ದು ಸಿಓ೪೧೯ ಕಬ್ಬಿನ ತಳಿ, ೩೪೦ ಅಂತ ಮತ್ತೊಂದು ತಳಿ. ತುಂಗಭದ್ರಾ sugar works ಅಂತ factory ಇಲ್ಲಿತ್ತು. ೧೯೮೦ರ ನಂತರ permit ನೀಡಲು ತೊಂದರೆ ಮಾಡಿದ್ರು, ಅಲ್ಲಿನ ಕೆಲವು ಅಧಿಕಾರಿಗಳು. ಅಲ್ಲಿ ಹಾಥಿಸಾಹೇಬರು ಅಂತ manager ಇದ್ರು. ಅವರಿಗೆ ನಮ್ಮನ್ನು ಕಂಡರೆ ಬಹಳ ವಿಶ್ವಾಸ. ಅದಕ್ಕೊಂದು ಕಾರಣವೂ ಇತ್ತು. ಒಮ್ಮೆ ಅವರಿಗೆ ಉಗಾಂಡದ ಹತ್ತಿರ ಇರುವ ತಾಂಜೇನಿಯಾಕ್ಕೆ ವರ್ಗ ಆಗಿತ್ತು. ನಮ್ಮ ದೊಡ್ಡಪ್ಪ ದೊಡ್ಡ astrologer. ಹಾಥಿ ಸಾಹೇಬರು ಅವರ ಬಳಿ ಬಂದು ಉಗಾಂಡಕ್ಕೆ ಯಾವಾಗ ಹೋಗಲಿ ಅಂದ್ರು. ದೊಡ್ಡಪ್ಪ 'ನೀವೊಂದು ಸಂಖ್ಯೆ ಹೇಳಿ' ಅಂದ್ರು. ಅವರು ಹೇಳಿದ್ರು. ದೊಡ್ಡಪ್ಪ ಆಗ ಜೋರಾಗಿ ನಕ್ಕುಬಿಟ್ಟು 'ನೀವು ಉಗಾಂಡಕ್ಕೆ ಹೋಗೋದೇ ಇಲ್ಲ' ಅಂದ್ರು. ಅವರು 'ಶಾಸ್ತ್ರೀಜಿ, ನೋಡಿ order ಬಂದಿದೆ, ನೀವು ಹೇಳೋದು ಸಾಧ್ಯವಿಲ್ಲದ ವಿಚಾರ' ಅಂದ್ರು. 'ನಾಳೆ ಬೆಳಗ್ಗೆ ನೋಡಿ' ಅಂದ್ರು ದೊಡ್ಡಪ್ಪ. ಮಾರನೇ ದಿನ ಅವರ order cancel ಆಗಿತ್ತು. 'ನೀವು ಒಳ್ಳೆಯ ಕೆಲಸಗಾರರು, ನೀವು ಇಲ್ಲೇ ಇರಬೇಕು', ಅಂತ ಮರು ಆದೇಶ ಬಂದಿತ್ತು. ಆವಾಗಿನಿಂದ ಹಾಥಿ ಸಾಹೇಬರಿಗೆ ನಮ್ಮ ಮೇಲೆ ವಿಶ್ವಾಸ. ಅವರಿಗೆ ವಿಚಾರ ತಿಳಿಸಿ, ನಾನೂ ಇನ್ನು ಮುಂದೆ ಕಬ್ಬು ಬೆಳೆಯೋಲ್ಲ ಅಂದೆ. ಅವರು ನಕ್ಕರು ಅಷ್ಟೆ. Permit ಮಾರನೆ ದಿನ ಸಿಕ್ತು. ನಂತರದ ದಿನಗಳಲ್ಲಿ . . . ಅಡಿಕೆ ತೋಟ ಎಬ್ಬಿಸಲು ಆರಂಭಿಸಿದೆ. 1987ರ ಹೊತ್ತಿಗೆ ಪೂರಾ ಅಡಿಕೆ ತೋಟ ಮಾಡಿದ್ದೆ.

- **ಕೂಳೆ ಕಬ್ಬಿನ ಬೇಸಾಯವನ್ನು ಯಾವ ರೀತಿ ಮಾಡ್ತಿದ್ರಿ?**

ನಾನು ನಾಲ್ಕು, ಐದು ಕೂಳೆ ಬೆಳೆದಿದೀನಿ. ತೆನೆ ಫಸಲು ಕಡಿದ ತಕ್ಷಣ ನಾವು ತರಗಿಗೆ ಬೆಂಕಿ ಹಾಕ್ತಿದ್ವಿ. ಇಲ್ಲಿ ಹತ್ತಿರದಲ್ಲಿದ್ದ ಪ್ರಗತಿಪರ ಕೃಷಿಕರಾದ ಪ್ರಫುಲ್ಲಚಂದ್ರ ಅವರು ಕಬ್ಬಿನ ತರಗಿನ ಮೇಲೆ ಮಣ್ಣನ್ನು ಹಾಕ್ತಿದ್ರು. ನಾವು ಕೂಲಿಯಾಳುಗಳು ಸಿಗದೆ, ತರಗನ್ನು ಸುಡ್ತಿದ್ವಿ, ಆದ್ರೆ ತರಗಿನ ಮೇಲೆ ಮಣ್ಣು ಹಾಕೋದು ಒಳ್ಳೆಯದು. ನಂತರ ಬೇಸಾಯ ಹೊಡೀತಿದ್ವಿ. ನಂತರ ಸೂಪರ್ ಫಾಸ್ಫೇಟು, ಅಮೋನಿಯಂ ಸಲ್ಫೇಟು, ಪೊಟ್ಯಾಷ್ ಸಾಲಿನಲ್ಲಿ ಹಾಕ್ತಿದ್ವಿ. ಕಬ್ಬಿಗೆ ಗೊಬ್ಬರ ಚೆನ್ನಾಗಿ ಹಾಕ್ತಿದ್ವಿ. ಮೂರು ತಿಂಗಳವರೆಗೆ ಬೇಸಾಯ ಹೊಡೆದು, ridgerನಲ್ಲಿ ಮಣ್ಣು ಹೊಡೆಸ್ತಾ ಇದ್ವಿ. ಕಡೆಗೆ ಗುನ್ನ ಹೊಡೆದು ಗೊಬ್ಬರ ಹಾಕ್ತಿದ್ವಿ, ಯಾಕೇಂದ್ರೆ ಮಣ್ಣು ಹೇರಿರ್ತಾ ಇದ್ರಿಂದ ಬೇಸಾಯ ಮಾಡಲು ಆಗ್ತಿರಲಿಲ್ಲ. ಕೂಳೇನೂ ಒಳ್ಳೆಯ ಇಳುವರಿ ಬರೋದು.

- **ನಿಮ್ಮ ತಂದೆ, ತಾತನವರ ವ್ಯವಸಾಯ ಯಾವ ರೀತಿ ಇತ್ತು?**

ಹಿಂದಿನ ಕಾಲದ್ದು, ಭತ್ತದ ನಾಟಿ ಮಾಡ್ತಿರಲಿಲ್ಲ. ನೇರವಾಗಿ ಬಿತ್ತನೆ ಮಾಡ್ತಿದ್ರು. ಮಳೆ ಬಂದ ಮೇಲೆ ಕೊರಡು ಹೊಡೀತಿದ್ರು. ಎಡೆ



ಅಡಿಕೆ ಬೇಯಿಸುವ ಒಲೆಯ ಪಕ್ಕದಲ್ಲಿ ಎಚ್.ವಿ.ಕೃಷ್ಣರಾವ್:ಹೊಸಹಳ್ಳಿ

ಕುಂಟೇಲಿ ಕಳೆ ತೆಗೀತಾ ಇದ್ರು. ನನ್ನ ತಾತ ಹಳೆಯ ತೋಟ ಸಹಾ ಮಾಡಿದ್ರು. ನಮ್ಮ ಇಡೀ familyಗೆ ಎರಡು ಎಕರೆ ತೋಟ ಇತ್ತು ಅಷ್ಟೆ.

- **ನಿಮಗೆ ಸಹಾಯ ಮಾಡಿದ್ರು ಕೂಡಲಿಯ ಸಾಹುಕಾರರು ಅಂತ ಹೇಳಿದ್ರಲ್ಲಾ, ಅವರು ನಿಮಗೆ ಯಾಕೆ ಸಹಾಯ ಮಾಡಿದ್ರು?**

ಅವರು ಧರ್ಮಾತ್ಮರು. ಅವರು ನಮ್ಮೂರಲ್ಲಿ ಲೇವಾದೇವಿ ಇಟ್ಟುಕೊಂಡಿದ್ರು. ನಮ್ಮ ತಂದೆ ಮಾತ್ರ ಸಾಲಕ್ಕೆ ಹೋಗ್ತಿರಲಿಲ್ಲ. ಅವರಿಗೆ ಇವರನ್ನು ನಮ್ಮ ಕಡೆ ಮಾಡ್ಕೋಬೇಕು ಅಂತ ಮನಸ್ಸಲ್ಲಿ ಇತ್ತು. ಒಂದು ಸಾರಿ ನಮ್ಮ ಮನೇಗೇ ಬಂದ್ರು. ನಮ್ಮ ದೊಡ್ಡಪ್ಪ ಹಾಗೂ ತಂದೆಗೆ ಹೆದರಿಕೆ, ಅವರ ಹತ್ರ ಸಾಲ ಮಾಡಿದ್ರೆ ಜಮೀನು ಹೋಗುತ್ತೆ ಅಂತ. ಆ ದಿನ ೧೯೪೨ನೇ ಇಸವಿ ಫೆಬ್ರವರಿ ೧೯ನೇ ತಾರೀಖು. 'ನೀವು sub registrar officeಗೆ ಬನ್ನಿ, ನಿಮಗೆ ದುಡ್ಡು ಕೊಡ್ತೀನಿ' ಅಂದ್ರು. ಆಗ ಆರಂಭದಲ್ಲಿ ಒಂದು ಸಾವಿರ ಸಾಲ ತೊಗೊಂಡ್ವಿ. ಎಂಟು ರೂಪಾಯಿ ಬಡ್ಡಿ, ವರುಷಕ್ಕೆ ನೂರು ರೂಪಾಯಿ. ಅಸಲು ಕೇಳ್ತಾ ಇರಲಿಲ್ಲ. ಬರೀ ಬಡ್ಡಿ ತೊಗೊಂಡು ಹೋಗೋರು. ಅವತ್ತಿನ ಕಾಲದಲ್ಲಿಯೇ ಅವರದ್ದು ಎರಡು ಮೂರು ಲಕ್ಷ ರೂಪಾಯಿ ಲೇವಾದೇವಿ ಇತ್ತು. ಕೂಡಲಿ ಹತ್ರ ಅವರದ್ದು ಐದುನೂರು ಎಕರೆ ಜಮೀನಿತ್ತು. ಕಡೆಗೆ ಹಿರಿಯರಿಗೆ ಕಡೆಗಾಲ ಬಂದಾಗ ನಾವು ನೋಡಲು ಹೋಗಿದ್ವಿ. ಆಗ ಅವರು ಹೇಳಿದ್ರು, 'ನಾನು ಸತ್ತರೂ, ನನ್ನ ಮಗನಿಗೆ ಹೇಳಿಹೋಗ್ತೀನಿ. ಅವನು ಯಾರ ಚಾಡಿ ಮಾತೂ ಕೇಳೋಲ್ಲ. ನಿಮಗೆ ನೆರವು ನೀಡ್ತಾನೆ, ನಿಮ್ಮನ್ನು ಸಾಧ್ಯವಾದಷ್ಟು ಮಟ್ಟಿಗೆ ಮುಂದೆ ತರ್ತಾನೆ' ಅಂದ್ರು. ಅವರ ಮಗನೂ ಸಹ ನಮಗೆ ನೆರವಾದರು. ಒಂದು ಸಾವಿರ ಸಾಲ ತೀರಿಸಿದ್ವಿ. ಐದು ಸಾವಿರ ಸಾಲ ನೀಡಿದ್ರು. ಜಮೀನನ್ನು ಖರೀದಿಸಲೂ ಸಹ ನೆರವು ನೀಡಿದ್ರು. ಅವರದ್ದೂ ಇಲ್ಲಿ ಜಮೀನಿತ್ತು. ಅದನ್ನು ಅವರು ಖರೀದಿಸಿದ ಧಾರಣೆಗೇ ನಮಗೆ ನೀಡಿದ್ರು. ಆಗ ಎಕರೆಗೆ ೨೦೦ ರೂಪಾಯಿ ತರಿ ಜಮೀನು. ಅಡಿಕೆ ತೋಟ ಎಕರೆಗೆ ನಾಲ್ಕರಿಂದ ಐದು ಸಾವಿರ ಅಷ್ಟೆ. ನಾವು ಅವರ ಹತ್ರ ೪/೫ ಎಕರೆ ಅಡಿಕೆ ತೋಟ, ೧೦/೧೨ ಎಕರೆ ಗದ್ದೆ ಖರೀದಿಸಿದ್ವಿ. ಇನಾಮು ಅಬಾಲಿಷನ್ act ಬಂದಾಗ, ಊರಿನ ಇನಾಮು ಜಮೀನು ಹೋಗುತ್ತೆ ಅಂತ ಹೆದರಿಕೆ ಆಯ್ತು. ಊರಿನಲ್ಲಿ ಜಮೀನು ಖರೀದಿಸಲು ಮುಂದೆ ಬರಲಿಲ್ಲ. ನಾವು ಆಗ ೨೫ ಎಕರೆ ಜಮೀನು ಖರೀದಿಸಿದ್ವಿ.

- **ಈಗ ನಿಮಗೆ ಎಷ್ಟು ಜಮೀನಿದೆ?**

ನಾನು, ನನ್ನ ಅಣ್ಣ ೩೦, ೩೦ ಎಕರೆ ಹಂಚಿಕೊಂಡಿದ್ದೀವಿ. ನನ್ನ ಮೂರು ಮಕ್ಕಳಿಗೆ ಹತ್ತು ಹತ್ತು ಎಕರೆ ನೀಡಿ 'ನೋಡಿಕೊಳ್ಳಿ' ಅಂತ ಹೇಳಿದೀನಿ.

- **ನಿಮ್ಮ ಮಕ್ಕಳಿಗೆ ವ್ಯವಸಾಯದಲ್ಲಿ ಆಸಕ್ತಿ ಇದೆಯಾ?**

ಇದೆ. ಅವರೇ ಈಗ ಜಮೀನು ನೋಡಿಕೊಳ್ತಾ ಇರೋದು. ನಾನು ಈಗ್ಗೆ ಎರಡು ವರುಷದಿಂದ ಜಮೀನು ಕಡೆ ಹೋಗ್ತಿಲ್ಲ. ಮಕ್ಕಳು ಕೇಳಿದ್ರೆ ಸಲಹೆ ನೀಡ್ತೀನಿ ಅಷ್ಟೆ. ನಾನು ನನ್ನ ೧೪ನೇ ವಯಸ್ಸಿನಿಂದ ದುಡಿಯೋಕೆ ಶುರು ಮಾಡಿರೋದು.

- **ನೀವು ಏನೇನು ಕಷ್ಟ ಅನುಭವಿಸಿದ್ರಿ?**

ಪ್ರತಿನಿತ್ಯ ಜಮೀನಿಗೆ ಹೋದ್ರೆ ಸಂಜೇನೇ ಬಂದು ಊಟ ಮಾಡ್ತಿದ್ದು. ಇಲ್ಲಿಂದ ಹೊಳೆ ಆಚೆ ಕುಸಕೂರು ಅಂತ ಹಳ್ಳಿ ಇತ್ತು. ಅಲ್ಲಿಯೂ ಜಮೀನು ಮಾಡಿದ್ದೆ. ಅಲ್ಲಿನ ಗ್ರಾಮಠಾಣದ ಜಮೀನು ಖರೀದಿಸಿ, ನೆಲವನ್ನು ಮಟ್ಟ ಮಾಡಿಸಿ, ಸಾಗುವಳಿ ಮಾಡಿಸಿದೆ. ಇಲ್ಲಿ ಸಮೀಪದಲ್ಲೇ ಊರೊಟ್ಟಿನದು dry land ಇತ್ತು. ಎಕರೆಗೆ ೪೦, ೫೦ ರೂಪಾಯಿ ಇತ್ತು. ಅದನ್ನೆಲ್ಲಾ ಖರೀದಿಸಿ, ಬುಲ್ಡೋಜರ್


ಹಳೆಯ ನೆನಪಾಗಿ ಉಳಿದ ಮರದ ಪೆಟ್ಟಿಗೆ: ಏಕಾಂತದ ಒಂದು ಕ್ಷಣ: ಎಚ್.ವಿ.ಕೃಷ್ಣರಾವ್:ಹೊಸಹಳ್ಳಿ

ಹೊಡಿಸಿ, ನೆಲ ಸಮಮಾಡಿಸಿ ಸಾಗುವಳಿ ಮಾಡಿದೆ. ಅದನ್ನು ಈಗ minister ಕೆ.ಹೆಚ್.ಶ್ರೀನಿವಾಸ್ ತೊಗೊಂಡಿದಾರೆ. ಇನ್ನೊಂದು ೨೦ ಎಕರೆ ನೀರುಹರಿಯದ ಜಮೀನನ್ನೂ ಸಹ ಮಟ್ಟ ಮಾಡಿದೆ. Agricultrual departmentನವರು 'factory ಮಾಡ್ತೀವಿ, ಲೀಸ್‌ಗೆ ಕೊಡಿ' ಅಂದ್ರು. ಐದು ವರುಷ ಲೀಸ್‌ಗೆ ಕೊಟ್ಟೆ. ನಂತರ ಎಕರೆಗೆ ಒಂದು ಸಾವಿರದಂತೆ ಅದನ್ನು ಮಾರಿದೆ.

- **ನೀವು ತೋಟವನ್ನು ಯಾವ ರೀತಿ ಅಭಿವೃದ್ಧಿ ಮಾಡಿದ್ರಿ?**

ಮಧ್ಯ tractor ಓಡಾಡುವ ಹಾಗೆ ಜಾಗ ಬಿಟ್ಟುಕೊಂಡು, ಲೈನ್‌ನಲ್ಲಿ ಅಡಿಕೆ ಹಾಕಿದೆ. ಒಂಭತ್ತು ಅಡಿಗೆ ಒಂದರಂತೆ ಅಡಿಕೆ ಹಾಕಿದ್ದು, ಪ್ರತಿ ಸಾಲಿಗೂ ಮಧ್ಯದಲ್ಲಿ ಒಂದು ಕಾಲುವೆ. ನೀರು ಜಾಸ್ತಿಯಾದಾಗ ಕಾಲುವೇಲಿ ಹರಿಯೋದು, ನೀರಿಲ್ಲದಾಗ ಕಾಲುವೇಲಿ ನೀರು ಕೊಟ್ರೆ ತೋಟದಲ್ಲಿ ತನು ನಿಲ್ಲೋದು. ನಾವು ಬಳಸಿದ್ದು ಸ್ಥಳೀಯ ತಳೀನೇ. ಮಧ್ಯದಲ್ಲಿ ಮಂಗಳ ಅಂತ ತಳಿ ಹಾಕಿದ್ವಿ. ಅದರಲ್ಲಿ ಇಷ್ಟು ಇಳುವರಿ ಬರೋಲ್ಲ ಅನ್ನಿಸಿತು. ಅದು ಈಗ ಎರಡು ಎಕರೆ ಇದೆ ಅಷ್ಟೆ. ಎಕರೆಗೆ ೮ ರಿಂದ ೧೦ ಕ್ವಿಂಟಾಲ್ ಇಳುವರಿ ಬರುತ್ತೆ. ಒಟ್ಟು ೩೦ ಎಕರೆಯಿಂದ ೨೫೦ ರಿಂದ ೩೦೦ ಕ್ವಿಂಟಾಲ್ ಅಡಿಕೆ ಬರ್‍ತಿದೆ. ನಾವೇ ಅಡಿಕೆಯನ್ನು ಬೇಯಿಸ್ತೀವಿ. ಮನೇ ಹಿಂಬದೀಲಿ ದೊಡ್ಡ ಶೆಡ್ ಮಾಡಿಸಿದೀನಿ. ಅಡಿಕೆ ಸುಲಿಯೋದಕ್ಕೆ ಬೇರೆ ಜಾಗ ಇದೆ. ಬೇಯಿಸೋದು ಬೇರೆ ಕಡೆ. ಒಣಗಿಸಲೂ ಜಾಗ ಇದೆ. ೨೦ ರಿಂದ ೩೦ ಜನ ಅಡಿಕೆ ಸುಲಿಯೋದಕ್ಕೆ ಬರ್‍ತಾರೆ. ಸುಲಿಯೋರಿಗೆ ಮುಂಚೆ ಡಬ್ಬದ ಲೆಕ್ಕದಲ್ಲಿ ಹಣ ಕೊಡ್ತಿದ್ವಿ. ಈಗ ತೂಕದ ಲೆಕ್ಕ. ಸುಲಿದ ಮೇಲೆ ಬೇಯಿಸೋದು. ಮುಂಚೆ ಸೌದೇಲಿ ಬೇಯಿಸ್ತಾ ಇದ್ವಿ. ಅದಕ್ಕೇ ಒಲೆ ಹಾಕಿದ್ವಿ. ಈಗ ಅಡಿಕೆ ಸಿಪ್ಪೆ ಹಾಗೂ ಹಿಂಗಾರಾನೇ ಹಾಕಿ ಬೇಯಿಸ್ತೀವಿ. ಸೌದೆ ಖರ್ಚು ಮಿಗ್ತಿದೆ. ಈ ವರುಷದ ಅಡಿಕೆ ಸಿಪ್ಪೇನ Stock ಮಾಡಿಕೊಂಡು ಮುಂದಿನ ವರುಷ ಬಳಸ್ತೀವಿ. ನಾವು 'ಇಡಿ' ಅಂದ್ರೆ ಉಂಡೆ ಅಡಿಕೆ ಮಾಡೋದು ಜಾಸ್ತಿ. ಅದಕ್ಕೆ ಧಾರಣೆ ಜಾಸ್ತಿ. ಅದರಲ್ಲಿ ಸ್ವಲ್ಪ ಬಲಿತಿರೋದು ಬೆಟ್ಟೆ-ಹದ ಬರುತ್ತೆ. ಹಣ್ಣಾದ ಅಡಿಕೇನ 'ಗೋಟು ಅಡಿಕೆ' ಅಂತ ಮಾಡ್ತೀವಿ. ಗೋಟಿಗೆ ಧಾರಣೆ ಇದ್ದ ಸಂದರ್ಭದಲ್ಲಿ, ಒಂದು ಹತ್ತು ವರುಷ ಅಡಿಕೇನ ಬೇಯಿಸ್ತಾ ಇರಲಿಲ್ಲ. ಪೂರ್ತಿ ಹಣ್ಣಾದ ಮೇಲೆ ಅಡಿಕೇನ ಖಟಾವು ಮಾಡ್ತಿದ್ವಿ. ಬಿಸಿಲಿನಲ್ಲಿ ಒಣಗಿಸಬೇಕು. ಅದನ್ನು ಸಾಗರಕ್ಕೆ ಕಳಿಸ್ತಾ ಇದ್ವಿ. ಈಗ್ಗೆ ಐದಾರು ವರುಷದಿಂದ ಗೋಟಿನ ಧಾರಣೆ ಕಡಿಮೆ ಇರೋದ್ರಿಂದ ಅಡಿಕೇನ ಬೇಯಿಸ್ತಾ ಇದೀವಿ.

- **ನಿಮಗೆ ವ್ಯವಸಾಯದ ಬಗ್ಗೆ ಆಸಕ್ತಿ ಬರಲು ಏನು ಕಾರಣ?**

೧೯೩೮ರಲ್ಲಿ primary school ಆಯ್ತು ನಂದು. ನಂತರ ಮೈಸೂರಿಗೆ ಹೋದೆ. ಮರಿಮಲ್ಲಪ್ಪ ಶಾಲೇಲಿ ಸೇರಿದೆ. ಒಂದು ವಾರ ಇದ್ದೆ. ಇರೋಕೆ ಜಾಗ ಇರಲಿಲ್ಲ. ಕಡೆಗೆ ಪರಕಾಲ ಮಠದಲ್ಲಿ ಸ್ವಾಮಿಗಳು ಹೇಳಿದ್ರು, 'ಜತೆಗೆ ಸಂಸ್ಕೃತಾನೂ ಕಲೀರಿ, ಇಲ್ಲಿ ಉಳಿಯಲು ಅವಕಾಶ ಕೊಡ್ತೀನಿ' ಅಂತ. ನನಗೆ ಯಾಕೋ ಮನಸ್ಸು ಒಡೀತು. ನಮ್ಮ ನೆಂಟರ ಮನೇಲಿ ಉಳೀಬೇಕು ಅಂದುಕೊಂಡಿದ್ದು ಯಾವಾಗ ಆಗಲಿಲ್ಲವೋ ಬೇಡ ಅನ್ನಿಸ್ತು. ನಾನು schoolಗೆ ಹೋಗಿ ಹೇಳಿದೆ, 'ಸಾರ್, ನಾನು ಊರಿಗೆ ಹೋಗ್ತೀನಿ' ಅಂದೆ. 'ಯಾಕಪ್ಪ, ನೀನು ಬುದ್ಧಿವಂತ. ಬೇಕಾದ್ರೆ ನಿಂಗೆ ಎರಡು ವರುಷ promotion ಕೊಡ್ತೀವಿ. middle school first yearಗೆ ಬೇಡ, 3rd year ಗೆ ಸೇರಿಕೋ. ಹೋಗಬೇಡ' ಅಂದ್ರು, ಶಾಲೆಯ ಮುಖ್ಯೋಪಾಧ್ಯಾಯರು. ನನಗೆ ಮನಸ್ಸು ಆಗದೆ ಊರಿಗೆ ಬಂದೆ. ಇಲ್ಲಿ ಮತ್ತೂರಿನ ಶಾಲೇಲಿ, ಎರಡು ವರುಷ ಸಾಮಾನ್ಯವಾಗಿ ABCD ಕಲಿತು ಸಾಧಾರಣ ಓದಿನ ಮಟ್ಟಕ್ಕೆ ಬಂದೆ. ನಂತರ ನನಗೆ ಜಮೀನು ಮಾಡಬೇಕು, ವ್ಯಾಪಾರ ಮಾಡಬೇಕು ಅನ್ನುವ ಮನಸ್ಸು ಬಂತು. ಮತ್ತೂರು ಹಾಗೂ ನಮ್ಮೂರಿನಲ್ಲಿ ಅಡಿಕೆ ಹಾಗೂ ಭತ್ತದ ವ್ಯಾಪಾರ ಆರಂಭಿಸಿದೆ. ಅದು ನನ್ನ ಕೈಹಿಡೀತು. ಮುಂದುವರೆಸಿದೆ. ಕೂಡಲಿ ಅವಧಾನಿಗಳು ಸಾಲ ನೀಡಿದ ಮೇಲೆ

ನಾನು, ನಮ್ಮಣ್ಣ ಸೇರಿ ಹಗಲು, ರಾತ್ರಿ ದುಡಿದು ವ್ಯವಸಾಯ ಅಭಿವೃದ್ಧಿಪಡಿಸಿದ್ವಿ. ನನ್ನ ತಂದೆಯವರು ನಮಗಿಂತ ಬಹಳ ಕಷ್ಟಪಟ್ಟಿದಾರೆ. ಅವರ ಹೆಸರು ಹೇಳೋದಕ್ಕೂ ನಮಗೆ ಯೋಗ್ಯತೆ ಇಲ್ಲ. ಅವರು ಕೋರ್ಟಿನಲ್ಲಿ ಕೆಲಸದಲ್ಲಿದ್ರು. ಕೋರ್ಟನಿಂದ ಬಂದು ಇಲ್ಲೆಲ್ಲಾ ಜಮೀನು ಮಾಡಿ, ಮತ್ತೂರಿನಲ್ಲಿ ನಮ್ಮ ಸೋದರತ್ತೆ ಜಮೀನಿತ್ತು ಅದನ್ನೂ ಮಾಡೋರು. ಮುಂಚೆ ನಮ್ಮ ಸ್ಥಳ ಹರಕೇರಿ. ನಮ್ಮ ತಂದೆ ಅಲ್ಲಿಂದ ಶಿವಮೊಗ್ಗಕ್ಕೆ ಹೋಗ್ತಾ ಇದ್ರು. ಆದರೆ ಈಗ ಅಲ್ಲಿ ಬ್ರಾಹ್ಮಣರ ಕುಟುಂಬವೇ ಇಲ್ಲ.

ಒಂದು ದಿನ ಮನೇಲಿ ಎಲ್ಲರೂ ಕುಳಿತಿರುವಾಗ, ನಮ್ಮ ದೊಡ್ಡಪ್ಪನವರು, ನನ್ನ ೧೫ನೇ ವಯಸ್ಸಿನಲ್ಲಿ ಜಾತಕ ನೋಡಿದರು. 'ಇವನ ಜಾತಕ ಬಹಳ ಚೆನ್ನಾಗಿದೆ. ಇವನಿಗೆ ಜವಾಬ್ದಾರಿ ಬಿಡು. ಮನೇನ ಬಹಳ ಮುಂದಕ್ಕೆ ತರ್ತಾನೆ, ಹಿಂದುಮುಂದೆ ಯೋಚನೆ ಮಾಡಬೇಡ' ಅಂದ್ರು. ಆ ಕ್ಷಣ ನಮ್ಮ ತಂದೆ ಜನಿವಾರದಲ್ಲಿದ್ದ ಬೀಗದಕೈಯನ್ನು ಕೊಟ್ಟುಬಿಟ್ರು. ನನ್ನ ಅಣ್ಣ ಧರ್ಮರಾಯರು. ಅವರು ಏನು ಮಾಡ್ತೀಯ ಅಂತ ಕೇಳ್ತಿರಲಿಲ್ಲ. ನಾನು ಮುಟ್ಟಿದ್ದೆಲ್ಲಾ ಹಾಗೇ ಯಶಸ್ಸು ಆಯ್ತು. ಪ್ರತಿದಿನ ಲೆಕ್ಕ ಬರೀತಾ ಇದ್ದೆ. ರಾತ್ರಿ ಒಂದು ಸಾರಿ ಪರೀಕ್ಷೆ ಮಾಡಿ ಅಂತ ಅಣ್ಣನಿಗೆ ಹೇಳ್ತಿದ್ದೆ. ಮಾರನೆ ದಿನ, 'ತಮ್ಮ ಹಾಗೆ ಮಾಡಿದ, ಹೀಗೆ ಮಾಡಿದ' ಅನ್ನುವ ದೂರು ಬರಬಾರದು ಅನ್ನುವ ಉದ್ದೇಶ ನನ್ನದು. 'ಇಲ್ಲಪ್ಪ, ನೀನು ಮಾಡಿದ ಮೇಲೆ ನನಗೆ ನಂಬಿಕೆ ಇದೆ' ಅಂತ ಅವರು ಹೇಳ್ತಿದ್ರು. ಇವತ್ತಿನವರೆಗೂ ಅವರು ನನ್ನ ಸಲಹೆ ಕೇಳ್ತಾರೆ. ಅವರ ಮಕ್ಕಳಿಗೂ 'ಚಿಕ್ಕಪ್ಪನನ್ನು ಕೇಳಿ' ಅಂತಾರೆ. ಅಷ್ಟು ಅನ್ಯೋನ್ಯವಾಗಿದೀವಿ.

- **ನಿಮ್ಮ ತಂದೆ ಸದಾ ನಿಮಗೆ ಯಾವ ವಿಚಾರ ತಿಳಿಸ್ತಾ ಇದ್ರು?**

ಜಮೀನನ್ನು ಸರಿಯಾಗಿ ನೋಡಿಕೋಬೇಕು. ಕಾಲ ಕಳೆದು ಅಲ್ಲಿ ಇಲ್ಲಿ ತಿರುಗಾಡಬೇಡ. ಚೆನ್ನಾಗಿ ಮುತುವರ್ಜಿ ಇಟ್ಟು ಕೆಲಸ ಮಾಡಬೇಕು ಅಂತಿದ್ರು. ಅವರೂ ಸಹ ಅವರ ೮೩ನೇ ವಯಸ್ಸಿನಲ್ಲಿಯೂ ಜಮೀನಿಗೆ ಬರ್ತಿದ್ರು. ಸ್ವತಃ ಕೆಲಸ ಮಾಡ್ತಿದ್ದು ಕಡಿಮೆ. ಆಳುಗಳ ಮೂಲಕ ಮಾಡಿಸ್ತಾ ಇದ್ರು. ನಾನು ಸಣ್ಣ ವಯಸ್ಸಿನಲ್ಲಿ ಎರಡು-ಮೂರು ವರುಷ ಸ್ವತಃ ಕೆಲಸ ಮಾಡಿದ್ದೆ, ಕಬ್ಬಿನಲ್ಲಿ ಅಗೆತ ಮಾಡ್ತಿದ್ದೆ, ಆಮೇಲೆ ಬಿಟ್ಟೆ.

- **ನಿಮ್ಮ ಮನೆಯ ಹೆಣ್ಣುಮಕ್ಕಳು ವ್ಯವಸಾಯದ ಅಭಿವೃದ್ಧಿಯಲ್ಲಿ ಯಾವ ರೀತಿ ಪಾತ್ರ ವಹಿಸಿದ್ದಾರೆ?**

ನಮಗೆ ಸಮಯಕ್ಕೆ ಸರಿಯಾಗಿ ಊಟ, ತಿಂಡಿ ಎಲ್ಲಾ ಹೊಂದಿಸ್ತಾ ಇದ್ರು. ನಮ್ಮ ವ್ಯವಹಾರದ ಬಗ್ಗೆ ಏನೂ ಕೇಳ್ತಾ ಇರಲಿಲ್ಲ. ಕೇಳುವ ಪದ್ಧತೀನೂ ಇಲ್ಲ ನಮ್ಮ ಕುಟುಂಬದಲ್ಲಿ. ಇದು ತಪ್ಪೋ ಸರೀನೋ ಗೊತ್ತಿಲ್ಲ , ಆದ್ರೆ ನಮಗೆ ಚೆನ್ನಾಗಿ ಸಹಕಾರ ನೀಡಿದ್ದಾರೆ. ನಾವು ಬರುವವರೆಗೂ ಅವರು ಊಟ ಮಾಡ್ತಿರಲಿಲ್ಲ.

- **ನಿಮ್ಮ ಮನೇಲಿ ರಾಸುಗಳು ಇತ್ತಾ?**

ಇದ್ವು, ೧೫ ರಿಂದ ೨೦ ರಾಸುಗಳು ಇದ್ವು. ಈಗ ಎರಡು ಹಸು ಇದೆ ಅಷ್ಟೆ. ಜಾಸ್ತಿ ರಾಸು ಇದ್ದಾಗಲೂ ನಾವು ಹಾಲು ಮಾರ್ತಿರಲಿಲ್ಲ. ಹಾಲನ್ನು ನೆಂಟರು ಇಷ್ಟರಿಗೆ ಕೊಡ್ತಿದ್ವಿ ಅಷ್ಟೆ.

- **ನಿಮ್ಮ ಮಕ್ಕಳಲ್ಲಿ ವ್ಯವಸಾಯದ ಆಸಕ್ತಿ ಮೂಡಲು ನೀವೇನು ಮಾಡಿದ್ರಿ? ಅಥವಾ ಅವರಲ್ಲೇ ಅದು ಸ್ವತಃ ಮೂಡಿತಾ?**

ಇಲ್ಲ. ನಾವು ಮಾಡೋದನ್ನೆಲ್ಲಾ ನೋಡಿಕೊಂಡ್ರು. ನಾನು ಪ್ರತಿಯೊಂದನ್ನೂ ಅವರಿಗೆ ಹೇಳ್ತಾ ಇದ್ದೆ. ನಮ್ಮ ಕಷ್ಟ ನಷ್ಟ ಸಾಧನೆಗಳನ್ನು ವಿವರಿಸ್ತಾ ಇದ್ದೆ. ಆಗ ಅವರಿಗೂ ಆಸಕ್ತಿ ಬಂತು, 'ನಾವೂ



ಆಧುನಿಕತೆಯನ್ನು ನಿರಾಕರಿಸದ ಸನಾತನಿ ಎಚ್.ವಿ.ಕೃಷ್ಣರಾವ್:ಹೊಸಹಳ್ಳಿ

ಮಾಡಬೇಕು' ಅಂತ. ಕಡೆಗೆ ಏನು ಆಯ್ತು, ಇಂಜಿನೀಯರ್ ಆಗಿರುವ ನನ್ನ ಮಗ 'ನೀವು ಜಮೀನಿಗೆ ಬರೋದು ಬಿಟ್ರೆ ನಾನು ಎಲ್ಲ complete ಆಗಿ ನೋಡ್ಕೋತೀನಿ. ನೀವು ಬಂದ್ರೆ ಮಾತ್ರ ಬರೋದೇ ಇಲ್ಲ ನಾನು' ಅಂದ. ನಮಗೆ ವಯಸ್ಸಾಗಿದೆ. ನಾವು ಹೆಚ್ಚು ಕಷ್ಟಪಡಬಾರದು ಅನ್ನುವ ಮನೋಭಾವ ಅವನಿಗಿತ್ತು. 'ಆಯ್ತಪ್ಪಾ, ನೀವು ನೋಡಿಕೊಳ್ಳಿ, ಆಗಾಗ ನನ್ನನ್ನು ಕರೆದುಕೊಂಡು ಹೋಗಿ, ನೋಡ್ತೀನಿ' ಅಂದೆ. ಈ ಜಮೀನಿನ ನಿರ್ವಹಣೆ ಮಕ್ಕಳದ್ದು. ಆವಾಗವಾಗ scooter ಹಾಗೂ ಕಾರ್‌ನಲ್ಲಿ ಜಮೀನಿಗೆ ಕರೆದುಕೊಂಡು ಹೋಗ್ತಾರೆ. ಸಲಹೆ ಕೊಡ್ತೀನಿ, ಹೀಗೀಗೆ ಮಾಡಿ ಅಂತ. ಅವರೂ ಹೇಳಿದ್ದನ್ನು ಕೇಳ್ತಾರೆ. ಕೊಟ್ಟ ಸಲಹೆ ಸ್ವೀಕರಿಸ್ತಾರೆ. ಅನ್ಯೋನ್ಯವಾಗಿದೀವಿ.

- **ಮುಂದಿನ ಯೋಜನೆಗಳೇನು ನಿಮ್ಮದು?**

ಇನ್ನೇನು ನಮ್ಮದು ನಿವೃತ್ತಿಯ ಯೋಜನೆ. ಪ್ರವೃತ್ತಿಯ ಯೋಜನೆಗಳು ಸಾಕು ಅನ್ನಿಸಿದೆ. ಸಂಪಾದನೆ ಮಾಡುವ ಆಸಕ್ತಿ ಇಲ್ಲ. ಜಪ, ಪೂಜೆ, ಅದೇ ನಮ್ಮ ದಾರಿ. ನನ್ನ ಜೀವನದಲ್ಲಿ ಸತ್ಯವಾಗಿ ಬಾಳಿದೆ. ಸುಳ್ಳು ನನಗೆ ಆಗೋದಿಲ್ಲ. ಸತ್ಯವೇ ನನ್ನನ್ನು ಕಾಪಾಡಿದ್ದು.

- **ವ್ಯವಸಾಯದ ಯಶಸ್ಸಿಗೆ ಏನು ಮುಖ್ಯ?**

ಆಸಕ್ತಿ ವಹಿಸಿಕೊಂಡು, ಬೇಜಾರಿಲ್ಲದೆ ಕೆಲಸ ಮಾಡಬೇಕು. ಬೇರೆಯವರಿಗೆ 'ಅದು ಮಾಡಿ' ಅಂತ ಹೇಳಿ ನಾವು ಮನೇಲಿ ಕುಳಿತರೆ ಅದು ಬೇಸಾಯ ಆಗೋಲ್ಲ. ಪ್ರತಿದಿನ ಜಮೀನಿನಲ್ಲಿ ನಿಂತರೇ ಅದು ಯಶಸ್ವಿಯಾಗೋದು.

- *ಒಳ್ಳೆಯದು ಕೃಷ್ಣರಾವ್ ಅವರೆ, ಇದುವರೆಗೂ ನಿಮ್ಮ ವಿಚಾರ ತಿಳಿಸಿದ್ರಿ, ವಂದನೆಗಳು.*

ನಮಸ್ಕಾರ.

ಆ) ಎಚ್.ಆರ್. ಕೃಷ್ಣಮೂರ್ತಿ (ಪ್ರೊಫೆಸರ್) ಇ/ಮ ರಾಮಸ್ವಾಮಿಶಾಸ್ತ್ರಿ
ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237551


ವಿಜಯಕೃಷ್ಣಮೂರ್ತಿ-ಪ್ರೊ.ಎಚ್.ಆರ್.ಕೃಷ್ಣಮೂರ್ತಿ:ಮನೆಯ ಮುಂದಿನ ಗಿಡಗಳೊಂದಿಗೆ ಸಂವಾದ:ಹೊಸಹಳ್ಳಿ

ನನ್ನ ತಂದೆ ಎರಡು ಎತ್ತನ್ನು ಮುಂದೆ ಬಿಟ್ಟುಕೊಂಡು ಸ್ವತಃ ಕಪಿಲೆ ಎತ್ತುತಾ ಇದ್ರು. ಬೆಳಗ್ಗೆ ನಾಲ್ಕಕ್ಕೆ ಎದ್ದು ನಿತ್ಯಕರ್ಮ ಮುಗಿಸಿ, ಹೆಗಲ ಮೇಲೆ ಗುದ್ದಲಿ ಹಾಕಿಕೊಂಡು ತೋಟಕ್ಕೆ ಹೋದ್ರೆ ಬರ್ತಾ ಇದ್ದದ್ದು ರಾತ್ರಿ ಎಳಕ್ಕೆ. ಅವರು ಮನೇಲಿ ಇರ್ತಿದ್ದು ಕಡಿಮೆ. ತೋಟವೇ ಅವರಿಗೆ ಸರ್ವಸ್ವ.

ಹೊಸಹಳ್ಳಿ ಪಟೇಲ್ ರಾಮಸ್ವಾಮಿಶಾಸ್ತ್ರಿ ಹಾಗೂ ಲಕ್ಷ್ಮೀದೇವಮ್ಮ ದಂಪತಿಗಳಿಗೆ ಐದು ಜನ ಗಂಡು ಹಾಗೂ ಎರಡು ಹೆಣ್ಣು ಮಕ್ಕಳು. ನಾಲ್ಕನೆಯ ಮಗನೇ ಎಚ್.ಆರ್. ಕೃಷ್ಣಮೂರ್ತಿ. ಬೆಂಗಳೂರಿನ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಲ್ಲಿ profes-sor ಆಗಿದ್ದು, ನಿವೃತ್ತಿ ಹೊಂದಿದ ಮೇಲೆ ಹುಟ್ಟೂರಿಗೆ ಬಂದು ಇವರು ವ್ಯವಸಾಯ

ಮಾಡುತ್ತಿರುವುದು ನಿಜಕ್ಕೂ ಆದರ್ಶಪ್ರಾಯ. ಇವರ ಪತ್ನಿ ವಿಜಯ ಕೃಷ್ಣಮೂರ್ತಿ, ಬಸವಾಪಟ್ಟಣದ ಬಿ.ಆರ್.ಸುಬ್ಬರಾಯಸ್ವಾಮಿ ಹಾಗೂ ಶಾರದಮ್ಮ ದಂಪತಿಗಳ ಮಗಳು. ಇವರಿಗೆ ಇಬ್ಬರು ಗಂಡು ಮಕ್ಕಳು. ಇಳಿವಯಸ್ಸಿನಲ್ಲಿ, ಹಿರಿಯರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುತ್ತಿರುವ ಈ ದಂಪತಿಗಳು ಇಂದಿನ ಯುವಪೀಳಿಗೆಗೆ ಮಾದರಿ ಆಗಬಲ್ಲರು. ನಾವು ಸಂದರ್ಶನಕ್ಕೆಂದು ಮನೆಗೆ ಹೋದಾಗ, ಕೃಷ್ಣಮೂರ್ತಿಯವರು ತೋಟಕ್ಕೆ ಹೋದವರು, ಇನ್ನೂ ಬಂದಿರಲಿಲ್ಲ. ಪತ್ನಿ ವಿಜಯ ಅವರು, 'ನಿಮಗೆ ಬೇಕಾದ ವಿಷಯವನ್ನು ನಾನೇ ಹೇಳುತ್ತೇನೆ, ನಾನೂ ಸಹ ಕೃಷಿ ಕುಟುಂಬದಿಂದ ಬಂದವಳು' ಅಂದಾಗ ಅಚ್ಚರಿಯಾಯ್ತು. ಒಂದೆಡೆ ಖುಷಿಯೂ ಆಯ್ತು.

- **ನಮಸ್ಕಾರ ವಿಜಯ ಅವರೆ? ನಿಮ್ಮ ತಂದೆ ತಾಯಿಯ ಬಗ್ಗೆ ನಿಮಗೆ ಗೊತ್ತಿರುವುದನ್ನು ಹೇಳಿ. . .**
  ನನ್ನ ತಂದೆ ನಿಜವಾಗಿ ಕೃಷಿಕರು. ಸುತ್ತಲಿನ ಹಳ್ಳಿಗೆಲ್ಲಾ ಅವರು ಚಿರಪರಿಚಿತರಾಗಿದ್ರು. ಕೃಷಿಯ ಬಗ್ಗೆ ಅವರಿಗಿದ್ದ ತಿಳುವಳಿಕೆ ತಿಳಿಸಲು ನನಗೆ ಹೆಮ್ಮೆಯಾಗುತ್ತೆ. ನಮ್ಮ ತಾತ ಪಾರ್ವತೀರಾಮಣ್ಣ ಅಂತ. ಅವರು ತೋಟವನ್ನು ಜೂಜಿನ ಹವ್ಯಾಸದಿಂದ ಕಳೆದಿದ್ರು. ನಮ್ಮಪ್ಪ ಅದನ್ನು ಹೇಗೆ ಅಭಿವೃದ್ಧಿಪಡಿಸಿದ್ರು ಅಂದ್ರೆ, ಅಲ್ಲಿ ಓಡಾಡುವ ಪ್ರತಿಯೊಬ್ಬರೂ ನಮಸ್ಕಾರ ಮಾಡುವ ಹಾಗೆ. ಅಲ್ಲಿ ತೋಟ ಮಾಡುವುದಕ್ಕಿಂತ ಮುಂಚೆ ಒಂದು ಭಾವಿ ತೋಡಿದ್ರು. ಆ ಭಾವಿ ತೋಡಲು ಎರಡೇ ಆಳು. ನಮ್ಮಪ್ಪ ಒಬ್ರು ಮತ್ತು ಅವರ ಜತೆ ಹನುಮ ಅಂತ ಒಬ್ಬ ಇದ್ದ. ಭಾವಿ ತೋಡುವಾಗ ಮೇಲಿನಿಂದ ಮಣ್ಣು ಕುಸಿದು, ಪೂರ ಇವರ ಜಲಸಮಾಧಿಯಾಗಬೇಕಾದ ಪರಿಸ್ಥಿತಿ ಬಂದಿತ್ತು. ಆದ್ರೆ ಹನುಮ ಮೊದಲು ಮೇಲೆದ್ದು, ಇವರನ್ನು ತಡಕಾಡಿ ಹುಡುಕಿ ಮೇಲೆ ಹಾಕಿದನಂತೆ. ಆಗಿನ್ನೂ ನಮ್ಮ ತಂದೆಗೆ ೧೯ ವರುಷ ಅಷ್ಟೇಯಂತೆ. ಮದುವೆಯಾದ ಹೊಸತು. ಕಡೆಗೆ ಆ ಭಾವಿ ತೋಡಿ ಕಟ್ಟಡ ಕಟ್ಟಿದ್ದು ಈ ಇಬ್ಬರೇ. ಇದುವರೆವಿಗೂ ಆ ಭಾವೀಲಿ ನೀರು ಹೋಗಿಲ್ಲ. ತೋಟದಲ್ಲಿ ಈ ನೀರನ್ನು ಬಳಸಿಕೊಂಡು, ವಿಳ್ಳೇದೆಲೆ, ತೆಂಗು, ಅಡಿಕೆ, ಬಾಳೆ ಹಾಕಿದ್ರು. ನನ್ನ ತಂದೆಗೆ ಏಳು ಜನ ಹೆಣ್ಣುಮಕ್ಕಳು, ಒಬ್ಬ ಮಗ; ಏಳು ಜನಕ್ಕೂ ತೋಟದ ಆದಾಯದಲ್ಲೇ ಮದುವೆ ಮಾಡಿದಾರೆ, ಒಳ್ಳೆ ಕಡೆಗೇ ಕೊಟ್ಟಿದಾರೆ. ಇದೆಲ್ಲಾ ನೋಡಿದ್ರೆ ನಮ್ಮಪ್ಪ ಎಷ್ಟು ಕಷ್ಟಪಟ್ಟಿರಬಹುದು ಅನ್ನಿಸುತ್ತೆ. ಅವರ ಮಕ್ಕಳಾಗಿರೋದು ನಮಗೆ ತುಂಬಾ ಹೆಮ್ಮೆ.

- **ನಿಮ್ಮ ವಿದ್ಯಾಭ್ಯಾಸ ಬಾಲ್ಯದಲ್ಲಿ ಹೇಗಿತ್ತು, ನಿಮ್ಮ ಕನಸುಗಳೇನಿತ್ತು?**
  (ನಗು...) Actually ನನಗೆ doctor ಆಗಬೇಕು ಅಂತ ತುಂಬಾ ಆಸೆಯಿತ್ತು. ನನಗೆ ಸಿಕ್ಕಿಯೂ ಇತ್ತು. ಹಳ್ಳಿಯ ಪರಿಸರ ಆದ್ದರಿಂದ, ನನಗೆ ೧೬ನೇ ವಯಸ್ಸಿಗೆ ಮದುವೆ ಮಾಡಿದ್ರು. ನನಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ seat ಸಿಕ್ಕಿತ್ತು. ಆದ್ರೆ ಹಳ್ಳಿಯ ವಾತಾವರಣ ಹೇಗಿತ್ತು ಅಂದ್ರೆ, ಹೆಣ್ಣುಮಕ್ಕಳು ಹೊರಗೆ ಹೋದ್ರೆ ಹಾಳಾಗ್ತಾರೆ ಅನ್ನುವುದು ತಂದೆ ತಾಯಿಗೆ ಇದ್ದ ಬಹುದೊಡ್ಡ ಯೋಚನೆ. ನಾನು PUC ಓದಿದ್ದು ಕೊಣನೂರು ಕಾಲೇಜಿನಲ್ಲಿ. ನನ್ನ ಮಕ್ಕಳು ಓದಬೇಕು ಅನ್ನುವ ಆಸೆ ಅಪ್ಪನಿಗೆ ಇತ್ತು. ಏಳು ಜನ ಹೆಣ್ಣುಮಕ್ಕಳು ಅನ್ನುವ ಬೇಜಾರು ಇರಲಿಲ್ಲ. ನನಗೂ ಹೆಣ್ಣುಮಕ್ಕಳೇ ಇಷ್ಟ. ಹೆಣ್ಣುಮಕ್ಕಳು ಇದ್ರೆ ಮನೆಗೆ ಕನ್ನಡಿ ಇದ್ದ ಹಾಗೆ. ಬೇರೆ ಏನೂ ಬೇಕೇ ಇಲ್ಲ. ದುರದೃಷ್ಟವಶಾತ್ ನನಗೆ ಹೆಣ್ಣುಮಕ್ಕಳಿಲ್ಲ (ನಗು). ಏನು ಮಾಡ್ತೀರಿ. ಕೊಣನೂರು ಕಾಲೇಜಿಗೆ ನಾನು ಹೋಗುವಾಗ, ನಮ್ಮೂರಿನ ಹಿರಿಯ ಸಂಸ್ಕೃತ ಪಂಡಿತರ ಜತೆಗೆ ನಾನು ಹೋಗಿ ಬಂದು ಮಾಡ್ತಿದ್ದೆ. ನಿಜವಾಗಿ ಅವರಿಗೆ ನಮ್ಮನ್ನು ಕಂಡರೆ, ನಮ್ಮ ತಂದೆಗಿಂತಲೂ ಹೆಚ್ಚಿಗೆ ಅಭಿಮಾನ. ಅವರ ಹೆಸರು ಸುಬ್ಬರಾಯಶಾಸ್ತ್ರಿಗಳು ಅಂತ. ಅವರು ನಮ್ಮ ಕಾಲೇಜು ಬಿಡುವ ತನಕ ಕಾದಿರೋರು. ಬಸ್ಸು ಇರದಿದ್ದಾಗ, ನಡೆದು ಬಂದಿರೋದೂ ಉಂಟು. ಅವರು ಮುಂದೆ ಹೋಗೋರು, ನಾವು ಹಿಂದೆ ಬರ್ತಾ ಇರೋವಿ. ತಂದೆ ಮಕ್ಕಳ ಸಂಬಂಧ ಇದ್ದಹಾಗೆ ಇತ್ತು.

- **ನೀವು ವ್ಯವಸಾಯದ ಕೆಲಸ ಏನು ಮಾಡ್ತಿದ್ರಿ?**
  ಹುಟ್ಟಿದ ಮನೇಲಿ ಹಾಗೆಲ್ಲಾ ಮಾಡಿಸ್ತಾ ಇರಲಿಲ್ಲ. ನಮಗೆ ಆಸೆ, 'ಅಪ್ಪ ಒಬ್ಬರೇ ಮಾಡ್ತಾರೆ, ನಾವೂ ಒಂಚೂರು help ಮಾಡೋಣ' ಅಂತ. ಆದ್ರೆ ಅಪ್ಪ 'ಬೇಡ' ಅಂತ ಹೇಳೋರು. 'ಎಲ್ಲರೂ ಓದಿಕೊಳ್ಳಿ' ಅಂತ ತುಂಬಾ encourage ಮಾಡ್ತಿದ್ರು.

- **ನಿಮ್ಮ ಯಜಮಾನರ ಬಗ್ಗೆ, ಅತ್ತೆ ಮಾವಂದಿರ ಬಗ್ಗೆ ಹಾಗೇ ಅವರ ಹಿನ್ನೆಲೆ ಬಗ್ಗೆ ಹೇಳಿ. . .**
  ನನ್ನ ಮಾವ ಹೊಸಹಳ್ಳಿ ಪಟೇಲ್ ರಾಮಸ್ವಾಮಿಶಾಸ್ತ್ರಿ. ಹೇಳಕ್ಕೆ ತುಂಬಾ ಖುಷಿಯಾಗುತ್ತೆ ನನಗೆ. ವೈದಿಕ ಕುಟುಂಬ ಇದು. ನನ್ನ ಮಾವನವರು, ಹಾಗೇ ದೊಡ್ಡಮಾವನವರು ಒಟ್ಟಿಗೆ ಇದ್ದವರು. ಒಟ್ಟು ಕುಟುಂಬ ಇದು. ನಾನು ಮದುವೆಯಾಗಿ ಬಂದಾಗ, ೫೦ ರಿಂದ ೭೫ ಜನ ಇದ್ರು ಇಲ್ಲಿ. ನಾನು ೧೬, ೧೭ ವರುಷದ ಹುಡುಗಿ. ನನ್ನ ಓರಗಿತ್ತೀರು, ನನಗೆ 'ಮಕ್ಕಳಿಗೆ ತಿಂಡಿ ಬಡಿಸು' ಅಂತ

ಹೇಳೋರು. ಎಷ್ಟು ಕಷ್ಟ ಆಗೋದು ಅಂದ್ರೆ ಒಬ್ಬ 'ಅಮ್ಮಾಮಿ ನನಗೆ ನೀರು' ಅಂದ್ರೆ, ಒಬ್ಬಳು 'ಚಿಕ್ಕಮ್ಮ ನನಗೆ ಉಪ್ಪಿನಕಾಯಿ' ಅನ್ನೋಳು, ಮತ್ತೊಬ್ಬ ಇನ್ನೊಂದು ಕೇಳುತ್ತಿದ್ದ. ನನಗೆ ಬಡಿಸಿ ಗೊತ್ತಿರಲಿಲ್ಲ. ಮಾವನವರು ಅಲ್ಲಿ ಕುಳಿತಿದ್ರೆ ಭಯವಾಗೋದು. ಆಗಿನ ಕಾಲದಲ್ಲಿ ಅತ್ತೆ, ಮಾವ ಅಂದ್ರೆ ತುಂಬಾ ಬೆಲೆ. ಅವರು ಬಂದ್ರು ಅಂದ್ರೆ ನಾವು ಅಲ್ಲಿ ನಿಂತುಕೊಳ್ತಾ ಇರಲಿಲ್ಲ. ದೊಡ್ಡವರಿಗೆ ಬಹಳ ಮರ್ಯಾದಿ ಇತ್ತು. ಅವರು ಹೇಳೋರು, 'ಬೇರೆ ಕಡೆಯಿಂದ ಬಂದಿದಾಳೆ ಹುಡುಗಿ. ಅವಳನ್ನು ನೋಡಿಕೊಳ್ಳಿ, ಅವಳಿಗೆ ತಿಂಡಿಕೊಡಿ' ಅಂತ. ಆಗ ನಮ್ಮ ಓರಗಿತ್ತೀರೂ ಸಹ ತುಂಬಾ ಸಹಕಾರ ಕೊಡ್ತಿದ್ರು. ನಮ್ಮ ಅತ್ತೆ ಮಾವಂಗೆ ಐದು ಜನ ಗಂಡು ಹಾಗೂ ಎರಡು ಹೆಣ್ಣು. ಓದಿದವರು ಅಂದ್ರೆ ಇವರೇ. B.E. ಮಾಡಿ R.V. ಇಂಜಿನಿಯರಿಂಗ್ ಕಾಲೇಜಿನಲ್ಲಿ Mechanical departmentನಲ್ಲಿ professor ಆಗಿ ಕೆಲಸ ಮಾಡ್ತಿದ್ರು. ನಮ್ಮ ಮದುವೆಯಾದ ಹೊಸದರಲ್ಲಿ ಎರಡು ವರುಷ ಇಲ್ಲಿದ್ದೆ. ಆವಾಗವಾಗ ಬರ್‍ತಿದ್ವಿ. ನಂತರ ಇವರು ಬೆಂಗಳೂರಿನಲ್ಲಿ ಮನೆ ಮಾಡಿದ್ರು. ನಂತರ ಅಲ್ಲಿಗೆ ಹೊರಟುಹೋದ್ವಿ.

- **ಆಗಿನ ಸಂದರ್ಭದಲ್ಲಿ ಹೊಸಹಳ್ಳಿಯ ಕೃಷಿ ಪರಿಸ್ಥಿತಿ ಹೇಗಿತ್ತು?**

ಬಹಳ ಬಡತನ. ಈಗಿನ ಹಾಗೆ ಏನೂ ಇರಲಿಲ್ಲ. ಎತ್ತು ಇಟ್ಟುಕೊಂಡಿದ್ರು. ಶಿವಮೊಗ್ಗದ ಹತ್ತಿರವಿದ್ದುದರಿಂದಲೇನೋ ಇಲ್ಲಿ ಚೆನ್ನಾಗಿ ಬೆಳವಣಿಗೆ ಆಯ್ತು. ನನ್ನ ಭಾವನವರು ಕೇಶವಮೂರ್ತಿಯವರು, ಎರಡೂ ಮನೆಯ ವ್ಯವಹಾರ ನೋಡಿಕೊಳ್ತಿದ್ರು. ಇಲ್ಲಿ ಕೆಲಸಗಾರರ ಸಮಸ್ಯೆಯಿತ್ತು.



ವಿಜಯಕೃಷ್ಣಮೂರ್ತಿ-ಪ್ರೊ.ಎಚ್.ಆರ್.ಕೃಷ್ಣಮೂರ್ತಿ:ಹಳ್ಳಿಗೆ ಹಿಂದಿರುಗಿದ ಕೃಷಿಕರು: ಹೊಸಹಳ್ಳಿ

- **ನಿಮ್ಮ ತಂದೆಯವರ ದೈಹಿಕ ಶ್ರಮ ಗಮನಿಸಿದ್ದ ನೀವು, ಇಲ್ಲಿನ ವ್ಯವಸಾಯ ನೋಡಿದಾಗ ಏನನ್ನಿಸಿತು?**

ನನಗೆ, 'ಅಯ್ಯೋ! ಸರಸರನೆ ಹೋಗಿ ನಾವೇ ಯಾಕೆ ಕೆಲಸ ಮಾಡಬಾರದು? ಯಾಕೆ ಇವರುಗಳು ಇಷ್ಟೊಂದು depend ಆಗಿದಾರೆ. ಈ dependency ಅನ್ನೋದು ಎಷ್ಟು ಕಷ್ಟ' ಅನ್ನಿಸ್ತಿತ್ತು. But ಅವರಿಗೆಲ್ಲಾ ವಯಸ್ಸಾಗಿದೆ ಅಂತ ಇನ್ನೊಂದು ಮನಸ್ಸು ಹೇಳ್ತಿತ್ತು.

- **ಇಲ್ಲಿ ತೋಟದಲ್ಲಿ ವೇದಾಭ್ಯಾಸ ನಡೀತಿತ್ತಾ?**

ಸಾಧಾರಣವಾಗಿ, ನಮ್ಮ ಮಾವನವರಾಗಲಿ, ಈ ಊರಿನ ವೇದಪಂಡಿತರಾಗಲಿ ತೋಟಕ್ಕೆ ಹೋಗುವಾಗ ಸ್ವಲ್ಪ ಬಾಯಲ್ಲಿ ಹೇಳಿಕೊಂಡು ಹೋಗೋದು, ತೋಟದಲ್ಲಿ ಒಂದು ಸುತ್ತು ಸುತ್ತಿ ವೇದವನ್ನು ಅಭ್ಯಾಸ ಮಾಡುವುದು ಮಾಡ್ತಿದ್ರು. ಸುಶ್ರಾವ್ಯವಾದ ವೇದವನ್ನು ಕೇಳಿದಾಗ ತುಂಬಾ ಸಂತೋಷ ಆಗ್ತಿತ್ತು. ನಮ್ಮ ಮನೇನಲ್ಲಿ ಯಾವಾಗಲೂ ವೇದಪಾರಾಯಣ ನಡೀತಿತ್ತು. ದೇವೀ ಪಾರಾಯಣ ನಡೀತಿತ್ತು. ನಮ್ಮ ಮಾವನವರು ಅದರಲ್ಲೆಲ್ಲಾ ಗಟ್ಟಿಗರು.

- **ನಿಮ್ಮ ಮಾವನವರ ಮನೆಯಲ್ಲಿ ವ್ಯವಸಾಯಕ್ಕೆ ಹೆಣ್ಣುಮಕ್ಕಳ ಕೊಡುಗೆ ಏನು?**

ಹಾಗೆಲ್ಲಾ ತೋಟಕ್ಕೆ ಹೋಗುವುದು ಇರಲಿಲ್ಲ. ಇಲ್ಲಿ ಎಲ್ಲಾ ಪುರುಷಪ್ರಧಾನ ಅಂತ ಹೇಳಬಹುದು. ಯಾಕೇಂದ್ರೆ ಈಗ ನಾನು ಬಂದ ಮೇಲೆ ನಾನು ಯಾವತ್ತಾದರೂ ಒಂದೊಂದು ದಿನ ತೋಟಕ್ಕೆ ಹೋದರೆ, ಇಲ್ಲಿನ ಜನರು 'ಏನಿದು, ಇವರು ತೋಟದ ಕೆಲಸಕ್ಕೆ ಹೋಗ್ತಿದಾರಲ್ಲ' ಅಂತ ನೋಡ್ತಾರೆ. ಆದರೆ ನಾನು ಹೋಗ್ತಿದ್ದುದು ತೋಟಾನ ಬರೀ ನೋಡೋದಕ್ಕೆ ಮಾತ್ರ, 'ಗಿಡಗಳ ಸ್ಥಿತಿ ಹೇಗಿದೆ, ಏನಾದ್ರೂ ಖಾಯಿಲೆ ಇದೆಯಾ' ಇದನ್ನಾದ್ರೂ ನೋಡಬೇಕಾದ್ದು ನಮ್ಮ duty. ನಾನು ಹೋಗಲೇಬೇಕು ಅಂತ ನನಗೆ. ಆದ್ರೆ ನನ್ನ ಮನೆಯವರು ಮಾತ್ರ ತೋಟಾನ ತುಂಬಾ ಚೆನ್ನಾಗಿ ನೋಡ್ಕೋತಾರೆ. ಮಕ್ಕಳಿಗಿಂತ ಚೆನ್ನಾಗಿ ಗಿಡಗಳನ್ನು ನೋಡಿಕೊಳ್ತಾರೆ.

- **ನಿಮಗೆ ವ್ಯವಸಾಯದಲ್ಲಿ ಚಿಕ್ಕಂದಿನಿಂದ ಆಸಕ್ತಿ ಇತ್ತು ಅಂತ ಹೇಳಿದ್ರಿ. ತಂದೆ ತಾಯಂದಿರ ಬಲವಂತಕ್ಕೆ ಒಪ್ಪಿ ನೀವು ಮದುವೆಯಾದ್ರಿ. ಆದ್ರೆ ನಿಮಗೆ ರೈತನನ್ನು ಮದುವೆಯಾಗುವ ಆಸೆ ಇರಲಿಲ್ವಾ?**

  ಹಾಗೇನಿಲ್ಲ. ನನಗೆ ಆಗಿನ ೧೫, ೧೬ ವರುಷದ ವಯಸ್ಸಿನಲ್ಲಿ ಅದೆಲ್ಲಾ ಗೊತ್ತಾಗ್ತಾ ಇರಲಿಲ್ಲ (ನಗು). ಯಾವ ಆಸೆ, ಅನಿಸಿಕೆಗಳೂ ಮೊಳೆಯುವ ವಯಸ್ಸಲ್ಲ, ಅದು.

- **ಅನಿವಾರ್ಯವಾಗಿ ಬೆಂಗಳೂರಿನ ಜೀವನಕ್ಕೆ ಒಗ್ಗಿಕೊಂಡ್ರಾ? ಅಥವಾ ಆ ಪಟ್ಟಣದ ಜೀವನ ಇಷ್ಟವಾಯ್ತಾ?**

  ಅನಿವಾರ್ಯವಾಗಿಯೇ ಒಗ್ಗಿದ್ದು ಅದು. ಮಕ್ಕಳ ವಿದ್ಯಾಭ್ಯಾಸ ಆಗುವ ಕಾಲದಲ್ಲಿ ನಾನೂ engage ಆಗಿರ್ತಿದ್ದ ಕಾರಣ ನನಗೆ ಅಲ್ಲಿಯದು ಅಷ್ಟಾಗಿ ಗೊತ್ತಾಗ್ತಾ ಇರಲಿಲ್ಲ. ಮಕ್ಕಳು ಅವರವರ ಕಾಲ ಮೇಲೆ ನಿಂತು ಹಕ್ಕಿ ಹಾರಿದ ಮೇಲೆ, ನಾವು ಮನೇಲಿ ಇಬ್ಬರೇ ಆಗಿಬಿಟ್ವಿ. ಆಗ ಇಲ್ಲಿದ್ದು ಏನು ಮಾಡಬೇಕು? ಇವರಿಗೂ retire ಆಯ್ತಲ್ಲಾ-ಇಲ್ಲೀ ಜೀವನ ಸಾಕು ಅನ್ನಿಸ್ತು. ಆದ್ರೂ R.V.ಕಾಲೇಜಿನಲ್ಲಿ ಮತ್ತೆ ಕರೆದು ಐದು ವರುಷ ಸೇವೆಗೆ ಅವಕಾಶ ನೀಡಿದ್ರು. ನಾನು ಯಜಮಾನರಿಗೆ ಹೇಳಿದೆ. 'ಇಷ್ಟು ವರುಷ ಗಂಟಲ ಶೋಷಣೆ ಆಗಿರೋದು ಸಾಕು, ಊರಿಗೆ ಹೋಗೋಣ. ಪರಿಸರ ಚೆನ್ನಾಗಿದೆ. ನಮ್ಮವರು ಇದಾರೆ. ಅವರ ಜತೆ ಸೇರಿ ಇರೋಣ. ನಮಗೆ ವಯಸ್ಸಾಯ್ತು, ಸ್ವಲ್ಪ ದೇವರು ದಿಂಡ್ರು ಇದರ ಬಗ್ಗೆ ಚಿಂತನೆ ಮಾಡೋಣ' ಅಂತ ನಾನೇ pressure ಹಾಕಿದೆ.

- **ನಿಮ್ಮ ಯಜಮಾನರಿಗೆ ಇಲ್ಲಿ ಜಮೀನಿತ್ತಾ?**

  ಇತ್ತು. ಅವರ ಪಿತ್ರಾರ್ಜಿತವಾದ ಆಸ್ತಿ ಮೂರು ಎಕರೆಯಷ್ಟು ಇತ್ತು. ಗಮಕದಲ್ಲಿ ರಾಜ್ಯಪ್ರಶಸ್ತಿಗಳಿಸಿರುವ ನನ್ನ ಭಾವನವರು ಕೇಶವಮೂರ್ತಿಗಳು ನಮ್ಮ ಜಮೀನನ್ನು ನೋಡಿಕೊಳ್ತಿದ್ರು. ನಾವು ಇಲ್ಲಿಗೆ ಬಂದಾಗ ಜಮೀನನ್ನು ಸರಾಗವಾಗಿ ಬಿಟ್ಟುಕೊಟ್ರು. 'ನಿಮ್ಮ ಜಮೀನನ್ನು ತೊಗೊಳ್ಳಿ' ಅಂತ ಅವರು ತುದಿಗಾಲಲ್ಲಿ ನಿಂತಿದ್ರು.

- **ವ್ಯವಸಾಯದಲ್ಲಿ ನಿಮ್ಮ ಯಜಮಾನರಿಗೆ ಅನುಭವ ಹ್ಯಾಗೆ?**

  ಆಗಾಗ ಇಲ್ಲಿಗೆ ಬಂದಾಗ ತೋಟ, ಜಮೀನು ನೋಡ್ತಾ ಇದ್ರು. ಅವರಿಗೂ interest ಇತ್ತು. ಮತ್ತೊಂದು ಅಂಶ ಅಂದ್ರೆ ಅವರ ಅಣ್ಣನೂ ವಯಸ್ಸಾದವರು. ಎಲ್ಲರ ಜಮೀನು ನೋಡಿಕೊಳ್ಳೋದು ಅವರಿಗೂ ಕಷ್ಟ. Retire ಆದ ಮೇಲೆ ನಮ್ಮದನ್ನು ನಾವು ನೋಡಿಕೊಂಡು ಅವರ ಶ್ರಮ ಹಗುರ ಮಾಡೋಣ ಅನ್ನುವ ವಿಚಾರವೂ ಇತ್ತು. ಹಾಗೇ ಅವರಿಗೆ ಸಹಾಯ ಮಾಡೋಣ ಅನ್ನುವ ಮನೋಭಾವವೂ ಇತ್ತು.

- **ವಾಪಸ್ಸು ಇಲ್ಲಿಗೆ ಬಂದ ಮೇಲೆ ನೀವು, ನಿಮ್ಮ ಯಜಮಾನರು ಏನು ಕೆಲಸ ಮಾಡ್ತಿದೀರ?**

  ಸ್ವಲ್ಪ ಜಮೀನು ಖರೀದಿ ಮಾಡಿದ್ರು. ಅದಕ್ಕೆಲ್ಲಾ ಸಸಿಗಳನ್ನು ಹಾಕಿಸಿದ್ರು. ಒಂದೂಕಾಲು ಎಕರೆ ವಿಸ್ತೀರ್ಣ ಇತ್ತು. ಮುಂಚೆ ಅದು ಗದ್ದೆಯಾಗಿತ್ತು. ಅದನ್ನು ತೋಟವಾಗಿ convert ಮಾಡಿ, ಅಡಿಕೆ ನೆಡಿಸಿದ್ರು. ಬಾಳೆ ಹಾಕಿಸಿದ್ರು ಈಗ್ಗೆ ಮೂರು ವರುಷದ ಹಿಂದೆ.

- **ಮಕ್ಕಳಲ್ಲಿ ಯಾರನ್ನಾದ್ರೂ ಒಬ್ಬನನ್ನು ವ್ಯವಸಾಯಸ್ಥನನ್ನಾಗಿ ಮಾಡುವ ಆಸೆ ಇರಲಿಲ್ಲವಾ?**

  ನನಗೇನೋ ಬಹಳ ಆಸೆ ಇತ್ತು. ಆದ್ರೆ ಯಾರು ಕೇಳ್ತಾರೆ, ಈ ಕಾಲ? ಹೇಳ್ತಾ ಹೇಳ್ತಾ ಒಬ್ಬ doctor, ಮತ್ತೊಬ್ಬ engineer ಆದ. ನಾವು ಯಾರನ್ನು 'ಬಾ' ಅನ್ನೋದು? ಇವನ್ನ ಕರೆದ್ರೆ ಅವನಿಗೆ ಕೋಪ, ಅವನ್ನ ಕರೆದ್ರೆ ಇವನಿಗೆ ಕೋಪ. mostly ಯಾರೂ ಬರೋಮಟ್ಟಿಗೆ ಕಾಣೆ.

- **ಈಗ ನೀವು ಇಷ್ಟು ಪ್ರೀತಿಯಿಂದ ಮಾಡ್ತಿರೋ ವ್ಯವಸಾಯವನ್ನು ಮುಂದುವರಿಸುವವರು ಯಾರು?**

  ಕಾದು ನೋಡಬೇಕು ಅಷ್ಟೆ. Doctor ಆಗಿರೋ ಮಗನಿಗೆ ಆಸಕ್ತಿ ಇದೆ. ಇಲ್ಲಿ ಬಂದಾಗ ಅವರ ಅಪ್ಪನ ಜತೆ ತೋಟಕ್ಕೆ ಹೋಗ್ತಾನೆ. Phone ಮಾಡಿದಾಗಲೆಲ್ಲಾ ತೋಟದ ಬಗ್ಗೆ ವಿಚಾರಿಸ್ತಾನೆ.

- **ನಿಮ್ಮ ಸೊಸೆಯಂದಿರು ಹ್ಯಾಗೆ? ಅವರಿಗೆ ಆಸಕ್ತಿ ಇದೆಯಾ?**

  (ನಗು)... ಇಲ್ಲಾ, ಖಂಡಿತಾ ಇಲ್ಲ. ನನಗೇ ಗಲಾಟೆ ಮಾಡ್ತಾರೆ, 'ಯಾಕೆ ಸುಮ್ಮನೆ ಒದ್ದಾಡ್ತೀರಿ. ಸುಮ್ಮನೆ ಇರಿ' ಅಂತ. ಆದ್ರೆ ನನ್ನ

personal interest ಇದು. ಯಾರ ಬಲವಂತವೂ ಇಲ್ಲ, ನನಗೆ. ನನಗೆ ಇಷ್ಟವಾಯ್ತು, ನಾನು ತೋಟಕ್ಕೆ ಹೋಗ್ತೀನಿ. ಇದು ನನ್ನಪ್ಪನಿಂದ ಬಂದ ಬಳುವಳಿ ಅನ್ನಿಸುತ್ತೆ.

- **ನಿಮ್ಮ ವ್ಯವಸಾಯದ ಗ್ರಹಿಕೆ ಹೇಗೆ? ಯಾವ ರೀತಿ ಅಡಿಕೆ ತೋಟ ನೋಡಿಕೋಬೇಕು ಅಂತೀರಿ?**
ಕಳೆ ಬಂದಾಗ ತೆಗೆಸಬೇಕು. ಅಗೆತ ಮಾಡಬೇಕು. ಅದಕ್ಕೆ ವರುಷಕ್ಕೆ ಎರಡು ಬಾರಿಯಾದ್ರೂ ಗೊಬ್ಬರ ಕೊಡಬೇಕು. ಇಲ್ಲಿ ಸೀಮೆಗೊಬ್ಬರ ಕೊಡ್ತಾರೆ. ಆದ್ರೆ ಕೊಟ್ಟಿಗೆ ಗೊಬ್ಬರ the best. ನಮ್ಮ ಜಮೀನಿನಲ್ಲಿ ನಮಗೆ ಬಿಟ್ಟುಕೊಟ್ಟಾಗ ಆ ವರುಷ bumper crop. ಎರಡು ವರುಷ ನನ್ನ ಮಟ್ಟಿಗೆ ಕಂಡೇ ಇಲ್ಲದಷ್ಟು crop. ನಾಲ್ಕು ಲಕ್ಷ ಬಂತು. ನನಗೆ ಆಶ್ಚರ್ಯ. ಇದೇನಿದು, ಮೂರು ಎಕರೆ, ನಾಲ್ಕು ಲಕ್ಷ. ಅಬ್ಬಾ ಅಂತ. ಆ ದೃಷ್ಟಿಯಿಂದ ಇನ್ನೂ ಒಂದೂ ಕಾಲು ಎಕರೆ ಖರೀದಿ ಮಾಡಿದ್ವಿ.

- **ಉಳಿತಾಯ ಎಷ್ಟು ಮಾಡಿದಾರೆ ನಿಮ್ಮ ಯಜಮಾನರು?**
(ನಗು) .... ಸುಮಾರು ೧೦/೧೫ ಲಕ್ಷ. ಬೆಂಗಳೂರಿನಲ್ಲಿ ಮನೆ ಕಟ್ಟಿದಾರೆ . . ಇಲ್ಲಿ ಯಜಮಾನರೇ ನಿಂತು ಮನೆ ಕಟ್ಟಿಸಿದಾರೆ. ಯಾವುದಾದ್ರೂ ಅಷ್ಟೆ - ನಮ್ಮ ಮನೆ ಕೆಲಸ ನಾವು ಮಾಡಬೇಕು, ನಮಗಾಗದಾದಾಗ ಬೇರೆಯವರ ಹತ್ರ ಮಾಡಿಸಬೇಕು, ಅನ್ನುವುದು ನಮ್ಮ ತತ್ತ್ವ. ನಾವು ಕೆಲಸ ಮಾಡದಿದ್ರೆ ಕೀಳು ಅನ್ನುವ ಭಾವನೆ ಬಂದು ಬಿಡೋದು; ಏನಿದು, ಕೈಲಾಗದವರ ಹಾಗೆ ಕುಳಿತಿರೋದು ಅಂದ್ರೆ ಏನರ್ಥ ಅಂತ ನನ್ನ ಮನಸ್ಸಿಗೆ ಬರೋದು. ನಾವಿರೋದು ಕೆಲಸ ಮಾಡೋದಕ್ಕೆ. ಕರ್ಮ ಮಾಡೋದಕ್ಕೇ ನಾವು ಹುಟ್ಟಿರೋದು. ಕೈಲಾಗದ್ದನ್ನು ಮಾಡೋದು ಬೇಡ. ನಮ್ಮ ಕೆಲಸ ನಾವು ಮಾಡಬೇಕು.

- **ಇತ್ತೀಚೆಗೆ ಹೆಣ್ಣುಮಕ್ಕಳು ವ್ಯವಸಾಯದ ಬಗ್ಗೆ ಆಸಕ್ತೀನ ಕಳೆದುಕೊಳ್ತಾ ಇರೋದು ಮತ್ತೆ ಹೆಣ್ಣುಮಕ್ಕಳು ಹಳ್ಳಿ ಕಡೆ ಇರುವ ಹುಡುಗನ್ನ ಮದುವೆಯಾಗದೇ ಇರೋದು ಸಂಕೇತಿ ಕೃಷಿ ಕ್ಷೀಣಿಸೋದಕ್ಕೆ ಕಾರಣ ಅನ್ನಲಾಗ್ತಿದೆ? ಹೆಣ್ಣುಮಗಳಾಗಿ ನೀವು ಏನು ಹೇಳ್ತೀರಿ?**
ಖಂಡಿತಾ ನನಗೆ ಹಾಗೆ ಅನ್ನಿಸೋಲ್ಲ. ಅವರುಗಳು ಹಳ್ಳಿ ಕಡೆ ಬಂದು ಇಲ್ಲಿಯದನ್ನು ನೋಡಬೇಕು. ಕೊನೆಯ ಪಕ್ಷ ಒಂದು ತಿಂಗಳು ಇಲ್ಲಿನ ಜೀವನವನ್ನು ಅಳವಡಿಸಿಕೊಳ್ಳಬೇಕು. ಹಾಗೇ city ಜೀವನಾನೂ ಅವರು ನೋಡಬೇಕು. ಅಲ್ಲೀ ಜೀವನ ಹಾಗೂ ಇಲ್ಲೀ ಜೀವನದ ಬಗ್ಗೆ ವ್ಯತ್ಯಾಸ ತಿಳಿದಾಗ ಮಾತ್ರ, ನಿಜಸ್ಥಿತಿ ಅರಿವಾಗುತ್ತೆ. ಇವತ್ತು ಹಳ್ಳಿಗೆ ಹೆಣ್ಣುಮಕ್ಕಳು ಖಂಡಿತಾ ಬರ್ತಾ ಇದಾರೆ. ಎಲ್ಲರಿಗೂ ಆಸಕ್ತಿ ಬಂದಿದೆ.

- **ನಿಮ್ಮ ಮಕ್ಕಳು ರೈತರಾಗಿದ್ದರೆ, ಈಗ ನೀವು ಹೆಣ್ಣು ತಂದಿರುವ ಕಡೆ ನಿಮಗೆ ಹೆಣ್ಣು ಸಿಕ್ತಿತ್ತು ಅನ್ನುವ ನಂಬಿಕೆ ನಿಮಗಿದೆಯಾ?**
ಅದು ಹೇಳಲು ಆಗೋದಿಲ್ಲ. ಆವಾಗ ಓದದೇ ಇರುವ ಹುಡುಗೀನೆ ಬರ್ತಾ ಇದ್ದಳೋ ಏನೋ. ಈಗ ಓದಿರುವ ಹುಡುಗಿ ಬಂದಿರೋದ್ರಿಂದ, ಊಹೆ ಮಾಡೋಕೆ ಆಗೋದಿಲ್ಲ.

- **ವ್ಯವಸಾಯದ ಅಭಿವೃದ್ಧಿಯಲ್ಲಿ ಹೆಣ್ಣುಮಕ್ಕಳ ಪಾತ್ರ ಏನು ಅನ್ನಿಸುತ್ತೆ? ಅದೂ ಇಲ್ಲಿನ ಪುರುಷಪ್ರಧಾನ ಸಮಾಜದಲ್ಲಿ?**
ಇಲ್ಲಿ ಏನಿದ್ರೂ ಗಂಡ ಹೇಳಬೇಕು, ಹೆಂಡತಿ ಕೇಳಬೇಕು. ಆದ್ರೆ ಹೆಂಡತಿ ಸರಿಯಾಗಿ ಹೇಳಿದ್ದನ್ನು ಗಂಡ ಕೇಳಬಾರದು ಅಂತ ಇಲ್ಲ. ಅಲ್ವಾ? ಹಾಗೆ ಹೇಳಿದ್ದನ್ನು implement ಮಾಡೋದ್ರಲ್ಲಿ ಯಾವ ತಪ್ಪೂ ಇಲ್ಲ. ಇಲ್ಲೂ ಈಗೀಗ ಹಿಂದಿನ ಪರಿಸ್ಥಿತಿ ಹೋಗ್ತಾ ಇದೆ. ನನಗಂತೂ ಹೆಂಗಸರದ್ದು ಸ್ವಲ್ಪ ಮೇಲೆ ಬರುವ ಹಾಗೆ ಕಾಣ್ತಾ ಇದೆ. ಹೆಣ್ಣುಮಕ್ಕಳು ಎಲ್ಲರೂ ಅಷ್ಟೇನೆ . . .. . ಗಂಡಂದಿರಿಗೆ ಚೆನ್ನಾಗಿ encourage ಕೊಡ್ತಾರೆ. ಕೃಷಿ ಆಗಲಿ, ಹೊರಗಿನ ಕೆಲಸವಾಗಲಿ ಎಲ್ಲರೂ ಮಾಡ್ತಾರೆ.

- **ನಿಮಗೆ ಹೆಣ್ಣುಮಕ್ಕಳಿದ್ರೆ ನೀವು ವ್ಯವಸಾಯಸ್ಥನಿಗೆ ಕೊಡ್ತಿದ್ರಾ?**
ಖಂಡಿತಾ ಕೊಡ್ತಿದ್ದೆ. ನನಗಂತೂ ಬಹಳ ಇಷ್ಟ. ವ್ಯವಸಾಯಸ್ಥನಿಗೆ ಕೊಟ್ಟು, ಅವಳಿಗೆ ಒಂದು ಹತ್ತು, ಹದಿನೈದು ಎಕರೆ ಮಾಡಿಟ್ಟು ಬಹುಶಃ ನಾನು ಕಣ್ಣು ಮುಚ್ಚಿಕೊಳ್ತಾ ಇದ್ದೆನೇನೋ. ಆ ಆಸೆ ಇತ್ತು ನನಗೆ. ನನಗೆ ಹೆಣ್ಣಾಗಲಿಲ್ಲ ನೋಡಿ.

- **ನಿಮ್ಮ ಯಜಮಾನರ ಅಣ್ಣ ತಂಗೀರಿಗೆ, ನಿಮ್ಮ ಅಕ್ಕ ತಂಗೀರಿಗೆ ಹೆಣ್ಣುಮಕ್ಕಳು ಇರಬೇಕಲ್ವಾ? ಅವರೆಲ್ಲಾ ಯಾರಿಗೆ ಕೊಟ್ಟಿದಾರೆ?**
ಕೆಲವರು ಕೃಷಿಕರಿಗೆ . . ಕೆಲವರು ಇತರರಿಗೆ ಕೊಟ್ಟಿದ್ದಾರೆ. ನಂಗೇನೋ ನಮ್ಮ ದೇಶ ಉದ್ಧಾರ ಆಗಬೇಕಾದ್ರೆ ಕೃಷಿ very important

ಅಂತ ಅನ್ನಿಸುತ್ತೆ. ಪೇಟೆ ಆಕರ್ಷಣೆ ಸಹಜವಾಗಿದೆ ಅಂತ ಅನ್ನಿಸುತ್ತೆ. ನನ್ನ ಮನೆ ನಾನು ಚೆನ್ನಾಗಿ ನೋಡಿಕೋಬೇಕು... ನನ್ನ ಊರನ್ನು ನಾನು ಚೆನ್ನಾಗಿ ಕಟ್ಟಿಕೊಂಡಾಗ ಮಾತ್ರ ದೇಶ ಕಟ್ಟಲು ಸಾಧ್ಯ ಅನ್ನುವ ನಂಬಿಕೆ ಇರುವವಳು. ಮಕ್ಕಳು ಓದಬೇಕು.... ಆದರೆ ಕೃಷಿ ಬಗ್ಗೆ ಸಣ್ಣ ಮಾತನಾಡಿದ್ರೆ ನನಗೆ ಬಹಳ ಸಿಟ್ಟು ಬರುತ್ತೆ. ಕೃಷಿ ಇದ್ದರೆ ತಾನೆ ಬದುಕು? ಕೃಷಿಯಂಥ ಒಳ್ಳೆಯ ಕೆಲಸ ಮತ್ತೊಂದಿಲ್ಲ. ಬೇರೆಯವರಿಗೆ ಕೈಮುಗಿಯಬೇಕಿಲ್ಲ... ಸ್ವತಂತ್ರವಾದ ಕೆಲಸ. ನಾವು ಎಷ್ಟು ಭೂಮಿ ತಾಯಿಗೆ ಹಾಕ್ತೀವೋ ಅವಳು ಅಷ್ಟು ನಮಗೆ ಕೊಡ್ತಾಳೆ. ನನ್ನ ಮಕ್ಕಳೂ ಸಹ ಅಷ್ಟೆ. ಮುಂದೆ ಅವರು ಹಳ್ಳಿಗೆ ವಾಪಸ್ಸು ಬಂದ್ರೆ ಸಂತೋಷ ಪಡ್ತೀನಿ. ಬರದೇ ಇದ್ದಾಗ ... ಆಸ್ತಿಯ ಸ್ವಲ್ಪ ಭಾಗಾನ ಅವರ ಅಪ್ಪ ಅಮ್ಮನ ಹೆಸರಿನಲ್ಲಿ ದಾನ ಮಾಡಲಿ ಅಂತ ಆಸೆ ಇದೆ ನನಗೆ. ನಾವು ಇರೋವರೆಗೆ ಕೃಷಿ ಮಾಡಿ, ಬಂದ ಉತ್ಪತ್ತೀನಲ್ಲಿ ಕೆಲಭಾಗ ದಾನಧರ್ಮ ಮಾಡಬೇಕು ಅಂತ ಇದೆ.

- *ಒಳ್ಳೆಯದು ತಾಯಿ, ನಮಸ್ಕಾರ*

ನಮಸ್ಕಾರ.

ನಂತರ ಕೃಷ್ಣಮೂರ್ತಿಗಳು ಬಂದರು. 'ನನ್ನ ಹೆಂಡತಿ ಹೇಳಿದ ಮೇಲೆ ಎಲ್ಲಾ ಹೇಳಿರ್ತಾಳೆ... ಮತ್ತೆ ನಾನೇನೂ ಹೇಳುವುದು ಬೇಡ' ಅಂದರು. ಕೃಷಿಯ ಬಗ್ಗೆ ಈ ದಂಪತಿಗಳಿಗಿದ್ದ ಒಲವೇ ಮತ್ತೆ ಈ ದಂಪತಿಗಳನ್ನು ಇಲ್ಲಿಗೆ ಕರೆ ತಂದಿದೆ ಎನ್ನುವ ವಿಚಾರದಲ್ಲಿ ಸಂದೇಹವಿರಲಿಲ್ಲ. ಸಂತೃಪ್ತಿ ಆ ಹಿರಿಯ ಜೀವಗಳಲ್ಲೂ ಇತ್ತು.

ಇ) ಎಚ್.ರಾಮಣ್ಣ ಇ/ಮ ವೆಂಕಟರಮಣಾವಧಾನಿ
ಹೊಸಹಳ್ಳಿ, ಶಿವಮೊಗ್ಗ, ದೂರವಾಣಿ : 08182 237865


ಇದು ಬೆಳೆದವರ ಹೆಮ್ಮೆ:ಹೊಸಹಳ್ಳಿಯ ಎಚ್.ರಾಮಣ್ಣ ಅವರು

ನಮ್ಮಜ್ಜ, ಮುತ್ತಜ್ಜ ದಿನದ ೨೪ ಘಂಟೆ ವರುಷದ ೩೬೫ ದಿನಾನೂ ತೋಟದಲ್ಲೇ ಇರ್ತಿದ್ರು. ಆ ಕಾಲದಲ್ಲಿ ಒಂದು ದಿನ ತೋಟಕ್ಕೆ ಹೋಗದಿದ್ರೆ ಅವತ್ತಿನ ಅನ್ನ ಇರ್ತಿರಲಿಲ್ಲ. ಹಗಲು ರಾತ್ರಿ ತೋಟದಲ್ಲಿಯೇ ಇರ್ತಿದ್ರಿಂದ, ಎಲ್ಲವನ್ನೂ ರಕ್ಷಣೆ ಮಾಡಲು ಆಯ್ತು.

ಹೊಸಹಳ್ಳಿಯ ವೆಂಕಟರಮಣಾವಧಾನಿ ಹಾಗೂ ಚನ್ನಮ್ಮ ದಂಪತಿಗಳಿಗೆ, ನಾಲ್ಕು ಗಂಡು ಹಾಗೂ ಒಂದು ಹೆಣ್ಣು. ಎರಡನೆಯ ಮಗನೇ ಎಚ್.ರಾಮಣ್ಣ. ರಾಮಣ್ಣನವರು ಕೈಹಿಡಿದದ್ದು ಹೊಸಹಳ್ಳಿಯ ವೆಂಕಟೇಶಾವಧಾನಿ ಹಾಗೂ ಅನ್ನಪೂರ್ಣಮ್ಮ ದಂಪತಿಗಳ ಮಗಳು ಶಾಂತಮ್ಮನವರನ್ನು. ರಾಮಣ್ಣನವರಿಗೆ ೭೨ರ ಹರಯ. ಬಿರುಬೇಸಿಗೆಯಲ್ಲಿ . . ಮಧ್ಯಾಹ್ನ ಇವರ ಮನೆಗೆ ಹೋದಾಗ ಹಾಯಾಗಿ ಮಲಗಿ ದಣಿವಾರಿಸಿಕೊಳ್ಳುತ್ತಿದ್ದರು, 'ಬನ್ನಿ ಬನ್ನಿ' ಎಂದು ಎದ್ದು ಸ್ವಾಗತಿಸಿದರು. ಇತ್ತೀಚೆಗಷ್ಟೆ ಶುಭಕಾರ್ಯ ನಡೆದದ್ದರ ಕುರುಹಾಗಿ ಮನೆ ಮುಂಬಾಗಿಲಿನಲ್ಲಿ ಚಪ್ಪರವಿತ್ತು. ನೇರವಾಗಿ ರಾಮಣ್ಣನವರ ಜತೆ ಮಾತಿಗಿಳಿದೆವು.

- **ನಮಸ್ಕಾರ ರಾಮಣ್ಣನವರೆ . . .**

ನಮಸ್ಕಾರ.

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ . . .**

ನಮ್ಮಜ್ಜ ವೆಂಕಟೇಶ ಅವಧಾನಿ ಇಲ್ಲೇ ಇದ್ದಿದ್ದು. ನಮ್ಮಜ್ಜಿ ಲಕ್ಷ್ಮೀದೇವಮ್ಮ ಮತ್ತೂರಿನವರು. ಅವರಿಗೆ ಬಹಳ ಕಾಲ ಮಕ್ಕಳಾಗಲಿಲ್ಲವಂತೆ.



ಶಾಂತಮ್ಮ-ಎಚ್.ರಾಮಣ್ಣ ದಂಪತಿ:ಹೊಸಹಳ್ಳಿ

ಆಗ ಆ ಕಡೆ ಒಂದು ಮನೆ ಇತ್ತು. ಆ ಮನೇನ ಬಿಟ್ಟು . . . ಏನೋ ಒಂದು ಮೂಢನಂಬಿಕೆ - ಈ ಮನೇಲಿ ವಾಸವಾದ್ರೆ ಮಕ್ಕಳಾಗಬಹುದು ಅನ್ನುವ ದೃಷ್ಟಿಯಿಂದ ಈ ಮನೆಗೆ ಬಂದ್ರು. ಆ ಕಡೆ ೧೨ ಅಡಿ ಅಗಲ, ನೂರಡಿ ಉದ್ದ ಇರುವ ಮನೆ, ಅದು ದನದ ಕೊಟ್ಟಿಗೆ ಹಾಗಿತ್ತು. ಪೂರ ದನಗಳನ್ನು ಸಾಕ್ತಾ ಇದ್ರು. ಇಲ್ಲಿ ಬಂದು ವಾಸವಾದ ಮೇಲೆ ನನ್ನ ತಂದೆ ಹುಟ್ಟಿದ್ರು. ತಂದೆ ಜತೆಗೆ ಇಬ್ಬರು ಹೆಣ್ಣು ಮಕ್ಕಳಾದ್ರು. ತುಂಬಾ ಬಡತನ. ಆದರೆ ಇವರು ಮೊದಲು ತುಂಬಾ ಐಶ್ವರ್ಯವಂತರೇ, ದೊಡ್ಡ ವೃತ್ತಿವಂತರೇ. ಎಲ್ಲವೂ ಹೋಗಿಬಿಡ್ತು. ಬಡತನದಲ್ಲೇ ಕಾಲ ಕಳೆದ್ರು. ನನ್ನ ತಂದೆಯವರು ಒಣಗಿದ ತರಗು ದೊನ್ನೇನ ಮಾರಿ ಮಕ್ಕಳನ್ನು ಸಾಕಿದ್ರು. ಸಾಹುಕಾರರ ಮನೆಗೆ ಹೋಗಿ ಅಡಿಕೆ ಸುಲಿಯೋದು, ಬಂದ ಆದಾಯದಲ್ಲಿ ವಾರವಾರ ಸಾಮಾನು ತಂದು ನಮ್ಮನ್ನು ಸಾಕಿದ್ದು. ನನ್ನ ತಾತನವರ ಜಮೀನು ಹೋದದ್ದು ಯಾವ ಕಾರಣವೋ ಗೊತ್ತಿಲ್ಲ. ನನ್ನ ಅತ್ತೆಯವರ ಮದುವೆ ಕಾಲದಲ್ಲಿ ಜಮೀನು ಮಾರಿದ್ರಂತೆ. ಇಲ್ಲೇ ಮುಳ್ಳುಕೆರೇಲೂ ಜಮೀನಿತ್ತು. ರಾಮಯ್ಯನ ಕೊಪ್ಪದಲ್ಲಿ ತೋಟ ಮಾಡಿದ್ರು. ಅದು ಸರ್ಕಾರಿ ಗ್ರಾಮ. ಬರಗಾಲದಲ್ಲಿ ಆ ತೋಟವೂ ಹೋಯ್ತು. ಆಗಿನ ಕಾಲದಲ್ಲಿ ೮೦ ರೂಪಾಯಿ ಕಂದಾಯ ಕಟ್ಟಲು ಆಗದೇನೇ ಸಂಕ್ಲಾಪುರದ ಜಮೀನನ್ನು ಬಿಟ್ಟುಬಿಟ್ರು. ಈ ಊರಲ್ಲಿ ಎಲ್ಲಾ ವೃತ್ತಿವಂತ್ರೂ ಈಗಿನ ಕಾಲದ ಹಾಗೆ ದೊಡ್ಡ ಹಿಡುವಳೀನ ಮಾಡ್ತಾ ಇರಲಿಲ್ಲ. ಒಂದೊಂದು ಜಮೀನಿನಲ್ಲಿ ೫ ರಿಂದ ೧೦ ಗುಂಟೆ ಊರಿನವರೆಲ್ಲಾ ಹೋಗಿ ಸ್ವತಂತ್ರವಾಗಿ ಎಬ್ಬಿಸೋದು. ತಮ್ಮ ಸ್ವಂತ ಪರಿಶ್ರಮದಿಂದ ತೋಟ ಮಾಡೋದು. ಹೀಗಾಗಿ, ಒಂದೊಂದು ಸರ್ವೆನಂಬರಿನಲ್ಲಿ ಮೂರು ನಾಲ್ಕು ಜನರ ತೋಟ ಇದೆ. ಹಿಂದಿನ ಕಾಲದಲ್ಲಿ ಒಟ್ಟಾಗಿ ವ್ಯವಸಾಯ ಮಾಡ್ತಾ ಇದ್ರು. ಅದೂ ಭಾವೀನ ತೋಡಿ, ಅದ್ರಿಂದ ನೀರನ್ನು ಎತ್ತಿ ಹಾಕಿ ತುಂಬಾ ಕಷ್ಟ ಪಡ್ತಾ ಇದ್ರು. ನಾನು ಕಂಡ ಹಾಗೆ ನಮ್ಮ ತಂದೆ ಕಾಲದಲ್ಲಿ ಸ್ವತಂತ್ರವಾಗಿ ಗುದ್ದಲೀ ತೊಗೊಂಡು ಹೋಗಿ ಅವರೇ ಅಡಿಕೆ ಸಸೀನ ನೆಡೋದು, ಕೈ ತೂಕದಲ್ಲಿ ನೀರನ್ನು ಹಾಕೋದು, ಹೀಗೆ ಮಾಡಿ ತೋಟ ಉಳಿಸಿದ್ರು. ಇಲ್ಲಿ ನಾಲೆ ಬರೋದಕ್ಕಿಂತ ಮುಂಚೆ ೧೯೫೮-೫೯ನೇ ಇಸವೀಲಿ ಬರ ಬಂತು. ಭಾರೀ ಬರ. ತೋಟವೆಲ್ಲಾ ಹೋಗುತ್ತೆ ಅನ್ನುವ ಕಾಲದಲ್ಲಿ, ಇಲ್ಲಿ ತಾಳಿಸುಬ್ಬರಾಯರು ಅಂತ ಹೇಳಿ Electric superintendent ಆಗಿದ್ರು. ಅವರೂ ಸಂಕೇತಿಗಳೇ. ಅವರು ಶಿವಮೊಗ್ಗದಿಂದ ಒಂದೇ ಒಂದು ತಿಂಗಳಲ್ಲಿ current line ತಂದು, ಹೊಳೆಯಿಂದ pumpset ಹಾಕಿಕೊಟ್ರು. ಆಗ ತೋಟ ಉಳೀತು. ಆಗಲೇ ನಮ್ಮ ಊರಿಗೆ current ಬಂದಿದ್ದು. ಆಗ ಒಂದೆರಡು ಸಾಹುಕಾರರು ಮಾತ್ರ current light ಹಾಕಿದ್ರು. ಕ್ರಮೇಣ ನಾಲೇನೂ ಬಂತು, ದೊಡ್ಡ ದೊಡ್ಡ ವ್ಯವಸಾಯ ಪ್ರಾರಂಭವಾಯ್ತು. ಈಗ ನಾವೆಲ್ಲಾ ಮೂರು ನಾಲ್ಕು ಎಕರೆ ತೋಟ ಎಬ್ಬಿಸಿದೀವಿ ಅಂದ್ರೆ ನಮಗೇ ಆಶ್ಚರ್ಯವಾಗುತ್ತೆ. ಆಗ ಐದು, ಹತ್ತು ಗುಂಟೆ ತೋಟ ಎಬ್ಬಿಸೋದಕ್ಕೆ ಎಷ್ಟು ಕಷ್ಟಪಡ್ತಿದ್ರು, ಎಷ್ಟು ಪರಿಶ್ರಮ ಇತ್ತು! ಈಗಿನ ಕಾಲದಲ್ಲಿ ನಾಲ್ಕೈದು ಎಕರೆ ತೋಟವಾದ್ರೂ ಸುಲಭವಾಗಿ ಮಾಡಬಹುದು. ನೀರಿನ ಆಶ್ರಯ ಇದೆ. ಸೌಕರ್ಯ ಇದೆ. ನಾನೇ ಸುಖವಾಗಿ ನಾಲ್ಕು ಎಕರೆ ಹೊಸದಾಗಿ ತೋಟ ಮಾಡಿದೀನಿ. ನನ್ನ ತಂದೆ ಕಾಲದಲ್ಲಿ ಕೇವಲ ಒಂದು ಎಕರೆ ತೋಟ ಇತ್ತು. ಆಗಿನ ಕಾಲದಲ್ಲಿ ೫೦೦/೬೦೦ ರೂಪಾಯಿ ಉತ್ಪತ್ತಿ ಅಷ್ಟೇನೇ. ನಮ್ಮ ಅಣ್ಣ ತಮ್ಮಂದಿರಿಗೆ ಐದು ಸಾವಿರ ಉತ್ಪತ್ತಿ ಇತ್ತು. ಈಗ ಅದೇ ಐದು ಲಕ್ಷ, ಆರು ಲಕ್ಷ ಉತ್ಪತ್ತಿ ಬರುವ ಹಾಗೆ ಆಗಿದೆ.

- **ಪಿತ್ರಾರ್ಜಿತವಾಗಿ ಎಷ್ಟು ಆಸ್ತಿ ಇತ್ತು ನಿಮಗೆ?**

  ಒಂದೇ ಎಕರೆ ತೋಟ. ಇನಾಮು ಗ್ರಾಮ ಹೋದಾಗ ೪೮ನೇ ಒಂದು ಭಾಗ ಉಳಿದಿತ್ತು ಆಸ್ತಿ, ಅಷ್ಟೇ.

- **ತೋಟದಲ್ಲಿ ಏನೇನು ಕೆಲಸ ಮಾಡ್ತಿದ್ರು ನಿಮ್ಮ ತಂದೆ?**

  ಅಗೆತ ಮಾಡೋರು, ನೀರು ಕಪ್ಪುಗಳನ್ನು ತೆಗೆಯೋರು, ಬಾಳೆ ಕಂದು ಹಾಕೋರು, ಅಡಿಕೆ ಸಸಿ ನೆಡೋರು, ಮನೆಯಿಂದ ಗೊಬ್ಬರ

ತೊಗೊಂಡು ಹೋಗೋರು. ಹಿಂದೆ ಗಾಡಿಗಳಲ್ಲಿ ಹೋಗ್ತಾ ಇರಲಿಲ್ಲ. ತಲೆ ಮೇಲೆ ಗೊಬ್ಬರ ತೊಗೊಂಡು ಹೋಗ್ತಾ ಇದ್ರು. ಸ್ವಲ್ಪವೇ ತೋಟ ಆದ್ರಿಂದ, ಒಂದು ತಿಂಗಳು ಓಡಾಡಿದ್ರೆ, ತೋಟಕ್ಕೆ ಬೇಕಾದ ಮಣ್ಣು, ಗೊಬ್ಬರ ಎಲ್ಲವನ್ನೂ ತಲೆ ಮೇಲೆಯೇ ಸಾಗಿಸಬಹುದಿತ್ತು. ಇಲ್ಲಿ ಮನೇಲಿ ದನಗಳನ್ನು ಸಾಕ್ತಾ ಇದ್ರು. ಇಲ್ಲಿ ಕೊಟ್ಟಿಗೇಯಿಂದ ದನಗಳ ಗೊಬ್ಬರಗಳನ್ನು ತೋಟಕ್ಕೆ ಸಾಗಿಸ್ತಾ ಇದ್ರು. ಗಿಡಮರಗಳ ಸಂದಿಯಲ್ಲಿ ಬೆಳೆಯುವ ಎಳೆ ದರಗನ್ನು ತೊಗೊಂಡು ಹೋಗಿ ಹಾಕಿ ಬೆಳೀತಾ ಇದ್ರು. ಆದ್ರೆ ಈಗ ನಾವು ನಾಲ್ಕು ಐದು ಎಕರೇಲಿ ಮಾಡಬೇಕಿದ್ರೆ tractor ಹಾಗೇ ಗಾಡೀನ ಉಪಯೋಗಿಸಲೇಬೇಕು.

- **ಯಾವ ರೀತಿ ತೋಟದ ಬೇಸಾಯ ಮಾಡಬೇಕು, ವಿವರವಾಗಿ ಹೇಳಿ, ನಿಮ್ಮ ಅನುಭವವನ್ನು.**

ಸಾಮಾನ್ಯವಾಗಿ ಹಳೇ ತೋಟದಲ್ಲಿ ನಾವು ಅಳತೇನ ಇಟ್ಟುಕೋತಿರಲಿಲ್ಲ. ಹಿಂದಿನ ಅಳತೆ ಏನಿದೆಯೋ ಅಲ್ಲಿ ಎಲ್ಲಿ ಸಸಿ ಹೋಗುತ್ತೋ, ಹೋದ ಜಾಗಕ್ಕೆ ಬೇರೆ ಸಸಿಗಳನ್ನು ನೆಡ್ತಾ ಇದ್ವಿ. ನಾಲ್ಕು ಅಡಿಕೆ ಸಸಿಗಳ ಮಧ್ಯೆ ಬಾಳೆ ಹಾಕ್ತಿದ್ವಿ. ಹೊಸ ತೋಟದಲ್ಲಿ ಹಾಗಲ್ಲ. ಎಂಟು ಅಡಿ ದಾಯವನ್ನು ಹಿಡಿದು, ಶಂಕೂನ ಹಿಡಿದು, ಬಿಸಿಲ ಝಳ ತೋಟದ ಒಳಗೆ ಬರದಿರುವ ರೀತಿ, ಒಂದು ಗಿಡ ಮತ್ತೊಂದು ಗಿಡಕ್ಕೆ ನೆರಳಾಗುವ ಹಾಗೆ ನೆಡಬೇಕು. ಪಶ್ಚಿಮದ ಬಿಸಿಲು ಅಡಿಕೆಗೆ ಬಹಳ ಕಠೋರ. ನೈಋತ್ಯದ ಬಿಸಿಲು ಅಡಿಕೆ ಮರವನ್ನು ಸುಡುತ್ತೆ. ಆಗ್ನೇಯದ ಬಿಸಿಲೂ ಅಷ್ಟೆ. ಪೂರ್ವಿಕರು ಮಾಡಿರುವ ರೀತೀಲಿ, ಪೂರ್ತಿ ಕಂದಕ ತೋಡಿ, ತೋಟದ ಸುತ್ತಲೂ ಮರಗಳನ್ನು ಹಾಕೋರು. ತೆಂಗು, ನೇರಳೆ, ಮಾವು, ಹಲಸು ಬೆಳಸೋರು. ಇದು ಗಾಳಿ ಹೊಡೆತ ಹಾಗೂ ಬಿಸಿಲಿನ ಝಳ ತಡಿಯುತ್ತೆ, ತೋಟಕ್ಕೂ ರಕ್ಷಣೆಯಾಗಿರುತ್ತೆ. ತುಂಬಾ ಬಿಸಿಲಿನಲ್ಲಿ ತೋಟ ಎಬ್ಬಿಸಿದ್ರೆ ಆ ತೋಟ ಬಹುಕಾಲ ಬಾಳೋಲ್ಲ. ಅಡಿಕೆ ಸಸಿ, ೧೫ ರಿಂದ ೧೮ ವರುಷಗಳ ಕಾಲ ತುಂಬಾ ಮೆದುವಾಗಿರುತ್ತೆ. ದೊಡ್ಡ ಮರವಾಗಿದ್ರೂನೆ, ಬಿಸಿಲಿನ ಝಳ ತಡಿಯೋಲ್ಲ. ಹಾಗಾಗಿ ಬಾಳೆ ಹಾಕಿ, ಮರಕ್ಕೆ ರಕ್ಷಣೆ ನೀಡಬೇಕು. ಈಗ ನಾವು ಹೊಸದಾಗಿ ಮಾಡಿರುವ ತೋಟದ ಸುತ್ತಾ ತೆಂಗು ಹಾಕಿದೀವಿ.



ಎಚ್.ರಾಮಣ್ಣ ಅವರೊಂದಿಗೆ ಸಂದರ್ಶನ: ಎನ್.ಕೇಶವಮೂರ್ತಿ:ಹೊಸಹಳ್ಳಿ

ಹಿಂದಿನವರು ಹಾಕಿದ ಹಾಗೆ ಬಹಳ ಕಾಲ ಬಾಳುವ ಮರಗಳನ್ನು ಹಾಕಿಲ್ಲ. ಅಂದ್ರೆ ಹುಳಿಮಾವಿನಮರ, ನಾಟಿ ನೇರಳೆ ಹಾಗೂ ಹಲಸು ಮರ ಎತ್ತರವಾಗಿ ಬೆಳೆದು ರಕ್ಷಣೆ ನೀಡೋವು. ಹಣ್ಣಿಗಾಗಿ ಬೆಳೀತಿರಲಿಲ್ಲ. ಈಗ ನಾವು ಗಾಳಿ ಮರಗಳು, ಸಿಲ್ವರ್ ಮರಗಳನ್ನು ಹಾಕಿದೀವಿ.

- **ನಿಮಗೆ ವ್ಯವಸಾಯದ ಬಗ್ಗೆ ಆಸಕ್ತಿ ಬರಲು ಏನು ಕಾರಣ?**

ನಮ್ಮ ತಂದೆ ಮಾಡ್ತಿದ್ರು. ಅದನ್ನೇ ಮುಂದುವರಿಸಬೇಕು ಅಂತ ಆಸೆ. ಆಗ ತುಂಬಾ ಕಷ್ಟ ಇತ್ತು. ನಾನು ಮಾಸ್ತರ ಕೆಲಸದಲ್ಲೂ ಇದ್ದೆ. ನನಗೆ ಇಲ್ಲೇ ಹತ್ತಿರದಲ್ಲೇ ಶಾಲೆ. ಬೆಳಗ್ಗೆ ತೋಟಕ್ಕೆ ಹೋಗಿ ಕೆಲಸ ಮಾಡೋದು, ಶಾಲೆಗೆ ಹೋಗೋದು. ಸಂಜೆ ಬರುವಾಗ ತೋಟವನ್ನು ನೋಡಿಕೊಂಡು, ಏನೇನು ಕೆಲಸ ಆಗಿದೆ ನೋಡಿ, ಆಳುಗಳಿಗೆ ವ್ಯವಸ್ಥೆ ಮಾಡಿ, ಮನೆಗೆ ಬರ್ತಿದ್ದೆ. ನಾನು SSLCವರೆಗೆ ಓದಿ, ಮೇಷ್ಟರ ಕೆಲಸಕ್ಕೆ ಸೇರಿದ್ದು. ನನ್ನ ಅಣ್ಣ ವೈದಿಕ ವೃತ್ತಿಯಲ್ಲಿದ್ದು, ವ್ಯವಸಾಯಕ್ಕೆ ನೆರವು ನೀಡೋರು. ನಾನು ಮೇಷ್ಟರಾದ ಮೇಲೆ, ಸ್ವತಂತ್ರವಾಗಿ, ಸ್ವಂತವಾಗಿ ಮಾಡುವಂತಹದ್ದು ಏನೂ ಮಾಡಲಿಲ್ಲ. ಎಲ್ಲಾ ಆಳುಕಾಳುಗಳ ಮೇಲೆ ಅವಲಂಬನೆ. ನಮ್ಮ ತಂದೆ ಸ್ವಂತ ದುಡಿಯೋರು. ಆಗ ಅವರ ಕಾಲದಲ್ಲಿ ಜತೆಗೆ ಹೋಗಿ, ಅವರ ಜತೆ ವ್ಯವಸಾಯದ ಶಿಕ್ಷಣ ಪಡೆದೆ.

- **ಹೇಗೆ ಆದಾಯ ಗಳಿಸಿದ್ರಿ? ಎಲ್ಲಾ ವ್ಯವಸಾಯದ್ದೇನ ಅಥವಾ ಮಾಸ್ತರ ವೃತ್ತೀಲಿ ಉಳಿಸಿದ್ರಾ?**

ಮಾಸ್ತರ ವೃತ್ತೀಲಿ ಉಳಿಸಲು ಆಗಲಿಲ್ಲ (ನಗು). ನಾನು ಕೆಲಸಕ್ಕೆ ಸೇರಿದಾಗ ೨೫ ರೂಪಾಯಿ ಸಂಬಳ. ಆ ಸಂಬಳ ಇಲ್ಲಿ ಒಂದು

ದಿನದ ಕೆಲಸಕ್ಕೆ ಆಗ್ತಿರಲಿಲ್ಲ. ನಾನು ೩೩ ವರುಷ ಮೇಷ್ಟ್ರಾಗಿ, ರಿಟೈರ್ ಆದೆ. ವ್ಯವಸಾಯ ನನಗೆ ಉಪವೃತ್ತಿ. ಅದರ ಮೇಲೆ ನಿಗಾ ಇತ್ತು. ಗಮನ ಇತ್ತು.

- **ನಿಮ್ಮ ಕಷ್ಟಗಳು ಕೊನೆಗೊಂಡದ್ದು ಯಾವಾಗ?**

ಈಗ್ಗೆ ೧೫, ೨೦ ವರುಷದಿಂದ ಸುಖವಾಗಿ, ನಿರಾಳವಾಗಿ ಇದೀವಿ. ತೋಟದ ಉತ್ಪತ್ತೀನೂ ಜಾಸ್ತಿ ಬಂತು. ಮಕ್ಕಳೂ ಕೆಲಸಕ್ಕೆ ಸೇರಿದ್ರು. ಸ್ವಂತ ಸಂಪಾದನೆಗೆ ಇಳಿದ್ರು.

- **ನೀವು ವ್ಯವಸಾಯದಲ್ಲಿ ಗಳಿಸಿದ್ದು ಹೇಗೆ?**

ಕಬ್ಬು ಬೆಳೆದೆ, ಭತ್ತ ಬೆಳೆದೆ. ತುಂಬಾನೇ ಬೆಳೀತಾ ಇದ್ವಿ. ಕಬ್ಬನ್ನು sugar factoryಗೆ ಹೊಡೀತಿದ್ವಿ. ಹೀಗೇ ಆ ಕೈ ಈ ಕೈ ಮಾಡಿ ಸಂಪಾದನೆ ಮಾಡಿದೆ (ನಗು). ನನ್ನ ತಂದೆ ದುಡಿದ ಹಾಗೆ, ನಾನು ದೊನ್ನೆ ಮಾಡಲಿಲ್ಲ. ಆ ದುಡಿಮೆ ಸಾಲದು ಅನ್ನಿಸ್ತು. ಒಂದು ಸಾವಿರ ದೊನ್ನೆ ಕಟ್ಟಿದ್ರೆ ನಾಲ್ಕು ರೂಪಾಯಿ, ಐದು ರೂಪಾಯಿ ಸಿಗ್ತಿತ್ತು. ಅದಕ್ಕೆ ನಾಲ್ಕು ದಿನದ ಶ್ರಮ ಬೇಕಿತ್ತು. ಈಗಿನ ಹಾಗೆ ನೂರಾರು ರೂಪಾಯಿ ಸಿಗ್ತಿರಲಿಲ್ಲ. ಆಗಲೇ 'ಇದೆಲ್ಲಾ ದುಡಿಮೆ ಅಲ್ಲ, ನಾವು ದೊಡ್ಡ ದೊಡ್ಡ ವ್ಯವಸಾಯ ಮಾಡಬೇಕು, ಹೆಚ್ಚು ಹೆಚ್ಚು ಸಂಪಾದನೆ ಮಾಡಬೇಕು' ಅನ್ನುವ ದೃಷ್ಟಿಯಿಂದ ಹೆಚ್ಚು ವ್ಯವಸಾಯ ಮಾಡಲು ಆರಂಭಿಸಿದೆ. ೪, ೫ ಎಕರೆ ಭತ್ತ ಬೆಳೀತಿದ್ದೆ. IR-8, ಥಾಯ್‌ಚುಂಗ್, ಹಾಗೇ ಹೊಸತಳಿ ಭತ್ತ ಬೆಳೀತಾ ಇದ್ದೆ.

- **ಯಾವ ರೀತಿ ನೀವು ಭತ್ತದ ಬೇಸಾಯ ಮಾಡ್ತಿದ್ರಿ?**

ಹಳೇ ಕಾಲದಲ್ಲಿ ನೇರವಾಗಿ ಭತ್ತ ಬಿತ್ತನೆ ಮಾಡೋರು. ಸಮೃದ್ಧವಾಗಿ ಮಳೆಗಾಲ ಆಗ್ತಾ ಇತ್ತು ಆಗ. ನಾನೇನೆ ಹೊಲಭತ್ತ ಬಿತ್ತಿ ಆರಿದ್ರೆ ಮಳೇಲಿ ಕೊರಡು ಹೊಡೀತಿದ್ದೆ. ಭಾರಿ ಮಳೆ ಆಗ. ಕಾಲ ಕಾಲಕ್ಕೆ ಮಳೆ ಆಗೋದು. ಮೃಗಶಿರ ಮಳೆ ಹೊತ್ತಿಗೆ, ಭತ್ತ ಎತ್ತರವಾಗಿ ಬೆಳೆದಿರೋದು. ಆಗ ಎಕರೆಗೆ ಪಲ್ಲಾಗಟ್ಟಲೆ ಬೀಜ ಬಿತ್ತುತಾ ಇದ್ವಿ. ಈಗ ಎಕರೆಗೆ ೨೦ ಸೇರು ಆದ್ರೆ ಸಾಕು. ಅದನ್ನು ಅಗೆ ಹಾಕಿ, ಸಸಿ ಮಾಡಿ, ನಾಟಿ ಮಾಡಿ, ಬೆಳೀಬೇಕು. ಹಿಂದಿನ ವ್ಯವಸಾಯ ಪದ್ಧತೀಲಿ ಎಕರೆಗೆ ೧೦ ರಿಂದ ೧೨ ಚೀಲ ಭತ್ತ ಬರೋದು ಅಷ್ಟೆ. ಭತ್ತದ ಬೇಸಾಯವೂ ಕೆಲಸದ ಆಳುಗಳ ಸಹಾಯದಿಂದಲೇ ಆಗ್ತಿತ್ತು. ನಮ್ಮದು ಮೇಲುಸ್ತುವಾರಿ ಅಷ್ಟೆ. ನಾವು ನೇಗಿಲು ಹಿಡಿದಿದ್ದಿಲ್ಲ. ನಾಟಿ ಮಾಡಿ ಭತ್ತ ಬೆಳೆಯುವಾಗ ೩೫ ರಿಂದ ೪೦ ಚೀಲದವರೆಗೂ ಭತ್ತ ಬಂದಿದೆ. ಎಷ್ಟೇ ಬೆಳೆ ಕೆಟ್ರೂ, ರೋಗರುಜಿನ ಬಂದ್ರೂ ೨೫ ಚೀಲಕ್ಕೆ ಮೋಸ ಇರಲಿಲ್ಲ.

ವ್ಯವಸಾಯದಲ್ಲಿ ನಷ್ಟವೂ ಆಗಿದೆ. ಭತ್ತಕ್ಕೆ ಕೂಲಿ ಜಾಸ್ತಿ ಕೊಟ್ಟು, ಮಳೆ ಹಿಡಿದು ಕಳೆ ಕೀಳಿಸಲು ಆಗದೆ ವಿಪರೀತ ಕಳೆ ಬೆಳೆದು ನಷ್ಟವೂ ಆಗಿದೆ. ಒಟ್ಟಿನಲ್ಲಿ ಒಂದು ವರುಷ ಆದಾಯ ಬಂದ್ರೆ, ಎರಡನೇ ಬೆಳೇಲಿ ಸೋಲು. ಅಂತೂ ವ್ಯವಸಾಯದಿಂದ ಅನುಕೂಲವಾಗಿದೆಯೇ ವಿನಃ ತೊಂದರೆ ಆಗಿಲ್ಲ. ಒಂದು ವರುಷ ಹೋದ್ರೂ ಮುಂದಿನ ವರುಷ ಉತ್ಪತ್ತಿ ಬರೋದು.

- **ನಿಮ್ಮ ತಾಯಿ, ಅಜ್ಜಿ, ಹೇಗೆ ದುಡೀತಿದ್ರು?**

ಮನೇಕೆಲಸ ಹೆಚ್ಚು ಮಾಡೋರು. ಅವರೂ ತರಗು ದೊನ್ನೆ ಮಾಡೋದ್ರಲ್ಲಿ ತಂದೆಗೆ ಸಹಾಯ ಮಾಡ್ತಿದ್ರು. ಮನೆಗೆ ಬಂದ ಅಡಿಕೇನೆಲ್ಲಾ ಅವರೇ ಸ್ವಂತ ಸುಲೀತಿದ್ರು. ಈಗಾದ್ರೆ ಕೂಲಿ ಕೊಡ್ತೀವಿ. ಆಗ ಊರಲ್ಲಿ ಎಲ್ಲರೂ ಮುಯ್ಯಿ ಮಾಡಿಕೊಂಡು, ಮನೆಯಿಂದ ಮನೆಗೆ ಹೋಗಿ ಎಲ್ಲರೂ ಒಟ್ಟಾಗಿ ಕೆಲಸ ಮಾಡೋರು. ಒಬ್ಬೊಬ್ಬರ ಮನೇಲಿ ಒಂದೊಂದು ದಿನ ಅಡಿಕೆ ಕೆಡವಿಸೋರು. ಪರಸ್ಪರ ಅನ್ಯೋನ್ಯತೆಯಿಂದ ಕೆಲಸ ಮಾಡೋರು. ಅಡಿಕೆ ಕಾಲದಲ್ಲಿ ಹೆಂಗಸರಿಗೆ ಪುರುಸೊತ್ತೇ ಇಲ್ಲ.

- **ಮರಹತ್ತಿ ಕಾಯಿ ಕೆಡವುವ ಸಂಕೇತಿಗಳು ಇದ್ರಾ?**

ನಮ್ಮಲ್ಲಿ ಕಡಿಮೆ. ಖಾಯಂ ಆಗಿ ಅಡಿಕೆ ಕೆಡವಲು ಆಳುಗಳು ಇದ್ರು. ಹಾಗಾಗಿ ನಮ್ಮವರು ಅಡಿಕೆ ಕೆಡವಿಲ್ಲ. ತೆಂಗಿನಕಾಯನ್ನು ಇವರೇ ಹೋಗಿ ಕೆಡವಿದಾರೆ.

- **ಭತ್ತ, ಕಬ್ಬು, ಬಾಳೆ, ಅಡಿಕೆ ಈ ಬೆಳೆ ಮಾತ್ರಾ ಬೆಳೆದಿದೀರಿ ಅಷ್ಟೆ. ವಿಳ್ಳೇದೆಲೆ, ಕಾಳುಮೆಣಸು, ಏಲಕ್ಕಿ ಈ ತರಹದ ಬೆಳೆ ಯಾಕೆ ಮಾಡಿಲ್ಲ?**

ಇಲ್ಲಿ ಬೆಳೆದಿಲ್ಲ. ಯಾಕೇಂದ್ರೆ ಇಲ್ಲಿ ನಾವು ಬೇಸಿಗೆ ಕಾಲದಲ್ಲಿ ನೀರು ಕಟ್ಟೋದ್ರಿಂದ ಅದು ಆಗೋದಿಲ್ಲ ಅಂತ ಅಭಿಪ್ರಾಯ ಇದೆ. ಅದು ಹೊಯ್ಯು ನೀರಿಗೇ ಸರಿ ಆಗೋದು. ತೋಟದಲ್ಲಿ ನೀರು ಕಟ್ಟಿದ್ರೆ ಈ ಬೆಳೆಗಳು ಆಗೋಲ್ಲ ಅಂತ ನಾವು ಪ್ರಯತ್ನವೇ ಪಡಲಿಲ್ಲ. ನಾನು ಒಂದು ಸಲ ಐವತ್ತು ಹಂಬು ಹಾಕಿದೆ, ಯಾವುದೂ ಉಳೀಲಿಲ್ಲ. ಆದ್ರೆ ಹೊಸ ತೋಟದಲ್ಲಿ ಟೊಮ್ಯಾಟೊ, ಬದನೇಕಾಯಿ ಹಾಗೂ ಇತರೇ ತರಕಾರಿಗಳನ್ನು ಆರಂಭದಲ್ಲಿ ಮೂರು ನಾಲ್ಕು ವರುಷ ಬೆಳೆದಿದೀನಿ. ತುಂಬಾ ನೆರಳಾದ್ರೆ ಆಮೇಲೆ ಅದು ಬರೋಲ್ಲ. ನಾನು ಅಲಸಂದಿ, ಉದ್ದು ಎಲ್ಲವನ್ನೂ ತೋಟದಲ್ಲಿ ಚೆಲ್ತೀನಿ. ಇದರಿಂದ ತೋಟಾನೂ ಹಸನಾಗುತ್ತೆ, ಇದರ ಎಲೆ ಉದುರಿದ್ರೆ ನೆಲ ಫಲವತ್ತಾಗುತ್ತೆ. ಸ್ವಲ್ಪ ಬೆಳೆ ತೊಗೊಂಡು, ಉಳಿದಿದ್ದನ್ನು ಅಲ್ಲೇ ಉಳುಮೆ ಮಾಡಿಸ್ತೀನಿ.

- **ನಿಮ್ಮ ನಂತರ ಮಕ್ಕಳು ವ್ಯವಸಾಯ ಮುಂದುವರೆಸ್ತಾರಾ?**

ಮುಂದುವರಿಸ್ತಾರೆ. ಮುಂದುವರಿಸದಿದ್ದರೆ ನಿರ್ವಾಹವಿಲ್ಲ. ನನಗೆ ಐದು ಗಂಡು ಹಾಗೂ ಒಂದು ಹೆಣ್ಣು. ನಮಗೆ ಈಗ ಮುಖ್ಯ ಜೀವನವೇ ವ್ಯವಸಾಯ. ಉಳಿದದ್ದೆಲ್ಲಾ ಉಪವೃತ್ತಿ. ಹಾಗಾಗಿ ಅವರು ವ್ಯವಸಾಯವನ್ನು ರಕ್ಷಣೆ ಮಾಡಲೇಬೇಕು. ಈಗ ಹೆಚ್ಚು ಶ್ರಮ ಇಲ್ಲ. ಕಾಲಕಾಲಕ್ಕೆ ಗೊಬ್ಬರ, ನೀರು, ಅಗೆತ ನೋಡಿದ್ರೆ ಸಾಕು. ಸುಗ್ಗಿ ಒಳಗೆ ಅಡಿಕೆ ಕುಯ್ಯೋದು, ರೇಖೆ ಮಾಡೋದು ವ್ಯಾಪಾರ ಮಾಡಿ ದುಡ್ಡು ಮಾಡಿಕೊಳ್ಳೋದು.

- **ನಿಮ್ಮ ಅಭಿವೃದ್ಧಿಗಾಗಿ ಸಾಲ ಸೋಲ ಮಾಡ್ತಿದ್ರಾ?**

ಸಾಲ ಮಾಡ್ತಿದ್ದೆ. ಇಲ್ಲಿ ಸುಬ್ಬರಾಯಶಾಸ್ತ್ರಿಗಳು ಅಂತ ಇದ್ರು, ನಂಜುಂಡಾವಧಾನಿಗಳು ಅಂತ ಇದ್ರು; ಆಗಿನ ಕಾಲದಲ್ಲಿ ಅವರೇ ಶ್ರೀಮಂತರು. ಅವರ ಹತ್ರ ಜಮೀನು ತೊಗೋಳ್ಳೋದಕ್ಕೂ ಸಾಲ ಮಾಡಿದೀನಿ, ವ್ಯವಸಾಯಕ್ಕೂ ಸಾಲ ಮಾಡಿದೀನಿ. ಸಾಲ ಮಾಡೋದು, ಕಟ್ಟೋದು. ಈ ಊರಿನವರಿಗೆಲ್ಲಾ ಸಾಮಾನ್ಯವಾಗಿ ಅವರು ಸಹಾಯ ಮಾಡಿದಾರೆ. ಸರ್ಕಾರದಿಂದ ಯಾವ ನೆರವೂ ನಾವು ಪಡೀದೇ ಇದ್ರೂವೆ, ಇಲ್ಲಿ ಹಣ ಸಿಗ್ತಾ ಇತ್ತು, ಅನುಕೂಲವಾಗಿತ್ತು.

- **ದನಕರುಗಳನ್ನು ಎಷ್ಟು ಇಟ್ಟುಕೊಂಡಿದ್ರಿ?**

ಈಗಲೂ ಐದು/ಆರು ದನಗಳು ಇವೆ. ನನ್ನ ತಂದೆ ಎಮ್ಮೆ, ದನ ಕಟ್ತಾ ಇದ್ರು. ಕೊಟ್ಟಿಗೆಗೆ ಸ್ಥಳ ಇಲ್ಲದ್ದರಿಂದ ನಾಲ್ಕು/ಐದು ರಾಸು ಇಟ್ಟಿದ್ರು.

- **ರೈತನ ಮನೆ ಹ್ಯಾಗಿರಬೇಕು ಅಂತೀರಿ? ಯಾವ ರೀತಿ ಕಟ್ಟಬೇಕು?**

ರೈತನಿಗೆ ಸಾಮಾನು ಇಟ್ಟುಕೊಳ್ಳೋದಕ್ಕೂ ಬೇಕು. ದನಕರುಗಳ ಕೊಟ್ಟಿಗೆ ಇರಬೇಕು. ಅವುಗಳಿಗೆ ಮೇವು ಇಡಲು ಸ್ಥಳ ಬೇಕು. ತೋಟದಲ್ಲಿ ಬೆಳೆದ ಪದಾರ್ಥಗಳನ್ನು ತಂದು ಶೇಖರಣೆ ಮಾಡಲು ಜಾಗ ಇರಬೇಕು. ನಮ್ಮ ಮನೆ ಮಾತ್ರ ಯಾವುದಕ್ಕೂ ಸಾಲದು ಅಷ್ಟೆ.

- **ನಿಮ್ಮಲ್ಲಿ ತೋಟದಲ್ಲೇ ಮನೆ ಮಾಡಿ ನೆಲೆಸುವ ಸಂಪ್ರದಾಯ ಇಲ್ಲವಾ?**

ಕಡಿಮೆ. ಮೊದಲು ತೋಟ ಸಮೀಪವಾಗೇ ಇತ್ತಲ್ಲ. ಊರಿಂದ ಅರ್ಧ ಕಿಲೋಮೀಟರ್‌ವಳಗೆ ಎಲ್ಲರ ತೋಟವೂ ಸೇರ್ತಾ ಇತ್ತು. ಆದ್ರೆ ಈಗ ದೂರ ಇದೆ. ನಾವು ಇಲ್ಲಿಂದ ಮೂರು ಕಿಲೋಮೀಟರ್ ದೂರದ ಮುಳ್ಳುಕೆರೇಲೂ ಜಮೀನು ಮಾಡಿದೀವಿ. ನಮ್ಮ ಸ್ವಯಾರ್ಜಿತವಾದ ಆಸ್ತಿ ಏನಿದ್ರೂ ಎರಡು ಕಿಲೋಮೀಟರ್ ಆಚೇನೇ. ಪಿತ್ರಾರ್ಜಿತವಾದ ಆಸ್ತಿ ಅರ್ಧ ಕಿಲೋಮೀಟರ್ ಒಳಗೇನೇ ಇದೆ. ಓಡಾಟವೆಲ್ಲಾ ನಡೆದೇ ಆಗಬೇಕು. ದಿನಕ್ಕೆ ಮೂರುನಾಲ್ಕು ಸಲ ನಡೆದೇ ಹೋಗ್ತಿದ್ದೆ. ಈಗ ಮಕ್ಕಳು ದ್ವಿಚಕ್ರ ವಾಹನ ಇಟ್ಟುಕೊಂಡಿದ್ದಾರೆ. ತೋಟಕ್ಕೆ ಗೊಬ್ಬರ ಸಾಗಿಸೋದು ಟ್ರಾಕ್ಟರ್‌ನಲ್ಲಿ. ತೋಟದ ಸಮೀಪದಲ್ಲಿರುವ ಸಾಲು ಮರಗಳ ತರಗನ್ನು ಬಾಚಿ ಗಿಡದ ಬೊಡ್ಡೆಗೆ ಹಾಕಿಸ್ತೀವಿ. ನಾವು ಬೇರೆ ಬೇರೆ ತರಹ ವ್ಯವಸಾಯ ಮಾಡ್ತೀವಿ. ಒಂದು ವರುಷ ಸೊಪ್ಪು ಹಾಕಿದ್ರೆ, ಒಂದು ವರುಷ ಮನೆಗೊಬ್ಬರ, ಮಣ್ಣು, ಹೀಗೆ ಹಾಕ್ತೀವಿ. ಸರಿಯಾಗಿ ಗೊಬ್ಬರ ಗೋಡು ನೀರು ಕೊಟ್ರೆ ವ್ಯವಸಾಯದಲ್ಲಿ ವರಮಾನ ಗಳಿಸಬಹುದು.

- **ನಿಮಗೆ ಯಾವ ಹವ್ಯಾಸಗಳು ಹೆಚ್ಚು ಪ್ರಿಯ?**

ಮೊದಲು ನಶ್ಯ ಹಾಕ್ತಾ ಇದ್ದೆ, ಅದನ್ನು ಬಿಟ್ಟು ಈಗ ಎಲೆ ಅಡಿಕೆ ಹಾಕೋದಕ್ಕೆ ಶುರು ಮಾಡಿದೆ. ದಿನಕ್ಕೆ ೧೦/೧೫ ಸಲ ಹಾಕ್ತೀನಿ.

ನಾನು ಯಾವುದೇ ಒಂದು ಕೆಲಸವನ್ನು ಮಾಡಬೇಕಾದ್ರೆ ಎಲೆ ಅಡಿಕೆ ಹಾಕ್ಕೊಂಡ್ರೆ ಅದನ್ನು ಗಮನ ಇಟ್ಟು ಮಾಡಬಹುದು ಅನ್ನಿಸುತ್ತೆ. ಬಾಯಲ್ಲಿ ಏನೂ ಇಲ್ಲದಿದ್ರೆ ಹರಟೆ ಹೊಡೆಯೋದು ಜಾಸ್ತಿ. ಅದು ಉಪಯೋಗವಿಲ್ಲದ ಕಸುಬು ತಾನೆ (ನಗು). ಬಾಯಲ್ಲಿ ಎಲೆ ಅಡಿಕೆ ಇದ್ರೆ ಮಾತು ಕಡಿಮೆ. ಕೆಲಸದ ಬಗ್ಗೆ ಆಲೋಚನೆ ಜಾಸ್ತಿಯಾಗುತ್ತೆ ಅಂತ ನನ್ನ ಅನಿಸಿಕೆ!

- **ನಿಮ್ಮ ತಂದೆಯವರು ಏನು ಬುದ್ಧಿವಾದ ಹೇಳಿದಾರೆ?**

  ವ್ಯವಸಾಯದಲ್ಲಿ ನನ್ನ ತಂದೆಗೆ ಬಹಳ ಆಸಕ್ತಿ. ಅದರ ಬಗ್ಗೆ ಬಹಳ ಹೇಳೋರು. ವ್ಯವಸಾಯ ಮಾಡೋರನ್ನು ಕಂಡರೆ ತುಂಬಾ ಇಷ್ಟ ಅವರಿಗೆ.

- **ಇವತ್ತಿನ ನಿಮ್ಮ ಯುವಪೀಳಿಗೆಯಲ್ಲಿ ದುಡಿಮೆ ನಶಿಸ್ತಾ ಇದೆ. ಏನು ಕಾರಣ ಇರಬಹುದು ಅಂತೀರಿ?**

  ಕಾರಣ ಇಷ್ಟೆ, ಅವರಿಗೆ ಪಿತ್ರಾರ್ಜಿವಾದ ಆಸ್ತಿ ಸಾಕಷ್ಟು ಇದೆ. ತಂದೆ-ತಾಯಿ ಸಾಕಷ್ಟು ಸಂಪಾದನೆ ಮಾಡಿದಾರೆ. ಇನ್ನು ಸಂಪಾದನೆಯ ಅಗತ್ಯ ಇಲ್ಲ ಅಂತ ಅವರಿಗೆ ಅನ್ನಿಸಿದೆ. ಇನ್ನೇನೂ ಮಾಡಬೇಕಿಲ್ಲ ನಾವು, ತಂದೆಯವರ ತೋಟ ಇದೆ, ಅದನ್ನು, ಮಾರಿ ದುಡ್ಡು ಮಾಡಿದ್ರಾಯ್ತು ಅನ್ನುವ ಭಾವನೆ ಬಂದಿದೆ. ನಮ್ಮಜ್ಜ ಹಾಗೂ ಮುತ್ತಜ್ಜ ೩೬೫ ದಿವಸ, ೨೪ ಗಂಟೇನೂ ತೋಟದಲ್ಲೇ ಇರ್ತಿದ್ರಲ್ಲಾ ಆ ಥರ ಈಗ ಇರಬೇಕಾಗಿಲ್ಲ. ನಮ್ಮ ತಂದೆಯವರ ಕಾಲದಲ್ಲಿ ಇರ್ತಾ ಇದ್ರು. ಹಗಲು ರಾತ್ರಿ ತೋಟದಲ್ಲಿ ಇದ್ದುದರಿಂದ ಎಲ್ಲವನ್ನೂ ರಕ್ಷಣೆ ಮಾಡಿಕೊಳ್ಳಲು ಆಯ್ತು. ಕಳ್ಳಕಾಕರ ಕಾಟವೂ ಕಡಿಮೆ ಆಗ್ತಾ ಇತ್ತು.

- **ಮುಂದಿನ ಯೋಜನೆಗಳೇನು ನಿಮ್ಮದು?**

  ನಮಗೆ ವಯಸ್ಸಾಗಿದೆ. ನಾವು ಇನ್ನೇನು ಯೋಜನೆ ಹಾಕಿಕೊಳ್ಳೋದು (ನಗುತ್ತಾ). ನಮ್ಮ ಹುಡುಗರಿಗೆ ಹೇಳೋದು, 'ಇರೋದನ್ನು ರಕ್ಷಣೆ ಮಾಡಿಕೊಳ್ರಪ್ಪ. ಜೋಪಾಸನೆ ಮಾಡಿಕೊಳ್ರಪ್ಪಾ' ಅಂತ ಅಷ್ಟೆ. ಅದು ಬಿಟ್ಟರೆ ನಮ್ಮ ಯೋಜನೆಗಳು ಮತ್ತೇನೂ ಇಲ್ಲ. ಹೀಗೇ ರಾಮಾಕೃಷ್ಣಾಂತ ಕಾಲ ಹಾಕೋದು ಅಷ್ಟೆ.

- ಒಳ್ಳೆಯದು ರಾಮಣ್ಣನವರೆ, ಇದುವರೆವಿಗೂ ನಿಮ್ಮ ವಿಚಾರಗಳನ್ನು ತಿಳಿಸಿದ್ರಿ. ನಮಸ್ಕಾರಗಳು

  ನಮಸ್ಕಾರ.

ಈ) ಕೆ. ಕೃಷ್ಣಸ್ವಾಮಿ ೩/ಮ ಕೇಶವ ಅವಧಾನಿ
ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237775

ಹೊಸದಾಗಿ ಥಾಯ್‌ಚುಂಗ್ ಭತ್ತದ ತಳಿ ಪರಿಚಯಿಸಲಾಗಿತ್ತು. ನಾನು ಜಪಾನ್ ಮಾದರೀಲಿ, ಒಂಭತ್ತು ಅಂಗುಲಕ್ಕೆ ಸಾಲು ತೆಗೆದು ನಾಲ್ಕು ಅಂಗುಲಕ್ಕೆ ಒಂದು ಭತ್ತ ಸಸಿ ನಾಟಿ ಮಾಡಿದೆ. ಒಂದೊಂದು ಬೊಡ್ಡೇಲಿ ೫೦ ರಿಂದ ೬೦ ತೆಂಡೆಗಳು ಬಂದ್ವು. ಎಕರೆಗೆ ೪೦ ಕ್ವಿಂಟಾಲ್ ಇಳುವರಿ ಬಂತು. ನನಗೆ ಜಿಲ್ಲಾ ಮಟ್ಟದಲ್ಲಿ ಮೊದಲ ಕೃಷಿ ಪ್ರಶಸ್ತಿ ಕೂಡ ದೊರೀತು. ಇದು ನನ್ನ ಪರಿಶ್ರಮಕ್ಕೆ ಸಂದ ಪ್ರಶಸ್ತಿ ಅಂತ ನನ್ನ ಭಾವನೆ.

ಹೊಸಹಳ್ಳಿಯ ಕೆ. ಕೃಷ್ಣಸ್ವಾಮಿಗಳಿಗೆ ಈಗ ೭೩ ವರುಷ. ಇವರ ಪತ್ನಿ ಟಿ.ಆರ್.ಸರೋಜ ತರೀಕೆರೆ ಮೂಲದ ಟಿ.ರಾಮಾಶಾಸ್ತ್ರಿ ಹಾಗೂ ಮತ್ತೂರಿನ ಸಾವಿತ್ರಮ್ಮ ದಂಪತಿಗಳ ಮಗಳು. ಕೃಷ್ಣಸ್ವಾಮಿಗಳಿಗೆ ಒಬ್ಬ ಮಗ ಹಾಗೂ ನಾಲ್ಕು ಜನ ಹೆಣ್ಣುಮಕ್ಕಳು. ವಿಶಾಲವಾದ ಅವರ ಮನೆಯಂಗಳದಲ್ಲಿ ಕುಳಿತು, ಮಾತುಕತೆ ಆರಂಭಿಸಿದಾಗ, ಬಾಗಿಲವಾಡದ ಬಳಿ ನಿಂತು ಅವರ ಪತ್ನಿ ತಾದಾತ್ಮ್ಯದಿಂದ ಕೇಳುತ್ತಿದ್ದರು.

- **ನಮಸ್ಕಾರ ಕೃಷ್ಣಸ್ವಾಮಿಗಳೆ . . .**

  ನಮಸ್ಕಾರ.

- **ನಿಮ್ಮ ಪೂರ್ವಿಕರು ಎಲ್ಲಿಯವರು ಮತ್ತು ಅವರ ವ್ಯವಸಾಯದ ವಿಧಾನ ಹ್ಯಾಗಿತ್ತು?**

ನನ್ನ ತಂದೆ ಕೇಶವ ಅವಧಾನಿ ಮತ್ತೂರಿನವರು. ನನ್ನ ತಾಯಿ ಸಾವಿತ್ರಮ್ಮ ಹೊಸಹಳ್ಳಿಯವರು. ನನ್ನ ತಾತ ಸೂರ್ಯನಾರಾಯಣಾವಧಾನಿ ಹಾಗೂ ಅಜ್ಜಿ ಅನ್ನಪೂರ್ಣಮ್ಮ ರಾಮನಾಥಪುರದವರು. ಅಲ್ಲಿ ಅವರಿಗೆ ಸಾಮರಸ್ಯ ಸರಿ ಇಲ್ಲದ್ದರಿಂದ ನೂರು ವರುಷಗಳ ಹಿಂದೆ ಮತ್ತೂರಿಗೆ ಬಂದು ನೆಲೆಸಿದರಂತೆ. ಮತ್ತೂರಿನಲ್ಲಿ ಆಸ್ತಿ ಮಾಡಿದ್ರು. ನಮ್ಮ ಅಜ್ಜ ಅಜ್ಜಿಗೆ ಮಕ್ಕಳಿರಲಿಲ್ಲ. ನಮ್ಮ ತಂದೇನ ಮತ್ತೂರಿನಲ್ಲಿಯೇ ದತ್ತು ತೆಗೆದುಕೊಂಡು ಸಾಕಿದ್ರು. ನನ್ನ ತಂದೆಗೆ ನಾಲ್ಕು ಗಂಡು, ಎರಡು ಹೆಣ್ಣು. ಅದರಲ್ಲಿ ಮೂರು ಜನ ಅಣ್ಣತಮ್ಮಂದಿರು ಮತ್ತೂರಿನಲ್ಲಿದಾರೆ. ನಾನು ಒಬ್ಬ ಮಾತ್ರ ಹೊಸಹಳ್ಳೀಲಿದೀನಿ.


ಕೆ.ಕೃಷ್ಣಸ್ವಾಮಿ:ಮನೆಯ ಹಿತ್ತಲ ಹಿನ್ನೆಲೆ:ಹೊಸಹಳ್ಳಿ

- **ನೀವು ಹೊಸಹಳ್ಳಿಗೆ ಬರಲು ಏನು ಕಾರಣ?**

ಶಿವಮೊಗ್ಗದ D.V.S. ಕಾಲೇಜಿನಲ್ಲಿ teacher ಆಗಿದ್ದೆ. ಮತ್ತೂರಿನಿಂದ ಓಡಾಡಲು ರಸ್ತೆ ಸೌಕರ್ಯ ಸರಿ ಇರಲಿಲ್ಲ. ಹೊಸಹಳ್ಳಿಯಿಂದ ಸಿಮೆಂಟ್ ರಸ್ತೆ ಇತ್ತು, ಹಾಗಾಗಿ ಇಲ್ಲಿಗೆ ಬಂದೆ. ನಾವು ಜಾಯಿಂಟ್ ಫ್ಯಾಮಿಲೀಲಿ ಇರಬೇಕಾದ್ರೆ ಮೂರು ಎಕರೆ ತರಿ ಜಮೀನಿತ್ತು. ನಾನು ಬಂದ ಮೇಲೆ ಮೂರು ಎಕರೆ ತರಿ ಜಮೀನು ಖರೀದಿಸಿದೆ. ಆರು ಎಕರೆಯನ್ನು ಅಡಿಕೆ ತೋಟ ಮಾಡಿದೆ. ನನ್ನ ತಂದೆ, ತಾತ ಎಲ್ಲಾ ವ್ಯವಸಾಯಸ್ಥರೇ. ಅಡಿಕೆ ಹಾಗೂ ಭತ್ತ ಬೆಳೀತಿದ್ರು. ಅಡಿಕೇನ ಕೆಡವಿ, ಮನೇಲಿ ಸುಲಿದು, ಬೇಯಿಸಿ, ರೇಖೆ ಮಾಡಿ, ಮಾರುಕಟ್ಟೆಗೆ ಸಾಗಿಸಿ ಮಾರಾಟ ಮಾಡ್ತಿದ್ರು. ಸ್ವಂತವಾಗಿ ಭಾವಿಯಿಂದ ನೀರು ಹಾಕೋರು. ನನ್ನ ತಾಯಿ ಕೂಡ ನೀರು ಹೊತ್ತಿದಾರೆ. ನನ್ನ ತಂದೆ ಬಹಳ ಚಿಕ್ಕವಯಸ್ಸಿನಲ್ಲಿ ಹೋಗಿಬಿಟ್ರು. ನಾವು ನಾಲ್ಕು ಜನ ತುಂಬಾ ಚಿಕ್ಕೋರು. ಆಗ ತಾಯೀನೇ ಕಷ್ಟಪಟ್ಟು ತೋಟದ ಕೆಲಸ ಮಾಡೋರು. ಬೆಳಗೆ ನಾಲ್ಕು ಘಂಟೆಗೆ ಎದ್ದು ರಾತ್ರಿ ೧೨ಕ್ಕೆ ಮಲಗ್ತಾ ಇದ್ರು. ಬೆಳಗ್ಗೆ ಮನೆಕೆಲಸ ಮಾಡಿ, ಅಡುಗೆ ಮಾಡಿ, ಮಕ್ಕಳ ಆರೈಕೆ ಮಾಡಿ, ಕುಡಿಯೋ ನೀರನ್ನು ಹೊಳೆಯಿಂದ ತರ್ತಿದ್ರು, ಸ್ನಾನಕ್ಕೆ ಭಾವಿಯಿಂದ ನೀರು ಸೇದೋರು. ಇದೆಲ್ಲಾ ಮುಗಿಸಿ ತೋಟಕ್ಕೆ ಹೋಗೋರು. ರಾತ್ರಿ ೯ ರಿಂದ ೧೨ರವರೆಗೆ ಅಡಿಕೆ ಸುಲಿಯೋರು, ಹಾಗೇ ಬೆಳಗ್ಗೆ ೪ ರಿಂದ ೬ ರವರೆಗೆ ಅಡಿಕೆ ಸುಲಿಯೋರು. ಬೇರೆಯವರ ಮನೆಗೂ ಸುಲಿಯೋಕೆ ಹೋಗೋರು. ಇಲ್ಲಿ ಸಹಕಾರ ಪದ್ಧತಿ ಇತ್ತು. ನಾವು ಅವರ ಮನೇಲಿ ಸುಲಿದ್ರೆ, ಅವರು ನಮ್ಮ ಮನೇಲಿ ಸುಲಿಯೋರು. ನನ್ನ ತಾಯಿ ಕುಟುಂಬಾನ ಕಟ್ಟಿ ಬೆಳೆಸಿದ್ರು.

- **ನಿಮ್ಮ ಬಾಲ್ಯದ ಬಗ್ಗೆ ಹೇಳಿ.**

ನಾನು ಮತ್ತೂರಿನಲ್ಲಿ Middle School ವರೆಗೆ ಓದಿದೆ. ನಂತರ High School ಶಿವಮೊಗ್ಗದಲ್ಲಿ. High School ಪಾಸಾದ ಮೇಲೆ Intermediate Collegeಗೆ ಮತ್ತೂರಿನಿಂದ ಶಿವಮೊಗ್ಗಕ್ಕೆ ಪ್ರತಿ ದಿವಸ ಎಂಟು ಕಿಲೋಮೀಟರ್ ನಡೀತಾ ಇದ್ದೆ. ಇಷ್ಟು ಓದಿದ್ರೆ ಕೆಲಸ ಸಿಗೋಲ್ಲ ಅಂತ ಮೈಸೂರಿಗೆ ಹೋಗಿ TCH (Teacher Certificate Higher) ಮಾಡಿಕೊಂಡೆ. ನಂತರ ಶಿವಮೊಗ್ಗದ ದೇಶೀಯ ವಿದ್ಯಾಶಾಲಾ (ಡಿ.ವಿ.ಎಸ್) ಅನ್ನುವ ಖಾಸಗಿ ಶಾಲೆಯಲ್ಲಿ ಅಧ್ಯಾಪಕನ ಕೆಲಸ ಸಿಗ್ತು. ೩೫ ವರುಷ ಸೇವೆ ಸಲ್ಲಿಸಿ ೧೯೮೫ರಲ್ಲಿ retire ಆದೆ.

- **ನಿಮಗೆ ಬಾಲ್ಯದಿಂದಲೂ 'ನಾನು ರೈತ ಆಗಬೇಕು, ವ್ಯವಸಾಯ ಮಾಡಬೇಕು' ಅನ್ನಿಸ್ತಾ ಇರಲಿಲ್ವಾ?**

ವ್ಯವಸಾಯದಲ್ಲಿ ಸುಖ ಇರಲಿಲ್ಲ. ನಾವು ನಾಲ್ಕು ಜನ ಅಣ್ಣತಮ್ಮಂದಿರು. ಒಬ್ಬೊಬ್ಬರಿಂದ ೩೦ ಗುಂಟೆ ಜಮೀನು ಬರ್ತಿತ್ತು.

ಮೂರು ಎಕರೆ ತರಿ ಬರ್‍ತಾ ಇತ್ತು. ಅದ್ರಲ್ಲಿ ಜೀವನ ಸಾಕಾಗೋಲ್ಲ. ವಿದ್ಯಾಭ್ಯಾಸ ಮಾಡಿ ನೌಕರಿಗೆ ಸೇರಿಕೋಬೇಕು ಅನ್ನುವ ಉದ್ದೇಶದಿಂದ ಓದಿದ್ದು, ನನ್ನ ಅಣ್ಣತಮ್ಮಂದಿರು primary school ನಿಂದ ಮುಂದೆ ಓದಲಿಲ್ಲ. ಆದರೆ ನನಗೆ ಪ್ರೋತ್ಸಾಹ ನೀಡಿದ್ರು. ಅವರೆಲ್ಲಾ ವ್ಯವಸಾಯಗಾರರಾದ್ರು. ೧೯೪೧ನೇ ಇಸವೀವರೆಗೂ ನಮ್ಮೂರಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಇರಲಿಲ್ಲ. ಎಲ್ಲರೂ ೭/೮ನೇ ತರಗತಿವರೆಗೆ ಓದೋರು, ವ್ಯವಸಾಯದ ವ್ಯವಹಾರಕ್ಕೆ ಆ ವಿದ್ಯಾಭ್ಯಾಸ ಸಾಕಾಗ್ತಾ ಇತ್ತು.

- **ಹ್ಯಾಗಿದ್ರೂ ವ್ಯವಸಾಯದಲ್ಲಿ ಸುಖ ಇಲ್ಲ ಅಂತಾನೇ ಕೆಲಸಕ್ಕೆ ಸೇರಿದ್ರಿ, ಆದ್ರೆ ಮತ್ತೆ ಜಮೀನು ಮಾಡುವ ಆಸಕ್ತಿ ಹ್ಯಾಗೆ ಬಂತು ತಮಗೆ?**

ಸಂಬಳ ಆವಾಗ ತುಂಬ ಕಡಿಮೆ. ನಾನು ಸೇರಿದಾಗ ತಿಂಗಳಿಗೆ ೨೫ ರೂಪಾಯಿ ಬರ್‍ತಾ ಇತ್ತು. ೪೦ ರೂಪಾಯಿ ಬಂದ್ರೆ ಹೇಗೋ ಜೀವನ ಮಾಡಬಹುದು, ೨೫ ರೂಪಾಯಿಯಲ್ಲಿ ಜೀವನ ಆಗೋಲ್ಲ ಅಂದ್ಕೊಂಡಿದ್ದೆ. ನಂತರ Middle Schoolಗೆ promotion ಸಿಕ್ತು. ಆಗ ೪೦ ರೂಪಾಯಿ ಸಂಬಳ. ಅದ್ರಲ್ಲೂ ಜೀವನ ಸಾಗ್ತಿರಲಿಲ್ಲ. ನಾವು ಮುಂದುವರೀಬೇಕಾದ್ರೆ ಕೃಷಿ ಮಾಡದೇನೇ ಬರೀ ನೌಕರೀಲಿ ಸಾಧ್ಯವಿಲ್ಲ ಅಂತ ಹೇಳಿ ಕೃಷಿಗೆ ಇಳಿದೆ.

- **ನೀವು ಜಮೀನು ಖರೀದಿಸಿದಾಗ ಇಲ್ಲಿ ವ್ಯವಸಾಯ ಹ್ಯಾಗಿತ್ತು? ಏನು ಧಾರಣೆಗೆ ಖರೀದಿ ಮಾಡಿದ್ರಿ? ಹಣ ಹ್ಯಾಗೆ ಹೊಂದಿಸಿದ್ರಿ?**

೧೯೬೦ರಲ್ಲಿ ಆಗ ಎಕರೆಗೆ ಎಂಟು ಸಾವಿರ ಇತ್ತು. ಇಲ್ಲಿನ ವೆಂಕಟೇಶ ಅವಧಾನಿಗಳಿಂದ ಮೂರು ಎಕರೆ ಜಮೀನು ಖರೀದಿಸಿದೆ, ಮತ್ತೂರಿನ ಎಂ.ಆರ್. ಸುಬ್ಬರಾಯ ಅನ್ನುವವರಿಂದ ಮೂರು ಎಕರೆ ಖರೀದಿಸಿದೆ. ಇದಲ್ಲದೆ ಎಂಟು ಎಕರೆ ತರೀನ ಗುತ್ತಿಗೆಗೆ ಮಾಡ್ತಾ ಇದ್ದೆ. ೧೪ ಎಕರೇಲಿ, ೪ ಎಕರೆ ಭತ್ತ, ೧೦ ಎಕರೆ ಕಬ್ಬು ಬೆಳೀತಾ ಇದ್ದೆ. ಇದಾದ ನಂತರ, ಇದ್ಯಾವುದೂ ಸುಖವಿಲ್ಲ, ಸುಮ್ಮನೇ ಸೀಗೆಮೆಳೆ ಮೇಲೆ ಬಟ್ಟೆ ಹಾಕಿ ಎಳೆದುಕೊಳ್ಳೋದು ಆಗುತ್ತೆ ಅಂತ ಹೇಳಿ, ಭತ್ತ ಕಬ್ಬು ವ್ಯವಸಾಯ ಕೈಬಿಟ್ಟು ಬಾಗಾಯ್ತಿಗೆ ಬಂದೆ. ಸ್ವಂತದ ಆರು ಎಕರೆ ಜಮೀನಿನಲ್ಲಿ, ೧೯೮೧-೮೫ರವರೆಗೆ ಅಡಿಕೆ ಕೂರಿಸಿದೆ. ಅದು ೧೯೯೦ರಲ್ಲಿ ಫಸಲಿಗೆ ಬಂತು.

- **ನೀವು ಶಾಲೆ ಕೆಲಸ ಹಾಗೂ ವ್ಯವಸಾಯದ ಕೆಲಸ ಹ್ಯಾಗೆ ನಿಭಾಯಿಸ್ತಾ ಇದ್ರಿ?**

ಸಾಧಾರಣವಾಗಿ ಬೆಳಗ್ಗೆ ನಾಲ್ಕಕ್ಕೆ ಏಳೂವೆ. ಎದ್ದು ತೋಟಕ್ಕೆ ಹೋಗ್ತಿದ್ದೆ. ಆಳುಗಳಿಗೆ ಏನೇನು instructions ಕೊಡಬೇಕೋ ಅದನ್ನೆಲ್ಲಾ ಕೊಟ್ಟು, ಒಂಭತ್ತು ಘಂಟೆಗೆ ಮನೆಗೆ ಬಂದು, ಸ್ನಾನ ಊಟ ಮುಗಿಸಿ ಕೆಲಸಕ್ಕೆ ಹೋಗ್ತಿದ್ದೆ. ಸಂಜೆ ಮನೆಗೆ ಬಂದ ಮೇಲೆ ಮತ್ತೆ ಗದ್ದೆ, ತೋಟದ ಬಳಿ ಹೋಗ್ತಿದ್ದೆ. ರಾತ್ರಿ ಎಂಟರವರೆಗೆ ಅಲ್ಲೇ ಇರ್ತಿದ್ದೆ. ಕಬ್ಬು ಹಾಕಿದಾಗ ರಾತ್ರಿಯಿಡೀ ಕೆಲಸ ಮಾಡಿರೋದೂ ಉಂಟು.

- **ನಿಮಗೆ ಕೃಷಿ ಪ್ರಶಸ್ತೀನೂ ಬಂದಿದೆ. ಅದರ ಬಗ್ಗೆ ಹೇಳಿ.**

ಹೊಸದಾಗಿ ಥಾಯ್‌ಚುಂಗ್ ಅನ್ನುವ ಭತ್ತದ ತಳಿ introduce ಮಾಡಿದ್ರು. ಅದನ್ನು ಜಪಾನ್ ಮಾದರೀಲಿ ಬೆಳೀಬೇಕು. ಅಂತ ಹೇಳಿ, ಒಂಭತ್ತು ಇಂಚ್ ಸಾಲು, ನಾಲ್ಕು ಇಂಚ್‌ಗೆ ಭತ್ತದ ಸಸಿ ನೆಟ್ಟು ಬೆಳೆದಿದ್ದೆ. ಎಕರೆಗೆ ೪೦ ಕ್ವಿಂಟಾಲ್ ಭತ್ತ ಬಂತು. ಮೊದಲು ಥಾಯ್‌ಚುಂಗ್ ಭತ್ತವನ್ನು ಎಕರೆಗೆ ೧೦ ಸೇರಿನಂತೆ, ಒಂದು ಕಡೆ, ನೆಲವನ್ನು ಶುದ್ಧಿ ಮಾಡಿ, ಪಾಕ ಮಾಡಿ, ನೀರು ಕಟ್ಟಿ ಚೆಲ್ಲಿದ್ವಿ. ಎಂಟು, ಒಂಭತ್ತು ದಿನದಲ್ಲಿ ಮೊಳಕೆ ಬಂತು. ೨೧/೨೨ ದಿನದ ಸಸಿಯನ್ನು ನಾಟಿ ಮಾಡಿದ್ವಿ. ಭತ್ತದ ಸಸಿಗಳನ್ನು ಕಿತ್ತು, ಬೇರನ್ನು ಔಷಧೀಲಿ ಅದ್ದಿ ನಾಟಿ ಮಾಡಿದ್ವಿ. ಸಾಲು ನಾಟಿ ಮಾಡಿದಾಗ intercultivation ಸಹ ಮಾಡಬಹುದು. ಕೈಬೆರಳುಗಳ ರೀತಿಯಲ್ಲಿ ಕಬ್ಬಿಣದಲ್ಲಿ ಸಲಕರಣೆ ಮಾಡಿಸಿ, ಅದರಲ್ಲಿ ಕಳೆ ತೆಗೆಸ್ದೆ. ಬಹಳ ಚೆನ್ನಾಗಿ ಬಂತು ಭತ್ತ. ಒಂದೊಂದು ಬೊಡ್ಡೇಲಿ ೫೦/೬೦ ತೆಂಡೆಗಳು ಬಂತು. ಕಾಳಿನ ತೂಕಾನೂ ಚೆನ್ನಾಗಿತ್ತು. ಹಾಗಾಗಿ ಎಕರೆಗೆ ೪೦ ಕ್ವಿಂಟಾಲ್ ಇಳುವರಿ ಬಂತು. ನನಗೆ ಜಿಲ್ಲಾಮಟ್ಟದಲ್ಲಿ ಮೊದಲನೇ ಬಹುಮಾನ ಸಿಗ್ತು. ಬಹುಮಾನವಾಗಿ ಒಂದು ಸಾವಿರ ರೂಪಾಯಿ ಸಿಕ್ತು, ಹಾಗೂ ಪ್ರಶಸ್ತಿಪತ್ರ ಕೊಟ್ರು. ನಾವು ಬೆಳೆಯುವವರೆಗೆ ಇಲ್ಲಿ ಭತ್ತದ ಒಂದೇ ಬೆಳೆ ತೆಗೀತಾ ಇದ್ರು. ನಾನು ಬೆಳೆದ ಮೇಲೆ ಇಲ್ಲಿ ವರುಷಕ್ಕೆ ಎರಡು ಬೆಳೆ ತೆಗೆಯಲು ಆರಂಭಿಸಿದ್ರು. ಒಂದು ಬೆಳೆ ತೆಗೆದ್ರೆ ಬೆಳೆ ಚೆನ್ನಾಗಿರುತ್ತೆ. ಎರಡು ಬೆಳೆ ತೆಗೆದ್ರೆ ಗದ್ದೆ ಹಾಳಾಗುತ್ತೆ ಅನ್ನುವ ಪ್ರತೀತಿ ಇತ್ತು. ನಾನು ಪರೀಕ್ಷೆ ಮಾಡಿದೆ, ಪ್ರಯೋಗಾನೂ ಮಾಡಿದೆ. ಮೊದಲನೇ ಬೆಳೆ ಜೂನ್‌ನಲ್ಲಿ ಆರಂಭವಾಗಿ ನವೆಂಬರ್‌ನಲ್ಲಿ ಖಟಾವಿಗೆ ಬರೋದು. ಮತ್ತೊಂದು ಬೆಳೆ February 15ರ ನಂತರ ನಾಟಿ ಮಾಡಿ, Mayನಲ್ಲಿ ಖಟಾವಿಗೆ ಬರೋದು. ಒಮ್ಮೊಮ್ಮೆ ಅದು ಮಳೆಗೆ ಸಿಕ್ಕಿರೋದೂ ಉಂಟು.

- **ಅಡಿಕೆ ತೋಟವನ್ನು ಹೇಗೆ ಎಬ್ಬಿಸಬೇಕು? ವಿವರವಾಗಿ ಹೇಳಿ.**

  ಒಂದು ತೋಟ ಎಬ್ಬಿಸಬೇಕಾದ್ರೆ ನಾವು ಮಕ್ಕಳನ್ನು ಬೆಳೆಸಲು ಎಷ್ಟು attention ಕೊಡಬೇಕೋ ಅಷ್ಟೇ attention ಕೊಡಬೇಕು. ಬೆಳಗ್ಗೆ, ಮಧ್ಯಾಹ್ನ, ಸಂಜೆ ಮೂರು ಹೊತ್ತೂ ಗಮನ ಇಟ್ಟು ನೋಡಬೇಕು. ಸಸಿಗಳನ್ನು ಮೊದಲು ಪಾತೀಲಿ ಬೆಳೆಸ್ತೀವಿ. ನಾಲ್ಕು ರಿಂದ ಐದು ಇಂಚು ಮೊಳಕೆ ಬಂದ ಕೂಡಲೆ ಅದನ್ನು ಬೇರೆ ಕಡೆ ಪಾತಿ ಮಾಡ್ತೀವಿ, ಒಂದೂವರೆ ಅಡಿಗೆ ಒಂದರಂತೆ. ಒಂದು ವರುಷದ ನಂತರ ಒಂದು ಅಡಿ ಎತ್ತರ ಬೆಳೆದ ಮೇಲೆ, ಅದನ್ನು ನಾವು ಎಲ್ಲಿ ನಾಟಿ ಮಾಡಬೇಕೋ ಆ ಜಮೀನಿನಲ್ಲಿ ಎಂಟು/ಒಂಭತ್ತು ಅಡಿಗೆ ಒಂದರಂತೆ ನೆಡಬೇಕು. ಅದು ೧೦ ವರುಷಕ್ಕೆ ಪೂರ್ಣ ಫಸಲಿಗೆ ಬರುತ್ತೆ. ಬಾಗಾಯ್ತಿನಲ್ಲಿ ಬಹಳ ಮುಖ್ಯವಾದದ್ದು, ಕಳೆ ಆಗದ ಹಾಗೆ ನೋಡಿಕೋಬೇಕು. ಕಳೆ ಆದಾಗ ತೆಗೆಸಬೇಕು. ಇದಕ್ಕೆ ಬಹಳ ಖರ್ಚಾಗುತ್ತೆ. ಎಕರೆಗೆ ಒಂದು ಸಾವಿರದವರೆಗೂ ಆಗೋದುಂಟು. ಮೂರು ನಾಲ್ಕು ಬಾರಿ ತೆಗೆಸಬೇಕಾಗುತ್ತೆ. ಬೇಸಗೆ ಪೂರ್ತಿ ೧೫ ದಿನಕ್ಕೆ ಒಂದು ಸಲ ನೀರನ್ನು ಕೊಡಬೇಕು. ಇದಲ್ಲದೆ ತೋಟಕ್ಕೆ ಅಗೆತ ಮಾಡಬೇಕು. ನೀರು ಸುಲಭವಾಗಿ ಹರಿಯುವ ಹಾಗೆ, ಮಳೆಗಾಲದಲ್ಲಿ ಹೆಚ್ಚಾದ ನೀರು ಹರಿದು ಹೋಗುವ ಹಾಗೆ ಕಾಲುವೆಗಳನ್ನು ಇಟ್ಟುಕೋಬೇಕು. ಮನೆಗೊಬ್ಬರ ಹಾಕಬೇಕು. ಕಾಡಿನ ಮಣ್ಣು, ಹಾಗೇ ಕೆರೆಮಣ್ಣನ್ನು, ಮರಕ್ಕೆ ಎರಡು ಬುಟ್ಟಿ ಹಾಗೆ ಕೊಟ್ಟರೆ ಒಳ್ಳೆಯದು. ಇದಲ್ಲದೆ, ನಾವು 17:17:17 ಅಥವಾ 19:19:19 ರಾಸಾಯನಿಕ ಗೊಬ್ಬರವನ್ನು ಪ್ರತಿಮರಕ್ಕೆ ೨೫೦ ರಿಂದ ೩೦೦ ಗ್ರಾಂ ವರೆಗೆ ಕೊಡ್ತೀವಿ - ವರುಷಕ್ಕೆ ಒಂದು ಬಾರಿ, ಅದೂ ಮುಂಗಾರಿನ ಜೂನ್ ತಿಂಗಳಿನಲ್ಲಿ. ನಾನು ತೋಟದ ಮಣ್ಣು ಪರೀಕ್ಷೆ ಇದುವರೆಗೆ ಮಾಡಿಸಿಲ್ಲ. ಅಡಿಕೆಗೆ ಕಪ್ಪುಮಣ್ಣು ಬಹಳ ಸೂಕ್ತ. ಸ್ವಲ್ಪ ಕಲ್ಲು ಮಿಶ್ರಿತವಾಗಿದ್ರೆ ಒಳ್ಳೆಯದು. ತೆಂಗಿಗೆ ಕೆಂಪುಮಿಶ್ರಿತ ಕಲ್ಲುಮಣ್ಣು ಬಹಳ ಉತ್ತಮ. ನಾವು ಅಡಿಕೆ ತೋಟದ ಸುತ್ತಾ ತೆಂಗನ್ನು ಬೆಳೆಯೋದು ಒಂದು ರೀತಿ ಅಲಂಕಾರಿಕವಾಗಿದೆ. ನಾನು ಮಾತ್ರ ಆರು ಎಕರೆ ಜಮೀನಿನಲ್ಲಿ ಮಧ್ಯದಲ್ಲಿ ರಸ್ತೆ ಮಾಡಿಕೊಂಡು, ಅದನ್ನು ಸ್ವಲ್ಪ ಎತ್ತರಿಸಿ, ಅಲ್ಲಿ ತೆಂಗಿನ ಗಿಡ ಹಾಕಿ, ಅದಕ್ಕೆ ಈ ಜಲ್ಲಿಕಲ್ಲನ್ನು ತೆಗೆದುಕೊಂಡು ಹೋಗಿ ಹಾಕಿದೀನಿ, ಮರದ ಸುತ್ತಲೂ ಎತ್ತರವಾಗಿದೆ. ಹೀಗೆ ನಾವು ಎತ್ತರದಲ್ಲಿ ಹಾಕಿರೋದ್ರಿಂದ ಅದಕ್ಕೆ ಥಂಡಿ ಜಾಸ್ತೀನೂ ಆಗೋದಿಲ್ಲ, ಕಡಿಮೇನೂ ಆಗೋಲ್ಲ. ಕೆಳಗಿನಿಂದ ತೇವಾನ ಹೀರುತ್ತೆ. ಅತಿಯಾದ ನೀರು ಬಸಿಯುತ್ತೆ. ಹಾಗಾಗಿ ಫಸಲು ತೆಂಗಿನಲ್ಲೂ ಚೆನ್ನಾಗಿದೆ. ತೆಂಗಿನ ಮರಕ್ಕೆಲ್ಲಾ ಕೆಂಪು ಮಣ್ಣು ಹೊರಗಿನಿಂದ ತರಿಸಿ ಹಾಕಿಸ್ತೀನಿ. ಅಡಿಕೆಗೆ ಕಪ್ಪು ಮಣ್ಣು ಹಾಕಿಸ್ತೀನಿ.

- **ಬಾಳೆ ಬೇಸಾಯ ನೀವು ಮಾಡಿಲ್ವಾ?**

  ನಾನು ಪಚ್ಚಬಾಳೇನ ಒಂದೂವರೆ ಎಕರೇಲಿ ಬೆಳೆದಿದೀನಿ. ಒಂದು ವರುಷ ಇಳುವರಿ ಬಂತು. ಮುಂದಿನ ವರುಷ ಬರಲಿಲ್ಲ. ಹಾಗಾಗಿ ಕೀಳಿಸಿದೆ. ನಮ್ಮಲ್ಲಿ ಬಾಳೆಗೆ ಉಪಟಳ ಹೆಚ್ಚು. ಕಳ್ಳರ ಹಾವಳಿ ಜಾಸ್ತಿ. ಬಾಳೆ ಎಲೆ ಕೂಡ ನಮಗೆ ಸಿಗೋದಿಲ್ಲ. ಬಾಳೆ ಹಾಕಿದ್ರೆ ಕಳ್ಳರ ಹೊಟ್ಟೆ ತುಂಬಿಸೋದಾಗುತ್ತೆ, ಖರ್ಚೆಲ್ಲಾ ನಮಗೆ ಬರುತ್ತೆ ಅಂತ ಬಾಳೆ ಬೆಳೆಯಲಿಲ್ಲ. ಅಡಿಕೆ ಕಳ್ಳತನ ಕಡಿಮೆ. ನಾನು ಹಗಲು ರಾತ್ರಿ ಕಾವಲು ಇಟ್ಟಿರ್‍ತೀನಿ. ಅಲ್ಪ ಸ್ವಲ್ಪ ಕಳ್ಳತನ ಆದ್ರೂ ದೊಡ್ಡ ಪ್ರಮಾಣದಲ್ಲಿ ಆಗೋಲ್ಲ.

- **ವಿದ್ಯಾವಂತರು ವ್ಯವಸಾಯ ಮಾಡಿದ್ರೆ ಚೆನ್ನಾಗಿ ಮಾಡಬಹುದಾ?**

  ಧಾರಾಳವಾಗಿ. ವಿದ್ಯಾವಂತರು ವ್ಯವಸಾಯ ಮಾಡಿದ್ರೆ scientific ಆಗಿ, ಹೊಸ ಹೊಸ method ತಿಳಿದು ಮಾಡೋದಕ್ಕೆ ಅನುಕೂಲ. ಅವಿದ್ಯಾವಂತರಾದ್ರೆ ಅಪ್ಪ, ಅಜ್ಜ ಯಾವ ರೀತಿ ಮಾಡಿದ್ರೋ ಅದೇ ರೀತಿ ಮಾಡಬೇಕಾಗುತ್ತೆ. Experimental mind ಇರೋದಿಲ್ಲ.

- **ನಿಮ್ಮ ವ್ಯವಸಾಯದಲ್ಲಿ ಏನೇನು ಪ್ರಯೋಗಗಳನ್ನು ಮಾಡಿದೀರಿ?**

  ಜಪಾನ್ ವಿಧಾನದಲ್ಲಿ ಭತ್ತ ಬೆಳೆದದ್ದು, ಅಡಿಕೆ ಒಳಗೆ ಕಳೆ ತೆಗೆಸಲು ಶ್ರಮ ಬರುತ್ತೆ ಅಂತ ಒಂಟಿ ಎತ್ತಿನ ಬೇಸಾಯ ಮಾಡಿದ್ದು, ಅಂದ್ರೆ ಒಂದು ಎತ್ತು ಬೇಸಾಯ ಹಿಡಿಯೋದು. ಅದರಲ್ಲಿ ಬೇರೆ ಬೇರೆ ತರಹದ cultivators, ನೇಗಿಲು, ಎಲ್ಲಾ ನಾವೇ plan ಮಾಡಿ ಹಾಕಿದ್ವಿ. Workshopಗೆ ಹೋಗಿ, ನೇಗಿಲಿಗೆ ಬೇರೆ ತರಹದ frame ಜೋಡಿಸಿ, ಒಂಟೆತ್ತಿನ ಗಾಡೀನ ಎತ್ತಿನ ಎರಡೂ ಪಕ್ಕಕ್ಕೆ ಬರುತ್ತಲ್ಲಾ, ಆ ರೀತಿ, ಒಂದೂವರೆ inch ಕಬ್ಬಿಣದ pipe ಹಾಕಿ, ಹಲಸಿನ ಮರದ ನೊಗ ಹಾಕಿ, ಉಳುಮೆ ಮಾಡಿದ್ದೇನೆ. ತೊಂದರೆ ಬಂದಾಗ ನಾನೇ ಉಪಾಯವನ್ನೂ ಹುಡುಕಿದೆ. ಕೊನೆಗೆ ಯಶಸ್ವಿಯಾಯ್ತು. ಆರು ಎಕರೇಲೂ ಸಹ ಕಳೆ ಆಗದ ಹಾಗೆ, ಬೇಸಿಗೆ ಪೂರ್ತಿ ಬೇಸಾಯ ಮಾಡಿಕೊಂಡು ಇದ್ವಿ. ಇದನ್ನು ನಾನೇ ಸ್ವತಃ ಆಲೋಚಿಸಿದ್ದು. ಜೋಡೆತ್ತಿನ ಬೇಸಾಯ ತೋಟದಲ್ಲಿ

ಹೋಗೋದಿಲ್ಲ. ಮರಗಳಿಗೆ ಹೊಡೆಯುತ್ತೆ, ಒಂಟೆತ್ತಿನ ಬೇಸಾಯ ಆದ್ರೆ ಮರದ ಹತ್ತಿರದವರೆಗೂ ಬೇಸಾಯ ಮಾಡಬಹುದು, ಕಳೆ ತೆಗೀಬಹುದು ಅನ್ನುವ ಉದ್ದೇಶದಿಂದ. ಹಾಗೇ ಮನೇಲಿ ಒಂದು ಹೋರಿ ಹುಟ್ಟಿತ್ತು. ಅದು ಭೀಮಗಾತ್ರ. ಚೆನ್ನಾಗಿತ್ತು. ಒಂಟೆತ್ತಿನ ಬೇಸಾಯ ಮಾಡಿದ್ರೆ ಅದಕ್ಕೆ ಎಳೆಯೋದಕ್ಕೆ ಸಾಮರ್ಥ್ಯ ಇದೆ ಅನ್ನಿಸಿತು. ಹಾಗಾಗಿ ಮಾಡಿದೆ. ಯಶಸ್ವೀನೂ ಆದೆ.

ಇವತ್ತಿಗೂ ಕೂಡ, ತೋಟದಲ್ಲಿ ಕಳೆ ಆಗದ ಹಾಗೆ ಅಡಿಕೆ ಮರದ ಸೋಗೆ ಬೀಳುತ್ತಲ್ಲಾ, ಸೋಗೇನ, ಮರದ ಸಾಲಿನ ಮಧ್ಯೆ ತುಂಡು ಮಾಡಿ ಹಾಕ್ತಾ ಇದೀವಿ. ಅದ್ರಿಂದ ಕಳೆ ಬೆಳವಣಿಗೆ ಕಡಿಮೆಯಾಗುತ್ತೆ, ಕಳೆ ಉಪಯೋಗಿಸಿಕೊಳ್ಳುವ ಗೊಬ್ಬರವನ್ನು ಸಹ ಅಡಿಕೆ ಮರವೇ ಬಳಸಿಕೊಳ್ಳುತ್ತೆ.

- **ಹಸುಗಳ ಸಾಕಾಣಿಕೇನ ಮಾಡ್ತಾ ಇಲ್ವಾ?**

  ಹಸುಗಳ ಸಾಕಾಣಿಕೆ ತುಂಬಾ ಕಷ್ಟದ ಕೆಲಸ. ಇತ್ತೀಚೆಗೆ ಮೇವಿಗೆ ತುಂಬಾ ತೊಂದರೆ. ಈ ಮುಂಚೆ ನಾಲ್ಕು ರಾಸು ಇತ್ತು. ಆದರೆ ಕಳೆದ ಹತ್ತು ವರುಷದಿಂದ ಹಸು ಸಾಕ್ತಾ ಇಲ್ಲ. ಈಗ ನಾನು ಭತ್ತ, ಕಬ್ಬು ಸಹ ಬೆಳೀತಾ ಇಲ್ಲ. ಬರೀ ಬಾಗಾಯ್ತು ಅಷ್ಟೆ.

- **ವ್ಯವಸಾಯದಿಂದ ನಿಮಗೆ ವೈಯಕ್ತಿಕವಾಗಿ ಏನು ಉಪಯೋಗವಾಗಿದೆ?**

  ಒಂದು ೨೦ ಲಕ್ಷ ರೂಪಾಯಿ ಆದಾಯ ಬಂದಿದೆ. ಮನೆ ಕಟ್ಟಿದೀನಿ. ತೋಟವನ್ನು ಆಬಾದಿಗೆ ತಂದಿದೀನಿ. ಹೆಣ್ಣುಮಕ್ಕಳ ಮದುವೆ, ಮನೆ ಖರ್ಚನ್ನು ತೂಗಿಸಲು ನೆರವಾಗ್ತಿದೆ. ವ್ಯವಸಾಯದಿಂದ ನನಗೆ ಅನುಕೂಲವಾಗಿದೆ. ಮೊಮ್ಮಕ್ಕಳ ಹೆಸರಿನಲ್ಲೆಲ್ಲಾ ವರುಷಕ್ಕೆ ಐದು ಸಾವಿರದ ಹಾಗೆ ವರುಷಕ್ಕೆ ೫೦ ಸಾವಿರ ರೂಪಾಯಿ fixed deposit ಮಾಡಿದೆ. ಒಂಭತ್ತು ಜನ ಮೊಮ್ಮಕ್ಕಳ ಭವಿಷ್ಯಕ್ಕೆ ಕಳೆದ ಐದು ವರುಷದಿಂದ ಈ ಕೆಲಸ ಮಾಡ್ತಾ ಇದೀನಿ. ಆದರೆ ಈಗ ಅಡಿಕೆ ಧಾರಣೆ ಕುಸಿದಿರೋದ್ರಿಂದ ಮುಂದೆ ಕಷ್ಟ ಆಗಬಹುದು.

- **ನಿಮ್ಮ ವ್ಯವಸಾಯವನ್ನು ಮಗ ಮುಂದುವರಿಸ್ತಾನಾ?**

  ಮುಂದುವರೆಸ್ತಾನೆ. ಅವನಿಗೆ ಆಸಕ್ತಿ ಇದೆ. ರೈತಾಪಿ ಕೆಲಸದಲ್ಲಿ ಹೊಟ್ಟೆ ಹೊರೀಬಹುದು, ಆದ್ರೆ ಮಕ್ಕಳ ವಿದ್ಯಾಭ್ಯಾಸ ಕಷ್ಟ. ಒಳ್ಳೊಳ್ಳೆ ಕಡೆ ಕಳಿಸಲು ಆಗೋಲ್ಲ. ಅವರು ಇಲ್ಲಿಂದಲೇ ಓಡಾಡಬೇಕಾಗುತ್ತೆ. ಪಟ್ಟಣದ ಕಡೆ ಇದ್ರೆ ಮಕ್ಕಳ ಪುರೋಭಿವೃದ್ಧಿಗೆ ಅನುಕೂಲ. ಹಾಗಾಗಿ ಈಗ ನನ್ನ ಮಗ ಪಟ್ಟಣದಲ್ಲಿರುವ ಬ್ಯಾಂಕ್‌ನಲ್ಲಿ clerk ಆಗಿದ್ದಾನೆ.

- **ಹೆಚ್ಚು ಓದಿದ್ರೆ ಮಕ್ಕಳು ವ್ಯವಸಾಯಕ್ಕೆ ಬರೋದಿಲ್ವಲ್ಲಾ?**

  ತಿಂಗಳಿಗೆ ೨೫ ರಿಂದ ೩೦ ಸಾವಿರ ತೊಗೊಳ್ಳೋದಾದ್ರೆ ವ್ಯವಸಾಯ ಬೇಡವೇ ಬೇಡ. ಹಳ್ಳಿಗೆ ಬರೋದೂ ಬೇಡ. ನನಗೆ ಅಂದ್ರೆ ಸಂಬಳ ತುಂಬ ಕಮ್ಮಿ ಬರ್ತಿತ್ತು. ವ್ಯವಸಾಯದ ಆಶ್ರಯ ನಮಗೆ ಬೇಕಿತ್ತು. ನನಗೆ ಸಂಬಳ ಜಾಸ್ತಿ ಬಂದಿದ್ರೆ ನಾನೂ ಖಂಡಿತವಾಗಿ ವ್ಯವಸಾಯ ಮಾಡ್ತಿರಲಿಲ್ಲ. ವ್ಯವಸಾಯದಿಂದ ಮುಂದೆ ಬರಬೇಕು ಅಂತ ಮಾಡಿದೆ, ನನಗೆ ವಿಶೇಷವಾದ ಅಕ್ಕರೆಯೇನೂ ವ್ಯವಸಾಯದ ಮೇಲಿಲ್ಲ. ವ್ಯವಸಾಯದಿಂದ ಹೆಚ್ಚು ಸಂಪಾದನೆ ಮಾಡಲೇಬೇಕು ಅಂತ ಎಷ್ಟೋ ಬಾರಿ ೪೮ ಘಂಟೆಗಳ ಕಾಲ ನಿದ್ದೆ ಮಾಡದೆಯೇ ನಿರಂತರವಾಗಿ ಕೆಲಸ ಮಾಡಿದೀವಿ. ಸಂಪಾದನೆ ನನ್ನ ಧ್ಯೇಯ. ರಾತ್ರಿ ಹೊತ್ತು ಒಂದೊಂದು ಗಾಡಿ ಸೊಪ್ಪನ್ನು ಕಡಿದು ಚಾನಲ್‌ಗೆ ಅಡ್ಡ ಹಾಕಿ, ನಮ್ಮ ಕಡೆ ನೀರು ತಿರುಗಿಸಬೇಕಿತ್ತು. ನಾವು ಒಂದು ಘಳಿಗೆ ಮಲಗಿದ್ರೂ ಕೂಡ ನಮ್ಮತನಕ ನೀರು ತಲುಪ್ತಾ ಇರಲಿಲ್ಲ.

- **ನಿಮ್ಮ ತಾಯಿಯವರು ಕಷ್ಟಪಟ್ಟ ರೀತಿಯಲ್ಲೇ ನಿಮ್ಮ ಹೆಂಡತಿಯೂ ಸಹ ಕಷ್ಟಪಟ್ರಾ?**

  ಅವಳು ಅಷ್ಟು ಕಷ್ಟಪಟ್ಟಿಲ್ಲ. ಅವಳು ಬರುವ ಕಾಲಕ್ಕೆ ಸುಖದ ಕಾಲ ಬರದೇ ಹೋದ್ರೂ, ಕಷ್ಟದ ಕಾಲ ಕಳೆದಿತ್ತು. ನನ್ನ ಹೆಂಡತಿ ಬರುವ ಹೊತ್ತಿಗೆ ನಮ್ಮ ಮನೇಲಿ ನಾಲ್ಕು ಜನ ಸೊಸೆಯಂದ್ರು. ಎಲ್ಲರೂ ಮನೆಕೆಲಸ ಮಾಡೋರೇ ಹೊರತು ತೋಟದ ಕೆಲಸ ಮಾಡ್ತಿರಲಿಲ್ಲ. ಅತ್ತೆ-ಸೊಸೆಯರ ನಡುವಿನ ಸಂಬಂಧವೂ ಚೆನ್ನಾಗಿತ್ತು. ನನ್ನ ಹೆಂಡತಿ ವ್ಯವಸಾಯದ ಬದುಕಿನಲ್ಲೂ ಜತೆಯಾಗಿದ್ದಾಳೆ. ಸಕಾಲಕ್ಕೆ ಸಲಹೆ ನೀಡಿದ್ದಾಳೆ.

- **ವ್ಯವಸಾಯದ ಗುಟ್ಟು ಏನು? ಹ್ಯಾಗೆ ಮಾಡಿದ್ರೆ ಆದಾಯ ಬರುತ್ತೆ?**

  ತಪಸ್ಸು ಮಾಡಿದ ಹಾಗೆ ಮಾಡಿದ್ರೆ ಮಾತ್ರ ವ್ಯವಸಾಯ. ಅವನಿಗೆ ಅನುಕೂಲವಾಗುತ್ತೆ. ನಾಲ್ಕು ಕಡೆ ಕಾಲಿಟ್ಟು, ಎಲ್ಲಾ ಕಸುಬು

ಮಾಡಿದ್ರೆ ಬೇಸಾಯದಲ್ಲಿ ಯಾರೂ ಉದ್ಧಾರವಾಗೋಕೆ ಆಗೋಲ್ಲ. ಆಮೇಲೆ ಬೇಸಾಯವನ್ನು ಚಿಕ್ಕದಾಗಿಯೇ ಆರಂಭಿಸಬೇಕು. ಒಂದೇ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಮಾಡಬಾರದು. ನಾನು ಮೊದಲು ಒಂದೂವರೆ ಎಕರೆಗೆ ಅಡಿಕೆ ಕೂರಿಸಿದೆ. ನಾಲ್ಕು, ಐದು ವರುಷ ಕಳೆದ ಮೇಲೆ ಇನ್ನೊಂದು ಎರಡು ಎಕರೆ ಕೂಡಿಸಿದೆ. ಮತ್ತೆ ಕೆಲಸಮಯ ಕಳೆದ ಮೇಲೆ ಮೂರು ಎಕರೆ ಕೂಡಿಸಿದೆ. ನಿಧಾನವಾಗಿ, ಹಂತ ಹಂತವಾಗಿ ನಾನು ಬಾಗಾಯ್ತು ಮಾಡಿದ್ದು. ಕೃಷೀನೇ ನೆಚ್ಚಿಕೊಂಡು ಮಾಡಿದ್ರೆ ಪ್ರಗತಿ ಸಾಧ್ಯ.

- **ಜೀವನದುದ್ದಕ್ಕೂ ಯಾವ ತತ್ತ್ವ ಪಾಲಿಸಿದ್ರೀ?**

ನಾನು ಚಿಕ್ಕವಯಸ್ಸಿನಿಂದ ಈ ವಯಸ್ಸಿನವರೆಗೆ ಯಾವ ಕೆಲಸ ಮನಸ್ಸಿಗೆ ಬಂತೋ, ತತ್‌ಕ್ಷಣ ಮಾಡಬೇಕು. ಅದನ್ನು ನಾಳೆ ಮಾಡ್ತೀನಿ ಅಂತ ಬಿಡಕೂಡದು. ಹಿಮಾಲಯದಲ್ಲಿ ಮಿಲಿಟರಿಯವರು ಯಾವ ರೀತಿ ಶಿಸ್ತಿನಿಂದ ಇರ್ತಾರೋ ನಾವೂ ಅದೇ ರೀತಿ ಶಿಸ್ತಿನಿಂದ ಇರಬೇಕು. ಸೋಮಾರಿಗಳಾಗಬಾರದು ಅನ್ನುವುದು ನನ್ನ ತತ್ತ್ವ.

- *ಒಳ್ಳೆಯದು ಕೃಷ್ಣಸ್ವಾಮಿಯವರೆ, ಇದುವರೆಗೆ ನಿಮ್ಮ ಅನುಭವಗಳನ್ನು ತಿಳಿಸಿದ್ರಿ. ವಂದನೆಗಳು.*

ನಮಸ್ಕಾರ.

ಉ) ರಾಜಾರಾಮಮೂರ್ತಿ ಇ/ಮ ಲಕ್ಷ್ಮೀರಮಣ ಅವಧಾನಿ

ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237745 (ಮನೆ) / 08182 237684 (ಕಛೇರಿ)

'ರಾಸಾಯನಿಕ ಗೊಬ್ಬರವನ್ನು ಅಡಿಕೆ ತೋಟದಲ್ಲಿ ಬಳಸಬಾರದು; ಮರ ತೆಳ್ಳಗಾಗಿ, ಸತ್ತ್ವ ಕಳೆದುಕೊಳ್ಳುತ್ತೆ. ನೂರು ವರುಷ ಬಾಳುವ ಮರ ಕೇವಲ ಇಪ್ಪತ್ತು ವರುಷದಲ್ಲಿ ನೆಲ ಸೇರುತ್ತೆ' ಅಂತಿದ್ರು ಹಿಂದೆ. ಆದರೆ ಈಗಿನ ನಮ್ಮ ಆಧುನಿಕ ವಿಜ್ಞಾನದ ಚಿಂತನೆ ಯಾವ ರೀತಿ ಇದೆ ಅಂದ್ರೆ, ನೂರು ವರುಷ ಬಾಳುವ ಮರ ಕೇವಲ ೨೦ ವರುಷದಲ್ಲೇ ನೂರು ವರುಷದ ಫಸಲು ಕೊಡುವುದಾದ್ರೆ ಅದು ಅಷ್ಟೇ ಬಾಳಲಿ, ಅದು ಹೋದ ಮೇಲೆ, ಮತ್ತೊಂದನ್ನು ನೆಡೋಣ, ಅದ್ರಿಂದ ಅಧಿಕ ಇಳುವರಿ ಪಡೆಯೋಣ, ಮತ್ತೆ ಸಸಿ ಹಾಕೋಣ, ನೂರು ವರುಷದಲ್ಲಿ ಐದು ಮರ ಆಗಲಿ ತೊಂದರೆ ಏನೀಗ? ಅನ್ನುವ ಚಿಂತನೆ. ಇದು ಕೃಷಿಯ ಅಭಿವೃದ್ಧಿಯೋ, ಅವನತಿಯೋ ಹೇಳುವುದು ಕಠಿಣ.


ರಾಜಾರಾಮಮೂರ್ತಿ:ಮಾತಾಡುವ ಮೂಡಿನಲ್ಲಿ:ಹೊಸಹಳ್ಳಿ

ಹೊಸಹಳ್ಳಿಯಿಂದ ಮುದ್ರಿತವಾಗಿ ಪ್ರಸಾರವಾಗುವ '*ಸಂಕೇತಿ ಸಂಗಮ*' ಸಂಕೇತಿಗಳ ಜೀವನಾಡಿ. ಈ ಜೀವನಾಡಿಯ ಮಿಡಿತವೇ ರಾಜಾರಾಮಮೂರ್ತಿ. ಪ್ರತಿ ಸಂಕೇತಿಗಳ ಕುಟುಂಬವೂ ಮನೆಯಂಗಳದಲ್ಲಿಯೇ ಕುಳಿತು, ದೂರದ ತಮ್ಮ ಬಂಧು ಬಾಂಧವರ ವಿಚಾರಗಳನ್ನು ತಿಳಿಯುವ ಸ್ನೇಹಸೇತು ಈ **ಸಂಕೇತಿ ಸಂಗಮ.** ರಾಜಾರಾಮಮೂರ್ತಿಯವರದ್ದು ಮೂಲತಃ ಕೃಷಿ ಕುಟುಂಬ. ಹೊಸಹಳ್ಳಿಯ ಲಕ್ಷ್ಮೀರಮಣ ಅವಧಾನಿ ಹಾಗೂ ಅನ್ನಪೂರ್ಣಮ್ಮ ದಂಪತಿಗಳಿಗೆ ಮೂರು ಗಂಡು ಹಾಗೂ ಆರು ಜನ ಹೆಣ್ಣುಮಕ್ಕಳು. ಮೊದಲನೇ ಮಗನೇ ರಾಜಾರಾಮಮೂರ್ತಿ. ಇವರ ಪತ್ನಿ ವಿಜಯಲಕ್ಷ್ಮಿ ಹಾಸನ ತಾಲ್ಲೂಕು

ಎಳ್ಳೇಶಪುರದ ಗೋಪಾಲಕೃಷ್ಣಯ್ಯ ಹಾಗೂ ವನಮಾಲಾ ದಂಪತಿಗಳ ಮಗಳು. ರಾಜಾರಾಮಮೂರ್ತಿಯವರ ತಮ್ಮ ಶ್ರೀಕಂಠ ಅವಧಾನಿ ಹಾಗೂ ಅವರ ಪತ್ನಿ ವಿದ್ಯಾಲಕ್ಷ್ಮಿ ವ್ಯವಸಾಯದಲ್ಲಿ ನೆರವಾಗಿದ್ದಾರೆ. ತಮ್ಮ ಕುಟುಂಬದ, ಹಾಗೇ ಹೊಸಹಳ್ಳಿಯ ಕೃಷಿ ಬದುಕನ್ನು ರಾಜಾರಾಮಮೂರ್ತಿಯವರು ನೇರವಾಗಿ ತಿಳಿಸಿದ್ರು.

"ನನ್ನ ತಂದೆ, ಅಜ್ಜ, ಮುತ್ತಜ್ಜ ಎಲ್ಲರೂ ಇದೇ ಊರಲ್ಲಿ ಕೃಷಿಯನ್ನೇ ಅವಲಂಬಿಸಿ ಬದುಕಿದವರು. ನಮ್ಮ ಕುಲಾಚಾರ ವೈದಿಕ ವೃತ್ತಿಯಾದರೂ ಕೂಡ, ಹೊಟ್ಟೆಪಾಡಿಗೆ ನಾವು ಆಶ್ರಯಿಸಿದ್ದು ಕೃಷಿಯನ್ನೇ. ನಮ್ಮದು ಬಾಗಾಯ್ತು ಹಾಗೂ ತರಿ ಎರಡೂ ಇತ್ತು. ಭತ್ತಾನೂ ಬೆಳೀತಾ ಇದ್ವಿ. ನಾವು ಹಿಂದೆ ನೋಡಿದಂತೆ ಇಲ್ಲಿ ಪ್ರತಿಯೊಂದು ಮನೇಲೂ ಎತ್ತುಗಾಡಿ ಇತ್ತು. ಬೇಸಾಯದ ಉಪಕರಣವನ್ನೆಲ್ಲಾ ಮನೆಯಲ್ಲಿ ಇಟ್ಟುಕೊಂಡಿದ್ರು. ಬೇರೆ ರೈತಾಪಿ ಜನ ಬಂದು ನಮ್ಮ ಗದ್ದೇಲಿ ದುಡೀತಾ ಇದ್ರು. ರೈತಾಪಿ ಜನರ ಬಳಿ ಕೃಷಿ ಉಪಕರಣಗಳು ಇರಲಿಲ್ಲ. ಗುದ್ದಲಿ, ಪಿಕಾಸಿ, ನೇಗಿಲು, ಎತ್ತು, ಗಾಡಿ ಎಲ್ಲ ಪರಿಕರಗಳೂ ನಮ್ಮವೆ, ಶ್ರಮ ಮಾತ್ರವೇ ಅವರ ಬಂಡವಾಳವಾಗಿತ್ತು. ಊಟ, ತಿಂಡಿಯನ್ನು ಮನೆಯಿಂದಲೇ ಸಾಗಿಸ್ತಾ ಇದ್ವು. ಕೃಷಿ ಕುಟುಂಬದ ಸಂಪೂರ್ಣ ಹಳ್ಳಿಯ ಲಕ್ಷಣ ಹಿಂದೆ ಹೊಸಹಳ್ಳಿಯಲ್ಲಿತ್ತು. ಆದ್ರೆ ಈಗ್ಗೆ ಸುಮಾರು ೩೦ ವರುಷಗಳಿಂದ ಈಚೆಗೆ ಆ ಲಕ್ಷಣಗಳೆಲ್ಲಾ ಮರೆಯಾಗಿವೆ. ನಮ್ಮಲ್ಲಿ ಮೊದಲು ಭತ್ತವನ್ನು ಬೆಳೆಯುವ ಗದ್ದೆ ಸಾಕಷ್ಟು ಇತ್ತು. ಈಗ ಗದ್ದೆ ಜಮೀನೆಲ್ಲಾ ತೋಟವಾಗಿ ಪರಿವರ್ತನೆ ಹೊಂದಿವೆ. ಇದಕ್ಕೆ ಪ್ರಮುಖ ಕಾರಣ ಅಡಿಕೆಗೆ ಉತ್ತಮ ಧಾರಣೆ ಸಿಕ್ಕಿದ್ದು. ಹೊಸಹಳ್ಳಿಯಲ್ಲಿ ಈಗ ಯಾರ ಮನೇಲೂ ಎತ್ತಿನಗಾಡಿ ಇಲ್ಲ, ಎತ್ತಿಲ್ಲ. ಹಾಗೇ ಇಲ್ಲಿ ಸ್ವಂತ ಕೆಲಸ ಮಾಡುವ ಜನ ಬಹಳ ಕಡಿಮೆ. ಮೊದಲೆಲ್ಲಾ ಗದ್ದೆ ಬದು ಹೆರೆಯೋದು, ನೀರು ಕಟ್ಟೋದು ಇಂಥ ಚಿಕ್ಕಪುಟ್ಟ ಕೆಲಸಾನೆಲ್ಲ ಮನೆಯ ಯಜಮಾನನೇ ಮಾಡ್ತಿದ್ದ. ಇತ್ತೀಚೆಗೆ ಎಲ್ಲವನ್ನೂ ಆಳುಗಳ ಸಹಾಯದಿಂದ ಮಾಡಿಸ್ತಾ ಇದಾರೆ. ಬಾಗಾಯ್ತಿನಲ್ಲಿ ಲಾಗಾಯ್ತಿನಿಂದಲೂ ಸ್ವಂತ ಕೆಲಸವೇ ಇತ್ತು. ಆಳಿಗೆ ಒಂದು ಪೈಸೆ ಕೊಡ್ತಿರಲಿಲ್ಲ. ಕೇವಲ ಅಡಿಕೆ ಕೊಯ್ಲಿನ ಸಂದರ್ಭದಲ್ಲಿ ಮಾತ್ರ ಆಳುಗಳನ್ನು ತೋಟದ ಬಳಿ ಬಿಡ್ತಿದ್ರು. ಹಿಂದೆ ನಮ್ಮ ತೋಟದಲ್ಲಿ ತೆಂಗು, ಅಡಿಕೆ, ಬಾಳೆ ಇತ್ತು. ಬಾಳೆಗೆ ರೋಗ ಬಂದು, ೨೦ ವರುಷಕ್ಕಿಂತ ಹಿಂದೇನೇ ಬಾಳೆ ಹೊರಟುಹೋಯ್ತು. ಅಡಿಕೆ ಆರಿಸೋದಕ್ಕೆ ಮನೆಮಂದಿಯೆಲ್ಲಾ ಹೋಗೋರು. ನಾವೂ ಹೋಗ್ತಿದ್ವಿ. ಇಲ್ಲಿ ಈಗ ಶೇಕಡಾ ೮೦ ಭಾಗದ ಜನ ಕೃಷಿ ಕೆಲಸಗಳನ್ನು ಮಾಡ್ತಾ ಇಲ್ಲ. ಈಗ ಇಲ್ಲಿ ದೈಹಿಕ ಶ್ರಮ ನಶಿಸಿದೆ. ಬೌದ್ಧಿಕ ಪರಿಶ್ರಮ ಮಾತ್ರ ಜಾರಿಯಲ್ಲಿದೆ. ಎಷ್ಟೋ ಜನ ಕೇಣಿ ಕೊಟ್ಟು ಆ ಕೆಲಸದಿಂದ ತಪ್ಪಿಸಿಕೊಂಡಿದಾರೆ. ಹೊರಗಿನ ವೃತ್ತಿ ಆಶ್ರಯಿಸಿದಾರೆ. ಎತ್ತಿನ ಕಮಾನುಗಾಡಿ ಕಟ್ಟಿಕೊಂಡು ಶಿವಮೊಗ್ಗಕ್ಕೆ ಹೋಗುವ ಕಾಲ ಹೊರಟು ಹೋಗಿ, ಆ ಜಾಗದಲ್ಲಿ scooter, ಕಾರು ಬಂದಿದೆ. ಯಾವಾಗ ಪರಿಕರಗಳು ನಮ್ಮಲ್ಲಿ ಉಳೀಲಿಲ್ಲ, ಅಕಸ್ಮಾತ್ತಾಗಿ ಆ ಕೆಲಸವನ್ನು ಮಾಡಬೇಕಾಗಿ ಬಂದಾಗ ಮತ್ತೊಬ್ಬರನ್ನು ಆಶ್ರಯಿಸಲೇಬೇಕು."

- **ಇದು ವ್ಯವಸಾಯದ ಪ್ರಗತಿ ಅಂತೀರಾ?**
  ಒಂದು ದೃಷ್ಟಿಯಿಂದ ಹೇಳೋದಾದ್ರೆ ಇದು ವ್ಯವಸಾಯದ ಪ್ರಗತಿ ಹೌದು. ಯಾಕೇಂದ್ರೆ ನಾವು ಹೆಚ್ಚು ಹೆಚ್ಚು ಬುದ್ಧಿವಂತರಾದಷ್ಟೂ, ನಮ್ಮ ಮೈ ಬಗ್ಗೋದು ಕಡಿಮೆಯಾಗುತ್ತೆ, ಬಗ್ಗಿಸಿ ಏನು ಮಾಡಬೇಕಾಗಿದೆ ಅಂತ! ಏನನ್ನು ನಾವು ಮಾಡಬೇಕಾಗಿದೆಯೋ ಅದನ್ನು ಸುಲಭವಾಗಿ ಇತರರಿಂದ ಮಾಡಿಸಬಹುದು ಅಂದ್ರೆ ನಾವು ಯಾಕೆ ಮಾಡಬೇಕು ಅಂತ. ನಾವು ಯಾವಾಗಲೂ ಕೆಲಸ ಮತ್ತು ಕಾಲ ಗಮನಿಸ್ತೀವಿ. ಹಾಗೇ ಕೆಲಸ ಹಾಗೂ ನಮ್ಮ ಆರ್ಥಿಕ ಸಂಪಾದನೇನೂ ಗಮನಿಸ್ತೀವಿ. ಈಗ ನಾವು ಅದೇ ಸಮಯದಲ್ಲಿ ಬೇರೆಯದನ್ನು ಆಶ್ರಯಿಸಿಕೊಂಡು ಮಾಡಿದ್ರೆ, ಅದ್ರಿಂದ ಹೆಚ್ಚು ಸಂಪಾದನೆ ಬರುತ್ತೆ ಅಂತಾದ್ರೆ ನಾವು ಆ ಕೆಲಸ ಯಾಕೆ ಮಾಡಬೇಕು? ಈಗ ತೋಟದಲ್ಲಿ ಅಡಿಕೆ ಆರಿಸೋದಕ್ಕೆ ಒಬ್ಬ ಮನುಷ್ಯನಿಗೆ ೨೦/೩೦ ರೂಪಾಯಿ ಕೊಡ್ತೀವಿ, ಅವನು ಆರಿಸಿಕೊಂಡು ಬರ್ತಾನೆ. ಅದೇ ಸಮಯದಲ್ಲಿ ನಾವು ಬೇರೆ ಕೆಲಸ ಮಾಡಿದ್ರೆ ನಾವು ಅದಕ್ಕಿಂತ ಜಾಸ್ತಿ ದುಡೀಬಹುದು ಒಂದು, ಇನ್ನೊಂದು ಬಗ್ಗಿ ಬಗ್ಗಿ ಆರಿಸಿ ಸೊಂಟನೋವಾದ್ರೆ ಡಾಕ್ಟರಿಗೆ ೧೫೦ ರೂಪಾಯಿ ಕೊಡಬೇಕಾಗುತ್ತೆ. ಅದರ ಬದಲು ಅವನಿಗೆ ೨೦ ರೂಪಾಯಿ ಕೊಟ್ರೆ ನಾವು ೧೩೦ ರೂಪಾಯಿ ಉಳಿಸಬಹುದು. ಹಾಗಾಗಿ ದೈಹಿಕ ಕೆಲಸವನ್ನು ತಪ್ಪಿಸಿಕೊಳ್ತಾ ಇದೀವಿ. ಇದಕ್ಕೆ ಪ್ರತಿಯಾಗಿ ಮಾನಸಿಕ ಚಟುವಟಿಕೆಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು, ಬೌದ್ಧಿಕವಾಗಿ ಬೆಳೀಬೇಕು ಅನ್ನುವುದು ಜನರಲ್ಲಿ ಜಾಸ್ತಿ ಆಗ್ತಾ ಇದೆ.

- **ದೈಹಿಕ ಶ್ರಮದಿಂದ ವ್ಯವಸಾಯದ ಬಗ್ಗೆ ಶ್ರದ್ಧೆ ಜಾಸ್ತಿಯಾಗುತ್ತೆ. ನಾನು ನೆಟ್ಟು, ದುಡಿದು ಬೆಳೆಸಿದ ತೋಟ ಅನ್ನುವ ಅಭಿಮಾನ ಮೂಡುತ್ತೆ. ಇವತ್ತು ಬರಿಯ ಮಾನಸಿಕ ಸಂಬಂಧವಷ್ಟೇ ತೋಟದ ಜತೆ ಉಳಿದಿರೋದ್ರಿಂದ, ಅಷ್ಟೇ ಸಲೀಸಾಗಿ ವ್ಯವಸಾಯದ ಜತೆ**

ನಂಟೂ ಕಳಚಬಹುದು ಅನ್ನಿಸೋಲ್ವ?

ಖಂಡಿತಾ ಹೌದು, ತಾಯಿ ತನ್ನ ತೊಡೆ ಮೇಲೆ ಮಗುವನ್ನು ಮಲಗಿಸಿಕೊಂಡು, ಮಲಮೂತ್ರಗಳನ್ನು ಮಾಡಿಸಿಕೊಂಡು, ಅದನ್ನು ತೊಳೆದು, ಅದರ ಶುಶ್ರೂಷೆ ಮಾಡಿ ಬೆಳೆಸ್ತಾ ಇದ್ರೆ ಆಗ ತಾಯಿ-ಮಕ್ಕಳ ಸಂಬಂಧ ಚೆನ್ನಾಗಿರುತ್ತೆ. ಅದು ಬಿಟ್ಟು ಒಬ್ಬ ಆಯಾಳನ್ನು ಇಟ್ಟು, ತಾಯಿ ಬಂದು ಮಗುವನ್ನು ಬರೀ ಮುದ್ದು ಮಾಡ್ತಾ ಹೋದ್ರೆ ಆ ತಾಯಿ ಮಕ್ಕಳ ಸಂಬಂಧ ಶಾಶ್ವತವಾಗಿ ಇರೋದಿಲ್ಲ. ಹಾಗೆಯೇ ಈ ಕೃಷಿಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡು ದೈಹಿಕವಾಗಿ ಎಲ್ಲವನ್ನೂ ಮಾಡುವಾಗ ಇರುವ ಪ್ರೀತಿ ಖಂಡಿತವಾಗಿ ಆಳುಗಳ ಕೈಲಿ ಮಾಡಿಸುವಾಗ ಇರೋದಿಲ್ಲ. ಕೆಲಸ ಮಾಡೋದಕ್ಕೆ ತೋಟಕ್ಕೆ ಹೋದವನು ಯಾವುದಾದರೂ ಕಾರಣದಿಂದ ಪ್ರತಿ ಮರವನ್ನೂ ಮುಟ್ಟಬೇಕಾಗುತ್ತೆ. ಪ್ರತಿ ಮರದ ಬೆಳವಣಿಗೇನೂ ಅವನಿಗೆ ಅರಿವಾಗುತ್ತೆ. ಬರಿಯ supervision ಮಾತ್ರ ಮಾಡ್ತಾ ಇದ್ರೆ ಯಾವುದೂ ಅರಿವಾಗೋಲ್ಲ, ಆ ಮರದ ಬಗ್ಗೆ ಪ್ರೀತೀನೂ ಹೊರಟುಹೋಗುತ್ತೆ.

- **ಇದು ವ್ಯವಸಾಯದ ಪ್ರಗತಿ ಅಲ್ಲವಲ್ಲ. ಇದು ಕೃಷಿಯ ಅವನತಿ ತಾನೆ?**



ತಾಯಿ ಅನ್ನಪೂರ್ಣಮ್ಮ ಅವರ ಜತೆಯಲ್ಲಿ ನಿಂತ ರಾಜಾರಾಮಮೂರ್ತಿ, ವಿದ್ಯಾಲಕ್ಷ್ಮಿ ಶ್ರೀಕಂಠ ಅವಧಾನಿ

'ರಾಸಾಯನಿಕ ಗೊಬ್ಬರವನ್ನು ಅಡಿಕೆ ತೋಟದಲ್ಲಿ ಬಳಸಬಾರದು; ಮರ ತೆಳ್ಳಗಾಗಿ, ಸತ್ವ ಕಳೆದುಕೊಳ್ಳುತ್ತೆ. ನೂರು ವರುಷ ಬಾಳುವ ಮರ ಕೇವಲ ಇಪ್ಪತ್ತು ವರುಷದಲ್ಲಿ ನೆಲ ಸೇರುತ್ತೆ' ಅಂತಿದ್ರು ಹಿಂದೆ. ಆದರೆ ಈಗಿನ ನಮ್ಮ ಆಧುನಿಕ ವಿಜ್ಞಾನದ ಚಿಂತನೆ ಯಾವ ರೀತಿ ಇದೆ ಅಂದ್ರೆ, ನೂರು ವರುಷ ಬಾಳುವ ಮರ ಕೇವಲ ೨೦ ವರುಷದಲ್ಲೇ ನೂರು ವರುಷದ ಫಸಲು ಕೊಡುವುದಾದ್ರೆ ಅದು ಅಷ್ಟೇ ಬಾಳಲಿ, ಅದು ಹೋದ ಮೇಲೆ, ಮತ್ತೊಂದನ್ನು ನೆಡೋಣ, ಅದ್ರಿಂದ ಅಧಿಕ ಇಳುವರಿ ಪಡೆಯೋಣ, ಮತ್ತೆ ಸಸಿ ಹಾಕೋಣ, ನೂರು ವರುಷದಲ್ಲಿ ಐದು ಮರ ಆಗಲಿ ತೊಂದರೆ ಏನೀಗ ಅನ್ನುವ ಧೋರಣೆ ಬೆಳೆದಿದೆ. ಈಗ ಇದನ್ನೇ ಪ್ರಗತಿ ಅಂತಿದೀವಿ. ಬೇಗ ಹೆಚ್ಚು ಫಸಲು ಕೈಸೇರಬೇಕು, ಇದು ಪ್ರಗತಿಯ ಲಕ್ಷಣವಾಗಿದೆ. ಆದರೆ ನಿಜವಾಗಿ ಹೇಳೋದಾದ್ರೆ ಇದು ಅವನತಿಯೇ.

- **ನಿಮ್ಮ ಕುಟುಂಬದ ವ್ಯವಸಾಯದ ಬಗ್ಗೆ ಹೇಳಿ.**

ನಮ್ಮ ಮನೇಲೂ ಎತ್ತು, ಗಾಡಿ ಇತ್ತು. ನನ್ನ ತಂದೆ ದೈಹಿಕವಾಗಿ ಕೆಲಸ ಮಾಡ್ತಿದ್ರು. ಎರಡೂವರೆ ಎಕರೆ ಹೊಸ ತೋಟವನ್ನು ಬೆಳೆಸಿದ್ರು. ತೋಟದ ಕೆಲಸ ಸಂಪೂರ್ಣವಾಗಿ ಮಾಡೋರು. ನಮ್ಮ ತೋಟದಲ್ಲಿ ಹಿಂದೆ ತುಂಬಾ ನಿಂಬೆಹಣ್ಣಿನ ಗಿಡಗಳು ಇದ್ವು. ಸಾವಿರಾರು ನಿಂಬೆ ಹಣ್ಣು ಬಿಡೋದು. ಅದನ್ನೆಲ್ಲಾ ಕುಯ್ದು ನನ್ನ ತಂದೆ, ಶಿವಮೊಗ್ಗಕ್ಕೆ ತಲೆ ಮೇಲೆ ಹೊತ್ತುಕೊಂಡು ಹೋಗಿ ಸಂತೇಲಿ ಮಾರಿ ಬರ್ತಾ ಇದ್ರು. ಮಾರಿದ ದುಡ್ಡಲ್ಲಿ ದಿನಸಿ ಪದಾರ್ಥವನ್ನು ಕೊಂಡು ತರೋರು. ಪ್ರತಿವಾರವೂ ಈ ಕೆಲಸ ನಡೀತಾ ಇತ್ತು. ಬೆಳಗ್ಗೆ ಎದ್ದ ಕೂಡಲೇ ತೋಟಕ್ಕೆ ಹೋಗಿ ಬಾಳೆಯ ತರಗನ್ನು ಕುಯ್ದುಕೊಂಡು ಬರೋರು. ಮನೆಯಲ್ಲಿ ದೊನ್ನೆ ಕಟ್ಟೋರು. ದೊನ್ನೇನ ಶಿವಮೊಗ್ಗದಲ್ಲಿ ಮಾರೋರು. ಆದರೆ ಕ್ರಮೇಣ ನಿಂಬೆ, ಬಾಳೆ ನಶಿಸಿಹೋಯ್ತು. ನಂತರ ನಮಗೆ ಕೃಷಿ ಅಂದರೆ ಕೇವಲ ಅಡಿಕೆ ಕುಯಿಲು ಮಾತ್ರ. ನಾನು ಪ್ರಾಪ್ತವಯಸ್ಸಿಗೆ ಬಂದ ಮೇಲೆ ಎರಡು ವರುಷಗಳ ಕಾಲ ಸ್ವತಃ ಕೆಲಸ ಮಾಡಿ ಭತ್ತ ಬೆಳೆದೆ, ಅಂದ್ರೆ ಮೇಲುಸ್ತುವಾರಿ ಮಾಡಿ. ನಾನು ಗದ್ದೆಗೆ ಇಳಿದಿಲ್ಲ. ಎರಡು ವರುಷದಲ್ಲಿ ನಾಲ್ಕು ಬೆಳೆ ಬಂದಿತ್ತು. ಆ ಮೊದಲು ನಾವು ಗುತ್ತಿಗೆ ಕೊಡ್ತಿದ್ವಿ. ಆಗ ೨೦ ಚೀಲ ಭತ್ತ ಬರೋದು. ಮನೆಗೆ ವರುಷಕ್ಕೆ ಆಗೋದು. ಆದರೆ ನಾನೇ ಮಾಡಿದಾಗ, ನಾವು ದುಡ್ಡು ಕೊಟ್ಟು ಭತ್ತ ಕೊಳ್ಳುವಂತಾಯ್ತು. ನನಗೆ ಅಷ್ಟು ಬರಲಿಲ್ಲ. ಆಗ ನನ್ನ ತಂದೆ ಹೇಳಿದ್ರು, 'ಇಲ್ಲಪ್ಪ, ನಮಗೆ ಗುತ್ತಿಗೆ ಕೊಡೋದೇ ಲಾಭ. ಯಾಕೇಂದ್ರೆ ಯಾರು ಸ್ವಂತ ಬೇಸಾಯವನ್ನು

ಹೂಡಿ ಗದ್ದೆಗೆ ಇಳೀತಾನೋ, ಅವನಿಗೆ ಮಾತ್ರವೇ ಭತ್ತದಲ್ಲಿ ಏಳಿಗೆ ಆಗೋದು,' ಅಂದ್ರು. ಆಮೇಲೆ ಭತ್ತದ ಜಮೀನು ಮಾರಿದ್ವಿ. ಅಡಿಕೆಯಿಂದ ಸಾಕಷ್ಟು ಉತ್ಪತ್ತಿ ಇದೆ. ನಾವು ಅಡಿಕೆಗೆ ರಾಸಾಯನಿಕ ಗೊಬ್ಬರ ಬಳಸೋಲ್ಲ, ಮನೆಗೊಬ್ಬರ ಹಾಕ್ತೀವಿ. ಮನೇಲಿ ನಾಲ್ಕು ಹಸು ಇದೆ. ಸಗಣಿ ಗೊಬ್ಬರ ತಯಾರಿಸಿ ತೋಟಕ್ಕೆ ಹಾಕ್ತೀವಿ. ಆ ಸಗಣಿ ಗೊಬ್ಬರದಿಂದ ಒಳ್ಳೆಯ ಫಸಲು ಸಿಕ್ತಾ ಇದೆ. ರಾಸಾಯನಿಕ ಗೊಬ್ಬರ ಹಾಕಿದ ತೋಟದ ಇಳುವರೀಗೂ ನಮ್ಮ ತೋಟದ ಇಳುವರೀಗೂ ತುಂಬಾ ವ್ಯತ್ಯಾಸವಿಲ್ಲ. ಪ್ರತಿ ಎರಡು, ಮೂರು ವರುಷಗಳಿಗೆ ಫಸಲು ಜಾಸ್ತಿಯಾಗುತ್ತೆ, ಹಾಗೇ ಕಡಿಮೆಯಾಗುತ್ತೆ. ಆ ರೀತಿ ನಡೆದುಕೊಂಡು ಬರ್ತಾ ಇದೆ.

ನನ್ನ ಬಾಲ್ಯದ ದಿನಗಳಲ್ಲಿ ಕೃಷಿಗೆ ಹೆಚ್ಚು ಒತ್ತು ಕೊಡ್ತಾ ಇದ್ರು. ಸ್ವಲ್ಪ ದೊಡ್ಡವನಾದ ಮೇಲೆ, ಇಡೀ ದೇಶದಲ್ಲಿಯೇ ಅಕ್ಷರ ವಿದ್ಯೆ ಕಡೆ ವಿಶೇಷವಾದ ಒಲವು ಆರಂಭವಾಯಿತು. ಬಹುಶಃ ಅದು job oriented ಆದುದರಿಂದಲೋ ಏನೋ, ಆಧುನಿಕ ವಿದ್ಯಾಭ್ಯಾಸ ಮಾಡಿದವನು ಕೆಲಸಕ್ಕೆ ಸೇರ್ತಾ ಬಂದ. ಹಾಗಾಗಿ ವಿದ್ಯಾಭ್ಯಾಸ ಹೊಟ್ಟೆಪಾಡಿಗೆ ಬೇರೆ ಮಾರ್ಗವನ್ನು ಕಲ್ಪಿಸಿತು, ಕೃಷಿಯನ್ನು ಬಿಟ್ಟು. ಎಲ್ಲ ಬ್ರಾಹ್ಮಣವರ್ಗದವರಿಗೂ ಅದೊಂದು ಹುಚ್ಚು ಹಿಡಿದಿತ್ತು. ಎಲ್ಲರಿಗೂ ನಾವು ಓದಬೇಕು, ಕೆಲಸ ಹಿಡಿಯಬೇಕು ಅನ್ನುವುದು ಶುರುವಾಯ್ತು. ವಿದ್ಯಾಭ್ಯಾಸ ಬದುಕಿಗೆ ಬೇರೆ ದಿಕ್ಕು ನೀಡಿತು. ಅದಕ್ಕಿಂತ ಹಿಂದೆ ಇಲ್ಲಿ ವೇದ ಕಲೀತಾ ಇದ್ರು. ಅಂದ್ರೆ ಪೂರ್ಣವೇದಾಭ್ಯಾಸ ಮಾಡಬೇಕು ಅಂತಲ್ಲ. ಮದುವೆ ಆಗುವವರೆಗೆ ವೇದ ಕಲೀಬೇಕು ಅಂತ. ೧೫, ೧೬, ೧೮ರವರೆಗೆ ವೇದ ಕಲಿಯೋರು. ಮದುವೆ ಆದ ಮೇಲೆ ಕೊಯ್ಲುಗತ್ತಿ ಸಿಗಿಸಿಕೊಂಡು ತೋಟಕ್ಕೆ ಹೋಗೋರು. ನೌಕರಿಯ ಪ್ರಶ್ನೆ ಇರಲಿಲ್ಲ. ಆದರೆ ನಾವು SSLC ಮುಗಿಸುವ ಹೊತ್ತಿಗೆ ಈ ವಿದ್ಯಾಭ್ಯಾಸ ನಮಗೆ ಕೆಲಸ ಕೊಡುತ್ತೆ, ಅನ್ನವನ್ನು ಕೊಡುತ್ತೆ ಅನ್ನುವುದು ಶುರುವಾಯ್ತು. ಅದ್ರಿಂದ ಸ್ವಭಾವತಃ ಕೃಷಿ ಕಡೆ ಗಮನ ಕಡಿಮೆಯಾಯ್ತು. ಎಲ್ಲರೂ ಓದುವ ಕಡೆ ಗಮನ ಕೊಡೋರೇನೇ. ಹೇಗಿದ್ರೂ ಬಾಗಾಯ್ತು ಜಾಸ್ತಿ. ಅಡಿಕೆ, ತೆಂಗಿಗೆ ವರುಷ ಇಡೀ ಕೆಲಸ ಮಾಡಬೇಕಿರಲಿಲ್ಲ. ಬೇರೆ ಕೆಲಸದಲ್ಲಿದ್ದು ಈ ಕೃಷಿ ಮಾಡಬಹುದು ಅಂತ ಅನ್ನಿಸಿತು. ನಾವು ವಿದ್ಯಾಭ್ಯಾಸ ಮುಗಿಸಿದ ಮೇಲೆ ನಮ್ಮ ತಂದೆ ವ್ಯವಸಾಯ ಮಾಡ್ತಿದ್ದರಿಂದ, ಕೃಷಿ ಕಡೆಗೂ ಗಮನ ನೀಡ್ತಿದ್ವಿ, ಮುಂದುವರೆಸಿದ್ವಿ. ಆದರೆ ನಾವು ಎಲ್ಲರೂ white ಕಾಲರ್ ಕೆಲಸವನ್ನು ಅಪೇಕ್ಷೆ ಪಡೋರೇ ಜಾಸ್ತಿ ಇದ್ದದ್ದು. ಹಾಗಾಗಿ ನಾವು ಗುದ್ದಲಿ ಹಿಡಿದು ಕೆಲಸ ಮಾಡೋದನ್ನು ಊಹಿಸಲೂ ಸಾಧ್ಯವಿರುತ್ತಿರಲಿಲ್ಲ. ನಮ್ಮದು management ಅಷ್ಟೇ ಆಗಿತ್ತು. ಇಡೀ ವಾತಾವರಣ ಪೂರ್ಣ ಹಾಗೇ ಬಂದಿರೋದು. ತೋಟಕ್ಕೆ ಚಪ್ಪಲಿ ಹಾಕಿಕೊಂಡು ಹೋಗೋದು; ಹೂತುಕೊಳ್ಳುತ್ತೆ ಅಂದ್ರೆ ಚಪ್ಪಲಿ ಬಿಟ್ಟು ತೋಟಕ್ಕೆ ಇಳಿಯೋದು. ಹೂತುಕೊಳ್ಳಲಿಲ್ಲ ಅಂದ್ರೆ ಚಪ್ಪಲಿ ಸಮೇತವೇ ತೋಟದ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಿ ಬರೋದು, ಅಷ್ಟೆ.

- **ಮುಂದೆ ಏನಾಗಬಹುದು ಅಂತೀರಿ?**

ಈಗ ಸದ್ಯಕ್ಕೆ ಇರುವ ಪರಿಸ್ಥಿತಿ ಪ್ರಕಾರ ಮುಂದಿನ ಕಾಲದವರೆಲ್ಲರೂ city ಸೇರ್ತಾರೆ, ಅಕಸ್ಮಾತ್ ಊರಲ್ಲೇ ಇದ್ರೂ ಕೇಣಿ ಕೊಡ್ತಾರೆ. ಅದ್ರಲ್ಲಿ ಬಂದ ದುಡ್ಡಿನಿಂದ ಬೇರೇನಾದ್ರೂ ಮಾಡ್ತಾರೆ. ಅದನ್ನು ಬಿಟ್ಟು ತೋಟದಲ್ಲಿ ಹೊಸ ಪ್ರಯೋಗಗಳನ್ನು ಮಾಡುವುದು ಕಡಿಮೆಯಾಗುತ್ತೆ. ಹಿಂದೆ ತೋಟದಲ್ಲಿ ಲವಂಗ, ಕಾಫಿ, ಕಾಳುಮೆಣಸು ಬೆಳೆದವರು ಇದ್ದಾರೆ. ಕೃಷಿ ಬಗ್ಗೆ ಒಲವು ಕಡಿಮೆಯಾಗುತ್ತೆ.

ಹಾಗೇ ವೈದಿಕ ವೃತ್ತಿಗೆ ಇಲ್ಲಿ ಹಾಗೂ ಮತ್ತೂರಿನಲ್ಲಿ ಪ್ರಾಶಸ್ತ್ಯ ಜಾಸ್ತಿಯಾಗಿದೆ. ಕರ್ನಾಟಕದ ಇನ್ನೊಂದು ಗೋಕರ್ಣ ಅನ್ನುವ ಸ್ಥಿತಿ ಮುಟ್ಟಿದೆ. ಪ್ರತಿನಿತ್ಯವೂ ಸಹ ಪಂಚಪಾತ್ರೆ ಹಿಡಿದುಕೊಂಡಿದ್ರೇನೆ ಅವರಿಗೆ ಹೊಟ್ಟೆಪಾಡು ನಡೆಯುವ ಸ್ಥಿತಿ ಇದೆ. ತೋಟಕ್ಕೆ ಹೋಗಿ ಏನೂ ಮಾಡಬೇಕಿಲ್ಲ, ಮನೇಲಿದ್ದು ಜಪ ಮಾಡಿದ್ರೆ ಸಾಕು ಅನ್ನುವ ಬೆಳವಣಿಗೆ ಸಹ ಜಾಸ್ತಿಯಾಗಿದೆ. ವೇದದ ಬಗ್ಗೆ ಒಲವು ಜಾಸ್ತಿಯಾಗಿದೆ. ಈಗ ಪೂರ್ಣ ವೇದಾಧ್ಯಯನ ಮಾಡಬೇಕು ಅನ್ನುವವರ ಸಂಖ್ಯೆ ಜಾಸ್ತಿಯಾಗಿದೆ. ಕಲೀತಾನೂ ಇದಾರೆ. ಕೃಷಿ ಬಗ್ಗೆ ಒಲವೂ ದಿನೇ ದಿನೇ ಕಡಿಮೆಯಾಗ್ತಾ ಇದೆ.

- *ಒಳ್ಳೆಯದು ರಾಜಾರಾಮಮೂರ್ತಿಗಳೆ, ಇದುವರೆಗೂ ನಿಮ್ಮ ವಿಚಾರ ತಿಳಿಸಿದ್ರಿ, ಅನುಕೂಲವಾಯ್ತು. ವಂದನೆಗಳು.*

ನಮಸ್ಕಾರ.

ಊ) ಎಲ್. ಎಸ್. ಮುರಳೀಧರ ಇ/ಮ ಎಲ್.ವಿ. ಸುಬ್ರಹ್ಮಣ್ಯ

ಗದ್ದೆಮನೆ, ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237890

ಯಾವುದೇ ವೃತ್ತಿಯಾದ್ರೂ, ಹಿರಿಯರು ಇದೇ ವೃತ್ತಿಯನ್ನು ಮಾಡು ಎಂದು ಕಿರಿಯರಿಗೆ ಬಲವಂತ ಮಾಡಬಾರದು. ಎಲ್ಲದಕ್ಕಿಂತ ಮುಖ್ಯವಾದುದು ಜೀವನ ಮಾಡುವುದು. ಹೊಟ್ಟೆಪಾಡು ಬಲು ದೊಡ್ಡದು. ನನಗೆ ಚಿತ್ರ ಬರೆಯೋದ್ರಲ್ಲಿ ಆಸಕ್ತಿ ಇರಬಹುದು . . . ಆದ್ರಿಂದ ನನ್ನ ಜೀವನ ಸಾಗದೇ ಇದ್ರೆ ಏನು ಪ್ರಯೋಜನ? ವೃತ್ತಿಯ ವಿಷಯ ಬಂದಾಗ ಹೊಟ್ಟೆಪಾಡಿಗಾಗಿ ಒಂದಷ್ಟು ಬದಲಾವಣೆ ಮಾಡಿಕೊಳ್ಳೋದು ಅನಿವಾರ್ಯ. ವ್ಯವಸಾಯದ ವಿಷಯವೂ ಅಷ್ಟೆ.



ಎಂ.ಆರ್.ಇಂದಿರಾ-ಎಲ್.ಎಸ್.ಮುರಳೀಧರ ದಂಪತಿ ಮಗನೊಂದಿಗೆ: ಹೊಸಹಳ್ಳಿ ಗದ್ದೆಮನೆ

ಲಿಂಗದಹಳ್ಳಿಯ ಎಲ್.ಎಸ್. ಸುಬ್ರಹ್ಮಣ್ಯ ಹಾಗೂ ಮತ್ತೂರಿನ ಸಾವಿತ್ರಮ್ಮ ದಂಪತಿಗಳಿಗೆ ನಾಲ್ಕು ಜನ ಗಂಡು ಹಾಗೂ ಒಬ್ಬಳು ಮಗಳು. ಇವರ ಎರಡನೆಯ ಮಗ ಎಲ್.ಎಸ್. ಮುರಳೀಧರ ಅವರಿಗೆ ೪೨ ವರುಷ. ಇವರ ಪತ್ನಿ ಎಂ.ಆರ್. ಇಂದಿರಾ, ಶೃಂಗೇರಿ ಸಮೀಪದ ಮೇಗೂರಿನ ರಂಗರಾಯ ಹಾಗೂ ಲಲಿತಮ್ಮ ದಂಪತಿಗಳ ಮಗಳು. ಇವರು ಶಿವಳ್ಳಿ ಬ್ರಾಹ್ಮಣರು. ಮುರಳೀಧರ ತಮ್ಮ ವ್ಯವಸಾಯದ ವಿವರಗಳನ್ನು ತಿಳಿಸಿದರು. 'ನನ್ನ ತಂದೆ PWD Departmentನಲ್ಲಿ Retire ಆಗುವ ಸಮಯದಲ್ಲಿ Executive Engineer ಆಗಿದ್ದರು. ಅವರಿಗೆ ಇಲಾಖೆಯಲ್ಲಿನ ರಾಜಕೀಯ, ಲಂಚ ಇಷ್ಟವಾಗ್ತಾ ಇರಲಿಲ್ಲ. ಹಾಗಾಗಿ ಅವರು voluntary retirement ತೊಗೊಂಡು ಇಲ್ಲಿಗೆ ಬಂದ್ರು. ಇಲ್ಲಿನ ಜಮೀನನ್ನು ನಮ್ಮ ದೊಡ್ಡಪ್ಪ ಸಾಗುವಳಿ ಮಾಡ್ತಿದ್ರು. ನಮ್ಮ ತಂದೆ ಬಂದ ತಕ್ಷಣ ಅವರ ಪಾಲನ್ನು ಬಿಟ್ಟುಕೊಟ್ರು. ನಂತರ ನಮ್ಮ ತಂದೆ ಈ ಜಾಗವನ್ನು ತೋಟ ಮಾಡಬೇಕು ಅಂತ ಹೊರಟರು. ನೀರಾವರಿಗೆ ಆಗ ತುಂಬಾ ತಾಪತ್ರಯವಿತ್ತು. ಅಕ್ಕಪಕ್ಕದಲ್ಲಿ ಜಗಳ, ದೊಂಬೀನೂ ಇತ್ತು. ಇಲ್ಲಿ ಏನಾಗಿತ್ತು ಅಂದ್ರೆ main channelನಿಂದ ಕೆಳಗಡೆ ಬರಬೇಕಾದ್ರೆ, ನೀರು ಹರಿಯಲು ವಾಟ (gradient) ಇರಬೇಕು. ಅದು ವಿರುದ್ಧವಾಗಿತ್ತು. ಮಳೆಗಾಲದಲ್ಲಿ ಮೂರು ನಾಲ್ಕು ಅಡಿ ನೀರು ಬಿಟ್ಟಾಗ ಇಲ್ಲಿಗೆ ಬರೋದು. ಹಾಗಿಲ್ಲದಿದ್ರೆ ಬರ್ತಾ ಇರಲಿಲ್ಲ. ನನ್ನ ತಂದೆ court ನಿಂದ stay order ತಂದು, ನೆಲಗಾಲುವೆ (culvert)ಗಳನ್ನು ಇಳಿಸಿ, ಕೆಳಗೆ ನೀರು ಬರುವ ಹಾಗೆ ಮಾಡಿದ್ರು. ಹೊಸಹಳ್ಳಿ ಹಾಗೂ ಸುತ್ತಮುತ್ತಲಿನ ಜನರಿಗೆ ಅನುಕೂಲವೂ ಆಯ್ತು. ಇಲ್ಲೆಲ್ಲಾ ಸಾಗುವಳಿ ಉತ್ತಮವಾಯ್ತು. PWDನಲ್ಲಿ ಸುಮಾರು ಸೇವೆ ಸಲ್ಲಿಸಿದ್ರಿಂದ ಕೃಷಿ ವಿಷಯಕ್ಕೆ ನನ್ನ ತಂದೆ ಹೊಸಬರು. ಅವರಿಗೆ ಇಂಗ್ಲೀಷು, ಕನ್ನಡ, ಸಂಸ್ಕೃತ ಸಾಹಿತ್ಯದ ಬಗ್ಗೆ ಅಭಿರುಚೀನೂ ಇತ್ತು. ಅವರು ತೆಂಗು, ಅಡಿಕೆಗೆ ಸಂಬಂಧಪಟ್ಟ research ಪುಸ್ತಕಗಳನ್ನೆಲ್ಲಾ ತರಿಸಿ ಅದನ್ನೆಲ್ಲಾ ಓದಿ, ನೆರೆಹೊರೆಯವರನ್ನೂ ಕೇಳಿ, ಯಾವುದು ಸರಿ, ಯಾವುದು ತಪ್ಪು ಅಂತ ಚರ್ಚಿಸಿ, ವ್ಯವಸಾಯ ಆರಂಭಿಸಿದ್ರು. ಊರಿನವರಿಗೂ ನಮಗೂ ಕೃಷೀಲಿ ವ್ಯತ್ಯಾಸ ಇರ್ತಿತ್ತು. ನಾವು ಸ್ವಲ್ಪ ಪ್ರಗತಿಪರ ಅಂತ ಅವರು ಹೇಳ್ತಿದ್ರು. ನಮಗದು ಗೊತ್ತಿಲ್ಲ. ತೆಂಗಿನಲ್ಲಿ ರೈನೋಸಿರಸ್ ದುಂಬಿಯನ್ನು ಹತೋಟಿ ಮಾಡೋದಕ್ಕೆ, ತೋಟದಲ್ಲಿ tubelightಗಳನ್ನು ಹಾಕಿಸಿದ್ರು. ಬೆಳಕಿಗೆ ಆಕರ್ಷಿತವಾಗಿ ಬಂದ ಕೀಟವನ್ನು ಸುಲಭವಾಗಿ ಹತೋಟಿ ಮಾಡಬಹುದಿತ್ತು. ಇಲ್ಲಿ ಎಲ್ಲರೂ ವರುಷದಲ್ಲಿ ಒಂದು ಸಾರಿ ಗೊಬ್ಬರ ಕೊಡೋದು ರೂಢಿ. ನಾವು ಎರಡು ಸಾರಿ ಕೊಡ್ತಿದ್ವಿ. ಅಂದ್ರೆ ಒಂದು ಸಾರಿ ಕೊಡೋದನ್ನೆ, split ಮಾಡಿ ಎರಡು ಸಾರಿ ಕೊಟ್ಟರೆ ಅನುಕೂಲ. ಯಾರಿಗಾದ್ರೂ ಹಸಿವೆ ಆಗಿದ್ರೆ, ಒಂದೇ ಸಾರಿ ಒಂದು ದಿನದ ಊಟವನ್ನೆಲ್ಲಾ ಮಾಡೋದು ಕಷ್ಟ. ಅದನ್ನೇ ಎರಡು

ಮೂರು ಸಾರಿ ತಿಂದರೆ ಹಸಿವು ಇಂಗುತ್ತೆ. ನಾವು ಇಲ್ಲಿ ಅಡಿಕೆ, ತೆಂಗು main ಆಗಿ ಶುರುಮಾಡಿದ್ವಿ. ಅದರಲ್ಲಿ ನಮ್ಮ ಆರ್ಥಿಕ ಕೊರತೆಯನ್ನು ನೀಗಿಸಿಕೊಳ್ಳುವ ಸಲುವಾಗಿ ಬಾಳೆ ಬೆಳೆದ್ವಿ. ಪಚ್ಚಬಾಳೆ ಚೆನ್ನಾಗಿ ಬೆಳೆದು, ಅದನ್ನು ವ್ಯಾಪಾರ ಮಾಡಿ, ತೋಟದ ಒಟ್ಟು ಉತ್ಪತ್ತೀನ ಬಾಳೇಲೇ ಪಡೀತಿದ್ವಿ. ಲಿಂಗದಹಳ್ಳೀಲಿ ನಮ್ಮ ಪೂರ್ವಿಕರು ಮಾಡಿದ್ದ ಜಮೀನನ್ನು ಒಂದೊಂದೇ ಮಾರ್ತಾ ಬಂದು ಇಲ್ಲಿ ವ್ಯವಸಾಯಕ್ಕೆ ದುಡ್ಡು ಹಾಕಿದ್ವಿ. ಇಲ್ಲಿ ನಮಗೆ ಇದ್ದದ್ದು ಆರು ಎಕರೆ. ಅದರಲ್ಲಿ high tension line ಒಂದು ಎಕರೆಗೆ ಬಂದಿರೋದರಿಂದ, ಒಟ್ಟು ಐದು ಎಕರೆ ಇದೆ. ಅದು ಪೂರ್ಣ ತೋಟ. ಮನೆ ಮಟ್ಟಿಗೆ ಬೇಕಾದ ಸಪೋಟ, ಪೇರಲೆ, ಮಾವು, ಹಲಸು, ಸಮಸ್ತವನ್ನೂ ಒಂದೊಂದು ಗಿಡ sampleಗೆ ಹಾಕಿದೀವಿ. ವ್ಯಾಪಾರದ ದೃಷ್ಟಿಯಿಂದ ಅಡಿಕೆ, ತೆಂಗು. ಬಾಳೆ ಇತ್ತು, ಈಗಿಲ್ಲ. ನಾನು ಬಾಲ್ಯದ ವಿದ್ಯಾಭ್ಯಾಸ ಮುಗಿಸಿದ್ದು ಚಿಕ್ಕಮಗಳೂರು ಜಿಲ್ಲೆಯಲ್ಲಿ. ನಂತರ ನಮ್ಮ ತಂದೆಗೆ transfer ಆದ ಹಾಗೆ ಧಾರವಾಡ, ಹುಬ್ಬಳ್ಳಿ, ದಾಂಡೇಲಿ ಅಂತ ಎಲ್ಲಾ ಹೋದ್ವಿ. ನಾನು College ಓದಿದ್ದು ಹುಬ್ಬಳ್ಳೀಲಿ. ನನ್ನ ತಂದೆ ಲಿಂಗದಹಳ್ಳೀಲಿ ಸ್ವಲ್ಪ ದಿನ ಇದ್ದು, ವ್ಯವಸಾಯ ಮಾಡ್ತಿದ್ರು. ಆಗ ನಾವಿನ್ನೂ ಎರಡು ಮೂರನೇ ಕ್ಲಾಸು. ನಮಗೆ ಮರಕೋತಿ ಆಟದಲ್ಲಿ ಆಸಕ್ತೀನೇ ಹೊರತು, ಮರದಿಂದ ಫಲ ಪಡೆಯುವ ಅಭಿರುಚಿ ಇರಲಿಲ್ಲ. ನಂತರ ನಾನು ಹೊರಗಡೆ ಬಾಂಬೆ, ಡೆಲ್ಲಿ, ಇರಾಕ್‌ನಲ್ಲಿ ಕೆಲಸದಲ್ಲಿದ್ದೆ. ಕಡೆಗೆ ನನ್ನ ತಂದೇನೇ ವ್ಯವಸಾಯಕ್ಕೆ ನಿಂತ ಮೇಲೆ, ನೀನೂ ಜತೇಲಿರು ಬಾ ಅಂದ್ರು. ನನಗೂ ಹೊರಗಡೆ ಇದ್ದು ಬೇಜಾರಾಗಿತ್ತು, ಬಂದೆ. 1987ರಲ್ಲಿ ನಮ್ಮ ತಂದೆ ಇಲ್ಲಿಗೆ ಬಂದ್ರು. 1989ರಲ್ಲಿ ನಾನು ಇಲ್ಲಿಗೆ ಬಂದೆ. ತಂದೆಯವರ ಹಿಂದೆ ತಿರುಗಿ ನಾನು ವ್ಯವಸಾಯ ಕಲಿತಿದ್ದು.

- **ನೀವು ವ್ಯವಸಾಯವನ್ನೇ ಏಕೆ ಮಾಡಿದ್ರಿ?**

  ನಾನು ಒಳ್ಳೆಯ ವಿದ್ಯಾಭ್ಯಾಸ ಮಾಡಿರಲಿಲ್ಲ. B.Sc. ಕೂಡ ಪಾಸಾಗಿರಲಿಲ್ಲ. ನಾನು ಮಾಡ್ತಿದ್ದ ಕೆಲಸದಲ್ಲಿ ಭಾರಿ future ಸಹ ಇರಲಿಲ್ಲ. ನಾನು ಒಳ್ಳೆಯ ಕೆಲಸದಲ್ಲಿದ್ದರೆ, ಮತ್ತೆ ವ್ಯವಸಾಯಕ್ಕೆ ಬರ್ತಾ ಇದ್ನೋ ಇಲ್ಲವೋ ಹೇಳಲು ಆಗೋಲ್ಲ. ನಾನು ಇವತ್ತು ಇಲ್ಲಿದೀನಿ, ನಾಳೇನೂ ನಾನು ಇಲ್ಲೇ ಇರ್ತೀನಿ ಅಂತ ಬರೆದುಕೊಡೋದಕ್ಕೆ ಆಗೋದಿಲ್ಲ. ನಾನು ಇಲ್ಲಿ ಬಂದಾಗ ನನ್ನ ಅಣ್ಣತಮ್ಮಂದಿರು ಹೊರಗಡೆ ಕೆಲಸದಲ್ಲಿದ್ರು. ಎಲ್ಲರೂ ಉತ್ತಮವಾಗಿದಾರೆ. ಹಾಗಾಗಿ ನಮ್ಮ ತಂದೆ ನನ್ನನ್ನೇ ಕರೆದ್ರು. ಉದ್ದೇಶಪಟ್ಟು ನನಗೆ ಅನುಕೂಲವಾಗಲೀ ಅಂತಾನೇ ಕರೆದದ್ದು.

- **ನೀವು ವ್ಯವಸಾಯದ ವಿಚಾರಗಳನ್ನು ಯಾರಿಂದ ತಿಳಿದ್ರಿ?**

  ಇಲ್ಲಿ ನಮ್ಮ ತಂದೆ ಅಣ್ಣ ತಮ್ಮಂದಿರ ಮೂರು ಮನೆ ಸಾಲಾಗಿದೆ. ಬರೋದು, ಹೋಗೋದು, ಏನಾರೂ ವಿಷಯ ಇದ್ರೆ ಕೇಳೋದು ಮಾಡ್ತಿದ್ದೆ. ತಂದೆ ಅವರ ಬಾಲ್ಯದ ಅನುಭವ ಹಾಗೂ ಪುಸ್ತಕದ ಜ್ಞಾನವನ್ನು ತಿಳಿಸಿದ್ರು. ಆದರೆ ನಾನಾಗಲಿ, ನಮ್ಮ ತಂದೆಯಾಗಲಿ ಗುದ್ದಲಿ ಹಿಡಿದು ಕೆಲಸ ಮಾಡಿಲ್ಲ. ಎಲ್ಲಾ supervision ಮಾತ್ರ. ಖಯಾಲಿಗೆ ಗುಲಾಬಿ ಗಿಡದ ಬುಡ ಅಗೆದಿರಬಹುದೇ ವಿನಃ ನೇಗಿಲು, ಗುಳ ಹಿಡಿದಿಲ್ಲ. ನಾವು ಬರುವ ಹೊತ್ತಿಗೆ ಇಲ್ಲಿ ಎತ್ತಿನ ಬೇಸಾಯವೇ ನಶಿಸಿತ್ತು. Tractor, tiller ಕಾಲ. ಇಲ್ಲಿ ಸಮಸ್ತವೂ ಬಾಡಿಗೆಗೆ ಸಿಗುತ್ತೆ. ನಮಗೆ ಈ ಜಮೀನು ಬಂದಾಗ, ಇಲ್ಲಿ ಭತ್ತ ಬೆಳೀತಾ ಇದ್ರು. ಒಂದೇ ಬೆಳೆ ಆಗ್ತಿತ್ತು. ಚಾನಲ್ ನೀರು ಬಂದಮೇಲೆ, ತೋಟ ಮಾಡಿದ್ದು. ನನ್ನ ತಂದೇನ ವ್ಯವಸಾಯದಲ್ಲಿ ತುಂಬಾ influence ಮಾಡಿದ್ದು ಹೊಸಹಳ್ಳಿಯ ನನ್ನ ಚಿಕ್ಕಪ್ಪ ಎಚ್.ಎಸ್. ಗೋಪಾಲ್. ನಾನೂ ಅವರಂತೆಯೇ ಅಡಿಕೆ ತೋಟ ಎಬ್ಬಿಸಬೇಕು ಅಂತ, ಅವರಿಂದಲೇ ಮಾಹಿತಿ ತಿಳಿದುಕೊಂಡೆ.



ಎಲ್.ಎಸ್.ಮುರಳೀಧರ: ತೋಟದ ಹಿನ್ನೆಲೆ:ಹೊಸಹಳ್ಳಿ ಗದ್ದೆ ಮನೆ



ತಳಿ ಅಭಿವೃದ್ಧಿಯ ಕಾಯಕ: ಎಲ್.ಎಸ್.ಮುರಳೀಧರ:ಹೊಸಹಳ್ಳಿ ಗದ್ದೆಮನೆ

- **ನಿಮ್ಮ ತಂದೆಯವರು ಕಾಲವಾದ ಮೆಲೆ ನೀವು ಯಾವ ರೀತಿ ಬದಲಾವಣೆಗಳನ್ನು ಮಾಡಿಕೊಂಡ್ರಿ?**

ಸುಧಾರಣೆ ಅಂತ ಮಾಡಿಲ್ಲ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದೆ. ಯಾವುದಾದರೂ ಅವರು ಪೂರೈಸದೇ ಇದ್ರೆ ಅದನ್ನು ತುದಿ ಮುಟ್ಟಿಸಿರಬಹುದು. ಅವರು ಗೋಡೆ ಕಟ್ಟಿ ಅರ್ಧ ಆಗಿ ಪೂರೈಸದೇ ಇದ್ದುದನ್ನು ನಾನು ಮೇಲೆ ಏರಿಸಿರಬಹುದು, ಅಷ್ಟೇ. ನನ್ನ ತಂದೆ ತೋಟಕ್ಕೆ drip irrigation ಮಾಡಿಸಿದ್ರು. ಅರ್ಧ ಆಗಿತ್ತು. ಅದನ್ನು ನಾನು ಪೂರೈಸಿದ್ದೇನೆ. ಇಲ್ಲಿ ನಮ್ಮ ಐದೆಕರೆ ಜಮೀನಿನಲ್ಲಿ ಅರ್ಧ dry land, ಅರ್ಧ ನಾಲಾ ನೀರಾವರಿ ಇದೆ. ಒಂದು ಬೋರ್‌ವೆಲ್ ಕೊರೆಸಿ, ಒಣ ಭೂಮೀಲೂ ಅಡಿಕೆ ಹಾಕಿದ್ರು. ಅದಕ್ಕೆ ನೀರು ಹಾಯಿಸ್ತಾ ಇದ್ವಿ. ಕರೆಂಟ್ ಸಮಸ್ಯೆ, ನೀರಿನ ಸಮಸ್ಯೆಯಿಂದಾಗಿ ಹನಿ ನೀರಾವರಿ ಅಳವಡಿಸಿದ್ವಿ.

- **ವ್ಯವಸಾಯದಲ್ಲಿ ಯಶಸ್ವಿಯಾಗಬೇಕು ಅಂದ್ರೆ ವ್ಯಕ್ತಿಯಲ್ಲಿ ಯಾವ ಗುಣ ಇರಬೇಕು?**

ಛಲ ಇರಬೇಕು. ಯಾವುದೇ ವೃತ್ತಿಯಲ್ಲಾದರೂ ಮುಂದೆ ಬರಬೇಕಾದ್ರೆ ಛಲ ಇರಲೇಬೇಕು, ಒಂದಷ್ಟು ಹಟ ಇರಬೇಕು. ನಾನು ವ್ಯವಸಾಯದಲ್ಲಿ ಸಂತೃಪ್ತನಾಗಿದ್ದೇನೆ. ನಾನು ಯಾವಾಗಲೂ ಸಂತೃಪ್ತನೇ. ನಾನು ಮೊದಲಿದ್ದ ಜಾಗದಲ್ಲೂ ಬೇಜಾರಿನಿಂದ ಇರಲಿಲ್ಲ.

- **ನಿಮ್ಮ ಜೀವನದಲ್ಲಿ ನಿಮ್ಮ ಪತ್ನಿಯ ಕೊಡುಗೆ ಬಗ್ಗೆ ಹೇಳಿ?**

ಅವಳೂ ಕೃಷಿ ಕುಟುಂಬದಿಂದಲೇ ಬಂದಿರೋದು. ಅವರು ನಮಗಿಂತಲೂ, ದಟ್ಟವಾದ ಕಾಡಿನ ನಡುವೆ, ತೋಟದ ಮಧ್ಯದಲ್ಲಿ ಇದ್ದವರು. ನೆರೆಹೊರೆ ಇಲ್ಲದ ಮನೆಗಳು. ಹಾಗಾಗಿ ಏನು ಮಾಡಿದ್ರೂ ಒಂದಷ್ಟು ಅಡಿಕೆ ಗಿಡಗಳ ಜತೆ ಮಾತಾಡಲೇಬೇಕಾದಂತಹ ಜಾಗಗಳು ಅವು. ಅವರಿಗೂ ಒಂದಷ್ಟು ಗೊತ್ತಿತ್ತು. ನಾನೂ ನಮ್ಮ ತಂದೆಯೂ ಇಲ್ಲಿ ಬಂದು ನಾಲ್ಕು ವರುಷ ಆಗಿತ್ತು; ಫಸಲು ಬಂದಿರಲಿಲ್ಲ. ಫಸಲು ಬಂದ ಮೇಲೆ ನಮ್ಮ ತಂದೆ ಅಡಿಕೆ ಬೇಯಿಸುವ ವಿಚಾರದಲ್ಲಿ ನನ್ನ ಹೆಂಡತೀನೇ ಕೇಳೋರು. ಯಾಕೇಂದ್ರೆ ಅವರ ಮನೇಲಿ ತಲತಲಾಂತರದಿಂದ ಅಡಿಕೆ ಬೇಯಿಸ್ತಾ ಇದ್ರು. ಇವಳಿಗೂ ಬಾಲ್ಯದಿಂದ ಅನುಭವ ಇತ್ತು. 'ನನ್ನ ಸೊಸೆ ಅಡಿಕೇನ ಬಹಳ ಚೆನ್ನಾಗಿ ಸುಲೀತಾಳೆ' ಅಂತ ತಂದೆ ಹೇಳ್ತಿದ್ರು. ಅಡಿಕೆ ಬೇಯಿಸುವಾಗ ಒಂದು ಹದ ಬರುತ್ತೆ. ಒಂದು ತರದಲ್ಲಿ ಅಂಟು ಹಾರುತ್ತಂತೆ. ಅಂಟು ಹಾರುವ ವಿಚಾರ, ನಮಗೆ ಗೊತ್ತಾಗ್ತಾ ಇರಲಿಲ್ಲ. ಇವತ್ತಿಗೂ ನಾನು ನನ್ನ ಹೆಂಡತೀನೇ ಕೇಳ್ತೀನಿ. ನನ್ನ ವ್ಯವಸಾಯದ ಬದುಕಿನಲ್ಲಿ ಅವಳು ಸಹಕರಿಸಿದ್ದಾಳೆ.

- **ನಿಮ್ಮ ತಂದೆಯಿಂದ ಯಾವ ವಿಚಾರವನ್ನು ಕಲಿತಿದ್ದೀರಿ?**

ನಮ್ಮ ತಂದೆಗೆ ನ್ಯಾಯದ ವಿಚಾರದಲ್ಲಿ ಅಭಿರುಚಿ. ಯಾರು ತಪ್ಪು ಮಾಡಿದ್ರೂ ಸಹಿಸ್ತಾ ಇರಲಿಲ್ಲ. ದಾರೀಲಿ ಹೋಗೋನು, ನನಗೆ ಸಂಬಂಧ ಇಲ್ಲ ಅಂದ್ರೂ ಅವನನ್ನು ತಿದ್ದೋಕೆ ನೋಡೋರು. ತಾರ್ಕಿಕವಾಗಿ ನಮ್ಮ ತಂದೆಗೆ ಆಗದವರೂ ಇದ್ದರು. ಅವರು ತುಂಬಾ ವಿಚಾರವನ್ನು ಕಡ್ಡಿ ತುಂಡು ಮಾಡಿದ ಹಾಗೆ ಹೇಳೋರು. ಮಕ್ಕಳ ವಿಷಯದಲ್ಲೂ ರಿಯಾಯಿತಿ ತೋರುತ್ತಾ ಇರಲಿಲ್ಲ. ಇನ್ನು ನನ್ನ ವಿಚಾರದಲ್ಲಿ ಹೇಳೋದಾದ್ರೆ ನಾನು ಏನು ಕಲಿತಿದ್ದೀನಿ ಅನ್ನುವುದನ್ನು ಆತ್ಮಾವಲೋಕನ ಮಾಡಿಲ್ಲ. ಕುದುರೆ ಕಟ್ಟಿಯಾಗಿದೆ, ಓಡ್ತಾ ಇರೋದು ಅಷ್ಟೆ. ಹಿಂದೆ ತಿರುಗಿ ನೋಡಿಲ್ಲ. ಲೌಕಿಕವಾಗಿ ಪೂರಾ ಹಚ್ಚಿಕೊಂಡಿರುವಾಗ ಇದು ತಪ್ಪು, ಇದು ಸರಿ ಅನ್ನುವ ಚಿಂತನೆ ಸಾಧ್ಯವಿಲ್ಲ ಅನ್ನಿಸುತ್ತೆ.

- **ಕುದುರೆ ಕಟ್ಟಿದೀರಾ ಸರಿ, ಹಳೆಯ ದಾರಿಯ ಆತ್ಮಾವಲೋಕನ ಬೇಡ ಹೋಗಲಿ, ಮುಂದಿನ ದಾರಿಯಾದ್ರೂ ಸ್ಪಷ್ಟವಾಗಿದೆಯಾ?**

  ಸುಮಾರೆಲ್ಲಾ ನಾವು ನಿಶ್ಚಿತವಾಗಿ ಹೀಗೇ ಹೋಗಬೇಕು ಅಂತ ಯಾವತ್ತೂ ತಿಳಿದುಕೊಳ್ಳುವ ಕೆಲಸವಿಲ್ಲ. ಹೋಗ್ತಾ ಇರೋದು. ನನಗೆ ಒಬ್ಬ ಮಗ ಇದ್ದಾನೆ. ಅವನಿಗೆ ವಿದ್ಯಾಭ್ಯಾಸ ಕೊಡಿಸಿ, ನಮ್ಮಂತೆಯೇ ಒಂದು ಜೀವನ ಕಲ್ಪಿಸಬೇಕೆಂಬ ಗುರಿ ಇದೆ. ನಮ್ಮನ್ನು ಪೂರ್ವಿಕರು ಹ್ಯಾಗೆ ರೂಪುಗೊಳಿಸಿದ್ರೋ, ಹಾಗೇ ನಾವೂ ಮಾಡಬೇಕು ಅನ್ನೋದು ಅಷ್ಟೆ. ನನ್ನ ಮಗ ವ್ಯವಸಾಯಸ್ಥನೇ ಆಗಬೇಕು ಅಂತ ನನ್ನ ಬಲವಂತವೇನಿಲ್ಲ. ಅವನ ಕ್ಷೇತ್ರವನ್ನು ಅವನು ಆರಿಸಿಕೊಳ್ಳಬಹುದು. ನನ್ನ ತಂದೇನೂ ನನಗೆ ಇಂಥಾದ್ದನ್ನೇ ಮಾಡು ಅಂತ ಬಲವಂತ ಮಾಡಲಿಲ್ಲ. ಅಲ್ಲದೆ ಎಲ್ಲದಕ್ಕಿಂತ ಮುಖ್ಯವಾದದ್ದು ಜೀವನ ಮಾಡುವುದು. ಹೊಟ್ಟೆಪಾಡು ಬಹಳ ಮುಖ್ಯ ಹಾಗೂ ದೊಡ್ಡದು. ಅದಕ್ಕೋಸ್ಕರವೇ ಕೆಲವು ಬದಲಾವಣೆ ಅಗತ್ಯ. ನನಗೆ ಆಸಕ್ತಿ ಇರಬಹುದು ಚಿತ್ರ ಬರೀಬೇಕು ಅಂತ, ಅದರಲ್ಲಿ ಸಾಧಿಸ್ತೀನಿ ಅಂತ ಹೇಳೋಕಾಗಲ್ಲ. ಹೊಟ್ಟೆಪಾಡಿಗೆ ಒಂದಷ್ಟು ಒಪ್ಪಂದ ಮಾಡಿಕೋಬೇಕು. ಇದು ಅನಿವಾರ್ಯ.

- **ಸಂಕೇತಿ ಕೃಷಿ, ಇತರೇ ಕೃಷಿಗಿಂತ ಹ್ಯಾಗೆ ಭಿನ್ನ ಅಂತೀರ?**

  'ಈ ತೀರ್ಥಹಳ್ಳಿ ಕಡೆಯಿಂದ ಇಲ್ಲಿ ಸುಮಾರು ಜನ ಬಂದು ನಮ್ಮ ನೆರೆಹೊರೇಲೇ ಇದಾರೆ. ಅವರು ಅಡಿಕೆ ಹರವೋದಾದ್ರೆ ಯಾವುದೋ particular ಚಾಪೇನೇ ಆಗಬೇಕು. ಮಳೆಗಾಲದಲ್ಲಿ ಬೋರ್ಡೋ ದ್ರಾವಣ ಗೊನೆಗೆ ಹೊಡೀತಾರೆ, ಕಾಯಿ ಉದುರುತ್ತೆ ಅಂತ. ಅದು ಅವರು ನೆಚ್ಚಿಕೊಂಡು ಬಂದಿರೋದು. ಅಲ್ಲಿ ಅವರ ಊರಲ್ಲಿ ಅದು ಬೇಕಿತ್ತೇನೋ, ಇಲ್ಲೂ ಅದನ್ನೇ ಅನುಸರಿಸ್ತಾರೆ. ಇಲ್ಲಿ ಯಾರೂ ಬೋರ್ಡೋ ಹೊಡೆಯೋದಿಲ್ಲ. ಅದು ಇಲ್ಲಿಗೆ ಬೇಕಾ ಬೇಡವಾ ಅಂತ ಅವರು ವಿಚಾರ ಮಾಡೋಲ್ಲ. ನಮ್ಮದೂ ತೋಟ ಇದೆ, ಅವರದ್ದೂ ತೋಟ ಇದೆ. ಅಂಧಾನುಕರಣೆ ವ್ಯವಸಾಯದಲ್ಲಿ ಸಲ್ಲದು. ನಮ್ಮ ಹವಾಮಾನಕ್ಕೆ ತಕ್ಕ ಪದ್ಧತಿ ರೂಢಿಸಿಕೊಳ್ಳೋದು ಒಳ್ಳೆಯದು. ಸಂಕೇತಿಗಳ ಕೃಷಿಯಲ್ಲಿ ಈ ಭಿನ್ನತೆ ಇದೆ. ನಾವು ಬೇಲಿ ಸುತ್ತಾ ಇರುವ ಗ್ಲಿರಿಸೀಡಿಯಾ ಸೊಪ್ಪನ್ನು, ಹಾಗೆಯೇ ಕೃಷಿ ತ್ಯಾಜ್ಯವನ್ನು ಸಗಣಿಸಮೇತ ಕೊಳೆಸಿ ಕಾಂಪೋಸ್ಟ್ ಮಾಡಿ ಗಿಡಗಳಿಗೆ ನೀಡ್ತೀವಿ. ಕಾಂಪೋಸ್ಟ್ ಗುಂಡೀನೂ ತೇವ ಇರಬೇಕು ಅಂತಾರೆ. ಹಾಗಾಗಿ ಅದರ ಮೇಲೂ ಬಂದು drip pipe ಜೋಡಿಸಿದೀವಿ, ನೀರು ಬೀಳುತ್ತೆ. ಕಾಲಕ್ಕೆ, ಹವಾಗುಣಕ್ಕೆ, ಪರಿಸ್ಥಿತಿಗೆ ತಕ್ಕಂತೆ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರಲ್ಲಿ ನಾವು ಸಿದ್ಧಹಸ್ತರು ಅನ್ನಿಸುತ್ತೆ,' ಅಂತ ಮಂಗಳ ಹಾಡಿದ್ರು ಮುರಳೀಧರ. ಅವರ ತೋಟವನ್ನೆಲ್ಲಾ ಒಮ್ಮೆ ಸುತ್ತಿ, ಭಾವಚಿತ್ರಗಳನ್ನು ತೆಗೆದು, ಮುಂದಿನ ಮನೆಗೆ ಪ್ರಯಾಣ ಬೆಳೆಸಿದ್ವು.



ತೋಟದಲ್ಲೊಂದು ಮಾವಿನತೋಪು: ಎಲ್.ಎಸ್.ಮುರಳೀಧರ

೫೫) ಎಲ್.ಕೆ. ಶ್ರೀಕಂಠ ಸ/ಮ ಎಲ್.ವಿ. ಕೃಷ್ಣಮೂರ್ತಿ

ಗದ್ದೆಮನೆ, ಹೊಸಹಳ್ಳಿ, ಶಿವಮೊಗ್ಗ ಜಿಲ್ಲೆ, ದೂರವಾಣಿ : 08182 237523

ಯಾವ ಶಾಸ್ತ್ರದಲ್ಲಿ ಹೇಳಿದೆ ಬ್ರಾಹ್ಮಣ ಬೇಸಾಯ ಹೂಡಬಾರದು ಅಂತ? ಅದನ್ನು ನಾವೇ ಮಾಡಿಕೊಂಡಿರೋದು ಅಷ್ಟೆ. ಮೊದಲಿನಿಂದಲೂ ನಾನು ಸ್ವತಃ ಬೇಸಾಯ ಹೊಡೆದಿದೀನಿ. ಶಾಸ್ತ್ರ ಹೇಳಿಕೊಂಡು ಕುಳಿತರೆ ಬೆಳೆ ಬೆಳೆಯೋದು ಯಾವಾಗ? ಎಲ್ಲರಿಗೂ ಪೌರೋಹಿತ್ಯದಿಂದ ಬೇಕಾದಷ್ಟು ದಕ್ಷಿಣೆ ಸಿಗೋದಾದ್ರೆ ಪರವಾಗಿಲ್ಲ. ಹಿಂದೇನೋ ಮಹಾರಾಜರ ಕಾಲದಲ್ಲಿ ಕೊಡ್ತಿದ್ರು. ಈಗ ಯಾರು ಕೊಡ್ತಾರೆ? ಶಾಸ್ತ್ರ ಹೇಳಿದೆ ಅಂತ ಸುಮ್ಮನಿದ್ರೆ ಉಪವಾಸ ಇರಬೇಕಾಗುತ್ತೆ, ಅಷ್ಟೆ. ನಾನು ಬದುಕಿದ್ದು ನೇಗಿಲು ಹಿಡಿದು ಬೇಸಾಯ ಮಾಡಿಯೇ.



'ಕೃಷಿಸಾಹಸಿ' ವೇ||ಬ್ರ||ಶ್ರೀ ಎಲ್.ವಿ.ಕೃಷ್ಣಮೂರ್ತಿ ಅವರ ಜತೆ ತುಳಸಿ-ಎಲ್.ಕೆ.ಶ್ರೀಕಂಠ ದಂಪತಿ ತಮ್ಮ ಮಗನೊಂದಿಗೆ:ಹೊಸಹಳ್ಳಿ-ಗದ್ದೆಮನೆ

ಲಿಂಗದಹಳ್ಳಿಯ ಎಲ್.ವಿ. ಕೃಷ್ಣಮೂರ್ತಿ ಹಾಗೂ ಸುಶೀಲಮ್ಮ ದಂಪತಿಗಳಿಗೆ ಏಳು ಜನ ಮಕ್ಕಳು. ಐದು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಮೊದಲನೆಯ ಮಗ ಎಲ್.ಕೆ.ಶ್ರೀಕಂಠ ಅವರಿಗೆ ೫೫ ವರುಷ ವಯಸ್ಸು. ಹೊಸಹಳ್ಳಿಯಲ್ಲಿ ಈಗ ಇವರು ನೆಲೆಸಿದ್ದಾರೆ. ಬೆಟ್ಟದಪುರದ ಕೃಷ್ಣಪ್ಪ ಹಾಗೂ ಸುಬ್ಬಮ್ಮ ದಂಪತಿಗಳ ಮಗಳು ತುಳಸಿ ಶ್ರೀಕಂಠ ಅವರ ಪತ್ನಿ. ಶ್ರೀಕಂಠ ಅವರಿಗೆ ಇಬ್ಬರು ಹೆಣ್ಣುಮಕ್ಕಳು ಹಾಗೂ ಒಬ್ಬ ಮಗನಿದ್ದಾನೆ. ಶ್ರೀಕಂಠ ಅವರೊಂದಿಗೆ ಮಾತಿಗಿಳಿದಾಗ ಸಂಜೆಯ ಸಮಯ. ತೋಟದ ಮನೆಯೊಳಗೆ ಮಾತಿನ ಲೇಪನ ಹಚ್ಚುವ ಕೆಲಸ ಆರಂಭವಾಯ್ತು.

- **ಶ್ರೀಕಂಠ ಅವರೆ, ನಮಸ್ಕಾರ.**

  ನಮಸ್ಕಾರ. . .



ಹೊಸ ತಂತ್ರಜ್ಞಾನದ ಆಹ್ವಾನದ ಪ್ರತೀಕ:ಎಲ್.ಕೆ.ಶ್ರೀಕಂಠ:ಹೊಸಹಳ್ಳಿ-ಗದ್ದೆಮನೆ

- **ನಿಮ್ಮ ಪೂರ್ವಿಕರ ಬಗ್ಗೆ, ನೀವು ಲಿಂಗದಹಳ್ಳಿಯಿಂದ ಇಲ್ಲಿ ಬಂದು ನೆಲೆಸಿದ ಕಾರಣಗಳ ಬಗ್ಗೆ ವಿವರವಾಗಿ ಹೇಳಿ?**

ನಮ್ಮಜ್ಜ ವೆಂಕಟರಮಣಾವಧಾನಿ ಹಾಗೂ ಅಜ್ಜಿ ಮಹಾಲಕ್ಷಮ್ಮ ಲಿಂಗದಹಳ್ಳಿಯಲ್ಲಿದ್ರು. Land Tribunal Act ಬಂದಾಗ ಹೊಸಹಳ್ಳೀಲಿ ಜಮೀನನ್ನು ಕಡಿಮೆ ಬೆಲೆಗೆ ಮಾರಿದ್ರು. ಹಾಗಾಗಿ ನನ್ನ ತಂದೆ ಎಲ್.ವಿ.ಕೃಷ್ಣಮೂರ್ತಿ ಇಲ್ಲಿ ಜಮೀನು ಖರೀದಿಸಿ settle ಆದ್ರು. ನಾನು PUCವರೆಗೆ ಓದಿ ಇಲ್ಲಿ ವ್ಯವಸಾಯಕ್ಕೆ ನಿಂತೆ. ನಮ್ಮ ಪೂರ್ವಿಕರು ಮೊದಲು ತೀರ್ಥಹಳ್ಳಿಯ ಹತ್ರ ತೆಂಗಿನಕೆರೆಯಲ್ಲಿದ್ರಂತೆ. ಅಲ್ಲಿಂದ ಲಿಂಗದಹಳ್ಳಿಗೆ ಹೋಗಿದ್ರಂತೆ.


ಜೋಡೆತ್ತಿನಗಾಡಿ: ಎಲ್.ಕೆ.ಶ್ರೀಕಂಠ:ಹೊಸಹಳ್ಳಿ ಗದ್ದೆ ಮನೆ

ಅಲ್ಲಿಂದ ಮತ್ತೆ ವಾಪಸ್ಸು ತೀರ್ಥಹಳ್ಳಿ ದಾರೀಲೇ ಇಲ್ಲಿ ಬಂದು settle ಆಗಿದಾರೆ. ತೆಂಗಿನಕೆರೇಲಿ ಅಡಿಕೆಗೆ ಕೊಳೆರೋಗ ಜಾಸ್ತಿ, ಮನುಷ್ಯರಿಗೆ ಮಲೇರಿಯಾ ಖಾಯಿಲೆ ಜಾಸ್ತಿ, ಹಾಗಾಗಿ ಲಿಂಗದಹಳ್ಳಿಗೆ ಹೋದರು. ಅಲ್ಲಿ ಶ್ಯಾನುಭೋಗರಾಗಿ ಸಂಕೇತಿಗಳೇ ಇದ್ರು, ಹಾಗಾಗಿ ಅಲ್ಲಿಗೆ ಹೋದ್ರು. ಇಲ್ಲಿ ಅಣೆಕಟ್ಟೆ ಆಯ್ತು, ನಾಲಾನೀರಿನ ಸೌಲಭ್ಯ ಆಯ್ತು, ಜಮೀನು ಸುಲಭವಾಗಿ ಸಿಗ್ತು; ಹಾಗಾಗಿ ಇಲ್ಲಿಗೆ ಬಂದ್ರು. ನಮ್ಮ ತಂದೆಗೆ ನಾಲ್ಕು ಜನ ಅಣ್ಣತಮ್ಮಂದಿರು. ಲಿಂಗದಹಳ್ಳೀಲಿ ಆಸ್ತೀನ ನಾಲ್ಕು ಭಾಗ ಮಾಡಿ, ಅಲ್ಲೂ ನಮಗೆ ಜಮೀನು ಇದೆ. ಅಲ್ಲಿ ನಮ್ಮಜ್ಜ ಮಾಡಿದ ಆಸ್ತೀನ ನಾವು ಕಳೆದಿಲ್ಲ. ನನ್ನ ಆಸ್ತಿಯ ಪರವಾಗಿ ನನ್ನ ತಮ್ಮ ಇದಾನೆ. ಎಲ್ಲರ ಆಸ್ತೀಗೂ ಒಬ್ಬೊಬ್ಬರು ಇದೀವಿ.

- **ನಿಮ್ಮ ಬಗ್ಗೆ ಹೇಳಿ ಶ್ರೀಕಂಠ ಅವರೆ.**

'ಉಳುವವನೇ ಭೂಮಿಯ ಒಡೆಯ' ಕಾನೂನು ಬಂದ ಮೇಲೆ, ನಮ್ಮ ಇಲ್ಲಿನ ಜಮೀನು ಬೇರೆಯವರ ಪಾಲಾಗಬಾರದು, ನಾವೇ ಉಳೋಣ ಅಂತ ಹೇಳಿ, PUC ಓದುತ್ತಾ ಇದ್ದವನು ಬಿಟ್ಟು ಇಲ್ಲಿಗೆ ಬಂದು ನಾವೇ ಉಳೋದಕ್ಕೆ ಶುರು ಮಾಡಿದ್ವಿ. ಕ್ರಮೇಣ ತೋಟ ಅಭಿವೃದ್ಧಿ ಮಾಡಿದ್ವಿ. ನನ್ನ ತಂದೆ ಕಾಲದಲ್ಲಿ, tractor ಇರಲಿಲ್ಲ. ಗಾಡಿ ಇತ್ತು. ಎತ್ತುಗಳನ್ನು ಇಟ್ಟುಕೊಂಡು, ಆಳುಗಳ ಸಹಾಯದಿಂದ ಬೇಸಾಯ ನಡೆಸ್ತಾ ಇದ್ರು. ನಾನು tractor ಬಾಡಿಗೆ ತೆಗೆದುಕೊಂಡು ಉಳುಮೆ ಮಾಡಿಸಿದೆ. ನನ್ನ ತಂದೇನೂ ಬಹಳ ಕಷ್ಟಪಟ್ಟಿದಾರೆ. ಅವರು ಶೃಂಗೇರಿ ಮಠದಲ್ಲಿದ್ದು ಓದಿ ವೈದಿಕ ವೃತ್ತಿ ಅವಲಂಬಿಸಿದ್ರು. ಪೌರೋಹಿತ್ಯಾನೂ ಬಿಟ್ಟು ಇಲ್ಲಿ ಬಂದು ವ್ಯವಸಾಯ ಮಾಡಿದ್ರು. ನನ್ನ ಚಿಕ್ಕಪ್ಪ doctor ಆಗಿದ್ರು, ಅವರು ನಮಗೆ ಬಹಳ ಸಹಾಯ ಮಾಡಿದ್ರು. ಆರ್ಥಿಕ ನೆರವು ನೀಡಿದ್ರು. ನಮ್ಮ ತಂದೆ ಹೊಸಹಳ್ಳಿಯ ಛತ್ರದಲ್ಲಿದ್ದು ಅಲ್ಲಿಂದ ಓಡಾಡಿಕೊಂಡು ಇಲ್ಲಿ ಜಮೀನು ಮಾಡಿದ್ರು. ಇಲ್ಲಿ ಮೊದಲು ಕಾಡಿತ್ತಂತೆ. ಕಾಡನ್ನು ಕಡಿದು, ವ್ಯವಸಾಯದ ಜಮೀನನ್ನಾಗಿ ಪರಿವರ್ತಿಸಿಕೊಂಡು, ಕಷ್ಟಪಟ್ಟು ರೂಢಿಸಿದ್ದಾರೆ. ನಾವು ಕಷ್ಟ ಪಟ್ಟಿರೋದು ಅದರ ನೂರನೇ ಒಂದು ಭಾಗ ಇಲ್ಲಾಂತ ಹೇಳಬಹುದು. ನನ್ನ ತಂದೆ ದುಡ್ಡು ಬರುವ ಬೆಳೆ ಬೆಳೀತಾ ಇರಲಿಲ್ಲ. ಬರೀ ಗದ್ದೆ ಮಾಡ್ತಿದ್ರು. ನಾವು ತೋಟ ಮಾಡಿದ್ವಿ. ಅವರು ಜಮೀನು ಖರೀದಿಸಿದ್ರಿಂದ ನಾವು ತೋಟ ಮಾಡಲು ಅವಕಾಶವಾಯ್ತು. ಗದ್ದೆ ಮಾಡೋದ್ರ ಬಗ್ಗೆ ತಂದೆಗೆ ಆಸಕ್ತಿ. ನೆಲ ಮಟ್ಟಮಾಡೋದು, ಅಗೆಸೋದು ಮಾಡಿಸೋರು. ನಮ್ಮಜ್ಜ ತೋಟದಲ್ಲಿ ಯಾರಾದ್ರು ಕಳ್ಳತನ ಮಾಡ್ತಿರೋದು ಗೊತ್ತಾದರೆ, ದೂರದಿಂದಲೇ ಶಬ್ದ ಮಾಡಿಕೊಂಡು - ಹೋಗೋರಂತೆ. ಅವನು ಅತ್ತಲಾಗಿ ಹೋಗಲಿ, ಸಿಗೋದು ಬೇಡ ಅಂತ.

- **ನಿಮಗೆ ಬಾಲ್ಯದಲ್ಲಿ ಏನಾಗಬೇಕು ಅಂತ ಕನಸಿತ್ತು?**

ಬಾಲ್ಯದಲ್ಲಿ, ನಾನು ಮುಂದೆ ಓದಿ ಕೆಲಸ ಸಂಪಾದಿಸಬೇಕು ಅಂತ ಇತ್ತು. ಆದರೆ change ಆಯ್ತು.

- **ವ್ಯವಸಾಯಕ್ಕೆ ಬಂದಿದ್ದರಿಂದ ಬೇಸರ ಇದೆಯಾ?**

ಇಲ್ಲ . . ಅಂತಹ ಪರಿತಪನ ಇಲ್ಲ. ಮಧ್ಯದಲ್ಲಿ ಸ್ವಲ್ಪ ದಿನ 'ಯಾಕೆ ಬಂದೆನೋ ಈ ಜಮೀನಿಗೆ' ಅನ್ನಿಸ್ತಾ ಇತ್ತು. ಅಡಿಕೆ ತೋಟವೆಲ್ಲಾ ಕೈಯಿಗೆ ಬಂದ ಮೇಲೆ ನನಗೇನೂ ಬೇಸರವಿಲ್ಲ. ಈಗ ಆರ್ಥಿಕವಾಗಿ ಪರವಾಗಿಲ್ಲ, ಅನುಕೂಲವಾಗಿದೀವಿ.

- **ನೀವು ಹೇಗೆ ಕಷ್ಟಪಟ್ಟು ಜಮೀನು ವ್ಯವಸಾಯ ರೂಢಿಸಿದ್ರಿ ಹೇಳಿ?**

(ನಗು) ಕಷ್ಟಪಟ್ಟಿದ್ದೆಲ್ಲಾ ಮರೆತುಹೋಗಿದೆ. ಈಗ ಸುಖವೊಂದೇ ನೆನಪಿಗೆ ಬರ್ತಾ ಇರೋದು. ಆವಾಗೆಲ್ಲಾ ಗೋಟು ತಂದು, ಮಳಕೆ ಮಾಡಿ, ಪಾತಿ ಮಾಡಿ, ತೋಟ ಮಾಡಿದೆ. ದುಡ್ಡಿಗೆಲ್ಲಾ ಬಹಳ ತೊಂದರೆ ಇತ್ತು. ಭತ್ತ ಬೆಳೆದು ಮಾರಾಟ ಮಾಡಿಬಂದ ಹಣವನ್ನು

ನಾವು ತೋಟಕ್ಕೆ ಹಾಕಬೇಕು. ಮತ್ತೆ ಮುಂದಿನ ವರುಷ ಭತ್ತ ಬೆಳೆಯಲು ದುಡ್ಡು ಕಡಿಮೆಯಾಗೋದು. ಸಾಲದಲ್ಲೇ ಸಿಲುಕಿ, ಒದ್ದಾಡಿ, ಭತ್ತದ ವ್ಯಾಪಾರಿಗಳ ವಿಶ್ವಾಸಗಳಿಸಿಕೊಂಡು, ಅವರತ್ರನೇ ಸಾಲಸೋಲ ಮಾಡಿ ಉಳಿದ್ವಿ. ಆಗ ಬೇರೆಯವರು ಸಾಲ ಕೊಡ್ತಿರಲಿಲ್ಲ, ನಾವು ಭತ್ತ ಕೊಡ್ತೀವಿ ಅಂತ ಹೇಳಿ ದುಡ್ಡು ತರ್ತಾ ಇದ್ವಿ. ಭತ್ತ ಬಂದಾಗ ಅವರಿಗೆ ಭತ್ತ ಕೊಡ್ತಿದ್ವಿ. ತೋಟ ಸ್ವಲ್ಪ ಫಸಲಿಗೆ ಬರಲು ಶುರುವಾದ ಮೇಲೆ ನಾವು ಅಡಿಕೆ ಮಂಡಿಗೆ ತಿರುಗಿದ್ವಿ. ಭತ್ತದ ಕಡೆ ಹೋಗಲಿಲ್ಲ. ಆಮೇಲೆ ಅಡಿಕೆ ಮಂಡಿಯವರ ಹತ್ರ ದುಡ್ಡು ತರೋದು, ಅಡಿಕೆ ಕೊಡೋದು ಮಾಡಿದೀವಿ. ಅಡಿಕೆ ಧಾರಣೇನೂ ಕಡಿಮೆಯಾದ ಮೇಲೆ, ಬಾಳೆ ಹಾಕಿದರೆ ಅನುಕೂಲ ಅಂತ ಬಾಳೆ ಬೇಸಾಯ ಆರಂಭಿಸಿದೆ. 'ಸುಧಾ' ವಾರಪತ್ರಿಕೆಯಲ್ಲಿ ಓದಿ ತಿಳಿದು tissue culture (ಅಂಗಾಂಶ ಕೃಷಿ) ಬಾಳೆ ಹಾಕಿದೆ. ಬೆಂಗಳೂರಿನ Green Earth Nurseryನಲ್ಲಿ, ೬.೫೦ ರೂಪಾಯಿಗೆ ಒಂದು ಸಸಿಯಂತೆ ತೆಗೆದುಕೊಂಡು ಬಂದೆ. ಒಂದೊಂದು ಬಾಳೆ ಗೊನೆ ೩೦ ರಿಂದ ೪೦ ಕೇಜಿ ತೂಗುತ್ತೆ.

- **ಯಾವ ರೀತಿ ಅದರ ಕೃಷಿ ಮಾಡಿದ್ರಿ?**

ಬಾಳೆಯ ಒಂದು ಅಂಗಾಂಶದಲ್ಲಿ ಸಸಿ ಬೆಳೆಸಿ ನಮಗೆ ಕೊಡ್ತಾರೆ. ಅದನ್ನು ಒಂದು ಬಾಕ್ಸ್‌ನಲ್ಲಿ ಹಾಕಿಕೊಂಡು ಬಂದು, ಒಂದು ಕೆಜಿ ಅಳತೆಯ ಪ್ಲಾಸ್ಟಿಕ್ ಚೀಲದಲ್ಲಿ, ಮಣ್ಣು ಗೊಬ್ಬರ ಗೋಡು ತುಂಬಿ, ಸಸಿಯನ್ನು ಅದರಲ್ಲಿ ನೆಡಬೇಕು. ಅದರಲ್ಲಿ ಸುಮಾರು ೪೫ ರಿಂದ ೬೦ ದಿನ ಬೆಳೆಸಿ, ನಂತರ ಬಾಳೆ ಬೆಳೆಯುವ ಮುಖ್ಯ ಜಮೀನಿನಲ್ಲಿ ನಾಟಿ ಮಾಡಬೇಕು. ಸಂಸ್ಥೆಯವರು ಮೊದಲು ನಮಗೆ ನೀಡುವ ಬಾಳೆ ಗಿಡ ಒಂದೂವರೆಯಿಂದ ಎರಡು ಇಂಚ್ ಇರುತ್ತೆ ಅಷ್ಟೆ. ಐದುನೂರು ಗಿಡವನ್ನು ಒಂದು ೨' x ೨' ಅಳತೆ ಪೆಟ್ಟಿಗೆಯಲ್ಲಿ ಆರಾಮವಾಗಿ ತರಬಹುದು. ಇಲ್ಲಿ ಪಾಲಿಥೀನ್ ಬ್ಯಾಗ್‌ನಲ್ಲಿ ಆ ಸಸಿಯನ್ನು ಬಹಳ ಹುಶಾರಾಗಿ ಬೆಳೆಸಬೇಕು. ನಂತರ ಮುಖ್ಯ ಜಮೀನಿನಲ್ಲಿ ಸಾಲಿನಿಂದ ಸಾಲು ಹಾಗೂ ಗಿಡದಿಂದ ಗಿಡಕ್ಕೆ ಆರರಿಂದ ಏಳು ಅಡಿ ಅಂತರದಲ್ಲಿ ಗುಂಡಿ ತೆಗೆದೆ. ಅದಕ್ಕೆ ಮಣ್ಣು, ಗೊಬ್ಬರ ತುಂಬಿ ಸಸಿ ನಾಟಿ ಮಾಡಬೇಕು, ೧೫ ದಿನಕ್ಕೆ ಒಂದು ಸಾರಿ ಗೊಬ್ಬರ, ಔಷಧಿ, ಹಾಕ್ತಾ ಬಂದು, ಶ್ರದ್ಧೆಯಿಂದ ನೋಡಿಕೊಂಡ್ರೆ ಒಂದೊಂದು ಗಿಡದಿಂದ ೫೦ ಕೇಜಿ ಬಾಳೆ ಉತ್ಪಾದಿಸಬಹುದು. ನಾನು 15:15:15 (ಸುಫಲಾ) ಗೊಬ್ಬರ ಹಾಕಿದೀನಿ. ಕೊನೇ ಕಂತಾಗಿ Urea ಮತ್ತು Potash ಹಾಕಿದೀವಿ. ಗೊನೆ ದಪ್ಪದಾಗಿ ಬಂದ ಗಿಡಗಳಿಗೆ ಕೋಲು ಕೊಟ್ಟು ಆಧಾರ ನೀಡಿದೀವಿ. ನಾಲ್ಕು ರಿಂದ ಐದು ರೂಪಾಯಿ ಕಿಲೋಗ್ರಾಂ ಲೆಕ್ಕದಲ್ಲಿ ಈಗ ಮಾರ್ತಾ ಇದೀವಿ. ಮಾವಿನ ಹಣ್ಣಿನ season ದಾಟಿದ್ರೆ ಆರು, ಏಳು ರೂಪಾಯಿ ಆಗುತ್ತೆ. ಒಳ್ಳೆಯ ಆದಾಯ ಸಿಗುತ್ತೆ. ನಾನು ೫೦೦ ಬುಡ ಹಾಕಿದ್ದು. ಖರ್ಚು ೧೩,೫೦೦ ರೂಪಾಯಿ ಆಗಿದೆ. ಖರ್ಚು ಕಳೆದು ೨೫ ಸಾವಿರ ರೂಪಾಯಿ ಸಂಪಾದನೆಯಾಗಿದೆ. ಇದು ಅರ್ಧ ಎಕರೆ ಆದಾಯ. ಒಂದು ಎಕರೇಲಿ ಈ ಬಾಳೆ ಬೆಳೆದ್ರೆ ಐವತ್ತು ಸಾವಿರ ರೂಪಾಯಿ ಸಂಪಾದನೆ ಮಾಡಬಹುದು.

- **ಅಡಿಕೆ ಬಾಳೆ ಬಿಟ್ಟು ಬೇರೆ ಯಾವ ಬೆಳೆ ಬೆಳಿದಿದೀರಿ?**

ನಾನು ೩೦೦, ೪೦೦ ಟನ್ ಕಬ್ಬು ಬೆಳೀತಿದ್ದೆ. ಇಲ್ಲಿ factory ಮುಚ್ಚಿದ್ರಿಂದ ನಮಗೆ ನಷ್ಟ ಆಯ್ತು. ಕಬ್ಬನ್ನು ಬಿಟ್ಟುಬಿಟ್ಟೆ. ಭತ್ತವನ್ನು ಮುಂಚೆ ತುಂಬಾ ಬೆಳೀತಿದ್ವಿ. ಈಗ ಎರಡು ಎಕರೇಲಿ ಬೆಳೀತೀವಿ ಅಷ್ಟೆ. ದನಕರುಗಳಿಗೆ ಮೇವು ಆಗಲಿ ಅನ್ನುವುದು ಭತ್ತದ ಬೇಸಾಯದ ಉದ್ದೇಶ. ನಮ್ಮ ಮನೇಲಿ, ಒಂದು ಹಸು, ಎರಡು ಎತ್ತು, ಮೂರು ಎಮ್ಮೆಗಳು ಇವೆ. ಮನೆಗೆ ಹಾಲಾಗುತ್ತೆ. ಹಾಗೇ ಗೋಬರ್ ಗ್ಯಾಸ್ plant ಇದೆ. ೧೯೭೮ರಲ್ಲಿ ನಾನು ಗೋಬರ್ ಗ್ಯಾಸ್ ಮಾಡಿಸಿದ್ದು, ಡ್ರಂ


ತುಳಸಿ-ಶ್ರೀ ಎಲ್.ಕೆ.ಶ್ರೀಕಂಠ:ತಮ್ಮ ಕುಟುಂಬವರ್ಗದೊಂದಿಗೆ:ಹೊಸಹಳ್ಳಿ-ಗದ್ದೆಮನೆ

ಮಾದರಿಯದ್ದು; ಇವತ್ತಿನವರೆಗೂ ಯಾವ ತೊಂದರೆಯೂ ಇಲ್ಲ. Fibredrum ಆಗಿದ್ರೆ lifelong ಬದಲಾಯಿಸುವ ಅಗತ್ಯವಿರಲಿಲ್ಲ. ಕಬ್ಬಿಣದ ಡ್ರಂ ಇತ್ತು, ಹಾಗಾಗಿ ಒಂದು ಸಾರಿ ಡ್ರಂ ಬದಲಾಯಿಸಿದೀನಿ ಅಷ್ಟೆ. ನಮ್ಮ ಮನೇಲಿರುವ ಐದು ಜನರಿಗೆ ಸಾಕಾಗುವಷ್ಟು ಗ್ಯಾಸ್ ಬರುತ್ತೆ. ನಿರ್ವಹಣೇನೂ ಸುಲಭ. ಅತ್ಯಂತ ಕಡಿಮೆ ಖರ್ಚಿನಲ್ಲಿ ಮನೆಗೆ ಬೇಕಾದ fuel ಸಿಗ್ತಾ ಇದೆ.

- **ಹಿಂದಿನ ಕಾಲದ ಭತ್ತದ ಬೇಸಾಯಕ್ಕೂ ಈಗ ನೀವು ಮಾಡ್ತಿರುವ ಭತ್ತದ ಬೇಸಾಯಕ್ಕೂ ಏನು ವ್ಯತ್ಯಾಸ ಇದೆ?**

ಹಿಂದೆ chemical fertilizer ಯಾವುದೂ ಬಳಸ್ತಾ ಇರಲಿಲ್ಲ. ಈಗ ಔಷಧಿ, ರಾಸಾಯನಿಕ ಗೊಬ್ಬರ ಬಳಸ್ತಾ ಇದೀವಿ. ಆದ್ರೆ ಈಗ ನೆಲ ಎಲ್ಲ ಬೆಂಡಾಗಿದೆ. ಈಗ ಪರಿಸ್ಥಿತಿ ಹ್ಯಾಗಿದೆ ಅಂದ್ರೆ, ನಾವು ರಾಸಾಯನಿಕ ಬಳಸ್ದೇ ಇದ್ರೆ, ಗಿಡ ಮೇಲೆ ಏಳೋಲ್ಲ, ಹಸಿರಾಗೋದೇ ಇಲ್ಲ. ಹಿಂದೆ ಕೊಯಮತ್ತೂರು ಸಣ್ಣ, ಗೌರಿ, ಅಂತ ಸ್ಥಳೀಯ ತಳಿಗಳನ್ನು ಬೆಳೀತಾ ಇದ್ವಿ. ನಂತರ ಇಂಟಾನ್ ತಳಿ. ನೀರು ಕಡಿಮೆ ಇರುವ ಸ್ಥಳದಲ್ಲಿ ದಬ್ಬಣ ಸಾಲೆ ಬೆಳೀತಾ ಇದ್ವಿ. ಈಗ ಪ್ರತಿ ವರುಷ ಹೊಸ ತಳಿ ಬರುತ್ತಾ ಇದೆ. ಯಾವುದು ಚೆನ್ನಾಗಿ ಬರುತ್ತೆ ಅಂತಾರೋ ಆ ಬೇರೆ ಬೇರೆ ತಳಿ ಬೆಳೀತೀನಿ. ಈಗ ಮಂಡ್ಯದ ೧೦೦೧ ತಳಿ ಹಾಕಿದೀನಿ. ಎರಡೂವರೆ ಎಕರೇಲಿ ೬೦/೭೦ ಚೀಲ ಭತ್ತ ಆಗುತ್ತೆ. ನಾನು ಜ್ಯೋತಿ ಭತ್ತದ ಬೆಳೆಯ ಬಿತ್ತನೆ ಬೀಜ ಸಹಾ ಬೆಳೆದು ಕೊಟ್ಟಿದೀನಿ. ಮೊದಲು ಬೀಜ ಬೆಳೆದದ್ದು ನಾನೇ. ನನ್ನ ಮನೆಗೇ ಬಂದು ಬೀಜ ತೊಗೊಂಡು ಹೋಗೋರು.

- **ನಿಮಗೆ ಬೇಕಾದ ಆಹಾರ ಪದಾರ್ಥವೆಲ್ಲ ನಿಮ್ಮ ಜಮೀನಿನಲ್ಲಿ ನೀವೇ ಬೆಳೀತಾ ಇದೀರಾ?**

ನಾವು ತರಕಾರಿ ಬೆಳೀತೀವಿ. ಬದನೇಕಾಯಿ, ನುಗ್ಗೆಕಾಯಿ, ಪಪ್ಪಾಯ ಇದೆ. ಮಾವಿನಲ್ಲಿ ಮಲ್ಲಿಕಾ, ಆಪೂಸ್, ರತ್ನಗಿರಿ ತಳಿಗಳು ಇವೆ. ಸಣ್ಣಪುಟ್ಟ ಇತರೇ ಬೆಳೆಗಳೂ ಇವೆ. ಬಾಳೆಯಂತೂ ಇದೆ. ಬಾಳೇಲಿ ಚಂದ್ರಬಾಳೆ, ನೇಂದ್ರಬಾಳೆ (ಬಣ್ಣ ಕೆಂಪಿರುತ್ತೆ. ಬಹಳ ರುಚಿ ಜಾಸ್ತಿ). ಅದಕ್ಕೆ rate ಜಾಸ್ತಿ. ೪೦ ರೂಪಾಯಿ Kg ಅದು. ನೇಂದ್ರ ಬಾಳೆ ಚಿಪ್ಸ್ ಮಾಡಲು ಹೋಗುತ್ತೆ. ೨೫ ರೂಪಾಯಿ Kgಗೆ ಧಾರಣೆ ಇದೆ. ನನ್ನ ೧೦ ಎಕರೆ ಜಮೀನಿನಲ್ಲಿ, ಐದು ಎಕರೆ ಅಡಿಕೆ ಇದೆ. ಎರಡೂವರೆ ಎಕರೆ ಭತ್ತ ಇದೆ. ಇನ್ನು ಎರಡೂವರೆ ಎಕರೇಲಿ ಬಾಳೆ ಹಾಗೂ ಬೇರೆ ಬೇರೆ ಬೆಳೆ ಬೆಳೀತೀನಿ. ಕೆಲವನ್ನು ಕೊಂಡು ತರ್ತೀನಿ.

- **ಅಡಿಕೆ ತೋಟದ ನಿರ್ವಹಣೇನ ಯಾವ ರೀತಿ ಮಾಡ್ತೀರಿ?**

ಅಡಿಕೆ ಒಂದು ಎಕರೇಲಿ ೮ ಕ್ವಿಂಟಾಲ್ ಉತ್ಪತ್ತಿ ಇದೆ. ನಾನು ಸಾಲಿನಿಂದ ಸಾಲಿಗೆ ೧೨ ಅಡಿ, ಗಿಡದಿಂದ ಗಿಡಕ್ಕೆ ಎಂಟು ಅಡಿ, ದೊಡ್ಡ ದಾಯದಲ್ಲಿ ಗಿಡ ನಾಟಿ ಮಾಡಿದೀನಿ. ಮಧ್ಯದಲ್ಲಿ ಮತ್ತೆ ಕಟ್ಟಿದೀನಿ, ಅದು ಇನ್ನೂ ಫಸಲಿಗೆ ಬಂದಿಲ್ಲ. ಅಡಿಕೆಗೆ ೮ x ೮ ಅಡಿ ದಾಯ ಸಾಕು, ಅಂತ ನನ್ನ ಅಭಿಪ್ರಾಯ. ೬' x ೬' ಕ್ಕೆ ಹಾಕಿದ್ರೆ ಬಹಳ ಸೋಲೇ ಆಗುತ್ತೆ. ಗೊನೆ ಬರುವ ಸಮಯದಲ್ಲಿ, ಬಿಸಿಲು ಸಾಕಾಗೋಲ್ಲ. ಆಗ ಗರಿ ಕಡೀಬೇಕಾಗುತ್ತೆ. ಅಡಿಕೇನ ಒಂದೂವರೆ ವರುಷದ ಸಸೀನ ನೆಡಬೇಕು. ಅಡಿಕೆ ಸಸಿ ನೆಡುವ ಮೊದಲು ನೆರಳಿಗೆ ಕರಿಬಾಳೆ ಹಾಕಿದ್ರೆ ಸೂಕ್ತ. ನಮ್ಮ ಜಮೀನು, ಹಾಗೂ ಮಣ್ಣು ಯಾವುದಿದ್ರೂ, ಒಳ್ಳೆಯ ಕಾಡುಮಣ್ಣು, ಗೋಡು ಹಾಕಿದ್ರೆ ಯಾವ ಮಣ್ಣಿನಲ್ಲಾದ್ರು ಅಡಿಕೆ ಬೆಳೀಬಹುದು. ನಾವು ಇಲ್ಲಿ ಸಕ್ಕರೆಬೈಲು ಹಾಗೂ ಹೊಸಕೊಪ್ಪ ಕಾಡಿನಿಂದ ಮಣ್ಣು ತರ್ತೀವಿ. ಒಂದು tractor ಮಣ್ಣಿಗೆ ೧೫೦ ರೂಪಾಯಿ. ಒಂದೆರಡು load ಗೆ ನಾವು ಹೋಗ್ತೀವಿ, ಒಳ್ಳೆಯ ಮಣ್ಣು ತುಂಬ್ತಿದಾನ ಅಂತ ಪರೀಕ್ಷೆ ಮಾಡೋಕೆ. ಪ್ರತೀ ವರುಷ ಮರಕ್ಕೆ ನಾಲ್ಕು ಬುಟ್ಟಿ ಮಣ್ಣು, ಒಂದು ಬುಟ್ಟಿ ಗೊಬ್ಬರ ಹಾಕಬೇಕು. ೨೦ ದಿನಕ್ಕೆ ಒಂದು ಬಾರಿ ನೀರು ಕೊಡಬೇಕು. ನಮ್ಮಲ್ಲಿ ಹಾಯಿ ನೀರು. ನಾವು ಕಪ್ಪುಗಳಲ್ಲಿ ನೀರು ತುಂಬಿಸ್ತೀವಿ. ಪ್ರತೀ ಸಾಲಿನಲ್ಲೂ ಒಂದೂವರೆ ಅಡಿ ಆಳ, ಒಂದು ಅಡಿ ಅಗಲ ಕಪ್ಪು ಇದೆ. ನಮ್ಮದು ಜೌಗು ನೆಲ, ಪ್ರತೀ ಸಾಲಿಗೆ ಕಪ್ಪು ಹೊಡೆದಿದೀವಿ. ಜೌಗು ಇರದಿದ್ರೆ ಎರಡು ಸಾಲಿಗೆ ಒಂದು ಕಪ್ಪು ಕೊಡಬಹುದು. ಮೊದಲೇ ಸ್ಥಳೀಯ ತಳಿ ಬಾಳೆ ಹಾಕಿರೋದ್ರಿಂದ ನೆರಳಲ್ಲಿ ಅಡಿಕೆ ಚೆನ್ನಾಗಿ ಬರುತ್ತೆ. ಮೂರು ವರುಷ ಆದ ಮೇಲೆ, ಬಾಳೆಗಿಂತ ಅಡಿಕೆ ಮೇಲೆ ಬೆಳೆದು ತೂಗಲು ಆರಂಭವಾಗುತ್ತೆ. ಆಗ ಬಾಳೆ ತೆಗೀಬಹುದು. ಮರ ತೂಗುವುದರಿಂದ ಬಿಸಿಲು ಸಹ ಒಂದೇ ಕಡೆ ಬೀಳೋದಿಲ್ಲ. ತಾನೇ ತಾನು ಬಿಸಿಲಿನ ಹೊಡೆತವನ್ನು ರಕ್ಷಣೆ ಮಾಡಿಕೊಳ್ಳುತ್ತೆ. ಅಡಿಕೆ ತೋಟದ ಸುತ್ತಾ ನಾನು ಕಾಡು ಹಲಸಿನ ಮರ ಹಾಕಿದೀನಿ. ಅದು ಎತ್ತರವಾಗಿ ಬೆಳೆಯುತ್ತೆ. ಪನ್ನೇರಳೆ, ನಿಂಬೆ, ಕಂಚಿಕಾಯಿ ಎಲ್ಲವೂ ತೋಟದಲ್ಲಿ ಇದೆ.

- **ನಿಮ್ಮ ಕುಟುಂಬದ ಅಭಿವೃದ್ಧಿಗೆ, ವ್ಯವಸಾಯಕ್ಕೆ ಹೆಣ್ಣು ಮಕ್ಕಳ ಕೊಡುಗೆ ಏನು?**

ಸಮನಾಗಿದೆ. ಶೇಕಡಾ ೫೦ ಅವರದ್ದು. ನಾವು ಪೇಟೆಗೆ ಹೋದಾಗ ನನ್ನ ಹೆಂಡತೀನೇ ಎಲ್ಲಾ ನೋಡಿಕೊಳ್ತಾಳೆ. ನಾವು ಇಲ್ಲಿ ಒಂಟಿ

ಮನೆ ಮಾಡಿಕೊಂಡು ಇದೀವಲ್ಲ, ನಮಗೆ ಸಹಾಯವಾಗಿ ಅವರು ಇರೋದು ಐವತ್ತು ಪರ್‌ಸೆಂಟ್ ಸಹಕಾರ ಆಗಿದೆ.



ಗೋಬರ್‌ಗ್ಯಾಸ್ ನಿರ್ವಹಣೆ: ತುಳಸಿ:ಹೊಸಹಳ್ಳಿ-ಗದ್ದೆಮನೆ

- **ನಿಮ್ಮ ಕುಟುಂಬದ ಮನೋರಂಜನೆ ಹ್ಯಾಗೆ?**
ಪುಸ್ತಕಗಳನ್ನು ಓದುತ್ತೀವಿ. ಹತ್ತಿರ ಶಿವಮೊಗ್ಗದಲ್ಲಿ ಗ್ರಂಥಾಲಯ ಇದೆ. ಎಲ್ಲಾ ಕಾದಂಬರಿ, ಪುಸ್ತಕಗಳನ್ನೂ ಓದುತ್ತೀವಿ. ಏನೂ ಬೇಜಾರಿಲ್ಲ. ಕೃಷಿ ಬಗ್ಗೆ BGL ಸ್ವಾಮಿಗಳ 'ಹಸಿರು ಹೊನ್ನು' ಓದಿದೀನಿ. Magazine ಗಳನ್ನು ಓದುತ್ತೀನಿ. ಪುಸ್ತಕವೇ ನಮ್ಮ ಸಂಗಾತಿ.

- **ಬೇರೆಯವರ ತೋಟಕ್ಕೆ ಹೋಗಿ ನೋಡ್ತೀರಾ?**
ಹೌದು, ಹೋಗ್ತೀನಿ. ಹೊಸಹಳ್ಳಿಯಲ್ಲಿ ಎಲ್ಲರ ತೋಟವನ್ನೂ ನಾನು ನೋಡಿದೀನಿ. ಕೃಷಿಯಲ್ಲಿ ಅವರು ಬಹಳ ಮುಂದುವರಿದಿದ್ದಾರೆ. ನಾನು ಇನ್ನೂ ಆ ಮಟ್ಟಕ್ಕೆ ಹೋಗಿಲ್ಲ. ನಾನು ಈಗ ಅಡಿಕೆ ತೋಟ ಮಾಡ್ತಿರೋದು ಹೊರಗಡೆ ವಿಚಾರ ತಿಳಿದುಕೊಂಡೇ. ಮೊದಲು ನನಗೆ ಕಪ್ಪುಗಳನ್ನು ಯಾವ ಕಡೆ ಹೊಡೀಬೇಕು ಅಂತ ಗೊತ್ತಿರಲಿಲ್ಲ. ಅಡ್ಡವಾಗಿ ಹೊಡೆದು ಬಹಳಷ್ಟು ಒದ್ದಾಡಿದೆ. ಕಡೆಗೆ ಎರಡು ಮೂರು ತೋಟ ನೋಡಿಕೊಂಡು ಬಂದು, ಇಳಿಜಾರಿಗೆ ಹೊಡೆದೆ; ಸರಿಹೋಯ್ತು. ನಮ್ಮದು ಜೌಗಿನ ತೋಟ, ಹಾಗಾಗಿ ಇಳಿಜಾರಿನ ಕಡೆಗೆ ಹೊಡೀಬೇಕು. ಎಟ್ಟೆ ತೋಟವಾದ್ರೆ ಅಡ್ಡಲಾಗೇ ಹೊಡೀಬೇಕು. ಹೊಸಹಳ್ಳಿಯಲ್ಲಿ ನನಗೆ ವೆಂಕಟೇಶ್ ಅಂತ ಸ್ನೇಹಿತರಿದ್ರು. ಅವರು ವಿಚಾರವಂತರು. ನಾನು ಮೊದಲು ತೋಟ ಎಬ್ಬಿಸಲು ಅವರೇ ಕಾರಣ ಅಂತ ಹೇಳಬಹುದು. 'ಬರೀ ಭತ್ತ ಮಾಡಿದ್ರೆ ಏನೂ ಉಪಯೋಗ ಆಗೋಲ್ಲ, ನೀವು ಅಡಿಕೆ ಮಾಡಲೇಬೇಕು' ಅಂತ ಬಲವಂತ ಮಾಡಿದ್ರು. ಸಂಕೇತಿಗಳಲ್ಲಿ ಅವರದ್ದು intensive agriculture. ಅವರೇ ನನಗೆ ವ್ಯವಸಾಯದ ಮಾರ್ಗದರ್ಶಿ. ಜತೆಗೆ ಪುಸ್ತಕಗಳನ್ನು ಓದಿದ್ರಿಂದಲೂ ವಿಚಾರ ತಿಳೀತು. ಇನ್ನೊಬ್ಬರಿಗೆ ತೊಂದರೆ ಕೊಡಬಾರದು ಅನ್ನುವುದನ್ನು ಪುಸ್ತಕವನ್ನು ಓದಿ ಚೆನ್ನಾಗಿ ತಿಳಿದುಕೊಂಡಿದೀನಿ. ಉಪಕಾರ ಮಾಡದಿದ್ರೂ, ತೊಂದರೆ ಮಾತ್ರಾ ಮಾಡಬಾರದು ಅನ್ನುವುದು ನನ್ನ ಧ್ಯೇಯ.

- **ಸಂಕೇತಿಗಳಲ್ಲಿ, ಹಳ್ಳೀಲಿ ವ್ಯವಸಾಯ ಮಾಡೋರಿಗೆ ಹೆಣ್ಣು ಸಿಗೋಲ್ಲ ಅಂತಾರೆ, ನಿಮ್ಮಲ್ಲಿ ಪರಿಸ್ಥಿತಿ ಹ್ಯಾಗೆ?**
ನನಗೆ ಏನೋಪ್ಪ ತೊಂದರೆ ಕಾಣಲಿಲ್ಲ. ಮೊದಲ ಸರೀಗೇ ಒಪ್ಪಿಕೊಂಡ್ಲು ಮನೆಯವಳು, ಮದುವೆಯಾಯ್ತು. ಬಾಕಿಯೋರಿಗೆಲ್ಲಾ ಈಗ ಸ್ವಲ್ಪ ಏನಾಗಿದೆ ಅಂದ್ರೆ, ಹೇಳೋಕಷ್ಟೆ, 'ಸಂಧ್ಯಾವಂದನೆ ಮಾಡಿ, ಜುಟ್ಟುಬಿಡ್ರಿ, ಕ್ರಾಪ್ ತೆಗಿಸಿ' ಅಂತಾರೆ. ಆದರೆ ಅಂಥವರೇ ಅವರ ಹೆಣ್ಣುಮಕ್ಕಳನ್ನು ಅಂತಹ ಹುಡುಗರಿಗೆ ಕೊಡೋಲ್ಲ. ನೀವು ಬೇಕಾದರೆ ಪರೀಕ್ಷೆ ಮಾಡಿ. ಎಲ್ಲ ಸ್ವಲ್ಪ modify ಆಗಿರಬೇಕು. ಅವನು scooter ಹಾಗೂ ಕಾರ್‌ನಲ್ಲಿ ಓಡಾಡಬೇಕು, ಹೋಟಲ್ ಗೀಟಲ್‌ಗೆ ಹೆಂಡತೀನ ಕರೆದುಕೊಂಡು ಹೋದ್ರೆ ಇವರಿಗೆ ಖುಷಿ. ಹೇಳೋದು ಮಾತ್ರ ಆಚಾರ.

- **ನಿಮ್ಮ ಹೆಣ್ಣುಮಕ್ಕಳನ್ನು ವ್ಯವಸಾಯಸ್ಥರಿಗೆ ಕೊಟ್ಟಿದೀರಾ ಅಥವಾ ಕೊಡ್ತೀರಾ?**
ನಾವು ವ್ಯವಸಾಯಸ್ಥರಿಗೇ ಅಂತಲ್ಲ, ಕೊಡ್ತೀವಿ. ಅನುಕೂಲವಾಗಿರಬೇಕು. ಹೊಟ್ಟೆಗೆ, ಬಟ್ಟೆಗೆ ಸಾಕಾಗುವಷ್ಟು ಇದ್ರೆ ತೊಂದರೆ ಇಲ್ಲ, ಕೊಡ್ತೀವಿ. ಒಬ್ಬಳನ್ನು ಹೊಸಹಳ್ಳೀಗೇ ಕೊಟ್ಟಿದೀವಿ. ಅವರ ಪಾಡಿಗೆ ಅವರು ಅನುಕೂಲವಾಗಿದಾರೆ, ಸಾಕು. ಸುಖವಾಗಿದಾರೆ. ನಾನು ಅನಿವಾರ್ಯವಾಗಿ ವ್ಯವಸಾಯಕ್ಕೆ ಬರಬೇಕಾಯ್ತು. ಇಲ್ಲಾಂದ್ರೆ ಜಮೀನು ಹಾಳಾಗ್ತಿತ್ತು. ನನ್ನ ಮಗ ಓದ್ತಾ ಇದಾನೆ. ಮುಂದೆ ಅವನಿಗೆ ಸೂಕ್ತವಾದ ಕ್ಷೇತ್ರವನ್ನು ಅವನೇ ಆಯ್ಕೆ ಮಾಡಬಹುದು. ನನ್ನದೇನೂ ಬಲವಂತವಿಲ್ಲ. ನಾನಿರೋವರೆಗೂ ವ್ಯವಸಾಯ ಮಾಡ್ತೀನಿ. ನನಗೇನೂ ಪಶ್ಚಾತ್ತಾಪವಿಲ್ಲ. ನಾನಂತೂ ವ್ಯವಸಾಯದಲ್ಲಿ ಎಲ್ಲಾ ಅನುಕೂಲ ಮಾಡಿದೀನಿ. ಮಗನಿಗೆ ಅನುಕೂಲ

ಅನಿಸಿದರೆ ಬರಬಹುದು. ಮಗನನ್ನು ನಾನು ಈವರೆಗೆ ವ್ಯವಸಾಯಕ್ಕೆ ಕರೆದಿಲ್ಲ.

- **ನೋಡಿ, ತಂದೆ ತಾಯಂದಿರು ಅದೇ ತಪ್ಪು ಮಾಡೋದು. 'ನಾವಂತೂ ಕಷ್ಟಪಟ್ಟಿದೀವಿ, ನೀನು ಕಷ್ಟಪಡಬೇಡ, ಎಮ್ಮೆ ಮೈ ತೊಳೀಬೇಡ' ಅಂತ ಸುಖವಾಗಿ ಬೆಳೆಸಿದ್ರೆ ಅವರು ವ್ಯವಸಾಯಕ್ಕೆ ಬರ್ತ್ತಾರಾ?**

  ಶಿಕ್ಷಣಕ್ಕೆ ನನ್ನದು ಮೊದಲ ಪ್ರಾಧಾನ್ಯ. ಆದರೆ ರಜದಲ್ಲಿ ಬರ್ತ್ತಾನೆ, ಹೊಲದ ಕಡೆಗೆ. ಓದುವ ಕಾಲದಲ್ಲಿ ಓದಿಬಿಡಲಿ. ಆಮೇಲೆ ಬರ್ತ್ತಾನೆ ವ್ಯವಸಾಯಕ್ಕೆ ಬರೋದಾದ್ರೆ! ಶ್ರದ್ಧೆ ಇದ್ರೆ ವ್ಯವಸಾಯದಲ್ಲಿ ಮುಂದುವರೀಬಹುದು. ಉದಾಸೀನ ಮಾಡಿದ್ರೆ ಹಾಳಾಗುತ್ತೆ. ನೀರು ಕಟ್ಟಬೇಕು ತೋಟಕ್ಕೆ ಅಂದ್ರೆ ಏನಾದ್ರೂ ಮಾಡಿ ನೀರು ಕಟ್ಟಲೇಬೇಕು. ನೋಡೋಣ ಅಂತ ಬೆಂಗಳೂರಿಗೆ ಹೋದ್ರೆ ತೋಟ ಹೋಗುತ್ತೆ. ಮಗ B.Sc.(Ag.) M.Sc.(Ag.) ಓದಿ ವ್ಯವಸಾಯ ಮುಂದುವರೆಸಲಿ ಅನ್ನುವುದು ನನ್ನ ಆಸೆ.

- **ನೀವು ಏನೇನು ಕೆಲಸ ಈಗಲೂ ಮಾಡ್ತೀರಿ?**

  ಮೊದಲು ಮಾಡ್ತಾ ಇದ್ದೆ. ನಾನೇ ಸ್ವತಃ ಬೇಸಾಯ ಹೊಡೀತಿದ್ದೆ. ಮೊದಲಿನಿಂದಲೂ ನಾನೇ ಕೆಲಸ ಮಾಡಿರೋದು. ಈಗ ವಯಸ್ಸಾಗಿದೆ. ಸಕ್ಕರೆ ಖಾಯಿಲೆ ಬಂದಿದೆ. ಹಾಗಾಗಿ ಈಗ ಕೆಲಸ ಮಾಡಲು ಆಗೋಲ್ಲ ಅಷ್ಟೆ.

- **ಬ್ರಾಹ್ಮಣರು ಜಮೀನು ಉಳಬಾರದು ಅಂತಾರಲ್ಲ?**

  ಹೇಳಿಕೊಂಡು ಕುಳಿತರೆ ಏನೂ ಆಗೋಲ್ಲ. ಎಲ್ಲಾ ಆಳುಗಳ ಮೇಲೆ ನಂಬಿಕೊಂಡು ಕುಳಿತರೆ, ನಾನು ಬೆಳೆ ಬೆಳೆಯೋದು ಯಾವಾಗ? ಭತ್ತ ಬೆಳೀಬೇಕಾದ್ರೆ, ನಾನೇ ಬೇಸಾಯ ಹೊಡೀತಿದ್ದೆ. ಕೆಸರುಗದ್ದೆ ಉಳುತಿದ್ದೆ. ನನ್ನದೊಂದು ಬೇಸಾಯ, ನನ್ನ ಜತೆಯವನದೊಂದು ಬೇಸಾಯ, ಎರಡು ಬೇಸಾಯ ಹೊಡೀತಿದ್ವಿ. ನಾನು, ನನ್ನ ತಮ್ಮ ಎಲ್ಲರೂ ಉತ್ತಿದೀವಿ.

- **ಶಾಸ್ತ್ರಗಳು ಹೇಳುತ್ತೆ ಬ್ರಾಹ್ಮಣರು ಹೊಲ ಉಳಬಾರದು ಅಂತ. ಆದರೆ ತಾವು ಹೇಳ್ತೀರಿ ಅದನ್ನೆಲ್ಲಾ ನೆಚ್ಚಿಕೊಂಡು ಕುಳಿತರೆ ಬದುಕಲೂ ಆಗೋಲ್ಲ ಅಂತ!**

  ಶಾಸ್ತ್ರ ಏನೂ ಹೇಳಿಲ್ಲ, ಬೇಸಾಯ ಮಾಡಬಾರದು ಅಂತ. ಅದನ್ನು ನಾವು ಮಾಡಿಕೊಂಡಿರೋದು ಅಷ್ಟೆ. ವ್ಯವಸಾಯ ಮಾಡಲೇಬೇಕು. ಎಲ್ಲರಿಗೂ ಪೌರೋಹಿತ್ಯದಲ್ಲಿ ಬೇಕಾದಷ್ಟು ದಕ್ಷಿಣೆ ಸಿಗೋದಾದ್ರೆ ಪರವಾಗಿಲ್ಲ. ಹಿಂದೇನೋ ಮಹಾರಾಜರ ಕಾಲದಲ್ಲಿ ಕೊಡ್ತಿದ್ರು, ಈಗ ಯಾರು ಕೊಡ್ತಾರೆ. ಉಪವಾಸ ಇರಬೇಕಾಗುತ್ತೆ. ನಾವು ಬೇಸಾಯ ಮಾಡಿಯೇ ಬದುಕಿದ್ದು.

- **ಕುಟುಂಬದಲ್ಲಿ ಎಲ್ಲರೂ ಕಷ್ಟಪಟ್ಟು ದುಡಿದ್ರೆ ವ್ಯವಸಾಯದಲ್ಲಿ ಆದಾಯ ತೋಗೋಬಹುದಾ?**

  ಧಾರಾಳವಾಗಿ ತೊಗೋಬಹುದು. ಈಗ ನಾವು ಇಷ್ಟು ವರುಷ ಜೀವನ ಮಾಡಿದೀವಲ್ಲ, ಇದೇ ಸಾಕ್ಷಿ. ಇವತ್ತಿನ ದಿನ ಪ್ರತಿ ತಿಂಗಳೂ ಐದು ಸಾವಿರ ರೂಪಾಯಿ ಬೇಕು ಒಂದು ಕುಟುಂಬದ ನಿರ್ವಹಣೆಗೆ. ನಾವು ವ್ಯವಸಾಯದಿಂದ ಬದುಕ್ತಾ ಇದೀವಿ ಅಂದ್ರೆ ವರುಷಕ್ಕೆ ೬೦ ಸಾವಿರ ರೂಪಾಯಿ ಸಂಪಾದನೆ ಮಾಡ್ತಿದೀವಿ ಅಂತ ತಾನೆ ಅರ್ಥ. ಹೀಗೆ ೩೦ ವರುಷದಿಂದಲೂ ನಮ್ಮ ರಥ ಸಾಗ್ತಾನೇ ಬಂದಿದೆ.

- **ಮುಂದಿನ ಯೋಜನೆಗಳೇನು ನಿಮ್ಮವು?**

  ಈಗ ತೆಂಗಿನ ಗಿಡಗಳನ್ನು ಹಾಕಿದೀನಿ. ಅದನ್ನೆಲ್ಲಾ ಅಚ್ಚುಕಟ್ಟು ಮಾಡಬೇಕು. ಮಕ್ಕಳ ಜವಾಬ್ದಾರಿ ಇದೆ. ಜವಾಬ್ದಾರಿ ಕಳೆದ ಮೇಲೆ ಒಂದು ರೌಂಡ್ ‘All India Tour’ ಹೋಗಬೇಕು. ಅಷ್ಟೆ.

ಎಲ್.ಕೆ.ಶ್ರೀಕಂಠ ಅವರಿಗೆ ವಂದನೆ ತಿಳಿಸಿ, ಬಾಳೆಯ ತೋಟಕ್ಕೆ ಅವರನ್ನೂ ಕರೆದುಕೊಂಡು ಹೊರಟೆವು, Photo session ನಡೆಸಲು. ಬಾಳೆ ಬೆಳೆ ಅದ್ಭುತವಾಗಿತ್ತು. ತೋಟದಲ್ಲಿ ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಮುಂದಿನ ಊರಿನ ಹಾದಿ ನಮಗಾಗಿ ಕಾಯುತ್ತಿತ್ತು. ಸೂರ್ಯ ನಮಗಾಗಿ ಕಾಯದೆ ಮುಳುಗುವ ಸಿದ್ಧತೆ ನಡೆಸಿಯೇ ಇದ್ದ. ನಮಗೆ ಎರಡು ದಿನ ಆಶ್ರಯ ನೀಡಿದ್ದ ರಾಜಾರಾಮಮೂರ್ತಿ, ಹಾಗೇ ನಮ್ಮನ್ನು ನಗುಮೊಗದಿಂದ ಅವರ ಮಾರುತಿ ಗಾಡಿಯಲ್ಲಿ ಸುತ್ತಾಡಿಸಿದ ಹೊಸಹಳ್ಳಿಯ ಹೆಚ್.ಎಸ್.ವೆಂಕಟೇಶ್ ಅವರಿಗೂ ವಂದನೆ ತಿಳಿಸಿ, ಬಿಡಲಾರದ ಮನಸ್ಸಿನಿಂದಲೇ ವಿದಾಯ ಹೇಳಿದ್ದಾಯಿತು ಹೊಸಹಳ್ಳಿಗೆ.

26. ಭಕ್ತರಹಳ್ಳಿ

ಮಲೆನಾಡ ಮಡಿಲಿನ ಪುಟ್ಟಗ್ರಾಮ ಭಕ್ತರಹಳ್ಳಿ, ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಚಿಕ್ಕಮಗಳೂರಿನಿಂದ, ಲಿಂಗದಹಳ್ಳಿಗೆ ನಂತರ ತರೀಕೆರೆಗೆ ತೆರಳುವ ಎಸ್ಟೇಟ್ ರಸ್ತೆಯಲ್ಲಿ ಭಕ್ತರಹಳ್ಳಿ ಸಿಗುತ್ತೆ. ಚಿಕ್ಕಮಗಳೂರಿನಿಂದ ತರೀಕೆರೆಗೆ ತೆರಳಲು ಸಖರಾಯಪಟ್ಟಣ-ಕಡೂರಿನ ಮಾರ್ಗವಾಗಿ ಮುಖ್ಯದಾರಿಯೂ ಇದೆ. ತರೀಕೆರೆಯಿಂದ ೩೮ ಕಿಲೋಮೀಟರ್ ಹಾಗೂ ಚಿಕ್ಕಮಗಳೂರಿನಿಂದ ೧೯ ಕಿಲೋಮೀಟರ್ ದೂರದಲ್ಲಿರುವ ಭಕ್ತರಹಳ್ಳಿಯ 'ಪಂಪಾಪತಿ ಎಸ್ಟೇಟ್'ನಲ್ಲಿ ಏಕೈಕ ಸಂಕೇತಿ ಕೃಷಿಕುಟುಂಬ ನೆಲೆಸಿದೆ. ಸಂಕೇತಿಗಳಿಗೆ ಬಹಳ ವಿಶಿಷ್ಟ ಎನಿಸುವ ಕಾಫಿ ಬೆಳೆಯನ್ನು ಈ ಕುಟುಂಬ ಬೆಳೆಯುತ್ತಿದ್ದರಿಂದ, ನಾವು ಇವರನ್ನು ಭೇಟಿಯಾಗಲೇಬೇಕಿತ್ತು. ಆದ್ರೆ ನಮ್ಮ ದಾರಿ ಸುಗಮವಾಗಿರಲಿಲ್ಲ. ಭಕ್ತರಹಳ್ಳಿಯ ಕೆ.ಆರ್.ನಟರಾಜ್ ಹಾಗೂ ಭಾಗ್ಯಲಕ್ಷ್ಮಿ ದಂಪತಿಗಳಿಗೆ ದೂರವಾಣಿ ಮುಖಾಂತರ ನಾವು ಬರುವ ವಿಚಾರ ತಿಳಿಸಿದ್ದು ಆಯ್ತು, ಅದೂ ಹೊಸಹಳ್ಳಿಯಲ್ಲಿರುವ ಭಾಗ್ಯಲಕ್ಷ್ಮಿ ಅವರ ಅಕ್ಕ ವಿಜಯಕೃಷ್ಣಮೂರ್ತಿ ಅವರ ಮನೆಯಿಂದ. ಆದ್ರೆ ನಾವು ಹೊಸಹಳ್ಳಿ ಬಿಟ್ಟಾಗ ಸಂಜೆಯ ಸೂರ್ಯ ಅಸ್ತನಾಗಿದ್ದ. ಲಿಂಗದಹಳ್ಳಿಯಿಂದ, ಎಸ್ಟೇಟ್ ಮಾರ್ಗವಾಗಿ ಚಿಕ್ಕಮಗಳೂರಿಗೆ ತೆರಳುವ ಕಡೆಯ ಬಸ್ಸು ನಾವು ತರೀಕೆರೆಗೆ ತಲುಪುವಷ್ಟರಲ್ಲಿ ಹೋಗಿರುತ್ತೆ ಎಂಬ ವಿಷಯ ತಿಳಿಯಿತು, ಬಸ್ಸಿನಲ್ಲಿ. ಹಾಗೇ ಕೆಲವರು 'ಇಳಿದು ಪ್ರಯತ್ನಪಡಿ' ಅಂದರು. ನಾವು ಕುಳಿತಿದ್ದು ಶಿವಮೊಗ್ಗದಿಂದ ಚಿಕ್ಕಮಗಳೂರಿಗೆ - ಸಖರಾಯಪಟ್ಟಣ, ಕಡೂರು ಮಾರ್ಗವಾಗಿ - ತೆರಳುವ ಬಸ್ಸಿನಲ್ಲಿ. ಏನು ಮಾಡೋದು. 'ತರೀಕೆರೆಯಲ್ಲಿಳಿದು, ಲಿಂಗದಹಳ್ಳಿಗೆ ಹೋಗೋಣವಾ? ಅಥವಾ ಚಿಕ್ಕಮಗಳೂರಿಗೇ ಆದದ್ದಾಗಲಿ ಅಂತ ನೇರವಾಗಿ ಹೋಗೋಣವಾ?' ನಿರ್ಧರಿಸುವುದೇ ಕಠಿಣವಾಯ್ತು. ಅಷ್ಟರಲ್ಲಿ ತರೀಕೆರೆಯೂ ಬಂತು. ಜತೇಲಿದ್ದ ಪ್ರಣತಾರ್ತಿಹರನ್ ದೃಢವಾಗಿ ಹೇಳಿದ್ರು, 'ಏನಾದ್ರೂ ಆಗಲಿ ಚಿಕ್ಕಮಗಳೂರಿಗೇ ಹೋಗೋಣ' ಅಂತ. ಚಿಕ್ಕಮಗಳೂರನ್ನು ನಾವು ತಲುಪಿದ್ದು ರಾತ್ರಿ ಹತ್ತಕ್ಕೆ. ಆ ಸಮಯದಲ್ಲಿ ಯಾವ ವಾಹನವೂ ಇರಲಿಲ್ಲ. ಕಡೆಗೆ ಒಬ್ಬ ಆಟೋದವನನ್ನು ಒಪ್ಪಿಸಿ, ಅವನು ಕೇಳಿದಷ್ಟು ಹಣವನ್ನು ಕೊಟ್ಟು ಹೊರಟಿದ್ದಾಯ್ತು. ಆದ್ರೆ ನಮಗೆ ಮಾರ್ಗ ಹೊಸದು. ಆಟೋದವನಿಗೆ ಭಕ್ತರಹಳ್ಳಿ ಮಾತ್ರ ಗೊತ್ತು, ಪಂಪಾಪತಿ ಎಸ್ಟೇಟ್ ಅಲ್ಲ. ಮಲೆನಾಡಿನಲ್ಲಿ ರಾತ್ರಿ ನಿರ್ಜನ ರಸ್ತೆಯಲ್ಲಿ, ಮಾರ್ಗದರ್ಶಿಗಳು ಇಲ್ಲದಾಗ ಹುಡುಕಾಟ ನಡೆಸುವುದು ನಿಜಕ್ಕೂ ಕಷ್ಟ. ದೂರವಾಣಿಯಲ್ಲಿ ಅವರು ತಿಳಿಸಿದ ವಿವರಗಳನ್ನು ಆಧಾರವಾಗಿ ಇಟ್ಟುಕೊಂಡೇ ಪ್ರಯಾಣಿಸಿದೆವು. ಚಿಕ್ಕಮಗಳೂರಿನಿಂದ via ಕೈಮರ ಅರಿಸಿನಗುಪ್ಪೆ, ಮಲ್ಲೇನಹಳ್ಳಿ ಮಾರ್ಗವಾಗಿ ಭಕ್ತರಹಳ್ಳಿಗೆ ಬಂದ್ವಿ. 'ಸರ್, ಇದೇ ಭಕ್ತರಹಳ್ಳಿ' ಅಂದ ಆಟೋದವನು. ಪಂಪಾಪತಿ ಎಸ್ಟೇಟ್ ಸಿಕ್ಕಿರಲಿಲ್ಲ. ಭಕ್ತರಹಳ್ಳಿ ದಾಟಿದ ಕೂಡಲೇ ಸಿಗುತ್ತೆ ಅಂತ ಹೇಳಿದ್ದು ನೆನಪು. 'ನಿಧಾನವಾಗಿ ನಡೆಯಯ್ಯ' ಅಂತ ತಿಳಿಸಿ, ಎಡಬಲದ ಮರಗಳನ್ನು ಗಮನಿಸುತ್ತಾ ಬಂದೆವು. ಆಹ್...! ಅದೋ ಅಲ್ಲಿ ಮರದ ಮೇಲೆ ಸಣ್ಣ ಬೋರ್ಡಿತ್ತು, ಪಂಪಾಪತಿ ಎಸ್ಟೇಟ್ ಅಂತ! ನಮಗೆ ನಿಧಿ ಸಿಕ್ಕಿದಷ್ಟು ಸಂತಸವಾಯ್ತು. ಎಸ್ಟೇಟ್ ಗೇಟಿನ ಬಳಿ ಆಟೋ ನಿಲ್ಲಿಸಿದೆವು. ಮನೆ ಬಹಳ ದೂರದಲ್ಲಿತ್ತು. ಸದ್ಯ ಮನೇಲಿ ದೀಪ ಉರೀತಿತ್ತು. ಸೀದಾ ಗೇಟನ್ನು ತೆರೆದು ಹೋಗಲು ನಾಯಿಗಳ ಭಯ. ಆಟೋದವನಿಗೆ ಹಾರ್ನ್ ಮಾಡಲು ಹೇಳಿದೆವು. ಎರಡು ಮೂರು ಬಾರಿ ಹಾರ್ನ್ ಮಾಡಿದ ಮೇಲೆ ಮನೆಯಲ್ಲಿ ಶಬ್ದಗಳ ಸಂಚಲನವಾಯ್ತು. ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಹುಡುಗ ಬಂದು, 'ಸಾರ್, ಬನ್ನಿ' ಎಂದು ನಮ್ಮ ಲಗೇಜ್ ತೆಗೆದುಕೊಂಡ ಮೇಲೆಯೇ ನಮಗೆ ಧೈರ್ಯ ಬಂದಿತ್ತು. ನಾಯಿಯ ಬೊಗಳುವಿಕೆಯೂ ಜಾಸ್ತಿಯಾಯ್ತು. ಮನೆಯ ಮುಂಬಾಗಿಲಲ್ಲೇ, ತೆಳುಕಾಯದ ವ್ಯಕ್ತಿಯೊಬ್ಬರು ಬಂದು, 'ಬನ್ನಿ, ದಾರಿ ಹುಡುಕಲು ಶ್ರಮವಾಯ್ತೆ' ಅಂದರು. ಅವರೇ ಕೆ.ಆರ್. ನಟರಾಜ್ ಎಂದು ನಂತರ ತಿಳಿಯಿತು. ಅಪರಾತ್ರಿಯಲ್ಲಿಯೇ ಅಡುಗೆ ಮಾಡಿ ಬಡಿಸಿದರು



ಗಿರಿಗಳ ನಡುವಿನ ಕಾಫಿ ತೋಟ: 'ಪಂಪಾಪತಿ ಎಸ್ಟೇಟ್':ಭಕ್ತರಹಳ್ಳಿ

ಭಾಗ್ಯಲಕ್ಷ್ಮಿ. ಇವರ ಒಬ್ಬಳೇ ಮಗಳು ಡಾ.ಗಾಯತ್ರಿ ಜತೆಯಲ್ಲಿದ್ರು. ಇವರನ್ನು ಬೆಟ್ಟದಪುರದ ಡಾ.ಬಿ.ಎಸ್.ಸಂಜಯ್ ಅವರಿಗೆ ಮದುವೆ ಮಾಡಲಾಗಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಹಾರುವ ಉತ್ಸಾದಲ್ಲಿದ್ರು ಗಾಯತ್ರಿ. ಸುದೀರ್ಘ ಪಯಣದ ನಂತರ, ಮಾತುಕತೆಯೂ ಸುದೀರ್ಘವಾಗಿತ್ತು. 'ಆಯಾಸವಾಗಿರಬಹುದು, ಮಲಗಿ' ಎಂದು ನಟರಾಜ್ ಘೋಷಿಸಿದರು. ಮಾತುಕತೆಗೆ ವಿರಾಮ ಬಿತ್ತು. ಎಸ್ಟೇಟ್ ಛಳಿ ಮೈ ಆವರಿಸಿತು. ಬೆಚ್ಚನೆಯ ಕಂಬಳಿ ಕತ್ತಿನವರೆಗೆ ಏರಿದ್ದಷ್ಟೆ, ಎಚ್ಚರವಾದಾಗ ಮುಂಬಾಗಿಲಲ್ಲಿ ಹೊಂಬೆಳಕು ಇತ್ತು.

ಕೆ.ಆರ್. ನಟರಾಜ್ ಇ/ಮ ಡಾ.ಕೆ.ಪಿ. ರಘುನಾಥ್, ಪಂಪಾಪತಿ ಎಸ್ಟೇಟ್
ಭಕ್ತರಹಳ್ಳಿ, ಮಲ್ಲೇನಹಳ್ಳಿ ಅಂಚೆ, ಚಿಕ್ಕಮಗಳೂರು ಹೋಬಳಿ (ತಾ) ಜಿಲ್ಲೆ, ದೂರವಾಣಿ : 08262 267035

ನನ್ನ ಕಾಫಿ ತೋಟವೇ ನನ್ನ ಮುಂದಿನ ಯೋಜನೆ. ಅದನ್ನು ಹಂತಹಂತವಾಗಿ ಮತ್ತಷ್ಟು ಅಭಿವೃದ್ಧಿ ಪಡಿಸುವ ಆಸೆ ನನ್ನದು. ವ್ಯವಸಾಯ ನಮ್ಮನ್ನು ಇಲ್ಲಿ ಹಿಡಿದು ನಿಲ್ಲಿಸಿದೆ. ಪಟ್ಟಣಕ್ಕೆ ಹೋದ್ರೆ ಆ pollutionನಿಂದ, ಯಾವಾಗ ನಮ್ಮ ತೋಟದ ಕುಟೀರಕ್ಕೆ ವಾಪಸ್ಸು ಹೋಗ್ತೀವೋ ಅನ್ನಿಸ್ತಾ ಇರುತ್ತೆ. ಮುಂಚೆ ಈ ತೋಟದಲ್ಲಿ ಕಾಲಹರಣ ಮಾಡುವುದು ಹೇಗೆ ಅನ್ನಿಸ್ತಾ ಇತ್ತು. ಈಗ ತೋಟ ಬಿಟ್ಟು ಹೊರಗೆ ಹೋಗುವ ಮನಸ್ಸು ಬರೋಲ್ಲ. ವ್ಯವಸಾಯ ಬಿಟ್ಟು ಬೇರೆಡೆ ಹೋಗುವ ಮನಸ್ಸು ನನಗಾಗಲಿ, ನನ್ನ ಹೆಂಡತಿಗಾಗಲಿ ಇಲ್ಲ.


ಡಾ.ಗಾಯತ್ರಿ:ಅಕ್ಕಪಕ್ಕದಲ್ಲಿ ತಾಯಿ ಭಾಗ್ಯಲಕ್ಷ್ಮಿ, ತಂದೆ ಕೆ.ಆರ್.ನಟರಾಜ್:ಭಕ್ತರಹಳ್ಳಿ

ಪಂಪಾಪತಿ ಎಸ್ಟೇಟಿನಲ್ಲಿ ನಾವು ನಟರಾಜ್ ಅವರನ್ನು ಮಾತನಾಡಿಸಿದ್ದು ಮುಂಜಾನೆಯ ಸಮಯದಲ್ಲಿ. ಅವರ ಪತ್ನಿ ಬಸವಾಪಟ್ಟಣದ ಸುಬ್ಬರಾಯಸ್ವಾಮಿ ಹಾಗೂ ಶಾರದಮ್ಮ ಅವರ ಮಗಳು ಭಾಗ್ಯಲಕ್ಷ್ಮಿ. ಹಾಗೇ, ನಟರಾಜ್ ಅವರ ಮಗಳು ಜತೇಲಿದ್ರು. ವಿಶಿಷ್ಟವಾದ ತಮ್ಮ ಕೃಷಿ ಪರಂಪರೆಯನ್ನು ವಿವರಿಸಲು ಆರಂಭಿಸಿದ್ರು ನಟರಾಜ್.

'ನನ್ನ ತಾತ ಪಟ್ಟಾಭಿರಾಮಯ್ಯ ಹಾಸನ ತಾಲ್ಲೂಕು ಕೊಣನೂರು ಸಮೀಪದ ಕಟ್ಟೇಪುರದವರು. ಅವರೂ ಕೃಷಿಕರು. ಆಸ್ತಿ ಎಲ್ಲಾ ಅಲ್ಲೇ ಇತ್ತು. ಅವರ ಮೂರೂ ಜನ ಮಕ್ಕಳು ಹೊರಗಡೆ ಕೆಲಸದಲ್ಲಿ ಇದ್ದುದರಿಂದ ಅವರೇ ಜಮೀನನ್ನು ನೋಡಿಕೊಳ್ಳುತ್ತಿದ್ದರು. ನಮ್ಮಜ್ಜಿ ಗೌರಮ್ಮ. ನನ್ನ ತಾತ ತೀರಿಕೊಂಡ ಮೇಲೆ, ಮಕ್ಕಳು ಜಮೀನನ್ನು ನೋಡಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ, ಅದನ್ನೆಲ್ಲಾ ಮಾರಿದ್ರು. ನನ್ನ ತಂದೆ ಕೆ.ಪಿ. ರಘುನಾಥ್ L.M.P ಓದು ಮುಗಿಸಿ, ಇಲ್ಲಿ ಚಿಕ್ಕಮಗಳೂರಿನಲ್ಲಿ ಬಂದು settle ಆದರು. ನನ್ನ ತಾಯಿ ಹೋಚೇಹಳ್ಳಿಯ ಕೆ.ಆರ್.ಸುಶೀಲಮ್ಮ. ನಾವು ಐದು ಜನ ಗಂಡು ಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳು. ನಾನೇ ಹಿರಿಯ ಮಗ.'

- **ನಿಮ್ಮ ತಂದೆ ಚಿಕ್ಕಮಗಳೂರಿನಲ್ಲಿಯೇ ನೆಲೆಸಲು ಏನು ಕಾರಣ?**

ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಗ ತುಂಬಾ ಮಲೇರಿಯಾ ಇತ್ತು. ಇಲ್ಲಿ ನಮ್ಮ ತಂದೆಯ ಸ್ನೇಹಿತರು ಒಬ್ಬರು planter ಇದ್ರು. ಅವರು 'ನೀನು ಚಿಕ್ಕಮಗಳೂರಿನಲ್ಲಿ practice ಮಾಡು' ಅಂತ advice ಮಾಡಿದ್ರು. ಆಗ ನಮ್ಮ ತಂದೆ ಇಲ್ಲಿ ಬಂದು Dispensary ಶುರು ಮಾಡಿದ್ರು. ನನ್ನ ತಂದೆಯ ಹಸ್ತಗುಣ ಬಹಳ ಚೆನ್ನಾಗಿತ್ತು. ಜನ ಹೇಳೋದೇನೂ ಅಂದ್ರೆ, ಅವರು ಮಾತಲ್ಲೇ ಅರ್ಧ ರೋಗಗಳನ್ನು cure ಮಾಡೋರಂತೆ. 'ಮಗೂ' ಅನ್ನದೆ ಅವರು ಮಾತೇ ಆರಂಭಿಸ್ತಾ ಇರಲಿಲ್ಲ. ೭೦ ವರುಷದ ಮುದುಕನನ್ನೂ

ಮಗೂ ಅಂತಾನೇ ಕರೆಯೋರು. ಅವತ್ತಿನ ಕಾಲದಲ್ಲಿ ಚಿಕ್ಕಮಗಳೂರಿನಲ್ಲಿ ಆಗ doctor ಇರಲಿಲ್ಲ. ಅವರು ಇಲ್ಲಿಗೆ ಬಂದದ್ದು ೧೯೩೫ರಲ್ಲಿ ಇರಬಹುದು. ಆಗ ನಾನು ಹುಟ್ಟಿರಲಿಲ್ಲ. ನಾನು ಹುಟ್ಟಿದ್ದು ಬೆಳೆದದ್ದು ಇಲ್ಲಿಯೇ.

- **ನಿಮ್ಮ ತಂದೆಯವರಿಗೆ ತೋಟ ಮಾಡಬೇಕು ಅನ್ನಿಸಿದ್ದು ಯಾವಾಗ? ಯಾಕೆ?**

ಮೊದಲು ಅವರು medical fieldನಲ್ಲಿ ಬಹಳ flourish ಆಗಿದ್ರಿಂದ, ಅವರಿಗೆ ಸಮಯವೇ ಇರ್‍ತಿರಲಿಲ್ಲ. ಆ ದಿನಗಳಲ್ಲಿ ಕಾರು ಗೀರು ಇರಲಿಲ್ಲ. ಬರೀ ಸೈಕಲ್‌ನಲ್ಲಿ ಹೋಗಿ treatment ಕೊಟ್ಟು ಬರೋರು. ಅವರು swimming ಹಾಗೂ cyclingನಲ್ಲಿ expert. ಮೈಸೂರಿನಲ್ಲಿ ಅವರ college days ನಲ್ಲಿ medal ಕೂಡ ಸಿಕ್ಕಿತ್ತು. ಇಲ್ಲಿ ಬಂದ ಮೇಲೆ ಅವರಿಗೆ ಬಹಳ ಜನ plannerಗಳ ಪರಿಚಯವಾಯ್ತು. ಒಬ್ಬರು ಡಿ.ಎಲ್.ಲಕ್ಷ್ಮೀಕಾಂತಯ್ಯಂಗಾರ್ ಅನ್ನುವ ಲಾಯರ್ ಬಹಳ close ಆದ್ರು. ಆಗಿನ ಕಾಲದಲ್ಲಿ ಬಹಳ cheap ಆಗಿ ಸಿಕ್ಕೋದು, ಕಾಫಿ ತೋಟಗಳು. ನನ್ನ ತಂದೆ ಹಾಗೂ ಲಾಯರ್ ಇಬ್ಬರೂ ಸೇರಿ ತೋಟ ಖರೀದಿಸಿದ್ರು. ಮೊದಲು ನಮ್ಮ ತಂದೆ ಧೋರಣೆ ಮಾಡಿಕೊಂಡು ಬಂದ್ರು. 'ತೋಟ ಯಾಕೆ ಬೇಕು, ನಮ್ಮಿಬ್ಬರಿಗೂ ಬೇರೆ ಬೇರೆ profession ಇದೆ' ಅಂತ ಅಂತಿದ್ರು. ಕೊನೆಗೆ ಜಮೀನು ಖರೀದಿಸಿದ್ರು. ಇಲ್ಲಿ ಹಳ್ಳೀಲೇನೆ ಈರೇಗೌಡರು ಅಂತ close ಆದರು. ಅವರು ನಮ್ಮ ತಂದೆಯ patient. ಅವರ ಸಹಾಯದಿಂದ ಮೊದಲು ೭೦ ಎಕರೆ ಹೊಲದಿಂದ ಆರಂಭಿಸಿ, ನಂತರ ಜಾಸ್ತಿ ಜಾಸ್ತಿ ಮಾಡ್ತಾ ಬಂದ್ರು. ಒಂದು ಹಂತಕ್ಕೆ ತಂದ್ರು. ನಂತರ ಕಾಫಿ ತೋಟ ಮಾಡಿದ್ರು. ತೋಟ ಮಾಡೋದು long process. ಮೊದಲು ಇಲ್ಲಿ ದೊಡ್ಡ ಭಾವಿ ಕಟ್ಟಿಸಿದ್ರು. ಎಂಥ ಭಾವಿ ಅದು ಅಂದ್ರೆ ಅದರಲ್ಲಿ ಇದುವರೆಗೂ ನೀರು ಬತ್ತಿಯೇ ಇಲ್ಲ. ಎಷ್ಟು ಮಳೆ ಹೋದ್ರೂ ಬತ್ತಿಲ್ಲ. ನೀರಿನ facility ಇಲ್ಲದೆ ಕಾಫಿ ಬೆಳೆಯಲು ಆಗೋಲ್ಲ. ಸುತ್ತಮುತ್ತಲ ಹಳ್ಳಿಯವರು ತಂದೆಗೆ ಸಹಾಯ ಮಾಡಿದ್ರು. ಆಗ ಸುತ್ತಮುತ್ತಲೆಲ್ಲಾ ದೊಡ್ಡ ದೊಡ್ಡ ಕಾಫಿ ಎಸ್ಟೇಟುಗಳಿದ್ದು. ನನ್ನ ತಂದೆ ಮಾಡಿದ ಜಮೀನಿನಲ್ಲಿ ಮೊದಲು ಕಾಫಿ ಇರಲಿಲ್ಲ. ಎಲ್ಲ ಇವರೇ ಬೆಳೆಸಿದ್ದು. ಸುಮಾರು ೧೫ ವರುಷ ಆದ ಮೇಲೆ ತೋಟ ಒಂದು ಹಂತಕ್ಕೆ ಬಂತು. ವಾರಕ್ಕೆ ಒಂದು ಸಾರಿ ನನ್ನ ತಂದೆ ಹಾಗೂ ಅವರ ಸ್ನೇಹಿತರು ಇಬ್ಬರೂ ಬಂದು ನೋಡಿಕೊಂಡು ಹೋಗೋರು. ಇಬ್ಬರಿಗೂ ವಯಸ್ಸಾಗಿತ್ತು. ಕೂಲಿಯವರಿಗೆಲ್ಲಾ ಬಟವಾಡೆ ಮಾಡೋರು. ಅಯ್ಯಂಗಾರರ ಮಗ ಡಿ.ಎಲ್. ಸಂಪತ್ ಅಯ್ಯಂಗಾರ್ ಅವರು ಇಲ್ಲಿಯೇ ಇದ್ರು.

- **ನಿಮ್ಮ ಬಗ್ಗೆ ಹೇಳಿ. ನಿಮ್ಮ ವಿದ್ಯಾಭ್ಯಾಸ, ನಿಮ್ಮ ಬಾಲ್ಯ, ಕನಸುಗಳು ಎಲ್ಲದರ ಬಗ್ಗೆ ವಿಚಾರ ತಿಳಿಸಿ?**

ನನಗೆ ಮೊದಲಿನಿಂದಲೂ ವ್ಯವಸಾಯದಲ್ಲಿ ಆಸಕ್ತಿ ಇರಲಿಲ್ಲ. ಕಾಫಿ ತೋಟದ areaದಲ್ಲಿ ಇದ್ರೂ ಕಾಫಿ ಅಂದ್ರೇನು ಅಂತ ಗೊತ್ತಿರಲಿಲ್ಲ. ನಾನು ಚಿಕ್ಕಮಗಳೂರಿನಲ್ಲಿ PUC ಮಾಡಿದ್ದು, ನಂತರ ನಾನು ಎರ್ನಾಕುಲಂನ Aeronautics Collegeನಲ್ಲಿ ಓದಿದೆ. ಅವರು Aircrafts ಬಗ್ಗೆ teach ಮಾಡ್ತಾರೆ. ಅಲ್ಲಿ ನಾಲ್ಕೂವರೆ ವರುಷ ಓದಿದೆ. ಅಲ್ಲಿ ತೇರ್ಗಡೆ ಹೊಂದಿದ ಮೇಲೆ, I had a chance of going abroad also. But ತಂದೆ ಕಳಿಸಲಿಲ್ಲ. ಕೊನೆಗೆ ಅಲ್ಲಿಂದ practical trainingಗಾಗಿ ಬೇರೆ ಕಡೆ ಕಳಿಸಿದ್ರು. ನಾನು ಅಸ್ಸಾಂನ ದಿಬ್ರುಘರ್‌ನಲ್ಲಿ ಒಂದೂವರೆ ವರುಷಗಳ ಕಾಲ ಬಿಜುಪಟ್ನಾಯಕ್‌ರ ಕಳಿಂಗ ಏರ್‌ಲೈನ್ಸ್‌ನಲ್ಲಿ special training ಪಡೆದೆ. ಆಮೇಲೆ ಬಂದು airforceಗೆ apply ಮಾಡಿದೆ. One of my cousins was Wing Commander in the airforce you know. ಅವರ ಸಹಾಯದಿಂದ test ಕೊಟ್ಟು, pass ಆಗಿ air forceನಲ್ಲಿ serviceಗೆ ಸೇರಿದೆ. ಅಲ್ಲಿ ೨೮ ವರುಷ ಕೆಲಸ ಮಾಡಿದೆ. ಆಮೇಲೆ retirement ತೊಗೊಂಡೆ.



ಎಸ್ಟೇಟ್ ಮನೆಯ ಪಕ್ಕದಲ್ಲಿ ನಿಂತ ಕೆ.ಆರ್.ನಟರಾಜ್ ಅವರ ಕುಟುಂಬ:ಭಕ್ತರಹಳ್ಳಿ

At that time father was already aged, and was not taking much interest in the estate. In between ನಮ್ಮ ತಂದೆ ಹಾಗೂ ಲಾಯರ್ separate ಆದ್ರು. 'ಈಗ ಬೇರೆ ಬೇರೆ ಮಾಡಿಕೊಳ್ಳೋಣ, ಮುಂದೆ ಮಕ್ಕಳು ಏನು ಮಾಡಿಕೊಳ್ತಾರೋ ಯಾರಿಗೆ ಗೊತ್ತು,' ಅಂತ ಹೇಳಿ ನನ್ನ ತಂದೆಗೆ ೪೦ ಎಕರೆ ಹಾಗೂ ಅವರಿಗೆ ೬೦ ಎಕರೆ ರೀತಿಯಲ್ಲಿ ಪಾಲು ಮಾಡಿಕೊಂಡ್ರು. ನಂತರ ನಾವು ನಮ್ಮದೇ ಮನೆ, coffee pulping room, yard, ಮೆಷೀನ್‌ರೂಮ್ ಎಲ್ಲಾ ಮಾಡಿಕೊಂಡ್ವಿ. ನಾನು airforceನಲ್ಲಿದ್ದಾಗ ಜಮೀನಿಗೆ ಬರ್‍ತಿದ್ದು ಕಡಿಮೆ. ನಾವು ನಮ್ಮ ತಂದೇನ ಒಂದು ಪೈಸೆ ಸಹಾ ಕೇಳ್ತಿರಲಿಲ್ಲ. ನಮ್ಮ ತಂದೆ ಅವರು ಏನೇನು ಸಂಪಾದನೆ ಮಾಡೋರೋ ಅವರೇ enjoy ಮಾಡೋರು. ಬಹಳ ಖುಷಿಯಾಗಿ ಇರೋರು. He was just like a king you know (ನಗು). ಹಾಸ್ಯ ಮಾಡೋರು .. 'ಏನೂ ಕೇಳೋಕೆ ಬರಬೇಡಿ ನನ್ನನ್ನು ... I have lived like a king, and die like a king' ಅನ್ನೋರು. ಇದು ಅವರ ಧ್ಯೇಯವಾಕ್ಯ ಮೊದಲಿನಿಂದಲೂ. ನಾವೂ ಅವರನ್ನು ಏನೂ ಕೇಳ್ತಾ ಇರಲಿಲ್ಲ. ನನ್ನ ತಂದೆ ಇಲ್ಲಿ ತುಂಬಾ ಜನರಿಗೆ ಸಾಲ ನೀಡಿ ಸಹಾಯ ಮಾಡಿದಾರೆ. ನನ್ನ ಹೆಂಡತಿ ಅಂದ್ರೆ ನಮ್ಮ ತಂದೆಗೆ ಪ್ರಾಣ. 'ಇವಳೇ ನಮ್ಮ ತೋಟ improve ಮಾಡೋದು, ನನ್ನ ಮಗ ಏನೂ ಮಾಡೋಲ್ಲ' ಅಂತ ಹಾಸ್ಯ ಮಾಡೋರು. ಅವಳು ತುಂಬಾ sincere, ಹಾಗೂ hard worker. Very loyal. ಸುಳ್ಳು ಹೇಳ್ತಿರಲಿಲ್ಲ. She is the key holder, ಅವಳಿಗೆ ಆಸಕ್ತಿ ಸಹಾ ಇದೆ ಅನ್ನೋದನ್ನು ಗಮನಿಸಿದ್ರು.

- **ಕಾಫಿ ಬೇಸಾಯದ ತಾಂತ್ರಿಕ ವಿಚಾರಗಳನ್ನು ತಿಳಿಸಿ.**

ಮೊದಲೆಲ್ಲಾ ಕಾಫಿ ಮಂಡಳಿಯಿಂದ ಕಾಫಿ ಸಸಿಗಳು ಸಿಗ್ತಾ ಇದ್ವು. ಈಗ ನಾವೇ ನಮ್ಮ ತೋಟದ ಬೀಜಗಳಿಂದ ಸಸಿ ಮಾಡ್ಕೋತೀವಿ. ನಾವು ಹಾಕಿರೋದು ಅರೇಬಿಕಾ ೭೯೫ ಅನ್ನುವ ತಳಿ. ಕಾವೇರಿ ತಳೀನೂ ಸಹ ಇದೆ. ಹಳೇ ಅರೇಬಿಕಾ ಸಸಿ ಸಹಾ ಇದೆ. ತುಂಬಾ ಉತ್ತಮವಾದ ತಳಿ. ನಾಟಿ ಮಾಡಿದ ಐದನೇ ವರುಷದಿಂದ ಬೆಳೆ ಕೊಡಲು ಆರಂಭಿಸುತ್ತೆ. ಮೊದಲು ಕಾಡುಮಣ್ಣು ಹಾಗೂ ಹಟ್ಟಿಗೊಬ್ಬರವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಇಡ್ತೀವಿ. ಕಾಫಿ ಬೀಜವನ್ನು ನೆಲದಲ್ಲಿ ಒಗ್ಗು ಹಾಕ್ತೀವಿ. ಅದು ನಿಧಾನವಾಗಿ ಮೊಳಕೆ ಒಡೆದು ಬರುತ್ತೆ. ಅದು ಟೋಪಿ ಹಂತಕ್ಕೆ ಬಂದಾಗ ಒಟ್ಲು ಪಾತಿಯಿಂದ ಸಸಿಗಳನ್ನು ಕಿತ್ತು ಪ್ಲಾಸ್ಟಿಕ್ ಚೀಲದಲ್ಲಿ ಹಾಕ್ತೀವಿ. ನಂತರ ಈ ಪ್ಲಾಸ್ಟಿಕ್ ಚೀಲವನ್ನು ಒಂದು ಕಡೆ ಚಪ್ಪರದ ಅಡಿ ನೆರಳಲ್ಲಿ ಶೇಖರಿಸಿ ಪ್ರತಿ ದಿನಾ ನೀರು ಕೊಡ್ತೀವಿ. ಒಂದು ವರುಷ ಪಾತೀನಲ್ಲಿ ಇರುತ್ತೆ. ಈ ಒಂದು ವರುಷದ ಗಿಡಗಳನ್ನು ನಂತರ ತೋಟದಲ್ಲಿ ನೆಡ್ತೀವಿ. ತೋಟದಲ್ಲಿ ಅನೇಕ ಜಾತಿಯ ನೆರಳಿನ ಕಾಡುಮರಗಳು ಇವೆ. ಹೊನ್ನೆ, ನಂದಿ, ಸಿಲ್ವರ್, ಗೋಣಿ, ಹಲಸು, ಮಾವು, ಬಿಲ್ವಾರ ಎಲ್ಲ ಜಾತಿಯ ಮರಗಳೂ ಇವೆ. ರೋಗದಿಂದ ಹಾಳಾದ ಗಿಡ ಹಾಗೂ ನೆರಳಿನ ಮರ ಬಿದ್ದು ಹಾಳಾಗಿರುವ ಜಾಗದಲ್ಲಿ ಸಸಿ ನೆಡ್ತೀವಿ. ಪ್ರತಿ ವರುಷ ಎರಡರಿಂದ, ಮೂರು ಸಾವಿರ ಗಿಡ ಮಾಡ್ತೀವಿ. ನರ್ಸರಿಯ ಚಿಕ್ಕಸಸಿಗಳಿಗೆ ಸಗಣಿ ನೀರು, ಅಂಟುವಾಳದ ನೀರು ಸಿಂಪರಣೆ ಮಾಡ್ತೀವಿ, ಅಷ್ಟೆ. ಬೇರೆಯ ಗೊಬ್ಬರ ಹಾಕೋಲ್ಲ. ಮುಖ್ಯ ಜಮೀನಿಗೆ, Ammonium Sulphate, Urea, 20:20 ಅಥವಾ DAP ಹಾಗೂ Rockphosphate ಈ ಗೊಬ್ಬರವನ್ನು ಮಿಶ್ರಣ ಮಾಡಿ ಕೊಡ್ತೀವಿ. ಪ್ರತಿ ಗಿಡಕ್ಕೆ ೧೫೦ ಗ್ರಾಂ ಗೊಬ್ಬರ ಬೀಳುವಂತೆ ಹಾಕ್ತೀವಿ. ನಿಯಮಿತವಾಗಿ ವಿವಿಧ ಔಷಧ ಸಿಂಪರಣೆ ಮಾಡ್ತೀವಿ. ಕಾಫಿ ಗಿಡ ಕಸಿ ಮಾಡಿ ಗಿಡವನ್ನು ನಿಯಂತ್ರಣದಲ್ಲಿ ಇಡಬೇಕು. ಕಾಫಿ ಗಿಡದಲ್ಲಿ unwanted ಚಿಗುರನ್ನು ವರ್ಷಪೂರ್ತೀ ತೆಗೀತಾನೆ ಇರಬೇಕು. ಇಲ್ಲದೇಹೋದ್ರೆ ಅದೇ ಅರ್ಧಗೊಬ್ಬರ ತಿಂದುಹಾಕುತ್ತೆ. ಈಗ ಸುಮಾರು ಒಂದು ಎಕರೆಗೆ ೫೦೦ ಕೇಜಿ ಕಾಫಿ ಉತ್ಪಾದನೆ ಆಗಿದೆ. ಕೆಲವು ಸಾರಿ ೭೫೦ ಕೇಜಿ ಬಂದಿರಬಹುದು. ೧೦೦೦ ಕೇಜಿ ಯಾವತ್ತೂ ಬಂದಿಲ್ಲ. ಕಾಫಿ ತೋಟದಲ್ಲಿ ಕಿತ್ತಳೆಗಿಡಗಳು ಇವೆ. ಕಾಳುಮೆಣಸು, ಹಾಗೇ ಏಲಕ್ಕಿ ಸಹಾ ಇದೆ.

ಕಾಳು ಮೆಣಸು ನಮ್ಮ ತಂದೆಯ ಕಾಲದ್ದು. ಅದೇ ಗಿಡದಿಂದ ನಾವು ಬಿತ್ತನೆ ತುಂಡುಗಳನ್ನು ಸಂಗ್ರಹಿಸಿ, ಪಾತಿ ಮಾಡಿ, ಸಸಿಗಳನ್ನು ಅಭಿವೃದ್ಧಿಪಡಿಸಿಕೊಂಡು, ಹೆಚ್ಚಿನ ಪ್ರದೇಶಕ್ಕೆ ನಾಟಿ ಮಾಡಿದೀವಿ . ತಕ್ಕಮಟ್ಟಿಗೆ ಇಳುವರಿ ಬರ್‍ತಿದೆ.

- **Air Forceನಲ್ಲಿ ಇದ್ದವರು ತಾವು? ವ್ಯವಸಾಯಕ್ಕೆ ಬಂದ ಮೇಲೆ ಮೊದಲು ಕಷ್ಟ ಅನ್ನಿಸಿತಾ?**

ಬಹಳಾನೇ ಕಷ್ಟ ಅಂತ ಅನ್ನಿಸಿತು. ಎಷ್ಟೋ ಬಾರಿ ಓಡಿಹೋಗೋಣ ಅನ್ನಿಸಿತ್ತು. ಎರಡು ವರುಷ ಬಹಳ ತಾಪತ್ರಯ ಆಯ್ತು. ರಾತ್ರಿ ಸಮಯದಲ್ಲಿ ಇಂತಹ ಜಾಗದಲ್ಲಿ ಇದ್ದು ಅಭ್ಯಾಸ ಇರಲಿಲ್ಲ. Time spend ಮಾಡೋದು ಹ್ಯಾಗೆ ಅಂತ ತಿಳೀತಿರಲಿಲ್ಲ. Current ಸಹಾ ಇರ್‍ತಿರಲಿಲ್ಲ. ಹ್ಯಾಗೋ ಕಷ್ಟಪಟ್ಟು ಜಮೀನನ್ನು ರೂಢಿಸಿದ್ವಿ. ಮಧ್ಯ ಮಧ್ಯದಲ್ಲಿ ಊರಿಗೂ ಹೋಗ್ತಿದ್ವಿ. ಊರಿಗೆ

ಓಡಾಡ್ತಾ ಇದ್ರೆ ಕಾಫಿ ತೋಟ ನೋಡಲು ಸಾಧ್ಯವಿಲ್ಲ ಎಂದಾಗ ಇಲ್ಲೇ ಬಂದು ನೆಲೆಸಿದ್ವಿ. ಈಗ ಹ್ಯಾಗೆ ಆಗಿದೆ ಅಂದ್ರೆ ಊರಿಗೆ ಹೋಗೋದು ಬೇಡ ಅನ್ನಿಸುತ್ತೆ. ಈಗ ಪಟ್ಟಣದ ಸೆಖೆ, pollution ನೋಡಿದ್ರೆ ಸಾಧ್ಯವಾದಷ್ಟು ಬೇಗ ನಮ್ಮ ಕುಟೀರವನ್ನು ಸೇರಿಕೊಂಡು ಬಿಡೋಣ ಅನ್ನಿಸುತ್ತೆ.

- **ಸಂಕೇತಿಗಳಿಗೆ ಬಹಳ ವಿಭಿನ್ನವಾದ ಕೃಷಿ ನಿಮ್ಮದು? ಆದ್ರೆ ನಿಮ್ಮ ತಂದೆಯವರಿಗೆ ಬಾಗಾಯ್ತಿನ ಮೇಲೆ ಯಾವತ್ತೂ ಆಸೆ ಬರಲಿಲ್ಲವಾ?**

ಇತ್ತು ಅವರದ್ದು . . . ಕಟ್ಟೆಪುರದಲ್ಲಿ. ಆದ್ರೆ ಎಲ್ಲಾ ಮಾರಿದ್ರು. ಮತ್ತೆ ಇಲ್ಲಿ ಮಾಡಲು ಹೋಗಲಿಲ್ಲ ಅಷ್ಟೆ.



ಕಾಫಿ ಸಂಸ್ಕರಣ ಯಂತ್ರದ ಪಕ್ಕ ನಿಂತ ಭಾಗ್ಯಲಕ್ಷ್ಮಿ : ಭಕ್ತರಹಳ್ಳಿ

- **ಕಾಫಿ ತೋಟದ ವ್ಯವಸಾಯದಲ್ಲಿ ನಷ್ಟ ಆಗಬಾರದು ಅಂದ್ರೆ ಏನು ಮಾಡಬೇಕು ಅಂತೀರಾ?**

ಮಳೆ ಮೇಲೆ ಎಲ್ಲಾ ಅವಲಂಬಿತವಾಗಿದೆ. ನಾವು ಏನೂ ಮಾಡೋಕೆ ಆಗೋದಿಲ್ಲ. Only nature has to give us food ಅಷ್ಟೆ. ರೋಬಸ್ಟಾ ಬೆಳೆಯುವ ಜಾಗದಲ್ಲಿ sprinkler ಇರುತ್ತೆ. .. natural resources ಸಹಾ ಇರುತ್ತೆ. ನೀರು ಹೊಡೆದು ಕಾಫಿ ತೆಗೀತಾರೆ. ಇಲ್ಲಿ ನಮಗೆ ಆ ತರಹ ಆಗೋಲ್ಲ . . . ಮಳೆಯ ಮೇಲೆ ಹೆಚ್ಚು ಅವಲಂಬಿತರಾಗಿದೀವಿ. ಮಳೆ ಇದ್ದರೆ ನಮ್ಮ ಬದುಕು ಅಷ್ಟೆ. ಕಾಫಿಯ ಹಣ್ಣಿನ ಸಂಸ್ಕರಣೆ ಸಹಾ ನಾವು ಇಲ್ಲೇ ಮಾಡ್ತೀವಿ. ಕರೆಂಟ್ ಮೇಲೆ ಅವಲಂಬಿತರಾಗಲು ಸಾಧ್ಯವಿಲ್ಲದ್ದರಿಂದ ಡೀಸಲ್ ಇಂಜನ್ ಸಮೇತ ಕಾಫಿ ಹಣ್ಣಿನ ಸಂಸ್ಕರಣಾ ಘಟಕ ಮಾಡಲು ಸುಮಾರು ಎರಡು ಲಕ್ಷ ರೂಪಾಯಿ ಖರ್ಚಾಗಿದೆ. ಕಾಫಿ ತೋಟದಿಂದ ಗಳಿಸಿದ ಆದಾಯದಿಂದಲೇ ನಾವು ಇದೆಲ್ಲವನ್ನೂ ಮಾಡಿದ್ದು. ತೋಟದಿಂದ ಪಡೆದಿದ್ದನ್ನು ತೋಟದ ಅಭಿವೃದ್ಧಿಗೆ ಬಳಸ್ತಾ ಇದೀವಿ. ಇದು ಬಹಳ ಮುಖ್ಯ. ವರುಷಕ್ಕೆ ಐದರಿಂದ ಆರು ಲಕ್ಷ ರೂಪಾಯಿ ಇಲ್ಲದೆ ನಮ್ಮ ತೋಟದ ನಿರ್ವಹಣೆ ಮಾಡಲು ಆಗೋದಿಲ್ಲ. ಇಡೀ ಜಮೀನು ನಮ್ಮ ಐದು ಜನ ಅಣ್ಣತಮ್ಮಂದಿರಿಗೆ ಪಾಲಾಗಿದ್ರೂ ನಾನೇ ನೋಡಿಕೊಳ್ತಾ ಇದೀನಿ. ನಮ್ಮ ತಂದೇನೇ ಪಾಲು ಮಾಡಿ ಹೋಗಿದಾರೆ. ಅಣ್ಣತಮ್ಮಂದಿರು ಯಾರೂ ಇಲ್ಲಿ ಬರುವ ಹಾಗಿಲ್ಲ. ಎಲ್ಲಾ ವೈದ್ಯರು.

- **ನಿಮ್ಮ ಕುಟುಂಬದಲ್ಲಿ ಇಷ್ಟೊಂದು ಜನ ವೈದ್ಯರಿರಲು ಕಾರಣ ಏನು?**

ಏನೋ ಮೊದಲಿನಿಂದ ಬಂದಿದೆ... ಎಲ್ಲರೂ father profession follow ಮಾಡೋಣ ಅಂತ ಹೇಳಿ.. Doctor ಆಗಿದಾರೆ. ನಮ್ಮ ಕುಟುಂಬದಲ್ಲಿ ಸುಮಾರು ೧೮ ಜನ ವೈದ್ಯರು ಇದಾರೆ. ಇದು ನಮ್ಮ ಅಣ್ಣತಮ್ಮ, ಅಕ್ಕತಂಗೀರ ಕುಟುಂಬದಲ್ಲಿ ಮಾತ್ರ. ನಮ್ಮ cousin brother ಹಾಗೂ sister ಎಲ್ಲರನ್ನೂ ಸೇರಿಸಿದ್ರೆ ಸಂಖ್ಯೆ ಮತ್ತೂ ಹೆಚ್ಚಬಹುದು.

- **ಮುಂದಿನ ಯೋಜನೆಗಳೇನು?**

'ಕಾಫಿ ತೋಟವೇ ನಮ್ಮ ಯೋಜನೆ. ಇನ್ನೂ ತೋಟವನ್ನು improve ಮಾಡೋಣ ಅಂತಿದೀವಿ. ತೋಟಕ್ಕೆ ತುಂಬಾ ವಯಸ್ಸು ಆಗಿರೋದ್ರಿಂದ ಹೊಸ ಗಿಡಗಳನ್ನು ಹಾಕಬೇಕು. ಒಂದೇ ಸಾರಿ ಎಲ್ಲವನ್ನೂ ಮಾಡೋಕೆ ಆಗೋದಿಲ್ಲ. ಹಂತಹಂತವಾಗಿ ಮಾಡೋಣ ಅಂತಿದೀವಿ. ವ್ಯವಸಾಯ ನಮ್ಮನ್ನು ಇಲ್ಲಿ ಹಿಡಿದು ನಿಲ್ಲಿಸಿದೆ. ಇದು ಬಿಟ್ಟು ಬೇರೆಡೆ ಹೋಗುವ ಮನಸ್ಸು ನಮಗಿಲ್ಲ' ಎಂದು ಹೇಳಿ ನಟರಾಜ್ ವ್ಯವಸಾಯದ ಬಗೆಗಿನ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರು. ಮುಂದೆ ನಮಗೆ ಉಳಿದಿದ್ದ ಮಾರ್ಗ ಭಾಗ್ಯಲಕ್ಷ್ಮಿ ಅವರನ್ನು ಮಾತನಾಡಿಸುವುದು. ಮಗಳು ಗಾಯತ್ರಿ, ತಾಯಿಗೆ ಒತ್ತಾಸೆ ನೀಡ್ತಾ ಇದ್ದರು. ಡಾ. ರಘುನಾಥ್ ಅವರ ಮುದ್ದಿನ ಸೊಸೆ,

ನಟರಾಜ್ ಅವರ ಪ್ರೀತಿಯ ಮಡದಿ ಭಾಗ್ಯಲಕ್ಷ್ಮಿ ಅವರನ್ನು ನಾವು ಆಹ್ವಾನಿಸಿದೆವು. ಮುಜುಗರವಿಲ್ಲದೆ ಮಾತನಾಡಲು ಬಂದರು.

'ನನ್ನ ಹುಟ್ಟೂರು ಬಸವಾಪಟ್ಟಣ. ನನ್ನ ತಂದೆ ಮಹಡಿ ಮನೆ ಸುಬ್ಬರಾಯಸ್ವಾಮಿಗಳು ಅಂತ. ಅವರು ಉತ್ತಮ ಕೃಷಿಕರು. ನಮ್ಮ ಕುಟುಂಬದಲ್ಲಿ ಎಲ್ಲದಕ್ಕಿಂತ ಸ್ಫೂರ್ತಿದಾಯಕವಾಗಿದ್ದು ನಮ್ಮ ಮುತ್ತಜ್ಜಿ. ನಾನು ಅವರನ್ನು ನೋಡದೇ ಇರಬಹುದು. ಆದರೂ ಸಹ ನಮ್ಮ ತಾಯಿ ಅವರ ಬಗ್ಗೆ ಹೇಳಿದ್ದನ್ನು ಕೇಳಿದೀನಿ - ಅವರು ಝಾನ್ಸಿರಾಣಿ ಲಕ್ಷ್ಮೀಬಾಯಿಗಿಂತ ಕಡಿಮೆ ಇಲ್ಲ ಅಂತ. ಹ್ಯಾಗೆ ಅಂತೀರಾ, ಅವರ ಹೆಸರು ಪಾರ್ವತಮ್ಮ ಅಂತ. ಅವರ ಹೆಸರಲ್ಲೇ ನಮ್ಮಜ್ಜ famous ಆಗಿದ್ದು "ಪಾರ್ವತೀ ರಾಮಣ್ಣ" ಅಂತ. ನಮ್ಮಜ್ಜನ ತಂದೆ ಅಂದ್ರೆ ನನ್ನ ಮುತ್ತಜ್ಜನವರು ಅಜ್ಜ ಹುಟ್ಟುವ ಮೊದಲೇ ತೀರಿಹೋಗಿದ್ರು. ನಮ್ಮ ಮುತ್ತಜ್ಜಿ everything is over ಅಂದುಕೊಂಡು ಮನೇಲಿದ್ದ ಮೂರು ನಾಲ್ಕು ಚಿನ್ನದ ಗಡಿಗೆಗಳನ್ನು ಎಲ್ಲರಿಗೂ ದಾನ ಮಾಡಿದ್ರು. ನಮ್ಮಜ್ಜ ಹುಟ್ಟಿದಾಗ ಅವರಿಗೆ guilty feeling ಆಯ್ತು. ನನ್ನ ಮಗನಿಗೆ ಏನೂ ಮಾಡಲಿಲ್ಲವಲ್ಲ, ಅವನು ಅನಾಥನಾದನಲ್ಲ ಅಂತ. ತಂದೇನೂ ಇಲ್ಲ ಅಂತ ಯೋಚನೆ ಆರಂಭವಾಯ್ತು. ಆವಾಗ ಅವರಿಗೆ ಸ್ವಲ್ಪವೇ ಜಮೀನು ಇದ್ದಿದ್ದು - ೪, ೫ ಎಕರೆ ತೋಟ. ಅದೇನು ಕಾಡು ತರಹವೇ ಇತ್ತಂತೆ. ನಮ್ಮ ಮುತ್ತಜ್ಜ ಚಿಕ್ಕವಯಸ್ಸಿನಲ್ಲೇ ಹೋಗಿದ್ರಿಂದ ತೋಟದ ನಿಗಾ ನೋಡೋರೂ ಸಹ ಯಾರೂ ಇರಲಿಲ್ಲ. ನಮ್ಮ ಮುತ್ತಜ್ಜೀನೇ ಆಗ ವ್ಯವಸಾಯದ ಕೆಲಸ ಆರಂಭಿಸಿದ್ರಂತೆ. ಮರ ಹತ್ತೋದ್ರಿಂದ ಹಿಡಿದು, ಅಗೆಯೋದು, ನೀರು ಹಾಕೋದು, ಎಲೆ ಹಂಬಿಗೆ ಎರಡು ಕೈಯಲ್ಲೂ ಗಡಿಗೆ ಹಿಡಿದುಕೊಂಡು ನೀರು ಹಾಕೋದು; ತಮ್ಮ ಪುಟ್ಟ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಕೆಲಸ ಮಾಡಿದ್ರಂತೆ. ಆ ಬೆನ್ನಿಗೆ ಮಗುವನ್ನು ಕಟ್ಟಿಕೊಂಡ ದೃಶ್ಯವನ್ನು ನಾನು ನೆನಪಿಸಿಕೊಂಡಾಗಲೆಲ್ಲಾ ನನಗೆ ಝಾನ್ಸಿರಾಣಿ ಲಕ್ಷ್ಮೀಬಾಯೀದೇ ನೆನಪು ಬರುತ್ತೆ. ಯಾಕೇಂದ್ರೆ ಆಕೇನೂ ತನ್ನ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಯುದ್ಧ ಮಾಡಿದ ದೃಶ್ಯ, ನಾನು ಇತಿಹಾಸದಲ್ಲಿ ಓದಿದ್ದು ನನ್ನ ಕಣ್ಣಿಗೆ ಬರುತ್ತೆ. ಅವರು ಆ ತೋಟವನ್ನು ಚಿನ್ನದ ತರಹ ಮಾಡಿದ್ರು. ಅವರ ಮಗ ವ್ಯವಸಾಯದ ಕಡೆ ಗಮನ ಅಷ್ಟು ಕೊಡಲಿಲ್ಲ. ನಂತರ ನಮ್ಮ ತಂದೆ ಹುಟ್ಟಿದ್ರು. ಅವರಿಗೆ ವ್ಯವಸಾಯದ ಮೇಲೆ ಮೊದಲಿನಿಂದಲೂ ಅಕ್ಕರೆ. ಅವರು ನಾಲ್ಕು ಜನ ಕೆಲಸ ಮಾಡೋದನ್ನು ಒಬ್ಬರೇ ಮಾಡ್ತಿದ್ರು. ಅವರು ಆಳುಗಳಿಗೆ ಬೇರೆಯವರು ಕೊಡೋದಕ್ಕಿಂತ ಜಾಸ್ತಿ ಕೂಲಿ ಕೊಡೋರು. ಅವರು ಆಳುಗಳಿಗೆ ಹೇಳೋರು, "ನೀವು ನನ್ನಷ್ಟು ಕೆಲಸ ಮಾಡಬೇಡಿ. ನಾನು ಮಾಡುವ ಕೆಲಸದಲ್ಲಿ ಅರ್ಧ ಕೆಲಸ ಮಾಡಿ ಸಾಕು" ಅನ್ನೋರು. ಆದ್ರೆ ನಮ್ಮ ತಂದೆ ಜತೆ ಕೆಲಸ ಮಾಡಲು ಎಲ್ಲರೂ ಹೆದರೋರು. ನನ್ನ ತಂದೆಗೆ ತೋಟವೇ ದೇವಾಲಯವಾಗಿತ್ತು. ಕೊನೆ ಕೊನೆಗೆ ನಮ್ಮ ತಂದೆ ಕರ್ಮಯೋಗಿಯಾಗಿದ್ರು. ಯಾರ ಜತೆಯೂ ಅವರು ಜಗಳ ಆಡಿದ್ದಿಲ್ಲ. ನಮ್ಮ ಮನೇಲಿ ವಾರದಲ್ಲಿ ಸುಮಾರು ೨೦ ರಿಂದ ೨೫ ಜನ ಓದುವ ಹುಡುಗರು ಊಟ ಮಾಡ್ತಿದ್ರು. ಶಿಕ್ಷಣಕ್ಕೆ ನಮ್ಮ ತಂದೆ ತುಂಬಾ ಪ್ರಾಮುಖ್ಯ ಕೊಡ್ತಿದ್ರು. ನಾನು PUC ವರೆಗೆ ಓದಿದ ಮೇಲೆ ನನ್ನ ಮದುವೆಯಾಯ್ತು. ನನ್ನ ತಾಯಿ ಅಗ್ರಹಾರದವರು; ಅವರ ತಂದೆ ರಾಮಣ್ಣ ಅಂತ. ಅವರನ್ನು class ರಾಮಣ್ಣ ಅನ್ನೋರು. ಯಾಕೇಂದ್ರೆ ಅವರು ಆ ಕಾಲದಲ್ಲೂ ಸಹ, ಮಕ್ಕಳಿಗೆ ಒಳ್ಳೆಯದಾಗಲಿ ಅಂತ ಒಂದು school ಆರಂಭಿಸಿ, class ನಡೆಸ್ತಾ ಇದ್ರು. ಅದ್ರಿಂದಲೇ "class ರಾಮಣ್ಣ" ಆದ್ರು. ನನ್ನ ತಾಯಿಗೂ ಅವರ ಏಳನೇ ವಯಸ್ಸಿನಲ್ಲಿಯೇ ಮದುವೆ ಆಗಿದ್ದು. ನಮ್ಮ ತಂದೆಗೆ ಅನುರೂಪವಾಗಿದ್ರು. ಮಕ್ಕಳಿಗೆ ಯಾವುದೇ ಕಷ್ಟದ ಅರಿವಾಗದಂತೆ ಬೆಳೆಸಿದ್ರು. ನಾವು ಏಳು ಜನ ಹೆಣ್ಣು ಮಕ್ಕಳು. ನಾನೇ ಮಧ್ಯದವಳು. ಆಕಡೆ ಮೂರು ಜನ ಅಕ್ಕಂದಿರು, ಈಕಡೆ ಮೂರು ಜನ ತಂಗೀರು. ನಾನು, ನನ್ನ ತಮ್ಮ ಮಧ್ಯದವರು. ನಾನು ಯಾತಕ್ಕೂ ತಲೆ ಕೆಡಿಸಿಕೊಳ್ತಾ ಇರಲಿಲ್ಲ; ಮೊದಲಿನಿಂದಲೂ ಯಾರು ಏನಂದ್ರೂ ಬೇಜಾರು ಮಾಡಿಕೊಳ್ತಿರಲಿಲ್ಲ.



'ನೋಡಿ, ಇದು ಕಾಫಿ ನರ್ಸರಿ': ಭಾಗ್ಯಲಕ್ಷ್ಮಿ:ಭಕ್ತರಹಳ್ಳಿ

ಕೆಲವು unusual thoughts ನನಗೆ ಮೊದಲಿನಿಂದಲೂ ಇತ್ತು. ನಾನು ಮತ್ತೆ ನಳಿನಾಮೂರ್ತಿ ಅಂತ ಆಮೇಲೆ ಶಮಂತಕಮಣಿ ಅಂತ ಮೂರು ಜನ friends. ನಾವು ತೋಟದಲ್ಲಿ ಲಿಂಗವನ್ನು ಮಾಡಿಕೊಂಡು, ಪೂಜೆ ಮಾಡ್ತಿದ್ವಿ. ಆ ಈಶ್ವರನನ್ನು ತಪಸ್ಸು ಮಾಡಿ ಒಲಿಸಿಕೊಂಡು ಬಿಡಬೇಕೆಂಬ ಹಂಬಲ ಬರ್ತಾ ಇತ್ತು. ನಾನು ನಾಟಕಗಳಲ್ಲಿ ಭಕ್ತಿಪ್ರಧಾನವಾದ ಪಾತ್ರಗಳಲ್ಲಿ ಅಭಿನಯಿಸ್ತಾ ಇದ್ದೆ. ಸತ್ಯ ಹೇಳಬೇಕು, ಯಾರಿಗೂ ಮೋಸ ಮಾಡಬಾರದು ಅನ್ನುವ ಗುಣಗಳು ತನಗೆ ತಾನೇ ಹುಟ್ಟಿದ್ವು. ದೇವರ ಮೇಲೆ ನನಗೆ ಮೊದಲಿನಿಂದಲೂ ಭಕ್ತಿ ಹಾಗೂ ಶ್ರದ್ಧೆ. ನನಗೆ ಈಗಲೂ ಅಷ್ಟೇ, ಈ ತೋಟವೇ ದೇವರು ಅನ್ನಿಸುತ್ತೆ. ಪ್ರತಿಯೊಂದು ಗಿಡವೂ ಜೀವಂತ ಪ್ರತಿರೂಪ ಅನ್ನಿಸುತ್ತೆ. ಗಿಡದ ಹತ್ರ ಹೋದರೆ ಅದು ನನ್ನ ಜತೆ ಮಾತನಾಡ್ತಾ ಇದೆಯೇನೋ ಅನ್ನಿಸುತ್ತೆ. ನನಗೆ ೧೭ನೇ ವಯಸ್ಸಿಗೆ ಮದುವೆಯಾಯ್ತು. ನಮ್ಮ ಅತ್ತೆ-ಮಾವನ ಮನೆಗೆ ಹೋಗುವಾಗ ಯಾವ feeling ಸಹಾ ಇರಲಿಲ್ಲ. ನನ್ನ ಅತ್ತೆ-ಮಾವ ಸಹಾ ನನ್ನನ್ನು ಮಗಳಂತೆ ಕಂಡರು. ಮಾವನವರಂತೂ ಮಗಳಿಗಿಂತ ಚೆನ್ನಾಗಿ ನೋಡಿಕೊಂಡ್ರು. ನಾವು ಪೂನಾದಲ್ಲಿ ನೆಲೆಸಿದ್ವು. ಸುಮಾರು ೧೫ ವರುಷಗಳ ಕಾಲ Airforce Schoolನಲ್ಲಿ Teacher ಆಗಿದ್ದೆ. ಮದುವೆಯಾಗಿ ಹತ್ತು ವರುಷ ಕಳೆದ ಮೇಲೆ ಮಗಳು ಹುಟ್ಟಿದ್ಲು. ಅವಳದ್ದು ೪ನೇ class ಮುಗಿದ ತಕ್ಷಣ, ನಮಗೆ ಅಲ್ಲಿರೋದು ಬೇಡ ಅನ್ನಿಸ್ತು. ನಮ್ಮ ಮಾವನವರೂ ಸಹ "ಇಲ್ಲೇ ಬಂದುಬಿಡಿ, ನಮಗೂ ತೋಟ ನೋಡುವುದು ಕಷ್ಟ ಆಗುತ್ತೆ" ಅಂತ ಹೇಳ್ತಿದ್ರು. ನನಗೆ ಮೊದಲಿನಿಂದಲೂ ಜನಗಳ ಜತೆ ತುಂಬಾ ಓಡಾಡಬೇಕೆಂಬ ಆಸೆ ಇರಲಿಲ್ಲ. ಒಂದು ಗಿಡ, ಒಂದು ಹಕ್ಕಿ ನೋಡಿದಾಗ ನನಗೆ ಅವರ್ಣನೀಯ ಆನಂದವಾಗುತ್ತೆ. ದೇವರರೂಪವೇನೋ ಅನ್ನಿಸುತ್ತೆ. ಇದನ್ನು ಅನುಭವಿಸಬೇಕೇ ಹೊರತು ವಿವರಿಸಲು ಆಗೋಲ್ಲ. ಪ್ರಕೃತಿಯ ಮಡಿಲಿನಲ್ಲಿ ಪ್ರತಿ ದಿನವೂ ನನಗೆ ಹೊಸದಾಗಿ ಕಾಣುತ್ತೆ. ನನಗೆ ಈ ಕಾಫಿ ತೋಟದ ವ್ಯವಸಾಯದಲ್ಲಿ ಅನುಭವ ಇರಲಿಲ್ಲ. ಮಾವನವರು ನಮ್ಮ ಜತೆ ಇದ್ದಿದ್ರಿಂದ ನಾವು ಜಾಸ್ತಿ ತಲೆ ಕೆಡಿಸಿಕೊಳ್ತಾ ಇರಲಿಲ್ಲ - ಬರೀ ಲೆಕ್ಕಾಚಾರ ನೋಡೋದು, ಕೆಲಸದವರನ್ನು ಗಮನಿಸೋದು ಅಷ್ಟೆ. ನೋಡ್ತಾ, ನೋಡ್ತಾನೇ ನನಗೆ ಅನುಭವ ಆಯ್ತು. ಈಗ ನಮ್ಮ ಮಾವನವರೂ ಇಲ್ಲ, ಹಾಗಾಗಿ ಸಂಪೂರ್ಣ ಜವಾಬ್ದಾರಿ ನಮ್ಮದೇ ಆಗಿದೆ. ಕಾಫಿ ತೋಟದಲ್ಲಿ ಮೆಣಸು, ಏಲಕ್ಕಿ ಸ್ವಲ್ಪವೇ ಇದ್ದಿದ್ದು. ನಾವು ಬಂದ ಮೇಲೆ ಅದನ್ನು ಜಾಸ್ತಿ ಮಾಡಿದ್ವಿ. ಮೊದಲು ಮನೆ ಮಟ್ಟಿಗೆ ಆಗುವಷ್ಟು ಮಾತ್ರ ಮಾವನವರು ಬೆಳೀತಿದ್ರು. ಈಗ ನಾವು ಅದನ್ನು ಮಾರಿ ಲಕ್ಷಗಟ್ಟಳೆ ಗಳಿಸ್ತಾ ಇದೀವಿ.

'ನಮ್ಮ ಮಾವನವರು ೬೦ ವರುಷದ ಹಿಂದೆ ಈ ತೋಟವನ್ನು ಮಾಡಲು ಅಗೀತಾ ಇದ್ದಾಗ ಒಂದು ಲಿಂಗ ಸಿಕ್ತು. ಇಲ್ಲಿ ಹಿಂದೆ ಪಂಪಾಪತಿ ಅಂತ ಊರಿತ್ತಂತೆ. ಪಾಳೇಗಾರರು ಆಳಿದ ಜಾಗವಂತೆ. ಇಲ್ಲೊಂದು ದೇವಸ್ಥಾನ ಇತ್ತು. ಯಾವ ರೀತಿ ಹಾಳಾಯ್ತು ಅನ್ನುವುದಕ್ಕೆ ಆಧಾರಗಳಾಗಲಿ, ವಿಚಾರಗಳಾಗಲಿ ಇಲ್ಲ. ಒಟ್ಟಿನಲ್ಲಿ ಇದು ಕಾಡಾಯ್ತು. ನಾವು ಕಾಡಿನಲ್ಲಿ ತೋಟ ಮಾಡುವಾಗ ಲಿಂಗ ಸಿಕ್ತು. ಮಾವನವರೇ ಅದನ್ನು ಪ್ರತಿಷ್ಠಾಪನೆ ಮಾಡಿದ್ರು. ಅದಕ್ಕೆ ಒಬ್ಬರು ಪೂಜಾರರನ್ನು ನೇಮಿಸಿದ್ರು. ಅನೇಕ ಹಿರಿಯರು ಈ ಲಿಂಗದ ಬಗ್ಗೆ ವಿಚಾರಗಳನ್ನು ತಿಳಿಸಿದಾರೆ. ಇದು ಕಿನ್ನರರು, ಸಿದ್ಧರು ಪೂಜಿಸಿದ ಲಿಂಗ. ಅದಕ್ಕೇ ಅವರು ಇಲ್ಲಿ ಬರ್ತಾರೆ ಅಂತ ಹೇಳ್ತಾರೆ. ಆದರೆ ನಾವಂತೂ ನೋಡಿದ ಅನುಭವ ಇಲ್ಲ. ಈ ಕಾರಣದಿಂದಲೇ ನಮ್ಮ ಎಸ್ಟೇಟಿಗೆ "ಪಂಪಾಪತಿ" ಅಂತ ಹೆಸರು ಇಟ್ಟಿದೀವಿ.

'ಕಾಫಿ ತೋಟದಲ್ಲಿ ಕಾಲಕಾಲಕ್ಕೆ ತಕ್ಕಹಾಗೆ, ೩೬೫ ದಿನವೂ ಕೆಲಸ ನಡೀತಾನೇ ಇರುತ್ತೆ. ಮಳೆಗಾಲದಲ್ಲಿ ಹೋದ ಗಿಡಗಳ ಕಡೆ ಗುಂಡಿ ಹೊಡೆದು ಹೊಸ ಸಸಿಗಳನ್ನು ನಾಟಿ ಮಾಡ್ತೀವಿ. ತೋಟದಲ್ಲಿ ಕಳೆಯನ್ನು ತೆಗಿಸ್ತೀವಿ. ಅಗೆತ, ಕ್ರಿಮಿಕೀಟಗಳನ್ನು ತಡೆಯಲು ಎರಡು ಬಾರಿ ಔಷಧವನ್ನು spray ಮಾಡ್ತೀವಿ - ಒಂದು March-Aprilನಲ್ಲಿ, ಮತ್ತೊಂದು September-Octoberನಲ್ಲಿ. ಮನುಷ್ಯನಿಗೆ ಬರುವ cancer ತರಹ ಕಾಫಿ ಗಿಡಗಳಿಗೆ ಬೋರರ್ ಅಂತ ಬರುತ್ತೆ. ಅದು ಬಂದ ಮೇಲೆ ಅಂತಹ ಗಿಡ ಇಟ್ಕೊಂಡ್ರೆ ಉಪಯೋಗ ಇಲ್ಲ. ಅದರಲ್ಲಿ ಕಾಫಿ ಬಂದ್ರೂ ಎಲ್ಲಾ ಜಳ್ಳಾಗುತ್ತೆ, ಸತ್ತ್ವ ಇರೋದಿಲ್ಲ. ಅದ್ರಿಂದ ಅಂತಹ ಗಿಡಗಳನ್ನು ಕಿತ್ತು ತೆಗೀತೀವಿ. ಅದು ಇದ್ರೆ ಮತ್ತೆ ನೂರಾರು ಗಿಡಗಳಿಗೆ ಹರಡಬಹುದು. ಮೊದಲೆಲ್ಲಾ ತುಂಬಾ ಬೋರರ್ ಕಾಟ ಇತ್ತು. ಸುಮಾರು ೨೦೦೦, ೩೦೦೦ ಗಿಡಗಳನ್ನು ಕೀಳ್ತಾ ಇದ್ವಿ. ಈಗ ೧೫ ವರುಷದಿಂದ ಈಚೆಗೆ ಸರಿಯಾದ ಸಮಯಕ್ಕೆ ಕೀಟನಾಶಕಗಳನ್ನು ಬಳಕೆ ಮಾಡ್ತೀವಿ. ಹಾಗಾಗಿ ಹತೋಟಿಗೆ ಬಂದಿದೆ. ವರುಷದಲ್ಲಿ ಈಗ ೨೦೦ ಗಿಡ ಹೋಗಬಹುದು. ಕಾಫಿ ಗಿಡಗಳಿಗೆ ನಾಲ್ಕು ಸಾರಿ ಗೊಬ್ಬರ ಕೊಡ್ತೀವಿ. ಮೊದಲೆಲ್ಲಾ ನಮ್ಮ ಮಾವನವರು ಎರಡು ಸಾರಿ ಮಾತ್ರ ಅರ್ಧ ಅರ್ಧ kg ಕೊಡೋರು. ಈಗ ನಾವು split ಮಾಡಿ ನಾಲ್ಕು ಬಾರಿ ಕೊಡ್ತೀವಿ. ಪ್ರಮಾಣ ಅದೇ. ಒಂದು ಗಿಡಕ್ಕೆ ೫೦೦ ರಿಂದ ೬೦೦ ಗ್ರಾಂ ಕೊಡ್ತೀವಿ. ಆದರೆ ಅವಧಿಯನ್ನು

ವಿಸ್ತರಿಸ್ತೀವಿ. ಇದ್ರಿಂದ ಗಿಡಗಳು ಚೆನ್ನಾಗಿ ಪೋಷಕಾಂಶಾನ ತೊಗೋಳುತ್ವೆ. ಒಟ್ಟಿಗೆ ಒಂದೇ ಸಾರಿ ನೀಡಿದ್ರೆ, ಪೋಲಾಗೋದು ಜಾಸ್ತಿ. ಕಾಫಿ ತೋಟದಲ್ಲಿ ಹೂ ಅರಳುವ ಕ್ರಿಯೆ ನಮ್ಮ ಕೈಯಲ್ಲಿ ಇಲ್ಲ. Sprinkler ಇದ್ರೆ ಆಗಬಹುದು. ಇಲ್ಲೆಲ್ಲಾ sprinkler ಇಡಲು ನೀರಿನ ಸೌಲಭ್ಯ ಅಷ್ಟಿಲ್ಲ. ಏನಿದ್ರೂ ದೊಡ್ಡ ಝರಿಗಳಿದ್ರೆ ಅನುಕೂಲ. ನಾವು ಮಳೆಗೇನೇ ಕಾಯ್ತೀವಿ. ಸುಮಾರಾಗಿ March 31ಕ್ಕೆ ಮೊದಲ ಮಳೆ ಹುಟ್ಟುತ್ತೆ. ಸುಮಾರಾಗಿ ೧ ರಿಂದ ೩ ಇಂಚ್ ಮಳೆ ಬಿದ್ದ ತಕ್ಷಣ ಕಾಫಿ ಹೂ ಅರಳುತ್ತೆ. ಒಂದು ಇಂಚು ಮಳೇನೇ ಸಾಕು. ಅದು ಬಿದ್ದ ೯ನೇ ದಿನಕ್ಕೆ flowering ಆಗುತ್ತೆ. ಅದಕ್ಕೆ backing ಆಗಿ ಮಳೆ ಬೀಳಬೇಕು. ಕಾಫಿ ಹೂ ಅರಳಿದಾಗ ತೋಟದ ತುಂಬಾ ಮಲ್ಲಿಗೆ ಹೂವನ್ನು ಹರಡಿದಂತೆ ಕಾಣುತ್ತೆ. ಪೂರಾ ಆಹ್ಲಾದಕರ ವಾತಾವರಣ ತುಂಬಿರುತ್ತೆ. ಎಲ್ಲಾ ಕಡೆ ಸುವಾಸನೆ, ದುಂಬಿಗಳ ಝೇಂಕಾರ; ಒಂದು ರೀತಿ ಹಬ್ಬದ ವಾತಾವರಣ. ಸುಮಾರಾಗಿ ಡಿಸೆಂಬರ್ ಅಂತ್ಯದ ವೇಳೆಗೆ ಕಾಫಿ ಹಣ್ಣಾಗುತ್ತೆ. ಹಣ್ಣಾದಾಗ ನಾವು ಸುಣ್ಣವನ್ನು ಚೆಲ್ತೀವಿ; ಯಾಕೆ ಅಂದ್ರೆ, ನೆಲದ ಶಕ್ತಿಯನ್ನೂ stabilise ಮಾಡುವ ಸಲುವಾಗಿ. ತೋಟದ ಮಣ್ಣು ಆಮ್ಲೀಯವಾಗಿರೋದ್ರಿಂದ, ಸುಣ್ಣ ಮಣ್ಣನ್ನು ತಟಸ್ಥವಾಗಿಡುತ್ತೆ. ಸುಣ್ಣ ಹಾಕಿದ ತಕ್ಷಣ ಹಣ್ಣು ಬೇಗ ಆಗುತ್ತೆ. ಕಾಫಿ ಹಣ್ಣನ್ನು ಸುಮಾರು ಮೂರು ತಿಂಗಳು ಕುಯ್ತೀವಿ. ಸುಮಾರಾಗಿ ೪೦ ರಿಂದ ೫೦ ಜನ ಆಳುಗಳು ಆ ಸಂದರ್ಭದಲ್ಲಿ ಕೆಲಸ ಮಾಡ್ತಾರೆ. ಒಂದೊಂದು ದಿನಕ್ಕೆ ೧೫೦ ರಿಂದ ೨೦೦ bushel ಕುಯ್ತಾರೆ. ಅದನ್ನು ಅವತ್ತವತ್ತು pulp ಮಾಡಿ ಅದನ್ನು curingಗೆ ಇಡ್ತೀವಿ. ಸುಮಾರು ಮೂರು ದಿನ ಕಳೆದ ಮೇಲೆ pulp ಆಗಿ, wash ಆದ ಕಾಫಿಯನ್ನು ಒಣಗಿಸಲು ಶುರು ಮಾಡ್ತೀವಿ.

'ಕಾಫಿ pulping ವಿಧಾನ ಅಂದ್ರೆ ಮೊದಲು ಕಾಫಿ ಹಣ್ಣಿನ ಸಿಪ್ಪೆ ತೆಗೆದು ಅದನ್ನು ಒಂದು ದಿನ ಪೂರ್ಣವಾಗಿ ನೀರಿನಲ್ಲಿ ಇಡ್ತೀವಿ. ನಂತರ ಅದನ್ನು ತೊಳೆದು, ಮತ್ತೆ ೨೪ ಘಂಟೆ ನೀರಲ್ಲಿ ಬಿಡ್ತೀವಿ. ಆಮೇಲೆ ಮಾರನೆ ದಿನ ಕಣಕ್ಕೆ ಹಾಕ್ತೀವಿ. ಚೆನ್ನಾಗಿರುವ ಬಿಸಿಲು ಇದ್ರೆ ಐದರಿಂದ ಆರು ದಿನದಲ್ಲಿ ಒಣಗುತ್ತೆ. ಕಾಫಿ ಬೀಜ ಒಣಗಿದೆಯೇ ಇಲ್ಲವೋ ತಿಳಿಯಲು biting test ಮಾಡ್ತೀವಿ. ಅದು preliminary test. ಅದಾದ ಮೇಲೆ ನಾವು ತೂಕ ಹಾಕ್ತೀವಿ. ಒಂದು bushelಗೆ ಹದಿನಾಲ್ಕೂವರೆ ಯಿಂದ ಹದಿನೈದೂವರೆ ಕೇಜಿವರೆಗೆ ಬಂದ್ರೆ ಸರಿಯಾಗಿ ಒಣಗಿದೆ ಅಂತ. ಯಾಕೇಂದ್ರೆ ಮೊದಲು ಕುಯ್ದಿರುವ ಕಾಫಿ weight ಇರುತ್ತೆ. ಆಗ ಕಾಫಿ ಬೀಜದಲ್ಲಿ ತೇವಾಂಶ ಸಹ ಸರಿಯಾಗಿರುತ್ತೆ. ಒಂದೊಂದು ಚೀಲದಲ್ಲಿ ಸುಮಾರು ೫೦ kg ತುಂಬ್ತೀವಿ. ನಂತರ ಮಾರಾಟ ಮಾಡ್ತೀವಿ.

'ಕಾಳು ಮೆಣಸಿಗೆ ಅಂತಹ ಖರ್ಚಾಗೋದಿಲ್ಲ. ಮೊದಲು ಬೀಳು ತರಹ ಕೆಳಗೆ ಹರಿದುಕೊಂಡು ಹೋಗಿರುತ್ತಲ್ಲಾ, ಅದನ್ನು cut ಮಾಡಿ, ಒಂದು ಪ್ಲಾಸ್ಟಿಕ್ ಕವರ್‌ನಲ್ಲಿ ಮಣ್ಣು ಗೊಬ್ಬರ ತುಂಬಿ ಅದರಲ್ಲಿ ನೆಡ್ತೀವಿ. ಒಂದು ವರುಷ nurseryಲಿ ಬೆಳೆಯುತ್ತೆ. ನೇರವಾಗಿ ತೋಟದಲ್ಲಿ ೧೦೦ ಸಸಿ ಹಾಕಿದ್ರೆ ೨೦ ರಿಂದ ೩೦ ಉಳಿಯುತ್ತೆ. ಕಾಡುಮರ ಅಥವಾ ಸಿಲ್ವರ್ ಮರದ ಬೊಡ್ಡೆಯಲ್ಲಿ ಮಳೆಗಾಲದ ಸಂದರ್ಭದಲ್ಲಿ ನಾಟಿ ಮಾಡ್ತೀವಿ. ನಾಲ್ಕು ವರುಷ ಬೆಳೆದ ಮೇಲೆ ಚೆನ್ನಾಗಿ ಫಸಲು ಕೊಡುತ್ತೆ. ಅದಕ್ಕೆ ರಾಸಾಯನಿಕ ಗೊಬ್ಬರ ಹಾಕಿದ್ರೆ ಆಗೋಲ್ಲ. ಅದಕ್ಕೆ ಹಸುವಿನ ಗೊಬ್ಬರ ಮಾತ್ರ ಹಾಕಬೇಕು. ಕಾಫಿ ಗಿಡಗಳಿಗೆ spray ಮಾಡುವಾಗ ಕಾಳು ಮೆಣಸಿಗೂ ತೋರಿಸ್ತೀವಿ ಅಷ್ಟೆ. ನಂತರ ಕುಯ್ಯೋದು ಹಾಗೂ ಮಾರೋದು ಅಷ್ಟೆ. ಒಂದೊಂದು ಬೀಳಿನಲ್ಲಿ ೨೦ ರಿಂದ ೩೦ kg ವರೆಗೂ ಕಾಳು ಮೆಣಸು ಸಿಗ್ತಿದೆ. ಕೆಲವುದ್ರಲ್ಲಿ ಐದು kgಯೂ ಸಿಗೋಲ್ಲ. ಕಾಳುಮೆಣಸಿಗೂ ಮಳೆಯ ಪ್ರಮಾಣ ಸಾಕಷ್ಟು ಇರಬೇಕು. ಏಲಕ್ಕಿ ಸುಮಾರು ನಾಲ್ಕರಿಂದ ಐದು ಎಕರೇಲಿ ಇದೆ. ಎರಡರಿಂದ ಮೂರು ಸಾವಿರ ಗಿಡಗಳು ಇದೆ. ಏಲಕ್ಕಿಯನ್ನು ಕಪ್ಪೆ, ಅಳಿಲು ತುಂಬಾ ತಿನ್ನುತ್ತೆ. ಏಲಕ್ಕಿ ಕಾಯಿನ ಸಿಹಿ ಅಂಶಕ್ಕಾಗಿ ಇವು ದಾಳಿ ಮಾಡುತ್ವೆ. Phorate ಅನ್ನುವ ಔಷಧ ಇದೆ. ಅದು ತುಂಬಾ ವಾಸನೆ. ಇದನ್ನು ಪ್ಲಾಸ್ಟಿಕ್‌ನಲ್ಲಿ ಕಟ್ಟಿ ಗಿಡಕ್ಕೆ ಕಟ್ಟಿದ್ರೆ ವಾಸನೆಗೆ ಅಳಿಲು, ಕಪ್ಪೆ ಜಾಸ್ತಿ ಬರೋದಿಲ್ಲ. ಏಲಕ್ಕಿಯನ್ನು ಒಟ್ಟಿಗೆ ಕುಯ್ಯಲು ಆಗೋದಿಲ್ಲ. ಒಂದು ಗಿಡದಲ್ಲಿ ೫೦ ರಿಂದ ೧೦೦ ಕಾಯಿ ಒಂದು ಸಾರಿ ಕುಯ್ಯಬಹುದು ಅಷ್ಟೆ. ವಾರಕ್ಕೆ ಎರಡು ಸಾರಿ ಕುಯ್ಯಬಹುದು. ಮೂರ್ನಾಲ್ಕು ತಿಂಗಳುಗಟ್ಟಳೆ ಖಟಾವು ಸಾಗುತ್ತೆ. ಕಾಫಿಯನ್ನು ೫೦ kg ಚೀಲದ್ದು ಐದರಿಂದ ಆರು ಸಾವಿರಕ್ಕೆ ನಾವೂ ಮಾರಿದೀವಿ. ನಾಲ್ಕೈದು ವರುಷಗಳ ಹಿಂದೆ ತುಂಬಾ ಆದಾಯ ಸಿಕ್ಕಿದೆ. ಐದು ಜನ ಅಣ್ಣ ತಮ್ಮಂದಿರು ಹಾಗೂ ಇವರ ತಾಯಿ ಸೇರಿ, ಸುಮಾರು ಆರುಭಾಗ ಮಾಡಿ ಒಬ್ಬೊಬ್ಬರಿಗೆ ಎರಡೆರಡು ಲಕ್ಷದ ಹಾಗೆ ಒಟ್ಟು ೧೨ ರಿಂದ ೧೫ ಲಕ್ಷದವರೆಗೆ ಈ ತೋಟ ನಮಗೆ ಆದಾಯ ನೀಡಿದೆ. ಆದರೆ ಈಗ ಪರಿಸ್ಥಿತಿ ಆ ರೀತಿ ಇಲ್ಲ. ಖರ್ಚು, ಆದಾಯ ಅಲ್ಲಿಗಲ್ಲಿಗೆ ಸರಿಹೋಗ್ತಿದೆ. ಈಗ ಒಂದು ಎಕರೆಗೆ ಹದಿನೆಂಟು ಸಾವಿರದವರೆಗೆ ಸುಮಾರಾಗಿ ಖರ್ಚಾಗ್ತಿದೆ - ಬರಿಯ ಆಳುಗಳ ಕೂಲಿ ಲೆಕ್ಕಕ್ಕೆ ತೊಗೊಂಡ್ರೆ. ಒಟ್ಟಾರೆ ಐದರಿಂದ ಆರು ಲಕ್ಷ ಖರ್ಚು. ಏಳರಿಂದ, ಎಂಟು ಲಕ್ಷ ಆದಾಯ ಈಗ ಸಿಗ್ತಿದೆ. ಕಾಳುಮೆಣಸಿನಲ್ಲಿ ನಿಜ ಹೇಳಬೇಕು ಅಂದ್ರೆ ೮೦% ಲಾಭ. ಏಲಕ್ಕಿಗೆ ರಾಸಾಯನಿಕ

ಗೊಬ್ಬರ ಹಾಕೋದ್ರಿಂದ ಸ್ವಲ್ಪ ಖರ್ಚಾಗುತ್ತೆ. ಕುಯ್ಯೋದಕ್ಕೂ ಕೂಲಿ ಆಳುಗಳು ಜಾಸ್ತಿ ಬೇಕು.

'ನಾನು ಮನೆಗೆ ಬೇಕಾದ ತರಕಾರಿಗಳನ್ನು ಮನೆಯ ಮುಂದಿನ yardನಲ್ಲಿ ಬೆಳೀತಾ ಇದೀನಿ. ಸುಣ್ಣದ ಖಾಲಿ ಚೀಲಗಳಲ್ಲಿ ಕಾಡು ಮಣ್ಣು ಹಾಗೂ ಹಟ್ಟಿಗೊಬ್ಬರ ಸೇರಿಸಿ ತುಂಬಿಟ್ಟು ಗಿಡಗಳನ್ನು ಹಾಕಿದೀನಿ. ಎಲ್ಲಾ ತರಹದ ಸೊಪ್ಪು, ಬದನೇಕಾಯಿ, ಮೆಣಸಿನಕಾಯಿ, ಬೆಂಡೆಕಾಯಿ, ಕ್ಯಾರೆಟ್, ಮೂಲಂಗಿ ಎಲ್ಲಾ ಬೆಳೀತೀನಿ. ವಿಶೇಷವಾಗಿ ಏನಾದ್ರೂ ಮಾಡಬೇಕಾದ್ರೆ ಹೊರಗಿನಿಂದ ತರಬೇಕು ಅಷ್ಟೆ. ಉಳಿದಂತೆ ಇಲ್ಲಿ ಬೆಳೆದಿರೋದೇ ಸಾಕು. ನಾವೇ ಬೆಳೆದು, ತಾಜಾ ಆಗಿ ತಿನ್ನೋದ್ರಿಂದ ನಮ್ಮ ಆರೋಗ್ಯ ಸುಧಾರಿಸುತ್ತೆ. ನಾನು ಇಲ್ಲಿ ಸೌತೇಕಾಯಿ ಸಹಾ ಬೆಳೀತೀನಿ.

'ವ್ಯವಸಾಯದಲ್ಲಿ ಮಹಿಳೆಯರಿಗೂ ಮುಖ್ಯ ಪಾತ್ರ ಇದೆ. ಯಾಕೇಂದ್ರೆ ಆಕೆಗೂ ತನ್ನತನ ಅನ್ನುವುದು ಇರುತ್ತೆ. ಎಲ್ಲರಿಗೂ ಆಸಕ್ತಿ ಇದೆ ಅಂತ ನಾನು ಹೇಳಲಾರೆ. ಆದರೆ ಕೆಲವರಿಗಂತೂ ಖಂಡಿತಾ ಇದೆ. ಆಸಕ್ತಿ ಇರೋರೆಲ್ಲಾ ತೋಟವನ್ನು ತುಂಬಾ ಚೆನ್ನಾಗಿ ನೋಡಿಕೊಂಡಿದಾರೆ. ನಾನು ಎಷ್ಟೋ ಎಸ್ಟೇಟ್‌ಗಳನ್ನು ನೋಡಿದೀನಿ. ಗಂಡಸರು ಬರೀ ಲೆಕ್ಕಾಚಾರ, ಆಳುಗಳ ನಿಯಂತ್ರಣ ಮಾಡಿದ್ರೆ, ಹೆಂಗಸರು ವ್ಯವಸಾಯವನ್ನು ಚೆನ್ನಾಗಿ ಮಾಡಿಸ್ತಾ ಇದಾರೆ.



ಪಂಪಾಪತಿ ಎಸ್ಟೇಟಿನ ಅಧಿದೈವ ಶ್ರೀಪಂಪಾಪತಿಗೆ ನಮನ: ಭಾಗ್ಯಲಕ್ಷ್ಮಿ:ಭಕ್ತರಹಳ್ಳಿ

'ನಿಜ ಹೇಳಬೇಕು ಅಂದ್ರೆ ನಾವು ಮನುಷ್ಯರಾಗಬೇಕು. ಮನುಷ್ಯತ್ವವನ್ನು ಉಳಿಸಿಕೊಳ್ಳಬೇಕು. ಅದೇ ಬದುಕಿನ ಮುಖ್ಯವಾದ ತತ್ತ್ವ. ನಾವು ಮನುಷ್ಯರಾಗಿರಬೇಕು... ಮೃಗಗಳಾಗಬಾರದು. ಹುಟ್ಟಿದ ದಿನದಿಂದಲೂ ನಾನು ಸಂತೃಪ್ತಳಾಗಿದ್ದೇನೆ. ನನಗೆ ಒಳ್ಳೆಯ ತಂದೆ-ತಾಯಿ, ಅತ್ತೆ-ಮಾವ, ಗಂಡ, ಮಗಳು, ನೆರೆಹೊರೆ ದೊರಕಿದರೆಂಬುದರ ಬಗ್ಗೆ ತುಂಬಾ ಸಂತೋಷವಿದೆ. ನನ್ನ ಗಂಡ ನನಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದಾರೆ. ಮುದ್ದಿನ ಮಗಳಿದ್ದಾಳೆ. ಜೀವನ ತೃಪ್ತಿಕರವಾಗಿ ಸಾಗಿದೆ' ಎಂದು ಸಂತೃಪ್ತರಾಗಿ ನುಡಿದರು. ಮಾಸದ ಮುಗುಳುನಗೆ ಮುಖಾರವಿಂದವನ್ನು ಅಲಂಕರಿಸಿತ್ತು. ನಂತರದ ಕೆಲಸ ತೋಟದ ತುಂಬಾ ಅಡ್ಡಾಡಿದ್ದು, ಛಾಯಾಚಿತ್ರಗಳನ್ನು ತೆಗೆದಿದ್ದು. ಕೆಲವೇ ದಿನಗಳ ಹಿಂದೆ ಬಿದ್ದ ಮಳೆ ಬರದ ಛಾಯೆಯನ್ನು ಬಡಿದೋಡಿಸಿತ್ತು. ನಮ್ಮ ಸುತ್ತಾಟಕ್ಕೆ ಮಾರ್ಗದರ್ಶಿಯಾಗಿದ್ದು ಭಾಗ್ಯಲಕ್ಷ್ಮಿ ಅವರೇ. ಮನೆಗೆ ಬಂದ ಮೇಲೆ ಹೊಟ್ಟೆ ತುಂಬುವ ಕೆಲಸ. ಸ್ವಲ್ಪ ಖಾಲಿಯಿದ್ದದ್ದು ನಮ್ಮ bag ಮಾತ್ರ. ಅದನ್ನೂ ನಟರಾಜ್, ಭಾಗ್ಯಲಕ್ಷ್ಮಿ ದಂಪತಿಗಳು, ಕಾಫಿ, ಕಾಳುಮೆಣಸು, ಏಲಕ್ಕಿಯಿಂದ ತುಂಬಿದ್ರು. ಅಲ್ಲಿಗೆ ಎಲ್ಲವೂ ಭರ್ತಿಯಾಯ್ತು. ಹೆಚ್ಚಿನ ವ್ಯಾಸಂಗಕ್ಕಾಗಿ ಲಂಡನ್‌ಗೆ ತೆರಳುತ್ತಿದ್ದ ಡಾ.ಗಾಯತ್ರಿ ಅವರಿಗೆ ಶುಭ ಹಾರೈಸಿದೆವು. ತವರಿಗೆ ಬಂದ ಮಗಳನ್ನು ಬೀಳ್ಕೊಡುವಂತೆ ನಮ್ಮನ್ನೂ ಮುಂದಿನ ರಸ್ತೆಯವರೆಗೂ ಬಂದು ಬೀಳ್ಕೊಟ್ಟರು. ಎಸ್ಟೇಟ್ ರಸ್ತೆಯಲ್ಲಿ ಸಾಗಿ ಬಂದು ನಮ್ಮ ಮುಂದಿನ ಗುರಿ ಲಿಂಗದಹಳ್ಳಿಗೆ ತೆರಳುವ ಬಸ್ಸು ಶಬ್ದ ಮಾಡುತ್ತಾ ಬಂದು ನಿಂತಾಗ, ನಮ್ಮ ಮಾತುಕತೆಗೆ ಪೂರ್ಣ ವಿರಾಮ. ಮೂಡಿದ ಯಾವುದೋ ಅವ್ಯಕ್ತ ಬಂಧವನ್ನು ಬಿಡಿಸುವಂತೆ ಬಸ್ಸು ಮುಂದೆ ಓಡಿತು. ಮನವೇಕೋ ಭಾರವಾಗಿತ್ತು!

27. ಲಿಂಗದಹಳ್ಳಿ

ಒಂದು ಕಾಲದಲ್ಲಿ ಸಂಕೇತಿಗಳಿಗೆ ಅವರ ವ್ಯವಸಾಯಕ್ಕೆ ದಿವ್ಯವಾದ ನೆಲೆಯಾದ ಲಿಂಗದಹಳ್ಳಿ, ಅಲೆಮಾರಿಗಳಂತೆ ಅಲೆದು ಬಂದ ಸಂಕೇತಿ ಕೃಷಿಕರಿಗೆ ಅನ್ನ, ಆಶ್ರಯ ನೀಡಿದ ಪುಣ್ಯಭೂಮಿ. ಸಂಕೇತಿಗಳು ಬಂದು ನೆಲೆಸಿದ ಮುಖ್ಯ ಗ್ರಾಮಗಳಲ್ಲಿ ಲಿಂಗದಹಳ್ಳಿಯೂ ಒಂದು. ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿಗೆ ಸೇರಿದ ಹೋಬಳಿ ಮುಖ್ಯ ಕೇಂದ್ರ ಲಿಂಗದಹಳ್ಳಿ ಚಿಕ್ಕಮಗಳೂರಿನಿಂದ ೪೦ ಕಿಲೋಮೀಟರ್ ದೂರದಲ್ಲಿದೆ. ತರೀಕೆರೆ, ಬೀರೂರಿನಿಂದ ಕೇವಲ ೧೫ ಕಿಲೋಮೀಟರ್ ಮಾತ್ರ. ಲಿಂಗದಹಳ್ಳಿಯ ಅಂಗಳದಲ್ಲಿ ನಡೆಯುತ್ತಾ, ಬ್ರಾಹ್ಮಣರ ಬೀದಿಯಲ್ಲಿ ಕಣ್ಣಾಡಿಸಿದಾಗ ಕಂಡದ್ದು ಹಿಂದಿನ ಭವ್ಯ ಬದುಕಿಗೆ ಮೂಕಸಾಕ್ಷಿಯಂತೆ ನಿಂತಿರುವ ಹಳೆಯ ಮನೆಗಳು, ಶಿಥಿಲವಾದ ಮಣ್ಣಿನ ಗೋಡೆಗಳು. ಅಲ್ಲಲ್ಲಿ ಒಳ್ಳೆಯ ಹೊಸ ಮನೆಗಳಿಗೂ ಕೊರತೆಯೇನಿರಲಿಲ್ಲ. ದಾರಿ ಮಧ್ಯದಲ್ಲಿ ಬೃಹತ್ತಾದ ಮರದ ಕಣಜ. ಈಗಲೂ ಇಲ್ಲಿ ಭತ್ತ ಶೇಖರಿಸುತ್ತಾರಂತೆ. ಹಾಗೇ ಮುಂದೆ ಸಾಗಿ ನಾವು ಎಲ್.ಜಿ. ಪ್ರಕಾಶ ಅವರ ಮನೆಗೆ ಹೋದಾಗ, ಸ್ನೇಹದ ನಗು ಬೀರುತ್ತಾ ಬಂದು ಸ್ವಾಗತಿಸಿದರು. ಬಿಸಿ ಹಾಲು ಸಹಾ ಹಿಂದೆಯೇ ಬಂತು, ಜತೆಗೆ ಭೋಜನಕ್ಕೆ ಆಹ್ವಾನ. ಲಿಂಗದಹಳ್ಳಿಯಲ್ಲಿ ಸಂಕೇತಿಗಳದ್ದು ೨೮ ಮನೆ ಇದ್ದಾವೆ. ಎಲ್ಲರಿಗೂ ಜಮೀನಿದೆ. ಸ್ವತಃ ಪರಿಶ್ರಮದಿಂದ ವ್ಯವಸಾಯ ಈಗ ಮಾಡ್ತಿರೋದು ಸುಮಾರು ೨೦ ಮನೆಯವರು ಮಾತ್ರ. ರಾಗಿ, ಅಡಿಕೆ, ತೆಂಗು, ಭತ್ತ, ಈರುಳ್ಳಿ, ಟೊಮ್ಯಾಟೋ, ಬದನೇಕಾಯಿ ಬೇಸಾಯ ಜಾರೀಲಿದೆ. ಸಮೀಪದ ಕಲ್ಹತ್ತಗಿರಿ ಹಾಗೂ ಹರಿಯುವ ಗಿರಿಯ ಝರಿ ಎರಡೂ, ವಲಸೆ ಬಂದ ಸಂಕೇತಿಗಳನ್ನು ಲಿಂಗದಹಳ್ಳೀಲಿ ನೆಲೆಸಲು ಪ್ರೇರೇಪಿಸಿರಬಹುದು ಅನ್ನಿಸುತ್ತೆ. ಕಾಲಕ್ರಮೇಣ ಸುತ್ತಲಿನ ದಟ್ಟವಾದ ಕಾಡು ನಾಡಾಗಿ ಝರಿಯ ನೀರು ಬತ್ತಿದಂತೆ, ... ಇಲ್ಲಿನ ಸಂಕೇತಿ ಕೃಷಿಕರ ಜೀವನೋತ್ಸಾಹವೂ ಈಗ ಬತ್ತಿದಂತೆ ಭಾಸವಾಗ್ತಿದೆ. ಬತ್ತಿದ ಭಾವದಲ್ಲೇ ಸಂಕೇತಿ ಕೃಷಿಕರು ಇದ್ದಾರೆ. ಇದ್ದುದರಲ್ಲಿ ತೃಪ್ತರಾಗಿರುವ ಕೃಷಿಕರೂ ಇದ್ದಾರೆ.



ಬೀದಿಯಲ್ಲೇ ನಿಂತ ಮರದ ಕಣಜ: ಲಿಂಗದಹಳ್ಳಿ

ಅ) ಎಲ್.ಜಿ. ಪ್ರಕಾಶ್ ಇ/ಮ ಗೋಪಾಲಮೂರ್ತಿ
ಲಿಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆ, ದೂರವಾಣಿ : 08261 454852

ನನಗೆ ದನಕರುಗಳ ಬಗ್ಗೆ ತುಂಬಾ ವ್ಯಾಮೋಹ. ಬಹಳ ಪ್ರೀತಿ ವಿಶ್ವಾಸದಿಂದ ಅವುಗಳ ಸಾಕಣೆ ಮಾಡ್ತಿದ್ದೆ. ಅದನ್ನು ಕಟುಕರಿಗೆ ಮಾರ್ತ್ತಿರಲಿಲ್ಲ. ಕಡೆಯ ತನಕ ನೋಡಿಕೊಳ್ತಿದ್ದೆ. ನನಗೆ ರಾಸುಗಳ ಸಾಕಾಣಿಕೆಯಲ್ಲಿ ಲಾಭದ ದೃಷ್ಟಿ ಇರಲಿಲ್ಲ. ಎಲ್ಲಿ ಯಾವುದೇ ಸಮಾರಂಭಕ್ಕೆ ಹೋದ್ರೂ, ದನಕರುಗಳ ಸಲುವಾಗಿ ರಾತ್ರಿ ಒಳಗೆ ಮನೆ ಸೇರ್ತಿದ್ದೆ. ನನಗೆ ದುಡ್ಡು ಮಾಡಬೇಕು, ಶೋಕಿ ಮಾಡಬೇಕು, ಊರೂರು ತಿರುಗಬೇಕು, ಒಳ್ಳೊಳ್ಳೆ ಬಟ್ಟೆ ಹಾಕಬೇಕು ಅಂತ ಅನ್ನಿಸಲೇ ಇಲ್ಲ. ನನಗೆ ಪ್ರೀತಿ ವಿಶ್ವಾಸ ಅಂದ್ರೆ ದನಕರು, ತೋಟಗದ್ದೆ ಹಾಗೂ ನನ್ನ ಮನೆ ಅಷ್ಟೆ.


'ನನ್ನ ಮೊದಲ ಪ್ರೀತಿ ಗೋಪಾಲನೆಗೆ' ಎನ್ನುವ ಎಲ್.ಜಿ.ಪ್ರಕಾಶ್:ಲಿಂಗದಹಳ್ಳಿ

ಲಿಂಗದಹಳ್ಳಿಯ ಗೋಪಾಲಮೂರ್ತಿ ಹಾಗೂ ಹೊಸಹಳ್ಳಿಯ ಕಮಲಮ್ಮ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು. ಮೊದಲನೆಯ ಮಗನೇ ಎಲ್.ಜಿ. ಪ್ರಕಾಶ್. ಪ್ರಕಾಶ್ ಅವರು ಮದುವೆಯಾದದ್ದು ಲಿಂಗದಹಳ್ಳಿಯ ಶ್ರೀನಿವಾಸ್ ಹಾಗೂ ರಾಜಮ್ಮ ದಂಪತಿಗಳ ಮಗಳು ವನಜಾಕ್ಷಿಯನ್ನು. ಪ್ರಕಾಶ್ ಹಾಗೂ ವನಜಾಕ್ಷಿ ಅವರಿಗೆ ಮೂರು ಜನ ಹೆಣ್ಣುಮಕ್ಕಳು. ವ್ಯವಸಾಯವೇ ಇವರ ಬದುಕಿನ ಆಧಾರ. ತಮ್ಮ, ಎಲ್.ಜಿ. ಅನಂತ್ ಚಿಕ್ಕಮಗಳೂರಿನ ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿದ್ದಾರೆ. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಮಾತಿಗಿಳಿದರೂ ಪ್ರಕಾಶ್ ಅಷ್ಟೇ ತಂಪಾಗಿದ್ದರು. 'ನೀವು ಪ್ರಶ್ನೆಗಳನ್ನು ಕೇಳಿ, ನನಗೆ ತಿಳಿದಷ್ಟನ್ನು ಹೇಳುತ್ತೇನೆ' ಎಂದು ತಣ್ಣಗೆ ನಕ್ಕರು. ತಮ್ಮ ಪೂರ್ವಿಕರ ವಿಚಾರದಿಂದ ವಿಷಯವನ್ನೂ ಆರಂಭಿಸಿದರು.

ನನ್ನ ತಾತ ಸುಬ್ಬರಾಯರು. ಅವರು ಇಲ್ಲೇ ಹುಟ್ಟಿ ಬೆಳೆದದ್ದು. ಚೆನ್ನಾಗಿ ವಿದ್ಯಾಭ್ಯಾಸ ಮಾಡಿ, ಇಂಜಿನಿಯರ್ ಆದರು. ನಂತರ ಚಿತ್ರದುರ್ಗ ಜಿಲ್ಲೆ ಭರಮಸಾಗರದಲ್ಲಿ ಒಂದು ಸಾವಿರ ರೂಪಾಯಿ ಸಂಬಳಕ್ಕೆ ಕೆಲಸಕ್ಕೆ ಸೇರಿದ್ರು. ಕೆಲಸವನ್ನೂ ಮಾಡಿದ್ರು. ಆದರೆ ಅದೇನಾಯ್ತೋ ಗೊತ್ತಿಲ್ಲ, ಗುಲಾಮಗಿರಿ ಕೆಲಸಬೇಡ ಅಂತ ಹೇಳಿ ಲಿಂಗದಹಳ್ಳಿಗೆ ವಾಪಸ್ಸು ಬಂದ್ರು. ಇವರು ಅಷ್ಟೊಂದು ಸಂಬಳದ ಕೆಲಸ ಬಿಟ್ಟು ಬಂದ್ರಲ್ಲಾ ಅಂತ ಅವರ ಚಿಕ್ಕಪ್ಪಂಗೆ ಸಿಟ್ಟು ಬಂತು. ಅದನ್ನು ಅವರು ಬೇರೆಯವರ ಹತ್ರ ಹೇಳಿಕೊಂಡ್ರು. ಅದನ್ನು ಕೇಳಿ ನಮ್ಮ ತಾತ, 'ನಾನು ಇರುವವರೆಗೆ ಇವರ ಹತ್ತಿರ ಆಸ್ತಿ ಮನೆ ಏನೂ ಕೇಳೋದಿಲ್ಲ' ಅಂತ ಹೇಳಿ, ಇಲ್ಲಿಂದ ಹನ್ನೆರಡು ಮೈಲಿ ದೂರದಲ್ಲಿ ತನಿಗೆಬೈಲು ಅಂತ ಇದೆ, ಕನ್ನಂಕಾಡು ಅದು. ಅಲ್ಲಿ ದರಕಾಸ್ತಿನಲ್ಲಿ ಜಮೀನು ಪಡೆದು, ಅಲ್ಲಿಯೇ


ಎಲ್.ಜಿ.ಪ್ರಕಾಶ್ ತಮ್ಮ ಮನೆ ಬಾಗಿಲಲ್ಲಿ:ನೆರೆಮನೆಯು ಪ್ರಸಿದ್ಧ ವಿದ್ವಾಂಸ ವೇ||ಬ್ರ||ಶ್ರೀ ನರಸಿಂಹಮೂರ್ತಿಶಾಸ್ತ್ರಿ ಅವರದು:ಲಿಂಗದಹಳ್ಳಿ

ತಗಡಿನ ಮನೆ ಕಟ್ಟಿಕೊಂಡು, ಗೆಡ್ಡೆ, ಕಾಡು ಕಡಿದುಕೊಂಡು, ಆನೆ, ಹುಲಿ, ಕರಡಿ ಇರುವ ಜಾಗದಲ್ಲಿ ವ್ಯವಸಾಯ ಆರಂಭಿಸಿದ್ರು, ಒಂದು ಎಕರೆ ಕಾಡನ್ನು ಒಂದು ವರುಷದಲ್ಲಿ ಸಮಮಾಡಿ, ಆ ಜಮೀನಿನಲ್ಲಿ, ಮೊದಲನೇ ವರುಷದಲ್ಲಿ ನಾಲ್ಕೂವರೆ ಪಲ್ಲ ಭತ್ತ ಬೆಳೆದರು. ಆ ಭತ್ತ ಯಾವ ರೀತಿ ಬೆಳೆದಿತ್ತಂತೆ ಅಂದ್ರೆ ಒಂದು ಬೊಡ್ಡೆಗೆ ನಾಲ್ಕರಿಂದ ಐದು ಸರಿ ಕುಡುಗೋಲು ಹಾಕಿದ್ರೂ ತೆಂಡೆ ಕತ್ತರಿಸಿ ಮುಗಿಸಲು ಆಗುತ್ತಿರಲಿಲ್ಲವಂತೆ. ಆಗ ಬರಗಾಲ. ಇಲ್ಲಿ ಲಿಂಗದಹಳ್ಳೀಲಿ ಯಾರದೋ ಮದುವೇಗೆ, ಅಕ್ಕಿ ಇಲ್ಲಾಂತ ಅಂದಾಗ ಅವರು ನಾಲ್ಕು ಚೀಲ ಭತ್ತ ಕೊಟ್ರಂತೆ. ಅಂತಹ ಸಾಧಕ ಆತ. ಪ್ರತಿ ವರುಷ ಜಮೀನು ಜಾಸ್ತಿ ಮಾಡ್ತಾ ಬಂದು, ಅಂತಹ ಕಾಡಿನಲ್ಲಿ ಐದಾರು ಎಕರೆ ಜಮೀನು ರೂಢಿಸಿದ್ರು. ನಮ್ಮ ತಾತಂಗೆ ಇಬ್ಬರು ಮಕ್ಕಳು. ಒಬ್ಬರು ನಮ್ಮ ತಂದೆ ಗೋಪಾಲಮೂರ್ತಿ. ವಿಶ್ವೇಶ್ವರಯ್ಯ ಅನ್ನುವವರು ಅವರ ತಮ್ಮ. ನನ್ನ ತಂದೆ, ತಮ್ಮ ತಂದೆಗಿಂತಲೂ ಚೆನ್ನಾಗಿ ಬೆಳೆ ಬೆಳೆದವರು. ಅದೇ ಜಾಗದಲ್ಲಿ ಇದ್ದು, ಕಬ್ಬು, ಭತ್ತ, ಅಡಿಕೆ, ಹಣ್ಣಿನ ಬೆಳೆಗಳನ್ನು ಬೆಳೆದ್ರು. ನಮ್ಮಜ್ಜನೇ ಅವರ ಜಮೀನಿನಲ್ಲಿ ಎಲ್ಲಾ ಬಗೆಯ ಹಣ್ಣಿನ ಗಿಡಗಳನ್ನೂ ಬೆಳೆದಿದ್ರು. ಇಂಥ ಹಣ್ಣು ಇಲ್ಲ ಅಂತ ಇರಲಿಲ್ಲ. ಪ್ರತಿ ಹಣ್ಣನ್ನೂ ಬೆಳೆದು, ರಾತ್ರಿ ವೇಳೆ ಊಟ ಮಾಡದೆ ಅದನ್ನೇ ತಿಂತಿದ್ರಂತೆ. ಹಲಸು, ಮಾವು, ನೇರಳೆ, ಸೀಬೆ, ಹೀಗೆ ಎಲ್ಲಾ ಜಾತಿಯ ಹಣ್ಣಿನ ಗಿಡಗಳೂ ಅಲ್ಲಿದ್ವು. ನನ್ನ ತಂದೆಗೆ, ವ್ಯವಸಾಯದಲ್ಲಿ ತಾತನಿಗಿಂತ ಜಾಸ್ತಿ ಆಸಕ್ತಿಯಿತ್ತು. ಅವರು ಹಠವಾದಿಗಳು, ಹಾಗೇ ಶ್ರಮಜೀವಿಗಳು. ನನ್ನ ತಾತನನ್ನು ನಾನು ನೋಡಿಲ್ಲ. ನನ್ನ ತಂದೆ ತೆಳ್ಳಗೆ, ಬೆಳ್ಳಗೆ ಗಟ್ಟಿಮುಟ್ಟಾಗಿದ್ರು. ಆರೋಗ್ಯ ಸರಿ ಇಲ್ಲ ಅಂದವರಲ್ಲ. ಅವರು ಬೆಳಗ್ಗೆ ಎದ್ದು ಹೊಲಗದ್ದೆಗೆ ಕೆಲಸಕ್ಕೆ ಹೊರಟರು ಅಂದ್ರೆ, ಆ ಕೆಲಸ ಪೂರ್ಣ ಮಾಡುವವರೆಗೂ ದುಡೀತಿರೋರು. ನಮ್ಮದು ಎಲ್ಲಿಂದ ಎಲ್ಲಿಯವರೆಗೆ ಜಮೀನು ಇದೆಯೋ, ಅಲ್ಲಿಯವರೆಗೂ ಏನಾದ್ರೂ ಕೆಲಸ ಮಾಡುತ್ತಾ, ಗಿಡ ಗಂಟಿ ಕಿತ್ತು, ಇನ್ನೇನು ನಮ್ಮ ಜಮೀನು ದಾಟಿದ್ವಿ ಅನ್ನುವಾಗ ಕೆಲಸ ಮುಗಿಸಿ ಬರೋರು. ನನ್ನ ತಂದೆ ಸಹ "ನಾನು ಲಿಂಗದಹಳ್ಳೀಲಿ ಏನನ್ನೂ ಕೇಳೋಲ್ಲ, ನನ್ನ ತಂದೇನೇ ಏನನ್ನೂ ಕೇಳಿಲ್ಲ, ನಾನು ಯಾಕೆ ಕೇಳಬೇಕು?" ಅಂತ ಪ್ರತಿಜ್ಞೆ ಮಾಡಿದ್ರು. ನನ್ನ ತಂದೆ ಪೂರ್ಣಸಂಸಾರಸಮೇತ ತೋಟದಲ್ಲಿದ್ರು. ಆಮೇಲೆ ಆ ಹುಲಿಕಾಡು ಬಿಟ್ಟು ನಾಡಿಗೆ ಬಂದ್ರು. ಆಗ ನಾವು ಬಹಳ ಚಿಕ್ಕವರು. ನನ್ನ ತಂದೆ ಇಲ್ಲಿ ೮, ೧೦ ಎಕರೆ ಗದ್ದೆ, ಹೊಲ ೧೦, ೧೨ ಎಕರೆ ಹಳೆಯ ತೋಟವನ್ನು ಕೇಳದೆ, ಮೂರು ಎಕರೇಲಿ ಹೊಸದಾಗಿ ತೋಟ ಮಾಡಿದ್ರು. ಈಗ ನನ್ನ ಬಳಿ ಆರು ಎಕರೆ ಗದ್ದೆ, ಎರಡು ಎಕರೆ ಹೊಲ ಹಾಗೂ ಅಡಿಕೆ ತೋಟ ಇದೆ.

- **ಅಲ್ಲಿಂದ ಇಲ್ಲಿಗೆ ಬಂದ ಮೇಲೆ ತೋಟ ಯಾವ ರೀತಿ ಅಭಿವೃದ್ಧಿ ಮಾಡಿದ್ರು?**

ಬಹಳ ಕಷ್ಟಪಟ್ಟು, ಕಾಡಿರುವ ಜಾಗ ಖರೀದಿಸಿ ಅದನ್ನು ಕಡಿದು, ಮರವನ್ನೂ ಸುಟ್ಟು ಇದ್ದಿಲು ಮಾಡಿ ಅದನ್ನೂ ಮಾರಿದ್ರು. ನೆಲವನ್ನೆಲ್ಲಾ ಮಟ್ಟಮಾಡಿ, ಮೊದಲು ಭತ್ತ ಬೆಳೆದ್ರು. ಯಾವುದಾದರೂ ಒಂದು ರೀತೀಲಿ ಆದಾಯ ಸಂಪಾದಿಸಿ, ಮುಂದಿನ ಯೋಜನೆ ಹಾಕೋರು. ತಗ್ಗಿನ ಜಾಗ ಅದು. ಮೊದಲು ಭತ್ತ, ಹಣ್ಣು, ತರಕಾರಿ ಬೆಳೆದು ನಂತರ ಅಡಿಕೆ ಕಟ್ಟಿದ್ರು. ಆಗ ಭಾವಿ, ಬೋರು ಒಂದೂ ಇರಲಿಲ್ಲ. ಯಾತದಲ್ಲಿ ನೀರೆತ್ತಿ ಅಡಿಕೆ ಗಿಡ ಉಳಿಸಿದ್ರು. ನಂತರ ಒಂದು ಭಾವಿ ತೆಗೆಸಿದ್ರು. ಅದು ಸ್ವಲ್ಪ ದಿನ ನೀರು ಕೊಟ್ಟು ಒಣಗಿಹೋಯ್ತು. ಅದೇ ನೀರನ್ನು ನೆಚ್ಚಿಕೊಂಡಿದ್ದ ಒಂದೂವರೆ ಎಕರೆ ತೋಟ ಒಣಗಿಹೋಯ್ತು. ಈ ಜಾಗ ಸರಿ ಇಲ್ಲ ಅಂತ ಎಲ್ಲಾ ಹೇಳೋದಕ್ಕೆ ಶುರು ಮಾಡಿದ್ರು. ತಂದೆ ತಾಯಿ ಕಷ್ಟಪಟ್ಟು ಮಾಡಿದ್ದನ್ನು ಬಿಡಬಾರದು ಅಂತ, ನಾನು ಮತ್ತೆ ರೂಢಿಸಲು ಆರಂಭಿಸಿದೆ. ಸ್ನೇಹಿತರ ಬೆಂಬಲ ಸಿಕ್ತು. ಮತ್ತೆ ಬೋರ್‌ವೆಲ್ ಕೊರೆಸಿದ್ವಿ, ಅದೂ ನಮ್ಮ ತಂದೆ ಹೋದ ಮೇಲೆ. ಆ ಬೋರ್‌ನಲ್ಲಿ ನೀರು ಚೆನ್ನಾಗಿ ಬಂತು. ೨೧೦ ಅಡೀಲಿ ಮೂರೂವರೆ inch ನೀರು ಸಿಕ್ತು. ಈಗ ಬರಗಾಲ ಬಿದ್ದಿದ್ರೂ ಸ್ವಲ್ಪ ನೀರು ಕೊಡ್ತಿದೆ.

- **ನಿಮ್ಮ ಬಗ್ಗೆ ಹೇಳಿ ಪ್ರಕಾಶ್ ಅವರೆ?**

ನಾನು SSLCವರೆಗೆ ಓದಿದೆ. ಬೇಕೋ ಬೇಡವೋ ಅಂತಲೇ ಓದಿದ್ದು. ನನಗೆ ವ್ಯವಸಾಯದ ಬಗ್ಗೆ ಗಮನ ಜಾಸ್ತಿ ಇತ್ತು. ಸಣ್ಣದರಿಂದ ವ್ಯಾಮೋಹ ಬಂದಿತ್ತು. ನಮ್ಮಜ್ಜನ ಅಂಶ ಇತ್ತೇನೋ. ನನಗೆ ದನಕರುಗಳ ಬಗ್ಗೆ, ಜಮೀನಿನ ಬಗ್ಗೆ ಒಲವಿತ್ತು. ವ್ಯವಸಾಯ ಮಾಡ್ತಾ ಮಾಡ್ತಾ ವ್ಯಾಮೋಹ ಜಾಸ್ತಿಯಾಯ್ತು. ನನಗೆ ಓದಬೇಕು, ಓದಿ ಕೆಲಸ ಹಿಡೀಬೇಕು ಅನ್ನುವ ಆಸೆ ಹಿಂದಿನಿಂದಲೂ ಇರಲಿಲ್ಲ. ನಾನು ಬಲವಾಗಿದ್ದೆ, ಹಾಗೂ ಕಷ್ಟ ಪಟ್ಟು ಕೆಲಸ ಮಾಡುವ ಹುಮ್ಮಸ್ಸು ಇತ್ತು. ನಾನು ಕಷ್ಟಪಟ್ಟು ಕೆಲಸ ಮಾಡ್ತಿದ್ದೆ, ಬೆಳೆ ಬೆಳೀತಿದ್ದೆ. ಆದರೆ ಯಾರಾದ್ರೂ ಏನು ಸಾಧನೆ ಮಾಡಿದೀಯ ಅಂದ್ರೆ ಹೇಳೋಕೆ ಏನಿಲ್ಲ. NIL.

- **ನಿಮ್ಮ ತಂದೆಯವರು ವ್ಯವಸಾಯದ ವಿಚಾರಗಳನ್ನು ಏನು ಹೇಳಿದಾರೆ?**

ಅವರ ಜತೇಲಿ ಕೆಲಸ ಮಾಡಿ, ಅನುಭವ ಪಡೆದಿದೀನಿ. ಅವರಿಗೆ ಸಹಾಯ ಮಾಡ್ತಾ ಮಾಡ್ತಾ ಕಲಿತಿದೀನಿ. ವಿಶೇಷವಾಗಿ ಶಿಕ್ಷಣ ಅಂತೇನೂ ನೀಡಿಲ್ಲ. ನಾವೂ ದೊಡ್ಡದಾಗಿ ತಿಳಿದುಕೊಳ್ಳಲೂ ಹೋಗಲಿಲ್ಲ. ಆದರೆ ಈಗ, ಅವರಿಂದ ತಿಳಿಯಬಹುದಿತ್ತು ಅನ್ನಿಸುತ್ತೆ. ಅವರೂ ಹೇಳಿ ಕೊಡಬಹುದಿತ್ತು ಅಂತ ಅನ್ನಿಸುತ್ತೆ. ಏನು ಪ್ರಯೋಜನ? ನನ್ನ ತಂದೆ ಹತ್ರ ಎರಡು ಬಿಳಿ ಪಂಚೆ ಇತ್ತು. ತೋಟದಲ್ಲಿ ಅಷ್ಟು ಕೆಲಸ ಮಾಡಿದ್ರೂ ಅವರ ಪಂಚೆ ಮಾತ್ರ ಕೊಳೆ ಆಗ್ತಿರಲಿಲ್ಲ. ಅದು ನಮಗೆ ಆಶ್ಚರ್ಯ.

- **ಎಷ್ಟು ದನಕರುಗಳು ಇದ್ದು?**

ಒಂದು ೧೧, ೧೫ ರಾಸು ಇತ್ತು. ತಂದೆ ಕಾಲದಲ್ಲಿ ನಾಲ್ಕು ಜತೆ ಎತ್ತೂ ಸಹಾ ಇತ್ತು. ೪೦ ಗಾಡಿ ಹುಲ್ಲು ಜಮೀನಿನಲ್ಲಿ ಆಗ್ತಾ ಇತ್ತು. ೩೦೦ ಚೀಲ ಭತ್ತ ಬೆಳೀತಾ ಇದ್ವಿ. ಎರಡು ಎತ್ತಿನಗಾಡಿ ಇತ್ತು. ಬೇಸಿಗೆ ಕಾಲದಲ್ಲಿ ಭಾವಿಯಿಂದ ನೀರು ಸೇದಿ ರಾಸುಗಳಿಗೆ ಕುಡಿಸ್ತಾ ಇದ್ವಿ. ಅಷ್ಟು ರಾಸಿಗೂ ನಾಲ್ಕು ಕಡೆ ಬಣವೆ ಮಾಡ್ತಾ ಇದ್ವಿ. ಬರ್ತಾ ಬರ್ತಾ ಮಳೆ ಬೆಳೆ ಕಡಿಮೆ ಆದಂಗೆ ಮನೇಲಿ ರಾಸುಗಳ ಸಂಖ್ಯೇನೂ ಕಡಿಮೆಯಾಯ್ತು. ವ್ಯವಸಾಯದ ಖರ್ಚು ಜಾಸ್ತಿ ಆಯ್ತು. ೨೦ ವರುಷದಿಂದ ಈಚೆಗೆ ಹಸು ಸಾಕಾಣಿಕೆ ತುಂಬಾ ಕಡಿಮೆಯಾಯ್ತು. ಮನೇಲಿ ಗೋಬರ್ ಗ್ಯಾಸ್ ಇದೆ. ತಮ್ಮ, ಹೆಂಡತಿ, ಮಕ್ಕಳ ಪ್ರತಿರೋಧ ಇದ್ರೂ ನನಗೆ ದನಕರುಗಳ ಬಗ್ಗೆ ವ್ಯಾಮೋಹ ಹೋಗಿಲ್ಲ. ಲಾಭದ ದೃಷ್ಟಿಯಿಂದ ಅಲ್ಲ. ಪ್ರೀತಿ ವಿಶ್ವಾಸದಿಂದ ದನಕರುಗಳ ಸಾಕಣೆ ಮಾಡ್ತಿದ್ವಿ. ಕಟುಕರಿಗೆ ಮಾರ್ತಿರಲಿಲ್ಲ. ಕಡೇತನಕ ಪ್ರೀತಿಯಿಂದ ನೋಡಿಕೊಳ್ತಿದ್ದೆ. ಎಲ್ಲಿ ಯಾವುದೇ function ಆದ್ರೂ ರಾತ್ರಿ ಒಳಗೆ ಮನೆಗೆ ಬಂದು ಸೇರ್ತಿದ್ದೆ, ದನಕರುಗಳ ಸಲುವಾಗಿ. ತರೀಕೆರೆ ಜಾತ್ರೇಲಿ ದನಕರುಗಳ ಮಾರಾಟ ಮಾಡ್ತಿದ್ದೆ. ಎತ್ತು, ಹಸುವಿನ ವ್ಯಾಪಾರದ ಅನುಭವವೂ ಇದೆ.



ಮತ್ತೆ ಮತ್ತೆ ತಮ್ಮ ಕೊಟ್ಟಿಗೆಗೆ ಆಹ್ವಾನಿಸಿದ ಎಲ್.ಜಿ.ಪ್ರಕಾಶ್:ಗೋಲೋಲ:ಲಿಂಗದಹಳ್ಳಿ

- **ಈಗ ನೀವು ಏನೇನು ಬೆಳೆಗಳ ಬೇಸಾಯ ಮಾಡ್ತಾ ಇದೀರಿ?**

ಬಹಳಷ್ಟು ಖರ್ಚು ಬರೋದ್ರಿಂದ, ನಾನು ಈಗ ಯಾವ ಬೆಳೇನೂ ಮಾಡಬಾರದು ಅಂತ ಬಿಟ್ಟಿದೀನಿ. ಬಾಗಾಯ್ತು ಒಂದೇ ಈಗ ನಮಗೆ ಆಧಾರ. ಹೊಲಗದ್ದೆ ಮಾಡುವಾಗ ತೋಟದ ಮೇಲೆ ಉತ್ಸಾಹ ಕಡಿಮೆ ಇತ್ತು. ಆದ್ರೆ ತೋಟದ ಉತ್ಪತ್ತಿ ಚೆನ್ನಾಗಿತ್ತು. ಯಾರಲ್ಲಿ ಕಡಿಮೆ ಹೊಲಗದ್ದೆ ಹಾಗೂ ಹೆಚ್ಚು ತೋಟ ಇತ್ತೋ ಅವರು profitಗೆ ಬಂದರು. ಅಡಿಕೆಗೆ ಒಳ್ಳೆಯ ಧಾರಣೆ ಸಿಕ್ತು. ಅವರು ಅಷ್ಟು ಕಷ್ಟಾನೂಪಡಲಿಲ್ಲ . .. ಸುಖ ಜಾಸ್ತಿ ಸಿಕ್ತು. ನಾವು ಜಮೀನು ಜಾಸ್ತಿ ಮಾಡಿದ್ರಿಂದ ಕಷ್ಟಾನೂ ಜಾಸ್ತಿ ಬಂತು... ಉತ್ಪತ್ತಿ ಕಡಿಮೆ ಆಯ್ತು. ಜಾಸ್ತಿ ಜಮೀನು ಜಾಸ್ತಿ ಕಷ್ಟ ಅಂತಾಯ್ತು..

- **ಏನೂ ಜಮೀನಿಲ್ಲ ಅಂದ್ರೆ ಏನೂ ಕಷ್ಟ ಇಲ್ಲ ಅಂತಾನಾ?**

ಅದು ಹಂಗಾಗಲಿಲ್ಲ! ಕಡಿಮೆ ಜಮೀನಿದ್ರೆ ಉತ್ಪತ್ತಿ ಜಾಸ್ತಿ ಅಷ್ಟೆ.

- **ನೀವು ಭತ್ತವನ್ನು ಬೆಳೀತಾ ಇದ್ದದ್ದು ಯಾವ ನೀರಿನ ಆಶ್ರಯದಲ್ಲಿ?**

ನಮಗೆ ಗಿರಿನೀರಿನ ಆಶ್ರಯವಿತ್ತು. ಕಲ್ಹತ್ತಗಿರಿ ನೀರು ಝರಿ ತರಹ ಬರೋದು. ಸುಮಾರು ಐದು ನೂರು ಎಕರೆಗೆ ಮಳೆಗಾಲದಲ್ಲಿ ನೀರು ಸಾಕಾಗೋದು. ಬೇಸಿಗೇಲಿ ಒಂದು ೪೦, ೫೦ ಎಕರೆ ಅಡಿಕೆ ತೋಟಕ್ಕೆ ನೀರು ಆಗೋದು. ಹೊಲದಲ್ಲಿ ರಾಗಿ ಬೆಳೀತಾ ಇದ್ವಿ.

ಕೆಲವು ಸಂದರ್ಭದಲ್ಲಿ ರಾಗಿ ಮುದ್ದೆ ನಾವು ಬಳಸ್ತಾ ಇದ್ವಿ. ಆಳುಗಳು ಬರ್‍ತಿದ್ದರಲ್ಲಾ ಅವರಿಗೂ ಆಗೋದು.

- **ನಿಮ್ಮ ಮನೇಲಿ ನಿಮ್ಮ ತಾಯಿ, ಅಜ್ಜಿ ಹಾಗೂ ನಿಮ್ಮ ಹೆಂಡತಿ ಯಾವ ರೀತಿ ವ್ಯವಸಾಯಕ್ಕೆ ಸಹಕರಿಸಿದಾರೆ?**

ಅಜ್ಜಿ ವಿಷಯ ಗೊತ್ತಿಲ್ಲ. ತಾಯಿ ಬಹಳಷ್ಟು ಕಷ್ಟಪಟ್ಟು, ಒಂದು ಸ್ಥಾನಕ್ಕೆ ಬರಬೇಕು ಅಂತ ಹೇಳಿ, ಬಂದ ದುಡ್ಡನ್ನು ಉಳಿಸಿ ಮತ್ತೆ ಸಂಸಾರಕ್ಕೆ ಕೊಡ್ತಾ ಬಂದ್ರು. ಮೊದಲು ಇಲ್ಲಿ ಜಮೀನು ಇಲ್ಲ ಅಂತಾದಾಗ, ಶಿವಮೊಗ್ಗ ಹೊಸಹಳ್ಳೀಲಿ ಜಮೀನು ಸಿಕ್ತು. ಐವತ್ತು ಎಕರೆ plot. ನನ್ನ ತಾಯಿಗೆ ಆ plot ಅನ್ನು ತೆಗೆದುಕೊಂಡು, ಅಲ್ಲಿ ಹೋಗಿ ನೆಲೆಸಬೇಕು ಅಂತ ಇತ್ತು. ಮುನ್ನೂರು, ನಾನೂರು ರೂಪಾಯಿ ಹ್ಯಾಗೋ ಮಾಡಿ ಉಳಿಸಿದ್ರು. ಅದೂ ಕಾಡು ಇದ್ದ ಜಮೀನು. ಇಲ್ಲಿ ಈ ಕಾಡು ಹೋದ ಮೇಲೆ, ಅದನ್ನಾದರೂ ಮಾಡಬೇಕು ಅನ್ನುವ ಆಸೆಯಿತ್ತು. ಅಲ್ಲಿಗೆ ಹೋಗಿ ನೇರವಾಗಿ ಜಮೀನು ಕೊಡುವವರನ್ನು ಹಿಡಿದಿದ್ರೆ ಆ ಜಮೀನು ಆಗೋದು. ಎಕರೆಗೆ ೩೦ ರೂಪಾಯಿ ಅಷ್ಟೆ, ಇದ್ದಿದ್ದು. ಆದರೆ ಅವರ ಅಣ್ಣ ಹೆದರಿಸಿದ್ರು. ನೀನು ಇಲ್ಲಿ ಈ ಕಾಡನ್ನು ಮಾಡಿ, ಪೂರೈಸ್ತೀಯಾ ಅಂತ ಅಧೈರ್ಯ ತುಂಬಿದ್ರು. ಹಾಗಾಗಿ ಬಿಟ್ಟುಬಿಟ್ರು! ಇಲ್ಲೂ ಸಹ ನಮ್ಮ ತಾಯಿ ಬಹಳ ಕಷ್ಟಪಟ್ಟಿದಾರೆ. ಮತ್ತೆ ನಾವು ಈಗ ತೋಟ ಮಾಡಿರುವ ಜಾಗ ಸಿಗುತ್ತೆ ಅಂತ ಆಯ್ತು. ಹೊಸದಾಗಿ ನಾವು ತೋಟ ಮಾಡಲೇಬೇಕು ಅಂತ ಹೇಳಿ ೧೩೦೦ ರೂಪಾಯಿ ದುಡ್ಡು ಸಂಗ್ರಹಿಸಿ, ಜಮೀನು ತೊಗೊಂಡು, ಕಾಡು ಕಡಿಯುವುದರಿಂದ ಹಿಡಿದು, ಎಲ್ಲದರಲ್ಲೂ ತಂದೆಯವರಿಗೆ ನೆರವು ನೀಡಿದ್ರು. ನನ್ನ ತಂದೆ ಅದನ್ನು ಮಾಡಬೇಕು ಅಂತಿರಲಿಲ್ಲ. ಅವತ್ತು ನಮ್ಮ ತಾಯಿ ಮಾಡಿದ್ರಿಂದ ಇವತ್ತು ನಾವು ಬದುಕ್ತಾ ಇದೀವಿ. ನನ್ನ ಹೆಂಡತಿ ಇದೇ ಊರಿನವಳು. ಅವಳಿಗೆ ತಾಳ್ಮೆ ಜಾಸ್ತಿ. ಹೆಚ್ಚಿಗೆ ಏನನ್ನೂ ಅಪೇಕ್ಷೆ ಪಡಲಿಲ್ಲ. ನಮ್ಮ ಹತ್ತಿರ ದುಡ್ಡು ಇರ್‍ತಾನೂ ಇರಲಿಲ್ಲ. ಇದ್ದುದರಲ್ಲಿ ಜಾಣ್ಮೆಯಿಂದ ಸಂಸಾರ ತೂಗಿಸಿಕೊಂಡು ಬಂದಿದಾಳೆ.

- **ಈಗ ನೀವು ಏನೇನು ಕೆಲಸ ಮಾಡ್ತಿದೀರಿ?**

ನನಗೆ ೫೫ ವರುಷ. ನಾವು ವ್ಯವಸಾಯ ಮಾಡಿ ಬಿಟ್ಟು retire ಆಗುವ ಹಂತದಲ್ಲಿದೀವಿ. ತೋಟವನ್ನೂ ಸಹ ಮಾಡೋಣವೋ ಬೇಡವೋ ಅನ್ನುವ ಸ್ಥಿತಿಗೆ ಬಂದಿದೀವಿ.



ಗೋಬರ್‌ಗ್ಯಾಸ್ ನಿರ್ವಹಣೆ: ಎಲ್.ಜಿ.ಪ್ರಕಾಶ್:ಲಿಂಗದಹಳ್ಳಿ

- **ಎಲ್ಲಾ ಜಮೀನನ್ನು ಮಾರಬೇಕು ಅಂತಿದೀರಾ?**

ಹಾಗಲ್ಲ.... ಉತ್ಪತ್ತಿ ಬರ್‍ತಾ ಇದ್ದರೆ, ನಮಗೆ ಮಾಡುವ ಉತ್ಸಾಹ ಇರ್‍ತಾ ಇತ್ತು. ಆವಾಗಲೂ, ಈವಾಗಲೂ ಮಾಡಿಸೋದು ಕಷ್ಟ ಆಗಿದೆ. ಈಗ ಮಾಡಕ್ಕೂ ನನಗೆ ವಯಸ್ಸು ಆಗಿದೆ.

- **ಮಾಡುವ ಕಾಲದಲ್ಲಿ ಏನೇನು ಕೆಲಸ ಮಾಡಿದೀರಿ?**

ಎತ್ತಿನ ಬೇಸಾಯ ಮಾಡಿದೀನಿ. ಗಾಡಿ ಹೊಡೆದಿದೀನಿ. ರಾತ್ರಿ ಎಲ್ಲಾ ನಿದ್ದೆ ಬರ್‍ತಿರಲಿಲ್ಲ - ಯಾವಾಗ ಬೆಳಗ್ಗೆ ಆಗುತ್ತೋ, ಆರು ಹೊಡ್ತೀವೋ ಅಂತಿದ್ದೆ. ನನ್ನ ಜತೆಗೆ ತಂದೆಯವರು ಇದ್ದೇ ಇರ್‍ತಿದ್ರು. ಕಾಡಿಗೆ ಹೋಗಬೇಕು, ಕಟ್ಟಿಗೆ ತರಬೇಕು - ನೇಗಿಲು, ಸಾಮಾನು ತರಬೇಕು ಇದೇ ಧ್ಯಾನ. ಆಳುಗಳ ಜತೇಲೂ ಕೆಲಸ ಮಾಡಿದೀನಿ. ಕಣದಲ್ಲಿ ಎಲ್ಲರ ಜತೇಗೂ ಕೆಲಸ ಮಾಡಿದೀನಿ. ನಾವು ಮಾಡದಿದ್ರೆ ಆಳುಗಳು ಮಾಡೋದಿಲ್ಲ ಅನ್ನುವುದು ನನ್ನ ನಂಬಿಕೆ.

- **ನಿಮ್ಮ ತಮ್ಮ ಮಾಸ್ತರಾಗಿದಾರೆ. ಈಗ ನಿಮಗೂ ನಾನು ವ್ಯವಸಾಯ ಮಾಡದೆ ನಾನೂ ಮಾಸ್ತರಾಗಿದ್ರೆ ಚೆನ್ನಾಗಿರ್‍ತಿತ್ತು ಅಂತ ಅನ್ನಿಸುತ್ತಾ?**

ಹಾಗೇನೂ ಅನ್ನಿಸ್ತಾ ಇಲ್ಲ. ತೋಟದಲ್ಲಿ ಉತ್ಪತ್ತಿ ಕಡಿಮೆ. ಆದರೂ ಹತ್ತು ಹದಿನೈದು ವರುಷದಿಂದ ಕಡಿಮೆ ಉತ್ಪತ್ತೀಲೇ ಜೀವನ ನಡೆಸ್ತಾ ಬರ್‍ತಾ ಇದೀವಿ. ಎಷ್ಟು ಬಂತೋ ಅಷ್ಟರಲ್ಲೇ ನಾವು ನೆಮ್ಮದಿಯಾಗಿದೀವಿ.

ನನ್ನ ತಮ್ಮನೂ ಬಹಳಷ್ಟು ಕಷ್ಟಪಟ್ಟು ಎಲ್ಲೇ ಇದ್ರೂ ಅಲ್ಲಿಂದಲೇ ಬಂದು ಕೆಲಸ ಮಾಡ್ತಿದ್ದ. ಅವನಿಗೆ ನನಗಿಂತಲೂ ಉತ್ಸಾಹ ಜಾಸ್ತಿ. ಅವನು ಬೇಸಾಯ ಒಂದು ಹೊಡೀತಿರಲಿಲ್ಲ ಅನ್ನೋದು ಬಿಟ್ರೆ ಪ್ರತಿಯೊಂದು ಕೆಲಸದಲ್ಲೂ ನೆರವು ನೀಡ್ತಿದ್ದ. ಹತ್ತಿ ಸಹ ನಾವು ಬೆಳೆದ್ವಿ. ಯಾವುದು ಪ್ರಗತಿಪರವಾಗಿ ಮಾಡಬಹುದು ಅಂತ ಅವನಿಗೆ ಅನ್ನಿಸ್ತೊ ಅದೆಲ್ಲವನ್ನೂ ಬೆಳೆದ್ವಿ. ಸಮಯಕ್ಕೆ ಸರಿಯಾಗಿ ಉತ್ಸಾಹದಿಂದ - ಊರಿಗೆ ಬರದೆಯೇ, ಗುಡ್ಡದಿಂದಲೇ ಇಳಿದು, ಜಮೀನಿನಲ್ಲಿಯೇ ಅಡುಗೆ ಮಾಡಿಕೊಂಡು, ಹಗಲು ರಾತ್ರಿ ಅವನೂ ದುಡಿದಿದಾನೆ. ವರಲಕ್ಷ್ಮಿ ಹತ್ತಿ ಬೆಳೆದು ಅದನ್ನು ಮಾರುಕಟ್ಟೆಗೆ ಹಾಕುವವರೆಗೂ ಉತ್ಸಾಹದಿಂದ ಇಬ್ಬರೂ ದುಡಿದಿದೀವಿ. ಅವನು ಯಾವುದೇ ಬೆಳೆ ಮಾಡಿದ್ರೂ ಒಂದು ವರುಷ, ಎರಡು ವರುಷ ಮಾಡ್ತಿದ್ದ, ನಂತರ ಬಿಟ್ಟುಬಿಡ್ತಿದ್ದ - ಇದು ಸರಿ ಇಲ್ಲ ಅಂತ. ಸೂರ್ಯಕಾಂತಿ, ಎಳ್ಳು ಬೆಳೆದ್ವಿ. ಸಾಮಾನ್ಯವಾಗಿ ಒಂದೂಕಾಲು ಸೇರು ಒಂದು ಎಕರೆಗೆ ಬಿತ್ತಿದ್ರೆ ೪ ರಿಂದ ೫ ಚೀಲ ಎಳ್ಳು ಬರೋದು. ಭತ್ತ, ರಾಗಿ ಬೆಳೆದ್ರೆ ಆದಾಯವಿಲ್ಲ ಅಂತ ಹೇಳಿ ತರಕಾರಿ ಬೇಸಾಯ ಸಹಾ ಮಾಡಿದ್ವಿ. ಬದನೇಕಾಯಿ, ಟೊಮ್ಯಾಟೋ, ಎಲೆಕೋಸು, ನವಿಲುಕೋಸು ಬೆಳೆದ್ವಿ. ಅದಕ್ಕೆ ಸುಣ್ಣ, ಹೊಗೆಸೊಪ್ಪು ಹೀಗೆ ನಾಟಿ ಔಷಧ ಹೊಡೀತಿದ್ವಿ. ಕೆಲವೊಮ್ಮೆ ಬೆಳೆ ನಷ್ಟವಾಗೋದು. ಏನು ಮಾಡಿದ್ರೂ ಕಾಲಕ್ಕೆ ಸರಿಯಾಗಿ ಬೆಳೆಯಲು ಆಗ್ತಿರಲಿಲ್ಲ. ಒಂದ್ರಲ್ಲಿ profit ಆದ್ರೆ ಮತ್ತೊಂದ್ರಲ್ಲಿ ಅಸಲು ಹೋಗ್ತಿತ್ತು. ತೋಟದಲ್ಲಿ ಆದಾಯ ಬಂದಾಗ, ಗದ್ದೇಲಿ ಹೋಗೋದು. ಅಸಲು ಸಮ ಆಗ್ತಿತ್ತು ಅಷ್ಟೆ. ಲಾಭ ಇತ್ತಿಲ್ಲ. ಮತ್ತೆ ಮುಂದುವರಿಸಿದ್ರೆ ಇರೋ ಜಮೀನೂ ಹೋಗುತ್ತೆ ಅಂತ ಬೇಸಾಯ ಬಿಟ್ಟುಬಿಟ್ಟೆ. ತೋಟ ಮಾತ್ರ ಮಾಡಲು ಆರಂಭಿಸಿದೆ.

- **ಮುಂದಿನ ಭವಿಷ್ಯ ಹ್ಯಾಗೆ? ಏನು ಮಾಡಬೇಕು ಅಂತಿದೀರಿ?**

  ಮುಂದೆ ತೋಟದ ಪಾಡಿಗೆ ತೋಟ ಮಾಡಬೇಕು ಅಂತ ಇದೀನಿ. ಮನೆ ಸರಿಪಡಿಸಬೇಕು ಅಂತ ಮನಸ್ಸು, ಆದರೆ ವಿಕಾಸವಾಗೋದು ಇಲ್ಲ; ಅಲ್ಲಿಗೇ ಮತ್ತೆ ಕುಗ್ತಾ ಬರುತ್ತೆ. ನಮ್ಮದು ರಕ್ತಗತವಾಗಿ ಇತ್ತೋ ಏನೋ ನನ್ನ ಮೊದಲನೆ ಮಗಳು M.Sc.(Ag) ಮಾಡಿ, officer ಆಗಿದಾಳೆ. ಅವಳ ಹೆಸರು ಎಲ್.ಪಿ.ಶೋಭ ಅಂತ. ಅವಳದ್ದು ಮದುವೆ ಆಗಿದೆ. ನಮ್ಮ ಅಳೀಮಯ್ಯ ಕೃಷಿ ವಿಜ್ಞಾನದಲ್ಲಿ Ph.D., ಮಾಡಿದಾರೆ. ನನ್ನ ಮಗಳಿಗೆ ಅವಳ ವಿದ್ಯಾಭ್ಯಾಸದಿಂದ ವ್ಯವಸಾಯದಲ್ಲಿ ಆಸಕ್ತಿ ಅನ್ನುವ ಹಾಗಿದೆ. ವ್ಯವಸಾಯದ ಬಗ್ಗೆ ನೀವು ಹೇಗೆ ಮಾಡಿದೀರಿ, ಏನು ಮಾಡಬೇಕು ಅನ್ನುವುದರ ಬಗ್ಗೆ ಸಂಪರ್ಕ ಇಲ್ಲ. ನನ್ನ ನಂತರ ಅವರು ಇಲ್ಲಿ ಬಂದು ವ್ಯವಸಾಯ ಮುಂದುವರಿಸ್ತಾರೆ ಅನ್ನುವ ನಂಬಿಕೆ ಸಹಾ ನನಗಿಲ್ಲ. ಪುಸ್ತಕದ ಬದನೇಕಾಯಿ ತಿನ್ನೋದಕ್ಕೆ ಬರೋದಿಲ್ಲ ಅನ್ನುವ ಹಾಗೆ ಅವರು ಪುಸ್ತಕದಲ್ಲಿ ಓದಿದಾರೆ, ನಾವು ಪ್ರಾಯೋಗಿಕವಾಗಿ ಮಾಡಿದೀವಿ.

- **ನಿಮ್ಮ ನಂತರ ವ್ಯವಸಾಯ ಮುಂದುವರಿಯೋದಿಲ್ಲವಾ?**

  ಯಾರೂ ಶ್ರದ್ಧೆ ತೋರಿಸೋಲ್ಲ. ನಮ್ಮ ವಿಚಾರಗಳನ್ನು ಸಮಂಜಸವಾಗಿ ಸ್ವೀಕರಿಸೋಲ್ಲ. ಹಾಗಾಗಿ ವ್ಯವಸಾಯ ಮುಂದುವರಿಯೋಲ್ಲ. ನನಗಂತೂ ನಾಟಕದ ಖಯಾಲಿ ಇರಲಿಲ್ಲ. ಏನಾದ್ರೂ ಮಾಡಿ ದುಡ್ಡು ಮಾಡಬೇಕು, ಬಟ್ಟೆ ಹಾಕಬೇಕು, ಶೋಕಿ ಮಾಡಬೇಕು ಅಂತ ಯಾವುದೂ ಬರಲಿಲ್ಲ. ಊರೂರು ತಿರುಗಬೇಕು ಅಂತ ಅನ್ನಿಸಲಿಲ್ಲ. ನನಗೆ ಪ್ರೀತಿ ವಿಶ್ವಾಸ ಅಂದ್ರೆ ದನಕರು, ತೋಟಗದ್ದೆ, ಹಾಗೂ ನನ್ನ ಮನೆ ಅಷ್ಟೆ.

ಪ್ರಕಾಶ್ ಅವರಿಗೆ ವಂದನೆ ತಿಳಿಸುವಷ್ಟರಲ್ಲಿ ಊಟದ ಮನೆಯಿಂದ ಕರೆಬಂತು. ಹೊಟ್ಟೆಯೂ ಹಸಿದಿತ್ತು. ಬಹಳ ಆದರದಿಂದ ಬಡಿಸಿದವರು ವನಜಾಕ್ಷಿಯವರು. ಕಡಿಮೆ ಸಮಯದಲ್ಲಿ, ಹಬ್ಬದೂಟ ತಯಾರಾಗಿತ್ತು. ಬಹಳ ಸಮಯದವರೆಗೆ ತಮ್ಮ ದನಕರುಗಳ ವ್ಯಾಮೋಹದ ಬಗ್ಗೆ ಮಾತನಾಡಿದ್ರು ಪ್ರಕಾಶ್. ಊಟವಾದ ಬಳಿಕ ಇತರೇ ಕೃಷಿಕರನ್ನು ಭೇಟಿ ಮಾಡಲು ನಮಗೆ ದಾರಿದೀಪವಾಗಿದ್ದು ಪ್ರಕಾಶ್ ಅವರೇ. ಮೇಲುನೋಟಕ್ಕೆ ಗ್ರಹಿಸುವಷ್ಟು ಸಾಮಾನ್ಯವಾದ ವ್ಯಕ್ತಿ ಅಲ್ಲ. ... ಬಹಳ ಆಳವಾದ ವ್ಯಕ್ತಿತ್ವ ಪ್ರಕಾಶ್ ಅವರದ್ದು ಅಂತ ನಿಧಾನವಾಗಿಯಾದ್ರೂ ಅರಿವಾಯ್ತು. ಪ್ರಕಾಶ್ ಶಾಂತವಾಗಿಯೇ ಇದ್ರು..... ತಾಳ್ಮೆಯ ಮೂರ್ತಿಯಾಗಿದ್ರು. ಹೆಚ್ಚು ಅರಿಯುವವರಿಗೆ .... ಅರ್ಥವಾಗದಂತೆಯೂ ಇದ್ರು. ಅದು ವಿಶೇಷ.

ಆ) ಎಲ್. ನಾಗರಾಜ್ ಇ/ಮ ಲಕ್ಷ್ಮೀವೆಂಕಟೇಶಯ್ಯ
ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ


ಎಸ್.ಎನ್.ನಾಗರತ್ನ-ಎಲ್.ನಾಗರಾಜ್ ದಂಪತಿ: ಲಿಂಗದಹಳ್ಳಿ

ಮಂಡಕ್ಕಿಯನ್ನು ತೊಗೊಂಡು ಹೋಗಿ ಕಡಲೆ ಹೊಲದಲ್ಲಿ ಚೆಲ್ಲಿ ಬಂದ್ರೆ, ಅದನ್ನು ತಿನ್ನಲು ಬರುವ ಹಕ್ಕಿಪಕ್ಷಿಗಳು ಕಡಲೆಗೆ ಬಿದ್ದ ಹುಳುಗಳನ್ನು ತಿಂದು ಹತೋಟಿ ಮಾಡುತ್ವೆ. ಕೀಟಗಳ ಹತೋಟಿಗೆ ಬಹಳ ಸುಲಭದ ವಿಧಾನ ಇದು. ಕೀಟರೋಗ ನಿಯಂತ್ರಣಕ್ಕೆ ವಿಷರಾಸಾಯನಿಕಗಳನ್ನು ಸಿಂಪರಣೆ ಮಾಡಿದ್ರೆ, ನಾವು ತಿನ್ನುವ ಕಡಲೆಕಾಳಿನಲ್ಲೂ ವಿಷ ಸೇರುತ್ತೆ. ಈಗೀಗ ಹತ್ತಿ, ದ್ರಾಕ್ಷಿ, ತರಕಾರಿ ಬೆಳೆಯೋರು ದಿನದ ೨೪ ಗಂಟೇನೂ sprayer ಅನ್ನು ಹೆಗಲ ಮೇಲೆ ಹೊತ್ತು ವಿಷ ಸಿಂಪರಣೆ ಮಾಡಿ ಬೆಳೀತಾರೆ. ಅಂತಹ ಉತ್ಪನ್ನ ತಿಂದ್ರೆ ಶರೀರ ಚೆನ್ನಾಗಿ ಬೆಳೀಬಹುದು, ಆದರೆ ಯಾವುದಾದ್ರೂ ಖಾಯಿಲೆ ಮಾತ್ರ ಮನುಷ್ಯನಿಗೆ ಕಟ್ಟಿಟ್ಟ ಬುತ್ತಿ. ಮನುಷ್ಯನ ಸರಾಸರಿ ಆಯಸ್ಸು ನೂರರಿಂದ, ಐವತ್ತಕ್ಕೆ ಬಂದಿದೆ, ಮುಂದೆ ಅದು ಇಪ್ಪತ್ತೈದು ಆಗುತ್ತೇನೋ!

ಲಿಂಗದಹಳ್ಳಿಯ ಲಕ್ಷ್ಮೀವೆಂಕಟೇಶಯ್ಯ ಹಾಗೂ ಬೀರೂರಿನ ಸಾವಿತ್ರಮ್ಮ ದಂಪತಿಗಳಿಗೆ ಆರು ಜನ ಹೆಣ್ಣು ಮಕ್ಕಳು ಹಾಗೂ ಐದು ಜನ ಗಂಡು ಮಕ್ಕಳು. ಎರಡನೆಯ ಮಗನೇ ಎಲ್. ನಾಗರಾಜ. ಇವರ ಪತ್ನಿ ಎಸ್.ಎನ್. ನಾಗರತ್ನ, ಹೊಸನಗರ ಸಮೀಪದ ಕಂದಾವರದ ನಾಗಭಟ್ಟರು ಹಾಗೂ ಪದ್ಮಾವತಮ್ಮ ದಂಪತಿಗಳ ಮಗಳು. ನಾಗರಾಜ ಅವರಿಗೆ ಒಬ್ಬ ಮಗ ಹಾಗೂ ಒಬ್ಬಳು ಮಗಳು. ಮಗ ಹೊರನಾಡಿನ ವೇದಪಾಠಶಾಲೆಯಲ್ಲಿ ಕಲಿಯುತ್ತಿದ್ದಾನೆ. ನಾಗರಾಜ ಅವರನ್ನು ನಾವು ಮಾತನಾಡಿಸಿದ್ದು ಪ್ರಕಾಶ್ ಅವರ ಮನೆಯಲ್ಲೇ. ಅಲ್ಲದೆ ಪ್ರಕಾಶ್ ಅವರ ಸಂದರ್ಶನವನ್ನೂ ಸಹ ಸಂಪೂರ್ಣವಾಗಿ ಕೇಳಿದ್ದರು. ಹಾಗಾಗಿ ಸರದಿ ಬಂದಾಗ ಅಡೆತಡೆಯಿಲ್ಲದೆ ಆರಂಭಿಸಿದರು.


'ನಮ್ಮದು ಶ್ಯಾನುಭೋಗರ ಮನೆತನ. ನನ್ನ ತಾತನ ಹೆಸರು ಸೂರಪ್ಪ ಅಂತ. ಶ್ಯಾನುಭೋಗಿಕೆ ಮಾಡ್ತಿದ್ದ ಮೂರು ಮನೆತನದವರು ಇಲ್ಲಿ ಈಗ ಇದೀವಿ. ನನ್ನ ತಂದೆ ಹಾಗೂ ದೊಡ್ಡಪ್ಪ ಇಬ್ಬರೂ ಶ್ಯಾನುಭೋಗಿಕೆಗೆ ಐದೈದು ಊರನ್ನು ಹಂಚಿಕೊಂಡಿದ್ರು. ನನ್ನ ತಂದೆಗೆ ಇಲ್ಲಿ ಉಡೇವು, ಸಂತವೇರಿ, ಕಾಮನದುರ್ಗ, ಕಲ್ಹತ್ತಿಪುರ ಬಂದಿತ್ತು. ನನ್ನ ತಾತನ ಕಾಲದಿಂದಲೂ ಜಮೀನಿತ್ತು. ಆದರೆ ಇವರು ಜಮೀನಿಗೆ ಹೋಗ್ತಿರಲಿಲ್ಲ, ಶ್ಯಾನುಭೋಗರಾಗಿದ್ರು. ಒಂದು ನೂರಾರು ಎಕರೆ ಜಮೀನು ಇರಬಹುದು. ಭತ್ತ, ರಾಗಿ ಇದನ್ನು ಬೆಳೆಯೋರಿಗೆ ಗುತ್ತಿಗೆಗೆ ಜಮೀನನ್ನು ಕೊಡೋರು. ಅವನು ಎಷ್ಟು ತಂದುಕೊಟ್ಟನೋ ಅಷ್ಟೇ ಇವರಿಗೆ. ನನ್ನ ತಂದೆ ಊರಲ್ಲಿ ಮೊದಲಿಗರಾಗಿ ಮುಂಚಿತವಾಗಿ ಸಾಧನೆ ಮಾಡ್ತಿದ್ರು. ಇಡೀ ಊರಿಗೆ ಮೊದಲು BSC ಮೋಟರ್‌ಸೈಕಲ್ ತಂದವರು ನಮ್ಮ ತಂದೆ. ಎಲ್ಲಾ ಹುಡುಗರೂ ಪುಟುಪುಟು ಮೋಟರ್ ಅನ್ನೋರು. ಅದುವರೆಗೂ ಸೈಕಲ್ ಇತ್ತೇ ಸಹ, ಮೋಟರ್‌ಸೈಕಲ್ ಇರಲಿಲ್ಲ. ಈ ಊರಲ್ಲಿ ಮೊದಲು ಹೊಗೆಸೊಪ್ಪು ಬೆಳೆದವರೂ ಸಹ ನನ್ನ ತಂದೇನೆ. ಒಂದು ಬ್ಯಾರನ್ ಇಲ್ಲಿ ಕಟ್ಟಿ ಸಿಗರೇಟ್ ತಂಬಾಕು ಬೆಳೆದ್ರು. ನಮ್ಮೂರಲ್ಲಿ ಬೋರ್‌ವೆಲ್ ಅಂದರೆ ಏನು ಅಂತ ಗೊತ್ತಿರಲಿಲ್ಲ. ಮೊದಲು ಬೋರ್‌ವೆಲ್ ತಂದವರು ನನ್ನ ತಂದೆ. ಈ ಊರಿಗೆ ಮೊದಲು ವಿದ್ಯುತ್‌ಸಂಪರ್ಕ ನೀಡುವವರು ಬಂದಾಗ, ಅವರಿಂದ ವಿಚಾರಗಳನ್ನು ತಿಳಿದು, ಕಲಿತು, Electric contract ಸಹಾ ಆರಂಭಿಸಿದ್ರು. ಹುಣಿಸೇಮರಗಳನ್ನು ಚೇಣಿ ಮಾಡಿಕೊಂಡು, ಅದನ್ನು ಕೆಡವಿಸಿ, ಜಜ್ಜಿಸಿ, ಹುಣಿಸೇಹಣ್ಣನ್ನು ಮಾರಾಟ ಮಾಡ್ತಿದ್ರು. ಯಾವಾಗಲೂ ಕೆಲಸ ಮಾಡೋರು. ಅಷ್ಟು ಜನ ಮಕ್ಕಳನ್ನು ಒಂದು ನೆಲೆಗೆ ತಂದ್ರು.

- **ನಿಮ್ಮ ತಂದೆ ಜಮೀನಿನ ಕೆಲಸವನ್ನು ಏನೂ ಮಾಡ್ತಿರಲಿಲ್ವಾ?**

ಜಮೀನಿಗೂ ಬರ್ತಿದ್ರು. ನನ್ನ ಜೊತೆ ಸೇರಿಕೊಂಡು ಬೇಸಾಯ ಹೊಡೀತಿದ್ರು. ಅವರು ಅದಕ್ಕಿಂತ ಮುಂಚಿತವಾಗಿ ಬೇಸಾಯ ಮಾಡಿರಲಿಲ್ಲ. ನಾನು ಬಂದ ಮೇಲೆ, ನನಗೆ ಜಮೀನಿನ ಬಗ್ಗೆ ತುಂಬಾ ಆಸಕ್ತಿ ಇದ್ದುದನ್ನು ನೋಡಿ ನನ್ನ ಜತೆ ಬರೋರು. ನನ್ನ ಅಣ್ಣಾನೂ ಬೇಸಾಯ ಮಾಡ್ತಿದ್ದ, ಆದರೆ ನನ್ನ ತಂದೆ ಮುಂಚಿತವಾಗಿ ಕೆಲಸ ಹೇಳ್ತಾ ಇದ್ದಿದ್ದು ನನಗೆ.

- **ನಿಮ್ಮ ವಿದ್ಯಾಭ್ಯಾಸ ಏನು? ನಿಮ್ಮ ಬಗ್ಗೆ ಹೇಳಿ?**

ನಾನು SSLC ಓದಿದೆ. 'ಮುಂದೆ ಓದಿ ಏನು ಮಾಡಬೇಕಾಗಿದೆಯೋ, ಬ್ಯಾಡ' ಅನ್ನೋರು ತಂದೆ. ಕೆಲಸಕ್ಕೆ ಹೋಗೋಣ ಅಂದ್ರೆ ಅದಕ್ಕೆ ಬೇಡ ಅಂದ್ರು. 'ಅವರಿವರ ಕೈಕೆಳಗೆ ಏನು ದುಡೀತೀಯ. ಇಲ್ಲಿ ಜಮೀನನ್ನು ನೋಡಿಕೊಂಡು ಸ್ವತಂತ್ರವಾಗಿರು' ಅನ್ನೋರು. ಆಗಿನ ದಿನಗಳಲ್ಲಿ ನಮಗೆ ನಮ್ಮದು ಅಂತ ಏನೂ ಇರಲಿಲ್ಲ. ತಂದೆ ತಾಯಿ ಏನು ಹೇಳ್ತಾರೋ ಅದನ್ನು ಕೇಳಬೇಕು ಅನ್ನುವ ಮನಸ್ಸು ಮಾತ್ರ ಇತ್ತು. ನಾವು ಸ್ವಂತವಾಗಿ ವ್ಯಾಪಾರ ಮಾಡಬೇಕು, ಉದ್ಯೋಗ ಮಾಡಬೇಕು ಅನ್ನುವುದು ನಮಗೆ ಬರಲೇ ಇಲ್ಲ. ನನ್ನ ತಾಯಿ ಹಾಗೂ ಅಜ್ಜಿ ಸಹಾ ಕುಟುಂಬದ ಏಳ್ಗೆಗೆ ಶ್ರಮಿಸಿದ್ದಾರೆ. ಸಾಮಾನ್ಯವಾಗಿ ನಮ್ಮ ಮನೇಲಿ ಒಂದು ೫೦ ರಿಂದ ೬೦ ಬಾಣಂತನ ಆಗಿರಬಹುದು. ಮುಂಚೆ ಯಾವುದೋ ಕಾರಣಕ್ಕೆ ನಮ್ಮ ದೊಡ್ಡಪ್ಪ 'ನಾನು ಮನೆ ಬಿಟ್ಟುಹೋಗ್ತೀನಿ' ಅಂತ ಶುರುಮಾಡಿದ್ರಂತೆ. ದೊಡ್ಡೋನು ನೀನು ಯಾಕೆ ಬಿಟ್ಟುಹೋಗ್ತೀಯಾ ಅಂತ ನನ್ನ ತಂದೆ. ಆಗ ನಾನಿನ್ನೂ ಮೂರು ತಿಂಗಳ ಮಗು, ಇವರು ಹೊರಗೆ ಬಂದು ಹಿಂದಿನ ಕುದುರೇಲಾಯವಿದ್ದ ಮನೇಲಿ ವಾಸ ಮಾಡಲು ಶುರುಮಾಡಿದ್ರಂತೆ. ಈಗಲೂ ನಾವು ಅಲ್ಲೇ ಇದೀವಿ (ನಗು).... ಇದು ಪಾಳೇಗಾರರ ಕುದುರೆಗಳು ಇದ್ದ ಲಾಯ. ನಮ್ಮ ದೊಡ್ಡಪ್ಪನದು, ದೊಡ್ಡದಾದ ಶ್ಯಾನುಭೋಗರ ಚೌಕಿ ಮನೆ, ಅಂದ್ರೆ ತೊಟ್ಟಿಮನೆ. ಈಗಲೂ ಆ ಮನೆ ಇದೆ. ಅಣ್ಣನನ್ನು ಯಾಕೆ ಮನೆ ಬಿಟ್ಟು ಕಳಿಸಬೇಕು ಅಂತ ತಮ್ಮನೇ ಹೊರಗೆ ಬಂದ್ರು. ನಮ್ಮ ತಂದೆಗೆ ಸುತ್ತಾ ಐದು ಹಳ್ಳೀಲಿ ಹಾಗೂ ಲಿಂಗದಹಳ್ಳೀಲೂ ಜಮೀನು ಇತ್ತು. Tenancy Act ಬಂದಾಗ ಸುಮಾರು ಜಮೀನು ಹೋಯ್ತು. ಇಲ್ಲಿಂದ ಸಾಮಾನು ಗಾಡಿ ಕಟ್ಟಿಕೊಂಡು ಐದು ಕಿಲೋಮೀಟರ್ ದೂರದಲ್ಲಿರುವ ಕಲ್ಹತ್ತಿಪುರದ ಜಮೀನು ಮಾಡಿಸಲು ಹೋಗ್ತಿದ್ವಿ. ಸುಮಾರು ೫೦ ರಿಂದ ೬೦ ಎಕರೆ ಜಮೀನು Act ಬಂದ ಮೇಲೆ ಹೋಯ್ತು.


ಈರುಳ್ಳಿ ಬೆಳೆಗಾರ ಎಲ್.ನಾಗರಾಜ್:ಲಿಂಗದಹಳ್ಳಿ

- **ಈಗ ನಿಮಗೆ ಎಷ್ಟು ಜಮೀನಿದೆ?**

ನಾವು ಐದು ಜನ ಇದೀವಲ್ಲ. ಎಲ್ಲರಿಗೂ ಪಾಲಾಗಿ ಆರು ಎಕರೆ ಜಮೀನು ಬಂದಿದೆ. ಮುಂಚೆ ಎಲ್ಲಾ ತರಿ ಜಮೀನು. ಒಂದೇ ಎಕರೆ ಬಾಗಾಯ್ತು ಇದ್ದದ್ದು. Borewell ಮಾಡಿದ ಮೇಲೆ ನೀರಾವರಿ ಜಮೀನಾಯ್ತು. ಮುಂಚೆ ನಮ್ಮ ತಂದೆ ೧೦೫ ಅಡಿ ಆಳದಲ್ಲಿ ಬೋರ್‌ವೆಲ್ ಕೊರೆಸಿದಾಗ ಮೂರೂವರೆ inch ನೀರು ಬಂದಿತ್ತು. ಇಡೀ ಊರಿಗೆ ನಮ್ಮದೇ ಭಾರಿ ನೀರು. ಇವತ್ತಿಗೂ ನೀರು ಬರ್ತಾ ಇದೆ. ಈಗ ಅದನ್ನೇ ನಾವು ೨೦೦ ಅಡಿಗೆ ಇಳಿಸಿದೀವಿ.

- **ನೀವು ವ್ಯವಸಾಯದಲ್ಲಿ ಏನೇನು ಪ್ರಯೋಗಗಳನ್ನು ಮಾಡಿದೀರಿ?**

ನಾನು ಸುಮಾರು ೧೦೦ ಚೀಲ ಶೇಂಗಾ ಬೆಳೀತಿದ್ದೆ. ೬೦, ೭೦ ಚೀಲ ರಾಗಿ ಬೆಳೀತಾ ಇದ್ದೆ. ೨೫ ಚೀಲ ಕಡಲೇಕಾಳು ಬೆಳೆದು ಅದನ್ನು ಮಾರಿದ ದುಡ್ಡಲ್ಲೇ borewell motor ತಂದಿದ್ದು. ೮೦ ಚೀಲ ಜೋಳ ಬೆಳಿಸಿದೀನಿ. ಬೋರ್‌ವೆಲ್ ಆದ ಮೇಲೆ ತೆಂಗಿನ



ಎಸ್.ಎನ್.ನಾಗರತ್ನ-ಎಲ್.ನಾಗರಾಜ್ ದಂಪತಿ ಎಲ್.ಜಿ.ಪ್ರಕಾಶ್ ಅವರೊಂದಿಗೆ:ಮನೆಯ ಅಂಗಳದ ಒಂದು ನೋಟ-ಲಿಂಗದಹಳ್ಳಿ

ಗಿಡಗಳನ್ನು ಹಾಕಿಕೊಂಡ್ವಿ. ತಂಬಾಕು ಕೆಲವು ವರುಷ ಬೆಳೆದ್ವಿ ಅಷ್ಟೆ. ತಂಬಾಕಿಗೆ ಪೂರ್ತಿ ಮರಳು ಭೂಮಿ ಆಗಬೇಕು. ನಮ್ಮ ಕೆಂಪು ಜಮೀನಿನ ತಂಬಾಕು ಬೇಯಿಸುವಾಗ ಎಲೆ ಕಪ್ಪು ಬಣ್ಣ ಬರೋದು. ಹಳದಿ ಬಣ್ಣ ಬರ್ತಿರಲಿಲ್ಲ. ಹಾಗಾಗಿ ಐದು ವರುಷದ ನಂತರ ತಂಬಾಕು ಬೇಸಾಯ ಬಿಟ್ಟುಬಿಟ್ವೆ.

- ನೆಲಗಡಲೆ ಬೇಸಾಯ ಯಾವ ರೀತಿ ಮಾಡ್ತಿದ್ರಿ?

ನಾವೇ ಮೂರು ಜತೆ ಎತ್ತು ಹೂಡಿಕೊಂಡು, ಮೊದಲು ಕಬ್ಬಿಣದ ನೇಗಿಲಿನಲ್ಲಿ ಆಳವಾಗಿ ಉಳುಮೆ ಮಾಡೋವಿ. ಕೆರೆಗೋಡು ಮಣ್ಣನ್ನು ಗಾಡೀಲಿ ಹೇರ್ತಿದ್ವಿ. ಗೊಬ್ಬರ ಹಾಕ್ತಿದ್ವಿ. ಮನೇಲಿ ಯಾವಾಗಲೂ ೧೦, ೧೨ ರಾಸು ಇರೋದು. ಒಂದೊಂದು ರಾಸು ಐದು ಲೀಟರ್ ಹಾಲು ಕೊಡೋದು. ಹಾಲನ್ನೂ ಸಹ ಮಾರ್ತಿದ್ವಿ. ಒಂದು ಎಕರೆಗೆ ೨೫ ಸೇರು ಬೀಜ ಬಿತ್ತುತಾ ಇದ್ವಿ. ನಾವು ಬೆಳೆದಿದ್ದ ಬೆಳೆಯಲ್ಲಿ ಬಿತ್ತನೆ ಬೀಜವನ್ನು ಇಟ್ಕೊರ್ತಿದ್ವಿ. ಎಕರೆಗೆ ೨೫ ಪಲ್ಲ ನೆಲಗಡಲೆ ಸಿಗೋದು. ಒಂದು ಸೇರು ಬಿತ್ತನೆ ಮಾಡಿದ್ರೆ ಒಂದು ಪಲ್ಲ ನೆಲಗಡಲೆ ಸಿಗೋದು. ಆದರೆ ಉತ್ತಮಧಾರಣೆ ಸಿಗ್ತಿರಲಿಲ್ಲ. ೩೫ ರೂಪಾಯಿ ಒಂದು ಪಲ್ಲ ಶೇಂಗಾ. ಹಾಗಾಗಿ ಹೆಚ್ಚಿನ ಆದಾಯ ಆಗ್ತಿರಲಿಲ್ಲ. ನಾವು ನಾಲ್ಕು ಎಕರೇಲಿ ಸಾಮಾನ್ಯವಾಗಿ ಶೇಂಗಾ ಬೆಳೀತಾ ಇದ್ವಿ.

- ರಾಗಿ ಬೇಸಾಯ ಯಾವ ರೀತಿ ಮಾಡ್ತಾ ಇದ್ರಿ?

ನಾವು ಐದರಿಂದ ಎಂಟು ಎಕರೇಲಿ ರಾಗಿ ಬೆಳೀತಾ ಇದ್ವಿ. ಅದಕ್ಕೆ ಗೋಡುಗೊಬ್ಬರ ಚೆನ್ನಾಗಿ ಹಾಕ್ತಿದ್ವಿ. ಔಷಧಿ spray ಮಾಡ್ತಿರಲಿಲ್ಲ. ರಾಗಿಗೆ ರಾಸಾಯನಿಕ ಗೊಬ್ಬರ ಹಾಕ್ತಿರಲಿಲ್ಲ. ನಮ್ಮ ತಂದೆ ಅದನ್ನು ಒಪ್ತಾ ಇರಲಿಲ್ಲ. 'ಭೂಮಿ ಬಂಜರಾಗುತ್ತೆ; ಹಾಗಾಗಿ ಅದು ಬೇಡ, ಬರಿಯ ಗೊಬ್ಬರ ಗೋಡು ಸಾಕು ರಾಗಿಗೆ' ಅಂತಿದ್ರು. ಈಗಲೂ ನಾನು ಸೀಮೆಗೊಬ್ಬರ ಬಳಸೋದು ಕಡಿಮೇನೆ. ಹಟ್ಟಿಗೊಬ್ಬರಕ್ಕಾಗಿಯೇ ಹೆಚ್ಚು ದನಗಳನ್ನು ಸಾಕ್ತಾ ಇದ್ವಿ. ಹಂಗೂ ಸಾಲದೇ ಬಂದ್ರೆ ಖರೀದಿ ಮಾಡಿ ಹಾಕ್ತಿದ್ವಿ. ರಾಸಾಯನಿಕ ಗೊಬ್ಬರ ಮಣ್ಣಿಗೆ ಸೋಕಿಸ್ತಾ ಇರಲಿಲ್ಲ. ಬೆಳೆ ಚೆನ್ನಾಗಿ ಬರೋದು, ಉತ್ಪತ್ತಿ ಚೆನ್ನಾಗಿತ್ತು. ಬೆಳೆಗೆ ಯಾವ ರೋಗವೂ ಬರ್ತಾ ಇರಲಿಲ್ಲ. ನಾವು ರಾಗಿಯನ್ನು ನಾಟಿ ಮಾಡ್ತಿರಲಿಲ್ಲ. ನೇರವಾಗಿ ಬಿತ್ತನೆ ಮಾಡ್ತಿದ್ವಿ. ಆದ್ರಿ ಮಳೇಲಿ ಬಿತ್ತನೆ ಮಾಡ್ತಿದ್ವಿ. ನಂತರ ಕಳೆ ತೆಗೆಯಲು ಸಾಲಿನಲ್ಲಿ ಎಡೆಕುಂಟೆ ಹಾಯಿಸ್ತಾ ಇದ್ವಿ. ಹಂಗೂ ಕಳೆ ಉಳಿದ್ರೆ ಆಳುಗಳ ಸಹಾಯದಿಂದ ಕೀಳಿಸ್ತಾ ಇದ್ವಿ. ಎಕರೆಗೆ ೧೫ ರಿಂದ ೨೦ ಪಲ್ಲ ರಾಗಿ ಬರೋದು. ಮನೆಗೆ ಬೇಕಾದಷ್ಟು ರಾಗಿ ಹುಲ್ಲು ಆಗೋದು. ಹಾಗಾಗಿ ದನಕರುಗಳೂ ಆರಾಮವಾಗಿ ಇರೋವು. ದನಕರುಗಳ ಯೋಗಕ್ಷೇಮ ನೋಡಲು ಒಬ್ಬ ಆಳಿದ್ದ. ಅವನು ಇಲ್ಲದಾಗ ನಾವೇ ದನಕಾಯಲು ಹೋಗ್ತಿದ್ವಿ.

- ಭತ್ತದ ಬೇಸಾಯ ಮಾಡ್ತಿರಲಿಲ್ವಾ?

ನಾವು ೧೦೦ ಚೀಲದವರೆಗೆ ಭತ್ತ ಬೆಳೆದಿದೀವಿ. ಇಲ್ಲಿ ಮುಣೇನಕೆರೆ ಅಂತ ಇದೆ, ಅಲ್ಲಿ ನಮ್ಮೂರ ಗದ್ದೆ ಇದೆ. ನಮ್ಮದು ಏಳು ಎಕರೆ ಒಟ್ಟು ಇತ್ತು. ಅಲ್ಲಿ ಭತ್ತ ಬೆಳೀತಿದ್ವಿ. ಈಗಲೂ ಬೆಳೀತೀವಿ. ಅಲ್ಲೂ ನಾವು ಸೀಮೆಗೊಬ್ಬರ ಹೆಚ್ಚು ಬಳಸೋಲ್ಲ. ದುಡ್ಡಿಗೆ ಹಟ್ಟಿಗೊಬ್ಬರ ಖರೀದಿ ಮಾಡ್ತೀವಿ. ನಾವು ರಾಸಾಯನಿಕ ಔಷಧವನ್ನೂ ಹೊಡೆಯೋಲ್ಲ. ನೀರು, ಹಟ್ಟಿಗೊಬ್ಬರ ಚೆನ್ನಾಗಿ ನೋಡಿಕೊಂಡ್ರೆ ಭೂಮಿ ಚೆನ್ನಾಗಿ ಹದ ನಿಲ್ಲುತ್ತೆ. ಮೊದಲು ನಾವು ಜಮೀನಿನಲ್ಲಿ ಸೆಣಬು, ಹುಚ್ಚೆಳ್ಳನ್ನು ಚೆಲ್ತೀವಿ. ನಂತರ ಭತ್ತದ ಸಸಿ ನಾಟಿ ಮಾಡುವ ಸಂದರ್ಭದಲ್ಲಿ ಅದನ್ನು ಜಮೀನಿನಲ್ಲಿ ಉಳುಮೆ ಮಾಡಿ, ಮಣ್ಣಿಗೆ ತುಳಿಸಿ ಬೆರೆಸ್ತೀವಿ. ಹೀಗೆ ಬೇಸಾಯ ಮಾಡಿದ್ರೆ ಏನೂ ತೊಂದ್ರೆ ಆಗೋಲ್ಲ. ಈ ಸೀಮೆಗೊಬ್ಬರ ಹಾಕಿದ್ರೇ ಎಲ್ಲಾ ರೋಗ ಕೀಟ ಬರೋದು. ಸೀಮೆಗೊಬ್ಬರ ಒಂದು ಚೀಲ ಹಾಕುವ

ಬದಲು ಎರಡು ಚೀಲ ಹಾಕ್ತಾರೆ. ಆ ವರುಷ ಇಳುವರಿ ಬಂದುಬಿಡುತ್ತೆ. ಮುಂದಿನ ವರುಷ ಅವರು ಒದ್ದಾಡಬೇಕು. ಇಲ್ಲಿ ಕೆರೆ ನೀರು, ಹಾಗೇ ಬೋರ್‌ವೆಲ್ ನೀರಿನ ಆಶ್ರಯ ಅಷ್ಟೆ. ಕಲ್ಹತ್ತಗಿರಿಯಿಂದ ಬರುವ ಝರಿಗೆ ನಾಟಿ ಮಾಡಿದ್ರೂ ಸುಮಾರು ಒಂದು ಐವತ್ತು ಎಕರೆ ಭತ್ತದ ಬೇಸಾಯಕ್ಕೆ ಬೇಸಗೇಲಿ ನೀರು ಸಿಗೋದು. ಈಗ ಅಡಿಕೆಗೆ ಬೆಲೆ ಬಂದ ಮೇಲೆ ಎಲ್ಲರೂ ಅಡಿಕೆ ತೋಟ ಮಾಡಿದಾರೆ... ಯಾರಿಗೂ ನೀರು ಸರಿಯಾಗಿ ಸಿಕ್ತಿಲ್ಲ. ಅಲ್ಲದೆ ಈ ಗಿರಿ ನೀರನ್ನು ಇಲ್ಲಿ ಕುಡಿಯುವ ನೀರಿಗಾಗಿ ಬಳಸಲು ಆರಂಭಿಸಿದಾರೆ. ಹಾಗಾಗಿ ನೀರಿಗೆ ತುಂಬಾ ತೊಂದರೆ.

- **ಕಡಲೆ ಬೇಸಾಯ ಯಾವ ರೀತಿ ಮಾಡಿದ್ರಿ?**

ಹಿಂಗಾರಿನಲ್ಲಿ ಉತ್ತರೆ ಮಳೆಗೆ ಬಿತ್ತಬೇಕು. ಒಂದು ಎಕರೆಗೆ ಇಪ್ಪತ್ತು ಸೇರು ಕಡಲೇ ಕಾಳು ಬೇಕು. ನಾಟಿ ಕಾಳನ್ನೇ ಬಳಸ್ತೀವಿ. ಇಬ್ಬನೀಲೆ ಅದು ಜಾಸ್ತಿ ಬರೋದು. ಇಬ್ಬನಿ ಇದ್ರೆ ಹುಳು ಹೊಡೆಯೋಲ್ಲ. ಹುಳು ಹೊಡೆದಾಗ ಬೂದಿ ಎರಚಿದ್ರೆ ಕಡಿಮೆಯಾಗುತ್ತೆ. ಅದಕ್ಕೆ ರಾಸಾಯನಿಕ ಔಷಧಿ ಬಳಸುವ ಅಗತ್ಯವಿಲ್ಲ. ಕಡಲೆಯಲ್ಲಿ ಕೀಟ ಹತೋಟಿ ಮಾಡಲು ಮತ್ತೊಂದು ಸುಲಭದ ವಿಧಾನವಿದೆ. ಮಂಡಕ್ಕಿಯನ್ನು ತೊಗೊಂಡು ಹೋಗಿ ಹೊಲದ ತುಂಬಾ ಚೆಲ್ಲಿಬಿಟ್ರೆ, ಅದನ್ನು ತಿನ್ನಲು ಕಾಗೆ ಹಾಗೇ ಹಕ್ಕಿಪಕ್ಷಿಗಳು ಬರುತ್ವೆ. ಅದನ್ನು ತಿನ್ನುವುದರ ಜತೆಗೆ ಕಡಲೆಗೆ ಬಂದ ಹುಳುಗಳನ್ನೂ ಕೂಡ ಅವು ಹೆಕ್ಕಿ ತಿನ್ನುತ್ವೆ. ಕೀಟಗಳ ಹತೋಟಿ ಆಗುತ್ತೆ. ವಿಷ ರಾಸಾಯನಿಕ ಸಿಂಪರಣೆ ಮಾಡಿದ್ರೆ, ತಿನ್ನುವ ಕಾಳಿನಲ್ಲಿ ವಿಷ ಸೇರುತ್ತಲ್ಲಾ ಅಂತ ನಾವು ಸಿಂಪರಣೆ ಮಾಡ್ತಿರಲಿಲ್ಲ. ಈಗೀಗ ಎಲ್ಲ ಕಡೇನೂ spraying ಬಂದಿದೆ. ಹೆಗಲ ಮೇಲೆ ಆ sprayer ಹೊತ್ತುಕೊಂಡೇ ಇರ್ತಾರೆ, ಈ ಹತ್ತಿ, ದ್ರಾಕ್ಷಿ ಹಾಗೂ ತರಕಾರಿ ಬೆಳೆಗಾರರು. ೨೪ ಗಂಟೆ spray ಮಾಡಿ ಮಾಡಿ ಬೆಳೀತಾರೆ. ಅಂತಹ ಉತ್ಪನ್ನ ತಿಂದ್ರೆ ಶರೀರ ಚೆನ್ನಾಗಿ ಬೆಳೀಬಹುದು, ಆದ್ರೆ ಯಾವುದಾದ್ರೂ ಖಾಯಿಲೆ ಬರೋದು ಮಾತ್ರ ಗ್ಯಾರಂಟಿ. ಈಗ ಸರಾಸರಿ ಆಯಸ್ಸು ೧೦೦ ವರುಷದಿಂದ ೫೦ಕ್ಕೆ ಬಂದಿದೆ, ಮುಂದೆ ೨೫ ವರುಷಕ್ಕೆ ಬರುತ್ತೇನೋ (ನಗು....)

- **ತರಕಾರಿ ಏನೇನು ಬೆಳೆದಿದೀರಿ?**

ಟೊಮ್ಯಾಟೋ, ಬೆಂಡೆ, ಕ್ಯಾರೆಟ್, ಇವೆಲ್ಲಾ ಬೆಳೆದು ಬೆಂಗಳೂರು, ಭದ್ರಾವತಿ ಇಲ್ಲೆಲ್ಲಾ ಮಾರಾಟ ಮಾಡಿ ಬಂದಿದೀನಿ. ಉತ್ಪತ್ತಿ ಕಡಿಮೆ. ಕೆಲವೊಮ್ಮೆ ನಾವು ತೆಗೆದುಕೊಂಡು ಹೋದ ಲಗ್ಗೇಜ್ ಚಾರ್ಜು ಸಹಾ ಸಿಗ್ತಿರಲಿಲ್ಲ. ಏನೋ ಬೆಳೆಯುವ ಉತ್ಸಾಹವಿತ್ತು... ಬೆಳೆದೆ. ನಾವು ಬೆಳೀತಾ ಇದ್ದದ್ದು ಬೇಸಗೇಲಿ. ನೀರು ಹಾಯುವ ಪ್ರದೇಶದಲ್ಲಿ ಒಂದು ಎಕರೆಗೆ ಹಾಕ್ತಾ ಇದ್ದೆ. ಒಂದು ಎಕರೇಲಿ, ಅರ್ಧಟೊಮ್ಯಾಟೋ, ಅರ್ಧ ಬೆಂಡೆ ಅಥವಾ ಕ್ಯಾರೆಟ್ ಹೀಗೆ ಸ್ವಲ್ಪ ಸ್ವಲ್ಪ ಬೆಳೀತೀವಿ. ಮುಂಗಾರಿನಲ್ಲಿ ಮೆಣಸಿನಕಾಯಿ ಬೆಳೀತೀವಿ. ಟೊಮ್ಯಾಟೋ ಮೆಣಸಿನಕಾಯಿ ಬೀಜವನ್ನು ಮೊದಲು ಸಸಿ ಮಡೀಲಿ ಬಿತ್ತಿ, ನಂತರ ೨೨ ದಿನದ ಪೈರನ್ನು ನಾಟಿ ಮಾಡ್ತೀವಿ. ಎರಡರಿಂದ, ಎರಡೂವರೆ ತಿಂಗಳಿಗೆ ಫಸಲು ಬರುತ್ತೆ. ಬೇಸಿಗೇಲಿ ನಾವು ಟೊಮ್ಯಾಟೋ ಬೆಳೀತೀವಿ. ಹೈಬ್ರಿಡ್ ತಳಿ ಬಳಸೋಲ್ಲ. ನಾಟಿ ತಳಿ ಬೆಳೆಯೋದು. ಹಾಗಾಗಿ ಗಿಡಗಳಿಗೆ ಕಡ್ಡಿಯ ಆಧಾರ ಬೇಕಾಗೋಲ್ಲ. ಅದೂ ಅಲ್ಲದೆ ಬೇಸಿಗೇಲಿ ಬೆಳೆಯೋದ್ರಿಂದ, ನೆಲ ಹಸಿಯಾಗಿರೋಲ್ಲ, ವಾರ ವಾರ ೧೦ ರಿಂದ ೧೫ ಬುಟ್ಟಿ (ಒಂದು ಬುಟ್ಟಿ ೧೦ ರಿಂದ ೧೫ kg) ಕುಯ್ತಾ ಇದ್ವಿ. ಉತ್ತಮ ಧಾರಣೆ ಇದ್ದಾಗ ಒಂದು ಬುಟ್ಟೀನ ನೂರು ರೂಪಾಯಿಯವರೆಗೂ ಮಾರಿದೀವಿ.

ಕ್ಯಾರೆಟ್ ನಾಲ್ಕು ತಿಂಗಳ ಪೈರು. ಮೊದಲು ಜಮೀನಿನಲ್ಲಿ ಉದ್ದನೆಯ ಮಡಿ ಮಾಡಿ ಅದರಲ್ಲಿ ಬೀಜವನ್ನು ಚೆಲ್ಲಿಸುತ್ತಾ ನೀರು ಕಟ್ತಾ ಇದ್ವಿ. ೧೦ ರಿಂದ ೧೫ ಅಡಿ ಉದ್ದ, ೩ ಅಡಿ ಅಗಲದ ಅರ್ಧ ಅಡಿ ಎತ್ತರದ ಪಟ ಮಾಡಿ, ನೀರು ಸುತ್ತಲೂ ಹರಿದು ಹೋಗುವ ವ್ಯವಸ್ಥೆ ಮಾಡಿದ್ರೆ ಸಾಕು. ಕ್ಯಾರೆಟ್ ಬೀಜ ಸಣ್ಣದಿರೋದ್ರಿಂದ ಮಡಿ ಮೇಲೆ ನೀರು ಹಾಯಿಸುವಂತಿಲ್ಲ. ಹಟ್ಟಿಗೊಬ್ಬರ, ಗೋಡು ಚೆನ್ನಾಗಿ ಹೊಡೀತಿದ್ರೆ ಉತ್ತಮವಾಗಿ ಕ್ಯಾರೆಟ್ ಬರೋದು. ತರಕಾರಿ ಬೇಸಾಯದಿಂದ ನಮಗೆ ಆದಾಯಕ್ಕಿಂತ ಮುಖ್ಯವಾಗಿ ಅವತ್ತಿಗೆ ಉದ್ಯೋಗ ದೊರೆಯೋದು, ಮನೆಗೆ ತರಕಾರಿಯಾಗೋದು, ನಮಗೆ ಅದರಿಂದ ದುಡ್ಡು ಮಾಡುವ ಉದ್ದೇಶವಿರಲಿಲ್ಲ. ನಾವು ಸಾಮಾನ್ಯವಾಗಿ ದುಡ್ಡಿಗೆ ತರಕಾರಿ ಕೊಂಡಿಲ್ಲ. ನಮ್ಮ ಜಮೀನು, ನಮ್ಮ ನೀರು ಹಾಗೇ ನಮಗೊಂದು ಉದ್ಯೋಗ ಅಂತ ನಾವೇ ತರಕಾರಿ ಬೆಳೀತಿದ್ವಿ.

- **ಹಣ್ಣಿನ ಬೆಳೆಗಳನ್ನು ನೀವು ಬೆಳೀಲಿಲ್ವಾ?**

  ಇಲ್ಲ. ನಾವು ಬೆಳೆಯಲು ಹೋಗಲಿಲ್ಲ.

- **ಬಾಗಾಯ್ತಿನಲ್ಲಿ ಏನೇನು ಬೆಳೆ ಇದೆ?**

  ನಮ್ಮದು ತೆಂಗು ಇದೆ. ಅಡಿಕೆ ಈಗ ಸ್ವಲ್ಪ ಮಾಡಿದೀವಿ. ಆರು ವರುಷದಿಂದ ತೆಂಗಿನ ಫಸಲು ಬರ್ತಿದೆ. ಬೋರ್ ಮಾಡಿದ ಮೇಲೆ ನಾವು ತೋಟ ಅಭಿವೃದ್ಧಿ ಮಾಡಿದ್ದು. ೧೫೦ ತೆಂಗಿನ ಗಿಡ ಇದೆ. ಅದರ ಮಧ್ಯದಲ್ಲಿ ಸುಮಾರು ೮೦೦ ಅಡಿಕೆ ಸಸಿ ಕೂರಿಸಿದೀನಿ. ೫೫ ಅಡಿ ಅಂತರದಲ್ಲಿ ತೆಂಗು ಹಾಕಿದೀನಿ. ಮಧ್ಯದಲ್ಲಿ ಮೂರು ವರುಷದ ಕೆಳಗೆ ಮೂರು ಸಾಲೂ ಅಡಿಕೆ ಹಾಕಿದೀನಿ. ತೆಂಗಿನಿಂದ ನಮಗೆ ನಷ್ಟ ಇಲ್ಲ. ಈಗ ನುಸಿ ಹೊಡೆದಿರೋದ್ರಿಂದ ತೊಂದ್ರೆ ಅಷ್ಟೆ. ಒಂದು ವರುಷ ಮಳೆ ಇಲ್ಲದಿದ್ರೂ ತೆಂಗಿಗೆ ತೊಂದರೆ ಇಲ್ಲ. ಆದ್ರೆ ಅಡಿಕೆಗೆ ಕಷ್ಟ ಅಷ್ಟೆ. ತೆಂಗು ಕಲ್ಪವೃಕ್ಷ. ಮನೆಗೆ ಸೌದೆ ಆಗುತ್ತೆ. ತೆಂಗಿನಿಂದ ತೊಂದರೆ ಇಲ್ಲ.

- **ಬೇರೆ ಇನ್ನ್ಯಾವ ಬೆಳೆ ಬೆಳೆದಿದೀರಿ?**

  ಹತ್ತಿಯನ್ನು ಎರಡು ವರುಷ ಬೆಳೆದ್ವಿ. ಹತ್ತಿಯಲ್ಲಿ ಕೂಲಿಯಾಳುಗಳ ಖರ್ಚು ಜಾಸ್ತಿ. ನಾವು ಹತ್ತಿಯನ್ನು ಬಿಡಿಸಲು ಹೋದರೆ ಬಟ್ಟೆ ಹರಿದುಕೊಂಡು ಬರೋದೇ. ಹಾಗಾಗಿ ನಾವು ಈಗ ಅಡಿಕೆ, ತೆಂಗು, ಭತ್ತ, ರಾಗಿ ಮಾತ್ರ ಬೆಳೀತಾ ಇದೀವಿ. ನೀರಿನ ಸಮಸ್ಯೆ ಹಾಗೂ ವಿದ್ಯುತ್ ಸಮಸ್ಯೆ ಇರೋದ್ರಿಂದ ತರಕಾರಿ ಬೇಸಾಯ ಮಾಡ್ತಿಲ್ಲ.

- **ನೀವು ವ್ಯವಸಾಯದ ಜತೆಗೆ ಬೇರೆ ಕಸುಬುಗಳನ್ನು ಮಾಡ್ತಾ ಇದೀರ?**

  ನನ್ನ ತಂದೆ ಜತೆ ಓಡಾಡ್ತಾ ನಾನು Electric wiring ಕಲಿತಿದ್ದೀನಿ. ಈಗ ಇಲ್ಲಿ ಎಷ್ಟೋ ಜನರ ಮನೆಗೆ wiring ಮಾಡಿದೀನಿ. ಮೋಟಾರ್ ರಿಪೇರಿ ಕೆಲಸವೂ ಬರುತ್ತೆ. ಬೇರೆ ಯಾರಾದ್ರೂ ಕರೆದ್ರೆ ಅದಕ್ಕೂ ಹೋಗ್ತೀನಿ. ನಮ್ಮ ಬೀದೀಲೆಲ್ಲಾ ಸಾಮಾನ್ಯವಾಗಿ ನನ್ನನ್ನೇ ಕರೆಯೋದು. ನನ್ನನ್ನು Electrician ಅಂತಾನೆ ಹೆಸರಿಸಿ, ಕರೀತಾರೆ. ನಾನು ಸಂಪಾದನೆಯ ದೃಷ್ಟಿಯಿಂದ ಮಾಡೋಲ್ಲ. ಯಾರ ಹತ್ರಾನೂ ನಾನು ದುಡ್ಡು ತೊಗೋಳ್ಳೋದಿಲ್ಲ. ನಾನು ಕಲಿತಿದ್ದು ಮತ್ತೊಬ್ಬರಿಗೆ ಉಪಯೋಗವಾಗಲಿ ಅನ್ನುವ ಮನಸ್ಸು ಅಷ್ಟೆ. ಇದ್ರಿಂದ ಉತ್ಪತ್ತಿ ಮಾಡಬೇಕು, ದುಡ್ಡು ಮಾಡಬೇಕು, ದೊಡ್ಡ ಅಂಗಡಿ ಇಡಬೇಕು ಅನ್ನುವ ವಿಚಾರವೇ ಇಲ್ಲ. ನನ್ನ ತಂದೇನೂ ನನಗೆ ಇದನ್ನೇ ಹೇಳೋರು. 'ಇನ್ನೊಬ್ಬರಿಗೆ ಉಪಕಾರ ಮಾಡು, ಎಲ್ಲರನ್ನೂ ಒಂದಾಗಿ ಕಾಣು, ಭೇದಭಾವ ಎಣಿಸಬೇಡ' ಅನ್ನೋರು. ನಾನು ಅದನ್ನೇ ಮುಂದುವರಿಸ್ತಾ ಇದೀನಿ.

- **ನಿಮಗೆ ವ್ಯವಸಾಯ ಬೇಸರ ತಂದಿದೆಯಾ?**

  ಇಲ್ಲ. ಖಂಡಿತಾ ಇಲ್ಲ. ಒಂದು ಸರಿ ನಮ್ಮ ಭಾವ ಒಬ್ಬರು ಕೆಲಸಕ್ಕೆ ಬಾ ಅಂತ ಕರೆದರು. ನನ್ನ ತಂದೆ ಹೋಗಬೇಡ ಅಂದ್ರು. ಆವಾಗ ಒಂದು ಸಾರಿ ಆಸೆ ಹುಟ್ಟಿದ್ದು ಬಿಟ್ಟರೆ, ಮತ್ತೆ ಆ ಬಗ್ಗೆ ಯೋಚನೆ ಮಾಡಿಲ್ಲ.

- **ನಿಮ್ಮ ಮಕ್ಕಳಿಗೆ ವ್ಯವಸಾಯದಲ್ಲಿ ಆಸಕ್ತಿ ಇದೆಯಾ?**

  ನಮ್ಮ ಹುಡುಗನಿಗೆ ಅದಕ್ಕೇ ನಾನು ವೇದ ಕಲಿಸಿದೆ. ಅವನಿಗೆ ಓದೋದು ಕಲಿಸಿದ್ರೆ, ಅವನು ಅಲ್ಲಿ ಇಲ್ಲಿಗೆ ಹೋಗ್ತಾನೆ ಅಂತ. ಈಗ ಅವನು ಜಮೀನಾದ್ರೂ ಮಾಡಬಹುದು ಅಥವಾ ಮನೇಲಿದ್ದು ಪೌರೋಹಿತ್ಯನಾದ್ರೂ ಮಾಡಬಹುದು. ನನ್ನ ತಂದೆ ಹೇಳಿದಂತೆ, ಓದಿ ಬೇರೆಯವರ ಅಡಿಯಾಳಾಗಿ ಇರೋದಕ್ಕಿಂತ ಸ್ವತಂತ್ರವಾಗಿ ಬದುಕಲಿ ಅಂತ ವೇದ ಕಲಿಸಿದೆ. ಮನೇಲೂ ಪೂಜೆ ಪುನಸ್ಕಾರ ಮಾಡಬಹುದು. ಇಷ್ಟಪಟ್ಟರೆ ಪೌರೋಹಿತ್ಯ ಹಾಗೂ ವ್ಯವಸಾಯ ಎರಡನ್ನೂ ಮಾಡಬಹುದು.

- **ನಿಮ್ಮ ತಂದೆ, ನಿಮ್ಮ ತಾತ ತೋಟದಲ್ಲಿ ವೇದಾಭ್ಯಾಸ ಮಾಡ್ತಿದ್ರಾ? ಸಂಗೀತವನ್ನು ಅಭ್ಯಾಸ ಮಾಡಿದ ನಿದರ್ಶನಗಳು ಇದೆಯಾ?**

  ವೇದಾಭ್ಯಾಸ ಮಾಡ್ತಿದ್ರು ತೋಟದಲ್ಲಿ. ಆದರೆ ಸಂಗೀತ ನಮ್ಮ ಕುಟುಂಬದಲ್ಲಿ ಇಲ್ಲ. ತೋಟದಲ್ಲಿ ಕೆಲಸ ಮಾಡುವಾಗ ಬಾಯಲ್ಲಿ ವೇದ ಪಠಣ ಮಾಡ್ತಿದ್ರು. ನಾನು ಅಷ್ಟು ಅಭ್ಯಾಸ ಮಾಡಲಿಲ್ಲ.

- **ನಿಮ್ಮೂರಿನಲ್ಲಿ ಸಂಕೇತಿಗಳ ನಡುವೆ ಪರಸ್ಪರ ಸಹಕಾರ ಹೇಗಿದೆ?**

  ಎಲ್ಲರೂ ಸ್ನೇಹಿತರಾಗಿ ಇದೀವಿ. ಕರೆದರೆ ಹೋಗಿ ಕೆಲಸಾನೂ ಮಾಡ್ತೀವಿ. ಹಿಂದೆಲ್ಲಾ ಹತ್ತು ಜನ ಜತೆಯಾಗಿ ಭತ್ತವನ್ನು ಕುಯ್ದು ಒಟ್ಟಿಗೆ ಕಣ ಮಾಡ್ತಿದ್ವಿ. ರಾತ್ರಿ ಹಗಲು ಕೆಲಸ ಮಾಡ್ತಿದ್ವಿ. ಆಗ ಕೂಲಿಯಾಳುಗಳಿಗೆ ಬಹಳ ಕಷ್ಟ ಇತ್ತು. ಹಂಗಾಗಿ ಮನೆ ಮನೆಯವರೇ ಸೇರಿ ಕೆಲಸ ಮಾಡಿದ್ವಿ. ಪರಸ್ಪರ ಸಹಕಾರ ನೀಡ್ತಿದ್ವಿ. ನಮ್ಮ ಜನ ಇಲ್ಲಿ ಕಷ್ಟ ಪಡಬೇಕು ಅನ್ನುವ ಮನಸ್ಸಿನವರೆ. ಆರಾಮವಾಗಿ ಕೆಲಸ ಇಲ್ಲದೆ ಸುಖವಾಗಿರಬೇಕು ಅನ್ನೋರು ಯಾರೂ ಇಲ್ಲ. ನಮ್ಮ ತಂದೆ ಐದು ಹಳ್ಳಿ ಪೂರ್ತಾ ಗುಡ್ಡಗಾಡು ಪ್ರದೇಶದಲ್ಲಿ ನಡೆದುಕೊಂಡೇ ಓಡಾಡೋರು. ಸುಸ್ತಾಯ್ತು ಅಂತ ಒಂದು ದಿನ ಹೇಳಿದೋರು ಅಲ್ಲ.

- **ಇಲ್ಲಿನ ಸಂಕೇತಿಗಳು ಯಾವ ರೀತಿ ಪರಿಶ್ರಮ ಪಡ್ತಿದ್ರು?**

  ಸ್ವತಃ ಬೇಸಾಯ ಮಾಡ್ತಿದ್ರು, ಎತ್ತುಗಳನ್ನು ಕಟ್ಟಿದ್ರು. ಮನೇಲಿ ದನಕರುಗಳನ್ನು ಇಟ್ಟಿದ್ರು. ಗಾಡಿ ಇಟ್ಟಿದ್ರು. ಪ್ರತಿಯೊಂದು ಕೆಲಸವನ್ನೂ ಸ್ವತಃ ಮಾಡ್ತಿದ್ರು. ನಾನೂ ಸ್ವತಃ ಮಾಡ್ತಿದ್ದೆ. ಕೂರಿಗೆ, ಕುಂಟೆ, ಮರದನೇಗಿಲು, ಕಬ್ಬಿಣದ ನೇಗಿಲು, ಎಲ್ಲಾ ಸಲಕರಣೆಗಳೂ ನಮ್ಮ ಮನೇಲಿವೆ. ಇಲ್ಲಿ ನಮ್ಮವರೇ ಲಕ್ಷ್ಮೀನಾರಾಯಣ ಅಂತ ಇದ್ರು. ಅವರು ಬಾಳು ಅಂತ ಇಟ್ಟುಕೊಂಡಿದ್ರು. ಅದರಲ್ಲಿ ಮರದ ನೇಗಿಲನ್ನು ಅವರೇ ಕೆತ್ತಿಕೊಡೋರು. ಸ್ವಲ್ಪ ಆಳವಾಗಿ ಉಳುಮೆ ಮಾಡೋದಕ್ಕೆ ಆ ನೇಗಿಲು ಸಹಕರಿಸೋದು. ಸಾಮಾನ್ಯವಾಗಿ ದಿಂಡಿಗಲು ಮರದಲ್ಲಿ ನೇಗಿಲು ಮಾಡೋರು. ಅದು ಸ್ವಲ್ಪ ಸವೆಯೋದು ಕಡಿಮೆ. ಇಲ್ಲಿಂದ ಮೂರು ನಾಲ್ಕು ಮೈಲಿ ದೂರದಲ್ಲಿ ಕಾಡಿತ್ತು. ಮರಮುಟ್ಟು ಸಿಕ್ತಿತ್ತು. ಸುಲಭವಾಗಿ ನೇಗಿಲು ಆಗೋದು; ನಮಗೆ ಬೇಕಾದ ಬಿದ್ದಮರ ಕತ್ತರಿಸಿ ತರ್ತಿದ್ವು. ಇತರೇ ಗಿಡಗಳನ್ನು ಕತ್ತರಿಸುವ ದುರಾಸೆಯೂ ನಮಗಿರಲಿಲ್ಲ. ವರುಷವಿಡೀ ಗುಡ್ಡದಿಂದ ಸೌದೆ ಸಿಗೋದು. ನಮ್ಮವರೆಲ್ಲಾ ಒಟ್ಟಾಗಿಯೇ ಹೋಗಿ ಸೌದೆ ತರ್ತಿದ್ವಿ.

- **ನೀವು ಸಂಕೇತಿಗಳೆಲ್ಲಾ ಒಟ್ಟಾಗಿ ಹಬ್ಬಹರಿದಿನಗಳನ್ನು ಆಚರಿಸ್ತೀರಾ?**

  ನಾನು ಏಳನೇ ತರಗತಿಯಲ್ಲಿ ಓದಬೇಕಾದರೆ ರಾಮೋತ್ಸವ ಇಲ್ಲಿ ಆರಂಭವಾಯ್ತು. ಅವತ್ತಿನಿಂದ ಇವತ್ತಿನವರೆಗೂ ಇದು ನಡೆದು ಬಂದಿದೆ. ಆಗ ನಾವು ಹುಡುಗರು ಸುಮ್ಮನೆ ತಮಾಷೆಗೆ ಆರಂಭಿಸಿದ್ದು ಈಗ ನಿಜವಾಗಿ ದೊಡ್ಡ ಹಬ್ಬವೇ ಆಗಿದೆ. ಅದಕ್ಕಿಂತ ಮುಂಚೆ ಇಲ್ಲಿ ಒಟ್ಟಾಗಿ ಯಾವ ಹಬ್ಬಾನೂ ಆಚರಣೆ ಮಾಡ್ತಿರಲಿಲ್ಲ. ಈಗ ರಾಮಮಂದಿರ ದೊಡ್ಡದಾಗಿ ಕಟ್ಟಿದೀವಿ. ವರುಷ ವರುಷ ಒಂಭತ್ತು ದಿನ ರಾಮೋತ್ಸವವನ್ನು ವಿಜೃಂಭಣೆಯಿಂದ ಮಾಡ್ತೀವಿ. ನಾವು ಮಕ್ಕಳಿಗೆ ರಜಾ ಇರುವ ಮೇ ತಿಂಗಳಲ್ಲಿ ರಾಮೋತ್ಸವ ಇಡ್ತೀವಿ.

- **ವ್ಯವಸಾಯ ನಂಬಿಕೊಂಡು ಒಂದು ಕುಟುಂಬ ನೆಮ್ಮದಿಯಾಗಿ ಇರಬಹುದಾ?**

  ಈಗಿನ ಮಳೆ ಸ್ವಲ್ಪ ಎಡವಟ್ಟಾಗಿರೋದ್ರಿಂದ ಕಷ್ಟ. ಮಳೆ ಚೆನ್ನಾಗಿ ನಡೆಸಿದ್ರೆ ಬದುಕಬಹುದು. ಆವಾಗ ಮೂರು ತಿಂಗಳು ಸೋನೆ ಮಳೆ ಹಿಡಿಯೋದು, ಈಗ ಮೂರು ದಿನ ಹಿಡಿಯೋದು ಕಷ್ಟ ಆಗಿದೆ. ನೀರು ಬೋರು ಇದ್ದು, ತೋಟ ಇದ್ರೆ ಒಂದು ಸಂಸಾರ ನೆಮ್ಮದಿಯಾಗಿರಬಹುದು.

- **ನಿಮ್ಮ ನಂತರ ವ್ಯವಸಾಯದ ಗತಿ?**

  ನಮ್ಮ ನಂತರ ಅದು ದೇವರೇಗತಿ! (ನಗು) ಈಗಿನ ವಾತಾವರಣದಲ್ಲಿ ನಾಳೆಗೆ ಏನಾಗುತ್ತೆ ಹೇಳೋದೇ ಕಷ್ಟ ಅಂತಾದ್ರಲ್ಲಿ! ಈಗ ನಮ್ಮನ್ನು ಕೇಳಿದರೆ ನಾವು ಹೇಗೆ ಹೇಳುವುದು' ಅಂತ ನಮ್ಮ ಪ್ರಶ್ನೆಗೆ ಮತ್ತೊಂದು ಪ್ರಶ್ನೆ ಮೂಡಿಸಿ ಚಿಂತನೆಗೆ ಹಚ್ಚಿ ತಾವು ತಮ್ಮ ಚಿಂತೆಯಿಂದ ಮುಕ್ತರಾದ್ರು ನಾಗರಾಜ. ಮುಂದಿನ ಕೃಷಿಕ ಸಿಗುವವರೆಗೂ ನಾವು ಆಲೋಚಿಸಲು ಆಹಾರ ಬೇಕಲ್ಲ. ಬದುಕು, ಭವಿಷ್ಯ ಎಲ್ಲವೂ ಅನಿಶ್ಚಿತ ಎನ್ನುವಷ್ಟರಲ್ಲಿ ಮುಂದಿನ ಮನೆ ಬಂದಾಗಿತ್ತು.

ಇ) ಎಲ್.ಎಸ್. ನಟೇಶ್ ಇ/ಮ ಶ್ರೀನಿವಾಸ ದೀಕ್ಷಿತ್
ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ



ಕನಕಾಂಗಿ-ಎಲ್.ಎಸ್.ನಟೇಶ್ ದಂಪತಿ:ಲಿಂಗದಹಳ್ಳಿಯ ತಮ್ಮ ಮನೆಯ ಮುಂದೆ

ನಾನು ಅಲ್ಪತೃಪ್ತ. ಜಮೀನಿನಿಂದ ಏನು ಬಂತೋ ಅದರಲ್ಲಿ ನೆಮ್ಮದಿಯಾಗಿ ಇರೋದು ನನ್ನ ಜೀವನಕ್ರಮ. ನನ್ನ ಅತಿಯಾದ ಹಣದ ನಿರೀಕ್ಷೆಯನ್ನು ಭೂಮಿಯ ಮೇಲೆ ಹೇರಿ, ಬೆಳೆಗಳ ಮೇಲೆ ಒತ್ತಡ ತರುವುದು ಇಷ್ಟವಿಲ್ಲ. ಭೂಮಿ ಕೊಟ್ಟಷ್ಟರಲ್ಲಿ ತೃಪ್ತನಾಗಿದೀನಿ. ಪುಸ್ತಕದ ವಾಸನೆ ತಲೆಗೆ ಹೋಗದಾದಾಗ ಮಣ್ಣಿನ ವಾಸನೆ ತಂತಾನೆ ಬರುತ್ತೆ. ಇದು ಖಚಿತ.

ಲಿಂಗದಹಳ್ಳಿಯ ಶ್ರೀನಿವಾಸ ದೀಕ್ಷಿತ್ ಹಾಗೂ ಛಾಯಾದೇವಿ ದಂಪತಿಗಳಿಗೆ ಎರಡು ಹೆಣ್ಣು ಹಾಗೂ ಎರಡು ಗಂಡುಮಕ್ಕಳು. ಹಿರಿಯ ಮಗ ಎಲ್. ಎಸ್. ನಟೇಶ್. ಅವರಿಗೆ ಈಗ ೭೦ರ ಹರಯ. ಅವರ ಪತ್ನಿ ಕನಕಾಂಗಿ ಲಿಂಗದಹಳ್ಳಿಯ ಶ್ಯಾನುಭೋಗ್ ವೆಂಕಟರಾಮಯ್ಯ ಹಾಗೂ ಮಹಾಲಕ್ಷಮ್ಮ ದಂಪತಿಗಳ ಮಗಳು. ನಾವು ನಟೇಶ್ ಅವರ ಮನೆಗೆ ಹೋದಾಗ ಸಂಜೆಯ ಸಮಯ. ಅವರಿಗೆ ನಮ್ಮನ್ನು ಉಪಚರಿಸುವುದರಲ್ಲೇ ಹೆಚ್ಚು ಸಂಭ್ರಮ ಇತ್ತು. ಮನೆಯ ಹಜಾರದಲ್ಲಿ ಕೂತು ಮಾತು ಆರಂಭಿಸಿದೆವು.

- **ನಮಸ್ಕಾರ ನಟೇಶ್ ಅವರೆ...**

  ನಮಸ್ಕಾರ

- **ನಿಮ್ಮ ಪೂರ್ವಿಕರ ಬಗ್ಗೆ ನಿಮಗೇನು ಗೊತ್ತು?**

  ನಮ್ಮ ಪೂರ್ವಿಕರು ಅಂದ್ರೆ ಮುತ್ತಜ್ಜ ಧಾರವಾಡ ಸಮೀಪದ ಲಕ್ಕುಂಡಿಯಲ್ಲಿ ಇದ್ರಂತೆ. ಅವರಿಗೆ ಮಕ್ಕಳಿರಲಿಲ್ಲ. ಅಲ್ಲಿದ್ದ ಜಮೀನನ್ನು ಸರ್ಕಾರಕ್ಕೆ ಬರೆದುಕೊಟ್ಟು ಇಲ್ಲಿಗೆ ಬಂದ್ರು. ಇಲ್ಲಿದ್ದ ಅವರ ನೆಂಟರು ವೆಂಕಟನರಸಿಂಹ ದೀಕ್ಷಿತ್ ಅನ್ನುವವರನ್ನು ದತ್ತು ನೀಡಿದ್ರು. ಇವರನ್ನು ಕರೆದುಕೊಂಡು ಮತ್ತೆ ಲಕ್ಕುಂಡಿಗೆ ಹೋಗಿ ಜಮೀನಿಗೆ ಪ್ರಯತ್ನಪಟ್ಟರು. ಅದು ಇವರಿಗೆ ಸಿಗಲಿಲ್ಲ. ಕೊನೆಗೆ ಆ ಜಮೀನನ್ನು ಒಬ್ಬ ಲಾಯರ್ ಹೆಸರಿಗೆ ಅಫಿಡವಿಟ್ ಮಾಡಿದ್ರು. ಅವರೇನೋ ನಾನು ಮಾಡಿಸಿಕೊಡ್ತೀನಿ ಅಂತ ಅಂದ್ರು. ಕಡೆಗೆ ಜಮೀನೇನೋ ಬಂತು, ಆದ್ರೆ ಆ ಲಾಯರ್ ಹೆಸರಿಗೆ ಹೋಯ್ತು. ಹಂಗಾಗಿ ಮತ್ತೆ ಆ ಊರು ಬಿಟ್ಟು ಇಲ್ಲಿಗೆ ಬಂದ್ರು. ಅವರ ತಾಯಿ ಮನೆ ಮತ್ತೂರು. ಇವರು ಮತ್ತೂರು ಹಾಗೂ ಹೊಸಹಳ್ಳಿ ಅಲ್ಲಿ ಇಲ್ಲಿ ತಿರುಗಾಡ್ತಿದ್ರು. ನಾನು ೧೯೩೪ರಲ್ಲಿ ಹುಟ್ಟಿದೆ. ಅವರು ಧಾರವಾಡದಿಂದ ಬರುವಾಗ ತಂದಿದ್ದನ್ನು ಕೊಟ್ಟು, ಮೂರು ಎಕರೆ ಹೊಲ, ಅರ್ಧ ಎಕರೆ ತೋಟವನ್ನು ನೆಂಟರು ಇಷ್ಟರಿಂದ ಪಡೆದುಕೊಂಡ್ರು. ಅದನ್ನು ಹಾಗೇ ರೂಢಿಸಿದ್ರು. ಹಾಗೇ ಅವರ ಸಂತತೀನೂ ಬೆಳೀತು.



ಎಲ್.ಎಸ್.ನಟೇಶ್ ಜತೆಗೆ ಕೃಷಿ ಉಪಕರಣ ಹಿಡಿದ ಎಲ್.ನಾಗರಾಜ್:ಲಿಂಗದಹಳ್ಳಿ

- **ನೀವು ಏನು ಓದಿದ್ರಿ? ಹ್ಯಾಗೆ ವ್ಯವಸಾಯ ಮಾಡಿದ್ರಿ?**

  ನಾನು ಬೀರೂರಿನಲ್ಲಿ SSLC, ಮೈಸೂರಿನಲ್ಲಿ Intermediate ಮಾಡಿದೆ. ಇಲ್ಲಿ ಮನೆಕೆಲಸ ನೋಡಲು ತೊಂದರೆ ಆಗುತ್ತೆ ಅಂತ ಓದುವುದನ್ನು ಬಿಟ್ಟು ಇಲ್ಲಿ ಬಂದು ವ್ಯವಸಾಯ ಆರಂಭಿಸಿದೆ. ಮೊದಲು ಮೂರು ಎಕರೆ ಹೊಲಾನ ಸಾಗುವಳಿ ಮಾಡಿ ತೆಂಗಿನ ಗಿಡ ಹಾಕಿದೆ. ಸ್ವತಃ ನೀರು ಹೊತ್ತು, ಸಸಿಯಿಂದ ಬೆಳೆಸಿದೆ. ಹಿರಿಯೂರು ಹತ್ತಿರದ ಒಬ್ಬರ ಫಾರ್ಮ್‌ನಿಂದ ತೆಂಗಿನ ಸಸಿ ತಂದಿದ್ದು. ಜಮೀನಿನ ನಡುವೆ ಹಳ್ಳ ಇತ್ತು. ಆವಾಗೆಲ್ಲ ನೀರು ಯಥೇಚ್ಛವಾಗಿ ಇರೋದು. ಮೂರಡಿ, ಮೂರಡಿ ಸುತ್ತಳತೆ ಗುಂಡಿ ತೋಡಿ ತೆಂಗಿನ ಸಸಿಯನ್ನು ನಾಟಿ ಮಾಡಿದ್ವಿ. ಹಳ್ಳದಲ್ಲಿ ನೀರು ಕಡಿಮೆಯಾದಾಗ ತೋಟದಲ್ಲಿ ಬಾವಿ ತೆಗೆದು ನೀರು ಹಾಕ್ತಿದ್ವಿ. ಆಗೆಲ್ಲಾ ಆರು ಅಡಿ, ಎಂಟು ಅಡಿ ಬಾವಿ ತೆಗೆದ್ರೆ ಬೇಕಾದಷ್ಟು ನೀರು ಸಿಗೋದು. ತೆಂಗಿನ ಬೇಸಾಯದಲ್ಲಿ ಬಹಳ ಮುಖ್ಯವಾದದ್ದು ಅಂದ್ರೆ ನೆಲದ ಗುಣ ಹಾಗೂ ಗಿಡದ ಗುಣ. ಇವೆರಡೂ ಉತ್ತಮವಾಗಿದ್ರೆ ಇಳುವರಿ ಚೆನ್ನಾಗಿ ಬರುತ್ತೆ. ನಮ್ಮದು ಒಂದು ಗಿಡದಲ್ಲಿ ಸರಾಸರಿ ೩೦೦ ಕಾಯಿ ಸಿಗೋದು. ಒಟ್ಟು ನನ್ನದು ೧೨೦ ಗಿಡ ಇತ್ತು. ಸುಮಾರು ೩೦ ಸಾವಿರ ಕಾಯನ್ನು ಪ್ರತಿ ವರುಷ ಕುಯ್ತಾ ಇದ್ವಿ. ತೆಂಗಿಗೆ ಗೊಬ್ಬರದ ಹುಳುವಿನ ಕಾಟ ಇತ್ತು. ಅದು ಸುಳಿ ಕೊರೆಯುತ್ತೆ. ಸುಳಿ ಗರಿ ಕತ್ತರಿಸಿದ ಹಾಗೆ ಬಂದ್ರೆ ಈ ಹುಳ ಹೊಡೆದಿದೆ ಎಂದು ಅರ್ಥ. ಸುಳಿ ಹತ್ರದ ರಂಧ್ರದಲ್ಲಿ, ಕೊಕ್ಕೆ ಹಾಕಿ ಅಲುಗಾಡಿಸಿದ್ರೆ ಹುಳು ಸಿಕ್ಕಿಹಾಕಿಕೊಳ್ಳುತ್ತೆ, ಅದನ್ನು ತೆಗೆದು ನಂತರ ಸಾಯಿಸ್ತಾ ಇದ್ವಿ. ನನಗೆ ತೆಂಗು ಬೆಳೆ ಬಿಟ್ರೆ, ಭತ್ತ ಬೆಳೆಯುವ ಗದ್ದೆ ಇದೆ. ಭತ್ತಾನೂ ಸ್ವಲ್ಪ ಬೆಳೀತೀನಿ. ಎಕರೆಗೆ ೧೦ ಕ್ವಿಂಟಾಲ್ ಬೆಳೆದ್ರೆ ಮನಸ್ಸಿಗೆ ಸಂತೋಷ. ಯಾಕೇಂದ್ರೆ ಅದಕ್ಕೆ ensured ನೀರು ಇಲ್ಲ. ಮಳೆ ಬಂದು ಕೆರೆ ತುಂಬಿ ಬಂದ್ರೆ ನೀರು ಅಷ್ಟೆ.

- **ವ್ಯವಸಾಯದ ಬಗ್ಗೆ ಆಸಕ್ತಿ ಹೇಗೆ ತಮಗೆ?**

  ಆಸಕ್ತಿ ಅಂತ ಏನೂ ಇಲ್ಲ. ವಿಧಿ ಇಲ್ಲ, ಓದೋದು ಬಿಟ್ಟು ಬಂದ ಮೇಲೆ ಏನಾದ್ರೂ ಮಾಡಬೇಕಲ್ಲ ಅಂತ ಮಾಡಿದ್ದು ಅಷ್ಟೆ. ಮನೆ ಬಿಟ್ಟು ಬೇರೆ ಕೆಲಸಕ್ಕೆ ಹೋಗುವ ಅಂದಾಜು ಇರಲಿಲ್ಲ. ನಾವೆಲ್ಲ ಅಲ್ಪತೃಪ್ತರು. ಏನು ಬಂತೋ ಅದರಲ್ಲಿ ನೆಮ್ಮದಿಯಾಗಿ ಇದೀವಿ. ನನ್ನ ಹೆಂಡತೀನೂ ಕೃಷಿ ಕುಟುಂಬದವಳು. ಅವಳೂ ನನಗೆ ಜತೆಯಾಗಿ ಇದಾಳೆ. ನಮ್ಮ ಜೀವನ ಸರಾಗವಾಗಿ ಸಾಗಿದೆ.

- *ಒಳ್ಳೆಯದು ನಟೇಶ್ ಅವರೆ, ಇದುವರೆಗೂ ನಿಮ್ಮ ವಿಚಾರ ತಿಳಿಸಿದ್ರಿ, ವಂದನೆಗಳು.*

  ನಮಸ್ಕಾರ.

ಈ) ಎಲ್.ಕೆ. ಗೋಪಾಲ್ ಇ/ಮ ಎಲ್.ವಿ. ಕೃಷ್ಣಮೂರ್ತಿ
ಲಿಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆ, ದೂರವಾಣಿ : 08261 454737

ಯಾರು ಮನೆಗೆ ಬಂದ್ರೂ ಹಣ್ಣು ಕೊಡುವುದು ನಮ್ಮ ಧರ್ಮ. ಮನೇಲಿ ನಾವು ಬೆಳೆದ ಹಣ್ಣಿದ್ರೆ, ಮನೆಗೆ ಬಂದವರಿಗೆ ಬೇರೆ ಏನನ್ನೂ ಕೊಡದೇ ಹೋದ್ರೂ ಹಣ್ಣನ್ನು ಕೊಡಬಹುದು. ಅಲ್ಲದೇ, ಹಣ್ಣಿನ ಗಿಡಗಳ ಬೇಸಾಯ ನಮ್ಮ ಜೀವನಕ್ಕೂ ನೆರವಾಗುತ್ತೆ. ತೆಂಗಿಗೆ ನುಸಿ ಬಂದಿದೆ. ಬರ ಬಿದ್ರೆ ಅಡಿಕೆ ಬದುಕೋಲ್ಲ.... ಧಾರಣೆಯ ಏರುಪೇರು ಸಹಜ. ಹಣ್ಣಿನ ಗಿಡಗಳು ಇದ್ರೆ ಕಷ್ಟಕಾಲದಲ್ಲಿ ಕಾಪಾಡಬಹುದು. ಅಲ್ಲದೆ ನಾವು ತಿನ್ನಲು, ನಮ್ಮ ಆರೋಗ್ಯ ಉತ್ತಮವಾಗಿಡಲು ಹಣ್ಣು ಬೇಕು. ಈ ಎಲ್ಲ ಕಾರಣಕ್ಕೆ ಹಣ್ಣಿನ ಗಿಡಗಳ ಬೇಸಾಯವೂ ಇರಬೇಕು.

ಲಿಂಗದಹಳ್ಳಿಯ ಎಲ್.ವಿ. ಕೃಷ್ಣಮೂರ್ತಿ ಹಾಗೂ ಸುಶೀಲಮ್ಮ ದಂಪತಿಗಳಿಗೆ ಐದು ಗಂಡು ಹಾಗೂ ಎರಡು ಹೆಣ್ಣುಮಕ್ಕಳು. ಗಂಡು ಮಕ್ಕಳಲ್ಲಿ ಒಬ್ಬರಾದ ಎಲ್.ಕೆ. ಗೋಪಾಲ್ ಅವರಿಗೆ ಈಗ ೪೨ ವರುಷ. ಇವರ ಪತ್ನಿ ಶಾರದಾ ಶೃಂಗೇರಿ ಸಮೀಪದ ಹುಲಿಗಾರು ಗ್ರಾಮದ ವೆಂಕಟಯ್ಯ ಹಾಗೂ ರುಕ್ಮಿಣಿ ದಂಪತಿಗಳ ಮಗಳು. ಗೋಪಾಲ್ ಅವರಿಗೆ ಮುದ್ದಾದ ಒಬ್ಬ ಮಗಳಿದ್ದಾಳೆ. ಚಟುವಟಿಕೆಯಿಂದ ಓಡಾಡುತ್ತಿದ್ದ ಗೋಪಾಲ್ ಅವರನ್ನು ನಾವು ಮಾತನಾಡಿಸಿದ್ದು ನಟೇಶ್ ಅವರ ಮನೆಯಲ್ಲಿಯೇ.



ಶಾರದಾ-ಎಲ್.ಕೆ.ಗೋಪಾಲ್ ದಂಪತಿ ತಮ್ಮ ಮಗಳೊಂದಿಗೆ:ಲಿಂಗದಹಳ್ಳಿ

- **ಗೋಪಾಲ್ ಅವರೆ, ನಮಸ್ಕಾರ.**

  ನಮಸ್ಕಾರ.

- **ನಿಮ್ಮ ವಿದ್ಯಾಭ್ಯಾಸ ಎಲ್ಲಿಯವರೆಗೆ ಆಗಿದೆ?**

  ನಾನು BA ಮಾಡಿದೀನಿ.

- **ನಿಮಗೆ ಬಾಲ್ಯದಿಂದಲೂ ವ್ಯವಸಾಯದ ಬಗ್ಗೆ ಆಸಕ್ತಿ ಇತ್ತಾ?**

  ನಾನು ಹೆಚ್ಚು ಕಮ್ಮಿ ಎಂಟು ವರುಷದ ಹುಡುಗ ಆಗಿದ್ದಾಗಿನಿಂದ ದನಕರು ಎಮ್ಮೆ ನೋಡಿಕೊಳ್ಳೋದು, ಹುಲ್ಲು ಕುಯ್ಯೋದು ಮಾಡ್ತಿದ್ದೆ. ನನಗೆ ಬೇರೆ ಹವ್ಯಾಸ ಇರಲಿಲ್ಲ. ವ್ಯವಸಾಯ ಮಾಡಬೇಕೆಂಬ ಭಾವನೆ ಇತ್ತು. ನಾನು ಹೊಸಹಳ್ಳೀಲಿ ಅಣ್ಣನ ಜತೆ ಇದ್ದು BA ಮಾಡುವಾಗಲೂ ವ್ಯವಸಾಯದ ಕೆಲಸ ಮಾಡ್ತಿದ್ದೆ. ಮದುವೆಯಾದ ಮೇಲೆ ಲಿಂಗದಹಳ್ಳಿ ಜಮೀನನ್ನು ಯಾರೂ ನೋಡೋರಿಲ್ಲ ಅಂತ ಇಲ್ಲಿಗೆ ಬಂದೆ.

- **ಇಲ್ಲಿ ಎಷ್ಟು ಜಮೀನಿದೆ ತಮಗೆ? ಹ್ಯಾಗೆ ವ್ಯವಸಾಯ ಮಾಡ್ತಿದೀರಿ?**

  ಐದು ಎಕರೆ ಹೊಲ ಇದೆ. ಒಂದು ಎಕರೆ ತೋಟ ಇದೆ. ಮೂರು ಎಕರೆ ಗದ್ದೆ ಇದೆ. ಎಲ್ಲವನ್ನೂ ನಾನು ಒಬ್ಬನೇ ನೋಡಿಕೊಳ್ತಾ ಇದೀನಿ. ನನಗೆ ಚಿಕ್ಕಂದಿನಿಂದಲೂ ವ್ಯವಸಾಯ ಸ್ವತಂತ್ರ ಅನ್ನಿಸಿತು. ಎಲ್ಲಾದರೂ ಕೆಲಸ ಮಾಡಬೇಕು, ಸಂಬಳ ತೊಗೋಬೇಕು ಅಂತ ಅನ್ನಿಸಲಿಲ್ಲ. ಕೆಲಸಕ್ಕೆ ಹೋಗಬೇಕು ಅಂತ ಉತ್ತಮವಾಗಿ ಓದಲೂ ಹೋಗಲಿಲ್ಲ. ಇಲ್ಲಿ ನೋಡೋರೂ ಸಹ ಇತ್ತಿಲ್ಲ. ನಮ್ಮ ಮನೇಲಿ ಹೆಚ್ಚು ಕಡಿಮೆ ೫೦ ದನ ಇತ್ತು. ೨೦ ಎಮ್ಮೆ ಇತ್ತು. ಹುಲ್ಲು ತರೋದು, ಎಮ್ಮೆ ಕಾಯೋದೇ ಜೀವನ ಅಂತ ನಾನು ಆ ಕಾಲದಲ್ಲಿ ತಿಳಿದಿದ್ದೆ.

- **ಅವತ್ತಿನ ಕಾಲದಲ್ಲಿ ದನಗಳ ಸಾಕಣೆ ಹೇಗೆ ಇತ್ತು?**

  ಬೇಕಾದಷ್ಟು ಹುಲ್ಲು ಸಿಕ್ತಾ ಇತ್ತು. ದನಗಳೂ ಚೆನ್ನಾಗಿದ್ವು. ದನಕಾಯೋರ ಜತೆ ಹಿಂಡಿನಲ್ಲಿ ನಮ್ಮ ದನಾನೂ ಹೊಡೆಯೋವಿ. ಸಂಜೆ ಮನೆಗೆ ಬಂದ ಮೇಲೆ ಕೊಟ್ಟಿಗೇಲಿ ಕಟ್ಟಿ ಹುಲ್ಲು ಹಾಕ್ತಿದ್ವಿ. ಹಾಲು ಮನೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಕರೀತಿದ್ರು. ಬಾಕೀದೆಲ್ಲಾ ಕರು ಕುಡಿಯಲು ಬಿಡ್ತಿದ್ರು. ನಮ್ಮ ಅಜ್ಜನ ಕಾಲದಲ್ಲಿ ನೂರು ದನ ಇತ್ತಂತೆ. ನಂತರ ಕಡಿಮೆಯಾಗ್ತಾ ಬಂತು. ಈಗ ಒಂದು ಐದಾರು ಇದೆ ಅಷ್ಟೆ. ಮೇವು ಕಡಿಮೆ ಆದಂಗೆ ದನಗಳ ಸಂಖ್ಯೇನೂ ಕಡಿಮೆ ಆಗ್ತಾ ಬಂತು.



ಬಿಕರಿಗೆ ತೆಂಗಿನಮೂಟೆ ಸಿದ್ಧಪಡಿಸುತ್ತಿರುವ ಎಲ್.ಕೆ.ಗೋಪಾಲ್:ಲಿಂಗದಹಳ್ಳಿ

- **ನಿಮ್ಮ ಜಮೀನಿನಲ್ಲಿ ದನಗಳಿಗೆ ಮೇವು ಬೆಳೀತಿರಲಿಲ್ವಾ?**

  ಆ ಕಾಲದಲ್ಲಿ ನಮಗೆ ಐದು ತಿಂಗಳು ಮಳೆ ಬೀಳ್ತಿತ್ತು. ವರುಷವೆಲ್ಲಾ ಹಸಿ ಹುಲ್ಲು ಬೆಳೆಯಲು ಆಗ್ತಿರಲಿಲ್ಲ. ಹೊರಗಡೆ ಸಿಕ್ಕಷ್ಟು ಮೇಯ್ತಾ ಇದ್ವು. ಮನೇಲಿ ಒಣಹುಲ್ಲು ಶೇಖರಣೆ ಮಾಡಿ, ಹಾಕ್ತಾ ಇದ್ವಿ.

- **ವ್ಯವಸಾಯಕ್ಕೆ ದನಗಳ ಸಾಕಣೆಯಿಂದ ಏನು ಅನುಕೂಲ?**

  ಮುಖ್ಯವಾಗಿ ವ್ಯವಸಾಯಕ್ಕೆ ಬೇಕಾದ್ದು ದನಗಳ ಗೊಬ್ಬರ. ಅದು ಚೆನ್ನಾಗಿ ಸಿಗುತ್ತೆ. ಮನೆಗೆ ಗಟ್ಟಿಯಾದ ಹಾಲು ಮೊಸರು ಸಿಕ್ಕುತ್ತೆ. ಆಮೇಲೆ ಮನೇಲಿ ದನಕರು ಇದ್ರೆ ಏನೋ ಸಮಾಧಾನ. ದನಕರುಗಳ ಸಾಕಣೆಯನ್ನೇ ಕಸುಬಾಗಿ ಮಾಡಿಕೊಂಡ್ರೆ ಚೆನ್ನಾಗಿ ನಡೆಯುತ್ತೆ. ನಮ್ಮ ದನಕರುಗಳಿಗೆ ಗಂಗೆ, ಗೌರಿ, ತುಂಗೆ, ಭದ್ರೆ ಅಂತ ಹೆಸರು ಇಟ್ಟಿದೀವಿ. ಒಂಥರಾ ಪ್ರೀತಿಪಾತ್ರವಾದ ಪ್ರಾಣಿಗಳು.

- **ಏನೇನು ಬೆಳೆ ಬೇಸಾಯ ಮಾಡ್ತೀರಿ?**

  ಗದ್ದೇಲಿ ಭತ್ತದ ಬೇಸಾಯ. ಹೊಲದಲ್ಲಿ ಜೋಳ, ರಾಗಿ, ತಿಂಗಳ ಅವರೆ ಹಾಕ್ತೀನಿ. ಭತ್ತದ ಬೇಸಾಯಾನ ಸ್ವಂತವಾಗಿ ಮಾಡ್ತೀನಿ ಅಷ್ಟೆ. ಹೊಲಾನ ಗುತ್ತಿಗೆ ಕೊಟ್ಟಿದೀನಿ. ಅವರು ಶೇಂಗಾ ಬೆಳೀತಾರೆ.

- **ನೀವೇ ಯಾಕೆ ಬೆಳೀಬಾರದು?**

  ನಮಗೆ ಖರ್ಚು ಜಾಸ್ತಿ ಬರುತ್ತೆ. ನಾನು ಎತ್ತು ಇಟ್ಟಿಲ್ಲ. ಇವತ್ತಿನ ಕಾಲದಲ್ಲಿ ಮನೇಲಿ ಮೂರು ನಾಲ್ಕು ಜನ ಇದ್ರೆ, ಹ್ಯಾಗೋ ವ್ಯವಸಾಯ ಮಾಡಬಹುದೇ ಹೊರತು ಒಬ್ಬೊಬ್ಬರು ಮಾಡುವಂತಹದು ಅಲ್ಲ ಈಗಿನ ವ್ಯವಸಾಯ.



'ನೋಡಿ, ನಾ ಸಾಕಿದ ಎತ್ತು': ಎಲ್.ಕೆ.ಗೋಪಾಲ್: ಲಿಂಗದಹಳ್ಳಿ

- **ನಿಮ್ಮ ತಂದೆ ಹಾಗೂ ತಾತ ಇಲ್ಲಿ ಸ್ವತಃ ಪರಿಶ್ರಮದಿಂದ ದುಡೀತಿರಲಿಲ್ವಾ?**

  ಅಜ್ಜನ ಕಾಲದಲ್ಲಿ ಅವರು ಸ್ವತಃ ಗುದ್ದಲಿ ಹಿಡಿದು ಕೆಲಸ ಮಾಡಿದಾರೆ. ಹಾಗೇ ಆಳುಕಾಳುಗಳ ಕೈಲೂ ಮಾಡಿಸೋರು. ತಂದೆ ಕಾಲದಲ್ಲಿ ದಿನಕ್ಕೆ ಐದಾರು ಜನ ಕೆಲಸಕ್ಕೆ ಬರೋರು. ನನ್ನದು ಈಗ ಸಂಪೂರ್ಣ ಅವಲಂಬನೆ. ಮಾಡುವಂಥ ಕೆಲಸ ಸ್ವಲ್ಪ ನಾನು ಮಾಡ್ತೀನಿ.

- **ಏನು ಮಾಡ್ತೀರಿ?**

  ತೆಂಗಿನ ಗಿಡಗಳಿಗೆ ಗೊಬ್ಬರ ಹಾಕ್ತೀನಿ, ದನಗಳಿಗೆ ಹಸಿರು ಹುಲ್ಲು ಕುಯ್ದು ತರ್ತೀನಿ, ತೋಟದಲ್ಲಿ ಕಳೆ ಸವರ್ತೀನಿ, ಸಮಯ ಅಂದ್ರೆ ಎತ್ತುಗಳು ಸಿಕ್ಕರೆ ಬೇಸಾಯ ಸಹಾ ಹೊಡೀತೀನಿ. ಸೋಮಾರಿಯಾಗಿ ಮಾತ್ರ ಮನೇಲಿ ಕೂರಲ್ಲ. ಮಂತ್ರ ಕಲೀತಾ ಇದೀನಿ. ಮೃದಂಗ ಅಭ್ಯಾಸ ಮಾಡಿದೀನಿ. ಒಂದೇ ಹವ್ಯಾಸ ಮಾಡಬಾರದು ಅಂತ ಏನೇನು ಸಿಗುತ್ತೋ ಕಲಿಯೋಣ ಅಂತ ಮಾಡಿದೆ ಅಷ್ಟೆ. ಅದನ್ನೇ ಅವಲಂಬಿಸಿ ಹಣ ಮಾಡಬೇಕು ಅಂತ ಹೊರಟಿಲ್ಲ. ವ್ಯವಸಾಯದ ಕೆಲಸದಲ್ಲಿನ ಏಕತಾನತೆಯನ್ನು ಈ ಅಭ್ಯಾಸ ಹೊಡೆದೋಡಿಸಬಹುದು ಅಂತ ಮಾಡಿದ್ದು. ಹಾಡ್ತಾ ಇದ್ರೆ ದನಗಳು ಚೆನ್ನಾಗಿ ಹಾಲು ಕೊಡ್ತಾವೆ, ಗಿಡಗಳು ಚೆನ್ನಾಗಿ ಬೆಳೀತಾವೆ ಅಂತ ವಿಜ್ಞಾನ ಹೇಳುತ್ತಲ್ಲಾ... ಪ್ರಯೋಗ ಮಾಡಿ ನೋಡಬೇಕು (ನಗು)



ದವಸತುಂಬಿದ ಪೆಟ್ಟೈಗಳ ನಡುವೆ ನಿಂತ ಶಾರದಾ-ಎಲ್.ಕೆ.ಗೋಪಾಲ್ ದಂಪತಿ: ಲಿಂಗದಹಳ್ಳಿ

- **ಬಾಗಾಯ್ತಿನಲ್ಲಿ ಏನೇನು ಬೆಳೆ ಇದೆ?**

ಅಡಿಕೆ ಇದೆ, ತೆಂಗು ಇದೆ - ಅಜ್ಜನ ಕಾಲದಲ್ಲಿ ಹಾಕಿದ್ದು. ಹೊಸದಾಗಿ borewell ಕೊರೆಸಿ ಈಗ ಎರಡು ಎಕರೆ ತೆಂಗಿನ ಗಿಡ ಕೂರಿಸಿದೀನಿ. ಒಂದೊಂದು ಫಸಲು ಬರ್ತಿದೆ. ಈ ಮುಂಚೆ ನಮ್ಮದು ಬೋರ್ ಇತ್ತಿಲ್ಲ. ಈಗ ಸುಮಾರು ನಾಲ್ಕು inch ನೀರು ಸಿಕ್ಕಿದೆ. ನೀರು ಚೆನ್ನಾಗಿ ಸಿಕ್ಕಾಗ ಅಡಿಕೆ ಮಾಡೋಣ ಅಂತ ಅನ್ನಿಸ್ತು. ಒಂದು ಎಕರೆ ಅಡಿಕೆ ತೋಟಾನೇ ಚೆನ್ನಾಗಿ ನೋಡಿಕೊಂಡು, ಇಲ್ಲಿ ಬರಿಯ ತೆಂಗು ಹಾಕಿ, ಹಣ್ಣಿನ ಗಿಡ ಹಾಕೋಣ ಅಂತ ಮಾಡಿದೀನಿ.

- **ಯಾವ ಯಾವ ಹಣ್ಣಿನ ಬೆಳೆ ಮಾಡಬೇಕು ಅಂತಿದೀರಿ?**

ದಾಳಿಂಬೆ, ಸಪೋಟ, ಪೇರಲೆ, ನಿಂಬೆ, ಕಿತ್ತಲೆ ಹಾಕಬೇಕು ಅಂತಿದೀನಿ.

- **ಹಣ್ಣಿನ ಗಿಡಗಳ ಮೇಲೆ ಅಷ್ಟು ಆಸಕ್ತಿ ಯಾಕೆ?**

ಯಾರು ಮನೆಗೆ ಬಂದ್ರೂ ಹಣ್ಣು ಕೊಡುವುದು ನಮ್ಮ ಧರ್ಮ. ನಮ್ಮ ಮನೆಗೆ ಬಂದವರಿಗೆ ಬೇರೆ ಏನನ್ನು ಕೊಡದೆ ಇದ್ರೂ, ಮನೇಲಿ ಹಣ್ಣಿದ್ರೆ ಕೊಡಬಹುದು. ನಮಗೆ ಜೀವನಕ್ಕೂ ಆಗುತ್ತೆ. ತೆಂಗಿಗೆ ನುಸಿ ಬಂದಿದೆ, ಅಡಿಕೆ ಧಾರಣೆ ಕುಸಿದಿದೆ, ಮಳೆ ಹೋದರೆ ಅಡಿಕೆ ಒಣಗಬಹುದು. ಹಣ್ಣಿನ ಗಿಡಗಳು ಇದ್ರೆ ನಮ್ಮ ಕಷ್ಟಕಾಲಕ್ಕೆ ಆಗಬಹುದು. ಹಾಗೇ ನಮಗೆ ತಿನ್ನಲು ಆಗುತ್ತೆ. ಈ ಎಲ್ಲ ಕಾರಣಗಳಿಂದ ಹಣ್ಣಿನ ಗಿಡಗಳು ಬೇಕು.

- **ತೆಂಗಿನ ಬೇಸಾಯ ಯಾವ ರೀತಿ ಮಾಡಬೇಕು ಅಂತೀರಿ?**

ನಮ್ಮ ನೆಲ ಕಲ್ಲು ನೆಲ ಆದ್ರಿಂದ ತೆಂಗಿನ ಸಸಿ ನೆಡಬೇಕಾದ್ರೆ ಮೂರು ಅಡಿ ಗುಂಡಿ ತೆಗೀಬೇಕು. ಅದಕ್ಕೆ ಹೊರಗಡೆ ಮಣ್ಣು, ದನದ ಗೊಬ್ಬರ ಹಾಕಿ ಗಿಡ ನೆಡಬೇಕು. ಒಂದು ವರುಷದವರೆಗೂ ರಾಸಾಯನಿಕ ಗೊಬ್ಬರ ಬೇಡ. ನಂತರ ಬೇಕಾದ್ರೆ ಕೊಡಬಹುದು. ಗೆದ್ದಲಿಗೆ ಔಷಧ ಹಾಕಬೇಕು. ನೀರು ಚೆನ್ನಾಗಿ ಕೊಡಬೇಕು. ಗಿಡ ಚೆನ್ನಾಗಿ ಬೆಳೆಯುತ್ತೆ. ನಾನು ಹನಿ ನೀರಾವರಿ ಮಾಡಿಸಿದೀನಿ. ಅದ್ರಿಂದ ಗಿಡ ಬೇಗ ಬಂದಿದೆ. ನನಗೆ ಎರಡು ಸಾವಿರ ಸಹಾಯಧನ ಸೇರಿ ಹತ್ತು ಸಾವಿರ ರೂಪಾಯಿ ಹನಿ ನೀರಾವರಿ ವಿಧಾನ ಅಳವಡಿಸಲು ಬೇಕಾಯ್ತು. ನಮ್ಮ ನೂರು ಗಿಡಗಳಿಗೆ ಹನಿ ನೀರಾವರಿ ಮೂಲಕ ನೀರು ಹೋಗುತ್ತೆ. ಇದ್ರಲ್ಲಿ ಗಿಡದ ಬೇರಿನ ವಲಯಕ್ಕೆ ಎಷ್ಟು ಬೇಕೋ ಅಷ್ಟೇ ನೀರು ಹೋಗುತ್ತೆ. ತೋಟ ಪೂರ್ತಿ ನೀರು ಹಾಯಿಸದೇ ಇರೋದ್ರಿಂದ ಕಳೆ ಬೆಳೆಯೋದು ಕಡಿಮೆ. ನೀರಿನ ಉಳಿತಾಯಾನೂ ಆಗುತ್ತೆ.

- **ಭತ್ತದ ಬೇಸಾಯ ಯಾವ ರೀತಿ ಮಾಡ್ತೀರಿ?**

ನಮ್ಮ ಜಾಗ ವಿಶೇಷವಾಗಿ ತಗ್ಗಿನ ಜಾಗ. ನಮಗೆ ಗಿರಿ ನೀರು ಚೆನ್ನಾಗಿ ಬರುತ್ತೆ. ಹಾಗಾಗಿ ಭತ್ತದ ಬೇಸಾಯದಲ್ಲಿ ರಾಸಾಯನಿಕ ಗೊಬ್ಬರ ಬಳಸ್ತೀವಿ. ಒಂದು ಮಳೆ ಬಂದ್ರೂ ಒಂದು ತಿಂಗಳು ಗದ್ದೇಲಿ ನೀರು ನಿಲ್ಲುತ್ತೆ. ನಾವು ಸೋನಾಮಸೂರಿ, IR20 ತಳೀನೇ ಬಳಸೋದು. ಒಂದು ಎಕರೆಗೆ ೨೦ ರಿಂದ ೩೦ ಚೀಲ ಇಳುವರಿ ಬರುತ್ತೆ. ಭತ್ತವನ್ನು ಎರಡು ರೀತಿ ಬೆಳೀಬಹುದು. ಒಣಭತ್ತ ಹಾಕೋರೂ ಇದಾರೆ. ಕೆಸರು ಗದ್ದೆ ಮಾಡೋರೂ ಇದಾರೆ. ಕೆಸರು ಗದ್ದೆ ಮಾಡೋದಾದ್ರೆ ಮನೇಲಿ ಮಳಕೆ ಕಟ್ಟಿ ಅದನ್ನು ಕೆಸರು ಗದ್ದೇಲಿ ಚೆಲ್ಲಿ ಸಸಿ ಬೆಳೆಸಿ ನಾಟಿ ಮಾಡ್ತಾರೆ. ಒಣ ಭತ್ತವನ್ನು ನೇರವಾಗಿ ಬಿತ್ತುತಾರೆ. ನಾನು ಸಸಿ ನಾಟಿ ಮಾಡಿ ಭತ್ತ ಬೆಳೀತೀನಿ. ನಾಟಿ ಮಾಡೋದ್ರಿಂದ ಕಳೆ ಕಡಿಮೆ, ಇಳುವರಿ ಜಾಸ್ತಿ. ಭತ್ತವನ್ನು ಬಿತ್ತಿದಾಗ ೮೦ ಭಾಗ ಹುಟ್ಟಬಹುದು; ಇನ್ನು ೨೦ ಭಾಗ

ಹುಟ್ಟಲ್ಲ. ನಾಟಿ ಮಾಡಿದ್ರೆ ಹಾಕಿದ ಪೈರು ನೂರಕ್ಕೆ ನೂರು ಉಳಿಯುತ್ತೆ. ಪ್ರತಿ ಗುಣಿಗೆ ಎರಡರಿಂದ ಮೂರು ಸಸಿ ನಾಟಿ ಮಾಡಬೇಕು. ಮರಳು ಗದ್ದೆಗಳಾದ್ರೆ ತೇಲಿಸಿ ನಾಟಿ ಮಾಡಿದ್ರೆ ಗದ್ದೆ ಗಟ್ಟಿಯಾಗಿ ಕೂರುತ್ತೆ. ಕೆಸರು ಗದ್ದೆ ಆದ್ರೆ ಸ್ವಲ್ಪ ಆಳವಾಗಿ ನಾಟಿ ಮಾಡಬೇಕು. ಏಡಿ ಕಡಿಯೋದು ಜಾಸ್ತಿ. ಅಲ್ಲದೆ ಕೆಸರಿಗೆ ಬೇಗ ಕೊಳೆತುಹೋಗುತ್ತೆ ಗಿಡ. ಒಂದು ವಾರ ನೀರು ನಿಲ್ಲದಂತೆ ನೋಡಿಕೊಂಡ್ರೆ ಆಗ ಏಡಿ ಕಡಿಯೋಲ್ಲ.

- **ವ್ಯವಸಾಯದಲ್ಲಿ ಒಂದು ಕುಟುಂಬ ಅಭಿವೃದ್ಧಿಯಾಗಬೇಕು ಅಂದ್ರೆ ಗಂಡ ಹೆಂಡತಿ ಒಟ್ಟಾಗಿ ದುಡೀಬೇಕು ತಾನೆ, ನಿಮ್ಮ ಕುಟುಂಬದಲ್ಲಿ ಹ್ಯಾಗಿದೆ ಪರಿಸ್ಥಿತಿ?**
  'ವ್ಯವಸಾಯ ಅಂದ್ರೆ ಮನೆ ಮಂದಿಯೆಲ್ಲಾ ಸಾಯ(ಸಹಾಯ)' ಅನ್ನುವ ಮಾತಿದೆ. ಎಲ್ಲರೂ ಮಾಡಿದ್ರೆ ಮಾತ್ರ ವ್ಯವಸಾಯ, ಇಲ್ಲದೇ ಹೋದ್ರೆ ನಿಜವಾಗಿಯೂ ಸಾಯೋದೇನೇ. ಅವಳೂ ಕೃಷಿ ಮನೆತನದಿಂದ ಬಂದವಳು, ಅನುಭವ ಇದೆ, ಪ್ರೋತ್ಸಾಹ ಕೊಡ್ತಾಳೆ. ಕೆಲಸಾನೂ ಸಂದರ್ಭದಲ್ಲಿ ಮಾಡ್ತಾಳೆ.

- **ನಿಮ್ಮ ಸಂಕೇತಿಗಳಲ್ಲಿ ಪೀಳಿಗೆಯಿಂದ ಪೀಳಿಗೆಗೆ ವ್ಯವಸಾಯ ನಶಿಸ್ತಾ ಇದೆ. ಈಗ ನೀವು ಮಾಡ್ತಾ ಇದೀರಿ. ನಿಮ್ಮ ನಂತರ ಏನು ಅನ್ನುವ ಪರಿಸ್ಥಿತಿ ಇದೆ. ಇದಕ್ಕೆ ಏನು ಕಾರಣ ಅನ್ನುವುದು ನಿಮ್ಮ ಅನಿಸಿಕೆ?**
  ಇವತ್ತಿನ ಮಳೆ ವಾತಾವರಣ ಬಹಳಷ್ಟು ಜನರಲ್ಲಿ ನಿರಾಸೆ ಮೂಡಿಸಿದೆ. ನಮ್ಮ ಕಡೆ ನೀರಿಗೆ ವ್ಯವಸ್ಥೆ ಇಲ್ಲ. ನದಿ, ಅಣೆಕಟ್ಟು ಇರುವ ಕಡೆ ಈ ಸಮಸ್ಯೆ ಇರೋದಿಲ್ಲ. ಮತ್ತೆ ಹೊರಗಡೆ ಇಲ್ಲಿಗಿಂತ ಅನುಕೂಲವಾಗಿರೋದನ್ನು ಕಂಡಾಗ ಸಹಜವಾಗಿ ಎಲ್ಲರೂ ಅದಕ್ಕೆ ಅಪೇಕ್ಷೆ ಪಡ್ತಾರೆ. ಇಲ್ಲಿಗಿಂತ ಅಲ್ಲಿ ಆದಾಯ ಉತ್ತಮವಾಗಿದೆ ಅನ್ನಿಸಿದ್ರೆ ಮಾನಸಿಕವಾಗಿಯೂ ಹಳ್ಳಿಯನ್ನು ಬಿಡೋದಕ್ಕೆ ತಯಾರಾಗಿರ್ತಾರೆ. ಇದು ಸಹಜ ಗುಣ. ಅಲ್ಲಿ ಸುಲಭವಾಗಿ ಸಂಪಾದಿಸಬಹುದು, ಕೆಲಸದಲ್ಲಿ ಒಂದು ಸಾವಿರ ರೂಪಾಯಿ ಸಂಬಳ ಬಂದ್ರೂ ಸಾಕು ಆರಾಮವಾಗಿರಬಹುದು ಅನ್ನುವ ಪ್ರವೃತ್ತಿ ಬೆಳೀತಾ ಇದೆ. ಅದೇ ವ್ಯವಸಾಯದಲ್ಲಿ ಸಾವಿರ ರೂಪಾಯಿ ಬಂದ್ರೆ ಆ ರೀತಿ ಇರೋದಕ್ಕೆ ಆಗೋಲ್ಲ ಅನ್ನುವ ಭಾವನೆ ಬಂದಿದೆ.

- **ನಿಮಗೂ ಆ ರೀತಿ ಅನ್ನಿಸ್ತಾ ಇದ್ಯಾ?**
  ಅನ್ನಿಸುತ್ತೆ. ಆದ್ರೆ ಇವತ್ತಿನ ಪರಿಸ್ಥಿತೀಲಿ ನಾವು ಎಲ್ಲೂ ಬಿಟ್ಟು ಹೋಗೋದಕ್ಕೆ ಆಗೋಲ್ಲ. ಅಲ್ಲದೆ ಮಾಡಬೇಕು ಅನ್ನುವ ಹಟ ಇರುವಾಗ ಏನಾದ್ರೂ ಸರಿ ಮಾಡಲೇಬೇಕು.

- **ನಿಮಗೆ ಹಠ ಬಂದ ಹಾಗೆ ಇಂದಿನ ಪೀಳಿಗೆಯವರಿಗೆ ಯಾಕೆ ಬರ್ತಾ ಇಲ್ಲ, ನೀವೇ ಹೇಳ್ತೀರಾ ವ್ಯವಸಾಯ ಬೇಡ ಅಂತ?**
  ನಾವು ಯಾರಿಗೂ ಹೇಳೋಲ್ಲ, 'ಬೇಡ' ಅಂತ. ಅವರವರೇ ತಿಳಿದುಕೊಂಡೇ ಆ ರೀತಿ ಮಾಡಿರ್ತಾರೆ. ಈಗ ನಮ್ಮಜ್ಜ, ಹಾಗೇ ನಮ್ಮ ತಂದೆ ಮಾಡಿದಷ್ಟು ಕೆಲಸಾನ ನಮಗೆ ಮಾಡಲು ಮನಸ್ಸು ಬರೋಲ್ಲ. ಜಮೀನಿಗೋಸ್ಕರ ಅಷ್ಟು ಯಾಕೆ ಕಷ್ಟಪಡಬೇಕು, ಜನ ಬಿಟ್ರೆ ಆಯ್ತು ಅನ್ನುವ ಭಾವನೆ ಬೆಳೆದಿದೆ. ಕೆಲಸ ಮಾಡದೇ ಇರೋದ್ರಿಂದ ಸಹಜವಾಗಿ ನಮಗೆ ಒಲವು ಬಂದಿಲ್ಲ. ಇನ್ನು ಮುಂದೆ ಮತ್ತೂ ಕಡಿಮೆಯಾಗುತ್ತೆ. ಭೂಮೀನೇ ನಂಬಿ ಬದುಕಬೇಕು ಅನ್ನುವುದು ಇಲ್ಲದೇ ಹೋದಾಗ,



ಅಡಿಕೆ ಬೇಯಿಸಲು ಕಟ್ಟಿಕೊಂಡ ಒಲೆ: ಎಲ್.ಕೆ.ಗೋಪಾಲ್, ಎಲ್.ನಾಗರಾಜ್ : ಲಿಂಗದಹಳ್ಳಿ

ಬೇರೆ ಬೇರೆ ಕೆಲಸ ಹುಡುಕಿಕೊಂಡು ಹೋಗುವುದು ಸಾಮಾನ್ಯ.

- **ಲಿಂಗದಹಳ್ಳಿಯಲ್ಲಿ ಸಂಕೇತಿಗಳ ಕೃಷಿ, ಇಲ್ಲಿರುವ ಇತರೇ ಜನರ ಕೃಷಿಗಿಂತ ಯಾವ ರೀತಿ ಭಿನ್ನವಾಗಿದೆ?**
  ವಕ್ಕಲಿಗರು ಅದರಲ್ಲೇ ಹುಟ್ಟಿ ಬೆಳೆದಿರೋದ್ರಿಂದ ಎಲ್ರೂ ಎಲ್ಲಾ ಕೆಲಸ ಮಾಡಲು ತಯಾರಿರ್ತಾರೆ. ನಮ್ಮಲ್ಲಿ ಆ ರೀತಿ ಇಲ್ಲ.

- **ಲಿಂಗದಹಳ್ಳೀಲಿ ಬೇರೆ ಬೇರೆ ಬೆಳೆಗಳನ್ನು ಉತ್ಕೃಷ್ಟವಾಗಿ ಬೆಳೆದು ಸಾಧನೆ ಮಾಡಿರುವ ಸಂಕೇತಿ ಕೃಷಿಕರು ಇದಾರಾ?**
  ಮೊದಲು ಹೊಗೆಸೊಪ್ಪು ಬಂದಾಗ ನಮ್ಮವರು ಮೂರು ನಾಲ್ಕು ಜನ ಬೆಳೆದ್ರು. ನಂತರ ಕಾರಣಾಂತರದಿಂದ ಅದು ನಾಲ್ಕು ಐದು ವರುಷಗಳ ನಂತರ ಹೊರಟುಹೋಯ್ತು. ಸೂರ್ಯಕಾಂತಿ ಬೆಳೆ ಈ ಊರಿಗೆ ಪರಿಚಯಿಸಿದವರು ಸಂಕೇತಿಗಳೇ. ಇಲ್ಲಿ ಸಾಕಷ್ಟು ಹೊಸ ಹೊಸ ಬೆಳೆಗಳನ್ನು ಬೆಳೆದ್ರು. ಆದ್ರೆ ಪರಿಸ್ಥಿತಿ ಸರಿ ಹೋಗದೆ ನಮಗೆ ಅಡಿಕೆ ತೋಟ ಮಾತ್ರ ಸಾಕು, ಅದರಲ್ಲೇ ಬದುಕೋಣ ಅಂತ ತೀರ್ಮಾನಿಸಿದ್ರು. ಹಾಗಾಗಿ ಈಗ ದಿನಸಿ ಪೈರನ್ನು ಯಾರೂ ಮಾಡ್ತಿಲ್ಲ.

- **ವಿದ್ಯಾವಂತರಾಗಿ ನೀವು ವ್ಯವಸಾಯ ಮಾಡ್ತಿರೋರು. ನಿಮ್ಮ ವ್ಯವಸಾಯ ಬೇರೆಯವರದ್ದಕ್ಕಿಂತ ಸ್ವಲ್ಪ ಭಿನ್ನವಾಗಿರಬೇಕು ತಾನೆ? ನೀವು ಹೊಸ ಪ್ರಯತ್ನ ಏನೇನೂ ಮಾಡಲಿಲ್ಲವೆ?**
  ನಾನು ಮಾಡಲಿಲ್ಲ. ಇದೇ ಸಾಕು ಅನ್ನಿಸ್ತು. ಬೇರೆ ಪ್ರಯೋಗಳನ್ನು ಮಾಡಲು ಅನುಕೂಲ ಇರಲಿಲ್ಲ. ಇಲ್ಲಿ ಪರಿಸ್ಥಿತೀನೂ ಹೊಂದಿಕೆ ಆಗಲಿಲ್ಲ. ಒಳ್ಳೆ ಇಳುವರಿ ನೀಡುವ ಹೈಬ್ರಿಡ್ ಭತ್ತ ತಂದು ಹಾಕಬೇಕು. ಹೆಚ್ಚಿನ ಇಳುವರಿಗೆ ರಾಸಾಯನಿಕ ಗೊಬ್ಬರ ಹಾಕಬೇಕು. ಎಲ್ಲವನ್ನೂ ಮಾಡಿ ಮಳೆ ನೀರು ಬರದೇ ಹೋದ್ರೆ, ಏನು ಮಾಡಲೂ ಮನಸ್ಸು ಬರೋಲ್ಲ. ಮುಂಚಿನ ಬೇಸಾಯ ವಿಧಾನವೇ ಇರಲಿ ಅಂತ ಅನ್ನಿಸುತ್ತೆ. ನಮಗೆ ನೀರಿನ ಸಹಕಾರ ಇದ್ದಿದ್ರೆ ಯಾವ ತರಹ ಪ್ರಯೋಗಾನಾದ್ರೂ ಮಾಡಬಹುದಿತ್ತು.

- **ವ್ಯವಸಾಯದ ಬದುಕಿನಲ್ಲಿ ತೃಪ್ತಿ ಇದೆಯಾ?**
  ಸದ್ಯಕ್ಕಂತೂ ಇದೆ.

- **ಯಾವ ಆದರ್ಶವನ್ನು ಬದುಕಿನುದ್ದಕ್ಕೂ ಪಾಲಿಸಿದೀರಿ?**
  ಜೀವನದಲ್ಲಿ ಏನಾದ್ರೂ ಆಗಲಿ ಇನ್ನೊಬ್ಬನನ್ನು ಹೊಡೆದು ತಿನ್ನಬಾರದು. ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೋ ಅಷ್ಟು ದುಡಿದು ತಿನ್ನಬೇಕು. ಅಷ್ಟನ್ನು ಮಾತ್ರ ಹೇಳ್ತೀನಿ. ಇದು ನಮ್ಮ ಸಂಕೇತಿಗಳಲ್ಲೇ ಬಂದಿದೆ. ಅದಕ್ಕೇ ಅವರು ಆರಕ್ಕೇರದೆ, ಮೂರಕ್ಕಿಳಿಯದೆ ಇದಾರೆ. ಇದ್ದುದರಲ್ಲಿ ತೃಪ್ತರಾಗಿದಾರೆ.

- **ಲಿಂಗದಹಳ್ಳೀಲಿ ಎಲೆ ಹಚ್ಚಿ, ದೊನ್ನೆ ಮಾಡಿ, ಜನಿವಾರ ಮಾಡಿ, ಈ ತರಹ ಬದುಕಿದ ಸಂಕೇತಿಗಳು ಇದಾರಾ?**
  ನನಗೆ ಗೊತ್ತಿರುವ ಹಾಗೆ ... ಇಲ್ಲ. ಉಲ್ಲೇಖಿಸಬಹುದಾದ ಉಪಕಸುಬು ಮಾಡಿ ಬದುಕಿದವರು ಯಾರೂ ಇಲ್ಲ.

- **ಮುಂದಿನ ದಿನಗಳಲ್ಲಿ ಸಂಕೇತಿಗಳು ಲಿಂಗದಹಳ್ಳೀಲಿ ಕೃಷಿ ಮುಂದುವರಿಸ್ತಾರಾ?**
  ಕಡಿಮೆಯಾಗ್ತಾ ಹೋಗುತ್ತೆ. ಬಹಳಷ್ಟು ಜನ ಹೊರಗಡೆ ಕೆಲಸ ಹುಡುಕಿಕೊಂಡು ಹೋಗೋದ್ರಿಂದ ಕ್ರಮೇಣ ಕಡಿಮೆಯಾಗುತ್ತೆ.

- **ಮುಂದೊಂದು ದಿನ ಇಲ್ಲಿ ಸಂಕೇತಿ ವ್ಯವಸಾಯಸ್ಥರು ಯಾರೂ ಇರೋದಿಲ್ವಾ?**
  ಅದು ಹೇಳೋಕೆ ಬರೋಲ್ಲ. ಅದು ಐವತ್ತು ನೂರು ವರುಷದ ಮಾತೇ? ಅಥವಾ ಇನ್ನೆರಡು ಮೂರು ವರುಷದಲ್ಲಿ ಮಳೆ ಬರದಿದ್ರೆ ನಾವೂ ಖಾಲಿ ಮಾಡಬೇಕಾಗಿ ಬರುತ್ತೇನೋ, ಅದೂ ಗೊತ್ತಿಲ್ಲ.

- **ಕೃಷಿಗೆ ಸಂಬಂಧಪಟ್ಟಂತೆ ಜನಪದ ಆಚರಣೆಗಳು ಇಲ್ಲಿ ಜಾರೀಲಿತ್ತಾ?**
  ಇಲ್ಲಿ ೨೦, ೨೫ ವರುಷಕ್ಕಿಂತ ಹಿಂದೆ, ದಿನಸಿ ಬೆಳೆಯುವಾಗ ಕಣದ ಪೂಜೆ ಮಾಡ್ತಿದ್ವಿ. ಈಗ ಅದನ್ನು ಬೆಳೆಯೋದು ಯಾವಾಗ ಕಡಿಮೆ ಮಾಡಿದ್ವೊ ಕಣ ಮಾಡೋದೂ ಹೊರಟುಹೋಯ್ತು. ನಾನು ಕಂಡ ಹಾಗೆ ರಾಗಿ ಪೂಜೆ ಜಾಸ್ತಿ ಇತ್ತು. ಕಣ ಮಾಡಿದಾಗ ರಾಗೀನ ರಾಶಿ ಮಾಡಿ ಅದಕ್ಕೆ ಅರಿಸಿನಕುಂಕುಮ, ಹೂವು ಅಕ್ಷತೆ ತಂದು ಶಾಸ್ತ್ರೋಕ್ತವಾಗಿ ಪೂಜೆ ಮಾಡಿ, ಆಮೇಲೆ ಎತ್ತುಗಳೆರಡನ್ನೂ

ತಂದು ಸ್ವಲ್ಪ ಹೊತ್ತು ತಿನ್ನೋದಕ್ಕೆ ಬಿಟ್ಟು, ಆಮೇಲೆ ಎತ್ತುಗಳಿಗೂ ನಮಸ್ಕಾರ ಮಾಡಿ, ನಂತರ ಐದು ಸೇರು ರಾಗೀನ ದಾನ ಕೊಡೋದು ಜಾರೀಲಿತ್ತು. ಆಮೇಲೆ ಚೀಲಕ್ಕೆ ತುಂಬಿ ಮನೆಗೆ ತರ್ತಿದ್ವು. ಇದು ನನಗೆ ನೆನಪಿದೆ.

- **ಬೆಳೆದ ಧಾನ್ಯವನ್ನು ಯಾವ ರೀತಿ ಸಂಗ್ರಹಣೆ ಮಾಡ್ತಿದ್ರಿ?**

ಕಣಜ ಅಥವಾ ಪಣತಗಳಲ್ಲಿ ಸಂಗ್ರಹಣೆ ಮಾಡ್ತಿದ್ವಿ. ಮುಂಚೆ ಮರದ ಪಣತ ಇರ್ತಿತ್ತು. ಈಗಲೂ ಅದು ಕೆಲವರ ಮನೇಲಿ ಇದೆ. ನಾವು ಬಿದಿರಿನ ಕಣಜ ಅಥವಾ ಇಟ್ಟಿಗೆ ಸೀಮೆಂಟ್‌ನಿಂದ ನಿರ್ಮಿಸಿದ ಪಣತದಲ್ಲಿ ಸಂಗ್ರಹಿಸ್ತಾ ಇದ್ವಿ. ಬೇಳೆ ಕಾಳನ್ನು ಹುಳ ಹೊಡೆಯದ ಹಾಗೆ ಮಡಿಕೇಲಿ ಸಂಗ್ರಹ ಮಾಡ್ತಿದ್ವಿ. ಕಾಳಿನ ಜತೆ ಬೂದಿ ಮಿಶ್ರಣ ಮಾಡಿ ಇಡ್ತಿದ್ವಿ. ಈಗೆಲ್ಲಾ ದಿನಸಿ ಬೆಳೆಯೋದೇ ಕಡಿಮೆಯಾಗಿದೆ.

- *ಇದುವರೆಗೂ ನಿಮ್ಮ ಅನುಭವವನ್ನು ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು ಗೋಪಾಲ್ ಅವರೆ.*

ನಮಸ್ಕಾರ.

ಉ) ಎಲ್.ಎಸ್. ಸುಧಾಕರ್ ಇ/ಮ ಶ್ರೀನಿವಾಸ್
ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ



ಅಡಿಕೆ ಕತ್ತರಿಸುತ್ತಲೇ ಪ್ರಶ್ನೆಗಳಿಗೆ ಉತ್ತರಿಸಿದ ಎಲ್.ಎಸ್.ಸುಧಾಕರ್:ಲಿಂಗದಹಳ್ಳಿ

ನಾವು ನಂಬಿದರೆ ಭೂತಾಯಿ ನಮ್ಮ ಕೈ ಬಿಡೋದಿಲ್ಲ. ನಾವು ಭೂಮಿಗೆ ಹಾಕಿದ್ರೆ ಅದು ಇವತ್ತಲ್ಲ ನಾಳೆ ಗ್ಯಾರಂಟಿ ವಾಪಸ್ಸು ಬರುತ್ತೆ. ಅದ್ರಲ್ಲಿ ಅನುಮಾನವೇ ಇಲ್ಲ. ಆದ್ರೆ ನಾವು ಶ್ರದ್ಧೆಯಿಂದ ಕೆಲಸ ಮಾಡಬೇಕು. ಅದು ಬಹಳಮುಖ್ಯ.

ಲಿಂಗದಹಳ್ಳಿಯಲ್ಲಿ ನಾವು ಮಾತನಾಡಿಸಿದ ಕಡೆಯ ಸಂಕೇತಿ ಕೃಷಿಕ ಎಲ್.ಎಸ್. ಸುಧಾಕರ್. ಇವರೂ ಉತ್ತಮವಾದ ಕೃಷಿಕರು ಎಂದು ಪರಿಚಯಿಸಿದರು ಎಲ್.ಜಿ. ಪ್ರಕಾಶ್. ಮನೆಯಲ್ಲಿ ಅಡಿಕೆ ಸುಲಿಯುತ್ತಿದ್ದ ಸುಧಾಕರ್ ನಗುತ್ತಾ 'ನಮಸ್ಕಾರ' ಎಂದರು. ಅವರ ತಾಯಿ ರತ್ನಮ್ಮ ಹತ್ತಿರದಲ್ಲೇ ಕುಳಿತು ಹತ್ತಿ ಬತ್ತಿ ಹೊಸೀತಾ ಇದ್ರು. ಪುಟ್ಟಮನೆ .. ಚೊಕ್ಕಟವಾಗಿತ್ತು. ಬಹಳ ಕ್ಲುಪ್ತವಾಗಿ ತಮ್ಮ ವಿಚಾರ ಹಂಚಿಕೊಂಡ್ರು. "ನನ್ನ ತಂದೆ ಶ್ರೀನಿವಾಸ್. ಅವರು ಇಲ್ಲಿ LAMS Doctor ಆಗಿದ್ರು. ನನ್ನ ತಾಯಿ ರತ್ನಮ್ಮ. ನಮ್ಮ ತಂದೆಗೆ ಮೂರು ಗಂಡು, ಮೂರು ಹೆಣ್ಣು. ನನಗೆ ಚಿಕ್ಕಂದಿನಿಂದಲೂ ಅಡಿಕೆ ತೋಟ ಬೆಳೆಸಬೇಕು ಅನ್ನುವ ಹಂಬಲ. ಹಾಗಾಗಿ ಪಟ್ಟಣದ ವಿದ್ಯಾಭ್ಯಾಸ ಮುಗಿಸಿ ಹಳ್ಳಿಗೆ ಬಂದು ನೆಲೆಸಿದೆ. ನನ್ನ ಪತ್ನಿಯ ಹೆಸರು ಮಮತಾ. ನನಗೆ ಇಬ್ಬರು ಹೆಣ್ಣು ಮಕ್ಕಳು. ನಾನು ವ್ಯವಸಾಯ ಆರಂಭಿಸುವಾಗ ಆರ್ಥಿಕ ಬಲ ಅಷ್ಟು ಇಲ್ಲದ ಕಾರಣ, ಪಿತ್ರಾರ್ಜಿತವಾಗಿ ನನಗೆ ಬಂದ ಆಸ್ತೀಲಿ, ೧೫೦ ಗಿಡ ತೆಂಗು ಹಾಗೂ ಅಡಿಕೆ ಹಾಕಿದೆ. ತೆಂಗು ಹಾಕಿ ೨೦ ವರುಷವಾಯ್ತು. ತೆಂಗಿನ ಫಸಲು ಕೈ ಸೇರ್ತಿದೆ. ಮಳೆ ಇಲ್ಲದಿದ್ದರೂ ಅಡಿಕೆ ಅಷ್ಟು ಉತ್ತಮವಾಗಿದೆ. ನನಗೆ ಜಮೀನಿನಲ್ಲಿ ಒಂದು Borewell ಸಹಾ ಇದೆ. ಎಲ್ಲರೂ ವ್ಯವಸಾಯ ಬಿಡ್ತಿರುವಾಗ ಇವನು ಯಾಕೆ ವ್ಯವಸಾಯ ಮಾಡ್ತಿದಾನೆ ಅಂತ ನಿಮಗೆ ಅನ್ನಿಸಬಹುದು. ಹಾಗೆ ವ್ಯವಸಾಯ ಬಿಡೋರಿಗೆ ಬೇರೆ ರೀತಿಯ ಅನುಕೂಲಗಳು ಚೆನ್ನಾಗಿರುತ್ತೆ, ಅದ್ರಿಂದ ಬಿಡ್ತಾರೆ. ಆದ್ರೆ ನನ್ನ


ಅನಿಸಿಕೆ ಅಂದ್ರೆ ಭೂಮಿ ನಂಬಿದ್ರೆ ಬದುಕು ಬರಡಾಗೋಲ್ಲ. ನಮ್ಮ ಶ್ರದ್ಧೆ ಬಹಳ ಮುಖ್ಯ. ನನಗಿರುವ ಜಮೀನಲ್ಲೇ, ನಾನು ತೃಪ್ತಿಯಾಗಿ ಬದುಕ್ತಾ ಇದೀನಿ. ಗದ್ದೇಲಿ ಭತ್ತ ಬೆಳೀತೀನಿ. Borewell ಆಶ್ರಯದಲ್ಲಿ ಬದನೆ, ಟೊಮ್ಯಾಟೋ, ಹೀರೇಕಾಯಿ - ಹೀಗೆ ತರಕಾರಿ ಬೆಳೀತೀನಿ. ಮನೆಗೆ ಆಗುತ್ತೆ. ವ್ಯವಸಾಯದ್ದು ಒಂಥರಾ independent life, ಮಾನಸಿಕವಾಗಿ ಬಹಳ ಆರಾಮವಾಗಿ ಇರಬಹುದು. ಇತರೇ ಪಂಗಡದ ಜನಗಳಲ್ಲಿ ಮನೆಯವರೆಲ್ಲಾ ಒಟ್ಟಾಗಿ ಹೋಗಿ ಹೊಲಜಮೀನಿನಲ್ಲಿ ಸ್ವತಃ ದುಡೀತಾರೆ. ಪ್ರತಿಯೊಂದು ಕೆಲಸ ಅವರೇ ಮಾಡಿಕೊಳ್ತಾರೆ. ಆದ್ರೆ ಬ್ರಾಹ್ಮಣರು ಈ ರೀತಿ ಮಾಡೋಲ್ಲ. ಎಲ್ಲವನ್ನೂ ಒಬ್ಬ ಮಾಡಬೇಕು... ಇಲ್ಲಾ ಆಳುಗಳನ್ನು ಅವಲಂಬಿಸಬೇಕು. ಆದ್ರಿಂದ ಮುಂದಿನ ದಿನಗಳಲ್ಲಿ ಸಂಕೇತಿಗಳ ಕೃಷಿಗೆ ಕಷ್ಟಬರಬಹುದು. ತೋಟ ಇದ್ರೆ ಜೀವನ ಸುಲಭವಾಗಿ ಸಾಗುತ್ತೆ. ಮನಸ್ಸಿಗೆ ನೆಮ್ಮದಿ, ಜೀವನಕ್ಕೆ ಸುಭದ್ರತೆ ಇರುತ್ತೆ" ಅಂತ ಹೇಳಿ ಮಾತು ಮುಗಿಸಿದ್ರು. ಲಿಂಗದಹಳ್ಳಿಯ ಸಂಕೇತಿಗಳು ಇದ್ದುದರಲ್ಲಿಯೇ ತೃಪ್ತಿಯಾಗಿ ಇದಾರೆ ಅನ್ನುವ ಮಾತಿಗೆ, ಸುಧಾಕರ್ ಅವರ ಜೀವನಕ್ರಮ ಒಪ್ಪುವಂತಿತ್ತು. ತೃಪ್ತಿ ಮನಸ್ಸಿನ ಭಾವನೆ ತಾನೆ.... ಹೊರಗಿನಿಂದ ಬರುವುದಲ್ಲ... ಅಂತರಾಳದಿಂದ ಸ್ಫುರಿಸಬೇಕು... ಮತ್ತೆ ಸುಧಾಕರ ಅವರನ್ನು ನೋಡಿದಾಗ ನಗುವ ಅವರ ಮುಖದಲ್ಲಿ ಕಣ್ಣುಗಳು ಆತ್ಮವಿಶ್ವಾಸದಿಂದ ಬೆಳಗುತ್ತಿದ್ದವು. ಮುಂದಿನ ದಾರಿ ನಮಗೆ ಕಾಯುತ್ತಿತ್ತು.

28. ಮಡಿಕೇರಿ

'ದೂರದ ಮಲೆನಾಡಿನಲ್ಲಿ ಕೃಷಿ ಮಾಡುವ ಸಂಕೇತಿಗಳದ್ದು ಒಂದು ಕುಟುಂಬವಿದೆ, ಹೋಗಿ ಬರುತ್ತೀರಾ?' ಎಂದು ಹರನ್ ಹೇಳಿದಾಗ ನನಗೆ ನಂಬಲು ಆಗಲಿಲ್ಲ. ಸಂಕೇತಿಗಳಲ್ಲಿ ವಿಶಿಷ್ಟ ಎನ್ನಬಹುದಾದ ಕಾಫಿಕೃಷಿಕರು ಅವರು ಎಂದಾಗ ನಿರೀಕ್ಷೆಯ ನವಿಲು ಗರಿಗೆದರಿತ್ತು. ಮಡಿಕೇರಿಯ ವಿಶ್ವನಾಥ್ ಅವರನ್ನು ನಾನು ಕರವಾಣಿಯ (mobile) ಮೂಲಕ ಸಂಪರ್ಕಿಸಿದಾಗ, 'ಬನ್ನಿ' ಎಂಬ ಆತ್ಮೀಯವಾದ ಸ್ವಾಗತ ದೊರೆಯಿತು. ಹೊಳೇನರಸೀಪುರ, ಅರಕಲಗೂಡು, ರಾಮನಾಥಪುರ, ಕೊಣನೂರು, ಕುಶಾಲನಗರ ಮಾರ್ಗವಾಗಿ ಮಡಿಕೇರಿ ಸೇರಿದಾಗ ಮಧ್ಯಾಹ್ನ ಹನ್ನೊಂದರ ಸಮಯ. ವಿಶ್ವನಾಥ್ ಅವರ ತಂದೆ ಕೇಶವಮೂರ್ತಿಯವರು ಮನೇಲಿ ಇರಲಿಲ್ಲ, ಅಮೆರಿಕಾದಲ್ಲಿದ್ರು. ಅವರ ಮಗ KK ಹಿರಿಯಣ್ಣ ಹಾಗೂ ರಾಜೇಶ್ವರಿ ದಂಪತಿಗಳು ಮತ್ತು ಮಗಳು ಜಯಶ್ರೀ ಹಾಗೂ ಅಳಿಯ ಅಶೋಕ್‌ಮತ್ತೂರು ನೆಲೆಸಿರೋದು ಅಮೇರಿಕಾದಲ್ಲಿ. ಅವರನ್ನು ಕಾಣುವ ಸಲುವಾಗಿ ಕೇಶವಮೂರ್ತಿಯವರು ಅಮೇರಿಕಾದಲ್ಲಿದಾರೆ, ಬರೋದು ಎರಡು ಮೂರು ತಿಂಗಳು ಎಂದಾಗ 'ನಾನೇಕೆ, ಇಲ್ಲಿಗೆ ಈಗ ಬಂದೆ?' ಎನ್ನಿಸಿತು. ಆಗ ವಿಶ್ವನಾಥ್ ಹೇಳಿದ್ರು, 'ಸಾರ್, ನಮ್ಮ ತಂದೆ ಕೃಷಿಕರಲ್ಲ, ಅವರಿಗೆ ಒಲವಿತ್ತು, ನಾನು ಕೃಷಿಕ' ಅಂದಾಗ ಧೈರ್ಯ ಬಂತು. ಅವರ ಜತೆ ಊರನ್ನು ಸುತ್ತಿ, ಭಾವಚಿತ್ರಗಳನ್ನು ತೆಗೆದು, ನೋಡಿದ್ದನ್ನು ಅರಗಿಸುತ್ತಾ ಮನೆಗೆ ಬಂದಾಗ ಹಸಿದ ಹೊಟ್ಟೆಗೂ ಹಸನಾದ ಆಹಾರ ಬಿತ್ತು. ವಿಚಾರ ಸಂಗ್ರಹಣೆ ಆರಂಭವಾಯ್ತು.

ಕೆ.ಕೆ. ವಿಶ್ವನಾಥ್ ಇ/ಮ ಕೆ.ಎನ್. ಕೇಶವಮೂರ್ತಿ
ಕೌಶಿಕ ಬಿಲ್ಡಿಂಗ್, Next to J.D.Hospital, Daswal Road, Madikeri
ದೂರವಾಣಿ : 08272 225517 ಕರವಾಣಿ : 9448045517

ಸಂಕೇತಿಗಳಲ್ಲಿ ಕೃಷಿ ನಶಿಸಲು ಕಾರಣ ಅಂದ್ರೆ, ಮಕ್ಕಳು ಓದಿದ ಹಾಗೆ, ಕೃಷಿಯಲ್ಲಿ ಅವನು ಆಸಕ್ತಿ ತೋರದ ಹಾಗೆ ತಂದೆ ತಾಯಿಗಳೇ ಮಾಡ್ತಾರೆ. 'ನೀನು ಚೆನ್ನಾಗಿ ಓದು, ಪೇಟೆಗೆ ಹೋಗು, ಅಲ್ಲಿ ಕೆಲಸ ಮಾಡು, ಅದೇ ನಿನಗೆ ಚೆನ್ನ, ಹಳ್ಳಿಗೆ ಬರಬೇಡ, ಕೃಷಿ ನಿನ್ನ ಕೈಲಿ ಆಗದ ಕೆಲಸ' ಅಂತ ಮಕ್ಕಳಲ್ಲಿ ಚೆನ್ನಾಗಿ ತುಂಬಿಸ್ತಾರೆ. ತಲೆಯಲ್ಲಿ ತುಂಬಿರುವ ಈ ವಿಚಾರಗಳಿಂದ ಯುವಪೀಳಿಗೆಯಲ್ಲಿ ತೋಟದ ವ್ಯಾಮೋಹ ಕಾಣೋದಿಲ್ಲ. ನನ್ನ ಸಂಬಂಧಿಗಳ ಮಕ್ಕಳನ್ನೇ ನಾನು ನೋಡಿದೇನಲ್ಲ. ಅವರೆಲ್ಲಾ ಕೃಷಿ ಕುಟುಂಬದಿಂದಲೇ ಬಂದಿದ್ರೂ, ಅವರಿಗೆ 'ನಮ್ಮ ತೋಟ' ಅನ್ನುವ ಮನಸ್ಸಿಲ್ಲ. ಕೇಳಿದ್ರೆ, ನಮ್ಮಪ್ಪನ ತೋಟ ಅಂತಾರೆ. ನಮ್ಮ ತೋಟ ಅನ್ನುವ ಶಿಕ್ಷಣವನ್ನು ತಂದೆ ತಾಯಿ ನೀಡಿಲ್ಲ ಅನ್ನಿಸುತ್ತೆ. ಹಾಗಾಗಿ ಯುವಪೀಳಿಗೆಗೆ sentimental involvement ಇಲ್ಲ. ಕೃಷಿ ಅನ್ನೋದು ಹೃದಯದಿಂದ ಬಂದ್ರೆ ಮಾತ್ರ ಆಗುವ ವ್ಯವಹಾರ.



ಸಿ.ಎ.ರಾಧಿಕಾ-ಕೆ.ಕೆ.ವಿಶ್ವನಾಥ್ ದಂಪತಿ: ಮಡಿಕೇರಿ

ದಕ್ಷಿಣಗಂಗೆ ಕಾವೇರಿ ಹುಟ್ಟುವ ಜಿಲ್ಲೆ ಕೊಡಗು ಸಹ ಕೃಷಿ ಮಾಡುತ್ತಿರುವ ಸಂಕೇತಿಗಳ ಕುಟುಂಬಕ್ಕೆ ಆಶ್ರಯ ನೀಡಿದೆ. ಈ ಮಳೆನಾಡಿನಲ್ಲಿ ಮನೆ ಮನಸು ಕಟ್ಟಿ, ಕುಟುಂಬ ಬೆಳೆಸಿರುವ ಕೇಶವಮೂರ್ತಿಯವರು ಸಂಕೇತಿಗಳನ್ನು ಇಲ್ಲಿ ಪ್ರತಿನಿಧಿಸುವ ಏಕೈಕ ಕುಟುಂಬ. ಮೂಲತಃ ಕೌಶಿಕದವರಾದ ಕೇಶವಮೂರ್ತಿಯವರು ಮಡಿಕೇರಿಗೆ ಬಂದದ್ದು ಕೃಷಿ ಮಾಡಲು ಅಲ್ಲ, ನೌಕರಿ ಮಾಡಲು. ಆದರೆ ಇವರ ಮೊದಲನೆಯ ಮಗ ಕೆ.ಕೆ. ವಿಶ್ವನಾಥ್ ಸ್ವತಃ ಜಮೀನು ಮಾಡಿ, ಕೃಷಿ ಸಲಹೆಗಾರರಾಗಿ ಇಲ್ಲಿ ಹೆಸರು ಮಾಡಿದ್ದಾರೆಂದರೆ ಅದು ನಿಜಕ್ಕೂ ರಕ್ತದಲ್ಲಿ ಹರಿದುಬಂದ ಗುಣವಿದ್ದೀತು. ವಿಶಿಷ್ಟ ಎನಿಸುವ ವ್ಯಕ್ತಿತ್ವದ ವಿಶ್ವನಾಥ್ ಮೊದಲ ಭೇಟಿಯಲ್ಲಿಯೇ ಆಪ್ತರಾದರು. ತಮ್ಮ ಸಾಮ್ರಾಜ್ಯದ ಪರಿಧಿಯನ್ನು ಅವರ ರಥದಲ್ಲಿ (ಜೀಪಿನಲ್ಲಿ) ಪರಿಚಯಿಸಿದರು. ಅವರ ಮನೆಯಲ್ಲಿ ಆತಿಥ್ಯವನ್ನು ಸವಿದು ನಾವು ಮಾತುಕತೆಗೆ ಕುಳಿತಾಗ ಮಧ್ಯಾಹ್ನದ ಸಮಯ. ಮುಂಚಿತವಾಗಿಯೇ ವಿಷಯವೆಲ್ಲವೂ ಮನವರಿಕೆಯಾಗಿದ್ದರಿಂದ ಪ್ರಶ್ನೆಗಳ ಅಗತ್ಯವಿರಲಿಲ್ಲ. ಅದರ ಅಡಚಣೆಯೂ ಇರಲಿಲ್ಲ. ಕಾವೇರಿ ನದಿ ನೀರಿನ ಅಬ್ಬರ, ಸೆಳವು, ಶಾಂತತೆ, ತಿರುವು, ಲಾಸ್ಯ, ಎಲ್ಲವೂ ಮಾತಿನ ಓಘದಲ್ಲಿತ್ತು. ವಿಶ್ವನಾಥ್ ಅವರೇ ಇನ್ನು ಮುಂದೆ ನೇರವಾಗಿ ನಿಮ್ಮೊಂದಿಗೆ ಸಂವಾದಿಸಲಿದ್ದಾರೆ. ನಾನು ಮೂಕ ಪ್ರೇಕ್ಷಕ ಅಷ್ಟೆ.

'ಸಂಕೇತಿ ಕೃಷಿಯ ಬಗ್ಗೆ, ಕೃಷಿಕರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸಬೇಕು, ಸಂಕೇತಿ ಬಾಂಧವರಿಗೆ ತಮ್ಮದೇ ಪಂಗಡದಲ್ಲಿ ಯಾವ ರೀತಿಯ ಕೃಷಿ ಸಾಧನೆ ಆಗ್ತಾ ಇದೆ ಅನ್ನುವುದನ್ನು ತಿಳಿಸಬೇಕು. ಅದಕ್ಕಾಗಿ ಸಂಕೇತಿ ಕೃಷಿಯ ಬಗ್ಗೆ ಪುಸ್ತಕವನ್ನು ಹೊರತರುವ ಕಾರ್ಯ ನಿಜಕ್ಕೂ ಅಭಿನಂದನಾರ್ಹ. ನಾನು ಹುಟ್ಟಿ ಬೆಳೆದದ್ದು ಮಡಿಕೇರಿಯಲ್ಲಿ. ಮೂಲತಃ ನಾವು ಕೌಶಿಕದವರು. ನನ್ನ ಅಜ್ಜಯ್ಯ ನರಸಿಂಹಯ್ಯ ಹಾಗೂ ಅಜ್ಜಿ ಸಾವಿತ್ರಮ್ಮ. ನನ್ನ ಅಜ್ಜ ಮುನ್ಷಿಶಾಮಯ್ಯ ಅಂತಾನೇ ಚಿರಪರಿಚಿತರು. ಅಜ್ಜನೂ ಕೃಷಿಕರೆ, ಮೂಲತಃ ಅಡಿಕೆ ಕೃಷಿ ಮಾಡ್ತಿದ್ರು. ನಾನು ಸಣ್ಣ ವಯಸ್ಸಿನಲ್ಲಿ ಅಜ್ಜನ ಮನೆಗೆ ಹೋದಾಗ, ಜೋಳ, ರಾಗಿ ಬೆಳೆಯೋದನ್ನು ಸಹಾ ನಾನು ನೋಡ್ತಾ ಇದ್ದೆ. ನಾನು ಕೌಶಿಕದಲ್ಲಿ ಕಬ್ಬು ಬೆಳೆಯೋದನ್ನು ಸಹಾ ನೋಡಿದ್ದೇನೆ. ಆದರೆ ಈಗ ೧೫ ವರುಷಗಳಿಂದ ಅಲ್ಲಿ ಕಬ್ಬು ಬೆಳೀತಾ ಇಲ್ಲ. ನಾನು ಚಿಕ್ಕಂದಿನಲ್ಲಿ ಕಾಣುತ್ತಿದ್ದ ಆಲೆಮನೆಯ ಸುಗ್ಗಿ ಈಗ ಇಲ್ಲದಂತಾಗಿದೆ. ಇವತ್ತು ಸಂಕೇತಿಗಳಲ್ಲಿ ಕೃಷಿಗಿಂತ ಕೃಷಿಯೇತರ ಚಟುವಟಿಕೆ ಮುಂದಿದೆ. ಬೇರೆ ಯಾವ ವಿಚಾರಗಳಲ್ಲೂ ತೊಡಗಿಸಿಕೊಳ್ಳಲು ಆಗದವರಿಗೆ ಕೃಷಿ ಒಂದು ವೃತ್ತಿ ಅನ್ನುವ ಮಟ್ಟಿಗೆ ಆಗಿದೆ. ನನ್ನ ತಾತನಿಗೆ ೧೧ ಜನ ಮಕ್ಕಳು, ಆರು ಗಂಡು, ಐದು ಹೆಣ್ಣು. ನನ್ನ ತಂದೆ ಆರನೆಯ ಮಗ. ೧೯೬೩ರಲ್ಲಿ ನನ್ನ ತಂದೆ ಮಡಿಕೇರಿಯ Spencers ಅನ್ನುವ ಕಂಪನಿಯಲ್ಲಿ Pharmacist ಆಗಿ ಕೆಲಸಕ್ಕೆ ಸೇರಿದ್ರು. ನನ್ನ ತಂದೆ ನಾಲ್ಕನೆಯ ತರಗತಿಯವರೆಗೆ ಓದಿದ್ದು ಕೌಶಿಕದಲ್ಲಿ. ನಂತರ ನನ್ನ ತಂದೆಯ ದೊಡ್ಡ ಅಣ್ಣ ಸುಬ್ಬರಾವ್ ಭದ್ರಾವತಿಯಲ್ಲಿ post master ಆಗಿದ್ರು. SSLCವರೆಗೆ ಭದ್ರಾವತೀಲಿ ಓದಿದ್ರು. ನಂತರ ಮೈಸೂರು, ಹಾಗೂ ಬೆಂಗಳೂರಿನಲ್ಲಿ D.Pharma ಓದಿದಾರೆ - ಒಂದೊಂದು ವರುಷ. ಅದಾದ ಮೇಲೆ ಮಡಿಕೇರಿಯಲ್ಲಿಯೇ ಕೆಲಸಕ್ಕೆ ಸೇರಿದ್ರಂತೆ. ನನ್ನ ತಂದೆಯ ಸ್ನೇಹಿತರಾದ ಡಾ.ಮನೋಹರ ಜಿ.ಪಾಟ್ಕರ್ ಸರ್ಕಾರಿ ಆಸ್ಪತ್ರೇಲಿ ಕೆಲಸದಲ್ಲಿದ್ರು. ಅವರ ಪತ್ನೀನೂ ವೈದ್ಯರೇ. ಅವರು ಒಂದು ದಿನ ಮಾತನಾಡುವಾಗ, "ನಾನು ಕೆಲಸದಲ್ಲಿದ್ದು private practice ಮಾಡುವಾ ಅಂತಿದ್ದೇನೆ, ನೀವೂ ಯಾಕೆ medical shop ಹಾಕಬಾರದು? ಇದ್ರಿಂದ ಇಬ್ಬರಿಗೂ ಅನುಕೂಲ ಆಗುತ್ತೆ" ಅಂತ ತಂದೆಗೆ ಸಲಹೆ ನೀಡಿದ್ರು. ಹಾಗಾಗಿ ೧೯೭೦ರಲ್ಲಿ, ಅಜ್ಜನವರ ಸಹಾಯದಿಂದ ಒಂದು medical shop open ಮಾಡಿದ್ರು. ನಂತರ ಡಾ.ಪಾಟ್ಕರ್ ಮಡಿಕೇರಿಯ ದಾಸವಾಳ ರಸ್ತೇಲಿ ನರ್ಸಿಂಗ್ ಹೋಂ ಕಟ್ಟಲು ಆರಂಭಿಸಿದ್ರು. ನನ್ನ ತಂದೇನೂ ಹತ್ತಿರದಲ್ಲಿಯೇ ಜಾಗ ತೊಗೊಂಡು, ಮನೆ ಮತ್ತು medical shop ಎರಡನ್ನೂ ಮಾಡಿದ್ರು. ೧೯೭೯-೮೦ರಲ್ಲಿ ನನಗೆ ೧೦ ವರುಷ ಇದ್ದಾಗ ನಾವು ಹೊಸ ಮನೆಗೆ ಬಂದ್ವಿ. ಈಗ್ಗೆ ಮೂರು ವರುಷದಿಂದ



ಕಾಫಿ ಸಂಸ್ಕರಣ ಯಂತ್ರದ ಪಕ್ಕ ನಿಂತ ಕೆ.ಕೆ.ವಿಶ್ವನಾಥ್:ಮಡಿಕೇರಿ

ಡಾ.ಪಾಟ್ಕರ್ ಹಾಗೂ ನನ್ನ ತಂದೆ ಇಬ್ಬರೂ ವೃತ್ತಿಯಿಂದ ನಿವೃತ್ತರಾಗಿದಾರೆ. ನಾನು SSLCವರೆಗೆ ಮಡಿಕೇರಿಲೇ ಓದಿದೆ. ಹಾಸನದಲ್ಲಿ ಎರಡು ವರುಷ PUC ಓದಿದೆ. ನಂತರ ಮೈಸೂರಿನಲ್ಲಿ Mechanical Engineering Diploma ಮುಗಿಸಿದೆ. ನಂತರ ಮಡಿಕೇರಿಗೆ ಬಂದು Bajaj Dealership ತೊಗೊಂಡೆ. ಅದು ನನ್ನ ಜೀವನದ ಮೊದಲನೆಯ ವೃತ್ತಿ. ಎರಡು ವರುಷ ಒಳ್ಳೆಯ ವಿಳಿಗೆ ಕಂಡೆ. ಇಲ್ಲಿ floating population ಕಡಿಮೆ ಇರೋದ್ರಿಂದ market saturation ಆಗಿ vehicle sales ಕಡಿಮೆ ಆದ್ರಿಂದ, ಬೇರೆ ಏನಾದ್ರೂ ಮಾಡುವ ಆಲೋಚನೆ ಬಂತು. ನನಗೆ ಕೃಷಿಯಲ್ಲಿ ಮುಂಚಿನಿಂದಲೂ ಆಸಕ್ತಿ. ನಾನು Bajaj dealer ಆಗಿ ಇರುವಾಗಲೆ ಒಂದು ತೋಟ ಖರೀದಿಸಿದ್ವಿ. ೧೯೯೫-೯೬ರಲ್ಲಿ ಕೃಷೀನೇ ನನ್ನ ಮುಖ್ಯವೃತ್ತಿಯಾಯ್ತು. ೧೯೯೪ರಲ್ಲಿ ಮಡಿಕೇರಿಯಿಂದ ಸುಮಾರು ಆರು ಕಿ.ಮೀ. ದೂರದಲ್ಲಿರುವ ಕರವಲೆ ಬಾಡಗ ಅನ್ನುವ ಹಳ್ಳೀಲಿ ೧೫ ಎಕರೆ ತೋಟ ಖರೀದಿಸಿದ್ವಿ. ತಂದೇಗೂ ತೋಟ ಮಾಡಬೇಕು ಅನ್ನುವ ವ್ಯಾಮೋಹವಿತ್ತು. ನಾನು ಊರಿಗೆ ಬಂದ ಮೇಲೆ ನನಗೆ ತನು, ಮನ, ಧನ ಸಹಾಯ ಮಾಡಿ ಕೃಷಿ ಮಾಡಲು ಪ್ರೋತ್ಸಾಹಿಸಿದ್ರು. ನಾನು ಇವತ್ತು ಏನಾಗಿದೇನೋ ಅದಕ್ಕೆ ಪೂರ್ತಿಯಾಗಿ ನನ್ನ ತಂದೆ, ತಾಯೀನೇ ಕಾರಣ. ಅವರಿಗೂ ನಾನು ಆಭಾರಿಯಾಗಿದ್ದೇನೆ. ನಾವು ಒಂದು ಎಕರೆಗೆ ಮೂವತ್ತೈದು ಸಾವಿರದ ಹಾಗೆ ತೊಗೊಂಡಿದ್ದು. ಮೂರು ವರುಷ ಆ ತೋಟ ನಿರ್ವಹಣೆ ಮಾಡಿದ್ವಿ. ಕಡೆಗೆ ನನ್ನ ತಂದೆ ಸ್ನೇಹಿತರು ಬಂದು ಆ ತೋಟವನ್ನು ಹೆಚ್ಚಿನ ಧಾರಣೆಗೆ ನಮ್ಮಿಂದ ಖರೀದಿಸಿದ್ರು. ನಂತರ ನನಗೆ ಸಾಲದಿಂದ ಹೊರಬರಲು ಆಯ್ತು. ಇನ್ನೊಂದು ತೋಟವನ್ನೂ ಸಾಲದಲ್ಲಿ ಖರೀದಿಸಿದ್ವಿ. ಒಂದು ಎಕರೆಗೆ ಒಂದು ಲಕ್ಷದ ಎಪ್ಪತ್ತೈದು ಸಾವಿರದ ಹಾಗೆ ತೊಗೊಂಡ್ವಿ. ಮಡಿಕೇರಿ ಭಾಗಮಂಡಲ ರಸ್ತೇಲಿ ಆರು ಕಿ.ಮಿ. ಹೋಗಿ, ಬಲಗಡೆಗೆ ಸುಮಾರು ಒಂದೂವರೆ k.m. ಮಣ್ಣಿನ ರಸ್ತೇಲಿ ತೆರಳಿದ್ರೆ ಈಗ ನಾವು ಖರೀದಿಸಿರುವ ೧೨ ಎಕರೆ ತೋಟ ಸಿಗುತ್ತೆ. ಅದರಲ್ಲಿ ಮುಖ್ಯ ಬೆಳೆ ರೊಬಸ್ಟಾ ಕಾಫಿ, ಜೊತೆಗೆ ಅಡಿಕೆಯನ್ನು ಇತ್ತೀಚೆಗೆ ಹಾಕಿದೇವೆ. ಕಾಳುಮೆಣಸು, ಫಸಲು ಬರ್‍ತಿದೆ. ಅದು ಉಪಬೆಳೆ. ನಮ್ಮ ತೋಟದಲ್ಲಿ ಮತ್ತೊಂದು ಮುಖ್ಯ ಬೆಳೆಯಾಗಿ ಏಲಕ್ಕಿಯನ್ನು ಬೆಳೀತಾ ಇದೀವಿ. ಮಾಡಿದ ಖರ್ಚಿಗೆ ತಕ್ಕಂತೆ ತೋಟ ಆದಾಯವನ್ನು ಕೊಡ್ತಾ ಇದೆ. ಇನ್ನು ಮುಂದೆ ಉತ್ತಮ ಆದಾಯ ಬರಬಹುದು ಅನ್ನುವ ನಿರೀಕ್ಷೆಯೂ ಇದೆ.

ನನ್ನ ತಂದೆಯವರ ಸ್ನೇಹಿತರಾದ ಜಿ.ಟಿ.ರಾಘುವೇಂದ್ರ ಅನ್ನುವವರ ತೋಟಕ್ಕೆ ಪ್ರತಿದಿನ ಬೆಳಿಗ್ಗೆ ಹೋಗಿ, ಮಧ್ಯಾಹ್ನ ನಮ್ಮ ತೋಟಕ್ಕೆ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದೆ. ಯಾಕೇಂದ್ರೆ ಕಾಫಿ ಗಿಡ ಹೇಗಿರುತ್ತೆ, ಅದು ಎಲ್ಲಿ ಬೆಳೆಯುತ್ತೆ, ಕಾಫಿ ಹೇಗೆ ತಯಾರಾಗುತ್ತೆ, ಅನ್ನುವುದರ ಪ್ರಾಥಮಿಕ ಮಾಹಿತಿ ನನಗೆ ಇರಲಿಲ್ಲ. ನಾನು ಒಂದನೆಯ ತರಗತಿಯ ಹುಡುಗನ ತರಹ ಬೆಳಗ್ಗೆ ರಾಘುವೇಂದ್ರ ಅವರ ತೋಟದಲ್ಲಿ ಕಲಿತಿದ್ದನ್ನು, ಮಧ್ಯಾಹ್ನ ನಮ್ಮ ತೋಟದಲ್ಲಿ implement ಮಾಡ್ತಿದ್ದೆ. ಹೀಗೆ ಮಾಡ್ತಾ ಮಾಡ್ತಾ ಅನುಭವ ಆಗ್ತಾ ಬಂತು. ಒಂದು ದಿನ ನನ್ನ ತಂದೆಯ ಸ್ನೇಹಿತರು, ಅವರದ್ದು ದೊಡ್ಡ ಹಿಡುವಳಿ ಆದ್ದರಿಂದ ಅವರಿಗೆ ನೋಡಿಕೊಳ್ಳಲು ಕಷ್ಟ ಆಗುತ್ತೆ ಅಂತ, ಅದನ್ನು ನೀನೇ ನೋಡಿಕೋ ಅಂತ ನನ್ನ ವಯಸ್ಸಿಗೆ ಅನುಭವಕ್ಕೆ ಮೀರಿದ ಜವಾಬ್ದಾರಿ ವಹಿಸಿದರು. ನಾನು ಅವರನ್ನು ಕೇಳಿದೆ, "ಇಷ್ಟು ದೊಡ್ಡ ತೋಟವನ್ನು ನನಗೆ ವಹಿಸ್ತಾ ಇದೀರಲ್ಲಾ. Suppose ನಾನೇನಾದ್ರೂ ತಪ್ಪು ಮಾಡಿದ್ರೆ ಅದ್ರಿಂದಾಗುವ ನಷ್ಟಕ್ಕೆ ಯಾರು ಹೊಣೆಯಾಗ್ತಾರೆ?" ಅಂತ. ಆಗ ಅವರು ಒಂದೇ ಮಾತು ಹೇಳಿದ್ರು. "You learn at my cost" ಅಂತ. ಅದು ನನಗೆ ತುಂಬಾ ಸ್ಫೂರ್ತಿ ನೀಡಿತು. ಅದು ಸರಿಸುಮಾರು ೪೫೦ ಎಕರೆಯಷ್ಟು ವಿಸ್ತೀರ್ಣ ಇರುವ ದೊಡ್ಡ ತೋಟ ಆದ್ದರಿಂದ ಅಲ್ಲಿ ನಾನು ಕಲಿತದ್ದು ಬಹಳ. ಇವತ್ತು ನನ್ನ ತಂದೆ ತಾಯಿ ನನಗೆ ಏನು ನೀಡಿದಾರೋ ಅಷ್ಟನ್ನು ನನ್ನ ತಂದೆಯ ಸ್ನೇಹಿತರಾದ ರಾಘುವೇಂದ್ರ ಅವರೂ ನೀಡಿದಾರೆ ಅಂತ ನನ್ನ ಅನಿಸಿಕೆ.

ಕೃಷಿಯಲ್ಲಿ ಅನುಭವವನ್ನು ನಾನು ಪಡೀತಾ ಬಂದ ಹಾಗೆ, ಇಲ್ಲಿಯ ಅನೇಕರು ತಮ್ಮ ತೋಟದ ಜವಾಬ್ದಾರಿಯನ್ನು ಸಹ ನನಗೆ ವಹಿಸಿದರು. ಈಗ ನನ್ನ ಕೃಷಿ ಕೆಲಸದ ಜತೆ, ಇತರೇ ತೋಟದ management ಸಹ ನೋಡ್ತಿದೇನೆ, ಒಬ್ಬ consultant ಆಗಿ. ನನ್ನ ಸ್ನೇಹಿತರ "ಶಕ್ತಿ ಎಸ್ಟೇಟ್", ಮಲೆನಾಡಿನಲ್ಲಿರುವ ಕಾಸರಗೋಡಿನ ಪ್ರಸಾದ್ ಅವರ ೪೫ ಎಕರೆ ತೋಟ, ಹಾಗೇ Calcuttaದವರ Golf View ಎಸ್ಟೇಟ್, ನಾನು ನೋಡಿಕೊಳ್ತಾ ಇದ್ದೇನೆ. ದ್ವಾರಕಾದವರದ್ದು ಐದಾರು ಕಡೆ ತೋಟ ಇದೆ; ಅದನ್ನೂ ನೋಡಿಕೊಳ್ತಾ ಇದೀನಿ, ಹಾಗೇ ನನ್ನ ತೋಟ ಸಹಾ ಮಾಡಿಸ್ತಾ ಇದೀನಿ. ಈಗ ಐದು ವರುಷಗಳಿಂದ ಆಂಥೂರಿಯಂ ಹೂವಿನ ಬೆಳೆ ಬೇಸಾಯವನ್ನು ನಾವು ದ್ವಾರಕಾದಲ್ಲಿ ಆರಂಭಿಸಿದ್ದೇವೆ. ಅದರಲ್ಲೂ ಏಳಿಗೆ ಕಾಣ್ತಾ ಇದೆ. ಕಾಫಿ, ಏಲಕ್ಕಿ, ಕಾಳುಮೆಣಸು ಧಾರಣೆ ಕುಸಿದಿರುವುದರಿಂದ ಪರ್ಯಾಯಬೆಳೆಯಾಗಿ ಆರಂಭವಾದ ಆಂಥೂರಿಯಂ ಹೂವಿನ ಬೇಸಾಯ ನಮ್ಮ ಆರ್ಥಿಕ ಮುಗ್ಗಟ್ಟನ್ನು ಬಹಳ ಪರಿಹರಿಸಿದೆ.

ನಮ್ಮ ಸಂಕೇತಿಗಳಲ್ಲಿ, ಎಲ್ಲೂ ಸಲ್ಲದವರು ಇಲ್ಲಿ ಆಗಬಹುದು ಅಂತ ಮನಸ್ಸಿಗೆ ಬಂದಿದೆ. ಸರಿಯಾಗಿ ವಿದ್ಯೆ ಇಲ್ಲ, ವಿದ್ಯೆ ಇದ್ದರೂ ಕೆಲಸ ಸಿಗಲಿಲ್ಲ, ಪಟ್ಟಣಗಳಿಗೆ ಹೋಗಿ ಸ್ವತಂತ್ರವಾಗಿ ಉದ್ಯೋಗ ಮಾಡಲು ಸಾಮರ್ಥ್ಯ ಇಲ್ಲ, ಬೇರೆ ಇನ್ನೇನು ಮಾಡಲೂ ಆಗೋದಿಲ್ಲ ಅಂತಾದಾಗ ಬೇರೆ ದಾರಿ ಕಾಣದೆ ಕೃಷಿಗೆ ಇಳಿಯುವ ಸಂಕೇತಿಗಳೇ ಜಾಸ್ತಿ. ವಿದ್ಯಾಭ್ಯಾಸ ಚೆನ್ನಾಗಿರುವ ಮನೆಗಳಲ್ಲಿ ಮಕ್ಕಳೆಲ್ಲಾ ಹೊರಗಡೆ ಬೇರೆ ಊರಿಗೆ ಹೋಗಿ settle ಆಗಿರ್ತಾರೆ. ನಾವು ಈಗ ಯಾವುದೇ ಹಳ್ಳಿಗೆ ಹೋಗಿ ನೋಡಿದ್ರೂ ಸಹ, ಸಂಕೇತಿ ಕೃಷಿಕರು ಅಂದ್ರೆ ೫೦ plus ಕೃಷಿಕರು ಅಂತ ಆಗಿದ್ದಾರೆ. ಇನ್ನೂ ಒಂದು ೧೦, ೧೫ ವರುಷ ಕಳೆದ ಮೇಲೆ ಇವರಿಗೂ ಕೃಷಿ ಮಾಡಲು ಸಾಧ್ಯವಾಗದೆ ತಮ್ಮ ಮಕ್ಕಳಿರುವ ಕಡೆ ಹೋಗಲೇಬೇಕಾಗುತ್ತದೆ. ಹಳ್ಳಿಯಲ್ಲಿನ ಒಂದೊಂದು ಕುಟುಂಬ ಹೀಗೆ ಖಾಲಿಯಾಗ್ತಾ ಹೋಗುತ್ತೆ. ಇವತ್ತು ನಾವು ಕೃಷಿಯಲ್ಲಿ ಯಾವುದೇ commodity ತೊಗೊಳ್ಳಿ, ಭತ್ತ, ರಾಗಿ, ಅಡಿಕೆ, ಏಲಕ್ಕಿ, ಕಾಫಿ ಧಾರಣೆಯಲ್ಲಿ ಹೆಚ್ಚಿನ ವೆತ್ಯಾಸವಾಗಿಲ್ಲ. ರೈತನಿಗೆ ಈಗ ಇರೋದು ಒಂದೇ ದಾರಿ. ತಾನು ಒಂದು ಎಕರೇಲಿ ಮುಂಚೆ ಏನು ಉತ್ಪತ್ತಿ ತೆಗೀತಾ ಇದ್ದನೋ ಅದರ ದುಪ್ಪಟ್ಟು ತೆಗೆದರೆ ಅದ್ರಿಂದ ಅನುಕೂಲ ಆಗುತ್ತೆ ಅಷ್ಟೆ. ವಿಜ್ಞಾನ ಇಷ್ಟು ಮುಂದುವರಿದಿರುವಾಗ, ಸರಿಯಾದ ವಿಧಾನದಲ್ಲಿ ನಾವು ಕೃಷಿ ಮಾಡುವ ತಂತ್ರಗಳತ್ತ ಯೋಚನೆ ಮಾಡಬೇಕು.

ಇತ್ತೀಚೆಗೆ ನಾವು ಇಲ್ಲಿ ಏನು ಮಾಡಿದೀವಿ, purely technical, intensive cultivation programme ಹಾಕಿದ್ದೇವೆ. ತೋಟಕ್ಕೆ ಗೊಬ್ಬರ ಹಾಕೋದಿರಲಿ, ಔಷಧಿ ಹೊಡೆಯೋದಿರಲಿ ವೈಜ್ಞಾನಿಕ ವಿಧಾನಗಳನ್ನು ಅನುಸರಿಸ್ತೀವಿ. ಇವತ್ತು ಕೃಷಿಯಲ್ಲಿ ಎಲ್ಲರೂ nitrogen (ಸಾರಜನಕ), phosphorus (ರಂಜಕ) ಹಾಗೂ potash (ಪೊಟ್ಯಾಶ್) ಈ ಮೂರು ಅಂಶಕ್ಕೆ ಹೆಚ್ಚಿನ ಒತ್ತು ನೀಡಿದ್ದೇವೆ. ಯಾವುದೇ ಬೆಳೆಯಲ್ಲಿ ಈ ಮೂರು ಪೋಷಕಾಂಶಗಳದ್ದೇ ಮೇಲುಗೈ. ಆದರೆ ಅದು ಅಲ್ಲದೆ micro nutrients ಏನಿದೆ (ಲಘುಪೋಷಕಾಂಶಗಳು) Sulphur, Magnesium, Boron, Iron, Calcium ಈ ಪೋಷಕಾಂಶಗಳತ್ತ ನಾವು ಗಮನ ನೀಡಲಿಲ್ಲ. ಮಣ್ಣಿನ ಪರೀಕ್ಷೆ ಮಾಡಿಸಿದಾಗ ಈ ಪೋಷಕಾಂಶಗಳ ಕೊರತೆ ಕಂಡಿದ್ದರಿಂದ, ನಾವು ಈಗ ಲಘು ಪೋಷಕಾಂಶಗಳನ್ನೂ ಸಹ ಮಣ್ಣಿಗೆ ಹಾಕ್ತಾ ಇರೋದ್ರಿಂದ ನಮ್ಮ ಇಳುವರಿ ಹೆಚ್ಚಿದೆ ಹಾಗೂ ಗಿಡಗಳ ಆರೋಗ್ಯ ಸಹಾ ಉತ್ತಮವಾಗಿದೆ. ಇದರ ಜತೆಗೆ ಹೆಚ್ಚು ಫಸಲು ತೊಗೊಂಡಷ್ಟೂ, ನಾವು ಮಣ್ಣಿನಲ್ಲಿ ಇರುವ ಪೋಷಕಾಂಶಗಳನ್ನು ಕಡಿಮೆ ಮಾಡ್ತಾ ಹೋಗ್ತೀವಿ. ಆದ ಕಾರಣ ನಮ್ಮ ತೋಟದಲ್ಲಿ ಏನು ಮಾಡ್ತೀನಿ ಅಂದ್ರೆ ಪ್ರತಿ ವರುಷ ನಾವು ಹಾಕುವ ಗೊಬ್ಬರದ ಅರ್ಧದಷ್ಟು ಪ್ರಮಾಣ, ಅಂದ್ರೆ ೧೦೦kg ಅಷ್ಟು NPK ಹಾಕಿದ್ರೆ, ೫೦ kg ಅಷ್ಟು Chemical form ನಲ್ಲೂ ೫೦kg ಅಷ್ಟು NPK organic formನಲ್ಲೂ



ಬತ್ತದ ಪೈರಿನ ನಡುವೆ ಕೆ.ಕೆ.ವಿಶ್ವನಾಥ್:ಮಡಿಕೇರಿ



'ಕಾಫಿ ಹಣ್ಣಿನ ರಂಗು ಇದು': ಕೆ.ಕೆ.ವಿಶ್ವನಾಥ್:ಮಡಿಕೇರಿ

ಹಾಕುವುದನ್ನು ಅಭ್ಯಾಸ ಮಾಡಿಕೊಂಡಿದ್ದೇವೆ. ಹೀಗಾಗಿ ಮಣ್ಣಿನ ಸಾವಯವ ಅಂಶ ಉತ್ತಮ ವಾಗಿದೆ. ಮಣ್ಣಿನ ಸತ್ವ ಹೆಚ್ಚಿರುವುದರಿಂದ ಒಳ್ಳೆಯ ಗುಣಮಟ್ಟದ ಕಾಫಿ, ಏಲಕ್ಕಿ, ಕಾಳುಮೆಣಸು ಬೆಳೆಯಲು ಸಾಧ್ಯವಾಗಿದೆ.

ಇನ್ನು ಕೃಷಿಯ ತಾಂತ್ರಿಕ ವಿಚಾರಗಳಿಗೆ ಬರೋದಾದ್ರೆ: ಕಾಫಿ ಬೇಸಾಯದಲ್ಲಿ ಬಹಳ ಮುಖ್ಯವಾದದ್ದು ಜಾಗದ ಆಯ್ಕೆ. ನೆರಳಲ್ಲಿ ಬೆಳೆಯುವ ಬೆಳೆ ಕಾಫಿ. ಮೊದಲು ನಾವು ನೋಡಬೇಕಾದ್ದು ನೆರಳಿನ ಪ್ರಮಾಣ. ಶೇಕಡಾ ಐವತ್ತಕ್ಕಿಂತ ಕಡಿಮೆ ನೆರಳಿದ್ದು, ಅಲ್ಲಿ ನೀರಿನ abundant source ಇದ್ದರೆ ನಾವು ರೋಬಸ್ಟಾ ಕಾಫಿ ಬೆಳೆಯಬಹುದು. ನೀರಿನ ನಿರ್ವಹಣೆ ಕಷ್ಟವಾದ ಜಾಗದಲ್ಲಿ, ದೂರದಿಂದ ನೀರು ತರಬೇಕಾದ ಜಾಗದಲ್ಲಿ ನೆರಳು ತುಂಬಾ ಚೆನ್ನಾಗಿದೆ ಅಂತಾ ಆದ್ರೆ ಅಂಥಾ ಜಾಗದಲ್ಲಿ ಅರೇಬಿಕಾ ಕಾಫಿ ಬೆಳೆಯಬಹುದು. ನಾವು ಐದು ಎಕರೆ ಅರೇಬಿಕಾ ತೋಟ ಮಾಡಿದ್ರೆ, ಐದು ಎಕರೆ ರೋಬಸ್ಟಾ ತೋಟ ಮಾಡುವುದು ಉತ್ತಮ. ಯಾಕೆ ಅಂದ್ರೆ, ಒಂದು ವರುಷ ಅರೇಬಿಕಾ ಕಾಫಿಗೆ ಧಾರಣೆ ಇದ್ರೆ, ಮತ್ತೊಂದು ವರುಷ ರೋಬಸ್ಟಾ ಕಾಫಿಗೆ ಧಾರಣೆ ಇರುತ್ತೆ. ಎರಡೂ ಕಾಫಿಯನ್ನು ಬೆಳೆದಾಗ ನಮ್ಮ risk uniform ಆಗಿ spread ಆಗುತ್ತೆ. ಅರೇಬಿಕಾ ಸಣ್ಣ bushy ಆಗಿ ಬೆಳೆಯುವ ಗಿಡ. ಎಲೆ ಸಣ್ಣದಾಗಿರುತ್ತೆ. ಇದು ನೆರಳು ಇಷ್ಟಪಡುವ ಬೆಳೆ. ಶೇಕಡಾ ಐವತ್ತರಿಂದ ಐವತ್ತೈದರಷ್ಟು ನೆರಳಿರುವ ಜಾಗದಲ್ಲಿ ಅತ್ಯಂತ ಉತ್ತಮವಾಗಿ ಬೆಳೆಯುತ್ತೆ. ಇದು tap root system ಇರುವ ಗಿಡ, ಹಾಗಾಗಿ ಇದಕ್ಕೆ ತುಂಬಾ ನೀರಿನ ಆವಶ್ಯಕತೆ ಇರೋದಿಲ್ಲ. ರೋಬಸ್ಟಾಗಾದ್ರೆ ಏನಾಗ್ತದೆ ಅದರದ್ದು fibrous root system. ಎಂಥಾ ದೊಡ್ಡ ಗಿಡ ಆದರೂ ಬೇರು ಒಂದು ಅಡಿಗಿಂತ ಕೆಳಗೆ ಹೋಗಿರೋದಿಲ್ಲ. ಹಾಗಾಗಿ ಇದಕ್ಕೆ ಹತ್ತಿರದಲ್ಲಿ ನೀರಿನ ವ್ಯವಸ್ಥೆ (sprinkler irrigation) ಉತ್ತಮವಾಗಿರಬೇಕು. ಅರೇಬಿಕಾದಲ್ಲಿ, ಸುಧಾರಿತ ತಳಿಗಳಾದ ತುಂಗಭದ್ರಾ, ಹೇಮಾವತಿ, ಕಟುವಾಯಿ, ಕುಯಿರು-ಉತ್ತಮವಾದ ತಳಿಗಳು. ಖಾಯಿಲೆ ತಡೆಯುವ ಶಕ್ತಿ ಇದೆ. ಕಾವೇರಿ ತಳಿಯಲ್ಲಿ leaf rust, leaf rot (phytopthera and anthrachnose) ಈ ಎರಡು problem ತುಂಬಾ ಜಾಸ್ತಿ. ಈಗ ನಾವು ಕಾವೇರಿ ನೆಡ್ತಾ ಇಲ್ಲ. ಈ ತಳಿಗಳನ್ನೆಲ್ಲಾ, ೫' x ೫' ಅಥವಾ ೬' x ೬' ಅಥವಾ ೫' x ೬' ಈ ಮೂರು spacingನಲ್ಲಿ ನಮ್ಮ ಅನುಕೂಲಕ್ಕೆ ತಕ್ಕುದಾಗಿ ನೆಡಬಹುದು. ನಾವು ಗಿಡ ನೆಡುವಾಗ ಚೌಕಾಕೃತಿಯಲ್ಲಿ ನೆಡುತ್ತೀವಿ. ಇದರ ಬದಲು diamond shapeನಲ್ಲಿ ನೆಟ್ಟರೆ ಒಂದು ಎಕರೆಗೆ ಶೇಕಡಾ ೧೫ರಷ್ಟು ಹೆಚ್ಚಿಗೆ ಗಿಡಗಳು ಕೂರುತ್ವೆ. ೬' x ೬' ಅಂತರದಲ್ಲಿ ಎಕರೆಗೆ ೧೨೦೦ ಗಿಡ ಕೂರುವ ಜಾಗದಲ್ಲಿ ೧೩೫೦ ಗಿಡ ಬರುತ್ತೆ. ಇದೇ ರೀತಿಯ spacing ಅಡಿಕೆ ಕೃಷಿಯಲ್ಲಿ ಸಹ ಅಳವಡಿಸಬಹುದು. ಅಡಿಕೆಯಲ್ಲಿ ತುಂಬಾ closer spacing ಅನುಸರಿಸುವ ಬದಲು ೮' x ೮' ಅಥವಾ ೭' x ೮' ಅನುಸರಿಸುವುದು ಸೂಕ್ತ. ಅರೇಬಿಕಾ ಕಾಫಿಯ ಬೇಸಾಯದಲ್ಲಿ ೪ ರಿಂದ ೫ ವರುಷ gestation period. ಮೂರನೇ ವರುಷಾನೇ ಫಸಲು ಆರಂಭವಾಗುತ್ತೆ. Economial crop ಬರಬೇಕಾದ್ರೆ ನಾಲ್ಕರಿಂದ ಐದು ವರುಷ ಆಗಬೇಕು. ನಂತರ ನಿರಂತರವಾಗಿ ೪೦ ರಿಂದ ೫೦ ವರ್ಷ ಫಸಲು ಉತ್ತಮವಾಗಿ ನೀಡುತ್ತೆ. ಮೂರು ವರುಷ ಈ ಗಿಡಗಳನ್ನು ಮಕ್ಕಳು ಬೆಳೆಸಿದ ಹಾಗೆ ಬೆಳೆಸಬೇಕು. ಅರೇಬಿಕಾ ಗಿಡನೆಟ್ಟು ಒಂದು ವರುಷ ಆದ ಮೇಲೆ ಗಿಡದ topping ಮಾಡಬೇಕು. ಕಾಫಿ ಮರವಾಗಿ ಬೆಳೆಯುವ ಗಿಡ. ಇದನ್ನು ನಾವು ಏನು ಮಾಡ್ತೀವಿ, ಅರೇಬಿಕಾ ಗಿಡದಲ್ಲಿ ಒಂದೂಮುಕ್ಕಾಲರಿಂದ ಎರಡು ಅಡಿ ಎತ್ತರಕ್ಕೆ ಮೊದಲನೇ ವರುಷವೇ topping ಮಾಡ್ತೀವಿ. ಕಾಫಿ ಗಿಡದಲ್ಲಿ lead ಚಿಗುರು, ಅಂದ್ರೆ ನೆಟ್ಟಗೆ ಹೋಗುವ ಮೇಲಿನ ಕಂಬ ಚಿಗುರನ್ನು ತೆಗೀತೀವಿ. ಗಿಡ ಅಗಲವಾಗಿ ಬೆಳೆಯಲು ಆರಂಭವಾಗುತ್ತೆ. ನಂತರ ಗಿಡ ಕಸಿ ಮಾಡಬೇಕು. ನಾನು diagonal pruning system ಅಳವಡಿಸಿದ್ದೇನೆ. ಇದ್ರಿಂದ ಏನಾಗುತ್ತೆ, ಫಸಲು ಕೊಡುವ ಸಂದರ್ಭದಲ್ಲಿ ಒಂದೇ ವರುಷ ತುಂಬಾ ಫಸಲು ಕೊಡುವ ರೆಕ್ಕೆಗಳು ಇದ್ರೆ, ಆ ವರುಷ ಇಳುವರಿ

ಉತ್ತಮವಾಗಿ ಬರುತ್ತೆ, ಬರುವ ವರುಷಕ್ಕೆ ಗಿಡ ಪೂರ್ಣವಾಗಿ ಸೋಲುತ್ತೆ. ಒಬ್ಬ ಹೆಂಗಸು ಒಟ್ಟಿಗೆ ನಾಲ್ಕು ಮಕ್ಕಳನ್ನು ಹೆತ್ತರೆ ಯಾವ ಸ್ಥಿತಿ ತಲುಪುತ್ತಾಳೋ ಅದೇ ಸ್ಥಿತಿಯನ್ನು ಆ ಅರೇಬಿಕಾ ಗಿಡ ಸಹಾ ಪಡೆಯುತ್ತೆ. ಇದಕ್ಕಾಗಿ ವರುಷದಲ್ಲಿ ಎರಡರಿಂದ ಮೂರು ಬಾರಿ ಗಿಡ ಕಸಿ ಮಾಡಿದ್ರೆ ಒಳ್ಳೆಯದು. ಜತೆಗೆ ಗಿಡದಲ್ಲಿ ಕಂಬ ಚಿಗುರು ಬರ್ತಾ ಇರುತ್ತೆ, ಯಾಕೇಂದ್ರೆ ಗಿಡದ ಸ್ವಭಾವ ನೆಟ್ಟಗೆ ಬೆಳೆಯುವುದು. ಈ ಚಿಗುರನ್ನು ಆಗಾಗ ತೆಗೀತಾ ಇರಬೇಕು. ಗಿಡ ಅಡ್ಡಲಾಗಿ, ಪೊದೆ ರೀತಿ ಬೆಳೆಯುವಂತೆ ನೋಡಿಕೊಳ್ಳಬೇಕು. Diagonal pruning ಅಂದ್ರೆ ಗಿಡದಲ್ಲಿ ಪ್ರತೀ ಗಂಟಲ್ಲಿ ಎರಡು ದಿಕ್ಕಿನಲ್ಲಿ ರೆಕ್ಕೆಗಳು ಬರುತ್ತೆ. ಕೆಲವು ಸಾರಿ ೪ ರಿಂದ ೫ ರೆಕ್ಕೆ ಎರಡೂ ಕಡೆ ಬರುತ್ತೆ. ಅಷ್ಟು ರೆಕ್ಕೇನೂ ಬಿಟ್ರೆ ಯಾವುದೂ mature ಆಗೋಲ್ಲ. ಈ ಕಾಫಿಯಲ್ಲಿ Blossom shower ಬೀಳುವ ಹೊತ್ತಿಗೆ ಎಲ್ಲಾ ರೆಕ್ಕೇನೂ mature ಆಗಬೇಕು. ಆದಷ್ಟು ಕಡಿಮೆ ಪ್ರಮಾಣದಲ್ಲಿ ಫಸಲು ಬರುವ ರೆಕ್ಕೆಗಳನ್ನು ಇಟ್ಟುಕೊಂಡ್ರೆ, ಒಂದೇ ಸಾರಿ mature ಆಗುತ್ತೆ. ಫಸಲು ಚೆನ್ನಾಗಿ ಸಿಗುತ್ತೆ. ನಮ್ಮಲ್ಲಿ ಬಿದಿರು ಏಣಿ ಅಂತ ಇರುತ್ತೆ. ಅದ್ರಲ್ಲಿ ಪ್ರತೀ ಗಂಟಲ್ಲಿ ಆಕಡೆ ಒಂದು ರೆಕ್ಕೆ ಇದ್ರೆ ಈ ಕಡೆ ಒಂದಿರುತ್ತೆ. ಅದೇ patternನಲ್ಲಿ ಕಾಫಿ ಗಿಡದ ರೆಕ್ಕೆಗಳನ್ನು ಕತ್ತರಿಸುವುದು diagonal pruning. ಗಿಡಕ್ಕೆ ಒಳ್ಳೆಯ air circulation ಆಗುತ್ತೆ. ಕೊಳೆಯುವ ಖಾಯಿಲೆ ಕಡಿಮೆಯಾಗುತ್ತೆ, ಮಳೆಗಾಲದಲ್ಲಿ ಕಾಡುವ ಕೊಳೆರೋಗವನ್ನು ಈ ರೀತಿ ಗಿಡದಲ್ಲಿ ಸಮರ್ಪಕವಾಗಿ ಗಾಳಿ ಸಂಚಾರದ ವ್ಯವಸ್ಥೆ ಮಾಡೋದ್ರಿಂದ ತಪ್ಪಿಸಬಹುದು. ಅರೇಬಿಕಾಕ್ಕೆ ಮೊದಲನೆಯ ವರುಷ 40: 30: 40 N:P:K ಕೊಡಬೇಕು. ಜೊತೆಗೆ ಮಾರುಕಟ್ಟೆಯಲ್ಲಿ ಸಿಗುವ Borocol (boron micro nutrient) ಹಾಗೇ Apserite ಅಂದ್ರೆ Calcium and Sulphur ಇರುವ ಲಘು ಪೋಷಕಾಂಶಗಳ ಗೊಬ್ಬರ ಸಹಾ ಹಾಕಬೇಕು. ಇದು ಕಾಫಿಯ ಗುಣಮಟ್ಟಕ್ಕೆ ಹಾಗೂ ರುಚಿಗೆ ತುಂಬಾ ಉತ್ತಮ- Calcium ಹಾಗೂ Sulphur (ಸುಣ್ಣ ಹಾಗೂ ಗಂಧಕ). ಪ್ರತೀ ವರುಷ ಒಂದು ೫೦೦ kg dolamite (ಸುಣ್ಣ) ಪ್ರತೀ ಎಕರೆಯಲ್ಲಿ ಹಾಕಬೇಕು. ಯಾಕೆ ಅಂದ್ರೆ ಕಾಫಿ ತೋಟದ ಮಣ್ಣು acidic soil (ಹುಳಿ ಮಣ್ಣು). Soil pH 6ಕ್ಕಿಂತ ಕಡಿಮೆ ಇರುತ್ತೆ. Acidic soilನಲ್ಲಿ ಯಾವುದೇ crop ಆದ್ರೂ ಅದಕ್ಕೆ ಬೇಕಾದ ಪೋಷಕಾಂಶವನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರೋದಿಲ್ಲ. ಇದಕ್ಕೆ ಸುಣ್ಣ ಹಾಕಿದಾಗ ಮಣ್ಣಿನ ರಸಸಾರ ತಟಸ್ಥ ಸ್ಥಿತಿಗೆ ಬರುತ್ತೆ. ಇದು ಗೊಬ್ಬರದ ನಿರ್ವಹಣೆ.

ಅರೇಬಿಕಾ ಕಾಫಿಗೆ ಎರಡು major problems ಇವೆ. ಒಂದು leaf rust ಹಾಗೂ leaf rot. ಇದಕ್ಕೆ ರೋಗನಿರೋಧಕ ತಳಿ ಹಾಕಬೇಕು. ಆದರೂ ಕೂಡ precautionary measure ಆಗಿ ಶೇಕಡಾ ಎರಡರ ಬೋರ್ಡೋ ದ್ರಾವಣ ಮಳೆಗಾಲಕ್ಕಿಂತ ಮುಂಚಿತವಾಗಿ ಹಾಗೂ ಮಳೆಗಾಲ ಮುಗಿದ ನಂತರ ಹೊಡೀಬೇಕು. ಹಾಗೆ ಮಾಡಿದ್ರೂ ಹತೋಟಿ ಆಗದೇ ಹೋದ್ರೆ, Blossom shower ಆಗುವುದಕ್ಕಿಂತ ಮುಂಚಿತವಾಗಿ ಅಂದ್ರೆ March April ತಿಂಗಳಿನಲ್ಲಿ, ೪೦೦ ml per ಬ್ಯಾರಲ್ Contaf (hexaconazole) ಸಿಂಪರಣೆ ಮಾಡಿದ್ರೆ, ಈ ಖಾಯಿಲೆ avoid ಮಾಡಬಹುದು. ಇದಾದ ೭೦ ದಿನ ಕಳೆದ ಮೇಲೆ ಶೇಕಡಾ ೧ರ ಬೋರ್ಡೋ ನಂತರ ಮತ್ತೆ Contaf ಸಿಂಪರಣೆ ಮಾಡಿದ್ರೆ ಕೊಳೆ ರೋಗ ಹತೋಟಿಯಲ್ಲಿ ಇಡಬಹುದು. ಇದರ ಜತೆಗೆ berry borer (ಕಾಯಿ ಕೊರಕ) ಹಾಗೂ stem borer (ಕಾಂಡ ಕೊರಕ) ಕೀಟದ ಹಾವಳೀನೂ ಅರೇಬಿಕಾ ಕಾಫಿಗೆ ಇದೆ. Stem borerಗೆ ನೆರಳಿನ ನಿರ್ವಹಣೆ ಅತೀ ಮುಖ್ಯ. ಫಸಲಿನ ಆಸೆಗಾಗಿ ಹೆಚ್ಚಿನ ನೆರಳನ್ನು ತೆಗೆದ್ರೆ ಅಂಥ ತೋಟದಲ್ಲಿ ಕಾಂಡಕೊರಕದ ಹಾವಳಿ ವಿಪರೀತ ಅನ್ನುವುದು ನನ್ನ ಅನುಭವದಿಂದ ತಿಳಿದುಬಂದಿದೆ. ನಾವು ಕಾಫಿ ಬೆಳೆಗಾರರು, ಹೆಚ್ಚಿನ ಫಸಲು ಅಪೇಕ್ಷಿಸದೆ, ಸಮಾನಾಂತರವಾಗಿ ೫೦೦ ರಿಂದ ೭೦೦kg clean coffee ಒಂದು ಎಕರೆಗೆ ಬರುವಂತೆ ತೋಟ ನಿರ್ವಹಣೆ ಮಾಡಿದ್ರೆ ಖಾಯಿಲೆಯನ್ನು ಹತೋಟಿಯಲ್ಲಿ ಇಡಬಹುದು.



'ಹೀಗಿದ್ದರೆ ನೀರಿನ ಆಸರೆ?': ಕೆ.ಕೆ.ವಿಶ್ವನಾಥ್:ಮಡಿಕೇರಿ

ಗಿಡದ ಬೆಳೆವಣಿಗೇನೂ ಚೆನ್ನಾಗಿರುತ್ತೆ. Uniformity in crop, uniformity in bean size ಎಲ್ಲಾ ರೀತಿಯಲ್ಲೂ ಅನುಕೂಲ ಆಗುತ್ತೆ.

ಕಾಫಿ ಬೀಜವನ್ನು ಕಾಡುವ ಕೀಟ Berry borer. ಇದ್ರಿಂದಾಗಿ ನಮ್ಮ ಫಸಲು ಶೇಕಡಾ ೭೦ರವರೆಗೆ ಹಾನಿಯಾಗಿರುವುದು ಕಂಡುಬಂದಿದೆ. ಈ ಕೀಟ ೨೫೦ ದಿನ ಆಹಾರವಿಲ್ಲದೆ ಬದುಕಬಲ್ಲದಂತೆ. ಈ ಕೀಟದ ಹಾವಳಿ ಜಾಸ್ತಿಯಾಗುವ ಮುನ್ನವೇ ನಾವು ಎಚ್ಚರಿಕೆವಹಿಸೋದು ಒಳ್ಳೆಯದು. ಕಾಫಿ ಬೀಜದಲ್ಲಿ ಸಣ್ಣ ರಂಧ್ರ ಮಾಡಿ ಈ ಕೀಟ ಒಳಗೆ ಹೋಗಿ ಸೇರುತ್ತೆ. ಒಂದು ತಿಂಗಳಲ್ಲಿ ಒಂದು ಕೀಟ ೧೫ ರಿಂದ ೫೦ ಕೀಟ ಆಗುತ್ತೆ. May-June ತಿಂಗಳಿನಲ್ಲಿ ಒಂದು ಸಾರಿ Endosulfan (400ml/Barrel) ಹೊಡೀಬೇಕು. ಪ್ರತೀಗಿಡದ ಬಳಿ ಹೋಗಿ, ಬಾಧೆಗೆ ಒಳಗಾಗಿರುವ ಬೀಜವನ್ನು ಕೈಯಲ್ಲಿ ತೆಗೆದು ಕೀಟವನ್ನು ನಾಶಪಡಿಸಬೇಕು. ಕಾಫಿಹಣ್ಣು ಕುಯ್ದ ನಂತರ, ತೋಟದಲ್ಲಿ ಕೆಳಗೆ ಬಿದ್ದಿರುವ ಕಾಫಿ ಬೀಜವನ್ನು ಆಯಬೇಕು. ಕಾರಣವೇನು ಅಂದ್ರೆ, ಕೆಳಗೆ ಬಿದ್ದಿರುವ ಬೀಜದಲ್ಲಿ ಈ ಹುಳ ಆಶ್ರಯ ಪಡೆದ್ರೆ, ಮುಂದಿನ ಫಸಲು ಬರುವವರೆಗೂ ಅಲ್ಲಿದ್ದು ನಂತರ ಹೊಸ ಫಸಲಿನ ಮೇಲೆ ಆರಾಮವಾಗಿ ದಾಳಿ ಮಾಡುತ್ತೆ.



'ಇಲ್ಲಿನ ಬಹುಬೆಳೆ ನೋಡಿ': ಕೆ.ಕೆ.ವಿಶ್ವನಾಥ್:ಮಡಿಕೇರಿ

ಒಬ್ಬ ಆಳು ಒಂದು ದಿನಕ್ಕೆ ೬೦-೭೦ kg ಕುಯ್ಯಬಹುದು. ಒಂದು ಎಕರೆಗೆ ೫೦೦ kg clean coffee ಬರಬೇಕಾದ್ರೆ ೩೦೦೦ kg ಹಣ್ಣು ಕುಯ್ಯಬೇಕಾಗುತ್ತೆ. ಅರೇಬಿಕಾ ಕಾಫಿಯ ವಿಶೇಷ ಏನು ಅಂದ್ರೆ Feb-March ತಿಂಗಳಿನಲ್ಲಿ ಹೂಮಳೆ ಬರದೆ Aprilನಲ್ಲಿ ಮಳೆ ಬಂದ್ರೆ ಹೂ ಅರಳುವಿಕೆಯಲ್ಲಿ ಯಾವುದೇ ವೆತ್ಯಾಸ ಆಗೋದಿಲ್ಲ. ಹಾಗಾಗಿ ಯಾವ ತೋಟದಲ್ಲಿ ನೀರು ಕೊಡುವ ವ್ಯವಸ್ಥೆ ಇಲ್ಲವೋ ಅಂತಹ ತೋಟದಲ್ಲಿ ಅರೇಬಿಕಾ ಬೆಳೆಯಬೇಕು ಅನ್ನುವುದು ನನ್ನ ಅನಿಸಿಕೆ. ೬೦೦ kg ಅರೇಬಿಕಾ clean coffee ಕುಯ್ಯಬೇಕಾದ್ರೆ ೧೫ ರಿಂದ ೧೬ ಸಾವಿರ ಖರ್ಚಾಗುತ್ತೆ. ೬೦೦ kgಗೆ ಇವತ್ತಿನ ಧಾರಣೇಲಿ ೨೮ ರಿಂದ ೩೦ ಸಾವಿರ ಸಿಗುತ್ತೆ. ಎಕರೆಗೆ ಅತ್ಯಂತ ಕ್ಷೀಣವಾಗಿರುವ ಧಾರಣೆ ಸಂದರ್ಭದಲ್ಲಿ ಹತ್ತರಿಂದ ಹದಿನೈದು ಸಾವಿರ ಲಾಭಗಳಿಸಬಹುದು. ಕಾಫಿಯ ಜತೆಗೆ ಉಪಬೆಳೆಯಾಗಿ ನಾವು ಕಾಳುಮೆಣಸನ್ನು ನೆಡಬಹುದು. ಒಂದು ಎಕರೆಗೆ ಅಂದಾಜು, ನೂರು ಬಳ್ಳಿ ನೆಡಬಹುದು. ಕಾಳುಮೆಣಸಿನ ಬಳ್ಳಿ ಅಂದಾಜು ಆರನೇ ವರುಷ ಪೂರ್ತಿ ಫಸಲಿಗೆ ಬರುತ್ತೆ. ಒಂದು ಬಳ್ಳಿಗೆ ೩ ರಿಂದ ೪ kg ಅಂತ ಲೆಕ್ಕ ಹಿಡಿದ್ರೂ ಎಕರೆಗೆ ೩೦೦ ರಿಂದ ೪೦೦ kg ಆಯ್ತು. ಅಂದಾಜು ೧೮ ರಿಂದ ೨೦ ಸಾವಿರ ಆದಾಯ ಸಿಗುತ್ತೆ. ಕಾಳುಮೆಣಸಿನ ನಿರ್ವಹಣೆಗೆ ಒಂದು ಎಕರೆಗೆ ಎರಡರಿಂದ ಎರಡೂವರೆ ಸಾವಿರ ಖರ್ಚಾಗುತ್ತೆ. ಕಾಫಿ ಹಾಗೂ ಕಾಳುಮೆಣಸಿನ ಖರ್ಚನ್ನು ನಾವು ಉಪಬೆಳೆಯಾದ ಕಾಳುಮೆಣಸಿನಲ್ಲಿ ಪಡೀಬಹುದು. ಕಾಳುಮೆಣಸಿಗೆ ವಿಪರೀತವಾದ ಕೃಷಿಯ ಅಗತ್ಯವಿಲ್ಲ. ಮುಂಗಾರಿನ ನಂತರ September ತಿಂಗಳ ಮೊದಲನೆಯ ವಾರದಲ್ಲಿ ಮರದ ಬುಡದ ಏರಿನ ಜಾಗದಲ್ಲಿ ಸಸಿಗಳನ್ನು ನೆಡಬೇಕು. ಯಾಕೇಂದ್ರೆ ಬಳ್ಳಿ ಬುಡದಲ್ಲಿ ನೀರು ನಿಂತ್ರೆ ಗಿಡಕ್ಕೆ ತುಂಬಾ ತೊಂದರೆ. ಸೂರ್ಯನಿಗೆ ಅಭಿಮುಖವಾಗಿ ಕಾಳುಮೆಣಸನ್ನು ನೆಡಬೇಕು. ಬೇಸಿಗೇಲಿ ನೀರು ಕೊಡಬೇಕು. ಹಾಗೇ ಸರಿಯಾದ ನೆರಳಿನ ವ್ಯವಸ್ಥೆ ಮಾಡಬೇಕು. ಕಾಳುಮೆಣಸು 'ಹಬ್ಬುವ' ಜಾತಿಯದ್ದಾದ್ದರಿಂದ ಮೊದಲನೆಯ ವರುಷ, ಒಳ್ಳೆಯದನ್ನು ಆಧಾರ-ಮರಕ್ಕೆ ಕಟ್ಟಬೇಕು. ಒಂದು ಸಲ ಬಳ್ಳಿಯು ಮರವನ್ನು ಹಿಡಿದ ಮೇಲೆ ಅದರ ಪಾಡಿಗೆ ಅದು ಹತ್ತಿಕೊಂಡು ಹೋಗುತ್ತೆ. ಬಳ್ಳಿ ಬೆಳೆದು ನಿಂತು ಆರು ವರುಷದಿಂದ ಫಸಲು ಕೊಡಲು ಆರಂಭವಾಗುತ್ತೆ. ಕಾಳುಮೆಣಸಿನಲ್ಲೂ ಫಸಲಿಗೆ ಬಂದಾಗ ಕೊಳೆರೋಗ ಕಾಣಿಸುತ್ತೆ. ಅರೇಬಿಕಾಕ್ಕೆ ನಾವು ಯಾವಾಗ ಬೋರ್ಡೋ ಸಿಂಪರಣೆ ಮಾಡ್ತೀವೋ ಆವಾಗ ಕಾಳುಮೆಣಸಿಗೂ ಸಿಂಪರಣೆ ಮಾಡ್ತೀವಿ. ನವೆಂಬರ್ ತಿಂಗಳಿನಲ್ಲಿ ಕಾಳುಮೆಣಸಿನ ಚಿಗುರನ್ನು ಕೀಟ ತಿನ್ನುತ್ತೆ. ಅದರ ಹತೋಟಿಗೆ monocrotophos ಅಥವಾ endosulfan ಸಿಂಪರಣೆ ಮಾಡಿದ್ರೆ ಆಯ್ತು. ಫಸಲಿಗೆ ಬಂದ ಮೇಲೆ

contact pesticide ಹೊಡೆಯೋದು ಒಳ್ಳೆಯದು. ಫಸಲಿಗೆ ಬರುವುದಕ್ಕಿಂತ ಮುಂಚಿತವಾಗಿ ನಾವು systemic pesticide ಹೊಡೀಬಹುದು. ಕಾಳುಮೆಣಸಿಗೆ, March ತಿಂಗಳಿನಿಂದ ಗಿಡದ ಬುಡಕ್ಕೆ, ಒಂದು ದಿನಕ್ಕೆ ಯಾವುದೇ ನೀರಾವರಿ ವಿಧಾನದಲ್ಲಿ ೩ ರಿಂದ ೬ ಲೀಟರ್ ನೀರು ಕೊಡಬೇಕು. March, Aprilನಿಂದ Juneವರೆಗೆ ನೀರು ಕೊಟ್ರೆ, ನಮಗೆ June ಮೊದಲನೆಯ ಹಾಗೂ ಎರಡನೆಯ ವಾರದಲ್ಲಿ ಒಂದೇ ಬಾರಿಗೆ ಗೆರೆಗಳು ಬರುತ್ತೆ. June ತಿಂಗಳಿನಲ್ಲಿ ಕಾಳುಮೆಣಸು ಹೂ ಬಿಟ್ಟರೆ ನಮಗೆ ಸಾಕಷ್ಟು ಪ್ರಮಾಣದಲ್ಲಿ ಗಂಡು ಹೆಣ್ಣು ಹೂವು ಇರುತ್ತೆ, ಅದೂ ಗರಿಷ್ಠ ಸಂಖ್ಯೆಯಲ್ಲಿ. ಆಗ ಮಳೆಯಲ್ಲಿ ಯಾವ ರೀತಿಯ ವೆತ್ಯಾಸವಾದರೂ ನಮಗೆ flower settingನಲ್ಲಿ ಯಾವುದೇ ತೊಂದರೆ ಆಗೋದಿಲ್ಲ. ಒಳ್ಳೆಯ ಇಳುವರಿ ಬರುತ್ತೆ. ನಮಗೆ ನೀರು ಕೊಡಲು ಆಗದಿದ್ರೆ August ತಿಂಗಳಿನಲ್ಲಿ ಹೂವು ಬರುತ್ತೆ. ಆಗ ಬಂದ ಗೆರೆಗಳಲ್ಲಿ according to the scientific study ಬರಿಯ ಹೆಣ್ಣು ಹೂವುಗಳು ಜಾಸ್ತಿ. Male flower ಕಡಿಮೆ ಇರೋದ್ರಿಂದ, flower setting ಆಗದೆ ಇಳುವರಿ ಕುಂಠಿತವಾಗುತ್ತೆ. ಹಾಗಾಗಿ ಕಾಳುಮೆಣಸಿಗೆ ನೀರು ಕೊಟ್ಟರೆ ಉತ್ತಮ ಇಳುವರಿಪಡೀಬಹುದು ಅಂತ ನನ್ನ ಅಭಿಪ್ರಾಯ. normal ಫಸಲು ಮೂರು kg ಇದ್ರೆ, ಆರು kg ವರೆಗೂ ಇಳುವರಿ ಪಡೀಬಹುದು.

ಇನ್ನು ರೊಬಸ್ಟಾ ಕಾಫಿ ಕೃಷಿಯ ಬಗ್ಗೆ ಬರೋದಾದ್ರೆ, ಇದ್ರಲ್ಲಿ ಮುಖ್ಯವಾಗಿ ಎರಡು variety ಇದೆ, ೨೭೪ ಅಂತ ಒಂದು, ಮತ್ತೊಂದು RXC. 274 ತಳಿ, ೧೩ x ೧೩ ಅಡಿ ಅಂತರದಲ್ಲಿ ನೆಡಬೇಕು. ಇದು ಉತ್ತಮ ಫಸಲಿಗೆ ಬರಲು ೧೦ ವರುಷ ಬೇಕು. ಅದಕ್ಕೆ ನಾವು ಏನು ಮಾಡ್ತೀವಿ, ಈ ಗಿಡವನ್ನು ೧೩ x ೧೩ ಅಡಿ ಅಂತರದಲ್ಲಿ ನೆಟ್ಟು ಅದರ ಮಧ್ಯದಲ್ಲಿ ಒಂದು ರೊಬಸ್ಟಾ ಸಸಿ ಇಡ್ತೀವಿ. ಇವು ನಾಲ್ಕು ಐದು ವರುಷ ಹೀಗೆ ಬೆಳೆಯುತ್ವೆ. ಐದನೇ ವರುಷದಿಂದ ಫಸಲು ಆರಂಭವಾಗುತ್ತೆ. ೧೦ನೇ ವರುಷ ಆಗುವವರೆಗೂ ಬೆಳೆದು, ನಂತರ ಮಧ್ಯದ ಗಿಡ ತೆಗೆಯುವ ಸ್ಥಿತಿ ಬರುತ್ತೆ. ಮಧ್ಯದಲ್ಲಿ ಒಂದು ಗಿಡ ಬೆಳೆಯೋದ್ರಿಂದ ಕಳೆಯ ನಿರ್ವಹಣೆಗೆ ಅನುಕೂಲವಾಗುತ್ತೆ. ಅಲ್ಲದೆ ಆರಂಭದ ದಿನಗಳಲ್ಲಿ ಎಲ್ಲಾ ರೊಬಸ್ಟಾ ಗಿಡಗಳೂ ಬೆಳೆದು ಒಂದನ್ನೊಂದು ಕೂಡುವ ತನಕ ಮಧ್ಯದ ಗಿಡವೂ ಫಸಲು ಕೊಡ್ತಿರುತ್ತೆ. ಇದ್ರಿಂದ ನಮಗೆ double advantage. ರೊಬಸ್ಟಾ ಕೃಷಿಯಲ್ಲಿ ತಾಳ್ಮೆಯೇ ಮುಖ್ಯವಾದ ಅಂಶ. ಯಾಕೇಂದ್ರೆ ಹತ್ತು ವರುಷ ಆಗದೇ ಸರಿಯಾದ ಫಸಲು ಸಿಗೋದಿಲ್ಲ. RXC ಆದ್ರೆ ೭ ರಿಂದ ೮ ವರುಷದಲ್ಲಿ ಉತ್ತಮ ಫಸಲನ್ನು ನಿರೀಕ್ಷೆ ಮಾಡಬಹುದು. ರೊಬಸ್ಟಾವನ್ನು ಎರಡೂಮುಕ್ಕಾಲರಿಂದ ಮೂರು ಅಡಿವರೆಗೆ ಬೆಳೆಯಲು ಬಿಟ್ಟು ನಂತರ topping ಮಾಡಬಹುದು. ಮಣ್ಣಿನ ಫಲವತ್ತತೆ ಚೆನ್ನಾಗಿದೆ, ನನಗೆ ನೀರು ಕೊಡುವ ಸಾಮರ್ಥ್ಯ ಇದೆ ಅಂತಾದ್ರೆ ನಾಲ್ಕು ಅಡಿವರೆಗೂ single topping ಮಾಡಿಬಿಡಬಹುದು. ಒಂದು ಗಿಡ ೮ ಅಡಿ ಸುತ್ತಳತೆ ಬಂತು ಅಂತಾದ್ರೆ second tyre ಬಿಡಬಹುದು. ಅಂದ್ರೆ ಒಂದೂಕಾಲು ಅಡಿ ಉದ್ದದ ಒಂದು stem ಪ್ರತೀ ಗಿಡಕ್ಕೆ ಬಿಡುವುದು. ಮೊದಲ topping ಮೇಲೆ ಮತ್ತೆ ಒಂದೂಕಾಲು ಅಡಿ top ಬೆಳೆಯಲು ಬಿಟ್ಟು ನಂತರ cut ಮಾಡಿದ್ರೆ ನಂತರ ರೋಬಸ್ಟಾ ಗಿಡವನ್ನು ಮೇಲೆ ಬೆಳೆಯಲು ಬಿಡಬಾರದು. Pruning methodನಲ್ಲಿ ಅರೇಬಿಕಾ, ರೊಬಸ್ಟಾಗೆ ತುಂಬಾ ವೆತ್ಯಾಸವಿಲ್ಲ. ರೊಬಸ್ಟಾ ಕಾಫಿಗೆ leaf rust ಮತ್ತು leaf rot ಸಮಸ್ಯೆಯಿಲ್ಲ. ಹಾಗಾಗಿ ಔಷಧದ ಸಿಂಪರಣೆ ಅಗತ್ಯ ಬೀಳೋಲ್ಲ. ನೆರಳು ಕಡಿಮೆ ಇರುವ ಪ್ರದೇಶದಲ್ಲಿ ರೊಬಸ್ಟಾ ಕೃಷಿ ಒಳ್ಳೆಯದು. ಅರೇಬಿಕಾಕ್ಕೆ ಹೋಲಿಸಿದಾಗ ನಿರ್ವಹಣಾ ವೆಚ್ಚ ಶೇಕಡಾ ೧೦ ರಿಂದ ೧೨ ಕಡಿಮೆಯಾಗುತ್ತೆ. Berry borer ಸಮಸ್ಯೆ ಅರೇಬಿಕಾಗಿಂತ ರೊಬಸ್ಟಾವನ್ನು ತುಂಬಾ ಕಾಡುತ್ತೆ. ಈ ಕೀಟದ ನಿರ್ವಹಣೇನ ಅತ್ಯಂತ ಜಾಗರೂಕತೆಯಿಂದ ಮಾಡಬೇಕು. ಅರೇಬಿಕಾದಲ್ಲಿ develop ಆಗುವ berry borer ಮುಂದೆ attack ಮಾಡುವುದೇ ರೊಬಸ್ಟಾ cropನ. ಯಾಕೇಂದ್ರೆ ರೊಬಸ್ಟಾ ಕಾಫಿ ಖಟಾವಿಗೆ ಬರುವುದು ಅರೇಬಿಕಾ ಕಾಫಿ ಖಟಾವಾದ ಬಳಿಕ. ಒಂದು ಎಕರೆ ಪ್ರದೇಶದಲ್ಲಿಸಾಮಾನ್ಯ ರೈತನೂ ಸಹ ೭೦೦ ರಿಂದ ೮೦೦ kg ಕಾಫಿ ಕುಯ್ಯಬಹುದು. ಎಕರೆಗೆ ೧೨ ರಿಂದ ೧೩ ಸಾವಿರ ಖರ್ಚಾಗಬಹುದು. ೨೦ ರಿಂದ ೨೨ ಸಾವಿರ ಬೆಲೆ ಮಾರಾಟದಿಂದ ಸಿಗುತ್ತೆ. ೭ ರಿಂದ ೮ ಸಾವಿರ ರೂಪಾಯಿ ನಿವ್ವಳ ಆದಾಯ ಎಕರೆಗೆ ಸಿಗುತ್ತೆ. ಆದರೆ ಕಾಫಿ ಬೆಳೆಗಾರರು ಹಾಕುವ ಶ್ರಮಕ್ಕೆ ಈ ಆದಾಯ ಸಾಲದು. Viability ದೃಷ್ಟಿಯಿಂದ ಮಾತ್ರ ಅನುಕೂಲಕರ. ಆದರೆ ಆತ ಯಾವಾಗ ಉತ್ತಮ ಬೆಳೇನೇ ಸದಾ ತೆಗೀಬೇಕು, ಆದ್ದರಿಂದ ಇನ್ನು ಮುಂದೆ ಎಲ್ಲಾ ಬೆಳೆಯಲ್ಲಿಯೂ ನಾವು ಆದಷ್ಟೂ ಯೋಚನೆ ಮಾಡಬೇಕಾದ್ದು high productivity ಮಾತ್ರ. ಆಗ ನಾವು ಕೃಷಿಯ negative balanceನಿಂದ ಹೊರಬರಬಹುದು.

ಕಾಫಿ ಬೆಳೆಗಾರರು ಏಲಕ್ಕಿಯನ್ನು ಸಹ ಮುಖ್ಯ ಬೆಳೆಯಾಗಿ ಬೆಳೆಯಬಹುದು. ಹಿಂದಿನ ಕಾಲದಲ್ಲಿ ಕಾಡಿನಲ್ಲಿ ಏಲಕ್ಕಿ ಬೆಳೀತಿದ್ರು. ಆಗ ನಮ್ಮ India ದೇಶದ average ಇದ್ದದ್ದು ಪ್ರತೀ ಎಕರೆಗೆ ೨೦ ರಿಂದ ೨೫ kg ಮಾತ್ರ. ಇವತ್ತೂ ಅದೇ ರೀತಿ ಕೃಷಿ ಮಾಡಿದ್ರೆ ನಾವು



ಏಲಕ್ಕಿ ಬೊಡ್ಡೆಗಳ ಬುಡದಲ್ಲಿ ಕೆ.ಕೆ.ವಿಶ್ವನಾಥ್: ಮಡಿಕೇರಿ

ಉಳಿಯಲು ಆಗೋಲ್ಲ. ಏಲಕ್ಕಿಯಲ್ಲೂ ಅತ್ಯಂತ ಸುಧಾರಿತ ತಳಿಗಳು ಇದಾವೆ. ಕಟ್ಟೆರೋಗಕ್ಕೆ ನಿರೋಧಕ ಶಕ್ತಿ ಹೊಂದಿರುವ ತಳಿಗಳೂ ಇದ್ದಾವೆ. RR-1 ಅಂತ Rot Resistant variety ಸಹಾ ಇದೆ. ಜೌಗು ಪ್ರದೇಶದಲ್ಲಿ ಈ ತಳಿ ತುಂಬಾ ಸೂಕ್ತ. ಕೊಳೆರೋಗ ಏಲಕ್ಕಿಯನ್ನು ಕಾಡುತ್ತೆ. ಆ ರೋಗದಿಂದ ಮುಕ್ತಿ ಹೊಂದಲು RR-1 ತಳಿ ಬಳಸುವುದು ಸೂಕ್ತ. ಇನ್ನು Clone-37 variety ಸರಾಸರಿ ಉತ್ತಮ ಇಳುವರಿ ನೀಡುತ್ತೆ. Drought resistant (ಬರ ನಿರೋಧಕ) ಶಕ್ತಿ ಹೊಂದಿದೆ ಈ ಗಿಡ. ಏಲಕ್ಕಿಯನ್ನು ೬ x ೬ ಅಡಿ ಅಂತರದಲ್ಲಿ ನೆಡಬೇಕು. Intensive ಆಗಿ ಏಲಕ್ಕಿ ಕೃಷಿ ಮಾಡೋರು, ಅಂದ್ರೆ ವರುಷಕ್ಕೆ ಏಳೆಂಟು ಬಾರಿ ಸಾವಯವ ಹಾಗೂ ರಾಸಾಯನಿಕ ಗೊಬ್ಬರ ಹಾಕುವ ಸಾಮರ್ಥ್ಯ ಇರೋರು ೭ x ೭ ಅಡಿ ಅಥವಾ ೮ x ೮ ಅಡಿ ಅಂತರದವರೆಗೂ ನೆಡಬಹುದು. ಈಗ ಎಲ್ಲರ ಮನಸ್ಸಿನಲ್ಲೂ ಕೇರಳದ 'ನೆಲ್ಯಾಡಿ ಗೋಲ್ಡ್' ಅನ್ನುವ ತಳಿಯ ಬಗ್ಗೆ ವ್ಯಾಮೋಹ ಜಾಸ್ತಿಯಾಗಿದೆ. ಆ ತಳಿ ಆನೆಯ ಹಾಗೆ. ಆನೆ ಸಾಕಿದ ಹಾಗೆ ಇದನ್ನು ಸಾಕಬೇಕು. ಹೆಚ್ಚು ಆಹಾರವನ್ನು ಕೊಟ್ಟರೆ ಮಾತ್ರ ಈ ತಳಿ ಇಳುವರಿ ನೀಡುತ್ತೆ. ಈ ತಳಿಗೆ ನೀಡುವ ಆಹಾರದ ಅರ್ಧಭಾಗ ನೀಡಿದ್ರೂ ನಮ್ಮಲ್ಲಿರುವ ತಳಿಗಳು ನೆಲ್ಯಾಡಿ ಗೋಲ್ಡ್‌ಗಿಂತ ಚೆನ್ನಾಗಿ ಇಳುವರಿ ನೀಡುತ್ವೆ. ಇದು ನನ್ನ ಅನುಭವ. ಏಲಕ್ಕಿಗೆ ಎಕರೆಗೆ ೩೦ ರಿಂದ ೩೫ ಸಾವಿರ ರೂಪಾಯಿ ಖರ್ಚಾಗುತ್ತೆ. ಅಷ್ಟು ಖರ್ಚು ಮಾಡಲು ತಯಾರಾಗಿ ಇರುವವರು ಏಲಕ್ಕಿ ಬೆಳೆಯುವುದು ಉತ್ತಮ. ಏಲಕ್ಕಿಗೆ ಸರಿಯಾಗಿ ಸೋಸಿ ಬರುವ ನೆರಳು ಬಿಸಿಲು ಇರಬೇಕು. ಅರೇಬಿಕಾ ಕಾಫಿಗಿಂತ ಸ್ವಲ್ಪ ಹೆಚ್ಚಿನ ನೆರಳು ಇರಬೇಕು. ಒಂದು ಎಕರೆಗೆ ೧೨೦೦ ಗಿಡ ನೆಡಬಹುದು. ಏಲಕ್ಕಿಗೆ ಸಾವಯವ ಗೊಬ್ಬರ ಹೆಚ್ಚು ನೀಡಬೇಕು. ಏಲಕ್ಕಿ ತೋಟದಲ್ಲಿ ನೀರು ಸರಾಗವಾಗಿ ಹರಿದುಹೋಗುವ ಹಾಗೆ ಇರಬೇಕು. ನೀರು ನಿಲ್ಲುವ (water stagnation) ಜಾಗದಲ್ಲಿ ಏಲಕ್ಕಿ ಕೃಷಿ ಸಾಧ್ಯವಿಲ್ಲ. ಗಿಡ ಚೆನ್ನಾಗಿ ಬರುತ್ತೆ. ಮಳೆಗಾಲದಲ್ಲಿ ಗಿಡ ಕೊಳೆಯುತ್ತೆ. ಏಲಕ್ಕಿಯಲ್ಲಿ ಕಾಯಿ ಬರುವುದು ಬುಡದಲ್ಲಿ, ಪ್ರತಿ ವರುಷ ಕಾಯಿಬರಬೇಕು ಅಂದ್ರೆ ಬುಡದಲ್ಲಿ ಒಂದು ಹೊಸ ಕಂದು (tiller) ಬರಬೇಕು. ಪ್ರತೀ ವರುಷ ಹೊಸ ಹೊಸ tiller ಬರಬೇಕು ಅನ್ನುವುದೇ ಆದ್ರೆ ಸಾರಜನಕ, ರಂಜಕ ಹಾಗೂ ಪೊಟ್ಯಾಷ್ ಗೊಬ್ಬರವನ್ನು ಸಮರ್ಪಕವಾಗಿ ನೀಡಬೇಕು. ವರುಷಕ್ಕೆ ಏಳು ಬಾರಿ, ಚಳಿಗಾಲವನ್ನು ಹೊರತು ಪಡಿಸಿ ರಾಸಾಯನಿಕ ಗೊಬ್ಬರ ನೀಡಬೇಕು. ನವೆಂಬರ್, ಡಿಸೆಂಬರ್, ಜನವರಿ ಬಿಟ್ಟು, ಉಳಿದಂತೆ ಸಾವಯವ ಗೊಬ್ಬರದ ಜತೆ, ರಾಸಾಯನಿಕ ಗೊಬ್ಬರ ಸೇರಿಸಿ ಕೊಡಬೇಕು. ಒಂದು ಎಕರೆಗೆ 100 kg N; 100 kg P ಹಾಗೂ 100 kg K ನೀಡಬೇಕು. ಏಲಕ್ಕಿಯಲ್ಲಿ ಕಾಯಿಕೊರಕ ಹಾಗೂ ಅಳಿಲಿನ ಕಾಟ ಬಹಳ. ಗೊಬ್ಬರದ ಹುಳು ಬೇರು ಕಡಿಯುತ್ತೆ. ಇದರ ನಿರ್ವಹಣೆಗೆ Furadon ಅಥವಾ Phorate, ಪ್ರತಿ ಗಿಡಕ್ಕೆ ೧೫ ಗ್ರಾಂನಂತೆ ವರುಷಕ್ಕೆ ಎರಡು ಬಾರಿ ನೀಡಬೇಕು - ಅದೂ ಮಳೆಗಾಲಕ್ಕೆ ಮುಂಚೆ ಹಾಗೂ ಚಳಿಗಾಲಕ್ಕೆ ಮುಂಚೆ. ನೆಲದಲ್ಲಿ ಕೋಲಿನಲ್ಲಿ ತೂತು ಮಾಡಿ, ಅದಕ್ಕೆ ಈ ಔಷಧ ತುಂಬಿಸಿ, ಮಣ್ಣು ಮುಚ್ಚಿದ್ರೆ, ಮಣ್ಣು ವಿಷಯುಕ್ತವಾಗಿ ಕೀಟಗಳ ಹತೋಟಿಯಾಗುತ್ತೆ. ಇದರ ಘಾಟುವಾಸನೆಗೆ ಅಳಿಲು ಹತ್ತಿರ ಬರೋದಿಲ್ಲ. ಏಲಕ್ಕಿಯಲ್ಲಿ ಕಾಂಡ ಕೊರಕದ ಹಾವಳಿ ಸಹಾ ಜಾಸ್ತಿ. ಏಲಕ್ಕಿ ಕಂದುಗಳನ್ನು ಕೊರೆದು ಈ ಕೀಟ ಹಾಳು ಮಾಡುತ್ತೆ. ಇದನ್ನು ಹತೋಟಿ ಮಾಡುವುದಕ್ಕಾಗಿ ಚಳಿಗಾಲದಲ್ಲಿ ತಿಂಗಳಿಗೆ ಒಂದು ಬಾರಿ, Endosulfan, Quinolphos ಹಾಗೂ Monocrotophos ಕೀಟನಾಶಕವನ್ನು alternate ಆಗಿ ಸಿಂಪರಣೆ ಮಾಡಬೇಕು. ಮಳೆಗಾಲದಲ್ಲಿ ೩ spray ಹಾಗೇ ಚಳಿಗಾಲದಲ್ಲಿ ೩ spray ಕೊಟ್ಟರೆ ಕೀಟ ಹತೋಟಿಯಾಗುತ್ತೆ. ಏಲಕ್ಕಿ ಗಿಡಕ್ಕೆ ೮ ರಿಂದ ೧೦ irrigation ಬೇಕು, ವಾರಕ್ಕೆ ಒಂದು ಬಾರಿ. ಜನವರಿ ೧೫ ರಿಂದ ಹಿಡಿದು ಮಳೆಗಾಲದವರೆಗೆ, ಎಕರೆಗೆ ೧ inchನಂತೆ, ೮ ರಿಂದ ೧೦ inch ಮಳೆ ಒಟ್ಟಾರೆ ಕೊಡಬೇಕು. ಇಷ್ಟು ನಿರ್ವಹಣೆ ಮಾಡಿದ್ರೆ ಎಕರೆಗೆ ೧೫೦ kg ಒಣ ಏಲಕ್ಕಿಯನ್ನು ಕುಯ್ಯಬಹುದು. ಏಲಕ್ಕಿ ಹೂ ಬಿಡುವ ಸಮಯ ಜುಲೈನಿಂದ ಆರಂಭವಾಗುತ್ತೆ. ಏಲಕ್ಕಿಯಲ್ಲಿ ಕೊತ್ತು ಬಂದು (panicle) ಹೂವು ಬಿಡುವ ಸ್ಥಿತಿ ತಲುಪಲು ೧೦೦ ದಿವಸ ತೊಗೊಳ್ಳುತ್ತೆ.

ಹೂವು ೧೦೦ ದಿವಸ ಬರುತ್ತೆ. ಹೂವು maturityಗೆ ೧೦೦ ದಿನ ತೊಗೊಳ್ಳುತ್ತೆ. ಸರಿಸುಮಾರು ೫ ರಿಂದ ೬ ತಿಂಗಳು ಖಟಾವಿಗೆ ಬರುತ್ತೆ. ೧೫ ದಿನಕ್ಕೆ ಒಂದು ಬಾರಿ ಖಟಾವು ಮಾಡಬೇಕು. ಹಣ್ಣು ಕಾಯನ್ನು ಮಾತ್ರಾ ಕುಯ್ಯಬೇಕು. ಸರಿಯಾದ ಹಣ್ಣು ಕಾಯಿ ಕುಯ್ದರೆ ನಾಲ್ಕೂವರೆಯಿಂದ ಐದೂವರೆ kg ಹಸಿಕಾಯಿಗೆ ಒಂದು kg ಒಣಕಾಯಿ (ಒಣ ಏಲಕ್ಕಿ) ಸಿಗುತ್ತೆ. ಸುಧಾರಿತ ಬೇಸಾಯ ವಿಧಾನ ಅಳವಡಿಸಿದ್ರೆ ಒಂದು ಎಕರೆಗೆ ೧೫೦ ರಿಂದ ೨೦೦ kg ಒಣ ಏಲಕ್ಕಿ ಕುಯ್ಯಬಹುದು. ಒಂದು ಎಕರೆಗೆ ಅಂದಾಜು ೩೦ ಸಾವಿರ ರೂಪಾಯಿ ಖರ್ಚಾಗಬಹುದು. ಒಂದು kg ಒಣ ಏಲಕ್ಕಿಗೆ ೩೦೦ ರೂಪಾಯಿ ಸಿಕ್ಕಿದ್ರೂ ೬೦ ಸಾವಿರ ರೂಪಾಯಿ ಸಿಕ್ಕಿದಂತಾಗುತ್ತೆ. ಕಡಿಮೆ ಧಾರಣೆ ಇದ್ದಾಗಲೂ ಏಲಕ್ಕಿ ಉತ್ತಮವಾದ ಬೆಳೆ.

ಈ ನಡುವೆ ನಾನು ನಮ್ಮ ತೋಟದಲ್ಲಿ ಅಡಿಕೆ ಕೃಷಿ ಸಹಾ ಆರಂಭಿಸಿದ್ದೇನೆ. ರೊಬಸ್ಟಾ ಕಾಫಿಯ ಜತೆನೇ ಅಡಿಕೆ ಸಹಾ ನೆಡಬಹುದು. ಇವೆರಡು ಬೆಳೆಗೂ root competition ಬರದ ಹಾಗೆ ಮಾಡಬಹುದು. ನನ್ನಲ್ಲಿ RXC ಎನ್ನುವ Robusta variety ನಾಟಿ ಮಾಡಿದ್ದೇನೆ. ಇದನ್ನು ೮ x ೮ spacing ನೆಟ್ರೆ ಸಾಕು. ನಾನು ೧೦' x ೧೦' ಅಂತರದಲ್ಲಿ ಇದನ್ನು ನೆಟ್ಟಿದೇನೆ, ಇದರ ಮಧ್ಯದಲ್ಲಿ ಅಡಿಕೆ ಗಿಡವನ್ನು ಹಾಕಿದ್ದೇನೆ. ಒಂದು ೧೦ ಎಕರೆ ಜಾಗದಲ್ಲಿ ೨೦ ಎಕರೆ ಉತ್ಪತ್ತಿಯನ್ನು ಪಡೀಬಹುದು. ಅಡಿಕೆ, ಕಾಫಿ ಎರಡೂ ಮುಖ್ಯ ಬೆಳೆಯೇ ಆದ್ದರಿಂದ ಉತ್ತಮ ನಿರೀಕ್ಷೆ ಇಡಬಹುದು. ಅಡಿಕೆಯಲ್ಲಿ ಮತ್ತೊಂದು ಮುಖ್ಯವಾದ ಅಂಶ ಅಂದ್ರೆ, ನಾನು ಇತ್ತೀಚೆಗೆ ಸಿರ್ಸಿ ಕಡೆಗೆ ಹೋಗಿದ್ದಾಗ ಅಲ್ಲಿನ ಒಂದು ಅಡಿಕೆ ತೋಟದಲ್ಲಿ ನೋಡಿದೆ. ವರುಷಕ್ಕೆ ಒಂದು ಮರ ಎಷ್ಟು ಗೊನೆ ಬಿಡ್ತಿದೆ, ಈ ಗೊನೆಯಲ್ಲಿ ಎಷ್ಟು ಕಾಯಿಗಳಿವೆ, ನಮ್ಮ ಮೆಚ್ಚುಗೆಗೆ ಆಗುವಂಥ ಇಳುವರಿ ಆ ಗೊನೆಯಲ್ಲಿ ಇದೆಯಾ ನೋಡಿಕೊಂಡು, ಮರ ಒಂದು ಗೊನೆ ಬಿಟ್ಟಾಗ ಕೆಂಪು, ಎರಡನೆಯ ಗೊನೆ ಬಿಟ್ಟಾಗ ಹಳದಿ, ಮೂರನೆಯ ಗೊನೆಗೆ ನೀಲಿ ಹೀಗೆ ಪ್ರತೀ ಮರದ ಮೇಲೆ ಗುರುತು ಮಾಡ್ತಾರೆ. ಯಾವ ಮರ ಮೂರು ವರುಷಗಳ ಕಾಲ ಸತತವಾಗಿ ಎರಡೇ ಗೊನೆ ಬಿಡುತ್ತೋ ಆ ಮರವನ್ನು ಕತ್ತರಿಸಿ ಹಾಕ್ತಾರೆ. ಆ ಜಾಗಕ್ಕೆ ವರುಷಕ್ಕೆ ಐದು ಗೊನೆ ಬಿಡುವ ಮರದಿಂದ ಗೋಟು ಆಯ್ದು ಬೆಳೆಸಿದ ಸಸಿಯನ್ನು ನೆಡ್ತಾರೆ. ಈ ರೀತಿ ಮಾಡಿದಾಗ ಪ್ರತಿಯೊಂದು ಮರವೂ ಉತ್ತಮವಾದ ಇಳುವರಿಯನ್ನು ಕೊಡುತ್ತೆ, ಸ್ವಭಾವತಃ ಉತ್ತಮ ತಳಿಯ ಆಯ್ಕೆಯಾದ್ದರಿಂದ, ಆ ತೋಟದಲ್ಲಿ ಶೇಕಡಾ ೮೦ರಷ್ಟು ಮರಗಳು ನಾಲ್ಕು ಗೊನೆಯನ್ನು ಕೊಡ್ತಿದ್ದು, ಪ್ರತಿ ಎಕರೆಗೆ ೨೦೦೦ kg ಒಣ ಅಡಿಕೆ ಇಳುವರಿ ಬರ್ತಿತ್ತು. ಅವರಿಗೆ ೧೫ ಎಕರೆ ಅಡಿಕೆ ತೋಟ ಇತ್ತು. ಸರಾಸರಿ ೩೦ ಟನ್ ಇಳುವರಿ ಸಿಗ್ತಿತ್ತು. ಈ ವಿಚಾರ ಯಾಕೆ ಇಲ್ಲಿ ಹೇಳ್ತಿದೀನಿ ಅಂದ್ರೆ ನಾವು ಸಂಕೇತಿಗಳಿಗೆ ಅಡಿಕೆ ಮುಖ್ಯಬೆಳೆ. ಇದರೊಳಗೆ ಬಾಳೆ, ಎಲೆಹಂಬು, ಅರಿಸಿನ ಬೆಳೀತೀವಿ. ನಾವು ಇದುವರೆಗೂ ಹಳೆಯ ರೀತಿಯ ಕೃಷಿ ಪದ್ಧತಿಯನ್ನೇ ಅನುಸರಿಸ್ತಾ ಇದೀವಿ. ನಾವು ಹತ್ತು ಕಡೆ ಹೋಗಿ ನೋಡಿದ್ರೆ ಅನುಕೂಲ. ನಾವು ಸಂಕೇತಿಗಳು ಅಡಿಕೆ ಬೆಳೆಯುವ ಜಾಗಕ್ಕೆ ಹೋಲಿಸಿದ್ರೆ, ಸಿರ್ಸಿ ಕಡೆ ಮಳೆಗಾಲ ತುಂಬಾ. ಅಲ್ಲಿ ಶಿಲೀಂಧ್ರದ ಬೆಳವಣಿಗೆ ಜಾಸ್ತಿ. ಇವೆಲ್ಲದಕ್ಕೂ ಅವರು ಉತ್ತರ ಕಂಡುಕೊಂಡು, ಅವರು ನಮಗಿಂತ ಹೆಚ್ಚು ಅಡಿಕೆ ಕುಯ್ದಿದಾರೆ ಅಂದ್ರೆ, ಅವರ ಸಾಮರ್ಥ್ಯವನ್ನು ನಾವು ಮೆಚ್ಚಲೇಬೇಕು. ನಾವು (ಸಂಕೇತಿಗಳು,) ಅಡಿಕೆಯಲ್ಲಿ ಹಿಂದಿನಿಂದಲೂ ಪಾಲಿಸಿದ ವಿಧಾನವನ್ನೇ ಅನುಸರಿಸ್ತಾ ಇದೀವಿ. ಅಡಿಕೆಗೂ ನಾವು ಗೊಬ್ಬರ (N:P:K) ಕೊಡ್ತೀವಿ, ಯಾಕೆ ಕೊಡ್ತೀವಿ ಅನ್ನೋದು ಗೊತ್ತಿಲ್ಲ, ಎಷ್ಟು ಕೊಡಬೇಕು ಅದು ಗೊತ್ತಿಲ್ಲ. ಸುಮ್ಮನೆ ಎಕರೆಗೆ ಎರಡು ಚೀಲ ಹಾಕುತೀವಿ. ಅಗೆತ ಮಾಡಿದಾಗ ಎರಡು ಚೀಲ ತೋಟಕ್ಕೆ ಬಿಸಾಕಿದೆ ಅಂತ vague ಆಗಿ ಉತ್ತರ ಕೊಡ್ತೀವೇ ಹೊರತು, ಯಾಕೆ ಕೊಡಬೇಕು ಗೊತ್ತಿಲ್ಲ. ಅಡಿಕೆ ಗಿಡಕ್ಕೆ ನಾವು ಹೆಚ್ಚು ಕಾಣ್ತಿರೋದು ಅಣಬೆ ರೋಗ. ಈ ರೋಗಕ್ಕೆ ಲಘು ಪೋಷಕಾಂಶಗಳ ಕೊರತೆ ಸಹಾ ಕಾರಣ ಅಂತ ಹಲವು ಸಂಶೋಧನೆಗಳು ತಿಳಿಸಿವೆ. ಈ ಲಘು



'ಕೃಷಿಯ ಬಹುಸಾಧ್ಯತೆ ನಮಗೆ ತಿಳಿಯಬೇಕು' ಕೆ.ಕೆ.ವಿಶ್ವನಾಥ್:ಮಡಿಕೇರಿ


'ಇದು ಏಲಾವನ': ಕೆ.ಕೆ.ವಿಶ್ವನಾಥ್:ಮಡಿಕೇರಿ

ಪೋಷಕಾಂಶಗಳ ಬಗ್ಗೆ ನಮ್ಮಲ್ಲಿ ತಿಳಿದವರು ಬಹಳ ಕಡಿಮೆ. ಆದ್ದರಿಂದ ನಾವು ನಮ್ಮ ಸುತ್ತಮುತ್ತಲಿನವರ ಜತೆ ಬೆರೆತು, ಸಂಶೋಧನಾ ಕೇಂದ್ರಗಳಿಗೆ ಹೋಗಬೇಕು, ಅವರ ಜತೆ ಕುಳಿತು ಚರ್ಚಿಸಿ ನಮ್ಮ ಉತ್ಪತ್ತೀನ ಜಾಸ್ತಿ ಮಾಡಿಕೊಂಡ್ರೆ ನಮಗೇ ಅನುಕೂಲ. ಹಾಗೇ ನಮ್ಮ ಸಣ್ಣ ಸಣ್ಣ ಹಿಡುವಳೀಲಿ ದುಪ್ಪಟ್ಟು ಇಳುವರೀಪಡೀಬಹುದು. ಒಂದು ೫೦% extra ಖರ್ಚು ಮಾಡಿದ್ರೆ ೧೦೦% extra ಪಡೀಬಹುದು ಅಂತ ನನ್ನ ಅನಿಸಿಕೆ.

ಕಾಫಿ ತೋಟದಲ್ಲಿ ನಾವು ವೆನಿಲ್ಲಾ ಬೆಳೀಬಹುದು. ವೆನಿಲ್ಲಾವನ್ನು ನನ್ನ ಮಟ್ಟಿಗೆ, ಒಂದು poly house ಒಳಗೆ ಬೆಳೆಯುವುದು ಉತ್ತಮ. ಯಾಕೇಂದ್ರೆ ಅಲ್ಲಿ ಭದ್ರತೆ ಇರುತ್ತೆ. ಬೇರೆ ಬೆಳೆಯಲ್ಲಿ ಫಸಲನ್ನು ಮಾತ್ರ ಕದೀತಾರೆ, ಈ ವೆನಿಲ್ಲಾದಲ್ಲಿ ಬಳ್ಳೀನೂ ಕದೀತಾರೆ. ಹಾಗಾಗಿ ವೆನಿಲ್ಲಾ ಕೃಷಿಗೆ poly house ಉತ್ತಮ. ಕಾಫಿ ತೋಟದಲ್ಲಿ ನಾವು ಆರಂಭದಲ್ಲಿ ಅನಾನಸ್ ಸಹಾ ಬೆಳೀಬಹುದು. ಹಾಗೇ ಕಾಫಿಯ ಆರಂಭದ ದಿನಗಳಲ್ಲಿ ನಾನು ಶುಂಠಿ ಸಹಾ ಬೆಳೆದಿದೀನಿ. ಕಾಫಿ ನೆಟ್ಟ ಮರು ವರುಷ ನಾವು ಶುಂಠಿ ಬೆಳೆದ್ರೆ ಕಾಫಿ ತೋಟಕ್ಕೆ ಉತ್ತಮ ವ್ಯಾವಸಾಯಿಕ ಕೆಲಸ ಆಗುತ್ತೆ. ಮುಂದಿನ ಮೂರು ವರುಷದ ಕಾಫಿ ತೋಟದ ನಿರ್ವಹಣೆಗೆ ಅಗತ್ಯವಾದ ಹಣವನ್ನು ನಾವು ಒಂದು ವರುಷದ ಶುಂಠಿ ಬೆಳೆಯಲ್ಲಿ ಪಡೀಬಹುದು. ಆದ್ರೆ ಶುಂಠಿಯನ್ನು ಒಂದು ಸಾರಿ ಮಾತ್ರ ಬೆಳೀಬೇಕು. ಯಾಕೇಂದ್ರೆ ಮಣ್ಣಿನ ಫಲವತ್ತತೆಯನ್ನು ಅದು ಅಷ್ಟು ಹೀರಿಬಿಡುತ್ತೆ. ಒಂದು ವರುಷ ಶುಂಠಿ ಹಾಗೇ ಒಂದು ವರುಷ ಅನಾನಸ್ ಬೆಳೀಬಹುದು.

ನಾನು manage ಮಾಡುವ ದ್ವಾರಕಾ ಎಸ್ಟೇಟಿನಲ್ಲಿ ಈ ನಡುವೆ, ಧಾರಣೆ ಕುಸಿತದ ಚರ್ಚೆ ಬಂತು. ನಮಗೆ ಪರ್ಯಾಯ ಬೆಳೆಯಾಗಿ ಆಗ ಸಿಕ್ಕಿದ್ದು ಆಂಥೂರಿಯಂ ಹೂವಿನ ಬೆಳೆ. ಇದಕ್ಕೆ ಒಳ್ಳೆಯ ಮಾರುಕಟ್ಟೆ ಇದೆ, ಇದನ್ಯಾಕೆ ಬೆಳೀಬಾರದು ಅಂತ ಐದಾರು ವರುಷದ ಹಿಂದೆ ಯೋಚನೆ ಮಾಡಿದ್ವಿ. ಆಂಥೂರಿಯಂ ಹೂವಿನ ಕೃಷಿ ಕೊಡಗಿನ ವಾತಾವರಣಕ್ಕೆ ಅತ್ಯಂತ ಚೆನ್ನಾಗಿ ಬರುತ್ತೆ ಅನ್ನುವ ವಿಚಾರ ಸಿಕ್ತು. ಯಾಕೇಂದ್ರೆ ಕೊಡಗಿನಲ್ಲಿ ಎಲ್ಲರ ಮನೆಯಲ್ಲೂ ನಾವು ಒಂದೊಂದು ಆಂಥೂರಿಯಂ ಗಿಡವನ್ನು ಎಷ್ಟೋ ವರುಷದಿಂದ ಕಂಡಿದ್ದೇವೆ. ಆ ಗಿಡಗಳೆಲ್ಲವೂ ಚೆನ್ನಾಗಿ ಬೆಳೆದಿವೆ. ಹಾಗಾಗಿ ನಾವು large scaleನಲ್ಲಿ ಬೇಸಾಯ ಆರಂಭಿಸಿದ್ವಿ. ಈ ಆಂಥೂರಿಯಂ ಬೆಳೆಗೆ ಮಣ್ಣು ಮುಖ್ಯ ಅಲ್ಲ. ಜಮೀನು ತೀರಾ slope ಇದ್ರೆ ಕೃಷಿ ಮಾಡಲು ಕಷ್ಟ. ಆಂಥೂರಿಯಂ ಅನ್ನು poly house ಒಳಗೆ ಬೆಳೆಯಬೇಕು. Controlled conditions ಇರಬೇಕು. ಆಂಥೂರಿಯಂ ಒಂದು ಆರ್ಕಿಡ್ ಜಾತಿಗೆ ಸೇರಿರುವ ಸಸ್ಯವಾದ್ದರಿಂದ ಮಣ್ಣಿನಲ್ಲಿ ಇದರ ಬೇಸಾಯ ಕಷ್ಟ. ಇದು ಮರಗಳ ಕಂಕುಳಲ್ಲಿ ಬೆಳೆಯುವ ಪರಾವಲಂಬಿ ಗಿಡ. ಇದರದ್ದು ಗಾಳಿ ಬೇರುಗಳು ಆದ್ದರಿಂದ ಬೇರುಗಳಿಗೆ ಗಾಳಿ ಸಂಚಾರದ ಅಗತ್ಯ ತುಂಬಾ ಇದೆ. ತೆಂಗಿನ ಮಟ್ಟೆಯ ಮೇಲೆ, ತೆಂಗಿನ ನಾರಿನ ಹುಡಿಹಾಕಿ ಈ ಮಾಧ್ಯಮದಲ್ಲಿ ಆಂಥೂರಿಯಂ ಅನ್ನು ತುಂಬಾ ಉತ್ತಮವಾಗಿ ಬೆಳೆಯಬಹುದು. ಮಣ್ಣಿನಲ್ಲಿ ಬೆಳೆದಾಗ ಬೇರು-ಕೊಳೆರೋಗ ಹಾಗೂ ಬ್ಯಾಕ್ಟೀರಿಯಲ್ ಬ್ಲೈಟ್ ರೋಗಗಳು ಬರೋದು ಜಾಸ್ತಿ. ಸಗಣಿ ಗೊಬ್ಬರ ಹಾಗೇ ಕಾಡುಮಣ್ಣನ್ನು ಇದರಲ್ಲಿ ಬಳಸುವುದು ಸೂಕ್ತವಲ್ಲ. ಒಂದು ಎಕರೆಗೆ ೪೦ ಸಾವಿರ ಗಿಡ ನಾಟಿ ಮಾಡಬಹುದು. ಒಂದು square meterಗೆ ೧೪ ಗಿಡ ಕೂರುತ್ತೆ, 30cm x 20cm ಅಳತೆಯಲ್ಲಿ ಇದನ್ನು ನಾಟಿ ಮಾಡಬೇಕು. ಆಂಥೂರಿಯಂಗೆ ನೆರಳು ಹಾಗೂ ನೀರಾವರಿ ಬಹಳ ಮುಖ್ಯವಾದದ್ದು. ಶೇಕಡಾ ೫೦ಕ್ಕಿಂತ ಹೆಚ್ಚು ನೆರಳಿರಬಾರದು. ಹೆಚ್ಚು ನೆರಳಾದ್ರೆ ಬರೀ vegetative growth ಇರುತ್ತೆ, productive growth ಇರೋದಿಲ್ಲ. ಇದನ್ನು ಬೆಳೆಯೋರು ಹೂವಿನ ಮಾರಾಟಕ್ಕೆ ಮುಂಚೇನೇ ವ್ಯವಸ್ಥೆ ಮಾಡಿಕೊಂಡಿರಬೇಕು. ಯಾಕೇಂದ್ರೆ ಹೂವನ್ನು ಖಟಾವು ಮಾಡಿದ ತಕ್ಷಣ ಅದನ್ನು ಮಾರಬೇಕು, ಸಂಗ್ರಹಿಸುವ ಹಾಗಿಲ್ಲ. ಹೂವು mature ಆದ ಮೇಲೆ fieldನಲ್ಲಿ ಇಡಲು ಸಾಧ್ಯವಿಲ್ಲ. ಇವತ್ತು ಹೂವನ್ನು ಕುಯ್ದರೆ ಇವತ್ತೇ ಮಾರಬೇಕು. ಈ ಹೂವಿನ ಮಾರಾಟಕ್ಕೂ

ತೊಂದರೆಯಿಲ್ಲ, ಬೆಂಗಳೂರಿನಲ್ಲಿ ಬಹಳಷ್ಟು ಜನ ಈ ಹೂವಿನ exporters ಇದಾರೆ, ಉತ್ತಮ ಧಾರಣೆ ಕೊಟ್ಟು ಹೂವನ್ನು ಕೊಳ್ತಾ ಇದಾರೆ. ಸರಿಸುಮಾರು ೪೦ ಸಾವಿರ ಗಿಡಗಳಿಗೆ, ವರುಷಕ್ಕೆ ಎರಡು ಲಕ್ಷ ಹೂವು ಸಿಗುತ್ತೆ. ಮೊದಲನೆಯ ವರುಷ ಒಂದು ಹೂವಿಗೆ ೮ ರೂಪಾಯಿ ಸಿಗುತ್ತೆ. ೧೬ ಲಕ್ಷ ರೂಪಾಯಿ ಆದಾಯ ಗಳಿಸಬಹುದು. ಎರಡನೆಯ ವರುಷದಿಂದ ಒಂದು ಹೂವಿಗೆ ಹತ್ತು ರೂಪಾಯಿವರೆಗೆ ಸಿಗುತ್ತೆ. ೨೦ ರಿಂದ ೨೨ ಲಕ್ಷ ರೂಪಾಯಿವರೆಗೆ ಆದಾಯ ಗಳಿಸಬಹುದು. ಆಂಥೂರಿಯಂ ಕೃಷಿ ಎಲ್ಲರ ಕೈಗೂ ನಿಲುಕುವಂತಹದಲ್ಲ. ಕನಿಷ್ಠ ೨೦ ಸಾವಿರ ಗಿಡವನ್ನಾದರೂ ನೆಡಬೇಕು. ಯಾಕೇಂದ್ರೆ ಒಂದು ಸಾರಿ ಖಟಾವು ಮಾಡಿದ್ರೆ ಐದು ನೂರು ಹೂವಾದ್ರೂ ಸಿಗಬೇಕು. ಇಲ್ಲದಿದ್ರೆ ಇದು viable project ಆಗೋಲ್ಲ. ಸಾಧಾರಣ ಒಂದು ಗಿಡಕ್ಕೆ ೧೨೫ ರೂಪಾಯಿ ಧಾರಣೆ ಇದೆ. ಸುಮಾರು ೨೦ ಸಾವಿರ ಗಿಡಕ್ಕೆ ೨೫ ಲಕ್ಷ ರೂಪಾಯಿ ಬೇಕು. ಮತ್ತೆ, shade net ಹಾಗೂ poly sheetಗೆ ಐದು ಲಕ್ಷ ರೂಪಾಯಿ. ಈ ಗಿಡ ಬೆಳೆಯಲು ಬೇಕಾಗುವ ಮಾಧ್ಯಮ, ತೆಂಗಿನ ನಾರಿನ ಹುಡಿ ಹಾಗೂ ಕಾಯಿಮಟ್ಟೆಯನ್ನೂ ಒಂದು ಹಾಸಿಗೆಯಾಗಿ ಹಾಕಲು retaining wall ಬೇಕು. ಇದನ್ನು ನಾವು 'L' Blocks ಅಂತೀವಿ. ಇವಕ್ಕೆಲ್ಲಾ ೧ ಲಕ್ಷದ ೭೫ ಸಾವಿರ ಆಗುತ್ತೆ. ಇದಲ್ಲದೆ, ನೀರಿನ ವ್ಯವಸ್ಥೆಗಾಗಿ ಒಂದು ಸರಿಯಾದ water tank ಮಾಡಬೇಕು. Drip irrigation system, ನೀರನ್ನು pump ಮಾಡಲು ಯಂತ್ರ ಬೇಕು. ಹಾಗೇ misting system ವ್ಯವಸ್ಥೆ ಸಹಾ poly houseನಲ್ಲಿ ಇರಬೇಕು. ಈ ಹೂವಿಗೆ ಮಂಜಿನ ಮಳೆಯಂತೆ ನೀರು ಬೀಳುವ ವ್ಯವಸ್ಥೆ ಬೇಕು. ಇವೆಲ್ಲದಕ್ಕೂ ಮೂರು ನಾಲ್ಕು ಲಕ್ಷ ಬೇಕಾಗುತ್ತೆ. ಒಟ್ಟು ೩೫ ಲಕ್ಷ ರೂಪಾಯಿ ಬಂಡವಾಳ ಬೇಕಾಗಬಹುದು. ಈ project viability ನಾವು ಲೆಕ್ಕ ಮಾಡಿದ್ರೆ, ಬಂಡವಾಳದ ಶೇಕಡಾ ೨೫ರಷ್ಟು ಬ್ಯಾಂಕ್ ಸಾಲ ಪಡೆದ್ರು ಸಹ, ಬಂದ ಆದಾಯವನ್ನು ನಾವು ಉಪಯೋಗಿಸದೆ ಪುನಃ ಬೇಸಾಯಕ್ಕೇ ಬಳಸಿದಲ್ಲಿ, ಆರರಿಂದ ಏಳು ವರುಷದಲ್ಲಿ ನಾವು ಹಾಕಿದ ದುಡ್ಡು ನಮಗೆ ವಾಪಸ್ಸು ಸಿಗುತ್ತೆ. ಇದು ಉತ್ತಮ ಆದಾಯ ನೀಡುವ ಪರ್ಯಾಯ ಬೆಳೆ.

ಇಂದು ಏನಾಗಿದೆ ಅಂದ್ರೆ, ನಮ್ಮ ಸಂಕೇತಿಗಳಲ್ಲಿ ಕೃಷಿ ಚಟುವಟಿಕೆ ಒಂದನ್ನು ಬಿಟ್ಟು, ಇತರ ವ್ಯಾಪಾರದಲ್ಲಿ, ವೈದ್ಯವೃತ್ತಿಯಲ್ಲಿ, software ಉದ್ಯಮದಲ್ಲಿ, ಎಲ್ಲಾ ಕ್ಷೇತ್ರದಲ್ಲೂ ಅತ್ಯಂತ ಮುಂದುವರಿದ ವಿಚಾರಗಳನ್ನು ಅಳವಡಿಸಿಕೊಂಡಿದ್ದಾರೆ. ಅತ್ಯಂತ ಯಶಸ್ವಿಯಾಗಿದ್ದಾರೆ. ಆದ್ರೆ ಕೃಷಿ ವಿಚಾರದಲ್ಲಿ ಮಾತ್ರ, ನಿದ್ರೆ ಮಾಡುತ್ತಿರುವ ಹಾಗೆ ನಟಿಸುತ್ತಿದ್ದಾರೆ. ಇದ್ರಿಂದ ಹ್ಯಾಗೆ ಹೊರಗೆ ಬರಬಹುದು ನನಗೆ ತಿಳೀತಿಲ್ಲ. ನಾವು ಕೃಷಿಯಲ್ಲಿ ಎಲ್ಲಾ ತಿಳಿದಿದ್ದೇವೆ ಅಂತ ನಾವು ಅಂದುಕೊಂಡಿದೇವೋ, ಅಥವಾ ನಮಗೆ ಈಗ ಪಡೀತಾ ಇರುವ ಇಳುವರಿ ಸಾಕು ಅನ್ನಿಸಿದೆಯೋ ಹೇಳಲು ಆಗ್ತಿಲ್ಲ. ಹಾಗೆ ನಾವು ಇತಿಹಾಸ ಗಮನಿಸಿದ್ರೆ ಎಲ್ಲವೂ ಬದಲಾಗಿದೆ. ನಾವು ಎತ್ತಿನಗಾಡಿಯಿಂದ Jet ಯುಗಕ್ಕೆ ಬಂದಿದೀವಿ. ಕೃಷಿಯಲ್ಲೂ ಸಹ ಬದಲಾಗುತ್ತಿರುವ ವಾತಾವರಣಕ್ಕೆ ಅನುಗುಣವಾಗಿ ನಾವು ಹೋಗಬೇಕು ಅನ್ನುವುದು ನನ್ನ ಅನಿಸಿಕೆ. ನಾವು ಹತ್ತು ದಿಕ್ಕಿನಿಂದ ಬರುವ ವಿಚಾರಗಳನ್ನು ವಿಮರ್ಶೆ ಮಾಡಿ ಸ್ವೀಕರಿಸಬೇಕು. ನಾವು ದೇಹಕ್ಕೆ ಹೆಚ್ಚು ಶ್ರಮ ಕೊಡ್ತಾ ಬಂದಿದೀವಿ. ಆದ್ರೆ ನಮ್ಮ ಬುದ್ಧಿಗೆ ಹೆಚ್ಚು ಶ್ರಮ ಕೊಡ್ತಿಲ್ಲ. ನಾವು ಮೆದುಳಿಗೆ ಹೆಚ್ಚು ಶ್ರಮ ಕೊಟ್ಟರೆ ಈಗ ಮಾಡ್ತಿರುವುದಕ್ಕಿಂತಲೂ ಮತ್ತೂ ಉತ್ತಮವಾಗಿ ಬೇಸಾಯ ಮಾಡಬಹುದು ಅಂತ ನನ್ನ ಅನಿಸಿಕೆ.


'ನನ್ನ ಕೃಷಿವಿಹಾರದ ವಿಸ್ತಾರವಿದು': ಕೆ.ಕೆ.ವಿಶ್ವನಾಥ್:ಮಡಿಕೇರಿ

ನಾನು ನನ್ನ ಮದುವೆಗಿಂತ ಮುಂಚಿತವಾಗಿಯೇ ಕೃಷಿ ಆರಂಭಿಸಿದ್ದು. ಆಗ ನನ್ನ ತಾಯಿಯ ಸಹಕಾರ ಸಿಕ್ತಿತ್ತು. ಈಗ ನನ್ನ ಹೆಂಡತಿ, ಬೆಟ್ಟದಪುರದ ಅನಂತರಾಮಯ್ಯ ಹಾಗೂ ಎಳ್ಳೇಶಪುರದ ಸಾವಿತ್ರಮ್ಮ ದಂಪತಿಗಳ ಮಗಳಾದ ಸಿ.ಎ.ರಾಧಿಕಾ ಸಹ ಸ್ಪಂದಿಸುತ್ತಾ ಇದಾಳೆ. ನನ್ನ ಕೃಷಿ ಕೆಲಸದಲ್ಲಿ ಹಗಲು, ರಾತ್ರಿ ಇಲ್ಲ. ನೀರಾವರಿ ಸಮಯ ಬಂದಾಗ ನಾನು ಮನೆಗೆ ಬರುವುದು ರಾತ್ರಿ ಒಂದು ಘಂಟೆಗೆ.

ಅಂಥ ಸಂದರ್ಭದಲ್ಲೂ 'ಯಾಕೆ ತಡವಾಗಿ ಬಂದ್ರಿ, ನಾನು ಎಲ್ಲೋ ಹೋಗುವುದಿತ್ತು' ಎಂದು ನನ್ನ ಹೆಂಡತಿ ಕೇಳಿಲ್ಲ. ಅವಳ ಬೇಕು ಬೇಡಗಳನ್ನು ನನ್ನ ಮೇಲೆ ಇದುವರೆವಿಗೂ impose ಮಾಡಿಲ್ಲ. ಆ ವಿಚಾರದಲ್ಲಿ ನಾನು ಭಾಗ್ಯವಂತನೇ. ಯಾಕೇಂದ್ರೆ ಇವತ್ತಿನ ಸಂಕೇತಿ ಸಮಾಜದ ಹೆಣ್ಣುಮಕ್ಕಳಲ್ಲಿ ನಾನು ಏನು ಕಾಣ್ತಿದೀನಿ ಅಂದ್ರೆ, ಅದು ಸ್ವಾರ್ಥ ತುಂಬಿದ ಚಿಂತನೆಗಳು ಅಂದ್ರೆ ತಪ್ಪಾಗಲಾರದು. ನಾವು ಇದಕ್ಕೆ ತಂದೆ ತಾಯಂದಿರನ್ನೇ ದೂಷಿಸಬೇಕು, ಯಾಕೆ ಅಂದ್ರೆ ನಾನು ಒಬ್ಬ ಹೆಣ್ಣು ಮಗುವಿನ ತಂದೆ. ನಾಳೆ ನನ್ನ ಮಗಳಿಗೆ ಮದುವೆ ಆಗುತ್ತೆ. ಅವಳ ಗಂಡನ ಮನೆಗೆ ಹೋಗ್ತಾಳೆ. ಅಲ್ಲಿ ಅತ್ತೆ, ಮಾವಂದಿರು ಇರ್ತಾರೆ. ಅವರಿಗೆ ಹುಷಾರಿಲ್ಲದ ಸಂದರ್ಭದಲ್ಲಿ, ಅವರನ್ನು ನೋಡಿಕೊಳ್ತಾಳಾ? ತಂದೆ ತಾಯನ್ನು ಹೇಗೆ ಸ್ವೀಕರಿಸಿದ್ದಾಳೋ ಅದೇ ರೀತಿ ಅತ್ತೆ ಮಾವಂದಿರನ್ನು ಸ್ವೀಕರಿಸುತ್ತಾಳಾ? ಇಂದು ನಾನು ನನ್ನನ್ನೇ ಪ್ರಶ್ನೆ ಮಾಡಿಕೊಳ್ಳಬೇಕು. ಇವತ್ತು ನಾವು ನಮ್ಮ ಹೆಣ್ಣುಮಕ್ಕಳನ್ನೂ ಸರಿಯಾಗಿ ಬೆಳೆಸ್ತಾ ಇಲ್ಲ. ನಾವು ನಮ್ಮ ಹೆಣ್ಣುಮಕ್ಕಳನ್ನು ಅತ್ತೆ ಮಾವಂದಿರ ಮನೆಗೆ ಕಳಿಸುವುದಕ್ಕಿಂತ ಮುಂಚೆನೇ financial strength ಕೊಟ್ಟಿರ್ತೇವೆ. ಏನು! ಗಂಡ ಏನು ಸಾಕಬೇಕು ನನ್ನ, ನಾನು ನನ್ನ ಕಾಲ ಮೇಲೆ ನಿಂತುಕೊಳ್ಳಲು ಸಾಧ್ಯವಿಲ್ಲವಾ? ಅವನ ದುಡ್ಡಿನಿಂದಲೇ ಆಗಬೇಕಾ? ಗಂಡನಿಂದಲೇ ದಿನಾ ಬೆಳಕಾಗೋದಾ? ಅವನ ಅಪ್ಪ-ಅಮ್ಮ ಇಲ್ಲದೇ ಹೋದರೆ ನಮಗೆ ಜೀವನ ಮಾಡಲು ಆಗೋಲ್ವಾ? ಈ ತರಹದ ಮನೋಭಾವನೆ ಅವರಲ್ಲಿ ಬೆಳೆದಿರುತ್ತೆ, ನಾವು ಬೆಳೆಸಿರ್ತೀವಿ. ಈ mentality ಪಕ್ಕಕ್ಕೆ ಇಡಬೇಕು ಅಂತ ನನಗೆ ಅನ್ನಿಸುತ್ತೆ. ಯಾಕೇಂದ್ರೆ, ಹಿಂದಿನ ಪೀಳಿಗೇಲೆ ಈ ಮನೋಭಾವನೆ ಬೆಳೆದಿದ್ರೆ, ನಾವು ಇಂದು ಈ ಸ್ಥಿತಿ ಮುಟ್ಟಲು ಆಗ್ತಿತ್ತಾ? ಅದನ್ನು ನಾವು ಪ್ರಶ್ನೆ ಮಾಡಬೇಕು. ನೈತಿಕವಾಗಿ ನಾವು ಹೆಣ್ಣುಮಕ್ಕಳಿಗೆ ತಾಯ್ತನದ ಬಗ್ಗೆ, ಕುಟುಂಬ ಕಟ್ಟುವುದರ ಬಗ್ಗೆ ಸರಿಯಾದ ಮಾಹಿತಿ ನೀಡಬೇಕೇ ಹೊರತು ಇತರ ವಿಚಾರಗಳನ್ನಲ್ಲ. ತ್ಯಾಗ ಹೆಣ್ತನದ ಮೊದಲ ಮೆಟ್ಟಿಲು. ತನ್ನ ಮಗುವನ್ನು ಹೆರುವಾಗಲೇ ತಾಯಿ ತನ್ನ ಜೀವನ್ಮರಣದ ಹೋರಾಟ ನಡೆಸಿರ್ತಾಳೆ. ಆದರೂ ತಾಯಿ ಖುಷಿಪಡ್ತಾಳೇ ಹೊರತು ದುಃಖಪಡೋದಿಲ್ಲ. ಅಂಥ ಮನೋಭಾವವನ್ನು ನಾವು ಮಕ್ಕಳಲ್ಲಿ ಬೆಳೆಸಬೇಕು. ಹೆಣ್ಣು ಮಗು ಬೆಳೀತಾ ಬೆಳೀತಾ ಕೇಳೋದು ನನಗೆ ಒಂದು ಮಗು ಬೇಕು ಅಂತಾ, ಕಾರು ಬೇಕು ಅಂತ ಕೇಳೋದಿಲ್ಲ! ನಾನು ತಾಯ್ತನಕ್ಕಾಗಿ ಹುಟ್ಟಿರೋದು ಅಂತ ಸಣ್ಣ ಮಗು ತೋರಿಸಿದಾಗ ನಾವು ಏನು ಮಾಡ್ತೀವಿ, ಈ ಬೊಂಬೆ ಜತೆ ಯಾಕೆ ಆಡ್ತೀಯಾ, ಬಾ ನಿನಗೆ ಚಾಕೊಲೇಟ್ ಕೊಡಿಸ್ತೀನಿ, ice cream ಕೊಡಿಸ್ತೀನಿ ಅಂತ ಹೇಳ್ತೀವಿ. ಅಪ್ಪ ಮನೆಗೆ ಬಂದಾಗ, ಆ ಮಗು ಅಪ್ಪನ ಕೈಯಲ್ಲಿ ಏನಿದೆ ಅಂತ ಹುಡುಕುತ್ತದೆಯೇ ಹೊರತು, 'ಅಪ್ಪಾ, ಮನೆಗೆ ಬಂದ್ಯಾ ಬಾ, ಸುಸ್ತಾಯ್ತಾ' ಅಂತ ಎಷ್ಟು ಜನ ಹೆಣ್ಣುಮಕ್ಕಳು ಮನೇಲಿ ಕೇಳ್ತಾರೆ? ಪ್ರತಿ ಮಗೂನೂ ಅಪ್ಪ ನನಗೇನು ತಂದೆ ಅಂತ ಕೇಳೋದನ್ನೇ ಪ್ರತೀ ಮನೇಲೂ ನೋಡ್ತೀವಿ. ಮಕ್ಕಳು ನಮ್ಮನ್ನು ಇಷ್ಟಪಡಬೇಕೇ ಹೊರತು ನಾವು ತರುವ ವಸ್ತುವಿನಿಂದಲ್ಲ. ಲಂಚದ ಪ್ರವೃತ್ತಿಯನ್ನು ನಾವು ಸಣ್ಣವಯಸ್ಸಿನಿಂದ ಮಕ್ಕಳಲ್ಲಿ ಬೆಳೆಸ್ತೀವಿ. ನಮಗೆ ಏನು, ಮಗು ನಾನು ಬಂದಾಕ್ಷಣ greet ಮಾಡಬೇಕು ಅಂತ ಹೇಳಿ ಹೀಗೆ ಮಾಡ್ತೀವಿ. ನಮಗೆ ಪುರುಸೊತ್ತಿಲ್ಲ ಅವಳನ್ನು ಸಮಾಧಾನವಾಗಿ ಮಾತನಾಡಿಸಲು, ಹಾಗಾಗಿ ನಾವು ಬಂದಾಗ ನಮ್ಮ ಮಗುವಿನ ನಗುವನ್ನು ನೋಡುವ ಸಲುವಾಗಿ ಲಂಚದ ಮೊರೆ ಹೋಗ್ತೀವಿ. ಅದರ ಬದಲು ಮಗುವಿಗಾಗಿ ಸ್ವಲ್ಪ ಸಮಯ ಮೀಸಲು ಇಡೋದೇ ಒಳಿತು. ಹಾಗೇ - ಹೆಣ್ಣುಮಕ್ಕಳಿಗೆ, ಅಪ್ಪ, ಅಮ್ಮ, ಅತ್ತೆ ಮಾವಂದಿರ ಬಗ್ಗೆ, ಗಂಡನ ಬಗ್ಗೆ, ತಾಳ್ಮೆ ಸಹನೆಯ ಬಗ್ಗೆ, ಸಮಾಧಾನದಿಂದ ಜೀವನ ನಡೆಸುವುದರ ಬಗ್ಗೆ ಇನ್ನೊಬ್ಬರ ಜತೆ ಅನುಸರಿಸಿಕೊಂಡು ಹೋಗುವುದರ ಬಗ್ಗೆ ಸ್ವಲ್ಪ ನಾವು ವಿಮರ್ಶೆ ಮಾಡಿ ಹೇಳಿಕೊಟ್ಟರೆ ಒಳ್ಳೆಯದು ಅಂತ ನನಗೆ ಅನ್ನಿಸುತ್ತೆ. ಎಷ್ಟೋ divorce caseಗಳು ಇದೇ ಸಲುವಾಗಿ ಆಗಿವೆ. ನಾವು ನಮ್ಮ ಹೆಣ್ಣುಮಕ್ಕಳನ್ನು ಬೆಳೆಸುವುದರಲ್ಲಿ ಎಲ್ಲೋ ತಪ್ಪು ಮಾಡ್ತಿದೀವಿ ಅಂತ ಅನ್ನಿಸುತ್ತೆ. ನಮ್ಮ ನೆಂಟರು ಇಷ್ಟರ, ಸ್ನೇಹಿತರ ಜೀವನವನ್ನು ನೋಡಿದಾಗ ನನಗೆ ಹಾಗೆ ಅನ್ನಿಸಿದೆ. ಸೂಕ್ತ ಶಿಕ್ಷಣದಿಂದ ಇದನ್ನು ಸರಿಪಡಿಸಬಹುದು. ಜೀವನದ ನಿಜವಾದ ಮೌಲ್ಯಗಳ ಅರಿವಾದಾಗ ಬದುಕು ಸುಂದರವಾಗುತ್ತೆ.

ಇವತ್ತು ಮತ್ತೊಂದು ಪರಿಸ್ಥಿತಿ ಬಂದಿದೆ. ಗ್ರಾಮೀಣ ಜಾಗಗಳಲ್ಲಿ ನೆಲೆಸಿರುವ ಯುವಕರಿಗೆ ಹೆಣ್ಣು ಸಿಗದ ಪರಿಸ್ಥಿತಿ. ನಮ್ಮ ನೈಜ ಮೌಲ್ಯಗಳನ್ನು ಬಿಡ್ತಾ ಇರೋದೇ ಇದಕ್ಕೆ ನಿಜವಾದ ಕಾರಣ. ನಾನು ಶುದ್ಧವಾದ ರೈತ. ಆದರೂ ನಮ್ಮ ನೆಂಟರು ಇಷ್ಟರಿಂದ, ಮನೇಲಿ, ಹಾಗೇ ಹೆಂಡ್ತಿಯಿಂದ ಅಸಹಕಾರ ಸಿಗಲಿಲ್ಲ. ಉತ್ತಮವಾಗಿಯೇ ನಾನು ಜೀವನ ಸಾಗಿಸ್ತಾ ಇದೀನಿ. ಕಷ್ಟಸಹಿಷ್ಣುತೆ ದಂಪತಿಗಳಲ್ಲಿ ಬಂದಾಗ ಕುಟುಂಬ ಹಿತಕರವಾಗಿರುತ್ತೆ. ಹುಡುಗನಿಗೆ ಸಿಗದಿರುವಷ್ಟು financial freedom ಹುಡುಗಿಗೆ ಸಿಗ್ತಾ ಇದೆ. Power with responsibility ಅನ್ನೋದನ್ನು ನಾವು ಅಳವಡಿಸಿಕೊಂಡಾಗ ಬೆಳವಣಿಗೆ ಪರಿಪೂರ್ಣವಾಗುತ್ತೆ.

ಈ ನಡುವೆ, ಕಳೆದ ಮೂರು ವರುಷದಿಂದ ನಾನು Agricultural consulting ಸಹಾ ಮಾಡ್ತಿದೀನಿ. ನನ್ನ ತೋಟವೂ ಸಹಾ ಇನ್ನೂ

ಪೂರ್ಣಪ್ರಮಾಣದ ಫಸಲಿಗೆ ಬರದೇ ಇದ್ದುದರಿಂದ ಬೇರೇ opportunity ಸಹಾ ನಾನು ನೋಡ್ತಿದ್ದೆ. ನನ್ನ ಸ್ನೇಹಿತರೂ ಸಹಾ "ನೀನು ಇಷ್ಟೆಲ್ಲಾ ತಿಳಿದಿದ್ದೀಯಾ, ನೀನು ನಮ್ಮ ತೋಟ ಯಾಕೆ ನಿರ್ವಹಣೆ ಮಾಡಬಾರದು" ಅಂತ ಕೇಳಿದ್ರು. ಇದು ನನ್ನ good luck ಅಂತಾನೇ ಹೇಳಬಹುದು. ಇನ್ನೂ ಹೇಳಬೇಕು ಅಂದ್ರೆ ನಾಯೂ ಕಾದಿತ್ತು, ಹಿಟ್ಟೂ ಹಳಸಿತ್ತು ಅನ್ನುವ ಪರಿಸ್ಥಿತೀಲೇ ಇದ್ದೆ ನಾನು. ಅವಕಾಶ ಸಿಕ್ಕಿದಾಗ ಅದನ್ನು ಸೂಕ್ತವಾಗಿ ಬಳಸಿದೆ. ಮೊದಲು ನನ್ನ ಸ್ನೇಹಿತರ ತೋಟ ನೋಡಲು ಶುರು ಮಾಡಿದೆ. ಅದೇ ರೀತಿ, ನನ್ನ ನಿರ್ವಹಣೆ ನೋಡಿ, ಮತ್ತೂ ನಾಲ್ಕಾರು ತೋಟಗಳು ಬಂದ್ವು. ಈಗ ನನಗೆ financial relief ಸಿಕ್ಕಿದೆ. ಈಗ ಕಾಫಿ ಬೆಳೆಗಾರರು ಸಂಕಷ್ಟದಲ್ಲಿದಾರೆ. ಕಾಫಿ ತೋಟದಿಂದ ಬರುವ ಆದಾಯದಲ್ಲಿ, ಇಲ್ಲಾ ತೋಟ ನಿರ್ವಹಣೆ ಮಾಡಬಹುದು ಅಥವಾ ಮನೆ ನಿರ್ವಹಣೆ ಮಾಡಬಹುದು. ಇಂತಹ ಪರಿಸ್ಥಿತೀಲಿ, ಆದಾಯ ತರುವ ಮತ್ತೊಂದು ಪೂರಕವಾದ ಕಸುಬು ಮಾಡಬೇಕಾದ ಅನಿವಾರ್ಯತೆ ಇತ್ತು. ನಾನು ಹತ್ತಾರು ಕಡೆ ಸುತ್ತಾಡಲು ಆರಂಭಿಸಿದ ಮೇಲೆ ನನ್ನ ಕೃಷಿ ಜ್ಞಾನ ಸಹಾ ಹೆಚ್ಚಿತು. Exposure ಸಿಕ್ಕಿದ್ದರಿಂದ confidence ಕೂಡಾ ಬಂತು. ನಾನು ಕಂಡುಕೊಂಡ ಮತ್ತೊಂದು ವಿಚಾರ ಅಂದ್ರೆ, ಕೃಷೀಲಿ ನಾವು ಪ್ರತಿಯೊಂದು ಕೆಲಸವನ್ನೂ ನಾವೇ ಮಾಡಬೇಕು ಅಂತ ಬಯಸ್ತೀವಿ, ನಾವು ಅದನ್ನುಯಾರಿಗೂ delegate ಮಾಡೋದಿಲ್ಲ. ಆದರೆ ನಾನು ಒಂದೇ ಸಲ ನಾಲ್ಕಾರು ಕಡೆ ಕೆಲಸ ಮಾಡಬೇಕಾದ ಅನಿವಾರ್ಯತೆ ಇದ್ದುದರಿಂದ I was forced to delegate. ಆಗ ನಾನು ಕೇವಲ power ಮಾತ್ರ delegate ಮಾಡದೆ, responsibility ಸಹಾ fix ಮಾಡಿದೆ. ಈ ರೀತಿ ಮಾಡೋದ್ರಿಂದ ಮುಂಚೆ ನಾನು consultation firm ನಡೆಸಲು ಎಷ್ಟು ಕಷ್ಟ ಪಡ್ತಾ ಇದ್ದೆನೋ, ಅದರ ಅರ್ಧದಷ್ಟು ಶ್ರಮದಲ್ಲಿ ನನ್ನ ಎಲ್ಲಾ ಕೆಲಸಗಳೂ ಆಗ್ತಾ ಇದಾವೆ. ನನ್ನ ಕಾರ್ಯವ್ಯಾಪ್ತಿ ಈಗ ಹೆಚ್ಚಾಗಿದ್ದರೂ ಈಗ ಮೊದಲಿಗಿಂತಲೂ ಹೆಚ್ಚಿನ ಸಮಯ ನನಗಾಗಿ ಸಿಗ್ತಾ ಇದೆ. ಆದಷ್ಟೂ ನಾವು ಸಂಕೇತಿಗಳು ಕೃಷೀಲಿ work delegation ಅನ್ನುವುದನ್ನು ಅಳವಡಿಸಿದ್ರೆ ಅನುಕೂಲ. ಯಾಕೇಂದ್ರೆ ನನಗೆ ಇದ್ರಿಂದ ಬಹಳ ಅನುಕೂಲವಾಗಿದೆ.

ಸಂಕೇತಿಗಳು ನೆಲೆಸಿರುವ ಹಳ್ಳಿಗಳಲ್ಲಿ ವರುಷದಿಂದ ವರುಷಕ್ಕೆ ಕುಟುಂಬಗಳು ಕ್ಷೀಣಿಸ್ತಾ ಇದಾವೆ. ಹಿಡುವಳಿಗಳು ಕಡಿಮೆಯಾಗ್ತಾ ಇವೆ. Viability ಹೋಗ್ತಾ ಇದೆ. ಇನ್ನು ಮುಂದೆ ಸಂಕೇತಿಗಳು ನಾವು ಕೃಷಿ ಉಳಿಸಲೇಬೇಕು ಅಂತಾದ್ರೆ, ನಮ್ಮ ಜನಾಂಗದ ದೊಡ್ಡ ದೊಡ್ಡ ಉದ್ಯಮಿಗಳು ಮರಳಿ ಗ್ರಾಮಗಳಲ್ಲಿ ದೊಡ್ಡ ಹಿಡುವಳಿ ಖರೀದಿಸಿ, ನಮ್ಮ ಯುವಕರನ್ನೇ ಅಳವಡಿಸಿಕೊಂಡು, ಕೈಗಾರಿಕೆಯನ್ನು ನಡೆಸುವ ರೀತೀಲೇ, ಆಧುನಿಕ technology ಅಳವಡಿಸಿ ಕೃಷಿ ಮುಂದುವರೆಸಿದ್ರೆ, ಜನಾಂಗಕ್ಕೆ ಅನುಕೂಲ. ಹಾಗೇ, ಕೃಷೀಲೂ ಸಹಾ sophistication ಇದೆ, ಇದನ್ನು ನಂಬಿಯೂ ನಾನು ಬದುಕಲು ಸಾಧ್ಯ ಎಂಬ ಭಾವನೆಯನ್ನೂ ಬರುವ ಪೀಳಿಗೆಗಳಲ್ಲಿ ಬಿತ್ತಬಹುದು. Cityಲಿ ಮಾತ್ರ ಹೆಚ್ಚಿನ ಸಂಬಳ, ಉತ್ತಮ ಜೀವನ ಇಲ್ಲ, ಹಳ್ಳೀಲಿ ನೆಲೆಸಿದ್ರೂ, ಕೃಷಿ ಕೆಲಸಾನೇ ಮಾಡಿದ್ರೂ, ಉತ್ತಮ ಸಂಬಳ ಸಿಗುತ್ತೆ, ಉತ್ತಮವಾಗಿ ಜೀವಿಸಬಹುದು ಅನ್ನುವ ಭಾವನೆ ಬೆಳೆಯುತ್ತೆ. ಮುಂದಿನ ಭವಿಷ್ಯಕ್ಕೆ ಭದ್ರ ಬುನಾದಿಯಾಗುತ್ತೆ. ಹೀಗೆ ಮಾಡೋದ್ರಿಂದ ಖಂಡಿತವಾಗಿಯೂ ಸಂಕೇತಿ ಕೃಷಿ ಉಳಿಯುತ್ತೆ, ಬೆಳೆಯುತ್ತೆ. ಸುಸ್ಥಿತಿಯಲ್ಲಿರುವ ಸಂಕೇತಿ ಬಾಂಧವರು ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಹಾಗೇ ಸಂಕೇತಿಗಳಲ್ಲಿ ಈಗೀಗ ನೇಗಿಲು ಹಿಡಿದರೆ, ಹಾಗೇ ಗುದ್ದಲಿ ಹಿಡಿದರೆ ಕೀಳರಿಮೆ ಭಾವನೆ ಮೂಡುತ್ತಿದೆ. ಆದರೆ ಇತರೇ ಜನಾಂಗದಲ್ಲಿ ಅದೊಂದು ಹೆಮ್ಮೆಯ ವೃತ್ತಿಯಾಗಿದೆ. ನಮಗಿಂತ ಕಡಿಮೆ ಹಿಡುವಳಿ ಇರುವ ಇತರೇ ಜನಾಂಗ ನೆಮ್ಮದಿಯಾಗಿದೆ. ಯಾಕೇಂದ್ರೆ ಅವರಲ್ಲಿ dignity of labour ಇರೋದಿಲ್ಲ. ನಾವು ಕೂಡ, ಆ ಕೆಲಸ ಮೇಲು, ಈ ಕೆಲಸ ಕೀಳು ಅಂತ ಯೋಚನೆ ಮಾಡದೆ, ಬಂದದನ್ನು ಸ್ಪರ್ಧಾತ್ಮಕವಾಗಿ ಸ್ವೀಕರಿಸಿದ್ರೆ, ಮುಂದಕ್ಕೆ ಏಳಿಗೆ ಪಡೀಬಹುದು. ಇಂದು ಯಾವ ಕೆಲಸವೂ ದೊಡ್ಡದಲ್ಲ, ಯಾವ ಕೆಲಸವೂ ಕೀಳಲ್ಲ. ನನಗೆ ನಾನೇ ಸೇವಕ, ಅಂತ ಯೋಚನೆ ಮಾಡಿದ್ರೆ ಖಂಡಿತಾ ಮುಂದೆ ನಾನು ಬೆಳೀತೀನಿ ಅನ್ನುವುದು ನನ್ನ ನಂಬಿಕೆ' ಎಂದು ದೃಢವಾಗಿ ನುಡಿದು, ನಗುತ್ತಾ ನನ್ನನ್ನು ನೋಡಿದ್ರು ವಿಶ್ವನಾಥ್. ಗುಡುಗು, ಮಿಂಚು, ಸಿಡಿಲಿನಿಂದ ಕೂಡಿದ ಭರ್ಜರಿ ಮುಂಗಾರಿನ ಮಳೆ ಸಮೃದ್ಧವಾಗಿ ಸುರಿದು ನಿಂತಂತಾಗಿತ್ತು. ನಾನು ಕುಳಿತ ನೆಲವೂ ತಂಪಾಗಿತ್ತು. ಇಷ್ಟು ಚಿಕ್ಕ ವಯಸ್ಸಿಗೇ ಇಷ್ಟೆಲ್ಲ ಗಹನವಾದ ಚಿಂತನೆಗಳನ್ನು ಹೊಂದಿರುವ ವಿಶ್ವನಾಥ್ ಅವರಿಗೆ ಮನದಲ್ಲಿಯೇ ವಂದಿಸಿದೆ. ಇವರಂತಹ ಯುವಕರ ಅಗತ್ಯ ಸಂಕೇತಿ ಕೃಷಿಯ ಏಳಿಗೆಗೆ ಇದೆ ಅನ್ನಿಸಿತು. ವಿಶ್ವನಾಥ್, ರಾಧಿಕಾ ದಂಪತಿಗಳ ಉಪಚಾರವೂ ಜೋರಾಗಿತ್ತು. ಚಟುವಟಿಕೆಯಿಂದ ಓಡಾಡುತ್ತಿದ್ದ ಅವರ ಮಗಳು, ನಾವು ಹೊರಡುವಾಗ ಮಲಗಿದ್ದಳು. ನನ್ನನ್ನು ಮಡಿಕೇರಿಯ ಬಸ್ ನಿಲ್ದಾಣದವರೆಗೆ ಬಂದು ಬೀಳ್ಕೊಟ್ಟ ವಿಶ್ವನಾಥ್, ಮತ್ತೊಮ್ಮೆ ಕುಟುಂಬಸಮೇತರಾಗಿ ಬನ್ನಿ ಎಂದು ಕೈ ಕುಲುಕಿದ್ರು. ಸ್ನೇಹ ನಮ್ಮಲ್ಲಿ ಚಿಗುರೊಡೆದಿತ್ತು.

29. ಕೇರಳಾಪುರ

ಸಂಕೇತಿಗಳ ಸಮೃದ್ಧ ನೆಲೆಗಳಲ್ಲಿ ಕೇರಳಾಪುರವೂ ಪ್ರಮುಖವಾದದ್ದು. ಸುಮಾರು ೨೦ ಸಂಕೇತಿ ಕುಟುಂಬಗಳು ಈಗ ಇಲ್ಲಿ ನೆಲೆಸಿವೆ. ಬೇಸಾಯಸ್ಥರು, ಸ್ವಂತ ಉದ್ಯೋಗಿಗಳು, ಅಧ್ಯಯನಶೀಲರು, ಅಡಿಕೆ ಹಾಗೂ ಬಟ್ಟೆ ವ್ಯಾಪಾರ ಹಾಗೂ ಜೋಯಿಸ ವೃತ್ತಿಯನ್ನು ಅವಲಂಬಿಸಿರುವ ಕುಟುಂಬಗಳು ನೆಮ್ಮದಿಯಿಂದ ಕಾಲ ನೂಕುತ್ತಿವೆ. ಕಾವೇರಿಯು ಪಕ್ಕದಲ್ಲಿ ತಂಪಾಗಿ ಹರಿದಿದ್ದಾಳೆ. ಹಾಸನದಿಂದ ಸುಮಾರು ೬೫ ಕಿಲೋಮೀಟರ್ ದೂರದಲ್ಲಿರುವ ಈ ಕೇರಳಾಪುರಕ್ಕೆ ಅರಕಲಗೂಡು ಹಾಗೂ ಹೊಳೆನರಸೀಪುರ ಮಾರ್ಗವಾಗಿ ಬರಬಹುದು. ಹೊಳೆನರಸೀಪುರ, ಐಚನಹಳ್ಳಿ, ಕುಪ್ಪೆ, ಓಡನಹಳ್ಳಿ, ಬಿದಿರಕ್ಕ ಮಾರ್ಗವಾಗಿ ಕೇರಳಾಪುರಕ್ಕೆ ಕೇವಲ ೨೬ km ಮಾತ್ರ. ಹೊಳೆನರಸೀಪುರ ಹಳ್ಳಿಮೈಸೂರು ಮಾರ್ಗವಾಗಿ ಬಂದ್ರೆ ೩೦ km ಆಗುತ್ತೆ. ಅರಕಲಗೂಡು, ರಾಮನಾಥಪುರ, ಬಸವಾಪಟ್ಟಣ ಮಾರ್ಗವಾಗಿಯೂ ಸಹ ಕೇರಳಾಪುರಕ್ಕೆ ಬರಬಹುದು. ಕೇರಳಾಪುರದ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಕೆ.ರಾಮಚಂದ್ರ ಜೋಯಿಸ್ ಊರ ವಿವರಗಳ ಬಗ್ಗೆ ಮಾತನಾಡಿದ್ರು. 'ಈ ಊರಿನ ಹೆಸರು ಸುಮಾರು ಐದು ಶತಮಾನಗಳ ಹಿಂದೆ ವೀರಭದ್ರಪುರ ಅಂತ ಇತ್ತಂತೆ. ನಮ್ಮವರು ಇಲ್ಲಿಗೆ ಬಂದಾಗ ಈ ಊರಿಗೆ ಹಳೇ ಹೆಸರೇ ಇತ್ತಂತೆ. ಸಂಕೇತಿಗಳು ಪೂರ್ಣವಾಗಿ ಶಾಪತ್ತೂರು ಕೇರಳಾಪುರದವರು. ಅರ್ಥಾತ್, ತಮಿಳುನಾಡು ಹಾಗೂ ಕೇರಳದ ಗಡಿ ಭಾಗವಾದ ಶೆಂಕೋಟ್ಟೈನವರು. ಇವರು ಅಲ್ಲಿಂದ ಇಲ್ಲಿಗೆ ಬಂದದ್ದರಿಂದ, ಇವರೇ ಊರ ಹೆಸರನ್ನು ಬದಲಾಯಿಸಿದರು ಅಂತ ಕೆಲವರು ಹೇಳ್ತಾರೆ. ಸುಮಾರು ೭೦೦ ವರುಷಗಳಿಂದ ಸಂಕೇತಿಗಳು ಇಲ್ಲಿದಾರೆ. ನಮ್ಮ ಹಿರಿಯರ ಏಳು ತಲೆಮಾರುಗಳು ನಮಗೆ ಗೊತ್ತಿರುವಂತೆ ಇಲ್ಲಿ ವಾಸ ಮಾಡಿದವರೆ. ಎಲ್ಲರೂ ೮೫, ೯೦ರ ವರೆಗೆ ಬದುಕಿದವರು. ಹಾಗಾಗಿ ಏಳು ಶತಮಾನಗಳ ಇತಿಹಾಸ ಅಂತ ಹೇಳಬಹುದು. ಹಿಂದೆ ವೇದಪುರಾಣಿಕರು ಬಹಳ ಇದ್ದರಂತೆ. ನಮ್ಮ ತಲೆಮಾರಿಗೆ ವೇದ ಕ್ಷೀಣಿಸ್ತಾ ಬಂದು, ಈಗ ವ್ಯವಸಾಯವನ್ನು ಗ್ರಾಮದಲ್ಲಿ ಇರುವವರು ಮಾತ್ರ ಮಾಡ್ತಿದಾರೆ. ನಮ್ಮ ಮುಂದಿನ ಪೀಳಿಗೆ ಮಾತ್ರ, ಕೆಲಸ ಅರಸುತ್ತಾ ಪರಸ್ಥಳ ಸೇರಿದ್ದಾರೆ. ಊರಲ್ಲಿರುವವರು ಬಹಳ ಕಡಿಮೆ. ೭೦೦ ವರುಷಗಳ ಹಿಂದೆ ೧೦, ೧೨ ಕುಟುಂಬಗಳು ಇದ್ದಿರಬಹುದು. ಅದು ಬೆಳೆದು ಬಂದು ೨೫ ಕುಟುಂಬವಾಗಿ ಈಗ ಮತ್ತೆ ೨೦ಕ್ಕೆ ಇಳಿದಿದೆ. ಐದು ಒಕ್ಕಲು ಈಗ ಬೆಂಗಳೂರಿನಲ್ಲಿ ನೆಲೆಸಿದಾರೆ. ಇಲ್ಲಿಯ ಜನರ ಈಗಿನ ಮುಖ್ಯ ಕಸುಬು ವ್ಯವಸಾಯ. ನಮ್ಮಲ್ಲಿ ಉಳಬಾರದು, ಎತ್ತುಗಳನ್ನು ಕಟ್ಟಬಾರದು ಅನ್ನುವುದು ಇರೋದ್ರಿಂದ, ಹೊಲ ಗದ್ದೆ ಮಾಡೋರು ಕಡಿಮೆ, ತೋಟ ಇರೋರು ಜಾಸ್ತಿ. ಈಗ ಇಲ್ಲಿನ ಯುವಕರು ಒಟ್ಟಾಗಿ ಸೇರಿ, ನಾಲ್ಕಾರು ಜನ ಒಂದು ತೋಟಕ್ಕೆ ಹೋಗಿ ಒಂದೇ ದಿನದಲ್ಲಿ ಒಂದು ತೋಟದ ಕೆಲಸ ನಿರ್ವಹಿಸುತ್ತಾರೆ. ಪರಸ್ಪರ ಸಹಕಾರ ಮನೋಭಾವನೆ ಇಲ್ಲಿ ಬೆಳೀತಾ ಇದೆ. ನಮ್ಮ ಕೆಲಸ ನಾವೇ ಮಾಡಿಕೊಳ್ಳೋಣ, ಆಳುಗಳ ಮೇಲಿನ ಅವಲಂಬನೆ ಸಾಕು ಅನ್ನುವ ನಿರ್ಧಾರಕ್ಕೂ ಬಂದಿದಾರೆ. ಕೇರಳಾಪುರದಲ್ಲಿ ಆಗಮೋಕ್ತವಾದ ದೇವಸ್ಥಾನಗಳು ಮೂರು ಇವೆ. ಶ್ರೀನಿವಾಸ, ಗಣಪತಿ ಹಾಗೂ ವೀರಭದ್ರಸ್ವಾಮಿ ದೇವಾಲಯಗಳು, ಇದಲ್ಲದೆ, ಊರ ಬಾಗಿಲಿನಲ್ಲಿ ರಾಜರಾಜೇಶ್ವರಿ ದೇವಸ್ಥಾನ ಇದೆ. ಕೇರಳಾಪುರಗ್ರಾಮ ಹಿಂದೆ ಮಹಾಕ್ಷೇತ್ರವಾಗಿತ್ತಂತೆ. ನಾಲ್ಕು ದಿಕ್ಕಿನಲ್ಲೂ ಕೂಡ, ಒಂದು ಕಡೆ ಉತ್ತರ ದಿಕ್ಕಿನಲ್ಲಿ ಚೌಡಾಂಬಿಕೆ, ಪೂರ್ವದಿಕ್ಕಿನಲ್ಲಿ ಗ್ರಾಮದೇವತೆ, ದಕ್ಷಿಣ ದಿಕ್ಕಿನಲ್ಲಿ ಕಾವೇರಿ, ಪಶ್ಚಿಮ ದಿಕ್ಕಿನಲ್ಲಿ ಮಹಾಕಾಳಿ ಅರ್ಥಾತ್ ಹೊಳೆಸಾಲಮ್ಮ ಅಂತ ಕರೀತಾರೆ. ಇಲ್ಲಿ ವೈಶಾಖ ಶುದ್ಧ ಪೂರ್ಣಿಮೆಯ ದಿನ ಶ್ರೀನಿವಾಸನ ರಥ, ಚೈತ್ರ ಶುದ್ಧ ಪಂಚಮಿಯ ದಿನ ರಾಜರಾಜೇಶ್ವರಿ ರಥ ಹಾಗೂ ಮಾಘ ಶುದ್ಧ ದಶಮಿಯ ದಿನದಂದು ವೀರಭದ್ರಸ್ವಾಮಿಯ ರಥ ನಡೆಯುತ್ತೆ. ನಾವು ಸಂಕೇತಿಗಳೆಲ್ಲಾ ಸೇರಿ ಒಂದು ರಾಮಮಂದಿರ ಕಟ್ಟಿದೀವಿ. ಸಂಕೇತಿಗಳೇ ಗಣಪತಿ ದೇವಸ್ಥಾನದ ಪೂಜೆ ಮಾಡ್ತಿದೀವಿ. ಪ್ರತಿ ವರುಷ ರಾಮೋತ್ಸವ ಮಾಡ್ತೀವಿ. ವ್ಯಾಸಪೂರ್ಣಿಮೆ, ಶಿವರಾತ್ರಿ, ಕೃಷ್ಣಾಷ್ಟಮಿ, ನವರಾತ್ರಿ ಈ ಹಬ್ಬಗಳನ್ನು ನಾವು ಒಟ್ಟಿಗೆ ಸೇರಿ ಆಚರಣೆ ಮಾಡ್ತೀವಿ. ಇಲ್ಲಿ ಅಡಿಕೆ, ಎಲೆಹಂಬು, ಬಾಳೆ, ಬಾಗಾಯ್ತಿನಲ್ಲಿ ಪ್ರಮುಖವಾದ ಬೆಳೆಗಳು. ಜೊತೆಗೆ ಕಾಫಿ, ಕಾಳುಮೆಣಸು, ಏಲಕ್ಕಿ, ತೆಂಗು ಸಹಾ ಈಗ ಬೆಳೀತಾ ಇದಾರೆ. ವ್ಯವಸಾಯ ಇಲ್ಲಿ ಉತ್ತಮವಾಗಿ ನಡೀತಾ ಇದೆ. ವಿಶೇಷವಾಗಿ ನಮ್ಮನ್ನು "ಗೊದಮೊಟ್ಟೆ ಸಂಕೇತಿಗಳು" ಅಂತಾನೇ ಹೇಳ್ತಾರೆ. ಅರ್ಥಾತ್ ಇವರಿಗೆ ವ್ಯವಸಾಯವೇ ಮೂಲ ಕಸುಬು, ಆದ್ದರಿಂದ ಇವರಿಗೆ ಆಯಾಸ ಅನ್ನುವುದು ಇಲ್ಲ, ಬೇಜಾರೂ ಇಲ್ಲ. ಸಂಕೇತಿಗಳು ಕಷ್ಟಸುಖಕ್ಕೆ ಒಬ್ಬರಿಗೊಬ್ಬರು ಆಗ್ತಾರೆ. ಸುಖ ಹಾಗೂ ಕಷ್ಟವನ್ನು ಹಂಚಿಕೊಳ್ಳುವ ಮನೋಭಾವದವರು ಈ ಊರಿನಲ್ಲಿ ಬಹಳ ಹೆಚ್ಚು ಜನ ಇದಾರೆ. ನಮ್ಮ ಊರಿನಲ್ಲಿ ಪರಸ್ಪರ ಸಹಕಾರ ಉತ್ತಮವಾಗಿದೆ. ಹೊಂದಿಕೊಂಡು ಕೆಲಸ ಮಾಡಿಕೊಂಡು ಹೋಗ್ತಿದೀವಿ. ಪರಸ್ಥಳದಲ್ಲಿ ನೌಕರಿ ಮಾಡುತ್ತಿರುವ ನಮ್ಮವರೂ ಬಹಳ ನೆರವು ನೀಡ್ತಾರೆ ' ಅಂತ ಹೆಮ್ಮೆಯಿಂದ ಹೇಳಿದ್ರು. ಕೇರಳಾಪುರದ ಸಂಕೇತಿ ಕೃಷಿ ಬದುಕನ್ನು ವಿವರವಾಗಿ ತಿಳಿಯಲು, ಮನೆಗಳಿಗೆ ಭೇಟಿ ನೀಡಿದೆವು. ಊರು, ಕೇರಿ ಸುತ್ತಿದ್ದು ಆಯಿತು. ಕಂಡ ಅನುಭವಗಳನ್ನು, ಕೇಳಿದ ವಿಚಾರಗಳನ್ನು ಇಲ್ಲಿ ದಾಖಲಿಸಲಾಗಿದೆ.

ಅ) ಎಸ್.ಸುಬ್ರಹ್ಮಣ್ಯ ಇ/ಮ ಗಮಕಿ ಕೆ.ಸುಬ್ಬರಾಯ

ಕೇರಳಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ದೂರವಾಣಿ : 08175 531381

೧೯೭೫ರಲ್ಲಿ ನೀರಿಗೆ ಕ್ಷಾಮ ಬಂತು. ಏತ ಎತ್ತಿ ನೀರು ಹಾಕಲು ಭಾರೀ ಶ್ರಮ. Kerosene oil pump ಬಂದಿದೆ ಅಂತ ತಿಳೀತು. ೨೫೦೦ ರಿಂದ ೩೦೦೦ ರೂಪಾಯಿ ಆಗಬಹುದು, ಅದನ್ನು ತರೋಣ ಅಂತ ತಂದೆಗೆ ಹೇಳಿದೆ. ಕಬ್ಬಿಣದ ಹವ್ಯಾಸ ಒಳ್ಳೆದಲ್ಲ, ಹಣ ಹಾಕಿ ಕಳೀಬೇಡ ಅಂದ್ರು. ಹಟ ಮಾಡಿ ಬೆಂಗಳೂರಿನಿಂದ ತಂದೆ. ಆ ಮೆಶೀನ್ start ಮಾಡುವ ಮೊದಲು ಅದಕ್ಕೆ 4T ಗ್ರೇಡ್ oil ಹಾಕುವ ವಿಚಾರ ತಿಳಿದಿರಲಿಲ್ಲ. ಬೇಸಿಗೆ ಕಾಲ ಬೇರೆ. Start ಆದ ತಕ್ಷಣ ನಿಂತು ಹೋಗೋದು. ಅದೂ ಅಲ್ಲದೆ ಆ ಮೆಶೀನ್ ಆರಂಭವಾದ ಮೇಲೆ ಅದು ಮುಂದೆ ಹೋಗಿ ಹೋಗಿ ಬಾವಿಗೇ ಬೀಳುತ್ತೆ ಅಂತ ಹೆದರಿಸಿದ್ರು ಇಲ್ಲೆಲ್ಲಾ. ನನಗೂ ಭಯ ಆರಂಭವಾಯ್ತು. ಇಲ್ಲಿ ರಾಮ ಅಂತ ಒಬ್ಬ ಇದ್ದ. ಅವನಿಗೆ ಯಂತ್ರಗಳ ಬಗ್ಗೆ ಮಾಹಿತಿ ಇತ್ತು. ಅವನೇ ನನಗೆ ಹೇಳಿದ್ದು 2T oil ಹಾಕಬೇಕು ಅಂತ. Oil ಹಾಕಿ pump ಆರಂಭಿಸಿದ್ವಿ, ನೋಡಿ, ಎರಡು ಪೈಪ್‌ನಲ್ಲೂ ನೀರು ಬರಲು ಆರಂಭವಾಯ್ತು. ಆಗ ನನ್ನ ತಂದೆಗೆ ಹೇಳತೀರದಷ್ಟು ಸಂತೋಷ.



ಎಚ್.ಆರ್.ಸೀತಾಲಕ್ಷ್ಮಿ-ಎಸ್.ಸುಬ್ರಹ್ಮಣ್ಯ; ಸುನಂದ-ಕೇಶವಮೂರ್ತಿ:ಕೇರಳಾಪುರ

ಕೇರಳಾಪುರದ ಗಮಕಿ ಕೆ. ಸುಬ್ಬರಾಯ ಹಾಗೂ ಸೋಮನಹಳ್ಳಿಯ ರಾಮಲಕ್ಷ್ಮಿ ದಂಪತಿಗಳಿಗೆ ಎರಡು ಗಂಡು ಹಾಗೂ ಒಬ್ಬಳು ಮಗಳು. ಹಿರಿಯ ಮಗ ಕೆ. ನಾರಾಯಣ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿ ಮುಗಿಸಿ, ಹೊಳೆನರಸೀಪುರದ ಸುಲೋಚನ ಅವರನ್ನು ಮದುವೆಯಾಗಿ ದೆಹಲಿಯಲ್ಲಿ ನೆಲೆಸಿದ್ದಾರೆ. ಕಿರಿಯ ಮಗ ಎಸ್.ಸುಬ್ರಹ್ಮಣ್ಯ ಅವರಿಗೆ ಈಗ ೬೦ರ ಹರಯ. ಇವರ ಪತ್ನಿ ಎಚ್.ಆರ್.ಸೀತಾಲಕ್ಷ್ಮಿ, ಹಾನಗಲ್‌ನ ಎಚ್.ಕೆ.ರಾಮಸ್ವಾಮಯ್ಯ ಹಾಗೂ ಕೇರಳಾಪುರದ ಮಹಾಲಕ್ಷ್ಮಿ ದಂಪತಿಗಳ ಮಗಳು. ಕೇರಳಾಪುರದಲ್ಲಿ, ವ್ಯವಸಾಯದ ಜತೆಗೆ ಅಡಿಕೆ ಹಾಳೆಗಳಿಂದ ತಟ್ಟೆಗಳನ್ನು ಮಾಡುವ ಸ್ವಂತ ಉದ್ಯಮವನ್ನು ನಡೆಸುತ್ತಿದ್ದಾರೆ ಸುಬ್ರಹ್ಮಣ್ಯ. ಸಂಕೇತಿಗಳಿಗೆ ಬಹಳ ವಿಶಿಷ್ಟ ಎನಿಸಬಹುದಾದ ಉಪಕಸುಬು ಇದು.

ವ್ಯವಸಾಯದಿಂದ ಹೊರಬರುವ ಉಪ ಉತ್ಪನ್ನವೇ, ಇವರ ಸ್ವಂತ ಉದ್ಯೋಗಕ್ಕೆ ಕಚ್ಚಾ ಪದಾರ್ಥ. ಹಳ್ಳಿಯ ಮಟ್ಟದಲ್ಲಿಯೇ ವ್ಯವಸಾಯಕ್ಕೆ ಪೂರಕವಾದ ಉಪಕಸುಬು ನಡೆಸುತ್ತಿರುವ ಸುಬ್ರಹ್ಮಣ್ಯ ಅವರ ಶ್ರಮ ಮೆಚ್ಚುವಂತಹದ್ದು. ಇವರ ಮಗ ಕೇಶವಮೂರ್ತಿ, ಸಿವಿಲ್ diploma ಮುಗಿಸಿ ತಂದೆಗೆ ಸ್ವಂತ ಉದ್ಯಮದಲ್ಲಿ ನೆರವಾಗಿದ್ದಾರೆ. ಸೊಸೆ ಸುನಂದ ಹೊಳೆನರಸೀಪುರ ತಾಲ್ಲೂಕು, ಹಿರಿಹಳ್ಳಿ ಕೊಪ್ಪಲಿನವರು. ಬಿ.ಎ. ನಂತರ, ಪತ್ರಿಕೋದ್ಯಮದ diploma ಮುಗಿಸಿ, ಅತ್ತೆ ಮಾವ ಹಾಗೂ ಗಂಡನಿಗೆ ನೆರವಾಗಿದ್ದಾರೆ. ಇಡೀ ಕುಟುಂಬ ಈ ಉದ್ಯಮದಲ್ಲಿ ಒಂದಾಗಿ ತೊಡಗಿದೆ. ಆಕಾಶವಾಣಿಯ ಸಂದರ್ಶನಕ್ಕೆಂದು ಮೊದಲ ಬಾರಿ ಸುಬ್ರಹ್ಮಣ್ಯ ಅವರನ್ನು ಭೇಟಿ ಮಾಡಿದ್ದಾಗ, ಅವರು ತಮ್ಮ factory ತೋರಿಸಿರಲಿಲ್ಲ. ಬಹುಶಃ ಹಗಲು ರಾತ್ರಿ ತಾವು ಶ್ರಮಪಟ್ಟು ಸುಧಾರಿಸಿದ್ದ ತಂತ್ರಜ್ಞಾನಗಳನ್ನು ನಾವು ತಿಳಿಯಬಹುದು, ಸುಲಭವಾಗಿ ಅದು ಇತರರಿಗೆ ವರ್ಗಾವಣೆ ಆಗಬಹುದು ಅನ್ನುವ ಆತಂಕವೂ ಕಾರಣವಿದ್ದೀತು. ಆದರೆ ನಾವು ನಿರುಪದ್ರವಿಗಳು ಎಂದು ತಿಳಿದ ಮೇಲೆ, ಎರಡನೆಯ ಭೇಟಿಯಲ್ಲಿ ವಾತಾವರಣ ಮುಕ್ತವಾಗಿತ್ತು. ತಮ್ಮ ಉದ್ದಿಮೆಯನ್ನು ವಿವರವಾಗಿ ಪರಿಚಯಿಸಿ, ಭಾವಚಿತ್ರಗಳನ್ನು ತೆಗೆಯಲು ಅನುವು ಮಾಡಿಕೊಟ್ಟರು. ತಮ್ಮ ಶ್ರಮದ ದುಡಿಮೆಯ ವಿವರಗಳನ್ನು ನೀಡಿದರು. ನಮ್ಮೊಂದಿಗೆ ಮಾತನಾಡಲು ಕುಳಿತಾಗ ವಿಷಯಗಳನ್ನು ನೆನಪಿಸುತ್ತಾ ಇದ್ದಿದ್ದು ಇವರ ಸೊಸೆ ಸುನಂದ ಅವರೇ. ಸ್ತ್ರೀಯರ ಭಾಗವಹಿಸುವಿಕೆ ಸಹಾ ಇವರ ಉದ್ದಿಮೆಯ ಅಭಿವೃದ್ಧಿಯಲ್ಲಿ



ತಾಯಿ ರಾಮಲಕ್ಷ್ಮಿ ಅವರ ಜತೆ ಎಸ್.ಸುಬ್ರಹ್ಮಣ್ಯ ಅವರ ಕುಟುಂಬ:ಕೇರಳಾಪುರ

ಗಮನಾರ್ಹ ಪಾತ್ರವಹಿಸಿದೆ ಎಂಬುದು ಅವರ ಚಟುವಟಿಕೆಗಳನ್ನು ಗಮನಿಸಿದಾಗ ಅನ್ನಿಸಿತು. ಗಂಡು ಹೆಣ್ಣು ಬಾಳಬಂಡಿಯ ಎರಡು ಗಾಲಿಗಳಂತೆ ಎಂಬುದು ಇಲ್ಲಿ ಅನ್ವರ್ಥವಾಗಿದೆ. ಅಷ್ಟರಲ್ಲಿ ಸುಬ್ರಹ್ಮಣ್ಯ ತಮ್ಮ ವಿಚಾರಗಳನ್ನು ಹೇಳಲು ಉಪಕ್ರಮಿಸಿದರು.

'ನನ್ನ ತಂದೆಗೆ ಎಂಟು ವರುಷ ಆಗಿದ್ದಾಗಲೇ ನನ್ನ ತಾತ ತೀರಿಕೊಂಡ್ರಂತೆ. ನನ್ನ ಅಜ್ಜೀನೇ ತಮ್ಮ ಎರಡು ಗಂಡು ಮಕ್ಕಳನ್ನು, ಹಾಗೇ ಒಬ್ಬ ಮಗಳನ್ನು ಸಾಕಿ ಸಲಹಿದ್ದು. ನನ್ನ ತಾತಂಗೆ ಇಲ್ಲಿಂದ ಐದು ಕಿಲೋಮೀಟರ್ ದೂರದಲ್ಲಿ ತೋಟ ಇತ್ತಂತೆ. ತಾತ ಹೋದ ಮೇಲೆ ಅಜ್ಜಿ ಆ ತೋಟ ಮಾರಿ ಊರ ಮುಂದಿನ ೧೫ ಗುಂಟೆ ತೋಟ ತೊಗೊಂಡ್ರು. ನನ್ನ ತಂದೆಗೆ ನನ್ನ ಅಜ್ಜಿ ಮದುವೆ ಮಾಡಿದ್ದು ತಂದೆಗೆ ೧೬ ವರುಷ ಆಗಿದ್ದಾಗ. ನನ್ನ ತಾಯಿ ಸೋಮನಹಳ್ಳಿಯ ಸಾಹುಕಾರರ ಮಗಳು. ಈ ಮದುವೆ ಆದದ್ದು ಒಂದು ರೀತಿ ವಿಶೇಷವೇ. ನನ್ನ ತಾಯಿಯ ಮನೇಲಿ ಇಬ್ಬರು ಹೆಣ್ಣುಮಕ್ಕಳು. ಒಬ್ಬಳನ್ನು ಕಲ್ಲಹಳ್ಳಿಗೆ ಗೊತ್ತು ಮಾಡಿದ್ರು. ಆಕಸ್ಮಿಕವಾಗಿ ಆ ಹುಡುಗಿ ಗೊತ್ತಾಗಿದ್ದ ಕಡೆ ಬೆಂಕಿ ಬಿದ್ದು ಮನೆ ಸುಟ್ಟುಹೋಯ್ತು. ಅವರು ಈ ಹುಡುಗಿ ಕಾಲುಗುಣ ಸರಿ ಇಲ್ಲ ಅಂತ ಹೇಳಿಬಿಟ್ರು. ಇಲ್ಲಿ ಕರತಾಳಿನಲ್ಲಿ ಮೀಸೆ ರಾಮಣ್ಣನವರು ಅಂತ ಇದ್ರಂತೆ. ಪಾಳೇಗಾರಿಕೆ ಜನ. ಅವರಿಗೆ ನಮ್ಮ ಮನೆ ಹಾಗೇ ಆ ಹುಡುಗಿ ಮನೆಯ ನಂಟಸ್ತನ ಇತ್ತು. ಅವರು ಹುಡುಗಿ ಮನೆಗೆ ಹೋಗಿ "ನಾನು ಗಂಡು ಅಂತ ಕರೆದುಕೊಂಡು ಬಂದವನಿಗೆ ನೀನು ಧಾರೆ ಎರೆದು ಕೊಡ್ತೀಯ?" ಅಂತ ಕೇಳಿದ್ರಂತೆ. ಹುಡುಗಿ ಮನೆಯವರು ಒಪ್ಪಿದ ಮೇಲೆ, ನಮ್ಮ ಮನೆಗೆ ಮಂಗಳವಾರ ಮಟಮಟಮಧ್ಯಾಹ್ನ ಬಂದರು. "ಏನೇ ನರಸಮ್ಮ, ನಿನಗೆ ಶುಭವಾದ ವಾರ್ತೆ ತಂದಿದೀನಿ. ನಿನ್ನ ಮಗನಿಗೆ ಮದುವೆ ಮಾಡು" ಅಂದ್ರಂತೆ. ನನ್ನ ಅಜ್ಜಿ "ನನ್ನ ಹತ್ರ ದುಡ್ಡಿಲ್ಲ" ಅಂದ್ರು. ನನ್ನ ತಂದೆ, "ನನಗೆ ಈಗಲೇ ಯಾಕೆ ಮದುವೆ?" ಅಂದ್ರಂತೆ. ಆದರೂ ಅವರು ಬಿಡದೆ ನನ್ನ ತಂದೆ ಹಾಗೂ ಅಜ್ಜೀನ ಒಪ್ಪಿಸಿದರಂತೆ. ಕಡೆಗೆ ಅಜ್ಜಿ ೨೦೦ ರೂಪಾಯಿ ಸಾಲತಂದು ಮದುವೆ ಮಾಡಿದ್ರಂತೆ. ನಂತರ ಭಗವಂತ ಒಳ್ಳೇದು ಮಾಡಿದ. ನನ್ನ ತಾಯಿ ಬಂದ ಘಳಿಗೆ, ಮನೆ ಏಳಿಗೆಯಾಯ್ತು, ನನ್ನ ತಂದೆ LS ಸಹ ಓದಿರಲಿಲ್ಲ. ಇಲ್ಲಿ postmaster ಶ್ರೀನಿವಾಸಯ್ಯನವರು ಅಂತ ಸಂಸ್ಕೃತ ಪಂಡಿತರಿದ್ರು ('ಕಾಡು ಮಾಸ್ತರ' ತಂದೆ). ಅವರು ನನ್ನ ತಂದೆಗೆ ಸಂಸ್ಕೃತ ಹಾಗೇ ಕನ್ನಡ ಹೇಳಿಕೊಟ್ಟಿದ್ರು. ಸಂಗೀತ ವಿದ್ವಾನ್ ರುದ್ರಪಟ್ಟಣದ ಶ್ರೀಕಂಠಯ್ಯನವರ ಬಳಿ ಸಂಗೀತ ಕಲಿತ್ರು. ತಮ್ಮನನ್ನು LS ಓದಿಸಿದ್ರು. ಇಲ್ಲಿ ನಮ್ಮ ಊರ ಬಾಗಿಲಲ್ಲಿ ಬಸವನಗುಡಿ ಅಂತ ಇದೆ. ಅಲ್ಲಿನ ಚಾವಡೀಲಿ ಪ್ರತಿದಿನ ಕಾವ್ಯ ಓದಿ, ವ್ಯಾಖ್ಯಾನ ಮಾಡೋರು. ಒಂದು ದಿನ ನನ್ನ ತಂದೇನೂ ಅಲ್ಲಿ ಹೋದರಂತೆ. ಯಾರೋ ಇವರನ್ನು "ನೀನೂ ಓದ್ತೀಯಾ?" ಎಂದು ಕೇಳಿದರಂತೆ. ನನ್ನ ತಂದೆ ಓದಿದಾಗ ಅವರಿಗೆ ಅಪಹಾಸ್ಯ ಮಾಡಿದರಂತೆ. ಅದನ್ನು ಕೇಳಿ ತಂದೆಗೆ ಬೇಸರವಾಯ್ತು, ಅಲ್ಲೇ ತಮ್ಮ ನಿರ್ಧಾರ ಹೇಳಿದ್ರಂತೆ, "ನನ್ನದು ವಿಶ್ವಾಮಿತ್ರ ಗೋತ್ರ. ಇನ್ನೆರಡು ತಿಂಗಳಲ್ಲಿ ನಿಮ್ಮ ಮುಂದೆಯೇ ಕಾವ್ಯ ಓದಿ ಸೈ ಅನ್ನಿಸಿಕೊಳ್ತೀನಿ" ಅಂತ. ಹೀಗೆ ಹೇಳಿ ಗುರುಗಳ ಬಳಿ ಹೋದ್ರು. ಅವರು "ಕಾವ್ಯದ ಪುಸ್ತಕ ತೊಗೊಂಡು ಬಾ, ಹೇಳಿಕೊಡ್ತೀನಿ" ಅಂದರಂತೆ. ಪುಸ್ತಕ ತರಲು ಇವರ ಬಳಿ ದುಡ್ಡಿರಲಿಲ್ಲ. ಇಲ್ಲಿನ ಶ್ಯಾನುಭೋಗ ವಾದ್ಯಾರ್ ಮನೇಲಿದ್ದ ಒಂದು ದೊಡ್ಡ ಭಾವೀಲಿ ಅವರ ಕೊಡ ಬಿದ್ದಿತ್ತಂತೆ. ನನ್ನ ತಂದೆ ಅವರ ಮನೆಗೆ ಹೋದಾಗ ಕೊಡದ ವಿಚಾರ ತಿಳೀತಂತೆ. ಆ ಭಾವಿ ಬಹಳ ಹಳೇದು, ತುಂಬಾ ಹೊಡಗು ಇದ್ದ ಭಾವಿ. ಅಂಥಾ ಭಾವಿಗೇ ಧೈರ್ಯಮಾಡಿ ಇಳಿದು ಕೊಡ ಹುಡುಕಿ ತಂದ್ರು. ಅದಕ್ಕೆ ಪ್ರತಿಯಾಗಿ ಭಾರತ ಪುಸ್ತಕ ಅವರಿಂದ ಪಡೆದುಕೊಂಡ್ರಂತೆ. ಮನೆಗೆ ಬಂದಾಗ ಅಜ್ಜಿಗೆ ವಿಷಯ ತಿಳಿದಿತ್ತು. ತಂದೇನ ನೋಡಿದ್ದೇ ತಡ "ಬಂದ್ಯಾಪ್ಪಾ, ಬಾ... ಒಬ್ಬ ಮಗನನ್ನು ಕಳೆದುಕೊಳ್ಳಬೇಕಿತ್ತು... ನಿನ್ನ ಹೆಂಡತಿ ಮಾಂಗಲ್ಯ ಗಟ್ಟಿ ಇತ್ತು. ಉಳಿದುಕೊಂಡೆ" ಅಂತ ಹೇಳಿ ಸ್ವಾಗತಿಸಿದ್ರಂತೆ. ಸಂಸಾರ, ಸಂಗೀತ, ವಿದ್ಯಾಭ್ಯಾಸ ಈ ಮೂರೂ ಜವಾಬ್ದಾರಿ ತಂದೆಯ ಮೇಲಿತ್ತು. ಗುರುಗಳ ಬಳಿ ಕಲಿಯುತ್ತಲೇ ಒಂದು ಹಂತ



ಗೃಹ ಕೈಗಾರಿಕೆಯಾಗಿ ಅಡಿಕೆ ತಟ್ಟೆ ತಯಾರಿಕೆ: ತಮ್ಮ ಮಗ ಕೇಶವಮೂರ್ತಿ ಅವರೊಡನೆ ಎಸ್.ಸುಬ್ರಹ್ಮಣ್ಯ : ಕೇರಳಾಪುರ

ತಲುಪಿದ್ರು. ಪುಸ್ತಕಾನ ತೊಗೊಂಡು ಬೆಳಿಗ್ಗೇನೆ ತೋಟಕ್ಕೆ ಹೋಗೋರು. ಅಲ್ಲಿ ಕೆಲಸ ಮಾಡೋರು. ನಂತರ ತೋಟದಲ್ಲೇ ಸಂಗೀತ, ವಾಚನದ ಅಭ್ಯಾಸ ಮಾಡೋರು. ಮರಕ್ಕೇನು... ಸ್ವರ ಅಸ್ವರ ಎಲ್ಲಾ ಒಂದೇ! "ಹಾಡ್ತಾ ಹಾಡ್ತಾ ರಾಗ" ಅನ್ನೋ ರೀತೀಲಿ ಬಹಳ ಬೇಗನೇ ತಂದೆ ಅಭಿವೃದ್ಧಿಯಾದ್ರು. ನಂತರ ಊರ ಮುಂದಿನ ಬಸವನಗುಡೀಲಿ, ಒಂದು ಘಂಟೆ ಕಾಲ ಕಾವ್ಯವಾಚನ ಮಾಡಿದ್ರಂತೆ. ಇಡೀ ಸಭೆಯೇ ಬೆಕ್ಕಸ ಬೆರಗಾಯ್ತಂತೆ. ಅಂತಹ ಛಲವಾದಿ ನನ್ನ ತಂದೆ. ಅವರಿಗೆ ಉತ್ತಮ ದೇಹದಾರ್ಢ್ಯ ಇತ್ತು. ಒಂದು ಕ್ವಿಂಟಾಲ್‌ಗಿಂತಲೂ ಜಾಸ್ತಿ ಇದ್ರೂ, ಒಂದೂ ಚಟ ಇರಲಿಲ್ಲ. ಒಂದೇ ಸಮ ಕೆಲಸ ಮಾಡೋರು. ತೋಟದಲ್ಲಿ ವಿಳ್ಳೆದೆಲೆ, ಅಡಿಕೆ, ಬಾಳೆ ತೆಂಗು ಇತ್ತು. ಕಷ್ಟಪಟ್ಟು ದುಡೀತಿದ್ರು. ರುದ್ರಪಟ್ಟಣದ ಸಮೀಪ ಇರುವ ಹನ್ಯಾಳಿನಲ್ಲಿ ಒಂದು ಎಕರೆ ಜಮೀನು ಖರೀದಿಸಿದ್ರು. ಇಲ್ಲಿಂದ ಹೋಗಿ ಬಂದು ವ್ಯವಸಾಯ ಮಾಡ್ತಿದ್ರು. ನಂತರ ಕಾರಣಾಂತರದಿಂದ ಆ ಜಮೀನು ಮಾರಿದ್ರು. ನಾನು ಇಲ್ಲಿ LS ವರೆಗೆ ಓದಿ, ಮಂಡ್ಯದಲ್ಲಿ ಒಂದು ವರುಷ, ಹಾಗೇ ಅರಕಲಗೂಡಿನಲ್ಲಿ ಎರಡು ವರುಷ ಹೈಸ್ಕೂಲ್ ಓದಿದೆ. SSLCಲಿ 60% ಪಡೆದು ಉತ್ತೀರ್ಣನಾದೆ. ನಂತರ ಎರಡು ವರುಷ B.Com., ಓದಿ ವಾಪಸ್ಸು ಊರಿಗೇ ಬಂದೆ. ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಇಬ್ಬರೂ ಒಟ್ಟಿಗೆ ಇದ್ವಿ. ಇಲ್ಲಿಂದ ಐದು km ದೂರದಲ್ಲಿ ಒಂದೂಮುಕ್ಕಾಲು ಎಕರೆ ಪಾಳು ತೋಟಾನ ಒಂದೂ ಕಾಲು ಸಾವಿರ ರೂಪಾಯಿ ಕ್ರಯಕ್ಕೆ ತೊಗೊಂಡ್ವಿ. ನಾನು, ನನ್ನ ತಂದೆ, ಚಿಕ್ಕಪ್ಪ, ಅವರ ಮಗ ಎಲ್ಲರೂ ಸೇರಿ ದುಡಿದು ತೋಟವನ್ನು ಅಭಿವೃದ್ಧಿ ಮಾಡಿದ್ವಿ. ನಾವು ಎಲ್ಲರೂ ಒಟ್ಟಾಗಿದ್ದಿದ್ದರಿಂದ ಹಣದ ಸಮಸ್ಯೆ ಇರಲಿಲ್ಲ. ೧೯೬೦ರ ಇಸವೀಲಿ ನಮ್ಮ ಬಳಿ ೧೦ ರಿಂದ ೧೫ ಸಾವಿರ ರೂಪಾಯಿ ಹಣವಿತ್ತು. ಬೆಳಗ್ಗೆ ಐದಕ್ಕೆ ಎದ್ದು, ನಿತ್ಯಕರ್ಮಗಳನ್ನು ಮುಗಿಸಿ, ತೋಟಕ್ಕೆ ಹೋಗೋವಿ. ನನ್ನ ತಂದೆಯ ಮುಖಂಡತ್ವದಲ್ಲಿ ತೋಟದಲ್ಲಿ ಕೆಲಸ ಮಾಡೋವಿ. ನನ್ನ ಚಿಕ್ಕಪ್ಪ ತೋಟಕ್ಕೆ ಊಟ ತೊಗೊಂಡು ಬರೋರು. ಪಾಳು ಕಡಿದು, ಬಾಳೆ ಗುಂಡಿ ತೆಗೆದು, ಬಾಳೆ ಹಾಕಿದ್ವಿ. ನಂತರ ಅದರ ನೆರಳಿಗೆ ಅಡಿಕೆ ಹಾಕಿದ್ವಿ. ಸುತ್ತಾ ತೆಂಗು ಕೂರಿಸಿದ್ವಿ. ಅವತ್ತು ಎಂಟಾಣೆಗೆ ಆಳುಗಳು ಸಿಕ್ಕೋರು. ಅವರ ಬಳಿ ಅಗೆತದ ಕೆಲಸ ಮಾಡಿಸ್ತಿದ್ವಿ. ೬೩ರಲ್ಲಿ ತಂಗೀನ ಹಾನಗಲ್ಲಿಗೆ ಕೊಟ್ಟು ಮದುವೆ ಮಾಡಿದ್ವಿ. ಅದೇ ವರುಷ ಇಲ್ಲಿ ಶೀಗವಾಳಿನಲ್ಲಿ ಶಿವರಾಮಯ್ಯನವರು ಅಂತ ಇದ್ರು. ಅವರದ್ದು ಮೂರೂಮುಕ್ಕಾಲು ಎಕರೆ ತೋಟ ಇತ್ತು. ನನ್ನ ತಂದೆಯವರಿಗೆ ಅಡ್ಡ ಹೆಸರು "ಸೋಮರಾಯ" ಅಂತ. "ನಾನು ನನ್ನ ಜಮೀನನ್ನು ನಿನಗೇ ಕೊಡ್ತೀನಿ ಸೋಮರಾಯ, ತೊಗೋ" ಅಂದ್ರು ಶಿವರಾಮಯ್ಯನವರು. ನನ್ನ ತಂದೆಗೆ ಎಲ್ಲಿ ಜಾಸ್ತಿ ಹಣ ಕೇಳ್ತಾರೋ ಅನ್ನುವ ಆತಂಕ. "ಐದು ಸಾವಿರ ರೂಪಾಯಿಗೆ ಕ್ರಯ ಕೊಡ್ತೀನಿ" ಅಂದ್ರು. ಅಷ್ಟು ಜಮೀನನ್ನೂ ನಮ್ಮೊಬ್ಬರಿಂದ ಮಾಡಲು ಆಗೋದಿಲ್ಲ ಅಂತ, ಇಲ್ಲಿ ರಾಮಣ್ಣನವರು ಹಾಗೂ ಅವರ ಮಗ ವೆಂಕಟಸುಬ್ಬಯ್ಯ ಅವರನ್ನು ಜತೆಗೆ ಸೇರಿಸಿಕೊಂಡ್ವಿ.



ಸುನಂದ ಕೇಶವಮೂರ್ತಿ ತಮ್ಮ ಕೃಷಿ ಉತ್ಪನ್ನಗಳೊಂದಿಗೆ: ಕೇರಳಾಪುರ

ನಾವು ಆ ಜಮೀನನ್ನು ಖರೀದಿಸಿದ್ದು ೧೯೬೫ರಲ್ಲಿ. ಆ ಜಮೀನನ್ನೂ ಕಷ್ಟಪಟ್ಟು ಅಭಿವೃದ್ಧಿ ಮಾಡಿದ್ವಿ. ನಮಗೆ ಆಗ ಮೈತುಂಬಾ ಕೆಲಸ ಸಿಗ್ತು. ಮನೆ ಯಜಮಾನಿಕೆ ಎಲ್ಲಾ ನಮ್ಮ ಚಿಕ್ಕಪ್ಪನದೇ. ಬೆಳಗಿನಿಂದ ಸಂಜೆಯವರೆಗೆ ದುಡಿದು ತೋಟವನ್ನು ಅಭಿವೃದ್ಧಿ ಮಾಡಿದ್ವಿ. ೧೯೬೭ರಲ್ಲಿ ನನ್ನ ತಂದೆ ಹಾಗೂ ಚಿಕ್ಕಪ್ಪ ಬೇರಾದರು. ಇರುವುದನ್ನು ಕಳೆದುಕೊಂಡು ಒಟ್ಟಾಗಿ ಇರುವುದರ ಬದಲು, ಇರೋದನ್ನು ಇಟ್ಟುಕೊಂಡು ಬೇರಾಗೋದು ಒಳ್ಳೆಯದು ಅನ್ನುವುದು ನನ್ನ ತಂದೆಯ ಅಭಿಪ್ರಾಯ. ೧೯೬೫ರಲ್ಲಿಯೇ ನನ್ನ ಮದುವೆ ಆಗಿತ್ತು. ನನ್ನ ತಂದೆಗೆ ಅವರ ೩೦ನೇ ವಯಸ್ಸಿನಲ್ಲಿಯೇ ಪತ್ನೀ ವಿಯೋಗವಾಗಿದ್ರೂ ಅವರು ಮರುಮದುವೆ ಆಗಿರಲಿಲ್ಲ. ತಮ್ಮ ಸರ್ವಸ್ವವನ್ನೂ ಈ ಕುಟುಂಬಕ್ಕೆ ತ್ಯಾಗ ಮಾಡಿದ್ರು. ಕಡೆಗೆ ಅವರು ನಮ್ಮ ಚಿಕ್ಕಪ್ಪನಿಗೆ ಹೇಳಿದ್ರು. ... "ನೀನು ಚಿಕ್ಕವನು. ವ್ಯವಹಾರ ನಿನ್ನಲ್ಲೇ ಇದೆ. ನಿನಗೆ ಏನು ಬೇಕೋ ಅದನ್ನು ಇಟ್ಟುಕೊಂಡು ಉಳಿದಿದ್ದನ್ನು ನಮಗೆ ಕೊಡು" ಅಂದ್ರು. ಅಷ್ಟರಲ್ಲಿ ನನ್ನ ಅಣ್ಣನಿಗೆ ಕೆಲಸ ಸಿಕ್ಕಿತ್ತು. ನಾವು ಬೇರಾದಾಗ, ನನ್ನ ಹತ್ತಿರ ದುಡ್ಡಿರಲಿಲ್ಲ. ಅರಿಶಿನ ಕುಂಕುಮದ ಹಣ ೨೦೦ ರೂಪಾಯಿಯಲ್ಲಿ ಸಂಸಾರ ಆರಂಭಿಸಿದೆ. ನಮಗೆ ಇದ್ದಿದ್ದು ಮಣ್ಣಿನ ಮನೆ. ಬಿದಿರು ಬಂಬು ನೆಟ್ಟು, ಅದಕ್ಕೆ ಅಡಿಕೆ ದಬ್ಬೆ ಕಟ್ಟಿ, ಎರಡೂ ಬದಿಗೆ ಮಣ್ಣು ಮೆತ್ತಿ ಅಡಿಕೆ ಗೋಡೆ ಎಬ್ಬಿಸಿದ್ವಿ. ಬೆಳಗ್ಗೆಯೆಲ್ಲಾ ತೋಟದ ಕೆಲಸ, ರಾತ್ರಿಯೆಲ್ಲಾ ಮನೆಯ ಗೋಡೆಯ ಕೆಲಸ. ಹೀಗೆ ಸ್ವಂತವಾಗಿ ಮನೆ ಎಬ್ಬಿಸಿಕೊಂಡ್ವಿ. ತೋಟದ ಎಲೆಹಂಬು ಹಾಗೂ ಬಾಳೆಯಿಂದ ಖರ್ಚಿಗೆ ಹಣ ಸಿಗ್ತಿತ್ತು. ನನ್ನ ಪಾಲಿಗೆ ಊರ ಮುಂದೆ ೨೦ ಗುಂಟೆ ತೋಟ ಬಂದಿತ್ತು ಹಾಗೂ ಶೀಗವಾಳಿನಲ್ಲಿ ಒಂದೂಮುಕ್ಕಾಲು ಎಕರೆ ತೋಟದ ಜಮೀನು ಸಹಾ ಇತ್ತು. ೭೦/೭೨ ರ ಹೊತ್ತಿಗೆ ಕುಟುಂಬದ ಸ್ಥಿತಿ ಸುಧಾರಿಸ್ತು. ಮನೇಲಿ ಏಳು/ಎಂಟು ಎಮ್ಮೆ ಇತ್ತು. ನಾನು ವ್ಯವಸಾಯದ ಜತೆಗೆ ಇಲ್ಲಿದ್ದ ಕೇಶವಮೂರ್ತಿಗಳ ಬಳಿ ವೇದಾಧ್ಯಯನ ಮಾಡ್ತಿದ್ದೆ. ಮಾವನವರದ್ದು ಮೂರು/ನಾಲ್ಕು ಎಕರೆ ಗದ್ದೆ ಸಹಾ ಇತ್ತು. ೧೯೮೫ರಲ್ಲಿ ಮಗಳನ್ನು ಮೈಸೂರಿನ JSS ಕಾಲೇಜಿನಲ್ಲಿ Diplomaಗೆ ಸೇರಿಸಿದೆ. ಮಗ ಸಹಾ SSLC ಮುಗಿಸಿ ITIಗೆ ಸೇರಿದ. ನನ್ನ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಅಲ್ಲಿಗೇ ಹೋದಳು. ಮಕ್ಕಳ ವಿದ್ಯಾಭ್ಯಾಸ ಆಗುವವರೆಗೆ ನಾನು ಇಲ್ಲಿ ಒಬ್ಬನೇ ಇದ್ದೆ. ೯೦ರಲ್ಲಿ ಹಿರಿಮಗಳಿಗೆ, ೯೫ರಲ್ಲಿ ಕಿರಿಮಗಳಿಗೆ ಮದುವೆ ಮಾಡ್ದೆ. ಮಗ ಓದಿಯಾದ ಮೇಲೆ ಕೆಲಸಕ್ಕೆ ಸೇರಿದ. ಅಲ್ಲಿ ಅವನಿಗೆ ಬರ್‍ತಿದ್ದ ಸಂಬಳ ಅವನ ಊಟಕ್ಕೆ ಸಾಲ್ತಿರಲಿಲ್ಲ. ಮನೆ ಮುಂದೆ ಬದುಕೋಣ ಬಾ ಅಂತ ಅವನನ್ನು ಕೆಲಸ ಬಿಡಿಸಿ ಇಲ್ಲಿಗೇ ಕರೆ ತಂದೆ. ಅವನಿಗೆ ೯೮ರಲ್ಲಿ ಮದುವೆ ಆಯ್ತು. ಅವನಿಗೆ ಹಣ ಸಂಪಾದಿಸುವ ಚಟ. ಚೀಟಿ ವ್ಯವಹಾರದಲ್ಲಿ ೧೦ ರಿಂದ ೧೨ ಲಕ್ಷ ನಷ್ಟ ಆಯ್ತು. ಮಗ ಉಳೀಬೇಕು, ಇಲ್ಲ ತೋಟ ಉಳೀಬೇಕು ಅನ್ನುವ ಪರಿಸ್ಥಿತಿ. ಆಗ ಶೀಗುವಾಳು ಸಮೀಪದ ಒಂದೂಮುಕ್ಕಾಲು ಎಕರೆ ತೋಟಾನ ಮಾರಿದೆ. ಆಗ ನಮಗೆ ಕುಟುಂಬ ನಡೆಸಲು ಅನಿವಾರ್ಯವಾಗಿ ಒಂದು ಉಪಕಸುಬು ಬೇಕಾಯ್ತು. ನಾನು ಕರ್ನಾಟಕ, ಕೇರಳ, ತಮಿಳುನಾಡು ಎಲ್ಲಾ ಜಾಗದಲ್ಲೂ ಸುತ್ತಿದೆ. ಅಡಿಕೆ ಪಟ್ಟೆ factory ತೆಗೀಬೇಕು ಅಂತ ನಿರ್ಧಾರ ಮಾಡಿದೆ. ಸುಳ್ಯದಲ್ಲಿ ಜಿ.ಜಿ. ನಾಯಕ್ ಅಂತ ಒಬ್ಬರು ಸಣ್ಣ ಪ್ರಮಾಣದಲ್ಲಿ ಮಾಡ್ತಾ ಇದ್ರು. ಅವರು ಎಡೀದೇ ಇರೋ ಅಡಿಕೆ ಪಟ್ಟೇಲಿ ತಟ್ಟೆ ಮಾಡ್ತಿದ್ರು. ಅಲ್ಲಿಂದ ವಿಚಾರ ತಿಳಿದು, ಊರಿಗೆ ಬಂದು ಉಳಿದಿದ್ದ ಅಲ್ಪಸ್ವಲ್ಪ ತೋಟಾನ PLDB ಬ್ಯಾಂಕ್‌ನಲ್ಲಿ ಅಡ ಇಟ್ಟು ಎರಡು ಲಕ್ಷ ಸಾಲ ತಂದ್ವು. Factory ಆರಂಭವಾಯ್ತು. ಆರು ತಿಂಗಳಲ್ಲಿ ಬಹಳ ಶ್ರಮವಾಯ್ತು. ಅಡಿಕೆ ಪಟ್ಟೇನ ಸುತ್ತಮುತ್ತಲ ಬೆಳೆಗಾರರಿಂದ ಹಣ ನೀಡಿ ಖರೀದಿಸಬೇಕಿತ್ತು, ಇಲ್ಲಿ ಕೆಲಸ ಮಾಡುವ ಕೂಲಿಕಾರ್ಮಿಕರಿಗೆ ಹಣ ನೀಡಬೇಕಿತ್ತು, ಕರೆಂಟಿಗೆ ಹಣ; ಆದ್ರೆ ನನ್ನ ಮಾಲನ್ನು ಕೊಟ್ರೆ ಹಣ ತಕ್ಷಣ ಸಿಗ್ತಿರಲಿಲ್ಲ. ಬಹಳ ಶ್ರಮಪಟ್ಟೆ. ನಂತ್ರ ನಾನು ನಿರ್ಧಾರ ಮಾಡ್ದೆ. "ಈ ಕರೆಂಟನ್ನು ಕೈಬಿಡಬೇಕು. ಕೂಲಿಯಾಳುಗಳ ಮೇಲಿನ ಅವಲಂಬನೆ ಕಡಿಮೆಯಾಗಬೇಕು. ನಾವು ಸ್ವತಃ ಕೆಲಸ ಮಾಡಬೇಕು" ಅಂತ. ನಾನು ಮೈಸೂರಿನ Anil



ಎಸ್.ಸುಬ್ರಹ್ಮಣ್ಯ ತಾವು ಸಿದ್ಧಪಡಿಸಿದ ಅಡಿಕೆ ತಟ್ಟೆಗಳೊಂದಿಗೆ: ಕೇರಳಾಪುರ

and Co.ನಲ್ಲಿ ಅಡಿಕೆ ತಟ್ಟೆ ಮಾಡುವ M/c ತಂದದ್ದು. ಅಲ್ಲಿ ಅವರು ಒಂದು ಕಾಯಿಲ್ ಕೊಡೋರು. ಆ ಮೆಶೀನ್‌ಗೆ ೮೦ ಸಾವಿರ. ಆರು, ಏಳು ತರಹದ ಅಡಿಕೆ ತಟ್ಟೆ ಮಾಡುವಂತಹದ್ದು ಆ ಯಂತ್ರ. ಈ ಕಾಯಿಲ್ ಬಹಳ ಬೇಗ ಹಾಳಾಗೋದು. ಮೊದಲು ೮೦ ರೂಪಾಯಿ ಇದ್ದ ಕಾಯಿಲ್ ೧೫೦ ರೂಪಾಯಿಗಳವರೆಗೂ ಏರಿತು. ಆರು ತಿಂಗಳು, ವರುಷದಲ್ಲಿ ನನ್ನನ್ನು ಇದು ಸುಸ್ತು ಮಾಡ್ತು. ಆಗ ನಾನು ಯೋಚನೆ ಮಾಡಿದೆ, "ಈ ತರಹ Coil ಹಾಕುವ ಬದಲು ನನ್ನ ಮನೇಲಿರುವ GI ಕಾಯಿಲ್ ಹಾಕಿದ್ರೆ ಹೇಗಿರುತ್ತೆ" ಅಂತ. ನಾನು ರಾತ್ರಿ ಕೆಲಸ ಮಾಡುವಾಗಲೇ ಇದು ಹೊಳೆದದ್ದು. ಹಳೆಯ ಎಲೆಕ್ಟ್ರಿಕ್ stove ಇತ್ತು. ಅದರ ಕಾಯಿಲ್ ಕಿತ್ತೆ. ನನ್ನ ಹೆಂಡತಿ stove ಹಾಳು ಮಾಡಿದ್ದಕ್ಕೆ ಬೈದಳು. ನಾನು ಆ ಕಾಯಿಲ್ ಅನ್ನು ಬೇಕಾದ ರೀತಿಯಲ್ಲಿ ಸುತ್ತಿದೆ, ನಂತರ ಅದನ್ನು ಒಂದು ಯಂತ್ರಕ್ಕೆ set ಮಾಡಿದೆ. ಕೆಲಸ ಶುರು ಮಾಡಿದೆ. ಈ coil ಹಾಳಾಗಲೇ ಇಲ್ಲ, ತಿಂಗಳುಗಟ್ಟಲೆ ಕೆಲಸ ಮಾಡಿದ್ರೂ ಏನೂ ಆಗಲಿಲ್ಲ. ಪ್ರತಿ ಬಾರಿ coil ತರುವ ಹಣ ಇಲ್ಲಿ ಉಳಿಯಿತು. ನನ್ನ ಮಗನನ್ನು ಬೆಂಗಳೂರಿಗೆ ಕಳಿಸಿದೆ. ಈ GI ಕಾಯಿಲ್ ತಯಾರು ಮಾಡುವವರ ವಿಳಾಸ ತೊಗೊಂಡು ಬಾ ಅಂತ. ಅಲ್ಲಿ ಜಾಗ ತಿಳಿದು, ಇದೇ ಕಾಯಿಲ್ ಅನ್ನು ಎಲ್ಲಾ ಯಂತ್ರಕ್ಕೆ ಅಳವಡಿಸಿದೆ. ಆಗ ಹಣದ ಉಳಿತಾಯ ಆರಂಭವಾಯ್ತು. ಮನಸ್ಸಿಗೆ ಶಾಂತಿ ಸಿಕ್ತು. ಈ ಕೂಲಿಗಾರರು ಸಮಸ್ಯೆ ಮಾಡಿದಾಗ... ನಾವೇ ಕೆಲಸ ಆರಂಭಿಸಿದ್ವು. ಆಗ ಈ ಸಮಸ್ಯೆನೂ ಪರಿಹಾರವಾಯ್ತು. ಅಷ್ಟು ಹೊತ್ತಿಗೆ ಈ ಉದ್ಯಮ ನಡೆಸಲು ನಾನು ಮನೆ ಬಾಡಿಗೆ ತೊಗೊಂಡಿದ್ನಲ್ಲಾ. . ಅವರು ನನಗೆ "ಮನೆ ಖಾಲಿ ಮಾಡು. ನಾನು ಇದನ್ನೆಲ್ಲಾ ಮಾರಬೇಕು" ಅಂದ್ರು. ಆರು ತಿಂಗಳ ಅವಧೀಲಿ ಮನೆ ಬಿಟ್ಟೆ. ಮನೆ ಹತ್ತಿರವೇ ಉದ್ದಿಮೆಯನ್ನು ಆರಂಭಿಸಿದೆ. ರಾತ್ರಿಯೆಲ್ಲಾ ಕೆಲಸ ಮಾಡಿ, ಅಡಿಕೆ ತಟ್ಟೆ ಮಾಡೋದು, ಬೆಳಗ್ಗೆ ಆರು ಘಂಟೆಗೆ ಅದನ್ನು ಮಾರಾಟಕ್ಕೆ ತೆಗೆದುಕೊಂಡು ಹೋಗೋದು. ಅಷ್ಟು ಶ್ರಮ ಆಗ್ತಿತ್ತು; ಕರೆಂಟಿನ ತೊಂದರೆ ತಪ್ಪಿಸಿಕೊಳ್ಳಲು, ಗ್ಯಾಸ್‌ನಿಂದ ಉದ್ದಿಮೆ ನಡೆಸಬೇಕು ಅಂತ ತೀರ್ಮಾನಿಸಿ, ಬೆಂಗಳೂರಿಗೆ ಹೋದೆ. ಅಲ್ಲಿ ಅಂಗಡಿಯವನಿಗೆ ವಿಚಾರವನ್ನೆಲ್ಲಾ ವಿವರಿಸಿ ಹೇಳಿದೆ. ಆಗ ಆತ ಒಂದು gas burner ಕೊಟ್ಟ. ೨೦೦ ರೂಪಾಯಿಗೆ ಖರೀದಿಸಿದೆ. ಈ ಯಂತ್ರಕ್ಕೆ ಅದನ್ನು ಅಳವಡಿಸಿದಾಗ ನಮಗೆ ಕೆಲಸಕ್ಕೆ ಅನುಕೂಲ ಆಗುತ್ತೆ ಅಂತ ಅನ್ನಿಸಿತು. ನಂತ್ರ ಕರೆಂಟ್ ಬಿಟ್ಟು, ಗ್ಯಾಸ್‌ನಲ್ಲಿ ಕೆಲಸ ಆರಂಭಿಸಿದ್ವು. ಇದುವರೆಗೂ ಅದು ನಡೀತಿದೆ. ಏನೂ ತೊಂದರೆ ಆಗಿಲ್ಲ.

ಅಡಿಕೆ ಪಟ್ಟೇನ ಸುತ್ತಮುತ್ತಲಿನ ಬೆಳೆಗಾರರಿಂದ ಖರೀದಿ ಮಾಡ್ತೀವಿ. ಒಂದು ದಿನಕ್ಕೆ ೫೦೦ ಬೇಕಾಗುತ್ತೆ. ಬಸವಾಪಟ್ಟಣ, ಅಗ್ರಹಾರ, ಮಗ್ಗೆ ಈ ಕಡೆಯಿಂದ ತರ್ತಿದ್ವು. ಅಡಿಕೆ ಪಟ್ಟೇನ ಯಂತ್ರಕ್ಕೆ ಕೊಟ್ಟು, ಅಚ್ಚನ್ನು ಕಾಲಿನಿಂದ ಒತ್ತಿ ಅದನ್ನು ಕಾಯಿಸಿದ್ರೆ ಅಡಿಕೆ ತಟ್ಟೆ ತಯಾರಾಗುತ್ತೆ. ನಂತರ ಅದು ಒಣಗಬೇಕು. ನಾವು ಏಳು ತರಹ ತಟ್ಟೆ ಮಾಡ್ತೀವಿ. ೧೨ ಇಂಚು, ೧೦ ಇಂಚು, ಎಂಟು ಇಂಚು ತಟ್ಟೆ, 4" x 6" ಇರುವ ಚೌಕಾಕಾರದ ತಟ್ಟೆ, ಆರು ಇಂಚು ವ್ಯಾಸದ ದುಂಡಾದ ತಟ್ಟೆ, ಐದು ಇಂಚಿನ ಆಳವಾದ BOWL, ೪ ಇಂಚಿನ ಸಣ್ಣದಾದ ತಟ್ಟೆ, ಇಷ್ಟನ್ನೂ ಮಾಡ್ತಾ ಇದೀವಿ. ನಾವು ಉದ್ದಿಮೆಯನ್ನು ಆರಂಭಿಸಿದಾಗ ಮಾರುವುದು ಕಷ್ಟ ಆಯಿತು. ಆರಂಭದಲ್ಲಿ ಬ್ಯಾಗಿನಲ್ಲಿ ಇಟ್ಟುಕೊಂಡು, ಸಂತೆ, ದೇವಸ್ಥಾನ ಹಾಗೂ ಬಸ್ ನಿಲ್ದಾಣದಲ್ಲಿ ಎಲ್ಲಾ ಕಡೆ ಪ್ರಚಾರ ಮಾಡೋದು. ಇಲ್ಲಿ ಬೂದನೂರು ಅಂತ ಇದೆ. ಅಲ್ಲಿ ದೇವರ ಹಬ್ಬ ಅಂತ ನಡಿಯುತ್ತೆ. ಆ ಹಬ್ಬದಲ್ಲಿ ಅಡಿಕೆ ತಟ್ಟೇನ ಐವತ್ತು ಪೈಸೆಗೆ ಕೊಟ್ಟೆ. ಅಲ್ಲಿಗೆ ಸುತ್ತಮುತ್ತಲಿನ ಎಲ್ಲಾ ಜನ ಬರ್ತಾರೆ, ಸುಮಾರು ನಾಲ್ಕರಿಂದ ಐದು ಕ್ವಿಂಟಾಲ್ ಅಕ್ಕಿ ಬೇಯುತ್ತೆ. ಅಲ್ಲಿ ಅಡಿಕೆ ತಟ್ಟೇಲಿ ಊಟ ಮಾಡಿದ ಜನರಿಗೆ ಈ ತಟ್ಟೆ ಹಿಡಿಸಿತು. ಅದು ನಮ್ಮ ವ್ಯಾಪಾರಕ್ಕೆ turning point ನೀಡ್ತು. ಈಗ್ಗೆ ನಾಲ್ಕು/ಐದು ವರುಷಗಳ ಹಿಂದೆ ಮೈಸೂರಲ್ಲಿ ಮಲ್ಲಿಗೆ ಇಡ್ಲಿ ಅಂತ ಮಾಡ್ತಾರೆ. ಅಲ್ಲಿಗೆ ಒಂದು ಸಾರಿ ಭೇಟಿ ಕೊಟ್ಟೆ. ಅವರು "ತಂದು ಕೊಡಿ, ನೋಡೋಣ" ಅಂದ್ರು. ಅವರಿಗೂ ಹಿಡಿಸಿತು. ಆ ವರುಷ ಒಂದು ಲಕ್ಷ ಅಡಿಕೆ ತಟ್ಟೆ ತೊಗೊಂಡ್ರು. ಅವಾಗ ಮನಸ್ಸಿಗೆ ನೆಮ್ಮದಿಯಾಯ್ತು. ಮಾರನೆ ವರುಷ ಬೇರೆಯವರಿಗೆ ಒಂದೂಮುಕ್ಕಾಲು ಲಕ್ಷ plate ಕೊಟ್ಟೆ. ಕೆ.ಆರ್.ನಗರದ ರಥೋತ್ಸವಕ್ಕೆ plate supply ಮಾಡಲು ಆರಂಭಿಸಿದ್ವು. ಜನಗಳ ಪರಿಚಯವಾಯ್ತು. ಈಗ ವರುಷಕ್ಕೆ ಆರರಿಂದ ಏಳು ಲಕ್ಷ ತಟ್ಟೆಗಳನ್ನು ನಾವು ಉತ್ಪಾದನೆ ಮಾಡ್ತಿದೀವಿ.

ನಾರನ್ನು ಎಡೀದೇ ಇರುವ ಅಡಿಕೆ ಹಾಳೇಲಿ ತಟ್ಟೆಗಳನ್ನು ತಯಾರು ಮಾಡಬಹುದು. ಆದ್ರೆ ಅದನ್ನು ಉಪಯೋಗಿಸಿ, ಬಿಸಾಕಿ ಹೋದ ಮೇಲೆ ಬೇರೆಯವರು ಅವನ್ನು ತೊಳೆದು ಸುಲಭವಾಗಿ ಮಾರಬಹುದು. ಎಡೀದೇ ಇರುವ ಹಾಳೆ ನೀರು ಹೀರಬೇಕಾದ್ರೆ ನಾಲ್ಕರಿಂದ ಐದು ಘಂಟೆ ಬೇಕು. ಊಟವಾದ ತಕ್ಷಣ ಅದನ್ನು ತೊಳೆದು ಒಣಗಿಸಿದ್ರೆ ಮತ್ತೆ ಬಳಸಬಹುದು. ಎಡೆದ ಹಾಳೇಲಿ ಅಡಿಕೆ ತಟ್ಟೆ ಮಾಡಿದ್ರೆ ಅದು ತಕ್ಷಣ ನೀರು ಹೀರುತ್ತೆ. ಅದರ ಗುಣ ಬದಲಾಗುತ್ತೆ, shape ಹೊರಟು ಹೋಗುತ್ತೆ. ಹಾಗಾಗಿ ಅದನ್ನು ಮತ್ತೆ ಬಳಸಲು ಆಗೋಲ್ಲ. ಹಾಗಾಗಿ ನಾನು ಎಡೀದೇ ಇರುವ ಅಡಿಕೆ ಹಾಳೇಲಿ plate ಮಾಡೋಲ್ಲ.



ಮಾಲು ಬಿಕರಿಗೆ ಸಿದ್ಧ: ಅಡಿಕೆ ಪಟ್ಟೆಯ ತಟ್ಟೆಗಳನ್ನು ಹಿಡಿದ ಎಸ್.ಸುಬ್ರಹ್ಮಣ್ಯ: ಕೇರಳಾಪುರ

ನನ್ನ ಉದ್ಯಮ ಸುಗಮವಾಗಿ ನಡೀತಾ ಇರೋದ್ರಿಂದ ಮೂರು ನಾಲ್ಕು ತರಹ ಅನುಕೂಲ ಇದೆ. ಅಡಿಕೆ ಹಾಳೇನ ಎಡೆದು ಕೊಡೋದ್ರಿಂದ, ಅಡಿಕೆ ಬೆಳೆಗಾರರಿಗೆ ಉರುವಲು ಅವರಲ್ಲೇ ಉಳಿಯುತ್ತೆ. ಅಡಿಕೆ ಹಾಳೇನ ನಾವು ೩೦ ರಿಂದ ೫೦ ಪೈಸಕ್ಕೆ ಖರೀದಿ ಮಾಡ್ತೀವಲ್ಲ ಅದ್ರಿಂದಲೂ ಆದಾಯ ಸಿಗುತ್ತೆ; ಈ ಹಿಂದೆ ಅದು ವ್ಯರ್ಥವಾಗಿ ಹೋಗ್ತಿತ್ತು. ೧೫-೨೦ ಪೈಸೆಗೂ ಕೇಳೋರು ಇತ್ತಿಲ್ಲ. ನಮಗೆ ಜಮೀನು ಬದುಕಾಗುತ್ತೆ. ಒಂದಿಬ್ಬರಿಗೆ ಕೆಲಸ ಕೊಡಬಹುದು. ನಮ್ಮಿಂದ ಖರೀದಿ ಮಾಡಿ ಬೇರೆಡೆ ಮಾರುವ ವ್ಯಾಪಾರಸ್ಥರಿಗೂ ಆದಾಯ ಸಿಗುತ್ತೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಇದ್ರಿಂದ ಪರಿಸರಕ್ಕೆ ಯಾವುದೇ ಹಾನಿಯಾಗಿಲ್ಲ. ಬಳಸಿ ಬಿಸಾಡಿದ ಅಡಿಕೆ ತಟ್ಟೆ ಸುಲಭವಾಗಿ ಮಣ್ಣಿನಲ್ಲಿ ಬೆರೆಯುತ್ತೆ. ಪ್ಲಾಸ್ಟಿಕ್ ತಟ್ಟೆಗಳ ಹಾಗೆ ಪರಿಸರಕ್ಕೆ ಹಾನಿಕರವಲ್ಲ. ಈಗ ನನಗೆ ಉಳಿದಿರೋದು ಅರ್ಧ ಎಕರೆ ತೋಟ ಮಾತ್ರ. ಅದ್ರಲ್ಲಿ ಅಡಿಕೆ, ಬಾಳೆ ಅಷ್ಟೆ. ತೋಟದ ಕೆಲಸಾನೂ ಅಷ್ಟಾಗಿ ಇರೋದಿಲ್ಲ. ಈ ಉಪಕಸುಬೂ ಸಹ ಇರೋದ್ರಿಂದ ಜೀವನ ಸರಾಗವಾಗಿ ಸಾಗ್ತಿದೆ. ಇವತ್ತಿನವರೆಗೂ ನಾವು ತಯಾರು ಮಾಡ್ತಿರುವ ತಟ್ಟೆಗಳು ಒಂದೂನೂ ಉಳಿಯದ ಹಾಗೆ ಮಾರಾಟ ಆಗ್ತಿದೆ.

ನನ್ನ ಹೆಂಡತಿ ನನ್ನ ಕುಟುಂಬದ ಆಧಾರಸ್ತಂಭ. ಅವಳದ್ದೇ major ಅಂತ ಹೇಳಬೇಕು. ನಾವು ದಾರಿ ತಪ್ಪಿದಾಗ ಮೂಗುದಾರ ಹಿಡಿದು, ಎಳೆದು control ಮಾಡ್ತಾರೆ. ಬಹಳ ಚಾಣಾಕ್ಷತನ ಇದೆ. ಮಕ್ಕಳನ್ನೂ ಸಹ ನಿಯಂತ್ರಣದಲ್ಲಿ ಇಟ್ಟುಕೊಂಡಿದಾರೆ. ಮಾತಿನಲ್ಲಿ ಬಹಳ ಬಿಗಿ. ಅಲ್ಲದೆ ನನ್ನ ಹೆಂಡತಿ ಹಾಗೂ ಸೊಸೆ ಎಲ್ಲರೂ ಈ ಉದ್ದಿಮೇಲಿ ಸಹಕರಿಸ್ತಾರೆ. ಅಡುಗೆ ಮಾಡಿದ ನಂತರ, ತಟ್ಟೆಗಳನ್ನು ವಿಂಗಡಣೆ ಮಾಡೋದು, ಅದನ್ನು pack ಮಾಡೋದು, ಹಾಳಾದ ತಟ್ಟೆಗಳಿಗೆ patch ಹಾಕೋದು - ಈ ಕೆಲಸ ಇರುತ್ತೆ. ನಮ್ಮ ಸಂಸಾರದಲ್ಲಿ ನಾವು ಎಷ್ಟು ಕೆಲಸ ಮಾಡ್ತೀವೋ ಅಷ್ಟು ದುಡ್ಡು ನಮಗೆ ಬರುತ್ತೆ. ಇದಲ್ಲದೆ ಹಾಳಾದ ತಟ್ಟೆಗಳಿಗೆ, patch ಹಾಕಿ ಮಾಡೋದ್ರಿಂದ ಅದನ್ನು ಕಡಿಮೆ ಧಾರಣೆಗೆ ಮಾರಬಹುದು. ನಮಗೂ ಆಗ ನಷ್ಟ ಕಡಿಮೆ, ಕೊಳ್ಳುವವರಿಗೂ ಅನುಕೂಲ. ನಮ್ಮ ಉದ್ಯಮ **ಶ್ರೀಲಕ್ಷ್ಮೀಕೇಶವ ಲೀಫ್ ಕಪ್ ಇಂಡಸ್ಟ್ರೀಸ್** ನಮ್ಮ ಬದುಕಿಗೆ ಸುಭದ್ರ ನೆಲೆಯಾಗಿದೆ. ಈಗ ನಮಗೆ ಕೈತುಂಬಾ ಕೆಲಸವಿದೆ... ಬದುಕಿಗೆ ಬೇಕಾದ ವರಮಾನವಿದೆ. Raw material ಎಲ್ಲಿ ಸಿಗುತ್ತೋ, ಅಲ್ಲಿ ಉದ್ಯಮ ಮಾಡಿದ್ರೆ ready material ಸಾಗಿಸೋದು ಸುಲಭ. ಅಲ್ಲದೆ ನಾವು ಒಂದು ಸ್ವಂತ ಉದ್ಯೋಗ ಮಾಡಿದ್ರೆ, ಬೇರೆಯವರ ಹಂಗಿನಲ್ಲಿ ಇರೋದಿಲ್ಲ. ಅಲ್ಲದೆ ಈಗ ನಮ್ಮ ಮನೆಯ ಹೆಂಗಸರು ಉದ್ದಿನ ಹಪ್ಪಳ ಮಾಡುವ ಉದ್ದಿಮೆ ಮಾಡುವತ್ತ ಆಲೋಚನೆ ಮಾಡ್ತಿದಾರೆ. ನಾನು ಅಡಿಕೇಲಿ chocolate ಮಾಡುವ ಬಗ್ಗೆ ಆಲೋಚನೆ ಮಾಡ್ತಿದೀನಿ. ಈ ಎರಡರಲ್ಲಿ ಯಾವುದಾದರೂ ಒಂದನ್ನು ಮಾಡ್ತೀವಿ.

ಇವತ್ತು ಇಲ್ಲಿ ವ್ಯವಸಾಯದಲ್ಲಿ ಸ್ವತಃ ಕೆಲಸ ಮಾಡುವವರು ಕಡಿಮೆ ಆಗ್ತಿದಾರೆ. ಕೂಲಿ ಕೊಟ್ಟಾಗ ವ್ಯವಸಾಯ ಅಭಿವೃದ್ಧಿಯಾಗೋದು ಕಷ್ಟ. ಈಗ ನನ್ನ ಉದ್ದಿಮೆಯಲ್ಲಿ ನನಗೆ ಉಳಿತಾಯ ಯಾವುದು ಅಂದ್ರೆ ನಾವು ಸ್ವತಃ ಕೆಲಸ ಮಾಡ್ತಿರೋದು. ಮಗ ಈಗ ಬಸವಾಪಟ್ಟಣದಲ್ಲಿ ವೇದ ಕಲೀತಾ ಇದಾನೆ-ಪ್ರಯೋಗ ಭಾಗಾನ. ಒಂದೇ ಕೊಂಬೆ ಹಿಡಿಯೋದು ಬೇಡ ಅಂತ. ಭವಿಷ್ಯವನ್ನು ಹೇಳುವುದು ಕಷ್ಟ. ಆದರೂ ನನ್ನ ಬದುಕಿನಲ್ಲಿ ಸಂತೃಪ್ತಿ ಇದೆ. ಕೆಲಸ ಚೆನ್ನಾಗಿ ಮಾಡಬೇಕು... ಆರೋಗ್ಯ ಚೆನ್ನಾಗಿ ಇಟ್ಟುಕೋಬೇಕು. ಇಷ್ಟೇ ನನ್ನ ವಿಚಾರ. ಕೆಲಸ ಚೆನ್ನಾಗಿ ಮಾಡಿದಾಗ ಆದಾಯ ಚೆನ್ನಾಗಿ ಬಂದೇ ಬರುತ್ತೆ. ದಿನಕ್ಕೆ ನಾನು ೧೨ ರಿಂದ ೧೬ ಘಂಟೆ ದುಡೀತೀನಿ. ನಾನು ರಾತ್ರಿ ಕೆಲಸ ಮಾಡೋದು ಜಾಸ್ತಿ. ಬೆಳಗಿನ ಸಮಯದಲ್ಲಿ, ಊಟಕ್ಕೆ ಬನ್ನಿ, ಕಾಫಿಗೆ ಬನ್ನಿ, ತಿಂಡಿಗೆ ಬನ್ನಿ ಅಂತ ಮಧ್ಯೆ ಮಧ್ಯೆ ಕರೀತಾ ಇರ್ತಾರೆ. ರಾತ್ರಿಯಾದ್ರೆ ಯಾವ ಅಡೆತಡೆ ಇರೋಲ್ಲ. ಹೀಗೆ ರಾತ್ರಿ ೧೨ರಿಂದ ಬೆಳಿಗ್ಗೆ ಆರರವರೆಗೆ ನಿರಂತರವಾಗಿ ಕೆಲಸ ಮಾಡಿದಾಗಲೇ ನಮಗೆ

ಯಂತ್ರದ ದೋಷಗಳು ಅರಿವಾಗೋದು. ಮನಸ್ಸು ಸಹ ಒಂದೇ ತರನಾಗಿ ಇರುತ್ತೆ. ಏಕಾಗ್ರತೆಯಿಂದ ಕೆಲಸ ಮಾಡಲು ರಾತ್ರಿಯೇ ಸರಿ. ಇದು ನನ್ನ ಅನುಭವ. ಕಷ್ಟಗಳ ಸರಮಾಲೆಯಲ್ಲೂ ಮನಸ್ಸಿನ ಏಕಾಗ್ರತೆ ಇದ್ದರೆ ಸುಖ ಕಾಣಲು ಸಾಧ್ಯ. ನನ್ನ ತಾಯಿ ಸಿರಿವಂತರ ಮನೇಲಿ ಹುಟ್ಟಿದ್ದು, ಬಡವರ ಮನೆಗೆ ಸೇರಿದ್ದು. ಆರೇಳು ಜನ ಹುಟ್ಟಿದ್ರು... ಉಳಿದದ್ದು ನಾವು ಮೂರು ಜನ. ನನ್ನ ಕುಟುಂಬ ಸಹ ಮುಂದೆ ಬರಬೇಕು ಅನ್ನುವ ಅದಮ್ಯ ಆಸೆ. ಅವರು ರಾತ್ರಿ ವೇಳೆ ಕೆಲಸ ಮಾಡುವಾಗ ದೀಪ ಇಟ್ರೆ ಎಣ್ಣೆಗೆ ಖರ್ಚಾಗುತ್ತೆ ಅಂತ ದೀಪ ಇಟ್ಟುಕೋತಾ ಇರಲಿಲ್ಲ. ಆದಾಯ ಮಾಡಬೇಕು, ಖರ್ಚು ಕಡಿಮೆ ಮಾಡಬೇಕು ಅನ್ನುವ ಮನೋಭಾವ ಅವರದ್ದು ಅಷ್ಟೆ. ಒಂದು ದಿನ ಸಾಲಿಗ್ರಾಮದವರು ಬಸವನಗುಡಿಗೆ ಅಡಿಕೆ ಹಾಕಿದಾರೆ ಅನ್ನುವ ವಿಚಾರ ತಿಳಿದು ಊಟ ಮಾಡ್ತಿದ್ದ ತಟ್ಟೇನ, ಅಲ್ಲೇ ಬಿದಿರಿನ ಬುಟ್ಟಿಯಲ್ಲಿ ಮುಚ್ಚಿಟ್ಟು, ನನಗೆ ಅಡಿಕೆ ಎಡೆಯಲು ಎಲ್ಲಿ ಸಿಕ್ಕೋಲ್ವೋ ಅಂತ ಓಡಿಹೋಗಿರೋದು ಕಣ್ಣಿಗೆ ಕಟ್ಟಿದಂತಿದೆ. ಹೊಟ್ಟೆ ಹಸಿದುಕೊಂಡೇ ಅಡಿಕೆ ಎಡೆದು, ನಂತರ ಬಂದು ಊಟ ಮಾಡಿರುವ ಜೀವಿ ಅದು. ಅಷ್ಟು ಕಷ್ಟಪಟ್ಟಿದ್ದಾರೆ ತಾಯಿ. ನನ್ನ ತಂದೆ ಮಾತ್ರ, ನಾವು ಎಷ್ಟು ಕಷ್ಟಪಟ್ರೂ ಅಷ್ಟೇನೆ... ನಮಗೆ ಏನೂ ಲಭ್ಯವೋ, ಅಷ್ಟೇ ಸಿಕ್ಕೋದು ಅಂತಿದ್ರು. ಕಷ್ಟಪಟ್ಟರೆ ಸುಖ ಉಂಟು ಅನ್ನುವುದು ಬಾಲ್ಯದ ಅನುಭವ' ಅಂತ ನಿರುಮ್ಮಳವಾಗಿ ನುಡಿದು ಮಾತು ಮುಗಿಸಿದ್ರು ಸುಬ್ರಹ್ಮಣ್ಯ. ಮಾತಿನ ಸವಿಯನ್ನು ಸವಿಯುತ್ತಿರುವಾಗಲೇ ಭೂರಿಭೋಜನ ನಮಗಾಗಿ ಕಾದಿತ್ತು. ಹಸಿದ ಹೊಟ್ಟೆ ಹೆಚ್ಚು ಕಷ್ಟಪಡದೆ ಸವಿಯನ್ನು ಸೇರಿಸಿಕೊಂಡ್ತು. ಮುಂದಿನ ಮನೆಗೆ ಹೊರಡುವಾಗ ತಿಂಡಿಯ ಗಂಟು ಕೈಸೇರಿತು. ಅವರ ಉದ್ದಿಮೆಯ ಭಾವಚಿತ್ರಗಳನ್ನು ತೆಗೆದು ಹೊರಡುವಾಗ 'ನಿಮಗೆ ಶುಭವಾಗಲಿ' ಎಂದು ಹಾರೈಸಲಷ್ಟೇ ನಮ್ಮಿಂದ ಸಾಧ್ಯವಾದದ್ದು.

ಆ) ಕೆ.ರಾಮಚಂದ್ರ ಜೋಯಿಸ್ ಇ/ಮ ಕೇಶವ ಜೋಯಿಸ್

ಕೇರಳಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, ದೂರವಾಣಿ : 08175 531409

ನಾನು ಚಿಕ್ಕಂದದಲ್ಲಿ ವೇದ ಕಲಿಯುವಾಗ, ನನ್ನ ಗುರುಗಳು ತೋಟದಲ್ಲಿಯೇ ಹೇಳಿಕೊಡ್ತಿದ್ರು. ಗುಣಿ ಹಾಕಿ, ಹಂಬು ಕಟ್ತಾ, ನೀರು ಹಾಕುತ್ತಾ ವೇದ ಕಲೀತಿದ್ದ ನಮಗೆ ಸಹಜವಾಗಿ ವ್ಯವಸಾಯದ ಬಗ್ಗೆ ವ್ಯಾಮೋಹ ಬಂತು. ಆದರೆ ಈಗಿನ ಶಿಕ್ಷಣ ಬದಲಾಗಿದೆ. ವೇದಾಭ್ಯಾಸ ಕ್ಷೀಣಿಸ್ತಾ ಇದೆ. ಹಿಂದೆ ಗುರುಕುಲಗಳಿದ್ವು. ಶಿಷ್ಯರು ಗುರುಗಳನ್ನು ಹುಡುಕಿಕೊಂಡು ಹೋಗಬೇಕಿತ್ತು. ಗುರುಗಳ ಸೇವೆ ಮಾಡಿಕೊಂಡು, ೧೨, ೧೬, ೧೮ ವರುಷ ಜತೇಲಿದ್ದು ವಿದ್ಯಾ ಕಲೀಬೇಕಿತ್ತು. ಆದ್ರೆ ಈಗಿನ ಗುರುಕುಲಗಳು ಅರ್ಥಾತ್ ಶಾಲೆಗಳು ಮನೆಬಾಗಿಲಿಗೆ ಬಂದಿವೆ. ಗುರುಗಳು ಶಿಷ್ಯರ ಮನೆ ಬಾಗಿಲಲ್ಲಿ ಇದಾರೆ. ಆದರೆ ಈಗಿನ ಶಿಷ್ಯರು ಹೇಳ್ತಾರೆ, 'ನೀವು ಸಂಬಳ ತೊಗೊಳೋದಿಲ್ವಾ, ಹೇಳಿಬಿಟ್ಟುಹೋಗಿ. ನಾವು ಬೇಕಿದ್ರೆ ಕಲೀತೀವಿ. ಸಾಕಾದ್ರೆ ಬಿಡ್ತೀವಿ' ಅಂತ.


ಕೆ.ರಾಮಚಂದ್ರ ಜೋಯಿಸ್: ಕೇರಳಾಪುರ

ಕೇರಳಾಪುರದ ಕೇಶವಜೋಯಿಸ್ ಹಾಗೂ ಹಳ್ಳಿಮೈಸೂರಿನ ನಾಗಮ್ಮ ದಂಪತಿಗಳಿಗೆ ಎರಡು ಗಂಡು ಹಾಗೂ ಎರಡು ಹೆಣ್ಣು ಮಕ್ಕಳು. ಕೊನೆಯ ಮಗ ರಾಮಚಂದ್ರಜೋಯಿಸರಿಗೆ ಈಗ ೭೫ ವರುಷ ವಯಸ್ಸು. ಇವರ ಪತ್ನಿ ಸಾವಿತ್ರಮ್ಮ ಗೆಜ್ಜಗನ ಹಳ್ಳಿಯ ಸುಬ್ಬರಾಯ ಹಾಗೂ ಸೋಮನಹಳ್ಳಿಯ ಸುಬ್ಬಮ್ಮ ದಂಪತಿಗಳ ಮಗಳು. ರಾಮಚಂದ್ರ ಜೋಯಿಸರಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬನೇ ಮಗ. ಜೋಯಿಸರ ವ್ಯವಸಾಯ ವೃತ್ತಿಯನ್ನು ಮಗ ಕೇಶವದತ್ತ ಈಗ ಮುಂದುವರಿಸುತ್ತಿದ್ದಾರೆ. ಸೊಸೆ ಪದ್ಮಿನಿ ಕುಪ್ಪಹಳ್ಳಿಯವರು. ರಾಮಚಂದ್ರ ಜೋಯಿಸರ ಮನೇಲಿ ಮಾತಿಗೆ ಕುಳಿತಾಗ ಮಧ್ಯಾಹ್ನದ ಸಮಯ. ಪೂರ್ವಿಕರ ಹಿನ್ನೆಲೆಯೊಂದಿಗೆ ವಿಚಾರ ಆರಂಭವಾಯ್ತು.

'ನಮ್ಮ ಐದನೆಯ ತಲೆ ಪಂಚಾಂಗದ ತಿಮ್ಮಾಭಟ್ಟರು ಅಂತ, ಅವರು ಬಹಳ ಪ್ರಸಿದ್ಧರಾದವರು. ಅವರು ಉಪಾಸಕರು, ಹೇಳಿದ ಮಾತು ನಿಜವಾಗುತ್ತೆ ಅನ್ನುವ ಭಾವನೆ ಸುತ್ತಮುತ್ತಲಿನ ಜನರಲ್ಲಿ ಬೇರೂರಿತ್ತು. ಅವರು ಪ್ರತಿದಿನ ರಾಮನಾಥಪುರಕ್ಕೆ ಹೋಗಿ, ಹೊಳೇಲಿ ಸ್ನಾನ ಮಾಡಿ ಬರ್ತಾ ಇದ್ರು. ಅಲ್ಲಿ ಸ್ನಾನ ಮಾಡಿ, ಮಡಿವಸ್ತ್ರ ಹಿಂಡಿ ಅವನ್ನು ಮೇಲಕ್ಕೆ ಎಸೆದ್ರೆ, ಅದು ಅವರ ಹಿಂದೆ ಛತ್ರಿಯ ಹಾಗೆ ಊರಿನವರೆಗೂ ಬರ್ತಾ ಇತ್ತಂತೆ. ಬೆಳಿಗ್ಗೆ ನಾಲ್ಕಕ್ಕೆ ಎದ್ದು ಹೋಗಿ ೧೨ರ ಹೊತ್ತಿಗೆ ಊರಿಗೆ ವಾಪಸ್ಸು ಬರೋರಂತೆ. ಹೀಗೆ ಒಂದು ಸಲ, ಈಗ ಬಂದಿರುವಂತೆ ಆಗಲೂ ಬರ ಬಂದಿತ್ತಂತೆ. ಕೃಷ್ಣರಾಜ ಒಡೆಯರ್ ಆಗ ಮಹಾರಾಜರು. ರಾಮನಾಥಪುರದ ರಾಮೇಶ್ವರನಿಗೆ ಅಭಿಷೇಕ ಮಾಡಿಸ್ತೀನಿ, ಮಳೆ ಬರಲಿ ಅಂತ ಅಲ್ಲಿಗೆ ಬಂದಿದ್ರು. ಮಾಮೂಲಿನಂತೆ ಇವರು ಸ್ನಾನಕ್ಕೆ ಹೋದಾಗ, ಬೇಕಾದಷ್ಟು ಜನ ವೈದಿಕರು ಸ್ನಾನ ಮಾಡಿ ಮಾಡಿ ಹೋಗ್ತಾ ಇದ್ರು. ಏನಯ್ಯಾ ಎಲ್ರೂ ಹೋಗ್ತಾ ಇದೀರಲ್ಲ ಏನು ವಿಷಯ ಅಂತ ಕೇಳಿದರಂತೆ. "ಹೀಗೆ, ಪ್ರಭುಗಳು ಬಂದಿದಾರೆ. ಸೋಮಸೂತ್ರ ಕಟ್ಟಿಸ್ತಾರೆ, ರುದ್ರಾಭಿಷೇಕಕ್ಕೆ ಹೋಗ್ತಿದೀವಿ" ಅಂದರಂತೆ. "ಆ ಭೋಳೀಮಗನಿಗೆ ಬುದ್ಧಿ ಇಲ್ಲ. ಈ ಭೋಳೀ ಮಕ್ಕಳು ಮಾಡಿದ್ರು. ಆ ಭೋಳೀ ಮಗ ಮಾಡಿಸ್ತಾನೆ. ಹೋಗ್ರಲೇ" ಅಂತ ಬೈದರಂತೆ. ಇದು ಮಹಾರಾಜರಿಗೆ ತಿಳೀತು. ಮಹಾರಾಜರು "ಅವನನ್ನು ಹಿಡಿದುಕೊಂಡು ಬನ್ರೋ" ಅಂದ್ರು. ಸಿಪಾಯಿಗಳು ಇವರನ್ನ ಹಿಡಿಕೊಂಡು ಹೋದ್ರು. ಆಗ ರಾಜನಿಗೆ "ಅಯ್ಯೋ ಭೋಳೀಮಗನೆ, ಅನಂತಹಸ್ತದ ಆ ಭೋಳೀಮಗ ಕೊಡಬೇಕು. ಎರಡು ಹಸ್ತದ ಭೋಳೀಮಕ್ಕಳು ಮಾಡಿಬಿಟ್ರೆ ಏನಾಗುತ್ತೆ ನಿಮಗೆ, ಮೂರು ತಿಂದು ಆರು ಮರ ಹೇಲೋ ಜನ ಇವರು" ಅಂತ ಅಲ್ಲೂ ಬೈದರಂತೆ. ನಂತರ "ಹಾಗಾದ್ರೆ ನಾವು ಮಾಡುವುದೆಲ್ಲಾ ದಂಡವೋ" ಅಂತ ಮಹಾರಾಜರು ಕೇಳಿದರಂತೆ. "ಯಾಕೋ ಮಾಡಿಸ್ತೀಯ, ನಾಳೆ ಮಧ್ಯಾಹ್ನ ಮೂರು ಘಂಟೆಗೆ ಮಳೆ ಬರುತ್ತೆ ಕಣೋ. ನಿಮಗೆ ಬೇಕಾದಷ್ಟು ಮಳೆ ಕೊಡ್ತಾನೆ ಗಂಗಾಧರೇಶ್ವರ" ಅಂತ ಹೇಳಿದರಂತೆ. ನಿಮ್ಮ ಮಾತು ನಿಜವಾಗುತ್ತೋ ಇಲ್ಲವೋ ಅಂತ ಕೇಳಿದಾಗ "ನನ್ನ ನಿತ್ಯ ಕರ್ಮಗಳಿಗೆ ತೊಂದರೆ ಮಾಡಿದ್ರೆ ನಿಮ್ಮ ವಂಶ ನಿರ್ವಂಶವಾಗುತ್ತೆ" ಅಂತ ಹೇಳಿ ವಾಪಸ್ಸು ಬಂದರಂತೆ. ಮಾರನೇ ದಿನ ಬೆಳಗಾಯ್ತು. ಇವರು ಸ್ನಾನ ಮಾಡಿ ಮೆಟ್ಟಿಲ ಮೇಲೆ ಜಪಕ್ಕೆ ಕುಳಿತರು. ತಲೆ ಮೇಲೆತ್ತಿ ಸೂರ್ಯನನ್ನು ನೋಡುತ್ತಾ ಜಪ ಮಾಡ್ತಾ ಇದಾರೆ, ಎರಡೂಮುಕ್ಕಾಲು ಆಯ್ತು. ಎಲ್ಲೂ ಒಂದು ತುಣುಕು ಮೋಡ ಇಲ್ಲ. "ಈ ಮುದುಕ ಏನೋ ಹೇಳಿದಾನೆ... ಅದು ನಿಜವಾಗುತ್ತಾ? ಅವತ್ತಿನಿಂದ ಬರದಿರುವ ಮಳೆ ಇಂದು ಬರುತ್ತಾ? ಮಹಾರಾಜರು ಇವನಿಗೆ ಸರಿಯಾಗಿ ಮಾಡ್ತಾರೆ ಇವತ್ತು" ಅಂತ ಸುತ್ತಮುತ್ತಲಿನ ಜನ ಮಾತನಾಡಿಕೊಂಡಿದಾರೆ. ಆದರೆ ಇವರು ತಲೆ ಎತ್ತಿ ಜಪ ಮಾಡ್ತಾಲೇ ಇದ್ರು. ಮೂರು ಘಂಟೆಯ ಹೊತ್ತಿಗೆ ಗುಡುಗು ಸಿಡಿಲಿನ ಸಮೇತ ಮಳೆ ಸುರಿಯಲು ಆರಂಭವಾಯ್ತು. ನಾಲ್ಕರಿಂದ ನಾಲ್ಕೂವರೆ ಹೊತ್ತಿಗೆ, ಆ ಕೆರೆ ಕೋಡಿ ಬಿತ್ತು, ಈ ಕಟ್ಟೆ ಒಡೆದುಹೋಯ್ತು ಅನ್ನುವ ವರ್ತಮಾನ ರಾಜರಿಗೆ ಬರಲು ಆರಂಭವಾಯ್ತು. ಐದರಿಂದ ಆರು ಘಂಟೆ ಹೊತ್ತಿಗೆ, "ಮಳೆ ನಿಂತರೆ ಸಾಕು" ಅನ್ನುವ ಅಭಿಪ್ರಾಯಕ್ಕೆ ಬಂದರು ಮಹಾರಾಜರು. ರಾಮನಾಥಪುರದಲ್ಲಿ ತಿರುಗಾಡಲು ಜಾಗ ಇಲ್ಲದಂತೆ ಆಗಿದೆ. ಮಹಾರಾಜರು ಇವರ ಬಳಿ ಓಡಿ ಬಂದ್ರಂತೆ, "ಸ್ವಾಮಿ, ದಯವಿಟ್ಟು ಕ್ಷಮಿಸಿ, ನೀವು ಬೈದಿರಿ ಅಂತ ನಿಮ್ಮನ್ನು ಅಪಾರ್ಥ ಮಾಡಿಕೊಂಡು ಬಿಟ್ಟೆ. ಮಳೆ ನಿಲ್ಲಿಸಿ ನಮ್ಮನ್ನು ಉದ್ಧಾರ ಮಾಡಿ" ಅಂತ ಕೇಳಿಕೊಂಡರಂತೆ. ಆವಾಗ "ಅಯ್ಯೋ ಭೋಳಿಮಗನೆ, ಇದಕ್ಯಾಕೆ ಹೆದರ್ತೀಯ. ರಾಮೇಶ್ವರನಿಗೆ ಶೀತ ಆಗಿದೆ. ನಿನ್ನ ಕೈಯಲ್ಲಿ ಎಷ್ಟು ಆಗುತ್ತೆ ಅಷ್ಟು ಕರ್ಪೂರ ತರಿಸು" ಅಂದರಂತೆ. ಮಹಾರಾಜರ ಅಪ್ಪಣೆಯಾಯ್ತು. ನಾಲ್ಕು ಐದು ಮಣ ಕರ್ಪೂರ ಬಂತು. ಹೋಗಿ ದೇವಸ್ಥಾನದಲ್ಲಿ ರಾಮೇಶ್ವರನಿಗೆ ಪೂರ್ಣವಾಗಿ ಅಲಂಕಾರ ಮಾಡಿದ್ರು. ಕರ್ಪೂರವನ್ನೆಲ್ಲಾ ಮುಚ್ಚಿಬಿಟ್ರು. ಬೆಂಕಿ ಹಾಕ್ರೋ ಅಂದರು. 'ಅಯ್ಯಯ್ಯೋ ಲಿಂಗ ಉಳಿಯುತ್ತಾ,' ಅಂತ ಹೆದರಿದ್ರಂತೆ ಎಲ್ಲರೂ. ಏನೂ ಆಗೋದಿಲ್ಲ ಅಂತ ಹೇಳಿ ಇವರೇ ಬೆಂಕಿ ಇಟ್ಟು ಬಾಗಿಲು ಹಾಕಿದ್ರು. ಒಂದೈದು ನಿಮಿಷದಲ್ಲಿ ಮಳೆ ನಿಂತು ಹೋಯ್ತು. "ರಾಮೇಶ್ವರನಿಗೆ ನೆಗಡಿ ಹೋಗಿದೆ, ಈಗ ಬಾಗಿಲು ತೆಗೀರಪ್ಪಾ" ಅಂದರಂತೆ. ಬಾಗಿಲು ತೆಗೆದ್ರೆ ಕರ್ಪೂರ ಎಲ್ಲಾ ಉರಿದುಹೋಗಿತ್ತು, ಹೂವು ಬಾಡಿರಲಿಲ್ಲ. ರಾಮೇಶ್ವರನಿಗೆ ಬೆವರು ಇಳೀತಾ ಇದೆ. ಆವಾಗ ಮಹಾರಾಜರು ಸುಮಾರು ೮೦, ೮೫ ಎಕರೆ ಹೊಲಾನ ಇವರಿಗೆ ಉಂಬಳಿ ಕೊಟ್ರಂತೆ. ಆ ಹೊಲಗಳೆಲ್ಲಾ ನಮ್ಮ ತಂದೆಯ ತಲೆವರೆಗೂ ಇತ್ತು. ನಮ್ಮ ತಂದೆ ಮೇಷ್ಟರ ಕೆಲಸದಲ್ಲಿ ಇದ್ದುದರಿಂದ, ದೊಡ್ಡಪ್ಪ, ಚಿಕ್ಕಪ್ಪ, ತಂದೆ ಎಲ್ಲಾ ಮಾರಿಕೊಂಡ್ರಂತೆ. ಪಂಚಾಂಗದ ತಿಮ್ಮಾಭಟ್ಟರು ಅಂದ್ರೆ ಅವರು ನನ್ನ ಅಜ್ಜನ ಅಜ್ಜ. ಹೀಗೆ ನಮ್ಮ ವಂಶದಲ್ಲಿ ನಡೆದು ಬಂದ ಜ್ಯೋತಿಷ್ಯ ಈಗಲೂ ನಮಗೆ ಆಸರೆಯಾಗಿದೆ. ವಂಶಪಾರಂಪರ್ಯವಾಗಿ ಜ್ಯೋತಿಷ್ಯ ನಮ್ಮಲ್ಲಿ ಬೆಳೆದು ಬಂದಿದೆ. ಅದಲ್ಲದೆ ನನ್ನ ತಂದೆ ಅಣ್ಣತಮ್ಮಂದಿರೂ ನಾನೂ ಮೇಷ್ಟರಾಗಿದ್ವಿ. ಈಗ ನಾನು ನಿವೃತ್ತಿ ಹೊಂದಿದೀನಿ. ನನ್ನ ಮಗ ಮಾತ್ರ ನಾನು "ಇನ್ನು ಗುಲಾಮಗಿರಿಗೆ ಹೋಗೋದಿಲ್ಲ" ಅಂತ ಹೇಳಿ ತೋಟ ನೋಡಿಕೊಂಡು, ವ್ಯವಸಾಯ ಮಾಡ್ತಿದಾನೆ. ಅವನಿಗೂ B.Com., ಆಗಿದೆ.



ತಮ್ಮ ಹುಲ್ಲುಮೆದೆಯ ಬಳಿ ಕೆ.ರಾಮಚಂದ್ರಜೋಯಿಸ್:ಕೇರಳಾಪುರ

'ನನ್ನ ಅಜ್ಜ ವೆಂಕಟಸುಬ್ಬಾ ಜೋಯಿಸರು ಅಂತ. ಅವರು ಜೋಯಿಸರಾದ್ರೂ ಪಂಚಾಂಗವನ್ನು ಒಂದು ದಿನ ಹಿಡಿದು ನೋಡಿದವರಲ್ಲ. "ಬುದ್ಧೀ, ಲಗ್ನ ಮಾಡಬೇಕು" ಅಂತ ಬಂದ್ರೆ, "ಇಂಥ ದಿನ ಇಷ್ಟು ಹೊತ್ತಿಗೆ ಮಾಡಿಕೊಂಡುಬಿಡೋ'' ಅಂತ ಹೇಳಿಬಿಡೋರು. "ಸ್ವಾಮಿ, ಅವತ್ತು ಅಮಾವಾಸ್ಯೆ ಅಲ್ಲವಾ" ಅಂದ್ರೆ, "ಅಯ್ಯೋ ಮುಂಡೆಮಗನೆ, ನಾನಿಲ್ಲವಾ ಇಲ್ಲಿ. ನೀನು ಯಾಕೆ ಯೋಚನೆ ಮಾಡ್ತೀಯ. ನಾನು ಯೋಚನೆ ಮಾಡೋದು" ಅಂತ ಹೇಳಿ ಧಾರೆ ಮಾಡಿಸಿ ಬರೋರಂತೆ ಅವರು. ಯಾರಿಗೂ ಏನೂ ನೋವಾಗ್ತಾ ಇರಲಿಲ್ಲವಂತೆ. ವೆಂಕಟಸುಬ್ಬಯ್ಯನವರು ಧಾರೆಗೆ ಬರ್ತಾರೆ ಅಂದ್ರೆ ಎಲ್ಲರಿಗೂ ತುಂಬಾ ಸಂತೋಷ. ಅವರು ಚಂಡಿ ಉಪಾಸಕರು. ಅವರ ಶಕ್ತಿಯೂ ಹಾಗಿತ್ತು. ಜನರ ನಂಬಿಕೆಯೂ ಇತ್ತು. ಅವರ ಮಗ ನಮ್ಮ ತಂದೆ ಕೇಶವ ಜೋಯಿಸ್. ಉಗ್ರ ಚಂಡಿ ಉಪಾಸಕರು. ಬಹಳ ಸುಲಭವಾಗಿ ಹೇಳಿಬಿಡೋರು, ಪಂಚಾಂಗದ ನೆರವಿಲ್ಲದೆ. ನಮಗೆ ಅವರಿಗೆ ಇಷ್ಟೆಲ್ಲಾ ಶಕ್ತಿ ಹ್ಯಾಗಿತ್ತು ಅನ್ನೋದು ಅರ್ಥ ಆಗ್ತಿರಲಿಲ್ಲ. ನಮ್ಮ ತಂದೆ ಶುಕ್ರವಾರಗಳಂದು ಚಕ್ರಾರಾಧನೆ ಮಾಡೋರು. ಚಕ್ರಾರಾಧನೆಗೆ ಅವರು ಕುಳಿತುಕೋಬೇಕಾದ್ರೆ ಎರಡು ಘಂಟೆ ಮೇಲೆ ಹೊಳೆಗೆ ಹೋಗೋರು ಸ್ನಾನಕ್ಕೆ. ಅವರು ಬರುವ ಹೊತ್ತಿಗೆ ನಾವು ಚಕ್ರಗಳನ್ನೆಲ್ಲಾ ಬರೆದು, ದೀಪಗಳನ್ನೆಲ್ಲಾ ready ಮಾಡಿ ಇಟ್ಟಿರಬೇಕು. ಸ್ವಲ್ಪ ವ್ಯತ್ಯಾಸವಾದ್ರೂ ಅವರಿಗೆ ಬಹಳ ಕೋಪ. ಅವರು ಬೈದರೆ ನಿಜ ಆಗುತ್ತೆ ಅನ್ನುವ ಭಯ ನಮಗೆ. ಹಣೆ ತುಂಬಾ ಕುಂಕುಮ ಹಚ್ಚಿಕೊಂಡು, ಪದ್ಮಾಸನಾ ಹಾಕ್ಕೊಂಡು ಕುಳಿತುಕೊಂಡು "ಅಮ್ಮಾ ನಾನು ಬಂದಿದೀನಿ ಪೂಜೆಗೆ, ದೀಪ ಆಗಬೇಕು ತಾಯಿ" ಅಂದ್ರೆ ಆ ದೀಪಗಳೆಲ್ಲಾ ಹತ್ತಿಕೊಳ್ಳೋದು. ಒಂದು ದಿನ ಅವರು ಬೆಂಕಿ ಪೆಟ್ಟಿಗೆ ಹಿಡಿದು ದೀಪ ಹಚ್ಚಿದವರಲ್ಲ. ದೀಪ ಹಚ್ಚಿದರೆ ಅವರಿಗೆ ಬಹಳ ಸಂತೋಷ. "ಅಮ್ಮ ಬಂದ್ಯಾಮ್ಮಾ, ಇಲ್ಲೇ ಇದೀಯಾಮ್ಮ" ಅಂತ ಹೇಳಿ ಸಂಜೆ ಏಳೂವರೆವರೆಗೆ ಪೂಜೆ ಮಾಡೋರು. ನಂತರ ಮುತ್ತೈದೆಯರನ್ನು ಕರೆದು, ಅವರಿಗೆ ಊಟ ಬಡಿಸಿ, ನಂತರ ತಾವು ಚಂದ್ರದರ್ಶನ ಮಾಡಿ ಊಟ ಮಾಡೋರು. ಮಹಾಮಂತ್ರವಾದಿಗಳು, ಶಕ್ತಿವಂತರು ಅಂತ ಪ್ರಸಿದ್ಧರಾಗಿದ್ರು ನನ್ನ ತಂದೆ. ಎಷ್ಟೇ ಶಕ್ತಿ ಇದ್ದರೂ ಸಹ ಯಾರಿಗೂ ಅವರು ತೊಂದರೆ ಮಾಡಿದವರಲ್ಲ.

'ನಮ್ಮ ಹಿರಿಯರಿಗೆ ಪೂರ್ಣವಾಗಿ ಜೀವನಕ್ಕೆ ಆಧಾರ ಅಂದ್ರೆ ವ್ಯವಸಾಯ. ತೋಟಾನೇ ಪ್ರಾಮುಖ್ಯ. ಗದ್ದೇನ ಗುತ್ತಿಗೆ ಹಾಗೂ ಚೇಣಿಗೆ ಕೊಟ್ಟಿದ್ರು. ತೋಟದ ಕೆಲಸ ಸ್ವತಃ ಮಾಡೋರು. ತೋಟದ ಉತ್ಪನ್ನವಾದ ಅಡಿಕೆ, ಬಾಳೆ, ತೆಂಗು, ಎಲೆ ಹಂಬು ಜೀವನಕ್ಕೆ ಆಧಾರ. ನನ್ನ ತಂದೆ ಮೇಷ್ಟರ ಕೆಲಸವನ್ನು ನೆಚ್ಚಿಕೊಂಡು ಜಮೀನನ್ನೆಲ್ಲಾ ಮಾರಿಬಿಟ್ಟಿದ್ರು. ನನಗೆ ಏನೂ ಇರಲಿಲ್ಲ. ಆದ್ರೆ ನಮ್ಮ ಪೂರ್ವಿಕರು ಬೇಸಾಯದಿಂದಲೇ ಬದುಕಿದವರು. ಬೆಳಗ್ಗೆ ಎದ್ದು, ಇವತ್ತಿನ ಹಾಗೆ ಕಾಫಿ ಇರಲಿಲ್ಲ. ಐದು ಘಂಟೆಗೆ ತೋಟಕ್ಕೆ ಹೋದ್ರೆ ಹನ್ನೊಂದು ಘಂಟೆಗೆ ಮನೆಗೆ ಬರೋರು. ಎಲ್ಲಾ ಕೆಲಸವನ್ನೂ ಸಹ ಸ್ವತಃ ಮಾಡೋರು. ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ ಮಾಡಿ, ಎರಡು ಘಂಟೆಗೆ ಊಟ ಮಾಡಿ, ಒಂದು ಅರ್ಧಘಂಟೆ "ವಾಮಕುಕ್ಷಿ" ಅಂತ ಎಡಮಗ್ಗುಲಾಗಿ ಮಲಗಿ ಮತ್ತೆ ತೋಟಕ್ಕೆ ಹೋದ್ರೆ ಸಂಜೆ ಏಳಕ್ಕೇನೆ ಮನೆಗೆ ಬರ್ತಾ ಇದ್ದದ್ದು. ಮಧ್ಯಾಹ್ನ ಊಟ ಆದ ಮೇಲೆ ಎಡ ಮಗ್ಗುಲಾಗಿ ಮಲಗಬೇಕು ಅನ್ನುವ ನಿಯಮ ಇದೆ ಆಯುರ್ವೇದದಲ್ಲಿ. "ವಾಮಕುಕ್ಷಿ" ಅಂತ. ಆಹಾರ ಎಡಗಡೆಗೆ ಇಳೀಬೇಕು, ಅಲ್ಲಿ ಜೀರ್ಣವಾಗಬೇಕು ಅಂತ. ಸಂಜೆ ಮತ್ತೆ ಸ್ನಾನ ಮಾಡಿ, ಸಂಧ್ಯಾವಂದನೆ, ಅರ್ಚನೆ ಮುಗಿಸಿ ಊಟ ಮಾಡೋರು. ನಮ್ಮ ಪೂರ್ವಿಕರಿಗೆ ನಾಲ್ಕು ಎಕರೆ ತೋಟ, ಮಹಾರಾಜರು ಉಂಬಳಿ ಕೊಟ್ಟ ೮೦ ಎಕರೆ ಹೊಲ, ಮೂರು ಎಕರೆ ಗದ್ದೆ ಇತ್ತು. ನನ್ನ ತಂದೆಯ ಐದು ಜನ ಅಣ್ಣತಮ್ಮಂದಿರು ಅದನ್ನು ಹಂಚಿಕೊಂಡಿದ್ರು. ಮೂರು ಜನರಿಗೆ ಕೆಲಸ ಇದ್ದಿದ್ರಿಂದ ಅವರು ಜಮೀನು ಮಾರಿದ್ರು. ದೊಡ್ಡಪ್ಪ ಹಾಗೂ ಚಿಕ್ಕಪ್ಪ ಇಬ್ಬರ ಬಳಿ ಈಗ ಸ್ವಲ್ಪ ಪೂರ್ವಿಕರ ತೋಟ ಉಳಿದಿದೆ. ನನ್ನ

ತಂದೆ ೫೮ರಲ್ಲಿ ಕಾಲವಾದ್ರು. ಸಾಯುವಾಗ "ರಾಮು, ಇದ್ದ ಜಮೀನನ್ನು ಕಳೆದೆ ಕಣೋ. ಏನಾದ್ರೂ ಮಾಡಿ ಈ ಊರಲ್ಲಿ ಸ್ವಲ್ಪ ಜಮೀನು ಮಾಡು" ಅಂತ ಹೇಳಿದ್ರು. ಜಮೀನು ಮಾರಿದ್ರೂ ಜಮೀನು ಮಾಡಬೇಕು, ಸ್ವತಂತ್ರ ಜೀವಿಯಾಗಿ ಬದುಕಬೇಕು ಅನ್ನುವ ಹಂಬಲ ಅವರಿಗೆ. ನನ್ನ ತಂದೆ ಆಗಿನ ಕಾಲದಲ್ಲಿ head master. ಐದು ರೂಪಾಯಿ ಸಂಬಳ. ಹಾಗಾಗಿ ಜಮೀನು ಕೊಟ್ರು. ನಾನು ೬೭ನೇ ಇಸವೀಲಿ ಒಂದು ಎಕರೆ ತೋಟ ಮಾಡಿದೆ.

ನಾನು ೧೯೨೯ರ ಮಾರ್ಚ್ ತಿಂಗಳಲ್ಲಿ ಹುಟ್ಟಿದೆ. ಮಾಧ್ಯಮಿಕ ಶಾಲೆಯವರೆಗೆ ಕೇರಳಾಪುರದಲ್ಲಿಯೇ ಓದಿದೆ. ಜತೆಗೆ ತಂದೆಯವರು ಕಠಿಣ ಪರಿಶ್ರಮದಿಂದ ನನಗೆ ವಿದ್ಯಾಭ್ಯಾಸ ಮಾಡಿಸಿದ್ರು. ಮನೇಲಿ ಅವರು ಹೇಳಿಕೊಟ್ರು. ೧೯೪೧-೪೨ರಲ್ಲಿ ನಾನು SSLC ಮಾಡಿದ್ದು. ಏನೋ ತಾಪತ್ರಯ ಬಂದು ಓದಿಸೋಕೆ ಆಗೋದಿಲ್ಲ ಅಂತ ತಂದೆ ಕರೆದುಕೊಂಡು ಬಂದುಬಿಟ್ರು. ನನ್ನ ವಿದ್ಯಾಭ್ಯಾಸ ಅಲ್ಲಿಗೆ ಮುಗಿಯಿತು. ಆಮೇಲಿಂದ ಇಲ್ಲಿ ಮನೇಲಿ ನನಗೆ ಯಥಾಪ್ರಕಾರ ಜ್ಯೋತಿಷ್ಯ, ಸಂಸ್ಕೃತ ತಂದೇನೇ ಹೇಳಿಕೊಟ್ರು. ಸಂಸ್ಕೃತದಲ್ಲಿ ಉನ್ನತವಾದ ವಿದ್ಯಾಭ್ಯಾಸಕ್ಕೆಂದು ಚಿಲ್ಕುಂದಕ್ಕೆ ಕಳಿಸಿದ್ರು. ಅಲ್ಲಿ ನಾಗಪ್ಪಶಾಸ್ತ್ರಿಗಳು ಅಂತ ವಿದ್ವಾಂಸರಿದ್ರು. ಅವರ ಹತ್ತಿರ ಮೂರು ವರುಷ ಕಲಿತು, ವಿದ್ವತ್ ಮುಗಿಸಿಕೊಂಡು ಊರಿಗೆ ಬಂದೆ. ಜ್ಯೋತಿಷ್ಯಾನ ಪೂರ್ಣವಾಗಿ ತಂದೆಯವರಿಂದಲೇ ಕಲಿತೆ. ನನ್ನಣ್ಣ ಜ್ಯೋತಿಷ್ಯ ವಿದ್ವಾನ್. ಅವರು ಹಾಸನದಲ್ಲಿದ್ರು. ಅವರ ಹತ್ರ ಒಂದು ವರುಷ ಪರಿಶ್ರಮಪಟ್ಟೆ. ಜ್ಯೋತಿಷ್ಯ ಸುಲಭದ ತುತ್ತಲ್ಲ. ನನ್ನ ಅನುಭವದಲ್ಲಿ ಹೇಳುವುದಾದ್ರೆ ೬೦ ವರುಷಗಳಿಂದ ನಾನು ಜ್ಯೋತಿಷ್ಯವನ್ನು ವಿದ್ಯಾಭ್ಯಾಸ ಮಾಡ್ತಾ ಇದೀನಿ. ಆದ್ರೂ ನಾನು ಇನ್ನೂ ಓದುತ್ತಲೇ ಇದೀನಿ. ಅದರಲ್ಲೂ ಮುಹೂರ್ತದ ಭಾಗ ಮಾತ್ರ ಓದ್ತಾ ಇದೀನಿ. ಅದೇ ಇನ್ನೂ ಮುಗಿದಿಲ್ಲ. ಇನ್ನು ಜ್ಯೋತಿಷ್ಯದಲ್ಲಿ ನೂರಾರು ಭಾಗ ಇದೆ, ಅದನ್ನು ಯಾವಾಗ ಮುಗಿಸ್ತೀನೋ ಗೊತ್ತಿಲ್ಲ. ಮಗ ಹಾಸ್ಯ ಮಾಡ್ತಾ ಇರ್ತಾನೆ, "ಏನಣ್ಣಾ, ಇನ್ನೂ ಓದ್ತಾ ಇದೀಯಾ!" ಅಂತ.

'ನಾನು ನನ್ನ ೨೪ನೇ ವಯಸ್ಸಿನಲ್ಲಿ ಅಂದ್ರೆ ೧೯೫೩ರಲ್ಲಿ ಹೈಸ್ಕೂಲ್ ಮೇಷ್ಟರಾಗಿ ಸೇರಿದೆ. SSLC ಜತೆಗೆ ಹಿಂದಿ ವಿಶಾರದ ಮಾಡಿಕೊಂಡಿದ್ದೆ. ನಂತರ ಪ್ರವೀಣ ಮಾಡಿಕೊಂಡೆ. ಹೈಸ್ಕೂಲ್ ಮೇಷ್ಟರಾಗಿ ಸಾಲಿಗ್ರಾಮದಲ್ಲಿ ಸೇರಿದ್ದು. ಅಲ್ಲಿ ೩೧ ವರುಷ ಸೇವೆ ಸಲ್ಲಿಸಿ ಅಲ್ಲಿಯೇ retire ಆದೆ. ನಾನು ಕಲಿತ ವಿದ್ಯೆ ನನ್ನ ಜತೆಯೇ ಹೋಗಬಾರದು ಅಂತ - ರಾಮನಾಥಪುರ, ಬಸವಾಪಟ್ಟಣ, ಚುಂಚನಕಟ್ಟೆ, ಸಾಲಿಗ್ರಾಮ, ಕೇರಳಾಪುರ ಮತ್ತು ಪಿರಿಯಾಪಟ್ಟಣ ಇಷ್ಟು ಊರಿನಲ್ಲಿ ಹಿಂದಿ ಪ್ರಚಾರ ಸಭೆ ಆರಂಭಿಸಿದ್ದೆ. ಎಲ್ಲ ಕಡೆಯೂ ನಾನು ಸೈಕಲ್‌ನಲ್ಲೇ ತಿರುಗ್ತಾ ಇದ್ದದ್ದು. ಸಾಮಾನ್ಯವಾಗಿ ದಿನಕ್ಕೆ ೫೦ ರಿಂದ ೬೦ ಕಿಲೋಮೀಟರ್‌ವರೆಗೆ ಸೈಕಲ್ ತುಳೀತಿದ್ದೆ. ಎಲ್ಲಾ ಜಾಗದಲ್ಲೂ ಉಸ್ತುವಾರಿಗೆ ಒಬ್ಬೊಬ್ಬರನ್ನು ನೇಮಿಸಿದ್ದೆ. ಸಾಲಿಗ್ರಾಮ ಖಾಯಂ ಕೇಂದ್ರವಾಗಿತ್ತು. ಪ್ರಥಮದಿಂದ ರತ್ನ ತರಗತಿಗಳು ಇಲ್ಲಿಯೇ ನಡೆಯೋದು. ಪರೀಕ್ಷಾ ಕೇಂದ್ರವೂ ಇಲ್ಲೇ ಇತ್ತು. ಇಲ್ಲಿ ಹಿಂದಿ ಕಲಿತ ನೂರಾರು ಜನ ನನ್ನ ಶಿಷ್ಯರು ಮೇಷ್ಟರಾಗಿದಾರೆ. ಅದೊಂದೇ ನನಗೆ ತೃಪ್ತಿ ತರುವ ವಿಷಯ. ಯಾಕೇಂದ್ರೆ ಸ್ಕೂಲಿನಲ್ಲಿ ಸಂಬಳಕ್ಕೆ ನನ್ನ ವಿದ್ಯೆಯನ್ನು ಮಾರಿಕೊಳ್ತಿದ್ದೆ. ಇಲ್ಲಿ ನನ್ನ ಆತ್ಮತೃಪ್ತಿಗಾಗಿ ಪಾಠ ಹೇಳ್ತಿದ್ದೆ.


ಸಾವಿತ್ರಮ್ಮ-ಕೆ.ರಾಮಚಂದ್ರಜೋಯಿಸ್ ದಂಪತಿ: ಮಗ ಕೇಶವದತ್ತ ಅವರೊಂದಿಗೆ: ಕೇರಳಾಪುರ

'ನಾನು ಚಿಕ್ಕಂದಿನಿಂದಲೂ ವ್ಯವಸಾಯ ಕಂಡವನೇ ಅಲ್ಲ. ೬೭ರಲ್ಲಿ ಜಮೀನು ಖರೀದಿಸಿದ ಮೇಲೆ, ಅಂದ್ರೆ ನನ್ನ ೩೮ನೇ ವಯಸ್ಸಿನಲ್ಲಿ ಅಭ್ಯಾಸ ಆರಂಭಿಸಿದೆ. ಸ್ವಲ್ಪ ಸ್ವಲ್ಪವಾಗಿ ಅಕ್ಕಪಕ್ಕದವರನ್ನು ನೋಡಿ, ಅವರಿವರನ್ನು ಕೇಳಿ ತಿಳಿದುಕೊಂಡೆ. ನಮ್ಮವರೇ ನನಗೆ ಚೆನ್ನಾಗಿ ಹೇಳಿಕೊಟ್ರು, ನನಗೆ ವ್ಯವಸಾಯದಲ್ಲಿ ಮೇಲೆ ಬರಲು ನನಗೆ ಅವಕಾಶ ಮಾಡಿಕೊಟ್ರು. ಒಂದು ಎಕರೆ ತೋಟದ ಜಮೀನನ್ನು ನಾನು ಖರೀದಿಸಿದಾಗ, ಅಲ್ಲಿ ೨೦ ಸಾವಿರ ಅಡಿಕೆ ಆಗ್ತಿತ್ತು ಅಷ್ಟೆ. ಮರಗಳಿತ್ತು; ಆದ್ರೆ

ಅದಕ್ಕೆ ನೀರಿಲ್ಲ, ಗೊಬ್ರ ಇಲ್ಲ, ವ್ಯವಸಾಯ ಇಲ್ಲ. ನಾನು ಆ ಜಮೀನು ಖರೀದಿ ಮಾಡಿದ್ದು ೪೦ ಸಾವಿರಕ್ಕೆ. ಎಲ್ಲರೂ "ಇದು ಪಾಳು ಜಮೀನು, ನೀನು ದುಡಿದಿದ್ದನ್ನು ದಂಡ ಮಾಡಿದ್ಯಲ್ಲಾ" ಅಂತ ಮೊದಲು ಹೇಳಿದ್ರು. ವಂಶಪಾರಂಪರ್ಯವಾಗಿ ನಾವು ಚಂಡಿ ಉಪಾಸಕರು ಆದ್ದರಿಂದ, "ಆ ತಾಯಿ ಇದಾಳೆ ನೋಡಿಕೊಳ್ತಾಳೆ" ಅನ್ನುವ ಭಾವನೆ ನನಗೆ ಇತ್ತು. ಅದರಂತೆ ಕಷ್ಟಪಟ್ಟು ದುಡಿದೆ. ತೋಟಕ್ಕೆ ನೀರು ಹಾಕಿದೆ, ಗೊಬ್ಬರ ಹಾಕಿದೆ. ಹಾಳಾದ ಜಾಗದಲ್ಲಿ ಹೊಸದಾಗಿ ಸಸಿಗಳನ್ನು ಹಾಕಿದೆ. ಐದಾರು ವರುಷ ಕಷ್ಟಪಟ್ಟೆ. ಮೊದಲು ನನಗೆ ಕೇವಲ ೧೫೦೦ ರೂಪಾಯಿ ಅಡಿಕೇಲಿ ಬಂದಿತ್ತು. ಎಂಟು ವರುಷದ ಹೊತ್ತಿಗೆ ೨೫ ಸಾವಿರ ಆದಾಯ ಬಂತು. ಈಗ ೯೦ ಸಾವಿರದವರೆಗೆ ಅಡಿಕೇಲಿ ಆದಾಯ ಆಗ್ತಿದೆ.

'ಅಡಿಕೆಗೆ ಬೇಸಗೇಲಿ ವಾರಕ್ಕೆ ಒಂದು ಬಾರಿ ನೀರು ಕೊಡಬೇಕು. ವರುಷಕ್ಕೆ ಎರಡು ಬಾರಿ ಹಟ್ಟಿಗೊಬ್ಬರ ಹಾಕಬೇಕು. ಅದೇ ಶ್ರೇಷ್ಠ. ಈ chemical manure ಹಾಕಿದ್ರೆ ಭೂಮಿ loose ಆಗುತ್ತೆ. ಮರಗಳು ಬಿಗಿಯಾಗಿ ನಿಲ್ಲೋದಿಲ್ಲ. ಕೊಟ್ಟಿಗೆ ಗೊಬ್ಬರ ಹಾಕಿದ್ರೆ ಅದರ ಫಲ ಎರಡು ವರುಷ ಇರುತ್ತೆ. ಒಂದು ವರುಷ ಗೊಬ್ಬರ ಹಾಕಲು ಸಾಧ್ಯ ಆಗದಿದ್ರೂ, ಸಾವಯವ ಗೊಬ್ಬರದ ಬಲದಲ್ಲಿ ಆ ಮರ ಕಾಯಿ ಬಿಡುತ್ತೆ. ಸೀಮೆಗೊಬ್ಬರ ಹಾಕಿದ್ರೆ ಆರು ತಿಂಗಳಿನಲ್ಲಿ ಅದರ power ಹೊರಟು ಹೋಗಿರುತ್ತೆ. ಪ್ರಯೋಜನ ಆಗೋದಿಲ್ಲ. ಹಾಗಾಗಿ ನಾನು ಹಟ್ಟಿಗೊಬ್ಬರ ಮಾತ್ರಾ ಹಾಕೋದು. ಅದಕ್ಕೋಸ್ಕರ ನಾನು ದನಗಳನ್ನು ಸಾಕಿದೀನಿ. ಐದಾರು ಎಮ್ಮೆ ಇದೆ. ಮನೇಲಿ ಹಾಲು ಮೊಸರಿಗೆ ಯೋಚನೆ ಇಲ್ಲ. ತೋಟಕ್ಕೆ ಗೊಬ್ಬರ ಆಗುತ್ತೆ. ಸಾಲದ್ದನ್ನು ಖರೀದಿ ಮಾಡ್ತೀನಿ.

'ಅಡಿಕೆ ಸಸಿ ಏಳಿಸಬೇಕಾದ್ರೆ ನಾವು ಧನುರ್ಮಾಸದಲ್ಲಿ ಬೀಳುವ ಅಡಿಕೆ ಆರಿಸಬೇಕು. ಅದರ ಗಾತ್ರ ಒಂದೇ ಸಮ ಇರಬೇಕು. ಮಧ್ಯಮ ಗಾತ್ರದ್ದು ಆಗಿರಬೇಕು. ಅದನ್ನು ೨೦ ರಿಂದ ೨೨ ದಿನ ಒಂದು ಗಡಿಗೆಗೆ ನೀರು ಹಾಕಿ ಇಡಬೇಕು. ಅದು ಕರಗುತ್ತೆ, ಆಗ ಪಟ ಮಾಡಿ ಗೇಣಿಗೊಂದರಂತೆ ನೆಡಬೇಕು. ಮೊಳಕೆ ಬಂದ ಮೇಲೆ ಅದನ್ನು ಹೆಪ್ಪುಸಮೇತ ಕಿತ್ತು ಬೇರೆ ಜಾಗದಲ್ಲಿ ನಾಟಿ ಮಾಡಬೇಕು. ಒಂದು ವರುಷ ಗೊಬ್ಬರ ಹಾಕಬಾರದು. ಬರೀ ನೀರು ಕೊಡಬೇಕು. ನಂತರ ಸ್ವಲ್ಪ ಸ್ವಲ್ಪವಾಗಿ ಗೊಬ್ಬರ ಕೊಡಬೇಕು. ಮೂರು ವರುಷದಲ್ಲಿ ಸಸಿ ದಪ್ಪನಾಗಿ ಬೆಳೆಯುತ್ತೆ. ಆವಾಗ ಅದನ್ನು ಕಿತ್ತು ಮುಖ್ಯ ಜಮೀನಿಗೆ ನೆಟ್ರೆ ಫಸಲು ಉತ್ತಮವಾಗಿ ಬರುತ್ತೆ. ನನ್ನ ಅಡಿಕೆ ತೋಟದಲ್ಲಿ ಕಾಳುಮೆಣಸು ಇದೆ. ಕಾಫಿ ಹಾಕಿದ್ದೆ, ನಂತರ ನಾನೇ ತೆಗೆದುಬಿಟ್ಟೆ. ಯಾಕೇಂದ್ರೆ ಅಡಿಕೆ ಫಸಲು ಕಡಿಮೆಯಾಯ್ತು. ತೋಟಕ್ಕೆ ಕೊಟ್ಟ ಗೊಬ್ಬರವನ್ನೆಲ್ಲಾ ಕಾಫೀನೇ ಹೀರುತ್ತೆ. ತೋಟದ ತುಂಬಾ ಕಾಫಿ ಬೇರೇ ಜಾಸ್ತಿಯಾಗುತ್ತೆ. ಆದ್ದರಿಂದ ತೆಗೆದುಹಾಕಿದೆ. ವಿಳ್ಳೇದೆಲೆ ಇದೆ. ಬಾಳೆ ಇದೆ. ಎಲೆ, ಅಡಿಕೆ ನಮಗೆ ಆದಾಯದ ಮೂಲ. ವರುಷಕ್ಕೆ ಮೂರು ಸಲ ಎಲೆ ಕುಯ್ಯಿಸಬೇಕು. ನಾಲ್ಕು ಐದು ಸಲ ಕುಯ್ಯೋರೂ ಇದಾರೆ; ಆದರೆ ಹಂಬು ಬಲವಾಗೋದಿಲ್ಲ. ಮೂರೇ ಸಲ ಖಟಾವು ಮಾಡಿಸಿದ್ರೆ ಹಂಬು ಜೋರಾಗಿರುತ್ತೆ. ಎಲೆ ಅಗಲವಾಗಿಯೂ ಇರುತ್ತೆ. ನನ್ನ ತೋಟದ ವಿಳ್ಳೇದೆಲೆಯ ರುಚೀನೂ ಜಾಸ್ತಿ. ಅಗಲಾನೂ ಜಾಸ್ತಿ. ಒಂದು ಕುಯಿಲನ್ನು ಐದು ಸಾವಿರ ರೂಪಾಯಿಗೆ ಕೊಡ್ತೀನಿ. ವರುಷಕ್ಕೆ ೧೫ ಸಾವಿರ ಆದಾಯ ಇದೆ.

'ನಾನು ಮೇಷ್ಟ್ರ ಕೆಲಸ ಮಾಡಿಕೊಂಡು, ವ್ಯವಸಾಯದ ಕೆಲಸವನ್ನೂ ಸಹ ಮಾಡ್ತಿದ್ದೆ. ಆಗ ಆಳುಗಳು ಇರಲಿಲ್ಲ. ನೀರೆತ್ತಲು pump ಸಹಾ ಇರಲಿಲ್ಲ. ಕೈತೂಕದಲ್ಲಿಯೇ ನೀರು ಹಾಕಬೇಕಿತ್ತು. ತೋಟದ ಭಾವಿಯಿಂದ ಎರಡು ಗಡಿಗೆ ಹಿಡಿದು ನೀರು ಹಾಕ್ತಿದ್ದೆ. ಬೆಳಿಗ್ಗೆ ಐದಕ್ಕೆ ಎದ್ದು ತೋಟಕ್ಕೆ ಹೋದ್ರೆ ಎಂಟು ಘಂಟೆವರೆಗೆ ನೀರು ಹಾಕೋದು. ಮನೇಲಿ ನನ್ನ ನಿತ್ಯವಿಧಿಗಳನ್ನು ಪೂರೈಸಿ, ಒಂಭತ್ತೂವರೆಗೆ ಶಾಲೆಗೆ ಹೋಗ್ತಿದ್ದೆ, ಸಂಜೆ ಐದೂವರೆಗೆ ಮನೆಗೆ ಬರೂವೆ. ನಾನು ಹದಿನಾರು ವರುಷ ಸೈಕಲ್ ತುಳಿದೆ. ನಂತರ ಒಂದು scooter ಖರೀದಿಸಿದೆ.

'ನನ್ನ ಅನುಭವದಲ್ಲಿ ಬೇರೆ ವೃತ್ತಿಗಿಂತಲೂ ವ್ಯವಸಾಯ ಉತ್ತಮ. ಸ್ವತಂತ್ರ ಜೀವಿಯಾಗಿ ಇರಬಹುದು. ಮನಸ್ಸಿಗೆ ತೃಪ್ತಿಯಾಗುವಂತೆ ಕೆಲಸ ಮಾಡಬಹುದು. ಇನ್ನೊಬ್ಬರ ಅಡಿಯಾಳಾಗಿ ಇರಬೇಕಿಲ್ಲ. ಆದರೂ ಈಗ ಸಂಕೇತಿಗಳಲ್ಲಿ ವ್ಯವಸಾಯ ಕ್ಷೀಣಿಸ್ತಾ ಇದೆ. ಹಿಂದಿನಂತೆ ಈಗ ಕೆಲಸ ಮಾಡಲು ಆಗ್ತಿಲ್ಲ. ಕೆಲವು ಜನರಿಗೆ ಸಂಬಳದ ಮೇಲಿನ ಆಸೆ-ನೆರಳಿನಲ್ಲಿ ದುಡೀಬಹುದಲ್ಲಾ ಅಂತ. ಈಗಿನ ವಿದ್ಯಾಭ್ಯಾಸವೂ ಅದಕ್ಕೆ ಪೂರಕವಾಗಿದೆ. ಹಿಂದೆ ವೇದಾಭ್ಯಾಸ ಮಾಡೋರು. ಅದೂ ತೋಟದಲ್ಲಿ ಕೆಲಸ ಮಾಡುತ್ತಲೇ ವೇದ ಕಲೀತಾ ಇದ್ದದ್ದು. ಗುರು, ಶಿಷ್ಯ ಇಬ್ಬರೂ ತೋಟದ ಕೆಲಸ ಮಾಡುತ್ತಲೇ ಕಲೀತಾ ಇದ್ದರು. ನಾನು ಚಿಕ್ಕಂದದಲ್ಲಿ ಇದ್ದಾಗ ಇದೇ ರೀತಿ ಕಲಿತಿದ್ದು. ನನ್ನ ಗುರುಗಳು ವೇದ, ಸಂಸ್ಕೃತ ಎರಡನ್ನೂ ಹೇಳಿಕೊಡೋರು. ಸಂಸ್ಕೃತ ಹೇಳಿಕೊಡುವಾಗ ಮಾತ್ರ "ಕುಳಿತುಕೋಪ್ಪ ಚಂದ್ರು ನೀನು, ಪುಸ್ತಕ ತೊಗೋ" ಅಂತ ಹೇಳೋರು. ವೇದ ಹೇಳಿಕೊಡುವಾಗ "ನೀನೂ ಬಾರೋ" ಅನ್ನೋರು. "ಕೆಲಸ ಮಾಡು" ಅನ್ನೋರು. ಹೀಗೆ ವೇದಾಭ್ಯಾಸ ಮಾಡುವಾಗಲೇ


ಕೇಶವದತ್ತ ತಮ್ಮ ಮನೆಯ ಹಿತ್ತಿಲಲ್ಲಿ:ಕೇರಳಾಪುರ

ನನಗೆ ವ್ಯವಸಾಯ ಸಹ ಅಭ್ಯಾಸವಾಗಿತ್ತು. ಗುಣಿ ಹಾಕೋದು, ನೀರು ಹಾಕೋದು, ಹಂಬು ಕಟ್ಟೋದು ಮಾಡ್ತಿದ್ದೆ. ವ್ಯವಸಾಯದ ಬಗ್ಗೆ ಪ್ರೀತೀನೂ ಹುಟ್ತು. ಈಗಿನ ವಿದ್ಯಾಭ್ಯಾಸದ ರೀತೀನೇ ಬದಲಾಗಿರೋದ್ರಿಂದ, ವೇದಾಭ್ಯಾಸ ಕಡಿಮೆಯಾದ್ದರಿಂದ ವ್ಯವಸಾಯದ ಬಗ್ಗೆ ವ್ಯಾಮೋಹ ಕಡಿಮೆಯಾಗ್ತಾ ಬಂತು. Engineering ಓದಿದ ಮೇಲೆ ವ್ಯವಸಾಯ ಮಾಡೋದು ಕಡಿಮೆ ತಾನೆ! ಹಾಗಾಗಿ ನಮ್ಮ ಸುತ್ತಿನಲ್ಲೇ ನೂರಾರು ಕುಟುಂಬಗಳು ಬೆಂಗಳೂರಿಗೆ ಹೊರಟು ಹೋಗಿದಾವೆ. ಸಂಕೇತಿ ಕೃಷಿ ಉಳೀಬೇಕಾದ್ರೆ ಮತ್ತೆ ಊರಲ್ಲಿ ವೇದಾಭ್ಯಾಸ ಆರಂಭವಾಗಬೇಕು. ಜನರಲ್ಲಿ ವ್ಯವಸಾಯದ ಬಗ್ಗೆ ಒಲವು ಮೂಡಬೇಕು. ನಾನು ಸ್ವತಂತ್ರಜೀವಿಯಾಗಿ ಬದುಕಬೇಕೆಂಬ ವ್ಯಾಮೋಹ ಬೆಳೀಬೇಕು, ಹಳ್ಳಿಯಲ್ಲಿ ಉಳಿಯಲು ಅವರು ನಿರ್ಧಾರ ಮಾಡಬೇಕು.

'ನನ್ನ ಮಗ ಓದಿದ್ದ. "ನೀನು ಗೊಬ್ಬರ ಹೊರೋಕೆ ಆಗೋದಿಲ್ಲ, ಸರ್ಕಾರಿ ಕೆಲಸ ಮಾಡು" ಅಂದೆ. ಅವನು ವ್ಯವಸಾಯ ಇಷ್ಟಪಟ್ಟ. ನನಗೆ ಸಂಬಳ ಬರ್‍ತಿತ್ತು. ಒಂದು ಎಕರೆ ತೋಟವನ್ನು ಅಭಿವೃದ್ಧಿ ಮಾಡಿದೆ. ದುಡ್ಡನ್ನು ಜತೆ ಮಾಡಿಕೊಂಡು ಇನ್ನೊಂದು ಅರ್ಧ ಎಕರೆ ತೋಟ, ಒಂದೆಕರೆ ಗದ್ದೆ ಮಾಡಿಕೊಂಡ ಅವನೇನೆ. ಈಗ ಸಂಪೂರ್ಣವಾಗಿ ಅವನೇ ನಿರ್ವಹಣೆ ಮಾಡ್ತಿದಾನೆ. ಅವನು ನಿರಾಳವಾಗಿದಾನೆ. ನನಗೆ ಸ್ವಲ್ಪವೂ ಯೋಚನೆ ಇಲ್ಲ. ನನಗೂ ನೆರವಾಗ್ತಾನೆ. ನಿರಾಳವಾಗಿದೀನಿ. ಯಾಕೇಂದ್ರೆ "ಸಾರ್, ಶುಕ್ರವಾರ ರಜಾ ಕೊಡಿ, ನಮ್ಮ ಅಪ್ಪನ ತಿಥಿ ಇದೆ" ಅಂದ್ರೆ "ಭಾನುವಾರ ಮಾಡಿಕೊಳ್ರಿ ತಿಥೀನ, ಈಗ ರಜಾ ಕೊಡೋಕೆ ಆಗೋದಿಲ್ಲ" ಅನ್ನುವ ಕಾಲ ಇತ್ತು ಹಿಂದೆ. ಆದ್ದರಿಂದ ನನ್ನ ಮಗ ಕೆಲಸಕ್ಕೆ ಹೋಗದೆ ಹೀಗೆ ಇದ್ದುದ್ದೇ ಒಳ್ಳೆಯದಾಯ್ತು ಅಂತ ಅನ್ನಿಸಿದೆ. ನನ್ನ ಮಗನಿಗೆ ವ್ಯವಸಾಯಸ್ಥರ ಮನೆಯಿಂದಲೇ ಹೆಣ್ಣು ತಂದಿದೀನಿ. ಅವನಿಗೂ ಎರಡು ಹೆಣ್ಣು, ಒಂದು ಗಂಡು. ನೆಮ್ಮದಿಯಾಗಿದಾನೆ.

'ನನಗೆ ವ್ಯವಸಾಯ ಬೇಸರ ತಂದಿಲ್ಲ. ನಮಗೆ ಜನ ಮೋಸ ಮಾಡಬಹುದು. ಆದ್ರೆ ಭೂಮಿ ಮೋಸ ಮಾಡೋಲ್ಲ. ಮೂರು ಕಾಳೋ, ಆರು ಕಾಳೋ, ಏನಾದ್ರೂ ಆಗಲಿ ಕೊಡ್ತಾಳೆ. "ನೀನು ಕೆಲಸ ಮಾಡಿದೀಯ ಮಗನೆ, ತೊಗೋ ತಿನ್ನು" ಅಂತ ಕೊಡ್ತಾಳೆ. ಅಲ್ಲದೆ ವ್ಯವಸಾಯದಲ್ಲಿ ಭೂಮಿತಾಯಿ ಸೇವೆ ಮಾಡಿಕೊಂಡು ಇರೋವಾಗ, ನಮಗೆ ಆತ್ಮಾನೂ ಶುದ್ಧವಾಗುತ್ತೆ. ಶರೀರವೂ ಗಟ್ಟಿಮುಟ್ಟಾಗಿರುತ್ತೆ. ಆರೋಗ್ಯವೂ ಚೆನ್ನಾಗಿರುತ್ತೆ, ಮತ್ತೊಬ್ಬರ ಹಂಗಿರೋಲ್ಲ. ಆದ್ದರಿಂದ ವ್ಯವಸಾಯವೇ ಸರ್ವಶ್ರೇಷ್ಠ.

'ನಾನು ನನ್ನ ೨೮, ೨೯ ವರುಷದ ನಂತರ ಮಾಡಿದ ಸಾಧನೆಗೆ ಮೂಲಕಾರಣ ನನ್ನ ಹೆಂಡತಿ. ನಾನು collegeಗೆ ಹೊರಟು ಹೋದ ಮೇಲೆ, ತೋಟಕ್ಕೆ ಹೋಗಿ ನೀರು ಹಾಕೋದು, ಕಸ ತೆಗೆಯೋದು, ಕಳೆ ತೆಗೆಯೋದು ಅವಳೇ ಮಾಡ್ತಿದ್ಲು. ಎಷ್ಟೋ ಕೆಲಸ ಅವಳೇ ಮಾಡ್ತಾ ಇದ್ದಿದ್ರಿಂದ ನನ್ನ ಕೆಲಸ ಸರಳವಾಗೋದು. ಗಂಡ ಮಕ್ಕಳ ಯೋಗಕ್ಷೇಮ ನೋಡಿ, ದನಕರು ನಿರ್ವಹಣೆ ಮಾಡಿ, ಮನೆ ನಿರ್ವಹಣೆ ಜತೆಗೆ ತೋಟದ ಕೆಲಸ ಸಹಾ ಮಾಡೋಳು. ಅವಳು ಬಹಳ ಕಷ್ಟಪಟ್ಟು ನನಗೆ ನೆರವಾಗದಿದ್ರೆ ನಾನು ಆ ತೋಟ ಉಳಿಸಲು ಆಗ್ತಿರಲಿಲ್ಲ.

'ಶಾಸ್ತ್ರ ಏನು ಹೇಳುತ್ತೆ ಅಂದ್ರೆ

ತತ್ರ ವಿಪ್ರೈಃ ನ ವಸ್ತವ್ಯಂ ನಾಸ್ತಿ ಯತ್ರ ಚತುಷ್ಟಯಮ್|
ಋಣದಾತಾ ಚ ವೈದ್ಯಶ್ಚ ಶ್ರೋತ್ರಿಯಶ್ಚ ನದೀಜಲಮ್||

ಅಂತ. ನಾವು ಶ್ರೋತ್ರಿಯರಾಗಿಯೇ ಬದುಕಿದವರು. ವೇದಾಧ್ಯಾಯನವೇ ಜಾಸ್ತಿ. ಆದ್ದರಿಂದ ಸಂಕೇತಿಗಳಿಗೆ ಸ್ನಾನ ಪಾನಗಳಿಗೆ ನೀರು ಬೇಕಿತ್ತು. ಶಾಸ್ತ್ರ ಏನು ಹೇಳುತ್ತೆ ಅಂದ್ರೆ "ಯಾವ ಊರಿನಲ್ಲಿ ಸಾಲ ಕೊಡುವವನು, ವೈದ್ಯರು, ಶ್ರೋತ್ರಿಯರು ಅಂದ್ರೆ ತಿಥಿ, ತಾಳಿ ಮಾಡಿಸುವ ವೈದಿಕ

ಹಾಗೂ ನೀರಿರುವ ಹೊಳೆ ಇಲ್ಲವೋ, ಆ ಊರಲ್ಲಿ ಇರಬೇಡ" ಅಂತ ಹೇಳುತ್ತೆ. ಆದ್ದರಿಂದ ಸಂಕೇತಿಗಳು ನದಿ ಇರುವ ಜಾಗ ಅಥವಾ ಕೆರೆಕಟ್ಟೆಗಳಿರುವ ಆಸುಪಾಸಿನಲ್ಲಿ ನೆಲೆಸಿದ್ರು. ವ್ಯವಸಾಯ ಮಾಡಿದ್ರು. ನಮ್ಮ ವ್ಯವಸಾಯದಲ್ಲಿ ರಕ್ತಗತವಾಗಿ ಬಂದಿರುವ ತಲ್ಲೀನತೆ ಇದೆ. "ಇದು ನಮ್ಮದಲ್ಲ, ಭೂಮಿ ತಾಯೀದು" ಅನ್ನುವ ಮನೋಭಾವನೆಯಿಂದ ನಾವು ವ್ಯವಸಾಯ ಮಾಡ್ತೀವಿ. ಆದರೆ ಇತರೇ ಜನ ಯಾವ ಬೆಳೆ ಮಾಡಿದ್ರೆ ನಮಗೆ ಲಾಭ ಜಾಸ್ತಿ ಅಂತ ಅರಸುತ್ತಾರೆ. ಆದ್ರೆ ಸಂಕೇತಿಗಳಿಗೆ ಲಾಭ ಅಲ್ಲ ಪ್ರಾಮುಖ್ಯ. "ನಮ್ಮ ಜೀವನಕ್ಕೆ ಸಾಕಾಗುವಷ್ಟು ಬಂದರೆ ಸಾಕು. ಭೂಮಿ ತಾಯಿ ಅಷ್ಟು ಕೊಟ್ಟೇ ಕೊಡ್ತಾಳೆ" ಅನ್ನುವ ನಂಬಿಕೆಯಿಂದ ನಾವು ಶ್ರದ್ಧೆಯಿಂದ ಕೆಲಸ ಮಾಡ್ತೀವಿ. ಇದು ನಮ್ಮ ವಿಶೇಷ.

'ಇನ್ನು ಶಿಕ್ಷಣ: ಅವತ್ತು ಗುರುಕುಲ ಕ್ರಮಗಳಿತ್ತು. ಗುರುಗಳನ್ನು ಶಿಷ್ಯರು ಹುಡುಕಿಕೊಂಡು ಹೋಗಬೇಕಿತ್ತು. ಗುರುಗಳ ಸೇವೆ ಮಾಡಿ, ಆಶ್ರಮದಲ್ಲಿ ಇದ್ದುಕೊಂಡು, ವಾರಾನ್ನ, ಭಿಕ್ಷಾನ್ನದಿಂದ ೧೨, ೧೬, ೧೮ ವರುಷ ಜೀವನ ಮಾಡಿ, ವಿದ್ಯೆ ಕಲೀಬೇಕಿತ್ತು. ಈಗ ಗುರುಕುಲಾಶ್ರಮಗಳು ಅರ್ಥಾತ್ ಶಾಲೆಗಳು ಮನೆ ಬಾಗಿಲಿಗೆ ಬಂದಿವೆ. ಗುರುಗಳು ಮನೆ ಬಾಗಿಲಿಗೆ ಬಂದಿದಾರೆ. "ನೀವು ಹೇಳ್ತೀರಿ.... ನೀವು ಸಂಬಳ ತೊಗೋಳೋದಿಲ್ವಾ. ಹೇಳಿಬಿಟ್ಟುಹೋಗಿ. ನಾವು ಬೇಕಿದ್ರೆ ಕಲಿತೀವಿ. ಸಾಕಾದ್ರೆ ಬಿಡ್ತೀವಿ" ಅನ್ನುವ ಹುಡುಗರು ಇದಾರೆ. ಇದೇ ಅವತ್ತಿನ ವಿದ್ಯಾಭ್ಯಾಸಕ್ಕೂ ಇವತ್ತಿನ ವಿದ್ಯಾಭ್ಯಾಸಕ್ಕೂ ಇರುವ ವೆತ್ಯಾಸ. ಶಿಕ್ಷಣ ಇದೇ ರೀತಿ ಮುಂದುವರಿದ್ರೆ ಸಂಕೇತಿಗಳ ರೀತಿ ನೀತಿಗಳೇ ಮಾಯವಾಗಿ ಹೋಗುತ್ತೆ ಅನ್ನುವ ಗಾಭರಿ ನನಗಿದೆ. ದೈವಭಕ್ತಿ, ವೇದಾಭ್ಯಾಸ, ಕರ್ಮಠತೆ ಹಿಂದೆ ಬಹಳಷ್ಟು ಇತ್ತು. ಈಗ ಅದು ನಮ್ಮಲ್ಲಿ ಕಾಣ್ತಾ ಇಲ್ಲ. ಕರ್ಮಶ್ರದ್ಧೆ ಕಡಿಮೆ ಆಯ್ತು. ವೇದಾಧ್ಯಯನ ನಿಂತುಹೋಯ್ತು. ಹಿಂದೆ ಇವೆಲ್ಲವೂ ವ್ಯವಸಾಯಕ್ಕೆ ಪೂರಕವಾಗಿತ್ತು. ಕುರ್ಚಿ ಮೇಲೆ ಕುಳಿತು ಪಾಠ ಹೇಳುವ ಪದ್ಧತಿ ಹಿಂದೆ ಇರಲಿಲ್ಲ. "ಬೆಳಗ್ಗೆ ಐದು ಘಂಟೆಗೆ ಎದ್ದು ತೋಟದ ಬಳಿ ಬಂದು ಬಿಡು" ಅಂತ ಗುರುಗಳು ಹೇಳೋರು. ಇವನು ಐದು ಘಂಟೆಗೆ ಹೋಗಿ ಅಲ್ಲಿ ಕಾಯ್ತಾ ಇರಬೇಕು. ಗುರುಗಳು ಬರೋದು ತಡ ಆದ್ರೆ ಸುಮ್ಮನೆ ಕೂರುವ ಹಾಗಿಲ್ಲ. ತೋಟದ ಕೆಲಸ ಮಾಡುತ್ತಲೇ, ಗುರುಗಳು ಹಿಂದಿನ ದಿನ ಹೇಳಿಕೊಟ್ಟ ಪಾಠವನ್ನು ಗಟ್ಟಿಯಾಗಿ ಹೇಳುತ್ತ ಅಭ್ಯಾಸ ಮಾಡಬೇಕಿತ್ತು. ಇದು ಆಗಿನ ಕಾಲ. ಆ ಶ್ರದ್ಧೆ, ವ್ಯಾಮೋಹ ಬೆಳೆದ್ರೆ ವ್ಯವಸಾಯ ಉಳಿಯುತ್ತೆ' ಎಂದು ಹೇಳಿ ಸುಮ್ಮನಾದ್ರು ಕೆ.ರಾಮಚಂದ್ರ ಜೋಯಿಸ್. ವಿಶಾಲವಾದ ಮನೆ, ಹಿತ್ತಿಲು, ಕೊಟ್ಟಿಗೆ ಎಲ್ಲವನ್ನೂ ನೋಡಿದಾಗ ಪಕ್ಕಾ ಕೃಷಿಕರ ಮನೇನೇ ಇದು ಅನ್ನಿಸಿತು. ರಾಮಚಂದ್ರ ಜೋಯಿಸ್ ಅವರಿಗೆ ವಂದಿಸಿ ನಾವು ಮುಂದಿನ ಮನೆಗೆ ಹೊರಟಾಗ ಸಂಜೆಯ ಸಮಯ.

ಇ) ಕೆ.ಆರ್. ಸೂರ್ಯನಾರಾಯಣಪ್ಪ (ಮುತ್ತಣ್ಣ) ಇ/ಮ ಕೆ.ಎ. ನಂಜುಂಡಯ್ಯ (ರಾಜಪ್ಪ)

ಕೇರಳಾಪುರ, ಅರಕಲಗೂಡು (ತಾ) ಹಾಸನಜಿಲ್ಲೆ, ದೂರವಾಣಿ: 08175 531351

ವಾಸ್ತವವಾಗಿ ಹೇಳಬೇಕೂಂದ್ರೆ ಹಿಂದೆ ಸಂಕೇತಿಗಳಲ್ಲಿ ಬಹಳ ಬಡತನ ಇತ್ತು. ನಾವು ದುಡೀದಿದ್ರೆ ಜೀವನ ನಡೆಯೋದು ಹೇಗೆ ಅನ್ನುವ ಪರಿಸ್ಥಿತಿ ಇತ್ತು. ಅಡಿಕೆ ಸುಗ್ಗೀಲಿ ಒಂದರಿಂದ ಎರಡು ಸಾವಿರ ಸಿಕ್ರೆ ಸಾಕು ಅಂತ ಪ್ರತಿಯೊಬ್ಬರೂ ದುಡೀತಿದ್ರು. ಅಡಿಕೆ ಎಡಿಯೋರು. ಅಡಿಕೆ ಧಾರಣೆ ಏರಿದಾಗ ಹಣಕಾಸಿನ ಮುಗ್ಗಟ್ಟು ಕಡಿಮೆಯಾಯ್ತು. ನಾಜೂಕಿನ ಜನ ಜಾಸ್ತಿಯಾದ್ರು. ದೈಹಿಕ ಶ್ರಮ ಕಡಿಮೆಯಾಯ್ತು. ಹಾಗಾಗಿ ಈಗ ನಮ್ಮ ಸಂಕೇತಿಗಳಲ್ಲಿ ಅಡಿಕೆ ಎಡೆಯೋರು ಶೇಕಡಾ ಒಂದರಷ್ಟು ಇರಬಹುದು ಅಷ್ಟೆ. ದೈಹಿಕ ಶ್ರಮ ದೂರಾದ್ದರಿಂದ ಅಡಿಕೆ-ತುಡಿಕೆ ಮಾಡೋರೂ ಇಲ್ಲ.


ಎಚ್.ವಿ.ವೆಂಕಟಲಕ್ಷ್ಮಮ್ಮ-ಕೆ.ಆರ್.ಸೂರ್ಯನಾರಾಯಣಪ್ಪ ದಂಪತಿ:ಕೇರಳಾಪುರ

ಕೇರಳಾಪುರದ ಕೆ.ಎ. ನಂಜುಂಡಯ್ಯ (ರಾಜಪ್ಪ) ಹಾಗೂ ಬಸವಾಪಟ್ಟಣದ ನಾಗಲಕ್ಷಮ್ಮ

ದಂಪತಿಗಳಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೇ ನಾಲ್ಕು ಜನ ಹೆಣ್ಣು ಮಕ್ಕಳು. ಹಿರಿಯ ಮಗನೇ ಕೆ.ಆರ್. ಸೂರ್ಯನಾರಾಯಣಪ್ಪ. ಇವರ ಪತ್ನಿ ಹೆಚ್.ವಿ. ವೆಂಕಟಲಕ್ಷ್ಮಿ, ಹಳ್ಳಿಮೈಸೂರಿನ ವೆಂಕಟಸುಬ್ಬಾವಧಾನಿ (ಸುಂದರೇಶಘನಪಾಠಿ) ಹಾಗೂ ಹಂದ್ರಾಳಿನ ಜಯಲಕ್ಷಮ್ಮನವರ ಮಗಳು. ರಾಜಪ್ಪನವರ ನಾಲ್ಕು ಜನ ಮಕ್ಕಳಲ್ಲಿ ಈಗ ವ್ಯವಸಾಯ ಮಾಡುತ್ತಿರುವವರು ಮುತ್ತಣ್ಣ ಹಾಗೂ ಅವರ ತಮ್ಮ ಕೆ.ಎನ್.ಸುಬ್ರಹ್ಮಣ್ಯ ಮಾತ್ರ. ಉಳಿದವರು ದೂರದ ಊರಿನಲ್ಲಿ ಕೆಲಸದಲ್ಲಿದ್ದಾರೆ. ಮುತ್ತಣ್ಣನವರಿಗೆ ಮೂರು ಜನ ಮಕ್ಕಳು. ಎರಡು ಗಂಡು ಹಾಗೂ ಒಬ್ಬಳು ಮಗಳು. ಇವರಲ್ಲಿಯೂ ಯಾರೂ ಕೃಷಿ ಮಾಡುತ್ತಿಲ್ಲ. ವ್ಯವಸಾಯದ ಹೋರಾಟದ ಬದುಕು ಮುತ್ತಣ್ಣನವರಿಗೆ ಮಾತ್ರ...! ಮಕ್ಕಳಿಗೆ ಇದರಲ್ಲಿ ಪಾಲಿಲ್ಲ. ಮನೆಯಂಗಳದಲ್ಲಿ ಮನಸ್ಸಿನಾಳದ ಮಾತುಗಳನ್ನು ಮುತ್ತಣ್ಣನವರು ನುಡಿದಾಗ ಮುಸ್ಸಂಜೆಯ ಸಮಯ.

'ನನ್ನ ತಾತನನ್ನು ನಾನು ನೋಡಿಲ್ಲ. ನಾನು ಹುಟ್ಟುವುದಕ್ಕಿಂತ ಮುಂಚಿತವಾಗಿಯೇ ಅವರು ಕಾಲವಾಗಿದ್ರು. ನನ್ನ ತಂದೇನೇ ಸಾಕಿ ಸಲಹಿದ್ದು ನನ್ನನ್ನು. ನನ್ನ ತಾತ ಇಲ್ಲಿಗೆ ಹತ್ತಿರವಿರುವ ಶೀಗುವಾಳು ಗ್ರಾಮದಲ್ಲಿ ಬರೀ ಹದಿನೈದು ಗುಂಟೆ ಅಡಿಕೆ ತೋಟ, ಕೇರಳಾಪುರದಲ್ಲಿ ಒಂದೂವರೆ ಎಕರೆ ಗದ್ದೆ ಇಷ್ಟನ್ನೂ ಸಂಪಾದಿಸಿದ್ರು. ಶೀಗುವಾಳು ತೋಟಕ್ಕೆ ದಿನಕ್ಕೆ ಎರಡು ಬಾರಿ ಹೋಗಿ ಕೆಲಸ ಮಾಡಿಕೊಂಡು ಬರ್ತಿದ್ರು. ಅವರಿಗೆ ದನಕರುಗಳ ಮೇಲೆ ತುಂಬಾ ಆಸಕ್ತಿ. ಆ ಕಾಲದಲ್ಲಿ ಅವರಿಗೆ ಹೆಚ್ಚು ಉದ್ಯೋಗಗಳಿರಲಿಲ್ಲ. ಸಣ್ಣಪುಟ್ಟ ವ್ಯಾಪಾರ ಶಾಖೆಗಳನ್ನು ಹಿಂದಿನಿಂದಲೂ ಇಟ್ಟುಕೊಂಡು ಬಂದಿದ್ರು. ಅಡಿಕೆ ವ್ಯಾಪಾರ ಪೂರ್ವಕಾಲದಿಂದಲೂ ನಮ್ಮ ತಲೆಮಾರಿನಲ್ಲಿ ಇತ್ತು. ಒಂದು ವರುಷದಲ್ಲಿ ಐವತ್ತರಿಂದ ನೂರು ಮೂಟೆ ವ್ಯಾಪಾರ ಮಾಡ್ತಿದ್ರಂತೆ. ಬೆಳಗಿನ ಜಾವಕ್ಕೆ ಎದ್ದು ಮಣ್ಣು ಹೇರಬೇಕು, ಗೊಬ್ಬರ ಹೇರಬೇಕು ಜಮೀನಿಗೆ ಅನ್ನುವ ಆಸಕ್ತಿ ತುಂಬಾ. ನಾಲ್ಕು ಎಮ್ಮೆ, ಎರಡು ಹಸು, ಒಂದು ಜತೆ ಎತ್ತು ಇಷ್ಟು ಸದಾ ಇರೋದು. ಹೊನ್ನೇನಹಳ್ಳಿ ಗ್ರಾಮದಲ್ಲಿ ನಾಲ್ಕು/ಐದು ಎಕರೆ ಹೊಲ ಇತ್ತು. ನನ್ನ ತಾತ ಬೆಳಗಿನ ಜಾವ ನಾಲ್ಕು ಘಂಟೆಗೆ ಶೀಗುವಾಳು ತೋಟಕ್ಕೆ ಹೋಗೋರು, ಅಲ್ಲಿ ನೀರು ಹಾಕಿ, ಎಲೆ ಕುಯ್ದುಕೊಂಡು ಕೇರಳಾಪುರಕ್ಕೆ ಎಂಟು ಒಂಬತ್ತು ಘಂಟೆಗೆ ಬರೋರು. ಆ ಎಲೇನ ಇಲ್ಲಿ ಕವಳಿಗೆ ಹಿಡಿದು, ಊರು ಮುಂದಿನ ಮಾರುಕಟ್ಟೇಲಿ ಮಾರೋರು. ಆವಾಗೆಲ್ಲ ಜನರು ಇಲ್ಲಿ ಬಂದು ಒಂದೊಂದು ಕಟ್ಟು ಕವಳಿಗೆ ಖರೀದಿಸೋರು. ಹೀಗೆ ಮಾಡಿ ಬಹಳ ಶ್ರಮದಲ್ಲಿ ಜೀವನ ಮಾಡಿ ಸಂಪಾದನೆ ಮಾಡಿದ ವ್ಯಕ್ತಿ ನಮ್ಮ ತಾತ. ನನ್ನ ಅಜ್ಜಿ ಬಹಳ ಒಳ್ಳೆಯ ಹೆಂಗಸು. ತಾತನಿಗೆ ಎರಡನೆಯ ಹೆಂಡತಿ ಅವರು. ಆದರೂ ತಾತನನ್ನೇ ಅನುಸರಿಸಿ ನಡೆದ್ರು. ನನ್ನ ಅಜ್ಜಿ ತೀರಿಹೋದ ದಿನ ದನಕರುಗಳೆಲ್ಲಾ ಅಳುತ್ತಾ ಬಂದು ನಿಂತವಂತೆ. ಅವರಿಗೂ ದನಕರುಗಳ ಮೇಲೆ ಅಷ್ಟು ವ್ಯಾಮೋಹ.'

- **ನಿಮ್ಮ ತಂದೆ ಹಾಗೂ ತಾಯಿ ಬಗ್ಗೆ ಹೇಳಿ.**


ತೋಟದಲ್ಲಿ ನೀರು ಹಾಯಿಸುತ್ತಿರುವ ಕೆ.ಆರ್.ಸೂರ್ಯನಾರಾಯಣಪ್ಪ: ಕೇರಳಾಪುರ

ನನ್ನ ತಂದೆ ತಮ್ಮ ಎಂಬತ್ತೆರಡನೇ ವರುಷದಲ್ಲಿ ಕಾಲವಾದ್ರು. ಅವರು ವ್ಯವಸಾಯವನ್ನು ನಂಬಿದವರು. ಸಾಧಾರಣವಾಗಿ ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೂ ಅಡಿಕೆ ವ್ಯಾಪಾರ ಮಾಡೋರು. ಅವರು ನಾಲ್ಕನೇ ತರಗತಿಯವರೆಗೆ ಓದಿದ್ದರು. ಅವರ ವ್ಯವಹಾರಕ್ಕೆ ತಕ್ಕಂತಹ ಬರವಣಿಗೆ ಇತ್ತು. ಬೂದನೂರು, ಬಿದಿರಕ್ಕ, ಕರ್ತಾಳು, ಬಸವಾಪಟ್ಟಣ, ಹರದನಹಳ್ಳಿ ಈ ಸುತ್ತಮುತ್ತಲಿನ ನಾಲ್ಕು ಐದು ಕಿಲೋಮೀಟರ್ ಆಸುಪಾಸಿನಲ್ಲಿ ಮಾತ್ರಾ ಅವರು ವ್ಯಾಪಾರ ಮಾಡ್ತಿದ್ರು. ಬೆಳಿಗ್ಗೆ ಹೋಗಿ, ಇತರೇ ತೋಟದಿಂದ ಅಡಿಕೆ ಕೆಡವಿಸಿಕೊಂಡು, ಗಾಡಿಯಲ್ಲಿ ಹೇರಿಕೊಂಡು ಸಂಜೆವಳಗೆ ಊರಿಗೆ ವಾಪಸ್ಸು ಬರೋರು. ಊರ ಹತ್ತಿರ ಅಡಿಕೆ ಸುಲಿಸಿ, ಅದನ್ನು ರೇಖೆ ಮಾಡಿ ಊರ ಹತ್ತಿರವೇ ಮಾರೋರು.


ತೋಟದಲ್ಲಿ ಹಂಬು ಕಟ್ಟುತ್ತಿರುವ ಕೆ.ಆರ್.ಸೂರ್ಯನಾರಾಯಣಪ್ಪ: ಕೇರಳಾಪುರ

ಕೊಣನೂರಿನಿಂದ ಸತ್ಯನಾರಾಯಣ ಶೆಟ್ಟರು, ಚಿನ್ನಸ್ವಾಮಿ ಶೆಟ್ಟರು ಅಂತ ವ್ಯಾಪಾರಗಾರರು ಬರೋರು. ಅವರಿಗೆ ಮಾರೋರು. ನನ್ನ ತಂದೆ ಸ್ಥೂಲ ಶರೀರದವರು. ವಿದ್ಯಾಭ್ಯಾಸ ಕಡಿಮೆ ಆದ್ರೂ ಬುದ್ಧಿಶಕ್ತಿ ಚೆನ್ನಾಗಿತ್ತು. ದೈಹಿಕ ಕೆಲಸ ಕಡಿಮೆ. ಏನಿದ್ರೂ ತಮ್ಮ ಬುದ್ಧಿಶಕ್ತಿ ಬಳಸಿ ಕೆಲಸ ಮಾಡ್ತಿದ್ರು. ಆಳುಕಾಳುಗಳ ನೆರವಿನಿಂದ ವ್ಯವಸಾಯ ಮಾಡ್ತಿದ್ರು. ಅವರ ಕಾಲದಲ್ಲೇ ನಾಲ್ಕು ಐದು ಎಕರೆ ಗದ್ದೆ, ಎರಡು ಎಕರೆ ತೋಟ, ನಾಲ್ಕು ಎಕರೆ ಹೊಲ ಖರೀದಿ ಮಾಡಿದ್ರು. ನಮ್ಮ ಸುತ್ತಮುತ್ತ ಆವಾಗ ಹೆಚ್ಚಿಗೆ ಅಡಿಕೆ ವ್ಯಾಪಾರಿಗಳು ಇರಲಿಲ್ಲ. ಅಡಿಕೆ ವ್ಯಾಪಾರಸ್ಥರು ಅಂದರೆ ರಾಜಪ್ಪನವರು ಅನ್ನುವ ಭಾವನೆ ಇತ್ತು ಇಲ್ಲಿ. ಹಾಗಾಗಿ ವ್ಯಾಪಾರದಲ್ಲಿ ಹಿಂದೆ ಅನುಕೂಲ ಇತ್ತು. ವ್ಯಾಪಾರಕ್ಕಾಗಿ ತುಂಬಾ ಸಾಲ ಸಹಾ ಮಾಡಿದವರಲ್ಲ. ಜನರೂ ಕೂಡ ನಂಬಿಕೆ ಇಟ್ಟು, ನೀವು ವ್ಯಾಪಾರ ಮಾಡಿದ ಮೇಲೇ ಹಣ ಕೊಡಿ ಅಂತಿದ್ರು. ತೀರ ಕಠಿಣ ಪರಿಸ್ಥಿತಿ ಬಂದಾಗ ಎರಡು ಸಾವಿರ, ಮೂರು ಸಾವಿರ ಮುಂಚೆ ಇಸಿದುಕೊಳ್ತೋರು ಅಷ್ಟೆ. ಅಲ್ಲದೇ ನನ್ನ ತಂದೇನೂ ಮುಂಚಿತವಾಗಿಯೇ ಕೆಲವು ಬೆಳೆಗಾರರಿಗೆ ಹಣವನ್ನು ಪಾವತಿ ಮಾಡಿರೋರು. ನಂತರ ಅವರಿಂದ ಅಡಿಕೆಯನ್ನು ಖರೀದಿ ಮಾಡೋರು. ಅವರ ಅರುವತ್ತು ಹಾಗೂ ಎಪ್ಪತ್ತು ವರುಷದ ಶಾಂತಿಯನ್ನೂ ವಿಜೃಂಭಣೆಯಿಂದ ನಾವು ಮಾಡಿದ್ವಿ. ನನ್ನ ತಂದೆ, ತಾಯಿ ನಮ್ಮನ್ನು ಬೆಳೆಸಲು ತುಂಬಾ ಶ್ರಮಪಟ್ಟಿದ್ದಾರೆ.

- **ನಿಮ್ಮ ಬಗ್ಗೆ ಹೇಳಿ.**

ನಾನು ಹುಟ್ಟಿದ್ದು ಬಸವಾಪಟ್ಟಣದಲ್ಲಿ ೧೯೪೫ರಲ್ಲಿ, ಫೆಬ್ರವರಿ ತಿಂಗಳಲ್ಲಿ. ಕೇರಳಾಪುರದಲ್ಲಿ ಎರಡನೇ ತರಗತಿಯವರೆಗೆ ಓದಿದೆ. ಅಲ್ಲಿಂದ ನನ್ನ ತಾಯಿಯ ತಂದೆ ಬಸವಾಪಟ್ಟಣದಲ್ಲಿ ಕೇಶವನಾರಾಯಣಪ್ಪ (ಚಿನ್ನಪ್ಪ) ಅಂತಿದ್ರು. ಅವರ ಮನೇಲಿ ಚಿಕ್ಕಮಕ್ಕಳು ಇರಲಿಲ್ಲ. ಹಾಗಾಗಿ ನನ್ನನ್ನು ಅಲ್ಲಿಗೆ ಬಹಳ ಪ್ರೀತಿಯಿಂದ ಕರೆಸಿಕೊಂಡ್ರು. ಅಲ್ಲಿ ಅವತ್ತಿನ ಶಿಕ್ಷಣ ಬಹಳ ಚೆನ್ನಾಗಿತ್ತು. ಪಿ.ವಿ. ಶ್ರೀಕಂಠಯ್ಯ ಅಂತ ನಮ್ಮ ತಾಯಿಯ ಸೋದರಮಾವ. ಅವರೇ ಅಲ್ಲಿನ Middle School Head Master. 'ಸ್ವಾಮಿ ಮೇಷ್ಟ್ರು' ಅಂತ ಒಬ್ಬರಿದ್ರು. ಕೂಲಿಪಾಠಕ್ಕೆ ನನ್ನನ್ನು ಅವರ ಮನೆಗೆ ಸೇರಿಸಿದ್ರು. ನಿಜವಾಗಿ ಹೇಳಬೇಕು ಅಂದ್ರೆ ಅವರಿಗೆ ನಾನು ಕೈಮುಗೀಬೇಕು. ಗಣಿತ ಅಂತ ಹೇಳಿಕೊಟ್ಟಿದ್ದು ಇವತ್ತಿಗೂ ಅಚ್ಚಳಿಯದೆ ಉಳಿದಿದೆ. High Schoolನಲ್ಲಿ ಸೂರ್ಯನಾರಾಯಣ ರಾವ್ (Head Master), ಚಂದ್ರಶೇಖರಯ್ಯ, ರಾಮಯ್ಯ, ವಾಸುದೇವಯ್ಯ ಈ ಉಪಾಧ್ಯಾಯರು ಪ್ರಭಾವ ಬೀರಿದ್ರು. ನಾನು SSLCಲಿ ಇಡೀ ಬಸವಾಪಟ್ಟಣ High Schoolಗೇ first. ೬೦% ಬಂದಿತ್ತು. ನಂತರ ಮೈಸೂರಿನಲ್ಲಿ ಶಾರದಾ ವಿಲಾಸ್ ಸೇರಿದೆ. ರಾಮಸ್ವಾಮಯ್ಯ (ತಾತಯ್ಯ) ಅಂತ ಆಗ principal ಇದ್ರು. ಒಂದೇ ವರುಷ PUC. ನನಗೆ PUCನಲ್ಲಿ Mathsನಲ್ಲಿ ನೂರಕ್ಕೆ ನೂರು ಅಂಕ ಬಂದಿತ್ತು. ಒಟ್ಟು ಶೇ.೮೪ ಅಂಕ ಬಂತು. ನನ್ನ ದುರದೃಕ್ಕೆ English, Social Science ಹೋಗಿಬಿಡ್ತು. ಮತ್ತೆ ಕಟ್ಟಿದೆ. Social Science ಆಯ್ತು English ಹೋಯ್ತು. ಅಷ್ಟು ಹೊತ್ತಿಗೆ ತಂದೆಯ ಆರೋಗ್ಯ ಕ್ಷೀಣಿಸಿತ್ತು. ನಾನೇ ಮನೆಗೆ ಹಿರಿಯ ಮಗ. ಬಾಕಿ ನನ್ನ ತಮ್ಮ ತಂಗೀರು ಎಲ್ಲಾ ಚಿಕ್ಕವರು. ತಂದೆ ಓದು ಅಂದ್ರು. ಆದ್ರೆ ಅವತ್ತಿನ ಕೃಷಿಯಲ್ಲಿದ್ದ ಸಂತೋಷಾನೂ ನಾನು ಗಮನಿಸಿ ವ್ಯವಸಾಯದಲ್ಲಿ ಇರೋಣ ಅನ್ನುವ ಆಸಕ್ತಿ ಬಂತು.

- **ಚಿಕ್ಕಂದಿನಿಂದಲೂ ನಿಮಗೆ ವ್ಯವಸಾಯದ ವ್ಯಾಮೋಹ ಇತ್ತಾ?**

ನಾನು ಬಸವಾಪಟ್ಟಣದ ನಮ್ಮ ತಾತನ ತೋಟದಲ್ಲಿಯೇ ಶಾಲೆಯಿಂದ ಬಂದ ಮೇಲೆ, ಸಂಜೆ ತೋಟಕ್ಕೆ ಹೋಗಿ ಅಡಿಕೆ ಪಟ್ಟೆ ಕತ್ತರಿಸಿಕೊಂಡು ಬರ್ತಿದ್ದೆ. ರಜಾದಲ್ಲಿ ಊರಿಗೆ ಬಂದಾಗ ತೋಟಕ್ಕೆ ಹೋಗಿ ಬರಾಳೆ, ಸೋಗೆ ಹೊತ್ತು ತರೋದು, ತೋಟ ಬಳಸೋದು,



ತೋಟದೊಳಗಿನ ಒಂದು ನೋಟ:
ಕೆ.ಆರ್.ಸೂರ್ಯನಾರಾಯಣಪ್ಪ: ಕೇರಳಾಪುರ

ಬೆಳಗ್ಗೆ ತೋಟಕ್ಕೆ ಹೋಗೋದು, ಹಂಬು ತೆಕ್ಕೆ ಇಳಿಸೋದು ಮಾಡ್ತಿದ್ದೆ. ಮನೇಲಿ ತರಕಾರಿ ಬೆಳೆಯುವುದರ ಬಗ್ಗೆ ತುಂಬಾ ಆಸಕ್ತಿ ಇತ್ತು. ನಾನು ಶಾಲೇಲೂ ಸಹ ಹಸಿರು ಬೆಳೆಸಿ, ಸೊಪ್ಪು ಸದೆ ಬೆಳೆಸ್ತಾ ಇದ್ದೆ. ನಮ್ಮ ಬಸವಾಪಟ್ಟಣದ ತಾತ ಕೃಷೀಲಿ ಮಹಾ ಪಂಡಿತರು. ಅವರ ಒಂದು ಮಾರ್ಗದರ್ಶನದಲ್ಲಿ ನಾನು ರಾತ್ರಿ ಒಂಭತ್ತರವಗೆ ಓದಿ, ಹನ್ನೊಂದು ಘಂಟೆಯವರೆಗೆ ಎಲೆ ಕವಳಿಗೆ ಹಿಡೀಬೇಕು. ನನ್ನ ತಾತಂದು ಬಹಳ ಶಿಸ್ತು. ಬೇಕೂಂತ ತಪ್ಪು ಮಾಡಿದ್ರೂ ಶಿಕ್ಷೆ ಕೊಡ್ತಿದ್ರು. ಶಿಸ್ತಿನ ಸಿಪಾಯಿ ಅವರು. ಅವರು ದೇವತಾಕಾರ್ಯಗಳಲ್ಲಿ ಎತ್ತಿದ ಕೈ. ಬೆಳಗ್ಗೆ ಎದ್ದು ಹೊಳೆಗೆ ಹೋಗಿ ಸ್ನಾನ ಮುಗಿಸಿ, ಮನೇಲಿ ದೇವತಾರ್ಚನೆ ಮುಗಿಸಿ ತೋಟಕ್ಕೆ ಹೋಗ್ತಿದ್ರು. ಸ್ವಂತವಾಗಿ ಎಲೇನ ತೆಕ್ಕೆ ಬಿಡ್ತಿದ್ರು. ನೋಡೋದಕ್ಕೆ ವ್ಯಕ್ತಿ ಬಹಳ ಸಣ್ಣ, ತೆಳುವು, ಕುಳ್ಳ, ಕಪ್ಪು ಶರೀರ. ಏನಿವತ್ತೆಲ್ಲಾ ಅಮ್ಮಯ್ಯಾಂತ ಇದ್ರೆ ನಲವತ್ತರಿಂದ ನಲವತ್ತೈದು ಕೇಜಿ ಇರಬಹುದು. ಅವರು ಇಪ್ಪತ್ತು ಹಂತದ ಏಣೀನ ಚಕ್ಕಂತ ಏತ್ತಿ ಇಡೋರು. ಅಂತಹ ಅಸಾಧಾರಣವಾದ ಶಕ್ತಿ. ಆಹಾರಾನೂ ಕ್ಲುಪ್ತ. ಕಾಫಿ ಗೀಫೀ ಸೇವನೆ ಇರಲಿಲ್ಲ. ತಾತನಿಗೆ ಕಾಣದಂತೆ ನಮಗೆ ಅಜ್ಜಿ ಕಾಫೀನ ಮುಚ್ಚಿ ಮುಚ್ಚಿ ಕೊಡ್ತಿದ್ರು. ನನ್ನ ತಾತ ಮನೆಗೆ ಸಾಮಾನು ತಂದು ಹಾಕುವುದರ ಬಗ್ಗೆ ಯಾವ ಕ್ಷೋಭೇನೂ ಮಾಡ್ತಿರಲಿಲ್ಲ.

- **ನಿಮ್ಮ ತಂದೆಯವರ ಆರೋಗ್ಯ ಸರಿ ಇರಲಿಲ್ಲ ಅಂತ ನೀವು ಇಲ್ಲಿಗೆ ಬಂದ್ರಿ. ಇಲ್ಲಿ ಅವತ್ತಿನ ಪರಿಸ್ಥಿತಿ ಹೇಗಿತ್ತು?**

ನಾನು ವಿದ್ಯಾಭ್ಯಾಸ ಮಾಡಿದ್ರೆ ತಮ್ಮಂದಿರ ಪರಿಸ್ಥಿತಿ ಕಠಿಣವಾಗುತ್ತೆ ಅಂತ ಊರಿಗೆ ಬಂದೆ. ೧೯೬೨ರಲ್ಲಿ ಆಗಲೇ ತಂದೆ ಹೊಲ ಗದ್ದೇನ ಗೇಣಿಗೆ ಕೊಟ್ಟಿದ್ರು. Tenancy Actನ ವಾಸನೆ ಆಗಲೇ ಸ್ವಲ್ಪ ಸ್ವಲ್ಪವಾಗಿ ಬರ್ತಾ ಇತ್ತು. ನಾನು ತಕ್ಷಣ ತೋಟ, ಹೊಲ, ಗದ್ದೇನ ನನ್ನ ವಶಕ್ಕೆ ತೆಗೆದುಕೊಂಡೆ. ಆಗ ನಾಲ್ಕು ಎಕರೆ ಗದ್ದೆ, ಎರಡು ಎಕರೆ ತೋಟ, ಆರು ಎಕರೆ ಹೊಲ ಇತ್ತು. ಆಗ ಹೊಲದಲ್ಲಿ ರಾಗಿ, ಗದ್ದೇಲಿ ಭತ್ತ ಬೆಳೀತಾ ಇದ್ವು. ತೋಟದಲ್ಲಿ ವಿಳ್ಳೇದೆಲೆ, ಬಾಳೆ, ಅಡಿಕೆ, ತೆಂಗು ಇಷ್ಟು ಇತ್ತು.

- **ಮನೆಮಟ್ಟಿಗೆ ಯಾವ ಯಾವ ತರಕಾರಿ ಬೆಳೀತಾ ಇದ್ರಿ?**

ಬದನೇಕಾಯಿ, ಬೀನ್ಸು, ಬೆಂಡೆ, ಪರಂಗಿ, ಸೊಪ್ಪು, ನುಗ್ಗೆ, ಕರಿಬೇವು - ಹೀಗೆ ಮನೆಗೆ ಬೇಕಾದ್ದೆಲ್ಲಾ ಕೈತೋಟದಲ್ಲಿ ಬೆಳೀತಾ ಇದ್ವಿ. ನಾನು ಇಲ್ಲಿಗೆ ಬಂದಾಗ ಮನೇಲಿ ಎರಡು ಎಮ್ಮೆ ಇತ್ತು ಅಷ್ಟೇನೇ. ನಾನು ಬಂದ ಮೇಲೆ ದನಕರುಗಳನ್ನು ಜಾಸ್ತಿ ಮಾಡಿದೆ. ಒಂದು ಜತೆ ಎತ್ತುಗಾಡಿ ಮಾಡಿದೆ. ಹಿಂದಿನಿಂದಲೂ ನಾವು ಉಳುವುದು ಬೇಡ ಅಂತ ಬಂದಿದೆ ಅಂತ ತಂದೆಯವರು ಹೇಳಿದ್ದರಿಂದ ನಾನು ಉಳುಮೆ ಮಾಡಲಿಲ್ಲ. ಆಳುಕಾಳುಗಳ ನೆರವಿನಿಂದ ಮಾಡಿಸಿದೀನಿ. ನಾನು ತಂದೆಯವರ ವ್ಯಾಪಾರವನ್ನೂ ಸಹ ಹಾಗೇ ಮುಂದುವರೆಸಿದೆ. ಅನುಕೂಲವಾದ ಹಾಗೆಲ್ಲಾ ಸ್ವಲ್ಪ ಜಮೀನನ್ನೂ ಖರೀದಿ ಮಾಡಿದೆ. ಹಾಗೇ ಕುಟುಂಬದ ಪುರೋಭಿವೃದ್ಧಿ ಆಯ್ತು. ತಮ್ಮ ತಂಗಿಯರ ವಿದ್ಯಾಭ್ಯಾಸ ಮಾಡಿಸಿದೆ. ನಮ್ಮ ಕುಟುಂಬವನ್ನು ಒಂದು ಹಂತಕ್ಕೆ ತಂದೆ.

- **ವ್ಯವಸಾಯದ ತಾಂತ್ರಿಕ ವಿವರಗಳಿಗೆ ಬರೋಣ. ಬಾಗಾಯ್ತನ್ನು ಯಾವ ರೀತಿ ನಿರ್ವಹಣೆ ಮಾಡಬೇಕು? ಅಂದ್ರೆ ಅಡಿಕೆ ತೋಟವನ್ನು ಯಾವ ರೀತಿ ಎಬ್ಬಿಸಬೇಕು ಅಂತೀರಿ?**

ನಮ್ಮ ತೋಟದ ಪಕ್ಕದಲ್ಲೇ ಹದಿನೈದು ಗುಂಟೆ ಗದ್ದೇನ ತಂದೆ ಖರೀದಿಸಿದ್ರು. ಅದನ್ನು ಹೊಸದಾಗಿ ತೋಟ ಮಾಡುವ ಉತ್ಸಾಹ ನನ್ನಲ್ಲಿ ಮೂಡಿತು. ನಾವು ಆಗ ಏನು ಮಾಡಿದ್ವಿ ಅಂದ್ರೆ ಕೈಯಲ್ಲಿ ಗುಂಡಿ ತೆಗೆದು ಅಡಿಕೆ ಸಸಿಗಳನ್ನು ಆಳದಲ್ಲಿ ನೆಡಿಸಿದ್ವಿ. ಎಲ್ಲಾ ಮನುಷ್ಯರ ನೆರವಿನಿಂದಲೇ ತೋಟ ಎಬ್ಬಿಸಿದ್ವಿ. ಅದು ತಾಂತ್ರಿಕತೆ ಇಲ್ಲದ ಯುಗ. ಆದ್ರೆ ಅದೇ ಈಗ ಮತ್ತೊಂದು ಇಪ್ಪತ್ತೈದು ಗುಂಟೆ

ಜಮೀನನನ್ನು ತೋಟ ಮಾಡಿದೀವಿ. ಈಗ ಆಧುನಿಕ ಕಾಲ ಬಂದಿರೋದ್ರಿಂದ JCBನಲ್ಲಿ ಪೂರ್ಣ ಜಮೀನನ್ನು ಎರಡೂವರೆಯಿಂದ ಮೂರು ಅಡಿ ಆಳದವರೆಗೆ ತೋಡಿಸಿದೆ. ಒಂದು ದಿನದಲ್ಲಿ ಕೆಲಸ ಮುಗೀತು. ನಂತರ ಅದಕ್ಕೆ ಬಾಳೆ ಅಡಿಕೆ ಎಲ್ಲಾ ಕೂರಿಸಿದೆ. ಈಗಿನ ತಾಂತ್ರಿಕತೆ ಬಳಸಿ ತೋಟ ಎಬ್ಬಿಸೋದು ಬಹಳ ಸುಲಭ. ಹಿಂದೆ ಎಲ್ಲಾ ಸ್ವತಃ ಮಾಡಬೇಕಿತ್ತು ಅಥವಾ ಆಳುಕಾಳುಗಳ ನೆರವಿನಿಂದ ಮಾಡಿಸಬೇಕಿತ್ತು. ಯಂತ್ರಗಳನ್ನು ಬಳಸಿ ಬೇಸಾಯ ಮಾಡುವ ವಿಧಾನ ಬಳಕೆಯಲ್ಲಿ ಇರಲಿಲ್ಲ. ಹಿಂದೆ ಬಾಳೆಗೆ ಯಾವುದೇ ಖಾಯಿಲೆ ಇರಲಿಲ್ಲ. ನಂತರ ಕಟ್ಟೆ ರೋಗ ಬಂದು ಬಾಳೆ ನಿರ್ನಾಮವಾಯ್ತು. ನಮ್ಮ ಸುತ್ತ ಹತ್ತು ಹದಿನೈದು ವರುಷಗಳ ಕಾಲ ಬಾಳೆಯೇ ಇರಲಿಲ್ಲ. ಬೆಂಗಳೂರು, ಮೈಸೂರಿನಿಂದ ರುಚಿಗಾಗಿ ಒಂದು ಚಿಪ್ಪು ಕೊಂಡು ತರಬೇಕಿತ್ತು. ನಂತರ ಔಷಧಿಗಳ ಬಳಕೆ ಆರಂಭವಾದ ಮೇಲೆ ಬಾಳೆ ಬೆಳೆಯಲು ಅನುವಾಯ್ತು. ಕೃಷಿ ತಾಂತ್ರಿಕತೆಗಳು ಬಂದ ಮೇಲೆ ಈಗ ಅನುಕೂಲವಾಗಿದೆ.

ಪ್ರಾರಂಭಿಕವಾಗಿ ಹೇಳೋದಾದ್ರೆ ಗದ್ದೇನ ತೋಟ ಮಾಡಬೇಕು. ಆರಂಭದಲ್ಲಿ ಬಾಳೆ ಹಾಕಬೇಕು. ಸುಮ್ಮನೇ ಗುಂಡಿ ತೆಗೆದು ಬಾಳೆ ಹಾಕಿಬಿಟ್ರೆ ಬಾಳೆ ಚೆನ್ನಾಗಿ ಬರೋಲ್ಲ. ಮೊದಲು ಬಾಳೆಗೆ ಗುಂಡಿ ತೆಗೆದು, ಎರಡು ಅಡಿಗೆ ಕಡಿಮೆ ಇಲ್ಲದಂತೆ ಕೆಳಗಿನಿಂದ ಮಣ್ಣನ್ನು ಮೇಲೆ ತಿರುವಿ ಹಾಕಬೇಕು. ಅತಿಯಾಗಿ level ಸಹಾ ಮಾಡಬಾರದು. ಅಗೆತ ಮಾಡುವ ಕೆಲಸ ಮೇ ತಿಂಗಳಿನಿಂದ, ಜೂನ್ ತಿಂಗಳವರೆಗೆ ನಡೀಬೇಕು. ಜೂನ್‌ನಲ್ಲಿ ಬಾಳೆ ನಾಟಿ ಮಾಡಿದ್ರೆ ಆಗಸ್ಟ್‌ವರೆಗೆ ಬಾಳೆ ನಾಲ್ಕು ಎಲೆ ಆಗಿರುತ್ತೆ. ಆನಂತರ ಅಡಿಕೆ ಸಸೀನ ಏಳು ಮಳಕ್ಕೆ ಒಂದರಂತೆ ನೆಡಬೇಕು. ಬಾಳೇನ ಆರು ಮಳಕ್ಕೆ ಹಾಕಿದ್ರೆ ಅಡಿಕೇನೂ ಆರು ಮಳಕ್ಕೇ ಹಾಕಬೇಕು. ಬಾಳೆಯ ಎರಡು ಸಾಲಿನ ನಡುವೆ ಒಂದು ಸಾಲು ಅಡಿಕೆ ಬರಬೇಕು. ಈಗೆಲ್ಲಾ ಪ್ಲಾಸ್ಟಿಕ್ ಚೀಲದಲ್ಲಿ ಅಡಿಕೆ ಗೋಟನ್ನು ಹಾಕಿ ಎರಡರಿಂದ ಮೂರು ವರುಷ ಬೆಳೆಸಿರುವ ಸಸಿಗಳು ಸಿಗುತ್ತೆ. ಅದನ್ನೇ ಗುಂಡಿಗಳಲ್ಲಿ ನೆಡ್ತಾರೆ. ಹಿಂದೆಲ್ಲಾ ನಾವು ಅಡಿಕೆ ಕಾಯನ್ನು ತೋಟದಲ್ಲಿಯೇ ಒಟ್ಲು ಪಾತಿ ಮಾಡಿ ಬೆಳೆಸ್ತಾ ಇದ್ವಿ. ಅದನ್ನು ಗೆಪ್ಪೆಸಸಿ ಅಂತ ಕರೀತಾ ಇದ್ವಿ. ಯಾವ ಸಸಿಯಾದ್ರೂ, ಸುಳಿಯಿಂದ ಅರ್ಧ ಅಂಗುಲ ಕೆಳಗೆ ಮಣ್ಣು ಇರುವ ಹಾಗೆ ನೆಟ್ಟು, ಸುತ್ತಾ ಚೆನ್ನಾಗಿ ತುಳಿದು ಬಿಡಬೇಕು. ಮೂರು ದಿನ ನಾಲ್ಕು ದಿನಕ್ಕೆ ಒಂದು ಬಾರಿ ಎರಡರಿಂದ ಮೂರು ತೂಕ ನೀರನ್ನು (ಸುಮಾರು ಇಪ್ಪತ್ತು ಲೀಟರ್) ಹಾಕಬೇಕು, ಮಳೆ ಇಲ್ಲದ ದಿನಗಳಲ್ಲಿ. ಸಸಿ ನೆಟ್ಟು ಮೂರು ತಿಂಗಳಾದ ಬಳಿಕ, ಅದಕ್ಕೆ ಅರ್ಧ ಮಂಕರಿ ಕೊಟ್ಟಿಗೆ ಗೊಬ್ಬರ ಹಾಕಬೇಕು. ಸೀಮೆಗೊಬ್ಬರವನ್ನು ಸಣ್ಣ ಅಡಿಕೆ ಗಿಡಗಳಿಗೆ ಹಾಕಬಾರದು. ಬರಿಯ ಹಟ್ಟಿಗೊಬ್ಬರ, ಹಸಿರು ಎಲೆ ಹಾಕ್ತಾ ಬಂದ್ರೆ ನಾಲ್ಕು, ಐದು ವರುಷದಲ್ಲಿ ಚೆನ್ನಾಗಿ ಗಿಡ ಏಳುತ್ತೆ. ಐದು ವರುಷ ಕಳೆದು ಸಸಿ ಫಸಲು ಬಿಡಲು ಆರಂಭಿಸಿದ ಮೇಲೆ, ಪ್ರತಿಮರಕ್ಕೆ ಹಟ್ಟಿಗೊಬ್ಬರದ ಜತೆಗೆ ನೂರರಿಂದ ಇನ್ನೂರು ಗ್ರಾಂ ರಾಸಾಯನಿಕ ಗೊಬ್ಬರ ಕೊಡಬಹುದು. ಹಟ್ಟಿಗೊಬ್ಬರ ಬಹಳ ಮುಖ್ಯ. ಬರೀ ರಾಸಾಯನಿಕ ಗೊಬ್ಬರ ಹಾಕಿದ್ರೆ ಅಡಿಕೆ ಸಸಿ ಬಾಳಿಕೆ ಬರೋದಿಲ್ಲ. ಸಸಿ ಸುಮ್ಮನೆ ಬೆಳೆಯುತ್ತೇ ಹೊರತು, ಕಾಯಿ ಚೆನ್ನಾಗಿ ಕಟ್ಟೋದಿಲ್ಲ, ಇಳುವರಿ ಬರೋದಿಲ್ಲ. ಖಾಯಿಲೆ ಖಸಾಲೆಗಳು ಅಂತಹ ಮರಗಳಿಗೆ ಬಹಳ ಬೇಗ ಬರುತ್ತೆ. ಈಗ ಹಿಡಿಗಲ ಮುಂಡಿ, ಅಣಬೆ ಖಾಯಿಲೆ ಅಡಿಕೆ ತೋಟವನ್ನು ಬಹಳವಾಗಿ ಕಾಡ್ತಿದೆ. ಇದನ್ನು ಹತೋಟಿ ಮಾಡಿದ್ರೆ ಅಡಿಕೆ ಕೃಷಿಕರೆಲ್ಲಾ ಬದುಕಿ ಹೋಗ್ತಾರೆ. ಹೊಸ ತೋಟದಲ್ಲಿ ಅಡಿಕೆ ಐದರಿಂದ ಆರು ವರುಷದಲ್ಲಿ ಫಸಲಿಗೆ ಬರುತ್ತೆ. ಅದೇ ಹಳೆಯ ಅಡಿಕೆ ತೋಟದಲ್ಲಿ ನೆಟ್ಟ ಅಡಿಕೆ ಸಸಿಗಳು ಫಸಲಿಗೆ ಬರಲು ಹತ್ತು ವರುಷ ಬೇಕು. ಯಾಕೇಂದ್ರೆ ಇದು ನೆರಳಲ್ಲಿ ಬೆಳೆಯುತ್ತೆ. ಫಸಲಿಗೆ ಬರುವ ತೋಟದಲ್ಲಿ ವರುಷಕ್ಕೆ ಎರಡು ಬಾರಿ ಕೊಟ್ಟಿಗೆ ಗೊಬ್ಬರ ಹಾಕಬೇಕು. ಮಳೆಗಾಲದಲ್ಲಿ ಕಾಂಪ್ಲೆಕ್ಸ್ ಗೊಬ್ಬರವನ್ನು ನೂರು ಗ್ರಾಂ ಪ್ರತಿ ಗಿಡಕ್ಕೆ ಹಾಕಬಹುದು. ನಾವು ಇಲ್ಲಿ ಗಿಡಗಳಿಗೆ ನೀರನ್ನು ಹಾಕ್ತೀವಿ. ಆದ್ರೆ ಮಲೆನಾಡು



'ಬದಲಿ ಸಸಿಗಳು ಇರಲೇಬೇಕು ನೋಡಿ':
ಕೆ.ಆರ್.ಸೂರ್ಯನಾರಾಯಣಪ್ಪ:ಕೇರಳಾಪುರ



ಕಣ ತುಳಿಸುವ ಸಾಂಪ್ರದಾಯಿಕ ರೀತಿ: ಕೇರಳಾಪುರ

ಭಾಗದಲ್ಲಿ ನೀರನ್ನು ಹಾಯಿಸ್ತಾರೆ. ಪಿಳ್ಳೆ ತೆಗೆದು ಹಾಯಿ ನೀರಲ್ಲಿ ಅಡಿಕೆ ಕೃಷಿ ಮಾಡ್ತಾರೆ. ನೀರನ್ನು ಹಾಯಿಸಿದ್ರೆ ಅಂತಹ ತೋಟದಲ್ಲಿ ಎಲೆ ಹಂಬು ಆಗೋದಿಲ್ಲ. ಮತ್ತೆ ಬಾಳೆ ಆಗೋದಿಲ್ಲ. ಅಷ್ಟು ಶೀತ ಆದ್ರೆ ತೆಂಗಿನ ಫಸಲೂ ಸಹ ಕಡಿಮೆಯಾಗುತ್ತೆ. ಅಡಿಕೆಗೆ ಅನುಕೂಲವಾಗಬಹುದು ಅಷ್ಟೆ. ಮಿಶ್ರ ಬೆಳೆಗಳನ್ನು ಬೆಳೆಯಲು ಇಲ್ಲಿ ಅನುಕೂಲ ಇರೋದ್ರಿಂದ ನಾವು ಹಾಯಿ ನೀರು ಮಾಡೋಲ್ಲ.

- ಎಷ್ಟು ಇಳುವರಿ ಬರ್‍ತಿದೆ ನಿಮ್ಮ ತೋಟದಲ್ಲಿ ?

ನಮ್ಮಲ್ಲಿ ಒಂದು ಎಕರೆ ಪ್ರದೇಶಕ್ಕೆ ಅರವತ್ತರಿಂದ ಎಂಬತ್ತು Quintal ವರೆಗೆ ಇಳುವರಿ ಬರ್‍ತಿದೆ (ಹಸಿ ಅಡಿಕೆ). ಎಂಬತ್ತು Quintal ಹಸಿ ಅಡಿಕೆಗೆ ಒಂಬತ್ತರಿಂದ ಹತ್ತು Quintal ಅಡಿಕೆ ಬರುತ್ತೆ. ನಾನು ಹಿಂದಿನ ಕಾಲದಲ್ಲಿ ಅಡಿಕೆ ಖರೀದಿಸುವಾಗ ತೂಕ ಇರಲಿಲ್ಲ. ಇಲ್ಲಿ ಎಣಿಕೆ ಲೆಕ್ಕ ಅಥವಾ ತೋಟ ಲೆಕ್ಕ ಅಷ್ಟೆ. ಒಂದು ಮೂಟೆ ಎಂಬತ್ತರಿಂದ ತೊಂಬತ್ತು ಕೇಜಿ ಬರೋದು. ಚೆನ್ನಾಗಿ ಬಲಿತ ಒಂದು ಕ್ವಿಂಟಾಲ್ ಅಡಿಕೇಗೆ ಹತ್ತರಿಂದ ಹನ್ನೆರಡು ಕೇಜಿ ಒಣ ಅಡಿಕೆ ಸಿಗೋದು. ತೋಟದಲ್ಲಿ ಕುಯ್ಸಿಸಿ, ಆಯಿಸಿ ಇಲ್ಲಿಗೆ ಗಾಡೀಲಿ ಹೇರಿಕೊಂಡು ಬರ್‍ತಿದ್ವಿ. ರಾತ್ರಿ ತಂದು ಗುಡ್ಡೆ ಹಾಕೋವಿ, ಬೆಳಗ್ಗೆ ಜನ ಬಂದು ಅಡಿಕೆ ಎಡಿಯೋರು. ಸುಲಿಯುವಾಗಲೇ ಗೋಟನ್ನು ಬೇರೆ ಕಡೆ ಹಾಕ್ತಿದ್ವಿ. ಸುಲಿದಿದ್ದನ್ನು ಗುಡ್ಡೆ ಹಾಕಿ, ನಂತರ ಅಳತೆ ಮಾಡಿ ಅವರಿಗೇ ವಾಪಸ್ಸು ಕತ್ತರಿಸಿ ಬಟ್ಟಲು ಅಡಿಕೆ ಮಾಡಲು ಕೊಡ್ತಿದ್ವಿ. ಎರಡು ಹೋಳಾಗಿ ಅವರು ಅಡಿಕೆ ಕತ್ತರಿಸೋರು. ನಾವು ಬೆಳಗಿನ ಜಾವ ಎರಡರಿಂದ ಮೂರು ಘಂಟೆಗೆ ಎದ್ದು ಒಲೆ ಹತ್ತಿಸಿ, ತೊಗರು ಮಾಡಿಕೊಳ್ಳೋವಿ. ತೊಗರು ಅಂದ್ರೆ ಗಂಧದ ಚೆಕ್ಕೆ, ಎಲೆ, ಅಡಿಕೆ, ಸುಣ್ಣ, ಕಾಚು, ತಾಟ ಅಡಿಕೆ ಮರದ ಕಾಯಿಯನ್ನು ಚಚ್ಚಿ ಹಾಕ್ತಿದ್ವಿ. ಒಳ್ಳೆಣ್ಣೆ, ಬೆಲ್ಲ, ಇದನ್ನೆಲ್ಲವನ್ನು ಬೆರೆಸಿ, ಇಪ್ಪತ್ತನಾಲ್ಕು ಘಂಟೆಗಳ ಕಾಲ ನೀರಲ್ಲಿ ಕುದಿಸಿ, ಕುದಿಸಿ, ಭಟ್ಟಿ ಇಳಿಸಿ, ಸೋಸಿ, ಪಾತ್ರೆಯಲ್ಲಿ ತೊಗರು ಅಂತ ಸಂಗ್ರಹಿಸಿ ಇಟ್ಟಿರೋವಿ. ಆ ತೊಗರು ಹಾಕಿ ನಾವು ಬಟ್ಟಲು ಅಡಿಕೇನ ಬೇಯಿಸ್ತಾ ಇದ್ವಿ. ಬೆಳಗ್ಗೆ ಆರು ಘಂಟೆ ಹೊತ್ತಿಗೆ ಒಂದು ಜೋಡಿ ಕಡಾಯಿ ಬೆಂದಿರೋದು. ಬಿಸಿಲು ಶುರುವಾದ ತಕ್ಷಣ ಒಂದು ಅಡಿಕೆ ಮೇಲೆ ಮತ್ತೊಂದು ಅಡಿಕೆ ಕೂರದಂತೆ ರವರವ ಅಂತ ಹರಡೋವಿ. ತಕ್ಷಣ ಮತ್ತೊಂದು Batch ಬೇಯಿಸಲು ರೆಡಿ. ಹೀಗೆ ಮಧ್ಯಾಹ್ನ ಹನ್ನೆರಡು ಘಂಟೆಯವರೆಗೆ ಬೇಯಿಸ್ತಾ ಇದ್ವಿ. ಆಮೇಲೆ ಬೇಯಿಸ್ತಾ ಇರಲಿಲ್ಲ. ಹನ್ನೆರಡು ಘಂಟೆಗೆ ಅದನ್ನು ಹರಡಿಬಿಟ್ರೆ ಸಂಜೆ ಐದು ಘಂಟೆ ಸುಮಾರಿಗೆ ಅಂಟು ಆರಿರೋದು. ಸಂಜೆ ಗುಡ್ಡೆ ಹಾಕೋವಿ. ಹೀಗೆ ಅವತ್ತಿನದು ಅವತ್ತಿಗೆ ಬೇರೆ ಗುಡ್ಡೆ ಹಾಕೋವಿ. ಮಾರನೇ ದಿನ ಮತ್ತೆ ಒಣಗಿ ಹಾಕೋವಿ. ಹೀಗೆ ಐದರಿಂದ ಆರು ದಿನ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ, ನಂತರ ರೇಖೆ ಮಾಡೋವಿ. ಹಿಂದಿನ ಕಾಲದಲ್ಲಿ ನಾವು ಅಡಿಕೆ ಬೇಯಿಸುವ ವಿಧಾನದಲ್ಲಿ ಅದಕ್ಕೆ ಕೃತಕ ಬಣ್ಣವೇ ಬೇಕಿರಲಿಲ್ಲ. ಅದರಲ್ಲೇ original colour ಬಂದುಬಿಡೋದು. ಈಗಿನ ಕಾಲದಲ್ಲಿ ಸುಮ್ಮನೆ ಒಂದು ಘಂಟೆ ಕಾಲ ಅದನ್ನು ಕುದಿಸಿ, ತೋಡಿ ಹಾಕಿ ಬಿಡ್ತಾರೆ. ಅವಾಗ ಮೂರು ಘಂಟೆಗೆ ಕಡಿಮೆ ಇಲ್ಲದಂತೆ ಅಡಿಕೇನ ಬೇಯಿಸೋವಿ. ಈಗ ಒಂದು ಘಂಟೆಗೆ ಒಂದು ಕುದಿ ಬಂದ ತಕ್ಷಣ ತೆಗೀತಾರೆ. ಅದು ಬೆಳ್ಳಗೇ ಇರುತ್ತೆ. ಆಮೇಲೆ ಸ್ವಲ್ಪ ಜಾಸ್ತಿ ತೊಗರು ಮಾಡಿಕೊಂಡು, ನಾಲ್ಕು ಬಿಸಿಲು ಅಡಿಕೆ ಒಣಗಿದ ಮೇಲೆ ಅದಕ್ಕೆ ಬಣ್ಣ ಕಟ್ತಾರೆ. ಅದು coated ಬಣ್ಣ. ಎಷ್ಟಾದರೂ ಅದು permanent ಬಣ್ಣ ಅಲ್ಲ. ಹಿಂದೆ ನಾವು ಮಾಡ್ತಿದ್ರಲ್ಲಿ ಬಣ್ಣಾನೇ ಹೋಗ್ತಿರಲಿಲ್ಲ. ಗೋಟನ್ನು ಪ್ರತ್ಯೇಕ ಮಾಡಿ ಹಿಂದುಗಡೆಯಿಂದ ಎಡೆಯೋರು. ಅದನ್ನೂ ನಾಲ್ಕು ಹೋಳು ಮಾಡಿ, ಬೇಯಿಸ್ತಾ ಇದ್ವಿ. ಗೋಟು ಅಂದ್ರೆ ಬಲಿತಿರುವ ಅಡಿಕೆ. ತುಂಬಾ ಬಲಿತಿರುವುದು ಹಣ್ಣುಗೋಟು. ಅದನ್ನು ಹಾಗೇ ಒಣಗಿ ಹಾಕ್ತಿದ್ವಿ. ಹಣ್ಣುಗೋಟನ್ನು ಹಾಗೇ ಮಾರುಕಟ್ಟೆಗೆ ತೆಗೆದುಕೊಂಡು ಹೋಗೋರು. ಈ ಹಸಿರು ಗೋಟನ್ನೂ ಎಡೆಸಿ, ನಾಲ್ಕು ಚೂರು ಮಾಡಿ, ಸ್ಥಳೀಯ ಮಾರುಕಟ್ಟೇಲಿ ಮಾರ್‍ತಿದ್ವಿ.

ಎರಡು ಚೂರು ಮಾಡಿದ ಹಸಿರು ಗೋಟನ್ನು ಶಿವಮೊಗ್ಗ ಮಾರುಕಟ್ಟೇಲಿ ಮಾರ್‍ತಿದ್ವಿ. ಈಗಲೂ ಅಲ್ಲಿಯೇ ಮಾರ್‍ತೀವಿ. ಉಂಡೆ ಅಡಿಕೆ ಆವಾಗ ಬಹಳ ಕಡಿಮೆ. ಐಲಾನು ಅಂತ ಆವಾಗ ಮಾಡ್ತಿದ್ರು. ಐಲಾನು ಅಂದ್ರೆ ಹಸಿ ಅಡಿಕೇನೂ, ಗಾಲಿ ಹಾಗೆ ಸಣ್ಣ ಸಣ್ಣ ಬಿಲ್ಲೆ ಹಾಗೆ ಕತ್ತರಿಸೋದು. ಅದನ್ನು ಬೇಯಿಸುವ ಹಾಗೆ ಇಲ್ಲ. ಐಲಾನು ಆಗ ಕೇರಳಕ್ಕೆ ಹೋಗೋದು. ಕೇರಳದವರು ಒಂದು colour ತಂದು ಕೊಡೋರು. ನೀರಿನಲ್ಲಿ ಆ colourಗೆ ಅದನ್ನು ಕೂಡಿಸೋದು, ಹಾಗೇ ಅದನ್ನು ಒಣಗಿಸೋದು. ಎರಡು ಬಿಸಿಲಿನಲ್ಲಿ ಐಲಾನು ಒಣಗೋದು. ಯಾಕೇಂದ್ರೆ ಅದು ತುಂಬಾ ತೆಳ್ಳಗಿರೋದು. ಆವಾಗ ಈ ಪೋಡಿ ಚೂರು ಅಂತ ಮಾಡೋರು. ಅದು ಮದರಾಸಿನ ಸತ್ಯಮಂಗಲಕ್ಕೆ ಹೋಗೋದು. ಅದು ಬರಿಯ ಎಳೆಯ ಅಡಿಕೆ ಮಾತ್ರ. ಬಲಿತಿದ್ದನ್ನು ಮಾಡ್ತಿರಲಿಲ್ಲ. ಲವಂಗದ ಚೂರಿನ ತರಹ ಮಾಡೋವಿ. ಅದನ್ನೂ ಸಹ ಬೇಯಿಸ್ತಾ ಇರಲಿಲ್ಲ. ಅದರಲ್ಲಿ ಒಗರು ಇರಬೇಕಿತ್ತು. ಚೆನ್ನಾಗಿ ಬೇಯಿಸಿದ್ರೆ ಅಡಿಕೆ ಒಗರು ಹೊರಟು ಹೋಗುತ್ತೆ. ಒಗರೆಲ್ಲಾ ತೊಗರಿಗೆ ಇಳಿದುಬಿಡುತ್ತೆ. ಅಂತಹ ಒಗರಿರುವ ಅಡಿಕೆ ತಿಂದರೆ ಅವರಿಗೆ ಬೆವರಬೇಕು. ಒಗರಿನ ಅಂಶ ಹಾಗೇನೇ....! ಇದು ಶರೀರಕ್ಕೆ ಹೋದರೆ, ಮೈಬೆವೆತು ಸೊಕ್ಕಿ ಬಿಡ್ತಾರೆ. ಆ ಮದರಾಸಿನವರಿಗೆ ಹಾಗೆ ಆಗಬೇಕಿತ್ತಂತೆ. ಸತ್ಯಮಂಗಲದ ಪೋಡಿಚೂರನ್ನೂ ಸಹ ಒಣಗಿಸಿ ಬಣ್ಣ ಹಾಕ್ತಿದ್ವಿ. ಬಲಿತ ಅಡಿಕೇನ ಮಾತ್ರ ಬಟ್ಟಲು ಅಡಿಕೆ ಮಾಡ್ತಿದ್ವಿ. ಬಟ್ಟಲು ಅಡಿಕೆ ಒಣಗಿದ ಮೇಲೆ ಅದನ್ನು ಕಳಿ, ಬೆಟ್ಟೆ, ಗೊರಬಲು ಅಂತ ಮೂರು ಭಾಗವಾಗಿ ವಿಂಗಡಿಸೋವಿ. ಇಲ್ಲಿ ಕಳಿ ಅಂತ ಮಾತ್ರಾ ಮಾಡೋವಿ. ಅಲ್ಲಿ ಮಾರುಕಟ್ಟೆಗೆ ಹೋದ ಮೇಲೆ ಅದನ್ನು ರಾಜಾಲು, ನುಲಿ, ಬಿಟ್ಟೆ, ವಂತಿಬಿಟ್ಟೆ ಹೀಗೆ ಏಳೆಂಟು ವಿಧಾನಗಳಲ್ಲಿ ಶಿವಮೊಗ್ಗದಲ್ಲಿ ವರ್ಗೀಕರಣ ಮಾಡೋರು. ನಂತರವೇ ಅಡಿಕೆ ಮಾರಾಟ ಆಗ್ತಿತ್ತು. ಇದು ಅಡಿಕೆ ಸಂಸ್ಕರಣೆ ವಿಧಾನ.

- **ಇವತ್ತು ಅಡಿಕೆ ಸಂಸ್ಕರಣೆ ಸಂಕೇತಿಗಳಿಂದ ಮಾಯವಾಗ್ತಿದೆಯಲ್ಲಾ ಇದಕ್ಕೇನು ಕಾರಣ?**

ಹಿಂದೆ ಅಡಿಕೆ ಬೆಳೀತಿದ್ದೋರಲ್ಲಿ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ಎಡೀತಾ ಇದ್ದೋರೂ ಸಹಾ ನೂರಕ್ಕೆ ತೊಂಬತ್ತು ಭಾಗ ಸಂಕೇತಿಗಳು. ಈ ಕಸುಬು ಕಲಿತಿದ್ದೋರೇ ಸಂಕೇತಿಗಳು. ಬೇರೆಯವರು ತಿಳಿದಿರಲಿಲ್ಲ. ನಿಧಾನವಾಗಿ ಇತರಾದಿಗಳು ಕಲಿತುಕೊಂಡ್ರು. ವಾಸ್ತವವಾಗಿ ಹೇಳಬೇಕು ಅಂದ್ರೆ ಹಣಕಾಸಿನ ಮುಗ್ಗಟ್ಟು ಸಂಕೇತಿಗಳಲ್ಲಿ ಬಹಳವಾಗಿ ಇತ್ತು. ಸಂಕೇತಿಗಳಲ್ಲಿ ಬಡತನ ಬಹಳ ತಾಂಡವವಾಡ್ತಿತ್ತು. ಅವತ್ತು ಎಲ್ಲರೂ ಕಷ್ಟಜೀವಿಗಳಾಗಿದ್ರು. ನಾವು ದುಡೀಲೇಬೇಕು, ಇಲ್ಲದೇ ಹೋದ್ರೆ ಜೀವನ ಮಾಡುವ ಉಪಾಯ ಹೇಗೆ ಅನ್ನುವ ಪರಿಸ್ಥಿತಿ ಇತ್ತು. ಇವತ್ತು ಅಡಿಕೆ ಸುಗ್ಗೀಲಿ ಎರಡು ಸಾವಿರ, ಒಂದು ಸಾವಿರ ಕೂಲಿ ಬಂದ್ರೆ, ಅದರಲ್ಲಿಯೇ ನಾವು ಹ್ಯಾಗೋ ಜೀವನ ಮಾಡ್ತೀವಿ ಅನ್ನುವ ಮನೋಭಾವನೆ ಪ್ರತಿಯೊಬ್ಬರಲ್ಲಿ ಇತ್ತು. ಹಾಗಾಗಿ ಎಲ್ಲರೂ ಅಡಿಕೆ ಎಡಿಯೋಕೆ ಹೋಗೋರು. ಬರುತ್ತಾ ಬರುತ್ತಾ ಅಡಿಕೆ ಧಾರಣೆ ಯಾವಾಗ ಏರಿತೋ, ಹಣಕಾಸಿನ ಮುಗ್ಗಟ್ಟು ಕಡಿಮೆಯಾಗ್ತಾ ಬಂತು. ಜೀವನಮಟ್ಟ ಮುಂದುವರೀತು. ನಾಜೂಕಿನ ಜನ ಜಾಸ್ತಿಯಾದ್ರು. ಶ್ರಮ ಕಡಿಮೆಯಾಗ್ತಾ ಬಂತು. ಗಂಡಸರು ಇತರಾದಿಗಳನ್ನು ಕರೆಸಿ ಎಡೆಸಿದ್ರೇ ಹೊರತು, ಸಂಕೇತಿಗಳಲ್ಲಿ ಎಡಿಯೋರು ಈಗ ಶೇಕಡಾ ಒಂದರಷ್ಟು ಜನ ಇಲ್ಲ ಅನ್ನುವುದು ನನ್ನ ಅಭಿಪ್ರಾಯ. ಇವತ್ತು ಕೆಲವು ಸಂಕೇತಿಗಳು ಮಾತ್ರ ಅಡಿಕೆ ಸಂಸ್ಕರಣೆ ಮಾಡ್ತಿದಾರೆ. ನಮ್ಮೂರಿನಲ್ಲಂತೂ ಇಲ್ಲವೇ ಇಲ್ಲ. ಇದ್ದೋರೇ ನಾವೊಬ್ರು ಮಾತ್ರ.


ಕಣವೊಂದರ ವಿಸ್ತಾರದ ನೋಟ: ಕೇರಳಾಪುರ

- **ನೀವು ಯಾಕೆ ಬಿಟ್ರಿ?**

ಈ processing ವ್ಯವಹಾರದಲ್ಲಿ ಏನಾಗಿದೆ ಅಂದ್ರೆ ಕಳ್ಳತನ ಜಾಸ್ತಿ ಆಗಿದೆ. ಎಡಿಯುವಾಗ, ಬೇಯಿಸುವಾಗ, ಹರವುವಾಗ, ತೋಟದಲ್ಲಿ, ಎಲ್ಲ ಕಡೆ ಕಳ್ಳತನ ಜಾಸ್ತಿ. ಬ್ರಾಹ್ಮಣರಲ್ಲಿ ಈ ನಾಲ್ಕು ಐದು ಜಾಗದಲ್ಲಿ ನಿಗಾ ಮಾಡೋದಕ್ಕೆ ಜನಸಂಖ್ಯೆ ಕಡಿಮೆಯಾಯ್ತು. ಯಾಕೆ, ಮನೇಲಿ ಮಕ್ಕಳೆಲ್ಲಾ ವಿದ್ಯಾಭ್ಯಾಸದ

ಕಡೆ ಹೊರಟು ಹೋಗ್ತಾ ಇದ್ರು. ಇದ್ದೋರು ಒಬ್ಬಂಟಿಗರಾಗ್ತಾ ಬಂದ್ರು. ನಾಲ್ಕು ಕಡೆ ಕಳ್ಳತನ ಆದಾಗ ಗಂಟು ಹೋಗುತ್ತೆ. ಆದ್ದರಿಂದ ನಮ್ಮಲ್ಲಿ ಸಂಸ್ಕರಣೆ ಕಡಿಮೆಯಾಗ್ತಾ ಬಂತು. ವೈಯಕ್ತಿಕವಾಗಿ ಹೇಳಬೇಕೂಂದ್ರೆ ನಾನು ತುಂಬಾ ಆಸಕ್ತಿಯಿದ್ದ ವ್ಯಕ್ತಿ. ನಾನು ಕರ್ತಾಳಿನಿಂದ ಜನರನ್ನು ತಂದು ಅಡಿಕೆ ಎಡಿಸ್ತಾ ಇದ್ದೆ. ಕಡೆಗೆ ಹರದನಹಳ್ಳೀಲಿ ತುಡಿಕೆ ಜಾಸ್ತಿ ಆಯ್ತು. ಅಲ್ಲಿಗೆ ಅಡಿಕೆ ಹೇರಿಕೊಂಡು ಹೋಗಿ ಐದು ವರುಷ ಅಡಿಕೆ ಎಡಿಸಿದೆ. ಮತ್ತೆ ಇಲ್ಲಿಗೆ ತಂದು ಬೇಯಿಸಿದೆ. ಕಳ್ಳತನ ತಡೆಯಲು ಆಗಲಿಲ್ಲ. ಒಂದು ಸಾವಿರ ಗೋಟನ್ನು ಎಡಿಯೋಕೆ ಕೊಟ್ಟರೆ ಮಾರನೇ ದಿನ ಕೊಡ್ತಾ ಇದ್ದದ್ದೇ ಎಂಟುನೂರರಿಂದ ಎಂಟುನೂರೈವತ್ತು ಅಡಿಕೆ. 'ಯಾಕಮ್ಮಾ ಹೀಗೆ?' ಅಂದ್ರೆ, 'ಅದು ಕೆಟ್ಟು ಹೋಗಿತ್ತು, ಒಣಗಿತ್ತು, ಹಾಳಾಗಿತ್ತು, ಹಾಗಿತ್ತು, ಹೀಗಿತ್ತು ನಾವೇನು ಕದ್ದಿದೀವಾ' ಅನ್ನೋರು. ಕೂಲಿಯವರಿಗೂ ಆಗ ಬೇಡಿಕೆ ಜಾಸ್ತಿ. ಅಡಿಕೆ ಎಡೆಯಲು ನಮ್ಮಲ್ಲಿಗೆ ಬನ್ನಿ ಅಂತ ಕರೆಯುವವರು ಜಾಸ್ತಿ ಆದಾಗ, 'ಏನು ನೀವು ಒಬ್ಬರೇನಾ, ನಮ್ಮ ಮೇಲೆ ಯಾಕೆ ಕಳ್ಳತನ ಹೇರ್ತೀರಿ... ನಾಳೆಯಿಂದ ನಾವು ಬರೋದೇ ಇಲ್ಲ,' ಅನ್ನುವ ಧಾರ್ಷ್ಟ್ಯ ಅವರಲ್ಲಿ ಬೆಳೀತೂ. ನಾನೂ ಲೆಕ್ಕ ಹಾಕಿದೆ. ಖರ್ಚು, ಆದಾಯ ಸಮ ಆಗೋದು. ಹಾಗಾಗಿ ನಾನು ಸಹ ಸಂಸ್ಕರಣೆ ಮಾಡೋದು ಬಿಟ್ಟೆ.


ಅರಿ ಹರಡುವುದೂ ಒಂದು ಕಲೆ: ಕೇರಳಾಪುರ

- **ಅಡಿಕೇನ ಚೇಣಿ ಕೊಡೋದು ಉತ್ತಮ ಅಂತೀರಾ ಅಥವಾ ರೈತನೇ ಸಂಸ್ಕರಣೆ ಮಾಡಿ ಮಾರೋದು ಉತ್ತಮವಾ? ಆದಾಯದಲ್ಲಿ ಏನು ವ್ಯತ್ಯಾಸ ಆಗುತ್ತೆ?**

ಎಡೆಯೋದಕ್ಕೆ ಜನರ ಸೌಲಭ್ಯ ಇರಬೇಕು. ಜತೆಗೆ ಕಳ್ಳತನ ಕಾಯಲು ಜನ ಇರಬೇಕು. ಎಲ್ಲಾ ಇದ್ರೆ ಸಂಸ್ಕರಣೆ ಮಾಡುವುದು ಲಾಭದಾಯಕ. ತೋಟದಲ್ಲಿ ಮಾರುವುದಕ್ಕಿಂತ ಸಾಧಾರಣ ಹದಿನೈದರಿಂದ ಇಪ್ಪತ್ತು ಇದರಲ್ಲಿ ಲಾಭ ಹೆಚ್ಚು. ಲಾಭದ ಬಗ್ಗೆ ಅನುಮಾನವಿಲ್ಲ. ಮಾಡುವುದು ಕಷ್ಟ ಅಷ್ಟೆ.

- **ಅಡಿಕೆ ತೋಟದಲ್ಲಿ ತಾವು ಬೆಳೆದಿರುವ ಇತರೇ ಬೆಳೆಗಳು ಮತ್ತು ಅದರ ಬೇಸಾಯ ವಿಧಾನ ತಿಳಿಸಿ?**

ಅಡಿಕೆ ತೋಟದಲ್ಲಿ, ವಿಳ್ಳೇದೆಲೆ, ತೆಂಗು, ಬಾಳೆ ಬೆಳೆದಿದೀನಿ. ಈಚೀಚೆಗೆ ಕಾಳುಮೆಣಸು, ವೆನಿಲ್ಲಾ ಮಾಡ್ತಿದಾರೆ. ಎಲೆ ಹಂಬನ್ನು ನಾವು ಎಲ್ಲಾ ಅಡಿಕೆ ಗಿಡಗಳಿಗೂ ಹಬ್ಬಿಸೋಲ್ಲ. ಮಧ್ಯೆ ಪಾಳು ಮರಗಳು ಇರಬೇಕು. ಯಾಕೇಂದ್ರೆ ಮರಹತ್ತಿ ಅಡಿಕೆ ಕುಯ್ಯುವಾಗ ಪ್ರತಿಯೊಂದಕ್ಕೆ ಹಂಬು ಹಾಕಿದ್ರೆ ಅಡಿಕೆ ಕುಯ್ಯುವವನಿಗೆ ಹತ್ತಿ ಇಳಿಯಲು ತೊಂದರೆ, ಅಲ್ಲದೆ ತುಂಬಾ waste ಆಗುತ್ತೆ. ಆದ್ದರಿಂದ ಮಧ್ಯೆ ದೂರಬಿಟ್ಟು ಎಲೆಹಂಬು ಹಾಕ್ತೀವಿ. ಸ್ವಲ್ಪ ತಿಳುವಳಿಕೆ ಇರುವ ಜನ, ಉತ್ಸುಕತೆ ಇರೋರು, ಯುವಕರಾಗಿರೋರು ಎಲೆಹಂಬು ಮಾಡೋದು ಉತ್ತಮ. ಇದು ಲಾಭದಾಯಕ. ಎಲೆಹಂಬನ್ನೂ ಬೆಳೆದ ಮೇಲೆ, ಅದನ್ನು ಸ್ವತಃ ಕುಯ್ದು, ಸಂತೆಗೆ ಒಯ್ದು ಮಾರಾಟ ಮಾಡಬೇಕು. ಅದಕ್ಕೆ ಮಾಡುವ ವ್ಯವಸಾಯದ ಕ್ರಮ ಅಂದ್ರೆ ತೆಕ್ಕೆ ಬಿಡಬೇಕು, ಕುಡಿ ಕಟ್ಟಿ ಹಾಕಬೇಕು. ಈ ಕೆಲಸವನ್ನು ಸ್ವಂತವಾಗಿ ಒಬ್ಬರ ಸಹಾಯದಿಂದ ಮಾಡಬೇಕು. ಅವನಿಗೆ ಅನುಭವ ಇದ್ದು ಅವನೇ ಮಾಡಿದ್ರೆ ವಿಳ್ಳೇದೆಲೆ ಲಾಭದಾಯಕ. ಪ್ರತಿಯೊಂದನ್ನು ಕೂಲಿ ಕೈಲಿ ಮಾಡಿಸ್ತೀನಿ, ಚೇಣಿ ಮಾಡ್ತೀನಿ ಅಂದ್ರೆ ನಷ್ಟ ಆಗೋಲ್ಲ ಆದ್ರೆ ಅಷ್ಟು ಲಾಭ ಬರೋಲ್ಲ. ಒಂದು ವರುಷದಲ್ಲಿ ಹತ್ತು ಸಾವಿರ ಸಿಕ್ತು ಅಂದ್ರೆ, ಒಂದರಿಂದ ಎರಡು ಸಾವಿರ ಆದಾಯ ಸಿಗಬಹುದು. ಏಳು ಎಂಟು ಸಾವಿರ ಖರ್ಚು ಆಗುತ್ತೆ. ಎಲೆ ಹಂಬಿಗೆ ಒಂದರಿಂದ, ಒಂದೂವರೆ ವರುಷಕ್ಕೆ ತೆಕ್ಕೆ ಬಿಡಬೇಕು. ಮೂರು ತಿಂಗಳಿಗೆ ಒಂದು ಬಾರಿ ಕುಡಿ ಕಟ್ಟಬೇಕು. ವರುಷದಲ್ಲಿ ಎರಡು ಬಾರಿ ಹಟ್ಟಿಗೊಬ್ಬರ ಹಾಕಬೇಕು. ತೇವಾಂಶ ಕಡಿಮೆಯಾದಾಗ ನೀರು ಕೊಡಬೇಕು. ಅಡಿಕೆಗೆ ಹಿಂದೆ ಮುಂದೆ ಆದ್ರೆ ತಡಿಯುತ್ತೆ. ಹಂಬಿಗೆ ಅವಶ್ಯ ನೀರು ಬೇಕೇಬೇಕು. ಕಾಲಕ್ಕೆ ತಕ್ಕಂತೆ, ಒಡಗುಯ್ಲು, ಮುರುಗುಯ್ಲು, ಮುಂಟು ಅಂತ ಮೂರು ಕುಯಿಲು ಮಾಡ್ತಾರೆ. ಛಳಿಗಾಲದಲ್ಲಿ ಮಾಡುವ ಕುಯಿಲು ಒಡಗುಯಿಲು. ಅದನ್ನು December-Januaryನಲ್ಲಿ ಮಾಡ್ತಾರೆ. ಸಾಧಾರಣವಾಗಿ ಈ

ಅಂಕುರ ಇರುವ ಪಕ್ಕದಲ್ಲಿ ಒಂದು ಎಲೆ ಬಿಟ್ಟು ಹಿಂದಿನ ಎಲೆಯನ್ನು ಪೂರ್ಣವಾಗಿ ಕುಯ್ತಾರೆ. ಈ ಮುರುಗುಯ್ಲು ಅಂದ್ರೆ ಎಳೆ ಎಲೆ ಬಿಟ್ಟು ಉಳಿದದ್ದೆಲ್ಲಾ ಕುಯ್ಯೋದು. ಅದನ್ನು March-Aprilನಲ್ಲಿ ಮಾಡ್ತಾರೆ. ಆಮೇಲೆ ವ್ಯವಸಾಯ ಮಾಡಿದ ಹಾಗೆ ಚಿಗುರು ಬರುತ್ತೆ. ಚಿಗುರು ಬಂದಾಗ ಅದನ್ನು May ತಿಂಗಳಿನಲ್ಲಿ ಮುಂಟು ಕುಯಿಲು ಅಂತ ಮಾಡ್ತಾರೆ. ಅದಕ್ಕೆ ಒಳ್ಳೆಯ ಧಾರಣೆ ಸಿಗುತ್ತೆ. ಚೆನ್ನಾಗಿ ವ್ಯವಸಾಯ ಮಾಡಿರುವ ತೋಟದಲ್ಲಿ ಕೆಲವರು ಮತ್ತೊಂದು ಮರುಗುಯಿಲು ಕುಯ್ತಾರೆ. ಅದು ಜೂನ್ ತಿಂಗಳಿನಲ್ಲಿ ಅಂದ್ರೆ ಸೋನೆ ಮಳೆ ಹಿಡಿಯುವುದಕ್ಕಿಂತ ಮುಂಚಿತವಾಗಿ. ನಾವು ಬರೀ ತೆಂಗನ್ನು ಬೆಳೆಯೋದಿಲ್ಲ. ಅಡಿಕೆ ತೋಟದ ಸುತ್ತಾ ತೆಂಗು ಬೆಳೆದಿರ್ತೀವಿ ಅಷ್ಟೆ.

- **ಭತ್ತದ ಬೇಸಾಯ ಯಾವ ರೀತಿ ಮಾಡ್ತೀರಿ?**

  ನಮಗೆ ನೀರಾವರಿ ಅಂದ್ರೆ ಕಟ್ಟೆಪುರ ನಾಲೆ ನೀರು. ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಕಟ್ಟೆ ಇದು. ಇಲ್ಲಿಗೆ ಎಡದಂಡೆ ನಾಲೆ ಬರುತ್ತೆ. ಜನವರಿ, ಫೆಬ್ರವರಿ, ಮಾರ್ಚಿ ತಿಂಗಳಿನಲ್ಲಿ ಮಾಗಿ ಉಳುಮೆ ಮಾಡ್ತೀವಿ. ಕೂಳೆ ಮಣ್ಣಿನಲ್ಲಿ ಬೆರೆತು, ಭೂಮಿ ಒಣಗಿ, ಮುಂಗಾರಿಗೆ ಸಿದ್ಧವಾಗುತ್ತೆ. ಮೊದಲ ಮುಂಗಾರು ಮಳೆ ಬಂದ ನಂತರ ಉಳುಮೆ ಮಾಡಿ ಸೆಣಬನ್ನು ಬಿತ್ತನೆ ಮಾಡ್ತೀವಿ. ಅದು ಬೆಳೆದು ದೊಡ್ಡದಾದ ಮೇಲೆ ನಲವತ್ತೈದು ದಿನದಲ್ಲಿ ಜಮೀನಿನಲ್ಲಿ ಉಳುಮೆ ಮಾಡಿಬಿಡ್ತೀವಿ. ನಾಲೇಲಿ ನೀರು ಬಂದ ತಕ್ಷಣ ಅಗೆ ಗದ್ದೇನ ಎರಡೆರಡು ಬಾರಿ ಉಳುಮೆ ಮಾಡಿ ಸಿದ್ಧ ಮಾಡಿರ್ತೀವಿ. ಒಂದು ಎಕರೆಗೆ ಮುವತ್ತು ಕೇಜಿ ಭತ್ತದ ಬೀಜದಂತೆ ಒಟ್ಲು ಹುಯ್ತೀವಿ. ಈಗ ಇಲ್ಲಿ ಹೈಬ್ರಿಡ್ ತಳಿಗಳು ಜಾಸ್ತಿ, Local ತಳಿಗಳು ಕಡಿಮೆ. ಹಿಂದೆ ಬಂಗಾರ ಕೋವಿ, ಬಂಗಾರ ಸಣ್ಣ, BPT ಬೆಳೀತಾ ಇದ್ವಿ. ಈಗ IR-20, ಮಂಡ್ಯವಾಣಿ, ಬಾಂಗ್ಲಾ ರೈಸ್ ತಳಿಗಳು ಬಂದಿವೆ. ಇವೆಲ್ಲಾ ಸಾಧಾರಣ ನೂರಮುವತ್ತರಿಂದ ನೂರನಲವತ್ತೈದು ದಿನಗಳ ಒಳಗೆ ಖಟಾವಾಗುತ್ತೆ. ಹಿಂದೆ ಭತ್ತಕ್ಕೆ ನಾಡ ಗೊಬ್ಬರ ಜಾಸ್ತಿ ಹಾಕ್ತಿದ್ವಿ. ಈಗ ಸೀಮೆಗೊಬ್ಬರ ಜಾಸ್ತಿ ಹಾಕ್ತೀವಿ. ಬೆಳೆದ ಸೊಪ್ಪನ್ನು ಗದ್ದೆಯಲ್ಲಿ ಹರಡಲು ಸೀಳು ಉಕ್ಕೆ ಅಂತ ಮಾಡ್ತೀವಿ. ಒಂದು ವಾರ ಬಿಟ್ಟು ಮಗಚುಉಕ್ಕೆ ಅಂತ ಮಾಡ್ತೀವಿ. ನಂತರ ಬದು ಕತ್ತರಿಸಿ, ಮಣ್ಣು ಹಾಕಿದ ಮೇಲೆ, ಒಂದು ವಾರದಲ್ಲಿ ಸಸಿಯನ್ನೂ ನಾಟಿ ಮಾಡ್ತೀವಿ. ನಾಟಿ ಮಾಡಲು ಯಂತ್ರದ ಬಳಕೆ ಇನ್ನೂ ಇಲ್ಲಿ ಆರಂಭವಾಗಿಲ್ಲ. ಕೂಲಿ ಆಳುಗಳ ನೆರವಿನಿಂದ ನಾಟಿ ಹಾಕಿಸ್ತೀವಿ. ನಾಟಿಯಾದ ಮಾರನೇ ದಿನದಿಂದ ನೀರು ಕಟ್ಟಲು ಆರಂಭಿಸ್ತೀವಿ. ಹದಿನೈದರಿಂದ ಮುವತ್ತು ದಿನದಲ್ಲಿ ಒಂದು ಕಳೆ ತೆಗೀತೀವಿ. ನಂತರ ಗಿಡದ ಬೆಳವಣಿಗೆ ಕಡಿಮೆ ಇದ್ರೆ ಸ್ವಲ್ಪ ಯೂರಿಯಾ ಗೊಬ್ಬರ ಮೇಲುಗೊಬ್ಬರವಾಗಿ ಹಾಕ್ತೀವಿ, ಭತ್ತ ತೆಂಡೆ ಹೊಡೆದು, ತೆನೆ ಬಂದು ಕಾಳು ಬಲಿತ ಮೇಲೆ ನೀರು ಬಸಿದು ಖಟಾವು ಮಾಡಿಸ್ತೀವಿ. ಕುಯಿಲಾದ ಮೇಲೆ, ಗುಡ್ಡೆ ಹಾಕಿ, ಕಣ ಮಾಡಿ, ಬಡಿದು, ಚೀಲದಲ್ಲಿ ಭತ್ತವನ್ನು ತುಂಬಿಕೊಂಡು, ಮನೆಗೆ ತರ್ತೀವಿ. ಒಂದು ಎಕರೆಗೆ ಮೂವತ್ತರಿಂದ ಮೂವತ್ತೈದು Quintal ಇಳುವರಿ ಸಾಧಾರಣವಾಗಿ ಬರುತ್ತಿತ್ತು ಹಿಂದೆ. ಉತ್ಕೃಷ್ಟವಾದ ಜಮೀನು ಇದ್ದ ಕಡೆ ನಲವತ್ತು Quintal ಇಳುವರಿ ಸಹಾ ಬಂದಿದೆ. ಆದ್ರೆ ಈವಾಗ ಭತ್ತ ಬೆಳೆಯುವ ಜಮೀನಿನಲ್ಲಿ ಅಷ್ಟು ಸತ್ತ್ವ ಇಲ್ಲ. ಈಗ ಎಕರೆಗೆ ಇಪ್ಪತ್ತರಿಂದ ಇಪ್ಪತ್ತೈದು Quintal ಭತ್ತ ಬಂದ್ರೆ ಪರವಾಗಿಲ್ಲ ಅನ್ನುವ ಪರಿಸ್ಥಿತಿ ಇದೆ.

- **ಹೊಲದ ಬೆಳೆಗಳನ್ನು ಏನೇನು ಬೆಳೆದಿದೀರಿ?**

  ಮುಸುಕಿನಜೋಳ, ರಾಗಿ, ಹುರುಳಿ, ಮೆಣಸಿನಕಾಯಿ ಬೆಳೀತೀನಿ. ಒಂದು ಸಾರಿ ೭೦ ಚೀಲ ಜೋಳ ಬೆಳೆದಿದೀನಿ. ಅರವತ್ತು ಎಪ್ಪತ್ತು ಚೀಲ ರಾಗಿ ಆಗುತ್ತೆ. ಸ್ವಲ್ಪ ಹುರುಳಿ ಆಗುತ್ತೆ. ಈಗ ಬೋರ್‌ವೆಲ್ ಹಾಕಿಸಿದೀನಿ, ನೀರಾವರಿ ಸಲುವಾಗಿ.

- **ಕೇರಳಾಪುರ ಸುತ್ತಮುತ್ತ ಹೂವಿನ ಬೇಸಾಯವನ್ನು ಇತರೇ ಕೃಷಿಕರು ಬಹಳವಾಗಿ ಮಾಡ್ತಾರೆ. ಸಂಕೇತಿಗಳಲ್ಲಿ ಈ ಹೂವಿನ ಕೃಷಿ ಯಾಕಿಲ್ಲ?**

  ಸಂಕೇತಿಗಳೆಲ್ಲ ತೋಟವನ್ನು ನಂಬಿದ್ರು. ಇತರೇ ಜನಾಂಗವೆಲ್ಲಾ ಹೂವಿನ ಬೇಸಾಯವನ್ನು ನಂಬಿದ್ರು. ನಮಗೆ, ಅವರಿಗೆ ಒಂದು ಸೌಜನ್ಯವಾದ ಬಾಂಧವ್ಯ ನಡೀತಾ ಇತ್ತು. ಇವತ್ತಿಗೂ ಅವರು ನಮ್ಮನ್ನು ಕಂಡ್ರೆ ಗೌರವಯುತವಾಗಿ ಇದಾರೆ. ಆದ್ದರಿಂದ ಅವರದ್ದಕ್ಕೆ ನಾವು ಕೈ ಹಾಕುವುದು ಬೇಡ, ನಮ್ಮದಕ್ಕೆ ಅವರು ಕೈ ಹಾಕುವುದು ಬೇಡ ಅಂತ ಹೇಳಿ, ನಾವು ಹೂವಿನ ಬೇಸಾಯ ಮಾಡಲಿಲ್ಲ. ನಮ್ಮ ಊರಲ್ಲಿ ಮಾತ್ರ ಇತರಾದಿಗಳು ವಿಶೇಷವಾಗಿ ತೋಟಾನೂ ಸಹ ಮಾಡಿಲ್ಲ. ಆದ್ರೆ ಈಚೀಚೆಗೆ ಮಾಡಿದಾರೆ ಅಷ್ಟೆ. ಸಂಕೇತಿಗಳಿಗೆ ಬಾಗಾಯ್ತು ಮಾಡಿದ್ರೆ ಸಾಕು, ಹೂವಿನ ಬೇಸಾಯವನ್ನು ನಾವು ಮಾಡದೇ ಇದ್ದುದರಿಂದ ನಮಗೇನೂ ತೊಂದರೆಯಾಗಿಲ್ಲ. ತೋಟದಲ್ಲೇ

ದೇವರು ನಮಗೆ ಸಮೃದ್ಧವಾಗಿ ಕೊಟ್ಟಿದ್ದಾನೆ. ಸ್ವಂತ ದುರ್ಬುದ್ಧಿಯಿಂದ, ಎಡವಟ್ಟು ನಡವಳಿಕೆಯಿಂದ ಒಂದೆರಡು ಸಂಕೇತಿ ಕುಟುಂಬ ಹಾದಿ ತಪ್ಪಿದೆಯೇ ಹೊರತು, ನಮ್ಮಲ್ಲಿ ಯಾರೂ ಆರ್ಥಿಕವಾಗಿ ಹಿಂದೆ ಬಿದ್ದಿಲ್ಲ.

- **ವಿಶೇಷವಾಗಿ ನಿಮ್ಮ ಸಂಕೇತಿಗಳಲ್ಲಿ ಬೇರೆ ಬೆಳೆ ಬೆಳೆದವರೂ ಇದ್ದಾರೆಯೇ?**

ನನ್ನ ತಮ್ಮ ಹೊಗೆಸೊಪ್ಪು, ಹಿಪ್ಪುನೇರಳೆ ಬೇಸಾಯ ಮಾಡಿದ್ದಾನೆ. ಶುಂಠಿ ಹಾಕಿದ. ದುಡ್ಡು ಹೋಯ್ತು ಅಷ್ಟೆ.

- **ನಿಮಗೆ ಯಾವತ್ತೂ ವ್ಯವಸಾಯ ಬಿಡಬೇಕು, ಪೇಟೇಲಿ ಕೆಲಸ ಮಾಡಬೇಕು ಅನ್ನಿಸಲಿಲ್ವಾ?**

ಇಲ್ಲ. ನನಗೆ ಇವತ್ತಿಗೂ ಅಷ್ಟೇನೆ-ಆ ಭೂಮೀಲೇ ಬೆಳೀಬೇಕು ಅಂತ ಆಸೆ. ಭೂಮಿ ಬಿಡಬೇಕು ಅಂದ್ರೆ ಅಳುವಷ್ಟು ಸಂಕಟವಾಗುತ್ತೆ. ಹಿಂದೆ ನಮ್ಮ ತಂದೆಗೆ ಎಷ್ಟಿತ್ತೋ ಅದಕ್ಕೆ ಮೂರರಷ್ಟು ಜಮೀನನ್ನು ನಾವು ಮಾಡಿದ್ವಿ. ಅದನ್ನು ಎಲ್ಲಾರಿಗೆ ಹಂಚಿಕೊಟ್ಟು, ನನ್ನ ತಮ್ಮನ ಹಿಸ್ಸೆಗೆ ಬಂದಿದ್ದನ್ನು ಅವನು ಮಾರಿದಾಗಲೂ ಸಹ ನನಗೆ ಬಹಳ ಬೇಜಾರಾಯ್ತು. ಜಮೀನಿನ ಮೇಲೆ ನನಗೆ ತುಂಬಾ ವ್ಯಾಮೋಹ.

- **ಇಷ್ಟೆಲ್ಲಾ ಜಮೀನಿನ ಮೇಲೆ ವ್ಯಾಮೋಹ ಇರುವ ನೀವು ಮಗನನ್ನು ಯಾಕೆ ವ್ಯವಸಾಯಸ್ಥನನ್ನಾಗಿ ಮಾಡಲಿಲ್ಲ?**

ಮಕ್ಕಳಿಗೆ ವಿದ್ಯಾಭ್ಯಾಸ ಚೆನ್ನಾಗಿ ಹತ್ತಿತ್ತು. ಅವರಿಗೆ ನನ್ನ ಹಾಗೆ ವ್ಯವಸಾಯದ ಪ್ರೌಢಿಮೆ ಬರಲಿಲ್ಲ. ನಾನು ೧೯೬೩ರಲ್ಲಿ ವ್ಯವಸಾಯಕ್ಕೆ ಬಂದಾಗ ಆಳುಕಾಳುಗಳ ಸೌಕರ್ಯ ಎಷ್ಟು ಚೆನ್ನಾಗಿತ್ತೋ ಈಗ ಅಷ್ಟೂ ಅಧ್ವಾನವಾಗಿದೆ. ಆದ್ದರಿಂದ ಅವರಿಗೆ ಮುಂದೆ ಮಾಡಲು ಆಗೋದಿಲ್ಲ. ಕಷ್ಟ ಆಗುತ್ತೆ.

- **ನಿಮ್ಮ ನಂತರ ನಿಮ್ಮ ಮುಂದಿನ ಕೃಷಿ?**

ಭಗವಂತನೇ ಬಲ್ಲ. ನಾನು ಹೇಳಲು ಆಗೋಲ್ಲ. ನಮ್ಮ ಕೈಲಾಗೋವರೆಗೆ ಮಾಡೋದು, ನಂತರ ನಾವು ಜಮೀನು ಇಟ್ಟುಕೋಬೇಕು, ಯಾರನ್ನಾದ್ರೂ ಇಟ್ಟುಕೊಂಡು ನೋಡಿಕೊಳ್ತೀವಿ ಅನ್ನೋ ಮನೋಭಾವನೆ ಬಂದ್ರೆ ಮಕ್ಕಳು ನೋಡಿಕೊಳ್ತಾರೆ. ಹಾಗೆ ನೋಡಿಕೊಳ್ಳೋದಾದ್ರೆ ನೋಡಿಕೊಳ್ಳಲಿ ಇಲ್ಲಾಂದ್ರೆ ಮಾರಿಕೊಳ್ಳಲಿ. ಅದಕ್ಕೆ ನಾನೇನೂ ಮಾಡಲು ಆಗೋದಿಲ್ಲ.

- **ಇವತ್ತು ಸಂಕೇತಿಗಳು ನೆಲೆಸಿರುವ ಯಾವುದೇ ಗ್ರಾಮಕ್ಕೆ ಹೋದರೂ ಅಲ್ಲಿನ ಪರಿಸ್ಥಿತಿ ಇದೇ ಆಗಿದೆ. ಐವತ್ತು ಐವತ್ತೈದು ವರುಷದವರೇ ಅಲ್ಲಿರೋದು. ನಿಮ್ಮ ಸಂಕೇತಿ ಕೃಷಿ ಉಳೀಬೇಕಾದ್ರೆ ಏನು ಮಾಡಬೇಕು ಅಂತೀರಿ?**

ಈಗ ಜನಸಂಖ್ಯೆನೇ ಕಡಿಮೆಯಾಗ್ತಾ ಇದೆ. ಹಿಂದೆಲ್ಲಾ ಮನೇಲಿ ನಾಲ್ಕು ಐದು ಮಕ್ಕಳು ಇರೋರು. ಈಗ ಒಂದು ಇರೋದು ಕಷ್ಟ. ಆ ಒಬ್ಬ ಮಗ ಊರಲ್ಲಿ ವ್ಯವಸಾಯ ಮಾಡ್ತೀನಿ ಅಂತ ನಿಂತ್ರೆ ಅವನಿಗೆ ಹೆಣ್ಣು ಕೊಡೋರು ಇಲ್ಲ. ಇವತ್ತು ನಮ್ಮ ಊರಿನ ಇಪ್ಪತ್ತೆರಡು ಒಕ್ಕಲಲ್ಲಿ ಹತ್ತು ಜನರ ಮನೇಲಿ ಹುಡುಗರು ಇಲ್ಲ. ಪರಿಸ್ಥಿತಿ ಹೀಗಿರೋದ್ರಿಂದ ಮುಂದೆ ಕಷ್ಟ ಆಗುತ್ತೆ. ಏನೂ ಮಾಡಲೂ ಆಗೋಲ್ಲ.

- **ನಿಮ್ಮ ಹೆಂಡತಿಯ ಸಹಕಾರ ಹೇಗಿದೆ?**

ನಿಜವಾಗಿ ಹೇಳೋದಾದರೆ ಅವರು ನನಗೆ ಬಲಭುಜ ಇದ್ದ ಹಾಗೆ. ಎಲ್ಲಾವುದಕ್ಕೂ ತುಂಬ ಸಹಕಾರ ನೀಡಿದಾಳೆ. ಆಳುಕಾಳುಗಳಿಗೆ ಊಟದಿಂದ ಹಿಡಿದು, ಪ್ರತಿಯೊಂದರಲ್ಲೂ ದುಡಿದಿದಾಳೆ. ಅಡಿಕೆ ವ್ಯಾಪಾರ ಮಾಡ್ತಿದ್ದಾಗ ನಾನು ಮನೆಗೆ ವೇಳೆ ಇಲ್ಲದೆ ಬರ್ತಿದ್ದೆ. ವೇಳೆ ಇಲ್ಲದೆ ಹೋಗ್ತಿದ್ದೆ. ಆಗ ಚೂರೂ ಬೇಸರಿಸದೆ ಸಹಕಾರ ನೀಡಿದಾಳೆ.

- **ಯಾವ ತತ್ತ್ವ, ಆದರ್ಶಗಳನ್ನು ಇಟ್ಟುಕೊಂಡು ಬದುಕಿದ್ರಿ?**

ಸತ್ಯವಾಗಿ ನಡೀಬೇಕು. ದೇವರಲ್ಲಿನ ನಂಬಿಕೆ, ಮತ್ತು ಭೂಮಿಯಲ್ಲಿ ನಾವು ಶ್ರದ್ಧೆಯಿಂದ ಮಾಡುವ ವ್ಯವಸಾಯ ಇದೇ ನನ್ನ ಆದರ್ಶ.

- *ಒಳ್ಳೆಯದು ಮುತ್ತಣ್ಣನವರೆ, ಇದುವರೆವಿಗೂ ನಿಮ್ಮ ವಿಚಾರಗಳನ್ನು ಹಂಚಿಕೊಂಡ್ರಿ. ನಮಸ್ಕಾರ.*

ವಂದನೆಗಳು.

30. ಶೀಗವಾಳು

ಎಸ್. ಮುರಳೀಧರ (ಹರಿ) ಇ/ಮ ಎಸ್.ಎನ್. ಶಿವರಾಮಯ್ಯ
ಸಾಲಿಗ್ರಾಮ ಹೋಬಳಿ, ಕೆ.ಆರ್.ನಗರ ತಾಲ್ಲೂಕು, ಮೈಸೂರು ಜಿಲ್ಲೆ- 571604
ದೂರವಾಣಿ: 08213 686026

ಈ ಊರಲ್ಲಿ ನನ್ನ ತಂದೆಯವರನ್ನು ಕಂಡ್ರೆ ಎಲ್ಲರಿಗೂ ಭಯ, ಭಕ್ತಿ, ತುಂಬಾ ಗೌರವ ಇತ್ತು. ಅವರ ವ್ಯಕ್ತಿತ್ವವೂ ಹಾಗೇ ಇತ್ತು. ಒಳ್ಳೆಯ ಆಜಾನುಬಾಹು ಅವರು. ಅಲ್ಲದೆ ನನ್ನ ತಂದೆ ಈ ಊರಲ್ಲಿ ಸುಮಾರು ಇನ್ನೂರರಿಂದ ಮುನ್ನೂರು ಸಾಲುಮರಗಳನ್ನು ಬೆಳೆಸಿದ್ರು.



ಎಚ್.ಎಸ್.ವಿಶಾಲಾಕ್ಷಿ-ಎಸ್.ಮುರಳೀಧರ ದಂಪತಿ: ಶೀಗವಾಳು

ಶೀಗವಾಳಿನ ಶಿವರಾಮಯ್ಯ ಹಾಗೂ ಬೆಟ್ಟದಪುರದ ಸಾವಿತ್ರಮ್ಮನವರಿಗೆ ನಾಲ್ಕು ಜನ ಗಂಡು ಮಕ್ಕಳು, ಹಾಗೇ ಐದು ಜನ ಹೆಣ್ಣುಮಕ್ಕಳು. ಕೊನೆಯ ಮಗನೇ ಎಸ್. ಮುರಳೀಧರ. ಇವರ ಪತ್ನಿ ಹೆಚ್.ಎಸ್.ವಿಶಾಲಾಕ್ಷಿ, ಬಸವಾಪಟ್ಟಣದ ಸಮೀಪವಿರುವ ಮೂಲೆಹೊಸಹಳ್ಳಿಯ ಸುಬ್ರಹ್ಮಣ್ಯ ಹಾಗೂ ದೊಡ್ಡಹನಸೋಗೆಯ ಲಕ್ಷ್ಮೀದೇವಮ್ಮ ದಂಪತಿಗಳ ಮಗಳು. ಎಸ್. ಮುರಳೀಧರ ಅವರಿಗೆ ಇಬ್ಬರು ಹೆಣ್ಣುಮಕ್ಕಳು. ಶೀಗವಾಳಿನಲ್ಲಿ ವಾಸವಾಗಿರುವ ಏಕೈಕ ಸಂಕೇತಿಗಳ ಕುಟುಂಬ ಹರಿ (ಮುರಳೀಧರ) ಅವರದ್ದೆ. ಬ್ರಾಹ್ಮಣರ ಇತರ ಪಂಗಡಗಳ ಜತೆ ಇವರ ಒಡನಾಟ ಆತ್ಮೀಯವಾಗಿದೆ. ಮೊದಲು ದೂರವಾಣಿಯ ಮುಖಾಂತರ ಮಾತನಾಡಿದಾಗ ಖಚಿತವಾಗಿ ದಿನ, ದಿನಾಂಕ, ಸಮಯವನ್ನು ಮುರಳೀಧರ್ ಅವರೇ ನಿಗದಿ ಮಾಡಿದರು. ಮಧ್ಯದಲ್ಲಿ ಮಾಹಿತಿಗಾಗಿ ಸಂಪರ್ಕಿಸಿದಾಗ ಅವರ ನೆನಪಿನ ಶಕ್ತಿ ಖಚಿತವಾಗಿತ್ತು. ಆ ದಿನ ನಾವು ಅವರ ಊರನ್ನು ತಲುಪುವುದು ತಡವಾಯ್ತು. ಸರಿಯಾದ ಸಮಯಕ್ಕೆ ನಾವೇ ಹೋಗದ್ದರಿಂದ, ನಮಗಾಗಿ ಕಾದ ಮುರಳೀಧರ್ ದೂರದ ತೋಟಕ್ಕೆ ಹೋಗಿದ್ದರು. ಕಡೆಗೆ ನಮಗಾಗಿ ವಾಪಸ್ಸು ಬಂದರು, ಬಂದವರೇ ನೀವು ನಿಮ್ಮ ಸಮಯ ಪರಿಪಾಲಿಸಲಿಲ್ಲವೆಂದ್ರು. ಅವರ ಸಮಯಪ್ರಜ್ಞೆ ನಮಗೆ ಮೆಚ್ಚುಗೆಯಾಯಿತು. ಮೊದಲು ಮಾತು, ನಂತರ ತೋಟ ಎಂಬ ನಿರ್ಧಾರವಾಯಿತು. ಮುರಳೀಧರ್ ಅವರ ಮಾತು ಆರಂಭವಾಯಿತು.

'ನನ್ನ ತಾತ ಲಕ್ಷ್ಮೀನಾರಾಯಣಪ್ಪ. ಅವರದ್ದು ಇಲ್ಲಿ ತೊಟ್ಟಿಮನೆ ಇತ್ತು. ಬೇಕಾದಷ್ಟು ರಾಸುಗಳನ್ನು ಕಟ್ಟಿದ್ರು. ವೈಭವವಾಗಿ ಬದುಕಿದ್ರು. ಹೆಚ್ಚು ಕಡಿಮೆ ಎಂಭತ್ತು ಎಕರೆ ಜಮೀನಿತ್ತು. ಅದೇ ಕಾಲದಲ್ಲಿ plague (ಪ್ಲೇಗ್) ಮಹಾಮಾರಿ ಬಂದು ನಮ್ಮ ಚಿಕ್ಕಪ್ಪ, ದೊಡ್ಡಪ್ಪ, ಅವರ ಮಕ್ಕಳು ತೀರಿಕೊಂಡು ಬಿಟ್ರು. ಆಗ ಊರ ಹೊರಗಡೆ ಗುಡಿಸಲು ಹಾಕಿ ವಾಸ ಮಾಡಿದ್ರಂತೆ. ಉಳಿದವರು ಕಾಲವಾಗಿ ನಮ್ಮ ತಾತನವರ ಮಕ್ಕಳಲ್ಲಿ ನಮ್ಮ ತಂದೆ ಶಿವರಾಮಯ್ಯನವರು ಮಾತ್ರಾ ಉಳಿದದ್ದು. ನನ್ನ ತಂದೆಯ ಅಭಿಪ್ರಾಯ ಏನಿತ್ತೂ ಅಂದ್ರೆ ನಮ್ಮನ್ನು ಯಾರನ್ನೂ ಶೀಗವಾಳಿಗೆ ಕರೆದುಕೊಂಡು ಬರಬಾರದು, ಯಾರೂ ಹಳ್ಳೀಲಿ ಇರಬಾರದು ಅಂತ. ಪ್ಲೇಗ್ ಬಂದು ಎಲ್ಲರೂ ತೀರಿಕೊಂಡು ಹೋದದ್ದನ್ನು ನೋಡಿದ್ದ ಅವರಿಗೆ ಮನಸ್ಸಿನಲ್ಲಿ ಭಯವಿತ್ತು. ನೀವು ಯಾರೂ ಇಲ್ಲಿ ಬರುವುದು ಬೇಡ, ನಾನೊಬ್ಬನೇ ಇಲ್ಲಿಯದನ್ನು maintain ಮಾಡ್ತೀನಿ ಅಂತ ಹೇಳಿ ನಮ್ಮನ್ನು ಮೈಸೂರಿನಲ್ಲಿ ಇಟ್ಟಿದ್ರು. ಸುಮಾರು ದಿನದವರೆಗೆ ನಮಗೆ ನಮ್ಮ ಹುಟ್ಟೂರು ಶೀಗವಾಳು ಯಾವುದು ಅಂತಾನೇ ಗೊತ್ತಿರಲಿಲ್ಲ. ನಾನು graduationವರೆಗೂ ಮೈಸೂರಿನಲ್ಲಿಯೇ ಓದಿದ್ದು. ನಾನು ಹುಟ್ಟಿದ್ದೂ ಮೈಸೂರಿನಲ್ಲಿಯೇ. ನಮ್ಮ ತಾಯಿ ಜತೆ ನಾವೆಲ್ಲಾ ಮೈಸೂರಿನಲ್ಲಿಯೇ ಇದ್ವಿ. ನನ್ನ ತಂದೆ ಮಾತ್ರ ಶೀಗವಾಳಿನಿಂದ, ಮೈಸೂರಿಗೆ ಓಡಾಡೋರು. ಶೀಗವಾಳಿನಲ್ಲಿ ಇದ್ದದ್ದು ನಮ್ಮದೊಂದೇ ಸಂಕೇತಿ ಕುಟುಂಬ. ನಾನು B.Com. ಓದಿದ ಮೇಲೆ ಸ್ವಲ್ಪ ದಿನ ಬೇರೆ ಕಡೆ



ಹಂಬಿಗೆ ನೀರು ಹಾಕುವ ಹಳೆಯ ರೀತಿ:ಎಸ್.ಮುರಳೀಧರ: ಶೀಗವಾಳು

ಕೆಲಸ ಮಾಡಿದೆ. ಭಗವಂತನ ಪ್ರೇರಣೆ ಏನಿತ್ತೋ ಏನೋ, ನನ್ನ ತಂದೆ ಕಾಲವಾದ ಬಳಿಕ ನಾನು ಶೀಗವಾಳಿಗೆ ಬಂದೆ. ನನ್ನ ಜೀವನ ಇಲ್ಲೇ ನಡೀಬೇಕು ಅಂತ ಇತ್ತೇನೋ.

ಇಲ್ಲಿ ಸಮೀಪದ ನೇರಳೆ ಗ್ರಾಮದಲ್ಲಿ ಅವರ ಕಾಲದಲ್ಲೂ ಎಂಭತ್ತು ಎಕರೆ ಜಮೀನು ಇತ್ತು. ಎಲ್ಲಾ ಹೊಲ ಜಮೀನು. ಈಗ ಅದು ಗದ್ದೆ ಆಗಿದೆ. ಬಾಗಾಯ್ತು, ಎಂಟು ಎಕರೆ ಇತ್ತು. ಈಗ ನಾವು ಮೂರು ಎಕರೆ ಉಳಿಸಿಕೊಂಡಿದೀವಿ ಅಷ್ಟೆ. ನನ್ನ ಅಕ್ಕಂದಿರ ಮದುವೇಗೆ ಜಮೀನನ್ನು ಮಾರಿದ್ರು ನನ್ನ ತಂದೆ. ನನ್ನ ತಂದೆ ಸ್ವಂತವಾಗಿ ದೈಹಿಕ ಶ್ರಮದಿಂದ ದುಡೀತಿರಲಿಲ್ಲ. ರೈತರನ್ನು ಇಟ್ಟುಕೊಂಡು ವ್ಯವಸಾಯ ಮಾಡ್ತಿದ್ರು. ಅವತ್ತು ನಮ್ಮ, ಅವರ ಸಂಬಂಧ ಹಾಗೇ ಇತ್ತು. ಹೇಳಿದ ಕೆಲಸ ಮಾಡಿಕೊಂಡು ಸಹಕರಿಸೋರು. ಬಾಗಾಯ್ತನ್ನು ಎಲ್ಲರಿಗೂ ಸ್ವಲ್ಪ ಸ್ವಲ್ಪ ಹಂಚಿಕೊಟ್ಟಿದ್ರು. ಅವರು ವ್ಯವಸಾಯ ಮಾಡೋರು. ನಮ್ಮ ತಂದೆ ನಿರ್ವಹಣೆ ಮಾಡೋರು. ನನ್ನ ತಂದೆ ವಿದ್ಯಾವಂತರು. ಅವರ ಚಿಕ್ಕಪ್ಪನ ಹೆಣ್ಣುಮಕ್ಕಳು ನಮಗೂ ಆಸ್ತಿ ಬರಬೇಕು ಅಂತ ಹಟ ಹಿಡಿದಿದ್ದರಿಂದ ಕೋರ್ಟು ಕಛೇರಿಗೆ ಅಂತ ಸುಮಾರು ಖರ್ಚು ಮಾಡಿದ್ರು. ಹಾಗಾಗಿ ಸುಮಾರು ಜಮೀನು ಪರಭಾರೆಯಾಯ್ತು.

ನಮ್ಮ ತಂದೆ ಸೋದರಮಾವ ಗೋವಿಂದರಾಯರು ಅಂತ ಇದ್ರಂತೆ. ಅವರು ದಿವಾನರು. ರಾಮನಾಥಪುರದ ಸಂತರ್ಪಣೇನ ಅವರು ನಡೆಸಿಕೊಂಡು ಹೋಗ್ತಿದ್ರಂತೆ. ಕುದುರೇ ಮೇಲೆ ಓಡಾಡೋರಂತೆ. ಇದು ಪೂರ್ವಿಕರ ಬಗ್ಗೆ ನಾವು ಕೇಳಿರುವ ವಿಚಾರ.

ನನ್ನ ತಂದೆಗೆ 'ಮಕ್ಕಳು ಓದಲಿ' ಅನ್ನುವ ಆಸೆಯಿತ್ತು. ಆದ್ರೆ ಜಮೀನು ಹಾಳಾಗುತ್ತಲ್ಲ ಅಂತ ನಾನು ಇಲ್ಲಿಗೆ ಬಂದು settle ಆದೆ. ನನ್ನ ಜಾತಕ ನೋಡಿದವರು ನೀರಿರುವ ಜಾಗದಲ್ಲಿ ಅದರ ಆಸರೇಲಿ ಇವರ ಜೀವನ ನಡೆಯುತ್ತೆ ಅಂತ ಹೇಳಿದ್ರಂತೆ. ನಾನು ಇಲ್ಲಿಗೆ ಬಂದಾಗ ನನ್ನ ತಾಯಿ ಸಹಾ ಜತೇಲಿದ್ರು. ಅವರು ನನಗೆ ಆಸರೆಯಾಗಿದ್ರಿಂದ ಜಮೀನು ಅಭಿವೃದ್ಧಿ ಮಾಡಲು ಅನುಕೂಲವಾಯ್ತು. ನನ್ನ ತಾಯಿಗೆ ವ್ಯವಸಾಯದಲ್ಲಿ ತುಂಬಾನೇ ಆಸಕ್ತಿ. ಅವರು ಬೆಟ್ಟದಪುರದ ಕೃಷಿ ಮನೆತನದವರು. ಹಾಗಾಗಿ ವ್ಯವಸಾಯದ ಅನುಭವಾನೂ ಇತ್ತು. ತೋಟ ಹಾಗೂ ಗದ್ದೇನ ನನ್ನ ತಂದೆ ನಾಲ್ಕಾರು ಜನ ರೈತರಿಗೆ ಹಂಚಿದ್ರು. ನಾನು ಬಂದ ಮೇಲೆ ಅದನ್ನು ಬಿಡಿಸಿಕೊಂಡೆ. ನನ್ನ ತಂದೆ ಊರಲ್ಲಿ ಸಾಲುಮರಗಳನ್ನು ಬೆಳೆಸಿದ್ರು. ಇನ್ನೂರರಿಂದ ಮುನ್ನೂರು ಸಾಲುಮರಗಳನ್ನು ಅವರು ಬೆಳೆಸಿದ್ದಾರೆ. ಕೆರೆಗೆ ಹೋಗುವ ದಾರೀಲಿ ದೊಡ್ಡದಾಗಿ ಬೆಳೆದಿತ್ತು. ನೆಲದ ಮೇಲೆ ಒಂದಿಷ್ಟು ಸೂರ್ಯನ ಕಿರಣ ಬೀಳ್ತಿರಲಿಲ್ಲ. ಅಷ್ಟರಮಟ್ಟಿಗೆ ಬೆಳೆದಿತ್ತು. ಸರ್ಕಾರದಿಂದ ಅವರಿಗೆ ಪುರಸ್ಕಾರಾನೂ ದೊರಕಿದೆ. ಆದ್ರೆ ಈಗ ಆ ಮರಗಳು ಇಲ್ಲ. ನನ್ನ ಅಣ್ಣನವರು ಒಬ್ರು ಇಲ್ಲಿ ಇದ್ರು, ಕೆಲವು ದಿವಸ. ಅವರಿಗೆ ನಿರ್ವಹಣೆ ಕಷ್ಟಸಾಧ್ಯವಾಯ್ತು. ನಂತರ ನಾನು ಬಂದೆ. ನಮ್ಮದು ದೊಡ್ಡ ತೊಟ್ಟಿಮನೆ, ದಿವಾನಖಾನೆ, ಕೊಟ್ಟಿಗೆ, ಹಜಾರ ಅಂತ ವಿಶಾಲವಾಗಿತ್ತು. ಅದನ್ನು ಕೆಡವಿಸಿದವನು ನಾನು. ಇಲ್ಲಿರುವ ರೈತರ ಜತೆ ಬೆರೆತು, ಅವರನ್ನು ಆಶ್ರಯಿಸಿ ವ್ಯವಸಾಯದ ವಿಚಾರಗಳನ್ನು ನಿಧಾನವಾಗಿ ತಿಳೀತಾ ಬಂದೆ. ನಾನೂ ಕೂಡ ಅವರ ನೆರವಿನಿಂದಲೇ ವ್ಯವಸಾಯ ಮಾಡ್ತಿರೋದು. ಇವತ್ತು ನಾನು ಒಂದು ಎಕರೆ ಗದ್ದೇನ ಮಾಡಿದೀನಿ, ತೋಟವನ್ನ ನಾನು ಸ್ವತಃ ನಿರ್ವಹಣೆ ಮಾಡ್ತಿದೀನಿ.

ನಮಗೆ ಈಗ ಮೂರೂ ಚಿಲ್ಲರೆ ಎಕರೆ ಜಮೀನು ಇದೆ. ಅದರಲ್ಲಿ ನಾವು ನಾಲ್ಕು ಜನ ಅಣ್ಣತಮ್ಮಂದಿರು ಪಾಲಾಗಿದ್ದೀವಿ. ಎಲ್ಲರ ಪಾಲನ್ನೂ ಸಹ ನಾನೇ ನಿರ್ವಹಣೆ ಮಾಡ್ತಿದೀನಿ. ಗದ್ದೆ ಎಂಟು ಎಕರೆ ಇದೆ. ಅದು ಕೂಡ ಪಾಲಾಗಿದೆ. ಹೊಲಜಮೀನನ್ನೆಲ್ಲಾ ಮಾರಿದೀವಿ. ತೋಟದಲ್ಲಿ ಅಡಿಕೆ, ತೆಂಗು, ಬಾಳೆ ಇದೆ. ಹಾರಂಗಿ ನೀರು, ಕೆರೆ ನೀರು ಇದ್ರೆ ಭತ್ತ ಆಗುತ್ತೆ. ನಮ್ಮ ಜಮೀನಿರೋದು ಕೆರೆ ಕೆಳಗಡೆ. ಮಳೆ

ಚೆನ್ನಾಗಿ ಆದರೇ ಕೆರೆ ತುಂಬೋದು, ಭತ್ತ ಆಗೋದು.



ಅಡಿಕೆ ತೋಟದಲ್ಲೊಂದು ಕದಲೀವನ: ಎಸ್.ಮುರಳೀಧರ: ಶೀಗವಾಳು

ನಮ್ಮ ಪೂರ್ವಿಕರು ಸ್ಥಾಪಿಸಿದ ತೋಟದಲ್ಲಿ ನಾನು ಹೊಸದಾಗಿ, ಗಿಡಗಳನ್ನು ಎಬ್ಬಿಸಿ ಅಭಿವೃದ್ಧಿಪಡಿಸಿದೀನಿ. ತೋಟಕ್ಕೆ ಚೆನ್ನಾಗಿ ಗೊಬ್ಬರ, ಗೋಡನ್ನು ಹೇರಬೇಕು. ಇವತ್ತು ಕೂಲಿಯಾಳಿನ ಸಮಸ್ಯೆ ವಿಪರೀತ. ಆದರೂ ನಾನು ತುಂಬಾ ಮುತುವರ್ಜಿ ಇಟ್ಟು ವ್ಯವಸಾಯ ಮಾಡ್ತಿರೋದರಿಂದ ಫಸಲು ಚೆನ್ನಾಗಿ ಸಿಗ್ತಿದೆ. ನಾನು ಅಡಿಕೆ ತೋಟಕ್ಕೆ ಕೃತಕ ರಾಸಾಯನಿಕ ಗೊಬ್ಬರವನ್ನೂ ಹಾಕ್ತೀನಿ. ವಾರಕ್ಕೆ ಎರಡು ಸರಿ ಸೀಮೆಎಣ್ಣೆ pumpನಿಂದ ನೀರು ಕೊಡ್ತೀನಿ. ತೋಟದಲ್ಲಿ ಎಲೆ ಹಂಬಿದೆ. ಬಾಳೆ ಇದೆ. ತೆಂಗು ತೋಟದ ಸುತ್ತಾ ಇದೆ. ನೇರಳೆಮರ, ಹಲಸಿನಮರ ಎಲ್ಲವನ್ನೂ ಬೆಳೆಸಿದೀನಿ.

ನಾನು ಸ್ವಂತವಾಗಿ ಒಂದು ಎಕರೆ ಗದ್ದೆ ಮಾಡ್ತಿದೀನಿ. ನನ್ನ ಅಣ್ಣತಮ್ಮಂದಿರದ್ದು ವಾರ, ಗುತ್ತಿಗೆ ಅಂತ ಕೊಟ್ಟಿದಾರೆ. ಉಳುವವನಿಗೇ ಭೂಮಿ ಕಾನೂನಿನಲ್ಲಿ ನಮ್ಮ ಜಮೀನು ಹೋಗಲಿಲ್ಲ. ಆದ್ರೆ ತೋಟದಲ್ಲಿ ನಾನು ಸ್ವತಃ ಕೆಲಸ ಮಾಡಿದ್ದು ಕಡಿಮೇನೆ. ಆದಿಯಿಂದಲೂ ಜಮೀನಿನಲ್ಲೇ ಇದ್ದಿದ್ರೆ ಬಂದಿರೋದೇನೋ. ನಾನು ಮಧ್ಯಾಂತರದಲ್ಲಿ ವ್ಯವಸಾಯಕ್ಕೆ ಬಂದಿದ್ರಿಂದ ಅಭ್ಯಾಸ ಆಗಲಿಲ್ಲ. ಪೂರ್ಣವಾಗಿ ಆಳುಗಳ ಮೇಲೆ depend ಆಗಿ, ನಿಂತು ಮಾಡಿಸಿದ್ದು, ಉಸ್ತುವಾರಿ ನೋಡಿದ್ದು ಅಷ್ಟೆ. ನಮ್ಮ ತಂದೆಯವರ ಕಾಲದಲ್ಲಿ ರೈತರೆಲ್ಲಾ ತುಂಬಾ ಕ್ರಿಯವಾಗಿದ್ದು, ಪ್ರಾಮಾಣಿಕವಾಗಿದ್ರು. ಹಾಗಾಗಿ ಅವರಿಗೆ ಯಾವ ಸಮಸ್ಯೇನೂ ಆಗಿರಲಿಲ್ಲ. ಇವತ್ತಿನ ಕಾಲದಲ್ಲಿ ಕಷ್ಟ ಅಷ್ಟೆ. ಕ್ರಿಯೆ ಇಟ್ಟುಕೊಂಡಿದ್ರು.

ಹಿಂದೆ ಹತ್ತು ರೂಪಾಯಿ ಕೊಡ್ತಾ ಇದ್ರು ಒಬ್ಬ ಆಳಿಗೆ. ಇವತ್ತು ಐವತ್ತು ನೂರು ಕೊಟ್ರೂ ಅವತ್ತಿನ ಹತ್ತು ರೂಪಾಯಿ ಕೆಲಸ ಮಾಡೋದಿಲ್ಲ. ಹಾಗಿದೆ ಪರಿಸ್ಥಿತಿ. ನಾನು ಸ್ವತಃ ತೋಟದಲ್ಲಿ ಪರಿಶ್ರಮ ಪಡದೇ ಇದ್ದುದರಿಂದ, ಉಳಿದ ಸಮಯದಲ್ಲಿ, ಇಲ್ಲಿ ಒಂದು ಹಾಲಿನ ಸಹಕಾರ ಸಂಘ ಇತ್ತು. ಅದರ ಕಾರ್ಯದರ್ಶಿಯಾಗಿದ್ದೆ. ಅದನ್ನು ನಾವೇ ಸ್ಥಾಪಿಸಿದ್ದು. ನಾನು ಅದರ founder member. ಜನರಿಂದ ಶೇರು ಹಣ ಸಂಗ್ರಹಿಸಿ ಅದನ್ನು DCC ಬ್ಯಾಂಕಿಗೆ ಕಟ್ಟಿದ್ದು. ಡೈರಿವತಿಯಿಂದ ನಮಗೆ material ಎಲ್ಲಾ ಬಂತು. ಒಂದು fine day 'ನೀವು ಡೈರಿ ಆರಂಭಿಸಬಹುದು' ಅನ್ನುವ ಅನುಮತಿ ದೊರೀತು. ನಾನೇ ಆರಂಭದಲ್ಲಿ ಕಾರ್ಯದರ್ಶಿಯಾದೆ. ಸುತ್ತಮುತ್ತಲಿಂದ ಹಾಲು ತಂದು ಹಾಕೋರು. ಆಗ ಐವತ್ತು, ಅರುವತ್ತು ಲೀಟರ್ ಹಾಲು ಬರೋದು. ನಾನು ಸುಮಾರು ಐದಾರು ವರುಷ ನಡೆಸಿದೆ. ನಂತರ ಯಾರೋ ಮುಂದುವರಿಸಿದ್ರು. ಈಗ ನಮ್ಮೂರಲ್ಲಿ ಡೈರಿ ನಡೀತಿಲ್ಲ. ಜನರ ಸಹಕಾರ ಸರಿ ಇಲ್ಲದೆ ನಿಂತು ಹೋಯ್ತು.



ಹಳೆಯ ಅಡಿಕೆ ಮರಗಳಿಗೆ ಪರ್ಯಾಯವಾಗಿ ಹೊಸ ಸಸಿಗಳು: ಶೀಗವಾಳು

ಈ ಊರಲ್ಲಿ ಬ್ರಾಹ್ಮಣರದ್ದು ಹತ್ತು ಒಕ್ಕಲಿದೆ. ಇಲ್ಲಿ ನಮಗೆ ಇತರರಿಂದ ಕಿರುಕುಳ ಅಷ್ಟಾಗಿ ಇಲ್ಲ. ಸಣ್ಣಪುಟ್ಟದು ಇದ್ದೇ ಇರುತ್ತೆ. ಆದರೆ ನಾವೇ ಪರಿಹರಿಸಿಕೊಳ್ತೀವಿ. ನಾವು ಬ್ರಾಹ್ಮಣರೆಲ್ಲಾ ಒಟ್ಟಾಗಿ ಇದೀವಿ. ಯಾವುದೇ ಕೆಲಸ ಆದ್ರೂ ಎಲ್ಲರೂ ಸೇರ್ತೀವಿ. ವ್ಯವಸಾಯದ ಕೆಲಸದಲ್ಲಿ ಪರಸ್ಪರ ಸಹಕಾರ ಇರದೇ ಹೋದ್ರೂ, ಆಳುಕಾಳು ಬೇಕಾದ್ರೆ ಒದಗಿಸಿಕೊಡ್ತಾರೆ. ಮನೇಲಿ ಸಭೆ ಸಮಾರಂಭಗಳಾದಾಗ ಸಹಕರಿಸ್ತಾರೆ, ಸಲಹೆಗಳು ಬೇಕಾದಾಗ ಕೇಳಿದ್ರೆ ಹೇಳ್ತಾರೆ. ಹೊಂದಿಕೊಂಡು ಹೋಗ್ತಿದೀವಿ.

ಮೊದಲು ನಮ್ಮದು ತೊಟ್ಟಿಮನೆ ಇದ್ದಾಗ ಎಮ್ಮೆ ಹಸು ಬೇಕಾದಷ್ಟು ಇತ್ತು. ಈಗ ನಮ್ಮ ಮನೇಲಿ ಇಲ್ಲ ಅಷ್ಟೆ. ಯಾಕೇಂದ್ರೆ ಈಗ ನನ್ನ ಸಂಸಾರ ಇಲ್ಲಿ ಒಂದು ಕಾಲು, ಬೆಂಗಳೂರಿನಲ್ಲಿ ಒಂದು ಕಾಲು ಅನ್ನುವ ಹಾಗಿದೆ. ನನಗೆ ಇಬ್ಬರು ಹೆಣ್ಣುಮಕ್ಕಳು. ಅವರು ಬೆಂಗಳೂರಿನಲ್ಲಿ ಓದ್ತಾ ಇದಾರೆ. ದನಕರು ಇದ್ರೆ ನಮಗೆ ಬಿಟ್ಟುಹೋಗೋದು ಕಷ್ಟ. ಆಳುಕಾಳು ನಂಬಿ ಬಿಟ್ಟು ಹೋಗೋಕೆ ಆಗೋಲ್ಲ. ನನ್ನ ಹೆಂಡತಿಗೆ ಇವತ್ತಿಗೂ ಇಷ್ಟ. ಆದ್ರೆ ಅದನ್ನು ನೋಡೋಕೆ ಒಬ್ಬ ಆಳು ಆಗಬೇಕು. ಹಾಗಾಗಿ ದನಕರು ಇಟ್ಟಿಲ್ಲ.

ನನ್ನ ಹೆಂಡತಿ ಬೆಂಗಳೂರಿನವಳು. ಅವಳು cityಲಿ ಬೆಳೆದವಳು. ನಾನು ಮದುವೆಯಾಗುವ ಮೊದಲು ಅವಳನ್ನು ನೀನು ಹಳ್ಳೀಲಿ ಬಂದು ಇರ್ತೀಯಾ ಅಂತ ಕೇಳಿದೆ - ನಾನು ಇರುವುದು ಹಳ್ಳೀಲಿ, ಹಳ್ಳಿಯ ಜೀವನ ನಿನಗೆ ಇಷ್ಟವಾ ಅಂತ. ಅವಳು ಇಷ್ಟಪಟ್ಟು ಬಂದಳು. ಇವಳು ಬಂದ ಮೇಲೂ, ಊರ ಜನ ಹೇಳ್ತಾ ಇದ್ರು, ಇವರು ನಿಜವಾಗಿ ಹಳ್ಳೀಲಿ ಇರೋದಿಲ್ಲ, ಯಜಮಾನರನ್ನು ಕರೆದುಕೊಂಡು ಬೆಂಗಳೂರಿಗೇ ಹೋಗ್ತಾರೆ ಅಂತ. ಆದ್ರೆ ಆ ರೀತಿ ಆಗಲಿಲ್ಲ. ನನ್ನ ಹೆಂಡತಿ ಇಲ್ಲಿನ ಜೀವನಕ್ಕೆ ಒಗ್ಗಿಕೊಂಡು, ನನಗೆ ಸಹಕಾರ ನೀಡುತ್ತಾ ಬಂದಿದಾಳೆ. ಮುತುವರ್ಜಿ ವಹಿಸಿ ರೈತರನ್ನು ನೋಡಿಕೊಳ್ತಾಳೆ. ಊಟ, ತಿಂಡಿ ಸಮಯಕ್ಕೆ ಮಾಡಿಕೊಡ್ತಾಳೆ. ಕೆಲವೊಮ್ಮೆ ಗದ್ದೆ ಹತ್ರಾನೂ ಬರ್ತಾಳೆ. ನಾನು ಬೇರೆ ಕೆಲಸದ ಮೇಲೆ ಹೊರಗೆ ಹೋದಾಗ ತೋಟಾನೂ ನೋಡಿಕೊಂಡಿದಾಳೆ. ಮಕ್ಕಳನ್ನು ಬೆಂಗಳೂರಿನಲ್ಲಿ ಬಿಟ್ಟು ಓದಿಸುವಾಗಲೂ ಅವಳು ಇಲ್ಲಿ ನನ್ನ ಜತೇಲೇ ಇದ್ದು ಕುಟುಂಬ ನಿರ್ವಹಣೆ ಮಾಡಿದಾಳೆ. ಹೆಂಡತಿ ಅಂದ್ರೆ ನನಗೆ ಹೆಮ್ಮೆ. ನನ್ನ ಮದುವೆ ಸಂದರ್ಭದಲ್ಲಿ ಹಳ್ಳಿಗೆ ಹೆಣ್ಣು ಕೊಡಲು ತೊಂದರೆ ಇರಲಿಲ್ಲ. ಈಗೀಗ ತೊಂದರೆ ಆಗ್ತಿದೆ. ಅದನ್ನು ನಾವು ನೋಡ್ತಿದೀವಿ. ಆದ್ರೆ ನಾನು ನೋಡಿದ್ದೇ ಇವಳನ್ನು... ಮದುವೆಯಾದದ್ದೇ ಇವಳನ್ನು.


ಸೊಂಪಾದ ಹಂಬು, ರೈತನ ಸಂತೋಷ; ಎಸ್.ಮುರಳೀಧರ: ಶೀಗವಾಳು

ನನ್ನ ನಂತರದ ಕೃಷಿ ಯಾರು ಮಾಡ್ತಾರೆ ಅನ್ನುವುದೇ ಈಗ ನಿಜವಾದ ಸಮಸ್ಯೆ ಆಗಿದೆ. ನನಗಿರೋದು ಹೆಣ್ಣುಮಕ್ಕಳು. ಮುಂದೆ ಏನೋ ಗೊತ್ತಿಲ್ಲ. ನನಗೆ ನನ್ನ ಹೆಣ್ಣುಮಕ್ಕಳನ್ನು ರೈತನಿಗೆ ಕೊಡೋದು ಇಷ್ಟ ಇಲ್ಲ. ಯಾಕೇಂದ್ರೆ ಅವರು cityಲಿ ಇದಾರೆ, ತುಂಬಾ ಮುಂದುವರೆದಿದಾರೆ. ಮದುವೆ ಅಂದಾಗ ಅವರು ಹಳ್ಳಿಗೆ ಬರಲು ಇಷ್ಟಪಡೋದಿಲ್ಲ. ಒಟ್ಟಾರೆ ಹೇಳೋದಾದ್ರೆ ಅವರ‍್ಯಾರೂ ಇಲ್ಲಿಗೆ ಬರೋದಿಲ್ಲ. ಹಳ್ಳೀಲಿ ಇರೋದಿಲ್ಲ. ಮುಂದೆ ಒಂದಾನೊಂದು ಕಾಲದಲ್ಲಿ ನಾನೂ ಸಹ ಈ ಜಮೀನನ್ನೆಲ್ಲಾ ಮಾರಿ ಪಟ್ಟಣ ಸೇರುವ ಅಭಿಲಾಷೇನೂ ಇದೆ. ಒಳ್ಳೆಯ ಧಾರಣೆ ಸಿಕ್ಕರೆ ಜಮೀನು ಮಾರುವ ಉದ್ದೇಶ ಇದೆ ನನಗೆ. ನನ್ನ ಅಣ್ಣತಮ್ಮಂದಿರ ಮಕ್ಕಳೂ ಕೆಲಸಕಾರ್ಯ ಮಾಡಿಕೊಂಡು ಪೇಟೆ ಪಟ್ಟಣದಲ್ಲಿ ಇದಾರೆ. ಅವರ‍್ಯಾರೂ ಶೀಗವಾಳಿಗೆ ಬರೋದಿಲ್ಲ. ವ್ಯವಸಾಯ ಮುಂದುವರಿಸೋಲ್ಲ. ಆದ್ರೆ ನಾನು ಇಲ್ಲಿ ಇದ್ದಷ್ಟು ದಿವಸ ವ್ಯವಸಾಯ ಚೆನ್ನಾಗಿ ನಡೆಸಿಕೊಂಡು ಹೋಗ್ತೀನಿ. ಅಷ್ಟು ಹೇಳಬಹುದು.

ನನ್ನ ಮದುವೆಗಿಂತ ಮುಂಚಿತವಾಗಿ ನಾನು ಇಲ್ಲಿ ಬಂದಿದ್ದಾಗ, ಒಬ್ಬಂಟಿಗನಾಗಿ ವ್ಯವಸಾಯದ ಕೆಲಸ ಮಾಡ್ತಿರುವಾಗ ಯಾಕಾದ್ರೂ ಹಳ್ಳಿಗೆ ಬಂದೆನೋ ಅನ್ನಿಸ್ತಿತ್ತು. ಆಗ ಇನ್ನೂ ನನ್ನ ವ್ಯವಸಾಯದ ಜೀವನದ ಆರಂಭ ಆಗಿತ್ತು. ಊಟ ತಿಂಡಿಗೆ ಬಹಳ ತೊಂದರೆ ಆಗಿತ್ತು.

ಹಳ್ಳಿಜೀವನ ಕಷ್ಟ, ಇಲ್ಲಿ ಇರಲು ಆಗೊಲ್ಲ ಅಂತ ಅನ್ನಿಸ್ತಿತ್ತು. ನನ್ನ ಮದುವೆ ಆದ ಬಳಿಕ ಎಲ್ಲವೂ ಸರಿಯಾಯ್ತು. ವ್ಯವಸಾಯದ ಜೀವನ ನನ್ನ ಬದುಕಿನಲ್ಲಿ ತೃಪ್ತಿ ನೆಮ್ಮದಿ ನೀಡಿತು. ವ್ಯವಸಾಯದ ಅಭಿವೃದ್ಧಿಯನ್ನು ಇನ್ನೂ ಮಾಡಬೇಕು ಅನ್ನುವ ಮನಸ್ಸಿದೆ. ನನ್ನ ಅಣ್ಣತಮ್ಮಂದಿರೂ ಸಹಕರಿಸ್ತಾ ಇದಾರೆ. ನಾನು ನಂಬಿದ ಭೂಮಿ ಇದುವರೆವಿಗೂ ನನ್ನ ಕೈಬಿಟ್ಟಿಲ್ಲ. ಮುಂದೇನಾಗುತ್ತೋ ಗೊತ್ತಿಲ್ಲ' ಅಂತ ಹೇಳಿ ಮಾತು ಮುಗಿಸಿದ್ರು ಮುರಳೀಧರ್.

ತೋಟ ಬಳಸಿ ಸಿಹಿಯಾದ ಎಳನೀರು ಕುಡಿದು, ಅಚ್ಚುಕಟ್ಟಾದ ನಿರ್ವಹಣೇನ ಮೆಚ್ಚಿ ಮನೆಗೆ ಬರುವಷ್ಟರಲ್ಲಿ ಅಡುಗೆ ತಯಾರಿತ್ತು. ನೀವು ತೆಗೆದ photoಗಳ ಕಾಪಿ ನನಗೆ ಸಹಾ ಬೇಕು ಅಂದ್ರು ಮುರಳೀಧರ್. ಭರ್ಜರಿ ಊಟವಾದ ಮೇಲೆ ಊರಿನ ಇತರೇ ಕೃಷಿಕರನ್ನು ಭೇಟಿ ಮಾಡಿದೆವು. ಮುರಳೀಧರ್ ಅವರೂರಿನಿಂದ ಹೊರಟಾಗ ಸಂಜೆಯ ಸಮಯ. ಜಪದ ಕಟ್ಟೆಯ ಬಳಿ ತಣ್ಣಗೆ ಹರೀತಿದ್ದ ಕಾವೇರಿಯನ್ನು ನೋಡುವ ಆಸೆ ಬಂತು. ಜತೇಲಿದ್ದ ಪ್ರಕಾಶ್ ಮಾರ್ಗದರ್ಶಕರಾದ್ರು. ಇದೇ ಜಪದ ಕಟ್ಟೇಲಿ ಒಂದು ಕಾರ್ಯಕ್ರಮ ಇಟ್ಟುಕೊಂಡಿದೀವಿ, ಹವನ, ಹೋಮ ಜರುಗುತ್ತೆ, ನೀವು ಬರಬೇಕು ಅಂತ ಮುರಳೀಧರ್ ಅವರು ಕೊಟ್ಟ ಆಹ್ವಾನ ಪತ್ರಿಕೆಯ ನೆನಪಾಯ್ತು. ಮನಸ್ಸಿಗೆ ಮುದನೀಡುವ ಈ ಪರಿಸರ, ಜೀವನದಿ ಕಾವೇರಿ, ಕೃಷಿ ಎಲ್ಲವನ್ನೂ ಬಿಟ್ಟು ಹೋಗಲು ಮನಸ್ಸಾದರೂ ಹೇಗೆ ಬರುತ್ತೆ ಅಂತ ಮನಸ್ಸು ಯೋಚಿಸುತ್ತಿತ್ತು. ಆಲೋಚನಾ ಸರಣಿಗೆ ಭಂಗ ತಂದದ್ದು ಮೀನಿನಮರಿಗಳು. ತಿಳಿನೀರಲ್ಲಿ ಕಾಲನ್ನು ಬಿಟ್ಟು, ತಂಪಾದ ಗಾಳಿಗೆ ಮುಖವೊಡ್ಡಿ ಕುಳಿತಿದ್ದ ನಮ್ಮನ್ನು ಎಚ್ಚರಿಸಿದ್ದು ಕಾಲನ್ನು ಕೆರೆದ ಮೀನುಗಳು. ಕಾಲ ಬಳಿ ಅಸಂಖ್ಯಾತ ಮೀನುಗಳಿದ್ದು. ಅವುಗಳ ಕೆರೆತವೂ ಹಿತವಾಗಿತ್ತು. ಆ ಪರಿಸರ ಬಿಡುವ ಮನಸ್ಸಾಗಲಿಲ್ಲ... ಪ್ರಕಾಶ್ ಮುಂದಿನದನ್ನು ನೆನಪಿಸಿದಾಗ ಬಿಟ್ಟು ಬರಲೇಬೇಕಾಯ್ತು. ಎರಡು ದಿನಗಳ ಕಾಲ ಜತೇಲಿದ್ದು ಓಡಾಡಿ, ಅಗತ್ಯ ನೆರವು ನೀಡಿದ ಬಸವಾಪಟ್ಟಣದ ಕಾಶೀಪತಯ್ಯ(ಪ್ರಕಾಶ್) ಅವರಿಗೆ ವಂದಿಸಿ ಬಸವಾಪಟ್ಟಣ ಬಿಟ್ಟಾಗ ಸಂಜೆಯ ಸಮಯ.

31. ಆಲನ್‌ದಡಕ

ಎಂ.ಎಸ್. ರವೀಂದ್ರ

ರಾಘುವೇಂದ್ರ ಕೃಪ, ಆಲನ್‌ದಡಕ (Alandadaka)

ಕಡಿರುದ್ಯಾವರ (Kadirudyavara)

ಬೆಳ್ತಂಗಡಿ (ತಾ)ದಕ್ಷಿಣ ಕನ್ನಡ - 574 280

ದೂರವಾಣಿ: 08256 - 274209

ನಂ.೧೬೬, ೧೧ನೇ ಮೈನ್, ನಾಗೇಂದ್ರ ಬ್ಲಾಕ್, ಬನಶಂಕರಿ, ೩ನೇ ಹಂತ, ಬೆಂಗಳೂರು - ೫೦.

ದೂರವಾಣಿ: 080-26728474 ಕರವಾಣಿ: 9845466388

ವ್ಯವಸಾಯದಲ್ಲಿ ಯಾವಾಗಲೂ ಹೊಸ ವಿಚಾರಗಳನ್ನು ಅಳವಡಿಸಲೂ.... ಅನ್ವೇಷಣೆ ಮಾಡಲೂ ಬಹಳ ಮಾರ್ಗಗಳಿವೆ. ಅದನ್ನು ಮಾಡಲು ಹೆದರಬಾರದು. ಪ್ರಯತ್ನ ಮಾಡಿದ್ರೆ ಒಂದಲ್ಲಾ ಒಂದು ದಿನ ಯಶಸ್ಸು ಸಿಕ್ಕೇ ಸಿಗುತ್ತೆ. ಫಲಿತಾಂಶ ಉತ್ತಮವಾದದ್ದೇ ದೊರೆಯುತ್ತೆ. ಆದ್ರೆ ಯಾವುದೂ ತಕ್ಷಣ ದೊರೆಯುವುದಿಲ್ಲ. ಒಂದು ನಿರ್ದಿಷ್ಟವಾದ ಸಮಯ ಆದ ಬಳಿಕವೇ ಸಿಗೋದು. ಆದರೆ ಅಲ್ಲಿ ಯವರೆವಿಗೆ ಕಾಯುವ ತಾಳ್ಮೆ ನಮ್ಮಲ್ಲಿ ಇರಬೇಕು ಅಷ್ಟೆ.

'ಅನೇಕ ಸಂಕೇತಿ ಕೃಷಿಕರನ್ನು ನೀವು ಭೇಟಿ ಮಾಡಿದೀರಿ. ಮೂಲತಃ ಸಂಕೇತಿಗಳು ಇದ್ದದ್ದು ಕೇರಳ, ತಮಿಳುನಾಡಿನ ಘಟ್ಟಗಳಲ್ಲಿ. ಅದರ ನೆನಪಿಗಾಗಿಯೇನೋ ಎಂಬಂತೆ ಬೆಳ್ತಂಗಡಿ ಹತ್ತಿರ, ರವೀಂದ್ರ ಅನ್ನುವವರು ಜಮೀನು ಮಾಡಿದಾರೆ, ಅಡಿಕೆ ಬೆಳೆದಿದಾರೆ. ನೀವೊಮ್ಮೆ ಅಲ್ಲಿಗೆ ಹೋಗಿ ಬರಲೇಬೇಕು' ಎಂದು ಪ್ರಣತಾರ್ತಿಹರನ್ ಪ್ರೀತಿಪೂರ್ವಕವಾಗಿ ತಿಳಿಸ್ತಾನೇ ಇದ್ರು. ಕಾಲ ಕೂಡಿ ಬರಲಿಲ್ಲ. ಆದ್ರೆ

ಒಂದು ದಿನ ಭೇಟಿ ಮಾಡಲೇಬೇಕೆಂದು ನಿರ್ಧರಿಸಿ, ಹಿರಿಯರಾದ ಬಿ.ವಿ. ವೆಂಕಟನಾರಾಯಣ ಅವರ ಜತೆ ಸೇರಿ ಮೈಸೂರು ಬಿಟ್ಟಾಗ ರಾತ್ರಿಯಾಗಿತ್ತು. ಮಾರನೆ ದಿನ ಬೆಳಗ್ಗೆ ಮೊದಲು ನಾವು ತಲುಪಿದ್ದು ಧರ್ಮಸ್ಥಳಾನ. ನಿತ್ಯಕರ್ಮಗಳನ್ನು ಮುಗಿಸಿ, ಮಂಜುನಾಥನ ದರ್ಶನವನ್ನು ಪಡೆದಾಗ ನಮ್ಮ ಕೆಲಸ ಸುಸೂತ್ರವಾಗಿ ಆಗುತ್ತೆ ಅನ್ನಿಸಿತು. ಧರ್ಮಸ್ಥಳದ ಸಮೀಪವಿರುವ ಉಜಿರೆಗೆ ಹತ್ತಿರದಲ್ಲಿದೆ ರವೀಂದ್ರ ಅವರ ತೋಟ. ಉಜಿರೆಯಲ್ಲಿ ನಾವು ರವೀಂದ್ರ ಅವರಿಗೆ ಕಾಯುತ್ತಿರುವಾಗ ನಮ್ಮನ್ನು ಬರಮಾಡಿಕೊಂಡಿದ್ದು, ಎಂ.ಸಿ. ಗಿರೀಶ್ ಹಾಗೂ ಶೀಲಾ ಅಯ್ಯರ್ ದಂಪತಿಗಳು. ನಮಗೆ ಆಶ್ಚರ್ಯವಾಯ್ತು. ನಿಧಾನವಾಗಿ ಗಿರೀಶ್ ಮಾತನಾಡತೊಡಗಿದರು.

ಎಂ.ಸಿ. ಗಿರೀಶ್, ರವೀಂದ್ರ ಅವರ ಚಿಕ್ಕಪ್ಪನವರಾದ ಎಂ.ಎಸ್. ಚಿಂತಾಮಣಿ ಅವರ ಮಗ. ವಿದೇಶದಲ್ಲಿದ್ದು, ಸಂಪಾದಿಸಿ ಈಗ ಭಾರತಕ್ಕೆ ಬಂದಿದ್ದಾರೆ. ಅವರ ಪತ್ನಿ ಶೀಲಾ, ಬೆಂಗಳೂರಿನ ISROದಲ್ಲಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅಣ್ಣ ರವೀಂದ್ರ ಅವರ ಜಮೀನು ನೋಡಿದ ಮೇಲೆ ವ್ಯವಸಾಯದ ಮೇಲೆ ಮನಸ್ಸಾಗಿದೆ. ಹಾಗಾಗಿ ರವೀಂದ್ರ ಅವರ ಜಮೀನಿನ ಹತ್ತಿರ ಅಂದ್ರೆ ಮುಂಡಾದೆ ಗ್ರಾಮದ ಚಿನ್ನಿಗುಡ್ಡೆಯಲ್ಲಿ ಹನ್ನೊಂದೂ ಕಾಲು ಎಕರೆ ಜಮೀನು ಖರೀದಿಸಿದ್ದಾರೆ. ಅಲ್ಲಿಯೇ ಒಂದು ತೊಟ್ಟಿ ಮನೆ ಸಹಾ ಕಟ್ಟಿದ್ದಾರೆ. ನಾವು ರವೀಂದ್ರ ಅವರನ್ನು ನೋಡಬೇಕೆಂದು ಹೋದ ದಿನವೇ ಗಿರೀಶ್ ಅವರ ಮನೆಯಲ್ಲಿ ಸಣ್ಣ ಪೂಜೆ ಏರ್ಪಾಡಾಗಿತ್ತು. ಪೂಜೆ ಸಾಮಾನಿನ ಖರೀದಿಗೆಂದು ಬಂದ ಗಿರೀಶ್ ಹಾಗೇ ಉಜಿರೆಯಿಂದ ನಮ್ಮನ್ನು ಕರೆದೊಯ್ಯಲು ಬಂದಿದ್ದರು. 'ಒಬ್ಬ' ವ್ಯವಸಾಯಸ್ಥರನ್ನು ಭೇಟಿ ಮಾಡಲು ಬಂದರೆ ಇಬ್ಬರು ದೊರೆತರಲ್ಲಾ ಎಂಬ ಸಂತೋಷ ನಮಗೆ. ಎಂ.ಸಿ. ಗಿರೀಶ್ ಮತ್ತೊಂದು ವಿಚಾರ ತಿಳಿಸಿದರು. ನಾನು ಹಾಗೂ ನನ್ನ ತಮ್ಮ ಎಂ.ಸಿ. ವೆಂಕಟೇಶ್ ಇಬ್ಬರೂ ಸೇರಿ ಇಲ್ಲಿ ನೆಲೆಸಿ ವ್ಯವಸಾಯ ಮಾಡುತ್ತೇವೆ ಅಂತ. ಸಂಕೇತಿ ಆಲದಮರದ ಬಿಳಿಲುಗಳು ಇಲ್ಲೂ ನೆಲೆಯೂರುವುದು ಖಚಿತ ಎಂದು ನನಗೆ ಅನ್ನಿಸಿತು.

ರವೀಂದ್ರ ಅವರ ಮನೆಗೆ ಬಂದಾಗ ನಮಗೆ ಆತ್ಮೀಯ ಸ್ವಾಗತ ದೊರೆಯಿತು. ಮನೆಯಲ್ಲಿ ಹಬ್ಬದ ವಾತಾವರಣ. ಗಿರೀಶ್ ಅವರ ಮನೆ ಸಮಾರಂಭಕ್ಕೆ ಸಡಗರ ಕಾಣುತ್ತಿತ್ತು. ತಿಂಡಿಯಾದ ಬಳಿಕ ರವೀಂದ್ರ ಅವರ ಚಿಕ್ಕಪ್ಪನವರಾದ ಎಂ.ಎಸ್. ಚಿಂತಾಮಣಿ ಮಾತು ಆರಂಭಿಸಿದರು.

ಬೆಟ್ಟದಪುರದ ಬಿ.ಕೆ.ಸುಬ್ಬರಾವ್ ಹಾಗೂ ರುದ್ರಪಟ್ಟಣದ ವೆಂಕಟರಾಯಪ್ಪನವರ ದೊಡ್ಡಮಗಳು ಸಾವಿತ್ರಮ್ಮ ದಂಪತಿಗಳ ಹಿರಿಯ ಮಗನೇ ಎಂ.ಎಸ್.ಶ್ರೀಕಂಠಯ್ಯ. ಕಿರಿಯ ಮಗ ಎಂ.ಎಸ್.ಚಿಂತಾಮಣಿ. ಎಂ.ಎಸ್.ಶ್ರೀಕಂಠಯ್ಯನವರ ಹಿರಿಯ ಮಗ ಎಂ.ಎಸ್.ಪ್ರಕಾಶ್. ಇವರ ಪತ್ನಿ ರತ್ನಮಾಲಾಪ್ರಕಾಶ್ ಸುಗಮ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಕಿರಿಯ ಮಗನೇ ಎಂ.ಎಸ್.ರವೀಂದ್ರ. ಇವರ ಪತ್ನಿ ನಾಗರತ್ನ ಅವರು ಹರವೆಯ ಹೆಚ್.ಎನ್.ವೆಂಕಟರಾವ್ ಹಾಗೂ ಸಾಲಿಗ್ರಾಮದ ಸುಭದ್ರ ದಂಪತಿಗಳ ಮಗಳು. ಕೃಷಿಕರ ಸಾಲಿಗೆ ಸೇರಿರುವವರು ರವೀಂದ್ರ ಮಾತ್ರ. ಈಗ ನನ್ನ ಮಗ ಸಹಾ ವ್ಯವಸಾಯ ಮಾಡ್ತೀನಿ ಅಂತಿದಾನೆ ಎಂದು ಹೇಳಿ ಸ್ವಲ್ಪ ಸುಧಾರಿಸಿಕೊಂಡ್ರು. ನಂತರ ಮತ್ತೆ ಮಾತು ಮುಂದುವರೆಸಿದ್ರು ಚಿಂತಾಮಣಿ.

"ನನ್ನ ತಂದೆ ನಾನು ಎರಡು ವರುಷ ವಯಸ್ಸಿನವನಿದ್ದಾಗ ಹೋಗಿಬಿಟ್ರು. ಆಗ ನನ್ನ ತಾಯಿ ಬನಾರಸ್‌ನಿಂದ ಸಂಸಾರ ಕರೆದುಕೊಂಡು ಬಂದು ಮೈಸೂರಿನಲ್ಲಿ settle ಆದ್ರು. ಅಲ್ಲಿಂದ ನಮ್ಮ ಜೀವನ ಆರಂಭವಾಯ್ತು. ನಮ್ಮ ಪೂರ್ವಿಕರು ಜಮೀನು ಮಾಡಿರುವ ದಾಖಲೆ ಇಲ್ಲ. ನಮ್ಮ ಚಿಕ್ಕಪ್ಪನವನರಾದ ಬೆಟ್ಟದಪುರದ ತಮ್ಮಯ್ಯ ಅವಧಾನಿಗಳು ಎರಡು ತೋಟವನ್ನು ಇಟ್ಟಿದ್ರು. ಅವರು ಸಂಸ್ಕೃತ ವಿದ್ವಾಂಸರು. ಅವರು ನಮ್ಮ ತಾಯಿಯ ತಂಗಿ ಯಜಮಾನರು. ಅವರ ನಂತರ ಮಕ್ಕಳು ತೋಟ ಮಾಡಿ ಬೆಂಗಳೂರಿನಲ್ಲಿ settle ಆಗಿದಾರೆ. ನಾನು ೮ ವರುಷದಷ್ಟು ಚಿಕ್ಕವನಿದ್ದಾಗ ಬೆಟ್ಟದಪುರಕ್ಕೆ ಹೋಗಿ ನಮ್ಮವರ ಕೃಷಿ ನೋಡಿದ್ದೇನೆ. ಅಲ್ಲಿ ಸಂಕೇತಿಗಳು ಅಡಿಕೆ ಮರ ಹತ್ತಿದ್ರೆ ಮಧ್ಯಾಹ್ನದವರೆಗೂ ಇಳೀತಾ ಇರಲಿಲ್ಲ. ಒಂದು ಮರದಿಂದ ಮತ್ತೊಂದು ಮರಕ್ಕೆ ಹಾಗೇ ಜಿಗೀತಾ ಇದ್ರು. ಅವರ ಬಟ್ಟೆಯೆಲ್ಲಾ ಬಹಳ ಕೊಳಕಾಗಿರೋದು. ಅಡಿಕೆ, ಬಾಳೆ ತೋಟಗಳು ತುಂಬಾ ಇರೋದು. ನಮ್ಮ ಕುಟುಂಬದಲ್ಲಿ ಕೃಷಿ ಕಸುಬು ಇರಲಿಲ್ಲ. ೧೦, ೨೦ ವರುಷಗಳು ಕಳೆದ ಮೇಲೆ ನಮ್ಮ ಚಿಕ್ಕಪ್ಪನ ಮನೆಯವರೂ ತೋಟ ಮಾರಿದ್ರು. ಆದರೆ ಪೂರ್ವದ ನೆನಪಿನಿಂದ ನಮ್ಮ ರವಿ ಇಲ್ಲಿ ತೋಟ ಮಾಡಿದ. ಹಿರಿಯರು ಮಾತನಾಡುತ್ತಿದ್ದ ವಿಷಯ ಕೇಳಿ ಅವನಿಗೆ ಆಸಕ್ತಿ ಬಂದಿರಬಹುದು ಅಂತ ಕಾಣುತ್ತೆ. ಅವನು ಇಲ್ಲಿ ಬಂದು ವ್ಯವಸಾಯ ಶುರು ಮಾಡಿದ. ಬಸವನ ಹಿಂದೆ ಬಾಲ ಎಂಬಂತೆ ನನ್ನ ಮಗ ಗಿರೀ ಸಹಾ ಬಂದಿದಾನೆ. ಇವರಿಬ್ಬರೂ ಸಾಗುತ್ತಿರುವ ವೇಗ ನೋಡಿದರೆ, ಇವರ ಭವಿಷ್ಯ ಉತ್ತಮವಾಗಿದೆ ಅಂತ ಅನ್ನಿಸುತ್ತೆ. ನನ್ನ ಎರಡನೆಯ ಮಗನಿಗೂ ಆಸಕ್ತಿ ಬಂದಿದೆ. ಇನ್ನು ಮುಂದೆ ಸಂಕೇತಿಗಳ ಕೃಷಿ ಬದುಕು ಇಲ್ಲಿ ಆರಂಭವಾಗಬಹುದು. ಇವರು ಕೃಷಿ ಬಗ್ಗೆ ತೋರಿಸುತ್ತಿರುವ ಆಸಕ್ತಿ, ಅನುಸರಿಸುತ್ತಿರುವ ಸರಿಯಾದ

ಮಾರ್ಗ ನನಗೆ ಸಂತೋಷ ನೀಡಿದೆ" ಎಂದು ಸಂತೃಪ್ತವಾಗಿ ನುಡಿದರು ಚಿಂತಾಮಣಿ.

"ವ್ಯವಸಾಯದಲ್ಲಿ ದುಡ್ಡು ಮುಖ್ಯವಲ್ಲ. ಮನುಷ್ಯ ಒಂದು stage reach ಆದ ಮೇಲೆ ದುಡ್ಡು ಗೌಣ. ನನ್ನ ಮಗ ಉತ್ತಮವಾದ ಕೆಲಸಾನೇ ಬಿಟ್ಟು ಬಂದಿದಾನೆ. ಮನಸ್ಸಿನ ತೃಪ್ತಿಗಾಗಿ ವ್ಯವಸಾಯ ಮಾಡ್ತಿದಾನೆ. ಇದರಲ್ಲಿ ಯಶಸ್ಸು ಕಾಣಲಿ ಅಂತ ಆಶೀರ್ವಾದ ಮಾಡ್ತೀನಿ ಅಷ್ಟೇ. ನನಗೆ ಕೃಷಿಯಲ್ಲಿ ಆಸಕ್ತಿ ಇಲ್ಲ. ಅದರ ಜ್ಞಾನಾನೂ ಇಲ್ಲ. ಈಗ ನಿವೃತ್ತ ಜೀವನ ನಡೆಸ್ತಾ ಇದೀನಿ, ಇವರ ಪ್ರೀತಿಗಾಗಿ ಇಲ್ಲಿ ಬಂದಿದೀನಿ ಅಷ್ಟೇ. ನನ್ನ ಒಳ್ಳೆಯ ಹಾರೈಕೆ ಇವರಿಗೆ ಸದಾ ಇರುತ್ತೆ" ಎಂದು ಮಾತು ಮುಗಿಸಿದರು ಚಿಂತಾಮಣಿ. ನಂತರ ರವೀಂದ್ರ ಅವರ ವಿಚಾರಧಾರೆ ಆರಂಭವಾಯ್ತು.

ನಮ್ಮ ತಂದೆ, ಚಿಕ್ಕಪ್ಪ ಎಲ್ಲಾ ಹಿಂದೆ ಒಟ್ಟಿಗೆ ಇದ್ವಿ. ನಮ್ಮ ಅಜ್ಜಿ ಸಾವಿತ್ರಮ್ಮ ಅಂತ. ಅವರದ್ದು ನನಗೆ ಮಸುಕು ಮಸುಕಾಗಿ ನೆನಪಿದೆ. ಅವರು ತುಂಬಾ ಮಡಿ. ಹಾಗೇ ಶುಚಿಯಾಗಿರ್‍ತಾ ಇದ್ರು. ಅವರ ಜತೆ ನಾನು ರುದ್ರಪಟ್ಟಣಕ್ಕೆ ಹೋಗಿದ್ದೆ. ಅಲ್ಲಿನ ಕಾವೇರಿ ನದಿ, ಹಸಿರುಗದ್ದೆ, ಬೆಟ್ಟಗುಡ್ಡ ಎಲ್ಲಾ ಈಗಲೂ ನನಗೆ ನೆನಪಿದೆ. ನನಗೆ ಅದೆಲ್ಲದರ ಮೇಲೆ ಮುಂಚಿನಿಂದಲೂ ತುಂಬಾ ಆಸೆ ಇತ್ತು. ನನ್ನ ತಂದೆ SLN ಶಾಲೆನಲ್ಲಿ (ದೊಡ್ಡಣ್ಣ ಹೈಸ್ಕೂಲ್) ಶಾಲಾ ಶಿಕ್ಷಕರಾಗಿದ್ರು. ನಂತರ ಅದನ್ನು ಬಿಟ್ಟು ನನ್ನ ಚಿಕ್ಕಪ್ಪನ ಜತೆ ಅವರ JC ರೋಡ್‌ನಲ್ಲಿದ್ದ Eastern Pressನಲ್ಲಿ ಕೆಲಸ ಮಾಡಲು ಆರಂಭಿಸಿದ್ರು. ನಂತರ ತಾಯಿನಾಡು, ಕನ್ನಡಪ್ರಭ ಪತ್ರಿಕೇಲಿ ಕೆಲಸ ಮಾಡಿದ್ರು. ನಾವು ನಮ್ಮ ಚಿಕ್ಕಪ್ಪನ ಮಕ್ಕಳ ಜತೆ ಕಷ್ಟದಲ್ಲೇ ಬೆಳೆದ್ವು. ಆದ್ದರಿಂದ ನಮ್ಮ ನಡುವೆ ಆತ್ಮೀಯತೆ ಜಾಸ್ತಿ.

ನನಗೆ ಮುಂಚಿನಿಂದಲೂ ಪ್ರಕೃತಿ ಅಂದ್ರೆ ಇಷ್ಟ. ಪ್ರಯಾಣ ಮಾಡುವಾಗ ಕಿಟಕಿ ಹತ್ರ ಕುಳಿತು ಸುತ್ತಮುತ್ತ ನೋಡ್ತಿದ್ದೆ. ಗಿಡ, ಮರ, ಹಣ್ಣು ಇದೆಲ್ಲ ನೋಡಿದ್ರೆ ನನಗೆ ನೆಮ್ಮದಿ ಸಿಗ್ತಿತ್ತು. ನಾನೂ Bangalore High Schoolನಲ್ಲಿ ಓದಿದ್ದು. ಆಚಾರ್ಯ ಪಾಠಶಾಲೇಲಿ PUC ಮುಗಿಸ್ದೆ. ನನಗೆ Armyಗೆ ಸೇರುವ ಆಸೆ ಇತ್ತು. National Defence Academy ಪರೀಕ್ಷೆ ಬರೆದೆ. ಸಂದರ್ಶನದಲ್ಲಿ fail ಆದೆ. ನಂತರ ಬೆಂಗಳೂರಲ್ಲಿ B.Sc. ಮುಗಿಸಿ, Godrej Company Salesman ಆಗಿ ಸೇರಿದೆ. ಈ ಕೆಲಸ ನನಗೆ ಎಲ್ಲ ಕಡೆ ಪ್ರವಾಸ ಮಾಡುವ ಅವಕಾಶ ನೀಡಿತು. ಪ್ರತೀ ಪಟ್ಟಣದ ಪ್ರಕೃತಿ ನನ್ನನ್ನು ವಿಸ್ಮಯನನ್ನಾಗಿ ಮಾಡುತ್ತಿತ್ತು. ಪ್ರಕೃತಿಯ ವೈವಿಧ್ಯ ನನಗೆ ಸಂತೋಷ ಸಹಾ ಕೊಡ್ತಿತ್ತು. ಆಗ ನಾನು ನನ್ನದೇ ಆದ ಜಮೀನು ಯಾಕೆ ಮಾಡಬಾರದು ಅಂತ ಆಲೋಚಿಸಲು ಆರಂಭಿಸಿದೆ. ನನ್ನದೇ ಆದ ಜಮೀನಿನಲ್ಲಿ ಗಿಡಮರ ಬೆಳೆದು, ಪ್ರಾಣಿಗಳನ್ನು ಸಾಕಿ ಪ್ರಕೃತಿಯ ಜತೆಗಿರಬೇಕು ಎಂಬ ಹಂಬಲ ಬೆಳೆಯಿತು.

ನನ್ನ ತಂದೆಯ ತಾತ ಕೃಷ್ಣಭಟ್ಟರು ಮೈಸೂರಿನ ಇಲವಾಲದಲ್ಲಿ ಶಾನುಭೋಗರಾಗಿದ್ರಂತೆ. ಹಾಗಂತ ನನ್ನ ತಂದೆ ಹೇಳೋರು. ಅವರ ಹತ್ರ ನವಿಲಕೋಡಿ ತೋಟ ಅಂತ ದೊಡ್ಡ ತೋಟ ಇತ್ತಂತೆ. ಅದು ಮಾದರಿ ತೋಟ ಆಗಿತ್ತಂತೆ. ಏನೋ ಕಷ್ಟ ಬಂದಾಗ ಅದನ್ನು ಮಾರಿದ್ರಂತೆ. ಬಹುಶಃ ಅದಕ್ಕೂ ನಾನು ತೋಟ ಮಾಡಿರೋದಕ್ಕೂ ಸಂಬಂಧ ಇಲ್ಲ. ನಾವು ವ್ಯವಸಾಯಕ್ಕೆ ಬಂದಿದ್ದು ಗಿಡಗಳ ಜತೆಗಿದ್ದಾಗ ನನಗೆ ದೊರೆಯುತ್ತಿದ್ದ ಶಾಂತಿ, ನೆಮ್ಮದಿಯ ಕಾರಣಗಳಿಂದ.

ನಾವು ಹಣಕಾಸಿನ ವಿಷಯದಲ್ಲಿ ತುಂಬಾ ಶ್ರೀಮಂತರಲ್ಲ. ಆದರೆ ಜಮೀನು ಮಾಡಬೇಕು ಎಂಬ ಹಠ ಬಂದು ಹಣ ಸೇರಿಸಲು ಆರಂಭಿಸಿದೆ. ನಮ್ಮ ಮನೆಯವರೆಲ್ಲಾ ತುಂಬಾ ಸಹಾಯ ಮಾಡಿದರು. ಸ್ನೇಹಿತರೂ ಸಹ ಸಹಾಯ ಮಾಡಿದ್ರು. ಜಮೀನಿಗಾಗಿ ಬಹಳ ಹುಡುಕಾಡಿದೆ. ನನ್ನ ಧ್ಯೇಯ ಇದ್ದದ್ದು ನೀವು ಮಾಡುವ ಕೆಲಸದಲ್ಲಿ ಮನಸ್ಸು ಹಾಗೂ ಹೃದಯ ತೊಡಗಿಸಿದರೆ ಅದು ಖಂಡಿತಾ ಯಶಸ್ವಿ ಆಗುತ್ತೆ ಅನ್ನುವುದು.

ನಾನು ಮೊದಲು ಇಷ್ಟಪಟ್ಟ ಜಾಗ ಶಿರಸಿ. ಅಲ್ಲಿನ ವರದಾ ನದಿ ಹತ್ತಿರ ಜಮೀನು ಖರೀದಿಸಲು ಹೋಗಿದ್ದೆ. ಜಾಗ ತುಂಬಾ ಚೆನ್ನಾಗಿತ್ತು. ಆದ್ರೆ land litigation ಇತ್ತು. ಹೊಸನಗರದಲ್ಲೂ ಜಮೀನು ನೋಡಿದೆ. ಆದರೆ ನೆಲಕ್ಕೆ ಋಣ ಅಂತ ಇರುತ್ತೆ ನೋಡಿ. ಇಲ್ಲಿ ಬರಬೇಕು ಅಂತ ಇತ್ತೇನೋ. ನಮ್ಮ Office Boy ಒಬ್ಬನಿಗೆ ನಾನು ಜಮೀನು ಹುಡುಕುತ್ತಿರುವ ವಿಚಾರ ತಿಳಿದಿತ್ತು. ಅವನು ಒಂದು ದಿನ sudden ಆಗಿ ಬಂದು, "ನಮ್ಮ ಬೆಳ್ತಂಗಡಿ ತಾಲ್ಲೂಕಿನಲ್ಲಿ ನೀವು ಏಕೆ ಜಮೀನು ನೋಡಬಾರದು? ಅಲ್ಲಿ ನೆಲ ಚೆನ್ನಾಗಿದೆ" ಅಂತ ಹೇಳಿದ. ಹಾಗಾಗಿ ನಾನು, ನಮ್ಮಣ್ಣ ಇಲ್ಲಿಗೆ ಬಂದ್ವಿ. ಆಗ ನನಗೆ ಇಲ್ಲಿದ್ದ ನನ್ನ ಸ್ನೇಹಿತನ ನೆನಪಾಯ್ತು. ವರ್ಮ ಅಂತ ಅವರ ಹೆಸರು.

ಅವರು ಕೃಷಿಕರು. ನಾವು ಅವರಿಗೆ, ಜಮೀನನ್ನು ಖರೀದಿ ಮಾಡಲು ನೆರವಾಗುವುದಂತೆ ಕೇಳಿಕೊಂಡೆವು. ''ನೀವು ಬೆಂಗಳೂರಿನಿಂದ ಬಂದು ಇಲ್ಲಿ ಕೃಷಿ ಮಾಡ್ತೀರಾ! ಅಲ್ಲಿನ ಕೆಲಸ ಯಾಕೆ ಬಿಡ್ತೀರಾ? ಇದು ಕಷ್ಟ. ನಿಮ್ಮ ಕೈಲಿ ಆಗಲ್ಲ' ಅಂದ್ರು. ಆದ್ರೆ ನಾವು ಬಿಡಲಿಲ್ಲ. 'ವರ್ಮ, ನೀವು ಜಮೀನು ಕೊಡಿಸಿ, ನಾವು ಕೃಷಿ ಮಾಡ್ತೀವಿ' ಅಂತ ಹೇಳಿದೆ. ಅವರು ಈ ಜಮೀನಿಗೆ ಕರೆದುಕೊಂಡು ಬಂದ್ರು. ಏನೋ ಒಂದು ತರಹದ vibration ಇಲ್ಲಿ ನನಗಾಯ್ತು. ಇದು ನನ್ನ ಜಾಗ ಅಂತ ಅನ್ನಿಸಿತು. ನನಗೆ ಆದ ಅನುಭವವನ್ನು ವರ್ಣಿಸಲು ಆಗೋಲ್ಲ. ಆದ್ರೆ ಈ ಜಮೀನಿನಲ್ಲಿ ನಡೆಯುವಾಗ ನನಗೆ ನಾನು ನನ್ನ ಜಾಗ ತಲುಪಿದೀನಿ ಅಂತ ಅನ್ನಿಸಿತು. ನನ್ನ ಜೇಬಿನಲ್ಲಿ ಆಗ ದುಡ್ಡಿರಲಿಲ್ಲ. ಹತ್ತರಿಂದ ಹನ್ನೊಂದು ರೂಪಾಯಿ ಇತ್ತು. ಅದನ್ನೇ ಅವರಿಗೆ ಕೊಟ್ಟು ನಾನು ಈ ಜಮೀನನನ್ನು ಖರೀದಿಸುತ್ತೇನೆ ಅಂತ ಹೇಳಿದೆ. ನಂತರ ಆ ಜಮೀನಿಗೆ ಏಳೂವರೆ ಲಕ್ಷ ರೂಪಾಯಿ ಹೇಳಿದ್ರು. ನನ್ನ ಬಳಿ ಎರಡು ಲಕ್ಷ ರೂಪಾಯಿ ಇತ್ತು ಅಷ್ಟೆ. ಎಲ್ಲರ ಸಹಕಾರದಿಂದ ಜಮೀನು ಖರೀದಿಸಿದೆ. ನಂತರ ಈಗ ಮತ್ತೆ ಪಕ್ಕದಲ್ಲಿ ಜಮೀನು ಖರೀದಿಸಿದ್ದೇನೆ. ಈಗ ನಮ್ಮದು ಇಲ್ಲಿ ೧೫ ಎಕರೆ ಜಮೀನಿದೆ.

ನಾನು ಜಮೀನು ಖರೀದಿಸಿದಾಗ ಇಲ್ಲಿ ಬರಿ ೧೨೦೦ ಅಡಿಕೆ ಮಾತ್ರ ಇತ್ತು. ಈಗ ನಾನು ಮತ್ತಷ್ಟು ಅಡಿಕೆ ಹಾಕಿದೀನಿ. ತೆಂಗು ಹಾಕಿದೀನಿ. ಬಾಳೆ ಹಾಕಿದೀನಿ. ಅರಿಶಿನ ಬೆಳೀತಿದೀನಿ. ವೆನಿಲ್ಲಾ ಹಾಕಿದೀನಿ. ಕಾಳುಮೆಣಸು ಬೆಳೀತಾ ಇದೀನಿ. ಇಲ್ಲಿ ಬೆಳೆಯಬಹುದಾದ ಎಲ್ಲ ಬೆಳೆಗಳನ್ನೂ ಪ್ರಯತ್ನಿಸುತ್ತಾ ಇದ್ದೀನಿ. ನನ್ನ ಪ್ರಕಾರ ಈ ಭೂಮಿಗೆ ಜೀವ ಇದೆ. ನಮ್ಮ ಮಕ್ಕಳನ್ನು ನಾವು ಸರಿಯಾಗಿ ಬೆಳೆಸಿದ್ರೆ ಹ್ಯಾಗೆ ಮೇಲೆ ಬರ್ತಾರೋ, ಅದೇ ತರಹ ಈ ಭೂಮಿಯ ಆರೈಕೇನ ನಾವು ಮಾಡಿದ್ರೆ ಅವಳು ನಮ್ಮ ಕೈ ಬಿಡೋದಿಲ್ಲ.

ನಾನು salesman ಆಗಿದ್ದಾಗಿನಿಂದಲೂ ಒಂದೇ ತತ್ತ್ವದಲ್ಲಿ ನಂಬಿಕೆ ಇಟ್ಟವನು. 'ನಿನ್ನ ಹೃದಯ ಹಾಗೂ ಆತ್ಮವನ್ನು ತೊಡಗಿಸು. ಹಣದ ಬಗ್ಗೆ ಆಲೋಚನೆ ಮಾಡಬೇಡ. ನಂತರ ಅದು ನಿನ್ನನ್ನು ಅನುಸರಿಸುತ್ತದೆ. ನೀನು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡು. ಹಾಗೇ ಉತ್ತಮವಾಗಿ ಮಾಡು' ಎಂಬುದು ನನ್ನ ಧ್ಯೇಯ. ಅದರಂತೆಯೇ ನಾನು ನಡೆದಿದ್ದೇನೆ.

- **ನೀವು ಜಮೀನು ಖರೀದಿ ಮಾಡಿದ್ದು ಯಾವಾಗ?**

  ನಾನು ಜಮೀನು ಖರೀದಿಸಿದ್ದು ೧೯೯೮ನೇ ಇಸವೀಲಿ. ಆಗ ನನಗೆ ವ್ಯವಸಾಯದ ವಿಚಾರ ತಿಳಿದಿರಲಿಲ್ಲ. ಬೇರೆ ಬೇರೆ ತೋಟಗಳನ್ನು ನೋಡ್ತಿದ್ದೆ. ನಾನು Retire ಆದ ಮೇಲೆ ಬಹಳ ಉತ್ತಮವಾಗಿ ತೋಟ ಮಾಡಿರುವವರ ಜಮೀನಿಗೆ ಹೋಗಿ ಅಲ್ಲಿ ಕೆಲಸಗಾರರ ತರಹ ಒಂದು ತಿಂಗಳು ಇರಬೇಕು ಅನ್ನುವ ಆಲೋಚನೆ ಸಹಾ ಇದೆ. ವ್ಯವಸಾಯಾನ ಬಹಳ ಶ್ರದ್ಧೆಯಿಂದ ಮಾಡಿದ್ರೆ ಫಲ ಬಿಡದ ಮರ ಸಹಾ ಹಣ್ಣು ನೋಡುತ್ತೆ ಅಂತಾರೆ. ಅದು ನಿಜ ಅಂತ ನನಗೆ ಅನ್ನಿಸಿದೆ.

- **ಈಗ ನಿಮ್ಮ ಜಮೀನಿನಲ್ಲಿ ಏನೇನು ಬೆಳೆ ಇದೆ?**

  ೨೪೦೦ ಅಡಿಕೆ ಇದೆ. ಅಂಗಾಶ ಕೃಷಿ ಬಾಳೆ G-9 ಅನ್ನುವ ತಳಿ ೧೬೦೦ ಗಿಡ ಹಾಕಿದೀನಿ. ಈ ಬಾಳೆ ಹಾಕಿದಾಗ ಇಲ್ಲಿನ ಸ್ಥಳೀಯರು ಹೇಳಿದ್ರು. ಈ ಬಾಳೆ ಇಲ್ಲಿ ಆಗೋಲ್ಲ ಅಂತ. ಬೇಸಗೇಲಿ ಹಣ್ಣು ಉದುರುತ್ತೆ, ನಿಮಗೆ ಮಾರಲು ಆಗೋಲ್ಲ ಅಂದ್ರು. ಆದ್ರೆ ನಾನು ಕಷ್ಟಪಟ್ಟು ಬೆಳೆದೆ. ಈಗ ಬೆಳೆ ಬಹಳ ಚೆನ್ನಾಗಿದೆ. ನನಗೆ ಅದನ್ನು ನೋಡಲು ಸಂತೋಷವಾಗುತ್ತೆ. ಈಗ ಸುತ್ತಮುತ್ತಲಿನವರು ಬಂದು ನಾವೂ ಆ ಬೆಳೆ ಬೆಳೆಯಬಹುದು ಅಂತಿದಾರೆ. ನಮಗೆ ತಂದು ಕೊಡಿ ಅಂತ ಕೇಳ್ತಿದಾರೆ. ಈಗ ನನಗೆ ನಾವು ಯಶಸ್ವಿಯಾಗಿದೀವಿ ಅಂತ ಅನ್ನಿಸ್ತಿದೆ.

  ನಾನೇ ಈಗ ೫೦೦ ವೆನಿಲ್ಲಾ ಬಳ್ಳಿ ಹಾಕಿದೀನಿ. ಅದನ್ನೇ ಅಭಿವೃದ್ಧಿಪಡಿಸಿ, ೧೫೦೦ ಗಿಡ ಮಾಡಿದೀನಿ. ಕಾಳುಮೆಣಸು ಹಾಕಿದೀನಿ. ನನ್ನ vision ಏನೂ ಅಂದ್ರೆ ಯಾವ ತುಂಡು ಜಮೀನನ್ನೂ ಖಾಲಿ ಬಿಡಬಾರದು. ಅದನ್ನು ಬಳಸಬೇಕು ಎಂಬುದು. ಭೂಮಿಯನ್ನು Exploit ಮಾಡುವುದಲ್ಲ. ೧೫ ಎಕರೆ ಜಮೀನಿದ್ರೆ, ಅದರ ಸಂಪೂರ್ಣ ಉಪಯೋಗ ಆಗಬೇಕು ಅನ್ನುವುದು ನನ್ನ ಚಿಂತನೆ. ಅದಕ್ಕಾಗಿ ಖಾಲಿ ಜಾಗದಲ್ಲಿ ಬೆಟ್ಟದ ನೆಲ್ಲಿ ಹಾಕಿದೀನಿ. ಏಲಕ್ಕಿ ನಾಟಿ ಮಾಡಿದೀನಿ. ಹಸು ಸಾಕಬೇಕು ಅಂತಿದೀನಿ. ಗೊಬ್ಬರ, ನೀರು ಇರದಿದ್ರೆ ಬೆಳೆ ಬೆಳೆಯುವುದಿಲ್ಲ. ಹಾಗಾಗಿ ಹಸು ಸಾಕಿದ್ರೆ ನಮಗೆ ಹಾಲು, ಗೊಬ್ಬರ, ಆದಾಯ ಸಿಗುತ್ತೆ. ಜಮೀನಿನ ಬೆಳೆಗಳಿಂದ ಹಸುಗಳಿಗೆ ಮೇವು ದೊರೆಯುತ್ತೆ. ಹಸುವಿನ ಸಗಣಿ ಬೆಳೆಗಳಿಗೆ ಗೊಬ್ಬರ. ಅದಕ್ಕಾಗಿ ಆರು ಹಸು ಕಟ್ಟಬೇಕು ಅನ್ನುವ ಆಲೋಚನೆ ಇದೆ. ಅದಕ್ಕಾಗಿ ಕೊಟ್ಟಿಗೆ ಕಟ್ಟಿಸ್ತಾ ಇದೀನಿ. ಶ್ರೀರಾಮಚಂದ್ರಾಪುರ ಮಠದಲ್ಲಿ ಡಾ|| ಕೃಷ್ಣಮೂರ್ತಿ ಅಂತಿದಾರೆ. ಅವರನ್ನು ಭೇಟಿ

ಮಾಡಿದ್ದೆ. ಅವರು ದೇಶೀ ತಳಿಗಳನ್ನು ಸಾಕಿ ಅಂತ ಸಲಹೆ ನೀಡಿದ್ರು. ಅವರ ಸಲಹೆ ನನಗೆ ಒಪ್ಪಿಗೆಯಾಯ್ತು. ಕಾಂಕ್ರೆಜ್ ಅನ್ನುವ ಜಾನುವಾರು ತಳಿ ಇದೆ. ಇದು ರಾಜಾಸ್ಥಾನದ್ದು. ಆ ತಳಿಯನ್ನು ಇಲ್ಲಿ ಅಭಿವೃದ್ಧಿ ಮಾಡುವ ಆಲೋಚನೆ ಇದೆ.

- **ಈಗ ನೀವು ಎಲ್ಲಿ ವಾಸವಿದ್ದೀರಿ?**

  ಈಗ ಒಂದು ಕಾಲು ಬೆಂಗಳೂರಿನಲ್ಲಿದೆ. ಮತ್ತೊಂದು ಇಲ್ಲಿದೆ. ಆದರೆ ೨೦೦೫ರ ಜುಲೈ ತಿಂಗಳಿನಿಂದ ಪೂರ್ತಿ ಇಲ್ಲೇ ಇರುತ್ತೇನೆ. ಈಗ ಆಫೀಸ್‌ನಲ್ಲಿ ೫ ದಿನದ ಕೆಲಸ. ಶುಕ್ರವಾರ ಸಂಜೆ ಬೆಂಗಳೂರು ಬಿಟ್ಟರೆ ಶನಿವಾರ ಇಲ್ಲಿಗೆ ಬರ್ತೀನಿ. ಮತ್ತೆ ಭಾನುವಾರ ಸಂಜೆ ಇಲ್ಲಿಂದ ಬೆಂಗಳೂರಿಗೆ ಹೋಗ್ತೀನಿ. ಪ್ರತೀ ವಾರ ಜಮೀನಿಗೆ ಬರ್ತೀನಿ.

- **ನೀವೇನೋ ವ್ಯವಸಾಯಸ್ಥನಾಗಬೇಕು ಅಂತಿದೀರಾ. ನಿಮ್ಮ ಮನೆಯವರ ಪ್ರತಿಕ್ರಿಯೆ ಹ್ಯಾಗಿದೆ?**

  ಉತ್ತಮವಾಗಿದೆ. ಹಾಗೇ ಸಂಪೂರ್ಣ ಸಹಕಾರ ಇದೆ. ಈ ತೋಟ ಉತ್ತಮಪಡಿಸಲು ಎಲ್ಲರೂ ದುಡಿದಿದ್ದಾರೆ. ನನ್ನ ಅತ್ತೆ ಕೃಷಿ ಮನೆತನದವರು. ಸಾಲಿಗ್ರಾಮದಲ್ಲಿ ಅವರ ಅಕ್ಕತಂಗಿಯರ ತೋಟ ಈಗಲೂ ಇದೆ. ನಮ್ಮ ಅತ್ತೆ ಸುಭದ್ರ ಅವರು ಈ ಜಮೀನಿನಲ್ಲಿ ೧೫ ದಿನ ಇದ್ದರು. ತುಂಬಾ ಖುಷಿಪಟ್ರು. ನಮ್ಮನ್ನು ತುಂಬಾ ಹರಸಿದ್ರು. ಹೀಗೆ ಎಲ್ಲರ ಹಾರೈಕೆ ನನ್ನೊಂದಿಗೆ ಇದೆ.

- **ಅಡಿಕೆ ಕೃಷೀನ ಯಾವ ರೀತಿ ಮಾಡ್ತೀರಿ?**

  ನನಗೆ ಆಳವಾದ ಜ್ಞಾನ ಇಲ್ಲ. ಮಲೆನಾಡು ಹಾಗೂ ಇಲ್ಲಿಗೆ ಅಂತರದಲ್ಲಿ ವೆತ್ಯಾಸವಿದೆ. ನಾವು ಇಲ್ಲಿ ೯ ಅಡಿಗೆ ಅಡಿಕೆ ಹಾಗ್ತೀವಿ. ಅಲ್ಲಿ ೬ ಅಡಿಗೆ ಹಾಕ್ತಾರೆ. ನಾನು ಇಲ್ಲಿನ ವಿಟ್ಲದ ಸ್ಥಳೀಯ ತಳಿ ಹಾಕಿದ್ದೇನೆ. ಹನಿ ನೀರಾವರಿ ಅಳವಡಿಸಿದ್ದೇನೆ. ಇಲ್ಲಿದ್ದ ಅಡಿಕೆ ಮರದಿಂದಲೇ ಗೋಟು ಸಂಗ್ರಹಿಸಿ, ಸಸಿ ಮಾಡಿ ತೋಟ ಅಭಿವೃದ್ಧಿ ಮಾಡ್ತಿದೀನಿ.

- **ಬಾಳೆ ಬೇಸಾಯದ ಬಗ್ಗೆ ಹೇಳಿ.**

  ನನ್ನ ಸ್ನೇಹಿತರು ಗುರುದತ್ ಅಂತ ತೋಟಗಾರಿಕೆ ಇಲಾಖೇಲಿ ಇದ್ದಾರೆ. ಅವರು ನನಗೆ ಅಂಗಾಂಶ ಕೃಷಿ ಬಾಳೇನ ಬೆಳೆಯೋದಕ್ಕೆ ಸಲಹೆ ನೀಡಿದ್ರು. ಇದು ಅಲ್ಪಾವಧಿ ಬೆಳೆ, ಆದಾಯಾನೂ ಜಾಸ್ತಿ. G-9 ಬಾಳೆ ತಳಿಹಾಕಿ ಅಂದರು. ಈ ವಾತಾವರಣ ಬಾಳೆ ಬೇಸಾಯಕ್ಕೆ ತುಂಬಾ ಸೂಕ್ತವಾಗಿತ್ತು. ಮಳೆ ನೀರಿನ ಸಂರಕ್ಷಣೆ ಮಾಡಿದ್ರೆ ಮುಂಗಾರಿನಲ್ಲಿ ಬೀಳುವ ಮಳೆ ನೀರನ್ನೇ ಬೇಸಗೆಯಲ್ಲೂ ಬಳಸಬಹುದು.

  ಅಂಗಾಂಶ ಕೃಷಿಯಿಂದ ಅಭಿವೃದ್ಧಿಪಡಿಸಿರುವ ಬಾಳೆ ಸಸಿಗಳು ಒಂದೇ ಸಮವಾಗಿ ಬೆಳೆಯುತ್ವೆ, ಇಳುವರಿ ಸಹಾ ಉತ್ತಮವಾಗಿರುತ್ತೆ ಅನ್ನುವ ಅಂಶ ಗುರುದತ್ ಅವರಿಂದ ತಿಳೀತು. ನನಗೆ ಬಾಳೆ ಬಗ್ಗೆ ಏನೂ ಗೊತ್ತಿರಲಿಲ್ಲ. ಆದರೂ ಒಂದೂವರೆ ಎಕರೇಲಿ ಬಾಳೆ ಹಾಕಿದೆ. ಬೆಂಗಳೂರಿನ RAMCO Biotechnology Centreನಿಂದ ಬಾಳೆ ಸಸಿ ಖರೀದಿ ಮಾಡಿದೆ. ಪಾಲಿಥೀನ್ ಚೀಲದಲ್ಲಿದ್ದ ಸಸೀನ ತೊಗೊಂಡು ಬಂದು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ೨೫ ದಿನ ಹಾಗೇ ಬಿಟ್ಟು, ಆಮೇಲೆ ಜಮೀನಿನಲ್ಲಿ ನೆಟ್ಟೆ. ಬಾಳೆಗೆ ಕೇವಲ ಸಾವಯವ ಗೊಬ್ಬರ ಮಾತ್ರ ಹಾಕಿದ್ರೆ ಇಳುವರಿ ಕಡಿಮೆಯಾಗುತ್ತೆ. ಸ್ವಲ್ಪ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಸಹಾ ಹಾಕಿ ಅಂತ ಸ್ನೇಹಿತರು ಸಲಹೆ ನೀಡಿದ್ರು. ಪ್ರತಿ ಹದಿನೈದು ದಿನಕ್ಕೆ ನನ್ನ ಸ್ನೇಹಿತರು ಬಂದು ಸಲಹೆ ನೀಡಿದ್ರು. ಬಾಳೆಗೆ ನಾನು ಮಾಡಿದ ಬೇಸಾಯ ವಿಧಾನ ಎಲ್ಲಾ ಒಂದು ಪುಸ್ತಕದಲ್ಲಿ ಬರೆದಿದೀನಿ. ಮುಂದಿನ ಸಾರಿ ನಾನೇ ಸ್ವಂತವಾಗಿ ಬಾಳೆ ಬೆಳೆಯುವಾಗ ನನಗೆ ಈ ಮಾಹಿತಿ ನೆರವಾಗುತ್ತೆ. ಮೂರು ತಿಂಗಳಿಗೆ ಒಂದು ಸಾರಿ ನಾನು ಬಾಳೆಗೆ ಸಾವಯವ ಗೊಬ್ಬರ ಹಾಗೂ ರಾಸಾಯನಿಕ ಗೊಬ್ಬರ ಬಳಸಿದ್ದೇನೆ. ಬಾಳೇಲಿ ಉತ್ತಮ ಇಳುವರಿ ಬಂದಿದೆ.

  ಅಡಿಕೆ ಒಳಗೆ ನಾನು ಅರಿಶಿನ ಬೇಸಾಯ ಸಹಾ ಮಾಡುತ್ತಾ ಇದೀನಿ. ಅರಿಶಿನ ಗೆಡ್ಡೆ ಬೆಳೆ ಆದ್ದರಿಂದ ರಾಸಾಯನಿಕ ಗೊಬ್ಬರ ಹಾಕಿದೀನಿ. ಅಡಿಕೆ ಒಳಗೆ ವೆನಿಲ್ಲಾ, ಏಲಕ್ಕಿ ಬೆಳೆದಿರುವ ಕಡೆ ಕೇವಲ ಸಾವಯವ ಕೃಷಿ ಮಾಡ್ತಿದೀನಿ.

- **ಅಡಿಕೆ ತೋಟದಲ್ಲಿ ಅರಿಶಿನ ಬೆಳೆಯಬಹುದಾ?**

  ನನ್ನ ಸ್ನೇಹಿತರ ಸಲಹೆ ಪ್ರಕಾರ ಮಾಡಿದೆ. ಅಡಿಕೇನ ೯' x ೬' ಸಾಲಿನಲ್ಲಿ ಹಾಕಿದೀನಿ. ಅರಿಸಿನಕ್ಕೆ ೪' x ೬' ರ ಬೆಡ್ ಮಾಡಿ, ಶುಂಠಿ

ಬೆಳೆದ ಹಾಗೆ ಬೆಳೀತಾ ಇದೀನಿ. ಅರಿಸಿನದ ಬೀಜಾನ ನಾನು ನಂಜನಗೂಡು ಸಮೀಪದಲ್ಲಿರುವ ರಾಘವೇಂದ್ರರಾವ್ ಅವರ ಜಮೀನಿನಿಂದ ತಂದೆ. ಮುಂದಿನ ಸಲ ಶುಂಠಿ ಬೆಳೆಯುವ ಆಲೋಚನೆ ಸಹಾ ಇದೆ.

- **ಏನೇನು ಹಣ್ಣಿನ ಗಿಡಗಳನ್ನು ಬೆಳೆದಿದೀರಿ?**
ನನ್ನ ಪ್ರಕಾರ ಎಲ್ಲಾ ರೀತಿಯ ಹಣ್ಣಿನ ಗಿಡಗಳನ್ನು ಬೆಳೀಬೇಕು. ಈಗ ಮಾವು ಇದೆ, ಬೆಣ್ಣೆಹಣ್ಣು, ನೇರಳೆ, ಹಲಸು, ಹೆಬ್ಬಲಸು, ಹೀಗೆ ೧೫ ಜಾತಿ ಹಣ್ಣಿನ ಗಿಡಗಳು ಇವೆ.

- **ನೀವು ಗೋಡಂಬಿ ಬೇಸಾಯ ಮಾಡಲಿಲ್ವಾ?**
ಮಾಡಿದೀನಿ. ಉಳ್ಳಾಲ ಮೂರು ಅನ್ನುವ ತಳಿ ೧೫೦ ಗಿಡ ಹಾಕಿದೀನಿ. ಮತ್ತೆ ೩೦೦ ಗೋಡಂಬಿ ಗಿಡ ಹಾಕುವ ಉದ್ದೇಶ ಇದೆ. ರಾಸಾಯನಿಕ ಗೊಬ್ಬರ ಹಾಕಿ ಪ್ರತೀ ಗಿಡವನ್ನು ಚೆನ್ನಾಗಿ ನೋಡಿಕೊಂಡ್ರೆ ಪ್ರತಿ ಗಿಡಾನೂ ೩೦-೪೦ ಕೆಜಿ ಹಸಿ ಗೋಡಂಬಿ ನೀಡುತ್ತೆ. ಪ್ರತಿ ಕೆಜಿಗೆ ೩೦ ರಿಂದ ೩೫ ರೂಪಾಯಿ ಸಿಗುತ್ತೆ. ಗಿಡಕ್ಕೆ ೧೫೦೦ ರೂಪಾಯಿ ಸಿಕ್ಕಂತಾಗುತ್ತೆ. ಗೋಡಂಬಿಗೆ ನೀರಾವರಿ ಸೌಲಭ್ಯ ಬೇಕಿಲ್ಲ. ಅದು ತನಗೆ ತಾನೇ ಬೆಳೆಯುತ್ತೆ. ಗಿಡದಿಂದ ಗಿಡಕ್ಕೆ ೧೦ ರಿಂದ ೧೨ ಅಡಿ ಅಂತರ ಕೊಟ್ಟಿದೀನಿ. ಮಳೆ ಬರುವುದಕ್ಕಿಂತ ಮುಂಚಿತವಾಗಿ ರಾಸಾಯನಿಕ ಗೊಬ್ಬರ ಕೊಡ್ತೀನಿ. ಜಮೀನಿನ ತುಂಬಾ ಇಳಿಜಾರಿಗೆ ಅಡ್ಡಲಾಗಿ ಗುಂಡಿ ತೆಗೆದು, ಅದರಲ್ಲಿ ಒಣಗಿದ ತರಗೆಲೆ ತುಂಬಿದ್ರೆ ಮಳೆ ನೀರು ಸಂರಕ್ಷಣೆ ಆಗುತ್ತೆ, ಜಮೀನಿನಲ್ಲಿ ತೇವಾಂಶ ಸಂಗ್ರಹಣೆ ಆಗುತ್ತೆ. ಗೋಡಂಬಿ ಗಿಡಗಳು ಹುಲುಸಾಗಿ ಬೆಳೆಯುತ್ತೆ. ಬೇಸಗೆಯಲ್ಲೂ ಗುಂಡಿಯಲ್ಲಿ ತೇವಾಂಶ ಇರುತ್ತೆ. May-June ತಿಂಗಳಲ್ಲಿ ಗೋಡಂಬಿ ಹಣ್ಣು ಸಿಗುತ್ತೆ. ನಾನು ಕಚ್ಚಾ ಗೋಡಂಬಿ ಕಾಯಿಯನ್ನೇ ಮಾರಾಟ ಮಾಡ್ತಿದೀನಿ. ಅದನ್ನು process ಮಾಡ್ತಿಲ್ಲ. ಹಣ್ಣನ್ನು ಗೊಬ್ಬರವಾಗಿ ಬಳಸ್ತೀವಿ. ನಾಟಿ ಮಾಡಿದ ಮೂರು ವರುಷದಲ್ಲಿ ಗೋಡಂಬಿಯಲ್ಲಿ ಇಳುವರಿ ಆರಂಭವಾಗುತ್ತೆ. ಅತೀ ಹೆಚ್ಚಿನ ಇಳುವರಿ ಆರಂಭವಾಗೋದು ಆರು ವರುಷಗಳಿಂದ.

- **ನೀವು ರಬ್ಬರ್ ಬೇಸಾಯ ಮಾಡಲಿಲ್ಲವಾ?**
ಇಲ್ಲ. ರಬ್ಬರ್ ಬೆಳೇನ large scaleನಲ್ಲಿ ಮಾಡಬೇಕು. ನನ್ನಲ್ಲಿ ಅಷ್ಟು ಜಾಗ ಇಲ್ಲ. ಮತ್ತು ಅದು labour intensive. ಹಾಗಾಗಿ ರಬ್ಬರ್ ಬೆಳೀತಾ ಇಲ್ಲ.

ನನ್ನ ಒಟ್ಟು ೧೫ ಎಕರೆ ಜಮೀನಿನಲ್ಲಿ ಮೂರು ಎಕರೆ ಜಮೀನು ಖಾಲಿ ಇದೆ. ಅಲ್ಲಿ ಶುಂಠಿ ಬೆಳೀಬೇಕು ಅನ್ನುವ ಯೋಜನೆ ಇದೆ. ನನ್ನ ಜಮೀನಿನಲ್ಲಿ ಎರಡು 'ತೆರೆದ' ಬಾವಿ ಇದೆ. ಎರಡು ಬೋರ್‌ವೆಲ್ ಸಹಾ ಇದೆ. ತೋಟದ ಪಕ್ಕದಲ್ಲಿಯೇ ಒಂದು ತೊರೆ ಸಹಾ ಹರಿಯುತ್ತೆ. ಇದು ಹರಿದು ನೇತ್ರಾವತಿ ನದಿ ಸೇರುತ್ತೆ. ನಾನು ಜಮೀನು ಖರೀದಿಸಿದಾಗ ಬರೀ ಎರಡು ತೆರೆದ ಬಾವಿ ಇತ್ತು ಅಷ್ಟೆ. ಅದು ಬೇಸಗೇಲಿ ಬತ್ತಿ ಹೋಗ್ತಿತ್ತು. ಇಲ್ಲಿ ವಿಪರೀತ ಮಳೆ ಬಿದ್ರೂ, April-May ತಿಂಗಳಲ್ಲಿ ನೀರಿಗೆ ಸಮಸ್ಯೆ ಉಂಟಾಗುತ್ತೆ. ಇಲ್ಲಿನ ಮಣ್ಣು lateratic. ನೀರು ನಿಲ್ಲೋಲ್ಲ. ಮೊದಲು ನೀರಿಗೆ ತುಂಬಾ ಸಮಸ್ಯೆ ಇದ್ದುದರಿಂದ ಜಮೀನಿನ ಗಿಡಮರಗಳ ಬೆಳವಣಿಗೆ ಕುಂಠಿತವಾಯ್ತು. ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಂತರ್ಜಲದ ಮಟ್ಟ ತುಂಬಾ ಕಡಿಮೆ, ಬೋರ್‌ವೆಲ್ ಕೊರೆದ್ರೆ ನೀರು ಸಿಗೊಲ್ಲ ಅಂತ ತುಂಬಾ ಜನ ಹೇಳಿದ್ರು. ನಾನು ಮೊದಲು ಪ್ರಾಯೋಗಿಕವಾಗಿ ೪೦೦ ಅಡಿ ಬೋರ್‌ವೆಲ್ ಕೊರೆಸಿದೆ. ಒಂದು ಇಂಚು ನೀರು ಸಿಗ್ತು. ಕಡೆಗೆ ಪಕ್ಕದ ತೋಟದವರಿಂದ ತೊರೆ ನೀರನ್ನು ಪಡೆದು ಬೇಸಗೇಲಿ ನನ್ನ ತೋಟದ ಗಿಡವನ್ನು ಉಳಿಸಿಕೊಂಡೆ. ನಂತರ ೩೦ ರಿಂದ ೪೦ ಸಾವಿರ ಖರ್ಚು ಮಾಡಿ ತೆರೆದ ಬಾವೀನ ಮತ್ತಷ್ಟು ಆಳ ಮಾಡಿಸ್ದೆ. ಆಗಲೇ ಸಮೀಪದಲ್ಲಿ ಒಬ್ರು ಗೌಡರಿದ್ದಾರೆ. 'ನೀವು ಬೋರ್‌ವೆಲ್ ತೆಗೆಸೋದಾದ್ರೆ ಇಲ್ಲಿ point ನೋಡೋರು ಒಬ್ರು ಇದಾರೆ ಬೇಕಾದ್ರೆ ಪರಿಚಯ ಮಾಡಿಕೊಡ್ತೀನಿ' ಅಂದ್ರು. ನಾನು ಆಗಲಿ ಅಂದೆ. ಈ point ನೋಡೋರ ಹೆಸರು Professor S.S.Hegde ಅಂತ. ಅವರು ಇಲ್ಲಿನ ಮಡಂತ್ಯಾರ್‌ನ Sacred Heart Collegeನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಅವರು ಬಂದು ಒಂದು point ಗುರುತು ಮಾಡಿಕೊಟ್ರು. ಬೋರ್‌ವೆಲ್ ಕೊರೆಸುವಾಗ ನೀವೂ ಸಹಾ ನನ್ನ ಜತೆ ಇರಬೇಕು ಅಂತ ನಾನು ಕೇಳಿದೆ. ಅವರು ಖಂಡಿತಾ ಬರ್ತೀನಿ ಅಂದ್ರು. ಅವರು ಎಷ್ಟು confident ಆಗಿದ್ರು ಅಂದ್ರೆ ನೀವು ತೋಡು ಬಾವೀನ ಆಳ ಮಾಡ್ತಿರೋದನ್ನು ನಿಲ್ಲಿಸಿ ಬಿಡಿ, ನಿಮಗೆ ಖಂಡಿತಾ ನೀರು ಕೊಡ್ತೀನಿ ಅಂದ್ರು. ನನಗೆ ಆಶ್ಚರ್ಯವಾಯ್ತು. ಬೆಳಗ್ಗೆ ೬ ಘಂಟೆಗೆ ಕೊರೆಯೋದಕ್ಕೆ ಆರಂಭಿಸಿದ್ವಿ. ೧೨ ಘಂಟೆ ತನಕ ಧೂಳೇ

ಸಿಗ್ತಿತ್ತು. ಅವರಿಗೂ tension ಆಯ್ತು. ೨೦೦ ಅಡಿ ತನಕ ಕೊರೆದ್ವಿ, ೨೫೦ ಅಡೀಲೂ ನೀರು ಸಿಗಲಿಲ್ಲ. Hegde ಅವರು ಹೇಳಿದ್ರು, 'ಏನೋ ಸ್ವಲ್ಪ ಸಮಸ್ಯೆ ಇರೋ ಹಾಗಿದೆ, ನಿಲ್ಲಿಸಿಬಿಡೋಣ' ಅಂತ. ನಾನು 'ನೀವೇ ಈಗ BOSS. ನಿರ್ಧಾರ ತೊಗೋಳಿ' ಅಂದೆ. ಆಗ ಇದ್ದಕ್ಕಿದ್ದಂತೆ ಇನ್ನೊಂದು length ಹಾಕಿ ಬಿಡೋಣ' ಅಂದ್ರು ಹೆಗಡೆ ಅವರು. ಇನ್ನೊಂದು length ಹಾಕಿದ ತಕ್ಷಣ ಒಂದು ಜೋರು ಶಬ್ದ ಬಂದು ನೀರು ಚಿಮ್ಮಿ ಬಂತು. ಆಗ ನನಗಾದ ಅನುಭವಾನ explain ಮಾಡಲು ಸಾಧ್ಯವಿಲ್ಲ. ನಾನು ಕಾಣ್ತಿರೋದು ಸತ್ಯಾನಾ ಅಂತ ಮೈಯನ್ನು ಜಿಗುಟಿ ಸಹಾ ನೋಡಿಕೊಂಡಿದೀನಿ. ನನಗೆ ಹೆಗಡೆ ಅವರೇ ದೇವರರೂಪದಲ್ಲಿ ಬಂದ ಹಾಗೆ ಆಯ್ತು. ಅವರೇ ಮತ್ತೊಂದು point ಹಾಕಿ ಕೊಟ್ರು. ಕೇವಲ ೧೦೦ ಅಡಿ ಆಳದಲ್ಲಿ 7HP ಮೋಟರ್ ಇಳಿಸಿದೀನಿ. ನೀರು ಅದ್ಭುತವಾಗಿ ಸಿಕ್ಕಿದೆ. ಈಗ ನನ್ನ ಕೃಷಿ ಸಮೃದ್ಧವಾಗಿದೆ.

- **ಹೆಚ್ಚು ಮಳೆ ಬೀಳುವ ಪ್ರದೇಶದಲ್ಲಿ ಅಡಿಕೆ ಕೃಷೀನ ಯಾವ ರೀತಿ ಮಾಡಬೇಕು ಅಂತೀರಿ?**

ಮೊದಲನೇದು ಮಳೆ ನೀರಿನ ಸಂರಕ್ಷಣೆ. ಹಾಗೇ ಬೋರ್‌ವೆಲ್ ನೀರಿನ ಸಂರಕ್ಷಣೆ ಸಹಾ ಮಾಡಬೇಕು. ನಮಗೆ ಗೊತ್ತಿರದ ಜಾಗದಿಂದ ನೀರನ್ನು ಹೊರ ತೆಗೀತಾ ಇರ್ತೀವಿ. ನಮ್ಮ ಬ್ಯಾಂಕ್ accountನಿಂದ ಹಣ ತೆಗೆದ ಹಾಗೆ ಇದು. ಮತ್ತೆ ಆ ನೀರನ್ನು ವಾಪಸ್ಸು ಮಳೆ ನೀರಿನ ಮೂಲಕ ಮಣ್ಣಿಗೆ ನೀಡದೇ ಹೋದ್ರೆ, ಬೋರ್‌ವೆಲ್ ಒಣಗಬಹುದು. ಹಾಗಾಗಿ ಬೋರ್‌ವೆಲ್ Recharge ಮಾಡಿಸ್ತಾ ಇದೀನಿ. ಆದ್ರೆ ಇಲ್ಲಿನ ಮಣ್ಣಿನ ಗುಣ ಹೇಗೆ ಅಂದ್ರೆ ನೀವು ಎಷ್ಟು Rainwater ಸಂಗ್ರಹ ಮಾಡಿದ್ರೂ ಸಹ ಅದು ಜಮೀನಿನಲ್ಲಿ ನಿಲ್ಲೋಲ್ಲ. ಹರಿದು ಹೋಗುತ್ತೆ. ಅದಕ್ಕೆ ನಾನೊಂದು ತಂತ್ರಜ್ಞಾನ ಅಳವಡಿಸಿದೀನಿ. ೫೦೦ ಅಡಿ ಉದ್ದದ trench ಅನ್ನು ಜಮೀನಿನಲ್ಲಿ ತೋಡಿದೀನಿ. ೧೦ ಅಡಿ ಅಗಲ ಇದೆ. ಅದಕ್ಕೆ plastic sheet ಹಾಕಿ ಮತ್ತೆ ಮಣ್ಣು ತುಂಬಿದೀನಿ. ಈಗ ಅಲ್ಲಿ ನೀರು ನಿಲ್ತಿದೆ. Open wellನಲ್ಲಿ ಸಹಾ ನೀರು ಜಾಸ್ತಿ ಆಗಿದೆ. ಈಗ ನಮ್ಮ ಜಮೀನಿನಲ್ಲಿ checkdam ಕಟ್ಟಿ, ಗುಂಡಿ ತೋಡಿಸಿ ಬೀಳು ಹನಿಹನಿ ಮಳೆ ನೀರನ್ನೂ ಹಿಡೀಬೇಕು ಅಂತ ಅಂದುಕೊಂಡಿದೀನಿ. ಹೀಗೆ ಮಾಡೋದ್ರಿಂದ ಜಮೀನಿನಲ್ಲಿ ತನು ನಿಲ್ಲುತ್ತೆ. ಅಡಿಕೆ ಬೆಳೆ ಸಹಾ ಉತ್ತಮವಾಗಿ ಬೆಳೆಯುತ್ತೆ.

- **ಇಲ್ಲಿನ ಅಡಿಕೆ ಬೇಸಾಯಕ್ಕೂ, ನೀವು ನೋಡಿರುವ ಇತರೆ ಪ್ರದೇಶದ ಅಡಿಕೆ ಬೇಸಾಯಕ್ಕೂ ಏನು ವ್ಯತ್ಯಾಸ ಗಮನಿಸಿದೀರಿ?**

Infact ಕ್ರಮದಲ್ಲಿ ಏನೂ ವ್ಯತ್ಯಾಸ ಇಲ್ಲ. Spacing ಮಾತ್ರಾ ಸ್ವಲ್ಪ ಸಿರ್ಸಿಲೀ ಹಾಗೂ ಇಲ್ಲಿ ಬೇರೆ ಬೇರೆ ಅಷ್ಟೆ. ಅಡಿಕೆ ತಳಿ ಸಹಾ ಬೇರೇದೆ. ಇಲ್ಲಿ ಬೆಳೆಯುವ variety ಅಲ್ಲಿ ಬೆಳೆಯೋಲ್ಲ. ಅಲ್ಲಿ ಅವರು process ಮಾಡಿ, ಕೆಂಪು ಅಡಿಕೆಯಾಗಿ ಮಾಡ್ತಾರೆ. ನಾವು ಇಲ್ಲಿ ಚಾಲೀನೇ ಮಾರಿಬಿಡ್ತೀವಿ. ಅಡಿಕೇನ ಒಣಗಿಸಿ, ಸುಲಿದು ಮಾಡ್ತೀವಿ. ನಾವು process ಮಾಡೋಲ್ಲ.

- **ಅಡಿಕೇಲಿ ಈಗ ಎಷ್ಟು ಇಳುವರಿ ಸಿಗ್ತಿದೆ?**

ನನಗೆ ೧೨೦೦ ಗಿಡ ಇಳುವರಿ ಕೊಟ್ಟಿದೆ. Approximately ಒಂದು ಗಿಡದಿಂದ ಎರಡು ಕೇಜಿ ಅಡಿಕೆ ಸಿಗ್ತಿದೆ. ಅದೂ ನನಗೆ last year ನೀರಿನ ಸಮಸ್ಯೆ ಇತ್ತು. ಆಗ ಎರಡು ಕೇಜಿ ಸಿಕ್ಕಿದ್ದು. ಈಗ ನಾನು ತೋಟದ ನಿರ್ವಹಣೇನ ಉತ್ತಮವಾಗಿ ಮಾಡಿದೀನಿ. ನನ್ನ ಅಂದಾಜು ಈಗ ೧೦ ರಿಂದ ೧೫% ಇಳುವರಿ ಜಾಸ್ತಿ ಆಗಬಹುದು ಅನ್ನುವ ನಿರೀಕ್ಷೆ ಇದೆ.

ನಾನು ಉದಯವಾಣೀಲಿ ಒಂದು ಲೇಖನ ಓದಿದೆ. ವಿಜಯ್ ಅಂತ ಒಬ್ಬ ರೈತ. ಆತ ದಾಳಿಂಬೆ, ನಿಂಬೆ ಸಪೋಟ ಬೆಳೀತಾ ಇದ್ದಾನೆ. ಆತನದೊಂದು technique ಇದೆ. ಅದೇನಪ್ಪಾ ಅಂದ್ರೆ ಆತ ಖಾನಾಪುರ ಮಡಿಕೇನ ತೊಗೊಂಡು ಅದರ ಕೆಳಗೆ ನಾಲ್ಕು ರಂಧ್ರ ಮಾಡಿ ಅದನ್ನು ಮಣ್ಣಿನಲ್ಲಿ ಗಿಡದ ಪಕ್ಕ ಹೂತುಬಿಡ್ತಾರೆ. Dripeine ಮುಖಾಂತರ ಮಡಿಕೆಗೆ ನೀರು ತುಂಬ್ತಾ ಬಂದ್ರೆ, ಗಿಡದ ಬೇರುಗಳು ಮಡಿಕೆ ಸುತ್ತಾ ಬೆಳೆಯುತ್ತೆ. ಆಗ ಗಿಡಗಳಿಗೆ ನೀರು ಪೋಲಾಗದಂತೆ ನೀರುಣಿಸಬಹುದು. ಈ ವಿಧಾನಾನ ಆತ ನನಗೆ ದೂರವಾಣಿ ಮುಖಾಂತರ ಸಹಾ ತಿಳಿಸಿದ. ರೈತರಲ್ಲಿ ಮಾಹಿತಿ ವಿನಿಮಯಕ್ಕೆ ಎಷ್ಟೊಂದು ಆಸಕ್ತಿ ಇದೆ ಅಲ್ವಾ ಅಂತ ಆಗ ನನಗೆ ಅನ್ನಿಸಿತು. ಪತ್ರಿಕೆ ಮೂಲಕ ವಿಚಾರ ಪಡೆದು, ಆತನನ್ನು ಸಂಪರ್ಕಿಸಿದಾಗ ಬಹಳ ವಿಚಾರ ತಿಳೀತು. ನಾನು ಈ ರೀತಿ ಅಡಿಕೆ ಗಿಡಗಳಿಗೆ ಮಾಡಬಹುದಾ ಅಂತ ಕೇಳಿದೆ. ಆಗ ಆತ ನಾನು ಪ್ರಯತ್ನ ಮಾಡಿಲ್ಲ ಅಂತ ಹೇಳಿದ. ಆದ್ರೆ ನನಗೆ ಇದು ತೆಂಗು ಹಾಗೂ ಅಡಿಕೆ ಬೇಸಾಯದಲ್ಲಿ ಸಾಧ್ಯವಾಗಬಹುದು ಅಂತ ಅನ್ನಿಸ್ತು. ಯಾಕೇಂದ್ರೆ ಅಡಿಕೆ ಹಾಗೂ ತೆಂಗಿನ ಗಿಡಗಳದ್ದು fibrous root system. ನೀವು ಭೂಮಿಯನ್ನು

ಅಗೆದ್ರೆ, ಯಾವ ಬೇರು ನೀರನ್ನು ಹುಡುಕಿಕೊಂಡು ಹೋಗ್ತಿದೆ ಅಂತ ಸುಲಭವಾಗಿ ಹೇಳಬಹುದು. ಹಾಗೇ ಪೋಷಕಾಂಶಗಳನ್ನು ಹುಡುಕುವ ಬೇರನ್ನು ಗುರುತಿಸುವುದೂ ಸುಲಭ. ಹಾಗೂ ಈ ವರುಷ ನಾನು ಮತ್ತು ನನ್ನ ತಮ್ಮ trial basisನಲ್ಲಿ ಈ ವಿಧಾನ ಅಳವಡಿಸಬೇಕು ಅಂತಿದೀವಿ. Agricultureನಲ್ಲಿ ಯಾವಾಗಲೂ there is scope for innovation. ಹೆದರಬಾರದು. Attempt ಮಾಡಿದರೆ somewhere it gives some result. But ಇದರಲ್ಲಿ ಏನೂ ಅಂದ್ರೆ immediate ಆಗಿ result ಸಿಗೋದಿಲ್ಲ. Over a period of time ಅದು ಸಿಗುತ್ತೆ. And you should have patience.

ನಾನು ಮತ್ತೊಂದು ವಿಚಾರವನ್ನು ನನ್ನ ಇಲ್ಲಿನ ಬದುಕಿನಿಂದ ಕಲಿತದ್ದು ಅಂದ್ರೆ agriculture teaches you patience. ನಾನು ನನ್ನ ತಮ್ಮ ಬೆಳದಿಂಗಳ ರಾತ್ರೀಲಿ ತೋಟದಲ್ಲಿ ಕುಳಿತುಕೊಳ್ತೀವಿ. ಇಲ್ಲಿನ ಪ್ರಕೃತಿ, ಗಿಡ, ಮರ ಎಲ್ಲ ಎಷ್ಟು ದೊಡ್ಡದಾಗಿರುತ್ತೆ. ಆದರೆ ನಾವು ಅದರ ಮುಂದೆ ಎಷ್ಟು ಚಿಕ್ಕವರಾಗಿ ಕಾಣ್ತೇವಿ. ನಮ್ಮ ಅಹಂಕಾರ ನಿಜವಾಗಿಯೂ ಆಗ ಕಡಿಮೆಯಾಗುತ್ತೆ. ಗಿಡಮರಗಳು ಸ್ವಾರ್ಥಿಯಲ್ಲ. ನೀವು ಅದರ ನಿರ್ವಹಣೆ ಮಾಡಿ, ಅದು ನಿಮಗೆ ಫಲ ನೀಡುತ್ತೆ. ನಾನು ಅನುಭವದಿಂದ ಕಲಿತಿರುವ ಪಾಠ ಇದು.

- **ರವೀಂದ್ರ ಅವರೆ ನೀವು ಬೇರೆ ಉದ್ಯೋಗದಲ್ಲಿದ್ದೀರಿ. ಇಲ್ಲಿಗೆ ಬಂದು ಇಷ್ಟೆಲ್ಲಾ ಸಾಧನೆ ಮಾಡಿದೀರಿ. ಆದ್ರೆ ನೀವು ಮೊದಲಿನಿಂದ ಒಬ್ಬ ರೈತನೇ ಆಗಿದ್ದಿದ್ರೆ ಇಷ್ಟೆಲ್ಲಾ ಸಾಧನೆ ಮಾಡೋಕೆ ಆಗ್ತಿತ್ತ?**
  ಗೊತ್ತಿಲ್ಲ! ಅದನ್ನು ನಾನು ಹೇಳಲಾರೆ. ಆದ್ರೆ ನನಗೆ ಒಂದೊಂದು ಸಾರಿ ಅನ್ನಿಸುತ್ತೆ, ನಾನು ೧೦ ವರುಷ ಹಿಂದೇನೇ ವ್ಯವಸಾಯ ಕ್ಷೇತ್ರಕ್ಕೆ ಬರಬೇಕಿತ್ತು ಅಂತ.

- **ಆದ್ರೆ ಇವತ್ತು ಹಳ್ಳೀಲಿರೋರು ವ್ಯವಸಾಯ ಸಾಕು ಅಂತ ಪಟ್ಟಣಕ್ಕೆ ಬರ್‍ತಿದಾರೆ. ಪಟ್ಟಣದೋರು ವ್ಯವಸಾಯ ಮಾಡೋಕೆ ಹಳ್ಳಿಗೆ ಬರ್‍ತಿದಾರೆ. ಇದು ವೈರುಧ್ಯ ಅಲ್ವಾ?**
  ಇದು ಸ್ವಾಭಾವಿಕ. ನೀವು ನನ್ನ ಕೇಳೋದಾದ್ರೆ ಎಲ್ಲಾವುದಕ್ಕೂ ಒಂದು life cycle ಅಂತ ಇರುತ್ತೆ. ಈಗ ನಾನು ನನ್ನ ಕೆಲಸದ ಬಗ್ಗೆ ನಿಮಗೆ ಹೇಳ್ತೀನಿ. Marketingನಲ್ಲಿ we build brands. ಆ brandಗೂ life ಇರುತ್ತೆ. ಅದೊಂದು cycle. ಬೆಳೀತಾ ಬೆಳೀತಾ curve ಮೇಲೆ ಹೋಗುತ್ತೆ. ಆಮೇಲೆ ತಿರಗಾ curve ಕೆಳಗೆ ಬರುತ್ತೆ. Brandಗೂ ಸಾವಿದೆ. ಆದ್ರೆ ನಾವು ಅದನ್ನು ಸಾಯದೇ ಇರೋ ತರಹಾ ಜೋಪಾನವಾಗಿ ಕಾದಿಡ್ತೀವಿ ಅಷ್ಟೆ. ಇದು ಎಲ್ಲ ಕ್ಷೇತ್ರದಲ್ಲೂ ಇದೆ. ವ್ಯವಸಾಯ ಕ್ಷೇತ್ರ ಇದಕ್ಕೆ ಹೊರತಾಗಿಲ್ಲ.

- **ಒಬ್ಬ ಮನುಷ್ಯ ಕೇವಲ ವ್ಯವಸಾಯ ಮಾಡಿಕೊಂಡು ತನ್ನ ಕುಟುಂಬಾನ ನಿರ್ವಹಣೆ ಮಾಡಬಹುದಾ?**
  ಹೌದು..... ನಿರ್ವಹಣೆ ಮಾಡಬಹುದು. ಯಾಕೇಂದ್ರೆ ನಾನು State Bank of India Branch Manager ಹತ್ರ ಮಾತನಾಡ್ತಿದ್ದೆ. ಅವರ ಬಳಿ ವ್ಯವಸಾಯಗಾರರಿಗೆ ನೀಡಲು ಬಹಳ ಸೌಲಭ್ಯ ಇದೆ. ಯೋಜನೆಗಳೂ ಸಹ ಇವೆ. ವ್ಯವಸಾಯಗಾರರು ಇದರ ಸೌಲಭ್ಯ ಯಾಕೆ ಪಡೀತಾ ಇಲ್ಲ ಅಂತ ನಾನು ಅವರನ್ನು ಕೇಳಿದಾಗ ಅವರು ಇದೊಂದು ವಿಷವರ್ತುಲ ಅಂತ ಹೇಳಿದ್ರು. ನೋಡಿ, ರೈತರು ವ್ಯವಸಾಯದಲ್ಲಿ ಆದಾಯ ಇಲ್ಲ ಅಂತಾರೆ. ..... ಆತ್ಮಹತ್ಯೆ ಮಾಡಿಕೊಳ್ತಾರೆ.... ಕೆಲವು ಸಲ ರಾಜಕೀಯ ಪ್ರೇರಿತವೂ ಆಗಿರಬಹುದು. ಇದೆಲ್ಲಾ ನಿಜಾನಾ ಅಂತ ನನಗೆ ಒಮ್ಮೊಮ್ಮೆ ಆಶ್ಚರ್ಯ ಆಗುತ್ತೆ. ಆದ್ರೆ ವ್ಯವಸಾಯ ಮಾಡಿ ಕುಟುಂಬ ನಿರ್ವಹಣೆ ಮಾಡಲು, ಬಹಳಷ್ಟು ಅವಕಾಶ ಇದೆ ಅಂತ ನನಗೆ ಅನ್ನಿಸುತ್ತೆ. ಆದ್ರೆ ಅದು ನಿಮ್ಮ ಅಗತ್ಯಗಳ ಮೇಲೂ ಅವಲಂಬಿಸಿರುತ್ತೆ ಅಲ್ವಾ? ನನ್ನ ಪ್ರಕಾರ ವ್ಯವಸಾಯ ಮನುಷ್ಯನಿಗೆ ಅಗತ್ಯವಾದ ಅನ್ನ, ಬಟ್ಟೆ, ವಸತಿ ಕೊಡಲು ಸಮರ್ಥವಾಗಿದೆ ಅಂತ ಅನ್ನಿಸುತ್ತೆ. ಅದನ್ನೇ ... ಮಾಡಿದ್ರೆ ಸಂಪಾದನೆ ಜಾಸ್ತಿ ಸಹಾ ಆಗಬಹುದು.

- **ನೀವು ನಿಮ್ಮ ಜಮೀನಿನಲ್ಲಿ ಕೆಲಸ ಮಾಡ್ತೀರಾ?**
  Try ಮಾಡ್ತಿದೀನಿ. ಕೆಲವು ಸಲ ಅಗೀತೀನಿ.. ನೆಲ ಉಳುಮೆ ಮಾಡಲು ಸಹಾ try ಮಾಡ್ತೀದೀನಿ. ಕಳೆದ ಸಾರಿ ೧೦ ದಿನ ರಜಾ ಹಾಕಿ ಬಂದಿದ್ದೆ. ೫೦೦ರಷ್ಟು ವೆನಿಲ್ಲಾ ಗಿಡಗಳನ್ನೂ ಆಗ ನಾನೇ ಹಾಕಿದೆ. ಸ್ವಲ್ಪ ಕಷ್ಟ ಆಗುತ್ತೆ. ಆದ್ರೆ ಅದ್ರಿಂದ ನನಗೆ ತುಂಬಾನೇ

pleasure ಸಿಗ್ತಿದೆ. ನೀವು ಕಷ್ಟಪಟ್ಟು ಮನೆಗೆ ಬಂದ್ರೆ you sleep well in the evening.

- **ನಿಮ್ಮ ತೋಟದ ನಿರ್ವಹಣೇನ ಈಗ ಯಾರು ಮಾಡ್ತಿದಾರೆ?**
  ಇಲ್ಲಿ ಒಬ್ಬ ಬಾಬು ಅಂತ permanent ಆಗಿ ಇದಾನೆ. ತುಂಬಾ ನಿಯತ್ತಿನಿಂದ ಕೆಲಸ ಮಾಡ್ತಿದಾನೆ. ನಾನು ಇಲ್ಲದಿರುವಾಗ ಈ ತೋಟದ ನಿರ್ವಹಣೆ ಆತನದ್ದೇ. ಕೆಲಸದ ಅಗತ್ಯ ನೋಡಿಕೊಂಡು ಕೂಲಿ ಕೆಲಸಗಾರರನ್ನು ಕರೆದುಕೊಳ್ತೀವಿ.

- **ನೀವು ಒಬ್ಬ Businessman. Agricultureಗೆ ಹಾಕಿದ ಬಂಡವಾಳದಿಂದ ಸಾಕಷ್ಟು ಆದಾಯ ಸಿಗುತ್ತಾ?**
  ನನ್ನ ಸ್ನೇಹಿತರು ಆರ್.ಟಿ.ಕುಲಕರ್ಣಿ ಅಂತ ಇದಾರೆ. ಅವರ ಜತೆ ನಾನು ಇದೇ ಮಾತಾಡ್ತಿದ್ದೆ. ಅವರು economics ಬಗ್ಗೆ ತುಂಬಾ ಮಾತನಾಡಿದ್ರು. ನಿಮ್ಮ investment, ಅದರ ಬಡ್ಡಿ ಎಲ್ಲಾ ನೀವು ಗಮನಿಸಬೇಕು ಅಂದ್ರು. ಆ ತರಹ ಎಲ್ಲಾ ಯೋಚನೆ ಮಾಡಿದ್ರೆ there is no business which is profitable. ನನ್ನ ಕೇಳೋದಾದ್ರೆ ವ್ಯವಸಾಯದಲ್ಲಿ ಒಂದು ಬೀಜ ಹಾಕಿ ಹತ್ತು ಬೀಜ ಪಡೀಬಹುದು. ಕೆಲವು ಗಿಡಗಳು ಒಂದಕ್ಕೆ ೨೦ ಸಹಾ ಕೊಡಬಹುದು. ಕೆಲವು ಒಂದಕ್ಕೆ ನೂರು ಸಾವಿರ ಸಹಾ ಕೊಡಬಹುದು. ಈ ನಿಟ್ಟಿನಲ್ಲಿ ನನಗೆ ವ್ಯವಸಾಯ ತುಂಬಾ ಲಾಭದಾಯಕ ಅನ್ನಿಸುತ್ತೆ. It makes sense. I think agriculture is profitable provided if you do it in the right way.

- **ಈಗಿನ ದಿನದಲ್ಲಿ ವ್ಯವಸಾಯ ಮಾಡೋನಿಗೆ ಹೆಣ್ಣು ಕೊಡೋದಿಲ್ಲ. ಇದಕ್ಕೆ ನೀವೇನಂತೀರಾ?**
  ಈ point ಸಹಾ ಯೋಚನೆ ಮಾಡಿದೀವಿ. ಒಂದಾನೊಂದು ಕಾಲದಲ್ಲಿ salesmanಗೆ ಹೆಣ್ಣು ಸಿಗ್ತಿರಲಿಲ್ಲ. ನಾನೂ ಸಹ salesman ಆಗಿದ್ದೆ. ಈಗ Software ಹುಡುಗರಿಗೆ ಹೆಣ್ಣು ಸಿಕ್ತಿಲ್ಲ. ಅವನು ಎಷ್ಟು tensionನಲ್ಲಿ ಇರ್ತಾನೇಂದ್ರೆ ಬೆಳಿಗ್ಗೆಯಿಂದ ರಾತ್ರಿವರೆಗೆ ಅವನಿಗೆ ಕೆಲಸಾನೆ. Agriculture ಮಾಡೋರಿಗೆ ಹೆಣ್ಣು ಕೊಡ್ತಿಲ್ಲ ಅನ್ನುವುದು ನನಗೆ ಗೊತ್ತಿಲ್ಲ. ನಾನು ನನ್ನ ಮದುವೆ ಆದ ಮೇಲೆ ೨೦ ವರುಷ ಬಿಟ್ಟು ಈ fieldಗೆ ಬಂದದ್ದು.

- **ನಿಮ್ಮವರು ಬಾಳಿ ಬದುಕಿದ ಅನೇಕ ಹಳ್ಳಿಗಳಲ್ಲಿ ಇವತ್ತು ಸಂಕೇತಿಗಳು ವ್ಯವಸಾಯ ಮಾಡ್ತಿಲ್ಲ. ಜಮೀನು ಮಾರಿ ಪೇಟೆಗೆ ಬರ್ತಿದಾರೆ. ಹಾಗೂ ನಿಮ್ಮಲ್ಲಿ ಹಣವಂತರು ಪೇಟೇಲಿ ಸಾಕಷ್ಟು ಇದ್ದಾರೆ. ನೀವು ಯಾಕೆ ನಿಮ್ಮ ಪರಂಪರಾಗತ ಊರುಗಳಲ್ಲಿ ಸಂಕೇತಿಗಳ ಕೃಷಿ ಉಳಿಸಬಾರದು?**
  ನೋಡಿ.... ನಾನು ಇಲ್ಲಿಗೆ ಬಂದು ವ್ಯವಸಾಯ ಆರಂಭಿಸಿದ್ದು ಸಂಕೇತಿಗಳ ಕೃಷಿ ಉಳಿಸಬೇಕು ಅಂತ ಅಲ್ಲ. ನನ್ನೊಳಗೆ ಏನೋ ಒಂದು instinct ಇತ್ತು. ಅದರ ಪ್ರಕಾರ ನಾನು ಇಲ್ಲಿಗೆ ಬಂದೆ. ನನಗೆ ಅನ್ನಿಸುತ್ತೆ ವ್ಯವಸಾಯ ಮಾಡೋದ್ರ ಹಿಂದೆ ಒಂದು social obligation ಇರಬಹುದು ಅಂತ ಅನ್ನಿಸುತ್ತೆ. ನನ್ನ ತೋಟದಲ್ಲಿ ಕೆಲಸ ಮಾಡುವ ಬಾಬು ಇದ್ದಾನಲ್ಲ ಅವನು ಮೊದಲು ನಮ್ಮ ಮನೆ ಒಳಗೆ ಬರ್ತಿರಲಿಲ್ಲ. ಆದ್ರೆ ಈಗ ಅವನು ತುಂಬಾ ಬದಲಾಗಿದಾನೆ. ನಿಮ್ಮಿಂದ ನಾನು ಬಹಳ ಕಲಿತಿದ್ದೇನೆ ಅಂತ ಹೇಳ್ತಾನೆ. ಮನೆಯಲ್ಲಿನ ಸ್ವಚ್ಛತೆ, ಬಟ್ಟೆ ಗಲೀಜಾಗಿದ್ರೆ ಅದನ್ನು ಒಗೆದು ಹಾಕ್ಕೋಬೇಕು ಅನ್ನೋದು ಅವನಿಗೆ ತಿಳಿದಿದೆ. ಅವನಿಗೆ ಶಿಕ್ಷಣದ ಮಹತ್ವ ಸಹಾ ಅರಿವಾಗಿದೆ. ಮಕ್ಕಳನ್ನು ಶಾಲೆಗೆ ಕಳಿಸ್ತಾ ಇದಾನೆ. ಹುಮ್ಮಸ್ಸಿನಿಂದ ಓದಿಸ್ತಾ ಇದಾನೆ. ನಿಮ್ಮಲ್ಲಿನ ಜ್ಞಾನವನ್ನು ಇತರರ ಜತೆ ಹಂಚಿಕೋಬೇಕು ಅನ್ನುವುದು ನನ್ನ ಚಿಂತನೆ. And that's how society nourishes and flourishes.

- **ಸಂಕೇತಿಗಳ ಕೃಷಿ ವೈಶಿಷ್ಟ್ಯ ಏನು ಅಂತ ನಿಮಗೆ ಅನ್ನಿಸುತ್ತೆ?**
  ನನಗೆ ಗೊತ್ತಿಲ್ಲ... I am not an expert to make a comment. ಆದ್ರೆ ನಾನು ಹೇಳ್ತೋ ಒಂದು ವಿಚಾರ ಅಂದ್ರೆ ನನಗೆ ನನ್ನ ಶೇಕಡಾ ನೂರರಷ್ಟು ಸಮಯಾನ ಇಲ್ಲಿ ಕಳೆಯಲು ಆಗ್ತಿಲ್ಲ. ಮುಂದೆ ಅದನ್ನು ಖಂಡಿತಾ ಮಾಡ್ತೀನಿ. ನಾನು ಇಲ್ಲಿ ಕಳೆಯುವ ಅಷ್ಟು ಸಮಯದಲ್ಲೇ ಇಲ್ಲಿರುವ ಗಿಡಮರಗಳ ಜತೆ ಒಡನಾಟ ಬೆಳೆಸಿಕೊಂಡಿದೀನಿ. ಅದು ನನ್ನ ಗುರಿ ಅನ್ನಿಸುತ್ತೆ.

- **ಮುಂದೆ ನಿಮ್ಮ ಮಗ ಇದನ್ನು ಮುಂದುವರಿಸ್ತಾನಾ?**
  ಅದಕ್ಕೋಸ್ಕರ ನಾನು ಮಾಡ್ತಾ ಇಲ್ಲ. ನನ್ನ ಸುಖಕ್ಕೋಸ್ಕರ ಮಾಡ್ತಾ ಇದೀನಿ. ನಾನು ಅವನನ್ನು motivate ಸಹಾ ಮಾಡ್ತಿಲ್ಲ.

ಅದು ಅವನ ಆಯ್ಕೆ. I am not doing this for somebody else.... I am doing it for me alone.

- **ಸಂಕೇತಿಗಳ ವೈಶಿಷ್ಟ್ಯವಾದ ಕೃಷಿ ಪರಂಪರೆ ಉಳೀಬೇಕು ಅನ್ನೋದು ನಿಮ್ಮ ಆಸೇನಾ!**
  ಉಳೀಬೇಕು ಅಂತೀನಿ. ಖಂಡಿತಾ ಉಳೀಬೇಕು.

- **ಉಳೀಬೇಕಾದ್ರೆ ಏನು ಮಾಡಬೇಕು?**
  ಮಾಹಿತಿ ಎಲ್ಲರಿಗೂ ವರ್ಗಾವಣೆ ಆಗಬೇಕು. ಪ್ರತಿಯೊಬ್ಬರೂ ಮತ್ತೊಬ್ಬರನ್ನು ಭೇಟಿ ಮಾಡಬೇಕು. ಅವರಿಂದ ನಾವು ಕಲೀಬೇಕು... ನಮ್ಮ ವಿಚಾರಾನ ಅವರಿಗೆ ತಿಳಿಸಬೇಕು. ವ್ಯವಸಾಯದಲ್ಲಿ ಮಾರುಕಟ್ಟೆ ನಿರ್ವಹಣೆ ಕಷ್ಟದ ಕೆಲಸ. ಕೇವಲ ಸಂಕೇತಿ ಕೃಷಿ ಮಾತ್ರ ಅಲ್ಲ, ಎಲ್ಲರೂ ಒಟ್ಟಾಗಿ ಸೇರಿ ತಂಡವಾಗಿ ಈ ಸಮಸ್ಯೆ ಎದುರಿಸಬೇಕಿದೆ. ಇದು ನನ್ನ ವಿಚಾರ.

- **ವ್ಯವಸಾಯ ಇತರರಿಗೂ ಉತ್ತಮವಾದ ಕಸುಬು ಅಂತೀರಾ!**
  I will say it is the noble profession on the earth. There is no other profession equivalent to agriculture.

- **ಈಗ ಒಂದು ವೇಳೆ ಖರ್ಚು ಮಾಡಲು ತಮ್ಮ ಹತ್ರ ಹಣ ಇರಲಿಲ್ಲಾ ಅಂದಿದ್ರೆ! ಬೇರೆ ಉದ್ದಿಮೆಯ ಸಹಕಾರ ನಿಮಗೆ ಇರದಿದ್ರೆ, ವ್ಯವಸಾಯ ನೆಚ್ಚಿಕೊಂಡು ನೀವು ಇಷ್ಟು ಮುಂದುವರೆಯಲು ಆಗ್ತಿತ್ತಾ?**

  ಇದು ನೀವು ವ್ಯವಸಾಯಕ್ಕೆ ಸಂಬಂಧಿಸಿದಂತೆ ಯಾವ ರೀತಿಯ passion ಹೊಂದಿದೀರಾ ಅನ್ನೋದನ್ನೂ ಅವಲಂಬಿಸಿರುತ್ತೆ. ನಾವು Businessನಲ್ಲಿ fail ಆಗಿ ವ್ಯವಸಾಯ ಮಾಡಬಾರದು. ನಮಗೆ ಆಸೆ ಇರಬೇಕು. ಶ್ರದ್ಧೆ ಇರಬೇಕು. ಆಗ ವ್ಯವಸಾಯ ಮಾಡಬಹುದು ಅಷ್ಟೆ. ಇಲ್ಲದೇ ಇದ್ರೆ ಎರಡು ದಿನ ತೋಟದಲ್ಲಿ ಖುಷಿಯಾಗಿರಬಹುದು ಅಷ್ಟೆ - ನಮ್ಮ ತೋಟ, ನೀರು, ತರಕಾರಿ ಅಂತ. ನಂತರ ಅವನಿಗೆ ಬೋರ್ ಆಗುತ್ತೆ. Cityಗೆ ಹೋಗಬೇಕು ಅನ್ನಿಸುತ್ತೆ. ಅದಕ್ಕೆ ವ್ಯವಸಾಯ ಮಾಡಲು passion ಒಳಗಿನಿಂದ ಇರಬೇಕು. ನನಗೆ cityಗೆ ಹೋಗಬೇಕಲ್ಲಾ ಜಮೀನು ಬಿಟ್ಟು ಅಂತ ಬೇಜಾರಾಗುತ್ತೆ. ಆಸೆ ಇದ್ರೆ ಬಂಡವಾಳ ಬರುತ್ತೆ. Bankನೋರು ಸಹಾಯ ಮಾಡ್ತಾರೆ. ಅದನ್ನು ನಾವು ಉಪಯೋಗಿಸಿಕೊಳ್ತಿಲ್ಲ ಅಷ್ಟೆ.

- **ಹಾಗಿದ್ರೆ ನಿಮ್ಮವರು ಯಾಕೆ ವ್ಯವಸಾಯ ಮಾಡ್ತಿಲ್ಲ?**
  ಏನೋ ಹೇಳ್ತಾರಲ್ಲ.. Quick money ಅಂತ. Agricultureನಲ್ಲಿ patience ಇರಬೇಕು. ಇಲ್ಲಿ ಹತ್ತು ಹದಿನೈದು ಸಾವಿರ ಸಂಪಾದನೆ ಆಗಬೇಕಾದ್ರೆ ಐದು ವರುಷ ಕಷ್ಟಪಡಬೇಕು. ಯುವಕರಿಗೆ ಕಾಯುವ ತಾಳ್ಮೆ ಇಲ್ಲ. ಅದಕ್ಕಾಗಿ ಬಿಡ್ತಿದಾರೆ ಅಷ್ಟೆ.

- **ನಿಮ್ಮ ಹೆಂಡತಿ ಸಹಕಾರ ಹೇಗಿದೆ?**
  ತುಂಬಾ ಇದೆ. ನಾನೇನು ಮಾಡಿದ್ರೂ ಸಹಿಸಿಕೊಳ್ಳುತ್ತಾಳೆ. ನನ್ನ ಮಗನ ಶಿಕ್ಷಣ ಮುಗಿದ ಮೇಲೆ ನಾನೂ ಅವಳೂ ತೋಟದಲ್ಲಿಯೇ ಇರೋ ಯೋಜನೆ ಇದೆ. ಗೊತ್ತಿಲ್ಲ, ಮುಂದೆ ಏನಾಗುತ್ತೆ ಅಂತ. ನನ್ನ ಅಭಿವೃದ್ಧಿಯಲ್ಲಿ ಅವಳದ್ದೂ ಪಾಲಿದೆ. ನಮ್ಮ ಮನೆಯವರ ಎಲ್ಲರ ಪಾಲೂ ಇದೆ. ನನ್ನ ತಂದೆ ತಾಯೀದೂ ಇದೆ.

- **ನಿಮ್ಮ ಮುಂದಿನ ಕನಸುಗಳೇನು?**
  'ನಾನು ವ್ಯವಸಾಯದ ಬಗ್ಗೆ ಬಹಳ ಕಲಿತಿಲ್ಲ. ವ್ಯವಸಾಯದ ಬಗ್ಗೆ ಬಹಳವಾಗಿ ಕಲಿತು ನನ್ನ ತೋಟವನ್ನು ಮಾದರಿ ತೋಟವನ್ನಾಗಿ ಮಾಡುವ ಬಯಕೆ ಇದೆ. ಬೇರೆಯವರಿಗೆ ನನ್ನ ಕೈಲಾದಷ್ಟು ಸಹಾಯ ಮಾಡಬೇಕು ಅಂತಾನೂ ಇದೆ. ಇದು ಮಾದರಿ ತೋಟ ಆಗಬೇಕು. ಬೇರೆಯವರು ಬಂದು ನನ್ನ ಕೇಳಬೇಕು ಅನ್ನೋದು ನನ್ನ ಆಸೆ' ಅಂತ ಹೇಳಿ ಮಾತು ಮುಗಿಸಿದ್ರು ರವೀಂದ್ರ.

ನಂತರ ನಡೆಯಬೇಕಾದ ಸಮಾರಂಭದ ಕಡೆಗೆ ಎಲ್ಲರ ಗಮನ ಹರೀತು. ಎಂ.ಸಿ. ಗಿರೀಶ್ ಅವರ ಮನೆ ಗೃಹಪ್ರವೇಶ ಅಚ್ಚುಕಟ್ಟಾಗಿ ಆಯ್ತು. ಅದರ ಪೌರೋಹಿತ್ಯ ಎಸ್.ಎಸ್.ಹೆಗಡೆ ಅವರದ್ದೆ. ಮನೆಯವರೆಲ್ಲಾ ಬಹಳ ಆತ್ಮೀಯವಾಗಿ ಸಮಾರಂಭ ನಡೆಸಿದ್ರು. ನಂತರ

ಸುಗ್ರಾಸ ಭೋಜನ ಆದದ್ದು ರವೀಂದ್ರ ಅವರ ಮನೇಲಿ. ಪ್ರತಿ ಕ್ಷಣದಲ್ಲೂ ನಮಗೆ ಕಂಡದ್ದು ಪ್ರೀತಿ ವಿಶ್ವಾಸದ ಸೆಲೇನೆ. ವ್ಯವಸಾಯಕ್ಕೆ ಇಷ್ಟೆಲ್ಲಾ ಶಕ್ತಿ ಇದೆಯಾ ಅಂತ ನನಗೆ ಅನ್ನಿಸಿತು. ಬೆಂಗಳೂರಿಗೆ ವಾಪಸ್ಸು ಹೊರಡಬೇಕಿದ್ದ ರವೀಂದ್ರ ನಮ್ಮನ್ನು ಕಾರಿನಲ್ಲಿ ಹಾಸನದವರೆಗೂ ಕರೆತಂದು ಬಿಟ್ರು. ದಾರಿ ಉದ್ದಕ್ಕೂ ವ್ಯವಸಾಯದ್ದೇ ಮಾತು. ಅದರ ಅಭಿವೃದ್ಧಿಯದೇ ಚಿಂತನೆ ಅವರಿಗೆ. ಹಾಸನದಲ್ಲಿ ಅವರಿಂದ ಬೀಳ್ಕೊಟ್ಟು ಮೈಸೂರಿನ ಬಸ್ಸು ಹತ್ತಿ ವೆಂಕಟನಾರಾಯಣ ಅವರ ಜತೆ ಮೈಸೂರಿಗೆ ಬಂದಾಗ ರಾತ್ರಿ ಹತ್ತು ಘಂಟೆ. ಎರಡು ದಿನದ ಆಯಾಸ ನನ್ನನ್ನು ಕಾಡಿರಲಿಲ್ಲ. ಅಷ್ಟು ದೂರದ ಪ್ರವಾಸ ವ್ಯರ್ಥವಾಗಲಿಲ್ಲವಲ್ಲ ಎಂಬ ಚಿಂತನೆಗಳ ಕಾರಣವೋ ಏನೋ ಗೊತ್ತಿಲ್ಲ.... ರಾತ್ರಿ ನಿದ್ದೆಯಲ್ಲೂ ರವೀಂದ್ರ ಅವರದೇ ಕನಸು.

32. ಮೈಸೂರು

ಅ) ಬಿ.ಸಿ. ಸತ್ಯನಾರಾಯಣ ಇ/ಮ ಪಿ.ಕೆ. ಚನ್ನಕೇಶವಯ್ಯ

ನಂ.೧, ಹೆಚ್ ಬ್ಲಾಕ್, ರಮಾನಿವಾಸ, ರಾಮಕೃಷ್ಣನಗರ, ಮೈಸೂರು-೨೨

ದೂರವಾಣಿ: 0821-2566083 ಕರವಾಣಿ: 984443632/9844411644

ನನ್ನ ತೋಟದಲ್ಲಿ ನಾನು ನೂರು ಬೇವಿನ ಗಿಡಗಳನ್ನು ಹಾಕಿದ್ದೇನೆ. ಆರೋಗ್ಯದ ದೃಷ್ಟಿಯಿಂದ ಇದು ಬಹಳ ಒಳ್ಳೆಯದು. ಈ ಮರದ ಗಾಳಿ ಕುಡೀತಿದ್ರೆ ಆಸ್ತಮಾ, ಕ್ಷಯರೋಗಗಳು ಬರೋಲ್ಲ. ಬೆಳಗ್ಗೆ ಹಲ್ಲು ಉಜ್ಜಲು ಬೇವಿನ ಕಡ್ಡಿ ಸಿಗುತ್ತೆ. ಮಣ್ಣಿಗೆ ಬೇವಿನ ಸೊಪ್ಪನ್ನು ಹಾಕಿದ್ರೆ ಉತ್ತಮ ಗೊಬ್ಬರವಾಗುತ್ತೆ. ಬೇವಿನ ಸೊಪ್ಪಿನ ಜತೆ ಭತ್ತವನ್ನು ಶೇಖರಿಸಿ ಇಟ್ರೆ ಕೀಟಗಳು ಬರೋಲ್ಲ. ವಿಷ ರಾಸಾಯನಿಕಗಳನ್ನು ಬಳಸುವ ಅಗತ್ಯವಿಲ್ಲ. ಜತೆಗೆ ಬೇವಿನ ಮರಗಳನ್ನು ೨೦ ವರುಷಕ್ಕೆ ಕಡಿಯಬಹುದು. ಅಷ್ಟು ಬೇಗ ಬೆಳೆಯುತ್ತೆ. ಮನೆ ಕಟ್ಟಲು ತೇಗದ ಮರಬಿಟ್ರೆ ಎರಡನೆಯ ಆದ್ಯತೆ ಇರೋದು ಬೇವಿನ ಮರಕ್ಕೆ.

ಮೂಲತಃ ಬಸವಾಪಟ್ಟಣದವರಾದ ಸತ್ಯನಾರಾಯಣ ಈಗ ವಾಸವಿರೋದು ಮೈಸೂರಿನಲ್ಲಿ. ಉದ್ಯೋಗವನ್ನರಸಿ ಮೂಲ ನೆಲೆ ಬಿಟ್ಟು ಬಂದ ಮೇಲೆ ಇದ್ದ ಊರೇ ಹುಟ್ಟೂರಿನಂತಾಯ್ತು. ಆದರೆ ಉದ್ಯೋಗಸುಖದ ವಾಸನೆಯು, ಅಷ್ಟು ಸುಲಭವಾಗಿ ರಕ್ತಗತವಾಗಿ ಬಂದ ಮಣ್ಣಿನ ವಾಸನೆಯನ್ನು ತೊಡೆಯಲು ಆಗಲಿಲ್ಲ. ನಂಜನಗೂಡಿನ ಮಣ್ಣು ಸತ್ಯನಾರಾಯಣ ಅವರಿಗೆ ಆಶ್ರಯ ನೀಡಿತು. ಕೃಷಿಯಾಗಕ್ಕೆ ಪಾಠಶಾಲೆಯಾಯ್ತು. ಉದ್ಯೋಗದಲ್ಲಿರುವಾಗ ಅರೆಕಾಲಿಕ ಕೃಷಿಕರಾಗಿದ್ದ ಸತ್ಯನಾರಾಯಣ ಈಗ ಸಂಪೂರ್ಣ ಕೃಷಿಕರು. ಪ್ರತಿನಿತ್ಯ ನಂಜನಗೂಡಿನ ಜಮೀನಿಗೆ ರೈಲಿನಲ್ಲಿ ಇವರ ಪ್ರಯಾಣ. ಬಿಡುವಿದ್ದಾಗ ಮನೆಯವರೂ ಇವರನ್ನು ಹಿಂಬಾಲಿಸುವುದುಂಟು. ನೆಲೆಯಲ್ಲದ ನೆಲೆಯಲ್ಲಿ ಹಸಿರು ಹಬ್ಬಿಸಿ ಉಸಿರು ತುಂಬಿರುವ ಸತ್ಯನಾರಾಯಣ ಅವರನ್ನು ನಾವು ಮಾತನಾಡಿಸಿದ್ದು ಭೀಮನ ಅಮವಾಸ್ಯೆಯಂದು.



ಬಿ.ಸಿ.ಸತ್ಯನಾರಾಯಣ ತಮ್ಮ ಕುಟುಂಬವರ್ಗದೊಂದಿಗೆ: ಮೈಸೂರು

ಮನೆಯಲ್ಲಿ ಮಕ್ಕಳು, ಮೊಮ್ಮಕ್ಕಳ ಕಲರವ. ವೈಭವದ ಪೂಜೆ ನಡೆದದ್ದರ ಕುರುಹಾಗಿ ಸಾಲಂಕೃತವಾದ ಮಂಟಪ ಹಜಾರದಲ್ಲಿತ್ತು. 'ಇಲ್ಲಿ ಬೇಡ, ಮೇಲಿನ ಕೋಣೆಯಲ್ಲಿ ಮಾತನಾಡೋಣ' ಅಂದ್ರು ಸತ್ಯನಾರಾಯಣ್. ಸುಸಜ್ಜಿತವಾದ ಕಛೇರಿ ಅಲ್ಲಿತ್ತು. ಗಣಕಯಂತ್ರ ನಗುತ್ತಿತ್ತು. ಸಕಲ ವಿಘ್ನಗಳ ವಿನಾಶಕ ಗಣಪತಿಯ ಅಭಯಹಸ್ತವಿತ್ತು. ನಿಮ್ಮ ಪ್ರಶ್ನಾವಳಿ ತುಂಬಾ ಸರಳವಾಗಿದೆ. ನಾನು ನಿಧಾನವಾಗಿ ಹೇಳುತ್ತಾ ಹೋಗುತ್ತೇನೆ ಅಂದು, ಮಾತನಾಡಲು ಉಪಕ್ರಮಿಸಿದ್ರು.

ನನ್ನ ತಾತ ಕೇಶವಯ್ಯನವರು, ಬರಗೂರಿನವರು; ಬರಗೂರು ಸಣ್ಣಪ್ಪನವರು ಅಂತಾನೆ ಜನ ಅವರನ್ನು

ಕರೀತಾ ಇದ್ದದ್ದು. ನನ್ನ ಅಜ್ಜಿ ಪೂಂಗಾಮೆಯ ಗೌರಮ್ಮ. ನನ್ನ ತಂದೆ ಪಿ.ಕೆ. ಚನ್ನಕೇಶವಯ್ಯ ಬರಗೂರಿಗೆ ದತ್ತು, ನನ್ನ ತಾಯಿ ಲಲಿತಮ್ಮ ಮರಿತಮ್ಮನಹಳ್ಳಿಯವರು. ಬರಗೂರಿನಲ್ಲಿ ಸರಿಯಾಗಿ ಮಳೆ ಇರಲಿಲ್ಲವಂತೆ. ನಾಲೆ ಇರಲಿಲ್ಲ. ಒಣ ಪ್ರದೇಶ. ಅಡಕೆ ತೋಟ ಆಗ್ತಿರಲಿಲ್ಲ. ಹಾಗಾಗಿ ವೀಳೆತೋಟಾನೇ ಜೀವನಕ್ಕೆ ಆಧಾರ. ಹೊಲಗದ್ದೆಯನ್ನು ಇವರು ಜಾಸ್ತಿ ಮಾಡ್ತಿರಲಿಲ್ಲ. ಅದನ್ನು ಬೇರೆಯವರ ಕೈಲಿ ಮಾಡಿಸ್ತಾ ಇದ್ರು. ಅಡಕೆ ತೋಟ ಸ್ವಂತವಾಗಿ ಮಾಡೋರು. ಬಸವಾಪಟ್ಟಣದಲ್ಲಿ ಜಮೀನು ಖರೀದಿಸಿ ಅಡಕೆ ತೋಟ ಮಾಡಿದ್ರು. ತಂದೆ ಅಡಕೆ ತೋಟ ಚೇಣಿ ಮಾಡೋರು. ತೋಟದಲ್ಲಿನ ಫಸಲನ್ನು ಅಂದಾಜು ಮಾಡಿ, ಮೊದಲೇ ಸ್ವಲ್ಪ ಹಣ ಪಾವತಿ ಮಾಡೋರು. ಅನಂತರ ಅಡಿಕೆ ಫಸಲನ್ನು ಶಿವಮೊಗ್ಗದಲ್ಲಿ ಮಾರೋರು. ತಂದೆಗೆ ಒಂದು ಎಕರೆ ಅಡಿಕೆ ತೋಟವಿತ್ತು. ಅನಂತರ ಎರಡು ಎಕರೆ ಹೊಲ ಖರೀದಿಸಿ ಅದಕ್ಕೆ ಅಡಿಕೆ, ತೆಂಗು ಹಾಕಿದ್ರು. ನನ್ನ ತಂದೆಗೆ ನಾವು ನಾಲ್ಕು ಗಂಡು, ಮೂರು ಹೆಣ್ಣು. ನನ್ನ ತಾಯಿ ನಮ್ಮ ತಂದೆಗೆ ಎರಡನೆಯ ಹೆಂಡತಿ. ಮೊದಲನೇ ಹೆಂಡತಿಗೆ ಒಬ್ಬ ಮಗ, ಎರಡು ಜನ ಹೆಣ್ಣು ಮಕ್ಕಳಿದ್ರು. ನನ್ನ ತಂದೆ ಬೆಳಗ್ಗೆ ಎದ್ದು ತೋಟಕ್ಕೆ ಹೋಗುವಾಗ ನಮ್ಮನ್ನೂ ಜತೆಗೆ ಕರೆದುಕೊಂಡು ಹೋಗೋರು. ಅಲ್ಲಿ ಅಡಿಕೆಗೆ ನೀರು ಹಾಕಿ, ಇತರೆ ಕೆಲಸ ಮಾಡಿ ಮನೆಗೆ ಬರ್ತ್ತಿದ್ವಿ. ಅನಂತರ ನಾವು ವಿದ್ಯಾಭ್ಯಾಸ ಮಾಡ್ತಿದ್ವಿ. ನನ್ನ ತಂದೆ ಅವರ ನಿತ್ಯಕರ್ಮಗಳನ್ನು ಮುಗಿಸಿ ಮತ್ತೆ ತೋಟಕ್ಕೆ ಹೋಗ್ತಿದ್ರು. ವಾರವಾರ ವಿಳ್ಳೇದೆಲೆ ಕುಯ್ದು ಸಂತೇಲಿ ಮಾರೋರು. ಆಗ ತಿಂಗಳ ಆದಾಯ ವಿಳ್ಳೇದೆಲೇನೇ. ಅದನ್ನು ಮಾರಿ ಬಂದ ಹಣದಲ್ಲಿಯೇ ಮನೆಗೆ ಬೇಕಾದ ಸಾಮಾನು ತರಬೇಕಿತ್ತು. ವರುಷಕ್ಕೆ ಒಂದು ಸಾರಿ ಬರುವ ಅಡಿಕೆ ದುಡ್ಡು ಇಡಿಗಂಟಾಗುತ್ತಿತ್ತು. ಅಡಿಕೆ ಚೇಣೀಲಿ ತಂದೆಗೆ ಬಹಳ ಅನುಭವ ಇತ್ತು. ಸೆಪ್ಟೆಂಬರ್ ತಿಂಗಳಲ್ಲಿ ಗಣಪತಿಹಬ್ಬ ಕಳೆದ ಬಳಿಕ ಮನೆ ಬಿಟ್ಟುಹೊರಟ್ರೆ, ಜನವರಿ, ಫೆಬ್ರವರೀವರೆಗೆ ಅವರು ಮನೇಲಿ ಇರ್ತ್ತಿರಲಿಲ್ಲ. ತೋಟದಲ್ಲಿ ಸಸಿ ಮರ, ಬಲಿತ ಮರ, ಹಳೇಮರ ಅಂತ ಭಾಗಗಳು ಇರುತ್ತೆ. ಹಳೇ ಮರದಲ್ಲಿ ಅಡಿಕೆ ಹರಳು ಉದುರೋದಿಲ್ಲ. ಹೊಸ ಮರದಲ್ಲಿ ಹರಳು ಉದುರುತ್ತೆ. ಸಣ್ಣಮರಗಳಾದ್ರೆ ಅಳಿಲಿನ ಹಾವಳಿ ಜಾಸ್ತಿ. ದೊಡ್ಡ ಮರದಲ್ಲಿಯಾದ್ರೆ ಅಳಿಲಿನ ಹಾವಳಿ ಇರೋದಿಲ್ಲ. ಇದೆಲ್ಲವನ್ನೂ ನೋಡಬೇಕು. ಚೇಣಿ ಮಾಡುವಾಗ ಮತ್ತೂ ಕೆಲವು ಅಂಶ ಗಮನಿಸಬೇಕು. ಹೋದ ವರುಷ ಎಷ್ಟು ಫಸಲು ಬಂದಿತ್ತು? ಹೋದ ವರುಷ ಮಳೆ ಚೆನ್ನಾಗಿ ಆಗಿದೆಯಾ ಅಥವಾ ಆಗಿಲ್ವಾ? ತೋಟದ ನಿರ್ವಹಣೆ ಉತ್ತಮವಾಗಿದೆಯಾ? ನೀರು, ಗೊಬ್ಬರ ಹಾಕ್ತಿದಾರಾ? ಎಲ್ಲವನ್ನೂ ತಿಳಿಯಬೇಕು. ಹಿಂದೆ ಎಲ್ಲಾ ತೋಟದ ಫಸಲನ್ನು ಹುಂಡಿ ವ್ಯಾಪಾರ ಮಾಡ್ತಿದ್ರು. ಅದು ಕೆಲವು ವರುಷ ನಡೀತು. ಈಗ ಹುಂಡಿ ವ್ಯವಹಾರ ಇಲ್ಲ. ಏನಿದ್ರೂ ಎಣಿಕೆ ಅಥವಾ ಕ್ವಿಂಟಾಲ್ ಲೆಕ್ಕ ಅಷ್ಟೆ. ಈಗ ಚೇಣಿ ಮಾಡೋರೆಲ್ಲಾ ಒಂದು ಲಕ್ಷ ಅಡಿಕೆಗೆ ಇಷ್ಟು ಅಂತ ಎಣಿಕೆ ಮೇಲೆ ಮಾಡ್ತಾರೆ. ನನ್ನ ತಂದೆ ಚೇಣಿ ಮಾಡುವಾಗ ಮೊದಲು ಸ್ವಲ್ಪ ಹಣ ಮುಂಗಡ ಕೊಡೋರು. ಕೆಡವಿಸುವಾಗ ಪೂರ್ತಿ ಹಣ ಕೊಡೋರು. ಎರಡು ತೋಟದ ಅಡಿಕೆಯನ್ನು ಕುಯ್ಸಿಸಿ, ಮಾರಿದ್ರೆ ಹಣ ಸಿಗೋದು. ಮುಂದಿನ ವ್ಯವಹಾರಕ್ಕೆ ಅನುಕೂಲ ಆಗೋದು. ಹಿಂದೆಲ್ಲಾ ಹಳ್ಳಿ ಕಡೆ ಸಾಲ ಮಾಡುವ ವ್ಯವಹಾರ ಇರಲಿಲ್ಲ. ಆವಾಗ ನಂಬಿಕೆ ಇರೋದು. 'ಬಂದ ಅಡಿಕೆ ನಿನಗೆ ಕೊಡ್ತೀನಿ, ಸ್ವಲ್ಪ ಹಣ ಕೊಡು' ಅಂದ್ರೆ ಕೊಟ್ಟುಬಿಡೋರು. ಸಾಲ ಅನ್ನುವ ಹೆಸರಲ್ಲಿ ದುಡ್ಡು ತೊಗೋತಾ ಇರಲಿಲ್ಲ. ಆ ಕಾಲದಲ್ಲಿ ನಮ್ಮ ತಂದೆಯ ವ್ಯವಹಾರದಿಂದ ವರುಷಕ್ಕೆ ಹತ್ತರಿಂದ ಹದಿನೈದು ಸಾವಿರ ಉಳಿಯೋದು. ಅದರಲ್ಲೇ ನಮ್ಮ ಜೀವನ ಆಗೋದು. ಐದು ಜನ ಹೆಣ್ಣು ಮಕ್ಕಳ ಮದುವೆ, ಬಸುರಿ, ಬಾಣಂತಿ, ಮುಂಜಿ, ಏನು ಹುಡುಗಾಟಾನೇ! ಎಲ್ಲಾ ಮಾಡಬೇಕು ಅಂದ್ರೆ! ಅಷ್ಟೆಲ್ಲಾ ತಂದೆ ಮಾಡಿದಾರೆ, ಅದೂ ವ್ಯವಸಾಯದಿಂದ, ಹಾಗೇ ಸುಮಾರು ೨೫ ವರುಷಗಳ ಕಾಲ ಮಾಡಿದ ಚೇಣಿ ವ್ಯವಹಾರದಿಂದ.

ನನ್ನ ತಾಯಿ ತುಂಬಾ ಕಷ್ಟದ ಪ್ರಾಣಿ. ಬೆಳಗ್ಗೆ ನಾಲ್ಕೂವರೆಗೆ ಏಳೋರು. ಆವಾಗೆಲ್ಲಾ ನಲ್ಲಿ ಇರಲಿಲ್ಲ. ನಮ್ಮ ಬಟ್ಟೇನೆಲ್ಲಾ ತೊಗೊಂಡು ಹೋಗಿ ಒಗೆದು, ಕುಡಿಯೋ ನೀರನ್ನೂ ತೋಟದಿಂದ ತಲೆ ಮೇಲೆ ಹೊತ್ತುಕೊಂಡು ಬರೋರು. ಅನಂತರ ನಮ್ಮನ್ನು ಏಳಿಸಿ, ಓದಿಸ್ತಾ ಇದ್ದೋರು ನನ್ನ ತಾಯೀನೇ. ನನ್ನ ತಂದೆ ಚೇಣಿಗೆ ಅಂತ ಊರು ಬಿಟ್ಟು ಹೋಗೋರು. ಆವಾಗ ಈಗಿನಂತೆ 'ಓದಬೇಕು' ಅನ್ನುವ ಪ್ರೇರಣೆ ಸಹಾ ಇರಲಿಲ್ಲ. ಹಾಗಾಗಿ ತಾಯಿ ಒತ್ತಾಸೆ ನಾವು ವಿದ್ಯಾವಂತರಾಗಲು ಕಾರಣ. ನಮ್ಮ ಊರಿಗೆ ವಿದ್ಯುತ್ ಶಕ್ತಿ ಬಂದದ್ದು ೧೯೫೮ರಲ್ಲಿ. ನಾವು ಬೀದಿ ಜಗಲೀಲೆ ಕುಳಿತು ಓದ್ತಾ ಇದ್ದದ್ದು. ಭತ್ತ ಕುಟ್ಟಬೇಕು, ಅಕ್ಕಿ, ರಾಗಿ ಬೀಸಬೇಕು, ಹಾಲು ಕರೀಬೇಕಿತ್ತು; ಮೊಸರು ಮಜ್ಜಿಗೆ ಕಡೀಬೇಕಿತ್ತು. ಇವು ತಾಯಿಗಿದ್ದ ಕೆಲಸಗಳು. ಆಗ ಹೆಣ್ಣುಮಕ್ಕಳ ಕೆಲಸ ಮುಗೀತಾನೇ ಇರಲಿಲ್ಲ. ಈಗಿನ ತರಹ ಯಾರೂ ಸಹಾಯ ಸಹಾ ಮಾಡ್ತಿರಲಿಲ್ಲ. ಹಾಗಾಗಿ ನನ್ನ ತಾಯಿ ದುಡಿದಿದ್ದರಿಂದಲೇ ನಮ್ಮ ಕುಟುಂಬಕ್ಕೆ ನೆಲೆ ಬಂದದ್ದು.

ನನ್ನ ತಂದೆ ಜತೆ ನಾನೂ ತೋಟಕ್ಕೆ ಹೋಗಿ ಬಹಳ ವಿಚಾರ ತಿಳಿದುಕೊಂಡೆ. ಸತ್ತ ಅಡಿಕೆ ಗಿಡಗಳ ಜಾಗಕ್ಕೆ ಹೊಸ ಸಸಿ ನೆಡುವುದು,

ಬಾಳೆಗಿಡ ಹಾಕುವುದು, ಎಲೆಹಂಬು ತೆಕ್ಕೆ ಬಿಡುವುದು, ಎಲ್ಲಾ ತಂದೇನೇ ತಿಳಿಸಿದ್ದು. ಅಡಿಕೆ ಗಿಡಾನ ಎಂಟು ಅಡಿ ದಾಯಕ್ಕೆ ನೆಡಬೇಕು. ಮೊದಲು ಮೂರು ಅಡಿ ಆಳದ ಗುಂಡಿ ತೆಗೆದು ಒಂದು ತಿಂಗಳು ಬಿಡಬೇಕು. ಅದು ಬಿಸಿಲಲ್ಲಿ ಚೆನ್ನಾಗಿ ಒಣಗಬೇಕು. ಅನಂತರ ಗುಂಡಿಗೆ ನಾಟಿಗೊಬ್ಬರ ತುಂಬಿ ಅಡಿಕೆ ಸಸಿ ನೆಡಬೇಕು. ಹಿಂದೆ ನೆಲದಲ್ಲಿಯೇ ಅಡಿಕೆ ಸಸಿ ಏಳಿಸ್ತಾ ಇದ್ವಿ. ಆದರೆ ಈಗ ಪ್ಯಾಕೆಟ್‌ನಲ್ಲಿ ಸಸೀನ ಏಳಿಸ್ತಾ ಇದೀವಿ. ನೆಲದಲ್ಲಿ ಅಡಿಕೆ ಸಸೀನ ಏಳಿಸಿದಾಗ, ತೆಂಗಿನಗರಿಯ ದಸಿಯನ್ನು ಚೂಪಾಗಿ ಮಾಡಿಕೊಂಡು ಅದರಲ್ಲಿ ಸಸೀನ ತೆಗೀತಿದ್ವಿ. ಮೊದಲು ಸಸಿ ಮಡೀಗೆ ನೀರನ್ನು ಹಾಕಿ, ಕೆಸರು ಮಾಡಿ, ಹೆಪ್ಪು ಬರುವ ಹಾಗೆ ತುಳಿದೂ ತುಳಿದೂ, ಆರು ಅಂಗುಲ ಚಚ್ಚೌಕದ ಹೆಪ್ಪು ಬರುವ ಹಾಗೆ ಸಸಿಯನ್ನು ಎಬ್ಬಿಸಿ ಅದನ್ನು ಗುಂಡೀಲಿ ನೆಡ್ತಾ ಇದ್ವಿ. ಒಣಗಿದ ಗುಂಡೀಲಿ ಚೆನ್ನಾಗಿ ಗಾಳಿ ಆಡಿರುತ್ತೆ, ಹೆಪ್ಪು ಸಮೇತ ಅಡಿಕೆ ಸಸಿ ನೆಟ್ಟಾಗ ಬೇರು ಚೆನ್ನಾಗಿ ಬಿಡುತ್ತೆ. ಅಡಿಕೆ ಸಸಿ ಹಾಕಿದಾಗ ದಿನಾಲೂ ಬೆಳಗ್ಗೆ, ಸಂಜೆ ಅರ್ಧ ಗಡಿಗೆ ನೀರು ಹಾಕಬೇಕು. ಜಾಸ್ತೀನೂ ಆಗಬಾರದು, ಒಣಗಲೂಬಾರದು. ಆ ತರಹ ಒಂದು ತಿಂಗಳು ನೀರು ಹಾಕಿದ್ರೆ ಚೆನ್ನಾಗಿ ಬೇರು ಬಿಡುತ್ತೆ. ಐದಾರು ತಿಂಗಳು ಈ ರೀತಿ ನಿರ್ವಹಣೆ ಮಾಡಿದ್ರೆ ಎಲ್ಲಾ ಅಡಿಕೆ ಗಿಡಗಳೂ ನಿಲ್ಲುತ್ವೆ. ವರುಷಕ್ಕೆ ಒಂದು ಬಾರಿ ಗೊಬ್ಬರ ಕೊಟ್ರೆ ಎಂಟು ವರುಷಕ್ಕೆ ಅಡಿಕೆ ಫಸಲು ಆರಂಭವಾಗುತ್ತೆ. ನಾಲ್ಕು ಅಡಿಕೆ ಗಿಡದ ಮಧ್ಯೆ ಬಾಳೆ ಬರುವ ಹಾಗೆ ಉದ್ದಕ್ಕೂ ಬಾಳೆ ಹಾಕಬಹುದು. ಬಾಳೆಗೆ ಪ್ರತ್ಯೇಕವಾದ ಬೇಸಾಯ ಬೇಕಿಲ್ಲ. ಅಡಿಕೆಗೆ ಹಾಕಿದ ಗೊಬ್ಬರ ಮತ್ತು ನೀರನ್ನೇ ಹೀರಿ ಬಾಳೆ ಸಹಾ ಬೆಳೆಯುತ್ತೆ. ಬಾಳೇಲಿ ಒಂದು ಕೂಳೆ ಮಾತ್ರಾ ತೊಗೋಬೇಕು. ಅಂದ್ರೆ ಒಂದು ಬುಡದಿಂದ ಎರಡು ಗೊನೆ ಮಾತ್ರ. ಅನಂತ್ರ ಬಾಳೆಗಿಡ ತೇಲುತ್ತೆ. ಆಮೇಲೆ ಗೊನೆ ಚೆನ್ನಾಗಿ ಬರೋದಿಲ್ಲ. ಹಾಗಾಗಿ ಹಳೇದನ್ನು ಕಿತ್ತು ಬೇರೆ ಕಂದನ್ನು ನೆಡಬೇಕು. ಅಡಿಕೆ ಗಿಡಕ್ಕೆ ಎಲೆಹಂಬನ್ನು ಹಬ್ಬಿಸಿರ್ತೀವಿ. ಅದನ್ನು ನಾವೇ ಕುಯ್ತಾ ಇದ್ವಿ. ಈಗ ಎಲ್ಲಾ ಹುಂಡಿ ಕೊಡ್ತಾರೆ. ನಾವೇ ಕೊಣನೂರು, ಕೇರಳಾಪುರ ಸಂತೆಗೆ ತೊಗೊಂಡು ಹೋಗಿ ಮಾರೋವಿ. ಆಗ ಒಂದು ಕವಳಿಗೆ ಅಂದ್ರೆ ಹತ್ತು ಎಲೆ, ೧೦೦ ಎಲೆಗೆ ಒಂದು ಕಟ್ಟು. ಹೀಗೆ ಕಟ್ಟಿಕೊಂಡು ಹೋಗಿ ಮಾರೋವಿ. ಸಂತೆಯಿಂದ ಮನೆಗೆ ಬೇಕಾದ ತರಕಾರಿ, ಮನೆ ಸಾಮಾನು ತರ್ತಿದ್ವಿ. ತೆಂಗಿನ ಗಿಡಗಳನ್ನು ಅಡಿಕೆ ಮಧ್ಯೆ ಹಾಕ್ತಿರಲಿಲ್ಲ. ತೆಂಗಿನಗರಿ ಮೇಲೆ ಅಳಿಲು ಬಂದು ಬಿಡುತ್ತೆ. ಆದ್ದರಿಂದ ತೋಟದ ಸುತ್ತಾ ತೆಂಗಿರಬೇಕು. ಸೌದೆಗೆ ಬೇಕಾದ ಮರಗಿಡ, ಮಾವು, ಹಲಸು ಹಾಕ್ಕೋಬಹುದು ಅಷ್ಟೆ. ಹೀಗೆ ನಾನು ನನ್ನ ೧೭ನೇ ವಯಸ್ಸಿನವರೆಗೆ ತಂದೆ ಜತೇಲಿದ್ದು ವ್ಯವಸಾಯ ಮಾಡಿದೆ. ಜೊತೆಗೆ ನಮ್ಮ ತಾಯಿಯ ತಂದೆ ಅಂದ್ರೆ ತಾತ ಅವರದು ಈಗಲೂ ಆರಂಬಾನೇ. ಅವರ ಜೀವನಾನೇ ಬೇಸಾಯ. ಅವರು ಜೋಡಿದಾರರಾಗಿದ್ರು. ಅವರಿಗೆ ೬೦, ೭೦ ಎಕರೆ ಜಮೀನಿತ್ತು. ನಾನು ಸಣ್ಣ ವಯಸ್ಸಿನಲ್ಲಿ ಬೆಳೆದದ್ದೆಲ್ಲಾ ನಮ್ಮ ಅಜ್ಜಿ ಊರು ಮರಿತಮ್ಮನಹಳ್ಳೀಲೆ. ನಮ್ಮ ಸೋದರಮಾವನ ಜತೆ ದನಕಾಯಲು ಹೋಗ್ತಿದ್ದೆ, ಜಮೀನು ಉಳೋದನ್ನು ನೋಡ್ತಿದ್ದೆ. ಅವರಿಗೆ ಆಗೆಲ್ಲಾ ಗದ್ದೆ ಸಹಾ ಇತ್ತು. ಆದ್ದರಿಂದ ನನಗೆ ಬೇಸಾಯದಲ್ಲಿ ಬಹಳವಾಗಿ ಆಸಕ್ತಿ ಬಂತು. ನಾವು ಹುಡುಗರಿದ್ದಾಗ 'ನಿಮ್ಮ ಜೀವನ ಈ ರೀತಿ ರೂಪಿಸಿಕೋಬೇಕು' ಅಂತ ಹೇಳುವವರೇ ಇರಲಿಲ್ಲ. ಹಳ್ಳಿ ಅಷ್ಟು ಹಿಂದುಳಿದಿತ್ತು. ನಮ್ಮ ಊರಲ್ಲಿ ಎಸ್‌ಎಸ್‌ಎಲ್‌ಸಿ ವರೆಗೆ ಇತ್ತು. ಎಸ್‌ಎಸ್‌ಎಲ್‌ಸಿ ಅನಂತರ ಏನು ಮಾಡಬೇಕು ಅಂತ ಹೇಳುವ ಜನರು ಇತ್ತಿಲ್ಲ. ನಮಗೆ SSLC ಆದ ಮೇಲೆ, PUC; ಅದಾದ ಮೇಲೆ BSc ಈ ರೀತಿ ಇತ್ತು. ಇದೇ ನಮ್ಮೂರಲ್ಲಿ ಹೆಚ್ಚಿನ ವಿದ್ಯಾಭ್ಯಾಸ. ವಿದ್ಯಾವಂತರು ಜಾಸ್ತಿ ಇರಲಿಲ್ಲ. ನಮ್ಮ ಕಾಲದಿಂದ B.E., MBBS ಓದೋರು ಬಂದ್ರೇ ಹೊರತು, ಹಿಂದೆ ವಿಚಾರ ತಿಳಿದವರು ಇತ್ತಿಲ್ಲ, ಹಣಕಾಸಿನ ಸೌಕರ್ಯವೂ ಇತ್ತಿಲ್ಲ. ನನ್ನ ತಂದೆ 'ನಿಮ್ಮ ನಿಮ್ಮ ಜವಾಬ್ದಾರಿ ನೀವು ನೋಡಿಕೊಳ್ಳಿ, ಇಷ್ಟು ಜಮೀನಿನಲ್ಲಿ ನಿಮ್ಮನ್ನು ನೋಡಿಕೊಳ್ಳಲು ಆಗೋದಿಲ್ಲ' ಅನ್ನೋರು. ನೀವು ಸರಿಯಾಗಿ ಓದಿಕೊಂಡು ಊರು ಖಾಲಿ ಮಾಡಿ ಅಂತಾನೇ ಹೇಳೋರು. ಆದ್ರೆ ನಮ್ಮ ತಾತ, 'ನೋಡಯ್ಯ, ಏನಿದ್ರೂ ವ್ಯವಸಾಯ ಬಿಟ್ರೆ ಇಲ್ಲ. ಭೂಮಿ ತಾಯೀನೇ ನಮಗೆ ಕೊಡಬೇಕು. ಅವಳ ಜತೆ ಇದ್ರೇನೇ ನಿಮಗೆ ಒಳ್ಳೇದಾಗುತ್ತೆ. ಹಾಗಾಗಿ ನೀವು ಭೂಮಿ ತಾಯೀನ ನಂಬಿ ವ್ಯವಸಾಯ ಮಾಡಿ, ಬೇರೆಯದನ್ನು ನಂಬಬೇಡಿ' ಅನ್ನೋರು.

ಹಾಗಾಗಿ ನಾನು Degree ಮುಗಿದ ಮೇಲೆ ಕೇರಳಾಪುರದಲ್ಲಿ ಒಂದು ವರುಷ ಖಾಸಗಿ ಶಾಲೇಲಿ ಮೇಷ್ಟರಾಗಿದ್ದೆ. ಆಗಲೂ ನಮ್ಮ ನೆಂಟರು, ಇಷ್ಟರು, ಸ್ನೇಹಿತರು ಎಲ್ಲರೂ ತೋಟಗಾರರೇನೆ. ಹಾಗಾಗಿ 'ನಾನೂ ತೋಟ ಮಾಡಬೇಕು' ಅಂತ ಆಸೆ ಅಂಕುರವಾಯ್ತು. ಈ ನಿರ್ಧಾರ ಇನ್ನೂ ದ್ರವರೂಪದಲ್ಲೇ ಇತ್ತು, ಗಟ್ಟಿಯಾಗಿರಲಿಲ್ಲ. ಅನಂತರ ೧೯೬೭ರ Aprilನಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿದೆ. ಆರೋಗ್ಯ ಇಲಾಖೇಲಿ ಪ್ರಥಮದರ್ಜೆ ಸಹಾಯಕನಾಗಿ ಕೆಲಸ ಸಿಗ್ತು. ೧೯೭೧ರಿಂದ ೭೬ರವರೆಗೆ ಹಾಸನದಲ್ಲಿದ್ದೆ. ೧೯೭೬ರಿಂದ ಮೈಸೂರಿನಲ್ಲಿಯೇ ನೆಲೆಸಿದೆ. ೧೯೮೬ರಲ್ಲಿ ಚಿಕ್ಕಮಗಳೂರಿಗೆ ಹೋಗಬೇಕಾಗಿ ಬಂತು. ಆಗ ಅಲ್ಲಿ Estate area ಕಡೆ ಎಲ್ಲಾ ಹೋಗ್ತಾ ಇದ್ದೆ. ಅಲ್ಲಿಯ ವಾತಾವರಣ, ತೋಟದಲ್ಲಿರುವಾಗ ಮನಕ್ಕೆ ಆಗುವ ಹರುಷ ಎಲ್ಲವನ್ನೂ ನೋಡಿದಾಗ ನಾನು ಶಿಕ್ಷಕನಾದಾಗ ಮಾಡಿದ್ದ ನಿರ್ಧಾರ

ಗಟ್ಟಿಯಾಯ್ತು. ಪ್ರಕೃತಿಯೇ ನನ್ನ ಮನಃಪರಿವರ್ತನೆಗೆ ಕಾರಣವಾಯ್ತು. ೧೯೮೯ರಿಂದ ೯೨ರವರೆಗೆ ಮಂಡ್ಯದಲ್ಲಿದ್ದೆ. ೧೯೯೨ಕ್ಕೆ ಮೈಸೂರಿಗೆ ವಾಪಸ್ಸು ಬಂದೆ. ಇಲ್ಲಿಗೆ ಬಂದ ತಕ್ಷಣ, ಇನ್ನು ತಡ ಮಾಡಬಾರದು ಅಂತ ೯೩ರಲ್ಲಿ ಜಮೀನು ಖರೀದಿಸಲು ನಿರ್ಧಾರ ಮಾಡಿದೆ. ಆಗ ನಾವು ಜಮೀನು ಖರೀದಿ ಮಾಡಲು RTC ತೊಂದರೆ ಇತ್ತು. ನಮ್ಮ ಹೆಸರಿನಲ್ಲಿ ಜಮೀನು ಖರೀದಿಸುವಂತಿರಲಿಲ್ಲ. ನನ್ನ ಭಾಮೈದನ ಹೆಸರಿನಲ್ಲಿ, ನಂಜನಗೂಡಿನ ಹತ್ತಿರವಿರುವ ಚಿನ್ನದಗುಡಿಹುಂಡೀಲಿ ಜಮೀನು ಖರೀದಿಸಿದೆ. ನಾವು ಚಾಮುಂಡಿಪುರದಲ್ಲಿದ್ದಾಗ ನಮ್ಮ ಪಕ್ಕದ ಮನೇಲಿ ನಿವೃತ್ತ ತಹಸಿಲ್ದಾರರು ಇದ್ರು. ಅವರು ಅಲ್ಲಿ ಜಮೀನು ಮಾಡಿದ್ರು. ಅವರು ತೀರಿಹೋದ ಮೇಲೆ, ಅವರ ಮಕ್ಕಳು 'ನಮಗೆ ಜಮೀನು ಮಾಡಲು ಆಗೋಲ್ಲ' ಅಂತ ನಮಗೆ ಮಾರಿದ್ರು. ಒಂದು ಎಕರೆಗೆ ೧೫ ಸಾವಿರ ರೂಪಾಯಿ ದರದಲ್ಲಿ ಎಂಟೂಕಾಲು ಎಕರೆ ಜಮೀನು ಖರೀದಿಸಿದ್ವಿ. ಈ ಜಮೀನು ಇರೋದು ಕೆರೆ ಅಂಗಳದಲ್ಲಿ. ಜಯಚಾಮರಾಜೇಂದ್ರ ಒಡೆಯರ್ ಕಾಲದಿಂದ, ನಮ್ಮದು ನಾಲ್ಕನೆಯ Registration. ಈಗಲೂ ಜಯಚಾಮರಾಜೇಂದ್ರ ಒಡೆಯರ್ ಪತ್ರ ನನ್ನ ಬಳಿ ಇದೆ. ೧೨೫ ಎಕರೆ ಕೆರೆ ಜಮೀನಿನಲ್ಲಿ, ಈ ಎಂಟೂಕಾಲು ಎಕರೇನ ಹಿಂದೆನೇ ಮಾರಿದಾರೆ. ಊರಲ್ಲಿ ನನ್ನ ಹೆಂಡತಿ ಹೆಸರಿನಲ್ಲಿ ಈಗ ಮೂರೂಕಾಲು ಎಕರೆ ತೆಂಗಿನ ತೋಟ ಇದೆ. ಚಿನ್ನದಗುಡಿಹುಂಡೀಲಿ ನಾನು ಜಮೀನು ಖರೀದಿಸಿದಾಗ ಅದು ಖಾಲಿ ಕೆರೆ. ಅದರಲ್ಲಿ ಕಾಡು ಗಿಡ ಇತ್ತು ಅಷ್ಟೆ. ಅದನ್ನು ಶುಚಿಗೊಳಿಸಲು ನಾಲ್ಕು ಸಾವಿರ ಬೇಕಾಯ್ತು. ಅನಂತರ ಬೇಲಿ ಹಾಕಿಸಿ, ಮೂರು ಬೋರ್‌ವೆಲ್ ಹಾಕಿಸಿದೆ. ಅನಂತರ ಬಸವಾಪಟ್ಟಣದಿಂದ ೨೦೦೦ ಅಡಿಕೆ ಸಸಿ ತಂದು ಕೂರಿಸಿದೆ. ೩೦೦೦ ಬಾಳೆ ಹಾಕಿದ್ವಿ. ಆಗ ನಾನು ಕೆ.ಆರ್.ಆಸ್ಪತ್ರೇಲಿ Secretary ಆಗಿದ್ದೆ. ವಾರಕ್ಕೊಂದು ಸಲ ಜಮೀನಿಗೆ ಹೋಗ್ತಿದ್ದೆ. ಆಳುಗಳ ಮೇಲೆ ಎಲ್ಲಾ ಜವಾಬ್ದಾರಿ ಇತ್ತು. ವಾರಕ್ಕೆ ಒಂದು ಸಾರಿ ಜಮೀನಿಗೆ ಹೋಗ್ತಿದ್ದೆ. ಆಳುಗಳು ಸರಿಯಾಗಿ ನೋಡಿಕೊಳ್ಳದೆ, ನೀರು ಹಾಕದೆ ತುಂಬಾ ಸಸಿಗಳು ಹೋಗಿಬಿಟ್ವು. ಆದರೆ ಈಗ ಒಂದು ವರುಷದಿಂದ, ದಿನಾ ಜಮೀನಿಗೆ ಹೋಗ್ತಿದೀನಿ. ನಾಲ್ಕು ಎಕರೆಗೆ ಕಬ್ಬು ಹಾಕಿದೀನಿ, ಒಂದು ಎಕರೇಲಿ ಭತ್ತ ಇದೆ. ೪೦೦ ಗಿಡ ಅಡಿಕೆ ಇದೆ, ೧೨೦ ತೆಂಗು ಸುತ್ತಲೂ ಇದೆ. ಅಡಿಕೇಲಿ ಒಂದು ೨೫ ಗಿಡದಲ್ಲಿ ಈಗ ಫಸಲು ಇದೆ. ನಾನು ಒಂದರಿಂದ ಎರಡು ಗುಂಟೇಲಿ, ತರಕಾರಿ ಸಹಾ ಬೆಳೀತೀನಿ. ಟೊಮ್ಯಾಟೋ, ಬದನೆ, ಮೂಲಂಗಿ, ಕ್ಯಾರೆಟ್, ಮೆಣಸಿನಕಾಯಿ, ಬೀನ್ಸ್, ಕೋಸು, ಬೆಂಡೆ, ಬೀಟ್‌ರೂಟ್, ಸೊಪ್ಪು ಎಲ್ಲವನ್ನೂ ಬೆಳೀತಾ ಇದೀನಿ.

ನನ್ನ ಅನುಭವದಲ್ಲಿ ಕೂಲಿ ಕೊಟ್ಟು ತರಕಾರಿ ಬೆಳೆದ್ರೆ ಅನುಕೂಲ ಆಗೋಲ್ಲ. ನಾನು ಟೊಮ್ಯಾಟೋ ಬೆಳೆದಿದ್ದೆ. ಒಂದು ಗೂಡೆಗೆ (ಒಂದು ಕುಕ್ಕೆಗೆ) ೨೦ ರೂಪಾಯಿ ಇತ್ತು. ಆಳಿನ ಕೈಲಿ ಎರಡು ಕುಕ್ಕೆ ಕುಯ್ಯಿಸಲು ೪೦ ರೂಪಾಯಿ ಕೂಲೀನೇ ಕೊಡ್ತಿದ್ದೆ. ಮಾರುಕಟ್ಟೆ ಧಾರಣೆ ಕುಯ್ಸಿಸಿದ ಕೂಲಿಗೆ ಆಗ್ತಿತ್ತು. ಆದ್ದರಿಂದ ತರಕಾರೀಲಿ ಜೀವನ ಮಾಡಬೇಕಾದ್ರೆ ಸ್ವಂತ ಬೇಸಾಯ ಮಾಡಬೇಕು.

ನನಗೆ ಬೀನ್ಸು ಹಾಗೂ ಬೆಂಡೇಲಿ ಚೆನ್ನಾಗಿ workout ಆಯ್ತು. ಬೀನ್ಸಿಗೆ ಬೇಸಾಯ ಜಾಸ್ತಿ, ಬೆಂಡೆಗೆ ಕಡಿಮೆ. ಬೀನ್ಸ್‌ಗೆ ಖಾಯಿಲೆ ಜಾಸ್ತಿ, ಬೆಂಡೆಗೆ ಕಡಿಮೆ. ಆದಾಯದ ದೃಷ್ಟಿಯಿಂದ ಬೀನ್ಸ್ ಒಳ್ಳೆಯದು. ಬೇಸಾಯದ ದೃಷ್ಟಿಯಿಂದ ಬೆಂಡೆ ಒಳ್ಳೆಯದು. ಈಗ ವರುಷದ ಎಲ್ಲಾ ಹಂಗಾಮಿನಲ್ಲೂ ಎಲ್ಲಾ ತರಹದ ತರಕಾರಿ ಬೆಳೀಬಹುದು. ಆ ತರಹದ ಹೈಬ್ರಿಡ್ ಬೀಜಗಳನ್ನು ಅಭಿವೃದ್ಧಿ ಮಾಡಿದಾರೆ. ಬದನೆ long duration crop. ಆರು ತಿಂಗಳವರೆಗೆ ಕಾಯಿ ಕೊಡುತ್ತೆ. ಟೊಮ್ಯಾಟೋ ಎರಡು ತಿಂಗಳು ಮಾತ್ರ ಹಣ್ಣು ಕೊಡುತ್ತೆ. ಒಂದೇ ಸಾರಿ ಖಟಾವಾಗುವ ಕೋಸು, ಬೀಟರೂಟ್, ಕ್ಯಾರೆಟ್ ಬೆಳೆದಾಗ, ಮಾರುಕಟ್ಟೆ ಧಾರಣೆ ಮೇಲೆ ಲಾಭ ಅವಲಂಬಿಸಿರುತ್ತೆ. ನಾನು ಒಂದು ಕೆ.ಜಿ. ಕೋಸನ್ನು ಎಪ್ಪತ್ತು ಪೈಸೆಯಿಂದ ಮೂರು ರೂಪಾಯಿವರೆಗೂ ಮಾರಿದೀನಿ. ನಾನು ಈ ತರಕಾರಿಗಳನ್ನು ನಾಲ್ಕು ಗುಂಟೆ ಪ್ರದೇಶದಲ್ಲಿ ಬೆಳೆದಿದ್ದೀನಿ. ಮನೆಬಳಕೆಗೂ ಆಗ್ತಿದೆ . ಅಲ್ಪಸ್ವಲ್ಪ ಆದಾಯಾನೂ ಸಿಗ್ತಿದೆ. ನಾನು ನನ್ನ ಅಡಿಕೆ ತೆಂಗಿನ ತೋಟದ ಕೆಲಸ ಮಾಡುವ ಐದು ಜನ ಕೂಲಿಗಳನ್ನು ಒಂದು ಅರ್ಧ ಘಂಟೆ ಈ ತರಕಾರಿ ಕೆಲಸಕ್ಕೂ ಕರ್ಕೊತೀನಿ. ಹಾಗಾಗಿ ಹೆಚ್ಚಿನ ಹೊರೆ ಆಗ್ತಿಲ್ಲ. ಎಕರೆಗಟ್ಟಲೆ ಬೇಸಾಯ ಮಾಡಿದ್ರೆ ಕೂಲಿ ಆಳನ್ನ ತರಕಾರಿಗೇ ಬಿಡಬೇಕು. ನಮ್ಮ ಕೂಲಿ workout ಆಗೋಲ್ಲ. ನನ್ನ ಅನುಭವ ಏನಪ್ಪಾ ಅಂದ್ರೆ ಸ್ವಂತ ದುಡಿದ್ರೆ ಒಂದು ಎಕರೇಲಿ ತರಕಾರಿ ಬೆಳೆದು ಒಂದು ಸಂಸಾರ ಸಾಕಬಹುದು. ಆಳುಗಳ ಕೈಲಿ ಮಾಡಿಸ್ತೀನಿ ಅಂದ್ರೆ ಮನೆಗೆ ತರಕಾರಿ ಆಗುತ್ತೆ, ಬರುವ ಸ್ವಲ್ಪ ಆದಾಯ ಆಳುಗಳಿಗೆ ಹೋಗುತ್ತೆ.

ನಾನು ಒಂದು ಜತೆ ಎತ್ತು ಇಟ್ಟಿದೀನಿ, ತೋಟದಲ್ಲಿಯೇ ಹುಲ್ಲಿರುತ್ತೆ. ಅದಕ್ಕಾಗಿ ದುಡ್ಡು ಕೊಡಬೇಕಿಲ್ಲ. ಗೊಬ್ಬರ ನಮಗೆ free ಆಗಿ ಸಿಗುತ್ತೆ. ಹೊರಗಡೆಯಿಂದ ತಂದ್ರೆ ಒಂದು ಆಳಿಗೆ ನೂರು ರೂಪಾಯಿ ಕೊಡಬೇಕು. ನಾವೇ ಎತ್ತು ಸಾಕಿರುವುದರಿಂದ ನಮ್ಮ ಆಳುಗಳೇ ಉಳ್ತಾರೆ. ಜತೇಲಿ ಒಂದು ಸಿಂಧಿ ಹಸು ಸಹಾ ಇಟ್ಟಿದೀನಿ. ಮನೆಗೆ ಬೇಕಾದ ಹಾಲು, ಮೊಸರು, ಬೆಣ್ಣೆ, ತುಪ್ಪ ಎಲ್ಲಾ ಸಿಗುತ್ತೆ. ಸುಮಾರು

ಆರು ಲೀಟರ್ ಹಾಲು ಸಿಗುತ್ತೆ. ಒಂದು ಹೊತ್ತಿನದನ್ನು ಡೈರಿಗೆ ಹಾಕ್ತೀವಿ. ಮತ್ತೊಂದು ಹೊತ್ತಿನದನ್ನು ಮನೆಗೆ ತರ್ತೀವಿ. ನಾನು ಬೆಳಗ್ಗೆ ತೋಟಕ್ಕೆ ಹೋದ್ರೆ, ರಾತ್ರಿಯವರೆಗೂ ಅಲ್ಲೇ ಇರ್ತೀನಿ. ಉಳಿದುಕೊಳ್ಳೋದಕ್ಕೆ ಒಂದು ತೋಟದ ಮನೆ ಇದೆ. ದೊಡ್ಡದಾಗಿ ಒಂದು ಕೊಟ್ಟಿಗೆ ಸಹಾ ಕಟ್ಟಿದೀನಿ. ಆಳುಕಾಳು ಅಲ್ಲಿ ಉಳ್ಕೋತಾರೆ. ಹಸುಕರು, ಎತ್ತಿನಿಂದ ನಮಗೆ Extra Expenditure ಇಲ್ಲ. ಬರೀ ಆದಾಯ ಮಾತ್ರ. ಒಂದು ಜತೆ ಎತ್ತು ಹಾಗೂ ಒಂದು ಹಸುವಿನಿಂದ, ಒಂದು ವರುಷಕ್ಕೆ ೧೫ ಗಾಡಿಗೊಬ್ಬರ ಸಿಗ್ತಾ ಇದೆ. ಅಂದ್ರೆ ಸುಮಾರು ೭೫೦೦ ರೂಪಾಯಿ ಸಿಕ್ಕ ಹಾಗೆ. ನಾನು ಮೂರು ಲೀಟರ್ ಹಾಲು ಮನೆಗೆ ತರ್ತೀನಿ. ಲೀಟರ್‌ಗೆ ಮೈಸೂರಿನಲ್ಲಿ ೧೪ ರೂಪಾಯಿ ಕೊಡಬೇಕು. ಅಂದ್ರೆ ದಿನಕ್ಕೆ ೪೨ ರೂಪಾಯಿ. ತಿಂಗಳಿಗೆ ೧೨೦೦ ರೂಪಾಯಿ. ಅಷ್ಟು ನನಗೆ ಉಳಿದಂತಾಯ್ತು. ಮೂರು ಲೀಟರ್ ಹಾಲು ಡೈರಿಗೆ ಹಾಕ್ತಿದೀವಿ. ಅದೂ ಆದಾಯವೇ. ಹಸುವಿಗೆ ಆರರಿಂದ ಎಂಟು ಸಾವಿರ ಕೊಟ್ಟಿರ್ತೀವಿ. ಹುಟ್ಟಿರುವ ಕರು ಮಾರಿದ್ರೇನೇ ನಮಗೆ ಆರು ಸಾವಿರ ಸಿಗುತ್ತೆ. ಆದ್ದರಿಂದ ಹಸು, ಕರು ಸಾಕುವುದು ರೈತನಿಗೆ ತುಂಬಾ ಆದಾಯವಿದೆ.

ನಾನು ಒಂದು ಸಾರಿ ತೋಟದಲ್ಲಿ ಬೂದಗುಂಬಳಕಾಯಿ ಹಾಕಿಸಿದ್ದೆ. ಫಸಲು ತುಂಬಾ ಚೆನ್ನಾಗಿ ಬಂತು. ಆದರೆ ಮಾರುಕಟ್ಟೇಲಿ ಕಿಲೋಗ್ರಾಂಗೆ ೭೦ ಪೈಸೆ ಧಾರಣೆ ಇತ್ತು. ಅವರ ಬಳಿ ಚರ್ಚೆ ಮಾಡಿ ಕಡೆಗೆ ೭೫ ಪೈಸೇಲಿ ಮಾರಬೇಕಾಯ್ತು. ಲಾರಿ ಬಾಡಿಗೆ, ಖರ್ಚು ಲೆಕ್ಕ ಹಾಕಿದ್ರೆ ಆದಾಯ ಸಿಗಲಿಲ್ಲ. ಅದಾದ ಮೇಲೆ ಮಿಣಿಕೆ ಹಣ್ಣು ಬೆಳೆದ್ವಿ. ಒಂದು ಹಣ್ಣಿಗೆ ಒಂದು ರೂಪಾಯಿ ಸಿಗ್ತು. ಅದರಲ್ಲೂ ಆದಾಯ ಆಗ್ಲಿಲ್ಲ. ಹಾಗಾಗಿ ವಾಣಿಜ್ಯ ಬೆಳೇನ ಸ್ವಂತ ಬೇಸಾಯದಲ್ಲಿ ಮಾಡೋದು ಮಾತ್ರ ಲಾಭಕರ ಅನ್ನುವ ಅಭಿಪ್ರಾಯಕ್ಕೆ ಬಂದೆ.

ಭತ್ತದ ಬೇಸಾಯವನ್ನು ನನ್ನ ತಾತನವರ ಮನೇಲಿದ್ದಾಗ ನೋಡಿದ್ದೆ. ಅದು ಹೇಗೆ ಅಂದ್ರೆ ಮೊದಲು ಉಳುಮೆ ಮಾಡಿ ಒಂದು ಹದಿನೈದು ದಿವಸ ಭೂಮಿ ಒಣಗಲು ಬಿಡಬೇಕು. ಅನಂತರ ೧೫ ದಿನ ನೀರು ಬಿಟ್ಟು ಭೂಮೀನ ಚೆನ್ನಾಗಿ ಕೊಳೆಸಬೇಕು. ಆಮೇಲೆ ಅದಕ್ಕೆ ಗೊಬ್ಬರ ಹಾಕುವುದಕ್ಕಿಂತ ಮುಂಚಿತವಾಗಿ ಹಸಿರು ಸೊಪ್ಪನ್ನು ಹಾಕಬೇಕು. ಹೊಂಗೆ ಸೊಪ್ಪು, ಎಕ್ಕದ ಎಲೆ, ಬೇವಿನಸೊಪ್ಪು ಹಾಕಬೇಕು. ಮೊದಲೆಲ್ಲಾ ಗದ್ದೇಲೇ ಸೊಪ್ಪು ಬೆಳೆದು ಅದನ್ನೇ ತುಳಿಯೋರು. ನಾವೂ ಹೊರಗಡೆ ಸೊಪ್ಪನ್ನು ತಂದು ತುಳಿಸ್ತೀವಿ. ನಮ್ಮ ತೋಟದಲ್ಲಿ ಒಂದು ನೂರು ಬೇವಿನ ಗಿಡ ಇದೆ, ನಾನೇ ಹಾಕಿರೋದು. ಮಣ್ಣಿಗೆ ಹಾಕಿದ್ರೆ ಈ ಸೊಪ್ಪು ಉತ್ತಮ ಗೊಬ್ಬರವಾಗುತ್ತೆ. ಬೇವಿನಮರವನ್ನು ೨೦ ವರುಷಕ್ಕೆ ಕಡೀಬಹುದು. ಅಷ್ಟು ಬೇಗ ಬೆಳೆ ಬೆಳೆಯುತ್ತೆ. ಮನೆಕಟ್ಟಲು ತೇಗದ ಮರಬಿಟ್ರೆ ಎರಡನೆಯ ಆದ್ಯತೆ ಇರೋದು ಬೇವಿನ ಮರಕ್ಕೆ. ಬೇವಿನ ಮರದ ಜತೆ ಮಧ್ಯದಲ್ಲಿ ಹೊಂಗೆಯ ಮರಗಳೂ ಇವೆ. ಗೊಬ್ಬಳಿ ಮರವೂ ಇದೆ. ವರುಷಕ್ಕೆ ಎರಡು ಪೈರು ಭತ್ತ ತೆಗೆಯೋದು ನಾವು. ಮನೆ ಬಳಕೆಗೆ ಮಂಡ್ಯವಿಜಯ ಸಣ್ಣಕ್ಕಿ ಹಾಕಿಸ್ತೀನಿ. ಮಾರೋದಕ್ಕೆ ದಪ್ಪ ಭತ್ತ ಜಯಾ ಹಾಕಿಸ್ತೀನಿ. ಎಕರೆಗೆ ೩೦ ರಿಂದ ೩೫ ಚೀಲ ಭತ್ತ ಬರುತ್ತೆ. ಹಿಂದೆಲ್ಲಾ ರತ್ನಚೂಡಿ, ಬಂಗಾರ ಸಣ್ಣ, ಬಂಗಾರ ಕೋವಿ ಬೆಳೀತಿದ್ವಿ. ರತ್ನ ಚೂಡಿ ಮುಂದೆ ಮತ್ಯಾವುದೂ ಇಲ್ಲ ಬಿಡಿ. ಈಗ ಬೆಲ್ಲ ಹಾಕಿಕೊಂಡು ತಿಂದ್ರೆ ಎಷ್ಟು ಸಿಹಿ ಇರುತ್ತೋ ಅಷ್ಟು ಸಿಹಿ ಇರೋದು ಅದರ ಅನ್ನ. ಬಂಗಾರಸಣ್ಣ ಸಿಹಿ ಕಮ್ಮಿ; ಆದರೆ ಅನ್ನ ತುಂಬಾ ಒದಗೋದು. ಹಿಂದೆಲ್ಲಾ ಭತ್ತದ ಬೇಸಾಯ ಮಾಡುವಾಗ ಕೃತಕ ಗೊಬ್ಬರ ಬಳಸ್ತಾ ಇರಲಿಲ್ಲ. ಎಲ್ಲಾ ಹಟ್ಟಿಗೊಬ್ಬರ ಮಾತ್ರ. ಈಗ ರಾಸಾಯನಿಕ ಗೊಬ್ಬರದ ಮೇಲಿನ ಅವಲಂಬನೆ ಜಾಸ್ತಿ. ಅದಕ್ಕೆ ಏನಾಗುತ್ತೆ ಈಗಿನ ಅಕ್ಕೀಲಿ ಯಾವುದೇ ಸತ್ವ ಇರೋದಿಲ್ಲ. ಸುಮ್ಮನೇ ಕಡ್ಲೆಪುರಿ ತಿಂದ ಹಾಗಿರುತ್ತೆ. ಹೊಟ್ಟೆ ತುಂಬಲ್ಲ, ರುಚಿ ಇರಲ್ಲ. ನಾನು ಮನೆಗೆ ಬೆಳೆಯುವಾಗ ಒಂದು ಎಕರೆಗೆ ೧೦ ಟ್ರಾಕ್ಟರ್ ಕೆಮ್ಮಣ್ಣು ಹಾಕಿಸ್ತೀನಿ. ಎರಡು ಟ್ರಾಕ್ಟರ್ ಸೊಪ್ಪು ಹಾಕಿಸ್ತೀನಿ. ಅದಕ್ಕೆ ರಾಸಾಯನಿಕ ಗೊಬ್ಬರ ಹಾಕೋಲ್ಲ. ನಾನು ಇದುವರೆಗೆ ಭತ್ತಕ್ಕೆ ಔಷಧಿ ಹೊಡೆಸಿಲ್ಲ. ಇಳುವರಿ ಚೆನ್ನಾಗಿ ಬರ್ತಿದೆ. ಕಬ್ಬಿಗೆ ನೀರು ಚೆನ್ನಾಗಿ ಬೇಕು. ನಾನು ನಷ್ಟ ಆಗುತ್ತೆ ಅಂತ ಬೆಲ್ಲ ಮಾಡಿಸೋಲ್ಲ. ಇಲ್ಲೇ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಹೊಡೀತೀನಿ. ಭತ್ತಕ್ಕಿಂತ ಸುಲಭದ ಬೆಳೆ ಕಬ್ಬು. ನಾಟಿ ಮಾಡಿಸಿ ಬಿಟ್ಟ ಮೇಲೆ, ಎಂಟರಿಂದ ಹತ್ತು ದಿನಕ್ಕೆ ನೀರು ಬಿಡೋದು ಬಿಟ್ರೆ ಬೇರೆ ಬೇಸಾಯಾನೇ ಇಲ್ಲ, ಅದನ್ನು ಕತ್ತರಿಸುವುದರವರೆಗೂ ಕಬ್ಬಿಗೆ ಖರ್ಚು ಕಡಿಮೆ.

ಸಂಕೇತಿಗಳು ಅಡಿಕೆ ಕೃಷೀಲಿ ಬಹಳ ಮುಂದು. ನಾವು ಹಿಂದೆಲ್ಲಾ ಅಡಿಕೆ ಕುಯ್ಸಿ ಬೇಯಿಸಿದೀವಿ. ಹಿಂದೆಲ್ಲಾ ಏನು ಮಾಡ್ತಿದ್ವಿ ಅಂದ್ರೆ ಇವತ್ತು ಅಡಿಕೆ ಕುಯ್ಸಿದ್ರೆ ಮಾರನೇ ದಿನ ಅದನ್ನು ಉದ್ದಕ್ಕೂ ಹರಡೋರು. ಅನಂತರ ಎರಡೂ ಬದೀಲಿ ಕುಳಿತು ಅಡಿಕೆ ಸುಲಿಯೋರು. ಸಂಜೆ ನಾಲ್ಕರವರೆಗೆ ಅಡಿಕೆ ಸುಲಿಯೋ ಕೆಲಸ. ಅದರಲ್ಲಿ ಮೂರು ತರಹ ಅಡಿಕೆ ಮಾಡೋರು. ಉಂಡೆ, ಆಮೇಲೆ ನಾಲ್ಕು ಭಾಗ ಮಾಡಿ ಛಾತ್ರ ಅನ್ನೋರು. ಈಗ ಅದು ಇಲ್ಲ. ಆಮೇಲೆ ಕಳಿ ಅಂದ್ರೆ ಎರಡು ಭಾಗ ಮಾಡೋರು. ಅದೇ ನೀವು ಬಟ್ಟಲು ಅಡಿಕೆ ಅಂತೀರಲ್ಲ, ಅದು. ಅಡಿಕೆ ಬೇಯಿಸಿ ಅಡೀಲಿ ಉಳಿದಿರುವ ಅಂಶಕ್ಕೆ ತೊಗರು ಅಂತೀವಿ. ಅದಕ್ಕೆ ಗಂಧದ ಚಕ್ಕೆ ಬೆರೆಸ್ತೀವಿ. ಅನಂತರ ಕುದಿಸಿದಾಗ ಬಣ್ಣ ಬರುತ್ತೆ.

ಅದರಲ್ಲಿ ಬೇಯಿಸಿದ ಅಡಿಕೇನ ಅದ್ದಿ ತೆಗೆದು ಒಣಗಿಸ್ತೀವಿ. ನಾವು ಮಾರುಕಟ್ಟೆಯಿಂದ ತರುವ ಕೃತಕ ಬಣ್ಣ ಹಾಕಿಲ್ಲ. ಈಗಲೂ ಹಾಕೋಲ್ಲ. ನನ್ನ ಹೆಂಡತಿಯ ಅಣ್ಣ ಬಸವಾಪಟ್ಟಣದ ನಾಗಭೂಷಣ ಅವರೂ ಅಡಿಕೆ ವ್ಯಾಪಾರ ಮಾಡ್ತಾರೆ. ಅವರೂ ಕೃತಕ ಬಣ್ಣ ಬಳಸೋಲ್ಲ.

ಕೃಷಿ ಅನ್ನೋದು ನಿಜವಾಗಿಯೂ ಒಂದು ಕಲೆ. ಆದರೆ ಈಗ ನಮ್ಮವರಿಗೂ ಕುರ್ಚಿಯ ಮೇಲೆ ಕೂರುವ ವ್ಯಾಮೋಹ ಜಾಸ್ತಿಯಾಗಿದೆ. ನಮ್ಮ ಕೃಷೀನು ಸಹ ನಶಿಸ್ತಾ ಇದೆ. ನಾನು ಕೆಲಸಕ್ಕೆ ಸೇರಿದಾಗ ನನಗೆ ೧೯ ವರುಷ. ರಾಜ್ಯ ಸರ್ಕಾರದ ಕೆಲಸ. ಅಲ್ಲೂ ನಾನು ಶ್ರಮದಿಂದ ದುಡಿದೆ. ವ್ಯವಸಾಯದ ಬದುಕಿಗೂ ನನ್ನ ವೃತ್ತಿಗೂ ಒಂದಕ್ಕೊಂದು ಸಂಬಂಧವೇ ಇಲ್ಲ. Official Sideನಲ್ಲಿ ಮೋಸ ಈಗ ಜಾಸ್ತಿ. ರೈತಾಪಿಯಲ್ಲಿ ಅದಿಲ್ಲ. ರೈತರು ಮುಗ್ಧರು. ಹೊಟ್ಟೆಪಾಡಿಗೆ ಇಲ್ಲಿ ದುಡಿಮೆ ಅಷ್ಟೆ. ಕಛೇರಿ ಕೆಲಸದಲ್ಲಿ ರಾಜಕೀಯ ಜಾಸ್ತಿ. ಅವರನ್ನು ತುಳೀಬೇಕು, ಇವರನ್ನು ಮೇಲೆತ್ತಬೇಕು ಅನ್ನುತಾರೆ. ಇಷ್ಟಿದ್ರೂ ನನ್ನ ವೃತ್ತೀನೇ ನನಗೆ ಮತ್ತೆ ವ್ಯವಸಾಯ ಮಾಡಲು ಪ್ರೇರೇಪಿಸಿತು. ನಾನು ನನ್ನ ವೃತ್ತಿಯಿಂದ ನಿವೃತ್ತಿ ಹೊಂದಿದ ಮೇಲೆ ಪ್ರವೃತ್ತಿಯಾದ ವ್ಯವಸಾಯ ಅಪ್ಪಿಕೊಂಡೆ. ನನ್ನ ಹೆಂಡತಿ, ಮಕ್ಕಳಿಂದ ಪ್ರತಿರೋಧವೇನೂ ಬರಲಿಲ್ಲ. ಬದಲಾಗಿ ಅವರಿಗೆ ಸಂತೋಷವೇ ಆಗಿದೆ. ಅವರೂ ಜಮೀನಿಗೆ ಬರ್ತಾರೆ. ಸಣ್ಣಪುಟ್ಟ ಕೆಲಸ ಮಾಡ್ತಾರೆ. ಅವರದೂ ನಮ್ಮದೇ ವಂಶವಾಹಿ ಅಲ್ವಾ? ರಕ್ತಗತವಾಗಿ ಬಂದಿರುವ ಪ್ರೀತಿ ವ್ಯವಸಾಯದ ಬಗ್ಗೆ ಇದೆ. ನಾನು ಇನ್ನೂ ಒಂದು ಹತ್ತು ವರುಷ ಗಟ್ಟಿಮುಟ್ಟಾಗಿರುವವರೆಗೆ ವ್ಯವಸಾಯ ಮಾಡಿಸ್ತೀನಿ. ಅನಂತರ ಏನಾಗುತ್ತೋ ಹೇಳಲು ಆಗೋಲ್ಲ. ಈಗ ಮಕ್ಕಳಿಗೆ ಆಸಕ್ತಿ ಇದ್ರೂ ಅವರು ಮಾಡುವ ಕೆಲಸದಿಂದಾಗಿ ಅವಕಾಶ ಸಿಗ್ತಾ ಇಲ್ಲ. ಸಮಯಾನೂ ಇಲ್ಲ. ಮಕ್ಕಳಿಗೂ ಈಗ ನಿರ್ಧಾರ ತೊಗೊಳ್ಳಲು ಆಗ್ತಾ ಇಲ್ಲ.

ನನ್ನ ಹೆಂಡತಿ ರೈತ ಕುಟುಂಬದಿಂದಲೇ ಬಂದವಳು. ಅವರಿಗೂ ತೋಟ ಗದ್ದೆ ಇತ್ತು. ಇವಳ ತಂದೆ ಮನೇಲಿ ಅವರು ಏಳು ಜನ ಅಣ್ಣತಮ್ಮಂದಿರು. ಅವರೆಲ್ಲಾ ರೈತರೇ. ಎತ್ತು, ಗಾಡಿ ಎಲ್ಲಾ ಇಟ್ಟಿದ್ರು. ವ್ಯವಸಾಯವೇ ವೃತ್ತಿ. ಹೆಂಡತಿಗೂ ವ್ಯವಸಾಯದಲ್ಲಿ ಆಸಕ್ತಿ. ನನಗೂ ಆಸಕ್ತಿ. ಹಾಗಾಗಿ ನಮ್ಮಿಬ್ಬರಿಗೂ ಹೊಂದಾಣಿಕೆ ಸರಿಯಾಗಿದೆ. ನನ್ನ ಜೀವನದಲ್ಲಿ ಮುಂದೆ ಬರಲು ಅವಳೂ ಸಹಕರಿಸಿದ್ದಾಳೆ. ನನ್ನ ಹೆಂಡತೀದೂ, ನನ್ನದೂ ಒಂದೇ ಊರು. ನಾನು ಮದುವೆಯಾದಾಗ ನನಗೆ ೨೩ ವರುಷ. ನಾನು ಹುಡುಗಿ ನೋಡೋದು, ಆಯ್ಕೆ ಮಾಡೋದು ಆಗ ಇರಲೇ ಇಲ್ಲ. ನನ್ನ ತಂದೆ, ಇವಳ ತಂದೆ ಪರಿಚಯಿಸ್ತರು. ಅವರೇ ಗೊತ್ತು ಮಾಡಿ, ನೀನು ಇವಳನ್ನು ಮದುವೆ ಆಗು ಅಂತ ಹೇಳೋರು. ಈಗಿನ ಕಾಲದ ಹಾಗೆ ಆಗಿರಲಿಲ್ಲ. ಮದುವೆಯಾದಾಗ ನನ್ನ ಹೆಂಡತಿಗೆ ೧೫ ವರುಷ. ನನ್ನ ಮದುವೆ ಐದು ದಿನ ನಡೀತು. ಈಗಿನ ಹಾಗೆ ತಿಳುವಳಿಕೆ ಆಗ ಇರಲಿಲ್ಲ. ಪುರೋಹಿತರು ಮಾಡಿಸೋರು. ನಾವು ಕೂತುಕೊಳ್ಳೋವು ಅಷ್ಟೆ (ನಗು). ನನ್ನ ಮದುವೆ ಆದದ್ದು ನನ್ನ ಮನೇಲೇ. ಛತ್ರದಲ್ಲಿ ಆಗೋದಕ್ಕಿಂತ ಮನೇಲಿ ಮದುವೆ ಆಗೋದು ಒಳ್ಳೆಯದು. ಮನೇಲಿ ಎಲ್ಲರೂ ಆತ್ಮಪೂರಕವಾಗಿ, ಹೃದಯಪೂರಕವಾಗಿ ಬಂದು ಆಶೀರ್ವಾದ ಮಾಡ್ತಾರೆ. ಆದರೆ ಛತ್ರದಲ್ಲಿ ವ್ಯಾವಹಾರಿಕತೆ ಜಾಸ್ತಿ. ಹಿಂದೆಲ್ಲಾ ಮದುವೆ ಅಂದ್ರೆ ಅದು ಮೂರು ತಿಂಗಳ project. ಪ್ರತಿಯೊಂದನ್ನೂ ಮನೇಲೇ ಮಾಡೋರು. ಈಗ ಎಲ್ಲವೂ ಕೃತಕ. ಹಿಂದಿನ ದಿನ order ಕೊಟ್ಟು, ಬೆಳಗ್ಗೆ ಮದುವೆ ಮಾಡಬಹುದು. ಸಂಜೆನೇ ಛತ್ರ ಖಾಲಿ ಮಾಡಿಕೊಂಡು ಬರಬಹುದು.

ಸಂಕೇತಿಗಳಲ್ಲಿ ವ್ಯವಸಾಯ ಮಾಡೋರಿಗೆ ಹೆಣ್ಣು ಸಿಗೋಲ್ಲ ಅಂತಾರೆ. ಆದರೆ ಅದರಲ್ಲಿ ಮುಖ್ಯವಾದ ಅಂಶಗಳಿವೆ. ಅವರಿಗೆ ಜಮೀನಿನಲ್ಲಿ ಉತ್ಪತ್ತಿ ಎಷ್ಟಿದೆ, ಜೀವನಮಟ್ಟ ಏನು ಅಂತ ನೋಡ್ತಾರೆ. ತೃಪ್ತಿಯಾದ್ರೆ ಹೆಣ್ಣು ಕೊಡ್ತಾರೆ. ಊರಲ್ಲಿ ನನ್ನ ಭಾಮೈದನ ಮಕ್ಕಳು ಸಹ ವ್ಯವಸಾಯ ಮಾಡ್ತಿದಾರೆ. ಒಬ್ಬನಿಗೆ ಮದುವೆ ಆಗಿದೆ. ಮತ್ತೊಬ್ಬನಿಗೆ ಈಗಾಗಲೇ ಇಬ್ಬರು, ಮೂರು ಜನ ಹೆಣ್ಣು ಕೇಳ್ತಿದಾರೆ. ಒಂದು ಎಕರೆ, ಅರ್ಧ ಎಕರೆ ತೋಟ ಇದ್ರೆ ಈಗ ಜೀವನ ಸಾಗೋಲ್ಲ. ಹಾಗಾಗಿ ಮಗಳು ಕಷ್ಟಪಡಬೇಕಾಗುತ್ತೆ ಅಂತ ಹೆಣ್ಣು ಕೊಡಲ್ವೇ ಹೊರತು, ಮತ್ತಾವ ಉದ್ದೇಶವೂ ಇಲ್ಲ ಅಂತ ಅನ್ನಿಸುತ್ತೆ. ಈಗ ಹಳ್ಳೀಲೂ TV ಇದೆ, mixer ಇದೆ, Refrigerator ಇದೆ, Grinder ಇದೆ, vehicle ಇದೆ. ಅದು ಹಳ್ಳಿ ಅಂತ ಅನ್ನಿಸೋದೇ ಇಲ್ಲ. ಜಮೀನು ಚೆನ್ನಾಗಿ ಇದ್ರೆ ಹಳ್ಳೀಲೂ ಸಹ cityಲಿ ಇದ್ದ ಹಾಗೆ ಇರಬಹುದು.

ನನ್ನ ದೃಷ್ಟೀಲಿ ಅಡಿಕೆ ತೋಟ ಇರುವ ಸಂಕೇತಿಗಳು ಯಾರೂ ವ್ಯವಸಾಯ ಬಿಡ್ತಿಲ್ಲ. ನಮ್ಮೂರಿನಲ್ಲಿ ನಾಗರಾಜ ಅಂತ ನನಗಿಂತ ಚಿಕ್ಕವನು ಇದ್ದಾನೆ. ಅವನು ತಂದೆಗೆ ಒಬ್ಬನೇ ಮಗ. ಹಾಸನದಲ್ಲಿ doctor ಆಗಿದಾನೆ. ಅವನಿಗೆ ತೋಟ ಇದೆ. ಅವನು ತೋಟ ಬಿಡ್ತಾ ಇಲ್ಲ. ತೋಟ ತೊಗೋತೀವಿ ಅಂತ ಸುಮಾರು ಜನ ಬಂದ್ರೂ ಅವನು ತೋಟ ಮಾರ್ತಾ ಇಲ್ಲ. ಚಿಲ್ಕುಂದದಲ್ಲೂ ಮಾರಲು ತಯಾರಿಲ್ಲ. ನಮ್ಮವರು ಎಲ್ಲಿ concentrate ಆಗಿದಾರೆ ಅಲ್ಲಿರುವ ಯಾರೂ ತೋಟ ಮಾರಲು ಒಪ್ತಾ ಇಲ್ಲ. ಇನ್ನೂ ಹೊಲ, ಗದ್ದೆ ಆದ್ರೆ ಕೊಟ್ಟುಬಿಡ್ತಾರೆ. ಯಾಕೆಂದ್ರೆ ನಮ್ಮ ಸಂಕೇತಿ ಜನಾಂಗದಲ್ಲಿ ನೇಗಿಲು ಹಿಡಿದಿರೋದು ಕಡಿಮೆ. ನಾವೇನಿದ್ರೂ ಗುದ್ದಲಿ ಹಿಡಿಯೋರು

ಅಷ್ಟೇ. ಒಣಭೂಮಿ ಇರೋರು ಜಮೀನು ಮಾರಿ ಪಟ್ಟಣ ಸೇರಬಹುದು ಅಷ್ಟೇ. ತೋಟ ಇರೋರು ಖಂಡಿತಾ ಮಾರೋಲ್ಲ. ಹೊಲದ ಕೆಲಸಕ್ಕೂ ತೋಟದ ಕೆಲಸಕ್ಕೂ ಬಹಳ ವ್ಯತ್ಯಾಸ ಇದೆ. ಹೊಲದ ಕೆಲಸ ಬಿಸಿಲಲ್ಲಿ ಮಾಡುವ ಕೆಲಸ. ನೀರಾವರಿ ಇರೋಲ್ಲ. ಜೀವನಮಟ್ಟ ತುಂಬಾ ಕಡಿಮೆ. ತೋಟದಲ್ಲಿ ಜೀವನ ಮಟ್ಟ ಜಾಸ್ತಿ. ಅದೂ ನೆರಳಲ್ಲಿ ಮಾಡುವ ಕೆಲಸ ಇದು. ಹಾಗಾಗಿ ಸಂಕೇತಿಗಳು ಇರುವ ಕಡೆ ಯಾವಾಗಲೂ ಸುಭಿಕ್ಷ ಇರುತ್ತೆ.

ಸಂಕೇತಿಗಳು ಒರಟು ಜನ. ನಮ್ಮವರು ತಿನ್ನೋದು ಜಾಸ್ತಿ. .. ಕೆಲಸ ಮಾಡೋದೂ ಜಾಸ್ತಿ . . ಶ್ರಮಾನೂ ಜಾಸ್ತಿ. ಬುದ್ಧಿವಂತಿಕೇನೂ ಜಾಸ್ತಿ. ಹಾಗಾಗಿ ಇವರನ್ನು 'ಗೊದಮಟ್ಟೆ ಸಂಕೇತಿಗಳು' ಅಂತ ಕರೀತಾರೆ. ಯಾಕೇಂದ್ರೆ ಅದೂ ಒರಟು ನೋಡಿ. ಮಾನಸಿಕ ಆರೋಗ್ಯ, ದೈಹಿಕ ಆರೋಗ್ಯ ಸದಾ ಉತ್ತಮವಾಗಿರುತ್ತೆ ವ್ಯವಸಾಯ ಮಾಡೋರಿಗೆ. ನನ್ನನ್ನೇ ತೊಗೊಳ್ಳಿ. ನನಗೆ ಉದ್ಯೋಗ ಮಾಡುವಾಗ ತುಂಬಾ BP ಇತ್ತು. ಈಗ ಅದು ಇಳಿದು ಹೋಗಿದೆ. ಈಗ ಆರಾಮವಾಗಿದೀನಿ. ವಿಪರೀತವಾಗಿ ಬೆಳೆದಿದ್ದ ದೇಹ ಸಹಾ ಕಡಿಮೆಯಾಗಿದೆ. ಒತ್ತಡ ಕಡಿಮೆಯಾಗಿದೆ. ಆರೋಗ್ಯ ಬಹಳವಾಗಿ ಸುಧಾರಿಸಿದೆ.

ನಾನು ಗೆಜೆಟೆಡ್ ಆಫೀಸರ್ ಆಗಿದ್ದಾಗ ಹವಾನಿಯಂತ್ರಿತ ಕೊಠಡೀಲಿ ಕೂರ್ತಿದ್ದೆ. ದೈಹಿಕ ಶ್ರಮ ಇತ್ತಿಲ್ಲ. ಆದರೂ ಆರೋಗ್ಯ ಇರಲಿಲ್ಲ. ಈಗ ಬಿಸಿಲು, ಛಳಿ, ಮಳೇಲಿ ಇದ್ರು ಸಹ, ಆರೋಗ್ಯ ಉತ್ತಮವಾಗಿದೆ. ಇದು ವ್ಯವಸಾಯದ ವಿಷಯ. ನಾನು ಕೆಲಸದಲ್ಲಿ ಇದ್ದಿದ್ದರಿಂದ, ಈಗ ಬೇರೆಯವರ ಕೈಲಿ ಕೆಲಸ ನಿಂತು ಮಾಡಿಸ್ತಿದೀನಿ. ಆದರೆ ನಾನು ವ್ಯವಸಾಯದಲ್ಲಿಯೇ ಇದ್ದಿದ್ರೆ ನಾನೇ ದುಡೀತಿದ್ದೆ.ವ್ಯವಸಾಯ ನನಗೆ ಬಹಳ ತೃಪ್ತಿ ನೀಡಿದೆ.' ಎಂದು ತೃಪ್ತಿಯಾಗಿ ಹೇಳಿದ್ರು ಸತ್ಯನಾರಾಯಣ. ಮನೇಲಿ ಹಬ್ಬದ ವಾತಾವರಣವಿತ್ತು. ಮಗ ನರಹರಿ ಹಾಸನ ಮಲೆನಾಡು ಇಂಡಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕ. ಸೊಸೆ ಶುಭ ಬ್ಯಾಲದಕೆರೆಯವರು. ಮತ್ತೊಬ್ಬ ಮಗ ಗಿರೀಶ್ ಸ್ವಂತ ಉದ್ಯೋಗ ಮಾಡಿಸ್ತಿದ್ದಾರೆ. ಇವರ ಪತ್ನಿ ಚೈತ್ರ. ತುಂಬಿದ ಕುಟುಂಬದ ಭಾವಚಿತ್ರ ಮನೇಲಿ ಸಿಗ್ತು. ಮಕ್ಕಳಿಬ್ಬರಿಗೂ ವ್ಯವಸಾಯದಲ್ಲಿ ಆಸಕ್ತಿ ಇದೆ. ಈಗ ತಂದೆ ಮಾಡ್ತಿದಾರೆ, ಮುಂದೆ ನೋಡೋಣ ಎಂದ್ರು. ನಮಗೆ ಭೀಮನ ಅಮಾವಾಸ್ಯೆಯ ಉಪಚಾರವೂ ಜೋರಾಗಿತ್ತು. ಅವರಿಗೆ ವಂದನೆ ಸಲ್ಲಿಸಿ, ವಾಪಸಾಗಲು ವೆಂಕಟನಾರಾಯಣರ ಬೈಕು ಹತ್ತಿದಾಗ, ಸಂಜೆಯ ಸಮಯ.

ಆ) ಕ್ಯಾಪ್ಟನ್ ಕೆ.ಕೆ. ವೆಂಕಟೇಶ್ ಇ/ಮ ಕೊಣನೂರು ಕೇಶವಮೂರ್ತಿ

ನಂ.೪೭೩, ರೋಸ್‌ಕಾಟೇಜ್, ೧೩ನೇ ಕ್ರಾಸ್, ೭ನೇ ಮೈನ್,
ವಿಜಯನಗರ ಮೊದಲನೆ ಹಂತ, ಮೈಸೂರು - 570 017

ಸಮುದ್ರದ ಜತೆಗಿನ ಜೀವನ ಬಹಳ ಕಷ್ಟಕರವಾದ ಜೀವನ. ಆದ್ರೆ ನೀವು ಸಮುದ್ರವನ್ನು ಗೌರವಿಸಿದ್ರೆ ಅದು ನಿಮ್ಮನ್ನು ಗೌರವಿಸುತ್ತೆ. ನಾವು ಪ್ರಕೃತಿಯ ವಿರುದ್ಧ ಹೋರಾಟ ಮಾಡುವ ಆಗತ್ಯವಿಲ್ಲ. ಪ್ರಕೃತಿಯೊಂದಿಗೆ ಜತೆಯಾಗಿ ಬದುಕಿದರೆ ಸಾಕು, ನಿಸರ್ಗ ನಮ್ಮ ಗುರುವಾಗುತ್ತೆ. ಜೀವನ ಸುಂದರವಾಗುತ್ತೆ.



ಎಚ್.ಆರ್.ವೀಣ-ಕ್ಯಾಪ್ಟನ್ ಕೆ.ಕೆ.ವೆಂಕಟೇಶ್ ದಂಪತಿ ತಮ್ಮ ಕುಟುಂಬದೊಂದಿಗೆ:ಮೈಸೂರು

ಕೊಣನೂರಿನ ಕೇಶವಮೂರ್ತಿ ಹಾಗೂ (ಮೈಸೂರು ಮಹಾರಾಜರಿಗೆ Chief Engineer ಆಗಿದ್ದ ಸುಬ್ಬರಾಯರ ಮಗಳು) ಲಲಿತಮ್ಮ ದಂಪತಿಗಳಿಗೆ ಎಂಟು ಜನ ಮಕ್ಕಳು. ಅದರಲ್ಲಿ ನಾಲ್ಕು ಗಂಡು, ಐದು ಹೆಣ್ಣು. ಗಂಡು ಮಕ್ಕಳಲ್ಲಿ ಕೊನೆಯ ಹಾಗೂ ಮಕ್ಕಳಲ್ಲಿ ಎಂಟನೆಯವರೇ ಕ್ಯಾಪ್ಟನ್ ಕೆ.ಕೆ. ವೆಂಕಟೇಶ್.

ಭೂಮಿ ಮೇಲೆ ಅರ್ಧ ವರುಷ, ನೀರ ಮೇಲೆ ಅರ್ಧ ವರುಷ ಕಳೆಯುವ ವೆಂಕಟೇಶ್ ಅವರದ್ದು ವಿಶಿಷ್ಟವಾದ ಬದುಕು. ಹಾಗೇ ಅವರು ಕೃಷಿಕರು ಸಹಾ ಹೌದು. ಅವರನ್ನು ಭೇಟಿಯಾಗಲು, ನಾವು ಸಹ ಒಂದು ವರುಷ ಕಾಯಬೇಕಾಯ್ತು. ಕಡೆಗೂ ವೆಂಕಟೇಶ್ ಅವರು ಮೈಸೂರಿನ ತಮ್ಮ ವಿಜಯನಗರದ ಮನೇಲಿ ರಾತ್ರಿಯ ಹೊತ್ತು ಮಾತಿಗೆ ಸಿಕ್ಕರು. 'ನನಗೆ ಮಾತನಾಡಲು ಬರೋಲ್ಲ' ಅಂತಲೇ ಭರ್ಜರಿಯಾಗಿ ಮಾತನಾಡಿದ್ರು. 'ನನ್ನ ತಂದೆಯ ತಾಯಿ ವೆಂಕಟಲಕ್ಷಮ್ಮ ಅಂತ. ಅವರೊಬ್ಬರ ಬಗ್ಗೆ ನನಗೆ ತಿಳಿದಿದೆ. ನಾನು ಎರಡು ಕಡೆ ಅಜ್ಜನ್ನೂ ನೋಡಿಲ್ಲ. ನನ್ನ ತಾಯಿಯ ತಾಯೀನೂ ನೋಡಿಲ್ಲ. ನನ್ನ ಐದನೇ ವಯಸ್ಸಿನಲ್ಲೇ ನನ್ನನ್ನು ಮದರಾಸಿಗೆ ಓದೋಕೆ ಕಳಿಸಿದ್ರು. ನನ್ನ ಅಜ್ಜಿ ನನ್ನನ್ನು ಪ್ರೀತಿಯಿಂದ ವೆಂಕಟಸಾಮಿ ಅಂತ ಕರೆಯೋರು. ನಾನು ಮದರಾಸಿಗೆ ಹೋದ ಮೇಲೆ ವರುಷದಲ್ಲಿ ೧೫ ರಿಂದ ೨೦ ದಿನ ಊರಿಗೆ ಬರ್ತಿದ್ದೆ. ತಂದೆ ತಾಯಂದಿರ ಜತೆಗೂ ಅಷ್ಟರಮಟ್ಟಿಗಿನ ಒಡನಾಟ ಇರಲಿಲ್ಲ. ಮದರಾಸಿನಲ್ಲಿ ನನ್ನ ದೊಡ್ಡಕ್ಕ ಅಮೃತಾ ಹಾಗೇ ಭಾವ ವೆಂಕಟಸುಬ್ಬಯ್ಯ ಅವರು ಇದ್ರು. ಅವರ ಮನೇಲಿ ನಾನು ಓದುತ್ತಾ ಬೆಳೆದದ್ದು. ಅಲ್ಲಿ matriculation ಮುಗಿಸಿದೆ. ನಾನು ಕೋಣನೂರಿನಲ್ಲಿದ್ದಾಗ ಪೋಕರಿಯಾಗಿ, ಎಮ್ಮೆ ಮೇಲೆ ಕುಳಿತು ಕಾಲ ಕಳೀತಿದ್ದೆ. ಅದಕ್ಕೇ ನನ್ನನ್ನು ಮದರಾಸಿಗೆ ಓಡಿಸಿದ್ರು. ನಮ್ಮದು ಜಮೀನ್ದಾರ್ family, ಅಲ್ಲಿ ಯಾರೂ ಓದ್ತಾ ಇರಲಿಲ್ಲ. ಹಾಗಾಗಿ ನನ್ನ ದೊಡ್ಡಣ್ಣನನ್ನು ಹಾಸನಕ್ಕೆ, ಮತ್ತೊಬ್ಬನನ್ನು ಮೈಸೂರಿಗೆ ಓದೋಕೆ ಕಳಿಸಿದ್ರು.

ಮದರಾಸಿನಲ್ಲಿ ಡಾನ್‌ಬಾಸ್ಕೋ Matriculation Schoolನಲ್ಲಿ ನಾನು ಓದಿದ್ದು. ಭಾವನ್ನ ಕಂಡರೆ ಹೆದರಿಕೆ ಇತ್ತು. ನಾನು average student ಆಗಿದ್ದೆ. ಆದ್ರೆ very good in sports. Cricket, Volleyball, Hockey, Football, Basketball, Badminton, Shuttle, Tabletennis ಎಲ್ಲವುದರಲ್ಲೂ prize ತೊಗೋತಿದ್ದೆ. ೧೯೭೦ರಲ್ಲಿ Public Examನಲ್ಲಿ ಶೇಕಡಾ ೭೨ರಷ್ಟು ಅಂಕ ಗಳಿಸಿದೆ. ಆರಂಭದಲ್ಲಿ ತಂದೆ ತಾಯಂದಿರನ್ನು ಬಿಟ್ಟಿರೋಕೆ ಕಷ್ಟ ಆಯಿತು. ಆದ್ರೆ ಅಕ್ಕ, ಭಾವ ನನ್ನನ್ನು ಚೆನ್ನಾಗಿ ನೋಡಿಕೊಂಡ್ರು. ಅವರಿಗೂ ಇಬ್ಬರು ಗಂಡು ಮಕ್ಕಳಿದ್ರು. ನನಗಿಂತಾ ಚಿಕ್ಕವರು. ಅವರಿಗೆ ಜಮೀನು ಇರಲಿಲ್ಲ. ನಾನು ರಜಾ ಇದ್ದಾಗ ಮಾತ್ರ ಊರಿಗೆ ಬರ್ತಿದ್ದೆ ಅಷ್ಟೆ. ಆಗಲೂ ವ್ಯವಸಾಯದ ಕೆಲಸ ನಾನೇನೂ ಮಾಡ್ತಿರಲಿಲ್ಲ. ಚಿನ್ನಿದಾಂಡು, ಬುಗರಿ, ಲಗೋರಿ, ಗೋಲಿ ಇದೇ ಆಟ ಆಡ್ತಿದ್ದೆ. ನಾನು ಹುಟ್ಟಿದ ವರುಷ ಭತ್ತದ ಬೆಳೆ ತುಂಬಾ ಚೆನ್ನಾಗಿ ಬಂದಿತ್ತಂತೆ. ಅದುವರೆಗೂ ಆ ರೀತಿ ಬೆಳೆ ನೋಡಿರಲಿಲ್ಲ ಅಂತ ಅಜ್ಜಿ ಹೇಳ್ತಿದ್ರು ಅಷ್ಟೆ.

ಒಂದು ದಿನ ನನ್ನ ಶಾಲೆ ನೋಟೀಸ್ ಬೋರ್ಡ್‌ನಲ್ಲಿ Training ship offering in merchant navy ಅನ್ನುವ ಜಾಹೀರಾತು ನೋಡಿದೆ. ಯಾರಿಗೂ ಹೇಳದೆ application ತರಿಸಿದೆ. Apply ಮಾಡಿದೆ. All India Entrance Exam 1970ರ May 15, 16 ರಂದು ಇತ್ತು. ನನ್ನ Roll No.3863M. Exam ಬರೆದು ಮರೆತುಬಿಟ್ಟೆ. ಒಂದು ದಿನ sudden ಆಗಿ ಬಾಂಬೆಗೆ ನೀವು ಸಂದರ್ಶನಕ್ಕೆ ಬನ್ನಿ, ಅಂತ Interview letter ಬಂತು. ಆವಾಗ ಮನೆಗೆ ಹೇಳಲೇಬೇಕಾಯ್ತು. ನನ್ನ ತಂದೇನೂ ಒಪ್ಪಿಗೆ ನೀಡಿದ್ರು. ಆವಾಗ ಆ ಕಾಲದಲ್ಲಿ ಸಾವಿರದ ಆರುನೂರು ರೂಪಾಯಿ ಎರಡು ವರುಷದ training fee. ನನ್ನ ಭಾವ ಹಾಗೂ ನನ್ನ ತಂದೆ ಸಂದರ್ಶನಕ್ಕೆ ನನ್ನ ಜತೇಲಿ ಬಂದ್ರು. 1970ರ August 28ರ ರಾತ್ರಿ 11 ಘಂಟೆಗೆ ನನ್ನ Interview ಆಗಿದ್ದು. ರಾತ್ರಿ ೧೧ರ ವೇಳೇಲಿ ಸಂದರ್ಶನ ಅಂತ ನಾನು ಸಹಜವಾಗಿ ಗಾಭರಿಯಾಗಿದ್ದೆ. ಸಂದರ್ಶನ ಮಾಡೋರು ಸಹಕರಿಸಿದ್ರು. ದೈಹಿಕ ಪರೀಕ್ಷೆ, ಸಂದರ್ಶನ ಎಲ್ಲದರಲ್ಲೂ ತೇರ್ಗಡೆಯಾಗಿ ನಾನು select ಆದೆ. ಐದು ಸಾವಿರ ಜನ Exam ಬರೆದಿದ್ರು. ಕಡೆಗೆ ಆಯ್ಕೆಯಾಗಿದ್ದು ನಾವು ೪೦ ಜನ ಮಾತ್ರ. ಇದು Bombayನಲ್ಲಿ ಹಡಗಿನಲ್ಲಿ ನಡೆಯುವ training. 'Trainingship Dufferin' ಅನ್ನುವ training Establishment ನಮಗೆ ತರಬೇತಿ ನೀಡ್ತಿತ್ತು. ಅಲ್ಲಿ ಎರಡು ವರುಷ Navigation, stability, cargo loading, Ship maintenance, Marine Engineering, Ship construction ಇದೆಲ್ಲಾ ಕಲಿಸಿದ್ರು. ೧೯೭೨ ಜೂನ್ ೬ ರಂದು ನನ್ನ ತರಬೇತಿ ಮುಗೀತು. ನನಗೆ Shipping Corporation of India ಸೇರಬೇಕು ಅಂತ ಇತ್ತು. ಯಾಕೇಂದ್ರೆ ಆ ಕಂಪನೇಲಿ ತುಂಬ variety ಹಡಗುಗಳು ಇದ್ವು. Tankers, Bulkers, Cargoships, container ships ಎಲ್ಲಾ ಇತ್ತು. ಆದ್ರೆ ನಮ್ಮ ಭಾವ ಅವರ ಪರಿಚಯದವರನ್ನು ಅಲ್ಲಿ ವಿಚಾರಿಸಿದ್ರು. ಆ ಸಮಯದಲ್ಲಿ ಸಿಂಧ್ಯ ಸ್ಟೀಮ್ ನ್ಯಾವಿಗೇಷನ್ ಅನ್ನುವ World famous company ಇತ್ತು. ಅಲ್ಲಿ ಇದ್ದದ್ದು British officers. ಭಾವನ ಸ್ನೇಹಿತರು 'ಇದೇ company ಸೇರಿಸಿ' ಅಂತ ಸಲಹೆ ನೀಡಿದ್ರು. Freedom fighter ನರೋತ್ತಮರಾಜಿ ಅವರ family concern ಸಂಸ್ಥೆ ಇದು. ಅಲ್ಲಿಗೆ apply ಮಾಡ್ದೆ. Select ಆಯ್ತು. ಅಲ್ಲು ಸಹ ಎರಡು ವರುಷ ಮೂರು ತಿಂಗಳು shipನಲ್ಲಿ cadet

ಅಪ್ರೆಂಟಿಸ್ ಆಗಿ ಕೆಲಸ ಮಾಡಿದೆ. ಅದನ್ನು ಮುಗಿಸಿ ೩ ವಿಧದ ಪರೀಕ್ಷೆ attend ಮಾಡಬೇಕು. Second Officer Exam, Chief Officer Exam ಹಾಗೂ Masters Examination ಅಂತ. ಒಂದು Exam ಮುಗಿಸಿದ ಮೇಲೆ ಮತ್ತೆ ಒಂದೂವರೆ ವರುಷ Service ಆಗಬೇಕು. ನಾನು Second Officers Exam ಪಾಸ್ ಮಾಡಿ, ಭಾರತ ದೇಶದ ಅತ್ಯಂತ ಕಿರಿಯ Second officer ಆಗಿ ಆಯ್ಕೆಯಾದೆ. ಅನಂತರ ನನಗೆ ೨೪ ವರುಷ ತುಂಬುವ ಮೊದಲೇ Chief Officer ಆಗಿದ್ದೆ. ನಾನು Masters Exam ಮುಗಿಸಿದಾಗ Shippingನಲ್ಲಿ Recession ಇತ್ತು. ಜನಜಾಸ್ತಿ ಇದ್ರು, ಹಡಗುಗಳು ಕಡಿಮೆ ಇದ್ವು. ಆದರೂ ನನಗೆ ನನ್ನ ೨೬ನೇ ವಯಸ್ಸಿನಲ್ಲಿ Captain ಆಗುವ ಅವಕಾಶ ಸಿಗ್ತು. ಆದ್ರೆ ನನಗೆ ಅಷ್ಟು ಜವಾಬ್ದಾರಿ ಹೊರಲು ಸಾಧ್ಯವಿಲ್ಲ ಅಂತ ಅನ್ನಿಸಿತು. I may not be able to do justice to my job ಅಂತ ನಾನು refuse ಮಾಡಿದೆ. ೧೯೮೦ರಲ್ಲಿ ನನಗೆ ಸಿಕ್ಕ chance ಮತ್ತೆ ಸಿಕ್ಕಿದ್ದು ೧೯೮೪ರಲ್ಲಿ. ೧೯೮೪ರಿಂದ ಇಲ್ಲಿಯವರೆಗೂ ನಾನು Captain ಆಗಿಯೇ ಇದೀನಿ. ಇರೋ foreign company ಎಲ್ಲಾ ನೋಡಿದೀನಿ. ಯಾವ Indian companyಗೂ ಕೆಲಸ ಮಾಡಿಲ್ಲ. Hongkog, Thailand, Jordanian, Japanese, Italian companyಗಳಿಗೆ ಕೆಲಸ ಮಾಡಿದೀನಿ. ಈವಾಗ as a captain ನಾನು administrator ಮಾತ್ರ. Ship Handling, Ship Navigation, Ship loading, Security, Ship safety ಇವೆಲ್ಲಾ ನನ್ನ ಜವಾಬ್ದಾರಿ. Medical care ಬಗ್ಗೆ ನಮಗೆ ಒಂದು course ಸಹಾ ಇರುತ್ತೆ. ಹಡಗಿನಲ್ಲಿ, ಸಮುದ್ರದ ಮಧ್ಯದಲ್ಲಿ Doctors ಯಾರೂ ಸಿಗೋಲ್ಲ. ಹಾಗಾಗಿ ಹಡಗಿಗೆ ನಾನೇ Doctor. First Aid, Injection ಕೊಡೋದು, fracture set ಮಾಡೋದು ಎಲ್ಲದರ ಬಗ್ಗೆ ನನಗೆ ತರಬೇತಿ ನೀಡಿದಾರೆ. Also I am a partial lawyer. Ship Masters Law and Business ಅನ್ನುವ ತರಬೇತಿ ನೀಡಿದಾರೆ.

ಈ ಸೇವೇಲಿ ನಾನು ಸುಮಾರು ೭೮ ದೇಶ ನೋಡಿದೀನಿ. ಹಡಗಿನಲ್ಲಿ ಪ್ರಪಂಚ ಸುತ್ತಿರೋದನ್ನು ನೋಡಿದ್ರೆ ಈಗ ತಲೆಸುತ್ತಿ ಬರುತ್ತೆ (ನಗು). ಇದುವರೆಗಿನ ನನ್ನ ಸೇವೇಲಿ ಒಂದು ಇಪ್ಪತ್ತು ಸಾರಿ ಪ್ರಪಂಚ ಪೂರ್ತಿ ಸುತ್ತಿದೀನಿ. ಈಗ ನಮ್ಮ ಕೆಲಸದಲ್ಲಿ contract system ಬಂದಿದೆ. ಇದರಲ್ಲಿ ನೀವು ಎಷ್ಟು ದಿನ ಬೇಕಾದ್ರೂ ಹೋಗಬಹುದು. ಎರಡು ತಿಂಗಳು, ನಾಲ್ಕು ತಿಂಗಳು, ಆರು ತಿಂಗಳು, ಎಂಟು ತಿಂಗಳು ಎಷ್ಟು ದಿನ ಬೇಕಾದ್ರೂ ಹೋಗಬಹುದು. ನಾನು foreign companyಲಿ ಕೆಲಸ ಮಾಡ್ತಿರೋದ್ರಿಂದ NRI statusಗೆ ಕನಿಷ್ಠ ೧೮೩ ದಿನ ಕೆಲಸ ಮಾಡಲೇಬೇಕು, Income tax ಕೊಡದೇ ಇರೋದಕ್ಕೆ, ಈ ೬ ತಿಂಗಳು ಕೆಲಸದಲ್ಲಿ, ಒಂದು ತಿಂಗಳು ದಡದಲ್ಲಿರಬಹುದು ಅಷ್ಟೆ. ಉಳಿದ ಐದು ತಿಂಗಳು ಸಮುದ್ರದ ಮೇಲೇ ಇರ್ತೀವಿ. ಸಮುದ್ರದಲ್ಲಿ ಎಷ್ಟೋ ಕಷ್ಟ ನೋಡಿದೀವಿ, ಎಷ್ಟೋ ತೂಫಾನ್ ನೋಡಿದೀವಿ. ಎಷ್ಟೋ ಸರಿ ಹಡಗು ಮುಳುಗುವ ಹಾಗಿದ್ರೂ ಬದುಕಿ ಬಂದಿದೀವಿ. ಜನ ಮದರಾಸಿನಲ್ಲಿ cyclone ಬಂತು ಅಂತ ಗಾಭರಿಯಿಂದ ಹೇಳುವಾಗ ನನಗೆ ನಗು ಬರುತ್ತೆ. ಸಮುದ್ರದಲ್ಲಿ ನಮಗೆ ಇದೆಲ್ಲಾ ಏನೂ ಅಲ್ಲ. ಅಲ್ಲಿ ಒಂದು ಅಲೆ ಹೊಡೆದ್ರೆ ಅರವತ್ತು ಅಡಿ ಮೇಲೆ ಎತ್ತಿಹಾಕುತ್ತೆ. ಅಲ್ಲಿ ಬರಿ ಆಕಾಶ ಮಾತ್ರ ಕಾಣುತ್ತೆ. ನೀರೇ ಕಾಣೋಲ್ಲ, ಅಷ್ಟು ಎತ್ತರದ ಅಲೆ ನೋಡಿದೀವಿ. ಆದರೂ ಇದುವರೆಗೂ ಏನೂ ಆಗಿಲ್ಲ. ಬದುಕಿಕೊಂಡು ಬಂದಿದೀವಿ. Sea Life is very hard life. But you respect the sea and it respects you back, you don't have to fight Nature. ಸಮುದ್ರದಲ್ಲೂ Environmental pollutionಗೆ ತುಂಬಾ Laws ಇದೆ. Oil spillage, garbage disposal ಇದರ ಬಗ್ಗೆ ತುಂಬ rules and regulations ಇವೆ. ಎಂಟು, ಹತ್ತು, ಲಕ್ಷ fine ಹಾಕ್ತಾರೆ. Shipನಿಂದ Oil leak ಆದ್ರೆ ಜೈಲಿಗೇ ಹಾಕ್ತಾರೆ. ಇದೆಲ್ಲಾ ಗಂಭೀರವಾದ ಸಮಸ್ಯೆಗಳು.

ತುಂಬಾ ಪ್ರದೇಶಗಳಿಗೆ ಭೇಟಿ ನೀಡುವಾಗ ನಾನಾ ವಿಧದ ಜನ ಸಿಕ್ತಾರೆ. ಒಳ್ಳೆಯ ಜನ, ಕೆಟ್ಟಜನ, ಕರಿಜನ, ಬಿಳಿಜನ, ಎಲ್ಲರೂ ಸಿಕ್ತಾರೆ. ಹಾಗೆ ಹೇಳೋದಾದ್ರೆ ಪ್ರಪಂಚದಲ್ಲಿ ಶೇಕಡಾ ೯೦ರಷ್ಟು ಜನ ಒಳ್ಳೆಯವರು. ಉಳಿದ ಹತ್ತರಷ್ಟು ಜನ ನಮ್ಮ behaviour ಮೇಲೆ ಒಳ್ಳೆಯವರು ಅಥವಾ ಕೆಟ್ಟವರಾಗಿರ್ತಾರೆ. ತುಂಬಾ ಮೋಸದ ಜನ ಒಂದೆರಡು percent ಇದಾರೆ. ಈಗ West Africa ತುಂಬಾ ಕಷ್ಟ. Arab countries ತುಂಬಾ ಕಷ್ಟ. Arab countriesನಲ್ಲಿ religious sentiment ಜಾಸ್ತಿ. ನಮ್ಮನ್ನು ಅವರು ಕಫೀರ್ ಅಂತಾರೆ. ಅಂದ್ರೆ Non-believer. ಈಗ ಅಲ್ಲೂ ಬದಲಾಗ್ತಿದೆ. ನಾವು ಜೆದ್ದಾ ಅಂತ portಗೆ ಹೋಗ್ತೀವಿ. ಅಲ್ಲಿಂದ ಮೆಕ್ಕಾ ಮದೀನಾ ತುಂಬಾ ಹತ್ತಿರ. ನಾನು ೨೫ ಸಲ ಜೆದ್ದಾಗೆ ಹೋಗಿದೀನಿ. ಆದ್ರೆ ಅಲ್ಲಿಂದ ಆಚೆ ಹೋಗಲು ಆಗಿಲ್ಲ. ಅವರು ಬಿಡೋದಿಲ್ಲ. West Africaದಲ್ಲಿ ಲೂಟಿ, ದರೋಡೆ ಜಾಸ್ತಿ. AK-47 ತಂದು ಹಡಗು ಹತ್ತಿ, ಜನರನ್ನು shoot ಮಾಡಿ ಹಣ ದೋಚಿರೋದೂ ಉಂಟು. ನಮಗೆ gun ತೊಗೊಳ್ಳೋಕೆ permission ಇಲ್ಲ. ಒಂದು ಕಾಲದಲ್ಲಿ ಕ್ಯಾಪ್ಟನ್ ಹತ್ರ ಒಂದು ಗನ್ ಹಾಗೂ ಕೈಕೋಳ ಎರಡೂ ಇರ್ತಾ ಇತ್ತು.

ಕಳ್ಳರನ್ನು ಹಡಗಿನ lockupನಲ್ಲಿ ಹಾಕಿ ಇಟ್ಟು, portಗೆ ಬಂದಾಗ policeಗೆ ಒಪ್ಪಿಸಬೇಕಾಗಿತ್ತು. ಈಗ terrorist activity ಹೆಚ್ಚಿರೋದ್ರಿಂದ ಗನ್ allow ಮಾಡ್ತಿಲ್ಲ. So ಈಗ ಹಡಗಿಗೆ ಯಾರಾದ್ರೂ ಕಳ್ಳರು ಬಂದ್ರೆ, 'ಸ್ವಾಮಿ, ಏನಾದ್ರೂ ತೊಗೊಂಡು ಹೋಗಿ. ಆದ್ರೆ ನಮ್ಮನ್ನೂ, ನಮ್ಮ ಹಡಗನ್ನೂ ಏನೂ ಮಾಡಬೇಡಿ' ಅಂತ ಕೈಮುಗೀಬೇಕು ಅಷ್ಟೆ.

ನನಗೆ ೨೮ ವರುಷ ಆಗಿದ್ದಾಗ ಹಳ್ಳಿ ಮೈಸೂರಿನ ಲಾಯರ್ ರಾಮಕೃಷ್ಣಯ್ಯ ಹಾಗೂ ಸೋಮನಹಳ್ಳಿ ಜಾನಕಿ ಅವರ ಮಗಳು ಹೆಚ್.ಆರ್. ವೀಣ ಅವರನ್ನು ಮದುವೆಯಾಗುವ ಪ್ರಸ್ತಾಪ ಬಂತು. ಮದುವೇನೂ ಆದೆ. ನನಗೆ ಒಂದು ವರುಷ ಇದ್ದಾಗ ನನ್ನ ಜಾತಕ ನನ್ನ ತಾಯಿ ಬರೆಸಿದ್ರು. ಅದನ್ನು ನನ್ನ ತಾಯಿ ಹೆಂಡತಿಗೆ ಕೊಟ್ರು. ನನ್ನ ಮದುವೆಯಾದ ಒಂದು ವರುಷ ಕಳೆದ ಮೇಲೆ ನನ್ನ ಹೆಂಡತಿಗೆ ಹೇಳಿದೆ. 'ಓದಿನೋಡು, ಜಾತಕವನ್ನು ಏನು ಬರೆದಿದೆ' ಅಂತ. ಯಾಕೇಂದ್ರೆ ನನಗೆ ಕನ್ನಡ ಓದಲು ಬರೋದಿಲ್ಲ. ಆ ಜಾತಕದಲ್ಲಿ ಬರೆದಿತ್ತು, ಈ ಹುಡುಗ ತೆಳ್ಳಗಿರ್ತಾನೆ, ಉದ್ದದ ಕಾಲು, ಇವನ ೧೬ನೇ ವಯಸ್ಸಿನಲ್ಲಿ ನೀರಿನಲ್ಲಿ ಕೆಲಸ ಮಾಡ್ತಾನೆ ಅಂತ ಬರೆದಿತ್ತಂತೆ. ಆಗ ನನಗೆ ನಿಜಕ್ಕೂ ಅಚ್ಚರಿಯಾಯ್ತು. ಹಡಗಿನ ಜೀವನ ನನ್ನ ಹಣೇಲಿ ಬರೆದದ್ದು ಅಂತ ನನಗೆ ಆವಾಗ ಅರಿವಾಯ್ತು. ಜಾತಕ ನಂಬದಿರುವವರ ಪೈಕಿ ನಾನೂ ಇದ್ದೆ. ಆದರೆ ನನಗೆ ಒಂದು ವರುಷ ಇರುವಾಗ, ೧೬ ವರುಷದ್ದು ಬರೆದಿದಾರೆ ಅಂದ್ರೆ ಜಾತಕಗಳು ನಿಜವಿರಬಹುದು ಅಂತ ನನಗೆ ಅನ್ನಿಸಿತು. ನಂಬಿಕೆ ಬಂತು.

- **ನೀವು ಬೇರೆ ದೇಶಗಳನ್ನು ಸುತ್ತುವಾಗ ಅಲ್ಲಿನ ಕೃಷಿ ಬದುಕನ್ನು ಗಮನಿಸಿದ್ರಾ?**

  ಗಮನಿಸ್ತಾ ಇರಲಿಲ್ಲ. ಯಾಕೇಂದ್ರೆ ನಮ್ಮದು ಏನಿದ್ರೂ ಸಮುದ್ರದಡ ತಾನೆ? ಕೃಷಿ ಮಾಡೋದು ಎಲ್ಲಾ interior ತಾನೆ? Sea coastನಲ್ಲಿ ಸಾಮಾನ್ಯವಾಗಿ ಕೃಷಿ ನಡೆಯೋಲ್ಲ. ಆದ್ರೆ ನನಗೆ ಚಿಕ್ಕ ವಯಸ್ಸಿನಿಂದ National Geographic Magazine ಓದೋದು ಅಂದ್ರೆ ತುಂಬಾ ಇಷ್ಟ. ಅದರಲ್ಲಿ ನಾನು ದೇಶ ವಿದೇಶಗಳ ಕೃಷಿ ಬದುಕಿನ ಬಗ್ಗೆ ಓದ್ತಾ ಇದ್ದೆ. ಪ್ರತಿ ದೇಶಕ್ಕೆ ಹೋದಾಗಲೂ ನನಗೆ ತುಂಬಾ ಸುಲಭವಾಗಿ Language ಕಲಿಯುವ ಅವಕಾಶವಿತ್ತು. ದೇವರು ಕೊಟ್ಟಿರುವ ವರ ಅನ್ನಬಹುದು. ನಾನು Russian, French, German, Portugul, Spanish, ಕನ್ನಡ, ತೆಲುಗು, ಮಳೆಯಾಳಂ, ತಮಿಳು, ಗುಜರಾತಿ, ಮರಾಠಿ, ಬೆಂಗಾಳಿ ಭಾಷೆಯನ್ನು ಕಲಿತಿದೀನಿ. ನನಗೆ flair for languages ಇತ್ತು.

  ಮುಂಚೆ ಮದರಾಸಿನಲ್ಲಿದ್ದೆ. ಅನಂತರ ೧೯೮೬ರಲ್ಲಿ ಬೆಂಗಳೂರಿಗೆ ಬಂದ್ವಿ. ನನ್ನ ಮೊದಲನೆಯ ಮಗ ಸಿದ್ಧಾರ್ಥನಿಗೆ ಆಗ ಎರಡೂವರೆ ವರುಷ ಅಷ್ಟೆ. ಚಿಕ್ಕವ ಸುಶ್ರುತ್ ಇನ್ನೂ ಹುಟ್ಟಿರಲಿಲ್ಲ. ಆದ್ರೆ ಬೆಂಗಳೂರಿನ pollution ಹಾಗೂ ಪಾರ್ಥೇನಿಯಂ ಕಳೆ ಸಮಸ್ಯೆಯಿಂದ ನನ್ನ ಆರೋಗ್ಯ ಬಿಗಡಾಯಿಸ್ತು. ತುಂಬಾ allergy ಆಯ್ತು. 'ಇಲ್ಲಿರಲು ಆಗೋಲ್ಲ ವಾಪಸ್ಸು ಮದರಾಸಿಗೆ ಹೋಗೋಣ' ಅಂತ ಹೆಂಡತಿಗೆ ಹೇಳಿದೆ. ನನ್ನ ಹೆಂಡತಿಗೆ ಅಲ್ಲಿನ ಸೆಖೆ, ಸೊಳ್ಳೆ, ವಿದ್ಯುತ್ ಹಾಗೂ ನೀರಿನ ಸಮಸ್ಯೆ ಬೇಸರ ತರಿಸಿತ್ತು. ಮದ್ರಾಸ್ ಸೊಳ್ಳೆ ಮೈಮೇಲೆ ಕುಳಿತರೆ ಅದರ ಭಾರದಿಂದಲೇ ನಮಗೆ ತಿಳಿಯುತ್ತೆ ಅಷ್ಟು ದಪ್ಪನಾದ ಸೊಳ್ಳೆಗಳು ಇದಾವೆ (ನಗು) ಅಂತ. ಅನಂತರ ಊಟಿಗೆ ಹೋಗೋಣವಾ ಅಂತ ಕೇಳಿದೆ. ಮಗನನ್ನು ಓದಿಸಲು ಸಹ ಅಲ್ಲಿ ಅನುಕೂಲವಿತ್ತು. ನಾವೆಲ್ಲರೂ ಒಟ್ಟಿಗೆ ಊಟಿಗೆ ಹೋಗುವಾಗ car accident ಆಯ್ತು. ಹಾಗಾಗಿ ವಾಪಸ್ಸು ಬಂದ್ವಿ. ಮುಂದಿನ ವರುಷ ಮತ್ತೆ ಹೋದ್ವಿ. ಐದನೇ ತರಗತಿಗೆ ಮಗನ admission ಆಯ್ತು. ಶಾಲೆ principal relative ನಡೆಸ್ತಾ ಇದ್ದ Dormitoryಗೆ ಸೇರಿಸಿದ್ವಿ. ಅನಂತರ ಆರನೇ ತರಗತಿಗೆ ಬರುವಷ್ಟರಲ್ಲಿ, 'ನಾನು ಒಬ್ಬನೇ ಇರೋಲ್ಲ, ನಾನಿಲ್ಲಿ ಓದಬೇಕಾದ್ರೆ ನೀವೂ ಬಂದು ಇಲ್ಲೇ settle ಆಗಬೇಕು' ಅಂತ ಮಗ ಹೇಳೋದಕ್ಕೆ ಶುರು ಮಾಡಿದ. ಮೂರು ತಿಂಗಳಿಗೆ ಒಂದು ಸಾರಿ ಬೆಂಗಳೂರಿನಿಂದ ನೀವು ಬಂದು ಹೋಗೋದು ಸರಿಯಾಗೋಲ್ಲ ಅಂತ. ಆಗ ನನ್ನ ಹೆಂಡತೀನ ಇಲ್ಲೇ ಸ್ವಲ್ಪ ಜಮೀನು ಖರೀದಿಸೋಣ್ವ ಅಂತ ಕೇಳಿದೆ. ಅಲ್ಲಿ ಮಗನ ಶಾಲೆ ಸಮೀಪವೇ ನಾಲ್ಕು ಕಿಮೀ ದೂರದಲ್ಲಿ ಒಂದು ಜಾಗ ತುಂಬಾ ಇಷ್ಟ ಆಯ್ತು. ಅಲ್ಲಿ ಮೂರು ಎಕರೆ ಭೂಮಿ ಖರೀದಿ ಮಾಡಿದ್ವಿ. ಅಲ್ಲಿ ಮನೆ ಕಟ್ಟಬೇಕಿತ್ತು. ಬೆಂಗಳೂರಿನಿಂದ ತಿಂಗಳಿಗೆ ಒಂದು ಸಾರಿ ಹೋಗಿ, ಕಷ್ಟಪಟ್ಟು ೨೪ ಚದುರದ ಮನೇನ ಕಟ್ಟಿದ್ವಿ. ಅಲ್ಲಿ ಒಂದು ವರುಷ ಬೆಳೆದಿದ್ದ tea ಗಿಡಗಳು ಇದ್ವು. ಮೂರು ಎಕರೆಯಿಂದ ೬೦೦ ಕೆಜಿ tea ಸಿಕ್ತಾ ಇತ್ತು. ಇದು ೧೯೯೪ ರಿಂದ ೧೯೯೬ರ ಸಂದರ್ಭ. ಅನೇಕ contractors ನಮಗೆ ಮೋಸ ಮಾಡಿದ್ರು. ಮನೆ ಕಟ್ಟಿದ architect ಮಾತ್ರ ಬಹಳ ಸಹಾಯ ಮಾಡಿದ್ರು. ಅನಂತರ ನಾವು ಬೆಂಗಳೂರು ಬಿಟ್ಟು ಊಟೀಲೇ settle ಆದ್ವಿ. ನಾನು ಹೆಂಡತೀ ಜತೇನೂ discuss ಮಾಡ್ತಿದ್ದೆ. 'ದುಡ್ಡು ಕಳಿಯೋಕೆ

contractor ಯಾಕೆ? ನಾವೇ ಕಳಿಯೋಣ, ನಾವೇ ಪ್ರಯತ್ನ ಪಡೋಣ' ಅಂತ ಹೇಳಿ ನಮ್ಮ tea estate ನಿರ್ವಹಣೆ ಮಾಡಲು ಆರಂಭಿಸಿದೆ. ಕೂನೂರಿನಲ್ಲಿ Tea Training ಅಂತ classes ಇದೆ. United planters' Association of South India ಅಂದ್ರೆ UPASI ಅವರು ನಡೆಸೋದು. ಆ classಗೆ ಸೇರಿದೆ. Tea ಅಂದ್ರೆ ಏನು, ಅದನ್ನು ಬೆಳೆಸೋದು ಹ್ಯಾಗೆ, ಏನೇನು ಗೊಬ್ಬರ ಹಾಕಬೇಕು, ಕೀಟ ರೋಗಗಳ ನಿರ್ವಹಣೆ ಹೇಗೆ ಇವೆಲ್ಲವನ್ನೂ ಕಲಿತು, ತೋಟ ನೋಡಿಕೊಳ್ಳಿದ್ದ contractorನ ಓಡಿಸಿದೆ. ಟೀ ಕುಯ್ಯಲು ಬರಿಯ ಹೆಣ್ಣಾಳುಗಳು ಮಾತ್ರ ಸಿಕ್ತಾರೆ, ಗಂಡಸರು ಈ ಕೆಲಸ ಮಾಡೋಲ್ಲ. ಹೆಣ್ಣಾಳುಗಳನ್ನು handle ಮಾಡಲು ನನ್ನ ಹೆಂಡತಿ ಇದ್ದಳು. ನಾನು ಆಗಲೂ shipನಲ್ಲಿ ಆರರಿಂದ ಎಂಟು ತಿಂಗಳು ಇದ್ದು, ಉಳಿದ ಸಮಯದಲ್ಲಿ ಇಲ್ಲಿದ್ದು ತೋಟದ ಕೆಲಸ ಮಾಡಿಸ್ತಿದ್ದೆ. ನಾನು ನನ್ನ ಸ್ವತಃ ನಿರ್ವಹಣೆಯಿಂದ ಎರಡು ವರುಷದಲ್ಲಿ ಮೂರು ಎಕರೇಲಿ ೬೦೦ ಕೆಜಿ ಬರ್ತಿದ್ದ ಇಳುವರೀನ ೨೪ ಸಾವಿರ ಕೆಜಿಗೆ ಏರಿಸಿದೆ. ಅದೂ without knowing much about tea. ನನ್ನ ಬುದ್ಧಿಶಕ್ತಿ ಬಳಸಿ, ನನ್ನ ಹೆಂಡತಿಯ ಸಹಕಾರದಿಂದ ಇದು ಸಾಧ್ಯವಾಯ್ತು. Thank god, I have her as my wife. ಅವಳಿಗೆ patience ಹಾಗೂ responsibility ಜಾಸ್ತಿ.

ಟೀ ಗಿಡದಲ್ಲಿ ಬೆಳೆಯುವ ಎಲೆಗಳನ್ನು ದಿನವೂ ಕೀಳಬೇಕು. ತಿಂಗಳಲ್ಲಿ ೨೦ ದಿವಸ ಕೀಳೋದು, ಬಾಕಿ ಹತ್ತು ದಿನ 'ಕೆತ್ತಲು' ಅಂತೀವಿ ಅಂದ್ರೆ ಕಳೆ ಕೀಳೋದು. ಟೀನಲ್ಲಿ ಎರಡು variety ಇದೆ. ಒಂದು China tea ಮತ್ತೊಂದು Assam tea ಅಂತ. ಕಸಿ ಕಟ್ಟಿದ ಸಸಿಗಳನ್ನು ನರ್ಸರೀನವರು ಮಾರ್ತಾರೆ. ಒಂದು ಎಕರೇಲಿ ನಾಲ್ಕೂವರೆ ಸಾವಿರ ಟೀ ಸಸಿ ಹಾಕಬಹುದು. ಸಾಮಾನ್ಯವಾಗಿ ಗಿಡದಿಂದ ಗಿಡಕ್ಕೆ, ಸಾಲಿನಿಂದ ಸಾಲಿಗೆ ೩ ಅಡಿ ಅಂತರ ಇರುತ್ತೆ. ಜಾಸ್ತಿ ಇದ್ರೆ ಇನ್ನೂ ಒಳ್ಳೆಯದು. ಜಾಸ್ತಿ sunlight ಬಿದ್ರೆ ಅನುಕೂಲ. ಮೊದಲನೇ ವರುಷ ಏನೂ ಸಿಗೋಲ್ಲ. ಎರಡನೇ ವರುಷ ಬಂದದ್ದನ್ನೆಲ್ಲಾ ಕಿತ್ತು ಹಾಕಬೇಕು. ಮೂರನೇ ವರುಷದಿಂದ tea ಕೀಳಬಹುದು. ಹಾಗೇ foliage spread ಆಗಲು ಬಿಡಬಹುದು. ಟೀ ಗಿಡ ಒಂದು ಪೊದೆ ರೀತಿ, table top ತರಹ ಇರಬೇಕು. ಕಾಡು ತರಹ ಎತ್ತರ ಬೆಳೆದ್ರೆ ಕೆಳಗಿನ ಎಲೆಗೆ ಸೂರ್ಯನ ಬಿಸಿಲು ತಾಗೋಲ್ಲ. ಅದಕ್ಕಾಗಿ ಗಿಡವನ್ನು ಯಾವಾಗಲೂ trim ಮಾಡ್ತಾ ಇರಬೇಕು. ನಾವು teaನಲ್ಲೂ ಎಲ್ಲಾ ಎಲೇನೂ ಕೀಳೋಲ್ಲ. ಮೇಲಿರುವ ಮೂರು ಎಲೆ ಮಾತ್ರ ಕೀಳೋದು. ಒಂದು ಚಿಗುರು, ಎರಡು ಸಣ್ಣ ಎಲೆ ಇಷ್ಟು ಮಾತ್ರ ಕುಯ್ಯೋದು.



ಬೆಟ್ಟದ ಮೇಲಿನ ಮನೆ: ಊಟಿಯ ತಮ್ಮ ಟೀ ಎಸ್ಟೇಟಿನಲ್ಲಿ ನಿಂತಿರುವ ಕ್ಯಾಪ್ಟನ್ ಕೆ.ಕೆ.ವೆಂಕಟೇಶ್ ಅವರ ಕುಟುಂಬ

ವರುಷದಲ್ಲಿ ನಾಲ್ಕು ಬಾರಿ ಯೂರಿಯಾ ಗೊಬ್ಬರ, ಒಂದು ಸಾರಿ calcium ammonium nitrate ಹಾಕ್ತೀವಿ. ಜನವರೀಲಿ potassium sulphate ಹಾಕ್ತೀವಿ. ಗೊಬ್ಬರ ಕೊಡುವಾಗ ಹನಿ ಬೀಳ್ತಾ ಇರಬೇಕು. ಮಣ್ಣಿನಲ್ಲಿ ತೇವ ಇರಬೇಕು, ಆದ್ರೆ ಜೋರು ಮಳೆ ಆಗಬಾರದು. ಎಲ್ಲಾ ಕೊಚ್ಚಿಕೊಂಡು ಹೋಗುತ್ತೆ. ಟೀ ಬೆಳೆಯೋದು ಬೆಟ್ಟದ ಇಳಿಜಾರಿನಲ್ಲಿ. ಹಾಗಾಗಿ ನೀರು ನಿಲ್ಲಿಸಲು ಇಳಿಜಾರಿಗೆ ಅಡ್ಡಲಾಗಿ ೬ ಅಡಿ ಉದ್ದ, ಎರಡು ಅಡಿ ಅಗಲ, ಎರಡು ಅಡಿ ಆಳದ trench ತೆಗೆಸುತೀವಿ. ಇದು check dam ತರಹ ನೀರನ್ನು ಹಿಡಿದಿಡುತ್ತೆ. ಬೇಡವಾದ tea ಗಿಡದ ಸೊಪ್ಪು, ಕಳೆ ಗಿಡಗಳನ್ನು ಕಿತ್ತು ಗುಂಡೀಲಿ ಹಾಕ್ತೀವಿ. ಅದೇ ಗೊಬ್ಬರವಾಗುತ್ತೆ. Surface moisture ನಲ್ಲಿ ಟೀ ಬೆಳೆಯುತ್ತೆ. ನೆರಳಿಗಾಗಿ ಸಾಮಾನ್ಯವಾಗಿ silver oak ಹಾಕ್ತೀವಿ. ಯಾಕೇಂದ್ರೆ ತುಂಬಾ ಬಿಸಿಲು ನೇರವಾಗಿ ಬಿದ್ರೆ ಎಲೆ ಕಪ್ಪಾಗುತ್ತೆ. ಅಲ್ಲದೆ ತುಂಬಾ ನೆರಳಿದ್ರೆ, ಸೂರ್ಯರಶ್ಮಿ ಬೀಳದೇ ಇದ್ರೆ ಎಲೆ ಚಿಗುರೋಲ್ಲ. ಜಾಸ್ತಿ ನೆರಳಿದ್ರೆ ಡಿಸೆಂಬರ್, ಜನವರೀಲಿ frost ಬಿದ್ದಾಗಲೂ ಸಹ ಎಲೆ ಕಪ್ಪಾಗುತ್ತೆ. ಇದನ್ನು balance ಮಾಡೋಕೆ ತುಂಬಾ ಮರಾನೂ ಇರಬಾರದು.

ಮರ ಇರದಂತೇನೂ ಇರಬಾರದು. ಹಾಗಾಗಿ ತೋಟಕ್ಕೆ ಶೇಕಡಾ ಎಂಟರಿಂದ ಹತ್ತರಷ್ಟು ನೆರಳು ಬೀಳುವಂತೆ ಸಿಲ್ವರ್ ಮರವನ್ನು ಬೆಳೆಸಿರ್‍ತೀವಿ. ಕೆಲವರು ನೀಲಗಿರಿ ಮರಾ ಸಹಾ ಹಾಕ್ತಾರೆ. ನಾನು ಹಾಕಿಲ್ಲ ಅಷ್ಟೆ. ನೀಲಗಿರಿ ಮರ ನನಗೆ ಇಷ್ಟ ಆಗಲಿಲ್ಲ. ಟೀ ಎಲೆಗಳನ್ನು ತಿಂಗಳಲ್ಲಿ ೨೦ ದಿನ ಕೀಳ್ತಾರೆ, ಗಿಡಗಳನ್ನು ಚೆನ್ನಾಗಿ ನಿರ್ವಹಣೆ ಮಾಡಿದ್ರೆ ಮಾತ್ರ ತಿಂಗಳಲ್ಲಿ ೨೦ ದಿನ ಎಲೆ ಕುಯ್ಯಬಹುದು. ತೋಟದ ಒಂದು ಭಾಗದಿಂದ ಕುಯ್ಯುತ್ತಾ ಬಂದು ಮತ್ತೆ ಅದೇ ಜಾಗಕ್ಕೆ ಬರುವ ಹೊತ್ತಿಗೆ ೨೦ ದಿನ ಬೇಕು. ಹಾಗಾಗಿ ಮಧ್ಯೆ ೧೦ ದಿನ ಬಿಟ್ಟು ದಿನಾ ಕೀಳುವ ಕೆಲಸ ಇದ್ದೇ ಇರುತ್ತೆ. ಈ ೧೦ ದಿನದ ಬಿಡುವಿನಲ್ಲಿ ಕಳೆ ಹುಲ್ಲಿನ ನಿರ್ವಹಣೆ ಮಾಡ್ತೀವಿ. ಅದನ್ನೇ ಕಿತ್ತು ಭೂಮಿಯ ಮೇಲೆ ಹೊದಿಕೆಯಾಗಿ ಬಳಸ್ತೀವಿ. ಟೀ ಗಿಡಗಳಿಗೆ ಐದಾರು ತರಹದ ಮೈಟ್ಸ್ (mites) ಬರುತ್ತೆ. ಅದಕ್ಕೆ ಕೀಟನಾಶಕಗಳನ್ನು ಸಿಂಪರಣೆ ಮಾಡಬೇಕು. ನನಗೆ ವಿಷ ಔಷಧಿ ಹೊಡೆಯುವ ಆಸಕ್ತಿ ಇರಲಿಲ್ಲ. ಸಾವಯವ ಕೃಷಿಯ ಬಗ್ಗೆ ಆಸಕ್ತಿ ಇತ್ತು. ಈ ಕೃಷಿ ಅಳವಡಿಸಿದರೆ ಆಗುವ ಲಾಭ, ನಷ್ಟಗಳ ಬಗ್ಗೆ ಪತ್ತೆ ಮಾಡಿದೆ. ಅನುಭವಿಗಳು ಹೇಳಿದ್ರು, ನೀವು organic farming ಮಾಡಿದ್ರೆ ಪ್ರತಿ ಕೆಜಿಗೆ ಈಗ ೧೦ ರೂಪಾಯಿ ಸಿಗೋದು, ಅನಂತರ ಅದೇ ಎಲೆಗೆ ೪೦ ರೂಪಾಯಿ ಸಿಗುತ್ತೆ. ಆದ್ರೆ ಉತ್ಪಾದನೆ ಸಹಾ ಕಡಿಮೆಯಾಗುತ್ತೆ ಅಂದ್ರು. ಪರವಾಗಿಲ್ಲ, ನಾವು ಆರಂಭ ಮಾಡ್ತೀವಿ ಅಂತ ಹೊರಟಾಗ, UPASI meetingನಲ್ಲಿ ದೊಡ್ಡ planter ಒಬ್ರು ಭೇಟಿಯಾದ್ರು. ಅವರು ನಿಮ್ಮ ಅಕ್ಕಪಕ್ಕದಲ್ಲಿ fertilizer ಯಾರಾದ್ರೂ ಬಳಸ್ತಾ ಇದಾರ ಅಂತ ಕೇಳಿದ್ರು. ಎಲ್ಲರೂ ಬಳಸ್ತಾ ಇದಾರೆ, ಆದರೆ ನಾನು ನಿಲ್ಲಿಸಿ ಸಾವಯವ ಕೃಷಿ ಮಾಡ್ತೀನಿ ಅಂದೆ. 'ಹಾಗಾದ್ರೆ Don't do it son' ಅಂದ್ರು. ಅಕ್ಕಪಕ್ಕದವರು ರಾಸಾಯನಿಕ ಬಳಸಿದ್ರೆ ಅದು ನಿಮ್ಮ ತೋಟಕ್ಕೂ ಬರುತ್ತೆ, ರಾಸಾಯನಿಕ ಸಿಂಪರಣೆ ಮಾಡಿದಾಗ ಗಾಳೀಲಿ ಗಿಡಗಳಿಗೆ ಬಂದು ಬೀಳುತ್ತೆ. ಇದೂ ಇಲ್ಲ, ಅದೂ ಇಲ್ಲ ಅನ್ನುವ ಪರಿಸ್ಥಿತಿ ಆಗುತ್ತೆ. ನೀನು ಬೆಳೆದ Tea ಸಾವಯವ tea ಆಗೋಲ್ಲ. ಈ ಕಡೆ ಉತ್ಪಾದನೆ ಇರೋಲ್ಲ, ಉತ್ತಮ ಧಾರಣೆ ಸಹಾ ಸಿಗೋಲ್ಲ ಅಂದ್ರು. ಹಾಗಾಗಿ ನಾನು ಸಹಾ ಎಲ್ಲರಂತೆಯೇ ರಾಸಾಯನಿಕ ಬಳಸಿ tea ಬೇಸಾಯ ಮಾಡಲು ಆರಂಭಿಸಿದೆ. ಯಾಕೇಂದ್ರೆ ನಮ್ಮ ಅಕ್ಕಪಕ್ಕದವರೆಲ್ಲಾ small holding but no forward thinking. ಹಾಗಾಗಿ ನಾನೊಬ್ಬ ಸಾವಯವ ಕೃಷಿ ಮಾಡಲಾಗಲಿಲ್ಲ.

Tea ಎಲೆ ಕಿತ್ತ ಮೇಲೆ ಅದನ್ನು ಸಂಸ್ಕರಿಸಲು factory ಮಾಡಬೇಕಾದ್ರೆ ೨೨ ರಿಂದ ೨೫ ಲಕ್ಷ ರೂಪಾಯಿ ಬೇಕು. ಬರೀ ನನ್ನ ತೋಟದ ಉತ್ಪನ್ನದಿಂದ ಮಾತ್ರ factory ಓಡಿಸಲು ಸಾಕಾಗ್ತಾ ಇರಲಿಲ್ಲ. ಬೇರೆಯವರಿಂದ ಖರೀದಿ ಮಾಡಬೇಕು. ಗುಣಮಟ್ಟದ ಉತ್ಪನ್ನ ಅವರಿಂದ ಸಿಗದಿದ್ರೆ ಕಷ್ಟ ಅಂತ ಮಾರಾಟಕ್ಕಿದ್ದ ಒಂದು factoryನ ನಾನು ಖರೀದಿ ಮಾಡಲಿಲ್ಲ. ನಾನು ಬೆಳೆದ Raw leaves ಬೇರೆ factoryಗೆ ಕೊಡ್ತಿದ್ದೆ. ಇಲ್ಲಿ ಪದ್ಧತಿ ಹ್ಯಾಗೆ ಅಂದ್ರೆ ಬೆಳಗ್ಗೆ ಎಲೆ ಕಿತ್ತು, Jute bagನಲ್ಲಿ (tea sacks) ತೂಕ ಹಾಕಿ ತೋಟದ ಗೇಟಿನಲ್ಲಿ ಇಡ್ತೀವಿ. ಸಂಜೆ factoryಯಿಂದ van ಬರುತ್ತೆ. ಅವರು ಅದನ್ನು ಖರೀದಿ ಮಾಡಿ, ದಿನಾ ದುಡ್ಡು ಕೊಡ್ತಾರೆ ಅಥವಾ ವಾರಕ್ಕೆ ಬೇಕಾದ್ರೂ ದುಡ್ಡು ಕೊಡ್ತಾರೆ. ಪ್ರತಿ ಕೆಜಿಗೆ ೩ ರೂಪಾಯಿ ೩೦ ಪೈಸೆಯಿಂದ ೧೯ ರೂಪಾಯಿಯವರೆಗೆ ಧಾರಣೆ ಏರುಪೇರಾಗಿದೆ. Worldನಲ್ಲಿ tea production excess ಆಗಿ, tea export ನಿಂತಿದ್ದರಿಂದ ಧಾರಣೆ ಏರುಪೇರು ಸಹಜವಾಗಿದೆ. ಮತ್ತೊಂದು ಮುಖ್ಯ ಸಮಸ್ಯೆ ಏನೂಂದ್ರೆ ಉತ್ತರ ಭಾರತದ ಟೀ ತಳಿಗಳು ದಕ್ಷಿಣ ಭಾರತದ ಟೀ ತಳಿಗಳಿಗಿಂತ ಉತ್ತಮ. ಹಾಗೇ ದಕ್ಷಿಣ ಭಾರತದಲ್ಲಿ ಟೀ ಕಲಬೆರಕೆ ಸಹಾ ಜಾಸ್ತಿ. ಎಲ್ಲದಕ್ಕಿಂತ ಮುಖ್ಯವಾಗಿ ಕೇಂದ್ರ ಸರ್ಕಾರ ನೆರೆ ದೇಶ ಶ್ರೀಲಂಕಾಗೆ most favoured nation ಪಟ್ಟ ಕೊಟ್ಟು, tea duty ತೆಗೆದು ಹಾಕಿದ್ರು. ಶ್ರೀಲಂಕಾ ಟೀ ಉತ್ತಮ ಗುಣಮಟ್ಟದ ಟೀ. ಹಾಗೆ duty ತೆಗೆದಿದ್ರಿಂದ ನಮ್ಮ ಟೀ ಗಿಂತ cheap ಆಯ್ತು. ಹಾಗಾಗಿ Indian Exporters ಶ್ರೀಲಂಕಾದಿಂದ ಟೀ ಖರೀದಿಸಿ ಅದನ್ನೇ ಭಾರತೀಯ ಟೀ ಅಂತ ಹೊರದೇಶಗಳಿಗೆ ಕಳಿಸಿದ್ರು. 'ಹ್ಯಾಗಾದ್ರೂ ದುಡ್ಡು ಮಾಡಬೇಕು. ದೇಶ ಹಾಳಾದ್ರೂ ಪರವಾಗಿಲ್ಲ' ಅನ್ನುವ ಚಿಂತೆ ನಮ್ಮ ಜನಗಳಿಗೆ. ಕಲಬೆರಕೆ ತುಂಬಾ ಆಗಿ ರಷ್ಯಾದಿಂದ consignment ವಾಪಸ್ಸು ಬಂದಿದೆ. ನಾವು ಕುಡಿದು ಎಸೆದ ಟೀ ಪುಡಿ, ಕುದುರೆ ಲದ್ದಿ ಎಲ್ಲಾ ಮಿಶ್ರ ಮಾಡಿ export ಮಾಡಿದಾರೆ. ಮೂರು ಮಿಲಿಯನ್ ಟನ್ ಟೀ ವಾಪಸ್ಸು ಬಂದ ಮೇಲೆ ಭಾರತದ ಟೀಗೆ ಮರ್ಯಾದೆ ಹೋಯ್ತು. ಆಗ ಕೀನ್ಯಾ ದೇಶದ ಟೀಗೆ ಬೆಲೆ ಬಂತು. ಟೀ ಉತ್ಪಾದನೆ ಮಾಡುವ ಇತರೆ ರಾಷ್ಟ್ರಗಳು ಅಂದ್ರೆ ಪಾಕಿಸ್ತಾನ, ಚೈನಾ, ವಿಯೆಟ್ನಾಂ, ಶ್ರೀಲಂಕಾ ಮುಖ್ಯವಾದವು. ಈಗ ಅಂತರಾಷ್ಟ್ರೀಯ ಮಾರುಕಟ್ಟೇಲಿ ಬಹಳವಾದ competition ಇದೆ. ದಕ್ಷಿಣ ಭಾರತದ ಟೀ ಧಾರಣೆ ಕುಸಿದ ಮೇಲೆ, ಜನ ಇಲ್ಲಿ ಆಲೂಗೆಡ್ಡೆ ಬೆಳೆಯಲು ಆರಂಭಿಸಿದ್ರು. ಒಂದು ಕ್ವಿಂಟಾಲ್‌ಗೆ ೮೦೦ ರೂಪಾಯಿ ಧಾರಣೆ ಸಿಕ್ತಾ ಇತ್ತು. ಎಲ್ಲರೂ ಬೆಳೆದಾಗ ೩೦೦ ರೂಪಾಯಿಗೆ ಕುಸೀತು. ಆದ್ರೆ ನಾನು ಆಲೂಗೆಡ್ಡೆ

ಬೆಳೀಲಿಲ್ಲ. ನನಗೆ ಅಲ್ಲಿ ಹಣ್ಣಿನ ಬೆಳೆ ಬೆಳೀಬೇಕು ಅಂತ ಆಸೆ ಇತ್ತು. Horticulture Societyಗೆ ಹೋಗಿ, apple, orange, lime, passion fruit, pears, plums, peaches, kiwifruit ಸಸಿ ಕೊಡಿ ಅಂತ ಕೇಳಿದೆ. ದುಡ್ಡು ತೊಗೊಂಡ್ರು. ಸಸಿ ಕೊಟ್ರು. ಆದ್ರೆ ನೆಟ್ಟ ಎರಡು, ಮೂರು ವರುಷ ಆದ ಮೇಲೆ ಕಾಡುಕಾಯಿ ಬಿಡಲು ಆರಂಭವಾಯ್ತು. ಅನಂತರ ಕಿತ್ತು ಹಾಕಿದೆ. ಹಾಕಿದ್ದಕ್ಕೆ ಕೆಲವು ಗಿಡ ನೆರಳಿಗೆ ಆಗಲಿ ಅಂತ ಬಿಟ್ಟಿದೀನಿ. ಇದ್ರಿಂದ ನನಗೆ ತುಂಬಾ ಬೇಜಾರಾಯ್ತು. ನನ್ನ ಮನೆ ಇರುವ valleyನಲ್ಲಿ ಗಾಳಿ ಜಾಸ್ತಿ. ಛಳಿ ಜಾಸ್ತಿ. ಹಾಗಾಗಿ ಅದ್ರಿಂದ ಬೆಳೀಲಿಲ್ವೇನೋ ಅಂದುಕೊಂಡು ಸುಮ್ಮನಾದೆ.

ಕೃಷಿಯಲ್ಲಿ ಅಪಾರ ಸಾಧನೆ ಮಾಡಬೇಕು ಅನ್ನುವ ಹುಮ್ಮಸ್ಸು ಇತ್ತು. ಆರಂಭದಲ್ಲೇ ಕೋಲಾರದಲ್ಲಿ ೨೦ ಎಕರೆ ಜಮೀನು ಖರೀದಿಸಿ, mexicoದ special type of beans ಬೆಳೀಬೇಕು ಅಂತ ಆಸೆ ಇತ್ತು. ಅದರಲ್ಲಿ protein content 20%. ನನ್ನ ಹೆಂಡತಿ ಈ idea ಇಷ್ಟಪಡಲಿಲ್ಲ. 'Mexicoದಲ್ಲಿಯೇ Rubber plant variety ಬಂದಿದೆ. ಇದು dry areaಗೆ green cover ಆಗುತ್ತೆ, ಹಾಗೇ ಎಕರೆಗೆ ಎರಡರಿಂದ, ಮೂರು ಟನ್ ರಬ್ಬರ್ ಉತ್ಪಾದನೆ ಮಾಡಬಹುದು. ಗಿಡದ ಬೀಜವನ್ನೇ Rubber ಆಗಿ convert ಮಾಡ್ತಾರೆ. ಅದು ಸಹಜ ರಬ್ಬರ್‌ಗಿಂತ ಉತ್ತಮವಂತೆ. ಅದನ್ನು try ಮಾಡೋಣ' ಅಂದುಕೊಂಡೆ. 'ಊಟೀಲಿರೋದು ನೋಡಿಕೊಳ್ಳೋಣ, ಎರಡು ಮೂರು ಕಡೆ ನಿರ್ವಹಣೆ ಆಗೋಲ್ಲ' ಅಂತ ನನ್ನ ಹೆಂಡತಿ ಆಸಕ್ತಿ ತೋರಿಸಲಿಲ್ಲ. ಒಂದು ಎತ್ತಿನಿಂದ ಗಾಡಿ ಎಳೆಯಲು ಸಾಧ್ಯವಿಲ್ಲ ಅಲ್ವಾ . . . ಎಳೆದ್ರೆ ಗಾಡಿ ತಲೆ ಮೇಲೆ ಬೀಳುತ್ತೆ ಅಂತ ಆಲೋಚನೆ ಬಿಟ್ಟುಬಿಟ್ಟೆ. (ನಗು)

ಮೈಸೂರಿನ ಲಿಂಗಾಂಬುಧಿ ಕೆರೆ ಹತ್ರ ಈಗ ಎರಡು ಎಕರೆ ಜಮೀನು ಖರೀದಿಸಿದೀನಿ. ಅಲ್ಲಿ Herbal farming ಮಾಡಬೇಕು ಅನ್ನುವ ಆಸೆ ಇದೆ. ನಾನಿನ್ನೂ active serviceನಲ್ಲಿ ಇರೋದ್ರಿಂದ ಇನ್ನೂ ನಿರ್ಧಾರ ಮಾಡಿಲ್ಲ. ನಾನು ಏಳು ತಿಂಗಳು ಹೊರಗಿದ್ರೆ ಬಾಕಿ ೫ ತಿಂಗಳು quantity and quality time ಮನೇಲೇ ಕಳೀತೀನಿ. ಸದ್ಯಕ್ಕೆ ತುಂಬಾ ಗೋಜಲುಗಳನ್ನು ಇಟ್ಟುಕೊಳ್ಳೋದು ಬೇಡ ಅಂತ ತೀರ್ಮಾನಿಸಿದೀನಿ. ಈಗ stock market ಬಗ್ಗೆ ಗಮನ ಹರಿಸಿದೀನಿ. ವ್ಯವಸಾಯ ಮಾಡಿದ್ರೆ full commitment ಇಟ್ಟು ಮಾಡಬೇಕು. ಅರ್ಧಂಬರ್ಧ ಮಾಡೋದ್ರಲ್ಲಿ ನನಗೆ ನಂಬಿಕೆ ಇಲ್ಲ. ಒಳ್ಳೇದೋ, ಕೆಟ್ಟದೋ ನಾನು ಏನು ಮಾಡಿದ್ರೂ ಚೆನ್ನಾಗೇ ಮಾಡಿಬಿಡ್ತೀನಿ. (ನಗು)

Water conservation ಬಗ್ಗೆ ನನಗೆ ತುಂಬಾ ಒಲವಿದೆ. ಮನೇಲಿ ನಲ್ಲಿ ನೀರು ಸೋರ್ತಿದ್ರೆ ಎಲ್ಲರಿಗೂ ರೇಗಿಬಿಡ್ತೀನಿ. ಯಾಕೇಂದ್ರೆ ನಮ್ಮ ಹಡಗಿನಲ್ಲಿ, ನಮಗೆ ನೀರಿನ unlimited supply ಇರೋದಿಲ್ಲ. ನಮ್ಮ tankನಲ್ಲಿರುವ ನೀರಿನಲ್ಲೇ ಎಲ್ಲಾ manage ಮಾಡಬೇಕು. ಒಂದೇ ಬಕೆಟ್ ನೀರಿನಲ್ಲಿ, toilet, ಸ್ನಾನ, ಮುಖ ತೊಳಿಯೋದು, ಹಲ್ಲು ಉಜ್ಜುವುದು ಎಲ್ಲಾ ಮಾಡಬೇಕು. ನೀರು ಪೋಲು ಮಾಡೋದು ನನಗೆ ಆಗೋಲ್ಲ. ಒಣ ಭೂಮೀಲಿ ನೀರಿನ ಸಂರಕ್ಷಣೆ ಮೂಲಕ ಗಿಡಮರ ಬೆಳೆದು ಸಾಧನೆ ಮಾಡುವ ಆಸೆ ಇದೆ. ಯಾಕೇಂದ್ರೆ ನಮ್ಮ ಮಣ್ಣು ಸುವರ್ಣದ ತರಹ ಇದೆ. ಇಲ್ಲಿ ಏನಾದ್ರೂ ಮಾಡಬಹುದು. ಆದ್ರೆ ನನಗೆ ಅಷ್ಟು commitment ಇಲ್ಲ. ಅಲ್ಲದೆ ಮಾಡಲೇಬೇಕು ಅನ್ನುವ ಒತ್ತಡ ಸಹಾ ಇಲ್ಲ. ಬಾಕಿ ಎಲ್ಲಾ ದೇವರ ದಯದಿಂದ ಚೆನ್ನಾಗಿದೆ.

- **ಟೀ ಸಂಸ್ಕರಣೆ ವಿಚಾರಗಳನ್ನು ತಿಳಿಸ್ತೀರಾ?**

ಬೆಳೆಗಾರರಿಂದ ಖರೀದಿಸಿದ tea ಎಲೇನ factoryನಲ್ಲಿ ದೊಡ್ಡ Mesh tableನಲ್ಲಿ ಹರಡಿಬಿಡ್ತಾರೆ. Jute bagನಲ್ಲಿ ತುಂಬಿದಾಗ ಬಂದಿರಬಹುದಾದ ಶಾಖ ಆಗ ಕಡಿಮೆಯಾಗುತ್ತೆ. ಎಲೆ ತಣ್ಣಗಾದ ಮೇಲೆ, dehumidification ಅಂತ ಮಾಡ್ತಾರೆ. ಎಲೆಯನ್ನು ಒಣಗಿಸಿದ ಮೇಲೆ, ಅದನ್ನು machineಗೆ ಒಯ್ತಾರೆ. ಅಲ್ಲಿ ಐದು ಹಂತದ crushing ನಡೆಯುತ್ತೆ. ಐದು, ಆರನೇ ಹಂತದಲ್ಲಿ, ನೀವು ಕುಡಿಯುವ ಟೀ ಎಲೆಯ sizeಗೆ ಬರುತ್ತೆ. ನಂತರ ಅದನ್ನು heater ಒಳಗೆ ಹಾಕ್ತಾರೆ. ಅಲ್ಲಿ tea ಎಲೆ ಒಣಗಿಸಿ ಅನಂತರ Graderಗೆ ಕಳಿಸ್ತಾರೆ. ಅಲ್ಲಿ ಎಲೆ ವಿಂಗಡನೆ ಆಗುತ್ತೆ. ಇದೆಲ್ಲಾ ಒಂದು continuous process. Gradingನಲ್ಲಿ different type of mesh ಹಾಕಿರ್ತಾರೆ. ಅದ್ರಲ್ಲಿ Dust tea, CTC tea, Rougher variety ಬರುತ್ತೆ. Higher variety tea ಧೂಳು ತುಂಬಾ expensive. ಹೀಗೆ factory ಜನರು Grade ಮಾಡಿ, Pack ಮಾಡಿ ಮಧ್ಯವರ್ತಿಗಳಿಗೆ ಕಳಿಸಿ ಕೊಡ್ತಾರೆ. ಅಸ್ಸಾಂನಲ್ಲಿ, tea ಎಲ್ಲಾ auctionಗೆ ಹೋಗುತ್ತೆ. Factory ಯಿಂದ direct sales ಮಾಡೋಲ್ಲ. ಅಲ್ಲಿಗೆ tea tasters ಬಂದು ಅವರು ರುಚಿ ನೋಡಿ ಅಭಿಪ್ರಾಯ ಕೊಟ್ಟ ಮೇಲೆ ಬೆಲೆ ನಿರ್ಧಾರವಾಗುತ್ತೆ. ಡಾರ್ಜಲಿಂಗ್‌ನಲ್ಲಿ ಒಂದು Estate ಇದೆ.

ಅದರ ಒಂದು ಕೆಜಿ tea ಇಪ್ಪತ್ತೈದು ಸಾವಿರ ರೂಪಾಯಿಗೆ ಮಾರಾಟ ಆಗಿದೆ. ಅವರು ಜಪಾನ್ ದೇಶದ ಸಲುವಾಗಿ ವಿಶೇಷವಾದ Green tea ಮಾಡ್ತಾರೆ. ಅಲ್ಲಿನ ಮಣ್ಣು, ಹವಾಮಾನ ಈ ಟೀಗೆ ಬೆಲೆ ತಂದು ಕೊಟ್ಟಿದೆ. ಅಲ್ಲಿನ leaf ಬೇರೆ texture, ಬೇರೆ flavour, ಬೇರೆ taste ಇರೋದ್ರಿಂದ ಅದಕ್ಕೆ ಬೇರೆ ಬೆಲೆ.

- **Teaನಲ್ಲಿ ಗುಣಮಟ್ಟ ನಿರ್ಧರಿಸುವ ಅಂಶಗಳು ಯಾವುದು?**
  Soil, climate, ತೋಟದ drinage ಅಂದ್ರೆ ತೋಟದಲ್ಲಿ ನೀರು ನಿಲ್ಲಕೂಡದು, ಯಾವಾಗಲೂ ತುಂತುರು ಮಳೆ ಬೀಳ್ತಾನೇ ಇರಬೇಕು. ವಾತಾವರಣದಲ್ಲಿ ಯಾವಾಗಲೂ humidity ಇರಬೇಕು. ತೋಟ ಇಳಿಜಾರಾಗಿರಬೇಕು, ನೆರಳು ಇರಬೇಕು. ಅಂತಹ ತೋಟದ ಟೀ ಗುಣಮಟ್ಟ ಉತ್ತಮವಾಗಿರುತ್ತೆ.

- **ಉತ್ತಮ ಗುಣಮಟ್ಟದ ಟೀ ತಯಾರಿಸುವುದು ಹೇಗೆ?**
  ಮೊದಲು ನೀರನ್ನು ಚೆನ್ನಾಗಿ ಕುದಿಸಬೇಕು. ಅನಂತರ low heatನಲ್ಲಿ (simನಲ್ಲಿ) tea ಪುಡಿ ಹಾಕಿ ಮೂರು ನಿಮಿಷ ಬಿಟ್ಟು ಅನಂತರ ಆರಿಸಬೇಕು. ನಂತರ ಮೂರು ನಿಮಿಷ ಹಾಗೇ ಬಿಟ್ಟರೆ, tea flavourನ ನೀರು absorb ಮಾಡಿಕೊಳ್ಳುತ್ತೆ. ಆಮೇಲೆ ಅದನ್ನು filter ಮಾಡಿ, ಎಷ್ಟು ಕಡಿಮೆ ಹಾಲು ಹಾಕಬೇಕೋ ಹಾಕಿ, ಅವರವರ taste ಹಾಗೂ flavour ಅನುಸರಿಸಿ tea ತಯಾರಿಸಬೇಕು. ಆದ್ರೆ ಜನ ಹಾಲಿಗೆ ಎಲ್ಲಾ ಹಾಕಿ, ಚೆನ್ನಾಗಿ ಕುದಿಸಿ ಕುಡೀತಾರೆ. ಅದು ಸರಿಯಾದ ವಿಧಾನ ಅಲ್ಲ. ಮಸಾಲ tea ತಯಾರಿಸೋರು ಏಲಕ್ಕಿ, ದಾಲ್ಚಿನ್ನಿ, ಹಾಕ್ಕೋಬಹುದು. Lime tea ಅಂತಾನೂ ಕುಡೀತಾರೆ. ಅದು ಅವರವರ tasteಗೆ ಹೋಗುತ್ತೆ.

  Tea ಗಿಡ ಹಾಕಿದ ಮೇಲೆ ಮೂರನೇ ವರುಷದಿಂದ yield ಶುರುವಾಗುತ್ತೆ. ಎಂಟು, ಹತ್ತು ವರುಷದಲ್ಲಿ ಉತ್ತಮ ಇಳುವರಿ ದೊರೆಯುತ್ತೆ. ಸುಮಾರು ೬೦ ರಿಂದ ೭೦ ವರುಷ tea ಕೊಡ್ತಾನೇ ಇರುತ್ತೆ. ಆದರೆ ಆ ಗಿಡಗಳನ್ನು regular ಆಗಿ trim ಮಾಡಬೇಕು. ಪ್ರತೀ ಆರರಿಂದ, ಏಳು ವರುಷಕ್ಕೆ ಒಂದು ಬಾರಿ ಎಲ್ಲಾ ಎಲೆಗಳನ್ನೂ ಕಿತ್ತು ಹಾಕಬೇಕು. ಗಿಡವನ್ನು ಬುಡಮಟ್ಟಕ್ಕೆ ಕತ್ತರಿಸಿ, ಅನಂತರ ಎಲೆ ಬೆಳೆಸಲು ಶುರು ಮಾಡಬೇಕು. ಇಲ್ಲದೇ ಹೋದ್ರೆ ಹಳೇ ಎಲೇನೇ ಯಾವಾಗಲೂ ಇರುತ್ತೆ. fresh leaf ಬರೋದು ಕಡಿಮೆ ಆಗುತ್ತೆ. ನಾವು ಗಿಡಕ್ಕೆ ಕೊಡೋ ಆಹಾರ ಎಲ್ಲಾ ಹಳೇ ಎಲೆಗಳಿಗೇ ಹೋಗುತ್ತೆ. ಅದಕ್ಕೇ ಎಲ್ಲಾ ಎಲೆಗಳನ್ನೂ ಕೈಯಿಂದಲೇ ಕಿತ್ತು, ಗಿಡದ ರೆಂಬೆ ಕೊಂಬೆಗಳನ್ನು ನಮಗೆ ಬೇಕಾದ ಮಟ್ಟಕ್ಕೆ ಕತ್ತರಿಸುವುದು ಸೂಕ್ತ. ಕತ್ತರಿಸಿದಾಗ, ಒಂದು ಎರಡು, ಮೂರು ತಿಂಗಳು tea leaf ಸಿಗೋಲ್ಲ. ಹಾಗಾಗಿ ಗಿಡಗಳ trimming ಎಲ್ಲಾ ಒಟ್ಟಿಗೆ ಮಾಡೋಲ್ಲ. ಒಂದು ಹತ್ತು ಎಕರೆ ಇದ್ರೆ, ಎರಡು ಎಕರೆ trim ಮಾಡ್ತಾರೆ. ಹೀಗೆ ಹಂತಹಂತವಾಗಿ ತೋಟ ಪೂರ್ಣ trim ಮಾಡ್ತಾ ಬಂದ್ರೆ productionಗೆ ಯಾವುದೇ ರೀತಿ ತೊಂದರೆ ಇರೋದಿಲ್ಲ. ಈ ತರಹದ cycleನ ಇಟ್ಟುಕೊಂಡ್ರೆ ಗಿಡ ೭೦ ವರುಷದವರೆಗೆ ಆರೋಗ್ಯವಾಗಿರುತ್ತೆ.

  ನನ್ನ ತೋಟ ಇರುವ ಜಾಗದ ಪಕ್ಕದಲ್ಲಿ ಒಂದು factory ಇದೆ. ಅವರು Mushroom cultivation ಮಾಡ್ತಾರೆ, for export purpose. ದಿನಕ್ಕೆ ೩೦ ಟನ್ produce ಮಾಡಿ export ಮಾಡ್ತಾರೆ. ನನ್ನ ಹೆಂಡತೀನ ಅಣಬೆ ಬೇಸಾಯದ ತರಬೇತಿಗೆ ಸಹಾ ಕಳಿಸಿದ್ದೆ. ಮನೇಲು ಸಹಾ ಬೆಳೆಸಿದೀವಿ. ಆ factory ನವರು mushroom ಬೆಳೆಸಿದ ಮೇಲೆ ಉಳಿಯುವ ಹುಲ್ಲು, ಮರದ ಹೊಟ್ಟನ್ನು ಬಿಸಾಕ್ತಾರೆ. ನಾನು ಆ wasteನ tea ಗಿಡಗಳಿಗೆ ಹಾಕಿದಾಗ ಇಳುವರೀಲಿ ತುಂಬಾ ಹೆಚ್ಚಳ ಕಂಡುಬಂತು. ಹಾಗೇ ಎರೆಹುಳು ಸಾಕಿ, ಗೊಬ್ಬರ ತಯಾರು ಮಾಡಿ ಗಿಡಗಳಿಗೆ ಹಾಕಿದ್ರೆ ತುಂಬಾ ಒಳ್ಳೆಯದು. ಯಾಕೇಂದ್ರೆ ಇಲ್ಲಿ ೨೦, ೩೦ ವರುಷದಿಂದ tea ಬೆಳೀತಿದೆ, ನೀರು ಹರೀತಿದೆ. tea ಬೆಳೆಯುವ ಜಮೀನು ತುಂಬಾ ಗಟ್ಟಿಯಾಗ್ತಿದೆ. ಅದರಲ್ಲಿ ventilation holes ಇರೋದಿಲ್ಲ. ಈ ಎರೆಹುಳುಗಳು ಜಮೀನಿನಲ್ಲಿದ್ರೆ ಅವು ಮಣ್ಣನ್ನು ರಂಧ್ರ ಮಾಡುತ್ತೆ, we get more pores in the soil, better breathing for the soil, better absorbment of nutrients. ಆಗ definitely yield will be better. ಆದ್ರೆ ಊಟಿಯ ಛಳಿಗೆ ಎರೆಹುಳು ಅಷ್ಟಾಗಿ reproduce ಆಗ್ತಿಲ್ಲ. Experiment ಮಾಡಬೇಕು ಅಂದುಕೊಂಡಿದೇನೆ.

  Tea ತೋಟದಲ್ಲಿ ಗಿಡಗಳು ಹೋದಾಗ ಆ ಗಿಡಕ್ಕೆ Nursery ಇಂದ ಬೇರೆ ಗಿಡಗಳನ್ನು ತಂದು ನಾಟಿ ಮಾಡ್ತೀವಿ. Teaನಲ್ಲಿ mites ಹಾವಳಿ ಜಾಸ್ತಿ. ಎಲೆ ಕೆಂಪು ಕೆಂಪಾಗಿ ಉದುರಲು ಆರಂಭಿಸುತ್ತೆ. ಬೇರಲ್ಲಿ ತೂತು ಬಂದು, ಹೊಟ್ಟು ಬರುತ್ತೆ. ಅಂಥ

ಗಿಡಗಳು ಸಾಯುತ್ವೆ. ಜತೆಗೆ ಇಲಿಗಳು ಬೇರನ್ನು ಕಡಿದು ಹಾಕುತ್ವೆ. ನಮ್ಮ ತೋಟದ ಹತ್ರ ಬೇರೆಯವರು ಆಲೂಗೆಡ್ಡೆ ಹಾಕಿದ್ರು. ಅದನ್ನು ತಿನ್ನೋದಕ್ಕೆ ಬಂದ ಕಾಡುಹಂದಿಗಳು ನಮ್ಮ tea ಗಿಡಗಳ ಬೇರನ್ನು ಕೆದಕಿ ಹಾಳು ಮಾಡಿದ್ವು. ಈಗೆಲ್ಲಾ ಕೋತಿ ಕಾಟಾನೂ ಇದೆ. ಟೀ ತೋಟದಲ್ಲಿ ಬೆಳೆದಿರುವ ಹಣ್ಣಿನ ಗಿಡದ ಹಣ್ಣನ್ನು ತಿಂದು ಹಾಳು ಮಾಡ್ತಿದೆ. ಬರೀ tea ತೋಟ ಇದ್ರೆ ಏನೂ ತೊಂದರೆ ಇಲ್ಲ. ಕಳ್ಳತನ ಸಹಾ ಆಗೋಲ್ಲ. ಒಬ್ಬ labour ಒಂದು ದಿನಕ್ಕೆ normal ಆಗಿ ೨೦ ರಿಂದ ೨೨ ಕೆಜಿ ಟೀ ಕೀಳಬಹುದು. ಅವನು ಕಳ್ಳತನದಲ್ಲಿ ಕಿತ್ತು ಮಾರಿದ್ರೆ ೬೦ ರಿಂದ ೭೦ ರೂಪಾಯಿ ಸಿಗುತ್ತೆ. ಕೂಲೀನೇ ಅವರಿಗೆ ೪೦ ರಿಂದ ೫೦ ರೂಪಾಯಿವರೆಗೆ ಸಿಗುತ್ತೆ. ೨೦ ರಿಂದ ೩೦ ರೂಪಾಯಿಗೆ ಯಾರೂ ಕಳ್ಳ ಆಗಲು ಇಷ್ಟ ಪಡೋಲ್ಲ. ಹಾಗಾಗಿ tea ಈ ಪ್ರದೇಶಕ್ಕೆ safest crop. ನಾನು Ootyನಲ್ಲಿ ಮಾಡಿದ tea ತೋಟ ನನ್ನ ಬದುಕಿಗೆ ಭದ್ರತೆ ನೀಡಿದೆ. ಸಾಕಷ್ಟು ಆದಾಯ ನೀಡಿದೆ. ನನ್ನ ಹೆಂಡತೀನು ಸಹಾ ಅಲ್ಲಿ ಬಹಳ ಕಷ್ಟಪಟ್ಟಿದಾಳೆ.

ತೋಟದಲ್ಲಿ ನಮಗೆ ಬರುವ ಆದಾಯ ನಾವು ಎಷ್ಟು workersನ ಇಟ್ಟುಕೊಂಡಿದೀವಿ ಅದರ ಮೇಲು ಸಹ depend ಆಗುತ್ತೆ. ನಾವು ಐದು ಜನ ಹೆಣ್ಣಾಳುಗಳನ್ನು ಇಟ್ಟುಕೊಂಡಿದ್ವಿ. ಬಾಕಿ ಎಲ್ಲಾ ಕಡೆ ಒಂದು ರೂಪಾಯಿ, ಒಂದೂಕಾಲು ರೂಪಾಯಿ ಕೊಡ್ತಿದ್ರು. ದಿನಕ್ಕೆ ೨೦ ಕೆಜಿ Tea ಸಿಗ್ತಿತ್ತು. ನಾವು ನಮ್ಮ ತೋಟದಲ್ಲಿ ಮೊದಲಿಗೆ contract basis ಶುರು ಮಾಡಿದ್ವಿ. ನಾವು ಹೇಳಿದ್ವಿ ಎರಡು ರೂಪಾಯಿ ಕೊಡ್ತೀವಿ. ಏಳು ದಿವಸದಲ್ಲಿ ಖಟಾವು ಮುಗಿಸಬೇಕು ಅಂತ. ಆಗ ದಿನಕ್ಕೆ ೮೦ ಕೆಜಿ ಕುಯ್ಯಲು ಆರಂಭಿಸಿದ್ರು. ನಮ್ಮ Estateನಲ್ಲಿ ಮಾತ್ರಾ ಅದು ನಡೀತಿತ್ತು. ನಮ್ಮಿಂದಾಗಿ ಅವರು ಎಲ್ಲಾ ಕಡೆ ಜಾಸ್ತಿ ದುಡ್ಡು ಕೇಳಲು ಆರಂಭಿಸಿದ್ರು. ಬೇರೆ estateನವರು ಬಂದು ನನ್ನ ಜತೆ ಜಗಳ ಆರಂಭಿಸಿದ್ರು. ಆಗ ನಾನು ಹೇಳಿದೆ, ನಿಮಗೆ ಒಂದೂ ಕಾಲು ರೂಪಾಯಿಗೆ ೨೦ ಕೆಜಿ ಸಿಗ್ತಿದೆ, ಆದರೆ ನನಗೆ ಎರಡು ರೂಪಾಯಿಗೆ ೮೦ ಕೆಜಿ ಸಿಕ್ತಿದೆ ಅಂತ. ಯಾರಯ್ಯ ಬುದ್ಧಿಶಾಲಿ ಅಂತ ಹೇಳಿ ಕಳಿಸಿದೆ. ಆಗ ಕೆಜಿಗೆ ಆರು ರೂಪಾಯಿ ಸಿಕ್ಕಿದ್ರೂ ನಮಗೆ break even ಆಗ್ತಿತ್ತು. ಯಾಕೇಂದ್ರೆ ನಾವು average ೧೫ ಸಾವಿರ ರೂಪಾಯಿ ಜಾಸ್ತಿ ಖರ್ಚು ಮಾಡ್ತಿದ್ವಿ. ಆರು ರೂಪಾಯಿ ಮೇಲೆ ಸಿಕ್ಕಿದ ಧಾರಣೆ ಲಾಭಕ್ಕೆ ಸೇರ್ತಿತ್ತು. ಇಷ್ಟು ವರುಷದ ಹಿನ್ನೆಲೆ ಗಮನಿಸಿದ್ರೆ ನಾನು ಖರ್ಚು ಮಾಡಿದ ದುಡ್ಡು ವಾಪಸ್ಸು ಬಂದಿದೆ. ಈಗ ನನ್ನ ತೋಟ free ಆಗಿ ನಡೀತಿದೆ, ಅಂತ ನಿರುಮ್ಮಳರಾಗಿ ನುಡಿದ್ರು, ಕ್ಯಾಪ್ಟನ್ ಕೆ.ಕೆ. ವೆಂಕಟೇಶ್. ಅನಂತರದ ಮಾತುಕತೆ ಅವರ ಪತ್ನಿ ವೀಣಾ ವೆಂಕಟೇಶ್ ಅವರತ್ತ ಸರಿಯಿತು. ನನಗೆ ಮಾತನಾಡಲು ಬರೋಲ್ಲ ಅಂತಾನೇ ವಿಚಾರ ಆರಂಭಿಸಿದ್ರು ವೀಣಾ ವೆಂಕಟೇಶ್. ಅನಂತರ ಅವರ ವಿಚಾರಧಾರೆ ಊಟಿಯ ಜಲಧಾರೆಯಂತೆ ಮುಂದುವರೀತು.

'ನನ್ನ ಅಜ್ಜ ಹಳ್ಳಿ ಮೈಸೂರಿನ ನರಸಿಂಹಯ್ಯನವರು. ನನ್ನ ಅಜ್ಜಿ ನಾವು ಚಿಕ್ಕವರಿರುವಾಗಲೇ ಹೋಗಿಬಿಟ್ಟಿದ್ರು. ಹಾಗಾಗಿ ಅವರ ನೆನಪು ನನಗಿಲ್ಲ. ನನ್ನ ತಂದೆ advocate ರಾಮಕೃಷ್ಣಯ್ಯ. ಹೊಳೆನರಸೀಪುರದಲ್ಲಿ Law practice ಮಾಡ್ತಿದ್ದಾರೆ. ಅವರು ಬಹಳ famous. ನನ್ನ ತಾಯಿ ಸೋಮನಹಳ್ಳಿಯ ಜಾನಕಮ್ಮ. ನನಗೆ ಇಬ್ಬರು ಅಣ್ಣಂದಿರು, ಹಾಗೇ ನಾನು ಒಬ್ಬಳೇ ಹೆಣ್ಣು ಮಗಳು. ನಾನು PUCವರೆಗೆ ಹೊಳೆನರಸೀಪುರದಲ್ಲಿಯೇ ಓದಿದ್ದು. ಅನಂತರ ಮೈಸೂರಿನಲ್ಲಿ ನಮ್ಮ ಅಜ್ಜ ಡಾ. ಮಾಣಿಕ್ಯ ಅವರ ಮನೇಲಿದ್ದು, BA ಗೆ ಸೇರಿದೆ. ನಾನು BA Ist year ನಲ್ಲಿದ್ದಾಗ ಇವರ proposal ಬಂತು. Final year ನಲ್ಲಿರುವಾಗ ಮದುವೆಯಾಯ್ತು. ನಮ್ಮ ತಂದೆಯವರದ್ದು ಈಗಲೂ ಹಳ್ಳಿಮೈಸೂರಿನಲ್ಲಿ ಜಮೀನಿದೆ. ಅದನ್ನು ತುಂಬಾ ಚೆನ್ನಾಗಿ ನಿರ್ವಹಣೆ ಮಾಡ್ತಿದಾರೆ. ನನಗೆ ಕೃಷಿ ಬಗ್ಗೆ ಆಸಕ್ತಿ ಇರಲಿಲ್ಲ. ಆಗ ನಮಗೆ exposure ಸಹಾ ಜಾಸ್ತಿ ಇರಲಿಲ್ಲ. ನನಗೆ ಇವರ proposal ಬಂದಾಗ, ಎಲ್ಲರೂ ಅಂದ್ರು. ಇದೇನು ಹಡಗಿನಲ್ಲಿ ಕೆಲಸ ಮಾಡೋರನ್ನು ಮದುವೆ ಮಾಡಿಕೊಳ್ತೀರಲ್ಲಾ ಅಂತ. ಆದ್ರೆ ನನಗೆ ಬೇರೆ ಬೇರೆ ದೇಶ ನೋಡಬಹುದು ಅನ್ನುವ thrilling! ಹಾಗಾಗಿ ೧೯೮೨ರ ಜೂನ್ ೨೪ ಮೈಸೂರಿನಲ್ಲಿ ನನ್ನ ಮದುವೆಯಾಯ್ತು. ಅನಂತರ ಅವರು ಹೋದ ನಾಲ್ಕು ತಿಂಗಳಿಗೆ ನಾನೂ ಹಡಗಿಗೆ ಹೋದೆ. ನನಗೆ ಭಾಷೆ ಬರ್ತಿರಲಿಲ್ಲ. ಕನ್ನಡ ಮಾತ್ರ ಬರ್ತಾ ಇತ್ತು. ಪ್ರಥಮ, ಮಧ್ಯಮ, ರಾಷ್ಟ್ರ ಭಾಷೆ ಹಿಂದಿ ಮಾಡಿದ್ರಿಂದ ಅಲ್ಪಸ್ವಲ್ಪ ಅರ್ಥ ಆಗ್ತಿತ್ತು. ಇಂಗ್ಲೀಷ್ ಬರ್ತಾ ಇರಲಿಲ್ಲ. ನನ್ನ ಯಜಮಾನರಿಗೆ ಓದೋಕೆ, ಬರೆಯೋಕೆ ಕನ್ನಡ ಬರ್ತಾ ಇರಲಿಲ್ಲ. ನನ್ನ engagement ಆದ ಮೇಲೆ, ಮದುವೆ ಆಗುವವರೆಗೆ ಎರಡು ವರುಷ ಕಾಲ ಇದ್ದಿದ್ರಿಂದ, ಕಾಗದ ಬರೀಬೇಕು ಅನ್ನುವುದಕ್ಕೆ ಇಂಗ್ಲಿಷ್ ಕಲಿತೆ. ಹಡಗಿನಲ್ಲಿ ಎರಡು ಸಾರಿ ಆರಾರು ತಿಂಗಳು ಇದ್ದ ಮೇಲೆ ಜನರ ಜತೆ ಬೆರೆಯುವ ಅಭ್ಯಾಸವಾಯ್ತು. ಊಟದ tableನಲ್ಲಿ fork, knife, spoon ಹೀಗೆ ಹಡಗಿನಲ್ಲಿ sophistication ಜಾಸ್ತಿ. ಅದನ್ನೆಲ್ಲಾ

ಕಲೀಬೇಕಾಯ್ತು. (ನಗು) ಹಡಗು ದಡದಲ್ಲಿ ನಿಂತಾಗ, ಎಷ್ಟೋ ಸಾರಿ ಇವರು ಕೆಲಸದ ಒತ್ತಡದಿಂದ ನನ್ನ ಜತೆ ಬರೋಕೆ ಆಗ್ತಿರಲಿಲ್ಲ. ಮೊದಲು ನನ್ನ ಜತೆ cadet ಕಳಿಸೋರು. ಅನಂತರ ನನಗೆ ಧೈರ್ಯ ಬಂದ ಮೇಲೆ, ನಾನು ಒಬ್ಬಳೇ reliable taxi ಬಾಡಿಗೆಗೆ ತೊಗೊಂಡು ಆ ದೇಶಾನೆಲ್ಲಾ ನೋಡ್ತಿದ್ದೆ. ನಾನು European countries ಎಲ್ಲಾ ನೋಡಿದೀನಿ. ಸಮುದ್ರದಲ್ಲಿ Sea sickness ನನಗೆ ತುಂಬಾ ಸಮಸ್ಯೆಯಾಯ್ತು. ನಮ್ಮ ಮನೇಲಿ ನಾವು ಬೆಳ್ಳುಳ್ಳಿ ಸಹಾ ತಿಂತಿರಲಿಲ್ಲ. ಹಾಗಾಗಿ ನನಗೆ ಹಡಗಿನ food ತುಂಬಾ allergy ಆಯ್ತು. ಊಟ ಮಾಡಿದ ಮೇಲೆ ಆಹಾರ ಎಲ್ಲಾ ವಾಂತಿಯಾಗೋದು. ಕಡೆಕಡೆಗೆ ನಾನು Salt tabletsನಲ್ಲಿ ಇರಬೇಕಾಗಿ ಬಂತು. ಪ್ರತೀ ಸಲ ಹೋದಾಗ ಐದಾರು ಕೆಜಿ ತೂಕ ಕಡಿಮೆ ಆಗ್ತಿತ್ತು. ಈಗ ಮತ್ತೆ ನಾನು ದಪ್ಪಗಾಗಿದೀನಿ. ಮತ್ತೊಂದು ಸಲ ಹೋಗಿ ಇಪ್ಪತ್ತು ಕೆಜಿ ಕಡಿಮೆ ಆಗಿ ಬರಬೇಕು. (ನಗು) ನಮ್ಮ ಮನೆಯವರು ಅದನ್ನೇ ಹಾಸ್ಯ ಮಾಡ್ತಿರ್ತಾರೆ. ಹಡಗಿನಲ್ಲಿ ನನಗೆ ನನ್ನ ಗಂಡನ moral support ದೊರೆತಿದ್ರಿಂದ ತೊಂದರೆಯಾಗಲಿಲ್ಲ. ಮೊದಲು ನಾವು ನಾದಿನಿ ಮನೇಲಿದ್ವಿ. ಅನಂತರ family ಬೆಂಗಳೂರಿಗೆ shift ಮಾಡಿದ್ವಿ. ನಾನು ೨೦, ೨೫ ದಿನ ರಜಾ ಸಿಕ್ಕಾಗ ಅವರ ಜತೆ ಹಡಗಿನಲ್ಲಿ ಇರ್ತಿದ್ದೆ. ಇವರಿಗೆ NRI Statusಗಾಗಿ ಒಂಭತ್ತು ತಿಂಗಳು ಹೊರಗೆ ಇರ್ತಿದ್ರು. ಮೂರು ತಿಂಗಳು ಮಾತ್ರ ಜತೇಲಿ ಇರ್ತಿದ್ರು. ಅವರು ಇದ್ದಾಗಲೂ ಅಥವಾ ಹಡಗಿಗೆ ಹೋದಾಗಲೂ ಕುಟುಂಬದ ಎಲ್ಲಾ ಜವಾಬ್ದಾರೀನೂ ನಾನೇ ನೋಡ್ಕೋತಾ ಇದ್ದಿದ್ದು. ಆರಂಭದಲ್ಲಿ ನನ್ನ ತಂದೆ ತಾಯಿ 'ನಾವು ಜತೆಗೆ ಬಂದು ಇರೋದಾ' ಅಂತ ಕೇಳ್ತಿದ್ರು. ಅತ್ತೆ, ಮಾವ ಸಹಾ ಕೇಳಿದ್ರು. ಇವರು ಅಂದ್ರು 'ಇದು ಒಂದೆರಡು ದಿನದ ಸಮಸ್ಯೆ ಅಲ್ಲ. ಅವಳು ಇದನ್ನು ಅಭ್ಯಾಸ ಮಾಡಿಕೊಳ್ಳಲಿ' ಅಂತ. ಆಗ ನನಗೂ confidence ಬಂತು. 'ಹೌದು ನಾನು ಒಬ್ಬಳೇ ಇರೋಣ. ಯಾಕೆ ಇನ್ನೊಬ್ಬರ ಮೇಲೆ depend ಆಗಿರಬೇಕು' ಅಂತ. ಹಾಗಾಗಿ ಸಣ್ಣಮನೇಲಿ ಇದ್ವಿ.

ಅನಂತರ ನಮ್ಮ ಯಜಮಾನರು ಊಟಿಗೆ ಹೋಗೋಣ ಅಂದಾಗ ನಾನು ಒಬ್ಬಳೇ ಅಲ್ಲಿ ಇರಲು ಸಾಧ್ಯವಾ ಅನ್ನಿಸ್ತು. ಆಮೇಲೆ ಆ ಜಾಗ ಎಷ್ಟು ಇಷ್ಟ ಆಯ್ತು ಅಂದ್ರೆ fancy price ಕೊಟ್ಟು ಜಾಗ ಖರೀದಿ ಮಾಡಿದ್ವಿ. ಮನೆ ಕಟ್ಟುವಾಗಲೂ ಸಮಸ್ಯೆಯಾಯ್ತು. ಆಗ ನಮ್ಮ architect ನಮಗೆ ತುಂಬಾ ಸಹಾಯ ಮಾಡಿದ್ರು. ಎಷ್ಟೋ ಸಾರಿ ಅವರ ಮನೇಲೇ ಇದ್ದೆ. ಅವರ wife ತುಂಬಾ friendly. ಅವರ ಸಹಕಾರದಿಂದ ಮನೆಗೆಲಸ ಮುಗೀತು. ನಮ್ಮ ಬದುಕು ಅಲ್ಲಿ ಆರಂಭವಾಯ್ತು. ಇವರು ಮತ್ತೆ ಹಡಗಿಗೆ ಹೋಗೋಲ್ಲ ಅಂತಿದ್ರು. ಆಮೇಲೆ, ಇನ್ನೊಂದು ಸರಿ ಹೋಗಿ ಬರಬಹುದೇನೋ, ನೀನು manage ಮಾಡಿಕೊಂಡ್ರೆ ಅಂದ್ರು. 'ಆಯ್ತು manage ಮಾಡ್ತೀನಿ ಹೋಗಿ ಬನ್ನಿ' ಅಂದೆ.

ಶುರೂನಲ್ಲಿ ನನಗೆ ವ್ಯವಸಾಯದ ಬಗ್ಗೆ ಏನೂ ಗೊತ್ತಿರಲಿಲ್ಲ. ನಾವು ಒಬ್ಬ ಗಂಡು ಮೇಸ್ತ್ರೀನ ಮೇಲ್ವಿಚಾರಣೆಗಳಿಗೆ ಇಟ್ಟುಕೊಂಡಿದ್ವು. ಅವನು ಹೆಣ್ಣಾಳುಗಳನ್ನು ತುಂಬಾ ಬೈತಿದ್ದ. ಅದು ನನಗೆ ಹಿಡಿಸಲಿಲ್ಲ. ನಾವು ನಮ್ಮ ಮನೆ ಕೆಲಸದವರನ್ನು ಸಹಾ 'ಬನ್ನಿ, ಹೋಗಿ' ಅಂದು ರೂಢಿ. ಅಷ್ಟು ಮರ್ಯಾದೆ ಇತ್ತು. ಅವರಿಗೂ ನಮ್ಮನ್ನು ಕಂಡರೆ ಗೌರವ ಇತ್ತು. ಹಾಗಾಗಿ ನಾನು ಆ ಮೇಸ್ತ್ರೀನ ಕೆಲಸದಿಂದ ಬಿಡಿಸಿದೆ. ಐದು ಜನ ಹೆಣ್ಣಾಳುಗಳನ್ನು ಇಟ್ಟುಕೊಂಡು ಇಡೀ ತೋಟ ನಿರ್ವಹಣೆ ಮಾಡಿದೆ. ತುಂಬಾ ಉತ್ತಮವಾದ ಇಳುವರಿ ಬರೋದಕ್ಕೆ ಆರಂಭವಾಯ್ತು. ಕೆಲವು ತಿಂಗಳುಗಳಲ್ಲಿ, ಒಂದೇ ತಿಂಗಳಿಗೆ ಐವತ್ತು, ಅರವತ್ತು ಸಾವಿರ ರೂಪಾಯಿ ಸಹಾ ಸಿಕ್ಕಿದೆ. ಆಗ ತುಂಬಾ ಖುಷಿ ಆಗೋದು. ಆಗ ನಾವು ಕೆಲಸದವರಿಗೆ, ಅವರ ಮಕ್ಕಳಿಗೆ ತುಂಬಾ ಸಹಾಯ ಮಾಡಿದೀವಿ.

ವ್ಯವಸಾಯವನ್ನು ನಾನು ಬಲವಂತವಾಗಿ ಮಾಡಲು ಆರಂಭಿಸಿದ ಮೇಲೆ ನನಗೂ ಇಷ್ಟ ಆಗತೊಡಗಿತು. ತೋಟದಲ್ಲಿ ಇರೋದಕ್ಕೆ ಶುರು ಮಾಡಿದೆ. ಅನಂತರ ಟೀ ತೋಟವನ್ನು ನಿರ್ವಹಣೆ ಮಾಡುವುದು ಸುಲಭವಾಯ್ತು. ಆದ್ರೆ ನನಗೆ ಬೇರೆ ಬೆಳೆಗಳ ಬೇಸಾಯದ ಬಗ್ಗೆ ಅಷ್ಟು ತಿಳಿದಿಲ್ಲ. ನಾವು ಊಟಿಗೆ ಹೋದದ್ದು ಮುಖ್ಯವಾಗಿ ನಮ್ಮ ಮಕ್ಕಳನ್ನು ಊಟಿಯಲ್ಲಿ ಓದಿಸಲು ಅಷ್ಟೆ. ನನಗೆ tea estate ಮಾಡುವ ಉದ್ದೇಶ ಖಂಡಿತಾ ಇರಲಿಲ್ಲ. ಆದರೆ ಆ ಜಾಗ, ಹಾಗೂ ಪರಿಸರ ನೋಡಿ, ತೋಟ ಖರೀದಿ ಮಾಡಿದ್ವಿ. ನಾವು ಅಲ್ಲಿರುವಾಗ ಅಕ್ಕಪಕ್ಕ ಯಾರೂ ಇರಲಿಲ್ಲ. ಸಮೀಪದಲ್ಲಿ ಅಲೆಂಜಿ ಅನ್ನುವ ಹಳ್ಳೀಲಿ ೪೦ರಿಂದ ೫೦ ಜನ ಕೂಲಿಕಾರರ ಕುಟುಂಬ ಇತ್ತು ಅಷ್ಟೆ. ನಾವು ಪೂರ್ಣ ಒಂಟಿಯಾಗಿ ಇದ್ವಿ. ಮಳೆ ಶುರುವಾದಾಗ, ಗಾಳಿ ಇರುವಾಗ, ತೋಟದ ಕೆಲಸ ಸಹಾ ಇರ್ತಿರಲಿಲ್ಲ. ಆಗ ತುಂಬಾ ಏಕಾಂಗಿ ಅಂತ ಅನ್ನಿಸೋದು. ಬೇಜಾರಾಗೋದು. ಆದ್ರೆ ಅದು ಕ್ಷಣಿಕ ಮಾತ್ರ. ಮರುಕ್ಷಣ ಅಲ್ಲಿನ ಪರಿಸರ, ಹಲ್ಲಿ, ಸೊಳ್ಳೆ, ಜಿರಳೆ, ಇಲಿಗಳು ಇಲ್ಲದಿರುವ ವಾತಾವರಣ, ತುಂಬಾ ಹಿಡಿಸಿತು. ಊಟಿಯಿಂದ ಮತ್ತೆ ಮಕ್ಕಳನ್ನು ಮೈಸೂರಿನಲ್ಲಿ ಓದಿಸಲು ಕರೆತಂದಾಗ

ನನಗೆ ಮೈಸೂರಿನ ವಾತಾವರಣ ಹಿಡಿಸಲಿಲ್ಲ. ವಾಪಸ್ಸು ಹೋಗೋಣ ಅನ್ನಿಸ್ತಾ ಇತ್ತು. ಆದ್ರೆ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ೨೦೦೦ ಇಸವೀನಿಂದ ಮೈಸೂರಿನಲ್ಲಿ ಉಳಿದಿದೀವಿ. ಈಗ ನಮ್ಮ ಊಟಿ ತೋಟಾನ ಹತ್ತಿರದ ಒಂದು ದೊಡ್ಡ estateನವರು ನೋಡಿಕೋತಿದಾರೆ. ನಮ್ಮ ಮನೆಗೆ ಒಬ್ಬರು ಒಳ್ಳೆಯ ಬಾಡಿಗೆದಾರರು ಬಂದಿದಾರೆ. ನಮಗೆ ತೋಟವನ್ನು ಮಾರುವ ಉದ್ದೇಶವಿಲ್ಲ. ನನ್ನ ಚಿಕ್ಕ ಮಗನಿಗೆ ವ್ಯವಸಾಯದಲ್ಲಿ ತುಂಬಾ ಆಸಕ್ತಿ ಇದೆ. ಅವನು ತುಂಬಾ sentimental, ಅವನು ಮಗುವಿನಿಂದ tea ಜತೇಲಿ ಬೆಳೆದದ್ರಿಂದ ಆ ಪರಿಸರ ಹಿಡಿಸಿದೆ. ಮುಂದೆ ಏನಾಗುತ್ತೋ ಕಾದು ನೋಡಬೇಕು ಅಂತ ಮಾತು ಮುಗಿಸಿದ್ರು ವೀಣಾ ವೆಂಕಟೇಶ್. ಗಡಿಯಾರದ ಮುಳ್ಳು ರಾತ್ರಿ ೧೦.೩೦ರ ಸಮಯ ಮೀರಿರುವುದನ್ನು ನೆನಪಿಸುತ್ತಿತ್ತು. ಅದು ಮಾತಿನ ಉತ್ಸಾಹಕ್ಕೆ ಭಂಗ ತರಲಿಲ್ಲ. ಕಡೆಗೆ ಕೆಲವು ಭಾವಚಿತ್ರ ತೆಗೆದು, ಮನೆಯಿಂದ ಹೊರಟು ಬರುವಾಗ ನಮ್ಮನ್ನು ಬೀಳ್ಕೊಡಲು Gateವರೆಗೆ ಬಂದ ವೆಂಕಟೇಶ್ ಹೊಸ ಬಗೆಯ ಕೃಷಿ ಉತ್ಪನ್ನಗಳನ್ನು ಇಲ್ಲಿ ಬೆಳೆದು ಹೊರ ದೇಶಕ್ಕೆ ರಫ್ತು ಮಾಡುವುದರ ಬಗ್ಗೆ ಮಾತನಾಡಿದ್ರು. ಅಂಗಾಂಶ ಕೃಷಿ ತಂತ್ರಜ್ಞಾನದ ಅಭಿವೃದ್ಧಿ ಬಗ್ಗೆ, ವಿದೇಶಿ ಕೃಷಿ ತಂತ್ರಜ್ಞಾನದ ಆಮದಿನ ಬಗ್ಗೆ ಮಾತನಾಡಿದ್ರು. ಸಮುದ್ರದ ಅಲೆಗಳು ಹೇಗೆ ನಿರಂತರವೋ ಹಾಗೇ ಕ್ಯಾಪ್ಟನ್ ವೆಂಕಟೇಶ್ ಅವರ ಕೃಷಿ ಚಿಂತನೆಗಳೂ ನಿರಂತರ ಅನ್ನಿಸಿತು. ಅವರ ಚಿಂತನೆಗಳಿಗೆ ಒಂದು ಸಲಾಮು ಹೊಡೆದು ಹೊರಟಾಗ ಬೆಳದಿಂಗಳು ಸುತ್ತೆಲ್ಲಾ ಪಸರಿಸಿತ್ತು.

ಇ) ಕೆ.ಎಸ್. ಚನ್ನಕೇಶವಯ್ಯ ಇ/ಮ ವೆಂಕಟಕೃಷ್ಣ (ಸಣ್ಣಯ್ಯ)

ವೆಂಕಟಕೃಷ್ಣನಿಲಯ, ಮನೆ ನಂ.೧೯೫, ಬೆಳವಾಡಿ, ಮೈಸೂರು ತಾಲ್ಲೂಕು. ದೂರವಾಣಿ : 0821 2403500

ಸಂತೋಷವಾಗಿ ಮಾಡಿದ್ರೆ ಅದು ಸುಲಭ, ಹಾಗೇ ಕೆಲಸಾನೇ ಆನಂದ ನೀಡುತ್ತೆ. ಇದು ನನ್ನ ಆರು ಗುಂಟೆ ತೋಟದ ಅನುಭವ.

ಇಲ್ಲೇ ಸಮೀಪದ ಬೆಳವಾಡೀಲಿ ಅಡಿಕೆ ತೋಟ ಮಾಡಿರೋರು ಇದಾರೆ, ಅವರನ್ನು ಮಾತನಾಡಿಸೋಣ ಅಂತ ಸ್ನೇಹಿತರಾದ ವೆಂಕಟನಾರಾಯಣ ಅವರು ಹೇಳಿದಾಗ ಕುತೂಹಲ ಮೂಡಿತು. ಒಂದು ದಿನ ಬೆಳಗ್ಗೆ ಅವರ ಜಮೀನಿಗೆ ಹೋದಾಗ ನಮ್ಮ ನಿರೀಕ್ಷೆ ಅತಿಯಾಯ್ತೇನೋ ಅನ್ನಿಸ್ತು. ಯಾಕೇಂದ್ರೆ ಅದು ಕೇವಲ ಆರು ಗುಂಟೆ ತೋಟ ಅಷ್ಟೆ. ಆದ್ರೆ ಆ ತೋಟದ ಮಾಲೀಕರಾದ ಚನ್ನಕೇಶವಯ್ಯನವರು ಕೃಷಿ ಹಿನ್ನೆಲೆ ಇರದವರು ಅಂತ ತಿಳಿದಾಗ ಅಚ್ಚರಿಯಾಯ್ತು. ಮೈಸೂರು ಸಮೀಪದ ಬೆಳವಾಡೀಲಿ ಹತ್ತು ಗುಂಟೆ ಜಾಗ ಖರೀದಿ ಮಾಡಿ, ಅದರಲ್ಲಿ ಆರು ಗುಂಟೆ ಪ್ರದೇಶಾನ ತೋಟ ಮಾಡಿರೋದು ಅಂತ ತಿಳಿದಾಗ ಕೃಷಿ ಸಂಕೇತಿಗಳಲ್ಲಿ ರಕ್ತಗತವಾಗಿದೆ ಎಂಬುದಕ್ಕೆ ಇದು ನಿದರ್ಶನವೆ ಅನ್ನಿಸಿತು. ಕೃಷಿ ಗಂಧಗಾಳಿ ಇರದವರು, ಮೈಸೂರಿನ Extension ತರಹ ಇರುವ ಜಾಗದಲ್ಲಿ site ಮಾಡಬಹುದಿತ್ತು. ಮಾರಿ ಆದಾಯ ಗಳಿಸಬಹುದಿತ್ತು. ಆದರೆ ಹಾಗೆ ಮಾಡದೆ ಅಡಿಕೆ ತೋಟ ಎಬ್ಬಿಸಿದಾರೆ ಅಂದ್ರೆ ಅದು ಮೆಚ್ಚುವ ವಿಷಯ ಅಲ್ಲವೆ? ಆರು ಗುಂಟೆ ತೋಟದಲ್ಲೇ ಎಲ್ಲವೂ ಇದೆ. ೧೪ ತೇಗ, ೨೦ ತೆಂಗು, ೨ ಸಪೋಟ, ನಾಲ್ಕು ಬೆಟ್ಟದನೆಲ್ಲಿ, ೪ ಕರಿಬೇವು, ಒಂದು ಮಾವು, ಒಂದು ಹಲಸು, ಪುಟ್ಟಬಾಳೆ ಗಿಡಗಳು, ಸೀಬೆ, ದಾಳಿಂಬೆ, ಅವರೇಕಾಯಿ ಗಿಡ, ಐವತ್ತು ಕಾಫಿ, ೭೦ ಅಡಿಕೆ



ಸಾವಿತ್ರಮ್ಮ-ಕೆ.ಎಸ್.ಚನ್ನಕೇಶವಯ್ಯ ದಂಪತಿ:ಮೈಸೂರು



ಆರು ಗುಂಟೆಯಲ್ಲಿ ವೃದ್ಧರು ಮಾಡಿದ ಅಡಿಕೆ ತೋಟ: ಸಾವಿತ್ರಮ್ಮ-ಕೆ.ಎಸ್.ಚನ್ನಕೇಶವಯ್ಯ ದಂಪತಿ: ಮೈಸೂರು

ಗಿಡ ಬಗೆ ಬಗೆ ಹೂವಿನಗಿಡ ನಳನಳಿಸ್ತಾ ಇದಾವೆ. ತೋಟದ ಮಧ್ಯದಲ್ಲಿಯೇ ಸ್ವಲ್ಪ ಖಾಲಿ ಪ್ರದೇಶ. ಅಲ್ಲಿ ಹುರುಳಿ, ತಡಗುಣಿ, ಹೆಸರು, ಉದ್ದು, ಬೀನ್ಸ್, ಅರಿಶಿನ, ಕಡಲೇಕಾಯಿ, ಸೊಪ್ಪು, ಮೂಲಂಗಿ, ಕೋಸು, ಗೆಣಸು, ಎಲ್ಲವನ್ನೂ ಬೆಳೀತಿದಾರೆ ಚನ್ನಕೇಶವಯ್ಯ. Telephone Exchangeನಲ್ಲಿ ಕೆಲಸದಲ್ಲಿರುವ ಕಿರಿಯ ಮಗ ಮುರಳೀಧರ್ ಹೇಳುವ ಪ್ರಕಾರ, ಅವರ ತಂದೆಗೆ ಸದಾ ಆರು ಗುಂಟೆ ತೋಟದ್ದೇ ಧ್ಯಾನ. ಮಂಡಿ ನೋವಿದ್ದರೂ ತೋಟದ ಕೆಲಸ ಮಾಡೋದು ಅವರ ರೂಢಿ. ಕಳೆ ತೆಗೆಯೋದು, ನೀರು ಹಾಕೋದು, ಗಿಡ ನೆಡೋದು ಅವರ ಪ್ರಿಯವಾದ ಕಸುಬು. ನಾವು ತೋಟದ ಒಳಗೆ ಹೋದರೆ ಕಡಿಯುವ ಸೊಳ್ಳೆಗಳು, ನಮ್ಮ ತಂದೆಗೆ ಏನೂ ಮಾಡೋಲ್ಲ, ಅವರು ಅದಕ್ಕೆ adjust ಆಗಿದಾರೆ ಅಂತ ನಗುತ್ತಾ ಹೇಳುತ್ತಾರೆ. ರಜಾ ದಿನಗಳಲ್ಲಿ ತಂದೆಯ ಕೃಷಿ ಕೆಲಸದಲ್ಲಿ ನೆರವಾಗುವ ಮುರಳೀಧರ್ ಅವರಿಗೆ ತಂದೆಯ ಕೃಷಿ ಕೆಲಸದ ಬಗ್ಗೆ ಹೆಮ್ಮೆ ಇದೆ.

೯೦ರ ಇಳಿಹರಯದ ಕೆ.ಎಸ್. ಚನ್ನಕೇಶವಯ್ಯ ಬೆಳವಾಡಿಯಲ್ಲಿ 'ಮೇಲುಕೋಟೆ ಮಾಸ್ತರು' ಎಂದೇ ಪ್ರಖ್ಯಾತರು. ಕುಪ್ಪಳ್ಳಿಯ ವೆಂಕಟಕೃಷ್ಣಯ್ಯ (ಸಣ್ಣಯ್ಯ) ಹಾಗೂ ಕೆ.ಆರ್. ಪೇಟೆ (ತಾ) ನಾಚನಹಳ್ಳಿಯ ಸುಬ್ಬಲಕ್ಷ್ಮಿ ದಂಪತಿಗಳ ಐದು ಜನ ಗಂಡು ಮಕ್ಕಳಲ್ಲಿ ಮಧ್ಯದವರು ಈ ಮೇಲುಕೋಟೆ ಮಾಸ್ತರು. ಭಾಸನ ಮಧ್ಯಮ ವ್ಯಾಯೋಗ ನೆನಸಿದರೆ ನಗುತ್ತಾರೆ. ಇವರ ಪತ್ನಿ ಸಾವಿತ್ರಮ್ಮ ಲಿಂಗದಹಳ್ಳಿಯ ಸುಬ್ಬರಾವ್, ಲಲಿತಮ್ಮ ದಂಪತಿಗಳ ಮಗಳು. ಚನ್ನಕೇಶವಯ್ಯನವರಿಗೆ ಎರಡು ಗಂಡು, ನಾಲ್ಕು ಜನ ಹೆಣ್ಣು ಮಕ್ಕಳು. ಮನೆಯ ಪಡಸಾಲೆಯಲ್ಲಿ ಕುಳಿತು ಮುಚ್ಚುಮರೆಯಿಲ್ಲದೆ ಮಾತನಾಡಿದರು ಮಾಸ್ತರು. ಅವರ ನೇರವಾದ ನಡೆನುಡಿ ಇಷ್ಟವಾದವು. ಇಲ್ಲದ ಅನುಭವ ಇದೆ ಎಂದು ಹೇಳುವ ಜರೂರತ್ತು ಅವರಿಗೆ ಇರಲಿಲ್ಲ. ಆದರೆ ಅವರ ಶ್ರಮದ ಪ್ರತೀಕವಾದ ತೋಟ ಕಣ್ಣ ಮುಂದಿತ್ತು. ತಮ್ಮ ಪೂರ್ವಿಕರಿಂದಲೇ ಅವರು ವಿಚಾರ ಆರಂಭಿಸಿದ್ರು.



'ಇದರಲ್ಲೇ ಕಾಫಿಯನ್ನೂ ಬೆಳೆದಿದೇನೆ':ಕೆ.ಎಸ್.ಚನ್ನಕೇಶವಯ್ಯ: ಮೈಸೂರು

"ಕುಪ್ಪಳ್ಳಿಯಲ್ಲಿ ೩೦ ಜನ ಬ್ರಾಹ್ಮಣ ಒಕ್ಕಲು ಇದ್ರು. ಎಲ್ಲರೂ ವ್ಯವಸಾಯ ಮಾಡ್ತಿದ್ರು. ತೋಟ, ಎಲೆಹಂಬು ಜಾಸ್ತಿ. ಶ್ರಮಪಟ್ಟು ಸ್ವತಃ ದುಡೀತಿದ್ರು. ಅದರಲ್ಲಿ ಗದ್ದೆ ಸೂರಪ್ಪನವರು ಹಾಗೇ ಕೃಷ್ಣಪ್ಪನವರು ಮಾತ್ರ ಹೊಲದ ಬೇಸಾಯ ಅಷ್ಟೆ. ನನ್ನ ತಂದೆ contractor. ರಸ್ತೆ Building ಕೆಲಸ ಮಾಡೋರು. ಅವರು ಓದಿರಲಿಲ್ಲ. Engineer ತಿಪ್ಪಯ್ಯ ಅವರ ಜತೇಲಿ ಓದ್ತಿದ್ರು. ಅವರು Examಗೆ ಹೋಗಿ pass ಆದ್ರು, ನನ್ನ ತಂದೆ ಆಗಲಿಲ್ಲ. ಆದರೂ ಅಭ್ಯಾಸದಿಂದಲೇ ಕೆಲಸ ಮಾಡಿಸೋರು. ನನ್ನ ತಾತ ವೆಂಕಟಸುಬ್ಬಯ್ಯ, ಅಜ್ಜಿ ರಾಮಮ್ಮ. ನಮ್ಮದು ವ್ಯವಸಾಯಸ್ಥ ಕುಟುಂಬವಲ್ಲ. ಜಮೀನು ಇರಲಿಲ್ಲ. ನಾನು ಅನೇ

ತರಗತೀವರೆಗೆ ಕುಪ್ಪಳೀಲಿ ಓದಿದೆ. ಅನಂತರ ೧೯೩೯ರಲ್ಲಿ ನನಗೆ ೧೯ ವರುಷ ಇರುವಾಗ ಮಾಸ್ತರಾಗಿ ಕೆಲಸಕ್ಕೆ ಸೇರಿದೆ. ಮೊದಲು ಕನ್ನಡ LS ಮಾಡಿ, ಅನಂತರ English LS ಮಾಡಿದೆ. ನಾನು ಮೊದಲು ಕೆಲಸ ಮಾಡಿದ್ದು ಚಿಕ್ಕಮಗಳೂರು ಜಿಲ್ಲೆ ಸಂಗಮೇಶ್ವರ ಪೇಟೇಲಿ. ಪೇಟೆ ಅನ್ನುವ ಹೆಸರು ಕೇಳಿ ಸಂತೋಷವಾಗಿ ಹೋದ್ರೆ ಅಲ್ಲಿದ್ದುದು ಪೂರ್ಣ ಮುಸಲ್ಮಾನರು. ನನ್ನನ್ನು ಅಲ್ಲಿನ Urdu School Head master ಮಾಡಿದ್ರು. ಅಲ್ಲಿಂದ ಗುಡ್ಡೆತೋಟ, ತರೀಕೆರೆ ತಾಲ್ಲೂಕು ಸೌಸರ, ಅನಂತರ ಕುದುರೇಮುಖ ದಾಟಿದ ಮೇಲೆ ಶಿರಾಳಿ ಕಡೆ ಬರುವ ಸಂಸೆ, ಕುಂಟಾಣಿ, ವೇಗಾಲ್, ಹಿರೇನೆಲ್ಲೂರು, ಮುಗಳೀಕಟ್ಟೆ, ಪಾಂಡವಪುರ (ತಾ) ಚಿಟ್ನಳ್ಳಿ, ಆನಂತರ ಮೇಲುಕೋಟೆಲಿ ೧೩ ವರುಷ ಇದ್ದೆ. ಎಲ್ಲೂ ವ್ಯವಸಾಯ ಮಾಡಿಲ್ಲ. ಮೇಲುಕೋಟೇಲಿ ಸ್ವತಃ ಕಲಿತು, photo frame ಅಂಗಡಿ ಮಾಡಿದ್ದೆ. ಹೆಂಡತಿ ಮನೆ ಕಡೆ ವ್ಯವಸಾಯಸ್ಥರು. ಲಿಂಗದಹಳ್ಳೀಲಿ ಪಿತ್ರಾರ್ಜಿತ ಆಸ್ತಿ ಹೊಂದಿರುವ ಸಂಕೇತಿಗಳು ಇದ್ರು. ನಾನು ಮಾವನ ಮನೆಗೆ ಹೋದಾಗ, ವಾಯುವಿಹಾರಕ್ಕೆ ಅಂತ ತೋಟಕ್ಕೆ ಹೋಗಿ ಬರೋವೆ ಅಷ್ಟೆ. ಆದ್ರೆ retire ಆದ ಮೇಲೆ ಹೊತ್ತು ಹೋಗೋಲ್ಲ ಅಂತ ತೋಟ ಮಾಡಿದೆ. ಅನಂತರ ಅದೇ ಕೆಲಸ ಇಷ್ಟ ಆಯ್ತು.

ಹಿಂದೆ ಗುರುಶಿಷ್ಯರ ಸಂಬಂಧ ಚೆನ್ನಾಗಿತ್ತು. ಗುರುಗಳ ಶಿಕ್ಷೇನೂ ಹಾಗೇ ಇತ್ತು. ಗುರುಗಳು ಓಣೀಲಿ ಬರ್‍ತಾ ಇದ್ರೆ ಹುಡುಗರ್‍ಯಾರೂ ಮನೆಯಿಂದ ಹೊರಗೆ ಬರ್‍ತಿರಲಿಲ್ಲ. ಆದರೆ ಸ್ವಾತಂತ್ರ್ಯ ಬಂದ ಮೇಲೆ ಹುಡುಗರು ಗುರುಗಳನ್ನು ಬೀಡಿ ಸೇದಲು ಕರೀತಾರೆ. ಕಾಲ ಹಾಗಾಗಿದೆ. ಹಳ್ಳೀಲಿ ರೈತರು ಸಹ ಗುರುಗಳನ್ನು ಚೆನ್ನಾಗಿ ನೋಡಿಕೊಳ್ತಿದ್ರು. ಆಗ್ಲೂ ಈಗ್ಲೂ ಅಜಗಜಾಂತರ ವೆತ್ಯಾಸವಿದೆ.

"ತೋಟದ ಕೆಲಸ ಇಷ್ಟಪಟ್ಟು ಈಗ ನಾನು ಮಾಡ್ತಿರೋದ್ರಿಂದ ಆನಂದ ಸಿಗ್ತಾ ಇದೆ" ಅಂದ್ರು ಚನ್ನಕೇಶವಯ್ಯ. ಅವರ ಮಾತಿಗೆ ದನಿಗೂಡಿಸಿದರು ಸಾವಿತ್ರಮ್ಮ. ಕೃಷಿ ಹಿನ್ನೆಲೆ ಇರದ ವ್ಯಕ್ತಿಯೊಬ್ಬ ಚಿಕ್ಕ ತೋಟ ಮಾಡಿರುವ ವಿಚಾರ ಸಹಾ ದಾಖಲಿಸಲು ಯೋಗ್ಯವಾದ ವಿಚಾರ ಅನ್ನಿಸಿದ್ದು ಚನ್ನಕೇಶವಯ್ಯನವರ ತೋಟ ನೋಡಿದಾಗಲೆ. ಮುಂದಿನ ದಿನಗಳಲ್ಲಿ, ಪೇಟೆ ಇರಲಿ, ಪಟ್ಟಣ ಇರಲಿ ಮನೆ ಮನೆಗಳಲ್ಲೂ ಒಂದೆರಡು ಗುಂಟೆ ತೋಟ ಸಂಕೇತಿಗಳ ಬಾಳು ತುಂಬಿದರೆ ಅದು ಅವರ ಕೃಷಿ ಬದುಕಿನ ಹೊಸ ದಾರಿ ತಾನೆ? ನಮ್ಮ ಕೃಷಿ ಮರೆಯಬಾರದು ಎನ್ನುವ ಚಿಂತನೆ ಈ ಪುಟ್ಟ ತೋಟಗಳದ್ದು ಎಂದು ಹಿರಿಯರು ಹೇಳಿದ ಮಾತು ಖಂಡಿತಾ ವೇದ್ಯವಾದದ್ದು. ಪುಟ್ಟ ಕಿಡಿಯಿಂದಲೇ ಅಲ್ಲವೇ ದೊಡ್ಡ ಬೆಂಕಿ ಭುಗಿಲೇಳುವುದು! ಪುಟ್ಟದೋ, ದೊಡ್ಡದೋ, ತೋಟ ಸಂಕೇತಿಗಳಿಗೆ ಭೂಷಣ ತಾನೆ! ಮೇಲುಕೋಟೆ ಮಾಸ್ತರಿಗೆ ವಂದಿಸಿ ನಾವು ಹೊರಟಾಗ ನನ್ನ ಮನದಲ್ಲಿದ್ದುದು ಇದೇ ವಿಚಾರ.



ಹಣ್ಣು, ತರಕಾರಿಗೂ ಜಾಗ ಮಾಡಿದ ತಮ್ಮ ತೋಟದಲ್ಲಿ: ಕುಟುಂಬವರ್ಗದೊಂದಿಗೆ ಕೆ.ಎಸ್.ಚನ್ನಕೇಶವಯ್ಯ: ಮೈಸೂರು

33. ಬೆಂಗಳೂರು

ಅ) ಡಾ|| ಬಿ.ಆರ್. ರಾಮಕೃಷ್ಣ

ಆತ್ರೇಯ ಆಯುರ್ಧಾಮ, ನಂ.೨೪೭೯/೧, ೧೭ ಮೈನ್, ೨೫ ಕ್ರಾಸ್,

ಬನಶಂಕರಿ ೨ನೆ ಸ್ಟೇಜ್, ಬೆಂಗಳೂರು- 560 070 ದೂರವಾಣಿ: 080-26710924

ನಾವು ಸಂಕೇತಿಗಳು ಮೊದಲಿನಿಂದಲೂ ಅಡಿಕೆ ಕೃಷಿಯಲ್ಲಿ ಪರಿಣತರು. ಆದರೆ ಈಗ ಅಡಿಕೆ ಜತೆಗೆ ದೀರ್ಘಕಾಲದ ಹೂಡಿಕೆ ದೃಷ್ಟಿಯಿಂದ ಒಂದು ಅರ್ಧ ಎಕರೇಲಿ ಅಥವಾ ಬೇಲಿ ಸುತ್ತಾ ತೇಗವನ್ನೂ ಬೆಳೀಬೇಕು. ಅಡಿಕೆಗೆ ನೀಡುವ ಮುತುವರ್ಜೀನ ತೇಗಕ್ಕೆ ನೀಡಿದ್ರೆ ಮುಂದೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತೆ. ಭದ್ರವಾದ ಠೇವಣಿ ರೀತಿ ನಮಗೆ ರಕ್ಷಣೆ ನೀಡುತ್ತೆ. ವ್ಯವಸಾಯದಲ್ಲಿ ವೈವಿಧ್ಯ ತರಲು ಔಷಧಿ ಗಿಡಗಳನ್ನು ಬೆಳೆದ್ರೆ ಮತ್ತೂ ಅನುಕೂಲ.

ಮೂಲತಃ ಬಸವಾಪಟ್ಟಣದವರಾದ ಡಾ. ಬಿ.ಆರ್. ರಾಮಕೃಷ್ಣ, 'ಉದಯ' ಎಂದೇ ಪ್ರಸಿದ್ಧರು. ಆಕರ್ಷಕವಾದ ವ್ಯಕ್ತಿತ್ವ. ಮಾತನಾಡಲು ಕುಳಿತರೆ ಮೋಡಿ ಮಾಡುವ ಮಾತುಗಾರಿಕೆ. ವೆಂಕಟನಾರಾಯಣ್ ಅವರೊಂದಿಗೆ ಉದಯ ಅವರನ್ನು ನೋಡಲು ನಾವು ಬೆಂಗಳೂರಿಗೆ ಹೋದಾಗ ಮಧ್ಯಾಹ್ನದ ಸಮಯ. ಬಸವಾಪಟ್ಟಣದವರಾದ ಸಿವಿಲ್ ಇಂಜಿನಿಯರ್ ಬಿ.ಕೆ. ಶಂಕರ್ ಅವರ ಮನೆಗೆ ನಾವು ಮೊದಲು ಹೋದದ್ದು. ಸುಗ್ರಾಸ ಭೋಜನ ನಮಗಾಗಿ ಕಾಯುತ್ತಿತ್ತು. ಬಿ.ಕೆ. ಶಂಕರ್ ಅವರ ಪತ್ನಿ ವೈ.ಕೆ. ಕಮಲ ಬಹಳ ಮುತುವರ್ಜಿಯಿಂದ ಉಪಚರಿಸಿದರು. ಅನಂತರ ಸರಿಯಾದ ಸಮಯಕ್ಕೆ ರಾಮಕೃಷ್ಣ ಅವರ ಮನೆ ತಲುಪಿದಾಗ ನಮಗಾಗಿ ಅವರು ಕಾಯುತ್ತಿದ್ದರು. ಪರಿಚಯವಾದೊಡನೇ ಅವರ ವಿಭಿನ್ನ ವ್ಯಕ್ತಿತ್ವವನ್ನು ಪರಿಚಯಿಸುವ ಐದು ಬಗೆಯ visiting card ನೀಡಿದ್ರು. ನಾನು ನಿಜಕ್ಕೂ ಅಚ್ಚರಿಗೊಂಡೆ. ಮನೆಯ ಪಕ್ಕದಲ್ಲಿದ್ದ, ಮಧ್ಯಾಹ್ನದ ಬಿಸಿ ಊಟವನ್ನು ತಯಾರು ಮಾಡುವ ಪಾಕಶಾಲೆಗೆ ಕರೆದೊಯ್ದರು. ಅಲ್ಲಿನ ವ್ಯವಸ್ಥೆ ಅಚ್ಚುಕಟ್ಟಾಗಿತ್ತು. ಅಷ್ಟರಲ್ಲಿ ಮಳೆ ಆರಂಭವಾಯ್ತು. 'ನಡೀರಿ, ತೋಟದಲ್ಲಿ ಮಾತನಾಡೋಣ' ಎಂದು ಅವರ ವಾಹನದಲ್ಲಿ ಕರೆದೊಯ್ದರು. ನಾವು ಮೊದಲು ಹೋದದ್ದು ಅವರ ಪ್ರಯೋಗಾತ್ಮಕವಾದ ತೇಗದ ತೋಟಕ್ಕೆ. ಪಾದರಸದಂತೆ ಓಡಾಡಿ ಇಡೀ ತೋಟವನ್ನು ಪರಿಚಯಿಸಿದ್ರು. ಮಳೆ ನಿಂತಿತ್ತು. ವಾತಾವರಣ ತಂಪಾಗಿತ್ತು. ಮುಂದಿನ ನಮ್ಮ ಭೇಟಿ ಅವರು ನೂತನವಾಗಿ ನಿರ್ಮಿಸುತ್ತಿರುವ ಔಷಧೀಯವನ ಹಾಗೂ ಆಯುರ್ವೇದ ಔಷಧವನ್ನು ತಯಾರಿಸುವ ಘಟಕ ಇಡಲು ಉದ್ದೇಶಿಸಿರುವ ಜಮೀನಿಗೆ. ಮತ್ತೆ ಮುಗಿಲು ಕಪ್ಪಾಗತೊಡಗಿತ್ತು. ಜಮೀನಿನ ತುಂಬಾ ಓಡಾಡಿದ್ವು. ಇನ್ನೇನು ಎಲ್ಲಾ ಮುಗಿಯುಷ್ಟರಲ್ಲಿ ಮುಗಿಲು ತೂತಾದಂತೆ ಮುಸಲಧಾರೆ ಶುರುವಾಯ್ತು. ಮಳೆಯ ಮಧ್ಯೆಯಲ್ಲಿ ಓಡಿಬಂದು ತೋಟದ ಮನೆ ಸೇರಿಕೊಂಡ್ವು. ಮನೆಯಿಂದ ತಂದ ಸಾಮಗ್ರಿಯಲ್ಲೇ ಎಲ್ಲರಿಗೂ ಅಲ್ಲೇ ಕಾಫಿ ತಯಾರಾಯ್ತು. ಮಳೆಯ ನಡುವೆ ಮುದ ನೀಡುವ ವಾತಾವರಣವಿತ್ತು. ರಂಗೇರಿಸಲು ರಾಮಕೃಷ್ಣ ಅವರ ಮಾತುಗಳಿದ್ದು. ನಮ್ಮ ಉದ್ದೇಶಗಳ ಅರಿವಿದ್ದ ರಾಮಕೃಷ್ಣ ಹೇಳಲು ಉಪಕ್ರಮಿಸಿದ್ರು. ಬದುಕಿನ ಏರಿಳಿತದ ಹಾದಿಯನ್ನು ಕೂಲಂಕಶವಾಗಿ ನಮ್ಮೊಂದಿಗೆ ಹಂಚಿಕೊಡ್ರು.

"ಶ್ರೀ ಗುರುಭ್ಯೋನಮಃ ಹರಿಃ ಓಂ. ನಮ್ಮ ಮುತ್ತಾತ ತಿಪ್ಪಾಭಟ್ಟರ ಸುಬ್ಬರಾಯರು. ಅವರ ಮಗ ಸುಬ್ಬರಾಯರು. ಅವರಿಗೆ ಟಿ.ಬಿ. ಸುಬ್ಬರಾಯರು ಅಂತ ಕರೀತಿದ್ರು. ಸುಬ್ಬರಾಯರಿಗೆ ಏಳು ಜನ ಮಕ್ಕಳು. ಆ ಏಳು ಜನಕ್ಕೆ ಬಸವಾಪಟ್ಟಣದಲ್ಲಿ 'ವಠಾರದವರು' ಅಂತ ಕರೀತಾರೆ. ಆ ವಠಾರದವರ ಪೈಕಿ ನನ್ನ ತಂದೆ, ಬಿ.ಎಸ್. ರಾಮಯ್ಯ ನಾಲ್ಕನೆಯವರು. ನನ್ನ ತಾಯಿ 'ರಂಗಮ್ಮ' ಅಂತ ಹೇಳಿ. ಅವರು ಮೂಲತಃ ಕೇರಳಾಪುರದ ಹೊಳೆ ಆಚೆ ಇರುವ ಕರತಾಳಿನವರು. ನಮ್ಮ ಪೂರ್ವಜರು ಪ್ರಮುಖವಾಗಿ ಕೃಷಿ, ಅನಂತರ ಅದಕ್ಕೆ ಪೂರಕವಾಗಿ ದೇವಸ್ಥಾನಗಳ ಪೂಜೆ ಮಾಡ್ತಿದ್ದರು. ನನ್ನ ತಂದೆಯ ಅಣ್ಣ ತಮ್ಮಂದಿರು ಬೇರಾದಾಗ ಅವರಿಗೆ ನಾಲ್ಕು ಸಾಲು ಮಾತ್ರ ತೋಟ. ಇದರಲ್ಲಿಯೇ ಅವರ ಜೀವನ ಸಾಗಿಸಿದ್ರು. ನಾನೂ ಸೇರಿ ಮನೇಲಿ ಒಟ್ಟು ೧೩ ಜನ ಮಕ್ಕಳಿದ್ವಿ. ನಮ್ಮನ್ನ ಸುಸ್ಥಿತಿಗೆ ತರಬೇಕಾದ್ರೆ ನಮ್ಮ ತಂದೆ ತಾಯಿ ಬಹಳ ಪರಿಶ್ರಮಪಟ್ಟಿದಾರೆ. ನಮ್ಮ ವಠಾರದ ಏಳು ಮನೆಗಳು ಕೃಷಿಯಲ್ಲಿ ತೊಡಗಿದ್ರೂ, ವ್ಯಾಪಾರವನ್ನು ಸಹ ಮಾಡ್ತಿದ್ರು. ಅದು ಅಡಿಕೆ-ತುಡಿಕೆ. ವರುಷದಲ್ಲಿ ಮೂರು ನಾಲ್ಕು ತಿಂಗಳು ಅಡಿಕೆ ತುಡಿಕೆ ವ್ಯಾಪಾರ. ಉಳಿದ ಸಮಯದಲ್ಲಿ ಸಂಪೂರ್ಣ ಕೃಷಿ ಮಾಡ್ತಿದ್ರು. ಆಗ ಕೃಷಿ ಅಂದ್ರೆ ಗೊತ್ತಿದ್ದು ಎರಡೇ. ಒಂದು ಅಡಿಕೆ, ಇನ್ನೊಂದು ಭತ್ತ. ಅಲ್ಪಸಲ್ಪ ರಾಗಿ ಬೆಳೀತಿದ್ರು ಅಷ್ಟೆ. ನಮ್ಮ ಮನೇಲಿ ಯಾವ ರೀತಿ ವಾತಾವರಣ ಇತ್ತು ಅಂದ್ರೆ ಬೆಳಗ್ಗೆ ಪಾಠಶಾಲೆಗೆ ಹೋಗುವುದಕ್ಕಿಂತ ಎರಡು ಘಂಟೆ ಮುಂಚಿತವಾಗಿ, ಅನಂತರ ಶಾಲೆ ಮುಗಿದ ಮೇಲೆ ಎರಡು ಘಂಟೆಗಳ ಕಾಲ ನಾವು ಅವಶ್ಯವಾಗಿ ಜಮೀನಿಗೆ ಹೋಗಬೇಕಿತ್ತು. ಕೆಲಸ ಮಾಡದಿದ್ರೂ, ತೋಟ ಬಳಸಬೇಕು, ಅದರ

ಬಗ್ಗೆ ಎಚ್ಚರವಹಿಸಬೇಕು-ಅನ್ನುವ ಮಾರ್ಗದರ್ಶನ ಕೊಡ್ತಿದ್ರು. ಶನಿವಾರ ಭಾನುವಾರ ಬಂತು ಅಂದ್ರೆ, ನಮ್ಮ ಮನೇಲಿ ಗೊಬ್ಬರ ಹಾಕುವ ಕೆಲಸ, ಕಳೆ ಕೀಳುವ ಕೆಲಸ, ತೋಟದಿಂದ ಅಡಿಕೆ ಪಟ್ಟಿ ತರುವ ಕೆಲಸವನ್ನು ನಾವು ಸ್ವಂತವಾಗಿ ಮಾಡ್ತಿದ್ವಿ. ನಮ್ಮ ತಂದೆ ತಾಯಿ ಯಾರನ್ನು ಕೂಡ ಬಲವಂತ ಮಾಡ್ತಿರಲಿಲ್ಲ-ನೀವು ಹೋಗೇ ಹೋಗಬೇಕು ಅಂತ. ಆದ್ರೆ ಪರಿಸರ ಹ್ಯಾಗಿತ್ತು ಅಂದ್ರೆ, ನಮ್ಮನ್ನು ದುಡಿಯಲು ಪ್ರೇರೇಪಿಸುತ್ತಿತ್ತು. ಮನೆ ತುಂಬಾ ದನಕರುಗಳು ಇದ್ವು. ಅವನ್ನು ಹೊಲಕ್ಕೆ ಕರೆದುಕೊಂಡು ಹೋಗಿ ಮೇಯಿಸಿಕೊಂಡು ಬರ್ತಿದ್ವಿ. ಅವುಗಳ ಆರೈಕೆ ಮಾಡ್ತಿದ್ವಿ. ನಮ್ಮ ಪ್ರತಿನಿತ್ಯದ ದಿನಚರಿಯಲ್ಲಿ ಪಾಠಶಾಲೆಯ ಜತೆಗೆ ತೋಟವೂ ಸೇರಿ ಹೋಗಿತ್ತು.

ನನ್ನ ತಂದೆಗೆ ಈಗ ೮೬ ವರುಷ. ಅವರು ಎಷ್ಟೋ ದಿನ ಜಮೀನಿನಲ್ಲೇ ಇರ್ತಿದ್ರು. ಜಮೀನಿನಲ್ಲಿ ಆಳುಗಳ ಜತೆಗೆ ನಮ್ಮನ್ನೂ ಸೇರಿಸಿಕೊಂಡು ಕೆಲಸಕಾರ್ಯಗಳನ್ನು ಮಾಡ್ತಿದ್ರು. ಮಧ್ಯಾಹ್ನದ ಊಟ ತೋಟದಲ್ಲಿಯೇ ಮಾಡ್ತಿದ್ರು. ಮತ್ತೆ ವಿರಾಮವಿಲ್ಲದೆ ಸಂಜೆ ಏಳರವರೆಗೆ ತೋಟದಲ್ಲಿಯೇ ದುಡೀತಿದ್ರು. ಜತೆಗೆ ನಮ್ಮ ದೊಡ್ಡ ಅಣ್ಣ, ನಾಗರಾಜ್ ಅಂತ ಹೇಳಿ ಈಗ ಅಮೇರಿಕಾದಲ್ಲಿ ಹಿಂದು ದೇವಸ್ಥಾನ ಸಮುಚ್ಚಯದಲ್ಲಿ ಅರ್ಚಕರಾಗಿದ್ದಾರೆ. ನಮ್ಮ ಅತ್ತಿಗೆ ವಿಜಯಲಕ್ಷ್ಮಿ ಬಸವಾಪಟ್ಟಣದವರು. ಅವರು ನಮಗೆ ವ್ಯವಸಾಯದ ಮಾರ್ಗದರ್ಶನವನ್ನು ನೀಡಿದ್ದಾರೆ. ಅವರು ನಮ್ಮ ಜತೆ ಬಂದು ಗಿಡಗಳಿಗೆ ನೀರು ಹಾಕೋರು. ಭಾನುವಾರ ಆಯ್ತು ಅಂದ್ರೆ ನಮ್ಮನ್ನು ಹುರಿದುಂಬಿಸಿಕೊಂಡು, ತೋಟಕ್ಕೆ ಊಟ ಕಟ್ಟಿಕೊಂಡು ಹೋಗೋದು, ಜಮೀನಿನಲ್ಲೇ ಸಾಯಂಕಾಲದವರೆಗೆ ಇರೋದು. ಆ ತರಹ ಮಣ್ಣಿನ ವಾಸನೆಯನ್ನು ನಮಗೆ ನಿಜವಾಗಿ ಹಿಡಿಸಿದವರು ಮೊದಲನೆಯವರಾಗಿ ನಮ್ಮ ತಂದೆ, ಎರಡನೆಯವರಾಗಿ ನಮ್ಮ ಅತ್ತಿಗೆ. ನಮ್ಮ ತಂದೆ ಬೆಳಗ್ಗೆ ತೋಟಕ್ಕೆ ಹೋಗುವಾಗ ಒಂದು ಮಂಕರಿ ಹಿಡಿದು ಹೋಗೋರು. ಹಾದಿಬದಿಯಲ್ಲಿ ಬಿದ್ದಿರುವ ತೊಪ್ಪೆಯನ್ನು ಆರಿಸಿ ಮಂಕರಿಗೆ ತುಂಬಿಕೊಳ್ಳೋರು. ಸಂಜೆ ಬರುವಾಗಲೂ ಇದೇ ಕೆಲಸ. ಹೀಗೇ ದಿನಕ್ಕೆ ಆರು ಮಂಕರಿ ಸಗಣಿಯನ್ನು ಸಂಗ್ರಹಿಸೋರು. ನಮ್ಮ ಊರಿಗೇ ಮೀನಿನಗೊಬ್ಬರ ಮೊದಲು ಬಳಸಿದ್ದು ನಮ್ಮ ಅಣ್ಣ. ಒಂದು ಸಾರಿ ಹೀಗೇ ಮಂಗಳೂರಿನಿಂದ ಮೀನಿನಗೊಬ್ಬರ ತರಿಸಿ ತೋಟದಲ್ಲಿ ಚೀಲ ಇಡಿಸಿದ್ವಿ. ಅದನ್ನೂ ಹಟ್ಟಿಗೊಬ್ಬರದ ಜತೆ ಬೆರೆಸಿ ತೋಟಕ್ಕೆ ಹಾಕಬೇಕಿತ್ತು. ಸಂಜೆಯವರೆವಿಗೂ ಆಳುಗಳು ಕೆಲಸ ಮಾಡಿದಾರೆ. ಮೀನಿನಗೊಬ್ಬರ ಬಹಳ ವಿಶೇಷ ಆಗ. ಆಳುಗಳು ಏನು ಮಾಡಿದಾರೆ. ಎರಡು ಮೀನಿನ ಗೊಬ್ಬರದ ಚೀಲವನ್ನೂ ಹಾಗೇ ಹಟ್ಟಿ ಗೊಬ್ಬರದ ಒಳಗೆ ಅಡಗಿಸಿ ಇಟ್ಟಿದಾರೆ. ರಾತ್ರಿಯಾದ ಮೇಲೆ ಬಂದು ಕದ್ದುಕೊಂಡು ಹೋಗೋಣ ಅಂತ ಇರಬಹುದು. ನಮ್ಮ ತಂದೆ ಕೆಲಸ ಎಲ್ಲಾ ಮುಗಿದ ಮೇಲೆ ಖಾಲಿ ಚೀಲ ಎಣಿಸಿದ್ದಾರೆ. ಎರಡು ಚೀಲ ಕಡಿಮೆ ಬಂದಿದೆ. ನಮ್ಮನ್ನೆಲ್ಲಾ ಮನೆಗೆ ಕಳಿಸಿ ಅವರು ತೋಟದಲ್ಲಿಯೇ ಕಾದಿದ್ದಾರೆ. ರಾತ್ರಿ ೧೧ ಘಂಟೆ ಆದರೂ ಅವರು ಮನೆಗೆ ಬರಲಿಲ್ಲ. ನಮಗೆಲ್ಲಾ ಗಾಬರಿ. ಕದ್ದಮಾಲನ್ನು ಒಯ್ಯಲು ಆಳುಗಳು ಬಂದೇ ಬರುತ್ತಾರೆ ಎನ್ನುವ ನಂಬಿಕೆ ಅವರದ್ದು. ರಾತ್ರಿ ೧೨ ಘಂಟೆಗೆ ಬಂದ ಕಳ್ಳರನ್ನು ಒಬ್ಬರೇ ಹಿಡಿದು, ಪಂಚಾಯ್ತಿಗೆ ಒಪ್ಪಿಸಿ ಅಂದು ನಮ್ಮ ತಂದೆ ಮನೆಗೆ ಬಂದಾಗ ರಾತ್ರಿ ಒಂದು ಘಂಟೆ.

ನಮ್ಮ ಅಣ್ಣ-ಅತ್ತಿಗೆ, ೧೯೬೮ರಿಂದ ೭೪ರವರೆಗೆ ಹೊಸ ಹೊಸ ಕೃಷಿ ಪ್ರಯೋಗಗಳನ್ನು ಮಾಡಿದ್ರು. ಇದು ಹಾಸನ ಜಿಲ್ಲೆಗೇ ಪ್ರಥಮ ಇರಬಹುದು. ಪ್ರಪ್ರಥಮವಾಗಿ ಅವರು ಗೋಧಿ ಬೆಳೆದ್ರು. ಆಮೇಲೆ ಆಸ್ಟ್ರೇಲಿಯಾದ ಸ್ಕ್ಯಾವೆಂಡಿಯನ್ ಬಾಳೆ ಬೆಳೆದ್ರು. ಹೈಬ್ರಿಡ್ ಮುಸುಕಿನ ಜೋಳವನ್ನೂ ಮೊದಲು ಪರಿಚಯಿಸಿದ್ರು. ಹೀಗೆಲ್ಲಾ ಹೊಸ ಹೊಸ ಪ್ರಯೋಗ ಮಾಡುವಾಗ ತುಂಬಾ ನಷ್ಟ ಆಯ್ತು. ಸಾಲಾನೂ ಆಯ್ತು. ಬಸವಾಪಟ್ಟಣ ಬಿಡುವ ಪರಿಸ್ಥಿತಿ ಬಂತು. ಹಾಗಾಗಿ ಅವರು ಬೆಂಗಳೂರಿಗೆ ಬಂದ್ರು. ಹೂಕೋಸನ್ನು ಮೊದಲು ಬೆಳೆದವರು ನಮ್ಮ ಅಣ್ಣನೇ. ಹೊಸದನ್ನು ಬೆಳೆಯಬೇಕೆನ್ನುವ ತುಡಿತ ಅವರಲ್ಲಿ ಬಹಳವಾಗಿ ಇತ್ತು. ಸಂಕೇತಿಗಳಲ್ಲಿ ನಮ್ಮ ಸುತ್ತಮುತ್ತ ಮೊದಲ ಬಾರಿಗೆ ವರ್ಜೀನಿಯಾ ತಂಬಾಕು ಬೆಳೆದವರು ನಮ್ಮ ಅಣ್ಣನೇ. ೧೯೭೦-೭೧ರಲ್ಲಿ ನಾನು ಸಹ ಊರಲ್ಲಿಯೇ ಇದ್ದೆ. ಆಗ ಸ್ವತಃ ನಾವೇ ಉಳುಮೆ ಮಾಡಿ, ಹೊಗೇಸೊಪ್ಪು ಬೆಳೆದು, ಬ್ಯಾರನ್‌ನಲ್ಲಿ ಅದನ್ನು ಬೇಯಿಸಿ, ಪರಿಶುದ್ಧ ಮಾಡಿ ದೊಡ್ಡಮಗ್ಗೆಯ ಮಾರುಕಟ್ಟೇಲಿ ಮಾರುವವರೆಗೂ ದುಡಿದಿದ್ದೇವೆ. ಇಷ್ಟೆಲ್ಲಾ ಮಾಡಿದ್ರೂ ಹಣದ ಬೆಂಬಲ ಸಿಗಲಿಲ್ಲ.

ಅನಂತರ ನಾವು ಎಲ್ಲರೂ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ಸೇರಿದ್ವಿ. ಊರಲ್ಲಿ ಯಾರೂ ನೋಡುವವರು ಇಲ್ಲದಾಗ ನಮ್ಮ ತಂದೆ 'ಹೋಗುವ ಧಾರಣೆಗೆ' ಜಮೀನು ಮಾರಿ ಬೆಂಗಳೂರಿಗೆ ಬಂದುಬಿಟ್ರು, ೧೯೭೪-೭೫ರಲ್ಲಿ. ಇಲ್ಲಿ ಬಂದ ಮೇಲೂ ನಮ್ಮ ಅಣ್ಣ ನಾಗರಾಜ್ ಬಿಡಲೇ ಇಲ್ಲ. ಸಾಹಸ ಅಂದ್ರೆ ಅವರದ್ದು. ಅವರ ಮುಂದೆ ನಾವೇನೂ ಅಲ್ಲ. ನಾವೆಲ್ಲಾ Jack of all master of none ಆದರೆ ಅವರು master of all. ಅಂತಹ ವ್ಯಕ್ತಿತ್ವ ಅವರದ್ದು. ಇಲ್ಲಿ ಚಿಕ್ಕಬಳ್ಳಾಪುರದ ಹತ್ರ, ಮತ್ತೆ ೧೨ ಎಕರೆ ಜಮೀನು ತೊಗೊಂಡ್ರು.

ಮಣ್ಣಿನ ವಾಸನೆ ಹೋಗೋಲ್ಲ ಅನ್ನೋದಕ್ಕೆ. ಅಲ್ಲೂ ಹೊಸ ಪ್ರಯೋಗ. ಮತ್ತೆ ಕಹಿ ಅನುಭವ. ಆದರೂ ಬಿಡಲಿಲ್ಲ. ಮತ್ತೆ ನೆಲಮಂಗಲದ ಹತ್ರ ಜಮೀನು ಖರೀದಿಸಿದ್ವಿ. ಬೇರೆ ವೃತ್ತಿ ಹಿಡಿದಿದ್ರೂ, ಮತ್ತೆ ಮತ್ತೆ ಮಣ್ಣಿನ ಸೊಗಡು ವ್ಯವಸಾಯದತ್ತ ಎಳೀತಾ ಇತ್ತು. ಈಗ ನಾನೂ ಬೆಂಗಳೂರಿನಲ್ಲಿ ಸಾಕಷ್ಟು ಹೆಸರು ಮಾಡಿದೀನಿ, ವೃತ್ತಿ ಇದೆ, ಹಣವೂ ಇದೆ. ಆದರೆ ನಮ್ಮ ಜಮೀನಿಗೆ ಬಂದು ಅರ್ಧಘಂಟೆ ಕಳೆಯುವುದರಲ್ಲಿ ಸಿಗುವ ಆನಂದ ಬೇರೆಲ್ಲೂ ಸಿಗೋಲ್ಲ. ಇಲ್ಲಿ ಸಿಗುವ ನೆಮ್ಮದಿ ಬೇರೆಲ್ಲೂ ಸಿಗೋಲ್ಲ.

ನನಗೆ ಎತ್ತುಗಾಡಿ ಅಂದ್ರೆ ಬಹಳ ವ್ಯಾಮೋಹ. ಎರಡು ಕಡ್ಡಿ ಹಿಡಿದು ಅದನ್ನೇ ಎತ್ತು ಅಂತ ಆಡಿಸ್ತಾ ಇದ್ದೆ. ನಮ್ಮ ಶಾಲೇಲಿ fancy dress competition ಆದಾಗ, ಕೋಲೆ ಬಸವನ ಪಾತ್ರ ಹಾಕಿ, ಎರಡು ಕರುವನ್ನೂ stage ಮೇಲೆ ನಿಲ್ಲಿಸಿದ್ದೆ. ಪ್ರಥಮ ಬಹುಮಾನ ಬಂತು. ಈಗ ನನ್ನ ಹತ್ರ ಕಾರಿದೆ... ಆದರೆ ಈಗಲೂ ನನಗೆ ಎತ್ತು ಗಾಡೀನೇ ಬಹಳ ಇಷ್ಟ. ನಾನು ಚಿಕ್ಕವನಿದ್ದಾಗ ಒಳ್ಳೆಯ ಹೋರಿ ಕರುಗಳನ್ನು ಸಾಕ್ತಿದ್ದೆ. ನನ್ನ ತಾಯಿ ನನಗೆ ಹಾಲುಕೊಟ್ರೆ, ನಾನು ಅದನ್ನು ಕರೂಗೆ ಕುಡಿಸ್ತಾ ಇದ್ದೆ. ನಾವು ಹೊಗೆಸೊಪ್ಪಿನ ಬೇಸಾಯ ಮಾಡುವಾಗ ನಮಗೆ ಸೌದೆ ಬೇಕಿತ್ತು. ಸೌದೆ ತರಲು ಗೊರೂರಿನಿಂದ ತಂದ ಒಂದು ಜತೆ ಎತ್ತನ್ನು ಗಾಡಿಗೆ ಹೂಡಿಕೊಂಡ್ವಿ. ಆ ಎತ್ತಿಗೆ ಒಂದು ತರಹ ಆಸ್ತಮಾ ತರಹ ಆಗಿ ಸ್ವಲ್ಪದೂರ ನಡೆದ್ರೂ ಸಾಕು ಸುಸ್ತಾಗಿ ಮಲಗಿ ಬಿಡೋದು. ನಮಗೆ ಗೊತ್ತಿರಲಿಲ್ಲ. ನಾನು ಕೊಣನೂರಿನಿಂದ ಆಚೆ ಇರುವ ಬೆಮ್ಮತ್ತಿ ಕಾಡಿಗೆ ಸೌದೆ ತರಲು ಹೋದೆ. ಸೌದೆಯನ್ನು ಚೆನ್ನಾಗಿ ತುಂಬಿ ಸಂಜೆ ಅಲ್ಲಿಂದ ನಾನೂ ನಮ್ಮ ಆಳೂ ಹೊರಟ್ವಿ. ಏರು ಬಂದಾಗ ಉಬ್ಬಸ ಬಂದು ಎತ್ತು ಮಲಗಿ ಬಿಡ್ತು. ಹಿಂದಿನಿಂದ ಆನೆಗಳು. ಎಲ್ಲರೂ 'ಓಡಿ' ಅಂತಿದಾರೆ, ಎತ್ತು ಏನು ಮಾಡಿದ್ರೂ ಏಳ್ತಾ ಇಲ್ಲ. ಕಡೇಗೆ ಮರೇಲಿ ನಿಂತು, ಆನೆ ಹೋದ ಮೇಲೆ, ಗಾಡಿ ತೂಕ ಕಡಿಮೆ ಮಾಡಿ, ಹ್ಯಾಗೋ ಮನೆಗೆ ಬಂದ್ವಿ. ಸಾಮಾನ್ಯವಾಗಿ ಎತ್ತು ಮಲಗಿದ್ರೆ ಅದಕ್ಕೆ ನಾನಾ ತರಹ ಹಿಂಸೆ ಕೊಡ್ತಾರೆ. ಬಾಲ ಕಚ್ತಾರೆ. ಪೃಷ್ಠದ ಭಾಗವನ್ನು ಬೆಂಕಿಯಿಂದ ಸುಡ್ತಾರೆ, ಹೊಡೀತಾರೆ. ಹೀಗೆ ನಮ್ಮ ಎತ್ತಿಗೆ ಕೆಳಗೆಲ್ಲಾ ಸುಟ್ಟಿದ್ರು. ಆ ಎತ್ತು ಎಷ್ಟರಮಟ್ಟಿಗೆ ನನ್ನನ್ನು ಹಚ್ಚಿಕೊಂಡಿತ್ತು ಅಂದ್ರೆ, ನಾನು ಅದರ ಅಡೀಲಿ ಕುಳಿತು ಗಾಯವನ್ನು ಸ್ವಚ್ಛಗೊಳಿಸಿ, ಆಯಿಂಟ್‌ಮೆಂಟ್ ಹಾಕ್ತಿದ್ದೆ. ನನ್ನೊಬ್ಬನನ್ನು ಮಾತ್ರ ಸೇರಿಸ್ತಾ ಇತ್ತು ಅಷ್ಟೆ. ನಾವು ಪ್ರೀತಿ ತೋರಿಸಿದ್ರೆ ಅದು ಹ್ಯಾಗೆ ಪ್ರೀತಿ ತೋರಿಸುತ್ತೆ ಅನ್ನುವುದಕ್ಕೆ ಉದಾಹರಣೆ ಇದು.

ನಮಗೆ ಏನಾದ್ರೂ ಗಡಸುತನ ಅಂತ ಬಂದಿದ್ರೆ ಅದು ನಮ್ಮ ತಾಯಿಯಿಂದ ಬಂದಿರೋದು. ನಮ್ಮ ತಾಯಿ ಹ್ಯಾಗೆ ಅಂದ್ರೆ, ಅದು ಹಾಯುವ ಹಸು ಇರ್ಲಿ, ಒದೆಯುವ ಹಸು ಇರ್ಲಿ ಅದನ್ನೂ ಹಿಡಿದು, ಕಟ್ಟಿಹಾಕಿ, ಹಾಲು ಕರೀತಿದ್ರು. ನಮ್ಮ ಅತ್ತಿಗೆ ಮನೇಲಿ ಒಂದು ಬಿಳಿ ಹಸು ಇತ್ತು. ನನ್ನ ತಾಯಿ ಒಬ್ಬರೇ ಅದನ್ನು ಬಗ್ಗಿಸ್ತಾ ಇದ್ದಿದ್ದು. ಹೀಗಾಗಿ ದನಕರುಗಳ ಮೇಲಿನ ವ್ಯಾಮೋಹ, ಜಮೀನನ್ನು ಕಳೆದ್ರೂ ಮತ್ತೆ ಮತ್ತೆ ಜಮೀನನ್ನು ಖರೀದಿ ಮಾಡುವಂತೆ ಮಾಡಿತ್ತು.

ನಾನು PUC ಮುಗಿದ ಮೇಲೆ, ಬೆಂಗಳೂರಿನಲ್ಲಿ BAMS (Bachelor of Ayurvedic Medicine)ಗೆ ಸೇರಿದೆ. ನನ್ನ ಪರಿಶ್ರಮದ ಫಲವಾಗಿ ಕರ್ನಾಟಕ ರಾಜ್ಯ ಪ್ರಶಸ್ತಿ ಬಂತು. ಮೂರು ಯೂನಿವರ್ಸಿಟಿಗಳಿಗೆ ನನ್ನದು ಅತ್ಯಧಿಕ ಅಂಕ ಹಾಗೂ ಮೊದಲನೆಯ ರ್‍ಯಾಂಕು. ಆಗ ನಾನು ಸಜ್ಜನರಾವ್ ಛತ್ರದಲ್ಲಿದ್ದ ರಾಮಕೃಷ್ಣ ವಿದ್ಯಾರ್ಥಿ ನಿಲಯದಲ್ಲಿದ್ದೆ. ಅದನ್ನೂ ನಾವು ಇವತ್ತೂ ಸ್ಮರಿಸಬೇಕು. ನಮಗೆ ಸಂಪೂರ್ಣವಾಗಿ ಉಚಿತವಾಗಿತ್ತು ಅಲ್ಲಿನ ವಾಸ. ಯಾಕೇಂದ್ರೆ ಅವತ್ತು ನಮ್ಮ ಪರಿಸ್ಥಿತಿ 'ಇಲ್ಲಾ ಓದಬೇಕು ಅಥವಾ ಕೂಲಿ ಮಾಡಬೇಕು' ಅನ್ನುವಂತಿತ್ತು. ಅಂಥಾ ಪರಿಸ್ಥಿತಿಯಲ್ಲಿ ರಾಮಕೃಷ್ಣ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಸಿಕ್ಕಿತು. ನಮ್ಮ ಶಾಲೆಯಲ್ಲಿ ನಮ್ಮೆಲ್ಲರಿಗೂ ಬೆಳೆ ಬೆಳೆಯಲು ಜಾಗ ಕೊಡ್ತಿದ್ರು. ಪ್ರತಿವರ್ಷ ನನಗೇ ಮೊದಲ ಬಹುಮಾನ. ಪ್ರತಿಯೊಂದು ತರಕಾರೀನೂ ಬೆಳೀತಿದ್ದೆ. Degree ಮುಗಿದ ಮೇಲೆ, ಬೆಂಗಳೂರು Medical Collegeನಲ್ಲಿ ಆಧುನಿಕ ಪದ್ಧತಿಯ ಬಗ್ಗೆ ಎರಡು ವರುಷ ಕಲಿತೆ. ವೃತ್ತಿ ಆರಂಭಿಸಿದೆ. ಜತೆಜತೆಗೆ ದ್ರವ್ಯಗುಣ ವಿಜ್ಞಾನ ಅಂತ ಗಿಡಮೂಲಿಕೆಗಳ ಔಷಧೀಯ ಗುಣಗಳ ಬಗ್ಗೆ MD ಮಾಡಿದೆ. ಬೆಂಗಳೂರಿನ ರಾಷ್ಟ್ರೀಯ ವಿದ್ಯಾಸಂಸ್ಥೆಗೆ ಸೇರಿದ SSMRV Collegeನಲ್ಲಿ, MSc in Applied Botany ವಿಷಯವನ್ನೂ ೧೧ ವರುಷಗಳ ಕಾಲ ಬೋಧಿಸಿದೆ. ನಮ್ಮ ಸ್ನೇಹಿತರ ಜತೆ ಸೇರಿ, Vedic Biolabs Pvt. Ltd. ಸಂಸ್ಥೆಯನ್ನೂ ಆರಂಭಿಸಿದೆ. ಇದು ಗಿಡ ಮೂಲಿಕೆಗಳ ಸಂಬಂಧಪಟ್ಟ Ayurvedic Pharmaceutical Industry. Bangalore Universityನ ಆರ್.ಆರ್. ಚವಾಣ್ ಅವರ (ಈಗ ಅವರು ನ್ಯೂಜಿಲ್ಯಾಂಡ್‌ನಲ್ಲಿದ್ದಾರೆ) ಮಾರ್ಗದರ್ಶನದಲ್ಲಿ Ethno Botonical Study of Charaka Samhita ಅದರ ಬಗ್ಗೆ Ph.D., ಮಾಡ್ತಿದೀನಿ. ಕಳೆದ ಎರಡು ವರುಷಗಳಿಂದ ಸುಶ್ರುತ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ Professor ಹಾಗೂ ಸಂಸ್ಥೆಯ ಮಾರ್ಗದರ್ಶನ ಮಂಡಳಿಯ

ಸದಸ್ಯನಾಗಿ ಕೆಲಸ ಮಾಡ್ತಿದೀನಿ. ಜತೆಗೆ ಕಳೆದ ಐದು, ಆರು ವರುಷಗಳಿಂದ ರವಿಶಂಕರ್ ಗುರೂಜಿ ಅವರ Art of Living Foundationನ ಸಂಪರ್ಕದಲ್ಲಿದೀನಿ. ಇದರ ಜತೆಗೆ ಜಿಗಣಿಯ 'ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಕೇಂದ್ರ'ದಲ್ಲಿ ಡಾ.ನಾಗೇಂದ್ರ, ಹಾಗೂ ಡಾ. ನಾಗರತ್ನ ಅವರು ಯೋಗದ ಬಗ್ಗೆ ಮಾಡಿರುವ ಸಂಶೋಧನೆಗಳ ಬಗ್ಗೆ, ಆಸಕ್ತಿ ಮೂಡಿ, ಅಲ್ಲಿಗೆ ಹೋಗಿ MS in Yoga and Special Science ಮುಗಿಸಿ, ಈಗ Ph.D. ಕೆಲಸ ಮಾಡ್ತಿದೀನಿ. ನನ್ನ Ph.D., ವಿಷಯ 'Effect of Sudarshana Kriya and Art of Living in Promoting Positive Health'. ಇದರ ಜತೆ Pradhan Herbal Companyಯ ಸಲಹೆಗಾರನಾಗಿ ಕೆಲಸ ಮಾಡ್ತಿದೀನಿ. ಹಾಗೇ ಕರ್ನಾಟಕ ರಾಜ್ಯ ಸರಕಾರ ಸ್ಥಾಪಿಸಿರುವ ಕರ್ನಾಟಕ ರಾಜ್ಯ ಔಷಧಿ ಪ್ರಾಧಿಕಾರದ ನಾಮನಿರ್ದೇಶಿತ ಸಲಹೆಗಾರನಾಗಿದ್ದೇನೆ. ಇದು ನನ್ನ ವೈಯುಕ್ತಿಕ ವಿವರ.



ತಮ್ಮ ತೇಗದ ತೋಟದ ಮುಂದೆ ಡಾ.ಬಿ.ಆರ್.ರಾಮಕೃಷ್ಣ : ಬೆಂಗಳೂರು

ನಾವು ನೆಲಮಂಗಲದಲ್ಲಿ ಜಮೀನು ಮಾಡಿದಾಗ, ಬೆಂಗಳೂರಿನ ಮನೇಲಿ ಸುಮಾರು ೨೦ ಹಸು ಕಟ್ಟಿದ್ವಿ. ನನ್ನ ವೃತ್ತಿಯ ಜತೆಗೆ ಹಸುಗಳನ್ನು ತೊಳೆದು, ಹಾಲು ಕರೆದು, ಹಾಲನ್ನು ಮಾರ್ತಿದ್ವಿ. ಒಂದು ಸಾರಿ ಕಲ್ಲಂಗಡಿ ತುಂಬಾ ಬೆಳೆದ್ವಿ. ಧಾರಣೆ ಕುಸಿದು ಮಾರುಕಟ್ಟೆಗೆ ಹಾಕಲು ತುಂಬಾ ಬೇಸರವಾಯ್ತು. ಆಗ ಜಯನಗರ 4th Blockನಲ್ಲಿ ನಿಂತು ನಾನೇ ಕಲ್ಲಂಗಡಿ ಹಣ್ಣು ಮಾರಿದೀನಿ. ನಮ್ಮ ಅಣ್ಣ ಅಮೇರಿಕಾಕ್ಕೆ ಹೋಗುವ ಸಂದರ್ಭ ಬಂದಾಗ ನೆಲಮಂಗಲದ ಜಮೀನು ಮಾರಿದ್ವಿ. ಅನಂತರ ನಾನು ನನ್ನ ಸಂಶೋಧನೆ ಬಗ್ಗೆ ಕನಕಪುರ ರಸ್ತೇಲಿ ಓಡಾಡ್ತಾನೇ ಇದ್ದೆ. ಇಲ್ಲಿನ ನೀರು, ಹಸಿರನ್ನು ನೋಡಿ ಮತ್ತೆ ಆಸೆ ಚಿಗುರು ಒಡೀತು. ಹಾಗಾಗಿ ನಾಲ್ಕು ವರುಷದ ಹಿಂದೆ, ಎರಡೂವರೆ ಎಕರೆ ಜಮೀನನ್ನು ನಾನು ಖರೀದಿ ಮಾಡಿದೆ. ನನ್ನ ಸ್ನೇಹಿತರು ಇಬ್ಬರು ಜಮೀನು ನೋಡಲು ಬಂದಾಗ 'ನನಗೆ ಸ್ವಲ್ಪ ಕೊಡು' ಅಂದ್ರು. ಅನಂತರ ಅವರಿಬ್ಬರಿಗೆ ಕೊಟ್ಟು, ನಾನು ಮುಕ್ಕಾಲು ಎಕರೆ ಮಾತ್ರ ಇಟ್ಟುಕೊಂಡೆ. ನನ್ನ ಸ್ನೇಹಿತರಿಗೆ ಜಮೀನು ಕೊಟ್ಟಿದ್ದ್ಯಾಕೆ ಅಂದ್ರೆ, ನಮ್ಮ ಮನೇಲಿ ಹಂಚಿಕೊಂಡು ಬಾಳುವ ಮಾರ್ಗದರ್ಶನ ಇತ್ತು. ಯಾರಾದ್ರೂ ಅಪೇಕ್ಷೆಪಟ್ರೆ ಅದನ್ನು ಉಪೇಕ್ಷೆ ಮಾಡಬಾರದು, ಕೊಟ್ಟೇಕೊಡಬೇಕು ಅನ್ನುವುದು ತತ್ವ ಆಗಿತ್ತು. ಅಲ್ಲದೆ ಹೊರಗಿನಿಂದ ಬಂದವನು ನಾನು ಒಬ್ಬನೇ. ನಮ್ಮವರು ತಮ್ಮವರು ಅಂತ ಪಕ್ಕದಲ್ಲಿದ್ರೆ ಅನುಕೂಲ ಆಗುತ್ತೆ ಅನ್ನುವುದು ಉದ್ದೇಶ. ನಂತರ ಈ ಮುಕ್ಕಾಲು ಎಕರೆ ಇಟ್ಟುಕೊಂಡು ಏನು ಮಾಡೋಣ ಅಂತ ಚಿಂತಿಸಿದೆ. ನನಗೆ ಏನು ಜ್ಞಾಪಕ ಆಯ್ತು ಅಂದ್ರೆ ಊರಲ್ಲಿ ಬಿ.ಎಸ್.ನಾಗಪ್ಪ ಅಂತ ನಮ್ಮ ದೊಡ್ಡಪ್ಪ ಇದ್ರು, ಬಹಳ ಪ್ರೀತಿಪಾತ್ರರಾದ ವ್ಯಕ್ತಿ. ಅವರ ಕಾಲಕ್ಕೆ ನಾವು ಮಧ್ಯಾಹ್ನದ ವೇಳೆ ಹೋದರೆ ನಮಗೆ ಊಟ ಬಡಿಸಲು ತೇಗದ ಮರದ ಎಲೆ ಕೀಳೋರು. ನನಗೆ



'ನಾಲ್ಕು ಕೋಟಿ ರುಪಾಯಿಗಳ ಯೋಜನೆ ಸ್ವಾಮಿ ಇದು!': ಡಾ.ಬಿ.ಆರ್.ರಾಮಕೃಷ್ಣ : ಬೆಂಗಳೂರು

ಆಗ ಅದು ತೇಗ ಅಂತ ಗೊತ್ತಿರಲಿಲ್ಲ. ಈಗ ೧೦-೧೨ ವರುಷದ ಹಿಂದೆ ಅದೇ ನಮ್ಮ ದೊಡ್ಡಪ್ಪನ ಮಕ್ಕಳು ಸ್ವಲ್ಪ ಸಾಲಸೋಲ ಮಾಡಿ, ಬೆಂಗಳೂರಿಗೆ ಬಂದ್ರು. ನನ್ನ ಹಣಕಾಸು ಪರಿಸ್ಥಿತಿ ಉತ್ತಮ ಇದ್ದಿದ್ರಿಂದ ಆರ್ಥಿಕ ನೆರವಿಗಾಗಿ ಬಂದಿದ್ರು ಅಂತ ಅನ್ನಿಸುತ್ತೆ. ಆದರೆ ಅವರು, 'ಏನು ಮಾಡೋದು ಜಮೀನು ಮಾರೋಣ' ಅಂತ ಹೇಳಿದ್ರು. ಆಗ ನಾನು ಹೇಳಿದೆ, 'ನೋಡು, ಕೈಯಲ್ಲಿ ಬೆಣ್ಣೆ ಇಟ್ಟುಕೊಂಡು ತುಪ್ಪಕ್ಕಾಗಿ ಊರೆಲ್ಲಾ ಅಲೆದ್ರಂತೆ' ಅಂತ. 'ದೊಡ್ಡಪ್ಪ ಹಾಕಿರುವ ಆರು ತೇಗದ ಮರ ಇದೆ. ಎರಡೂವರೆ ಅಡಿ ಗಾತ್ರ ಇದೆ. ಸುಮಾರು ೨೨ ವರುಷ ಆಗಿದೆ. ಅದನ್ನು permit ಪಡೆದು ಕಡಿಸಿ ಮಾರಾಟ ಮಾಡೋಣ. permitನ ಹಣ ನಾನು ಕೊಡ್ತೀನಿ' ಅಂದೆ. ಅನಂತರ ಹಿತೈಷಿಗಳ ನೆರವಿನಿಂದ ಮರವನ್ನು ಮಾರಿದ್ದಕ್ಕೆ ಜಮೀನು ಮಾರಿದ್ರೆ ಎಷ್ಟು ಬೆಳೆ ಸಿಕ್ತಿತ್ತೋ ಅಷ್ಟು ಹಣ ಈ ಮರದಿಂದ ಬಂತು. ಸಾಲ ತೀರ್‍ತು. ಜಮೀನೂ ಉಳೀತು. ಊರು ಬಿಡಲಿಲ್ಲ. ವ್ಯವಸಾಯ ಮಾಡಿಕೊಂಡು ಈಗ ಊರಲ್ಲಿ ಚೆನ್ನಾಗಿದಾರೆ. ನಮ್ಮ ದೊಡ್ಡಪ್ಪ ೨೨ ವರುಷದ ಹಿಂದೆ ಹಾಕಿದ ಕೇವಲ ಆರು ತೇಗದ ಗಿಡ, ಆ ಒಂದೂವರೆ ಎಕರೆ ಅಡಿಕೆ ತೋಟವನ್ನು ಕಾಪಾಡ್ತು. ಇದು ನೆನಪಾದಾಗ ನಾನು ನನ್ನ ಮುಕ್ಕಾಲು ಎಕರೆ ಜಮೀನಿನಲ್ಲಿ ತೇಗ ಹಾಕುವ ನಿರ್ಧಾರ ಮಾಡಿದೆ. ಕೆಲವರೆಲ್ಲಾ ನನಗೆ ತೇಗ ಬರೋದು ೩೦ ವರುಷಕ್ಕೆ, ೫೦ ವರುಷಕ್ಕೆ, ನೂರು ವರುಷಕ್ಕೆ ಅಂತೆಲ್ಲಾ ಹೇಳಿದ್ರು. ನಾನು ಕಣ್ಣಾರೆ ನೋಡಿದ್ದು ಕಣ್ಣ ಮುಂದಿತ್ತು. ನಮ್ಮ ಮೂರನೆಯ ದೊಡ್ಡಪ್ಪ ಕೃಷ್ಣ ಅಂತ ಇದ್ರು. ಅವರು ಒಂದು ದಿನವೂ ಜಮೀನಿಗೆ ಹೋಗದೆ ಮನೆ ಜಗಲಿಯ ಮೇಲೆ ಕುಳಿತು ಅಡಿಕೆ ತೋಟ ಮಾಡಿಸ್ತಿದ್ರು. ನಮ್ಮ ಊರಲ್ಲಿ ಯಾರೂ ಅವರಷ್ಟು ಇಳುವರಿ ತೆಗೆಯಲು ಆಗ್ತಿರಲಿಲ್ಲ. ನಮ್ಮ ಕೃಷ್ಣ ದೊಡ್ಡಪ್ಪ ಭತ್ತದ ಗದ್ದೆ ಒಳಕ್ಕೆ ಯಾವತ್ತೂ ಇಳಿದಿಲ್ಲ. ಏರಿ ಮೇಲೆ ಛತ್ರಿ ಹಿಡಿದು ನಿಂತು ಕೂಗಿ ಕೆಲಸ ಮಾಡಿಸೋರು. ತೋಟಕ್ಕೆ ಹೋಗದಿದ್ರೂ ಕಾಲ್ಪನಿಕವಾದ ರೀತಿಯಿಂದಲೇ ನಿರ್ವಹಣೆ ಮಾಡೋರು. ಅವರ ನಿರ್ವಹಣಾ ವಿಧಾನ ನನಗೆ ಇಷ್ಟವಾಗಿತ್ತು. ಹಾಗಾಗಿ ನಾನು ಬೆಂಗಳೂರಿನಲ್ಲಿ ಇದ್ರೂ ಇಲ್ಲಿ ತೇಗ ಹಾಕಬಹುದು, ಜಮೀನು ಮಾಡಬಹುದು ಅಂತ ಅನ್ನಿಸಿತು. ಬೆಂಗಳೂರಿನ, ಮಲ್ಲೇಶ್ವರದಲ್ಲಿ ಭಾರತ ಸರ್ಕಾರದ Timber Research Institute ಇದೆ. ಅಲ್ಲಿ ಹೋಗಿ ಡಾ. ಸಂಜಯ್ ಅನ್ನುವ ವಿಜ್ಞಾನಿಯೊಬ್ಬರನ್ನು ಭೇಟಿ ಮಾಡಿದೆ. ಅವರು ನನಗೆ 'ನೀವು ಮಾಡಿ' ಅಂತ ಧೈರ್ಯ ಕೊಟ್ರು. ನಾನು ತೇಗ ಮಾಡಿದ್ದು ಒಂದು Investment purposeಗೆ. ಎರಡನೆಯದು ಹಸಿರಿರುತ್ವಲ್ವಾ? ಮೂರನೆಯದು ವಾರಕ್ಕೆ ಒಂದು ಸಾರಿ ನಮ್ಮ ಜಮೀನು ಅಂತ ಬರ್ತೀವಾ? ಈ ಮೂರು ಉದ್ದೇಶಗಳಿಂದ. ಈಗ ನಾಲ್ಕು ವರುಷದ ಹಿಂದೆ, ಭೀಮನ ಅಮಾವಾಸ್ಯೆಯ ದಿನದಂದು, ೧೦೬೦ ತೇಗದ ಗಿಡವನ್ನು ಮುಕ್ಕಾಲು ಎಕರೆಯಲ್ಲಿ ನಾಟಿ ಮಾಡಿದೆ. ಬೆಂಗಳೂರಿನ ಹತ್ತಿರದ farm ಒಂದರಲ್ಲಿ ಗಿಡ ಖರೀದಿಸಿದ್ದು. ಮೊದಲು ಜಮೀನನ್ನು level ಮಾಡಿಸಿ, ಅಗೆತ ಮಾಡಿಸಿ, ಆರರಿಂದ ಏಳು ಅಡಿ ಅಂತರದಲ್ಲಿ ಎರಡೂವರೆ ಅಡಿ ಗುಂಡಿ ತೆಗೆಸಿ, ಅದಕ್ಕೆ ಸಾವಯವ ಗೊಬ್ಬರ, ಕೆಂಪು ಮಣ್ಣು ಹಾಕಿ, ಕುರಿಗೊಬ್ಬರ ಹಾಕಿ, ಗೆದ್ದಲಿನ ಹತೋಟಿಗೆ phorate chemical ಹಾಕಿ, ತೇಗ ಹಾಕಿದ್ದು, ಅನಂತರ ಸುಮಾರು ಎರಡು ವರುಷಗಳ ಕಾಲ ನಮ್ಮ ಮನೆಗೆ ಆಗುವಷ್ಟು ತರಕಾರಿ, ಬೆಳೆದೆ. ಬೀನ್ಸು, ಬೆಂಡೆ, ಸೋರೇಕಾಯಿ, ಹೀರೇಕಾಯಿ, ಅವರೇಕಾಯಿ ಬೆಳೆದು ಬಂಧುಗಳಿಗೂ ಹಂಚಿದೆ. ಈ ತೋಟ ಮಾಡುವಾಗ ಖರ್ಚು ವೆಚ್ಚ ಲೆಕ್ಕ ಹಾಕಿದೆ. ಇದು ೨೨ ವರುಷದವರೆಗೆ ಖರ್ಚಿನ ಬಾಬತ್ತೇ. ನೋಡಲು ಒಬ್ಬ ಆಳಿನ ವ್ಯವಸ್ಥೆ ಆಗಬೇಕು. ಅವನಿಗೆ ತಿಂಗಳಿಗೆ ೧೫೦೦ ರೂಪಾಯಿಯಂತೆ ಒಬ್ಬ ಆಳನ್ನೂ ಗೊತ್ತು ಮಾಡಿದೆ. ೪೫೦೦ ರೂಪಾಯಿ ಕೊಟ್ಟು ತೇಗದ ಗಿಡ ತಂದೆ. ಗೊಬ್ಬರಗೋಡು ಅಂತ ೩೦೦೦ ಖರ್ಚಾಯ್ತು. ಈಗ ಒಂದು ತಿಂಗಳಿಗೆ ೩೦೦೦ ರೂಪಾಯಿ ಹಣವನ್ನು Recurring depositಗೆ ಹಾಕುವ ರೀತಿ ಎತ್ತಿಡ್ತಾ ಇದೀನಿ ನನ್ನದಲ್ಲ ಅಂತ. ರೈತನ ಕೂಲಿಗೆ ೧೫೦೦ ರೂ ಹೋದ್ರೆ, ಉಳಿದ ೧೫೦೦ರೂ ಹಾಗೇ ಇರುತ್ತೆ. ಅದು ವರುಷಕ್ಕೆ ೧೮,೦೦೦ ರೂಪಾಯಿ ಆಗುತ್ತೆ. ಅಷ್ಟರಲ್ಲಿ ವರುಷಕ್ಕೆ ಎರಡು ಸಾರಿ ತೇಗಕ್ಕೆ ಬೇಕಾದ ಗೊಬ್ಬರ ಗೋಡನ್ನು ಖರೀದಿ ಮಾಡ್ತೀನಿ. ಒಂದು ವರುಷಕ್ಕೆ ನನಗೆ ೩೬,೦೦೦ ರೂಪಾಯಿ ತೇಗಕ್ಕಾಗಿ ಖರ್ಚಾಗ್ತಿದೆ.

ನಾನು ಸುಮಾರು ಕಡೆ ನೋಡಿದೀನಿ. ರೈತರು ಬೇಲೀಲಿ ಜಮೀನಿಗೆ ಬರುವ ದಾರೀಲಿ ತೇಗ ಹಾಕಿರ್‍ತಾರೆ. ಆದರೆ ಅದಕ್ಕೆ ಯಾವುದೇ ವಿಧವಾದ ಕೃಷಿ ಮಾಡ್ತಿರೋಲ್ಲ. ಸರಿಯಾಗಿ ಕೃಷಿ ಮಾಡಿದ್ರೆ ಸುಲಭವಾಗಿ ತೇಗ ಬೆಳೀಬಹುದು ಅನ್ನಿಸ್ತು. ಈ ತೇಗದ ಒಂದು ಸಸೀನೂ ಸಾಯೋಲ್ಲ. ೨೨ ವರುಷಗಳ ಕಾಲ ನಾವು ತೇಗವನ್ನು ಬೆಳೆಸಿದ್ದೇ ಆದರೆ, ಒಂದು ಗಿಡದಿಂದ ನಾನು ನಿರೀಕ್ಷೆ ಮಾಡ್ತಿರೋದು ೨೦ ಘನಡಿ ಮರ. ಒಂದು ಸಾವಿರ ಮರದಿಂದ ೨೦ ಸಾವಿರ ಘನಡಿ ಮರ ದೊರಕುತ್ತೆ. ಇವತ್ತಿನ ಧಾರಣೆ ಒಂದು ಘನಡಿಗೆ ೧೫೦೦ ದಿಂದ ೧೬೦೦ ರೂಪಾಯಿ ಇದೆ. ಇನ್ನು ೨೦ ವರುಷಗಳ ನಂತರ ಧಾರಣೆ ೨೦೦೦ಕ್ಕೆ ಏರಬಹುದು ಅಂತ ನಿರೀಕ್ಷೆ ಇಟ್ಟುಕೊಂಡ್ರೆ, ಅಲ್ಲಿ ೨೦ ಸಾವಿರ ಘನಡಿ ಮರಕ್ಕೆ ೪ ಕೋಟಿ ರೂಪಾಯಿ ಆಗುತ್ತೆ. ಒಂದು ತಿಂಗಳಿಗೆ ಮೂರು ಸಾವಿರ ರೂಪಾಯಿಯನ್ನು ಯಾವುದೇ ತರಹದ ಯೋಜನೆಯಲ್ಲಿ

Deposit ಮಾಡಿದ್ರೂ ಇಷ್ಟೊಂದು ಆದಾಯ ಬರೋಲ್ಲ. ಮುಂದಿನ ದಿನಗಳಲ್ಲಿ ಇದು ಮಕ್ಕಳಿಗೆ ಆಸ್ತಿ ಆಗಬಹುದು. ಅಲ್ಲದೆ ಪ್ರಕೃತಿಯಿಂದ ನಾವು ಇಷ್ಟೆಲ್ಲಾ ಪಡೀತೀವಿ, ನಾವು ಪ್ರಕೃತಿಗೇನು ಮಾಡಿದೀವಿ ಅಂದ್ರೆ ಒಂದು ಸಾವಿರ ಮರ ಕೊಟ್ಟಿದೀನಿ ಅಂತ ಹೆಮ್ಮೆಯಿಂದ ಹೇಳಬಹುದು. ವೇದದಲ್ಲಿ ಬಹಳ ಚೆನ್ನಾಗಿ ಹೇಳಿದೆ, ಒಂದು ಮರವನ್ನು ಒಬ್ಬ ವ್ಯಕ್ತಿ ತನ್ನ ಜೀವಿತ ಅವಧಿಯಲ್ಲಿ ಬೆಳೆಸಿದ್ರೆ ಆತ ಮಾಡಿರುವ ಪಾಪಗಳ ವಿಮೋಚನೆಯಾಗುತ್ತಂತೆ. ಸಾವಿರ ಮರಗಳನ್ನು ಬೆಳೆಸಿ ಅದರ ಫಲ ನಾವೇ ಅನುಭವಿಸಬೇಕು ಅಂತೇನಿಲ್ಲ. ನಾಲ್ಕು ಕೋಟಿ ಬೇಡ, ಅದರ ಅರ್ಧ ಬಂದ್ರೂ ಆದಾಯವೇ ತಾನೆ? ಕೆಲವರು ಹೇಳ್ತಾರೆ 'ಆ ಮರ ನೀವು ಹಾಕಿರೋದು ಹತ್ರ ಆಯ್ತು. ಅದನ್ನು ದೂರ ಮಾಡಬೇಕು' ಅಂತ. ನನ್ನ ಪ್ರಾತ್ಯಕ್ಷಿಕ ಅನುಭವ ಹೇಗೆ ಅಂದ್ರೆ ಮರದಿಂದ ಮರಕ್ಕಿರುವ ಅಂತರದಿಂದ, ಆ ಮರ ದಪ್ಪ, ಸಣ್ಣ ಆಗುತ್ತೆ ಅನ್ನುವುದು ಸರಿಯಲ್ಲ. ಮೂಲತಃ ನಾವು ಪ್ರತೀಮರಕ್ಕೆ ಕೊಡುವ ಗೊಬ್ಬರ, ನೀರು, ಪೋಷಕಾಂಶ, ನಿರ್ವಹಣೆ, ... ಹಾಗೂ ಸಸಿಯ ಗುಣಮಟ್ಟದ ಮೇಲೆ ಮರ ದಪ್ಪ ಸಣ್ಣ ಆಗುತ್ತೆ. ಕೆಲವರು ಸಸಿ ಮಾಡುವಾಗ ಎಳೆ ಬೇರನ್ನು ಹಾಕಿರ್‍ತಾರೆ. ಆಗ ಮರ ದಪ್ಪ ಆಗೋಲ್ಲ ಅಷ್ಟೇ, ಸಾಯೋದಿಲ್ಲ, ತೆಳ್ಳಗಿದ್ರೂ ಬದುಕಿರುತ್ತೆ. ಶೇಕಡ ಹತ್ತರಷ್ಟು ಸಣ್ಣಗಾಗಬಹುದು ಅಷ್ಟೇ. ತೇಗ ಒಂದು ರೀತಿ ಕಲ್ಪವೃಕ್ಷ ಇದ್ದ ಹಾಗೆ. ನಾನು ಸಾವಯವ, ಹಾಗೂ ರಾಸಾಯನಿಕ ಗೊಬ್ಬರ ಹಾಕ್ತೀದೀನಿ. ಎಲ್ಲದಕ್ಕಿಂತ ಮುಖ್ಯವಾಗಿ ಸಂಕ್ರಾಂತಿಯನಂತರ, ಯುಗಾದಿಗೆ ಮೊದಲು ತೇಗದ ಎಲೆಗಳನ್ನೂ ಕೊಂಬೆಗಳನ್ನೂ ಕತ್ತರಿಸಿ, ಎರಡು ಸಾಲಿನ ನಡುವೆ ೧೨ ಅಡಿ ಕಾಲುವೆ ಹೊಡೆದು ಅದರಲ್ಲಿ ತುಂಬ್ತೀನಿ. ಮೇಲೆ ಮಣ್ಣು ಹಾಕ್ತೀವಿ. ಬೇಸಿಗೆ ಆರಂಭವಾಗುವುದಕ್ಕಿಂತ ಮೊದಲು, ಹಿಪ್ಪೆಹಿಂಡಿ ಹಾಕಿ, ಹರಳು ಹಿಂಡೀನ, ಗಿಡದ ಶಕ್ತಿಗೆ ಅನುಸಾರವಾಗಿ, ಆರಂಭದಲ್ಲಿ ಮೊದಲನೇ ವರುಷ ಗಿಡಕ್ಕೆ ೧೫೦ ಗ್ರಾಂನಂತೆ, ಎರಡನೇ ವರುಷ ೩೦೦ ಗ್ರಾಂ, ನಂತರ, ೫೦೦ ಗ್ರಾಂ, ಹಾಗೂ ಈ ವರುಷ ಒಂದು ಕೆಜಿ ಅಷ್ಟು ಪ್ರತಿಗಿಡಕ್ಕೆ ಈ ಹಿಂಡಿ ಗೊಬ್ಬರಾನ ಹಾಕ್ತೀನಿ. ಈ ಹಿಪ್ಪೆ, ಹಾಗು ಹರಳು ಹಿಂಡೀಲಿ cooling effect ಇದೆ. ನಾವು ಬೇಸಿಗೆ ಕಾಲ ಬಂದಾಗ ತಂಪಾದ ನೀರು ಕುಡೀತೀವಿ, fan ಹಾಕ್ಕೋತೀವಿ. ಸಸ್ಯಗಳಿಗೂ ಹಾಗೇನೇ ತಂಪಾಗಿರುವ ವಸ್ತುವಿನಿಂದ ಬೇಗ ಗಿಡಕ್ಕೆ ಪೋಷಣೆ ಸಿಗುತ್ತೆ. ಅನಂತರ ಆರು ತಿಂಗಳು ಕಳೆದ ಮೇಲೆ, ಆರಿದ್ರೆ ಕಳೆದು, ಪುಷ್ಯ, ಮಾರ್ಗಶಿರ ಮಳೆಯ ಹೊತ್ತಿಗೆ ಬೇವಿನ ಹಿಂಡಿ, ಹಾಗೂ ಹೊಂಗೆ ಹಿಂಡೀನ ಕೊಡ್ತೀನಿ. ಬೇವು ಹೊಂಗೆ ಎರಡು ಕೂಡ ಉಷ್ಣ ಸ್ವರೂಪಿಯಾದವು. ಛಳಿಗಾಲದಲ್ಲಿ ನಾವು ಬಿಸಿ ಬಿಸಿಯಾಗಿ, ಬಜ್ಜಿ, ಬೋಂಡ, ಕಾಫಿ, ಟೀ ಕುಡಿಯುವಂತೆ, ಸಸ್ಯಗಳು ಕೂಡ ಬಿಸಿ ನೀಡುವ ಪದಾರ್ಥಗಳನ್ನು ಇಷ್ಟಪಡುತ್ವೆ. ಇದರ ಬಗ್ಗೆ ವೃಕ್ಷಾಯುರ್ವೇದ ಗ್ರಂಥದಲ್ಲಿ ಸಾಕಷ್ಟು ಉಲ್ಲೇಖ ಇದೆ. ಹಿಂಡಿ ಯಾಕೆ ಕೊಡಬೇಕು ಅಂದ್ರೆ ಈ ಎಲ್ಲ ಹಿಂಡಿಯಲ್ಲೂ ಎಣ್ಣೆಯ ಅಂಶ ಇರುತ್ತೆ. ತೇಗದ ಗುಣಮಟ್ಟ ನಿರ್ಧಾರವಾಗೋದು ಅದು ಹೊಂದಿರುವ ಎಣ್ಣೆಯ ಪ್ರಮಾಣದಲ್ಲಿ. ಹುಣಸೂರು ತೇಗ, ದಾಂಡೇಲಿ ತೇಗ ಅಥವಾ ಬರ್ಮಾ ತೇಗ ಇವುಗಳ ಗುಣಮಟ್ಟ ನಿರ್ಧಾರವಾಗೋದು ಎಣ್ಣೆಯ ಆಧಾರದ ಮೇಲೆ. ಈ ಎಣ್ಣೆಯು ಸಸ್ಯಗಳ ದ್ಯುತಿಸಂಶ್ಲೇಷಣಾ ವಿಧಾನದಲ್ಲಿ ತಯಾರಾದ್ರೂ ಇದು ಹ್ಯಾಗೇಂದ್ರೆ

'ರಕ್ತಂ ರಕ್ತೇನ ವರ್ಧತೇ
ಮಾಂಸಂ ಮಾಂಸೇನ ವರ್ಧತೇ'

ಅನ್ನುವ ಆಧಾರದ ಪ್ರಕಾರ ಎಣ್ಣೆಯ ಅಂಶವಿರುವ ಆಹಾರದಿಂದ ಎಣ್ಣೆ ಅಂಶ ವರ್ಧಿಸಲೇಬೇಕು ತಾನೆ? ಒಂದು ಗಿಡದ ತೈಲಾಂಶವನ್ನು ಜಾಸ್ತಿ ಮಾಡಬೇಕಾದ್ರೆ ತೈಲವನ್ನೇ ಕೊಡಬೇಕು. ಇದ್ರಿಂದ ಮರ ಗಟ್ಟಿಯಾಗುತ್ತೆ, ಕಾಂಡ ದಪ್ಪವಾಗುತ್ತೆ. ನಾವು ಅಂದುಕೊಂಡಿದ್ದಕ್ಕಿಂತ ಮೊದಲು ಮರವನ್ನು ಕಡಿಯುವ ಸ್ಥಿತಿ ಬರುತ್ತೆ ಅನ್ನುವುದು ನನ್ನ ಒಂದು ನಂಬಿಕೆ.

ಆರಂಭದಲ್ಲಿ ನಾನು ಖುದ್ದಾಗಿ ಕೀಟನಾಷಕ ಔಷಧಗಳನ್ನು ಸಿಂಪರಣೆ ಮಾಡ್ತಿದ್ದೆ. ಈಗ ಗಿಡಗಳು ಆರೋಗ್ಯವಾಗಿರುವುದರಿಂದ ಸಿಂಪರಣೆ ಅಗತ್ಯವಿಲ್ಲ. ತೇಗದಲ್ಲಿ ಆರಂಭ ಎರಡು ವರುಷ ಬೆಳೆದ ತರಕಾರಿಯಿಂದ ಏಳೆಂಟು ಸಾವಿರ ರೂಪಾಯಿ ಆದಾಯ ಸಿಕ್ತು. ಅಲ್ಲದೆ ನಾನು ಪುತ್ತೂರು, ಕೊಪ್ಪ, ಶೃಂಗೇರಿ ಎಲ್ಲಾ ಕಡೆ ಹೋಗಿ ಬಂದು, ಈಗ ತೇಗದ ಒಳಗಡೆ ವೆನಿಲ್ಲಾ ಹಾಕಬೇಕು ಅಂತ ಯೋಜನೆ ಹಾಕಿದೆ. ವೆನಿಲ್ಲಾಕ್ಕೆ ೫೦ರಷ್ಟು ನೆರಳು ಬೇಕು ಹಾಗೂ ನೀರು ಇರಬೇಕು. ಆದರೆ ತೀರಾ ನಿಗಾನೂ ಬೇಕು. ವೆನಿಲ್ಲಾಕಳ್ಳತನ ಹಾಗೂ ಧಾರಣೆ ಏರುಪೇರು ಗಮನಿಸಿ ವೆನಿಲ್ಲಾ ಬೆಳೆಯುವ ಯೋಜನೆ ಬಿಟ್ಟು, ಸುಮಾರು ೧೫೦೦ ಕಾಳುಮೆಣಸಿನ ಗಿಡ ಹಾಕಬೇಕು ಅಂತ ಗಿಡ ತರಿಸಿದೀನಿ. ಜತೆಗೆ ಎರಡು ತೇಗದ ಮಧ್ಯೆ, ಹಿಪ್ಪಲಿ ಅಂತ ಗಿಡಮೂಲಿಕೆ ಇದೆ. ಇದು ಮೆಣಸಿನ ಜಾತಿಗೆ ಸೇರಿದ ಹಂಬು. ಮಾರುಕಟ್ಟೇಲಿ ಒಂದು ಕೆಜಿ ಮೆಣಸಿಗೆ ೬೦ ರಿಂದ ೯೦ ರೂಪಾಯಿ ಇದ್ರೆ ಹಿಪ್ಪಲಿಗೆ ೧೮೦ ರಿಂದ ೨೦೦ ರೂಪಾಯಿವರೆಗಿದೆ. ಹಾಗೂ ಸುಮಾರು ೩೦೦೦ ಗಿಡ



ಹೊಸ ಅಡಿಕೆ ತೋಟ: 'ಹುಲ್ಲೂ ಲಾಭದಾಯಕ':ಡಾ.ಬಿ.ಆರ್.ರಾಮಕೃಷ್ಣ: ಬೆಂಗಳೂರು

ಹಿಪ್ಪಲಿಯನ್ನು ಸಹ ಹಾಕುವ ಯೋಜನೆ ಇದೆ. ಮೆಣಸು ಬರಲು ಮೂರರಿಂದ ನಾಲ್ಕು ವರುಷ ಬೇಕು. ಹಿಪ್ಪಲಿ ಬೇಗ ಬರುತ್ತೆ. ಇವೆರಡು ಬಂದ್ರೆ ನಾನು ಖರ್ಚು ಮಾಡ್ತಿರುವ ಹಣ ವಾಪಸ್ಸು ಬರಬಹುದು ಎನ್ನುವುದು ನನ್ನ ಅಚಲವಾದ ವಿಶ್ವಾಸ.

ನನ್ನ ಸ್ನೇಹಿತರು ಕೃಷಿಯನ್ನು ನಮಗೂ ಪರಿಚಯಿಸಿ ಅಂದಾಗ ಸುಮಾರು ಎರಡು ವರುಷಗಳ ಹಿಂದೆ ಆರು ಎಕರೆ ಜಮೀನನ್ನು ನಮ್ಮ ಜಮೀನಿಗೆ ಹತ್ತಿರವಿರುವಂತೆ ಖರೀದಿಸಿದ್ವಿ. ಅದು ಹೊಲದ ಜಮೀನು. ಮೊದಲು ಅದನ್ನು level ಮಾಡಿಸಿ, ಬೇಲಿ ಹಾಕಿಸಿ, ಬೋರ್‌ವೆಲ್ ಕೊರೆಸಿ ಕೃಷಿ ಆರಂಭಿಸಿದ್ವಿ. ಮೊದಲು ನಾನು ನನ್ನ ಪ್ರೀತಿಯ ಎತ್ತುಗಾಡಿ ತೊಗೊಂಡೆ. ಟ್ರಾಕ್ಟರ್‌ಗೆ, ಉಳುಮೆಗೆ ಹಣ ಖರ್ಚು ಮಾಡಿಲ್ಲ. ಎತ್ತಿನಿಂದ ಉಳುಮೆ. ಮಣ್ಣು, ಗೊಬ್ಬರಾನ ಗಾಡೀಲೇ ಹೇರಿಸ್ತೀವಿ. ಟ್ರಾಕ್ಟರ್ ಯುಗದಲ್ಲಿ, ನೀವು ಎತ್ತುಗಾಡಿ ಇಟ್ಟಿದೀರಲ್ಲ ಅಂತ ಕೆಲವರು ನನ್ನನ್ನು ಛೇಡಿಸ್ತಾರೆ. ಅವರಿಗೆ ನಾನೊಂದು ಮಾತು ಹೇಳ್ತೀನಿ, 'ಟ್ರಾಕ್ಟರ್ ಸಗಣಿ ಹಾಕುವುದಿಲ್ಲ. ಎತ್ತಿನಗಾಡಿ ಹೊಗೆ ಸೂಸುವುದಿಲ್ಲ' ಅಂತ. ನಾನು ಸುಶ್ರುತ Ayurvedic Collegeನಲ್ಲಿ ದ್ರವ್ಯಗುಣ ವಿಭಾಗ ಅಂದ್ರೆ ಗಿಡಮೂಲಿಕೆಗಳ ವಿಭಾಗಕ್ಕೆ ಪ್ರಾಧ್ಯಾಪಕನಾಗಿ ಕೆಲಸ ಮಾಡ್ತಿದೀನಿ. ನಮ್ಮ ಕಾಲೇಜಿಗೆ ಒಂದು Botanical Garden ಅಂದ್ರೆ ಔಷಧಿ ವನದ ಅಗತ್ಯವಿತ್ತು. ನಾನು ನಮ್ಮ Managementಗೆ ಹೇಳಿದೆ, 'ನಾನು ನಿಮಗೆ ಔಷಧ ವನವನ್ನು ನಿರ್ಮಾಣ ಮಾಡಿಕೊಡ್ತೀನಿ' ಅಂತ. ನಾನು ಇಲ್ಲಿ ಸುಮಾರು ೨೫೦ಕ್ಕೂ ಹೆಚ್ಚು ಔಷಧಿ ಸಸ್ಯಗಳನ್ನು ಬೆಳೆಯುವ ಪ್ರಯತ್ನ ಮಾಡಿದ್ದೇನೆ. ಎಂಟರಿಂದ ಹತ್ತು ಬಗೆಯ ನೆಲ್ಲೀಕಾಯಿ, ಇದು ಚ್ಯವನಪ್ರಾಶ ಅನ್ನುವ ಲೇಹ್ಯದಲ್ಲಿ, ಭೃಂಗಾಮಲಕ ಎನ್ನುವ ತೈಲದಲ್ಲಿ ಹೀಗೆ ಹಲವಾರು ರೂಪದಲ್ಲಿ ನೆಲ್ಲೀಕಾಯಿ ಉಪಯೋಗಿಸ್ತೀವಿ. ಜತೆಗೆ ಔಷಧಿಯನ್ನು ತಯಾರಿಸುವ ನಮ್ಮ Vedic Biolabs Pvt. Ltd.ಗೆ ಹತ್ತರಿಂದ ಹನ್ನೆರಡು ಟನ್ ನೆಲ್ಲೀಕಾಯಿ ಆವಶ್ಯಕತೆಯಿದೆ. ಅರಿಶಿನ, ಭಜೆ, ಶುಂಠಿ ಹಾಕಿದೀನಿ. ಇದು ಪ್ರತಿನಿತ್ಯ ಬಳಸುವ ಆಯುರ್ವೇದ ಔಷಧ. ಸುಮಾರು ಮೂರು ಎಕರೆ ಜಾಗದಲ್ಲಿ ಅಡಿಕೆ ಹಾಕಿದೀನಿ. ಅದರ ಮಧ್ಯೆ ನೆರಳಿಗಾಗಿ ನುಗ್ಗೆ ಗಿಡ ಹಾಕಿದೀನಿ. ಈ ನೆರಳಿನ ಮರದಿಂದ ನಮಗೆ ಉತ್ಪತ್ತೀನೂ ಇದೆ. ೮೦೦ ನುಗ್ಗೆ ಗಿಡಗಳು ಇವೆ. ಬೆಂಗಳೂರಿನಲ್ಲಿ ಒಂದು ಕೆಜಿ ನುಗ್ಗೆಗೆ ೨೫ ರಿಂದ ೩೦ ರೂಪಾಯಿ ಇದೆ. ಸುಮಾರು ೪೫೦ ರಿಂದ ೫೦೦ ನಿಂಬೆ ಗಿಡ ಮಧ್ಯದಲ್ಲಿ ಹಾಕಿದೀನಿ. ಸುಮಾರು ೩೦ ತರಹದ ಹಣ್ಣಿನ ಗಿಡಗಳನ್ನು ಹಾಕಿದೀನಿ. ಚೆರ್ರಿ, ನೇರಳೆ, ಮಾವಿನಹಣ್ಣು, ಮೂಸಂಬಿ, ಚಕ್ಕೋತ, ಹೆರಳೇಕಾಯಿ, ಸೀಬೆ, ದಾಳಿಂಬೆ, ಗೋಡಂಬಿ, ಅಂಜೂರ, ಬಾಳೆಗಿಡಗಳು ಇವೆ. ಅಡಿಕೆ ಗಿಡಗಳ ಮಧ್ಯೆ ಹುಲುಸಾಗಿ ಹುಲ್ಲು ಬೆಳೆದಿದೆ. ನನ್ನ ಅನಿಸಿಕೆ ಅಂದ್ರೆ ಅಡಿಕೆ ಗಿಡದ ಸುತ್ತಲೂ ಸುಮಾರು ಒಂದು ಅಡಿಯಷ್ಟು ಜಾಗವನ್ನು ಅಗೆದು ಗೊಬ್ಬರ ಹಾಕಿದ್ರೆ



ಅಡಿಕೆ ತೋಟ: ಮೂವತ್ತು ತರಹದ ಹಣ್ಣಿನ ಗಿಡಗಳಿಗೂ ಜಾಗ:ಡಾ.ಬಿ.ಆರ್.ರಾಮಕೃಷ್ಣ: ಬೆಂಗಳೂರು

ಸಾಕು. ಗಿಡಗಳ ಮಧ್ಯೆ ಇರುವ ಹುಲ್ಲು ಎತ್ತುಗಳಿಗೆ ಮೇವಾಗ್ತದೆ. ಮುಂದೆ ಇಲ್ಲಿ ಒಂದು ಡೈರಿ ಮಾಡುವ ಯೋಜನೆ ಇದೆ. ಜತೆಗೆ ಬೆಂಗಳೂರು ಸುತ್ತ ಒಂದು ಟ್ರ್ಯಾಕ್ಟರ್ ಸಾವಯವ ಗೊಬ್ಬರಕ್ಕೆ ೧೪೦೦ ರಿಂದ ೧೫೦೦ ರೂಪಾಯಿ ಕೊಡಬೇಕು. ಎತ್ತಿನ ಜತೆ ನಾಲ್ಕು ಹಸುಕಟ್ಟಿ ಹುಲ್ಲನ್ನು ಸದ್ಬಳಕೆ ಮಾಡಿದ್ರೆ, ೧೫ ರಿಂದ ೨೦ ಸಾವಿರ ರೂಪಾಯಿಯಷ್ಟು ಗೊಬ್ಬರ ಉತ್ಪಾದಿಸಬಹುದು. ಇಲ್ಲಿ ಎರೆಹುಳು ಸಾಕಬೇಕು ಅಂತ ಅಂದುಕೊಂಡಿದ್ದೇನೆ.



ಅಡಿಕೆ ತೋಟ:'ನುಗ್ಗೆ ಕೂಡ ಜತೆಗಿರಲಿ':ಡಾ.ಬಿ.ಆರ್.ರಾಮಕೃಷ್ಣ: ಬೆಂಗಳೂರು

ಇಲ್ಲಿ ಒಂದೂವರೆ ಎಕರೆ ಜಾಗವನ್ನು ಔಷಧಿ ವನ ಮಾಡಿದ್ದೇನೆ. ಬ್ರಾಹ್ಮಿ ಅಥವಾ ಮಂಡೂಕಪರ್ಣಿ ಜ್ಞಾಪಕಶಕ್ತಿ ಹೆಚ್ಚಿಸುವ ಔಷಧಿಗಳಲ್ಲಿ ಬಳಕೆಯಾಗುವ ಸಸ್ಯ ಇದು. ಇದ್ರಿಂದ ಮಕ್ಕಳಲ್ಲಿ ಬುದ್ಧಿಶಕ್ತಿ ಹೆಚ್ಚುತ್ತೆ. ದೊಡ್ಡವರ ಮಾನಸಿಕ ಒತ್ತಡ ಕಡಿಮೆಯಾಗುತ್ತೆ. ತಲೆ ಕೂದಲು ಸೊಂಪಾಗಿ ಬೆಳೆಯುತ್ತೆ. ಭೃಂಗರಾಜ ಅಥವಾ ಗರಗದ ಸೊಪ್ಪು ಹಾಕಿದೀವಿ. ಎರಡು ತರಹ ಗರಗದ ಸೊಪ್ಪಿದೆ. ಒಂದು ಬಿಳಿಯ ಹೂವಿನದು, ಮತ್ತೊಂದು ಹಳದಿ ಹೂವಿನದು. ಜಾಂಡೀಸ್ ಹಾಗೂ Hepatitis B ಗುಣಪಡಿಸುವ ಶಕ್ತಿ ಇದಕ್ಕಿದೆ. ಭೂದಾತ್ರಿ ಅಂದ್ರೆ ನೆಲನೆಲ್ಲಿ ಕಾಮಾಲೆಗೆ ಉಪಕಾರಿ. ಮಿಂಟ್ ಹಾಕಿದೀನಿ. ಪುದೀನ, ಜ್ಞಾಪನ ಶಕ್ತಿ ಜಾಸ್ತಿ ಮಾಡುತ್ತೆ, ಗ್ಯಾಸ್ ತೊಂದರೆ ಕಡಿಮೆ ಮಾಡುತ್ತೆ. ಐದಾರು ವಿಧದ ತುಳಸಿ ಇದೆ. ರಾಮ ತುಳಸಿ, ಕೃಷ್ಣ ತುಳಸಿ, ಬಿಳಿ ತುಳಸಿ, ಕಾಮಕಸ್ತೂರಿ ತುಳಸಿ ಹಾಕಿದೀವಿ. ಗರಿಕೆ, ಅರ್ಥಾತ್ ದೂರ್ವ, ದರ್ಭೆ, ಕುಶ, ನಳ, ಉಶಿರ, ಲಾವಂಚ, (ಸಿಟ್ರೋನೆಲ್ಲಾ) ಜಾತಿಯ ಹುಲ್ಲು ಬೆಳೆದಿದ್ದೇನೆ. ಹುಲ್ಲಿನಿಂದ ಸುಗಂಧ ತೈಲವನ್ನು ತಯಾರು ಮಾಡಬಹುದು. ನಮ್ಮ ಕಾಲೇಜಿನ ಮಕ್ಕಳಿಗೆ ಪ್ರಾತ್ಯಕ್ಷಿಕ ಜ್ಞಾನವನ್ನು ಕೊಡುವುದಕ್ಕೆ ಈ ವನ ಅನುಕೂಲವಾಗ್ತಿದೆ. ರಾಸ್ನಾ ಗಿಡಮೂಲಿಕೆ ಇದೆ. ವಚ ಅಂದ್ರೆ ಭಜೆ, ನಮ್ಮ ಮಾತಿನಶಕ್ತಿಯನ್ನು ಜಾಸ್ತಿ ಮಾಡುವ ದ್ರವ್ಯ ಅದು. ಕರಿಗಣಿಕೆ ಹಾಗೂ ಕೆಂಪುಗಣಿಕೆ ಗಿಡ ಇದೆ. ಇದು ಯಕೃತ್ತಿಗೆ ಸಂಬಂಧಿಸಿದ ರೋಗವನ್ನು ನಾಶಪಡಿಸುವಲ್ಲಿ ಒಳ್ಳೆಯ ಔಷಧಿ. ಹಾಗೇ ಆಡುಮುಟ್ಟದಸೊಪ್ಪು *(Tailofera indica),* ಆಸ್ತಮಾದಲ್ಲಿ ಬಳಸ್ತೀವಿ. ಆಡುಸೋಗೆಸೊಪ್ಪು ಅಂದ್ರೆ ವಾಸಾ. *Adathoda vasika.* ಮುಟ್ಟಿದರೆ ಮುನಿ, ಕಾಶ್ಮೀರದ ಕೇಸರಿ ಹಾಕಿದೀನಿ. ಲಲಿತಾ ಸಹಸ್ರನಾಮದಲ್ಲಿ ದೇವಿಗೆ ಕುಂಕುಮ ಕೇಸರಿ ಪುಷ್ಪಪೂಜೆ ಮಾಡಬೇಕು ಅಂತ ಹೇಳಲಾಗಿದೆ. ಕಳೆದ ವರುಷ ನಮ್ಮ ತೇಗದ ತೋಟದಲ್ಲಿ ಬೆಳೆದಿದ್ದ ೫೦೦ ಬಗೆಯ ಹೂವನ್ನು ಪೂಜೆ ಮಾಡುವ ಅವಕಾಶ ಸಿಕ್ಕಿತ್ತು. Stevia ಗಿಡ ಹಾಕಿದೀನಿ. ಇದು ಸಕ್ಕರೆಗಿಂತ ೨೭ ಪಟ್ಟು ಜಾಸ್ತಿ ಸಿಹಿ. ಕಿರಾತ ತಿಕ್ತಾ ಅಥವಾ ಕಾಲಮೇಘ ಅಥವಾ ನೆಲಬೇವು, *Sirsia Chirata.* Stevia ಎಷ್ಟು ಸಿಹಿಯೋ, ನೆಲಬೇವು ಅಷ್ಟೇ ಕಹಿ. ಜೀರ್ಣ ಜ್ವರದಲ್ಲಿ ಬಹಳವಾಗಿ ಬಳಸಲಾಗುತ್ತೆ. ಅಶ್ವಗಂಧ, ಅಥವ ಹಿರೇಮದ್ದಿನ ಬೇರು: 'ಹೆಸರಿಲ್ಲದ ಖಾಯಿಲೆಗೆ ಹಿರೇಮದ್ದಿನ ಬೇರು' ಅಂತ. ಅಶ್ವಗಂಧ ಬಳಸೋದ್ರಿಂದ ದೇಹದ ವ್ಯಾಧಿಕ್ಷಮತ್ವ ಅಂದ್ರೆ



ಔಷಧವನದಲ್ಲಿ ಡಾ.ಬಿ.ಆರ್.ರಾಮಕೃಷ್ಣ



ಔಷಧವನದಲ್ಲಿ ಡಾ.ಬಿ.ಆರ್.ರಾಮಕೃಷ್ಣ

immunity ಜಾಸ್ತಿ ಆಗುತ್ತೆ. ಶತಾವರಿಗಡ್ಡೆ ಅಥವಾ ಹಲವು ಮಕ್ಕಳ ಬೇರು *Ospharagus recemosis* ಅಂತ. ಹೆರಿಗೆ ಆದ ಮೇಲೆ ತಾಯಿಗೆ ಅದನ್ನು ಕೊಡೋದ್ರಿಂದ ಹಲವಾರು ಮಕ್ಕಳಿಗೆ ಉಣಿಸುವಷ್ಟು ಹಾಲು ಬರುತ್ತೆ ಅಂತ ಹೇಳ್ತಾರೆ. ಒಂದೆಲಗ ಇದೆ. ಹೊನಗೊನೆಸೊಪ್ಪು ಹಾಕಿದೀನಿ. ಕೆಂಪು, ದೊಡ್ಡ ಎಲೇದು, ಚಿಕ್ಕ ಎಲೆಯ ಹೊನಗೊನೆಸೊಪ್ಪು ಹಾಕಿದೀನಿ. ಹೊನಗೊನೆಸೊಪ್ಪು ಬಳಸುವುದರಿಂದ ಕಣ್ಣಿನ ತೊಂದರೆ ಬರೋದಿಲ್ಲ. ಲೋಳೆಸರ ಹಾಕಿದೀವಿ. ಇದ್ರಲ್ಲಿ ಎರಡು ತರಹ ಇದೆ. ಇದಕ್ಕೆ ಕುಮಾರಿ ಅಂತ ಹೇಳ್ತೀವಿ.

'ಗೃಹಕನ್ಯಾಕುಮಾರೀಚ ಕನ್ಯಕಾದೀರ್ಘಪತ್ರಿಕಾ' ಅಂತ ಸಂಸ್ಕೃತದ ಉಲ್ಲೇಖವಿದೆ. ಕುಮಾರಿಯರು ಅಂದ್ರೆ ಮದುವೆಯಾದ ಹೆಣ್ಣುಮಕ್ಕಳಲ್ಲಿ ಮುಟ್ಟಿನನೋವು ಅಥವಾ ತೊಂದರೆಗಳನ್ನು ಈ ಲೋಳೆಸರದ ರಸ ಹದಿನೈದು ದಿನ ಕೊಟ್ರೆ ನೋವು ಇರೋಲ್ಲ. ಯಾವ ಮನೆಯಲ್ಲಿ ಲೋಳೆಸರ ಬಳಸ್ತಾರೋ ಅವರ ಹೆಣ್ಣುಮಕ್ಕಳು ಆರೋಗ್ಯವಾಗಿರ್ತಾರಂತೆ. ಅದೇ ತರಹ ಅಶೋಕ. 'ಅಶೋಕಃ ಶೋಕನಾಶಶ್ಚ' ಅಂತೀವಿ. ರಾಮಾಯಣದಲ್ಲಿ ಸೀತೇನ ರಾವಣ ಕರೆದುಕೊಂಡು ಹೋದ ಮೇಲೆ ರಾವಣ ಸೀತೆಗೆ ಒಂದು ಸ್ವಾತಂತ್ರ್ಯ ಕೊಡ್ತಾನೆ, ನಿನಗೆ ಕದಂಬವನ ಬೇಕಾ, ಕದಳೀವನಬೇಕಾ, ಅಶೋಕವನ ಬೇಕಾ ಅಂತ. ಆವಾಗ ಸೀತೆ ಆಯ್ದದ್ದು ಅಶೋಕವನ. ಅಶೋಕ ವನದಲ್ಲಿದ್ರೆ ಆಕೆಗೆ ಮುಟ್ಟಿನ ತೊಂದರೆ, ಶೋಕ ಇರೋದಿಲ್ಲ ಅಂತ ಹೇಳಿ. ಲೋಳೆಸರದಲ್ಲಿ ಹಳೆಯ ಗಾಯಗಳು ವಾಸಿಯಾಗುತ್ತೆ. ತಲೆ ಹೊಟ್ಟಿಗೆ ಒಳ್ಳೆಯ ಔಷಧ, ಯಕೃತ್ತಿಗೆ (liver) ಒಳ್ಳೆಯ ಔಷಧ. ಸುಮಾರು ೩೫ ರಿಂದ ೪೦ ಗುಣಗಳು ಲೋಳೆಸರದಲ್ಲಿ ಇದಾವೆ. ಲೋಳೆಸರ ಮನೇಲಿ ನೇತು ಹಾಕಿದ್ರೆ ಗುಂಗುರು ಬರೋದಿಲ್ಲ ಅಂತ ಹೇಳ್ತೀವಿ. ಅಶ್ವತ್ಥ ಅಂದ್ರೆ ಅರಳಿ, ಗೋಣಿ, ಆಲ, ಬಸರಿ, ಅತ್ತಿ, ಈ ಐದು ಪಂಚ ವಲ್ಕಲಗಳು. ಇವನ್ನು ಹಾಕಿದೇವೆ. ಖದಿರ ಅಂದ್ರೆ 'ಖಾದಿರಮ್ ಅಂಗಾರಕಾಯ' ಅಂಗಾರಕನಿಗೆ ಶ್ರೇಷ್ಠವಾದ ಖದಿರ, ನವಗ್ರಹದಲ್ಲಿ ಉಪಯೋಗಿಸುವ ಫಲಾಶಗುಂಸೋಮಾಯ ಅರ್ಕಸಂಹಿದಂ ಆದಿತ್ಯಾಯ ಔದುಂಬರಂ ಬುಧಾಯ, ಹೀಗೆ ನವಗ್ರಹದಲ್ಲಿ ಉಪಯೋಗಿಸುವ ಗಿಡಗಳನ್ನು ಅಂದ್ರೆ ನವ ಮೂಲಿಕೆಗಳನ್ನು ಇಲ್ಲಿ ಬೆಳೆದಿದೇವೆ.



ಔಷಧವನದಲ್ಲಿ : ಡಾ.ಬಿ.ಆರ್.ರಾಮಕೃಷ್ಣ : ಬೆಂಗಳೂರು

ನಾವು ಸಂಕೇತಿಗಳು ಮೊದಲಿನಿಂದಲೂ ಅಡಿಕೆಯಲ್ಲಿ ಪರಿಣತರು. ಆದರೆ ಈಗ ಅಡಿಕೆ ಜತೆಗೆ long term investment ದೃಷ್ಟಿಯಿಂದ, ಒಂದು ಅರ್ಧ ಎಕರೇಲಿ ಅಥವಾ ಬೇಲಿಸುತ್ತಾ ತೇಗವನ್ನೂ ಬೆಳೀಬೇಕು. ಅಡಿಕೆಗೆ ಕೊಡುವ ಮುತುವರ್ಜೀನೇ ಇದಕ್ಕೆ ಕೊಟ್ರೆ ಮುಂದೆ ಭವಿಷ್ಯದಲ್ಲಿ ಒಳ್ಳೆಯದಾಗುತ್ತೆ, ಭದ್ರವಾದ ಠೇವಣಿ (fixed deposit) ತರಹ ನಮ್ಮನ್ನು ಕಾಪಾಡುತ್ತೆ. ಇನ್ನು ಔಷಧೀಯ ಗಿಡಗಳ ಬಗ್ಗೆ ಬರೋದಾದ್ರೆ ಈಗ ಆಯುರ್ವೇದ ಮತ್ತು Herbal products ಇಡೀ ಪ್ರಪಂಚದಲ್ಲಿ No.1 ಆಗಿದೆ. ಒಂದು Recent

Report ಪ್ರಕಾರ ಚೈನಾ ಹಾಗೂ ಭಾರತದ ನಡುವೆ competition ನಡೀತಿದೆ. ೨೦೦೩-೨೦೦೪ರಲ್ಲಿ ಚೈನಾ ಮೂವತ್ತುಸಾವಿರ ಕೋಟಿ ರೂಪಾಯಿಯಷ್ಟು ಔಷಧೀಯ ಸಸ್ಯಗಳನ್ನು ಅಮೇರಿಕಾ ಹಾಗೂ ಯೂರೋಪ್ ದೇಶಗಳಿಗೆ export ಮಾಡಿದೆ. ಆದರೆ ಭಾರತ ರಫ್ತು ಬರಿ ೫೦೦ ಕೋಟಿ ಮಾತ್ರ. ಈ ಸ್ಪರ್ಧೆ ಗಮನಿಸಿ ಭಾರತ ಸರ್ಕಾರ ಔಷಧಿ ಮಂಡಳಿ ಆರಂಭಿಸಿದೆ. ೨೯ ಔಷಧಿ ಸಸ್ಯಗಳನ್ನು ಗುರುತಿಸಲಾಗಿದೆ. ಈ ಸಸ್ಯಗಳನ್ನು ಬೆಳೆದು ಕೊಟ್ರೆ ಅದಕ್ಕೆ ಸರ್ಕಾರದಿಂದ ಶೇಕಡಾ ೩೦ ರಿಂದ ೬೦ ರಷ್ಟು ಸಹಾಯಧನ ಸಿಗುತ್ತೆ. ಮುಂದಿನ ದಿನಗಳಲ್ಲಿ ಔಷಧಿ ಸಸ್ಯಗಳಿಗೆ ಬೇಡಿಕೆ ಜಾಸ್ತಿಯಾಗಬಹುದು. ನಾವು Vedic Biolabs ಆರಂಭಿಸಿದಾಗ ನಮ್ಮದು ಒಂದೇ ಒಂದು product vedic protein ಅಂತ ಇತ್ತು. ಅದೂ ಐದು ವರುಷದ ಹಿಂದೆ. ಈಗ ನಮ್ಮಲ್ಲಿ ಬಹಳ ವಿಧವಾದ Range of products ಬಂದಿದೆ. ಅಮೇರಿಕಾ, ಜರ್ಮನಿ, ಫ್ರಾನ್ಸ್, ಆಸ್ಟ್ರೇಲಿಯಾ, ಸಿಂಗಾಪುರ, ದುಬೈ, ಮಲೇಸಿಯಾ, ರಷ್ಯಾ ದೇಶಗಳಿಗೆ ರಫ್ತು ಮಾಡ್ತಿದೇವೆ. ನಾವು ಕೃಷಿಯ ಜತೆಗೆ ಈ ತರಹದ ಪ್ರವೃತ್ತಿಯನ್ನು ಬೆಳೆಸಿಕೊಂಡಾಗ, ಅದು ಲಾಭದಾಯಕವಾಗಿಯೇ ಇರುತ್ತೆ, ಹಾಗೇ ಚೇತೋದಾಯಕವಾಗಿರುತ್ತೆ. ನಾವು ಈಗ ಮಾಡುತ್ತಿರುವ ಕೃಷಿಗೆ, ನಮ್ಮ ಉದ್ಯಮ ಪೂರಕವಾಗಿದೆ. ನಾವು ಬೆಳೀತಿರುವ ಔಷಧ ಸಸ್ಯಗಳನ್ನು, ನಾವೇ ಉದ್ಯಮದಲ್ಲಿ ಬಳಸ್ತೀವಿ. ಔಷಧಿ ತಯಾರಿಸಿದ ಮೇಲೆ ಉಳಿಯುವ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುತ್ತೇವೆ. ಅದನ್ನು ಮತ್ತೆ ಕೃಷಿಯಲ್ಲಿ ಮರುಬಳಕೆ ಮಾಡಬಹುದು. ನನ್ನ ಈ ಎಲ್ಲಾ ಯೋಜನೆಗಳಲ್ಲಿ ನನ್ನ ಹೆಂಡತಿಯ ಪಾತ್ರ ಹಿರಿದು. ಅವಳು ಡಾ. ಎಸ್.ಪಿ. ಗೀತ. ಕೊಳ್ಳೇಗಾಲದ ಬಳಿ ಇರುವ ಸರಗೂರಿನ ಎಂ.ಎಸ್.ಪುತ್ತೂರಾವ್ ಹಾಗೂ ಗೌರಮ್ಮ ದಂಪತಿಗಳ ಮಗಳು. ನನ್ನ ಯೋಜನೆಗಳಿಗೆ ಅವಳಿಂದ ಸಮರ್ಪಕವಾದ ಬೆಂಬಲ ದೊರಕಿದೆ.


ಅನ್ನದಾನಕ್ಕೆ ನವೀನ ಪಾಕೋಪಕರಣ: ಡಾ.ಬಿ.ಆರ್.ರಾಮಕೃಷ್ಣ : ಬೆಂಗಳೂರು

ನಾನು ೨೮ ವರುಷದ ಹಿಂದೆ ಜಯನಗರದ ಮೊದಲನೆಯ Blockನಲ್ಲಿ ಒಂದು ಚಿಕಿತ್ಸಾಲಯ ಆರಂಭಿಸಿದೆ. ಆಗ ಇಲ್ಲಿ ಇದ್ದವರು ಕೊಳೇಗೇರಿಯಿಂದ ಬಂದ ಜನ. ಅವರ ವಿದ್ಯಾಭ್ಯಾಸದ ದೃಷ್ಟಿಯಿಂದ ಒಂದು ಶಾಲೇನ ಮಾಡಬೇಕು ಅಂತ ಹೇಳಿ, ನನ್ನ clinicನಲ್ಲೇ, ಬಿಡುವಿನ ಸಮಯದಲ್ಲಿ ಒಂದು ಶಾಲೆ ಆರಂಭಿಸಿದ್ವಿ. ಶ್ರೀ ಸಾಯಿ ಪ್ರಶಾಂತಿ ಎಜುಕೇಷನಲ್ ವೆಲ್‌ಫೇರ್ ಟ್ರಸ್ಟ್ ಆರಂಭಿಸಿ, ಅದರ ಅಡಿಯಲ್ಲಿ ಶಾಲೆ ಕೆಲಸಕಾರ್ಯ ಶುರುವಾಯ್ತು. ಇವತ್ತು ಆ ಶಾಲೆ ತನ್ನದೇ ಆದ ಅಸ್ತಿತ್ವವನ್ನು ಹೊಂದಿದ್ದು, ಸ್ವಂತ ಕಟ್ಟಡ ಇದೆ. ೩೫೦ಕ್ಕೂ ಹೆಚ್ಚು ಬಡ ಮಕ್ಕಳು, ಕೊಳೇಗೇರಿ ಮಕ್ಕಳು ಒಂದರಿಂದ ಏಳನೇ ತರಗತಿಯವರೆಗೆ ಓದುತ್ತಿದ್ದಾರೆ. ಎಲ್ಲರಿಗೂ ಉಚಿತ ವಿದ್ಯಾಭ್ಯಾಸ ಕೊಡ್ತಿದೇವೆ. ಅವರ ಮಧ್ಯಾಹ್ನದ ಊಟ, ಪುಸ್ತಕ, ಸಮವಸ್ತ್ರ ಎಲ್ಲಾ free ಆಗಿ ನಡೀತಾ ಇದೆ. ಹಾಗೇ ಎಂಟು ವರುಷದ ಹಿಂದೆ ಬಡಮಕ್ಕಳಿಗೆ ಮಧ್ಯಾಹ್ನದ ಊಟದ ಯೋಜನೆ ಆರಂಭಿಸಿದ್ದು. ಈ ಯೋಜನೆಗೆ ನನ್ನ ಸ್ನೇಹಿತರಾದ ಅಪ್ಪಾಜಿಗೌಡರು ಹಾಗೂ ಅವರ ಧರ್ಮಪತ್ನಿಯವರ ತುಂಬುಬೆಂಬಲ ದೊರಕಿತು. ನಮ್ಮ ಮನೆಯ ಪಕ್ಕದಲ್ಲಿ, ಸರ್ಕಾರಿ ಜಾಗದಲ್ಲಿ ಈ ಕೆಲಸ ಆರಂಭಿಸಿದ್ವಿ. ಶುರುವಿನಲ್ಲಿ ೨೦೦ ಮಕ್ಕಳಿಗೆ ಊಟ ನಡೀತಾ ಇತ್ತು. 'ಅನ್ನದಾನಂ ಮಹಾದಾನಮ್' ಅನ್ನುವ ಉಕ್ತಿಯ ಬೆಂಬಲ ದೊರೀತು. ಇವತ್ತು, ಬೆಂಗಳೂರು ದಕ್ಷಿಣದಲ್ಲಿ ಎಲ್ಲ ಪಾಠಶಾಲೆಗಳಿಗೆ, ಸುಮಾರು ೩೨ ಸಾವಿರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಸರಬರಾಜು ಮಾಡ್ತಿದೇವೆ. ಕಳೆದ ಒಂದೂವರೆ ವರುಷದಿಂದ ಕರ್ನಾಟಕ ರಾಜ್ಯ ಸರಕಾರ ಸಹ ಸಹಾಯ ಮಾಡ್ತಿದೆ. ೧೨ ರಿಂದ ೧೩ steam plant ಹಾಕಿ ಬಿಸಿ ಊಟವನ್ನು ಶುಚಿಯಾಗಿ, ರುಚಿಯಾಗಿ ಮಾಡ್ತಿದೀವಿ. ನಮ್ಮ ಜಮೀನಿನಲ್ಲಿ ಬೆಳೆಯುವ ತರಕಾರಿಗಳನ್ನು ಸಹ ಇಲ್ಲಿ ಮಧ್ಯಾಹ್ನದ ಊಟಕ್ಕೆ ಬಳಕೆ ಮಾಡ್ತಿದೀವಿ. ಈ ಕೆಲಸ ನನಗೆ ಬಹಳ ಸಂತೃಪ್ತಿ ನೀಡಿದೆ.

ನಾವು ಈಗ 'ಸಂಕೇತಿ ಫುಡ್ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್' ಕಂಪನಿಯನ್ನು ನೋಂದಾಯಿಸಿದ್ದೇವೆ. ಈ ಸಂಸ್ಥೆಯ ಮೂಲಕ ಸಂಕೇತಿಗಳ



ಉಚಿತವಿದ್ಯೆ, ಉಚಿತ ಊಟದ ಯೋಜನೆ:
ಡಾ.ಬಿ.ಆರ್.ರಾಮಕೃಷ್ಣ: ಬೆಂಗಳೂರು

ವಿಶಿಷ್ಟವಾದ ಆಹಾರ ಪದಾರ್ಥಗಳಾದ ಮಿಡಿಮಾವಿನಕಾಯಿ ಉಪ್ಪಿನಕಾಯಿ, ಮಾಗಡಿ ಬೇರು, ಮೆಣಸು ಹಾಕಿ ಮಾಡುವ ನಿಂಬೇಕಾಯಿ ಉಪ್ಪಿನಕಾಯಿ, ಹುಳಿಯನ್ನದ ಗೊಜ್ಜು, ಪುದೀನಾಚಟ್ನಿ, ಕೊಳಕಟ್ಟೆ ಅಂದ್ರೆ ಉದ್ದಿನ ಕಡುಬು, ಮಿಕ್ಸ್ ತಯಾರಿಸಿ ಮಾಡುವ ಯೋಜನೆ ಸಹಾ ಇದೆ.

ಸಂಕೇತಿಗಳು ಇವತ್ತು ಹಳ್ಳಿ ಬಿಟ್ಟು ಪಟ್ಟಣ ಸೇರ್ತಿದಾರೆ. ಪಟ್ಟಣ ಬಿಟ್ಟು ಅಮೇರಿಕಾ ಸೇರ್ತಿದಾರೆ. ಹಾಗಾಗಿ ಸಂಕೇತಿ ಕೃಷಿ ನಶಿಸ್ತಾ ಇದೆ. ನಮ್ಮದೇ ಉದಾಹರಣೆ ತೊಗೊಂಡ್ರೆ, ನಾವು ಮಕ್ಕಳು ಜಾಸ್ತಿ, ಖರ್ಚು ಜಾಸ್ತಿ, ಉತ್ಪತ್ತಿ ಕಡಿಮೆ, ಸಾಲ ಜಾಸ್ತಿ ಆಯ್ತು. ಜಮೀನು ಮಾರಿ ಬೆಂಗಳೂರಿಗೆ ಬಂದ್ವಿ. ನಾವು ನೆಚ್ಚಿರುವ ಏಕಕೃಷಿ ಅಡಿಕೆ ಧಾರಣೆ ಮಾರುಕಟ್ಟೇಲಿ ವಿಪರೀತ ಏರುಪೇರಾಗ್ತಿದೆ. ಅಡಿಕೆಗೆ ಖಾಯಿಲೆ ಸಹಾ ಜಾಸ್ತಿ. ಈ ಏಕಕೃಷಿಯಿಂದ ಸಂಕೇತಿ ಕೃಷಿ ನಶಿಸ್ತಾ ಇದೆ. ನಮ್ಮ ಕೃಷಿ ಉಳೀಬೇಕಂದ್ರೆ ವೈಜ್ಞಾನಿಕ ಚಿಂತನೆ ಮಾಡಬೇಕು. ತಕ್ಷಣ ಆದಾಯ ನೀಡುವ ಬೆಳೆ ಬೆಳೆಯಬೇಕು. ಐದಾರು ವರುಷಗಳ ನಂತರ ಹಣ ಬರುವ ಬೆಳೆ ಬೆಳೀಬೇಕು. ಹತ್ತಾರು ವರುಷಗಳನಂತರ ಬರುವ, ತೇಗ, ಸಿಲ್ವರ್ ಈ ತರಹದ ಮರ ಬೆಳೀಬೇಕು. ಆಗ ಕೃಷಿ ಆದಾಯ ಕೊಡುವ ವೃತ್ತಿ ಆಗುತ್ತೆ. ನಾವು ಮಾಡುವ ಕೃಷಿಯ ಬಗ್ಗೆ ನಮಗೆ ಜ್ಞಾನ ಇರಬೇಕು. ಇಲ್ಲದಿದ್ರೆ ಎಲ್ಲರೂ ಮೋಸ ಮಾಡ್ತಾರೆ.

ವ್ಯವಸಾಯ ಮಾಡುತ್ತಿರುವ ಸಂಕೇತಿ ಹುಡುಗರಿಗೆ ಹೆಣ್ಣು ಸಿಗೋಲ್ಲ ಅನ್ನುವುದು ಹೊಸ ಸಮಸ್ಯೆ. ನಮ್ಮ ಬಸವಾಪಟ್ಟಣವನ್ನು ಸಂಕೇತಿಗಳಿಗೆ ಮಧ್ಯಕೇತ್ರ ಅಂತಾರೆ. ಅಲ್ಲಿಗೆ ದಕ್ಷಿಣ ಕನ್ನಡದಿಂದ, ಶಿವಮೊಗ್ಗದಿಂದ, ಶೃಂಗೇರಿ ಕಡೆಯಿಂದ ಹೆಣ್ಣು ಕೊಟ್ಟಿದಾರೆ.

ನನ್ನ ಮನೆಮಟ್ಟಿಗೆ ಹೇಳುವುದಾದ್ರೆ ನಮ್ಮ ಕೃಷಿ ಉಳಿಯುವ ನಂಬಿಕೆ ನನಗಿದೆ. ನನಗೆ ಒಬ್ಬ ಮಗ ಕುಮಾರ ಶಶಾಂಕ. BBM ಓದ್ತಿದಾನೆ. ಅವನ ವಿಶೇಷ ಅಂದ್ರೆ ನನಗೆ ಇಷ್ಟವಿರುವುದನ್ನು ಅವನು ಮಾಡ್ತಾನೆ. ಇಷ್ಟವಿರದದ್ದನ್ನು ಅವನು ಮಾಡೋದೇ ಇಲ್ಲ. ನನಗೆ ಕೃಷಿ ಬಗ್ಗೆ ಒಲವು ಇರೋದ್ರಿಂದ ಅವನಿಗೂ ಇದರ ಬಗ್ಗೆ ಕಾಳಜಿ ಇದೆ.

ವೇದ ಹೇಳುತ್ತೆ 'ಸಂಗಚ್ಛಧ್ವಂ ಸಂವದಧ್ವಂ' ಅಂತ. ನಾವು ಸಂಘಟಿತರಾಗಿ ಸಮಾಜವನ್ನು ನಿರ್ಮಾಣ ಮಾಡಿದ್ರೆ ದೇವತೆಗಳು ಬಂದು ಆಶೀರ್ವಾದ ಮಾಡ್ತಾರಂತೆ, ನೋಡಿ ನಲೀತಾರಂತೆ. ನನಗೆ ಏನನ್ನಿಸುತ್ತೆ ಅಂದ್ರೆ ಸಂಪದ್ಭರಿತವಾದ ಸಂಕೇತಿ ಸಮಾಜ, ಸಂಕೇತಿ ಕೃಷಿ ಉಳಿಸಲು ಸಂಘಟಿತ ಪ್ರಯತ್ನ ಮಾಡಬೇಕು ಅಂತ. ನನ್ನ ಉದಾಹರಣೆ ತೊಗೋಳೋದಾದ್ರೆ, ನಾನು ಎರಡೂವರೆ ಎಕರೆ ಜಮೀನು ತೊಗೊಂಡಾಗ ಅದರಲ್ಲಿ ಕಾಲು ಭಾಗವನ್ನು ಒಬ್ಬರು ಲಾಯರ್ ಹಾಗೂ ಒಬ್ಬರು Chartered Accountantಗೆ ಕೊಟ್ಟೆ. ಆ ಲಾಯರ್ ಅವರ ಜಮೀನನ್ನು ಪಾಳು ಬಿಟ್ಟಿದ್ದರು. ಈಗ ನಾನು ಅವರ ಜತೆ ಒಂದು ವ್ಯವಹಾರ ಮಾಡಿದೀನಿ. ನಿಮ್ಮ ಜಮೀನನ್ನು ನಾನು ಅಭಿವೃದ್ಧಿ ಮಾಡ್ತೀನಿ ಅಂತ. ಅವರು ನನಗೆ ಹೇಳಿದಾರೆ ನೀವು ತೇಗ ಹಾಕಿರುವ ತರಹ, ನನ್ನ ಜಮೀನಿನಲ್ಲೂ ಬೆಳೀರಿ. ನಿಮಗೆ ೩೦ ವರುಷಕ್ಕೆ contract ಕೊಡ್ತೀನಿ. ಬಂದ ೨೧ ಭಾಗ ಆದಾಯ ನನಗೆ ಕೊಡಿ ಸಾಕು ಅಂತ. ಈ ರೀತಿ ನಮ್ಮ ಕಲ್ಪನೆಗಳು ಬದಲಾಗಬೇಕು. Unless we have a vision and interest ಕೃಷಿ ಉಳಿಯೋಲ್ಲ. ಕೃಷಿ ಉಳೀಬೇಕಾದ್ರೆ ಆದಾಯಕ್ಕಿಂತ ಆಸಕ್ತಿ ಮುಖ್ಯ.

ನನ್ನ ಯೋಗ, ವೇದದ ಪರಿಜ್ಞಾನ ಹಾಗೂ ಸಂಶೋಧನೆಗಳ ಪ್ರಕಾರ, ಮಂತ್ರಗಳನ್ನು, ಸಂಗೀತವನ್ನು ಗಿಡಮರಗಳ ಮಧ್ಯೆ ನಾವು ಪಠಣ ಮಾಡಿದಾಗ, ಗಿಡಗಳ ಬೆಳವಣಿಗೆ ಹಾಗೂ ಇಳುವರಿ ಜಾಸ್ತಿಯಾಗಿರುವುದು ಗಮನಕ್ಕೆ ಬಂದಿದೆ. ಹಿಂದೆಲ್ಲಾ ನಮ್ಮ ಊರುಗಳಲ್ಲಿ ಅಷ್ಟೇಕೆ ನಮ್ಮ ಪಕ್ಕದ ತೋಟದಲ್ಲಿ ಚಿನ್ನಸ್ವಾಮಿ ಬಾಧ್ಯಾರ್ ಅವರು ಮಂತ್ರವನ್ನು ಅಡಿಕೆ ತೋಟದಲ್ಲೇ ಪಠಣ ಮಾಡ್ತಿದ್ರು, ಇತರರಿಗೂ

ಹೇಳಿಕೊಡ್ತಿದ್ರು. ಕೃಷಿ ಕೆಲಸ ಮಾಡುತ್ತಲೇ ಅಂದ್ರೆ ಅಡಿಕೆಗೆ ನೀರು ಹಾಕುತ್ತಲೇ ಮಂತ್ರ ಹೇಳ್ತಿದ್ರು. ನಾವು ವಿವೇಕಾನಂದ ಕೇಂದ್ರದಲ್ಲಿ ಮಾಡಿರುವ ಪ್ರಯೋಗಗಳ ಪ್ರಕಾರ ಸಾಮವೇದವನ್ನು ಪಠಿಸಿರುವ ಕಡೆ ಬೆಳೆ ತುಂಬಾ ಚೆನ್ನಾಗಿದೆ. ಒಂದಂತೂ ಹೇಳಬಹುದು, ಯಾವ ಪರಿಸರದಲ್ಲಿ ನಿರ್ಮಲ ವಾತಾವರಣವಿರುತ್ತೆ, ಅಂದ್ರೆ ಮಂತ್ರ ಹೇಳುವಾಗ, ಸಂಗೀತ ಹಾಡುವಾಗ ಆ ಸ್ಥಳದ ಶುಚಿಯನ್ನು ಕಾಪಾಡ್ತೀವಿ, ಅಂತಹ ಪರಿಸರದಲ್ಲಿ ಗಿಡಗಳ ಬೆಳವಣಿಗೆ ಮುಕ್ತವಾಗಿರುತ್ತೆ. ನಾವು ಸಾಹಿತ್ಯದ ವಿಚಾರವನ್ನು ಉದಹರಿಸೋದಾದ್ರೆ ಶಕುಂತಲಾ ಕಣ್ವರ ಆಶ್ರಮ ಬಿಟ್ಟು ದುಷ್ಯಂತನ ಬಳಿ ತೆರಳುವಾಗ, ಅಲ್ಲಿರುವ ಗಿಡಬಳ್ಳಿಗಳಿಗೆ, ಪ್ರಾಣಿಪಕ್ಷಿಗಳಿಗೆ ಅವಳು ಹೊರಡುವುದು ತಿಳಿಯುತ್ತಂತೆ. ಕಾಳಿದಾಸ ಹೇಳಿರುವುದು ಉತ್ಪ್ರೇಕ್ಷೆಯಲ್ಲ. ಯಾಕೇಂದ್ರೆ ನಾವು ಸಾಕಿರುವ ಎತ್ತು ಬೇರೆಯವರನ್ನು ತಿವಿಯಲು ಹೋಗುತ್ತೆ. ಆದ್ರೆ ನಾವು ಹತ್ರ ಹೋದ್ರೆ ಹಾಯೋದಿಲ್ಲ ಹಾಗೂ ಒದೆಯೋದಿಲ್ಲ. ಅದಕ್ಕೂ ನಾವು, ನಮ್ಮವರು ಅನ್ನುವ ಅರಿವಿದೆ. Infact ಮಂತ್ರಪಠಣ ಮಾಡಿದಾಗ, ನಾವು cosmic energy ಅಂತ ಏನು ಹೇಳ್ತೀವಿ ಅಂದ್ರೆ ಪ್ರಾಣಶಕ್ತಿ charge ಆಗುತ್ತೆ. ಈ ತರಹದ ಸನ್ನಿವೇಶದಲ್ಲಿ ಗಿಡಮೂಲಿಕೆಗಳಲ್ಲು ಸಹ ಅದರ ಶಕ್ತಿ ಸಂಚಯವಾಗುತ್ತೆ. ಈಗ ನಾವು ಮಾಡಿರುವ ಹಸಿರುಮನೇಲಿ ಮಂತ್ರ ಪಠಣವನ್ನು ನಿರಂತರವಾಗಿ ನಡೆಸುವ ಉದ್ದೇಶ ಹೊಂದಿದ್ದೇವೆ. ಸರಿಯಾದ variables ಪತ್ತೆ ಮಾಡಿ ಫಲಿತಾಂಶವನ್ನು ಪತ್ತೆ ಮಾಡುವ ಉದ್ದೇಶ ಸಹಾ ಇದೆ" ಎಂದು ಮುಗುಳ್ನಕ್ಕು ಮಾತು ಮುಗಿಸಿದ್ರು. ಅನಂತರ ಕಾರಿನಲ್ಲಿ ಬರುವಾಗ ತಮ್ಮ ಬದುಕಿನ ಕೆಲವು ಘಟನೆಗಳನ್ನು ಸ್ವಾರಸ್ಯಕರವಾಗಿ ವಿವರಿಸಿದ್ರು. ಸಂಕೇತಿ ಕೃಷಿಗೆ ಹೊಸದಿಕ್ಕು ನಮಗೆ ರಾಮಕೃಷ್ಣ ಅವರ ಮಾತಿನ ಜಾಡಿನಲ್ಲಿ ಸಿಕ್ಕಿತ್ತು. ಅವರೇ ಹೇಳಿದಂತೆ ಈ ಹಾದಿಯಲ್ಲಿ ಸಾಗುವಾಗ ಸಂಘಟನೆ ದೊಡ್ಡ ಅಗತ್ಯ ಅನ್ನಿಸಿತು. ನಿಮ್ಮ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಅವರಿಗೆ ಹಾರೈಸಿ ನಾವು ಬೆಂಗಳೂರು ಬಿಟ್ಟಾಗ ಬಾನಲ್ಲಿ ಬೆಳುದಿಂಗಳು ಬೆಳಗುತ್ತಿತ್ತು.

ಆ) ಬಿ.ಎನ್.ವಿ. ಸುಬ್ರಹ್ಮಣ್ಯ ಇ/ಮ ನಾರಾಯಣಸ್ವಾಮಿ

ನಂ.೩೧, ಪಂಪ ಮಹಾಕವಿ ರಸ್ತೆ, ಬೆಂಗಳೂರು-೪

ದೂರವಾಣಿ : 080-26677852(ಮನೆ) ಕರವಾಣಿ : 9448055562

ಬ್ರಾಹ್ಮಣ ಹೆಚ್ಚು ಮಕ್ಕಳನ್ನು ಹೆರಬೇಕು. ನಾನು ಹೇಳೋದು ಈಗಿನ law of landಗೆ ವಿರುದ್ಧವಾಗಿರಬಹುದು. ಆದ್ರೆ ಬೇರೆ ಪಂಗಡದವರು ಮೂರು ನಾಲ್ಕು ಮಕ್ಕಳನ್ನು ಹೊಂದಿರ್ತಾರೆ. ಒಬ್ಬನ್ನ ಕೃಷಿಗೆ, ಒಬ್ಬನ್ನ ರಾಜಕೀಯಕ್ಕೆ, ಮತ್ತೊಬ್ಬನ್ನು ಉದ್ಯೋಗಕ್ಕೆ ಹಾಕ್ತಾರೆ. ತುಂಬಾ ಬುದ್ಧಿವಂತಿಕೆಯಿಂದ, ವ್ಯವಸ್ಥಿತವಾಗಿ ತಮ್ಮ ಸಮುದಾಯ ಬೆಳೆಸ್ತಾ ಇದಾರೆ. ಆದ್ರೆ ಬ್ರಾಹ್ಮಣರು 'ಒಂದು ಮಗು ಸಾಕು' ಅಂತಾರೆ. Software ಬೆನ್ನ ಹಿಂದೆ ಬಿದ್ದಿರುವವರಿಗೆ ಮುಂದೆ ಮಕ್ಕಳು ಆಗದಿರಬಹುದು. 'ನಮ್ಮದೇ ಆಗಬೇಕು ಅಂತ ಏನಿದೆ, adopt ಮಾಡಿಕೊಂಡ್ರೆ ಆಯ್ತು' ಅನ್ನುವ ಧೋರಣೆ ಬೆಳೀತಿದೆ. ಹಣ ಸಂಪಾದನೆ ಮುಖ್ಯವಾಗಿದೆ. ಹೀಗಿರುವಾಗ ಹಳ್ಳೀಲಿ ಮನೆಗೊಬ್ಬ ಮಗ ಕೃಷಿ ಮಾಡಲು ಉಳಿಯಲು ಹೇಗೆ ಸಾಧ್ಯ!



ಸೀತಾ-ಬಿ.ಎನ್.ವಿ.ಸುಬ್ರಹ್ಮಣ್ಯ ದಂಪತಿ : ಬೆಂಗಳೂರು

ಬ್ರಾಹ್ಮಣ ಸಮುದಾಯದ ಆಸ್ತಿ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಬಗ್ಗೆ ಅಭಿನಂದನಾ ಗ್ರಂಥವೇ ಇದೆ. ಇನ್ನು ಅವರ ಕೃಷಿಯ ಬಗ್ಗೆ ನಾನು ಬರೆಯುವುದೇನು ಎನ್ನುವ ಅನುಮಾನ ಕಾಡಿದ್ದು ರೈಲಿನಲ್ಲಿ. ಅದೂ ಬಿ.ಎನ್.ವಿ. ಅವರನ್ನು



ಅಡಿಕೆ ಎಡೆಯುತ್ತಿರುವ ಸೀತಾ ಸುಬ್ರಹ್ಮಣ್ಯ

ಮಾತನಾಡಿಸಲು ಮೈಸೂರಿನಿಂದ ಬೆಂಗಳೂರಿಗೆ ಹೊರಟಿರುವ ಸಮಯದಲ್ಲಿ. ಜತೆಯಲ್ಲಿದ್ದ ವೆಂಕಟನಾರಾಯಣ್ ಅವರ ಬಳಿಯಲ್ಲಿ ಬಿ.ಎನ್.ವಿ ಅವರದ್ದೇ ಅಭಿನಂದನಾ ಗ್ರಂಥದ ಕರಡು ಪ್ರತಿ proof readingಗಾಗಿ ಇತ್ತು. ಸಂಕೇತಿ ಸಮುದಾಯದ ಮೂರನೇ ಪುಸ್ತಕದ ಭಾಗವಾಗಿದ್ದರು ಬಿ.ಎನ್.ವಿ. ಪ್ರಯಾಣದ ಉದ್ದಕ್ಕೂ ಅದನ್ನು ಓದುತ್ತಾ ಹೋದೆ. ಎಲ್ಲವೂ ಪುಸ್ತಕ ರೂಪದಲ್ಲಿ ಕಣ್ಮುಂದೆ ಇರುವಾಗ ಹೊಸದಾಗಿ ಅವರ ಬದುಕಿನ ಬಗ್ಗೆ ಬರೆಯುವುದೇನು ಎಂದು ಅನ್ನಿಸಿದರೂ ಅವರ ಕೃಷಿ ಬದುಕಿನ ಬಗ್ಗೆ ಆ ಅಭಿನಂದನಾ ಗ್ರಂಥದಲ್ಲಿ ವಿವರಗಳು ಇಲ್ಲದ್ದು ನನಗೆ ಅವಕಾಶ ನೀಡಿತ್ತು. ಬಹುಶಃ ಬಿ.ಎನ್.ವಿ. ಅವರ ಕೃಷಿ ಬದುಕಿನ ಮಗ್ಗುಲನ್ನು ಮಾತ್ರ ಅರಿಯಬೇಕೆಂದು ರೈಲಿನಲ್ಲಿ ನಿರ್ಧರಿಸಿದೆ. ಬೆಳಗ್ಗೆ ೯.೩೦ಕ್ಕೆ ಅವರ ಭೇಟಿ ನಿಗದಿಯಾಗಿದ್ದು, ನಾವು ಹತ್ತು ನಿಮಿಷ ಮೊದಲೇ ಅವರ ಮನೆಯಲ್ಲಿದ್ದೆವು. ಬಿಸಿಬಿಸಿಯಾದ ದೋಸೆ ಚಟ್ನಿ ಹಸಿವನ್ನು ಇಂಗಿಸಿತು. ರುಚಿಯಾದ ಕಾಫಿ ಗಂಟಲಿನ ತ್ರಾಣ ಹೆಚ್ಚಿಸ್ತು. ಪೂಜೆ ಮಾಡುತ್ತಿದ್ದ ಬಿ.ಎನ್.ವಿ. ಹೊರಬಂದು ಹತ್ತು ನಿಮಿಷದಲ್ಲಿ ಬಂದೆ ಎಂದು ಮತ್ತೆ ಒಳಹೊಕ್ಕರು. ನಾನು ಆಗಲೇ ಮೊದಲ ಬಾರಿಗೆ ಬಿ.ಎನ್.ವಿ. ಅವರನ್ನು ನೋಡಿದ್ದು. ಅವರ ಅಭಿನಂದನಾ ಗ್ರಂಥದ ಸಾಹಿತ್ಯದಿಂದ ನನ್ನ ಕಲ್ಪನೆಗೆ ಸಿಕ್ಕಿದ್ದ ಅವರ ಭಾರೀ ವ್ಯಕ್ತಿತ್ವ ನನ್ನ ಕಣ್ಣ ಮುಂದಿತ್ತು. ಹತ್ತು ನಿಮಿಷದಲ್ಲಿ ನಗುನಗುತ್ತಾ ಬಿ.ಎನ್.ವಿ. ನಮ್ಮ ಮುಂದೆ ಕುಳಿತರು. ನಮ್ಮ ಉದ್ದೇಶಗಳನ್ನು ತಿಳಿದು ಮಾತನಾಡಲು ಆರಂಭಿಸಿದ್ರು. ಇದು ಅವರ ಸಂದರ್ಶನ ಎನ್ನುವುದಕ್ಕಿಂತ ಅವರ ಆತ್ಮಾವಲೋಕನ ಎಂದರೆ ಹೆಚ್ಚು ಅರ್ಥ ಬಂದೀತೇನೋ. ಅವರ ಮಾತುಗಳಲ್ಲಿ ಒಟ್ಟಾರೆ ಬ್ರಾಹ್ಮಣಸಮೂಹದ ಅಭಿವೃದ್ಧಿ ವಿಚಾರ ತುಂಬಿತ್ತು. ಸಂಕೇತಿಗಳ ಬದುಕನ್ನು ಅವರು ವಿಶ್ಲೇಷಿಸಿದ್ದು ಈ ಸಮಗ್ರತೆಯ ದೃಷ್ಟಿಕೋನದಿಂದಲೇ, ನೆಲೆಗಟ್ಟಿನಿಂದಲೇ. ಅವರನ್ನು ನಾನು ಕೇಳಿದ್ದಕ್ಕಿಂತ . . . ಪಡೆದದ್ದೇ ಹೆಚ್ಚು. ತಮ್ಮ ವಿಚಾರಗಳನ್ನು ಹಳೆಯ ತಲೆಮಾರಿನಿಂದಲೇ ಆರಂಭಿಸಿದರು.

ಸಂಕೇತಿಗಳು ಶೆಂಕೋಟ್ಟೈನಿಂದ ವಲಸೆ ಬಂದ ಮೇಲೆ ಇಲ್ಲಿ ರಾಜರ ಆಶ್ರಯದಲ್ಲಿದ್ದು, ಹೊಳೆದಡದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡು (ಕೃಷಿ ಅಂದ್ರೆ ತೋಟಗಾರಿಕೆ) ಅದರಲ್ಲಿಯೇ ಜೀವನ ಮಾಡಿದ್ರು.

- **ಅಡಿಕೆಯನ್ನೇ ಮುಖ್ಯವಾಗಿ ಬೆಳೆಯಲು ಏನು ಕಾರಣ ಇರಬಹುದು?**

  ಪುರಾಣ ಕಾಲದಿಂದಲೂ ಅದಕ್ಕೆ ಪೂಜ್ಯಭಾವನೆ ಇದೆ. ಅಡಿಕೆ, ವಿಳ್ಳೇದೆಲೆ ಶ್ರೇಷ್ಠ ಅಂತ ಈ ಬೆಳೆ ಬೆಳೆದ್ರು. ಹಾಗೇ ವಾಣಿಜ್ಯವಾಗಿಯೂ ಇದನ್ನು ಬೆಳೆಯಲು ಆರಂಭಿಸಿದ್ರು. ಸಂಕೇತಿಗಳ ವಿಶೇಷ ಅಂದ್ರೆ ಅವರು ಇನ್ನೊಬ್ಬರನ್ನು ಯಾಚನೆ ಮಾಡ್ತಿರಲಿಲ್ಲ. ಅವರ ಅಧ್ಯಯನ, ಅಧ್ಯಾಪನ ಮಾಡ್ಕೊಂಡು, ತೋಟದಲ್ಲಿ ಸ್ವತಃ



ಅಡಿಕೆ ಸಿಪ್ಪೆಯ ಸಾಗಣೆ: ಸೀತಾ-ಸುಬ್ರಹ್ಮಣ್ಯ

ದುಡೀತಿದ್ರು. ಆದ್ರೆ ಈಗ ಕಾಲ ಬದಲಾಗಿದೆ. ವಿಜ್ಞಾನ ಮುಂದುವರಿದಿದೆ, ವಿದ್ಯಾಕ್ಷೇತ್ರ ವಿಸ್ತಾರವಾಗಿರೋದ್ರಿಂದ ಕೃಷಿ ಈಗ ಕಡಿಮೆಯಾಗ್ತಿದೆ. ಆದ್ರೆ ಕೌಶಿಕಸಂಕೇತಿಗಳು ಈಗಲೂ ತೋಟಾನ ಇಟ್ಟುಕೊಂಡಿದಾರೆ, ಆದ್ರೆ ಬೆಟ್ಟದಪುರ ಸಂಕೇತಿಗಳು ಕೃಷೀನಾ totally ಬಿಟ್ಟಿದಾರೆ ಅಂದ್ರೆ ತಪ್ಪಾಗೋಲ್ಲ.

- **ನಿಮ್ಮ ಪೂರ್ವಿಕರ ಬಗ್ಗೆ ಹೇಳಿ.**

ನಮ್ಮ ಪೂರ್ವಿಕರು ಸ್ವಂತ ದುಡಿಯೋರು. ಆಳುಗಳನ್ನು ಇಟ್ಟು ಕೆಲಸ ಮಾಡ್ತಿರಲಿಲ್ಲ. ಆಧುನಿಕ ಕೃಷಿ ಪದ್ಧತಿ ಆಗ ಇರಲಿಲ್ಲ. ಸಗಣಿಗೊಬ್ಬರ, ಗಂಜಲ ಬಳಸಿ ಉತ್ತಮವಾಗಿ ಫಸಲು ಬೆಳೀತಿದ್ರು. ನಾನು ಒಂದು ವರುಷದವನಿರುವಾಗ ನಮ್ಮ ತಂದೆ ಬೆಟ್ಟದಪುರದ ನಾರಾಯಣಸ್ವಾಮಿ ತೀರಿಕೊಂಡ್ರು. ನನ್ನ ತಾಯಿ ದೊಡ್ಡ ಹನಸೋಗೆಯ ಕಾವೇರಮ್ಮ. ಆಗ ನಮ್ಮ ಮನೇಲಿ ಬಹಳ ಬಡತನ. ನನ್ನ ಅಜ್ಜಿ ಅಂದ್ರೆ ತಾಯಿಯ ತಾಯಿ ಪುಟ್ಟಕ್ಕಯ್ಯ ಅಂತ ಇದ್ರು. ಅವರು ನಮ್ಮನ್ನು ಸಾಕಿದ್ದು. ಅವರು ಬೇರೆಯವರ ಮನೇಲಿ ಅಡುಗೆ ಮಾಡಿಕೊಂಡು ನಮ್ಮನ್ನು ಬೆಳೆಸಿದ್ರು. ಹಾಗಾಗಿ ನನಗೆ ತೋಟದ ವ್ಯವಸಾಯದ ಬಗ್ಗೆ ಅನುಭವ ಬರಲಿಲ್ಲ. ನನ್ನ ತಂದೆ ತೋಟ ಮಾಡಿದ್ರಂತೆ. ಆ ವಿಚಾರ ಹೆಚ್ಚು ತಿಳಿದಿಲ್ಲ. ಆದ್ರೆ ಕೃಷಿ ರಕ್ತಗತವಾಗಿ ಬಂದಿರೋದ್ರಿಂದ, ನನ್ನ ಉದ್ಯಮ ಬೆಳೆಸಿದ ಮೇಲೆ, ಈಗ ತೋಟ ಬೆಳೆಸಲೇಬೇಕು ಅನ್ನುವ ಛಲದಿಂದ ತೋಟ ಮಾಡಿದೀನಿ. ನನ್ನ ತಂದೆ ಮಾಡಿದ ತೋಟ, ಇವತ್ತಿಗೂ ಬೆಟ್ಟದಪುರದಲ್ಲಿದೆ. ಇವತ್ತಿಗೂ ಅದು ಉತ್ತಮವಾದ ತೋಟ.

- **ನಿಮ್ಮ ಅಜ್ಜಿ ತೋಟದ ಕೆಲಸ ಮಾಡ್ತಿದ್ರಾ?**

ಇಲ್ಲ ಮಾಡ್ತಿರಲಿಲ್ಲ. ಬೇರೆಯವರ ಮನೇಲಿ ಅಡುಗೆ ಮಾಡೋದು, ಬಾಣಂತನ ಮಾಡೋದು ಹೀಗೇ social service ಅಷ್ಟೆ. ಇಡೀ ಜೀವನವನ್ನು ಅವರು ಇದಕ್ಕಾಗಿಯೇ ಮುಡುಪಾಗಿಟ್ಟಿದ್ರು. ಈಗಿನ ಕಾಲದಲ್ಲಿ ಅಡುಗೆಯವರಿಗೆ rate ಇದೆ. ಹಿಂದೆ rate ಇತ್ತಿಲ್ಲ. ಕೊಡುವವರು ಕೊಟ್ಟಷ್ಟು ತೊಗೋಬೇಕಿತ್ತು. ಮೂರು ತಿಂಗಳ ಕಾಲ ಬ್ರಾಹ್ಮಣರ ಮನೇಲಿ ಬಾಣಂತನಕ್ಕೆ ಇರೋರು. ಹೀಗೆ ಬಹಳ ಕಷ್ಟಪಟ್ಟಿದ್ದಾರೆ.


ಇನ್ನೂ ಒಣಗಬೇಕು, ಅಲ್ಲವೆ?: ಬಿ.ಎನ್.ವಿ.ಸುಬ್ರಹ್ಮಣ್ಯ

- **ನೀವು ಚಿಕ್ಕಂದಿನಿಂದ ಬೆಳೆದು ಬಂದಿದ್ದೇ ಕೃಷಿ ಪರಿಸರ. ನಿಮಗೆ ನೀವು ಯಾವತ್ತೂ ಕೃಷಿಕನಾಗಬೇಕು ಅಂತ ಅನ್ನಿಸಲೇ ಇಲ್ವಾ?**

ಇಲ್ಲ . . ಆವಾಗ ಇತ್ತಿಲ್ಲ. ಯಾಕೇಂದ್ರೆ ಜೀವನ ಮಾಡಲೇ ನಾವು ಒದ್ದಾಡ್ತಾ ಇದ್ವು. ಬದುಕುವುದೇ ಒಂದು ಹೋರಾಟ. ನಾನು, ನನ್ನ ಇಬ್ಬರು ಅಕ್ಕಂದಿರನ್ನು ಅಜ್ಜಿ ಶ್ರಮಪಟ್ಟು ಸಾಕಿದ್ರು. ನನ್ನ ತಂದೆಗೆ ತೋಟ ಇತ್ತು, ಮನೆ ಇತ್ತು. ಆದ್ರೆ ಅನ್ಯರ ಕುತಂತ್ರದಿಂದ ಬೇರೆಯವರ ಪಾಲಾಯ್ತು. ಆ ಹಳೇಕಥೆ ಈಗ ಬೇಡ. ನನ್ನ ತಂದೆ ತೀರಿಹೋದ ಬಳಿಕ, ನಮ್ಮನ್ನು ಆಚೆ ಹಾಕಿದ್ರು. ಆಗ ನಮ್ಮ ಅಜ್ಜಿ ಬೆಟ್ಟದಪುರದಲ್ಲಿ, ಸಾಲಿಗ್ರಾಮದಲ್ಲಿ ನಮ್ಮನ್ನು ಸಾಕಿದ್ದು. ನಮ್ಮ ತಂದೆ, ತಾಯಿ ಎಲ್ಲಾ ಅವರೇ. ಅವರ ಆಶೀರ್ವಾದವೇ ನಮ್ಮನ್ನು ಈ ಮಟ್ಟಕ್ಕೆ ಬೆಳೆಸಿದ್ದು, ನಮ್ಮ ಅಜ್ಜಿ ಇರದಿದ್ರೆ ನಮ್ಮ ಜೀವನ ಆಗ್ತಿರಲಿಲ್ಲ.

- **ನಿಮ್ಮ ವಿದ್ಯಾಭ್ಯಾಸ ಸಾಲಿಗ್ರಾಮದಲ್ಲೇ ಆಯ್ತಾ?**

ಎಸ್‌ಎಸ್‌ಎಲ್‌ಸಿವರೆಗೆ ನಾನು ಅಲ್ಲೇ ಓದಿದ್ದು.

- **ಸಾಲಿಗ್ರಾಮ ಸಂಕೇತಿಕೃಷಿಗೆ ಹೆಸರಾಗಿದ್ದ ಗ್ರಾಮ. ಆಗ ಅಲ್ಲಿನ ಪರಿಸ್ಥಿತಿ ಹೇಗಿತ್ತು?**

ಹೌದು, ಕೃಷಿಕರು ಇದ್ರು. ಆದ್ರೆ Land Reform Act ಬರಲು ಕಾರಣ ಬ್ರಾಹ್ಮಣರ ಸೋಂಬೇರಿತನವೇ! ನಾನು ನೋಡ್ತಾ ಇದ್ದೆ.



ತಮ್ಮದೇ ವೇದಪಾಠಶಾಲೆಯಲ್ಲಿ ವೇದಾಧ್ಯಯನ ಮಾಡುತ್ತಿರುವ ಬ್ರಹ್ಮಚಾರಿಗಳೊಂದಿಗೆ
ಬಿ.ಎನ್.ವಿ.ಸುಬ್ರಹ್ಮಣ್ಯ: ಬೆಂಗಳೂರು

ಇವರು ಜಮೀನು ಯಾವ ದಿಕ್ಕಿಗಿದೆ ಅಂತ ನೋಡ್ತಾ ಇರಲಿಲ್ಲ. ರೈತ ಬೆಳೆದು ತಂದದ್ದನ್ನು, ಮೂಟೆ ಎಣಿಸಿ ಒಳಗೆ ಹಾಕ್ತಿದ್ರೇ ಹೊರತು ಜಮೀನಿಗೆ ಗೊಬ್ಬರ ಹಾಕಿದ್ರಾ, ಮಾಡಿದ್ರಾ, tax ಕಟ್ಟಿದರಾ ಏನೂ ತಲೆ ಕೆಡಿಸಿಕೊಳ್ತಾ ಇರಲಿಲ್ಲ. ಹಾಗಾಗಿ ಹಳೇ ಮೈಸೂರಿನವರಿಗೆ Land Reform Act Major ಆಗಿ affect ಆಯ್ತು. ಯಾರು ಸ್ವಂತವಾಗಿ ದುಡಿಮೆ ಮಾಡಿಕೊಂಡಿದ್ರೋ ಅವರ ಜಮೀನು ಹೋಗಲಿಲ್ಲ. Especially ಸಾಲಿಗ್ರಾಮದಲ್ಲಿ ಎಲ್ಲರೂ ಜಮೀನನ್ನು ಕಳೆದುಕೊಂಡುಬಿಟ್ರು. ಅಲ್ಲಿ ಇದ್ದವರೆಲ್ಲಾ ಹಾಗೇನೇ. ಬರೀ ಮನೆಯ ಮುಂದೆ ಹರಟೆ ಹೊಡೆದುಕೊಂಡು ಕೂರೋರು. ಹೀಗಾಗಿ ಜಮೀನು ಹೊರಟುಹೋಯ್ತು.

- **ತಾವು ಹೇಳಿದ್ರಿ . . ಸಂಕೇತಿಗಳು ಸ್ವಂತ ದುಡಿಮೇಲೇ ನಂಬಿಕೆ ಇಟ್ಟವರು ಅಂತ. ಆದ್ರೂ ಕೂಡ ಬಾಗಾಯ್ತನ್ನು ಮಾಡಿದ್ರು, ಗದ್ದೆ ವ್ಯವಸಾಯ ಮಾಡಲಿಲ್ಲ. ಜಮೀನನ್ನು ಕಳೆದುಕೊಂಡ್ರು ಅಂದ್ರೆ ಬಹಳ ವಿರೋದಾಭಾಸ ಅನ್ನಿಸುತ್ತಲ್ವಾ?**

  ಯಾಕೇಂದ್ರೆ ಈ ಜಮೀನು ಅವರು ಸಂಪಾದನೆ ಮಾಡಿದ್ದಲ್ಲ. ತಲತಲಾಂತರದಿಂದ ಬಂದದ್ದು. ಸಾಲಿಗ್ರಾಮದಲ್ಲಿ ಸಂಕೇತಿಗಳದ್ದು ತೋಟ ಕಡಿಮೆ. ಬೆಟ್ಟದಪುರ, ಬಸವಾಪಟ್ಟಣ, ಹರವೆ ಈ ಕಡೆ ಜಾಸ್ತಿ. ಕಾವೇರಿ ನಾಲೆ ನೀರಿದ್ರಿಂದ ಸಾಲಿಗ್ರಾಮದಲ್ಲಿ ಗದ್ದೆ ಜಾಸ್ತಿ. ಪೂರ್ವಿಕರಿಂದ ಬಂದದ್ದನ್ನು ಇವರು ಆರಾಮವಾಗಿ ಕಾಲ ಕಳೆದು ಹಾಳು ಮಾಡಿದ್ರು.

- **ವಿದ್ಯಾಭ್ಯಾಸದ ಜತೆಗೆ ನೀವೇನಾದ್ರೂ ಕೃಷಿ ಕೆಲಸ ಮಾಡ್ತಿದ್ರಾ?**

  ಇಲ್ಲ. ನಮಗೆ ಜೀವನವೇ ಒಂದು ಹೋರಾಟ ಆಗಿತ್ತು. ಹಾಗಾಗಿ ೬೨ರಲ್ಲಿ ಬೆಂಗಳೂರಿಗೆ ಬರುವವರೆಗೆ ನಾನು ಬರೀ ಓದುತ್ತಿದ್ದೆ ಅಷ್ಟೆ. ಬೇರ್‍ಯಾವ ಕೆಲಸ ಮಾಡಿಲ್ಲ. ನಮ್ಮ ಅಜ್ಜಿ ಏನು ಮಾಡಿದ್ರೂ ಅದಕ್ಕೆ ಅವಕಾಶ ಕೊಡ್ತಿರಲಿಲ್ಲ.

- **ನಿಮ್ಮ ಬಾಲ್ಯದ ಕನಸುಗಳು ಏನಿದ್ವು?**

  ಕನಸೂ ಏನೂ ಇತ್ತಿಲ್ಲ. ಭಗವಂತ ನನ್ನನ್ನ ಈ ಮಟ್ಟಕ್ಕೆ ತರ್‍ತಾನೆ ಅಂತ ನಾನು ಖಂಡಿತಾ ತಿಳಿದಿರಲಿಲ್ಲ. ನಾನು ಬಹಳ ಸಾಮಾನ್ಯವಾಗಿದ್ದವನು. ಅರುವತ್ತೆರಡರಲ್ಲಿ ಬೆಂಗಳೂರಿಗೆ ಬಂದಾಗ ನನಗೆ ೭೫ ರೂಪಾಯಿ ಸಂಬಳ. ಬೆಂಗಳೂರಿನಲ್ಲಿ ಟಿ.ಟಿ.ಕೆ. ಪ್ರಿಸಿಶನ್ಸ್ ಕಂಪೆನಿಯಲ್ಲಿ Draftmen ಆಗಿ ಕೆಲಸಕ್ಕೆ ಸೇರಿದೆ. ಬೇರೆ, ಬೇರೆ factoryನಲ್ಲಿ ಸುಮಾರು ಹತ್ತು ವರುಷ ದುಡಿದೆ. ೬೮ರಲ್ಲಿ ನನಗೆ ಮಲ್ಲಿಕಾರ್ಜುನಶಾಸ್ತ್ರಿಗಳು ಅವರ ಮಗಳನ್ನು ಕೊಟ್ಟು ಮದುವೆ ಮಾಡಿದ್ರು. ಆಗ ನನಗೆ ೩೦೦ ರೂಪಾಯಿ ಸಂಬಳ ಬರ್‍ತಿತ್ತು. ಜೀವನಕ್ಕಾಗಿ ಹೋರಾಡೋದೇ ಇದ್ದ ದೊಡ್ಡ ಕನಸು. ನನ್ನ ಮಗಳು ೭೧ರಲ್ಲಿ ಹುಟ್ಟಿದ್ಳು. ಆಮೇಲೆ ನನ್ನ ಜೀವನ ಶೈಲೀನೇ ಬದಲಾಯ್ತು. ಅವಳೇ ಎಲ್ಲವನ್ನೂ ತಂದುಕೊಟ್ಳು ಅಂದ್ರೆ ತಪ್ಪೇನಿಲ್ಲ.

- **ಬಾಲ್ಯದಿಂದಲೂ ತಮಗೆ ಕೃಷಿಕನಾಗಬೇಕು ಅನ್ನುವ ವಿಶೇಷವಾದ ಹಂಬಲ ಇರಲಿಲ್ಲ. ಆದ್ರೆ ಈಗ ಕೃಷಿಕನಾಗಬೇಕು ಅನ್ನುವ ಛಲ ಯಾಕೆ ಬಂತು?**

  ರಕ್ತದಲ್ಲಿ ಇತ್ತಲ್ಲ. ಸಂಕೇತಿಗಳಿಗೆ ಕೃಷಿ ಅನ್ನುವುದು ರಕ್ತಗತವಾಗಿದೆ. ಆದ್ರಿಂದ ಬಂತು. ನಮ್ಮ ತಂದೆಯವರ ತೋಟ ಸಿಗಲಿಲ್ಲವಲ್ಲಾ ಎಂಬ ಛಲವೂ ಕಾರಣ ಇರಬಹುದು. ನಮ್ಮಜ್ಜಿ ಹೇಳೋರು. ಒಳ್ಳೆಯ ತೋಟ ಮಾಡಿದ್ರು ನಿಮ್ಮ ತಂದೆ, ಆದ್ರೆ ನಿಮಗೆ ಏನೂ ಸಿಗಲಿಲ್ಲ, 'ನೀನು ಮತ್ತೆ ತೋಟ ಮಾಡು' ಅಂತ ಒತ್ತಾಸೆ ಕೊಟ್ರು, ಕಡೆಗೆ ಮೊದಲು ಅವರ ಹೆಸರಲ್ಲೇ ದೇವನಹಳ್ಳಿ ಹತ್ರ ಹೆಗ್ಗನಹಳ್ಳೀಲಿ ೧೫ ಎಕರೆ ಜಮೀನು ಖರೀದಿಸಿದೆ. ಅಲ್ಲಿ ದ್ರಾಕ್ಷಿ, ತೆಂಗು ಎಲ್ಲಾ ಬೆಳೆದೆ. ನಮ್ಮವರು ಅಂತ ಒಬ್ರನ್ನು ನಂಬಿದ್ದೆ. ಅವರು ಕೈಕೊಟ್ರು.

ಹಾಗಾಗಿ ಆ ಜಮೀನು ಮಾರಿದೆ. ಅನಂತರ ೨೦ ವರುಷದ ಹಿಂದೆ, ಕನಕಪುರ ರಸ್ತೇಲಿ, ಮೂರೂವರೆ ಎಕರೆ ತೋಟ ತೊಗೊಂಡೆ. ಅದು ಪೂರ್ಣ ಹಾಳಾಗಿದ್ದ ತೋಟ. ಅದನ್ನು ಸಂಪೂರ್ಣವಾಗಿ ಅಭಿವೃದ್ಧಿ ಮಾಡಿ, ಮತ್ತೆ ಅಕ್ಕಪಕ್ಕದ ಜಮೀನು ಖರೀದಿಸಿ, ಒಟ್ಟು ೧೨ ಎಕರೆ ಜಮೀನು ಮಾಡಿದೀನಿ. ಎಲ್ಲಾ ತೆಂಗು, ಅಡಿಕೆ, ಬಾಳೆ ಹಾಕಿದೀನಿ. ಮಲೆನಾಡಿನ ತೋಟದಂತೆ ಈ ತೋಟ ಸಹಾ ಮಾಡಿದೀನಿ. ತೋಟದಲ್ಲಿ ಇಲ್ಲದಿರುವ ವಸ್ತೂನೇ ಇಲ್ಲ. ಆದ್ರೆ ಈಗ ನನಗೆ ಅಲ್ಲಿ ಉಳಿದಿರೋದು ಒಂದೂವರೆ ಎಕರೆ ತೋಟ. ಯಾಕೇಂದ್ರೆ ನನ್ನ ಶಾಲೆ ಸಲುವಾಗಿ ತೋಟ ಸ್ವಲ್ಪ



ಕಾಫಿ ಚೆನ್ನಾಗಿ ಹೂ ಬಿಟ್ಟಿದೆ: ಬಿ.ಎನ್.ವಿ.ಸುಬ್ರಹ್ಮಣ್ಯ: ಬೆಂಗಳೂರು

ಮಾರಬೇಕಾಯ್ತು. ಒಂದೂವರೆ ಎಕರೇಲಿ, ೬೦ ಗಿಡ ತೆಂಗಿದೆ, ೨೦೦ ಗಿಡ ಅಡಿಕೆ ಇದೆ, ೩೦೦ ಗಿಡ ಕಾಫಿ, ಕಾಳುಮೆಣಸಿದೆ, ಏಲಕ್ಕಿ ಇದೆ. ಸೀಬೆ, ಸಪೋಟ, ಮಾವು, ಹಾಗೇ ಬೇರೆ ಬೇರೆ ಹಣ್ಣಿನ ಗಿಡಗಳು ಇವೆ. ಇಷ್ಟನ್ನೂ ಮಿಶ್ರಬೆಳೆಯಾಗಿ ಒಂದೂವರೆ ಎಕರೇಲಿ ಬೆಳೆದಿದೀನಿ. ನೀರಿಗೆ ಬೋರ್‌ವೆಲ್ ಇದೆ. ಅದ್ರಲ್ಲಿ ನೀರು ಚೆನ್ನಾಗಿದೆ. ನಾನು chemicals ಬಳಸೋಲ್ಲ. ಹಿಂದೆ ರಾಸಾಯನಿಕ ಗೊಬ್ಬರ ಹಾಕ್ತಿದ್ದೆ. ಆದ್ರೆ ಎರೆಹುಳು ಗೊಬ್ಬರ ಬಂದ ಮೇಲೆ ಅದನ್ನು ನಾನೇ ಅಭಿವೃದ್ಧಿ ಮಾಡಿದೆ. ರಾಗಿಗುಡ್ಡದಿಂದ ಕಾಲು ಕೇಜಿ ಹುಳು ತಂದು, ಅಭಿವೃದ್ಧಿಪಡಿಸಿದೆ. ಈಗ ಇಡೀ ತೋಟಕ್ಕೆ ಆಗುವಷ್ಟು ಗೊಬ್ಬರ ಸಿಕ್ತಾ ಇದೆ. ಹಸಿರುಗೊಬ್ಬರ ಹಾಗೂ ಎರೆಗೊಬ್ಬರ ಬಿಟ್ಟರೆ ತೋಟಕ್ಕೆ ಬೇರೆ ಏನೂ ಬಳಸೋಲ್ಲ. ನಮ್ಮ ಬೆಳೆ ಉತ್ತಮವಾಗಿದೆ. ಎರೆಹುಳು ಗೊಬ್ಬರ ಹಾಕಿದ್ರೆ ಬೆಳೆಗೆ ಯಾವುದೇ ಖಾಯಿಲೆ ಬರೋಲ್ಲ. ಬೆಳೆ Bumper crop. ಅದು ಬಹಳ ನಿಜ. ನನ್ನ ಪ್ರಾಯೋಗಿಕ ಅನುಭವ ಸಹ ಹೌದು. ಸಾವಯವ ಕೃಷೀನ ನಾನು ಶುರು ಮಾಡಿದೀನಿ. ಈಗ ಮತ್ತೆ ಆರು ಎಕರೆ ಜಮೀನು ಖರೀದಿ ಮಾಡಿದೀನಿ. ಅಲ್ಲಿ ಶಾಲೆ ಅಭಿವೃದ್ಧಿ ಮಾಡಬೇಕು, ಅಬಲಾಶ್ರಮ ಮಾಡಬೇಕು, ವೃದ್ಧಾಶ್ರಮ ಮಾಡಬೇಕು ಅಂತಿದೀನಿ. ಅಲ್ಲಿ ಹೆಣ್ಣುಮಕ್ಕಳ ವಿದ್ಯಾರ್ಥಿನಿಲಯ ಆರಂಭಿಸಿದೀನಿ. ನಮ್ಮ ಪಾಠಶಾಲೆ ಇದೆ ಅಲ್ಲಿ. ರಾಗಿ, ಬೇಳೆ, ಕಾಳು ಎಲ್ಲಾ ಅಲ್ಲೇ ಬೆಳೀತಾ ಇದೀವಿ.



ತಮ್ಮ ಗೋವುಗಳೊಂದಿಗೆ ಬಿ.ಎನ್.ವಿ.ಸುಬ್ರಹ್ಮಣ್ಯ: ಬೆಂಗಳೂರು

- ಆರಂಭದಲ್ಲಿ ದ್ರಾಕ್ಷಿ ಬೆಳೆದೆ ಅಂದ್ರಲ್ಲಾ ಅದರ ಅನುಭವದ ಬಗ್ಗೆ ಹೇಳಿ?

ದ್ರಾಕ್ಷಿ ಚೆನ್ನಾಗಿ ಇತ್ತು. ಆದ್ರೆ ಅದಕ್ಕೆ ಬರೀ ರೋಗ. ಔಷಧ ಸಿಂಪರಣೆ ಮಾಡದೆ ದ್ರಾಕ್ಷಿ ಬೆಳೆಯಲು ಸಾಧ್ಯವೇ ಇಲ್ಲ. ನಾನು ಬೆಳೆದದ್ದು ಅನಬ್-ಇ-ಶಾಹಿ ಅನ್ನುವ ತಳಿ. ಬರೀ ಔಷಧಿ ಹೊಡೆದು ಸಾಕಾಯ್ತು. ಆ ಬೆಳೆ ಇಷ್ಟ ಆಗೋಲ್ಲ.

- ಕೃಷಿ ಬಗ್ಗೆ ತಾಂತ್ರಿಕ ವಿಚಾರ ತಿಳಿಯಲು ಏನು ಮಾಡ್ತಿದ್ರಿ?

ಗಾಂಧಿ ಕೃಷಿ ವಿಶ್ವವಿದ್ಯಾಲಯ ತಜ್ಞರನ್ನು ಸಂಪರ್ಕ ಮಾಡ್ತಿದ್ದೆ. ಅವರನ್ನು ತೋಟಕ್ಕೆ ಕರೆದುಕೊಂಡು ಬರ್ತಿದ್ದೆ. ರೋಗ ಬಂದಾಗ ಏನು

ಔಷಧ ಸಿಂಪರಣೆ ಮಾಡಬೇಕು ಅಂತ ಕೇಳ್ತಿದ್ದೆ. ಮುಂಚೆ ಅದನ್ನು ಬಳಸ್ತಾನೂ ಇದ್ದೆ. ಈಗ ಅದನ್ನೆಲ್ಲಾ ಬಿಟ್ಟಿದೀನಿ. ಈಗ ಹಸುವಿನ ಗಂಜಲ, ಬೇವಿನ ಎಣ್ಣೇನ ಮಿಶ್ರಣ ಮಾಡಿ, ನೀರು ಬೆರೆಸಿ ಸಿಂಪರಣೆ ಮಾಡ್ತೀನಿ. ಯಾವ ರೋಗಾನೂ ಬರ್ತಿಲ್ಲ.

- **ನಿಮ್ಮ ತೋಟವನ್ನು ಹ್ಯಾಗೆ ಹಂತ ಹಂತವಾಗಿ ಅಭಿವೃದ್ಧಿ ಮಾಡಿದ್ರಿ?**

  ತೋಟ ತೊಗೊಂಡಾಗ ೨೦ ತೆಂಗಿನ ಗಿಡ ಇತ್ತು. ಉಳಿದದ್ದೆಲ್ಲಾ ಪಾಳು. ಮೊದಲು ದುಡ್ಡು develop ಮಾಡೋದಕ್ಕೆ commercial crop ಬಾಳೆ ಹಾಕಿದೆ. ಬಾಳೇಲಿ ಚೆನ್ನಾಗಿ ದುಡ್ಡು ಬಂತು. ಅನಂತರ ಆ ಜಮೀನಿಗೆ ತೆಂಗು ಹಾಕಿದೆ. ಮಾವಿನಗಿಡ ಹಾಕಿದೆ. ಶೃಂಗೇರಿಯಿಂದ ಅಡಿಕೆ ತಂದು ಹಾಕಿದೆ. ತಿಪಟೂರು (ತಾ) ಹೊನ್ನವಳ್ಳಿಯಿಂದ ತೆಂಗು ತಂದೆ. ಒಳ್ಳೆಯ ತಿಪಟೂರು ತಳಿ ಅದು. Oil content ಜಾಸ್ತಿ, ತಿರುಳು ದಪ್ಪ ಇದೆ. ಮಲೆನಾಡು ಅಡಿಕೆಗೆ famous. ಹಾಗಾಗಿ ಶೃಂಗೇರಿಯಿಂದ ಅಡಿಕೆ ತಂದೆ. ಈಗ ಅಲ್ಲೊಂದು ತೋಟ ಸಹಾ ಮಾಡಿದೀನಿ. ಜಯಪುರದ ಹತ್ರ ೧೬ ಎಕರೆ ತೋಟ ಸಹಾ ಮಾಡಿದೀನಿ. ಅಲ್ಲಿ ನಮ್ಮ ನೆಂಟರು ಇದಾರೆ. ಶೃಂಗೇಶ್ ಅಂತ ಅವರ ಹೆಸರು. ಅವರ ತಂಗೀನ ನಮ್ಮ ಅಕ್ಕನ ಮಗನಿಗೆ ತಂದಿದೀವಿ. ಹಾಗಾಗಿ ಅಕ್ಕನ ಮಗನ ಹೆಸರಿನಲ್ಲಿ ೧೬ ಎಕರೆ ತೋಟ ಮಾಡಿದೀನಿ. ಅಡಿಕೆ, ಕಾಫಿ, ಮೆಣಸು, ವೆನಿಲ್ಲಾ, ಹಣ್ಣಿನ ಗಿಡಗಳು ಎಲ್ಲಾ ಹಾಕಿದೀನಿ. ಅಲ್ಲೂ ನೀರು ಚೆನ್ನಾಗಿ ಸಿಕ್ಕಿದೆ.

  ತೋಟದಲ್ಲಿ ನಾನು ಬೆಳೆದದ್ದನ್ನು ಅನಂತರದ ದಿನಗಳಲ್ಲಿ commercial ದೃಷ್ಟಿಯಿಂದ ಮಾಡಲಿಲ್ಲ. ನಾನು ಪಾಠಶಾಲೆ ಶುರು ಮಾಡಿ ೨೦ ವರುಷ ಆಯ್ತು. ಅಲ್ಲಿಯ ಮಕ್ಕಳಿಗೆ ನಾವು ಬೆಳೆದದ್ದೆಲ್ಲಾ ಕೊಡಬೇಕು. ಅಡಿಕೆ ಬಿಟ್ರೆ ಬೇರೆ ಯಾವ ತೋಟದ ಉತ್ಪನ್ನಾನೂ ನಾನು ಈಗ ಮಾರ್ತಿಲ್ಲ.

- **ಇಷ್ಟೆಲ್ಲಾ ಬೆಳೆಗಳನ್ನು ಒಂದೇ ಜಮೀನಿನಲ್ಲಿ ಹ್ಯಾಗೆ ಒಟ್ಟಾಗಿ ಬೆಳೀಬಹುದು ಅಂತ ತಿಳಿದುಕೊಂಡ್ರಿ?**

  ಸುಮ್ಮನೆ ಹಾಕೋಣ ಅಂತ ಪ್ರಯತ್ನ ಮಾಡಿದ್ದು. 'ಬರೀ ಒಂದು ಬೆಳೆನೇ ನಂಬಬೇಡಿ. ಮಿಶ್ರ ಬೇಸಾಯ ಮಾಡಿ. ಒಂದರಲ್ಲಿ ಏಟು ಬಿದ್ರೆ ಮತ್ತೊಂದರಲ್ಲಿ ದುಡ್ಡು ಬರುತ್ತೆ' ಅಂತ ಪತ್ರಿಕೇಲಿ ಬಂದದ್ದನ್ನು ಓದುತ್ತಿದ್ದೆ. ನಮಗೂ ಬೆಳೆಗಳು ಬೇಕಿದ್ರಿಂದ ಪ್ರಯತ್ನ ಮಾಡಿದೆ. ಮತ್ತೂರಿನಲ್ಲಿ ಒಂದೆರಡು ತೋಟವನ್ನು ನೋಡಿದ್ದೆ. ಚಿಲ್ಕುಂದದಲ್ಲೂ ಒಂದೆರಡು ತೋಟ ನೋಡಿದ್ದೆ. ಅಲ್ಲಿ ಪ್ರಸನ್ನ ಅಂತ ಒಬ್ಬರು ಮೇಷ್ಟರು ಮಿಶ್ರ ಬೆಳೆ ಮಾಡಿ ತೋಟಾನ ತುಂಬಾ ಚೆನ್ನಾಗಿ ಅಭಿವೃದ್ಧಿ ಮಾಡಿದಾರೆ. ಹಾಗಾಗಿ ನಮ್ಮ ತೋಟಾನೂ ಅದೇ ರೀತಿ ಅಭಿವೃದ್ಧಿ ಮಾಡಿದೆ. ನಮ್ಮ ತೋಟಕ್ಕೆ ಹೋದ್ರೆ ನನ್ನ ಬ್ಯಾಟರಿ charge ಆಗುತ್ತೆ. ಬೆಳಗಿನಿಂದ ನೂರೆಂಟು ತಾಪತ್ರಯ ಅನುಭವಿಸಿ, ತೋಟಕ್ಕೆ ಹೋದ್ರೆ ಪ್ರಕೃತಿ ಒಳಗೆ ನಾವು ಎಲ್ಲ ಮರೀತೀವಿ. ಗಿಡ, ಹಣ್ಣು, ಹೂವು ನೋಡ್ತಾನೇ ಆಂತರಿಕಶಕ್ತಿ ಹೆಚ್ಚಾಗುತ್ತೆ. ಪ್ರತಿ ದಿನಾ ನಾನು ಬೆಳಗ್ಗೆ ಶಾಲೆಗೆ ಹೋಗ್ತೀನಿ. ನಂತ್ರ Hostel, ಆಮೇಲೆ factory ಒಂದು round ಸುತ್ತಿ ತೋಟಕ್ಕೆ ಹೋಗ್ತೀನಿ. ಎರಡು ಮೂರು ಘಂಟೆ ಅಲ್ಲೇ ಕಳೀತೀನಿ. ನನಗೆ maximum ಖುಷಿ ಸಿಗೋದು ತೋಟದಲ್ಲಿ. ಜನ ಮೋಸ ಮಾಡಬಹುದು. ಆದ್ರೆ ಪ್ರಕೃತಿ ನಮಗೆ ಮೋಸ ಮಾಡೋಲ್ಲ. ಅಲ್ಲಿ ಎರಡು ಹಸು ಇಟ್ಟಿದೀನಿ. ಇಲ್ಲಿ ಬೆಂಗಳೂರಿನ ಮನೇಲಿ ಎರಡು ಹಸು ಇದೆ. ತೋಟ ನನಗೆ ತೃಪ್ತಿ ನೀಡಿದೆ.

- **ವ್ಯವಸಾಯಕ್ಕೆ ಬಹಳ ಪೂರಕವಾದದ್ದು ಹಸು ಸಾಕಾಣಿಕೆ. ಅದರ ಬಗ್ಗೆ ಹೇಳಿ.**

  ನಮ್ಮ ಪೂರ್ವಿಕರ ಕಾಲದಿಂದಲೂವೆ ಗೋವಿಗೆ ಶ್ರೇಷ್ಠವಾದ ಸ್ಥಾನ ಕೊಟ್ಟಿದೀವಿ. ಮೂವತ್ಮೂರು ಕೋಟಿ ದೇವರು ಅದರಲ್ಲಿದ್ದಾರೆ ಅಂತ ಅದಕ್ಕೆ ಪೂಜನೀಯ ಸ್ಥಾನ ಇದೆ. ಗೋಸೇವೆ ಮಾಡಿದ್ರೆ ಪುಣ್ಯ ಸಿಗುತ್ತೆ ಅಂತ ಹಿಂದೂಗಳಲ್ಲಿ ನಂಬಿಕೆ ಇದೆ. ಹಾಲು, ಸಗಣಿ, ಗಂಜಲ ಎಲ್ಲಾ ಮನುಷ್ಯನ ಒಳ್ಳೆಯದಕ್ಕಾಗಿ ಗೋವು ಕೊಡ್ತಿರೋದು. ಅದು ಹುಲ್ಲು ತಿಂದು ನಮಗೆ ಹಾಲು ನೀಡುತ್ತೆ. ಅದಕ್ಕಾಗಿ ನಾನು ೨೫ ವರುಷಗಳಿಂದ ಹಸು ಸಾಕಿದೀನಿ. ಹಿಂದೆ ನಾಟಿ ತಳಿಗಳು ಇದ್ವು. ಈಗ ಮಿಶ್ರತಳಿ ಸಾಕ್ತಿದೀನಿ. ವ್ಯವಸಾಯಕ್ಕೆ ಹಸು ಇರಬೇಕು ಅನ್ನುವುದು ನೂರಕ್ಕೆ ನೂರರಷ್ಟು ಸತ್ಯ.

- **ಆದಾಯದ ದೃಷ್ಟಿಯಿಂದ ತಾವು ವ್ಯವಸಾಯ ಮಾಡ್ತಿಲ್ಲ. ಆದ್ರೆ ಖರ್ಚಿನ ಲೆಕ್ಕಾನಾದ್ರೂ ತಾವು ಇಟ್ಟಿದೀರಾ?**

  ಇಟ್ಟಿದೀನಿ. ಅದು ಅಲ್ಲಿಗಲ್ಲಿಗೆ maintain ಆಗ್ತಿದೆ. Income tax ಸಲುವಾಗಿಯಾದ್ರೂ ಇಡಲೇಬೇಕಲ್ಲ. ಯಾಕೇಂದ್ರೆ ನನ್ನದು ಎಲ್ಲಾ accountable. ಹಾಗಾಗಿ ನಾನು ಕೃಷಿಯ ಖರ್ಚುವೆಚ್ಚ ತೋರಿಸಲೇಬೇಕು.

- **ಆದಾಯದ ದೃಷ್ಟಿಯಿಂದ ಕೃಷಿ ಮಾಡೋದು ಇವತ್ತು ಲಾಭದಾಯಕವೇ? ಯಾಕೇಂದ್ರೆ ನೀವು ಕೈಗಾರಿಕೋದ್ಯಮಿ ಸಹಾ ಹೌದು?**
  ಅಡಿಕೆ, ವೆನಿಲ್ಲಾ ಹೀಗೆ ಆದಾಯದ ಬೆಳೆ ಬೆಳೆದ್ರೆ ಲಾಭದಾಯಕ. ಆದ್ರೆ ಅವುಗಳ ಬೆಲೆ ಬಹಳ fluctuate ಆಗೋದ್ರಿಂದ ಕೃಷಿ ನಮ್ಮ industry ತರಹ ಅಲ್ಲ. Industryಲಿ ನಮಗೆ product ಬಂದ ತಕ್ಷಣ profit expect ಮಾಡ್ತೀವಿ. ಆದ್ರೆ ಇಲ್ಲಿ ಹತ್ತು ವರುಷದವರೆಗೆ ಏನೂ ಸಿಗೋಲ್ಲ. ಇಲ್ಲಿ ಅಲ್ಲಿಯವರೆಗೆ ದುಡ್ಡು ಹಾಕ್ತಾನೇ ಇರಬೇಕು. ಆದಾಯದ ನಿರೀಕ್ಷೆ ಇರುವುದಿಲ್ಲ.

- **ಹಾಗಾದ್ರೆ ವ್ಯವಸಾಯ ಮಾಡಿ ಬದುಕಲು ಸಾಧ್ಯವಿಲ್ಲವಾ?**
  ಬದುಕಬಹುದು. ಆದ್ರೆ ಅವನೇ ಎಲ್ಲಾ ಮಾಡಬೇಕು. ಆಗ ಖಂಡಿತವಾಗಿ ಕುಟುಂಬದ ಜೀವನ ನಡೆಸಬಹುದು. ತುಂಬಾ ಸಂತೋಷವಾಗಿ ಇರಬಹುದು.

- **ವ್ಯವಸಾಯವನ್ನೇ ನಂಬಿ ಸಂಕೇತಿಗಳು ಬಾಳಿ ಬದುಕಿದ್ದ ಹಲವು ಗ್ರಾಮಗಳಲ್ಲಿ ಈಗ ಸಂಕೇತಿ ಕೃಷಿಕರು ಇಲ್ಲ. ಈ ಸಂಕೇತಿ ಕೃಷಿಕರು ಇರುವ ಗ್ರಾಮಗಳಲ್ಲೂ ನಿಧಾನವಾಗಿ ಪಟ್ಟಣದ ಕಡೆ ಮುಖ ಮಾಡುವವರ ಸಂಖ್ಯೆ ಜಾಸ್ತಿಯಾಗಿದೆ. ವ್ಯವಸಾಯ ನಂಬಿ ಬದುಕಬಹುದಾಗಿದ್ರೆ, ಈ ಪರಿಸ್ಥಿತಿ ಯಾಕೆ ಬಂದಿದೆ?**
  ನಮ್ಮ ಸಂಕೇತಿಗಳಲ್ಲಿ ಬೆಟ್ಟದಪುರದ ಸಂಕೇತಿಗಳು ಇಂಗ್ಲಿಷ್ ವಿದ್ಯಾಭ್ಯಾಸದ ವ್ಯಾಮೋಹಕ್ಕೆ ಬಲಿಯಾಗಿ, ವೇದ, ವ್ಯವಸಾಯ ಎರಡೂ ಬಿಟ್ರು. ಆದ್ರೆ ಕೌಶಿಕ ಸಂಕೇತಿಗಳು ಇವತ್ತಿಗೂ ವ್ಯವಸಾಯ ಬಿಟ್ಟಿಲ್ಲ. M.Sc., Ph.D., ಮಾಡಿದ್ರೂ ಕೂಡ, ಹಳ್ಳೀಲಿದ್ದು ವ್ಯವಸಾಯ ಮಾಡ್ತಾರೆ. ಒಂದು ಕುಟುಂಬದಲ್ಲಿ ಒಬ್ಬ ವ್ಯವಸಾಯ ಮಾಡ್ತಾನೆ. ಮತ್ತೂರು, ಹೊಸಹಳ್ಳಿ, ಚಿಲ್ಕುಂದ, ಲಿಂಗದಹಳ್ಳಿ, ಬಸವಾಪಟ್ಟಣ, ಅಗ್ರಹಾರ, ಅಲ್ಲೆಲ್ಲಾ ಜಮೀನು ಕಳೆಯದೆ ತಾವೇ ವ್ಯವಸಾಯ ಮಾಡ್ತಿದಾರೆ. ಅದನ್ನು ನಿಜಕ್ಕೂ appreciate ಮಾಡಬೇಕು. ಹಾಗಾಗಿ ನೀವು ಹೇಳಿದ್ದು ಅರ್ಧ ಸರಿ ಅಷ್ಟೆ.

- **ನಿಮ್ಮ ವಿಶಿಷ್ಟವಾದ ಸಂಕೇತಿ ಕೃಷಿ ಉಳೀಬೇಕು ಅಂತೀರಾ? ಅದು ಉಳೀಬೇಕಿದ್ರೆ ಏನು ಮಾಡಬೇಕು?**
  ನಾನು ಸಂಕೇತಿಗಳಷ್ಟೇ ಅಲ್ಲ, ಬ್ರಾಹ್ಮಣರು ಜಮೀನು ಇಟ್ಟು ಬೆಳೆಸಬೇಕು ಅಂತೀನಿ. ಈಗಿನ ಸ್ಥಿತಿ ನೋಡಿದ್ರೆ ಮುಂದಕ್ಕೆ ಕೆಲಸ ಸಿಗುತ್ತೋ ಇಲ್ವೋ! ಎಷ್ಟೇ ಓದಿದ್ರೂ, ಕೆಲಸ ಸಿಗುವ ಭರವಸೆ ಇಲ್ಲ. ಅದಕ್ಕೆ ಅವನು ಭೂಮಿ ತಾಯಿ ನಂಬಿದ್ರೆ ಅವನ ಹೊಟ್ಟೇಗಂತೂ ದ್ರೋಹ ಮಾಡೋಲ್ಲ ಅದು. ನಾನು ಬ್ರಾಹ್ಮಣಸಂಘದ ಅಧ್ಯಕ್ಷನಾಗಿ ಎಲ್ಲಾ ಕಡೆ ಪ್ರಾರ್ಥನೆ ಮಾಡೋದೇನು ಅಂದ್ರೆ ದಯವಿಟ್ಟು ಜಮೀನು ಮಾರಬೇಡಿ, ಉಳಿಸಿಕೊಳ್ಳಿ, ಮುಂದೆ ಜಮೀನು ಸಿಗೋಲ್ಲ, ಅಂತ. ಬೇರೆ ಜಾತಿಯವರನ್ನು ನೋಡಿ, ಅವರು ಜಮೀನು ಮಾರೋದಿಲ್ಲ. ಎಷ್ಟು ಸಿಗುತ್ತೋ ಅಷ್ಟನ್ನೂ ಖರೀದಿ ಮಾಡಲು ನೋಡ್ತಾರೆ. ಆದ್ದರಿಂದ ಬ್ರಾಹ್ಮಣರು ಜಮೀನು ಉಳಿಸಿದ್ರೆ ಮುಂದಿನ ಪೀಳಿಗೆಗೆ ಆಗುತ್ತೆ. ಯಾರು ಕೈಬಿಟ್ರೂ ಜಮೀನು ಕೈಬಿಡೋಲ್ಲ.

- **ಒಬ್ಬ ಮಗನನ್ನು ವ್ಯವಸಾಯಕ್ಕೆ ಉಳಿಸಲು, ತಂದೆ ತಾಯಂದಿರ ಪೂರಕ ಶಿಕ್ಷಣ ಬಹಳ ಮುಖ್ಯ. ಅವರು ವ್ಯವಸಾಯದ ಬಗ್ಗೆ ಶ್ರದ್ಧೆ ತೋರಿಸದೇ ಇರುವುದು ಕೃಷಿ ಅಳಿಯಲು ಕಾರಣವೆ?**
  ಹೌದು, ಖಂಡಿತ. ಹಿಂದಿನವರು ಮಾಡಿದ್ರೆ ಮುಂದಿನ ಪೀಳಿಗೆಗೆ ಬಂದಿರೋದು. ಸಂಕೇತಿಗಳಿಗೆ ಒಂದು ಕಾಲದಲ್ಲಿ ವ್ಯವಸಾಯ ಬಿಟ್ಟು ಬದುಕು ಇತ್ತಿಲ್ಲ. ಇವತ್ತು ಸಂಕೇತಿಗಳು ಇಡೀ ಪ್ರಪಂಚದಲ್ಲಿ ಇದಾರೆ. ಕೃಷಿ ಮರೆತುಹೋಗಿದೆ. ಹೇಳಿಕೇಳಿ ವಿದ್ಯಾವಂತ ಜನ ಹಾಗೂ ಬುದ್ಧಿವಂತ ಜನ ಇವರು. ಏನು ಮಾಡಿಯಾದ್ರೂ ಬದುಕುವ ಛಲ ಇವರಲ್ಲಿ ಇದೆ.

- **ಹಾಗಾದ್ರೆ ವಿದ್ಯಾಭ್ಯಾಸವೇ ವ್ಯವಸಾಯದ ಉನ್ನತಿಗೆ ಮಾರಕವಾಯ್ತೆ?**
  ಅದು ಹೇಗೆ ಹೇಳಲು ಆಗುತ್ತೆ(ನಗು). ಯಾಕೇಂದ್ರೆ ಅವನು ಮೇಲೆ ಬರೋದನ್ನು ನಾವು ತಪ್ಪು ಅಂತ ಹೇಳಲು ಆಗೋದಿಲ್ವಲ್ಲಾ. ಅಲ್ಲದೆ ವ್ಯವಸಾಯಾನೇ ಮಾಡಿದ್ರೆ ಅವನು ಖಂಡಿತಾ ಇಷ್ಟು ಮುಂದುವರೆಯಲು ಆಗ್ತಿರಲಿಲ್ಲ. ಅವನಷ್ಟೇ ಸಂತೃಪ್ತನಾಗಿ ಇರಬಹುದಿತ್ತು ಅಷ್ಟೆ. ಆದ್ರೆ ಮನುಷ್ಯನಿಗೆ ತೃಪ್ತಿ ಬಹಳ ಮುಖ್ಯ. ಆಸೆಗಳಿಗೆ limit ಇಲ್ಲ. ಪೂರ್ವಿಕರಿಗೆ compare ಮಾಡಿ. ಇಡೀ ಕುಟುಂಬ ಹಳ್ಳೀಲೇ ಸಂತೃಪ್ತವಾಗಿ ಬದುಕೋರು. ಈಗ ಕಾಲ ಬದಲಾಗಿದೆ. ಆಸೆ ಮಿತಿ ಮೀರಿದೆ. ಎಷ್ಟು ಸ್ವಾರ್ಥಿಗಳಾಗಿದಾರೆ ಅಂದ್ರೆ ಅವರಿಗೆ ತಂದೆ ತಾಯಂದಿರೂ ಬೇಡ. ಆ ಸ್ಥಿತಿ ತಲುಪಿದಾರೆ. ತಾನು ತನ್ನ ಹೆಂಡತಿ, ಮಕ್ಕಳು ಇಷ್ಟೇ ಜೀವನ ಆಗಿದೆ.

- **ತಾವು ಹೇಳಿದ್ರಿ, ಪ್ರತಿಯೊಬ್ಬ ಬ್ರಾಹ್ಮಣನೂ ವ್ಯವಸಾಯ ಮಾಡಬೇಕು, ಜಮೀನು ಕಳೀಬಾರದು ಅಂತ. ನೀವು ಆದಾಯದ ಮೂಲವಾಗಿ ಉದ್ಯಮ ಇಟ್ಟಿದೀರಿ. ವ್ಯವಸಾಯವನ್ನು ಆತ್ಮತೃಪ್ತಿಗಾಗಿ ಮಾಡ್ತಿದೀರಿ. ಆದ್ರೆ ಹಳ್ಳಿಯಲ್ಲಿ ವ್ಯವಸಾಯವನ್ನೇ ನೆಚ್ಚಿಕೊಂಡಿರುವ ಅಪಾರ ಬ್ರಾಹ್ಮಣರು 'ವ್ಯವಸಾಯ ಬೇಡ, ಪಟ್ಟಣಕ್ಕೆ ಹೋಗೋಣ' ಅಂತಿದಾರೆ. ಪಟ್ಟಣದವರು ವ್ಯವಸಾಯ ಮಾಡೋಣ ಅಂತಿದಾರೆ. ಇದು ನಿಜಕ್ಕೂ ಗೊಂದಲದ ವಿಚಾರ ಅಲ್ವಾ?**

  ಖಂಡಿತಾ ಹೌದು. ಅದಕ್ಕೆ ಕಾರಣಾನೂ ಇದೆ. ಹಿಂದೆ ಸ್ವತಃ ದುಡಿಮೆ ಮಾಡ್ತಿದ್ರು. ಯಾರನ್ನೂ ನಂಬ್ತಿರಲಿಲ್ಲ. ಈಗ ನಾವು ಆರಾಮವಾಗಿರಬೇಕು, ಎಲ್ಲಾ ಆಳು ಬಂದು ಮಾಡಬೇಕು ಅನ್ನುವ ಕಾಲ ಬಂದಿದೆ. ಹಾಗಾಗಿ ಬರುವ ಉತ್ಪನ್ನವೆಲ್ಲಾ ಆಳಿನ ಕೂಲಿಗೇ ಹೋಗ್ತಿದೆ. ಸ್ವಂತ ದುಡಿಮೆ ಬಿಟ್ಟಿದ್ದೇ ಹಳ್ಳೀಲಿ ವ್ಯವಸಾಯದ ಹಿನ್ನಡೆಗೆ ಕಾರಣ. ಇವತ್ತು ಪ್ರಪಂಚ ವಿಶಾಲವಾಗಿದೆ. ಕೃಷೀನ ಆಧಾರವಾಗಿಟ್ಟುಕೊಂಡು ಅನೇಕ ಇತರೇ ಉಪ ಕಸುಬು ಮಾಡಬಹುದಲ್ವಾ.

- **ಸ್ವಂತ ದುಡಿಮೆ ಬಗ್ಗೆ ಮತ್ತೊಂದು ವಿಶ್ಲೇಷಣೇನು ಸಹಾ ನಿಮ್ಮದೇ ಜನಾಂಗ ನೀಡುತ್ತೆ. 'ಸ್ವತಃ ಶ್ರಮ ಪಡೋ ಬದಲು, ಬುದ್ಧಿಶಕ್ತಿ ಬಳಸಿ ದೈಹಿಕ ಶ್ರಮ ಕೊಂಡು ವ್ಯವಸಾಯ ಮಾಡಿದ್ರೆ, ಸಮಯ, ಶ್ರಮ ಉಳಿತಾಯ ಆಗುತ್ತೆ. ಆಗ ಇದೇ ಬುದ್ಧಿಶಕ್ತಿಯನ್ನು ಬೇರೊಂದು ಕೆಲಸಕ್ಕೆ ವಿನಿಯೋಗಿಸಬಹುದು, ಪೂರಕ ಉದ್ಯೋಗಗಳನ್ನು ಮಾಡಬಹುದು, ವ್ಯವಸಾಯದ ಬದುಕನ್ನು ಸರಿ ತೂಗಿಸಿಕೊಂಡು ಹೋಗಬಹುದು' ಅಂತ. ನೀವೇನಂತೀರಾ?**

  ಹಾಗೆ ಮಾಡಿದ್ರೆ ಚೆನ್ನಾಗಿತ್ತು. ಆದ್ರೆ ನಿಜವಾಗಿ ಏನಾಯ್ತು ಅಂದ್ರೆ ಬೇರೆಯವರನ್ನು ಇಟ್ಟು ಇವರು ಆರಾಮವಾಗಿ ಕಾಲ ಕಳೆದುಬಿಟ್ರು. ಅಲ್ಲದೇ ಆಳುಗಳನ್ನು ಬಿಟ್ಟು ಮಾಡಿಸಲು ಉತ್ಪತ್ತಿ ಸಹಾ ಹಾಗೇ ಇರಬೇಕಲ್ಲಾ. ಅರ್ಧ ಎಕರೆ, ಮುಕ್ಕಾಲ ಎಕರೆ, ಒಂದು ಎಕರೆಯ ಸಣ್ಣ ಹಿಡುವಳಿದಾರರು ಆಳುಗಳನ್ನು ಇಟ್ರೆ ಅವರಿಗೆ ಏನು ಸಿಗುತ್ತೆ? ಆದ್ರೆ ಸ್ವಂತ ದುಡಿಮೆ ಮಾಡಿದ್ರೆ ಅವನು ಆರಾಮವಾಗಿರಬಹುದು. ಹತ್ತು ಹದಿನೈದು ಎಕರೆ ಜಮೀನಿರೋರು ಆಳುಗಳನ್ನು ಇಡಲೇಬೇಕು. ನಾನು ಹೇಳೋದು ಬ್ರಾಹ್ಮಣನಿಗೆ ಒಂದು ಎಕರೆ ಅಥವಾ ಎರಡು ಎಕರೆ ಜಮೀನಿದ್ದು, ಅವನು ಸ್ವಂತವಾಗಿ ದುಡಿಮೆ ಮಾಡಿದ್ರೆ, ಸುಖವಾಗಿ ಜೀವನ ಮಾಡಬಹುದು. ಅದಂತೂ ಸತ್ಯ. ಆದ್ರೆ ಮಾಡ್ತಾ ಇಲ್ಲ. ಎಲ್ಲರಿಗೂ ಆಳು ಬೇಕು, luxury life ಬೇಕು. ಆ ಸ್ಥಿತಿ ತಲುಪಿದ್ದೀವಿ. Satisfaction ಇಲ್ಲ, ಬ್ರಾಹ್ಮಣರಲ್ಲಿ sacrificing nature ಹೊರಟುಹೋಗಿದೆ, ಏನು ಮಾಡುವುದು.

- **ಹಳ್ಳಿಯಲ್ಲಿದ್ದು ವ್ಯವಸಾಯ, ವೇದಾಧ್ಯಯನ ಮಾಡ್ತಾನೆ ಅಂದ್ರೆ ಅವನಿಗೆ ಹೆಣ್ಣು ಸಿಗೋಲ್ಲ, ಹಾಗಾಗಿ ಸಂಕೇತಿಗಳಲ್ಲಿ ವ್ಯವಸಾಯ ಬಿಡೋರ ಸಂಖ್ಯೆ ಜಾಸ್ತಿಯಾಗಿದೆ ಅಂತಾ ಹೇಳಲಾಗ್ತಿದೆ.**

  ಅದೊಂದು ಇದೆ. ಸಂಕೇತಿಗಳಲ್ಲಿ ಮಾತ್ರವಲ್ಲ, ಹವ್ಯಕರಲ್ಲೂ ಆಗಿದೆ. ಹವ್ಯಕರಿಗೂ ಸಂಕೇತಿಗಳಿಗೂ ಒಂದು ಸಾಮ್ಯ ಇದೆ. ಅವರೂ ವೇದಾಧ್ಯಯನ, ತೋಟ, ಕೃಷಿ, ನಮ್ಮಂತೆಯೇ. ಹಾಗಾಗಿ ಅವರೂ ನಮ್ಮ ಬಳಿ ಬರ್ತಾರೆ. ವೇದ ಕಲಿತರೂ ಹೆಣ್ಣು ಸಿಗೋಲ್ಲ, ಪದ್ಧತಿ ಹಾಗೆ ಬಂದಿದೆ. ಕಾಲಾನೇ ತೀರ್ಮಾನ ಮಾಡಬೇಕು.

- **ನಿಮ್ಮ ಕೃಷಿಯನ್ನು ಉಳಿಸುವ ಸಲುವಾಗಿ ಹೆಣ್ಣುಮಕ್ಕಳ ಮನಃಸ್ಥಿತಿಯನ್ನು ಬದಲಿಸಲು ಏನು ಮಾಡಬೇಕು ಅಂತೀರಿ?**

  ಅದನ್ನು ಹಿರಿಯರು ಮಾಡಬೇಕಿತ್ತು, ಮಾಡಿಲ್ಲ. ನಮ್ಮ ಧಾರ್ಮಿಕ ಮುಖಂಡರು ಮಾಡಬೇಕಿತ್ತು, ಮಾಡಿಲ್ಲ. ಬರೀ ಇದೊಂದೇ ಅಲ್ಲ, ಇಡೀ ಬ್ರಾಹ್ಮಣ್ಯ ಹಾಳಾಗ್ತಿದೆ, ಉಳೀತಾ ಇಲ್ಲ. ಹೆಣ್ಣುಮಕ್ಕಳು, ಗಂಡುಮಕ್ಕಳು ಅನ್ಯಜಾತಿಯವರನ್ನು ವಿವಾಹವಾಗ್ತಿದಾರೆ, ಅದು ಈಗ fashion ಆಗಿದೆ. ನಮ್ಮ ವೇದವಿದ್ಯೆಯ ಬಗ್ಗೆ ಅಪನಂಬಿಕೆ ಹಾಗೂ ಕೀಳರಿಮೆ ಬಂದಿದೆ. ಇದನ್ನೆಲ್ಲಾ ಸಾಮಾನ್ಯರು ತೊಡೆದು ಹಾಕಲು ಸಾಧ್ಯವಿಲ್ಲ. ಧಾರ್ಮಿಕ ಮುಖಂಡರು ಮಾಡಬೇಕು. ಅವರು ಅದಕ್ಕೇ ಕುಳಿತಿರೋದು. ಇವತ್ತು ಅವರು ಬ್ರಾಹ್ಮಣ್ಯ ಉಳಿಸಲು ಪ್ರಯತ್ನ ಮಾಡಬೇಕು. ಹೆಣ್ಣುಮಕ್ಕಳಿಗೆ ಹೇಗಿರಬೇಕು ಅಂತ ಶಿಕ್ಷಣ ನೀಡಬೇಕು. ಇಲ್ಲದೇ ಹೋದ್ರೆ ಐಶ್ವರ್ಯ ಸಂಪಾದಿಸಬೇಕು, ಮಜಾ ಮಾಡಬೇಕು ಅನ್ನುವುದೇ ಜೀವನದ ಗುರಿ ಆಗಿ ಬಿಡುತ್ತೆ. ಮನುಷ್ಯ ಹುಟ್ತಾನೆ, ಸಾಯ್ತಾನೆ. ಆ ಹುಟ್ಟು ಸಾವಿನ ಮಧ್ಯೆ ಇನ್ನೊಬ್ಬರಿಗೆ ನಾನೇನು ಮಾಡಿದೆ ಅನ್ನುವುದು ಮುಖ್ಯ. ಆ ಕಲ್ಪನೆ ಬೆಳೀಬೇಕು. ಈ ರೀತಿ ಆಗೋದಕ್ಕೆ ಹಿರಿಯರೇ ಕಾರಣ. ಅವರು ಸರಿಯಾಗಿ ಮಾರ್ಗದರ್ಶನ ಮಾಡೋಲ್ಲ, ಪೂಜೆ ಮಾಡೋಲ್ಲ, ಅತಿಥಿಗಳು ಬಂದ್ರೆ ಗೌರವ ಕೊಡೋಲ್ಲ, 'ಆಚೆಹೋಗು' ಅಂತಾರೆ. ಹೀಗಾಗಿದೆ ನಮ್ಮ ಸಮಾಜ. ಈ ಮನೋಭಾವನೆ ತೊಡೆಯಲು ಮಠಾಧೀಶರು ಪ್ರಯತ್ನ ಮಾಡಬೇಕು. ಶಿಬಿರಗಳನ್ನು

ನಡೆಸಬೇಕು. ಈ ವಿಚಾರವನ್ನು ನಾನು ಎಲ್ಲರಿಗೂ ಹೇಳ್ತೀನಿ. ಇದು ಆಗಬೇಕು. ಬೇರೆ community ನೋಡಿ, ಅವರು ತಮ್ಮ ಸಂಸ್ಕೃತಿ ಉಳಿಸಲು ಎಷ್ಟು ಶ್ರಮಪಡ್ತಿದಾರೆ. ಅವರಿಗೆ ಅವರ ಸಮುದಾಯದಲ್ಲಿ ಅಷ್ಟು ಆಸಕ್ತಿ ಇದೆ. ಆದ್ರೆ ಬ್ರಾಹ್ಮಣರಲ್ಲಿ ವಿಪರ್ಯಾಸ ನೋಡಿ. ಬ್ರಾಹ್ಮಣ ಇಡೀ ಪ್ರಪಂಚಕ್ಕೆ ಮಾರ್ಗದರ್ಶನ ತೋರಿಸ್ತಿದ್ದ. ಈಗ ಬ್ರಾಹ್ಮಣನಿಗೆ ಮಾರ್ಗದರ್ಶನ ತೋರಿಸುವ ಸ್ಥಿತಿ ಬಂದಿದೆ.

- **ತಾವು ಶಿಕ್ಷಣ ಅನ್ನುವ ಬಹಳ ಮುಖ್ಯವಾದ ವಿಷಯವನ್ನೂ ಎತ್ತಿದೀರಿ. ನೀವು ಶಿಕ್ಷಣಸಂಸ್ಥೆಯನ್ನೂ ಕಟ್ಟಿ ಬೆಳೆಸಿದ ವ್ಯಕ್ತಿ. ಕೃಷಿಗೆ ಮೂಲಭೂತವಾದ ಶಿಕ್ಷಣ ಪ್ರಾಥಮಿಕ ಹಂತದಿಂದ ಆರಂಭವಾದ್ರೆ, ಕೃಷಿ ಉಳೀಬಹುದು ಅಂತ ಅನ್ನಿಸುತ್ತಾ?**

ಖಂಡಿತಾ ಉಳಿಯುತ್ತೆ. ಕೃಷಿಯನ್ನು ಪಠ್ಯದಲ್ಲಿ ಸೇರಿಸಬೇಕು. ಭಾರತ ಕೃಷಿ ಅವಲಂಬಿಸಿದ ದೇಶ. ನಮ್ಮ ದೇಶ ಬರೀ ಕೈಗಾರಿಕೇನ ಅವಲಂಬಿಸಿದ್ರೆ ಯಾವತ್ತೋ ದಿವಾಳಿಯಾಗಿರೋದು. ಕೃಷಿ ಅವಲಂಬಿತ ರಾಷ್ಟ್ರವಾಗಿರೋದ್ರಿಂದ ಇವತ್ತಿಗೂ ಲಂಚರುಷುವತ್ತು ಹಗರಣಗಳ ನಡುವೆಯೂ ಉಳಿದಿದೆ. ಉತ್ತಮ ಮಳೆಯಾದ್ರೆ, ರೈತ ಕಷ್ಟಪಟ್ಟು ದುಡೀತಾನೆ, ಆಹಾರ ಧಾನ್ಯ ಉತ್ಪತ್ತಿಯಾಗುತ್ತೆ, ನಾವು ಬದುಕಿಬಿಡ್ತೀವಿ. ಅದಕ್ಕೇ text bookಗಳಲ್ಲಿ ಕೃಷಿಯ ಬಗ್ಗೆ ಹೆಚ್ಚು ಉಲ್ಲೇಖಗಳು ಇರಬೇಕು. ಆದ್ರೆ ಅದು ಆಗ್ತಾ ಇಲ್ಲ?

- **ಸಂಕೇತಿ ಕೃಷಿ ಉಳಿಸುವ ನಿಟ್ಟಿನಲ್ಲಿ, ನಿಮ್ಮ ಸಂಕೇತಿ ಹೆಣ್ಣುಮಕ್ಕಳ ಹಾಗೂ ಗಂಡುಮಕ್ಕಳ ವಸತಿ ಪ್ರದೇಶಗಳಲ್ಲಿ, ಕೃಷಿಯ ಬಗ್ಗೆ ವ್ಯಾಮೋಹ ಹುಟ್ಟುವ ರೀತಿಯಲ್ಲಿ ಪೂರಕಶಿಕ್ಷಣ ನೀಡುವುದು ಸಾಧ್ಯವಿಲ್ಲವೆ?**

ಬಹಳ ಕಷ್ಟ. ಪ್ರವಾಹ ಯಾವ ದಿಕ್ಕಿನಲ್ಲಿ ಹೋಗ್ತಾ ಇದೆಯೋ ಆ ದಿಕ್ಕಿನಲ್ಲಿ ನಾವೂ ಹೋಗಬೇಕು. ಅದರ ಎದುರಿಗೆ ಈಜಲು ಸಾಧ್ಯವಿಲ್ಲ. ಅದನ್ನೂ Introduce ಮಾಡಿದ್ರೆ, Schoolಗೇ ಯಾರೂ ಬರೋಲ್ಲ. ಏನೂ ಬೇಡ, ನಮ್ಮ ಸಂಸ್ಕೃತಿ ಉಳಿಸಲು ನಾವು ಶಾಲೇಲಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ರೆ, ತಂದೆ, ತಾಯಿ ನಮಗೆ ಕಾಗದ ಬರೀತಾರೆ. 'ಅವರಿಗ್ಯಾಕೆ ನೀವು ಬಲವಂತ ಮಾಡ್ತೀರಾ, ನಾವೇ ಅವರಿಗೆ ಹೇಳೋಲ್ಲ, ನೀವು ಯಾಕೆ ಹೇಳ್ತೀರಾ?'. ಹಣೆಗೆ ಕುಂಕುಮ ಇಡಬೇಕು, ಕೈಗೆ ಬಳೆ ಹಾಕಬೇಕು, ಹೂವು ಮುಡೀಬೇಕು ಅಂದ್ರೆ, 'ನೀವು ಯಾಕೆ ಅದನ್ನು insist ಮಾಡ್ತೀರಾ?' ಅಂತ ಕೇಳ್ತಾರೆ, ತಂದೆ ತಾಯಿಗಳು. ಈ ಮಾತನ್ನು ಬೇರೆಯರಾದ್ರೂ ಹೇಳಿದ್ರೆ ಪರವಾಗಿರಲಿಲ್ಲ. ಆದ್ರೆ ಆಡೋರು ತಂದೆ ತಾಯಂದಿರು. ಆಟ ಆಡಿಸಬೇಕು ಅಂದ್ರೆ, 'ಬೇಡ, ಮಕ್ಕಳಿಗೆ ಕೈಕಾಲು ಮುರಿಯುತ್ತೆ' ಅಂತಾರೆ. ಯಾವ entertainmentಗೂ ಅವಕಾಶವಿಲ್ಲ. ಬರೀ ಓದು ಅಷ್ಟೆ. ಮುಂದೆ ಬದುಕಬೇಕಾದ್ರೆ ಅವನು ಓದಬೇಕು ಅಷ್ಟೆ. ಯಾವ ಮೌಲ್ಯಗಳೂ ಬೇಕಿಲ್ಲ, ಸಂಸ್ಕೃತಿ ಬೇಕಿಲ್ಲ, ಸಂಸ್ಕಾರ ಬೇಕಿಲ್ಲ, ಏನೂ ಬೇಡ ಅವರಿಗೆ.

ಈ ಮನೋಸ್ಥಿತಿಯಲ್ಲಿ ತಂದೆ ತಾಯಂದಿರು ಇರುವಾಗ ಬದಲಾವಣೆ ಹೇಗೆ ಸಾಧ್ಯ? ಇದಕ್ಕಾಗಿ ಒಂದು Revolution ಆಗಬೇಕು. ಯಾರೋ ಒಬ್ಬ ಹೋರಾಡಿದ್ರೆ ಸಾಧ್ಯವಾಗೋಲ್ಲ. ನಾವು ಆ ದಿಕ್ಕಿನತ್ತ ಹೋಗುವ ಪ್ರಯತ್ನ ಮಾಡ್ತಿದೀವಿ ಅಷ್ಟೆ. ಈಗ ನಾವು ಮಾಡ್ತಿರೋದು ತಪ್ಪು ಅಂತ ಕೂಡ ಹೇಳ್ತೀವಿ. ಆದ್ರೆ ಕೇಳುವವರು ಎಷ್ಟು ಜನ ಇದಾರೆ? ಆದ್ರೆ ನಾವು ಅಳವಡಿಸಿಕೊಳ್ಳಬೇಕು ಅಷ್ಟೆ. ಅದಕ್ಕೆ ನಾನು ಭಗವಂತ ಕೊಟ್ಟಿರೋದ್ರಲ್ಲಿ ಸಂತೃಪ್ತನಾಗಿದೀನಿ. ಮನೇಲಿ ಪಾಠಶಾಲೆ ಇಟ್ಟಿದೀನಿ. ನನಗೆ ಜೀವನತೃಪ್ತಿ ಸಿಕ್ಕಿದೆ. ಮೂವತ್ತು ಮಕ್ಕಳನ್ನು ಮನೇಲಿ ಇಟ್ಟುಕೊಂಡಿದೀನಿ. ನಾವೇನು ತಿಂತೀವೋ ಅದನ್ನೇ ಅವರು ತಿಂತಾರೆ. ಅವರ ಊಟವಾದ ಮೇಲೆ ನಾವು ಊಟ ಮಾಡ್ತೀವಿ. ಅದೇ ಪ್ರಸಾದ ನಮಗೆ. ಒಂದು ಶಾಲೆ ಮಾಡಿದೀನಿ, ಈಗ ಒಂದು Girls Hostel ಮಾಡಿದೆ. ಹೀಗೆ ಭಗವಂತ ಕೊಟ್ಟಿರೋದನ್ನು ವಿನಿಯೋಗ ಮಾಡೋದು ಅಷ್ಟೆ. ನಾವು ಜೀವನದಲ್ಲಿ Sacrifice ಮಾಡಬೇಕು. ಆಗ ಮಾನವಜೀವನಕ್ಕೆ ಬೆಲೆ. ನನ್ನ ಹೆಂಡತೀನೂ ಹಾಗೇ ಇದಾಳೆ. ಅವಳು ನನ್ನ ನಿಜವಾದ ಸಹಧರ್ಮಿಣಿ. ಅವಳಿಗೆ ಕೈಮುಗೀಬೇಕು. ಈಗಿನ ಕಾಲದಲ್ಲಿ ಆ ತರಹ ಇರಲು ಸಾಧ್ಯವಿಲ್ಲ. ಅವಳೇ ಅಡುಗೆ ಮಾಡಿ ಶಾಲೆಯ ಮಕ್ಕಳಿಗೆ ಬಡಿಸ್ತಾಳೆ. ತಂದೆ ತಾಯಂದಿರಿಗಿಂತ ಹೆಚ್ಚು ಕಾಳಜಿ ತೋರ್ಗೋತಾಳೆ. ನನ್ನ ಕೆಲಸದಲ್ಲಿ ಒಂದು ಕ್ಷಣ ಅಡ್ಡಿ ಬರೋಲ್ಲ. ಅವಳಿಗೆ ಗೊತ್ತು, ಗಂಡ ಮಾಡ್ತಿರೋದು ಒಳ್ಳೆಯ ಕೆಲಸ ಅಂತ. ಆ ನಂಬಿಕೆ ಅವಳಿಗಿದೆ. ಅವಳ support ನನಗಿದೆ. ಮನೇ ಹೆಂಗಸು ನಮಗೆ support ಮಾಡದಿದ್ರೆ ನಾವೇನು ಮಾಡಲೂ ಸಾಧ್ಯವಿಲ್ಲ. ದಿನ ಬೆಳಗಾದರೆ ಜಗಳ ಹೌದೋ ಅಲ್ಲವೋ? ಮೊನ್ನೆ Hostel open ಆದಾಗ ಅವಳೇ ಹೋಗಿ ಅಡುಗೆ ಮಾಡಿದ್ದು. ಈ ಸಂಸ್ಕೃತಿ ಅನ್ನುವುದು ಮನೆ ಮನೇಲಿ ನಡೀಬೇಕು. ಇನ್ನೊಬ್ಬರು ಹೇಳುವುದಕ್ಕಿಂತ ಅವರೇ ಅಳವಡಿಸಿಕೊಳ್ಳಬೇಕು. ಪ್ರಯತ್ನ ಮಾಡಿದ್ರೆ ಆಗುತ್ತೆ. ಆದ್ರೆ ಪ್ರಯತ್ನ ಮಾಡ್ತಿಲ್ಲ. ಬರಿಯ ಲೋಲುಪತೆ ಅಷ್ಟೆ. ಸಮಾಜಕ್ಕೆ ನೂರು ರೂಪಾಯಿ ಕೊಡಪ್ಪಾ ಅಂದ್ರೆ 'ನಾನು ಯಾಕೆ

ಕೊಡಬೇಕು?' ಅಂತಾರೆ. ಸಮಾಜದಿಂದ ನನಗೇನು ಪ್ರಯೋಜನ ಅಂತ ಕೇಳ್ತಾರೆ. ಸ್ವಲ್ಪ ಶ್ರೀಮಂತರಾದ್ರೆ, 'ಇವರಿಗೆಲ್ಲಾ ಬುದ್ಧಿ ಇಲ್ಲಾರೀ, ಈ ಕಾಲದಲ್ಲಿ ಯಾವ ಜಾತಿ, ನಾವು secular, ನಾವೆಲ್ಲ ಭಾರತೀಯರು' ಅಂತಾರೆ. ಏನು ಮಾಡೋದು? ದೊಡ್ಡ ದೊಡ್ಡ ಶ್ರೀಮಂತರು ಈ ರೀತಿ ಅಂದ್ರೆ, ಪಾಪ middle class ಜನ ಎಷ್ಟು ಕೊಡಲು ಸಾಧ್ಯ? ನಾನು ಸಮಾಜದಲ್ಲಿ ಹುಟ್ಟಿದೀನಿ, ಸಮಾಜಕ್ಕೆ ನಾನು ಕೊಡಬೇಕು ಅನ್ನುವ ಭಾವನೆ ಅವರಲ್ಲಿ ಬರಬೇಕು. ಈ ದೇಶಕ್ಕಾಗಿ ನಾನು ಏನಾದರೂ ಮಾಡಬೇಕು, ದೇಶ ನನಗೇನು ಮಾಡ್ತು ಅಂದ್ರೆ ಅದಕ್ಕೆ ಅರ್ಥವಿಲ್ಲ. ತಂದೆ ತಾಯಿ ನನಗೇನು ಮಾಡಿದ್ರು ಅಂದ್ರೆ? ಅವರು ನಮ್ಮನ್ನು ಬೆಳೆಸಿ, ಪೋಷಿಸಿಲ್ವೆ? ಆ ಕೃತಜ್ಞತೆ ನಮ್ಮಲ್ಲಿ ಇರಬೇಕು. ಎಲ್ಲಾ ವ್ಯಾಪಾರದ ಲೆಕ್ಕಾಚಾರ ಇಟ್ಟುಕೊಂಡ್ರೆ ಯಾವ ಭಾವನೆ ಸಹಾ ಬೆಳೆಯೋಲ್ಲ.

- **ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯ ಬಿಡುತ್ತಿರುವ ಸಂಕೇತಿಗಳ ಜಮೀನನ್ನು ಇತರಾದಿಗಳು ಕೊಂಡುಕೊಳ್ತಿದಾರೆ. ಹಿಂದೆ ಆ ಊರಿನಲ್ಲಿ ಸ್ಥಿತಿವಂತರಾದ ಸಂಕೇತಿಗಳು ಇದ್ದಿಲ್ಲಿರಬಹುದು. ಆದರೆ ಈಗ ನಿಮ್ಮ ಪಂಗಡದಲ್ಲಿಯೇ ಬಹಳ ಶ್ರೀಮಂತರು ಇದ್ದಾರೆ. ಅವರೇ ಅಂಥ ಸಂದರ್ಭಗಳು ಬಂದಾಗ ಖರೀದಿ ಮಾಡಿದ್ರೆ ಗ್ರಾಮಗಳಲ್ಲಿ ಸಂಕೇತಿ ಕೃಷಿ ಉಳಿಯೋಲ್ವೆ?**

ಕೌಶಿಕ ಸಂಕೇತಿಗಳಲ್ಲಿ ಇವತ್ತಿಗೂ ಇದೆ. ಶ್ರೀಮಂತರು ಮನಸ್ಸು ಮಾಡಿದ್ರೆ ಈ ಕೆಲಸ ಮಾಡಬಹುದು. ಖಂಡಿತಾ ಮಾಡಬಹುದು. ಹಾಗೇ ಮಾಡಬೇಕು ಕೂಡ. ಇನ್ನೊಬ್ಬರಿಗೆ ಜಮೀನು ಮಾರುವುದನ್ನು avoid ಮಾಡಬೇಕು. ಆಗ ನಮ್ಮ ಕೃಷಿ ಉಳಿಯುತ್ತೆ. ಪೂರ್ವಿಕರು ಯಾರೂ ಮುಟ್ಠಾಳರಲ್ಲ. ಅದನ್ನು ಎಲ್ಲರೂ ತಿಳೀಬೇಕು. ಎಲ್ಲರೂ ಏನಂದುಕೊಂಡಿದಾರೆ, 'ಪೂರ್ವಿಕರು ಮಾಡಿದ್ದು ತಪ್ಪು. . . ನಾವು ಮಾಡಿದ್ದು ಸರಿ' ಅಂತ ತಿಳಿದಿದಾರೆ. ನಮ್ಮ ಪೂರ್ವಿಕರಲ್ಲಿ ಈ ಚಿಂತನೆಗಳೆಲ್ಲಾ ಇತ್ತು. ಆದರೆ ಅವರು ಯಾವುದನ್ನೂ ಬಿಡಿಸಿ ಹೇಳಲಿಲ್ಲ. ಅವರು ಅನುಸರಿಸಿದ ಪ್ರತಿಯೊಂದು ಪದ್ಧತಿಗೂ ಒಂದು ಅರ್ಥ ಇದೆ. ಇತರರಿಗೆ ಹೇಳುವುದನ್ನು ಮೊದಲು ಅವರ ಜೀವನಕ್ಕೆ ಅಳವಡಿಸಿಕೊಂಡು, ಇನ್ನೊಬ್ಬನಿಗೋಸ್ಕರ, ದೇಶಕ್ಕೋಸ್ಕರ ಬದುಕಿದಾರೆ. ಅವರು ಯಾವುದಕ್ಕೂ ಅರ್ಥ ಹೇಳದಿದ್ದರಿಂದ ನಾವು ಅದೆಲ್ಲಾ ಮೂಢನಂಬಿಕೆ ಎಂದು ಕರೆಯುವ ಹಂತಕ್ಕೆ ಬಂದಿದೇವೆ. ವೇದ ಅಂದ್ರೆ ಬರೀ ಬ್ರಾಹ್ಮಣರಿಗೆ ಅಂತ ಆಗಿದೆ. ವೇದ ಇರೋದು ಇಡೀ ಮಾನವ ಸಂಕುಲಕ್ಕೆ. ಸಮಸ್ತ ಜೀವರಾಶಿಗೆ ಇರೋದು ವೇದ. ಅರ್ಥ ತಿಳಿಯದ್ದರಿಂದ ಸಂಸ್ಕೃತ, ವೇದ ಬ್ರಾಹ್ಮಣರಿಗೆ ಅಂದುಬಿಟ್ರು. ಒಳಗಡೆಯ ತಿರುಳು ಇಲ್ಲಿನ ಜನರಿಗೆ ತಿಳಿದಿದ್ರೆ ಎಲ್ಲರೂ ಅದನ್ನು ಆಸಕ್ತಿಯಿಂದ ಓದಿರೋರು. ಹೊರಗಿನ ದೇಶಗಳಲ್ಲಿ, ಅಮೇರಿಕಾ, ಜರ್ಮನಿಗಳಲ್ಲಿ ನಮ್ಮ ವೇದಗಳ ಬಗ್ಗೆ ಅಧ್ಯಯನ, ಸಂಶೋಧನೆ ಮಾಡ್ತಿದಾರೆ. ನಮ್ಮ ದೇಶದ, ನಮ್ಮ ಸಂಪತ್ತಿನ ಬಗ್ಗೆ ನಮಗೆ ಹೆಮ್ಮೆ ಇಲ್ಲ. ಈ ಸ್ಥಿತಿ ನಾವು ತಲುಪಲು ನಮ್ಮವರೇ ಕಾರಣ.

- **ಮುಂದಿನ ದಿನಗಳಲ್ಲಿ ಯಾವ ರೀತಿ ನಿಮ್ಮ ಕೃಷಿ ಅಭಿವೃದ್ಧಿ ಮಾಡಬೇಕು ಅಂದುಕೊಂಡಿದೀರಿ?**

ಸಾಕು ನಮಗೆ . . . ಈಗ ತೃಪ್ತನಾಗಿದೀನಿ. ಭಗವಂತ ನನ್ನನ್ನು ಈ ಮಟ್ಟದಲ್ಲಿಟ್ಟರೆ ಸಾಕು. ಸಮಾಜಸೇವೆ ಮಾಡಬೇಕು ಅನ್ನುವ ಆಸೆ ನನಗಿದೆ. ಅಬಲಾಶ್ರಮ ಮಾಡಬೇಕು ಅಂದುಕೊಂಡಿದೀನಿ. ಬರೀ ನಮ್ಮ communityಗೆ ಮಾತ್ರ ಅಲ್ಲ. ಯಾರೇ ಆಗಲಿ ಹೆಣ್ಣು ಮಕ್ಕಳನ್ನು ಐದನೇ ತರಗತಿಯಿಂದ ತೊಗೊಂಡು ನಮ್ಮ ಶಾಲೇಲಿ SSLC ವರೆಗೆ ಓದಿಸಿ, ಮುಂದೆ ಬರೋದಾದ್ರೆ ಓದಲಿ, ಆಗದವರಿಗೆ ಒಂದು ತರಬೇತಿ ಶಾಲೆ open ಮಾಡಿ, ಸ್ವಂತ ಉದ್ಯೋಗದಲ್ಲಿ ತರಬೇತಿ ನೀಡಿ, ಅವರು ಸ್ವಾವಲಂಬಿಗಳಾಗಿ ತಮ್ಮ ಕಾಲಮೇಲೆ ನಿಲ್ಲುವಂತೆ ಮಾಡುವ ಯೋಜನೆ ಇದೆ. ಅದಕ್ಕಾಗಿ ಆರು ಎಕರೆ ಜಮೀನು ಖರೀದಿಸಿದ್ದೇನೆ. ಜತೆಗೆ ಒಂದು ವೃದ್ಧಾಶ್ರಮ ಸಹಾ ಮಾಡಬೇಕು ಅಂತಿದೀನಿ. ದೇವರ ಅನುಗ್ರಹ, ಹಿರಿಯರ ಆಶೀರ್ವಾದ ಇದ್ರೆ ಆಗುತ್ತೆ. ನಾನು ಮಾಡಿದೆ ಅನ್ನುವುದು ಅಹಂಕಾರದ ಮಾತಾಗುತ್ತೆ.

- **ನಿಮ್ಮ ಕೃಷಿ ಉಳಿಯುತ್ತಾ?**

ಉಳಿಯುತ್ತಪ್ಪ. ನಾನು ನೋಡಿದೀನಿ, ಈಗ ಅಮೇರಿಕಾದಲ್ಲಿರೋರು ಸಹಾ ಜಮೀನು ಖರೀದಿ ಮಾಡಬೇಕು ಅಂತಿದಾರೆ. ಸುಮಾರು ಜನ ವಾಪಸ್ಸು ಬಂದು ಇಲ್ಲಿ settle ಆಗ್ತಿದಾರೆ. ಹಾಗಾಗಿ ನಮ್ಮ ಕೃಷಿ ಉಳಿಯುತ್ತೆ.

- **ಆದ್ರೆ ಹಿಂದಿನ ದೈಹಿಕ ಶ್ರಮದ ಕೃಷಿ ಮುಂದೆ ಉಳಿಯೋಲ್ಲ?**

ದೈಹಿಕ ಶ್ರಮ ಇರೋಲ್ಲ . . . ಇನ್ನೇನಿದ್ರೂ ಇನ್ನೊಬ್ಬನನ್ನು ಇಟ್ಟು ಕೆಲಸ ಮಾಡಿಸಬೇಕು, ಆ ಸ್ಥಿತಿ ತಲುಪಿದೀವಿ.

- **ಮತ್ತೆ ವ್ಯಾಮೋಹ ಹ್ಯಾಗೆ ಹುಟ್ಟುತ್ತೆ?**

  ಏನೋ ಒಂದು ಖುಷಿ ಅಷ್ಟೆ. 'ನಾನೂ ಕೃಷಿ ಮಾಡಬೇಕು. ನಮ್ಮ ಪೂರ್ವಿಕರು ಮಾಡ್ತಿದ್ದ ಕಸುಬು' ಅನ್ನುವ ಪ್ರೀತಿ. ಸಂಪಾದನೆ ಮಾಡಿದ ದುಡ್ಡನ್ನು ಇಲ್ಲಿ invest ಮಾಡಬೇಕು, ಜಮೀನು ಮಾಡಬೇಕು ಅಂತ ನನ್ನ ಸ್ನೇಹಿತರೇ ಎಷ್ಟೋ ಜನ ಹೇಳಿದಾರೆ. 'ಜಮೀನು ಕೊಡಿಸು' ಅಂತ ಕೇಳ್ತಿದಾರೆ. ಕಾಲ ಮತ್ತೆ ಬರುತ್ತೆ. ಕಾಲಚಕ್ರ ಒಂದೇ ಸಮ ಇರೋಲ್ಲ. ಈ system ಹಾಗೇನೇ. ಮೇಲೇರಿದವನು ಕೆಳಗೆ, ಕೆಳಗಿನವನು ಮೇಲೆ ಹೋಗೋದನ್ನು ನಾವೇ ಗಮನಿಸಿದೀವಿ. ನನ್ನೇ ನೋಡಿ, ನಾನು bottommost ನಲ್ಲಿದ್ದೆ. . . ಈಗ ಮೇಲಿದೀನಿ . . . ಮುಂದೆ ಹ್ಯಾಗೋ. ಹೇಳೋಕೆ ಆಗೋಲ್ಲ. ಅಧಿಕಾರ, ಹಣ ಶಾಶ್ವತವಲ್ಲ. ಅದು ಇರುವವರೆಗೆ ಇನ್ನೊಬ್ಬರಿಗೆ ಏನಾದರೂ ಮಾಡಬೇಕು. ಕಡೆಗೆ ಶಾಶ್ವತವಾಗಿ ಉಳಿಯುವುದು ಅದೇ. ಹಣ, ಅಧಿಕಾರ ಹೋದಮೇಲೆ ನಾನೇನೂ ಮಾಡಲಿಲ್ಲವಲ್ಲ ಅಂತ ಕೊರಗಿದ್ರೆ ಏನು ಫಲ? ಕೈಕೈ ಹಿಸುಕಿಕೋಬೇಕು ಅಷ್ಟೆ.

- **ವ್ಯವಸಾಯದಲ್ಲಿ ಹೊಸ ಹೊಸ ಚಿಂತನಗಳನ್ನು ಅಳವಡಿಸದೇ ಇದ್ದುದರಿಂದ ಸಂಕೇತಿಗಳು ಹೆಚ್ಚು ಅಭಿವೃದ್ಧಿ ಆಗಲಿಲ್ವಾ? ಯಾಕಂದ್ರೆ ಇವರು ಕೇವಲ ಬಾಗಾಯ್ತು ನೆಚ್ಚಿಕೊಂಡ್ರು. . . ಇತರೇ ವರ್ಗ ಬೇರೆ ಬೇರೆ ಬೆಳೆ ಸಹಾ ಮಾಡಿದ್ರು . . ಜನಸಂಪರ್ಕ ಸಾಧಿಸಿದ್ರು. ಸಂಕೇತಿಗಳು ತಮ್ಮ ತೋಟದ ಬದುಕಿನಲ್ಲಿ ಒಂಟಿಯಾದ್ರು. ಇದು ಕೂಡ ಕೃಷಿ ಕಡಿಮೆಯಾಗಲು ಕಾರಣವಿರಬಹುದೇ?**

  ಅವರಿಗೆ ಜನರ ಸಂಪರ್ಕ ಬೇಕಿರಲಿಲ್ಲ. ಅವರು ಅಲ್ಪತೃಪ್ತರಾಗಿದ್ರು. ಸಂಗೀತ, ವೇದಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ರು. ಅತಿ ಆಸೆ ಇತ್ತಿಲ್ಲ. ಅದಕ್ಕೆ ಅವರು ಅನೂಚಾನವಾಗಿ ನಡೆದು ಬಂದಿರುವ ಕೃಷಿ ಪದ್ಧತಿ ಅನುಸರಿಸುತ್ತಿದ್ದರು, ತೃಪ್ತನಾಗಿದ್ದರು. ಬೇರೆಯದಕ್ಕೆ ತಲೆ ಕೆಡಿಸ್ಕೋತಾ ಇರಲಿಲ್ಲ.

- **ಆ ತೃಪ್ತೀನೇ ಮುಳುವಾಯ್ತೆ?**

  (ನಗು) . . ಇರಬಹುದು. ಇವತ್ತಿನ ಕಾಲಕ್ಕೆ ತಕ್ಕಂತೆ ಅವನು ಬದಲಾಗಲಿಲ್ಲ. ಯಾಕೇಂದ್ರೆ ಬ್ರಾಹ್ಮಣ ಉಳಬಾರದು ಅಂತ ನಮಗೆ ಬಂದಿದೆಯಲ್ಲ.

- **ಆದ್ರೆ ನಿಮ್ಮವರೇ ಬಹಳಷ್ಟು ಜನ ಹೇಳ್ತಾರೆ, 'ಅದು ಬರೀ ಶಾಸ್ತ್ರ ಅಷ್ಟೆ, ನಾವು ಜಮೀನು ಉತ್ತಿದೀವಿ' ಅಂತಾರಲ್ಲ . . .**

  ಅದಕ್ಕೇ ನಾನು ಹೇಳಿದ್ದು. ನಮ್ಮ ಹಿರಿಯರು ಯಾರೂ ಅರ್ಥ ತಿಳಿಸಲಿಲ್ಲ. ಅದಕ್ಕೇ ಈ ಗೊಂದಲ ಇರೋದು. ಸುಮ್ಮನೇ ಬ್ರಾಹ್ಮಣ ಉಳಬಾರದು ಅಂದ್ರು. ಯಾಕೆ ಮಾಡಬಾರದು ಅಂದ್ರೆ ಅದಕ್ಕೆ ಉತ್ತರ ಇಲ್ಲ. ಹೀಗಾಗಿ ಎಲ್ಲವೂ ಅಡ್ಡಗೋಡೆಯ ಮೇಲಿನ ದೀಪದಂತಿದೆ. ನಾನು ಮೊನ್ನೆ ಗಂಧ ತೇಯ್ತಾ ಇದ್ದೆ, ಕೊರಡನ್ನು ಅದರ ಮೇಲೆ ಇಟ್ಟಿದ್ದೆ. ಮನೆಗೆ ಬಂದಿದ್ದವರೊಬ್ಬರು 'ಹಾಗೆ ಇಡಬಾರದು' ಅಂದ್ರು. 'ಯಾಕೆ ಇಡಬಾರದು?' ಅಂದೆ. 'ದೊಡ್ಡವರು ಹಾಗೆ ಹೇಳಿದಾರಪ್ಪ' ಅಂದ್ರು. ನಾವು ಅನುಸರಿಸುವ ಪದ್ಧತಿಗಳಿಗೆ ಅರ್ಥ ತಿಳಿದಿದ್ದರೆ ಎಲ್ಲರೂ ಅನುಸರಿಸುತ್ತಿದ್ದರು, ಅಂತ ಅನ್ನಿಸುತ್ತೆ. ಆದರೆ ಈಗ ಕಾಲ ಬದಲಾಗಿದೆ. ಧಾರವಾಡದ ಕಡೆ ಹಾಗೂ ಉತ್ತರ ಕರ್ನಾಟಕಕ್ಕೆ ಹೋದ್ರೆ ಬ್ರಾಹ್ಮಣರು ದೊಡ್ಡ ಪ್ರಮಾಣದಲ್ಲಿ ಜಮೀನು ಮಾಡಿ ಟ್ರಾಕ್ಟರ್ ಇಟ್ಟಿದಾರೆ. ತೊಗರಿ ಬೆಳೀತಿದಾರೆ. ವೈಜ್ಞಾನಿಕ ಕೃಷಿ ಮಾಡ್ತಿದಾರೆ. ಹಿಂದೆ ಬ್ರಾಹ್ಮಣ 'ಅನ್ನ ಮಾರಬಾರದು' ಅಂತ ಇತ್ತು. ಈಗ ಅವನು ಅನ್ನ ಮಾರಿಯೇ ಜೀವನ ಸಾಗಿಸ್ತಿದಾನೆ. ಹಾಲು ಮಾರಬಾರದು, ವಿದ್ಯೆ ಮಾರಬಾರದು, ಔಷಧಿ ಮಾರಬಾರದು ಅಂತ ಇತ್ತು. ಆದ್ರೆ ಈಗ ಎಲ್ಲಾ ಬದಲಾಗಿದೆ. ಕಾಲಾಯ ತಸ್ಮೈ ನಮಃ ಅನ್ನುವ ಹಾಗೆ ಕಾಲಕ್ಕೆ ತಕ್ಕಂತೆ ಬದಲಾಗಲೇಬೇಕು.

- **ವ್ಯವಸಾಯ ನಿಮ್ಮ ವರ್ಗದಲ್ಲಿ ವ್ಯವಹಾರಕ್ಕಿಂತ ಒಂದು ಸಂಸ್ಕೃತಿಯಾಗಿ ರೂಪುಗೊಂಡಿತ್ತು. ಅದರ ಬಗ್ಗೆ ಹೇಳಿ.**

  ವ್ಯವಸಾಯ ನಮ್ಮ ಸಂಸ್ಕೃತಿ. ಜೀವನದ ಅಂಗ. ಪ್ರತಿಯೊಬ್ಬರೂ ಅದನ್ನು ಮಾಡಬೇಕು ಅಂತ system ಇತ್ತು ಹಿಂದೆ. ಈಗ software ಒಂದೇ ಜೀವನ ಅಂತಾರೆ. ದುಡ್ಡು ತುಂಬಾ ಬರುತ್ತೆ ಅವರಿಗೆ, ಆದರೆ ಜೀವನವೆಲ್ಲಿದೆ ಅವರಿಗೆ! ದುಡ್ಡು ಬರುತ್ತೆ, ಬ್ಯಾಂಕ್ ಬ್ಯಾಲೆನ್ಸ್ ಜಾಸ್ತಿಯಾಗುತ್ತೆ. ಜೀವನದ ಸುಖ ಅನುಭವಿಸಲು ಆಗೋಲ್ಲ.

- **ಗ್ರಾಮಕೇಂದ್ರಿತ ವ್ಯವಸ್ಥೆಯಲ್ಲಿದ್ದುಕೊಂಡೇ ಸಂಪೂರ್ಣ ಜೀವನವನ್ನೂ ರೂಪಿಸಿಕೊಂಡಿದ್ರು ಸಂಕೇತಿಗಳು. ಗ್ರಾಮವೇ ಅವರ ಮನರಂಜನೆಯ ತಾಣವಾಗಿತ್ತು. ಕಾಲಕ್ರಮೇಣ ಹಳ್ಳಿಯಲಿದ್ದ ಬ್ರಾಹ್ಮಣರಲ್ಲಿಯೇ, ಒಂದಾಗಿರುವ ಗುಣ ಬರದೇ ಹೋದ್ದರಿಂದ,**

ಹಾಗೇ ಸಂಘಟನಾ ಸಾಮರ್ಥ್ಯದ ಕೊರತೆಯಿಂದ ಹಳ್ಳಿಯ ಜೀವನ ಅಸಹನೀಯವಾಯ್ತು. ವ್ಯವಸಾಯಕ್ಕೆ ಪರಸ್ಪರ ಸಹಕಾರ (ಮುಯ್ಯಿ ಆಳು) ಇಲ್ಲವಾಯ್ತು. ಪಟ್ಟಣದ ಜೀವನ ಹಿತಕರವಾಗಿರುವಂತೆ ಭಾಸವಾಗತೊಡಗಿತು. ಹಳ್ಳಿಗಳಲ್ಲಿ ಸಂಘಟನೆ, ಸಾಮರಸ್ಯ ವಿಶ್ವಾಸದ ಕೊರತೆಯಿಂದಾಗಿ ವ್ಯವಸಾಯದ ಒಲುಮೆ ಕ್ಷೀಣಿಸಿರಬಹುದಾ?

ಎಲ್ಲದಕ್ಕೂ ಸಂಘಟನೆಯೇ ಕಾರಣ. ಅದಿಲ್ಲದ್ದರಿಂದಲೇ ನಾವು ಈ ಸ್ಥಿತಿ ತಲುಪಿರೋದು. ಅದಕ್ಕೆ ನಾವೇ ಕಾರಣ ಹೊರತು ಬೇರೆ ಯಾರೂ ಅಲ್ಲ. ಬ್ರಾಹ್ಮಣರಲ್ಲಿ ಸಂಘಟನೆ ಇಲ್ಲ. ಅದಕ್ಕೇ ನಾವು ಎಲ್ಲವನ್ನೂ ಕಳೆದುಕೊಂಡಿದ್ದೀವಿ. ಇವತ್ತು ನಾವು ಸಂಘಟಿತರಾದ್ರೆ ಏನು ಬೇಕಾದ್ರೂ ಎದುರಿಸಬಹುದು. ಒಂದು ಊರಲ್ಲಿ ಹತ್ತು ಜನ ಬ್ರಾಹ್ಮಣರಿದ್ರೆ ಅವರು ಸೇರಬೇಕು, ಆಗ ಏನು ಬೇಕಾದ್ರೂ ಉಳಿಸಬಹುದು. ನೋಡಿ Land Reform Act ಬಂದಾಗ ಬ್ರಾಹ್ಮಣರೇ ಎಷ್ಟು ಜನ ಬ್ರಾಹ್ಮಣರ ಜಮೀನಿಗೆ Declaration ಕೊಡಿಸಿದ್ರು. ಇಡೀ ಬ್ರಾಹ್ಮಣ ಸಮೂಹ ಒಂದಾಗಿದ್ರೆ ಜಮೀನು ಖಂಡಿತಾ ಹೋಗ್ತಿರಲಿಲ್ಲ. ಯಾಕೇಂದ್ರೆ ರೈತರು ಇವರ ಅಧೀನದಲ್ಲಿದ್ರು. ಅವರಿಗೆ ಸ್ವಲ್ಪ ಪಾಲು ಕೊಟ್ಟಿದ್ರೆ ಅವರು ಹಾಕ್ತಿರಲಿಲ್ಲ. ಆದರೆ ಇವರೇ ಹೇಳಿಕೊಟ್ರು. ಒಬ್ಬರಿಗೊಬ್ಬರಿಗಿದ್ದ ವೈಮನಸ್ಯದಿಂದಾಗಿ ನಾವು ಎಲ್ಲವನ್ನೂ ಕಳೆದುಕೋಬೇಕಾಯ್ತು.

- **ಅಕ್ಕಪಕ್ಕದ ತೋಟಗಳಲ್ಲಿದ್ದ ಇತರೇ ಜನಗಳ ಕಿರುಕುಳ ಸಹಾ ಸಂಕೇತಿ ಕೃಷಿಕರು ಹಳ್ಳಿ ಬಿಡಲು ಕಾರಣವಾಯ್ತು ಅನ್ನುವ ಅಭಿಪ್ರಾಯ ಸಹಾ ಇದೆ. ಏನಂತೀರಾ?**

  ಕಿರುಕುಳ ಯಾಕಾಯ್ತು? ಇವನು ಒಂಟಿಯಾದ. ಇವನ ಹಿಂದೆ ಹತ್ತು ಜನ ಇದ್ರೆ ಯಾರು ಕಿರುಕುಳ ಕೊಡ್ತಿದ್ರು? ಅಲ್ವಾ? ನೀವೇ ಹೇಳಿ. ಒಬ್ಬ ಎಲ್ಲರನ್ನೂ ಎದುರಿಸಲು ಆಗೋಲ್ಲ. ಇದು weak point. ಹಾಗಾಗಿ ಕಿರುಕುಳ natural ಅಲ್ವ? ಹಿಂದೆ ಊರುಗಳಲ್ಲಿ ಬ್ರಾಹ್ಮಣ ಒಂದು ತೂಕದಲ್ಲಿದ್ದ. ನಾನು ನೋಡಿದ ಹಾಗೇನೇ ಇತರೇ ಜನ ಅವನು ಹಾಕಿದ ಗೆರೆ ದಾಟ್ತಿರಲಿಲ್ಲ. ಕಾಲ ಈಗ ಬದಲಾಗಿದೆ. ಅವನೇ ನಮ್ಮನ್ನು dictate ಮಾಡ್ತಾನೆ. ಕಾರಣ ಒಂಟಿತನವೇ. ಅಲ್ಲದೇ, ಬ್ರಾಹ್ಮಣರಲ್ಲಿನ ಒಳಪಂಗಡಗಳು ನಮ್ಮನ್ನು ಮತ್ತಷ್ಟು ಬೇರೆ ಮಾಡಿವೆ. ಹೀಗಾಗಿ ನಮ್ಮ ಶಕ್ತಿ ಕುಂದಿದೆ.

- **ಇವತ್ತು ಹಳ್ಳಿಯಲ್ಲಿದ್ದು ಪ್ರೀತಿಯಿಂದ ವ್ಯವಸಾಯ ಮಾಡುತ್ತಿರುವ ಸಂಕೇತಿಗಳಿಗಿಂತ ಪೇಟೇಲಿದ್ದು ವ್ಯವಸಾಯ ಮಾಡುತ್ತಿರುವವರ ಕೃಷಿ ಪ್ರೀತಿ ದೊಡ್ಡದಾಗಿದೆ. ಹಳ್ಳಿಯಲ್ಲೇ ವ್ಯವಸಾಯದ ಬಗೆಗಿನ ವ್ಯಾಮೋಹ ಹೊರಟುಹೋಗ್ತಾ ಇದೆ ಅಂತ ಅನ್ನಿಸೋಲ್ವಾ?**

  ಈ ಮಾತು ಅಕ್ಷರಶಃ ನಿಜ.

- **ಈ ಬೆಳವಣಿಗೆ ಒಳ್ಳೆಯದು ಅಂತೀರಾ . . . ಕೆಟ್ಟದ್ದು ಅಂತೀರಾ?**

  (ನಗು). . . ಅಲ್ಲ, ಹಳ್ಳೀಲೂ ಬೆಳೀಬೇಕು, ಆದ್ರೆ ಅಲ್ಲಿ ಆಗ್ತಾ ಇಲ್ಲವಲ್ಲ. ಪರಿಸರ ಹಾಗಿದೆ. ಪೇಟೇಲಿ ದುಡ್ಡು ಸಂಪಾದನೆ ಮಾಡಿ ವ್ಯವಸಾಯ ಸಹಾ ಅಭಿವೃದ್ಧಿ ಮಾಡ್ತಾ ಇರೋದು ಒಳ್ಳೇದಲ್ವೆ?

- **ನಿಜವಾದ ಅರ್ಥದಲ್ಲಿ ಅದು ಕೃಷಿ ಅಲ್ಲವೇ ಅಲ್ಲ. . . ಅಲ್ವಾ?**

  ಕೃಷಿ ಅಲ್ಲದಿದ್ರು ಕೂಡ land develop ಆಗುತ್ತಲ್ವಾ? Agricultural production ಜಾಸ್ತಿಯಾಗುತ್ತಲ್ವಾ. ದೇಶದ ದೃಷ್ಟಿಯಿಂದ ನೋಡುವಾಗ ಇದು ಒಳ್ಳೆಯದೇ ತಾನೆ? ನಗರದಲ್ಲಿ ಬ್ರಾಹ್ಮಣ ಕೃಷಿ ಚೆನ್ನಾಗಿ ಮಾಡಬಹುದು. ಬ್ರಾಹ್ಮಣರಿಗೆ ಗೌರವ ಸಿಗೋದಿಲ್ಲ ಅಂತಾರಲ್ಲ ಅದು ತಪ್ಪು. ನಮ್ಮ ಶಕ್ತಿ ನಾವು ಉಳಿಸಿಕೊಂಡಿದ್ರೆ ಯಾರಾದ್ರೂ ನಮಗೆ respect ಕೊಟ್ಟೇ ಕೊಡ್ತಾರೆ. ಇತರೇ ಜನ ಯಾರೇ ಬಂದರೂ ನನಗೆ ಗೌರವ ಕೊಡ್ತಾರೆ. ಹೇಗೆ ಬಂತು ನನಗೆ ಅದು? ನನ್ನ ಅನುಷ್ಠಾನ, ನನ್ನ ಪದ್ಧತಿ, ನನ್ನ ಜೀವನಶೈಲಿ, ಜನಗಳ ಜತೆ ಬೆರೆಯುವ ರೀತಿ, ಇತರರಿಗೆ ಸಹಾಯ ಮಾಡುವ ರೀತಿ, ನಾನು ಬ್ರಾಹ್ಮಣರಿಗೆ ಅಂತಲ್ಲ . . . ಎಲ್ಲರಿಗೂ ಸಹಾಯ ಮಾಡ್ತೀನಿ. ನನ್ನ ತೋಟದ ಬಳಿ ತಲಘಟ್ಟಪುರ ಊರಿದೆ. ಅಲ್ಲಿ ಶಾಲೆ ಅಭಿವೃದ್ಧಿ ಮಾಡಿದೀನಿ. ನೀರಿನ ವ್ಯವಸ್ಥೆ ಮಾಡಿಕೊಟ್ಟಿದೀನಿ. ದೇವಸ್ಥಾನ ಅಭಿವೃದ್ಧಿ ಮಾಡಿದೀನಿ. ಹೀಗೆ ನಾನು ಎಲ್ಲಿ ಹೋದ್ರೂ, ನಾನೊಬ್ಬನೇ ಬದುಕಲು ಪ್ರಯತ್ನ ಪಡೋಲ್ಲ. ಹಾಗಾಗಿ ಜನರಿಂದ ಪ್ರೀತಿ ಅನ್ನೋದು ತಾನಾಗಿಯೇ ಬರುತ್ತೆ. ಸಂಪತ್ತನ್ನು ನಾವೇ ಅನುಭವಿಸುವುದಲ್ಲ. ಇನ್ನೊಬ್ಬರಿಗೆ ಕೊಡಬೇಕು.

- **ತಾವು ಬೆಂಗಳೂರಿನಲ್ಲಿ ಅಭಿವೃದ್ಧಿ ಮಾಡಿದ ತೋಟವನ್ನು, ಸಂಕೇತಿಗಳು ವಾಸಿಸುತ್ತಿರುವ ಹಳ್ಳೀಲೂ ಮಾಡಬಹುದಿತ್ತು ಅಲ್ವಾ?**
  ಮಾಡಬಹುದಿತ್ತು. ಆದ್ರೆ ನೋಡಿಕೊಳ್ಳೋರು ಯಾರು? ನಾನು ಬೆಂಗಳೂರಿನಿಂದ ೧೫ ಕಿಲೋಮೀಟರ್ ದೂರದಲ್ಲಿ ತೋಟ ಮಾಡಿ ಒಬ್ಬ ಸಂಕೇತಿಯನ್ನೇ ಇಟ್ಟಿದ್ದೆ. ಅವನು ಕೈಕೊಟ್ಟ. ಇನ್ನು ಬೇರೆ ಊರಲ್ಲಿ ಜಮೀನು ಮಾಡಿದ್ರೆ ಯಾರನ್ನು ಬಿಡೋದು? ನಂಬಿಕೆ ಎಲ್ಲಿದೆ ಈಗ? ನನಗೆ ಇವತ್ತಿಗೂ ಆಸೆ ಇದೆ. ಆದ್ರೆ ಅದನ್ನು ನೋಡೋರು ಯಾರು? ಅವರ ತೋಟಾನೇ ಅವರು ನೋಡಿಕೊಳ್ಳೋಲ್ಲ, ಇನ್ನು ನಮ್ಮ ತೋಟ ನೋಡಿಕೊಳ್ತಾರಾ?

- **ವೇದ ವಿದ್ಯೆಯನ್ನು ಬಿಟ್ಟಿದ್ದು, ನಮ್ಮ ಸಂಸ್ಕಾರ, ಸಂಸ್ಕೃತಿ ಕಡೆಗಣಿಸಿದ್ದು ಸಹಾ ಸಂಕೇತಿ ಕೃಷಿ ಅಳಿಯಲು ಕಾರಣವೆ?**
  ನಮ್ಮ ಅವನತಿಗೆ ನಾವು ಹಿಂದಿನಿಂದ ಅನುಸರಿಸುತ್ತಿದ್ದ ಪದ್ಧತಿಯನ್ನು ಬಿಟ್ಟಿದ್ದೇ ಕಾರಣ. ನಮ್ಮ ತಲೆ ಮೇಲೆ ನಾವೇ ಕಲ್ಲು ಹಾಕ್ಕೋತಾ ಇದೀವಿ. ನಾವು ಎಲ್ಲವನ್ನೂ ಗೌರವಿಸೋದು ಬಿಟ್ವಿ. ಏನೋ ಒಂದು ಕೀಳರಿಮೆ ನಮ್ಮಲ್ಲಿ ಬಂದಿದೆ-ಇದೆಲ್ಲಾ ತಪ್ಪು ಅಂತ. ಇಂಗ್ಲಿಷ್ systemನಲ್ಲಿದ್ರೆ ಜೀವನದಲ್ಲಿ ಏನೋ ದೊಡ್ಡ ಸಾಧನೆ ಮಾಡಿರುವ ಭಾವ ಬಂದಿದೆ. ದುಷ್ಟಕಲ್ಪನೆಗಳು ಮೂಡಿವೆ. ಪಾಶ್ಚಾತ್ಯ ಶಿಕ್ಷಣದ ಪ್ರಭಾವವೋ ಏನೋ ಗೊತ್ತಿಲ್ಲ. ನಮ್ಮ ಪುರೋಹಿತರು, 'ನಾನು ಅನುಭವಿಸಿದ್ದು ಸಾಕಪ್ಪಾ, ನನ್ನ ಮಕ್ಕಳಾದ್ರೂ ಚೆನ್ನಾಗಿರಲಿ' ಅಂತ ಹೇಳ್ತಾರೆ. ಇನ್ನು ಅದಕ್ಕಿಂತಾನಾ? "ನಾನೇ ಕೇಳ್ದೆ ನೀವು ಏನು ಅನುಭವಿಸಿದೀರಾ ಹೇಳಿ, ನಿಮ್ಮ ಮಕ್ಕಳನ್ನು ಇಂಜಿನಿಯರ್, ಡಾಕ್ಟರ್ ಮಾಡಿಲ್ವಾ?" ಪೌರೋಹಿತ್ಯ ಕೆಲಸದಲ್ಲಿಯೇ ಇದೆಲ್ಲವನ್ನೂ ಮಾಡಿದ್ದು. ಅದನ್ನು ಅರ್ಥವೇ ಮಾಡಿಕೊಳ್ಳೊಲ್ಲ. ನಾನು ಅನುಭವಿಸಿದ್ದು ಸಾಕು. . . ನನ್ನ ಮಕ್ಕಳಿಗೆ ಇದೆಲ್ಲಾ ಬೇಡ ಅಂತಾರೆ. ಅವರ ವೃತ್ತಿಯ ಬಗ್ಗೆ ಅವರಿಗೇ ಬೇಸರವಾದ್ರೆ . . ಬೇರೆಯವರು ಅದನ್ನು ಹೇಗೆ ಕಲೀತಾರೆ? ಹೇಗೆ ಅದನ್ನು ಗೌರವಿಸ್ತಾರೆ ಹೇಳಿ?

- **ತುಂಬಾ ವಿಶಿಷ್ಟವಾದ ಕೃಷಿತಂತ್ರಜ್ಞಾನವನ್ನು ಇತರರಿಗೂ ಪರಿಚಯಿಸಿದ ವರ್ಗ ಸಂಕೇತಿಗಳದ್ದು. ಈ ಬಗ್ಗೆ ಸ್ವಲ್ಪ ಹೇಳಿ. . .**
  ತೋಟದ ಕಲ್ಪನೆ ಕೊಟ್ಟಿದ್ದೇ ಸಂಕೇತಿಗಳು. ಕೇವಲ ಹತ್ತು ಗುಂಟೆ ಪ್ರದೇಶದಲ್ಲಿಯೇ ಒಂದು ಕುಟುಂಬ ಬದುಕಬಹುದು ಎಂಬ ಕಲ್ಪನೆ ನೀಡಿದ್ದು ಸಹಾ ಸಂಕೇತಿಗಳೇ.

- **ಈಗ ನಿಮ್ಮ ಕೃಷಿ ಉಳೀಬೇಕು ಅಂದ್ರೆ ಕಾರ್ಯ ಎಲ್ಲಿಂದ ಆರಂಭವಾಗಬೇಕು?**
  (ನಗು). . ಹಳ್ಳಿಯಿಂದ ಆರಂಭವಾಗಬೇಕು. ಮನೆಗೊಬ್ಬ ಮಗ ಕೃಷೀಗೆ ಉಳೀಬೇಕು. ಹಿಂದೆ ಐದಾರು ಜನ ಮಕ್ಕಳಿರೋರು. ಈಗ ಮಿತ ಕುಟುಂಬ. ಮಕ್ಕಳ ಸಂಖ್ಯೇನೂ ಕಡಿಮೆಯಾಗಿದೆಯಲ್ಲ. ಒಟ್ಟು ಕುಟುಂಬದ ಕಲ್ಪನೆ ಹೋಗಿದೆ. . . ಒಂದು ಮಗು ಸಾಕು ಅಂತಾರೆ. ನಾನು ಹೇಳೋದು ಬ್ರಾಹ್ಮಣರು ಇನ್ನೂ ಮಕ್ಕಳನ್ನು ಮಾಡಿಕೊಳ್ಳಬೇಕು. ನಾನು ಈಗಿನ Law of the landಗೆ ವಿರುದ್ಧವಾಗಿ ಮಾತನಾಡ್ತಿದೀನಿ ಅಂತ ಅನ್ನಿಸಬಹುದು. ಆದ್ರೆ ಬೇರೆ communityನವರು ಮೂರು ನಾಲ್ಕು ಜನ ಮಕ್ಕಳನ್ನು ಹೊಂದಿರ್ತಾರೆ. ಒಬ್ಬೊಬ್ಬನ್ನೂ ಒಂದೊಂದಕ್ಕೆ ಹಾಕ್ತಾರೆ. ಒಬ್ಬನ್ನ ಕೃಷೀಗೆ ಹಾಕ್ತಾರೆ, ಒಬ್ಬನ್ನು ರಾಜಕೀಯಕ್ಕೆ, ಇನ್ನೊಬ್ಬನ್ನ ಕೆಲಸಕ್ಕೆ ಕಳಿಸ್ತಾರೆ. ತುಂಬಾ ಬುದ್ಧಿವಂತಿಕೆಯಿಂದ, balanced ಆಗಿ ಸಮುದಾಯ ಬೆಳೆಸ್ತಾ ಇದಾರೆ. ಆದ್ರೆ ನಮ್ಮವರು 'ಒಂದು ಮಗು ಸಾಕು' ಅಂತಿದಾರೆ. ಮುಂದೆ ಅದೂ ಆಗದೇ ಇರಬಹುದು. ಈ software ಬೆನ್ನ ಹಿಂದೆ ಬಿದ್ದಿರುವವರಿಗೆ ಈಗ ಮಕ್ಕಳೇ ಆಗ್ತಿಲ್ಲ. ದುಡ್ಡೇ ಅವರ ಮಕ್ಕಳು. ಮಕ್ಕಳನ್ನು adopt ಮಾಡಿಕೊಂಡ್ರೆ ಆಯ್ತು. ನಮ್ಮದೇ ಆಗಬೇಕು ಅಂತ ಏನಿದೆ, ಈ ಧೋರಣೆ ಬ್ರಾಹ್ಮಣರಲ್ಲಿ ಬರ್ತಾ ಇದೆ.

- **ಅಂದ್ರೆ ತಾವು ಹೇಳೋದು, ಹಳೆಯ ಸಮೃದ್ಧ ಒಟ್ಟು ಕುಟುಂಬದ ಗ್ರಾಮೀಣ ಬದುಕು ಇರಬೇಕು ಅಂತಾನ?**
  ಹೌದು, ಅದಕ್ಕೆ ನಾವು ಒತ್ತು ಕೊಟ್ಟರೆ ಇಡೀ ದೇಶ ಸುಭಿಕ್ಷವಾಗುತ್ತೆ. ಹಳ್ಳಿಗಳು ಸಮೃದ್ಧವಾಗಿದ್ರೆ ದೇಶದ ಉದ್ಧಾರ ಸಾಧ್ಯ ಅನ್ನೋದು ಗಾಂಧೀಜಿಯ ಕಲ್ಪನೆ ತಾನೆ? ಆದ್ರೆ ಈಗ ನಾವು ಅನುಸರಿಸುತ್ತಿರುವ ವಿಧಾನ ಸಂಪೂರ್ಣ ತಪ್ಪು. ನಮ್ಮ ಜೀವನದ ಮೌಲ್ಯಗಳು ಅಧಃಪತನವಾಗಿವೆ.

- **ವ್ಯವಸಾಯ ಬದುಕಿನ ಮಾರ್ಗ ಅಷ್ಟೆ. ಬದುಕೋದಕ್ಕೆ ವ್ಯವಸಾಯ ಮಾಡಬೇಕಿತ್ತು. ಭೂಮಿತಾಯಿಯನ್ನು ಪ್ರೀತಿಸಬೇಕಿತ್ತು. ಆದಾಯದ ಮೂಲ ಮಾತ್ರವನ್ನೇ ಇಟ್ಟು ವ್ಯವಸಾಯ ಮಾಡಿದ್ರಿಂದ ಕೃಷಿ ಪರಿಸ್ಥಿತಿ, ಮೌಲ್ಯಗಳು ಕ್ಷೀಣಿಸುತ್ತಿವೆಯೆ?**

ಎಲ್ಲವೂ ಕೈಗಾರಿಕೆಯಾಗಿದೆ. ಈಗ ಎಲ್ಲರಿಗೂ ಹಣ ದ್ವಿಗುಣವಾಗಬೇಕು. ಒಂದು ರೂಪಾಯಿ ಹಾಕಿದ್ರೆ, ಒಂದೇ ದಿನದಲ್ಲಿ ನೂರು ರೂಪಾಯಿ ಸಿಗಬೇಕು. ಬೆಳೆ ಬರುವವರೆಗೂ ಕಾಯುವ ತಾಳ್ಮೆ ಉಳಿದಿಲ್ಲ.

- **ರಾಸಾಯನಿಕ ಕೃಷಿ ಕೈಬಿಟ್ಟು, ಸಾವಯವ ಕೃಷಿಯನ್ನು ತಾವು ಅನುಸರಿಸಲು ಕಾರಣ ಏನು?**

ರಾಸಾಯನಿಕದಲ್ಲಿ ಏನು ಅನ್ಯಾಯವಾಯ್ತು ಅನ್ನುವುದು ಗೊತ್ತು. ಸಾವಯವ ಕೃಷಿಯ ಅನುಕೂಲಗಳೂ ಗೊತ್ತು. ರಾಸಾಯನಿಕ ಹಾಕೋದ್ರಿಂದ ನೆಲದ ಗುಣಮಟ್ಟ ಕಡಿಮೆಯಾಗಿದೆ. ರೈತನಿಗೆ ಉಪಯುಕ್ತವಾಗಿದ್ದ ಎರೆಹುಳು, ಕಪ್ಪೆ, ಹಾವು ಹಾಗೂ ಇತರೇ ಸಂಘ ಜೀವಿಗಳು ವಿಷರಾಸಾಯನಿಕದಿಂದ ಸತ್ತುಹೋದ್ವು. ಭೂಮಿ ಬರಡಾಗುವ ಸ್ಥಿತಿ ಬಂತು. ತಾನೂ ಬದುಕಬೇಕು ಇನ್ನೊಬ್ಬನೂ ಬದುಕಬೇಕು-ಇದು ಸಾವಯವ ಕೃಷಿಯ ನೀತಿ, ಹಾಗೂ ಬದುಕಿನ ರೀತಿ. ನಾನೊಬ್ಬನೇ ಬದುಕಬೇಕು ಅಂದ್ರೆ ಅಂತಿಮವಾಗಿ ವಿನಾಶ ಅಷ್ಟೆ. ಅದಂತೂ ನಿಜ. Live and let live is nature's principle. ಆದ್ರೆ ನಾವು ಪಾಶ್ಚಾತ್ಯರ ಅನುಕರಣೆ ಮಾಡ್ತಿದೀವಿ. ಅವರು ತಂದು ರಾಶಿ ಹಾಕಿರುವ ವಿಷಾನ ವಿವೇಚನೆ ಇಲ್ಲದೆ ಬಳಸ್ತಾ ಇದೀವಿ. ಮುಂದಿನ ಅನಾಹುತದ ಬಗ್ಗೆ ಯೋಚನೆ ಮಾಡಲಿಲ್ಲ. ಹಣ ಸಂಪಾದನೆಯಂತೂ ಆಯ್ತು. ಆದ್ರೆ ಪರಿಸರ ನಾಶಾನ ಈಗ ಅನುಭವಿಸ್ತಾ ಇದೀವಿ. ಈಗ ಮತ್ತೆ ಹಳೆಯದಕ್ಕೆ ವಾಪಸ್ಸಾಗುವ ಚಿಂತನೆ ಮಾಡ್ತಿದೀವಿ. ತಾಯ ಎದೆ ಹಾಲಿಗೂ ಈಗ publicity ಕೊಡಬೇಕಿದೆ. ಇದಕ್ಕಿಂತ ಮುಟ್ಠಾಳ ಕೆಲಸ ಬೇಕೆ? ಇದು ನಿಸರ್ಗದ ನಿಯಮ. ಆದ್ರೆ ಈಗ ಅದಕ್ಕೊಂದು ದಿನಾಚರಣೆ ಮಾಡ್ತಿದಾರೆ.

- **ಸಂಕೇತಿ ಸಮುದಾಯಕ್ಕೆ ಮಾರ್ಗದರ್ಶನ ನೀಡುವ ಸ್ಥಾನದಲ್ಲಿ ತಾವಿದೀರಿ.**

ಇಲ್ಲ . . ನಾನಂತೂ ಇಲ್ಲ.

- **ಒಂದು ಅರ್ಥದಲ್ಲಿ ಹಾಗಂದುಕೊಳ್ಳೋಣ ಸರ್. ಹಿಂದಿನ ನಿಮ್ಮ ಶ್ರೀಮಂತ ಕೃಷಿ ಬದುಕನ್ನೂ ಗಮನದಲ್ಲಿಟ್ಟುಕೊಂಡು, ಇವತ್ತು ನೀವು ವೈಯುಕ್ತಿಕ ಮಟ್ಟದಲ್ಲಿ ಸಂಕೇತಿ ಕೃಷಿ ಉಳಿಸಲು ಏನು ಮಾಡಬಹುದು?**

ಇನ್ನೊಬ್ಬನಿಗೆ ಹೇಳುವ ಯೋಗ್ಯತೆಯಂತೂ ನನಗಿಲ್ಲ. ಯಾಕೇಂದ್ರೆ ಅದು ಅವರ ಇಷ್ಟ. ಆದ್ರೆ ಇತರರಿಗೆ ಹೇಳೋದನ್ನು ನಾನು ಅಳವಡಿಸಬಹುದು ಅಷ್ಟೆ. ಮನುಷ್ಯ ಅಂದ್ರೆ ಹೀಗಿರಬೇಕು ಅನ್ನುವ ಚೌಕಟ್ಟನ್ನೂ ನನಗೆ ನಾನು ಹಾಕಿಕೊಂಡಿದೀನಿ. ಅದರೊಳಗೆ ನಾನಿದೀನಿ.

- **ಇವತ್ತಿಗೂ ಹಳ್ಳಿಗಳಲ್ಲಿ ಬಹಳ ಬಡತನದಲ್ಲಿ ವ್ಯವಸಾಯ ಮಾಡ್ತಿರುವ ನಿಮ್ಮ ಸಂಕೇತಿ ಕುಟುಂಬಗಳು ಇದ್ದಾವೆ. ಪಟ್ಟಣಗಳಲ್ಲಿ ನೆಲೆಸಿರುವ ಶ್ರೀಮಂತ ವರ್ಗ ಅವರನ್ನು ಸ್ವಲ್ಪ ಗಮನಿಸಿಕೊಂಡ್ರೆ, ಅವರ ವ್ಯವಸಾಯ ಹಳ್ಳೀಲೇ ಉಳಿಯುತ್ತೆ. ಜಮೀನು ಸಂಪದ್ಭರಿತವಾಗುತ್ತೆ ಅಂತ ತಮಗೆ ಅನ್ನಿಸೋಲ್ವ?**

ಮನುಷ್ಯ . . ಕಷ್ಟಪಟ್ಟು ಮೇಲೆ ಬರಬೇಕು ಅಂತ ಮೊದಲು ಅವನಿಗೆ ಅನ್ನಿಸಬೇಕು. ಅವನು ಆ ಮಾರ್ಗಗಳನ್ನು ಆರಿಸಬೇಕು. ಇತರರು ಏನೇ ಕೊಟ್ರೂ ಅದು ಉಪಯೋಗಕ್ಕೆ ಬರೋಲ್ಲ. ನನ್ನ ಹೊಟ್ಟೆ ಹಸಿದಾಗ ನನ್ನ ಅನ್ನವನ್ನು ನಾನೇ ಹುಡುಕಬೇಕೇ ಹೊರತು ಅನ್ನ ತಾನಾಗೇ ಬರೋಲ್ಲ. ಅನ್ನವನ್ನು ಇರುವ ಕಡೇನೇ ಹುಡುಕಬೇಕು. ಯುವಕರಲ್ಲಿ ಈಗ ಏನೋ ನಿರಾಸೆ ಬಂದಿದೆ. ಆದ್ರೆ ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಬ್ರಾಹ್ಮಣ ಯುವಕರನ್ನು ನಾನು ಅಭಿನಂದಿಸ್ತೀನಿ. ಅವರು ಎಲ್ಲಾ ಸ್ವಾವಲಂಬಿಗಳಾಗಿದಾರೆ. ಎಂಥ ಉದ್ಯೋಗ ಮಾಡಲೂ ಅವರಿಗೆ ಅವಮಾನವಿಲ್ಲ. ಸ್ವಾವಲಂಬನೆ ಅವರ ಮೂಲ ಉದ್ದೇಶ. ಬ್ರಾಹ್ಮಣರು ಯಾವ ಸ್ವಂತ ಉದ್ಯೋಗ ಮಾಡಿದ್ರೂ ತಪ್ಪಿಲ್ಲ. ಮಾರವಾಡಿಗಳನ್ನು ನೋಡಿ. ಅವರೇನೂ ಬೇರೆ ಉದ್ಯೋಗಕ್ಕೆ ಹೋಗೋಲ್ಲ. ಸ್ವಂತ ದುಡೀತಾರೆ . . ನಾಲ್ಕು ಜನ ಇತರರಿಗೆ ಕೆಲಸ ಕೊಡ್ತಾರೆ. ಹಾಗೆ ಹಳ್ಳೀಲಿರುವ ಬ್ರಾಹ್ಮಣ ಯುವಕರಿಗೆ ಬರಬೇಕು. White collar job ಮಾತ್ರ ಅಪೇಕ್ಷೆ ಮಾಡಬಾರದು. ತಂದೆ ತಾಯಂದಿರು ತಮ್ಮ ಭ್ರಮೆ ಬಿಡಬೇಕು. ತಮ್ಮ ಮಗ Doctor, ಇಂಜಿನಿಯರ್ ಹಾಗೂ ಬ್ಯಾಂಕಿನಲ್ಲೇ ಇರಬೇಕು ಅನ್ನುವುದನ್ನು ಬಿಡಬೇಕು. ಸ್ವಂತ ಉದ್ಯೋಗ ಮಾಡಿದ್ರೆ ಬ್ರಾಹ್ಮಣ ಖಂಡಿತಾ ತೃಪ್ತಿದಾಯಕವಾಗಿ ಬದುಕ್ತಾನೆ. ನಾವು ನಾಲ್ಕು ಜನರಿಗೆ ಆಶ್ರಯ ಕೊಡಬೇಕೇ ಹೊರತು ಇನ್ನೊಬ್ಬರ ಆಶ್ರಯಕ್ಕೆ ಬೀಳಬಾರದು. ಕೃಷೀನೂ ಒಂದು ಬದುಕುವ ಮಾರ್ಗ ಅಷ್ಟೆ. ಇವತ್ತು ಬೇಕಾದಷ್ಟು ಸರ್ಕಾರದ ಯೋಜನೆ ಇದೆ. ಅವನಿಗೆ sincerity ಬರಬೇಕು ಅಷ್ಟೆ. ನಾನು industry ಮಾಡಿದಾಗ ಯಾರೂ ನನಗೆ package ಕೊಡಲಿಲ್ಲ. ನನಗೆ ಹತ್ತು ವರುಷದ ಅನುಭವವಿತ್ತು. ಸ್ವಂತ industry ಮಾಡ್ತೀನಿ ಅಂದಾಗ, ಮನೇಲಿ

ಎಲ್ಲಾ, 'ಎರಡು ಸಾವಿರ ರೂಪಾಯಿಯ ಸಂಬಳದ ಕೆಲಸ ಬಿಡ್ತೀಯಾ?' ಅಂದ್ರು. 'ನನ್ನ ಅದೃಷ್ಟ ಪರೀಕ್ಷೆ ಮಾಡ್ತೀನಿ' ಅಂದೆ. ಕೇವಲ ೨೦೦೦ ರೂಪಾಯಿ ಬಂಡವಾಳದಲ್ಲಿ ಮಾಡಿದೆ ಅಷ್ಟೆ. ನಮಗೆ ಆತ್ಮಶಕ್ತಿಯಿರಬೇಕು. ಇವತ್ತು ಹುಡುಗರಿಗೆ ಸ್ವಂತ ಉದ್ಯೋಗ ಮಾಡಿದ ತಕ್ಷಣ ಶ್ರೀಮಂತರಾಗುವ ಆಸೆ ಬರುತ್ತೆ. ಎಲ್ಲಿ ಆಗಲು ಸಾಧ್ಯ? ಕಷ್ಟ ಪಡಬೇಕು, ಬಂಡವಾಳ ಬೆಳೆಸಬೇಕು ಅನ್ನುವ ಪ್ರಜ್ಞೆ ಇರದಿದ್ದರೆ ಶ್ರೀಮಂತರಾಗಲು ಹೇಗೆ ಸಾಧ್ಯ? ಒಂದು ಹತ್ತು ವರುಷ ಶ್ರಮಪಟ್ಟರೆ, ಅಡಿಪಾಯ ಭದ್ರವಾಗುತ್ತೆ, ಆದಾಯ ಬರ್ತಾ ಹೋಗುತ್ತೆ. Industry ಮಾಡಿದ ತಕ್ಷಣ, Five star ಹೋಟೆಲ್ member ಆಗ್ತಾನೆ, clubಗೆ ಹೋಗ್ತಾನೆ, ವಿಮಾನದಲ್ಲೇ ಪ್ರಯಾಣಿಸಬೇಕು ಅಂತಾನೆ. ಈ ರೀತಿ ಆದ್ರೆ ಯಾವ business ಉಳಿಯುತ್ತೆ? ನಾನು industry ಮಾಡಿದಾಗ, ಹತ್ತು ವರುಷದ ಕಾಲ ಅದನ್ನು develop ಮಾಡಿದೆ. ನನ್ನ ದುಡ್ಡು ಅಲ್ಲ ಅಂತ ಬಂಡವಾಳ ಬೆಳೆಸಬೇಕು. ನೋಡಿ ನಾನು industry ಮಾಡಿ ೩೫ ವರುಷ ಆಯ್ತು. ನಾನು ಇದುವರೆಗೂ ಹಿಂತಿರುಗಿ ನೋಡಿಲ್ಲ. ನನ್ನಲ್ಲಿ sincerity, quality ಇದೆ. ಅದಕ್ಕೆ ನಾನು agency ಇಡದಿದ್ರೂ, ಗ್ರಾಹಕ ಹುಡುಕಿಕೊಂಡು ಬರ್ತಾನೆ. ಮನುಷ್ಯ ಸತ್ಯವಾಗಿರಬೇಕು. Quality, Hardwork, Sincerity ಇದ್ರೆ ಯಾವ ಉಗ್ಯೋಗಾನಾದ್ರೂ ಯಶಸ್ವಿಯಾಗುತ್ತೆ. ಯುವಕರು ಇದನ್ನು ಅಳವಡಿಸಿಕೋಬೇಕು. ಸ್ವಂತ ಉದ್ಯೋಗದ ಜತೆ ಜತೆಗೆ ಹಳ್ಳೀಲಿ ಕೃಷೀನೂ ಮಾಡಬಹುದು. ಆಗ ಸಂಕೇತಿ ಕೃಷಿ ಖಂಡಿತವಾಗಿಯೂ ಉಳಿಯುತ್ತೆ.

ಒಳ್ಳೆಯದು ಬಿ.ಎನ್.ವಿ. ಸುಬ್ರಹ್ಮಣ್ಯ ಅವರೆ, ಇದುವರೆಗೂ ನಿಮ್ಮ ಬದುಕಿನ ಅಮೂಲ್ಯವಾದ ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಂಡ್ರಿ, ವಂದನೆಗಳು, ನಮಸ್ಕಾರ.

ನಮಸ್ಕಾರ.

ಇ) ಡಾ. ಕೆ. ರಾಮಚಂದ್ರ ಮೂರ್ತಿ ಇ/ಮ ಡಾ. ಹೆಚ್. ಕೃಷ್ಣಮೂರ್ತಿ

ಪ್ರಭಾ ಕಣ್ಣಿನ ಆಸ್ಪತ್ರೆ, ಬನಶಂಕರಿ, ಬೆಂಗಳೂರು

ನನ್ನ ತಾತನಿಗೆ ತೋಟಗಾರಿಕೇಲಿ ಬಹಳ ಆಸಕ್ತಿ ಇತ್ತು. ನಾವು ಚಿಕ್ಕವರಿದ್ದಾಗ ತೋಟಗಾರಿಕೆ ಬಗ್ಗೆ ಆಸಕ್ತಿ ಬೆಳೆಸೋದಕ್ಕೆ, ಬೇಸಗೆ ರಜೇಲಿ ಮನೆ ಮುಂದೆ ಇದ್ದ ದೊಡ್ಡ ತೋಟದಲ್ಲಿ ನಮ್ಮ ಬಳಿ ಕೆಲಸ ಮಾಡಿಸೋರು. ನಾವು ಕೆಲಸ ಮಾಡಿದ್ದಕ್ಕೆ ದಿನಗೂಲಿ ಕೊಡೋರು. ಇದ್ರಿಂದಾಗಿ ನನಗೆ ಚಿಕ್ಕಂದಿನಿಂದಲೇ ಕೃಷಿ ಬಗ್ಗೆ ಒಲವು ಮೂಡಿತು.

ಬೆಂಗಳೂರಿನಲ್ಲಿ ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಸಂದರ್ಶನ ಮುಗಿಸಿದಾಗ ಬೆಳಗ್ಗೆ ಹನ್ನೊಂದರ ಸಮಯ. ಮುಂದೇನು ಮಾಡುವುದು ಎಂದು ಜತೇಲಿದ್ದ ವೆಂಕಟನಾರಾಯಣ್ ಅವರನ್ನು ಪ್ರಶ್ನಿಸಿದೆ. ಆಗ ಅವರು ಪ್ರಭಾ ಕಣ್ಣಿನ ಆಸ್ಪತ್ರೆಯ ಡಾ.ರಾಮಚಂದ್ರಮೂರ್ತಿಯವರು ಸಹ ತೋಟ ಮಾಡಿದ್ದಾರೆ. ಅವರಿಗೆ Phone ಮಾಡೋಣ. ಅವರು ಒಪ್ಪಿಗೆ ಕೊಟ್ರೆ ಇವತ್ತು ಅವರ ಸಂದರ್ಶನವನ್ನೂ ಸಹ ಮುಗಿಸಿಬಿಡೋಣ ಅಂದ್ರು. ದೂರವಾಣಿ ಕರೆ ಮಾಡಿದಾಗ ಮಧ್ಯಾಹ್ನ ಹನ್ನೆರಡು ಘಂಟೆಗೆ ಸರಿಯಾಗಿ ಆಸ್ಪತ್ರೆಗೆ ಬರಹೇಳಿದ್ರು, ಡಾ. ರಾಮಚಂದ್ರಮೂರ್ತಿಯವರು. ಸರಿಯಾದ ಸಮಯಕ್ಕೆ ಅಲ್ಲಿಗೆ ಹೋದಾಗ ಆಸ್ಪತ್ರೆಯ



ಭಾಗ್ಯಲಕ್ಷ್ಮಿ-ಡಾ.ಕೆ.ರಾಮಚಂದ್ರಮೂರ್ತಿ ದಂಪತಿ: ಬೆಂಗಳೂರು

ತಳಭಾಗದ ವಿಶಾಲವಾದ ಹಜಾರದಲ್ಲಿ operation dress ಧರಿಸಿ ಕುಳಿತಿದ್ರು ಡಾ. ಮೂರ್ತಿಯವರು. ಆಗಲೇ ಒಂದು operation ಮುಗಿಸಿ, ಅನಂತರ ಮತ್ತೊಂದು ಕಣ್ಣಿನ operationಗೆ ಅವರು ಹೋಗಬೇಕಿತ್ತು. ಎರಡು operationಗಳ ನಡುವಿನ ಬಿಡುವಿನ ಸಮಯವನ್ನು ನಮ್ಮ ಸಂದರ್ಶನಕ್ಕೆ ಮೀಸಲಿಟ್ಟಿದ್ದನ್ನು ಕೇಳಿ ಆಶ್ಚರ್ಯವಾಯ್ತು. ಜತೆಗೆ ಅವರ ಸಮಯಪಾಲನೆಯ ಬಗ್ಗೆ ಮೆಚ್ಚುಗೆಯೂ ಬಂತು. ನನ್ನ ಕೃಷಿಯ ಸಂಪೂರ್ಣ ನಿರ್ವಹಣೆ ನನ್ನ ಹೆಂಡತಿ ಭಾಗ್ಯಲಕ್ಷ್ಮಿಯದು. ನಾನು ಬರೀ ತೋಟಕ್ಕೆ ಹೋಗುವ visitor ಅಷ್ಟೆ. ಹಾಗಾಗಿ ಕೃಷಿಯ ತಾಂತ್ರಿಕ ವಿಚಾರಗಳನ್ನು ನೀವು ಅವಳಿಂದಲೇ ಪಡೆಯಿರಿ ಎಂದು ಆರಂಭದಲ್ಲಿಯೇ ಹೇಳಿ, ತಮ್ಮ ಪೂರ್ವಿಕರ ಬಗ್ಗೆ ಹಾಗೂ ತಮ್ಮ ಕೃಷಿ ಆಸಕ್ತಿಯ ಬಗ್ಗೆ ಮಾತನಾಡಿದ್ರು.

ನನ್ನ ತಾಯಿ ಲಕ್ಷ್ಮಿಕೃಷ್ಣಮೂರ್ತಿ. ಅವರ ತಂದೆ ಡಾ. ಬಿ.ಕೆ. ನಾರಾಯಣರಾವ್, ಅಂದ್ರೆ ನಮ್ಮಜ್ಜ eye surgeon ಆಗಿದ್ರು. ಅವರ ಮೂಲ ಊರು ಬಸವಾಪಟ್ಟಣ. ಅಲ್ಲಿ ಅವರಿಗೆ ಜಮೀನು ಇತ್ತು. ಮುಖ್ಯವಾಗಿ ನಮ್ಮ ಅಜ್ಜನಿಗೆ ತೋಟಗಾರಿಕೆ ಅಂದ್ರೆ ಬಹಳ ಇಷ್ಟ. ಅವರು ಮೈಸೂರು ಹಾರ್ಟಿಕಲ್ಚರಲ್ ಸೊಸೈಟಿಯ founder member. ನಾವು ಚಿಕ್ಕವರಿದ್ದಾಗ horticulture ಬಗ್ಗೆ ಆಸಕ್ತಿ ಬೆಳೆಸೋದಕ್ಕೆ, ಬೇಸಗೆ ರಜೇಲಿ ಮನೆ ಮುಂದೆ ಇರುವ ದೊಡ್ಡ ತೋಟದಲ್ಲಿ ಕೆಲಸ ಮಾಡಿಸೋರು. ನಾವು ಕೆಲಸ ಮಾಡಿದ್ದಕ್ಕೆ ದಿನಗೂಲಿ ಕೊಡೋರು. ನಮ್ಮ ಶಾಲಾದಿನಗಳಲ್ಲಿ ಲಾಲ್‌ಬಾಗ್ ಹಾರ್ಟಿಕಲ್ಚರಲ್ ಸೊಸೈಟಿಗೆ ಹೋಗಿ, ಅಲ್ಲಿ ಎರಡು ತಿಂಗಳು ತರಬೇತಿ ಸಹಾ ಪಡೆದಿದ್ವು. ಕಳೆ ಕೀಳುವುದು ಹೇಗೆ, ಪಾಟ್‌ನಲ್ಲಿ ಗಿಡ ಬೆಳೆಸುವುದು ಹೇಗೆ, ಮಡಿ ಮಾಡುವುದು ಹೇಗೆ, ನೀರು ಕೊಡುವುದು ಹೇಗೆ, ಹೀಗೆ ತೋಟಗಾರಿಕಾ ಬೆಳೆಗಳ ಬೇಸಾಯದ ಬಗ್ಗೆ ತರಬೇತಿ ಪಡೆದಿದ್ವಿ. ನನ್ನ ತಾಯಿಗೂ ತೋಟಗಾರಿಕೆಯಲ್ಲಿ ಆಸಕ್ತಿ. ಅವರು ಆಸ್ಪತ್ರೆಯ ಮುಂದುಗಡೆ ಒಳ್ಳೆಯ Garden ಮಾಡಿದ್ರು. ತೋಟಗಾರಿಕಾ ಪ್ರದರ್ಶನಗಳಲ್ಲಿ ಬಹುಮಾನಗಳನ್ನು ಬಹಳವಾಗಿ ಗೆದ್ದಿದ್ರು.

ಕೋಲಿಯಸ್, ಗುಲಾಬಿ, ಕ್ರೋಟನ್ ಗಿಡಗಳನ್ನು ತುಂಬಾ ಚೆನ್ನಾಗಿ ಬೆಳೆಯೋರು. ಹಾಗಾಗಿ ನಮ್ಮ ರಕ್ತದಲ್ಲಿ Basic ಆಗಿ ಕೃಷಿ ಮತ್ತು ತೋಟಗಾರಿಕೆ ಬಗ್ಗೆ ಆಸಕ್ತಿ ಇತ್ತು. ನನ್ನ ತಂದೆ ಹಂದ್ರಾಳಿನ ಡಾ. ಹೆಚ್. ಕೃಷ್ಣಮೂರ್ತಿ. ಅವರಿಗೆ ವ್ಯವಸಾಯದಲ್ಲಿ ಅಷ್ಟು ಆಸಕ್ತಿ ಇರಲಿಲ್ಲ. ನನ್ನ ತಂದೆಯ ತಂದೆ ಅಂದ್ರೆ ತಾತ ಸುಬ್ಬಾವಧಾನಿಗಳು. ಅವರು ಜಮೀನ್ದಾರರಾಗಿದ್ರು. ನಮ್ಮ ತಂದೆಯ ಅಣ್ಣ ಮಂಜಯ್ಯನವರು ಹಳ್ಳೀಲಿದ್ದು ಜಮೀನು ನೋಡ್ತಿದ್ರು. ನಾನು ಇಂಗ್ಲೆಂಡ್‌ಗೆ ಹೋಗಿದ್ದಾಗ, ಅಲ್ಲಿನ ತೋಟಗಳು, ಅಲ್ಲಿಯ ಬೇಸಾಯ ವಿಧಾನ ಎಲ್ಲ ನೋಡಿದ್ದೆ. ಅಲ್ಲಿ ದೊಡ್ಡ ದೊಡ್ಡ farmಗಳನ್ನು ಎಂಟು, ಹತ್ತು ಜನ ಮಾತ್ರ ಮಾಡ್ತಾ ಇದ್ರು. ಅಲ್ಲಿ ಎಲ್ಲಾ ಯಾಂತ್ರೀಕೃತ ಬೇಸಾಯ. ನಾವು ಇಲ್ಲಿಗೆ ವಾಪಸ್ಸು ಬಂದಾಗ site ಖರೀದಿಸಿ ಮನೆ ಕಟ್ಟುವುದಕ್ಕಿಂತ ತೋಟದ ಮನೇಲಿರೋಣ ಅಂತ ನನಗೆ ಹಾಗೂ ನನ್ನ ಹೆಂಡತಿಗೆ ಆಸೆ ಇದ್ದದ್ದು. ಅದಕ್ಕೆ ನಾವು ಬೇಕಾದಷ್ಟು ಜಾಗ ನೋಡಿದ್ವಿ. ಆದ್ರೆ ಮೈಸೂರು ಸರ್ಕಾರದ ಕಾಯಿದೆಗಳು ಅಡ್ಡ ಬಂದು ಜಮೀನು ಖರೀದಿಸಲು ಆಗಲಿಲ್ಲ. ಅದಕ್ಕಾಗಿ ನಾವು ಆಂಧ್ರಪದೇಶದ ಹಿಂದೂಪುರದಲ್ಲಿ 15 ಎಕರೆ ಜಮೀನು ಖರೀದಿಸಿದ್ವಿ. ಅಲ್ಲಿ ಮುಂಚೆ ದಾಳಿಂಬೆ ಇತ್ತು. ಹಾಳಾಗಿತ್ತು. ಅದನ್ನು ತೆಗೆಸಿ, ತೆಂಗು, ಮಾವು ಹಾಕಿದ್ವಿ. ಸುಮಾರು ೨೦ ವರುಷ ನಮಗೆ ಬೆಂಗಳೂರಿನ ಆಸುಪಾಸಿನಲ್ಲಿ ಜಮೀನು ಖರೀದಿಸಲು ಆಗಲಿಲ್ಲ. ಆಗ Rules ಹ್ಯಾಗಿತ್ತು ಅಂದ್ರೆ, ಹನ್ನೆರಡು ಸಾವಿರ ಆದಾಯವಿದ್ದರೂ ಜಮೀನು ಖರೀದಿಸುವಂತಿರಲಿಲ್ಲ. ೯೮೦ನೇ ಇಸವೀಲಿ, ಆದಾಯದ ಮಿತಿ ಜಾಸ್ತಿ ಆಯಿತು. ಆ ಒಂದು ಘಳಿಗೇಲಿ ನಾನು ಯಾವುದೇ ಕಾಯ್ದೆ



ಮುಸುಕಿನ ಜೋಳದ ಪೈರಿನಲ್ಲಿ ತಾದಾತ್ಮ್ಯ ಕಂಡ ಭಾಗ್ಯಲಕ್ಷ್ಮಿ:ಬೆಂಗಳೂರು



ಹಣ್ಣಿನ ಗಿಡಗಳೂ ತೋಟದ ಭಾಗ : ಭಾಗ್ಯಲಕ್ಷ್ಮಿ : ಬೆಂಗಳೂರು

ಉಲ್ಲಂಘಿಸದೆ ೨೫ ಎಕರೆ ಜಮೀನು ಖರೀದಿಸಲು ಆಯ್ತು. ನಾನು ಚಿಕ್ಕಂದಿನಿಂದ ವೈದ್ಯನಾಗಬೇಕು ಅಂತಾನೇ ಓದಿದೆ. ತೋಟಗಾರಿಕೆ ನನ್ನ ಹವ್ಯಾಸವಾಗಿತ್ತು. ಇಲ್ಲಿ ಜಮೀನು ಖರೀದಿ ಮಾಡಿದಾಗಲೂ ತುಂಬಾ ದುಡ್ಡು ಮಾಡುವ ಉದ್ದೇಶವಿರಲಿಲ್ಲ. ನಮಗೆ ಕೃಷಿಯ ಬಗ್ಗೆ ಆಸಕ್ತಿ ಇತ್ತು, ಅಷ್ಟೆ. ಜಮೀನು ಕನಕಪುರ ರಸ್ತೇಲಿ ಸೋಮನಹಳ್ಳಿ ಸಿಗುತ್ತೆ. ಅಲ್ಲಿಂದ ಬಲಕ್ಕೆ ಕೆರೆ ಚೂಡನಹಳ್ಳಿಯ ಪಕ್ಕದ ಗುಡಿಪಾಳ್ಯದಲ್ಲಿ ನನ್ನ ಜಮೀನಿದೆ. ಅದು ಪಾಳು ಬಿದ್ದಿತ್ತು. ಒಂದು ನೂರು ತೆಂಗಿನ ಮರ ಇತ್ತು. ಉಳಿದ ಜಾಗದಲ್ಲಿ ಕಾಡು ಇತ್ತು. ಈಗ ಅದರಲ್ಲಿ ಅಡಿಕೆ, ತೆಂಗು, ರಾಗಿ, ಭತ್ತ, ಗೋಧಿ, ತೊಗರಿ, ಮುಸುಕಿನಜೋಳ, ಪ್ರತಿಯೊಂದನ್ನೂ ಬೆಳೀತಿದೀವಿ. ಐದು ಬೋರ್‌ವೆಲ್ ಹಾಕಿಸಿದೀವಿ. ಪೂರ್ಣವಾಗಿ ಹನಿ ನೀರಾವರಿ ಅಳವಡಿಸಿದೀವಿ. ಬಾಳೆ, ಸಪೋಟ, ಭಾರತ ದೇಶದಲ್ಲಿ ಬೆಳೆಯುವ ಎಲ್ಲ ಜಾತಿ ಮಾವು, ಮಲ್ಲಿಕಾ, ಸಿಂಧೂರ, ರಸಪುರಿ, ಬಾದಾಮಿ, ರತ್ನಗಿರಿ Alphonso, ಮಲಗೋಬ, ಆಮ್ರಪಾಲಿ, ದುಸೇರ, ಬಂಗನಪಲ್ಲಿ, ಎಲ್ಲ ತಳೀನೂ ಇದೆ. ೮೦೦ ತೆಂಗು, ೩೦೦ ಅಡಿಕೆ, ೧೦೦ ಹಲಸು, ಚೆರ್ರಿ, ನೇರಳೆ, ದಾಳಿಂಬೆ, seedless ನೇರಳೆ ಸಹಾ ಇದೆ, ಎಲ್ಲಾ ತರಹದ ಹಣ್ಣನ್ನೂ ಬೆಳೆದಿದೀವಿ. ಇಲ್ಲ ಅನ್ನುವುದೇ ಇಲ್ಲ. ೨೦೦೦ ತೇಗದ ಗಿಡಗಳು ಇವೆ. ಸ್ವಾಭಾವಿಕವಾಗಿ ಬೆಳೆದ ಗಂಧದ ಗಿಡಗಳೂ ಇವೆ. ಬೀಟೆ, ಎಲ್ಲಾ ತರಹ ಕಾಡಿನ ಗಿಡಮರಗಳು, ನಂದಿ, ಮತ್ತಿ, ಪ್ರತಿಯೊಂದನ್ನೂ ಹುಡುಕಿ ತಂದು ಮರಮಟ್ಟಿಗಾಗಿ ಬೆಳೆಸಿದ್ದೇವೆ. ಜಮೀನಿನ Borderನಲ್ಲಿ ಕಾಡು ಮರಗಿಡಗಳು, ಮಧ್ಯದಲ್ಲಿ ಹಣ್ಣಿನ ಗಿಡಗಳು, open spaceನಲ್ಲಿ ಆಹಾರ ಧಾನ್ಯಗಳನ್ನು ಬೆಳೆದಿದೀವಿ.

ಸರಿಯಾಗಿ, ಬೆಳದದ್ದನ್ನು ಮಾರಿದ್ರೆ ಹಣ್ಣಿನ ಬೇಸಾಯದಲ್ಲಿ ಆದಾಯವಿದೆ. ಯಾವಾಗ Bumper crop ಬರುತ್ತೋ ಆಗ ಆದಾಯ ಕಡಿಮೆ. ಕಡಿಮೆ ಬೆಳೆ ಇದ್ದಾಗ ಆದಾಯ ಜಾಸ್ತಿ. ನಮಗೆ ಮೊದಲು ಮಾರುಕಟ್ಟೆ ಮರ್ಮ ತಿಳಿದಿರಲಿಲ್ಲ. ಹಾಗಾಗಿ ತುಂಬಾ ನಷ್ಟ ಅನುಭವಿಸಿದೀವಿ. ಎರಡು, ಮೂರು ಟನ್ ಮಾವು ಬೆಳೆದು ಮಾರುಕಟ್ಟೆಗೆ ಹಾಕಿದ್ರೆ ಲಾಲ್‌ಬಾಗ್‌ನೋರು ತೊಗೋಳ್ಳಲ್ಲ ಅಂದುಬಿಟ್ರು. ನಾನು ಅಲ್ಲಿನ associationಗೆ life member. ಕಡೆಗೆ ನಾವು ನಮ್ಮ ಆಸ್ಪತ್ರೇಲೇ ಇಟ್ಟು ಮಾರಿದ್ವಿ. ಮೊದಲು ಎಲ್ಲಾರೂ, ಒಂದು ಥರಾ sceptical ಆಗಿ ಒಂದೊಂದು kg ತಗೊಂಡುಹೋದ್ರು. ಅದನ್ನ ತಿಂದ ಮೇಲೆ, ಎಲ್ಲರೂ ಬಂದು ೧೫, ೨೦ ಕೇಜಿ ತೊಗೊಂಡು ಹೋದ್ರು. ಎರಡರಿಂದ, ಮೂರು ಟನ್ ನಾಲ್ಕು ಐದು ದಿನಗಳಲ್ಲಿ ಖಾಲಿಯಾಯ್ತು. ನಮ್ಮ first attempt ಹೀಗೆ ಯಶಸ್ವಿಯಾದ ಮೇಲೆ, ಕಳೆದ ಏಳೆಂಟು ವರುಷಗಳಿಂದ ನಾವು ಎಲ್ಲಾ ಹಣ್ಣನ್ನು ಇಲ್ಲಿಯೇ ಇಟ್ಟು ಮಾರ್‍ತಾ ಇದೀವಿ.

ಹಿಂದೂಪುರದಲ್ಲಿ ಜಮೀನು ತೆಗೆದಾಗಿನಿಂದಲೂ, ಪ್ರತಿಯೊಂದನ್ನೂ scientific ಆಗಿ study ಮಾಡಿ, ಪುಸ್ತಕ ಓದಿ, forest officers ಜತೆ discuss ಮಾಡಿ, ಯಾವ ತರಹ ಮರಗಿಡ ಹಾಕಬೇಕು, ತೋಟಕ್ಕೆ ಬರುವ ಗಾಳಿ ಹೊಡೆತವನ್ನು ತಡೆಯಲು ಗಾಳಿ ಬೇಲಿ ನಿರ್ಮಿಸೋದು ಹ್ಯಾಗೆ ಅಂತೆಲ್ಲಾ ತಿಳಿದು, Graphsheet ಇಟ್ಟುಕೊಂಡು, ಯಾವ್ಯಾವ ಗಿಡ ಎಲ್ಲಿ ಬರಬೇಕು ಅನ್ನೋದನ್ನು mark ಮಾಡಿ, ತೋಟ ಅಭಿವೃದ್ಧಿ ಮಾಡಿದೀವಿ. ನಾವು ತೋಟದ ಸುತ್ತಾ, ಎತ್ತರವಾಗಿ ಬೆಳೆಯುವ ಮರಗಳನ್ನು ಹಾಕಿದ್ರೆ, ಅದು ಜೋರಾಗಿ ಬೀಸುವ ಗಾಳಿಯನ್ನು ತಡೆಯುತ್ತೆ. ಹಂಗಾಗಿ ತೋಟದ ಒಳಗೆ damage ಆಗೋದಿಲ್ಲ. ಗಿಡಗಳು ಒಳಗೆ ಚೆನ್ನಾಗಿ ಬೆಳೆಯುತ್ತೆ. ಅದಕ್ಕೆ ಆಯ್ಕೆ ಮಾಡುವ ಗಿಡಗಳು ತುಂಬಾ ಎತ್ತರವಾಗಿ ಬೆಳೀಬೇಕು. ಹರಡಿಕೊಂಡು ಬೆಳೀಬಾರದು. ತೇಗ, silver oak, ಸುಬಾಬುಲ್, ಇವೆಲ್ಲಾ ತುಂಬಾ ಉತ್ತಮ ಗಾಳಿ ತಡೆ ಮರಗಳು. ನಮ್ಮ ತೋಟದ planning ಎಲ್ಲಾ ಮಾಡಿದ ಮೇಲೆ, ನನ್ನ ಹೆಂಡತಿ ನಿರ್ವಹಣೆ ಮಾಡ್ತಿದಾಳೆ. Infact ನಾನೇ ನಮ್ಮ ತೋಟದ ಮರಗಿಡಗಳಿಗೆ ಗೊಬ್ಬರ, ನೀರು ಹಾಕಿದೀನಿ.

ನೀರೊಂದು ಇದ್ರೆ ವ್ಯವಸಾಯದಿಂದ ಆದಾಯ ಖಂಡಿತಾ ಪಡೀಬಹುದು. ಆದ್ರೆ ನಮ್ಮವರು ವ್ಯವಸಾಯ ಬಿಡ್ತಿರೋದಕ್ಕೆ ನೀರಿನ ಮೂಲ ಇಲ್ಲದಿರುವುದೂ ಒಂದು ಕಾರಣ ಇರಬಹುದು. ಮೂಲತಃ ವ್ಯವಸಾಯ ಮಾಡಲು ಆಸಕ್ತಿಯೂ ಇರಬೇಕು. ಇಲ್ಲದಿರುವ ಮನಸ್ಸಿನಿಂದ ವ್ಯವಸಾಯ ಮಾಡಿದ್ರೆ ಉಪಯೋಗ ಆಗೋದಿಲ್ಲ. ನನಗೆ ಅನ್ನಿಸುವ ಪ್ರಕಾರ ಕೃಷಿಯಲ್ಲಿ ಆದಾಯವಿದೆ. ಯಾವ ಬ್ಯಾಂಕಿಗೆ ದುಡ್ಡು ಹಾಕಿದ್ರೂ, ಇಲ್ಲಿ ಬಂದಷ್ಟು ವೇಗವಾಗಿ ಆದಾಯ ಸಿಗೋದಿಲ್ಲ. ಆದ್ರೆ ನಾವು ಸ್ವತಃ ಅಲ್ಲಿದ್ದು ಮಾಡಿದ್ರೆ ಆದಾಯ ಸಿಗುತ್ತೆ. ನಾವು ಇನ್ನೊಬ್ಬರಿಗೆ ಬಿಟ್ಟು ದೂರದಲ್ಲಿ ವಾಸವಾಗಿದ್ರೆ, ವ್ಯವಸಾಯ ಮಾಡಿದೋರು ಉದ್ಧಾರ ಆಗ್ತಾರೆ, ನಾವು ಆಗೋದಿಲ್ಲ.

- **ನಿಮಗೆ ವೈದ್ಯ ವೃತ್ತಿ ಇತ್ತು, ಬಂಡವಾಳ ಇತ್ತು, ಹಾಗಾಗಿ ವ್ಯವಸಾಯ ಅಭಿವೃದ್ಧಿ ಮಾಡಿದ್ರಿ. ಆದ್ರೆ ನೀವು ವ್ಯವಸಾಯಾನೇ ಮಾಡಿದ್ರೆ ಇಷ್ಟು ಅಭಿವೃದ್ಧಿ ಸಾಧ್ಯವಾಗ್ತಿತ್ತಾ?**

ಆಗ್ತಿತ್ತೇನೋ . . . ಅದನ್ನೇ full ಮನಸ್ಸಿನಿಂದ ಮಾಡಿದ್ರೆ. ಯಾಕೇಂದ್ರೆ ನಿಮಗೆ ಒಂದು ಉದಾಹರಣೆ ಹೇಳೋದಾದ್ರೆ, ನಾವು ಅಡಿಕೆ ಗಿಡ ತರೋದಕ್ಕೆ ಚಿಲ್ಕುಂದಕ್ಕೆ ಹೋಗಿದ್ವು. ಆವಾಗ ಅಲ್ಲಿರೋರು ನನಗೆ ಒಂದು ಮನೆ ತೋರಿಸಿದ್ರು. ನನಗೆ ಆ ಮನೆ ನೋಡಿ ಬಹಳ ಆಶ್ಚರ್ಯವಾಯ್ತು. ಯಾಕೇಂದ್ರೆ ಅವರಿಗೆ ಇದ್ದದ್ದು ಒಂದೂಕಾಲು ಎಕರೆ ಅಷ್ಟೆ. ಅವರ ಹೆಸರನ್ನು ನಾನು ಮರೆತಿದ್ದೇನೆ. ಅಷ್ಟನ್ನೇ ಅವರು ಎಷ್ಟು ಚೆನ್ನಾಗಿ ಬೇಸಾಯ ಮಾಡಿದ್ರು ಅಂದ್ರೆ ಒಂದು ಮನೆ ಕಟ್ಟಿಸಿ, ಮೂರು ಜನ ಹೆಣ್ಣು ಮಕ್ಕಳಿಗೆ ಮದುವೆ ಮಾಡಿ ಎಲ್ಲೂ ಸಾಲಸೋಲ ಮಾಡದೆ ಜೀವನ ಸಾಗಿಸಿದಾರೆ ಅಂತ ತಿಳೀತು. ಅಷ್ಟು ಜಮೀನಿನಲ್ಲಿ ಅವರು ಜೀವನಪೂರ್ತಿ ಅಚ್ಚುಕಟ್ಟಾಗಿ ಬದುಕಬಹುದು ಅಂತಾದ್ರೆ, ವ್ಯವಸಾಯದಲ್ಲಿ ಆದಾಯ ಇಲ್ಲ ಅಂತ ಹೇಗೆ ಹೇಳ್ತೀರಿ? ವ್ಯವಸಾಯದ ಆದಾಯ ನೀವು ಎಷ್ಟು ಶ್ರಮ ತೊಗೊಂಡು ಅದನ್ನು ಮಾಡಿರ್ತೀರಿ ಅನ್ನೋದ್ರ ಮೇಲೆ ಅವಲಂಬಿತವಾಗಿದೆ ಅಷ್ಟೆ. ಇದರಲ್ಲಿ ನನಗೆ ಅನುಮಾನವೇ ಇಲ್ಲ. ಬೇರೆ ದೇಶಗಳ economy shaky ಆಗಿದ್ರೂ, ಭಾರತ ದೇಶದ economy ಕೃಷಿ ಆಧಾರಿತವಾಗಿದ್ರಿಂದ ಸುಸ್ಥಿರವಾಗಿದೆ. Green Revolution ಆದ ಮೇಲೆ ಆಹಾರದ ಸಮಸ್ಯೆ ನೀಗಿದೆ. ಆಹಾರ ಸರಿಯಾಗಿದ್ರೆ economy stable ಆಗಿರುತ್ತೆ.


ಅಡಿಕೆ ತೋಟದ ಸೊಗಸು: ನೆಲದಲ್ಲಿ ಹರಡಿದ ಗೊಬ್ಬರವಸ್ತು: ಭಾಗ್ಯಲಕ್ಷ್ಮಿ: ಬೆಂಗಳೂರು

- **ನೀವು ವೈದ್ಯನಾಗಿರದೆ, ರೈತನಾಗಿಯೇ ಇದ್ದಿದ್ರೆ ಈಗ ನೀವು ಹೆಣ್ಣು ತಂದಿರುವ ಕಡೆ, ಮದುವೆ ಆಗಲು ಸಾಧ್ಯವಿತ್ತಾ?**

ಆ ವಿಚಾರ ಹೇಳಲು ಕಷ್ಟ (ನಗು).

- **ಯಾಕೇಂದ್ರೆ ಹಳ್ಳೀಲಿ ವ್ಯವಸಾಯ ಮಾಡೋರಿಗೆ ಹೆಣ್ಣು ಸಿಕ್ತಿಲ್ಲ. ನಿಮ್ಮವರೇ ಕೊಡ್ತಿಲ್ಲ. ನಿಮ್ಮ ಕೃಷಿ ನಶಿಸಲು ಅದೂ ಕಾರಣ ಅಂತ ಹೇಳಲಾಗ್ತಾ ಇದೆ. ನೀವೇನಂತೀರಾ?**

ಯಾವ ತರಹ portray ಮಾಡ್ತೀವಿ ಅನ್ನುವುದರ ಮೇಲೆ ಹೋಗುತ್ತೆ ಅದು. ನಮ್ಮಲ್ಲಿ ಎಷ್ಟು ಜನ ಓದಿ ಕಲಿತು ಅನಂತರ ವೈದಿಕ ವೃತ್ತಿಗೆ ಹೋಗಿದಾರೆ! ವಾಪಸ್ಸು ಕೃಷಿಗೆ ಹೋಗಿರೋರೂ ಇದಾರೆ! ಏನೇ ಮಾಡ್ತಿದ್ರೂ, ಮಾಡ್ತಿರೋದನ್ನು ಉತ್ತಮ ಸ್ಥಿತಿಯಲ್ಲಿ ಮಾಡ್ತಿದ್ರೆ ಅವರಿಗೆ automatic ಆಗಿ respect ಬರುತ್ತೆ. ಈಗ ಪಟ್ಟಣಕ್ಕೆ ಬಂದು ಸೇರಿರೋರು ಸಹ ಹಳ್ಳಿಯಿಂದಲೇ ಬಂದಿರೋದು. ಅವರಲ್ಲಿ ಏನು ಶಕ್ತಿ ಇತ್ತೋ, ಆಸಕ್ತಿ ಇತ್ತೋ ಅದನ್ನು ಬೆಳೆಸಿದಾರೆ ಅಷ್ಟೆ. ಅದನ್ನು ಅತ್ಯುತ್ತಮವಾಗಿ ಬೆಳೆಸಿರೋದ್ರಿಂದ ಪ್ರತಿಭೆ ಮುಂದೆ ಬಂದೇ ಬರುತ್ತೆ, ಅವರು ಯಾವ ಕ್ಷೇತ್ರದಲ್ಲಿದ್ರೂ.

- **ನಿಮ್ಮ ಮಕ್ಕಳು ವ್ಯವಸಾಯ ಮುಂದುವರೆಸ್ತಾರಾ?**

ನನ್ನ ಮೂರು ಜನ ಗಂಡು ಮಕ್ಕಳು ಎಲ್ಲರೂ ವೈದ್ಯರಾಗಿದ್ರೂ, ವ್ಯವಸಾಯದಲ್ಲಿ ಆಸಕ್ತಿ ಇದೆ. ನನ್ನ ಮಗ ಬೇರೆ ಕಡೆ ಜಮೀನು

ಸಹಾ ಖರೀದಿಸಿದಾನೆ. ಅವರೂ ನನ್ನ ಜತೆ ತೋಟದಲ್ಲಿ ಕೆಲಸ ಮಾಡ್ತಾರೆ. ನಮ್ಮ ತೋಟದ ಮಾವಿನ ಸಸೀನ ಮಕ್ಕಳೇ ನೆಟ್ಟಿರೋದು. ತೋಟದಲ್ಲಿ ಹಸು, ಎತ್ತು ಇದೆ. ಸುಮಾರು ಇಪ್ಪತ್ತೈದು ವರುಷದಿಂದ ನನ್ನ ಹೆಂಡತಿ dairy ನಡೆಸ್ತಾ ಇದಾಳೆ. ೧೯೭೧ ರಿಂದ, ದಿನಾಲೂ ೨೦, ೩೦ ಲೀಟರ್ ಹಾಲು ಮಾರ್‍ತಾ ಇದ್ವಿ regular ಆಗಿ. Dairy ಅಂದ್ರೆ ನಮಗೆ ಎರಡನೇ ಉದ್ಯೋಗ ಇದ್ದ ಹಾಗೆ. ವೈದ್ಯ ವೃತ್ತಿಯಿಂದ ನಿವೃತ್ತಿ ಹೊಂದಿದ ಮೇಲೆ Dairy, ಜಮೀನು ನೋಡ್ಕೊಂಡು ಇರ್‍ತೀವಿ ನಾವು.

ನನ್ನ ತೋಟದ ಗಿಡಗಳ ಜತೆ, ನನ್ನ ಸಂಬಂಧ ಉತ್ತಮವಾಗಿದೆ. ಎಲ್ಲರೂ ಹಣ್ಣನ್ನು ಕಿತ್ತುಕೊಂಡು ಹೋಗಿದ್ರೂ, ನಾನು ಹೋದಾಗ ನನಗೆ ಒಂದು ಹಣ್ಣು ಸಿಕ್ಕೇ ಸಿಗುತ್ತೆ ಅಂತ ತಮಾಷೆ ಸಹ ಮಾಡ್ತಿರ್‍ತೀನಿ. ಗಿಡ ಹಾಕಿ ಅದನ್ನು ಬೆಳೆಯೋದು, ನೋಡೋದು, ಅದು ವೃದ್ಧಿಯಾಗೋದ್ರಿಂದ ಬರುವ ಸಂತೋಷ ಬೇರ್‍ಯಾವುದರಲ್ಲೂ ಸಿಗೋಲ್ಲ. ಅದು ಮಕ್ಕಳನ್ನು ಬೆಳೆಸಿದ ಹಾಗೆ. ಅದೊಂದು ಆನಂದಕರವಾದ ಕಸುಬು. ಜತೆಗೆ ನಿರ್ಮಲವಾದ ವಾತಾವರಣ, ಉಸಿರಾಡಲು ಒಳ್ಳೆಯ ಗಾಳಿ, ನಿಶ್ಶಬ್ದತೆ ಮನಸ್ಸಿಗೆ ಬಹಳ ಹಿತವಾಗಿರುತ್ತೆ. ಇಲ್ಲಿ ಮನಸ್ಸಿಗೆ ಬೇಸರವಾದಾಗ, ತೋಟಕ್ಕೆ ಹೋಗಿ ಎರಡು ದಿನ ಇದ್ದು ಬಂದ್ರೆ, ಮನಸ್ಸು ತಿಳಿಯಾಗಿ Battery recharge ಆಗುತ್ತೆ. ಈಗ ವಾರದ ಕೊನೇಲಿ ಹೋಗ್ತಾ ಇದೀವಿ. ನಿವೃತ್ತಿ ಪಡೆದ ಮೇಲೆ ಅಲ್ಲೇ ಶಾಶ್ವತವಾಗಿ ಹೋಗಿ ಇರುವ ಆಲೋಚನೆ ಇದೆ.

- **ವ್ಯವಸಾಯದ ಮೇಲೆ ಇಷ್ಟೆಲ್ಲಾ ಪ್ರೀತಿ ಇರುವ ನೀವು ಒಬ್ಬ ಮಗನನ್ನು ಸಂಪೂರ್ಣವಾಗಿ ವ್ಯವಸಾಯಸ್ಥನನ್ನಾಗಿ ಯಾಕೆ ಮಾಡಲಿಲ್ಲ?**
  ನಾವು ಯಾರನ್ನೂ ಏನೂ ಮಾಡೋಕ್ಕೆ ಹೋಗಬಾರದು ಅನ್ನುವುದು ನನ್ನ ಉದ್ದೇಶ. ಅವರೆಲ್ಲಾ ಅವರವರಿಗೆ ಏನೇನು ಇಷ್ಟವೋ ಅದೇ ಮಾಡಬೇಕು. ಆಸಕ್ತಿ ಹುಟ್ಟಿಸುವ ಪ್ರಯತ್ನ ಮಾಡಬಹುದೇ ಹೊರತು, ಕ್ಷೇತ್ರವನ್ನು ಮಕ್ಕಳು choose ಮಾಡಬೇಕು. ನಾವು ಹೇಳಬಾರದು.

- **ನಿಮ್ಮ ಒಬ್ಬ ಮಗ 'ನಾನು ರೈತನಾಗ್ತೀನಿ' ಅಂದಿದ್ರೆ ನಿಮ್ಮ ಅಭ್ಯಂತರವೇನೂ ಇರ್‍ತಿರಲಿಲ್ಲವಾ?**
  ಅಯ್ಯೋ ಖಂಡಿತಾ ಇಲ್ಲ. ಅದಕ್ಕೇನಂತೆ. ಉತ್ತಮವಾಗಿ ಅಭಿವೃದ್ಧಿ ಮಾಡ್ತಿದ್ವಿ. ವ್ಯವಸಾಯದಲ್ಲಿ ನೀರು ಹಾಗೂ ಗಿಡದ ರೋಗ ನಿರ್ವಹಣೆ ಮುಖ್ಯ ಅಷ್ಟೆ. ಅದಿದ್ರೆ ಆರಾಮ ಖಂಡಿತಾ ಸಿಗುತ್ತೆ. ಆದ್ರೆ ಎಷ್ಟು ಆದಾಯ ಅನ್ನೋದು ಮುಖ್ಯ ಅಷ್ಟೆ. ನಮ್ಮ ಆಸೆ ಎಷ್ಟಿದೆ, ಬರೋದೆಷ್ಟಿದೆ ಅನ್ನುವುದರಲ್ಲಿನ ಅಂತರ ಬಹಳ ಮುಖ್ಯ. ಲಕ್ಷಾಂತರ ರೂಪಾಯಿ ಆದಾಯ ಬೇಕು ಅಂದ್ರೆ ಅದು ಒಂದು ಎಕರೇಲಿ ಬರೋಲ್ಲ. ವಿವಿಧ ಬೆಳೆಗಳ ಸಂಯೋಜನೆ ಬಗ್ಗೆ ಸಹಾ ಆಲೋಚನೆ ಮಾಡಬೇಕು. ಬೇರೆ ಬೇರೆ ಬೆಳೆಗಳ economics ಒಂದೊಂದು ರೀತಿ ಅಲ್ವಾ? ನಾವು ಬಾಳೆ ಹಾಕಿದಾಗ ಮೊದಲ ಬಾರಿಗೆ ೭೫ ಸಾವಿರ ರೂಪಾಯಿ ಸಿಕ್ತು, ಆದ್ರೆ ಎರಡನೆಯ ಬಾರಿಗೆ ರೋಗ ಬಂತು. ಸರಿಯಾಗಿ ಯೋಚನೆ ಮಾಡಿ, ಪ್ರತಿ ದಿನ ಗಮನ ಇಟ್ಟು ಬೇಸಾಯ ಮಾಡಿದ್ರೆ ವ್ಯವಸಾಯ ಖಂಡಿತಾ ಲಾಭದಾಯಕ. ಬಿಡುವಂತಹ ವೃತ್ತಿ ಖಂಡಿತಾ ಅಲ್ಲ.

- **ನಿಮ್ಮ ಉಪವೃತ್ತಿ ವ್ಯವಸಾಯ, ವೈದ್ಯಕೀಯ ವೃತ್ತಿ ಮೇಲೆ ಪರಿಣಾಮ ಬೀರಿದ್ಯಾ?**
  ಖಂಡಿತಾ. ಯಾಕೇ ಅಂದ್ರೆ, ಆಯುರ್ವೇದ ಔಷಧಿಗಳ ಬಗ್ಗೆ ನನಗೆ ಆಸಕ್ತಿ ಇದೆ. ತೋಟದಲ್ಲಿ ಅಂಥ ಸಸ್ಯಗಳನ್ನು ನಾನು ಬೆಳೆದಿದೀನಿ. ಅದರಲ್ಲಿ ಕೆಲವನ್ನು experiment ಸಹಾ ಮಾಡಿದೀನಿ. ತುಳಸಿ decoctionನ, ಕಣ್ಣಿನ allergyಗೆ ಬಳಸಿದ್ದೇನೆ. ಎಷ್ಟೋ ಜನರಿಗೆ advice ಸಹಾ ಮಾಡ್ತಿದ್ದೇನೆ. ಇದನ್ನು ಔಷಧವಾಗಿ ಹೊಟ್ಟೆಗೆ ಬಳಸಬೇಕು. ಈಗ recent ಆಗಿ ಎಕ್ಕದ ಹಾಲಿನ ಮೇಲೆ ಸಂಶೋಧನೆ ಮಾಡಬೇಕು ಅಂತ ಅಧ್ಯಯನ ಮಾಡ್ತಿದೇನೆ. ತೋಟದಲ್ಲಿ ಅಳಲೇಕಾಯಿ ಮರಗಳು ಇವೆ. ೧೫, ೨೦ ನೆಲ್ಲಿಕಾಯಿ, ತಾರೇಕಾಯಿ ಮರ ಇದೆ. ಈ ಮೂರೂ ತ್ರಿಫಲ ಚೂರ್ಣಕ್ಕೆ ಹೇರಳವಾಗಿಬೇಕು. ನೆಲನೆಲ್ಲಿ ಕಷಾಯ ಬಳಸಲು ಮಗನಿಗೆ ಹೇಳಿದ್ದೇನೆ. ತಂಗಡಿ ಸೊಪ್ಪನ್ನು ಸಕ್ಕರೆ ಖಾಯಿಲೆಗಾಗಿ, ನನ್ನ ಮೇಲೆ ಸಾಕಷ್ಟು ಪ್ರಯೋಗ ಸಹಾ ಮಾಡಿಕೊಂಡಿದ್ದೇನೆ. ಇದು ಅಧ್ಯಯನ ಹಂತದಲ್ಲಿದೆ. Biotech ಈಗ ಮುಂದುವರೀತಿರುವ ವಿಜ್ಞಾನ. ನಾವು ಏನನ್ನಾದರೂ ಕಂಡು ಹಿಡಿದ್ರೆ ಮುಂದೆ ಅದು ಆದಾಯವನ್ನು ಸಹಾ ತರಬಹುದು. ಈ ಕ್ಷೇತ್ರದಲ್ಲಿ ಬಹಳ ಭವಿಷ್ಯವಿದೆ.

- **ವ್ಯವಸಾಯದಲ್ಲಿ ಹೊಸದೇನನ್ನಾದರೂ ಮಾಡಿದೀರಾ?**
  ಸಾವಯವ ಕೃಷಿ ಬಗ್ಗೆ ಒಲವಿದೆ. ಎರೆಹುಳು ಗೊಬ್ಬರವನ್ನು ದೊಡ್ಡ ಮಟ್ಟದಲ್ಲಿಯೇ ತಯಾರು ಮಾಡ್ತಿದೇವೆ. ರಾಸಾಯನಿಕ

ಗೊಬ್ಬರ ಬಳಸೋದನ್ನು ನಿಲ್ಲಿಸಿದೀವಿ. ದನದ ಗೊಬ್ಬರ, ಎರೆಹುಳು ಗೊಬ್ಬರ ತೋಟಕ್ಕೆ ಪೂರ್ಣವಾಗಿ ಸಾಕಾಗ್ತಿದೆ. ಕೀಟ ರೋಗಗಳ ಜೈವಿಕ ನಿಯಂತ್ರಣಕ್ಕೆ ಸಹ ಪ್ರಯತ್ನ ಪಡ್ತಿದೀವಿ. ವಿಷ ರಾಸಾಯನಿಕಗಳ ಬಳಕೆ ಕಡಿಮೆ ಮಾಡಿದೀವಿ. ತೆಂಗಿನ ನುಸಿ ಹತೋಟಿಗೆ ಇಂಗನ್ನು ಬಳಸಿದೀವಿ. ಶೇಕಡಾ ೬೦ರಷ್ಟು ಫಲಿತಾಂಶ ಸಿಕ್ಕಿದೆ. ವ್ಯವಸಾಯ ತೃಪ್ತಿ ತಂದಿದೆ. ಭವಿಷ್ಯ ಉತ್ತಮವಾಗಿದೆ ಎಂದು ಮುಗುಳ್ನಕ್ಕು ಮಾತು ಮುಗಿಸಿದ್ರು ಡಾ. ಕೆ. ರಾಮಚಂದ್ರಮೂರ್ತಿ. ಅವರ ಬಿಡುವಿನ ಅವಧಿ ಸಹಾ ಮುಗಿದಿತ್ತು. ತುರ್ತಾಗಿ ಮತ್ತೊಂದು ಕಣ್ಣಿನ ಆಪರೇಷನ್‌ಗೆ ಅವರು ತೆರಳಿದ್ರು.

ಅನಂತರ ವ್ಯವಸಾಯದ ವಿಚಾರಗಳನ್ನು ಮುಂದುವರೆಸಿದ್ರು ಡಾ. ಕೆ. ರಾಮಚಂದ್ರ ಮೂರ್ತಿಯವರು ಪತ್ನಿ ಭಾಗ್ಯಲಕ್ಷ್ಮಿಯವರು. ನನ್ನ ತಾತ ಇದ್ದದ್ದು ಕೋಲಾರದಲ್ಲಿ. ನನ್ನ ತಂದೆ ರಾಮಚಂದ್ರರಾವ್ ಅವರು ಇದ್ದದ್ದು ಪೋಲಿಸ್ ಇಲಾಖೆಯಲ್ಲಿ. ತಾಯಿ ಶಾರದಮ್ಮ. ನಾವು ಹುಟ್ಟಿದ್ದು, ಬೆಳೆದದ್ದು ಎಲ್ಲಾ ಬೆಂಗಳೂರಲ್ಲೆ. ನನ್ನ ತಾತಂಗೆ ಜಮೀನು ಇತ್ತಂತೆ. ನನ್ನ ತಂದೆ ವ್ಯವಸಾಯ ಮಾಡ್ತಿರಲಿಲ್ಲ. ಆದ್ರೆ ನಂಗೆ ತೋಟ, ಗಿಡಗಳು ಅಂದ್ರೆ ಮುಂಚಿನಿಂದಲೂ ಇಷ್ಟ. ಮನೇಲೂ ಚಿಕ್ಕ ಕೈತೋಟ ಮಾಡಿ ಹೂವಿನ ಗಿಡಗಳನ್ನು ಹಾಕಿದ್ದೆ. ಬೇರೆ ಕಡೆ ತೋಟಕ್ಕೆ ಹೋದಾಗ, 'ನನಗೂ ಇಂತಹ ತೋಟ ಮಾಡಬೇಕು' ಅಂತ ಆಸೆಯಾಗೋದು. ಗಿಡಗಳ ಮಧ್ಯೆ ಇದ್ರೆ ನನಗೆ peace of mind ಸಿಕ್ಕೋದು. ನಾನು Psychology, Sociologyನಲ್ಲಿ B.A., ಮಾಡಿದೆ. ಅನಂತರ ನನ್ನ ಮದುವೆಯಾಯ್ತು. ಅನಂತರ ಇಂಗ್ಲೆಂಡ್‌ಗೆ ಹೋದ್ವಿ. ಅಲ್ಲಿ ಎರಡು ವರುಷ ಇದ್ವಿ. ಆಮೇಲೆ ಬೆಂಗಳೂರಿಗೆ ವಾಪಸ್ಸು ಬಂದ್ವಿ. ನಮ್ಮ ಯಾಜಮಾನರಿಗೆ ವೈದ್ಯವೃತ್ತಿ ಕೆಲಸ ತುಂಬಾ ಇರೋದ್ರಿಂದ ತೋಟದ ನಿರ್ವಹಣೆ ಕೆಲಸಾನಾ ನಾನೇ ಮಾಡ್ತಿದೀನಿ. ನಾವು ೧೯೯೧ರಲ್ಲಿ ಜಮೀನು ಖರೀದಿಸಿದ್ದು. ಮೊದಲು ತಂತಿ ಬೇಲಿ ಹಾಕಿದ್ವಿ. ತುಂಬಾ ಹಣ invest ಮಾಡಲು ಆಗ ಹೆದರಿಕೇನೂ ಇತ್ತು, ಹಾಗೂ ನಮಗೆ ಆಗ್ತಾನೂ ಇರಲಿಲ್ಲ. ತೋಟದ ಮರಗಿಡಗಳನ್ನು ಹಾಗೇ ಉಳಿಸಿಕೊಂಡು, ಹಂತಹಂತವಾಗಿ ಅಭಿವೃದ್ಧಿ ಮಾಡ್ತಾ ಇದ್ವಿ. ಜಮೀನನ್ನು level ಸಹಾ ಮಾಡಲಿಲ್ಲ. ಪ್ರಕೃತಿ ಸಹಜವಾಗಿ ಹೇಗಿತ್ತೋ ಹಾಗೇ ಉಳಿಸಿದ್ವಿ. ಬೇಲಿಗೆ ಗ್ಲಿರಿಸೀಡಿಯಾ ಗಿಡಗಳನ್ನು ಹಾಕಿದೀವಿ. ಸಾಕಷ್ಟು ಬೇವು, ಹೊಂಗೆ ಮರಗಳು ಇವೆ. ಜಮೀನಿನ ವ್ಯವಸಾಯ ನಮಗೂ ಹೊಸದು. ಮೊದಲು ಒಂದು Borewell ಹಾಕಿದ್ವಿ. ೩೦೦೦ ಗ್ಯಾಲನ್ ನೀರು ಸಿಕ್ತು. ತಕ್ಷಣ ಹನಿ ನೀರಾವರಿ ಅಳವಡಿಸಿ, ೪೦೦ ತೆಂಗು ಹಾಗು ೨೫೦ ಮಾವಿನ ಗಿಡ ಹಾಕಿದ್ವಿ. ನಾವು ಜಮೀನಿನಲ್ಲಿ ಸದಾ ಇರುವವರಲ್ಲ. ಹಾಗಾಗಿ ರಾಗಿ, ಭತ್ತ ಬೆಳೆಯೋದು ಕಷ್ಟ. ಬೆಂಗಳೂರಿನಿಂದ ಬಂದು ಹೋಗಿ ನಿರ್ವಹಣೆ ಮಾಡೋದಕ್ಕೆ ಹಣ್ಣಿನ ಗಿಡಗಳು, ತೋಟಗಾರಿಕೆ ಬೆಳೆಗಳು ಸರಿ ಅಂತ ಆಗ ಅನ್ನಿಸ್ತು. ಹಾಗೇ ಕೂಲಿಕಾರ್ಮಿಕರ ಅವಲಂಬನೇನೂ ಈ ಬೆಳೆಗಳಿಗೆ ಅಷ್ಟಾಗಿ ಇರೋಲ್ಲ. ಏಳೆಂಟು ವರುಷ ಕಾಪಾಡಿದ್ರೆ ಖರ್ಚು ಕಳೆದು Break-even ಆಗಿ ಆದಾಯ ಬರಬಹುದು ಅನ್ನುವ ನಿರೀಕ್ಷೆ ಸಹಾ ಇತ್ತು. ತೋಟದಲ್ಲಿ ನಾವು ಬಂದು ವಾಸವಿರಲು ಒಂದು ಮನೆ ಕಟ್ಟಿದ್ದೇವೆ. ತೋಟ ನೋಡಿಕೊಳ್ಳಲು ಈಗ ಐದು ಸಂಸಾರ ಇದೆ. ಅವರಿಗೂ ಮನೆ ಕಟ್ಟಿದೀವಿ. ಕೊಟ್ಟಿಗೆ ಕಟ್ಟಿದೀವಿ. ಎರಡು ಜತೆ ಎತ್ತು ಇದೆ. ಹಾಲು ಕರೆಯುವ ಐದು ಹಸು, ಎಂಟು-ಹತ್ತು ದನಕರುಗಳು ಇವೆ. ನಾವು ಉಳುಮೆಗೆ ಟ್ರಾಕ್ಟರ್ ಬಳಸ್ತಾ ಇಲ್ಲ. ಮೊದಲು ಹಸುಗಳನ್ನು ಸಾಕಲು ಆರಂಭಿಸಿದೆ. ಡೈರಿ ಮಾಡುವ ಉದ್ದೇಶವಿರಲಿಲ್ಲ. ವ್ಯವಸಾಯದ ಕೆಲಸಕ್ಕೆ ಗೊಬ್ಬರಕ್ಕಾಗಿ ಅಂತ ಆರಂಭಿಸಿದ್ದು. ನಂತರ ಅವುಗಳನ್ನು ಮಾರಲು ಮನಸ್ಸಾಗಲಿಲ್ಲ, ಹಾಗೇ ಸಾಕಿಕೊಂಡ್ವಿ. ಹತ್ತಿರದಲ್ಲೇ ಡೈರಿ ಆರಂಭವಾಯ್ತು. ಅಲ್ಲಿಗೆ ಪ್ರತಿದಿನ ೩೦ ಲೀಟರ್ ಹಾಲು ಮಾರಲು ಆರಂಭಿಸಿದ್ವಿ. ಅಲ್ಲಿಗಲ್ಲಿಗೆ maintain ಆಗ್ತಿದೆ. ಸ್ವಲ್ಪ ಆದಾಯ ಸಹಾ ಸಿಗ್ತಿದೆ. ಮನೆಗೆ ಹಾಲು, ತೋಟಕ್ಕೆ ಗೊಬ್ಬರ ಸಿಕ್ತಿದೆ. ದನಕ್ಕೆ ನೇಪಿಯರ್ ಹುಲ್ಲನ್ನು ತೋಟದಲ್ಲಿ ಬೆಳೆಸ್ತಾ ಇದೀವಿ. ಜತೆಗೆ ಬಿಳಿಜೋಳ, ಮುಸುಕಿನ ಜೋಳಾನ ಬೆಳೀತೀವಿ. ಜೋಳಾನ ರವೆ ಮಾಡಿಸಿ, ಕಡಲೆಕಾಯಿ ಹಿಂಡಿ ಜತೆ ಹಸುವಿಗೆ ಆಹಾರವಾಗಿ ಬಳಸ್ತಾ ಇದೀವಿ. ನನಗೆ ೩೦ ಎಕರೆ ತೋಟಕ್ಕೆ ಆಗುವಷ್ಟು ಕೊಟ್ಟಿಗೆ ಗೊಬ್ಬರ ಸಿಗ್ತಿದೆ.

ತೋಟದಲ್ಲಿ ಎರೆಹುಳು ಸಾಕ್ತಿದೀನಿ. ಕೃಷಿಗೆ ಸಂಬಂಧಪಟ್ಟ ಪುಸ್ತಕ, ಪ್ರಕಟಣೆಗಳನ್ನೂ ಓದಿ ತಿಳಿದು ಆರಂಭಿಸಿದ್ದು. ತೋಟ ಕತ್ತರಿಸಿದಾಗ ಸಿಗುವ ಸೊಪ್ಪುಸದೆಗೆ ಸಗಣಿ ರಾಡೀನ ಬೆರೆಸಿ ಹುಳ ಬಿಟ್ರೆ ಐದು ವಾರಕ್ಕೆ ಒಂದು ಸಾರಿ ಜರಡಿ ಆಡಿದ್ರೆ, ೨೦, ೨೫ ಸಿಮೆಂಟ್ ಚೀಲ ಗೊಬ್ಬರ ಸಿಗುತ್ತೆ. ಅದನ್ನು ಶೇಖರಿಸಿ ಇಟ್ಟುಕೊಂಡಿರ್ತೀವಿ. ವರುಷಕ್ಕೆ ಒಂದು ಬಾರಿ ಗಿಡಗಳಿಗೆ ಗೊಬ್ಬರ ಹಾಕ್ತೀವಿ. ರಾಸಾಯನಿಕ ಗೊಬ್ಬರ ನಾವು ಹೆಚ್ಚಿಗೆ ಬಳಸ್ತಾ ಇಲ್ಲ. ಆದ್ರೆ ದನಕ್ಕೆ ಹಾಕಿರುವ ಹುಲ್ಲು ಮಳೆಗಾಲದನಂತರ ಚೆನ್ನಾಗಿ ಬೆಳೆಯೋಲ್ಲ. ಹಾಗಾಗಿ ಅದಕ್ಕೆ ಸ್ವಲ್ಪ ಯೂರಿಯಾ ಗೊಬ್ಬರ ಹಾಕ್ತೀವಿ. ರಾಸಾಯನಿಕ ವಿಷ ಔಷಧಿಗಳನ್ನು ಹೆಚ್ಚು ಬಳಸ್ತಾ ಇಲ್ಲ. ಗೋಮೂತ್ರ, ಬೇವಿನ

ಕಷಾಯವನ್ನೇ ಹೆಚ್ಚಾಗಿ ಸಿಂಪರಣೆ ಮಾಡ್ತಾ ಇದೀವಿ. ತೀರಾ ಅನಿವಾರ್ಯವಾದಾಗ ರಾಸಾಯನಿಕ ಔಷಧಿ ಬಳಸ್ತೀವಿ.

ನನಗೆ ವ್ಯವಸಾಯದ ಕೆಲಸ ತುಂಬಾ ಇಷ್ಟ. ನಾನು ತೋಟಕ್ಕೆ ಹೋದ್ರೂ ಒಂದು ನಿಮಿಷ ಕುಳಿತುಕೊಳ್ಳೋಲ್ಲ. ತೋಟದ ತುಂಬಾ ಸುತ್ತಾಡಕ್ಕೆ ಒಂದೂವರೆ ಘಂಟೆ ಬೇಕು. ಆಳುಗಳ ಕೆಲಸಾನ ನಿರ್ವಹಣೆ ಮಾಡ್ತೀನಿ. ದೈಹಿಕ ಶ್ರಮ ವಹಿಸೋಕೆ ನಮಗೆ ಆಗೋಲ್ಲ. ಅನುಭವ ನನಗೆ ಪಾಠ ಕಲಿಸಿದೆ. ಇಲ್ಲಿಯವರೆಗೆ ನನಗೆ ತೋಟದ ಆದಾಯ, ಖರ್ಚು ಸಮಸಮ ಆಗ್ತಿತ್ತು. ಈಗ ಅಡಿಕೆ ಬಂದಿದೆ, ತೆಂಗು ಬರ್ತಾ ಇದೆ. ಹಾಗಾಗಿ ಎರಡರಿಂದ, ಮೂರು ಲಕ್ಷ ರೂಪಾಯಿ ನಿರೀಕ್ಷೆ ಮಾಡಬಹುದು. ತೋಟದ ಖರೀದಿ ಹಾಗೂ ಅಭಿವೃದ್ಧಿಗೆ ಸುಮಾರು ಹತ್ತು ಲಕ್ಷ ಖರ್ಚು ಮಾಡಿದ್ದೇವೆ. ಆಳುಗಳಿಗೆ ತಿಂಗಳಿಗೆ ೧೫ ರಿಂದ ೧೬ ಸಾವಿರ ಖರ್ಚು ಬರ್ತಿದೆ. ನಾವು ತೋಟ ಖರೀದಿ ಮಾಡಿದಾಗ ಇಲ್ಲಿದ್ದ ನೂರು ತೆಂಗಿನ ಗಿಡವೇ ಆದಾಯದ ಮೂಲ ಆಗಿತ್ತು. ಹಾಗೇ ೨೫ ಮಾವಿನ ಗಿಡ ಇತ್ತು. ಮೊದಲು ಅದನ್ನು ನಿರ್ವಹಣೆ ಮಾಡಿದ್ವಿ. ತೋಟದಲ್ಲಿ ಸಿಗುವ ಎಲ್ಲವನ್ನೂ ನಾನು ಮಾರ್ತಾ ಇದೀನಿ. ಅದರಲ್ಲೂ ಆದಾಯ ಬರ್ತಿದೆ. ತೆಂಗು, ಮಾವು, ಸಪೋಟ, ನಿಂಬೆ, ಕಿತ್ತಳೆ, ಹಲಸು, ಚೆರ್ರಿ, ಸೀಬೆ, ಪನ್ನೇರಳೆ, ಡಾಲ್ಚಿನ್ನಿ, ಲವಂಗ, ಜಾಯಿಕಾಯಿ, ಅಮಟೆಕಾಯಿ, ದಾಳಿಂಬೆ, ಅಡಿಕೆ ಗಿಡಗಳು ಇವೆ. ನಾನು ತೋಟ ಮಾಡಿದ್ದಕ್ಕಿಂತ ಹೆಚ್ಚಿಗೆ ಉತ್ಪನ್ನಗಳನ್ನು ಮಾರಲು ಕಷ್ಟಪಟ್ಟಿದೇನೆ. ನಮಗೆ ಯಾರು ಖರೀದಿ ಮಾಡ್ತಾರೆ ಅನ್ನುವ ಬಗ್ಗೆ ಮಾಹಿತಿ ಇರಲಿಲ್ಲ. ಮಾರುವಾಗ ತುಂಬಾ ಮೋಸ ನಡೆಯುತ್ತೆ. ತುಂಬಾ ಕಡಿಮೆ ದರಕ್ಕೆ ಕೇಳಿ ನಾವು desperate ಆಗಿ ಮಾರುವ ಹಾಗೆ ಮಾಡ್ತಾರೆ. ಹಾಗಾಗಿ ನಾನು ಹಟ ಹಿಡಿದು ತೋಟದ ಉತ್ಪನ್ನಗಳನ್ನ ನಮ್ಮ ವಾಹನದಲ್ಲೇ ಬೇರೆ ಬೇರೆ ಕಡೆ ಸಾಗಿಸಿ ಮಾರ್ತಿದೇನೆ. ಈಗ ಕೆಲವು ಅಂಗಡಿಗಳು ಆರಂಭವಾಗಿವೆ. ಅಲ್ಲಿ ನ್ಯಾಯವಾದ ಬೆಲೆ ಸಿಗ್ತಿದೆ. ಹಾಗಾಗಿ ಪರವಾಗಿಲ್ಲ. ಕೆಲವನ್ನು ನಾನು ಆಸ್ಪತ್ರೇಲೇ ಇಟ್ಟು ಮಾರಿದೆ. ಈಗ ಲಾಲ್‌ಬಾಗ್‌ಗೆ ಹಾಕ್ತಿದೀನಿ. ಬೆಳೆಯೋದು ಸುಲಭ, ಮಾರೋದು ಕಷ್ಟ ಅಂತ ಅನ್ನಿಸ್ತಾ ಇತ್ತು. ಈಗ ಹಿಡಿತ ಸಿಗ್ತಾ ಇದೆ.

- **ನಿಮ್ಮ ಸೊಸೆಯಂದಿರಿಗೂ ಆಸಕ್ತಿ ಇದ್ಯಾ?**

ನನ್ನ ಸೊಸೆಯಂದಿರಿಗೆ ತುಂಬಾ Interest ಇದೆ ಅಂತ ನನಗೆ ಅನ್ನಿಸಿಲ್ಲ. ಅವರದು ಇನ್ನೂ ಚಿಕ್ಕ ವಯಸ್ಸು. ಸಮಯವೂ ಇಲ್ಲ. ಈಗಂತೂ ನಾನು ನೋಡ್ತಾ ಇದೀನಿ. ಮುಂದಿನ ದಿನಗಳ ಬಗ್ಗೆ ನನಗೆ ಗೊತ್ತಿಲ್ಲ. ನನಗಂತೂ ವ್ಯವಸಾಯ ಇಷ್ಟ. ಎಲ್ಲಾ comfort ಆಗಿ ಇದ್ದರೆ ನಾನಂತೂ ನನಗೆ ಹೆಣ್ಣು ಮಕ್ಕಳಾಗಿದ್ರೆ ವ್ಯವಸಾಯಸ್ಥನಿಗೆ ಕೊಟ್ಬಿಡ್ತಾ ಇದ್ದೆ. ಎಲ್ಲರಿಗೂ ಯಾಕೆ ಇಷ್ಟ ಆಗೋಲ್ಲ ಅಂದ್ರೆ ಹಳ್ಳಿ ಕೆಲಸ ಕಷ್ಟ ಅಂತ ಭಾವನೆ ಇದೆ. ನಮ್ಮ ಮಕ್ಕಳು ಅಷ್ಟು ಕಷ್ಟದ ಕೆಲಸ ಮಾಡೋದು ಬೇಡ ಅನ್ನೋದು ತಂದೆ ತಾಯಂದಿರಿಗೆ ಇರುತ್ತೆ. ನಮ್ಮ ಆಳುಗಳೇ ಹಾಗೆ ಹೇಳ್ತಿರ್ತಾರೆ. ಹಿಂದೆ ಹಳ್ಳಿಗಳಲ್ಲಿ Basic amenities ಇರ್ತಾ ಇರಲಿಲ್ಲ. ಮನೋರಂಜನೆಗೂ ಸಮಸ್ಯೆ ಇರ್ತಾ ಇತ್ತು. ಈಗ ಹಳ್ಳಿಗಳು ಚೆನ್ನಾಗಿವೆ. ನನ್ನ friend ಮಕ್ಕಳು, ನರಸಿಂಹರಾಜುಪುರ, ಸುತ್ತಮುತ್ತ ದೊಡ್ಡ ದೊಡ್ಡ ತೋಟ ಮಾಡಿಕೊಂಡು ಸಂತೃಪ್ತವಾಗಿದಾರೆ.

- **ಹಾಗಾದ್ರೆ ನಿಮ್ಮ ಗಂಡುಮಕ್ಕಳಿಗೆ ವ್ಯವಸಾಯಸ್ಥ ಕುಟುಂಬದಿಂದ ಹೆಣ್ಣು ತರಲಿಲ್ಲವೇಕೆ?**

ನನ್ನ ಮಕ್ಕಳು ನಮಗೆ chance ಕೊಡಲಿಲ್ಲ. ಓದುವಾಗ ಅವರೇ ಹುಡುಕಿಕೊಂಡ್ರು. ಅದಕ್ಕೆ ನಮ್ಮ ಅಭ್ಯಂತರ ಇರಲಿಲ್ಲ. ಮದುವೆ ಮಾಡಿದ್ವಿ (ನಗು).

ನಮ್ಮ ಹಿಂದೂಪುರದ ಜಮೀನಿನಲ್ಲಿ ತೆಂಗು, ಮಾವು, ಸಪೋಟ ಹಾಕಿದ್ದೇವೆ. ತಿಂಗಳಿಗೆ ಒಂದು ಸಾರಿ ಹೋಗಿ ಬರ್ತೀವಿ. ಆಳು ಕಾಳುಗಳನ್ನಿಟ್ಟು ತುಂಬಾ ಕಷ್ಟದಿಂದಲೇ ನಿರ್ವಹಣೆ ಮಾಡ್ತಿದೀವಿ. ಇಲ್ಲಿನ ಕೆಲಸದವರನ್ನೇ ಅಲ್ಲಿ ಬಿಟ್ಟಿದೀವಿ. ಅಲ್ಲಿನ ಸ್ಥಳೀಯ ಜನ ಇವರನ್ನು ಓಡಿಸಲು ನೋಡ್ತಾರೆ. Desperate ಆಗಿ ತೋಟ ಮಾರಿ ಹೋಗುವಂತೆ ತೊಂದರೆ ಕೊಡ್ತಾ ಇದಾರೆ. ಆದರೂ ನಿರ್ವಹಣೆ ಮಾಡ್ತಿದೀವಿ. ಅದು ಅಷ್ಟು profitable ಆಗಿ ಉಳಿದಿಲ್ಲ.

- **ಸಂಕೇತಿಗಳ ಕೃಷಿ ಬದುಕು ನಶಿಸುವುದಕ್ಕೆ ಮಹಿಳೆ ಕಾರಣಳಾ?**

ಕಾರಣ ಅಲ್ಲ ಅಂತ ನನಗೆ ಅನ್ನಿಸುತ್ತೆ. ಯಾಕೇಂದ್ರೆ ನನ್ನನ್ನೇ ತೊಗೊಳ್ಳಿ, ನನಗೆ ಎಲ್ಲಾ Basic amenities ಇದ್ರೆ ತೋಟದಲ್ಲಿ ಇರಲು ನನಗೆ ಭಯವಿಲ್ಲ. ಹಾಗಾಗಿ ಹೆಂಗಸರಿಂದ ಕೃಷಿ ನಶಿಸ್ತಾ ಇದೆ ಅನ್ನೋದು ತಪ್ಪು.

- **ವ್ಯವಸಾಯದ ಬದುಕು ನಿಮಗೆ ಏನನ್ನು ಕೊಟ್ಟಿದೆ?**

  ಮನಃಶಾಂತಿ ನೀಡಿದೆ. ಮಳೆ ಚೆನ್ನಾಗಿ ನಡೆದು, ನೀರು ಸಮೃದ್ಧವಾಗಿ ಸಿಕ್ಕರೆ ಇನ್ನೆರಡು ವರುಷಗಳಲ್ಲಿ ಹಣಾನೂ ಸಿಗಬಹುದು.

- **ಮಳೆ ನೀರಿನ ಸಂರಕ್ಷಣೆ ಬಗ್ಗೆ ಏನಾದರೂ ಕೆಲಸ ಮಾಡಿದೀರಾ?**

  "ತೋಟದ ಮಧ್ಯದಲ್ಲಿ ಒಂದು ಹಳ್ಳ ಹರಿಯುತ್ತೆ. ಅದಕ್ಕೆ ಸರ್ಕಾರದವರೇ ಸಣ್ಣಪುಟ್ಟ checkdam ಕಟ್ಟಿದ್ರು. ನಾವು ನಮ್ಮ ಸ್ವಂತ ದುಡ್ಡು ಖರ್ಚು ಮಾಡಿ ಇನ್ನೂ ಹೆಚ್ಚಿಗೆ checkdam ಕಟ್ಟಿದ್ವಿ. ಈಗ ನೀರು ಸಿಗ್ತಾ ಇದೆ. ಅದಲ್ಲದೆ ತೋಟದಲ್ಲಿ ೩೦ ರಿಂದ ೩೫ ಇಂಗು ಗುಂಡಿ ಮಾಡಿಸಿದೀನಿ. ಬದುಗಳನ್ನು ಎತ್ತಿರಿಸಿದೀನಿ. ಒಂದು ಹನಿ ಮಳೆ ನೀರು ಸಹಾ ತೋಟದಿಂದ ಆಚೆ ಹೋಗದಂತೆ ಎಚ್ಚರಿಕೆ ವಹಿಸಿದ್ದೇನೆ. ಎರಡು ವರುಷ ನೀರಿಲ್ಲದೆ ನಾವು ಕಷ್ಟಪಟ್ಟುದು, ನೀರು ಉಳಿಸಲು ಕಾರಣವಾಯ್ತು. ನೀರನ್ನು ನಾನು ಹೆಚ್ಚು ಪೋಲು ಮಾಡೋಲ್ಲ. ಅಗತ್ಯವರಿತು ಬೇಸಾಯ ಮಾಡ್ತಿದೀನಿ. ನನ್ನ ಅಂದಾಜಿನ ಪ್ರಕಾರ ನಾನಿಲ್ಲಿ ಅಡಿಕೆ ಸಹಾ ಬೆಳೀಬಾರದಿತ್ತು. ಆದ್ರೆ ಎಲ್ಲರೂ ಹೇಳಿದ್ರು ಅಂತ ಹಾಕಿದ್ವಿ. ಬೋರ್‌ನಿಂದ ನೀರು ಕೊಟ್ಟು ಅಡಿಕೆ ಬೆಳೀಬಾರದು. ನದಿ, ಕೆರೆ ಪಕ್ಕ ಹಳ್ಳದ ಜಮೀನಿನಲ್ಲಿ ಅಡಿಕೆ ಬೆಳೆಯೋದು ಉತ್ತಮ ಅನ್ನೋದು ನನ್ನ ಅನುಭವ" ಎಂದು ನಗುನಗುತ್ತಾ ಮಾತು ಮುಗಿಸಿದ್ರು. ಕೃಷಿಯಲ್ಲಿ ಅವರು ತಿಳಿಸಿದ್ದಕ್ಕಿಂತ ಜಾಸ್ತಿ ಅನುಭವವೇ ಇದೆ ಅನ್ನುವುದು ನಮಗೆ ತಿಳಿದದ್ದು ನಾವು ಭಾಗ್ಯಲಕ್ಷ್ಮಿ ಅವರ ಜತೆ ತೋಟಕ್ಕೆ ಹೋದಾಗ. ತೋಟದ ತುಂಬಾ ಸುತ್ತಾಡಿ, ಹೆಜ್ಜೆಹೆಜ್ಜೆಗೂ ವಿಚಾರಗಳನ್ನು ತಿಳಿಸಿದರು. ಇಡೀ ತೋಟದ ಬೆಳವಣಿಗೆ ಅವರಿಗೆ ತಿಳಿದಿತ್ತು. ಮೂಲೆ ಮೂಲೆಗಳ ಸಸಿ ಪರಿಚಯವಿತ್ತು. ತೋಟದ ತುಂಬಾ ಭಾವಚಿತ್ರ ತೆಗೆದು, ಬಂದ ಮೇಲೆ, ಆಗ ತಾನೇ ಕರೆದ ಹಾಲಿನಲ್ಲಿ ಕಾಫಿ ಆಯಿತು. ವಾಪಸ್ಸು ಬರುವಾಗ ಕಾರಿನುದ್ದಕ್ಕೂ ಕೃಷಿಯದೇ ವಿಚಾರ. ಮುಂದೆ ತೋಟದಲ್ಲಿ ಉಪ್ಪಿನಕಾಯಿ ತಯಾರಿಸಿ ಮಾರುವ ಉದ್ಯಮ ಮಾಡುವ ಇರಾದೆ ಇದೆ ಎಂದರು ಭಾಗ್ಯಲಕ್ಷ್ಮಿ. ನಿಮ್ಮ ಎಲ್ಲ ಪ್ರಯತ್ನಗಳಿಗೂ ಶುಭವಾಗಲಿ ಎಂದು ಹೇಳಿ ಅವರಿಂದ ಬೀಳ್ಕೊಟ್ಟಾಗ ಸಂಜೆಯ ಸಮಯ.




ತೋಟ ತನುವಾಗಿರಲು ಬೇಕು ನೀರಿನಾಸರೆ: ಸಮೃದ್ಧ ಜಲಾಶ್ರಯದ ಹಿನ್ನೆಲೆಯಲ್ಲಿ ಭಾಗ್ಯಲಕ್ಷ್ಮಿ:ಬೆಂಗಳೂರು

****

ಈ) ಟಿ.ಎನ್. ಸುಬ್ಬರಾವ್ ಇ/ಮ ವಿ.ಎಸ್. ನೀಲಕಂಠಯ್ಯ

ನಂ.೧೩೭೮, ಶ್ರೀ ಗಣೇಶ ಅಪಾರ್ಟ್‌ಮೆಂಟ್, ಮನೆ ನಂ.೪೦೨
ಎರಡನೇ ಫೇಸ್, ಹದಿನೈದನೇ ಕ್ರಾಸ್, ಗಿರಿನಗರ, ಬೆಂಗಳೂರು-85
ದೂರವಾಣಿ : 26727017 ಕರವಾಣಿ : 9845289810

ನನಗೆ ಹಳ್ಳೀಲಿದ್ದು ವ್ಯವಸಾಯ ಮಾಡಬೇಕು ಅಂತ ಮನಸ್ಸಿತ್ತು. ನನ್ನ ತಂದೆಗೆ ಮಗ ಓದದೆ ಹಳ್ಳಿ ಸೇರಿದ್ರೆ ಹಳ್ಳಿಯ ಚಟಗಳನ್ನು ಕಲಿತು ಹಾಳಾಗಬಹುದು ಅನ್ನುವ ಭಯವಿತ್ತು. ನನ್ನ ಅಜ್ಜಿಯ ದತ್ತು ಮಗ ತಿಮ್ಮಪ್ಪಯ್ಯ ಅಂತ ಇದ್ರು. ಅವರು ಇಸ್ಪೀಟು ಆಡೋದನ್ನು ನೋಡಿ ರೋಸಿ ಹೋಗಿ ನಮ್ಮ ಅಜ್ಜಿ ಅವರ ಜತೆ ಮಾತನಾಡೋದನ್ನು ಬಿಟ್ಟಿದ್ರಂತೆ. ನಾನು ಚಿಕ್ಕ ಹುಡುಗನಿದ್ದಾಗ ಈ ವಿಚಾರ ನನ್ನ ಮೇಲೆ ಎಂತಹ ಪರಿಣಾಮ ಬೀರ್ತು ಅಂದ್ರೆ, ಆಗಲೇ ನಾನು ಮುಂದೆ ಈ ಇಸ್ಪೀಟಿನ ಚಟಕ್ಕೆ ಬಲಿಯಾಗಬಾರದು ಅಂತ ತೀರ್ಮಾನಿಸಿದ್ದೆ. ಇವತ್ತಿಗು ಸಹ ದೇವರ ದಯದಿಂದ ನಾನಾಗಲಿ, ನನ್ನ ಮಕ್ಕಳಾಗಲಿ ಆ ಚಟಕ್ಕೆ ಬೀಳಲಿಲ್ಲ. ಅದು ಹೆಮ್ಮೆಯ ವಿಷಯ.




ಮಹಿಕೊ ಸಂಸ್ಥೆಯನ್ನು ಮುಗಿಲೆತ್ತರ ಬೆಳೆಸಿದ ಟಿ.ಎನ್.ಸುಬ್ಬರಾವ್: ಬೆಂಗಳೂರು

ತೇಗನಹಳ್ಳಿಯ ನೀಲಕಂಠಯ್ಯ ಸುಬ್ಬರಾವ್ ಸಂಕೇತಿಗಳಲ್ಲಿ ಬಹಳ ಹೆಸರು ಮಾಡಿರುವ ವ್ಯಕ್ತಿ. ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಕಂಪನಿಯಲ್ಲಿ ರಾಷ್ಟ್ರೀಯ ಮಾರುಕಟ್ಟೆ ಅಧಿಕಾರಿಯಾಗಿರುವ ಇವರು ಖಾಸಗಿ ಬಿತ್ತನೆ ಬೀಜದ ಮಾರಾಟ ಕ್ಷೇತ್ರದಲ್ಲಿ ಬಹು ದೊಡ್ಡ ಹೆಸರು. ಖಾಸಗಿ ಹೈಬ್ರಿಡ್ ಬಿತ್ತನೆ ಬೀಜಕ್ಕೆ, MAHYCO ಬಿತ್ತನೆ ಬೀಜದ ಸಂಸ್ಥೆಗೆ ಉನ್ನತ ಹೆಸರು ತಂದುಕೊಡುವುದರಲ್ಲಿ ಟಿ.ಎನ್.ಸುಬ್ಬರಾವ್ ಅವರ ಪಾತ್ರವನ್ನು ಬಣ್ಣಿಸಲು ಅಸಾಧ್ಯ. ನಾನು B.Sc. ಕೃಷಿ ಓದುತ್ತಿರುವಾಗ, ಪ್ರತಿಯೊಬ್ಬ ಕೃಷಿ ಪದವೀಧರನೂ 'ಮುಂದೆ Mahyco ಸಂಸ್ಥೆಗೆ ಸೇರಿದರೆಷ್ಟು ಸೊಗಸು! ಅಲ್ಲಿ ಕೆಲಸ ಸಿಕ್ಕೀತೆ?' ಎಂದು ಯೋಚಿಸುವ ಕಾಲವಿತ್ತು. ಕೃಷಿ ಮೇಳಗಳಲ್ಲಿ ಟಿ.ಎನ್. ಸುಬ್ಬರಾವ್ ಅವರನ್ನು ನಾನು ನೋಡಿದ್ದೇನೆ. ಅನಂತರ ನಾನು ಇಂಡೋ-ಅಮೆರಿಕನ್ ಹೈಬ್ರಿಡ್ ಬಿತ್ತನೆ ಬೀಜ ಸಂಸ್ಥೆಯಲ್ಲಿ ಮಾರಾಟ ಅಧಿಕಾರಿಯಾಗಿ ಸೇರಿದಾಗ, Mahyco ಬಿತ್ತನೆ ಬೀಜ ಸಂಸ್ಥೆ ನಮ್ಮ ಪ್ರತಿಸ್ಪರ್ಧಿ. ನಾಗಮಂಗಲ, ಮೈಸೂರು, ಹಾಸನದಲ್ಲಿ ಟಿ.ಎನ್. ಸುಬ್ಬರಾವ್ ಅವರನ್ನು ಭೇಟಿಯಾಗಿದ್ದೆ. ಅವರ ಪಾದರಸದಂತಹ ವ್ಯಕ್ತಿತ್ವ, ಆಲೋಚನಾ ಶೈಲಿ, ಮಾರಾಟದ ವೈಖರಿ ನನ್ನನ್ನು ಪ್ರಭಾವಿತಗೊಳಿಸಿದ್ದೂ ಇದೆ. ಮೋಡಿ ಮಾಡುವ ವ್ಯಕ್ತಿತ್ವದ ಸಹೃದಯಿ ಸುಬ್ಬರಾವ್, ಸಂಕೇತಿ ಸಮುದಾಯಕ್ಕೆ ಸೇರಿದವರು ಎಂದು ನನಗೆ ತಿಳಿದದ್ದು, ನಾವು ತೇಗನಹಳ್ಳಿಗೆ ಭೇಟಿ ಕೊಟ್ಟಾಗಲೆ. ಆಗಿನಿಂದ ನಾನು ಸಂಕೇತಿ ಕೃಷಿ ಪುಸ್ತಕಕ್ಕಾಗಿ ಸುಬ್ಬರಾವ್ ಅವರನ್ನು ಮಾತನಾಡಿಸಲೇಬೇಕೆಂದು ಸಂಕಲ್ಪ ತೊಟ್ಟೆ. ಯಾಕೇಂದ್ರೆ ಸುಬ್ಬರಾವ್ ಅವರ ಚಿಂತನೆಗಳಿಲ್ಲದೆ ಈ ಪುಸ್ತಕ ಅಪೂರ್ಣವಾಗಬಹುದೆಂಬ ಭಯ ನನ್ನಲ್ಲಿತ್ತು. ಇವರು ಸಂಕೇತಿ ಕೃಷಿಯ ಮಿನುಗುವ ನಕ್ಷತ್ರ. ಹಮ್ಮು ಬಿಮ್ಮು ಇಲ್ಲದೆ, ಬೆಂಗಳೂರಿನ Mahyco ಕಛೇರಿಯಲ್ಲಿ ಅವರು ಮಾತನಾಡಲು ಸಿಕ್ಕಾಗ ನನ್ನ ಈ ಎಲ್ಲಾ ಅನಿಸಿಕೆಗಳನ್ನು ಹೇಳಿದೆ. ನಸುನಕ್ಕರು ಅಷ್ಟೆ. ನಮ್ಮ ವಿಚಾರಗಳನ್ನು ತಿಳಿದ ಅವರು ಇದು ಉತ್ತಮ ಪ್ರಯತ್ನ ಎಂದರು. ಅಷ್ಟು ದೊಡ್ಡ ಹುದ್ದೆಯಲ್ಲಿದ್ದರೂ ಸರಳವಾದ ವ್ಯಕ್ತಿತ್ವ ರೂಢಿಸಿಕೊಂಡಿರುವ ಸುಬ್ಬರಾವ್ ಮಾತನಾಡುತ್ತಿದ್ದರೆ ಕೇಳೋಣ ಅನ್ನಿಸುತ್ತೆ. ನಮ್ಮೊಂದಿಗೆ ತಮ್ಮ ವಿಚಾರ ಸುಲಲಿತವಾಗಿ ಹೇಳುತ್ತಿದ್ದ ಸುಬ್ಬರಾವ್ ಮಧ್ಯದಲ್ಲಿ ಅಸ್ತವ್ಯಸ್ತರಾದರು. ಕೇಳಿದ್ದಕ್ಕೆ, ತಮಗಾಗಿ ದೂರದೂರಿನಿಂದ ಒಬ್ಬ ರೈತರು ಬಂದು ಕಾಯುತ್ತಿದ್ದಾರೆ, ಹಾಗಾಗಿ ನನಗೆ ಅವರ ಬಗ್ಗೆ ಯೋಚನೆಯಾಗಿದೆ ಎಂದು ತಿಳಿಸಿದರು. ಅವರ ರೈತಪ್ರೇಮ ಕಂಡು ಮನಸ್ಸಿಗೆ ಮೆಚ್ಚುಗೆಯಾಯ್ತು. ಸಂದರ್ಶನವನ್ನು ಮಧ್ಯದಲ್ಲಿ ನಿಲ್ಲಿಸಿದೆವು. ರೈತನೊಡನೆ ಮಾತನಾಡಿ ಬಂದ ಸುಬ್ಬರಾವ್ ಮೊದಲಿನ ಹುರುಪಿನಲ್ಲಿದ್ರು. ಆಗ ವಿಚಾರ ಅಡೆತಡೆಯಿಲ್ಲದೆ ಮುಂದುವರೀತು.

'ನನ್ನ ಅಜ್ಜ ಮೈಸೂರು ಜಿಲ್ಲೆ ಕೆ.ಆರ್.ನಗರ (ತಾ) ವಿಠಲಾಪುರದ ಸುಬ್ಬರಾಯಶಾಸ್ತ್ರಿ ಅಂತ. ಅಲ್ಲಿ ಬಹಳ ವರುಷದವರೆಗೆ ವ್ಯವಸಾಯ ಮಾಡ್ತಿದ್ರು. ಅಲ್ಲಿ ಬಹಳಷ್ಟು ಜನ ಸಂಕೇತಿ ವ್ಯವಸಾಯಗಾರರು ಇದ್ರಂತೆ. ಅನಿವಾರ್ಯ ಕಾರಣದಿಂದ ಊರು ಬಿಡಬೇಕಾದಾಗ, ಅದೇ ಕೆ.ಆರ್. ಪೇಟೆ(ತಾ) ತೇಗನಹಳ್ಳಿಗೆ ವಲಸೆ ಬಂದರಂತೆ. ಆಗಿನ ಕಾಲದಲ್ಲಿ, ಕುಪ್ಪಹಳ್ಳಿ, ಹೇಮಗಿರಿ, ಹರಿಹರಪುರ, ಕೆ.ಆರ್.ಪೇಟೇಲಿ ಸಂಕೇತಿಗಳು ವಾಸವಾಗಿದ್ರಂತೆ. ತೇಗನಹಳ್ಳೀಲಿ ಕೃಷಿಗೆ ಬೇಕಾದ ನೀರಾವರಿ ವ್ಯವಸ್ಥೆ ಇರಲಿಲ್ಲ. ಆದರೂ ಬಹಳ ಕಷ್ಟಪಟ್ಟು ವ್ಯವಸಾಯ ಮಾಡಿದ್ರು. ನನ್ನ ಅಜ್ಜಿ ಮಹಾಲಕ್ಷಮ್ಮ ಅಂತ. ನನ್ನ ತಂದೆ ನೀಲಕಂಠಯ್ಯ ಎರಡು ಎಕರೆ ತೋಟ ಇಟ್ಟುಕೊಂಡಿದ್ರು. ಎರಡು ಎಕರೆ ಗದ್ದೆ ಇತ್ತು, ನಾಲ್ಕು ಎಕರೆ ಹೊಲ ಇತ್ತು. ನನ್ನ ತಾಯಿ ಚಿಲ್ಕುಂದದ ವೆಂಕಟಲಕ್ಷಮ್ಮ. ಆ ಕಾಲದಲ್ಲಿ ಹೇಳುವಂತಹ ಮಳೆ ಇತ್ತಿಲ್ಲ. ತೋಟದಲ್ಲಿ ಅಡಿಕೆ, ತೆಂಗು, ಬಾಳೆ, ಹಣ್ಣು ಹಂಪಲಿನ ಗಿಡಗಳು ಇದ್ವು. ನಾವು ಚಿಕ್ಕ ಹುಡುಗರಿದ್ದಾಗ ನನ್ನ ತಂದೆ ಬೆಳಗ್ಗೆ ಎದ್ದು ತೋಟಕ್ಕೆ ಹೋಗ್ತಿದ್ರು. ತೋಟದಲ್ಲಿ ಕೆಲಸದ ಆಳುಗಳ ಜತೆ ಅವರು ಸಹ ನಿಂತು ಕೆಲಸ ಮಾಡ್ತಿದ್ರು. ಅಡಿಕೆ ಬೆಳೇನ ಉತ್ತಮವಾಗಿ ಬೆಳೆಯುವ ಸಲುವಾಗಿ ವಿಳ್ಳೇದೆಲೆ ಹಾಕಿದ್ರು. ತಂದೆಯವರು ವ್ಯವಸಾಯ ಮಾಡ್ತಿದ್ದ ಕಾಲದಲ್ಲಿ ರಾಸಾಯನಿಕ ಗೊಬ್ಬರ ಇರಲಿಲ್ಲ. ತಿಪ್ಪೆ ಗೊಬ್ಬರವನ್ನು ಯಥೇಚ್ಛವಾಗಿ ತೋಟಕ್ಕೆ ಹಾಕುವ ಸಲುವಾಗಿ ಮನೇಲಿ ಸಾಕಷ್ಟು ದನಗಳನ್ನು, ಎಮ್ಮೆಗಳನ್ನು ಕಟ್ಟಿಕೊಂಡಿದ್ರು. ಪ್ರತಿ ವರುಷ ತೋಟಕ್ಕೆ ಬೇಕಾದ ಗೊಬ್ಬರವನ್ನು ಅವರೇ ತಯಾರಿಸ್ತಾ ಇದ್ರು. ಹಿಂದೆ ಹಟ್ಟಿಗೊಬ್ಬರವನ್ನು ಪಕ್ವ ಮಾಡಿ ಬಳಸ್ತಾ ಇರಲಿಲ್ಲ. ಸುಮ್ಮನೆ ಸಗಣೀನ ಒಂದು ಕಡೇಲಿ ಹಾಕೋರು. ಈಗಿನಂತೆ ಹಸಿರುಸೊಪ್ಪು, ಎಲೆ ಹಾಕ್ತಿರಲಿಲ್ಲ. ಗೊಬ್ಬರಸತ್ತ್ವ ಹೆಚ್ಚಿಸಿದ್ರೆ ಮತ್ತೂ ಹೆಚ್ಚಿನ ಇಳುವರಿ ಬರ್ತಿತ್ತೇನೋ. ಅಡಿಕೆ ಜತೆ ತೆಂಗು, ಬಾಳೆ ಹಾಕಿದ್ರಿಂದ ಜೀವನ ಸಾಗ್ತಾ ಇತ್ತು. ಪ್ರತಿ ಶುಕ್ರವಾರ ತೇಗನಹಳ್ಳಿ ಸಮೀಪವಿರುವ ಕಿಕ್ಕೇರಿಗೆ, ಬಾಳೆಕಾಯಿ, ವಿಳ್ಳೇದೆಲೆ ತೊಗೊಂಡು ಹೋಗಿ ಮಾರಾಟ ಮಾಡಿ ದಿನನಿತ್ಯದ ಖರ್ಚಿಗೆ ಹಣ ಹೊಂದಿಸಿಕೊಳ್ತಿದ್ರು. ಚೆನ್ನಾಗಿ ಮಳೆ ಬಂದ ದಿನಗಳಲ್ಲಿ ಹೊಲದಲ್ಲಿ ರಾಗಿ, ಗದ್ದೇಲಿ ಭತ್ತ ಬೆಳೀತಿದ್ರು. ತಮ್ಮ ಆಹಾರ ಉತ್ಪತ್ತಿ ಮಾಡ್ತಿದ್ರು. ನಾವು ನಮ್ಮ ತಂದೆಗೆ ನಾಲ್ಕು ಜನ ಗಂಡು ಮಕ್ಕಳು. ನಾನು ಮೂರನೆಯವನು. ನಾನು ನಮ್ಮ ಸೋದರತ್ತೆ ಮೀನಾಕ್ಷಮ್ಮ ಹಾಗೂ ಮಾವ ಅನಂತರಾಮ ಭಾಗವತರ್ ಇವರಿಗೆ ದತ್ತು ಮಗನಾಗಿ ಹೋದೆ. ಮಹಾನ್ ಸಂಗೀತಗಾರರು, ನಾಟಕಕಾರರಾಗಿದ್ದ ನಮ್ಮ ಮಾವ ಬೇಗ ಸತ್ತಿದ್ದರಿಂದ ನನ್ನನ್ನು ಅತ್ತೆ ದತ್ತು ತೊಗೊಂಡ್ರು. ನಮ್ಮ ಚಿಕ್ಕಪ್ಪನವರಾದ ವಿ.ಎಸ್. ಸುಬ್ಬರಾವ್ ಅವರು ದೊಡ್ಡ ಮೇಧಾವಿಗಳು, ಗಣಿತದ ಉಪನ್ಯಾಸಕರು. ಬೆಂಗಳೂರಿನ Central College, ಮಂಡ್ಯದಲ್ಲಿ ಹಾಗೂ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕರಾಗಿದ್ರು. ಅವರ ಸಾವಿರಾರು ಶಿಷ್ಯಂದಿರು ದೇಶವಿದೇಶಗಳಲ್ಲಿ ನೆಲೆಸಿದಾರೆ. ಅವರಿಗೆ ನನ್ನನ್ನು Doctor ಮಾಡಬೇಕು ಅಂತಿತ್ತು. ಹಿಂದೆ ನಾವು PUC ಓದುವಾಗ ಇಲ್ಲ PCB ಅಥವಾ PCM ತೊಗೋಬೇಕಿತ್ತು. PCB ತೊಗೊಂಡ್ರೆ Medical, PCM ತೊಗೊಂಡ್ರೆ Engineeringಗೆ ಹೋಗಬೇಕಿತ್ತು. ನಾನು PCB ತೊಗೊಂಡೆ. ಹೇಳುವಂತಹ ಅಂಕ ಬರಲಿಲ್ಲ. ವೈದ್ಯ ಆಗಲು ಆಗಲಿಲ್ಲ. ಪ್ರಾಥಮಿಕ ಶಿಕ್ಷಣ ಆದದ್ದು ತೇಗನಹಳ್ಳಿಯಲ್ಲಿ. ನನ್ನ ತಾಯಿಯ ತಾಯಿ ಅಂದ್ರೆ ಅಜ್ಜಿ ಗುಂಡಮ್ಮನವರು, ಅವರು ಚಿಲ್ಕುಂದದವರು. ಬಹಳ ಕಷ್ಟಜೀವಿ. ಸಣ್ಣ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡಿದ್ರು. ನಾಲ್ಕಾರು ಜನರಿಗೆ ಸಹಾಯ ಮಾಡ್ತಿದ್ರು. ಅವರು ನನ್ನ ಮೊಮ್ಮಕ್ಕಳು ಓದಬೇಕು ಅಂತ ನಮ್ಮನ್ನು ಅಲ್ಲಿಗೆ ಕರೆಸಿಕೊಂಡ್ರು. ಮಾಧ್ಯಮಿಕಶಾಲಾ ಶಿಕ್ಷಣ ಚಿಲ್ಕುಂದದಲ್ಲಿ ಆಯ್ತು. ಹೈಸ್ಕೂಲನ್ನು ನಾನು ಕಿಕ್ಕೇರೀಲಿ ವಾರಾನ್ನ ಮಾಡಿಕೊಂಡು ಓದಿದೆ. ನನ್ನ ಅಣ್ಣ ಶ್ರೀಕಂಠಯ್ಯ ಬೆಂಗಳೂರಿನ ಮಿನರ್ವ ಮಿಲ್‌ನಲ್ಲಿದ್ರು. ಅವರ ಸಹಾಯದಿಂದ PUCನ ಬೆಂಗಳೂರಿನಲ್ಲಿ ಓದಿದೆ.

ನಾನು ಚಿಕ್ಕವನಿದ್ದಾಗ ನನಗೆ ರಜಾ ಸಿಕ್ತು ಅಂದ್ರೆ ತೋಟಕ್ಕೆ ಹೋಗೋದು ಅಂದ್ರೆ ಖುಷಿ. ಯಾಕೇಂದ್ರೆ ಅಲ್ಲಿಗೆ ಹೋದ್ರೆ ತಿನ್ನಲು ಏನಾದ್ರೂ ಸಿಗುತ್ತೆ ಅಂತ. ಮಾವಿನಕಾಯಿ, ಬಾಳೆಹಣ್ಣು, ಎಳನೀರು ಸಿಗ್ತಿತ್ತು. ಅಲ್ಲಿ ನಮ್ಮ ಆಳುಗಳು ಮಾಡುವ ಕೆಲಸ ನೋಡಿ ನನಗೂ ಆಗೀಬೇಕು ಅಂತ ಅನ್ನಿಸ್ತಾ ಇತ್ತು. ನಾನು ಚಿಕ್ಕವನಿದ್ದಾಗ ತೋಟಕ್ಕೆ ಬೆಳಗ್ಗೆ ಹೋಗಿ ನೀರು ಹಾಕ್ತಿದ್ದೆ. ತಂದೆ ಎಲೆ ಕುಯ್ತಿದ್ರೆ ಅದನ್ನು ಕವಟಲು ಮಾಡ್ತಿದ್ದೆ. ಗುರುವಾರ ಎಲೆ ಕುಯ್ತಿದ್ರು. ಅನಂತರ ಅದನ್ನು ರಾಶಿ ಮಾಡಿ ಎಲೆಗಳನ್ನು ವರ್ಗೀಕರಿಸ್ತಾ ಇದ್ವು. ಕವಳಿಗೆ ಮಾಡಿ, ಕಟ್ಟುಕಟ್ತಾ ಇದ್ವಿ. ತಂದೆ ಅದನ್ನು ಮಾರಿ ಬಂದ ಮೇಲೆ ನಾವು ಕೇಳ್ತಾ ಇದ್ವಿ, 'ಈ ಸಾರಿ ನಿನಗೆ Rate ಸಿಕ್ತಾ, ಮಾರಾಟ ಚೆನ್ನಾಗಿ ಆಯ್ತಾ' ಅಂತ. ೧೯೫೮, ೬೦ರಲ್ಲಿ, ೨೫ ಕಟ್ಟು ವಿಳ್ಳೇದೆಲೆ ತೊಗೊಂಡು ಹೋದ್ರೆ ಐದು ರೂಪಾಯಿ ಸಿಗ್ತಿತ್ತು. ಅದರಲ್ಲಿ ವಾರಕ್ಕೆ ಬೇಕಾದ ದವಸ, ಎಣ್ಣೆ, ಕಾಳು, ಎಲ್ಲಾ ತರ್ತಾ ಇದ್ರು. ಕೆಲವೊಮ್ಮೆ ಆರು, ಏಳು ರೂಪಾಯಿ ಸಿಕ್ಕಾಗ ನಮಗೆ ಪೆಪ್ಪರ್‌ಮೆಂಟ್ ತರ್ತಾ ಇದ್ರು. ಅವರು ಹಾಗೆ ತಂದ್ರೆ ನಾವು ಅಂದುಕೊಳ್ತಾ ಇದ್ವಿ ಬಹುಶಃ ಇವತ್ತು ಒಳ್ಳೆಯ ಧಾರಣೆ ಸಿಕ್ಕಿದೆ, ಸಂತೋಷವಾಗಿದಾರೆ ಅಂತ. ನಮ್ಮ ತೇಗನಹಳ್ಳೀಲಿ

ಸಾಮೂಹಿಕ ಕೃಷಿ ನಡೀತಾ ಇತ್ತು. ಎಂಟು, ಹತ್ತು ಜನ ಒಟ್ಟಿಗೆ ಸೇರಿ ಒಂದೊಂದು ದಿನ ಒಬ್ಬೊಬ್ಬರ ತೋಟಕ್ಕೆ, ಹೊಲಕ್ಕೆ ಹೋಗೋದು, ಅಲ್ಲಿಯ ಎಲ್ಲ ಕೆಲಸ ಸಹ ಮಾಡೋದು. ತೋಟದ ಅಗತೆ, ಗದ್ದೆನಾಟಿ, ಹೀಗೆ ಸಾಮೂಹಿಕವಾಗಿ ಕೃಷಿ ಕೆಲಸ ಮಾಡೋರು. ನಾವೆಲ್ಲರೂ ಸಂಘಜೀವಿಗಳು, ನಾವೆಲ್ಲರೂ ಒಟ್ಟಾಗಿ ಇರಬೇಕು ಅನ್ನುವ ಸಾಮೂಹಿಕ ಜೀವನ ಪದ್ಧತಿಯನ್ನು ಅವತ್ತಿನ ದಿನವೇ ಅವರು ರೂಢಿಸಿಕೊಂಡಿದ್ರು. ಆದ್ರೆ ಮಳೆ ಪ್ರಮಾಣ ಸರಿಯಾಗಿ ಇರದ್ರಿಂದ ಅವರು ಮುಂದೆ ಬರಲು ಆಗಲಿಲ್ಲವೇನೋ ಅಂತ ಅನ್ನಿಸುತ್ತೆ. ಅದರ ಜತೆಗೆ ಇವತ್ತಿನ ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಂದೇ ಅಳವಡಿಸಿದ್ರೆ, ಕೃಷಿ, ಹಾಗೂ ತೋಟಗಾರಿಕಾ ಇಲಾಖೆಗಳು ಮಾಹಿತಿ ನೀಡಿದ್ರೆ ಇನ್ನೂ ಮುಂದುವರೆದಿರೋರೇನೋ. ನನಗೆ ನೆನಪಿರುವ ಮತ್ತೊಂದು ವಿಚಾರ ಅಂದ್ರೆ ನಮ್ಮ ಊರಿಗೆ ಕಂದಾಯ ವಸೂಲು ಮಾಡಲು ಶ್ಯಾನುಭೋಗರು ಬರೋರು. ಅವರು ಹೆಚ್ಚಾಗಿ ಬ್ರಾಹ್ಮಣರೇ ಆದ್ದರಿಂದ, ಬೇರೆ ಕಡೆ ಊಟ, ನೀರು ಸೇವಿಸ್ತಾ ಇರಲಿಲ್ಲ. ಹಾಗಾಗಿ ಶ್ಯಾನುಭೋಗರು, ಅಮಲ್ದಾರರು, ನಮ್ಮ ಮನೆಗೆ ಊಟಕ್ಕೆ ಬರೋರು. ನಮ್ಮ ಊರಿನಲ್ಲಿ ಒಂದು ಕೆರೆ ಇತ್ತು, 'ಕಾಡು ಮೆಣಸಿನ ಕೆರೆ' ಅಂತ. ಆ ಕೆರೆ ಕೋಡಿ ಎಲ್ಲಾ ಒಡೆದಿತ್ತು. ಕಂದಾಯ ವಸೂಲಿ ಮಾಡಲು ಬಂದೋರು, ಜನರ ಕಷ್ಟದ ಪರಿಸ್ಥಿತಿ ನೋಡಿ, ಕೋಡಿ ಸರಿಮಾಡಿಸಿ, ಹೂಳು ತೆಗೆಸಿ, ನೀರು ಹೆಚ್ಚಿಗೆ ಸಂಗ್ರಹವಾಗುವಂತೆ ವ್ಯವಸ್ಥೆ ಮಾಡಿದ್ರು. ಶ್ಯಾನುಭೋಗರ ಹೆಸರು ನಿಂಗಪ್ಪಯ್ಯ ಅಂತ. ಈ ರಿಪೇರಿ ಆದ ಮೇಲೆ ಆ ವರುಷ ಹೆಚ್ಚಿನ ಮಳೆಯಾಗಿ ಕೆರೆ ಭರ್ತಿಯಾಯ್ತು. ಆ ವರುಷ ನಮ್ಮ ತೋಟದ ಬಾಳೆ, ತೆಂಗು, ಅಡಿಕೆ ಮರಗಳು ಬಹಳ ಚೆನ್ನಾಗಿದ್ವು. ಆಗ ನನಗೆ ಅನ್ನಿಸ್ತು, ಈ ನೀರು ಯಾವಾಗಲೂ ಇದ್ದಿದ್ರೆ ನಮ್ಮ ಜನ ಎಷ್ಟು ಮುಂದೆ ಬರ್‍ತಿದ್ರು ಅಂತ. ಇದೇ ರೀತಿ ನಮ್ಮ ಚಿಲ್ಕುಂದದಲ್ಲಿದ್ದ ಸಂಕೇತಿಗಳು ಸಹ ಬಹಳ ಕಷ್ಟಜೀವಿಗಳು. ನಮ್ಮ ಸೋದರಮಾವ ಅನಂತರಾಮಯ್ಯ ಅಂತ ಇದ್ರು. ಅವರು ಬೆಳಗ್ಗೆ ಎದ್ದು ತೋಟಕ್ಕೆ ಹೋದ್ರೆ ಮಧ್ಯಾಹ್ನದವರೆಗೂ ತೋಟದ ಕೆಲಸ, ವೇದಾಧ್ಯಯನ ಮಾಡ್ತ ಇದ್ರು. ಅಡಿಕೆ, ತೆಂಗು, ಬಾಳೆ, ವಿಳ್ಳೇದೆಲೆ ಬೆಳೆದಿದ್ರು. ನಾನು ಅವರ ಜತೆ ಕಂಪ್ಲಾಪುರದ ಸಂತೆಗೆ ಹೋಗ್ತಿದ್ದೆ. ನಮ್ಮ ತೇಗನಹಳ್ಳಿಗೆ ಹೋಲಿಸಿದ್ರೆ, ಆಗಿನ ಕಾಲದಲ್ಲೇ ಚಿಲ್ಕುಂದದಲ್ಲಿ ವ್ಯವಸಾಯ ಬಹಳ ಮುಂದುವರೆದಿತ್ತು. ಚಿಲ್ಕುಂದದಲ್ಲಿ ಸಂಕೇತಿಗಳಿಗೆ ತೋಟವನ್ನು ಬಿಟ್ರೆ ಬೇರೆ ವ್ಯವಹಾರ ಇರಲಿಲ್ಲ. ಹೆಚ್ಚಿನ ಶ್ರಮವಹಿಸಿ ಅವರು ಬೇಸಾಯ ಮಾಡ್ತಿದ್ರು. ಅಲ್ಲೇನೇ ನಮ್ಮ ಸಾಹುಕಾರ್ ಸಿ.ಎನ್. ನರಸಿಂಹಮೂರ್ತಿಗಳು ಅಂತ ಇದ್ರು. ಅವರು ತುಂಬಾ ಚೆನ್ನಾಗಿ ತೋಟವನ್ನು ಮಾಡ್ತಿದ್ರು. ಅವರು ಹೊಗೇಸೊಪ್ಪನ್ನು ರೇಖೆ ಮಾಡ್ತಿದ್ರು. ಅಂದ್ರೆ ಬೆಳೆದಿದ್ದ ಹೊಗೆಸೊಪ್ಪನ್ನು ಖರೀದಿ ಮಾಡಿ, ಸಂಸ್ಕರಣೆ ಮಾಡಿ, ವೆಲ್ಲೂರಿನಲ್ಲಿ ಬೀಡಿ ಕಟ್ಟುವ ಜನರಿಗೆ ಮಾರಾಟ ಮಾಡ್ತಿದ್ರು. ಜೊತೆಗೆ ಆಗತಾನೆ Sea Island ಹತ್ತಿ ಅಂತ ನಮ್ಮ ರಾಜ್ಯದಲ್ಲಿ ಬಂದಿತ್ತು. ಈ ಹತ್ತಿಯನ್ನು ಅವರು ಖರೀದಿ ಮಾಡಿ ಬೇರೆ ಮಿಲ್‌ಗೆ ಕಳಿಸ್ತಾ ಇದ್ರು. ಅವರನ್ನು ನೋಡಿ ಸಣ್ಣ ಹುಡುಗನಾದ ನನಗೆ ಸ್ಫೂರ್ತಿ ಬರ್‍ತಾ ಇತ್ತು. ನಾನು ಸಹ ಮುಂದೆ ಇದೇ ರೀತಿ ಹೆಚ್ಚಿನ ರೀತಿ ಕೃಷಿ ಮಾಡಿ, ಕೃಷಿ ಪದಾರ್ಥಗಳನ್ನು ಹೊರಗಡೆ ಮಾರಿ, ನಮ್ಮ ಸಂಕೇತಿಗಳು ಬೆಳೆದ ಪದಾರ್ಥಕ್ಕೆ ಒಳ್ಳೆಯ ಬೆಲೆ ಸಿಕ್ಕುವಂತೆ ಮಾಡಿ, ಅವರ ಜೀವನ ಮಟ್ಟವನ್ನು ಸುಧಾರಿಸಬೇಕು ಅಂತ ಆಲೋಚನೆ ಮಾಡ್ತಿದ್ದೆ. ನನಗೆ ವ್ಯವಸಾಯ ಮಾಡಬೇಕು ಅಂತ ಬಹಳ ಆಸೆಯಿತ್ತು. ನಾನು ನಮ್ಮ ತಂದೆಯವರಿಗೆ ಹೇಳ್ತಾ ಇದ್ದೆ 'ನಾನು ಊರಿನಲ್ಲೇ ಇದ್ದು ವ್ಯವಸಾಯ ಮಾಡ್ತೀನಿ' ಅಂತ. ನನ್ನ ತಂದೆ ಆಗ ಹೇಳೋರು, 'ನೋಡಪ್ಪ, ಕಾಲ ಇನ್ನೂ ಕೂಡಿ ಬಂದಿಲ್ಲ, ನೀನು ಇನ್ನೂ ಸ್ವಲ್ಪ ದೊಡ್ಡವನಾಗು. ಆಗ ನೀನು ಇಲ್ಲೇ ಇರುವಿಯಂತೆ' ಅಂತ. ಆದ್ರೆ ನನ್ನ ಹಿಂದುಗಡೆ ಇತರರಿಗೆ ಹೇಳ್ತಿದ್ರು 'ನನ್ನ ಮಗ ಇಲ್ಲಿಗೆ ಬಂದ್ರೆ ಕೆಟ್ಟವನಾಗಿಬಿಡ್ತಾನೆ,' ಅಂತ. ನನ್ನ ತಂದೆಯವರ ಚಿಂತೆ ಏನಿತ್ತು ಅಂದ್ರೆ ಮಕ್ಕಳು ಸರಿಯಾಗಿ ಓದಿಕೊಂಡಿರದೆ ಹಳ್ಳೀಲಿದ್ರೆ, ಹಳ್ಳಿಯ ಹವ್ಯಾಸಗಳನ್ನೂ ಚಟಗಳನ್ನೂ ಕಲೀತಾರೆ ಅಂತ. ಚಟಗಳು ಅಂದ್ರೆ ಇಸ್ಪೀಟು ಆಟ. ಇದು ಸಂಕೇತಿಗಳಿಗೆ ವರಾನೋ ಅಥವಾ ಶಾಪಾನೋ ಗೊತ್ತಿಲ್ಲ. ನಾನು ಅದನ್ನು ಶಾಪ ಅಂತ ತಿಳಿದುಕೊಂಡಿದೀನಿ.



ಅಧ್ಯಯನ ನಿರತ ಟಿ.ಎಸ್.ಸುಬ್ಬರಾವ್ : ಬೆಂಗಳೂರು

ಆಗ ನಮ್ಮ ತಂದೆಯವರಿಗೆ ಈ ಭಯ ಇತ್ತು. ನಾನು ಚಿಕ್ಕವನಿದ್ದಾಗ ನನ್ನ ಮನಸ್ಸಿಗೆ ಪರಿಣಾಮ ಬೀರಿದ ಮತ್ತೊಂದು ವಿಷಯ ಅಂದ್ರೆ, ನಮ್ಮ ಅಜ್ಜಿಯವರು ಹೇಳ್ತಿದ್ರು, ಆವರ ದತ್ತು ಮಗ ತಿಮ್ಮಪ್ಪಯ್ಯ ಅಂತ ಹೇಳಿ, ಅವರು ಇಸ್ಪೀಟು ಆಡೋದನ್ನು ನೋಡಿ, ಅವರ ಜತೆ ಮಾತನಾಡೋದನ್ನು ಬಿಟ್ಟಿದ್ರಂತೆ. ಇದು ನಾನು ಚಿಕ್ಕ ಹುಡುಗನಿದ್ದಾಗ ಎಂತಹಾ ಪರಿಣಾಮ ಬೀರ್ತು ಅಂದ್ರೆ ಬಹುಶಃ ನಾನು ಯಾವುದೇ ಕಾರಣಕ್ಕೆ ಮುಂದೆ ಈ ಚಟಕ್ಕೆ ಬಲಿಯಾಗಬಾರದು ಅಂತ ತೀರ್ಮಾನಿಸಿದ್ದೆ. ಇವತ್ತಿಗು ಸಹ ದೇವರ ದಯದಿಂದ ನಾನಾಗಲಿ, ನನ್ನ ಮಕ್ಕಳಾಗಲಿ ಆ ಚಟಕ್ಕೆ ಬಲಿಯಾಗಿಲ್ಲ. ಅದು ಹೆಮ್ಮೆಯ ವಿಷಯ.

ನಾನು PUC ಮುಗಿಸಿದ ಮೇಲೆ ನನಗೆ ಯಾವಾಗ Medicalಗೆ ಸೀಟ್ ಸಿಗಲಿಲ್ಲವೋ ನನ್ನ ಚಿಕ್ಕಪ್ಪನವರ ಸ್ನೇಹಿತರು ಹೇಳಿದ್ರು, 'ಇವತ್ತು ನಮ್ಮ ದೇಶದಲ್ಲಿ ಕೃಷಿಗೆ ಬಹಳ ಪ್ರಾಧಾನ್ಯ ಇದೆ. ಹಾಗಾಗಿ ನೀನು ಕೃಷಿ ಕಾಲೇಜಿಗೆ ಸೇರು. ಮುಂದಕ್ಕೆ ಬಹಳ ಅನುಕೂಲ ಆಗುತ್ತೆ' ಅಂತ ಹೇಳಿದ್ರು. ಆಗ ನನ್ನ ಚಿಕ್ಕಪ್ಪನವರು ಸಹ ಕೃಷಿ ಕಾಲೇಜಿಗೆ ಅರ್ಜಿ ಹಾಕು ಅಂದ್ರು. ನಾನು ಅರ್ಜಿ ಹಾಕಿದೆ. ಮೊದಲನೇ Listನಲ್ಲಿ ಸೀಟು ಸಿಕ್ತು, ಅವತ್ತು fee ಕೇವಲ ೧೫ ರೂಪಾಯಿ. ನಾನು ೧೯೬೪ರಲ್ಲಿ B.Sc. (Ag.)ಗೆ ಸೇರಿದೆ. ಆವಾಗಿನ್ನೂ ಬೆಂಗಳೂರಿನಲ್ಲಿ ಹೆಬ್ಬಾಳದಲ್ಲಿ ಈ ಕಾಲೇಜು ಶುರುವಾಗಿತ್ತು. ನಾನು ಕೃಷಿ ಹಿನ್ನಲೆಯಿಂದ ಬಂದಿದ್ರಿಂದ ಅಲ್ಲಿನ ವಾತಾವರಣ ತುಂಬಾ ಹಿಡಿಸ್ತು. ಆಗ ನನಗೆ ಅನ್ನಿಸ್ತು, 'ನಾನು ಸರಿಯಾದ courseಗೆ ಸೇರಿದೀನಿ. Medicalಗೆ ಹೋಗಿಲ್ಲ ಅಂತ ಬೇಜಾರು ಮಾಡಿಕೊಳ್ಳುವುದು ಬೇಡ' ಅಂತ. ಅವತ್ತು ವಿದ್ಯಾಭ್ಯಾಸ ಬಹಳ ಚೆನ್ನಾಗಿತ್ತು. ಎಂ.ಪುಟ್ಟರುದ್ರಯ್ಯ ಅಂತ ನಮಗೆ ಪ್ರಾಧ್ಯಾಪಕರಿದ್ರು. ಅವರು ಎಲ್ಲರಿಗೂ ಹೇಳ್ತಿದ್ರು. 'ನೋಡ್ರಪ್ಪಾ, ನೀವೆಲ್ಲಾ ಉತ್ತಮವಾದ ಪ್ರಜೆಗಳಾಗ್ತೀರಾ, ನಮ್ಮ ದೇಶದ ಕೃಷಿ ಚಿತ್ರಣವನ್ನು ಬದಲಾವಣೆ ಮಾಡುವ ಶಕ್ತಿ ನಿಮ್ಮಲ್ಲಿ ಇದೆ. ಆದ್ದರಿಂದ ನೀವೆಲ್ಲರೂ ಬಹಳ ಶ್ರದ್ಧೆಯಿಂದ ಓದಬೇಕು' ಅಂತ ಹೇಳೋರು. ಡಾ. ರಾಮಣ್ಣ ಹಾಗೂ ಡಾ. ಕೆಂಪಣ್ಣ, ಮಂಡ್ಯ ಜಿಲ್ಲೆಯವರಾದ ಡಾ. ಕೃಷ್ಣಮೂರ್ತಿ, ಇವರೆಲ್ಲರೂ ನನಗೆ ಮನವರಿಕೆ ಆಗುವ ರೀತಿಯಲ್ಲಿ ವಿಚಾರಗಳನ್ನು ತಿಳಿಸ್ತಿದ್ರು. ಆದ್ರೆ ಇವತ್ತಿನ ವಿದ್ಯಾಭ್ಯಾಸದಲ್ಲಿ ಹಿಂದಿನ ಶಿಕ್ಷಕ ಹಾಗೂ ವಿದ್ಯಾರ್ಥಿ ನಡುವಿನ ಸಂಬಂಧ ಇಲ್ಲವೇನೋ ಅನ್ನಿಸುತ್ತೆ. ನಾನು ಬಹಳ ಕಷ್ಟದಿಂದಲೇ ಓದಿದೆ. ನನ್ನ ಅಣ್ಣನವರು ತಿಂಗಳಿಗೆ ೪೦ ರೂಪಾಯಿ ಕೊಡ್ತಿದ್ರು. ಶಾಲೇಲಿ ನಾನು ಉತ್ತಮ ವಿದ್ಯಾರ್ಥಿಯಾದ್ರಿಂದ fee ನೀಡುವ ಅಗತ್ಯವಿರಲಿಲ್ಲ. ಆಗ ನಮ್ಮ College Libraryಗೆ World Bank Assistanceನಲ್ಲಿ ಲಕ್ಷಾಂತರ ಪುಸ್ತಕಗಳು ಬಂದಿದ್ವು. ಈ ಪುಸ್ತಕಗಳಿಗೆ ಸಂಖ್ಯೆ ಹಾಕುವ ಕಾರ್ಯಕ್ರಮ ಇತ್ತು. ಪ್ರತಿ ಘಂಟೆ ಕೆಲಸ ಮಾಡಿದ್ರೆ ೫೦ ಪೈಸೆ ಕೊಡ್ತಿದ್ರು. ಹಾಗಾಗಿ ನಾನು ನನ್ನ ಬಿಡುವಿನ ವೇಳೇಲಿ ದಿನಕ್ಕೆ ನಾಲ್ಕರಿಂದ ಐದು ಘಂಟೆ ಕೆಲಸ ಮಾಡ್ತಿದ್ದೆ. ಹಾಗಾಗಿ ಸ್ವಲ್ಪ ಹಣದ ಗಳಿಕೆ ಸಹಾ ಆಗ್ತಿತ್ತು. ನಾವು ಹೆಬ್ಬಾಳದಲ್ಲಿ Room ಮಾಡಿಕೊಂಡು ಓದ್ತಾ ಇದ್ವಿ. ಸಾಯಂಕಾಲದ ವೇಳೇಲಿ ನಾವು ಏನು ಮಾಡ್ತಿದ್ವಿ ಅಂದ್ರೆ, ಅಲ್ಲಿ ವ್ಯವಸಾಯ ಮಾಡ್ತಿದ್ದ ಬೇಕಾದಷ್ಟು ಜನ ರೈತರು ಇದ್ರು. ಅವರ ಹೊಲಕ್ಕೆ ಹೋಗೋದು, ಅವರು ಬೆಳೆದಿರುವ ಭತ್ತ, ರಾಗಿ, ತರಕಾರಿ ಬೆಳೆಗಳ ರೋಗ, ಕೀಟ ನಿಯಂತ್ರಣದ ಬಗ್ಗೆ, ಹಾಗೇ ಗೊಬ್ಬರದ ಬಳಕೆಯ ಬಗ್ಗೆ, ಆಗಿನ್ನೂ ಕಾಲೇಜಿನಲ್ಲಿ ತಿಳಿದ ವಿಚಾರಗಳನ್ನು ರೈತರಿಗೆ ಹೇಳ್ತಿದ್ವು. ಆ ರೈತರೂ ನಮ್ಮನ್ನು ಎಷ್ಟು ಹಚ್ಚಿಕೊಂಡಿದ್ರು ಅಂದ್ರೆ ನಾವು ಯಾವತ್ತಾದರೂ ಸಾಯಂಕಾಲ ಹೋಗದೇ ಇದ್ರೆ ಅವರೇ ನಮ್ಮ ರೂಮಿನ ಹತ್ರ ಹುಡುಕಿಕೊಂಡು ಬರ್ತಿದ್ರು. ಅವತ್ತೇ ನನಗೆ ಅನ್ನಿಸಿತ್ತು, ನಮ್ಮ ದೇಶದ ರೈತನಿಗೆ ಎಷ್ಟು ವಿಚಾರ ಬೇಕಿದೆ, ಬಹುಶಃ ನಾವು ಅವನಿಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಟ್ರೆ, ರೈತನ ಪರಿಸ್ಥಿತಿ ಉತ್ತಮವಾಗಬಹುದು ಅಂತ ಮನಸ್ಸಿನಲ್ಲಿ ಅನ್ನಿಸ್ತಾ ಇತ್ತು.

ನನ್ನ ನಾಲ್ಕು ವರುಷದ ಬಿಎಸ್ಸಿ ಕೃಷಿ ವ್ಯಾಸಂಗ ೧೯೬೮ರಲ್ಲಿ ಮುಗೀತು. ನಾನು ಓದುವ ದಿನಗಳಲ್ಲಿ ನಮ್ಮ ಹಳ್ಳಿಗಳಲ್ಲಿ ರಾಸಾಯನಿಕ ಗೊಬ್ಬರ ಯಾರೂ ಬಳಸ್ತಾ ಇರಲಿಲ್ಲ. ಇದನ್ನು ಹಾಕಿದ್ರೆ ನಮ್ಮ ಭೂಮಿ ಬರಡಾಗುತ್ತೆ ಅನ್ನುವ ಮನೋಭಾವವಿತ್ತು. ಅದರಲ್ಲಿ ಬೆಳೆಯುವ ಕಾಳುಗಳನ್ನು ತಿಂದ್ರೆ ನಮ್ಮ ಆರೋಗ್ಯ ಕೆಟ್ಟುಹೋಗುತ್ತೆ ಅನ್ನುವ ಕಲ್ಪನೆ ಇತ್ತು. ನಾನು ಇದನ್ನು ಬದಲಾಯಿಸಲು ಬಹಳಷ್ಟು ಪ್ರಯತ್ನ ಮಾಡಿದೆ. ನನ್ನ ಪ್ರಯತ್ನ ಅಷ್ಟು ಫಲಕಾರಿಯಾಗಲಿಲ್ಲ. ನಾನು ಚಿಕ್ಕ ಹುಡುಗನಾದ್ರಿಂದ ನನ್ನ ವಿಚಾರ ಅವರ ಮನದಲ್ಲಿ ಪರಿವರ್ತನೆ ಮೂಡಿಸಲಿಲ್ಲ. ಆದರೆ ನನ್ನಲ್ಲಿ ಛಲವಿತ್ತು. ಬಹುಶಃ ಅವತ್ತು ನಾನದನ್ನು ಬದಲಾವಣೆ ಮಾಡೇ ತೋರ್ತೀನಿ ಅಂದುಕೊಂಡಿದ್ದೆ. ನನ್ನ ವಿದ್ಯಾರ್ಥಿ ಜೀವನ ಮುಗಿದ ತಕ್ಷಣ ನನ್ನ ಹಳ್ಳಿಗೆ ಹೋದೆ. ಆವಾಗಿನ್ನೂ ಬಿಡುಗಡೆಯಾದ ಹೊಸ ರಾಗಿ ತಳಿ ಬಂದಿತ್ತು. ಅದ್ರ ಹೆಸರು ಹಂಸ. ಅದು ಬಿಳೀ ಬಣ್ಣದ ರಾಗಿ. ನಾನು ನನ್ನ ತಂದೆಗೆ ಹೇಳಿ ಅದರ ಬೇಸಾಯ ಆರಂಭಿಸಿದೆ. ರಾಗಿ ಬಂದ ಮೇಲೆ ಹಳ್ಳಿಯ ಎಲ್ಲಾ ರೈತರನ್ನೂ ಸೇರಿಸಿದೆ. ಅವರಿಗೂ ಬಿಳಿಯ ಬಣ್ಣದ ರಾಗಿ ನೋಡಿ ಆಶ್ಚರ್ಯವಾಯ್ತು. ಇದೇ ರೀತಿ ಭತ್ತ, ಅಲಸಂದೆ, ಕಾಳಿನ ಬೆಳೆಗಳು, ಎಣ್ಣೆಕಾಳು ಬೆಳೆಗಳಲ್ಲಿ ಹೊಸತಳಿ ಇದೆ ಎಂದು ನಮ್ಮ ಹಳ್ಳಿಗರಿಗೆ ವಿವರಿಸಿದೆ. ನನಗೆ ನಮ್ಮ ಹಳ್ಳಿಯ ವ್ಯವಸಾಯದ

ರೀತಿಯನ್ನು ಬದಲಾಯಿಸಬೇಕು, ನಾನು ತಿಳಿದದ್ದನ್ನು ಅವರಿಗೆ ತಿಳಿಸಬೇಕು ಅನ್ನುವ ಅದಮ್ಯ ಉತ್ಸಾಹವಿತ್ತು. ಸಾಮಾನ್ಯವಾಗಿ ಆಗ ನಮ್ಮ ಊರಲ್ಲಿ, ಒಂದು ಎಕರೆಗೆ ಎರಡರಿಂದ, ಮೂರು ಪಲ್ಲ ರಾಗಿ ಸಿಗ್ತಿತ್ತು. ಆದರೆ ಆ ವರುಷ ನಮ್ಮ ಹೊಲದಲ್ಲಿ ಎಕರೆಗೆ ಹತ್ತು ಪಲ್ಲ ರಾಗಿ ಬಂತು. ಆಗ ಕೃಷಿಕರು ನನ್ನ ವಿಚಾರಗಳಿಗೆ ಬೆಲೆ ನೀಡಲು ಆರಂಭಿಸಿದ್ರು. ಅವರು ಸಹ ಹೊಸ ವಿಚಾರಗಳನ್ನು ವ್ಯವಸಾಯದಲ್ಲಿ ಅಳವಡಿಸಿಕೊಳ್ಳಲು ಆರಂಭಿಸಿದರು.

ನನಗೆ ತಿಳಿದಿರುವ ಹಾಗೆ ಸಂಕೇತಿಗಳು ತೋಟಗಾರಿಕೆ ಬೆಳೆಗಳಲ್ಲಿ ಪರಿಣತರು. ಹಿಂದೆಲ್ಲಾ ಹಿಡುವಳಿ ಕಡಿಮೆ ಇದ್ದಿದ್ರಿಂದ, ಇರುವ ಅಲ್ಪ ಪ್ರದೇಶದಲ್ಲಿ, ಅಧಿಕ ಉತ್ಪತ್ತಿ ಪಡೆಯುವ ಕೃಷಿಯನ್ನು ಇವರು ಅನುಸರಿಸ್ತಾ ಇದ್ರು. ಹಾಗಾಗಿ ಅದಕ್ಕೆ ಪೂರಕವಾದ ಅಡಿಕೆ, ತೆಂಗು, ಬಾಳೆ, ವಿಳ್ಳೇದೆಲೆ, ಹುಣಿಸೆ, ಮಾವು, ಹಣ್ಣಿನ ಗಿಡಗಳನ್ನು ಬೆಳೀತಾ ಇದ್ರು. ಹಿಂದಿನಿಂದಲೂ ನಮ್ಮ ಸಂಕೇತಿಗಳು ನೆಲೆಸಿದ್ದ ಪ್ರದೇಶಗಳಲ್ಲಿ ಮಳೆ ಕಡಿಮೆ ಅಂತಾನೇ ಹೇಳಬೇಕು. ಆದ್ರಿಂದ ಇವರು ತೋಡು ಬಾವಿಯಿಂದ ನೀರನ್ನು ಎತ್ತಿ, ಬಹಳ ಕಷ್ಟದಿಂದ ತೋಟವನ್ನು ಉಳಿಸಿಕೊಂಡಿದ್ರು. ತಾವು ಅಲ್ಪ ಜಮೀನಿನಲ್ಲಿ ಬೆಳೆದಿದ್ದ ಬೆಳೆಗಳು ಉತ್ತಮವಾಗಿ ಬರಬೇಕಿದ್ರೆ ಗೊಬ್ಬರ ಹಾಕಬೇಕು ಅನ್ನುವ ಭಾವನೆ ಇವರಲ್ಲಿ ಇತ್ತು. ಇದಕ್ಕಾಗಿ ಇವರು ಬಳಸ್ತಾ ಇದ್ದದ್ದು ತಿಪ್ಪೆಗೊಬ್ಬರ. ಅದಕ್ಕಾಗಿ ಹಸುಗಳನ್ನು ಸಾಕ್ತಿದ್ರು. ಮನೆಗೆ ಹಾಲು, ಮೊಸರು ಬೆಣ್ಣೆ ಸಿಗ್ತಿತ್ತು, ತೋಟಕ್ಕೆ ಗೊಬ್ರ ಸಾಕಾಗ್ತಿತ್ತು. ಹೀಗಾಗಿ, ಬೇರೆ ಕೃಷಿಗೆ ಗೊಬ್ಬರ ಹಾಕ್ತಿರಲಿಲ್ಲ. ಮತ್ತೂರು, ಹೊಸಹಳ್ಳಿ, ರುದ್ರಪಟ್ಟಣ, ಬಸವಾಪಟ್ಟಣ, ರಾಮನಾಥಪುರದ ಕೆಲವು ಸಂಕೇತಿಗಳು ಆಗಿನ ಕಾಲದಲ್ಲೇ ತೋಟದಲ್ಲಿ ಬಾವಿ ತೋಡಿಸಿ, pump ಕೂರಿಸಿ, ಬೆಳೆ ಬೆಳೀತಾ ಇದ್ರು. ೧೯೭೦ರಿಂದ ಮುಂದಕ್ಕೆ ನಮ್ಮವರೆಲ್ಲರೂ ಈ ನಿಟ್ಟಿನತ್ತ ಗಮನ ನೀಡಿದ್ರು ಅಂತ ನನಗೆ ಅನ್ನಿಸುತ್ತೆ. ಅಲ್ಲದೆ ನಮ್ಮಲ್ಲಿನ ಕೃಷಿ ಕುಟುಂಬದಲ್ಲಿ ವ್ಯವಸಾಯ ಮಾಡುವವರ ಸಂಖ್ಯೆ ಕಡಿಮೆ ಇದ್ದಿದ್ರಿಂದ ಕೇವಲ ತೋಟ ಮಾಡ್ತಾ ಇದ್ರು. ಇತರೇ ಬೆಳೆಗಳ ಬೇಸಾಯದತ್ತ ಹೆಚ್ಚು ಗಮನ ನೀಡಲು ಇವರಿಗೆ ಸಾಧ್ಯವಾಗಲಿಲ್ಲ. ಜಮೀನಿದ್ರೂ ಅದನ್ನು ಬೇರೆಯವರಿಗೆ ನೀಡಿದ್ರು. ಹಾಗಾಗಿ ಇವರಿಗೆ ಮುಂದೆ ಬರಲು ಆಗಲಿಲ್ಲ. ಇದು ನಿಜವಾದ ವಿಚಾರ. ಬೇರೆ ಜನಗಳ ಜತೆ ಬೆರೆಯದೆ, ಅವನಾಯ್ತು, ಅವನ ಕಾಲವಾಯ್ತು, ಬರುವ ಉತ್ಪತ್ತಿ ಸಾಕು. ನನ್ನ ಜೀವನ ನಡೀತಿದೆ ಸಾಕು ಅಂದುಕೊಂಡು ಬಹುಶಃ ಸಂಕೇತಿಗಳು ತಪ್ಪು ಮಾಡಿದರೇನೋ ಅಂತ ನನಗೆ ಅನ್ನಿಸುತ್ತೆ. ನಮ್ಮವರ ಸಾಮೂಹಿಕ ಕೃಷಿ ವಿಧಾನ ಕಾಲಕ್ರಮೇಣ ನಶಿಸಿದ್ದೂ ಅವನಿತಿಗೆ ಕಾರಣವಿರಬಹುದು.

ನಾನು B.Sc.(Ag.), ಮುಗಿಸಿದ ಮೇಲೆ, ಮೂರು ತಿಂಗಳು ಹಳ್ಳೀಲಿದ್ದೆ. ಅನಂತರ ತಂದೆಯವರು ಮಾಡಿದ ಸಾಲಸೋಲ ತೀರಿಸಲು ಅವರಿಗೆ ಸಹಕಾರಿಯಾಗಿರಬೇಕು ಅಂತ ನಾನು ಉದ್ಯೋಗ ಮಾಡಲು ಬೆಂಗಳೂರಿಗೆ ಬಂದೆ. ನನಗೆ ಮುಂಚಿನಿಂದಲೂ ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕಿಂತ ಖಾಸಗೀ ಕ್ಷೇತ್ರದಲ್ಲಿ ಕೆಲಸ ಮಾಡಿದ್ರೆ ಹೆಚ್ಚು ಮುಂದುವರೆಯಲು ಅವಕಾಶವಾಗಬಹುದು ಅನ್ನುವ ಭಾವನೆ ಇತ್ತು. ಅಂದು ನಮ್ಮ ಬ್ರಾಹ್ಮಣರೇ ಆದಂತಹ ಎಸ್.ವಿ.ರಂಗಸ್ವಾಮಿ ಅಂತ ಹೇಳಿ, ಅವರು ಸಾಕಷ್ಟು ಜನರಿಗೆ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡಲು ಸಹಕರಿಸಿದ್ರು. ನಾನು ಅವರನ್ನು ಕಂಡೆ, ಹಾಗೇ ಸಹಾಯ ಮಾಡಲು ವಿನಂತಿಸಿದೆ. ನನ್ನ ಕಾಲೇಜಿನ ಅಧ್ಯಾಪಕರಾದ ಬಿ.ಎನ್.ವೆಂಕಟರಾವ್ ಅವರು ಸಹ ನನ್ನ ಬಗ್ಗೆ ಎಸ್.ವಿ.ರಂಗಸ್ವಾಮಿ ಅವರಿಗೆ ತಿಳಿಸಿದ್ರು. ಎಸ್.ವಿ.ರಂಗಸ್ವಾಮಿಯವರು ಆಗ ಮಹಾರಾಷ್ಟ್ರ ಹೈಬ್ರಿಡ್ ಸೀಡ್ಸ್ ಸಂಸ್ಥೆಗೆ ವಿತರಕರಾಗಿದ್ರು. ಈ Mahyco ಸಂಸ್ಥೆಯವರು ಸಹ ಆಗ ತಮ್ಮ ಹೈಬ್ರಿಡ್ ಬೀಜಗಳನ್ನು ಮಾರಾಟ ಮಾಡುವ ಸಲುವಾಗಿ ಮಾರಾಟ ಪ್ರತಿನಿಧಿಗಳಿಗಾಗಿ ಸಂದರ್ಶನ ಮಾಡ್ತಿದ್ರು. ಆಗ ಎಸ್.ವಿ. ರಂಗಸ್ವಾಮಿಗಳು ೧೯೬೯ರ December ೧೬ ರಂದು ಸಂದರ್ಶನಕ್ಕೆ ಬಾ ಅಂದ್ರು. ಸಂದರ್ಶನದಲ್ಲಿ ನನ್ನನ್ನು ಬಿತ್ತನೆ ಬೀಜಗಳ ಬಗ್ಗೆ, ಹಾಗೇ ಇದೇ



ಸದಾ ಹೊಸತಕ್ಕೆ ತುಡಿಯುವ ಟಿ.ಎನ್.ಸುಬ್ಬರಾವ್ : ಬೆಂಗಳೂರು

ಸಂಸ್ಥೆಗೆ ಯಾಕೆ ಸೇರ್ತ್ತೀಯಾ ಅಂತ ಸಹಾ ಕೇಳಿದ್ರು. ಆಗ ನಾನು ಹೇಳಿದೆ, "ನಾನು ಕೃಷಿಕನಾಗಿ ಬಂದಿದೀನಿ. ಕೃಷಿ ಪದವಿ ಸಹ ಇದೆ. ಕೃಷಿಯ ಬಗ್ಗೆ ಹೆಚ್ಚಿನ ಜ್ಞಾನ ಇರುವುದರಿಂದ ರೈತನಿಗೆ ಹೆಚ್ಚಿನ ಸಹಾಯ ಮಾಡಬಹುದು ಅನ್ನುವುದು ನನ್ನ ಭಾವನೆ. ಅದಕ್ಕೆ ನಿಮ್ಮ ಸಂಸ್ಥೆಗೆ ಸೇರಲು ಬಯಸುತ್ತೇನೆ" ಅಂದೆ. ಆಗ ಅವರು ನೀವು ಇವತ್ತೇ ಕೆಲಸಕ್ಕೆ ಸೇರಿ ಅಂದ್ರು. ಆದ್ರೆ ನಾನು December ೨೯, ೧೯೭೯ರಲ್ಲಿ ಈ ಸಂಸ್ಥೆಗೆ ಸೇರಿದೆ. ಬೆಂಗಳೂರಿನಲ್ಲಿ ಆಗ ಜೆ.ಡಿ.ವೈದ್ಯ ಅಂತ ನನ್ನ ಹಿರಿಯ ಅಧಿಕಾರಿಯಿದ್ರು. ಅವರಿಗೆ ನಾನು Report ಮಾಡಿಕೊಂಡೆ.

ನಾನು Mahyco ಸೇರಿದ್ದು Sales Representative ಅಂದ್ರೆ ಮಾರಾಟ ಪ್ರತಿನಿಧಿಯಾಗಿ. ಇದಕ್ಕೆ ನಾನು ಸೇರಲು ಮುಖ್ಯ ಕಾರಣ ಅಂದ್ರೆ ಈ ಸಂಸ್ಥೆಯ ಮಾಲೀಕರಾದ ಶ್ರೀಮಾನ್ ಬಾರವಾಲೆ ಅವರು ಮೂಲತಃ ಒಬ್ಬರು ರೈತರು. ಮಹಾರಾಷ್ಟ್ರದ ಜಾಲ್ನಾ ಪ್ರಾಂತ್ಯದಲ್ಲಿ ಬಹಳ ಹೆಚ್ಚಿನ ಕೃಷಿ ಪರಿಣತಿ ಪಡೆದಿದ್ದರು. ಕೃಷಿ ಉತ್ಪಾದನೆ ಹೆಚ್ಚು ಮಾಡುವ ಸಲುವಾಗಿ, ಅವರು ೧೯೬೪ರಲ್ಲಿ Maharastra Hybrid Seeds ಅನ್ನುವ ಸಣ್ಣ ಸಂಸ್ಥೆ (MAHYCO) ಆರಂಭಿಸಿದ್ರು. ಕೆಲವೇ ವರುಷಗಳಲ್ಲಿ ಈ ಸಂಸ್ಥೆಯ ಬಿತ್ತನೆ ಬೀಜ ದೇಶದ ನಾನಾ ಕಡೆ ಮಾರಾಟವಾಗಲು ಆರಂಭವಾಯ್ತು. ರೈತರಿಗೆ ಈ ಬೀಜಗಳಲ್ಲಿ ಹೆಚ್ಚು ಒಲವು ಇತ್ತು. ನಾನು B.Sc. Ag ಓದುವಾಗಲೂ ಸಹ ಮುಂದೆ ಈ ಸಂಸ್ಥೆಯು ಪ್ರಭಾವಶಾಲಿಯಾಗಿ ಬೆಳೀಬಹುದು ಅಂತ ಹೇಳ್ತಾ ಇದ್ರು. ಅದು ನನ್ನ ಮನಸ್ಸಿನಲ್ಲಿತ್ತು. ಹಾಗಾಗಿ ಈ ಸಂಸ್ಥೆಗೆ ನಾನು ಸೇರಿದೆ. ಸೇರಿದ ಎರಡು ತಿಂಗಳು ರೈತನ ಬಗ್ಗೆ, ವ್ಯವಸಾಯದ ಬಗ್ಗೆ, ಬೀಜ ಮಾರಾಟದ ಬಗ್ಗೆ ರೈತನ ಹತ್ತಿರ ವಿಚಾರ ವಿನಿಮಯ ಮಾಡುವುದರ ಬಗ್ಗೆ ತರಬೇತಿ ನೀಡಿದ್ರು. ಉತ್ತಮವಾದ ಬಿತ್ತನೆ ಬೀಜ ರೈತನಿಗೆ ದೊರೆತರೆ ಅವನ ಶೇಕಡಾ ೭೦ರಷ್ಟು ಸಮಸ್ಯೆ ಪರಿಹಾರವಾಗುತ್ತೆ. ಬಿತ್ತನೆ ಬೀಜದ ಬಗ್ಗೆ ರೈತನಿಗೆ ತಿಳುವಳಿಕೆ ಮಾಡಿದಾಗ ಹಸಿರು ಕ್ರಾಂತಿ ಆಗುತ್ತೆ ಅನ್ನುವುದನ್ನು ನಮಗೆ ಮನದಟ್ಟುಮಾಡಿದ್ರು. ಮೊದಲು ನಾನು ಮೈಸೂರು ಜಿಲ್ಲೆಯಲ್ಲಿ ಕೆಲಸ ಮಾಡಿದ್ದು. ೬೦ ಹಾಗೂ ೭೦ರ ದಶಕದ ನಮ್ಮ ರಾಜ್ಯದ ಹಾಗೂ ದೇಶದ ಕೃಷಿಯ ಬಗ್ಗೆ ಇಲ್ಲಿ ಹೇಳಬೇಕು ಅಂದ್ರೆ ಉತ್ಪಾದನೆ ಅಷ್ಟು ಇರಲಿಲ್ಲ. ಯಾಕೇಂದ್ರೆ ಉತ್ತಮ ತಾಂತ್ರಿಕತೆಯ ಕೊರತೆಯಿತ್ತು. ನಮ್ಮ ದೇಶದ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಡಾ. ಸ್ವಾಮಿನಾಥನ್ ಎನ್ನುವ ಮಹಾನ್ ವ್ಯಕ್ತಿ ಹಾಗೂ ಅಂದಿನ ಕೃಷಿ ಮಂತ್ರಿಗಳಾದ ಸಿ. ಸುಬ್ರಹ್ಮಣ್ಯಂ ಅವರು, ಪರದೇಶಗಳಿಂದ ಹೊಸ ಹೊಸ ತಳಿಗಳಾದ ಭತ್ತ, ಹಾಗೂ ಗಿಡ್ಡ ಜಾತಿಯ ಗೋಧಿಯನ್ನು ತಂದು ಹಸಿರು ಕ್ರಾಂತಿ ಅಥವಾ Green Revolution ಆಗೋದಕ್ಕೆ ಕಾರಣರಾದ್ರು. ಅಂದಿನ ದಿನಗಳಲ್ಲಿ ಕೃಷಿ ಅಭಿವೃದ್ಧಿ ಸರ್ಕಾರಿ ಹಾಗೂ ಸಹಕಾರಿ ಕ್ಷೇತ್ರದ ನೆರವಿನಿಂದ ಮಾತ್ರಾ ಆಗ್ತಾ ಇತ್ತು. ಖಾಸಗೀ ಕ್ಷೇತ್ರದವರನ್ನು ಜನ ಅಷ್ಟು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದ್ರೆ ನಮ್ಮ ಸಂಸ್ಥೆಯ ಬಾರವಾಲೆಯವರದು ಒಂದು ಖಚಿತವಾದ ನಂಬಿಕೆಯಿತ್ತು. ರೈತನಿಗೆ ಉತ್ತಮ ಬಿತ್ತನೆ ಬೀಜ ನೀಡಿ ಅವನಿಗೆ ಉತ್ತಮ ಸೇವೆಯನ್ನು ಕೊಟ್ಟು, ಉತ್ಪಾದನೆ ಹೆಚ್ಚಳ ಮಾಡುವ ತಾಂತ್ರಿಕತೆಗಳನ್ನು ನೀಡಿದ್ರೆ ಅವನ ಅಭಿವೃದ್ಧಿ ಸಾಧ್ಯ ಅಂತ ಸದಾ ಹೇಳ್ತಿದ್ರು. ಇದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡು, ರೈತನಿಗೆ ಉತ್ತಮ ಬೀಜ ಕೊಡುವುದರ ಜತೆಗೆ ಪ್ರಾತ್ಯಕ್ಷತೆಯನ್ನೂ ಮಾಡ್ತಾ ಇದ್ವಿ. ತಂತ್ರಜ್ಞಾನ ವರ್ಗಾವಣೆ ಮಾಡ್ತಿದ್ವಿ. ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲೆ ಹುಣಸೂರು (ತಾ) ಚಿಲ್ಕುಂದದಲ್ಲಿ ನರಸಿಂಹಮೂರ್ತಿ ಅಂತ ಇದ್ರು. ಅವರು ಕೃಷಿ ಪರಿಣತರು. ನಾನು ಅವರಿಗೆ ಮೊತ್ತಮೊದಲ ಬಾರಿಗೆ ನಮ್ಮ ಸಂಸ್ಥೆಯ ಮುಸುಕಿನ ಜೋಳದ ಬೀಜ ಕೊಡಲು ಹೋಗಿದ್ದೆ. ಯಾಕೇಂದ್ರೆ ಪಿರಿಯಾಪಟ್ಟಣದ ಬೈಲುಕುಪ್ಪೆ ಬಳಿ ಟಿಬೆಟ್ಟಿಯನ್ನರು ಆಗ ತಾನೆ ವಲಸೆ ಬಂದಿದ್ರು. ಆ ಜನರಿಗೆ ಬೇರೆ ಬೆಳೆ ಬಗ್ಗೆ ಗೊತ್ತಿರಲಿಲ್ಲ. ಬರಿ ಮುಸುಕಿನ ಜೋಳ ಗೊತ್ತಿತ್ತು. ಅವರಿಗೆ ಬೀಜ ಮಾರಾಟ ಮಾಡಲು ನಾನು ಹೋಗ್ತಿದ್ದೆ. ಆಗ ನಾನು ಇವರ ಹತ್ರಾನೂ ಹೋಗ್ತಿದ್ದೆ. ಅವರು ಮೊದಲು ಒಪ್ಪಲಿಲ್ಲ. ಅನಂತರ ನಾನು ಬಿಡದೆ ಅವರ ಜಮೀನಿನಲ್ಲಿ ಮೊದಲ ಬಾರಿಗೆ ಮುಸುಕಿನ ಜೋಳ ಬೆಳೆಸಿದ್ದೆ. ಅನಂತರ ಚಿಲ್ಕುಂದದಲ್ಲಿ ಬಹಳಷ್ಟು ಜನ ಸಂಕೇತಿಗಳು ಮುಸುಕಿನ ಜೋಳವನ್ನು ಬೆಳೆದ್ರು. ಆದಾಯಾನೂ ಮಾಡಿದ್ರು. ಆಗ ನನಗೆ ಸಂತೋಷವಾಯ್ತು. ಬಹುಶಃ ನಾನು ತಿಳಿದಿದ್ದ ವಿಚಾರವನ್ನು ಇವರಿಗೆ ತಿಳಿಸಿದ್ರಿಂದ ಅವರಿಗೆ ಅನುಕೂಲವಾಯ್ತಲ್ಲ ಅನ್ನುವ ಸಮಾಧಾನ ಬಂತು. ಮೈಸೂರಿನಿಂದ ಅನಂತರ ನನ್ನನ್ನು ಸಂಸ್ಥೆಯವರು ಹರಿಹರಕ್ಕೆ ಕಳಿಸಿದ್ರು. ಹರಿಹರ, ದಾವಣಗೆರೆ, ಆ ಕಾಲದಲ್ಲೂ ಈ ಕಾಲದಲ್ಲೂ ಕೃಷೀಲಿ ಮುಂದುವರೆದಿರುವ ಪ್ರದೇಶ. ಹರಿಹರದಲ್ಲಿ ನಾನು ಧಾರವಾಡ, ಚಿತ್ರದುರ್ಗ, ಬೆಳಗಾಂ, ಬಳ್ಳಾರಿ, ಮೈಸೂರು ಜಿಲ್ಲೆ ನಿರ್ವಹಣೆ ಮಾಡುತ್ತಿದ್ದೆ. ಹೊನ್ನಾಳಿ, ಬಸವಾಪಟ್ಟಣ, ನ್ಯಾಮತಿ, ಹಾವೇರಿ, ರಾಣಿಬೆನ್ನೂರು ಈ ಭಾಗದ ರೈತರನ್ನು ಭೇಟಿ ಮಾಡಿ, ನಮ್ಮ ಬಿತ್ತನೆ ಬೀಜಗಳ ಬಗ್ಗೆ ತಿಳಿಸಿ, ಮಾರಾಟಗಾರರ, ವಿತರಕರ ಸರಪಣಿಯನ್ನು ಬೆಳೆಸ್ತಾ ಹೋದೆ. ನಾನು ಆ ವೇಳೇಲಿ ಒಂದು motorcycleನಲ್ಲಿ ಬಹಳಷ್ಟು ಸುತ್ತಿದೀನಿ. ನಿಮಗೆ ಆಶ್ಚರ್ಯವಾಗಬಹುದು. ನನ್ನ ಹತ್ರ Rajdoot Motor Bike ಇತ್ತು.

ಅದರಲ್ಲಿ ನಾನು ಹರಿಹರದಿಂದ ಮೈಸೂರಿಗೆ ಬರ್‍ತಿದ್ದೆ. ಇಲ್ಲಿ ಟಿಬೆಟ್ ನಿರಾಶ್ರಿತರ ಕಾಲೋನಿನಲ್ಲಿ ಬಿತ್ತನೆ ಬೀಜ ಉತ್ಪಾದನೇನ ನಾನೇ ಮಾಡಬೇಕಿತ್ತು. ಆಗ ಕೆಲಸದಲ್ಲಿ ಬಹಳ ಉತ್ಸಾಹಾನೂ ಇತ್ತು. ದಾರಿಯುದ್ದಕ್ಕೂ ರೈತರನ್ನು ಮಾತನಾಡಿಸಿಕೊಂಡು ಬರ್‍ತಿದ್ದೆ. ನಾನು ಸಂಸ್ಥೆ ಸೇರಿದಾಗ ನಮ್ಮ ಸಂಸ್ಥೆಯ ಬಿತ್ತನೆ ಬೀಜದ ವಹಿವಾಟು ವರ್ಷಕ್ಕೆ ಕೇವಲ ನಾಲ್ಕು ಸಾವಿರ ರೂಪಾಯಿ ಇತ್ತು. ನಾನು ಕೆಲಸ ಆರಂಭಿಸಿದ ಮೇಲೆ ಮೊದಲನೇ ವರುಷದಲ್ಲಿ ಐದು ಲಕ್ಷ ಮುಟ್ಟಿತು. ಮೊಟ್ಟ ಮೊದಲ ಬಾರಿಗೆ ೧೯೭೪ರ ವೇಳೆಗೆ ವಹಿವಾಟು ೫೦ ಲಕ್ಷ ಮುಟ್ಟಿತು. ಆಗ ನನ್ನ ಮನಸ್ಸಿಗೆ ನಾನು ಸರಿ ದಾರೀಲಿ ಹೋಗ್ತಾ ಇದೀನಿ ಅನ್ನುವ ಹೆಮ್ಮೆ ಮೂಡಿತು. ಮೊತ್ತ ಮೊದಲು Mahyco ಸಂಸ್ಥೆಯವರು ಸಾರ್ವತ್ರಿಕ ತಳಿಗಳು ಅಂದ್ರೆ Public Released varieties ಮಾತ್ರ ಮಾರ್‍ತಿದ್ರು. ಗೋವಿನ ಜೋಳದಲ್ಲಿ Deccan 103, ಜೋಳದಲ್ಲಿ CSH-1 ಅಂತ ತಳೀ ಮಾತ್ರ ಅಭಿವೃದ್ಧಿ ಮಾಡಿದ್ರು. ಆದ್ರೆ ತಮ್ಮದೇ ಆದ ಸಂಶೋಧಿತ ತಳೀನ ಬಿಡುಗಡೆ ಮಾಡಿದ್ದು ೧೯೭೫ರನಂತರವೇ. ಮೊತ್ತ ಮೊದಲಿಗೆ ಜೋಳದಲ್ಲಿ MSH-8 ತಳಿ ಬಿಡುಗಡೆಯಾಯ್ತು. ಮುಸುಕಿನ ಜೋಳದಲ್ಲಿ MMH 1 ಬಿಡುಗಡೆಯಾಯ್ತು. ರೈತರಿಗೆ ಇದ್ರಿಂದ ಹೆಚ್ಚಿನ ಅನುಕೂಲವಾಯ್ತು.

೧೯೭೨ರ ವೇಳೆಗೆ ನಮ್ಮ ದೇಶದಲ್ಲಿ ಸಂಕರಹತ್ತಿ H-4 ಬಿಡುಗಡೆಯಾಯ್ತು. ಒಂದು ಎಕರೆಗೆ ೨೦ ಕ್ವಿಂಟಾಲ್ ಹತ್ತಿ ಬರ್‍ತಾ ಇತ್ತು. ಈ ಹತ್ತಿ ಬಂದಾಗ ನಾನು ಪಿರಿಯಾಪಟ್ಟಣದಲ್ಲಿ ನಮ್ಮ ಹಿಂದಿನ ಲೋಕೋಪಯೋಗಿ ಸಚಿವರಾದ ಪ್ರಗತಿಪರ ಕೃಷಿಕರಾದ ಹೆಚ್.ಎಮ್.ಚನ್ನಬಸಪ್ಪ ಅವರ ಜಮೀನಿನಲ್ಲಿ H-4 ಹತ್ತಿ ಹಾಕಿಸಿದೆ. ಮತ್ತು ಕಂಪಲಾಪುರದ ಪ್ರಗತಿಪರ ರೈತರಾದ ಸಿದ್ದರಾಮಪ್ಪ ಅವರ ಹೊಲದಲ್ಲಿಯು ಸಹ ಬೆಳೆದು ಪ್ರಾತ್ಯಕ್ಷತೆ ಮಾಡಿದ್ವು. ಅದರ ಸಮಾರಂಭಕ್ಕೆ ಬಂದಿದ್ದ ಚನ್ನಬಸಪ್ಪನವರು, "ನೀವು ಉತ್ತಮ ಕೆಲಸ ಮಾಡಿದ್ದೀರಿ" ಅಂತ ಬೆನ್ನು ತಟ್ಟಿದರು. ಅದು ನನಗೆ ಬಹಳ ಸ್ಫೂರ್ತಿದಾಯಕವಾಯ್ತು. ೧೯೭೦ರಲ್ಲಿ ಮೈಸೂರಿನಲ್ಲಿದ್ದಾಗ ಕೊಳ್ಳೇಗಾಲ ಭಾಗದಲ್ಲಿ ಬಿತ್ತನೆ ಬೀಜ ಮಾರಾಟ ಮಾಡ್ತಾ ಇದ್ದೆ. ನನಗೆ ಬೀಜ ಮಾರಲು Matadoor van ನೀಡಿದ್ರು. ಅದರಲ್ಲಿ ಬೀಜ ಸಹಾ ಹಾಕಿಕೊಂಡು ಹೋಗ್ತಿದ್ದೆ. ಒಂದು ದಿನ ಒಂದು ಟನ್ ಬಿತ್ತನೆ ಬೀಜ ತೊಗೊಂಡು ಹೋಗಿ ಕೊಳ್ಳೇಗಾಲದಲ್ಲಿ ಪೂರ್ಣ ನನ್ನ ಬಿತ್ತನೆ ಬೀಜ ಮಾರಾಟ ಮಾಡಿದೆ. ಅನಂತರ Driverನ ಮತ್ತೆ ವಾಪಸ್ಸು ಕಳಿಸಿ ಮತ್ತೊಂದು ಟನ್ ಬೀಜ ತರಿಸಿ, ಮಹದೇಶ್ವರ ಬೆಟ್ಟದ ತಪ್ಪಲಿನಲ್ಲಿರುವ ರಾಮಾಪುರದಲ್ಲಿ ರಾತ್ರಿ ಹೊತ್ತಿಗೆ ಮಾರಿದೆ. ಆಗ ನನಗೆ ಎಷ್ಟು ಸಂತೋಷವಾಯ್ತು ಅಂದ್ರೆ ಬಹುಶಃ ಕಷ್ಟಪಟ್ರೆ ಅದಕ್ಕೆ ಸರಿಯಾದ ಪ್ರತಿಫಲ ಸಿಕ್ಕೇಸಿಗುತ್ತೆ ಅಂತ ಅರಿವಾಯ್ತು. ನಮ್ಮ ಸಂಸ್ಥೆ ವಹಿವಾಟು ದಿನೇ ದಿನೇ ಏರಿ ಒಂದು ಕೋಟಿಯಾಯ್ತು. ೧೯೮೨-೮೫ರಲ್ಲಿ ತರಕಾರಿ ಬೀಜ ಮಾರಾಟ ಆರಂಭಿಸಿದ್ವಿ. ಮೊದಲಿಗೆ ನಾವು ಪರದೇಶದಿಂದ ಹೈಬ್ರಿಡ್ ಕೋಸು ಬೀಜವನ್ನು ತಂದು ಹಾಸನ ಜಿಲ್ಲೇಲಿ ರೈತರಿಗೆ ಕೊಟ್ವಿ. ಅವರು ಒಂದು ಎಕರೆಗೆ ಐವತ್ತರಿಂದ ಅರವತ್ತು ಸಾವಿರ ಲಾಭ ಗಳಿಸುವಂತಾಯ್ತು. ನನಗೆ ಒಂದು ನಿದರ್ಶನ ನೆನಪಿಗೆ ಬರುತ್ತೆ. ನಾವು ಈ ಹರಿರಾಣಿ ಕೋಸನ್ನು ಜಾವಗಲ್ ಹತ್ರ ಒಬ್ಬ ೮೦ ವರುಷದ ರೈತನಿಗೆ ಒಂದು ಎಕರೆಗೆ ಕೊಟ್ವಿ. ಅವನು ಬಿತ್ತನೆ ಬೀಜ free ಕೇಳಿದಾಗ ನಾನು ಹೇಳಿದೆ, "ನೋಡಿ, ಪ್ರತಿ ತಿಂಗಳು ನಾನು ನಿಮ್ಮ ಜಮೀನಿಗೆ ಭೇಟಿ ಕೊಡ್ತೀನಿ, ತಾಂತ್ರಿಕ ವಿಚಾರ ತಿಳಿಸ್ತೀನಿ, ಒಂದು ಎಕರೆಗೆ ೬೦ ಗ್ರಾಂ ಬಿತ್ತನೆ ಬೀಜ ಬೇಕು. ೧೦ ಗ್ರಾಂ ಬೆಲೆ ೪೦ ರೂಪಾಯಿ" ಅಂತ ಹೇಳಿದೆ. ಅವನು ಹಾಕಿದ. ಅವನಿಗೆ ಉತ್ತಮ ಬೆಳೆ ಬಂದು ಒಂದು ಲಕ್ಷ ರೂಪಾಯಿ ಆದಾಯ ಸಿಗ್ತು. ಆಗ ನನಗೆ ಅವರು ಹೇಳಿಕಳಿಸಿದ್ರು. ನಾನು ಅಲ್ಲಿಗೆ ಹೋದಾಗ ಆ ೮೦ ವರುಷದ ವೃದ್ಧ ಕೃಷಿಕ ಒಂದು ಪಂಚೇಲಿ ಒಂದು ಲಕ್ಷ ರೂಪಾಯಿ ಗಂಟನ್ನು ತಂದು ನನ್ನ ಮುಂದೆ ಹಿಡಿದು, "ಸ್ವಾಮಿ ಇದು ನಿಮ್ಮ ದುಡ್ಡು" ಅಂದ. ಬಹುಶಃ ನಾನು ಒಬ್ಬ ರೈತನಿಗೆ ಒಂದು ಲಕ್ಷ ರೂಪಾಯಿ ನೋಡುವ ಅವಕಾಶ ಮಾಡಿಕೊಟ್ಟೆನಲ್ಲ ಅಂತ ನನಗೆ ಬಹಳ ಖುಷಿಯಾಯ್ತು. "ವ್ಯವಸಾಯದಲ್ಲಿ ಒಂದು ಲಕ್ಷ ರೂಪಾಯೀನಾ ಇಂಥ ಹಳ್ಳೀಲಿ ನಾನು ನೋಡಿದ್ದು ಇದೇ ಮೊದಲು. ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ. ನನ್ನಂಥ ನೂರಾರು ಜನ ರೈತರಿಗೆ ಇದೇ ರೀತಿ ನೀವು ಸಹಾಯ ಮಾಡಿ" ಅಂತ ಆ ರೈತ ಅಂದಿದ್ದು ಇವತ್ತಿಗೂ ನನಗೆ ನೆನಪಿದೆ. ನಮ್ಮ ಜೀವನದಲ್ಲಿ ನಿಜವಾದ ಮಾರ್ಪಾಡು ಯಾವಾಗ ಆಗುತ್ತೆ ಅಂದ್ರೆ ನಮ್ಮಿಂದ ಇತರರಿಗೆ ಯಾವಾಗಲಾದರೂ ಅನುಕೂಲವಾದಾಗ. ಆಗ ನನಗೆ ಇನ್ನೂ ಛಲ ಬಂತು. ರೈತರಿಗೆ ಇನ್ನೂ ಹೆಚ್ಚು ಹೆಚ್ಚಿನ ತಂತ್ರಜ್ಞಾನ ಮುಟ್ಟಿಸಬೇಕು ಅಂತ ಸಂಕಲ್ಪ ಮಾಡಿದೆ. ನಮ್ಮ ಸಂಕೇತಿ ಕೃಷಿಕರು ಸಹ ಇದರ ಪ್ರಯೋಜನ ಪಡೆದಿದ್ದಾರೆ. ನನ್ನ ಪರಿಶ್ರಮದಿಂದ ನಾನು officer ಆಗಿ ಬೆಂಗಳೂರಿಗೆ ಬಂದೆ. ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳನ್ನು ನೋಡಿಕೊಳ್ತಾ ಇದ್ದೆ. ಕಂಪನಿ ಮಾರಾಟ ಜಾಲ ವಿಸ್ತಾರವಾಯ್ತು. ೧೯೯೦ರಲ್ಲಿ ನಮ್ಮ ಸಂಸ್ಥೆಯ ವಹಿವಾಟು ಆರು ಕೋಟಿ ಮುಟ್ಟಿತು. ಸಂಸ್ಥೆ ಸಹಾ ಹೊಸ ಹೊಸ ಹೈಬ್ರಿಡ್ ತಳಿ ಪರಿಚಯಿಸ್ತು. ಸೂರ್ಯಕಾಂತಿ ನಮ್ಮ ದೇಶದ ಉತ್ತಮ ಬೆಳೆ, ಭಾರತ ದೇಶ ಪ್ರತಿ ವರುಷ ಮೂರು ಸಾವಿರ ಕೋಟಿ ರೂಪಾಯಿಯನ್ನು ಎಣ್ಣೆ ಹಾಗೂ ಎಣ್ಣೆಕಾಳು ಆಮದಿಗೆ

ಖರ್ಚು ಮಾಡ್ತಿತ್ತು. ಪರದೇಶದ ಮೇಲೆ ನಾವು ಅವಲಂಬಿತರಾಗಿದ್ವು. ಈ ಸಂದರ್ಭದಲ್ಲಿ ನಾವು ೧೯೮೫ರಲ್ಲಿ ಮೊತ್ತ ಮೊದಲಿಗೆ ಸೂರ್ಯಕ್ರಾಂತಿ ಹೈಬ್ರಿಡ್ ಬಿಡುಗಡೆ ಮಾಡಿದ್ವು. ಸೂರ್ಯಕ್ರಾಂತಿ ಬೆಳೆದಿದ್ರೆ ಜನ ಮಾತನಾಡ್ತಿದ್ರು, 'ಬಹುಶಃ ಇದು ಹೂವಿನ ಗಿಡ ಅಂತ ಕಾಣುತ್ತೆ, film shootingಗೆ ಹಾಕಿದಾರೆ' ಅಂತ. ಆಗ ನಾನು ಜನಗಳಿಗೆ ಹೇಳ್ತಿದ್ದೆ, 'ಇಲ್ಲ, ಇದು ಎಣ್ಣೆ ಕಾಳು ಬೆಳೆ, ಇದನ್ನು ಬಳಸೋದ್ರಿಂದ ಆರೋಗ್ಯ ಉತ್ತಮವಾಗಿರುತ್ತೆ. ನಾವು ಇದನ್ನು ಬೆಳೆಯೋದ್ರಿಂದ ಪರದೇಶಕ್ಕೆ ನಾವು ಕೊಡುತ್ತಿರುವ ಸಾವಿರಾರು ಕೋಟಿ ಡಾಲರ್ ಹಣ ಉಳಿಸಬಹುದು' ಅಂತ ಮನವರಿಕೆ ಮಾಡಿಕೊಡ್ತಿದ್ದೆ. ಅನಂತರ ಇದು ಎಷ್ಟು ಜನಪ್ರಿಯವಾಯ್ತು ಅಂದ್ರೆ ಒಂದು ಕಾಲಕ್ಕೆ ಕರ್ನಾಟಕದಲ್ಲಿ ೧೬ ಲಕ್ಷ ಹೆಕ್ಟೇರಿನಲ್ಲಿ ಸೂರ್ಯಕ್ರಾಂತಿ ಬೆಳೆದು ೧೮ ಲಕ್ಷ ಟನ್ ಎಣ್ಣೆ ಉತ್ಪಾದನೆಯಾಗಿ, ಪರದೇಶದ ಆಮದು ಗಣನೀಯವಾಗಿ ಕಡಿಮೆಯಾಯ್ತು. ನಮ್ಮ ದೇಶದಲ್ಲಿ ಹತ್ತಿ ಸಹಾ ಒಂದು ಪ್ರಮುಖ ಬೆಳೆ. ಹತ್ತಿಗೆ ಹತ್ತು ಕುತ್ತು ಅಂತಾರೆ. ಅದಕ್ಕೆ ಬರುವ ಕೀಟ, ರೋಗಗಳು ಜಾಸ್ತಿ. ಇದಕ್ಕಾಗಿ Mahyco ಸಂಸ್ಥೆ ಹೊಸ ತಂತ್ರಜ್ಞಾನ ಮಾಡಿತು. ಹತ್ತಿಗೆ ಬರುವ ಹಸಿರುಕಾಯಿ ಕೊರಕ ಕೀಟದ ಹತೋಟಿ ಮಾಡಬಲ್ಲ ವಿಷವನ್ನು ಹತ್ತಿ ಗಿಡದಲ್ಲಿ ಅಳವಡಿಸಿದ್ದಾರೆ. ಇದಕ್ಕಾಗಿ Biotechnology ಅಂದ್ರೆ ಜೈವಿಕ ತಂತ್ರಜ್ಞಾನ ಬಳಸಲಾಗಿದೆ. ಈ ಶತಮಾನದ ಹೊಸ ತಂತ್ರಜ್ಞಾನ ಬಿ.ಟಿ.ಹತ್ತಿಯನ್ನು ನಮ್ಮ ಸಂಸ್ಥೆ ಬಿಡುಗಡೆ ಮಾಡಿತು. ಭಾರತ ಸರಕಾರ ಸಹ ಈ ಹತ್ತಿ ತಳಿಯನ್ನು ಮಾರಾಟ ಮಾಡಲು ೨೦೦೦ನೇ ಇಸವೀಲಿ ಅನುಮತಿ ನೀಡಿತು. ಈ ತಳಿ ಹತ್ತಿ ಬೆಳೆದ ರೈತ ಹತ್ತು, ಹದಿನೈದು ಸಾರಿ ವಿಷ ರಾಸಾಯನಿಕ ಸಿಂಪರಣೆ ಮಾಡುವ ಅಗತ್ಯವಿರಲಿಲ್ಲ, ಹತ್ತಿಯ ಇಳುವರಿ ಹೆಚ್ಚಿತ್ತು ಮತ್ತು ಉತ್ಪಾದನಾ ವೆಚ್ಚ ಸಹಾ ಗಣನೀಯವಾಗಿ ಕಡಿಮೆಯಾಯ್ತು. ಒಂದು ಎಕರೆಗೆ ಐದು ಸಾವಿರ ರೂಪಾಯಿ ಔಷಧಿ ವೆಚ್ಚ ಉಳಿತಾಯವಾಗ್ತಿತ್ತು. ಕರ್ನಾಟಕ, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಕೃಷಿಕರು ಈ ತಂತ್ರಜ್ಞಾನದ ಪ್ರಯೋಜನ ಪಡೆದುಕೊಂಡ್ರು. ಕೃಷಿಕರು ಒಂದು ಎಕರೆಗೆ ೧೦ ರಿಂದ ೧೫ ಕ್ವಿಂಟಾಲ್ ಹತ್ತಿ ಬೆಳೀತಾ ಇದಾರೆ. ಈ ಸಂಶೋಧನೆ ಗುರುತಿಸಿ ನಮ್ಮ ಸಂಸ್ಥೆಯ ಸಂಸ್ಥಾಪಕ ಬಿ.ಆರ್. ಬಾರವಾಲೆ ಅವರಿಗೆ ೨೦೦೧ರಲ್ಲಿ ಭಾರತ ಸರ್ಕಾರದ ಪ್ರತಿಷ್ಠಿತ World Food Award ಪ್ರಶಸ್ತಿ ದೊರಕಿದೆ. ೨೦೦೨ರಲ್ಲಿ ಪದ್ಮಭೂಷಣ ಪ್ರಶಸ್ತಿ ಸಹಾ ದೊರಕಿದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನಮಗು ಸಹ ವೈಯಕ್ತಿಕವಾಗಿ ಹೆಮ್ಮೆಯಾಯ್ತು. ನಾನು ಭಾರತ ದೇಶದ ಪ್ರಜೆಯಾಗಿ, ಈ ದೇಶದ ರೈತನಿಗೆ ಅನುಕೂಲ ಮಾಡಿಕೊಟ್ಟಿದೀನಿ, ರೈತನ ಪರಿಸ್ಥಿತಿ ಉತ್ತಮವಾಗಿದೆ ಅನ್ನುವ ಸಂತೋಷ ಸಿಕ್ಕಿದೆ.

ಕರ್ನಾಟಕದಲ್ಲಿ ರಾಣಿಬೆನ್ನೂರು ಕೃಷಿಯಲ್ಲಿ ಮುಂದುವರೆದ ಜಾಗ. ಇಲ್ಲಿ ೧೯೮೦ರಲ್ಲಿ ಬಿತ್ತನೆ ಬೀಜ ಉತ್ಪಾದನೆ ಮಾಡಲು ಕೆಲವು ರೈತರನ್ನು ಆಯ್ಕೆ ಮಾಡಿದ್ವು. ಸಜ್ಜೆ, ಟೊಮ್ಯಾಟೊ ಹಾಗೂ ಇತರೇ ಕಾಯಿಪಲ್ಲೆ ಬಿತ್ತನೆ ಬೀಜವನ್ನು ಉತ್ಪಾದನೆ ಮಾಡಲು ಅವರಿಗೆ ನೀಡಿದ್ವು. ಅವರಿಗೂ ಸಂತೋಷವಾಯ್ತು. ಇವತ್ತು ಆ ರೈತರ ಪರಿಸ್ಥಿತಿ ಎಷ್ಟು ಮುಂದುವರೆದಿದೆ ಅಂದ್ರೆ ಕೇವಲ ಒಂದು ಎಕರೆ, ಎರಡು ಎಕರೆ ಇಟ್ಟುಕೊಂಡಿದ್ದ ರೈತರು ಅವರ ಜಮೀನನ್ನು ಹತ್ತರಿಂದ ಹದಿನೈದು ಎಕರೆಗೆ ವಿಸ್ತರಿಸಿಕೊಂಡಿದ್ದಾರೆ. ಟ್ರಾಕ್ಟರ್ ಖರೀದಿಸಿದ್ದಾರೆ. ಹೊಸ ಮನೆ ಕಟ್ಟಿದಾರೆ, ಮಕ್ಕಳನ್ನು ಹೆಚ್ಚಿನ ವ್ಯಾಸಂಗಕ್ಕೆ ಬೇರೆ ಬೇರೆ ದೇಶಗಳಿಗೆ ಕಳಿಸಿದ್ದಾರೆ. ಅವರ ಸ್ಥಿತಿ ನೋಡಿದಾಗ ನಿಜವಾಗಲು ಸಹ ಕೃಷಿ ನಮ್ಮ ದೇಶದ ಬೆನ್ನೆಲುಬು ಅಂತ ನಾವೇನು ಓದ್ತಾ ಇದ್ವೋ, ಏನು ಕೇಳಿದ್ವೋ ಅದು ಖಂಡಿತಾ ನಿಜ ಅನ್ನಿಸುತ್ತೆ. ಇಂದು ಶೇಕಡಾ ೬೦ ರಿಂದ ೭೦ರಷ್ಟು ಜನ ಕೃಷಿ ಅವಲಂಬಿಸಿದಾರೆ. ಕೃಷಿ ಮುಂದುವರೀಬೇಕಾದ್ರೆ ಉತ್ತಮ ಬಿತ್ತನೆ ಬೀಜ, ಸರಿಯಾದ ಮಾರ್ಗದರ್ಶನ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಕೆ ಆಗಬೇಕು. ಹಾಗೇ ರೈತ ಉತ್ಪಾದನೆ ಮಾಡಿದ ಬೆಳೆಗೆ ಸರಿಯಾದ ಬೆಲೆ ಸಿಗಬೇಕು. ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತೆ, ನಮ್ಮ ಸಂಕೇತಿ ಕೃಷಿಕರು ಅಡಿಕೆ ಬೆಳೀತಾರೆ. ನಾನು ಚಿಲ್ಕುಂದ, ಬಸವಾಪಟ್ಟಣ ಈ ಕಡೆ ಹೋದಾಗ ರೈತರು ಹೇಳ್ತಿದ್ರು "ನನಗೆ ಈ ವರುಷ ಎರಡು ಲಕ್ಷ ಬಂತಪ್ಪಾ" ಅಂತ. ಆದರೆ ಈಚೆಗೆ ನೋಡಿದಾಗ, "ಅಡಿಕೆ ಹೋಯ್ತಪ್ಪಾ, ಸರಿಯಾದ ಬೆಲೆ ಇಲ್ಲ, ಏನಾಗುತ್ತೋ ಮುಂದೆ, ನಾವು ಇದನ್ನೇ ನೆಚ್ಚಿಕೊಂಡಿದೀವಿ" ಅಂತಿದಾರೆ. ನಾನು ಈ ವಿಚಾರ ಕುರಿತು ಕೆಲವು ತಜ್ಞರ ಹತ್ತಿರ ಮಾತನಾಡ್ತಿದ್ದೆ. ಈ ಪ್ರಶ್ನೆಗೆ ಉತ್ತರವಿದೆಯೇ ಅಥವಾ ಇದು ಪ್ರಶ್ನೆಯಾಗೇ ಉಳಿಯುತ್ತೆಯೇ ಅಂತ. ಆಗ ಅವರು ಹೇಳ್ತಿದ್ರು 'ಇದು ತಾತ್ಕಾಲಿಕವಾದ ಪ್ರಶ್ನೆ ಮಾತ್ರ, ಆದಾಯ ಖಂಡಿತವಾಗಿಯೂ ಸಿಗುತ್ತೆ. ಯಾವ ರೀತಿ ಅಂದ್ರೆ ನಮ್ಮ ಕೃಷಿಕರು ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬೇಕು. ಹಾಗೇ ಯಾವುದೇ ಒಂದೇ ಒಂದು ಬೆಳೆ ಮೇಲೆ ಅವಲಂಬನೆ ಆಗಬಾರದು. ಬೇರೆ ಪರ್ಯಾಯವಾದ ಬೆಳೆ ಸಹಾ ಮಾಡಬೇಕು. ಮುಖ್ಯವಾದದ್ದು ಏನು ಅಂದ್ರೆ ಇಂದು ನಮ್ಮ ದೇಶದಲ್ಲಿ, ಹಾಗೇ ರಾಜ್ಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗ್ತಿದೆ. ಎಷ್ಟು ಹಿತಮಿತವಾಗಿ ನಾವು ನೀರನ್ನು ಬಳಸ್ತೀವೋ ಆಗ ಉತ್ಪಾದನೆ ಜಾಸ್ತಿಯಾಗುತ್ತೆ, ಖರ್ಚು ಕಡಿಮೆಯಾಗುತ್ತೆ. ಒಂದು ವೇಳೆ ನಮಗೆ ಕಡಿಮೆ ಧಾರಣೆ ದೊರೆತರೂ ಕೆಲವು, ವರುಷ ಮುಂದುವರೀಬಹುದು,' ಅಂತ ಹೇಳಿದ್ರು. ಇದನ್ನು ತಿಳಿದ ಮೇಲೆ

ನಾನು ಚಿಲ್ಕುಂದಕ್ಕೆ ಹೋಗಿ, ಸ್ನೇಹಿತರನ್ನು, ರೈತರನ್ನು ಭೇಟಿ ಮಾಡಿ ಹೇಳಿದೆ. 'ನೀವು ಚಿಂತೆ ಮಾಡುವ ಅಗತ್ಯವಿಲ್ಲ. ನೀವು ಉತ್ಪಾದನೆ ಮಾಡಿದ್ದನ್ನು ಏಳೆಂಟು ಜನ ಒಟ್ಟಿಗೆ ಸೇರಿ, ಸಿಕ್ಕ ರೇಟಿಗೆ ಮಾರುವ ಬದಲು, ಸರ್ಕಾರದ, ಇಲಾಖೆಯ ನೆರವು ಪಡೆದು, ಅದನ್ನು ಸಂಗ್ರಹ ಮಾಡಿ ಇಟ್ಟು, ಉತ್ತಮವಾದ ಬೆಲೆ ಬಂದ ವೇಳೇಲಿ ಒಟ್ಟಾಗಿ ಮಾರಾಟ ಮಾಡಿ, ಆಗ ಅನುಕೂಲವಾಗುತ್ತೆ. ಹಣದ ಒತ್ತಡಕ್ಕೆ ಸ್ವಲ್ಪ ಸ್ವಲ್ಪ ಮಾರ್ತಾ ಹೋದ್ರೆ ಅನುಕೂಲ ಆಗೋಲ್ಲ' ಅಂತ. ಹತ್ತಾರು ಜನ ಸೇರಿ ಸರ್ಕಾರದ ಉಗ್ರಾಣದಲ್ಲಿ (ware houseನಲ್ಲಿ) ಶೇಖರಣೆ ಮಾಡಿದ್ರೆ, ಅದರ ಸ್ವಲ್ಪ ಭಾಗವನ್ನು ಸಾಲವಾಗಿ ಪಡೀಬಹುದು. ಪರಸ್ಪರ ಸಹಕಾರಿ ಮನೋಭಾವದಿಂದ ಒಟ್ಟಾಗಿ ಸೇರಿ ಮಾಡುವ ಕೆಲಸ ಇದು. ಸರ್ಕಾರವೇ ಮಾಡಬೇಕು ಅಂತೇನಿಲ್ಲ. ಹಳ್ಳಿಹಳ್ಳಿಗಳಲ್ಲೂ ಕೃಷಿಕರು ಒಂದಾಗಿ ಮುಂದೆ ಬಂದರೆ ಸರ್ಕಾರವೇ ಶೇಕಡಾ ೫೦ರ ಸಹಾಯಧನ ನೀಡಿ ಉಗ್ರಾಣ ಕಟ್ಟಿಕೊಳ್ಳಲು ನೆರವಾಗುತ್ತೆ. ಪದಾರ್ಥ ಅಲ್ಲಿಟ್ಟು, ರಸೀದಿ ಪಡೆದರೆ, ಬ್ಯಾಂಕಿನಿಂದ ಸಾಲ ಸಹಾ ಸಿಗುತ್ತೆ. ಈ ಲಾಭವನ್ನು ನಮ್ಮ ಸಂಕೇತಿ ಜನಾನೂ ಪಡೆದುಕೋಬೇಕು. ಅದೊಂದು ನನಗೆ ಆಸೆ ಇದೆ. ನಾನು ನಿವೃತ್ತಿಯಾದ ಮೇಲೆ, ನಮ್ಮ ರೈತರಿಗೆ ಅಡಿಕೆ ಜತೆಗೆ ಪರ್ಯಾಯ ಬೆಳೆಯಾಗಿ ವೆನಿಲ್ಲಾ ಹಾಗೇ ತರಕಾರಿ ಬೆಳೆಯುವ ಬಗ್ಗೆ ಮಾಹಿತಿ ನೀಡಬೇಕು. ಹಾಗೇ ಕೇವಲ ರಾಸಾಯನಿಕ ಗೊಬ್ಬರ ಮಾತ್ರ ಬಳಸುವುದರ ಬದಲು, ಸಾವಯವ ಗೊಬ್ಬರ ಮಾಡಲು ಸಹಾ ಸಲಹೆ ನೀಡಬೇಕು ಅಂತಿದೆ. ನಮ್ಮ ತೋಟದ ಕಸ, ಕಡ್ಡೀನ ಒಂದು ಕಡೆ ಗುಡ್ಡೆ ಹಾಕಿ, ಅದನ್ನು ಕರಗಿಸಿ, ತಿಪ್ಪೆಗೊಬ್ಬರದ ಜತೆ ಕೊಡೋದ್ರಿಂದ ಭೂಮಿಯ ಉತ್ಪಾದನಾ ಮಟ್ಟ ಹೆಚ್ಚುತ್ತದೆ. ಸಾವಯವ ಗೊಬ್ಬರ ನೀಡೋದ್ರಿಂದ ಅಡಿಕೆ, ತೆಂಗಿನ ಕೀಟ ರೋಗಗಳು ಸಹ ಕಡಿಮೆಯಾಗುತ್ತದೆ. ಬೇವು, ಹೊಗೆಸೊಪ್ಪು ಹಾಗೂ ಅದರ ಹಿಂಡೀನ ಗಿಡಗಳಿಗೆ ಕೊಡೋದ್ರಿಂದ ಅದರ ಆರೋಗ್ಯ ಉತ್ತಮವಾಗುತ್ತೆ.

ನಮ್ಮ ಸಂಸ್ಥೆ ವತಿಯಿಂದ ಪ್ರಪಂಚದ ವಿವಿಧ ಭಾಗಗಳಿಗು ಸಹ ನಾನು ಭೇಟಿ ಕೊಟ್ಟಿದೀನಿ. ಅಮೇರಿಕಾ, ಆಸ್ಟ್ರೇಲಿಯಾ, ಜಪಾನ್, ಕೊಲಂಬೊ, ಥೈಲ್ಯಾಂಡ್, ಯೂರೋಪ್ ದೇಶಗಳಿಗೆ ಹೋಗಿದ್ದೇನೆ. ಅಲ್ಲಿನ ರೈತ ಹಾಗೂ ಆತನ ಕೃಷೀನ ನಾನು ನೋಡಿದಾಗ ನನಗೆ ಅನ್ನಿಸ್ತಾ ಇತ್ತು ನಾವೂ ಸಹಾ ಇದೇ ರೀತಿ ಮುಂದುವರೀಬೇಕು ಅಂತ. ಅವರು ಕೃಷೀನ ಪೂರ್ಣವಾಗಿ ಸ್ವೀಕರಿಸಿದ್ದಾರೆ. 'ಇದೇ ನಮ್ಮ ಜೀವನ, ಇದನ್ನು ಬಿಟ್ರೆ ಇಲ್ಲ, ಅದರ ಬಗ್ಗೆ ಸಾಕಷ್ಟು ಪರಿಶ್ರಮ ಮಾಡಬೇಕು' ಅಂತ ಪ್ರತಿಯೊಬ್ಬರೂ ಅಂದುಕೊಂಡಿದಾರೆ. ಪ್ರತಿಯೊದು ಪದಾರ್ಥವನ್ನು, ಅದು ವಿದ್ಯುಚ್ಛಕ್ತಿ ಇರಬಹುದು, ನೀರು ಇರಬಹುದು, ಗೊಬ್ಬರ ಇರಬಹುದು, ಔಷಧ ಇರಬಹುದು ಅದನ್ನು ಬಹಳ ಮಿತವಾಗಿ ಬಳಸ್ತಾರೆ. ಉತ್ತಮವಾದ ತಳೀನ ಬೆಳೀತಾರೆ. ಹೊಸ ಹೊಸ ವೈಜ್ಞಾನಿಕ ತಿಳುವಳಿಕೇನ ಅಳವಡಿಸಿಕೊಂಡಿರೋದು ಮುಖ್ಯವಾದ ಅಂಶ. ಹಾಗೇ ಆ ದೇಶಗಳಲ್ಲಿ ಕೃಷಿಕರಿಗೆ ಪ್ರಾಮುಖ್ಯ ಸಹಾ ಇದೆ. ನಾವೂ ಕೃಷೀನ ವೈಜ್ಞಾನಿಕ ರೀತಿಲಿ ಮಾಡಿ, ಕೃಷಿಯ ಬಗ್ಗೆ ಹೆಚ್ಚಿನ ಪರಿಜ್ಞಾನ ಪಡೆದು, ಹಳ್ಳಿಯ ಎಲ್ಲಾ ರೈತರು ಒಗ್ಗೂಡಿ ಕೃಷಿ ಮಾಡಿದ್ರೆ ನಮ್ಮ ಪರಿಸ್ಥಿತಿ ಖಂಡಿತಾ ಉತ್ತಮವಾಗುತ್ತೆ.

ನನಗೆ ತೇಗನಹಳ್ಳೀಲಿ ಹೇಮಾವತಿ ಬಯಲಿನಲ್ಲಿ ಎರಡು ಎಕರೆ ಗದ್ದೆ ಇದೆ. ಅಲ್ಲಿ ಭತ್ತ ಬೆಳೀತಾ ಇದಾರೆ. ಅಲ್ಲಿ ಹೈಬ್ರಿಡ್ ಭತ್ತವನ್ನು ಬೆಳೆದು, ನಮ್ಮ ಹಳ್ಳಿಯ ಇತರೇ ಕೃಷಿಕರಿಗೂ ಅದನ್ನು ತೋರಿಸಿ, ಮಾದರಿ ಬೆಳೆ ಮಾಡಬೇಕು ಅನ್ನುವ ಆಸೆ ಇದೆ. ನನ್ನ ಮತ್ತೊಂದು ಆಸೆ ಏನು ಅಂದ್ರೆ ಕೃಷಿಕರಿಗೆ ಸರ್ಕಾರದಿಂದ ಬರುವಂಥ ಸೌಲಭ್ಯಗಳನ್ನು ಮುಟ್ಟುವಂತೆ ಮಾಡಬೇಕು ಅನ್ನುವುದು. ಉದಾಹರಣೆಗೆ ಹೈನುಗಾರಿಕೆ. ಇಂದು ಹಳ್ಳಿಗಳಲ್ಲಿ ವಿದೇಶಿ ಜಾತಿ ಹಸುಗಳನ್ನು ಸಾಕಿ ಕೃಷಿಕರು ಬಹಳ ಮುಂದೆ ಬಂದಿದಾರೆ. ಇದೇ ತರಹ ಪ್ರತಿಯೊಂದು ಮನೇಲೂ ಹಸು, ಎಮ್ಮೆ ಸಾಕಿ, ಒಂದು ಹಾಲಿನ ಸಹಕಾರ ಸಂಘ ಸ್ಥಾಪಿಸಿ, ಹಾಲು ಒಕ್ಕೂಟಕ್ಕೆ ಹಾಲು ಹಾಕಬೇಕು ಅನ್ನುವುದು. ಹೈನುಗಾರಿಕೆ ಮಾಡಿದಾಗ ದೊರೆಯುವ ಸಾವಯವ ಗೊಬ್ಬರಾನ ತೋಟದಲ್ಲಿ ಬಳಸಿದಾಗ, ತಂತಾನೆ ಉತ್ಪತ್ತಿ ಜಾಸ್ತಿಯಾಗುತ್ತೆ. ಹಾಗೇ ಇವತ್ತು ಯಾಂತ್ರಿಕ ಕೃಷಿ ಅಂದ್ರೆ ಯಂತ್ರಗಳ ಬಳಕೆ ಮಾಡುವುದರಿಂದ ಕೃಷಿಕರಿಗೆ ಬಹಳಷ್ಟು ಅನುಕೂಲವಾಗಿದೆ. ಆದರೆ ಎಲ್ಲರೂ ಎಲ್ಲ ಯಂತ್ರಗಳನ್ನೂ ಖರೀದಿಸಲು ಆಗೋಲ್ಲ. ಹಾಗಾಗಿ ಹಳ್ಳೀಲಿ ಯಾರಾದರೂ ಒಬ್ಬರು ಟ್ರಾಕ್ಟರ್ ಖರೀದಿಸಿದ್ರೆ, ಅದರಿಂದ ಹಳ್ಳಿಯ ಎಲ್ಲರಿಗೂ ಪ್ರಯೋಜನವಾಗುವಂತೆ ಮಾಡಬೇಕು ಅನ್ನುವುದು ನನ್ನ ಹೆಬ್ಬಯಕೆ.

ಹಾಸನ ಜಿಲ್ಲೆ ದುದ್ದದ ಕಾರೆಬೋರೆಕಾವಲ್‌ನಲ್ಲಿ ನನ್ನ ತಾಯಿಯವರದ್ದು ಸ್ವಲ್ಪ ಜಮೀನಿತ್ತು. ಹೆಸರಿಗೆ ತಕ್ಕಂತೆ ಅಲ್ಲಿ ಕಾರೆ ಬೆಳೆ ಬಿಟ್ರೆ ಏನೂ ಬೆಳೀತಿರಲಿಲ್ಲ. ನನ್ನ ತಾಯಿಯವರಿಗೆ ಅದನ್ನು ಮಾರಬೇಕು ಅಂತ ಇತ್ತು. ಆದರೆ ಅದನ್ನು ಮಾರದೆ, ಅಕ್ಕಪಕ್ಕದ ಜಾಗ ಖರೀದಿಸಿ ಈಗ ೧೮ ಎಕರೆ ತೋಟ ಮಾಡಿದ್ದೇನೆ. ಅಲ್ಲಿ ತೆಂಗು, ಮಾವು, ತೇಗ, ಹಾಕಿದೀನಿ. ನೀರು ಕಡಿಮೆ ಇದ್ದಿದ್ರಿಂದ ಹನಿ ನೀರಾವರಿ ಅಳವಡಿಸಿದ್ದೇನೆ. ಸದ್ಯ ನನ್ನ ಭಾವನವರ ಅಣ್ಣನವರಾದ ಶ್ರೀಮಾನ್ ಚನ್ನಕೇಶವಮೂರ್ತಿಯವರ ಮಕ್ಕಳು ಜಮೀನಿನ ನಿರ್ವಹಣೆ

ಮಾಡ್ತಿದಾರೆ. ನಾನು ಈ ಕೆಲಸದಿಂದ ಮುಂದಿನ ವರುಷ ಅಂದ್ರೆ ೨೦೦೫ರಲ್ಲಿ ನಿವೃತ್ತಿ ಹೊಂದಿದ ಮೇಲೆ, ಬೇರೆ ಬೇರೆ ಪರ್ಯಾಯ ಬೆಳೆ ಮಾಡಬೇಕು ಅಂತಿದೀನಿ. ಹೀಗೆ ಮಾದರಿ ಕೃಷಿ ಮಾಡಿ, ಸುತ್ತಮುತ್ತಲಿನ ಕೃಷಿಕರಿಗೆ ಮಾಹಿತಿ ನೀಡಿದರೆ, ನಾನು ಕೃಷಿನಾಗಿದ್ದಕ್ಕೆ, ಕೃಷಿ ಪದವೀಧರನಾಗಿದ್ದಕ್ಕೆ ಸಾರ್ಥಕವಾಗುತ್ತೆ ಅನ್ನುವುದು ನನ್ನ ಭಾವನೆ.

ನಮ್ಮ ಸಂಕೇತಿ ಕೃಷಿ, ಕಲುಷಿತಗೊಳ್ಳದೆ ಚೆನ್ನಾಗಿಯೇ ನಡೆದುಕೊಂಡು ಬರ್ತಿತ್ತು. ಆದ್ರೆ ನಮ್ಮ ಜನಾಂಗ ಒಂದೇ ಬೆಳೆ ಮೇಲೆ ಅವಲಂಬನೆ ಆದ್ರು, ಹಾಗೇ ಅನಂತರದ ವೇಳೆಗೆ ಕೃಷಿ ಮಾಡದೆ ಪಟ್ಟಣ ಸೇರಿದ್ರು. ಹಾಗಾಗಿ ಈಗ ನನಗೆ ಒಂದು ಕಡೆ ಅನ್ನಿಸುತ್ತೆ ಮುಂದಿನ ಕೆಲವಾರು ವರುಷಗಳಲ್ಲಿ ಸಂಕೇತಿ ಜನ ಹಳ್ಳಿ ಬಿಟ್ಟು ಪಟ್ಟಣ ಸೇರಬಹುದು ಅಂತ. ಆದರೂ ಮತ್ತೊಂದು ಕಡೆ, ನಾನು ಕುಪ್ಪಹಳ್ಳಿ, ಹಾನಗಲ್ ಈ ಕಡೆ ಹೋದಾಗ ಸಂಕೇತಿ ಕೆಲವು ಯುವಕರು, "ಏನಾದ್ರೂ ಪರಿಸ್ಥಿತಿ ಬರಲಿ, ನಾವು ಕೃಷಿ ಮಾಡ್ತೀವಿ" ಅಂತಿದಾರೆ. "ನಾವು ಓದಿದ್ರೂ ಹಳ್ಳೀಲಿ ನೆಲೆಸ್ತೀವಿ. ನಾವೆಲ್ಲಾ ಮುಂದೆ ಬಂದಿರೋದು ತೋಟದಿಂದ. ಇವತ್ತು ನಮಗೆ ಹೆಚ್ಚಿನ ಮಾಹಿತಿ ಬರ್ತಾ ಇದೆ. ತೋಟದ ಜತೆಗೆ ಬೇರೆ ಬೇರೆ ಬೆಳೆಗಳನ್ನೂ ಸಹ ಬೆಳೀಬಹುದು" ಅಂತ ಹೇಳುವುದನ್ನು ಕೇಳಿದಾಗ ನನಗೆ ಸ್ವಲ್ಪ ಆಸೇನೂ ಮೂಡುತ್ತೆ. ಬಹುಶಃ ಇಂದಿನ ಯುವಪೀಳಿಗೆ ತಮ್ಮ ಹಿರಿಯರ ವಿಚಾರಗಳ ಜತೆ, ಮುಂದಿನ ನೂತನ ತಂತ್ರಜ್ಞಾನವನ್ನು ಸಮ್ಮಿಶ್ರಗೊಳಿಸಿ ಸಂಕೇತಿ ಕೃಷಿ ಉಳಿಸ್ತಾರೇನೋ ಅನ್ನುವ ನಂಬಿಕೆ ಸಹಾ ಮೂಡುತ್ತೆ.

ಸಂಕೇತಿ ಜನಾಂಗ ಹಾಗೂ ಕೃಷಿ ಎರಡೂ ಒಂದಕ್ಕೊಂದು ಬೆರೀತಾ ಬರ್ತಾ ಇದೆ. ಇದು ಉಳೀಬೇಕಾದ್ರೆ ನಮ್ಮ ಯುವ ಸಮೂಹ, ಕೃಷಿಯನ್ನು ಕೈಗಾರಿಕೆಯ ರೀತಿಯಲ್ಲಿ ತೆಗೆದುಕೊಂಡು, ನಾವೂ ಸಂಬಳದಾರರಂತೆ ದುಡೀಬಹುದು ಅನ್ನುವ ಕಲ್ಪನೆ ಬೆಳೆಸಿಕೊಳ್ಳಬೇಕು. ಕೃಷಿ ಅಂದ್ರೆ ಬರೀ ತೋಟ ಮಾತ್ರ ಅಲ್ಲ. ಮೀನುಗಾರಿಕೆ, ಹೈನುಗಾರಿಕೆ, ರೇಷ್ಮೆ, ಪುಷ್ಪ ಕೃಷಿ ಕೂಡ ಇದೆ. ತೋಟದ ಮಧ್ಯದಲ್ಲಿ ಹೂಗಳ ಬೇಸಾಯ ಮಾಡಿದ್ರೆ ಪಟ್ಟಣಗಳಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆ ಇದೆ. ಹಾಗೇ ರೇಷ್ಮೆ ಕೃಷಿ ಸಹಾ ಮಾಡಿದ್ರೆ ಕೃಷಿಯಿಂದ ಮುಂದೆ ಬರಲು ಖಂಡಿತಾ ಸಾಧ್ಯ. ನಾನು ಶಿವಮೊಗ್ಗ ಭಾಗಕ್ಕೆ ಹೋದಾಗ ಗಮನಿಸಿದೆ, ಯುವಕರು ತಮ್ಮದೇ ಆದ ಕೃಷಿ ಕ್ಲಬ್ ಮಾಡಿಕೊಂಡಿದಾರೆ. ಕೇವಲ ನಮ್ಮ ಜನ ಮಾತ್ರವಲ್ಲ, ಕೃಷಿಗೆ ಸಂಬಂಧಪಟ್ಟ ಬೇರೆಯವರನ್ನೂ ಸೇರಿಸಿಕೊಂಡು, ಜತೆಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಕರೆಸಿ, ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಹಾಗೂ ತಾಂತ್ರಿಕ ವಿಚಾರಗಳ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸ್ತಾ ಇದ್ದಾರೆ. ಇದು ನಿಜಕ್ಕೂ ಸಂತೋಷದ ವಿಚಾರ. ನಾನು ಸಹ ಈ ತರಹದ ಕೃಷಿ ಕ್ಲಬ್‌ಗಳಲ್ಲಿ ಭಾಗವಹಿಸಿ ಸೂಕ್ತ ಮಾಹಿತಿ ನೀಡಿದ್ದೇನೆ. ನಮ್ಮ ಸಂಕೇತಿ ಜನಾಂಗ ಇನ್ನು ಮುಂದೆಯೂ ಕೃಷಿಗೆ ಸಂಬಂಧಪಟ್ಟ ಮಾಹಿತಿ, ಶಿಕ್ಷಣ ಬೇಕಾದ್ರೆ ನಾನು ಒದಗಿಸಲು ಸಿದ್ಧನಾಗಿದ್ದೇನೆ. ನಮ್ಮ ಕೃಷಿ ಮುಂದುವರೆದರೆ ಹೆಮ್ಮೆಪಡುವುದರಲ್ಲಿ ನಾನು ಮೊದಲಿಗನಾಗಿರುತ್ತೇನೆ.

ನನ್ನ ದೃಷ್ಟಿಯಲ್ಲಿ ಸಂಕೇತಿಗಳು ಶ್ರಮಜೀವಿಗಳು. ಅವರಿಗೆ ಒಂದು ತರಹ ಛಲ. ಒಮ್ಮೆ ಮನಸ್ಸಿಗೆ ಇದು ಉತ್ತಮವಾದಂತಹ ಕೆಲಸ, ಇದರಿಂದ ನಾಲ್ಕು ಜನಕ್ಕೆ ಹಾಗೂ ತನ್ನ ಸಂಸಾರಕ್ಕೆ ಅನುಕೂಲ ಆಗುತ್ತೆ ಅಂತ ತಿಳಿದ್ರೆ, ಅದನ್ನು ಮುಂದುವರಿಸಿಕೊಂಡು ಹೋಗ್ತಾರೆ. ಕೃಷಿಯ ಜತೆಗೆ ಇವರು ವಿಶಿಷ್ಟವಾದ ಹವ್ಯಾಸವನ್ನು ಸಹ ರೂಢಿಸಿಕೊಂಡಿದ್ದಾರೆ. ವೇದಾಧ್ಯಯನಸಂಪನ್ನರು, ಸಂಗೀತಗಾರರು, ನಾಟಕಕಾರರು, ಹಾಸ್ಯಗಾರರು, ಇದ್ದಾರೆ. ಬಿಡುವಿರದ ವ್ಯವಸಾಯದ ಜೀವನದ ನಡುವೆ ಈ ಹವ್ಯಾಸಗಳು ಬದುಕಿಗೆ ಬಲ ನೀಡುತ್ತವೆ. ಇತ್ತೀಚಿನ ಯುವ ಜನರಲ್ಲಿ ಕೃಷಿ ಜತೆಗೆ ಈ ಹವ್ಯಾಸಗಳು ಸಹ ಬೆಳೀತಿವೆ. ಮಕ್ಕಳು ಸಹ ಕೃಷಿಯ ಜತೆಗೆ, ಸಂಸ್ಕೃತ, ವೇದ, ಸಂಗೀತ, ದೇವರಪೂಜೆ ಮಂತ್ರ ಕಲೀತಿದಾರೆ. ಸಂಗೀತ ಮನಸ್ಸಿಗೆ ಶಾಂತಿ, ಉಲ್ಲಾಸ ನೀಡುವ ಹವ್ಯಾಸ. ಈ ರೀತಿಯ ವಾತಾವರಣ ಹಳ್ಳೀಲಿ ಮೂಡ್ತಿರೋದು ನಿಜಕ್ಕೂ ಸಂತೋಷಕರ ವಿಚಾರ.

ಹಳ್ಳಿಯಲ್ಲಿ ಕೃಷಿ ಮಾಡುವ ವ್ಯಕ್ತಿ, 'ಇದು ಕಷ್ಟದ ಕಸುಬು, ನನ್ನ ಮಕ್ಕಳಿಗೆ ಕಷ್ಟ ಆಗಬಾರದು, ಅವನು ನೆಮ್ಮದಿಯಾಗಿ ಅಮೇರಿಕಾ, ಆಸ್ಟ್ರೇಲಿಯಾದಲ್ಲಿರಲಿ' ಅಂತ ವಿಚಾರ ಮಾಡ್ತಾರೆ. ಅದೇ ಮಗ ಮುಂದೆ ದೊಡ್ಡ ಹಂತಕ್ಕೆ ಬಂದಾಗ, 'ನನ್ನ ತಂದೆ ಕೃಷಿಯಿಂದ ಬದುಕಿದರು, ಹಳ್ಳೀಲಿ ಬಾಳಿದವರು, ತಾತ ಮುತ್ತಾತಂದಿರು ಸಹ ಕೃಷಿಕರಾಗಿದ್ರು. ಹಾಗೇ ಮುಂದೆ ನಾನು ಕೃಷಿಕನಾಗಬೇಕು' ಅಂತ ಯೋಚಿಸ್ತಾನೆ. ನಾನು ಬಹಳಷ್ಟು ಕಡೆ ಇದನ್ನು ಗಮನಿಸಿದೀನಿ. ಈಗ ಈ ತರಹ ನೂರಾರು ಯುವಕರು ಜಮೀನು ಖರೀದಿಸ್ತಾ ಇದಾರೆ. ಅನುಕೂಲ ಆದಾಗ ಅವರು ಕೃಷಿ ಖಂಡಿತಾ ಮಾಡ್ತಾರೆ. ಇವತ್ತಲ್ಲಾ ನಾಳೆ ಕೃಷಿಯೇ ನಮಗೆ ಆಧಾರ. ಅದು ನಶಿಸಬಾರದು, ಮುಂದುವರೆಸಬೇಕು ಎನ್ನುವ ಮನೋಭಾವ ಯುವಕರಲ್ಲಿ ಬೆಳೀತಿದೆ. ಅದಕ್ಕಾಗಿ ಅವರು ಕೃಷಿ ಬಿಟ್ಟಿಲ್ಲ, ಬಿಡೋದೂ ಇಲ್ಲ. ಅವರ ಕೆಲಸ ಕಾರ್ಯದ

ಒತ್ತಡದಿಂದ ಪೂರ್ಣ ಪ್ರಮಾಣದ ಕೃಷಿಕರಾಗಿಲ್ಲದಿರಬಹುದು ಅಷ್ಟೆ. ಆದ್ರೆ ಮುಂದೆ ಆಗೇ ಆಗ್ತಾರೆ. ನನ್ನ ಸ್ನೇಹಿತರು ಕೆಲವರು, ಮನೆಯ ಮುಂದೆ ಅಂಗಳದಲ್ಲಿ ಅಡಿಕೆ, ತೆಂಗು, ಬಾಳೆ, ಏಲಕ್ಕಿ, ಕಾಫಿ, ತರಕಾರಿ, ಬೆಳೀತಿದಾರೆ. ನಾನು ಅವರನ್ನು ಕೇಳಿದಾಗ ಹೇಳಿದ್ರು "ನೋಡಿ ಮಾವಯ್ಯ, ನಾನು ಕೃಷಿಕ ಆಗಬೇಕು ಅಂತಿದ್ದೆ. ಆದ್ರೆ ನನ್ನ ತಂದೆ ನೀನು ಊರಿಗೆ ಬರಬೇಡ, ಪೇಟೇಲಿ ಕೆಲಸಮಾಡು ಅಂದ್ರು, ಈ ಕೃಷಿ ಕೆಲಸ ಮರೆತುಹೋಗಬಾರದು, ನಮ್ಮಲ್ಲಿ ಉಳೀಬೇಕು. ಇವತ್ತಲ್ಲಾ ನಾಳೆ ನಾವು ಊರಿಗೆ ಹೋಗಿ ಕೃಷಿ ಮಾಡುವ ಸಲುವಾಗಿ ಇದನ್ನು ನಡೆಸಿಕೊಂಡು ಬರ್ತೀನಿ" ಅನ್ನುವುದನ್ನು ಕೇಳಿದಾಗ ನನಗೆ ಅನ್ನಿಸ್ತು, ಕೃಷಿ ಸಂಕೇತಿಗಳ ರಕ್ತದಲ್ಲಿ ರಕ್ತಗತವಾಗಿದೆ ಅಂತ. ಇದು ಮುಂದೆ ನೂರಾರು ಸಹಸ್ರಾರು ವರುಷ ಇರುತ್ತೆ ಅನ್ನುವುದು ನನ್ನ ದೃಢವಾದ ನಂಬಿಕೆ. ನನ್ನ ಒಬ್ಬನೇ ಮಗನಿಗೂ ಕೃಷಿ ಆಸಕ್ತಿ ಇದೆ. ಈಗ ಸದ್ಯ ಅವನು ಆಸ್ಟ್ರೇಲಿಯಾದ ಸಿಡ್ನಿಯ Energy Australiaದಲ್ಲಿ Software Engineer ಆಗಿದಾನೆ. ನನ್ನ ಕೃಷೀನ ಅವನು ಮುಂದೆ ನಡೆಸಬಹುದು ಅನ್ನುವ ನಂಬಿಕೆ ನನಗಿದೆ. ನನ್ನ ಒಬ್ಬಳೇ ಮಗಳು ಸಹ Software Engineer. ಬೆಂಗಳೂರಿನಲ್ಲಿದಾಳೆ. ಅಳಿಯ Structural Engineer.

ನನ್ನ ಹೆಂಡತಿ ಕೆ.ಎಸ್. ವಿಜಯಲಕ್ಷ್ಮಿ, ಕಟ್ಟೆಪುರದ ಕೆ.ಎಸ್. ಶಾಮಣ್ಣ ಹಾಗೂ ರುದ್ರಪಟ್ಟಣದ ಸಮೀಪವಿರುವ ವಡ್ಡರಹಳ್ಳಿಯ ಲೀಲಾವತಿ ದಂಪತಿಗಳ ಮಗಳು. ಕೆ.ಜಿ. ಶಾಸ್ತ್ರಿಗಳ ಮೊಮ್ಮಗಳು. ನಮ್ಮ ಅತ್ತೆಮಾವ ಕೃಷಿಕರು. ನನ್ನ ಮಾವ ಇವತ್ತೀಗೂ ಗದ್ದೆ ಇಟ್ಟಿದ್ದಾರೆ. ಅವರಿಗೆ ಬಹಳ ಹೆಮ್ಮೆ. ಅವರ ಗದ್ದೇಲಿ ಬೆಳೆದ ಅಕ್ಕೀನೇ ಊಟ ಮಾಡಬೇಕು ಅಂತ ಹೇಳಿ ಭತ್ತ ಬೆಳೆದು ಊಟ ಮಾಡ್ತಿದಾರೆ. ನನ್ನ ಇಂದಿನ ಉನ್ನತ ಪರಿಸ್ಥಿತಿಗೆ ಬಹುಶಃ ನನ್ನ ಹೆಂಡತಿ ಕಾರಣ. ಯಾಕೇಂದ್ರೆ ನನ್ನ ಹುದ್ದೆ 'ಮಾರಾಟ.' ತಿಂಗಳಲ್ಲಿ ೨೦ ರಿಂದ ೨೫ ದಿನ ಹೊರಗಡೆ ಹೋಗ್ತಿದ್ದೆ. ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಅವಳೇ ಕಾರಣ. ನಾನು ಜಮೀನು ಖರೀದಿಸಿದಾಗ ಒಮ್ಮೆ ತೀವ್ರ ವಿರೋಧ ಸಹಾ ಮಾಡಿದ್ಳು, ನಮಗೆ ಯಾಕೆ ಬೇಕು ಅಂತ. ಆದರೆ ನಾನು ಅವಳಿಗೆ ತಿಳುವಳಿಕೆ ಹೇಳಿದೆ. ಅನಂತರ ಅವಳು ಸಹ ನಮ್ಮ ಕೃಷೀನ ಮುಂದುವರೆಸಬೇಕು ಅಂತ ಆಸೆ ಪಡ್ತಿದಾಳೆ. ನಾನು ನಿವೃತ್ತಿಯಾದ ಮೇಲೆ ನಮ್ಮ ಜಮೀನಿನಲ್ಲಿ ನೆಲೆಸಬೇಕು ಅಂತ ಅವಳಿಗೂ ಆಸೆ ಇದೆ. ದೇವರ ಅನುಗ್ರಹ ಇದ್ರೆ ನಾನು ಮಾದರಿ ಕೃಷಿ ಮಾಡಬೇಕು ಅನ್ನುವ ಆಸೆ ಇದೆ.

ಇತರಾದಿಗಳಲ್ಲಿ ಮನೆ ಮಂದಿಯೆಲ್ಲಾ ಅಂದ್ರೆ ಗಂಡಸರು ಹೆಂಗಸರು, ಎಲ್ಲಾ ಹಿರಿಯರು, ಮಕ್ಕಳು ಎಲ್ಲಾ ಒಟ್ಟಾಗಿ ಸೇರಿ ಕೃಷಿ ಮಾಡೋದ್ರಿಂದ ಅವರು ಇಂದು ಮುಂದುವರೆದಿದಾರೆ. ಅವರ ಪ್ರತಿ ಒಂದು ಎಕರೆ ಈಗ ಹತ್ತು ಎಕರೆ ಆಗಿದೆ. ಅದೇ ನಮ್ಮ ಸಂಕೇತಿಗಳಲ್ಲಿ ಸಾಂಘಿಕ ಕೃಷಿ ಇಲ್ಲದೆ ಹತ್ತು ಎಕರೆ ಒಂದು ಎಕರೆ ಆಗಿದೆ. ಇದು ನಮಗೂ, ಅವರಿಗೂ ಇರುವ ವೆತ್ಯಾಸ. ನಾವು ವ್ಯವಸಾಯದಲ್ಲಿ ಹೆಂಗಸರು, ಮಕ್ಕಳು ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹಿಸಲಿಲ್ಲ. ಅವರು ಪ್ರೋತ್ಸಾಹಿಸಿದರು. ಹಾಗಾಗಿ ಮುಂದುವರೆದ್ರು. ಹೀಗಿದ್ರೂ ನಮ್ಮ ಸಂಕೇತಿ ಕೃಷಿ ಮುಂದೆ ಖಂಡಿತವಾಗಿ ಉಳಿಯುತ್ತೆ. ಇವತ್ತು ಉದ್ಯೋಗಕ್ಕಾಗಿ ಇರುವ ಒತ್ತಡವನ್ನು ನೋಡಿದಾಗ, ಯುವಕರಿಗೆ ಕೃಷಿ ಮಾಡುವ ಹಂಬಲ ಹುಟ್ಟಿದೆ. ಜತೆಗೆ ಸರ್ಕಾರದ ಪ್ರೋತ್ಸಾಹ ಸಹಾ ಸೇರಿದೆ. ಅನೇಕ ಜನ ಸಂಕೇತಿ ಯುವಕರು, ಕೃಷಿಯ ಜತೆಗೆ ಕೃಷಿ ಸಾಮಾಗ್ರಿಗಳನ್ನು, ಅಂದ್ರೆ ಬೀಜ, ಗೊಬ್ಬರ, ಔಷಧಿ ಮಾರಾಟ ಮಾಡುವ ಅಂಗಡಿ ತೆರೆದಿದಾರೆ. ರೈತರಿಗೆ ಸಲಹೆ ಕೊಡ್ತಿದಾರೆ. ಮುಂದಿನ ದಿನಗಳಲ್ಲಿ ನಮ್ಮ ಕೃಷಿ ಹೆಚ್ಚಿನದಾಗಿ ಅಭಿವೃದ್ಧಿಗೆ ಬರುತ್ತೆ ಅನ್ನುವುದು ನನ್ನ ಖಚಿತವಾದ ನಿಲುವು. ಹಾಗೇ ನನಗೆ ಹೆಮ್ಮೆಯ ವಿಚಾರ ಅಂದ್ರೆ ಲಕ್ಷಾಂತರ ರೈತರ ಅಭಿವೃದ್ಧಿಗೆ ನಾನು ಕಾರಣ ಆಗಿದ್ದೇನೆ ಅನ್ನುವ ವಿನಮ್ರ ಭಾವನೆ ಇದೆ. ನನ್ನ ಕೆಲಸದ ಹಾದಿಯಲ್ಲಿ ಅನೇಕ ಸಂಕೇತಿ ಯುವಕರ ಭವಿಷ್ಯವನ್ನೂ ಉತ್ತಮವಾಗಿಸಲು ಪ್ರಯತ್ನ ಪಟ್ಟಿದ್ದೇನೆ. ನಮ್ಮ ಕರ್ನಾಟಕ ರಾಜ್ಯದ ವಿವಿಧ ಹಳ್ಳಿಗೆ ಹೋದ್ರೂ, ನಾನು ಗುರುತಿಸದಿದ್ರೂ, ಅವರು ನನ್ನನ್ನು ಗುರುತಿಸಿ, 'ಸ್ವಾಮಿ, ನೀವು ಬೀಜ ಕೊಟ್ಟಿದ್ರಿ, ನಾವು ಅದನ್ನು ಹಾಕಿ ಮುಂದುವರೆದಿದೀವಿ. ನಿಮ್ಮನ್ನು ನೋಡಿ ಸಂತೋಷವಾಯ್ತು' ಅಂತ ಹೇಳಿದಾರೆ. ಕೃಷಿ ಲಕ್ಷಾಂತರ ಜನರ ಬಾಳನ್ನು ಬೆಳಗಿದೆ, ಮುಂದೆ ಬೆಳಗಿಸಲೂ ಇದೆ ಎಂದು ಮಾತು ಮುಗಿಸಿದಾಗ ಸುಬ್ಬರಾವ್ ಅವರ ಮುಖದಲ್ಲಿ ಅನಿರ್ವಚನೀಯ ಆನಂದವಿತ್ತು. ಸಾರ್ಥಕತೆಯ ಭಾವವಿತ್ತು. ಸಾಧಿಸಿದ ಹಿರಿಮೆಯಿತ್ತು. ನಮ್ಮ ಆತಿಥ್ಯ ಸಹ ಚನ್ನಾಗಿಯೇ ಆಯಿತು. ಅನೇಕ ಅರ್ಹ ಸಂಕೇತಿ ಯುವಕರಿಗೆ ತಮ್ಮ ಸಂಸ್ಥೆಯಲ್ಲಿಯೇ ಬಾಳು ಕೊಟ್ಟಿರುವುದು ಕಂಡಾಗ ಅವರ ಬಗ್ಗೆ ನಮಗೂ ಹೆಮ್ಮೆಯಾಯ್ತು. ಮುಂದಿನ ದಿನಗಳಲ್ಲಿ ಯುವ ಸಂಕೇತಿ ಕೃಷಿಕರಿಗೆ ಸುಬ್ಬರಾವ್ ಅವರು ದಾರಿದೀಪವಾಗಬಲ್ಲರು. ಅವರಿಗೆ ವಂದನೆ ಸಲ್ಲಿಸಿ ನಾವು ಅವರ ಕಛೇರಿಯಿಂದ ಹೊರಬಂದಾಗ ಸೂರ್ಯಪ್ರಖರವಾಗಿದ್ದ. ಸುಬ್ಬರಾವ್ ಅವರ ಮಾತುಗಳೇ ಮನದಾಳದಲ್ಲಿ ರಿಂಗಣಿಸುತ್ತಿತ್ತು.

ಉಪಸಂಹಾರ

ಸಂಕೇತಿ ಕೃಷಿ ಮುಂದಿನ ಪೀಳಿಗೆಗೆ ಉಳಿಯುತ್ತದೆಯೆ? ಇಲ್ಲ ಅಂದರೆ, ತಮ್ಮ ಸ್ವಸಾಮರ್ಥ್ಯದಿಂದ ಹಳ್ಳಿಗಳಲ್ಲಿ ಬದುಕು ಕಟ್ಟಿರುವ ಸಂಕೇತಿಗಳು ಸಿಟ್ಟಾಗಬಹುದು. ಧ್ಯಾನನಿರತರಾಗಿರುವಾಗ ನೆಲಬಿಟ್ಟು ಮೇಲೇಳುತ್ತಿದ್ದ ಹಿರಿಯರು ಸ್ವರ್ಗದಲ್ಲಿಯೇ ಮರುಕಪಡಬಹುದು! ಮುಂದೆಯೂ ಕೃಷಿ ಉಳಿಯುತ್ತದೆ ಅಂದರೆ ವಾಸ್ತವಕ್ಕೆ ಹಿಡಿದ ಕೈಗನ್ನಡಿ ಬೇರೆಯೇ ಚಿತ್ರಣ ತೋರಿಸುತ್ತದೆ. ಹೌದು, ಇಲ್ಲಗಳ ನಡುವೆ ಒಂದು ಸಮಾನಾಂತರ ರೇಖೆ ಎಳೆಯುವಂತಿಲ್ಲ. ಯಾಕೆಂದರೆ ಯಾವುದೇ ಹೇಳಿಕೆಯನ್ನು ಅಲ್ಲಗಳೆಯುವ ಸಾಮರ್ಥ್ಯ ಭವಿಷ್ಯದ ಯುವ ಸಂಕೇತಿಗಳಿಗಿದೆ. ಸಮೃದ್ಧ ಸಂಕೇತಿ ಕೃಷಿ ಪರಂಪರೆ ಉಳಿಸುವ, ಬೆಳೆಸುವ ತೀರ್ಮಾನ ಅವರದ್ದೇ ತಾನೆ?

ನಮ್ಮ ಬಗ್ಗೆ ಪುಸ್ತಕ ಬರೆಯುವವನಿಗೆ, ನಮ್ಮ ಕೃಷಿ ಉಳಿಸಲೇಬೇಕು ಎನ್ನುವ ಈ ಪರಿಯ ವ್ಯಾಮೋಹವೇನು ಎಂದು ನೀವು ಕೇಳಬಹುದು. ಈ ಕಾಲಘಟ್ಟವೇ ಹಾಗಿದೆ. ಹಳೆಯದನ್ನು ಬಿಡಲಾಗದ, ಹೊಸದನ್ನು ಗಟ್ಟಿಯಾಗಿ ಅಪ್ಪಿಕೊಳ್ಳಲು ಆಗದ ಸ್ಥಿತಿಯಲ್ಲಿ ನಾವಿದ್ದೇವೆ. ಬೇರಿಲ್ಲದೆ ಮರದ ಚಿಗುರಿಲ್ಲ. .. ಚಿಗುರಿಲ್ಲದೆ ಮರಕ್ಕೆ ಬದುಕಿಲ್ಲ. ಬದುಕಿಗೆ, ಬೇರೋ . . ಅಥವಾ ಚಿಗುರೋ ಎಂಬ ಜಿಜ್ಞಾಸೆಯಲ್ಲಿ ನಾವಿದ್ದೇವೆ. ಕಳೆದ ಐದು, ಆರು ವರುಷಗಳ ಹಳ್ಳಿಹಳ್ಳಿಗಳ ಸುತ್ತಾಟದಲ್ಲಿ ಅನೇಕ ಸಂಕೇತಿ ಕೃಷಿಕರ ಬದುಕಿನ ಅನಾವರಣವನ್ನು ನೋಡಿದ್ದೇನೆ. ಸಂಕೇತಿಗಳ ಕೊನೆಯ ಕುಟುಂಬ ಹಳ್ಳಿ ಬಿಟ್ಟು ಪಟ್ಟಣ ಸೇರಿದ್ದಕ್ಕೆ ಸಾಕ್ಷಿಯಾಗಿದ್ದೇನೆ. ಬದುಕಿನ ದ್ವಂದ್ವಗಳನ್ನು ಕಂಡಿದ್ದೇನೆ. ಪಟ್ಟಣಗಳಲ್ಲಿ ನೆಲೆಸಿರುವವರ ಹಳ್ಳಿ ಪ್ರೀತಿಯನ್ನು, ಹಳ್ಳಿಯಲ್ಲಿರುವವರ ಪಟ್ಟಣದ ಪ್ರೀತಿಯನ್ನು ಒಟ್ಟಿಗೆ ನೋಡಿದ್ದೇನೆ. ತೊಳಲಾಟದ ಮೂಕವೇದನೆಗೆ ಮಾತಾಗಿದ್ದೇನೆ. ಜತನದಿಂದ ಕಾಪಾಡಿದ ಕೃಷಿ ಬದುಕು ಚೂರಾಗುತ್ತಿರುವುದನ್ನು ಕಣ್ಣಾರೆ ಕಂಡಿರುವ ಹಿರಿಯರ ಕಣ್ಣಂಚಿನ ಹನಿ ನೀರನ್ನೂ ಗಮನಿಸಿದ್ದೇನೆ .. . ಪಟ್ಟಣದಲ್ಲಿ ನೆಲೆಸಿ, ಗಳಿಸಿ ಸುಖ ಪಡೆಯುವ ಯುವಕರ ಕಣ್ಣ ಬೆಳಕನ್ನೂ ಅಚ್ಚರಿಯಿಂದಲೂ ವೀಕ್ಷಿಸಿದ್ದೇನೆ. ಅಲ್ಲಿರಲಾಗದೆ . . ಇಲ್ಲೂ ಇರಲಾಗದೆ ಚಡಪಡಿಸುವ ಜೀವಗಳ ಮಿಡಿತವನ್ನೂ ಅರಿತಿದ್ದೇನೆ. 'ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿವುದೇ ಜೀವನ' ಎನ್ನುವ ಕವಿವಾಣಿ ಸಂಕೇತಿ ಕೃಷಿಕರಿಗೆ ಎಷ್ಟು ಅನ್ವಯವಾಗುತ್ತಲ್ಲಾ ಅನ್ನಿಸಿದೆ! ಅನಿವಾರ್ಯ ಕಾರಣಗಳಿಂದ ಹಳ್ಳಿ ಬಿಟ್ಟು ಪಟ್ಟಣ ಸೇರಿರುವ ಸಂಕೇತಿಗಳ ಕೃಷಿಪ್ರೀತಿ, ಗ್ರಾಮಗಳಲ್ಲಿ ಇರಲಾಗದೆ ಅನಿವಾರ್ಯವಾಗಿ ಪಟ್ಟಣ ಸೇರುವ ಸಿದ್ಧತೆಯಲ್ಲಿರುವ ಹಳ್ಳಿಗರ ಪಟ್ಟಣಪ್ರೀತಿ, ಕೃಷಿಯನ್ನೇ ಅವಲಂಬಿಸಿ ಈಗಲೂ ಬದುಕುತ್ತಿರುವ ಸಂಕೇತಿಗಳ ಗ್ರಾಮಪ್ರೀತಿ ಎಲ್ಲವೂ ಜೀವನದ ಅನಿವಾರ್ಯತೆಯೇ ಅನ್ನಿಸುತ್ತದೆ. ಅವರವರ ವಿಚಾರಗಳನ್ನು ಆಲಿಸುವಾಗ . . . ಅವರದೇ ಚಿಂತನೆಗಳಲ್ಲಿ ಮುಳುಗಿ ಹೋಗುವಾಗ . . . ಅವರು ಹೇಳುತ್ತಿರುವುದೂ ಸತ್ಯವಲ್ಲವೇ ಎಂದು ಅನ್ನಿಸದೇ ಇರದು. ಯಾಕೆಂದರೆ ಅವರವರ ಬದುಕು ಅವರದ್ದು. ನೀವು ಹೀಗೇ ಇರಬೇಕು ಅನ್ನಲು ನಾನ್ಯಾರು! ಆದರೂ ಕಣ್ಣಿಗೆ ಕಂಡದನ್ನು, ಅನುಭವಿಸಿದ್ದನ್ನು, ಮನಸ್ಸಿನೊಳಗೆ ಮಥಿಸಿದ್ದನ್ನು ನೇರವಾಗಿ ನಿಮ್ಮ ಮುಂದೆ ಇಡುವ ಪ್ರಯತ್ನ ಮಾಡಿದ್ದೇನೆ. ಸ್ವೀಕರಿಸುವುದೂ . . . ಬಿಡುವುದೂ . . . ನಿಮಗೇ ಸೇರಿದ್ದು.

ನನ್ನ ಪ್ರಕಾರ ಸಂಕೇತಿಗಳ ಮೂಲ ಕಸುಬು ವ್ಯವಸಾಯ. ಈಗ ಸಂಕೇತಿಗಳಿಗೆ ಹೆಸರು ತಂದುಕೊಟ್ಟಿರುವ ಇತರೇ ಕ್ಷೇತ್ರಗಳು ವ್ಯವಸಾಯಕ್ಕೆ ಪೂರಕವಾಗಿದ್ದವು ಅಷ್ಟೆ. ವ್ಯವಸಾಯ ಅವರ ಮೂಲ ಕಸುಬಾಗಿದ್ದರಿಂದಲೇ ನೀರಿರುವ ತಂಪಾದ ಜಾಗಗಳಲ್ಲಿ ಅವರು ನೆಲೆ ನಿಂತರು. ಕೌಶಿಕದ ದೊಡ್ಡಕೆರೆ, ಮತ್ತೂರಿನ ತುಂಗಾನದಿ, ರಾಮನಾಥಪುರದ ಕಾವೇರಿ ಇದಕ್ಕೆ ನೀಡಬಹುದಾದ ಉದಾಹರಣೆ ಅಷ್ಟೆ. ಸಂಕೇತಿಗಳು ನೆಲೆಸಿರುವ ಊರುಗಳಲ್ಲಿ ನೀರಿಗೆ ಸಮೃದ್ಧಿ ಇತ್ತು.... ಇಲ್ಲಿ ಆರಂಭದಲ್ಲಿ ನೀರು ಇರದಿದ್ದರೂ ಅನಂತರ ಪಡೆಯಲು ಹೋರಾಡಿರುವ ಉದಾಹರಣೆಗಳಿವೆ. ಹಳ್ಳದ ಜಮೀನನ್ನು ಸಂಕೇತಿಗಳು ಹಿಡಿದದ್ದೇಕೆ ಅನ್ನುವ ಅಂಶ ಬಂದಾಗ ಹಲವರು ಹೇಳೋದು ಅಡಿಕೆ ಕೃಷಿ ಮಾಡಲು ಅಂತ. ಆದರೆ ಹಳ್ಳದ ಜಾಗದಲ್ಲಿ ನೀರಿನ ಸೆಲೆ ಬತ್ತುವುದಿಲ್ಲ ಅನ್ನುವ ಜ್ಞಾನ ಸಂಕೇತಿಗಳಿಗಿತ್ತು. ಹಾಗಾಗಿ ಈ ಜಮೀನಿಗೆ ಸೂಕ್ತವಾದ ಬೆಳೆ ಅಡಿಕೆ ಎಂದು ಅವರು ನಿರ್ಧರಿಸಿರಬಹುದು. ಅಡಿಕೆ ಕೃಷಿ ಮಾಡಲೆಂದೇ ಸಂಕೇತಿಗಳು ಹಳ್ಳದ ಜಮೀನನ್ನು ಮಾಡಿದರು ಎನ್ನುವುದನ್ನು ನಂಬುವುದು ಕಷ್ಟ. ಅಡಿಕೆ ಬೇಸಾಯ ಮಾಡದೇ . . . ಕೃಷಿ ಮಾಡಿರುವ ಅನೇಕ ಸಂಕೇತಿ ಕೃಷಿಕರೂ ಈಗಲೂ ಇದ್ದಾರೆ. ಎಲ್ಲರಿಗೂ ಕೃಷಿಯ ಆರಂಭ ಅಡಿಕೆಯಿಂದ ಆಗಿಲ್ಲ. ಆದರೂ ಅಡಿಕೆ ಸಂಕೇತಿಗಳ ಘನತೆ ಹೆಚ್ಚಿಸಿದ ಬೆಳೆ . . . ಅವರಿಗೆ ಸ್ಥಾನಮಾನ ನೀಡಿದ ಬೆಳೆ. ಹಾಗಾಗಿ ಅಡಿಕೆ ಕೃಷಿ ಸಂಕೇತಿಗಳಲ್ಲಿ ಹೇಗೆ ಆರಂಭವಾಯ್ತು ಅನ್ನುವುದಕ್ಕೆ ಸ್ಪಷ್ಟ ಉತ್ತರ ಸಿಗುವುದಿಲ್ಲ. ಸಂಕೇತಿ ಹುಟ್ಟುವಾಗ

ಅಡಿಕೆ ಸಸಿ ಹಿಡಿದೇ ಹುಟ್ಟಿಬಂದ ಅನ್ನುವ ನಾಣ್ನುಡಿ ಇದೆ ಅಷ್ಟೆ. ಹಳ್ಳದ ಜಮೀನಿಂದಾಗಿ ಅಡಿಕೆಯೇ . . . ಅಡಿಕೆಯಿಂದಾಗಿ ಹಳ್ಳದ ಜಮೀನೇ-ಇದು ಬೀಜ ವೃಕ್ಷ ನ್ಯಾಯದಂತಿದೆ!

ದೂರದ ಹಳ್ಳಿಗಳಿಗೆ ವಲಸೆ ಹೋಗಿ, ತನುವಾದ ನಿರ್ಜನ ಪ್ರದೇಶದಲ್ಲಿ ನೆಲೆ ನಿಂತು, ಕಾಡು-ಗಂಟಿ ಕಡಿದು ತೋಟ ಮಾಡಿದ ಸಂಕೇತಿಗಳದ್ದು ಏಕಾಂಗಿ ಕೃಷಿ ಬದುಕು, ಅವಿರತ ದುಡಿಮೆ, ಹಾಗೂ ಸಾಧಿಸುವ ಛಲ ಮಾತ್ರ ಅವರನ್ನು ಕೃಷಿ ಜೀವನದಲ್ಲಿ ಗೆಲ್ಲಿಸಿದ್ದು. ಹಗಲು ರಾತ್ರಿ ಎನ್ನದೇ ತೋಟದಲ್ಲಿ ದುಡಿಯುವಾಗ, ಆ ನೀರವ, ನಿರ್ಜನ ಪ್ರದೇಶದ ಭೀತಿಯನ್ನು ಹೊಡೆದೋಡಿಸಲು ತಾವು ಕಲಿತಿದ್ದ ವೇದಮಂತ್ರಗಳು ಸಹಾಯಕಾರಿ ಅನ್ನಿಸಿರಬಹುದು. ಜೋರಾಗಿ ಮಂತ್ರಗಳನ್ನು ಪಠಿಸಿದರೆ ಭೀತಿ ದೂರಾಗಬಹುದು ಎನ್ನುವ ನಂಬಿಕೆಯೇ ಕಾರಣವಿರಬಹುದು. ಹಾಗೆ ಆರಂಭವಾಗಿರಬಹುದು ತೋಟದಲ್ಲಿ ವೇದವಿದ್ಯಾಕಲಿಕೆ. ಮಕ್ಕಳಿಗೆ ಮಂತ್ರ ಕಲಿಸಿದಂತಾಯ್ತು. ತೋಟದ ಕೆಲಸವೂ ಆಯ್ತು. ಮಕ್ಕಳಿಗೆ ವ್ಯವಸಾಯದಲ್ಲಿ ಶ್ರದ್ಧೆಯೂ ಬಂದಂತಾಯ್ತು, ಎನ್ನುವುದು ಚಿಂತನೆ. ವೇದವನ್ನೇ ರಾಗವಾಗಿ ಹಾಡಿ, ತಮಗೆ ಬರುತ್ತಿದ್ದ ಕಾವ್ಯವನ್ನು ಹಾಡಿ, ಸಂಗೀತದ ಸಾಲುಗಳನ್ನು ಗುನುಗುತ್ತಾ ಸಾಗಿದ್ರೆ ಕೆಲಸದ ಶ್ರಮ ಅರಿವಾಗೋದಿಲ್ಲ. ಹಾಡುತ್ತಾ ಹಾಡುತ್ತಾ ರಾಗವೂ ಬಂತು. ತೋಟದ ಕೆಲಸವೂ ಆಯ್ತು. ಹಾಗಾಗಿ ಕೆಲ ಪ್ರದೇಶಗಳಲ್ಲಿ ಸಂಗೀತಾಭ್ಯಾಸವೂ ತೋಟದಲ್ಲಿ ಆಗಿರುವುದು ಉಂಟು. ನಮ್ಮ ಜನಪದ ಸಂಸ್ಕೃತಿಯಲ್ಲಿ, ಜನಪದ ಗೀತೆಗಳು ಹುಟ್ಟಿದ್ದು ಹೀಗೆಯೇ. ರಾಗಿ ಬೀಸುವ ಶ್ರಮ ತಪ್ಪಿಸಲು ರಾಗಿಕಲ್ಲಿನ ಪದ, ಭತ್ತದ ನಾಟಿ ಶ್ರಮ ತಪ್ಪಿಸಲು ಸೋಬಾನೆ ಪದ, ಸುಗ್ಗಿಯ ಹಿಗ್ಗಿಗೆ ಕುಣಿಯಲು ಕೋಲಾಟ - ಹೀಗೆ ಇತರರಿಗೆ ಜನಪದ ಗೀತೆಗಳಾದ್ರೆ . . . ಸಂಕೇತಿಗಳಿಗೆ ವೇದ, ಸಂಗೀತ ಕೆಲಸದ ಶ್ರಮ ಕಡಿಮೆ ಮಾಡುವ ಸಾಧನವಾಯ್ತು. ಅನಂತರ ಇದೇ ವಿದ್ಯೆಗಳು ಮೇಲಾಗಿ . . . ಸಂಕೇತಿಗಳ ವ್ಯವಸಾಯದ ಬದುಕಿನ ಮೂಲಕ್ಕೇ ಕೊಡಲಿ ಇಟ್ಟದ್ದು ಮಾತ್ರ ಸುಳ್ಳಲ್ಲ. ಮುಂಚಿನಿಂದಲೂ ಬಾಗಾಯ್ತನ್ನೇ ನಂಬಿ ಬಂದ ಹಲವು ಸಂಕೇತಿ ಕೃಷಿಕರು ಇಷ್ಟಪಟ್ಟಿದ್ದು ಸ್ವತಃ ಪರಿಶ್ರಮದಿಂದ ಕೂಡಿದ ತೋಟದ ಕೃಷಿಯನ್ನು ಹಾಗೂ ಏಕಾಂತ ವಾಸವನ್ನು. ಸಂಕೇತಿಗಳಲ್ಲಿ ಪರಸ್ಪರ ಸಾಮರಸ್ಯವಿದ್ದರೂ, ಸಂಘಟನೆಯಿದ್ದರೂ ಅವರು ಬಾಗಾಯ್ತನ್ನು ಬಿಟ್ಟು ಇತರೇ ಬೆಳೆಗಳ ವ್ಯವಸಾಯದತ್ತ ಗಮನ ಹರಿಸಿದವರಲ್ಲ. ಜಮೀನು ಇದ್ರೂ ಹೊಲದ ಬೆಳೆಗಳನ್ನು ಬೆಳೆಯುವತ್ತ ಹೆಚ್ಚಿನ ಜನ ಮನಸ್ಸು ಮಾಡಲಿಲ್ಲ. ಇದು ಸಹ ಅವರ ವ್ಯವಸಾಯದ ಹಿನ್ನಡೆಗೆ ಮುನ್ನುಡಿಯಾಯ್ತು. ಎಲ್ಲಿ ಬಾಗಾಯ್ತಿನ ಜತೆಜತೆಗೆ ಇತರೇ ಬೆಳೆಗಳ ಬೇಸಾಯವನ್ನು ಸಹ ಸಂಕೇತಿಗಳು ಮಾಡಿದ್ರೋ ಅಲ್ಲಿ ಕೃಷಿ ಬದುಕು ಸಮೃದ್ಧವಾಯ್ತು, ಸುಸ್ಥಿರವಾಯ್ತು. ಈಗಲೂ ವ್ಯವಸಾಯದಲ್ಲಿ ಮುಂದಿರುವ ಚಿಲ್ಕುಂದ, ಮತ್ತೂರು, ಬಸವಾಪಟ್ಟಣದ ಸಂಕೇತಿಗಳು ಇದಕ್ಕೆ ಸಾಕ್ಷಿ. ಹಾಗಿದ್ದರೆ ಈ ಸತ್ಯ ಬೇರೆಯವರಿಗೆ ತಿಳಿದಿರಲಿಲ್ಲವೇ? ಅಥವಾ, ಬೇಕಂತಲೇ ಮಾಡಲಿಲ್ಲವೇ? ಈ ಜಾಡು ಹಿಡಿದು ಹೊರಟರೆ ಅನೇಕ ವಿಚಾರಗಳು ಬಹಿರಂಗವಾಗುತ್ತವೆ.

ಬ್ರಾಹ್ಮಣರ ಕೃಷಿ ಬದುಕಿನ ಮಗ್ಗುಲು ಮುರಿದದ್ದು 'ಉಳುವವನಿಗೇ ಜಮೀನು' ಎಂಬ ಕಾನೂನು. ಒಂದು ಅರ್ಥದಲ್ಲಿ ಬ್ರಾಹ್ಮಣರ ಸೋಮಾರಿತನದ ಪರಾಕಾಷ್ಠೆಯೂ ಇದಕ್ಕೆ ಕಾರಣವಾಯ್ತು. ಸ್ವಂತ ಪರಿಶ್ರಮದಿಂದ ದುಡಿಯುವ ಸಂಕೇತಿಗಳೂ ತಮ್ಮ ಜಮೀನನ್ನು ಕಳೆದುಕೊಂಡು ಅನಾಥರಾದದ್ದೂ ಉಲ್ಲೇಖಿಸಬಹುದಾದ ಅಂಶ. ಬಾಗಾಯ್ತನ್ನು ಸ್ವಂತ ಮಾಡಿದ್ರೂ . . . ಹೊಲಗದ್ದೆಗಳನ್ನು ಸ್ವತಃ ಮಾಡುವ ಗೋಜಿಗೆ ಹಲವರು ಹೋಗಲಿಲ್ಲ. ಬ್ರಾಹ್ಮಣ ಹೊಲವನ್ನು ಉಳಬಾರದು ಎಂಬ ಶಾಸ್ತ್ರದ ಅಂಶ ಇದಕ್ಕೆ ಕಾರಣ ಎಂದು ಪ್ರಾಜ್ಞರು ಹೇಳಬಹುದಾದರೂ ಅಥವಾ ರೈತಾಪಿ ಜನರ ಬೇಸಾಯವನ್ನು ನಾವು ಮಾಡುವುದು ಬೇಡ ಎಂಬ ಸಾಮರಸ್ಯದಿಂದ ಹೊಲಗದ್ದೆ ಬೇಸಾಯ ನಾವು ಮಾಡಲಿಲ್ಲ ಎಂದು ಜಾಣತನದಿಂದ ಉತ್ತರಿಸಿದರೂ ವಿಚಾರ ಅಲ್ಲೇ ಉಳಿಯುತ್ತೆ. ಗ್ರಾಮ ವ್ಯವಸ್ಥೆಯಿಂದ ದೂರಾಗಿ .. ಬಾಗಾಯ್ತಿನ ಜತೆ ಒಂಟಿಯಾಗಿ ಬದುಕಿದ್ದರ ಪರಿಣಾಮ ಇದು. ಇದೂ ಸಂಕೇತಿಗಳ ಕೃಷಿ ಬದುಕಿನ ಬಹು ಮುಖ್ಯವಾದ ಘಟ್ಟ. ಆರಂಭದಲ್ಲಿ ಬರಿಯ ವ್ಯವಸಾಯವನ್ನೇ ಮಾಡಿ, ತಮ್ಮ ಸಂಪೂರ್ಣ ಕುಟುಂಬವನ್ನು ಮನೆ ಮಂದಿಯನ್ನೆಲ್ಲಾ ಅದರಲ್ಲಿಯೇ ತೊಡಗಿಸಿ, ಸಂಕೇತಿಗಳ ಜಮೀನನ್ನೂ ನೋಡಿಕೊಂಡಿದ್ದ ರೈತಾಪಿ ವರ್ಗ ಇಂದು ಬಾಗಾಯ್ತನ್ನೂ ಸಹ ಮಾಡುತ್ತಿದೆ . . . ತೋಟವನ್ನು ಅಭಿವೃದ್ಧಿ ಮಾಡಿದೆ. ಹಳ್ಳಿ ಜೀವನದಲ್ಲಿ ಇವತ್ತೂ ನೆಮ್ಮದಿಯಾಗಿದೆ. ಪ್ರತಿ ಮನೆಗೊಬ್ಬ ರೈತ ಹುಟ್ಟುತ್ತಲೇ ಇದ್ದಾನೆ. ಮನೆಗೊಬ್ಬ ರಾಜಕೀಯ ಮುಂದಾಳಿದ್ದಾನೆ. . . ಮನೆಗೊಬ್ಬ ಉದ್ಯೋಗಿಯೂ ಇದ್ದಾನೆ. ಹಾಗಿದ್ದರೆ ಸಂಕೇತಿಗಳು ಸೋತಿದ್ದೆಲ್ಲಿ! ಒಟ್ಟಾರೆಯಾಗಿ ಕೃಷಿ ಬದುಕನ್ನೂ ತಮ್ಮ ಅವಿಭಾಜ್ಯ ಅಂಗವಾಗಿ ಭಾವಿಸಿದ್ದ ಬ್ರಾಹ್ಮಣ ಸಮೂಹ ಅರ್ಥಮಾಡಿಕೊಳ್ಳದ್ದು ಏನು ಅನ್ನುವುದನ್ನು ಪ್ರತಿಯೊಬ್ಬರೂ ಚಿಂತಿಸಬೇಕಾಗಿದೆ. ಅವರಿಂದ ಸಾಧ್ಯವಾದದ್ದು ಇವರಿಂದ ಆಗಿಲ್ಲ ಎಂದರೆ ಸಂಕೇತಿಗಳು ಎಡವಿದ್ದೆಲ್ಲಿ? ಈ ಪ್ರಶ್ನೆಗೆ ಉತ್ತರ ದೊರೆತರೆ ಸಂಕೇತಿಗಳ ಕೃಷಿ ಬದುಕಿನ ಮುಂದಿನ ದಾರಿ ಸ್ಪಷ್ಟವಾಗುತ್ತದೆ.

ವ್ಯವಸಾಯ ಮಾಡುತ್ತಾ, ವೇದ ವಿದ್ಯಾ ಸಂಪನ್ನರಾಗಿದ್ದ ಹಿರಿಯ ಸಂಕೇತಿ ಕೃಷಿಕರು ಕ್ಷಾತ್ರತೇಜದಿಂದ ಕೂಡಿದ್ದರು ಎನ್ನುವುದಕ್ಕೆ ಉದಾಹರಣೆಗಳಿವೆ. ಬೆವರು ಹರಿಸಿ ದುಡಿಮೆ ಮಾಡಿದ್ದರ ಫಲವಾಗಿ ಮೈಗೆ ಆನೆಬಲ ಇತ್ತು, ಮನಸ್ಸಿಗೆ ಸಿಂಹದ ಪೌರುಷವಿತ್ತು, ಅವತ್ತಿನ ಊಟ, ವಿಹಾರಗಳೂ ಹಾಗೇ ಇದ್ದವು. ಗ್ರಾಮಕೇಂದ್ರಿತ ವ್ಯವಸ್ಥೆ ಬದುಕಿಗೆ ಒಂದು ಅರ್ಥ ಕಲ್ಪಿಸಿತ್ತು. ಆದರೆ ಈ ಕ್ಷಾತ್ರತೇಜ ಪೀಳಿಗೆಯಿಂದ ಪೀಳಿಗೆಗೆ ಬಹಳ ವೇಗವಾಗಿ ಕ್ಷೀಣಿಸಿದ್ದು ಏಕೆ? ಹಾಗೆಯೇ ಬಹಳ ಕ್ಷಿಪ್ರವಾಗಿ ಅವರ ಮುಂದಿನ ಪೀಳಿಗೆಗೆ ಶಕ್ತಿ ಸೋರಿಹೋಗಿದ್ದು ಹೇಗೆ-ಇದು ಸಹ ಅಧ್ಯಯನ ಯೋಗ್ಯವಾದ ವಿಷಯವೇ. ಅಪಾರ ದೈಹಿಕ ಶಕ್ತಿಯನ್ನು ಹೊಂದಿ, ಬಾಗಾಯ್ತನ್ನು ಅಭಿವೃದ್ಧಿ ಮಾಡಿರುವ ಈಗಿನ ಹಿರಿಯರು ಸಹ 'ನನ್ನ ಮಗ ನನ್ನಷ್ಟು ಶಕ್ತಿಯುತವಾಗಿಲ್ಲ. ಅವನ ಕೈಲಿ ಆಳುಗಳನ್ನು ಸಂಭಾಳಿಸಲು ಆಗೋಲ್ಲ. ನನ್ನ ಹಾಗೆ ಅವನು ವ್ಯವಸಾಯ ಮಾಡಲು ಆಗೋಲ್ಲ' ಅನ್ನುವುದನ್ನು ನೋಡಿದರೆ, ತಂದೆ-ತಾಯಂದಿರಿಗೇ ಮಗ ವ್ಯವಸಾಯ ಮಾಡುವುದು ಬೇಕಿರಲಿಲ್ಲವೇ ಎನ್ನುವ ಅನುಮಾನ ಕಾಡದೇ ಇರದು. ತಮ್ಮ ಶಕ್ತಿ ಮಕ್ಕಳಲ್ಲಿ ಬರಲಿಕ್ಕಿಲ್ಲ ಎನ್ನುವ ಈ ಅನುಮಾನ ಅವರಿಗೆ ಯಾವಾಗ, ಹೇಗೆ ಬಂದಿರಬಹುದು ಎನ್ನುವುದಕ್ಕೆ ಯಾರು ಉತ್ತರ ನೀಡಿಯಾರು? ದೈಹಿಕ ಶಕ್ತಿ ಮಾತ್ರ ಇಂದು ಕೃಷಿಗೆ ಪೂರಕ ಅನ್ನುವಂತಿದ್ದರೆ, ಕೃಶ ಕಾಯದವರು ಈಗಲೂ ಕೃಷಿ ಮಾಡುತ್ತಿರುವುದು ಯಾವ ಬಲದಿಂದ? ಮನೋಬಲ ಹಾಗೂ ಚಾಣಾಕ್ಷತನದಿಂದ ಮಾತ್ರ ಅಲ್ಲವೇ? ಹಾಗಿದ್ದರೆ ಕೃಷಿ ಮಾಡಲು ನಿಜಕ್ಕೂ ಏನು ಬೇಕು? ಮನಸಾ ಅಥವಾ ಮೈ ಕಸುವಾ?

ಹಿಂದಿನ ಮೈಮುರಿಯುವ ಕೆಲಸ, ಅಪಾರ ಶ್ರಮ ಈಗ ಇಲ್ಲದಿರುವುದರಿಂದ, ದಿನೇ ದಿನೇ ಆಹಾರದ ಗುಣಮಟ್ಟ ಸಹಾ ಕುಸಿತಾ ಇರುವುದರಿಂದ ಪೀಳಿಗೆಯಿಂದ ಪೀಳಿಗೆಗೆ ಶಕ್ತಿ ಕುಂದುತ್ತಾ ಬಂದಿದೆ ಎನ್ನುವ ವಾದ ಒಪ್ಪಬಹುದು. ಹಾಗಿದ್ದರೆ ಬಹಳ ಹಿಂದೆಯೇ ಹಿರಿಯರು, ಮುಂದೆ ನಮ್ಮ ಮಕ್ಕಳಿಂದ ಕೃಷಿ ಸಾಧ್ಯವಿಲ್ಲ ಎಂದು ನಿರ್ಧರಿಸಿದ್ದರೆ ಬಹುಶಃ ಇಲ್ಲಿಯವರೆವಿಗೂ ಸಂಕೇತಿ ಕೃಷಿ ಉಳಿಯುತ್ತಿರಲಿಲ್ಲ . . ಹೆಸರು ಹೇಳಲು ಕೃಷಿಕರೂ ಇರುತ್ತಿರಲಿಲ್ಲ . . ಈ ಪುಸ್ತಕ ಬರೆಯುವುದೂ ಸಾಧ್ಯವಿರುತ್ತಿರಲಿಲ್ಲ . . ಆದರೆ ಹಾಗಾಗಲಿಲ್ಲ . . ಕೃಷಿ ಉಳಿದಿದೆ. ಬೆಳೆದಿದೆ. ಇದು ಹೇಗೆ? ಉತ್ತರ ಬಹಳ ಸುಲಭ. ಹಿರಿಯರಿಗೆ, ಮಕ್ಕಳು ತಮ್ಮ ಕಸುಬು ಮುಂದುವರಿಸಲಿ ಎಂಬ ಮಹದಾಸೆಯಿರುತ್ತಿತ್ತು. ಮಕ್ಕಳಿಗೆ ಅದೇ ರೀತಿಯ ಶಿಕ್ಷಣ ಸಹಾ ದೊರೀತಿತ್ತು. ಬಾಲ್ಯದಿಂದಲೇ ತಮ್ಮ ಬದುಕು ಭೂಮಿಯಿಂದ ಮಾತ್ರವೇ ಎಂದು ನಿರ್ಧಾರ ಮಾಡಿಬಿಡುತ್ತಿದ್ದರು ಮಕ್ಕಳು. ಎದ್ದರೆ ಬಿದ್ದರೆ ತೋಟದಲ್ಲೇ . . ಶಿಕ್ಷಣವು ವ್ಯವಹಾರಕ್ಕೆ ಪೂರಕವಾಗಿತ್ತು ಅಷ್ಟೆ. ಭೂಮಿಯಿಂದ ಬದುಕು ರೂಢಿಸುವ ಕಲೆ ತಂದೆಯಿಂದ ಮಕ್ಕಳಿಗೆ ರವಾನೆಯಾಗುತ್ತಿತ್ತು. ತಂದೆ ತಾಯಂದಿರೇ ಮಕ್ಕಳ ಆದರ್ಶ . . ನಾನು ತಂದೆಯಂತಾಗಬೇಕು ಎಂದು ಪ್ರತೀ ಬಾಲಕ ಅಂದುಕೊಂಡರೆ . . ತಾಯಿಯಂತೆ ತಂದೆಗೆ ಸಹಕರಿಸುವ ಸತಿಯಾಗಬೇಕು ಎಂದು ಹೆಣ್ಣು ಮಕ್ಕಳು ನಿರ್ಧಾರ ಮಾಡುತ್ತಿದ್ದರು. ತಾವೇ ಮಕ್ಕಳಿಗೆ ಜೀವಂತ ಆದರ್ಶವಾಗಿದ್ದರು ಹಿರಿಯ ಸಂಕೇತಿ ಕೃಷಿಕರು. ಇದರಿಂದಾಗಿ ಮಕ್ಕಳಿಗೆ ನೀವು ಕೃಷಿ ಮಾಡಿ ಎಂದು ಪ್ರತ್ಯೇಕವಾಗಿ ಹೇಳುವ ಪ್ರಮೇಯವಿರಲಿಲ್ಲ. ಅದು ನನ್ನ ಆಜನ್ಮ ಸಿದ್ಧ ಹಕ್ಕು ಎಂದು ಕಿರಿಯರೇ ಭಾವಿಸುತ್ತಿದ್ದರು. ದಿನೇ ದಿನೇ ಪೀಳಿಗೆಗೆ ದೈಹಿಕ ಶ್ರಮ ಕಡಿಮೆಯಾದರೂ ಯುಕ್ತಿಯಿಂದ ಕೃಷಿ ಮಾಡುವವರ ಸಂಖ್ಯೆಗೇನೂ ಕೊರತೆಯಿರಲಿಲ್ಲ. ಆದರೆ ಕೊರತೆಯಾದದ್ದು ಇಚ್ಛಾಶಕ್ತಿಗೆ . . ಗರ ಬಡಿದದ್ದು ಮನಸ್ಸಿಗೆ. ಅನೇಕ ಆಘಾತಕಾರಿ ಬದಲಾವಣೆಗಳು ಹಳ್ಳಿಯಲ್ಲಿ ಸಂಭವಿಸಿದಾಗ, ಉಳುವವನಿಗೇ ಭೂಮಿ ಸೇರಿ ಹಲವರ ಬದುಕು ಮೂರಾಬಟ್ಟೆಯಾದಾಗ .. ಅಸ್ಥಿರತೆ ಕಾಡತೊಡಗಿರಬಹುದು. ಕೆಟ್ಟು ಪಟ್ಟಣ ಸೇರಿದವರು ಅದೃಷ್ಟವಶಾತ್ ಸ್ಥಿತಿವಂತರಾದಾಗ, ಕೃಷಿ ಕನಿಷ್ಠ ಜೀವನವಾಗಿ ಹಲವರಿಗೆ ಅನ್ನಿಸಿದ್ದು ಸುಳ್ಳಲ್ಲ. ಈ ಮಾತನ್ನು ಅನೇಕರು ಒಪ್ಪುತ್ತಾರೆ. ಆಗ ಬಹುಶಃ ತಂದೆ ತಾಯಂದಿರು ಮಗನನ್ನು ಕೃಷಿಯಿಂದ ವಿಮುಖಗೊಳಿಸುವ ಚಿಂತನೆ ನಡೆಸಿರಬಹುದು. ನಾನು ಹೊಲ ಜಮೀನಿನಲ್ಲಿ ದುಡಿದದ್ದು ಸಾಕು, ಮೈಕೈ ಕೆಸರು ಮಾಡಿಕೊಂಡಿದ್ದು ಸಾಕು, ಮಗ ಪೇಟೆಯಲ್ಲಿ ಓದಲಿ, ದೊಡ್ಡ ಆಫೀಸರ್ ಆಗಲಿ, ಎನ್ನುವ ಆಸೆ ಮೊಳೆತದ್ದು ಮೊದಲು ತಂದೆ-ತಾಯಿಗೆ. ಆದರೆ ಕೈ ಕೆಸರಾದ್ರೆ ಬಾಯಿ ಮೊಸರು ಎಂಬ ಸತ್ಯ ಆ ಕ್ಷಣಕ್ಕೆ ಅವರಿಗೆ ಮರೆತುಹೋಯ್ತು. ಪಟ್ಟಣದಲ್ಲಿ ಕಲಿತ ಮಗ, ಸಗಣಿ ಬಾಚದ ಮಗ, ದನಕರುಗಳನ್ನು ತೊಳೆಯದ ಮಗ, ಅಡಿಕೆ ಗೋಟನ್ನು ಮುಟ್ಟಿರದ ಮಗ ಮುಂದೆ ಕೃಷಿಕನಾಗುವುದಾದರೂ ಹೇಗೆ? ಕೃಷಿಯ ಕೊಂಡಿ ಕಳಚಲು ಆರಂಭಿಸಿದ್ದು ಹೀಗೆ. ಹಿರಿ-ಕಿರಿಯರಿಗೆ ಸಂವಹನ ಸೇತುವಾಗಿದ್ದ ಮಧ್ಯದ ಕೊಂಡಿ ಕಳಚಿದಾಗ . . ಆದ ಅಂತರ ಮುಂದೆ ಕಂದಕವಾಯ್ತು. ಕೃಷಿ ಕನಿಷ್ಠವಾಯ್ತು. ದೈಹಿಕ ಶ್ರಮಸಾಲದು, ಅವನಿಗೆ ಆಗೋಲ್ಲ ಎಂದು ತಂದೆ ತಾಯಂದಿರು ಹೇಳೋದು, ಎಷ್ಟರಮಟ್ಟಿಗೆ ಸರಿ? ಒಮ್ಮೆ ಆಲೋಚಿಸಿ. ನಾವು ಮಾಡುವ ಕಸುಬಿನ ಬಗ್ಗೆ ನಮಗೇ ಒಲವಿಲ್ಲದೇ ಹೋದರೆ, ಮುಂದಿನ ಪೀಳಿಗೆ ಕಸುಬನ್ನು ಗೌರವದಿಂದ ಕಾಣುವುದಾದರೂ ಹೇಗೆ? ಅದೇ ವೃತ್ತಿಯನ್ನು ಪ್ರೀತಿಯಿಂದ ಅಪ್ಪುವುದಾದರೂ ಹೇಗೆ? ಮಗ ಮುಂದೆ ಕೃಷಿ ಮಾಡಲಿ ಬಿಡಲಿ, ಕೃಷಿಯ ಬಗ್ಗೆ ಸದಭಿರುಚಿಯನ್ನು ಬೆಳೆಸುವ ಪ್ರಯತ್ನವಾದರೂ ಮಾಡಬಹುದಿತ್ತಲ್ಲವೆ! ಕೆಲಸದ ಬಗ್ಗೆ ಶ್ರದ್ಧೆ ಬೆಳೆಸಿ, ನಂತರದ ತೀರ್ಮಾನವನ್ನು ಮುಂದಿನ ತಲೆಮಾರಿಗೇ ಬಿಡಬಹುದಿತ್ತಲ್ಲವೇ? ಆಗ

ಎಷ್ಟೋ ಜನ ಪಟ್ಟಣದ ಜಂಜಾಟದ ಬದುಕು ಬಿಟ್ಟು ಮರಳಿ ಮಣ್ಣಿಗೆ ಬರುತ್ತಿದ್ದರೇನೋ . . ಆದರೆ ಮಕ್ಕಳಿಗೆ ಅಂತಹ ಅವಕಾಶಗಳನ್ನು ಹಿರಿಯರೇ ನಿರಾಕರಿಸುತ್ತಾ ಬಂದದ್ದೇಕೆ . . ಇದು ಕೂಡ ಆಸಕ್ತಿಯಿಂದ ಯೋಚಿಸಬೇಕಾದ ವಿಷಯವೇ. ಕೇವಲ ಸಂಕೇತಿಗಳಲ್ಲಿ ಮಾತ್ರವಲ್ಲ . . ಕೃಷಿ ಬದುಕನ್ನು ಸ್ವೀಕರಿಸಿರುವ ಪ್ರತಿಯೊಂದು ಬ್ರಾಹ್ಮಣ ಕುಟುಂಬದ್ದೂ ಇದೇ ಹಣೆ ಪಾಡು. ಹಾಗಿದ್ದರೆ ಹಿರಿಯರು ಪರಿಸ್ಥಿತಿಯನ್ನು ಸರಿಯಾಗಿ ಅರ್ಥೈಸಲಿಲ್ಲವೇ ಎಂಬ ಅನುಮಾನ ಕಾಡದೇ ಇರದು. ಸಂಕೇತಿ ಕೃಷಿ ಕಣ್ಮರೆಯಾಗಲು ಹಿರಿಯರ ಕೊಡುಗೆಯೂ ಅಪಾರ . .. ಅಪಾರ ಬುದ್ಧಿವಂತ ಹಿರಿಯ ವರ್ಗ, ಈ ತಾಂತ್ರಿಕ ವಿಚಾರಗಳನ್ನು ಕಿರಿಯರಿಗೆ ವರ್ಗಾಯಿಸಲಿಲ್ಲ . . ಮಕ್ಕಳಲ್ಲಿ ಒಲವು ಸಹ ಬೆಳೆಸಲಿಲ್ಲ. ಪೂರಕ ಶಿಕ್ಷಣ ನೀಡಲಿಲ್ಲ. ಬದಲಿಗೆ ಪಟ್ಟಣದ ದಾರಿ ತೋರಿಸಿದ್ದು . . ಆಧುನಿಕ ಶಿಕ್ಷಣಕ್ಕೆ ಹೆಚ್ಚಿನ ಒಲವು ನೀಡಿದ್ದು ಕೃಷಿ ಕಸುಬು ಹಳ್ಳಿಗಳಲ್ಲಿ ಕ್ಷೀಣಿಸಲು ಮೂಲ ಕಾರಣವಾಯಿತು.

ತಂದೆ, ತಾಯಿ ಜೀವ ತೇದು ಬೆಳೆಸಿದ ಬಾಗಾಯ್ತನ್ನು . . ಪೋಷಿಸಿದ ಹೊಲಗದ್ದೆಗಳನ್ನು . . ಅಷ್ಟೇ ನಿರ್ಭಾವುಕತೆಯಿಂದ ಮಾರುತ್ತಿರುವ ಕಿರಿಯರನ್ನು ಕಂಡು ಇತರೇ ಹಿರಿಯರೇ ಆಕ್ರೋಶ ವ್ಯಕ್ತಪಡಿಸುತ್ತಾರೆ. ಅವನಿಗೇನು ಗೊತ್ತು ಅವರಪ್ಪ ಪಟ್ಟ ಕಷ್ಟ ಎಂದು ಹಲುಬುತ್ತಾರೆ. ಕೃಷಿ ಬದುಕಿನ ಭಾವನಾತ್ಮಕ ಸಂಬಂಧಗಳ ಬಗ್ಗೆ, ಪಟ್ಟಣದ ಮಂದಿಗೇನು ಗೊತ್ತು ಎನ್ನುತ್ತಾರೆ. ಆದರೆ ಅದಕ್ಕೆ ಕಾರಣರಾರು ಎಂಬುದನ್ನು ಆ ಕ್ಷಣ ಮರೆಯುತ್ತಾರೆ. ಸಂಕೇತಿಗಳು ತುಂಬಿರುವ ಅಗ್ರಹಾರದಲ್ಲಿ ಹೆಣ್ಣು ಮಗಳೊಬ್ಬಳು ಹೇಳಿದ ಮಾತು ನನಗೆ ಈಗಲೂ ನೆನಪಿದೆ. "ನಾನು ನನ್ನ ಮನೆ ಮುಂದೆ ಮೂರು ತೆಂಗಿನ ಗಿಡ ನೆಟ್ಟಿದ್ದೇನೆ. ಪ್ರತಿದಿನ ಅವಕ್ಕೆ ನೀರು ಹಾಕುತ್ತೇನೆ. ಯಾವುದಾದರೂ ಒಂದು ದಿನ ಎರಡು ಗಿಡಕ್ಕೆ ಮೂರು ಕೊಡನೀರು ಹಾಕಿ, ಉಳಿದ ಒಂದು ಗಿಡಕ್ಕೆ ಎರಡು ಕೊಡ ನೀರು ಹಾಕಿ, ಬೇರೆ ಕೆಲಸ ಅಂತ ಮನೆ ಒಳಗೆ ಬಂದು ಬಿಟ್ರೆ ಮನಸ್ಸಿನೊಳಗೆ ಸದಾ ಕೊರೀತಿರುತ್ತೆ. ಅಯ್ಯೋ ಪಾಪ, ಈ ಮರಕ್ಕೆ ಒಂದು ಕೊಡ ನೀರು ಕಡಿಮೆ ಆಯ್ತಲ್ಲಾ ಅಂತ. ಮತ್ತೆ ಹೋಗಿ ಆ ಮರಕ್ಕೆ ಮತ್ತೊಂದು ಕೊಡ ನೀರು ಹಾಕಿ ಬರುವವರೆಗೂ ಮನಸ್ಸಿಗೆ ಸಮಾಧಾನ ಇರುವುದಿಲ್ಲ. ಬಿಟ್ಟ ಕೆಲಸ ಬಿಟ್ಟು ನೀರು ಹಾಕಿ ಬರುತ್ತೇನೆ" ಅಂತ. ಇದಲ್ಲವೇ ಭಾವನಾತ್ಮಕ ಸಂಬಂಧ! ಮುಳ್ಳುಗಂಟಿ, ಕಾಡು ಕಡಿದು, ನೆಲಸಮಮಾಡಿ, ನೆಲಬಾವಿ ತೋಡಿ, ಕೈತೂಕದಲ್ಲಿ ನೀರೆತ್ತಿ, ಹಗಲೂ ರಾತ್ರಿ ದಿನ ಎಣಿಸಿ, ಮೈಬೆವರ ಬಸಿದು ಮಕ್ಕಳಿಗಿಂತಲೂ ಪ್ರೀತಿಯಿಂದ ಬೆಳೆಸಿದ ಗಿಡದ ಜತೆ ಹಿರಿಯರಿಗಿದ್ದ ಸಂಬಂಧವನ್ನೂ, ಮಣ್ಣಿನ ವಾಸನೆಯೇ ಅಂಟದಂತೆ, ಗ್ರಾಮೀಣ ಸೂಕ್ಷ್ಮತೆಗೆ ದಪ್ಪಚರ್ಮ ಬೆಳೆಸಿಕೊಂಡ ಕಿರಿಯರ ಕೃಷಿ ಸಂಬಂಧವನ್ನೂ ಒಂದಕ್ಕೊಂದು ಹೋಲಿಸಲು ಸಾಧ್ಯವೇ? ಜಮೀನಿನ ಒಂದು ಗಿಡ ನೊಂದರೂ ದೇಹದ ಯಾವುದೋ ಒಂದು ಭಾಗಕ್ಕೆ ನೋವಾದಂತೆ ಸಂಕಟಪಡುತ್ತಿದ್ದ ಹಿರಿಯರಿಗೂ . . ಬೆಳೆದು ನಿಂತ ಮರವನ್ನು ಕತ್ತರಿಸಿದರೆ ಎಷ್ಟು ದುಡ್ಡು ಸಿಗಬಹುದೆಂದು ಲೆಕ್ಕ ಹಾಕುವ ಕಿರಿಯರಿಗೂ ವ್ಯತ್ಯಾಸವಿಲ್ಲವೇ? ಸಂಕೇತಿಗಳ ಕೃಷಿ ನಶಿಸಲು ಕಿರಿಯರು ತೋಟದೊಂದಿಗೆ ಭಾವನಾತ್ಮಕ ಸಂಬಂಧ ಹೊಂದದಿರುವುದು ಸಹ ಕಾರಣವೆಂದು ಅನೇಕ ಹಿರಿಯರು ಒಪ್ಪುತ್ತಾರೆ. ಆದರೆ ಈ ಸಂಬಂಧವನ್ನು ಬೆಳೆಸಬೇಕಿದ್ದು ಯಾರು ಎಂದರೆ ಮೌನವಾಗಿಬಿಡುತ್ತಾರೆ. ತಾನೇ ನೆಟ್ಟು ಬೆಳೆಸಿದ ಗಿಡವನ್ನು ಕಡಿಯುವುದು ಎಂತಹವರಿಗೂ ಕಷ್ಟವೇ . . ಅಂಥದ್ರಲ್ಲಿ ಬದುಕ ಕೊಟ್ಟ ಬಾಗಾಯ್ತಿನ ಭೂಮಿಯನ್ನು ಬಿಕರಿ ಮಾಡುವುದುಂಟೆ! ಭಾವನಾ ಜೀವಿಗಳು ಈ ಪ್ರಶ್ನೆ ಮುಂದಿಟ್ಟರೆ . . ಬದುಕುವ ಮಾರ್ಗ ತಿಳಿದವರು ಹಳ್ಳಿಯ ಜಮೀನನ್ನು ಮಾರುತ್ತಾರೆ! ಅಲ್ಲಿಗೆ ಸಂಕೇತಿಗಳ ಒಂದು ಕುಟುಂಬ ಕೊಂಡಿ ಕಳಚಲು ಸಿದ್ಧತೆ ನಡೆಸುತ್ತೆ. ಭಾವನೆಯ ಪ್ರಶ್ನೆ ಮಾತ್ರ ಇದ್ದಲ್ಲೇ ಇರುತ್ತೆ.

ಸಂಕೇತಿ ಕೃಷಿಯನ್ನು ಉಳಿಸಲು ಏನು ಮಾಡಬೇಕು ಎಂದು ಹಿರಿಯ ಕೃಷಿಕರನ್ನು ಕೇಳಿದಾಗ ಅವರು ಹೇಳಿದ್ದು 'ಸಂಕೇತಿ ಹೆಣ್ಣು ಮಕ್ಕಳು ಮನಸ್ಸು ಮಾಡಿದ್ರೆ ನಮ್ಮ ಕೃಷಿ ಉಳಿಯುತ್ತೆ' ಅಂತ. ಇದು ಮಾರ್ಮಿಕವಾದ ಉತ್ತರವೇ ಸರಿ. ಇಂದಿನ ಹೆಣ್ಣುಮಕ್ಕಳು ಹಳ್ಳೀಲಿ ನೆಲೆಸಿರುವ, ವ್ಯವಸಾಯ ಮಾಡುತ್ತಿರುವ ಹುಡುಗನನ್ನು ಮದುವೆಯಾಗಲು ಅಪೇಕ್ಷೆ ಪಡುವುದಿಲ್ಲ. ಅವರ ತಂದೆ ತಾಯಂದಿರಿಗೂ ಅದು ಇಷ್ಟವಿಲ್ಲ. ಅನಿವಾರ್ಯವಾಗಿ ರೈತನನ್ನು ಮದುವೆಯಾದ ಹೆಣ್ಣು ಮಕ್ಕಳಿಗೂ ವ್ಯವಸಾಯದ ವ್ಯಾಮೋಹವಿಲ್ಲ. ಸಮಯ ಸಿಕ್ಕರೆ ಪಟ್ಟಣಕ್ಕೆ ಜಾರುವ ಚಿಂತೆಯೇ ತುಂಬಿದೆ. ಪರಿಸ್ಥಿತಿ ಹೀಗಿರುವಾಗ ಕುಟುಂಬದ ಕಸುಬು ಕೃಷಿ ಉಳಿಯುವುದಾದರೂ ಹೇಗೆ? ಈ ಹಿನ್ನೆಲೇಲಿ ಸಂಕೇತಿ ಸ್ತ್ರೀವರ್ಗ ಕೃಷಿ ಉಳಿಸಲು ಮನಸ್ಸು ಮಾಡಬೇಕು ಎನ್ನುವುದು ಸರಿ. ಆದರೆ ಇದರಲ್ಲಿ ಪುರುಷರ ಪಾಲು ಏನೂ ಇಲ್ಲವೇ! ಬಸವಾನಿಯ ಹೆಣ್ಣು ಮಕ್ಕಳ ಕೃಷಿ ಈ ನಿಟ್ಟಿನಲ್ಲಿ ದಾರಿದೀಪವಾಗಬಹುದು. ಆದರೂ ಇಂತಹ ಪರಿಸ್ಥಿತಿಗೆ ಕಾರಣರಾರು . . ಅವಲೋಕಿಸಿದಾಗ ಅನೇಕ ಅಂಶಗಳು ಹೊರಬರುತ್ತವೆ.

ಹಗಲೂ ರಾತ್ರಿ ಬಾಗಾಯ್ತಿನಲ್ಲಿ ದುಡಿದರೂ ಹೆಚ್ಚಿನ ಸಂಖ್ಯೆಯ ಸಂಕೇತಿ ಕೃಷಿ ಕುಟುಂಬ ತೋಟಗಳಲ್ಲಿ ನೆಲೆಸಲಿಲ್ಲ. ಹಾಗೆ ತೋಟದಲ್ಲಿ ನೆಲೆ ನಿಂತಿರುವ ಕುಟುಂಬಗಳಲ್ಲಿ ಕೃಷಿ ಅಭಿವೃದ್ಧಿಯ ಸಿಂಹಪಾಲು ಸ್ತ್ರೀಯರಿಗೇ ಸಲ್ಲುತ್ತೆ. ಉತ್ತಮ ಬದುಕನ್ನು ತೋಟದಲ್ಲಿ

ಕಟ್ಟಿಕೊಳ್ಳಬಹುದಾಗಿದ್ದರೂ, ಸಂಕೇತಿಗಳು ನೆಲೆಸಿದ್ದು ಗ್ರಾಮಗಳಲ್ಲಿ. ಹಾಗಾಗಿ ಮೊದಲಿನಿಂದಲೂ ಕುಟುಂಬದ ಮಹಿಳೆಯರಿಗೆ ಮನೆಯ ಜವಾಬ್ದಾರಿ ಜಾಸ್ತಿ. ಆಳುಕಾಳುಗಳ ಊಟ ಉಪಚಾರ, ಮನೆ ಮಂದಿಯ ಸೇವೆಯಲ್ಲೇ ಮಹಿಳೆಗೆ ದಿನ ಕಳೆದದ್ದು ಹೆಚ್ಚು. ಅನಿವಾರ್ಯವಾಗಿ ತೋಟಕ್ಕೆ ಬಂದರೂ . . ಅಲ್ಲಿಯೂ ಮನೆ ಕೆಲಸದ್ದೇ ಪಾಲು ಜಾಸ್ತಿ. ಹೀಗಾಗಿ ಸಂಕೇತಿ ಮಹಿಳೆಯರಲ್ಲಿ ಕೃಷಿಯ ಬದುಕಿನ ಮುಖ್ಯ ಅಂಗವಾಗಲೇ ಇಲ್ಲ. ಅದೇನಿದ್ದರೂ ಪುರುಷರ ಪಾಲು. ನಾನು ಅವರ ಸಹಚಾರಿಣಿ ಎಂಬ ಭಾವನೆ ಮಾತ್ರ ಬಂತು. ಇಡೀ ಕುಟುಂಬವನ್ನು ವ್ಯವಸಾಯದಲ್ಲಿ ಜತೆಯಾಗಿ ತೊಡಗಿಸುವ ಕಲೆ ಇತರಾದಿಗಳಲ್ಲಿದೆ. ಅಲ್ಲಿ ಕೃಷಿ ಮನೆಯ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗ. ಆದರೆ ಸಂಕೇತಿಗಳಲ್ಲಿ ಬಹಳಷ್ಟು ಜನ ಪುರುಷರು, ಮಹಿಳೆಯರನ್ನು ಮನೆಯ ನಾಲ್ಕು ಗೋಡೆಗಳಿಗೆ ಸೀಮಿತಗೊಳಿಸಿದ್ದೇ ಜಾಸ್ತಿ. ಹೀಗಿದ್ದಾಗ ಅವರಿಂದ ಹೆಚ್ಚಿನದೇನನ್ನು ನಿರೀಕ್ಷಿಸುವುದು ಸಾಧ್ಯ? ಗಂಡ ಕೃಷಿ ಬಿಟ್ಟು ಪಟ್ಟಣ ಸೇರುವಾಗ . . ಅವರು ಅನುಸರಿಸಿದ್ರು. ಪಟ್ಟಣ ಬಿಟ್ಟು ಹಳ್ಳಿಗೆ ಬರ್‍ತೀನಿ ಅಂದಾಗಲೂ ಹಿಂದೆಯೇ ಬಂದಿರುವ ನಿದರ್ಶನಗಳಿವೆ. ಹಾಗಾಗಿ ಪುರುಷನ ಪ್ರತಿಬಿಂಬವಾದ್ರು ಸಂಕೇತಿ ಮಹಿಳೆಯರು. ಆದರೂ ಮಹಿಳೆಯರು ಮನಸ್ಸು ಮಾಡಿದರೆ ಸಂಕೇತಿ ಕೃಷಿ ಉಳಿಸಬಹುದು ಎನ್ನುವುದು ತುಂಬಾ ಸತ್ಯ. ಕೃಷಿ ಮಾಡಲು ಮಾನಸಿಕ ಪ್ರೋತ್ಸಾಹ . . ಜತೆಯಲ್ಲಿರುವೆನೆಂಬ ನಂಬಿಕೆ, ಹಳ್ಳಿಯಲ್ಲಿ ನೆಲೆಸುವ ವಿಶ್ವಾಸ ವ್ಯಕ್ತಪಡಿಸಿದರೆ .. ಅನೇಕ ಯುವಕರು ಇಂದಿಗೂ ಕೃಷಿಯ ಹಾದಿ ಹಿಡಿಯಬಹುದು. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರಾರು?

ಹಳ್ಳಿಯನ್ನು ಬಿಟ್ಟು ಪಟ್ಟಣ ಸೇರಲು ನೂರಾರು ಕಾರಣಗಳಿವೆ, ಅವರೆಲ್ಲಾ ಕೃಷಿ ಬೇಡ ಎಂದು ಹಳ್ಳಿ ತೊರೆದು ಹೋಗಿದ್ದಲ್ಲ ಎಂದು ಅನೇಕ ಹಿರಿಯ ಕೃಷಿಕರು, ಹಳ್ಳಿಯ ಹಜಾರಗಳಲ್ಲಿ ಕುಳಿತು ನುಡಿಯುತ್ತಾರೆ. ಕೃಷಿ ಮಾಡಲು ಜಮೀನಿಲ್ಲದೆ, ಊರು ಬಿಟ್ಟವರು ಹಲವು ಜನ .. ಹಳ್ಳಿಯಲ್ಲಿ ಬಡತನದಿಂದ ಬದುಕ ಸಾಗಿಸಲಾರದೆ ಉದ್ಯೋಗ ಅರಸಿ ಪಟ್ಟಣ ಸೇರಿದವರು ಅನೇಕ ಜನ. ಮಕ್ಕಳೆಲ್ಲಾ ಓದಿ, ಪಟ್ಟಣದಲ್ಲಿ ನೆಲೆ ನಿಂತ ಮೇಲೆ, ಹಳ್ಳಿ ಆಸ್ತಿಪಾಸ್ತಿ ಮಾರಿ ಪಟ್ಟಣ ಸೇರಿದವರು ಹಲವು ಜನ . . 'ಅಲ್ಲಿಹುದು ನಮ್ಮ ಮನೆ . . ಇಲ್ಲಿರುವುದು ಸುಮ್ಮನೆ' ಎಂಬ ಭಾವನೆ ಮೊಳೆತ ಮೇಲೆ ಹಳ್ಳಿ ಬಿಡುವುದೇ ಕ್ಷೇಮವಲ್ಲವೇ ಎಂದು ಕೇಳುವರೂ ಅನೇಕ ಜನ. ಇವೆಲ್ಲವೂ ಬದುಕಿನ ಕಟುವಾಸ್ತವಗಳು. ವಿದ್ಯೆಯ ಮಟ್ಟ ಏರಿದಾಗ . . ಇತರೇ ಬದುಕುವ ಮಾರ್ಗಗಳು ತಂತಾನೆ ತೆರೆದುಕೊಳ್ಳುತ್ತವೆ. ಹಾಗಾಗಿ ವಿದ್ಯಾವಂತ ಜನರು ಕೃಷಿ ಮಾಡಲು ಹಳ್ಳೀಲಿ ಉಳಿಯಲಿಲ್ಲ. ಕೃಷಿಗೆ ಪೂರಕವಾಗಿದ್ದ ವಿದ್ಯೆಗಳು ವೇದ ಹಾಗೂ ಸಂಗೀತ. ಅವಕ್ಕೆ ಪಟ್ಟಣದಲ್ಲಿ ಉದ್ಯೋಗದ ಮಾನ್ಯತೆ ದೊರಕಿದಾಗ ಹಳ್ಳಿಯ ಜೀವನ ಭಾರವಾಗಿ ಕಂಡುಬಂದಿರಲೂಬಹುದು. ಬದುಕಿನ ಮಟ್ಟವನ್ನು 'ಹಣ' ಆಳಲು ಆರಂಭಿಸಿದಾಗ ಹಳ್ಳಿಯ ಬದುಕು ಛಿದ್ರವಾಗಿರಬಹುದು ಎಂದು ನನ್ನ ಅನಿಸಿಕೆ. ಯಾಕೆಂದರೆ ಹಿಂದಿನ ದಿನಗಳಲ್ಲಿ ಕೃಷಿಯ ಮೂಲ ಉದ್ದೇಶ ಹಣ ಸಂಪಾದನೆ ಆಗಿರಲಿಲ್ಲ. ಭೂಮಿಯಿಂದ ಬದುಕು ಕಟ್ಟುವ ಕಲೆ ಸಂಕೇತಿಗಳಿಗೆ ಕರಗತವಾಗಿತ್ತು. ಕೇವಲ ಹತ್ತು ಗುಂಟೆ ಜಮೀನಿನಲ್ಲಿ ಬದುಕುವ ವಿಶಿಷ್ಟ ಕೃಷಿ ಸಂಕೇತಿಗಳಲ್ಲಿತ್ತು. ಹಣ ಸಂಪಾದನೆ ಜೀವನದ ಒಂದು ಭಾಗವಾಗಿತ್ತೇ ಹೊರತು . . ಹಣವೇ ಜೀವನವಾಗಿರಲಿಲ್ಲ. ಬಹುಮಹಡಿ ಬೆಳೆ ಪದ್ಧತಿಯ ಬಾಗಾಯ್ತು. . . ಕೃಷಿಯಲ್ಲಿ ಸ್ವಲ್ಪ ಹಣ ಹಾಗೂ ಸಂಪೂರ್ಣ ನೆಮ್ಮದಿ ಗಳಿಸಲು ಹಿರಿಯ ಸಂಕೇತಿಗಳು ಕಂಡುಕೊಂಡ ಒಂದು ಮಾರ್ಗ ಅಷ್ಟೆ. ಭೂಮಿ, ಬದುಕನ್ನು ಪ್ರೀತಿಸುತ್ತಿದ್ದ ಅವರಿಗೆ ಹಳ್ಳಿ ಆಸರೆಯಾಗಿತ್ತು. ಗ್ರಾಮೀಣ ಬದುಕು ಸುಸ್ಥಿರವಾಗಿತ್ತು. ಬದುಕಲು ಹಣ ಬೇಕು ಎನ್ನುವ ಗ್ರಾಮೀಣ ಚಿಂತನೆ ಕುಸಿದು, ಹಣ ಮಾಡಲು ಬದುಕಬೇಕು ಎಂಬ ಪಟ್ಟಣದ ವ್ಯಾಪಾರೀ ಚಿಂತನೆ ಬಂದಾಗ ಬದುಕಿನ ಮೌಲ್ಯಗಳು ಬದಲಾದವು. ಹಣದ ದೃಷ್ಟಿಕೋನದಿಂದ ಕೃಷಿ ಲಾಭವಿಲ್ಲದ ಉದ್ದಿಮೆಯಂತೆ ವಿದ್ಯಾವಂತರಿಗೆ ಗೋಚರವಾಯ್ತು. ಹಣ ತರುವ ಪೇಟೆಯ ಉದ್ಯೋಗ ಸುಂದರವಾಗಿ ಕಾಣಿಸ್ತು. ಕಡಿಮೆ ವಿದ್ಯಾಭ್ಯಾಸ ಮಾಡಿ, ಪಟ್ಟಣದಲ್ಲಿ ಸಲ್ಲದವ ಅನಿವಾರ್ಯವಾಗಿ ಹಳ್ಳೀಲಿದ್ದು ಕೃಷಿ ಮಾಡುವ ಹಂತಕ್ಕೆ ಬಂದ . . ಕಾಲು ಜಮೀನಿನ ಮೇಲಿದ್ರೂ ಅವರ ಕಣ್ಣು ನೆಟ್ಟಿದ್ದು ಪಟ್ಟಣಗಳತ್ತಲೇ. ವ್ಯವಸಾಯದ ಬದುಕಿಗೆ ಬೇಕಾದ ನಂಬಿಕೆ ಅವರಲ್ಲಿ ಬರಲೇ ಇಲ್ಲ. ದಿನೇ ದಿನೇ ಕೃಷಿ ಬದುಕು ಸೊರಗ್ತಾ ಬಂತು. ಇವತ್ತಿಗೂ ಅನೇಕ ಸಂಕೇತಿ ಕೃಷಿಕರು ನಂಬಿಕೆಯ ಭದ್ರ ಬುನಾದಿ ಇಲ್ಲದೇ ಕೃಷಿಯಲ್ಲಿದ್ದಾರೆ ಅಷ್ಟೆ. ತಾವೇ ಕಟ್ಟಿರುವ ಗೂಡಿನ ಬಗ್ಗೆ ಭರವಸೆ ಇಲ್ಲದೇ ಮರದಲ್ಲಿದ್ದಾರೆ. ಪುಟ್ಟ ಹಕ್ಕಿಗಳು ರೆಕ್ಕೆ ಬಲಿತು ಹಾರಿದ ತಕ್ಷಣ, ಭೂಮಿ ಬದುಕ ಬಿಟ್ಟು ಹಾರುವ ತವಕ ಅವರದ್ದು. ವಿದ್ಯೆ ವ್ಯವಸಾಯಕ್ಕೆ ಮಾರಕವಾದ ಪರಿ ಇದು. ಇದಲ್ಲವೆ ವಿಪರ್ಯಾಸ!

ಕೃಷಿ ನಮ್ಮಲ್ಲಿ ರಕ್ತಗತವಾಗಿದೆ ಅಂತಾರೆ ಸಂಕೇತಿಗಳು. ಹಳ್ಳಿ ಬಿಟ್ಟು ಪಟ್ಟಣ ಸೇರಿದ್ರೂ ಮನೆ ಮುಂದೆ ಹಿಂದೆ ಅಡಿಕೆ ಗಿಡ ನೆಡೋದು ಬಿಟ್ಟಿಲ್ಲ. ಮುಂದೆ ನಾವು ಹಳ್ಳೀನೇ ಸೇರ್‍ತೀವೇನೋ . . ಮರೀಬಾರದು ಅಂತ ಕೈತೋಟ ಮಾಡ್ತಿದೀವಿ ಅಂತ ಹಲವರು ಹೇಳ್ತಾರೆ. ನಮಗೆ ಕೃಷಿ ಮಾಡುವ ಮನಸ್ಸಿತ್ತು. . . ಆದರೆ ಅಪ್ಪ ಅಮ್ಮಂದಿರ ಬಲವಂತಕ್ಕೆ ಹಳ್ಳಿ ಬಿಟ್ಟು ಪಟ್ಟಣ ಸೇರಿ ಉದ್ಯೋಗಿಯಾದೆ ಅಂತ ಪರಿತಪಿಸುತ್ತಾರೆ. ಹಳ್ಳಿ ಬಿಟ್ಟು ಪಟ್ಟಣ ಸೇರಿ ಸ್ಥಿತಿವಂತರಾಗಿರುವ ಸಂಕೇತಿಗಳು . . . ಮತ್ತೆ ಕೃಷಿ ಆರಂಭ ಮಾಡಿದಾರೆ . . ಕೃಷಿ ಉತ್ತಮ ಕಸುಬು ಅಂತಾರೆ.

ಅದೇ ಹಳ್ಳೀಲಿದ್ದು ಕೃಷಿ ಮಾಡುವ ಸಂಕೇತಿಗಳು ಯಾರಿಗೆ ಬೇಕು ಈ ತೋಟ, ಗದ್ದೆ ಬೇಸಾಯ? ಎಲ್ಲವೂ ಮಾರಿ ಆರಾಮವಾಗಿ ಪಟ್ಟಣದಲ್ಲಿ ಇರೋದು ಒಳ್ಳೇದು ಅಂತಿದಾರೆ. ಬಹುಶಃ ಬದುಕಿನ ಭದ್ರತೆ ಈ ಎರಡೂ ವಿಚಾರಗಳಿಗೆ ಕಾರಣವಿರಬಹುದು. ಪಟ್ಟಣದಲ್ಲಿ ನೆಲೆಸಿರುವ ಸಂಕೇತಿಗಳು ಜಮೀನನ್ನು ಕೇಳ್ತಿದಾರೆ . . ಹಳ್ಳೀಲಿ ಇರುವವರು ಜಮೀನು ಮಾರ್‍ತಿದಾರೆ. ಒಂದೇ ಕೃಷಿಯ ಬಗ್ಗೆ ಎರಡು ವಿಭಿನ್ನ ನಿಲುವುಗಳು, ದ್ವಂದ್ವಗಳು. ಇದು ನಿಜಕ್ಕೂ ಆಶ್ಚರ್ಯಕರವಾದ ವಿಚಾರ. ಪಟ್ಟಣದ ಜಂಜಾಟಗಳಿಗೆ ಬೇಸತ್ತು, ತೋಟದಲ್ಲಿ ನೆಮ್ಮದಿಯನ್ನು ಪಡೆಯುವ ಉತ್ಸಾಹ ಕೃಷಿಗೆ ಕಾರಣವಾದರೆ, ಅದೇ ಪಟ್ಟಣದ ಜಂಜಾಟದ ಬದುಕಿನಲ್ಲಿನ ಆರ್ಥಿಕ ಅನುಕೂಲ ಗಮನಿಸಿ, ತಮ್ಮ ಬದುಕಿನ ಭದ್ರತೆಗಾಗಿ ನೆಮ್ಮದಿಯ ಕೃಷಿ ಬದುಕನ್ನೂ, ಹಳ್ಳಿಯನ್ನೂ ಬಿಡುತ್ತಿದ್ದಾರೆ ಅನೇಕ ಜನ. ನಗರಗಳ ಜೀವನಕ್ಕೆ ಹೊಂದಿಕೊಂಡತೆ ಇರುವ farm houseಗಳಲ್ಲಿ ನೆಮ್ಮದಿ ಪಡೆಯುವ ಸಂಕೇತಿ ಕೃಷಿಕರನ್ನು ನೀವೇಕೆ ಹಳ್ಳಿಗೆ ಹೋಗಿ ಕೃಷಿ ಮಾಡಬಾರದು ಅಂತ ಕೇಳಿದ್ರೆ ಉದ್ಯೋಗ ನೆಪ ಹೇಳ್ತಾರೆ .. ಹಳ್ಳೀಲಿದ್ದೆ ಕೃಷಿ ಮಾಡಬೇಕಾ, ಪಟ್ಟಣಗಳಲ್ಲಿದ್ದು ಕೃಷಿ ಮಾಡಬಾರದಾ ಅಂತ ಮರುಪ್ರಶ್ನೆ ಹಾಕುತ್ತಾರೆ. ಸಂಕೇತಿಗಳ ಕೃಷಿ ಪಟ್ಟಣಗಳಲ್ಲೂ ಬೆಳೀಲಿ ಬಿಡಿ ಅಂತ ನಗುತ್ತಾ ನುಡೀತಾರೆ. ಪಟ್ಟಣಗಳ ಕೃಷಿ ಕೇವಲ ಹವ್ಯಾಸಿ ಕೃಷಿ ಅಷ್ಟೆ. ಅವರಿಗೆ ಜಮೀನಿನಿಂದ ಬದುಕಬೇಕಾದ ಅನಿವಾರ್ಯತೆ ಇಲ್ಲ. ಹಣ ನೀಡುವ ಉದ್ಯೋಗದ ಉದ್ವೇಗಗಳನ್ನು ಕಡಿಮೆ ಮಾಡಿಕೊಳ್ಳಲು ಒಂದು ತಾಣ ಬೇಕು ಅಷ್ಟೆ. ಅದನ್ನು ಅವರಿಗೆ ಈಗ ತೋಟ ನೀಡಿದೆ ಅಷ್ಟೆ. ಪಟ್ಟಣಿಗರ ಕೃಷಿ ಒಂದು ಕವಲು ದಾರಿ ಅಷ್ಟೆ. ಅದೆಂದೂ ಮುಖ್ಯದಾರಿಯಾಗಲು ಸಾಧ್ಯವಿಲ್ಲ. ಇದು ಸಂಕೇತಿ ಕೃಷಿಯ ಮುಂದಿನ ಪರಿಭಾಷೆ ಬರೆಯುವಷ್ಟು ಶಕ್ತವಾಗಿಲ್ಲ. ವೈಯಕ್ತಿಕ ಚಿಂತನೆಗಳ ನೆಲೆಗಟ್ಟಿನಲ್ಲಿ ಮಾತ್ರ ನಿಂತಿರುವ ಈ ಕೃಷಿ ತುಂಬಾ ಕ್ಷಣಿಕ ಎಂದು ಖಚಿತವಾಗಿ ಹೇಳಬಹುದು. ವಿಸ್ತಾರವಾದ ತಳಹದಿಯಿರುವ ಗ್ರಾಮೀಣ ಕೃಷಿ ಬದುಕಿನ ಮುಂದೆ . . farm house ಕೃಷಿ ಸೂರ್ಯನ ಮುಂದಿನ ಹಣತೆಯಂತೆ.

ಕಾಲಕಾಲಕ್ಕೆ ಬದಲಾಗುತ್ತಿದ್ದ ಆಧುನಿಕ ಕೃಷಿ ತಾಂತ್ರಿಕತೆಗಳನ್ನು ಸಂಕೇತಿಗಳು ಅಳವಡಿಸಿಕೊಳ್ಳಲಿಲ್ಲವೇ ಎಂದು ಕೇಳಿದರೆ ಹೌದು ಎನ್ನಬಹುದು ಅಥವಾ ಇಲ್ಲ ಎಂತಲೂ ಹೇಳಬಹುದು. ಹಳೆಯ ಸಾಂಪ್ರದಾಯಿಕ ಬೇಸಾಯ ವಿಧಾನಗಳನ್ನು ಈಗಲೂ ಪಾಲಿಸುವವರು ಅರ್ಧಭಾಗವಾದರೆ, ಉಳಿದರ್ಧ ಹೊಸ ಹೊಸ ಬೆಳೆಗಳಿಗೆ, ಆಧುನಿಕ ಕೃಷಿ ವಿಜ್ಞಾನಕ್ಕೆ ತಮ್ಮನ್ನು ತಾವು ತೆರೆದುಕೊಂಡವರು, ಸ್ವತಃ ಯಂತ್ರಗಳನ್ನು ಆವಿಷ್ಕರಿಸಿ, ಕೃಷಿಯಲ್ಲಿ ಅಳವಡಿಸಿರುವ ಸಂಕೇತಿಗಳು ಅನೇಕರು ಇದ್ದಾರೆ. ಕೃಷಿಯನ್ನು ಸಹ ಒಂದು ಉದ್ಯಮದಂತೆ ಪರಿಗಣಿಸಿರುವ ಯುವ ಸಂಕೇತಿಗಳೂ ಇದ್ದಾರೆ. ಹಳೆಯ ಬೇರಿನಲ್ಲಿ ಹೊಸ ಚಿಗುರು ಬೆಳೆದಿದೆ. ಮರಕ್ಕೆ ಕಸುವ ತುಂಬುವ ಪ್ರಯತ್ನ ಅಲ್ಲಲ್ಲಿ ಸಾಗಿದೆ. ಕಾಲಮಾನಕ್ಕೆ ಕೃಷಿ ವಿಧಾನಗಳು ಬದಲಾದರೂ, ಕಡಿಮೆ ಜಮೀನಿನಲ್ಲೂ, ಕೃಷಿ ಮಾಡಿ ಬದುಕು ರೂಪಿಸುವ ವಿಶಿಷ್ಟವಾದ ಬಾಗಾಯ್ತಿನ ಕೃಷಿ ಪದ್ಧತಿ ಕೃಷಿ ಕ್ಷೇತ್ರಕ್ಕೆ ಸಂಕೇತಿಗಳ ಕೊಡುಗೆ ಎನ್ನಬಹುದು. ಕೃಷಿ ಸಂಕೇತಿಗಳ ಪಾಲಿಗೆ ಎಂದೂ ಹಣ ನೀಡುವ ವೃತ್ತಿಯಾಗಿರಲಿಲ್ಲ. ಅದು ಅವರ ಪಾಲಿಗೆ ಸಂಸ್ಕೃತಿಯಾಗಿತ್ತು. ಜೀವನದ ರೀತಿಯಾಗಿತ್ತು. ತಮಗೆ ಬೇಕಾದ್ದನ್ನೆಲ್ಲಾ, ಒಂದು ತುಂಡು ಭೂಮಿಯಲ್ಲೇ ಬೆಳೆಯುವ ಚಿಂತನೆಯಿತ್ತು. ಬಾಗಾಯ್ತು ಅವರ ಪಾಲಿಗೆ ಒಂದು ಪಾಠಶಾಲೆ, ಕೃಷಿಗೆ ಈ ಭಾಷ್ಯ ನೀಡಿದ ಸಂಕೇತಿಗಳು ನಿಜಕ್ಕೂ ಅಭಿನಂದನಾರ್ಹರು. ಹೊಸ ಕೃಷಿ ಚಿಂತನೆಗಳು ಹೊಳೆಯಂತೆ ಹರಿದು, ಹಳೆಯ ಬದುಕಿನ ಮೌಲ್ಯಗಳನ್ನು ಬುಡಮೇಲು ಮಾಡಿದರೂ, ಅಂದು, ಇಂದು, ಎಂದೆಂದಿಗೂ ಬದಲಾಗದ, ಗಟ್ಟಿಯಾದ ಕೃಷಿ ಪರಂಪರೆಯನ್ನು ಹುಟ್ಟುಹಾಕಿದ್ದು ಸಂಕೇತಿಗಳ ಬಾಗಾಯ್ತಿನ ಕೃಷಿ ರೀತಿ, ನೀತಿಗಳು. ಇಂದು ಪ್ರಸ್ತುತವಾಗಿರುವ ಸುಸ್ಥಿರ ಕೃಷಿ ಬದುಕಿಗೆ, ಬಹಳ ಹಿಂದೆಯೇ ಅಡಿಪಾಯ ಹಾಕಿದ್ದು ಸಂಕೇತಿಗಳು. ಆಲ್ಬರ್ಟ್ ಹೋವಾರ್ಡ್ ತನ್ನ ಪುಸ್ತಕ 'An Agricultural Testament'ನಲ್ಲಿ ಹೇಳುತ್ತಾನೆ, ಮಣ್ಣಿನ ಆರೋಗ್ಯಕ್ಕೂ ಮನುಷ್ಯನ ಆರೋಗ್ಯಕ್ಕೂ ನೇರವಾದ ಸಂಬಂಧ ಇದೆ ಎಂದು. ಎಲ್ಲಿ ಮಣ್ಣಿನ ಆರೋಗ್ಯ ಉತ್ತಮವಾಗಿರುತ್ತೋ ಅಲ್ಲಿ ಮನುಷ್ಯರ ಆರೋಗ್ಯ ಸಹಾ ಉತ್ತಮವಿರುತ್ತೆ ಎಂಬುದು, ಸರ್ವಕಾಲೀಕವಾದ ಸತ್ಯ. ಯಾವುದೇ ರೀತಿಯ ಆಧುನಿಕ ವಿಚಾರಗಳನ್ನು ಸಹ ಕೇಳದೆ, ನೋಡದೆ, ಕೇವಲ ತಮ್ಮ ಸಂಸ್ಕಾರದಿಂದ, ಸಂಸ್ಕೃತಿಯಿಂದ ತಮ್ಮ ಬಾಗಾಯ್ತಿನ ಮಣ್ಣನ್ನು ಸತ್ವಗೊಳಿಸಿ . . . ತಮ್ಮ ಬಾಳನ್ನು ಬಂಗಾರ ಮಾಡಿಕೊಂಡ ಹಿರಿಯ ಸಂಕೇತಿಗಳಿಗೆ ಗೌರವ ಸಲ್ಲಲೇಬೇಕು ತಾನೆ? ಸಾವಯವ ಕೃಷಿ ಪದ್ಧತಿ ಅನುಸರಿಸಿ, ಮಿಶ್ರಬೆಳೆ ಬೇಸಾಯದಿಂದ ಮಣ್ಣನ್ನು ಫಲವತ್ತುಗೊಳಿಸಿ, ವಿವಿಧ ಬೆಳೆಗಳನ್ನು ಒಂದೇ ಜಮೀನಿನಲ್ಲಿ ಉನ್ನತ ವಿಚಾರದಲ್ಲಿ ಬೆಳೆದು, ಸತ್ವಯುತ ಆಹಾರ ಸೇವಿಸಿ . . ತಮ್ಮ ಆರೋಗ್ಯವನ್ನೂ ಸಹ ಸುಸ್ಥಿತಿಯಲ್ಲಿಟ್ಟುಕೊಂಡು ಬಲಭೀಮರಾಗಿ ಬಾಳಿದ ಹಿರಿಯರ ಬದುಕು ಅವಿಸ್ಮರಣೀಯವಲ್ಲವೆ? ಇಷ್ಟೆಲ್ಲಾ ವೈಶಿಷ್ಟ್ಯಗಳನ್ನು ಒಳಗೊಂಡ ಈ ಕೃಷಿ ಮುಂದಿನ ಪೀಳಿಗೆಗೂ ಉಳಿಯಲೇಬೇಕು ತಾನೆ? ಅನ್ನಕ್ಕೆ ಎಂದೆಂದಿಗೂ ಬೆಲೆಯಿದೆ ಅಂದರೆ . . ಅನ್ನದಾತನಿಗೂ ಬೆಲೆ ಇದ್ದೇ ಇದೆ ತಾನೆ!

ಅಮೆರಿಕಾ ದೇಶದಲ್ಲಿ ಮೂಲಭೂತವಾದ ಜನಾಂಗ, ರೆಡ್ ಇಂಡಿಯನ್ನರು. ಅವರ ಸಂಸ್ಕೃತಿ ನಾಶ ಮಾಡಿ ಅವರನ್ನು ಅವರ ಕೃಷಿ ಭೂಮಿಯಿಂದ ಒಕ್ಕಲೆಬ್ಬಿಸಿ, ತಮ್ಮ ಬಂಡವಾಳಶಾಹಿ ಸಾಮ್ರಾಜ್ಯ ಅಲ್ಲಿ ಕಟ್ಟಲು ಹವಣಿಸಿದ ಅಮೇರಿಕಾದ ನಾಗರೀಕ ಸಮಾಜದ

ಮುಂದಾಳು ರೆಡ್‌ಇಂಡಿಯನ್ನರ ಮುಖಂಡನಿಗೆ, "ನಿಮ್ಮ ಕೃಷಿ ಜಮೀನುಗಳನ್ನು ನಮಗೆ ನೀಡಿ, ನಾವು ನಿಮಗೆ ಉದ್ಯೋಗ, ಭದ್ರತೆ ಹೊಸ ಬದುಕು ಕೊಡುತ್ತೇವೆ" ಎಂದು ಕೇಳಿದನಂತೆ. ಆಗ ಆ ರೆಡ್ ಇಂಡಿಯನ್ ದೊರೆ ಹೇಳಿದ ಮಾತು ನಿಜಕ್ಕೂ ಉಲ್ಲೇಖನೀಯವಾದುದು, "ಈ ಭೂಮಿ ನೀಡಲು ನಾನು ಯಾರು? . . ಅದನ್ನು ಕೇಳಲು ನೀನು ಯಾರು? ಈ ಭೂಮಿ ನನ್ನ ಅಧೀನದಲ್ಲೂ ಇಲ್ಲ .. ನಿನ್ನ ಅಧೀನದಲ್ಲಿ ಮುಂದೆ ಇರಲೂ ಸಾಧ್ಯವಿಲ್ಲ. ಅದರ ಅಧೀನದಲ್ಲಿ ನಾವಿದ್ದೇವೆ. ನಾವೆಲ್ಲ ಪ್ರಕೃತಿ ಮಾತೆಯ ಕೂಸುಗಳು" ಎಂದು ನುಡಿದನಂತೆ. ಪ್ರಕೃತಿಯ ವಿರಾಟ್ ಸ್ವರೂಪದ ಮುಂದೆ . . ನಮ್ಮ ಕೃಷಿ ಬದುಕು ಎಷ್ಟರಮಟ್ಟಿನದು? ಒಮ್ಮೆ ಯೋಚಿಸಿದರೆ, ಭೂಮಿಯನ್ನೂ, ಪ್ರಕೃತಿಯನ್ನೂ, ಪರಿಸರವನ್ನೂ ಇದ್ದ ಹಾಗೆ ಬಿಟ್ಟು ತನ್ನ ಬದುಕಿಗೆ ಬೇಕಾದ್ದನ್ನು ಮಾತ್ರ ಪಡೆದು, ನಿಃಸ್ವಾರ್ಥವಾಗಿ ಜೀವಿಸುವ ಕಲೆ ಎಂದರೆ ಕೃಷಿ, ಎನ್ನುವಂತಾಗಬೇಕು. ನಮ್ಮ ಕೃಷಿ, ಎಂದಿಗೂ ಪರಿಸರಕ್ಕೆ ಭಾರವಾಗಬಾರದು. ಕೃಷಿಕನಿಗೂ ಹೊರೆಯಾಗಬಾರದು. ನಿಸರ್ಗದ ನಿಯಮಗಳಿಗೆ ಕೃಷಿ ಬದ್ಧವಾಗಬೇಕು. ಹಿರಿಯ ಸಂಕೇತಿ ಕೃಷಿಕರು ರೂಪಿಸಿದ ಕೃಷಿ ಪದ್ಧತಿ ಸಹಾ ಇಂತಹುದೇ ಉದಾತ್ತವಾದ ನೆಲೆಗಟ್ಟನ್ನು ಹೊಂದಿತ್ತು. ಮೊದಲು ಕಾಡಿನ ಪರಿಸರದಲ್ಲಿ ಕಾಡು ಗಿಡ ಕಡಿದು ಕೃಷಿ ಮಾಡಿದ ಸಂಕೇತಿಗಳು, ಮತ್ತೆ ಕೃಷಿಯಲ್ಲಿ ಕಾಡು ಬೆಳೆದದ್ದು ಇದೇ ಅರ್ಥದಲ್ಲಿ. ಮತ್ತೆ ಬಾಗಾಯ್ತಿನ ಮೂಲಕ ಸಕಲ ಜೀವ ಜಂತುಗಳಿಗೆ, ಜೀವ ವೈವಿಧ್ಯಕ್ಕೆ ಆಶ್ರಯ ನೀಡಿದ್ದು ಸಹಾ ಇದೇ ಚಿಂತನೆಗಳಿಂದ. ನಿಸರ್ಗಕ್ಕೆ ಹತ್ತಿರವಾದ ರೀತಿಯಲ್ಲಿ ಬದುಕಿದ್ದೂ ಇದೇ ಕಾರಣಕ್ಕೆ. ಪ್ರಕೃತಿಯೇ ಶ್ರೇಷ್ಠ . . ಮಾನವ ಕನಿಷ್ಠ ಎಂಬುವ ವಿಚಾರವನ್ನು ಕ್ಷಣಕ್ಷಣಕ್ಕೂ ಸಾರುವಂತೆ ಅಡಿಕೆ ಗಿಡಗಳನ್ನು ಮುಗಿಲೆತ್ತರಕ್ಕೆ ಬೆಳೆಸಿದ್ದು ಇದೇ ಕಾರಣಕ್ಕಿರಬಹುದೇನೋ . . ಹೇಳುವರಾರು! ಪ್ರಕೃತಿ ನಮ್ಮ ಎಲ್ಲಾ ಆಸೆಗಳನ್ನೂ ಸಹಾ ಪೂರೈಸಬಲ್ಲದು . . ಆದರೆ ದುರಾಸೆಯನ್ನಲ್ಲ ಎಂದ ಮಹಾತ್ಮ ಗಾಂಧೀಜಿಯವರ ಧ್ಯೇಯವಾಕ್ಯದಂತೆ, ತಮ್ಮ ಆಸೆಗಳನ್ನು ಮಿತಿಯಲ್ಲಿಟ್ಟು ದುರಾಸೆಯನ್ನು ದೂರವಿಟ್ಟು . . ಮಣ್ಣಿನ ಮಗನಾಗಿ . . ಪ್ರಕೃತಿಯ ಕೂಸಾಗಿ ಬಾಳಿದ್ದು . . ಹಳ್ಳಿಯ ಅಂಗಳದಲ್ಲೇ ಬದುಕಿದ್ದು, ತಾದಾತ್ಮ್ಯದಿಂದ ಸುಭದ್ರ ಬದುಕನ್ನು ಕಟ್ಟಿದ್ದು ಇದೇ ಚಿಂತನೆಗಳಿಂದ. ಈ ನಿಟ್ಟಿನಲ್ಲಿ ಉದಾತ್ತ ಮೌಲ್ಯಗಳನ್ನು ಬೆಸೆದುಕೊಂಡ ಹಿರಿಯರ ಹಿಂದಿನ ಕೃಷಿ ಪದ್ಧತಿ ಎಂದಿಗೂ ಶ್ರೇಷ್ಠವಾದದ್ದು . . ಅನುಸರಿಸಲು ಯೋಗ್ಯವಾದದ್ದು . . ಎಂದೆಂದಿಗೂ ಇದೇ ನಿಜವಾದ ಕೃಷಿ . . ಇದೇ ನಿಜವಾದ ಜೀವನ ರೀತಿ.

ಗೊತ್ತಿರದ ಸ್ವರ್ಗಕ್ಕಿಂತ . . ಗೊತ್ತಿರುವ ನರಕವನ್ನೇ ಭವಿಷ್ಯಕ್ಕೆ ಆಯ್ಕೆ ಮಾಡುವುದು ಒಳಿತು ಎಂಬ ಗಾದೆ ಮಾತಿದೆ. ಕೃಷಿಯ ಮಟ್ಟಿಗೂ ಇದು ಅನ್ವಯಿಸುತ್ತದೆ. ಇಂದಿನ ಯುವ ಪೀಳಿಗೆ . . ಗ್ರಾಮದ ಬದುಕನ್ನು . . ಕೃಷಿಯನ್ನು ಬಿಟ್ಟು . . ದೂರದೂರಿನಲ್ಲಿ ಏನನ್ನೋ ಮಾಡಲು ಹೋಗಿ . . ಮತ್ತೇನನ್ನೋ ಮಾಡಿ .. ಮುಂದೆ ಮರಳಿ ಮಣ್ಣಿಗೆ ಬರುವ ನಿರ್ಧಾರ ಮಾಡಿದ್ರೆ . . ಬದುಕಲು ನೆಲೆಯೆಲ್ಲಿ . . ಕೃಷಿ ಮಾಡಲು ಮಣ್ಣೆಲ್ಲಿ? ಹಿರಿಯರು ಬದುಕಿ ಬಾಳಿದ ಅಂಗಳ ಪರಭಾರೆಯಾದ್ರೆ . . ಮುಂದೆ ಬದುಕು ಭಾರವಾಗುತ್ತೆ. ಮುಂದಿನ ಕೃಷಿಕರಿಗಾಗಿ ಇಂದು ಜಮೀನು ಉಳಿಸುವ ಪ್ರಯತ್ನ ಈಗ ಆಗಬೇಕಿದೆ. ಹುಟ್ಟೂರಿನ ಹೆಸರನ್ನು ತಮ್ಮ ಹೆಸರಿನ ಹಿಂದೆ, ಮುಂದೆ ಸೇರಿಸಿಕೊಂಡರೆ, ಮುಂದಿನ ಪೀಳಿಗೆಗೆ ಚಿತ್ತಾರ ಬಿಡಿಸಲು ಗೋಡೆಯನ್ನು ಉಳಿಸಿದಂತಾಗೋಲ್ಲ. ಬದುಕಿಗೆ ಭದ್ರ ಬುನಾದಿ ಅಥವಾ ಅಡಿಪಾಯ ಹಾಕಿದಂತಾಗೋಲ್ಲ. ಈಗ ಪರಭಾರೆಯಾಗುತ್ತಿರುವ . . ಅಥವಾ ಹುಟ್ಟೂರನ್ನು ತೊರೆದು ಹೋಗುತ್ತಿರುವವರು ಮಾರುತ್ತಿರುವ ಜಮೀನು ಉಳಿಯಬೇಕು. ಆಗ ಹುಟ್ಟೂರಿನ ಹೆಸರು ಹೊತ್ತಿದ್ದಕ್ಕೂ ಸಾರ್ಥಕ. ಸಂಕೇತಿಗಳ ಮೂಲ ನೆಲೆಗಳನ್ನು ಉಳಿಸಿದರೆ . . ಮುಂದಿನ ಕೃಷಿ ಉಳಿದಂತೆ. ಹಿಂದೆ ಬಡತನವಿತ್ತು . . ಜಮೀನು ಮಾರುವ ಅನಿವಾರ್ಯತೆ ಇತ್ತು. ಇಂದು ಹಣವಿದೆ . . ಅಂದು ಮಾರಿದ ಜಮೀನನ್ನು . . ಇಂದು ಮಾರುತ್ತಿರುವವರ ಜಮೀನನ್ನು ಖರೀದಿಸುವ ಶಕ್ತಿ ಇದೆ ಅಂದ ಮೇಲೆ ಮುಂದಿನ ಮಕ್ಕಳ ಕೃಷಿ ಭವಿಷ್ಯಕ್ಕೆ ಭದ್ರ ಅಡಿಗಳನ್ನು ಹಾಕುವುದು ಸಂಕೇತಿಗಳಿಗೆ ಕಷ್ಟವಲ್ಲ. ಸಂಕೇತಿಗಳು ಮಾರುವ ಜಮೀನು ಸಂಕೇತಿಗಳಿಗೇ ಸೇರಿದ್ರೆ . . ಮುಂದೆ ಮಕ್ಕಳು ಕೃಷಿ ಮಾಡಲು ಮಣ್ಣಿರುತ್ತೆ. ಸಂಕೇತಿ ಹೆಣ್ಣುಮಕ್ಕಳು ಮುಂದಿನ ಕೃಷಿ ಹಾದಿ ಬರೆಯುವಷ್ಟು ಸಬಲರಾಗಿದ್ರೆ . . ಸಂಕೇತಿ ಹೆಣ್ಣುಮಕ್ಕಳ ಹಾಸ್ಟಲಿನಲ್ಲಿ ಕೃಷಿ ಶಿಕ್ಷಣ ನೀಡುವುದು ಕಷ್ಟವೇನಲ್ಲ. ಒಟ್ಟಾರೆ ಸಾಂಘಿಕ ಪ್ರಯತ್ನ ಈ ವಿಶಿಷ್ಟ ಸಂಕೇತಿ ಕೃಷಿ ಪರಂಪರೆ ಉಳಿಸಬಲ್ಲದು, ಬೆಳೆಸಬಲ್ಲದು. ಪ್ರತಿಯೊಬ್ಬರೂ ಈ ನಿಟ್ಟಿನತ್ತ ಆಲೋಚಿಸಬೇಕಾದ . . ಕಾರ್ಯೋನ್ಮುಖರಾಗಬೇಕಾದ ಸಂಧಿ ಕಾಲ ಈಗ ಬಂದಿದೆ .. ಇದು ಮುಂದೆ ಬರದೇ ಇರಬಹುದು. ಸಂಕೇತಿ ಕೃಷಿ ಉಳಿಯಲಿ ಎನ್ನುವುದು ನನ್ನ ಆಸೆ. ಹಾಗೆ ಇದು ಹಿರಿಯರ ಆಸೆಯೂ ಇದ್ದಿರಬಹುದು ಎಂಬುದು ನನ್ನ ನಂಬಿಕೆ. ನನ್ನ ವಿಚಾರಗಳು ವಿಶಿಷ್ಟ ಸಂಕೇತಿ ಕೃಷಿ ಪರಂಪರೆ ಉಳಿಸಲು ಅಡಿಗಲ್ಲಾದ್ರೆ ಅದಕ್ಕಿಂತ ಹೆಚ್ಚಿನ ಸಂತೋಷ ನನಗೆ ಬೇರೇನೂ ಇಲ್ಲ. ನಮಸ್ಕಾರ.

ಅನುಬಂಧ

ಅನುಬಂಧ - ೧

ಪ್ರಶ್ನಾವಳಿಯ ಮಾದರಿ

೧.ಕೌಟುಂಬಿಕ ಹಿನ್ನೆಲೆ

ತಂದೆ/ತಾಯಿ/ಅಜ್ಜಿ/ತಾತಂದಿರ ಬಗ್ಗೆ-ಅವರ ವಿಶೇಷ ಗುಣಗಳ ಬಗ್ಗೆ/ಅವರಿಗಿದ್ದ ಪ್ರಾವೀಣ್ಯ/ಅವರು ಜೀವಿಸಿದ ರೀತಿ/ಪಾಲಿಸಿದ ನೀತಿ/ಬದುಕಿ ಬಂದ ಹಾದಿ/ಅವರು ಊರಿಗೆ ಸಲ್ಲಿಸಿದ ಕೊಡುಗೆ/ಸೇವೆ/ಅವರ ಬಗ್ಗೆ ಗೊತ್ತಿರುವ ವಿಶೇಷ ಸನ್ನಿವೇಶಗಳು/ಕುಟುಂಬದ ಹಿರಿಯರ ಬಗೆಗಿನ ಐತಿಹ್ಯಗಳು/ಕಿರಿಯರಿಗೆ ಅವರು ಹೇಳುತ್ತಿದ್ದ ನೀತಿ/ಹಳ್ಳಿ ಪರಿಸರದಲ್ಲಿದ್ದುಕೊಂಡೇ ಕಿರಿಯರ ಬದುಕನ್ನು ಅವರು ರೂಪಿಸಿದ ರೀತಿ/ಅವರ ಕೃಷಿ ಪದ್ಧತಿ /ಒಳ ವಿವರ/ಬೇಸಾಯ ವಿಧಾನಗಳು/ವ್ಯವಸಾಯ/ವ್ಯಾಪಾರದಿಂದ ಬದುಕು ರೂಪಿಸಿಕೊಂಡ ಹಿನ್ನೆಲೆ/ ಅವರ ಉಪಕಸುಬುಗಳು/ವ್ಯವಸಾಯದ ಹಳೆ ರೀತಿ ರಿವಾಜುಗಳು.

೨. ಊರಿನ ಹಿನ್ನೆಲೆ

ಊರಿನ ವಿಶೇಷಗಳು/ದೇವಸ್ಥಾನಗಳು/ಕೆರೆ ಕಟ್ಟೆ/ಜಾತ್ರೆ/ಹಬ್ಬ ಹರಿದಿನಗಳು/ಹಿಂದೆ ಊರಿದ್ದ ಪರಿಸ್ಥಿತಿ/ಈಗಿನ ಪರಿಸ್ಥಿತಿ/ಊರ ಪರಿಸರ/ಊರ ಕೃಷಿ ಪದ್ಧತಿಗಳು/ಈ ಊರಿಗೆ ಸಂಕೇತಿಗಳ ಆಗಮನ ಯಾವಾಗ/ಹೇಗೆ/ಯಾರಿಂದ/ಸಂಕೇತಿಗಳು ಈ ಊರಲ್ಲಿ ಅಭಿವೃದ್ಧಿ ಹೊಂದಿದ್ದು ಹ್ಯಾಗೆ/ಊರು ಬಿಟ್ಟು ತೆರಳಿದ್ರೆ ಅದಕ್ಕೆ ಕಾರಣಗಳು/ಊರಿನ ಇತರೇ ಜನರೊಂದಿಗೆ ಸಂಕೇತಿಗಳ ಸಂಬಂಧ/ಎಲ್ಲರೂ ಸೇರಿ ಆಚರಿಸುವ ಕಾರ್ಯಕ್ರಮಗಳು/ಸಂಕೇತಿಗಳ ವ್ಯವಸಾಯಕ್ಕೆ ಇತರೇ ಜನರ ಕೊಡುಗೆ/ನೆರವು/ಸಹಕಾರ.

೩.ವೈಯಕ್ತಿಕ ಹಿನ್ನೆಲೆ

ತನ್ನ ಬಗ್ಗೆ/ವಿದ್ಯಾಭ್ಯಾಸದ ಬಗ್ಗೆ/ಬಾಲ್ಯದ ಕನಸುಗಳ ಬಗ್ಗೆ/ಹಿರಿಯರೊಂದಿಗಿನ ಸಂಬಂಧಗಳ ಬಗ್ಗೆ/ ಗುರು-ಹಿರಿಯರ ಬಗ್ಗೆ/ ಶಾಲೆಯ ಬಗ್ಗೆ/ಆಟಪಾಠಗಳ ಬಗ್ಗೆ/ ವಿಶೇಷ ಗುಣಗಳ ಬಗ್ಗೆ/ಬದುಕಿನಲ್ಲಿ ಮರೆಯಲಾಗದ ಬಾಲ್ಯ ಘಟನೆಗಳು/ಬದುಕನ್ನು ರೂಪಿಸಿಕೊಳ್ಳಲು ನಿರ್ಧಾರ ಮಾಡುವಾಗಿನ ಪರಿಸ್ಥಿತಿ/ಆಸ್ತಿಪಾಸ್ತಿಯ ಹಿನ್ನೆಲೆ/ನೀರಾವರಿ ಆಶ್ರಯ ವಿಚಾರ.

೪. ವ್ಯವಹಾರ ಹಾಗೂ ಇತರೇ ಕಸುಬುಗಳು / ವ್ಯವಸಾಯದ ಜತೆ/ಅದರ ಬಗ್ಗೆ ಪ್ರಾವೀಣ್ಯ/ರೂಢಿಸಿಕೊಂಡಿದ್ದು ಯಾಕೆ? ಹ್ಯಾಗೆ? ಏನು ಅನುಕೂಲ/ಆದಾಯ ಖರ್ಚು/ವೆಚ್ಚ.

೫. ವ್ಯವಸಾಯದ ಹಿನ್ನೆಲೆ

ಸಂಕೇತಿ ಕೃಷಿಕರು ಇತರೇ ಕೃಷಿಕರಿಗಿಂತ ಹ್ಯಾಗೆ ಭಿನ್ನ? ವಿವಿಧ ಬೆಳೆ ಬೇಸಾಯದ ವಿಧಾನಗಳು/ತಾಂತ್ರಿಕ ಕುಶಲತೆ (ಪ್ರತಿ ಬೆಳೆ ಬೇಸಾಯಕ್ಕೆ ಸಂಬಂಧಿಸಿದಂತೆ) ಅನುಭವಕ್ಕೆ ಬಂದ ಅಮೂಲ್ಯ ವಿಚಾರಗಳು/ಪ್ರತಿಯೊಂದು ಬೆಳೆಯ ಬೇಸಾಯದ ವಿಧಾನ (ಬೀಜದಿಂದ ಖಟಾವಿನವರೆಗೆ)/ಬೆಳೆಯ ಮಾರಾಟದ ಬಗ್ಗೆ/ವ್ಯವಸಾಯದ ಬಗ್ಗೆ ಇತರರಿಂದ ಕಲಿತದ್ದು/ತಂದೆ ತಾಯಿಯಿಂದ ಕಲಿತದ್ದು/ತೊಡಗಿಸಿದ ಬಂಡವಾಳ/ಮಾಡಿದ ಸಾಲ ಸೋಲ/ತೀರಿಸಿದ ಬಗ್ಗೆ/ಅನುಭವಿಸಿದ ಕಷ್ಟನಷ್ಟಗಳು? ಬೇಸರವಾಗಿ ಹಿಂದೆ ಸರಿಯುವ ನಿರ್ಧಾರ ಮಾಡಿದ್ರಾ /ಯಾರ ನೆರವು ಸಿಕ್ಕಿತು/ಯಾರು ನಿಮ್ಮ ಬದುಕಿನ ಆದರ್ಶ/ ಬದುಕಿನಲ್ಲಿ ನೀವು ಪಾಲಿಸಲಾಗದ ಆದರ್ಶಗಳು/ಪಾಲಿಸಿದ ರೀತಿ ನೀತಿ/ಹಾದಿ ತಪ್ಪಿದ ನಿದರ್ಶನಗಳು/ಘಟನೆಗಳು/ವ್ಯವಸಾಯದ ಜೀವನ ನೆಮ್ಮದಿ ತಂದಿದೆಯಾ/ನಿಮ್ಮ ಜೀವನದ ಆನಂದವನ್ನು ಹ್ಯಾಗೆ ಪಡೆಯುತ್ತಿದ್ದೀರಿ? ಪ್ರತಿ ಕ್ಷಣ ಹ್ಯಾಗೆ ಜೀವಿಸುತ್ತೀರಿ? ವೇದದಲ್ಲಿ ಕೃಷಿ?

೬. ಪತ್ನಿಯ ಸಹಕಾರ

ಅತ್ತೆ/ಮಾವಂದಿರ ಬಗ್ಗೆ/ಅವರ ಹಿನ್ನೆಲೆ/ಆಸ್ತಿ ಪಾಸ್ತಿ / ಮಕ್ಕಳು/ ಅವರ ಕಸುಬು/ನಿಮಗೆ ಹೆಣ್ಣು ಸಿಗಲು ಕಷ್ಟವಾಯ್ತು? ಆಗಿನ

ಮದುವೆ ಪದ್ಧತಿಗಳು/ ನಿಮ್ಮ ಮದುವೆಯ ಬಗ್ಗೆ/ವರದಕ್ಷಿಣೆ, ವರೋಪಚಾರ/ಪತಿ ಪತ್ನಿಯ ಸಂಬಂಧ/ಅತ್ತೆ-ಸೊಸೆ ಸಂಬಂಧ/ಅಳಿಯನಾಗಿ ನೀವು ಅತ್ತೆ ಮಾವಂಗೆ ಮಾಡಿದ ನೆರವು/ನೀವು ನಿಮ್ಮ ಹೆಂಡತಿ ನಿಮ್ಮ ಕುಟುಂಬಕ್ಕೆ ಮಾಡಿದ ಸೇವೆ/ನಿಮ್ಮ ಅಭಿವೃದ್ಧಿಯಲ್ಲಿ ಹೆಂಡತಿಯ ಪಾತ್ರ/ನಿಮ್ಮ ಕುಟುಂಬದ ಸದಸ್ಯರೊಂದಿಗೆ ನಿಮ್ಮ ಹೆಂಡತಿಯ ಸಂಬಂಧ/ನಿಮ್ಮ ಅಭಿವೃದ್ಧಿಯಲ್ಲಿ ನಿಮ್ಮ ಕುಟುಂಬದ ಪಾತ್ರ/ನಿಮ್ಮದು ಒಟ್ಟು ಕುಟುಂಬಾನಾ? ಅದರ ಅನುಕೂಲ /ಅನಾನುಕೂಲಗಳು/ಗಂಡ ಹೆಂಡತಿ ಒಟ್ಟಾಗಿ ಮಾಡಿದ ಕೆಲಸ/ಪ್ರವಾಸ/ಸದಾ ಆನಂದವಾಗಿರಲು ಏನು ಮಾಡ್ತಿದ್ರಿ?

೭. ಪರಿಸರದ ಹಿನ್ನೆಲೆ

ನೆಂಟರು ಇಷ್ಟರು/ಸ್ನೇಹಿತರ ಜತೆ ನಿಮ್ಮ ಸಂಬಂಧ/ಚಟಗಳು/ದೌರ್ಬಲ್ಯಗಳು/ಅವುಗಳನ್ನು ಮೆಟ್ಟಿ ನಿಂತ ರೀತಿ/ಪಾಠ ಕಲಿಸಿದ ಘಟನೆಗಳು/ಇತರರಿಗೆ ನೀವು ನೀಡಿದ ಸಹಕಾರ/ಗ್ರಾಮಕ್ಕೆ ನಿಮ್ಮ ಕೊಡುಗೆ/ಬೇರೆಯವರಿಂದ ನಿಮಗಾದ ಸಹಕಾರ/ಕಷ್ಟ ನಷ್ಟಗಳ ವಿವರ

೮. ಮಕ್ಕಳ ಭವಿಷ್ಯ

ಮಕ್ಕಳು/ಅವರ ವಿದ್ಯಾಭ್ಯಾಸ/ಅವರ ಇಷ್ಟಕಷ್ಟಗಳು/ಅವರೇನಾಗಬೇಕೆಂಬ ಆಸೆ ನಿಮ್ಮದು/ನಿಮ್ಮ ಅವರ ನಡುವಿನ ಸಂಬಂಧ/ ಅವರ ಬದುಕು ರೂಪಿಸಲು ನೀವು ಪಟ್ಟ ಶ್ರಮ/ಅವರನ್ನು ವ್ಯವಸಾಯಸ್ಥರನ್ನಾಗಿ ಮಾಡ್ತೀರಾ? ಹೌದು/ಇಲ್ಲ ಅಂದ್ರೆ ಯಾಕೆ? ಇಲ್ಲವಾದ್ರೆ ಬಹಳ ಜತನದಿಂದ ಸಂಕೇತಿಗಳು ಕಾಪಾಡಿಕೊಂಡು ಬಂದ ವ್ಯವಸಾಯ ಮುಂದೆ ಮಣ್ಣಾಗಬೇಕೆ? ನಿಮ್ಮ ವಿಚಾರಗಳು ಏನು? ಕೃಷಿ ಸಂಕೇತಿಗಳಲ್ಲಿ ಮುಂದೆ ನಿಲ್ಲಬಲ್ಲದೆ? ಕಿರಿಯರಿಗೆ ಆಸಕ್ತಿಯಿಲ್ಲವೆಂದರೆ ಅದಕ್ಕೆ ಯಾರು ಕಾರಣ/ ನಿಮ್ಮ ಹಿರಿಯರು ಈ ಪರಿಸ್ಥಿತೀನ ಯಾವ ರೀತಿ ನಿಭಾಯಿಸಿದ್ರು? ಸಂಕೇತಿಗಳ ಕೃಷಿಯ ಮುಂದಿನ ಭವಿಷ್ಯ ಏನು?

೯. ಜೀವನದುದ್ದಕ್ಕೂ ನೀವು ಅನುಸರಿಸಿದ ತತ್ವ/ಆದರ್ಶಗಳು/ಹಿರಿಯರ ವಿಚಾರಗಳು/ಮಾತುಗಳು/ಬಾಳಿಗೆ ದಾರಿದೀಪವಾದ ಘಟನೆಗಳು/ಪುಸ್ತಕಗಳು/ವ್ಯಕ್ತಿಗಳು.

೧೦. ಹೀಗೇ ಬಾಳಬೇಕೆಂಬ ಛಲ ಇತ್ತಾ? ನಿಮ್ಮ ಗುರಿಗಳು/ಆದ್ಯತೆಗಳು, ಅದನ್ನು ಸಾಧಿಸಲು ನೀವು ಅನುಸರಿಸಿದ ಮಾರ್ಗ, ನಿಮ್ಮ ಸಾಧನೆಗಳು, (ವೈಯಕ್ತಿಕ/ಕೌಟುಂಬಿಕ)ಬದುಕಿನಲ್ಲಿ ಬಾಳಿದ ರೀತಿಯಲ್ಲಿ ಸಂತೃಪ್ತಿ ಇದೆಯಾ? ಇನ್ನೂ ಚೆನ್ನಾಗಿ ಬಾಳಬಹುದಿತ್ತು ಎಂಬ ಕೊರತೆ ಇದೆಯಾ? ಅಂದುಕೊಂಡ ಗುರಿ ಸಾಧಿಸಿದ್ದೀರಾ? ಮುಂದಿನ ಯೋಜನೆಗಳು?

೧೧. ನಿಮ್ಮ ಸಂಕೇತಿ ಕೃಷಿ ಪರಂಪರೆಗೆ ನಿಮ್ಮ ಕೊಡುಗೆ/ಸಮುದಾಯದ ಅಭಿವೃದ್ಧಿಗೆ ನೀವು ಪಟ್ಟ ಶ್ರಮ/ಹಳ್ಳಿಗಳಲ್ಲಿ ಇನ್ನು ಮುಂದೆ ಸಂಕೇತಿಗಳು ಉಳಿಯಬಲ್ಲರೇ? ರಾಜಕೀಯ ವಿಚಾರಗಳು/ಸಮುದಾಯದ ಅಭಿವೃದ್ಧಿಗಿಂತ ವೈಯಕ್ತಿಕ ಅಭಿವೃದ್ಧಿ ಮುಖ್ಯವಾ? ಸಮುದಾಯದಿಂದ ನಾವೋ ನಮ್ಮಿಂದ ಸಮುದಾಯವೋ? ಸಂಕೇತಿ ಒಗ್ಗಟ್ಟು ಹ್ಯಾಗೆ? ನಿಮ್ಮ ವಿಚಾರಗಳು ಏನು?

೧೨. ತೋಟದಲ್ಲಿ ಕೃಷಿ ಮಾಡುತ್ತಾ ವೇದಗಳನ್ನು ಕಲಿಯುತ್ತಿದ್ದ ರೀತಿ?

೧೩. ಅವರ ದೃಢಕಾಯ, ಕತ್ತಿ, ಗುರಾಣಿ, ಇತ್ಯಾದಿ ಲಭ್ಯವೇ? ಅನುಭವಿಸಿದ ಯಾವುದಾದರೂ ಕ್ಷಾಮದ ನೆನಪು, ನದಿಯ ಒಡನಾಟ, ಸ್ಥಳಪುರಾಣ (ಕೆರೆ, ನೀರಾವರಿ, ಫಲವತ್ತತೆ) ಸಂಕೇತಿಗಳು ಕೆರೆ, ಮಂಟಪ, ದೇವಾಲಯ ಕಟ್ಟಿಸಿದ್ದು, ಗಡ್ಡೆ ರೋಗ (ಹಿರಿಗನಹಳ್ಳಿ), ಬೇಚಿರಾಕ್ ಗ್ರಾಮಗಳ ಬಗೆಗೆ, ಸಂಕೇತಿಗಳು ಮಾತ್ರ ತೊರೆದ ನೆಲೆಗಳ ಬಗೆಗೆ, ಬೇಸಾಯ- ಅನುಷ್ಠಾನ ಹೇಗೆ ಹೊಂದಿಸಿಕೊಂಡರು

ವ್ಯವಸಾಯ ಸಾಧನೆ-ಬಹುಮಾನ: ಗೊದಮಟ್ಟೆ, ಸಂಕೇತಿ, ಸ್ವಂತ ಉಳುಮೆ? ಇತರ ದುಡಿಮೆ? ಪ್ರಗತಿಶೀಲ ರೈತ/ತೋಟದ ಪ್ರಾದೇಶಿಕ ಭಿನ್ನತೆ, ತೋಟದ ಪಾರಿಭಾಷಿಕ ಪದಗಳು, ಹೊಲ, ಪ್ರಾದೇಶಿಕ ಸ್ವೀಕಾರ, ವನಭೋಜನ, ಜಾನಪದ ಸಂಪ್ರದಾಯ (ಹಾಡು, ಪೂಜೆ), ವಿಧಿ, ನಿಷೇಧ (ಸೋಮವಾರ ಉಳದಿರುವುದು), ಗೋಚಿಕಿತ್ಸೆ? ಜಾತ್ರೆಯಲ್ಲಿ ಎತ್ತು ಮಾರುವುದು, ಹಸುಗಳ ಹೆಸರುಗಳು, ಸುಳಿ, ಉಪಕಸುಬು, ವಾಣಿಜ್ಯ ಬೆಳೆ? ತರಕಾರಿ? ರಾಗಿ ಬಳಕೆ? ವೃಕ್ಷ, ಪ್ರಾಣಿ ಆರಾಧನೆ.

ಅನುಬಂಧ - ೨

ಬೆಳೆಗಳ ಬಗೆಗಿನ ವಿಶೇಷ ಮಾಹಿತಿ

ಅನುಬಂಧ - ೩

ಸಾಮಾಜಿಕ ಪ್ರಜ್ಞೆಗೆ ನಮಸ್ಕಾರ

ರುದ್ರಪಟ್ಣ ಸಣ್ಣತೊಟ್ಟಿಮನೆಯ ಕಾಂತಯ್ಯ ಶ್ರೀ ವೆಂಕಟರಮಣಯ್ಯ (ಅಣ್ಯ)

ಪೂರ್ವಿಕರು


ಹಾಸನಜಿಲ್ಲೆಯ ಪವಿತ್ರ ಕಾವೇರಿ ದಡದಲ್ಲಿರುವ ರುದ್ರಪಟ್ಣವು ಪ್ರಖ್ಯಾತ ಸಂಗೀತಗಾರರ ತವರು. ಅದು ಸಂಕೇತಿ ಸಮುದಾಯದ ಮುಖ್ಯಕೇಂದ್ರಗಳಲ್ಲಿ ಒಂದು; ಅದರಲ್ಲೂ 'ಬೆಟ್ಟದಪುರ ಸಂಕೇತಿ'ಗಳ ಪ್ರಮುಖ ಸ್ಥಾನ. ಆ ಗ್ರಾಮದ ಸಣ್ಣತೊಟ್ಟಿ ಮನೆ ಮತ್ತು ದೊಡ್ಡತೊಟ್ಟಿ ಮನೆ ಬಹು ಗಣ್ಯವಾದಂಥವು. ಸಣ್ಣತೊಟ್ಟಿಮನೆಯ ಭಾರದ್ವಾಜವಂಶದ ಕುಲದಲ್ಲಿ ಜನಿಸಿದವರು ಶ್ರೀ ಲಕ್ಷ್ಮೀಕಾಂತಯ್ಯ. ಅವರು ತಮ್ಮ ಅಜ್ಜ ನರಸಿಂಹಯ್ಯ ಮತ್ತು ತಂದೆ ಶ್ರೀನಿವಾಸಯ್ಯನವರಂತೆ ತಾವೂ ಅಧ್ಯಾಪಕ ವೃತ್ತಿಯನ್ನು ಮಾಡಿ ಕೃಷಿಯನ್ನೂ ಮುಂದುವರಿಸಿದರು. ದಕ್ಷಿಣಕಾಶಿ ರಾಮನಾಥಪುರದ ಶ್ರೀ ಸುಬ್ರಹ್ಮಣ್ಯೇಶ್ವರ ದೇವಾಲಯದ ರಥೋತ್ಸವದ ಅಂಗವಾಗಿ ನಡೆಯುತ್ತಿದ್ದ ಅನ್ನ ಸಂತರ್ಪಣೆಯನ್ನು ಬೆಟ್ಟದಪುರದ ಸಂಕೇತಿ ಸಮುದಾಯದವರೇ ಆದ ದಿವಾನ್ ಗೋವಿಂದರಾಯರು ವಹಿಸಿಕೊಂಡಿದ್ದರು. ಅವರಾದರೂ ದೂರದ ಇಂದೂರ್ ಪ್ರಾಂತದ ದೇವಾಸ್‌ನ ರಾಜರಿಗೆ ದಿವಾನರಾಗಿದ್ದವರು. ದೂರದಲ್ಲಿದ್ದ ಅವರ ಪರವಾಗಿ ಸಂತರ್ಪಣೆಯ ನಿಗಾ ವಹಿಸುತ್ತಿದ್ದವರು ಲಕ್ಷ್ಮೀಕಾಂತಯ್ಯನವರು. ಒಮ್ಮೆ ಗೋವಿಂದರಾಯರು ಅಸ್ವಸ್ಥರಾದರು. ಅದರಿಂದಾಗಿ ಅನ್ನಸಂತರ್ಪಣೆ ನಿಲ್ಲಿಸಬಾರದೆಂದು ಸಾಲಸೋಲ ಮಾಡಿ ಅನ್ನಸಂತರ್ಪಣೆಯನ್ನು ಲಕ್ಷ್ಮೀಕಾಂತಯ್ಯನವರು ಮುಂದುವರಿಸಿದರು. ಎರಡು-ಮೂರು ವರ್ಷ ಅನ್ನಸಂತರ್ಪಣೆಯ ಬಾಬ್ತಿನ ಹಣ ದಿವಾನ್ ಗೋವಿಂದರಾಯರಿಂದ ಬರದೇ ಹೋಯಿತು. ಗೋವಿಂದರಾಯರು ಈ ಮಧ್ಯೆ ಕಾಲವಾಗಿಬಿಟ್ಟರು. ಬಡತನದಲ್ಲಿದ್ದ ಲಕ್ಷ್ಮೀಕಾಂತಯ್ಯನವರಿಗೆ ಸಾಲವನ್ನು ತೀರಿಸುವುದು ಸಾಧ್ಯವಾಗದೆ ಹೋಯಿತು. ಅದೇ ಕೊರಗಿನ ಭಾರದಿಂದ ಅವರು ಮೃತರಾದರು. ಆನಂತರ ಅವರ ಹಿರಿಯ ಮಗ ಶ್ರೀ ವೆಂಕಟರಮಣಯ್ಯನವರು ತಮ್ಮ ಧರ್ಮಪತ್ನಿಯವರಿಗೆ ತವರಿನಿಂದ ಬಂದಿದ್ದ ಗದ್ದೆ ತೋಟಗಳನ್ನು ಒತ್ತೆ ಇಟ್ಟು ಸಾಲ ತೀರಿಸಿ ಋಣಮುಕ್ತರಾದರು.

ರುದ್ರಪಟ್ಣ ಲಕ್ಷ್ಮೀಕಾಂತಯ್ಯನವರಿಗೆ ಜನಿಸಿದ ಏಳು ಗಂಡು ಮಕ್ಕಳು ಮತ್ತು ಒಬ್ಬ ಮಗಳ ಪೈಕಿ ಶ್ರೀ ವೆಂಕಟರಮಣಯ್ಯನವರೇ (ಜ: ಡಿ. 1900) ಜ್ಯೇಷ್ಠರು. ಆ ಕಾಲದ ವೈದ್ಯಕೀಯ ಸವಲತ್ತುಗಳ ಕೊರತೆಯ ಸನ್ನಿವೇಶದಲ್ಲಿ ಅವರ ಮೂವರು ಸೋದರರು ಸಣ್ಣ ವಯಸ್ಸಿನಲ್ಲೇ ಮೃತರಾದರು. ಆ ತಲೆಮಾರಿನಲ್ಲಿ ಆ ವಂಶದಲ್ಲಿ ಪದವೀಧರರೂ, ಇಂಜಿನಿಯರುಗಳೂ, ಉನ್ನತ ನೌಕರಿ ಮಾಡಿದವರೂ ಕಾಣಸಿಗುತ್ತಾರೆ. ಆ ಮುಂದಿನ ತಲೆಮಾರುಗಳಲ್ಲಿ ವಿದ್ಯೆ, ನೌಕರಿ ಮತ್ತು ಹವ್ಯಾಸಗಳಲ್ಲಿ ಆಧುನಿಕ ವೈವಿಧ್ಯಗಳೂ ಸಾಹಸಗಳೂ ಕಾಣುತ್ತವೆ.

ವೆಂಕಟರಮಣಯ್ಯನವರು ತಮ್ಮ 19ನೆಯ ವಯಸ್ಸಿನಲ್ಲಿ ಶ್ರೀಮತಿ ಪುಟ್ಟಮ್ಮನವರನ್ನು ವಿವಾಹವಾದರು. ಐವರು ಗಂಡುಮಕ್ಕಳನ್ನೂ ಐವರು ಹೆಣ್ಣು ಮಕ್ಕಳನ್ನೂ ಪಡೆದರು.

ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಎಂಟ್ರೆನ್ಸ್ (ಇಂಟರ್‌ಮೀಡಿಯಟ್) ಶಿಕ್ಷಣವನ್ನು ಮುಗಿಸಿಕೊಂಡ ವೆಂಕಟರಮಣಯ್ಯನವರ ಜೀವನದ ಹೆಜ್ಜೆಗಳು ವಿಶಿಷ್ಟವೆನಿಸುತ್ತವೆ. ಅವರಿಗೆ ಬಿ.ಎ. ಪದವಿ ಮಾಡಿ ಕಾನೂನು ಪದವಿಗಾಗಿ ಓದಲು ಬಹಳ ಆಸೆಯಿದ್ದಾಗಲೂ ಸಂಸಾರದಭಾರದಿಂದ ಮತ್ತು ತಂದೆಯವರ ಬಲವಂತದಿಂದ ದುಡಿಯಲು ಪ್ರಾರಂಭಿಸಿದರು. ಮೊದಲಿಗೆ ಅವರು ನೌಕರಿಗೆ ಸೇರಿದ್ದು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ. ಲಂಚ ಮುಟ್ಟದ ಅವರಿಂದ ಉಳಿದವರಿಗೆ ಕಿರಿಕಿರಿಯೇ ಆಯಿತು. ಆ ಜಾಗ ತಮಗಲ್ಲವೆಂದು ಆ ನೌಕರಿಯನ್ನೇ ತೊರೆದರು. ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದರು. ಯಾರೂ ಹೋಗದ ಕೊಪ್ಪದ ಶಾಲೆಯಲ್ಲೂ ಎರಡು

ರುದ್ರಪಟ್ಣ ಸಣ್ಣತೊಟ್ಟಿಮನೆಯ ಶ್ರೀ ವೆಂಕಟರಮಣಯ್ಯ ಅವರ ವಂಶವೃಕ್ಷ



ವರ್ಷ ಸ್ವಯಂ ಪ್ರೇರಣೆಯಿಂದ ಸೇವೆ ಸಲ್ಲಿಸಿದರು. ಆದರೆ ಅವರ ಸಾಮರ್ಥ್ಯವು ದೊಡ್ಡದು ಮತ್ತು ಬಹುಮುಖವಾದುದಾಗಿತ್ತು. ಮಹತ್ವಾಕಾಂಕ್ಷಿಗಳೂ ಆಗಿದ್ದರು. ಹಾಗಾಗಿ ಅದನ್ನೂ ಬಿಟ್ಟು ವ್ಯವಸಾಯದಲ್ಲಿ ತೊಡಗಿಕೊಂಡರು. ತಂದೆಯವರ ಮುನಿಸಿಗೆ ಕಾರಣರಾದರು, ಮನೆಯನ್ನೇ ತೊರೆದು ಹತ್ತಿರದ ರಾಗಿಮರೂರಿನಲ್ಲಿ 15 ಎಕರೆ ಜಮೀನು ಕೊಂಡರು. ಆ ಜಮೀನು ಏಳಿಗೆ ಕೊಡುವುದಿಲ್ಲವೆಂಬ ಪ್ರತೀತಿ ಇತ್ತು. ಜನ ಹೆದರಿಸಿದರು. ಆದರೂ ಅಲ್ಲಿಯೇ ಮನೆ ಕಟ್ಟಿಕೊಂಡು ನೆಲೆಸಿದರು. ದೊಡ್ಡದೊಂದು ಕೊಳವನ್ನೇ ಮನೆಯವರ ಜತೆಗೂಡಿ ಸ್ವತಃ ತೋಡಿ ತೆಂಗು, ಬಾಳೆ, ಬತ್ತ ಬೆಳೆಯತೊಡಗಿದರು. ಮತ್ತೆ ದೊಡ್ಡಹರವೆಯಲ್ಲಿ 40 ಎಕರೆ ಕಾಡು ಜಮೀನು ಕೊಂಡರು. ಆನೆಗಳಿಂದಲೂ ಹುಲಿಗಳಿಂದಲೂ ತುಂಬಿದ ಆ ಕಾಡಿಗೆ ಯಾರೂ ಪ್ರವೇಶಿಸುತ್ತಿರಲಿಲ್ಲ. ಅಲ್ಲಿಯೇ ಧೈರ್ಯಮಾಡಿ ನೆಲೆಸಿದರು. ಹುಲಿಯೇ ಎದುರು ನಿಂತ ಸಂದರ್ಭವನ್ನೂ ಧೈರ್ಯದಿಂದ ಎದುರಿಸಿ ಪಾರಾದ ಘಟನೆಯೂ ನಡೆಯಿತು. ಆದರೂ ಮೈಸೂರಿನಿಂದ ಅತ್ಯುತ್ತಮ ತಳಿ ರಾಸು ತಂದು ವೃದ್ಧಿಸಿ 100 ರಾಸು ಸಾಕಿದರು. ಜಮೀನಿನ ಫಸಲನ್ನೂ ಹಸುಗಳ ಹಾಲನ್ನೂ ಸುತ್ತಣ ಹಳ್ಳಿಗಳಲ್ಲಿ ಉಚಿತವಾಗಿ ವಿತರಿಸಿದರು. ಹೀಗೆ ವಿತರಿಸುವುದರಲ್ಲಿಯೇ ಬಹುದೊಡ್ಡ ಆನಂದವನ್ನು ಕಾಣುತ್ತಿದ್ದರು.

ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಸತ್ಯಾಗ್ರಹ ಚಳವಳಿಗೆ ದುಮುಕಿದರು. ವಿದೇಶಿ ಪ್ಯಾಂಟು ಶರ್ಟುಗಳನ್ನು ದಹಿಸಿ ಖಾದಿ ತೊಟ್ಟರು. ಮಿತವಸ್ತ್ರವೂ ಅವರ ವ್ರತವಾಗಿತ್ತು. ಭಗವದ್ಗೀತೆ, ರಾಮಾಯಣ, ಭಾರತ, ಪುರಾಣ, ಉಪನಿಷತ್ತುಗಳ ಜತೆಗೆ ಕಾನೂನು ಕಲಿತರು. ಬಲಭೀಮನಂತಿದ್ದ ಅವರು ಅತ್ಯಂತ ಪ್ರಾಮಾಣಿಕ, ತತ್ತ್ವಬದ್ಧ, ನೇರನಡೆಯ ಧೀರರಾಗಿ ಬಾಳಿದರು. ಸುತ್ತಣ ಗ್ರಾಮಸ್ಥರಿಗೆ ಉಚಿತ ಕಾನೂನು ನೆರವು ನೀಡಿದರು. ವ್ಯಾಜ್ಯಗಳನ್ನು ಪರಿಹರಿಸುತ್ತಿದ್ದರು, ವಕೀಲರಿಗೂ ಸಲಹೆ ನೀಡಬಲ್ಲ ಜಾಣ್ಮೆ ಅವರಿಗಿತ್ತು. ಈಮಧ್ಯೆ ಕೃಷಿಯಿಂದ ಏನೂ ಏಳಿಗೆ ಬರದೇ ಸಾಲ ಸೋಲ ಜಾಸ್ತಿ ಆಗಿ ಮಕ್ಕಳೆಲ್ಲಾ ವಿದ್ಯಾಭ್ಯಾಸದ ವಯಸ್ಸಿಗೆ ಬಂದ ಕಾರಣ ನಿರ್ವಾಹವಿಲ್ಲದೇ 1948ರಲ್ಲಿ ವಯಸ್ಕರ ಶಿಕ್ಷಣ ಸೇವೆಗೆ ಸೇರಿದರು, ವಿದ್ಯಾಪೀಠದ ಪ್ರಾಂಶುಪಾಲರಾಗಿ ಹತ್ತು ವರ್ಷ ದುಡಿದರು. 1950ರಲ್ಲಿ ಮಕ್ಕಳ ಶಿಕ್ಷಣಕ್ಕಾಗಿಯೇ ತಮ್ಮ ಸಂಸಾರವನ್ನು ಬೆಂಗಳೂರಿಗೆ ಸ್ಥಳಾಂತರಿಸಿದರು. ಆ ಕುಟುಂಬದ ಪ್ರಗತಿಯ ದೃಷ್ಟಿಯಿಂದ ಅದೊಂದು ಮೈಲುಗಲ್ಲಾಯಿತು. ಬೆಂಗಳೂರು, ಕೋಲಾರ, ಹಾಸನ, ರಾಮನಗರ, ಮಂಡ್ಯ, ಮೈಸೂರು ಮೊದಲಾದ ಕಡೆಗಳಲ್ಲಿ ಸಂಚರಿಸಿ ವಯಸ್ಕರ ಶಿಕ್ಷಣವನ್ನು ವಿಸ್ತರಿಸಿದರು. ಆ ಕ್ಷೇತ್ರದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ಬಯಲಿಗೆಳೆದು ನಿವಾರಿಸಿದರು. ಧರ್ಮನಿಷ್ಠ, ಹಠವಾದಿ, ಸತ್ಯವಾದಿ, ಕಷ್ಟಸಹಿಷ್ಣುವಾಗಿ 'ದೊಡ್ಡ ತೋಟದಯ್ಯ'ನಾಗಿ ಬೆಳೆದಿದ್ದವರು ಇದೀಗ ಸ್ವಾತಂತ್ರ್ಯ ಹೋರಾಟಗಾರರೂ ಸಮಾಜಸೇವಕರೂ ಆಗಿ ಬೆಳೆದರು. ಹಳ್ಳಿಗಳ ರೈತರನ್ನು ಸಂಘಟಿಸಿ ಶಿಕ್ಷಣ ನೀಡಿದರು. ಆ ಕಾಲದಲ್ಲಿ ಸಮುದ್ರಯಾನ ಮಾಡಿ ಮಡಿವಂತ ಸಮಾಜದಿಂದ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿದ್ದವರ (London Party) ಪರವಾಗಿ ನಿಂತರು, ಬೆಂಬಲಿಸಿದರು. ತಮ್ಮ ಮೂವರು ಗಂಡುಮಕ್ಕಳನ್ನೂ ಇಂಜಿನಿಯರುಗಳನ್ನಾಗಿ ಮಾಡಿದರು. ಆ ಕಾಲಕ್ಕೇ ಒಬ್ಬ ಮಗಳು ಪದವೀಧರಳಾದಳು, ಸಂಶೋಧಕಿಯಾಗಿ ಹೆಸರು ಮಾಡಿದಳು.

ವೆಂಕಟರಮಣಯ್ಯನವರ ಪತ್ನಿ ಪುಟ್ಟಮ್ಮನವರು ಹುಟ್ಟಿದ್ದು ಸಾಲಿಗ್ರಾಮದಲ್ಲಿ. ಪುಟ್ಟಮ್ಮ ಆರು ತಿಂಗಳ ಮಗುವಾಗಿದ್ದಾಗಲೇ ತಂದೆತಾಯಿ ಇಬ್ಬರೂ ತೀರಿಹೋಗಿದ್ದರು. ತಮ್ಮ ದೊಡ್ಡಮ್ಮನ ಮನೆಯಲ್ಲಿ ಬೆಳೆದ ಅವರಿಗೆ 15ನೆಯ ವಯಸ್ಸಿನಲ್ಲಿ ವಿವಾಹವಾಯಿತು. ಚೆಲುವೆಯಾಗಿದ್ದ ಆಕೆಯ ವಿವಾಹವೂ ವಿಶೇಷ ರೀತಿಯದು. ಅದು 1919ನೆಯ ಇಸವಿ. ವೆಂಕಟರಮಣಯ್ಯನವರು ಸಾಲಿಗ್ರಾಮಕ್ಕೆ ಬಂದಾಗ ನೀರು ಸೇದಿಕೊಂಡು ಸ್ನಾನಮಾಡಲು ಬಾವಿಯ ಬಳಿಗೆ ಬಂದಿದ್ದರು. ಬಾಲಕಿ ಪುಟ್ಟಮ್ಮ ವೆಂಕಟರಮಣಯ್ಯನವರಿಗೆ ತಾನೇ ನೀರು ಸೇದಿಕೊಟ್ಟಳು. ಅವರಿಬ್ಬರ ಮೊದಲ ಭೇಟಿ ಆದದ್ದು ಹಾಗೆ. ಆ ಮೊದಲ ನೋಟದಲ್ಲೇ ಅವರಲ್ಲಿ ಪ್ರೇಮ ಅಂಕುರಿಸಿತ್ತು. ಇದು ಆ ಕಾಲಕ್ಕೆ ಹೊಸ ರೀತಿ.

ರಾಗಿಮರೂರಿನಲ್ಲಿದ್ದ ದಿನಗಳಲ್ಲಿ ಪುಟ್ಟಮ್ಮನವರು ವೆಂಕಟರಮಣಯ್ಯನವರ ಬೇಸಾಯದ ಒಡನಾಡಿಯಾಗಿದ್ದರು. ಬಡತನವನ್ನೂ ಕಷ್ಟಗಳನ್ನೂ ಎದುರಿಸುವಲ್ಲಿ ಜತೆಯಾಗಿ ನಿಂತರು. ಅಷ್ಟು ಕಷ್ಟಕಾರ್ಪಣ್ಯಗಳ ನಡುವೆಯೂ ತಮ್ಮ ಹತ್ತೂ ಮಕ್ಕಳನ್ನು ಬೆಳೆಸಿದ ಮಹಾತಾಯಿಯಾದರು. ಸರಳಜೀವಿ ಪುಟ್ಟಮ್ಮನವರು ಮರಳಿನ ಮೇಲೆ ಅಕ್ಷರ ತಿದ್ದಿ ಮೂರನೆಯ ತರಗತಿಯವರೆಗೆ ಕಲಿತಿದ್ದರು. ನಿತ್ಯವೂ ಕಾವೇರಿಯ ಪವಿತ್ರಸ್ನಾನ ಮಾಡಿ ಸಾಂಪ್ರದಾಯಿಕ ಗಂಡಿಸೀರೆ ಉಡುತ್ತಿದ್ದ ಆಕೆ ದಯಾಳುವಾಗಿದ್ದರು; ದೈವಭಕ್ತೆಯೂ, ಸೂಕ್ಷ್ಮಮತಿಯೂ ಆಗಿದ್ದರು. 20 ವರ್ಷದ ಅವರ ಹಿರಿಯಮಗ ಪ್ಲೇಗ್ ರೋಗದಿಂದ ಮೃತರಾದಾಗ ಆ ತಾಯಿ ತತ್ತರಿಸಿ ಹೋದರು. ಆ ಆಘಾತದಿಂದ 10

ವರ್ಷದ ಇನ್ನೊಬ್ಬ ಮಗನೂ ಒಂದೇ ವಾರದ ಅಂತರದಲ್ಲಿ ಮೃತನಾದಾಗ ಆಕೆಯ ತೊಳಲಾಟಕ್ಕೆ ಎಲ್ಲೆ ಇಲ್ಲವಾಯಿತು. ಕೊನೆಯವರೆಗೂ ಆ ನೋವಿನಿಂದ ಎಚ್ಚೆತ್ತುಕೊಳ್ಳುವುದು ಅವರಿಗೆ ಸಾಧ್ಯವಾಗದೆ ಹೋಯಿತು. ಮಕ್ಕಳ ಅಭಿವೃದ್ಧಿ, ಮುಂಜಿ, ಮದುವೆಯ ಶುಭಕಾರ್ಯಗಳನ್ನು ನೆರವೇರಿಸಿ ತೀರ್ಥಯಾತ್ರೆಗಳನ್ನು ಮಾಡಿ ಮೊಮ್ಮಕ್ಕಳನ್ನು ಕಂಡು 1979ರ ಅಕ್ಟೋಬರ್ 29ರಂದು ಆಕೆ ಸ್ವರ್ಗಸ್ಥರಾದರು. ಇದಾದಮೇಲೂ ಹತ್ತು ವರ್ಷ ಜೀವಿಸಿದ್ದ ವೆಂಕಟರಮಣಯ್ಯನವರು 1989ರ ಜುಲೈ 3ರಂದು ಇಹಲೋಕವನ್ನು ತ್ಯಜಿಸಿದರು.

ಈ ವಂಶವೃಕ್ಷದ ಮೂಲಪುರುಷರಾದ ರುದ್ರಪಟ್ಣ ನರಸಿಂಹಯ್ಯನವರ ವಂಶದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಅಧ್ಯಾಪಕರು, ಕೃಷಿಕರು, ಸಮಾಜ ಸೇವಕರು, ಪ್ರಾಜೆಕ್ಟ್ ಮ್ಯಾನೇಜರ್, ಜಟಾಪಾಠಿಗಳು, ಅರಣ್ಯಜೀವಿಗಳ ಛಾಯಾಗ್ರಹಣ ನಿಪುಣರು, ಚೀಫ್ ಇಂಜಿನಿಯರ್, ಜಹಗೀರುದಾರರು, ಮಿನರಲ್ ಆಫೀಸರ್, ವಿಜ್ಞಾನಿ, ನ್ಯಾಯವಾದಿ, ಸಂಸ್ಥೆಗಳ ವ್ಯವಸ್ಥಾಪಕರು, ಭಾರತೀಯ ಸೇನೆಯ ಅಧಿಕಾರಿಗಳು, ಗಣಿತ ವಿಜ್ಞಾನ ಮತ್ತು ಗಣಕ ವಿಜ್ಞಾನದ ಪರಿಣತರು, ಪರಿಣತ ವೈದ್ಯರು ಇದ್ದಾರೆ. ವೆಂಕಟರಮಣಯ್ಯನವರ ಹಿರಿಯ ಮಗ ಆರ್.ವಿ. ಸೂರ್ಯನಾರಾಯಣ ಅವರು Central Water and Power Commissionನ Commissioner ಆಗಿದ್ದರು. ಕೇಂದ್ರ ಸರ್ಕಾರದ Minister for Waterways ಅವರಿಗೆ ತಾಂತ್ರಿಕ ಸಲಹೆಗಾರರೂ ಆಗಿದ್ದರು. ಇವರ ಪತ್ನಿ ಡಾ. ನಾಗರತ್ನಮ್ಮ Ph.D.(Maths) ಡೆಲ್ಲಿ ಯೂನಿವರ್ಸಿಟಿಯಲ್ಲಿ ಪ್ರಾಧ್ಯಾಪಕರಾಗಿದ್ದರು.

ಶ್ರೀಮತಿ ಸುಮಿತ್ರಮ್ಮ - ಶ್ರೀ ಹೆಚ್.ಎಸ್.ಅನಂತರಾಮು

ವೆಂಕಟರಮಣಯ್ಯನವರ ಜ್ಯೇಷ್ಠ ಪುತ್ರಿ ಜಯಲಕ್ಷ್ಮಿ ಅವರು ವಿವಾಹವಾದದ್ದು ರುದ್ರಪಟ್ಣದ ಜಹಗಿರಿ ವಂಶದ ಶ್ರೀ ಆರ್.ಜಿ. ಕೃಷ್ಣಪ್ಪನವರನ್ನು. ಕೃಷ್ಣಪ್ಪನವರ ಮುತ್ತಜ್ಜನವರು ವೈದಿಕರಾಗಿದ್ದರು, ಯಜ್ಞವನ್ನು ನೆರವೇರಿಸಿದ್ದರು. ಆ ಕಾರಣದಿಂದಾಗಿ ಅವರಿಗೆ ಜಹಗೀರು ದೊರೆತಿತ್ತು. ಕೃಷ್ಣಪ್ಪನವರು ಅಂಗಡಿಯ ವ್ಯಾಪಾರ ನಡೆಸುತ್ತಿದ್ದರು, ಲೆಕ್ಕಾಧಿಕಾರಿಯ ಕೆಲಸವೂ ಮಾಡುತ್ತಿದ್ದರು. ಶಾಂತಾ, ಸರಸ್ವತಿ, ಕೌಸಲ್ಯ, ಸುಮಿತ್ರ, ದಾಕ್ಷಾಯಿಣಿ ಸಾವಿತ್ರಿ, ಗಾಯತ್ರಿ - ಇವರು ಆ ದಂಪತಿಯ ಏಳು ಜನ ಹೆಣ್ಣುಮಕ್ಕಳು. ಅವರಲ್ಲಿ ಶ್ರೀಮತಿ ಸುಮಿತ್ರಮ್ಮ ನಾಲ್ಕನೆಯವರು (ಜ: 19-02-1949). ರುದ್ರಪಟ್ಣದ ಪಕ್ಕದ ಬಸವಾಪಟ್ಟಣದಲ್ಲಿ ಅವರ ಪ್ರೌಢಶಾಲಾ ಶಿಕ್ಷಣ ನಡೆಯಿತು. ಹೆಣ್ಣುಮಕ್ಕಳು ಹೊಳೆ ಹಾಯ್ದು ಗದ್ದೆಗಳ ಬಯಲಲ್ಲಿ ನಡೆದು ಮೂರು ಕಿಲೋಮೀಟರ್ ದೂರವನ್ನು ಸವೆಸಿ ಶಿಕ್ಷಣ ಪಡೆಯುವುದು ಆ ಕಾಲಕ್ಕೆ ಹೊಸ ಉಪಕ್ರಮದ ಭಾಗವಾಗಿತ್ತು. ರುದ್ರಪಟ್ಣದವರಾದ ಸುಮಿತ್ರ ಸಹಜವಾಗಿಯೇ ಚೆನ್ನಾಗಿ ಹಾಡುತ್ತಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಮುಂಚೂಣಿಯಲ್ಲಿರುತ್ತಿದ್ದರು. ಗಮಕ ರೂಪಕಗಳಲ್ಲಿ ಭಾಗವಹಿಸಿ ಒಳ್ಳೆಯ ಹೆಸರು ಪಡೆದಿದ್ದರು. ಅವರ ಅಭಿರುಚಿಗೆ ತಕ್ಕಂತೆ ಮುಂದೆ ಅವರು ದೆಹಲಿ ವಿಶ್ವವಿದ್ಯಾಲಯದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಬಿ.ಎ. (ಆನರ್ಸ್) ಪದವಿ ಪಡೆದರು. ಖ್ಯಾತ ವಿದ್ವಾಂಸ ಶ್ರೀ ಟಿ.ಎಸ್. ಸುಬ್ರಹ್ಮಣ್ಯಂ ಅವರ ಪಟ್ಟಶಿಷ್ಯೆ. ಶಾಲಾ ಕಾಲೇಜುಗಳ ದಿನದಿಂದಲೂ ಸಂಗೀತ ಸ್ಪರ್ಧೆಗಳಲ್ಲಿ ಅವರು ಪಡೆದ ಪ್ರತಿಷ್ಠಿತ ಬಹುಮಾನಗಳು ಹಲವು. ಆದರೆ ವೃತ್ತಿ ಮಾಡಿದ್ದು ಸಿಂಡಿಕೇಟ್ ಬ್ಯಾಂಕ್‌ನಲ್ಲಿ. 35 ವರ್ಷಗಳ ದೀರ್ಘಸೇವೆಯ ನಂತರ (1974-2009) ನಿವೃತ್ತರಾದದ್ದು ಅಸಿಸ್ಟೆಂಟ್ ಮ್ಯಾನೇಜರಾಗಿ. ಕಠಿಣ ಪರಿಶ್ರಮ ಮತ್ತು ಹರಿತವಾದ ಬುದ್ಧಿ ಇದ್ದ ಸಾವಿತ್ರಮ್ಮ ಯಾವುದೇ ಜವಾಬ್ದಾರಿಗಳನ್ನೂ ಸಂತೋಷವಾಗಿ ವಹಿಸಿಕೊಂಡು ಪೂರ್ಣಗೊಳಿಸುತ್ತಿದ್ದರು. ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಅವರ ಪತಿ ಶ್ರೀ ಹೆಚ್.ಎಸ್. ಅನಂತರಾಮು (ಜ: 1-04-1947). ಬಿ.ಎಸ್‌ಸಿ. ಪದವೀಧರರಾದ ಅನಂತರಾಮು ಭಾರತ್ ಅರ್ಥ್ ಮೂವರ್ಸ್‌ನಲ್ಲಿ ದೀರ್ಘಸೇವೆ ಸಲ್ಲಿಸಿ (1969-2007) ಅಕೌಂಟೆಂಟ್ ಆಗಿ ನಿವೃತ್ತರಾಗಿದ್ದಾರೆ. ದಕ್ಷತೆ ಮತ್ತು ಕಠಿಣ ದುಡಿಮೆಗೆ ಹೆಸರಾದ ಅನಂತರಾಮು ಎಲ್ಲ ಜವಾಬ್ದಾರಿಗಳನ್ನೂ ಸಂಸ್ಥೆಯ ಮೇಲಧಿಕಾರಿಗಳು ಮೆಚ್ಚುವಂತೆ ನಿರ್ವಹಿಸಿದರು. 2006ರಲ್ಲಿ ಸಂಸ್ಥೆಯು ಅವರ ಸೇವಾಶ್ರೇಷ್ಠತೆಗಾಗಿ Quality Certificate ಕೊಟ್ಟು ಪುರಸ್ಕರಿಸಿತು.

ಸೇಲಂ ಶ್ರೀನಿವಾಸಯ್ಯ ಅವರ ವಂಶಜರಾದ ಹುಣಸೂರು ಶ್ರೀ ಹೆಚ್.ಎಸ್. ಸುಬ್ರಹ್ಮಣ್ಯಂ ಅವರ ಆರು ಮಕ್ಕಳ ಪೈಕಿ ಅನಂತರಾಮು ಜ್ಯೇಷ್ಠ ಪುತ್ರ. ಅನಂತರಾಮು ಅವರ ತಾಯಿ ಶ್ರೀಮತಿ ನರ್ಮದಾ ಬೆಟ್ಟದಪುರದವರು.

ಶಾಂತ ಸ್ವಭಾವದ ಅನಂತರಾಮು ಸ್ನೇಹಶೀಲ, ಸಹಾಯಶೀಲ, ಕುತೂಹಲಿ, ಎಲ್ಲ ರೀತಿಯ ಸಂಗೀತದಲ್ಲಿ ಆಸಕ್ತ, ಒಳ್ಳೆಯ ಓದುಗ.

ಈ ದಂಪತಿಗಳ ಏಕಮಾತ್ರ ಪುತ್ರ ಬಿ.ಎ.ಅಮಿತ್‌ಕುಮಾರ್ ಆಟೋಮೊಬೈಲ್ ಡಿಪ್ಲೊಮಾ ಶಿಕ್ಷಣದ ಜೊತೆಗೆ ಅವರು ಮೆಕಾನಿಕಲ್ ಎಂಜಿನಿಯರಿಂಗ್‌ನಲ್ಲಿ BE ಪದವಿಯನ್ನೂ ಪಡೆದಿದ್ದಾರೆ. ಸುಮಿತ್ರಮ್ಮ ತಮ್ಮ 61ನೆಯ ವಯಸ್ಸಿನಲ್ಲಿ (15-11-2009) ವಿಧಿವಶರಾದರು. ಸೌಮ್ಯ ಸ್ವಭಾವದ ಸುಮಿತ್ರಮ್ಮ ಸ್ನೇಹಶೀಲೆ, ನಗುಮೊಗದ ಅವರು ಜನರೊಂದಿಗೆ ಬೆರೆಯುತ್ತಿದ್ದರು. ಕಷ್ಟದಲ್ಲಿರುವವರಿಗೆ ನೆರವಾಗುತ್ತಿದ್ದರು. ಸ್ವಭಾವತಃ ಅಧ್ಯಾತ್ಮದಲ್ಲಿ ಒಲವಿತ್ತು. ಸಂಪ್ರದಾಯಶೀಲೆಯಾಗಿದ್ದರು.

ಶ್ರೀಮತಿ ಸಬಿತಾ - ಬ್ರಿಗೇಡಿಯರ್ (ನಿ.) ಶ್ರೀ ಆರ್.ವಿ.ಸೀತಾರಾಮಯ್ಯ- V.S.M.

B.E., M.Tech, FIE., MIGS, MIME., FIIBE, MICI - Consulting Engineer

ಮಿಲಿಟರಿ ಇಂಜಿನಿಯರಿಂಗ್‌ನ ತಮ್ಮ ವಿಶಿಷ್ಟ ಸಾಧನೆಗಾಗಿ ಭಾರತದ ರಾಷ್ಟ್ರಪತಿಗಳ ಪ್ರತಿಷ್ಠಿತ ವಿಶಿಷ್ಟ ಸೇವಾ ಮೆಡಲ್ ಪಡೆದಿರುವ ಬ್ರಿಗೇಡಿಯರ್ (ನಿ.) ಶ್ರೀ ಆರ್.ವಿ. ಸೀತಾರಾಮಯ್ಯ ಭಾರತದ ಹೆಮ್ಮೆಯ ಪುತ್ರ. ಅವರು ರುದ್ರಪಟ್ಣ ವೆಂಕಟರಮಣಯ್ಯನವರ ಗಂಡು ಮಕ್ಕಳಲ್ಲಿ ನಾಲ್ಕನೆಯವರು (ಜ: 26-09-1939). ಪ್ರಾಥಮಿಕ ಶಿಕ್ಷಣವನ್ನು ತಮ್ಮ ಹಳ್ಳಿ ರುದ್ರಪಟ್ಣದಲ್ಲೇ ಪಡೆದ ಸೀತಾರಾಮಯ್ಯ ತಮ್ಮ ಮುಂದಿನ ವಿದ್ಯಾಭ್ಯಾಸವನ್ನು ಬೆಂಗಳೂರಿನಲ್ಲಿ ಮಾಡಿದರು. ಮೈಸೂರಿನ ಖ್ಯಾತ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಲ್ಲಿ ತಮ್ಮ ಬಿ.ಇ. ಪದವಿಯನ್ನು ಪ್ರಥಮ ದರ್ಜೆಯಲ್ಲಿ ಪೂರೈಸಿದರು. ಡೆಲ್ಲಿಯ ಪ್ರತಿಷ್ಠಿತ Indian Institute of Technologyಯಲ್ಲಿ M.Tech ಪದವಿಯನ್ನು ಡಿಸ್ಟಿಂಕ್ಷನ್‌ನಲ್ಲಿ ಮುಗಿಸಿದರು. ಅವರು ಸದಸ್ಯತ್ವ ಪಡೆದ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ವಿವರವೆಲ್ಲ ಅವರ ವಿವಿಧ ಕ್ಷೇತ್ರಗಳ ಸಾಧನೆಯ ವಿವರವೇ ಆಗಿದೆ. ಫೆಲೋ ಆಫ್ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಮೆಂಬರ್ ಆಫ್ ಇಂಡಿಯನ್ ಜಿಯೋ ಟೆಕ್ನಿಕಲ್ ಸೊಸೈಟಿ, ಮೆಂಬರ್ ಆಫ್ ಇನ್‌ಸ್ಟಿಟ್ಯೂಷನ್ ಆಫ್ ಮಿಲಿಟರಿ ಇಂಜಿನಿಯರ್ಸ್, ಫೆಲೋ ಆಫ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಬ್ರಿಡ್ಜ್ ಇಂಜಿನಿಯರ್ಸ್, ಮೆಂಬರ್ ಆಫ್ ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಅವುಗಳಲ್ಲಿ ಸೇರಿವೆ. ಅವೆಲ್ಲ ಮಾಹಿತಿ ವಿನಿಮಯದ ಸಂಪನ್ಮೂಲ ಕೇಂದ್ರಗಳು. ಇಂಡಿಯನ್ ಆರ್ಮಿಯ ಕೋರ್ ಆಫ್ ಇಂಜಿನಿಯರ್ಸ್‌ನಲ್ಲಿ 1962ರಿಂದ 1992ರ ವರೆಗೆ 31 ವರ್ಷಗಳ ದೀರ್ಘ ಸೇವೆಯನ್ನು ಯಶಸ್ವಿಯಾಗಿ ಪೂರೈಸಿದವರು ಸೀತಾರಾಮಯ್ಯನವರು. ಮುಂಬೈ, ಪೂನಾ, ಡೆಲ್ಲಿ, ಸಿಕ್ಕಿಂ, ನಾತುಲಾ, ಕಾರ್ಗಿಲ್ ಲಡಾಖ್ ಗಡಿಭಾಗಗಳಲ್ಲಿ, ಚೆನ್ನೈ, ವಿಶಾಖಪಟ್ನ, ಜಬ್ಬಲಪುರ ಇತ್ಯಾದಿ ಸ್ಥಳಗಳಲ್ಲಿ ಅವರ ಸೇವೆ ಸಂದಿದೆ. ಅವರು ತಮ್ಮ ಪ್ರಾಮಾಣಿಕತೆ ಮತ್ತು ದಕ್ಷತೆಗಾಗಿ ಸೇನೆಯಲ್ಲಿ ಪ್ರಸಿದ್ಧರಾಗಿದ್ದರು. ಈಗಲೂ Structural Consultant for Ports and Specialist in Cement and Concrete ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತೀಯ ನೌಕಾದಳಕ್ಕಾಗಿ ವಿಶಾಖಪಟ್ಣಂನಲ್ಲಿ ಎರಡು Dry Dock Projectನ್ನು Design ಮಾಡಿ ಕಟ್ಟಿಸಿದವರು ಅವರು. ಮುಂಬೈನ MESನ (Military Engineering Services) Chief Engineer ಆಗಿ ಅವರ ಸೇವೆ ಸಂದಿದೆ. ಪೂನಾದ CME (College of Military Engineering)ನಲ್ಲಿ ಸಿವಿಲ್ ಇಂಜಿನಿಯರಿಂಗ್ ಪ್ರಾಧ್ಯಾಪಕರಾಗಿ ಅವರು ಕೆಲಸ ಮಾಡಿದ್ದಾರೆ. ಮುಂಬಯಿ ಸಂಕೇತಿ ಸಭಾದ ಕಾರ್ಯದರ್ಶಿಯೂ ಆಗಿದ್ದ ಸೀತಾರಾಮಯ್ಯನವರು ಒಳ್ಳೆಯ ಗಾಲ್ಫ್ ಪಟು, ಈಜುಗಾರ, ಪರ್ವತಾರೋಹಿ. ಪರ್ವತಾರೋಹದಲ್ಲಿ ತೇನ್‌ಸಿಂಗ್ ಜತೆಗಿನ ಒಡನಾಟದ ಕೀರ್ತಿ ಅವರದು.

ಅವರಿಗೆ ವಿಶಿಷ್ಟ ಸೇವಾ ಪದಕವನ್ನು ತಂದುಕೊಟ್ಟದ್ದು ಕಾರ್ಗಿಲ್‌ನಲ್ಲಿನ ಅವರ ಸಾಧನೆ. ಪಾಕಿಸ್ತಾನದ ವಿರುದ್ಧ ಯಾವಾಗ ಬೇಕಾದರೂ ಯುದ್ಧವು ಸ್ಫೋಟಿಸಬಹುದಾಗಿದ್ದ ವಾತಾವರಣ ಆಗ ಇತ್ತು. ಆಗಿನ ಸ್ಥಿತಿಯಲ್ಲಿ ಮಿಗ್ ವಿಮಾನಗಳು ಚಂಡಿಗಡದ ನೆಲೆಯಿಂದಲೇ ಹಾರಿ ಪಾಕಿಸ್ತಾನದೊಳಗೆ ನುಗ್ಗಿ ಬಾಂಬ್ ಹಾಕಿ ಹಿಂದಿರುಗಬೇಕಾಗಿತ್ತು. ಆದರೆ ಮಿಗ್ ಫೈಟರ್ ವಿಮಾನಗಳ ಇಂಧನ ಸಂಗ್ರಹ ಅಷ್ಟು ಪ್ರಮಾಣದಲ್ಲಿ ಇರುತ್ತಿರಲಿಲ್ಲ. ಲಡಖ್‌ನ ಲೇಹ್‌ನಲ್ಲೇ ವಿಮಾನ ನೆಲೆಯೊಂದು ಇರಬೇಕಾದ ಅಗತ್ಯವಿತ್ತು. ಅದು ತುರ್ತಾಗಿಯೂ ಆಗಬೇಕಿತ್ತು. ಆದರೆ ಅಲ್ಲಿ ವರ್ಷದ ಐದು ತಿಂಗಳು ಹಿಮ ಕವಿದಿರುತ್ತದೆ. ಆರು ತಿಂಗಳು ವಿಪರೀತ ಚಳಿ ಇರುತ್ತದೆ. ಕೆಲಸ ಮಾಡಲು ಸಾಧ್ಯವಿರುವ ದಿನಗಳು ವರ್ಷದಲ್ಲಿ ನಾಲ್ಕರಿಂದ ಆರು ತಿಂಗಳು ಮಾತ್ರ. ಅಂಥ ಎರಡು ಕಾರ್ಯಸಾಧ್ಯ ಅವಧಿಗಳನ್ನು ಬಳಸಿಕೊಂಡು ವಿಮಾನನೆಲೆಯನ್ನು ಕಟ್ಟುವಂತೆ ಸೀತಾರಾಮಯ್ಯನವರ ಘಟಕಕ್ಕೆ ಆದೇಶ ಬಂತು. ಸ್ವತಃ ವಾಯುಪಡೆಯ ಮುಖ್ಯಸ್ಥರೇ ಬಂದು ಈ ಕೆಲಸವನ್ನು ವಹಿಸಿ ಹೋದರು. ವಿಷಯವು ಅಷ್ಟು ತುರ್ತಿನದಾಗಿತ್ತು. ಹಾಗೆ ವಹಿಸಿದಾಗ ಇದ್ದುದು ಹಿಮಪಾತದ ಋತುಮಾನ. ಆ ಸಮಯದಲ್ಲಿ ಅವರು ಕೆಲಸ ಮಾಡಬೇಕೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೂ ಸೀತಾರಾಮಯ್ಯನವರು

ತತ್‌ಕ್ಷಣವೇ ಮೌನವಾಗಿ ಕಾರ್ಯಪ್ರವೃತ್ತರಾದರು. ಆ ಛಳಿಗಾಲದಲ್ಲಿ ಎಲ್ಲರಿಗೂ ಇರುವ ರಜಾ ಅವಧಿಯನ್ನು ತಾವು ಕೈಬಿಟ್ಟರು, ತಮ್ಮ ಘಟಕಕ್ಕೂ ಕೈಬಿಟ್ಟರು. ಸಾವಿರ ಪಯನೀರ್‌ಗಳು ಮತ್ತು ಕೂಲಿಗಳೊಡನೆ ಲೇಹ್‌ಗೆ ಹೋದರು. ಆ ಋತುಮಾನಕ್ಕೆ ಬೇಕಾದ ವಿಶಿಷ್ಟ ಉಪಕರಣಗಳನ್ನು ಸಜ್ಜುಗೊಳಿಸಿದರು. ಜಲ್ಲಿ, ಮರಳು, ಆಸ್ಫಾಲ್ಟ್, ಸಿಮೆಂಟ್ ಮೊದಲಾದ ಸಾಮಗ್ರಿಗಳನ್ನು ಸಮುದ್ರದ ಮಟ್ಟಕ್ಕಿಂತ 11000 ಅಡಿ ಎತ್ತರದ ಆ ಪರ್ವತಾಗ್ರದಲ್ಲಿ ಶೇಖರಿಸಿದರು. ಅಲ್ಲಿಗೆ ಶೇ.40 ರಷ್ಟು ಕೆಲಸ ಆದಂತಾಗಿತ್ತು. ಹಿಮವು ಕರಗುತ್ತಿದ್ದಂತೆಯೇ ಮಿಗ್ ವಿಮಾನಗಳ ಬಂಕರ್ ಮತ್ತು ನಿಲ್ದಾಣ (Airfield runway) ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಹ್ಯಾಂಗರ್ ಕೆಲಸ ಚಾಲನೆಗೊಂಡಿತು. ಬಂಕರ್‌ಗಳ ಮೇಲೆ ಎರಡು ಮೀಟರ್ ಮಣ್ಣು ತುಂಬಬಹುದಾದ ಭದ್ರವಾದ ಈ ಬಂಕರ್‌ಗಳನ್ನು ಕೇವಲ ನಾಲ್ಕು ತಿಂಗಳಲ್ಲಿ ಸಿದ್ಧಪಡಿಸಿ, ವಾಯುಪಡೆಯ ಮುಖ್ಯರಿಗೆ ಸುದ್ದಿ ಮುಟ್ಟಿಸಿದರು. ವಾಯುದಳದ ಮುಖ್ಯಸ್ಥರಾಗಿದ್ದ ಏರ್ ಚೀಫ್ ಮಾರ್ಷಲ್ ಮುಲಗಾಂವ್‌ಕರ್ ಅವರಿಗೆ ಆಶ್ಚರ್ಯಾಘಾತವಾಯಿತು. ತತ್‌ಕ್ಷಣ ಸ್ಥಳಕ್ಕೆ ಧಾವಿಸಿದರು. ಅಂಥ ಪ್ರತಿಕೂಲ ಋತುಮಾನದಲ್ಲಿ 11000 ಅಡಿಗಳ ಆ ಎತ್ತರದಲ್ಲಿ ಕೇವಲ ಒಂದು ಕಾರ್ಯಸಾಧ್ಯ ಋತುಮಾನವನ್ನು ಬಳಸಿಕೊಂಡು ಏರ್‌ಸ್ಟ್ರಿಪ್ ಕಟ್ಟಿದ ಸೀತಾರಾಮಯ್ಯನವರ ಬಗೆಗೆ ಹೆಮ್ಮೆ ತಾಳಿದರು. ಅವರಿಗೆ ವಿಶಿಷ್ಟ ಸೇವಾ ಮೆಡಲ್‌ನ್ನು ವಾಯುದಳದ ವತಿಯಿಂದಲೇ ಶಿಫಾರಸು ಮಾಡಿದರು. ಸೀತಾರಾಮಯ್ಯನವರು ಶಿಫಾರಸು ಮಾಡಿದ ಇತರ ಎಂಟು ಅಧಿಕಾರಿಗಳಿಗೂ ಪ್ರಶಸ್ತಿ ಸಂದಿತು. ಅವರ ಕಾರ್ಯಪಡೆ ಮೆಚ್ಚುಗೆಗೆ ಪಾತ್ರವಾಯಿತು. 1976ರಲ್ಲಿ ರಾಷ್ಟ್ರಪತಿಗಳ ಆ ಹೆಮ್ಮೆಯ ಪದಕವನ್ನು (ಆಗಿನ) ಮೇ|| ಸೀತಾರಾಮಯ್ಯನವರು ಸ್ವೀಕರಿಸಿ ಧನ್ಯರಾದರು.

ಶ್ರೀ ಸೀತಾರಾಮಯ್ಯನವರ ಧರ್ಮಪತ್ನಿ ಶ್ರೀಮತಿ ಸಬಿತಾ (ಸವಿತಾ) M.A., B.Ed., ಪದವೀಧರೆ. ಗಣಿತವು ಅವರು ಕಲಿತ ವಿಶೇಷ ವಿಷಯ. ಸೆಂಟ್ರಲ್ ಸ್ಕೂಲ್‌ನಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಸಬಿತಾ ನವದೆಹಲಿಯಲ್ಲಿ CWPCನ Chief Engineer ಆಗಿ ಸೇವೆ ಸಲ್ಲಿಸಿದ ಪಿರಿಯಾಪಟ್ಟಣ ಸದಾಶಿವರಾವ್ ಅವರ ಮಗಳು. ಅವರ ಅಜ್ಜ ಪಿರಿಯಾಪಟ್ಟಣ ಸುಬ್ಬರಾವ್ ಕೃಷ್ಣರಾಜಸಾಗರ ನಿರ್ಮಾಣದ ಸೂಪರಿಂಟೆಂಡಿಂಗ್ ಇಂಜಿನಿಯರಾಗಿದ್ದವರು; ಸರ್.ಎಂ. ವಿಶ್ವೇಶ್ವರಯ್ಯನವರ ವಿಶ್ವಾಸಕ್ಕೆ ಪಾತ್ರರಾಗಿದ್ದವರು. ಸಬಿತಾ ಅವರ ಅಜ್ಜಿಯ ತಂದೆಯವರು ಪ್ರಸಿದ್ಧರಾದ ಕರಾಚಿ ಕೃಷ್ಣರಾಯರು. ಬಾಂಬೆ ಪ್ರಾವಿನ್ಸ್ ಮತ್ತು ಸಿಂಧ್‌ನ ಚೀಫ್ ಇಂಜಿನಿಯರಾಗಿದ್ದ ಕೃಷ್ಣರಾಯರು ಸರ್.ಎಂ.ವಿ. ಅವರ ಸಹಪಾಠಿಯಾಗಿದ್ದವರು ಎಂಬುದೂ ಸ್ಮರಣೀಯ ಸಂಗತಿಯಾಗಿದೆ. ಸಬಿತಾ ಅವರ ಪತಿ ಸೀತಾರಾಮಯ್ಯನವರ ಎಲ್ಲ ಸಾಧನೆಗಳ ಪೂರಕಶಕ್ತಿಯಾಗಿದ್ದಾರೆ ಎಂಬುದು ಸಹಜವಾಗಿದೆ.

ಸಬಿತಾ-ಸೀತಾರಾಮಯ್ಯ ದಂಪತಿಯ ಮಗಳು ಸ್ಮಿತಾ Applied Psychology ಮತ್ತು ಕಂಪ್ಯೂಟರ್ ವಿಜ್ಞಾನದ ಪದವೀಧರೆ; ಆಕೆಯ ಪತಿ ರವಿಕಶ್ಯಪ್ ಪ್ರತಿಷ್ಠಿತ ಕ್ಯಾಲಿಕಟ್ ರೀಜನಲ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಲಿತು ಮೆಕಾನಿಕಲ್ ಇಂಜಿನಿಯರಿಂಗ್ ಪದವೀಧರರಾದರು; ಮಲೇಷಿಯಾದಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದರ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಮಗನ ಹೆಸರು ಉಪಮನ್ಯು. ಸಬಿತಾ-ಸೀತಾರಾಮಯ್ಯನವರ ಪುತ್ರ ಅವಿನಾಶ್ ಪೂನಾದಲ್ಲಿ ಬಿ.ಇ. ವಿದ್ಯಾಭ್ಯಾಸ ಮುಗಿಸಿ ಅಮೆರಿಕದಲ್ಲಿ ಎಂ.ಎಸ್. ಪದವಿ ಪಡೆದು ಅಲ್ಲಿಯೇ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಸೀನಿಯರ್ ಎಕ್ಸಿಕ್ಯೂಟಿವ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಶೇಡನ್ ಅವರನ್ನು ವರಿಸಿದ್ದಾರೆ. ನೇಲಾನ್ ಮತ್ತು ಅರ್ಮನ್ ಅವರ ಮುದ್ದುಮಕ್ಕಳು.

ಶ್ರೀಮತಿ ನಾಗರತ್ನ (ಪಾಪು) – ಶ್ರೀ ಆರ್.ವಿ. ಕೃಷ್ಣಮೂರ್ತಿ

ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ದಕ್ಷಿಣ ಭಾರತದ ಸಮಗ್ರ ಹೊಣೆ ಹೊತ್ತು ಯಶಸ್ವಿಯಾಗಿ ನಿಭಾಯಿಸಿದವರು ಶ್ರೀ ಆರ್.ವಿ. ಕೃಷ್ಣಮೂರ್ತಿ. ದೃಢಕಾಯದ ಕೃಷ್ಣಮೂರ್ತಿಯವರು ಬುದ್ಧಿಮತ್ತೆ, ಸಾಹಸ, ಪ್ರಯೋಗಶೀಲತೆ, ಸಂಘಟನೆ ಮತ್ತು ಯೋಜನಾ ನಿರ್ವಹಣೆಗಾಗಿ ನಾಡಿಗೆ ಕೀರ್ತಿ ತಂದ ಹೆಮ್ಮೆಯ ಕನ್ನಡಿಗ. ಅವರಿಗೆ ಬಲ ನೀಡಿದ್ದು ಸಕಾರಾತ್ಮಕ ಚಿಂತನೆ, ಕಠಿಣ ಪರಿಶ್ರಮ, ಪ್ರಾಮಾಣಿಕತೆ, ನಿಷ್ಠೆ ಮತ್ತು ಎಡರುಗಳ ನಡುವೆಯೂ ಗುರಿಯ ಮೇಲೆ ನೆಟ್ಟ ಕಣ್ಣು.

ರುದ್ರಪಟ್ಣ ವೆಂಕಟರಮಣಯ್ಯ ಮತ್ತು ಪುಟ್ಟಮ್ಮ ದಂಪತಿಯ ಕೊನೆಯ ಮಗ ಆರ್.ವಿ. ಕೃಷ್ಣಮೂರ್ತಿ (ಜ. 20-5-1942) ಅವರ ಪ್ರಾಥಮಿಕ ಶಿಕ್ಷಣವು ರುದ್ರಪಟ್ಣದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲೇ ಮೂರು ವರ್ಷ ಆಯಿತು. 1950ರಲ್ಲಿ ವೆಂಕಟರಮಣಯ್ಯನವರು ಮಕ್ಕಳ ಶಿಕ್ಷಣದ ಸಲುವಾಗಿಯೇ ಕುಟುಂಬವನ್ನು ರುದ್ರಪಟ್ಣದಿಂದ ಬೆಂಗಳೂರಿಗೆ ಸ್ಥಳಾಂತರಿಸಿದರು. ಆ ಕಾಲಕ್ಕೆ ಆ ಕಲ್ಪನೆಯೇ ಹೊಸತು. ಬಾಲಕನ ಬುದ್ಧಿಮತ್ತೆ ಕಂಡ ಅಲ್ಲಿನ ಬಸವನಗುಡಿ ಶಾಲೆಯ ಮುಖ್ಯೋಪಾಧ್ಯಾಯರು ಆತನನ್ನು ನೇರವಾಗಿ ಆರನೆ ತರಗತಿಯ ಪರೀಕ್ಷೆಗೆ ಕೂರಿಸಿದರು. ಅದರ ಫಲವಾಗಿ 1953ರಲ್ಲಿ ಆ ಜಾಣ ಹುಡುಗನ L.S. ಪಬ್ಲಿಕ್ ಪರೀಕ್ಷೆ ಮುಗಿದಿತ್ತು. SSLCವರೆಗೆ ಕನ್ನಡ ಮಾಧ್ಯಮದಲ್ಲೇ ಕಲಿತ. ಪ್ರೌಢಶಾಲೆಯ ಮೂರು ವರ್ಷಗಳನ್ನೂ ತಂದೆಯವರ ವರ್ಗಾವಣೆಯ ಕಾರಣದಿಂದಾಗಿ ಮೂರು ಬೇರೆ ಊರುಗಳಲ್ಲಿ - ಕೋಲಾರ, ಹಾಸನ, ಬೆಂಗಳೂರು - ಕಲಿತ. ಆದರೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ. ಆ ಅವಧಿಯಲ್ಲಿ ಪರಿಸರ ಮತ್ತು ಅಧ್ಯಾಪಕರ ನಿರಂತರ ಪಲ್ಲಟದ ನಡುವೆಯೂ ಹಿಂದಿ 'ಪ್ರವೇಶಿಕಾ' ಮಾಡಿಕೊಂಡ, ಸಂಸ್ಕೃತ ಕಲಿತ, ರಾಷ್ಟ್ರೀಯ ಸೇವಾದಳ ಸೇರಿದ, ಬೆರಳಚ್ಚು ಜೂನಿಯರ್ ಪಾಸಾದ, RSS ಪ್ರಭಾವಕ್ಕೆ ಬಂದ, ಭಗವದ್ಗೀತೆ ಕಂಠಪಾಠ ಮಾಡಿದ, ಬೈಬಲ್ ಪೂರ್ತಿ ಓದಿದ, ಈಜು ಕಲಿತ, ಕ್ರಿಕೆಟ್ ಗೀಳು ಹಚ್ಚಿಕೊಂಡ. ಇಂಟರ್‌ನಲ್ಲಿ ಇದ್ದಕ್ಕಿದ್ದಂತೆ ಇಂಗ್ಲಿಷ್ ಮಾಧ್ಯಮ (PCM)ದಲ್ಲಿ ಕಲಿಯಬೇಕಾಯಿತು; ಆದರೂ ಪ್ರಥಮದರ್ಜೆಯಲ್ಲಿ ಉತ್ತೀರ್ಣನಾದ. 1958-62ರ ಅವಧಿಯಲ್ಲಿ ಮೈಸೂರಿನ ಪ್ರತಿಷ್ಠಿತ NIE ಸಂಸ್ಥೆಯಲ್ಲಿ ಸಿವಿಲ್ ಇಂಜಿನಿಯರಿಂಗ್ ಕಲಿತು ಬಿ.ಇ. ಪದವೀಧರನಾದ. ಎಸ್.ಎಲ್. ಶ್ರೀಕಂಠಯ್ಯ, ಎಸ್. ರಾಮಸ್ವಾಮಿ, ಎಸ್.ಕೆ. ಮುತ್ತಣ್ಣ, ಶ್ರೀನಿವಾಸನ್ ಆತನ ಗುರುಗಳಾಗಿದ್ದರು. ಬಿ.ಇ. ಮುಗಿಸಿದ್ದು 20ಕ್ಕೆ, 19 ವರ್ಷದವನಾಗಿದ್ದಾಗಲೇ ಕಾಲೇಜಿನ ಸರ್ವೇ ಕ್ಯಾಂಪ್ ಸೆಕ್ರೆಟರಿ, ಎಜುಕೇಷನ್ ಟೂರ್ ಸೆಕ್ರೆಟರಿ ಆಗಿ ಆ ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದ. ಆತನಿಗಿಂತ ಬಹಳ ಹಿರಿಯರಾದ ವಿದ್ಯಾರ್ಥಿಗಳು ಇದ್ದರೂ ನಾಯಕತ್ವದ ಗುಣದಿಂದಾಗಿ ಆ ಬಾಲಕನನ್ನು ಈ ಹೊಣೆ ಹುಡುಕಿಕೊಂಡು ಬಂದಿತ್ತು.

ಆ ಕಾಲಕ್ಕೆ ಬಿ.ಇ. ಫಲಿತಾಂಶವನ್ನು ನೋಡಿಯೇ ವಿದ್ಯಾರ್ಥಿಗಳಿಗೆ ಕೆಲಸದ ಕರೆ ಹೋಗುತ್ತಿತ್ತು. ಕೃಷ್ಣಮೂರ್ತಿಯವರಿಗೆ ಸ್ಟೇಟ್ ಪೋರ್ಟ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಜೂನಿಯರ್ ಇಂಜಿನಿಯರಾಗಿ ಸೇರಲು ಕರೆ ಬಂತು. ಮಂಗಳೂರಿನಲ್ಲಿ ನೌಕರಿಗೆ ಸೇರಿ ಇನ್ನೂ ಆರು ತಿಂಗಳಾಗಿತ್ತು. ಹೊಸ ಡಿವಿಷನ್ ಪ್ರಾರಂಭಿಸಲು ಕಾರವಾರಕ್ಕೆ ಕಳಿಸಿದರು. ಅವರ ಕಾರ್ಯದಕ್ಷತೆ ಮತ್ತು ನೈಪುಣ್ಯ ಹಾಗಿತ್ತು. ಅಲ್ಲೂ ಐದು ತಿಂಗಳಿದ್ದರು. ಆ ಹೊತ್ತಿಗೆ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿಯೂ ನೌಕರಿ ಸಿಕ್ಕಿತು. ಮುಂಬೈನಲ್ಲಿ ತರಬೇತಿ ಮುಗಿಸಿದರು. ಕೊಚಿನ್, ಖಾಂಡ್ಲಾ ಮತ್ತು ಕಲ್ಕತ್ತಾ ನಡುವೆ ಅವರು ಕಾರ್ಯಸ್ಥಾನವನ್ನು ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯವಿತ್ತು. ತರುಣನ ಸಾಹಸ ಗುಣವು ನಕ್ಸಲ್ ಪೀಡಿತ ಕಲ್ಕತ್ತಾವನ್ನೇ ಆಯ್ಕೆಮಾಡಿಕೊಳ್ಳುವಂತೆ ಮಾಡಿತ್ತು. ಜೆಂಷೆಡ್‌ಪುರ, ರೂರ್ಕೆಲಾ, ಮುಘಲ್‌ಸರಾಯ್‌ನಲ್ಲೂ ಸೇವೆ ಸಲ್ಲಿಸಿದರು. ಆಗ ಅವರು ಎದುರಿಸಿದ ಕಂಟಕಗಳು ಮತ್ತು ಮಾಡಿದ ಸಾಹಸಗಳ ಕಥೆ ದೊಡ್ಡದು.

ಕಲ್ಕತ್ತ-ದೆಹಲಿಯ ರಾಜಧಾನಿ ಎಕ್ಸ್‌ಪ್ರೆಸ್‌ಗಾಗಿ ಯೋಜಿಸಿ ನಿರ್ವಹಿಸಿದ ಫ್ಯೂಯಲಿಂಗ್ ಫೆಸಿಲಿಟಿ ಅವರಿಗೆ ಬೇಗ ಪದೋನ್ನತಿ ದೊರೆಯಲು ಕಾರಣವಾಯಿತು. ಆಗ ಅವರು ನೌಕರಿಗೆ ಸೇರಿ ಇನ್ನೂ ಐದು ವರ್ಷ ಮಾತ್ರವೇ ಆಗಿತ್ತು. ಜೆಂಷೆಡ್‌ಪುರದಲ್ಲಿ ಕಟ್ಟಿದ LSHS Project ಕೂಡ ಅಂಥದೇ ಸಾಧನೆಯಾಗಿತ್ತು. ಈಶಾನ್ಯ ಭಾರತದ ಹಲವು ಕಡೆ ದುಡಿದ ಅವರ ಅನುಭವವು ವಿಸ್ತಾರವಾಯಿತು. 1969ರಲ್ಲಿ ಅವರ ಸಾಧನೆಗಳ ಫಲವಾಗಿ Branch Engineer ಆಗಿ ಪದೋನ್ನತಿ ದೊರೆಯಿತು. ಆ ಕಾಲದಲ್ಲಿ ಅವರ ದೇಹಶಕ್ತಿ ಎಷ್ಟಿತ್ತೆಂದರೆ ಸ್ವತಃ ಕಾರು ಚಾಲಿಸಿ 7000 ಕಿ.ಮೀ. ಸುತ್ತಿಸಿ ತಂದೆ ತಾಯಿಯರಿಗೆ ಇಡೀ ಭಾರತದ ತೀರ್ಥಯಾತ್ರೆ ಮಾಡಿಸಿದರು. 1971ರಲ್ಲಿ ವಿವಾಹವಾದದ್ದು ಮೈಸೂರಿನ ಶ್ರೀ ಎಸ್.ಕೆ. ಸುಬ್ಬಯ್ಯ ಮತ್ತು ಶ್ರೀಮತಿ ಸಾವಿತ್ರಮ್ಮ ದಂಪತಿಯ ಕಡೆಯ ಮಗಳು ನಾಗರತ್ನ (ಪಾಪು) ಅವರನ್ನು. ಈ ದಂಪತಿಗಳಿಗೆ ಮೊದಲನೆಯ ಮಗ ಜನನವಾಗಿದ್ದು ಮೈಸೂರಿನಲ್ಲಿ (19-3-1972) ಚಿ. ಲಕ್ಷ್ಮೀಕಾಂತ್. ಎರಡನೆಯ ಮಗ ಚಿ. ವೆಂಕಟೇಶ್ ಬೊಂಬಾಯಿಯಲ್ಲಿ ಜನನ (2-7-1974).

1974ರಲ್ಲಿ ಬೆಂಗಳೂರಿನ Indian Institute of Management ನಲ್ಲಿ Operation Research Prog.ಗೆ ಆಯ್ಕೆಯಾದರು. 1974ರಿಂದ ಮುಂಬಯಿ ಅವರ ಕಾರ್ಯಕ್ಷೇತ್ರವಾಯಿತು. LPG ವಿಭಾಗದ ಪ್ರಾಜೆಕ್ಟ್ ಪ್ಲಾನಿಂಗ್ ಅವರ ಕೆಲಸವಾಯಿತು. ಅದೇ ವೇಳೆಗೆ ಬಂದ ಲಿಬಿಯಾ (North Africa) ನಿಯೋಗವು ಟ್ರಿಪೋಲಿಯ ತನ್ನ National Oil Companyಗೆ (BREGA) ಅವರನ್ನು ಆರಿಸಿಕೊಂಡಿತು (for Engineering and Projects). ಹೀಗೆ ಆಯ್ಕೆಯಾದ ಅತಿ ಕಿರಿಯ ಅಧಿಕಾರಿ ಎಂಬ ಹೆಗ್ಗಳಿಕೆ

ಕೃಷ್ಣಮೂರ್ತಿಯವರದಾಯಿತು. ಇಟಲಿಯ ಮಿಲಾನೊಗೆ ಲಿಬ್ಯಾದ ನಿಯೋಗದ ಮುಖ್ಯಸ್ಥರಾಗಿ ಎರಡು ಬಾರಿ ಹೋದರು (ಪ್ರಾಜೆಕ್ಟ್ ಡಿಸೈನ್ ಮತ್ತು ನೆಗೋಷಿಯೇಶನ್‌ಗಾಗಿ). ಸಕುಟುಂಬರಾಗಿ ಪ್ರಪಂಚ ಪರ್ಯಟನೆ ಮಾಡುವ ಸದವಕಾಶವೂ ಅವರಿಗೆ ದೊರೆಯಿತು. ಲಿಬ್ಯಾದಲ್ಲಿ ಐದು ವರ್ಷಗಳ ಕಾಲ ಸೇವೆಸಲ್ಲಿಸಿ (1977-1982) ಸುವಿಖ್ಯಾತರಾಗಿ ಸ್ವದೇಶಕ್ಕೆ ಮರಳಿದರು.

1982ರಲ್ಲಿ ಮುಂಬೈನ ಕೇಂದ್ರ ಕಛೇರಿಗೆ ಮರಳಿದರು. ಭಾರತದ ಎಲ್ಲ (IOC) ಕೇಂದ್ರಗಳ ಕಛೇರಿ ಮತ್ತು ವಸತಿ ನಿರ್ಮಾಣದ ಯೋಜನೆಯ ಮುಖ್ಯರಾದರು. 1985ಕ್ಕೆ ಪದೋನ್ನತಿ ದೊರೆತು ನವದೆಹಲಿಗೆ ಹೋದರು. ಚೀಫ್ ಇಂಜಿನಿಯರ್ ಮತ್ತು ಡೆಪ್ಯೂಟಿ ಜನರಲ್ ಮ್ಯಾನೇಜರ್ ಹುದ್ದೆಗಳನ್ನು ಅಲಂಕರಿಸಿ 1991ರ ವರೆಗೆ ಅಲ್ಲಿ ಸೇವೆ ಸಲ್ಲಿಸಿದರು. ದೆಹಲಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗಲೇ ಶ್ರೀನಗರದಲ್ಲಿ IOCಯ Projectನ್ನು ನಿರ್ವಹಿಸಿದರು. ಆ ಕಾಲದಲ್ಲಿ ಜಮ್ಮು ಕಾಶ್ಮೀರದಲ್ಲಿ ಪ್ರಕ್ಷುಬ್ಧಸ್ಥಿತಿ ಇತ್ತು. ನೇಪಾಳದಲ್ಲಿ Indian Oilನ ಪ್ರಥಮ Service Stationನ ಉಸ್ತುವಾರಿ ಮಾಡಿದವರೂ, ಖಾಂಡ್ಲಾದಲ್ಲಿ (ಗುಜರಾತ್) ಭೂಕಂಪವಾದಾಗ (26-1-2000) ಅಲ್ಲಿಯೇ ಕ್ಯಾಂಪ್ ಮಾಡಿ ಸೇವೆಸಲ್ಲಿಸಿದವರೂ ಕೃಷ್ಣಮೂರ್ತಿಯವರೇ. ಮಾರಿಷಸ್‌ನಲ್ಲಿ ಕಟ್ಟಿದ IOCಯ Bulk Oil Terminalನ Project Report ತಯಾರಿಸಿದ್ದೂ, ಮತ್ತೆ ಆಸ್ಟ್ರೇಲಿಯಾಗೆ ಹೋಗಿ Auto LPGಯ ವಿಷಯವನ್ನು ಅಭ್ಯಸಿಸಿ ಅದರ Manual ತಯಾರು ಮಾಡಿದ್ದೂ ಅವರೇ. ಅಲ್ಲಿಂದ ಮುಂಬೈಗೆ ಬಂದು ಜನರಲ್ ಮ್ಯಾನೇಜರ್ ಆದರು. ಖಾಂಡ್ಲಾ-ಭಟಿಂಡಾ ನಡುವಿನ 1500 ಕಿ.ಮೀ. ಗಳ Pipeline Project ಮತ್ತು ಒಂಬತ್ತು Oil Terminalಗಳನ್ನು ನಿರ್ವಹಿಸಿದ್ದು ಆಗ. ತೈಲೋದ್ಯಮಕ್ಕೆ ಬೇಕಾದ ಸಾಧನೋಪಕರಣಗಳ ಅಭಿವೃದ್ಧಿಯ ಉಸ್ತುವಾರಿಯೂ ಅವರದೇ ಆಗಿತ್ತು. ದೇಶ ವಿದೇಶಗಳಲ್ಲಿ ಪರಿಣತ ತರಬೇತಿಯನ್ನು ನಿರಂತರವಾಗಿ ಪಡೆದರು. ಭಾರತದಲ್ಲಿ ತರಬೇತಿ ಕಮ್ಮಟಗಳನ್ನೂ ನಡೆಸಿದರು.

2001ರಲ್ಲಿ ಚೆನ್ನೈನಲ್ಲಿ Executive Director ಎಂಬ ಅತ್ಯುನ್ನತ ಪದವಿಯನ್ನು ಅಲಂಕರಿಸಿದರು. ಆ ಮೂಲಕ ದಕ್ಷಿಣ ಭಾರತದ (ತಮಿಳುನಾಡು, ಆಂಧ್ರ, ಕರ್ನಾಟಕ, ಕೇರಳ, ಪಾಂಡಿಚೇರಿ ಮತ್ತು ಲಕ್ಷದ್ವೀಪ) IOCಯ ನಿರ್ವಹಣೆಯ ಪೂರ್ಣ ಹೊಣೆ ಅವರದಾಯಿತು. IOCಯ ಎಲ್ಲಾ ಇಂಧನ ಸಂಗ್ರಹ ಮತ್ತು ವಿತರಣೆಯ ಕೇಂದ್ರಗಳಲ್ಲಿ ಪ್ರಥಮವಾಗಿ Terminal Automation Systemನ್ನು ಅಳವಡಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. 40 ವರ್ಷಗಳ ಯಶಸ್ವೀ ಸೇವೆ ಸಲ್ಲಿಸಿ 2002ರಲ್ಲಿ ತಮ್ಮ 60ನೆಯ ವಯಸ್ಸಿನಲ್ಲಿ ನಿವೃತ್ತರಾದರು.

ಶ್ರೀ ಆರ್.ವಿ. ಕೃಷ್ಣಮೂರ್ತಿ ಈ ಹುದ್ದೆಯನ್ನು ಮುಟ್ಟಿದ ಪ್ರಥಮ ಕನ್ನಡಿಗ. ಈ ಅಭಿಮಾನದಿಂದ ಅನೇಕ ಕಡೆ - ವಿಶೇಷವಾಗಿ ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಬೆಳಗಾವಿಯಲ್ಲಿ ಸನ್ಮಾನ ಸಮಾರಂಭಗಳು ನಡೆದವು. ಅವರಿಗೆ ಅರ್ಪಿಸಿದ ಬಿನ್ನವತ್ತಳೆಯ ಸಾರಭೂತ ಕಾರಣ ಇದು: "The specific areas under his command were projects, Construction, design, infrastructure development, Port facilities development, Petroleum installations, Building the most modern state of the Art Lube blending plant, Pipe line projects, Oil Jettey construction, Network of retail outlets and the whole gamut of integrated development of Indian Oil Corporation". ಭಾರತೀಯ ವಿದ್ಯಾಭವನ, NIE ಮೊದಲಾದ ಸಂಸ್ಥೆಗಳಿಗೆ ನಿಧಿ ಸಂಗ್ರಹಿಸಿಕೊಟ್ಟರು. ನಿವೃತ್ತರಾದ ಮೇಲೂ ಅನೇಕ ಪ್ರತಿಷ್ಠಿತ ಸಂಸ್ಥೆಗಳ ಸದಸ್ಯರಾಗಿ ಕ್ರಿಯಾಶೀಲರಾಗಿ ಉಳಿದಿರುವ ಕೃಷ್ಣಮೂರ್ತಿಯವರು ಯೋಗ್ಯ ಸ್ಥಾನಗಳಿಗೆ ದಾನಗಳನ್ನು ಮಾಡಿಯೂ ಕೃತಾರ್ಥರಾಗಿದ್ದಾರೆ. (ರುದ್ರಪಟ್ಟದ ಸಪ್ತಸ್ವರಮಂದಿರ, ಭಾರತೀಯ ವಿದ್ಯಾಭವನದ ಶಿವಮೊಗ್ಗದ ಕೇಂದ್ರದ ಶಾಲೆ, ಬೆಟ್ಟದಪುರದ ಸಂಕೇತಿ ಸಂಘದ ವೃದ್ಧಾಶ್ರಮ ಇತ್ಯಾದಿ) ಪ್ರವಾಸ, ಕ್ರೀಡೆ, ಸಂಗೀತ ಅವರ ಮೆಚ್ಚಿನ ಹವ್ಯಾಸಗಳು. ಪ್ರಸ್ತುತ ಅವರು ರೋಟರಿಸಂಸ್ಥೆಯ ಅಧ್ಯಕ್ಷ (ಮೈಸೂರು ಪೂರ್ವ) ಸ್ಥಾನವನ್ನು ವಹಿಸಿಕೊಂಡಿದ್ದಾರೆ. NIEಯ Alumni Associationನ ಕಾರ್ಯದರ್ಶಿ ಕೂಡ. ಗಾಲ್ಫ್ ಕ್ರೀಡೆಯ ಪರಿಣತರು. ಇವರು ಬಾಂಬೇ ಸಂಕೇತಿ ಸಭಾದಲ್ಲೂ ಐದು ವರ್ಷಗಳ ಕಾಲ ಸಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಈಚೆಗೆ ಮಾನಸಸರೋವರ ಮತ್ತು ಕೈಲಾಸಪರ್ವತದ ಪರಿಕ್ರಮವನ್ನು ಯಶಸ್ವಿಯಾಗಿ ಮಾಡಿ ಬಂದಿರುವರು. ಇದಕ್ಕೆ ಮುಂಚೆ ಸಂಸಾರಸಮೇತ ಅಮರನಾಥಯಾತ್ರೆ, ಪಶುಪತಿನಾಥ (ನೇಪಾಲ), ಕಾಮಾಖ್ಯದೇವಿ, ವೈಷ್ಣೋದೇವಿ, ಇತ್ಯಾದಿ ಕ್ಷೇತ್ರಗಳನ್ನು ಯಾತ್ರೆ ಮಾಡಿ ಕೃತಾರ್ಥರಾಗಿದ್ದಾರೆ.

ಕೃಷ್ಣಮೂರ್ತಿಯವರ ಧರ್ಮಪತ್ನಿ ನಾಗರತ್ನ (ಪಾಪು) ಸಾಲಿಗ್ರಾಮ ಕೋಟೆ ಸುಬ್ಬಯ್ಯ ಮತ್ತು ರುದ್ರಪಟ್ಣ ಸಾವಿತ್ರಮ್ಮ ದಂಪತಿಯ ಮಗಳು (ಜ: 13-8-1946). ಶ್ರೀ ಎಸ್.ಕೆ. ಸುಬ್ಬಯ್ಯನವರು ಖ್ಯಾತರಾದ ಕೋಟೆ ಮಲ್ಲಪ್ಪನವರ ಮಗ. ಶ್ರೀಮತಿ ಸಾವಿತ್ರಮ್ಮನವರು ಪೂಜ್ಯರಾದ ಯಜ್ಞನಾರಾಯಣಶಾಸ್ತ್ರಿಗಳ ಮಗಳು. ಮೈಸೂರಿನ ಮಹಾರಾಣಿಯವರ ಕಾಲೇಜಿನಲ್ಲಿ B.Sc., ಪದವಿ ಪಡೆದ ನಾಗರತ್ನ ಅವರಿಗೆ ಸಂಗೀತದಲ್ಲಿ ಅಭಿರುಚಿ, ಪ್ರವಾಸದಲ್ಲಿ ಆಸಕ್ತಿ. 1971ರಲ್ಲಿ ಕೃಷ್ಣಮೂರ್ತಿಯವರನ್ನು ವಿವಾಹವಾದ ನಾಗರತ್ನ ಅವರು ಪತಿಯ ಸಾಧನೆಗಳ ಪೂರಕ ಶಕ್ತಿಯಾಗಿ ಉತ್ತಮ ಗೃಹಿಣಿಯಾಗಿ ಸಂಸಾರವನ್ನು ನಿರ್ವಹಿಸುತ್ತಿದ್ದಾರೆ.

ಅವರ ಜ್ಯೇಷ್ಠ ಪುತ್ರ ಶ್ರೀ ಲಕ್ಷ್ಮೀಕಾಂತ (ಜ: 19-3-1972) ಮತ್ತು ಎರಡನೆಯ ಮಗ ಶ್ರೀ ವೆಂಕಟೇಶ (ಜ: 02-7-1974) ನವದೆಹಲಿಯ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಪಡೆದ ಶಿಕ್ಷಣ ಭದ್ರ ಬುನಾದಿಯಾಯಿತು. ಕೃಷ್ಣಮೂರ್ತಿಯವರು ದೆಹಲಿಯಲ್ಲೇ ಸೇವೆ ಸಲ್ಲಿಸುತ್ತಿದ್ದುದರಿಂದ ಅದು ಸಾಧ್ಯವಾಗಿತ್ತು. ಲಕ್ಷ್ಮೀಕಾಂತ್ NIE ವಿದ್ಯಾರ್ಥಿಯಾಗಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಕಲಿತು 1994ರಲ್ಲಿ BE ಪದವಿ ಪಡೆದರು. ಅಮೆರಿಕದಲ್ಲಿ MS ಮುಗಿಸಿ Virginia (USA)ದಲ್ಲಿ ನೆಲೆಸಿದ್ದಾರೆ. Oracleನಲ್ಲಿ ಸೀನಿಯರ್ ಕನ್ಸಲ್ಟೆಂಟ್ ಆಗಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಸರೀತಾ. ಇವರು FREDDIEMAC ಕಂಪನಿಯಲ್ಲಿ Manager ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ವೆಂಕಟೇಶ್ ಮುಂಬೈ ವಿಶ್ವವಿದ್ಯಾಲಯದಿಂದ MBBS ಪದವಿ ಪಡೆದು ಅಮೆರಿಕದಲ್ಲಿ ಉನ್ನತ ಶಿಕ್ಷಣದಲ್ಲಿ ತೊಡಗಿಕೊಂಡಿದ್ದಾರೆ. MPH (Public Health-TEXAS), MD (Internal Medicine) ಮುಗಿಸಿ ಈಗ Oncologyಯಲ್ಲಿ Fellowship ಅಭ್ಯಾಸ ಮಾಡುತ್ತಿದ್ದಾರೆ (Salt Lake City University, UTAH). ಇವರ ಧರ್ಮಪತ್ನಿ ಶ್ರೀಮತಿ ಶೀಲಾ. B.S. (Computer) Deloitte Consultantನಲ್ಲಿ Project Manager ಹುದ್ದೆಯಲ್ಲಿದ್ದಾರೆ.

ಲಕ್ಷ್ಮೀಕಾಂತ-ಸರೀತಾ ದಂಪತಿಗೆ ಸೆಪ್ಟೆಂಬರ್ 2008ರಲ್ಲಿ ಜನಿಸಿದ ಮೊದಲ ಮಗಳು **ದಿಯಾಲೋಲ** ಈಗ ಕೃಷ್ಣಮೂರ್ತಿಯವರ ಕುಟುಂಬದ ಹರ್ಷದ ಸ್ರೋತವಾಗಿದ್ದಾಳೆ.

ಬ.ಸು.ಪ್ರ

ಅನುಬಂಧ - ೨

ಸಾಮಾಜಿಕ ಪ್ರಜ್ಞೆಗೆ ನಮಸ್ಕಾರ

ಶ್ರೀ ನಟೇಶ್ ಮಗ್ಗೆ ಅವರ ವಂಶವೃಕ್ಷ

ವೇ|| ಬ್ರ|| ಶ್ರೀ ಕೃಷ್ಣಾವಧಾನಿ (ಚಿಕ್ಕಮಗ್ಗೆ) + ಶ್ರೀಮತಿ ಚನ್ನಮ್ಮ

|

ವೇ|| ಬ್ರ|| ಶ್ರೀ ನಾರಾಯಣಾವಧಾನಿ (ದೊಡ್ಡಮಗ್ಗೆ) + ಶ್ರೀಮತಿ ಗೌರಮ್ಮ

|

ಶ್ರೀ ಎಂ.ಎನ್. ಸುಬ್ರಹ್ಮಣ್ಯಂ + ಶ್ರೀಮತಿ ಸೀತಾಲಕ್ಷ್ಮಮ್ಮ (ಹೊಸಕೋಟೆ)

|

ಶ್ರೀ ನಟೇಶ್ ಮಗ್ಗೆ (ಜ: 19-10-1936)
+ ಶ್ರೀಮತಿ ಸುಂದರಮಣಿ (ಅಗ್ರಹಾರ)

ಡಾ. ಸುಬ್ಬು ಎನ್. ಮಗ್ಗೆ, ಎಂ.ಡಿ.,
ನ್ಯೂರೋಸರ್ಜನ್ (ಬೋಸ್ಟನ್)
+
ಡಾ. ಕಲ್ಯಾಣಿ (ನೆಫ್ರಾಲಜಿಸ್ಟ್)

ಡಾ. ಶೀಲಾ ಎನ್. ಮಗ್ಗೆ, ಎಂ.ಡಿ.,
ಪೆಡಿಯಾಟ್ರಿಕ್, ಎಂಡೋಕ್ರೈನಾಲಜಿಸ್ಟ್
+
ಡಾ. ನಂದಕುಮಾರ್, ಪಿಎಹೆಚ್.ಡಿ.,

ವಿಜ್ಞಾನಿ

ಡಾ. ಸುರೇಶ್ ಎನ್. ಮಗ್ಗೆ, ಎಂ.ಡಿ.,
ಡಾ. ಹೇಮಾ ಎನ್. ಮಗ್ಗೆ, ಎಂ.ಡಿ.,

ಶ್ರೀ ನಟೇಶ್ ಮಗ್ಗೆ
ಅಮೆರಿಕದ ಶ್ರೇಷ್ಠ ವಿಮಾನತಂತ್ರಜ್ಞ

ಸುಮಾರು 150 ವರ್ಷಗಳ ಹಿಂದಿನ ಮಾತು. ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಚಿಕ್ಕಮಗ್ಗೆ ಎಂಬ ಗ್ರಾಮದಲ್ಲಿ ಧರ್ಮಪರಾಯಣರ ಒಂದು ಕುಟುಂಬವಿತ್ತು. ವೇದಾಧ್ಯಯನ ಸಂಪನ್ನರಾದ ಕೃಷ್ಣಾವಧಾನಿಗಳೂ ಅವರ ಧರ್ಮಪತ್ನಿ ಚನ್ನಮ್ಮನವರೂ ಆ ಸಂಸಾರದ ಮುಖ್ಯರು, ಅಗ್ನಿಹೋತ್ರಿಗಳು. ನಿತ್ಯವೂ ವೈಶ್ವದೇವವನ್ನು ಮುಗಿಸಿ ಅತಿಥಿಗಳಿಗೆ ಭೋಜನ ಮಾಡಿಸುವುದು ಅವರ ಕರ್ಮಾನುಷ್ಠಾನದ ಭಾಗವಾಗಿತ್ತು. ಅದೊಂದು ದಿನ ಎಲ್ಲಿಂದಲೋ ಬಂದ ಒಬ್ಬ ವೃದ್ಧರು ಅವರ ಅತಿಥಿಗಳಾಗಿದ್ದರು. ಭೋಜನವಾಗಿ ಕೈತೊಳೆಯಲು ಹೊರಹೋದವರು ಇದ್ದಕ್ಕಿದ್ದಂತೆ ಅಂತರ್ಧಾನರಾದರು; ಅದೇ ಸಮಯಕ್ಕೆ ವಿಶಾಲವಾದ ಅವರ ಮನೆಯೂ ಇದ್ದಕ್ಕಿದ್ದಂತೆ ದಗ್ಧವಾಯಿತು. ಹಾಗೆ ಬಂದಿದ್ದಾತ ಸಾಕ್ಷಾತ್ ಅಗ್ನಿದೇವನೇ ಎಂಬುದು ಕೃಷ್ಣಾವಧಾನಿಗಳ ವಿಶ್ವಾಸ. ಆದ್ದರಿಂದಲೇ, ಅಗ್ನಿಗೆ ತೃಪ್ತಿಯಾಗಲಿ ಎಂದು ಮನೆಯು ಭಸ್ಮವಾಗುವವರೆಗೂ ಸ್ತೋತ್ರಮಾಡುತ್ತ ನಿಂತುಬಿಟ್ಟರು. ಅಂದೇ ಆ ಊರನ್ನು ತೊರೆದು ದೊಡ್ಡಮಗ್ಗೆಯನ್ನು ಸೇರಿದರು. ಒಂದೇ ವಾರದಲ್ಲಿ ಮನೆ ಕಟ್ಟಿಕೊಂಡರು. ಅವರ ಮಗ ನಾರಾಯಣಾವಧಾನಿಗಳೂ ಆ ಪ್ರಾಂತದಲ್ಲೇ ಬಹುದೊಡ್ಡ ವಿದ್ವಾಂಸರಾಗಿದ್ದರು, ಸಮುದಾಯದ ಮುಂದಾಳೂ ಆಗಿದ್ದರು; ವೇದ ಶಾಸ್ತ್ರಗಳಲ್ಲಿ ಅಧಿಕಾರವಾಣಿಯಂತಿದ್ದರು; ಗುರುಕುಲವನ್ನೂ ನಡೆಸುತ್ತಿದ್ದರು. ಹೀಗೆ ವಿದ್ವಾಂಸರೂ, ಸಾತ್ತ್ವಿಕರೂ, ಸನಾತನಧರ್ಮ ನಿಷ್ಠರೂ ಆದವರ ವಂಶದಲ್ಲಿ ಬಂದವರು ನಟೇಶ್ ಮಗ್ಗೆ ಅವರು.

ನಾರಾಯಣಾವಧಾನಿಗಳ ಮಗ ಎಂ.ಎನ್. ಸುಬ್ರಹ್ಮಣ್ಯಂ. ವೇದ ಪರಂಪರೆಯನ್ನು ಮುರಿಯಲು ತಂದೆಗೆ ಇಷ್ಟವಿರಲಿಲ್ಲವಾದರೂ ಸುಬ್ರಹ್ಮಣ್ಯಂ ಪಾಶ್ಚಾತ್ಯ ಶಿಕ್ಷಣಕ್ಕೆ ಒಲಿದರು, ಎಂ.ಎ., ಬಿ.ಟಿ., ಮಾಡಿದರು. ಕಾನೂನು ಪರೀಕ್ಷೆ ಮಾಡಿಕೊಂಡರು, ಫ್ರೆಂಚ್ ಕಲಿತರು. ಜನೋಪಕಾರಿ ದೊಡ್ಡಣ್ಣ ಚೆಟ್ಟಿಯವರು ಬೆಂಗಳೂರಿನಲ್ಲಿ ಕಟ್ಟಿದ್ದ ಶ್ರೀ ಲಕ್ಷ್ಮೀನರಸಿಂಹ ಶಿಕ್ಷಣ ಸಂಸ್ಥೆಯಲ್ಲಿ ಆದ್ಯ ಮುಖ್ಯೋಪಾಧ್ಯಾಯರಾದರು, ಸಂಸ್ಥೆಯನ್ನು 'ನಂ. 1' ಎನ್ನುವಂತೆ ಬೆಳಸಿದರು, ಅದನ್ನು ಕಾಲೇಜನ್ನಾಗಿಸಿದರು, ಅದರ ಪ್ರಾಂಶುಪಾಲರೂ ಆದರು. ತಮ್ಮ 39ನೆಯ ವಯಸ್ಸಿನಲ್ಲಿ 1949ರಲ್ಲಿ ಸ್ವರ್ಗಸ್ಥರಾದರು. ತಮ್ಮ ತಂದೆಯವರ ಈ ಸಾಧನೆಯಿಂದಾಗಿ ನಟೇಶರ ಸಂಸ್ಕಾರಕ್ಕೆ ಆಧುನಿಕತೆಯ ಕಸಿಯೂ ಆದಂತಾಗಿತ್ತು.

ತಂದೆ ಸುಬ್ರಹ್ಮಣ್ಯಂ ತಮ್ಮ ಜಮೀನಿನ ಫಸಲನ್ನು ಪಡಿತರ ಅಂಗಡಿಗಳ ಬೆಲೆಗೇ ಮಾರುತ್ತಿದ್ದರು. ಬಡವರಿಗೆ ಅನುಕೂಲವಾಗಬೇಕೆಂಬುದು ಅವರ ಉದ್ದೇಶವಾಗಿತ್ತು. ಬಡವರಿಗೆ ಬಡ್ಡಿರಹಿತವಾಗಿ ಸಾಲ ನೀಡುತ್ತಿದ್ದರು. ತಮ್ಮಮಕ್ಕಳೂ 'ಪಡಿತರ'ದ ಮಿತಿಯಲ್ಲೇ ಜೀವನ ಮಾಡಬೇಕೆಂಬುದು ಅವರ ಅಪೇಕ್ಷೆಯಾಗಿತ್ತು. ತಮ್ಮ ಭಾರತೀಯ ಧಾರ್ಮಿಕ ಮತ್ತು ಸಾಮಾಜಿಕ ಪರಂಪರೆಯ ಬಗೆಗೆ ಅವರಿಗೆ ಅಪಾರ ಹೆಮ್ಮೆ ಇತ್ತು. 'ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯ ಬಗೆಗಿನ ಹೆಮ್ಮೆ ನಮಗಿದೆ. ಅದರ ಅರ್ಥ ಇತರರಿಗಿಂತ ನಾವು ಮೇಲು ಎಂಬುದಲ್ಲ' ಎಂಬುದನ್ನು ಅವರು ಸ್ಪಷ್ಟಪಡಿಸುತ್ತಿದ್ದರು. ಮನೆಯ ನಿರ್ವಹಣೆ ಸರಳವಾಗಿತ್ತು. ಆಳುಗಳನ್ನು ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರ ಆ ಉದಾತ್ತತೆಯ ಪ್ರಭಾವವು ಈ ವಂಶವನ್ನು ಈಗಲೂ ಮುನ್ನಡೆಸಿದೆ. ಎಂ.ಆರ್. ಲಕ್ಷ್ಮೀನಾರಾಯಣ ಟ್ರಸ್ಟ್ ಎಂಬ ಹೆಸರಿನ ಟ್ರಸ್ಟ್ ಮಾಡಿದ್ದಾರೆ. ತಮ್ಮ ಮನೆಯವರೇ ಸೇರಿ ಅದರಲ್ಲಿ ಇಡುಗಂಟು ಇರಿಸಿದ್ದಾರೆ. ಅದರಿಂದ ಬರುವ ಸುಮಾರು ಒಂದು ಲಕ್ಷ ರೂಗಳಷ್ಟು ಬಡ್ಡಿಯನ್ನು ಬಡವರಿಗೆ ವಿತರಿಸುವ ವ್ಯವಸ್ಥೆ ಮಾಡಿದ್ದಾರೆ.

ಎಂ.ಎನ್. ಸುಬ್ರಹ್ಮಣ್ಯಂ ಅವರ ಪತ್ನಿ ಹೊಸಕೋಟೆಯ ವೆಂಕಟರಮಣಯ್ಯನವರ ಮಗಳು ಸೀತಾಲಕ್ಷ್ಮಮ್ಮನವರು. ಆ ದಂಪತಿಗೆ ನಾಲ್ಕು ಮಕ್ಕಳು, ಎರಡನೆಯವರೇ ನಟೇಶ್ (ಜ: 19-10-1936). ಅವರು ಜನಿಸಿದ್ದೂ ಪ್ರಾಥಮಿಕ ಶಿಕ್ಷಣ ಪಡೆದದ್ದೂ ಮಗ್ಗೆಯಲ್ಲಿ, ಆ ಮುಂದೆ ಬೆಂಗಳೂರಿನಲ್ಲಿ. ಗವರ್ನಮೆಂಟ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ., (1956); ಇಂಡಿಯನ್

ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್‌ನಲ್ಲಿ ಎಂ.ಇ., (1958); ದೆಹಲಿಯಲ್ಲಿ ಗ್ಯಾಸ್ ಟರ್ಬೈನ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಆರು ತಿಂಗಳ ತರಬೇತಿ - ಇಷ್ಟನ್ನೂ ಮುಗಿಸಿದ ಅವರಿಗೆ 'ಡಿಸೈನ್'ನಲ್ಲಿ ಆಸಕ್ತಿ ಮೂಡಿತು. ಸೈಂಟಿಸ್ಟ್ ಆಗಿ ಕೆಲಸ ಮಾಡುವ ಅಭಿಲಾಷೆಯಾಯಿತು. 1959ರಲ್ಲಿ ಅಮೆರಿಕದ 'ಲೀ ಹೈ' ಯೂನಿವರ್ಸಿಟಿಯ ಫೆಲೋಷಿಪ್ ಕೂಡ ಅವರಿಗೆ ದೊರಕಿತು. ಮಗ್ಗೆಯಲ್ಲಿ ಅವರಿಗೆ ಆಸ್ತಿ ಇತ್ತು; ಅದನ್ನು ನೋಡಿಕೊಂಡು ನಟೇಶ್ ಇಲ್ಲೇ ಉಳಿಯಬೇಕೆಂಬುದೇ ಅವರ ಬಂಧುಗಳ ಇಂಗಿತವಾಗಿತ್ತು. ಅಲ್ಲದೆ ಆ ಕಾಲದಲ್ಲಿ ಅಮೆರಿಕೆಗೆ ವಿದ್ಯಾಭ್ಯಾಸಕ್ಕಾಗಲಿ, ನೌಕರಿಗಾಗಲಿ ಭಾರತದಿಂದ ಹೋಗುತ್ತಿದ್ದುದು ಅಪರೂಪದ ವಿಷಯವಾಗಿತ್ತು. ಸಂಪರ್ಕಮಾಧ್ಯಮಗಳೂ ಇಷ್ಟು ಬೆಳೆದಿರಲಿಲ್ಲ. ಅಮೆರಿಕದ ಮುಕ್ತಸಮಾಜವು ಒಡ್ಡುವ ದೌರ್ಬಲ್ಯಗಳಿಗೆ ಮಗನು ಈಡಾಗಬಹುದೆಂಬ ಆತಂಕವೂ ಮನೆಯವರಿಗಿತ್ತು. ಹಾಗಾಗಿ ಫೆಲೋಷಿಪ್‌ನ ಆದೇಶವನ್ನೇ ಮುಚ್ಚಿಟ್ಟುಬಿಟ್ಟರು. ನಭೂತೋ ನಭವಿಷ್ಯತಿ: ಆರು ತಿಂಗಳು ಕಳೆದುಹೋದ ಮೇಲೂ ಮತ್ತೆ ನಟೇಶ್‌ಗೆ ಆದೇಶ ಬಂತು ! ಅವರ ಸಾಧನಾಪರ್ವದ ಹೆಬ್ಬಾಗಿಲು ತೆರೆಯಿತು. ನಟೇಶರ ತಂದೆ ಸುಬ್ರಹ್ಮಣ್ಯಂ ಅವರು ಮಗನಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ 'ನಿನ್ನನ್ನು ಅಮೆರಿಕೆಗೆ ಕಳಿಸುತ್ತೇನೆ' ಎಂದು ಎಂದೋ ಹೇಳುತ್ತಿದ್ದ ಮಾತು ಕೊನೆಗೂ ನಿಜವಾದ ಹಾಗಾಯಿತು.

1959ರಲ್ಲಿ ಅಮೆರಿಕದ ನೆಲದಲ್ಲಿ ಕಾಲಿಟ್ಟ ನಟೇಶ್ New York ವಿಶ್ವವಿದ್ಯಾಲಯದಿಂದ Austronauticsನಲ್ಲಿ ಎಂ.ಎಸ್. ಪದವಿ ಮಾಡಿಕೊಂಡರು. ಅವರ ಕನಸು ಸಾಕಾರವಾಯಿತು: 1960ರಲ್ಲಿ Curtisswright Aircraft Engine Co., ಯಲ್ಲಿ Aircraft Engines Research & Development Scientist ಆಗಿ ಸೇರಿದರು; ಏಳು ವರ್ಷ ಅವರ ಸಂಶೋಧನೆ ನಡೆಯಿತು. ಅವರು ಮಂಡಿಸಿದ ಪ್ರಬಂಧವು 'Best Paper of the Year' ಎಂದು ಬಹುಮಾನಿತವಾಯಿತು. Society of Automotive Engineersನಿಂದ 'One of the Best Inventors' ಎಂದು ಮಾನ್ಯರಾದರು. 'Renowned Coveted Scientist' ಎಂದು ಅಮೆರಿಕವು ಗುರುತಿಸಿತು. ಅಮೆರಿಕದ ರಾಷ್ಟ್ರಮಟ್ಟದ ಈ ಪ್ರಶಸ್ತಿಯಿಂದಾಗಿ ಭಾರತದ ಪುಟ್ಟಹಳ್ಳಿಯ ಹುಡುಗನಿಗೆ ಜಗತ್ತಿನ ಶಿಖರವೇರಿದ ಅನುಭವ !

1967 ಅವರ ಮಹತ್ವಾಕಾಂಕ್ಷೆಯ ಮತ್ತೊಂದು ಹೆಬ್ಬಾಗಿಲು ತೆರೆದ ವರ್ಷ. Bostonನ General Electric Co. (GE) ನಲ್ಲಿ Manager in Engineering ಆಗಿ ಸೇರಿದರು. 1972ರಲ್ಲಿ Cincinnatiಗೆ ಸ್ಥಳಾಂತರವಾದುದು ಬಿಟ್ಟರೆ ಆ ಕಂಪನಿಯೇ ಅವರ ಸಾಧನಾಕ್ಷೇತ್ರವಾಗಿ ಇಂದಿಗೂ ಮುಂದುವರಿದಿದೆ. ವೃತ್ತಿ-ಪ್ರೇಮ ಮತ್ತು ವೃತ್ತಿ-ಸಂತೃಪ್ತಿ ಎಂಬುದರ ಪ್ರತೀಕವೇ ಅವರಾಗಿಬಿಟ್ಟಿದ್ದಾರೆ. ಉನ್ನತೋನ್ನತ ಜವಾಬ್ದಾರಿಗಳ ನಿರ್ವಹಣೆಯ ವೈವಿಧ್ಯಪೂರ್ಣ ಅಧಿಕಾರಗಳು ಅವರಿಗೆ ಅಲ್ಲಿಯೇ ಪ್ರಾಪ್ತವಾಗಿವೆ.

ಬೆರಗುಗೊಳಿಸುವಷ್ಟು ವೃತ್ತಿಪರಿಣತಿ ಅವರದು: ವಿಮಾನಗಳು ಎಷ್ಟು ಬಾರಿ ಏರಿ-ಇಳಿದು-ಹಾರಿದರೂ ವಿಫಲಗೊಳ್ಳದಂತೆ ನೋಡಿಕೊಳ್ಳುವ ಜವಾಬ್ದಾರಿ; ವಿವಿಧ ದೇಶಗಳಲ್ಲಿ ನಿರ್ವಹಿಸುವ Global Organisors ಯೋಜನೆಯ ಭಾರತ ಭಾಗದ ಜವಾಬ್ದಾರಿ; ಸಿನ್ಸಿನಾಟಿಯ ಇಂಜಿನಿಯರುಗಳ ಮಾರ್ಗದರ್ಶನದಲ್ಲಿ ವಿಶ್ಲೇಷಣೆ ಮಾಡಲು ಬೆಂಗಳೂರಿನಲ್ಲಿ ಇಂಜಿನಿಯರುಗಳನ್ನು ಆರಿಸಿಕೊಂಡು ತರಬೇತಿ ನೀಡುವಿಕೆ, 400 ಇಂಜಿನಿಯರುಗಳಿರುವ ಈ ಸಂಸ್ಥೆಯ ನಿರ್ವಹಣೆ; ಅಮೆರಿಕಾದಲ್ಲಿ Aircraft engineಗಳನ್ನು design ಮಾಡುವ 100 ಇಂಜಿನಿಯರುಗಳ ಉಸ್ತುವಾರಿ; Commercial Engines, Military Engines, Fighters, Airbus, Bombers, ಇತ್ಯಾದಿಗಳ ಗುಣನಿರ್ವಹಣೆಯ ಜವಾಬ್ದಾರಿ; ಬಹು ನೈಪುಣ್ಯದ ಈ ಕ್ಷೇತ್ರದಲ್ಲಿ ಅತ್ಯುತ್ತಮ ಇಂಜಿನಿಯರುಗಳನ್ನು ಆರಿಸಿ ತರಬೇತಿ ನೀಡುವ ಜವಾಬ್ದಾರಿ - ಹೀಗೆ ಅವರು ನಿರ್ವಹಿಸುತ್ತಿರುವ ಕೆಲಸಗಳು ವೈವಿಧ್ಯಪೂರ್ಣವೂ ವ್ಯಾಪಕವೂ ಆದುವಾಗಿವೆ.

ಅಮೆರಿಕದ ರಕ್ಷಣಾಪಡೆಯಲ್ಲಿ Aeronautical Engineer ಆಗಿ ಹೊರಗಿನವರಿಗೆ ನೌಕರಿ ದೊರೆಯುವುದು ಸುಲಭದ ಮಾತಲ್ಲ. ಆ ಅಪರೂಪದ ಗೌರವ ದೊರೆತದ್ದು ನಟೇಶ್ ಮಗ್ಗೆ ಅವರಿಗೆ ಎಂಬುದು ಕೂಡ ಕನ್ನಡಿಗರಿಗೆ ಗೌರವ ತಂದ ವಿಷಯ. Stress and Vibration Fieldನಲ್ಲಿ ಸಂಶೋಧನೆ ನಡೆಸಿ design ಮಾಡಿದ್ದು ಕೂಡ ಅವರ ಪ್ರತಿಭೆಗೆ ದೊರೆತ ಸುವರ್ಣಾವಕಾಶವಾಗಿತ್ತು. Squeeze film bearing technology fieldನ್ನು ಅಭಿವೃದ್ಧಿಪಡಿಸಿದ್ದಕ್ಕೆ ದೊರೆತ ಪ್ರಶಸ್ತಿಗಳು ಕೂಡ ಅನೇಕ.

General Electric Co., ಅಮೆರಿಕದ ಅತಿಶ್ರೇಷ್ಠ ಕಂಪನಿ ಎಂದು ಮಾನ್ಯವಾಗಿದೆ. ಅದರ ಗುಣನಿರ್ವಹಣೆ, ತಂತ್ರಜ್ಞಾನ,

ಮಾನವಸಂಪನ್ಮೂಲದ ನಿರ್ವಹಣೆ ಇವೆಲ್ಲ ಅದಕ್ಕೆ ಕಾರಣವಾಗಿವೆ. ನಟೇಶ್‌ಗೆ ಈ ಕಂಪನಿಯು ಜೀವದ ಜೀವವಾಗಿಬಿಟ್ಟಿದೆ; ಪ್ರತಿದಿನ ಕಲಿಯುತ್ತಾರೆ, ಪ್ರತಿನಿತ್ಯವೂ ತಂತ್ರಜ್ಞಾನದ ಏನಾದರೊಂದು ಕೊಡುಗೆ ನೀಡುತ್ತಾರೆ. ಹಾಗಾಗಿ ಕಂಪನಿಯಲ್ಲಿ ಅವರ ಬಗೆಗೆ ಗೌರವ, ಮೆಚ್ಚುಗೆ; ಅವರು ನಿವೃತ್ತಿಗೊಳ್ಳಲೂ ಬಿಡದಷ್ಟು ಆಪ್ತತೆ. Gas-Turbine Engine Design ಎಂಬ ವಿಷಯದ ಗ್ರಂಥವನ್ನೂ ಅವರು ರಚಿಸಿದ್ದಾರೆ. ಬೋಧನೆಯನ್ನೂ ಮಾಡಿ ಅಧ್ಯಾಪಕರನ್ನು ಅಣಿಗೊಳಿಸುವ ಕೆಲಸವನ್ನೂ ಅವರು ಮಾಡುತ್ತಿದ್ದಾರೆ. ಈ ಎಲ್ಲದರಿಂದಾಗಿ ಅವರಿಗೆ ಲೆಕ್ಕವಿಲ್ಲದಷ್ಟು ಸನ್ಮಾನಗಳೂ ಪ್ರಶಸ್ತಿಗಳೂ ದೊರೆತಿವೆ.

General Electric Co.,ಯಲ್ಲಿ ನೀಡುವ ಅತ್ಯುನ್ನತ ಪ್ರಶಸ್ತಿ 'Engineer of the Year' ಅವರಿಗೆ 1972ರಷ್ಟು ಹಿಂದೆಯೇ ಲಭ್ಯವಾಗಿದೆ. ಕಂಪನಿಯ ಅತಿಶ್ರೇಷ್ಠ ಇಂಜಿನಿಯರರಿಗೆ ನೀಡಲಾಗುವ ಪ್ರಶಸ್ತಿ ಅದಾಗಿದೆ ಎಂಬುದು ಕನ್ನಡಿಗರ ಹೆಮ್ಮೆಯನ್ನು ಎತ್ತರಿಸುವ ಸಂಗತಿಯಾಗಿದೆ.

ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದರಲ್ಲಿಯೂ ನಟೇಶ್ ಅವರು ಹಿಂದೆ ಬಿದ್ದಿಲ್ಲ. 1997-2000ದವರೆಗೆ ಎರಡು ಅವಧಿಗೆ North American Sanketi Associationನ ಅಧ್ಯಕ್ಷರಾಗಿದ್ದರು. ನಮ್ಮ ಬೇರುಗಳನ್ನು ಮರೆಯಬಾರದೆಂಬ ಪ್ರಜ್ಞೆಯಿಂದಲೇ ಅವರು ಅದರಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲರಾಗಿದ್ದಾರೆ. 1959ರಲ್ಲಿ ಅವರು ವಿವಾಹವಾದುದು ಹಾಸನ ಜಿಲ್ಲೆ ಅಗ್ರಹಾರ ಗ್ರಾಮದ ಶ್ರೀ ಚನ್ನಕೇಶವಯ್ಯನವರ (ಪುಟ್ಟಣ್ಣನವರು) ಮಗಳು ಶ್ರೀಮತಿ ಸುಂದರಮಣಿ ಅವರನ್ನು; ಜತೆಗೆ ಸೋದರರನ್ನೂ ಬಂಧುಗಳನ್ನೂ ಅಮೆರಿಕೆಗೆ ಕರೆಯಿಸಿಕೊಂಡು ಅವರ ಉನ್ನತಿಗೆ ಕಾರಣರಾದರು; ಆವರೆಗೆ ವೈಯಕ್ತಿಕವಾಗಿ ಅಮೆರಿಕೆಗೆ ಹೋದ ಸಂಕೇತಿಗಳಿದ್ದರು, ಆದರೆ ಸಂಸಾರದೊಂದಿಗೆ - ಇಡೀ ದೊಡ್ಡ ಬಳಗದೊಂದಿಗೆ - ಅಮೆರಿಕದಲ್ಲಿ ನೆಲೆಸಿದವರಲ್ಲಿ ಇವರೇ ಮೊದಲಿಗರೆನಿಸಿದರು. ಪತ್ನಿ ಸುಂದರಮಣಿ ಅವರು ಖ್ಯಾತ ವಿದ್ವಾನ್ ಆನೂರು ರಾಮಕೃಷ್ಣನ್ ಅವರಲ್ಲಿ ಮೂರು ವರ್ಷ ಗಾಯನ ಕಲೆಯನ್ನು ಕಲಿತವರು. ಮಕ್ಕಳೆಲ್ಲ ಮಹಾ ಮೇಧಾವಿಗಳು. ಎಲ್ಲರಿಗೂ ಸನಾತನ ಧರ್ಮದಲ್ಲಿ ಪ್ರೀತಿ, ದೀನರನ್ನು ಕಂಡರೆ ಅನುಕಂಪ, ಸಮಾಜ ಸೇವೆಯ ತುಡಿತವಿದೆ. ಅತ್ಯುನ್ನತ ಜ್ಞಾನ-ವಿಜ್ಞಾನ-ತಂತ್ರಜ್ಞಾನಗಳನ್ನು ವಶಪಡಿಸಿಕೊಳ್ಳುತ್ತಲೇ ಸನಾತನ ಪರಂಪರೆಯ ಶ್ರೇಷ್ಠತೆಯನ್ನೂ ಉಳಿಸಿಕೊಂಡಿರುವುದು ಅವರ ಹೆಗ್ಗಳಿಕೆಯಾಗಿದೆ.

ನಟೇಶ್ ಮಗ್ಗೆ ಅವರ ಕುಟುಂಬ

ನಟೇಶರ ಕುಟುಂಬದ ಬಗೆಗೆ ಬರೆಯುವುದೆಂದರೆ, ಬುದ್ಧಿತೀಕ್ಷ್ಣತೆ ಮತ್ತು ಮಾನವೀಯ ಅನುಕಂಪದ ಬಗೆಗೆ ಬರೆಯುವುದೆಂದೇ ಅರ್ಥ. ಅವರ ನಾಲ್ವರು ಮಕ್ಕಳೂ ಹೈಸ್ಕೂಲ್‌ನಲ್ಲಿ VALEDICTORIANಗಳು ! ಪಾಠ್ಯೇತರ ಸಾಧನೆಗಳಲ್ಲಿ ಬಹು ಶ್ರೇಷ್ಠ ಸಾಧನೆ ಮಾಡಿದವರಿಗೆ ಮತ್ತು ಬಹು ಬುದ್ಧಿವಂತರಿಗೆ ಮಾತ್ರವೇ ಸಾಧ್ಯವಾಗುವಂಥದು ಅದು.

ಮೊದಲ ಮಗ ಸುಬ್ಬು ಎನ್. ಮಗ್ಗೆ; ಸಂಪ್ರದಾಯದಂತೆ ಅಜ್ಜನ ಹೆಸರೇ ಈ ಜ್ಯೇಷ್ಠ ಪುತ್ರನಿಗೆ ಸಂದಿದೆ. ಹೈಸ್ಕೂಲಿನ ಅವರ ಮೆರಿಟ್ ಆಧರಿಸಿಯೇ ಅವರಿಗೆ MITನಲ್ಲಿ ಓದಲು ಅವಕಾಶ ದೊರೆಯಿತು. ಅಲ್ಲಿ ಅವರು ಉನ್ನತ ಶ್ರೇಯಾಂಕದಲ್ಲಿ ಪದವೀಧರರಾದರು; ಅಮೆರಿಕದ ಅತಿ ಶ್ರೇಷ್ಠ YALE MEDICAL SCHOOL ನಲ್ಲಿ ಜಾಗ ಪಡೆದು ಅಲ್ಲಿ ಅತ್ಯುನ್ನತ ಸ್ಥಾನಮಾನ (Highest honour) ಹೊಂದಿದರು; ಅನಂತರ 7 ವರ್ಷ Neurosurgeryಯಲ್ಲಿ ನುರಿತರು; ಬೋಸ್ಟನ್‌ನ ಲೇಹೀ ಕ್ಲಿನಿಕ್‌ನ ಸ್ಪೈನ್ ಸೆಂಟರ್‌ನ ನಿರ್ದೇಶಕರಾದರು; ಸುಪ್ರಸಿದ್ಧರಾದರು. ತಂದೆಯಂತೆ Aeronautical ಇಂಜಿನಿಯರನಾಗಬೇಕೆಂಬ ಆಸೆಯೊಂದಿಗೆ ಹೊರಟ ಸುಬ್ಬು ಏಡ್ಸ್ ಕ್ಷೇತ್ರದ ಸಂಶೋಧನೆಗಾಗಿ ನೊಬೆಲ್ ಪ್ರಶಸ್ತಿ ವಿಜೇತರಾದ ವಿಜ್ಞಾನಿಯ ಮಾರ್ಗದರ್ಶನದಲ್ಲಿ ಸಂಶೋಧನೆಗೆ ತೊಡಗಿಕೊಂಡ ಮೇಲೆ ವೈದ್ಯಕೀಯ ಕ್ಷೇತ್ರದಲ್ಲಿ ಆಸಕ್ತಿ ತಳೆದರು ಎಂಬುದೂ ಗಮನಾರ್ಹವೇ. ಅದಕ್ಕಿದ್ದ ಪ್ರೇರಣೆ ಮಾನವಸೇವೆಯ ಹಂಬಲ.

ಡಾ. ಸುಬ್ಬು ಅವರ ಪತ್ನಿ ಡಾ. ಕಲ್ಯಾಣಿ ಅವರು ಮೈಸೂರಿನ ಗೀತಾ-ನರಸಿಂಹಮೂರ್ತಿ ದಂಪತಿಯ ಮಗಳು. ಮೆಡಿಕಲ್ ಸ್ಕೂಲ್‌ನಲ್ಲಿ ಏಳನೆಯ ರ‍್ಯಾಂಕ್ ಪಡೆದು 'ಸರ್ಜರಿ'ಯಲ್ಲಿ ಸುವರ್ಣಪದಕ ಪಡೆದ ಪ್ರತಿಭಾವಂತೆ; ಈಗ ಅವರು Nephrologist ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ನಟೇಶರ ಮೊದಲ ಮಗಳು ಶೀಲಾ ಎನ್. ಮಗ್ಗೆ ಹೈಸ್ಕೂಲಿನಲ್ಲಿ Valedictorian ಆದ ನಂತರ ಅಮೆರಿಕದ ಶ್ರೇಷ್ಠ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು (ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಸಿಗುವುದು ಬಲು ಕಷ್ಟ. ಪಾಠ್ಯ, ಕ್ರೀಡೆ, ಲೈಟ್ ಮ್ಯೂಸಿಕ್, ಲೈಟ್ ಆರ್ಟ್ಸ್, ಲೈಟ್ ಸ್ಪೀಕಿಂಗ್..... ಹೀಗೆ ಬಹುಕ್ಷೇತ್ರದಲ್ಲಿ ಸಾಧನೆಗೈದಿದ್ದರೆ ಮಾತ್ರವೇ ಅಲ್ಲಿ ಪ್ರವೇಶ ಸಿಗುವಂಥದು. ಕಡ್ಡಾಯವಾಗಿ ಅಲ್ಲಿ ಮೆರಿಟ್ ಮಾತ್ರವೇ ಮಾನದಂಡವಾಗಿರುತ್ತದೆ.) ಮೆರಿಟ್ ಆಧಾರದ ಮೇಲೆ ಯೇಲ್ ಮೆಡಿಕಲ್ ಸ್ಕೂಲ್‌ಗೆ ಸೇರಿದರು. Paediatrics ಅಧ್ಯಯನ ಮಾಡಿ ಎಂಡೋಕ್ರೈನಾಲಜಿಯಲ್ಲಿ ಪರಿಣತರಾದರು. ಖ್ಯಾತವಾದ ಬಾಸ್ಟನ್ ಚಿಲ್ಡ್ರನ್ಸ್ ಹಾಸ್ಪಿಟಲ್‌ನಲ್ಲಿ ತರಬೇತಿ ಪಡೆದರು; ಈಗ ಪೆನ್ಸಿಲ್ವೇನಿಯಾ ಮೆಡಿಕಲ್ ಸ್ಕೂಲ್‌ನಲ್ಲಿ ಪ್ರಾಧ್ಯಾಪಕರೂ ವೃತ್ತಿನಿರತ ವೈದ್ಯರೂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಹು ಪ್ರಖ್ಯಾತವಾದ WHARTON SCHOOLನಲ್ಲಿ Ph.D., M.B.A., ಮಾಡಿರುವ ನಂದಕುಮಾರ್ ಶೀಲಾ ಅವರ ಪತಿ. ಅವರು ಓದಿದ್ದೂ MIT (Massachusetts Institute of Technology)ಯಲ್ಲಿಯೇ. ವೈದ್ಯಕೀಯ ಉಪಕರಣಗಳಿಗೆ ಸಂಬಂಧಿಸಿದ ಕಂಪನಿಯೊಂದರ ಮಾಲೀಕರು ಅವರು ಎಂಬುದು ಕೂಡ ಹೆಮ್ಮೆಯ ವಿಷಯವೇ. ಸ್ವಯಮುದ್ದಿಮೆಯ ಅಪರೂಪದ ಶ್ರೇಷ್ಠ ಪ್ರಯತ್ನಗಳಲ್ಲೊಂದು ಅದು. ಈ ದಂಪತಿಗೆ ಸುಪ್ರಿಯಾ, ಶ್ರೇಯಸ್ ಅವಳಿ ಮಕ್ಕಳು.

ಯಥಾಪ್ರಕಾರ VALEDICTORIAN ಆಗಿ, ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಪದವಿ ಪಡೆದು, ಅಮೆರಿಕದ ಶ್ರೇಷ್ಠ ಹಾರ್ವರ್ಡ್ ಮೆಡಿಕಲ್ ಸ್ಕೂಲ್ ಸೇರಿ ಏಳು ವರ್ಷ Neurosurgeryಯಲ್ಲಿ ನುರಿತವರು ಎರಡನೆಯ ಮಗ ಸುರೇಶ್ ಎನ್. ಮಗ್ಗೆ. ಹೆಸರಾಂತ ಕ್ರೀಡಾಪಟು, State levelನ ಟೆನ್ನಿಸ್ ಆಟಗಾರ. 33 ವರ್ಷದ ಅವರು ಈಗ ಉದ್ಯೋಗಾನ್ವೇಷಣೆಯಲ್ಲಿದ್ದಾರೆ.

ನಟೇಶ್ ಅವರ ಎಲ್ಲ ಮಕ್ಕಳೂ ಧಾರ್ಮಿಕ ಪ್ರವೃತ್ತಿಯವರು, ನಿಯತವಾಗಿ ಸಂಧ್ಯಾವಂದನೆ, ಸಮಿದಾಧಾನ ಮಾಡಿದವರು ಎಂಬುದನ್ನು ಇಲ್ಲಿನ ನಮ್ಮ ಹುಡುಗರು ಅವಶ್ಯವಾಗಿ ಗಮನಿಸಬೇಕು.

ನಟೇಶರ ಎರಡನೆಯ ಮಗಳು ಹೇಮಾ ಎನ್.ಮಗ್ಗೆ ಈ ರತ್ನಗಳ ನಡುವೆ ಮಕುಟಮಣಿ, ಎಲ್ಲರಿಗಿಂತ ಜಾಣೆ. ಅಮೆರಿಕದ PRESIDENTIAL SCHOLAR ಆಕೆ. ಯುನೈಟೆಡ್ ಸ್ಟೇಟ್‌ನ ಪ್ರತಿ ರಾಜ್ಯದಿಂದಲೂ, ಈ ಪ್ರಶಸ್ತಿಗಾಗಿ ಹೈಸ್ಕೂಲುಗಳ ಅತಿ ಶ್ರೇಷ್ಠ ವಿದ್ಯಾರ್ಥಿಗಳಿಬ್ಬರನ್ನು ಆರಿಸುತ್ತಾರೆ. ಪಾಠ್ಯಪರೀಕ್ಷಾ ಸಾಧನೆಯ ಜೊತೆಗೆ, ಮೌಖಿಕ ಪರೀಕ್ಷೆ ಸಂದರ್ಶನ ಮೊದಲಾಗಿ ಹಲವು ಸುತ್ತಿನ ಪರೀಕ್ಷೆಗಳು ಅದಕ್ಕಾಗಿ ನಡೆಯುತ್ತವೆ. ಅವೆಲ್ಲದರಲ್ಲಿ ಶ್ರೇಷ್ಠಳಾಗಿ ಹೊಮ್ಮಿದ ಹೇಮಾ ಅಧ್ಯಕ್ಷ ಕ್ಲಿಂಟನ್‌ರಿಂದ ಈ ಪ್ರಶಸ್ತಿಯನ್ನು ಸ್ವೀಕರಿಸಿದ ಹೆಮ್ಮೆಗೆ ಪಾತ್ರರಾಗಿದ್ದಾರೆ. ಈ ಪ್ರಶಸ್ತಿಯನ್ನು ಪಡೆಯುವ ಗೌರವಕ್ಕೆ ಈವರೆಗೆ ಪಾತ್ರರಾಗಿರುವ ಏಕೈಕ ಭಾರತೀಯ ಮೂಲದ ವಿದ್ಯಾರ್ಥಿನಿ ಹೇಮಾ! ಆಕೆ ಕೂಡ ಶ್ರೇಷ್ಠ ಶ್ರೇಯಾಂಕದೊಂದಿಗೆ (high honour) ಹೊಮ್ಮಿದ ಹಾರ್ವರ್ಡ್ ವಿಶ್ವವಿದ್ಯಾಲಯದ ಪದವೀಧರೆ, ಪೆನಿಸಲ್ವೇನಿಯಾ ಮೆಡಿಕಲ್ ಸ್ಕೂಲ್‌ನ M.D.; ಈಗ Paediatric ತರಬೇತಿ ಪಡೆಯುತ್ತಿದ್ದಾರೆ.

ಅಮೆರಿದಲ್ಲಿ ವೈದ್ಯಕೀಯ ಕ್ಷೇತ್ರವು ಹಣ ಮಾಡುವವರ ಸ್ವರ್ಗ. ಆದರೆ ನಟೇಶ್‌ರ ಮಕ್ಕಳು ಈ ಕ್ಷೇತ್ರವನ್ನು ಆರಿಸಿಕೊಂಡಿದ್ದು ಜನರ ಅದರಲ್ಲೂ ಬಡವರ ಸೇವೆ ಮಾಡುವುದಕ್ಕೆ. 'Patient is God' ಎಂಬುದು ಇವರೆಲ್ಲರ ಧ್ಯೇಯವಾಕ್ಯ. ಇವರ ನಡುವೆ ಹೇಮಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ಬಡಜನರ ಸೇವೆ ಮಾಡುವ ಕ್ಷೇತ್ರದಲ್ಲಿ ಪರಿಣತಿ ಪಡೆಯುತ್ತಿದ್ದಾರೆ. ಪ್ರತಿ ಬೇಸಗೆಯಲ್ಲಿ ದಕ್ಷಿಣ ಆಫ್ರಿಕಾಕ್ಕೆ ಹೋಗಿ, ಏಡ್ಸ್ ತಗುಲಿದ ಮಕ್ಕಳ ನಡುವೆ ಇದ್ದು ಅವರ ಸೇವೆ ಮಾಡಿ ಬರುತ್ತಿದ್ದಾರೆ. ಈ ವಿಷಯದಲ್ಲಿ ತೀವ್ರ ಬದ್ಧತೆ ಇರಿಸಿಕೊಂಡಿರುವ ಈಕೆ ತನಗೇ ಅಪಾಯ ಇರುವ ಸನ್ನಿವೇಶಗಳಲ್ಲೂ, ಸ್ವಂತ ಹಣವನ್ನು ಬಳಸಿ ದೀನರ ಸೇವೆ ಮಾಡುತ್ತಿದ್ದಾರೆ.

ಇಂಥ ಬುದ್ಧಿವಂತರೂ, ಸುಸಂಸ್ಕೃತರೂ, ಸಾಮಾಜಿಕ ಕಳಕಳಿ ಇರುವವರೂ ಆದ ಮಕ್ಕಳ ಬಗ್ಗೆ ಯಾವ ತಂದೆ-ತಾಯಿಯವರಿಗೆ ಹೆಮ್ಮೆ ಇರುವುದಿಲ್ಲ? ನಟೇಶ್ ಅವರಿಗೂ ಅಭಿಮಾನವಿದೆ. ಈ ಪುಣ್ಯವನ್ನು ನೆನೆಯುವಾಗ ಆನಂದದಿಂದ ಅವರ ಕಣ್ಣು ತೇವವಾಗುತ್ತದೆ.

ಬ.ಸು.ಪ್ರ

ಶ್ರೀಮತಿ ವಿನೋದಾ - ಶ್ರೀ ಎಂ.ಎಸ್. ಶ್ರೀನಿವಾಸ್

ಜಗದ್ವಿಖ್ಯಾತರಾದ **ಡಾ|| ಆರ್. ಶಾಮಶಾಸ್ತ್ರಿ**ಯವರು ಮೂಲತಃ ಹಾಸನ ಜಿಲ್ಲೆಯ ರುದ್ರಪಟ್ಟಣದವರು. ತಾಯಿಯ ಕಡೆಯ ಮೂಲ ಪುರುಷ ತಿರುಮಲದೇವರಭಟ್ಟರ ನಾಲ್ವರು ಮಕ್ಕಳಲ್ಲಿ ಮೊದಲನೆಯವರು ಗೋಪಾಲಭಟ್ಟರು. ಪಿಟೀಲ್ ಗೋಪಾಲಯ್ಯನವರು ಗೋಪಾಲಭಟ್ಟರ ಆರು ಮಕ್ಕಳಲ್ಲಿ ನಾಲ್ಕನೆಯವರು. ಹೆಸರೇ ಹೇಳುವಂತೆ ಪಿಟೀಲು ವಿದ್ವಾಂಸರು. ಅವರ ಏಕಮಾತ್ರ ಪುತ್ರಿ ಪುಟ್ಟಮ್ಮ. ಪುಟ್ಟಮ್ಮ - ವೆಂಕಟರಮಣಯ್ಯ (ರುದ್ರಪಟ್ಟಣ ಕಾಶೀಪತಿ-ತಾಯಮ್ಮ ದಂಪತಿಗಳ ಮಗ) ದಂಪತಿಯ ಜ್ಯೇಷ್ಠ ಪುತ್ರ ಡಾ|| ಆರ್. ಶಾಮಶಾಸ್ತ್ರಿಯವರು; ಇನ್ನಿಬ್ಬರು ಮಕ್ಕಳು ಶ್ರೀ ಆರ್. ರಾಮಸ್ವಾಮಿ, ಶ್ರೀ ಆರ್. ಗೋಪಾಲಯ್ಯ. ಡಾ|| ಆರ್. ಶಾಮಶಾಸ್ತ್ರಿ + ಪುಟ್ಟಮ್ಮ (ವೀಣೆ ಶಾಮಣ್ಣ+ ಯಜ್ಞಮ್ಮ ದಂಪತಿಯ ಮಗಳು) ದಂಪತಿಗಳಿಗೆ ನಾಲ್ವರು ಹೆಣ್ಣುಮಕ್ಕಳನಂತರ ಹುಟ್ಟಿದ ಏಕಮಾತ್ರ ಪುತ್ರ ಶ್ರೀ ಶ್ರೀನಿವಾಸ್ ಎಂ.ಎಸ್ (ಗುಂಡ). ಚಾಣಕ್ಯನ ಸಂಸ್ಕೃತ ಗ್ರಂಥ 'ಅರ್ಥಶಾಸ್ತ್ರ'ವನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ ಸಂಪಾದಿಸಿ, ಪ್ರಕಟಿಸಿ ಜಗತ್ತಿಗೆ ಈ ಮಹತ್ಕೃತಿಯನ್ನು ಪರಿಚಯಿಸಿದ ಮಹನೀಯರು ಡಾ|| ಆರ್. ಶಾಮಶಾಸ್ತ್ರಿಯವರು (೧೨-೧-೧೮೬೮ ರಿಂದ ೨೩-೧-೧೯೪೪). ಸಂಸ್ಕೃತ ಮತ್ತು ಇಂಗ್ಲಿಷ್ ಅಲ್ಲದೆ ಹಲವು ಭಾಷೆಗಳ ಪಂಡಿತರು. ಮೈಸೂರಿನ ಓರಿಯಂಟಲ್ ಲೈಬ್ರರಿಯಲ್ಲಿ ಗ್ರಂಥಪಾಲಕರಾಗಿಯೂ ಕ್ಯೂರೇಟರ್ ಆಗಿಯೂ, ಬೆಂಗಳೂರಿನ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪ್ರಿನ್ಸಿಪಾಲರಾಗಿಯೂ, ಪುರಾತತ್ವ ಇಲಾಖೆಯ ನಿರ್ದೇಶಕರಾಗಿಯೂ, ಮೈಸೂರು ವಿಶ್ವವಿದ್ಯಾಲಯದಲ್ಲಿ ಭಾರತೀಯ ಇತಿಹಾಸ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಏಳು ಗ್ರಂಥಗಳನ್ನು ರಚಿಸಿದರು, ಸಿದ್ಧಪಡಿಸಿದರು. ನೂರಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿದರು. ಹಲವು ಗ್ರಂಥಗಳ ಸಂಪಾದಕರಾಗಿಯೂ, ಪ್ರಧಾನ ಸಂಪಾದಕರಾಗಿಯೂ ಕೆಲಸ ಮಾಡಿದರು. ಅವರ ವಿದ್ವತ್ ಸಾಧನೆಗಾಗಿ ಗೌರವ ಡಾಕ್ಟರೇಟ್ ಪದವಿಗಳೂ, **ವಿದ್ಯಾಲಂಕಾರ, ಪಂಡಿತರಾಜ, ಅರ್ಥಶಾಸ್ತ್ರವಿಶಾರದ, ಮಹಾಮಹೋಪಾಧ್ಯಾಯ** ಮೊದಲಾದ ಬಿರುದುಗಳೂ ಪ್ರಾಪ್ತವಾದವು. ಶಾಸ್ತ್ರಿಯವರನ್ನು ಕುರಿತ ಹಲವು ಲೇಖನಗಳು ಆಗಾಗ ಪ್ರಕಟಗೊಂಡಿವೆ. ಪ್ರಸಿದ್ಧ ವಿದ್ವಾಂಸರಾದ ಡಾ|| ಟಿ.ವಿ. ವೆಂಕಟಚಲಶಾಸ್ತ್ರೀ ಅವರು ಬರೆದ **'ಮಹಾಮಹೋಪಾಧ್ಯಾಯ ಡಾ||ಆರ್.ಶಾಮಶಾಸ್ತ್ರಿ ಬದುಕು-ಬರಹ'** ಎಂಬ ಕಿರುಹೊತ್ತಗೆಯಲ್ಲಿ ಶಾಮಶಾಸ್ತ್ರಿಗಳ ಬಗೆಗಿನ ವಿಷಯಗಳು ಸಮಗ್ರವಾಗಿ ಅಚ್ಚುಕಟ್ಟಾಗಿ ಅಡಕವಾಗಿ ಬಂದಿವೆ. ಅದರ ಇಂಗ್ಲಿಷ್ ರೂಪವು ಸಮುದಾಯ ಅಧ್ಯಯನ ಕೇಂದ್ರವು ಪ್ರಕಟಿಸಿರುವ ಸಂಕೇತಿ ಅಧ್ಯಯನಮಾಲೆಯ ಏಳನೆಯ ಸಂಪುಟ **Vibrant India**ದಲ್ಲಿ ಉಪೋದ್ಘಾತ ರೂಪದಲ್ಲಿ ಬಂದಿದೆ.

ಶಾಮಶಾಸ್ತ್ರಿಗಳಿಗೆ ಹುಟ್ಟಿದ ಆರು ಗಂಡುಮಕ್ಕಳ ಪೈಕಿ ಉಳಿದುಕೊಂಡವರು ಶ್ರೀನಿವಾಸ್ ಮಾತ್ರ. ಹಾಗಾಗಿ ಅವರನ್ನು 'ಗುಂಡ' ಎಂದೇ ಕರೆದರು. ಶ್ರೀನಿವಾಸ್ (೮೪) ತಮಗೆ ಪರಂಪರೆಯಿಂದ ಬಂದ ಜಮೀನು ನೋಡಿಕೊಳ್ಳುವುದರ ಜೊತೆಗೆ ತಮ್ಮ ತಂದೆ ಡಾ||ಶಾಮಶಾಸ್ತ್ರಿಗಳ ಪುಸ್ತಕಗಳ ಪ್ರಕಾಶನ-ಪ್ರಚಾರ ಕಾರ್ಯವನ್ನೂ ಮಾಡಿದರು. ('ಆಶುತೋಷ್', ೨೯೪೬, ಝಾನ್ಸಿ ಲಕ್ಷ್ಮೀಬಾಯಿ ರಸ್ತೆ, ಚಾಮರಾಜಪುರಂ, ಮೈಸೂರು-೫೭೦ ೦೦೪) ವಿನೋದಾ ಅವರು (೭೫) ರುದ್ರಪಟ್ಟಣ ಶ್ರೀನಿವಾಸಯ್ಯ-ರತ್ನಮ್ಮ ದಂಪತಿಯ ಮಗಳು. ಶ್ರೀನಿವಾಸಯ್ಯನವರು ಸಾವಕಾರ್ ಅಪ್ಪಣ್ಣಯ್ಯ ಎಂದೇ ಪ್ರಸಿದ್ಧರು; ತಮ್ಮ ಧಾರ್ಮಿಕ ಪ್ರವೃತ್ತಿಯಿಂದಾಗಿ 'ಧರ್ಮರಾಯ' ಎಂದೇ ಖ್ಯಾತರು.

ಶ್ರೀನಿವಾಸ್ ಅವರ ಮೊದಲ ಮಗಳು ಡಾ. ಶಶಿರೇಖ, M.Sc., Ph.D. (+ ಡಾ. ಸತ್ಯನ್). ಎರಡನೆಯ ಮಗಳು ಶೋಭಾ, M.Sc (+ಇಂ|| ಪ್ರಸನ್ನ ವೆಂಕಟೇಶ್) ಇಬ್ಬರೂ ಆಸ್ಟ್ರೇಲಿಯಾದಲ್ಲಿದ್ದಾರೆ. ಮೊದಲ ಮಗ ಇಂ|| ಶ್ಯಾಮ್ (+ ಇಂ|| ವಿದ್ಯಾ); ಎರಡನೆಯ ಮಗ ಇಂ|| ಶರತ್, M.Tech, BOSCH ನಲ್ಲಿ ಸೀನಿಯರ್ ಮ್ಯಾನೇಜರ್. ಅವರ ಪತ್ನಿ ಇಂ|| ಶೈಲಜ, ಬೆಂಗಳೂರಿನ PES IT ಕಾಲೇಜಿನಲ್ಲಿ ಇನ್‌ಫರ್ಮೇಷನ್ ಸೈನ್ಸ್ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ.

ಇಂ|| ಶ್ಯಾಮ್ B.E., M.Tech, ಚೆನ್ನೈನ IITಯ ವಿದ್ಯಾರ್ಥಿ. ಮೈಸೂರಿನ ಜೆ.ಸಿ.ಇ. ನಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿ (ಎರಡು ವರ್ಷ) ಕಳೆದ ೨೪ ವರ್ಷಗಳಿಂದ ಖ್ಯಾತ NIE ಸಂಸ್ಥೆಯ IP ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. Polymer Composites ವಿಷಯದಲ್ಲಿ ಪ್ರೊ. ಸಿ.ಎಫ್. ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಅಧ್ಯಯನವನ್ನು ಮುಂದುವರಿಸಿದ್ದಾರೆ. ವಿಶ್ವೇಶ್ವರಯ್ಯ ಟೆಕ್ನಲಾಜಿಕಲ್ ಯೂನಿವರ್ಸಿಟಿಗೆ ಸೇರಿದ ನೂರಕ್ಕೂ ಹೆಚ್ಚು ವಿದ್ಯಾ ಸಂಸ್ಥೆಗಳಲ್ಲಿ

ಸೇವೆ ಸಲ್ಲಿಸುತ್ತಿರುವ ಅಧ್ಯಾಪಕರ ಪೈಕಿ ೧೫ ಪ್ರತಿಭಾವಂತ ಪ್ರಾಧ್ಯಾಪಕರು ಮಾತ್ರ ಜರ್ಮನ್ ಕಂಪನಿಯ ವಿಶಿಷ್ಟ ತರಬೇತಿ ಕಾರ್ಯಕ್ರಮಕ್ಕೆ ಆಯ್ಕೆಯಾದರು. ಅವರಲ್ಲಿ ಶ್ಯಾಮ್ ಒಬ್ಬರು. VTU ಮತ್ತು ಜರ್ಮನಿಯ BOSCH REXROTH ಸಂಸ್ಥೆಯ ನಡುವೆ ಆದ ಒಪ್ಪಂದದಂತೆ ಈ ತರಬೇತಿ ನಡೆದಿದೆ. ಈ ಎರಡೂ ವಿ.ವಿ.ಗಳ ನಡುವಿನ ಒಪ್ಪಂದದಂತೆ ಜರ್ಮನಿಯಲ್ಲೇ ನಡೆದ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಕ್ರಮ ಇದು. ಈ ಒಪ್ಪಂದದಂತೆ ಮೈಸೂರಿನಲ್ಲಿ ಕೂಡ ಏಳುತ್ತಿರುವ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ಕಾರ್ಯಾಗಾರ ನಡೆಯಲಿದೆ. ಇಂಥ ಕೇಂದ್ರಗಳಲ್ಲಿ ತರಬೇತಿ ನೀಡುವ ಪರಿಣತರಲ್ಲಿ ಇಂ|| ಶ್ಯಾಮ್ ಕೂಡ ಸೇರಿದಂತಾಗಿದೆ.

ಶ್ರೀ ಶ್ಯಾಮ್ ಅವರ ಮನೆಯಲ್ಲಿ ಎಲ್ಲರೂ ಸಂಗೀತಪ್ರೇಮಿಗಳು. ಅವರ ತಂದೆ ಎಂ.ಎಸ್. ಶ್ರೀನಿವಾಸ್ ರೇಡಿಯೋದಲ್ಲಿ ಪ್ರಸಾರವಾಗುವ ಸಂಗೀತ ಕಚೇರಿಗಳನ್ನು ಹುಡುಕಿ ನಿಯತವಾಗಿ ಕೇಳುತ್ತಾರೆ. ಶ್ರೀಮತಿ ವಿದ್ಯಾ ಶ್ಯಾಮ್ ವೀಣಾವಾದನ ಕಲಿತಿದ್ದಾರೆ. ಅವರ ಮಗ ಶ್ರೀ ಶ್ರೇಯಸ್ (೧೭) ಖ್ಯಾತ ಸಂಗೀತ ವಿದ್ವಾಂಸ ವಿ|| ಶ್ರೀ ಎ.ವಿ. ಪ್ರಕಾಶ್ ಅವರಲ್ಲಿ ವೀಣಾವಾದನ ಕಲಿತು ಜೂನಿಯರ್ ಪರೀಕ್ಷೆಯಲ್ಲಿ (ಶೇ. ೯೩ ಅಂಕ) ಉತ್ತೀರ್ಣರಾಗಿದ್ದಾರೆ. ವಿವಿಧ ಸಂಗೀತ ಸ್ಪರ್ಧೆಗಳಲ್ಲಿ ೫೦ಕ್ಕೂ ಹೆಚ್ಚು ಬಹುಮಾನಗಳು ಅವರ ಪಾಲಾಗಿವೆ. ಮಗಳು ಚಿ|| ಮೇಖಲಾ (೧೪) ಸಂಗೀತ ವಿದುಷಿ ಎ.ಎಸ್. ಪದ್ಮಾ ಅವರಲ್ಲಿ ವೀಣಾವಾದನವನ್ನು ಕಲಿತು ಜೂನಿಯರ್ ಪರೀಕ್ಷೆಯಲ್ಲಿ (ಶೇ. ೮೭ ಅಂಕ) ಉತ್ತೀರ್ಣರಾಗಿದ್ದಾರೆ. ಇಡೀ ಕುಟುಂಬದಲ್ಲಿ ವಿದ್ವತ್ ಪರಂಪರೆ ಮುಂದುವರಿದಿರುವುದನ್ನು ಕೂಡ ಕಾಣಬಹುದಾಗಿದೆ.

ಶ್ರೀಮತಿ ಸ್ವರ್ಣಾ - ಶ್ರೀ ಹರಿಪ್ರಸಾದ್

ಲಿಂಗದಹಳ್ಳಿಯ ಶ್ರೀ ಸುಬ್ರಹ್ಮಣ್ಯ ಅವರ ಮಗ ಶ್ರೀ ನಾರಾಯಣಭಟ್ಟರು. ವ್ಯವಸಾಯವನ್ನೇ ನಂಬಿ ಬದುಕಿದವರು ಅವರು. ಅವರ ಪತ್ನಿ ಪೂಮಗಾಮೆಯ ರಮಾಮಣಿ. ಅವರು ಸಂಗೀತದಲ್ಲಿ ಪರಿಶ್ರಮವಿರುವವರು. ಆ ದಂಪತಿಯ ಐವರು ಮಕ್ಕಳಲ್ಲಿ ಹರಿಪ್ರಸಾದ್ ಕೊನೆಯವರು. ತಮ್ಮ ಎಲ್ಲ ಮಕ್ಕಳಿಗೂ ನಾರಾಯಣಭಟ್ಟರು ಒಳ್ಳೆಯ ಶಿಕ್ಷಣ ಕೊಡಿಸಿದ್ದಾರೆ. ಅಮೆರಿಕದವರೆಗೂ ಅವರ ನೌಕರಿ ವಿಸ್ತರಿಸಿದೆ. ಶ್ರೀ ಹರಿಪ್ರಸಾದ್ ಕೂಡ ಅಮೆರಿಕದಲ್ಲಿ ೧೦ ವರ್ಷ ಸೇವೆಸಲ್ಲಿಸಿ ಭಾರತಕ್ಕೆ ಮರಳಿ ತಮ್ಮ ಸಾಫ್ಟ್‌ವೇರ್ ವೃತ್ತಿಯನ್ನು ಮುಂದುವರಿಸಿದ್ದಾರೆ. ಅವರ ಪತ್ನಿ ಸ್ವರ್ಣಾ ಕೂಡ ಸಾಫ್ಟ್‌ವೇರ್ ಇಂಜಿನಿಯರ್. ಅವರ ತಂದೆ-ತಾಯಿ ಮೂಲತಃ ಮತ್ತೂರಿನವರು; ಬೆಂಗಳೂರಿನಲ್ಲಿ ಅನೇಕ ಕಾಲ ಜೀವಿಸಿ ಇದೀಗ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಸ್ವರ್ಣಾಹರಿಪ್ರಸಾದ್ ಅವರ ಪುಟ್ಟ ಮಕ್ಕಳು ಚೇತನ ಮತ್ತು ಚೈತನ್ಯ. ಆತ್ರೇಯಸಗೋತ್ರದ ಈ ಕುಟುಂಬ ಇದೀಗ ಬೆಂಗಳೂರಿನ ಬನಶಂಕರಿಯ ಮೂರನೇ ಹಂತದಲ್ಲಿ ನೆಲೆಸಿದೆ.

ಹರಿಪ್ರಸಾದ್ ಅವರಿಗೆ ಲಿಂಗದಹಳ್ಳಿಯಲ್ಲಿ ಪೂರ್ವಿಕರ ಜಮೀನಿದೆ. ಅದನ್ನು ತಾವೇ ಆಬಾದು ಮಾಡುತ್ತಿದ್ದಾರೆ. ಸಂಕೇತಿಗಳ ವ್ಯವಸಾಯದ ವಾಸನೆ ಅವರನ್ನು ಆವರಿಸಿದೆ. ಹೊಸಹಳ್ಳಿ ಗದ್ದೆಮನೆಯ ಹತ್ತಿರ ಹೊಸದಾಗಿ ಜಮೀನು ಕೊಂಡಿದ್ದಾರೆ. ಅಡಿಕೆ, ತೆಂಗು, ಬಾಳೆ ಅವರು ಬೆಳೆಯುತ್ತಿರುವ ಬೆಳೆಗಳು.

ತಮ್ಮ ಸಂಕೇತಿ ಸಮುದಾಯದ ವಿಶಿಷ್ಟ ಸಾಧನೆಗಳಲ್ಲಿ ಅವರಿಗೆ ಉತ್ಪ್ರೇಕ್ಷೆ ಕಾಣುವುದಿಲ್ಲ. ಎಲ್ಲಿ ಹೋದರೂ ತಮ್ಮ ಅತ್ಯುತ್ತಮ ಸೇವೆಯನ್ನು ನೀಡಿ ಒಳ್ಳೆಯದನ್ನು ಸಾಧಿಸುವ ತಮ್ಮ ಸಮುದಾಯದ ಆ ಗುಣವು ತಮ್ಮ ಮಕ್ಕಳಲ್ಲಿಯೂ ಬರಲಿ, ಅವರು ಒಳ್ಳೆಯ ನಾಗರಿಕರಾಗಲಿ ಎಂಬುದಷ್ಟೇ ಅವರ ಆಸೆ. ರಾಮಾಯಣ, ಮಹಾಭಾರತದಲ್ಲಿ ವಿಶೇಷ ಆಸಕ್ತಿ ಅವರಿಗೆ. ಲಿಂಗದಹಳ್ಳಿಯ ನರಸಿಂಹಮೂರ್ತಿ ಶಾಸ್ತ್ರಿಗಳು ಪ್ರತ್ಯಕ್ಷ ದೇವರು ಎಂದೇ ಅವರು ಭಾವಿಸುತ್ತಾರೆ. ಅವರು ವಿದ್ಯೆಯ ಮೇರು, ಆದರೆ ಸರಳತೆಯ ಸಾಕಾರಮೂರ್ತಿ, ಪೂರ್ವಿಕರು ಎಂಥ ಉನ್ನತ ಬಾಳು ಬಾಳಿದರು ಎಂಬುದರ ಪ್ರತೀಕ ಅವರು - ಈ ಬಗೆಗೆ ಹರಿಪ್ರಸಾದರಿಗೆ ವಿಶೇಷ ಹೆಮ್ಮೆ.

ಶ್ರೀಮತಿ ನಾಗಲಕ್ಷ್ಮಮ್ಮ - ಹನ್ಯಾಳ್ ಶ್ರೀ ನಾರಣಪ್ಪ ವೆಂಕಟಸುಬ್ಬಯ್ಯ

ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಹನ್ಯಾಳ್ ಗ್ರಾಮವು ಸಂಕೇತಿಗಳ ಪ್ರಸಿದ್ಧ ವೇದಕೇಂದ್ರವಾಗಿತ್ತು. ಅಲ್ಲಿ ಈಗ ಸಂಕೇತಿಗಳು ಉಳಿದಿಲ್ಲ, ವಿವಿಧ ಊರುಗಳಿಗೆ ಚದುರಿದ್ದಾರೆ. ಹನ್ಯಾಳ್ ವಂಶದಲ್ಲಿ ಈಗ ೭೦ಕ್ಕೂ ಹೆಚ್ಚು ಕುಟುಂಬಗಳಿವೆ, ೨೨೫ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಅವರದು ವಾಧೂಲಸಗೋತ್ರ, ಯಜುರ್ವೇದ, ಆಪಸ್ತಂಬ ಸೂತ್ರ. ಈ ವಂಶದ ವೇ||ಬ್ರ||ಶ್ರೀ ಸುಬ್ರಹ್ಮಣ್ಯ ಅವಧಾನಿಗಳ ಮಗ ವೆಂಕಟನಾರಾಯಣ (ಹಾನ್ಯಾಳ್ ಸೋಮಿ) ಅವರು ೧೯೦೨-೦೩ರಲ್ಲಿಯೇ ಹತ್ತಿರದ ಬಸವಾಪಟ್ಟಣಕ್ಕೆ ಬಂದು ನೆಲೆಸಿದರು. ಆಗ ಅವರಿಗೆ ಎರಡು ವರ್ಷದ ಮಗನಿದ್ದ. ಆ ಮಗುವಿನ ಹೆಸರು ವೆಂಕಟಸುಬ್ಬಯ್ಯ. ತೀರ ಬಡತನದಲ್ಲಿದ್ದ ಹನ್ಯಾಳ್ ಸೋಮಿಯವರಿಗೆ ಬಡತನದ ಕಾರಣಕ್ಕಾಗಿ ಅಭಿಮಾನಭಂಗವಾಗುವ ಪ್ರಸಂಗ ಒದಗಿತು. ಅಂದೇ ಛಲತೊಟ್ಟರು. ಸಾಲ ಮಾಡಿ ತೋಟವೊಂದನ್ನು ಖರೀದಿಸಿದರು, ಎಡೆಬಿಡದೆ ದುಡಿದರು. ಆರ್ಥಿಕವಾಗಿ ಸುಸ್ಥಿತಿಗೆ ಬಂದರು. ಸೋಮಿ ಧಾರ್ಮಿಕರು. ಬಸವಾಪಟ್ಟಣದ ಸಂತೆಮಾಳದಲ್ಲಿ ಮರಗಳನ್ನೆಬ್ಬಿಸಿ ಜನರಿಗೆ ನೆರಳು ಕಲ್ಪಿಸಿದರು, ಸಂತೆಯ ಜನರ ದಾಹವಡಗಿಸಲು ಕಾವೇರಿಯಿಂದ ನೀರು ಹೊತ್ತು ತಂದು ಹಂಚಿದರು, ಪಕ್ಕದ ಅಗ್ರಹಾರದ ದಾರಿಯ ಬೋರೆಯಲ್ಲಿ ದನಗಳು ನೀರು ಕುಡಿಯಲು ಅನುಕೂಲವಾಗುವಂತೆ ಕಟ್ಟೆಯೊಂದನ್ನು ಕಟ್ಟಿಸಿದರು. ಅವರ ನಾಲ್ವರು ಮಕ್ಕಳಲ್ಲೂ ಅದೇ ಧಾರ್ಮಿಕ ಬುದ್ಧಿ ಮುಂದುವರಿಯಿತು. ಕಾರಣಾಂತರದಿಂದ ಅಂಗವಿಕಲತೆ ಉಂಟಾದರೂ ವೆಂಕಟಸುಬ್ಬಯ್ಯನವರು ಜಮೀನಿನಲ್ಲಿ ಇತರರಂತೆಯೇ ದುಡಿದರು. ತಕ್ಕಮಟ್ಟಿಗೆ ವೇದಾಭ್ಯಾಸವನ್ನೂ ಮಾಡಿ ತಮ್ಮ ವೈದಿಕ ಪರಂಪರೆಯನ್ನು ಮುಂದುವರಿಸಿದರು. ದೊನ್ನೆ ಕಟ್ಟುವುದು, ಯಜ್ಞೋಪವೀತ ತಯಾರಿಸುವುದು ಅವರ ಹವ್ಯಾಸವಾಗಿತ್ತು. ಅನೇಕ ಜನಪರ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಅಂಗವಿಕಲರಾದರೂ ಸುತ್ತಣ ಅನೇಕ ಹಳ್ಳಿಗಳ ಸಂತೆಗಳಿಗೆ ಹೋಗಿ ವಿಳ್ಳೇದೆಲೆ ವ್ಯಾಪಾರ ಮಾಡಿ, ಹಣ ಗಳಿಸಿ ಸಂಸಾರ ನಿರ್ವಹಿಸಿದರು. ಶ್ರೀ ವೆಂಕಟಸುಬ್ಬಯ್ಯನವರಿಗೆ ಅವರ ಧರ್ಮಪತ್ನಿ ಶ್ರೀಮತಿ ಗೌರಮ್ಮನವರಲ್ಲಿ (ಕೌಶಿಕ) ಶ್ರೀಯುತರಾದ ಬಿ.ವಿ. ಸುಬ್ಬರಾಮಯ್ಯ ಮತ್ತು ಬಿ.ವಿ. ರಾಮಕೃಷ್ಣ ಜನಿಸಿದರು. ಶ್ರೀಮತಿ ಗೌರಮ್ಮನವರ ಕಾಲಾನಂತರ ಶ್ರೀ ವೆಂಕಟಸುಬ್ಬಯ್ಯನವರು ಶ್ರೀಮತಿ ನಾಗಲಕ್ಷ್ಮಮ್ಮನವರನ್ನು ವರಿಸಿದರು. ಶ್ರೀಮತಿ ನಾಗಲಕ್ಷ್ಮಮ್ಮನವರು ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಸಾಮಾಜಿಕ ರೀತಿ ನೀತಿಗಳನ್ನು ಚೆನ್ನಾಗಿ ಅರಿತಿದ್ದರು. ವೆಂಕಟಸುಬ್ಬಯ್ಯನವರು ೧೯೫೦ರಲ್ಲಿ ಸ್ವರ್ಗಸ್ಥರಾದರು. ಶ್ರೀ ವೆಂಕಟಸುಬ್ಬಯ್ಯ - ಶ್ರೀಮತಿ ನಾಗಲಕ್ಷ್ಮಮ್ಮ (ಸೋಮನಹಳ್ಳಿ) ದಂಪತಿಯ ಮೂವರು ಮಕ್ಕಳಲ್ಲಿ ಶ್ರೀ ಬಿ.ವಿ. ವೆಂಕಟನಾರಾಯಣ ಕೊನೆಯವರು. ಅವರ ಧರ್ಮಪತ್ನಿ ಶ್ರೀಮತಿ ಆರ್.ಎಸ್. ಸಾವಿತ್ರಿ. ಇವರ ಮಗ ಶ್ರೀ ವಿ. ಮುಕುಂದ ಕುಮಾರ, ಹೆಚ್.ಸಿ.ಎಲ್.ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್, ಚೆನ್ನೈ. ಶ್ರೀ ಬಿ.ವಿ. ವೆಂಕಟನಾರಾಯಣ ಮಹಾದಾನಿಯಾಗಿ ಸಮುದಾಯ ಅಧ್ಯಯನ ಕೇಂದ್ರವನ್ನು ಪೋಷಿಸಿದ್ದಾರೆ, ಅದರ ಖಜಾಂಚಿಯೂ ಆಗಿದ್ದಾರೆ. ಸಮಾಜಸೇವೆಯ ಈ ಪ್ರವೃತ್ತಿ ಹನ್ಯಾಳ್ ವಂಶದ ಹೊಸ ಕುಡಿ ಶ್ರೀ ವಿ. ಮುಕುಂದ ಕುಮಾರ್ ಅವರಲ್ಲಿಯೂ ಮುಂದುವರಿದಿರುವುದು ಸಹಜವಾಗಿದೆ.

* * * * *

ರೈತಮಿತ್ರ ಶ್ರೀ ಎನ್. ಕೇಶವಮೂರ್ತಿ

(ಈ ಸಂಪುಟದ ಲೇಖಕರು)

ಶ್ರೀ ನಾರಾಯಣರಾವ್ ಕೇಶವಮೂರ್ತಿ (ಜ: 20-07-1967) ಒಬ್ಬ ಕೃಷಿತಜ್ಞ, ಕೃಷಿ ಪ್ರಸಾರಕ, ಕೃಷಿಕರ ಪರವಾದ ಸತತ ಚಿಂತಕ, ಕನಸುಗಾರ, ದುಡಿಮೆಗಾರ ಮತ್ತು ರೈತಮಿತ್ರ.

ಎನ್. ಕೇಶವಮೂರ್ತಿ ಅವರು ಸದ್ಯ ಮೈಸೂರಿನ ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ನಿರ್ವಾಹಕರಾಗಿ Farm and Home ವಿಭಾಗದಲ್ಲಿ ವಿಶೇಷ ಸೇವೆ ಸಲ್ಲಿಸುತ್ತಿದ್ದಾರೆ.

ಹಾಸನಜಿಲ್ಲೆ ಚನ್ನರಾಯಪಟ್ಟಣದ ಶ್ರೀ ಸಿ.ಎಸ್. ನಾರಾಯಣರಾವ್ ಮತ್ತು ಶ್ರೀಮತಿ ಜಯಲಕ್ಷ್ಮಿ ದಂಪತಿಯ ನಾಲ್ವರು ಮಕ್ಕಳಲ್ಲಿ ಕೊನೆಯವರು ಶ್ರೀ ಎನ್. ಕೇಶವಮೂರ್ತಿ. ಧಾರವಾಡದ University of Agricultural Sciencesನಲ್ಲಿ ಬಿ.ಎಸ್‌ಸಿ. (ಕೃಷಿ) ಪದವಿಯನ್ನು ಉನ್ನತ ಶ್ರೇಯಾಂಕದಲ್ಲಿ ಪಡೆದ (1990) ಕೇಶವಮೂರ್ತಿ ಇದೀಗ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ Mass Communication and Journalism ವಿಷಯದಲ್ಲಿ M.A., ಪದವಿಗಾಗಿ ಕಲಿಕೆಯನ್ನು ಮುಂದುವರಿಸಿದ್ದಾರೆ. ತಮ್ಮ ಮೂಲ ಶಿಕ್ಷಣ, ವೃತ್ತಿ ಮತ್ತು ಕೃಷಿಸಾಧನೆಗಳಿಗೆ ಕಸುವು ತುಂಬಿಕೊಳ್ಳುವ ನಿರಂತರ ಪ್ರಯತ್ನ ಅವರದು.

ಕೇಶವಮೂರ್ತಿ ಬೆಂಗಳೂರಿನ Indo-American Hybrid Seedsನಲ್ಲಿ Sales Promotion Officer ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1991-94ರ ನಡುವಿನ ಮೂರು ವರ್ಷಗಳ ಸಾಧನೆಗಾಗಿ ರಾಷ್ಟ್ರಮಟ್ಟದ Best Sales Promotion Officer Awardಗೆ ಪಾತ್ರರಾದರು. 1994ರಲ್ಲಿ ಆಕಾಶವಾಣಿಯ ಸೇವೆಗೆ ಸೇರುವ ಹೊತ್ತಿಗೆ ಅವರ ಕಾರ್ಯಕ್ಷಮತೆಗೆ ಹೀಗೆ ಮಾನ್ಯತೆ ದೊರೆತಿತ್ತು.

ಇದೀಗ ಗ್ರಾಮೀಣ ಕಾರ್ಯಕ್ರಮಗಳ ಪ್ರಸಾರಕರಾಗಿ ಕೇಶವಮೂರ್ತಿ 16 ವರ್ಷಗಳ ಸಾರ್ಥಕ ಸೇವೆಯನ್ನು ಪೂರೈಸಿದ್ದಾರೆ. ದಕ್ಷತೆ ಮತ್ತು ಕಾರ್ಯಕ್ಷಮತೆ ಅವರ ಶಕ್ತಿಯಾಗಿದೆ. ಅದನ್ನು ಜನಸಮ್ಮುಖವಾಗಿ ತೊಡಗಿಸಿಕೊಂಡಿದ್ದಾರೆ. 'ಮಾಹಿತಿಯ ಮೂಲಕ ರೈತರ ಜೀವನ ಸುಧಾರಣೆ' ಎಂಬುದು ಅವರ ಮಂತ್ರವಾಗಿದೆ. ಅವರ ಈ ದಿಕ್ಕಿನ ಶ್ರಮವು Public Service Broadcasting and Rural Development ಎಂಬ ಮಾತಿಗೆ ಅರ್ಥ ತಂದುಕೊಟ್ಟಿದೆ. ಅವರು ತಮ್ಮ ಸೇವೆಯನ್ನು ಪ್ರಾರಂಭಿಸಿದ್ದು ಆಕಾಶವಾಣಿಯ ಹಾಸನ ಕೇಂದ್ರದಲ್ಲಿ (12-09-1994). Effectiveness of Farm Broadcasts - A Cost Benefit Analysis ಎಂಬುದು ಹಾಸನದ ಬಾನುಲಿ ಕೇಂದ್ರದ ಕಾರ್ಯಕ್ರಮವನ್ನಾಧರಿಸಿದ ಪ್ರಸಾರ-ಶೋಧನ ವರದಿ. ಈ ಸಂಶೋಧನೆಯ ತಂಡದಲ್ಲಿ ಕೇಶವಮೂರ್ತಿಯವರೂ ಒಬ್ಬ ಸದಸ್ಯರಾಗಿದ್ದುದು ಗಮನಾರ್ಹ. ಈ ಸಂಶೋಧನ ವರದಿಗಾಗಿ National Akashavani Award ಲಭ್ಯವಾಯಿತೆಂಬುದು ಈ ಕೇಂದ್ರ ಮತ್ತು ಸಿಬ್ಬಂದಿಯ ಪರವಾದ ಪ್ರೋತ್ಸಾಹಕ ಸಂಗತಿಯೇ ಸರಿ.

ಶಿಕ್ಷಣ, ಮಾಹಿತಿ ಮತ್ತು ಮನೋರಂಜನೆ ಇವು ಬಾನುಲಿಯ ಮೂರು ಮೂಲಭೂತ ಆಶಯಗಳು. ಇವನ್ನು ಸಾಧಿಸುವುದಕ್ಕಾಗಿ ಕೇಶವಮೂರ್ತಿಯವರು ಕಲ್ಪಿಸಿದ ಹೊಸ ತತ್ತ್ವವೆಂದರೆ Radio Village - A New Definition for Rural Development ಎಂಬುದು. ಇದೀಗ ಮೈಸೂರು ಬಾನುಲಿ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಕೇಶವಮೂರ್ತಿಯವರು ಮಂಡ್ಯಜಿಲ್ಲೆಯ ಹೆಚ್. ಕೋಡಿಹಳ್ಳಿಯನ್ನು ಮೈಸೂರು ಬಾನುಲಿಕೇಂದ್ರದ ಬಾನುಲಿಗ್ರಾಮವನ್ನಾಗಿ (Radio Village) ರೂಪಿಸಿದ್ದಾರೆ. ರೈತರು ಅಲ್ಪವೆಚ್ಚದ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳುವಂತೆ ಮಾಡಲು ತಮ್ಮ ಪ್ರಸಾರ ಕಾರ್ಯಕ್ರಮಗಳ ಮೂಲಕ ಶ್ರಮಿಸಿದ್ದಾರೆ. ಅದರ ಫಲವಾಗಿ ಗ್ರಾಮದ ಪ್ರತಿ ರೈತನೂ ಪ್ರಗತಿಶೀಲನಾಗಿದ್ದಾನೆ. ಬಾನುಲಿಯ ಬಗೆಗೆ ಗೌರವವನ್ನು ಬೆಳೆಸಿಕೊಂಡಿದ್ದಾನೆ.

ಅವರ ಇಂಥ ಶ್ರಮದಿಂದಾಗಿ ಮೈಸೂರು ಬಾನುಲಿಯ ಕೃಷಿಕಾರ್ಯಕ್ರಮಗಳನ್ನು ನಿತ್ಯವೂ ಸುಮಾರು 18-20 ಲಕ್ಷ ಜನ ಕೇಳುತ್ತಾರೆ. ಅವರೆಲ್ಲರೂ ಅಲ್ಪವೆಚ್ಚದ ತಾಂತ್ರಿಕತೆಯನ್ನು ಕುರಿತ ಮಾಹಿತಿಯನ್ನು ಆಲಿಸುತ್ತಿದ್ದಾರೆ, ಅಳವಡಿಸಿಕೊಳ್ಳುತ್ತಿದ್ದಾರೆ. ಅದು ಒಳ್ಳೆಯ ಫಲಿತಾಂಶ ನೀಡಿದೆ. ಅದರಿಂದಾಗಿ ರೈತರು ತಮಗೆ ತಿಳಿದ ಇತರ ರೈತರಿಗೆ ಅದನ್ನು ಮುಟ್ಟಿಸುತ್ತಿದ್ದಾರೆ. Rural development is the development of the individual, and not the development of rural areas ಎಂಬ ದೃಢವಾದ ತಿಳಿವಿನ ನೆಲೆಯಲ್ಲಿ ಕೇಶವಮೂರ್ತಿಯವರು ಮುಂದುವರಿದಿದ್ದಾರೆ.

ಬಾನುಲಿಯು ಒಂದು ಶ್ರವ್ಯ ಮಾಧ್ಯಮ. ಅದನ್ನು ದೃಶ್ಯಮಾಧ್ಯಮವಾಗಿ ವಿಸ್ತರಿಸಿದ್ದು ಕೇಶವಮೂರ್ತಿ ಅವರು. ಅದಕ್ಕಾಗಿ ಅವರು ಬಾನುಲಿಯನ್ನೇ ಹೊಲಕ್ಕೆ ಒಯ್ಯುತ್ತಾರೆ. ಪ್ರತಿ ತಿಂಗಳೂ 'ಬಾನುಲಿ ಕೃಷಿ ಬೆಳಗು' ಕಾರ್ಯಕ್ರಮವನ್ನು ರೈತರಿಗಾಗಿ ನಡೆಸುತ್ತಾರೆ. 2006ರ ಮೇ ತಿಂಗಳಿನಿಂದ ತೊಡಗಿ ಇಲ್ಲಿಯವರೆಗೆ 42 ಅಂಥ ಕ್ಷೇತ್ರಕಾರ್ಯಕ್ರಮ ನಡೆಸಿದ್ದಾರೆ. ಈ ರೈತ-ತರಬೇತಿ ಶಿಬಿರಗಳಿಗೆ ಸುತ್ತಣ ಜಿಲ್ಲೆಗಳಿಂದ ಸುಮಾರು 300-400 ರೈತರು ಬಂದು ಭಾಗವಹಿಸುತ್ತಾರೆ. ಇದರಿಂದ ಪ್ರಚೋದಿತರಾದ ರೈತರು 'ಬಾನುಲಿ ಕೃಷಿಕರ ಬಳಗ'ಗಳನ್ನು ಕಟ್ಟಿಕೊಂಡಿದ್ದಾರೆ. 2009ರಲ್ಲಿ ಮಂಡ್ಯದಲ್ಲಿ ನಡೆದ ರಾಜ್ಯಮಟ್ಟದ ಬಾನುಲಿ ಕೃಷಿಕರ ಸಮಾವೇಶದಲ್ಲಿ ರೈತಕಮ್ಮಟದ ಐದು ಉತ್ಪಾದನೆಗಳು ಬಿಡುಗಡೆಗೊಂಡಿವೆ. ಇವೆಲ್ಲದರ ಪರಿಣಾಮವಾಗಿ ರೈತರು ತಮ್ಮ ಕೃಷಿಕಾಯಕದ ಬಗೆಗೆ ಹೆಮ್ಮೆ ತಾಳುತ್ತಿದ್ದಾರೆ. ಕೇಶವಮೂರ್ತಿಯವರು ತಮ್ಮ ಬದುಕಿನ ಸಾರ್ಥಕ್ಯವನ್ನು ಕಂಡುಕೊಳ್ಳುತ್ತಿರುವುದು ರೈತರ ಮುಖದಲ್ಲಿ ಬೆಳಗುವ ಈ ಆತ್ಮವಿಶ್ವಾಸದಲ್ಲಿ.

ಎನ್. ಕೇಶವಮೂರ್ತಿ ಚೆನ್ನಾಗಿ ಹಾಡುತ್ತಾರೆ, ಚೆನ್ನಾಗಿ ಉಪನ್ಯಾಸ ನೀಡುತ್ತಾರೆ, ರಂಗ ಕಲಾವಿದರು ಕೂಡ ಆಗಿದ್ದಾರೆ. ವಲಯ ಮಟ್ಟದ ಯುವಜನೋತ್ಸವದಲ್ಲಿ ತಮ್ಮ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದವರು ಅವರು.

ಶ್ರೀಯುತರು ಬರೆದ 'ಸಾವಯವ ತೋಟಗಾರಿಕೆ' ಎಂಬ ಕೃತಿ 2006ರಲ್ಲಿ ತೋಟಗಾರಿಕೆ ಇಲಾಖೆಯಿಂದ ಪ್ರಕಟಗೊಂಡಿದೆ. 'ಹಸಿರು ಸಿರಿ' ಎಂಬುದು ಸಾವಯವ ಕೃಷಿಯನ್ನು ಕುರಿತ ವಿಶ್ಲೇಷಣಾತ್ಮಕ ಕೃತಿ. ಇದನ್ನು ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ ಮತ್ತು NABARD ಸೇರಿ 2007ರಲ್ಲಿ ಪ್ರಕಟಿಸಿದ್ದಾರೆ. ಈ ಸಾಲಿಗೆ ಸೇರುವ 'ಸಂಕೇತಿ ಕೃಷಿಯ ವಿಭಿನ್ನ ನೆಲೆಗಳು' ಎಂಬುದು ಅವರ ಸಂಶೋಧನ ಕೃತಿಯಾಗಿದೆ.

ಇವಲ್ಲದೆ ಶ್ರೀಯುತರು 'ನೇಗಿಲಯೋಗಿ' ಎಂಬ ಹೆಸರಿನಲ್ಲಿ ತಿಂಗಳ ವಾರ್ತಾಪತ್ರವೊಂದನ್ನು ಬಾನುಲಿ ಕೃಷಿಕರ ಬಳಗದ ಸಹಯೋಗದಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. 2009ರ ಫೆಬ್ರವರಿಯಲ್ಲಿ ಮೊದಲ ಸಂಚಿಕೆ ಬಿಡುಗಡೆಯಾಗಿ ಈವರೆಗೆ ಎಂಟು ಸಂಚಿಕೆಗಳು ಬೆಳಕು ಕಂಡಿವೆ. ಜಗತ್ತಿನಾದ್ಯಂತ ಈ ಕುರಿತ ಮಾಹಿತಿ ತಲುಪಬೇಕೆಂಬ ಗುರಿ ಇಟ್ಟುಕೊಂಡ ಬ್ಲಾಗ್‌ಸ್ಪಾಟ್ www.negilayogi.blogspot.com. ಎನ್. ಕೇಶವಮೂರ್ತಿಯವರ ಇನ್ನೊಂದು ಉಪಕ್ರಮವಾಗಿದೆ. ಇವೆಲ್ಲವೂ ಅವರ ಎಲ್ಲೆಯರಿಯದ ರೈತಪ್ರೀತಿಯನ್ನೇ ತೋರಿಸುತ್ತವೆ.

ಹಾಸನ ಜಿಲ್ಲೆ ದೊಡ್ಡಗನ್ನಿಯ ಕೃಷಿಕರ ಕುಟುಂಬದಿಂದ ಬಂದವರು ಎನ್. ಕೇಶವಮೂರ್ತಿ. ಲಕ್ಷ್ಮಯ್ಯ-ವೆಂಕಟಲಕ್ಷ್ಮಮ್ಮ; ಅವರ ಮಗ ಜಿ. ಸುಬ್ಬರಾವ್-ನಂಜಮ್ಮ; ಅವರ ಮಗ ಸಿ.ಎಸ್.ನಾರಾಯಣರಾವ್ (ಮಣಯ್ಯ)-ಜಯಲಕ್ಷ್ಮಿ; ಅವರ ಮಗ ಎನ್. ಕೇಶವಮೂರ್ತಿ. ಸುಬ್ಬರಾವ್ ದೊಡ್ಡಗನ್ನಿಯ ಶಾನುಭೋಗರಾಗಿದ್ದವರು, ಶ್ರಮಜೀವಿ. ಹಿತ್ತಿಲನ್ನೇ ನಂದನವನವಾಗಿ ಬೆಳೆಸಿದವರು. ತೋಟಗಾರಿಕೆ ಇಲಾಖೆಯ ಬಹುಮಾನಗಳಿಗೆ ಪಾತ್ರರಾದವರು. ನಾರಾಯಣರಾವ್ ಕೌಟುಂಬಿಕ ಸಂಕಷ್ಟಗಳನ್ನು ಗೆದ್ದು ಕೋ ಆಪರೇಟಿವ್ ತರಬೇತಿ ಪಡೆದು ಕೋ ಆಪರೇಟಿವ್ ಸೊಸೈಟಿಯ ಕಾರ್ಯದರ್ಶಿಯಾದರು. ಕಂಟ್ರೋಲ್ ಕಾಲದಲ್ಲಿ ಕಾಡಿ ಬರುತ್ತಿದ್ದ ನಾನಾ ರೀತಿಯ ಆಮಿಷಗಳನ್ನು ನೂಕಿ ಹಸ್ತಶುದ್ಧಿಯನ್ನುಳಿಸಿಕೊಂಡವರು. "ನಾವು ಮಾಡಿದ ತಪ್ಪು ಮಕ್ಕಳನ್ನು ಕಾಡುತ್ತದೆ. ಬೇರೆಯವರ ಹಣಕ್ಕೆ ಆಸೆ ಪಡಬಾರದು. ಕಷ್ಟಪಟ್ಟು ದುಡಿಯಬೇಕು. ಮನಸ್ಸು ಶುದ್ಧವಾಗಿದ್ದರೆ ಅದೇ ದೇವರು. ಜಾತಿ ನೋಡಬೇಡ, ಜನ ನೋಡು" ಎಂಬುದು ಮಕ್ಕಳಿಗೆ ಅವರ ನಿತ್ಯಬೋಧನೆಯಾಗಿತ್ತು. ವ್ಯವಸಾಯದಲ್ಲಿ ಅವರಿಗೆ ಪ್ರೀತಿ. ಸ್ವಂತ ಉಳುಮೆ ಮಾಡಿದವರು. ರೈತರಿಗೆ ಜಮೀನು ಪತ್ರಗಳನ್ನು ಬರೆದುಕೊಡುವುದು, ಅವರ ವ್ಯಾಜ್ಯಗಳನ್ನು ಪರಿಹರಿಸುವುದು ಅವರ ಹವ್ಯಾಸ. ರಾಸುಗಳನ್ನು ಸಾಕುವ ಮೋಹ. ಹೈಬ್ರಿಡ್ ತಳಿಗಳನ್ನು ಉತ್ಪಾದಿಸಿದ ಸಾಧನೆ. ಮನೆಯಲ್ಲಿ ಅನ್ನಪಾನದ ಪರಂಠವಣೆಗೆ ಆದ್ಯತೆ. ಮಕ್ಕಳೆಲ್ಲರಿಗೆ ಸಂಗೀತ

ಹೇಳಿಸಿದರು. ಆದ್ಯತೆಯ ಮೇಲೆ ಶಿಕ್ಷಣ ಕೊಡಿಸಿದರು. ದನಕರುಗಳ ಪಾಲನೆ ಮತ್ತು ಕೃಷಿಗೆ ಸಂಬಂಧಿಸಿದಂತೆ ಮಕ್ಕಳನ್ನು ದುಡಿಮೆಗೆ ಹಚ್ಚಿ ದುಡಿಮೆಯ ಗೌರವವನ್ನು ಮೈಗೂಡಿಸಿದರು.

ಶ್ರೀ ನಾರಾಯಣರಾಯರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ ಅವರು ಶ್ರವಣಬೆಳಗೊಳದ ಹತ್ತಿರದ ಕೊತ್ತನ್‌ಘಟ್ಟ ಹಳ್ಳಿಯಿಂದ ಬಂದವರು. ಅವರ ತಂದೆ ಎ.ಎಸ್. ಕೇಶವಯ್ಯನವರು ವಿದ್ವಾಂಸರಾಗಿದ್ದರು. ಮೊಮ್ಮಕ್ಕಳಿಗೆಲ್ಲ ಇಂಗ್ಲಿಷ್ ಕಲಿಸಿದವರು ಅವರೇ. ಶ್ರೀಮದ್ಭಗವದ್ಗೀತೆಯ ಇಂಗ್ಲಿಷ್ ಅನುವಾದ ಅವರ ಸಾಧನೆ. ನೈಪುಣ್ಯದಿಂದ ಸಂಸಾರ ನಿರ್ವಹಣೆ ಮಾಡಿ ಸದ್ಗೃಹಿಣಿ ಎನಿಸಿದವರು ಜಯಲಕ್ಷ್ಮಿ. ಕಷ್ಟದಲ್ಲಿದ್ದವರಿಗೆ ಸ್ಪಂದಿಸಿ ಉಚಿತವರಿತು ನೆರವಾಗುತ್ತಿದ್ದ ಜಯಲಕ್ಷ್ಮಿಯವರನ್ನು ಊರಿನವರು ಈಗಲೂ ನೆನೆಯುವುದು ಅವರ ದಯಾಪರತೆಗಾಗಿ.

ಶ್ರೀ ಎನ್. ಕೇಶವಮೂರ್ತಿಯವರ ಧರ್ಮಪತ್ನಿ ಶ್ರೀಮತಿ ಬಿ.ಎಸ್. ವೀಣಾ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕು ಬೆಲಗೂರು ಗ್ರಾಮದವರು. ವೀಣಾ ಅವರ ತಂದೆ ಬಿ.ಎಸ್. ಸುಬ್ಬರಾವ್ ಅಧ್ಯಾಪಕರು. ತಾಯಿ ಶಾಂತರತ್ನ ಅವರು ಅರಸೀಕೆರೆ ತಾಲ್ಲೂಕು ಕುರವಂಕ ಗ್ರಾಮದ ಜಮೀನುದಾರರ ಮಗಳು. ವ್ಯವಸಾಯದಲ್ಲಿ ಅವರಿಗೆ ಪರಿಶ್ರಮ. ತುಂಬುಕುಟುಂಬದ ಹಿನ್ನೆಲೆಯಿಂದ ಬಂದ ವೀಣಾ ಸಹಜವಾಗಿಯೇ ಅತ್ತೆಮಾವಂದಿರ ಮೆಚ್ಚಿನ ಸೊಸೆಯಾದರು. ಪತಿಯ ಅವಿರತ ದುಡಿಮೆಯ ಹಿಂದಿನ ಪೂರಕ ಶಕ್ತಿಯಾದರು. ಚಿ|| ವಿಂಧ್ಯಾ ಕೇಶವ್ (7ನೇ ತರಗತಿ) ಮತ್ತು ಚಿ|| ವರ್ಷಾ ಕೇಶವ್ (ಎಲ್.ಕೆ.ಜಿ.) ಅವರ ಮುದ್ದಿನ ಮಕ್ಕಳು. ತಮ್ಮ ಪತಿ ಎನ್. ಕೇಶವಮೂರ್ತಿ ಧೈರ್ಯದಿಂದ ಮುನ್ನುಗ್ಗುವ ಗುಣದವರು ಎಂದು ವೀಣಾ ಹೆಮ್ಮೆಯಿಂದ ಹೇಳುತ್ತಾರೆ. ಅರಿವು ಮತ್ತು ಲೋಕಪ್ರೀತಿ ಇದ್ದ ಕಡೆ ಅಳುಕಿಲ್ಲದೆ ಮುನ್ನುಗ್ಗುವ ಛಲ ತಾನಾಗಿಯೇ ಬರುತ್ತದೆ. ಇದಕ್ಕೆ ಕೇಶವಮೂರ್ತಿಯವರ ಸಾಧನೆಗಳು ಸಾಕ್ಷಿಯಾಗಿವೆ.

ಶ್ರೀ ಎನ್. ಕೇಶವಮೂರ್ತಿಯವರ ವಿಳಾಸ

ಪ್ರಸಾರ ನಿರ್ವಹಣಾಧಿಕಾರಿ (Farm and Home)
ಆಕಾಶವಾಣಿ, ಯಾದವಗಿರಿ, ಮೈಸೂರು 570 002
ದೂ.ವಾ. 91-0821-2414789 (R)
91-0821-2416232 (O)
ಮೊಬೈಲ್ 9480056960
ಫ್ಯಾಕ್ಸ್ 91-0821-2514222
ಇ-ಮೈಲ್: keshavamurthy.n@gmail.com

ಬ.ಸು.ಪ್ರ

ಸಮುದಾಯ ಅಧ್ಯಯನ ಕೇಂದ್ರ

ಆಚಾರ್ಯರು

ಲಿಂಗದಹಳ್ಳಿಯ ಅವಧೂತ ವೇ||ಬ್ರ||ಶ್ರೀ ನರಸಿಂಹಮೂರ್ತಿಶಾಸ್ತ್ರಿಗಳು

ನಿಕಟಪೂರ್ವ ಗೌರವಾಧ್ಯಕ್ಷರು

ಡಾ||ಟಿ.ವಿ.ವೆಂಕಟಾಚಲಶಾಸ್ತ್ರೀ, ಮೈಸೂರು

ಪೋಷಕರ ವಿವರ

ಸಂಪುಟಾಧ್ಯಕ್ಷರು

ಶ್ರೀಮತಿ ಕೆ. ಕೆ. ವಿಜಯಲಕ್ಷ್ಮಿ - ಡಾ. ಆರ್. ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.
ಶ್ರೀಮತಿ ರೋಸಿಲಿ - ಡಾ. ಆರ್. ಎಸ್. ಎಸ್.ಕೃಷ್ಣಮೂರ್ತಿ, ಯು.ಕೆ.
ಶ್ರೀಮತಿ ರಾಜಲಕ್ಷ್ಮೀ - ಡಾ||ಮತ್ತೂರು ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಬಿ.ವಿ. ಸೀತಾ - ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯ, ಬೆಂಗಳೂರು
ಶ್ರೀಮತಿ ಪುಟ್ಟಮ್ಮ - ರುದ್ರಪಟ್ಣ ಶ್ರೀ ವೆಂಕಟರಮಣಯ್ಯ
(ಪರವಾಗಿ: ಶ್ರೀಮತಿ ನಾಗರತ್ನ (ಪಾಪು)-ಶ್ರೀ ಆರ್.ವಿ.ಕೃಷ್ಣಮೂರ್ತಿ
ಶ್ರೀಮತಿ ಸಬಿತಾ-ಬ್ರಿಗೇಡಿಯರ್ (ನಿ.) ಶ್ರೀ ಆರ್.ವಿ.ಸೀತಾರಾಮಯ್ಯ, ಶ್ರೀಮತಿ ಸುಮಿತಮ್ಮ-ಶ್ರೀ ಎಚ್.ಎಸ್.ಅನಂತರಾಮು,)
ಡಾ||ಎಂ.ಎಸ್.ವಿಜಯಹರನ್ - ಡಾ||ಬಿ.ಎಸ್.ಪ್ರಣತಾರ್ತಿಹರನ್, ಮೈಸೂರು
(ಇವರ ಪರವಾಗಿ: ಶ್ರೀಮತಿ ಎಂ.ಎಸ್.ಪಾರ್ವತಮ್ಮ - ವ್ಯಾಕರಣ ವಿದ್ವಾನ್ ಶ್ರೀ ಬಿ.ಎಸ್. ಸುಬ್ಬರಾಯ ಶಾಸ್ತ್ರೀ, ಬಸವಾಪಟ್ಟಣ)

ಸಂಪುಟ ಉಪಾಧ್ಯಕ್ಷರು

ಭಾರತೀಯ ವಿದ್ಯಾಭವನ ಶಾಖೆಯ ಅಭಿಮಾನಿಗಳು, ಲಂಡನ್
ಶ್ರೀಮತಿ ಸುಂದರಮಣಿ - ಶ್ರೀ ನಟೇಶ್ ಮಗ್ಗೆ, ಯು.ಎಸ್.ಎ.
ಡಾ. ಸುಪ್ರಿಯಾ - ಡಾ. ಎಸ್. ಶ್ರೀಧರ್, ಯು.ಎಸ್.ಎ.
ಶ್ರೀಮತಿ ವಿನಯ - ಡಾ. ಜಯ್.ಕೆ.ರಂಗಪ್ಪ, ಯು.ಎಸ್.ಎ.

ಮಹಾದಾನಿಗಳು

ಶ್ರೀಮತಿ ಶಾರದಾಬಾಯಿ - ಶ್ರೀ ಹರಿ ಆಚಾರ್ಯ, ಮಂಡ್ಯ
ಶ್ರೀಮತಿ ಆರ್.ಎಸ್.ಸಾವಿತ್ರಿ - ಶ್ರೀ ಬಿ.ವಿ.ವೆಂಕಟನಾರಾಯಣ, ಮೈಸೂರು
ಶ್ರೀಮತಿ ಭಾಗ್ಯಲಕ್ಷ್ಮಿ - ಶ್ರೀ ಸುಬ್ಬರಾವ್ ಲಕ್ಷ್ಮೀಕೇಶವ, ಬೆಂಗಳೂರು

ಮಹಾಪೋಷಕರು

ಶ್ರೀಮತಿ ಕಮಲಮ್ಮ - ಶ್ರೀ ಕೆ. ನಾಗರಾಜ್, ಬೆಂಗಳೂರು
ಶ್ರೀಮತಿ ಜಯಲಕ್ಷ್ಮೀ - ಶ್ರೀ ಕೆ. ಸುಬ್ಬರಾಯನ್, ಬೆಂಗಳೂರು
ಶ್ರೀಮತಿ ಸಾವಿತ್ರಮ್ಮ - ಶ್ರೀ ವೈ.ಎನ್. ನರಸಿಂಗರಾವ್, ಮೈಸೂರು
ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ - ಶ್ರೀ ಎಂ.ಎಸ್. ರಾಮರಾವ್, ಮೈಸೂರು
ಶ್ರೀಮತಿ ಲಕ್ಷ್ಮಿ - ಶ್ರೀ ಎಚ್.ಕೆ. ವೆಂಕಟರಾಮಯ್ಯ, ಮೈಸೂರು
ಶ್ರೀಮತಿ ಎಚ್.ಕೆ.ಜಯಲಕ್ಷ್ಮಮ್ಮ - ಶ್ರೀ ಎಂ.ಎಸ್.ಕೇಶವಮೂರ್ತಿ, ನವಿಲೆ
ಶ್ರೀಮತಿ ಎಚ್.ಎಸ್.ಸಾವಿತ್ರಿ - ಶ್ರೀ ಎಂ.ಆರ್.ನರಸಿಂಹಮೂರ್ತಿ, ಬೆಂಗಳೂರು
ಶ್ರೀಮತಿ ಸ್ವರ್ಣಾ - ಶ್ರೀ ಹರಿಪ್ರಸಾದ್, ಬೆಂಗಳೂರು
ಶ್ರೀಮತಿ ಎಂ.ಎಸ್.ಶಶಿಕಲಾಮೂರ್ತಿ - ಶ್ರೀ ಸಿ.ಎನ್.ಕೇಶವಮೂರ್ತಿ, ಚಿಲ್ಕುಂದ
ಶ್ರೀಮತಿ ಎಂ.ಆರ್.ನಂದಿನಿ - ಶ್ರೀ ಎಚ್.ಆರ್.ನಾಗರಾಜ್, ಬೆಟ್ಟದಪುರ
ಶ್ರೀಮತಿ ಐ.ಎಸ್.ಶಕುಂತಲಾ - ಶ್ರೀ ಸಿ.ಎನ್.ನರಸಿಂಹಮೂರ್ತಿ, ಪಿರಿಯಾಪಟ್ಣ
ಶ್ರೀಮತಿ ಕೆ.ಎನ್.ರೋಹಿಣಿ - ಶ್ರೀ ಸಿ.ಎಸ್.ಸುಬ್ರಹ್ಮಣ್ಯ, ಚಿಲ್ಕುಂದ
ಶ್ರೀಮತಿ ಎಂ.ಎಸ್.ಪ್ರಭಾವತಿ - ಶ್ರೀ ಪಿ.ಎಸ್.ಶ್ರೀನಿವಾಸಮೂರ್ತಿ, ಪಿರಿಯಾಪಟ್ಣ
ಶ್ರೀಮತಿ ಅನಂತಲಕ್ಷ್ಮಿ - ವೇ.ಬ್ರ.ಶ್ರೀ ಎಸ್.ಕೆ.ರಾಮಕೃಷ್ಣಶಾಸ್ತ್ರಿ, ಸರಗೂರು
ಶ್ರೀಮತಿ ಎಚ್.ಎನ್. ಅನಸೂಯಮ್ಮ - ಶ್ರೀ ವೈ.ಎನ್.ಸತ್ಯನಾರಾಯಣ, ಹಾಸನ
ಶ್ರೀಮತಿ ಎಂ.ಎಸ್. ರುಕ್ಮಿಣಿ - ಶ್ರೀ ಎಚ್.ಆರ್.ಸೂರ್ಯನಾರಾಯಣ, ಮೈಸೂರು
ಶ್ರೀಮತಿ ಪಂಕಜ - ಪ್ರೊ|| ಕೆ.ಎಸ್. ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ನಿರಂಜಿನಿ - ಶ್ರೀ ಕೆ.ಎಸ್. ಬಾಲಚಂದ್ರ, ಮೈಸೂರು
ಶ್ರೀಮತಿ ಆರ್.ಶಾರದಮ್ಮ - ಶ್ರೀ ರು.ಗೋ.ರಾಮಸ್ವಾಮಿ, ಮೈಸೂರು
ಶ್ರೀಮತಿ ಎಚ್.ಎಸ್.ಸೌದಾಮಿನಿ - ಶ್ರೀ ಆರ್.ವಿ.ಅಶ್ವತ್ಥನಾರಾಯಣ, ಮೈಸೂರು
ಶ್ರೀಮತಿ ಕುಮುದ ಎನ್.ಪ್ರಸಾದ್ - ಶ್ರೀ ಬಿ.ಎಸ್.ನಾಗೇಂದ್ರ ಪ್ರಸಾದ್, ಬೆಂಗಳೂರು
ಶ್ರೀಮತಿ ಎಸ್.ನಾಗಲಕ್ಷ್ಮಿ - ಶ್ರೀ ಬಿ.ವಿ.ಸುಬ್ಬರಾಮಯ್ಯ, ಬಸವಾಪಟ್ಟಣ
(ಪರವಾಗಿ ಶ್ರೀಮತಿ ಉಷಾ ನಾರಾಯಣ್ - ಶ್ರೀ ಬಿ.ಎಸ್.ಲಕ್ಷ್ಮೀನಾರಾಯಣ)
ಶ್ರೀಮತಿ ಸುಮನ್ ಸುಬ್ರಹ್ಮಣ್ಯ - ಶ್ರೀ ಬಿ.ಎಸ್.ಸುಬ್ರಹ್ಮಣ್ಯ (ಫಣೀಶ್), ಬಳ್ಳಾರಿ
ಶ್ರೀಮತಿ ಬಿ.ಎಸ್.ನಾಗರತ್ನ - ಶ್ರೀ ಎ.ವಿ.ಶಂಕರಮೂರ್ತಿ, ಅಗ್ರಹಾರ
ಶ್ರೀಮತಿ ಎಂ.ಆರ್.ಅನಂತಲಕ್ಷ್ಮಿ - ಶ್ರೀ ಎಲ್.ಎಂ.ಎಲ್.ಶಾಸ್ತ್ರಿ, ಶಿವಮೊಗ್ಗ
ಶ್ರೀಮತಿ ವಾಣಿ - ಶ್ರೀ ಎಂ.ಸಿ.ಶಂಕರಶಾಸ್ತ್ರಿ, ಬೆಂಗಳೂರು
ಶ್ರೀಮತಿ ರಾಧಾ - ಶ್ರೀ ಎಂ.ಆರ್.ರವಿಕುಮಾರ್, ಯು.ಎಸ್.ಎ.
ಶ್ರೀಮತಿ ನಾಗವೇಣಿ - ಶ್ರೀಮಾರ್ಕಂಡೇಯ ಅವಧಾನಿ, ಮತ್ತೂರು
ಶ್ರೀಮತಿ ಶರ್ವಾಣಿ ಹರನ್ - ಶ್ರೀ ಭಾನುಪ್ರಕಾಶ್, ಯು.ಎಸ್.ಎ.
ಶ್ರೀಮತಿ ವಿನೋದಾ - ಶ್ರೀ ಎಂ.ಎಸ್.ಶ್ರೀನಿವಾಸ, ಮೈಸೂರು
ಶ್ರೀಮತಿ ನಾಗಲಕ್ಷ್ಮಮ್ಮ - ಹನ್ಯಾಳ್ ಶ್ರೀ ನಾರಣಪ್ಪ ವೆಂಕಟಸುಬ್ಬಯ್ಯ
(ಇವರ ಪರವಾಗಿ ಶ್ರೀ ವಿ.ಮುಕುಂದಕುಮಾರ ಇ/ಮ ಶ್ರೀಮತಿ ಆರ್.ಎಸ್.ಸಾವಿತ್ರಿ - ಶ್ರೀ ಬಿ.ವಿ.ವೆಂಕಟನಾರಾಯಣ, ಮೈಸೂರು)

ಪೋಷಕರು

ಶ್ರೀಮತಿ ಶಾಂತಾ - ಶ್ರೀ ಕೆ. ಲಕ್ಷ್ಮಣರಾವ್, ಮೈಸೂರು
ಶ್ರೀಮತಿ ಲಕ್ಷ್ಮೀಕಿರಣ - ಶ್ರೀ ಜಿ.ಆನಂದಕುಮಾರ್, ಮೈಸೂರು
ಶ್ರೀಮತಿ ಕೆ.ಎನ್. ಸುಶೀಲಮ್ಮ - ಶ್ರೀ ಆರ್.ಎಸ್. ವಾಸುದೇವಮೂರ್ತಿ, ಮೈಸೂರು
ಶ್ರೀಮತಿ ಎಂ.ಗಾಯತ್ರಿ - ಶ್ರೀ ದೇವರಾಜು, ಮಂಡ್ಯ
ಶ್ರೀಮತಿ ಲಲಿತಮ್ಮ - ಶ್ರೀ ಎಚ್.ಕೆ.ಸುಬ್ಬಣ್ಣ, ಹಾಸನ
ಶ್ರೀಮತಿ ಎಂ.ಎನ್.ರಾಜಲಕ್ಷ್ಮಿ - ಶ್ರೀ ಎನ್.ಕೃಷ್ಣಮೂರ್ತಿ, ಹಾಸನ
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ಎಚ್.ರಾಮನಾಥನ್, ಹಾಸನ
ಡಾ. ಎಸ್.ಕೆ.ಸುಶೀಲಾಬಾಯಿ - ಶ್ರೀ ಎಸ್.ಕೃಷ್ಣಮೂರ್ತಿ, ಹಾಸನ
ಶ್ರೀ ಆರ್.ಪ್ರಕಾಶ್ ಇ/ಮ ರು.ಗೋ.ರಾಮಸ್ವಾಮಿ, ಮೈಸೂರು
ಶ್ರೀಮತಿ ಪ್ರಫುಲ್ಲ - ಶ್ರೀ ಕೆ.ಎಸ್.ಕೃಷ್ಣಮೂರ್ತಿ, ಬೆಂಗಳೂರು
ಶ್ರೀಮತಿ ಜಯಶ್ರೀ - ಡಾ||ಬಿ.ಚನ್ನಕೇಶವ, ಮೈಸೂರು
ಶ್ರೀಮತಿ ಸರಸ್ವತಿ ರಾವ್ - ಮೈಸೂರುಮನೆ ಶ್ರೀ ಎನ್.ಸುಬ್ಬರಾವ್, ಬೆಂಗಳೂರು
ಶ್ರೀಮತಿ ಸುಕನ್ಯಾ - ಶ್ರೀ ಲಕ್ಷ್ಮೀಶ, ಹಾಸನ
ಶ್ರೀಮತಿ ಭಾಗ್ಯ - ಶ್ರೀ ಸೂರ್ಯನಾರಾಯಣ, ಹಾಸನ
ಶ್ರೀಮತಿ ಸತ್ಯವತಿ - ಶ್ರೀ ಹರವೆ ಕೇಶವಮೂರ್ತಿ, ಮೈಸೂರು
ಡಾ|| ಆರ್. ಇಂದಿರಾ - ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ (ಬಾಬು), ಮೈಸೂರು
ಶ್ರೀಮತಿ ಕೆ.ಎಸ್.ನಾಗಮ್ಮ - ಶ್ರೀ ಬಿ.ಕೆ. ವಿಶ್ವನಾಥರಾವ್, ಬೆಂಗಳೂರು
ಶ್ರೀಮತಿ ಸರಳ - ಶ್ರೀ ಬಿ.ಕೆ. ರಾಮಚಂದ್ರ, ಬಸವಾಪಟ್ಟಣ
ಶ್ರೀಮತಿ ವಾಣಿ - ಪ್ರೊ|| ಎಂ.ಎನ್.ಚಂದ್ರಶೇಖರ್, ಬೆಂಗಳೂರು
ಶ್ರೀಮತಿ ಎಸ್.ಮೀರಾ - ಶ್ರೀ ಶ್ರೀಧರ್, ಯು.ಎಸ್.ಎ.
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ಕೆ.ವಿ. ನಾಗರಾಜ್, ಮೈಸೂರು
ಶ್ರೀಮತಿ ಸಂಪತ್‌ಲಕ್ಷ್ಮಿ - ಶ್ರೀ ಸಿ.ಆರ್. ನಾಗರಾಜ್, ಮೈಸೂರು
ಶ್ರೀಮತಿ ವೀಣಾ ಎನ್ - ಶ್ರೀ ನಾರಾಯಣ ಸುಬ್ಬರಾವ್, ಯು.ಎಸ್.ಎ.
ಶ್ರೀಮತಿ ಪೂರ್ಣಿಮಾ - ಶ್ರೀ ಐ.ಎನ್. ವೆಂಕಟಸುಬ್ಬರಾವ್, ಐಚನಹಳ್ಳಿ
ಶ್ರೀಮತಿ ಎಚ್.ಎಂ.ಜಯಶ್ರೀ ಶಾಸ್ತ್ರಿ - ಶ್ರೀ ಹನಸೋಗೆ ಎಸ್.ಶಾಸ್ತ್ರಿ, ಯುಎಸ್ಎ
ಶ್ರೀಮತಿ ವಾಸಂತಿ - ಶ್ರೀ ಜಿ. ಮಯೂರಸಿಂಹ, ಯು.ಎಸ್.ಎ.
ಶ್ರೀಮತಿ ಗೀತಾ - ಶ್ರೀ ಕೆ.ವಿ. ನಟೇಶ್, ಚನ್ನರಾಯಪಟ್ಟಣ
ಟಿ.ಬಿ.ಎಸ್. ವಠಾರ ಟ್ರಸ್ಟ್ (ರಿ.), ಬಸವಾಪಟ್ಟಣ
ಶ್ರೀಮತಿ ಐ.ವಿ.ರಮಾಮಣಿ - ಶ್ರೀ ಕೆ.ಎಸ್.ನಾಗರಾಜ, ಪಿರಿಯಾಪಟ್ಟಣ
ಶ್ರೀಮತಿ ಕೆ.ಶಾಂತ - ಶ್ರೀ ಕೇಶವ, ಬೆಂಗಳೂರು
ಶ್ರೀಮತಿ ಎಂ.ಆರ್.ಪ್ರಭಾವತಿ - ಶ್ರೀ ಎಂ.ಕೆ.ಚನ್ನಕೇಶವ, ಮುದ್ಲಾಪುರ
ಶ್ರೀಮತಿ ಎನ್.ಜಯಲಕ್ಷ್ಮಿ - ಶ್ರೀ ಪಿ.ಎನ್.ನರಸಿಂಹಮೂರ್ತಿ, ಹಾಸನ

ಶ್ರೀಮತಿ ಪಿ.ಕೆ.ವಸಂತಲಕ್ಷ್ಮಿ - ಶ್ರೀ ಬಿ.ಎನ್.ರಘುನಾಥ, ಹಾಸನ
ಶ್ರೀಮತಿ ಎಚ್.ಕೆ.ನಾಗಲಕ್ಷ್ಮಿ, ಮೈಸೂರು
ಸಾವಿತ್ರಮ್ಮಜ್ಜಿ , ಶ್ರೀಮತಿ ಆರ್.ಎಸ್.ಗಾಯತ್ರಮ್ಮ,ಹಾಸನ
ಶ್ರೀಮತಿ ಎನ್.ಎಸ್.ಸರಸ್ವತಿ - ಶ್ರೀ ಎಂ.ನಾಗರಾಜ್,ಮೈಸೂರು
ಶ್ರೀಮತಿ ಎಚ್.ಎಸ್.ಸಾವಿತ್ರಿ - ಶ್ರೀ ಎಂ.ಆರ್.ನರಸಿಂಹಮೂರ್ತಿ, ಬೆಂಗಳೂರು
ಶ್ರೀಮತಿ ಅನ್ನಪೂರ್ಣ - ಶ್ರೀ ಎಚ್.ಎಸ್.ಗೋಪಾಲ್, ಹೊಸಹಳ್ಳಿ
ಶ್ರೀಮತಿ ಜಯಂತಿ - ಶ್ರೀ ಸಿ.ಎಸ್.ರಾಮಚಂದ್ರ, ಮೈಸೂರು
ಶ್ರೀಮತಿ ಭಾಗ್ಯಲಕ್ಷ್ಮಿ - ಶ್ರೀ ಎಸ್.ಎನ್.ನಾರಾಯಣ, ಬೆಂಗಳೂರು
ಶ್ರೀಮತಿ ಲಕ್ಷ್ಮಿ - ಶ್ರೀ ಎಚ್.ಕೆ. ಸತ್ಯನಾರಾಯಣ, ಮೈಸೂರು
ಶ್ರೀಮತಿ ಎಸ್.ಆರ್.ನಾಗರತ್ನಮ್ಮ - ಶ್ರೀ ಸಾ.ನಾ.ಶ್ರೀಕಂಠಯ್ಯ, ಮೈಸೂರು

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ - ಶ್ರೀ ಬಿ.ಕೆ. ಕೇಶವಮೂರ್ತಿ, ಮೈಸೂರು
ಶ್ರೀಮತಿ ಸರೋಜ - ಶ್ರೀ ಎಚ್.ಆರ್. ಹಿರಿಯಣ್ಣ, ಮೈಸೂರು
ಶ್ರೀಮತಿ ಸುಬ್ಬಲಕ್ಷ್ಮಿ - ಶ್ರೀ ನಾಗೇಶ್, ಬೆಂಗಳೂರು
ಶ್ರೀಮತಿ ಕೆ.ಎಸ್.ಲೀಲಾವತಿ - ಶ್ರೀ ಕೆ.ಎಸ್. ಶಾಮಣ್ಣ, ಮೈಸೂರು
ಶ್ರೀಮತಿ ಪಾರ್ವತಿ - ಶ್ರೀ ಪಿ.ಆರ್. ಹರಿಹರನ್, ಮೈಸೂರು
ಶ್ರೀಮತಿ ರಾಧಾ - ಶ್ರೀ ಆರ್.ಎಸ್. ಅನಂತನಾರಾಯಣ, ಬೆಂಗಳೂರು
ಶ್ರೀಮತಿ ಶಶಿಕಲಾ - ಶ್ರೀ ವೆಂಕಟೇಶಮೂರ್ತಿ, ಮೈಸೂರು
ಶ್ರೀಮತಿ ಲೀಲಾವತಿ - ಶ್ರೀ ಜಿ.ಕೆ. ನರಸಿಂಹಮೂರ್ತಿ, ಮಂಡ್ಯ
ಶ್ರೀಮತಿ ಸುಧಾ - ಶ್ರೀ ಎ.ಎಸ್.ಅರುಣಕುಮಾರ್, ಮಂಡ್ಯ
ಶ್ರೀಮತಿ ಪ್ರೇಮಲತಾ - ಶ್ರೀ ಎಂ.ಆರ್.ರಾಮಶೇಷ, ಮಾದಾಪುರ
ಶ್ರೀಮತಿ ಲಲಿತಮ್ಮ - ಶ್ರೀ ಕೇಶವಮೂರ್ತಿ, ಕೊಣನೂರು

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ. ಎನ್. ವಿ. ಸುಬ್ರಹ್ಮಣ್ಯ

ಅಧ್ಯಕ್ಷರು

ಆರ್. ವಿ. ಶ್ರೀನಿವಾಸಯ್ಯ

ಸಂಚಾಲಕರು

ನಾಗರತ್ನ (ಪಾಪು)
ಆರ್.ವಿ.ಕೃಷ್ಣಮೂರ್ತಿ
ಬ್ರಿಗೇಡಿಯರ್ (ನಿ.) ಆರ್.ವಿ.ಸೀತಾರಾಂ

ಕಾರ್ಯದರ್ಶಿ

ಡಾ|| ಬಿ.ಎಸ್.ಪ್ರಣತಾರ್ತಿಹರನ್

ಖಜಾಂಚಿ

ಬಿ. ವಿ. ವೆಂಕಟನಾರಾಯಣ

ಪುಸ್ತಕ ಸಲಹಾ ಸಮಿತಿ

ಪ್ರೊ|| ಎ. ವಿ. ನರಸಿಂಹಮೂರ್ತಿ
ಪ್ರೊ|| ಜಿ. ಅಶ್ವತ್ಥನಾರಾಯಣ
ಡಾ. ಎಂ. ಎಲ್. ಲಲಿತಮ್ಮ
ಎನ್. ಎಸ್. ಶಾರದಾ ಪ್ರಸಾದ್
ವಿದ್ವಾನ್ ಡಾ|| ಟಿ. ವಿ. ಸತ್ಯನಾರಾಯಣ
ವಿದ್ವಾನ್ ಎಚ್. ವಿ. ನಾಗರಾಜರಾವ್
ವಿದ್ವಾನ್ ಡಾ|| ಆನಂದತೀರ್ಥ ನಾಗಸಂಪಿಗೆ
ಡಾ|| ಮೀರಾಮೂರ್ತಿ
ಡಾ|| ಕೆ. ಅನಂತರಾಮು
ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಎಸ್. ಕೆ. ಲಕ್ಷ್ಮೀನಾರಾಯಣ (ಬಾಬು)
ಡಾ. ಎ.ಎಸ್. ಚಂದ್ರಶೇಖರ್
ಸುಂದರೇಶನ್
ಎಸ್. ನಾಗೇಶ್ (ಪೂಮಗಾಮೆ ಗೋಪಿ)
ಎಂ.ಕೆ.ವಿಜಯಲಕ್ಷ್ಮೀ
ಎಚ್.ಎನ್.ರಘುನಾಥ
ಡಾ|| ಬಿ. ವಿ. ಸುಧಾಮಣಿ
ಡಾ|| ವಿಜಯಹರನ್

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವ ಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟ ಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಇದೀಗ ಓದುಗರ ಮುಂದಿರುವುದು ಸಂಕೇತಿ ಅಧ್ಯಯನ ಮಾಲೆಯ ಎಂಟನೆಯ ಸಂಪುಟ. ಇದು ಸಂಕೇತಿ ಸಮುದಾಯದ ಕೃಷಿಯ ಅನನ್ಯತೆಯನ್ನು ಶೋಧಿಸಲು ಹೊರಟ ಕೃತಿ. ಮೊದಲ ನೋಟದಲ್ಲೇ ಬೆರಗು ಹುಟ್ಟಿಸುವ ಸಂಗತಿ ಎಂದರೆ ಬ್ರಾಹ್ಮಣ ಸಮುದಾಯವೊಂದು ಇಷ್ಟೊಂದು ಗಾಢವಾಗಿ ಕೃಷಿಯನ್ನು ಅವಾಹಿಸಿಕೊಂಡಿದೆ ಎಂಬುದು.

ಶ್ರೀ ಎನ್. ಕೇಶವಮೂರ್ತಿ ಒಬ್ಬ ಕೃಷಿತಜ್ಞ, ಕೃಷಿ ವಿಜ್ಞಾನವನ್ನು ಅಭ್ಯಸಿಸಿ, ಆಕಾಶವಾಣಿಯ ಮಾಧ್ಯಮವು ಕೃಷಿಕರ ಪಾಲಿಗೆ ವರದಾನವಾಗುವಂತೆ ದಶಕಗಳಿಂದ ಕಾರ್ಯಕ್ರಮಗಳನ್ನು ಚಿತ್ತರಿಸುತ್ತಿರುವ ಕೃಷಿ ಅಧಿಕಾರಿ. ಕ್ಷೇತ್ರ ಸಂದರ್ಶನಗಳ ಮೂಲಕ ಕೇಶವಮೂರ್ತಿಯವರು ಸಂಕೇತಿ ಕೃಷಿಯ ನಾಡಿಗಳನ್ನು ಹಿಡಿಯುವ ಹರಸಾಹಸ ಮಾಡಿದ್ದಾರೆ. ಆಕಾಶವಾಣಿಯಂಥ ಅಗತ್ಯ ಸೇವೆಯನ್ನು ನಿರ್ವಹಿಸಿಕೊಂಡೂ ಪ್ರವಾಸ-ಸಂದರ್ಶನ-ಲೇಖನಮಾತ್ರವಲ್ಲದೆ ಸತತ ಚಿಂತನದ ತಪಸ್ಸು ಮಾಡಿದ್ದಾರೆ. ಈ ಬಗೆಗಿನ ಅವರ ಶ್ರದ್ಧೆಯು ಕೃಷಿಯ ಪರವಾದ ಅವರ ತೀವ್ರ ಮಿಡಿತದಿಂದಲೇ ಹುಟ್ಟಿಕೊಂಡಿದ್ದಾಗಿದೆ.

ಡಾ॥ ಬಿ.ಎಸ್. ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು